KARNATAKA
STATE
ARCHIVES

KARNATAKA
STATE
ARCHIVES

ROLL
No.
151

ROLL

No.

151

ARS 34 APP 82

NAVAYUGA KANNADA WEEKLY

CONTD. FROM ROLL NO. 150

FROM: ~~23~~ 17: 9: 1964

ARS 34 APP 82

NAVAYUGA KANNADA
WEEKLY

CONTD. FROM ROLL NO. 150

FROM: ~~23~~ 17:9:1964

NAVAYUGA 10-9-1964
Registered with the Registrar
of News Papers for India
under No. R. N 3546/'57

REGD. No. B. G. 176
LICENCE No. 31
Licensed to Post without Prepayment

ವಿಚಿತ್ರವಾದರೂ ಸತ್ಯ

ಶ್ಲೋಕವೊಂದು ಶೋಕವನ್ನಡಗಿಸಿತು

೧ ೨

ಪ್ರಾಚೀನ ಭಾರತದಲ್ಲಿ ಹಲವಾರು ವಿಶ್ವವಿದ್ಯಾಲಯಗಳು ತಲೆ ಎತ್ತಿ ದೇಶ—ವಿದೇಶಗಳ ಜ್ಞಾನಪಿಪಾಸುಗಳನ್ನು ಆಕರ್ಷಿಸುತ್ತಿದ್ದವು. ಗುರುಕುಲ ಮಾದರಿಯಲ್ಲಿ ನಡೆಯುತ್ತಿದ್ದುವು. ಗುರುಕುಲ ಮಾದರಿಯಲ್ಲಿ ನಡೆಯುತ್ತಿದ್ದ ಇವು ಉತ್ತಮೋತ್ತಮ ಪಂಡಿತರನ್ನೂ ವಿದ್ವಾಂಸರನ್ನೂ ತಯಾರಿಸುತ್ತಿದ್ದವು. ಇದೇ ರೀತಿಯ ಗುರುಕುಲ ವಿಶ್ವವಿದ್ಯಾಲಯಗಳು ಇತ್ತೀಚೆಗಿನ ವರ್ಷಗಳಲ್ಲಿಯೂ ಭಾರತದಲ್ಲಿ ಅಲ್ಲಲ್ಲಿ ತಲೆಯೆತ್ತಿ ನಿಲ್ಲುತ್ತಿದ್ದುವು.

ಕೇರಳದ ಕರಾವಳಿಯಲ್ಲಿ ತ್ರಿಚೂರು ಜಿಲ್ಲೆಯಿದೆ. ಇದರ ಕರಾವಳಿ ಪ್ರದೇಶದಲ್ಲಿ ಕೊಡುಂಗಲ್ಲೂರು ಎಂಬುದೊಂದು ಚಿಕ್ಕ ಪಟ್ಟಣ. ಇದರ ಇಂದಿನ ಹೆಸರು ಕ್ರಾಂಗನೂರು. ಬ್ರಿಟಿಷರು ಪಶ್ಚಿಮ ಕರಾವಳಿಯ ಪ್ರಭುತ್ವವನ್ನು ಪಡೆಯುವುದಕ್ಕೆ ಮೊದಲು ಇಲ್ಲೊಂದು ರಾಜವಂಶವು ಆಳುತ್ತಿತ್ತು. ಮಲಯಾಳದ ಸುಪ್ರಸಿದ್ಧ ಕವಿ ವೇಮನಿಯೂ ಈ ರಾಜವಂಶಕ್ಕೆ ಸೇರಿದವನು. ಈತನ ಮಗನೇ ಕೇರಳ ವ್ಯಾಸನೆಂಬ ಹೆಸರು ಪಡೆದ ರಾಮವರ್ಮ ಅಥವಾ ಕುಂಞ್ಞಿ ಕುಟ್ಟನ್ ತಂಪುರನ್.

ಕೊಡುಂಗಲ್ಲೂರಿನ ರಾಜ ಮನೆತನವೇ ಒಂದು ವಿಶ್ವ ವಿದ್ಯಾಲಯ ಇದ್ದಂತೆ. "ವಿದ್ಯಾ ನಃ ಪರಾದೈವತಂ ವ" ಎಂಬುದನ್ನು ಆರಿಸಿಕೊಂಡು ಅದರಂತೆ ನಡೆಯುತಿತ್ತು ಅದು. ರಾಜಭವನವೂ ವಿದ್ಯೆಯ ಆವಾಸಸ್ಥಾನವಾಗಿತ್ತು. ಆ ದಿನಗಳಲ್ಲಿಯೂ ಅದು ಉಚಿತ ಶಿಕ್ಷಣವನ್ನು ನೀಡುತಿತ್ತು. ಭಾರತೀಯ ಸಾಂಪ್ರದಾಯಿಕ ಪರಂಪರೆಯ ಎಲ್ಲ ವಿಭಾಗಗಳಲ್ಲೂ ಅಲ್ಲಿ ಶಿಕ್ಷಣ ದೊರೆಯುತ್ತಿತ್ತು. ಗುರುಕುಲ ಮಾದರಿಯ ಈ ಸಂಸ್ಕೃತ ವಿಶ್ವ ವಿದ್ಯಾಲಯದ ಹೆಸರು ಎಲ್ಲೆಲ್ಲಿಯೂ ಪ್ರಚುರವಾಗಿತ್ತು. ಸಮೀಪ—ದೂರದೂರುಗಳಿಂದ ಶಿಕ್ಷಣಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಿದ್ದರು. ಜಾನೇಚ್ಛುಗಳಾಗಿ ಬಂದ ಅಗಣಿತ ವ್ಯಕ್ತಿಗಳು ಕೆಲವರ್ಷಗಳ ಅಧ್ಯಯನ ಮತ್ತು ಸಂಶೋಧನೆಗಳನಂತರ ಸಂತೃಪ್ತರಾಗಿ ವಿದ್ಯಾ ಪಾರಂಗತರಾಗಿ ಮರಳುತ್ತಿದ್ದರು. ಕೊಡುಂಗಲ್ಲೂರಿನ ರಾಜಭವನದಲ್ಲಿ ತಾವು ವಿದ್ಯಾಭ್ಯಾಸ ಪಡೆದೆವೆಂದು ಹೇಳಲು ಅಂದಿನ ವಿದ್ಯಾರ್ಥಿಗಳು ಹೆಮ್ಮೆಪಡುತಿದ್ದರು

ಗುರುಕುಲದ ಪ್ರಧಾನನಾಗಿ ಬಹುಕಾಲ ಸೇವೆ ಸಲ್ಲಿಸಿದ ವಿದ್ವಾನ್ ಏಳಯ ತಂಪುರನ್ ವಿದ್ಯಾಪೀಠದ ಮೊದಲಿನ ಹಾಗೂ ಅತಿ ಹೆಸರುವಾಸಿಯಾದ ವಿದ್ಯಾರ್ಥಿ. ಈತನು ಮಡಿದು ಇಂದಿಗೆ ಕೇವಲ ೧೧೩ ವರ್ಷಗಳು ಮಾತ್ರ ಕಳೆದಿವೆ. ಈತನು ಮಹಾ ವಿದ್ವಾಂಸನಾಗಿದ್ದನು. ಇವನಿಗೊಬ್ಬ ನಂಬೂದಿರಿ ಗೆಳೆಯನಿದ್ದನು. ಈ ಮಿತ್ರನು ಬಹು ಬಡವನು. ಆಗ ಈತನೊಂದು ಸರಳ ಶ್ಲೋಕವನ್ನು ರಚಿಸಿಕೊಟ್ಟು ಅದನ್ನು ತಿರುವಂಕೂರಿನ ಮಹಾರಾಜರ ಮುಂದ ಹಾಡುವಂತೆ ತಿಳಿಸಿದನು. ನಂಬೂದಿರಿಯು ಹಾಗೆಯೇ ಮಾಡಿದನು.

> ದರಿದ್ರಸ್ಯ ದಯಾಲುತ್ವಮ್
> ಕಿಂಬ್ರವೀಮಿ ಮಹೀಪತೇ
> ಆತ್ಮನಾಶಮ್—ವಿನಾದ್ರೇತ್ಯ
> ಭವಂತಮ್ ಮಾಮ್
> ಅದರ್ಶಯನ್ ॥

[ಮಹಾರಾಜ, ಬಡತನದ ದಯಾಳುತನವನ್ನು ನಾನೆಂತು ವರ್ಣಿಸಲಿ? ತನ್ನ ಸರ್ವನಾಶವಾಗುವುದೆಂದು ತಿಳಿತಿಳಿದೂ ಅದು ನನ್ನನ್ನು ನಿನ್ನ ಮುಂದೆ ತಂದು ನಿಲ್ಲಿಸಿದ]

ಈ ಶ್ಲೋಕವನ್ನು ಕೇಳಿದ ಮಹಾರಾಜನ ಆದರ ಸೌಂದರ್ಯದಿಂದ ಮರುಳಾದನು. ತನ್ನ ಕರಣಿಕರಿಗೆ ಆಜ್ಞಾಪಿಸಿ ಸುವರ್ಣ ತುಂಬಿದ ಚೀಲವೊಂದನ್ನು ತರಿಸಿ ಅದನ್ನು ನಂಬೂದಿರಿಗೆ ಉಡುಗೊರೆಯಾಗಿ ನೀಡಿದನು. ವಿದ್ವಾನ್ ಏಳಯ ತಂಪುರನ್ ಈ ಶ್ಲೋಕವನ್ನು ತನ್ನ ಗಮನಕ್ಕೆ ತಂದುದಕ್ಕಾಗಿ ತಾನು ನೀಡುವ ಅಲ್ಪ ಕಾಣಿಕೆಯಿದೆಂದು ಭಯ ಭಕ್ತಿಯನ್ನು ಪ್ರದರ್ಶಿಸಿದನು.

ಸಂಸ್ಕೃತ ಜ್ಞಾನದ ಸಂಚಾರಿ ವಿಶ್ವಕೋಶವಾಗಿದ್ದನು ಏಳಯ ತಂಪುರನ್. ಈತನೇ ಕೊಡುಂಗಲ್ಲೂರಿನ ಗುರುಕುಲವನ್ನು ಸ್ಥಾಪಿಸಿದನು. ಈತನಿಂದ ಶಿಕ್ಷಣ ಪಡೆದವರಲ್ಲಿ ಅನೇಕರು ವಿಖ್ಯಾತ ವಿದ್ವಾಂಸರೂ ಕವಿಗಳೂ ಆಗಿದ್ದಾರೆ. ಇವರಲ್ಲಿ ಪ್ರತಿಯೊಬ್ಬರೂ ಕಡಿಮೆ ಪಕ್ಷಕ್ಕೆ ಒಂದೊಂದು ವಿಭಾಗಲ್ಲಾದರೂ ಮಹಾ ಪಾರಂಗತರು; ಆ ವಿಷಯದಲ್ಲಿ ಪ್ರಾಮಾಣಿಕ ಪರಿಜ್ಞಾನ ಪಡೆದವರು. ಸಂಸ್ಕೃತ ವ್ಯಾಕರಣದಲ್ಲಿ ಪರಿಣತನಾದ ಕುಞ್ಞು ರಾಮ ವರ್ಮನ್ ತಂಪುರನ್, ತರ್ಕ ಶಾಸ್ತ್ರವಿದ ಕುಞ್ಞನ್ ತಂಪುರನ್ ಜ್ಯೋತಿಶ್ಶಾಸ್ತ್ರಜ್ಞ ವಾಲಿಯ ಕೋಚುಣ್ಣಿ, ವಿಖ್ಯಾತ ಸಂಗೀತಜ್ಞ ಚಕ್ರನ್, ಭಾರತ ಸಾಸ್ತ್ರ ಪಂಡಿತನೂ ಕವಿ ಸಾರ್ವಭೌಮನೆಂಬ ಬಿರುದು ಪಡೆದವನೂ ಆದ ಚೆರಿಯ ಕೋಚುಣ್ಣಿ, ತರ್ಕ ಶಾಸ್ತ್ರರತ್ನ ಮಹಾಮಹೋಪಾಧ್ಯಾಯ ಗೋದವರ್ಮ, ಕಥಕ್ಕಳಿಯ ಆಚಾರ್ಯ ಭಾಗವತರ್ ಮೊದಲಾದವರು ಏಳಯನ ಶಿಷ್ಯಕೋಟಿಯಲ್ಲಿ ಕೆಲವರು.

ರಾಮವರ್ಮ ಅಥವಾ ಕೇರಳದ ವ್ಯಾಸನೂ ಇವರಲ್ಲೊಬ್ಬ. ಇವನು ವ್ಯಾಸ ಋಷಿ ಕೃತ ಸಂಸ್ಕೃತದ ಭಾರತದ ಶ್ಲೋಕಗಳನ್ನು ಮಲೆಯಾಳಂ ಭಾಷೆಗೆ ಇದ್ದಕ್ಕಿದ್ದಂತೆ ಅನುವಾದ ಮಾಡಿದ್ದಾನೆ. ಅನುವಾದವಾದರೂ ಸ್ವತಂತ್ರ ಕಾವ್ಯದಂತೆಯೇ ಮನೋಹರವಾಗಿದೆ. ಈ ಕವಿಯ ಶತಮಾನೋತ್ಸವ ಇದೇ ೩ರಿಂದ ಒಂದು ವಾರದವರೆಗೆ ಕೇರಳ ತುಂಬ ನಡೆಯುವುದು.

ಕವಿತಾ ವಿತಾನ

ಆನಂದ

(ಭಾವಗೀತೆ)

(೧)
ಹೆಣ್ಣು ಮಗುವಿನ ಮಾತೆಯಾಗುವ
ಕೊರಗು ಬೀಗಿತು ತಾಯಿಗೆ
ಹತ್ತು ದೇವರ ಹರಕೆ ಹೊತ್ತಳು
ಮತ್ತೆ ದುಹಿತೆಯು ಹರುನಿಕೆ

(೨)
ಲಲಿತಗಾತ್ರಿಯು ವಿಮಲ ನೇತ್ರೆಯು
ತೊಂಡೆ ಹಣ್ಣಿನ ತುಟಿಯೊಳು
ಹುಟ್ಟಿತಾಗಲೆ ಹೆಣ್ಣು ಮಗುವದು
ತಂಗಿ ತಾಣದ ತುಂಬಲು

(೩)
ಮರುಳುಗಾಡಿನ ಮಧ್ಯದಲ್ಲಿಯೆ
ಕಿರಿಯ ತೊರೆಯದು ಹರಿವೊಲು
ನಮ್ಮ ಮನದಲಿ ನಮ್ಮ ಮನೆಯಲಿ
ತೂಗುತದ್ದಿತು ತೊಟ್ಟಿಲು

(೪)
ತುಟಿಯ ಮಧ್ಯದಿ ಮಿನುಗಿ ಸೂಸುವ
ಎಳೆಯ ನಗುವಿನ ಬಂಧವು
ಮುದ್ದು ಸೂಟದ ಮುಗ್ಧ ಬಾಲೆಗೆ
ಕರೆದ ಹೆಸರಾ 'ನಂದವು'

(೫)
ಆರು ವರ್ಷವು ತುಂಬಲಿಲ್ಲವು
ಆಕೆ ಗೋಪುರ ಕಳಚಿತು
ಬಾಳಬಳ್ಳಿಯೊಳಿದ್ದ ಮಿಡಿಯದು
ಕದ್ದು ಕಾಣದೆ ಹೋಯಿತು

(೬)
ಹಸಿದ ಗರ್ಭಕೆ ಹಣ್ಣನೀಯುತ
ಮರಳಿ ಪಡೆವದು ನ್ಯಾಯವೆ?
ಒಡೆಯಲಾರದ ಒಗಟನೊರೆದಿಹ
ದೈವ ಲೀಲೆಗೆ ವೇಧ್ಯವೆ?

ಬಸವರಾಜ ಕುಂಚೂರು.

ಮಧುರಚೆನ್ನರ ಸ್ಮೃತಿ ದಿನಾಚ
ರಣೆ ಮುಂಬೈಯ ಕನ್ನಡ ಸಾಹಿತ್ಯ ಕೂಟದವರು ರೂಪಾರೇಲ್ ಕಾಲೇಜಿನ ಸಭಾಂಗಣದಲ್ಲಿ ಕನ್ನಡದ ಅನುಭಾವಿ ಕವಿ 'ಮಧುರಚೆನ್ನ'ರ ಸ್ಮೃತಿ ದಿನವನ್ನು ಆಚರಿಸಿದರು. ಸಾಹಿತ್ಯ ಕೂಟದ ಅಧ್ಯಕ್ಷ ಪ್ರೊ. ಸಿ. ಕೆ. ದೀಕ್ಷಿತರು ಪ್ರಾಸ್ತಾವಿಕ ಭಾಷಣಗೈದರು. ವರಕವಿ ದ. ರಾ. ಬೇಂದ್ರೆ ... ಮಧುರಚೆನ್ನರ ಕೃತಿ, ಅವರ ಬಗೆ ಪ್ರಕಟವಾದ. ಬರಹಗಳು ಮತ್ತು ನಾನಾ ದೇಶಾಯಿ ... ಬಿಡಿಸಿದ ಮಧುರಚೆನ್ನರ ತೈಲಚಿತ್ರಗಳನ್ನು ಅನಾವರಣಗೈದ ಬಳಿಕ ಅಧ್ಯಕ್ಷಪೀಠದಿಂದ ಮಾತಾಡುತ್ತಾ—ಯಾವುದು ಕರ್ನಾಟಕದಲ್ಲಿ ಆಗಬೇಕಿತ್ತು ಆಗುವದಿಲ್ಲವೋ ಅಂತಹ ಕಾರ್ಯಗಳು ಹೊರನಾಡಲ್ಲಿ ಅದರಲ್ಲೂ ಮುಂಬಯಿಯಲ್ಲಿ ಕನ್ನಡಿಗರು ಮಾಡುತ್ತಾರೆ ಎಂಬುವಕ್ಕೆ ಇದೊಂದು ಪ್ರತ್ಯಕ್ಷ ಉದಾಹರಣೆ ಎಂದರು.

ಶ್ರೀ ಸೂರತಿ ರಾಮಭಾಗರ ಕಾವ್ಯ ವಾಚನದ ಬಳಿಕ ಶ್ರೀ ... ಕುಲಕರ್ಣಿಯವರು ಮಧುರಚೆನ್ನರ ಜೀವನ ಅನುಭವ ಮತ್ತು ಕಾವ್ಯದ ಕುರಿತು ಭಾಷಣಗೈದರು. ಮುಖ್ಯ ಅತಿಥಿ ಶ್ರೀ ರಂ. ಶ್ರೀ ಮುಗಳಿಯವರು ಮುಂಬೈ ಸಾಹಿತ್ಯ ಕೂಟದ ಈ ಕಾರ್ಯಕ್ರಮವನ್ನು ಮನಸಾರೆ ಪ್ರಶಂಸಿಸಿದರು. ಮಧುರ ಚೆನ್ನರು ಪ್ರಚಂಡವಾದ ಪ್ರಾಮಾಣಿಕನಾದ ಅಧ್ಯಾತ್ಮಿಕ ಸಾಧಕ ಮೂರ್ತಿ ಎಂದರು. ಅನಂತರ ತನ್ನ ವಿದೇಶ ಯಾತ್ರೆಗೆ ಶುಭ ಕೋರಿದ ಮುಂಬೈ ಕನ್ನಡಿಗರಿಗೆ ಕೃತಜ್ಞತೆಯನ್ನು ಸೂಚಿಸಿದರು. ಮಧುರ ಚೆನ್ನರ ಸ್ಮೃತಿ ಇಂದು ನಡೆಯಿತು ಆದರೆ ಮುಗಿಯಿತೆಂದು ಯಾರೂ ಭಾವಿಸಬಾರದು ಇದು ಆರಂಭವಾಯಿತೆಂದು ತಿಳಿಯಬೇಕು ಎಂದರು. ಕಾರ್ಯ ನಿರ್ವಾಹಕರು ಆಭಾರ ಮನ್ನಣೆ ಸಲ್ಲಿಸಿದರು.

ಗುರುವಿನಂತೆ
ಮಿತ್ರನಂತೆ
ವೈದ್ಯನಂತೆ
3 ಪುಸ್ತಕಗಳು
ಸಿಗುವ ವಿಳಾಸ:
ನವಭಾರತ ಬುಕ್ ಡಿಪೊ,
ಪಾಲುಕೋಟೆ, ಉಡುಪಿ.

ಸುಲಭದಲ್ಲಿ
ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ
ಬೆಲೆ: ರೂ. ೨

ಸುಲಭದಲ್ಲಿ
ಪತ್ರಲೇಖನ
Letter Writing
Made Easy
ಬೆಲೆ: ರೂ. ೧-೨೫

ಮನೆಮದ್ದು
ನೂರಾರು ಕಾಯಿಲೆಗಳಿಗೆ
ಮನೆಯಲ್ಲೇ ಮದ್ದು ಮಾಡುವ ವಿಧಾನ ವಿವರಿಸುವ ಗೃಹ
ವೈದ್ಯ: ಬೆಲೆ: ರೂ. ೨.

Edited, Printed & Published by K. H. Shetty, at the Navayuga Press, Udipi, S. India

ನವಯುಗ

ಸೆಪ್ಟೆಂಬರ, ೧೭, ೬೪

ಸಂಪುಟ ೪೪

ಸಂಚಿಕೆ ೩



Navayuga nationalist kannada weekly

೨೦ ಪೈಸೆ

ಕನಲು ದಾರಿ–ಕೆಂಪು ದೀಪ

ನಮ್ಮ ದೇಶದಲ್ಲಿ ಮಂತ್ರಿಗಳೂ ಬಡವರಾಗಿದ್ದಾರೆ!

ಸಿನೆಮಾ ರಂಗವನ್ನು ಅಭಿನವ ಸ್ವರ್ಗವೆಂದು ಕರೆಯಲಾಗುತ್ತಿದೆ. ಇಲ್ಲಿರುವ ಭಾರೀ ಕುಳವಾರುಗಳೆಲ್ಲ, ಹುಲು ಮಾನವರ ಪಾಲಿಗೆ, ದೇವತೆಗಳೇ ಆಗಿದ್ದಾರೆ.

ಈ ಸ್ವರ್ಗದ ದೇವತೆಗಳಲ್ಲಿ ಕೆಲವರ ಮನೆಯನ್ನು, ಇಂದ್ರಪ್ರಸ್ಥದಿಂದ ಬಂದ ಎನ್‌ಫೋರ್ಸ್‌ಮೆಂಟ್ ವಿಭಾಗದ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಇದಕ್ಕೆ ಕಾರಣ ಅವರಲ್ಲಿ 'ಕಪ್ಪು ಹಣ' ವಿತ್ತು ಎನ್ನುವುದೇ ಆಗಿದೆ. ಈ ಕಪ್ಪು ಹಣವೆಂದರೇನು? ಎಂಬ ಪ್ರಶ್ನೆ ಸಾಮಾನ್ಯವಾಗಿ ಯಾರನ್ನೂ ಕಾಡುವದಿಲ್ಲ. ಗುಟ್ಟಾಗಿ ಸಂಪಾದಿಸಿ, ಗುಟ್ಟಾಗಿ ಇರಿಸಿಕೊಂಡಿರುವ ಹಣಕ್ಕೆ 'ಕಪ್ಪು ಹಣ' ಎಂಬ ಹೆಸರು ಹಚ್ಚಿ ಕರೆಯಲಾಗುತ್ತಿದೆ

ಈ ಮಾದರಿಯ ಹಣ, 'ತುಂಬು ಸುಖಾನುಭವ' ಪಡೆಯುತ್ತಿರುವ ಸಿನೆಮಾ ತಾರೆಯರಲ್ಲಿ ಮಾತ್ರವಿದೆ? ಅವರಲ್ಲಿದ್ದರೆ ಎಷ್ಟು ಹಣವಿದೆ? ಅದು ಎಲ್ಲಿಂದ ಬಂತು? ಯಾರ ಉದಾರತೆಯಿಂದ ಬಂತು? ಯಾಕೆ ಬಂತು?

ಈ ಎಲ್ಲಾ ಪ್ರಶ್ನೆ ಅನಗತ್ಯ. ಭಾರತದಲ್ಲಿ ಕಪ್ಪು ಹಣ ಇಂತಿಷ್ಟೇ ಇದೆ ಎಂದು ಕಲ್ಪಿಸಿಕೊಳ್ಳುವುದೂ ಸಾಧ್ಯವಾಗದ ಮಾತು.

ಕಪ್ಪು ಹಣ ಒಂದು ಕಾಲಕ್ಕೆ ಕೆಂಪಾಗಿತ್ತು. ನಮ್ಮ—ನಿಮ್ಮ ರಕ್ತದಿಂದಲೇ ಅದು ಜನ್ಮತಾಳಿತ್ತು. ಕೆಂಪಗಿನ ರಕ್ತ ಹೆಚ್ಚು ಕಾಲ ವ್ಯವಸ್ಥಿತ ರೂಪದಲ್ಲಿ ಅಂದರೆ ಎಲ್ಲಿರಬೇಕೋ ಅಲ್ಲಿರದಿದ್ದರೆ. ಕೆಂಪು ತನವನ್ನು ಕಳೆದುಕೊಳ್ಳುತ್ತದೆ ; ಕಪ್ಪಾಗುತ್ತದೆ. ಅಂತೆಯೇ ಈಗ ಈ ಕೆಂಪು ಹಣ ಕಪ್ಪಾಗಿದೆ ಎಂಬುದು ಭ್ರಷ್ಟಾಚಾರ ನಿವಾರಣೆ ಮಾಡಲು ಪ್ರಯತ್ನ ನಡೆಸಿರುವವರೆಲ್ಲ ತಿಳಿದುಕೊಂಡಿದ್ದಾರೆ.

ಏನಿದ್ದರೂ ಕಪ್ಪು ಹಣದ ಶೋಧನೆಗಾಗಿ ಹೊರಟು ನಿಂತವರು ಒಂದು ಉಪಕಾರ ಮಾಡಿದ್ದಾರೆ. ಕೆಲವು ಮಂದಿಯ ಮನೆಯನ್ನು ಶೋಧಿಸಿ, ಭಾರೀ ಸುದ್ದಿಗೆ ಎಡೆ ಮಾಡಿಕೊಟ್ಟ ಇವರು, ಐದು ಕೋಟಿಗೂ ಮಿಾರಿದೆ ಎಂದು ತಿಳಿಯಲಾಗಿರುವ ಕಪ್ಪು ಹಣದಲ್ಲಿ ಅರೆ ಲಕ್ಷವನ್ನೂ ಹುಡುಕಿ ತೆಗೆಯಲು ಸಮರ್ಥರಾಗಲಿಲ್ಲ.

ಈ ಹಣ ಐದು ಕೋಟಿಯೇ ಅಲ್ಲ; ಅದಕ್ಕೂ ಹೆಚ್ಚಾಗಿರಬಹುದು ನಮ್ಮ–ನಿಮ್ಮ ರಕ್ತಕ್ಕಿರುವ ಬೆಲೆ ಈ ಅಲ್ಪ ಪ್ರಮಾಣದ ಮೊತ್ತದಲ್ಲೇ ಇಲ್ಲ?

ಇವತ್ತಿಗೆ ಹೊಸದಾದುದೇನನ್ನೋ ನಾವು ಸಾಧಿಸಿ ತೋರುತ್ತೇವೆ ಎಂದು ಆಡಿಕೊಳ್ಳುತ್ತಿರುವವರೂ ತೋರಿಕೆಗೆ ಏನನ್ನಾದರೂ ಮಾಡಿ, ಅದನ್ನೇ ಭೂತಗನ್ನಡಿ ಹಿಡಿದು ಪ್ರದರ್ಶನ ಮಾಡುತ್ತಿರುವವರೂ ನಮ್ಮಲ್ಲಿದ್ದಾರೆ; ಹೆಚ್ಚು ಸಂಖ್ಯೆಯಲ್ಲಿದ್ದಾರೆ.

ಅವರು ಆಡಿಕೊಳ್ಳುತ್ತಿರುವದನ್ನು ನೋಡಿದಾಗ ನಮಗಿಂತ ಅವರ ಹೊಟ್ಟೆಯೇ ಹೆಚ್ಚು ಹಸಿಯುತ್ತಿರಬೇಕು ಎಂದು ನನಗಂತೂ ಅನ್ನಿಸುತ್ತಿದೆ.

ಯಾವುದೋ ಒಂದು ಆರೋಪ ಒಬ್ಬ ಮಂತ್ರಿಯ ಮೇಲಾಗಲೀ ಒಬ್ಬ ಪ್ರಥಮ ವರ್ಗದ ಕದೀಮನ ಮೇಲಾಗಲೀ ಹೊರಿಸಲ್ಪಟ್ಟರೆ, ಅವರ ಕುಟುಂಬವಾಗಲೀ, ಅವರಾಗಲೀ ಕೆಳಗುರುಳಿ, ಜನಸಾಮಾನ್ಯರಂತೆ ನಾಳಿನ ಗತಿಯೇನು ಎಂದು ತಲೆಗೆ ಕೈಯಿಟ್ಟು ಕುಳ್ಳಿರಬೇಕಾಗುವುದಿಲ್ಲ. ಅವರು ಕೂಡಿಟ್ಟುದು ಬಹಳಷ್ಟಿದೆ. ಕೂತು ಉಣ್ಣಬಹುದು?

ದಾಲ್ಮಿಯಾ ಅಪರಾಧ ಹೊತ್ತು ಜೈಲಿಗೆ ಹೋದರು ಅಲ್ಲೇನೂ ಅವರು ರಾಗಿಯ ಗಂಜಿ ಕುಡಿದಿಲ್ಲ. ತುಪ್ಪ ಕಾಣದ ರೊಟ್ಟಿ ತಿಂದಿಲ್ಲ.

– ದುಡ್ಡುಳ್ಳವರು ಜೈಲಿಗೆ ಹೋದರೂ, ಅಲ್ಲಿಯೂ ಅವರ ಆರೋಗ್ಯ ಕೆಡುವದಿಲ್ಲ. ಬೇಕಾದ್ದು ಅವರಿಗೆ ಸಿಗಲೇ ಬೇಕು. ಸಿಗದಿದ್ದರೆ ಕಾಭಾರ್ರಾರು ಹೇಗೆ ನಡೆದೀತು?

ಪಂಜಾಬದ ಮಂತ್ರಿಯೊಬ್ಬರು ತಮ್ಮ ಅವಸ್ಥೆಯನ್ನು ಹೇಳಿಕೊಂಡಿದ್ದಾರೆ. ಬೆಲೆ ಏರಿಕೆಯಿಂದ ತಾವೂ ಅವಸ್ಥೆ ಪಡಬೇಕಾಗಿದೆ ಎಂದು ತಮ್ಮ ತಾಪತ್ರಯವನ್ನು ಜನರ ಮುಂದಿಟ್ಟಿದ್ದಾರೆ. ಮಂತ್ರಿಗಳ ಸಂಬಳವಾದರೂ ತಿಂಗಳ ಹದಿನೆರಡು ತಾರೀಖಿನವರೆಗೆ ಮಾತ್ರ ಕೈಯಲ್ಲಿರುತ್ತದೆಯಂತೆ! ಆ ಬಳಿಕ ಅವರಾದರೂ ಅಂಗಡಿಗಳಲ್ಲಿ ಸಾಲವೆತ್ತ ಬೇಕಾಗುತ್ತದೆ ಎಂದು ಪಂಜಾಬದ ಶಿಕ್ಷಣಮಂತ್ರಿ ಪ್ರಭೋಧ ಚಂದ್ರರು ಹೇಳುತ್ತಾರೆ.

ಅವರ ಮಾತು ಕೇಳಿ ನನಗಂತೂ ಅಯ್ಯೋ ಅನ್ನಿಸಿತು. ನಮ್ಮ ಮಂತ್ರಿಗಳೇ ಇಷ್ಟೆಲ್ಲಾ ತಾಪತ್ರಯದ ಬಲೆಯಲ್ಲಿ ಸಿಕ್ಕಿ ಒದ್ದಾಟ ನಡೆಸುತ್ತಿರುವಾಗ, ನಾವೆಲ್ಲ ಅನುಭವಿಸುವದನ್ನು ಅನುಭವಿಸದಿದ್ದರೆ ಹೇಗೆ ಎಂದೂ ಅನ್ನಿಸಿತು

ನನ್ನಂತೆಯೇ ಹರಿದ ಬಟ್ಟೆತೊಟ್ಟು ಅರೆಹೊಟ್ಟೆ ಉಂಡು, ಬಸ್ಸಿಗೂ ಕಾಸಿಲ್ಲದೆ ನಡೆದುಕೊಂಡೇ ಹೋಗಬೇಕಾದ ಪರಿಸ್ಥಿತಿಯೂ ಮಂತ್ರಿಗಳಲ್ಲಿ ಕೆಲವರಿಗೆ ಬಂದಿರಬಹುದೇನೋ ಎಂದೂ ಕಲ್ಪಿಸಿಕೊಂಡೆ. ನಿಜಕ್ಕೂ ಈ ಮಂತ್ರಿಯಾಗಿ ಜನರಿಂದ ಬೈಗಳು ಕೇಳುವದೂ, ಸಂಬಳ ಸಾಲದೆ ಒದ್ದಾಡುವದೂ ಯಾರಿಗೂ ಬರಬಾರದ ಶಾಪವಪ್ಪಾ ಎಂದೂ ಅನ್ನಿಸಿತು

ಮಂತ್ರಿಗಳೆಲ್ಲಾ ಮೇಲಿನ ರೀತಿಯೇ ಹೇಳಿಕೆ ಕೊಡುತ್ತಾ ಬಂದರೆ, ಭ್ರಷ್ಟಾಚಾರದ ಕುರಿತು ಹೆಚ್ಚು ಹುಡುಕಾಟಕ್ಕಾಗಿ ಪ್ರಯತ್ನ ನಡೆಸುವ ಅಗತ್ಯವೇ ಇಲ್ಲ.

ಆದರೆ ಅವರು ಹೇಳಿದ್ದು ಸಂಬಳದ ಮಾತು. ಗಿಂಬಳದ ಕುರಿತು ಅವರು ಹೇಳಲೇ ಇಲ್ಲ.

ಅಂತೆಯೇ ನಮ್ಮ ದೇಶದಲ್ಲಿ ಪ್ರಾಮಾಣಿಕ ರೀತಿಯಲ್ಲಿ ಸಂಪಾದಿಸಿದ ಹಣ ಒಂದು ಪರಿಮಿತಿಯಲ್ಲಿದೆ. ಸಂಪಾದನೆಗೆ ನೂರು ದಾರಿಯಿದೆ ಎಂದು ತಿಳಿದುಕೊಂಡವರಿಗೆ?

ಕಪ್ಪು ಹಣ ಹೇಗೆಯೋ ಇರಲಿ, ಎಲ್ಲೇ ಇರಲಿ, ಅದು ಮಧ್ಯಮ ವರ್ಗ ಮತ್ತು ಬಡವ ವರ್ಗದಲ್ಲಂತೂ ಇಲ್ಲ ಎಂಬ ಭರವಸೆಯಂತೂ, ಅದರ ಶೋಧಕರಿಗಿದೆ. ಅದನ್ನು ಸಂಗ್ರಹಿಸುವ ಪ್ರಯತ್ನದಲ್ಲಿ ವ್ಯಗ್ರರಾಗಿರುವವರ ದೆಸೆಯಿಂದಾಗಿ ಮಧ್ಯಮ ವರ್ಗ ಸಾಯುವದೊಂದು ಬಾಕಿ ಇದೆ; ಅಧಮ ವರ್ಗ ಸತ್ತೂ ಬದುಕಿರುವಂತೆ ಕಾಣಿಸಿಕೊಳ್ಳುತ್ತಿದೆ.

ಇದನ್ನು ನೀವು ನಂಬುತ್ತೀರೋ ಇಲ್ಲವೋ? ನಂಬಿದರೂ ನಂಬದಿದ್ದರೂ ಇದಂತೂ ನಿಜ.

ಹೀಗೆ ನಡೆಯಬಾರದು ಎಂದು ಈಗ ಪ್ರಶ್ನಿಸುತ್ತೀರಾ ? ಈ ಪ್ರಶ್ನೆ ನಿಮ್ಮನ್ನು ಕಾಡಿದರೆ, ಆಗ ಇದಕ್ಕೆ ಪರಿಹಾರವನ್ನೂ ಕಂಡು ಹುಡುಕಿ ನೋಡೋಣ.

— ಸುದಾಸ

ಪ್ರಗತಿ ಪರವಾಗಿ ಮುಂದುವರೆಯಲು ಸ್ನೇಹದಿ....



14 ನೇ ಸೆಪ್ಟೆಂಬರ್ 1964 ರಿಂದ ವಿಜಯಬ್ಯಾಂಕ್ ಲಿಮಿಟೆಡ್‌ನೊಡನೆ ದಕ್ಷಿಣ ಭಾರತ ಬ್ಯಾಂಕ್ ಪ್ರೈವೇಟ್ ಲಿಮಿಟೆಡ್‌ನ ಸೇರ್ಪಡೆಯು, ಕೇರಳ, ರಾಜ್ಯದಲ್ಲಿ ವಿಜಯ ಬ್ಯಾಂಕಿನ ಪ್ರಾರಂಭವನ್ನು ಸೂಚಿಸುತ್ತದೆ.

ಈಗ ಪಾಲಿ ಎರ್ನಾಕುಲಂ, ಕೊಚ್ಚಿನ್, ತ್ರಿಪುನಿತುರ ಮತ್ತು ತ್ರಿಚೂರು ಇಲ್ಲಿರುವ ದಕ್ಷಿಣ ಭಾರತ್ ಬ್ಯಾಂಕ್ ಪ್ರೈವೇಟ್ ಲಿಮಿಟೆಡ್‌ನ ನಾಲ್ಕು ಕಚೇರಿಗಳು, ಸೇರ್ಪಡೆಯ ತಾರೀಖಿನಿಂದ ಮುಂದಕ್ಕೆ ವಿಜಯ ಬ್ಯಾಂಕ್ ಲಿಮಿಟೆಡ್‌ನ ಹೊಸ ಶಾಖೆಗಳಾಗಿ ಕೆಲಸ ಮಾಡುವುವು.

ವಿಜಯ ಬ್ಯಾಂಕ್ ಲಿಮಿಟೆಡ್‌ನ ಡೈರೆಕ್ಟರ್‌ಗಳ ಮಂಡಲಿಯು ದಕ್ಷಿಣ ಭಾರತ್ ಬ್ಯಾಂಕ್ ಪ್ರೈವೇಟ್ ಲಿಮಿಟೆಡ್‌ನ ಪ್ರತಿಯೊಬ್ಬ ಪೋಷಕರಿಗೂ ವಿಜಯ ಬ್ಯಾಂಕ್‌ನ ವೈಶಿಷ್ಟ್ಯವಾಗಿರುವ ವಿಶೇಷ ರೀತಿಯ, ಶೀಘ್ರ ಕರ ಹಾಗೂ ಆದರದ ಸೇವೆಯ ಭರವಸೆಯನ್ನು ನೀಡಬಯಸುತ್ತದೆ ಮತ್ತು ಅವರ ಅವಿರತ ಪ್ರೋತ್ಸಾಹವನ್ನು ಕೋರುತ್ತದೆ.

ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್

ವಿಜಯ ಬ್ಯಾಂಕ್ ಬಿಲ್ಡಿಂಗ್, ಲೈಟ್‌ಹೌಸ್ ಹಿಲ್ ರೋಡ್, ಮಂಗಳೂರು 3.

ಛೇರ್ಮನ್ ಎಂ. ಸುಂದರರಾಮಶೆಟ್ಟಿ ಸೆಕ್ರೆಟರಿ ಪಿ. ಜಯರಾಮಶೆಟ್ಟಿ

Estd: 1921

NAVAYUGA

Leading Kannada Weekly

UDIPI, S Kanara

(Mysore State)

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೇಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥಗಳಿಂದ ಕೂಡಿರಬೇಕು. ಕಾಗದ ತಾನಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅ ಪ್ರಕಟಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಸುದ್ದಿ ಕಳಿಸುವವರಿಗೆ

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಚಂದಾದಾರರಿಗೆ

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಲಭ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ಸಂಖ್ಯೆಯನ್ನು ಸೂಚಿಸುವುದು ಅನುಕೂಲ.

ಮಾರಾಟ ಪತ್ರದಲ್ಲಿ:

ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಶ್ರೀಪಾದಂಗಳವರು

═ ನವಯುಗ ═

ಸಂಪುಟ ೪೪	ಉಡುಪಿ ೧೭—೯—೧೯೬೪	ಸಂಚಿಕೆ ೩

ಯೋಜನೆಯಿಲ್ಲದ ಯೋಜನೆ

ಆಹಾರ ಧಾನ್ಯಗಳ ಬೆಲೆಯೇರಿಕೆಯನ್ನು ತಡೆಯುವ ಕ್ರಮವೆಂದು ಸರಕಾರವು ವಿವಿಧ ವರ್ಗದ ಧಾನ್ಯಗಳ ಬೆಲೆಯನ್ನು ಗೊತ್ತುಪಡಿಸಿದ್ದು ಸರ್ವವಿದಿತ. ಈ ಬೆಲೆಯಲ್ಲಿ ಅಲ್ಲಲ್ಲಿ ಕೆಲವು ವರ್ತಕರು ಹಾಗೂ ಸಹಕಾರಿ ಸಂಘಗಳು ಅವನ್ನು ಪೂರೈಸುತ್ತಿರುವುದೂ ನಿಜ. ಗೊತ್ತುಪಡಿಸಿದ ಬೆಲೆಗೆ ಗೊತ್ತುಪಡಿಸಿದ 'ಧಾನ್ಯವೇ ದೊರೆಯುತ್ತಿದೆ ಎಂದು ಖಾತ್ರಿಯಿಂದ ಹೇಳುವುದು ಸಾಧ್ಯವಾಗುತ್ತಿಲ್ಲ. ಸರಕಾರವು ನಿರ್ಣಯಿಸಿದ ದರವಾದರೂ ಕಡಿಮೆಯಲ್ಲಿಲ್ಲ. ಒಂದು ಕಿಲೋ ಧಾನ್ಯ ಬೇಕಾದರೆ ಸುಮಾರು ಒಂದು ರೂಪಾಯಿಯಷ್ಟು ಬೆಲೆಯನ್ನು ಕೊಡಬೇಕಾದ ಪ್ರಮೇಯವೇ ಹೆಚ್ಚಾಗಿದೆ. ನಿಯಮಿತ ಉದ್ಯೋಗಕ್ಕೆ ಅಂಟಿಕೊಂಡಿರುವವರು, ಕೂಲಿನಾಲೆ ಮಾಡಿ ಜೀವಿಸುವವರು ಆಹಾರ ಧಾನ್ಯಗಳ ಶಿಕಾರಿಯಲ್ಲೇ ಅರ್ಧ ದಿನ ಕಳೆಯುವುದು ಕಲ್ಯಾಣ ರಾಷ್ಟ್ರಕ್ಕೆ ಹಿತಕಾರಕವಾಗಲಾರದು. ದೇಶದಲ್ಲಿ ಹೇರಳ ಧಾನ್ಯ ಸಂಗ್ರಹವಿದ್ದರೂ ಸರಕಾರದ ಉದಾಸೀನದಿಂದ ಅದು ಮಾರುಕಟ್ಟೆಗೆ ಒದಗದಂತಾಗಿದೆ ವಾರ—ಎರಡು ವಾರಗಳಿಗೆ ಬೇಕಷ್ಟು ಧಾನ್ಯವನ್ನು ಒಟ್ಟುಗೂಡಿಸುವುದೂ ಮಧ್ಯಮ ವರ್ಗದ ಜನಕ್ಕೆ ಅಸಾಧ್ಯವಾಗಿದೆ. ಇದರಿಂದಾಗಿ ಬೆಲೆ ನಿಯಂತ್ರಣವನ್ನು ಹೇರಿ ಮಾರುಕಟ್ಟೆಯನ್ನು ನಿಯಂತ್ರಿಸಿದ ಸರಕಾರದ ನೀತಿಯು ಮೊದಲೇ ಅಭಾವ ಪೀಡಿತರಾದವರನ್ನು ಮತ್ತಷ್ಟು ಪೀಡೆಗೆ ಗುರಿ ಮಾಡಿದೆ.

ಇದಕ್ಕಿರುವ ಕಾರಣವೊಂದೇ. ಸರಕಾರವು ಧಾನ್ಯಗಳ ಪೂರೈಕೆಯನ್ನು ಬೇಕಷ್ಟು ಮಾಡಿ ಮತ್ತೆ ಬೆಲೆಯನ್ನು ನಿಯಂತ್ರಿಸಬೇಕಿತ್ತು. ಅಭಾವ ಪರಿಸ್ಥಿತಿಯನ್ನು ಹಣಮಾಡಲುಪಯೋಗಿಸುವ ಸಾರುತ್ತ ಬಂದುದರಿಂದ ಸಂಗ್ರಹಕಾರರು ಬಚ್ಚಿಡುವುದು ಸಾಧ್ಯವಾಯಿತು. ಸಂಗ್ರಹದ ಬಗ್ಗೆ ಘೋಷಣೆ ಮಾಡಿದರೂ ಕಳ್ಳಪೇಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರಲು ಅವರು ಸಿದ್ಧರಿದ್ದಾರೆ ಜನಸಾಮಾನ್ಯರಾದರೂ ಹೆಚ್ಚಿನ ಬೆಲೆ ತೆರುವುದಕ್ಕೂ ತಯಾರಿದ್ದಾರೆ. ಹಸಿದ ಹೊಟ್ಟೆಯಿಂದಿರುವುದು ಯಾರಿಂದಲೂ ಸಾಧ್ಯವಿಲ್ಲ. ಇದನ್ನೆಲ್ಲಾ ಗಮನಿಸುವಾಗ, ಈಗ ತೋರಿರುವ ಅಭಾವ ಪರಿಸ್ಥಿತಿಯು ಕೇವಲ ಕೃತಕವೆಂದು ಗೊತ್ತಾಗುವುದು. ಈ ಬಗ್ಗೆ ಸರಕಾರವು ಕೈ ಹಾಕದೆ ಇದ್ದಿದ್ದರೆ, ಪರಿಸ್ಥಿತಿಯು ಇಷ್ಟೊಂದು ಭೀಕರವಾಗುತ್ತಿರಲಿಲ್ಲವೇನೋ ಎಂಬ ಪ್ರಶ್ನೆಯೂ ಏಳುತ್ತದೆ. ಬಚ್ಚಿಟ್ಟಿರುವ ಸಂಗ್ರಹವನ್ನು ಹೊರಗೆ ತರಬೇಕಾದರೆ ಅವುಗಳ ಬೆಲೆ ಇಳಿಯಬೇಕು; ಇದಕ್ಕಾಗಿ ಸರಕಾರ ತನ್ನ ಸಂಗ್ರಹವನ್ನು ಉದಾರವಾಗಿ ಮಾರುಕಟ್ಟೆಗೆ ಹರಿಯಬಿಡಬೇಕು. ಆದರೆ ಇಂದಿನ ಪರಿಸ್ಥಿತಿಯನ್ನು ನೋಡುವಾಗ, ಸರಕಾರದೊಡನೆಯೂ ಆಹಾರಧಾನ್ಯಗಳ ಸಂಗ್ರಹವಿಲ್ಲವೆಂದು ಹೇಳಲೇ ಬೇಕಾಗುತ್ತದೆ. ಬೇರೆಯವರ ಕೈಯಲ್ಲಿರುವ ಒಡವೆ ಸರಕಾರದ ಬೆಲೆ ಗೊತ್ತುಮಾಡಿದರೆ, ಅದು ಯಶಸ್ವಿಯಾಗುವುದು ಸಾಧ್ಯವೇ ಇಲ್ಲ. ಖಾಸಗಿ ಸಂಗ್ರಹಕಾರರು ಒಂದಲ್ಲ ಒಂದು ದಿನ ತಮ್ಮ ಸಂಗ್ರಹವನ್ನು ಹೊರಹಾಕಬೇಕೇನೋ ನಿಜ. ಆದರೆ, ಅಂತಹ ಪರಿಸ್ಥಿತಿಯು ಒತ್ತಡ ತಲೆದೋರುವ ವರೆಗೆ ಹಸಿದ ಹೊಟ್ಟೆಗಳು ಸುಮ್ಮನಿರುವುದಿಲ್ಲ. ಹೆಚ್ಚು ಬೆಲೆ ತೆತ್ತಾದರೂ ತಮ್ಮ ಆವಶ್ಯಕತೆಯನ್ನು ಜನ ಪೂರಯಿಸಿಕೊಳ್ಳಬಹುದು. ಇದು ಅಸಾಧ್ಯರಾದವರು ಲೂಟಿ ಮಾಡುವುದಕ್ಕೂ ಹಿಂಜರಿಯಲಾರರು. ಇತ್ತೀಚೆಗೆ ಕೆಲವೆಡೆಗಳಿಂದ ಬಂದಿರುವ ವರದಿಯು ಇದನ್ನೇ ಪುಷ್ಟೀಕರಿಸುತ್ತದೆ ಬುಭುಕ್ಷಿತಃ ಕಿಂ ನ ಕರೋತಿ ಪಾಪಂ? ಇದರಿಂದ ಸಾಮಾಜಿಕ ಲೂಟಿ, ಗೊಂದಲ ಅವ್ಯವಸ್ಥೆ ಮತ್ತು ಅಭದ್ರತೆಗಳು ತಾನೇ ತಾನಾಗಿ ಕಾಣಿಸಿಕೊಳ್ಳುವುವು. ಇದು ಯಾರಿಗೂ ಶೋಭನೀಯವಲ್ಲ.

ಈ ಬಗೆಯ ಸ್ಥಿತಿ ತಲೆದೋರಿರುದರಿಂದಲೇ ಜನ ಕಂಗೆಟ್ಟಿದೆ. ಕಂಗೆಟ್ಟವರನ್ನ ದಾರಿ ತಪ್ಪಿಸುವ ದುಷ್ಟ ಶಕ್ತಿಗಳು ನಮ್ಮ ದೇಶದಲ್ಲಿ ಕಡಿಮೆಯಿಲ್ಲ. ದಾರಿದ್ರ್ಯದ ಬಳಿಕ ಕಿಡಿಗೇಡಿ ಪರಿಸ್ಥಿತಿ ತಲೆಯೆತ್ತುವುದೂ ಸ್ವಾಭಾವಿಕ. ಈಗ ಗೊತ್ತುಪಡಿಸಿದ ಬೆಲೆಯಲ್ಲಿ ಸರಿಯಾಗಿ ಆಹಾರ ಧಾನ್ಯಗಳು ಸಿಗುತ್ತಿಲ್ಲವಾದುದರಿಂದ ಪ್ರತಿ ಮನೆಗೂ ಪಡಿತರ ಪದ್ಧತಿಯು ಸುಲಭವಾಗಿ ನಡೆಯುವಂತಹ ಕ್ರಮಗಳನ್ನು ಸರಕಾರ ಕೈಗೊಳ್ಳಬೇಕು. ಎಂದ ಮಾತ್ರಕ್ಕೆ ಸೀದಾ ಪದ್ಧತಿಯನ್ನು ಅನುಸರಿಸಬೇಕೆಂದಿದರ ಅರ್ಥವಲ್ಲ. ವಿದೇಶಗಳಿಂದ ಆಯಾತವು ಬಹು ಬೇಗನೇ ಸಿದ್ಧಿಸಿತೆಂದರೆ, ಆಗ ಎಲ್ಲವೂ ಸರಿಹೊಂದುವುದು. ಸಾಗರದ ನಡುವಣ ಹಡಗ ಅಕ್ಕಿ ಹೊತ್ತು ತರುತ್ತಿದೆಯೆಂದ ಮಾತ್ರಕ್ಕೆ ಪೂರೈಕೆಯಾದಂತಾಗಲಿಲ್ಲ. ಕುದುರೆಗೆ ಮೊದಲೇ ಹುರುಳಿಯಂತೆ ಆವಶ್ಯಕವಿಲ್ಲದಿದ್ದ ಆಹಾರ ಧಾನ್ಯಗಳ ಬೆಲೆಯನ್ನು ನಿಯಂತ್ರಿಸ ಹೊರಟು ಸರಕಾರವೇ ಕರಿಯ ಮಾರುಕಟ್ಟೆಗೆ ಅವ್ಯಕ್ತಾನುಭೂತಿ ತೋರಿಸಿದಂತಾಯಿತು. ಇದರಿಂದಾಗಿಯೇ ಈ ನೀತಿಯು ಇಚ್ಛಿತ ಕಾರ್ಯರಂಗದಲ್ಲಿ ಯಶಸ್ವಿಯಾಗಲಿಲ್ಲ ಮುಂದಾದರೂ ಪೂರ್ವತಯಾರಿಯ ನಂತರವೇ ತನ್ನ ಹಜ್ಜೆಯನ್ನು ಸರಕಾರ ಇಡಬೇಕು. ಪ್ರತಿಯೊಂದಕ್ಕೂ ಯೋಜನೆಯನ್ನು ರಚಿಸುವಾಗ, ಆಹಾರಧಾನ್ಯ ಬೆಲೆ ಮತ್ತು ಪೂರೈಕೆಯ ಪಟ್ಟಿಗೂ ಸೂಕ್ತ ಯೋಜನೆಯಿರಬೇಕಾದುದು ಅತ್ಯಗತ್ಯವಲ್ಲವೇ?

ಕನಕ ಚತುರ್ಶತಮಾನ

ಮುಂದಿನ ವರ್ಷ ಎಪ್ರಿಲ್ ತಿಂಗಳಲ್ಲಿ ಕನಕದಾಸರ ನಾಲ್ಕನೆಯ ಶತಮಾನೋತ್ಸವವನ್ನು ಕರ್ನಾಟಕವಾದ್ಯಂತ ಆಚರಿಸುವ ಸಿದ್ಧತೆ ಈಗಲೇ ತಯಾರಾಗಿದೆ. ಮುಖ್ಯವಾಗಿ ಅವರ ಮೂಲಸ್ಥಾನ ಕಾಗಿನೆಲೆ, ಅವರಿಗೆ ಪರಮಾತ್ಮನ ದರ್ಶನವಿತ್ತ ಉಡುಪಿ ಮತ್ತು ರಾಜ್ಯದ ರಾಜಧಾನಿ ಬೆಂಗಳೂರುಗಳಲ್ಲಿ ಇದನ್ನು ವೈಭವದಿಂದ ಆಚರಿಸಲಾಗುವುದು. ಇದಕ್ಕಾಗಿ ರಾಜ್ಯದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲೊಂದು ಸಮಿತಿಯು ರಚಿತವಾಗಿದೆ ಸಭೆ-ಸಂಗೀತಗಳ ಕಾರ್ಯಕ್ರಮಗಳೊಡನೆ ಕನಕದಾಸ ಮತ್ತವರ ಕೃತಿಗಳಿಗೆ ಸಂಬಂಧಿಸಿದ ಸಂಶೋಧನೆ ನಡೆಸುವವರಿಗೆ ಛಾತ್ರವೃತ್ತಿ ನೀಡುವುದು, ಉಪನ್ಯಾಸಗಳನ್ನು ಏರ್ಪಡಿಸುವುದಲ್ಲದೆ ದಾಸವರ್ಯರ ಅವ್ಯಕ್ತ ಶಿಲೆಯ ಪ್ರತಿಮೆಯನ್ನು ಸ್ಥಾಪಿಸುವುದೂ ಸಮಿತಿಯ ಉದ್ದೇಶವಿದೆ.

ಶಿಲಾಪ್ರತಿಮೆಯ ಸ್ಥಾಪನೆಗಿಂತಲೂ ಮುಖ್ಯವಾದ ಒಂದು ಕೆಲಸವನ್ನು ಸಮಿತಿಯು ಮಾಡಬೇಕೆನಿಸುತ್ತದೆ. ಕನಕದಾಸರು ಭಕ್ತ ಶಿರೋಮಣಿ ಆದುದರಿಂದಲೇ ಉಡುಪಿಯ ಕೃಷ್ಣನೂ ಪಡುಗಡೆಗೆ ಮುಖ ತಿರುಗಿಸಿದನೆನ್ನುತ್ತಾರೆ, ನಿಜ. ಜತೆಗೆ ಅವರೊಬ್ಬ ಕವಿಗಳು. ಜಾತಿಪಂಥದ ವಿರುದ್ಧ, ಜ್ಞಾನದ ಗುತ್ತೇದಾರಿಯ ವಿರುದ್ಧ ಕ್ರಾಂತಿಯ ಕಹಳೆಯೂದಿದ ಕನಕದಾಸರೊಬ್ಬ ಉತ್ತಮ ಕವಿಗಳೂ ಹೌದು. ಅವರ ಕೃತಿಗಳು ಸುಲಭ ಬೆಲೆಯಲ್ಲಿ ಜನಸಾಮಾನ್ಯರಿಗೂ ದೊರೆಯುವಂತೆ ಮಾಡಬೇಕು. ಅವರ ಕೀರ್ತನೆಗಳನ್ನು ಪರಿಶೋಧನೆಗೆ ಗುರಿಪಡಿಸಿ ಅವರವನ್ನು ಹೆಕ್ಕಿ ತೆಗೆದು ಪ್ರಕಟಿಸಬೇಕು. ಅನುಕೂಲವಿದ್ದಲ್ಲಿ ದಾಸಸಾಹಿತ್ಯದ ಒಂದು ಸಂಶೋಧನಾ ಪೀಠವನ್ನೂ ಸ್ಥಾಪಿಸಬಹುದು.

ಚತುಃಶತಮಾನೋತ್ಸವವು ಕೇವಲ ವೈಭವಾಡಂಬರಗಳಲ್ಲಿಯೇ ಪರ್ಯವಸಾನಗೊಳ್ಳದಂತಾಗಬಾರದು. ನಾವು ಆಚರಿಸುವ ಉತ್ಸವಕ್ಕೂ ಒಂದು ಅರ್ಥ ಹುಟ್ಟುವಂತಿರಬೇಕು. ಈ ದಿಸೆಯಲ್ಲಿ ನಾವು ಅಗ್ರಸರರಾಗದೆ ಎಂದಿಗೂ ಉಳಿಯಬಾರದು.

ವಚನ ಸುಧೆ

ಇದ ಚೇದವೇದೀದಥ ಸತ್ಯಮಸ್ತಿ।
ನ ಚೇದಿಹಾವೇದೀನ್ಮಹತೀ ವಿನಷ್ಟಿಃ॥
(ಕೇನೋಪನಿಷತ್ತು ೨—೫)

೦ ಸತ್ಯ ಜ್ಞಾನವು ಬಳ್ಳಿಯದು. ಈ ಜ್ಞಾನವೊದಗದೆ ಹೋದರೆ ಬಹು ಗೂಢ ಹಾನಿಯಾಗುವುದು.

೦೦ ಸತ್ಯವೇ ಸರ್ವಶ್ರೇಷ್ಠವೆಂಬ ಪರಿಜ್ಞಾನವು ನಮ್ಮಲ್ಲಿ ಮೂಡುವುದು ಬಹೂತನು. ಆದರೆ, ಇಂತಹ ಜ್ಞಾನವು ನಮಗಾಗಲಿಲ್ಲವೆಂದಾದರೆ, ಅದರಿಂದ ಹಾನಿತಟ್ಟುತ್ತದು. ಆದುದರಿಂದ ಸತ್ಯದ ಮೇಲೆ ವಿಶ್ವಾಸವಿಡಬೇಕು.

ನರಸಣ್ಣನ ಸರಸ



ಕೇರಳದಲ್ಲಿ ಕಾಂಗ್ರೆಸಿಗರು ಶಿಸ್ತು ಭಂಗ ಮಾಡಿದ್ದು ಅಂತೀರೋ? ಅದನ್ನು ಅಲ್ಲೇ ಆಗು ಎನ್ನ ಹೊರಗಿನೋರು ಯಾಗ್ರ ಕಾರ್ಯಕ್ರಮ ಕೈಗೊಂಡೂ ಆಯ್ತಲ್ಲಾ....?

ಮೂರು

ಕಥಾಪ್ರಪಂಚ

ಜೀವನ ನಾಟಕ

ಕತೆಗಾರ್ತಿ
ಶ್ರೀಮತಿ ಯಶೋದಾ ಯನ್. ಜೆನ್ನಿ.

ಸರೋಜ ಮೇಜಿಗೆ ತಲೆಯೊರಗಿಸಿ ಯೋಚಿಸುತ್ತಲೇ ಇದ್ದಳು. ಎಷ್ಟು ಯೋಚಿಸಿದರೂ ಪರಿಹಾರವಾಗದ ಸಮಸ್ಯೆ ಆಕೆಯ ವಿಮಲ ಮನಸ್ಸನ್ನು ಕಲಕುತಿತ್ತು. ಆಕೆಯ ಐದು ವರ್ಷದ ಪುಟ್ಟ ತಮ್ಮ ರವಿ ಯಾವುದರ ಪರಿವೆಯೂ ಇಲ್ಲದೆ ಅಂಗಳದಲ್ಲಿ ಚೆಂಡಾಟದಲ್ಲಿ ತಲ್ಲೀನನಾಗಿದ್ದ.

"ಇಲ್ಲ ಕಾವೇರಮ್ಮ, ಈ ಕಲಿಯುಗದಲ್ಲಿ ನ್ಯಾಯ, ನೀತಿ, ಧರ್ಮ, ಕರ್ಮಗಳನ್ನು ಯಾರು ಕೇಳ್ತಾರೆ? ಒಟ್ನಾರೆ ಸುಖಪಡೋದು, ಆದೋದೇ ಬೇಕಾದ್ದು. ಆದ್ರೆ....ನಾಚಿಕೆ, ಮರ್ಯಾದೆ, ಭಯ, ಭೀತಿಗಳಾದ್ರೂ ಇರೋದು ಬೇಡ್ವೇ? ಥೂ...ಹೆಣ್ಣಾಗಿ ಹುಟ್ಟಿ....ಇಷ್ಟು ನಿರ್ಲಜ್ಜಳಾಗಿರೋದಂತ್ರೆ...?"

"ಹೌದಮ್ಮಾ, ಹೌದು. ಅವಳನ್ನು ನೋಡಿದ್ರೆ ತಿಳಿಯೋದಿಲ್ವೇ? ಗಂಡ ಸತ್ತವಳಿಗೆ ಆ ಸಿಂಗಾರ, ಶೋಕು ಎಲ್ಲ ಯಾಕೆ? ಗಂಡಸರಿಲ್ಲದ ಮನೆ ಬಾಗಿಲಿಗೆ ಗಂಡಸರು ಬರ್ತಿರೋದು ಯಾಕೆ? ನೀವೇ ಹೇಳಿ. ಒಟ್ನಾರೆ ಅದನ್ನೆಲ್ಲ ನೋಡಿದ್ರೆ ಹೊಟ್ಟೇಲಿ ಸಂಕಟವಾಗುತ್ತೆ. ಈ ಪಾಪಿ ಕಣ್ಣುಗಳಲ್ಲಿ ಏನೇನು ನೋಡಲಿಕ್ಕಿದೆಯೋ ಅಂತ" ಕಾವೇರಮ್ಮ ರಂಗಮ್ಮನಿಗಿತ್ತ ಪ್ರತ್ಯುತ್ತರವದು. ಲೋಕದ ಪಾಪ, ಪುಣ್ಯಗಳಿಗೆಲ್ಲ ತಾವೇ ಹೊಣೆಗಾರರೇನೋ ಎನ್ನುವ ರೀತಿಯ ವಾದ ಸರಣಿಯಲ್ಲಿ ಮಗ್ನರಾಗಿ ಸರೋಜಳ ಮನಸ್ಸನ್ನು ಚಿತ್ರಹಿಂಸೆಗೊಳಿಸಿದ್ದವುದು ಹೃದಯದವರೆಂದು ಹೆಸರು ಪಡೆದ ಮಹಿಳೆಯರಿಂದ ಹೊರಬಂದ ಕರ್ಕಶ ನುಡಿಗಳು ಮೇಳಿಸಿದವು.

"ಗಂಡನಿಲ್ಲವಾದ್ರೇನಂತೆ? ಇವಳ ಬೆಡಗಿಗೆ ಗುಂಡುಕಲ್ಲೂ ಮರುಳಾಗಿ ಗಂಡನಾದೀತು. ಏನು ವಯ್ಯಾರ....ಏನು ವೇಷ...ಅಬ್ಬಬ್ಬ....ಕೃಷ್ಣಾ....ಕೃಷ್ಣಾ... ನಮಗೇಕಪ್ಪ ಅಂತಾ ಪಾಪಿಷ್ಠರ ವಿಚಾರ....?" ಎಂಬ ವ್ಯಂಗ್ಯದ ನುಡಿ ಬೇರೆ.

ಪಕ್ಕದ ಕೊಠಡಿಯಿಂದಲೇ ಕೇಳಿಬರುವ ಕಿವಿಯಿರಿಯುವ ಕರ್ಕಶ ಮಾತುಗಳ ಬಾಣ ಸರೋಜಳ ಹೃದಯವನ್ನು ಘಾಸಿಗೊಳಿಸಿತು ಆದರೆ ಇಂತಹ ವಾಗ್ಬಾಣಗಳೇನೂ ಆಕೆಯ ಜೀವನದಲ್ಲಿ ಹೊಸ ವಿಷಯವಾಗಿರಲಿಲ್ಲ.

ಮದುವೆಯಾದ ಕೆಲವೇ ತಿಂಗಳುಗಳೊಳಗೆ ವಿಧವೆಯಾದ ಆ ದೌರ್ಭಾಗ್ಯ ಜೀವಿ ಹೊಟ್ಟೆಪಾಡಿಗಾಗಿ ಆಫೀಸೊಂದರಲ್ಲಿ ಗುಮಾಸ್ತೆಯ ಕೆಲಸವನ್ನು ಹಿಡಿದಿದ್ದಳು. ತವರು ಮನೆಯಲ್ಲೂ ಯಾವ ಅನುಕೂಲವೂ ಇಲ್ಲದ ಆಕೆ ಉದ್ಯೋಗಕ್ಕಾಗಿ ಪುಟ್ಟ ತಮ್ಮನೊಂದಿಗೆ ರಂಗಮ್ಮನ ನೆರಮನೆಯಲ್ಲೇ ವಾಸಿಸುವ ನತದೃಷ್ಟೆಯಾಗಿದ್ದಳು.

ಯಾವ ವಿಶೇಷ ಆಡಂಬರವೂ ಇಲ್ಲದೆ ಸರಳ ರೀತಿಯಲ್ಲಿ ಜೀವಿಸ ಬಯಸಿದ ಸರೋಜ ರಂಗಮ್ಮನ ದೃಷ್ಟಿಯಲ್ಲಿ ಅಪರಾಧೀಯ ಸ್ಥಾನ ಗಳಿಸಿದ್ದಳು.

ಚಿಕ್ಕಂದಿನಲ್ಲೇ ವಿಧವೆಯಾಗಿ ಮುಡಿವಂತರ ನೆರಳಲ್ಲಿ ಬೆಳೆದವಳು ರಂಗಮ್ಮ. ಜೀವನದಲ್ಲಿ ಸುಖ, ಸಂತೋಷವೆಂದರೇನೆಂದು ತಿಳಿಯದ ಆಕೆಯ ಹೃದಯ ಮತ್ಸರದಿಂದ ಕುದಿಯುತ್ತಲೇ ಇತ್ತು. ಎಂದೇ ಯಾರ ಹಂಗಿಗೂ ಒಳಗಾಗದೆ, ರಂಗಮ್ಮನ ಕೂಟಕ್ಕೂ ಸೇರದೆ ಪ್ರತ್ಯೇಕವಾಗಿ ಏಕಾಂತ ಜೀವಿಯಾಗಿದ್ದ ಸರೋಜ ಆವರ ವಕ್ರ ದೃಷ್ಟಿಗೆ ಬಲಿಯಾದಳು.

ಮೊದಲೇ ಕೊಸಗಾಣದ ಕೊರಗಿನಿಂದ ಸದಾ ಕಾಲವೂ ಕಳವಳ ಪಡುತ್ತಿರುವ ಸರೋಜಳಿಗೆ ಇಂತಹ ಮಾತುಗಳನ್ನೆಲ್ಲ ಕೇಳಿ ಕೇಳಿ ತಾನು ಕಿವುಡಿಯಾದರೂ ಆಗಬಾರದಿತ್ತೇ ಎಂದೆನಿಸುವಂತಾಗಿತ್ತು. ಅಲ್ಲದೆ ರಂಗಮ್ಮನಂತಹ ಪರಿತ ನಾಲಗೆಯೆದಿರು ಮಾತೆತ್ತಿದರೆ ಮುಂದೆ ಆ ಊರಲ್ಲೇ ಬಾಳುವಂತೆಯೂ ಇರಲಿಲ್ಲ. ಯಾವ ಸುಖ, ಸಂತೋಷಗಳೂ ಇರದೇ ಇದ್ದರೂ ಯಾಂತ್ರಿಕವಾಗಿಯಾದರೂ ಇನ್ನೊಬ್ಬರ ಆಶ್ರಯದ ಹಂಗಿಲ್ಲದೆ ಜೀವಿಸ ಬಯಸಿದ ಸರೋಜಳು ಸಮಾಜದಲ್ಲಿ ಗೌರವದ ಬದಲು ನಿಂದೆಯ ಸುರಿಮಳೆಯನ್ನಿದಿರಿಸ ಬೇಕಾಗಿತ್ತು.

ಕತ್ತಲಾಗುತ್ತಾ ಬಂದಿದ್ದರೂ ಸರೋಜ ದೀಪ ಹಚ್ಚುವ ಗೊಡವೆಗೂ ಹೋಗಲಿಲ್ಲ.

"ಅಕ್ಕ ..ಅಕ್ಕಾ....ಆದ್ಯಾರೆ ಇಲ್ಲಿ?" ಯಾರೋ ಅಪರಿಚಿತರನ್ನು ನೋಡಿದ ಸರೋಜಳ ತಮ್ಮ ಓಡಿಬಂದು ಹೊರಗಿನ ಕಿಟಿಕಿಯತ್ತ ಬೆರಳು ತೋರಿದ. ಸರೋಜ ತಟ್ಟನೆ ಎದ್ದು ನೋಡಿದಳು. ಆ ಮಸುಕು ಬೆಳಕಿನಲ್ಲಿ ಶಾಲು ಹೊದೆದ ಆ ವ್ಯಕ್ತಿ ರಂಗಮ್ಮನ ಮನೆ ಹಿಂಬಾಗಿಲಲ್ಲಿ ನಿಂತಿತ್ತು. ಸರೋಜ ಬೆರಗಾಗಿ ನೋಡುತ್ತಲೇ ಇದ್ದಳು. ಸ್ವಲ್ಪ ಹೊತ್ತಿನಲ್ಲಿ ಬಾಗಿಲು ತೆರೆದ ಸದ್ದು....ಗುಸು ಗುಸು ಮಾತು ...

ಆ ವೇಳೆ ರಾತ್ರಿಯ ಊಟ ಮುಗಿಸಿ ಕೈ ತೊಳೆಯಲೆಂದು ಸರೋಜ ಹೊರಗೆ ಬಂದಾಗ ಸರೋಜಳ ಅಂಗಳದಲ್ಲೇ ಹಾದು ಹೋದನಾತ. ಆ ಊರ ಶ್ರೀಮಂತ ಸೆಟ್ಟಿ. ಅರವತ್ತರ ಮುದುಕ....ಮಡಿವಂತಿಕೆ ಮತ್ತು ಸಂಪ್ರದಾಯಗಳ ಮುದ್ದೆಯಂತಿದ್ದ ರಂಗಮ್ಮನ ಮನೆಗೆ ಹೋಗಿ ಹಿಂತಿರುಗುತ್ತಿದ್ದ. ಮಾತೆತ್ತಿದರೆ ಸೀತಾ, ಅನುಸೂಯರ ಉದಾಹರಣೆಗಳನ್ನೆತ್ತುವ ರಂಗಮ್ಮ... ಪರನಿಂದೆಯೇ ಜೀವನದ ಪರಮ ಧ್ಯೇಯವೆಂದುಕೊಂಡಿದ್ದ ರಂಗಮ್ಮ....!

ಸರೋಜಳಿಗೆ ಆಶ್ಚರ್ಯ, ಕೋಪ, ತಿರಸ್ಕಾರಗಳು ಒಮ್ಮೆಯೇ ಉಂಟಾದವು.

ತಲೆ ಕೂದಲನ್ನು ತೆಗೆದು ಉರೂಪಗೊಳಿಸಿ, ಮಡಿ ಮಡಿಯೆಂದು ಬೊಬ್ಬಿಡುತ್ತಾ ಆತ್ಮಪ್ರಶಂಸೆ ಮಾಡುವ ಕಾವೇರಮ್ಮ ಪವಿತ್ರ ಜೀವಿಯೆಂದು ಪರಿಗಣಿಸಲ್ಪಟ್ಟವಳು. ಗೌರವದ ಬಾಳುವೆಗಾಗಿ ಒದ್ದಾಡುವ ಜೀವಿ ಸರೋಜ ಸರಳ ಜೀವನ ನಡೆಸಿದರೂ ಪಾಪಿ ಎಂದು ಪರಿಗಣಿಸಲ್ಪಟ್ಟಳು.

"ಅಯ್ಯೋ...ಈ ನಾಯಿಗಳ ಕಾಟವೇ ...ಬೆಳಗ್ಗೆ ಏಳುವಾಗ್ಲೇ ತಯಾರಾಗ್ತವೆ. ದರಿದ್ರದವು....ಈ ಚಳೀಲಿ ಮಿಂದು ಬೇಕು.ಕೃಷ್ಣಾ....ನಿನ್ನ ಲೀಲೆಯೇ...."ಎಂದು ಕೊಡಪಾನದೊಂದಿಗೆ ಬಾವಿಯ ಕಟ್ಟೆಯ ಬಳಿ ನಡೆದರು ರಂಗಮ್ಮ.

"ಹೌದು ಕಾವೇರಮ್ಮ; ಮಡಿ, ಮೈಲಿಗೆ ಇಲ್ಲದವ್ರಿಗೆ ಅದೆಲ್ಲ ಆದೀತು. ನಾವು ಕೊನೆಯುಸಿರೆಳೆವ ತನಕವೂ ಆ ರೀತಿ ನಾಯೀನ ಮುಟ್ಟಿ ಒಳಗೆ ಬರುವಂತಿದೆಯೋ.... ಕೃಷ್ಣಾ...." ಎನ್ನುತ್ತಾ ಕಣ್ಣರನ್ನು ಮೊಯ್ದುಕೊಂಡು ಶುದ್ಧರಾದ ರಂಗಮ್ಮ ದೇವರ ಹಾಡು ಗುಣುಗುಣಿಸುತ್ತಾ ಮನೆ ಸೇರಿದರು.

ಸರೋಜ ತನ್ನಲ್ಲೇ ಅಂದುಕೊಂಡಳು ಈಗ "ಇಂಥಹ ವೇಷಧಾರಿಗಳಿಗೇನೇ ಕಾಲ"

ಕವನ ಕಿಡಿಗಳು

ಕಾಲೇಜು ಹುಡುಗಿ

ತುಟಿಗೆ ನವಿಲದ ಲೇಪ
ಕಿವಿಗೆ ತೂಗುವ ದೀಪ
ಆ ಹುಡುಗಿ ಕಾಲೇಜು
ಬೆಡಗಿ, ವೈಯಾರಿ.
ಕೈಯಲ್ಲಿ ರ್‍ಯಾಕೆಟ್ಟು
ಮುಖದಲ್ಲಿ ಸ್ನೋ ಹಿಟ್ಟು.
ಉಟ್ಟ ಸೀರೆಯ ಸೆರಗು
ಹೋಗಿತ್ತು ಜಾರಿ.

ಸಂಭಾವಿತರ ಸೋಗಿನಲಿ

ಹಳ್ಳಿಯುದ್ಧಾರವೇ ಅವರ ಗುರಿಯಂತೆ!
ನೆಹರೂತತ್ವವೇ ಅವರ ಆದರ್ಶವಂತೆ
ಅವರು ತೊಡುವುದೂ ಶುದ್ಧ
ಖಾದಿಯಾ ಶರ್ಟ್
ಒಳಗೊಳಗೆ ಮಾಡುವುದು ಬ್ಲ್ಯಾಕು
ಮಾರ್ಕೆಟ್ಟು

ಬದಲಾದ ಕಾಲ

ಕಾಲ ಬದಲಾಯ್ತಪ್ಪ,
ಹಳ್ಳಿಯಾನಗರ
ಎಲ್ಲೆಲ್ಲೂ ವೀಕ್ಲಿ ಡೈಲಿಯ
ಗಾಳು ಬಹಳ
ಅಡುಗೆ ಮನೆಯಲ್ಲು
ಇಂಗ್ಲೀಷು ನೇಟರ್ರು.
ಗುಡಿಯಲ್ಲು ಸಹ
ರಾಮಂಜ ನಾಡರ್ರು.

ಅಡ್ವೋಕೇಟರ ಅವಸ್ಥೆ

ನಾನು ಅಡ್ವೋಕೇಟ್, ನನ್ನಾಕೆ ನರ್ಸ
ಯಾವಾಗಲೂ ಖಾಲಿ ನನ್ನ ಈ ಪರ್ಸ
ನನ್ನ ಚಟಗಳಿಗೆ ಕೊಡಬೇಕವಳೆ ಕಾಸು
ಅಯ್ಯೋ ಇದಕಿಂತಹಳ ವೃತ್ತಿ
ಬಲು ಲೇಸು.

ಜನಸಂಖ್ಯೆ ಏರುತಿದೆ

ಏರುತಿಹ ಜನಸಂಖ್ಯೆ ದೇಶಕ್ಕೇ ಭಾರಿ
ಪ್ರಾಬ್ಲೆಮ್ಮು ಇದ ತಡೆಯ
ಲುಂಟೊಂದು ದಾರಿ
ಮೆಡಿಕಲ್ಲು ಕಾಲೇಜು
ಹೆಚ್ಚಿದರೆ ಸಾಕೆ?
ಡಾಕ್ಟರರಿಗೆ ಕೊಲ್ಲುವಾ
ಲೈಸೆನ್ಸು ಬೇಕು.

ಪೋಲೀಸರೇ ಕಳ್ಳರಾದರೆ

ಎಲ್ಲ ಹಳ್ಳಿಗಳಲ್ಲೂ ಕಳ್ಳ ಭಟ್ಟಿಯ ಕೇಂದ್ರ
ಸುಳ್ಳಲ್ಲ; ಈ ಮಾತು ನಿಜಕೂ
ಬಹುಮಾತ್ರ
ಕಳ್ಳ ಅರ್ಜಿಯ ಬರೆದು
ಪೋಲೀಸ ಕರೆಸಿದರೆ,
ಪೋಲೀಸರೇ ಕುಡಿದು
ಮಲಗಿದರು ರಾತ್ರಿ.

—ಶಂಸ ಐತಾಳ, ಹಾರ್‍ಯಾಡಿ

![6¼%]

6¼%

ಫಿಕ್ಸೆಡ್ ಡಿಪಾಜಿಟುಗಳ ಮೇಲೆ ತಾರೀಕು 1—9—64ರಿಂದ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು:—

	1ರಿಂದ 3 (ತಿಂಗಳು)	4ರಿಂದ 12 (ತಿಂಗಳು)	2 ವರ್ಷ	3 ವರ್ಷ	4 ವರ್ಷ	5 ವರ್ಷ	6 ವರ್ಷ	7—10 (ವರ್ಷ)
	% p.a.	% p.a.	% p.a.	% p.a.	% p.a.	% p.a.	% p.a.	% p.a.
ರೂ. 4999ರ ವರೆಗಿನ ಡಿಪಾಜಿಟುಗಳ ಮೇಲೆ:-	$4\frac{3}{4}$	5	$5\frac{1}{4}$	$5\frac{1}{2}$	$5\frac{3}{4}$	6	$6\frac{1}{8}$	$6\frac{1}{4}$
ರೂ. 5000 ಮತ್ತು ಮೇಲ್ಪಟ್ಟ ಡಿಪಾಜಿಟುಗಳ ಮೇಲೆ:-	5	$5\frac{1}{4}$	$5\frac{1}{2}$	$5\frac{3}{4}$	6	6	$6\frac{1}{4}$	$6\frac{1}{4}$

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

ರಜಿಸ್ಟರ್ಡ ಆಫೀಸು: ಕೋರ್ಟ ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ)
(ಶೆಡ್ಯೂಲ್ಡ್ ಬ್ಯಾಂಕ್)
ಸ್ಥಾಪನೆ: 1920

ಭಾರತ ದರ್ಶನ

ವಿಮಾನಗಳಿಂದ ಆಹಾರ ಪೂರೈಕೆ



ಪರ್ವತದ ಶಿಖರದೆತ್ತರಕ್ಕೂ ಹಾರಬಲ್ಲ ಆಹಾರ ಪೂರೈಕೆಯ ವಿಮಾನವೊಂದನ್ನು ಇನ್ನೊಂದು ವಿಮಾನದಿಂದ ನಾವು ನೋಡಬಹುದಾದ ದೃಶ್ಯ

ಅಭಾವ ಪೀಡಿತ ಪ್ರದೇಶಗಳು ಬಯಲುನಾಡಿನಲ್ಲಿ ಮಾತ್ರವಲ್ಲ ಗುಡ್ಡಗಾಡು ಪ್ರದೇಶದಲ್ಲಿಯೂ ಇರುತ್ತವೆ ಆದರೆ ಇಂತಹ ಎಡೆಗಳಿಗೆ ಸುಲಭವಾಗಿ ಆಹಾರ ಧಾನ್ಯಗಳನ್ನು ಒದಗಿಸುವುದು ಸಾಧ್ಯವಿಲ್ಲ, ಅಲ್ಲಿ ಮೋಟರುಗಳು ಕೂಡ ಏರುವುದಿಲ್ಲ. ಅಂತಹ ಎತ್ತರದ ಪರ್ವತ ಶಿಖರಗಳಿಗೆ, ನದೀ ನೀರ ನೆರೆಯಲ್ಲಿ ದೈವ ಕಾರುಣ್ಯದಿಂದ ಬದುಕುಳಿದವರಿಗೆ ಆಹಾರ ವಿತರಣೆ ಮಾಡುವಲ್ಲಿ ನಮ್ಮ ವಿಮಾನ ದಳವು ಯಶಸ್ವಿಯಾಗಿ ಕೆಲಸ ಮಾಡುತ್ತಿದೆ. ತನ್ನ ಕರ್ತವ್ಯದಲ್ಲಿ ಅದು ಯಶವನ್ನೂ ಗಳಿಸಿದ ವಿಮಾನಗಳು ನಿರ್ದಿಷ್ಟ ಎಡೆಗಳಿಗೆ ತೆರಳಿ ಪ್ಯಾರಚೂಟ್‌ಗಳ ಸಹಾಯದಿಂದ ಉದರ ಪೀಡಿತರಿಗೆ ಆಹಾರವನ್ನು ನೀಡುತ್ತವೆ ನೇಫಾ, ಲಡಖಗಳಲ್ಲಿ ವಿಕ್ಷೋಭ ಪರಿಸ್ಥಿತಿಗೊಂಡಾಗ, ಗಂಗಾ-ಬ್ರಹ್ಮಪುತ್ರ ಮತ್ತು ಕೇರಳದ ನದಿಗಳು ಹುಚ್ಚಾಗಿ ಹರಿದು ಜನತೆಯನ್ನು ಕಂಗಾಲು ಮಾಡಿದಾಗ ನಮ್ಮ ವಿಮಾನಗಳು ಅವರಿಗೆ ಆಹಾರ ಪೂರೈಕೆ ಮಾಡಿರುವುದನ್ನು ಇಲ್ಲಿ ನೆನಪಿಸಬಹುದು.

ಹಿಮಾಲಯದ ಉತ್ತುಂಗಗಿರಿ ಶಿಖರಗಳಲ್ಲಿ ಮಳೆ ಚಳಿಯೆನ್ನದ ಅಹೋರಾತ್ರಿ ದೇಶ ರಕ್ಷಣೆಗಾಗಿ ಹೋರಾಡುವ ನಮ್ಮ ವೀರ ಯೋಧರಿಗೂ ಕೆಲವೊಮ್ಮೆ ಇದೇ ಮಾದರಿಯಲ್ಲಿ ಆಹಾರ ಪೂರೈಸಬೇಕಾಗುತ್ತದೆ

ಪ್ಯಾರಾಚೂಟುಗಳು ಹೂಗಳಂತೆ ಅರಳಿ ನಿಧಾನವಾಗಿ ನಿರ್ದಿಷ್ಟ ಗುರಿಯತ್ತ ಇಳಿಯುವಾಗಲೇ ನೋಡುವವರಿಗೆ ವಿಮಾನಗಳು ಎಸೆದ ವಸ್ತುಗಳ ಕಂಡು ಬರುತ್ತವೆ ವಿಮಾನಗಳು ಯೋಧರಿಗೆ ಅಗತ್ಯವಾದ ವಸ್ತುಗಳನ್ನು ಎಸೆಯುವಾಗ ಪ್ರತಿಸಲವೂ ವಿಮಾನದ ಒಳಭಾಗದಲ್ಲಿ ಒಂದು ನಾಟಕವೇ ನಡೆಯುತ್ತದೆ.

ವಿಮಾನ ಚಾಲಕನು ವಸ್ತುಗಳನ್ನು ಎಸೆಯುವ ಪ್ರದೇಶವನ್ನು ಗುರುತಿಸಿದ ಕೂಡಲೇ ಅವನು ವಸ್ತುಗಳನ್ನು ಎಸೆಯುವ ಸಿಬ್ಬಂದಿಯವರಿಗೆ ಸಂಜ್ಞೆ ಮಾಡುತ್ತಾನೆ. ಅವರು ಹೊರಗೆ ಎಸೆಯಬೇಕಾದ ವಸ್ತುಗಳನ್ನು ವಿಮಾನದ ಬಾಗಿಲಿನ ವರೆಗೂ ತಂದು ನಿಲ್ಲಿಸುತ್ತಾರೆ. ಎಸೆಯಬೇಕಾಗ ಸ್ಥಳ ಹತ್ತಿರ ಬಂದಂತೆ ಚಾಲಕನು ವಿಮಾನದ ವೇಗವನ್ನು ಕಡಿಮೆ ಮಾಡುತ್ತಾನೆ. ವಿಮಾನವನ್ನು ಅತಿ ವೇಗವಾಗಿ ನಡೆಸಿದರೆ ಪ್ಯಾರಾಚೂಟುಗಳು ಹರಿದು ಹೋಗುತ್ತವೆ, ಅತಿ ನಿಧಾನವಾಗಿ ನಡೆಸಿದರೆ, ವಿಮಾನದ ಹಿಂಬದಿಯಲ್ಲಿ ಸಿಕ್ಕಿಕೊಳ್ಳುವ ಸಂಭವವಿರುತ್ತದೆ.

ವಸ್ತುಗಳನ್ನು ಎಸೆಯಬೇಕಾದ ಸ್ಥಳ ಸಮೀಪಿಸಿದಂತೆ ವಿಮಾನ ಚಾಲಕ ತನ್ನ ಸಂಗಡಿಗನಾದ ಇನ್ನೊಬ್ಬ ವಿಮಾನ ಚಾಲಕನಿಗೆ ಸಂಜ್ಞೆ ಮಾಡುತ್ತಾನೆ ಅವನು 'ಸ್ವಿಚ್' ಹಾಕುತ್ತಾನೆ ಆಗ ಹಿಂಬದಿಯ ಬಾಗಿಲ ಒಳಿಯಲ್ಲಿರುವ ಕೆಂಪು ದೀಪ ಉರಿಯತೊಡಗುತ್ತದೆ. ಈ ವೇಳೆಗಾಗಲೇ ಆಹಾರ ವಸ್ತುಗಳನ್ನು ವಿಮಾನದಿಂದ ಹೊರಗೆ ಎಸೆಯುವ ಸಿಬ್ಬಂದಿಯವರು ಪೂರ್ಣ ಸಿದ್ಧವಾಗಿರುತ್ತಾರೆ. ಆಗ ವಿಮಾನ ಚಾಲಕನು ಭೂಮಿಗೆ ಎಸೆಯಬೇಕಾದ ಆಹಾರ ವಸ್ತುಗಳು ಎಲ್ಲಿಯೂ ಸಿಕ್ಕಿಕೊಳ್ಳದಂತೆ ನೋಡಿಕೊಳ್ಳಲು ವಿಮಾನವನ್ನು ಸ್ಥಿಮಿತವಾಗಿ ಕೆಳಗೆ ಬಾಗಿಸುತ್ತಾನೆ. ಅನಂತರ ವಸ್ತುಗಳನ್ನು ಎಸೆಯುವ ಸ್ಥಳದ ಅಂತರವನ್ನು ನಿಷ್ಕರ್ಷೆ ಮಾಡಿಕೊಂಡು ಬಳಿಕ ವಿಮಾನವನ್ನು ಬಲಗಡೆಗೆ ಬಾಗಿಸುತ್ತಾನೆ ಆಗ ಅವನೊಂದಿಗೆ ಇರುವ ಇನ್ನೊಬ್ಬ ವಿಮಾನ ಚಾಲಕನು 'ಸ್ವಿಚ್' ಹಾಕುವನು ವಿಮಾನದ ಹಿಂಬದಿಯಲ್ಲಿರುವ ಹಸಿರು ದೀಪ ಉರಿಯತೊಡಗುತ್ತದೆ ಜೊತೆಗೆ ವಿದ್ಯುತ್ ಗಂಟೆಯು ಸಪ್ಪಳವನ್ನು ಮಾಡುತ್ತದೆ. ಈ ಸಂಜ್ಞೆ ಒದಗಿದಕೂಡಲೇ ಆಹಾರ ವಸ್ತುಗಳನ್ನು ಹೊರಗೆ ಎಸೆಯುವ ಸಿಬ್ಬಂದಿಯವರು ಒಮ್ಮೆಲೆ ವಸ್ತುಗಳನ್ನು ವಿಮಾನದಿಂದ ಹೊರಗೆ ನೂಕುತ್ತಾರೆ ವಸ್ತುವು ನಿರಾತಂಕವಾಗಿ ಕೆಳಗೆ ಬೀಳತೊಡಗುತ್ತದೆ

ವಿಮಾನ ಚಾಲಕನು ಆಹಾರ ವಸ್ತುಗಳನ್ನು ಎಸೆಯಬೇಕಾದ ಸ್ಥಳದ ನಿರ್ದಿಷ್ಟ ಅಂತರದ ಅಂದಾಜಿನ ವೇಳೆಯೇ ಈ ಕಾರ್ಯ ನಡೆಯುತ್ತದೆ ಎಷ್ಟೋ ಸಲ ವಿಮಾನ ಚಾಲಕರು ತೀರ ಇಕ್ಕಟ್ಟಾದ ಪ್ರದೇಶಗಳಲ್ಲಿ ವಸ್ತುಗಳನ್ನು ಎಸೆಯಬೇಕಾಗುತ್ತದೆ ವಸ್ತುಗಳನ್ನು ಭೂಮಿಗೆ ಎಸೆದ ನಂತರ, ವಿಮಾನ ಚಾಲಕನು ವಿಮಾನವ[illegible] ಹಿಮಾಲಯದ ಕಣಿವೆಗಳ ಗೋಡೆಗಳಿಗೆ ಎದುರಾಗಿ ಮೇಲಕ್ಕೆ ತೆಗೆದುಕೊಂಡು ಹೋಗುತ್ತಾನೆ ಮತ್ತೆ ಸರಬರಾಜು ಕಾರ್ಯಕ್ಕೆ ಸಿದ್ಧನಾಗುತ್ತಾನೆ

ಹಸರು ದೀಪವುರಿದೊಡನೆ ಗಂಟೆ ಬಾರಿಸತೊಡಗಿದೊಡನೆಯೇ ಆಹಾರವಸ್ತುವೆಸೆಯುವ ಸಿಬ್ಬಂದಿಯವರು ತಮ್ಮ ಕಾರ್ಯಕ್ಕೆ ತೊಡಗುತ್ತಾರೆ.

ಸರಬರಾಜು ಮುಗಿದ ಕೂಡಲೇ ಚಾಲಕನು ವಿಮಾನವನ್ನು ಮೇಲಕ್ಕೆ ತೆಗೆದುಕೊಂಡು ಹೋಗುತ್ತಾನೆ: ಮರಳಿ ಪೂರೈಕೆಗೆ ಸಿದ್ಧನಾಗಿ ಬರುತ್ತಾನೆ

ಮೊತ್ತಮೊದಲ ಕಾಂಗ್ರೆಸ್

ಬೊಂಬಾಯಿಯ ಪ್ರಥಮ ಅಧಿವೇಶನ

ಶ್ರೀ ಕೆ. ನಾರಾಯಣಾಚಾರ್, ಶಿರೋಮಣಿ, ವಿದ್ವಾನ್.

ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಾರಂಭದ ದಿನಗಳು ಬಹುಬೇಗನೆ ಆಶ್ಚರ್ಯಕರವಾಗಿ ಪುರಾತನ ಕಥೆಯಾಗಿ ಬಿಟ್ಟಿವೆ. ಆರು ದಶಮಾನಗಳೊಳಗೆ ಸ್ವಾತಂತ್ರ್ಯವನ್ನು ದೊರಕಿಸುವುದರಲ್ಲಿ ಜಯಶಾಲಿಯಾಗುವಷ್ಟು ಶಕ್ತಿಯುಕ್ತವಾಗಿ ಬೆಳೆದ ಬಂತು. ಅದು ಹೇಗೆ ಪ್ರಾರಂಭವಾಯಿತು? ಹೇಗೆ ನಡೆಯಿತು? ಎಂಬೀ ವಿಚಾರಗಳು ಚರಿತ್ರೆಯ ಕೌತುಕದ ವಿಷಯಗಳಾಗಿವೆ.

ಆಧುನಿಕರಿಗೆ ಮಹಾತ್ಮಾ ಗಾಂಧಿಯವರು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರತೀಕವಾಗಿದ್ದಾರೆ. ಅದು ಪ್ರಾರಂಭವಾಗಿ ಬಹು ಸಮಯದ ನಂತರ ಮಹಾತ್ಮಾ ಗಾಂಧಿಯವರು ತಮ್ಮ ದಕ್ಷಿಣ ಆಫ್ರಿಕದ ಅನುಭವದ ಗಂಟನ್ನು ಹೊತ್ತುಕೊಂಡು ಕಾಂಗ್ರೆಸ್ಸಿನ ರಂಗಕ್ಕೆ ಬಂದಿಳಿದರೆಂಬುದು ಬಹುಶಃ ಅವರಿಗೆ ಗೊತ್ತಿಲ್ಲದಿರಬಹುದು.

ಕಾಂಗ್ರೆಸ್ಸು ಪ್ರಾರಂಭವಾಗುವುದಕ್ಕಿಂತ ಕೆಲವು ವರ್ಷಗಳ ಮೊದಲು ಇಂಡಿಯಾ ಗವರ್ನಮೆಂಟಿನ ಸೆಕ್ರೆಟರಿಯಾದ ಎ. ಓ. ಹ್ಯೂಮ್ ಎಂಬ ಎಬ್ಬ ಸ್ಕೋಟ್ ಮಹನೀಯರು ಶಿಮ್ಲಾದ ಎತ್ತರವಾದ ಗುಡ್ಡಗಳಲ್ಲಿ ವಿಚಾರದ ಗೊಂದಲಕ್ಕೆ ಸಿಲುಕಿ ಕುಳಿತಿದ್ದರು. ಪ್ರತಿಭಟಿಸುವ ಸ್ವಭಾವದ ವಿದ್ಯಾವಂತ ಭಾರತೀಯರು ಸಂಖ್ಯೆಯಲ್ಲಿ ಬೆಳೆಯುತಿದ್ದಾರೆ. ನಾನಾ ಜನಿಕ ವಿಷಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ತೊಡಗಿದ್ದಾರೆ ಇವರನ್ನು ಹಿಡಿತಕ್ಕೆ ತಂದು ಇಂಡಿಯಾದಲ್ಲಿ ಜೇಡರ ಬಲೆಯೊಳಗೆ ಹೇಗೆ ಹಾಕಬಹುದೆಂದು ಅವರು ವಿಚಾರಿಸುತಿದ್ದರು. ಅವರ ಮುಂದೆ ಸಿ.ಐ.ಡಿ. ರಿಪೋರ್ಟುಗಳವಿಳು ಸಂಚಿಕೆಗಳು ಬಿದ್ದಿದ್ದವು. "ಅವುಗಳು ಯಾವದಿನವಾದರೂ ಸ್ಫೋಟನಗೊಳ್ಳಬಹುದಾದ—ವಿವಿಧ ಪ್ರಾಂತಗಳಿಂದಬಂದ—ದೇಶದಲ್ಲೆಲ್ಲಾ ಕುದಿಯುತ್ತಿರುವ ಅತೃಪ್ತಿಯ ವರದಿಗಳನ್ನೊಳಗೊಂಡಿದ್ದವು

ಬ್ರಿಟಿಷ್ ಸರಕಾರವೇ ಈ ಅಶಾಂತಿಗೆ ಕಾರಣಗಳನ್ನುಂಟುಮಾಡಿ, ಅವುಗಳಿಗಾಗಿ ವಿರೋಧಿಸಲು ದೇಶೀಯ ಜನರಿಗೆ ಸಾಧನಗಳನ್ನು ಒದಗಿಸಿಕೊಟ್ಟಿತು. ಶಾಲಾ ಕಾಲೇಜುಗಳನ್ನು ಸ್ಥಾಪಿಸಿ ನಲ್ವತ್ತು ವರ್ಷಗಳಿಂದ ಕೊಟ್ಟ ಇಂಗ್ಲಿಷ್ ವಿದ್ಯಾಭ್ಯಾಸವು ಆಡಳಿತೆಯ ರೂಪದಲ್ಲಿ ಮಾಡಲಾಗುವ ಕಾರ್ಯಗಳಲ್ಲಿ ಯಾವುದು ಸರಿ, ಯಾವುದು ತಪ್ಪೆಂದು ವಿವೇಚಿಸಲು ಜನರಿಗೆ ಸಾಮರ್ಥ್ಯ ಕೊಡಲು ಸಾಕಾಯಿತು.

ಅತೃಪ್ತಿ

ಮಹಾರಾಣಿಯ ಘೋಷಣೆಯು ಬಹಳ ಆಕಾಂಕ್ಷೆಗಳನ್ನು ಹುಟ್ಟಿಸಿತ್ತು. ಆದರೆ ಇವೆಲ್ಲವೂ ವಿಫಲವಾಗಿ ಕಂಡುಬಂದವು. ಅಫಘಾನಿಸ್ತಾನ ಯುದ್ಧದ ಅತ್ಯಧಿಕವಾದ ವೆಚ್ಚ ಏರುತ್ತಿರುವ ಕರಭಾರ ೧೮೭೭ ಡಿಲ್ಲಿ ದರ್ಬಾರು, ೧೮೭೮ರ ದೇಶಭಾಷಾ ಮುದ್ರಣ ಶಾಸನ, ಇಲ್‌ಬರ್ಟ್ ಬಿಲ್ಲಿನ ವಿವಾದ ಇವುಗಳು ಹಿಂದೆಂದೂ ಇಲ್ಲದ ಪ್ರಬಲ ಪ್ರಚಾರವನ್ನು ಹುಟ್ಟಿಸಿ ಉರಿಸಿದ ಕೆಲವು ಉದಾಹರಣೆಗಳಾಗಿವೆ. ಬಂಗಾಳದಲ್ಲಿ ಕಾಲು ಮಿಲಿಯ ಜನರನ್ನು ಆಹುತಿಗೊಂಡ ಬಿರುಗಾಳಿಯು ಉಂಟಾಗಿತ್ತು. ದಕ್ಷಿಣದಲ್ಲಿ ಮಿಲಿಯಾಂತರ ಜನರು ಉಪವಾಸಬಿದ್ದು ಸಾಯುವ ಭಯವನ್ನುಂಟು ಮಾಡುತ್ತ ದುರ್ಭಿಕ್ಷವು ತಲೆದೋರಿತು. ಇಂತಹ ಸಮಯದಲ್ಲಿ ಅತ್ಯಧಿಕ ವೆಚ್ಚದಿಂದ ಡಿಲ್ಲಿ ದರ್ಬಾರು ರಾಜಕೀಯ ಆಡಂಬರವನ್ನು ಪ್ರದರ್ಶನ ಮಾಡಿತು. ಜನರ ಸಂಕಷ್ಟಗಳನ್ನು ಗಣನೆಗೆ ತಂದುಕೊಳ್ಳದೆ ಮಹಾರಾಜರು, ರಾಜರು ಮತ್ತು ಜಮೀನ್ದಾರರು ವೈಭವವನ್ನು ಹೆಚ್ಚಿಸುತ್ತಾ ಒಬ್ಬರನ್ನೊಬ್ಬರು ನೋಡಿಕೊಂಡು ವೈಸರಾಯರನ್ನು ಸುತ್ತುಗಟ್ಟಿದರು.

ಈ ಸಂಪೂರ್ಣ ತಟಸ್ಥಭಾವವು ಪ್ರಿಯ ಜನರ ಮನಸ್ಸಿನಲ್ಲಿ ಅಸಂತುಷ್ಟಿಯ ಪ್ರಭಾವವನ್ನುಂಟು ಮಾಡಿತು. ಮಧ್ಯಮ ವರ್ಗದ ವಿದ್ಯಾವಂತ ಜನರು ಕೋಪಗೊಂಡರು. ಇಲ್‌ಬರ್ಟ್ ಬಿಲ್ಲು ಒಂದು ಬಿರುಗಾಳಿಯನ್ನೇ ಎಬ್ಬಿಸಿತು. ಸುರೇಂದ್ರನಾಥ ಬೆನರ್ಜಿಯವರಿಗೆ "ಬೆಂಗಾಲೀ" ಪತ್ರಿಕೆಯ ಸಂಪಾದಕರಾಗಿ, ಕೋರ್ಟು ಅವಮಾನದ ಆರೋಪದ ಮೇಲೆ ಎರಡು ತಿಂಗಳ ಶಿಕ್ಷೆಯನ್ನು ವಿಧಿಸಲಾಯಿತು. ಇದು ೧೮೮೩ರಲ್ಲಿ ನಡೆಯಿತು, ಜನ ಇದರಿಂದ ರೊಚ್ಚಿಗೆದ್ದಿತು.

ಒಳಗೊಳಗೇ ಕುದಿಯುತ್ತಿರುವ ಈ ಕೋಪವು ಒಂದು ದಿನ ಪ್ರಬಲವಾಗಿ ಸ್ಫೋಟನಗೊಂಡು ಆಗಾಗ್ಯೆ ನಡೆಯುವ ಅತ್ಯಾಚಾರ, ದ್ವೇಷಿ ಜನರ ಕೊಲೆ, ಬೇಂಕುಗಳ ದರೋಡೆ. ಪೇಟೆಗಳ ಸುಲಿಗೆ, ನಿಜವಾಗಿ ಅನ್ಯಾಯಕಾರ್ಯ, ಹೀಗೆ ಸರಿಯಾದ ಶಕ್ತಿಗಳನ್ನು ಒಟ್ಟುಗೂಡಿಸಿಕೊಂಡು ರಾಷ್ಟ್ರೀಯ ದಂಗೆಯರೂಪದಿಂದ ಬೆಳೆಯಬಹುದೆಂದು ಎ. ಓ ಹ್ಯೂಮರು ಭಯಪಟ್ಟದ್ದು ಸಾಧಾರವಾಗಿದೆ. ಅದ್ದರಿಂದ ಅವರು ಈ ಅತೃಪ್ತಿಗಾಗಿ ಭದ್ರವಾದ ಕವಾಟಿಯನ್ನಿಡಲು ನಿಶ್ಚಯಿಸಿದರು. ಕಾಂಗ್ರೆಸ್ಸೇ ಅಂತಹ ಒಂದು ಸಾಧನವಾಗಿದೆ.

ಅವರು ಅದನ್ನು ರೂಪಿಸುವ ಕಾರ್ಯ ಕೈಗೊಳ್ಳಲು ಇಂಡಿಯನ್ ಸಿವಿಲ್ ಸರ್ವಿಸಿನಿಂದ ತನಗೆ ನಿವೃತ್ತಿಯಾಗುವ ತನಕ ಕಾದಿದ್ದರು. ೧೮೮೩ನೇ ಮಾರ್ಚಿಯಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದ ಪದವೀಧರರಿಗೆ ಅವರೊಂದು ಪ್ರಕಟನೆಯನ್ನು ಬಹಿರಂಗ ಪಡಿಸಿದರು. ದೇಶೀಯ ಆಡಳಿತೆಯ ಕಾರ್ಯದಲ್ಲಿ ಭಾಗವಹಿಸಲು ಹೆಚ್ಚಿನ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂದೂ ವೈಯಕ್ತಿಕ ಸೌಲಭ್ಯಗಳನ್ನು ಕಡೆಗಣಿಸಬೇಕೆಂದೂ ಅವರು ಅದರಲ್ಲಿ ವಿವರಿಸಿದರು. ತಾವು ಉದ್ದೇಶಿಸಿದ ಇಂಡಿಯಾ ರಾಷ್ಟ್ರೀಯ ಯೂನಿಯನನ್ನು ಸೇರಲು ಅವರು ಅವರನ್ನು ವಿನಂತಿಸಿಕೊಂಡರು. ಬಂಗಾಳದ ಮುಖಂಡರು ಅಖಿಲ ಭಾರತದ ಯೂನಿಯನಿನ ವಿಷಯ ಮಾತನಾಡಿದರು. ಮದರಾಸಿನ ಹದಿನೇಳು ಮಂದಿಯೂ ಥಿಯೋಸೊಫೀ ಸಮ್ಮೇಳನದ ಅನಂತರ ತಾವು ಖಾಸಗಿಯಾಗಿ ಕೂಡಿದ ಒಂದು ಕೂಟದಲ್ಲಿ ಹಾಗೆಯೇ ಹೇಳಿದರು. ವಿದ್ಯಾವಂತ ಭಾರತೀಯರಿಗೆ ಹ್ಯೂಮರ ವಿನಂತಿಯು ಮೆಚ್ಚಿಕೆಯಾಯಿತು, ಹ್ಯೂಮರನ್ನು ಜನರಲ್ ಸೆಕ್ರೆಟರಿಯಾಗಿ ಮಾಡಿಕೊಂಡು ಬಂಗಾಳ, ಬೊಂಬಾಯಿ, ಮದ್ರಾಸು ಮತ್ತು ಪಂಜಾಬಿನ ಮಧ್ಯಮ ವರ್ಗದ ಜನರ ಸಂಯುಕ್ತ ರಂಗವು ಮೊದಲನೇ ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಒಟ್ಟುಗೂಡಿತು.

ಕಾರ್ಯಕ್ಷೇತ್ರ

ಪೂನೆಯು ಮೀಟಿಂಗಿನ ಸ್ಥಳವೆಂದು ನಿಶ್ಚಯಿಸಲ್ಪಟ್ಟಿತು. ಪ್ರತಿನಿಧಿಗಳು ಅಲ್ಲಿಗೆ ಹೊರಟರು. ಆ ಸಮಯದಲ್ಲಿ ಪೂನೆಯಲ್ಲಿ ವಾಂತಿಭೇದಿಯು ತಲೆದೋರಿತು. ಆದ್ದರಿಂದ ಕಾರ್ಯಕ್ಷೇತ್ರವು ಬೊಂಬಾಯಿಗೆ ಬದಲಾಯಿಸಲ್ಪಟ್ಟಿತು. ಪ್ರಮುಖ ಜನರ ಚರ್ಚೆಗಳಫಲಗಳಾಗಿ ಗೊತ್ತಾದ ಸೂಚನೆಗಳನ್ನೊಳಗೊಂಡ ಪ್ರಾಸ್ತಾವಿಕ ವರದಿಯು ಪ್ರಕಟಗೊಂಡಿತು. ಈ ಸೂಚನೆಗಳಲ್ಲಿ ಪ್ರಧಾನವಾದುದು ಈ ಸಂಸ್ಥೆಯ ಮುಖ್ಯ ಸೂತ್ರವು ಬ್ರಿಟಿಷ್ ರಾಜಮುಕುಟಕ್ಕೆ ಅಚಲವಾದ ನಿಷ್ಠೆಯಿಂದಿರಬೇಕೆಂಬುದಾಗಿತ್ತು. ಮಿಸ್ಟರ್ ಹ್ಯೂಮರು ೧೮೮೫ರ ಆರಂಭದಲ್ಲಿ ವಾಯ್ಸರಾಯ್ ಲೋರ್ಡ್ ಧಫರಿನ್‌ರವರೊಡನೆ ಸಲಹೆ ಕೇಳಿದಾಗ ಅವರು ಈ ಕೆಳಗಿನಂತೆ ಸೂಚನೆ ಕೊಟ್ಟರು:— "ಈ ಯೂನಿಯನು ಇಂಡಿಯದ ರಾಜಕಾರಣಿಗಳ ಒಂದು ತಂಡವಾಗಿರಬೇಕು, ಅವರು ವರ್ಷಕ್ಕೊಮ್ಮೆ ಸಭೆ ಕೂಡಿ ಆಡಳಿತೆಯು ಯಾವ ವಿಷಯಗಳಲ್ಲಿ ಕೊರತೆಯುಳ್ಳದು? ಅದನ್ನು ಹೇಗೆ ಸರಿಪಡಿಸಬಹುದು? ಎಂದು ಸರಕಾರಕ್ಕೆ ತಿಳಿಸಬೇಕು, ಈ ಸಮ್ಮೇಳನಕ್ಕೆ ಸ್ಥಳೀಯ ಗವರ್ನರು ಅಧ್ಯಕ್ಷರಾಗಬೇಕೆಂಬುದು ಅಪೇಕ್ಷಣೀಯವಲ್ಲ. ಏಕೆಂದರೆ ಅವರ ಎದುರಿನಲ್ಲಿ ಜನರು ತಮ್ಮ ಮನೋಗತವನ್ನು ಸ್ಪಷ್ಟವಾಗಿ ಹೇಳಲು ಇಷ್ಟಪಡಲಾರರು."

ಆ ರಾಷ್ಟ್ರೀಯ ಪರಿಷತ್ತು ೧೮೮೫ನೇ ಇಸ್ವಿಯ ದಶಂಬರ ತಾ. ೨೮, ೨೯ ಮತ್ತು ೩೦ರಲ್ಲಿ ನಡೆಯಬೇಕೆಂದು ಗೊತ್ತುಪಡಿಸಲಾಯಿತು, ಎಲ್ಲಾ ಪ್ರತಿನಿಧಿಗಳೂ ತಾ. ೨೭ನೇ ದಿನವೇ ಬೊಂಬಾಯಿಗೆ ಬಂದು ತಲಪಿದರು. ಸಾಯಂಕಾಲ ಬೊಂಬಾಯಿಯ ರಾಷ್ಟ್ರೀಯ ಜನವರ್ಗವು ಒಬ್ಬರನ್ನೊಬ್ಬರು ತಿಳಿದುಕೊಳ್ಳುವ ಸಲುವಾಗಿ ಒಂದು ಅನಿಯತವಾದ ಕೂಟದಲ್ಲಿ ಪ್ರತಿನಿಧಿಗಳನ್ನು ಭೇಟಿ ಮಾಡಲು ಅಪೇಕ್ಷಿಸಿತು. ಈ ಕೂಟವು ಒಂದು ಕೌತುಕದ ದೃಶ್ಯವನ್ನು ಒದಗಿಸಿತು. ನಾವು ಅದನ್ನು ಮಿಸ್ಟರ್ ಡೋಕರರೊಡನೆ ಅವರ ಪುಸ್ತಕದ ಒಂದು ಮುದ್ರಿತ ಹಾಳೆಯಿಂದ ಓದಿ ತಿಳಿದು ಸಂತೋಷಪಡೋಣ.

ವಿವಿಧ ಪ್ರಾಂತಗಳ ಜನರು

ಮದರಾಸಿನಿಂದ ಜನರು ಬಂದಿದ್ದರು, ಕಪ್ಪಾದ ಮೈಬಣ್ಣವು ಅವರಲ್ಲಿ ಕೆಲವರು ಧರಿಸಿದ ಬಿಳೀ ರುಮಾಲುಗಳಿಂದ ಇನ್ನೂ ಕಪ್ಪಾಗಿ ಕಂಡು ಬಂತು. ಆ ಪ್ರಾಂತದಿಂದ ಬಂದ ಇನ್ನು ಕೆಲವರು ಬರೀ ತಲೆ ಮತ್ತು ಬರೀ ಕಾಲಿನವರಾಗಿದ್ದು ಇತರ ವಿಧದಲ್ಲಿ ಅದೇ ರೀತಿಯ ಉಡುಪನ್ನು ಧರಿಸಿದ್ದರು. ಸೊಂಟದ ಮೇಲೆ ಅವರ ಮೈಗಳು ಮಸ್ಲಿನ್ ಶಾಲುಗಳಿಂದ ಅಂಶತಃ ಮುಚ್ಚಲ್ಪಟ್ಟಿದ್ದವು. ಅವರು ತಾವು ಪ್ರತಿನಿಧೀಕರಿಸುವ ಪಟ್ಟಣಗಳ ಮುಂದಾಳುಗಳಾಗಿದ್ದರೆಂದು ತಿಳಿಯಬಹುದು. ಆದ್ದರಿಂದ ವಿದ್ಯಾವಂತರೆಂದೂ ಎಣಿಸಬಹುದು. ಆದರೆ ಅವರು ತಮ್ಮ ರಾಷ್ಟ್ರೀಯ ಉಡುಪನ್ನೂ ಶಿಷ್ಟಾಚಾರಗಳನ್ನೂ ಇಟ್ಟುಕೊಳ್ಳಲು ಬಯಸಿದ್ದರು. ಈ ವಿಷಯದಲ್ಲಿ ಬಂಗಾಳದ ಪ್ರತಿನಿಧಿಗಳಿಗೆ ಅವರು ವಿಲಕ್ಷಣವಾಗಿ ಕಂಡುಬಂದರು. ಅವರಲ್ಲಿ ಕೆಲವರು ಶುದ್ಧ ಯೂರೋಪಿಯನ್ ಡ್ರೆಸ್ಸಿನಲ್ಲಿ ಕಾಣಿಸಿಕೊಂಡರು. ಆಗಲೇ ಅವರು ತಾವು ಧರಿಸಿದ ಒಂದು ವಿಶಿಷ್ಟವಾದ ಹಿಂದಿನಿಂದ ನೇತಾಡುವ ವಸ್ತ್ರವುಳ್ಳ ಟೊಪ್ಪಿಯಿಂದ ಬಾಬುಗಳೆಂದು ಗುರುತಿಸಲ್ಪಡಬಲ್ಲವರಾಗಿದ್ದರು ಅವರಲ್ಲಿ ಯೂರೋಪು ಮದರಾಸಿಗಳಕಿವಿಗಳನ್ನು

(ಹನ್ನೊಂದನೇ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗಾಗಿ ಮತ್ತು ಅನಿಶ್ಚಿತ ಅವಶ್ಯಕತೆಗಳಿಗಾಗಿ
ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಅಭಿಪ್ರಾಯ

ಅಮೆರಿಕೆ-ಭಾರತಗಳ ನ್ಯಾಯಪರತೆ

ಇಂಡಿಯನ್ ಲಾ ಇನ್‌ಸ್ಟಿಟ್ಯೂಟ್ ಮತ್ತು ಏಶ್ಯಾ ಫೌಂಡೇಶನಿನ ಜಂಟಿ ವ್ಯವಸ್ಥೆಯಲ್ಲಿ ಭಾರತದಲ್ಲಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದ ಅಮೇರಿಕದ ಸುಪ್ರೀಂ ಕೋರ್ಟಿನ ನ್ಯಾಯಾಧೀಶ ಗೋಲ್ಡ್‌ಬರ್ಗ್ ಅವರು ತಮ್ಮೊಂದು ಉಪನ್ಯಾಸದಲ್ಲಿ ಅಮೇರಿಕೆ ಮತ್ತು ಭಾರತೀಯ ನ್ಯಾಯಾಲಯಗಳಲ್ಲಿರುವ ಹೊಂದಾಣಿಕೆಯನ್ನು ಪ್ರಶಂಸಿಸಿದರಲ್ಲದೆ ಭಾರತದ ನ್ಯಾಯಾಂಗದ ಕಾರ್ಯವಿಧಾನವನ್ನೂ ಮೆಚ್ಚಿದರು. 'ಶಾಸನದ ಮೇರೆಗೆ ಸಮಾನ ನ್ಯಾಯ ದೊರೆಯಬೇಕು' ಎಂಬ ತತ್ತ್ವದಲ್ಲಿ ಭಾರತಕ್ಕೆ ಅತ್ಯಂತ ನಿಷ್ಠೆಯಿದೆ ಎಂದಿದ್ದಾರೆ ಅವರು.

ಪ್ರಜಾಪ್ರಭುತ್ವ ಮತ್ತು ಶಾಸನ ನಿಯಮ ಪಾಲನೆಯ ಆದರ್ಶವನ್ನು ಭಾರತ ಮತ್ತು ಅಮೇರಿಕಗಳೆರಡೂ ಎತ್ತಿಹಿಡಿದಿವೆ. ಭಾರತೀಯ ನ್ಯಾಯ ನಿರ್ಣಯಗಳನ್ನು ಅಮೆರಿಕೆಯ ಸುಪ್ರಿಂ ಕೋರ್ಟ್ ಮತ್ತು ಅವುಗಳವನ್ನು ಭಾರತೀಯ ಸುಪ್ರೀಂ ಕೋರ್ಟು ಬೇರೆ ಬೇರೆ ಸಂದರ್ಭಗಳಲ್ಲಿ ಉಲ್ಲೇಖಿಸಿವೆ. ಅಮೆರಿಕೆ—ಭಾರತಗಳೆರಡೂ ದೇಶಗಳು ಸಾಮಾಜಿಕ ನ್ಯಾಯ ಸಾಧನೆಗಾಗಿ ಪ್ರಯತ್ನಿಸುತ್ತಿವೆ. ಭಾರತೀಯ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಬಗ್ಗೆ ಒಂದು ಅಧ್ಯಾಯವಿದೆ. ಅಮೆರಿಕೆಯ ಘಟನೆಯಲ್ಲಿಯೂ ಮೂಲಭೂತ ಸ್ವಾತಂತ್ರ್ಯದ ಬಗ್ಗೆ ಒಂದು ಭಾಗವಿದೆ. (ಇದಕ್ಕೆ ಹಕ್ಕುಗಳ ಮಸೂದೆ ಯೆಂದು ಹೆಸರು) ನ್ಯಾಯಾಂಗ ಪುನರ್ವಿಚಾರಣೆಯ ವಿಧಾನವೂ ಎರಡೂ ದೇಶಗಳಲ್ಲಿದೆ.

ಭಾರತದಲ್ಲಿ ಮೊಕದ್ದಮೆಗಳ ಪುನರ್ವಿಚಾರಣೆಗೆಂದು ಡಿವಿಜನ್ ಬೆಂಚುಗಳಿವೆ. ಆದರೆ ಅಮೆರಿಕೆಯಲ್ಲಿ ಒಂಬತ್ತು ನ್ಯಾಯಾಧೀಶರಿಂದ ಕೂಡಿದ ಸುಪ್ರೀಂ ಕೋರ್ಟ್ ತನ್ನ ಮುಂದೆ ಬರುವ ಎಲ್ಲ ಮೊಕದ್ದಮೆಗಳನ್ನೂ ಸಾಮಾನ್ಯವಾಗಿ ವಿಚಾರಿಸುವುದು. ಭಾರತದಲ್ಲಿ 'ಬೆಂಚು'ಗಳೇ ಹೆಚ್ಚಿನ ಕಾರ್ಯವನ್ನು ನಿರ್ವಹಿಸುವುದು ಕ್ರಮವಾಗಿ ಬಂದಿದೆ.

ಕೆಲವೆಡೆ ಶಾಸನಾಂಗ ಮತ್ತು ನ್ಯಾಯಾಂಗಗಳಲ್ಲಿ ತಕರಾರು ವಿವಾದಗಳು ಉದ್ಭವಿಸುವುದುಂಟು. ಆದರೆ, ಅಮೆರಿಕೆಯಲ್ಲಿ ನ್ಯಾಯಾಲಯದ ನಿರ್ಣಯಗಳನ್ನು ಶಾಸನಾಂಗವು ಒಪ್ಪಿಕೊಳ್ಳುವುದು ಸತ್ಸಂಪ್ರದಾಯಿಕವಾಗಿ ಬಂದಿದೆ ಇದು ಹೆಚ್ಚು ಕಡಿಮೆ ಭಾರತದಲ್ಲಿಯೂ ಇದೆ. ಸಾಂವಿಧಾನಿಕ ತಿದ್ದುಪಡಿಗಳ ಮೂಲಕ ಮಾತ್ರ ನ್ಯಾಯಾಲಯದ ನಿರ್ಣಯಗಳನ್ನು ಅಸಿಂಧುಗೊಳಿಸಬಹುದು. ಆಗರೆ, ಈ ತಿದ್ದುಪಡಿಯಾಗದ ಹೊರತು ಈ ತೀರ್ಮಾನದ ಮುಂದೆ ಪ್ರತಿಯೊಬ್ಬ ಪ್ರಜೆಯೂ ವಿಧೇಯನಾಗಲೇಬೇಕು.

ಅಮೆರಿಕೆಯಲ್ಲಿ ಸಂವಿಧಾನ ತಿದ್ದುಪಡಿ ಅಷ್ಟು ಸುಲಭದಲ್ಲಿ ಆಗುವುದಿಲ್ಲ. ಮೊದಲು ತಿದ್ದುಪಡಿ ವಿಧೇಯಕಕ್ಕೆ ಅಮೆರಿಕೆಯ ಕಾಂಗ್ರೆಸ್ಸಿನ ಉಭಯ ಸಭೆಗಳ ಮೂರನೇ ಎರಡಂಶದಷ್ಟು ಸದಸ್ಯ ಅನುಮೋದನೆ ದೊರೆಯಬೇಕು. ಅನಂತರ ರಾಜ್ಯಗಳಲ್ಲಿ ನಾಲ್ಕರಲ್ಲಿ ಮೂರರಷ್ಟು ಅದನ್ನು ಸ್ಥಿರಪಡಿಸಬೇಕು. ಆದುದರಿಂದಲೇ ಅಲ್ಲಿನ ಸಂವಿಧಾನಕ್ಕೆ ಕಳೆದ ೧೮೮ ವರ್ಷಗಳಲ್ಲಿ ಬರೇ ೨೪ ತಿದ್ದುಪಡಿಗಳು ಮಾತ್ರ ಆಗಿವೆ. ನಮ್ಮಲ್ಲಿ ಪಾರ್ಲಿಮೆಂಟಿನ ಮಿತಿಯಿದ್ದರೂ ರಾಜ್ಯಗಳ ಸ್ಥಿರೀಕರಣವು ಅನಗತ್ಯ. ಹಾಗಾಗಿ ಬರೇ ೧೪ ವರ್ಷಗಳಲ್ಲೇ ಸಂವಿಧಾನ ೧೭ ಬಾರಿ ತಿದ್ದುಪಡಿಯಾಯಿತು.

ಇತ್ತೀಚೆಗೆ ಚುನಾವಣಾ ಕ್ಷೇತ್ರಗಳನ್ನು ರಚಿಸುವ ಕುರಿತಾದ ವಿವಾದವೊಂದು ಅಮೆರಿಕೆಯಲ್ಲಿ ಎದ್ದಿತ್ತು. ರಾಜ್ಯಗಳಲ್ಲಿ ಜನಸಂಖ್ಯೆಯನ್ನಾಧರಿಸಿ ಚುನಾವಣಾ ಕ್ಷೇತ್ರಗಳನ್ನು ಗೊತ್ತುಪಡಿಸುವ ಸಂಬಂಧದಲ್ಲಿ ಸುಪ್ರೀಂ ಕೋರ್ಟ್ ನೀಡಿದ ನಿರ್ಧಾರವು ಎಲ್ಲರಿಗೂ ಇಷ್ಟವಾಗಲಿಲ್ಲ. ಆದರೆ, ಅದನ್ನು ಒಪ್ಪಿಕೊಳ್ಳದೆ ಗತ್ಯಂತರವೂ ಇಲ್ಲ. ಸಂವಿಧಾನದಲ್ಲಿ ಆವಶ್ಯಕ ತಿದ್ದುಪಡಿ ಮಾಡದೆ ನ್ಯಾಯ ನಿರ್ಣಯವನ್ನು ಕಡೆಗಣಿಸುವುದು ಎಂದಿಗೂ ಸಾಧ್ಯವಿಲ್ಲ. ಈ ಬಗೆಯ ವಿವಾದಗಳು ಕಾರ್ಯಾಂಗ – ನ್ಯಾಯಾಂಗಗಳ ನಡುವೆ ಬಹಳ ಅಪರೂಪವಾಗಿ ಮಾತ್ರ ಏಳುತ್ತವೆ.

ಅಮೆರಿಕೆಯ ಸಂವಿಧಾನವು ಅಲ್ಲಿನ ನ್ಯಾಯಾಲಯಕ್ಕೆ ಕೆಳಗಿನ ಕೋರ್ಟುಗಳ ನಿರ್ಣಯಗಳ ಪುನರ್ವಿಚಾರಣೆಗೆ ಅನುಮತಿ ನಿರಾಕರಿಸುವ ಅಧಿಕಾರವನ್ನೂ ನೀಡಿದೆ, ಇದರಿಂದ ನ್ಯಾಯದಾನದಲ್ಲಾಗುತ್ತಿರುವ ವಿಳಂಬವು ಕಡಿಮೆಯಾಗುತ್ತದೆ. ಕಳೆದ ಒಂದೇ ವರ್ಷದಲ್ಲಿ ಅಮೆರಿಕೆಯ ಸುಪ್ರಿಂಕೋರ್ಟ್ ೨೬೦೦ ಮೊಕದ್ದಮೆಗಳನ್ನು ಪೂರ್ತಿಗೊಳಿಸಿತ್ತು, ಇವುಗಳಲ್ಲಿ ೨೪೦೦ನ್ನು ಪುನರ್ವಿಚಾರಣೆಗೆ ಅವಕಾಶ ನೀಡದೇನೇ ಕೊನೆಗೊಳಿಸಿದವು.

ಭಾರತೀಯ ಸಂವಿಧಾನ ರಚಕರು ಅಮೆರಿಕೆಯ ಸಂವಿಧಾನದ ಸಹಾಯವನ್ನೂ ಪಡೆದಿದ್ದರು. ಎಂತಲೇ ಎರಡರಲ್ಲೂ ಹಲವೆಡೆ ಏಕರೂಪತೆಯಿದೆ. ಪ್ರಜಾಪ್ರಭುತ್ವದ ಬೆಳವಣಿಗೆಗೆ ನ್ಯಾಯಾಂಗವು ಸ್ವತಂತ್ರವಿರುವುದು ಅತ್ಯಗತ್ಯವೆಂಬ ಮನಗಂಡೇ ಭಾರತದಲ್ಲಿ ಅದನ್ನು ಬೇರೆಯಾಗಿಯೇ ಇರಿಸಿದೆ. ನ್ಯಾಯಾಲಯದ ತೀರ್ಪಿಗೆ ಮನ್ನಣೆ ನೀಡುವ ಸಂಪ್ರದಾಯ ನಮ್ಮಲ್ಲಿ ರಕ್ತಗುಣವಾಗಿ ಬೆಳೆದುಬರಬೇಕು; ಪ್ರಜಾಪ್ರಭುತ್ವದ ಯಶಸ್ಸಿಗೆ ಇದೂ ಒಂದು ಪೂರಕ ಕಾರಣ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ.

RIA 398/64 O. S. 482/63.

ವಿಶ್ವನಾಥ... ಅರ್ಜಿದಾರ.

ಮುತ್ತಣ್ಣ ಕೂಡಾ .... ಎದುರು

4 ನೇ ಎದುರು ಸೀತ, ನಾಬಾಲಿಗ ನ್ಯಾಕರ ಮಗಳು ನ ಪರೀಲ್ ತಮ್ಮಣ್ಣನವರ ಹೆಂಡತಿ, ಮೂಡಗೆರೆ ತಾಲೂಕಿನ ಕಣಚೂರು ಎಂಬಲ್ಲಿ. —ಇವರಿಗೆ ತಿಳಿಸುವುದೇನೆಂದರೆ:

ಈ ಡಾನೆ ವಾಕಲಾದ ನಂತರ ಮೃತ ಪಟ್ಟಿರುವ ಪ್ರತಿವಾದಿರ ವಾರೀಸುದಾರರಾಗಿ ನಿಮ್ಮನ್ನು ಕಕ್ಷಿಗೆ ಕೂಡಿಸಬೇಕೆಂತ ಅರ್ಜಿದಾರನು ದಾಕಲು ಮಾಡಿದ ಅರ್ಜಿಯು ತಾ 23—9—64 ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದಹರಿಸತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜ್ರಿಯಲ್ಲಿ ತೀರ್ಮಾನಿಸಲಾದೀತು.

ಬಿ. ಚಿದಾನಂದ ರಾವ್.

ಅರ್ಜಿದಾರನ ವಕೀಲ್

ಪುತ್ತೂರು ತಾ. 22—8—64

ರತ್ನ ರಾಶಿ

ಸಂಗ್ರಹ: ಭಾಸ್ಕರ ಭಂಡಾರಿ, ಮಂಜಿಬೈಲು.

ನಾವು ಅಜ್ಞಾನಿಗಳೆಂದು ಭಾವಿಸುವುದೇ ಜ್ಞಾನದ ಪ್ರಥಮ ಸೋಪಾನವಾಗಿದೆ. —ನೆಸಿಲ್.

ಪ್ರಶಂಸೆಗೆ ಅತ್ಯಾಸೆ ಪಡುವವರು ಗುಣದಲ್ಲಿ ತಾವು ಕಡಿಮೆ ಎಂಬುದನ್ನು ಎತ್ತಿ ತೋರಿಸುತ್ತಾರೆ. — ಪ್ಲುಟಾರ್ಕ್.

ಸಂಶಯವು ನಿಜ ಮೈತ್ರಿಗೆ ವಿಷಪ್ರಾಯ —ಅಗಸ್ಟೈನ್.

ಅನುಭವವೇ ಮನುಷ್ಯನ ನಿಜವಾದ ಶಾಲೆ. —ಬರ್ಕ್.

ಮನುಷ್ಯನ ಒಳ್ಳೆಯ ಗುಣಗಳನ್ನೆಲ್ಲಾ ನಿರ್ಲಕ್ಷಿಸಿ ಅವನ ದುರ್ಗುಣವನ್ನು ಮಾತ್ರ ಎತ್ತಿಕೊಳ್ಳುವುದು ಅವಿವೇಕವೆನಿಸುತ್ತದೆ. — ಎಡಿಸನ್.

ನಾನು ದಾಸನಾಗಿರಲು ಹೇಗೆ ಒಪ್ಪಲಾರೆನೋ ಹಾಗೆಯೇ ಪ್ರಭುವಾಗಿರಲೂ ಒಪ್ಪಲಾರೆ. ಇದೇ ನಿಜವಾದ ಪ್ರಜಾಪ್ರಭುತ್ವವೆಂದು ನನ್ನ ಅಭಿಪ್ರಾಯ. —ಲಿಂಕನ್.

ಜೀವನದ ವೈಭವವು ಪ್ರೇಮ ಮಾಡುವುದರಲ್ಲಿದೆ; ಬಯಸುವುದರಲ್ಲಿಲ್ಲ. ದಾನ ಮಾಡುವುದರಲ್ಲಿದೆ; ಸ್ವೀಕರಿಸುವುದರಲ್ಲಿಲ್ಲ. ಸೇವೆ ಮಾಡುವುದರಲ್ಲಿದೆ; ಅಪೇಕ್ಷಿಸುವುದರಲ್ಲಿಲ್ಲ —ಭಗವಾನ್ ಬುದ್ಧ

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 43ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 44 ನೆಯ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಅದನ್ನು ತ್ವರಿತ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ವಿನಂತಿ. ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚಿಲ್ಲದೆ ಜಮಾ ಮಾಡಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು ವಿ.ಪಿ. ಮಾಡಿದರೆ 70 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿ ಕೊಡುವಂತೆ ಬಿನ್ನವಿಸುತ್ತೇವೆ.

ಸ್ಥಿರ ಠೇವಣಾತಿಗಳ ಮೇಲೆ ಬಡ್ಡಿಯ ದರಗಳು

4% ರಿಂದ 6½%

ಇದೇ ತಾರೀಕು 17ನೇ ಆಗೋಸ್ತು 1964ರಿಂದ ನಿಮ್ಮ ಸ್ಥಿರ ಠೇವಣಾತಿಗಳ ಮೇಲೆ ಸಾಲಿಯಾನ್ ಸೇಕಡಾ 6½ ತನಕ ಬಡ್ಡಿ ಕೊಡಲಾಗುವುದೆಂದು ತಿಳಿಸಲು ಸಂತೋಷಪಡುತ್ತೇವೆ. ಹೆಚ್ಚಿನ ವಿವರಗಳಿಗೆ ನಿಮ್ಮ ಹತ್ತಿರದ 'ಸಿಂಡಿಕೇಟ್ ಬ್ಯಾಂಕಿ'ನ ಶಾಖೆಯಲ್ಲಿ ವಿಚಾರಿಸಿರಿ.

ಅರ್ಧ ವರ್ಷಕ್ಕೊಮ್ಮೆ ಬಡ್ಡಿಯ ಪಾವತಿ

1ರಿಂದ 7 ವರುಷಗಳ ಅವಧಿ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಪ್ರಧಾನ ಕಚೇರಿ - - - - ಮಣಿಪಾಲ

ಶಾಖೆಗಳು: 192

ಚಲಾವಣಾ ನಿಧಿ: ರೂ. 60 ಕೋಟಿಗೂ ಮಿಕ್ಕಿದೆ.

........ಪ್ರಪಂಚವ್ಯಾಪ್ತ ಬ್ಯಾಂಕಿಂಗ್ ವ್ಯವಹಾರ.

ಪ್ರಚಲಿತ ಸಮಸ್ಯೆ

ಅಧಿಕ ಆಹಾರೋತ್ಪಾದನೆ

ಭಾರತೀಯ ಕೃಷಿ ಕ್ಷೇತ್ರದ ಸ್ಥಿತಿಗತಿಗಳನ್ನು ನೋಡಿರುವ ಅನೇಕರು ಕೃಷಿ ವಿಧಾನಗಳು ವೈಜ್ಞಾನಿಕವಾಗಿ ಸಾಕಷ್ಟು ಮುಂದುವರಿಯದೇ ಇರುವುದನ್ನೂ ಇದರ ಪರಿಣಾಮವಾಗಿ ಎಕರೆ ಒಂದಕ್ಕೆ ದೊರಕುತ್ತಿರುವ ಬೆಳೆ ಪ್ರಮಾಣ ತುಂಬಾ ಕಡಿಮೆ ಇರುವುದನ್ನೂ ಕಂಡು ಮರುಗಿದ್ದಾರೆ. ಇದಕ್ಕೆ ಅನೇಕ ಕಾರಣಗಳುಂಟು. ನಮ್ಮ ರೈತರಿಗೆ ವ್ಯವಸಾಯದ ವಿಚಾರದಲ್ಲಿ ಸಾಕಷ್ಟು ಪರಿಜ್ಞಾನವಿಲ್ಲದಿರುವುದು ಮತ್ತು ಆಧುನಿಕ ಮಟ್ಟದಲ್ಲಿ ಬೇಸಾಯ ನಡೆಸಲು ಅವರ ಬಳಿ ಅವಶ್ಯಕವಾದ ಸಲಕರಣೆಗಳಿಲ್ಲದಿರುವುದು ಕೆಲವು ಮುಖ್ಯ ಕಾರಣಗಳಾಗಿವೆ. ರಾಸಾಯನಿಕ ಗೊಬ್ಬರಗಳು ಮತ್ತು ಕ್ರಿಮಿನಾಶಕಗಳನ್ನು ಎಷ್ಟು ಬಳಸಬೇಕೋ ಅಷ್ಟು ಪ್ರಮಾಣದಲ್ಲಿ ಅವರು ಬಳಸುತ್ತಿಲ್ಲ. ಜೊತೆಗೆ ಬೇಸಾಯ ಕಾರ್ಯಕ್ಕೆ ಹೆಚ್ಚು ಹಣ ಹಾಕಲು ಅವರ ಬಳಿ ಹಣವೂ ಇಲ್ಲ. ಬೇಸಾಯಾಭಿವೃದ್ಧಿಯನ್ನು ನಾವು ಹೆಚ್ಚಿಸಬೇಕಾದರೆ ಈ ಲೋಪದೋಷಗಳನ್ನು ಮೊದಲು ನಿವಾರಿಸಬೇಕು. ರೈತ ಮೊತ್ತ ಮೊದಲಿಗೆ ರಾಸಾಯನಿಕ ಗೊಬ್ಬರಗಳು ಹಾಗೂ ಕ್ರಿಮಿನಾಶಕಗಳನ್ನು ಉಪಯೋಗಿಸುವ ಪ್ರಜ್ಞೆಯುಳ್ಳವನಾಗಿರಬೇಕು. ಇದಕ್ಕಾಗಿ ವೆಚ್ಚ ಮಾಡುವ ಸಾಮರ್ಥ್ಯವೂ ಅವನಿಗಿರಬೇಕು. ವ್ಯವಸಾಯದ ವಿಚಾರವನ್ನು ನಾವು ಈ ದೃಷ್ಟಿಯಿಂದ ಮುಖ್ಯವಾಗಿ ನೋಡಬೇಕು.

ದೇಶದ ವ್ಯವಸಾಯಾಭಿವೃದ್ಧಿ ಸಾಧ್ಯವಾಗಿ ವ್ಯವಸಾಯೋತ್ಪನ್ನ ಹೆಚ್ಚಬೇಕಾದರೆ ಲಕ್ಷಾಂತರ ಜನ ರೈತರು ಈ ವಿಚಾರದಲ್ಲಿ ಒಂದು ಖಚಿತ ನಿರ್ಧಾರಕ್ಕೆ ಬರಬೇಕು ಮತ್ತು ಕಾರ್ಯೋನ್ಮುಖರಾಗಬೇಕು. ಕೈಗಾರಿಕಾ ಕ್ಷೇತ್ರದಲ್ಲಿ ಕೈಗಾರಿಕೆಗಳು ನಡೆಸುತ್ತಿರುವ ಉದ್ಯಮಗಳ ಸಂಖ್ಯೆ ಕಡಿಮೆ ಇದ್ದು ರೈತನಿಗಿಂತ ಹೆಚ್ಚಿನ ವಿದ್ಯಾಭ್ಯಾಸ ಪಡೆದವರಾಗಿರುತ್ತಾರೆ. ಹೊಸ ಹೊಸ ತಾಂತ್ರಿಕ ವಿಚಾರಗಳ ಕಡೆಗೂ ಅವರ ದೃಷ್ಟಿ ಇರುತ್ತದೆ. ಇವರನ್ನು ಹುರಿದುಂಬಿಸುವುದು ಹೆಚ್ಚು ಸುಲಭಸಾಧ್ಯ. ಬೇಸಾಯ ಕ್ಷೇತ್ರದಲ್ಲಿ ನಮ್ಮ ಲಕ್ಷಾಂತರ ಜನ ರೈತರು ಒಂದು ಹೊಸ ಅಧ್ಯಾಯ ತೆರೆಯುವಂತೆ ಮಾಡುವ ಪ್ರಯತ್ನ ಹೆಚ್ಚು ಕಠಿಣವಾದುದು

ರೈತನ ತರಬೇತಿ

ಹೊಸ ಹೊಸ ಬೇಸಾಯ ವಿಧಾನಗಳನ್ನು ರೈತ ತಿಳಿದಿದ್ದರೇ ಸಾಲದು ಅವುಗಳನ್ನು ಅನುಸರಿಸುವ ಶ್ರದ್ಧೆ ಹಾಗೂ ಸಾಮರ್ಥ್ಯ ಬಹಳ ಮುಖ್ಯವಾಗಿ ಬೇಕು. ಕೈಗಾರಿಕೋದ್ಯಮಿಗಳು ಯಾವುದೊಂದು ಹೊಸ ಕೈಗಾರಿಕಾ ಕಾರ್ಯಕ್ರಮವನ್ನು ಹಾಕಿಕೊಂಡರೂ ಆ ಕೈಗಾರಿಕೆಗೆ ಬೇಕಾಗುವ ಕಾರ್ಮಿಕರು, ಎಂಜನಿಯರುಗಳು ಮತ್ತು ಮ್ಯಾನೇಜರುಗಳಿಗೆ ಅವಶ್ಯ ತರಬೇತಿಯನ್ನೊದಗಿಸುವುದಕ್ಕೆ ಅವರು ಗಮನ ಕೊಡಲೇ ಬೇಕು. ಇಲ್ಲವಾದರೆ ಆ ಕೈಗಾರಿಕಾ ಉದ್ಯಮ ಮೂರ್ಖತನದಲ್ಲಿ ಪರ್ಯವಸಾನಗೊಳ್ಳುತ್ತದೆ. ಬೇಸಾಯ ವಿಚಾರಗಳಿಗೆ ಗಮನ ಕೊಡುವಾಗ ಈ ಅಂಶವನ್ನು ಬಹು ಸುಲಭವಾಗಿ ನಾವು ಮರೆಯುತ್ತೇವೆ. ರೈತರಿಗೆ ಬೇಕಾದ ತರಬೇತಿಯನ್ನೊದಗಿಸಲು ವ್ಯವಸ್ಥೆ ಮಾಡುವ ವಿಚಾರಕ್ಕೆ ನಾವು ಗಮನ ಕೊಡುತ್ತಿಲ್ಲ. ವಿವಿಧ ವಿಸ್ತರಣಾ ಸೇವೆಗಳನ್ನು ಆರಂಭಿಸಿದಾಗ ಈ ಕೊರತೆಯನ್ನು ಸ್ವಲ್ಪ ಮಟ್ಟಿಗೆ ನಿವಾರಿಸಿದಂತಾಯಿತು. ಆದರೂ ರೈತನಿಗೆ ತರಬೇತಿಯನ್ನು ಒದಗಿಸಬೇಕು ಎಂಬ ಖಚಿತ ಕಾರ್ಯಕ್ರಮವೊಂದು ಇಲ್ಲವಾಯಿತು. ಮುಂದಿನ ವರ್ಷಗಳಲ್ಲಾದರೂ ಹೊಸ ಬೇಸಾಯ ವಿಧಾನಗಳ ಬಗ್ಗೆ ರೈತನಿಗೆ ತರಬೇತಿಯನ್ನೊದಗಿಸುವ ಕಾರ್ಯಕ್ರಮಕ್ಕೆ ನಾವು ಮುಖ್ಯವಾಗಿ ಗಮನ ಕೊಡಬೇಕು. ಜಮೀನಿನ ಪೂರ್ಣ ಪ್ರಯೋಜನ ಪಡೆಯುವ ಬಗೆ ಹೇಗೆ, ನೀರಿನ ಸೌಕರ್ಯಗಳನ್ನು ಸರಿಯಾಗಿ ಒದಗಿಸಿಕೊಳ್ಳುವ ವಿಧಾನ ಹೇಗೆ, ಕ್ರಿಮಿನಾಶಕಗಳನ್ನು ಉಪಯೋಗಿಸುವ ಕ್ರಮ ಹೇಗೆ ಎಂಬಿತ್ಯಾದಿ ವಿಚಾರಗಳನ್ನು ರೈತನಾದವನು ಖಚಿತವಾಗಿ ತಿಳಿದುಕೊಂಡಿರಬೇಕು. ಅವುಗಳನ್ನು ಕಾರ್ಯತಃ ಜಾರಿಗೆ ತರಬೇಕು. ಇದಕ್ಕಾಗಿ ನಮ್ಮ ರೈತರಿಗೆ ತರಬೇತಿಯನ್ನು ಕೊಡುವ ಕಾರ್ಯಕ್ರಮಕ್ಕೆ ವ್ಯವಸಾಯಾಭಿವೃದ್ಧಿ ಯೋಜನೆಯಲ್ಲಿ ಪ್ರಥಮ ಸ್ಥಾನವನ್ನು ಕೊಡಬೇಕು

ಬೇಸಾಯ ಕಾಲೇಜುಗಳಲ್ಲಿ ತರಬೇತಿ ಕಾರ್ಯಕ್ರಮಗಳಿಗೆ ಹೆಚ್ಚಿನ ಚೈತನ್ಯ ತುಂಬುವುದು ಅಷ್ಟೇ ಅವಶ್ಯವಾಗಿದೆ. ಹೈಸ್ಕೂಲ್ ವಿದ್ಯಾಭ್ಯಾಸದ ನಂತರ ವ್ಯವಸಾಯ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಮೂರು ವರ್ಷಗಳ ತರಬೇತಿಯನ್ನೊದಗಿಸುವ ಕಾರ್ಯಕ್ರಮವೊಂದನ್ನು ಹಾಕಿಕೊಳ್ಳಬೇಕು ಮತ್ತು ಈ ಕೋರ್ಸಿನ ನಂತರ ತರಬೇತಿ ಪಡೆದ ಕಾರ್ಯಕರ್ತರಿಗೆ ಡಿಪ್ಲೊಮ ಕೊಡಬೇಕು. ಹೀಗೆ ತರಬೇತಿ ಪಡೆದ ಸುಶಿಕ್ಷಿತ ಜನರನ್ನು ಬೇಸಾಯ ಕ್ಷೇತ್ರಕ್ಕೆ ನಾವು ವಿಶೇಷ ಸಂಖ್ಯೆಯಲ್ಲಿ ಕಳುಹಿಸಿಕೊಡುವುದಾದರೆ ಬೇಸಾಯ ವಿಧಾನಗಳಲ್ಲಿ ಒಂದು ಕ್ರಾಂತಿಯ ಕಿಡಿಯನ್ನೇ ಹೊತ್ತಿಸಿದಂತಾಗುತ್ತದೆ. ರೈತರ ಸುಶಿಕ್ಷಿತ ವರ್ಗವೊಂದನ್ನು ನಿರ್ಮಿಸುವ ದೃಷ್ಟಿಯಿಂದ ಈಗಾಗಲೇ ಬೇಸಾಯ ನಡೆಸುತ್ತಿರುವ ರೈತರು ಕೆಲವರನ್ನು ಆರಿಸಿಕೊಂಡು ಅವರಿಗೆ ತರಬೇತಿಯನ್ನೊದಗಿಸುವುದು ಅವಶ್ಯವಾಗಿದೆ. ಬೇಸಾಯ ಶಿಕ್ಷಣ ಪಡೆದು ಪದವೀಧರರಾಗಿರುವ ಅಥವಾ ಡಿಪ್ಲೊಮ ಪಡೆದಿರುವ ರೈತರು ಸರ್ಕಾರದ ಕೆಲಸಗಳಿಗೆ ಸೇರುವ ಬದಲು ತಮ್ಮ ಹಳ್ಳಿಗೆ ಹೋಗಿ ಬೇಸಾಯಕ್ಕೆ ಇಳಿದರೆ ಕೃಷಿ ಉತ್ಪನ್ನವನ್ನು ಹೆಚ್ಚಿಸಲು ಸಮರ್ಥರಾಗುತ್ತಾರೆ. ವಿದ್ಯಾವಂತ ಜನರು ಮುಖ್ಯವಾಗಿ ಬೇಸಾಯ ವಿಚಾರಗಳಲ್ಲಿ ತರಬೇತಿ ಪಡೆದು ಪದವೀಧರರಾಗಿರುವವರು ಕೃಷಿ ಕ್ಷೇತ್ರಕ್ಕೆ ಉತ್ಸಾಹದಿಂದ ಇಳಿಯುವಂತೆ ಮಾಡಬೇಕು.

ಸಂಶೋಧನೆಯ ಪ್ರಯೋಜನ

ಬೇಸಾಯ ಕ್ಷೇತ್ರದಲ್ಲಿ ಸಂಶೋಧನಾ ಕಾರ್ಯದಲ್ಲಿ ತೊಡಗಿರುವ ಕಾರ್ಯಕರ್ತರು ಒಳ್ಳೆಯ ಕಾರ್ಯ ಮಾಡುತ್ತಿದ್ದಾರೆಂಬುದೂ ನಿಜ. ಆದರೆ ಅವರ ಸಂಪರ್ಕ ರೈತನೊಡನೆ ಹೆಚ್ಚು ನಿಕಟವಾಗಿರಬೇಕೆಂಬುದನ್ನು ಮರೆಯಲಾಗದು. ಹೊಸ ಹೊಸ ಬಗೆಯ ಕ್ರಿಮಿಗಳು, ರೋಗಗಳು ಹುಟ್ಟಿಕೊಳ್ಳುವುದರ ಜೊತೆಗೆ ಉತ್ಪನ್ನ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ ಮತ್ತು ರಾಸಾಯನಿಕ ಗೊಬ್ಬರಗಳ ಪ್ರಯೋಜನವೂ ನಿರೀಕ್ಷಿಸಿದಷ್ಟು ಆಗದೇ ಹೋಗುತ್ತದೆ. ಇದೆಲ್ಲ ರೈತನ ದಿನನಿತ್ಯದ ಸಮಸ್ಯೆಗಳು. ಇವುಗಳನ್ನು ಗಮನದಲ್ಲಿಟ್ಟುಕೊಂಡು ಸಂಶೋಧನಾ ಕಾರ್ಯ ನಡೆಯಬೇಕಾಗುತ್ತದೆ. ರೈತನ ಸಮಸ್ಯೆಗಳನ್ನು ನಿವಾರಿಸುವುದಕ್ಕೇ ನಾವಿರುವುದು ಎಂಬ ಪ್ರಜ್ಞೆ ಸಂಶೋಧಕನ ಮನಸ್ಸಿನಲ್ಲಿ ಯಾವತ್ತೂ ಇರಬೇಕು. ರೈತ ನನ್ನನ್ನು ಅನುಸರಿಸಿ ನಡೆಯಲಿ ಎಂಬ ವಿಚಾರ ಅವನ ತಲೆಗೆ ಬರಬಾರದು. ಸಂಶೋಧಕರ ತಂಡಗಳು ಮುಖ್ಯ ಮುಖ್ಯ ಬೇಸಾಯ ಕ್ಷೇತ್ರಗಳಿಗೆ ಹೋಗಿ ಅಲ್ಲಿಯ ಸಮಸ್ಯೆಗಳನ್ನು ಪ್ರತ್ಯಕ್ಷವಾಗಿ ಕಂಡುಬರಬೇಕು ಮತ್ತು ಆಗಾಗ್ಗೆ ಸಂಶೋಧಕರು ರೈತನೊಡನೆ ಕುಳಿತು ಸಮಸ್ಯೆಗಳನ್ನು ಚರ್ಚಿಸಿ ಅವುಗಳ ಬಗ್ಗೆ ತಮ್ಮ ವಿಚಾರಗಳನ್ನು ತಿಳಿಸಬೇಕು.

ಅದೇ ರೀತಿಯಲ್ಲಿ ರೈತನೂ ತನ್ನ ಹೊಸ ಹೊಸ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಸಂಶೋಧಕರ ಬಳಿಗೆ ಹೋಗುವಂತಾಗಬೇಕು. ಹೀಗೆ ನಿರಂತರವಾದ ಒಂದು ವಿಚಾರ ವಿನಿಮಯ ವ್ಯವಸ್ಥೆ ಹಾಗೂ ಅನುದಿನದ ಸಮಸ್ಯೆಗಳ ಬಗ್ಗೆ ನೇರವಾದ ಆಸಕ್ತಿ ಇವುಗಳು ಸಾಧ್ಯವಾದರೆ ಬೇಸಾಯ ಹಾಗೂ ಬೇಸಾಯ ಸಂಶೋಧನಾ ಕಾರ್ಯಗಳಿಗೆ ಒಂದು ಅರ್ಥ ಬರುವುದು ಸಾಧ್ಯವಾಗುತ್ತದೆ.

ವಿಸ್ತರಣಾ ಕಾರ್ಯ

ಉತ್ತಮ ಜಾತಿಯ ಬಿತ್ತನೆ ಬೀಜಗಳು, ಸಸ್ಯಗಳಿಗೆ ಪುಷ್ಟಿಕೊಡುವ ರಾಸಾಯನಿಕಗಳು, ನೀರನ್ನು ಸರಿಯಾದ ರೀತಿ



ವಿಮಾನದಿಂದ ಬಾಂಬಿಸಿದೊಡನೆಯೇ ನೆಲತಳದ ಜನರು ಆಹಾರ ಪೊಟ್ಟಣಗಳಿಗೆ ಬಂತೆಂದು ಸಡಗರದಿಂದ ಮೇಲೆ ನೋಡುತ್ತಾರೆ. ಆಗ ಅವರ ಕಣ್ಣಿಗೆ ಎಸೆದ ಆಹಾರದ ಗಂಟುಗಳು ಮೆಲ್ಲಮೆಲ್ಲನೆ ಗಾಳಿಯಲ್ಲಿ ತೂರಿಬರುವುದು ಕಾಣಿಸುತ್ತವೆ
(ವಿಮಾನಗಳಿಂದ ಆಹಾರ ಪೂರೈಕೆ ಸಚಿತ್ರ ಲೇಖನ ಪುಟ ೫ರಲ್ಲಿದೆ)

ಹೇಗೆ ಸಾಧ್ಯವಾದೀತು ?

-ಕೇಂದ್ರ ಆಹಾರ ಮಂತ್ರಿ
ಶ್ರೀ ಸಿ. ಸುಬ್ರಹ್ಮಣ್ಯಂ.

ಯಲ್ಲಿ ಉಪಯೋಗಿಸಿಕೊಳ್ಳುವ ಸುಧಾರಿತ ಬಳಕೆ ವಿಧಾನಗಳು, ಉತ್ತಮ ಬೇಸಾಯ ಉಪಕರಣಗಳು ಹಾಗೂ ಕ್ರಿಮಿನಾಶಕಗಳು—ಇವುಗಳಿಂದಾಗಿ ಬೇಸಾಯ ಕ್ಷೇತ್ರದಲ್ಲಿ ತಾಂತ್ರಿಕ ಪ್ರಗತಿ ಸಾಧ್ಯವಾಗಿದೆ. ಉತ್ತಮ ಬಿತ್ತನೆ ಬೀಜಗಳ ಪ್ರಯೋಜನವನ್ನು ರೈತನು ಬಹುಬೇಗ ಕಂಡುಕೊಂಡಿದ್ದಾನೆ. ಒಮ್ಮೆ ಇದರ ಪ್ರಯೋಜನ ಕಂಡುಬಂತೆಂದರೆ ಸಾಕು ರೈತ ಅವುಗಳಿಗಾಗಿಯೇ ಹುಡುಕಿಕೊಂಡು ಹೋಗುತ್ತಾನೆ. ಇದೇ ರೀತಿಯಲ್ಲಿ ಇತರ ಸಾಧನೆಗಳ ಕಡೆಗೂ ಅತನ ಗಮನವನ್ನು ಸೆಳೆಯಬಹುದಾಗಿದೆ ಇದು ವಿಸ್ತರಣಾ ಸೇವೆಗಳ ಪ್ರತ್ಯಕ್ಷದ ಮೂಲಕ ಮಾತ್ರ ಸಾಧ್ಯವಾದೀತು.

ನಮ್ಮ ವಿಸ್ತಾರಣಾ ಸೇವೆಗಳು ಈ ಸಮಸ್ಯೆಯನ್ನು ಸಾಕಷ್ಟು ಸಮಾಧಾನಕರವಾಗಿ ಎದುರಿಸುತ್ತಿಲ್ಲ. ಗ್ರಾಮ ಮಟ್ಟದ ಕಾರ್ಯಕರ್ತರಿಗೆ ಸಾಕಷ್ಟು ತಾಂತ್ರಿಕ ಜ್ಞಾನ ಇಲ್ಲದಿರುವುದೂ ಸ್ವಲ್ಪ ಮಟ್ಟಿಗೆ ಇದಕ್ಕೆ ಕಾರಣ. ಅದುದರಿಂದಲೇ ಅನೇಕ ಜನ ಕಾರ್ಯಕರ್ತರನ್ನು ನಾವು ಈ ದಿಶೆಯಲ್ಲಿ ಹುರಿದುಂಬಿಸಬೇಕು ಮತ್ತು ಅವರಿಗೆ ಬೇಕಾದ ತಾಂತ್ರಿಕ ಜ್ಞಾನವನ್ನೊದಗಿಸಿ ತರಬೇತಿ ನೀಡಬೇಕು.

ನಮ್ಮ ವಿಸ್ತಾರಣಾ ಸೇವೆಗಳು ಹೆಚ್ಚು ಯಶಸ್ವಿಯಾಗಬೇಕಾದರೆ ಬೇಸಾಯ ಇಲಾಖೆಯ ಅಧಿಕಾರಿಗಳು ತಮ್ಮ ಕೆಲಸವನ್ನು ಶ್ರದ್ಧೆಯಿಂದಲೂ ಸೇವಾ ಮನೋಭಾವದಿಂದಲೂ ನಿರ್ವಹಿಸ ಬೇಕಾಗುತ್ತದೆ. ಸಂಸ್ಥೆಗಳು ಪರಿಹಾರಕ್ಕಾಗಿಂದು ತಮ್ಮ ಬಳಿ ಬರುವುದನ್ನೇ ಕಾಯುತ್ತಾ ಕುಳಿತಿರುವುದಕ್ಕೆ ಬದಲಾಗಿ ಸಮಸ್ಯೆಗಳನ್ನು ಹುಡುಕಿಕೊಂಡು ಹೋಗಬೇಕು. ಬೇಸಾಯ ಇಲಾಖೆಯ, ಅಧಿಕಾರಿಗಳು ಎಷ್ಟೋ ವೇಳೆ ಕೇವಲ ಸಣ್ಣಪುಟ್ಟ ಆಡಳಿತ ವಿಷಯಗಳಿಗೇ ತಮ್ಮ ಸಮಯವನ್ನೆಲ್ಲಾ ವಿನಿಯೋಗಿಸುತ್ತಿದ್ದಾರೆ. ಇದು ಸಲ್ಲದು.

ಬೇಸಾಯ ಸಂಬಂಧವಾದ ಶಿಕ್ಷಣವನ್ನು ಪಡೆಯುವುದಕ್ಕಾಗಲಿ ಬೇಸಾಯ ಇಲಾಖೆ ಅಧಿಕಾರಿಯಾಗುವುದಕ್ಕಾಗಲಿ ಜನರಲ್ಲಿ ಸಾಕಷ್ಟು ಹುರುಪು ಇಲ್ಲ. ಬೇರೆ ಶಾಲಾ ಕಾಲೇಜುಗಳಲ್ಲಿ ಪ್ರವೇಶ ಸಿಗದೇ ಹೋಗಿರುವಂತಹ ಪರಿಸ್ಥಿತಿಯಲ್ಲಿ ಮಾತ್ರ ವಿದ್ಯಾರ್ಥಿಗಳು ವ್ಯವಸಾಯ ಶಿಕ್ಷಣ ಪಡೆಯಲು ಮುಂದೆ ಬರುತ್ತಾರೆ. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಬೇಸಾಯ ಇಲಾಖೆಯ ಅಧಿಕಾರಿಗಳ ಸಂಬಳ ಸಾರಿಗೆಗಳನ್ನು ಉತ್ತಮ ಪಡಿಸಲು ಮತ್ತು ಈ ಇಲಾಖೆಯಲ್ಲಿ ಸೇವೆ ಸಲ್ಲಿಸಲು ಬಂದರೆ ಮುಂದೆ ಒಳ್ಳೆಯ ಭವಿಷ್ಯವಿದೆ ಎಂಬ ಭರವಸೆ ಉಂಟಾಗುವಂತೆ ಮಾಡಲು ಹಲವು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ

ಉತ್ಪನ್ನ ಹೆಚ್ಚಿಸುವ ಪ್ರಯತ್ನ

ಎಕರೆಯೊಂದಕ್ಕೆ ದೊರಕುವ ಫಸಲಿನ ಪ್ರಮಾಣವನ್ನು ಹೆಚ್ಚಿಸುವುದು ಕೇವಲ ತಾಂತ್ರಿಕ ಜ್ಞಾನದಿಂದಲೇ ಸಾಧ್ಯವಾಗದು. ಉತ್ಪನ್ನ ಹೆಚ್ಚಿಸುವುದಕ್ಕೆ ಸಹಕಾರಿಯಾಗುವಂತಹ ಸಾಧನ ಸಲಕರಣೆಗಳನ್ನೂ ಜೊತೆಗೆ ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಟ್ರಾಕ್ಟರ್‌ಗಳ ತಯಾರಿಕೆ ಸಾಧ್ಯವಾಗಬೇಕು. ಅಂತೆಯೇ ಸಿಂಪಡಿಸುವ ಸಲಕರಣೆಗಳು ಕ್ರಿಮಿನಾಶಕಗಳು, ರಾಸಾಯನಿಕ ಗೊಬ್ಬರಗಳು ಇವೇ ಮೊದಲಾದುವುಗಳನ್ನು ಹೆಚ್ಚು ಹೆಚ್ಚಾಗಿ ತಯಾರಿಸಬೇಕು. ರಾಸಾಯನಿಕ ಗೊಬ್ಬರಗಳ ಉತ್ಪನ್ನವನ್ನು ಸಾಕಷ್ಟು ಹೆಚ್ಚಿಸಿಕೊಳ್ಳದೇ ಹೋದರೆ ಬೇಸಾಯ ಉತ್ಪನ್ನ ಕೂಡ ಹೆಚ್ಚುವುದು ಸಾಧ್ಯವಾಗದೇ ಹೋಗುತ್ತದೆ. ಭಾರತದಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆ ತುಂಬಾ ಕಡಿಮೆ ಇದೆ. ಒಂದು ಎಕರೆಯಷ್ಟು ಭೂಮಿಗೆ ಮೂರು ಪೌಂಡಿನಷ್ಟು ಅಲ್ಪ ಪ್ರಮಾಣದಲ್ಲಿದೆ. ಜಪಾನಿಗೆ ಹೋಲಿಸಿದರೆ ಈ ಪ್ರಮಾಣ ನೂರನೆ ಒಂದು ಭಾಗದಷ್ಟು ಕಡಿಮೆಯಿದೆ. ಕೋರಿಯಾಕ್ಕೆ ಹೋಲಿಸಿದರೆ ಮೂವತ್ತಮೂರನೆ ಒಂದು ಭಾಗದಷ್ಟಿದೆ. ನಮ್ಮಲ್ಲಿ ಉಪಯೋಗಿಸುವ ರಾಸಾಯನಿಕ ಗೊಬ್ಬರಗಳ ಪ್ರಮಾಣದಲ್ಲಿ ಬಹುಭಾಗ ವಾಣಿಜ್ಯ ಬೆಳೆಗಳಿಗೆ ಹೋಗುತ್ತದೆ ಎಂಬುದನ್ನು ಗಮನಿಸಿದರೆ ಆಹಾರ ಧಾನ್ಯಗಳ ಬೆಳೆಗಾಗಿ ಉಪಯೋಗಿಸುವ ರಾಸಾಯನಿಕ ಗೊಬ್ಬರಗಳ ಉತ್ಪನ್ನವನ್ನೂ ಬಳಕೆಯನ್ನೂ ಸಾಕಷ್ಟು ಹೆಚ್ಚಿಸುವುದು ತುಂಬಾ ಆವಶ್ಯಕವಾಗಿದೆ. ಇದಾಗದೇ ಬೇಸಾಯೋತ್ಪನ್ನ ಹೆಚ್ಚಿಸುವುದು ಕಷ್ಟಸಾಧ್ಯವೇ ಸರಿ.

ಮಾರುಕಟ್ಟೆಯ ಭದ್ರತೆ

ಬೇಸಾಯ ಪ್ರಗತಿಯು ಹಿಂದೆ ಬಿದ್ದಿರುವುದಕ್ಕೆ ಬೇಸಾಯ ಕಾರ್ಯ ಸಾಕಷ್ಟು ಲಾಭದಾಯಕವಾಗಿಲ್ಲದಿರುವುದೂ ಕಾರಣವಾಗಿದೆ. ರೈತನಿಗೆ ಅವನ ಫಸಲಿಗೆ ಉತ್ತಮ ಬೆಲೆ ಬರುವುದನ್ನು ಖಾತ್ರಿ ಮಾಡಿಕೊಡುವುದರಿಂದ ಬೇಸಾಯೋತ್ಪನ್ನ ಹೆಚ್ಚಿಸಲೂ ಅವನಿಗೂ ಉತ್ಸಾಹ ಬರುತ್ತದೆ. ರೈತನಿಗೆ ಅವನ ಫಸಲಿಗೆ ನ್ಯಾಯವಾದ ಬೆಲೆಯನ್ನು ದೊರಕಿಸಿಕೊಡುವ ವಿಚಾರವನ್ನು ಪರಿಶೀಲಿಸಿ ಬೆಲೆಗಳನ್ನು ನಿರ್ಧರಿಸುವ ಸಲುವಾಗಿಂದೇ ಪ್ರತ್ಯೇಕ ಸಮಿತಿಯೊಂದನ್ನು ನೇಮಿಸಲು ನಿರ್ಧಾರ ಕೈಗೊಳ್ಳಲಾಗಿದೆ. ವ್ಯಾಪಾರಿಗಳು ರೈತರಿಗೆ ಅನ್ಯಾಯ ಮಾಡುವುದಕ್ಕೆ ಅವಕಾಶ ಕೊಡಕೂಡದೆಂಬ ಉದ್ದೇಶದಿಂದ ಆಹಾರ ಧಾನ್ಯಗಳ ವ್ಯಾಪಾರ ನಡೆಸುವ ಪ್ರತ್ಯೇಕ ಕಾರ್ಪೊರೇಶನ್ ಒಂದನ್ನು ಸರಕಾರ ನಿರ್ಮಿಸಿದೆ. ಇದರಿಂದಾಗಿ ಬೆಲೆಗಳು ಒಂದು ಸ್ಥಿಮಿತಕ್ಕೆ ಬರಲು ಅವಕಾಶವಾಗುತ್ತದೆ. ಮುಂದೆ ವಾಣಿಜ್ಯ ಬೆಲೆಗಳಿಗೂ ಸಂಬಂಧಿಸಿದಂತೆ ಇಂತಹ ಕ್ರಮ ಕೈಗೊಳ್ಳುವುದು ಆವಶ್ಯಕವಾಗಬಹುದು

ಕಾರ್ಯವ್ಯಾಪ್ತಿಯ ಹೆಚ್ಚಳ

ಆಹಾರ ಧಾನ್ಯಗಳನ್ನಾಗಲಿ ವಾಣಿಜ್ಯ ಬೆಳೆಗಳನ್ನಾಗಲಿ ಬೆಳೆಯುವುದಷ್ಟೇ ಬೇಸಾಯವಾಗಲಾರದು. ಬೇಸಾಯ ಎಂಬ ಪದಕ್ಕೆ ಒಂದು ವಿಶಾಲ ಅರ್ಥವನ್ನು ಕೊಡಬೇಕು. ಪಶುಪಾಲನೆ, ಕೋಳಿಸಾಕಾಣಿಕೆ, ಮತ್ಸ್ಯಪಾಲನೆ, ಇವೇ ಮೊದಲಾದ ಕೆಲಸಗಳೂ ಇದರ ವ್ಯಾಪ್ತಿಗೆ ಬರಬೇಕು. ಈ ಸಂಬಂಧವಾದ ಕಾರ್ಯಕ್ರಮಗಳು ಅನೇಕ ವರ್ಷಗಳಿಂದಲೂ ನಡೆಯುತ್ತಿವೆ ಆದರೆ ಇವುಗಳಿಗೆ ಒಂದು ಹೊಸ ಚೈತನ್ಯವನ್ನು ತುಂಬಬೇಕಾದುದು ಮಾತ್ರ ಆವಶ್ಯಕವಾಗಿದೆ. ಗ್ರಾಮಾಂತರ ಪ್ರದೇಶಗಳ ಜನ ಹೆಚ್ಚು ಹೆಚ್ಚಾಗಿ ಈ ಕಾರ್ಯಕ್ರಮಗಳಲ್ಲಿ ಆಸಕ್ತಿ ವಹಿಸುವಂತೆ ಮಾಡಬೇಕು. ಕೈರಾ ಮತ್ತು ಆನಂದ್ ಈ ಎರಡು ಕಡೆಗಳಲ್ಲೂ ಈ ಕಾರ್ಯಕ್ರಮಗಳಿಂದಾಗಿ ಆರ್ಥಿಕ ಪರಿಸ್ಥಿತಿ ಹೇಗೆ ಸಂಪೂರ್ಣವಾಗಿ ಮಾರ್ಪಾಟು ಹೊಂದಿದೆ ಎಂಬುದನ್ನು ಇಲ್ಲಿ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಈ ಕಾರ್ಯಕ್ರಮಗಳು ಸರಿಯಾದ ರೀತಿಯಲ್ಲಿ ಕಾರ್ಯಗತವಾದರೆ ಅವುಗಳಿಂದಾಗಿ ಆರ್ಥಿಕ ವ್ಯವಸ್ಥೆಯೇ ಸಂಪೂರ್ಣವಾಗಿ ಬದಲಾಗಿ ಗ್ರಾಮ ಜೀವನ ಹೊಸ ಬಾಳ್ವೆಗೆ ಹಾದಿ ಮಾಡಿಕೊಡುತ್ತದೆ. ಹಂದಿಗಳ ಸಾಕಾಣಿಕೆ ಮತ್ತು ಕೋಳಿ ಸಾಕಾಣಿಕೆ ಸಂಬಂಧವಾದ ಕಾರ್ಯಕ್ರಮಗಳನ್ನು ಹೆಚ್ಚು ವ್ಯಾಪಕಗೊಳಿಸಲು ಅವಕಾಶವಿದೆ

ರೈತನಿಗೆ ಸಾಲ ಸೌಲಭ್ಯ

ರೈತನಿಗೆ ಸಾಲಸೌಲಭ್ಯಗಳನ್ನು ಒದಗಿಸುವ ಸಂದರ್ಭದಲ್ಲಿ ಹಿಂದೆ ಅನೇಕ ಪ್ರಯತ್ನಗಳು ನಡೆದಿವೆ ಇವುಗಳ ಫಲವಾಗಿ ಸಾಲಸೌಲಭ್ಯಗಳ ವ್ಯಾಪ್ತಿಯನ್ನು ಹೆಚ್ಚಿಸಲಾಗಿದೆ. ಇಷ್ಟೆಲ್ಲಾ ಕೆಲಸ ನಡೆದಿದ್ದರೂ ಇಂದಿಗೂ ರೈತನು ಖಾಸಗಿ ಮೂಲಗಳಿಂದ ಹಣ ಪಡೆಯುವ ಪರಿಸ್ಥಿತಿ ಮಾತ್ರ ತಪ್ಪಿಲ್ಲ. ಹಣ ಕೊಡುವ ಮನುಷ್ಯ ಇದನ್ನೇ ಒಂದು ಉದ್ಯೋಗವನ್ನಾಗಿ ಇಟ್ಟುಕೊಂಡಿದ್ದರೂ ಆತ ಸ್ವತಃ ಒಬ್ಬ ದೊಡ್ಡ ಜಮೀನುದಾರನಾಗಿರಬಹುದು ಅಥವಾ ಸಗಟು ವ್ಯಾಪಾರಿಯೂ ಆಗಿರಬಹುದು. ಅವನು ರೈತನಿಂದ ವಸೂಲಿ ಮಾಡುವ ಬಡ್ಡಿ ದರವು ಕಡಿಮೆ ಇಲ್ಲ. ಜೊತೆಗೆ ಇತರ ಷರತ್ತುಗಳೂ ಕಠಿಣವಾಗಿರುತ್ತವೆ. ಆದರೂ ಪಡೆಯುವ ಸಾಲವನ್ನು ಸುಲಭವಾಗಿ ಪಡೆಯಬಹುದೆಂಬ ಒಂದೇ ಆಕರ್ಷಣೆ ರೈತನ ಮಟ್ಟಿಗೆ ಪ್ರಮುಖವಾಗಿರುತ್ತದೆ. ಜಮೀನ್ದಾರನಿಂದ ಎಷ್ಟು ಬೇಗ ಸಾಲಪಡೆಯುವುದು ಸಾಧ್ಯವೋ ಅಷ್ಟು ಬೇಗ ಅಧಿಕೃತ ಸಂಸ್ಥೆಗಳಿಂದಲೂ ಪಡೆಯುವುದು ರೈತನಿಗೆ ಸಾಧ್ಯವಾಗಬೇಕು. ವಾಣಿಜ್ಯ ಬ್ಯಾಂಕುಗಳ ಶಾಖೆಗಳನ್ನು ಹೆಚ್ಚು ಹೆಚ್ಚಾಗಿ ತೆರೆಯುವುದಕ್ಕೆ ಅವಕಾಶ ಕಲ್ಪಿಸುವದರ ಮೂಲಕ ಇದು ಸಾಧ್ಯವಾಗಬಹುದು. ಸಹಕಾರಿ ಸಂಸ್ಥೆಗಳ ಮೂಲಕ ಸಾಲಪಡೆಯಲು ಇರುವ ನಿಬಂಧನೆಗಳನ್ನೂ ಸರಳಗೊಳಿಸಬೇಕು.

ಲಡಾಖಿನಲ್ಲಿ ಹರಿಯುವ ಸಿಂಧೂನದಿಯನ್ನು ದಾಟಿ ಹಾರುತ್ತಿರುವ ಹೆಲಿಕಾಪ್ಟರ್
(ವಿಮಾನದಿಂದ ಆಹಾರ ಪೂರೈಕೆ ಸಚಿತ್ರ ಲೇಖನ ಪುಟ ೨ರಲ್ಲಿದೆ)

ಅನುಭವ

ಸ್ವಪ್ನವೂ ಭವಿಷ್ಯ ಹೇಳುತ್ತದೆ

ಕು. ಅನೂಲ್ಯ ಖಂಡಿಗೆ

ವಿಜ್ಞಾನದ ದೃಷ್ಟಿಯಲ್ಲಿ (ಮಾನಸಿಕವಾಗಿ ಹಾಗೂ ದೈಹಿಕ) ನಾವು ಸ್ವಪ್ನವನ್ನು ರಾತ್ರಿ ನಿದ್ರೆಯಲ್ಲಿ ಅನುಭವಿಸಿದರೆ ಆರೋಗ್ಯವಲ್ಲ ಎನ್ನುವರು. ಅಂದರೆ ದೇಹದ ಚಟುವಟಿಕೆಗನುಗುಣವಾದ ಆಹಾರವನ್ನು ತೆಗೆದುಕೊಳ್ಳುವ ಪರಿಮಿತಿಯು ಮೀರಿಹೋದರೆ ಜೀರ್ಣಕಾರ್ಯವು ಸರಿಯಾಗಿ ಜರಗದೆ ಏನೇನೋ ಸ್ವಪ್ನವು ನಿದ್ದೆಯಲ್ಲಿ ಬೀಳುವುದು ಎಂಬುದನ್ನು ವಿಜ್ಞಾನಿಗಳು ಹಲವು ದೃಷ್ಟಾಂತಗಳಿಂದ ವ್ಯಕ್ತಪಡಿಸಿರುವರು. ಅದು ನಿಜವಿರಬಹುದು. ಆದರೆ "ಅಪ್ಪನು ನೆಟ್ಟ ಆಲದ ಮರಕ್ಕೆ ಪ್ರದಕ್ಷಿಣೆ ಬರುವುದು ಪದ್ಧತಿ' ಎಂದೆನ್ನದೆ ಸ್ವಲ್ಪ ವಿಮರ್ಶಾತ್ಮಕ ದೃಷ್ಟಿಯಿಂದ ಸ್ವಪ್ನದ ವಿಶೇಷತೆಯ ಕಡೆಗೆ ಗಮನವಿತ್ತು ನೋಡುವುದು ಉತ್ತಮವಲ್ಲವೆ?

ಸ್ವಪ್ನವು ಸಿಕ್ಕಾಪಟ್ಟೆಯಾಗಿ ಬೀಳಬು. ಅದಕ್ಕೂ ಸಮಯವಿದೆ. ಮಲಗಿದಾಕ್ಷಣ ಕಣ್ಣಿಗೆ ನಿದ್ದೆ ಬೀಳುತ್ತಲೇ ಸ್ವಪ್ನ ಬಿದ್ದು ಬೆಳಗಿನ ತನಕ ಅದೇ ಸಾಮ್ರಾಜ್ಯದಲ್ಲಿ ತಿರುಗುವವರು ಕೆಲವರಾದರೆ, ಇನ್ನು ಹಲವರು ನಿದ್ದೆ ಮಾಡಿ ಸ್ವಲ್ಪ ಹೊತ್ತಿನಲ್ಲಿ ಎಚ್ಚೆತ್ತು ಮಲಗಿದ ಬಳಿಕ ಸ್ವಪ್ನದನುಭವ ಹೊಂದುವರು. ಇದು ಸಾಧಾರಣ ರಾತ್ರಿ ಹನ್ನೊಂದರಿಂದ ಎರಡು ಘಂಟೆಯ ಒಳಗಿನ ಸಮಯವಿರಬಹುದು. ಇದರಲ್ಲೇನೂ ವಿಶೇಷತೆಯಿಲ್ಲ. ನಿದ್ರೆ ಮಾಡುವ ಪ್ರತಿಯೊಬ್ಬನೂ ಸ್ವಪ್ನ ಕಾಣುವನೆನ್ನಿ. ಆದರಲ್ಲೂ ಪ್ರಭಾತಮಯ ಸ್ವಪ್ನವನ್ನು ಅನುಭವಿಸುವುದು ಬಹು ವಿರಳ. ಆವರೆ ಯೋಗ್ಯ. ಇದು ಆರೋಗ್ಯದ ದೃಷ್ಟಿಯಲ್ಲಿ ಕೆಡುಕಲ್ಲ. ಶಾಸ್ತ್ರೀಯವಾದ ರೀತಿಯಲ್ಲಿ ಮುಂಜಾವದ ಸ್ವಪ್ನದಲ್ಲಿ ಸತ್ಯದ ಫಲವಿದೆಯೆಂದು ಬಲ್ಲ ಹಿರಿಯರು ಹೇಳುವುದನ್ನು ಕೇಳಿದ್ದ ನಾನು ಅವರನ್ನು ಮೂದಲಿಸುತ್ತಿದ್ದೆ.

ಮಾರ್ಚ ತಿಂಗಳಲ್ಲಿ ಪರೀಕ್ಷೆ ಕಳೆದು ನಲ್ಮೆಯ ಗೆಳತಿಯರನ್ನು ಅಗಲಿ ಮನೆಗೆ ಬಂದೆ. ಗೆಳತಿಯರ ಮಧ್ಯೆ ಲೀಲಾಜಾಲವಾಗಿ ಸಮಯ ಕಳೆಯುತ್ತಿದ್ದ ನನಗೆ ಮನೆಯಲ್ಲಿ ಒಂದು ದಿನವೆಂಬುದು ಯುಗವಾಗಿ ಪರಿಣಮಿಸುತಿತ್ತು. ಆ ಮಧ್ಯೆ ಪರೀಕ್ಷೆಯ ನೆನಪುಬಂತೆಂದರೆ 'ಹಾ! ಪ...ಬ್ಲಿ....ಕ್' ಎಂಬ ಭಯನುಡಿಯು ಮಾರ್ದನಿ ಕೊಡುತ್ತಿತ್ತು, ಹೃದಯದಲ್ಲಿ. ಹೆಚ್ಚಾಗಿ ಎಷ್ಟೇ ಚತುರ ವಿದ್ಯಾರ್ಥಿಗಳಿಗೂ ಪರೀಕ್ಷೆ ಕಳೆದು ಫಲಿತಾಂಶ ತಿಳಿಯುವ ತನಕ ಒಂದು ರೀತಿಯ ತಳಮಳ ಇದ್ದೇ ಇರುವುದು ಸಹಜ.

ಕಾಲಚಕ್ರವು ಉರುಳುತ್ತಲೇ ಮೇ ತಿಂಗಳು ಬಂದು ಇಪ್ಪತ್ತು ದಿನಗಳು ಸಂದುವು. ಅನಂತರ ಪರೀಕ್ಷೆಯ ಫಲಿತಾಂಶವು ತಿಳಿಯುವುದು ಇಂದು ನಾಳೆಯೆಂಬ "ಗುರುಗುರು" ವಾರ್ತೆಯು ಪ್ರತಿಯೊಬ್ಬರ ಬಾಯಿಯಿಂದಲೂ ಕೇಳಿಬರುತ್ತಿತ್ತು. ನನಗಂತೂ ಯಾವ ಲೋಕದಲ್ಲಿರುವೆನೆಂಬ ಅರಿವೇ ಇದ್ದಿಲ್ಲ. ಉತ್ಸಾಹವು ಅತಿಯಾಯಿತು ಬೆಳಗಾಗುತ್ತಲೇ ವಾರ್ತಾಪತ್ರಿಕೆಗಾಗಿ ಇದಿರು ನೋಡುವುದು. ಮೇ ತಿಂಗಳ ಬುಧವಾರ ದಿನ ರಾತ್ರಿ ದೇವರ ಸೇವೆಯನ್ನು ಸಲ್ಲಿಸಿ, ಊಟವನ್ನು ತೀರಿಸಿ ಕೋಣೆಗೆ ಹೋದೆ. ಆದೇನೋ, ಒಂದು ಕಥೆ ಪುಸ್ತಕವನ್ನು ಓದಿ ರಾತ್ರಿ ಹತ್ತು ಘಂಟೆ ಹೊಡೆಯುತ್ತಲೇ ನಿದ್ರಾದೇವಿಯ ಆಶ್ರಯವನ್ನು ಮರೆಹೋಗಲು ಹಾಸಿಗೆಯತ್ತ ಹೊರಳಿದೆ. ಬಹು ಬೇಗನೆ ನಿದ್ದೆ ಬಂದಿತು. ಸಾಧಾರಣ ಬೆಳಗ್ಗೆ (ಮುಂಜಾವ) ಐದು ಘಂಟೆಯಾಗಬಹುದು. ನಾನು ಉತ್ತೀರ್ಣಳಾಗಿ ಮಾರ್ಕುಕಾರ್ಡನ್ನು ತೆಗೆದುಕೊಂಡು ಬಂದೆ. ದಾರಿಯಲ್ಲಿ ಗೆಳತಿಯೋರ್ವಳು ಬಂದು "Congratulations for your Success" ಎಂದು ಕೈ ಹಿಡಿದು ಕುಲುಕಿಸುವಷ್ಟರಲ್ಲಿ ಸ್ವಪ್ನದಿಂದ ಎಚ್ಚೆತ್ತು ಬಿಟ್ಟೆ. ನೋಡುವುದೇನು!! ನಿಶೆಯಿನ್ನು ಹರಿದಿಲ್ಲ. ನನಗೇನೋ ಭಯದಿಂದ ಮಲಗಲಾಗಲಿಲ್ಲ. ಎದ್ದು ಮುಖ ತೊಳೆದು ದೇವರಿಗೆ ದೀಪ ಹಚ್ಚಿದಾಗ ಗಡಿಯಾರವು ಘಂಟೆ ಬಾರಿಸಿತು ಆರು. ಕೂಡಲೇ ಡೈರಿ ತೆಗೆದು ಸ್ವಪ್ನದಲ್ಲಿ ಕಂಡಿದ್ದ ಮಾರ್ಕನ್ನು ಬರೆದು ಇಟ್ಟುಕೊಂಡೆನು. ಬಳಿಕ ಅಮ್ಮನಿಗೆ ಬೆಳಗ್ಗಿನ ಉಪಹಾರ ತಯಾರಿಸುವುದಕ್ಕೆ ನೆರವಾದೆ. ಆಗಲೂ ಮನಸ್ಸಿನಲ್ಲಿ ಸುಳಿಯುವುದು ಸ್ವಪ್ನ. ಪೇಪರ್ ಸಿಗುವುದು ಸಂಜೆ ಆರು ಘಂಟೆಗೆ. ದೊಡ್ಡ ಮನಸ್ಸಿನಿಂದ ಸುಮ್ಮನಾದೆ. ಆ ದಿನ ಸಂಜೆ ಕ್ಷಣಾರ್ಧದಲ್ಲಿ ಬಂದಂತೆ ಆಯಿತು. ಪೇಪರನ್ನು ನೋಡಿದಾಗ ಪಾಸಾಗಿದ್ದೆ. ಕೆಲವು ದಿನಗಳು ಕಳೆದು ನನ್ನ ಮಾರ್ಕು ಕಾರ್ಡು ಕಾಲೇಜಿಗೆ ಬಂದಿತ್ತು. ಅದರ ಮಾತ್ರ ಸ್ವಪ್ನಸೂಚಿತ ಮಾರ್ಕುಗಳನ್ನು ಹೋಲಿಸಿದೆ. ಏನು ಅದ್ಭುತ! ಪ್ರತಿಯೊಂದು ವಿಷಯದಲ್ಲೂ ಅದು ಅಂಕೆ ಅಂಕೆ ಕೂಡಿಬರುತಿತ್ತು. ಆಗ ಹೊಳೆಯಿತು, ಹಿರಿಯರಾಡಿದ ಮಾತು ಸತ್ಯ, ಸ್ವಪ್ನದಲ್ಲಿ ದಿವ್ಯಶಕ್ತಿಯಿದೆ.

ಆದುದರಿಂದ ಪ್ರಭಾತ ಕಾಲದಲ್ಲಿ ಕಾಣುವ ಸ್ವಪ್ನವು ಒಂದು ರೀತಿಯ ದಿವ್ಯ ಸಂದೇಶವಿರಬಹುದೆಂದು ಎಣಿಸಲು ಸಾಧ್ಯ. ಭವಿಷ್ಯತ್ತನ್ನು ಕಾಣುವ ಒಂದು ದಿವ್ಯಶಕ್ತಿ ಜ್ಞಾನೇಂದ್ರಿಯಗಳಲ್ಲಿ ಹುದುಗಿಕೊಂಡಿದೆ. ಆಕಸ್ಮಿಕವಾಗಿ ನಮ್ಮ ದೇಹದಲ್ಲಿ ನೂತನವಾದ ಕ್ರಿಯೆಯು ಇಂದ್ರಿಯಗಳಿಂದ ನಡೆವಾಗ ಉಂಟಾಗುವ ಶಕ್ತಿಯೆ ಕನಸಾಗಿದೆ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ.

O. S. No. 80/1964.

ಸತ್ಯಮ್ಮ ಕೂಡಾ 10 ಜನರು—ವಾದಿರು

ದೇವಮ್ಮ ಕೂಡಾ 11 ಜನರು—ಪ್ರತಿವಾದಿರು

ಸದ್ರಿ ವ್ಯಾಜ್ಯದ 6 ನೇ ಪ್ರತಿವಾದಿ—ವಾಸು ಆಚಾರಿ; ದೇವಮ್ಮನ ಅಪ್ಪು ಆಚಾರಿ ಮಗ— ಬೆಳ್ತಂಗಡಿ ತಾಲ್ಲೂಕು ಮರೋಡಿ ಗ್ರಾಮ್ದ ಕೊಂಪೆ ಎಂಬಲ್ಲಿರುವವ— ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಮೇಲಿನ ವ್ಯಾಜ್ಯದಲ್ಲಿ ವಿವರ್ಸಿದಂತೆ ಕೈಪೇತಿನ A ಶೆಡ್ಯೂಲಲ್ಲಿ ವಿವರ್ಸಿದ ಕುತ್ಲೂರು ಗ್ರಾಮದ ಆಸ್ತಿಯಲ್ಲಿವಾಗೀಗೆ ಸಿಗತಕ್ಕ 10/21 ನೇ ಅಂಶದ ಆಸ್ತಿಯನ್ನು ಹಿಸೆ ವಿಂಗಡ್ಸಿ 1 ನೇ ವಾದಿಳ ಸ್ವಾಧೀನ ಬಿಡ್ಸಿ ಕೊಡಿಸಬೇಕೆಂತ್ಲೂ ಮಿಗ್ತೆ ಕೋರ್ಟು ಖರ್ಚು ಯಿತ್ಯಾದಿ ಕೊಡಿಸಬೇಕೆಂತ ಯಿತ್ಯಾದಿ ನಿವೃತ್ತಿಗಳ ಕುರಿತು ವಾದಿರ್ಯ ನಿಮ್ಮ ಮೇಲೆ ಕೂಡಾ ಮಾಡಿರುವ ಮೇಲ್ಕಂಡ ವ್ಯಾಜ್ಯ ತಾ. 29-9-64 ಕ್ಕೆ ತನ್ನಿಗೆ ಇಟ್ಟಿರುತ್ತದೆ— ಸದ್ರಿ ವ್ಯಾಜ್ಯದ ಕುರಿತು ಆಕ್ಷೇಪವಿದ್ದರೆ ಸದ್ರಿ ಪ್ಯಾದೆ ದಿನ ಬೆಳಗ್ಗೆ 11 ಕ್ಕೆ ನೀವು ಸ್ವತಃ ಯ ವಕೀಲ ದ್ವಾರ ಹಾಜರಾಗಿ ಉಚಿತ ರೀತಿ ತಪ್ಪಿದ್ರೆ ನಿಮನ್ನು ಶಿಪ್ಪಾಮಾಡಿ ವ್ಯಾಜ್ಯವನ್ನು ತೀರ್ಮಾನಿಸಲ್ಪಡಲಾದೀತು.

By order of Court.

B. K. Sooryanarayana Rao.
Advocate for Plaintiff

ಬೆಳ್ತಂಗಡಿ ತಾ. 5—9—1964

ನಗು ನೀನು....

ಜಗವೆ ನಿನ್ನೊಡನೆ ನಗುತಲಿಹುದು

'ಧೈರ್ಯ....'

ಡಾಕ್ಟರರು—(ರೋಗಿಗೆ) ಈ ಹೊತ್ತು ಹೇಗಿದೆ?"

ರೋಗಿ—"ಬಾಕಿ ಎಲ್ಲಾ ಸರಿ. ಉಸಿರಾಡುವದೆ ಸ್ವಲ್ಪ ಕಠಿಣವಾಗಿದೆ."

ಡಾಕ್ಟರರು— "ಅದು ನಿಲ್ಲಲು ಔಷಧ ಕೊಡ್ತೇನೆ".

o o o

ಉಪಾಯ

ಪ್ರತಿದಿನ ಗಂಡನು ಮಧ್ಯರಾತ್ರಿ ಮೀರಿ ಮನೆಗೆ ಬರುತ್ತಿರುವದನ್ನು ಪತ್ತೆಗಟ್ಟಲು; ಹೆಂಡತಿ ದೀರ್ಘವಾಗಿ ಯೋಚಿಸಿ—ಕೊನೆಗೊಂದು ಉಪಾಯ ಮಾಡಿದಳು....ದಿನದಂತೆ ಗಂಡ ಹನ್ನೆರಡು ಗಂಟೆಗೆ ಬಂದು ಬಾಗಿಲು ಬಡಿದ—ಅವಳು ಸಣ್ಣ ಧ್ವನಿಯಲ್ಲಿ—"ಈ ಹೊತ್ತೇನು? ಇಷ್ಟು ತಡವಾಗಿ ಬಂದ್ರಿ. ಅವರು ಬರುವ ಹೊತ್ತಾಯಿತು. ನೀವು ನಿನ್ನೆನೆ ಹೇಳಿದ್ದರೆ ನಾನೂ ನಿಮ್ಮೊಟ್ಟಿಗೆ ಸಿನೆಮಾಕ್ಕೂ ಬರುತ್ತಿದ್ದಿಲ್ಲವೆ?"...ಎಂದಳು.

—ಅಂದಿನಿಂದ ಗಂಡ ಬೇಗನೆ ಬಂದು ಮನೆ ಸೇರುತ್ತಿದ್ದ!......ಕಾಯುತ್ತಿದ್ದ!? ಮೋರಿಲೆ ಆಟ ಕೆಲವೆ ದಿವಸದಲ್ಲಿ ಕೈಬಿಟ್ಟು ಹೋಯಿತು.

o o o

ನೀವೂ ನಕ್ಕು ಬಿಡಿ

ಆತ—ಪ್ರತಿದಿನ ನನ್ನ ಮುಖವನ್ನೆ ನೋಡಿ ನೋಡಿ ಒಬ್ಬಳು (ಯುವತಿ)—ನಗುತ್ತಾಳೆ ನಾನೇನ' ಮಾಡಲಿ?

ಈತ— ಅವಳು ನಿನ್ನ ಮುಖವನ್ನು ನೋಡಿ—ನಕ್ಕರೆ—ನೀನು ಅವಳ ಮುಖವನ್ನು ನೋಡಿ ನಗು!?....

o o o

ಯೋಚನೆ?

ಲಕ್ಷ್ಮಣರಾಯರು— "ರಾಮರಾಯರೆ—ಓಡಿ ಹೋದ ಹೆಂಡತಿಯ ಬಗ್ಗೆ ಇಷ್ಟೇಕೆ ಚಿಂತೆ? ನಿಮಗಿನ್ನೂ ಐವತ್ತು ವರುಷ ಕೂಡಾ ಆಗಿಲ್ಲ...(?....)

ರಾಮರಾಯರು— "ಅವಳು ಇನ್ನಾರ ಸಂಗಡ ಓಡಿ ಹೋದರೂ ಅದರ ಬಗ್ಗೆ ಯೋಚನೆ ಮಾಡ್ತಾ ಇರಲಿಲ್ಲ...ಅವನಷ್ಟು ಉತ್ತಮವಾಗಿ ಅಡಿಗೆ ಮಾಡುವವರು ಸಿಗೋದೆ ಇಲ್ಲ. ಅದೇ ನನಗೆ ದೊಡ್ಡ ಯೋಚನೆ!...."

o o o

ವಿಶೇಷ ಸುದ್ದಿ

"ನೆಹರು ನಮ್ಮ ಕಣ್ಮಣಿಗಳಾಗಿದ್ದರು ಅವರ ಪಡೆದ ಭಾರತ ಮಾತೆ ಅನಾಥಳು" —"ದುರದೃಷ್ಟಳು..."; ಸ್ವಾತಂತ್ರ್ಯೋತ್ಸವದ ಅಧ್ಯಕ್ಷ ಪೀಠವನ್ನಲಂಕರಿಸಿದ ಡಾಕ್ಟರರು ಈ ರೀತಿ ತಮ್ಮ ಮಾತನ್ನು ಮುಗಿಸಿದ್ದರು.

—ಶ್ರೀ ಪಿ ಎನ್. ಹೆಗಡೆ— ಶಂಭು ಹೊಸಾಕುಳಿ.

ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್: 65 ಉಡುಪಿ.

ಬೊಂಬಯಿಯ ಪ್ರಥಮ ಅಧಿವೇಶನ

(ಆರನೇ ಪುಟದಿಂದ)

ಅಲಂಕರಿಸಿದಭಂಗಾರದ ಒಂಟಿಗೆಳನ್ನಾಗಲೀ ವಜ್ರದ ಆಭರಣಗಳನ್ನಾಗಲೀ ಧರಿಸಿರಲಿಲ್ಲ. ಹೆಚ್ಚು ಶ್ರದ್ಧಾವಂತ ಸಂಪ್ರದಾಯಾನುಸಾರಿಗಳಾದ ದಕ್ಷಿಣ ಪ್ರಾಂತದಿಂದ ಬಂದ ತಮ್ಮ ಸಹೋದರರಂತೆ ಹಣೆಗೆ ನಾಮಗಳನ್ನು ಹಚ್ಚಿಂಲಿಲ್ಲ. ಇನ್ನು ಡಿಲ್ಲಿ, ಆಗ್ರಾ, ಲಖ್ನೌ, ಮತ್ತು ಬನಾರಸ್ ಕಡೆಗಳಿಂದ ಬಂದ ಹಿಂದ ಸ್ಥಾಪಿಗಳಿದ್ದರು, ಅವರಲ್ಲಿ ಕೆಲವರು ಮಸ್ಲಿನ್ ಸ್ಕಲ್ ಕೇಪುಗಳನ್ನು ಧರಿಸಿ ಮುಖ್ಯವಾಗಿ ಅದೇ ಚಲೇ ವಸ್ತ್ರದ ಉಡುಪುಗಳನ್ನು ಧರಿಸಿದ್ದರು. ಇನ್ನೊಂದು ಕಡೆಯಲ್ಲಿ ವಾಯುವ್ಯ ಪ್ರಾಂತದಿಂದ ಗಡ್ಡವುಳ್ಳ ಸ್ಥೂಲ ಶರೀರದ ಪ್ರತಿನಿಧಿಗಳು ವಿವಿಧ ಬಣ್ಣದ ಕೋಟುಗಳನ್ನೂ ರುಮಾಲುಗಳನ್ನೂ ಧರಿಸಿ ಬಂದಿದ್ದರು. ಕರಾಚಿಯಿಂದ ಕಟ್ಟಾಳುಗಳಾದ ಸಿಂಧಿಗಳು ಮೇಲುಗಡೆ ದೊಡ್ಡ ಬೊಟ್ಟುಳ್ಳ ಉದ್ದವಾದ ಟೋಪಿಗಳನ್ನು ಧರಿಸಿ ಬಂದಿದ್ದರು. ಈ ವಿಚಿತ್ರವಾದ ಗುಂಪಿನಲ್ಲಿ ಗುಜರಾತಿನ ಬನಿಯರ, ಗಾಡಿಚಕ್ರದ ರುಮಾಲಿನ ಮರಾಠರ ಮತ್ತು ಉತ್ತಮ ತಲೆ ಡ್ರೆಸ್ಸಿಲ್ಲದ ಮತ್ತು ಇಳಿಜಾರಾದ ಮಾಡಿನಂತೆ ಮಾಡಿದ ಟೊಪ್ಪಿಗೆಗಳುಳ್ಳ ಪಾರ್ಸಿಗಳ ಪಂಚಿತ ಆಕೃತಿಗಳು ಕಂಡುಬರುತ್ತಿದ್ದವು. ಇವರಲ್ಲಿ ಕೆಲವರು ತಮ್ಮ ಫೇಂಟ್‌ಗಳನ್ನು ಧರಿಸಿ ಬಂದಿದ್ದರು.

ಪರಿಚಯದ ಕಾರ್ಯವು ನಡೆದ ವೇಳೆ ಆ ಪ್ರತಿನಿಧಿಗಳು ಒಂದು ಸ್ವಾಗತ ಸಮಾರಂಭದಲ್ಲಿ ಉಪಸ್ಥಿತರಾದರು. ನೆರೆದ ಯುರೋಪಿಯನರಲ್ಲಿ ಮಿಸ್ಟರ್. ಎ ಓ ಹ್ಯೂಮ್ ಓನರರಿ ಜಸ್ಟೀಸ್ ಸರ್. ಡಬ್ಲ್ಯು. ವೆಡ್ಡರ್ ಬರ್ನ್. ಓನರೇಬಲ್ ಜಸ್ಟೀಸ್. ಜಾರ್ಡಿನ್, ಪ್ರೊಫೆಸರ್ ವರ್ಡ್ಸ್ ವರ್ಥ್ ಮತ್ತು ಕರ್ನಲ್ ಫೆಲಾಪ್ಸ್ ಎಂಬವರಿದ್ದರು.

ಭಾಷಾಗೊಂದಲ

ಇಂಡಿಯದಲ್ಲಿ ನೂರಕ್ಕಿಂತ ಹೆಚ್ಚು ಭಾಷೆಗಳೂ, ಉಪಭಾಷೆಗಳೂ ಆಡಲ್ಪಡುತ್ತಿವೆ. ಒಂದು ಸಾಮಾನ್ಯವಾದ ಭಾಷೆಯಿಲ್ಲದಿದ್ದರೆ ಕಾಂಗ್ರೆಸ್ಸು ಒಂದು ಗೊಂದಲವೇ ಆಗುತ್ತಿತ್ತು. ಈ ಕೊರತೆಯನ್ನು ಇಂಗ್ಲೀಷು ಹೋಗಲಾಡಿಸಿತು. ಇಂಗ್ಲೀಷು ವಿದ್ಯಾಭ್ಯಾಸವೂ ಇಂಗ್ಲೀಷು ಮಾತನಾಡುವ ಭಾರತೀಯರ ಒಂದು ದೊಡ್ಡ ವರ್ಗವನ್ನು ಬೆಳೆಸಿತ್ತು. ಅವರಲ್ಲಿ ಭೌಗೋಲಿಕ ಮತ್ತು ಜನಾಂಗಿಕ ಭೇದಗಳಿದ್ದವು, ವರ್ಣ, ದೇಹಸ್ಥಿತಿ, ತೋರಿಕೆ, ಮುಖಭಾವ, ಉಡಿಗೆತೊಡಿಗೆ, ನಡವಳಿಕೆ, ಪದ್ಧತಿ, ಶಿಕ್ಷಣ, ಧರ್ಮ ಇವುಗಳ ವೈವಿಧ್ಯವಿತ್ತು. ಒಂದೇ ಮಾತಿನಲ್ಲಿ ಹೇಳುವುದಾದರೆ ಭಾರತೀಯತೆಯ ಏಕೀಭಾವಕ್ಕೆ ವಿಲಕ್ಷಣವಾಗಿ ಕಂಡುಬರುವ ಅನೇಕ ವ್ಯತ್ಯಾಸಗಳಿದ್ದವು. ಹಾಗಿದ್ದರೂ ಅವರೆಲ್ಲ ಒಬ್ಬರ ಕೈಗಳನ್ನು ಮತ್ತೊಬ್ಬರು ಕುಲುಕಿಕೊಂಡು, ತಮ್ಮ ವಿಚಾರ ವಿನಿಮಯಗಳನ್ನು ಮಾಡಿಕೊಂಡು ಒಂದು ವೇದಿಕೆಯ ಮೇಲೆ ಕಲೆತಿದ್ದರು. ಈ ಎಲ್ಲಾ ಅನೇಕ ಭೇದಕಾರಕ ಶಕ್ತಿಗಳಿದ್ದರೂ ಇಂಡಿಯವು ಸಂಯುಕ್ತ ರಾಷ್ಟ್ರವಾಗಿ ಗೋಚರಿಸಿತು. ಇಂಡಿಯನ್ ಯೂನಿಯನು ಮೆಲ್ಲಗೆ ಮುಂದರಿಯಿತು. ಮೊದಲ ಈ ಸಮ್ಮೇಳನದಲ್ಲಿ ೭೨ ಪ್ರತಿನಿಧಿಗಳು ಭಾಗವಹಿಸಿದ್ದರು.

ದಶಂಬರ ತಾ. ೨೮ರಂದು ಸಮ್ಮೇಳನವು ಪ್ರಾರಂಭವಾಯಿತು. ಬಂಗಾಳದ ಮಿ| ಎ. ಓ. ಹ್ಯೂಮರಿಂದ ಸೂಚಿತವಾಗಿ ಮದರಾಸಿನ ಓನರೇಬಲ್ ಎಸ್. ಸುಬ್ರಹ್ಮಣ್ಯ ಅಯ್ಯರರಿಂದ ಅನುಮೋದಿತವಾಗಿ, ಬೊಂಬಾಯಿ ಓನರೇಬಲ್ ಕೆ. ಟಿ. ತೆಲಂಗರಿಂದ ಸಮರ್ಥಿಸಲ್ಪಟ್ಟು, ಸರ್ವಾನುಮತದಿಂದ ಬಂಗಾಳದ ಸ್ಥಾಯಿ ನ್ಯಾಯವೇದಿಗಳಾದ ಮಿಸ್ಟರ್ ಡಬ್ಲ್ಯು. ಸಿ. ಬೆನರ್ಜಿಯವರು ಕಾಂಗ್ರೆಸ್ಸಿನ ಅಧ್ಯಕ್ಷಾಧಿಕಾರವನ್ನು ವಹಿಸಿಕೊಳ್ಳಲಿಕ್ಕೆ ಅವರನ್ನು ಕರೆಯಬೇಕೆಂದು ನಿರ್ಣಯವಾಯಿತು.

ಉದ್ದೇಶಗಳು

ಅಧ್ಯಕ್ಷರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಕಾಂಗ್ರೆಸ್ಸಿನ ಉದ್ದೇಶಗಳನ್ನು ಈ ಕೆಳಗಿನಂತೆ ವಿವರಿಸಿದರು.

(a) ಸಾಮ್ರಾಜ್ಯದ ಎಲ್ಲಾ ಭಾಗಗಳಲ್ಲಿ ನಮ್ಮ ದೇಶದ ಹಿತಕ್ಕೆ ಶ್ರದ್ಧೆಯಿಂದ ಕೆಲಸ ಮಾಡುವ ಎಲ್ಲಾ ಜನರೊಳಗೆ ಸ್ನೇಹ ಮತ್ತು ವೈಯಕ್ತಿಕ ಆಪ್ತ ಭಾವವನ್ನು ಹೆಚ್ಚಿಸುವುದು. (ಮಿಸ್ಟರ್ ಹ್ಯೂಮರು ಈ ಸಮ್ಮೇಳನ ಕೂಡುವ ಮೊದಲೇ ಇಂಗ್ಲೇಂಡಿನಲ್ಲಿರತಕ್ಕ ಇಂಗ್ಲೀಷ್ ಜನರಲ್ಲಿ ಅವರನ್ನು ಸ್ವತಃ ಸಂದರ್ಶಿಸಿ ಕಾಂಗ್ರೆಸ್ಸಿನ ಸಹಾಯಕ್ಕಾಗಿ ಪ್ರಚಾರ ಮಾಡಿದ್ದರು.

(b) ಎಲ್ಲಾ ದೇಶ ಪ್ರೇಮಿಗಳಲ್ಲಿ ನೇರವಾದ ಪರಸ್ಪರ ವ್ಯವಹಾರಗಳಿಂದ— ಜಾತಿ, ಮತ ಮತ್ತು ಪ್ರಾಂತೀಯತೆಯ ದುರಭಿಪ್ರಾಯಗಳನ್ನು ನಿರ್ಮೂಲಿಸುವುದು. ಮತ್ತು ಪ್ರಿಯ ಲೋರ್ಡ್ ರಿಪನ್ನರ ಚಿರಸ್ಮರಣೀಯವಾದ ಆಳಿಕೆಯಲ್ಲಿ ಹುಟ್ಟಿಬಂದ ರಾಷ್ಟ್ರೀಯ ಐಕಮತ್ಯದ ಭಾವನೆಗಳನ್ನು ಸ್ಥಿರಗೊಳಿಸಿ ಸಂಪೂರ್ಣ ಬೆಳೆಸುವುದು.

ನಿರ್ಣಯಗಳು

ಕಾಂಗ್ರೆಸ್ಸಿನಲ್ಲಿ ಒಂಭತ್ತು ನಿರ್ಣಯಗಳು ಮಂಜೂರಾದವು. ಇಂಡಿಯದ ಆಡಳಿತೆಯನ್ನು ವಿಮರ್ಶಿಸಲು ಒಂದು ರಾಯಲ್ ಕಮಿಷನನ್ನು ನೇಮಿಸಬೇಕು. ಅದರಲ್ಲಿ ಇಂಗ್ಲೀಷರೂ ಭಾರತೀಯರೂ ಪ್ರತಿನಿಧಿಗಳಾಗಿರಬೇಕು, ಇಂಡಿಯಾ ಸ್ಟೇಟ್ ಸೆಕ್ರೆಟರಿಗಳ ಕೌನ್ಸಿಲನ್ನು ರದ್ದುಗೊಳಿಸಬೇಕು. ಚುನಾಯಿತ ಪ್ರತಿನಿಧಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರವೇಶಗೊಳಿಸಿ ನ್ಯಾಯ ವಿಧಾಯಕ ಸಭೆಗಳನ್ನು ವಿಸ್ತರಿಸಬೇಕು. ವಾಯವ್ಯ ಪ್ರಾಂತ, ಔಧ್ ಮತ್ತು ಪಂಜಾಬುಗಳಿಗೆ ಸಮಾನ ರೀತಿಯ ನ್ಯಾಯ ವಿಧಾಯಕ ಸಭೆಗಳಿರಬೇಕು. ಮುಂಗಡ ಪತ್ರಗಳನ್ನು ಪರಿಶೀಲನೆಗೆ ಈ ಸಭೆಗಳಲ್ಲಿಡಬೇಕು ಐ. ಸಿ. ಎಸ್. ಸ್ಪರ್ಧಾ ಪರೀಕ್ಷೆಯನ್ನು ಇಂಗ್ಲೇಂಡು ಮತ್ತು ಇಂಡಿಯಗಳಲ್ಲಿ ಏಕ ಕಾಲದಲ್ಲಿ ನಡೆಸಬೇಕು, ಮಿಲಿಟರಿ ವೆಚ್ಚದಲ್ಲಿ ಆಧಿಕ್ಯವು ಇರಬಾರದು. ಮೇಲಿನ ಬರ್ಮವನ್ನು ಸೇರಿಸಿಕೊಂಡ ಪ್ರಯತ್ನ ಅನರ್ಹವಾದುದು. ಅದನ್ನು ಸೇರಿಸಿಕೊಳ್ಳಲೇ ಬೇಕಾಗಿದ್ದರೆ ಸಮಗ್ರ ಬರ್ಮವನ್ನು ಇಂಡಿಯಾ ವೈಸರಾಯರ ಕಾರ್ಯಕ್ಷೇತ್ರದಿಂದ ಹೊರಪಡಿಸಿ ಸಿಲೋನಿನಂತೆ ಪ್ರತ್ಯೇಕ ಕ್ರೌನ್ ಕೊಲೊನಿಯಾಗಿ ರಚಿಸಬೇಕು. ಈ ನಿರ್ಣಯಗಳನ್ನು ಪ್ರತಿ ಪ್ರಾಂತದ ರಾಜಕೀಯ ಸಂಸ್ಥೆಗಳಿಗೆ ಕಳುಹಿಸಿಕೊಡಬೇಕು. ಮುಂದಿನ ವರ್ಷ ಕಲ್ಕತ್ತಾದಲ್ಲಿ ದಶಂಬರ ತಾ ೨೮ನೇ ಮಂಗಳವಾರ ಮತ್ತು ನಂತರದ ದಿನಗಳಲ್ಲಿ ಈ ಕಾಂಗ್ರೆಸ್ಸು ಪುನಃ ಸೇರಬೇಕು. ಹೀಗೆ ಆ ಸಭೆಯು ನಿರ್ಣಯಗಳನ್ನು ಮಂಜೂರುಮಾಡಿತು.

ಈ ಕಾಲದಲ್ಲಿ ಅಂತಹ ಒಂದು ವರ್ಷವೇ ಇಲ್ಲವೆನ್ನಬಹುದಾದ ಅಧ್ಯ ಜನರ ವರ್ಗದವರಿಗಿಂತ ಬಹು ಮುಂಚಿತವಾಗಿ ಆ ಕಾಲದ ಮಧ್ಯಮ ವರ್ಗದ ಜನರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಭಿಪ್ರಾಯಗಳನ್ನು ಪಡೆದಿದ್ದರೆಂದೂ ಆ ವಿಷಯದಲ್ಲಿ ಅವರು ಪ್ರಶಂಸನೀಯರೆಂದೂ ಹೇಳಬಹುದು. ಇಂಡಿಯಾ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಅವರು ನಿರಂತರವಾಗಿಹೊಸ ರಕ್ತವನ್ನು ತುಂಬಿಸುತ್ತಿದ್ದರು.

'ಉಗಮಸ್ಥಾನದಲ್ಲಿ ಪ್ರವಾಹವನ್ನು ಒಂದು ಮರದ ಟೊಂಗೆಯಿಂದ ತಡೆದು ನಿಲ್ಲಿಸಬಹುದು. ಅದನ್ನು ಹರಿಯಬಿಟ್ಟರೆ ಬಳಿಕ ಆನೆಯನ್ನೂ ಮುಳುಗಿಸಬಲ್ಲದು' ಎಂದು ಒಬ್ಬ ಕವಿಯು ಹೇಳಿರುತ್ತಾನೆ. ಕಾಂಗ್ರೆಸ್ಸು ಪ್ರಬಲವಾದ ಬ್ರಿಟಿಷ್ ಸಿಂಹವನ್ನು ಕೊಚ್ಚಿಕೊಂಡು ಹೋಗುವುದರಲ್ಲಿ ಜಯಶಾಲಿಯಾಯಿತು.

—ನ್ಯಾಲ ಪತ್ರಿಕೆಯಿಂದ.

ಬೆಳ್ತಂಗಡಿ ಮುನ್ಸಿಫ್ ಕಮ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ

O. P. No. 7/1964.

ರಾಮಕೃಷ್ಣ ಪ್ರಭು .... ಅರ್ಜಿದಾರ

1. ಪುಷ್ಪಾ ಯಾನೆ ಮೋಹಿನಿ ಬ್ಯಾಯಿಲ್, ಲಕ್ಷ್ಮಣ ರಾಯರ ಪತ್ನಿ
2. ತಾರಾ ಬ್ಯಾ—ವೆಂಕಟೇಶ ಪ್ರಭುಗಳ ಪತ್ನಿ,
3. ಕಾಂರಾ ಬಬ್ಬ ಯಾನೆ ಶಿವರಾಯ ಕಂಪ್ತಿರ ಪತ್ನಿ.

4. ಕಮಲಾಕ್ಷ ಶೆಣೈ.
5. ಪ್ರಭಾಕರ ಶೆಣೈ.
6. ಮುಂದುಮತಿ.
7. ಸತೀಶ್ ಚಂದ್ರ ಶೆಣೈ.
8. ಗೋಕುಲಚಂದ್ರ ಶೆಣೈ

4ರಿಂದ 8ನೇವರೇಗಿನ ಎದ್ರಿರು 9ನೇ ಎದ್ರಿಯ ಮಕ್ಕಳು 6, 6, 7, 8ನೇ ಎದ್ರಿರು ಪ್ರಾಯನರರು. ಗಾರ್ಡಿಯಾನ್ ತಂದೆ 9ನೇ ಎದ್ರಿ. ...ಎದ್ರಿರು

9. ಪಾಂಡುರಂಗ ಶೆಣೈ-ಸುಬ್ರಾಯ ಶೆಣೈ ಮಗ.

1ನೇ ಎದ್ರಿ ಕಾಸರಗೋಡು ಟೌನ್ ಕೆಂಪಾ ಮನೆಯಲ್ಲೂ, ಕಾಸ್ರಗೋಡು ತಾಲ್ಕು, 2ನೇ ಎದ್ರಿ ಬೆಳ್ತಂಗಡಿ ತಾಲ್ಕು ಮುಂಡಾಜೆ ಗ್ರಾಮದಲ್ಲೂ, 3ನೇ ಎದ್ರಿ ಸದ್ರಿ ಮುಂಡಾಜೆ ಗ್ರಾಮದ ಮುಗೇರು ಎಂಬಲ್ಲೂ, 4ರಿಂದ 9ನೇ ವರೇಗಿನ ಎದ್ರಿರು ಸದ್ರಿ ತಾಲ್ಕು ಉಜ್ರೆ ಗ್ರಾಮದ ಉಜ್ರೆ ಪೇಟೆಯಲ್ಲೂ ಇರುತ್ತಾರೆ—

ಸದ್ರಿ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ— —

ಮೇಲ್ಕಂಡ ಅರ್ಜಿಯಲ್ಲಿ ವಿವರಿಸಿದಂತೆ ತಾ 15-2-32 ಮತ್ತು 15-2 55ರ್ರ ಎರಡು ಮೂಲಗೇಣಿ ಚೀಟುಗಳ ಶರ್ತ ಮತ್ತು ತಾ. 21-2-44ರಲ್ಲಿ ಎದ್ರಿರ ಕುಟುಂಬದೊಳಗಾದ ವಿಭಾಗಪತ್ರ ಶರ್ತ ಪ್ರಕಾರ ಕೂಡಾ ಕಳೆದ 1963—64ನೇ ವರ್ಷಕ್ಕೆ ಅರ್ಜಿದಾರರಿಂದ ಎದ್ರಿರಿಗೆ ಸಲ್ಲಬೇಕಾದ ಗೇಣಿ ಬಾಪ್ತಾ ಸಂದಾಯತಿಗೆಂತ ಡಿಪಾಜಿಟು ಮಾಡಿರುವರೂ 2339-75ನ್ನು ಎದ್ರಿರಿಗೆ ಪಾವತಿ ಮಾಡಿ ಗೇಣಿ ಬಾಪ್ತಾ ಸಂದಾಯತಿ ರಿಕಾರ್ಡು ಮಾಡಬೇಕೆಂತ ವಗೈರೆ ಅರ್ಜಿದಾರ ಮಾಡಿರುವ ಮೇಲಿನ ಅರ್ಜಿಯು ತಾರೀಕು 22-9-64ಕ್ಕೆ ತನಿಖೆಗೆ ಇಟ್ಟಿರುತ್ತದೆ. ಸದ್ರಿ ಅರ್ಜಿ ಕುರಿತು ಆಕ್ಷೇಪವುಳ್ಳವರು ಸದ್ರಿ ವ್ಯಾದೆ ದಿನ ಬೆಳಿಗೆ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಃ ಯಾ ವಕೀಲುಮ್ಮಾಲಿಕ ಹಾಜರಾಗಿ ಉಪಸರಿಸತಕ್ಕದ್ದು. ತಪ್ಪಿದ್ರೆ ಎದ್ರಿರನ್ನೇ ಶಿಪ್ಪು ಮಾಡಿ ತೀರ್ಮಾನಿಸಲ್ಪಡುತ್ತದೆ

(By order of the Court)

B. K. Sooryanarayana Rao,
Advocate for Petitioner

ಬೆಳ್ತಂಗಡಿ ತಾ 5—9—1964.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428.

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಮಹಿಳಾಮಂಡಳ

ಹೆಂಗಸಿಗೆ ಉದ್ಯೋಗ ಬೇಕೆ?

"ಸಚಿತ್ರ", ಯೇತಡ್ಕ.



ಸ್ತ್ರೀ ಉದ್ಯೋಗ ಮಾಡುವುದು ಸರಿಯೇ? ಪುರುಷನಿಗವಳು ಯಾವ ವಿಧದಲ್ಲಿ ಕಡಿಮೆ? ಅವಳು ದುಡಿದು ಯಾಕೆ ಕುಟುಂಬದ ಆರ್ಥಿಕ ಸ್ಥಿತಿಯನ್ನು ಉನ್ನತಿಗೊಳಿಸಬಾರದು? ಉದ್ಯೋಗವೆಂದರೆ ಪುರುಷರಿಗೆಂದೇ ಕಟ್ಟಿ ಗಂಟೇ?

ಸ್ತ್ರೀ ಉದ್ಯೋಗ ಮಾಡಿ ತನ್ನ ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಬಹುದೇನೋ ಸರಿ. ಆದರೆ ತನ್ಮೂಲಕ ಅವಳು ತನ್ನ ಸ್ಥಿತಿಯನ್ನು ಹೀನ ಮಟ್ಟಕ್ಕೆ ತಂದ ಕೊಳ್ಳಬಾರದಲ್ಲ?

ಉದ್ಯೋಗಿಯಾದ ಹೆಣ್ಣಿನ ಮನೋಭಾವವೇನೆಂದರೆ: ತಾನೂ ದುಡಿಯುವಾಗ, ತಾನ್ಯಾಕೆ ಮನೆಯ ಇತರ ಕೆಲಸಗಳನ್ನು ಮಾಡಬೇಕು? ತಾನ್ಯಾಕೆ ಮಕ್ಕಳ ಪಾಲನೆ ಪೋಷಣೆಯನ್ನು ಮಾಡಬೇಕು? ಸ್ತ್ರೀಯೆಂದರೆ ಮನೆ ಕೆಲಸದ ತೊತ್ತೆ? ಇಂತಹ ಮನೋಭಾವವನ್ನು ಬಿಡಬೇಕು ಹಿಂದಿನ ಭಾರತೀಯ ಸ್ತ್ರೀಯರಲ್ಲಿದ್ದಂತಹ ತನ್ನ ಮಕ್ಕಳು, ತನ್ನ ಪತಿ ತನ್ನ ಮನೆ, ತನ್ನ ಕುಟುಂಬ—ಎಂಬ ಅಭಿಮಾನ ಇಂದಿನ ಆಧುನಿಕ ನಾರಿಯರಲ್ಲಿ ಮೂಡಬೇಕು ಹೀಗಿದ್ದಾಗ ಸಂಪಾದಿಸುವ ಪತಿ, ಮುದ್ದು ಮಕ್ಕಳು ಆಕೆಗೆ ಹೆಮ್ಮೆಯ ವಿಷಯವಾಗಿರುತ್ತದೆ. ತೃಪ್ತಿಯೇ ಸಂಪತ್ತು. ಈಗ ತಾ ಸಂಪತ್ತಿಗೆ ಅನಭಿಷಿಕ್ತ ರಾಣಿ ಆಕೆ. ಜೀವನದಲ್ಲಿ ಬೇರೇನು ಬೇಕು?

ಇಂದಿನ ಮಕ್ಕಳೇ ಮುಂದಿನ ಜನಾಂಗ ಈ ಮಕ್ಕಳು ಒಳ್ಳೆಯವರಾಗಬೇಕೆಂದಿದ್ದರೆ, ಅದಕ್ಕೆ ತಕ್ಕ ಪಾಲನೆ ಪೋಷಣೆ ಸಿಗಬೇಕು. ಉತ್ತಮ ವಾತಾವರಣ ಬೇಕು. ದಿನವಿಡೀ ದುಡಿದು ಸಂಜೆ ಬಳಲಿ ಬರುವ ತಂದೆತಾಯಿಗಳಿಂದ ಎಂತಹ ವಾತಾವರಣ ತಾನೆ ಈ ಮಕ್ಕಳಿಗೆ ದೊರಕೀತು?

ಮನೆಯೇ ಪ್ರಥಮ ಪಾಠಶಾಲೆ ತಾಯಿಯಿನ್ನಿ ಗುರು ಮಕ್ಕಳನ್ನು ತಿದ್ದಲು ಪುರುಷನಿಗಿಂತ ಸ್ತ್ರೀಯೇ ಮೇಲು. ಅವಳ ತಾಯ್ತನದಿಂದ ಮಕ್ಕಳ ಮೇಲಿರುವ ಮನೋಭಾವ ಮಣಿದೇ ಮಣಿಯುತ್ತದೆ ಒಬ್ಬಳು ಸ್ತ್ರೀ ಒಳ್ಳೆಯವಳಾದರೆ ಹತ್ತು ಮಂದಿ ಪುರುಷರು ಒಳ್ಳೆಯವರಾದಂತೆ. ಒಬ್ಬಳು ಸ್ತ್ರೀ ಹಾಳಾದರೆ ನೂರು ಮಂದಿ ಗಂಡಸರು ಹಾಳಾದಂತೆ ಇದನ್ನು ಗಮನಿಸಬೇಕು ದಣಿದು ಬಂದ ಪತಿಗೆ ವಿಶ್ರಾಂತಿ, ಮಕ್ಕಳಿಗೆ ಸನ್ಮಾರ್ಗವನ್ನು ಅವಳು ನೀಡಬೇಕು ಆಗ ಮಾತ್ರ ಅವಳು ಸರ್ವ ಕಲ್ಯಾಣಿಯಾಗುತ್ತಾಳೆ.

ಸ್ತ್ರೀಗೆ ಮೇಲಿನ ಧೋರಣೆಗೆ ಕುಂದು ಬರದಂತೆ ಮನೆಯಲ್ಲೇ ಉದ್ಯೋಗವನ್ನು ಮಾಡಬಹುದು ಕಸೂತಿ ಹಾಕಬಹುದು, ಟೈಲರಿಂಗ್ ಮಾಡಬಹುದು. ಹಾಗೆಯೇ ಇನ್ನಿತರ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿ ತನ್ನ ಹಾಗೂ ಮಕ್ಕಳ ಪಾಕೆಟ್ ಮನಿ ಯನ್ನಷ್ಟಾದರೂ ಹೇಗೂ ಸಂಪಾದಿಸಬಹುದು. ಪುರುಷರೊಡನೆ ಬಾಳುವೆ ನಡೆಸುವುದೆಂದರೆ ಹೆಂಗಿನ ಬಾಳ್ವೆ ಎಂದು ಭಾವಿಸಬಾರದು.

ಶ್ರೀ ಅ ನ ಕೃ. ತಿಳಿಸಿದಂತೆ, ಮಹಿಳೆ ಯಾವುದೇ ಉದ್ಯೋಗವನ್ನು ಮಾಡದಿದ್ದಲ್ಲಿ ಜಗತ್ತಿಗಾವ ನಷ್ಟವೂ ಇಲ್ಲ. ಆದರೆ ಆವಳು ಆದರ್ಶ ಗೃಹಿಣಿಯಾಗದಿದ್ದಲ್ಲಿ ಮಾತ್ರ ಜಗತ್ತಿಗೆ ತುಂಬಲಾರದ ನಷ್ಟವುಂಟಾಗುತ್ತದೆ

— — —

ಕವಿತಾ ವಿತಾನ

ಸುಪ್ರಭಾತ ಸಮೀರಣ

ತಂಪು ಗಾಳಿಯು ಶಾಂತಿ ದೂತನ
  ತೆರದಿ ಬೀಸುತ ಬರುತಿದೆ
ಪ್ರಕೃತಿ ಮಾತೆಯ ಹೃದಯ ವೀಣಾ
  ನಾದದಂತೆಯೆ ಹೊಮ್ಮಿದೆ
ಬಿರಿದ ಹೂಗಳ ಮಧುರ ಕಂಪನು
  ತುಂಬಿ ಬೀಸುತ ಬರುತಿದೆ
ನೊಂದ ಹೃದಯದಿ ತೋಷಲಹರಿಯು
  ತುಂಬಲೆನ್ನುತ ಬರುತಿದೆ. || ೧ ||
ಶಾಂತ ಸಾಗರದಲೆಯ ತೆರೆಯಲಿ
  ತೇಲಿ ನಲಿಯುತ ಬರುತಿದೆ
ಗಗನ ಚುಂಬಿತ ನಿಬಿಡ ತರುಗಳ
  ಮರೆಯೊಳಲೆಯುತ ಬರುತಿದೆ
ಮುಗಿಲ ಹೂವನು ದೂಡಿ ಮುಂದಕೆ
  ಸರಸವಾಡುತ ಬರುತಿದ
ಹಿರಿಯ ಗಿರಿಯೆಡೆಯಿಂದ ಹರಿಯುವ
  ತೊರೆಯ ತೆರದೊಳು ಬರುತಿದ || ೨ ||
ಮಾಮರದ ಮರೆಯಿಂದ ಹೊಮ್ಮುವ
  ಕೋಗಿಲೆಯ ಕುಹುರವವನು
ಗೂಡಿನೆಡೆಯಿಂ ಚಿಮ್ಮಿ ಬರುತಿಹ
  ಹಕ್ಕಿಗಳ ಇಸಿದನಿಂಪನು
ಮಧುವ ಹೀರಲು ಸುಳಿದು ಮತ್ತವ
  ತುಂಬಿವಿಂಡಿನ ರವವನು
ಹೊತ್ತು ತರುತಿದೆ, ಕೂಡಿ ಬರುತಿದೆ
  ತುಂಬಿ ತಂದಿದೆ ಒಲವನ. || ೩ ||
ವಿರಹದಗ್ನಿಯೊಳುರಿದು ಬೆಂದಿಹ
  ಮನಕೆ ತಂಪನು ತಂದಿಹೆ
ಬಳಲಿ ಬೆಂಡಾಗಿರುವ ಹೃದಯದಿ
  ಒಲವ ಹನಿಯನು ತುಂಬಿಹೆ
ವಕ್ರ ಗತಿಯೊಳು ಸಾಗಿದೆನಗಿದೊ
  ರಾಜಮಾರ್ಗವ ತೋರಿಹೆ
ಅಮರ ಪ್ರೇಮದ ಮಧುರ ಗಾನಕೆ
  ಶ್ರುತಿಯು ತಾನಾಗಿರುತಿಹೆ || ೪ ||
— ಶ್ರೀ ಎ ಅಮೀರ್ ಹಸನ್
ಬಿ. ಎಸ್ ಸಿ.

ಮನೆಯ ಅಂಗಣದಲ್ಲಿ

ಹೊತ್ತು ಕಳೆಯುತಲಿತ್ತು, ಮಬ್ಬು
  ಮುಸುಕುತಲಿತ್ತು
ಹಗಲು ತನ್ನಂತ್ಯ ಸೇರಿತೋ ಎಂದು!
ಗುಡ್ಡದ ತಿಟ್ಟಿನಲ್ಲಿ ಗೋವಳನು
  ಮರಳುತಿಹ
  ಗೋವುಗಳ ಮಂದೆಯನು
  ನೆರಹಿಕೊಂಡು || ೧ ||
ಆಟವಾಡಲು ಹೋದ
  ನೋಟ ನೋಡಲು ಪೋದ
  ಜನರ ಅಗಣಿತ ರಾಶಿ, ಮನೆಗೆ ತೆರಳೆ
ಎಲ್ಲಿ ನೋಡಿದರಲ್ಲಿ ಧ್ವನಿಯು ಕಲ ಕಲ
  ನಾದ
  ಮತ್ತೆ ಕೇಳಿಸದಾಯ್ತು ಅದುವೆ
  ಬಳಲಿ || ೨ ||
ತನ್ನ ಮೋರೆಯ ಮೀರಿ, ನಿಶೆಯ ಅಂಜಿಗೆ
  ಬೆದರಿ
  ಬೆಳಕು ತನಗೆ ತಾ... ಓಡುತಿತ್ತು
ತನ್ನ ಸ್ವಪ್ನದಿ ಸುಖವ ಪಡೆದ ಗಾಳಿಯು
  ಚದುರಿ
  ನಿಡು ಸುಯ್ಯು ತೀಡುತಲೆ
  ಸಾಗುತಿತ್ತು || ೩ ||
ಹಟ್ಟಿ ಮನೆಗಳ ಮುಂದೆ, ದಟ್ಟ
  ಕೊಳಚೆಯೊಳಗಿಂದೆ
  ದುಂಬಿಗಳ ಝೇಂಕಾರ-ರಾತ್ರಿ ದಂಥೆ
ಉಳಿದೆಲ್ಲ ಕಡೆ ಮೌನ ನಿಷ್ಪಂದ ನೀರವತೆ
  ಸೂಜಿ ಬಿದ್ದರೂ ಬಹಳ
  ಸದ್ದಾಗುವಂತೆ || ೪ ||
ಸೋದರಮರೆಯ ಒಳಗೆ, ಕುಳಿತ ?
  ಹಾವನು ತಾನು
  ತಿಂದು ಜೀವಿಯು ವಿಕಟಹಾಸವ
  ಗೈದಿತ್ತು
ಅದರ ನಗುವನು ಕಂಡು ಸೃಷ್ಟಿ ತನಗೆ
  ತಾನು
  ಮರುಗಿ ಮನ ರೇಗಿ ಹಿಡಿಶಾಪ
  ಹಾಕಿತ್ತು || ೫ ||

—ಗ ಶ. ನಾ. ಪೂನಾ.
(ಪ್ರಾಯ ೧೪ ವರ್ಷ)

Announcement

HAPPY DEEPAVALI, the great Indian festival of lights, is fast approaching Rightly do the people rejoice on this day, what with hundred illuminations at home and in the market place.

NAVAYUGA, the premier Kannada Weekly, shares with the people this joy and serves them with a SPECIAL DEEPAVALI ISSUE to illumine their minds It will contain rich food for thought and entertainment for the masses Thousands of Kannada people read this issue with relish

It would be a happy idea for you to use the Navayuga Deepavali Special, as a medium for advertising your goods, for, Navayuga is able to carry your message to every home

Kindly send your advertisement before 15-10-64.

Date of publication 29—10 -1964.

For advt rates please write to

The Advt Manager,
Navayuga, Udipi·

ಚೀನೀಯರ ಆಕ್ರಮಣದ ಹಿನ್ನೆಲೆ

ಚೆಂಗ್ ಹೋನ ಅಂತಿಮ ಯಾತ್ರೆ

ಶ್ರೀ ಶಿವಶಂಕರ

ಕಾರಣಾಂತರಗಳಿಂದ ಪಹಾಯಿಯಿಂದಲೇ ಚೆಂಗ್-ಹೋ ಚೈನಾಕ್ಕೆ ಹಿಂತಿರುಗಿದ್ದನಾದರೂ ಸುಮ್ಮನುಳಿಯಲು ಸೈತಾನ ಬಿಡಲಿಲ್ಲ. ಪ್ರಪಂಚ ಪರ್ಯಟನದ ಗುಟ್ಟು ಅವನನ್ನು ಬಿಡಲಿಲ್ಲ. ಆಗ ಪದೇ ಪದೇ ಪುನಃ ಅವತರಿಸುತ್ತದೆಯಾದರೂ ತಾರುಣ್ಯ ಚಿಗುರೊಡೆಯುವುದಿಲ್ಲ, ಅದು ಬಾಳುವೆ-ಜೀವನ ವೃಕ್ಷದಲ್ಲಿ ಒಮ್ಮೆ ಮಾತ್ರ ಚಿಗುರೊಡೆಯುವುದು. ತಿರುತಿರುಗಿ ತಾರುಣ್ಯ ಬಂದಲ್ಲಿ ಅದುವೇ ಒಂದು ಸಮಸ್ಯೆಯಾದೀತು. ಆಗ ಜನನ—ನಿಯಂತ್ರಣದೊಂದಿಗೆ ಅದಕ್ಕೂ ಔಷಧಿ ಕಂಡುಹಿಡಿಯಬೇಕಾದೀತು. ಚೈನಾದಲ್ಲಿ ಈಗ ಎರಡು ಮಕ್ಕಳಾದ ಮೇಲೆ ಮೂರನೆಯ ಬಾರಿ ಹೆತ್ತಲ್ಲಿ ಅದನ್ನು ಸರಕಾರ ನೋಡಿಕೊಳ್ಳಲು ಸಿದ್ಧವಿರುವದಿಲ್ಲ. ಅಧಿಕಾರಿಗಳ ಅಂಗನೆಯರು ಹೆತ್ತಲ್ಲಿ ಸ್ವಲ್ಪ ಮಟ್ಟಿಗೆ ಸಲಿಗೆ ಇದ್ದೇ ಇದೆ. ತೃತೀಯ ತರಗತಿಯ ಮಕ್ಕಳನ್ನು ಕಂಡರೆ ಚೈನಾಕ್ಕೆ ಆಗುವದಿಲ್ಲ!

ಈ ನಿರ್ಬಂಧವೆಲ್ಲಾ ಆಗ ಇದ್ದಿರಲಿಲ್ಲ. ಅಂತೆಯೇ ಚೆಂಗ್—ಹೋನು ಮೂರನೆಯ ಬಾರಿ ಅಲ್ಲ—ಆರನೆಯ ಬಾರಿ ಪ್ರಯಾಣ ಸನ್ನದ್ಧನಾಗಿದ್ದನಲ್ಲದೆ, ಏಳನೆಯ ಸಲ ತಾನೇ ಪ್ರಯಾಣಕ್ಕೆ ಹೊರಟನು. ಅದು ಕೊನೆಯ ಬಾರಿ ಎಂದೋ ಏನೋ ಬಹಳ ಜನರು ಪ್ರಯಾಣಕ್ಕೆ ಹೊರಟರು. ಇದು ೧೫೩೦ರ ಮಧ್ಯಭಾಗದಲ್ಲಿ. ಆಗ ಹ್ಯುಯನ್-ತ್ಸುಂಗ್ ರಾಜ್ಯವಾಳುತಿದ್ದ. ಅವನು ಯುಂಗ್-ಲೋನ ಮೊಮ್ಮಗ. ಈ ರೀತಿ ಗದ್ದುಗೆಯ ಮೇಲೆ ಎರಡು ಶರೀರಗಳು ಬದಲಾಗಿ ಮೂರನೆಯದ್ದು ಬಂದಿದ್ದರೂ ಚೆಂಗ್-ಹೋ ಚೆನ್ನಾಗಿಯೇ ಇದ್ದ. ಅವನಿಗೆ ಪ್ರಪಂಚ ಪರ್ಯಟನೆಯ ಧ್ಯಾನ ಬಿಟ್ಟಲ್ಲಿ ಬೇರೇನೂ ಧ್ಯಾನ-ಅಭ್ಯಾಸ ಇದ್ದಿರಲಿಲ್ಲ. ಈ ತಂಡ ಲ್ಯೂಂಗ್‌ಟ್ಸೆ ಬಂದರಿನಿಂದ ೧೫೩೦ ಜೂನ್ ಕೊನೆಯಲ್ಲಿ ಹೊರಟಿತ್ತಾದರೂ ೧೫೩೧ ಜನವರಿಯ ವರೆಗೆ ಚೈನಾ ರಾಜ್ಯದ ಬಂದರುಗಳನ್ನೇ ಸುತ್ತಾಡುತ್ತಿತ್ತು. ಅಲ್ಲಲ್ಲಿ ಅವರು ಸ್ಮಾರಕ ಫಲಗಳನ್ನು ನಿರ್ಮಿಸಿದ್ದರಲ್ಲದೆ, ಟೈನ್-ಫೆ ದೇವತೆಗೆ ಗೌರವ ಮರ್ಯಾದೆ ಸಲ್ಲಿಸಿದ್ದಾರೆ.

ಅವರು ಅಲ್ಲಲ್ಲಿ ತಿರುಗಾಡುತ್ತ ಪುನಃ ಸಿಲೋನಿಗೆ ಬಂದರು. ಅಲ್ಲಿಂದ ಅವರು ಹಿಂದಿನ ಪ್ರಯಾಣದಲ್ಲಿ ಮಾಡಿದಂತೆ ಕಲ್ಲಿಕೋಟೆಗೆ ಹೋದರು. ಅದರಲ್ಲಿ ಹುಂಗ್—ಪೋ ಎಂಬವನು ಇಲ್ಲಿಂದ ಮಕ್ಕಾಕ್ಕೆ ಹೋದನು. ತಂಡವು ಬರಮುಜಿಗೆ ಹೋಯಿತು. ಪುನಃ ಅದೇ ದಾರಿಯಲ್ಲಿ ಅವರು ಹಿಂತಿರುಗಿದರು. ಸ್ವಲ್ಪ ಸಮಯದಲ್ಲೇ ಚೆಂಗ್—ಹೋ ಕಾಲವಾದನು. ಆಗ ಅವನು ಹಣ್ಣು—ಹಣ್ಣು ಮುದುಕನಾಗಿದ್ದನು.

ಪ್ರಪಂಚ ಪರ್ಯಟನೆಗಾಗಿಯೇ ತನ್ನ ಜೀವನವನ್ನು ಮುಡಿಪನ್ನಾಗಿಟ್ಟಿದ್ದರೂ, ಸಿಂಹಾಸನದ ಪೂರ್ಣ ಬೆಂಬಲವಿದ್ದರೂ ಚೆಂಗ್ ಹೋನಿಗೆ ಕನಸು ಕನಸಾಗಿಯೇ ಉಳಿಯಿತು. ಅವನಿಂದ ಪೂರ್ಣ ಪ್ರಪಂಚವನ್ನು ಸುತ್ತಿ ಬರಲಿಕ್ಕಾಗಲಿಲ್ಲ. ಇದಕ್ಕೆ ಕಾರಣವೇನು? ಇಂದಿನ ಆಧುನಿಕ ಅನುಕೂಲತೆಗಳ ಅಭಾವವೇ? ಅದಕ್ಕಿಂತಲೂ ಅತಿ ಮುಖ್ಯವಾದ ಕಾರಣ ಬೇರೆಯೇ ಇದೆ.

ಚೈನಾದಿಂದ ಸುಯೆನ್—ತ್ಸಿಗ್ ಬಂದಿದ್ದ ಇವನೆದುರಿಗಿದ್ದ ಆದರ್ಶವಾದರೋ ಮಾನವ ಸಹಜವಾದುದಾಗಿತ್ತು; ಮಹತ್ವಾಕಾಂಕ್ಷೆಯದ್ದಾಗಿರಲಿಲ್ಲ. ಜ್ಞಾನತೃಷೆಯನ್ನು ತೀರಿಸಿಕೊಳ್ಳಬೇಕೆಂದು ಅವನು ಭಾರತಕ್ಕೆ ಬಂದನು. ಅವನು ತನ್ನ ತೃಷೆಯನ್ನು ಮಾತ್ರ ತೀರಿಸಿಕೊಂಡದ್ದಲ್ಲದೆ ಚೈನೀಯರ ದಾಹವನ್ನು ತೀರಿಸಲು ಪ್ರಯತ್ನಿಸಿದನು. ಅವನಿಗೆ ಜಯ ಸಿಕ್ಕಿತ.

ಆದರೆ ಚೆಂಗ್—ಹೋ ಮಾಡಿದ್ದಾದರೂ ಏನು? ಕೇವಲ ಪ್ರಪಂಚ ಪರ್ಯಟನೆಯ ಗುರಿಯನ್ನು ಮುಂದಿಟ್ಟುಕೊಂಡಿರುತ್ತಿದ್ದಲ್ಲಿ ಅವನಿಗೂ ಜಯ ಸಿಗುತ್ತಿತ್ತು. ದುರಾದೃಷ್ಟವಶಾತ್ ಅವನು ಗೂಟಿ ಹಕ್ಕಿಯಂತೆಯೇ ಹೊಕ್ಕನು. ಸಿಲೋನಿನ ಮತ್ತು ಪಸಾಯಿಯ ರಾಜರನ್ನು ಕದ್ದೊಯ್ದನು. ಇವು ಬೆಳಕಿಗೆ ಬಂದಿರುವ ವಿಷಯ. ಲೂಟಿ ನಡೆಸಿದ್ದಕ್ಕೆ ಮಿತಿ ಇರಲಿಕ್ಕಿಲ್ಲ. ಬಹಳಷ್ಟು ಬೆಲೆ ಬಾಳುವ ಸರಕುಗಳನ್ನು ಅವನು ಚೈನಾಕ್ಕೆ ಕೊಂಡೊಯ್ದಿರುವನು. ಹಲವಾರು ಬಾರಿ ಅವನು ಹೋದಲ್ಲೆಲ್ಲ ಯುದ್ಧ ಮಾಡಿದ್ದನು. ಪ್ರಯಾಣ ಮುಂದರಿಯುತ್ತಿದ್ದ

ಇಂದಿನ ಚೈನಾ ಇದನ್ನು ಜ್ಞಾಪಿಸಿಕೊಂಡಲ್ಲಿ ಅದು ತನ್ನ ತಪ್ಪನ್ನು ತಿದ್ದಿಕೊಂಡೀತು. ಆದರೆ ಅದರ ತಲೆಗೆ ಈಗ ಕಮ್ಯೂನಿಸಮಿನ ಮದವೇರಿ ಹೋಗಿರುತ್ತದ. ಎಲ್ಲಾ ರಾಷ್ಟ್ರಗಳನ್ನು ಆಕ್ರಾಂತಗೊಳಿಸಿಕೊಳ್ಳುವ ಮಹತ್ವಾಕಾಂಕ್ಷೆಯಿಂದ ಅದು ಮುಂದಕ್ಕೆ ಬರುತ್ತಿದೆ. ಚೈನಾ ಒಂದೆರಡು ಬಾರಿ ಭಾರತದ ಮೇಲೆ ಆಕ್ರಮಣ ಮಾಡಿರುವದಲ್ಲ. ಹಲವಾರೆಡೆಗಳಲ್ಲಿ ಹಲವಾರು ವೇಷಗಳಿಂದ ಅದು ಆಕ್ರಮಣ ನಡೆಸುತ್ತದೆ. ಎಲ್ಲವನ್ನೂ ಶಾಂತಿ-ಸಮಾಧಾನಗಳಿಂದ ಮುಗಿಸಿ ಬಿಡಬೇಕೆಂದು ಪಂ| ಜವಾಹರ ನೆಹ್ರೂಜೀಯವರು ಗುಟ್ಟನ್ನು ರಹಸ್ಯವನ್ನಾಗಿಟ್ಟಿದ್ದರು. ಆದರೂ ಭಾರತಾಂಬೆಯ ಸುಪುತ್ರರು ಕೇಳಬೇಕಲ್ಲ! ಅವಳಿಗೆ ಆಕೆಯ ಕಣಕಣವೂ ಪವಿತ್ರವಿದೆ. ಅವರ ಮುಂದಿರುವದಾವರೋ ವಿದ್ಯಾರಣ್ಯ, ಶಿವಾಜಿ ಪ್ರತಾಪಸಿಂಹರ ಚಿತ್ರಗಳು. ಅಕ್ಬರನಿಗೆ ಒಂದು ನಮಸ್ಕಾರ ಮಾಡುತ್ತಿದ್ದಲ್ಲಿ ಸಾಕು, ಪ್ರತಾಪ ಸಿಂಹ ಹಾಯಾಗಿರಬಹುದಾಗಿತ್ತು; ಕಾಡು-ಮೇಡುಗಳಲ್ಲಿ ಹಿಂಬಾಲಕರೊಂದಿಗೆ ಚಿಕ್ಕಪುಟ್ಟ ಮಕ್ಕಳೊಂದಿಗೆ ಉಪವಾಸ ಇರಬೇಕಾಗಿರಲಿಲ್ಲ.

ಇದನ್ನು ಇಂದಿನ ಪ್ರಧಾನಿ ಲಾಲ ಬಹದ್ದೂರ ಶಾಸ್ತ್ರಿಯವರು ಪುರಸ್ಕರಿಸಲಾರರು. ಅದಾವಿನಿಂದ ಕಾಲ್ಕೆರೆಯಲು ಅವರು ಚೈನಿ ಕಮ್ಯೂನಿಸ್ಟರಿಗೆ ಆಜ್ಞೆ ಇತ್ತಿದ್ದಾರೆ. ರಕ್ಷಣಾ ಮಂತ್ರಿ ಯಶವಂತ ಚವ್ಹಾಣರು ಆಯುಧಗಳಿಗಾಗಿ ಹೊರನಾಡುಗಳಿಗೆ ಹೋಗುತ್ತಿದ್ದಾರೆ. ಬರುವ ದೀಪಾವಳಿಯ ಸಮಯ ಚೈನಾಸುರನ ವಧೆಮಾಡಿ ಎಣ್ಣೆ ಸ್ನಾನ ಮಾಡಬಹುದಾಗಿತ್ತು. ಕೆಲವೊಮ್ಮೆ ನಿರಾಶೆಯ ಗಾಢಾಂಧಕಾರದಲ್ಲಿ ಆಶೆಯ ನಕ್ಷತ್ರಗಳು ಕಂಡು ಬರುತ್ತವೆಯಾದರೂ ಮತ್ತೆ ಗಾಢಾಂಧಕಾರ ಕವಿಯುತ್ತಿದೆ. ಅದಕ್ಕೆ ಇಲ್ಲಿರುವ ಕಮ್ಯೂನಿಸ್ಟರೂ ಅವರ ಸಹಚರರೂ ಕಾರಣರಾಗಿದ್ದಾರೆ. ಅವರು ಮಾವೊನಿಗೆ ಪೂಜೆ ಮಾಡುತ್ತಿರುವದು ಮಾತ್ರವಲ್ಲ, ದೇಶದೊಳಗೆ ದಂಗೆ ಏಳಲು, ಗೊಂದಲವೆಬ್ಬಿಸಲು ಸಮಯ ನೋಡುತ್ತಿದ್ದಾರೆ. ಅದಕ್ಕೆ ಅನುಗುಣವಾಗಿ ಆಹಾರ ಅಭಾವದ ಸಂದರ್ಭ ಸಿಕ್ಕಿರುತ್ತದೆ. ನಿಜವಾಗಿ ಆಹಾರ ಬಚ್ಚಿಟ್ಟವರು ಯಾರು? ರಾಜಕೀಯ ರಾಜರನ್ನು ನಡೆಸುತ್ತಿರುವ ದೊಡ್ಡ ವ್ಯಾಪಾರಿಗಳೇ ಇದ್ದಾರೆ. ಅವರೂ ದೇಶಭಕ್ತರ ವೇಷ ಹಾಕಿ ಕೊಂಡಿದ್ದಾರೆ. ಆ ತಮಾಷೆಗೆ ಒಂದು ಉದಾಹರಣೆ ಈಗ ಬೆಳಕಿಗೆ ಬಂದಿದೆ 'ತ್ರಿಲೋಕ' ಎಂದು ಒಂದು ಚಲಚ್ಚಿತ್ರ ಪ್ರದರ್ಶನಕ್ಕೆ ಬಂದಿತ್ತು. ಅದು ಆಗ ಚಲಚ್ಚಿತ್ರವಾಗಿತ್ತು. ಇಂದದು ನಿಜವಾಗಿ ಬಿಟ್ಟಿದೆ. ಚಲಚ್ಚಿತ್ರ ತೆಗೆದವರು ಇಂದು ಅದಕ್ಕೆ ನಾಯಕರಾಗಿ ಬಿಟ್ಟಿದ್ದಾರೆ ಹೀಗಿದೆ ದುಃಸ್ಥಿತಿ.

ಆದುದರಿಂದ ಲಾಲಬಹದ್ದೂರ್, ಯಶವಂತರು ರಾಷ್ಟ್ರೀಯ ದೇಶಭಕ್ತರ ಒತ್ತಡಕ್ಕೆ ಒಳಗಾಗಿ ವಿಜಯದಶಮಿಯ ಸಮಯ ವಿಜಯ ಯಾತ್ರೆಗೆ ಹೊರಟು ದೀಪಾವಳಿಯ ಸಮಯ ಕಮ್ಯೂನಿಸ್ಟ್ ರಕ್ಕಸನ ದಮನಗೈದಲ್ಲಿ ದೇಶಭಕ್ತರು ಸಂತೋಷಪಡುವದರಲ್ಲಿ ಸಂದೇಹವಿಲ್ಲ. ಆದರೆ ಎಣ್ಣೆ ಸ್ನಾನವಾದ ಮೇಲೆ ಕೊಟ್ಟಿಯ ಬೆಂಕಿ ಹಾಗಿಲ್ಲವೆ ಇದ್ದೀತೇ? ಆ ದಾವಾನಲ ಅವರನ್ನು ಬಲಿ ತೆಗೆದುಕೊಳ್ಳದೆ ಬಿಡದು ಎಂದರೆ ದೇಶದಲ್ಲಿ ಹಾಹಾಕಾರವೆದ್ದೀತು. ಕಮ್ಯೂನಿಸ್ಟ್ ಚೈನೀ ಆಕ್ರಮಣಕಾರರನ್ನು ಓಡಿಸಿದ ಮೇಲೆ ಎಂದರೆ ಎಣ್ಣೆ ಸ್ನಾನವಾದ ಮೇಲೆ ಆ ರೀತಿ ಅದಲ್ಲಿ ಸಹಿಸಿಕೊಳ್ಳಬಹುದು. ವಿಜಯ ಯಾತ್ರೆಗೆ ಹೊರಟಾಗ ಇಲ್ಲಿ ಹಾಹಾಕಾರ ಎದ್ದರೆ ಪರಿಸ್ಥಿತಿಯನ್ನು ಹತೋಟಿಗೆ ತರಲು ಬಹಳ ಕಷ್ಟವಾದೀತು. ಅದಕ್ಕೆ ಈಗ ಇರುವ ಸುಲಭೋಪಾಯ ದೇಶ ದ್ರೋಹಿಗಳ ದಮನ ಕಾರ್ಯವನ್ನು ಮೊತ್ತ ಮೊದಲಿಗೆ ನಡೆಸುವದೇ ಇದೆ.



ಬೆಳ್ತಂಗಡಿ ಮುನ್ಸಿಫ್ ಕಮ್ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ

S. C. No. 113/1964.

A. ಪದ್ಮಪ್ಪ ಹೆಗ್ಡೆ —ವಾದಿ.

[illegible]

—ಪ್ರತಿವಾದಿ

[illegible]

[illegible] 22.9.1964ಕ್ಕೆ ತನ್ನಿಗೆ ಇಟ್ಟಿರುತ್ತದೆ. [illegible] ದಿನ ಬೆಳಿಗ್ಗೆ 11 ಗಂಟೆಗೆ ಕೋರ್ಟು ಮುಂದೆ ಸ್ವತಃ ಯಾ ವಕೀಲರ ದ್ವಾರಾ ಹಾಜರಾಗಿ [illegible] ತಪ್ಪಿದ್ದ ಪಕ್ಷದಲ್ಲಿ [illegible] ತೀರ್ಮಾನಿಸಲಾಗುವದು.

(By order of Court)

B. K. Sooryanarayana Rao,
Advocate for Plaintiff.

ಬೆಳ್ತಂಗಡಿ, ತಾ. 5-9-1964.

READ &
ADVERTISE IN
NAVAYUGA WEEKLY

ಅಲ್ಲಲ್ಲಿಯ ಸುದ್ದಿ ಸಾರ

ಕನ್ನಡ ಸಾಹಿತ್ಯ ಲೋಕಕ್ಕೆ ಕಾರಂತರ ಕಾಣಿಕೆ

ವೈಜ್ಞಾನಿಕ ವಿಷಯಗಳ ಬಗ್ಗೆ ನಾಲ್ಕು ಬೃಹತ್ ಗ್ರಂಥಗಳನ್ನು ಪ್ರಕಟಿಸುವುದರ ಮೂಲಕ ಡಾ| ಕೆ. ಶಿವರಾಮ ಕಾರಂತರು ಕನ್ನಡ ಸಾಹಿತ್ಯ ಲೋಕಕ್ಕೆ ಮಹಾ ಕಾಣಿಕೆ ಸಲ್ಲಿಸಿದ್ದಾರೆಂದು ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜಿನ ಪ್ರೊ| ಯು. ಎಲ್. ಆಚಾರ್ ತಾ. ೩ರಂದು ನುಡಿದರು. ಸಾಮಾನ್ಯ ವ್ಯಕ್ತಿಗೆ ವಿಜ್ಞಾನದ ನಾನಾ ವಿಷಯಗಳು ಸುಲಭವಾಗಿ ಅರ್ಥವಾಗುವ ಹಾಗೆ ಇತ್ತೀಚಿನ ಅಂಕಿ ಅಂಶಗಳನ್ನೂ ಸಚಿತ್ರವಾಗಿ ಪ್ರಕಟಿಸುವುದಕ್ಕೆ ಡಾ| ಕಾರಂತರು ಬಹಳ ಶ್ರಮ ಪಟ್ಟಿದ್ದಾರೆಂದೂ, ನಮ್ಮ ದೇಶದಲ್ಲಿ ಬೇರೆ ಯಾವ ಭಾಷೆಯಲ್ಲೂ, ಒಬ್ಬನೇ ವ್ಯಕ್ತಿ ಇಂಥ ಗ್ರಂಥಗಳನ್ನು ಬರೆದಿಲ್ಲವೆಂದೂ ಅವರು ತಿಳಿಸಿದರು. ಪ್ರೊ|| ಆಚಾರ್‌ರವರು ಉಡುಪಿ ರೋಟರಿ ಕ್ಲಬ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಈ ಗ್ರಂಥಗಳ ಪ್ರತಿಗಳನ್ನು ಅಲ್ಪ ಸಂಖ್ಯೆಯಲ್ಲಿ ಪ್ರಕಟಿಸಿದರೂ ಅರ್ಧದಷ್ಟು ಕೂಡಾ ಮಾರಾಟವಾಗದಿರುವ ಬಗ್ಗೆ ವಿಷಾದ ಸೂಚಿಸಿದರು. ಇವು ಮಕ್ಕಳಿಗೆ ವಿದ್ಯಾರ್ಥಿಗಳಿಗೆ ಮತ್ತು ವಯಸ್ಕದವರಿಗೆ ಸಹ ಉಪಯುಕ್ತವಾಗಿದ್ದು ಪ್ರತಿಯೊಂದು ಮನೆಯಲ್ಲೂ ಇರುವಂತಾಗಬೇಕೆಂದರು.

ಸದ್ಯದಲ್ಲೇ ಮಕ್ಕಳಿಗಾಗಿ ಡಾ| ಕಾರಂತರು ವಿಜ್ಞಾನದ ವಿಷಯಗಳನ್ನು ಕುರಿತು ಸಣ್ಣ ಪುಸ್ತಕಗಳನ್ನು ಪ್ರಕಟಿಸಲಿದ್ದಾರೆಂಬು ಅವರು ಹೊರಗೆಡಹಿದರು. ಅಧ್ಯಕ್ಷ ಡಾ|| ಎ. ಕೃಷ್ಣರಾವ್ ಅಧ್ಯಕ್ಷತೆ ವಹಿಸಿದ್ದರು.

ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಎನ್. ಆಚಾರ್ ಮಾತನಾಡಿ ತಮ್ಮ ಶಾಲೆಯಲ್ಲಿ ಜ್ಯೂನಿಯರ್ ರೆಡ್‌ಕ್ರಾಸ್ ಶಾಖೆಯನ್ನು ಆರಂಭಿಸಿರುವುದಾಗಿ ಹೇಳಿದರು. ಪಾಕಿಸ್ತಾನದಿಂದ ನಮ್ಮ ದೇಶಕ್ಕೆ ಬರುತ್ತಿರುವ ನಿರಾಶ್ರಿತರಿಗಾಗಿ [illegible] ಉಡುಪುಗಳನ್ನು ಕಳಿಸಬೇಕೆಂದಿದ್ದು, ಈ ಕಾರ್ಯದಲ್ಲಿ ಎಲ್ಲರೂ ಸಹಾಯ ಮತ್ತು ಸಹಕಾರ ಕೊಡಬೇಕೆಂದು ಕೋರಿದರು. ಉಪಾಧ್ಯಕ್ಷ ಡಾ|| ಕೆ. ಎಲ್. ಐತಾಳರು ವಂದನೆಗಳನ್ನು ಅರ್ಪಿಸಿದರು.

ಎ. ಬಿ. ಶೆಟ್ಟಿ ಮೆಮೋರಿಯಲ್ ಹೈಸ್ಕೂಲ್ ಶಿರ್ವ

ಸ್ಥಳೀಯ ವಿದ್ಯಾವರ್ಧಕ ಸಂಘ (ರಿ)ದ ಮಹಾಸಭೆಯು ತಾ. 12-9-61ರಂದು ಶ್ರೀ ಎಸ್. ಎಸ್. ಕೊಳ್ಕೆಬೈಲ್, ಎಂ. ಎಲ್. ಎ., ಕುಂದಾಪುರ—ಇವರ ಅಧ್ಯಕ್ಷತೆಯಲ್ಲಿ ಜರಗಿ, ಸ್ಥಳೀಯ ಹಿಂದೂ ಹೈಸ್ಕೂಲನ್ನು ಮದ್ರಾಸು ಮತ್ತು ಮೈಸೂರು ಪ್ರಾಂತ್ಯಗಳ ಆರೋಗ್ಯ ಮಂತ್ರಿಗಳಾಗಿದ್ದ ಮತ್ತು ಜಿಲ್ಲೆಯ ಅಭಿವೃದ್ಧಿಗಾಗಿ ತುಂಬ ಸೇವೆ ಸಲ್ಲಿಸಿದ್ದ ದಿವಂಗತ ಎ. ಬಿ. ಶೆಟ್ರ ಸ್ಮರಣಾರ್ಥವಾಗಿ, ಎ. ಬಿ. ಶೆಟ್ಟಿ ಮೆಮೋರಿಯಲ್ ಹೈಸ್ಕೂಲೆಂದು ಪುನರ್ನಾಮಕರಣ ಮಾಡುವುದಾಗಿ ಸರ್ವಾನುಮತದಿಂದ ನಿಶ್ಚೈಸಲಾಯ್ತು. ಸಭಾಧ್ಯಕ್ಷರು ಮುಂದೆ ತಂದ ಸೂಚನೆಯನ್ನು ಶ್ರೀಗಳಾದ ಕೆ. ಮುದ್ದು ಶೆಟ್ಟಿ, ಕೆ. ಎಚ್. ಶೆಟ್ಟಿ, ಕೆ. ಎಲ್ಲಪ್ಪ ಹೆಗ್ಡೆ, ಶಿರ್ವ ದುಗ್ಗಪ್ಪ ಹೆಗ್ಡೆ ಮತ್ತು ಕೆ. ವಾಸುದೇವ ಶೆಟ್ಟಿ ಮೊದಲಾದವರು ಅನುಮೋದಿಸಿ ಭಾಷಣಗಳನ್ನಿತ್ತರು.

ಆರಂಭದಲ್ಲಿ ಶ್ರೀ ದುಗ್ಗಪ್ಪ ಹೆಗ್ಡೆಯವರು ಸ್ವಾಗತ ಭಾಷಣಮಾಡಿ ಜವಾಹರಲಾಲ್ ನೆಹರು ಮತ್ತು ಕುತ್ಯಾರು ಗುತ್ತು ಗಣಪಯ್ಯ ಶೆಟ್ರ ನಿಧನದ ಕುರಿತು ಸಂತಾಪ ಸೂಚಕ ಠರಾವುಗಳನ್ನು ಮಂಡಿಸಿದರು. ಶ್ರೀ ಕೆ. ವಾಸುದೇವ ಶೆಟ್ರು ಸಂಘದ ಸಂಕ್ಷಿಪ್ತ ವರದಿಯನ್ನೊಪ್ಪಿಸಿದರು. ಈ ಕೆಳಗಿನ ಹೊಸ ಕಾರ್ಯ ನಿರ್ವಾಹಕ ಮಂಡಳಿಯು ಸರ್ವಾನುಮತದಿಂದ ಆರಿಸಲ್ಪಟ್ಟಿತು:—

ಶ್ರೀಗಳಾದ ಪಿ. ಶಿವಾಜಿ ಶೆಟ್ಟಿ, ಎಡ್ವಕೇಟ್ ಉಡುಪಿ (ಅಧ್ಯಕ್ಷ ಮತ್ತು ಶಾಲೆಗಳ ಕರೆಸ್ಪೊಂಡೆಂಟ್), ಶಿರ್ವ ದುಗಪ್ಪ ಹೆಗ್ಡೆ (ಉಪಾಧ್ಯಕ್ಷ), ಬಿ. ಜಯರಾಮ ಶೆಟ್ಟಿ, ಬಿ. ಎ. ಬಿ. ಟಿ. (ಕಾರ್ಯದರ್ಶಿ), ಎಸ್. ಶಂಕರ ಶೆಟ್ಟಿ (ಉಪಕಾರ್ಯದರ್ಶಿ), ಕೆ. ವಾಸುದೇವ ಶೆಟ್ಟಿ, ಎಂ. ಎ. ಬಿ. ಟಿ. (ಕೋಶಾಧಿಕಾರಿ), ಸೂಡ ಕಲ್ಲಬೆಟ್ಟು ಗುತ್ತು ವಾಸು ಶೆಟ್ಟಿ, ಡಾ| ಎಮ್. ರಾಜಶೇಖರ ಹೆಗ್ಗೆ, ಮಟ್ಟಾರು ಅರಂತಡೆ ಸದಾಶಿವ ಹೆಗ್ಡೆ, ಬಿ. ಚಂದ್ರದಾಸ ಹೆಗ್ಡೆ, ಮಾಣಿಪಾಡಿ ಮೇಲ್ಮನೆ ಲೋಕಯ್ಯ ಶೆಟ್ಟಿ, ಕುತ್ಯಾರುಗುತ್ತು ತಿಮ್ಮಪ್ಪ ಶೆಟ್ಟಿ, ಕುತ್ಯಾರು ಕನ್ಯಾನ ಭೋಜ ಶೆಟ್ಟಿ, ಮುನಾರ್ ಗುತ್ತು ಅಂತಯ ಶೆಟ್ಟಿ ಉದ್ಯಾವರ, ಮತ್ತು ಕಳತ್ತೂರು ಬರೆಬೆಟ್ಟು ಗುತ್ತು ನಾರಾಯಣ ಶೆಟ್ಟಿ (ಸದಸ್ಯರು), ಇನ್ನೀರ್ವರು ಸದಸ್ಯರನ್ನು ಸೇರಿಸಿ ಕೊಳ್ಳುವ ಮತ್ತು ನಿಧಿಸಂಗ್ರಹಕ್ಕಾಗಿ ಉಪ ಸಮಿತಿಯೊಂದನ್ನು ರಚಿಸುವ ಅಧಿಕಾರವನ್ನು ಅಧ್ಯಕ್ಷರಿಗೀಯಲಾಯ್ತು.

ಸಭಿಕರಲ್ಲಿ ಶ್ರೀಗಳಾದ ಅಂತಯ ಶೆಟ್ಟಿ ಮತ್ತು ಬಿ. ಜಯರಾಮ ಶೆಟ್ರು ಭಾಷಣಗಳನ್ನಿತ್ತರು.

ಅಧ್ಯಕ್ಷರ ಭಾಷಣಾ ನಂತರ ಶ್ರೀ ಕೆ. ವಾಸುದೇವ ಶೆಟ್ರು ಧನ್ಯವಾದಗಳನ್ನಿತ್ತರು

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ

ಮೈಸೂರು, ವಾಣಿವಿಲಾಸ ಮೊಹಲ್ಲಾದಲ್ಲಿರುವ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳ ಸಭೆಯು ಇತ್ತೀಚೆಗೆ ನಿಲಯದ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ಸೇರಿ ನಿಲಯದ ವಿದ್ಯಾರ್ಥಿ ಸಂಘಕ್ಕೆ ಈ ಕೆಳಗಿನವರನ್ನು ಆರಿಸಿತು.

ನಿಲಯದ ವಾರ್ಡನ್‌ರವರು (ಅಧ್ಯಕ್ಷರು) ಶ್ರೀ ಕೆ. ಕೃಷ್ಣ ಶೆಟ್ಟಿ (ಉಪಾಧ್ಯಕ್ಷರು) ಶ್ರೀಗಳಾದ ಎ. ಸತೀಶ ಶೆಟ್ಟಿ ಮತ್ತು ಎಂ. ಎ. ಇಸ್ಮಾಯಿಲ್ (ಕಾರ್ಯದರ್ಶಿಗಳು) ಶ್ರೀ ಕೆ. ರಮಾನಂದ ಹೆಗ್ಡೆ (ಕ್ರೀಡಾ ಕಾರ್ಯದರ್ಶಿ) ಮತ್ತು ಶ್ರೀ ಜಯ ಅಮೀನ್‌ರವರು (ವಾಚನಾಲಯ ಕಾರ್ಯದರ್ಶಿ).

ಹಿಂದಿನ ಸಾಲಿನ ಕಾರ್ಯದರ್ಶಿ ಶ್ರೀ ಎ. ಹೇಮನಾಥ ಶೆಟ್ಟಿಯವರು ಮಾತನಾಡಿ ಹೊಸ ಅಧಿಕಾರ ವರ್ಗವನ್ನು ಅಭಿನಂದಿಸಿದರು. ಹೊಸದಾಗಿ ಕಾರ್ಯದರ್ಶಿಯಾಗಿ ಚುನಾಯಿತರಾದ ಶ್ರೀ ಎ. ಸತೀಶ ಶೆಟ್ಟರು ಅಧಿಕಾರವರ್ಗದವರ ಧನ್ಯವಾದಗಳನ್ನರ್ಪಿಸಿದರು.

ರಜತ ಪರದೆಯ ಮೇಲೆ

ಪುರಾಣಿಕರ 'ಭಾಗೀರಥಿ' ತೆರೆಗೆ!

ಕೃಷ್ಣಮೂರ್ತಿ ಪುರಾಣಿಕರ ಜನಪ್ರಿಯ ಕಾದಂಬರಿ 'ಭಾಗೀರಥಿ'ಯನ್ನು ಕಾವೇರಿ ಫಿಲ್ಮ್ಸ್ ಅವರು ತೆರೆಗೆ ತರಲಿದ್ದಾರೆ. ಈಗಾಗಲೇ ಚಿತ್ರೀಕರಣದ ಕಾರ್ಯವು ಆರಂಭವಾಗಿದೆ. ವಿಶ್ವನಾಥ ಶೆಟ್ಟರು ನಿರ್ಮಿಸುವ ಈ ಚಿತ್ರವನ್ನು ಟಿ. ವಿ. ಸಿಂಗ್ ಠಾಕೂರರು ನಿರ್ದೇಶಿಸುವರು. ಸಂಗೀತ ನಿರ್ದೇಶನದ ಹೊಣೆಯನ್ನು ಜಿ. ಕೆ. ವೆಂಕಟೇಶರು ಹೊತ್ತಿದ್ದಾರೆ.

ಆಮ್ರಪಾಲಿ

ಸುನೀಲದತ್ತ, ವೈಜಯಂತಿ ಮಾಲಾ ಅಭಿನಯಿಸುವ ಈಗಲ್ ಫಿಲ್ಮ್ಸ್ ಅವರ ಆಮ್ರಪಾಲಿಯನ್ನು ಜಪಾನಿನಲ್ಲೂ ಪ್ರದರ್ಶಿಸುವ ಯೋಜನೆಯನ್ನು ನಿರ್ಮಾಪಕ ಎಫ್. ಸಿ. ಮೆಹ್ರಾ ಅವರು ಸಿದ್ಧಗೊಳಿಸಿದ್ದಾರೆ. ಬುದ್ಧನ ಕಾಲದಲ್ಲಿದ್ದ ರಾಜನರ್ತಕಿಯೊಬ್ಬಳ ಕಥಾವಸ್ತುವುಳ್ಳ ಆಮ್ರಪಾಲಿ ಚಿತ್ರವು ಜಪಾನೀಯರನ್ನು ಆಕರ್ಷಿಸುತ್ತದೆ ಎಂದು ಅವರು ಭರವಸೆ ಇರಿಸಿದ್ದಾರೆ. ಶಂಕರ್ ಜೈಕಿಷನ್ನರ ಸಂಗೀತವುಳ್ಳ ಈ ಚಿತ್ರವನ್ನು ಲೇಖ್ ಟಂಡನ್ ನಿರ್ದೇಶಿಸುತ್ತಾರೆ.

ಪುರಾಣಕಥೆ ಹರಿಶ್ಚಂದ್ರ!

ರಾಜಕುಮಾರ್, ಉದಯಕುಮಾರ್, ಪಂಢರೀಬಾಯಿ, ನರಸಿಂಹರಾಜು ಅಭಿನಯಿಸುವ ವಿಜಯಾ ಪ್ರೊಡಕ್ಷನ್ಸ್ ಅವರ ಪೌರಾಣಿಕ ಚಿತ್ರ 'ಹರಿಶ್ಚಂದ್ರ'ದ ಚಿತ್ರೀಕರಣ ಕಾರ್ಯವು ಭರದಿಂದ ನಡೆದಿದೆ. ಈ ಚಿತ್ರಕ್ಕೆ ಬೃಹತ್ ಪ್ರಮಾಣದ ದರ್ಬಾರ್ ಸೆಟ್‌ಗಳನ್ನು ಅಳವಡಿಸಿಕೊಳ್ಳಲಾಗಿದೆ. ಹುಣಸೂರು ಕೃಷ್ಣಮೂರ್ತಿಯವರು ಚಿತ್ರಗೀತೆ ಮತ್ತು ಸಂಭಾಷಣೆಗಳನ್ನು ರಚಿಸಿದ್ದಾರೆ.

ಪಂಢರೀಬಾಯಿ ಅರ್ಪಿಸುವ ಅರಶಿನ—ಕುಂಕುಮ!

ಅನ್ನಪೂರ್ಣ ಚಿತ್ರವನ್ನು ಅರ್ಪಿಸಿ ಜನಪ್ರಿಯತೆ ಗಳಿಸಿರುವ ಪಾಂಡುರಂಗ ಪ್ರೊಡಕ್ಷನ್ಸ್ ಅವರು ಕನ್ನಡಿಗರಿಗೆ ಇನ್ನೊಂದು ಸಾಮಾಜಿಕ ಚಿತ್ರವನ್ನು ಅರ್ಪಿಸುವ ಸಿದ್ಧತೆಯಲ್ಲಿದ್ದಾರೆ. 'ಅರಶಿನ—ಕುಂಕುಮ' ಚಿತ್ರದ ಹೆಸರು. ಚಿತ್ರೀಕರಣದ ಕಾರ್ಯವು ಆರಂಭವಾಗಿದೆ. ಚಿ. ಉದಯ ಶಂಕರ್ ಚಿತ್ರ ಕಥೆಯನ್ನು ರಚಿಸಿದ್ದಾರೆ. ಕೆ. ಎಸ್. ಅಶ್ವತ್ಥ್, ಪಂಢರೀಬಾಯಿ, ನೈನಾಪತಿ ಪ್ರಮುಖ ಪಾತ್ರ ವಹಿಸುವರು.

ನವಯುಗದ ವಾಚಕರಿಗೆ

ಇನ್ನೊಂದು ವಿಶೇಷ ಸಂಚಿಕೆ—

ಎಂದಿನಂತೆ ಪ್ರಕಟವಾಗುವ

ದೀಪಾವಳಿ ವಿಶೇಷಾಂಕ

ವೈವಿಧ್ಯಪೂರ್ಣ ಲೇಖನ, ಕವನ, ಕಥೆಗಳೊಂದಿಗೆ

ತಾ. 29-10-64ಕ್ಕೆ ಪ್ರಕಟವಾಗುವುದು.

ಕರ್ನಾಟಕದ ಎಲ್ಲಾ ಕಡೆಗಳಲ್ಲೂ ಮುಂಬಯಿಯಲ್ಲೂ ವಿಶೇಷ ಪ್ರಸಾರವಾಗುವ ಈ ಸಂಚಿಕೆಯು

ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ದರಗಳಿಗೆ ಬರೆಯಿರಿ:

ಮೆನೇಜರ್, ನವಯುಗ, ಉಡುಪಿ.

ಚಿಕ್ಕ—ಚೊಕ್ಕ ಲೇಖನಗಳನ್ನು ಆಮಂತ್ರಿಸಲಾಗಿದೆ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O S. 153/1964

Appulu Fernandes ... Plaintiff

and

L. D. Souza ... Defendant.

ಪ್ರತಿವಾದಿ L.D. Souza, Abunagudige Estate, Chickamagalur, Post Hirebail ನಲ್ಲಿರುವವರು.—

ಪ್ರತಿವಾದಿಯಿಂದ ಬಹಾ, ರೂಪಾಯಿ 566—67ಕ್ಕೆ ವಾದಿಯು ಮಾಡಿದ ಕೈಫೀತು ನೋಟೀಸಿನ ವ್ಯಾದೆ ತಾ. 30-9-1964ಕ್ಕೆ ಇಟ್ಟಿರುವುದರಿಂದ ನಿಮಗೇನಾದರೂ ಆಕ್ಷೇಪ ಹೇಳುವುದಿದ್ದ, ಆ ದಿನ ಕೋರ್ಟಿನ ಮುಂದೆ ಪೂರ್ವಾಹ್ನ 11 ಗಂಟೆಗೆ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ವಾ ಎಂತ ಮಾಡಿ ಮುಂದಿನ ತನ್ಖಿಯಿಂದ ತೀರ್ಮಾನಿಸಲ್ಪಡುವುದು ಎಂತ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

N. J. KADAMBA.
Advocate for Plaintiff

ಬೆಳ್ತಂಗಡಿ, 11—9—1964.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S 131/1964

N. ಅನಂತರಾಜ ಶೆಟ್ಟಿ —ವಾದಿ.

ಮತ್ತು

ನೇಮಿರಾಜ ಹೆಗ್ಡೆ ಸಹಾ —ಪ್ರತಿವಾದಿರು.

1ನೇ ಪ್ರತಿವಾದಿ ನೇಮಿರಾಜ ಹೆಗ್ಡೆರಿಗೆ, 2ನೇ ಪ್ರತಿವಾದಿ ಜಯಮತಿಗೆ, 4ನೇ ಪ್ರತಿವಾದಿ ಸುಮಿತ್ರಾಗೆ, 5ರಿಂದ 8ನೇ ಪ್ರತಿವಾದಿರು ಮೈನರರು, ಗಾರ್ಡಿಯನಳಾಗಿ 2ನೇ ಪ್ರತಿವಾದಿ ಜಯಮತಿಗೆ—

ಬೆಳ್ತಂಗಡಿ ತಾಲ್ಲೂಕು ಆರಂಬೋಡಿ ಗ್ರಾಮದ ಮೂಡಾಲು ಎಂಬಲ್ಲಿರುವವರು.

ಪ್ರತಿವಾದಿರಿಂದ ಭೋಗ್ಯಾದಿ ಅಡವಿನ ಶರ್ತ ಪ್ರಕಾರ ಬರಬೇಕಾದ ಗೇಣಿ ರೂ. 520/-ಕ್ಕೆ ವಾದಿಯು ಮಾಡಿದ ಕೈಫೀತು ನೋಟೀಸಿನ ವ್ಯಾದೆ ತಾ. 30.9.1964ಕ್ಕೆ ಇಟ್ಟಿರುವುದರಿಂದ ನಿಮಗೇನಾದರೂ ಆಕ್ಷೇಪ ಹೇಳುವುದಿದ್ದ, ಆ ದಿನ ಕೋರ್ಟಿನ ಮುಂದೆ 11 ಗಂಟೆಗೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವ್ವಾ ಎಂತ ಮಾಡಿ ಮುಂದಿನ ತನ್ಖಿಯಿಂದ ತೀರ್ಮಾನಿಸಲ್ಪಡುವುದು ಎಂತ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

N. J. Kadamba,
Advocate for Plaintiff-

ಬೆಳ್ತಂಗಡಿ, ತಾ. 10-9-1964.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 103/1964.

ನಾಗಮ್ಮ ದೇವಿ ಸಹಾ —ವಾದಿರು.

ಮತ್ತು

ಶಿವದೇವಿ ಸಹಾ —ಪ್ರತಿವಾದಿರು.

2ನೇ ಪ್ರತಿವಾದಿ ಜ್ವಾಲಿನಿಗೆ, ಹೊಸಂಗಡಿ ಗ್ರಾಮದ ಬಾಳನಗುತ್ತು ಎಂಬಲ್ಲಿರುವವಳು.—

ವಾದಿರು ಕಟ್ಟಿದ ಅಡವು ಹಣದಲ್ಲಿ ಪ್ರತಿವಾದಿರಿಂದ ದಾಮಾಶಾ ಪ್ರಕಾರ ಬರಬೇಕಾದ ಐವೇಜು ರೂ. 989-20ಕ್ಕೆ ವಾದಿಯು ಮಾಡಿದ ಕೈಫೀತಿನ ನೋಟೀಸಿನ ವ್ಯಾದೆ ತಾ. 30-9-1964ಕ್ಕೆ ಇಟ್ಟಿರುವದರಿಂದ ನಿಮಗೇನಾದರೂ ಹೇಳುವುದಿದ್ದ, ಆ ದಿನ ಕೋರ್ಟಿನ ಮುಂದೆ 11 ಗಂಟೆಗೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವ್ವಾ ಎಂತ ಮಾಡಿ ಮುಂದಿನ ತನ್ಖಿಯಿಂದ ತೀರ್ಮಾನಿಸಲ್ಪಡುವುದು ಎಂತ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

N. J. Kadamba,
Advocate for Plaintiffs.

ಬೆಳ್ತಂಗಡಿ, 10-9-64.

ನಮ್ಮ - ನಮ್ಮವರು

ಶ್ರೀ ಲಾಲ್ ಬಹಾದ್ದೂರ್ ಶಾಸ್ತ್ರಿ

ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಾಲ್ಕು ತಿಂಗಳುಗಳ ಅವಧಿಯೊಳಗೆ ಲಾಲ್ ಬಹಾದ್ದೂರ್ ಶಾಸ್ತ್ರಿಯವರ ಸತ್ವಪರೀಕ್ಷೆಯಾಗುವ ಹಲವಾರು ಕಠಿಣ ಪ್ರಸಂಗಗಳನ್ನು ಅವರು ಇದಿರಿಸಬೇಕಾಯಿತು. ದೇಶದ ಆಧಾರ ಸ್ತಂಭದಂತಿದ್ದ ದಿವಂಗತ ನೆಹರೂರವರು ನಿರ್ವಹಿಸಿದ ಮಹತ್ತರವಾದ ಹೊಣೆಯನ್ನು ಅವರು ಧೈರ್ಯವಾಗಿ ಹೊರಲು ಮುಂದೆ ಬಂದರು. ಪ್ರಧಾನ ಮಂತ್ರಿಸ್ಥಾನ ಅಲಂಕರಿಸಿದ ಶಾಸ್ತ್ರಿಯವರು ಅಲ್ಪಾವಧಿಯಲ್ಲೇ ಬಿಗಡಾಯಿಸಿದ ಆಹಾರ ಪರಿಸ್ಥಿತಿಯ ಘೋರ ಸಮಸ್ಯೆಯನ್ನೆದುರಿಸಬೇಕಾಯಿತು. ಪಂಜಾಬಿನಲ್ಲಿ ಕೈರೋನರ ಕಹಿ ಪ್ರಸಂಗ, ಕೇರಳದ ಕಾಂಗ್ರೆಸಿಗರ ಕಚ್ಚಾಟ, ಬರ್ಮಾದ ಭಾರತೀಯರ ಸಮಸ್ಯೆ, ಇವೇ ಮೊದಲಾದುವುಗಳು ಒಂದರ ಮೇಲೊಂದು ಒಂದು ಅವರನ್ನು ಕಾಡಹತ್ತಿದುವು. ಈ ಎಲ್ಲಾ ಘೋರ ಸಮಸ್ಯೆಗಳನ್ನು ಅವರು ಬಹಾದ್ದೂರರಂತೆ ಎದುರಿಸಿ, ಬಹಾದ್ದೂರರೆನಿಸಿಕೊಂಡರು ಸ್ವಲ್ಪವೂ ಉದ್ರೇಕಗೊಳ್ಳದೆ, ಶಾಂತಚಿತ್ತರಾಗಿ ಎಲ್ಲಾ ಕಹಿ ಪ್ರಸಂಗಗಳನ್ನು ನೀಲಕಂಠನಂತೆ ನುಂಗಿಕೊಂಡರು.

ಅವರ ಈ ವರೆಗಿನ ಜೀವನವನ್ನು ಪರಿಶೀಲಿಸಿದರೆ ಅವರು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುವವರಲ್ಲ ಎಂಬುದು ವಿದಿತವಾಗುತ್ತದೆ. ಅವರು ಪ್ರವಾಹಕ್ಕೆದುರಾಗಿ ಹೋರಾಡುವ ಜಾಣ ಈಜುಗಾರರು. ಭಾವನೆಗೆ ಪರವಶರಾಗಿ ಅವರು ಎಂದೂ ದುಡುಕಿದವರಲ್ಲ. ಹತ್ತು ಬಾರಿ ಯೋಚಿಸಿ ಅವರು ಮುಂದೆ ಹೆಜ್ಜೆ ಇಡುತ್ತಾರೆ. ದೇಶದ ಆಹಾರ ಪರಿಸ್ಥಿತಿಯನ್ನು ಅವರು ತನ್ನ ಸಹೋದ್ಯೋಗಿಗಳ ಸಹಕಾರದಿಂದ, ಸುಧಾರಿಸುವುದಕ್ಕೆ ಯತ್ನಿಸಿದರು. ಈ ದಿಶೆಯಲ್ಲಿ ಯಶಸ್ವಿಗಳೂ ಆದರು.

ಇದೀಗ ಅವರು ಮೊದಲ ಬಾರಿ ಪ್ರಧಾನ ಮಂತ್ರಿಯಾಗಿ ಭಾಗವಹಿಸುತ್ತಿರುವ ಸಂಸತ್ತಿನ ಸಭೆಯಲ್ಲಿ, ಅವರು ಮೊದಲ ಬಾರಿಗೆ ವಿರೋಧಿ ಪಕ್ಷದವರು ಮಂಡಿಸಿರುವ ಅವಿಶ್ವಾಸ ಸೂಚನೆಯನ್ನು ಎದುರಿಸಬೇಕಾಗಿ ಬಂದಿದೆ. ಕಳೆದ ಬಾರಿ, ನೆಹರೂ ಸರಕಾರದ ವಿರುದ್ಧ ಆಚಾರ್ಯ ಕೃಪಲಾನಿಯವರು ಇದೇ ತರದ ಅವಿಶ್ವಾಸ ಗೊತ್ತುವಳಿ ಮಂಡಿಸಿದ್ದರು. ಅದು ಪೂರ್ಣ ಪರಾಭವ ಹೊಂದಿತ. ಈಗ ಅಂತಹುದೇ ಇನ್ನೊಂದು ಪ್ರಸಂಗ ಬಿದ್ದಿದೆ. ಚತುರ ರಾಜಕಾರಣಿ ಶಾಸ್ತ್ರಿಯವರು, ಈ ಅವಿಶ್ವಾಸ ಗೊತ್ತುವಳಿಯನ್ನು ಯಶಸ್ವಿಯಾಗಿ ಎದುರಿಸಿ, ವಿರೋಧ ಪಕ್ಷಗಳ ಬಾಯಿ ಮುಚ್ಚಿಸುವುದು ಖಂಡಿತ. ಅವರ ಬಹಾದ್ದೂರತನಕ್ಕೆ ಈ ಅಧಿವೇಶನ ಇನ್ನೊಂದು ನಿದರ್ಶನವಾಗಲಿದೆ.

ಶ್ರೀ ಚಾರಮಕ್ಕಿ
ನಾರಾಯಣ ಶೆಟ್ಟಿ.

ಉದ್ಯಮಶೀಲರಿಗೆ, ಸಾಹಸಿಗಳಿಗೆ, ಸತತ ಪ್ರಯತ್ನವನ್ನು ಬಿಡದೆ ಮಾಡುವವರಿಗೆ, ಸೋಲಿಗೆ ಹೆದರದೇ ಮತ್ತು ಧೈರ್ಯದಿಂದ ಮುನ್ನುಗ್ಗುವವರಿಗೆ ಒಂದಲ್ಲ ಒಂದು ದಿನ ವಿಜಯವು ನಿಶ್ಚಿತ. ಅದೃಷ್ಟವು ಅಂತಹವರಿಗೆ ತಾನಾಗಿಯೇ ಒಲಿಯುತ್ತದೆ. ಈ ಮಾತಿಗೆ ನಿದರ್ಶನ ನಮ್ಮ ಪ್ರಾಂತ್ಯದ ಸುಪ್ರಸಿದ್ಧ ಕಂಟ್ರಾಕ್ಟದಾರರಾದ ಶ್ರೀ ಚಾರಮಕ್ಕಿ ನಾರಾಯಣ ಶೆಟ್ಟರು. ಅನೇಕ ಸಾಹಸಿಗರು ಪ್ರವಾಹದಲ್ಲಿ ಮುಳುಗಿ ತಳ ಮುಟ್ಟಿ ಅನಂತರ ದಡ ಸೇರಿದ್ದಾರೆ. ಇಂತಹ ಅವರನ್ನು ಸರಿಗಟ್ಟುವ ಕಂಟ್ರಾಕ್ಟದಾರರು ಬೆರಳೆಣಿಕೆಯಷ್ಟು ಸಿಗಬಹುದು.

ದಕ್ಷಿಣ ಕನ್ನಡದಲ್ಲಿ ಹುಟ್ಟಿದ ಶ್ರೀ|| ಶೆಟ್ಟರ ಕಾರ್ಯಕ್ಷೇತ್ರ ಇಂದು ಕಾರ್ಗಲ್ಲಾಗಿದೆ, ಶಿವಮೊಗ್ಗ ಜಿಲ್ಲೆಯ ಕಾರ್ಗಲಿನಲ್ಲಿ ಅವರು ಶಂಕರ ನಾರಾಯಣ ಕನ್‌ಸ್ಟ್ರಕ್ಷನ್ ಕಂಪೆನಿಯನ್ನು ಸ್ಥಾಪಿಸಿ, ಅದರ ನೇತೃಗಳಾಗಿ ದುಡಿಯುತ್ತಿದ್ದಾರೆ. ಅವರ ಸಾಹಸ ಪ್ರವೃತ್ತಿ ಇಂದು ಅವರಿಗೆ ತಕ್ಕ ಪುರಸ್ಕಾರವನ್ನು ನೀಡಿದೆ. ಅವರು ಉದ್ಯಮಶೀಲರೂ ಹೌದು. ಹಂಚಿನ ಕೈಗಾರಿಕೆಯಲ್ಲೂ ಅವರು ಇತ್ತೀಚಿಗೆ ಗಣನೀಯ ಪ್ರಗತಿ ಸಾಧಿಸಿದ್ದಾರೆ.

ಶ್ರೀ ಶೆಟ್ಟರು ವ್ಯವಹಾರದಲ್ಲಿ ಕುಶಲರಾಗಿದ್ದಷ್ಟೇ, ಸಾರ್ವಜನಿಕ ಕಾರ್ಯಗಳಲ್ಲೂ ಆಸಕ್ತರು. ಅವರು ಜಿಲ್ಲೆಯ ಹತ್ತು ಹಲವಾರು ವಿದ್ಯಾಸಂಸ್ಥೆಗಳಿಗೆ ಕೊಡುಗೈಯ ದಾನ ನೀಡಿದ್ದಾರೆ. ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿಗೆ ಅವರು ಧನ ಸಹಾಯವಿತ್ತುದು ಮಾತ್ರವಲ್ಲ ಅದರ ಟ್ರಸ್ಟಿಗಳಾಗಿ ದುಡಿಯುತ್ತಿದ್ದಾರೆ. ಕುಂದಾಪುರ ತಾಲೂಕಿನ ಅಲ್ಬಾಡಿಯಲ್ಲಿ ಒಂದು ಹೈಸ್ಕೂಲಿನ ಅವಶ್ಯಕತೆ ಕಂಡ ಒಡನೆ, ಶ್ರೀ ಶೆಟ್ಟರು ಮುಂದೆ ಒಂದು ಧನಸಹಾಯ ಮಾಡಿದರು. ಆ ಹೈಸ್ಕೂಲು ಇಂದು ಅವರ ಹೆಸರಲ್ಲೇ ಗ್ರಾಮದ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದೆ. ಒಳ್ಳೆಯ ಕಾರ್ಯಕ್ಕೆ ಶ್ರೀ ಶೆಟ್ಟರದು ಯಾವಾಗಲೂ ಬೆಂಬಲ ಹಾಗೂ ಪ್ರೋತ್ಸಾಹ.

ಸಾಹಸಿ, ಉದಾರಿ ಹಾಗೂ ಉದ್ಯಮಶೀಲ ಶ್ರೀ ಶೆಟ್ಟರಿಂದ ಜಿಲ್ಲೆಯ ಜನತೆ ಇನ್ನೂ ಹೆಚ್ಚಿನ ಸೇವೆಯನ್ನು ನಿರೀಕ್ಷಿಸುತ್ತದೆ. ಅವರ ಈ ವರೆಗಿನ ಸಾರ್ವಜನಿಕ ಕಾರ್ಯ ಹಾಗೂ ಸೇವೆಗಳು, ಜನತೆಯ ಮನದಲ್ಲಿ ಅಚ್ಚಳಿಯದೆ ಉಳಿಯುವುದು ಖಂಡಿತ. ಶ್ರೀ ಶೆಟ್ಟರಿಗೆ ನಾವು ಇನ್ನೂ ಹೆಚ್ಚಿನ ಯಶಸ್ಸು ಕೋರುತ್ತೇವೆ.

ಜಾಹೀರಾತುದಾರರಿಗೆ

ಸಂತಸದ ಸುದ್ದಿ

?

ನವಯುಗ

ಎಲ್ಲೆಲ್ಲಿ ಪ್ರಸಾರದಲ್ಲಿದೆ

ಬಲ್ಲಿರಾ?

ದಕ್ಷಿಣ ಕನ್ನಡದ ಎಲ್ಲೆಡೆಗಳಲ್ಲಿದೆ ಮುಂಬಯಿಯಲ್ಲಿ ವಿಶಾಲಪ್ರಚಾರದಲ್ಲಿದೆ.

ಕರ್ನಾಟಕದ ಈ ಕೆಳಗಿನ ಪ್ರಮುಖ ಕೇಂದ್ರಗಳಲ್ಲಿಯೂ ಪ್ರಸಾರದಲ್ಲಿವೆ.

ಬೆಂಗಳೂರು, ಮೈಸೂರು, ಹಾಸನ, ಸಕಲೇಶಪುರ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, ಹಿರಿಯೂರು ಶಿವಮೊಗ್ಗ, ತೀರ್ಥಹಳ್ಳಿ, ಭದ್ರಾವತಿ, ಹರಿಹರ, ಧಾರವಾಡ, ಹುಬ್ಬಳ್ಳಿ, ಸಾಗರ, ಸಿರ್ಸಿ, ಮಂಡ್ಯ, ಮೂಡಿಗೆರೆ, ಬೇಲೂರ, ತರೀಕೆರೆ, ಕೊಪ್ಪ, ಕಡೂರು, ಬೀರೂರು, ಹೊನ್ನಾವರ, ಬೆಳಗಾಂವ್, ಅಂಕೋಲಾ, ಜಗಳೂರು, ಹೊಳಲ್ಕೆರೆ, ನರಸಿಂಹರಾಜಪುರ, ಕೃಷ್ಣರಾಜಪೇಟೆ, ಅರೆಹಳ್ಳಿ, ಬೇಗೋಡು, ಶೃಂಗೇರಿ, ಸೊರಬ, ರಾಯಚೂರು, ಯಾದಗೀ, ಗುಬ್ಬಿ, ಅರಸೀಕೆರೆ, ಗಂಗಾವತಿ, ಇತ್ಯಾದಿ.

ಸುಖ - ದುಃಖ

ಕೊನೆಗೂ ಒಪ್ಪಿದರು

ಮೈಸೂರಿನ ಭಿನ್ನಮತೀಯ ಕಾಂಗ್ರೆಸ್ ಶಾಸಕರು ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಮೇಲೆ ಹೊರಿಸಿದ ಆರೋಪಗಳು ನಿರಾಧಾರವೆಂದೂ ದುರುದ್ದೇಶಪೂರಿತವೆಂದೂ ಅವರೂ ಅವರ ಹಿಂಬಾಲಕರೂ ಸಾರುತ್ತಿದ್ದುದು ನಿಜವಷ್ಟೆ? ಆದರೆ, ಇದೀಗ ಅವರು ಆಪಾದನೆಗಳ ಕುರಿತು ವಿಚಾರಣೆ ನಡೆಸಲು ತಮ್ಮ ಸಮ್ಮತಿಯನ್ನು ನೀಡಿದ್ದಾರೆಂದು ತಿಳಿದು ಬರುತ್ತದೆ. 'ಕೇರಳವು ನಮಗೆ ಪಾಠ ಕಲಿಸಿತು' ಎನ್ನುವ ನಮ್ಮ ಮುಖ್ಯ ಮಂತ್ರಿಗಳೂ ಪಾಠ ಕಲಿತುಕೊಂಡರು ಎನ್ನುವುದು ಸಂತೋಷ. ಶ್ರೀ ಎಸ್. ಕೆ. ಪಾಟೀಲರು ತಮ್ಮ ಸಂಧಾನದ ಪ್ರಯತ್ನವನ್ನು ಒಂದು ವಾರ ಮೊದಲೇ ಪ್ರಾರಂಭಿಸಿದ್ದರೆ, ಕೇರಳದ ಸರಕಾರವನ್ನು ಉಳಿಸಬಹುದಿತ್ತು ಎನ್ನುತ್ತಾರೆ ಅವರು. ತನ್ನ ಮೇಲಿನ ಆರೋಪಗಳ ವಿಚಾರಣೆಗೆ ಅವರು ಮೊದಲೇ ಒಪ್ಪುತ್ತಿದ್ದರೆ, ಮತ್ತಷ್ಟು ಜನಪ್ರಿಯರಾಗುತ್ತಿರಲಿಲ್ಲವೆ? ಇದೀಗ ಒತ್ತಾಯಕ್ಕೆ ಕಟ್ಟುಬಿದ್ದು ಒಪ್ಪಿದರು ಎಂದು ಜನರಾಡಿಕೊಳ್ಳುತ್ತಿರುವುದು ತಪ್ಪುತ್ತಿರಲಿಲ್ಲವೆ? —ನಾರಾಯಣ ಶೆಟ್ಟಿ.

ದುಷ್ಟ ಸಂಪ್ರದಾಯ

ಕೇರಳದಲ್ಲಿ ಸರಕಾರವುರುಳಿದುದು ಮಹತ್ವದ ಸಂಗತಿಯಲ್ಲ. ಏಕೆಂದರೆ, ಸರಕಾರವುರುಳುವುದು ಅಲ್ಲಿ ಮನೆ ಮಾತಿನಂತಾಗಿದೆ. ಆದರೆ, ಭಿನ್ನಮತೀಯ ಕಾಂಗ್ರೆಸಿಗರು ಕೈಕೊಂಡ ನಿರ್ಣಯ ಮಾತ್ರ ಪಕ್ಷದ ಹಿತದೃಷ್ಟಿಯಿಂದ ದುರದೃಷ್ಟಕರ. ಆರ್. ಶಂಕರರಲ್ಲಿ ೩೦ ಮಂದಿ ಶಾಸಕರಿಗೆ ಸಂಪೂರ್ಣ ವಿಶ್ವಾಸವಿರುವಾಗ ಈ ೧೫ ಜನರು ಅವಿಶ್ವಾಸವನ್ನು ಅಪಮಾನಕಾರಕ ರೀತಿಯಲ್ಲಿ ಪ್ರದರ್ಶನ ಮಾಡಿದುದು ನ್ಯಾಯವೆನ್ನಿಸಲಿಕ್ಕಿಲ್ಲ. ಪ್ರಜಾಪ್ರಭುತ್ವದಲ್ಲಿ ಬಹುಮತವನ್ನು ಮನ್ನಿಸುವುದು ಅತ್ಯಗತ್ಯವಾಗಿರುವಾಗ ತಮ್ಮ ಪಕ್ಷದ ಬಹುಸಂಖ್ಯಾಕ ಶಾಸಕರ ಅಭಿಮತವನ್ನು ತೃಣಸಮಾನ ಮಾಡಿದ ಇವರ ದುಸ್ಸಾಹಸ ನಿಂದನೀಯ. ನಾಯಕನ ಮೇಲಿನ ಆರೋಪಗಳನ್ನು ಪಕ್ಷದ ಮುಂದೆ ತಂದು ಅಲ್ಲಿ ನ್ಯಾಯ ಪಡೆಯಬಹುದಿತ್ತು. ಕೊನೆಯ ಗಳಿಗೆಯಲ್ಲಾದರೂ ಅಂತಹ ನ್ಯಾಯ ದೊರಕಿಸುವ ಭರವಸೆಯನ್ನು ಶ್ರೀ ಪಾಟೀಲರು ನೀಡಿದ್ದರು. ಇಂತಹ ದುಷ್ಟ ಸಂಪ್ರದಾಯದ ಪುನರಾವರ್ತನೆಯಾಗದಂತೆ ಕಾಂಗ್ರೆಸ್ಸು ತೀವ್ರ ಎಚ್ಚರಿಕೆಯಿಂದಿರುವುದು ಅಗತ್ಯವಲ್ಲವೆ? ಇಲ್ಲವಾದರೆ, ಅನರ್ಥ ಸಂಭವಿಸಲಿಕ್ಕಿಲ್ಲವೆ? —ಬಿ. ಎನ್. ಆರ್.

ವಿಶ್ವಾಸ ನಮಗಿದೆ

ಆಹಾರಧಾನ್ಯಗಳ ಕಾರ್ಪೊರೇಶನಿನ ಅಧ್ಯಕ್ಷ ಸ್ಥಾನಕ್ಕೆ ಆರಿಸಿದ ಶ್ರೀ ಟಿ. ಎ. ಪೈಯವರ ಆಯ್ಕೆಯನ್ನು ಅವರನ್ನು ಬಲ್ಲವರೆಲ್ಲರೂ ಸಮರ್ಥಿಸುತ್ತಾರೆ. ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ ಮೊದಲಾದ ಹಲವಾರು ರಂಗಗಳಲ್ಲಿ ಹೆಸರು ಮಾಡಿರುವ ಇವರು ಕೃಷಿ ಸಂಬಂಧವಾದ ಅಧ್ಯಯನವನ್ನೂ ಮಾಡಿದ್ದಾರೆ. ಉತ್ಪಾದನೆಯನ್ನು ಹೆಚ್ಚು ಮಾಡಿ ವಿತರಣೆಯನ್ನು ಸರಳ ಮಾಡಬೇಕೆಂದವರು ಹೇಳುತ್ತ ಬಂದಿದ್ದಾರೆ. ನಿಯೋಜಿತ ಕಾರ್ಪೊರೇಶನ್ ಆಹಾರಧಾನ್ಯಗಳ ಖರೀದಿ ಮತ್ತು ವಿತರಣೆಯನ್ನು ಮಾತ್ರ ನೋಡಿಕೊಳ್ಳದೆ, ಅಧಿಕ ಉತ್ಪಾದನೆಯತ್ತಲೂ ತೀವ್ರ ದೃಷ್ಟಿ ಹರಿಸುವಂತೆ ಮಾಡಿದರೆ, ಶ್ರೀ ಪೈಯವರಿಂದ ಮತ್ತೂ ಪ್ರಯೋಜನ ಪಡೆಯಬಹುದು. ಆಹಾರದಂತಹ ಮಹತ್ವದ ಹೊಣೆಗಾರಿಕೆಯ ಈ ಹೊಸ ರಂಗದಲ್ಲಿ ಯಶಸ್ವಿ ನಡೆಯುವುದು ಶಕ್ಯಸಾಧ್ಯವಾದರೆ ಶ್ರೀ ಪೈಯವರಿಂದದು ಸಾಧ್ಯವಾಗುವುದೆಂಬ ವಿಶ್ವಾಸವಿಡಬಹುದು. —ಅಚ್ಯುತ.

ಸದಾ ಸುಸ್ವಾಗತ

ಉಡುಪಿಯಲ್ಲಿ ಪ್ರಥಮ ಶ್ರೇಣಿಯ ಹಾಗೂ ಪ್ರಪ್ರಥಮ ವಸತಿ
ಮತ್ತು ಭೋಜನ ಮಂದಿರ

ರೋಯಲ್ ಮಹಾಲ್

ತೃಪ್ತಿದಾಯಕ ಸಮಾನ ಸೇವೆಯ ಸರ್ವಾನುಕೂಲತೆಗಳಿಂದೊಡ
ಗೂಡಿರುವ ಅತ್ಯಾಧುನಿಕ ಮಾದರಿಯ
ಬೋರ್ಡಿಂಗ್ ಮತ್ತು ಲಾಜಿಂಗ್.

ಸ್ಥಾಪಕ: ಕೆ. ವೆಂಕಟ್ರಮಣ ಭಟ್.

NAVAYUGA 17-9-1964

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಗೋಪರಾಜ್ಯದಲ್ಲಿ

ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ



"ಕೇಳಿದ್ರಾ, ನಿಮ್ಮ ಶಾಸ್ತ್ರಿಯವರು ಇಷ್ಟು ಬೇಗನೇ ಅಸಂಭಾವಿತರಾದ್ರಂತೆ..."

"ಆ...ಏನೆಂದೆ?...."

"ಅಲ್ಲಾ, ನಿಮ್ಮ ಶಾಸ್ತ್ರಿಯವರು...."

"ಯಾರೇ ಅದು ನನ್ನ ಶಾಸ್ತ್ರಿ....?"

"ಅಯ್ಯಯ್ಯೊ, ಶಾಸ್ತ್ರಿ ಅನ್ನೋದೂ ತಿಳಿಯೋದಿಲ್ವಾ?"

"ಏನಂತೀಯಾ ನೀನು? ನಿಮ್ಮ ಶಾಸ್ತ್ರಿ ನಿಮ್ಮ ಶಾಸ್ತ್ರೀಂತಂತೀಯಲ್ಲಾ? ಯಾರದು?..."

"ಅಪ್ಪೇನೇ ನಿಮ್ಮ ದಿಲ್ಲೀ ಶಾಸ್ತ್ರಿ..."

"ದಿಲ್ಲಿಯವ್ರು....ಪದ್ಮನಾಭ ಶಾಸ್ತ್ರಿಯವ್ರು ದಿಲ್ಲಿಗೆ ಹೋದದ್ದು ಹೌದು.... ಆದ್ರೆ....'

"ಆದ್ರೆ ಏನಂತೆ? ಹೇಳಿಬಿಡು...."

"ಅಲ್ಲಾ ಅವ್ರಿನ್ನೂ ದಿಲ್ಲಿ ಮುಟ್ಟಿಲ್ಲ ನೋಡು. ಇನ್ನೂ ಕಲ್ಕತ್ತೆಯಲ್ಲೇ ಇದ್ದಾರೇಂತ ತೋರುತ್ತೆ."

"ಸರಿಹೋಯ್ತು ಬಿಡಿ. ನಿಮ್ಮ ಬಂಡವಾಳ ಈಗ ತಿಳೀತು..."

"ಪಾಪ, ನನ್ನ ಬಂಡವಾಳ ತಿಳಿದ್ಹಂತೆ. ಆಯ್ತಪ್ಪ. ಏನನ್ನೂಂತ ಹೇಳ್ಬೇಡ. ಏನಾದ್ರೂ ವ್ಯಾಪಾರ್ದಲ್ಲಿ ತೊಡಗ್ಸಿದ್ರೆ ಲಾಭವಾದ್ರೂ ಪಡೀಬಹುದು..."

"ಮತ್ತೆಲ್ಲಾ ಮಾಡಿಯಾಯ್ತು. ಇನ್ನು ಅದೊಂದು ಮಾತ್ರ ಬಾಕಿ..."

"ಯಾವುದು?'

'ಅಲ್ಲ, ವ್ಯಾಪಾರ ಮಾಡೋದು...'

"ಏನಂತೀಯ? ನಾನು ವ್ಯಾಪಾರ ಮಾಡ್ಬಾರ್ದೇಂತ ಅನ್ಸೀತಾ ನೀನು?'

"ಅಂಗ್ಡಿಗೆ ಹೋಗಿ ಬೇರಾಗ ನಾವೂ ನನ್ನೇ ತರೋದಾಗದವ್ರು ಇನ್ನು ವ್ಯಾಪಾರಕ್ಕೆ ಕೂರ್ತಾರಂತೆ. ಸಾಕು ಮಾಡಿ ನಿಮ್ಮ ಉದ್ದುದ್ದ ಮಾತು. ಅಲ್ಲ, ನಿಮ್ಮಂಥವ್ರೂ ವ್ಯಾಪಾರಕ್ಕೆ ತೊಡಗಿದ್ರೆ ಮತ್ತೆ ಮಕ್ಳ ಗತಿಯೇನಾದೀತೋಂತ?"

"ಮಕ್ಳದ್ದೇ.... ಆಗೋದೇನು? ನೆಟ್ಟಗಾಗುತ್ತೆ. ಅಲ್ಲಾ, ನಮ್ಮ ಸರ್ಕಾರಾನೇ ವ್ಯಾಪಾರ ಮಾಡೋವತ್ತ ಮನಸ್ಸು ಮಾಡ್ತಾ ಇದೆ. ಹಾಗಿರ್ಬ್ವಾಗ ನಾನೂ ಏಕೆ ಮಾಡ್ಬಾರ್ದು?"

"ಮಾಡ್ಬ್ಯಾಡಾಂತ ಯಾರಂತಾರೆ? ಆದ್ರೆ ನೋಡಿ, ನೀವು ಅದ್ಕೆ ತೊಡಗಿದ್ರೆ ಹನ್ನೆರಡಾಣೆ ಮೊದ್ಲೇ ತಗ್ದು ಇಡ್ಬೇಕು..."

"ಯಾಕಂತೆ?"

"ಅಲ್ಲ, ಮತ್ತೆ ಅದ್ಕೆ ಬೇರೆ ಯಾವ್ರ ಮುಂದೆ ಕೈಯೊಡ್ಡುವಂತಾಗಬಾರ್ದಲ್ಲ...'

"ಸಾಕು ಕಣೇ ಸಾಕು. ನಿನ್ನ ಪರಿಹಾಸ ಮಿತಿಮೀರಿ ಹೋಯ್ತು...'

"ನಿಮ್ಮಂಥಹ ಸಂಭಾವಿತ್ರು ಮತ್ತೆ ಕೈಸುಟ್ಕೊಳ್ಳೋಕೆ ಹೊರಟ್ರೆ ಏನಾದೀತೂಂತ....'

"ಅಂದ್ರೆ ವ್ಯಾಪಾರ ಮಾಡೋರೆಲ್ಲಾ ಅಸಂಭಾವಿತ್ರೂಂತ ನೀನನ್ನೋದಲ್ವೆ?'

"ಹುಲಿ ಮೈ ಬಣ್ಣಕ್ಕೆ ನರಿ ಮೈಸುಟ್ಕೊಂಡಿತಂತೆ, ಹಾಗೇ ನೀವೂ..."

"ಬೇಡ ಮಾರಾಯ್ತಿ....ನನ್ಗೆ ವ್ಯಾಪಾರಾನೂ ಬೇಡ, ಗೀಪಾರಾನೂ ಬೇಡ. ಇರೋ ಈ ಸಂಸಾರದ ವ್ಯಾಪಾರಾನ ನೆಮ್ಮದಿಯಾಗಿ ಮಾಡುವಂತಾದ್ರೆ ಸಾಕು."

"ಅಯ್ಯಬ್ಬ, ನೀವು ವ್ಯಾಪಾರಾನೇ ಬೇಡಾನ್ನೋವಾಗ ಅದೂ ಬೇಡಾಂತೀರಾಂತ ಹೆದ್ರಿದ್ದೆ..."

"ಯಾವುದು ಬೇಡಂದ್ರೂ ಅದು ಬೇಡಾನ್ನೋಕಾಗುತ್ಯೆ? ಬೇಡಾಂತಂದ್ರೂ ನೀನು ಬಿಡಬೇಕಲ್ಲಾ...."

"ಸದ್ಯ ಅಷ್ಟಾದರೂ ಹೆದರಿಕೆ ಉಂಟಲ್ಲಾ"

"ಅಲ್ಲ, ಅವಿಶ್ವಾಸ ಅನ್ನೋವಾಗ ನೆಹ್ರು ಶಾಸ್ತ್ರಿಯಂಥವ್ರೂ ಒಮ್ಮೆ ನಡುಗ್ತಾರೆ. ಹಾಗಿರ್ಬ್ವಾಗ...."

"ನೋಡಿ, ಅದನ್ನೇ ನಾನಂದದ್ದು. ನಿಮ್ಮ ಶಾಸ್ತ್ರಿಯವರ ಮೇಲೆ ಅವಿಶ್ವಾಸ ಗೊತ್ತುವಳಿ ಇಟ್ಟಿದ್ದಾರಂತಲ್ಲ..."

"ಹೌದು, ಸ್ವತಂತ್ರ ಪಕ್ಷದವ್ರು ಬಿಟ್ಟು ಉಳಿದೆಲ್ಲಾ ವಿರೋಧಿ ಪಕ್ಷಗಳೆಲ್ಲಾ ಒಂದು ಸೇರಿದ್ದಾರೆ...."

"ಅಲ್ಲಾ ಪಾಪ ಸಂಭಾವಿತ, ಸಂಧಾನಕ ಎಂದು ಹೆಸ್ರುಗೊಂಡಿದ್ರು...ಈಗ ಅವ್ರು ನಾಲಾಯಕ್ಕೂಂತ....'

"ಸರೀನ್ನು. ನಡೆವರೆಡಹದೆ ಕುಳಿತರೆಡಹುವರೆ? ಎಂತ ಕೇಳಿದ್ದಾನೆ ಒಬ್ಬ ಕವಿ...'

"ನಿಮ್ಮ ಕವಿಗಳನ್ನು ಒಲೆಗೆ ಹಾಕಿ. ಅವ್ರು ಹಾಗೂ ಹೇಳ್ತಾರೆ- ಹೀಗೂ ಹೇಳ್ತಾರೆ ತಾವು ಬರಿಯೋದೆಲ್ಲಾ ಸರಿ. ಮಿಕ್ಕವರನ್ನೋದೆಲ್ಲಾ ತಪ್ಪೂಂತ ಅಂತಾರೆ ಅವ್ರು...."

'ಒಳ್ಳೆ ವಿರೋಧಿ ಪಕ್ಷದವರಂತೆ ಆಡ್ತಾ ಇದ್ದೀಯಲ್ಲಾ...?

'ವಿರೋಧಿ ಸದಸ್ಯರಲ್ಲ. ನಿಮ್ಮ ಭಿನ್ನಾಪ್ರಾಯದ ಟೋಪಿಯವ್ರಂತೆ...'

"...ಓ, ಕೇರಳದ ೧೫ ಜನ ಕಾಂಗ್ರೆಸ್ ಎಂಮೆಲ್ಯೆಗಳಂತೆ..."

'ಅಷ್ಟು ಮಾತ್ರವಲ್ಲ, ನಿಮ್ಮ ಮೈಸೂರಿನ ಭಿನ್ನಾಭಿಪ್ರಾಯ ಗುಂಪಿನವರಂತೆ ಅನ್ನಿ...'

'ಏನೋ, ಆದ್ರೆ....ಆದ್ರೆ .. ಅದೆಲ್ಲಾ ಸರಿಯಲ್ಲಾನ್ನು'

'ಯಾಕೆ ಸರಿಯಲ್ಲ?'

'ಯಾಕೇಂದ್ರೆ...ಒಂದು ಪಕ್ಷವೆಲ್ಲಾ ಒಂದೇ ನೀತಿಯನ್ನ...'

"ಸಾಕು ಬಿಡೀಂದ್ರೆ...ನೀವು ಏನು ಮಾಡಿದ್ರೂ ನಾನು ಸುಮ್ನೆ ಕೂತ್ಕೋಬೇಕೂಂತನ್ನೋದಲ್ಲ ನೀವು?"

"....ಒಂದು ರೀತಿ ಹಾಗೇನ್ನು"

"ನಂಗೂ ನಿಮ್ಗೂ ಕೂಡಿ ಬಾರ್ದಿದ್ರೆ...."

"ಓ ಅಸಹಕಾರ ಮಾಡಿದ್ರೆ ಸಂಸಾರ ನಡೀತದ?"

"ಮತ್ತೇನು ನಿಮ್ಮರುಳಿಗೆ ನಾನು ಕೊರಳು ಕೊಡಬೇಕೆಂತ?"

"ಬೇಡಾನ್ನ. ಇದೆಯಲ್ಲ, ನಮ್ಮಪ್ಪ-ನಿಮ್ಮಪ್ಪರ ಪೈಕಮಾಂಡು..."

"ಬೇಡದ್ದು ಬೇಡ. ಅಂತಹ ಪರಿಸ್ಥಿತಿ"

"ಅದ್ಕಂತ ಬೇರಾಗಿರೋಬೇಕೂಂತ ನೀನನ್ನೋದು?"

"ಶಾಂತಂ ಪಾಪಂ. ಶಾಂತಂ ಪಾಪಂ .... ಅಂಥ ಪರಿಸ್ಥಿತಿ ಬರಬಾರ್ದು. ಅದಿರ್ಲಿ... ಇಲ್ಲಿ ನೋಡಿ, ಶಾಸ್ತ್ರಿಯವ್ರ ಮೇಲೆ..."

'ಲಾಲಬಹದೂರ್ ಅಲ್ವೇ?'

'ಹೌದು ಹೌದು.... ಈಗ ತಾನೇ ಮೂರು ತಿಂಗಳಾಯ್ತಷ್ಟೆ..."

'ಅದೇನು ಮಹಾ? ಹುಟ್ಟಿದ ಮೂರನೇ ದಿನ ಕೃಷ್ಣನ್ನ ಕೊಲ್ಲೋಕೆ ಪೂತನಿ ಬರ್ಲಿಲ್ವೆ?"

'ಸಾಕು ಬಿಡೀಂದ್ರೆ....ನಿಮ್ಮ ವಿನೋದ....'

"ವಿನೋದವೇನು ಬಂತು? ಇದ್ದದ್ದನ್ನ ಅಂದ್ರೆ..."

"ಅಲ್ಲಾ ಶಾಸ್ತ್ರಿಯವ್ರು 'ಸಂಧಾನ' ಕೋಳದಲ್ಲಿ ಬಿದ್ದುಹೋಯ್ತು. ಇನ್ನು ಕೇರಳದಲ್ಲಿ ಸಂಭಾವಿತತನ..."

"ಅದೆಲ್ಲಾ ಏನಾಗುತ್ತೆ ಬಿಡು. ಮೊನ್ನೆ ನಿನ್ನ ಕೃಷ್ಣ ಸುಮ್ನೆ ಬಿಟ್ನೆ?

"ಅದು ಸರೀನ್ನಿ. ಸದ್ಯ ವಿರೋಧಿ ಪಕ್ಷದವ್ರು ಮಾತ್ರ ಎದ್ದು ನಿಂತಿದ್ದಾರೆ,"

"ಗುಬ್ಬೀ ಮೇಲೆ ಬ್ರಹ್ಮಾಸ್ತ್ರ ಎಸೆಯೋಕೆ ಉಳಿದವ್ರೂ ಸಿದ್ಧರಾಗುತ್ತಾರೇಂತ...."

"ಯಾರು? ಮುರಾರ್ಜಿ ಭಾಯಿ....ಅವರ ಜಾತಕ ಬೀ ನೆಟ್ಟಗಾಗಬೇಕಾದ್ರೆ ಇನ್ನೂ ತುಸ ಕಾಲ ಹಿಡಿಯುತ್ತಂತೆ".

"ಯಾರೇ ಇದನ್ನೆಲ್ಲಾ ಅಂದದ್ದು?"

"ಯಾರು ಯಾಕೆ ಅಂತಾರೆ? ಪತ್ರಿಕೆಗಳು ಸಾರ್ತಾವಲ್ಲ...."

"ಹ್ಹೂಂ...ತಾತೂ ಪತ್ರಿಕೆಯವರಿಗೆಲ್ಲಾ ಇದೇ ಕೆಲ್ಸ"

"ಅದೇನೇ ಇದ್ರೂ ಇಲಿಯೋಡದೆ ಹುಲಿಯೋಡಿತೂಂತ ಅನ್ನೋದಿಲ್ಲಾ ಅವ್ರೂಂತ ನೀವೇ ಒಮ್ಮೆ ಅಂದಿದ್ರಲ್ಲ...."

"ನೀನು ಯಾವಾಗ ಕೇಳಿದ್ಯೋ, ನಾನ್ಯಾವಾಗ ಅಂದಿದ್ನೋ ನೋಡು, ಒಳಗಡೆ ಇಲಿಯೋಡಿತೂಂತ ತೋರುತ್ತೆ..."

"...ಹ್ಹಾಂ....ಅಯ್ಯಯ್ಯೋ ವಿನಾಯಕನ ಚಕ್ಕುಲಿ ಮುಚ್ಚಿಟ್ಟಿದ್ರೆ..."

"ನಾ ಹೋಯ್ತು ಬಿಡು. ಅದನ್ನ ವಾಹನ ಎತ್ತಿ ಬಿಟ್ಟ್ತಂತ ತೋರುತ್ತೆ..."

"...ಹೌದೂಂದ್ರೆ...."

'ನಮ್ಮೆಲ್ಲ ಹಾಗೇ ಅಲ್ವೆ? ಕೊಡಬೇಕಾದ್ದನ್ನು ಮೊದ್ಲು ಕೊಟ್ಟು ಮಾತಿಗೆ ಕೂತು...'

'ಮೊದ್ಲು ಕೊಡಬೇಕಾದ್ದೆ...ಅದಂತೂ ಇಲ್ಲಾಂತಾಯ್ತಲ್ಲ ಇನ್ನು ಕೊನೆಗೆ ಕೊಡಬೇಕಾದನ್ನಾದ್ರೂ ತೆಗೆದುಕೊಳ್ಳಿ...'

'ಚಕ್ಕುಲಿ ಸಿಗದಿದ್ರೂ ಅದ್ರ ಪರಿಮಳ ಸಿಕ್ತು ಬಿಡು. ಅದನ್ನ ಯಾರೂ ಎತ್ತಿ ಹಾಕೋ ಹಾಗಿಲ್ಲ'

'ಅಷ್ಟು ವಿಶ್ವಾಸವಿದ್ರೆ ಸಾಕು ಸಧ್ಯ ..'

'ಅದೇ ವಿಶ್ವಾಸ ನೋಡು ಇದು ಬ್ರಹ್ಮಾಸ್ತ್ರ ಎದುರಿಸೋಕೆ ಶಾಸ್ತ್ರಿಗಿರುವುದು ...'

'ಪಾಪ, ನೀವೊಬ್ರು ದೊಡ್ಡ ಶಾಸ್ತ್ರಿ'

'ಹೌದು....'

'ನನ್ಗೆ ಮಾತ್ರ...'

'ಸಾಕು, ಕಣೇ ಸಾಕು. ಯಾರ್ಯಾರಿಗೆ ಶಾಸ್ತ್ರ ಹೇಳೋಕೆ ನಾನ್ಯಾಕೆ ಹೋಗ್ಬೇಕು...?'

"ಹಾಗೇ ಒಳ್ಳೆಯವ್ರು ನೀವು....'

'ಇಂದಾದ್ರೂ ಗೊತ್ತಾಯ್ತಲ್ಲ.... ಹ್ಹಾ..'

— ಗೋರಾ

Edited, Printed & Published by K. H.Shetty, at the Navayuga Press, Udipi, S. India

ನವಯುಗ

ಸೆಪ್ಟಂಬರ, ೨೪, ೬೪

ಸಂಪುಟ ೪೪

ಸಂಚಿಕೆ ೪

Navayuga nationalist kannada weekly

೧೦ ಪೈಸೆ

ನಮ್ಮ - ನಮ್ಮವರು

ವಿ. ಕೆ. ಕೃಷ್ಣ ಮೆನನ್

ದಿವಂಗತ ಪ್ರಧಾನಿ ನೆಹರೂರವರ ಧೋರಣೆ ಹಾಗೂ ಧ್ಯೇಯಗಳ ಕುರಿತು ಅಧಿಕಾರ ವಾಣಿಯಿಂದ ಮಾತನಾಡ ಬಲ್ಲ ಕೆಲವೇ ವ್ಯಕ್ತಿಗಳಲ್ಲಿ ಹಿಂದಿನ ಸಂರಕ್ಷಣ ಮಂತ್ರಿ ಕೃಷ್ಣಮೆನನ್ನರೂ ಒಬ್ಬರು. ಸ್ವಾತಂತ್ರ್ಯದ ದಿನಗಳ ಬಳಿಕವಂತೂ ಅವರ ಮತ್ತು ನೆಹರೂರವರ ಸಂಪರ್ಕ ಬಹಳ ನಿಕಟವಾಗಿ ಬೆಳೆದುಬಂತು. ನೆಹರೂರವರು ಅತ್ಯಂತ ವಿಶ್ವಾಸವಿರಿಸಿಕೊಂಡಿದ್ದ ವ್ಯಕ್ತಿಗಳಲ್ಲಿ ಶ್ರೀ ಮೆನನ್ನರೂ ಒಬ್ಬರು.

ವೃತ್ತಿಯಲ್ಲಿ ವಕೀಲರಾದ ಮೆನನ್ನರು ಅಪ್ರತಿಮ ಪ್ರತ್ಯುತ್ಪನ್ನಮತಿಗಳು. ಅವರ ವಾಗ್ವೈಖರಿಯ ಅನುಭವ ವಿಶ್ವದ ಎಲ್ಲಾ ರಾಷ್ಟ್ರಗಳಿಗೆ, ಅವರು ವಿಶ್ವಸಂಸ್ಥೆಯಲ್ಲಿ ಕಾಶ್ಮೀರ ಸಮಸ್ಯೆಯ ಕುರಿತು ಮಾಡಿದ ಸುದೀರ್ಘ ಭಾಷಣಗಳಿಂದ ವಿದಿತವಾಯಿತು. ಕಾಶ್ಮೀರ ಸಮಸ್ಯೆಯ ಕುರಿತು ಆವರಷ್ಟು ಆಳವಾಗಿ ಅಭ್ಯಸಿಸಿದವರು ಭಾರತದ ಅಭಿಪ್ರಾಯವನ್ನು ಖಂಡತುಂಡವಾಗಿ ಮಂಡಿಸಿದವರು ಅವರೊಬ್ಬರೇ. ಕಟು ಸತ್ಯವನ್ನೇ ಕಟುವಾಗಿ ನುಡಿಯುವ ಮೆನನ್ನರ ಸ್ವಭಾವ ಪಾಶ್ಚಾತ್ಯ ರಾಷ್ಟ್ರಗಳ ಗುಂಪಿನಲ್ಲಿ ಅವರನ್ನೊಬ್ಬ ಸಮಸ್ಯಾತ್ಮಕ ವ್ಯಕ್ತಿಯನ್ನಾಗಿ ಮಾಡಿತು. ಅವರು ಕಮ್ಯುನಿಸ್ಟರೆಂದು ಆರೋಪಿಸುವವರು ಕಾಂಗ್ರೆಸಿನಲ್ಲೂ ಬಹಳ ಮಂದಿ ಈಗಲೂ ಇದ್ದಾರೆ. ವಿದೇಶಗಳಲ್ಲಿ ಭಾರತದ ಕುರಿತು ಸದಭಿಪ್ರಾಯ ಮೂಡುವಂತೆ ಅವರು ಬಹಳವಾಗಿ ಯತ್ನಿಸಿದ್ದಾರೆ.

೧೯೬೨ರಲ್ಲಿ ದೇಶದ ಉತ್ತರ ಗಡಿಯಲ್ಲಿ ಚೀನೀ ಆಕ್ರಮಣವಾದಾಗ, ಸಂರಕ್ಷಣ ಮಂತ್ರಿಯಾಗಿದ್ದ ಮೆನನ್ನರ ಕುರಿತು ಭಾರೀ ವಿರೋಧಾಭಿಪ್ರಾಯ ಮೂಡಿ ಬಂತು. ಅವರು ರಾಜೀನಾಮೆ ಕೊಡಬೇಕೆಂಬ ಕೇಳಿಕೆಗೆ ಕೊನೆಗೂ ಬೆಲೆಬಂದು, ಅವರು ಮಂತ್ರಿ ಪದದಿಂದ ನಿರ್ಗಮಿಸಿದರು. ಆದರೂ, ಮೆನನ್ನರು ಇಂದು ಒಬ್ಬ ಪ್ರಭಾವೀ ಪಾರ್ಲಿಮೆಂಟ್ ಸದಸ್ಯರಾಗಿದ್ದಾರೆ.

ಮೊನ್ನೆಯ ಲೋಕ ಸಭೆಯ ಅಧಿವೇಶನದಲ್ಲಿ ವಿರೋಧಿ ಪಕ್ಷಗಳು ಮಂಡಿಸಿದ ಅವಿಶ್ವಾಸ ನಿರ್ಣಯವನ್ನು ಅವರು ನೆರಳಿನೊಂದಿಗೆ ಗುದ್ದಾಟ'ವೆಂದು ಬಹುಮಾರ್ಮಿಕವಾಗಿ ಹೇಳಿದ್ದಾರೆ. ವಿರೋಧಿ ಪಕ್ಷಗಳ ಟೀಕೆಗಳು ಹುರುಳಿಲ್ಲದವುಗಳು. ಸರಕಾರದ ಆಡಳಿತದಲ್ಲಿ ಕುಂದುಕೊರತೆಗಳು ಹೇಳುವಂತಹ ಮಟ್ಟದಲ್ಲಿಲ್ಲ ಎಂದು ಅವರು ನುಡಿದು, ದಿವಂಗತ ನೆಹರೂರವರ ಧೋರಣೆಗಳನ್ನು ಸಮರ್ಥಿಸಿ ವಿರೋಧಿಗಳ ಬಾಯಿ ಮುಚ್ಚಿಸಿದ್ದಾರೆ. ಅವರಂತಹ ಸದಸ್ಯರಿಂದ ಕಾಂಗ್ರೆಸಿಗೆ ಲೋಕ ಸಭೆಗೆ ಆಳುವ ಪಕ್ಷಕ್ಕೆ ಬೆಲೆ ಹೆಚ್ಚುತ್ತದೆ.



ಎಡ್ತರೆ ಮಂಜಯ್ಯ ಶೆಟ್ಟರು

ದೇಶದಲ್ಲಿ ಜರಗಿದ ೧೯೫೨ರ ಮೊದಲ ಚುನಾವಣೆಯಿಂದಲೂ, ಇಂದಿನ ವರೆಗೆ ಶಾಸನ ಸಭೆಯ ಸದಸ್ಯರಾಗಿ ಬಿಡದೆ ಆರಿಸಿ ಬಂದ ನಮ್ಮ ಜಿಲ್ಲೆಯ ಕಾಂಗ್ರೆಸ್ ಶಾಸಕರು ಶ್ರೀ ಎಡ್ತರೆ ಮಂಜಯ್ಯ ಶೆಟ್ಟರು. ಮೂರು ಮಹಾ ಚುನಾವಣೆಗಳಲ್ಲಿ, ಅವರು ಅತ್ಯಧಿಕ ಬಹುಮತದಿಂದ ಆರಿಸಿ ಬಂದು, ಜನತೆಯ ನಿಜವಾದ ಪ್ರತಿನಿಧಿ ಎನಿಸಿದ್ದಾರೆ. ೧೯೬೭ರ ಚುನಾವಣೆಯಲ್ಲಿ ಅವರು ಬೈಂದೂರು ಮತದಾರ ಕ್ಷೇತ್ರದಿಂದ ಅವಿರೋಧವಾಗಿ ಆರಿಸಿ ಬಂದರು. ಹೀಗೆ ಜನತೆಯ ವಿಶ್ವಾಸವನ್ನು ಪಡೆದುಕೊಂಡು ಬಂದ ವ್ಯಕ್ತಿಗಳು ಬಹಳ ಜನರಿಲ್ಲ.

ಶ್ರೀ ಎಡ್ತರೆಯವರ ಸ್ವಭಾವವೇ ಅವರನ್ನು ಇಷ್ಟು ಜನಪ್ರಿಯರನ್ನಾಗಿ ಮಾಡಿದೆ. ಜಿಲ್ಲೆಯ ಸುಪ್ರಸಿದ್ಧ ಎಡ್ತರೆ ಮನೆತನದಲ್ಲಿ ಹುಟ್ಟಿದ ಶ್ರೀ ಶೆಟ್ಟರು ವೃತ್ತಿಯಲ್ಲಿ ವಕೀಲರು. ಕುಂದಾಪುರ ತಾಲೂಕಿನ ಜನಜೀವನದಲ್ಲಿ ಅವರು ಹಾಸುಹೊಕ್ಕಾಗಿದ್ದಾರೆ. ಅವರದು ಸೌಮ್ಯ ಸ್ವಭಾವ. ಹಿತಮಿತವಾದ ಮಾತು, ಸದ್ದುಗದ್ದಲ ಮಾಡದೆ; ಶಾಂತವಾಗಿ ಕಾರ್ಯ ನಿರ್ವಹಿಸುವ ಪ್ರವೃತ್ತಿ ಅವರದು. ಅವರು ಒಮ್ಮೆ ಕುಂದಾಪುರದ ಯಕ್ಷಗಾನ ಕಾರ್ಯಕ್ರಮದಲ್ಲಿ 'ಧರ್ಮರಾಯ'ನ ಪಾತ್ರ ವಹಿಸಿದುದರ ಕುರಿತು ಒಬ್ಬರು ಬರೆಯುತ್ತಾ ಆ ಪಾತ್ರ ಅವರಿಗೆ ಹೇಳಿಸಿದುದು ಎಂದು ಹೇಳಿ, ಅವರಸ್ವಭಾವ'ಧರ್ಮರಾಯ'ನದು ಎಂದಿದ್ದರು. 'ಅಜಾತ ಶತ್ರು'ಗಳಾದ ಎಡ್ತರೆಯವರು ಕ್ರಿಯಾಶಾಲಿ ಶಾಸಕರು. ಅವರು ಶಾಸನ ಸಭೆಯಲ್ಲಿ ಹೆಚ್ಚು ಮಾತಾಡುವವರಲ್ಲ. ಆದರೆ ಕಾರ್ಯ ಸಾಧಕರು. ಸೌಮ್ಯಸ್ವಭಾವಕ್ಕೆ ಅವರು ಹೆಸರಾದರೂ ಅವರು ದಾಕ್ಷಿಣ್ಯಕ್ಕೆ ಬಲಿಬೀಳುವವರಲ್ಲ. ಎಲ್ಲರಿಗೆ ಸರಿಯೆನಿಸದ ವಿಚಾರಗಳನ್ನು ಅವರು ಖಂಡತುಂಡವಾಗಿ ಖಂಡಿಸಲೂ ಹಿಂಜರಿಯುವುದಿಲ್ಲ.

ಜಿಲ್ಲೆಯ ಹಲವಾರು ರಂಗಗಳಲ್ಲಿ ಅವರು ದುಡಿದಿದ್ದಾರೆ. ಉಡುಪಿಯ ಎಂ. ಜಿ. ಎಂ. ಕಾಲೇಜಿನ ಟ್ರಸ್ಟಿಗಳಾಗಿ ಅವರು ದುಡಿದಿದ್ದರು. ಕುಂದಾಪುರದ ವಿದ್ಯಾಸಂಘಗಳಿಗೂ ಅವರಿಗೂ ನಿಕಟ ಸಂಬಂಧ. ಪ್ರಕೃತ ಭಂಡಾರ್ಕರ್ಸ್ ಕಾಲೇಜಿನ ಟ್ರಸ್ಟಿಗಳಾಗಿ ಅವರು ಸೇವೆ ಸಲ್ಲಿಸುತ್ತಿದ್ದಾರೆ. ಜನಪ್ರಿಯತೆಯನ್ನು ಗಳಿಸಿರುವ ಶ್ರೀ ಎಡ್ತರೆಯವರು ಜನಹಿತ ಕಾರ್ಯಗಳಲ್ಲಿ ಇನ್ನೂ ಯಶಸ್ಸು ಪಡೆಯಲೆಂದು ನಾವು ಹಾರೈಸುತ್ತೇವೆ.

ನವಯುಗದ ವಾಚಕರಿಗೆ

ಇನ್ನೊಂದು ವಿಶೇಷ ಸಂಚಿಕೆ—

ಎಂದಿನಂತೆ ಪ್ರಕಟವಾಗುವ

ದೀಪಾವಳಿ ವಿಶೇಷಾಂಕ

ವೈವಿಧ್ಯಪೂರ್ಣ ಲೇಖನ, ಕವನ, ಕಥೆಗಳೊಂದಿಗೆ

ತಾ. 29-10-64ಕ್ಕೆ ಪ್ರಕಟವಾಗುವುದು.

ಕರ್ನಾಟಕದ ಎಲ್ಲಾ ಕಡೆಗಳಲ್ಲೂ ಮುಂಬಯಿಯಲ್ಲೂ ವಿಶೇಷ ಪ್ರಸಾರವಾಗುವ ಈ ಸಂಚಿಕೆಯು

ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ದರಗಳಿಗೆ ಬರೆಯಿರಿ:

ಮೆನೇಜರ್, ನವಯುಗ, ಉಡುಪಿ.

ಚಿಕ್ಕ—ಚೊಕ್ಕ ಲೇಖನಗಳನ್ನು ಆಮಂತ್ರಿಸಲಾಗಿದೆ.



ಸುಖ - ದುಃಖ

ಸಂಜೆ ಕಾಲೇಜು ಬೇಕು

ಇತ್ತೀಚೆಗೆ ಮೈಸೂರ ವಿಶ್ವವಿದ್ಯಾಲಯದವರು ತಮ್ಮ ಕ್ಷೇತ್ರದಲ್ಲಿ ಸಂಜೆ ಕಾಲೇಜುಗಳನ್ನು ತೆರೆಯಲು ಅನುಮತಿ ನೀಡಿರುವುದು ಸ್ತುತ್ಯಾರ್ಹ ನಿರ್ಣಯ.

ದಿನೇ ದಿನೇ ಬೆಳೆದು ಬರುತ್ತಿರುವ, ಶಿಕ್ಷಣ ಸಂಸ್ಥೆಗಳಿಗೆ ಹೆಸರಾದ ಉಡುಪಿ ನಗರದಲ್ಲಿ ಇಂತಹ ಒಂದು ಕಾಲೇಜು ಅತ್ಯಗತ್ಯವಿದೆ. ಸುಶಿಕ್ಷಿತ ಹಾಗೂ ಉತ್ಸಾಹಿಗಳು ಮುಂದೆ ಬಂದು ಈ ಕೊರತೆಯನ್ನು ಹೋಗಲಾಡಿಸುವರೆಂದು ನಂಬಬಹುದೆ?

— ತ್ರಿವಿಕ್ರಮ ಆಚಾರ್ಯ.

ಬಸ್ ಸೌಕರ್ಯ

ಉಡುಪಿಯಿಂದ ಕೊಳಲಗಿರಿಗಾಗಿ ಪೆರ್ಡೂರಿಗೆ ಪ್ರತಿದಿನ ಮಧ್ಯಾಹ್ನದವರೆಗೆ ಮೂರು ಸರ್ವಿಸುಗಳು ಓಡಾಡುವ ವ್ಯವಸ್ಥೆ ಮಾಡಿದುದರಿಂದ ಬಸ್ಸು ಮಾರ್ಗದಿಂದ ಬಹಳ ದೂರವಿದ್ದ ಕೊಳಲಗಿರಿ, ಕೀಳಿಂಜೆ ಕುಕ್ಕೆಹಳ್ಳಿ ಮೊದಲಾದ ಗ್ರಾಮಾಂತರ ಪ್ರದೇಶದ ಜನತೆಗೆ ಹೇಳಲಾರದಷ್ಟು ಪ್ರಯೋಜನ ದೊರೆತಿದೆ. ಆದರೆ, ಮಧ್ಯಾಹ್ನಾನಂತರದಲ್ಲಿ ಸರ್ವಿಸು ಇಲ್ಲವಾದುದರಿಂದ ತುಸು ಸೌಕರ್ಯ ಕಡಿಮೆಯಾಗುವಂತಾಗಿದೆ. ಆದುದರಿಂದ ಅಪರಾಹ್ನದಲ್ಲಿಯೂ ಎರಡು-ಮೂರು ಸರ್ವಿಸುಗಳನ್ನು ಒದಗಿಸುವುದರಿಂದ ಈ ಪ್ರದೇಶದ ಜನರಿಗೆ ಮತ್ತಷ್ಟು ಪ್ರಯೋಜನವಾಗುತ್ತದೆ. ಹಾಗೆಯೇ ಈ ಮಾರ್ಗವನ್ನು ಮಳೆಗಾಲದಲ್ಲಿಯೂ ಬಸ್ಸು ಸಂಚಾರಕ್ಕೆ ಸಂಪೂರ್ಣ ಯೋಗ್ಯವನ್ನಾಗಿ ಮಾಡುವುದರ ಕಡೆಗೆ ಪೈವೇ ಡಿಪಾರ್ಟ್‌ಮೆಂಟ್ ತೀವ್ರ ಗಮನ ಹರಿಸಬೇಕೆಂದು ನಮ್ಮ ಪ್ರಾರ್ಥನೆ.

—ಲೂಯಿಸ್ ಡಿ'ಸೋಜ.

ನೆಹರೂ ರೂಪಾಯಿ

ನಿಚ್ಚಿನ ಪ್ರಧಾನಿಯಾಗಿದ್ದ ದಿ| ನೆಹರುರವರ ಚಿತ್ರದಿಂದ ಕೂಡಿದ ಪೋಸ್ಟೇಜ್ ಸ್ಟಾಂಪುಗಳು ಹೊರಡುತ್ತಿವೆ. ಹೀಗೆಯೇ ಇನ್ನೂ ಅನೇಕರ ಹೆಸರಿನಲ್ಲಿ ಅಂಚೆ ಚೀಟಿಯನ್ನು ಹೊರಡಿಸುವುದಿಂದು ಭಾರತೀಯ ಅಂಚೆ ತಂತಿ ಶಾಖೆಯ ಪರಂಪರೆಯಾಗಿ ಬಂದಿದೆ. ಬರಲಿ. ಆದರೆ, ಪ್ರಜಾಸತ್ತಾತ್ಮಕವಾದ ಒಂದು ದೇಶದಲ್ಲಿ ಒಬ್ಬನ ಮುದ್ರೆಯೊತ್ತಿ ನಾಣ್ಯಗಳನ್ನು ಚಲಾವಣೆಗೆ ತರುವುದು ಸೂಕ್ತವೆನ್ನುವಂತಿಲ್ಲ. ರಾಜಮಹಾರಾಜರ ಕಾಲ ಭಾರತದಲ್ಲಿ ಗತಕಾಲವಾಯ್ತು. ಆದುದರಿಂದ ಇಂತಹ ಸಂಪ್ರದಾಯವನ್ನು ಪ್ರಾರಂಭಿಸುವಾಗ ಮುಂದಿನ ಪರಿಣಾಮವನ್ನು ಗಂಭೀರವಾಗಿ ಪರ್ಯಾಲೋಚಿಸಬೇಕು. ದಿವಂಗತ ಪ್ರಧಾನಿ ನೆಹರುರವರಿಗೆ ನಾವು ಸಲ್ಲಿಸುವ ಗೌರವ ಇಂತಹುದಾಗ ಬಾರದು. ಪ್ರಜಾತತ್ವವಾದಿ ನೆಹರುರವರ ಆತ್ಮಕ್ಕೂ ನಾವು ಹೀಗೆ ಮಾಡುವುದರಿಂದ ತೃಪ್ತಿಯಾಗದು. ನೆಹರು ಮೇಲಿನ ಪ್ರೀತಿಯನ್ನು ನಾವು ಬೇರೆ ರೀತಿಯಿಂದ ಪ್ರದರ್ಶಿಸೋಣ. ಅವರ ತತ್ವಗಳನ್ನೇ ನೆಮ್ಮಿ ಅವನ್ನು ಕಾರ್ಯರೂಪದಲ್ಲಿ ತರುವ ದೃಢ ಪ್ರತಿಜ್ಞೆ ಮಾಡೋಣ. ವ್ಯಕ್ತಿ ಪೂಜೆಯನ್ನು ಪುರಸ್ಕರಿಸದೆ ರಾಷ್ಟ್ರ ಪೂಜೆಗೈಯ್ಯೋಣ. ಪಂಡಿತ ನೆಹರೂ ನಮಗೆ ಕಲಿಸಿದ ರಾಷ್ಟ್ರಭಕ್ತಿಯ ಪಾಠವನ್ನು ಮರೆಯದೆ ಮುಂದುವರಿಯೋಣ.

—ವಾದಿರಾಜ ಆಚಾರಿ; ಕೆ

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮುಂಗಡವಾಗಿಯೇ ಮುಗಿಯುವುದರಿಂದ ವಾರ್ತೆ, ನೋಟೀಸು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಲಡಖದ ಸೇನೆಯಲ್ಲಿ ಸೇವೆ ಸಲ್ಲಿಸಲು ಸ್ವೇಚ್ಛೆಯಿಂದ ಮುಂದಾದ ಒಬ್ಬ ಲಡಖಿ ತರುಣ.

ನವಯುಗ

ಸಂಪುಟ ೪೪	ಉಡುಪಿ	Vol 44
ಸಂಚಿಕೆ ೪	೨೪—೯—೧೯೬೪	No. 4

ಶಾಸ್ತ್ರಿಗಳ ದಿಗ್ವಿಜಯ

ಮೂರು ತಿಂಗಳ ಹರೆಯದ ಲಾಲಬಹದೂರ ಶಾಸ್ತ್ರಿಯವರ ಸರಕಾರದ ಮೇಲೆ ಮಂಡಿತವಾದ ಅವಿಶ್ವಾಸ ಗೊತ್ತುವಳಿಯು ಐದು ದಿನಗಳ ಕಾಲ ಲೋಕಸಭೆಯಲ್ಲಿ ಚರ್ಚಿತವಾಗಿ ಮತ್ತೆ ಪ್ರಚಂಡ ಬಹುಮತದಿಂದ ಬಿದ್ದು ಹೋಯಿತು. ಇದು ಆಶ್ಚರ್ಯದ ಸಂಗತಿಯಾಗಲಿಲ್ಲ. ಮತಗಣನೆಯಿಂದ ಹೊರಟ ಫಲಿತಾಂಶವೆಂದರೆ, ಕಾಂಗ್ರೆಸ್ ಪಕ್ಷದಲ್ಲಿ ಶಾಸ್ತ್ರಿಯವರು ವಿಶ್ವಾಸವನ್ನು ಗಳಿಸಿಕೊಂಡಿದ್ದಾರೆ ಎಂಬುದು. ವಿರೋಧೀ ಸದಸ್ಯರು ಸಮ್ಮಿಳಿತವಾದರೂ ಕಾಂಗ್ರೆಸಿಗರ ಸಂಖ್ಯೆಯನ್ನು ಮೀರುವುದು ನಮ್ಮ ಲೋಕಸಭೆಯಲ್ಲಿ ಇದುವರೆಗೂ ಸಾಧ್ಯವಾಗಲಿಲ್ಲ. ಗೃಹ ಮಂತ್ರಿ ನಂದಾ ಹೇಳುವಂತೆ ಇನ್ನು ಮುಂದೆ ಕೆಲವು ವರ್ಷಗಳವರೆಗೂ ವಿರೋಧಿ ಪಕ್ಷಗಳು ಸರಕಾರ ನಡೆಸುವ ಸ್ಥಿತಿಯನ್ನು ಹೊಂದುವುದು ಸಾಧ್ಯವಿಲ್ಲ. ಹಾಗಿರುವಾಗ ರಾಜಕೀಯ ದುರುದ್ದೇಶವನ್ನು ಸಾಧಿಸುವ ಇರಾದೆಯಿಂದ ವಿರೋಧಿ ಪಕ್ಷಗಳು ಇಟ್ಟ ಹೆಜ್ಜೆಯು ಅಕಾಲಿಕವಾದುದು; ವ್ಯರ್ಥವಾದುದು. ಈ ಸಂದರ್ಭದಲ್ಲಿ ಶಾಸ್ತ್ರಿ ಸರಕಾರದಿಂದ ಇಷ್ಟು ಅಲ್ಪಾವಧಿಯಲ್ಲಿ ಏನನ್ನೂ 'ನಿರೀಕ್ಷಿಸುವುದು' ಸಾಧ್ಯವಿಲ್ಲವೆಂದು ಅವಿಶ್ವಾಸ ಗೊತ್ತುವಳಿಯನ್ನು ಬೆಂಬಲಿಸದ ಸ್ವತಂತ್ರ ಪಕ್ಷದ ನಿಲುವೆಯು ಮೆಚ್ಚತಕ್ಕದ್ದು.

ವಿರೋಧಿ ಪಕ್ಷಗಳ ದೇಶದ ಆಹಾರ ಸಮಸ್ಯೆ ಮತ್ತು ಭ್ರಷ್ಟಾಚಾರದ ಮುಖ್ಯ ವಿಷಯಗಳನ್ನೆತ್ತಿ ಅವಿಶ್ವಾಸ ಸೂಚನೆಯನ್ನು ತಂದಿದ್ದುವು. ಈ ಎರಡೂ ನಿಟ್ಟಿನಲ್ಲಿ ಸರಕಾರವು ಉಚಿತ ಕ್ರಮಗಳನ್ನು ಕೈಗೊಂಡಿದೆ. ಆಹಾರದ ಉತ್ಪಾದನೆಯು ಹೆಚ್ಚಾಗುತ್ತ ಬಂದಿದ್ದರೂ ಅದಕ್ಕೆ ಕೈನೀಡುವ ಕೈಗಳೂ ಹೆಚ್ಚಾದುದರಿಂದ ಅಭಾವದ ಸ್ಥಿತಿ ತಲೆದೋರಿದ್ದು ನಿಜ. ಇದಕ್ಕಾಗಿ ದೀರ್ಘ ಮತ್ತು ಅಲ್ಪ ಕಾಲಾವಧಿಯ ಕ್ರಮಗಳನ್ನು ಸರಕಾರ ಕೈಕೊಂಡಿದೆ; ಕೈಕೊಳ್ಳುತ್ತಿದೆ. ವಿದೇಶಗಳಿಂದ ಖಾದ್ಯ ಪದಾರ್ಥಗಳನ್ನು ಆಯಾತ ಮಾಡುವುದು ಅನಪೇಕ್ಷಣೀಯವಾದರೂ ಅದನ್ನು ಕಾರ್ಯರೂಪಕ್ಕೆ ತರುತ್ತಿದೆ. ಅದಲ್ಲದೆ ಆಹಾರ ಧಾನ್ಯಗಳನ್ನು ಮುಕ್ತ ಪೇಟೆಗೆ ತರುವ ಕ್ರಮ ಕೈಗೊಳ್ಳುತ್ತಿದೆ. ಆಹಾರ ಧಾನ್ಯಗಳ ಮಾರಾಟದ ಕಾರ್ಪೊರೇಶನನ್ನು ರಚಿಸುವುದಾಗಿ ಘೋಷಿಸಿದೆ. ಇದಕ್ಕಿಂತ ಹೆಚ್ಚಿನ ಕಾರ್ಯ ಯಾರಿಂದಲೂ ಮಾಡಲಾಗದು. ಆಹಾರ ಧಾನ್ಯಗಳ ಅಭಾವವೆಂದೊಡನೆಯೇ ಅಲ್ಲೋಲಕಲ್ಲೋಲವುಂಟಾಗುವ ದೀರ್ಘಕಾಲದ ಸಮಸ್ಯೆಯ ಮೂಲವನ್ನು ತಿಳಿಯದೆ ಕೇವಲ ಒಂದೆರಡು ದಿನಗಳಲ್ಲಿ ಪರಿಹಾರ ಕಾಣುವ ಅಪೇಕ್ಷೆಯು ಕೇವಲ ಮೂರ್ಖತನ. ಹೀಗಾಗಿ ಸರಕಾರವು ದೇಶಾದ್ಯಂತ ಆಹಾರ ಸ್ಥಿತಿಯನ್ನು ಸುಧಾರಿಸುವ ದಿಕ್ಕಿನಲ್ಲಿ ಹೆಜ್ಜೆಯಿಟ್ಟಿದೆ. ಅದನ್ನು ಕಾರ್ಯಗತ ಮಾಡುವಲ್ಲಿ ಜನತೆಯ ಸಹಕಾರವೂ ಅಗತ್ಯ. ಇಲ್ಲದಿದ್ದರೆ ಯಾವ ಸರಕಾರ ಬಂದರೂ ಆಹಾರ ಸಮಸ್ಯೆಯನ್ನು ಬಗೆಹರಿಸುವುದು ಕಷ್ಟ. ಆದ್ದರಿಂದ ಸರಕಾರದ ಬೆನ್ನೆಲುಬಾಗಿ ನಿಲ್ಲುವ ಹೊಣೆ ಜನತೆಯದು. ವ್ಯಾಪಾರಿಗಳ ಸ್ವಾರ್ಥ, ಲಾಭಕೋರತನ, ಕಾಳಸಂತೆ, ದಾಸ್ತಾನು ಇವೆಲ್ಲವೂ ನಿವಾರಣೆಯಾಗದೆ ಯಾವ ಸರಕಾರ

ದಿಂದ ಅದನ್ನು ಪಡೆಯಲು ಸಾಧ್ಯವಿಲ್ಲ. ಸಂಯಮ— ಮುಷ್ಕರ— ಕರತಾಳಗಳನ್ನು ಆಚರಿಸಿದೊಡನೆಯೇ ಅವು ಯಾರಿಗೂ ದೊರೆಯಲಾರವು. ಇದು ಜಟಿಲ ಸಮಸ್ಯೆ ನಿಜ. ಸಮಸ್ಯೆಯನ್ನು ಎದುರಿಸುವಲ್ಲಿ ಶಾಸ್ತ್ರಿ ಸರಕಾರ ದಿಟ್ಟತನ ತೋರಿಸಿದೆ. ಇದರಲ್ಲಿ ಸಂಪೂರ್ಣ ಯಶಸ್ವಿಯಾಗುವಂತೆ ಮಾಡುವ ಭಾರದಲ್ಲಿ ನಾಗರಿಕರ ಪಾಲೂ ಇದೆಯೆಂಬುದನ್ನು ಮರೆಯಬಾರದು.

ಭ್ರಷ್ಟಾಚಾರದ ಸಂಬಂಧದಲ್ಲಿ ಗೃಹ ಮಂತ್ರಿ ನಂದಾ ಪರಿಣಾಮಕರವಾಗಿ ಉತ್ತರಿಸಿದ್ದಾರೆ. ಶಾಸ್ತ್ರಿಯವರೂ ಅವರನ್ನು ಸಮರ್ಥಿಸಿದ್ದಾರೆ. ಈ ಆರೋಪಕ್ಕೆ ಒಳಗಾದ ಮಂತ್ರಿಯು ರಾಜೀನಾಮೆ ನೀಡಬೇಕು. ಯಾರ ಮೇಲೇ ಆಗಲಿ ಹೊರಿಸಿದ ಆರೋಪದಲ್ಲಿ ಸತ್ಯತೆ ಕಂಡು ಬಂದರೆ, ವಿಚಾರಣೆಯನ್ನು ಖಂಡಿತಕ್ಕೂ ನಡೆಸುತ್ತೇವೆ ಎಂದು ಭರವಸೆ ದೊರೆತಿದೆ. ಮಂತ್ರಿಗಳ ನಡಾವಳಿಗೆ ಸಂಬಂಧಪಟ್ಟ ನಿಯಮಗಳು ಈಗಾಗಲೇ ಸಿದ್ಧವಾಗಿವೆ. ಇದಕ್ಕೂ ಮಿಗಿಲಾಗಿ ಭ್ರಷ್ಟಾಚಾರದ ಹೆಚ್ಚಿನ ಪ್ರಸಂಗಗಳಿಗೆ ಸರಕಾರದ ಕಾರ್ಯ ವಿಧಾನದಲ್ಲಾಗುವ ವಿಳಂಬವೇ ಕಾರಣವಾದುದರಿಂದ ಇದನ್ನು ಸರಿಪಡಿಸಲು ಸಾಧ್ಯವಾಗುವ ಕ್ರಮ ಕೈಗೊಳ್ಳುವ ಪ್ರಸ್ತಾಪವನ್ನೂ ನಂದಾ ಮಾಡಿದ್ದಾರೆ. ದಿ|| ಪ್ರಧಾನಿ ಜವಾಹರಲಾಲರು ಇಟ್ಟ ಹೆಜ್ಜೆಯಲ್ಲೇ ಪರಿಸ್ಥಿತಿಗೆ ಅವಶ್ಯವಾದ ಬದಲಾವಣೆಯೊಂದಿಗೆ ತನ್ನ ಸರಕಾರ ಮುಂದುವರಿಯುವುದೆಂದು ಶಾಸ್ತ್ರಿ ಮತ್ತೊಮ್ಮೆ ವಿಶ್ವಸಿತ್ತಿದ್ದಾರೆ. ಶಾಸ್ತ್ರೀರ ಚೀನಾಗಳ ಬಗ್ಗೆ ಭಾರತೀಯ ನೀತಿಯು ನಿಶ್ಚಲವಾಗಿಯೇ ಇದೆಯೆಂಬುದನ್ನವರು ಮಾರ್ಮಿಕವಾಗಿ ಎತ್ತಿ ಹೇಳಿದ್ದಾರೆ. ಇವೆಲ್ಲವುಗಳಿಂದ ಶಾಸ್ತ್ರಿ ಸರಕಾರವು ಯೋಗ್ಯವಾಗಿ ಆಡಳಿತೆಯನ್ನು ನಿರ್ವಹಿಸುವುದೆಂದು ನಂಬುವುದು ಸಾಧ್ಯವಾಗುವುದು.

ಈ ಚರ್ಚೆಯಿಂದ ಒಂದು ಮಹತ್ತರವಾದ ವಿಚಾರ ಪ್ರಕಟವಾಗಿದೆ. ಶಾಸ್ತ್ರಿ-ನಂದಾರ ನಡುವೆ ಭಿನ್ನಾಭಿಪ್ರಾಯ ಮೂಡಿದೆಯೆಂದು ಪ್ರಚಾರ ಮಾಡಲಾಗಿತ್ತು. ಆದರೆ, ಇದೀಗ ಸಂಪೂರ್ಣ ಸುಳ್ಳೆಂದು ಸಿದ್ಧವಾಗಿದೆ. ಶಾಸ್ತ್ರಿ- ನಂದಾ—ಟಿ. ಟಿ. ಕೆ. ಯವರು ಅಭೇದ್ಯ ಕೋಟೆಯೊಂದನ್ನು ನಿರ್ಮಿಸಿದ್ದಾರೆ. ಆಡಳಿತೆಯಲ್ಲಿ ದಕ್ಷತೆಯನ್ನು ತಂದು, ಪ್ರಗತಿ ಪಥದಲ್ಲಿ ದೇಶವನ್ನು ಮುನ್ನಡೆಸುವ ಸೂತ್ರಧಾರಿತ್ರಯರಾಗಿದ್ದಾರೆ. ಪ್ರಜಾಸತ್ತಾತ್ಮಕ ಸಮಾಜವಾದೀ ರಾಷ್ಟ್ರವನ್ನಾಗಿ ಭಾರತ

ವನ್ನು ಕಟ್ಟುವಲ್ಲಿ ಶಾಸ್ತ್ರಿ ಸರಕಾರ ಎದೆಗೆಡದೆ ಸಿದ್ಧಿಯತ್ತ ಧಾವಿಸುತ್ತಿದೆ ಎಂದು ವಿಶ್ವಾಸವಿಡಬಹುದು. ವಿರೋಧಿಗಳ ವಿರೋಧವು ಕೇವಲ ವಿರೋಧಕ್ಕಾಗಿ ಮಾತ್ರವೆಂದೂ ಬಹಿರಂಗವಾಗುವುದು.

ವಚನ ಸುಧೆ

ಅಂಧಂ ತಮಃ ಪ್ರವಿಶಂತಿ ।
ಯೇ೭ವಿದ್ಯಾಮುಪಾಸತೇ ॥
(ಈಶೋಪನಿಷತ್ತು ೯)

೦ ಅವಿದ್ಯೆಯನ್ನು ಸೇವಿಸಿಕೊಂಡಿರುವವರು ಅಂಧಕಾರವನ್ನು ಪ್ರವೇಶಿಸುತ್ತಾರೆ

೦೦ ಅಭ್ಯಾಸ ಮಾಡದ ಜನರು ಅವಿದ್ಯೆ—ಅಜ್ಞಾನಗಳಲ್ಲಿಯೇ ತೊಳಲಾಡುತ್ತಾರೆ, ಮುಂದಕ್ಕೆ ಅವರು ಅತೀವದುಃಖವನ್ನು ಅನುಭವಿಸಬೇಕಾಗುವುದು.

ದುಃಖವನ್ನು ದೂರಮಾಡಬೇಕಾದರೆ, ಎಲ್ಲರೂ ಸತ್ಯ ವಿದ್ಯೆಯನ್ನು ಕಲಿಯಬೇಕು.

ಅಯೂಬರಿಗೆ ಚಳಿಜ್ವರ

ಪಾಕಿಸ್ತಾನದಲ್ಲಿ ಅಧ್ಯಕ್ಷ ಚುನಾವಣೆಯು ಸಮೀಪ ಬರುತ್ತಿದೆ. ಆಳುವ ಪಕ್ಷದಿಂದ ಸದ್ಯದ ಅಧ್ಯಕ್ಷ ಅಯ್ಯೂಬಖಾನರು ಚುನಾವಣೆಗಳಲ್ಲಿ ಸ್ಪರ್ಧಿಸುತ್ತಾರೆ. ಇದುವರೆಗೆ ಅದ್ವಿತೀಯರಾಗಿದ್ದ ಅವರು ಈಗ ಚಳಿಜ್ವರ ಬಂದವರಂತೆ ಕುಸು ಗಾಬರಿಪಡುವಂತಾಗಿದೆ. ಪಾಕಿಸ್ತಾನದ ಜನಕ ಮತ್ತು ದೇಶದ ಮೊಟ್ಟಮೊದಲ ಗವರ್ನರ ಜನರಲರಾಗಿದ್ದ ದಿ| ಮಹಮದಾಲಿ ಜಿನ್ನಾರವರ ೭೦ ವರ್ಷದ ತಂಗಿ ಫಾತಿಮಾ ಜಿನ್ನಾ ಕೂಡ ಈ ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ವಿರೋಧೀ ಪಕ್ಷಗಳೆಲ್ಲವೂ ಒಂದಾಗಿ ಪಾಕಿಸ್ತಾನದ ಉತ್ಥಾನಕ್ಕಾಗಿ ತನ್ನನ್ನು ಸ್ಪರ್ಧಿಸಲು ಪ್ರೇರಿಸಿದ ಹೇಳಿದವೆಂದೂ ಆ ಕಾರಣದಿಂದ ತಾನು ಅಧ್ಯಕ್ಷ ಸ್ಥಾನಕ್ಕೆ ಉಮೇದವಾರಳಾಗಿ ನಿಲ್ಲುವುದೆಂದೂ ಅವರೆಂದಿದ್ದಾರೆ. ಅಯ್ಯೂಬಖಾನರ ನೀತಿ ಧೋರಣೆಗಳ ಬಗ್ಗೆ ಪಾಕಿಸ್ತಾನದಲ್ಲಿ ತೀವ್ರ ಭಿನ್ನಮತವಿರುವುದು ಎಲ್ಲರಿಗೂ ತಿಳಿದ ಸಂಗತಿ.

ವಿರೋಧಿಗಳನ್ನು ಹತ್ತಿಕ್ಕುವಲ್ಲಿ ಅಯ್ಯೂಬಖಾನರು ಈ ಮೊದಲೇ ಕಾರ್ಯಪ್ರವೃತ್ತರಾಗಿದ್ದಾರೆ. ಫಾತಿಮಾ ಜಿನ್ನಾರನ್ನು ಅಧ್ಯಕ್ಷ ಸ್ಥಾನಕ್ಕೆ ಅನರ್ಹರನ್ನಾಗಿ ಮಾಡುವ ಕುರಿತೂ ಅವರು ತಲೆಕೆಡಿಸಿಕೊಂಡಿದ್ದಾರೆ. ಜಿನ್ನಾರವರು ಗೆದ್ದು ಬಂದರೂ ಬರಬಹುದೆಂಬ ಭೀತಿ ಅವರ ತಲೆ ಹೊಕ್ಕಿದೆ, ಇಸ್ಲಾಮಿ ಧ

(೧೬ನೇ ಪುಟ ನೋಡಿರಿ)

ನರಸಣ್ಣನ ಸರಸ

ಮಾತಾ- ಏನ್ಕಮಾದ್ರೂ ಕೀರ್ತಿ ದೊಕೆ ದೊಂಕ ರಾಲಬಹದೂರ ಶಾಸ್ತ್ರಿಯವರ ಬಿರಾಡರಿಣಿ ನಿನಗೆ ಲಗ್ನವಾಗೋದಿಲ್ಲ. ಗಳಿಸಿದ ವಿಶ್ವಾಸವನ್ನು ಅವ್ರು ಉಳಿಸಿಕೋ ಬಹುದಾನ್ನು. ಅದ್ರೆ ಕುಂಟಿವಾದ ನಿನಗೆ ಎಂಟು ಬುದ್ಧಿ ಆಸ್ವೇನಮ್ಮ?

ಬೆಳಕು ಕಂಡ ಬಾಳು

ಬರೆದವರು: ಶ್ರೀ ಪಿ. ಎಸ್. ಎಸ್., ಚಿತ್ರದುರ್ಗ.



"ರೀ......"

"ಏನೇ ಲೀಲಾ..."

"ನಿಮ್ಮನ್ನ ಒಂದು ಮಾತು ಕೇಳ್ತೀನಿ ಕ್ಷಮಿಸಿ ಕೊಡ್ತೀರಾ?"

"ನನ್ನ ಜೀವನದಲ್ಲಿ ನೀನೊಂದು ಅಮೂಲ್ಯ ವಸ್ತು ಲೀಲಾ...ನಿನ್ನ ಮನಸ್ಸಿಗೆ ಎಂದಾದರೂ ಬೇಸರವಾಗುವಂತೆ ನಡೆಸಿದ್ದೇನೆಯೇ?"

"ಈ ಕಣ್ಣು ಒರೆಸುವ ಮಾತು ಬೇಕಿಲ್ಲ. ನನ್ನ ಮಾತಿಗೆ ಉತ್ತರ ಹೇಳಿ"

"ಅದೇನು ರಾಣಿಯವರ ಅಪ್ಪಣೆಯಾಗಲಿ"

'ನನಗಾಗಿ ಅದಕ್ಕಿಂತಲೂ ಎಲ್ಲರ ಹಿತಕ್ಕಾಗಿ ದಯವಿಟ್ಟು ಇನ್ನೊಂದು ಮದುವೆ ಮಾಡಿಕೊಳ್ಳಿ"

'ನನ್ನನ್ನು ಪರೀಕ್ಷೆ ಮಾಡುತ್ತಿದ್ದೀಯಾ ಲೀಲಾ"

"ಖಂಡಿತವಾಗಿಯೂ ಪರೀಕ್ಷೆ ಅಲ್ಲ; ನಿಮ್ಮ ಮನಸ್ಸು ನನಗೆ ಗೊತ್ತು ಆದರೂ ನನ್ನ ಈ ಒಂದು ಬೇಡಿಕೆಯನ್ನು ನಡೆಸಿ ಕೊಡಿ"

"ಒಂದು ಹೆಣ್ಣು ತನ್ನ ಪ್ರಿಯ ವಸ್ತುವನ್ನು ಎಂದಿಗೂ ದೂರಮಾಡಲಾಶಿಸುವುದಿಲ್ಲ. ಅಂತಹದರಲ್ಲಿ ನೀನೇ ಬೇರೆ ಹೆಣ್ಣನ್ನು ತಂದೊಪ್ಪಿಸಲು ಸಿದ್ಧವಿದ್ದೀಯಲ್ಲ ಲೀಲಾ...ಒಂದು ವೇಳೆ ನೀನು ನನ್ನಿಂದ ಬೇರೆಯಾದರೆ ಅಥವಾ ಬೇರಾವ ಕಾರಣದಿಂದಲಾದರೂ ನೀನು ಕೈ ಬಿಟ್ಟರೆ ನಾನು ಉಳಿಯುತ್ತೇನೆಯೇ ಹೇಳು ಲೀಲಾ?'

"ಖಂಡಿತವಾಗಿಯೂ ನಿಮ್ಮ ಮನ ನೋಯಿಸಲು ಹೀಗೆ ಹೇಳಲಿಲ್ಲ ದೊರೆ, ಈ ಜೀವನದಲ್ಲಿ 'ಬಂಜೆ' ಎನ್ನುವ ಅಪನಿಂದೆಯನ್ನು ಹೊತ್ತು ಬಾಳಲಾರೆ, ಸಹಿಸಲಾರೆ. ಆದುದರಿಂದಲೇ..."

"ಲೀಲಾ....ನನ್ನಲ್ಲಿ ನಿನಗೆ ಪೂರ್ಣ ನಂಬಿಕೆ ಇರುವುದಾದರೆ ಇನ್ನೊಂದು ಬಾರಿ ಆ ವಿವಾಹದ ಪ್ರಶ್ನೆ ಎತ್ತಬೇಡ. ನನಗೆ ಮಕ್ಕಳಿಲ್ಲವೆಂದು ಯಾವ ದೇವರೂ ಅಳುತ್ತಿಲ್ಲ. ಮಕ್ಕಳಿಲ್ಲದಿದ್ದರೆ ಪ್ರಪಂಚ ಮುಳುಗುವುದಿಲ್ಲ. ಮನೆಯಲ್ಲಿ ಅಣ್ಣನ ಮಕ್ಕಳೇ ಇದ್ದಾರೆ. ಯಾರ ನಿಂದೆಗೂ ದೂಷಣೆಗೂ ಮನಸ್ಸು ಚಿಕ್ಕದು ಮಾಡಿಕೊಳ್ಳ ಬೇಡ" ಎಂದು ಪತ್ನಿಯ ಕಂಬನಿಯನ್ನು ಬೆರಳಿನಿಂದ ತಡೆದ ಪ್ರಸಾದ್.

ಪತಿಯ ಅಭಿಮಾನದ ನುಡಿಗಳಿಗೆ ಲೀಲಾ ಅತಿ ಮೂಕಳಾಗಿದ್ದಳು.

o o o

"ಏನ್ಮಾಡ್ತಿದೀರಾ ಅನುಸೂಯಮ್ಮ?"

"ಬನ್ನಿ ಸುಬ್ಬಮ್ಮ, ಇದೇನು ಇಷ್ಟು ಅಪರೂಪವಾಗಿ ಬಿಟ್ಟಿರಲ್ಲ....ಬನ್ನಿ...... ಬನ್ನಿ" ಎಂದು ಸ್ವಾಗತಿಸಿದರು ಅನಸೂಯಮ್ಮ.

ಸುಬ್ಬಮ್ಮ ಅಡಿಗೆಮನೆಯಲ್ಲಿ ಒಡಿ ಇರಿಸುತ್ತಾ "ಏನೋ ಮಾಡುತ್ತಿರುವಂತಿದೆ" ಎಂದರು.

"ಮನೆ ಅಂದ ಮೇಲೆ ಬರೋರು ಹೋಗೋರು ಇರ್ತಾರಲ್ಲಮ್ಮ, ಜೊತೆಗೆ ಮಕ್ಕಳ ಮನೆ. ಸ್ವಲ್ಪ ತಿಂಡಿ ಇರಲಿ ಅಂತ ಚಕ್ಕುಲಿ ಕೋಡುಬಳೆ ಮಾಡ್ತಿದೀನಿ."

"ನೀವೇ ಪುಣ್ಯವಂತರಮ್ಮ....ಅಂದ ಹಾಗೆ ಇವತ್ತು ಮಠದಲ್ಲಿ ಕೀರ್ತನೆ ಇದೆಯಂತೆ. ಬರುತ್ತೀರೇನು ಹೋಗೋಣ... ನಿಮ್ಮನ್ನು ಕೇಳಿ ಹೋಗೋಣ ಅಂತ ಬಂದೆ."

"ಬರ್ತೀನೆ ಸುಬ್ಬಮ್ಮ ಹೋಗೋಣಂತೆ....ಜನ್ಮಾಂತರಗಳ ಪಾಪ ಹರಿಕೀರ್ತನಾ ಶ್ರವಣದಿಂದಲಾದರೂ ದೂರವಾಗಲಿ. ಎಂದಿಗೆ ಕೊನೆ ನಮ್ಮ ಗೋಳು?"

"ನಿಮ್ಮ ಮಾತು ನಿಜ ಅನುಸೂಯಮ್ಮ...ಮತ್ತೇನು ವಿಶೇಷ?"

'ಏನು ಹೇಳಲಿ ಸುಬ್ಬಮ್ಮ, ನಿಮ್ಮ ಮನೆ ಕಡೆ ಎಲ್ಲಾ ಕ್ಷೇಮವೇನಮ್ಮ. ಮೊನ್ನೆ ಕಿರಿಯ ಸೊಸೆ ಊರಿಗೆ ಹೋಗಿದ್ದರಂತೆ. ಕಿರಿಯ ಸೊಸೆ ಮಗು ಆರೋಗ್ಯವಾಗಿದ್ದಾರಾ?"

"ಚೆನ್ನಾಗಿದ್ದಾರಮ್ಮ...ಎಲ್ಲಿ ನಿಮ್ಮ ಇಬ್ಬರು ಸೊಸೆಯರು ಕಾಣ್ಲೆ ಇಲ್ಲ. ಊರಲ್ಲಿದ್ದಾರಾ?"

"ಇದ್ದಾರಮ್ಮ ಶಾರದಾ ಅವರಣ್ಣನ ಮನೇಲಿ ಏನೋ ವಿಶೇಷ ಅಂತ ಮಕ್ಕಳನ್ನೂ ಕರೆದುಕೊಂಡು ಹೋಗಿದ್ದಾಳೆ. ಅವಳು ಹಿತ್ತಲ ಕಡೆ ಎಲ್ಲೋ ಬಟ್ಟೆ ಒಗೆಯುತ್ತಿರಬೇಕು"

"ಅಂದಹಾಗೆ ಲೀಲಾ ಮತ್ತೇನೂ..."

"ಏನು ಕೇಳ್ತೀರಾ, ಬಿಡಿ ಸುಬ್ಬಮ್ಮ ಅದೊಂದು ಗೊಡ್ಡು ಮುಂಡೇದು."

"ನೀವೇ ಹಾಗೆಂದರೆ ಹೇಗೆ ಅನುಸೂಯಮ್ಮ ? ಇನ್ನೂ ಚಿಕ್ಕ ವಯಸ್ಸು, ಸರಿಯಾದ ಡಾಕ್ಟರಿಗೆ ತೋರಿಸಿ ನೋಡಿ"

"ಎಲ್ಲಾ ಆಯ್ತು ರೀ...."

"ಲೀಲಾನೂ ಎಲ್ಲರ ಹಾಗೆ ಒಂದೋ ಎರಡೋ ಮಕ್ಕಳ ತಾಯಿಯಾಗಿದ್ದರೆ, ಎಲ್ಲರಿಗೂ ಸಂತೋಷವಾಗುತ್ತಿತ್ತು"

"ನಾನೇನು ಮಾಡ್ಲಿ ಸುಬ್ಬಮ್ಮ... ಮುಖ್ಯ ನನ್ನ ಹಣೆಬರಹ. ಯಾರ ಬಾಯಲ್ಲಿ ನೋಡಿದರೂ ಲೀಲಾ ಬಂಜೆತನದ ಮಾತೇ! ನನಗೆ ತಲೆ ಎತ್ತಿ ನಿಲ್ಲುವಂತಿಲ್ಲ." ಎಂದು ತಮ್ಮ ಮನಸ್ಸಿನ ಕಹಿಯನ್ನೆಲ್ಲಾ ಹೊರಗೆಡವಿದರು ಅನುಸೂಯಮ್ಮ.

"ಹೋಗಲಿ ಬಿಡಿ ಅಂದ ಹಾಗೆ ಎರಡನೆ ಮದುವೆ ಅಂತ ಅನ್ನುತಿದ್ದಿರಿ ಆ ವಿಷಯ ಏನಾಯ್ತು" ಎಂದು ಮೆಲ್ಲಗೆ ಪ್ರಶ್ನಿಸಿದರು ಜಗಳವಿಲ್ಲದ ಕಡೆಯಲ್ಲಿ ಜಗಳದ ಕಿಡಿಯನ್ನು ಹಾರಿಸುತ್ತಿದ್ದ ಸುಬ್ಬಮ್ಮ...

"ಅದೇನು ಹೇಳ್ತೀರಾ ಸುಬ್ಬಮ್ಮ, ಮಹರಾಯ್ತಿ ಹೊಸಲು ತುಳಿದು ಒಳಕ್ಕೆ ಬಂದಳು. ಎಲ್ಲರೂ ಅವಳನ್ನೇ ಹೊಂದಿಕೊಂಡರು. ಅವನಿಗಂತೂ ಅವಳ ಮಾತು ವೇದ ವಾಕ್ಯ, ಆ ವಿಷಯ ಪ್ರಸ್ತಾಪಿಸಿದರೆ ನಾಳು ಹೇಳದೆ ಕೇಳದೆ ಜಾಗ ಬಿಡುತ್ತಾನೆ".

"ಎಲ್ಲ ಸಂಸಾರಗಳಂತೆ ನಿಮ್ಮದು ನಂದ ಗೋಕುಲವಾಗಲಿ ಎನ್ನುವುದೇ ನಮ್ಮ ಆಸೆ ಅನುಸೂಯಮ್ಮ, ನಾನಿನ್ನು ಬರ್ತೀನಮ್ಮ" ಎಂದು ಹೊರಡಲನುವಾದರು ಸುಬ್ಬಮ್ಮ.

ಮಾಡಿದ ತಿಂಡಿಯನ್ನು ತಟ್ಟೆಯಲ್ಲಿ ಹಾಕಿ ಸುಬ್ಬಮ್ಮನವರ ಮುಂದಿಡುತ್ತಾ "ತೆಗೆದುಕೊಳ್ಳಿ ಸುಬ್ಬಮ್ಮ" ಎಂದರು ಅನುಸೂಯಮ್ಮ.

"ನಿಮ್ಮ ಎರಡನೇ ಮಗ ಸ್ವಲ್ಪ..."ಎಂದು ಸುಬ್ಬಮ್ಮ ಮಾತು ಬೆಳೆಸುತ್ತಿರುವಂತೆಯೇ—"ನಿಮಗೆ ಗೊತ್ತಿಲ್ಲ ಸುಬ್ಬಮ್ಮ ನಾನು ಆ ಬಂಜೆ ಬಗ್ಗೆ ಒಂದು ಮಾತನಾಡಿದರೆ ಯಜಮಾನ್ರು, ಹಿರಿಯ ಮಗ ಸೊಸೆ, ಅವಳ ಗಂಡ ಎಲ್ಲರೂ ನನ್ನನ್ನೇ ದೂಷಿಸುತ್ತಾರೆ ದಿಕ್ಕಿಲ್ಲದೆ ಹುಡುಗಿ ಚಾಣೆ ಅಂತ ಮನೆ ತುಂಬಿಸಿ ಕೊಂಡುದುದಕ್ಕೆ ಮನೆಗೆ ಮಾರಿ ಬಂದಳು" ಎಂದು ಕೋಪಾವೇಶದಿಂದ ನುಡಿದರು ಅನುಸೂಯಮ್ಮ.

ಹಿತ್ತಲಲ್ಲಿ ಬಟ್ಟೆ ಒಗೆದು ತಂತಿಯ ಮೇಲೆ ಹರವಲು ಬಂದ ಲೀಲಾ ಅತ್ತೆಯ ಮಾತು ಕೇಳಿ ಗಡಗಡ ನಡುಗಿದಳು. ಕಣ್ಣೀರು ತುಂಬಿ ಬಂತು. ಬವಳಿ ಬಂದು ಬೀಳುವಂತಾಗಿತ್ತು.

o o o

ಒಂದು ದಿನ ಮಿಕ್ಕವರಾರೂ ಮನೆಯಲ್ಲಿಲ್ಲದ ಸಮಯದಲ್ಲಿ ಅನುಸೂಯಮ್ಮ ಪ್ರಸಾದನೊಡನೆ ಮಾತಿಗೆ ಕುಳಿತರು.

"ಪ್ರಸಾದ, ನೀನು ಎಲ್ಲ ಸರಿಯಪ್ಪ ಆದರೆ ಒಂದು ವಿಷಯದಲ್ಲಿ ಮಾತ್ರ ಹಟ ಹಿಡಿದಿದ್ದೀಯ; ನನಗೇನೋ ಅದು ಚನ್ನಾಗಿಲ್ಲ"

"ಏನಮ್ಮ ಅದು ಅಂತಹ ವಿಷಯ?"

"ಸುತ್ತಿ ಬಳಸಿ ಹೇಳಿ ಏನು ಪ್ರಯೋ

(ಹನ್ನೆರಡನೇ ಪುಟ ನೋಡಿರಿ)

6¼ %

ಫಿಕ್ಸೆಡ್ ಡಿಪಾಜಿಟುಗಳ ಮೇಲೆ ತಾರೀಕು 1—9—64ರಿಂದ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು:—

	1ರಿಂದ 3 (ತಿಂಗಳು)	4ರಿಂದ 12 (ತಿಂಗಳು)	2 ವರ್ಷ	3 ವರ್ಷ	4 ವರ್ಷ	5 ವರ್ಷ	6 ವರ್ಷ	7—10 (ವರ್ಷ)
	% p a.	% p a.	% p a.	% p.a.	% p a.	% p.a	% p a	% p a
ರೂ. 4999ರ ವರೆಗಿನ ಡಿಪಾಜಿಟುಗಳ ಮೇಲೆ:	4¼	5	5¼	5½	5¾	6	6¼	6½
ರೂ. 5000 ಮತ್ತು ಮೇಲ್ಪಟ್ಟ ಡಿಪಾಜಿಟುಗಳ ಮೇಲೆ:	5	5¼	5½	5¾	6	6	6¼	6½

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಸಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

ರಿಜಿಸ್ಟರ್ಡ್ ಆಫೀಸು: ಕೋರ್ಟು ರಸ್ತೆ, (ಷೆಡ್ಯೂಲ್ಡ್ ಬ್ಯಾಂಕ್) ಸ್ಥಾಪನೆ:
ಉಡುಪಿ, ದ. ಕ. (ಮೈಸೂರು ರಾಜ್ಯ) 1920

ಅಭಿವೃದ್ಧಿಯ ಕೀಲಿಕೈ - ವಿದ್ಯುತ್

ನಮ್ಮ ರಾಷ್ಟ್ರ ಜೀವನದಲ್ಲಿ, ವಿದ್ಯುಚ್ಛಕ್ತಿಯು ಯಾವಾಗಲೂ ಒಂದಲ್ಲ ಒಂದು ರೀತಿಯಲ್ಲಿ ಪ್ರಾಮುಖ್ಯ ಪಾತ್ರ ವಹಿಸುತ್ತಿದೆ. ಆದರೆ, ಇಂದು ಕೈಗಾರಿಕಾಭಿವೃದ್ಧಿಯಲ್ಲಿ ಹಿಂದುಳಿದಿರುವ ಭಾರತದಂತಹ ದೇಶಗಳಲ್ಲಿ, ವಿದ್ಯುಚ್ಛಕ್ತಿಯು ಅತ್ಯಂತ ನಿರ್ಧಾರಕ ಅಂಶವಾಗುತ್ತದೆ, ಪ್ರಗತಿ ಪಥದಲ್ಲಿ ಸಹಾಯಕವಾಗುತ್ತದೆ.

ನಮ್ಮ ದೇಶದಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯಲ್ಲಿ ಮುಕ್ಕಾಲು ಭಾಗವನ್ನು ಗಣಿಗಳು ಮತ್ತು ಕೈಗಾರಿಕೆಗಳು ಬಳಸುತ್ತವೆ. ಆದ್ದರಿಂದ ಹೊಸ ಹಾಗೂ ಮತ್ತೂ ಹೆಚ್ಚಿನ ಪ್ರಮಾಣದ ವಿದ್ಯುಚ್ಛಕ್ತಿ ಸಾಧನ ಸಂಪತ್ತನ್ನು ನಾವು ಸದಾ ಹುಡುಕುತ್ತ ಇರಬೇಕಾಗುತ್ತದೆ. ಸ್ವಾತಂತ್ರ್ಯಕ್ಕೆ ಮೊದಲು ಆಗುತ್ತಿದ್ದ ವಿದ್ಯುಚ್ಛಕ್ತಿಯ ಉತ್ಪಾದನೆಯ ಪ್ರಮಾಣಕ್ಕೆ ಹೋಲಿಸಿದರೆ, ಈಗ ನಮ್ಮ ವಿದ್ಯುಚ್ಛಕ್ತಿ ಉತ್ಪಾದನೆಯ ಪ್ರಮಾಣವು ತ್ವರಿತಗತಿಯಲ್ಲಿ ಬೆಳೆಯುತ್ತಿದೆ ಎಂದು ಹೇಳಬಹುದಾದರೂ ವಿದ್ಯುಚ್ಛಕ್ತಿ ಉತ್ಪಾದನೆ ಸಾಮರ್ಥ್ಯಕ್ಕಿಂತ ವೇಗವಾಗಿ ವಿದ್ಯುಚ್ಛಕ್ತಿ ಬೇಡಿಕೆಗಳು ಹೆಚ್ಚುತ್ತಿರುವುದು ಗಮನಿಸಬೇಕಾದ ವಿಷಯ. ಪ್ರಥಮ ಯೋಜನೆಯ ಆರಂಭದಲ್ಲಿ ನಮ್ಮ ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯವು ೨೩ ಲಕ್ಷ ಕಿಲೋ ವ್ಯಾಟ್‌ಗಳಷ್ಟಿತ್ತು. ತೃತೀಯ ಯೋಜನೆಯಲ್ಲಿ ಒಟ್ಟು ೧೨೫ ಲಕ್ಷ ಕಿಲೊ ವ್ಯಾಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಗುರಿಯನ್ನಿಟ್ಟುಕೊಳ್ಳಲಾಗಿದೆ. ಚತುರ್ಥ ಯೋಜನೆಯಲ್ಲಿ ಉತ್ಪಾದನೆಯನ್ನು ದ್ವಿಗುಣಗೊಳಿಸುವ ಸಂಭವವಿದೆ.

ದ್ವಿತೀಯ ಯೋಜನೆಯ ಅವಧಿಯ ಕೊನೆಯಲ್ಲಿ, ವಿದೇಶೀ ವಿನಿಮಯ ಸಂಬಂಧವಾಗಿ ಎದುರಿಸಬೇಕಾದ ತೊಂದರೆಗಳನ್ನು ಗಣನೆಗೆ ತೆಗೆದುಕೊಂಡು, ಬಹುತೇಕ ವಿದ್ಯುಚ್ಛಕ್ತಿ ಉತ್ಪಾದನೆಗೆ ಸಂಬಂಧಪಟ್ಟ ಎಲ್ಲಾ ಪ್ರಾಜೆಕ್ಟ್‌ಗಳನ್ನು ವಿವಿಧ ವಿದೇಶಿ ನೆರವು ಇಲ್ಲದೆ, ಮುಂಗಡ ಸಾಲ ಸೌಲಭ್ಯಗಳಿಂದ ನಿರ್ವಹಿಸಲಾಗುತ್ತಿದೆ. ಈ ಕಾರ್ಯ ಯೋಜನೆಗಳಲ್ಲಿ ಸಮರ್ಪಕವಾದ ಪ್ರಗತಿಯನ್ನು ಸಾಧಿಸುತ್ತಿವೆ, ಅವು ನಿರ್ದಿಷ್ಟ ಅವಧಿಯಲ್ಲಿ ಇಟ್ಟುಕೊಂಡ ಗುರಿಯನ್ನು ಮುಟ್ಟುವಲ್ಲಿ ಯಾವ ಸಂಶಯವೂ ಇಲ್ಲ.

ಜಲ ಸಂಪತ್ತಿನ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದಕ್ಕೆ ವಿದೇಶೀ ಧನ ವಿನಿಮಯ ಅಷ್ಟು ಬೇಕಾಗುವುದಿಲ್ಲ. ಆದ್ದರಿಂದ ನಾವು ಸಾಧ್ಯವಾದ ಕಡೆ ಜಲ ಸಂಪತ್ತಿನಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು ಸೂಕ್ತವಾಗುತ್ತದೆ. ನೂರಾರು ಜಲಸಂಪತ್ತಿನಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ೩೫ ಕೇಂದ್ರಗಳನ್ನು ಈಗಾಗಲೇ ಮುಗಿಸಲಾಗಿದೆ. ಮತ್ತೆ ೩೦ ಕೇಂದ್ರಗಳನ್ನು ಈಗ ನಿರ್ಮಿಸಲಾಗುತ್ತಿದೆ. ಹಲವು ರಾಜ್ಯಗಳಲ್ಲಿ ಇಂತಹ ಹಲವಾರು ಯೋಜನೆಗಳಿಗಾಗಿ ಸಮೀಕ್ಷೆಗಳನ್ನು ನಡೆಸಲಾಗಿದೆ.

ಗಣಿಗಳು ಮತ್ತು ಕಲ್ಲಿದ್ದಲು ಶುದ್ಧೀಕರಣ ಕೇಂದ್ರಗಳಿಗೆ ಸಮೀಪದಲ್ಲಿಯೇ ಥರ್ಮಲ್ ವಿದ್ಯುಚ್ಛಕ್ತಿ ಕಾರ್ಯಯೋಜನೆಗಳನ್ನು ಕೈಗೊಳ್ಳಬೇಕಾಗಿದೆ. ಈ ಕಾರ್ಯಯೋಜನೆಗಳು ಮುಖ್ಯವಾಗಿ ಕಡಿಮೆ ದರ್ಜೆಯ ಕಲ್ಲಿದ್ದಲಿನ ಪೂರೈಕೆಯನ್ನು ಅವಲಂಬಿಸಿವೆ. ತೈಲ ಶುದ್ಧೀಕರಣ ಕಾರ್ಖಾನೆಗಳಿಂದ ದೊರೆಯುವ ಉಪ-ಉತ್ಪನ್ನಗಳೂ ಥರ್ಮಲ್ ವಿದ್ಯುಚ್ಛಕ್ತಿ ಉತ್ಪಾದನೆಯ ದೃಷ್ಟಿಯಿಂದ ಪ್ರಾಮುಖ್ಯ ಸಂಪನ್ಮೂಲಗಳಾಗಿವೆ. ಅಣು ಶಕ್ತಿ ಕೇಂದ್ರಗಳು, ಕಲ್ಲಿದ್ದಲು ಗಣಿ ಕ್ಷೇತ್ರಗಳಿಂದ ಬಹುದೂರವಿರುವ ಪ್ರದೇಶಗಳಿಗೆ—ಉದಾಹರಣೆಗಾಗಿ ಪಶ್ಚಿಮ ಕರಾವಳಿ, ಪಂಜಾಬ್-ರಾಜಸ್ಥಾನ್—ದೆಹಲಿ ವಿಭಾಗ, ದಕ್ಷಿಣ ವಿಭಾಗಗಳಿಗೆ ಆರ್ಥಿಕ ದೃಷ್ಟಿಯಿಂದ ಲಾಭದಾಯಕವಾಗಿವೆ. ಈ ಕಾರಣದಿಂದಾಗಿಯೇ ಪಶ್ಚಿಮ ಕರಾವಳಿಯಲ್ಲಿನ ತಾರಾಪರ್‌ನಲ್ಲಿ ೪೦೦ ಮೆಗಾವ್ಯಾಟ್ ಶಕ್ತಿಯ ಪ್ರಥಮ ಅಣುಶಕ್ತಿ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ. ರಾಜಸ್ಥಾನದಲ್ಲಿ ಒಂದು ಮತ್ತು ಮದರಾಸ್‌ನಲ್ಲಿ ಒಂದು ಹೀಗೆ ಎರಡು ಅಣು ಶಕ್ತಿ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈಗ ನಾವು ಅಣು ಶಕ್ತಿ ಸಂಪನ್ಮೂಲಗಳಿಂದ ಪಡೆಯುತ್ತಿರುವ ಪ್ರಯೋಜನಗಳಿಂದ, ಜಲ ವಿದ್ಯುತ್ ಕಾರ್ಯಯೋಜನೆಗಳು ಪೂರ್ಣಗೊಂಡಾಗ ಇಂಥ ಸಂಪನ್ಮೂಲಗಳ ಬಳಕೆಯ ಬಗೆಗೆ ಅಗತ್ಯವಾದ ಅನುಭವವನ್ನೂ ಮಾಹಿತಿಯನ್ನೂ ಪಡೆಯಬಹುದು.

ನಮ್ಮ ದೇಶದಲ್ಲಿ ಈ ವರೆಗೆ ರಾಜ್ಯ ಮಟ್ಟದ ಮೇಲೆ ವಿದ್ಯುಚ್ಛಕ್ತಿಯನ್ನು ಅಭಿವೃದ್ಧಿಗೊಳಿಸಲಾಗುತ್ತಿತ್ತು: ಈ ಸಂಬಂಧವಾದ ಯೋಜನೆಗಳನ್ನು ಸಿದ್ಧಗೊಳಿಸಲಾಗುತ್ತಿತ್ತು. ಈ ಹಿಂದೆ ವಿದ್ಯುಚ್ಛಕ್ತಿ ಅಭಿವೃದ್ಧಿ ಕಾರ್ಯದ ಪ್ರಾರಂಭದ ಹಂತದಲ್ಲಿದ್ದಾಗ, ಮೊದಲಿನ ವ್ಯವಸ್ಥೆಯೇ ಸಮರ್ಪಕವಾಗಿತ್ತು. ಆದರೆ ಈಗ ಕೈಗಾರಿಕಾ ಕ್ಷೇತ್ರದ ವಿಸ್ತರಣೆ ಮತ್ತು ವಿದ್ಯುಚ್ಛಕ್ತಿ ಕ್ಷೇತ್ರದಲ್ಲಿ ಕಾರ್ಯ ಚಟುವಟಿಕೆಗಳು ಹೆಚ್ಚಿದ್ದರಿಂದಾಗಿ ವಿದ್ಯುಚ್ಛಕ್ತಿ ಕಾರ್ಯಯೋಜನೆಗಳಿಗೆ ಸಂಬಂಧಿಸಿದಂತೆ ಪ್ರಗತಿಪರ ಮಾರ್ಗ ಅನುಸರಿಸುವುದು ಅಗತ್ಯವಾಗಿ ಪರಿಣಮಿಸಿದೆ. ಈ ಕಾರ್ಯದಿಂದಾಗಿ ಭವಿಷ್ಯದಲ್ಲಿ ಯಾವುದೇ ಒಂದು ರಾಜ್ಯದ ಅಗತ್ಯಗಳನ್ನೇ ದೃಷ್ಟಿಯಲ್ಲಿಟ್ಟುಕೊಳ್ಳದೆ, ವಲಯದಲ್ಲಿನ ರಾಜ್ಯಗಳ ಅಗತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವಿದ್ಯುಚ್ಛಕ್ತಿ ಅಭಿವೃದ್ಧಿ ಕಾರ್ಯಯೋಜನೆಗಳನ್ನು ರೂಪಿಸಬೇಕಾಗುವುದು. ಎಲ್ಲಾ ರಾಜ್ಯಗಳೂ ವಿದ್ಯುಚ್ಛಕ್ತಿ ಸಂಪನ್ಮೂಲಗಳಿಂದ ಸಮೃದ್ಧವಾಗಿಲ್ಲವಾದ್ದರಿಂದ ಈ ಕ್ರಮ ಕೈಗೊಳ್ಳಬೇಕಾಗಿದೆ. ಮದರಾಸ್ ರಾಜ್ಯವನ್ನೇ ಉದಾಹರಣೆಗಾಗಿ ತೆಗೆದುಕೊಳ್ಳೋಣ. ಈ ರಾಜ್ಯದಲ್ಲಿ ಕೆಲವು ಲಿಗ್ನೈಟ್ ನಿಕ್ಷೇಪಗಳನ್ನು ಬಿಟ್ಟರೆ, ಬೇರಾವ ಕಲ್ಲಿದ್ದಲು ಸಂಪನ್ಮೂಲಗಳೂ ಇಲ್ಲ. ಮದರಾಸ್ ರಾಜ್ಯವು ಎಲ್ಲಾ ಜಲಸಂಪನ್ಮೂಲಗಳನ್ನೂ ಉಪಯೋಗಿಸಿಕೊಂಡಿದ್ದು, ಈಗ ಜಲಸಂಪನ್ಮೂಲಗಳಿಗಾಗಿ ನೆರೆಯ ರಾಜ್ಯಗಳನ್ನೇ ಅವಲಂಬಿಸಬೇಕಾಗಿದೆ. ನೆರೆಯ ರಾಜ್ಯಗಳಿಗೆ ಉಪಯುಕ್ತವಾಗುವಂತೆ, ಮೈಸೂರು ಮತ್ತು ಕೇರಳ ರಾಜ್ಯಗಳಲ್ಲಿನ ಜಲ ಸಂಪನ್ಮೂಲಗಳನ್ನು ತ್ವರಿತ ಪ್ರಗತಿಯಿಂದ ಅಭಿವೃದ್ಧಿಗೊಳಿಸುವುದೂ ಅಗತ್ಯವಾಗಿದೆ. ಯಾವುದೇ ಒಂದು ರಾಜ್ಯದಲ್ಲಿ ಜಲ-ವಿದ್ಯುಚ್ಛಕ್ತಿಯನ್ನು ಅಭಿವೃದ್ಧಿಗೊಳಿಸುವಾಗ, ಈ ಕಾರ್ಯ ಮತ್ತು ನೆರೆಯ ರಾಜ್ಯಗಳಲ್ಲಿನ ಥರ್ಮಲ್ ಅಥವಾ ಅಣುಶಕ್ತಿ ಉತ್ಪಾದನಾ ಕೇಂದ್ರಗಳ ಕಾರ್ಯಗಳ ನಡುವೆ ಹೆಚ್ಚು ಸಮನ್ವಯ, ಸಾಧ್ಯವಾಗುವಂತೆ ನೋಡಿಕೊಳ್ಳಲಾಗುವುದು.

ವಿವಿಧ ಪದ್ಧತಿಗಳ ಹೊಂದಾಣಿಕೆ

ವಿಶ್ವದ ಮುಂದುವರಿದ ರಾಷ್ಟ್ರಗಳು ವಿವಿಧ ರೀತಿಯ ವಿದ್ಯುಚ್ಛಕ್ತಿ ಪದ್ಧತಿಗಳನ್ನು ಪರಸ್ಪರ ಹೊಂದುವಂತೆ ಮಾಡಿ, ಸಂಘಟಿತ ಆಧಾರದ ಮೇಲೆ ಅವುಗಳನ್ನು ಬಳಸಿಕೊಳ್ಳುತ್ತಿವೆ. ಹೈಡ್ರೋ, ಥರ್ಮಲ್ ಮತ್ತು ನ್ಯೂಕ್ಲಿಯರ್ ವಿದ್ಯುಚ್ಛಕ್ತಿ ತಯಾರಿಕೆ ಕೇಂದ್ರಗಳ ಸಮನ್ವಯದಿಂದಾಗಿ ವಿದ್ಯುಚ್ಛಕ್ತಿ ಸಂಪತ್ತನ್ನು ಪೂರ್ಣವಾಗಿ ಬಳಸಿದಂತಾಗುತ್ತದೆ. ವಿವಿಧ ಪದ್ಧತಿಗಳ ಪರಸ್ಪರ ಹೊಂದಾಣಿಕೆಯಿಂದ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಅತ್ಯಲ್ಪ ಕಾಲದಲ್ಲಿ ಹಾಗೂ ಅತಿ ಕಡಿಮೆ ವೆಚ್ಚದಲ್ಲಿ ಉತ್ಪಾದಿಸಬಹುದಾಗಿದೆ.

ನಮ್ಮ ವಿದ್ಯುಚ್ಛಕ್ತಿ ಅಭಿವೃದ್ಧಿಯ ಮತ್ತೊಂದು ಪ್ರಧಾನ ಅಂಶವೆಂದರೆ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುವುದು. ನಮ್ಮ ಐದು ಲಕ್ಷ ಗ್ರಾಮಗಳ ಪೈಕಿ ತೃತೀಯ ಯೋಜನೆಯ ಅಂತ್ಯದೊಳಗೆ ಸುಮಾರು ೪೫,೦೦೦ ಗ್ರಾಮಗಳಿಗೆ ಅಂದರೆ ಶೇ. ೯ರಷ್ಟು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುವ ನಿರೀಕ್ಷೆಯಿದೆ. ಗ್ರಾಮಾಂತರ ಆರ್ಥಿಕ ವ್ಯವಸ್ಥೆಯ ಅಭಿವೃದ್ಧಿ ಮತ್ತು ಬೇಸಾಯ ಉತ್ಪಾದನೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಗ್ರಾಮಾಂತರ ವಿದ್ಯುಚ್ಛಕ್ತೀಕರಣಕ್ಕಾಗಿ ಎಲ್ಲಾ ಕ್ರಮವನ್ನೂ ಕೈಗೊಳ್ಳಲಾಗುವುದು.

ಗ್ರಾಮಾಂತರ ಪ್ರದೇಶಗಳ ವಿದ್ಯುಚ್ಛಕ್ತೀಕರಣದಿಂದ ಸ್ವಾಭಾವಿಕವಾಗಿ ಹೆಚ್ಚು ಪ್ರಮಾಣದ ವಿದ್ಯುಚ್ಛಕ್ತಿಗೆ ಬೇಡಿಕೆ ಬರುವುದಂತೂ ಸುಸ್ಪಷ್ಟ.

—ಡಾ| ಕೆ. ಎಲ್. ರಾವ್
ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿ



ಅಸ್ಸಾಮಿನ ಉಮ್ಟ್ರು ಜಲ ವಿದ್ಯುದಾಗಾರದ ಒಂದು ನೋಟ

ಕೆಂಪು ಚೀನ ಕೇಳುತ್ತದೆ

ಅಕ್ಷಯ ಚಿನ್ನ - ಅನಂತರ ಅಂತ್ಯವೆಲ್ಲಿ?

ಬರೆದವರು: ಶ್ರೀ ಶಿವಶಂಕರ.

"ಜಯ ಜಯ ಜಯ ಪ್ರಕಾಶ"
"ನೂರ್ವೊಗೆ ಮಂಗಳವಾಗಲಿ!"

ರಾಜಕೀಯದಲ್ಲಿ ಸ್ಥಿರತೆ ಇಲ್ಲದೆ ಮೂರ್ಯೋತಿಗಿಂತಲೂ ಚುರುಕಾಗಿ ಬಣ್ಣ ಬದಲಿಸುವ ಪುಢಾರಿಗಳು ಕೆಲವರೂ ಕೆಂಪಣ್ಣನವರೂ ಬಡಬಡಿಸುತ್ತಿದ್ದರು.

"ದೇಶ ದ್ರೋಹಿಯನ್ನು ಬಂಧಿಸಿರಿ" ನಾದವನ್ನು ಎದುರಿಸಿ ಜಯ ಪ್ರಕಾಶ ನಾರಾಯಣರಿಂದ ಭಾಷಣವೀಯಲಾಗಲಿಲ್ಲ. ತನ್ನ ವಾದ ಸಮರ್ಥನೆಗೆ ಜನತೆ ಕಿವಿಗೊಡಲು ಸಿದ್ಧರಿಲ್ಲವೆಂಬುದನ್ನರಿತ ಜಯಪ್ರಕಾಶ ನಾರಾಯಣರು "ನಾರಾಯಣಾ ನಾರಾಯಣಾ!" ಜಪಿಸುತ್ತಾ ಮೆಲ್ಲನೆ ಜಾರಿದರು.

ಇಷ್ಟೆಲ್ಲಾ ಕೋಲಾಹಲಕ್ಕೆ ಕಾರಣವೇನು? ದಿನಾಂಕ ೧೦—೯—೬೪ ರ ಸಂಚಿಕೆಯಲ್ಲಿ ಕೆಲಕಾರಣಗಳನ್ನು ಕೊಡಲಾಗಿರುತ್ತದೆ. ಅಕ್ಷಯ ಚಿನ್ನ ಪ್ರದೇಶವನ್ನು ಚೈನಾಕ್ಕೆ ಗುತ್ತಿಗೆಗೆ ಕೊಟ್ಟು ರಾಜಿ—ಪಂಚಾಯತಿಗೆ ಮಾಡಿಕೊಳ್ಳಬೇಕೆಂದು ಹಿರಿಯ ರಾಜಕಾರಣಿ ಜಯಪ್ರಕಾಶ ನಾರಾಯಣರು ಸಲಹೆ ನೀಡಿರುವದೇ ಈ ಕೋಲಾಹಲಕ್ಕೆ ಕಾರಣ. ಈ ಅಕ್ಷಯ ಚಿನ್ನ ಎಲ್ಲಿದೆ? ಈ ಕುರಿತು ಹಿಂದಿನ ಸಂಚಿಕೆಗಳಲ್ಲಿ "ಭಾರತ ಸೀಮಾರೇಖೆ ಸುಸ್ಪಷ್ಟವಾಗಿದೆಯೇ?" ಅಲ್ಲದೆ ಇತರ ಕೆಲ ಲೇಖನಗಳಮೂಲಕ ಸ್ಪಷ್ಟಪಡಿಸಲಾಗಿರುತ್ತದೆ. ಅದನ್ನು ಚೈನೀಯರು ಆಕ್ರಮಿಸಿ ಕೊಂಡಿದ್ದಾರೆ. ಅವರು ನೇಫಾ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದಾರೆ. ಅಲ್ಲದೆ ಗಡಿ ದಾಟಿ ಬಹಳ ಮುಂದಕ್ಕೆ ಪ್ರವೇಶ ಬರುತ್ತಾ ಇದ್ದಾರೆ. ಅದನ್ನೇ ಸರಕಾರೀ ಭಾಷೆಯಲ್ಲಿ ಹೇಳುವುದಾದರೆ ಅಲ್ಲಿ ಸೈನ್ಯ ಶೇಖರಣೆ ಹಾಗೂ ಸಂಚಲನ ನಡೆಯುತ್ತಿದೆ.

ಅಕ್ಷಯ ಚಿನ್ನದ ಮೇಲೆ ಕಮ್ಯೂನಿಸ್ಟ ಚೈನಾದ ಗೃಧ್ರದೃಷ್ಟಿ ಬಿದ್ದಿರುತ್ತದೆ. ಅವರು ಅದನ್ನು ತಮ್ಮ ಭೂಪ್ರದೇಶವೆಂದು ಹೇಳುತಿದ್ದಾರೆ. ಆಗ ನಾವು ಈ ಪ್ರದೇಶವನ್ನು ಗುತ್ತಿಗೆಗೆ ಬಿಟ್ಟುಕೊಟ್ಟಲ್ಲಿ ಸ್ವಾಮಿತ್ವ ನಮ್ಮ ಬಳಿಯೇ ಉಳಿಯುತ್ತದೆಂಬುದು ಜಯಪ್ರಕಾಶರ ಆಲೋಚನೆ. ಸ್ವಾಮಿತ್ವವನ್ನು ಚೀನೀಯರು ಒಪ್ಪಿಕೊಳ್ಳಲು ಸಿದ್ಧರೇನು? ನಮ್ಮ ಹಿರಿಯ ಗತರಾಜಕಾರಣಿಗಳಷ್ಟೂ ಯೋಚನೆ ಅವರಿಗಿಲ್ಲವೇನು? ಇಂದು ಅಕ್ಷಯಚಿನ್ನವನ್ನು (ಆಕ್ರಮಿಸಿ) ಗುತ್ತಿಗೆಗೆ ಪಡೆದುಕೊಂಡವರು ನಾಳೆ ದಿಲ್ಲಿಯನ್ನು ಕೇಳದಿರುತ್ತಾರೆಯೇ? ಜಯಪ್ರಕಾಶರಿಗೆ ಅದು ಗೊತ್ತಿಲ್ಲವೆಂದಲ್ಲ. ಅವರೂ ರಾಜಕಾರಣಿ ಇದ್ದಾರೆ.

ಮಾಜಿ ರಾಜಕಾರಣಿ ಜಯಪ್ರಕಾಶರು ದಿವಂಗತ ಜವಾಹರಲಾಲಜಿಯವರ ನಿಕಟ ಸ್ನೇಹಿಗರು. ಜವಾಹರಲಾಲರ ನಂತರ ಜಯಪ್ರಕಾಶರು ಪ್ರಧಾನಿಯಾಗುವರೆಂಬ ಕನಸು ಕಂಡವರೂ ಇದ್ದಾರೆ. ಕೆಲವರಿಗೆ ಕೆಲವೊಮ್ಮೆ ಕೆಲವು ತರದ ವಿಶಿಷ್ಟ ಆಶೆ-ಆಲೋಚನೆಗಳು ಬರುವದುಂಟು. ತಿರುಕನೇ ಕನಸು ಕಾಣುವಾಗ ಇವರೇಕೆ ಹಿಂದೆ ಬಿದ್ದಾರು? ಇಂದು ಜವಾಹರಲಾಲಜೀ ನಮ್ಮನ್ನು ಬಿಟ್ಟು ದೂರ-ಬಹುದೂರ-ಹೋಗಿರುವರು. ಜಯಪ್ರಕಾಶರಿಗೆ ಒಮ್ಮೊಮ್ಮೆ ಆ ಹಿಂದಿನ ಯೌವ್ವನದ ಆಶೆ ಮರುಕಳಿಸುತ್ತಿರಬಹುದು. ಆದುದರಿಂದಲೇ ರಾಜಕೀಯ ಸನ್ಯಾಸದಿಂದ ನಾ ಕೆಟ್ಟೆನೆಂದು ಅವರು ಹಲುಬಿರುವರು. ತಾನು ತಪ್ಪು ಮಾಡಿರುವೆನಾಗಿ ಅವರು ಪಶ್ಚಾತ್ತಾಪಪಡುತ್ತಿದ್ದಾರೆ. ಪಾಳುಬಿದ್ದು ಹೋಗಿರುವ ಆ ಆಶಾಗೋಪುರವನ್ನು ಹೇಗಾದರೂ ಮಾಡಿ ಒಂದಿಷ್ಟು ದುರಸ್ತಿ ಮಾಡಿ ನಿಲ್ಲಿಸಬೇಕೆಂದು ಅವರು ಪ್ರಯತ್ನಿಸುತಿದ್ದಾರೆ. ಆದರೆ ತಾವು ಮಾಡುತ್ತಿರುವುದು ಇಸ್ಪೀಟು ಅರಮನೆಯೆಂಬುದು ಅವರಿಗೆ ಗೊತ್ತೇ ಆಗುವುದಿಲ್ಲ. ಅಂತೆಯೇ ಜವಾಹರಲಾಲಜೀಯವರು ಆಡುತ್ತಿದ್ದ ಕೆಲ ಮಾತುಗಳನ್ನು ಇವರು ಈಗ ಒಪ್ಪ-ಓರಣ-ಒಗ್ಗರಣೆ ಕೊಟ್ಟು ಜನತೆಯ ಮುಂದಿಡುತ್ತಿದ್ದಾರೆ. ಜವಾಹರಲಾಲರು ಹೇಳುತಿದ್ದುದನ್ನು ಕೇಳುತಿದ್ದ ಜನತೆ ಇವರ ಮಾತಿಗೂ ಕಿವಿಗೊಡಬೇಕೆಂದೇನಾದರೂ ಇದೆಯೇ? ಕಿವಿಗಳನ್ನು ಯಾರಾದರೂ ಇವರಿಗೆ ಗುತ್ತಿಗೆಗೆ ಕೊಟ್ಟರೇನು? ಜವಾಹರಲಾಲರಿಗೆ ಜನರನ್ನು ಮುಗ್ಧಗೊಳಿಸುವ ಕೌಶಲ್ಯ ಕರಗತವಾಗಿತ್ತು! ಆದರೆ ಜಯಪ್ರಕಾಶರ ಪಾಡೇನು? ಅವರು ಗಣೇಶನನ್ನು ಮಾಡಹೋಗಿ ಗಾಂಪನನ್ನು ಮಾಡುತ್ತಿದ್ದಾರೆ. ಹಾಗಾಗಿ ನಗೆಪಾಟಲಿಗೆ ಅವರು ತುತ್ತಾಗುತ್ತಿದ್ದಾರೆ.

ಅಕ್ಷಯ ಚಿನ್ನ ಅದೇನೂ ಬೆಳೆಯದ ಗುಡ್ಡಗಾಡೆಂದು ನೆಹ್ರೂಜಿ ಹೇಳಿ ಅದನ್ನು ಚೈನಾಕ್ಕೆ ಬಿಟ್ಟುಕೊಟ್ಟು ಸಂಧಾನ ನಡೆಸೋಣವೆಂದು ಪ್ರಧಾನಿಯಾಗಿದ್ದ ಜವಾಹರಲಾಲಜೀ ಆಗಾಗ ಹೇಳುತ್ತಿದ್ದರು. ಅವರಿಗದು ಮನಸ್ಸಿನಲ್ಲಿತ್ತೋ ಇಲ್ಲವೋ, ಬಿರುಬಾರಿಯಲ್ಲಿ ಜನವಸತಿಯೇ ಇಲ್ಲವೆಂದು ಅವರಾಡಿಲ್ಲವೇನು? ಹಾಗೆಯೇ ಅಕ್ಷಯ ಚಿನ್ನ ಕೂಡಾ ಅವರನ್ನು ದಾರಿ ತಪ್ಪಿಸಲು ಆಗ ಒಬ್ಬರು ರಕ್ಷಣಾ ಮಂತ್ರಿ ಸ್ಥಾನದಲ್ಲಿದ್ದರು! ಅವರನ್ನು ಭಾರತದ ರಕ್ಷಣಾ ಮಂತ್ರಿ ಎನ್ನುವುದಕ್ಕಿಂತ ಕಮ್ಯೂನಿಸ್ಟ್ ಚೈನಾದ ರಕ್ಷಣಾ ಮಂತ್ರಿ ಎಂದರೆ ಚೆನ್ನಾಗಿರುತ್ತದೆ. ಅವರ ಹೆಸರೇ ಕೃಷ್ಣಮೆನನ್. ಇಂತಹ ಅವರ ಕುಟಿಲ ದೇಶದ್ರೋಹಿ ಕಾರಸ್ಥಾನದ ಪರಿಣಾಮವಾಗಿ ಅವರಿಗೆ ಅರ್ಧಚಂದ್ರ ಪ್ರಯೋಗ ಮಾಡಲಾಯಿತು. ಅಂದರೆ ಅಕ್ಷಯ ಚಿನ್ನ ಬಿಟ್ಟುಕೊಡುವ ಯೋಜನೆಯನ್ನು ಬಿಟ್ಟುಕೊಟ್ಟಂತಾಯಿತು.

ಸತ್ತು ಕೊಳೆಯುತ್ತಿರುವ ಆ ಕತ್ತೆಯ ಮೇಲೆ ಜಯಪ್ರಕಾಶ ಕುಳಿತುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಒಡನೆ "ಉಘೋ, ಉಘೋ, ಉಘೇ, ಉಘೇ" ಮುಂತಾಗಿ ಕಮ್ಯೂನಿಸ್ಟರು ಸ್ವರ ಸೇರಿಸಿದರು. ಕಮ್ಯೂನಿಸ್ಟರ ಮುಂದಾಳು ಎ. ಕೆ. ಗೋಪಾಲನರು ಜಯಪ್ರಕಾಶರಿಗೆ ಜಯಕಾರ ಹಾಕಿದುದಲ್ಲದೇ ಮುಂದಕ್ಕೆ ದೂಡಿಬಿಟ್ಟಿದ್ದಾರೆ. ಕಾಶ್ಮೀರವನ್ನು ಪಾಕಿಸ್ತಾನ ಆಕ್ರಮಿಸಿಕೊಂಡಿದೆಯಾದರೂ ಪಾಕಿಸ್ತಾನದ ಬಳಿ ಸಂಧಾನದ ಮಾತುಕತೆ ನಡೆಯುತ್ತಿರುವಂತೆ ಚೈನಾದೊಂದಿಗೂ ನಡೆಸಬೇಕೆಂದು ಅವರು ಚೈನಾ ಪರ ವಕೀಲಿ ವಹಿಸಿದ್ದಾರೆ.

ಕಾಶ್ಮೀರವನ್ನು ಪಾಕಿಸ್ಥಾನಕ್ಕೆ ಬಿಟ್ಟುಕೊಟ್ಟಾದರೂ ರಾಜಿ ಮಾಡಿಕೊಳ್ಳಬೇಕೆಂದು ಹೇಳುವವರು ಸ್ವತಂತ್ರ ಪಕ್ಷದವರು. ಅವರ ಮುಖಂಡ ಮಸಾನಿಯವರು ಜಯಪ್ರಕಾಶರ ಗುತ್ತಿಗೆಯ ಮಾತಿಗೆ ಗುಡುಗಿದ್ದಾರೆ.

ಸಂಯುಕ್ತ ಸಮಾಜವಾದಿಗಳೂ ತಮ್ಮ ಮಾಜಿ ಮಹಾ ನಾಯಕನ ನೆರವಿಗೆ ನಿಧಾನಿಸಿದ್ದಾರೆ ಬಹಳಷ್ಟು ಟೀಕೆಗೆ ಹೋಗದಿದ್ದರೂ ಮುಖ ತಿರುಗಿಸಿಕೊಂಡಿದ್ದಾರೆ. ಅವರು ಮುಖ ತಿರುಗಿಸಿಕೊಂಡರೂ ರಾಮ ಮನೋಹರ ಲೋಹಿಯಾ ಕೇಳಬೇಕಲ್ಲಾ? ಜಯಪ್ರಕಾಶರು ಪಕ್ಷದಲ್ಲೇ ಇರುತ್ತಿದ್ದರೆ ಅವರ ಬಾಯಿಗೆ ಕಾಸಿದ ಲೋಹವನ್ನು ಲೋಹಿಯಾ ಸುರಿಯುತ್ತಿದ್ದರೋ ಏನೋ? ಅಷ್ಟರವರೆಗೆ ಬಿಸಿ ಬಿಸಿಯಾಗಿ ಮಾತಾಡಿದ್ದಾರೆ, ಕಾಶ್ಮೀರ ದಾನಕ್ಕಿಂತಲೂ ಕೂಟ ಸರಕಾರದ ಮಾತೆತ್ತುತ್ತಿರುವ ಲೋಹಿಯಾ ಚೈನಾ ಸಹಿತ ಏಕ ಕೂಟ—ಸರಕಾರ ನಡೆಸಬಾರದೆಂದು ಕಮ್ಯೂನಿಸ್ಟರು ಕೇಳದಿರುವರೇ?

ಭಾರತದ ಕಣಕಣವೂ ಪವಿತ್ರವೆನ್ನುತ್ತಿರುವ ಭಾರತೀಯ ಜನಸಂಘ ಅವರ ವಿಷಯ ಕೇಳಬೇಕೆ? ಆದರೆ ಅವರು ರಾಜಕೀಯ ರಂಗದಿಂದ ಜಯಪ್ರಕಾಶಜೀಯವರನ್ನು ಅಂದೇ ಲಕ್ಷ್ಯದಿಂದ ಹೊರಗೆ ಬಿಟ್ಟಿದ್ದಾರೆ ವಯಸ್ಸಾಗಿದೆ ಹೋಗಲಿ

ವಿರೋಧ ಪಕ್ಷಗಳು ಮಾತ್ರವಲ್ಲ, ಸಂಧಾನ ನಾರಾಯಣರನ್ನಾಗಿ ಜಯಪ್ರಕಾಶರನ್ನು ಕಳುಹಿಸುತ್ತಿರುವ ಕಾಂಗ್ರೆಸ್ ಪಕ್ಷದವರೂ ಜಯಪ್ರಕಾಶರಿಗೆ ಜಯಕಾರ ಹಾಕದೆ ಮಾತಿನ ಕರಬಿಡುತ್ತಿದ್ದಾರೆ. ಅರೇ! ನಮ್ಮ ನೆಚ್ಚಿನ ನಾಯಕ ಜವಾಹರಲಾಲರು ಹೇಳಿದ್ದನ್ನೇ ಜಯಪ್ರಕಾಶ ಹೇಳುತ್ತಿದ್ದಾರೆಂಬ ಅರಿವು, ಪ್ರಜ್ಞೆ, ಅವರಿಗೆ ಇದೆಯೋ ಇಲ್ಲವೋ. ಆದರೂ ಇಂದು ಜಯಪ್ರಕಾಶರ ದಾನಶೂರತ್ವವನ್ನು ವಿರೋಧಿಸಿರುವ ಕಾಂಗ್ರೆಸ್ಸ್ ಮುಂದಾಳುಗಳು ಅಂದು ಮುಂದಿನಿಂದ ಅಲ್ಲದಿದ್ದರೂ ಹಿಂದಿನಿಂದಾದರೂ ಜವಾಹರಲಾಲರ ಸಂಧಾನ ಮಾತುಕತೆಯನ್ನು ಎದುರಿಸಿದ್ದರು. ಆದರೂ ತಮ್ಮ ಮುಖ ಮುಚ್ಚಿಕೊಳ್ಳಲು ಇಂದೂ ಕೆಲವರು ಅವರಲ್ಲಿ ಪ್ರಯತ್ನಿಸುತ್ತಿದ್ದಾರೆ.

ಅಕ್ಷಯ ಚಿನ್ನ ದಾನವೆಂಬ ರಾಜಕೀಯ ಶಿಶುವನ್ನು ಹಿಂದೆಯೇ ಶಾಂತಿ ಘಟ್ಟದಲ್ಲಿ ಹೂಳಲಾಗಿರುತ್ತದೆ. ಆ ಕಳೇಬರವನ್ನು ಪುನಃ ಜಯಪ್ರಕಾಶಜೀ ತೆಗೆಯುವದು ಸರಿಯಲ್ಲ. ಮಾನವ ರಕ್ತದ ರುಚಿ ಕಂಡ ಹುಲಿ ಏನು ಮಾಡಿತು? ಅದನ್ನೇ ಕಮ್ಯೂನಿಸ್ಟ್ ಚೈನೀಯರು ಮಾಡುತ್ತಿದ್ದಾರೆ. ಅವರಿಗೆ ಸಹಾಯಕರಾಗಿ ಅವರ ಆಗಮನಾಪೇಕ್ಷಿಗಳಾಗಿದ್ದಾರೆ ಇದ್ದಾರೆ ಕಮ್ಯೂನಿಸ್ಟರು.

ಜನತಾ ಜಾಗೃತಿ ನಡೆದಲ್ಲಿ ಇಂತಹ ಕೊಳಕು ರಾಜಕೀಯ ರಾದ್ಧಾಂತದ ಇತಿಶ್ರೀಯಾದೀತು. ಇಲ್ಲದಿದ್ದಲ್ಲಿ ಇಂದು ಅಕ್ಷಯ ಚಿನ್ನ. ಅನಂತರ ಅದಕ್ಕೆ ಅಂತ್ಯವೆಲ್ಲಿ?



ವಿಶೇಷ ಸುದ್ದಿ

ಇದೀಗ ಉಡುಪಿ ತೆಂಕಪೇಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟಿದೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ ಮತ್ತು ರೇಡಿಯೋ, ಟ್ರಾನ್ಸಿಸ್ಟರ್‌ಗಳಿಗೂ, ಉಡುಗೊರೆ ವಸ್ತುಗಳಿಗೂ

ಇಂದೇ ಸಂದರ್ಶಿಸಿರಿ

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿ ಯೋಗ್ಯ ಬೆಲೆಗೆ ದೊರೆಯಲಿಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ಫೋನ್:66 ಉಡುಪಿ.

ಕವಲು ದಾರಿ–ಕೆಂಪು ದೀಪ

ಇವರು ವಂಚಿಸುತ್ತ ಬಂದರು; ನಾವು ನಂಬಿದೆವು. ಇನ್ನು ಮೇಲೆ?

—ಸುದಾಸ.

ನಾನು ಕನ್ನಡಿಗ—

—ನನ್ನ ಉಸಿರು ಇದನ್ನು ಸೂಚಿಸುತ್ತಿದೆ.

—ನನ್ನ ಸೇವೆಯೆಲ್ಲ ಕನ್ನಡಕ್ಕಾಗಿ ಮೀಸಲು.

—ನಾನು ಕನ್ನಡಕ್ಕಾಗಿ ದುಡಿಯುತ್ತೇನೆ; ಮಡಿಯುತ್ತೇನೆ –

—ಇಂತಹ ಒಂದು ಕಾಹಿಲೆಗೆ ನಮ್ಮ ರಾಜಕಾರಣಿಗಳು ಮಾತ್ರ ಬಲಿಯಾಗಿಲ್ಲ-ಅವರಷ್ಟೆ ಆಗಿದ್ದರೆ ಚೆನ್ನಾಗಿತ್ತು. ಆದರೆ ಈ ಕಾಹಿಲೆ ಅಲ್ಲಿಗೇ ಪರಿಸಮಾಪ್ತಿಗೊಳ್ಳದೆ, ಕನ್ನಡನಾಡಿನಲ್ಲಿ ಅಡ್ಡಾತಿಡ್ಡಿಯಾಗಿ ಹರಡಿದೆ, ಮುಂಬಯಿ ಸೇರಿದೆ; ಮದ್ರಾಸು ಮುಟ್ಟಿದೆ.

(ಮದ್ರಾಸು ಮುಟ್ಟಿದೆ ಎಂದರೆ, ಅಲ್ಲಿರುವವರೆಲ್ಲ ಈ ಕಾಹಿಲೆಯ ತುತ್ತಾಗಿದ್ದಾರೆ ಎಂದೊ, ಆಗುವ ಸಂಭವವಿದೆ ಎಂದೊ ಯಾರೂ ತಿಳಿಯಬಾರದು.)

ಈ ಶುಷ್ಕ ಉಪಚಾರದ ನಾಲ್ಕು ಮಾತುಗಳನ್ನು ಆಗೊಮ್ಮೆ–ಈಗೊಮ್ಮೆ ಆಡಿಕೊಳ್ಳುವವರು, ಮದ್ರಾಸಿನಲ್ಲಿರುವ ನಮ್ಮವರು

ಮದ್ರಾಸಿನಲ್ಲಿರುವ ಕನ್ನಡ ಚಿತ್ರರಂಗದವರು-

ಸಮಯಕ್ಕೆ ತಕ್ಕ ಹಾಗೆ ಆಡಿಕೊಳ್ಳುವವರಿಗೆ ಈ ಮಾತು ಬೊಕ್ಕಣದೊಳಗಿನ ರಾಮ ಬಾಣ ಇದನ್ನು ಉಪಯೋಗಿಸಿದರೆ, ಪರಿಣಾಮ ಕೂಡಲೆ ಕಂಡು ಬರುತ್ತದೆ ಎಂಬ ವಿಶ್ವಾಸ ಈ "ಸಮಯ ಸಾಧಕ"ರಿಗೆ ಇದ್ದೇ ಇರುತ್ತದೆ, ಎಂತಲೇ ಇದನ್ನು ಉಪಯೋಗಿಸುವದನ್ನು ಅವರೆಲ್ಲಾ ಅರಿತು ಬಲ್ಲರು

ಕನ್ನಡ ತಾಯಿಯನ್ನು ಜನರ ಮುಂದಿರಿಸಿಕೊಂಡು ಹೊಟ್ಟೆ ಹೊರೆಯುವ ಒಂದು ಕೆಲಸ ಈಗಷ್ಟೆ ಆರಂಭಗೊಂಡಿಲ್ಲ ಇದು ಕಳೆದ ಹತ್ತು-ಹದಿನೈದು ವರ್ಷಗಳ ಹಿಂದೆ—ಬೇಕಾಗಿದ್ದರೆ ಅದಕ್ಕೂ ಕೆಲವು ವರ್ಷಗಳ ಹಿಂದೆ ಪ್ರಾರಂಭವಾಗಿ, ಅಂದಿನಿಂದ ಇಂದಿನ ವರೆಗೆ ಚೆನ್ನಾಗಿಯೇ ನಡೆಯುತ್ತ ಬಂದಿರುವ ಒಂದು ವೃತ್ತಿ.

. ಕನ್ನಡನಾಡಿ—ಕನ್ನಡ ತಾಯಿಯನ್ನು ಬಳಸಿಕೊಂಡು ಹೊಟ್ಟೆ ತುಂಬಿಸಿಕೊಳ್ಳಬಹುದೆಂಬ ನಂಬಿಕೆ ಅಂದು ಇದ್ದಿರಲಿಕ್ಕಿಲ್ಲ; ಇವತ್ತಿಗೆ ಈ ರೀತಿ ಆಡಿಕೊಳ್ಳುತ್ತ ಸುಖವಾಗಿ ಇದ್ದು ಬಿಡಬಹುದೆಂಬ ನಂಬಿಕೆ ಅನೇಕರಲ್ಲಿದೆ.

ಇದು ಸಾಧ್ಯವೇ—ಸಾಧುವೇ ಎಂಬ ಪ್ರಶ್ನೆ ನಾವೀಗ ಎತ್ತುವ ಅಗತ್ಯವಿಲ್ಲ.

ಕನ್ನಡನಾಡನ್ನು ಕನ್ನಡನಾಡೆಂಬ ಹೆಸರಿಟ್ಟು ಕರೆಯಲು ಈ ವಿಳಂಬವೇಕೆ?

ಈ ಕುರಿತು ಆಡಬಲ್ಲ ಶ್ರೀಮಾನ್ ನಿಜಲಿಂಗಪ್ಪನವರು ಆಡಿದ್ದನ್ನು ಸಾಧಿಸಲು ಏಕೆ ಪ್ರಯತ್ನಿಸುವದಿಲ್ಲ?

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೆಂದು ಕಳೆದ ಎಂಟು ವರ್ಷಗಳಿಂದ ಕರೆಯಿಸಿಕೊಳ್ಳುತ್ತ ಬಂದಿರುವ ಶ್ರೀ ಶ್ರೀ ಶಿವಮೂರ್ತಿ ಶಾಸ್ತ್ರಿಗಳು, ಚೆನ್ನಾಗಿಯೇ ಆಡುತ್ತ ಬಂದಿದ್ದಾರೆ ಈ ರೀತಿ ಆಡುತ್ತ ಬಂದಿರುವರೆಂತಲೇ ಕಳೆದ ಎಂಟು ವರ್ಷಗಳಲ್ಲಿ ಅವರು ಅಧ್ಯಕ್ಷಸ್ಥಾನದಲ್ಲಿ ಉಳಿದುಕೊಂಡಿದ್ದಾರೆ?

ಇನ್ನು ಕನ್ನಡ ಚಳುವಳಿ ಏನು ಸಾಧಿಸಿದೆ ಎಂಬುದನ್ನು ಒಂದಿಷ್ಟು ನೋಡೋಣ

ಕಳೆದ ಕೆಲವು ವರ್ಷಗಳಲ್ಲಿ ಚಳುವಳಿ ಸಾಧಿಸಿದ್ದು ಕಡಿಮೆ.ಆದರೂ ಒಂದು ಸಮಾಧಾನವಿತ್ತು: ಜನಜಾಗ್ರತಿಯಾಗಲೂ ಬಹುದು ಎಂಬ ನಂಬಿಕೆ ಅಂದಿನ ದಿನಗಳಲ್ಲಿತ್ತು.

ಆದರೆ ಈಗ ಸ್ವಪ್ರತಿಷ್ಠೆ ಮತ್ತು ಸ್ವಪ್ರಚಾರದ ಕಾರ್ಯ ಮಾತ್ರ ಇಲ್ಲಿ ನಡೆಸಿದೆ ಅದಕ್ಕೂ ಮಿಗಿಲಾದ ಕೆಲಸ ಸಾಧಿಸುವ ದಿಡಿ ಎಂಬುದನ್ನೇ ಅವರು ಮರೆತಿದ್ದಾರೆ?

(ರಾಜ್ಯದ ಹೆಸರು ಕರ್ನಾಟಕವೆಂದು ಆದ ಕೂಡಲೆ, ಇವರೆಲ್ಲರಿಗೆ ಆಡಲು ವಿಷಯ ಸಿಗಲಾರದು; ಮಾಡಲು ಕೆಲಸವೂ ಇರಲಾರದು)

ಈ ರೀತಿ ಆಡುವ ಮಾತ್ರದಿಂದ ಆಗುವ ಲಾಭವೇನು?

ಇದಕ್ಕೆ ಉತ್ತರ ಕನ್ನಡ ಚಿತ್ರೋದ್ಯಮದಲ್ಲಿದೆ!

ಶ್ರೀಮಾನ್ ಕಲ್ಯಾಣಕುಮಾರ್ 'ನಾನು ಕನ್ನಡಿಗ' ಎಂದು ಹೇಳುತ್ತಾರೆ ತಮಿಳು ನಾಟಕಗಳನ್ನು ಆಡುತ್ತಾರೆ. [ಈ ತಮಿಳು ನಾಟಕವನ್ನು ನೋಡುವುದೆಂದರೆ ಮಂದನಿಗೆ ಹೆಚ್ಚು ಮೆಚ್ಚಿನ ವಿಷಯ. ಆ ಕನ್ನಡಿಗರಿಬ್ಬರು ಆಡುವ ಭಾಷೆ ಮಾತ್ರ ಅಚ್ಚ ಕನ್ನಡವೆನ್ನುತ್ತೀರಾ? ನೀವೇ ಬೇಕಾದರೆ ಕೇಳಿ ನೋಡಿ ಹಾಗೆಂದರೆ! ಈ ಅಚ್ಚಕನ್ನಡ ಅಭಿಮಾನಿಗಳು ಆಡುವ ಮೆಚ್ಚಿನ ತಮಿಳು ಭಾಷೆಯನ್ನೇ, 'ಭಾಷೆ' ಸಿಗುವ ಮಹದಾಸೆ ಎನ್ನಿ ಬೇಕಾದರೆ, ಅದನ್ನು ಒಪ್ಪಿಕೊಳ್ಳಬಹುದು!

ಟಿ ವಿ. ಸಿಂಗ್ ಠಾಕೂರ್ ಮತ್ತು ಎಸ್ ಕೆ. ಭಗವಾನ್ ಕನ್ನಡ ಚಿತ್ರೋದ್ಯಮದ ಏಳಿಗೆಗಾಗಿ ನಡೆಸುವ ಪ್ರಯತ್ನವೇನು ಕಡಿಮೆಯೆ? ತಮಿಳಿನಲ್ಲಿ ಸಂಭಾಷಣೆ ಇಲ್ಲದೆ ಇವರಿಗೂ ನಡೆಯುವುದಿಲ್ಲ. [ಬೆಂಗಳೂರಿಗೆ ಬಂದಾಗಲೂ,ಅವರು ಸ್ವರ ಬದಲಾಯಿಸಿ ಕೊಳ್ಳದಿದ್ದರೆ ಹೇಗೆ]

ನಾಗೇಂದ್ರರಾಯರು ಹಳೆಯ ಹುಲಿ, ಅನುಭವವುಳ್ಳವರು; ಕನ್ನಡದ ಪರಿಚಯ ಅವರಿಗೆ ಇವತ್ತು ನಿನ್ನೆಯದಲ್ಲ. ಅವರು ತಮಿಳು ಕಥಾವಸ್ತುವನ್ನು ತಂದು, ಕನ್ನಡ ಚಿತ್ರೋದ್ಯಮವನ್ನು ಬೆಳೆಸಲು ಮನಸ್ಸು ಮಾಡಿದ್ದಾರೆ. ಇದಕ್ಕಾಗಿ ಅವರನ್ನೂ ಅಭಿನಂದಿಸಬೇಕು

ಉದಯ ಕುಮಾರ್ ಗರ್ಜಿಸಿದ ಗರ್ಜನೆಯೇನೇನೂ ನಿಷ್ಪ್ರಯೋಜಕವಲ್ಲ ಇದರಿಂದ ತುಂಬಾ ಪ್ರಯೋಜನವಿದೆ. ತಮ್ಮನ್ನು ಕನ್ನಡಿಗರಿಂದ ಬೇರ್ಪಡಿಸಲು ತಮಿಳರು ಹೊಂಚು ಹಾಕಿದ್ದಾರೆ ಎಂದು ಬೇರೆ ಈ ಮಹಾಶಯರು ಹೇಳಿದ್ದಾರೆ [ಇದು ತಮಿಳರಿಗೆ ಎಚ್ಚರಿಕೆಯ ಮಾತೇನೂ ಅಲ್ಲ. ಕನ್ನಡದಲ್ಲಿ ತಮಗೆ ಇರುವ ಅಭಿಮಾನ ಇಷ್ಟು ಪಾಲಿದೆ ಎಂಬುದರ ಸೂಚನೆ] ಆದರೆ ಮದ್ರಾಸಿನ "ಮೂವಿಲ್ಯಾಂಡ್" ಪತ್ರಿಕೆ ಹೇಳಿದ ಮುತ್ತಿನಂತಹ ವಾಕ್ಯವನ್ನು ಉದಯ ಕುಮಾರ್ ಅಲ್ಲಗಳೆದಾಗಲೇ, ಆ ಪತ್ರಿಕೆ ಉದಯ ಕುಮಾರ್ ಇಂತಹ ಸಮಯ ಪತ್ರಿಕಾ ಗೋಷ್ಠಿಯಲ್ಲಿ ಹೀಗೆ ಹೇಳಿದ್ದಾರೆ ಎಂದೂ ಹೇಳಿತು. 'ನಾನು ಜನ್ಮತಃ ತಮಿಳು ನಾಡಿನಲ್ಲೇ ಹುಟ್ಟಿದವ' ಎಂದು ಶ್ರೀಮಾನ್ ಉದಯ ಕುಮಾರ್ ಅವರು ಹೇಳಿದ ಮಾತು ಅವರಿಗೆ ಮರೆತು ಹೋಗಿರ ಬಹುದೆಂದು, ಆ ಪತ್ರಿಕೆ ಎಚ್ಚರ ಪಡಿಸಿತು.

ಇನ್ನು ಜಿ ವಿ ಅಯ್ಯರ್ ಅವರು ಕನ್ನಡ ಚಿತ್ರಗಳನ್ನು ತಯಾರಿಸಲು ಸದಾ ಶ್ರಮಿಸಿದ್ದಾರೆ. ಅವರು ತಮ್ಮ ಚಿತ್ರಕ್ಕೆ ಒಂದೋ ತಮಿಳು ಪ್ರಿಯ ಕನ್ನಡಿಗ ಕಲ್ಯಾಣ ಕುಮಾರ್ ಅವರನ್ನೇ ಹೀರೋ ಮಾಡುತ್ತಾರೆ, ಇಲ್ಲವೇ ಹೊಸ ನಟರುಗಳನ್ನೇ ಆರಿಸುತ್ತಾರೆ. ಇವರಿಬ್ಬರು ಕೂಡಿದಾಗ ಕನ್ನಡ ಸುಳಿಯಬಾರದು ಎಂಬ ಪ್ರತಿಜ್ಞೆ ಏನೂ ಇಲ್ಲ. ಆದರೆ ತಮಿಳಿನ ಅಭಿಮಾನ ಅವರನ್ನು ಕನ್ನಡ ಭಾಷೆಯನ್ನು ಆಡಗೊಡುವುದಿಲ್ಲ. ಇದು ಯಾರ ತಪ್ಪು?

ಮದ್ರಾಸಿನಲ್ಲಿರುವ ಕನ್ನಡ ಚಿತ್ರೋದ್ಯಮ ತಮಿಳಿನ ಉಸಿರಿನಿಂದ ಬೆಳೆಯುತ್ತಿದೆ. ತಮಿಳು ಆಡುವದೆಂದರೆ ಕನ್ನಡ ಚಿತ್ರೋದ್ಯಮಿಗಳಿಗೆಲ್ಲ ಒಂದು ರೀತಿಯ ತೃಪ್ತಿ ಸಿಗುತ್ತಿದೆ. ಅನ್ನಕ್ಕಾಗಿ ತಿರುಗುವವನಿಗೆ ಭರ್ಜರಿ ಭೋಜನ ಸಿಕ್ಕಷ್ಟು ಸಂತೋಷ ಅವರಿಗಾಗುತ್ತದೆಯೋ ಏನೊ?

ಕೊನೆಯದಾಗಿ ಮುಂಬಯಿಗೆ ಒಂದು ಬಾರಿ ಹೋಗಿ ಬರೋಣ ಮುಂಬಯಿಯಲ್ಲಿ ನಿಮಗೆ ನಿರಾಶೆಯಾಗುವದಿಲ್ಲ ಇಲ್ಲಿ ನಮ್ಮವರು ನಾಲ್ಕು ಲಕ್ಷಕ್ಕೆ ಮೀರಿ ವಾಸಿಸುತ್ತಿದ್ದಾರೆ. ಕನ್ನಡ ಸಂಘ ಸಂಸ್ಥೆಗಳಿಗೂ ಕಡಿಮೆಯಿಲ್ಲ ಮುಂಬಯಿಯ ಒಂದು ತುದಿಯಿಂದ ಇನ್ನೊಂದು ತುದಿಗೆ ಹೋಗಿ ಬರುವಾಗ, ಅದೆಷ್ಟೋ ಮಂದಿ ನಮ್ಮವರ ಪರಿಚಯವಾಗುತ್ತದೆ.

(ಹತ್ತನೇ ಪುಟ ನೋಡಿರಿ)



ಸ್ಥಿರ ಠೇವಣಾತಿಗಳ ಮೇಲೆ
ಬಡ್ಡಿಯ ದರಗಳು

4% ರಿಂದ 6½%

ಇದೇ ತಾರೀಕು 17ನೇ ಅಗೋಸ್ತ್ 1964ರಿಂದ ನಿಮ್ಮ ಸ್ಥಿರ ಠೇವಣಾತಿಗಳ ಮೇಲೆ ಸಾಲಿಯಾನ್ ಸೇಕಡಾ 6½ ತನಕ ಬಡ್ಡಿ ಕೊಡಲಾಗುವುದೆಂದು ತಿಳಿಸಲು ಸಂತೋಷಪಡುತ್ತೇವೆ. ಹೆಚ್ಚಿನ ವಿವರಗಳಿಗೆ ನಿಮ್ಮ ಹತ್ತಿರದ 'ಸಿಂಡಿಕೇಟ್ ಬ್ಯಾಂಕಿ'ನ ಶಾಖೆಯಲ್ಲಿ ವಿಚಾರಿಸಿರಿ.

ಅರ್ಧ ವರ್ಷಕ್ಕೊಮ್ಮೆ ಬಡ್ಡಿಯ ಪಾವತಿ

1ರಿಂದ 7 ವರುಷಗಳ ಅವಧಿ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಪ್ರಧಾನ ಕಚೇರಿ - - - - ಮಣಿಪಾಲ

ಶಾಖೆಗಳು, 192

ಚಲಾವಣಾ ನಿಧಿ. ರೂ. 60 ಕೋಟಿಗೂ ಮಿಕ್ಕಿದೆ.

.......ಪ್ರಪಂಚದಾದ್ಯಂತ ಬ್ಯಾಂಕಿಂಗ್ ವ್ಯವಹಾರ.

ಪ್ರಚಲಿತ ಸಮಸ್ಯೆ ಭ್ರಷ್ಟಾಚಾರಕ್ಕೆ

ಇಂದು ದೇಶದ ಮೂಲೆ ಮೂಲೆಯಲ್ಲಿ ಕೇಳಿಬರುವ ಕೂಗೆಂದರೆ ಶಾಸಕರ ಭ್ರಷ್ಟಾಚಾರದ್ದು. ಪ್ರಾಯಃ ಆಹಾರ ಧಾನ್ಯಗಳ ಅಭಾವ, ಬೆಲೆಯೇರಿಕೆಯ ಸಂಬಂಧದ ಗೊಂದಲ ನಿಂತು ಹೋಯಿತೆಂದು ತಿಳಿಯಬೇಕಾಗುತ್ತದೆ. ಈ ತಿರುಗೊಬ್ಬೆ ಪ್ರಾರಂಭವಾಗಿ ಎರಡು ತಿಂಗಳುಗಳು ಕಳೆದುವು. ಈ ಅವಧಿಯಲ್ಲಿಯೇ ಆಹಾರಧಾನ್ಯಗಳ ಬೆಲೆಯು ಮಾರುಕಟ್ಟೆಯಲ್ಲಿ ಮತ್ತಷ್ಟು ಹೆಚ್ಚಿರುವುದನ್ನು ಗಮನಿಸಬಹುದು. ಸರಕಾರವು ಬೆಲೆ ನಿಯಂತ್ರಣ ಮಾಡದೆ ಹೋಗಿದ್ದರೆ, ಬೆಲೆಯೇರಿಕೆಯು ಈ ಮಟ್ಟವನ್ನು ಮುಟ್ಟುತಿತ್ತೋ ಇಲ್ಲವೋ ಎಂದು ಹೇಳುವುದು ಕಷ್ಟ. ಜನ ಸಾಮಾನ್ಯರು ಆಡಿಕೊಳ್ಳುವಂತೆ ೩೦—೩೨ ರೂಪಾಯಿಗೆ ಮುಡಿ ಅಕ್ಕಿ ದೊರಿಯುಬಹುದಿತ್ತು. ಇಂದಿನಂತೆ ೩೫-೩೬ ರೂಪಾಯಿ ತೆರುವುದು ತಪ್ಪುತಿತ್ತು. ಸರಕಾರವು ಈ ಪರಿಸ್ಥಿತಿಯನ್ನು ಉದ್ದೇಶಪೂರ್ವಕವಾಗಿ ನಿರ್ಮಿಸಲಿಲ್ಲ ನಿಜ. ಆದರೆ, ಗಣಪತಿಯನ್ನು ರಚಿಸಹೋಗಿ ಹನುಮಂತನನ್ನೇ ನಿರ್ಮಿಸಿದವನ ಕತೆಯಾಗಿದೆ ಇಂದು.

ಆದರೂ ಜನರಿಂದು ಕಾಂಗ್ರೆಸ್ ಶಾಸಕರ ಭ್ರಷ್ಟಾಚಾರದತ್ತ ಗಮನ ಹರಿಸಿದ್ದಾರೆ. ಕೇರಳದ ಶಂಕರ್ ಸಂಪುಟ ಶೋಚನೀಯ ದುಸ್ಥಿಯನ್ನೆದುರಿಸಿ ಉರುಳಿತು. ಒರಿಸ್ಸಾದಲ್ಲಿ ಬಿರೇನ್ ಮಿತ್ರರು ಮುಖ್ಯ ಮಂತ್ರಿ ಹುದ್ದೆಗೆ ರಾಜಿನಾಮೆಯಿತ್ತಿದ್ದಾರೆ. ಮಧ್ಯ ಪ್ರದೇಶದ ಮುಖ್ಯ ಮಂತ್ರಿ ಪರಿಸ್ಥಿತಿಯೂ ಅನರ್ಘನೀಯವಾಗಿದೆ. ಮಹಾರಾಷ್ಟ್ರದ ಪಾಸಿ ನಿರೋಧ ಸಚಿವ ಪಪನಾಗರರೂ ತಮ್ಮ ರಾಜಿನಾಮೆಯನ್ನರ್ಪಿಸಿದ್ದಾರೆ. ಕರ್ನಾಟಕ ನಿಜಲಿಂಗಪ್ಪನವರಲ್ಲಿ ಯಾವುದೇ ಪ್ರಕಾರದ ವಿಚಾರಣೆಯನ್ನೂ ಎದುರಿಸುವ ಎದೆಗಾರಿಕೆಯಿಂದು ಮೂಡಿ ಬಂದಿದೆ; ಕೇರಳದಿಂದವರು ಪಾಠ ಕಲಿತಿದ್ದಾರೆ; ಆರೋಪಗಳನ್ನು ಹೊರಿಸುವುದು ಸುಲಭ; ಸರಕಾರ ಅವನ್ನು ಸುಳ್ಳೆಂದು ಸಿದ್ಧಮಾಡಿ ತೋರಿಸಬೇಕಾಗಿದೆ— ಇದುವೇ ತ್ರಾಸದಾಯಕವಾದುದು.

ಪಂಜಾಬದ ಕೈರಾನರ ಪದಚ್ಯುತಿಯಿಂದ ದೇಶದ ಜನರಲ್ಲಿಯೂ ಒಂದು ನವಚೇತನ ಹರಿಯ ತೊಡಗಿದೆ. ಕೇಂದ್ರ ಗೃಹ ಮಂತ್ರಿ ನಂದಾರು ಕೈಗೊಂಡ ಕಾರ್ಯಕ್ರಮಗಳನ್ನೂ ಅವರು ಸ್ವಾಗತಿಸಿದ್ದಾರೆ. ಇದರಿಂದಾಗಿ ತಮ್ಮ ಹಾಲಹವಾಲೆಗಳನ್ನು ಕೇಳುವವರೂ ಇದ್ದಾರೆಂಬ ಮನೋಭಾವ ಜನರಲ್ಲಿ ಮೂಡಿ ಬಂದಿದೆ; ಅನ್ಯಾಯವನ್ನು ಪ್ರತಿಭಟಿಸುವ ಧೈರ್ಯವೂ ಅವರಲ್ಲಿ ಹುಟ್ಟಿಕೊಂಡಿದೆ. ಇದೇ ರೀತಿಯು ಮುಂದುವರಿದರೆ, ಭ್ರಷ್ಟಾಚಾರ— ಅನ್ಯಾಯಗಳು ದೂರವಾಗುವ ದಿನವೊಂದು ಭಾರತದ ಇತಿಹಾಸದಲ್ಲಿ ಮೂಡಿ ಬರುವುದು ಖಂಡಿತ.

ಪಂಜಾಬದಲ್ಲಿ ಕೈರಾನರ ಉತ್ತರಾಧಿಕಾರಿಯಾಗಿ ಬಂದ ರಾಮಕಿಶನರಿಗೂ ಅವರ ಹಿಂದಿನವರಿಗೂ ಅಜಗಜಾಂತರ. ಕೈರಾನರು ತನ್ನ ಮತ್ತು ಕುಟುಂಬದ ಸಂಪತ್ತನ್ನು ಕೂಡಿಸಿದ್ದರೆ ರಾಮಕಿಶನ್ ನಿಸ್ಪೃಹರಾಗಿದ್ದಾರೆ. ಅವರು ತನ್ನ ಆಸ್ತಿಪಾಸ್ತಿಗಳನ್ನು ಕಾಂಗ್ರೆಸ್ ಅಧ್ಯಕ್ಷರ ಮುಂದೆ ಘೋಷಿಸಿದ್ದಾರೆ. ತನ್ನ ಸಂಪುಟದ ಸದಸ್ಯರ ಆಸ್ತಿಯ ವಿವರಗಳನ್ನೂ ಪಡೆದುಕೊಂಡಿದ್ದಾರೆ. ಇವರು ನಿರ್ಮಿಸಿದ ಪರಂಪರೆಯಿಂದ ಮಂತ್ರಿಗಳ ಸದಾಚಾರದ ಪ್ರಶ್ನೆಯು ಸರಳವಾಗಿ ಉತ್ತರಿಸಲ್ಪಡುವ ನಿರೀಕ್ಷೆ ತಲೆದೋರಿದೆ. ರಾಜ್ಯ ಮತ್ತು ಕೇಂದ್ರದ ಎಲ್ಲ ಮಂತ್ರಿವರ್ಯರೂ ತಂತಮ್ಮ ಮತ್ತು ತಮ್ಮ ನಿಕಟ ಸಂಬಂಧಿಕರ ಆಸ್ತಿ-ಪಾಸ್ತಿಗಳ ಬಗ್ಗೆ ಸಂಪೂರ್ಣ ವಿವರಗಳನ್ನು ಕಾಲಕಾಲಕ್ಕೆ ನೀಡಬೇಕೆಂದು ಕಾಂಗ್ರೆಸ್ ಮಂತ್ರಿಗಳ ನಡಾವಳಿಯನ್ನು ರೂಪಿಸುವ ಸಮಿತಿಯು ಅಭಿಪ್ರಾಯಪಟ್ಟಿದೆ. ನಿಕಟ ಸಂಬಂಧಿಯೆಂದರೆ, ಹೆಂಡತಿ ಮಕ್ಕಳು ಮತ್ತು ಅವರನ್ನೇ ಜೀವನಕ್ಕೆ ಹೊಂದಿಕೊಂಡಿರುವವರು ಎಂದು ವಿವರಣೆ ಹೊರಟಿದೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳ ಮಂತ್ರಿಗಳ ಮೇಲೆ ಹೇರಲಾಗಿರುವ ಆರೋಪವೆಂದರೆ ಭ್ರಷ್ಟಾಚಾರ. ಗೃಹಮಂತ್ರಿ ನಂದಾರ ದೃಷ್ಟಿಯಲ್ಲಿ ಲಂಚ ಸ್ವೀಕರಿಸುವುದು ಮಾತ್ರ ಭ್ರಷ್ಟಾಚಾರವಲ್ಲ. ಅದಕ್ಕೆ ವಿಶಾಲಾರ್ಥವನ್ನು ನೀಡಿ ಕರ್ತವ್ಯಬಾಹಿರನಾಗುವುದೂ ಭ್ರಷ್ಟಾಚಾರವಾಗುವುದು. ವಶೀಲಿ ಪ್ರಭಾವ—ಆಗ್ರಹಗಳಿಗೆ ಬಲಿಬಿದ್ದೇ ಸರಕಾರದಲ್ಲಿ ಅನ್ಯಾಯ ನಡೆಯುತ್ತಿದೆ. ಇದರಿಂದ ಸರಕಾರದ ಕಾರ್ಯ ವಿಧಾನದಲ್ಲಿ ಅನಪೇಕ್ಷಿತ ವಿಳಂಬವಾಗುವುದು ಮಾತ್ರವಲ್ಲದೆ ಹಲವು ಜನರಿಗೆ ಅನ್ಯಾಯವಾಗುವುದು. ಇದರಿಂದಾಗಿಯೇ ಕಾಂಗ್ರೆಸ್ ಶಾಸನದಲ್ಲಿ ಜನತೆಯ ವಿಶ್ವಾಸವು ಕಡಿಮೆಯಾಗುತ್ತ ಬರುವುದು. ಹಾಗಿರುವಾಗ ಮಂತ್ರಿಗಳಾದವರು ತಮ್ಮ ಸಂಪತ್ತನ್ನು ಹೆಚ್ಚಿಸಿಕೊಂಡ ಉದಾಹರಣೆಗಳು ದೊರೆತರೆ, ವಿರೋಧಿ ಪಕ್ಷಗಳಿಗೆ ಕಸುವು ಬರುವುದು ಸಹಜ ಮತ್ತು ಸ್ವಾಭಾವಿಕವೇ.

ಮಂತ್ರಿಯ ಸಂಬಂಧಿಯಾದೊಡನೆಯೇ ಆತನಿಗೆ ಲೋಕದಲ್ಲಿ ಬದುಕುವ ಸೌಲಭ್ಯ ದೊರೆಯಬಾರದೆ? ವ್ಯಾಪಾರ, ಕಂಟ್ರಾಕ್ಟು, ಉದ್ದಿಮೆ ಮೊದಲಾದುವುಗಳಲ್ಲಿ ಆತ ತೊಡಗಬಾರದೆ? ಮಂತ್ರಿಯಾದವನ ಸಂಬಂಧಿಗೆ ಈ ಬಗೆಯ ಶಾಪವು ದೊರೆಯಬಾರದು. ಆತನ ಮಟ್ಟದ ಇನ್ನಿತರ ನಾಗರಿಕನಿಗೆ ನ್ಯಾಯವಾಗಿ ದೊರೆಯಬಹುದಾದ ಸೌಲಭ್ಯಗಳಷ್ಟೇ ದೊರೆಯಬೇಕಲ್ಲದೆ, ಕೈರಾನರ ಪುತ್ರರಂತೆ ಕುಬೇರನ ಭಂಡಾರವಲ್ಲ. ಆದರೆ, ಇಂದು ಅಪಾದಿತರಾದ ಮಂತ್ರಿಗಳು ತಮ್ಮ ನಿಕಟ ಸಂಬಂಧಿಗಳ ಹಾಗೂ ತಮ್ಮ ಅಚಲ ಭಕ್ತರ ಮೇಲೆ ಅಪಾರ ಕೃಪಾ ಕಟಾಕ್ಷವನ್ನು ಬೀರಿದ್ದಾರೆ ಎಂಬ ಬಲವತ್ತರವಾದ ಆರೋಪ ಎದ್ದಿದೆ. ಇದರಿಂದಾಗಿಯೇ ಅಧಿಕಾರೀ ವರ್ಗದಲ್ಲಿರುವ ಶಾಸಕರು ಮತ್ತು ಅನಧಿಕಾರಿ ಶಾಸಕರೆಂಬ ಎರಡು ಗುಂಪು ಪ್ರತಿಯೊಂದು ರಾಜ್ಯದಲ್ಲಿಯೂ ತಲೆದೋರಿದೆ. ಕಾಂಗ್ರೆಸ್ಸು ಪ್ರಬಲ ವಿರೋಧಿ ಪಕ್ಷದ ವಿರೋಧವನ್ನು ಎದುರಿಸಬೇಕಾದ ಸಂದರ್ಭವಿಲ್ಲದಿರುವಾಗ, ಕಾಂಗ್ರೆಸಿನೊಳಗಣ ಗುಂಪುಗಾರಿಕೆಯು ಒಳ್ಳೆಯ ಪರಿಣಾಮ ಬೀರುವುದೆನ್ನುತ್ತಾರೆ ಕೆಲವು ಮೇಧಾವಿಗಳು. ಗುಂಪುಗಾರಿಕೆಯು ಆಡಳಿತೆಯ ಲೋಪದೋಷಗಳನ್ನು ಎತ್ತಿ ಅವನ್ನು ಸರಿಪಡಿಸುವಲ್ಲಿ ಕಾರ್ಯತತ್ಪರವಾದರೆ ಅದನ್ನು ಒಂದು ರೀತಿಯಿಂದ ಸಮರ್ಥಿಸಲೂಬಹುದೆನ್ನಬಹುದೋ ಏನೋ! ಆದರೆ, ನಮ್ಮ ಭಿನ್ನಾಭಿಪ್ರಾಯದ ಗುಂಪಿನವರು ವಿರೋಧೀ ಪಕ್ಷಗಳನ್ನೂ ಮೀರಿದ ವಿರೋಧವನ್ನು ಕಟ್ಟಿ ದಾಯಾದಿ ಮತ್ಸರವನ್ನು ಪ್ರದರ್ಶಿಸಿ, ಕಾಂಗ್ರೆಸ್ ಸರಕಾರವನ್ನೇ ಉರುಳಿಸುವಷ್ಟು ಮುಂದುವರಿಯುತ್ತಿರುವಾಗ, ಈ ಬಗೆಯ ಗುಂಪುಗಾರಿಕೆ ಪಕ್ಷ ಹಿತದೃಷ್ಟಿಯಿಂದ ಹಿತಕಾರಿಯೆನ್ನುವುದು ಸಾಧ್ಯವಿಲ್ಲ.

ರಾಜಕೀಯ ಪಕ್ಷದೊಳಗಿರುವ ಭಿನ್ನಾಭಿಪ್ರಾಯಗಳನ್ನು ಪಕ್ಷದೊಳಗಡೆಯೇ ತೀರ್ಮಾನಿಸಿ ಒಮ್ಮತದ ಅಭಿಪ್ರಾಯಕ್ಕೆ ಬರಲೇಬೇಕು. ಅದು ಇಡಿಯ ಪಕ್ಷದ ನೀತಿಯಾಗಬೇಕು. ಕೇರಳದಲ್ಲಿ ನಡೆದಂತೆ ಪಕ್ಷದ ಸರಕಾರ ಪತನಕ್ಕೆ ಪಕ್ಷವೇ ಕಾರಣವಾಗುವುದೆಂದರೆ, ಅದು ಅಸಹನೀಯ ಮಾತ್ರವಲ್ಲ, ಗಂಡಾಂತರಕಾರಿ. ಕೌರವರು ಪಾಂಡವರು ಜ್ಞಾತಿ ಮತ್ಸರದಿಂದ ಕೂಡಿದ್ದರು; ಅವರಿಬ್ಬರೊಳಗೆ ಬೇಕಷ್ಟು ಭಿನ್ನಾಭಿಪ್ರಾಯವಿತ್ತು; ಹೋರಾಟ ನಡೆದಿತ್ತು; ಪಾಂಡವರನ್ನು ಮುಳುಗಿಸಿಯೇ ಬಿಡುವ ಛಲವೂ ಕೌರವರದಿತ್ತು. ಆದರೆ, ದುರ್ಯೋಧನನ ಮೇಲೆ ಚಿತ್ರಸೇನ ಹಲ್ಲೆ ಮಾಡಿದಾಗ, ಧರ್ಮರಾಯನೊಂದು ಮಾತಂದಿದ್ದನು: 'ನಮ್ಮ ಭಿನ್ನಮತಗಳೇನೇ ಇದ್ದರೂ ವೈರಿಗಳ ಆಕ್ರಮಣದ ಮುಂದೆ ನಾವು ನೂರಾರು ಜನ ಸೋದರರು ಒಂದು' ಎಂದು. ಇದನ್ನು ನಾವು ಮರೆಯಬಾರದು.

ಅಧಿಕಾರದಿಂದ ದೂರವುಳಿದವರು ಅಧಿಕಾರವಂತರನ್ನು ನಿಂದಿಸುವುದು ಹಾಗೂ ಅವರ ವರ್ತನೆಯ ಮೇಲೆ ಟೀಕೆ ಮಾಡುವುದು ಬಹಳ ಸುಲಭ. ಆದರೆ, ಅಧಿಕಾರವನ್ನು ನಿರ್ವಹಿಸುತ್ತ ಹೋಗುವುದು ಬಹಳ ತ್ರಾಸಕರ. ಅದೊಂದು ಮುಳ್ಳಿನ ಹಾಸಿಗೆ. ಆದರೂ ಅದನ್ನು ಬಯಸುವವರೇ ಹೆಚ್ಚು ಜನ. ಇದಕ್ಕೆ ಅದರಲ್ಲಿರುವ ಆಕರ್ಷಣೆಯೇ ಕಾರಣವೆನ್ನಬೇಕು. ಮಂತ್ರಿ ಪದವಿಯಲ್ಲಿಂದು ಇರಬಹುದಾದ ಆಕರ್ಷಣೆಯನ್ನು ತೆಗೆದು ಹಾಕಿದರೆ ಎಲ್ಲವೂ ಸರಿಯಾಗುವುದೋ ಏನೋ! ಇದು ಹೇಗೆ ಸಾಧ್ಯವಾದೀತು?

ಇದು ತನಕ ಭಾರತೀಯರನ್ನು ತನ್ನ ಅತ್ಯಪೂರ್ವ ವ್ಯಕ್ತಿತ್ವದಿಂದ ಮುಗ್ಧಗೊ



ಉತ್ಪಾದಿತ ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳಲು ಆಗತ್ಯವಾದ ಟ್ರಾನ್ಸ್‌ಫಾರ್ಮರ್, ಸ್ವಿಚ್‌ಗೇರ್ ಮೊದಲಾದುವನ್ನು ತಯಾರಿಸುವ ಭೋಪಾಳದ ಇಲೆಕ್ಟ್ರಿಕಲ್ ಕಾರಖಾನೆಯ ಒಂದು ನೋಟವಿದು.
(ವಿದ್ಯುಚ್ಛಕ್ತಿ ಸಂಬಂಧಿತ ಸಚಿತ್ರ ಲೇಖನ ಪುಟ ೫ರಲ್ಲಿ ಓದಿ)

ಮುಟ್ಟುಗೋಲು ಸಾಧ್ಯವೆ?

ಳಿಸುತಿದ್ದ ಪ್ರಧಾನಿ ನೆಹರು ಇಂದು ನಮ್ಮ ಮುಂದಿಲ್ಲ. ಅವರ ತ್ಯಾಗ ಮತ್ತು ಸೇವೆಯು ಮುಂದೆ ಎಂತಹರೂ ತಲೆಬಾಗಿಯೇ ಬಾಗುತಿದ್ದರು. ನೆಹರೂ ಪಕ್ಷವೆಂದು ಕಾಂಗ್ರೆಸ್ಸು ಪ್ರಚಂಡ ಬಹುಮತ ಪಡೆಯುತಿತ್ತು. ಇಂದು ಇಂತಹ ಪರಿಸ್ಥಿತಿಯುಳಿದಿಲ್ಲ, ಕೇಂದ್ರ ಮತ್ತು ರಾಜ್ಯ ಸರಕಾರಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿಯೇ ಜನಸ್ತೋಮದ ವಿಶ್ವಾಸವನ್ನು ಪಡೆಯ ಬೇಕಾಗಿದೆ. ಜನಹಿತವನ್ನು ಸರಕಾರ ನಿರ್ಲಕ್ಷಿಸಿದರೆ, ಅದರ ದುಷ್ಪರಿಣಾಮ ಕಾಂಗ್ರೆಸ್ಸಿನ ಮೇಲೆ ಖಂಡಿತವೂ ಬೀರುವುದೆಂಬುದನ್ನು ಮರೆಯಬಾರದು. ಹಾಗಿರುವಾಗ ಸಮರ್ಥ ಹಾಗೂ ಬಿಗುಹಿನ ಆಡಳಿತೆಯು ನಮಗಿಂದು ಬೇಕಾಗಿದೆ. ಮಾತನ್ನು ಕಡಿಮೆ ಮಾಡಿ ಕೃತಿಶೀಲರಾದ ನಾಯಕರಿಂದು ದೇಶಕ್ಕೆ ಬೇಕಾಗಿದ್ದಾರೆ. ಇಂದು ಅಧಿಕಾರದಲ್ಲಿರುವ ಮಂತ್ರಿಗಳಿಂದ ನಾವಿಂತಹ ನಿಷ್ಪಕ್ಷಪಾತವಾದ ಆಡಳಿತೆಯನ್ನು ನಿರೀಕ್ಷಿಸ ಬಹುದೆ?

ಮಂತ್ರಿಗಳು ಮತ್ತವರ ಸಂಬಂಧಿಕರ ಆಸ್ತಿ ಪಾಸ್ತಿ ವಿವರಣೆಗಳನ್ನು ಆಗಾಗ್ಗೆ ಪಡೆದುಕೊಳ್ಳುವ ಸಂಪ್ರದಾಯ ಅತ್ಯುತ್ತಮವಾದುದು. ಈ ಹೆಜ್ಜೆಯನ್ನೇ ಶಾಸಕ ಮಂಡಲದ ಎಲ್ಲ ಶಾಸಕರೂ ಈ ಮಾರ್ಗವನ್ನು ಅನುಸರಿಸುವುದು ಉಚಿತವಾಗದೇ ಎಂಬುದನ್ನು ಪರ್ಯಾಲೋಚಿಸ ಬೇಕು. ಸರಕಾರದಲ್ಲಿ ಕಾರ್ಯ ವಿಳಂಬವಾಗುತ್ತಿರುವುದಕ್ಕೆ ಈ ಶಾಸಕರು ಆಡಳಿತೆಯಲ್ಲಿ ಮಧ್ಯೆ ಪ್ರವೇಶಿಸುವುದು ಕಾರಣವೆಂದು ಹೇಳಲಾಗುತ್ತದೆ. ಕೆಲವು ಬಾರಿ ನಡೆಯುವ ಅನ್ಯಾಯಗಳಿಗೂ ಇದೇ ಕಾರಣವೆಂದು ತಿಳಿಯುತ್ತದೆ. ಶಾಸಕರಾಗಲಿ—ಮಂತ್ರಿಗಳಾಗಲೀ ಸರಕಾರದ ನೀತಿಯನ್ನು ನಿರ್ಣಯಿಸುವವರಷ್ಟೇ ಹೊರತು ಅವನ್ನು ಕಾರ್ಯರೂಪಕ್ಕೆ ತರುವವರಲ್ಲ. ಅಧಿಕಾರಿಗಳು ಯಾವುದೇ ಒತ್ತಡ—ಪ್ರಭಾವದಿಂದ ದೂರವಾಗಿದ್ದಲ್ಲಿ ಸಕಾಲದಲ್ಲಿ ಸಮರ್ಪಕವಾದ ರೀತಿಯಲ್ಲಿ ಕಾರ್ಯ ನಿರ್ವಹಿಸುವುದು ಸಾಧ್ಯವಾಗುವದು. ಇದು ಬಿಟ್ಟು ಸರಕಾರದ ಕಾರ್ಯಗಳ ನಡುವೆ ಶಾಸಕರು ಪ್ರವೇಶಿಸಿದರೆಂದರೆ ಅಲ್ಲಿ ಕಾರ್ಯಹಾನಿಯು ತಟ್ಟುವುದು.

ಜನತಾ ಸರಕಾರವು ಜನಹಿತವನ್ನು ಸಾಧಿಸಬೇಕು. ಜನತೆಯ ಸುಖ-ದುಃಖಗಳನ್ನು ಮೊದಲಿಗೆ ಅರಿತುಕೊಳ್ಳಬೇಕು. ನ್ಯಾಯಪರಿಪಾಲನೆಯನ್ನು ಮಾಡಬೇಕು. ಹಾಗಾದಲ್ಲಿ ಮಾತ್ರ ಜನ ಸುಖಪಡೆದೀತು. ಮಂತ್ರಿಗಳೂ ಸಜ್ಜನರಾದಾರು. ಪಕ್ಷವಾದರೂ ಆತ್ಮ ವಿಶ್ವಾಸದಿಂದ ಬೆಳೆದು ಬರಬಹುದು. ಆದರೆ, ಇಂತಹ ದಿನ ಭಾರತದಲ್ಲಿ ಬರಬಹುದೆ?

ಕೇಂದ್ರ ಗೃಹಮಂತ್ರಿ ನಂದಾರವರು ಭ್ರಷ್ಟಾಚಾರವನ್ನು ನಿಲ್ಲಿಸುವ ವೀರ ಪ್ರತಿಜ್ಞೆಯನ್ನು ಮಾಡಿದ್ದಾರೆ. ತನ್ನ ಪ್ರತಿಜ್ಞೆಯನ್ನು ಕೈಗೂಡಿಸುವತ್ತ ಅವರು ಮುಂದೆ ಮುಂದೆ ಸಾಗಿದ್ದಾರೆ. ಬೇರೆ ಬೇರೆ ರೀತಿಯಿಂದ ಅವರು ಭ್ರಷ್ಟಾಚಾರಿಗಳನ್ನು ಪಾತಾಳಕ್ಕೆ ತಳ್ಳಲು ಉಚಿತ ಕ್ರಮಗಳನ್ನೂ ಕೈಗೊಳ್ಳುತಿದ್ದಾರೆ. ಇದರಿಂದ ಕೆಲವೊಂದು ಪ್ರತಿಷ್ಠಿತ ವ್ಯಕ್ತಿಗಳು ಕಂಗಾಲಾದುದೂ ಇದೆ. ಹಾಗಾಗಿ ನಂದಾ ಅವರ ಟೀಕೆಗೂ ಗುರಿಯಾಗಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಅವರು ಹೂಡಿದ ಸಮರವನ್ನು ಮೆಚ್ಚದ ಕೆಲವು ಕಾಂಗ್ರೆಸಿಗರೂ ಇದ್ದಾರೆ. ಆದರೂ ಇವೆಲ್ಲವನ್ನೂ ಎದುರಿಸಿ ಕೆಚ್ಚೆದೆಯಿಂದ ಮುನ್ನಡೆಯುವ ಎದೆಗಾರಿಕೆ ಅವರಲ್ಲಿದೆ. ಉಗ್ರ ಮತ್ತು ತೀವ್ರೋಪಾಯಗಳನ್ನು ಕೈಕೊಂಡುದರಿಂದ ಕಾಂಗ್ರೆಸ್ಸಿನಲ್ಲೇ ಒಂದು ಗುಂಪಿನವರು ಅವರನ್ನು ವಿರೋಧಿಸುತಿದ್ದಾರೆ. ನಂದಾ ತಾನು ಹಿಡಿದ ಕಾರ್ಯವನ್ನು ರಭಸದಿಂದ ಮುಂದುವರಿಸುತ್ತಿರುವುದು ಪ್ರಶಂಸನೀಯವಾಗಿದೆ. ಇದರಲ್ಲಿ ಅವರು ಯಶ ಗಳಿಸಿದರೆಂದರೆ, ಅವರ ಮತ್ತು ಕಾಂಗ್ರೆಸಿನ ಕೀರ್ತಿ ಮುಕುಟಕ್ಕೆ ನವಿಲು ಗರಿಯೇರಿಸಿದಂತಾಗುತ್ತದೆ. ಇದುವರೆಗಿನ ಕಾರ್ಯಕ್ರಮಗಳಿಂದ ಇದು ಸಾಧ್ಯವಾಗುತ್ತದೆಂದು ನಂಬಲು ಯಾರೂ ಅಳುಕ ಬೇಕಾಗಿಲ್ಲ.

ಆಡಳಿತಾಂಗದಲ್ಲಿರುವ ಅಧಿಕಾರಿಗಳು ನಿಸ್ಪೃಹರೆಂದು ತಿಳಿಯುವಂತಿಲ್ಲ. ಉಚ್ಚ ಅಧಿಕಾರಿಯಿಂದ ತೊಡಗಿ ಸಾಮಾನ್ಯ ಚಪರಾಸಿಯವರೆಗೂ ಭ್ರಷ್ಟಾಚಾರಿಗಳು ಬೇಕಷ್ಟು ದೊರೆಯುತ್ತಾರೆ. ಇವರೆಲ್ಲರನ್ನೂ ಸಚ್ಚಾರಿತ್ರಗೊಳಿಸುವುದು ಸುಲಭ ಸಾಧ್ಯವಲ್ಲ. ಇದು ಸಾಧ್ಯವಾಗ ಬೇಕಾಗಿದ್ದರೆ, ಆಡಳಿತಾ ಯಂತ್ರದಲ್ಲಿಯೇ ಸಾಕಷ್ಟು ಸುವ್ಯವಸ್ಥೆ ಮಾಡುವುದು ಅಗತ್ಯವಾಗಿದೆ. ಇದಕ್ಕಾಗಿ ಆಡಳಿತ ಸುಧಾರಣೆಯ ಸಂಬಂಧ ಪರಿಶೀಲಿಸಿ ವರದಿಮಾಡಲು ಒಂದು ಕಮಿಶನ್ನನ್ನು ರಚಿಸುವ ಇರಾದೆಯನ್ನು ನಂದಾ ಪ್ರಕಟ ಪಡಿಸಿದರು. ಆದರೆ ಈ ಕಮಿಶನ್ನು ಎಂದು ಅಸ್ತಿತ್ವಕ್ಕೆ ಬರುವುದೆಂದು ತಿಳಿದಿಲ್ಲ. ಈ ಸಮಿತಿಯು ರೂಪಿತವಾಗಿ ಕೂಲಂಕಷ ಪರಿಶೀಲಿಸಿ ಆಡಳಿತೆಯಲ್ಲಿ ಸಾಕಷ್ಟು ಸುಧಾರಣೆ ಮಾಡಲು ನೆರವಾದೀತು ಎಂದು ನಂಬ ಬಹುದು. ಭ್ರಷ್ಟಾಚಾರಕ್ಕೆ ಗುರಿಯಾಗುವುದು ಮಾತ್ರವಲ್ಲ ಅದಕ್ಕೆ ಪ್ರೋತ್ಸಾಹ ಕೊಡುವುದೂ ಮಹಾಪಾಪವೆಂಬ ಪ್ರಜ್ಞೆ ನಮ್ಮಲ್ಲಿ ಮೂಡಿ ಬಂದಂದೇ ಎಲ್ಲವೂ ಸರಿ ಹೊಂದುವುದೆಂಬುದನ್ನು ಮರೆಯಬಾರದು

ಲಂಚ ಕೊಡುವವರು ಕೊಡುತ್ತ ಬಂದರೆ, ಕೊಳ್ಳುವವರು ಕೊಳ್ಳುತ್ತ ಒಲಿದರೆ, ಶುದ್ಧೀಕರಣವು ಖಂಡಿತಕ್ಕೂ ಅಸಾಧ್ಯ. ಆದುದರಿಂದ ಇಂದು ಜನತೆ ತನ್ನ ತನವನ್ನು ಮೊದಲು ಅರಿತುಕೊಳ್ಳಬೇಕು. ಆಗಲೇ ಈ ಘೋರ ಸಾಮಾಜಿಕ ಅನ್ಯಾಯಕ್ಕೆ ಮುಟ್ಟುಗೋಲು ಸಾಧ್ಯ.

ಕವಿತಾವಿತಾನ

ಹಾರೈಕೆ

ಒಂದೆ ಮನದಿ
ಒಂದೆ ಛಲದಿ
ಮುಂದೆ ಮುಂದೆ ಸಾಗಲಿ||
ಬಂಧು ಭಾವ
ದಿಂದ ಜಗವು
ಒಂದುಗೂಡಿ ನಗೆಯಲಿ||
    ನಮ್ಮ ಶಕ್ತಿ
    ನಮ್ಮ ಭಕ್ತಿ
    ಸಕಲ ಕಲೆಯು ಮೆರೆಯಲಿ||
    ಸುಖದ ತರಲಿ
    ಕೀರ್ತಿ ಬರಲಿ
    ದೇಶ ಕೋಶ ಬೆಳಗಲಿ||
ಸತ್ಯ ಸಮತೆ
ಯಿಂದ ಜನತೆ
ಭಯವ ತೊರೆದು ಬದುಕಲಿ||
ವೈರ ಮರೆತು
ಪ್ರೀತಿ ಬಲಿತು
ನಿಷ್ಠೆ ನಲಿದು ಸಾಗಲಿ||
    ಧೈರ್ಯದಿಂದ
    ಗೆಲುವಿನಿಂದ
    ಸಾಗಿ ಗುರಿಯ ಸೇರಲಿ||
    ದಯೆಯು ಇರಲಿ
    ಶೌರ್ಯ ಸುಡಲಿ
    ಜಗವೆ ಸುಖದಿ ಬಾಳಲಿ||

— ಕಾ. ಕಾ. ನಾ. ಭ.

ನಿರ್ಬಲ ಮನಸ್ಸಿನ ಮನುಷ್ಯನು ಬಡತನ ಹಾಗೂ ಸಿರಿತನ ಎರಡರಲ್ಲಿಯೂ ನಾಶವಾಗುವನು. ಆದರೆ ಸ್ಥಿರಚಿತ್ತ ಸಬಲನು ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ಅಸತ್ರಮವಾಗಿರುವ ಸಮುದ್ರದ ಅಲೆಗಳಂತಿರುವನು.

೦ ೦ ೦

ಅಹಂಕಾರಿಯೊಡನವನಲ್ಲಿ ಕೃತಜ್ಞತೆ ಇರಲಾರದು. ಏಕೆಂದರೆ ಅಹಂಕಾರಿ ತನ್ನ ಯೋಗ್ಯತೆಗೆ ಪರಿಮಿತಿಯಾದ ಪ್ರತಿಫಲ ದೊರೆಯುವದೆಂದು ಆಲೋಚಿಸುವದೇ ಇಲ್ಲ.

೦ ೦ ೦

ಬಿರುಗಾಳಿ ಇಲ್ಲದ ಸಮುದ್ರ, ಕುಶಲ ನಾವಿಕನನ್ನು ತರಬೇತಿಗೊಳಿಸದು. ಕಷ್ಟವಿಲ್ಲದ ಜೀವನ ಉಪಯುಕ್ತ ಮನುಷ್ಯನನ್ನು ರೂಪಿಸದು.



ಉತ್ತರ ಪ್ರದೇಶದ ರಿಹಂದ ಬಳಿಯ ಜಲವಿದ್ಯುದಾಗಾರ. (ವಿದ್ಯುಚ್ಛಕ್ತಿ ಸಂಬಂಧಿತ ಸಚಿತ್ರ ಲೇಖನ ಪುಟ ೫ರಲ್ಲಿ ಓದಿರಿ)

ಇವರು ವಂಚಿಸುತ್ತ ಬಂದರು; ನಾವು ನಂಬಿದೆವು. ಇನ್ನು ಮೇಲೆ?

(೭ನೇ ಪುಟದಿಂದ)

ನಮ್ಮವರು ಇಷ್ಟು ದೂರದಲ್ಲಿದ್ದು ಕೊಂಡು ಕನ್ನಡಕ್ಕಾಗಿ ಶ್ರಮಿಸುವದನ್ನು ನೋಡಿಯೇ ಹೊಟ್ಟೆ ತುಂಬುತ್ತದೆ. (ಹಾಗೆಂದು ಉಣ್ಣಬೇಕಾದ ಅಗತ್ಯವೇ ಇಲ್ಲ ಎಂದು ತಿಳಿದುಕೊಳ್ಳಬೇಡಿ!) ದೂರದೂರಲ್ಲಿ ಕನ್ನಡ ಪದ ಕಿವಿಗೆ ಬಿದ್ದಾಗ ಪರಿಚಯವಿಲ್ಲದಿದ್ದರೂ ನೀವು ಪರಿಚಯವಮಾಡಿಕೊಳ್ಳಲು ಮುಂದಾಗುತ್ತೀರಿ.

ಹಾಗೆ ಯಾರ ಪರಿಚಯವಾದರೂ ನಿಮಗಾದರೆ ಅವರು ಕನ್ನಡ ಸಂಸ್ಥೆಗೆ, ಸಂಸ್ಥೆಯ ಯಾವದೋ ಒಂದು ಕಾರ್ಯಕ್ರಮಕ್ಕೆ, ನಿಮ್ಮನ್ನು ಆಮಂತ್ರಿಸಬಹುದು.

ಅಲ್ಲಿ ಹೋದರೆ ನೀವು ಖಂಡಿತ ಮೋಸ ಹೋಗುತ್ತೀರಿ. ಅವರು ಕನ್ನಡಕ್ಕೆ ಬದಲಾಗಿ, ತಾವು ಇಂಗ್ಲಿಷ್ ಬಲ್ಲವರೆಂದು ಮನದಟ್ಟು ಮಾಡಿಕೊಡುತ್ತಾರೆ. (ಕನ್ನಡದ ತುತ್ತೂರಿಯಲ್ಲಿ ನಿಮಗೆ ಕೇಳಿಸುವದು ಇಂಗ್ಲೀಷಿನ ಕೊರೆತ!)

ಈ ಅವಮಾನವನ್ನು ನೋಡಿಯೂ ನೀವು ಸುಮ್ಮನಿರುತ್ತೀರಾ? ಸುಮ್ಮನಿರದೆ ನೀವೇನು ಮಾಡಬಲ್ಲಿರಿ? ಅಲ್ಲಿ ವಾಸಿಸುವ ಕನ್ನಡಿಗರೇ ನೋಡುತ್ತ ಸುಮ್ಮನಿದ್ದರೆ, ಅತಿಥಿಗಳಾಗಿ ಹೋಗುವ ನಮ್ಮಿಂದ ಬೇರೇನು ತಾನೇ ಮಾಡಲು ಸಾಧ್ಯವಿದೆಯಲ್ಲ? ಕಾರ್ಯಕ್ರಮದಿಂದ ಹೊರಗೆ ಹೋಗುವ ಇಚ್ಛೆ ನಿಮಗಾಗುತ್ತಿದೆ ಎನ್ನುತ್ತೀರಲ್ಲ? ಛೆ! ಛೆ! ಹಾಗೆ ಮಾಡೀರಿ ಮತ್ತೆ! ಕಾರ್ಯಕರ್ತರಿಗೆ ಶುದ್ಧ ಅವಮಾನವಾದೀತು!]

ಕನ್ನಡಾಭಿಮಾನದ ಕತೆ ಇಲ್ಲಿಗೇ ಮುಗಿಯುವುದಿಲ್ಲ. ಕನ್ನಡ ಉದ್ಧಾರಕ್ಕಾಗಿ ಟೊಂಕ ಕಟ್ಟಿದವರೆಲ್ಲರನ್ನೂ ಈ ಸಮಯಸಾಧಕರು ಮುಗಿಸಿ ಬಿಟ್ಟಿದ್ದಾರೆ. ಮುಗಿಸಿ ಬಿಡಲು ಇನ್ನೂ ಸಿದ್ಧರಾಗಿ ಉಳಿದಿದ್ದಾರೆ.

ಅಂತೆಯೇ ನಾವೀಗ ಕಾಣುತ್ತಿರುವದು ಕನ್ನಡಾಭಿಮಾನವನ್ನಲ್ಲ; ಆ ಗೋರಿಯ ಮೇಲಿರುವ ಕಲ್ಲನ್ನು.

ಈ ಕಲ್ಲಿಗೆ ನಾವು ಹೂ ಒಪ್ಪಿಸುತ್ತೇವೆ. ಶ್ರದ್ಧೆಯಿಂದ ವಂದಿಸುತ್ತೇವೆ [ಇದು ಒಳ್ಳೆಯ ಲಕ್ಷಣವಲ್ಲ. ಹೀಗಾಗಬಾರದು.]

ಕನ್ನಡಮ್ಮನು ಈ ಕನ್ನಡ ಬಂಧುಗಳಿಂದ ಉದ್ಧಾರವಾಗದಿದ್ದರೂ ಚಿಂತಿಲ್ಲ-ಮೊದಲು ಈ 'ಕನ್ನಡಾಭಿಮಾನಿ'ಗಳನ್ನು ಬಹಿಷ್ಕರಿಸಬೇಕು. ಇವರು ತಮ್ಮ ಪ್ರಚಾರ ಕಾರ್ಯ ನಡೆಸಿಕೊಂಡು ಜೀವನ ನಿರ್ವಹಣೆ ಮಾಡುವದನ್ನು ತಡೆಗಟ್ಟಬೇಕು. ಅದನ್ನು ಉಗ್ರ ರೂಪದಲ್ಲಿ ಪ್ರತಿಭಟಿಸಬೇಕು.

ಕನ್ನಡ ಉಳಿಯುವಂತಾಗ ಬೇಕು; ಬೆಳೆಯುವಂತಾಗ ಬೇಕು; ಬಾಳುವಂತಾಗ ಬೇಕು; ನಿಜ.

ಆದರೆ ಈ ಕಾರ್ಯ ಆಗಬೇಕಾದರೆ ನಾವು ಈಗಿರುವ ಕಾಲಕ್ಕೆ ಮುಕ್ತಾಯದ ಮಂಗಳ ಗೀತೆಯನ್ನು ಹಾಡಲೇ ಬೇಕು.

ಎಲ್ಲರೂ ಒಂದಾಗುವ, ಒಂದಾಗಿ ಬೆಳೆಸು ಕನ್ನಡವನ್ನು ಮೆರೆಸುವ ಹೊಸ ಯುಗಕ್ಕೆ ನಾವೀಗ ಮುನ್ನುಗ್ಗ ಬೇಕಾಗಿದೆ. ಉತ್ತರ ಕನ್ನಡ, ದಕ್ಷಿಣ ಕನ್ನಡ, ಹಳೆಯ ಮೈಸೂರು, ಹೊಸ ಮೈಸೂರು ಎಂಬ ಭಿನ್ನ ಭಾವನೆಗಳಿಗೆ ಎಡೆ ಮಾಡಿಕೊಟ್ಟ 'ಪುಣ್ಯ ಪುರುಷ'ರನ್ನು ನಾವು ಸ್ಮರಿಸಿಕೊಂಡೇ ಅವರೂ ಸ್ಮರಿಸಿಕೊಳ್ಳುವ ಈ ಒಂದು ಕೆಲಸವನ್ನು ನಾವು ಸಾಧಿಸೋಣ.

ನಾವೆಲ್ಲ ಒಂದಾದರೆ, ಆ ಕೆಲಸ ಸುಲಭ. ನಾವೆಲ್ಲ ಒಂದಾಗಿ ಈ 'ಕನ್ನಡಾಭಿಮಾನಿ'ಗಳನ್ನು ಬಹಿಷ್ಕರಿಸಿದರೆ ಆ ಕಾರ್ಯ ತೀರಾ ಸುಲಭ.

ನಿಜ; ಕನ್ನಡ ನಾಡಿನ ಕತೆಯ ಜೊತೆಗೆ ನಮ್ಮ—ನಿಮ್ಮ ಗೋಳಿನ ಕತೆಯೂ ಇದೆ. ನಮ್ಮೆಲ್ಲರ ಸ್ಥಿತಿ ನಿತ್ಯ ಶೋಚನೀಯವಾಗುತ್ತಾ ಸಾಗಿದೆ. ಆದರೆ ನಾವೆಲ್ಲ ಒಂದಾಗದಿದ್ದರೆ, ಈ ಸ್ಥಿತಿಯಲ್ಲಿ ಎಂದೂ ಬದಲಾವಣೆ ಕಂಡು ಬರುವದು ಸಾಧ್ಯವಿಲ್ಲ.

ನಾವು ಒಂದಾದಾಗ 'ನಮ್ಮ ನಾಡಿನ' ಉದಯವಾಗುತ್ತದೆ. ನಾಡಿನ ಅಭಿಮಾನದ ಮಾನರಕ್ಷಣೆಯಾಗುತ್ತದೆ.

ಎಂತಲೇ ನಮ್ಮ ಸುಖವನ್ನು ಕಸಿದುಕೊಂಡವರಿಗೆ, ನಮ್ಮ ಸುಂದರ ಕನಸನ್ನು ಮುರಿದಿಕ್ಕಿದವರಿಗೆ, ನಮ್ಮ ಅಭಿಮಾನಕ್ಕೆ ಬರೆ ಎಳೆದವರಿಗೆ, ನಮ್ಮನ್ನು ಒಂದಾಗದಂತೆ ತಡೆದವರಿಗೆ, ಇಂತು ಹೇಳೋಣ:

ನಿಮಗೆ ಧಿಕ್ಕಾರ! ನಿಮಗೆ ಅಂತಿಮ ವಿದಾಯ!

ಮಹಿಳಾ ಮಂಡಳ

ಅಲ್ಲಿ ನಗಲು ಕಲಿಸುತ್ತಾರೆ

ಯೌವನ ಜತೆಗೆ ಶಾಂತಿ; ಶಾಂತಿಯೊಂದಿಗೆ ಆಕರ್ಷಕ ಮಂದಹಾಸ ಮುಂತಾದ ಗುಣ ವಿಶೇಷಗಳು ಯುವತಿಯರಲ್ಲಿ ತಾವಾಗಿಯೇ ಆವಿರ್ಭವಿಸುತ್ತಿರುವಾಗ, ಅವರಿಗೆ ಆಕರ್ಷಕವಾಗಿ ಮಂದಹಾಸವನ್ನು ಬೀರುವುದರ ಬಗ್ಗೆ ಹೇಳಿಕೊಡಬೇಕೆಂಬುದು ವಿಚಿತ್ರವೆನ್ನಿಸಿದರೆ, ಹಾಸ್ಯವನ್ನು ಕಲಿಸುವಂತಿದೆಯಲ್ಲವೇ ಎಂದು ಕೇಳಬಹುದು. ಆದರೆ ಇದು ಎಲ್ಲಾ ಯುವತಿಯರಿಗೆ ಸಂಬಂಧಿಸಿದುದಲ್ಲ. ಲುಫ್ತಾನ್ಸಾ ಎಂಬ ಜರ್ಮನ್ ವಿಮಾನ ಕಂಪೆನಿಯು ತಾನು ತೆಗೆದುಕೊಳ್ಳುವ ವಿಮಾನ ಅತಿಥೇಯ ಹೆಣ್ಣುಗಳಿಗೆ ಇವೆಲ್ಲವನ್ನೂ ಹೇಳಿಕೊಡುವ ಸಲುವಾಗಿ ಶಾಲೆಯೊಂದನ್ನು ತೆರೆದಿದೆ.

"ಮಂದಹಾಸವು ಹಾಗೆಯೇ ಇರಲಿ! ಎನ್ನುತ್ತಾರೆ ಶಿಕ್ಷಕರು. ಎರಡು ಕೈಗಳಲ್ಲಿ ಭಾರವಾದ ತಟ್ಟೆಯನ್ನು ಹೊತ್ತು ನಿಂತಿದ್ದರೂ ತರುಣಿಯ ತುಟಿಗಳ ಮಿನುಗುವ ಮಂದಹಾಸವು ಮಾಯವಾಗಕೂಡದು. ಅದೊಂದು ಮುಖ್ಯ ನಿಯಮ. ಅದೇ ವ್ಯಾಪಾರದ ಅಭಿವೃದ್ಧಿಯ ಹಿಂದಿನ ರಹಸ್ಯವೂ ಸಹಾ!"

ಹೀಗೆಂದು ಪಶ್ಚಿಮ ಜರ್ಮನಿಯ ಪ್ರಖ್ಯಾತ ವಿಮಾನ ಸಂಸ್ಥೆಯಾದ ಲುಫ್ತಾನ್ಸಾದ ವ್ಯವಸ್ಥಾಪಕ ವರ್ಗವು ಅಭಿಪ್ರಾಯ ಪಡುತ್ತದೆ. ಅಭ್ಯರ್ಥಿಗಳಾದ ತರುಣಿಯರಿಗೆ ಶಿಕ್ಷಣವನ್ನು ನೀಡುವಾಗ ಅವರು ನಿಜವಾದ ವಿಮಾನದಲ್ಲಿ ನಿಂತಿರುವುದಿಲ್ಲ! ಮರದಲ್ಲಿ ಮಾಡಿದ ವಿಮಾನದ ಮಾದರಿಯಲ್ಲಿ ಅವರಿಗೆ ಶಿಕ್ಷಣವನ್ನು ಕೊಡಲಾಗುತ್ತದೆ. ಮುಂದೆ ಅವರು ಕೆಲಸ ಮಾಡುವ ವಿಮಾನಗಳಲ್ಲಿ ಅನೇಕ ಅತಿ ಮುಖ್ಯ ವ್ಯಕ್ತಿಗಳು ಪ್ರಯಾಣ ಮಾಡಬಹುದು. ಅದೂ ಅಲ್ಲದೆ ಪ್ರಯಾಣ ಮಾಡುವವರೆಲ್ಲರನ್ನೂ ಅತಿ ಮುಖ್ಯ ವ್ಯಕ್ತಿಗಳೆಂದು ತಿಳಿದುಕೊಳ್ಳಬೇಕಾಗುವುದು—ವಿಮಾನದಲ್ಲಿ ಕೆಲಸ ನೋಡುವ ಈ ತರುಣಿಯರ ಕರ್ತವ್ಯ.

ವಿಮಾನಗಳಲ್ಲಿ ಕೆಲಸ ನೋಡುವ ಮುನ್ನ ಈ ತರುಣಿಯರಿಗೆ ಎಂಟು ವಾರಗಳ ಶಿಕ್ಷಣವನ್ನು ಕೊಡಲಾಗುವುದು. ಆಹಾರ ವೈವಿಧ್ಯತೆ, ಹವಾಮಾನ, ಪ್ರಯಾಣಿಕರ ಇಂಗಿತವನ್ನರಿಯುವ ಸಾಮರ್ಥ್ಯ, ಅಲಂಕಾರ, ಪ್ರಥಮ ಚಿಕಿತ್ಸೆ, ವಿಮಾನದ ಬಗೆಗಿನ ವಿಷಯಗಳು, ಜರ್ಮನ್ ಭಾಷೆ ಮುಂತಾದುವುಗಳ ಬಗ್ಗೆ ಕೂಲಂಕುಷ ವಿವರಣೆಯನ್ನು ನೀಡಲಾಗುವುದು. ಇದೇ ವಿಭಾಗದಲ್ಲಿ ಯುವಕರಿಗೂ ಶಿಕ್ಷಣವನ್ನು ನೀಡಲಾಗುವುದು. ಅಭ್ಯರ್ಥಿಗಳ ವಯಸ್ಸು ೩೦ನ್ನು ಮೀರಿರ ಕೂಡದು. ಇವರಿಗೆ ಶಿಕ್ಷಣವನ್ನು ನೀಡುವುದಕ್ಕೆಂದೇ ಹ್ಯಾಂಬರ್ಗ್‌ನಲ್ಲಿ ತೆರೆದಿರುವ ಶಾಲೆಯಲ್ಲಿ ೧೯೫೫ರಿಂದೀಚೆಗೆ ೧೩೦೦ ತರುಣ, ತರುಣಿಯರಿಗೆ ಶಿಕ್ಷಣ ಕೊಡಲಾಗಿದೆ. ಇವರಲ್ಲಿ ೬೫೦ ತರುಣಿಯರೂ, ೩೫೦ ತರುಣರೂ, ಟೋಕಿಯೋ, ಸಾಂಟಿಯಾಗೋ ಮತ್ತು ನ್ಯೂಯಾರ್ಕ್‌ಗಳಿಗೆ ಹಾರುವ ವಿಮಾನಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಲುಫ್ತಾನ್ಸಾದ ವಿಮಾನಗಳಲ್ಲಿ ಸ್ಟೂವರ್ಡೆಸ್ ಆಗಿ ಕೆಲಸ ಮಾಡುವುದು ಎಷ್ಟು ಆನಂದದಾಯಕವೋ ಅಷ್ಟೇ ಅಪತ್ಕಾರಕವೂ ಕೂಡ ಈ ಆಪತ್ತಿನ ದೆಸೆಯಿಂದಾಗಿ ವರ್ಷಂಪ್ರತಿ ಸರಾಸರಿ ನೂರು ಮಹಿಳಾ ಅತಿಥೇಯರು ಕೆಲಸ ಕಳೆದು ಕೊಳ್ಳುತ್ತಿದ್ದಾರೆ, ಇದಂತಹ ಆಪತ್ತು ಗೊತ್ತೇ? ಮೂರೇ ಅಕ್ಷರದ್ದಾದರೂ, ಮಹಾ ಶಕ್ತಿಯಿಂದ ಕೂಡಿದ ಪ್ರಣಯ! ವಿಮಾನದಲ್ಲಿ ಪ್ರಯಾಣ ಮಾಡುವ ದೊಡ್ಡ ಮನುಷ್ಯರಿಗೂ, ವಿಮಾನದ ಈ ತರುಣಿಯರಿಗೂ ಪ್ರೇಮ ಹುಟ್ಟುವುದು. ಫಲಿತವಾಗಿ ಅವರ ಮದುವೆ ನಂತರ ಆಕೆ ವಿಮಾನದ ಪ್ರಯಾಣಿಕರನ್ನು ನೋಡಿಕೊಳ್ಳುವುದರ ಬದಲು ಗಂಡ, ಮಕ್ಕಳನ್ನು ನೋಡಿ ಕೊಳ್ಳಲಾರಂಭಿಸುತ್ತಾಳೆ. ಕೆಲಸಕ್ಕೆ ತಿಲಾಂಜಲಿ! ಎಲ್ಲಾ ತರುಣಿಯರೂ ಮದುವೆಯಾಯಿತೆಂದರೆ ಕೆಲಸ ಬಿಡುತ್ತಾರೆಂದು ಹೇಳಬರುವಂತಿಲ್ಲ. ಲುಫ್ತಾನ್ಸಾದಲ್ಲಿ ಕೆಲಸ ಮಾಡುವ ತರುಣಿಯರಲ್ಲಿ ನೇಕಡಾ ೩೦ ಮಂದಿ ವಿವಾಹಿತರೇ.

ಲುಫ್ತಾನ್ಸದಲ್ಲಿ ಕೆಲಸ ಮಾಡಲು ಹೆಚ್ಚು ಮಂದಿ ಇಚ್ಛಿಸುತ್ತಿದ್ದಾರೆ. ಆದರೆ, ಅದಕ್ಕೆ ಇನ್ನೂ ಅತಿ ಹೆಚ್ಚಿನ ಸಿಬ್ಬಂದಿಯ ಆವಶ್ಯಕತೆ ಇದೆ. ಲುಫ್ತಾನ್ಸಾ ಹಾರಾಟದ ಕ್ಷೇತ್ರವು ವಿಸ್ತರಿಸಲ್ಪಡಲಿರುವುದರಿಂದ, ೧೯೬೫ರ ಅವಧಿಯಲ್ಲಿ ೨೦೦ ತರುಣಿಯರನ್ನು ನೇಮಕ ಮಾಡಿಕೊಳ್ಳಲಾಗುವುದು. ಅನೇಕ ಪದವೀಧರ ಅಭ್ಯರ್ಥಿಗಳು ಮುಂದು ಬಂದಿದ್ದರೂ, ಭಾಷಾ ಸಮಸ್ಯೆಯೊಂದು ಅಡ್ಡಬಂದು ಅವರಲ್ಲಿ ಕೇವಲ ೧೦ ಮಂದಿಗೆ ಮಾತ್ರ ಕೆಲಸ ದೊರಕೀತು.

ಲುಫ್ತಾನ್ಸಾವಿಗೆ ಪ್ರವೇಶ ದೊರಕಿಸಿಕೊಳ್ಳುವ ಮುನ್ನ ಪರೀಕ್ಷೆಯೊಂದಕ್ಕೆ ಕೂಡಬೇಕು. ಉಪಾಧ್ಯಾಯ, ವೈದ್ಯ, ಮನಶ್ಶಾಸ್ತ್ರಜ್ಞರನ್ನೊಳಗೊಂಡ ಈ ಪರೀಕ್ಷಕ ಸಮಿತಿಯನ್ನು ತೃಪ್ತಿಪಡಿಸಿ ಮುನ್ನುಗ್ಗುವುದು ಮಹಾ ಕಠಿಣ. ಪ್ರತಿ ನಾಲ್ಕನೆ ಅಥವಾ ಐದನೆಯ ಅಭ್ಯರ್ಥಿ ಮಾತ್ರ ಜಯಿಸುತ್ತಾನೆ. ತರುಣಿಯರಿಗೆ ಹೋಟೇಲ್ ಉದ್ಯಮದಲ್ಲಿ ಅನುಭವವಿದ್ದು, ಇಂಗ್ಲೀಷ್ ಭಾಷೆಯ ಪೂರ್ಣ ಜ್ಞಾನವಿರಬೇಕು. ತರುಣಿಯರಿಗೆ ಆಕರ್ಷಕ ರೂಪವಿದ್ದು, ಆಂಗ್ಲ ಭಾಷಾ ಜ್ಞಾನವಿದ್ದೇ ಇರಬೇಕು. ಜರ್ಮನಿಯಲ್ಲಿ ಇಂಗ್ಲೀಷ್, ಫ್ರೆಂಚ್, ಸ್ಪಾನಿಷ್, ಪೋರ್ಚುಗೀಸ್ ಮತ್ತು ಇಟಾಲಿಯನ್ ಭಾಷೆಗಳನ್ನು ತಿಳಿದವರಿದ್ದರೂ ಜಪಾನ್ ಭಾಷೆಯನ್ನರಿತವರಿಲ್ಲ. ದೂರ ಪ್ರಾಚ್ಯ ದೇಶಗಳತ್ತಲಿಗೆ ಹಾರುವ ವಿಮಾನಗಳಲ್ಲಿ ಕೆಲಸ ನೋಡಲು ೧೫ ಜಪಾನಿ ಹಾಗೂ ಒಬ್ಬ ಚೈನಿ ತರುಣಿಗೆ ವಿಂಗ್ ಹೋಸ್ಟೆಸ್ ಕೆಲಸ ನೀಡಿದ್ದಾರೆ.

ಯೋಗ್ಯ ಕಾರ್ಮಿಕ ಮುಖಂಡರ ಆವಶ್ಯಕತೆ

ಉಡುಪಿ ತಾ. ೧೧– ಕೇಂದ್ರ ಸರಕಾರದ ವತಿಯಿಂದ ಉಡುಪಿ ಕ್ರಿಶ್ಚನ್ ಇನ್ಸುರೆನ್ಸ್ ನೌಕರರಿಗೆ ನಡೆಯುತ್ತಿರುವ ಕಾರ್ಮಿಕ ಶಿಕ್ಷಣ ತರಬೇತಿ ಕೇಂದ್ರವನ್ನು ಉದ್ದೇಶಿಸಿ ತಾ. ೧೧ರಲ್ಲಿ ಶ್ರೀ ಶಿವರಾಮ ನಿಲಿಯಂಕಿಂಟೋರವರು "ಕಾರ್ಮಿಕ ಚಳವಳಿಯಲ್ಲಿ ಯೋಗ್ಯ ಮುಖಂಡರ ಪಾತ್ರ" ಎಂಬ ವಿಷಯದ ಮೇಲೆ ಭಾಷಣವಿತ್ತು ಉತ್ತಮ ಕಾರ್ಮಿಕ ಮುಖಂಡನಲ್ಲಿ ನಿಸ್ವಾರ್ಥತೆ, ನ್ಯಾಯಪರತೆ, ಸರಳತೆ, ಕಾರ್ಮಿಕರ ಸಮಸ್ಯೆಗಳನ್ನು ತಿಳಿಯುವ ಉತ್ಸಾಹ, ಅನ್ಯಾಯಗಳ ವಿರುದ್ಧ ಹೋರಾಡಲು ತಕ್ಕ ಧೈರ್ಯ ಮೊದಲಾದ ಗುಣಗಳಿರ ಬೇಕೆಂದು ಹೇಳಿದರು.

ಉಡ್ಪಿ ಪಿ. ಮು. ಕೋರ್ಟಿನಲ್ಲಿ

O. S. 460/62, R.E.P. No. 203/61.

ರಾಮಚಂದ್ರ ಭಟ್ಟ....... ಅರ್ಜಿದಾರ.

ಮತ್ತು

ಅನಂತ ಪುರಾಣಿಕ ಕೂಡಾ .... ಎದ್ರಿರು.

ಇವರೊಳಗೆ

೪ನೇ ಎದ್ರಿ ಬಾಬು ಸೆಟ್ಟಿ— ಕುಕ್ಕಾಲು ಬೀಡು ಅಂಣಯ ಸೆಟ್ರ ಮಗ—ಉಡ್ಪಿ ತಾಲ್ಲೂಕು ಕುಕ್ಕಾಲು ಗ್ರಾಮದ ಕುಕ್ಕಾಲು ಮನೆ.

೪ನೇ ಎದ್ರಿಗೆ ತಿಳಿಯಪಡಿಸುವುದೇನೆಂದ್ರೆ– ಮೇಲಿನ ಅಮಲ್‌ಜಾರಿಯಲ್ಲಿ ದಾಕ್ಲಾತಿ ಸ್ಥಿರಾಸ್ತಿ ಯಿಸ್ತಿಹಾರಿನ ಶರತುಗಳ ನಿರ್ಣಯದ ಬಗ್ಗೆ ತಾ. ೨೪–೯–೬೪ಕ್ಕೆ ಸದ್ರಿ ಅಮಲು ಜ್ಯಾರಿ ಇಟ್ಟಿರುತ್ತದೆಂತ ಈ ಮೂಲ್ಕ ತಿಳಿಯಪಡಿಸಿಯದೆ.

Y. C. S. Hegde,
Advocate for Petitioner,

ಉಡ್ಪಿ, ತಾ. ೧೮–೯–೧೯೬೪.

ಕೃತಿ ಪರಿಚಯ



ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸು ವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ನಾನೇ ನಾನು ಮತ್ತು ಇತರ ಏಕಾಂಕಗಳು:

ಬರೆದವರು: ಬೇಂದ್ರೆ ಲಕ್ಷ್ಮಣರಾವ್.

ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ.

ಪುಟಗಳು: ೧೬೫, ಬೆಲೆ: ರೂ. ೨=೫೦

ಉತ್ತಮ ಪ್ರತಿ ರೂ. ೨=೭೫

ಉತ್ತಮ ಏಕಾಂಕಕಾರರೆಂದು ಹೆಸರಾದ ಬೇಂದ್ರೆ ಲಕ್ಷ್ಮಣರಾಯರ ಎಂಟು ಏಕಾಂಕಗಳ ನೂತನ ಸಂಗ್ರಹವಿದು. ಸ್ವತಂತ್ರ ಏಕಾಂಕ 'ನಾನೇ ನಾನು' ಇಂದಿನ ಡೌಲು ಕಾಣುವ ಕಣ್ಣನ್ನು ಕುರಿತು ಅಣಕವಾಡುತ್ತದೆ. ಕುರುಡು ಪ್ರೇಮದ ಭಯಂಕರ ಪರಿಣಾಮದ ಹಿನ್ನೆಲೆಯಲ್ಲಿ ವಿಧಿ ವಿಲಾಸದ ಚಿತ್ರವನ್ನು ನಾವು 'ಮೂರು ಮೆಟ್ಟಿಲು'ಗಳಲ್ಲಿ ಕಾಣಬಹುದು. ರಾಜಕಾರಣದ ರುಚಿಯೊಮ್ಮೆ ತಗಲಿದರೆ, ಅದರಿಂದ ಹೊರ ಬರುವುದಕ್ಕೆ ಎಂತಹ ಸಂದರ್ಭದಲ್ಲೂ ಮನಪ್ಪೊಪ್ಪದು ಎಂಬುದನ್ನು 'ನಾಯಿ ಒದರ್‍ತಾನೇ ಇತ್ತು' ಪೂರ್ಣವಾಗಿ ಸಾರುತ್ತದೆ, ಪಾಶ್ಚಾತ್ಯ ಶಿಕ್ಷಣದಿಂದ ಭಾರತೀಯ ಸಂಸ್ಕೃತಿ-ಜನಜೀವನದ ಮೇಲೆ ಆಗುವ ದುಷ್ಪರಿಣಾಮವನ್ನು "ಇವ ಮಗ" ಕಣ್ಣ ಮುಂದೆ ನಿಲ್ಲಿಸುತ್ತದೆ "ಪ್ರೇಮದ ಇಕ್ಕಟ್ಟು" ಇಕ್ಕಟ್ಟಿಗೆ ಸಿಕ್ಕಿ ಬಿದ್ದ ಕಾಲೇಜ್ ಪ್ರಾಧ್ಯಾಪಕನೊಬ್ಬನ ಪೇಚಿನ ಪ್ರಸಂಗ ಇಂದಿನ ಸಂಸಾರದ ವಾಸ್ತವ ಚಿತ್ರವೊಂದನ್ನು ವರ್ಣಿಸುತ್ತ ಭ್ರಷ್ಟಾಚಾರದ ಪರಿಣಾಮವನ್ನು 'ಮಾಡಿದ್ದುಣ್ಣೋ ಮಹಾರಾಯ" ನಮಗೆ ತಿಳಿ ಹೇಳುತ್ತದೆ. "ರೆಡಿಮೇಡ್ ಕವಿತೆಗಳ ಅಂಗಡಿ" ಅನುವಾದಿತವಾದುದು. ಇಲ್ಲಿ ಹುಲ್ಲಿನಂತೆ ಹುಲುಸಾಗಿ ಬೆಳೆಯುವ "ಕವಿ"ಗಳ ವ್ಯಂಗ್ಯ ಕಾಣುತ್ತದೆ. ಜಿ.ಬಿ.ಶಾಗ್ರೇಶರನ ಒರಟು ಹುಡುಗಿಯೊಂದನ್ನು ಮತ್ತೊಬ್ಬ ಕೃಪಣನ ಮಗ ಸರಿ ದಾರಿಗೆ ತಂದ ಕಥಾನಕ "ಬಾಯಿಗೆ ಬಾಯಿ ಕೈಗೆ ಕೈ"ಯಲ್ಲಿದೆ.

ಇಲ್ಲಿನ ಎಂಟು ಏಕಾಂಕಗಳಲ್ಲಿ ಎರಡು—ಮೂರನ್ನು ಬಿಟ್ಟು ಉಳಿದುವನ್ನು ರಂಗ ಭೂಮಿಯಲ್ಲಿ ತರಬಹುದು. ಸಾಲನ್ನಂತೂ ಯಶಸ್ವಿಯಾಗಿಯೇ ಅಭಿನಯಿಬಹುದು. (ನಾನೇ ನಾನು, ನಾಯಿ ಒದರ್‍ತಾನೇ ಇತ್ತು, ಇವ ಮಗ, ಮಾಡಿದ್ದುಣ್ಣೋ ಮಹಾರಾಯ). ಕನ್ನಡ ಸಾಹಿತ್ಯದಲ್ಲಿ ನಾಟಕ—ಏಕಾಂಕಗಳು ಸರಿಯಾದ ರೀತಿಯಲ್ಲಿ ಬೆಳೆದು ಬಂದಿಲ್ಲ. ಅಂತಿರುವಾಗ ಶ್ರೀ ಬೇಂದ್ರೆಯವರು ತಮ್ಮ ವಿಶಾಲವಾದ ಲೋಕಾನುಭವ ಮತ್ತು ಅರ್ಥಪೂರ್ಣ ಅಭ್ಯಾಸದಿಂದ ರೂಪಿಸಿರುವ ಏಕಾಂಕಗಳು ಸಾಹಿತ್ಯದ ರಸಬಿಂದುಗಳಾಗಿವೆ. ಇಲ್ಲಿನ ಏಕಾಂಕಗಳು ಕಲಾಪೂರ್ಣವಾಗಿವೆ; ಸ್ವಾರಸ್ಯವಾಗಿವೆ. ಬಳಸಿದ ಸಂಭಾಷಣೆ ಜೀವಂತವಾಗಿದೆ. ಸವಿಯಾಗಿದೆ, ಓದುವುದಕ್ಕೂ ಕೇಳುವುದಕ್ಕೂ ಮನೋಹರವಿದೆ.

ಕುಟುಂಬ ಸಮಾಜದ ಒಂದು ಅಂಗ. ಇಂದು ಸಂಕ್ರಮಣಾವಸ್ಥೆಯಲ್ಲಿ ಸಿಕ್ಕು ತೊಳಲುತ್ತಿರುವ ನಮ್ಮ ಕೌಟುಂಬಿಕ ಜೀವನದ ವಿವಿಧ ಚಿತ್ರಗಳನ್ನು ಅಂಕಿಸಿ, ಅವುಗಳಲ್ಲಿರುವ ಥಳುಕು—ಹುಳುಕುಗಳನ್ನು ಎತ್ತಿ ತೋರಿಸಿ ಪರಿಶುದ್ಧಗೊಳಿಸುವ ವಿಧಾನವನ್ನು ಶ್ರೀ ಬೇಂದ್ರೆಯವರು ಪ್ರತಿ ಏಕಾಂಕಿಯಲ್ಲಿಯೂ ಎತ್ತಿ ತೋರಿಸಿದ್ದಾರೆ. ಇದನ್ನು ನಾವು ಅರ್ಥ ಮಾಡಿಕೊಂಡು ಬದುಕಿಗೊಂದು ಅರ್ಥವನ್ನು ಕಲ್ಪಿಸಿ ಕೊಡುವಂತಾಗಬೇಕು. — ಗೋರಾ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R E P 203/64 O. S. 353/54

ಅನಂತಪದ್ಮನಾಭ ಕೂಡಾ....ಅರ್ಜಿದಾರರು.

ಜಯರಾಜ-ಶಾಂತಿರಾಜ ಹೆಗ್ಡೆಯವರ ಮಗ, ಪುತ್ತೂರು ತಾಲ್ಲೂಕು ಕಬಕಾ ಗ್ರಾಮದ ಕಲ್ಲಗ ಎಂಬಲ್ಲಿರುವವ. —ಎದ್ರಿ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ಮೇಲಿನ ಅಮಲ್ಜಾರಿಯಲ್ಲಿ ನಿಮ್ಮನ್ನು ಕೈ ಹಿಡಿ ವಾರಂಟಿನಲ್ಲಿ ಹಿಡಿತರಿಸಿ, ಸಿವಿಲ್ ಜೈಲಿಗೆ ರವಾನಿಸಬೇಕೆಂತ ಅರ್ಜಿ ಕೊಟ್ಟಿರುವುದರಿಂದ, ಆ ಕುರಿತು ನಿಮ್ಮ ಆಕ್ಷೇಪಗನ್ನು ತಾ.8—10—1964 ನೇ ದಿವಸ ಪೂರ್ವಾಹ್ನ ಘಂಟೆ 11 ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ದಾಖಲು ಮಾಡುವುದು. ತಪ್ಪಿದಲ್ಲಿ ಸದ್ರಿ ವಿಷಯದಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟಿನ ಹುಕುಂ ಪ್ರಕಾರ)

P. A. ARIGA.

Advocate for Peititioners

ಪುತ್ತೂರು. 12—9—1964.

ನಗು ನೀನು . . .



ಜಗವೆ ನಿನ್ನೊಡನೆ ನಗುತಲಿಹುದು

ಅನುಮಾನ

ಜಡ್ಜ್:—(ವಾದಿಗೆ ಜೇಬುಗಳ್ಳನನ್ನು ತೋರಿಸಿ) ಏನಯ್ಯ, ಇದೇ ವ್ಯಕ್ತಿ ಮೊನ್ನೆ ಮಾರ್ಕೆಟ್ಟಿನಲ್ಲಿ ಜೇಬು ಕತ್ತರಿಸಿದುದೆಂಬ ಬಗ್ಗೆ ನಿನಗೆ ವಿಶ್ವಾಸವಿದೆಯೇ?

ವಾದಿ:—(ಒಂದು ಕ್ಷಣ ತಡೆದು) ಮೊದಲೇನೋ ವಿಶ್ವಾಸವಿದ್ದಿತ್ತು ಸ್ವಾಮಿ, ಆದರೆ ನಮ್ಮ ವಕೀಲರ ಈ ವಾದವಿವಾದವನ್ನು ಕೇಳಿದ ನನಗೆ ಈಗ ನಾನು ಆ ದಿನ ಕೋಟನ್ನು ಧರಿಸಿದ್ದೇನೆ ಯೊ ಇಲ್ಲವೇ ಎಂಬ ವಿಷಯದಲ್ಲಿಯೇ ಅನುಮಾನ ಬರತೊಡಗಿದೆ.

o o o

ಹೊಡೆದಿಲ್ಲ

ತಂದೆ:—(ಮಗನಿಗೆ) ಏನೋ ನೀನು ಸಣ್ಣವನಿಗೆಲ್ಲ ಹೊಡೆಯುವಿಯಂತಲ್ಲ? (ಎಂದು ಎರಡೇಟು ಕೊಡುವನು.)

ಮಗ:—ಇಲ್ಲ ಅಪ್ಪ! ನಾನು ಸಣ್ಣವನೆಂದೇ ನೀನೀಗ ಸುಮ್ಮನೆ ಹೊಡೆಯುತ್ತಿರುವಿ.

o o o

ತಡೆದವರು

ಆತ:— ಆದಿನ ರಾಮುನನ್ನು ಕೊಂದೇ ಹಾಕಿಬಿಡುತ್ತಿದ್ದೆ-ಆತ ತಡೆಯದಿದ್ದರೆ...

ಈತ:—ತಡೆದವರಾರು?

ಆತ:—ತಡೆದುದೇ ಮತ್ತಾರು?—ಆದೇ ರಾಮನೇ.

o o o

ಎರಡು ಬಾರಿ

ಆತ:—ಏನು? ನಾನು ನಿನಗೆ ಕಳುಹಿಸಿದ ಚೆಕ್ಕು ನಿನ್ನ ಕೈ ಸೇರಿತೇ?

ಈತ:—ಹೌದು, ಎರಡೆರಡು ಬಾರಿ! ಒಮ್ಮೆ ನಿನ್ನಿಂದ; ಇನ್ನೊಮ್ಮೆ ಬ್ಯಾಂಕಿನಿಂದ!

o o o

ಪರಿಹಾರ

ಆತ. ಒಬ್ಬ ಸೇಟ್! ಒಮ್ಮೆ ಆವನು ಜೋರಿನಿಂದ ಅಂಗಡಿಗೆ ಸಾಗುತ್ತಿರುವಾಗ ಅವನ ಕಾರಿಗೆ ಹಂದಿಯೊಂದು ಸಿಕ್ಕಿ ಸತ್ತುಹೋಯಿತು. ಆಗ ಆ ಹಂದಿಯ ಮಾಲಿಕ ಸೇಟನ ಮೇಲೆ ಸಿಟ್ಟಾದ

ಸೇಟ್ ಎಂದ:—ಸಿಟ್ಟಾಗದಿರು ಆ ಹಂದಿಯ ಬೆಲೆಯಷ್ಟು ಪರಿಹಾರವನ್ನು ನಾನು ಕೊಡಲು ಸಿದ್ಧನಿದ್ದೇನೆ.

ಆಗ ಮಾಲಿಕನೆಂದ:—ಇಲ್ಲ ಸ್ವಾಮಿ ನೀವು ನನ್ನ ಈ ಹಂದಿಯಷ್ಟು ದಪ್ಪಗಿಲ್ಲ.

o o o

ನೀನೆಲ್ಲಿದ್ದೆ?

ಆತ:— ನಾನು ನಿನ್ನೆ ಪಶುಪಕ್ಷಿ ಸಂಗ್ರಹಾಲಯಕ್ಕೆ ಹೋಗಿದ್ದೆ.

ಈತ: ನಾನೂ ಹೋಗಿದ್ದೆ.

ಆತ:— ಹಾಗೋ, ನಾನು ನೋಡಲಿಲ್ಲವಲ್ಲ. ನೀನು ಯಾವ ಗೂಡಲಿದ್ದಿ?

o o o

ವಾಸನೆ

ಗಿರಾಕಿ:— (ಸಿಟ್ಟಿನಿಂದ) ಏನೋ, ಇದು, ಕಾಫೀನೋ ಅಥವಾ ಚಹಾನೊ? ಇದರಲ್ಲಿ ಕೊಳೆತ ತರಕಾರಿಯ ವಾಸನೆ ಬರುತ್ತಿದೆಯಲ್ಲ?

ಮಾಣಿ:— ಹಾಗಾದರೆ ಇದು ಖಂಡಿತ ಕಾಫಿಯೇ ಇರಬೇಕು. ಏಕೆಂದರೆ ನಮ್ಮ ಹೋಟೆಲಿನ ಚಹದಲ್ಲಿ ಬರುವುದು ಕೇವಲ ಉಪ್ಪಿನಕಾಯಿಯ ವಾಸನೆ.

o o o

ಒಳಗೆ ಬಿಡಬಾರದು

ಸೇವೆ:— ಸ್ವಾಮಿ ಡಾಕ್ಟರು ಬಂದಿದ್ದಾರೆ ಒಳಗೆ ಬರಹೇಳಲೇ?

ಪ್ರೊಫೆಸರ (ಸಿಟ್ಟಿನಿಂದ):- ಏನೋ ಅದು! ನಾನೀಗ ರೋಗದಲ್ಲಿ ನರಳುತ್ತಿದ್ದೇನೆ ಯಾರನ್ನೂ ಒಳಗೆ ಬಿಡದಿರೆಂದು ಆವಾಗಲೇ ಹೇಳಿಲ್ಲವೇ?

o o o

ಎಲ್ಲಿ?

ಯಜಮಾನ (ಸಿಟ್ಟಿನಿಂದ ಸೇವಕನೊಡನೆ):— ಏನೋ ಮುದಿ ಗೂಬೆ! ನಿನ್ನೆ ಎಲ್ಲಿದ್ದುದು?

ಸೇವಕ:— ಮರದ ಪೊಟರೆಯಲ್ಲಿ.

ಯಜಮಾನ (ಮತ್ತೂ ಸಿಟ್ಟಿನಿಂದ) ಕತ್ತೆ?

ಸೇವಕ:— ಅಗಸನ ಬಳಿಯಲ್ಲಿ.

ಯಜಮಾನ:— ಮೂರ್ಖ.

ಸೇವಕ (ಶಾಂತ ಸ್ವರದಿಂದ):— ನನ್ನ ಎದುರು.

—ಸಂ: ಶಂಕರ ಐತಾಳ, ಹಾಂಯರ್ಾಡಿ.

DEEPAVALI SPECIAL

HAPPY DEEPAVALI, the great Indian festival of lights, is fast approaching. Rightly do the people rejoice on this day, what with hundred illuminations at home and in the market place.

NAVAYUGA, the premier Kannada Weekly, shares with the people this joy and serves them with a SPECIAL DEEPAVALI ISSUE to illumine their minds It will contain rich food for thought and entertainment for the masses Thousands of Kannada people read this issue with relish.

It would be a happy idea for you to use the Navayuga Deepavali Special, as a medium for advertising your goods; for, Navayuga is able to carry your message to every home.

Kindly send your advertisement before 15-10-64.

Date of publication: 29—10—1964.

For advt rates please write to:

The Advt Manager,
Navayuga, Udipi.

READ &
ADVERTISE IN
NAVAYUGA WEEKLY

ಬೆಳಕು ಕಂಡ ಬಾಳು

(ನಾಲ್ಕನೇ ಪುಟದಿಂದ)

ಜನಕ್ ಶೀನು ಎರಡನೇ ಮದುವೆಗೆ ಒಪ್ಪಿಕೋ. ಮುಂದಿನದೆಲ್ಲ ನನಗಿರಲಿ"

"ಲೀಲಾ ಯಾರಿಗಾದರೂ ವಿರೋಧವಾಗಿ ವರ್ತಿಸಿದ್ದಾಳೆಯೆ? ಅಥವಾ ಏನಾದರೂ ತಪ್ಪು ಮಾಡಿದ್ದಾಳೆಯೆ?"

"ಹಾಗೇನೂ ಇಲ್ವೋ... ಅವಳು ಮನೆಗೆ ಬಂದು ಆರು ವರ್ಷವಾಯ್ತು. ನಾನು ಎಲ್ಲರ ಹಾಗೆ ನಿನ್ನ ಮಗುವನ್ನೂ ಎತ್ತಿ ಆಡಿಸ ಬೇಕೆನ್ನುವ ಆಸೆ ಇಟ್ಟುಕೊಂಡಿದ್ದೆ. ಅದು ನಡೆಯಲಿಲ್ಲ. ನನ್ನ ಆಸೆ ನೆರವೇರಿಸುವುದು ನಿನ್ನ ಕರ್ತವ್ಯವಲ್ಲವೆ?"

"ನಿನ್ನ ಆಸೆ, ಬೇಡಿಕೆ ಎಲ್ಲ ಸರಿಯಮ್ಮ. ಇಷ್ಟಕ್ಕಾಗಿಯೇ ಲೀಲಾಗೆ ಅನ್ಯಾಯ ಮಾಡುವುದಕ್ಕೂ ಬೇರೆ ಮದುವೆ ಮಾಡಿಕೊಳ್ಳುವುದಕ್ಕೂ ನಾನು ಸಿದ್ಧನಿಲ್ಲ. ನನಗೆ ಮಕ್ಕಳಿಲ್ಲದಿದ್ದರೆ ಯಾವ ಸಾಗರವೂ ಬತ್ತಿ ಹೋಗುವುದಿಲ್ಲ."

"ಇದೇ ನಿನ್ನ ನಿರ್ಧಾರವೇನೋ ಪ್ರಸಾದ?"

"ಹೌದಮ್ಮ..."

"ಒಳ್ಳೇ ಮಾರಿಯನ್ನೇ ಮನೆಗೆ ತಂದುಕೊಂಡ ಹಾಗಾಯ್ತು. ನನ್ನ ಮಾತಿಗೆ ಬೆಲೆಯೇ ಉಳಿಯಲಿಲ್ಲ. ನಿನಗೆ ಹೆಂಡತಿಯೇ ಹೆಚ್ಚಾದಳು. ಬಂಜೆ ಜೊತೆಗೆ ನಾನು ಅದು ಹೇಗೆ ಇರಬೇಕೋ ಕಾಣೆ?"

"ನಿನ್ನ ಮನಸ್ಸು ನೋಯುವಂತಿದ್ದರೆ ಹೇಳಮ್ಮ, ನಾನೂ ಅವಳೂ ಬೇರೆ ಮನೆಯಲ್ಲಿ ಇರುತ್ತೇವೆ. ಯಾರೊಬ್ಬರಿಗೂ ತೊಂದರೆ ಕೊಡುವ ಅಥವಾ ಮನಸ್ಸು ಬೇಸರ ಪಡಿಸುವ ಇಷ್ಟವಿಲ್ಲ"

"ಸಾರ್ಥಕವಾಯ್ತು ಕಣೋ ..ನಿನಗೇನೋ ಚೆನ್ನಾಗಿ ತಲೆ ತಿಕ್ಕಿದ್ದಾಳೆ ಹಾಳಾಗಿ ಹೋಗು. ನಿನ್ನಂತಹ ಮಗ ಇದ್ದರೆಷ್ಟು ಬಿಟ್ಟರೆಷ್ಟು" ಎಂದು ಮೊಸಳೆ ಕಣ್ಣೀರು ಸುರಿಸಿದರು ಅನುಸೂಯಮ್ಮ.

ಪ್ರಸಾದ ಎದ್ದು ಹೊರಟ.

ಹೆಂಡತಿ ಮನೆಯಲ್ಲಿ ಸರ್ವಾಧಿಕಾರಿಯಂತೆ ವರ್ತಿಸುತ್ತಾ ಕಿರಿಯ ಸೊಸೆ ಲೀಲಾಗೆ ಕೊಡುತ್ತಿದ್ದ ಕಷ್ಟಗಳನ್ನೂ ಲೀಲಾ ಅನುಭವಿಸುತ್ತಿದ್ದ ಬವಣೆಗಳನ್ನು ಕಂಡು ಭೀಮರಾಯರು ರೋಸಿ ಹೋದರು. ಒಂದು ದಿನ ಅವರ ಕೋಪ ಎಲ್ಲೆ ಮೀರಿತು. ಸೊಸೆಯನ್ನು ಹೀನಾಮಾನವಾಗಿ ಬಯ್ಯುತ್ತಿದ್ದ ಹೆಂಡತಿಯನ್ನು ಕಂಡು—

'ನಿನಗೆ ವಯಸ್ಸು ಬಂದದ್ದು ವ್ಯರ್ಥವಾಯ್ತು ಕಣೇ, ಆ ಮಗು ಏನು ಕರ್ಮ ಮಾಡಿ ಈ ಮನೆ ಸೇರಿ ಕೊಂಡಿತೋ! ಒಂದು ದಿನಕ್ಕೂ ಗಟ್ಟಿಯಾಗಿ ಮಾತನ್ನೂ ಆಡುವುದಿಲ್ಲ. ಅವಳನ್ನು ಗೋಳಾಡಿಸುತ್ತಿದ್ದಿಯಲ್ಲಾ ನೀನೇನು ಮನುಷ್ಯಳೋ ಅಥವಾ ಪಿಶಾಚಿಯೋ' ಎಂದು ಘರ್ಜಿಸಿದರು ಭೀಮರಾಯರು.

'ನಿಮ್ಮ ಸೊಸೆ ಸಕಲ ಗುಣ ಸಂಪನ್ನೆ. ನೀವೆಲ್ಲ ಅವಳನ್ನು ಹೊಗಳಿ ತಲೆ ಮೇಲೆ ಕೂಡಿಸಿಕೊಂಡು ಮೆರೆಸುತ್ತಿರುವುದರಿಂದಲೇ ಮನೆಯ ಕೀರ್ತಿ ಬೆಳಕಿಗೆ ಬಂದಿರೋದು. ಅವಳ ವಯ್ಯಾರ ಏನು! ಅವಳ ತಿರುಗಾಟ ಏನು! ರಾಮ! ರಾಮ! ನಾಚಿಕೆ.'

"ಇಲ್ಲಿ ಹೆಮ್ಮಾರಿ ಆಡಿದ ಹಾಗೆ ಆಡ್ತೀಯಲ್ವೇ?" ನಿನಗೇನು ಆಗಿರೋದು ಅರೆ?

'ಕನಕಾಭಿಷೇಕ ಮಾಡ್ತಿದ್ದೀರ ಎಲ್ಲ ಸೇರಿ?

"ನನ್ನ ಮಾತು ಕೇಳು ಸ್ವಲ್ಪ. ನೀನು ಹೆಂಗಸು ಮಕ್ಕಳನ್ನು ಹೊತ್ತು ಹೆತ್ತು, ಸಾಕಿ ಸಲಹಿದೋಳು. ಪಾಪ ಲೀಲಾ ತಂದೆ ತಾಯಿ ಯಿಲ್ಲದ ತಬ್ಬಲಿ, ನಿನ್ನ ಕೋಪಾನೆಲ್ಲ ಅವಳ ಮೇಲೇಕೆ ತೀರಿಸಿ ಕೊಳ್ತೀಯಾ? ಅವಳೇನು ಅನ್ಯಾಯ ಮಾಡಿದ್ದಾಳೆ? ನಿನಗೇನು ಅದೂ ಒಂದು ಹೆಣ್ಣು ಮಗು ಕಣೆ, ಅದಕ್ಕೂ ನೋವಿದೆ'

'ನೋವಿದ್ದರೆ ಹೋಗಿ ಕೆರೆಗೆ ಹಾರಲಿ. ನನಗೇನಾಗಬೇಕು? ಅವಳು ಬಂಜೆ ಅಂತಹವಳ ಸಹವಾಸಬೇಡ. ಪ್ರಸಾದ ಬೇರೆ ಮದುವೆ ಮಾಡಿಕೊಳ್ಳಲಿ ಎಂದೆ. ಯಾರಿಗೆ ಬೇಕು ನನ್ನ ಮಾತು. ನೀವೇನು ಮನೆ ವಿಷಯಕ್ಕೆ ಪ್ರವೇಶಿಸ ಬೇಕಾದುದಿಲ್ಲ. ಮನೆಯ ಯಜಮಾನಿ ನಾನು. ನನ್ನಿಷ್ಟ ಬಂದ ಹಾಗೆ ನಡೆದು ಕೊಳ್ಳುತ್ತೇನೆ" ಎಂದು ಸವಾಲು ಹಾಕಿದರು ಅನುಸೂಯಮ್ಮ.

'ಹಾಳಾಗಿ ಹೋಗು....' ಎಂದು ಶಪಿಸಿ ಭೀಮರಾಯರು ಮನೆ ಬಿಟ್ಟು ಹೊರಟರು.

ಒಂದು ದಿನ ಸಂಜೆ ಪ್ರಸಾದ್ ಪೇಟೆಯಲ್ಲಿ ತಿರುಗಾಡಿ ಬರಲು ಮನೆ ಬಿಟ್ಟು ಹೊರಡುವ ಸಿದ್ಧತೆಯಲ್ಲಿದ್ದನು. ಅಂದು ರಜವಿದ್ದ ಕಾರಣ ಪ್ರಸಾದ್ ಹಾಗೂ ಅವನ ಅಣ್ಣ ಮೂರ್ತಿ ಇಬ್ಬರೂ ಮನೆಯಲ್ಲೇ ಇದ್ದರು. ತಮ್ಮನೊಡನೆ ಪ್ರತ್ಯೇಕವಾಗಿ ಚರ್ಚಿಸಲು ಮೂರ್ತಿ ಸಮಯ ನಿರೀಕ್ಷಣೆಯಲ್ಲಿಯೇ ಇದ್ದ. ಅವಕಾಶ ತಾನಾಗಿಯೇ ಒದಗಿ ಬಂತು.

"ಪೇಟೆ ಕಡೆಗೇನೋ ಪ್ರಸಾದ್?"

"ಹೂನಣ್ಣ"

"ಬೇರೆ ಏನಾದರೂ ಕೆಲಸವಿದೆಯೋ ಅಥವಾ ಇವತ್ತು ಆಫೀಸಿನ ಕಡೆಗೊ?

"ಇಲ್ಲಣ್ಣ. ಅಂತಹ ಮುಖ್ಯ ಕೆಲಸವೇನಿಲ್ಲ. ಭಾನುವಾರದ ತಿರುಗಾಟ ಅಷ್ಟೆ" ಎಂದ ಪ್ರಸಾದ್.

"ಸ್ವಲ್ಪ ತಾಳು ನಾನೂ ಬರುತ್ತೇನೆ" ಎಂದು ಕೆಲ ನಿಮಿಷಗಳಲ್ಲಿಯೇ ಮೂರ್ತಿ ತಮ್ಮನೊಂದಿಗೆ ಹೊರಟ.

ಮೂರ್ತಿ ಮತ್ತು ಪ್ರಸಾದ್ ಇಬ್ಬರೂ ಲಾಲ್ ಬಾಗ್ ದಾರಿ ಹಿಡಿದರು.

ಮೂರ್ತಿಯೇ ತಾನು ತಮ್ಮನಿಗೆ ತಿಳಿಸಬೇಕಿದ್ದ ಗೃಹಜೀವನದ ಸಂಗತಿಯನ್ನು ತಿಳಿಸಿ—'ನೀನೇನೋ ಪತ್ರಿಕಾ ಕಚೇರಿಯಲ್ಲಿ ಬಿಡುವಿಲ್ಲದೆ ದುಡಿಯುತ್ತೀಯ, ನಿನಗೆ ಕೆಲಸ ಒಂದಿದ್ದರೆ ಸಾಕು. ಪ್ರಪಂಚವೇ ಬೇಡ. ನೀನು ಮನೆಯ ವಾತಾವರಣದ ಕಡೆಗೆ ಗಮನ ಹರಿಸಬೇಕು ಪ್ರಸಾದ್" ಎಂದ.

"ಆಗಲಿ ಅಣ್ಣ. ನನಗೂ ಅದು ದೊಡ್ಡ ಸಮಸ್ಯೆಯೇ ಆಗಿದೆ."

"ನೀನು ಲೀಲಾಳನ್ನು ನೋಡಿದ್ದೀಯಾ ಪ್ರಸಾದ್?'

"ಇದೇನಣ್ಣ ಹೀಗೆ ಕೇಳ್ತಿದ್ದೀಯ? ಲೀಲಾಗೆ ಏನಾಗಿದೆ?

"ಕಳಾಹೀನ. ಸಾಹಿತಿ ಭಾವಜೀವಿ ಎನ್ನುವುದು ಇದಕ್ಕೆ 'ತಾನೊಂದು ಮೂರು ಲೋಕ ಉಂಟು. ಅಲ್ಲ ಕಣೋ ಮನೆಯ ವಾತಾವರಣ ಅವಳನ್ನು ಕಂಗೆಡಿಸಿದೆ. ಬೇರೆಯವರಾಗಿದ್ದರೆ ಬಾವಿ ಕೆರೆ ನೋಡಿಕೊಳ್ಳಬೇಕಿತ್ತು, ಇಲ್ಲವೇ ಹುಚ್ಚರಾಗುತ್ತಿದ್ದರು ಅವಳಿಗೆ ಅದೇ ದೊಡ್ಡ ಕೊರಗಾಗಿದೆ. ಅಮ್ಮ ಅವಳನ್ನು ಮನಃಪೂರ್ವಕವಾಗಿ ಅಳುವುದಕ್ಕೂ ಅವಕಾಶ ಕೊಡುವುದಿಲ್ಲ ಪ್ರಸಾದ್."

"ಏನಣ್ಣ ಮಾಡೋದು? ನನಗೂ ಅಲ್ಪಸ್ವಲ್ಪ ಗೊತ್ತು. ಲೀಲಾ ಯಾವುದನ್ನೂ ಬಾಯಿಬಿಟ್ಟು ಹೇಳುವುದಿಲ್ಲ, ಅವಳ ಒಳ್ಳೆತನ ಅಮ್ಮನಿಗೆ ಅಧಿಕಾರ ನಡೆಸುವುದಕ್ಕೆ ಮತ್ತಷ್ಟು ಪ್ರೋತ್ಸಾಹ ಕೊಟ್ಟಂತಾಗಿದೆ. ಮನೆಯಲ್ಲಿ ಇದ್ದರೆ ಈ ಸಂಕಟ. ಮನೆ ಬಿಟ್ಟು ಬೇರೆ ಸಂಸಾರ ಹೂಡಿದರೆ ಅಮ್ಮ ಅಪ್ಪನ ಮನಸ್ಸು ನೊಂದುಕೊಳ್ಳುತ್ತವೆ."

"ಹಾಗಂತ ಅವಳನ್ನು ಚಿತ್ರಹಿಂಸೆ ಮಾಡುವುದಕ್ಕೆ ಬಿಟ್ಟು ನೀನು ಹಾಯಾಗಿರು."

"ನಾನು ಹಾಗಂದೆನೇನಣ್ಣ? ಲೀಲಾಗೆ ದುಃಖವಾಗಲಿ ಅನ್ನುತ್ತೀನೇನಣ್ಣ?

"ಲೀಲಾ ಚಿಕ್ಕಂದಿನಿಂದಲೂ ಕಷ್ಟ-ದುಃಖ-ನೋವುಗಳಲ್ಲಿಯೇ ಬೆಳೆದವಳು ಕಣೋ ಪ್ರಸಾದ್ ತಂದೆ-ತಾಯಿಗಳಿಲ್ಲದ ತಬ್ಬಲಿ ಚಿಕ್ಕಪ್ಪ ಚಿಕ್ಕಮ್ಮನ ಕಿರುಕುಳದಲ್ಲಿ ಬೆಳೆದು ದೊಡ್ಡವಳಾದಳು, ಅದೃಷ್ಟವಶಾತ್ ದೈವಯೋಗದಿಂದ ನಮ್ಮ ಮನೆ ಸೇರಿದಳು. ಆದರೂ ಅವಳ ನೋವು, ಕಷ್ಟ ತಪ್ಪಲಿಲ್ಲ, ನಾಲ್ಕು ವರ್ಷಗಳು ಹಾಗೂ ಹೀಗೂ ಕಳೆಯುವ ವೇಳೆಗೆ ಅಮ್ಮ ಅಕ್ಕಪಕ್ಕದವರ ಮಾತಿಗೆ ಬೆಲೆಕೊಟ್ಟು ವೃಥಾ ಅವಳನ್ನು ಹಂಗಿಸಿ ನೋಯಿಸುತ್ತಿದ್ದಾಳೆ. ನಿನ್ನ ಹೆಂಡತಿಯ ಯೋಗಕ್ಷೇಮವೇ ನಿನಗೆ ಬೇಡವಾಗಿದೆಯಲ್ಲೋ?"

"ಏನಣ್ಣ ಮಾಡೋದು..."

"ಕೆಲವು ದಿವಸವಾದರೂ ಅವಳು ಈ ಮನೆಯ ವಾತಾವರಣದಿಂದ ದೂರವಿರಬೇಕು. ಇಲ್ಲವಾದರೆ ಖಂಡಿತ ಅವಳು ಹುಚ್ಚಿಯಾಗುತ್ತಾಳೆ ಕ್ಷಣ ಕ್ಷಣಕ್ಕು ಅಮ್ಮ 'ನೀನು ಬಂಜೆ, ನೀನು ಬಂಜೆ. ಎಂದು ಹಂಗಿಸುವುದನ್ನು ಕೇಳಲಾರೆನಪ್ಪ ಸಧ್ಯಕ್ಕೆ ನೀನು ಎಲ್ಲಿಗಾದರೂ ನಾಲ್ಕು ದಿನ ಅವಳನ್ನು ಕರೆದು ಕೊಂಡು ಹೋಗು. ಅವಳಿಗೆ ಎಷ್ಟೋ ಶಾಂತಿ ದೊರೆತಂತಾಗುತ್ತದೆ."

"ಅತ್ತಿಗೆಯೂ ನನಗೆ ಒಂದೆರಡು ಬಾರಿ ಇದೇ ಮಾತನ್ನು ಹೇಳಿದ್ದಳು. ಆಗ ನನಗೆ ಯಾವುದೂ ತೋಚದಂತಾಗಿ ಸುಮ್ಮನೆ ಇದ್ದೆ. ಈಗ ಯೋಚಿಸಿದರೆ ನೀನು ಹೇಳಿದ ಮಾರ್ಗ ಅನುಸರಿಸಿದರೆ ಅವಳಿಗೆ ಸ್ವಲ್ಪವಾದರೂ ವಿಶ್ರಾಂತಿ ದೊರೆಯಬಹುದು ಅನ್ನಿಸುತ್ತದೆ',

"ನಾನೂ ಗಂಡಸು ಪ್ರಸಾದ್, ನನಗೂ ಕೆಚ್ಚೆದೆ ಬಲ ಎಲ್ಲ ಇದೆ ಆದರೆ ಹೆಣ್ಣಿನ ಕಣ್ಣೀರು ನೊಂದ ಹೃದಯವನ್ನು ಕಂಡು ಮೂಕನಾಗಿರುವಷ್ಟು ತಾಳ್ಮೆ ಶಕ್ತಿ ಇಲ್ಲ. ನಾವು ಯಾರು ಈ ವಿಷಯದಲ್ಲಿ ಪ್ರವೇಶ ಮಾಡಿದರೂ ಲೀಲಾ ಮನಸ್ಸು ಚಿಕ್ಕದು ಮಾಡಿಕೊಳ್ಳುತ್ತಾಳೆ. ಅದರಿಂದಲೇ ಸುಮ್ಮನಿರಬೇಕಾಗಿದೆ...ಅಂದ ಹಾಗೆ ಎಲ್ಲಿಗಾದರೂ ಹೋಗುವ ಯೋಜನೆ ಇದೆಯೇನು?'

"ದಕ್ಷಿಣ ಭಾರತದ ದೇವಾಲಯಗಳ ಇತಿಹಾಸ ಪರಿಚಯ. ಕ್ಷೇತ್ರ ಸಂದರ್ಶನದ ಬಗ್ಗೆ ಲೇಖನಗಳನ್ನು ಬರೆಯಲು, ಕ್ಷೇತ್ರಗಳನ್ನು ಸಂದರ್ಶಿಸಿ ವಿಷಯ ಸಂಗ್ರಹಿಸಿಕೊಂಡು ಬರಲು ಸಂಪಾದಕೀಯ ಮಂಡಳಿಯವರು ನನ್ನನ್ನೇ ನೇಮಿಸಿದ್ದಾರೆ. ಒಂದೆರಡು ವಾರದಲ್ಲಿಯೇ ಹೊರಡಬೇಕಾಗಬಹುದು ಆಗ ಲೀಲಾನ ಜೊತೆಯಲ್ಲೇ ಕರೆದುಕೊಂಡು ಹೋಗುತ್ತೇನೆ" ಎಂದು ಆಶ್ವಾಸನೆ ಇತ್ತ ಪ್ರಸಾದ್.

ಮೂರ್ತಿಗೆ ದೊಡ್ಡ ಹೊರೆ ಇಳಿದಂತಾಯಿತು."ಅಷ್ಟು ಮಾಡು ಪ್ರಸಾದ್" ಎಂದು ಉದ್ವಿಗ್ನನಾಗಿ ನುಡಿದ.

o o o

ಮದ್ರಾಸಿಗೆ ತೆರಳುವ ಹಾಗೂ ತನ್ನೊಂದಿಗೆ ಲೀಲಾಳನ್ನು ಕರೆದೊಯ್ಯುವ ವಿಷಯವನ್ನು ತಾಯಿಯೊಂದಿಗೆ ಪ್ರಸ್ತಾಪಿಸಿದ ಪ್ರಸಾದ್.

"ಅಂತೂ ಅವಳನ್ನು ಕರೆದುಕೊಂಡು ಹೋಗಲು ನಿರ್ಧರಿಸಿದ್ದೀಯಾ ಅನ್ನು...' ಎಂದು ಎಳೆದೆಳೆದೇ ಪ್ರಶ್ನಿಸಿದರು ಅನುಸೂಯಮ್ಮ.

'ಹೂನಮ್ಮ'

'ಬರ್ತೀನಿ ಅಂತ ಒಪ್ಪಿಕೊಂಡಿದ್ದಾಳೇನೋ?'

'ಬರೋದಿಲ್ಲ ಅಂತ ಮೊದಲು ಹಟ ಹಿಡಿದಳು. ಅಮ್ಮನನ್ನು ಒಪ್ಪಿಸುತ್ತೇನೆ ಅಂತ ಹೇಳಿ ಹೊರಡಲು ಹೇಳಿದ್ದೇನಮ್ಮ'

'ನನಗೆಲ್ಲ ಗೊತ್ತು ಕಣೊ. ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ಗೊತ್ತಾಗೊಲ್ವೆ? ಅವಳು ನಿಮ್ಮನ್ನೆಲ್ಲ ಒಟ್ಟಿಗೆ ಹಾಕಿಕೊಂಡು ನನ್ನ ಮೇಲೆ ಎತ್ತಿ ಕಟ್ಟಿದ್ದಾಳೆ. ಅದಕ್ಕೆ ಭಗವಂತ ಅವಳಿಗೆ ಆ ಗತಿ ಕೊಟ್ಟ ನೋಡು. ಅದೇನು ನಿ

(ಮುಂದಿನ ಪುಟಕ್ಕೆ)

ನಿಮ್ಮ ಆಕಾಂಕ್ಷೆಗಳ ಸಾಧನೆಗಾಗಿ ಮತ್ತು ಅನಿಶ್ಚಿತ ಅವಶ್ಯಕತೆಗಳಿಗಾಗಿ ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ಸ್ಥಿರ ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಬೆಳಕು ಕಂಡ ಬಾಳು

(ಹಿಂದಿನ ಪುಟದಿಂದ)

ಮ್ಮ ವಿಹಾರ ವಿನೋದ ನಡೆಯಬೇಕೋ ಎಲ್ಲಿ ನಡೀಲಿ' ಅದೇನೇನು ಮಾಡಿಕೊಳ್ಳಬೇಕೋ ಮಾಡಿಕೋ ಹೋಗು. ನನಗೇನು ವರದಿ ಬೇಕಿಲ್ಲ" ಎಂದು ಬಿಂತೆಯ ವಾಕ್ಯವನ್ನು ಸುರಿಸಿದರು ಅನುಸೂಯಮ್ಮ.

ಅಲ್ಲಿಯವರೆಗೆ ಮೌನವಾಗಿಯೇ ಸಹಿಸಿದ್ದ ಭೀಮರಾಯರು—"ಇಷ್ಟು ದೊಡ್ಡವರಾದರೂ ನಿಮಗೆ ಬುದ್ಧಿ ಬರಲಿಲ್ಲವಲ್ರೀ...ಅವಳನ್ನೇನು ಕೇಳಬೇಕು, ಎದ್ದು ಹೋಗಿ ಪ್ರಯಾಣದ ಸಿದ್ಧತೆ ಮಾಡಿಕೋ. ಒಳಲಿರುವ ಬೆಂಕಿಗೂ ಅವಳಿಗೂ ವ್ಯತ್ಯಾಸವೇ ಇಲ್ಲ" ಎಂದರು.

ೋ ೋ ೋ

ಪ್ರಸಾದ ಲೀಲಾನೊಂದಿಗೆ ಮದ್ರಾಸು ಗಾಡಿ ಹತ್ತಿದ.

ಯಾರೂ ನಿರೀಕ್ಷಿಸದಿದ್ದ ದುರಂತ ವಾರ್ತೆಯೊಂದು ಭಾರತೀಯರನ್ನೇ ಅಲುಗಾಡಿಸಿತು.

ಬೆಂಗಳೂರಿನಿಂದ ಮದ್ರಾಸಿಗೆ ಹೊರಟಿದ್ದ ಎಕ್ಸ್‌ಪ್ರೆಸ್ ಗಾಡಿ ಬೆಳಗಿನ ಜಾವ 3-40ರ ಸಮಯದಲ್ಲಿ ಮದ್ರಾಸಿಗೆ ಹದಿಮೂರು ಮೈಲಿ ದೂರದಲ್ಲಿ ಸೇತುವೆಯ ಬಳಿ ಉರುಳಿಬಿದ್ದಿದೆ. ನೂರಾರು ಜನರು ಮರಣಹೊಂದಿದ್ದಾರೆ. ಅಸಂಖ್ಯಾತ ಜನರಿಗೆ ಗಾಯಗಳಾಗಿವೆ. ಅವರನ್ನು ಮದ್ರಾಸು ಆಸ್ಪತ್ರೆಗೆ ಸೇರಿಸಲಾಗಿದೆ. ಎಂದು ಬಾನುಲಿ ಪತ್ರಿಕೆಗಳು ಲೋಕಕ್ಕೆ ಸುದ್ದಿಯನ್ನು ಸಾರಿದವು.

ಪ್ರಸಾದ್ ಹಾಗೂ ಅವನ ಪತ್ನಿ ಲೀಲಾ ಅದೇ ಗಾಡಿಯಲ್ಲಿ ಪ್ರಯಾಣಿಕರಾಗಿದ್ದರು. ಇಬ್ಬರೂ ಒಟ್ಟಾಗಿಯೇ ಪ್ರಯಾಣ ಮಾಡುತ್ತಿದ್ದರು.

ಇಬ್ಬರೂ ಪ್ರಾಣಾಪಾಯದಿಂದ ಪಾರಾಗಿದ್ದರು. ಪ್ರಸಾದ್‌ನ ಬಲಗಾಲಿಗೆ ಸ್ವಲ್ಪ ಹೊಡೆತ ಬಿದ್ದಿತ್ತು. ಲೀಲಾಳ ತಲೆಗೆ ಗಾಡಿಯ ಪೆಟ್ಟು ಬಡಿದು ಸಲ್ಪ ಹೆಚ್ಚಾಗಿಯೇ ಗಾಯವಾಗಿತ್ತು.

ಇಬ್ಬರೂ ಮದ್ರಾಸು ಆಸ್ಪತ್ರೆಯಲ್ಲಿ ಮಂಚಗಳ ಮೇಲೆ ಚಿಕಿತ್ಸೆಗಾಗಿ ಅಕ್ಕಪಕ್ಕದಲ್ಲಿಯೇ ಮಲಗಿದ್ದರು. ಪ್ರಸಾದ್ ಗುಣಮುಖನಾಗಲು ಹೆಚ್ಚು ದಿನ ಬೇಕಾಗಲಿಲ್ಲ ಲೀಲಾಗೆ ತಿಳಿವು ಬರುವ ವೇಳೆಗೆ ಒಂದು ವಾರ ಹಿಡಿಯಿತು.

ೋ ೋ ೋ ೋ

ಊರಿನಿಂದ ಮೂರ್ತಿ ತಂದೆ ಹೆಂಡತಿ ಮಕ್ಕಳೊಂದಿಗೆ ಬಂದು ತಮ್ಮ ಮತ್ತು ನಾದಿನಿಯನ್ನು ನೋಡಿಕೊಂಡು ಹೋದ. ಕೆಲಸದ ನಿಮಿತ್ತ ನಿಲ್ಲಲಾರದೆ ಊರಿಗೆ ಹಿಂತಿರುಗಿದ ಮೂರ್ತಿ. ಭೀಮರಾಯರು ಯಾರ ಮಾತಿಗೂ ಒಪ್ಪದೇ ಮದ್ರಾಸಿನಲ್ಲಿಯೇ ಉಳಿದುಕೊಂಡರು.

ಅನುಸೂಯಮ್ಮ ಸುದ್ದಿ ತಿಳಿದು ಎರಡು ಅನುಕಂಪದ ಮಾತುಗಳನ್ನು ಹೇಳಲಿಲ್ಲ "ಹೀಗೆ ಆಗುವುದೆಂದು ನನಗೆ ಗೊತ್ತಿತ್ತು" ಎಂದು ಸರ್ವಜ್ಞೆಯಂತೆ ಹೇಳಿದರು.

ತಾಯಿಯ ಪ್ರತಿಕ್ರಿಯೆಗೆ ಮೂರ್ತಿಯ ಮನಸ್ಸು ನೊಂದಿತು.

ೋ ೋ ೋ ೋ

ಲೇಡಿ ಡಾಕ್ಟರ್ ಗಾಯಿತ್ರಿ ದೇವಿ ಸರ್ಕಾರಿ ವೈದ್ಯಶಾಲೆಗೆ ಚಿರಪರಿಚಿತರು. ರೋಗಿಗಳಿಗೆ ಔಷಧಿ ಕೊಡುವ ವೈದ್ಯರು ಮಾತ್ರವೇ ಅಲ್ಲ ಅವರನ್ನು ತಮ್ಮ ಕರುಣೆ ವಿಶ್ವಾಸ, ಅಂತಃಕರಣಗಳಿಂದ ಆದರಿಸುವ ಸಹೃದಯ. ಪ್ರತಿ ನಿತ್ಯವೂ ಪ್ರತಿಯೊಬ್ಬ ರೋಗಿಯನ್ನು ಭೇಟಿ ಮಾಡುವುದು ಅವರ ಕರ್ತವ್ಯವೇ ಆಗಿತ್ತು.

ಗಾಯಿತ್ರಿ ದೇವಿ ಲೀಲಾ ಮಲಗಿದ್ದ ಮಂಚದ ಬಳಿಗೆ ಬಂದು ಪಕ್ಕದಲ್ಲಿ ಕುಳಿತು -"ಹೇಗಿದ್ದೀಯಮ್ಮ ಲೀಲಾ" ಎಂದು ಪ್ರಶ್ನಿಸಿದರು ಅವರ ಪ್ರಶ್ನೆಯಲ್ಲಿ ಮಾತೆಯ ಅನಿರ್ವಚನೀಯ ಮಮತೆ ತುಂಬಿತ್ತು.

"ಪರವಾಗಿಲ್ಲ ಡಾಕ್ಟರ್. ಆರೋಗ್ಯ ಸುಧಾರಿಸುತ್ತಲಿದೆ. ನನಗಂತೂ ನಿಮ್ಮೊಡನಿರುವಾಗ ಹೆತ್ತ ತಾಯಿಯೊಂದಿಗೆ ಇದ್ದಂತೆ ಆಗುತ್ತದೆ."

"ಬಹು ದೊಡ್ಡ ಮಾತಾಯಿತು ಕಣಮ್ಮ."

"ಈ ಕಾಲದಲ್ಲಿ ಯಾರಿದ್ದಾರೆ ಡಾಕ್ಟರ್ ರೋಗಿಗಳನ್ನು ಅಭಿಮಾನದಿಂದ ನೋಡಿಕೊಂಡು ಆರೈಕೆ ಮಾಡುವವರು?

"ನಿಜವಮ್ಮ ನಿನ್ನ ಮಾತು ವೈದ್ಯ ಕರುಣೆ, ದಯೆ, ಅಭಿಮಾನಿಗಳ ಮೂರ್ತಿ ಕಣಮ್ಮ."

"ನಿಮ್ಮಂತಹವರಾದರೆ ಮಾತ್ರ."

"ಎಲ್ಲರೂ ಹಾಗೇ ಇರಬೇಕಮ್ಮ" ಎಂದು ಲೀಲಾಳನ್ನು ಪರೀಕ್ಷಿಸಿ ಮುಂದೆ ನಡೆದರು ಗಾಯಿತ್ರೀ ದೇವಿ.

ಎರಡು ವಾರ ಕಳೆಯಿತು. ಲೀಲಾ ಗುಣಮುಖಳಾದಳು ಅವಳನ್ನು ಬಿಡುಗಡೆ ಮಾಡುವ ದಿನ ಸಮೀಪಿಸಿತು.

ಒಂದು ದಿನ ಲೀಲಾಳನ್ನು ಕಾಣಲು ಬಂದ ಗಾಯಿತ್ರಿ ದೇವಿ—

"ಇನ್ನೇನಮ್ಮ ನಮ್ಮನ್ನೆಲ್ಲ ಬಿಟ್ಟು ಹೊರಡುತ್ತೀಯ, ಮರೆಯಬೇಡಮ್ಮ. ಮದ್ರಾಸಿಗೆ ನಮ್ಮನೆಗೆ ಬರುತ್ತಿರು ಎಂದರು.

"ಆಗಲಿ ಡಾಕ್ಟರ್."

"ಹೆಣ್ಣು ಜನ್ಮ ಬಹು ನೋವಿನ ಜನ್ಮ ಕಣಮ್ಮ." "ಅದೇಕೆ ಹಾಗೆ ಹೇಳ್ತೀರಾ?" ಎಂದು ಮುಗ್ಧ ಪ್ರಶ್ನೆ ಹಾಕಿದಳು ಲೀಲಾ.

"ಏನು ಹೇಳಲಮ್ಮ? ನಿನ್ನ ಹಾಗೇ ನನಗೂ ಒಬ್ಬಳೇ ಮಗಳಿದ್ದಳು. ಒಂದು ದಿನ ಕಾರು ಅಪಘಾತದಲ್ಲಿ ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ಸತ್ತುಹೋದಳು. ಅಂದಿನಿಂದ ನನಗೆ ಪ್ರಪಂಚವೇ ಶೂನ್ಯವಾಯಿತು. ನನ್ನ ಯಜಮಾನರು ದೀನ ದಲಿತರ ಸೇವೆ ಮಾಡಿ ನಿನ್ನ ಮನಸ್ಸಿನ ನೋವು ಕಡಿಮೆ ಮಾಡಿಕೋ ಎಂದು ಸಲಹೆ ಮಾಡಿದರು. ಅಂದಿನಿಂದ ಈ ವೃತ್ತಿ ಹಿಡಿದೆ. ನನಗೆ ಈ ರೋಗಿಗಳ ಸೇವೆಯಲ್ಲಿ ತೃಪ್ತಿ ದೊರೆತಿದೆ. ನಿನ್ನನ್ನು ನೋಡಿದ ಕೂಡಲೇ ನನಗೆ ನನ್ನ ಗತಿಸಿದ ಮಗಳ ನೆನಪು ಬರುತ್ತದೆ" ಎಂದು ಕಣ್ಣಂಚಿನಲ್ಲಿ ಬಂದ ಕಣ್ಣೀರು ಒರೆಸಿಕೊಂಡರು ಗಾಯಿತ್ರಿ ದೇವಿ.

ಲೀಲಾ "ಅಮ್ಮಾ" ಎಂದು ಗಾಯಿತ್ರಿ ದೇವಿಯನ್ನು ಅಪ್ಪಿಕೊಂಡಳು.

ೋ ೋ ೋ

ಲೀಲಾ ಆಸ್ಪತ್ರೆ ಬಿಟ್ಟು ಹೊರಬರುವ ಎರಡು ದಿನ ಮುಂಚೆ ಅವಳ ಬಳಿಗೆ ಬಂದ ಗಾಯಿತ್ರಿ ದೇವಿ—"ನಿನ್ನ ಯಜಮಾನರು ಎಲ್ಲ ವಿಷಯಗಳನ್ನು ತಿಳಿಸಿದ್ದಾರೆ ಲೀಲಾ. ಇನ್ನು ಮೇಲೆ ನೀನು ಮಗಳು—ನಾನು ತಾಯಿ. ನೀನು ಮಗುವಿಲ್ಲ ಎಂದು ಏಕೆ ಕೊರಗುತ್ತೀಯೋ ಕಾಣೆ ನಿನ್ನ ಯಜಮಾನರೇ ಒಂದು ಮಗು"ಎಂದು ನಕ್ಕರು.

ಒಂದು ವರ್ಷದ ಮಗುವಿನ ಅಳುವನ್ನು ನಿಲ್ಲಿಸಿ ಸಮಾಧಾನ ಪಡಿಸಲಾರದೆ ನರ್ಸ್ ನೀನಾ ಮಗುವನ್ನೇ ಬಯ್ಯುತ್ತಿದ್ದಳು. ನರ್ಸ್ ಮಗುವಿನ ಕುಲಕೋಟಿಯನ್ನೇ ತೊಳೆಯುತ್ತಿರುವುದನ್ನು ಕಂಡ ಗಾಯಿತ್ರಿದೇವಿ "ನೀನಾ, ನಿನ್ನ ಕೈಲಿ ಮಗು ಸಮಾಧಾನಪಡಿಸಲಾಗದಿದ್ದುದರಿಂದ ಏಕಿಷ್ಟು ಹಾರಾಡುತ್ತೀಯ. ಪಾಪ ದುರಂತದಲ್ಲಿ ಅಪ್ಪ ಅಮ್ಮ ಎಲ್ಲರೂ ಕಣ್ಮುಚ್ಚಿದರು. ಅದಕ್ಕೆ ಪೋಷಕರೇ ಇಲ್ಲ ಭಗವಂತನೇ ರಕ್ಷಕ. ಅದೇಕೆ ಮಗುವನ್ನು ದೂಷಿಸುತ್ತೀಯಾ? ಪ್ರಪಂಚವನ್ನೇ ಕಾಣದ ಕಂದಮ್ಮ ಏನು ಪಾಪ ಮಾಡಿದೆ' ಎಂದು ಬೇಸರದಿಂದ ನುಡಿದರು.

ನರ್ಸ್ ಮರು ಮಾತಾಡಲಿಲ್ಲ. ಅತ್ತೆತ್ತಿ ನಿಲ್ಲಲಿಲ್ಲ ಗಾಯಿತ್ರಿ ದೇವಿ ಮಗುವನ್ನು ಎತ್ತಿಕೊಂಡು ನಡೆದರು.

ೋ ೋ ೋ

ಲೀಲಾ ಆಸ್ಪತ್ರೆ ಬಿಟ್ಟು ತೆರಳುವ ಮುಂಚೆ ಗಾಯಿತ್ರಿ ದೇವಿಗೆ ಹೇಳಿ ಅವರ ಅನುಮತಿ ಪಡೆದು ಹೋಗಲು ಅವರ ಕೋಣೆಗೆ ಬಂದಳು.

ಗಾಯಿತ್ರೀ ದೇವಿ ಹೆಣ್ಣು ಮಗುವನ್ನು ಪರೀಕ್ಷಿಸುತ್ತಿದ್ದರು.

ಅವರ ಕುರ್ಚಿಯ ಪಕ್ಕದಲ್ಲೇ ಇದ್ದ ತೊಟ್ಟಿಲಲ್ಲಿ ಒಂದು ವರ್ಷದ ಮಗು ಬಾಯಲ್ಲಿ ಬೆರಳಿಟ್ಟುಕೊಂಡು ಆಡುತ್ತಾ ಮಲಗಿತ್ತು. ಲೀಲಾಗೆ ಅಂದು ಡಾಕ್ಟರು ನರ್ಸ್ ಕೈಯಿಂದ ತೆಗೆದುಕೊಂಡ ಮಗುವೇ ಎಂದು ಮನವರಿಕೆಯಾಯಿತು

"ಬಾ ಲೀಲಾ" ಎಂದು ಗಾಯಿತ್ರಿ ದೇವಿಯೇ ಸ್ವಾಗತಿಸಿದರು.

"ಮತ್ತೆ ನಿಮ್ಮ ಭೇಟಿ ಯಾವಾಗ ಪ್ರಸಾದ್, ನನ್ನ ಮಗಳು ನನ್ನ ಮನೆಗೆ ಬರಲೇ ಇಲ್ಲ" ಎಂದು ನಕ್ಕರು ಗಾಯಿತ್ರಿ ದೇವಿ.

"ಇಂದೇ ಕರೆದುಕೊಂಡು ಹೋಗಿ-"

"ಬಹಳ ಸಂತೋಷವನ್ನಪ್ಪಾ. ಹೇಳಿ ತಪ್ಪಿಸಿಕೊಳ್ಳುವಂತಿಲ್ಲ ಬರಲೇ ಬೇಕು."

ಅದ ವರೆವಿಗೂ ತೊಟ್ಟಿಲಲ್ಲಿ ಮಲಗಿ ಆಡುತ್ತಿದ್ದ ಮಗು ಅಳಲಾರಂಭಿಸಿತು, ಗಾಯಿತ್ರಿ ದೇವಿ ಸಮಾಧಾನ ಪಡಿಸಲು ಮಗುವನ್ನ ಎತ್ತಿಕೊಂಡರು.

"ಪ್ರಪಂಚವನ್ನೇ ಕಾಣದ ಕಂದ ಹುಟ್ಟಿದಂದಿನಿಂದಲೇ ನೋವು ಅನುಭವಿಸುತ್ತಿದೆ. ರೈಲು ಅಪಘಾತದಲ್ಲಿ ಸುರಕ್ಷಿತವಾಗಿ ದೊರೆತ ಮಗು ಇದು. ತಂದೆ ತಾಯಿ ಯಾರು ಎನ್ನುವುದೂ ಗೊತ್ತಿಲ್ಲ. ಪತ್ರಿಕೆಗಳಲ್ಲಿ ಮಗುವಿನ ಫೋಟೋ ಪ್ರಕಟಿಸಿದರೂ ಬಂಧು ಬಳಗ ಬರಲಿಲ್ಲ ಈಗ ಇದು ದೇವರ ಕೂಸು – ಮಾನವ ಜನಾಂಗದ ಕೂಸು ಋಣಾನುಬಂಧ ; ಇರುವ ವರೆಗೆ ನನ್ನ ಬಳಿ ಇರುತ್ತದೆ. ಮಗುವಿನ ವ್ಯಥಾ ನಿಂದೆ ಕೇಳಲಾರದೆ ನನ್ನ ಬಳಿಯೇ ಇರಿಸಿ ಕೊಂಡಿದ್ದೇನೆ. ಈ ಮಗುವನ್ನು ಸಾಕಿಕೊಳ್ಳುವಂತಹ ಪುಣ್ಯಾತ್ಮರು ಬಂದರೆ ದಾನ ಮಾಡುತ್ತೇನೆ' ಎಂದು ನೊಂದು ನುಡಿದರು ಗಾಯಿತ್ರಿ ದೇವಿ.

ಲೀಲಾ ಗಂಡನನ್ನೊಮ್ಮೆ ಓರೆಗಣ್ಣಿನಿಂದ ನೋಡಿ

"ನಾನು ಸಾಕಿಕೊಳ್ಳುತ್ತೇನೆ ಕೊಡುತ್ತೀಯೇನಮ್ಮ' ಎಂದಳು.

"ಈ ಮಗು ಅಷ್ಟು ಭಾಗ್ಯ ಪಡೆದಿದೆಯೇ ಲೀಲಾ'

"ನಿಜವಾಗಿಯೂ ಅಮ್ಮ" ಎಂದು ತನ್ನ ಎರಡು ಕೈಗಳನ್ನೂ ಲೀಲಾ ಮುಂದೆ ಚಾಚಿದಳು.

ಗಾಯಿತ್ರಿ ದೇವಿ ಮಗುವನ್ನು ಲೀಲಾಳ ಕೈಗಿತ್ತು 'ಇದು ನಿನ್ನ ಬಾಳಿಗೆ ಬೆಳಕು ಲೀಲಾ'ಎಂದರು. ಭೀಮರಾಯರು, ಪ್ರಸಾದ, ನೆರೆದಿದ್ದ ರೋಗಿಗಳು, ನರ್ಸುಗಳು ಪವಾಡ ಕಂಡವರಂತೆ ನಿಂತೇ ಇದ್ದರು.

ಲೀಲಾ ಮಗುವಿಗೆ ಮುತ್ತಿಟ್ಟು 'ನನ್ನ ಚಿನ್ನಾ' ಎಂದು ಕಣ್ಮುಚ್ಚಿದಳು. ಕಣ್ಣಂಚಿನಿಂದ ಹರಿದ ಕಂಬನಿ ಆನಂದ ಸಂಕೇತವಾಗಿತ್ತು.

ಲೀಲಾಳ ಆತ್ಮ ತಾಯ್ತನದ ಸಾಗರದಲ್ಲಿ ಓಲಾಡಿತ್ತು.

In the Court of the Munsiff Udipi

O. S. No 273/1964

Muthakka Shedthi — Plaintiff

vs

Sanki Shedthi & others — Defendants

To the 7th defendant Ananthapadmanabha Tantri, son of Subraya Tantri, Udipi Town.

The above suit is posted to 26—9—64 for the appearance of the 7th defendant. He is directed to appear before this Court either personally or by pleader on 26—9—64 at 11 a. m failing which the suit will be decided in his absence.

K. L Aithal,
Vakil for Plaintiff.

Udipi, 15—9—64

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O S 172/1961.

ವೆಂಕಪ್ಪ ಶೆಟ್ಟಿ.........ವಾದಿ.

ತುಕುಣಿ ಪೂಜಾರಿ ಕೂಡಾ......... ಪ್ರತಿವಾದಿರು

3ನೇ ಪ್ರತಿವಾದಿ ಬೆಳ್ತಂಗಡಿ ತಾಲೂಕು ಪುತ್ತಿಲ ಗ್ರಾಮದ ಉದ್ಯೈರೆ ಎಂಬಲ್ಲಿರುವ ವೆಂಕಮ್ಮ ಹೆಂಗಸರವರ ಮಗ ನಾಕ್ಯಲ ಪೂಜಾರಿಗೆ.

ವಾದಿಯು ನಿಮ್ಮ ಸುತ್ತ ಇತರೆ ಮೂವರ ಮೇಲೆ ಆಡವು ದಸ್ತಾವೇಜಿನ ಅಸಲು ಮತ್ತು ಬಡ್ಡಿ ಹಣಗಳ ಬಾಕಿ ಬಗ್ಗೆ ದಾಖಲು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾರೀಕು. 6—10—1964 ಕ್ಕೆ ಇಟ್ಟಿರುತ್ತದೆ. ಆದಕಾರಣ ಮೇಲ್ಕಂಡ ಕೋರ್ಟಿನಲ್ಲಿ ನೀವು ತಾ. 6—10—1964 ರಲ್ಲು ಹಗಲು ಗಂಟೆ 11 ಕ್ಕೆ ಖುದ್ದು ಯಾ ವಕೀಲರ ದ್ವಾರಾ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ನಿಮ್ಮನ್ನು ಶಿಕ್ಷಾಮಾಡಿ ಮೇಲಿನ ದಾವೆಯನ್ನು ತೀರ್ಮಾನಿಸಲಾದೀತು.

(RIA 1045/64 ಕೋರ್ಟು ಹುಕುಂ ಪ್ರಕಾರ)

(Sd) ಪಿ. ರಾಮಚಂದ್ರ ಭಟ್ಟ
ವಾದಿಕಡೆ ಎಡ್ವೋಕೇಟ್.

ಎಲ್ಲೆಲ್ಲಿ ಏನೇನು?

ಎಂ. ವಿ. ಯವರ ಜನ್ಮ ದಿನಾಚರಣೆ

ಮಣಿಪಾಲ ಸೆ. ೧೬— ಉಡುಪಿ ರೋಟರಿ ಕ್ಲಬ್ ನಿನ್ನೆ ಇಲ್ಲಿ ಅಖಿಲ ಭಾರತ ತಯಾರಿಕೆಗಾರರ ಸಂಸ್ಥೆಯ ದಕ್ಷಿಣ ಕನ್ನಡ ಜಿಲ್ಲಾ ಶಾಖೆಯೊಡಗೂಡಿ ದಿವಂಗತ ಸರ್ ಎಂ. ವಿಶ್ವೇಶ್ವರಯ್ಯನವರ ಜನ್ಮ ದಿನವನ್ನಾಚರಿಸಿತು. ದ. ಕ. ಜಿಲ್ಲಾ ಶಾಖೆಯ ಅಧ್ಯಕ್ಷ ಶ್ರೀ ರಮೇಶ ಪೈಯವರು ಮಾತನಾಡಿ ಸರ್. ಎಂ. ವಿ. ಯವರು ಕೈಗಾರಿಕೆಗಳ ಸ್ಥಾಪನೆಗೆ ಕಾರಣ ಪುರುಷರಾಗಿದ್ದರೆಂದರು. ದಕ್ಷಿಣ ಕನ್ನಡದಲ್ಲಿ ಅನೇಕ ಕೈಗಾರಿಕೆಗಳು ಆರಂಭವಾಗಿದ್ದು, ಇನ್ನೂ ಹಲವಾರು ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಬೇಕಾದ ಸಂಪನ್ಮೂಲಗಳೆಲ್ಲ ಇವೆ ಎಂದರು. ಪ್ರೊ| ಸಿ. ಎ. ಸಾಲ್ಡಾನರು ಸರ್. ಎಂ. ವಿ ಯವರ ಇಂಜಿನಿಯರಿಂಗ್ ಪ್ರತಿಭೆ ಅಸಾಮಾನ್ಯವಾಗಿತ್ತೆಂದೂ ಹೊಸ ಸಂಸ್ಥೆಗಳನ್ನು ಆರಂಭಿಸುವುದಕ್ಕೆ ಖಾಸಗಿ ರಂಗಕ್ಕೆ ಹೆಚ್ಚು ಅವಕಾಶ ಕೊಡಬೇಕೆಂದೂ ಬೆಲೆಗಳು ಏರುವುದನ್ನು ತಡೆಗಟ್ಟುವುದಕ್ಕಾಗಿ ಬೃಹತ್ ಕೈಗಾರಿಕೆಗಳ ಯೋಜನೆಯನ್ನು ಸೀಮಿತಗೊಳಿಸಬೇಕಾದುದಗತ್ಯವೆಂದೂ ಹೇಳಿದರು. ಯಂತ್ರಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುವುದಕ್ಕಿಂತ ನಮ್ಮ ದೇಶದಲ್ಲಿಯೇ ತಯಾರಿಸುವುದನ್ನು ಕಲಿಯುವುದರ ಮೂಲಕ ಸರ್ ಎಂ. ವಿಯವರ ನೆನಪನ್ನು ಉಳಿಸಿಕೊಳ್ಳಬಹುದಾಗಿದೆ ಎಂದು ರೋಟರಿ ಜಿಲ್ಲಾ ಗವರ್ನರ್ ಡಾ|| ಟಿ. ಎಂ. ಎ. ಪೈ ನುಡಿದರು. ನಮ್ಮ ದೇಶ ಪ್ರಗತಿ ಹೊಂದಬೇಕಾದರೆ ಎಲ್ಲ ರಂಗಗಳಲ್ಲೂ ಉತ್ಪಾದನೆ ಹೆಚ್ಚಾಗಬೇಕೆಂದರು. ಕ್ಲಬ್ಬಿನ ಅಧ್ಯಕ್ಷ ಡಾ|| ಎ. ಕೃಷ್ಣರಾವ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಚಂದ್ರಶೇಖರ್ ವಂದನಾರ್ಪಣೆ ಮಾಡಿದರು.

(ಮೂರನೇ ಪುಟದಿಂದ)

ಧರ್ಮವನ್ನು ತನ್ನ ರಾಷ್ಟ್ರೀಯ ಧರ್ಮವೆಂದು ಸಾರಿದ ಪಾಕಿಸ್ತಾನದಲ್ಲಿ ಸ್ತ್ರೀಯು ಇಸ್ಲಾಮೀ ರಾಜ್ಯದ ವರಿಷ್ಠೆಯಾಗುವುದು ಧರ್ಮೋಚಿತವೇ ಎಂದು ಪ್ರಶ್ನಿಸುತ್ತಿದ್ದಾರೆ. ಹಾಗೆಯೇ ೭೦ ವರ್ಷದ ಮುದುಕಿಯೊಬ್ಬಳು ಅಧ್ಯಕ್ಷೆಯಾಗುವುದು ಉಚಿತವೇ ಎಂದೂ ಕೇಳುತ್ತಿದ್ದಾರೆ. ಒಂದು ವೇಳೆ ಇವೇ ಕಾರಣಗಳಿಂದ ಜಿನ್ನಾರನ್ನು ಬಹಿಷ್ಕರಿಸಿದರೆ ಪಾಕ್ ಇಸ್ಲಾಮೀ ಪ್ರಜಾರಾಜ್ಯದಲ್ಲಿ ಪ್ರಜೆಗಳಿಗೆ ಯಾವ ಸ್ವಾತಂತ್ರ್ಯವಿದೆಯೆಂದು ಜಗಜ್ಜಾಹೀರಾಗುವುದು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. P. No. 39/1964.

1. ಬೆನೆಡಿಕ್ಟಾ ಮಚಾದೋ—ಜೋನ್ ಫ್ರಾನ್ಸಿಸ್ ಕ್ಸೇವಿಯರ್ ಮಚಾದೋರ ವಿಧವೆ.
2. ಗ್ಲಾಡಿಸ್ ಮುಕ್ತಲಿತ (ಪ್ಯಾನರ್) ಜೋನ್ ಫ್ರಾನ್ಸಿಸ್ ಕ್ಸೇವಿಯರ್ ಮಚಾದೋರ ಮಗಳು. ಗಾರ್ಡಿಯನ್ 1ನೆ ಅರ್ಜಿದಾರಳು. ಉಡುಪಿ ತಾಲ್ಲೂಕು ಶಿರ್ವ ಗ್ರಾಮದ ದಡ್ಡಿನ ಹಿತ್ಲು ಮನೆಯಲ್ಲಿರುವವರು —ಅರ್ಜಿದಾರರು.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ 1ನೆ ಅರ್ಜಿದಾರಳ ಗಂಡ ವ 2ನೆ ಅರ್ಜಿದಾರಳ ತಂದೆ ಮೃತ ಜೋನ್ ಫ್ರಾನ್ಸಿಸ್ ಕ್ಸೇವಿಯರ್ ಮಚಾದೋರಿಗೆ ಬರತಕ್ಕ ಸದ್ರಿ ಅರ್ಜಿಯ A ಶೆಡ್ಯೂಲಿನಲ್ಲಿ ಕಾಣಿಸಿದ ಆಯಿವೇಜುಗಳನ್ನು ವಸೂಲು ಮಾಡಿಕೊಳ್ಳುವರೆ ತಾವು ಹಕ್ಕುದಾರರು ವ ವಾರೀಸುದಾರರೆಂತಲೂ ಆ ಬಗ್ಗೆ 1ನೆ ಅರ್ಜಿದಾರಳ ಹೆಸರಿನಲ್ಲಿ Succession Certificate ಕೊಡಿಸುವಂತೆ ಮಾಡಿದ ಮೇಲ್ಕಂಡ ಅರ್ಜಿಯ ಕುರಿತು ಯಾರಿಗೇನಾದರೂ ಆಕ್ಷೇಪವಿದ್ದಲ್ಲಿ ಅದನ್ನು ತಾರೀಕು 9-10-1964ಕ್ಕೆ ಹಗಲು ಗಂಟೆ 11ಕ್ಕೆ ಬಂದು ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿದೆ.

K. Varadaraya Pai,
Advocate for Petitioners.

ಉಡುಪಿ ತಾ. 21-9-1964

ಮೋಡರ್ನ್ ಟ್ಯುಟೋರಿಯಲ್ ಕಾಲೇಜಿನ ಉದ್ಘಾಟನೆ

ಉಡುಪಿ, ಸೆ. ೧೮. ಉಡುಪಿಯಲ್ಲಿ ನೂತನವಾಗಿ ರೂಪುಗೊಂಡಿರುವ ಮೋಡರ್ನ್ ಟ್ಯುಟೋರಿಯಲ್ ಕಾಲೇಜಿನ ಉದ್ಘಾಟನಾ ಸಮಾರಂಭವು ತಾ. ೧೪ರಂದು ನಗರಸಭಾಪತಿ ಶ್ರೀ ಪಿ. ರಂಗನಾಥ ಶೆಣ್ಯೆಯವರ ಅಧ್ಯಕ್ಷತೆಯಲ್ಲಿ ರೆ| ಫಾ. ಡಿ'ಸೋಜಾರವರಿಂದ ನೆರವೇರಿತು. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಟಿ. ಭರತನ್‌ರವರು ಈ ಕಾಲೇಜಿನ ಆವಶ್ಯಕತೆಯನ್ನು ವಿವರಿಸಿದರು. ಉದ್ಘಾಟಕರು ತಮ್ಮ ಭಾಷಣದಲ್ಲಿ ಈ ಕಾಲೇಜಿನಿಂದ ಯೋಗ್ಯ ಶಿಕ್ಷಣದೊಂದಿಗೆ ನೈತಿಕ ಶಿಕ್ಷಣವೂ ಮಕ್ಕಳಿಗೆ ದೊರೆಯುವಂತಾಗಲೆಂದೂ ಮೋಡರ್ನ್ ಸ್ಕೂಲ್ ಆಫ್ ಕಾಮರ್ಸ್ ಸಂಸ್ಥೆಯನ್ನು ದೀರ್ಘ ಸಮಯದಿಂದ ಉತ್ತಮವಾಗಿ ನಡೆಸಿಕೊಂಡು ಬರುವ ಶ್ರೀ ಟಿ ಎ. ವಾಸುದೇವನರೇ ಇದನ್ನು ನಡೆಸುವದರಿಂದ ಇದೂ ಚಲೋ ರೀತಿಯಲ್ಲಿ ನಡೆಯುವ ಭರವಸೆ ತಮಗಿದೆ ಎಂದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೆಚ್ಚಿನ ಜ್ಞಾನಾರ್ಜನೆಗೂ ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸುವುದಕ್ಕೂ ಇಂತಹ ಸಂಸ್ಥೆಗಳು ಅತ್ಯಾವಶ್ಯಕವೆಂದರು.

ಶ್ರೀ ಜೆ. ಸುಂದರರಾಯರು ಶಿಕ್ಷಣರಂಗದಲ್ಲಿ ಟ್ಯುಟೋರಿಯಲ್ ಕಾಲೇಜುಗಳ ಪಾತ್ರದ ಕುರಿತು ಮಾತನಾಡಿದ ಬಳಿಕ ಶ್ರೀ ಟಿ. ಎ. ವಾಸುದೇವನರು ಧನ್ಯವಾದ ಸಮರ್ಪಿಸಿದರು.

ನಿಧನ

ಪ್ರಸಿದ್ಧ ಸೆಟ್ಟಿಬೆಟ್ಟು ಮನೆತನದ ಸೆಟ್ಟಿಬೆಟ್ಟು ದಾಸಪ್ಪ ಹೆಗ್ಡೆಯವರು ತಾ. 16-9-64ರಂದು ತಮ್ಮ 59ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರು ಸಾರ್ವಜನಿಕ ಕೆಲಸಗಾರರೂ ಜನಪ್ರಿಯರೂ ಆಗಿದ್ದರು.

ಯಕ್ಷಗಾನ ಮಾಹಿತಿಯ ಸಂಪುಟಕ್ಕೆ ಸಿದ್ಧತೆ

ಕರ್ನಾಟಕದ ಅಭಿಮಾನದ ಕಲೆಯಾಗಿರುವ ಯಕ್ಷಗಾನದ ಬಗ್ಗೆ ಸಂಪೂರ್ಣ ಮಾಹಿತಿ ಹಾಗೂ ಸಚಿತ್ರ ಪರಿಚಯವನ್ನು ಒದಗಿಸುವ ಉದ್ದೇಶದಿಂದ ಉಡುಪಿಯ ಯಕ್ಷಗಾನ ಕಲಾ ಕ್ಷೇತ್ರದವರು (ರಿ) ೧೯೬೫ನೇ ಜನವರಿ ತಿಂಗಳಲ್ಲಿ ಒಂದು 'ಯಕ್ಷಗಾನ ಸುವರ್ಣ ಸಂಪುಟ'ವನ್ನು ಪ್ರಕಟಿಸಲು ನಿರ್ಧರಿಸಿ, ಕಾರ್ಯತತ್ಪರರಾಗಿದ್ದಾರೆ. ಅದರಲ್ಲಿ ಯಕ್ಷಗಾನದ ಬೆಳವಣಿಗೆ, ಶಾಸ್ತ್ರೀಯ ಹಿನ್ನೆಲೆಗಳ ಸಂಪೂರ್ಣ ವಿವರವನ್ನು ಪ್ರಕಟಿಸಲಾಗುವುದು. ಯಕ್ಷಗಾನದ ಹಿರಿಯ ನಟರು ಹಾಗೂ ಈಗಾಗಲೇ ಗತಿಸಿಹೋದ ಕಲಾವಿದರ ಭಾವಚಿತ್ರ, ಪರಿಚಯವನ್ನು ತಿಳಿದವರು ಹಾಗೂ ಸಂಗ್ರಹಿಸಿಟ್ಟುಕೊಂಡವರು ತಮ್ಮೊಂದಿಗೆ ಸಹಕರಿಸಿ ಪ್ರೋತ್ಸಾಹಿಸಬೇಕೆಂದು ಯಕ್ಷಗಾನ ಕಲಾಕ್ಷೇತ್ರದ ಸೊವನೀರ್ ಕಮಿಟಿಯವರು ವಿನಂತಿಸಿದ್ದಾರೆ. ಈ ಬಗ್ಗೆ ವ್ಯವಹರಿಸತಕ್ಕವರು ಸೊವನೀರ್ ಕಮಿಟಿ, ಯಕ್ಷಗಾನ ಕಲಾಕ್ಷೇತ್ರ, ಶಿರಿಬೀಡು, ಉಡುಪಿ - ಈ ವಿಳಾಸಕ್ಕೆ ಬರೆಯಬಹುದಾಗಿದೆ.

ಗಾಂಧಿ ತತ್ವಪ್ರಚಾರಕೇಂದ್ರ ಮಂಗಳೂರು

ಇದರ ಕಾರ್ಯಾಲಯದಲ್ಲಿ ಸಪ್ಟಂಬರ ತಾರೀಕು ಒಂದು ಮತ್ತು ಎರಡರಂದು ಗಾಂಧೀ ವಿಚಾರಗಳ ಅಧ್ಯಯನ ಗೋಷ್ಠಿಯೊಂದು ಜರಗಿತು. ಈ ಅಧ್ಯಯನ ಗೋಷ್ಠಿಯಲ್ಲಿ ಜಿಲ್ಲೆಯ ಇಪ್ಪತ್ತಕ್ಕೂ ಮಿಕ್ಕಿ ಸರ್ವೋದಯ ಕಾರ್ಯಕರ್ತರು ಹಾಗೂ ಸರ್ವೋದಯದ ಹಿತ ಚಿಂತಕರು ಭಾಗವಹಿಸಿದ್ದರು. ಗೋಷ್ಠಿಯಲ್ಲಿ ಗಾಂಧೀಜಿ ಮತ್ತು ಆಚಾರ್ಯ ವಿನೋಬಾರವರ ಜೀವನ ಚರಿತ್ರೆಯ ಕುರಿತೂ, ಇಂದು ಭಾರತದ ಕೆಲಕೆಲವು ರಾಜ್ಯಗಳಲ್ಲಿ ಅತ್ಯಂತ ಯಶಸ್ವಿಯಾಗಿ ಜನಪ್ರಿಯತೆ ಪಡೆದಿರುವ ಗ್ರಾಮದಾನ ಆಂದೋಲನದ ವಿಚಾರವಾಗಿಯೂ ವಿಸ್ತಾರವಾಗಿ ಚರ್ಚಿಸಲಾಯಿತು.

ತಾರೀಕು ಒಂದರಂದು ಬೆಳಗ್ಗೆ ಗೋಷ್ಠಿಯ ಪ್ರಾರಂಭಿಕ ಸಭೆಯ ಅಧ್ಯಕ್ಷತೆಯನ್ನು ಮಂಗಳೂರಿನ ಶ್ರೀ ಮಾನ್ ಕೆ. ಆರ್. ಆಚಾರ್, ಇವರು ವಹಿಸಿದ್ದರು. ತಾರೀಕು 2 ರಂದು ಅಪರಾಹ್ನ ಗೋಷ್ಠಿಯ ಸಮಾರೋಪ ಸಭೆಯು ಕಾರ್ಕಳದ ಶ್ರೀ ಎಂ. ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಕುಂದಾಪುರ, ಪುತ್ತೂರು ಮತ್ತು ಬೆಳ್ತಂಗಡಿ ತಾಲೂಕುಗಳ ಒಂದೊಂದು ಕ್ಷೇತ್ರವನ್ನು ಗ್ರಾಮದಾನದ ದೃಷ್ಟಿಯಿಂದ ಸಿದ್ಧಗೊಳಿಸುವ ನಿರ್ಧಾರವನ್ನು ಗೋಷ್ಠಿಯಲ್ಲಿ ಮಾಡಲಾಯಿತು.

ಗ್ರಾಮದಾನದ ಕುರಿತು ವಿಸ್ತಾರವಾಗಿ ತಿಳಿಯ ಬಯಸುವರು— ಗಾಂಧೀ ತತ್ವ ಪ್ರಚಾರ ಕೇಂದ್ರ—ಮಂಗಳೂರು.6 ಈ ವಿಳಾಸದೊಡನೆ ಪತ್ರವ್ಯವಹಾರ ಮಾಡಬೇಕಾಗಿ ಕೇಂದ್ರದ ತತ್ವ ಪ್ರಚಾರಕರು ವಿನಂತಿಸುತ್ತಾರೆ.

ಶ್ರೀ ಸತ್ಯಸಾಯಿ ಪ್ರೆಸ್ಸಿನ ಉದ್ಘಾಟನೆ

ವಿಟ್ಲ, ತಾ. ೫-೯-'೬೪—'ಶ್ರೀ ಸತ್ಯಸಾಯಿ ಪ್ರೆಸ್' ಎಂಬ ಒಂದು ಹೊಸ ಮುದ್ರಣಾಲಯವು ವಿಟ್ಲದಲ್ಲಿ ತಾ. ೫-೯-೬೪ರಂದು ಡಾ| ಸತ್ಯಸುಂದರ ರಾಯರಿಂದ ಉದ್ಘಾಟಿತವಾಯಿತು. ವಿಟ್ಲದ ಕೇಂದ್ರ ಅಡಿಕೆ ಸಂಶೋಧನಾ ಕ್ಷೇತ್ರದ ಪ್ರಧಾನಾಧಿಕಾರಿ ಶ್ರೀ ಕೆ. ವಿ. ಅಹಮ್ಮದ್ ಬಾವಪ್ಪ ಇವರು ಅಧ್ಯಕ್ಷತೆ ವಹಿಸಿದ್ದರು.

ಉದ್ಘಾಟಕರು "ಬಾಬಾರವರ ಅನುಗ್ರಹದಿಂದ ಪ್ರಾರಂಭವಾದ ಈ ನವೀನ ಪ್ರೆಸ್ ವಿಶಾಲವಾಗಿ ವಿಖ್ಯಾತವಾಗಿ ಬೆಳೆದು ಜನತೆಗೆ ಉತ್ತಮ ಸೇವೆ ಸಲ್ಲಿಸಲಿ" ಎಂದರು. ಶ್ರೀ ಬಾವಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಶ್ರೀ ಸತ್ಯಸಾಯಿ ಪ್ರೆಸ್ ಜನರನ್ನು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಉನ್ನತಿಗೇರಿಸಲು ಅವರೆಲ್ಲ ಉನ್ನತ ಮಾನಸಿಕ ಮಟ್ಟದಲ್ಲಿರುವಂತೆ ಮಾಡಲು ಸಮರ್ಥವಾಗುವುದೆಂದರು.

ವಿಟ್ಲ ಟೌನ್ ಪಂಚಾಯತ್ ಚೇರ್‌ಮೆನ್ ರಾದ ಶ್ರೀ ವಿ. ರಾಮಾಚಾರ್ಯರು "ಈ ತನಕ ಆಳಿಕೆಯಲ್ಲಿ ದೊಡ್ಡ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಾ ಜನತೆಗೆ ಸೇವೆಯೆಸಗುತ್ತಿರುವ ಶ್ರೀ ಮಡಿಯಾಲ ನಾರಾಯಣ ಭಟ್ಟರು ಈಗ ಈ ಪ್ರೆಸ್ಸಿನ ಸ್ಥಾಪನೆಯ ಮೂಲಕವಾಗಿ ತಮ್ಮ ಕಾರ್ಯರಂಗವನ್ನು ವಿಟ್ಲಕ್ಕೂ ವಿಸ್ತರಿಸಿದುದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ" ಎಂದರು. ವಿಟ್ಲದ ಹಿರಿಯ ಜನತಾ ಮುಖಂಡರಾದ ಶ್ರೀ ವಿ. ಬಾಬು ಶೆಟ್ಟರು ಶ್ರೀ ನಾರಾಯಣ ಭಟ್ಟರ ಕಾರ್ಯಸಾಮರ್ಥ್ಯಗಳನ್ನು ಕೊಂಡಾಡಿದರು.

ಆರಂಭದಲ್ಲಿ ಶ್ರೀ ಮೂಳ ಕೃಷ್ಣಭಟ್ಟರು ಅಧ್ಯಕ್ಷರ ಮತ್ತು ಉದ್ಘಾಟಕರ ಆಸನ ಸ್ವೀಕಾರಕ್ಕೆ ಕೇಳಿಕೊಂಡರು ಶ್ರೀ ಕೆ. ಶಿವರಾಮಯ್ಯ ಇವರು ಸ್ವಾಗತ ಭಾಷಣ ಮಾಡಿದರು. ಶ್ರೀ ಸಗ್ರಿಮೂಲೆ ವೆಂಕಟ್ರಮಣ ಭಟ್ಟರು ಮತ್ತು ಒಡಿಯೂರ ಭೀಮ ಭಟ್ಟರು ಪ್ರೆಸ್ ಪ್ರಾರಂಭವಾಗುವುದಕ್ಕೆ ನೆರವಾದ ಎಲ್ಲರನ್ನೂ ಶ್ಲಾಘಿಸಿದರು.

ಪ್ರೆಸ್ಸಿನ ಸುಪರಿಂಟೆಂಡೆಂಟ್ ಶ್ರೀ ನಾರಾಯಣಭಟ್ಟರು ಧ್ಯೇಯ ನಿರೂಪಣೆ ಮಾಡಿದ ಬಳಿಕ ಅಧ್ಯಕ್ಷ ಭಾಷಣವಾಗಿ ಶ್ರೀ ಬಿ. ನಾರಾಯಣರಾಯರಿಂದ ಸಂದೇಶ ವಾಚನವಾಗಿ ಮೆನೇಜರ್ ಶ್ರೀ ಪಿ. ಶಂಕರನಾರಾಯಣ ಭಟ್ಟರಿಂದ ಧನ್ಯವಾದ ಸಮರ್ಪಣೆಯಾಯಿತು.

ಶ್ರೀ ಶಾರದಾ ಭಜನಾ ಮಂಡಳಿ, ಪರ್ಕಳ

ಇದರ ಮಹಾ ಸಭೆಯು ತಾ 6-9-64ರಂದು ಶ್ರೀ ಎ. ಸತೀಶ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಗಳಿಂದ ಸ್ವಾಗತ ಭಾಷಣ ವರದಿವಾಚನವಾದ ಬಳಿಕ ಮುಂದಿನ ವರ್ಷದ ಆಡಳಿತೆ ಕಮಿಟಿಗೆ ಶ್ರೀಗಳಾದ ನಾರಾಯಣ ಸೆಟ್ಟಿಗಾರ, ರಾಮಣ್ಣ ಪ್ರಭು, ಅನಂತ ಸೆಟ್ಟಿಗಾರ, ಭೀಮ ಭಟ್, ಎಸ್. ರಾಘವ ಸೆಟ್ಟಿಗಾರ, ಸದಾಶಿವ ಸೆಟ್ಟಿ, ರಾಘವ ಸೆಟ್ಟಿ, ಸಂಜೀವ ಶ್ಯಾನುಭೋಗ, ಕೃಷ್ಣರಾಯ ಪ್ರಭು, ಶ್ರೀನಿವಾಸ ಹೆಬ್ಬಾರ್, ಸೀನ ಸೆಟ್ಟಿಗಾರ ಇವರನ್ನೂ ಲೆಕ್ಕ ಪರಿಶೋಧಕರಾಗಿ ಕೆ. ವಾಸುದೇವ ನಾಯಕರನ್ನೂ ಆರಿಸಲಾಯಿತು.

ರಜತ ಪರದೆಯ ಮೇಲೆ

ಪಾತ್‌ಲಾಗ್—ಸಾಯಾ!

ಮರಾಠಿ ಚಿತ್ರಕತೆ 'ಪಾತ್‌ಲಾಗ' ಹಿಂದೀ ಭಾಷೆಯಲ್ಲಿ ತೆರೆ ಕಾಣಿಸುವ ಯೋಜನೆಯನ್ನು ನಿರ್ಮಾಪಕ ಪ್ರೇಮಜ ಅವರು ಕೈಕೊಂಡಿದ್ದು ಹಿಂದಿ ಚಿತ್ರದ ಹೆಸರನ್ನು 'ಸಾಯಾ' ಎಂದು ಬದಲಿಸಿಕೊಂಡಿದ್ದಾರೆ. ರಾಜ್ ಖೋಸ್ಲಾ ಅವರು ಈ ಚಿತ್ರವನ್ನು ನಿರ್ದೇಶಿಸುವರು. ಸಾಧನಾ, ಸುನೀಲದತ್ತರು ಪ್ರಮುಖ ಪಾತ್ರದಲ್ಲಿದ್ದು ಈ ಚಿತ್ರವು ಈಸ್ಟ್‌ಮನ್ ಕಲರ್‌ನಲ್ಲಿ ತೆರೆ ಕಾಣಲಿದೆ

ನೈನಿತಾಲ್‌ನಲ್ಲಿ ತೀಸ್ರಿ ಮಂಜಿಲ್!

ನಿರ್ಮಾಪಕ ನಾಸೀರ್ ಹುಸೇನರು ನಿರ್ಮಿಸುವ ತೀಸ್ರಿ ಮಂಜಿಲ್‌ನ ಪ್ರಮುಖ ದೃಶ್ಯಗಳನ್ನು ನೈನಿತಾಲ್‌ದಲ್ಲಿ ಚಿತ್ರೀಕರಿಸಲಾಗುವದೆಂದು ತಿಳಿದು ಬಂದಿದೆ. ಹೆಚ್ಚಿನ ಭಾಗಗಳನ್ನು ಕುಮಾವೂ ಕಣಿವೆಗಳಲ್ಲೇ ದೃಶ್ಯೀಕರಿಸುವ ಯೋಜನೆಯಿದ್ದು, ಚಿತ್ರವು ಈಸ್ಟ್‌ಮನ್ ಕಲರಿನಲ್ಲೇ ತಯಾರಿಸಲು ನಿರ್ಮಾಪಕ ನಾಸೀರ್ ಹುಸೇನರು ನಿರ್ಧರಿಸಿದ್ದಾರೆ.

ತೆಲುಗು ಭಾಷೆಯತ್ತ ಕನ್ನಡ ನಟರು!

ಕನ್ನಡದಲ್ಲಿ ತಯಾರಿಸಲ್ಪಟ್ಟಿರುವ ಚಂದ್ರಕುಮಾರ ಚಿತ್ರವು 'ದೈವ ನಿರ್ಣಯಂ' ಎಂಬ ಹೆಸರಿನಲ್ಲಿ ತೆಲುಗು ಭಾಷೆಯಲ್ಲಿ ತಯಾರಿಸಲ್ಪಡಲಿದೆ. ಟಿ. ಎಂ. ಸುಂದರಂ ಅವರ ನಾಗ ಪ್ರಸಾದ್ ಲಾಂಛನದಲ್ಲಿ ಈ ಚಿತ್ರವು ನಿರ್ಮಿಸಲ್ಪಡುತ್ತದೆ. ಕನ್ನಡದ ಶ್ರೇಷ್ಠ ನಟರುಗಳಾದ ರಾಜಕುಮಾರ್, ಉದಯಕುಮಾರ್ ಕೃಷ್ಣಕುಮಾರಿ, ಜಯಂತಿ ಮುಂತಾದವರು ಈ ಚಿತ್ರದಲ್ಲಿ ಅಭಿನಯಿಸಲಿದ್ದಾರೆ. ಚಿತ್ರವನ್ನು ಎಸ್. ಎಸ್. ಶರ್ಮ ನಿರ್ದೇಶಿಸುವರು.

ಮಧುಸೂದನ ಹೊಸ ತಂತ್ರ?

ಹಿಂದೀ ಚಿತ್ರರಂಗದ ಪ್ರಖ್ಯಾತ ಹಾಸ್ಯ ನಟರುಗಳೆಲ್ಲ ಅಭಿನಯಿಸುವ ಒಂದು ಚಿತ್ರವನ್ನು ಹಾಸ್ಯ ನಟ ಮೆಹಮೂದನು ತಯಾರಿಸುವನೆಂದು ತಿಳಿದು ಬಂದಿದೆ. ಚಿತ್ರಕ್ಕೆ ಪಡೋಸನ್ ಎಂದು ಹೆಸರಿಡಲಾಗಿದೆ. ಜ್ಯೋತಿಸ್ವರೂಪರು ನಿರ್ದೇಶಿಸಲಿರುವ ಈ ಚಿತ್ರಕ್ಕೆ ಪ್ರಮುಖ ನಟಿಯನ್ನಾಗಿ ಸೈರಾಬಾನು ಆರಿಸಲ್ಪಟ್ಟಿದ್ದಾಳೆ. ನಾಮಾಂಕಿತ ಸಂಗೀತ ನಿರ್ದೇಶಕ ಸಚಿನ್‌ದೇವ್ ಬರ್ಮನ್ ಅವರ ಮಗ ರಾಹುಲ್‌ದೇವ್ ಬರ್ಮನ್ ಅವರು ಈ ಚಿತ್ರಕ್ಕೆ ಸಂಗೀತ ನೀಡುತ್ತಾರೆ.

ವಿಶೇಷ ಸವಲತ್ತು

'ನವಯುಗ'ಕ್ಕೆ ಹೊಸದಾಗಿ ಚಂದಾದಾರರಾಗುವವರಿಗೆ 'ಕಿರಿಯರ ಪ್ರಪಂಚ'ದ ಪ್ರತಿಗಳನ್ನು ಮುಕ್ಕಾಲಂಶ ಬೆಲೆಗೆ ಕೊಡಲಾಗುವುದು. ಪುಸ್ತಕಗಳ ಯಾದಿಗೆ "ಕಿರಿಯರ ಪ್ರಪಂಚ", c/o ನವಯುಗ, ಉಡುಪಿ ಇವರಿಗೆ ಬರೆಯಿರಿ.

ಅಸ್ತಮಾ ರೋಗಿಗಳ ತಿಳುವಳಿಕೆಗೆ

ರಜಿಸ್ಟ್ರಿಯಾದ ಚಿತ್ರಕೋಟ್ ಆಸ್ತಮಾ ನಿವಾರಕ ಬೂಟಿಯನ್ನು ತಾ. 21-10-64ನೆ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವುದರಿಂದ ಆಸ್ತಮಾ, ದಮ್ಮ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga
Baba Ayurvedashram,
P. O. Chitrakot U. P.

ಶೀಹರಾಜ್ಯದಲ್ಲಿ

ತಡವಾದ್ರೂ ತಡವಾದ ಸುದ್ದಿ ಸಿಕ್ತು



'ಏನಂತೆ, ಇಂದು ಬರೋಕೆ ಇಷ್ಟು ತಡವಾಯ್ತು?'

'ತಡವೆಲ್ಲಿ ಬಂತೆ?'

'ಪಾಪ, ಭಾರೀ ಬೇಗನೇ ಬಂದಿದ್ದಾರಂತೆ! ಅಲ್ಲಾ ಇನ್ನು ಕದಾಂತಂದ್ರೆ ಗಂಟೆ ಹನ್ನೊಂದಾಗಬೇಕೆಂದು ತೋರುತ್ತೆ...'

'ಸಾಕು ಬಿಡೇ, ನಿನ್ನದೊಂದು ಯಾವಾಗ್ಲೂ...'

'ಅಲ್ಲಾ ಗಂಟೆ ಎಂಟು ಆಗ್ಲೇ ಬಡ್ದಿದೆಯಲ್ಲಾ....?'

"ಅದೇನ, ಎಂಟು ಗಂಟೆಗೆ ಮೊದ್ಲೇ ಮನೆಗೆ ಬಂದೇ ತೀರ್‍ಬೇಕೂಂತ ಶಾಸ್ತ್ರ?'

"ನೀವು ಬರೋಕೆ ತಡಮಾಡಿ; ಮತ್ತೆ ನಾಲ್ಕು ಗಂಟೆಗೇ ಏಳಬೇಕೂಂತ ತಾಕತ್ತು ಮಾಡಿ. ಆಗ ಸರಿಯಾಗುತ್ತೆ...."

"ಅಯ್ಯೋ ಪಾಪ, ನಿದ್ದೆ ಮಾಡೋಕೆ ಸಮಯಾನೇ ಇಲ್ಲ..."

"ನಿಮ್ಗೇನು ಗೊತ್ತು ನನ್ನ ಕಷ್ಟ...! ಒಲೆ ಮುಂದೆ ಕೂತ್ರೆ ಕಣ್ಣು ಊದಿಕೊಳ್ಳುತ್ತೆ...."

"ಅದ್ಕೂ ನಿದ್ದೆಗೂ ಏನೇ ಅನು ಬಾದರಾಯಣ ಸಂಬಂಧ? ಹೊಗೆ ಹೊಕ್ರೆ ಹಾಗೆ ಆಗೋದೂ ಉಂಟು."

"ನಿಮ್ಮೊಡನೆ ವಾದಕ್ಕೆ ಕೂತ್ರೆ ಮತ್ತೆ ಉಳಿಗಾಲವಿಲ್ಲಾಂತ ನನ್ಗೂ ಗೊತ್ತು."

"ಸದ್ಯ ಅಷ್ಟಾದ್ರೂ ಮರ್ಯಾದೆ ಉಳ್ಸಿದೆಯಲ್ಲಾ?"

"ಯಾಕೆ ಹಾಗಂತೀರಿ?"

"ಮನೆಗೆದ್ದು ಮಾರುಗೆಡೆ ಅಂತಾರೆ. ಮನೆಯಪ್ಪ ಎದ್ರು ಮರ್‍ಯಾದೆ ಉಳ್ಸಿ ಮತ್ತೆ ಬೇರೆಯವ್ರ ಮುಂದೆ...."

"ಹೌದು, ನಿಮ್ಗೂ ಬೇರೆಯವ್ರ ಮರ್‍ಯಾದೆ ಕೊಡೋದ; ಆ ಕಂತಿ ಕಂಬಕ್ಕೂ ಜನ ಕೈಮುಗಿಯೋದು..."

"ಸಾಕು ಕಣೇ ನಿನ್ನ ನಾಲಿಗೆಗೆ ಎಲುಬೇ ಇಲ್ಲಾನ್ನೋದು ಸತ್ಯ."

"ಮತ್ತೆ ನಿಮ್ದಕ್ಕೆ ಇದೆಯೋನ.?"

'...ಓ ತಪ್ಪಿದೆ ಕಣೇ ತಪ್ಪಿದೆ. ಎಲುಬಿಲ್ಲದ ನಾಲಿಗೆಯೋ ಅಂತ ಅಂದಿದ್ದಾರೆ ನೋಡು ದಾಸರು.'

"ನಿಮ್ಮ ದಾಸ್ರನ್ನ ಅಲ್ಲೇ ಬಿಟ್ಬಿಡಿ. ಆದ್ರೆ ಏನು ತಡವಾಯ್ತೂಂತ..."

"ನಿಂತದ್ದಕ್ಕೂ ನಿನ್ಗೆ ಕಾರಣ ಕೊಡ್ಬೇಕು; ಕೂತದ್ದಕ್ಕೂ ನೀಡ್ಬೇಕು. ಒಳ್ಳೇ ಗ್ರಹಚಾರವಾಯ್ತಲ್ಲ ಇದು?"

"ಶನೀಚರನ ದೆಸೆಯವ್ರಿಗೆ ಗ್ರಹಚಾರ ಬೇರೆ ಬೇಕೆ?"

"ರಾಮೇಶ್ವರಕ್ಕೆ ಹೋದ್ರೂ ಶನೀಶ್ವರ ಬಿಡಲಾರ ಅಂತಾರೆ. ಆದ್ರೆ ಈಗ...."

"ಏನಂತೆ? ಅಂದು ಬಿಡಿ....ತಡೆಯೋದಕ್ಕೇನು ನಾಲಿಗೆ ಉಡುಹೋಯ್ತೆ?"

"ಅನಿಷ್ಟದ ಬಾಯಿ ನಿನ್ನದು...."

"ಬಾಯಿಗ್ಯಾಕೆ ಬಯ್ತೀರಾ ನೀವು? ನಾನು ಕೇಳಿದ್ದಕ್ಕೆ..."

"ಉತ್ರ ಹೇಳ್ಬೇಕು ಅಲ್ವೆ?"

"ಹಹ್ಞಂ...."

"ಅಯ್ಯಪ್ಪ ಶನೀಶ್ವರ ಬಿಟ್ರೂ ಗೀಣೇಶ್ವರಿ ಬಿಡೋದಿಲ್ಲ ಶಾಸ್ತ್ರಿ. ಆದಿಲ್ಲ. ಈಗ ತಡಮಾಡಿದ್ದು ಯಾಕೇಂತ ಹೇಳ್ಬೇಕು ಅಲ್ವೆ?"

"ಮತ್ತಿನ್ನೇನು ಹೇಳೋದು? ನಿಮಗೆ ಈ ಪ್ರಾಯದಲ್ಲೇ ಮರೈಯಾದ್ರೆ...."

"ಅಲ್ವೆ, ನಿನ್ನ ಹತ್ರ ಮಾತಿಗೆ ಕೂತ್ರೆ ಎಲ್ಲಾ ಮರ್‍ತೇ ಹೋಗುತ್ತೆ"

"ಅದು ಗೊತ್ತಾಗ್ತಿತ್ತು. ಆಪ್ರೆ ಬೇದೀಲಿ ಮಾತಿಗೆ ನಿಂತ್ರೆ...."

"ಅದು ಬಿಡೂನ್ನು. ಮತ್ತೆ ಆ ಮಾತು ಎತ್ಬೇಡ. ನಾನು ತಡಮಾಡಿ ಬಂದದ್ದು ಯಾಕೇಂತ..."

"ಹೇಳ್ಬೇಕು ..'

"ಹೇಳ್ಲೇ ಬೇಕು ಅಲ್ವೆ?"

"ಸತ್ಯ ಹೇಳೋದಾದ್ರೆ ಹೇಳಿ. ಮತ್ತೆ ಏನೇನೋ ಸೆವ್ನ ಅಂದ್ರೆ..."

"ನಿಲ್ಲೇ....ಸ್ವಲ್ಪ...ಹೇಳ್ತೀನೆ.. ಹ್ಞಂ ....ನೋಡು ಇವತ್ತು ಪೇಪ್ರಿನವ ದಾರಿಯಲ್ಲೇ ಸಿಕ್ಕಿದ. ಅವನ್ನೇ ನೋಡ್ತಾ ನಿಂತ್ಬಿಟ್ಟೆ..."

"ಏನಪ್ಪಾ, ಅಂತಹ ವಿಷಯ? ಬೀದೀಲೇ ನಿಂತು ಓದುವಷ್ಟು ರೋಮಾಂಚಕಾರಿ...."

"ರೋಮಾಂಚಕಲ್ವೆ, ಬಿಸಿ ಬಿಸಿ ಸುದ್ದಿ...."

"ಏನಂತೆ?"

ಆದೇ...ಹೌದು, ನಮ್ಮ ರಾಷ್ಟ್ರಾಧ್ಯಕ್ಷರು ಹೋಗಿದ್ದಾರಲ್ಲಾ...."

"ರಶ್ಯಕ್ಕೆ ತಾನೆ?'

"ಹೌದು ರಶ್ಯಕ್ಕೇನೆ. ಅಲ್ಲಿ ಉಭಯ ದೇಶಗಳ ಮುಖ್ಯಸ್ಥರು ಒಂದು ಜಂಟಿ ಹೇಳಿಕೆ ಹೊರಡಿಸಿದ್ದಾರೆ."

"ಅದು ಇದ್ದದ್ದೇ ತಾನೆ?'

"ಹಳೆಯದನ್ನಾದರೂ ಮತ್ತೆ ಮತ್ತೆ ನಾಯಿದ ಹಾಗೆ ಇಂಜೆಕ್ಷನ್ ಚುಚ್ಚುತ್ತಿರಬೇಕಲ್ಲಾ..."

"ಆಯ್ತಪ್ಪಾ. ಏನಂತೆ ಅದ್ರಲ್ಲಿ ಹೇಳಿದ್ದು?'

"ಇಕೋ, ಪೇಪ್ರು ಇಲ್ಲೇ ಇದೆ. ಓದ್ಕೊಳ್ಳಿ."

"ನನ್ಗೀಗ ಓದೋಕ್ಕೆ ಸುರ್‍ಸೊತ್ತು.... ನೀವು ಹೇಗೂ ಓದಿದವ್ರು ಇದ್ದೀರಲ್ಲಾ? ಹೇಳ್ಬಿಡಿ ನಾಲ್ಕು ಮಾತ್ನಲ್ಲಿ.

"ಅಲ್ಲಾ ಎಂಟು ದಿನದ ಸಂಚಾರದ ನಂತ್ರ ಹೊಂಟ ನಾಲ್ಕು ಕಲಂ ಹೇಳಿಕೇನ ನಾಲ್ಕು ಮಾತ್ನಲ್ಲಿ ತಿಳ್ಸೋದು ಹೇಗೆ?'

"ಅದೇ ಅಂದು ನೀವೇ ಅಂದಿದ್ರಲ್ಲಾ, ಕಿರಿದರಲ್ಲಿ ಪಿರಿದರ್ಥಮಂ ತುಂಬಬೇಕೂಂತ....'

"ನಾನು ಕಣೇ, ನಿನ್ನ ಜ್ಞಾಪಕ ಶಕ್ತಿ. ಎಂದೋ ಯಾವುದಕ್ಕೋ ಅಂದದ್ದನ್ನ ನೀನು....'

"ಮತ್ತೆ ಮರೆಕು ಬಿಡಬಾರ್ದು ಅಂದಿದ್ದಿರಲ್ಲಾ...."

"ಸರಿ ಹೋಯ್ತು. ನಿನ್ನ ಕೂಡ ಇನ್ನು ಮಾತಾಡೋದೇ ಕಷ್ಟವಾಯ್ತು"

"ಅಂದ್ರೆ, ಮಾತೇ ಬಿಡೋ ವಿಚಾರವೆ?"

"ಬಿಡಬಹುದಿತ್ತು. ಆದ್ರೆ...."

"ನೋಡಿ ನೀವು ಆದ್ರೆ...ಆದ್ರೆ...ಅಂತ ಅರ್ಥವಲ್ಲೇ ನಿಲ್ಲಿಸುವುದು ಬೇಡ ಹೇಳಬೇಕಾದ್ದನ್ನು ಹೇಳ್ಬಿಡಿ"

"ಅದೆಲ್ಲಾ ಬೇಡ ಕಣೇ. ಈಗ ನಿನ್ಗೆ ಹೇಳ್ಬೇಕಾದ್ದನ್ನು ನಾಲ್ಕು ಮಾತ್ನಲ್ಲಿ..."

"ನನ್ಗೇನೂ ಹೇಳೋದು ಬೇಡ. ಇದ್ವರೆಗೂ ಹೇಳಿರೋದು ಸಾಕಷ್ಟಾಗಿದೇಂದ್ರೆ."

"ಕೋಪ ಬಂತೆ? ಅಲ್ಲಾ ನೀನು ಕೇಳಿದ್ದ ಪ್ರಶ್ನೆಗೆ ಉತ್ರ...."

"ಅದೇ ಹ್ಞಾ ...ಸರಿ ಬೇಗ ಹೇಳಿ ಮತ್ತೆ...ತಡವಾಗುತ್ತೆ..."

"ಉಭಯತರರ ನಡುವಣ ವಿಚಾರ ವಿನಿಮಯ ಉಭಯ ತರರಿಗೂ ಆನಂದವನ್ನುಂಟು ಮಾಡಿದೆ..."

"ಇಲ್ಲಿದ್ದೆ ವಿನಿಮಯ ಮುಂದುವರಿಯುತ್ತೆಯೆ?"

"ನೋಡು, ನೀನು ನಡುನಡುವೆ ಬಾಯಿ ಹಾಕ್ಬಾರ್ದು. ಮಾತಿನ ಓಘ ಕಡಿಯುತ್ತೆ."

"ಹ್ಞಾಂ ..."

"ರಶ್ಯ ಮತ್ತು ಭಾರತಗಳಲ್ಲಿ ನಿಶ್ಶಸ್ತ್ರೀಕರಣ, ಶಾಂತಿಯುತ ಸಹಬಾಳ್ವೆ, ತಾಟಸ್ಥ್ಯ ನೀತಿಗಳ ಸಂಬಂಧ ಒಮ್ಮತವಿದೆ. ಭಾರತದ ಹೊಸ ಸರಕಾರವೂ ದಿ| ನೆಹರೂರವರು ತುಳಿದ ದಾರಿಯಲ್ಲೇ ಮುಂದುವರಿಯುತ್ತಿರುವುದು ರಶ್ಯಕ್ಕೆ ಆನಂದವನ್ನುಂಟು ಮಾಡಿದೆ. ದಕ್ಷಿಣ ಆಫ್ರಿಕೆಯ ವರ್ಣನೀತಿಯು ಮಾನವತೆ ಮತ್ತು ಮಾನವಾಧಿಕಾರಕ್ಕೆ ಅವಮಾನಕಾರಕವೆಂದು ಇಬ್ಬರೂ ಒಪ್ಪಿದ್ದಾರೆ.... ನಾಲ್ಕು ಮಾತು ಆಗಿಬಿಟ್ಟಿಲ್ವ?...."

"ಅಲ್ಲ, ಕೆಂಪು ಚೀನದ ಸುದ್ದಿಯನ್ನೇನು ಅವರು ಎತ್ತಿಲ್ವಾ?"

"ಚೀನಾದ್ದೂಂತ ಅನ್ನಿಲ್ಲ. ಆದ್ರೆ ರಾಷ್ಟ್ರರಾಷ್ಟ್ರಗಳ ಗಡಿ ವಿವಾದವನ್ನು ಪರಂಪರಾಗತ ಸಾಂಪ್ರದಾಯಿಕ ಗಡಿಯನ್ನು ಒಪ್ಪಿಕೊಂಡು ಶಾಂತ ವಿಧಾನಗಳಿಂದ ಪರಿಹರಿಸಿಕೊಳ್ಳಬೇಕು ಎಂದಿದ್ದಾರೆ."

"ಇಷ್ಟು ಸಾಕು ಬಿಡಿ. ಮತ್ತೆ ಆವ್ರ ಸಹಾಯ....?"

"ಅದು ಇಷ್ಟೇ ಇದೆಯೆನ್ನು."

"ಇನ್ನು ಭಾರತದ ಪರವಾಗಿ ಆಮಂತ್ರಣ?"

"ಅದು ಇಲ್ಲದೆ ಉಂಟೆ?'

"ಮತ್ತೇನು ಅಂದಿದ್ದಾರೆ?"

"ಆಗ್ನೇಯ ಏಶ್ಯಾದ ಶಾಂತಿ ರಕ್ಷಣೆ, ಉಭಯ ದೇಶಗಳ ನಡುವೆ ಸಾಂಸ್ಕೃತಿಕ, ಸಂಬಂಧ, ಬೊಕಾರೋ ಯೋಜನೆಗೆ ಸಹಾಯ....'

"ಮತ್ತೆ ಕಾಶ್ಮೀರ?'

"ಅದರಲ್ಲಿ ರಶ್ಯ ಏಕೆ ಕೈ ಹಾಕುತ್ತದೆ?'

'ಅಂದ್ರೆ ಅದು ಭಾರತದ ಅಂಗವೆಂದೇ ರಶ್ಯ ಹೇಳುತ್ತ ಬಂದಿದೆ ಅಲ್ವಾ?"

"ಹ್ಞಾಂ....'

'ಸರಿ ಹಾಗಾದ್ರೆ. ತಡವಾದ್ರೂ ತಡವಾದ ಸುದ್ದಿ ಸಿಕ್ತು. ಇಲ್ಲಿ; ಇನ್ನಾದ್ರೂ ತಡ ಮಾಡ್ಬೆ..."

'ಪಾಪ, ಭಾರಿ ಕಾದು ಕೂತೆಯಲ್ಲೆ?"

'ಸದ್ಯ, ಈಗಾದ್ರೂ ಗೊತ್ತಾಯ್ತಲ್ಲ?
'ಆಗಲೇ ಉಂಟೆ ಮತ್ತೆ'

'ಗೆದ್ದೆ ಸದ್ಯ...ಬನ್ನಿ..."

—ಗೋರಾ.

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧.

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ.

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

NAVAYUGA 24-9-1964

Registered with the Registrar of News Papers for India under No. R. N. 3516/'57

REGD. No. B. G. 176
LICENCE No. 31
Licensed to Post without Prepayment

ವಿಚಿತ್ರವಾದರೂ ಸತ್ಯ

ದಂಪತಿಗಳ ವಿವಾದ ತೀರ್ಮಾನ

ಗಂಡಹೆಂಡಿರ ನಡುವೆ ವಿರೋಧವೇರ್ಪಡುವುದುಂಟು. ಕೆಲವು ಸಾರಿ ಇದೇ ವಿಕೋಪಕ್ಕೆ ಹೋಗಿ ವಿವಾಹ ವಿಚ್ಛೇದನವಾಗುವುದೂ ಉಂಟು. ಆದರೆ, ವಿರಸವು ಪರಮಾವಧಿಯನ್ನು ಮುಟ್ಟುವ ಮುನ್ನ ಇವರಿಬ್ಬರೂ ತಮ್ಮನ್ನು ತಿಳಿಯಾಗಿಸಿಕೊಂಡರೆಂದರೆ, ಖಂಡಿತವಾಗಿಯೂ ಅವರ ಜೀವನವು ಸುಖಮಯವಾಗುವುದು.

ಊರಂಚಿನಲ್ಲಿ ಹರಿಯುತ್ತಿರುವ ಸುಂದರವಾದ ಟೌಬರ್ ನದಿ, ಹಳೆಯ ಕಾಲದ ಕೋಟೆ, ಕೊತ್ತಳಗಳು, ಕೆತ್ತನೆಯ ಕೆಲಸದ ಮರದ ಮನೆಗಳು, ಅಷ್ಟೇನೂ ಚಟುವಟಿಕೆಯಿರದ ಸಂದು, ಗೊಂದು, ಹಾದಿ, ಬೀದಿಗಳು, ಸುತ್ತಲಿನ ನಿಸರ್ಗ ರಮಣೀಯ ದೃಶ್ಯಗಳು ಮುಂತಾದುವು ರೋಕೆನ್ ಬರ್ಗ್ ನಗರವನ್ನು ಜನಪ್ರಿಯ ಪ್ರವಾಸೀ ಕೇಂದ್ರವನ್ನಾಗಿಸಿವೆ. ಆ ಊರಿನಲ್ಲಿ ಕೇವಲ ೧೨೦೦೦ ಜನರು ಮಾತ್ರ ವಾಸಿಸುತಿದ್ದರೂ, ಚರಿತ್ರಾರ್ಹವಾದ ಆ ನಗರವನ್ನು ನೋಡಲು ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗಳು ಬರುತಿದ್ದಾರೆ.

ಇಷ್ಟೆಲ್ಲಾ ಪುರಾತನ ವಿಷಯಗಳ ನಡುವೆ ಮನಸ್ಸು ಕಹಿಗೊಂಡ ದಂಪತಿಗಳ ಚಿತ್ತ ಕ್ಷೋಭೆಯನ್ನು ದೂರಗೊಳಿಸಿ, ಅವರನ್ನು ಒಂದುಗೂಡಿಸುವ ಸಂಗತಿಯೂ ಅಲ್ಲಿ ನಡೆಯುತ್ತಿದೆ. ಇಡೀ ಜರ್ಮನಿಯಲ್ಲಿ ಇಂತಹ ಕೇಂದ್ರ ರೋಕೆನ್ ಬರ್ಗ್ ಮಾತ್ರ.

ಏನೋ ಒಂದು ಚಿಲ್ಲರೆ ಜಗಳವಾಯಿತೆಂದೊಡನೆ ಈ ಕೇಂದ್ರದ ಬಾಗಿಲನ್ನು ತಟ್ಟಿ ಬಿಡಲಾಗುವುದಿಲ್ಲ. ವಿರಸಗೊಂಡ ದಂಪತಿಗಳು ಜತೆಯಾಗಿಯೇ ಹೋಗಿ, ಈ ಕೇಂದ್ರದ ಸ್ಥಾಪಕರಾದ ಕಾರ್ಲ್ ಫೂಸ್ಟರ್ ಎಂಬವರನ್ನು ಭೇಟಿ ಮಾಡಬೇಕು. ಅವರು ಆ ದಂಪತಿಗಳಿಗೆ ಹಲವಾರು ಪ್ರಶ್ನೆಗಳನ್ನು ಹಾಕುವರು.

ಅನಂತರ ಅವರಿಬ್ಬರನ್ನೂ ಆ ಊರಿನ ಪುರಾತನ ಗೋಪುರದ ಬಳಿಗೆ ಕರೆದೊಯ್ಯಲಾಗುವುದು. ಅದರ ತುದಿಗೆ ಹೋಗಬೇಕೆಂದರೆ ೧೩೬ ಮೆಟ್ಟಲುಗಳು! ಅಲ್ಲಿ ಪುರಾತನ ಕಾಲದ ಮೇಜು ಕುರ್ಚಿಗಳನ್ನು ಹಾಕಿಡಲಾಗಿದೆ. ವಿದ್ಯುದ್ದೀಪಗಳಿಗೆ ಬದಲು ಮೇಣಬತ್ತಿಗಳು ಅಲ್ಲಿ ಉರಿಯುತ್ತಿರುತ್ತವೆ. ಶಾಂತಿ ನೀರವತೆಗಳಿಗೆ ಅದೇ ಜನ್ಮಸ್ಥಾನವೋ ಎಂಬಂತಿದೆ ಆ ಜಾಗ. ಮನಸ್ಸು ವಿಷವಾಗಿರುವ ಗಂಡ ಹೆಂಡಿರು ಆ ಗೋಪುರದ ತುತ್ತ ತುದಿಗೆ ಹೋಗಿ ಕೆಲ ಹೊತ್ತು ಕುಳಿತು, ತಮ್ಮೊಳಗಿನ ವ್ಯತ್ಯಾಸವನ್ನು ಕುರಿತು ಚರ್ಚಿಸಬೇಕು. ಆ ಸುತ್ತಲಿನ ಪ್ರಕೃತಿ ಸುಂದರ ದೃಶ್ಯಗಳು, ಆ ಏಕಾಂತ, ಆ ಶಾಂತಿ ನಿವಾಸದಲ್ಲಿ ಎಂತಹ ವಿರಸವಿದ್ದರೂ ಹಾರಿಯೇ ಹೋಗುವುದು. ಅಂತಹ ನಿದರ್ಶನಗಳೇ ಬಲುಹೆಚ್ಚು. ಸಾಧಾರಣವಾದ ಭೇದವಿದ್ದ ಗಂಡ ಹೆಂಡರಂತೂ ಆ ೧೩೬ ಮೆಟ್ಟಲುಗಳನ್ನು ಪೂರ್ತಿ ಹತ್ತುವ ಗೋಜಿಗೆ ಹೋಗುವುದಿಲ್ಲ. ಅರ್ಧ ಹತ್ತುವಾಗಲೇ ಹೆಂಗಸಿನ ಗರ್ವ ಕರಗಿ, ಬೆವರು ಸುರಿಯತೊಡಗಿದಾಗ, ತನ್ನ ಉದ್ಧಟತನಕ್ಕೆ ಪಶ್ಚಾತ್ತಾಪಪಟ್ಟು, ಗಂಡನ ಎದೆಗೊರಗಿ ನಿಲ್ಲುತ್ತಾಳೆ. ಅಲ್ಲಿಗೆ ವ್ಯತ್ಯಾಸವು ಕೊನೆಗೊಂಡು, ಇಬ್ಬರೂ ಇಳಿದು ಬಂದು ಫೂಸ್ಟರರಿಗೆ ವಂದನೆ ತಿಳಿಸಿ ಜತೆಯಾಗಿ ಹಿಂದಿರುಗುತ್ತಾರೆ. ನಿಷ್ಣಾತರಾದ ಫೂಸ್ಟರ್ ಒಳಗೇ ನಗುತ್ತಿರುತ್ತಾರೆ.

ಗಂಡ ಹೆಂಡಿರ ವಿರಸ ದೂರ ಮಾಡುವ ಅವರ ಮೂಲ ಸಾಧಕವಾದ ಈ ಗೋಪುರದ ಕೊರಡಿಯು ಹೋಟೆಲಿನ ಒಂದು ಭಾಗವಾಗಿದೆ. 'ನಿಜ ನುಡಿಯಬೇಕೆಂದರೆ, ಕಹಿ ದಾಂಪತ್ಯಕ್ಕೆ ಮದ್ದು ಮಾಡುವ ವಿಷಯವು ನಮಗೆ ಆಕಸ್ಮಾತ್ತಾಗಿ ಹೊಳೆಯಿತು. ಈ ವಿಷಯದಲ್ಲಿ ವೈದ್ಯಕೀಯಕ್ಕಿಂತ ಮನಶ್ಶಾಸ್ತ್ರಕ್ಕೇ ಹೆಚ್ಚು ಮಾನ್ಯತೆಯನ್ನಿತ್ತಿದ್ದೇವೆ— ಫೂಸ್ಟರ್ ಎನ್ನುತ್ತಾರೆ.

ಗಂಡ ಏನು ಮಾಡಿದರೆ ಅದನ್ನೇ ಹೆಂಡತಿಯು ಮಾಡಬೇಕೆಂದು ನಿಯಮವೇನೂ ಇಲ್ಲ. ಎಷ್ಟೋ ಮಂದಿ ಗಂಡಂದಿರು ಮೀನು ಹಿಡಿಯಲು ಹೋದರೆಂದರೆ ಅವರ ಹೆಂಡತಿಯರು ಮನೆಯಲ್ಲಿಯೇ ಪಿಯಾನೋ ವಾದನದಲ್ಲಿಯೋ, ಚಿತ್ರಕಲೆಯಲ್ಲಿಯೋ ತೊಡಗಿರುತ್ತಾರೆ. ಸಾಯಂಕಾಲದಲ್ಲಿ ಇಬ್ಬರೂ ಕಲೆತಾಗ, ತಮ್ಮ ತಮ್ಮ ಅನುಭವಗಳನ್ನು ಹೇಳಿಕೊಳ್ಳುತ್ತಾರೆ.

'ಗಂಡ ಹೆಂಡಿರ ಜಗಳವುಂಡು ... ಗುವ ವರೆಗೆ' ಎಂಬ ನಮ್ಮಲ್ಲಿನ ... ಣ್ಣುಡಿಯಿರುವಂತೆ 'ಜತೆ ಊಟ ... ವರೆಗೆ ಗಂಡಹೆಂಡಿರ ಜಗಳಕ್ಕೆ ಜಾ... ಇಲ್ಲ' ಎಂದು ಜರ್ಮನಿಯಲ್ಲಿ ಬಳ... ರುವ ನಾಣ್ಣುಡಿಯಿದೆ. ಗಂಡನೊಂ... ಒಂದಷ್ಟು ಗಾಳಿ ಸಂಚಾರ ಹೋಗಿ, ... ದಾಗಿ ಕುಳಿತು ಚೊಕ್ಕ ಭೋಜನ ... ಬೇಕು ಎನ್ನುತ್ತಾರೆ ಫೂಸ್ಟರ್.

ಹಿಂದಿನಿಂದಲೂ ರೋಕೆನ್ ... ಸ್ತ್ರೀ ಪುರುಷರ ಭೇದ ನಿವಾರಣ ಕಾ...ವನ್ನು ನಡೆಸುತ್ತಿದೆ. ಪುರಾತನ ಕಾ... ಸೇರಿದ ಚಿತ್ರವಧೆ ಮಂಟಪವೆಂಬುದು ಅಲ್ಲಿದೆ. ಇಂತಹ ವಿಷಯಗಳ ತೀರ್ಪು ನೀಡಲಾಗುತಿತ್ತು. ಹೆಂಡ...ನ್ನು ಹೊಡೆದ ಗಂಡನ ಮನೆಯ ...ಣೆಯನ್ನು ಕೆಳಗಿಳಿಸಲಾಗುತಿತ್ತು. ...ಡನನ್ನು ಅಪಮಾನ ಮಾಡಿ, ಹೆ... ಹೆಂಡತಿಯನ್ನು ತಿರುಗ ಮುರುಗ... ಯ ಮೇಲೆ ಕುಳ್ಳಿರಿಸಿ ಸವಾರಿ ಮಾ...ಲಾಗುತಿತ್ತು.

ಸ್ತ್ರೀ ಪುರುಷರ ಸಮಾನತೆ ಏರ್ಪಟ್ಟ ಈ ಕಾಲದಲ್ಲಿ ಅಂತಹ ಶಿ...ಕ್ಷೆಗಳನ್ನು ಕೈಬಿಡಲಾಗಿದೆ. ರೋ...ಕೆನ್ ಬರ್ಗ್‌ನ ಈ ಮಹತ್ಕಾರ್ಯ ... ಎಲ್ಲೆಡೆಯೂ ಕುತೂಹಲವನ್ನು ಕೆರ... ಎಷ್ಟೋ ಮಂದಿ ಇದನ್ನು ನೋಡ...ದೇ ಅಲ್ಲಿಗೆ ಬರುತ್ತಿದ್ದಾರೆ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ಡಾ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ.ಖ.ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಕೆಂಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ ಎರಡು (ಟ ಖ ಪ್ರತ್ಯೇಕ)

ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' Weekly in the list of periodic and Newspapers approv for use in Second Schools as per proceedi Roc No. 466 N/50 dat 2-12-1950 of the Direct of Public Instructio Madras.

Edited. Printed & Published by K. H.Shetty, at the Navayuga Press, Udipi, S. India

ನವಯುಗ

ಸಂಪುಟ ೪೪] ಅಕ್ಟೋಬರ ೨೧, ೬೪ [ಸಂಚಿಕೆ ೫



Navayuga nationalist kannada weekly

೨೦ ಪೈಸೆ

ಕವಲು ದಾರಿ–ಕೆಂಪು ದೀಪ

ಕನ್ನಡ ಪತ್ರಿಕೋದ್ಯಮ: ಆ ಮುಖ ಈ ಮುಖ

—ಸುದಂಸ

ಜೋಷಿಯವರು ತಮ್ಮ 'ಜೀವನ'ವನ್ನು ಇಪ್ಪತ್ತೈದ ವರ್ಷದ ಹುಟ್ಟುಹಬ್ಬ ಆಚರಿಸಿ ನಿಲ್ಲಿಸುವವರಿದ್ದಾರೆ.

ಬೆಟಗೇರಿ ಕೃಷ್ಣ ಶರ್ಮರು ಕೈಬಿಟ್ಟ 'ಜಯಂತಿ' ಇನ್ನೂ ತಿಂಗಳಿಗೊಮ್ಮೆ ಪ್ರಕಟವಾಗುತ್ತಿದೆ. ನೋಡಿದಾಗ ಜಯಂತಿ ಇಂದು ತಪ್ಪಲಿ, ಎಂದು ಅನಿಸುತ್ತಿದೆ.

ಚಿತ್ರಗುಪ್ತ'ನು ಗತಿಸಿ ಸ್ಥಗಿತವಾಗಿ ಇನ್ನೂ ಹತ್ತು ವರ್ಷ ಕಳೆದಿಲ್ಲ. ಕನ್ನಡ ಪತ್ರಿಕಾರಂಗವನ್ನು ಇವತ್ತಿಗೆ ನೋಡುವವರಲ್ಲ 'ಚಿತ್ರಗುಪ್ತ'ದ ನೆನಪು ಮಾಡಿಕೊಂಡು ನಿಟ್ಟುಸಿರು ಬಿಡಬೇಕಾರೆ. ಚಿತ್ರಗುಪ್ತ ಮತ್ತೆ ಆರಂಭವಾಗುತ್ತದೆ ಎಂಬ ಸುದ್ದಿ ಇತ್ತು. ಆರಂಭವಾದರೂ ಅದು ಮೊದಲಿನ 'ಚಿತ್ರಗುಪ್ತ'ವಾಗುವದಿಲ್ಲ ಎಂಬ ಸುದ್ದಿಯೂ ಇದೆ.

'ಕಿಡಿ'ಯು ಶೇಷಪ್ಪ ಹೋಟೆಲ ಮೇಲೆ ಕಿಡಿ ಕಾಣಿಸಿಕೊಂಡಿತ್ತು, ಅದನ್ನು ಕಂಡು ಶೇಷಪ್ಪನಿಗೆ ಎಂತಹ ಅಪಚಾರವಾಯಿತು, ಎಂದು ಉದ್ಗಾರವೆತ್ತಿದವರಿದ್ದಾರೆ. ಕಾಣಿಸಿಕೊಂಡ ಕಿಡಿ ಮಾಡಿ ಹೋಯವಾದಂತಿದೆ [ಸಂತೋಷ!]

ಮುಂಬಯಿಯಲ್ಲಿ 'ನುಡಿ' ಇತ್ತು. ನುಡಿಯ ಬಿಚ್ಚು ನುಡಿಯಲ್ಲಿ ನಮ್ಮ ಅವಶ್ಯಕತೆ ಎಲ್ಲಾ ತುಂಬಿತ್ತು. [ಅದೇ ನಮಗೆ ಬೇಕಿಲ್ಲಿಲ್ಲ?] 'ನುಡಿ' ನಿಂತಿತು.

ನುಡಿಯ ಬದಲಿಗೆ "ತಾಯಿನುಡಿ" ಹೊರಡುತ್ತಿದೆ; ನಡೆಯುತ್ತಿದೆ [ಅದೂ ಈಗ ನಮಗೆ ಬೇಕಾಗಿಲ್ಲ?]

ಕನ್ನಡವನ್ನು ಪ್ರತಿನಿಧೀಕರಿಸುವ ಒಂದು ಪತ್ರಿಕೆ, ಪ್ರಪಂಚ. ಕನ್ನಡ ಜನ ಜೀವನಕ್ಕೆ ನೂರು ಕವಲು ಹಾಕಿ ಕಣ್ಣಾನೆಯ ರಕ್ಷಕ್ಕೆ ಬಿಸಿ ತಾಗಿಸಿದವರು "ಪಾಪು" [ಆ ಕವಲುಗಳು ಈಗಲೂ ಬೇಕಾಗಿವೆ! ದೊಡ್ಡ ವಿಚಾರಗಳು ಜನರಿಗೆ ಬೇಕು. ಜನಾಭಿಪ್ರಾಯವನ್ನು ಪ್ರತಿನಿಧೀಕರಿಸುವ ಆಗತ್ಯವೂ ಇದೆ. ಅದು "ಪಾಪು" ಅವರಿಂದ ಸಾಧ್ಯವೂ ಇದೆ. ಅವರು "ಮನಸ್ಸು" ಮಾಡಬೇಕು.

ಕನ್ನಡ ಸಾಹಿತ್ಯ ಪರಿಷತ್ತು ಬೆಳವಣಿಗೆಯ ದಾಳಿಯ ಮೇಲೆ 'ಕನ್ನಡ ನುಡಿ'ಯನ್ನು ಅಚ್ಚು ಹಾಕಿ ಪ್ರಕಟಿಸುತ್ತಿದೆ. "ಕನ್ನಡ ನುಡಿ" ಸಾಹಿತ್ಯ ಪರಿಷತ್ತಿನ ನುಡಿಯಾಗಿದೆ? [ಸಿಕ್ಕೋ ಕನ್ನಡಿಗರ ನುಡಿಯೂ ಆಗಲಿಲ್ಲ ಕನ್ನಡ ಸಾಹಿತ್ಯ ಪ್ರಿಯರ ನುಡಿಯೂ ಆಗಲಿಲ್ಲ ಕನ್ನಡ ಸಾಹಿತಿಗಳ ನುಡಿಯಾಗುವದಂತೂ ದೂರದ ಮಾತು]

ಅಂಕೋಲೆಯಿಂದ "ಜನ ಸೇವಕ" ಬರುತ್ತಿದೆ. ಜನರಿಗೆ ಬೇಕಾದುದನ್ನು ಒದಗಿಸುವ "ಜನ ಸೇವಕ"ದ ಕೆಲಸ ಮೆಚ್ಚುವಂತಹದ್ದು. [ಮೆಚ್ಚಿಕೊಳ್ಳುವವರು ಮಾತ್ರ "ಹಿತ"ವಾಗಿರದೆ "ಮಿತ"ವಾಗಿದ್ದಾರೆ!]

ಶಿರಸಿಯ "ಯುಗ ವಾಣಿ" ಆರಂಭದಲ್ಲಿ ಯಾವಾಗ 'ಹೊಸ ಆಸೆ' ಚಿಗುರೊಡೆಯುವಂತೆ ಮಾಡಿತ್ತು, ನಿಜ [ಆದರೆ, ಈಗ ಅದಕ್ಕೆ "ಸುಸ್ತು"ಗಿಂದ ಬೇಕು!]

ಈಗ ಹುಬ್ಬಳ್ಳಿಯಿಂದ 'ಸಂಗ್ರಾಮ' ಬರುತ್ತಿದೆ [ಈ ಸಂಗ್ರಾಮ ಎಲ್ಲಿಯವರೆಗೆ? ನಡೆಯುವ 'ಸಂಗ್ರಾಮ'; 'ಸಂಗ್ರಾಮ' ಕೊನೆಗೊಳ್ಳುವವರೆಗೆ?]

[ದಿನಪತ್ರಿಕೆಗಳಲ್ಲಿ 'ಪ್ರಜಾವಾಣಿ' ಬಿಟ್ಟರೆ, ಜನರಿಗೆ ವಿಚಾರ ಒದಗಿಸುವ ಪತ್ರಿಕೆ ಬೇರೆ ಯಾವದಿದೆ, ನೀವೇ ಹೇಳಿ?]

o o o

ಕನ್ನಡದಲ್ಲಿ ಓದುಗರ ಸಂಖ್ಯೆ ಈಗ ಹೆಚ್ಚಿದೆ. ಹತ್ತು ವರ್ಷಕ್ಕೆ ಹಿಂದಿನ ಸ್ಥಿತಿಯಲ್ಲಿ ವ್ಯತ್ಯಾಸವಿದೆ, ಪತ್ರಿಕೆ ಕೊಂಡು ಓದುವವರ ಸಂಖ್ಯೆ ಇನ್ನೂ ಹೆಚ್ಚಬೇಕಾಗಿದ್ದರೂ, ಎರವಲು ಪಡೆದು ಓದುವವರ ಸಂಖ್ಯೆ ಬೆಳೆಯುತ್ತಲೇ ಹೆಚ್ಚಳ ಕಂಡು ಬರುತ್ತಿರುವದು ಶುಭ ಚಿಹ್ನೆ!

ಈಗ ಜನ ಜಾಗೃತಿಯ ಕಾರ್ಯ ಆಗಬೇಕು. ಓದುಗರಿಗೆ ಯೋಗ್ಯ ವಿಚಾರಗಳನ್ನು ಒದಗಿಸಿ ಕೊಡುವ ಕರ್ತವ್ಯ ಪತ್ರಿಕೆಗಳದ್ದು.

ಅದಿನ್ನೂ ತೃಪ್ತಿಕರ ಮಟ್ಟದಲ್ಲಿಲ್ಲ. ಜನರನ್ನು ಗೊಂದಲದಲ್ಲಿ ಕೆಡಹುವ ಪತ್ರಿಕೆಗಳು ನಮ್ಮಲ್ಲಿವೆ, ಬೇಕಾದಷ್ಟಿವೆ. ಜನರನ್ನು ನೇರವಾದ ದಾರಿಯಲ್ಲಿ ಸಾಗುವಂತೆ ಪ್ರೇರೇಪಿಸುವ ಪತ್ರಿಕೆಗಳು ಎಷ್ಟಿವೆ? ಜನರಿಗೆ ಖಚಿತವಾದ ಅಭಿಪ್ರಾಯವನ್ನು ತಿಳಿಸುವ, ಈ ಮೂಲಕ ಜನರನ್ನು ವಿಚಾರವಂತರನ್ನಾಗಿಸುವ ಪತ್ರಿಕೆಗಳು ನಮ್ಮಲ್ಲಿ ಎಷ್ಟಿವೆ?

o o o

'ನುಡಿ'ಯ ವ್ಯಾಸರಾಯ ಬಲ್ಲಾಳ, ರಾಮಚಂದ್ರ ಉಚ್ಚಿಲ, ಮೋಹನರಾವ್, 'ತಾಯಿ ನುಡಿ'ಯ ದತ್ತಾತ್ರೇಯ, 'ಚಿತ್ರಗುಪ್ತ'ದ ಭಾರದ್ವಾಜ್, ನಿರಂಜನ, ಪಾನಸೆ, ಪ್ರಹ್ಲಾದರಾವ್, ಆರ್ ಎನ್ ಮೂರ್ತಿ, ಗರ್ಜನೆಯ ಪ. ಬೋ. ಬ. ಮುಂತಾದವರು ಕೂಡಿಕೊಂಡು ಒಂದು ಪತ್ರಿಕೆ ಆರಂಭಿಸಿದರೆ ಹೇಗೆ? (ಬಂಡವಲ ಯಾರು ಹಾಕುತ್ತಾರೆ?)

ಅಂದಹಾಗೆ ಬಂಡವಲವುಳ್ಳ ಪತ್ರಿಕೆಗಳು ನಮ್ಮಲ್ಲಿವೆ; ಇಲ್ಲದೆ ಇದ್ದ ಪತ್ರಿಕೆಗಳು ಅದಕ್ಕಾಗಿ ಪ್ರಯತ್ನ ನಡೆಸುತ್ತಿವೆ. ಜನರ ವಿಚಾರಕ್ಕೊಂದು ಕವಲು ಎನ್ನುವ ಪತ್ರಿಕೆಗಳ ಸಂಖ್ಯೆ ಈಗ ಬೆರಳೆಣಿಕೆಯಷ್ಟು ಇವೆ, ಇದ್ದರೂ ಇದ್ದಂತೆ ಕಾಣಿಸಿಕೊಳ್ಳುತ್ತಿಲ್ಲ.

ನಿರ್ದಿಷ್ಟವಾದ ಧೋರಣೆಯಿಂದ ಪತ್ರಿಕೆಗಳ ಸಂಖ್ಯೆ ನಮ್ಮಲ್ಲಿ ಕಡಿಮೆ ಇಲ್ಲ. ಈ ಪತ್ರಿಕೆಗಳೂ ಬೇಕು, ಬೇಕಾಗಿ ಉಳ್ಳ ಕೆಲವರಿಗೆ?

ನಮಗೆ ಅದು ಬೇಡ.

ಇವತ್ತು ಕಾಲ ಬದಲಾಗಿದೆ. ಉದ್ದೇಶವಿರಿಸಿಕೊಂಡು, ಜನಾಭಿಪ್ರಾಯಕ್ಕೆ—ಜನರ ವಿಚಾರ ವಿಕಾಸಕ್ಕೆ—ಬೆಲೆ ಕೊಡಬಲ್ಲ ಯಾವದೇ ಒಂದು ಪತ್ರಿಕೆ ಕನ್ನಡದಲ್ಲಿ ಬದುಕಿ ಉಳಿಯಲು ಸಾಧ್ಯವಿದೆ.

ಸಾಧ್ಯವಿದೆ?

ನಮ್ಮ–ನಮ್ಮವರು

ಎಂ ಸಿ ಛಾಗ್ಲಾ

ಪುಷ್ಪಹಾರವು ವಿಗ್ರಹವೇರುವುದರಿಂದ ವಿಗ್ರಹದ ಆಕರ್ಷಣೆ ಹೆಚ್ಚುವುದೇ ಅಥವಾ ಪುಷ್ಪಹಾರದ ಆಕರ್ಷಣೆ ಹೆಚ್ಚುವುದೇ ಎಂಬುದು ವಿವಾದಾತ್ಮಕ ಸಂಗತಿಯಾಗಿದೆ. ಅಂತೆಯೇ, ಎಂ. ಸಿ. ಛಾಗ್ಲಾರು ಕೇಂದ್ರ ಮಂತ್ರಿಮಂಡಲ ಸೇರುವುದರಿಂದ ಮಂತ್ರಿಮಂಡಲದ ಶೋಭೆ ಹೆಚ್ಚಿತೋ ಅಥವಾ ಛಾಗ್ಲಾರ ಶೋಭೆ ಹೆಚ್ಚಿತೋ ಎಂಬುದೂ ವಿವಾದಾತ್ಮಕ ವಿಷಯವಾಗಿದೆ. ಆದರೂ ಛಾಗ್ಲಾರು ಕೇಂದ್ರ ವಿದ್ಯಾಮಂತ್ರಿಗಳಾದುದರಿಂದ ವಿದ್ಯಾಮಂತ್ರಿ ಸ್ಥಾನದ ಶೋಭೆ ಹೆಚ್ಚಿತೆಂಬುದಕ್ಕೆ ಯಾವ ಸಂಶಯವೂ ಇಲ್ಲ. ಅವರು ವಿದ್ಯಾಮಂತ್ರಿಯಾಗಿ ಪ್ರತಿಜ್ಞೆ ಸ್ವೀಕರಿಸಿದಂದಿನಿಂದ, ವಿದ್ಯಾಮಂತ್ರಿ ಖಾತೆ ತುಂಬಾ ಚಟುವಟಿಕೆಯಿಂದ ಕಾರ್ಯವೆಸಗುತ್ತಿದೆ. ಚೈತನ್ಯಯುತವಾಗಿ ಅದು ದೇಶದ ಶಿಕ್ಷಣ ಧೋರಣೆಯನ್ನು ನಿರೂಪಿಸುವಲ್ಲಿ ಕಾರ್ಯೋನ್ಮುಖವಾಗಿದೆ.

ರಾಜ್ಯಾಂಗ ಘಟನೆಯ ಪ್ರಕಾರ, ಶಿಕ್ಷಣವು ರಾಜ್ಯ ಸರಕಾರಗಳ ಹಕ್ಕಿಗೊಳಪಡುವ ಖಾತೆಯಾಗಿದೆ. ಇದರ ಸಂಪೂರ್ಣ ಜವಾಬ್ದಾರಿ ರಾಜ್ಯ ಸರಕಾರಗಳ ಮೇಲೆ ಇದೆ. ಈ ದಿಶೆಯಲ್ಲಿ ಮಧ್ಯಪ್ರವೇಶಿಸುವ ಅಧಿಕಾರ ಕೇಂದ್ರಸರಕಾರಕ್ಕಿಲ್ಲ. ಇದು ದೇಶಕ್ಕೆ ಸಮಗ್ರ ರೂಪದ ಶಿಕ್ಷಣ ಪದ್ಧತಿಯನ್ನು ರೂಪಿಸುವಲ್ಲಿ ತುಂಬಾ ಅಡ್ಡಿಯನ್ನುಂಟುಮಾಡುತ್ತಿದೆ. ವಿವಿಧ ರಾಜ್ಯಗಳಲ್ಲಿಯ ಶಿಕ್ಷಣ ಮಟ್ಟ, ವಿಧಾನ, ಅಧ್ಯಾಪಕರ ವೇತನ, ಸೌಲಭ್ಯ ಇತ್ಯಾದಿಗಳು ಒಂದೊಂದು ವಿಧವಾಗಿದ್ದು ಅವುಗಳು ರಾಜ್ಯ ಸರಕಾರದ ಆದೇಶದ ಮೇರೆಗೆ ನಿರೂಪಿಸಲ್ಪಟ್ಟಿವೆ.

ಮುಖ್ಯವಾಗಿ ಅಧ್ಯಾಪಕರ ವೇತನ ಸೌಲಭ್ಯ ಸೇವಾನಿಯಮಗಳಲ್ಲಿ ದೇಶದಾದ್ಯಂತ ಏಕರೂಪತೆ ಇರಬೇಕಾದುದು ಪ್ರಕೃತ ತೀರಾ ಅವಶ್ಯವೆನಿಸಿದೆ. ಇಂದು ದೇಶದಲ್ಲಿ ಶಿಕ್ಷಕರ ಪರಿಸ್ಥಿತಿ ಎಳ್ಳಷ್ಟೂ ಉತ್ತಮವಾಗಿಲ್ಲ. "ಶಿಕ್ಷಕ ವೃತ್ತಿ ಒಂದು ಮಹಾ ಶಾಪ" ಎಂಬ ಭಾವನೆ ಇಂದು ಉಪಾಧ್ಯಾಯರಲ್ಲಿ ಮೂಡಿದೆ. ಶಿಕ್ಷಣ ಕ್ಷೇತ್ರದ ಯಾವ ಸುಧಾರಣೆಯಾಗಬೇಕಾದರೂ, ಮೊದಲು ಶಿಕ್ಷಕರಿಗೆ ದೇಶದಾದ್ಯಂತ ಏಕರೂಪದ ವೇತನ ಸೌಲಭ್ಯ ಈಯುವುದು ಅತಿ ಅಗತ್ಯವಾಗಿದೆ. ಈ ತತ್ವವನ್ನು ಮಾನ್ಯ ಮಂತ್ರಿ ಛಾಗ್ಲಾರು ಒಪ್ಪಿರುತ್ತಾರೆ. ಅಲ್ಲದೆ, ಅದು ಅವರ ಅಧಿಕಾರ ಹಕ್ಕಿಗೆ ಒಳಪಡದ ವಿಚಾರವಾದುದರಿಂದ ಅವರು ನಿರಪಾಯರಾಗಿರುತ್ತಾರೆ.

ಒಕ್ಟೋಬರ ತಿಂಗಳ ಎರಡನೇ ವಾರದಲ್ಲಿ ಬೆಂಗಳೂರಿನಲ್ಲಿ ಜರುಗಲಿರುವ ರಾಜ್ಯ ಸರಕಾರಗಳ ವಿದ್ಯಾಮಂತ್ರಿಗಳ ಹಾಗೂ ಕಾರ್ಯದರ್ಶಿಗಳ ಸಮ್ಮೇಳನವು ಈ ವಿಚಾರ ಹಾಗೂ ಇನ್ನಿತರ ಶಿಕ್ಷಣ ಸಮಸ್ಯೆಗಳ ಕುರಿತು ಚರ್ಚಿಸಲು ಸೇರಲಿದೆ ಎಂದು ತಿಳಿದು ಬರುತ್ತದೆ. ಶ್ರೀ ಛಾಗ್ಲಾರು, ಈ ಸಮ್ಮೇಳನದ ನೇತೃತ್ವ ವಹಿಸುವರೆಂದೂ ತಿಳಿದು ಬರುತ್ತದೆ. ಅವರು ತಮ್ಮ ವೈಯಕ್ತಿಕ ಪ್ರತಿಭೆಯಿಂದ ಯೋಜನೆಗಳು ಕಾರ್ಯರೂಪದಲ್ಲಿ ಬರುವಂತೆ ರಾಜ್ಯಗಳ ಮನವೊಲಿಸುವರೆಂದು ಈ ಸಂದರ್ಭ ಹಾರೈಸುವುದು ತಪ್ಪಾಗಲಾರದು. ಅಂತೂ ಭಾರತದಾದ್ಯಂತ ಶಿಕ್ಷಕರಿಗೆ ಏಕರೂಪದ ವೇತನ ಸೌಲಭ್ಯ ಸಿಗಬೇಕಾದುದು ಈಗ ಮೊದಲನೆ ಅವಶ್ಯಕತೆ. ಈ ಕುರಿತು ಸಮ್ಮೇಳನದ ಒಮ್ಮತದ ನಿರ್ಣಯಕ್ಕೆ ಶ್ರೀ ಛಾಗ್ಲಾರು ಶ್ರಮಿಸುವರೆಂದು ನಂಬಬಹುದು.



ಡಾಕ್ಟರ್ ಮಂಜುನಾಥ ರೈ

ದಕ್ಷಿಣ ಕನ್ನಡದ ಜನ, ಎಲ್ಲಿ ಹೋದರೂ ಸದ್ದಿಯನ್ನೇ ನಿರ್ಮಿಸುತ್ತಾರೆ. ತಾವು ಸೇರಿದ ಊರನ್ನು ತಮ್ಮದನ್ನಾಗಿ ಮಾಡಿಕೊಂಡು, ಅಲ್ಲಿಯ ಜನರೊಡನೆ ಕಲೆತು ಬಾಳುವ ಕಲೆ ಅವರಿಗೆ ಪಾರಂಪರ್ಯವಾಗಿದೆ. ತಮ್ಮ ಪ್ರತಿಭೆ, ಪ್ರಾಮಾಣಿಕ ಸೇವಾ ಪ್ರವೃತ್ತಿಗಳಿಂದ ಅವರು ಎಲ್ಲಿ ಹೋದರೂ ಬೆಳಕಿಗೆ ಬರುತ್ತಾರೆ. ಇದಕ್ಕೊಂದು ಜ್ವಲಂತ ನಿದರ್ಶನ ಡಾಕ್ಟರ್ ಕೆ. ಮಂಜನಾಥ ರೈಗಳು. ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಟ್ಟಿದರು. ವೈದ್ಯಕೀಯ ಪದವೀಧರರಾಗಿ, ಹಿಂದಿನ ಮದ್ರಾಸು ಸರಕಾರದಲ್ಲಿ ಉದ್ಯೋಗವನ್ನು ಕೈಕೊಂಡರು. ತಮ್ಮ ಅಸಾಧಾರಣ ಕರ್ತವ್ಯ ದಕ್ಷತೆ ಹಾಗೂ ಪ್ರತಿಭೆಯಿಂದ ಅವರು ಸರಕಾರವನ್ನು ಆಕರ್ಷಿಸಿದರು. ಅಂತಲೇ ೧೯೫೭ರಲ್ಲಿ ಮದ್ರಾಸು ಸರಕಾರ ಅವರನ್ನು ಉಚ್ಚ ಅಭ್ಯಾಸಕ್ಕಾಗಿ

(ಮೂರನೇ ಪುಟ ನೋಡಿರಿ)

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ; ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮುಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಭಾರತ ಭಾಗ್ಯವಿಧಾತ

ಬಾಪೂಜಿ

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೫	೧—೧೦—೧೯೬೪	No. 5

ವಚನ ಸುಧೆ

ಬಹೂನಾಮೇಮಿ ಪ್ರಥಮೋ
ಬಹೂನಾಮೇಮಿ ಮಧ್ಯಮಃ॥
(ಕಠೋಪನಿಷತ್ತು, ೧—೫)

O ಅನೇಕರಲ್ಲಿ ನಾನು ಮೊತ್ತಮೊದಲಿಗನಾಗುತ್ತೇನೆ ಹಾಗೆಯೇ ಅನೇಕರಲ್ಲಿ ಮಧ್ಯಮನಾಗುತ್ತೇನೆ.

OO ತಾನು ಪ್ರಥಮನು ಇಲ್ಲವೇ ಮಧ್ಯಮನಾಗಬೇಕೆಂಬ ಇರಾದೆಯಿಟ್ಟುಕೊಂಡು ಆದಕ್ಕಾಗಿ ಪ್ರಯತ್ನಿಸಬೇಕು. ಯಾವ ಸಂದರ್ಭದಲ್ಲಿಯೂ ತನ್ನ ಸ್ಥಿತಿಗತಿಯು ಅಧಮವಾಗದಂತೆ ಎಚ್ಚರವಹಿಸುತ್ತಿರಬೇಕು. ಇದು ಪ್ರತ್ಯೇಕ ಮಾನವನ ಪರಮ ಕರ್ತವ್ಯ.

ಯಶಸ್ವೀ ಸಂದರ್ಶನ

ರಾಷ್ಟ್ರಪತಿ ಡಾ| ರಾಧಾಕೃಷ್ಣನ್ನರು ರಶ್ಯ ಮತ್ತು ಆಯರ್ಲೆಂಡ್‌ಗಳಿಗೆ ನೀಡಿದ ಅಧಿಕೃತ ಸಂದರ್ಶನವು ಅಂತಾರಾಷ್ಟ್ರೀಯ ಮಹತ್ವವುಳ್ಳದ್ದು. ಪಂಡಿತ ನೆಹರು ರವರ ಜೀವಿತಾವಧಿಯಲ್ಲಿ ಅವರು ವಿದೇಶ ನೀತಿಗೆ ಮತ್ತು ಅಂತಾರಾಷ್ಟ್ರೀಯ ಸಂಬಂಧ—ಸಂಪರ್ಕಗಳಿಗೆ ವಿಶೇಷ ಗಮನ ನೀಡುತ್ತಿದ್ದುದು ಮಾತ್ರವಲ್ಲ ತನ್ನದೇ ಆದ ಒಂದು ವಿಶಿಷ್ಟ ನೀತಿಯನ್ನು ಅನುಸರಿಸಿಕೊಂಡು ಹೋಗುತ್ತಿದ್ದರು. ತಾಟಸ್ಥ್ಯದ ನೆಲಹದಿಯಲ್ಲಿ ನಿಂತ ಆ ನೀತಿಯು ಭಾರತಕ್ಕೆ ವಿಶೇಷ ಗೌರವದ ಸ್ಥಾನವನ್ನೂ ತಂದು ಕೊಟ್ಟಿತ್ತು. ಅವರ ನಿಧನಾನಂತರ ಭಾರತದ ನೀತಿಯು ಅದೇ ರೀತಿಯಲ್ಲಿ ಮುಂದುವರಿಯುವುದೆಂಬ ಆಶ್ವಾಸನ ಜಗತ್ತಿಗೆ ನೀಡಲಾಗಿದ್ದರೂ ಅದನ್ನು ಸಮರ್ಥಿಸುವ ಪ್ರಯತ್ನಗಳು ಇತ್ತೀಚೆಗೆ ಪ್ರಾರಂಭವಾದುವು. ವಿದೇಶ ಮಂತ್ರಿಯೆಂದು ನಿಯುಕ್ತರಾದ ಮೇಲೆ ಸರ್ದಾರ ಸ್ವರ್ಣಸಿಂಗರು ಸಿಂಹಳ ಮತ್ತು ಬರ್ಮಾಗಳಿಗೆ ನೀಡಿದ ಸಂದರ್ಶನವು ಮಹತ್ವಪೂರ್ಣವಾದುದು. ಸಂರಕ್ಷಣಾ ಮಂತ್ರಿ ಚವನರು ಸೋವಿಯತ್ ರಶ್ಯವನ್ನು ಭೆಟ್ಟಿ ಮಾಡಿ ಅಲ್ಲಿಂದ ನಮ್ಮ ಸಂರಕ್ಷಣೆಗೆ ಅವಶ್ಯಕವಾದ ಸಾಧನ ಮತ್ತು ಸಹಾಯವನ್ನು ಪಡೆದು ಮರಳಿದರು. ರಾಷ್ಟ್ರಪತಿಯವರು ಕೂಡ ರಶ್ಯವನ್ನಲ್ಲದೆ ಜೊತೆಗೆ ಆಯರ್ಲೆಂಡನ್ನೂ ಕಂಡು ಭಾರತ ಸರಕಾರದ ನೀತಿಯನ್ನು ಸ್ಪಷ್ಟಪಡಿಸಿ ಸೌಹಾರ್ದತೆಯನ್ನು ಹೆಚ್ಚಿಸಿದರು.

ಸೋವಿಯತ್ ರಶ್ಯವು ಭಾರತದ ಬಗ್ಗೆ ಉಚಿತವಾದ ನೀತಿಯನ್ನೇ ಹಿಂದಿನಿಂದಲೂ ತಳೆದಿದೆ. ಚೀನೀಯರ ಆಕ್ರಮಣದ ಸಂಕ್ರಾಂತಿಕಾಲದಲ್ಲೂ ಇದು ಗಡಿವಿವಾದವನ್ನು ವಿಚಾರ ವಿನಿಮಯದಿಂದಲೇ ಪರಿಹರಿಸಿಕೊಳ್ಳಬೇಕೆಂದು ಅಂದಿದ್ದರೂ, ಮುಂದೆ ಮಿಗ್ ವಿಮಾನಗಳನ್ನು ಕೊಡುವಲ್ಲಿ ವಿಲಂಬ ಮಾಡಿದ್ದರೂ ಇಂದದು ಮಿಗ್‌ಗಳನ್ನು ಕೊಡಲು ಮಾತ್ರವಲ್ಲ, ನಮ್ಮಲ್ಲಿಯೇ ಮಿಗ್ ವಿಮಾನ ತಯಾರಿಸುವ ಕಾರ್ಖಾನೆಯ ಸ್ಥಾಪನೆಗೂ ನೆರವು ನೀಡಲು ಮುಂದೆ ಬಂದಿದೆ. ಹಾಗಿರುವಾಗ, ಅಲ್ಲಿ ಕಮ್ಯುನಿಸ್ಟ್ ಪಕ್ಷವು ಅಧಿಕಾರದಲ್ಲಿರುವುದಾದರೂ ಚೀನಾ—ರಶ್ಯಗಳ ವಿವಾದ ತೀವ್ರವಾಗಿಯೇ ಬೆಳೆದಿದೆ ಎನ್ನಬೇಕು. ಗಡಿಯ ಸಂಬಂಧದಲ್ಲಿಯೂ ನಿರ್ದಿಷ್ಟ ಗಡಿಯಿಲ್ಲದಲ್ಲಿ ಸಾಂಪ್ರದಾಯಿಕ ಸೀಮೆಯನ್ನೇ ಒಪ್ಪಿಕೊಳ್ಳಬೇಕು ಎಂಬ ಅದರ ವಾದವು ಭಾರತ—ರಶ್ಯಗಳೆರಡಕ್ಕೂ ಅನ್ವಯಿಸುತ್ತದೆ. ಕಾಶ್ಮೀರದ ವಿಷಯದಲ್ಲಿ ಭಾರತವು ತಳೆದ ನಿಲುವೆಯನ್ನು ಅದು ಒಪ್ಪುತ್ತಲೇ ಬಂದಿದೆ. ಈ ಸಂಬಂಧ ಒಂದಕ್ಕಿಂತ ಹೆಚ್ಚು ಸಾರೆ ಅದು ವಿಟೋವನ್ನೂ ಪ್ರಯೋಗಿಸಿದೆ. ಮುಂದೆಯೂ ಆವಶ್ಯಕವೆನಿಸಿದಾಗ ಅದು ಭಾರತದ ಒಗ್ಗೆ ಸರಿಯಾದ ಕಾರ್ಯಕ್ರಮ ಕೈಗೊಳ್ಳುವುದೆಂದು ನಂಬಬಹುದು. ಡಾ| ರಾಧಾಕೃಷ್ಣನ್ನರ ಸಂದರ್ಶನವು ಉಭಯ ದೇಶಗಳ ಸ್ನೇಹವನ್ನು ಮತ್ತಷ್ಟು ಬಿಗಿಗೊಳಿಸುವುದು ಖಂಡಿತ.

ಆಯರ್ಲೆಂಡು ಬ್ರಿಟನರ ದಾಸ್ಯದಲ್ಲಿ ಬಹಳಷ್ಟು ನವೆದು ಅದರ ರುಚಿಯನ್ನು ಭಾರತದಂತೆಯೇ ಅನುಭವಿಸಿದ ದೇಶ. ಅದೂ ತಟಸ್ಥ ನೀತಿಯನ್ನು ಅನುಸರಿಸುತ್ತದೆ. ಆದರೆ, ಇತ್ತೀಚೆಗೆ ಅದು ಕಾಶ್ಮೀರ ಸಂಬಂಧದ ಒಂದು ಗೊತ್ತುವಳಿಯನ್ನು ಯುಕ್ತ ರಾಷ್ಟ್ರ ಸಂಘದಲ್ಲಿ ಮಂಡಿಸಿ, ಅದರಲ್ಲಿ ಭಾರತದ ನೀತಿಯನ್ನು ಒಪ್ಪದಿದ್ದುದೂ ರಶ್ಯದ ಪ್ರತಿಷೇಧ ಮತದಿಂದ ಅದು ಬಿದ್ದು ಹೋದುದೂ ನಮ್ಮ ಸ್ಮೃತಿಯಿಂದ ಜಾರಿಹೋಗಲಾರದು. ಇದಕ್ಕೆ ಆಯರ್ಲೆಂಡು ಭಾರತದ ಕಾಶ್ಮೀರ ನೀತಿಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲದಿರುವುದೇ ಕಾರಣವೆಂದು ಈಗ ಖಚಿತವಾಗಿ ಹೇಳಬಹುದು. ಆಗ ಈ ನೀತಿಯನ್ನು ಸಮರ್ಪಕವಾಗಿ ಅಲ್ಲಿ ಮಂಡಿಸಿ ಮಾಡುವ ಪ್ರಯತ್ನಗಳು ನಡೆದಂತೆ ತೋರುವುದಿಲ್ಲ. ಇಂದೀಗ ಡಾ| ರಾಧಾಕೃಷ್ಣರು ಈ ಕೆಲಸವನ್ನು ಯಶಸ್ವಿಯಾಗಿ ಮಾಡಿದ್ದಾರೆ. ಈ ಕಾರಣದಿಂದಲೇ ಕೊನೆಗೆ ಹೊರಟ ಜಂಟಿ ಹೇಳಿಕೆಯಲ್ಲಿ ಕಾಶ್ಮೀರದ ಪ್ರಶ್ನೆಯನ್ನು ಭಾರತ—ಪಾಕಿಸ್ತಾನಗಳು ವಿಚಾರ ವಿನಿಮಯದಿಂದ ಪರಿಹಾರ ಮಾಡಿಕೊಳ್ಳಬೇಕೆಂಬ ಆಶಯ ಪ್ರಕಟವಾಗಿದೆ. ಆಯರ್ಲೆಂಡಿನಲ್ಲಿ ಈ ಬಗ್ಗೆ ತುಂಬಿದ್ದ ತಪ್ಪು ತಿಳುವಳಿಕೆಯು ಈಗ ದೂರವಾಗಿದೆ ಎಂಬುದಕ್ಕೆ ಬೇರೆ ಪ್ರಮಾಣಬೇಕೆ? ಇದಕ್ಕಾಗಿ ನಾವು ರಾಷ್ಟ್ರಪತಿಯವರನ್ನು ಅಭಿನಂದಿಸಬೇಕು.

ಭಾರತದ ಬಗ್ಗೆ ಇನ್ನೂ ಕೆಲವೆಡೆಯಲ್ಲಿ ತಪ್ಪು ತಿಳುವಳಿಕೆಗಳು ಮನೆಮಾಡಿವೆ. ರಶ್ಯವಿತ್ತ ಸಹಾಯದಿಂದಾಗಿ ಅಮೇರಿಕೆ—ಬ್ರಿಟನ್ನುಗಳಲ್ಲಿ ಭಾರತದ ತಟಸ್ಥ ನೀತಿಯ ಬಗ್ಗೆ ಅನುಮಾನ ಹುಟ್ಟುವುದು ಸಾಧ್ಯ. ಅವನ್ನು ದೂರ ಮಾಡುವುದು ಬಹಳ ಅಗತ್ಯ. ಸಹಾಯವು ಯಾವ ಕಡೆಯಿಂದ ಬಂದರೂ ಅದನ್ನು ಸ್ವೀಕರಿಸುವುದು ಬೆಳೆದು ಬರುತ್ತಿರುವ ರಾಷ್ಟ್ರಕ್ಕೆ ಅಗತ್ಯವೆಂಬುದನ್ನು ತಿಳಿಯಪಡಿಸಬೇಕು. ನಮ್ಮ ಬಗ್ಗೆ ಇತರರು ದುರಭಿಪ್ರಾಯದಿಂದಿರಲು ಎರಡು ಪ್ರಬಲ ಕಾರಣಗಳಿವೆ. ಮೊದಲನೆಯದಾಗಿ ನಮ್ಮ ನೀತಿ ಘೋಷಣೆಗಳನ್ನು ಅವರು ಸಂಯಾಗಿ ಅರ್ಥಮಾಡಿಕೊಳ್ಳದಿರುವುದು. ಇನ್ನೊಂದು ನಾವು ನಮ್ಮ ನೀತಿಯನ್ನು ಮನದಟ್ಟು ಮಾಡದಿರುವುದು. ಭಾರತ ವಿಚಾರವಾಗಿ ಹೇಳುವುದಾದರೆ ಮೊದಲನೆಯದಕ್ಕಿಂತ ಎರಡನೆಯದೇ ಅಗ್ರ ಪ್ರಾಶಸ್ತ್ಯ ಪಡೆಯುತ್ತದೆ. ಜವಾಹರೋತ್ತರ ಯುಗದಲ್ಲಿ ಎರಡನೆಯ ಕಾರ್ಯ ಏಕಪ್ರಕಾರವಾಗಿ ಮುಂದುವರಿಯಬೇಕು. ಇದಕ್ಕಾಗಿ ಅಧಿಕಾರ ಸಂಪನ್ನರು ಮನೋವಾಕ್ಕಾಯಗಳಿಂದ ಶ್ರಮಿಸಬೇಕು. ಜಗತ್ತಿನ ಸೌಹಾರ್ದವನ್ನು ಗಳಿಸಿಕೊಂಡರೆ, ನಾವು ಎಂದೂ ಹಿಂದುಳಿಯಲಾರೆವೆಂಬುದನ್ನು ಮರೆಯದೆ ಶಾಸ್ತ್ರಿ ಸಂಪುಟವು ಈ ದಿಸೆಯಲ್ಲಿ ಪ್ರಯತ್ನಶೀಲವಾದರೆ, ಸಫಲತೆ ತಾನೇ ತಾನಾಗಿ ಲಭಿಸುವುದು.

ಮೊದಲ ವಿದೇಶ ಯಾತ್ರೆ

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಪ್ರಧಾನಿ ಶಾಸ್ತ್ರಿಯವರಿಗೆ ಆಗಲಿಲ್ಲ. ಇದು ದೈವಚಿತ್ತ; ಭಾರತದ ದುರದೃಷ್ಟ. ಇದೇ ತಿಂಗಳ ಮಧ್ಯದಲ್ಲಿ ಕೈರೋವಿನಲ್ಲಿ ನಡೆಯುವ ತಟಸ್ಥ ರಾಷ್ಟ್ರಗಳ ಪರಿಷತ್ತಿನಲ್ಲಿ ಅವರು ಭಾಗವಹಿಸುವರೆಂದು ವರದಿಯಾಗಿದೆ. ಇದಕ್ಕಾಗಿ ಮಾಡುವ ಯಾತ್ರೆ ಅವರ ಮೊತ್ತಮೊದಲ ವಿದೇಶ ಯಾತ್ರೆಯಾಗುವುದು. ಆಫ್ರಿಕಾ—ಏಶ್ಯಾಗಳ ಸುಮಾರು ಐವತ್ತು ಪಕ್ಷದ ದೇಶಗಳ ವರಿಷ್ಠರು ಇಲ್ಲಿ ಸೇರುವುದರಿಂದ ಭಾರತದ ನೀತಿ—ಧೋರಣೆಗಳನ್ನು ಪರಿಚಯ ಮಾಡಿಕೊಡುವ ಅಮೂಲ್ಯ ವೇದಿಕೆಯಿದಾಗಬಹುದು. ಸಮ್ಮೇಳನದ ಕಾರ್ಯಕ್ರಮಗಳ ಚೌಕಟ್ಟಿನೊಳಗೆ ಭಾರತದ ಗೌರವ ಹೆಚ್ಚಿಸುವ ಕ್ರಮವನ್ನು ಶಾಸ್ತ್ರಿ ಮತ್ತಿತರ ನಿಯೋಗದ ಸದಸ್ಯರು ಕೈಗೊಳ್ಳುವರೆಂದು ಭರವಸೆ. ಅವರ ನಿಯೋಗವು ತನ್ನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಲಿ; ಭಾರತದ ಕೀರ್ತಿಯು ಬೆಳೆಯಲಿ.

ನರಸಣ್ಣನ ಸರಸ

ನಾನು ರಾಜೀನಾಮೆಯಿತ್ತರೇನಾಯ್ತು? ಸದಸ್ಯರು ನನ್ನನ್ನು ರಾಜೀನಾಮೆ ಹಿಂತೆಗೆದುಕೊಳ್ಳಲು ಕೇಳಿಕೊಂಡರಾಯಿತಲ್ಲಾ?

ಕಥಾ ಪ್ರಪಂಚ

ಪ್ರವಾಸ ರದ್ದಾಯಿತು

ಬರೆದವರು: ಶ್ರೀ ಹು. ಗೋ.



ಫೈಲುಗಳನ್ನು ಮುಂದಿಟ್ಟುಕೊಂಡು ತಲೆ ಕೆರೆಯುತ್ತಾ ಕುಳಿತಿದ್ದೆ. ಮಾಡಿದ ಕೆಲಸವನ್ನೇ ಮಾಡಿ ಮಾಡಿ ಬೇಸರ ಬಂದಿತ್ತು ಅಂದು ಆಫೀಸಿನಲ್ಲಿ. 'ಬಿಸಾಡಯ್ಯ ಆ ಫೈಲುಗಳನ್ನು ಒಂದು ಮೂಲೆಗೆ. ಯಾವಾಗ ನೋಡಿದರೂ ತಲೆ ಕೆರೆಯುತ್ತಾ ಕುಳಿತುಕೊಳ್ಳುವುದೇ ಆಯ್ತು ನಿನ್ನ ಹಣೇ ಬರಹ. ಸ್ವಲ್ಪ ಹೊತ್ತಾದರೂ ಖುಷಿಯಾಗಿರಬೇಕಯ್ಯ. ಏನಾದರೂ ಒಂದು ಸಮಸ್ಯೆ ಬಂದರೆ ಅದನ್ನು ನಗ ನಗುತ್ತಾ ಪರಿಹರಿಸಬೇಕೇ ಹೊರತು ಹೀಗೆ ಜೋಲು ಮೋರೆ ಹಾಕಿಕೊಂಡು ಕೂತರೆ ಹೇಗೆ? ಆ ಕೆಲಸವೆಲ್ಲಾ ಅಲ್ಲಿರಲಿ, ಬಾ, ಒಂದು ಸಿಂಗಲ್ ಕಾಫಿ ಹಾಕಿಕೊಂಡು ಬರುವ. ಮೈಂಡ್ ಸ್ವಲ್ಪ ಫ್ರೆಶ್ ಆಗುತ್ತೆ' ಎಂದ ನಮ್ಮ ಚಂದ್ರು, ನನ್ನ ಟೇಬಲ್ಲಿನ ಬಳಿಯೇ ಬಂದು. ಮಾತಿನಲ್ಲಿ ಗಡಸುತನವಿದ್ದರೂ ಹೃದಯದಲ್ಲಿ ಅನುಕಂಪವಿತ್ತು. ನನ್ನ ಅವನ ದೃಷ್ಟಿಗಳು ಒಂದಾದೊಡನೆಯೇ ಅವನ ಮುಖದ ಭಾವವೂ ಬದಲಾವಣೆಯಾಯಿತು, ಗೆಲುವಿನ ಕಳೆ ಆತನ ಮುಖವನ್ನಲಂಕರಿಸಿತು. ಎವೆಯಿಕ್ಕದೆ ನೋಡಿದೆ ಆತನ ಸುಂದರವದನವನ್ನು ಸ್ವಲ್ಪ ಹೊತ್ತು. 'ಸಾಕು ಸಾಕು, ಹೆಚ್ಚು ನೋಡ ಬೇಡ ದೃಷ್ಟಿಯಾದೀತು, ಬಾ ಹೋಗುವ' ಎಂದ. ಫೈಲುಗಳನ್ನು ಬದಿಗಿರಿಸಿ ಸ್ವಲ್ಪ ಕೋಪವನ್ನು ನಟಿಸಿ ಪೆನ್ನನ್ನು ಕಿಸೆಗೇರಿಸಿ ಆಚೀಚೆ ನೋಡಿ ಎದ್ದೆ. 'ನೋಡು, ನನ್ನ ಜೊತೆಯಲ್ಲಿ ಯಾವಾಗ ನೀನು ನಗುತ್ತಾ ಇರಬೇಕು. ಇಂಥ ಗಂಟು ಮೋರೆಯನ್ನು ನೋಡಲು ನನ್ನಿಂದ ಆಗದು. ಎಲ್ಲಿ, ಸ್ವಲ್ಪ ನಗು ನೋಡುವ' ಎಂದ ಚಂದ್ರು. ನನಗೆ ಬೇಡ ಬೇಡವೆಂದರೂ ನಗು ಬಂತು. ಗೋಡೆ ಗಡಿಯಾರ ನೋಡಿದೆ. ಮೂರೂವರೆ ಘಂಟೆ ಮಾತ್ರ ಆಯ್ತು ಎಂದು ಹೇಳುತಿತ್ತು. ಇದು ನಾವಿಬ್ಬರೂ ಕೈಗೆ ಕೈ ಸೇರಿಸಿ, ಭುಜಕ್ಕೆ ಭುಜ ತಗುಲಿಸಿ ಗಂಡಭೇರುಂಡ ಪಕ್ಷಿಯಂತಾಗಿ ಹೊರಟೆವು, ಸನಿಹದಲ್ಲೇ ಇದ್ದ ಕ್ಯಾಂಟೀನಿಗೆ.

ಚಂದ್ರುವಿನ ಗೆಳೆತನ ನನಗಾದದ್ದು ನಾನು ಕೆಲಸಕ್ಕೆ ಸೇರಿದ ಮೇಲೆಯೇ. ನನಗಿಂತಲೂ ವಯಸ್ಸಿನಲ್ಲಿ ಚಿಕ್ಕವನಾಗಿದ್ದರೂ ನನಗಿಂತ ಮೊದಲೇ ಕೆಲಸ ದೊರಕಿಸಿಕೊಂಡಿದ್ದ ಆತ. ನಾನು ಹೊಸದಾಗಿ ಆಫೀಸಿಗೆ ಬಂದ ಸಮಯದಲ್ಲಿ ನನ್ನನ್ನು ಒಂದು ವಿಚಿತ್ರ ದೃಷ್ಟಿಯಿಂದ ನೋಡುತ್ತಿದ್ದ. ನನಗೂ ಏಕೋ ಯಾವಾಗಲೂ ಆತನನ್ನೇ ನೋಡುವ ಚಪಲ. ನನ್ನ ಟೇಬಲ್ಲಿಗೆ ಸುಮಾರು ಹತ್ತು ಗಜ ದೂರದಲ್ಲಿದ್ದ ಟೇಬಲ್ಲಿನ ಮುಂದೆ ಕುಳಿತು ಯಾವಾಗಲೂ ವಟಗುಟ್ಟುತ್ತಲೇ ಇರುವ ಜಾಯಮಾನ ಆತನದು. ಅಂತೂ ಅವನಿಗೆ ಏನನ್ನಾದರೂ ಮಾತನಾಡಬೇಕು. ಆ ಮಾತಿನಲ್ಲಿ ರಸಿಕತೆ ತುಂಬಿ ತುಳುಕಿರುತಿತ್ತು. ಕೇಳುವವರಿಗೆ ಅದು ಇಂಪಾಗಿರುತಿತ್ತು. ಆತನನ್ನು ನೋಡಿದೊಡನೆಯೇ ನಗಬೇಕೆಂದಾಗುತಿತ್ತು. ಅಂತೂ ನನ್ನ, ಆತನ ದೃಷ್ಟಿಗಳು ಆಗಾಗ್ಗೆ ಒಂದುಗೂಡಿ ಯಾವುದೋ ಒಂದು ಅವ್ಯಕ್ತ ಶಕ್ತಿ ನಮ್ಮನ್ನು ಒಂದುಗೂಡಿಸಿ ನಾವಿಬ್ಬರೂ ಸ್ನೇಹಿತರಾಗಿರುವಂತೆ ಮಾಡಿತ್ತು.

ಕ್ಯಾಂಟೀನಿನ ಒಳಗೆ ಹೋಗುವವರೆಗೂ ಇಬ್ಬರ ಬಾಯಿಗೂ ಬೀಗ ಬಿದ್ದಿತ್ತು. ಅಲ್ಲಿ ಕಾಫಿಯ ವಾಸನೆ ಬಿದ್ದೊಡನೆಯೇ ನಾನು ಹೇಳಿದೆ 'ಚಂದ್ರು, ಇವತ್ತು ಕಾಫಿಯ ದುಡ್ಡನ್ನು ನೀನೇ ಕೊಡಬೇಕಪ್ಪ, ನಾನು ದುಡ್ಡು ತಂದಿಲ್ಲ' ಎಂದು.

"ಆಗಲಿ, ನೀನೇ ಕೊಡು ನನ್ನದೇನೂ ಅಭ್ಯಂತರವಿಲ್ಲ, ನಿನಗೆ ಕೊಡಬೇಕೆಂದು ಅಪೇಕ್ಷೆ ಇದ್ದರೆ ಅದಕ್ಕೆ ನಾನೇಕೆ ಅಡ್ಡ ಬರಲಿ?"

"ನನ್ನ ಹತ್ತಿರ ದುಡ್ಡಿಲ್ಲಯ್ಯ. ನೀನೇ ಕೊಡಬೇಕೆಂದು ನಾನು ಹೇಳಿದ್ದು" ಎಂದೆ ಸ್ವಲ್ಪ ಗಡುಸಾಗಿ.

"ಓಹೋ, ಹಾಗೆ ಹೇಳಿದ್ದಾ? ಆಗಲಿ, ಬಾರಯ್ಯ, ಯಾರು ಕೊಟ್ಟರೆ ಏನಂತೆ? ನಮಗೇನು ಪಾಲು ಆಗಿದೆಯೇ? ಮುಖ್ಯವಾಗಿ ನೋಡು, ನಾವಿಬ್ಬರೂ ಸ್ನೇಹಿತರೆಂದ್ರೆ ಸ್ನೇಹಿತರಾಗಿಯೇ ಇರಬೇಕು. ನಾನು ಹೇಳಿದ್ದಕ್ಕೆ ನೀನು ತಲೆ ಅಲ್ಲಾಡಿಸಬೇಕ, ನೀನು ಹೇಳಿದ್ದಕ್ಕೆ ನಾನು ತಲೆ ಅಲ್ಲಾಡಿಸಬೇಕು.."

"ಏನು, ಹ್ಞಾಂ ಎಂದೇ ಅಥವಾ ಊಹ್ಞೂ ಎಂದೇ?"

"ಏನಾದರೂ ಒಂದು. ಒಟ್ಟಾರೆ ತಲೆ ಅಲ್ಲಾಡಿದರೆ ಸಾಕು. ಅದಿರಲಿ, ನಾನೀಗ ಏನು ಹೇಳಿದೆ? ಹೌದು, ಸ್ನೇಹಿತರಾಗಿರಬೇಕೆಂತ ಅಂದೆ. ನಮ್ಮ ಸ್ನೇಹ ಹೇಗಪ್ಪಾ ಇರಬೇಕು ..'?

"ಹಾಲಿವುಡ್ ತಾರೆಗಳಂತೆ."

"ಥೂ ಹಾಗಲ್ಲ. ಹಾಲಿವುಡ್ ತಾರೆಯರ ವಿಚಾರ ನಮಗೆ ಬೇಡ. ಅವರು ಬೆಳಿಗ್ಗೆ ಮದುವೆಯಾಗಿ, ಮಧ್ಯಾಹ್ನ ಜಗಳವಾಡಿ, ಸಾಯಂಕಾಲ ವಿಚ್ಛೇದನಕ್ಕೆ ಅರ್ಜಿ ಹಾಕುವ ಜಾತಿಯವರು. ನಮ್ಮದು ಹಾಗಾಗಬಾರದು. ಅಮರ ಪ್ರೇಮವೆಂದು ಏನನ್ನು ಹೇಳುತ್ತಾರೋ ಆ ಪ್ರೇಮ ನಮ್ಮದಾಗಿ ಬೇಕು."

"ಅದಕ್ಕೆ ಅಮರ ಕಲಿತಿರಬೇಕಲ್ಲ?"

'ಯಾವ ಅಮರ?"

"ಅದೇ ಸಂಸ್ಕೃತದಲ್ಲಿ ಅಮರ ಶಬ್ದಗಳನ್ನು ಉರು ಹೊಡೆಸುತ್ತಾರಲ್ಲ ರಾಮಃ ರಾಮೌ ರಾಮಾಃ, ಹೇ ರಾಮಃ, ಹೇ ರಾಮೌ ಹೇ ರಾಮಾಃ ಅಂತ ಏನೇನೋ ಹೇಳುತ್ತಾರಲ್ಲ, ಅದು ತಾನೇ?"

"ನಿನ್ನ ತಲೆ. ಅಮರವೆಂದರೆ ಆ ಅಮರವಲ್ಲ. ಅಮರ ಪ್ರೇಮವೆಂದರೆ ನಮ್ಮ ಪ್ರೇಮ ಪ್ರೀತಿ, ವಿಶ್ವಾಸ ಶಾಶ್ವತವಾಗಿರಬೇಕೆಂತ ಅರ್ಥ."

"ಅದು ಶ್ವಾಸ ಇರುವವರೆಗೆ ಮಾತ್ರ ಇದ್ದೀತು. ಅನಂತರ ಅದರ ಗತಿ ಏನು?"

"ಅನಂತರವೂ ಅದು ಶಾಶ್ವತವಾಗಿಯೇ ಇರುತ್ತದೆ, ನಾವು ಸತ್ತು ಹೋದರೂ ಕೂಡ ಅದನ್ನು ಹಾಗೆ ಇಟ್ಟುಕೊಳ್ಳಬೇಕು. ನಮ್ಮ ಸ್ನೇಹ ನಮ್ಮ ಆಫೀಸಿಗೆ ಮಾತ್ರವಲ್ಲ ಇಡೀ ವಿಶ್ವಕ್ಕೇ ಒಂದು ಮಾದರಿಯಾಗಬೇಕು, ಏನನ್ನುತ್ತೀ ನೀನು?"

"ನಾನು ಏನೂ ಅನ್ನೋಲ್ಲ. ಎರಡು ಕಾಫಿ ತರಲು ಹೇಳುತ್ತೇನೆ ಮಾಣಿಗೆ ಅಷ್ಟೆ" ಎಂದೆ ನಾನು.

ಅಷ್ಟರಲ್ಲಿ ಮಾಣಿ ಬಂದ. ಏನು ಅಪ್ಪಣೆ ಎಂದು ಶಿರಬಾಗಿಸಿ ನಿಂದ.

"ನೋಡಪ್ಪ, ಎರಡು ಫಸ್ಟ್ ಕ್ಲಾಸ್ ಕಾಫಿ ತಗೊಂಡು ಬಾ. ಆ ಮೇಲೆ ತಿನ್ನಲಿಕ್ಕೆ ಬಿಸಿ ಬಿಸಿ ಏನಾದರೂ ಇದ್ದರೆ ಕೊಡು. ಅಂದ್ರೆ ಕೆಂಡ ತರಬೇಡ, ನೋಡು, ಥಟ್ಟ ಬಿಸೀ ಉದ್ದಿನೊಡೆ ತಂದಿದ್ದಾರೆ. ಒಂದೊಂದು ಉದ್ದಿನೊಡೆ ತಾ" ಎಂದ ಚಂದ್ರು.

"ಬರೀ ಉದ್ದಿನೊಡೆ ನನಗೆ ಬೇಡ" ಎಂದೆ.

"ಇನ್ನೇನು ಬೇಕು?"

"ಅದರೊಂದಿಗೆ ಚಟ್ನಿ ಕೂಡಾ ಬೇಕು."

"ಆಗಲಿ, ನೋಡಪ್ಪಾ ಮಾಣಿ, ಎರಡೆರಡು ಉದ್ದಿನೊಡೆಗಳನ್ನು ಪ್ಲೇಟಿನಲ್ಲಿಟ್ಟು ಗಟ್ಟಿ ಚಟ್ನಿ ಹಾಕಿ ತಂದಿಡು. ಎರಡು ಲೋಟ ಒಳ್ಳೆಯ ನೀರೂ ತಂದಿಡು. ಆ ನಂತರ ಎರಡು ಒಳ್ಳೆಯ ಕಾಫಿ ತಂದಿಡು ...ಈಗ ಸರಿಯಾಯ್ತೇನಪ್ಪ"

"ಹ್ಞಾಂ."

"ಸರಿ ಆ ಮಾತು ಅಲ್ಲಿರಲಿ. ನೋಡು ರಾಜ ಈ ಸರ್ತಿ ಒಂದು ಪಿಕ್‌ನಿಕ್ ಏರ್ಪಾಡು ಮಾಡಬೇಕೆಂದಿದ್ದೇನೆ. ಅದಕ್ಕೆ ನಿನ್ನ ಅಭಿಪ್ರಾಯವೇನು?"

"ನನ್ನ ಅಭಿಪ್ರಾಯ ಕಟ್ಟಿಕೊಂಡು ಏನಾಗ ಬೇಕಾಗಿದೆ? ನೀನು ಮನಸ್ಸು ಮಾಡಿದರೆ ಎಲ್ಲವೂ ಆದ ಹಾಗೆಯೇ" ಎಂದೆ ಸ್ವಲ್ಪ ಉದಾಸೀನನಾಗಿ.

(ಹದಿನಾರನೇ ಪುಟ ನೋಡಿರಿ)

6¼%

ಫಿಕ್ಸೆಡ್ ಡಿಪಾಜಿಟುಗಳ ಮೇಲೆ ತಾರೀಕು 1—9—64ರಿಂದ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು:—

	1ರಿಂದ 3 (ತಿಂಗಳು) %pa	4ರಿಂದ 12 (ತಿಂಗಳು) %pa	2 ವರ್ಷ %pa	3 ವರ್ಷ %pa	4 ವರ್ಷ %pa	5 ವರ್ಷ %pa	6 ವರ್ಷ %pa	7—10 (ವರ್ಷ. %pa
ರೂ. 4999ರ ವರೆಗಿನ ಡಿಪಾಜಿಟುಗಳ ಮೇಲೆ:-	4½	5	5¼	5½	5¾	6	6⅛	6¼
ರೂ. 5000 ಮತ್ತು ಮೇಲ್ಪಟ್ಟ ಡಿಪಾಜಿಟುಗಳ ಮೇಲೆ:-	5	5¼	5½	5¾	6	6	6¼	6¼

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

ರಿಜಿಸ್ಟರ್ಡ್ ಆಫೀಸ್: ಕೋರ್ಟ್ ರಸ್ತೆ, (ಶೆಡ್ಯೂಲ್ಡ್ ಬ್ಯಾಂಕ್) ಸ್ಥಾಪನೆ.
ಉಡುಪಿ, ದ. ಕ. (ಮೈಸೂರು ರಾಜ್ಯ) 1920

ಮಣ್ಣಿನ ಮೂರ್ತಿಗಳಲ್ಲಿ ಚೇತನವನ್ನು ತುಂಬಿದ

“ಯುಗಪುರುಷ ಮಹಾತ್ಮಾ ಗಾಂಧೀಜಿ”

ಬರೆದವರು: ಶ್ರೀ ಭಾಸ್ಕರ ಭಂಡಾರಿ, ಮುಜಿಬೈಲು.

ಇಂದೇನೋ ನಾವು ಸ್ವತಂತ್ರ ಭಾರತದ ಸುಪ್ರಜೆಗಳಾಗಿ ಜನರಿಂದಲೇ ಜನರಿಗಾಗಿ ರಚಿಸಲ್ಪಟ್ಟ ಜನರ ಸರಕಾರದ ಆಡಳಿತಕ್ಕೊಳಪಟ್ಟು, ಪ್ರಜಾಪ್ರಭುತ್ವದ ಆನಂದವನ್ನು ಸವಿಯುತ್ತಿದ್ದೇವೆ. ಆದರೆ ಈ ಸವಿಯ ಹಿಂದೆ ಅದೆಷ್ಟು ಕಹಿಯಿತ್ತು? ಎಂಬುದನ್ನೂ ನಾವಿಲ್ಲಿ ಮರೆಯಬಾರದು. ಪರಕೀಯರ ಬಂಧನದಲ್ಲಿ ಬಿದ್ದು ಒದ್ದಾಡುತ್ತಿದ್ದ ಮಣ್ಣಿನ ಮೂರ್ತಿಗಳಂತಿದ್ದ ನಮ್ಮಲ್ಲಿ ಚೇತನವನ್ನು ತುಂಬಿದರು ಮಹಾತ್ಮಾ ಗಾಂಧೀಜಿ! ದೀಪ ತಾನಾಗಿ ಉರಿದು ಅನ್ಯರಿಗೆ ಬೆಳಕೀಯುವಂತೆ, ಅವರು ಪಟ್ಟ ಶ್ರಮ, ಉಪವಾಸ ಸತ್ಯಾಗ್ರಹ— ಈ ದುಡಿಮೆಗಳ ಸಂಕಷ್ಟವನ್ನು ನಾವೆಂದೂ ಮರೆಯುವಂತಿಲ್ಲ. ಅವರ ಸಂಸ್ಮರಣೆ—ಅದರಿಂದ ಉಂಟಾದ ಆ ದಿವ್ಯ ವ್ಯಕ್ತಿತ್ವದ ಕಲ್ಪನೆ—ಇವು ನಮ್ಮನ್ನು ದೇಶದ ಅಭಿವೃದ್ಧಿ ಮಾರ್ಗದಲ್ಲಿ ಯೋಗ್ಯ ಪಾಂಥರನ್ನಾಗಿಸಬಲ್ಲುದು.

ಗಾಂಧೀಜಿಯವರ ಜೀವನವನ್ನು ನಾವೊಂದು ಕಠಿಣ ತಪಸ್ಸೆನ್ನಬಹುದು. ಪೂರ್ವ ಕಾಲದಲ್ಲಿ ಅನೇಕ ಋಷಿವರ್ಯರು ಕಾಡಿಗೋ ಬೆಟ್ಟಕ್ಕೋ ಹೋಗಿ ತಮ್ಮ ದೇಹಗಳನ್ನು ವಿವಿಧ ರೀತಿಗಳಲ್ಲಿ ದಂಡಿಸಿ, ಭಗವದ್ಧ್ಯಾನದಿಂದ ಪುನೀತರಾಗಿದ್ದರೆ, ಮಹಾತ್ಮಾಜಿಯವರು ಶಾಂತಿಯೆಂಬ ಯಜ್ಞಕುಂಡದಲ್ಲಿ, ಅಹಿಂಸೆಯೆಂಬ ಸಮಿತ್ತುಗಳನ್ನು ಉರಿಸಿ. ಸತ್ಯದ ಹವಿಸ್ಸಿನಿಂದ ಸರ್ವಧರ್ಮ ಸಮನ್ವಯದ ಮಂತ್ರೋಚ್ಚಾರಣೆಯನ್ನು ಗೈದು ತಮ್ಮ “ಸತ್ಯಾಗ್ರಹ” ಎಂಬ ನವೀನ ಯಾಗವೊಂದನ್ನು ಈ ಕಲಿಯುಗದಲ್ಲೂ ಕೈಗೊಂಡು ವಿಜಯಿಗಳಾಗಿರುವಾಗ — ಅವರೊಬ್ಬ ಶ್ರೇಷ್ಠ ಮುನಿವರ್ಯರಲ್ಲದೆ ಮತ್ತೇನು?

ಮಹಾತ್ಮಾ ಗಾಂಧೀಜಿಯವರು ಮಾನವನಾಗಿ ಹುಟ್ಟಿ ಮಾನವ ಮಾತ್ರರ ಕಣ್ಣೋಟಕ್ಕೆ ಸಿಲುಕಲಾರದಂತಹ ಕಾರ್ಯಗಳನ್ನೆಸಗಿದ್ದಾರೆ. ಅವರ ಯಶೋಮಂದಿರವು ಖಡ್ಗದ ಧಾರೆಯಿಂದ ನೆತ್ತರಿನ ಕಾಲುವೆಯನ್ನೂ ಹರಿಸಿ ಕಟ್ಟಿದುದಾಗಿಲ್ಲ! ಶಾಂತಿ,ಸತ್ಯ ಅಹಿಂಸೆಗಳೆಂಬ ಹೆಗ್ಗಂಬಗಳು ಕೈದ್ವಾಗಿದೆ, ಅವರು ಮಹಾತ್ಮಾ ಬುದ್ಧ, ಭಗವಾನ್ ಯೇಸು ಇವರ ಸರಳ ಆದರೆ ಪವಿತ್ರ ಜೀವನವನ್ನು ಪ್ರತಿಬಿಂಬಿಸುವಂತೆಸಗುತ್ತಾರೆ, ಅವರ ಜ್ಞಾನ ಪರಿಪಕ್ವತೆಯು, ಗೀತೆ, ರಾಮಾಯಣ, ಮಹಾಭಾರತ, ಬೈಬಲ್, ಖುರಾನ್ ಮೊದಲಾದ ಧರ್ಮಗ್ರಂಥಗಳ ಸಾರಗಳ ಹೀರುವಿಕೆ ಮಾತ್ರವೇ ಅಲ್ಲದೆ ವಿಶ್ವದ ಮಾನವೀಯತೆಯನ್ನೂ ಹೊಂದಿಕೊಂಡಿದೆ. ಅವರ ಸರ್ವಧರ್ಮ ಸಮನ್ವಯತೆಯು ಜಗತ್ತಿಗೇ ಆದರ್ಶಪ್ರಾಯವಾಗಿದೆ. ಆಧುನಿಕ ರಾಷ್ಟ್ರಗಳು ಹುಲಿ, ಕರಡಿ, ಸಿಂಹಗಳಂತೆ ಪರಸ್ಪರ ದ್ವೇಷದಿಂದ ಹಲ್ಲು ಮಸೆಯುತ್ತಿದ್ದು ವಿಶ್ವ ನಾಶಕ್ಕೆ ಸೇತುವಾದ ವಿವಿಧ ಅಣುಬಾಂಬುಗಳನ್ನೋ ಆಟಂಬಾಂಬುಗಳನ್ನೋ ಮೆರೆಯುತ್ತಿರಬಹುದು. ಆದರೆ ಗಾಂಧೀಜಿಯವರು ಇವೆಲ್ಲವುಗಳಿಗೆ ಮಿಗಿಲಾದ ಆಟಂಬಾಂಬೊಂದನ್ನು ತಯಾರಿಸಿದರು! ಆಧುನಿಕ ವಿಜ್ಞಾನಗಳ ಬಾಂಬುಗಳು ಭೌತಿಕ ದೇಹವನ್ನು ಸುಟ್ಟು ನಾಶಮಾಡಬಲ್ಲವೇ ಹೊರತು ಆತ್ಮವನ್ನು ಸೋಂಕಲಾರವು. ಆದರೆ ಗಾಂಧೀಜಿಯವರ “ಸತ್ಯ ಶಾಂತಿ ಅಹಿಂಸೆ”ಗಳ ಸಮ್ಮಿಶ್ರ ದ್ರವ್ಯದಿಂದ ತಯಾರಿಸಿದ ಬಾಂಬುಗಳು ಆತ್ಮವನ್ನೂ ಸುಡುವಷ್ಟು ಶಕ್ತಿಶಾಲಿಗಳಾಗಿವೆ. ತನ್ನ ಜೀವಮಾನವನ್ನೇ ಸರಳತೆಗೆಂದೇ ಮೀಸಲಾಗಿಟ್ಟು, ಬಡಬಗ್ಗರ ಉಸಿರಾಗಿ, ಸಂರಕ್ಷಕನಾಗಿ, ದರಿದ್ರನಾರಾಯಣನಾಗಿ ಅವರು ಬಾಳಿದರು. ನಾವೇನೋ ಎಂದೂ ಕಂಡು ಕಾಣದ ಅಸಂಚಿತ ಋಷಿಗಳ ನುಡಿಗಳಿಗೆ ಮರುಳಾಗಿ ನಮ್ಮವರೇ ಆದ ಹರಿಜನ ಬಂಧುಗಳನ್ನು ಕಡೆಗಣಿಸುವುದನ್ನು ಅವರು ಪ್ರಬಲವಾಗಿ ವಿರೋಧಿಸಿದರು! ಖಾದಿಯ ದಿವ್ಯ ಹಾದಿಯನ್ನು ಬೇಗಿದರು! ಇದರಿಂದಾಗಿ ಜನರಿಗೆ ಸ್ವಲ್ಪ ಮಟ್ಟಿನ ಸ್ವಯಂ ಪೂರ್ಣತೆಯನ್ನು ಸಾಧಿಸುವಂತಾಯಿತು!

ಮಹಾತ್ಮಾಜಿಯವರು ಒಬ್ಬ ಪ್ರೇಮಮಯ ಮೂರ್ತಿಯಾಗಿದ್ದರು! ರಾಜನೀತಿಜ್ಞರೂ, ಸಮಾಜೋದ್ಧಾರಕರೂ, ಮಹಾಭಕ್ತರೂ ಆಗಿದ್ದರು! ಜನರೆಲ್ಲರ ಪ್ರೇಮ ಐಕ್ಯಗಳಿಗಾಗಿ ಒಂದೇ ಭಾಷೆ ಭೂಷಣ ಆಚಾರ ವಿಚಾರಗಳು ಅತ್ಯಾವಶ್ಯವೆಂದವರು ಮನಗಂಡರು, ಅದಕ್ಕಾಗಿ ಅವಿರತ ಶ್ರಮಿಸಿದರು! ತಾನು ತನ್ನ ನವೀನ ಶರಗಳಿಂದ ಜಗತ್ತನ್ನೇ ಗೆದ್ದಿದ್ದರೂ ಗರ್ವಿತರಾಗದೆ, ಶಾಂತಿಗಾಗಿಯೇ ತನ್ನ ದೇಹವನ್ನು ಸವೆಸಿದರ! ಪರೋಪಕಾರ ಪರಮಾತ್ಮನ ಧ್ಯಾನ ಇವು ಅವರ ಜೀವಾಳ ಆದುದರಿಂದಲೇ ಪ್ರಾರ್ಥನಾ ಮಂದಿರದಲ್ಲೇ ಅಪಾರ ಮಹಿಮನ ದಿವ್ಯ ನಾಮೋಚ್ಚರಣೆ ಗೈಯುತ್ತ ಸಾವನ್ನಪ್ಪಿದರು! ಇದು ಎಲ್ಲರಿಗೂ ಒದಗುವ ಭಾಗ್ಯವಲ್ಲ. ಆದರೆ ಮರಣಕ್ಕಾಗಿ ಎಂದೆಂದೂ ಗಾಂಧೀಜಿಯವರು ಭಯಪಡಲಿಲ್ಲ! ವಿಚಿತ್ರ ರೀತಿಯ ಜೀವನವನ್ನು ನಡೆಸಿ ವಿಚಿತ್ರ ರೀತಿಯಲ್ಲೇ ಸ್ವರ್ಗವನ್ನಡರಿದರು! ಅವರ ಅಗಲುವಿಕೆಯಿಂದ ವಿಶ್ವವೇ ಕಣ್ಣೀರಿಳಿಸಿತು. ಆದರೆ ಅವರ ನಶ್ವರ ದೇಹ ಕಣ್ಮರೆಯಾದರೂ ಅವರು ತೋರಿಸಿದ ಸತ್ಯ ಪ್ರೇಮ ಅಹಿಂಸಾ ಶಾಂತಿಗಳ ಮಾರ್ಗವು ಜನರ ಮುನ್ನಡೆಗಾಗಿ ಸದಾ ಕಾದಿರುವುದು! ಅದರಲ್ಲೇ ಭಾರತೀಯರಾದ ನಾವು, ಹಾಗೂ ವಿಶ್ವದ ಜನತೆ ಮುನ್ನಡೆದರೆ ಈ ಧರಿತ್ರಿಯೊಂದು ಆದರ್ಶ ಸ್ವರ್ಗವಾಗುವುದರಲ್ಲಿ ಸಂಶಯವಿಲ್ಲ.

— ಜೈಹಿಂದ್ —

‘ಬ್ಯಾಂಕ್’ ಅಷ್ಟೇ ಅಲ್ಲ ವಿಶೇಷ ವೈಶಿಷ್ಟ್ಯತೆಯ ಬ್ಯಾಂಕಿಂಗ್ ಸಂಸ್ಥೆಯೂ ಹೌದು

ಡಾ. ರಾಜೇಂದ್ರಪ್ರಸಾದರು ನಮ್ಮ ಬ್ಯಾಂಕಿನ ಆಡಳಿತ ಕಚೇರಿಯ ಕಟ್ಟಡದ ಆಸ್ತಿಭಾರ ಶಿಲಾನ್ಯಾಸದ ನಡೆದ ಸಂದರ್ಭದಲ್ಲಿ, ಜನಹಿತಕ್ಕಾಗಿ ಕೆನರಾ ಬ್ಯಾಂಕ್ ಕೈಗೊಂಡಿರುವ ವಿವಿಧ ಕಾರ್ಯಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು

“ನಿಮ್ಮ ಬುಕ್ ಬ್ಯಾಂಕ್ ಯೋಜನೆ, ಜ್ಯುಬಿಲೀ ಎಜುಕೇಶನ್ ಫಂಡ್, ಹೌಸಿಂಗ್ ಸಾಲದ ಯೋಜನೆ, ಜ್ಯುಬಿಲೀ ಸ್ಟಾಫ್ ವೆಲ್‌ಫೇರ್ ಫಂಡ್ ಇವೇ ಮೊದಲಾದ ಯೋಜನೆಗಳು ಸಾಮಾಜಿಕ ಸ್ಥಿತಿಗತಿಗಳ ಅಭಿವೃದ್ಧಿಗಾಗಿ ಪ್ರಯತ್ನಿಸುವ [illegible] ಪ್ರತಿಬಿಂಬವಾಗಿವೆ. ನಿಮ್ಮ ಯೋಜನೆಗಳು ನನ್ನ ಮನಸ್ಸನ್ನು ಬಹಳವಾಗಿ ಆಕರ್ಷಿಸಿವೆ” ಎಂಬುದಾಗಿ ತಿಳಿಯಪಡಿಸಿದರು

[illegible] ಡಾ. ರಾಜೇಂದ್ರಪ್ರಸಾದರ ಈ ಶ್ಲಾಘನೆಯ ಮಾತುಗಳು ಸಾಮಾಜಿಕ ಪ್ರಗತಿಯ ಬಗ್ಗೆ ಬ್ಯಾಂಕಿನ ಉತ್ಸುಕತೆ ಹಾಗೂ ಕರ್ತವ್ಯಪರತೆಯನ್ನು ಸೂಚಿಸುತ್ತವೆ

ಸಮಾಜ ಸೇವೆಯ ಬಗ್ಗೆ ಈ ಬ್ಯಾಂಕ್ ಹೊಂದಿರುವ ಈ ಧೋರಣೆಯ ಪರಿಣಾಮವಾಗಿ ಅನೇಕ ಜನಹಿತ ಸಂಸ್ಥೆಗಳು ಕಾರ್ಯತತ್ಪರವಾಗಿವೆ. ಈ ಕಾರ್ಯಗಳ ಪ್ರಗತಿ ಸಾಧನೆಗೆ ಬ್ಯಾಂಕ್ ಸತತವಾಗಿ ಪ್ರಯತ್ನಿಸುತ್ತಿದೆ

ಈ ಕಾರಣಕ್ಕಾಗಿಯೇ ಇಂದು ಕೆನರಾ ಬ್ಯಾಂಕು “ಬ್ಯಾಂಕ್ ಅಷ್ಟೇ ಅಲ್ಲ ವಿಶೇಷ ವೈಶಿಷ್ಟ್ಯತೆಯುಳ್ಳ ಬ್ಯಾಂಕಿಂಗ್ ಸಂಸ್ಥೆಯೂ ಹೌದು”



ಬ್ಯಾಂಕಿನ ಆಡಳಿತ ಕಛೇರಿ ಕಟ್ಟಡ

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪಿತ 1906)

ರಿಜಿಸ್ಟರ್ಡ್ ಆಫೀಸು: ಮಂಗಳೂರು

ಆಡಳಿತ ಕಛೇರಿ: ಬೆಂಗಳೂರು

ವಿಶ್ವಾದ್ಯಂತ ಪ್ರತಿನಿಧಿಗಳು

ಭಾರತದಲ್ಲಿ 235ಕ್ಕೂ ಹೆಚ್ಚಿನ ಶಾಖೆಗಳು

ಜ್ಯುಬಿಲೀ ಎಜುಕೇಶನ್ ಫಂಡ್

ಬುಕ್ ಬ್ಯಾಂಕುಗಳು

ರಿಲೀಫ್ ಅಂಡ್ ವೆಲ್‌ಫೇರ್ ಸೊಸೈಟಿ

ಬ್ಯಾಂಕ್ ಸಿಬ್ಬಂದಿಗಳಿಗೆ ಶಿಕ್ಷಣ ಸೌಲಭ್ಯ

ಪ್ರದರ್ಶನಗಳ ಮೂಲಕ ಬ್ಯಾಂಕಿಂಗ್ ತಿಳುವಳಿಕೆ

ಗೋಲ್ಡನ್ ಜ್ಯುಬಿಲೀ ಸ್ಟಾಫ್ ವೆಲ್‌ಫೇರ್ ಫಂಡ್

ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ

CB-108/61

ಆರೋಗ್ಯ ವಿಧಾನ

ತಲೆನೋವು ಒಂದು ಮಾನಸಿಕ ರೋಗ

ಬರೆದವರು

ಶ್ರೀ ರೋಹಿದಾಸ ನಾಯಕ್, ಹೊನ್ನಾವರ.

ತಲೆ ನೋವು ಉದ್ಭವಿಸಲು ಅನೇಕ ತರದ ಶಾರೀರಿಕ ದೌರ್ಬಲ್ಯ, ಅನಿಯಮಿತ ಆಹಾರ ಸೇವನೆ ಹಾಗೂ ಅಪಚನಗಳು ಕಾರಣೀಭೂತವೆಂದು ಜನಸಾಮಾನ್ಯರು ತಿಳಿದಿರಬಹುದಾದ ಸಂಗತಿ. ಆದರೆ ಇನ್ನು ಕೆಲವು ಕಾರಣಗಳನ್ನು ಇತ್ತೀಚಿನ ಶಾರೀರ ಶಾಸ್ತ್ರಜ್ಞರು ತಮ್ಮ ಸಂಶೋಧನೆಗಳ ಸಾಫಲ್ಯದಿಂದ ವಿವರಣೆ ಕೊಡುತ್ತಿದ್ದಾರೆ.

ಮಾನವ ದಿನೇ ದಿನೇ ಸುಧಾರಿಸುತ್ತಿದ್ದರೂ ಸಂಸ್ಕಾರ ಶೀಲನೆಯಲ್ಲಿ ಆತ ನಿಷ್ಣಾತನಾಗಿಲ್ಲ, ಪರಿಸರದ ಯುಕ್ತಾಯುಕ್ತತೆಯ ಕುರಿತು ಆತ ಯೋಚನೆ ಮಾಡುವ ಗೋಜಿಗೆ ಹೋಗುವದಿಲ್ಲ. ಒಳ್ಳೆಯದರ ಜತೆಗೆ ಕೆಟ್ಟದನ್ನು ಕಲಿಯುವ ಆತನ ಪರಂಪರೆ ಅವನತಿಯ ದಾರಿಯನ್ನು ತೋರಿಸುತ್ತಿದೆ. ಮುಖ್ಯವಾಗಿ ಇಂದು ಅನಾವಶ್ಯಕವಾದ ಎಷ್ಟೋ ಚಟಗಳು ಮಾನವನನ್ನು ಒಂದುಗೂಡುತ್ತಿವೆ. ಆ ಚಟಗಳ ನಿರ್ಮೂಲನಕ್ಕಾಗಿ ಆತ ಪರಿತಪಿಸಿದರೂ ಅದು ಆತನನ್ನು ಇನ್ನಿಷ್ಟು ಬಿಗಿ ಹಿಡಿಯುವಂತಾಗಿದೆ. ಆದ್ದರಿಂದ ಈ ಚಟಗಳ ನಿರ್ಮೂಲನೆಯ ವಿಳಂಬವೂ ತಲೆನೋವಿಗೆ ಕಾರಣ.

ಈ ಚಟಗಳು ಒಂದು ತೆರನಾಗಿ ತಲೆನೋವಿಗೆ ಕಾರಣವಾದರೆ ಮಾನಸಿಕ ದೌರ್ಬಲ್ಯವು ಅದಕ್ಕೂ ಮಿಗಿಲಾದ ಕಾರಣವಾಗಿ ಪರಿಣಮಿಸಿದೆ. ಬಡವನಿರಲಿ ರಾಜನೇ ಇರಲಿ ಮನೋದೌರ್ಬಲ್ಯವೇನೂ ಬಡತನ ಹೊಂದಿಲ್ಲ. ಜನಸಾಮಾನ್ಯರಲ್ಲಿಯೋ ನರೋತ್ತಮರಿಗೂ ಚಿಂತೆಗಳು ಒಂದರಿಂದೊಂದು ಸದಾ ಕಾಡುತ್ತಲೇ ಇರುತ್ತವೆ. ಈ ಚಿಂತೆ ಮಾನಸಿಕ ದೌರ್ಬಲ್ಯವಿದ್ದವರಿಗೆ ಇನ್ನಿಷ್ಟು ಬಲವಾಗಿ ಹಚ್ಚಿಕೊಂಡರೆ ಕೆಲವರಿಗೆ ಕ್ಷುಲ್ಲಕವೂ ಆಗಬಹುದು. ಆದುದರಿಂದ ಈ ಮಾನಸಿಕ ಆಂದೋಲನಗಳು ಕ್ರಮವಾಗಿ ತಲೆನೋವಿಗೆ ಕಾರಣವಾಗುತ್ತವೆ.

ಆದರೆ ಪ್ರತಿಸಾರೆಯೂ ತಲೆ ನೋವು ಒಂದಲ್ಲದಿದ್ದರೆ ಇನ್ನೊಂದು ಕಾರಣದಿಂದಾದರೂ ಮಾನಸಿಕ ರೋಗವಾಗಿಯೇ ಇರುತ್ತದೆ.

ಇಂದು ತಲೆ ನೋವು ಒಂದು ತರದ ವ್ಯಾಪಕ ರೋಗವಾಗಿ ಹೋಗಿದೆ. ದೊಡ್ಡ ನಗರವಿರಲಿ, ಚಿಕ್ಕ ಹಳ್ಳಿಯೇ ಇರಲಿ ಸಾಧಾರಣ ಎಲ್ಲೇ ಇದ್ದರೂ ಸುಮಾರು ನೂರಕ್ಕೆ ಹತ್ತರಷ್ಟಾದರೂ ಜನರು ಈ ರೋಗಕ್ಕೆ ಬಲಿಯಾಗುತ್ತಲೇ ಇರುತ್ತಾರೆ. ಇನ್ನು ಕೆಲವು ದೇಶಗಳಲ್ಲಿ ಈ ಪ್ರಮಾಣವು ಇನ್ನೂ ಹೆಚ್ಚಿದೆ. ಸ್ವಭಾವತಃ ಅಲ್ಲಿಯ ಸಮಾಜ ವ್ಯವಸ್ಥೆಯೇ ಈ ರೋಗ ವೃದ್ಧಿಯ ಕಾರಣವಾಗಿದೆ. ಯಾಕೆಂದರೆ ಈ ಸಮಾಜದ ಸ್ಥಿತಿಗತಿಗಳನ್ನು ಅವಲೋಕಿಸಿದ ಜಾಗರೂಕನಾದ ಮನುಷ್ಯ ತನ್ನ ಇರುವಿಕೆಯ ಬದಲಾವಣೆಗಾಗಿ ಪರಿತಪಿಸಿ ಅಸಮರ್ಥನಾದೊಡನೆಯೇ ಕೂಡಲೇ ಈ ರೋಗಕ್ಕೀಡಾಗುತ್ತಾನೆ.

ಶರೀರ ಶಾಸ್ತ್ರದ ಅನುಸಾರವಾಗಿ ಒಂದು ತರದ ವಿಷಕಾರಕ ರಸಾಯನವೇ ತಲೆ ನೋವಿಗೆ ಕಾರಣವಾಗುವದು! ಅದಕ್ಕೆ Pain Subsets ಎಂದೆನ್ನುತ್ತಾರೆ. ಮೆದುಳಿನ ಹತ್ತಿರ ಈ ವಿಷ ಉತ್ಪನ್ನವಾಗುವದೆಂದೂ ರಕ್ತನಾಳಗಳ ದುರ್ಬಲತೆಯಿಂದ ತಲೆ ನೋವು ಉಂಟಾಗುವದೆಂದೂ ಹೇಳುತ್ತಾರೆ. ಇಂತಹ ಕೇವಲ ವಿಷಕಾರಕ ರಸಾಯನ ಮತ್ತು ರಕ್ತನಾಳ ದೌರ್ಬಲ್ಯ ಮಾತ್ರದಿಂದಲೇ ತಲೆ ನೋವು ಉಂಟಾಗುವದಿಲ್ಲ. ಆದರೆ ಇವೆರಡು ಕ್ರಿಯೆಗಳ ಸಂಯೋಗ ಮಾತ್ರವೇ ತಲೆ ನೋವಿನ ಉತ್ಪತ್ತಿಗೆ ಕಾರಣ.

ನೋವಿಗೆ ಕಾರಣ ತಲೆಯ ಹೊರಾವರಣವೂ ವಿಶೇಷವಾಗಿದೆ. ಆದರೆ ನೂರಕ್ಕೆ ೯೦ರಷ್ಟು ಕಾರಣ ಇತರ ಸಂಗತಿಗಳಿಂದಾಗುತ್ತದೆ. ತಲೆಯ ಆಂತರಿಕ ಕ್ರಿಯೆಗಳೇ ತಲೆ ನೋವಿಗೆ ಕಾರಣವಾಗಿದೆ. ನಾವೆಲ್ಲ ತಿಳಿದಿರುವಂತೆ ಚಿಕ್ಕ ಕೋಣೆಯಲ್ಲಿ ಅದೂ ಹವೆಗೆ ಪ್ರತಿಬಂಧವಿದ್ದಲ್ಲಿ ಶ್ವಾಸೋಚ್ಛ್ವಾಸ ಮಾಡುವದರಿಂದ ಅಲ್ಲದೆ ಇತರ ಇದೇ ತೆರನಾದ ಕಾರಣಗಳಿಂದ ಮೆದುಳಿಗೆ ಸಂಬಂಧಿಸಿದ ನಾಳಗಳು ಉಬ್ಬಿಬಿಡುತ್ತವೆ. ಆದ್ದರಿಂದ ಈ ಶಾರೀರಿಕ ಅವಸ್ಥೆಯೂ ತಲೆ ನೋವಿಗೆ ಕಾರಣವಾಗಿದೆ.

ತೀರ ಅಶಕ್ತತೆ ಹಾಗೂ ನಿರಂತರ ಶ್ರಮ ಅನಿಯಮಿತ ಆಹಾರ ಸೇವನೆ ಸದಾ ಅನುಸರಿಸುತ್ತಿದ್ದರೆ ಕ್ರಮೇಣ ತಲೆ ನೋವು ಅಂಟುರೋಗದಂತೆ ಮತ್ತೆ ಮತ್ತೆ ಬರಲಾರಂಭಿಸುತ್ತದೆ. ಕುತ್ತಿಗೆಯ ಹಿಂಬದಿಯ ಸ್ನಾಯು ಮತ್ತೆ ಮತ್ತೆ ನೋಯತೊಡಗುತ್ತಿದೆ. ಒಂದೇ ಮಗ್ಗಲಿಗೆ ಮಲಗಿರುವದರಿಂದಲೂ ಹಾಗೂ ಒಂದೇ ರೀತಿ ಬಹಳ ವೇಳೆ ಕುಳಿತುಕೊಳ್ಳುವದರಿಂದಲೂ ತಲೆನೋವು ಉತ್ಪನ್ನವಾಗುತ್ತದೆ. ಕುಳಿತುಕೊಳ್ಳುವಿಕೆಯನ್ನು ಬದಲಿಸುತ್ತಿದ್ದರೆ ಸರಳ ರೀತಿಯಿಂದ ಅದು ದೂರವಾಗುತ್ತದೆ.

ಅರೆಗೆನ್ನೆ ಒಡೆತವು ಭಯಂಕರ ಹಾಗೂ ಅವಿಶ್ವಾಸಾರ್ಹನಾದದ್ದು. ಅದು ಸ್ನಾಯುಗಳ ಅತಿಪ್ರಸರಣತೆಯಿಂದ ಬರುವಂತಹದು Pain subsetsನ ಸ್ರವಿಸುವಿಕೆಯಿಂದ ಅದು ಇನ್ನು ಹೆಚ್ಚು ನೋವನ್ನುಂಟು ಮಾಡುತ್ತದೆ. ಇದರ ಜೊತೆಗೆ ಇನ್ನೂ ಕೆಲವು ಲಕ್ಷಣಗಳು ಕಂಡು ಬರುವವು. ಅವಾವೆಂದರೆ ಕಣ್ಣು ಕತ್ತಲೆ ಬಂದಂತಾಗುವದು, ಬವತಿಕೆ ಬರುವದು, ಮೂರ್ಛೆ ಹೋಗುವದು ಮುಂತಾದವು. ಅರೆಗೆನ್ನೆ ನೋವಿನಿಂದ ಇನ್ನೂ ಕೆಲವು ಪರಿಣಾಮಗಳು ದೇಹದ ಮೇಲುಂಟಾಗುವವು. ಆಹಾರ ರುಚಿಸುವದಿಲ್ಲ, ನಿದ್ದೆ ಬರಲಾರದು ಕೈಕಾಲುಗಳೆಲ್ಲ ಚೈತನ್ಯವಿಲ್ಲದಂತಾಗುವವು.

ಈ ಅರೆಗೆನ್ನೆ ನೋವಿಗೆ ಮನೋವೈಜ್ಞಾನಿಕ ಕೆಲವು ಕಾರಣಗಳೂ ಇವೆ. ವಿಶೇಷವಾಗಿ ಯಾರು ಅಶಕ್ತತೆಯುಳ್ಳವರಿರುತ್ತಾರೋ ಯಾರಿಗೆ ಚಿಕ್ಕ ಚಿಕ್ಕ ಮಾತುಗಳಿಂದ ಮನಸ್ಸಿನ ಮೇಲೆ ಭಾರಿ ಪರಿಣಾಮವು ಉಂಟಾಗುವದೋ ಅಂಥವರಿಗೆ ಕ್ರಮೇಣ ಮಾನಸಿಕ ದೌರ್ಬಲ್ಯದಿಂದಾಗಿ ಇದು ಅಂಟಿಕೊಳ್ಳುತ್ತದೆ. ಅವರ ಆ ದೌರ್ಬಲ್ಯ ದೂರವಾದರೆ ಈ ನೋವು ಅದರಿಂದ ದೂರವಾಗುತ್ತದೆ.

ಈ ರೋಗ ಪಾರಂಪರಿಕ ರೋಗವೂ ಆಗುವ ಸಂಭವ ಹೆಚ್ಚು. ತಂದೆ ತಾಯಿಗಳಿಗೆ ಈ ರೋಗವಿದ್ದರೆ ಅವರ ಮಕ್ಕಳಿಗೆ ಪ್ರತಿಶತ ೨೦ ರಿಂದ ೮೦ ರವರೆಗೆ ಹೆಚ್ಚಾಗಿ ಇದ್ದೇ ಇರುತ್ತದೆ. ತಂದೆ ತಾಯಿಗಳಿಬ್ಬರೂ ಈ ಅರೆಗೆನ್ನೆ ರೋಗದಿಂದ ಬಳಲುತ್ತಿದ್ದರೆ ೮೦ರ ವರೆಗೂ ಅದು ಹೆಚ್ಚುತ್ತದೆ. ಇದರ ಕಾರಣವೇನೆಂದರೆ ಹುಟ್ಟಿನಿಂದಲೇ ಮಕ್ಕಳು ತಂದೆ ತಾಯಿಂದಿರ ರಕ್ತ ಸಂಬಂಧ ಪಡೆದಿರುತ್ತಾರೆ. ಆದ್ದರಿಂದ ಆದು ಇರುವದು ಸಹಜವೇ.

ತಲೆನೋವಿನಲ್ಲಿ ಇನ್ನೊಂದು ಬಗೆಯಿದೆ. ಅದನ್ನು "ಸಾಯನೂ ಸಾಯಟೀಜ" ಎಂದು ಕರೆಯಲಾಗುತ್ತದೆ. ಈ ನೋವು ಮೂಗಿನ ಹೊಳ್ಳೆಗಳಲ್ಲಿಯ ಛಿದ್ರಗಳ ಪ್ರಸರಣದಿಂದ ಬರುತ್ತದೆ. ಅತಿ ಶೀತವಾದಾಗಲೂ ಇದು ಕಾಣಿಸಿಕೊಳ್ಳುತ್ತದೆ. ಕೊನೆ ಕೊನೆಗೆ ಅತಿ ನೋವಿನ ಜೊತೆಗೆ ಇದು ಕಾಣಿಸಿ ಜ್ವರವೂ ಬರಲಾರಂಭಿಸುತ್ತದೆ.

ಇಂತಹ ತಲೆನೋವಿಗೂ ಅನೇಕ ಮನೋವೈಜ್ಞಾನಿಕ ಕಾರಣಗಳಿವೆ. ಕೆಲವರು ಅನ್ಯಾಯ ಹಾಗೂ ಕಟು ಅನುಭವಗಳನ್ನು ಕಂಡಿರುತ್ತಾರೆ, ಹಾಗೂ ಸದಾ ಅಳುತ್ತಿದ್ದು ಜೋರಾಗಿ ಶ್ವಾಸೋಚ್ಛ್ವಾಸ ಮಾಡುತ್ತಿರುವದರಿಂದ ಮೂಗಿನ ಹೊಳ್ಳೆಗಳು ಶಿಥಿಲವಾಗಿ ನಿರಂತರ ಹಾಗೂ ದೊಡ್ಡದಾಗಿ ಶ್ವಾಸೋಚ್ಛ್ವಾಸ ಮಾಡುತ್ತಾರೆ. ಶೀತದಿಂದ ಮೂಗಿನ ರಂಧ್ರಗಳು ಉಸಿರಾಡಲು ತೊಂದರೆ ಕೊಡಬೇಕಾಗುತ್ತದೆ. ಈ ಆಕಸ್ಮಿಕ ಬದಲಾವಣೆಯೂ ಈ ತರದ ತಲೆನೋವಿಗೆ ಕಾರಣವಾಗುತ್ತದೆ.

ಇನ್ನೂ ಕೆಲವು ತರದ ತಲೆನೋವುಗಳಿವೆ. ಒಮ್ಮೆಲೆ ಪರ ಸ್ಥಳಕ್ಕೆ ಹೋದಾಗ ತೀಕ್ಷ್ಣ ವಾಸನೆಯ ಮೂಸುವಿಕೆಯಿಂದ ಅತಿ ಚಿಂತೆಯಿಂದ, ರಕ್ತದ ಅಭಾವದಿಂದ ಇವೆಲ್ಲವುಗಳಿಗೆ ಆಂತರಿಕ ಯೋಚನೆಯ ಆಂದೋಲನವು ಜೊತೆಗೂಡಿ ತಲೆನೋವು ಸ್ವಾಭಾವಿಕವಾಗಿ ಬಿಡುತ್ತದೆ.

ಕೆಲವು ಸಲ ಸ್ತ್ರೀಯರಿಗೆ ಸುಮಾರು ನಲ್ವತ್ತು ವರ್ಷಗಳ ನಂತರ ಮಾಸಿಕ ರಕ್ತಸ್ರಾವ ನಿಂತೊಡನೆಯೇ ತಲೆ ನೋವಿಗಾರಂಭವಾಗುತ್ತದೆ, ಕೊನೆಗೆ ಅದು ತನ್ನಿಂತಾನೇ ನಿಲ್ಲುತ್ತದೆ.

ಕೆಲವೊಮ್ಮೆ ತಲೆ ನೋವು ಭೀಕರವಾಗಿ ಪರಿಣಮಿಸುತ್ತದೆ. ಅದಕ್ಕಾಗಿ ತುಸು ಜಾಗ್ರತೆ ಅವಶ್ಯ. ತಲೆ ನೋವಿನ ರೋಗಿಗೆ ಮೊಟ್ಟಮೊದಲು ಮನೋವೈಜ್ಞಾನಿಕ ಆರೈಕೆ ಅಗತ್ಯ. ಅದೂ ಹೆಚ್ಚಾಗಿ ರೋಗಿಯನ್ನೇ ಅವಲಂಬಿಸಿರುತ್ತದೆ. ಹೆಚ್ಚು ಶ್ರಮ ತೆಗೆದುಕೊಳ್ಳುವ ಕೆಲಸವಾಗಿದ್ದರೆ ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಳ್ಳುವುದು ಅವಶ್ಯ.

ತಲೆನೋವನ್ನು ಹೋಗಲಾಡಿಸುವ ಸಾಮಾನ್ಯ ವಿಧಾನಗಳು

೧) ಯಾವದೇ ವ್ಯಕ್ತಿ ತನ್ನ ತಲೆನೋವಿನ ಕಾರಣವನ್ನು ಮೊದಲು ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಪರಿಸ್ಥಿತಿ ಪ್ರತಿಕೂಲವಿದ್ದಾಗ್ಯೂ ಸಾಹಸಪೂರ್ವಕವಾಗಿ ಶಾಂತಿಯನ್ನು ದೊರಕಿಸಲು ಪ್ರಯತ್ನಿಸಬೇಕು. ಬೇರೆಯವರ ಭಾವನೆ ಹಾಗೂ ವಿಚಾರಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು.

೨) ಕೆಲವು ಸಲ ನಾವು ಮನಸ್ಸಿನಲ್ಲಿ ವಿಚಾರಗಳ ದ್ವಂದ್ವವನ್ನೇ ಪ್ರಾರಂಭಿಸಿ ನಿರ್ಣಯಕ್ಕಾಗಿ ಹೋರಾಡುತ್ತೇವೆ. ಆಗ ಅವುಗಳನ್ನು ಆದಷ್ಟು ನಿಧಾನವಾಗಿ ಬಗೆಹರಿಸಲು ಪ್ರಯತ್ನಿಸಬೇಕು.

೩) ಮೆದುಳಿಗೆ ಹೆಚ್ಚು ಶ್ರಮವನ್ನು ಒಮ್ಮೆಲೇ ಕೊಡಲು ನೋಡಬಾರದು. ತಲೆಯ ಮೇಲೆ ಒಜ್ಜೆಯನ್ನು ಹೊರುವ ಅಭ್ಯಾಸವಿಲ್ಲದಿದ್ದರೂ ಹೊರುವ ಸಾಹಸಕ್ಕಣಿಯಾಗಬಾರದು

೪) ಒಮ್ಮೆಲೆ ಸಿಟ್ಟಿಗೇರದಂತೆ ಆಂತರಿಕ ಶಕ್ತಿಯನ್ನು ಆದಷ್ಟು ಅದುಮಿ ಹಿಡಿಯಬೇಕು. ಕಾಲ್ಪನಿಕ ಸಂಗತಿಗಳ ಕುರಿತು ಹೆಚ್ಚು ಶ್ರಮ ತೆಗೆದುಕೊಳ್ಳುವದು ವ್ಯರ್ಥ. ತನ್ನ ಅಂತಃಕರಣದಿಂದ ಆದಷ್ಟು ಒಳ್ಳೆಯ ಕೆಲಸ ಮಾಡಲು ಹಾಗೂ ಒಳ್ಳೆಯ ನಡತೆಯನ್ನೇ ಅನುಸರಿಸಲು ಹವಣಿಸಬೇಕು.

೫) ಪ್ರಾತಃಕಾಲದಲ್ಲಿ ನಾವು ಹೇಳುತ್ತಿರುವಂತೆಯೇ ತನ್ನಷ್ಟಕ್ಕೆ ಅಂದುಕೊಳ್ಳಬೇಕು.—"ನನ್ನನ್ನು ಜನರು ಪ್ರೀತಿಸುತ್ತಾರೆ. ನಾನು ಕೆಲವರಿಗೆ ಪ್ರೀತಿಯವನಾಗಿದ್ದೇನೆ ನನ್ನಿಂದ ಏನೇನೋ ಮಹಾಕಾರ್ಯಗಳು ಆಗಬೇಕಿದ್ದಿವೆ. ಇಂದಿನ ದಿನದಲ್ಲಿಯೆ ಕೆಲಸವನ್ನೆಲ್ಲ ಪ್ರಸನ್ನಚಿತ್ತದಿಂದ ಸಾವಧಾನದಿಂದ ಮಾಡಲು ಹವಣಿಸಬೇಕು."

ಕೆಲವು ಸಲ ತಲೆನೋವಿನ ಸುಳ್ಳು ಅನುಭವವಾಗುತ್ತದೆ. ಇದಕ್ಕೆ ಕಾರಣವೇನೆಂದರೆ ಮನಸ್ಸಿನಲ್ಲಿಯ ಭ್ರಾಂತಿ, ಇನ್ನು ಕೆಲವು ಸಲ ಆಕಸ್ಮಿಕವಾಗಿ ಏನೂ ಇಲ್ಲದಿದ್ದಾಗ ಒಮ್ಮೆಲೆ ತಲೆನೋವು ಉತ್ಪತ್ತಿಯೇ ಹೆಚ್ಚುತ್ತಲೇ ಇರುತ್ತದೆ. ತಕ್ಷಣ ಯಾವುದಾದರೂ ಮನೋವೈಜ್ಞಾನಿಕರ ಉಪಚಾರ ಹೊಂದುವುದು ಅಗತ್ಯ.

ಹೀಗೆ ತಲೆನೋವು ಕೆಲವೊಮ್ಮೆ ಬಹಳ ತೊಂದರೆಯನ್ನು ಕೊಟ್ಟು ಜೀವಕ್ಕೂ ಸಂಚಕಾರ ತಂದ ಸಂಗತಿ ಅನೇಕ ಇವೆ. ಆದಷ್ಟು ಜಾಗ್ರತೆ ಈ ಮಾನಸಿಕ ರೋಗಕ್ಕೆ ಪ್ರತೀಕಾರ ಬೇಕು.

(ಮೂಲ: 'ನವನೀತ')

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428.

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಜೋಳಾರ, ಮಂಗಳೂರು-೧.

ಆಹಾರದ ಕೊರತೆಗೆ ಕಾರಣವೇನು?

ಬರೆದವರು
ಶ್ರೀ ಎ. ಉಮಾನಾಥ ಹೆಗ್ಡೆ, ವೇರ್ಡೂರು.



"ಕೃಷಿಕನಿಗೆ ದುರ್ಭಿಕ್ಷವಿಲ್ಲ", "ಬೇಸಾಯಗಾರ ಬೇಗ ಸಾಯ", "ಕೈ ಕೆಸರಾದರೆ ಬಾಯಿ ಮೊಸರು" ಬಹಳ ಒಳ್ಳೆಯ ಮಾತುಗಳು! ಕೃಷಿಯ ಕುರಿತು, ಕೃಷಿಕರ್ಮಿಯ ಕುರಿತು ನಮ್ಮಲ್ಲಿ ಬಳಕೆಯಲ್ಲಿದ್ದ ನಾಣ್ಣುಡಿಗಳು ಇವು. ಆದರೆ ಇವು ಈ ಕಾಲಕ್ಕೆ ಅನ್ವಯವಾಗುವ ಮಾತಲ್ಲ. ಬಹು ಹಿಂದೆ ಹೀಗೆ ಇದ್ದಿರಬೇಕು ಅನ್ನಿಸುತ್ತದೆ. ಯಾಕಂದರೆ ನಮ್ಮ ರಾಷ್ಟ್ರದ ಕೃಷಿಯಾಗಲೀ ಕೃಷಿಗಾರನಾಗಲೀ ಈಗ ಸುಭಿಕ್ಷೆಯಲ್ಲಿಲ್ಲ. ಮೊಸರು ಉಣ್ಣುವುದೂ ಬೇಗ ಸಾಯದಿರುವುದೂ ನಮ್ಮ ರೈತನಲ್ಲವೇ ಅಲ್ಲ.

ಸ್ವಾತಂತ್ರ್ಯ ದೊರೆತ ನಂತರ ಕೃಷಿ ಅಭಿವೃದ್ಧಿಗೆ, ಆಹಾರಧಾನ್ಯ ಉತ್ಪತ್ತಿಗೆ ನಮ್ಮ ಯೋಜನೆಗಾರರು ಹಾಕಿದ ಯೋಜನೆಗಳೆಷ್ಟು, ವೆಚ್ಚಮಾಡಿದ ಹಣವೆಷ್ಟು, ನೇಮಿಸಿದ ಅಧಿಕಾರಿಗಳೆಷ್ಟು—ಈ ಕುರಿತು ಮಾಹಿತಿ ಪಡೆಯಲು ಉಚ್ಚ ಮಟ್ಟದ ಸಮಿತಿಯನ್ನು ನೇಮಿಸಬೇಕಾದೀತು.

ಇವೆಲ್ಲಾ ವಿಫಲವಾಗಿ ನಮ್ಮ ರಾಷ್ಟ್ರದ ಆಹಾರ ಪರಿಸ್ಥಿತಿ ವರ್ಷ ವರ್ಷ, ದಿನೇ ದಿನೇ ಯಾಕೆ ವಿಷಮಿಸುತ್ತಿದೆ? ಆಮದು ಮಾಡುವ ಪ್ರಮಾಣ ಯಾಕೆ ಹೆಚ್ಚುತ್ತಿದೆ? ಪೂರೈಕೆಯ ಗುರಿ ಮುಟ್ಟಲು ಯಾಕೆ ಸಾಧ್ಯವಾಗುತ್ತಿಲ್ಲ? ನಮ್ಮ ಯೋಜನೆದಾರರು ಈ ಕುರಿತು ಏನೇ ಯೋಜನೆ ಹಾಕಿಗಲಿ; ಕೃಷಿ ತಜ್ಞರು ಏನನ್ನೇ ಹೇಳಲಿ; ಮಂತ್ರಿಗಳು ಏನೇ ಭಾಷಣ ಮಾಡಲಿ, ಅಧಿಕಾರಿಗಳು ಎಷ್ಟೇ ಧಾಳಿಮಾಡಲಿ—ಈ ಪರಿಸ್ಥಿತಿಯ ಮೂಲ ಕಾರಣ ಅವರ ಕಲ್ಪಿತ ಕಾರಣವೊಂದೂ ಅಲ್ಲ. ಅದು ಬೆಳೆಗಾರನಿಗೆ ಸಂಬಂಧಪಟ್ಟಿರುವುದು; ಆಹಾರಧಾನ್ಯ ಉತ್ಪತ್ತಿ ಮಾಡುವ ರೈತನಿಗೆ ಸಂಬಂಧಿಸಿದುದು. ಕಾಲಾಂತರದಿಂದ ಬೇಸಾಯ ಮಾಡುತ್ತ ಬಂದಿರುವ ರೈತನ ಸ್ಥಿತಿ ನಮ್ಮ ಎಲ್ಲಾ ಯೋಜನೆಗಳಿಂದ ಸುಧಾರಿಸುವುದರ ಬದಲು ಹೀನವಾಗಿದೆ. ಅವನಲ್ಲಿರುವ ಕೃಷಿಯ ಉತ್ಪಾದನೆಯ ಉತ್ಸಾಹವೆಲ್ಲಾ ಹಾರಿಹೋಗಿದೆ. ತೀರ ಕ್ಷೀಣಿಸಿರುವ ಇಂದಿನ ಪರಿಸ್ಥಿತಿಯಲ್ಲಿ ರೈತನ ಜೀವನವನ್ನು ವಿಶ್ಲೇಷಣೆ ಮಾಡಿದರೆ ನಿಜಚಿತ್ರ ತಿಳಿದುಬರುತ್ತದೆ. ರೈತನ ಜೀವನದ ಕ್ರಮವನ್ನು ರೈತನೇ ತಿಳಿಸಿದರೆ ಅದು ನಿಜಚಿತ್ರ, ಸರಕಾರಿ ಅಧಿಕಾರಿ ಮಾಡಿದರೆ ಅದು ಅಂಕೆ ಸಂಖ್ಯೆಗಳೊಡನೆ ಹೊಡೆದಾಟವಷ್ಟೆ.

ಕಾಲಕ್ಕೆ ಸರಿಯಾಗಿ ಮಳೆ ಬಂದರೆ ಬೆಳೆಗೆ ರೋಗ ಬೀಳದಿದ್ದರೆ, ಮೇಲಿನ ಉತ್ಪತ್ತಿಯನ್ನು ನಿರೀಕ್ಷಿಸಬಹುದು. ಒಂದು ಮುಡಿ ಬತ್ತಕ್ಕೆ ರೂಪಾಯಿ 16ರಂತೆ ಕ್ರಯ ಹಿಡಿಯಲಾಗಿದೆ. ಅದರ ನಿಜ ಬೆಲೆ ಇದಕ್ಕಿಂತಲೂ ಹೆಚ್ಚಾಗುತ್ತದೆ. ಆದರೆ ಆ ಬೆಲೆ ರೈತನಿಗೆ ದೊರೆಯುವುದಿಲ್ಲ. ಅವನು ತೆಗೆದುಕೊಳ್ಳುವ ಬೀಜಕ್ಕೆ ರೂಪಾಯಿ 16ರಂತೆ ತೆರಬೇಕಾಗುತ್ತದೆ. ಆದರೆ ಅವನ ಬತ್ತ ಮಾರಾಟವಾಗ ಮಾಗ ರೂಪಾಯಿ 16ರಂತೆ ಅವನಿಗೆ ದೊರೆಯುವುದು ಬಹಳ ಅಪರೂಪ.

ಒಂದು ಎಕ್ರೆ ಜಮೀನನ್ನು ಸಾಗುವಳಿ ಮಾಡಲು ತಗಲುವ ವೆಚ್ಚ.

	ವೆಚ್ಚ. ರೂ— ಪೈಸೆ.
(a) 25 ಸೆಂಟ್ಸ್ ಭೂಮಿಯಲ್ಲಿ ಆಗಿಹಾಕಬೇಕಾದ	
ಹೂಟಿಗೆ—10 ಜೋಡಿಗೆ	66 = 20
ಹಟ್ಟಿಗೊಬ್ಬರ 90 ಹೆಡಿಗೆಗೆ	22 = 50
ಬಿಳಿಬೂದಿ 3 ಚೀಲಕ್ಕೆ	4 = 50
ಬದಿ ಕಡಿಯುವುದು ಮತ್ತು ಬೇಲಿಹಾಕುವುದಕ್ಕೆ	25 = 00
ಬೀಜಾವರಿ ಮುಡಿ 1 ರ	16 = 00
ಸುಡು ಬೂದಿ 100 ಹೆಡಿಗೆ ಮಾಡಲು 5 ಆಳಿನ ಮಜೂರಿ	12 = 50
ಜುಮ್ಲಾ	146 = 70
(b) ಒಂದು ಎಕ್ರೆಯಲ್ಲಿ ನಾಟಿಯ ವೆಚ್ಚ.	
ಹೂಟಿಗೆ—14 ಜೋಡು	92 = 68
ಗೊಬ್ಬರ ಹೆಡಿಗೆ 400 ಕ್ಕೆ	100 = 00
ಸುಡು ಬೂದಿ 100 ಹೆಡಿಗೆ 20 ಆಳಿನ ಮಜೂರಿ	51 = 00
ಹೊದ್ದು ಕಡಿಯಲು ಆಳು 1ರ ಕೂಲಿ	2 = 50
ನೇಜಿ ಹೊರುವ ಆಳು 4ರ ಕೂಲಿ	10 = 00
ನಟ್ಟಿನಡುವ ಆಳು 11ರ (ಅಕ್ಕಿ ಮುಡಿ ಕ್ಕೆ ದ)	12 = 50
ಬೇಲಿ ಮತ್ತು ಮೇಲ್ವಿಚಾರಣೆ	50 = 00
ಕೊಯ್ಯಲು ಮಾಡಲು ಅರ್ಧ ಮುಡಿ ಅಕ್ಕಿ	12 = 50
ಕೆಯ್ ಹೊರುವುದು ಬಡಿಯುವುದು, ಮತ್ತು ಗೇರುವುದು ಆಳು 10ಕ್ಕೆ ಮಜೂರಿ	25 = 00
ಜುಮ್ಲಾ	355 = 18
ಒಟ್ಟು ಸಾಗುವಳಿಯ ಖರ್ಚು (a) ಮತ್ತು (b) ಜುಮ್ಲಾ	501 = 88
ಇದರಿಂದ ದೊರಕುವ ಉತ್ಪತ್ತಿ	
ಬತ್ತ ಮುಡಿ 30 ರ	480 = 00
ಹುಲ್ಲು 1000 ಸೂಡಿಗೆ	25 = 00
ಜುಮ್ಲಾ ರೂಪಾಯಿ	505 = 00

ಮೇಲೆ ಕೊಟ್ಟ ಅಂಕೆ ಸಂಖ್ಯೆಗಳು ಅಂದಾಜಿನವುಗಳಾಗಿರದೆ ಅನುಭವದಿಂದಲೇ ಪಡೆದವುಗಳಾಗಿವೆ. ಒಂದು ವೇಳೆ ವೆಚ್ಚ ಇದಕ್ಕಿಂತ ಹೆಚ್ಚಾಗಬಹುದೇ ವಿನಾ ಕಡಿಮೆಯಾಗುವುದಿಲ್ಲ.

ಇದಲ್ಲದೆ ಭೂಕಂದಾಯ ತೆರಕಬೇಕಾಗಿದೆ, ಅದನ್ನು ಸೇರಿಸಿಕೊಂಡರೆ ಒಂದು ಎಕ್ರೆ ಸಾಗುವಳಿಯ ವೆಚ್ಚ ಇನ್ನೂ ಹೆಚ್ಚಾಗುತ್ತದೆ.

ಈ ಪರಿಸ್ಥಿತಿಯಲ್ಲಿ ರೈತನು ಹೇಗೆ ಬದುಕಿಯಾನು? ಹೇಗೆ ಉದ್ಧಾರವಾದಾನು? ತನ್ನ ಕೃಷಿಕರ್ಮದಲ್ಲಿ ಅವನಿಗೆ ಆಸಕ್ತಿಯಾದರೂ ಹೇಗೆ ಹುಟ್ಟೀತು?

ಗಂಡ ಹೆಂಡತಿ ಮಕ್ಕಳಿರುವ ಒಂದು ರೈತ ಕುಟುಂಬ ಸ್ವಂತ ಕೆಲಸದಿಂದ ಎರಡು ಎಕರೆ ಜಮೀನನ್ನು ಸಾಗುವಳಿ ಮಾಡಬಹುದು. ಇದರಿಂದ ದೊರಕುವ ಉತ್ಪತ್ತಿ 60 ಮುಡಿ ಬತ್ತ ಮತ್ತು 2000 ಸೂಡಿ ಹುಲ್ಲು. ಅಂದರೆ ಒಟ್ಟು ರೂಪಾಯಿ 1010. ಗಂಡನಿಗೆ ದಿನಕ್ಕೆ ರೂಪಾಯಿ 2=50ರಂ

(೧೦ನೇ ಪುಟ ನೋಡಿರಿ)

ಇನ್ನೆರಡು
ಹೊಸ
ಶಾಖೆಗಳು ......

ವಿಶಾಲವಾಗಿ ಹಬ್ಬಿರುವ ಸಿಂಡಿಕೇಟ್ ಬ್ಯಾಂಕಿನ ಶಾಖಾ ಸಮುದಾಯಕ್ಕೆ ಇನ್ನೆರಡು ಹೊಸ ಶಾಖೆಗಳು.

ಬೊಂಬಾಯಿ— ಬ್ರೋಚ್ ಸ್ಟ್ರೀಟ್
ಮತ್ತು
ಬಸವ ಕಲ್ಯಾಣ (ಬೀದರ್ ಜಿಲ್ಲೆ)

ಎಂಬಲ್ಲಿ
ಬೇಗನೇ ತೆರೆಯಲ್ಪಡುವುವೆಂದು ತಿಳಿಸಲು ನಾವು ಸಂತೋಷಪಡುತ್ತೇವೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು. 192
ಠೇವಣಿ ನಿಧಿ: ರೂ. 60 ಕೋಟಿಗೂ ಮಿಕ್ಕಿದೆ.

........ಪ್ರಪಂಚದಾದ್ಯಂತ ಬ್ಯಾಂಕಿಂಗ್ ವ್ಯವಹಾರ.



ಮದನೇಶ್ವರ ಪ್ರಸಾದ ಸಿಂಹನು ತನ್ನ ಪೂರ್ವಜರು ತ್ಯಜಿಸಿ ಹೋಗಿದ್ದ ಭೂಮಿಯಲ್ಲಿ ಮತ್ತೆ ದುಡಿಯಲು ಬಂದಿದ್ದಾನೆ.

ಕೋಶಿ ನದಿಯಿಂದ ಶೋಕವಿಲ್ಲ!

ಜುಲೈ ತಿಂಗಳಲ್ಲಿ ಕೋಶಿ ನದಿಯ ಪೂರ್ವದ ಮುಖ್ಯ ಕಾಲುವೆ ಪ್ರಾರಂಭವಾಯಿತು. ಉತ್ತರ ಬಿಹಾರದ ಅಸಂಖ್ಯ ಗ್ರಾಮಗಳಲ್ಲಿ ಆಶಾಕಿರಣ ಮೂಡಿ ಬಂತು. ೪ ಸಾವಿರ ಜನಸಂಖ್ಯೆಯಿರುವ ಗೋವಿಂದಪುರದಲ್ಲಿ ಕಳೆದ ೩೦ ವರ್ಷಗಳಿಂದ ಬಂಜರು ಬಿದ್ದ ೧ ಸಾವಿರ ಎಕ್ರೆ ಭೂಮಿಯು ಹಸುರು ತುಂಬುವಂತಾಯಿತು. ಭಾರತೀಯ ಇಂಜನಿಯರರ ಸಫಲ ಪ್ರಯತ್ನವೇ ಕೋಶಿ ಅಣೆಕಟ್ಟು. ಈ ಅಣೆಕಟ್ಟಿಗಾಗಿ ನದಿಯ ಇಕ್ಕಡೆಗಳಲ್ಲೂ ೭೫ ಮೈಲುದ್ದದ ವರೆಗೆ ಮಣ್ಣಿನ ಕಟ್ಟೆ ಕಟ್ಟಲು ರೂ. ೫೪ ಕೋಟಿ ವೆಚ್ಚ ತಗಲಿತು. ಇದರಲ್ಲಿ ೩.೫ ಕೋಟಿಯನ್ನು ಅಮೆರಿಕೆಯು ಸಾಲ ಮತ್ತು ಸಹಾಯರೂಪದಲ್ಲಿ ನೀಡಿದೆ.

ಗೋವಿಂದಪುರದ ಪಂಚಾಯತಿ ಅಧ್ಯಕ್ಷ ಐವತ್ತು ವರ್ಷದ ಚುಟ್ಟಿನ್ ಮಂಡಲನು ಈಗ ಪ್ರಸನ್ನನಾಗಿದ್ದಾನೆ. ಅವನ ಹಳ್ಳಿಯು ಹಿಂದೆ ವರ್ಷಂಪ್ರತಿ ನೆರೆಯಲ್ಲಿ ಮುಳುಗಿ ಹೋಗುತಿತ್ತು. ಗದ್ದೆಗಳಲ್ಲಿ ಮಳಲು ತುಂಬಿ ಪೈರು ನಾಶವಾಗುತಿತ್ತು. ಆದರೆ ಇಂದು ಹಾಗಿಲ್ಲ. ಅವನ ಗದ್ದೆಗಳು ಫಸಲು ತುಂಬಿದ ಪೈರುಗಳಿಂದ ಕಂಗೊಳಿಸುತ್ತವೆ. ತಾತ್ಕಾಲಿಕ ಗುಡಿಸಲುಗಳ ಬದಲು ಉತ್ತಮ ಮನೆಗಳು ಹಳ್ಳಿಯಲ್ಲಿ ನಿರ್ಮಾಣವಾಗುತ್ತಿವೆ.

೨೭ ವರ್ಷಗಳಿಗೆ ಮೊದಲು ಬಿಹಾರದ ಶೋಕ ನದಿ ಕೋಶಿಯಲ್ಲಿ ನೆರೆ ಬಂದು ಊರು ಹಾಳಾದುದರಿಂದ ಮದನೇಶ್ವರ ಪ್ರಸಾದ ಸಿಂಹನ ತಂದೆ ಗ್ರಾಮತ್ಯಾಗ ಮಾಡಿದ್ದನು. ಇದೀಗ ಮದನೇಶ್ವರನು ಮರಳಿ ಗೋವಿಂದಪುರಕ್ಕೆ ಬಂದಿದ್ದಾನೆ. ಅತನಂತೆಯೇ ಎಲ್ಲ ರೈತರಲ್ಲಿಯೂ ಇದೀಗ ಆಶಾಕಿರಣವೊಂದು ಮೂಡ ತೊಡಗಿದೆ. ಅವರೆಲ್ಲರ ಹೊಗೆ ತುಂಬುತಿದ್ದ ಗದ್ದೆಗಳು ಇಂದು ಸಸ್ಯಶ್ಯಾಮಲವಾಗಿವೆ; ಕಾಲುವೆಯ ನೀರು ಅವುಗಳಿಗೆ ಧಾರಾಳ ಸಿಗುತ್ತದೆ.

ಕೋಶಿಯು ತುಂಬಿ ಉಕ್ಕಿ ಹರಿಯುವ ನದಿ. ಇದರಿಂದಾಗಿ ಬಿಹಾರ—ನೇಪಾಲಗಳ ೮೦೦೦ ಚದರ ಮೈಲು ನೆಲ ಮರುಳುಗಾಡಾಗುತಿತ್ತು. ಪ್ರವಾಹವನ್ನು ತಡೆಯಲು ಕಟ್ಟೆ ಕಟ್ಟುತಿದ್ದರೂ ಪ್ರವಾಹದ ವೇಗವನ್ನು ತಡೆ ಹಿಡಿಯುವ ಶಕ್ತಿ ಅದಕ್ಕಿರಲಿಲ್ಲ. ನದಿ ತಾನೇ ತಾನಾಗಿ ಹರಿಯುತಿತ್ತು; ಜನರನ್ನು ಶೋಕ ಸಾಗರದಲ್ಲಿ ಅದ್ದುತಿತ್ತು. ಆದರೆ, ಇಂದು ಸ್ಥಿರವಾದ ದಂಡೆ ಕಟ್ಟುವುದು ಸಾಧ್ಯವಾಗಿದೆ. ನದಿಯು ೩ರಿಂದ ೧೦ ಮೈಲುಗಳಿಗಿಂತ ಅಗಲವಾಗಿ ಹರಿಯದಂತೆ ಇವು ತಡೆಯುತ್ತವೆ. ೬½ ಲಕ್ಷ ಎಕ್ರೆ ಜಮೀನು ನೆರೆಯ ಬಾಧೆಯಿಂದ ಮುಕ್ತವಾಗಿ ೭ ಕೋಟಿ ರೂಪಾಯಿಯ ಬೆಳೆ ಬೆಳೆಯಲು ಅನುಕೂಲವಾಯಿತು. ಪ್ರವಾಹ ಪೀಡಿತರಿಗೆ ಪ್ರತಿ ವರ್ಷ ಹಂಚುತಿದ್ದ ರೂ. ೩ ಕೋಟಿಯ ಉಳಿತಾಯವೂ ಆಯಿತು.

ಭಾರತದ ಎಲ್ಲ ನದಿಗಳಿಗಿಂತಲೂ ಕೋಶಿ ನದಿಯಲ್ಲಿ ಹೆಚ್ಚು ಹರಳು ಹೊಗೆಯು ಕೊಚ್ಚಿ ಬರುವುದು. ಇದು ಗದ್ದೆಯಲ್ಲಿ ತಂಗಿತೆಂದರೆ, ಮತ್ತದು ನಿರುಪಯುಕ್ತ



ಬಿಹಾರದ ಶೋಕ ನದಿ ಕೋಶಿಯು ತುಂಬಿ ಹರಿಯುತ್ತಿದೆ.

ಕಾಲುವೆಯ ನೀರಿನ ಮೇಲೆ ವಿಶ್ವಾಸವಿಟ್ಟ ಉತ್ತರ ಬಿಹಾರದ ರೈತರು ಮರಳಿ ಕರ್ತವ್ಯ ಪರಾಯಣರಾಗಿದ್ದಾರೆ



ಕನ್ನ ಐವತ್ತು ವರ್ಷಗಳ ಜೀವ: ಮಾನದಲ್ಲಿ ಕೋಶಿಯು ಉತ್ಪಾತ ನಡೆಸುವುದನ್ನೇ ಕಂಡ ಚುಟ್ಟಿನ್ ಮಂಡಲನೀಗ ಪ್ರಸನ್ನನಾಗಿ ದ್ದಾನೆ. (ಎಡಗಡೆ)

ಕೈಗೆ ಬರಲಿರುವ ಫಸಲಿನ ಕೊಯ್ಲಿಗೆ ಮದನೇಶ್ವರನು ಗೋದಾಮನ್ನೂ ಸಿದ್ಧಪಡಿಸಿದ್ದಾನೆ. (ಬಲಗಡೆ)

ತ್ತು. ಹೀಗೆ ಬಳಿದು ಬಂದ ಉಸುಬಿನಡಿಯಲ್ಲಿ ಮನೆಮಠಗಳು, ಕಾರಖಾನೆ ಗಿರಣಿಗಳು ಹೂತು ಹೋಗುತ್ತವೆ. ಆದರೆ ಇಂದು ಇಂತಹ ಪರಿಸ್ಥಿತಿಯುಳಿದಿಲ್ಲ. ೩೭೭೦ ಅಡಿ ಉದ್ದದ ಅಣೆಕಟ್ಟನ್ನು ಕಟ್ಟಿ ನೀರನ್ನು ನೀರಾವರಿ ಕಾಲುವೆಗಳಿಗೆ ಹರಿಸುವ ಪ್ರಯತ್ನ ಯಶಸ್ವಿಯಾಗಿದೆ. ಇದರಿಂದ ನೀರೆರೆದು ಫಸಲು ಪಡೆಯುವುದು ಸಾಧ್ಯವಾಗಿದೆ.

ನದಿಯ ಪೂರ್ವ—ಪಶ್ಚಿಮಗಳಲ್ಲಿ ಕಡಿದ ಕಾಲುವೆಗಳು ೨೬.೦ ಲಕ್ಷ ಎಕ್ರೆ ಜಮೀನಿಗೆ ನೀರುಣ್ಣಿಸುತ್ತವೆ. ಪೂರ್ವದ ಮುಖ್ಯ ನಾಲೆಯು ಜುಲೈ ತಿಂಗಳಲ್ಲಿ ಪ್ರಾರಂಭವಾಯಿತು. ಇದು ೧೪ ಲಕ್ಷ ಎಕ್ರೆಗಳಿಗೆ ನೀರೊದಗಿಸುವುದು. ಕೇವಲ ೨|| ರೂಪಾಯಿಗಳಿಂದ ಒಂದು ಎಕ್ರೆ ಜಮೀನಿಗೆ ನೀರು ಹರಿಸುವುದೆಂದು ಸಾಧ್ಯವಾಗಿದೆ. ಹೀಗೆ ಕೋಶಿ ನದಿಗೆ ಉದ್ದ ಮತ್ತು ಅಡ್ಡವಾಗಿ ಕಟ್ಟಿದ ಕಟ್ಟೆಯಿಂದಾಗಿ ಉತ್ತರ ಬಿಹಾರದ ಎಲ್ಲ ರೈತರಲ್ಲಿಯೂ ಮದನೇಶ್ವರ ಪ್ರಸಾದನಂತೆಯೇ ಹೊಸ ಉತ್ಸಾಹ ಮತ್ತು ಆತ್ಮವಿಶ್ವಾಸಗಳು ಮೂಡಿ ಬಂದಿವೆ.

ಅಮೆರಿಕೆಯು ಭಾರತದ ೧೨ ನದೀ ಯೋಜನೆಗಳಿಗೆ ನೆರವು ನೀಡುತ್ತದೆ. ಈ ಯೋಜನೆಗಳಲ್ಲಿ ಕೋಶಿಯೂ ಒಂದು. ಭಾರತದ ೯ ಬೇರೆ ಬೇರೆ ರಾಜ್ಯಗಳಲ್ಲಿ ಹರಡಿದ ಈ ಯೋಜನೆಗಳಿಂದ ನೀರಾವರಿ ಸೌಕರ್ಯವು ಹೆಚ್ಚಿ ಅಧಿಕ ಆಹಾರ ಉತ್ಪಾದನೆಯಾಗುವುದಲ್ಲದೆ ಜಲ ವಿದ್ಯುತ್ತನ್ನೂ ಪಡೆಯಬಹುದು. ನಿಯೋಜಿತ ಯೋಜನೆಗಳು ಕಾರ್ಯರೂಪಕ್ಕೆ ಬಂದಾಗ ೯೦ ಲಕ್ಷ ಭೂಮಿಗೆ ನೀರಾವರಿ ಸೌಲಭ್ಯ ಸಿಗುವುದು; ೨೫ ಲಕ್ಷ ಕಿಲೋವಾಟ್ ವಿದ್ಯುತ್ತು ದೊರೆಯುವುದು. ಇನ್ನೂ ಉದ್ಘಾಟಿತವಾದ ಕೋಶಿ ಪೂರ್ವ ಕಾಲುವೆಯ ಬಳಿ ೨೦ ಸಾವಿರ ಕಿಲೋವಾಟ್ ಶಕ್ತಿಯುತ್ಪಾದಿಸುವ ಜನರೇಟರನ್ನು ಇಡಲಾಗುವುದು. ಅಮೆರಿಕೆಯು ಭಾರತೀಯ ನದೀ ಯೋಜನೆಗಳಿಗೆ ಒಟ್ಟು ೨೦೦ ಕೋಟಿ ರೂಪಾಯಿ ನೆರವು ನೀಡುತ್ತಿದೆ.

• ಕೋಶಿ ನದೀ ಯೋಜನೆಯು ಅಮೆರಿಕೆ-ಭಾರತ ಮೈತ್ರಿಯ ಒಂದು ಸಂಕೇತ.





೩೭೭೦ ಅಡಿ ಉದ್ದದ ಅಣೆಕಟ್ಟನ್ನು ಕಟ್ಟಿ ಹುಚ್ಚು ಹೊಳೆ ಕೋಶಿಯ ನೀರು ಕಾಲುವೆಗಳಿಗೆ ಹರಿಯುವಂತೆ ಮಾಡಿದೆ. (ಎಡಗಡೆ)

ಕೋಶೀ ನದಿಯ ಪೂರ್ವದಲ್ಲಿ ಹೊಸತಾಗಿ ಪ್ರಾರಂಭವಾದ ಕಾಲುವೆ. (ಬಲಗಡೆ)

ಆಹಾರದ ಕೊರತೆಗೆ ಕಾರಣವೇನು?

(೩ನೇ ಪುಟದಿಂದ)

ತೆ ಒಂದು ವರ್ಷಕ್ಕೆ ರೂಪಾಯಿ 912=50 ಹೆಂಗಸಿಗೆ ದಿನಕ್ಕೆ ರೂಪಾಯಿ 1=25ರಂತೆ ಒಂದು ವರ್ಷಕ್ಕೆ ರೂಪಾಯಿ 456=25 ಅಂದರೆ ವರ್ಷಕ್ಕೆ ಅವರ ಸಂಬಳ ರೂಪಾಯಿ 1368=75 ಒಂದು ರೈತ ಕುಟುಂಬದ ಸಂಬಳವೂ ಪೂರ್ತಿಯಾಗಿ ದೊರೆಯುವಷ್ಟು ಉತ್ಪತ್ತಿ ಬೇಸಾಯದಿಂದ ದೊರಕುವುದಾದರೆ ಈ ಕೃಷಿಯಾಕೆ ಬೇಕು? ಯಾರಿಗೆ ಬೇಕು?

ಇನ್ನು ಸ್ವಂತ ಜಮೀನು ಇಲ್ಲದ ಗೇಣಿಗೆ ಬೇಸಾಯ ಮಾಡುತ್ತಿರುವ ರೈತನ ಪರಿಸ್ಥಿತಿ ಎಷ್ಟು ಘೋರವಿರಬಹುದು? ಗೇಣಿ ಪದ್ಧತಿ ಒಂದು ಎಕರೆಗೆ 7½ ಮುಡಿ ಅಕ್ಕಿ. ಇಷ್ಟು ಗೇಣಿಯನ್ನು ಬೆಳೆ ಬರಲಿ ಬಾರದಿರಲಿ ಕೊಡಲೇ ಬೇಕಷ್ಟೆ? ವರ್ಷವೆಲ್ಲಾ ದುಡಿದು ಹೊಟ್ಟೆ ಬಾಯಿಕಟ್ಟಿ, ಆಮೋದ, ಪ್ರಮೋದ ವಿಲಾಸಗಳಿಗೆಲ್ಲಾ ತಿಲಾಂಜಲಿ ಕೊಟ್ಟು ಒಳ್ಳೆಯ ಕಾಲದ ಕನಸನ್ನು ಕಾಣುತ್ತಿರುವ ರೈತ ಆ ಕನಸನ್ನೇ ನಂಬಿಕೊಂಡು ಮಣ್ಣಾಗಿ ಹೋಗುತ್ತಾನೆ ಅವನು ಮಣ್ಣಿನ ಮಗ. ಅಂದರೆ ಅವನಿಗೆ ತಿಳಿದಿರುವುದೊಂದೇ. ಮಣ್ಣಿನೊಂದಿಗೆ ಮಣ್ಣಾಗಿ ದುಡಿಯುವುದು. ಕೊನೆಗೆ ಅವನ ಬಾಯಿಗೂ ಮಣ್ಣು.

ಇಷ್ಟು ಕಾಲದ ಭೂಕಂದಾಯ ಹೆಚ್ಚಿಸುವ ಕಾರ್ಯ ಪ್ರಾರಂಭವಾಗಿದೆ ಭೂಮಿಯ ಮೇಲೆ ನಾನಾತರದ ಹೊಸ ತೆರಿಗೆಗಳನ್ನು ತೆರಬೇಕಾಗುತ್ತದೆ. ಜೀವನಾವಶ್ಯಕ ವಸ್ತುಗಳಬೆಲೆ ಗಗನಕ್ಕೇರುತ್ತಿವೆ ರೈತನ ಸಂಪತ್ತು ಬೆಳೆ. ಅವನೊಡನೆ "ಹಣ"ವಿಲ್ಲ. ಏನು ಕೊಂಡುಕೊಳ್ಳಬೇಕಿದ್ದರೂ ಬತ್ತವನ್ನೋ ಅಕ್ಕಿಯನ್ನೋ ಮಾರಬೇಕು

ಕೊಂಡು ಕೊಳ್ಳುವ ಶಕ್ತಿ ಹಣಕ್ಕೆ ಕಡಿಮೆಯಾಗಿದೆ. ಅತಿ ಪ್ರಸರಣದಿಂದ ಎಲ್ಲಾ ವಸ್ತುವಿನ ಬೆಲೆಯೂ ಪ್ರಮಾಣ ಮೀರಿ ಏರುತ್ತಿದೆ ಆದರೆ ಬೆಳೆಗೆ ಮಾತ್ರ ಹಾಗಾಗುತ್ತಿಲ್ಲ. ಸರಕಾರ ಕೂಡಾ ಬೇಸಾಯಗಾರನ ನಿಜಸ್ಥಿತಿಯನ್ನು ತಿಳಿಯದೆ, ತಿಳಿದರೂ ಗಮನಕ್ಕೆ ತಾರದೇ ಎಲ್ಲಾ ಬಿಟ್ಟು ಆಹಾರಧಾನ್ಯಗಳಿಗೆ ಯೋಗ್ಯ ಬೆಲೆ ನಿಶ್ಚಯಿಸುತ್ತದೆ. ಸರಕಾರ, ವ್ಯಾಪಾರಿಗಳು, ಗಿರಾಕಿಗಳು ಎಲ್ಲರೂ ಆರೋಪ ಹೊರಿಸುವುದು ರೈತನ ಮೇಲೆ ಅವನು ಸಾಕಷ್ಟು ಬೆಳೆಸುವುದಿಲ್ಲ ಎನ್ನುತ್ತಿದೆ ಸರಕಾರ ಬೆಳೆಸಿದ್ದನ್ನು ಮಾರುಕಟ್ಟೆಗೆ ರೈತನು ಹೆಚ್ಚಿನ ಲಾಭದ ಸೆಯಿಂದ ತರುತ್ತಿಲ್ಲವೆನ್ನುತ್ತಾರೆ, ವ್ಯಾಪಾರಿಗಳು. ಪರಿಸ್ಥಿತಿಯ ದುರುಪಯೋಗ ಮಾಡಿಕೊಂಡು ತಾನು ಬೆಳೆಸಿದ್ದಕ್ಕೆ ವಿಪರೀತ ಬೆಲೆ ಕೇಳುತ್ತಿದ್ದಾನೆ ಎನ್ನುತ್ತಾನೆ ಬಳಕೆದಾರ! ಎಂತಹ ವಿಪರ್ಯಾಸ? ಆದರೆ ಯಾರೂ ಬೆಳೆ ಬೆಳೆಯುವವನ ಪರಿಸ್ಥಿತಿಯ ವಿಶ್ಲೇಷಣೆ ಮಾಡುತ್ತಿಲ್ಲ ಅವನ ಅಸಹಾಯಕತೆಗೆ ದಡ್ಡತನದ ಆರೋಪ ಬೇರೆ.

ಸರಕಾರ ರೈತನ ಪರಿಸ್ಥಿತಿಯನ್ನು ಸುಧಾರಿಸಬೇಕೆಂಬ ಧ್ಯೇಯವಿರಿಸಿದ್ದರೆ, ನಮ್ಮ ರಾಷ್ಟ್ರದ ಕೃಷಿಯಲ್ಲಿ ಸುಧಾರಣೆಯಾಗಬೇಕೆಂಬ ಇಚ್ಛೆ ತಾಳಿದ್ದರೆ ಅದು ಮೊದಲು ಬೇಸಾಯಗಾರನ ಶ್ರಮಕ್ಕೆ ಸಾಕಷ್ಟು ಪ್ರತಿಫಲ ಸಿಗುವಂತೆ ಮಾಡಬೇಕು. ಯೋಗ್ಯ ಬೆಲೆಯನ್ನು ನಿಶ್ಚಯಿಸ ಬೇಕಾದ್ದು ವ್ಯಾಪಾರಿಗಲ್ಲ. ಬಳಕೆದಾರನಿಗಲ್ಲ. ಬದಲು ಆಹಾರ ಉತ್ಪತ್ತಿ ಮಾಡುವ ರೈತನಿಗೆ. ಅವನಿಗೆ ಲಾಭ ಬೇಡ. ಆದರೆ ವರ್ಷವಿಡೀ ದುಡಿಯುವ ರೈತನ ಜೀವನ ಸಾಗಬೇಕು. ಅವನ ಮಕ್ಕಳಿಗೆ ವಿದ್ಯಾಭ್ಯಾಸ ದೊರಕಬೇಕು. ಅವನ ಕಾಯಿಲೆ ಕಸಾಲೆಗೆ ಔಷಧಿ ಬೇಕು. ಅವನ ಮನೆಯಲ್ಲಿ ಮದುವೆ ಮುಂಜಿಗಳಾಗಬೇಕು, ಆಪತ್ತಿಗೆ ಸ್ವಲ್ಪ ಸಂಗ್ರಹಿಸಿ ಇಡಬೇಕು, ಹೀಗಾದಲ್ಲಿ ಮಾತ್ರ ರೈತ ಬೇಸಾಯ ಮಾಡಿಯಾನು ರಾಷ್ಟ್ರದ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಉತ್ಪತ್ತಿ ಮಾಡುವ ಉತ್ಸಾಹ ತಳೆದಾನು ಬದಲು ಪರಿಸ್ಥಿತಿಯನ್ನು ಹೀಗೆಯೇ ಇರಲು ಬಿಟ್ಟು, ಕಂದಾಯವನ್ನು ಇನ್ನೂ ಹೆಚ್ಚಿಸಿ ಅವನು ಬೆಳೆದ ಬೆಳೆಗೆ ದರವನ್ನು ಅವನಿಗೆ ಹಾನಿಯಾಗುವಂತೆ ನಿಶ್ಚಯಿಸಿದರೆ ನಮ್ಮ ರಾಷ್ಟ್ರದ ಆಹಾರ ಉತ್ಪತ್ತಿಯ ಉದ್ಯೋಗ ತೀರಾ ಕೆಳಸ್ಥಿತಿಗೆ ಇಳಿದೀತು ತನ್ನ ಹಾನಿಯ ಕಡೆಗೆ ರೈತನು ಗಮನ ಹರಿಸಲು ಪ್ರಾರಂಭಿಸಿದರೆ ನಮ್ಮ ದೇಶವನ್ನು ದೇವರೇ ಕಾಪಾಡಬೇಕು. ರೈತನೆನ್ನುವ ವರ್ಗವೇ ನಾಶವಾಗಿ ಹೋದೀತು. ಮತ್ತೆ ತುತ್ತು ತುತ್ತಿಗೂ ಪರದೇಶಗಳನ್ನು ಬೇಡುವ ಪರಿಸ್ಥಿತಿ ಬಂದೀತು. ಇಂತಹ ಸ್ಥಿತಿ ಬರುವುದರೊಳಗೆನೇ ನಮ್ಮ ಯೋಜನಾ ಆಯೋಗ ಮತ್ತು ತಜ್ಞರು ಎಚ್ಚೆತ್ತುಕೊಳ್ಳಬೇಕಾಗಿದೆ.

ಟಿಪ್ಪಣಿ: ಐದು ಹೂಟೆಯ ವೆಚ್ಚ

ನೇಗಿಲಿನ ಮರದ ಬೆಲೆ	ರೂ	೪—೫೦
ಹತ್ತಿ, ಹಗ್ಗ, ಈಸು ಇತ್ಯಾದಿ	ರೂ	೦—೯೯
ಮಜೂರಿ	ರೂ.	೧—೦೦
ನೇಗಿಲ ಬೆಲೆ ..	ರೂ.	೬—೪೯
ಹೂಟೆಯವನ ಸಂಬಳ	ರೂ	೧೩—೫೦
ಜೋಡಿಗೆ ಗೋಳಿ, ಗಂಜಿ, ತೌಡು, ಹುಲ್ಲು, ಇತ್ಯಾದಿ ..	ರೂ.	೧೨—೬೦
ಇತರ ಖರ್ಚು ... . __	ರೂ.	೦—೫೧
ಜುಮ್ಲಾ ...	ರೂ.	೩೩—೧೦

ಕ್ಷಯರೋಗದ ಗೃಹ ಚಿಕಿತ್ಸೆ

ಕ್ಷಯರೋಗಿಗಳನ್ನು ಮನೆಗಳಲ್ಲಿಯೇ ಚಿಕಿತ್ಸೆ ಮಾಡುವುದು ಈಗಿನ ಆಶಯವಾಗಿದೆ. ಈ ಉದ್ದೇಶಕ್ಕಾಗಿ ಸರಕಾರವು ಪ್ರತಿಯೊಂದು ಜಿಲ್ಲೆಯಲ್ಲಿಯೂ ಉತ್ತಮ ಸಲಕರಣೆಯಿರುವ ಆಸ್ಪತ್ರೆಯನ್ನು ಸ್ಥಾಪಿಸುತ್ತಿದೆ ಗೃಹ ಚಿಕಿತ್ಸಾ ಸೇವೆಯನ್ನು ಪರಿಣಾಮಕಾರಿಯನ್ನಾಗಿ ಮಾಡಲು ಮತ್ತು ಅದನ್ನು ಜನರ ಮನೆ ಬಾಗಿಲಿಗೆ ಕೊಂಡೊಯ್ಯಲು ಈ ಆಸ್ಪತ್ರೆಗಳಲ್ಲಿ ಯೋಗ್ಯ ಸಲಕರಣೆ, ತಕ್ಕ ತರಬೇತಾದ ಸಿಬಂದಿ ಮತ್ತು ರೋಗಿಗಳಿಗೆ ಧರ್ಮಾರ್ಥ ಹಂಚಲು ಬೇಕಾದಷ್ಟು ಪ್ರಮಾಣದ ಔಷಧಗಳು ಬೇಕು. ಡಾಕ್ಟರುಗಳು ಹೇಳಿದಂತೆ ಔಷಧಗಳನ್ನು ಕ್ರಮವಾಗಿ ತೆಗೆದುಕೊಳ್ಳಬೇಕೆಂದು ರೋಗಿಗಳಿಗೆ ನಿಶ್ಚಯಗೊಳಿಸಲ್ಪಡಬೇಕು ಔಷಧ ತೆಗೆದುಕೊಳ್ಳುವುದರಲ್ಲಿ ಕ್ರಮವಿಲ್ಲವೆಂಬುದೇ ಎಲ್ಲ ಕಡೆಯಲ್ಲಿಯೂ ಕೇಳಿ ಬರುವ ದೀರ್ಘ ಕಾಲದ ಆಕ್ಷೇಪವಾಗಿದೆ. ಐಚ್ಛಿಕ ಸಂಸ್ಥೆಗಳು ಪ್ರಾಮುಖ್ಯ ಭಾಗವಹಿಸಲು ಇಲ್ಲಿಯೇ ಸಂದರ್ಭವಿರುವುದು. ಔಷಧಗಳನ್ನು ವಿತರಣೆ ಮಾಡಲಿಕ್ಕೂ ಡಾಕ್ಟರರ ನಿರ್ದೇಶನದಂತೆ ಅವನ್ನು ಕ್ರಮವಾಗಿ ತೆಗೆದುಕೊಳ್ಳಬೇಕೆಂದು ರೋಗಿಗಳಿಗೆ ಸ್ಥಿರಪಡಿಸಲಿಕ್ಕೂ ಸರಕಾರದ ಏಜನ್ಸಿಗಳಿಗೆ ಸಹಾಯ ನೀಡಲು ಈ ಸಂಸ್ಥೆಗಳಿಗೆ ತರಬೇತಾದ ಸ್ವಯಂಸೇವಕರು ಬೇಕು.

ಟಿ ಬಿ ಸಂಸ್ಥೆಗಳಿಗೆ ತಕ್ಕಷ್ಟು ನಿಧಿ ಇಲ್ಲದಿದ್ದರೆ ಸ್ವಯಂಸೇವಕರನ್ನು ತರಬೇತುಗೊಳಿಸಲಿಕ್ಕೂ ನಡೆಸಲಿಕ್ಕೂ ಸಾಧ್ಯವಿಲ್ಲ. ಮೊಹರು ಮಾರಾಟ ಚಳವಳವು ನಿಧಿ ಎತ್ತುವ ಒಂದು ನೇರ ರೀತಿಯಾಗಿದೆ

ಕ್ಷಯರೋಗಿಗಳ ಸಾಗಾಣಿಕೆ, ಮಕ್ಕಳ ವಿದ್ಯಾಭ್ಯಾಸ, ಸಮಾರಂಭ ಸಂದರ್ಭಗಳಲ್ಲಿಯ ಖರ್ಚು ಮೊದಲಾದ ಬಡ ಕ್ಷಯರೋಗಿಗಳ ಸಾಮಾಜಿಕ ಅವಶ್ಯಕತೆಗಳಿಗಾಗಿ ಸಹಾಯ ನೀಡಲು ಹಣ ಅಗತ್ಯವಿದೆ

ಟಿ ಬಿ ಮೊಹರುಗಳನ್ನು ಕೊಂಡುಕೊಂಡು ಈ ಉದ್ದೇಶಕ್ಕೆ ನಿಧಿ ಎತ್ತಲು ಸಹಕರಿಸಿರಿ.

ಒಂದು ಮುದ್ರೆಯ ಬೆಲೆ ೧೦ ಪೈಸೆ ಮಾತ್ರ. ಮೊಹರುಗಳು ದೊರೆಯುವ ಸ್ಥಳ

ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಂಘ, ಮಂಗಳೂರು ಮತ್ತು ಅದರ ವಿವಿಧ ಏಜನ್ಸಿಗಳು.

15ನೇ ಟಿ ಬಿ ಮೊಹರು ಮಾರಾಟ ಚಳವಳ

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಂಸ್ಥೆಯಿಂದ ನಡೆಸಲ್ಪಡುವಂತಾದ್ದು.)

ಸ್ಥಳದಾನವಿತ್ತವರು:

Messrs Willcox (Buckwell India) Private Ltd.,
New Delhi

ವಿಶೇಷ ಸವಲತ್ತು

'ನವಯುಗ'ಕ್ಕೆ ಹೊಸದಾಗಿ ಚಂದಾದಾರಾಗುವವರಿಗೆ 'ಕಿರಿಯರ ಪ್ರಪಂಚ'ದ ಪ್ರಕಟಣೆಗಳನ್ನು ರಿಯಾಯ್ತಿ ಬೆಲೆಗೆ ಕೊಡಲಾಗುವುದು ಪುಸ್ತಕಗಳ ಯಾದಿಗೆ "ಕಿರಿಯರ ಪ್ರಪಂಚ", c/o ನವಯುಗ, ಉಡುಪಿ ಇವರಿಗೆ ಬರೆಯಿರಿ.

ಮನೋವೈಜ್ಞಾನಿಕ ಹರಟೆ

ನಿದ್ರೆ ಮತ್ತು ನನ್ನ ಅರ್ಧಾಂಗಿ

ಬರೆದವರು
ಶ್ರೀ ಶಂಕರ ಐತಾಳ, ಹಾರ್ಯಾಡಿ

ಈ ಶೀರ್ಷಿಕೆಯನ್ನೋದಿ, ನೀವು ಖಂಡಿತವಾಗಿಯೂ 'ಅರೇ, ನಿದ್ರೆಗೂ, ಇವನ ಅರ್ಧಾಂಗಿಗೂ ಏನು ಸಂಬಂಧವಿರಬಹುದು?" ಎಂದು ಆಶ್ಚರ್ಯ ಕುತೂಹಲಾದಿಗಳಿಂದ ತಲೆ (ಇದ್ದರೆ) ಕೆರೆದುಕೊಳ್ಳುತ್ತೀರಿ. ನನಗೆ ಗೊತ್ತು! ಈ ಬರೆಹಕ್ಕೆ ಈಗಿನ ನವ್ಯ ಬರೆಹಗಾರರಂತೆ "ನಿದ್ರೆಯಲ್ಲಿ ನನ್ನ ಕೈ ಹಿಡಿದವಳು" ಅಥವಾ "ಅರ್ಧಾಂಗಿ ನಿದ್ರಾಂಗನೆಯನ್ನಪ್ಪಿದಾಗ— "ಎಂದು ಮೊದಲಾಗಿ ಏನಾದರೂ ಹೊಸ ಹೆಸರನ್ನಿಡಬಹುದಾಗಿತ್ತೇನೋ ಆದರೆ, ನಾನು ಒಂದನೆಯ ತರಗತಿಯಲ್ಲಿರುವ ಕಥೆ "ಕತ್ತೆಯೂ ಕೋಣನೂ "ಎಂಬಂತೆ "ನಿದ್ರೆಯೂ ಮತ್ತು ನನ್ನ ಅರ್ಧಾಂಗಿಯೂ" ಎಂದು ಇಟ್ಟುಬಿಟ್ಟೆ— ಇನ್ನು ಬದಲಿಸುವುದೇಕೆ? ಅದೂ ಅಲ್ಲದೆ ಶೇಕ್ಸ್‌ಪಿಯರ್ ಹೇಳಿದಂತೆ ಹೆಸರಿನಲ್ಲೇನಿದೆ.? ಹೇಳಿ.

ಮತ್ತೊಂದು ವಿಷ್ಯ ಇದೊಂದು ಮನೋವಿಶ್ಲೇಷಣಾತ್ಮಕ ಹರಟೆ; ಗಾಬರಿಯಾಗಬೇಡಿ "ಹರಟೆಯಲ್ಲಿ ಮನೋವಿಜ್ಞಾನ ಅದೆಂತು ಬಂತಪ್ಪಾ"— ಈಗ, ಶ್ರೀ ನರಸಿಂಹಯ್ಯ ಮೊದಲಾದವರು ಹಣಗಳನ್ನು ಬೀಳಿಸಲೂ ಮನೋವಿಜ್ಞಾನದ ಆಗತ್ಯ ಬೇಕು ಎಂದು ವಾದಿಸುತ್ತಾರೆ. ಇಂತಿರುವಾಗ ಹರಟೆಯಲ್ಲಿ ಮನೋವಿಜ್ಞಾನ ಬಂದರೆ ಹೆಚ್ಚೇ?

ಹೌದು; ಅರ್ಧಾಂಗಿ ಮನೆಗೈತರುವ ಮೊದಲೇ ನಾನು ಅರ್ಧವಾಗಿದ್ದೆ.ಹೇಗೆನ್ನುವಿರಾ? ಎಳೆಯದಲ್ಲೇ, ತಂದೆಯನ್ನು, ಕಳೆದುಕೊಂಡು ತಬ್ಬಲಿಯಾಗಿ, ಮುಂದೆ ಬಹಳ, ಕಷ್ಟದಿಂದ, ಹೇಗೋ ಮಾಡಿ, ಸ್ಕೂಲ್ಗೆ ಸೇರಿ, ವಿದ್ಯೆ ಮುಂದುವರಿಸಿ ಕೊನೆಗೆ, ಡಿಗ್ರಿ ಪಡೆದು ಕೆಲಸ ಹಿಡಿದು ಬರುವ ಮಂತ್ಲಿ ಫಿಫ್ಟಿರೂಪೀಸ್(ಮೇಲೆ ಡೀ ಎ ಕತ್ತು) ಗಳಲ್ಲೇ ತಾಯಿ, ತಂಗಿ ತಮ್ಮ ಇರುವ ದೊಡ್ಡ ಫೆಮಿಲಿ ಅಬ್ಧಿಯಲ್ಲಿ ನಾಳಿಗೆ ತೇಲಿ ತೇಲಿ ಮುಳುಗಿ 'ಈಸಬೇಕು, ಇದ್ದು ಜೈಸಬೇಕು;' ಎನ್ನುವ ಮಂತ್ರವನ್ನು ನೆಚ್ಚಿ ಹುಟ್ಟಿಸಿದ ಆ ದೇವ ಹುಲ್ಲ ಮೇಯಿಸಾರ ಎಂದು ನಂಬಿ ಅಂತೂ ಬಹಳ ಅಚ್ಚುಕಟ್ಟಿನಿಂದ ಹೇಗೋ ಎಂತೋ ನನ್ನ ಸಂಸಾರ ರಥವನ್ನು ಮುಂದೂಡುತ್ತಿದ್ದೆ. ಹೀಗಿರುವಾಗ ನನ್ನ ತಾಯಿಗೆ ನನಗೆ ಮದುವೆ ಮಾಡಿ ಅರ್ಧಾಂಗಿಯನ್ನ ಕೊರಳಿಗೆ ಒಂದು ಕನ್ಯೆಯನ್ನು ತಂದು ಬಿಗಿದ. (ಮುಂದೆ ನಾನು ತಾಪತ್ರಯ ಪಡುವ ಆ) ಚಂದವನ್ನು ನೋಡುತ್ತ ನಾಯಬೇಕು ಅನ್ನುವ ದುರ್ಬುದ್ಧಿ ಬಂತು.'ಇಂದಿನಈ ಎಮರ್ಜನ್ಸಿಯಲ್ಲಿ ನಾನು ವಿವಾಹವಾಗುವುದು ಶುದ್ಧ ಗಂಡಾಂತರಕಾರಿ, ಆದುದರಿಂದ ನನಗೀಗ ಮದುವೆ ಬಿಲ್‌ಕುಲ್‌ ಬೇಡ, ಮೊದಲು ನನ್ನ ತಂಗಿಗೆ ಯಾವುದಾದರೊಬ್ಬ (ಸು) ವರನನ್ನು ಗಂಟು ಹಾಕೋಣ! ಆಕೆ ಮನೆಯಿಂದ ಹೊರಗೆ (ಗಂಡನ ಮನೆಗೆ) ಕಾಲಿಟ್ಟ ನಂತರ ಆಗತ್ಯವೆಂದು ಕಂಡು ಬಂದ ಪಕ್ಷದಲ್ಲಿ ನನ್ನ ವಿವಾಹದ ಕುರಿತು ಚರ್ಚಿಸೋಣ; ಏನಾದರೂ ನಿರ್ಣಯ ಕೈಗೊಳ್ಳೋಣ!' ಎಂದು ಆದೆಷ್ಟೋ ರೀತಿಯಲ್ಲಿ ಅದೆಷ್ಟೋ ಬಾರಿ, ಅದೆಷ್ಟೋ ಉಪಾಯಗಳೊಂದಿಗೆ. ತಾಯಿಯೊಡನೆ ಮತ್ತು ನನ್ನ ಮದುವೆಗಾಗಿ ಊಟ ನಿದ್ರೆ ಬಿಟ್ಟು ಒದ್ದಾಡುವ ಸೋದರ ಮಾವನೊಂದಿಗೆ ಹೇಳಿದೆ. ವಾಗ್ವರ್ಧಿನಿ ಸಭೆ ಮಾಡಿದೆ, ಪರೀಕ್ಷಾ ಪ್ರಶ್ನೆ ಪತ್ರಿಕೆಗಳಲ್ಲಿರುವಂತೆ ಸಂದರ್ಭ ಸಹಿತ ವಿವರಿಸಿದೆ, ಮದುವೆಯಿಂದಾಗುವ ಅನಾಹುತ ಅನರ್ಥ ಪರಂಪರೆಗಳನ್ನು ಅವರಿಗೆ ಮಂದಟ್ಟಾಗುವಂತೆ ಅವರ ಅವಗಾಹನೆಗೆ ತಂದೆ.

ಆದರೆ ನಾನೆಷ್ಟೇ ಹಟ ಮಾಡಿದರೇನಂತೆ?

ನನ್ನ ತಾಯಿ ತನ್ನ ಹಟ-- ಕಟವೇನು? ನನಗೊಂದು ಹೆಂಣು ತರಬೇಕೆನ್ನುವ ಆ ಚಟ-ವನ್ನು ಬಿಡಲೇ ಇಲ್ಲ. ತನ್ನ ತಮ್ಮ ಯಾನೇ ನನ್ನ ಸೋದರ ಮಾವನನ್ನು ಹಿಡಿದು ನನಗೊಂದು ಕನ್ಯೆ ಹುಡುಕುವ ಮಹತ್ಕಾರ್ಯವನ್ನು ಮುಂದುವರಿಸಿಯೇ ಬಿಟ್ಟಳು. ನಾನು 'ಪರಮಾತ್ಮಾ ನೀನೇ ಶರಣು' ಎಂದು ಸರ್ವ ಭಾರವನ್ನೂ ಇಲ್ಲದ ಆ ದೇವನ ಮೇಲೆ ಹೊರಿಸಿ ಸುಮ್ಮನೆ ಕಳಿತ ಬಿಟ್ಟೆ—

ಆಯ್ತು.

ಅಂತೂ ಇಂತೂ ಶಾಂತಾ ನನ್ನ ಕಾಂತೆಯಾಗಿ ಬಂದೇ ಬಿಟ್ಟಳು. ಶಾಂತಾ ಯಾರು? ಯಾರ ಮಗಳು? ಎಲ್ಲಿ ಮನೆ? ಎಷ್ಟು ವಿದ್ಯೆ? ರೂಪ ಹೇಗೆ? ಗುಣ ಎಂತು? ಪೌಡರ್ರು ಹಚ್ಚುತ್ತಾಳೆಯೆ? ತುಟಿಗೆ ಕೆಂಪು ಉಪಯೋಗಿಸುವ ಅಭ್ಯಾಸವಿದೆಯೆ? ಎಂದೆಲ್ಲ ಕೇಳಬೇಡ! ಕೇಳಿ ಮೊದಲೇ ಕೆಟ್ಟ ನನ್ನ ತಲೆಯನ್ನು ಇನ್ನಷ್ಟು ಕೆಡಿಸಬೇಡಿ! ಆಕೆ ಯಾರಾದರೇನಂತೆ? ಗುಣ ಹೇಗಿದ್ದರೇನಂತೆ? ಆಕೆ ನನ್ನ ಧರ್ಮಪತ್ನಿ. ಅಷ್ಟಲ್ಲದೆ ಆಕೆಯ ಬಗ್ಗೆ ನಾನು ಹೆಚ್ಚೇನೂ ಹೇಳಬಯಸುವುದಿಲ್ಲ.

ಇನ್ನು ಮುಂದಿನ ಅಧ್ಯಾಯವನ್ನಾರಂಭಿಸುತ್ತೇನೆ

ಶಾಂತಾ ನನ್ನ ಕಾಂತೆಯಾಗಿ ಬಂದಳೆಂದು ಉಲ್ಲೇಖಿಸಿದೆನಷ್ಟೇ.

ಶಾಂತಾಳ ಆಗಮನವಾಗುತ್ತಲೇ ನನ್ನ ತಾಯಿ ಅತ್ತೆಯಾದಳು. ನಾನು ಶಾಂತಾಳ ಗಂಡನಾದೆ. ಶಾಂತಾ ನನ್ನ ತಾಯಿಯ ಸೊಸೆಯಾದಳು ಮತ್ತು ನನ್ನ ತಂಗಿಯ ಅತ್ತಿಗೆಯಾದಳು. ಈ ರೀತಿ ನಮ್ಮ ಮನೆಯ ಪರಿಸ್ಥಿತಿಯುಂಟಾಗಿ ಮನೆಯ ಶಾಂತ ವಾತಾವರಣ, ಶಾಂತೆಯಿಂದ ಹದಗೆಡುವಂತಹ ಚಿಂತಾಜನಕ ಕುಮಾಲೋಚನೀಯ ಸಂದರ್ಭ ಕಾಲಿಡುವ ಸೂಚನೆಯುಂಟಾಯಿತು. ಅದು ಹೇಗೆಂದು ಕೇಳಿದಿರಾ? ಸ್ವಲ್ಪ ತಾಳಿ! ಅದನ್ನೇ ಈಗ ನಾನು ಬಿತ್ತರಿಸುವವನಿದ್ದೇನೆ.

ನನ್ನ ಕೈಹಿಡಿದಾಕೆ, ಮತ್ತೆಲ್ಲ ನವ ಸೊಸೆಯರಂತೆ ಅತ್ತೆ—ನನ್ನ ತಾಯಿ.ತಂಗಿಯರೊಂದಿಗೆ ಸಮಾಹೊಂದಿಕೊಂಡೇ ಹೋಗುತ್ತಿದ್ದಳು. ಅದು ನನಗೂ ಸಂತಸದಾಯಕವೇ ಆಗಿತ್ತು. ಆದರೆ ಅವಳ ಮನಸ್ಸಿನಲ್ಲೇನಿತ್ತೋ ದೇವನೇ ಬಲ್ಲ. ನಾನೇಕೆ ಹೀಗೆನ್ನುವೆನೆನ್ನುವಿರಾ?

ಹೌದು! ಅದಿನ, ಅದೊಂದು ದಿನದ ಆ ರಾತ್ರಿ, ಅದೊಂದು ರಾತ್ರಿ, ನಡುರಾತ್ರಿ, ಮಧ್ಯ ರಾತ್ರಿ, ಹನ್ನೆರಡು ಗಂಟೆಯ ಕಾರ್ಗತ್ತಲ ಭಯಂಕರ ಕರಾಳ ರಾತ್ರಿ ನನ್ನಾಕೆ ಅದೇನನ್ನೋ ಬಡಬಡಿಸ ತೊಡಗಿದಳು ನಾನು ಎಚ್ಚತ್ತೆ. "ಏನೇ ಇದೇ" ಎಂದು ಕೇಳಿದೆ ಆಗವಳೆಂದಳ— 'ನೋಡಿ! ಇನ್ನು ಮೇಲೆ ಇದು ಸಾಧ್ಯವಿಲ್ಲ!' "ಏನು ಸಾಧ್ಯವಿಲ್ಲ?" —ನಾನು ಪುನಃ ಪ್ರಶ್ನಿಸಿದೆ.

"ಈ ದಿನ ನೋಡಿ ಅತ್ತೆ ಅರ್ಧಾತ್ ನಿಮ್ಮ ಹಡೆದವ್ವ— ನನಗೇನೆಲ್ಲ ಬಯ್ದರು. ಅವರಿಗೆ ನನ್ನನ್ನು ನೋಡಿದರೇ ಆಗುತ್ತಿಲ್ಲ. ನಾನೆಷ್ಟು ಸಹನೆಯಿಂದ ಅವರನ್ನು ಹೊಂದಿಕೊಂಡಿರಲು ಬಯಸಿದರೂ ಸಹ ಅವರು ತಮ್ಮ ದರ್ಪವನ್ನೇ ತೋರಿಸುತ್ತಿದ್ದಾರೆ" ಎಂದು ಶಾಂತಾ ಅನ್ನುತ್ತಲೇ ನನಗೆ ದಿಗಿಲಾಯಿತು.

"ಏನೇ ಶಾಂತಾ! ನಮ್ಮ ಮದುವೆಯಾಗಿ ಇದುವರೆವಿಗೂ ಅಮ್ಮನ ವಿರುದ್ಧ ಒಂದೇ ಒಂದು ಮಾತನ್ನೂ ಆಡದ ನೀನು ಇಂದು ಹೀಗೆನ್ನುವಿಯಲ್ಲ? ಅಮ್ಮ ಈ ದಿನ ನಿನಗೇನೆಂದರು ? ಹೇಳೇ'"

"ಊಹೂ ಅದೆಲ್ಲ ಏನನ್ನೆಲಿ? ನಿಮ್ಮನ್ನೆ ನಾನೇಕೆ ನಿಮ್ಮಲ್ಲಿ ಚಾಡಿ ಹೇಳಿ ನಿಷ್ಠೂರ ಕಟ್ಟಿಕೊಳ್ಳಲಿ! ನೀವೂ ನಿಮ್ಮಮ್ಮ ಎಂದಿಗೂ ಒಂದೇ" ಎಂದವಳೇ ಆಕೆ ಮುಸುಕೆಳೆದುಕೊಂಡು ಮಲಗಿದಳು ನಾನವಳ ಬೆನ್ನುತಟ್ಟಿ ಮಾತನಾಡಿಸಲು ಯತ್ನಿಸಿದೆ. ಆದರೆ ನಿರರ್ಥಕ. ಆಕೆ ಬಾಯ್ತೆರೆಯಲೇ ಇಲ್ಲ.

ಅಂದಿನಿಂದ ನಾನೂ ಮನೆಯ ಅತ್ತೆ ಸೊಸೆಯರ ನಡುವಿನ ವರ್ತನೆಗಳನ್ನೂ, ಸಂಭಾಷಣೆಗಳನ್ನೂ ಜಾಗ್ರತೆಯಿಂದ ಪರೀಕ್ಷಿಸ ತೊಡಗಿದೆ. ಆದರೆ ನನಗವರ ನಡುವೆ ಇನಿತೂ ಭಿನ್ನಾಭಿಪ್ರಾಯವಿದ್ದುದು ಕಂಡು ಬರಲೇ ಇಲ್ಲ. ಅತ್ತೆ ಸೊಸೆ, ತಾಯಿ ಮಗಳಂತಿದ್ದರು. ನನ್ನಾಕೆ ಏನಾದರೂ ಕೆಲಸ ಮಾಡುತ್ತಿದ್ದರೆ ಅಮ್ಮ ಓಡೋಡಿ ಬಂದು ಆ ಕೆಲಸದಲ್ಲಿ ಅವಳಿಗೆ ಸಹಾಯ ಮಾಡುತ್ತಿದ್ದರು.

ಶಾಂತಾಳೂ ಅಷ್ಟೇ.

ಆದರೆ, ರಾತ್ರಿ ಬಂತೋ ಸರಿ. ಅವೂ ಅರ್ಧ ರಾತ್ರಿಯಲ್ಲಿ ನನ್ನಾಕೆ ಒಮ್ಮೊಮ್ಮೆ ಪ್ರೇಮ್ಲೀ ನನ್ನ ತಾಯಿ. ತಂಗಿಯರ ವಿಷಯ ಕಂಪ್ಲೇಂಟ್ ಮಾಡಲಾರಂಭಿಸುತ್ತಿದ್ದಳು. ಅರ್ಧ ಮುಕ್ಕಾಲು ಗಂಟೆ ಆಗುವುದರೊಳಗೆ ಆಕೆ ತನ್ನ ಪುರಾಣಕ್ಕೆ ಮಂಗಳ ಹಾಡಿ ಮುಸುಕೆಳೆದುಕೊಂಡು ಮಲಗಿ ಗೊರಗೆ ಹೊಡೆಯತೊಡಗುತ್ತಿದ್ದಳು.

"ಈ ರಾತ್ರಿ ಇದರ ನಿರ್ಣಯವಾಗಲೇ ಬೇಕು!" ಎಂದುಕೊಂಡೇ ಆ ದಿನ ನನ್ನಾಕೆಯನ್ನು ಎದುರಿಸಲು ಉದ್ಯುಕ್ತನಾಗಿ ಮಲಗಿದೆ. ಆ ದಿನವೂ ದಿನದಂತೆಯೇ ನನ್ನಾಕೆ "ನಿಮ್ಮಮ್ಮ ಹಾಗೆ, ನಿಮ್ಮ ತಂಗಿ ಹೀಗೆ" ಎಂದೆಲ್ಲಾ ಚಾಡಿ ಹೇಳತೊಡಗಿದಳು. ನಾನು ಸಿಟ್ಟಿನಿಂದ "ಸುಮ್ಮನೆ ಬಾಯಿಗೆ ಬಂದಂತೆ ಬೊಗಳ ಬೇಡವೇ?" ಎಂದು ಅಬ್ಬರಿಸಿದೆ. ಆಗವಳು "ನೀವು ಎಷ್ಟೆಂದರೂ ಅವರ ಪಕ್ಷವೇ!" ಎಂದಳು. ಆಗ ನಾನು ತಾಳಿಕೊಂಡಿದ್ದೆ, "ಇನ್ನೊಮ್ಮೆ ಆ ಮಾತು ಹೇಳು ನೋಡೋಣ" ಎಂದವನೇ ಅವಳ ಮೊಗಕ್ಕೆ ಟಾರ್ಚನ್ನು ಹಿಡಿದೆ ಹಾಗಾದರೆ ನನ್ನಾಕೆ ಕನಸಿನಲ್ಲಿಯೇ ಮಾತನಾಡುತ್ತಾಳೆಯೇ ಎಂದುಕೊಂಡು ಅವಳನ್ನು ಎಚ್ಚರಿಸಿದೆ, ಹಾಗೂ "ಏನು ಕನಸು ಬಿತ್ತು?" ಎಂದು ಕೇಳಿದೆ. ಆಗ ಅವಳು "ಕನಸೇ? ಏನೂ ಕನಸು ಬೀಳಲಿಲ್ಲ. ನನ್ನನ್ನು ನಿದ್ರೆಯಿಂದ ಎಚ್ಚರಿಸಿದುದು ಏತಕ್ಕೆ" ಎಂದು ಪ್ರಶ್ನಿಸಿದಳು

ಸರಿ! ಆಗ ನನಗರ್ಥವಾಯಿತು. ಇವಳಿಗೆ ಹಿಡಿದಿರೋದು ನಿದ್ರೆಯಲ್ಲಿನ ಮಾತನಾಡುವ ಅದೇನೋ ರೋಗಾ ಅಂತ.

ಮರುದಿನವೇ ಅವಳನ್ನು ಕಟ್ಟಿಕೊಂಡು ಸುಪ್ರಸಿದ್ಧ ಮನೋವಿಜ್ಞಾನಿಗಳಾದ ಡಾ॥ ಸೀತಾಪತಿಯವರಲ್ಲಿಗೆ ಓಡಿದೆ. ಅವರು ಅದೂ ಇದೂ ಪ್ರಶ್ನೆ ಕೇಳಿದರು ನಾನು ಎಲ್ಲ ವಿಷಯಗಳನ್ನೂ ವಿವರಿಸಿದೆ.

ಅವರು "ಇದು ನಿದ್ರೆಯ ರೋಗ! ಎಂದು ಅದಕ್ಕೆ ಏನೋ ಅಂಗ್ಲ ಹೆಸರನ್ನು ಉಚ್ಚರಿಸಿದರು ನಾನು ಆ ರೋಗಕ್ಕೆ ಕಾರಣವೇನೆಂದು ವಿಚಾರಿಸಿದೆ.

ಅವರು ಈ ಕೆಳಗಿನಂತೆ ತಮ್ಮ ಸಿದ್ಧಾಂತವನ್ನಿಟ್ಟರು. "ಮಾನವನು ಬಾಲ್ಯದಲ್ಲೇ ತನ್ನ ಭವಿಷ್ಯದ ಕುರಿತು ಆಲೋಚಿಸುತ್ತಾನೆ. ಹೆಚ್ಚಿಗೆ ಪಕ್ಷ ಅವನಿಚ್ಛೆಗನುಸರಿಸಿಯೂ ಆಗುತ್ತದೆ. ಆದರೆ, ಒಂದು ವೇಳೆ ಅದಕ್ಕೆ ವಿರುದ್ಧವಾಗಿ ಏನಾದರೂ ಸಂಭವಿಸಿದರೆ ಆತನ ಅಂತಃಕರಣ ಆ ರೋಗಕ್ಕೆ ಬಲಿಯಾಗುತ್ತಾನೆ. ಈಗ ನಿಮ್ಮಾಕೆಯನ್ನೇ ತೆಗೆದುಕೊಳ್ಳಿ. ಆಕೆ ಚಿಕ್ಕಂದಿನಲ್ಲಿಯೇ 'ಅತ್ತೆ ಎಂದರೆ ಅದೊಂದು ಭಯಂಕರ ದೆವ್ವ, ಯಾವಾಗಲೂ ಸೊಸೆಯಂದಿರನ್ನು ಕಾಡುವುದೇ ಆ ದೆವ್ವದ ಗುಣ' ಎಂದು ದೃಢವಾಗಿ ನಂಬಿದವಳು. ಈಗ ಮದುವೆಯಾಗಿ ಅವರು ಪಡೆದುದು ತಾಯಿಯಂತ ಹೆಮ್ಮೆಯ ಸ್ವಭಾವದ ಅತ್ತೆಯನ್ನು. ಸರಿ, ಆದರೆ ಹಿಂದೆ ಅವರಲ್ಲಿ ಬೇರೂರಿದ ಆ ಭಾವನೆಗಳನ್ನು ಈಗ ಒಮ್ಮೆಲೇ ಮರೆಯತೆಗೆಯಲು ಸಾಧ್ಯವಾಗಲಾರದು. ನನಗೆ ಅವರ ಅಭಿಮತ ಸರಿಯೇ ಅನಿಸಿತು.

"ಇದಕ್ಕೇನೂ ಪರಿಹಾರವಿಲ್ಲವೇ?" ನಾನು ಪ್ರಶ್ನಿಸಿದೆ.

"ಇದಕ್ಕೆಲ್ಲ ಮದ್ದು ಮಾಡಿ ಫಲವಿಲ್ಲ. ಸ್ವಲ್ಪಕಾಲ ನಿಮ್ಮಾಕೆ ಈ ತರಹ ವರ್ತಿಸಬಹುದು. ಕೊನೆಗೆ ಅವರ ಕೆಟ್ಟ ಭಾವನೆ ದೂರಾಗಲು ಅವರು ತನ್ನಂತಾನೇ ಈ ರೋಗದಿಂದ ಪಾರಾಗುತ್ತಾರೆ. ಹೆದರಬೇಡಿ. ಹೋಗಿ" ಎಂದು ನಮ್ಮನ್ನು ಕಳಿಸಿದರು.

ಶಬ್ದ ಚಿತ್ರ

ಗಡಿಯಾರ ಸಂಶೋಧಕ ಹಯುಜೆನ್ಸ್

ಕೆಲವರ ರೀತಿಯೇ ಹಾಗೆ! ಅವರು ಯಾವುದೇ ದೇಶದಲ್ಲಿ ಯಾವುದೇ ಕಾಲದಲ್ಲಿ ಹುಟ್ಟಿದ್ದರೂ ತಮ್ಮ ಅಸಮಾನ ಪ್ರತಿಭೆಯಿಂದ ಇಡೀ ಜಗತ್ತಿನ ಮರ್ಯಾದೆಗೆ ಪಾತ್ರವಾಗುತ್ತಾರೆ; ಸರ್ವಕಾಲಕ್ಕೂ ಸನ್ಮಾನನೀಯರಾಗುತ್ತಾರೆ. ಹಾಲೆಂಡಿನಲ್ಲಿ ಹದಿನೇಳನೆಯ ಶತಮಾನದಲ್ಲಿ ಜನಿಸಿದ ಕ್ರಿಶ್ಚಿಯನ್ ಹಯುಜೆನ್ಸ್ ಎಂಬ ಮಹಾ ವಿಜ್ಞಾನಿಯು ಇದೇ ಶ್ರೇಣಿಗೆ ಸೇರುತ್ತಾರೆ.

'ಟಿಕ್.... ಟಿಕ್... ಟಿಕ್.... ಟಾಕ್' ಎಂದು ಸದ್ದು ಮಾಡುತ್ತಾ ಯಾರೊಬ್ಬರ ಕಷ್ಟನಿಷ್ಠುರಗಳನ್ನೂ ಲೆಕ್ಕಿಸದೆ ತನ್ನಷ್ಟಕ್ಕೆ ತಾನೇ ಮುಂದುವರಿಯುತ್ತಿರುವ ಪೆಂಡುಲಂ ಗಡಿಯಾರವನ್ನು ಪ್ರತಿಯೊಬ್ಬರೂ ನೋಡಿದ್ದರೂ, ಅದರ ಜನಕನಾರು ಎಂದು ಬಹುಮಂದಿಗೆ ತಿಳಿದಿರಲಾರದು. ಗಡಿಯಾರದ ಒಂದೊಂದು ಟಿಕ್ ಟಿಕ್ ಸದ್ದೂ ೧೬೨೯ ಏಪ್ರಿಲ್ ೧೪ರಂದು ಹೇಗ್ ನಗರದಲ್ಲಿ ಹುಟ್ಟಿದ ಕ್ರಿಶ್ಚಿಯನ್ ಹಯುಜೆನ್ಸ್ ಎಂಬ ಮಹಾ ವಿಜ್ಞಾನಿಯ ಕೀರ್ತಿಯನ್ನು ಕೊಂಡಾಡುತ್ತಿದೆ.

ಕೇವಲ ನಾವು ಮನೆಗಳಲ್ಲಿ ಉಪಯೋಗಿಸುತ್ತಿರುವ ಗಡಿಯಾರಗಳು ಮಾತ್ರ ಅವರ ಸಂಶೋಧನೆಯ ಫಲವಲ್ಲ. ಅವರ ಸಾಧನೆಯಿಂದ ಖಗೋಳ ಶಾಸ್ತ್ರಕ್ಕೆ ಅತೀವ ಸಹಾಯವು ದೊರಕಿದೆ. ಹದಿನೇಳನೆಯ ಶತಮಾನದಲ್ಲಿ ಜನಿಸಿದ್ದರೂ, ಯಾವುದೇ ಶತಮಾನದವರೂ ಕೃತಜ್ಞತೆಯಿಂದ ಸ್ಮರಿಸಬಹುದಾದಂತಹ ಕೀರ್ತಿಯನ್ನು ಗಳಿಸಿಕೊಂಡಿರುವ ಹಯುಜೆನ್ಸ್‌ರವರನ್ನು ಜಗತ್ತಿನ ಅದ್ವಿತೀಯ ವಿಜ್ಞಾನಿಗಳಾದ ಗೆಲಿಲಿಯೋ ಹಾಗೂ ನ್ಯೂಟನ್‌ರವರೊಂದಿಗೆ ಹೋಲಿಸಲಾಗುತ್ತಿದೆ. ವಿಜ್ಞಾನವು ಹಯುಜೆನ್ಸ್‌ರವರಿಗೆ ವಂಶಪಾರಂಪರ್ಯವಾಗಿ ಬಂದುದಲ್ಲ. ಅವರ ತಂದೆ ಕವಿಯಾಗಿದ್ದರು. ಆದರೆ ಹಯುಜೆನ್ಸ್‌ರ ತಲೆಯಲ್ಲಿ ಗಣಿತ ಶಾಸ್ತ್ರವು ಮನೆ ಮಾಡಿಕೊಂಡಿತ್ತು. ಅವರು ಹದಿನಾರನೆಯ ವಯಸ್ಸಿನಲ್ಲಿ ಕಾಲೇಜಿನಲ್ಲಿ ಕಲಿಯುತ್ತಿರುವಾಗ ಗಣಿತದ ಮೇಲೆ ಪ್ರಬಂಧವೊಂದನ್ನು ಬರೆದರು. ಅದರಲ್ಲಡಕವಾಗಿದ್ದ ಪ್ರತಿಭೆಯಿಂದ ಅಂದಿನ ಕಾಲದ ಮಹಾ ಗಣಿತಜ್ಞರಾದ ಡೆಸ್ಕಾರ್ಟೆಸ್‌ರವರೂ ಚಕಿತಗೊಂಡರಂತೆ. ಹಯುಜೆನ್ಸ್‌ರಿಗೆ ಗಣಿತ ಶಾಸ್ತ್ರದಲ್ಲಿದ್ದ ಅಕ್ಕರೆ ವಿಜ್ಞಾನದಲ್ಲಿಯೂ ಇತ್ತು.

ಅಂತೆಯೇ ಅವರು ತಮ್ಮ ಮನಸ್ಸಿಗೆ ಹೊಳೆದುದನ್ನು ಸಿದ್ಧಾಂತಪೂರ್ವಕವಾಗಿ ಪ್ರಯೋಗ ಶಾಲೆಯಲ್ಲಿ ಕಾಣಲು ಯತ್ನಿಸುತ್ತಿದ್ದರು. ಪ್ರತಿಯೊಂದು ಸಮಸ್ಯೆಯನ್ನೂ ಅವರ ಗಾಢವಾಗಿ ಚಿಂತಿಸಿ ಅದಕ್ಕೇನಾದರೊಂದು ಮಾರ್ಗವನ್ನು ಕಂಡುಹಿಡಿದೇ ತೀರುತ್ತಿದ್ದರು. ಸಮುದ್ರ ಪ್ರಯಾಣ ಹಾಗೂ ಭೂಗೋಳ ಶಾಸ್ತ್ರಗಳಿಗೆ ಅನುಕೂಲಿಸುವಂತಹ ಪೆಂಡುಲಂ ಗಡಿಯಾರವೊಂದನ್ನು ಕಂಡುಹಿಡಿಯುವ ಅಭಿಲಾಷೆಯು ಅವರಲ್ಲಿ ಹುಟ್ಟಿತು. ಪೆಂಡುಲಮ್ಮಿನ ಬಗ್ಗೆ ಇವರ ಹಿಂದಿನ ವಿಜ್ಞಾನಿಯಾದ ಗೆಲಿಲಿಯೋ ಕುಸು ಮಟ್ಟಿಗೆ ಕಂಡುಹಿಡಿದಿದ್ದರು

ಹಯುಜೆನ್ಸ್‌ನವರು ಈ ಪೆಂಡುಲಂ ಸೂತ್ರದಾಧಾರದ ಮೇಲೆ ಗುರುತ್ವಾಕರ್ಷಣೆಯ ವೇಗವನ್ನು ಕಂಡು ಹಿಡಿಯಲಾರಂಭಿಸಿದರು. ೧೬೫೬ರ ಹೊತ್ತಿಗೆ ಅವರು ಒಂದು ಮುಖ್ಯ ಅಂಶವನ್ನು ಕಂಡುಹಿಡಿದರು. ಪ್ಯಾರಿಸ್ಸಿನಲ್ಲಿ ಉಪಯೋಗಿಸುವ ಗಡಿಯಾರದ ಪೆಂಡಲುಂಗಿಂತ ದಕ್ಷಿಣ ಫ್ರಾನ್ಸಿನ ಬೇರೊಂದು ಪ್ರದೇಶದಲ್ಲಿ ಉಪಯೋಗಿಸುವ ಪೆಂಡುಲಂ ೨೧ ಮಿಲ್ಲಿ ಮೀಟರುಗಳಷ್ಟು ಚಿಕ್ಕದಿರಬೇಕೆಂಬುದೇ ಅದು. ಭೂಮಿಯು ತನ್ನ ಅಕ್ಷದ ವೇಲೆಯೇ ಸುತ್ತುತ್ತಿದೆ ಎಂಬುದಕ್ಕೆ ಇದೇ ಮೊದಲ ಸಿದ್ಧಾಂತ.

ಹಯುಜೆನ್ಸ್‌ರವರು ೧೬೭೫ರಲ್ಲಿ ಗಡಿಯಾರಗಳ ಸ್ಪ್ರಿಂಗ್ ಮತ್ತು ಬ್ಯಾಲೆನ್ಸ್‌ಗಳನ್ನು ಕಂಡುಹಿಡಿದರು. ಖಗೋಳ ವೀಕ್ಷಕರಿಗೆ ಅವಶ್ಯವಾದ ದೂರದರ್ಶಕ ಯಂತ್ರಗಳಿಗೆ ಬೇಕಾಗುವ ಗಾಜುಗಳನ್ನು ಸಿದ್ಧಪಡಿಸುವ ಕಾರ್ಯವನ್ನು ಹಯುಜೆನ್ಸ್ ತಮ್ಮ ಸೋದರ ಕಾನ್‌ಸ್ಟಾಂಟಿನ್‌ರವರ ಸಹಕಾರದಿಂದ ಕೈಗೊಂಡರು. ೧೬೫೫ರಲ್ಲಿ ಅವರು ತಾನೇ ತಯಾರಿಸಿದ ದೂರದರ್ಶಕ ಯಂತ್ರದ ಸಹಾಯದಿಂದ ಶನಿಗ್ರಹದ ಸುತ್ತಲೂ ಧೂಳಿನ ಒಂದು ಪದರವು ಆವರಿಸಿಕೊಂಡಿದೆಯೆಂದು ಕಂಡುಹಿಡಿದರು. ಪಾರದರ್ಶಕ, ದೂರದರ್ಶಕ ಯಂತ್ರಗಳಿಗೆ ಬೇಕಾದ ಗಾಜುಗಳನ್ನು ಸಿದ್ಧಗೊಳಿಸುತ್ತಿದ್ದ ಮೂಲಕ ಬೆಳಕಿನ ಕಿರಣಗಳು ಶಬ್ದದಂತೆ ಒಂದೆಡೆಯಿಂದ ಮತ್ತೊಂದೆಡೆಗೆ ಪ್ರವಹಿಸುವುದೆಂದು ಕಂಡುಹಿಡಿದರು. ಹಯುಜೆನ್ಸ್‌ರ ಸೂತ್ರಗಳನ್ನು ಆಧಾರವಾಗಿಟ್ಟುಕೊಂಡೇ ಐನ್‌ಸ್ಟೀನರು ಮಹತ್ವದ ಸಂಶೋಧನೆಗಳನ್ನು ನಡೆಸಿದರು.

ಪ್ಯಾರಿಸಿನಲ್ಲಿ ವಿಜ್ಞಾನ ಅಕಾಡೆಮಿಯನ್ನು ಆರಂಭಿಸಿದಾಗ, ಫ್ರೆಂಚ್ ಮಂತ್ರಿಯಾದ ಕೋಲ್ಬರ್ಟ್ ಎಂಬುವರು ಅಕಾಡೆಮಿಯ ಅಧ್ಯಕ್ಷಸ್ಥಾನವನ್ನು ವಹಿಸುವಂತೆ ಕ್ರಿಶ್ಚಿಯನ್ ಹಯುಜೆನ್ಸ್‌ರವರನ್ನು ಖುದ್ದಾಗಿ ಕೇಳಿಕೊಂಡರು. ಆಹ್ವಾನವನ್ನು ಮನ್ನಿಸಿ, ಅವರು ಅಲ್ಲಿ ೧೬೬೬ರಿಂದ ೧೬೮೧ರವರೆಗೆ ಸೇವೆ ಸಲ್ಲಿಸಿದರು.

ಇಂದು, ಬಹುವೇಗದಿಂದ ಮುನ್ನಡೆಯುತ್ತಿರುವ ವೈಜ್ಞಾನಿಕ ಜಗತ್ತಿಗೆ, ಹಯುಜೇನ್ಸ್‌ರವರ ಸಂಶೋಧನೆಗಳು ಅತ್ಯಂತ ಸಹಾಯಕಾರಿಯಾಗಿದೆಯೆಂದರೆ ಅತಿಶಯೋಕ್ತಿಯಲ್ಲ!

ವಿಜ್ಞಾನ ವಿಸ್ಮಯ

ಮೂರು ದಿನಗಳಲ್ಲೇ ಹುಲ್ಲುಗಾವಲು

ತಂತಿ ಹಾಕುವಾಗ ಕೊಳವೆಗಳನ್ನು ಹಾಕುವಾಗ, ಭೂಗರ್ಭ ಚರಂಡಿಗಳನ್ನು ತೋಡುವಾಗ ಹೀಗೆ ಅನೇಕ ಕಾರಣಗಳಿಂದ ನೆಲವನ್ನು ಅಗೆದು ಅಗೆದು ಆ ರೀತಿ ಅಗೆದ ಭಾಗಗಳಲ್ಲಿ ಬೆಳೆ ಬೆಳೆಯುವ ಶಕ್ತಿಯೇ ಹೊರಟು ಹೋಗಿರುತ್ತದೆ. ಭೂಮಿಯ ಇಂತಹ ಅಶಕ್ತತೆಯನ್ನು ಹೋಗಲಾಡಿಸುವ ಹೊಸದೊಂದು ಮಾರ್ಗವನ್ನು ಜರ್ಮನ್ ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ.

ಜರ್ಮನಿಯಲ್ಲಿನ ತೋಟಗಾರಿಕೆಯ ನಿಪುಣರು ತಮ್ಮ ಉದ್ಯಾನಗಳನ್ನು ಸರ್ವಾಂಗ ಸುಂದರವಾಗಿಡುವಂತಹ ಹೊಸ ಮಾರ್ಗವೊಂದನ್ನು ಕಂಡು ಹಿಡಿದಿದ್ದಾರೆ. ಚರಂಡಿ ಹಾಕುವುದಕ್ಕೋ, ಕೊಳವೆಗಳನ್ನು ಹಾಕುವುದಕ್ಕೋ, ಭೂಮಿಯನ್ನು ಆಡಿಗಡಿಗೆ ತೋಡುತ್ತಿರುವುದರಿಂದ ಆ ಭಾಗದಲ್ಲಿ ಬೆಳೆ ಬೆಳೆವ ಶಕ್ತಿಯನ್ನೇ ಭೂಮಿಯು ಕಳೆದುಕೊಂಡಿರುತ್ತದೆ, ಭೂಮಿಯ ಈ ಅಶಕ್ತತೆಯನ್ನು ನೀಗಿಸಲು ಕಂಡು ಹಿಡಿದಿರುವ ಈ ಮಾರ್ಗದಿಂದ ಭೂಮಿಯು ಮೂರನೇ ದಿನಗಳಲ್ಲಿ ತನ್ನ ಶಕ್ತಿಯನ್ನು ಮರಳಿ ಪಡೆಯುವುದೆಂದು ಹೇಳಲಾಗಿದೆ.

ದಕ್ಷಿಣ ಜರ್ಮನಿಯಲ್ಲಿರುವ ಬಾದ್ ಡಿಜೆನ್‌ಬಾಕ್ ಎಂಬ ನಗರದಲ್ಲಿ ಭೂಮ್ಯಂತರ್ಗತ ಚರಂಡಿಗಳನ್ನು ಹಾಕುವ ಸಲುವಾಗಿ ೧೨ ಮೀಟರ್ ಅಗಲವೂ ೩೦೪ ಮೀಟರ್ ಉದ್ದವೂ ಆದ ಹಳ್ಳವನ್ನು ತೋಡಲಾಯಿತು. ಕೆಲಸವು ಮುಗಿದು ಹಳ್ಳವನ್ನು ಮುಚ್ಚಿದ ಮೇಲೆ ಆ ಸ್ಥಳದ ಭೂಮಿಯ ಮೇಲೆ ಬಹುಕಾಲ ಹುಲ್ಲು ಸಹಾ ಬೆಳೆಯಲಿಲ್ಲ. ಆಗ ಜರ್ಮನ್ ತೋಟಗಾರಿಕೆಯ ಪರಿಣತರು ಕಂಡು ಹಿಡಿದಿರುವ ಹೊಸ ವಿಧಾನವನ್ನು ಅನುಸರಿಸಿ, ಮೂರೇ ದಿನಗಳಲ್ಲಿ ಇಚ್ಛಿಸಿದ ಫಲಿತಾಂಶವನ್ನು ಪಡೆಯಲಾಯಿತು. ಈ ವಿಧಾನವನ್ನು ಒಮ್ಮೆ ಕೈಗೊಳ್ಳುವುದರಿಂದ ಮುಂದೆ ಸಹ ಭೂಸವೆತ, ಭೂಕೊರೆತಗಳ ಭಯವಿರುವುದಿಲ್ಲ.

ಈ ಹೊಸ ವಿಧಾನದ ಪ್ರಕಾರ ಹಳ್ಳ ತೋಡಿ, ಮುಚ್ಚಿದ ಭೂಭಾಗದ ಮೇಲೆ ೨ ಸೆಂಟಿ ಮೀಟರುಗಳಷ್ಟು ಎತ್ತರದಷ್ಟು ಒಂದು ಗಾರೆಯ ತರಹೆಯ ಪದರವನ್ನು ಹಾಕಲಾಯಿತು. ಇದರ ಮೇಲೆ ಕೆಲವು ಸೆಂಟಿ ಮೀಟರುಗಳ ಎತ್ತರದ ಮಣ್ಣನ್ನು ಹರಡಲಾಯಿತು. ಅದರ ಮೇಲೆ ರಸಾಯನಿಕ ಗೊಬ್ಬರವನ್ನು ಹರಡಿ, ಹೂವಿನ ಗಿಡಗಳನ್ನೂ, ಕೋಕ ಮುಂತಾದ ಮರಗಳ ಬೀಜಗಳನ್ನೂ ನೆಡಲಾಯಿತು. ಅಲ್ಲದೆ ಹುಲ್ಲು ಬೇರೆಕಡೆ ಬೆಳೆದಿರುವುದನ್ನು ಹಾಗೆಯೇ ಹೆಕ್ಕಳೆಗಳನ್ನಾಗಿ ಕತ್ತರಿಸಿ ಅವುಗಳನ್ನು ಅಲ್ಲಿ ತಂದಿಡಲಾಯಿತು. ಮಂತ್ರವಾದಿಯು ಮಾಡಿದ ಯಕ್ಷಿಣಿಯಂತೆ, ಇವು ಮೂರೇ ದಿನಗಳಲ್ಲಿ ಬೆಳೆದುವು. ಮರಗಳು ಬೆಳೆಯತೊಡಗಿದಂತೆ ಭೂಮಿಯು ಅಗೆಯುವುದಕ್ಕೆ ಮುನ್ನ ಹೇಗಿದ್ದಿತೋ, ಹಾಗೆಯೇ ಅದೇ ಶಕ್ತಿಯನ್ನು ಪಡೆದುಕೊಂಡಿತು. ಭೂಮಿಯು ಗಟ್ಟಿಯಾದುದಲ್ಲದೆ, ಸಾಂಭರಿತವೂ ಆಯಿತು. ಇದಕ್ಕೆ ಸೇರಿಸಲಾಗುವ ಕೆಲವು ರಸಾಯನಿಕ ವಸ್ತುಗಳು ಭೂಕೊರೆತವೇ ಆಗದಂತೆ ರಕ್ಷಿಸುತ್ತವೆ.

ಇದರಲ್ಲಿ ಎರಡನೆಯ ಹಂತದ ಕಾರ್ಯವು ಪ್ಯಾರಿಸ್‌ನಲ್ಲಿ ತಯಾರಿಸಲ್ಪಟ್ಟ ಪ್ರೆಟ್ಟಿ ವೀಕ್ಷರ್ ಎಂಬ ಯಂತ್ರದಿಂದ ನಡೆಯುತ್ತದೆ. ಇದು ಈ ಭೂಭಾಗದ ಮೇಲೆ ಅತಿ ತೆಳುವಾದ ನಯ ಗಾರೆಯ ಪದರವೊಂದನ್ನು ಹಾಕುವುದು. ಇದನ್ನು ಭೇದಿಸಿಕೊಂಡು ಹೊರ ಬರುವ ಶಕ್ತಿಯು ಹುಲ್ಲಿಗಿದೆ. ಆದರೆ ಪೊದರು, ಮುಳ್ಳುಗಿಡ ಮುಂತಾದುವುಗಳು ಕೆಳಗೇ ಒಣಗಿ ಹೋಗುತ್ತವೆ. ಕೆಲವು ವರ್ಷಗಳ ನಂತರ ಮರಗಳಿಂದ ನೋಡಿದ ಹುಲ್ಲುಗಾವಲನ್ನು ಕಾಣಬಹುದು.

ಈ ವಿಧಾನ ಪ್ರಕಾರ ಒಂದು ದಿನಕ್ಕೆ ೮೦೦ ಚದರ ಮೈಲುಗಳಷ್ಟು ವಿಸ್ತೀರ್ಣ ಪ್ರದೇಶದಲ್ಲಿ ಕೆಲಸ ಮಾಡಬಹುದು.

ಪ್ರವಾಸ ರದ್ದಾಯಿತು

(ಹನ್ನೊಂದನೇ ಪುಟದಿಂದ)

"ಅದೆಲ್ಲಾ ಬೇಡ ನೀನು ಹೇಳುವುದಾದರೆ ಪೂರ್ಣ ಮನಸ್ಸಿನಲ್ಲಿ ಹೇಳು. ಹೀಗೆ ನರಳುತ್ತಾ ಹೇಳಿದರೆ ನನಗೆ ಸರಿಯಾಗದು. ಪ್ರವಾಸ ಹೊರಡುವುದಾದರೆ ನೀನೂ ಬರುತ್ತೀಯೋ ಇಲ್ಲವಾ ತಿಳಿಸು" ನಿನ್ನ ಸರಿಯಾದ ಅಭಿಪ್ರಾಯವನ್ನು ತಿಳಿಸು'ಎಂದ ಚಂದ್ರು

"ಆಗಲಿ ಮಹಾರಾಯ ಹೋಗುವ, ಖಂಡಿತವಾಗಿಯೂ ಹೋಗುವ ನೀನು ಮುಂದಾಗಿ ಹೊರಟರೆ ನಾನು ಹಿಂದಾಳಾಗಿ ಬರಲು ಸದಾ ಸಿದ್ಧ. ಸರಿ, ಯಾವಾಗ ಹೋಗುವುದು? ಯಾವೂರಿಗೆ ಹೋಗುವುದು? ಹೇಗೆ ಹೋಗುವುದು? ಎಷ್ಟು ಜನ ಬರ್ತಾರೆ? ಯಾರ್‍ಯಾರು ಬರ್ತಾರೆ? ಎಷ್ಟು ದಿನ ರಜೆ ಹಾಕಬೇಕು? ಏನ ಕತೆ?'

"ಸ್ವಲ್ಪ ಸುಧಾರಿಸಿಕೊ ಮಹಾರಾಯ. ಅವಸರ ಮಾಡಬೇಡ ನೋಡು, ಮುಂದಿನವಾರ ಒಟ್ಟಿಗೆ ಮೂರುದಿನ ರಜವಿದೆ. ಇಲ್ಲೇ ಇದ್ದರೆ ಮುಟ್ಟಿನ ಹೆಂಗಸರಂತೆ ಮೂರು ದಿನವನ್ನು ಕಳೆಯ ಬೇಕಾಗುತ್ತದೆ. ಆದ್ದರಿಂದ ಅದರೊಂದಿಗೆ ನಾಲ್ಕು ದಿನ ಸಿ. ಎಲ್. ಹಾಕಿದರೆ ಭಾನುವಾರವೂ ಸೇರಿ ಎಂಟು ದಿನ ರಜೆ ಸಿಗುತ್ತದೆ ಈ ಅಂತರದಲ್ಲಿ ಎಲ್ಲಿಗೆ ಬೇಕಾದರೂ ಹೋಗಿ ಬರಬಹುದು. ಎಲ್ಲಿಗೆ ಹೋಗೋಣ ಹೇಳು?"

"ಲಂಡನ್ನಿಗೆ ಹೋಗೋಣ"

"ನೋಡು, ನೀನು ಹೀಗೆಲ್ಲಾ ಹರಟೆ ಬೇಡ ಇಲ್ಲದಿದ್ದನ್ನೆಲ್ಲಾ ಹೇಳಬೇಡ"

"ಏನು? ಲಂಡನ್ ಇಲ್ಲವೇ?"

"ಲಂಡನ್ ಇದೆ, ನನಗೂ ಗೊತ್ತು. ಆದರೆ ಈ ಜನ್ಮದಲ್ಲಿ ಲಂಡನ್ನಿಗೆ ಹೋಗುವ ಕನಸನ್ನು ಬಿಟ್ಟು ಬಿಡು. ವ್ಯರ್ಥವಾಗಿ ಸಮಯ ಹಾಳು ಮಾಡಬೇಡ ಸ್ವಲ್ಪ ಸೀರಿಯಸ್ ಆಗಿ ಮಾತನಾಡು. ಹೇಳು, ಎಲ್ಲಿಗೆ ಹೋಗೋಣ?"

"ಹಾಗಾದರೆ ಬೆಂಗಳೂರಿಗೆ ಹೋಗೋಣ"

"ಏನು, ನಿನಗೆ ಅತ್ತೆ ಮನೆ ಇದೆಯೋ ಬೆಂಗಳೂರಲ್ಲಿ ಎಷ್ಟು ಸರ್ತಿ ಹೋಗಿಬರಲಿಲ್ಲ ಆ ಬೆಂಗಳೂರಿಗೆ, ಅಲ್ಲಿಯ ಗೊಂದಲಮಯ ವಾತಾವರಣ ನನಗೇನೂ ಹಿಡಿಸೋಲ್ಲಪ್ಪ ಅಲ್ಲಿಗೆ ಹೋದರೆ ಬರೀ ದುಡ್ಡು ಖರ್ಚು ಮಾಡಿ ಬರಬೇಕು ಅಷ್ಟೆ. ನನಗೇನೂ ಇಷ್ಟವಿಲ್ಲಪ್ಪ ನೋಡಿದ ಊರನ್ನೇ ಪುನಃ ಪುನಃ ನೋಡಿ ಏನು ಪ್ರಯೋಜನ'

"ಹಾಗಾದರೆ ಎಲ್ಲಿಗೂ ಹೋಗುವುದು ಬೇಡ'

"ಹೀಗೆಂದರೆ ಹೇಗೆ? ಸ್ವಲ್ಪ ಯೋಚಿಸು."

"ಯೋಚಿಸ ವಸ್ತು, ವ್ಯವಧಾನ ನನಗಿಲ್ಲ ಮಹಾರಾಯ! ನೀನೇ ಯೋಚಿಸು ನೀನೇ ಹೇಳು ರಾಜ ಪಟ್ಟ, ಮಂತ್ರಿ ಪದವಿ ಎಲ್ಲವನ್ನೂ ನಿನಗೆ ಬಿಟ್ಟುಕೊಟ್ಟಿದ್ದೇನೆ. ಸರ್ವಾಧಿಕಾರವೂ ನಿನ್ನದೇ. ನೀನೇ ಹೇಳು, ಎಲ್ಲಿಗೆ ಹೋಗೋಣ?"

"ನೋಡು, ನನ್ನ ಐಡಿಯ ಹೀಗಿದೆ. ಇಲ್ಲಿಂದ ಬೆಳಗ್ಗಿನ ಬಸ್ಸಿನಲ್ಲಿ ಐಯನಕೆರೆಗೆ ಹೋಗುವ'

"ಸರಿ ಹೋಯ್ತು. ಎಲ್ಲಾ ಬಿಟ್ಟು ಮಗ ಭಂಗಿ ನೆಟ್ಟ ಅಂತಾರಲ್ಲ ಹಾಗಾಯ್ತು. ಕೆರೆ ನೋಡಲೂ ದುಡ್ಡು ಖರ್ಚ ಮಾಡಬೇಕೇನಯ್ಯ. ಅದೂ ಅಯ್ಯನ ಕೆರೆಯಂತೆ ಅಮ್ಮನ ಕೆರೆ ಇಲ್ಲವೇ?"

"ನಾನು ಹೇಳುವುದನ್ನು ಪೂರ್ತಿ ಕೇಳು. ಕೆರೆಗೆ ಬಿಟ್ಟವರ ಹಾಗೆ ತಡಬಡಿಸಬೇಡ ಐಯನ ಕೆರೆ ಒಂದು ಪ್ರೇಕ್ಷಣಿಯ ಸ್ಥಳ, ಇಲ್ಲಿಂದ ಮೊದಲು ಅಲ್ಲಿಗೆ ಹೋಗುವ. ಅಲ್ಲಿಂದ ಕಡೂರಿಗಾಗಿ ತರಿಕೆರೆ ತರೀಕೆರೆಯಿಂದ ಭದ್ರಾವತಿ ಅಲ್ಲಿಯ ಫ್ಯಾಕ್ಟರಿಗಳನ್ನೆಲ್ಲ ನೋಡಿಕೊಂಡು ಶಿವಮೊಗ್ಗಕ್ಕೆ ಹೋಗುವ ಶಿವಮೊಗ್ಗದಿಂದ ಸೀದ ಜೋಗ್‌ಫಾಲ್ಸ್..."

"ಅದಾದ ಮೇಲೆ ಬೇಡವೋ?"

"ನಾನು ಹೇಳುವುದನ್ನು ಸುಮ್ಮನೆ ಕೇಳು, ಜೋಗ್ ಫಾಲ್ಸ್‌ನಲ್ಲಿ ಎಲ್ಲವನ್ನು ನೋಡಿ ವಾಪಾಸು ಬರುವಾಗ ಸಮಯ ದೊರಕಿದರೆ ಕೆಮ್ಮಣ್ಣು ಗುಂಡಿ, ಬಕ್ಕವಳ್ಳಿ, ಚಿತ್ರದುರ್ಗ ಇತ್ಯಾದಿಗಳನ್ನು ನೋಡಿಕೊಂಡು ಬರಬಹುದು, ಇಡಿಮ ಎಂದರೆ ತಲೆಗೆ ಹೊಳೆಯತ್ತೈದು ಅಥವಾ ನಲವತ್ತು ರೂಪಾಯಿ ಬೀಳಬಹುದು ಮಜಾ ಮಾಡುವುದಾದರೆ ಈಗಲೇ ಮಾಡಬೇಕು, ಆಮೇಲೆ ಮದುವೆ, ಮಕ್ಕಳು ಮರಿಗಳು ಆದ ಮೇಲೆ ಮನೆ ಬಿಟ್ಟು ಹೋಗಲಾಗುವುದಿಲ್ಲ."

"ಊರು ಬಿಟ್ಟೇ ಹೋಗಬೇಕಾಗುತ್ತದೆ ಆಗ"

"ಅದೂ ಹೌದನ್ನು ಆದಕ್ಕೋಸ್ಕರ ಈಗಲೇ ರಜೆ ಸಿಕ್ಕಿದಾಗಲೆಲ್ಲ ಒಂದೊಂದು ಹೊಸ ಊರುಗಳನ್ನು ನೋಡಿಕೊಂಡು ಸಂತಸಗೊಂಡು ಬರಬಹುದು. ಯೋಚನೆ ಮಾಡು. ನಿನಗೆ ಒಪ್ಪಿಗೆಯಾದಲ್ಲಿ ಹೂಂ ಅನ್ನು ಇಲ್ಲದಿದ್ದಲ್ಲಿ ಊಹೂಂ ಅನ್ನು."

"ಅದೆಲ್ಲಾ ಇರಲಿ ನೀನು ಈ ಸ್ಥಳಗಳನ್ನು ಹೀಗೆ ಯೆಂದಾದರೂ ನೋಡಿದ್ದೀಯಾ."

"ಯಾವ ಊರಗಳನ್ನು?"

"ಆದೇ ಹೇಳಿದೆಯಲ್ಲಾ ಬಸ್ ಏಜಂಟರುಗಳು ಹೇಳುವಂತೆ ಹತ್ತಾರು ಊರುಗಳ ಹೆಸರನ್ನು"

"ನೋಡಿದ್ದರೆ ಪುನಃ ಹೋಗುತ್ತಿದ್ದೇನಾ?'

"ನಾನೂ ನೋಡಿಲ್ಲವಲ್ಲನಯ್ಯ ಆ ಊರುಗಳನ್ನೆಲ್ಲ"

"ಮತ್ತೂ ಒಳ್ಳೆಯದಾಯ್ತು ಬಿಡು"

"ಸರಿ ಹೋಯ್ತು. ನನಗೂ ಗೊತ್ತಿಲ್ಲ, ನಿನಗೂ ಗೊತ್ತಿಲ್ಲ ಇನ್ನು ನಮ್ಮ ಜೊತೆಗಿರುವವರಿಗೂ ಗೊತ್ತಿರಲಿಕ್ಕಿಲ್ಲ. ಎಲ್ಲಾ ಗೊತ್ತಿಲ್ಲದವರೇ ಹೋಗಿ ಏನನ್ನು ನೋಡಿಕೊಂಡು ಬರುವುದು? ಒಳ್ಳೇ ಮೂರ್ಖ ಸಾಮ್ರಾಜ್ಯವಾಯಿತು ನಮ್ಮದು."

"ಅದರಲ್ಲೇ ಇರುವುದು ನೋಡು ಸ್ವಾರಸ್ಯ. Ignorance is Bliss ಅಂತ ಕೇಳಿಲ್ಲವೇ ನೀನು?"

"ಅದನ್ನು ಕೇಳಿಯೇ ನೀನು ಇಷ್ಟು Ignorent ಆಗಿರುವುದೂಂತ ಕಾಣುತ್ತೆ"

"ಹಾಗಲ್ಲ ಮಾರಾಯ; ಗೊತ್ತಿಲ್ಲದವರೆಲ್ಲ ಒಟ್ಟಿಗೆ ಹೋದರೆ ನಮ್ಮ ಕಲ್ಪನೆಗೆ ಸಿಲುಕಿದ ವಸ್ತುಗಳನ್ನೆಲ್ಲ ನೋಡಿ ಬರಬಹುದು ಅಕ್ಕಪಕ್ಕದಲ್ಲಿ ಸಿಕ್ಕಿದವರೊಡನೆ ಕೇಳಿ ತಿಳಿಯ ಬಹುದು ನಾಲ್ಕಾರು ಕಡೆ ಗೊತ್ತು ಗುರಿಯಿಲ್ಲದೆ ತಿರುಗಾಡಿ ಬರ ಬಹುದು ಗೊತ್ತಿಲ್ಲದ ಅನೇಕ ವಿಚಾರಗಳನ್ನು ತಿಳಿದು ಕೊಳ್ಳಬಹುದು, ಇದರಲ್ಲಿ ಎಷ್ಟು ಆನಂದವಿರುತ್ತದೆ ಗೊತ್ತಾ ನಿನಗೆ; ನಾವು ಆ ಸ್ಥಳವನ್ನು ನೋಡದಿದ್ದರೂ ಕೇಳಿಯಾದರೂ ಬಲ್ಲೆವಲ್ಲ! ಅಷ್ಟು ಗೊತ್ತಿಲ್ಲದಿದ್ದರೆ ಶಾಲೆಯಲ್ಲಿ ಕಲಿತ ಚರಿತ್ರೆ ಭೂಗೋಳಗಳ ಬೆಲೆಯಾದರೂ ಏನು? ಏನು ಹೊರಡೋಣವೇ?"

"ಕೊಂಚ ನಿಲ್ಲು, ಕಾಫಿ ಕುಡಿದಾದ ಮೇಲೆ ಹೋಗೋಣ"

"ಹಾಗಲ್ಲ ನಾನು ಹೇಳಿದ್ದು, ಈ ಪ್ರವಾಸದ ವಿಚಾರ ಹೇಳಿದ್ದು? ಏನು ಹೊರಡೋಣವೇ ನಾಳಿದ್ದು?'

ಹೊರಡಲೂ ಬಹುದು, ಹೋಗಲೂ ಬಹುದು, ಹೋಗಿ ಬರಲೂ ಬಹುದು. ಆದರೆ ಆಷ್ಟು ದುಡ್ಡನ್ನು ಎಲ್ಲಿಂದ ತರಲಿ? ಯಾರ ತಲೆ ಒಡೆದು ತರಲಿ?"

"ಸಂಬಳ ಸಿಕ್ಕಿ ಒಂದು ವಾರವೂ ಕಳೆಯಲಿಲ್ಲವಯ್ಯ. ಆಗಲೇ ಕಿಸೆ ಖಾಲಿಯಾಯಿತೇ?'

"ನನ್ನ ಕಿಸೆ ಮಾತ್ರವಲ್ಲ ನಿನ್ನ ಕಿಸೆಯೂ ತೂತಾಗಿದೆ. ನನ್ನ ಹತ್ತಿರ ಏಕೆ ಮುಚ್ಚಿಕೊಳ್ಳುವೆ?"

"ಅದೂ ಹೌದೆನ್ನು! ಇದು ಯಾವಾಗಲೂ ಹೀಗೆಯೇ! ನಮ್ಮ ಜೀವಮಾನವಿಡೀ ದುಡ್ಡಿಲ್ಲದೆ ಕಳೆಯುತ್ತದೋ ಏನೋ? ಏನೆನ್ನುವೆ ನೀನ?"

"ಏನೂ ಅನ್ನೋಲ್ಲ' ಎಂದು ಹೇಳಿ ಉದ್ದಿ ನೊಡೆಯನ್ನ ಚಟ್ನಿಯಲ್ಲಿ ಅದ್ದಿದೆ.

o o o

ಕೊಡುವಾಗ ಒಂದು ಕೈಯಲ್ಲಿ ಕೊಟ್ಟು ತೆಗೆದುಕೊಳ್ಳುವಾಗ ಎರಡೂ ಕೈಗಳನ್ನೂ ನೀಡುವ ಜಾಯಮಾನ ಆ ದೇವನದು. ಹಾಗಿಲ್ಲದಿದ್ದರೆ ಚಂದ್ರು ಇಂದು ದೊಡ್ಡ ಸಾಹುಕಾರನಾಗಿ ಗಲ್ಲ ಪಟ್ಟಿಗೆಯ ಮುಂದ ಕಾಲ ಮೇಲೆ ಕಾಲು ಹಾಕಿ ಕುಳಿತುಕೊಳ್ಳಬೇಕಿತ್ತು. ಚೆಂದಾಗಿದ್ದ ಆ ಸಂಸಾರವನ್ನ ನೋಡಲು ದೇವನ ಆಸೂಯೆ ಬಿಡಲಿಲ್ಲವೋ ಏನೋ! ದುಡಿದು ಹಾಕುತಿದ್ದ ತಂದೆ ಚಿಕ್ಕಂದಿನಲ್ಲೇ ತೀರಿಕೊಂಡರು,ಇದ್ದಬದ್ದ ಆಸ್ತಿಗಳನ್ನೆಲ್ಲ ಕರಗಿಸಿದರ ,ಅವರ ಕೈಕೆಳಗಿದ್ದವರು ಮಕ್ಕಳೆಲ್ಲಾ ಚಿಕ್ಕವರು ದುಡಿದು ತಂದು ಹಾಕುವವರೇ ಇಲ್ಲವಾಯ್ತು.ಅದೃಷ್ಟ ಕೈಕೊಟ್ಟಿತು,ಹಿಂದಿನ ವೈಭವವೆಲ್ಲ ಮಣ್ಣುಗೂಡಿತು. ಯಾರದೋ ಸಹಾಯದಿಂದ ಕೆಲಸಕ್ಕೆ ಸೇರಿದ, ಚಂದ್ರು. ಎರಡು ಕೈಗಳು ತಂದದ್ದನ್ನ ಒಂಭತ್ತು ಬಾಯಿಗಳಿಗೆ ಹಂಚಬೇಕಿತ್ತು ಹೀಗಿರುವಾಗ ಆವನಲ್ಲಿ ದುಡ್ಡಾದರೂ ಎಲ್ಲಿರಬೇಕು? ದುಡ್ಡು ಸಿಕ್ಕಿದರೂ ಅದು ಎಲ್ಲಿ ಉಳಿಯಬೇಕು? ಉಳಿದರೂ ಯಾರು ಬಿಡಬೇಕು. ಅದನ್ನ ಅವನಲ್ಲೇ?

ಅವನ ಸ್ಥಿತಿ ಹಾಗಾದರೆ ನನ್ನದು ಇನ್ನೊಂದು ತರ. ಸಂಬಳ ತೆಗೆದ ಕೊಂಡು ಸಂಜೆ ಮನೆಕಡೆಗೆ ಹೊರಟರೆ ಕೆಲವು ಪೈಸೆಗಳು ಮಾತ್ರ ಜೇಬಿಕೆ ನೋಡುತ್ತಿರುತ್ತವೆ ಕಿಸೆಯಲ್ಲಿ. ದೇವರ ದಯದಿಂದ ಕೇಳಿದವರೆಲ್ಲಾ ಅಷ್ಟೋ ಇಷ್ಟೋ ಸಾಲ ಕೊಡುತ್ತಿರುತ್ತಾರೆ. ಅವರು ಯಾವ ಆಧಾರದ ಮೇಲೆ ನನಗೆ ಸಾಲ ಕೊಡುತ್ತಾರೆಂಬುದು ಆ ದೇವನಿಗೂ ಗೊತ್ತಿರಲಿಕ್ಕಿಲ್ಲ ಅಂತೂ ಈ ಕೈಯಿಂದ ತೆಗೆದುಕೊಂಡು ಆ ಕೈಗೆ ಕೊಟ್ಟು, ಕೋ ಎಂದಾಗ ತೆಗೆದುಕೊಂಡು ಕೊಡ. ಎಂದಾಗ ಕೊಡದೇ ಹೇಗೋ ದಿನ ದೂಡಿಕೊಂಡು ಬಂದಿದ್ದೇನೆ, ಬರುತ್ತಾ ಇದ್ದೇನೆ.

ಇಂಥಾ ಎರಡು ಜೀವಗಳು ಯಾವ ಪ್ರಾರಬ್ಧ ಕರ್ಮದಿಂದ ಒಂದುಗೂಡಿದವೆಂದು ಹೇಳುವುದು ತುಸು ಕಷ್ಟವೇ ಸರಿ ಕೈಯಲ್ಲಿ ದುಡ್ಡು ಇಲ್ಲದಿರಲಿ, ಇರಲಿ —ನೋಡಬೇಕಾದ್ದನ್ನೆಲ್ಲ ನೋಡಲೇಬೇಕು, ಮಾಡಬೇಕಾದ್ದನ್ನೆಲ್ಲ ಮಾಡಲೇಬೇಕು! ಚಂದ್ರುವಿನ ಸ್ವಭಾವವೇ ಹಾಗಾದರೆ ಯಾರೇನು ಮಾಡಲಾಗುತ್ತದೆ?

ಉದ್ದಿನೊಡೆಯೂ ಖಾಲಿಯಾಯ್ತು. ಚಟ್ನಿಯೂ ಖಾಲಿಯಾಯ್ತು. ಕಾಫಿಯ ಲೋಟವೂ ಬರಿದಾಯಿತು. ಮಾಣಿ ತಂದಿಟ್ಟ ಬಿಲ್ಲನ್ನು ಕೈಗೆತ್ತಿಕೊಂಡು ಕೇಳಿದ ಚಂದ್ರು. "ಏನಪ್ಪಾ ನೀನಿನ್ನೂ ಮೌನ

(ಐದನೇಯ ಪುಟ ನೋಡಿರಿ)

ನಿಮ್ಮ ಆಕಾಂಕ್ಷೆಗಳ ಸಾಧನೆಗಾಗಿ ಮತ್ತು ಅನಿಶ್ಚಿತ ಅವಶ್ಯಕತೆಗಳಿಗಾಗಿ ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ಸ್ಥಿರ ಠೇವಣಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ನಮ್ಮ-ನಮ್ಮವರು

(೨ನೇ ಪುಟದಿಂದ)

ಇಂಗ್ಲೆಂಡಿಗೆ ಕಳುಹಿಸಿತು ಇಂಗ್ಲೆಂಡದಲ್ಲಿ ಎಫ್. ಆರ್ ಸಿ. ಎಸ್. ಪದವಿ ಪಡೆದು, ರೇಡಿಯೋಲಜಿ ತರಬೇತಿಗಾಗಿ ಲಂಡನ್ ವಿಶ್ವವಿದ್ಯಾಲಯ ಸೇರಿ, ಅದರ ಡಿಪ್ಲೊಮ ಪರೀಕ್ಷೆಯಲ್ಲಿ ರೈಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅನಂತರ ಅವರು ಪ್ಯಾರಿಸ್ ಹಾಗೂ ಬರ್ಲಿನ್‌ಗಳಲ್ಲಿ ಕೆಲವು ಪ್ರೊಫೆಸರರ ಕೆಳಗೆ ಕೆಲಸಮಾಡಿ ಕ್ಯಾನ್ಸರ್ ಉಪಚಾರದ ಜ್ಞಾನ ಸಂಪಾದಿಸಿದರು.

೧೯೩೮ರಲ್ಲಿ ಅವರು ಮದ್ರಾಸಿನ ಬರ್ನಾರ್ಡ್ ಇನ್‌ಸ್ಟಿಟ್ಯೂಟ್ ಆಫ್ ರೇಡಿಯೋಲಜಿಯ ಸೇರಿಕೊಂಡರು. ತಮ್ಮ ಪ್ರತಿಭೆಯಿಂದ ಅವರು ಈ ಸಂಸ್ಥೆಯ ಮೊದಲ ಹಿಂದೀ ಡೈರೆಕ್ಟರರಾಗಿ ನೇಮಕಗೊಂಡರು ಆ ವರೆಗೆ ಡೈರೆಕ್ಟರರ ಹುದ್ದೆಯಲ್ಲಿ ವಿದೇಶಿಯರೇ ಇದ್ದರು ವಿಶೇಷ ನಿಪುಣತೆಯ ಸರ್ಜನರಾದ ಡಾ| ರೈಗಳು ೧೯೫೦ರಲ್ಲಿ ಲಂಡನದಲ್ಲಿ ಜರಗಿದ ೬ನೇ ಅಂತರರಾಷ್ಟ್ರೀಯ ಕಾಂಗ್ರೆಸಿನಲ್ಲಿ, ಹಿಂದೀ ರೇಡಿಯೊಲಜಿಕಲ್ ಸಂಘದ ಪ್ರತಿನಿಧಿಗಳಾಗಿ ಭಾಗವಹಿಸಿದರು. ಪ್ಯಾರಿಸ್‌ನಲ್ಲಿ ಜರಗಿದ ಅಂತರರಾಷ್ಟ್ರೀಯ ಕ್ಯಾನ್ಸರ್ ಕಾಂಗ್ರೆಸ್ಸಿನಲ್ಲೂ ಭಾಗವಹಿಸಿದರು. ಹೀಗೆ ಅವರು ವಿದೇಶಗಳಲ್ಲಿ ಹಲವು ಬಾರಿ ಸಂಚರಿಸಿ ಬಂದಿರುತ್ತಾರೆ

ಪ್ರಕೃತ ಮದ್ರಾಸಿನಲ್ಲಿ ನಿವೃತ್ತ ಜೀವನದಲ್ಲಿರುವ ರೈಗಳು ಇಂದಿಗೂ ಪ್ರಸಿದ್ಧ ಡಾಕ್ಟರರಾಗಿ ಹೆಸರು ಪಡೆದಿದ್ದಾರೆ. ಕ್ಯಾನ್ಸರ್ ಹಾಗೂ ರೇಡಿಯೊಲಜಿಯಲ್ಲಿ ಅವರಷ್ಟು ತಜ್ಞರು ಕೆಲವೇ ಮಂದಿ. ನಿವೃತ್ತರಾದ ಬಳಿಕ, ಕಳೆದ ಮಹಾ ಚುನಾವಣೆಯಲ್ಲಿ ಲೋಕ ಸಭೆಗೆ ಸ್ಪರ್ಧಿಸುವ ಅಪೇಕ್ಷೆಯೂ ಅವರಿಗೆ ಇತ್ತು. ಹಾಗೆ ಅವರು ಸ್ಪರ್ಧಿಸುತ್ತಿದ್ದರೆ, ವಿಜಯಿಗಳಾಗಿ ಇಂದು ಕೇಂದ್ರದಲ್ಲಿ ಶೋಭಿಸುತ್ತಿದ್ದರೇನೋ? ನವಯುಗದ ಅಭಿಮಾನಿ ರೈಗಳಿಗೆ ನವಯುಗವು ಶುಭಕಾಮನೆಗಳನ್ನು ಸಲ್ಲಿಸುತ್ತದೆ

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. P. No. 35/64

1 ನರೇಂದ್ರ ಕುಡ್ವ—
ಮೈನರ್. ಗಾರ್ಡಿಯನ್
2ನೇ ಅರ್ಜಿದಾರ.
2. M. ದಿನೇಶ ಕುಡ್ವ
3 ಕಮಲ ಯಾನೆ ತಾರಾ ಬಾಯಿ ಇವರ ಜನರಲ್ ಏಜಂಟ್ ಸಿಂಡಿಕೇಟ್ ಬೇಂಕ್ ಲಿಮಿಟೆಡ್ ಮಣಿಪಾಲ್— } ಅರ್ಜಿದಾರರು.

1ನೇ ಅರ್ಜಿದಾರನ ಅಜ್ಜ 2ನೇ ಅರ್ಜಿದಾರನ ತಂದೆ ಮ 3ನೇ ಅರ್ಜಿದಾರಳ ಗಂಡ ಮೃತ ಮುಕುಂದ ಕುಡ್ವರ ಬಾಬು ಬರತಕ್ಕ ಶೇರ್ಸ ಮ ಡಿವಿಡೆಂಟ್ ಹಣಗಳನ್ನು ವಸೂಲು ಮಾಡುವರೇ ಅರ್ಜಿದಾರರ ಕಡೆಯಿಂದ 2ನೇ ಅರ್ಜಿದಾರ ಮ ಅತನ ಜನರಲ್ ಏಜಂಟಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ದಾಖಲು ಮಾಡಿದ ಸದ್ರಿ ಅರ್ಜಿಯು ತಾ. 3 -10 —64ಕ್ಕೆ ಇಟ್ಟಿದೆ. ಆಕ್ಷೇಪ ಹೇಳತಕ್ಕವರು ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಪೂರ್ವಾಹ್ನ ಘಂಟೆ 11ಕ್ಕೆ ಹಾಜರಾಗಿ ಮನವಿ ಮಾಡಿಕೊಳ್ಳತಕ್ಕದ್ದು

M· Damodar Kamath·
Counsel for Petitioners

ಉಡುಪಿ, ತಾ. 29 —9 — 1964

ಎಲ್ಲೆಲ್ಲಿ ಏನೇನು?

ರೋಟರಿ ಧರ್ಮ ಉದಯವಾಗಬಹುದೆಂದು ಗವರ್ನರ್ ಪೈ

"ಇನ್ನು ಒಂದು ಅಥವಾ ಎರಡು ಶತಮಾನಗಳಲ್ಲಿ ಮಹಾ ರೋಟರಿ ಸಂಸ್ಥೆ ಪ್ರಪಂಚದ ಹೊಸ ಧರ್ಮವಾಗಿ ಪರಿವರ್ತನೆಗೊಳ್ಳಬಹುದು, ಏಕೆಂದರೆ ರೋಟರಿಯಲ್ಲಿ ಭೇದಭಾವಗಳಿಲ್ಲ ಅದರಲ್ಲಿ ವಿವಿಧ ಧರ್ಮಗಳಿಗೆ ಸೇರಿದವರು ಒಟ್ಟಿಗೆ ಕೆಲಸ ಮಾಡುತಿದ್ದಾರೆ."ಇದು ಅಂತರರಾಷ್ಟ್ರೀಯ ರೋಟರಿಯ ೩೧೭ನೇ ಜಿಲ್ಲೆಯ ಗವರ್ನರ್ ಡಾ|| ಟಿ. ಎಂ. ಎ ಪೈಯವರ ಅಭಿಪ್ರಾಯವಾಗಿದೆ. ಅವರು ಈ ವರೆಗೆ ೨೨ ರೋಟರಿ ಕ್ಲಬ್ಬುಗಳನ್ನು ಸಂದರ್ಶಿಸಿದ್ದಾರೆ.

ಅವರು ತಾ. ೨೨ರಂದು ಉಪೇಂದ್ರಬಾಗ್‌ನಲ್ಲಿ ಸೇರಿದ್ದ ಉಡುಪಿ ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಕ್ಲಬ್ಬಿನ ಅಧ್ಯಕ್ಷರಾದ ಡಾ| ಎ. ಕೃಷ್ಣರಾವ್‌ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನಕ್ಕೆ ಸಿದ್ಧತೆ.

೩೧೭ನೇ ರೋಟರಿ ಜಿಲ್ಲೆಯ ವಾರ್ಷಿಕ ಸಮ್ಮೇಳನವನ್ನು ಬರುವ ಡಿಸೆಂಬರ್ ೨೬ರಂದು ಮೈಸೂರು ರಾಜ್ಯಪಾಲರು ಉದ್ಘಾಟಿಸಲು ಒಪ್ಪಿಕೊಂಡಿದ್ದಾರೆಂದು ಸಮ್ಮೇಳನದ ಅಧ್ಯಕ್ಷ ಶ್ರೀ ರಮೇಶ ಪೈ ನುಡಿದರು. ಸಮ್ಮೇಳನದ ಮಂಟಪಕ್ಕೆ ಅಂತರರಾಷ್ಟ್ರೀಯ ರೋಟರಿಯ ಮಾಜಿ ಅಧ್ಯಕ್ಷ ದಿವಂಗತ ನಿತೀಶ ಲಹರಿಯವರ ಹೆಸರನ್ನಿಡಲಾಗುವುದೆಂದು ಅವರು ಹೇಳಿ ಸಮ್ಮೇಳನವನ್ನು ಅತ್ಯಂತ ಯಶಸ್ವಿಯನ್ನಾಗಿ ಮಾಡುವುದಕ್ಕೆ ಎಲ್ಲ ಸಿದ್ಧತೆಗಳನ್ನೂ ನಡೆಸಲಾಗುತ್ತಿದೆ ಎಂದರು.

ರೋಟರಿ ಕ್ಲಬ್ಬಿನ ಆಶ್ರಯದಲ್ಲಿ ಡಿಸೆಂಬರ್ ೨೧ ಮತ್ತು ೨೨ರಂದು ಮಣಿಪಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸೆಕೆಂಡರಿ ಶಾಲೆಗಳ ಮುಖ್ಯೋಪಾಧ್ಯಾಯರುಗಳ ಹಾಗೂ ವ್ಯವಸ್ಥಾಪಕರ ಸಮ್ಮೇಳನವನ್ನೂ ನಡೆಸಲು ಉದ್ದೇಶಿಸಲಾಗಿದೆ ಎಂದು ಅವರು ತಿಳಿಸಿದರು. ದಕ್ಷಿಣ ಕನ್ನಡದಲ್ಲಿ ೧೪೦ ಪ್ರೌಢ ಶಾಲೆಗಳಿದ್ದು ಅವುಗಳ ಸಮಸ್ಯೆಗಳನ್ನು ಚರ್ಚಿಸಿದರೆ ವಿದ್ಯಾಮಟ್ಟ ಹೆಚ್ಚಿಸುವುದಕ್ಕೆ ಅನುಕೂಲವಾಗುತ್ತದೆಂದರು.

ಮುಂಡಗದ್ದೆಯಲ್ಲಿ ಸತ್ಕಾರ

ಈ ಊರಿನಲ್ಲಿ ಸುಮಾರು 12 ವರ್ಷಗಳಿದ್ದು ಜನಾನುರಾಗಿಗಳಾಗಿದ್ದ ಡಾ|| ಆರ್. ಎಸ್. ಪರೋಡಿ (ವಕೀಲ್ ಶಿವಾಜಿ ಸೆಟ್ರಿ ತಮ್ಮ) ಯವರು ಈ ಊರು ಬಿಟ್ಟು ಧರಿಹರೆಕ್ಕೆ ಹೋಗುವ ಸಂದರ್ಭದಲ್ಲಿ ಈ ಊರಿನ ಮಿಲ್ಲು ಮಾಲೀಕರಾದ ಶ್ರೀ ಸಿ. ಎಸ್. ನಿಂಗೋಜಿ ರಾಯರು ಒಂದು ಸತ್ಕಾರಕೂಟವನ್ನು ಶ್ರೀ ಎಚ್. ಸಿ. ಶ್ರೀನಿವಾಸ ಗೌಡರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ಊರಿನ ಗಣ್ಯವ್ಯಕ್ತಿಗಳು, ಸರ್ಕಾರಿ ನೌಕರರು ಸೇರಿದ್ದರು, ಸರ್ವಶ್ರೀ ಸಿ. ಎಸ್. ನಿಂಗೋಜಿ ರಾವ್, ಕೆ.ಟಿ.ವೀರಪ್ಪ ಗೌಡರು,ಯು ದುಗಪ್ಪ ಸೆಟ್ರು,ವೈ ಕೆ ಧರ್ಮಯ್ಯ ಇವರು ಡಾಕ್ಟರ ಗುಣಗಾನ ಮಾಡಿದರು, ಅಧ್ಯಕ್ಷರು ಶುಭ ಕೋರಿದ ನಂತರ ಎಚ್. ತಿಮ್ಮಪ್ಪನವರು ವಂದನಾರ್ಪಣೆ ಮಾಡಿ ಹಾರ ಹಾಕಿದರು.

ಇದೇ ದಿನ ಈ ಊರಿನ ನಾಟಕ ಜನಾಂಗದವರು ಸೇರಿ ಸಿ ಎಸ್. ನಿಂಗೋಜಿ ರಾಯರ ಅಧ್ಯಕ್ಷತೆಯಲ್ಲಿ ಶ್ರೀ ಯು ದುಗ್ಗಪ್ಪ ಸೆಟ್ರು ಮನೆಯಲ್ಲಿ ಒಂದು ಸತ್ಕಾರ ಸಮಾರಂಭ ಏರ್ಪಡಿಸಿ ಮುಖ್ಯ ಅತಿಥಿಗೆ ಶುಭಕೋರಿ ಬೀಳ್ಕೊಟ್ಟರು.

ಕುಂದಾಪುರ ಕೋ-ಒಪರೇಟಿವ್ ಟೌನ್ ಬ್ಯಾಂಕಿನ ಮಹಾಸಭೆ

ಕುಂದಾಪುರ — ತಾ. 20—9 - 64 ರಂದು ಇವರ ಮಹಾಸಭೆಯು ಬ್ಯಾಂಕಿನ ಅಧ್ಯಕ್ಷ ವೈ. ಮಂಜಯ್ಯ ಶೆಟ್ಟಿ, ಎಂ ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನಡೆದು ಕಾರ್ಯದರ್ಶಿಯವರಿಂದ ವರದಿ ವಾಚನವಾಗಿ ಮಂಜೂರಾದ ಬಳಿಕ ನೂತನ ವರ್ಷಕ್ಕೆ ಆಡಳಿತ ಮಂಡಳಿಯ ಡೈರೆಕ್ಟರರಾಗಿ ಶ್ರೀಗಳಾದ ವೈ. ಮಂಜಯ್ಯ ಶೆಟ್ಟಿ, ಎಂ ಎಲ್. ಎ. (ಅಧ್ಯಕ್ಷ) ಎಚ್. ದೇವದಾಸರಾವ್ (ಉಪಾಧ್ಯಕ್ಷ) ಎಚ್. ಲಕ್ಷ್ಮೀನಾರಾಯಣಯ್ಯ (ಕಾರ್ಯದರ್ಶಿ) ಕೆ. ಶಂಕರ ಶೆಟ್ಟಿ, ಕೆ. ರಾಮಕೃಷ್ಣ ನಾಯ್ಕ, ವಿ. ವಿ. ಕಾಮತ, ವೆಂಕಟರಾವ್ ಇವರು ಅವಿರೋಧವಾಗಿ ಪುನರಾಯ್ಕೆಗೊಂಡರು ಬಳಿಕ ನೂತನ ಅಧ್ಯಕ್ಷರ ಭಾಷಣವಾಯಿತು.

ಮದರಾಸಿನಲ್ಲಿ ಯಕ್ಷಗಾನ

ದಾಸಪ್ರಕಾಶ ಹೋಟೇಲ್ ಸಂಸ್ಥೆಗಳ ಸ್ಥಾಪಕರಾದ ಶ್ರೀ ಕೆ ಸೀತಾರಾಮ ರಾಯರು ಮತ್ತು ಉಡ್‌ಲೇಂಡ್ಸ್ ಹೋಟೇಲ್ ಸ್ಥಾಪಕರಾದ ಶ್ರೀ ಕೆ ಕೃಷ್ಣರಾಯರು ಇನ್ನು ಅನೇಕ ಕನ್ನಡಿಗರು ಸೇರಿ ಮದ್ರಾಸಿನ 'ಧರ್ಮಪ್ರಕಾಶ'ದ ನಾಟಕ ರಂಗದಲ್ಲಿ ಸೆಪ್ಟಂಬರ್ 1964ರ ತಾ. 11, 16 ಮತ್ತು 17 ಈ ಮೂರು ದಿನಗಳಲ್ಲಿಯೂ ಆಹ್ವಾನಿತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ಲಿನ ಶ್ರೀ ಮಹಮ್ಮಾಯಿ ಯಕ್ಷಗಾನ ನಾಟಕ ಸಭೆಯವರಿಂದ ಯಕ್ಷಗಾನವನ್ನು ನಡೆಸಿದರು.

ಮೊದಲಿನ ದಿನ 'ಶ್ರೀ ಬಪ್ಪನಾಡು ಕ್ಷೇತ್ರ ಮಹಾತ್ಮೆ' ಯನ್ನು ಜಸ್ಟೀಸ್ ಆರ್. ಸದಾಶಿವಂ ಅವರ ಅಧ್ಯಕ್ಷತೆಯಲ್ಲಿಯೂ ಎರಡನೆ ದಿನ "ಶ್ರೀ ಕೃಷ್ಣ ಲೀಲೆ"ಯನ್ನು ಡಾ|ವಿ. ರಾಘವನ್ ಅವರ ಅಧ್ಯಕ್ಷತೆಯಲ್ಲಿಯೂ ಮೂರನೇ ದಿನ 'ಭೂ ಕೈಲಾಸ' ವೆಂಬ ಮತ್ತೊಂದು ಯಕ್ಷಗಾನ ನಾಟಕವನ್ನು ಶ್ರೀ ಕೃಷ್ಣ ಅಯ್ಯರ್ ಅವರ ಅಧ್ಯಕ್ಷತೆಯಲ್ಲಿಯೂ ಪ್ರದರ್ಶಿಸಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ 'ಶ್ರೀ ಮಹಮ್ಮಾಯಿ" ಯಕ್ಷಗಾನ ನಾಟಕ ಸಭೆಯವರನ್ನು ಅಭಿನಂದಿಸುತ್ತಾ ಪಾತ್ರಗಳ ನೃತ್ಯಾಭಿನಯವನ್ನು ಶ್ಲಾಘಿಸಿದರು. ಉತ್ತಮ ನಟವರ್ಗದವರಿಗೆ ಮದರಾಸಿನ ಕನ್ನಡಿಗರು ರಜತ ಪಾತ್ರೆಗಳನ್ನು ಅಧ್ಯಕ್ಷರಿಂದ ಕೊಡಿಸಿದರು. ಶ್ರೀ ಮರಿಯಪ್ಪ ಭಟ್ಟರು ಧನ್ಯವಾದವನ್ನು ಅರ್ಪಿಸಿದರು

ಸಿಂಡಿಕೇಟ್ ಬ್ಯಾಂಕಿನೊಂದಿಗೆ ಕೋಟಗಿರಿ ಬ್ಯಾಂಕಿನ ಸೇರ್ಪಡೆ

ನೀಲಗಿರಿ ಜಿಲ್ಲೆಯ ಕೋಟಗಿರಿ ಬ್ಯಾಂಕಿನ ಸಾಲ ಮೂಲಗಳನ್ನು ಸಿಂಡಿಕೇಟ್ ಬ್ಯಾಂಕಿನವರು ಇದೇ ತಾ 7 ರಂದು ವಹಿಸಿಕೊಳ್ಳಲಿರುವರು. ಇದು ಸಿಂಡಿಕೇಟ್‌ನವರು ತೆಗೆದುಕೊಳ್ಳುವ 17 ನೇ ಬ್ಯಾಂಕಾಗಿದೆ. ಈ ಬ್ಯಾಂಕಿನ ಸೇರ್ಪಡೆಯಿಂದ ಮದ್ರಾಸು ರಾಜ್ಯದಲ್ಲಿ ಸಿಂಡಿಕೇಟಿಗೆ 20 ಶಾಖೆಗಳಾದಂತಾಯಿತು.

ಬಸವಕಲ್ಯಾಣ ಶಾಖೆ ಬ್ಯಾಂಕು ಇಲ್ಲದ ಕ್ಷೇತ್ರವಾದ ಬಸವ ಕಲ್ಯಾಣದಲ್ಲಿ ಸಿಂಡಿಕೇಟಿನ ಶಾಖೆಯೊಂದು ಇದೇ ತಾ. 7ರಂದು ತೆರೆಯಲ್ಪಡುವುದು. ಆಗ ಸಿಂಡಿಕೇಟಿಗೆ 194 ಶಾಖೆಗಳಾದಂತಾಯಿತು.

ಮಂತ್ರಿ ಡಾ! ನಾಗಪ್ಪ ಆಳ್ವರ ಜಿಲ್ಲಾ ಸಂಚಾರ—ಮೈಸೂರು ಸರಕಾರದ ಆರೋಗ್ಯ ಸಚಿವ ಡಾ| ಕೆ. ನಾಗಪ್ಪ ಆಳ್ವರು ಇದೇ ತಾ- 1ರಿಂದ ತಾ, ೯ರ ತನಕ ಬೆಳ್ಳಾರೆ,ಮಂಗಳೂರು, ಕುಂದಾಪುರ, ಬಿದ್ಕಲ್ ಕಟ್ಟೆ, ಕಾರ್ಕಳ, ಪಣಂಬೂರು, ಬಂಟ್ವಾಳ, ಮೂಲ್ಕಿ, ಗಂಜೀಮಠ, ಬಜ್ಪೆ ಮೊದಲಾದ ಕಡೆಗಳಲ್ಲಿ ಸಂಚರಿಸಿ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿರುವರು.

ಉಡುಪಿ ಲಯನ್ಸ್ ಕ್ಲಬ್

ಲಯನ್ ಕೆ. ವಿ. ಬಾಳಿಗರು ಈ ಕ್ಲಬ್ಬಿಗೆ ದಾನವಾಗಿತ್ತ ಶವ ಸಾಗಾಟ ಗಾಡಿಯೊಂದನ್ನು ಲಯನ್ಸ್ ಕ್ಲಬ್ಬಿನವರು ಕಳೆದ ತಾ. 24 ರಂದು ಡಾ| ಪಿ. ಆರ್ ನಾಯ್ಕರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾದ ಭೋಜನ ಸಭಾ ಸಮಾರಂಭದಲ್ಲಿ ಉಡುಪಿ ಹಿಂದೂ ಶವ ಸಂಸ್ಕಾರ ಸಂಘದ ಅಧ್ಯಕ್ಷ ಡಾ| ಕೆ. ಎಲ. ಐತಾಳರಿಗೆ ಒಪ್ಪಿಸಿದರು. ಲಯನ್ಸ್ ಕ್ಲಬ್ಬಿನ ಅಧ್ಯಕ್ಷ ಶ್ರೀ ಕೆ. ಎಸ್. ಕಾಮತರು ಶ್ರೀ ಬಾಳಿಗರ ಉದಾರತೆಯನ್ನು ಕೊಂಡಾಡಿದರು ಡಾ| ನಾಯ್ಕರು ಶ್ರಮಪಡದೆ ಸುಖ ಹೊಂದಬೇಕೆನ್ನುವ ಮಹತ್ವಾಕಾಂಕ್ಷೆಯಿಂದಾಗಿ ಇಂದು ಅಸಂತೃಪ್ತಿ, ಅಶಾಂತಿ ತಲೆದೋರಿದೆಯೆಂದು ಹೇಳಿದರಲ್ಲದೆ ಬಾಳಿಗರ ಪರೋಪಕಾರಕ್ಕಾಗಿ ಸಂತೋಷ ವ್ಯಕ್ತ ಪಡಿಸಿದರು, ಡಾ| ಐತಾಳರು ಶವ ಸಂಸ್ಕಾರ ಸಮಿತಿಯ ಪರವಾಗಿ ವಂದನೆಗಳನ್ನರ್ಪಿಸಿದರು. ಕ್ಲಬ್ಬಿನ ಕಾರ್ಯದರ್ಶಿ ಬಿ. ಎನ್. ಬಾಳಿಗರು ಕೃತಜ್ಞತೆಗಳನ್ನರ್ಪಿಸಿದರು.

ನಿಧನ—ಶಿರ್ವ ಮೂಡಬೆಟ್ಟು ಅರಂತಡೆ ಮುಹಾಬಲ ಹೆಗ್ಗಡೆಯವರು ದೊಡ್ಡ ಜಮೀನ್ದಾರರೂ, ಕುಲೀನ ಮನೆತನದವರೂ ಆಗಿದ್ದು ತಾ. 23 . 9_64ರಂದು ತನ್ನ 85 ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. 192/64

ಎಂ. ಯಸ್. ಸಂಜೀವ ಕೂಡಾ.... ವಾದಿಯು

ಮತ್ತು

ಸಂಕಪ್ಪ ಕೂಡಾ .... ಪ್ರತಿವಾದಿಯು.

5. ಶಿವಪ್ಪ. ಶಿವಮ್ಮನ ಮಗ. ಕೋಪಟ ಗ್ರಾಮದ ಭಾಗಮಂಡಲ (ಕೊಡಗು)

7. ಐತಪ್ಪ—ಶಿವಮ್ಮನ ಮಗ. ಸ್ಟೇಟ್ ಬಸ್ ಡ್ರೈವರ್, ಹಾಸನ.

9. ಸರಸು,
10. ಕುಂಞಾಣಿ,
11. ಬಾಲಕೃಷ್ಣ.
} ಹೊನ್ನಮ್ಮನ ಮೈನರ ಮಕ್ಕಳು. ಗಾರ್ಡಿಯನ್ ತಾಯಿ 8ನೇ ಪ್ರತಿವಾದಿ ಹೊನ್ನಮ್ಮ, ಶಿವಮ್ಮನ ಮಗಳು. ಪ ಬಿ. ಅಂಣಿ ಪೂಜಾರಿ ಹೆಂಡ್ತಿ. ಹಳ್ಳಿಗಟ್ಟ ಪೋಸ್ಟ್ ಪೇಟೆ, ದಕ್ಷಿಣ ಕೊಡಗು.

14. ಜಾನಕಿ.
15. ಸೀತಮ್ಮ
16 ಲೀಲಾವತಿ
17. ಸುಂದರ
18 ಶಂಕರ
19 ರಾಜು
} —6ನೇ ಪ್ರತಿವಾದಿ ಲಲಿತನ ಮೈನರ ಮಕ್ಕಳು. ಗಾರ್ಡಿಯನ್ ತಾಯಿ 6ನೇ ಪ್ರತಿವಾದಿ ಲಲಿತ. ಶಿವಮ್ಮನ ಮಗಳು ವ. ಸೋಮಪ್ಪನ ಹೆಂಡತಿ. ಕೋಪಟ ಗ್ರಾಮದ ಭಾಗಮಂಡಲ.

45. ದಾಸಪ್ಪ ಗೋಪಾಲ ಯಾನೆ ಕೃಷ್ಣಮಿತ್ರ—ಗಂಗಮ್ಮನ ಮಗ ಉಪಾಧ್ಯಾಯ, ಗುಂಗಿಟ್ಟೆಲು, ಉಡುಪಿ

83. ಶೀನಪ್ಪ— ಮಂಜಕ್ಕ ಹೆಂಗ್ಸಿನ ಮಗ, ಪುತ್ತೂರು ತಾಲೂಕು ಕುಯ್ಯ ಗ್ರಾಮದ ಶಿಬಂದಿ.

ಸದ್ರಿ ಪ್ರತಿವಾದಿಯವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಮೇಲಿನ ವಾದಿಯು ದಾವಾ A ಶೆಡ್ಯೂಲಿನಲ್ಲಿ ಕಾಣ್ಸಿದ ಕುಯ್ಯ ಗ್ರಾಮದ ಆಸ್ತಿಯನ್ನು ಹಿಸೆ ಮಾಡಿ ವಾದಿಗೆ 20 ಹಿಸೆಗಳನ್ನು ಪಾಟ್ಟಿವಳಿ, ಪಮೀತ ಸ್ವಾಧೀನ ಕೊಡಿಸಬೇಕಾಗಿಯೂ ಮೇಲೆ ಹೆಸರು ಕಾಣ್ಸಿದ ಮೈನರ್ ಪ್ರತಿವಾದಿರ ಬಗ್ಗೆ ಅವರವರ ತಾಯಂದಿರನ್ನು ಗಾರ್ಡಿಯನ್ ಆಗಿ ನೇಮಕ ಮಾಡಬೇಕಾಗಿಯೂ ಅರ್ಜಿಕೊಟ್ಟಿರುವದರಿಂದ ಮೇಲಿನ ದಾವೆಯು ನಿಮಗೆ ನೋಟೀಸು ಬಗ್ಗೆ ತಾ 8-10 . 64ಕ್ಕೆ ಇಟ್ಟಿರುತ್ತದೆ, ಆದುದರಿಂದ ನಿಮಗೇನಾದರೂ ಆಕ್ಷೇಪವಿದ್ದಲ್ಲಿ ಮೇಲ್ಕಾಣಿಸಿದ ತಾರೀಕು ದಿವ್ಸ ಹಗಲು 11 ಗಂಟೆಗೆ ಸ್ವತಹ: ವ ವಕೀಲರ ಮೂಲಕ ಮೇಲ್ಕಂಡ ಕೋರ್ಟಿನಲ್ಲಿ ದಾಕ್ಲು ಮಾಡಿಕೊಳ್ಳತಕ್ಕದ್ದು ಇಲ್ಲವಾದ್ರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲಾಗುವದು.

(ಕೋರ್ಟು ಹುಕುಂ ಪ್ರಕಾರ)

N· R Bhat·
Advocate for plffs

ಪುತ್ತೂರು, ತಾ. 29 _ 9 — 64.

ಅಸ್ತಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ತಮಾ ನಿವಾರಕ ಮೂಲಿಕೆಯನ್ನು ದಿ. 21-10_64 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಖೀರಿನಲ್ಲಿ ತೆಗೆದುಕೊಳ್ಳುವುದರಿಂದ ಅಸ್ತಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ, ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ.

Shri Mahatma Sidh Baba Sewa Ashram
P. O. Chitrakot, (Uttar Pradesh)·

ಗೋವ ರಾಜ್ಯದಲ್ಲಿ

ನಾಟಕ ಎಲ್ಲಿಯೂ ನಡೆಯುತ್ತೆ

"ಕೇಳಿದ್ರೇನೆ ಹೊಸ ಸುದ್ದಿಯೊಂದು..."

"ಎಲ್ಲಿಯದ್ದು ಹೇಳಿ ಮೊದಲು.'

"ಮತ್ತೆಲ್ಲಿಯದ್ದು? ನಮ್ಮ ದೇಶದ್ದು.

'ಹೌದು, ನಮ್ಮ ದೇಶವಿಷ್ಟು ವಿಶಾಲವಿರೋವಾಗ ಯಾವ ಮೂಲೆಯದ್ದೂಂತ ಹೇಗೆ ಗೊತ್ತಾಗಬೇಕು?'

"ಆನೂ ಒಂದು ಪಾದ ರಂಗಸ್ಥಳ ಓರಿಯೆಂದ ಕುಣಿತ ತಿಳಿಯದ ನಟನಂತೆ.'

'ನಿಮ್ಮ ಉದ್ದ ತೋರ ಇದ್ರೆ ಅದೆಲ್ಲಾ ನನ್ಗೆ ಬೇಡ. ನಿಮ್ಮ ಸುದ್ದಿಯನ್ನ ತಿಳಿದು ನಾನು ಸೇರೋ ಸ್ವರ್ಗ ಅಪ್ಪರಲ್ಲೇ ಇದೆಯನ್ನಿ."

'ಏನಂತೆ? ಇವತ್ತಿನಷ್ಟು ವೈರಾಗ್ಯ ಬಂದಿರೋದು?"

"ವೈರಾಗ್ಯವಂತೆ ವೈರಾಗ್ಯ....'

"ಮತ್ತೆ ಇದನ್ನು ಏನಂತ ಕರೆಯಬೇಕೊ?

'ನೀವೇನೂ ಅನ್ನಬೇಡಿ."

"ಅಂದ್ರೆ...?"

"ಸರಿಯಪ್ಪ, ವೈರಾಗ್ಯಾಂತನ್ನೋದ್ರಿಂದ ನಿಮ್ಗೆ ತೃಪ್ತಿಯಾದ್ರೆ ಹಾಗೇನೇ ಅಂದುಕೊಳ್ಳಿ.

"ಮಹಾರಾಣಿಯವ್ರವಿನಷ್ಟು ಏನೋ ವ್ಯಾಕುಲ ಪಟ್ಟಂತೆ ಭಾವವಾಗುವುದು."

"ಸಾಕ ಮಾಡಿ ನಿಮ್ಮ ನಾಟಕವನ್ನು, ನೀವೆಲ್ಲಾ ಹಾಗೇನೇ .."

ಎಲ ಎಲಾ, ಇದೇನು ಮಾತು ಅಲನಾ ಮಣಿ!"

"ಅಂದೆನಲ್ಲಾ, ಸಾಕುಮಾಡೀಂತ..."

"ಅಂದ ಬಿಟ್ಟ ಮಾತ್ರಕ್ಕೆ ಸುಮ್ಮನಿರೋ ಭೂಪ ಇವನಲ್ಲ. ಅಲ್ಲದೆ ನಮ್ಮಮೇಲೆ ನಾಟಕವಾಡುವ ಆರೋಪ ಹೊರಿಸುವಾಗ ಸುಮ್ಮನಿರುವುದೆಂತು ಸಾಧ್ಯ?"

"ಮತ್ತೇನು ಮಾಡ್ತೀರೋ ಮಾಡಿಬಿಡಿ..."

"ಇದೊಳ್ಳೆ ಪೇಚಾಟವಾಯ್ತಲ್ಲ!"

"ಮತ್ತೇನಂತೆ? ಸುಳ್ಳು ಸುಳ್ಳು ನಾಟಕವಾಡಿದ್ರೆ ಪೇಚಾಟವೇ ಪ್ರಾಪ್ತಿ."

"ಅಲ್ಲ ಈಗ ಆಡಿದ್ದಾದ್ರೂ ಏನೂಂತ?"

"ಇನ್ನೇನು ಆಗ್ಬೇಕು? ಆಗೋದೆಲ್ಲಾ ಆಗಿಹೋಯ್ತು. ಏನೇನೋ ಅಂದೊಂಡಿದ್ದೆ. ಈಗ ಎಲ್ಲಾ ತಿಳಿಯಿತು ಬುದ್ಧಿವಂತ್ರು ಎನ್ನಿಸಿಕೊಳ್ಳೋರು ಎಲ್ಲಾ ಆಡೋದು ನಾಟಕವನ್ನೇ.'

"ಮತ್ತು, ನಾನು ನಾಟಕವಾಡ್ತೇನೆ ಅಂದಿಯಲ್ಲ!"

"ನೀವು ದೊಡ್ಡವರಲ್ಲವಾದ್ರೂ ಅವ್ರ ಸಾಲಿಗೆ ಸೇರಿದವ್ರು."

"ಅದಿರ್ಲಿ, ಯಾವ ನಾಟಕ ಆಡೋದು? ಎಲ್ಲಿ?"

"ರಾಜಕೀಯದ ರಂಗಸ್ಥಳದಲ್ಲಿ ಸ್ವಾರ್ಥದ ನಾಟಕ ಆಡೋದು"

"ಈ ಬಿಯುದಿಷಿಯು ಬೇಟೆ ಯಾವುದೋ?"

"ಮತ್ತೆ ಪುನಃ ಸುರು ಮಾಡಿದ್ರಲ್ಲಾ...."

'ತಪ್ಪಿದೆ . ತಪ್ಪಿದೆ.... ಏನೋ ಇದುವರೆಗೂ ನಾಟಕ ಪ್ರಾಕ್ಟೀಸು ಮಾಡುತ್ತ ಇದ್ದೆವು. ಅಂದಹಾಗೇ...."

"ಅಂದ ಹಾಗೇ ಗಿಂದ ಹಾಗೇ ಎಲ್ಲಾ ಬೇಡ. ಯಾವ ನಾಟ್ಕ? ಎಲ್ಲಿ ಆಡೋದು ಅಂತ ಹೇಳ್ಬಿಡಿ,'

"ಬಂತಲ್ಲ ದಸ್ರ...ಅದ್ಕೆ ..."

"ಹ್ಞಾ...."

"ನಾಟ್ಕದ ಹೆಸ್ರು ಸರೀ ನೆನಪಿಲ್ಲ; ಚಂದ್ರ ನೋಡಿಲ್ಲನ್ನು. ಅದ್ರ ಕಥೆ ಹೀಗೆ ಹೋಗುತ್ತೆ...."

"ಹೇಳಿಬಿಡಿ ಮತ್ತೆ .."

"ಸರಿ, ಹಾಗಾದ್ರೆ ಸದ್ಯ ಉದರ ಪೋಷಣೆಗೆ .."

"ಕತೆ ಹೇಳೀಂತಂದೆನಲ್ಲಾ...."

"ಮತೆಂತಂದೆ ಈಗ..."

"ಅಯ್ಯೋ, ಇಲ್ಲಿಯೂ ನಿಮ್ಮ ನಾಟಕ ಏನೋಪ್ಪ, ಈಗೀಗ ನಾಟಕದ ಗಾಳಿ ಬೀಸತೊಡಗಿದೆ...?"

"ಪ್ರಪಂಚವೇ ಭಗವಂತನ ಲೀಲಾ ನಾಟಕವಾಗಿರುವಾಗ ಇದೇನವ ಹಾ?'

"ಮಾತಿಗೆ ಮಾತು ಹಾಕೋದ್ರಲ್ಲಿ ನೀವು ನಿಸ್ಸೀಮರು. ಇದ್ಕೆ ಆ ಕಥೇನ ಹೇಳಿಬಿಡಿ."

"ಯಾವ ಕಥೆ ಮದ?"

"ನಟ ಸಾರ್ವಭೌಮರೇ, ತಾವು ವಾಸ್ತವ ಪ್ರಪಂಚಕ್ಕೆ ಇಳಿಯಿರಿ, ಇಲ್ಲೇ ನಿಮ್ಮ ನಾಟಕ ನಡೆಯಲಿ"

"ಏನೆಂದೆ ರಮಣೀಮಣಿ?"

"ಅಯ್ಯೋ, ನಿಮ್ಮ ಗ್ರಹಚಾರ .."

"ಏ.... ಹಾಗೆಲ್ಲ ಅಂದ್ರೆ ಜಾಗ್ರತೆ; ಒಂದೇ ಅಂದಿದ್ದೆ ಈ ಬಗೆಯ ಅವಾಚ್ಯಗಳನ್ನ ಆಡಬಾರದೂಂತ.'

"ಸರಿ. ಈಗ ನೀವು ಅಭಿನಯಿಸುವ ನಾಟಕದ ಕಥೆ ಕೇಳಬೇಕೆಂಬ ಉತ್ಕಟೇಚ್ಛೆಯು ನನ್ನಲ್ಲಿ ಜನಿಸಿದೆ. ನಾವು ಶರಣಾಗತ ರಕ್ಷಕರು. ಈ ಬಾಲೆಯ ಕಿರು ಬೇಡಿಕೆಯನ್ನು ಪೂರ್ಣ ಮಾಡುವ ಕೃಪೆದೋರುವಿರಾ?"

"ಇಷ್ಟೆಯೆ, ನಿನ್ನ ಹೆಬ್ಬಯಕೆ, ಕೇಳಿಲೆ ಬಾಲೆ, ಬಾಲೇಂದು ಫಾಲೆ, ಒಂದು ಸಂಘ ಅದರ ಕಾರ್ಯದರ್ಶಿಯು ತನ್ನ ಕರ್ತವ್ಯಗಳನ್ನು ಸರ್ವಸಮರ್ಪಕವಾಗಿ ನಿರ್ವಹಿಸಲಿಲ್ಲ ಎಂಬ ಗಂಭೀರ ಆರೋಪವನ್ನು ಹೊರಿಸಿ ಅವಿಶ್ವಾಸ ಗೊತ್ತುವಳಿಯನ್ನು ಸದಸ್ಯರು ತಂದರು.'

"ಇದು ನ್ಯಾಯವೇ ಇಂದಿನ ರಾಜಕೀಯದ ರಂಗಮಂಚದಲ್ಲಿ ಹಾಕುವುದೂ ಇದೇನೇ.'

"ಮುಂಗತೆಯ ಕೇಳು. ಅವಿಶ್ವಾಸ ಗೊತ್ತುವಳಿ ಬಹುಮತದಿಂದಲ್ಲ ಸರ್ವಾನುಮತದಿಂದ ಸ್ವೀಕೃತವಾಯ್ತು.'

"ಆಗಬಹುದಷ್ಟೇ; ಅಧಿಕಾರಲಾಲಸೆ ತುಂಬಿದ ಈ ಕಾಲದಲ್ಲಿ"

"ಮತ್ತೂ ಕೇಳು, ಹೊಸ ಕಾರ್ಯದರ್ಶಿಯ ಆಯ್ಕೆಗೆ ಸಭೆ ಸೇರುವಾಗ ಯಾರನ್ನು ಆಯ್ದುಕೊಳ್ಳಬೇಕೆಂಬ ಗೊಂದಲವೇಳುತ್ತದೆ. ಸಭೆ ಇಬ್ಭಾಗವಾಗುತ್ತದೆ. ಒಂದು ಪಂಗಡದವರು ಮುಂದೆ ಮಾಡಿದ ವ್ಯಕ್ತಿ ಎರಡನೆ ಪಂಗಡದವರಿಗೆ ಆಗದವ. ಆವನ ಸಾಮರ್ಥ್ಯವೇ ಆತನಿಗೆ ಸ್ಪರ್ಧ್ಯನೆನಿಸುತ್ತದೆ, ಮೊದಲ ಪಂಗಡದಲ್ಲಿ ಬೇರೆ ವ್ಯಕ್ತಿಯೇ ಇಲ್ಲ, ಅಧಿಕಾರ ಹೊರಲು ತಯಾರಾದವ.'

'ಮತ್ತೆ ಮುಂದೇನು?"

"ಇದ್ದೇ ಇದೆಯಲ್ಲ ಮತ್ತೆ ಒಡಿಸಾ ಕಾಂಗ್ರೆಸಿನ ನೀತಿ?"

"ಅಂದ್ರೆ, ಒಮ್ಮೆ ಹೊರ ತಳ್ಳಿದವನನ್ನೇ ಮತ್ತೆ ಕರೆದು ಕೊಂಡರು?"

"ಹ್ಞಾ ಹಾಗೇ ಎನ್ನು, ಅಂತೂ ಮೊದಲಿನ ಅವಿಶ್ವಾಸಿಯೇ ಈಗ ಬಹು ಜನರ ವಿಶ್ವಾಸದಿಂದ ಆಯ್ಕೆ ಹೊಂದಿದ."

"ಹಾಗಾದ್ರೆ ಈಯೆಲ್ಲಾ ಸಂಗತಿ ನಮ್ದಲ್ಲಾ ಇತ್ಲಾನ್ನಿ.'

"ಏಕೆ ಹಾಗಂತೀ?"

"ಅಲ್ಲಾ ಈ ನಾಟಕ ಬರೆದು ಎಷ್ಟು ವರ್ಷವಾಯ್ತೋ? ಇಂದು ನೋಡಿ, ಒರಿಸ್ಸಾದಲ್ಲಿ ಅದೇ ನಾಟಕ ತುಸು ಬದಲಾವಣೆ ಹೊಂದಿ ನಡೆದಿದೆಯಲ್ಲ?"

"ಬಹುಶಃ ನಾಟಕ ಕಾಪಿರೈಟ್ ಇವರ ಪೇರು ಈಗ ತೀರಿತು. ಬಿಡು ನೀನು ನಾಟಕ ನಾಟಕ ಅನ್ನುತ್ತ ಪಟ್ಟುಹಿಡಿದು ಬಿಟ್ಟದ್ದು ಯಾಕೇಂತ."

"ಅಲ್ಲ, ದೇಶೋದ್ಧಾರ ಮಾಡೋ ಟೋಪಿಯವ್ರೇ ಹೀಗೆ ನಾಟಕ ಆಡೋದಕ್ಕೆ ಹೊರಡಿದ್ರೆ ..?"

"ರಾಜಕಾರಣಾಂತಂದ್ರೆನೇ ಹಾಗೆ. ಅದೇನೂ ಇಲ್ಲಿ ಮಾತ್ರ ನಡೆದದ್ದೂ ಅಲ್ಲ. ಪ್ರಜಾತಂತ್ರದ ರಾಣಿ ಗ್ರೇಟ್‌ಬ್ರಿಟನಿನಲ್ಲಿಯೂ ಇಂತಹವೇ ನಡೆಯುತ್ತೆ."

"ಅಂದ್ರೆ . ?"

"ಅಂದ್ರೆ ಏನು? ಒಮ್ಮೆ ಚರ್ಚಿಲರ ಮೇಲೆ ಪಾರ್ಲಿಮೆಂಟ್ ಅಪಮಾನದಿಂದಿತ್ತು. ಆದರೆ, ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಅವರೊಬ್ಬರೇ ಪ್ರಧಾನಿಯಾಗಲು ಸಮರ್ಥರಿದ್ದರು. ಇಂತಹುದೇ ಎಲ್ಲೆಲ್ಲಿಯೂ ಯಾವಾಗಲೂ ನಡೆಯುತ್ತಿರುತ್ತೆ."

"ಎಲ್ಲೆಲ್ಲರು ಸುದ್ದಿ ನಮಗೆ ಗೊತ್ತಿಲ್ಲ. ನಮ್ಮಲ್ಲಂತೂ ನಡೆಯುತ್ತಿದೆ...."

"ನೀನು ಬಲು ಚಾಣಾಕ್ಷೆ ತಾನೆ?"

"ನೋಡಿ, ಕಳೆದ ವರ್ಷದವರೆಗೆ ಯಾವ ಸರಕಾರಿ—ಗೈರು ಸರಕಾರಿ ಪ್ರಶಸ್ತಿ ಪಡೆಯದವರೂ ಈ ವರ್ಷ ಯಾವ ಕೆಲಸವನ್ನೂ ಮಾಡದೇನೇ ಅವನ್ನು ಪಡೆಯುತ್ತಾರೆ. ಒಮ್ಮೆ ಸಂಘಟನೆಗಾಗಿ ಅಧಿಕಾರ ತ್ಯಾಗ ಮಾಡಿದವ್ರು....'

"ಛೆ ಛೆ...ಅವೆಲ್ಲಾ ಹೇಳಬೇಡ. ಅವ್ರು, ನಮ್ಗೆ ಬೇರೇನು ಮಾತೇ ಇಲ್ವೆ ಆಡೋಕೆ?"

"ಏನು, ಅದ್ರೆಲ್ಲಾ ವೈರಾಗ್ಯ ನಿಮಗೆ'

"ವೈರಾಗ್ಯವೆಲ್ಲಿ ಬಂತು? ನಮ್ಮ ಕಾಲ ಕೆಳಗೆ ಒಕ್ಕಿದ್ರೆ ಮೇಲೆ ನೋಡಿ ಉಗುಳಿದ್ರೆ?"

"ಅದಕ್ಕಾಗಿ ಸುಮ್ಮನಿರಬೇಕು ಅಲ್ವೆ?'

"ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ಅಂತಾರಲ್ಲ.."

"ಸರಿಯೆನ್ನಿ ಆ ಪಟಿ ಹಕ್ಕಿ ನಮಗೆ ಬೇಡ ಎಷ್ಟು ಹೊತ್ತಾಯ್ತೋ, ಬನ್ನಿ ಬೇಗ ಕೈಕಾಲು ತೊಳಕೊಂಡು ..."

'ಮತ್ತೆ ಆಗ್ಲೇ ಕೇಳಿದ್ದೆನಲ್ಲ....'

"ಮಾಮ, ಇನ್ನು ಯಾಕೆ ತಡ ಮಾಡ್ತೀರಾ!"

"ಇಲ್ಲ, ಇಲ್ಲ, ಇವತ್ತು ... ಒಂದು ದಿನ ಉಪವಾಸ ಮಾಡುವಾತೆ ಹೊಟ್ಟೆ..."

"ಹಿಹ್ಹಿ... ಅದು ಸರಿ ಪುಷ್ಕಳವಾಗಿ ಭೋಜನಮಾಡಿ....'

"ನೀನು ಬಾರೆಂದ ಮಾತ್ರಕ್ಕೆ ನಾನು ಬಂದೇ ಬಿಟ್ಟೆ ನೋಡು .."

— ಗೋರಾ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 167/1964.

ಮಂಜಪ್ಪ ಪೂಜಾರಿ —ವಾದಿ.

ಮತ್ತು

ಚಿನ್ನಿಯಾನೆ ... —ಪ್ರತಿವಾದಿಯು.

1ನೇ ಪ್ರತಿವಾದಿ—ಹೊಸಂಗಡಿ ಗ್ರಾಮದ ಬಾಳಂಜ ಎಂಬಲ್ಲಿರುವವಳು

ವಾದಿಯು ತನಗೇನೇ ಪ್ರತಿವಾದಿಯಿಂದ ಬರತಕ್ಕ ಜೀವನಾಂಶ ಬಗ್ಗೆ ರೂಪಾಯಿ 2207 = 10ಕ್ಕೆ ಹಾಕಿದ ಮೋಕದ್ದಮೆಯು ತಾರೀಕು 15-10-1964ಕ್ಕೆ ತನಿಖೆ ಇಟ್ಟಿರುತ್ತದೆ, ಸದ್ರಿ ದಾವೆಯ ಕುರಿತು ಆಕ್ಷೇಪ ಇದ್ದರೆ ಸದ್ರಿ ಮೇಲ್ಕಂಡ ದಿನ ಬೆಳಿಗ್ಗೆ 11 ಗಂಟೆಗೆ ಕೋರ್ಟಿನ ಮುಂದೆ ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ಏಕಪಕ್ಷೀಯ ತೀರ್ಮಾನಿಸಲಾಗುವುದು.

(By order of Court)

N J Kadamba,
Advocate for Plaintiff.

ಬೆಳ್ತಂಗಡಿ, 22.9.1964.

ಅಸ್ತಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟರಾದ ಚಿತ್ರಕೋಟ್ ಅಸ್ತಮಾ ನಿವಾರಕ ಔಷಧಿಯನ್ನು ತಾ. 21-10-64ನೇ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವುದರಿಂದ ಅಸ್ತಮಾ, ಶ್ವಾಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga
Baba Ayurvedashram,
P. O. Chitrakot U. P.

ಗುರುವಿನಂತೆ
ಮಿತ್ರನಂತೆ
ವೈದ್ಯನಂತೆ
3
ಪುಸ್ತಕಗಳು
ಸಿಗುವ ವಿಳಾಸ:
ನವಭಾರತ ಬುಕ್ ಡಿಪೋ,
ಪಾಲುಕೋಟೆ, ಉಡುಪಿ.

ಸುಲಭದಲ್ಲಿ
ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ
ಬೆಲೆ: ರೂ. ೨

ಸುಲಭದಲ್ಲಿ
ಪತ್ರಲೇಖನ
Letter Writing
Made Easy
ಬೆಲೆ: ರೂ. ೧-೨೫

ಮನೆಮದ್ದು
ನೂರಾರು ಕಾಹಿಲೆಗಳಿಗೆ
ಮನೆಯಲ್ಲೇ ಮದ್ದು ಮಾಡುವ ವಿಧಾನ ವಿವರಿಸುವ ಗೃಹ ವೈದ್ಯ: ಬೆಲೆ: ರೂ. ೨.

NAVAYUGA 1-10-1964
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಈ ವಾರದ ಭವಿಷ್ಯ

(ಜ್ಯೋತಿಷವು ಅದೃಷ್ಟವಾದವಲ್ಲ ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಆತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು, ನಮ್ಮ ಹಲವು ಮಂದಿ ವಾಚಕರ ಸೂಚನೆಯ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸಲಾರಂಭಿಸಿದ್ದೇವೆ. ಸಂ. ಸ.)

೧-೧೦-೬೪ರಿಂದ ೭-೧೦-೬೪ರ ವರೆಗೆ

೧. ಮೇಷ

ನಿಮ್ಮ ಜನ್ಮರಾಶಿಪತಿಯಾದ ಅಂಗಾರಕನೋರ್ವನನ್ನುಳಿದು ಇತರ ಎಲ್ಲಾ ಗ್ರಹರೂ ನಿಮಗನುಕೂಲವಾಗಿರುವರು. ಆದಕಾರಣ ನಿಮ್ಮ ಯಾವತ್ತೂ ಆಕಾಂಕ್ಷೆಗಳಿಂದು ನಿರ್ವಿಘ್ನದಿಂದ ನೆರವೇರಲಿವೆ. ನೌಕರಿ ವರ್ಗದವರಿಗೆ ಉದ್ಯೋಗದಲ್ಲಿ ಭಡತಿಯಾಗುವ ಯೋಗವಿದೆ. ವ್ಯಾಪಾರ ವ್ಯವಹಾರಗಳಲ್ಲಿ ಸಾಕಷ್ಟು ಲಾಭ, ವಿಜಯವನ್ನು ಗಳಿಸಿದರೂ ರಾಜಕೀಯ ರಂಗದಲ್ಲಿ ಪ್ರತಿಪಕ್ಷಗಳಿಂದ ಪರಾಭವ ಹೊಂದುವ ಸಂಭವವಿದೆ. ಸ್ವಂತ ಆರೋಗ್ಯದತ್ತ ಹೆಚ್ಚಿನ ಗಮನ ಕೊಡಿರಿ. ವಾರಾಂತ್ಯದ ೩ ದಿನಗಳಲ್ಲಿ ವಿಜಯ, ಸುಖ, ಲಾಭಗಳನ್ನು ಹೊಂದಲಿರುವಿರಿ.

೨. ವೃಷಭ

ಶ್ರಮವಹಿಸಿ ದುಡಿಯುವಿರಾದರೂ ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ಲಭಿಸದು. ಸಾಂಸಾರಿಕ ತಾಪತ್ರಯಗಳಿಂದ ಪೀಡಿತರಾದ ನಿಮಗೆ ಉದ್ಯೋಗದಲ್ಲೂ ಅಧಿಕಾರಿಗಳ ಪೀಡೆ ಉಪಟಳಗಳು ಸಂಭವಿಸುವವು. ಕಫ, ವಾತ ದೋಷಗಳು ಆಗಾಗ ಕಂಡುಬರಲಿವೆ. ಆಪ್ತೇಷ್ಟರ ವಿಯೋಗ ದುಃಖಕ್ಕೆ ನೀವಿಂದು ಎರವಾಗಲಿರುವಿರಿ. ಮಿತ್ರವರ್ಗದವರ ನೆರವಿನಿಂದಾಗಿ ದಿನಯಾಪನೆಯು ದುಸ್ತರವಾಗಲಾರದು, ಕಷ್ಟಸಹಿಷ್ಣುಗಳಾದ ನಿಮಗೆ ವಾರದ ಅಂತ್ಯಂತ ದಿನಗಳು ಅನುಕೂಲವಾಗಿವೆ.

೩. ಮಿಥುನ

ನೀವೆಷ್ಟೇ ಮಿತಭಾಷಿಗಳಾಗಿದ್ದರೂ ನಿಷ್ಕಾರಣವಾಗಿ ವಾಕ್ಕಲಹಕ್ಕೆ ಗುರಿಯಾಗಲಿರುವಿರಿ. ಗುರುಹಿರಿಯರ ಆಗ್ರಹಕ್ಕೆ ಪಾತ್ರರಾದ ನಿಮಗೆ ಅಧಿಕಾರಿಗಳ ಭಯ, ಹಿತ್ತೋಷ್ಣ ಸಂಬಂಧವಾದ ಕಾಹಿಲೆಗಳೂ ತಲೆದೋರಲಿವೆ. ಬಹುತೇಕ ನಿಮ್ಮ ಗೃಹತಾಪತ್ರಯಗಳಿಂದು ಮಾಯವಾಗುವುವು. ಜನ್ಮಪತಿಯಾದ ಬುಧನಿಂದು ಉಚ್ಚನಾಗಿರುವ ಕಾರಣ ದೇಹ ಮನಸ್ಸುಗಳಿಗೆ ಕೊಂಚ ಸುಖನೆಮ್ಮದಿ ದೊರಕೀತು. ಪ್ರವಾಸವು ದುಃಖಕರವಾಗಿ ಪರಿಣಮಿಸಲಿದೆ. ತಾ. ೨-೩ ಈ ವಾರದಲ್ಲಿ ಉತ್ತಮ ದಿನಗಳು.

೪. ಕರ್ಕಟ

ವಿರೋಧೀ ವರ್ಗದವರ ಕಾಟವಧಿಕವಾಗಿದ್ದರೂ ವ್ಯವಹಾರಚತುರರಾದ ನೀವು ಹಿಡಿದ ಕಾರ್ಯವನ್ನು ಕೊನೆ ಹಾಯಿಸಿಯೇ ತೀರುವಿರಿ. ವ್ಯಾಪಾರ ವ್ಯವಹಾರಗಳು ಎಂದಿನಂತೆ ಸಾಗುವುವು. ಧನಸುಖಭಾಗ್ಯ ಲಾಭಪತಿಗಳಾದ ರವಿ ಗುರು ಶುಕ್ರರ ಪೂರ್ಣಾನುಗ್ರಹವು ನಿಮ್ಮ ಮೇಲಿರುವುದರಿಂದ ಆರ್ಥಿಕ ತಗಾದೆಯಾಗಲಿ ಮಾನಸಿಕ ರೋಗವಾಗಲಿ ನಿಮಗುಂಟಾಗಲಾರದು. ನೀಚ ಜನರ ವಕ್ರದೃಷ್ಟಿಯು ನಿಮ್ಮ ಧನದ ಮೇಲಿರುವುದರಿಂದ ಆ ಭಾಗದಲ್ಲಿ ಜಾಗರೂಕರಾಗಿದ್ದರೆ ಒಳಿತು. ಚಿಕ್ಕಪುಟ್ಟ ಗೃಹಕಲಹಗಳು ಆಗಾಗ ಕಾಣಿಸಿಕೊಂಡಾವು. ಸ್ವಂತ ಆರೋಗ್ಯದತ್ತ ಹೆಚ್ಚಿನ ಗಮನವಿರಿಸಿರಿ. ತಾ. ೧, ೫, ೬ ಅನುಕೂಲದ ದಿನಗಳು.

೫. ಸಿಂಹ

ನಿಮ್ಮ ಧನಲಾಭಪತಿಯಾದ ಬುಧನು ಉಚ್ಚನಾಗಿ ಧನಸ್ಥಾನದಲ್ಲಿ ಕುಳಿತಿರುವುದರಿಂದ ನಿಮಗೀವಾರದಲ್ಲಿ ಹಣದ ಅಡಚಣೆಯು ಸ್ವಲ್ಪವೂ ಕಂಡುಬರಲಾರದು. ಆದರೆ ಎಷ್ಟೇ ದುಡಿದರೂ ವಾರಾಂತ್ಯದಲ್ಲಿ ಕೈಬರಿದಾದೀತು. ಮನಸ್ಸಿಗೆ ನೆಮ್ಮದಿ ಇರಲೊಲ್ಲದು. ದುಡಿಮೆಯ ಬಹ್ವಂಶವು ಅನಾವಶ್ಯಕವಾಗಿ ವ್ಯಯವಾಗಲಿದೆ. ಪಿತ್ತೋಷ್ಣದಿಂದ ದೇಹಾಲಸ್ಯವುಂಟಾಗುವುದು. ರಾಜಕೀಯದಲ್ಲಿ ಪ್ರತಿಸ್ಪರ್ಧಿಗಳ ಕೈಯೇ ಮೇಲಾಗುವ ಸಂಭವವಿದೆ. ವಿದ್ಯೋಪಜೀವೀ ಜನತೆಗೀವಾರವು ಅತ್ಯುತ್ತಮವಾಗಿರುವುದು. ತಾ. ೨, ೩, ೭ ಈ ದಿನಗಳಲ್ಲಿ ನಿಮ್ಮ ಬಯಕೆಗಳು ಸಿದ್ಧಿಸಲಿವೆ.

೬. ಕನ್ಯಾ

ಎಂತಹ ಅಸಮಾನ್ಯವಾದ ಕಾರ್ಯವೇ ಇರಲಿ ನೀವು ಯಾರೊಬ್ಬರ ನೆರವನ್ನು ಬಯಸದೆ ಸ್ವಯಂ ಕೊನೆಗೊಳಿಸಲು ಶಕ್ತರಿರುವಿರಿ. ಮುಂದಿಟ್ಟ ಹೆಜ್ಜೆಯನ್ನು ಎಂದೂ ಹಿಂದೆ ಇಡಲಾರಿರಿ. ಜನತೆಯ ಸಹಕಾರ, ಬಂಧುಗಳ ನೆರವು ಚೆನ್ನಾಗಿರುವ ನಿಮಗೆ ಸರ್ವತ್ರ ಸ್ಥಾನಮಾನಾದಿಗಳು ಲಭಿಸಲಿವೆ. ಪ್ರಬಲನಾದ ಪ್ರತಿಪಕ್ಷಿಯೂ ಕೂಡ ಮುಂಗುಸಿಯ ಕಂಡ ಸರ್ಪದಂತೆ ತಲೆಬಾಗುವನು. ಭೂಸಂಬಂಧವಾದ ವ್ಯವಹಾರದಲ್ಲಿ ಒಳ್ಳೆಯ ಲಾಭವಾದೀತು. ಪಿತ್ತದೋಷವು ಆಗಾಗ ಕಾಣಿಸಲಿದೆ. ತಾ. ೧, ೪, ೫, ೬ ಈ ದಿನಗಳಲ್ಲಿ ನಿಮ್ಮ ಆಕಾಂಕ್ಷೆಗಳು ಪೂರ್ಣವಾಗಲಿವೆ.

೭. ತುಲ

ಶ್ರಮಸಹಿಷ್ಣುಗಳೂ ಕಷ್ಟಜೀವಿಗಳೂ ಆದ ನಿಮಗೆ ಈ ವಾರದಲ್ಲಿ ಕಷ್ಟಕ್ಕೆ ತಕ್ಕ ಫಲ ಲಭಿಸಲಾರದು ಖರ್ಚುವೆಚ್ಚಗಳೂ ದಿನದಿಂದ ದಿನಕ್ಕೆ ಏರುವುದರಿಂದ ಮರ್ಯಾದೆಯನ್ನು ಕಾಪಾಡಿಕೊಳ್ಳಲು ಕಷ್ಟವಾದೀತು. ಆಪ್ತ ಬಂಧುಗಳೊಂದಿಗೆ ಕೆಲವು ಮನಸ್ತಾಪಗಳುಂಟಾಗಲಿವೆ. ಮಕ್ಕಳ ಆರೋಗ್ಯದತ್ತ ಹೆಚ್ಚಿನ ಗಮನವಿರಲಿ ವಿಶೇಷತಃ ನೌಕರಿವರ್ಗದವರಿಗೆ ಈ ವಾರವು ಅನಿಷ್ಟದಾಯಿಯಾಗಿ ಪರಿಣಮಿಸಲಿದೆ. ಮನೋರೋಗದಿಂದ ಪೀಡಿತರಾದ ನಿಮಗೆ ತಾ ೧, ೨, ೩, ೭. ಈ ದಿನಗಳು ಸ್ವಲ್ಪ ನೆಮ್ಮದಿಯನ್ನೀಯುವವು.

೮. ವೃಶ್ಚಿಕ

ಬೃಹಸ್ಪತಿಯ ನೇರದೃಷ್ಟಿಯು ನಿಮ್ಮ ರಾಶಿಯ ಮೇಲಿದ್ದರೂ ನಿಮ್ಮ ರಾಶ್ಯಧಿಪತಿಯಾದ ಅಂಗಾರಕನು ನೀಚನಾಗಿರುವುದರಿಂದ ನಿಮ್ಮ ದೇಹಕ್ಕೆ ಸುಖವುಂಟಾಗದು ದುರ್ಭಾವವಾದೀತು. ಆರ್ಥಿಕ ವಿಚಾರದಲ್ಲಿ ನೀವು ನಿಶ್ಚಿಂತರಾಗಿದ್ದರೂ ವ್ಯಾಪಾರದಲ್ಲೂ ಕೋರ್ಟು ಕಚೇರಿಗಳ ಕಾರ್ಯಗಳಲ್ಲೂ ನಷ್ಟಪರಾಭವಗಳುಂಟಾಗಲಿವೆ. ಎಷ್ಟೇ ಮಿತಭಾಷಿಗಳಾಗಿದ್ದರೂ ವಾಕ್ಸಂಬಂಧ ಕಲಹವು ಅನಿವಾರ್ಯವಾಗಲಿದೆ. ವಿದ್ಯೋಪಜೀವೀ ನೌಕರಿ ವರ್ಗಕ್ಕೂ ವಿದ್ಯಾರ್ಥಿ ವೃಂದಕ್ಕೂ ಶರದ್ಯದ ದಿನಗಳು ಅತೀವ ಪ್ರಶಸ್ತವಿವೆ. ತಾ ೨ ರಿಂದ ೬ ರ ವರೆಗಿನ ದಿನಗಳು ಅತೀವ ಪ್ರಶಸ್ತವಾಗಿವೆ.

೯. ಧನು

ಅನಿಷ್ಟಸ್ಥಾನವಾದ ಅಷ್ಟಮದಲ್ಲಿ ಅರಿಷ್ಟಕಾರಿಯಾದ ಅಂಗಾರಕನು ಕುಳಿತಿರುವುದರಿಂದ ಅತಿರೇಕ ಅಪದನರ್ಥಗಳು ಬಂದೊದಗಲಿವೆ, ಮಾತ್ರವಲ್ಲ ವಿರೋಧಿವರ್ಗದವರಿಂದಲೂ ನಾನಾತರದ ಕಿರುಕುಳ ಕಂಟಕಗಳೂ ಪ್ರಾಪ್ತವಾದಾವು. ಆದರೂ ಕರ್ತವ್ಯದಕ್ಷರೂ ಕಷ್ಟಸಹಿಷ್ಣುಗಳೂ ಆದ ನೀವು ಎದೆ ಗುಂದದೆ ಸ್ವಕಾರ್ಯದಲ್ಲಿ ಮುನ್ನಡೆವಿರಿ ನಿಮ್ಮ ಪರಿಶ್ರಮ ಸಾರ್ಥಕವಾಗುವುದು. ಆದಾಯವು ಉತ್ತಮವಿರುವುದರಿಂದ ದಿನ ಯಾಪನೆಯು ಸುಗಮವಾಗಲಿದೆ. ಪ್ರವಾಸ ಕಾಲ ಒಳ್ಳೆಯದಲ್ಲ ತಾ. ೪, ೫, ೬, ೭ ಉತ್ತಮ.

೧೦. ಮಕರ

ಗೃಹತಾಪತ್ರಯಗಳಿಂದ ನಿಮ್ಮ ಮನಸ್ಸಿಗಿಂದು ನೆಮ್ಮದಿಯಿರಲಾರದು. ಅರ್ಧಾಂಗಿಯು ಕೂಡ ಅನುದಿನ ಕಲಹವಾದೀತು. ಶ್ರಮಕ್ಕೆ ತಕ್ಕ ಫಲ ದೊರೆತರೂ ಬಹು ಮುಖದ ಖರ್ಚುಗಳು ನಿಮ್ಮನ್ನಾವರಿಸಿರುವುದರಿಂದ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಲಿರುವಿರಿ ಜನತೆಯ ಬೆಂಬಲವು ನಿಮಗಿದ್ದರೂ ಕೂಡ ಕೋರ್ಟು ಕಚೇರಿಗಳ ವ್ಯವಹಾರದಲ್ಲಿ ಪರಾಜಯ ಉಂಟಾದೀತು. ಶ್ರಮಜೀವಿಗಳಿಗೂ ಕಾಲವು ತುಂಬ ಅನಿಷ್ಟಕರವಿದೆ. ತಾರೀಕು ೧, ೬, ಇತರ ದಿನಗಳಿಗಿಂತ ಉತ್ತಮವಾಗಿವೆ.

೧೧. ಕುಂಭ

ನಿಮ್ಮ ಮನಸ್ಸಾಕ್ಷಿಗೆ ಸರಿಯಾಗಿ ನೀವು ಕರ್ತವ್ಯ ನಿರ್ವಹಿಸಿದರೂ ಹೆರವರು ನಿಮ್ಮ ವಿಷಯದಲ್ಲಿ ವಿಪರೀತ ಮನೋಭಾವನೆಯಿಂದಿರುವರು. ಅಷ್ಟೇಕೆ ನಿಮ್ಮ ಬಂಧುಗಳೇ ನಿಮ್ಮ ಮೇಲೆ ಎರಡೆಣಿಸುವರು. ಶ್ರಮಕ್ಕೆ ತಕ್ಕ ಫಲ ಕಾಣದಾದರೂ ಅನಿರೀಕ್ಷಿತ ಧನಲಾಭದ ಯೋಗವಿದೆ. ವಾತದೋಷದಿಂದಾಗಿ ಆರೋಗ್ಯವು ಚೆನ್ನಾಗಿರದು. ಸ್ತ್ರೀನಿಮಿತ್ತವಾಗಿ ಕೆಲವು ಧನ ಹಾನಿ ಜನಾಪವಾದಕ್ಕೂ ಕೂಡಾ ಸಿಲುಕುವ ಸಂಭವವಿದೆ. ವ್ಯಾಪಾರಿಗಳಿಗೆ ಅನಿರೀಕ್ಷಿತ ನಷ್ಟವಾದೀತು. ವಾರಿಯ ೩ ದಿನಗಳು ಅನುಕೂಲವಾಗಿವೆ.

೧೨. ಮೀನ

ಸದ್ಯ ಗ್ರಹಮಂಡಲವೇ ನಿಮ್ಮ ಮೇಲೆ ಮುನಿದಿರುವುದರಿಂದ ನಿಮ್ಮ ಯಾವತ್ತೂ ಪರಿಶ್ರಮವು ನೀರಲ್ಲಿ ಹೈದ ಹೋಮದಂತೆ ವಿಫಲವಾಗಲಿವೆ. ಆದರೂ "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ" ಎಂಬ ಗೀತೋಕ್ತಿಯಂತೆ ಫಲಾಪೇಕ್ಷೆಯನ್ನಿಡದೆ ಕಾರ್ಯ ನಿರ್ವಹಿಸಿರಿ. ಇಂದಲ್ಲ ಮುಂದಾದರೂ ನಿಮ್ಮ ಬಯಕೆ ಸಫಲವಾಗುವದು ಆರ್ಥಿಕ ದುರವಸ್ಥೆ ಗೃಹತಾಪತ್ರಯ ಸ್ವಜನ ವಿರೋಧ ಅಧಿಕಾರಿಗಳ ಭಯಾದಿಗಳಿಂದ ಪೀಡಿತರಾದ ನಿಮಗೆ ವಾರದ ಆದ್ಯಂತ ದಿನಗಳು ತುಂಬ ಅನಿಷ್ಟದಾಯಿಯಾಗಿ ಪರಿಣಮಿಸಲಿವೆ. ಜಾಗ್ರತರಾಗಿರಿ.

ಪ್ರವಾಸ ರದ್ದಾಯಿತು

(ಹದಿಮೂರನೇ ಪುಟದಿಂದ)

ಮೇಷ ಎಣಿಸುತ್ತಲೇ ಇದ್ದೀಯಲ್ಲ' ಎಂದು.

"ಮೀನ ಮೇಷ ಅಲ್ಲ, ಸಂಬಳ ಸಿಗಲು ಇನ್ನೂ ಎಷ್ಟು ದಿನವಿದೆ ಎಂದು ಲೆಕ್ಕ ಹಾಕುತ್ತಿದ್ದೇನೆ" ಎನ್ನುತ್ತಾ ಕೈ ಬೆರಳುಗಳನ್ನು ಮಡಚತೊಡಗಿದೆ.

"ಒಳ್ಳೆ ಗ್ರಹಚಾರ ಗಂಟು ಬಿದ್ದಂತಾಯಿತು ನನಗೆ!'

"ಗ್ರಹಚಾರ ಇವತ್ತು ಹಿಡಿದದ್ದೋ ನಿನಗೆ? ನಿನಗೆ ಎಂದೋ ಗ್ರಹಚಾರ ಹಿಡಿದಿದೆ. ಇಲ್ಲದಿದ್ದರೆ ಈ ನೂರೈವತ್ತು ರೂಪಾಯಿ ಕೆಲಸಕ್ಕೆ ಸೇರಬೇಕಿತ್ತಾ ನೀನು? ಕಾರಿನಲ್ಲಿ ಕುಳಿತು ಝುಂ ಅಂತ ಊರೂರು ಸುತ್ತಬೇಕಿತ್ತು ನೀನು. ಅದೆಲ್ಲಾ ಇರಲಿ, ಈಗ ಏನು ಮಾಡೋಣಾಂತೀಯ?"

"ನೋಡು, ಈಗ ನಮ್ಮಲ್ಲಿ ಯಾರು ಯಾರು ಬರುತ್ತಾರೇಂತ ಮೊದಲು ವಿಚಾರಿಸಬೇಕು. ಅನಂತರ ಸಂದರ್ಶಿಸಬೇಕಾದ ಊರುಗಳ ಪಟ್ಟಿಯನ್ನು ಸಿದ್ಧಗೊಳಿಸಬೇಕು. ಬಸ್ಸುಗಳ ವೇಳಾ ಪಟ್ಟಿಯನ್ನು ತಿಳಿದುಕೊಳ್ಳಬೇಕು. ಮತ್ತು ಆಗಬಹುದಾದ ಖರ್ಚನ್ನು ಅಂದಾಜು ಹಾಕಬೇಕು ನೀನೂ ಬರುತ್ತೀ ತಾನೇ?'

"ನಾನು ಬಾರದಿದ್ದರೆ ನೀನು ಬಿಡುವಿಯಾ? ಆದರೆ ನನ್ನ ಕೈಯಲ್ಲಿ ಹಣವಿಲ್ಲವಲ್ಲವಯ್ಯ ಈಗ!'

"ಅದರ ಏರ್ಪಾಡನ್ನೂ ನಾನು ಮಾಡುತ್ತೇನೆ'

"ಏನು ಕೊಸುಂಬತ್ತೂರು ಮಾಡ್ತೀಯಾ?"

"ಅದೆಲ್ಲಾ ನಿನಗೆ ಬೇಡ. ಕೊಸುಂಬತ್ತೂರಾದರೂ ಮಾಡ್ತೇನೆ, ಕೊತ್ತಂಬರಿ ಸೊಪ್ಪಾದರೂ ಮಾಡ್ತೇನೆ. ನಿನ್ನ ಖರ್ಚಿಗೆ ಬೇಕಾದಷ್ಟು ದುಡ್ಡನ್ನು ನಾನು ಕೊಡ್ತೇನೆ ಆಗಬಹುದು ತಾನೇ?'

"ಅದನ್ನು ವಾಪಸ್ಸು ಕೊಡಬೇಡವೇ?"

"ವಾಪಸ್ಸು ಕೊಡದೆ? ಧರ್ಮಕ್ಕೆ ಬರುತ್ತೆಯೇ ದುಡ್ಡು?"

"ಈಗಾಗಲೇ ನಾನು ನೂರು ರೂಪಾಯಿ ಕೊಡಬೇಕಲ್ಲಯ್ಯ ನಿನಗೆ!"

"ಹೌದು, ಅದರೊಂದಿಗೆ ಈ ಐವತ್ತನ್ನೂ ಸೇರಿಸಿಕೋ. ಒಟ್ಟಿಗೆ ನೂರೈವತ್ತು ರೂಪಾಯಿ ಕೊಡಬೇಕಾಗುತ್ತೆ ನೀನು."

"ಏನು ಸಾಲಕೊಟ್ಟು ನನ್ನನ್ನೇ ಮುಳುಗಿಸುವ ಯೋಚನೆಯೆ?"

"ನಿನ್ನನ್ನು ಮುಳುಗಿಸಲು ಆರಡಿ ಆಳ ಬೇಕಲ್ಲ. ಅಷ್ಟೆಲ್ಲ ಆಗಲಿಕ್ಕಿಲ್ಲ ಏನೂ ಯೋಚನೆ ಮಾಡಬೇಡ. ನಾಳಿದ್ದು ಪ್ರವಾಸ ಹೊರಡೋಣ'

"ಹಾಗೇ ಆಗಲಿ. ಸಧ್ಯಕ್ಕೆ ಇಲ್ಲಿಂದ ಹೊರಡೋಣ; ಆಫೀಸಿಗೆ. ಬಂದು ತುಂಬ ಹೊತ್ತಾಯ್ತು' ಎಂದೆ.

ಆಫೀಸಿಗೆ ಹೋದವನೇ ಡ್ರಾಯರಿನಿಂದ ಡೈರಿಯನ್ನು ತೆಗೆದು ರಜೆ ಯಾವಾಗ ಸಿಗುತ್ತದೆಂಬುದನ್ನು ನೋಡಿದೆ, ಮೂರು ದಿನಗಳ ರಜೆ ಒಟ್ಟಿಗೇ ಸಿಗುವ ಸಂಭವವಿತ್ತು.

ಡೈರಿಯನ್ನು ಹಿಡಿದುಕೊಂಡು ಚಂದ್ರುವಿನ ಬಳಿ ತೆರಳಿದೆ.

'ನಾಳಿದ್ದು ಮೂರು ದಿನ ರಜೆ ಇದೆಯೆಂದು ಹೇಳಿದೆಯಲ್ಲಾ, ಅದು ಏತಕ್ಕೆ?' ಎಂದು ಕೇಳಿದೆ ಚಂದ್ರುವನ್ನು.

'ಏಕೇಂತ ನನಗೆ ಗೊತ್ತಿಲ್ಲ. ಕ್ಯಾಲೆಂಡರ್ ನೋಡಬೇಕು. ಇದೆ' ಎಂದ ಆತ.

ಡೈರಿಯ ಪುಟವನ್ನು ಅವನ ಮುಂದಿಟ್ಟೆ. ಅದನ್ನು ನೋಡಿದ ಕೂಡಲೇ ನಾಲಗೆ ಕಚ್ಚಿಕೊಂಡ ಚಂದ್ರು. 'ನಾವು ಇಷ್ಟು ಹೊತ್ತು ಪ್ಲಾನ್ ಹಾಕಿ ಪ್ರಯೋಜನವೇ ಆಗಲಿಲ್ಲವಲ್ಲಯ್ಯಾ. ಹಬ್ಬದ ದಿವಸ ಯಾರಾದರೂ ಮನೆ ಬಿಟ್ಟು ಹೋಗಲು ಬಿಟ್ಟಾರೆಯೇ? ಈ ಸರ್ತಿ ಬೇಡ ಹೋಗುವುದು. ನಮ್ಮ ಈ ಬಾರಿಯ ಪ್ರವಾಸವನ್ನು ರದ್ದುಗೊಳಿಸುವ, ಮುಂದೆ ಎಂದಾದರೂ ಹೋದರಾಯಿತು. ಏನೆನ್ನುವಿ ನೀನು?' ಎಂದ ಚಂದ್ರು.

'ಬಹಳ ಒಳ್ಳೆಯದಾಯಿತು. ಹಣ ಉಳಿಯಿತು' ಎಂದುಸುರಿದೆ ನಾನು.

Edited, Printed & Published by K. H Shetty at the Navayuga Press, Udipi, S. India

ನವಯುಗ

ಸಂಪುಟ ೪೪] ಅಕ್ಟೋಬರ, ೮, ೬೪ [ಸಂಚಿಕೆ ೬



Navayuga nationalist kannada weekly

೨೦ ಪೈಸೆ

ಕನಲು ದಾರಿ—ಕೆಂಪು ದೀಪ

ಸಾಹಿತ್ಯ ವೇದಿಕೆಯ ಮೇಲೆ ಈಗ ಇನ್ನೊಂದು ಬಲಿ?

— ಸುದಾಸ.

ಪ್ರೇಮಚಂದರ ಕತೆ— ಕಾದಂಬರಿಗಳು, ಇಂದಿಗೆ ಹಿಂದೀ ಸಾಹಿತ್ಯ ಕ್ಷೇತ್ರಗಲ್ಲಿ ಎತ್ತರದ ಸ್ಥಾನದಲ್ಲಿವೆ. ಹಿಂದೀ ಸಾಹಿತ್ಯಪ್ರಿಯರು ಸಾಹಿತ್ಯ ಕ್ಷೇತ್ರದ ಅಮರ ಕೃತಿಗಳೆಂದು, ಪ್ರೇಮಚಂದರ ಸಾಹಿತ್ಯ ಕೃತಿಯನ್ನು ಮೆಚ್ಚಿಕೊಂಡಿದ್ದಾರೆ. ಇದಕ್ಕೆ ಕಾರಣ, ಅವರು ಬರೆದ ಕೃತಿಗಳಲ್ಲಿರುವದು ಜೀವನವನ್ನು ಕಣ್ಣೆದಿರು ನೋಡಬಲ್ಲ ಜೀವಂತ ಚಿತ್ರಣ. ಇದು ಸಾಧ್ಯವಾದುದು, ಅವರು ಪಾಡು ಪಟ್ಟುದರಿಂದಲೇ. [ಪ್ರಕಾಶಕರು ಅವರ ಕೃತಿಗಳನ್ನು ಪ್ರಕಟಿಸಿ, ಹಣದ ಕುರಿತು "ತಾರಮ್ಮಯ್ಯ" ಎಂದು ಕೈಯ್ಯಾಡಿಸಿದ್ದರಿಂದಲೇ?]

ಅನಂತರ ರಾಹುಲ ಸಾಂಕೃತ್ಯಾಯನರ ಸರದಿ ಅವರು ಕೈಕೊಂಡ ಪ್ರವಾಸ— ಅದರಿಂದ ಗಳಿಸಿದ ಅನುಭವ—ಅಧ್ಯಯನ--ಮುಂತಾದವುಗಳ ಬಗೆಗೆ ಬರೆದರೆ ನೂರು ಉತ್ತಮ ಗ್ರಂಥಗಳಾಗುತ್ತವೆ. ಅವರು ಬರೆದುದನ್ನು ಪ್ರಕಟಿಸದ ಸಂಪಾದಕರಿಲ್ಲ. ಆದರೆ ಸಂಭಾವನೆ ಶೂನ್ಯ.

ನಿರಾಲರು ಹಿಂದೀ ಸಾಹಿತ್ಯ ಕ್ಷೇತ್ರದಲ್ಲಿ ಚರ್ಚೆಗೀಡಾದ ಕವಿ. ಅವರ ಜೀವನವಿಡೀ ಸಂಘರ್ಷದಲ್ಲೇ ಕಳೆಯಿತು. ಸಾಹಿತಿಗಳೂ, ಓದುಗರೂ ಎಲ್ಲರೂ ಕೂಡಿಯೇ ನಿರಾಲರ ಸಮಾಧಿ ಮಾಡಿದರು. ಅವರು ಕೊನೆಯುಸಿರೆಳೆದ ಬಳಿಕ, ಅವರ ಶವಸಂಸ್ಕಾರ ಕ್ರಿಯೆ ಸುಸಾಂಗವಾಗಿ ನೆರವೇರಿದ ಬಳಿಕ ಕೇಳಿ ಬಂದ ಉದ್ಗಾರ: ನಿರಾಲರಂಥ ವ್ಯಕ್ತಿಗಳು ಇನ್ನೆಂದು ಬರುತ್ತಾರೆ; ಇನ್ನೆಲ್ಲಿ ಬರುತ್ತಾರೆ?

[ಸಾಹಿತ್ಯ ಕ್ಷೇತ್ರಕ್ಕಿಳಿಯುವವರಿಗೆ ಇದು ಭರವಸೆಯಿರಿಸಬಹುದಾದ ಮಾತೇ. ತಾವು ಸತ್ತ ಬಳಿಕವಾದರೂ ತಮ್ಮನ್ನು ಗೌರವಿಸುವವರು ಇರುತ್ತಾರೆ ಎಂಬ ಮಾತನ್ನು ನಂಬಬೇಕಾದ್ದೆ!]

ಕಳೆದ ತಿಂಗಳ ಹನ್ನೊಂದನೆಯ ತಾರೀಖಿಗೆ ಈ ಸಾಲಿಗೆ ಇನ್ನೊಬ್ಬರು ಸೇರಿಕೊಂಡರು. ಹೆಸರು ಗಜಾನನ ಮಾಧವ ಮುಕ್ತಿ ಬೋಧ.

[ಈ ಹೆಸರು ಸುಪರಿಚಿತವಲ್ಲ. ಕೊನೆಯುಸಿರೆಳೆವ ವರೆಗೆ ಪ್ರಾಮಾಣಿಕತನ, ಸಚ್ಚರಿತೆಯುಳ್ಳ ಜೀವನ, ಇದಕ್ಕಾಗಿ ಹೋರಾಟ ನಡೆಸಿದರೆಂತಲೇ ಮುಕ್ತಿಬೋಧರ ಹೆಸರು ಸುಪರಿಚಿತವಲ್ಲ!]

ಸಮಯ ಬಂದಿರಲಿಲ್ಲ, ಮುಕ್ತಿಬೋಧರ ಹೆಸರು ಸಾಹಿತ್ಯ ಕ್ಷೇತ್ರದಲ್ಲಿ ಚಿರ ಸ್ಥಾನವನ್ನು ಕಾಯ್ದುಕೊಳ್ಳಲು ಕಳೆದ ಫೆಬ್ರವರಿ ತಿಂಗಳ ವರೆಗೂ ಸಮಯ ಬಂದಿರಲಿಲ್ಲ. ಬರುವ ಸೂಚನೆ ಕಳೆದ ಫೆಬ್ರವರಿ ತಿಂಗಳಲ್ಲಿ ಕಂಡುಬಂದಿತ್ತು.

ಫೆಬ್ರವರಿ ತಿಂಗಳಲ್ಲಿ ಮಲಗಿದ ಮುಕ್ತಿಬೋಧರು ಮತ್ತೆ ಹಾಸಿಗೆ ಬಿಟ್ಟು ಏಳಲಿಲ್ಲ. ಏಳು ತಿಂಗಳ ಕಾಲ ಮಲಗಿ ಕಾಲನ ನಿರೀಕ್ಷೆಯಲ್ಲಿ ಕಳೆದ ಅವರು, ಕಳೆದ ತಿಂಗಳ ಹನ್ನೊಂದನೆಯ ತಾರೀಖಿಗೆ ಕಣ್ಣು ಮುಚ್ಚಿದರು. ಕೊನೆಯುಸಿರೆಳೆದರು. ಅಲ್ಲಿಗೆ ಮಹಾಜೀವವೊಂದರ ಹೋರಾಟ ಸ್ತಬ್ಧವಾಯಿತು. ರೇಡಿಯೋ ಹೇಳಿತು: ಗಜಾನನ ಮಾಧವ ಮುಕ್ತಿ ಬೋಧರು ಇನ್ನಿಲ್ಲ.

[ಪಕ್ಕದ ಮನೆಯ ರೇಡಿಯೋ ಇನ್ನೂ ಒರಲುತ್ತಲೇ ಇತ್ತು. ಕೇಳುವ ಇಚ್ಛೆ ನನಗಿರಲಿಲ್ಲ. ಅದನ್ನು ನಿಲ್ಲಿಸಿ ಬಿಡಬೇಕು. ಅದನ್ನು ಮಾತ್ರವೇ ಅಲ್ಲ— ಈ ಜೀವನದ ಸಮಸ್ತ ಆಗುಹೋಗುಗಳೆಲ್ಲವನ್ನೂ ನಿಲ್ಲಿಸಿ ಬಿಡಬೇಕು—ಏನೂ ಉಳಿಯಬಾರದು—ಎಲ್ಲ ವ್ಯಾಪ್ತಿಮೌನ ವಹಿಸುವಂತೆ — ಹತ್ತಿಕ್ಕಿ ಬಿಡಬೇಕು ಉದ್ವೇಗ ಕ್ಷೋಭೆಗೊಂಡ ಮನಸ್ಸು ಈ ರೀತಿ ಹುಯ್ಯಲಿಡುತ್ತಲಿತ್ತು ಕ್ಷಣ ಹೊತ್ತು. ಆದರೆ ಆ ಕ್ಷಣ ಹೊತ್ತಿನಲ್ಲೂ ನಾನು ನಿರುಪಾಯ; ನಾನೇನೂ ಮಾಡುವಂತಿಲ್ಲ!]

ಕವಿ ಮುಕ್ತಿ ಬೋಧರು ಕೈಕೊಂಡುದು ಅಧ್ಯಾಪಕ ವೃತ್ತಿ. ದೀಕ್ಷೆ ತೊಟ್ಟುದು ಸಾಹಿತ್ಯಸೇವೆಗಾಗಿ. ಬಿ. ಎ. ವರೆಗಿನ ಅವರ ಶಿಕ್ಷಣ, ಅವರಿಗೆ ಎರಡು ಹೊತ್ತು ಅನ್ನವನ್ನೂ ಕೊಡಲಿಲ್ಲ. ಪತ್ರಿಕಾ ಸಂಪಾದಕರಾಗಿಯೂ ಅವರು ದುಡಿದದ್ದಿದೆ. ಕಾವ್ಯಗಳಲ್ಲಿ ಘರ್ಷಣೆಯ ಹಲವು ಚಿತ್ರಗಳನ್ನು ಚಿತ್ರಿಸಿದ್ದೂ ಇದೆ. ಅವರ ಕಾವ್ಯದ ಒಂದು ತುಣುಕು — ಪ್ರಯತ್ನಿಸು— ಪ್ರಯತ್ನಿಸು—ಪ್ರಯತ್ನಿಸು— ಬದುಕುವದಕ್ಕಾಗಿ — ಮಣ್ಣಡಿಗೆ ಹೂಗಿಯಲ್ಪಟ್ಟ ಬಳಿಕವೂ; [ಪ್ರಯತ್ನಿಸು]

ಎಂತಹ ಬಯಕೆ! ಎಂತಹ ಎಚ್ಚರಿಕೆ! ಈ ಎಚ್ಚರಿಕೆ, ಈ ಬಯಕೆ ಮುಕ್ತಿ ಬೋಧರದ್ದೇ. ಅವರುಪಟ್ಟ ಪ್ರಯತ್ನದ ಫಲ ಮಾತ್ರ ವಿಫಲ. ಮುಕ್ತಿ ಬೋಧರು ನಿರಾಲಾ, ಪ್ರೇಮಚಂದ್ ರಾಹುಲಜೀ ಅವರು ತುಳಿದ ದಾರಿಯನ್ನೇ ತುಳಿಯುವಂತಾಗಬಾರದೆಂದು [ಕಳೆದ ಫೆಬ್ರವರಿ ತಿಂಗಳ ಬಳಿಕ] [ಪ್ರಯತ್ನಿಸಿದವರು ಹಿಂದೀ ಸಾಹಿತ್ಯ ಕ್ಷೇತ್ರದ ನಾಮಾಂಕಿತ ಸಾಹಿತಿಗಳು. ಈ ಸಂದರ್ಭದಲ್ಲೇ ಸರಕಾರವೂ 'ಮನಸ್ಸು' ಮಾಡಲು ಉದಾರತೆಯುಳ್ಳದ್ದಾಗಿತ್ತು, ಎಂಬುದೂ] ಅಭಿಮಾನದ ಸಂಗತಿ.

ಆದರೆ ಇವೆಲ್ಲಾ ನಡೆದಿದ್ದರೂ, ಅದು ಕೈಮೀರಿದ ಬಳಿಕ ಸಾವು ಬಲೆ ಬೀಸಿದ ಬಳಿಕ. ಕವಿಯು ಹಾಡದಂತೆ, ಬರೆಯದಂತೆ ಆದ ಬಳಿಕ.

[ಆ ಬಳಿಕವಾದರೂ ನಡೆದ ಪ್ರಯತ್ನಕ್ಕಾಗಿ ಇವರೆಲ್ಲರನ್ನು ಅಭಿನಂದಿಸಬೇಕಾಗಿದೆ!]

ಇದ್ದಾಗ ಅಡಿಕೊಳ್ಳುವದು ನಮ್ಮಲ್ಲಿನ ಪದ್ಧತಿ ಇದು ಭಾರತೀಯರ ರಕ್ತಗುಣ.

ವಂಗ ಸಾಹಿತ್ಯಕ್ಕೆ ಮನ್ನಣೆ ದೊರಕಿಸಿಕೊಟ್ಟ ಶರತ್ ಚಂದ್ರರು ಇದ್ದಾಗ ಅವರಿಗೆ ಬೆಲೆಯ ಕೊಡುವುದು, 'ವ್ಯೈಲೆಗ' ಎಂದು ನಂಬಿಕೆ ಇರಿಸಿದವರಿಗೇನೇನೂ ಕಡಿಮೆ ಇಲ್ಲ. ಈ ಕುರಿತು ಅವರು ಒಂದು ಪತ್ರದಲ್ಲಿ ಹೀಗೆಂದು ಹೇಳಿದ್ದಾರೆ. 'ಎಲ್ಲಕ್ಕಿಂತ ಜೀವಂತವಾಗಿರುವ ಲೇಖನವನ್ನು ಓದುವಾಗ ಲೇಖಕ ತನ್ನ ಒಳಗಿಂದಲೇ ಎಲ್ಲವನ್ನೂ ತೆಗೆದು ಹೂವಿನಂತೆ ಅರಳಿಸಿ ಇರಿಸಿದ್ದಾನೆಂದು

(ಹದಿನೈದನೇ ಪುಟ ನೋಡಿರಿ)

ದಕ್ಷ ಬ್ಯಾಂಕಿಂಗ್ ವ್ಯವಸ್ಥೆ ಆರ್ಥಿಕ ಸ್ವಾತಂತ್ರ್ಯಕ್ಕೆ ಹೆದ್ದಾರಿ

1947ರ ಆಗಸ್ಟ್‌ನಲ್ಲಿ ಭಾರತವು ಸ್ವತಂತ್ರವಾದಾಗಿನಿಂದೀಚೆಗೆ ದೇಶದಲ್ಲಿ ಬ್ಯಾಂಕಿಂಗ್ ಉದ್ಯಮವು ಬೆಳೆದು ಪ್ರಗತಿ ಹೊಂದಿರುವುದು ಆರ್ಥಿಕ ಸ್ವಾತಂತ್ರ್ಯಕ್ಕೆ ದಕ್ಷ ಬ್ಯಾಂಕಿಂಗ್ ವ್ಯವಸ್ಥೆಯು ಒಂದು ಪ್ರಮುಖ ಅವಶ್ಯಕತೆಯೆಂಬ ವಾಸ್ತವಾಂಶವನ್ನು ಸೂಚಿಸುವುದಾಗಿದೆ.

"ಒಂದು ಉತ್ತಮ ಬ್ಯಾಂಕಿಂಗ್ ಸಂಸ್ಥೆ ಜನಾಂಗದ ಆರ್ಥಿಕ ಜೀವನಾಡಿಯಷ್ಟೇ ಅಲ್ಲ, ಅದು ದೇಶದ ಜನ ಯಶಸ್ವಿಯಾಗಿ ಸಂಪತ್ಸಮೃದ್ಧಿ ಹೊಂದುವುದಕ್ಕೆ ಸರ್ವಸಾಧ್ಯ ರೀತಿಗಳಲ್ಲೂ ಸಹಾಯಮಾಡಬೇಕಾದ ಹೊಣೆಯನ್ನು ಹೊಂದಿದೆ" ಎಂಬ ಧ್ಯೇಯದಿಂದ ಐವತ್ತೆಂಟು ವರ್ಷಗಳ ಹಿಂದೆ ಕೆನರಾ ಬ್ಯಾಂಕ್ ಸ್ಥಾಪಿತವಾಯಿತು.

ಪಟ್ಟಣ ಮತ್ತು ಗ್ರಾಮಪ್ರದೇಶಗಳ ಜನರಲ್ಲಿ ಬ್ಯಾಂಕಿಂಗ್ ಅಭ್ಯಾಸವು ಬೆಳೆಯುವುದಕ್ಕೆ, ವಾಣಿಜ್ಯ-ವ್ಯಾಪಾರ-ಕೈಗಾರಿಕೆಗಳ ಅಭಿವೃದ್ಧಿ ಅಗತ್ಯವನ್ನು ಪೂರೈಸುವುದಕ್ಕೆ ಹಾಗೂ ಉತ್ತಮ ಹಣಕಾಸಿನ ನಿರ್ವಹಣೆಯ ಮೂಲಕ ಜನ ಆರ್ಥಿಕ ಭದ್ರತೆಯನ್ನು ಸಾಧಿಸುವುದಕ್ಕೆ ಕೆನರಾ ಬ್ಯಾಂಕ್ ಸ್ಥಾಪನೆಯಾದಾಗಿನಿಂದ ನಿರಂತರವಾಗಿ ಶ್ರಮಿಸುತ್ತಿದೆ.

ಆರ್ಥಿಕ ಸ್ವಾತಂತ್ರ್ಯವನ್ನು ಒಂದು ಸಾರ್ಥಕ ಸಾಧನೆಯಾಗಿಸಲು ಕೆನರಾ ಬ್ಯಾಂಕ್ ಎಷ್ಟು ನಿಷ್ಠೆಯಿಂದ ಶ್ರಮಿಸುತ್ತಿದೆಯೆಂಬುದು "ಉತ್ತಮ ಬ್ಯಾಂಕಿಂಗ್ ಮೂಲಕ ಉತ್ತಮ ಬಾಳುವೆ"ಗಾಗಿ, ಜನತೆಯ ಮತ್ತು ದೇಶದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವುದಕ್ಕಾಗಿ ಕೆನರಾ ಬ್ಯಾಂಕ್ ಒದಗಿಸುತ್ತಿರುವ ವಿವಿಧ ರೀತಿಯ ಸೇವೆಗಳಿಂದ ಸ್ಪಷ್ಟವಾಗುವುದು.

ಮುನ್ನಡೆಯಿರಿ — ಕೆನರಾ ಬ್ಯಾಂಕಿನೊಡನೆ ಮುಂದುವರಿಯಿರಿ

ಬ್ಯಾಂಕಿನ ಆಡಳಿತ ಕಛೇರಿ ಕಟ್ಟಡ

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಮಂಗಳೂರು — ಆಡಳಿತ ಕಛೇರಿ: ಬೆಂಗಳೂರು

ಬ್ಯಾಂಕ್ ಅಷ್ಟೇ ಅಲ್ಲ ವಿಶೇಷ ವೈಶಿಷ್ಟ್ಯತೆಯ ಬ್ಯಾಂಕಿಂಗ್ ಸಂಸ್ಥೆಯೂ ಹೌದು

ವಿಶ್ವದಾದ್ಯಂತ ಪ್ರತಿನಿಧಿಗಳು — ಭಾರತದಲ್ಲಿ 235ಕ್ಕೂ ಹೆಚ್ಚಿನ ಶಾಖೆಗಳು

CB-110 Kan. A

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ.

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಓರಿಸರ್ಥದಿಂದ ಕೂಡಿರಬೇಕು. ಕಾಲು ಕಾಗದಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು ಅಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮುಂಗಳವಾರವೇ ಮುಗಿಯುವುದರಿಂದ ವಾರ್ತೆ, ರಿಪೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಭಾರತದ ಫುಡ್ ಟ್ರೇಡಿಂಗ್ ಕಾರ್ಪರೇಶನಿನ ನಿಯೋಜಿತ ಅಧ್ಯಕ್ಷ, ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್

ಶ್ರೀ ಟಿ. ಎ. ಪೈ.

ಸಂಪುಟ ೪೪ | ಉಡುಪಿ | Vol 44
ಸಂಚಿಕೆ ೬ | ೮—೧೦—೧೯೬೪ | No. 6

ನಮ್ಮ ಕಾರ್ಯವಿಧಾನ

ನಮ್ಮ ರಾಜ್ಯದ ಸರಕಾರಿ ನಿರ್ಣಯ ಮತ್ತು ರಾಜ್ಯ ಶಾಸನಗಳ ಮೇಲೆ ದಾಖಲು ಮಾಡಲಾಗುತ್ತಿರುವ ರಿಟ್ ಅರ್ಜಿಗಳ ಸಂಖ್ಯೆಯನ್ನು ಮತ್ತೆಲ್ಲಿಯ ನ್ಯಾಯಾಲಯವೂ ದಾಖಲು ಮಾಡಿಕೊಂಡಂತಿಲ್ಲ. ಸರಕಾರವು ಹೊರಡಿಸುವ ಆಜ್ಞೆ ಆಜ್ಞೆಗೆಂಬಂತೆ ರಿಟ್ ದಾಖಲಾಗುತ್ತಿದೆ. ಇತ್ತೀಚಿಗೆ ಎರಡು ಮಹತ್ವದ ತೀರ್ಮಾನಗಳು ಹೊರಬಿದ್ದಿವೆ. ಕಟ್ಟಡ ತೆರಿಗೆಯ ಶಾಸನವು ಅನ್ಯಾಯವೆಂದು ಉಚ್ಚ ನ್ಯಾಯಾಲಯವು ಹೇಳಿದರೆ, ಪಬ್ಲಿಕ್ ಸರ್ವಿಸ್ ಕಮಿಶನ್ ಮಾಡಿಕೊಂಡ ನೇಮಕಗಳು ಅಕ್ರಮವೆಂದು ಸರ್ವೋಚ್ಚ ನ್ಯಾಯಾಲಯವು ಸಾರಿದೆ. ಈ ನಿರ್ಣಯಗಳ ಪರಿಣಾಮವು ಕ್ಷುಲ್ಲಕವೆಂದು ಭಾವಿಸುವಂತಿಲ್ಲ ಇಂತಹ ನಿರ್ಣಯಗಳು ಮಿಂಡಿ ತಕ್ಕ ಗಂಭೀರವಾಗಿವೆ; ಉತ್ತರ ಪ್ರದೇಶದ ಶಾಸನ ಸಭೆಯು ಅವಮಾನವನ್ನು ಅಲ್ಲಿನ ಉಚ್ಚ ನ್ಯಾಯಾಲಯವು ಮಾಡಿಲ್ಲವೆಂಬ ನಿರ್ಣಯದಿಂದ ಉಂಟಾದ ಪರಿಸ್ಥಿತಿಯೇ ಇಲ್ಲೂ ತಲೆದೋರಿದೆ ಆದರೆ, ಈ ಪರಿಸ್ಥಿತಿಗಳ ವಿಧಾನಗಳಲ್ಲಿ ವ್ಯತ್ಯಾಸವಿರಬಹುದು.

ಕಟ್ಟಡ ತೆರಿಗೆಗೆ ಸಂಬಂಧಿಸಿದ ವಿಧೇಯಕವನ್ನು ಯಾರೂ ಸೂಕ್ಷ್ಮವಾಗಿ ಪರಿಶೀಲಿಸಿದಂತಿಲ್ಲ. ಜನತೆಯೊದರೂ ಎಚ್ಚರಾದುದು ಆದು ಶಾಸನವಾದ ಮೇಲೆಯೆ ಆಗ ಇದಕ್ಕೆ ಎಲ್ಲೆಲ್ಲೂ ಪ್ರತಿಭಟನೆಯು ತೋರಿಬಂತು. ನ್ಯಾಯಾಲಯದ ನಿರ್ಧಾರದಂತೆ ಯಾವ ಉದ್ದೇಶದಿಂದ ಈ ಶಾಸನವನ್ನು ತರಲಾಗಿದೆಯೋ ಅದು ಇದರಿಂದ ಈಡೇರುವುದಿಲ್ಲ. ಒಂದುವೇಳೆ ತೆರಿಗೆಗಳನ್ನು ಹೆಚ್ಚಿಸಬೇಕೆಂದಿದ್ದರೆ, ಇಡಿಯ ರಾಜ್ಯಕ್ಕೆ ಏಕರೂಪವಾದ ನಗರ ಸಭಾ ಶಾಸನವನ್ನು ತಂದು ಅದರ ಬಲದಿಂದ ಆದಾಯ ಹೆಚ್ಚಿಸಬಹುದೆಂದದು ಸಲಹೆಯಿತ್ತಿದೆ. ಇಲ್ಲಿ ನಾವು ಗಮನಿಸಬೇಕಾದುದು ಶಾಸನವನ್ನು ನ್ಯಾಯಕ್ಕೆ ವಿರೋಧವಾಗಿ ತರುವ ಸರಕಾರದ, ನಮ್ಮ ಶಾಸಕರ ಕಾರ್ಯವಿಧಾನವನ್ನು. ಒಂದು ವಿಧೇಯಕವು ಸಿದ್ಧವಾಗಲು ಮತ್ತದು ಶಾಸನವಾಗಲು ತಗಲುವ ಅವಧಿ ಮತ್ತು ವೆಚ್ಚವನ್ನು ನಾವು ಕಡೆಗಣಿಸುವಂತಿಲ್ಲ. ನ್ಯಾಯಾಂಗದ ತೀರ್ಪು ಈ ಸಂಬಂಧ ವೆಚ್ಚಗಳೇ ಎಚ್ಚರಿಕೆ ವಹಿಸಿದ್ದರೆ ಎಷ್ಟೋಂಗ ಉಳಿತಾಯವಾಗುತಿತ್ತು! ಜನತೆಯ ಬೆವರಿನ ಸಂಪಾದನೆ ತೆರುತ್ತಿರುವ ಕರದ ಹಣವು ಉಳಿತಾಯವಾಗಿ ವ್ಯರ್ಥ ವೆಚ್ಚವಾಗುವುದನ್ನು ಕಾಣುವಾಗ ತೆರಿಗೆದಾರನ ಮನಸ್ಸಿನಲ್ಲಿ ವ್ಯಥೆ ಮೂಡುವುದು ಸ್ವಾಭಾವಿಕ. ಸರಕಾರದ ನಿರ್ಣಯಗಳ ವಿರುದ್ಧ ನ್ಯಾಯಾಲಯವು ಹಲವು ಬಾರಿ ತೀರ್ಮಾನಗಳನ್ನು ಕೊಟ್ಟಿದ್ದರೂ ಅದರಿಂದ ಸರಕಾರ ಎಚ್ಚರಾಗದಿರುವುದು ಶೋಚನೀಯ

ಪಬ್ಲಿಕ್ ಸರ್ವಿಸ್ ಕಮಿಶನ್ ಮಾಡಿಕೊಂಡ ೪೦ ನೇಮಕಗಳು ಅಕ್ರಮವೆಂಬ ಸರ್ವೋಚ್ಚ ನ್ಯಾಯಾಲಯದ ನಿರ್ಣಯದಿಂದ ನೇಮಕಗೊಂಡ ಈ ಜನರನ್ನು ಕೆಲಸದಿಂದ ತೆಗೆದು ಹಾಕದೆ ನಿವೃತ್ತಿಯಿಲ್ಲದಂತಾಗಿದೆ. ಇವರಲ್ಲೂ ಕೆಲವರಿಗೆ ಹಿಂದಿನ ಹುದ್ದೆಯು ದೊರೆತರೂ ಉಳಿದವರು ಕೆಲಸ ಕಳೆದು ಕೊಳ್ಳುವಂತಾಗಿದೆ. ಹೀಗೆ ನಿರುದ್ಯೋಗಿಗಳಾಗುವವರಲ್ಲಿ ಮೊದಲು ಉದ್ಯೋಗದಲ್ಲಿದ್ದು ಹೊಸತರ ಮೇಲಿನ ಆಸೆಯಿಂದ ಬಂದವರೂ ಕೆಲವರಿರಬಹುದು. ಹಾಗಿರುವಾಗ ಇವರ ತಲೆಯ ಮೇಲೆ ಅದೆಂತಹ ಭಾರ ಬಿದ್ದಂತಾದೀತು? ಕೈಗೆ ತುತ್ತನ್ನು ಕೊಟ್ಟು ಅದನ್ನು ಮತ್ತೆ ಕಸಿದುಕೊಳ್ಳುವುದು ಯಾರಿಗೂ ಶ್ರೇಯಸ್ಕರವಲ್ಲ ಅದರಲ್ಲೂ ಪಬ್ಲಿಕ್ ಸರ್ವಿಸ್ ಕಮಿಶನ್ನಿನಂತಹ ನಿಷ್ಪಕ್ಷಪಾತತನ ಮತ್ತು ನ್ಯಾಯಕ್ಕೆ ಹೆಸರಿರಬೇಕಾದ ಒಂದು ಸಂಸ್ಥೆ ತನ್ನ ಕಾರ್ಯವಿಧಾನದಲ್ಲಿ ತಪ್ಪುವುದಾದರೆ ಉಳಿದವರ ಪಾಡೇನು? ಇಂತಹ ಪರಿಸ್ಥಿತಿಗಳು ಅನಪೇಕ್ಷಣೀಯ ಮಾತ್ರವಲ್ಲ, ಅಪಮಾನಕಾರಕಗಳೂ ಹೌದು.

ಒಂದು ಕಾರ್ಯಮಾಡಬೇಕಾದರೆ ನೂರು ಬಾರಿ ಆಲೋಚಿಸಬೇಕು ಎಂಬೊಂದು ಮಾತಿದೆ. ನಮ್ಮ ಮಂತ್ರಿ ಮಾಗಧರು ಆಲೋಚನೆ ಮಾಡುವತ್ತ ಹೆಚ್ಚು ಗಮನ ಕೊಡುತ್ತಿಲ್ಲವೆಂಬುದಕ್ಕೆ ಇಂತಹ ವಿದ್ಯಮಾನಗಳೇ ಸಾಕ್ಷಿ. ಆದುದರಿಂದ ನಮ್ಮ ಮಂತ್ರಿಗಳೂ ಉಚ್ಚ ಅಧಿಕಾರಿಗಳೂ ಶಾಸಕರೂ ತಂತಮ್ಮ ಅಧಿಕಾರಗಳನ್ನು ನಿರ್ವಹಿಸುವಾಗ ತುಸು ಎಚ್ಚರಿಕೆಯನ್ನು ವಹಿಸುವತ್ತ ಗಮನ ನೀಡಬೇಕು. ಇದರಲ್ಲೂ ಆಳುವ ಪಕ್ಷದ ಶಾಸಕರ ಕರ್ತವ್ಯ ಅತಿ ಹೆಚ್ಚಿನದು. ನಮ್ಮ ಸಂವಿಧಾನದ ಕಾಲಂಕಷವಾದ ಪರಿಜ್ಞಾನವು ಅವರಿಗೆ ಅವಶ್ಯ ಇರಬೇಕು. ರಾಜ್ಯ ವಿಧಾನಸಭೆ—ಮಂಡಳಿಗಳ ಮುಂದೆ ಬರುವ ವಿಧೇಯಕವನ್ನೂ ಸರಕಾರೀ ಆಜ್ಞೆಗಳನ್ನೂ ಕಾನೂನಿನ ದೃಷ್ಟಿಯಲ್ಲಿ ನಿರೀಕ್ಷಿಸಿರುವಂತೆ ನೋಡಿಕೊಳ್ಳದೆ ಹೋದರೆ, ಸರಕಾರದ ಮೇಲೆ ಜನತೆಗೆ ಜುಗುಪ್ಸೆ ಮೂಡುವುದು ಸ್ವಾಭಾವಿಕ. ಈ ಕಾರಣದಿಂದಲೇ ನಿಜಲಿಂಗಪ್ಪ ಸರಕಾರವು ರಾಜೀನಾಮೆ ನೀಡಬೇಕು ಎಂಬ ಕೂಗೂ ಅಲ್ಲಲ್ಲಿ ಕೇಳಬರತೊಡಗಿದೆ. ಇಂತಹ ಪ್ರಮಾದಕ್ಕೆ ಇನ್ನು ಮುಂದಾದರೂ ಅವರು ಬಲಿಯಾಗದಂತೆ ಎಚ್ಚರಿಕೆ ವಹಿಸುವುದು ಅತ್ಯಗತ್ಯ.

ರಾಷ್ಟ್ರೀಯ ಉಡುಪು

ಪ್ರಧಾನಿ ಶಾಸ್ತ್ರಿಯವರು ವಿದೇಶ ಸಂಚಾರಕ್ಕೆ ಹೊರಟಿದ್ದಾರೆ ಸಾಮಾನ್ಯವಾಗಿ ಇಂತಹ ವೇಳೆ "ಅಂತರಾಷ್ಟ್ರೀಯ" ಉಡುಪು ತೊಡುವುದನ್ನು ಧರಿಸುವುದು ಸಂಪ್ರದಾಯ. ಊರಲ್ಲಿ ಮುಂಗ ನಾಗಿದ್ದರೂ ಪರವೂರಲ್ಲಿ ರಂಗನಾಗಿರಬೇಕು ಎಂಬುದಕ್ಕೆ ಉನ್ನತ ಮಟ್ಟದಲ್ಲಿ ಮಾತ್ರವಲ್ಲ ಜನಸಾಮಾನ್ಯರಲ್ಲೂ ಮನ್ನಣೆಯಿದೆ. ಆದರೆ ಇದನ್ನು ಮುರಿಯುವ ಎದೆಗಾರಿಕೆಯನ್ನು ಶಾಸ್ತ್ರೀಜಿ ತೋರಿಸಿದ್ದಾರೆ ತಾನು ತನ್ನ ಸಾದಾ ಉಡುಪಿನಲ್ಲೇ ತನ್ನ ಸಂಚಾರ ಮಾಡುವುದಾಗಿ ಅವರು ಹೇಳಿದ್ದಾರಲ್ಲದೆ ಮಾಡುತ್ತಲೂ ಇದ್ದಾರೆ. ಇದೊಂದು ಅತಿ ಮುಖ್ಯವಾದ ವಿಷಯ. ಪ್ರತಿ ದೇಶಕ್ಕೂ ಸ್ವದೇಶೀಯ ಭಾಷೆ—ಸಂಸ್ಕೃತಿಗಳಿವೆ. ನಮ್ಮ ದೇಶದ ನಾಯಕರು ಪರದೇಶಗಳಿಗೆ ಹೋದಾಗ ಅಲ್ಲಿ ರಾಷ್ಟ್ರಭಾಷೆಯಲ್ಲೇ ಮಾತಾಡಬೇಕು ಎಂಬ ಒಂದು ವಾದವಿದೆ ಆದರೆ, ನಮ್ಮಲ್ಲಿ ಹಿಂದೀ ಭಾಷೆಯನ್ನು ಅರಿಯದ ನಾಯಕರೂ ಇದ್ದಾರೆ, ಅಥವಾ ಇಂಗ್ಲಿಷ್ ಮತ್ತು ಹಿಂದಿಗಳೆರಡೂ ಸಮಾನ ಪಟ್ಟದಲ್ಲೇ ಕೆಲಸಮಾಡುವವರೆಗಾದರೂ ಇರುತ್ತವೆ. ಆದುದರಿಂದ ಈ ಬಗ್ಗೆ ವಿವಾದ ಮಾಡುವಂತಿಲ್ಲ. ಇದೇ ರೀತಿಯಲ್ಲಿ ನಮ್ಮ ನಾಯಕರು ರಾಷ್ಟ್ರೀಯ ಉಡುಪಿನಲ್ಲೇ ವಿದೇಶ ಸಂಚಾರವನ್ನೂ ಮಾಡಬೇಕೆಂಬ ವಾದ ಹುಟ್ಟಿದರೆ ತಪ್ಪಿಲ್ಲ.

ವಚನ ಸುಧೆ

ಸರಸ್ವತೀಮನ್ಯಮಂತಂ ಜಗಾಮ॥
(ಅಥರ್ವವೇದ ೧೯—೪೦—೧)

೧ ವಿದ್ಯೆಯು ಉತ್ಸಾಹಿಯಾದವನ ಬಳಿಗೆ ಹೋಗುತ್ತದೆ.

೧೧ ಉತ್ಸಾಹಿಯೂ ಉದ್ಯೋಗಿಯೂ ಪುರುಷಾರ್ಥಿಯೂ ಸಜ್ಜನನೂ ಆದವನು ಮಾತ್ರ ವಿದ್ಯಾಭ್ಯಾಸವನ್ನು ಮಾಡಬಲ್ಲನು. ಸೋಮಾರಿಯೂ ಉದಾಸೀನನೂ ದುರ್ಜನನೂ ಆದವನು ವಿದ್ಯೆಯನ್ನು ಕಲಿಯಲಾರನು. ವಿದ್ಯೆಯೇ ಸರ್ವಮಂಗಲಕಾರಣವಾಗಿರುವುದರಿಂದ ಪರಿಶ್ರಮಪೂರ್ವಕ ಎಲ್ಲರೂ ಅಧ್ಯಯನ ಮಾಡಬೇಕು.

ನರಸಣ್ಣನ ಸರಸ

ನನ್ನಲ್ಲಿ ಸಿನೇಮಕ್ಕಿಂತ ಅಗ್ಗದರದಲ್ಲಿ ಅಂಗಡಿಯಲ್ಲಿ ಅಕ್ಕಿ ಸಿಕ್ಕುತ್ತೆ ಅಲ್ಲಿಗೇ ಹೋಗು. ನನಗೂ ಲಾಭ, ನನಗೂ ಲಾಭಾನೇ ಆಯ್ತು.

ಕಥಾ ಪ್ರಪಂಚ

ನಿಜ ಅರಿತಾಗ ಕಾವು ಆರಿತು

ಬರೆದವರು

ಶ್ರೀ ಹಳನಾಡು ಸುಬ್ರಾಯ ಭಟ್.

ಚಂದ್ರನಿಗೆ ನಾಲ್ಕಾರು ದಿನಗಳಿಂದ ಸುಮನಳನ್ನು ನೋಡುವುದಾಗಿರಲಿಲ್ಲ. ಮನವು ಸುಮನಳತ್ತ ಹೊರಟಾಗ ಕಲಾವತಿಯು ಅದನ್ನು ತಡೆದು ಬೇರೊಂದು ಕೆಲಸವನ್ನು ಹಚ್ಚುತ್ತಿದ್ದಳು. ಸದಾ ಕಲಾವತಿಯೊಡನೆ ತಿರುಗಾಟ. ರಜೆಯಲ್ಲಿ ಅಪರೂಪವಾಗಿ ಬಂದ ಕಲಾವತಿ ಉಡುಪಿಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಚಂದ್ರನನ್ನೇ ಬಳಸಿಕೊಂಡಿದ್ದಳು. ಒಂದು ದಿನ ಮಠಗಳ ಸಂದರ್ಶನವಾದರೆ, ಇನ್ನೊಂದು ದಿನ ಅಜ್ಜರಕಾಡು; ಗಾಂಧೀ ಮೈದಾನಿನ ವಿಹಾರ. ಮತ್ತೊಂದು ದಿನ ಮಣಿಪಾಲದ ಭವ್ಯ ನೋಟದ ಪರಿಶೀಲನೆ. ಇದರೊಟ್ಟಿಗೆ ಸಿನಿಮಾ ಪ್ರಪಂಚ. ಹೀಗೆ ದಿನವೂ ಎಡೆ ಬಿಡದ ಕಾರ್ಯಕ್ರಮ ಸಾಗಿತ್ತು. ಚಂದ್ರನು ಮಾತ್ರ ಕನ್ನೆ ಮನದ ಚಾಕಲಾಟವನ್ನು ತಾಳಿಕೊಳ್ಳಲಾರದೆ, ಅತಿ ಕಷ್ಟದಿಂದಲೇ ಅದುಮಿ ಹಿಡಿದಿದ್ದನು. ಮನದಲ್ಲಿ ನೊಂದುಕೊಂಡಿದ್ದರೂ ಕಲಾವತಿಯೊಟ್ಟಿಗಿರುವಾಗ ಸದಾ ನಲಿಯುತ್ತಲೇ ಇದ್ದನು. ಅದಕ್ಕೆ ಕಾರಣ ಅವಳ ಹಾಸ್ಯ ರಸದಿಂದ ಕೂಡಿದ ಮಾತುಗಳು, ಹಾಗೂ ನಗು ಸೂಸುತ್ತಿರುವ ಮುಖ ಕಮಲವೇ ಆಗಿತ್ತು. ಚಿಕ್ಕಮ್ಮನ ಮನೆಗೆ ಅಪರೂಪವಾಗಿ ಬಂದ ಕಲಾವತಿ ಎಲ್ಲರ ಆದರಕ್ಕೂ ಪಾತ್ರಳಾಗಿದ್ದಳು.

o o o

ದಿನಕ್ಕೊಮ್ಮೆಯಾದರೂ ಸುಮನಳನ್ನು ನೋಡಲೇ ಬೇಕಿತ್ತು. ದಿನದಲ್ಲಿ ಯಾವ ಕಾರ್ಯ ಲೋಪವಾದರೂ ಅದಕ್ಕೆ ಚ್ಯುತಿ ಬಂದಿರಲಿಲ್ಲ. ಕಾಲೇಜು ಮುಗಿಸಿದೊಡನೆ ಕಾನ್ವೆಂಟಿನತ್ತ ಸಾಗಿ ಹೋಗುತ್ತಿದ್ದನು. ದಿನವೂ ಆತನಿಗಾಗಿ ಸುಮನ ರಸ್ತೆಯಿಂದ ತುಸು ದೂರವಿರುವ ಆಲದ ಮರದಡಿ ಕಾದಿರುತ್ತಿದ್ದಳು. ಎಷ್ಟೋ ಪ್ರೇಮಿಗಳಿಗೆ ಆಶ್ರಯ ನೀಡಿದ ಆಲದ ಮರ ಅವರಿಗೂ ಆಸರೆಯಾಗಿತ್ತು.

ಒಂದು ದಿನ ಆಕಸ್ಮಾತ್ತಾಗಿ ಇಬ್ಬರೂ ಅಲ್ಲಿ ಒಟ್ಟು ಸೇರಿದ್ದರು. ಅಪರಿಚಿತರಾದ ಇಬ್ಬರೂ ಕ್ಷಣಕಾಲ ಮೌನವಾಗಿಯೇ ನಿಟ್ಟಿಸಿದ್ದರು. ಕಬ್ಬಿಣವನ್ನು ತನ್ನತ್ತ ಸೆಳೆಯುವ ಸೂಜಿ ಕಲ್ಲಿನಂತೆ; ಚಂದ್ರನ ಮನವನ್ನು ಸುಮನಳ ರೂಪ ಸೆಳೆದಿತ್ತು. ಅಚ್ಚುಕಟ್ಟುತನದ ಉಡುಪನ್ನು ಧರಿಸಿ ಸುಂದರನಾಗಿ ತೋರುವ ಚಂದ್ರನ ಆಕರ್ಷಕ ವದನ ಸುಮಳ ಮನವನ್ನು ಅಲ್ಲೋಲ ಕಲ್ಲೋಲಗೊಳಿಸಿತ್ತು. ಆಚೀಚೆ ನಾಲ್ಕಾರು ಭಿಕ್ಷುಕರನ್ನುಳಿದು ಮತ್ತಾರೂ ಹತ್ತಿರವಿರಲಿಲ್ಲ. ಮುಗುಳು ನಗೆಯೇ ಮಾತಿಗೆ ನಾಂದಿಯಾಯಿತು. ಇಬ್ಬರ ಮನವೂ ಜೊತೆಯಾಗಿಯೇ ಹೊಂಟಿತು.

ಚಂದ್ರನು ಬಿ. ಎ. ಕೊನೆಯ ವರ್ಷದಲ್ಲಿದ್ದನು. ಸುಮನ ಆಗ ತಾನೆ ಇಂಟರ್ ಮುಗಿಸಿ ಬಿ. ಎ.ಗೆ ಕಾಲಿರಿಸಿದ್ದಳು. ಆತಳಿಗೆ ಕ್ಲಿಷ್ಟವಾದ ವಿಚಾರವನ್ನು ಚಂದ್ರನೇ ಬಿಡಿಸಿ ಹೇಳುತ್ತಿದ್ದನು. ಅನಾಥಳಾಗಿ ಕಾನ್ವೆಂಟ್ ಸೇರಿದ ಸುಮನ ಚಂದ್ರನನ್ನೇ ನಂಬಿದ್ದಳು. ಮುಂದೆ ವಿದ್ಯೆ ಮುಗಿದೊಡನೆ ತಾವಿಬ್ಬರೂ ಸತಿಪತಿಗಳಾಗಬೇಕೆಂದು ಬಯಸಿದ್ದರು. ತಮ್ಮಿಬ್ಬರ ಜೀವನ ಆದರ್ಶವಾಗಬೇಕೆಂಬ ಬಯಕೆ ಇಬ್ಬರಲ್ಲಿಯೂ ನೆಲೆಯಾಗಿತ್ತು. ಬರುವಾಗ ಯಾವುದಾದರೊಂದು ತಿಂಡಿ ತರುವುದು ಚಂದ್ರನ ನಿತ್ಯದ ಕ್ರಮವಾಗಿತ್ತು. ಕಾನ್ವೆಂಟಿನಲ್ಲಿ ವಿಹಾರಕ್ಕೆಂದು ಹೊರ ಬಿಟ್ಟಾಗಲೇ ಅವರಿಬ್ಬರ ಸಮಾಗಮ. ಗೆಳತಿಯರ ಕಣ್ಣು ತಪ್ಪಿಸಿ ಬರುವುದು ನಾಲ್ಕಾರು ದಿನ ಪ್ರಯಾಸವಾದರೂ ಮುಂದೇನು ಕಷ್ಟವಾಗಲಿಲ್ಲ.

ದೂರದ ಸಂಬಂಧಿಕರೊಬ್ಬರ ನಿಧನದ ವಾರ್ತೆಯನ್ನು ಕೇಳಿ; ದುಃಖಿತಳಾಗಿ ಮನಃಶಾಂತಿಗಾಗಿ ನಿರ್ಜನ ಪ್ರದೇಶವಾದ ಆಲದ ಮರದ ಬಳಿಗೆ ಬಂದಾಗಲೇ, ಚಂದ್ರನ ಮುಖ ದರ್ಶನವಾಗಿ ಆತನ ವಶವಾದುದು.

o o o

ದಿನದಂತೆ ಸುಮನ ಬಂದಾಗ ಅಂದು ಚಂದ್ರನ ಸುಳಿವಿರಲಿಲ್ಲ. ಮನದಲ್ಲಿ ಅಶಾಂತಿಯ ಅಲೆಗಳೆದ್ದರೂ "ಒಂದು ದಿನ ಬಾರದುದಕ್ಕೆ ತಾನೇಕೆ ಇಷ್ಟೊಂದು ದುಗುಡಗೊಳ್ಳ ಬೇಕೆಂದು" ಮನಃಶಾಂತಿಯಿಂದಲೇ ಹಿಂತೆರಳಿದ್ದಳು. ಆದರೆ.... ಒಂದು....ಎರಡು... ಮೂರು... ನಾಲ್ಕು ದಿನಗಳುರುಳಿದರೂ ಚಂದ್ರನ ಸುಳಿವಿರಲಿಲ್ಲ. ಆಗ ಸುಮನ ಸ್ವಾಭಾವಿಕವಾಗಿಯೇ ಗಾಬರಿಯಾದಳು. "ಅದೇಕೆ ಬರಲಿಲ್ಲ? ಮತ್ತೊಬ್ಬಳ ಬೆನ್ನು ಹತ್ತಿರಬಹುದೇ?" ಗಂಡಸರೆಲ್ಲ ವಂಚಕರೆಂಬ ಭಾವನೆ ಚಂದ್ರನ ಪರಿಚಯವಾಗುವವರೆಗಿದ್ದಿತ್ತು. ಅದಕ್ಕೆ ಕಾರಣವೂ ಇಲ್ಲದಿರಲಿಲ್ಲ. ಗೆಳತಿ ರತಿ! ನಂಬಿದ ಗಂಡು ಕೈ ಕೊಟ್ಟಾಗ ಮಾನಕ್ಕಾಗಿ ಪ್ರಾಣವನ್ನೇ ಅರ್ಪಿಸಿದ್ದಳು. ಎರಡು ವರ್ಷಗಳ ಕೆಳಗೆ ಬಿ. ಎ. ತರಗತಿಯಲ್ಲಿ ಕಲಿಯುತ್ತಿದ್ದ ರಾಧೆ! ಗಂಡಿನ ಮಾಯಾಜಾಲಕ್ಕೆ ಬಿದ್ದು ಕೊನೆಗೂ ದಿಕ್ಕಿಲ್ಲದೆ ಬೀದಿಯ ಭಿಕಾರಿಣಿಯಾಗಿದ್ದಳು. ಒಂದೊಂದೇ ಘಟನೆಗಳು ಮನದಲ್ಲಿ ಸುಳಿದು ಮಾಯವಾಗ ತೊಡಗಿತು. ಎಲ್ಲಿ ಹುಡುಕಲಿ? ಯಾರನ್ನು ಕೇಳಲಿ?" ಯಾವುದನ್ನೂ ಮನ ನಿರ್ಧರಿಸದಾಯಿತು.

o o o

ಒಂದು ದಿನ ದಾರಿಯ ಮಧ್ಯದಲ್ಲಿ ಚಂದ್ರ ಕಲಾವತಿಯೊಡನೆ ಹೊರಟಾಗ ಆಕಸ್ಮಾತ್ತಾಗಿ ಸುಮನ ಎದುರಾಗಿದ್ದಳು. ಆದರೆ ಅಂದು ಆತಳನ್ನು ನೋಡಿ ಮುಗುಳು ನಗೆ ಸೂಸಲು ಅವನ ಅಳ್ಳೆದೆ ಅಳುಕಿತ್ತು. ಕಲಾವತಿಯ ಬಾಯಿಗೆ ಸಿಲುಕಿ ಮನೆಯಲ್ಲಿ ರಾದ್ಧಾಂತವಾಗುವುದು ಆತನಿಗೆ ಬೇಕಿರಲಿಲ್ಲ. ಮುಂದೆ ಕಾಲ ಒದಗಿ ಬಂದಾಗ ಹೇಳಿದರಾಯಿತೆಂದು ಸುಮ್ಮನುಳಿದಿದ್ದನು. ತನ್ನನ್ನು ನೋಡಿಯೂ ನೋಡದವನಂತೆ ಬೇರೊಂದು ಹೆಣ್ಣಿನೊಡನೆ ಹೊರಟು ಹೋದ ಚಂದ್ರನ ನಡತೆ ಸುಮನಳ ಹೃದಯವನ್ನೇ ಭೇದಿಸಿತ್ತು. ಮತ್ತೊಂದು ಹೆಣ್ಣನ್ನು ಮೋಸಗೊಳಿಸಲು ಹೊರಟಿರುವನೆಂದು ಮತ್ಸರ ಉಕ್ಕೇರ ತೊಡಗಿತು

"ತಾನೂ ಮತ್ತೊಬ್ಬನೊಡನೆ ನಕ್ಕು ನಲಿಯುವುದನ್ನು ಆತನು ಕಣ್ಣಾರೆ ಕಾಣುವಂತಾಗಬೇಕು ಹೆಣ್ಣು ಗಂಡಿಗಿಂತ ಹಿಂದುಳಿದಿಲ್ಲವೆಂಬುದನ್ನು ತೋರಿಸಬೇಕು. ಆತನ ಹೊಟ್ಟೆಯುರಿಯುವಂತೆ ಮಾಡಬೇಕು. ಇದರ ಸೇಡನ್ನು ತೀರಿಸಿಕೊಳ್ಳಲೇ ಬೇಕೆಂ"ದು ನಿರ್ಧರಿಸಿಯೇ ಮನೆ ಪೆದಳು.

ರಜೆ ಕಳೆಯುವ ಮುನ್ನವೇ ಕಲಾವತಿ ಊರಿಗೆ ಹೊರಟು ನಿಂತಳು. ಊರಿಗೆ ಹೊರಟು ನಿಂತ ತಂಗಿಯನ್ನು ಕಳುಹಿಕೊಡುವಾಗ ಚಂದ್ರನಿಗೆ ವೇದನೆಯಾಗದೆ ಇರಲಿಲ್ಲ. ಆದರೆ ಸುಮನಳನ್ನು ನೋಡುವ ಆತುರವೊಂಬುದು ದುಃಖವನ್ನು ಕಡಿಮೆಯಾಗಿಸಿತ್ತು.

ಅಂದೇ ಸುಮನಳನ್ನು ನೋಡ ಹೊರಟ ಚಂದ್ರನನ್ನು ನಿರಾಸೆಯೇ ಹಿಂತೆರಳಿಸಿತ್ತು. ಮೂರು ದಿನ ಎಡೆಬಿಡದೆ ಹೋದರೂ ಆತಳ ದರ್ಶನವಾಗಿರಲಿಲ್ಲ. ಹೃದಯದಲ್ಲಿ ಸ್ಥಾನ ಕಲ್ಪಿಸಿ ಕೊಟ್ಟಿದ್ದ ಸುಮನಳನ್ನು ಕಿತ್ತೊಗೆಯುವುದು ಅಸಾಧ್ಯವಾಗಿತ್ತು.

ತಾನು ದಾರಿಯಲ್ಲಿ ಸಿಕ್ಕಾಗ ಮಾತನಾಡದೆ ಉಳಿದದ್ದು ತಪ್ಪು ಎಂಬ ಭಾವನೆ ಬರತೊಡಗಿತ್ತು. "ತನ್ನನ್ನು ಎಲ್ಲಾ ಗಂಡುಗಳ ಸಾಲಿಗೆ ಸೇರಿಸಿರಬಹುದೇ? ಅಥವಾ ತನ್ನಾಸೆಯನ್ನು ಬಿಟ್ಟು ಮತ್ತೊಬ್ಬನನ್ನು ಆಯ್ದುಕೊಂಡಿರಬಹುದೇ? ಛೀ! ಹಾಗಾಗಲಾರದು. ಆದರೆ ಏನಾಗಿರಬಹುದು?" ಉತ್ತರ ದೊರೆಯದೆ ಮನ ಅಶಾಂತಿಯನ್ನು ಪಡೆದಾಗ ದೂರದಿಂದ ಬರುತ್ತಿರುವ ತರುಣ-ತರುಣಿಯರತ್ತ ಗಮನ ಹರಿಯಿತು.

ಸೂರ್ಯಾಸ್ತವಾಗಿದ್ದರೂ ಬೆಳಕು ಅಲ್ಲಲ್ಲಿ ಇಣುಕಿ ನೋಡುತಿತ್ತು. ಆ ಎರಡು ವ್ಯಕ್ತಿಗಳು ನಡೆಯುತ್ತಲೇ ಇದ್ದುವು. ತರುಣನ ಪರಿಚಯವಿಲ್ಲವಾದರೂ ತರುಣಿ ಸುಮನಳೆಂದು ತಿಳಿಯಲು ತಡವಾಗಲಿಲ್ಲ. ಹೃದಯದಲ್ಲಿ ಸಾವಿರ ಚೇಳುಗಳು ಕುಟುಕಿದಂತಾಯಿತು. "ಒಂದೇ ಏಟಿಗೆ ಆತನನ್ನು ತೀರಿಸಿ ಬಿಡಲೇ?" ಎಂದು ಯೋಚಿಸಿದನು. ಅವಳು ಪ್ರತೀಕಾರಕ್ಕಾಗಿ ಇಳಿದಿರುವಳೆಂದೇ ತಿಳಿದನು. ಹೆಣ್ಣನ್ನು ನಂಬಲೇ ಬಾರದೆಂದರಿತನು. ಎಷ್ಟೊಂದು ದೃಢವಾಗಿ ಭಾಷೆಕೊಟ್ಟಿದ್ದ ಸುಮನ ಕೆಲವೇ ದಿನ ತನ್ನನ್ನು ಕಾಣದಾಗ ಬೇರೊಬ್ಬನೊಡನೆ ಹೊರಟಳೆಂದಾಗ ತಲೆಯು ಸಿಡಿಯುತ್ತಿತ್ತು. ಹೆಣ್ಣು-ಹೊನ್ನು-ಮಣ್ಣು ಮಾಯೆ ಎಂದಾಡಿದ ಬಸವಣ್ಣನವರ ವಚನಗಳು ನೆನಪಿಗೆ ಬಾರದೆ ಹೋಗಲಿಲ್ಲ.

(ಹದಿಮೂರನೇ ಪುಟ ನೋಡಿರಿ)

6¼%

ಫಿಕ್ಸೆಡ್ ಡಿಪಾಜಿಟುಗಳ ಮೇಲೆ ತಾರೀಕು 1—9—64ರಿಂದ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು:—

	1ರಿಂದ 3 (ತಿಂಗಳು) % p a.	4ರಿಂದ 12 (ತಿಂಗಳು) % p a.	2 ವರ್ಷ % p a.	3 ವರ್ಷ % p.a.	4 ವರ್ಷ % p a.	5 ವರ್ಷ % p a	6 ವರ್ಷ % p a	7—10 (ವರ್ಷ. % p a
ರೂ. 4999ರ ವರೆಗಿನ ಡಿಪಾಜಿಟುಗಳ ಮೇಲೆ:-	4¾	5	5¼	5½	5¾	6	6⅛	6¼
ರೂ. 5000 ಮತ್ತು ಮೇಲ್ಪಟ್ಟ ಡಿಪಾಜಿಟುಗಳ ಮೇಲೆ:-	5	5¼	5½	5¾	6	6	6¼	6¼

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

ರಿಜಿಸ್ಟರ್ಡ್ ಆಫೀಸು: ಕೋರ್ಟು ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ)
(ಶೆಡ್ಯೂಲ್ಡ್ ಬ್ಯಾಂಕ್)
ಸ್ಥಾಪನೆ: 1920

ಎಚ್ಚರಿಕೆ

ಚೀನಾ ಚಾಚಿದ ನೀಳ ನಾಲಗೆ

ಬರೆದವರು: ಶ್ರೀ ಶಿವಶಂಕರ.

ವಿಶ್ವಕೇಂದ್ರ ಭಾರತದ ಭೂಭಾಗ ಅಕ್ಷಯ ಚಿಹ್ನೆಯನ್ನು ಚೈನಾಕ್ಕೆ ಭೂದಾನ ಕೊಟ್ಟು ಸಂಧಾನ ನಡೆಸೋಣವೆಂದು ಭಾರತದಲ್ಲಿರುವ ಭೂದಾನಿಗಳು ಉಪದೇಶಿಸುತ್ತಿದ್ದಾರೆ. ಕೆಲವು ರಾಜಕೀಯ ಉದ್ಯಮಿಗಳು ಹಾಗೂ ಪ್ರಚಾರ ಪ್ರಿಯ ಪತ್ರಿಕೆಗಳು ಉಪದೇಶಕ್ಕೆ ಪ್ರಚಾರ ನೀಡುತ್ತಿದ್ದಾರೆ. ಅಧಿಕಾರ ಗದ್ದುಗೆಯಲ್ಲಿ ಆಸೀನರಾಗಿರುವವರು ತಲೆದೂಗುತ್ತಿದ್ದಾರೆ. ಕಮ್ಯೂನಿಸ್ಟರಂತೂ ಜಯಕಾರ ಹಾಕುತ್ತಿದ್ದಾರೆ. ಈ "ಶುಭ ಕಾರ್ಯ"ಕ್ಕೆ ಅಡ್ಡಿ ಬರುವವರೂ ಕೆಲವರಿದ್ದಾರೆ!

ಅಕ್ಷಯ ಚಿಹ್ನೆ ಅರ್ಪಿಸಿಬಿಟ್ಟಲ್ಲಿ ಅನಂತರ ಚೈನಾ ಸುಮ್ಮಗಾಗಳಿದೀತೇ? ಅಕ್ಷಯ ಚಿಹ್ನೆಯ ಅನಂತರ ಎಂಬ ಪ್ರಶ್ನೆಯನ್ನು ತಾ ೨೪—೧೦—೬೪ರ ಸಂಚಿಕೆಯೊಂದು ವಾಚಕರ ಮುಂದಿಟ್ಟಿರುತ್ತದೆ. ಅಕ್ಷಯ ಚಿಹ್ನೆಯನ್ನು ಸ್ವೀಕರಿಸಿ ಕಮ್ಯೂನಿಸ್ಟ್ ಚೈನಾ ಸುಮ್ಮನೆ ಇದ್ದೀತೇ?

ಆಗ್ನೇಯ ಏಷ್ಯಾದಲ್ಲಿ ಎಲ್ಲೆಡೆಗಳಲ್ಲೂ ಚೈನಾ ಗೊಂದಲವೆಬ್ಬಿಸಿರುತ್ತದೆ. ಮಲೇಷ್ಯಾ ಮಾತ್ರ ಮಲೆತು ನಿಂತಿರುತ್ತದೆ. ನಮ್ಮ ನೆರೆಕರೆಯಲ್ಲೂ ಹಾಗೆಯೇ. ನೇಪಾಳದ ಬಳಿ ಸ್ನೇಹಿಗನಂತೆ ನಾಟಕವಾಡಿತು ಕಮ್ಯೂನಿಸ್ಟ್ ಚೈನಾ. ಆಶೆ-ಆಮಿಷಗಳನ್ನು ತೋರಿಸಿತು. ಕ್ರಮಶಃ ಕೆಲವಾರು ಮುಖ್ಯ ಸ್ಥಳಗಳಲ್ಲಿ ಕಮ್ಯೂನಿಸ್ಟ್ ಚೈನೀಯರಿಗೆ ಚೆನ್ನಾಗಿ ಕಾಲಿಡಲು ಸ್ಥಳ ಸಿಗುವಂತೆ ಚೈನಾ ಪ್ರಯತ್ನಿಸಿತು. ಇದೀಗ ಮೆಲ್ಲನೆ ತನ್ನ ರೂಪವನ್ನು ಬದಲಾಯಿಸಲಾರಂಭಿಸಿರುತ್ತದೆ. ನೇಪಾಲಿಗಳು ಇತರ ಭಾರತೀಯರಂತೆ ತ್ರಿವಿಷ್ಟಪ (ಟಿಬೇಟು), ಸಿಕ್ಕಿಂ ಮುಂತಾದೆಡೆಗಳಲ್ಲಿ ವ್ಯಾಪಾರ ವಹಿವಾಟು ನಡೆಸಿಕೊಂಡಿದ್ದರು. ಭಾರತೀಯರನ್ನು ಕಮ್ಯೂನಿಸ್ಟ್ ಚೈನಾವು ಬರದಂತೆ ಮಾಡಿರುತ್ತದೆ. ಈ ವರ್ಷ ಅದೇ ಪ್ರಯೋಗವನ್ನು ನೇಪಾಲಿಗಳ ಮೇಲೂ ಮಾಡಿದೆ. ಅವರಿಗೆ ಅಲ್ಲಿ ಅಸಹ್ಯ ಕಿರುಕುಳ ಕೊಡುತ್ತಿದೆ.

ತ್ರಿವಿಷ್ಟಪದೊಳಗೆ ರಾಷ್ಟ್ರೀಯ ಜ್ವಾಲಾಮುಖಿಯನ್ನು ಅಡಗಿಸಿಕೊಂಡಿರುತ್ತದೆ ಎಂದದು ಕಮ್ಯೂನಿಸ್ಟ್ ಚೈನೀಯರನ್ನು ನ್ಯಾಯ ನೋಡೀತೆನ್ನುವದು ಸ್ವಲ್ಪ ಕಷ್ಟ. ಯಾಕೆಂದರೆ ಈಗಾಗಲೇ ಕಮ್ಯೂನಿಸ್ಟ್ ಚೈನಾ ಅಲ್ಲಿ ಚೆನ್ನಾಗಿ ಕಾಲೂರಿರುತ್ತದೆ. ಅದು ತನ್ನ ಪಡಿಯಚ್ಚನ್ನೊತ್ತಲು ಅಲ್ಲಿ ಬಹಳ ಪ್ರಯತ್ನಿಸಿರುತ್ತದೆ. ತ್ರಿವಿಷ್ಟಪದ ತರುಣಿಯರನ್ನು ಕಮ್ಯೂನಿಸ್ಟ್ ಚೈನಾದವರೇ ಬಲಾತ್ಕಾರದಿಂದಲಾದರೂ ಮದುವೆ ಮಾಡಿಕೊಳ್ಳುತ್ತಿದ್ದಾರೆಂಬ ಸುದ್ದಿಯೂ ಪ್ರಕಟವಾಗಿರುತ್ತದೆ. ಈ ರೀತಿ ತ್ರಿವಿಷ್ಟಪದ ಸರ್ವನಾಶವನ್ನವರು ಗೈಯ್ಯುತ್ತಿದ್ದಾರೆ.

ಸಿಕ್ಕಿಂದಲ್ಲಿ ಕಮ್ಯೂನಿಸ್ಟ್ ಚೈನೀಯರ ಸೈನ್ಯ ಬಹಳಷ್ಟು ಮುಂಬರಿಕ್ಕೆ ಬಂದಿರುತ್ತದೆ. ಈ ವಿಷಯದಲ್ಲಿ ಭಾರತವು ಕಮ್ಯೂನಿಸ್ಟ್ ಚೈನಾಕ್ಕೆ ಪತ್ರವನ್ನು ಬರೆದಿರುತ್ತದೆ. ಸಿಕ್ಕಿಮಿನ ಮಹಾರಾಜರು ಅಮೇರಿಕೆಯಲ್ಲಿ ತಮಗೆ ಚೈನಾದಿಂದ ಅಂತಹದೇನೂ ಭಯವಿಲ್ಲವೆಂದಿದ್ದಾರೆ. ಅದಕ್ಕೆ ಕಾರಣ ತಿಳಿಸುತ್ತ ಸಿಕ್ಕಿಂ ಬಹಳ ಚಿಕ್ಕ ಭೂಪ್ರದೇಶವಿದೆ, ಅಲ್ಲಿ ಜನ ವಸತಿಯೂ ಬಹಳ ಕಮ್ಮಿ ಎಂದಿದ್ದಾರೆ. ಚಿಕ್ಕ ಮೀನನ್ನು ನುಂಗುವದೇ ದೊಡ್ಡ ಮೀನಿನ ಕೆಲಸವಲ್ಲವೇ? ಚಿಕ್ಕ ಭೂಪ್ರದೇಶವಾದರೆ ನುಂಗಲು ಚೈನಾಕ್ಕೆ ಬಹಳ ಸುಲಭ. ಭಾರತಕ್ಕಿರುವಷ್ಟು ಅಪಾಯ ನಮಗಿಲ್ಲವೆಂಬುದನ್ನು ಅವರು ಪರೋಕ್ಷವಾಗಿ ಸೂಚಿಸಿದ್ದಾರೆ ಇದನ್ನು 'ಭೂದಾನಿ'ಗಳು ಗಮನಿಸಬೇಕು. ಅಕ್ಷಯ ಚಿಹ್ನೆ ಚಿಕ್ಕ ಪ್ರದೇಶವಿದೆ. ಕಮ್ಯೂನಿಸ್ಟ್ ಚೈನಾಕ್ಕೆ ಅದೇತಕ್ಕೆ ಬೇಕಾದೀತು? ಅದಕ್ಕೆ ದೊಡ್ಡ ಮೀನೇ ಬೇಕು. ಚಿಕ್ಕ ಮೀನನ್ನು ತಿಂದು ಅದು ಸಂಧಾನಕ್ಕೆ ಬಂದೀತೇ? ರುಚಿ ಸಿಕ್ಕಿದ ಮೇಲೆ ಸಂಧಾನ ಪತ್ರವನ್ನು ನೆಕ್ಕುತ್ತ ಚೈನಾ ಕುಳಿತು ಕೊಂಡೀತೇ? ಕಮ್ಯೂನಿಸ್ಟರು ಎಂದಾದರೂ, ಎಲ್ಲಾದರೂ ಸಂಧಾನ ಪತ್ರಕ್ಕೆ ಸರ್ವ ಮನ್ನಣೆ ಇತ್ತದ್ದನ್ನ ಓದಿದೆಯೋ? ಹಾಗಿರುವಾಗ ಕಮ್ಯೂನಿಸ್ಟ್ ಚೈನಾ ಅಕ್ಷಯ ಚಿಹ್ನೆಯನ್ನು ದಾಟಿ ಬರಲಿಕ್ಕಿಲ್ಲವೆಂದು ಅದೆಂತು ಹೇಳುವದ?

ಸಿಕ್ಕಿಂ ಬಹಳ ಚಿಕ್ಕ ಪ್ರದೇಶವಿರುವದರಿಂದ ಅಪಾಯ ಕಮ್ಮಿ ಎಂದು ಸಿಕ್ಕಿಂ ಮಹಾರಾಜರು ಹೇಳಲು ಇನ್ನೊಂದು ಕಾರಣವೆಂದರೆ ನೇರ ನೆರವು ಪಡೆದುಕೊಂಡು ಅವರೇನು ಮಾಡುವದು? ಆ ನೆರವು ಭಾರತಕ್ಕೆ ಸಿಗಬೇಕು. ಯಾಕೆಂದರೆ ಸಿಕ್ಕಿಮಿನ ರಕ್ಷಣೆಯ ಜವಾಬ್ದಾರಿ ಭಾರತದ ಮೇಲೆ ಇದೆ. ಭಾರತ ಬಲಶಾಲೀಯಾಗಿದ್ದಲ್ಲಿ ಸಿಕ್ಕಿಂ ಸುಭದ್ರವಾಗಿರುತ್ತದೆ ಅದಕ್ಕೇನೂ ಸಂದೇಹ ಇಲ್ಲ. ಅಮೇರಿಕನರು ಮಾತ್ರ ಇದಕ್ಕೆ ಅದ್ಯಾವ ಅರ್ಥ ಮಾಡಿಕೊಳ್ಳುವರೆಂಬುದನ್ನು ಕಾದು ನೋಡಬೇಕು,

ಉತ್ತರದ ಗಡಿಯಲ್ಲಿ ದಿನ ಕಳೆದಂತೆ ಭಾರೀ ಸೈನ್ಯ ಜಮಾವಣೆ ನಡೆಯುತ್ತಿದೆಯೆಂದು ಪ್ರಧಾನಿ ಲಾಲಬಹದೂರರವರೂ ರಕ್ಷಣಾ ಮಂತ್ರಿ ಚವ್ಹಾಣರೂ ಹೇಳುತ್ತಿದ್ದಾರಲ್ಲದೆ ರಕ್ಷಣಾ ಮಂತ್ರಿಯವರು ಶಸ್ತ್ರ-ವಾಹನ ಸೌಕರ್ಯಗಳ ಸಂಗ್ರಹಣೆಗಾಗಿ ರಷ್ಯಾ ಮುಂತಾದ ದೇಶಗಳಿಗೂ ಪ್ರಯಾಣ ನಡೆಸುತ್ತಿದ್ದಾರೆ.

ದಕ್ಷಿಣದಲ್ಲಿ ಶ್ರೀ ಲಂಕೆಗೂ ಚೈನಾಕ್ಕು ಹಿಡಿದಿದ್ದ 'ಸಾಗರ-ಸ್ನೇಹ'ದ ಕುರಿತು ಹಿಂದಿನ ಕೆಲವು ಸಂಚಿಕೆಗಳು ತಿಳಿಸಿರುತ್ತವೆ. ಕಮ್ಯೂನಿಸ್ಟ್ ಪಕ್ಷ ಅಧಿಕಾರ ಗದ್ದುಗೆಯ ಸಮೀಪಕ್ಕೆ ಅಲ್ಲಿ ಸಾಗುವಂತೆ ಕಂಡು ಬರುತ್ತಿದೆಯಾದರೂ ಪ್ರಧಾನಿ ಸಿರಿಮಾವೋರವರು ಸ್ವಲ್ಪ ಎಚ್ಚರಿಕೆಯಿಂದಲೇ ಇದ್ದಾರೆ ಅಲ್ಲಿ ಈಗ ಕೆಲ "ವಿಚಿತ್ರ ಚೈನೀಯರ" ಬೇಟೆ ನಡೆಯುತ್ತಿದೆ. ಆ "ವಿಚಿತ್ರ ಚೈನೀಯರು" ಅಲ್ಲಲ್ಲಿ ತಿರುಗಾಡುತ್ತ ಮುಖ್ಯ ಕೇಂದ್ರಗಳ ಚಿತ್ರಗಳನ್ನು ತೆಗೆದಿದ್ದಾರೆ. ಅವರು ರೇವು ಸ್ಥಳಗಳನ್ನು ನೋಡಿದ್ದಾರೆ. ವಿಮಾನ ನಿಲ್ದಾಣಗಳನ್ನೂ ನೋಡಿ ಚಿತ್ರ ತೆಗೆದಿದ್ದಾರೆ ಸಿಲೋನಿನಿಂದ ಭಾರತೀಯರನ್ನು ಬೆನ್ನಟ್ಟುತ್ತಿರುವರಾದರೂ ಅಲ್ಲಿಗೆ ಈಗ ಚೈನೀಯರು ಅಧಿಕ ಪ್ರಮಾಣದಲ್ಲಿ ಬರುತ್ತಿದ್ದಾರೆ ಸಿರಿಮಾವೋ ಅದನ್ನು ಕಂಡೂ ಸುಮ್ಮಗಿದ್ದರೆ, ಚೈನಾದ ಕುರಿತು. ಆದರೆ ಭಾರತೀಯರನ್ನು ಹಿಂದಕ್ಕೆ ಕರೆದುಕೊಳ್ಳಲು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಆ ರೀತಿ ಬರುತ್ತಿರುವ ಚೈನೀಯರು ಖಾನಾವಳಿಗಳನ್ನು ತೆರೆದು ಅಲ್ಲಿನ ಕಮ್ಯೂನಿಸ್ಟ್ [illegible]ಗಳಿಗೆ ಎಡೆ ಕೊಡುತ್ತಿದ್ದಾರೆ

ಈ ರೀತಿ ಕಮ್ಯೂನಿಸ್ಟ್ ಡ್ರೇಗನ್ ತನ್ನ ನಾಲಗೆಯನ್ನು ಉದ್ದಕ್ಕೆ ಭಾರತದ ಸುತ್ತಲೂ ಚಾಚುತ್ತಿದೆಯಲ್ಲದೆ ಆಫ್ರಿಕಾದತ್ತವೂ ದೃಷ್ಟಿ ಹಾಯಿಸಿರುತ್ತದೆ ಇಲ್ಲಿಯ ಕಮ್ಯೂನಿಸ್ಟರಂತೂ ದೇಶದೊಳಗೆ ಗೊಂದಲವೆಬ್ಬಿಸಿ, ಗಡಿಯಲ್ಲಿ ತಂಗಿರುವ ಕಮ್ಯೂನಿಸ್ಟ್ ಚೈನಿ ಸೈನಿಕರಿಗೆ ಪಟ್ಟೆ ಬಟ್ಟೆ ಕಾಣಿಸಲು ಹಾತೊರೆಯುತ್ತಿದ್ದಾರೆ.

ಪರಿಸ್ಥಿತಿ ಹೀಗಿರುವಾಗ ಗಾಂಧೀಜೀ ಸಂಗಡಿಗರು ತಾವೆನ್ನುವ ಬಂಡ್ವಾಳವನ್ನು ಮುಂದಿಕ್ಕಿಟ್ಟುಕೊಂಡು ಕೆಲವರು 'ಭೂದಾನ"ದ ಪ್ರಚಾರ ನಡೆಸುತ್ತಿದ್ದಾರೆ. ಗಾಂಧೀಜೀ ಇಂದು ಇರುತ್ತಿದ್ದಲ್ಲಿ ಅಕ್ಷಯ ಚಿಹ್ನೆಯ 'ಭೂದಾನ"ಕ್ಕೆ ಒಪ್ಪುತ್ತಿದ್ದರೇ?

ಹಿಟ್ಲರನು ಇಂಗ್ಲೆಂಡಿನ ಮೇಲೆ ಆಕ್ರಮಣ ನಡೆಸಿದಾಗ ಗಾಂಧೀಜಿಯವರು ಇಂಗ್ಲೆಂಡನ್ನಾಳಲು ಹಿಟ್ಲರನಿಗೆ ಬಿಟ್ಟುಕೊಟ್ಟಲ್ಲಿ ಅನಂತರ ಅವನು ಆಕ್ರಮಣ ನಡೆಸಲಿಕ್ಕಿಲ್ಲವೆಂದು ಇಂಗ್ಲೆಂಡಿಗೆ ತಿಳಿಸಿದ್ದರು. ಆಗ ಅವರಿತ್ತ ಉತ್ತರ ಗಾಂಧೀಜಿಯವರ ಕಣ್ಣು ತೆರೆಯಿಸಿತು. ಇಂಗ್ಲೆಂಡನ್ನು ಬಿಟ್ಟುಕೊಡಬೇಕೆನ್ನುವ ನೀವು ಅದ್ಯಾಕೆ ಸ್ವಾತಂತ್ರ್ಯ ಚಳುವಳಿ ನಡೆಸುತ್ತಿರುವಿರಿ? ಇಂಗ್ಲೆಂಡ್ ಕೇಳಿದ ಪ್ರಶ್ನೆ ಅದು. ಇದರಿಂದಾಗಿಯೇ ಅವರು ದೇಶ ವಿಭಜನೆಯ ಪಾತಕಕ್ಕೆ ಮೊದಲು ಒಪ್ಪಲಿಲ್ಲ. "ದೇಶವನ್ನು ವಿಭಜಿಸುವ ಮುಂಚೆ ನನ್ನ ವಿಚ್ಛೇದನೆಯಾಗಲಿ "ಎಂದು ಅವರು ಹೇಳಿದರು. ಈ ಎರಡು ಸಂಭವಗಳನ್ನು ಇಂದು ಜ್ಞಾಪಿಸಿಕೊಳ್ಳುವಾಗ ಗಾಂಧೀಜಿಯವರ ಹೆಸರು ಹೇಳಿ ತಮ್ಮ ರಾಜಕೀಯ ಪ್ರತಿಭೆಯನ್ನೂ, ಒಣ ಪ್ರತಿಷ್ಠೆಯನ್ನೂ ಪ್ರವರ್ಧಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಪ್ರಮುಖರನ್ನು 'ದೇಶದ್ರೋಹಿ'ಗಳೆಂದು ಹೇಳಿದರೆ ಸಾಕೇ ಎನಿಸುತ್ತದೆ. ಅಂದು ಒಪ್ಪದಿದ್ದ ಗಾಂಧೀಜಿ ಇಂದು ದೇಶದ ಭಾಗವನ್ನು ಗುತ್ತಿಗೆಗೆ ಕೊಡಲು ಒಪ್ಪುವರೇ? ಎಂದಿಗೂ ಇಲ್ಲವೆನ್ನುವ ಉತ್ತರವೇ ಒದಗುತ್ತದೆ. ಅದನ್ನು ಅರಿಯಲು ಗಾಂಧೀಜಿಯವರು ಇಲ್ಲವೆಂದ ಮಾತ್ರಕ್ಕೆ, ದೇಶವನ್ನು ಗುತ್ತಿಗೆಗೆ ಕೊಡುವಂತಹ 'ಕೋಟಿ ನಾರಾಯಣ'ರು ನಾವಾಗುವದು ಸರಿಯೇ? ಅದರಲ್ಲಿ 'ತಾವು ಅವರ ಸಂಗಡಿಗರೆ'ಂದು ಅವರ ನಾಮ ಜಪಿಸುತ್ತ ದ್ರೋಹಗೈಯಬಹುದೇ?

ಈ ಸಲದ ಗಾಂಧೀಜಿ ಜಯಂತಿಗೆ ಇದೇ ಜ್ಞಾಪಕಕ್ಕೆ ಬಂತು. ಕಮ್ಯೂನಿಸ್ಟ್ ಚೈನಾವು ಕಡು ನೀಳ ನಾಲಗೆಯನ್ನು ಚಾಚುತ್ತಿರುವಾಗ ನಾವಾಗಿ ಅದರ ನಾಲಗೆಗೆ ಅಕ್ಷಯ ಪಾತ್ರೆಯನ್ನು ಕೊಟ್ಟುಬಿಟ್ಟು "ಗಾಂಧೀಜಿಗೆ ಜಯವಾಗಲೆಂ"ದು ಹೇಳುವ ನಮ್ಮ ನಾಲಗೆಯನ್ನು ಹೊರ ಚಾಚಲು ನಮಗೆ ನಾಚಿಕೆಯಾಗುವದಿಲ್ಲವೇ? ಗಾಂಧೀಜಿಯವರ ಅಭಿಪ್ರಾಯಕ್ಕೆ ವಿರೋಧವಾಗಿ ದೇಶ ವಿಭಜನೆಯ ಪಾಪ ಕೃತ್ಯ ನಡೆದಾಗಲೂ ಅವರು ಕಾಶ್ಮೀರವನ್ನು ಬಿಟ್ಟುಕೊಡಲು ಹೇಳಿರಲಿಲ್ಲ. ಹಾಗೆಯೇ ಅಕ್ಷಯ ಚಿಹ್ನೆಯನ್ನೂ, ನೇಫಾ - ಲಡಾಖನ್ನೂ ಬಿಟ್ಟುಕೊಡಲು ಅವರು ಹೇಳಲಾರರು. ಅವರ ಈ ಸದಿಚ್ಛೆಗೆ ವಿರೋಧವಾಗಿ ಹೋಗುವದು ಸರಿಯಲ್ಲ



ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧.

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯ ಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ.

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯೊರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ಟೋಕಿಯೋದಲ್ಲಿ ಒಲಿಂಪಿಕ್ಸ್

"ಸಾಮಾನ್ಯವಾಗಿ ಎಲ್ಲ ರಸ್ತೆಗಳೂ ರೋಮಿಗೆ" ಎಂದು ಹೇಳುವುದುಂಟು. ನಾಲ್ಕು ವರ್ಷಗಳ ಹಿಂದೆ ಈ ನಾಣ್ಣುಡಿ ಅಕ್ಷರಶಃ ನಿಜವಾಗಿ ಪರಿಣಮಿಸಿತ್ತು.

ಆಗ ರೋಂ ನಗರದಲ್ಲಿ ಒಲಿಂಪಿಕ್ಸ್ ಕ್ರೀಡಾ ಸ್ಪರ್ಧೆಗಳು ನಡೆದಾಗ ಕ್ರೀಡಾ ಪ್ರೇಮಿಗಳೆಲ್ಲರ ಲಕ್ಷ್ಯ ಆ ನಗರದತ್ತ ಸೆಳೆದಿತ್ತು ಎಂದರೆ ಅತಿಶಯೋಕ್ತಿಯಲ್ಲ. ಕ್ರೀಡಾರಂಗದಲ್ಲಿ ಅತಿರಥ ಮಹಾರಥರೆನಿಸಿಕೊಂಡ ಜಗತ್ತಿನ ಶ್ರೇಷ್ಠ ಕ್ರೀಡಾಪಟುಗಳು ತಮ್ಮ ಶ್ರೇಷ್ಠತೆಯ ಪ್ರದರ್ಶನಕ್ಕಾಗಿ ತಾವು ಪ್ರತಿನಿಧಿಸುವ ದೇಶಗಳ ಕೀರ್ತಿ ಪ್ರತಿಷ್ಠೆಗಳನ್ನು ಮೊಳಗುವುದಕ್ಕಾಗಿ ರೋಂ ನಗರಕ್ಕೆ ತೆರಳಿದ್ದರು.

ನಾಲ್ಕು ವರ್ಷಗಳು ಉರುಳಿವೆ. ಈಗ ಮತ್ತೊಮ್ಮೆ ಕ್ರೀಡಾರಂಗದ ಅತಿರಥ ಮಹಾರಥರು ತಮ್ಮ ಶ್ರೇಷ್ಠತೆಯ ಪ್ರದರ್ಶನಕ್ಕಾಗಿ ಅಪೂರ್ವ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ. ಆದರೆ ಈ ಬಾರಿ ಶ್ರೇಷ್ಠತೆಯ ಪ್ರದರ್ಶನದ ರಂಗ ರೋಂ ನಗರವಲ್ಲ, ಟೋಕಿಯೋ.

ಇಂದು ಜಪಾನಿನ ರಾಜಧಾನಿ ಟೋಕಿಯೋ ನಗರವು ಎಲ್ಲರ ಗಮನವನ್ನೂ, ಮುಖ್ಯವಾಗಿ ಕ್ರೀಡಾಪ್ರೇಮಿಗಳೆಲ್ಲರ ಗಮನವನ್ನೂ ಸೆಳೆದಿದೆ. ಅಲ್ಲಿ ಅಕ್ಟೋಬರ ೧೦ರಿಂದ ಪ್ರಾರಂಭವಾಗುವ ಒಲಿಂಪಿಕ್ಸ್ ಕ್ರೀಡಾ ಸ್ಪರ್ಧೆಗಳು ಕ್ರೀಡಾಪ್ರೇಮಿಗಳಿಗೊಂದು ರಸದೌತಣವೇ ಸರಿ. ವ್ಯಾಯಾಮ ಕ್ರೀಡೆಗಳು, ಈಜುವುದು ಫುಟ್‌ಬಾಲ್, ಹಾಕಿ, ವಾಲಿಬಾಲ್ ಬ್ಯಾಸ್ಕೆಟ್‌ಬಾಲ್, ಬಾಕ್ಸಿಂಗ್, ಕುಸ್ತಿ ಈ ಮುಂತಾದ ಕ್ರೀಡೆಗಳಲ್ಲಿ ವಿಶ್ವ ಮಟ್ಟದಲ್ಲಿ ಸ್ಪರ್ಧೆ ನಡೆಯಲಿದೆ.

ಹಾಕಿ ಆಟದಲ್ಲಿ ಜಗತ್ತಿನಲ್ಲಿಯೇ ಅದ್ವಿತೀಯವೆನಿಸಿಕೊಂಡಿದ್ದ ಭಾರತವು ದುರದೃಷ್ಟವಶಾತ್ ರೋಂನಲ್ಲಿ ತನ್ನ ಅಗ್ರಸ್ಥಾನವನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಡಬೇಕಾಗಿ ಬಂತು. ಆದರೆ ಕಳೆದುಕೊಂಡ ಪ್ರಶಸ್ತಿಯನ್ನು ಪುನಃ ಪಡೆಯಲು ಭಾರತವು ಈ ಬಾರಿ ಚರಂಜಿತ್‌ಸಿಂಗ್ ಅವರ ನಾಯಕತ್ವದಲ್ಲಿ ಟೋಕಿಯೋದಲ್ಲಿ ಪ್ರಯತ್ನಿಸಲಿದೆ.

ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಭಾರತದ ಪರವಾಗಿ ೫೭ ಜನ ಸ್ಪರ್ಧಿಗಳು ಭಾಗವಹಿಸುವರು. ಇವರು ಹಾಕಿ, ವ್ಯಾಯಾಮ ಕ್ರೀಡೆಗಳು, ಕುಸ್ತಿ, ವೆಯಿಟ್ ಲಿಫ್ಟಿಂಗ್, ಬಾಕ್ಸಿಂಗ್, ರೈಫಲ್ ಶೂಟಿಂಗ್, ಸೈಕಲಿಂಗ್, ಜಿಮ್ನಾಸ್ಟಿಕ್ಸ್ ಮತ್ತು ಡೈವಿಂಗ್ ಕ್ರೀಡಾ ವಿಭಾಗಗಳಲ್ಲಿ ಸ್ಪರ್ಧಿಸಿ ಭಾರತಕ್ಕೆ ಸುವರ್ಣ ಪದಕಗಳನ್ನು ಗಳಿಸುವ ಮಹಾ ಪ್ರಯತ್ನದಲ್ಲಿ ನಿರತರಾಗಿದ್ದಾರೆ

ಭಾರತದ ಕ್ರೀಡಾ ತಂಡಕ್ಕೆ ರಾಜಾ ಬಲೀಂದ್ರ ಸಿಂಗ್ ನಾಯಕರಾಗಿರುವರು.



ಭಾರತದ ಕ್ರೀಡಾಪಟುಗಳು:— ಎಡಗಡೆ: ಹವಿಲ್ದಾರ್ ಶ್ರೀಚಂದ್ ಬಲಗಡೆ: ಜೋರಾ ಸಿಂಗ್ ಮತ್ತು ಅಜಿತ ಸಿಂಗ್.



ರೋಂನಲ್ಲಿ ಜರಗಿದ್ದ ಒಲಿಂಪಿಕ್ ಕ್ರೀಡಾಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ಭಾರತೀಯ ಫುಟ್‌ಬಾಲ್ ತಂಡ. ಎಡದಿಂದ ಐದನೆಯವರು ನಾಯಕ ಶ್ರೀ ಪಿ. ಕೆ. ಬೆನರ್ಜಿ.

ಹನಿಗತೆ

ದುಂಬಿ ಕಣ್ಣು ತೆರೆಯಲಿಲ್ಲ

ದುಂಬಿಯೊಂದು ರಸಸ್ವಾದಕ್ಕಾಗಿ ಅಲೆದಾಡುತ್ತಿತ್ತು. ಆಗಾಗಲೇ ರಸಸಂಗ್ರಹ ಪುಷ್ಕಳವಾಗಿತ್ತು. ಆದರೂ ತೃಪ್ತಿ ಆಗಿಲ್ಲ.

ಸುಂದರವಾದ ಕೊಳವೊಂದರಲ್ಲಿ ಅರಳಿದ ಕಮಲವೊಂದು ಕಂಡುಬಂದಿತು. ದುಂಬಿಯು ಮನವರಳಿತು. ಆಶೆ ಹೆಚ್ಚಿತು. ಕಮಲದ ಪರಾಗದ ಮೇಲೆ ಒರಗಿತು. ರಸಸ್ವಾದವಾಯ್ತು. ಸಮಯ ಕಳೆಯಿತು. ದುಂಬಿ ಮಾತ್ರ ಕಮಲದಲ್ಲೇ ಇತ್ತು ಸಾಯಂಕಾಲವಾಯ್ತು. ಕಮಲವು ತನ್ನ ಒಂದೊಂದೇ ಎಸಳನ್ನು ಮುಚ್ಚಿಕೊಳ್ಳತೊಡಗಿತು ದುಂಬಿ ಮಾತ್ರ ತನ್ನ ಕೊನೆ ಬಿಂದು ಎಂದು ಇನ್ನೂ ಸ್ವಾದ ಮಾಡುತಿತ್ತು.

ಬೆಳಕು ಕಳೆಯಿತು. ಕತ್ತಲು ಆವರಿಸಿತು. ಸುತ್ತಲೂ ಗಾಢಾಂಧಕಾರ. ದುಂಬಿ ಹೆದರಿತು. ರಸಸ್ವಾದ ಮುಗಿಯಿತು. ಹಾರಲು ಪ್ರಯತ್ನಿಸಿತು. ಆದರೆ ಕಮಲವು ಆಗಾಗಲೇ ಮುಚ್ಚಿಕೊಂಡಿತ್ತು.

"ಇಂದೇನೋ ಮುಚ್ಚಿರಬಹುದು. ನಾಳೆ ಸೂರ್ಯೋದಯಕ್ಕೆ ಸರಿಯಾಗಿ ಪುನಃ ಅರಳುವುದು. ಅಷ್ಟರ ತನಕ ಕಮಲದಲ್ಲೇ ಕಳೆದರಾಯ್ತು." ದುಂಬಿಯ ಮನ ನುಡಿಯಿತು. ಹೃದಯ ಮಿಡಿಯಿತು.

ಕೊಳದ ಪಕ್ಕದಲ್ಲಿ ಒಂದು ಕಾಡು. ಆ ಕಾಡಿನಲ್ಲಿ ಒಂದು ಆನೆ. ಆ ಆನೆ ನೀರು ಕುಡಿಯಲು ಕೊಳಕ್ಕೆ ಬಂತು. ಕೊಳ ತುಂಬಾ ಕಮಲ ಪುಷ್ಪ. ಆನೆಗೆ ಸಂತಸದ ಹಬ್ಬ. ಒಂದೊಂದೇ ಕಮಲ, ಆನೆಯ ಉದರ ಸೇರಿತು. ಇನ್ನು ಕೊನೆಯ ಒಂದು ಕಮಲ—ದುಂಬಿ ವಿಶ್ರಮಿಸಿರುವ ಕಮಲ ಕೂಡಾ ಆನೆಯ ಉದರ ಸೇರಿತು. ಜತೆಗೆ ಒಂದಿಷ್ಟು ನೀರೂ ಸೇರಿರಿತು.

ಆನೆ ಕಾಡಿಗೆ ಹೊರಟಿತು. ದುಂಬಿ ಕಣ್ಣು ತೆರೆಯಲಿಲ್ಲ.

—ವಾಮನ ಪಣಸಕರ್.

ಕಲಾಕ್ಷೇತ್ರ

ಭಾರತದಲ್ಲಿ ಕುಶಲಕಲೆಗಳ ಬೆಳವಣಿಗೆ

೧

ಭಾರತದಲ್ಲಿ ಕುಶಲ ಕಲಾವಸ್ತುಗಳನ್ನು ತಯಾರಿಸುವ ಕಲೆ ಚರಿತ್ರೆಯಷ್ಟೇ ಹಳೆಯದು. ಚರಿತ್ರೆಯ ಯಾವುದೇ ಕಾಲದಲ್ಲಿಯೇ ಆಗಲಿ, ದೇಶದಲ್ಲಿ ಸಿದ್ಧಗೊಳಿಸಲಾಗುತ್ತಿದ್ದ ಎಲ್ಲ ಬಗೆಯ ಕುಶಲ ಕಲಾವಸ್ತುಗಳ ಉನ್ನತ ಗುಣಾಂಶವನ್ನು ಕುರಿತು ಪ್ರಸ್ತಾಪಿಸಿರುವುದನ್ನು ಕಾಣಬಹುದು.

ಪುರಾತನ ಕಾಲದಲ್ಲಿ ಭಾರತದ ಕೀರ್ತಿಯು ದೇಶ — ವಿದೇಶಗಳಲ್ಲಿ ಹಬ್ಬಲು, ಕುಶಲಕಲಾ ವಸ್ತುಗಳ ಉನ್ನತ ಗುಣಾಂಶ ಮತ್ತು ಅಸಾಮಾನ್ಯ ಮಟ್ಟವೂ ಬಹುಮಟ್ಟಿಗೆ ಕಾರಣವಾಗಿದೆ. ಕುಶಲ ಕಲೆಯು ಅನೇಕ ಕಲೆಗಳ ಪ್ರಭಾವಗಳಿಗೆ ಒಳಪಟ್ಟಿತ್ತಾದರೂ ತನ್ನ ಮೊದಲಿನ ಮಟ್ಟವನ್ನು ಕಳೆದುಕೊಳ್ಳದೆ, ಹೊಸ ಹೊಸ ಅಂಶಗಳನ್ನು ಅಳವಡಿಸಿಕೊಂಡು ಉತ್ಕರ್ಷ ಹೊಂದಿತು. ಕುಶಲಕಲಾ ವಸ್ತುಗಳ ಉನ್ನತ ಗುಣಾಂಶ, ಕುಶಲಕಲಾವಿದರ ಅಸಾಮಾನ್ಯ ಕಲಾಸೃಷ್ಟಿಗಳಿಂದಾಗಿ ಭಾರತದ ಕೀರ್ತಿ ಹೊರ ದೇಶಗಳಿಗೂ ಹಬ್ಬುವಂತಾಯಿತು. ಕಾಲಾನುಕ್ರಮದಲ್ಲಿ ನಮ್ಮ ಜನರ ವಿವಿಧ ಸಂಸ್ಕೃತಿಗಳು ಸಂಪ್ರದಾಯಗಳು ಕುಶಲಕಲಾ ವಸ್ತುಗಳ ವಿನ್ಯಾಸದ ಮೇಲೆ ಅಚ್ಚಳಿಯದ ಪ್ರಭಾವ ಬೀರಿದವು. ಫಲಸ್ವರೂಪವಾಗಿ ಇಂದು ನಾವು ನೋಡುತ್ತಿರುವ ಪ್ರತಿಯೊಂದು ಸುಂದರವಾದ ಕುಶಲಕಲಾ ವಸ್ತುವೂ, ನಮ್ಮ ದೇಶದ ಅಸ್ಮಿತೆ ಮತ್ತು ಸಂಪ್ರದಾಯಗಳ ಸೂಕ್ಷ್ಮ ಪ್ರತಿರೂಪವಾಗಿದೆ.

ಯಂತ್ರ ಯುಗದ ಆರಂಭದೊಂದಿಗೆ, ವಿಶ್ವದ ಕೈಗಾರಿಕಾ ಕ್ಷೇತ್ರದಲ್ಲಿ ಕ್ರಾಂತಿಯುಂಟಾಯಿತು. ಹಸ್ತಕೌಶಲ ಕಲಾವಿದರು ತೀವ್ರ ಸ್ಪರ್ಧೆಯನ್ನು ಎದುರಿಸಬೇಕಾಯಿತು. ಇಂಥ ಒಂದು ಪರಿಸ್ಥಿತಿಯಲ್ಲಿ ಹಸ್ತಕೌಶಲ್ಯ ವಸ್ತುಗಳನ್ನು ಅಗ್ಗದ ಬೆಲೆಗೆ ಮಾರುವುದು, ಅನಿವಾರ್ಯವಾಯಿತು. ಪರಿಣಾಮಸ್ವರೂಪವಾಗಿ ಅವುಗಳ ಗುಣಾಂಶ ಅವನತಿ ಹೊಂದುತ್ತಾ ನಡೆಯಿತು.

ಮಾರುಕಟ್ಟೆಗಳು ವಿಸ್ತರಣೆ ಹೊಂದುತ್ತಾ ನಡೆದದ್ದರಿಂದ ಮತ್ತು ವಿಶ್ವಸಮರದ ನಂತರದ ಅವಧಿಯಲ್ಲಿ ಈ ವಸ್ತುಗಳ ಬಗೆಗೆ ಬೇಡಿಕೆಯೂ ಗಣನೀಯವಾಗಿ ಹೆಚ್ಚಿದ್ದರಿಂದ ಕುಶಲಕಲಾ ವಸ್ತುಗಳ ಗುಣಾಂಶ ಅವನತಿ ಹೊಂದತೊಡಗಿತ,

ಹಸ್ತ ಕುಶಲ ವಸ್ತುಗಳ ಗುಣಾಂಶದಲ್ಲಿ ಸಾಮಾನ್ಯವಾಗಿ ಕಂಡು ಬರುತ್ತಿದ್ದ ಈ ಅವನತಿಯ ಪ್ರವೃತ್ತಿಯನ್ನು ತಡೆಗಟ್ಟಲು ಹಸ್ತಕೌಶಲ್ಯಕಲಾ ವಸ್ತುಗಳ ಮಂಡಲಿಯು ಈ ವಸ್ತುಗಳ ಗುಣಾಂಶ ನಿಯಂತ್ರಣಕ್ಕಾಗಿ ರಾಜ್ಯಗಳು ಕೈಗೊಂಡ ಕಾರ್ಯ ಯೋಜನೆಗಳಿಗೆ ಉತ್ತೇಜನ ನೀಡಿತು,

ಗುಣಾಂಶ ನಿಯಂತ್ರಣ, ಈ ಸಂಬಂಧವಾಗಿ ಅನುಸರಿಸಬೇಕಾದ ವಿಧಿ–ವಿಧಾನಗಳು ಪರೀಕ್ಷಾ — ಪ್ರಯೋಗಗಳನ್ನು ಕುರಿತು ಕಾರ್ಯ ಯೋಜನೆಗಳನ್ನು ರೂಪಿಸುವುದಕ್ಕಾಗಿ ತಾಂತ್ರಿಕ ಸಮಿತಿಯೊಂದು ರಚಿತವಾಯಿತು. ಸಮಿತಿಯು ಭಾರತೀಯ ಮಾನಕಗಳ ಸಂಸ್ಥೆ ಮತ್ತು ಹಸ್ತಕೌಶಲ್ಯ ಕಲಾವಿದರ ಪ್ರತಿನಿಧಿಗಳ ಸಹಯೋಗದಿಂದ ಅನೇಕ ಕಾರ್ಯ ಯೋಜನೆಗಳನ್ನು ಸಿದ್ಧಗೊಳಿಸಿತು.

ಕುಶಲಕಲಾ ವಸ್ತುಗಳು ಆಕರ್ಷಕವಾಗಿ, ಸುಂದರವಾಗಿ ಕಂಡು ಬರಲು, ಅವುಗಳಲ್ಲಿನ ಪ್ರತಿಯೊಂದು ವಸ್ತುವಿನ ವೈಶಿಷ್ಟ್ಯವೂ ಒಂದು ಮುಖ್ಯ ಕಾರಣವಾಗಿದೆ. ಈ ಕಾರಣದಿಂದಾಗಿ ಸಮಗ್ರ ವಸ್ತುಗಳ ಪ್ರಮಾಣೀಕರಣ ಮಾಡುವುದು ಅಪೇಕ್ಷಣೀಯವೆನಿಸಲಾರದು.

ವಸ್ತುಗಳನ್ನು ಸಿದ್ಧಗೊಳಿಸಲು ಉಪಯೋಗಿಸುವ ಕಚ್ಚಾ ಸಾಮಗ್ರಿಗಳು, ಬಿಡಿಭಾಗಗಳು, ಉನ್ನತ ಮಟ್ಟದವಾಗಿರುವುದು ಮಹತ್ವದ್ದಾಗಿದೆ. ಯಾಕೆಂದರೆ ಇವುಗಳ ಗುಣಾಂಶವೇ ಕುಶಲಕಲಾ ವಸ್ತುಗಳ ಮಟ್ಟವನ್ನು ನಿರ್ಧರಿಸುತ್ತದೆ.

ಕುಶಲಕಲಾ ವಸ್ತುಗಳನ್ನು ತಯಾರಿಸಲು ಬಳಸಬೇಕಾದ ವಿಶಿಷ್ಟ ಸಲಕರಣೆಗಳು, ವಿವಿಧ ಹಂತಗಳಲ್ಲಿ, ಅವುಗಳ ಗುಣನಿಯಂತ್ರಣಕ್ಕಾಗಿ ನಡೆಸಬೇಕಾದ ಪ್ರಯೋಗ—ಪರೀಕ್ಷೆಗಳು ಇವೇ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಕಾರ್ಯ ಯೋಜನೆಗಳನ್ನು ಸಿದ್ಧಗೊಳಿಸಲಾಗಿದೆ. ಭಾರತೀಯ ಮಾನಕಗಳ ಸಂಸ್ಥೆ ಮತ್ತು ಸಂಬಂಧಿಸಿದ ಹಸ್ತ ಕುಶಲಕಲಾವಿದರೊಂದಿಗೆ ಸಮಾಲೋಚನೆ ನಡೆಸಿದ ನಂತರವೇ ಈ ಕಾರ್ಯ ಯೋಜನೆಗಳನ್ನು ರೂಪಿಸಲಾಗಿದೆ.

ಅನೇಕ ಹಸ್ತಕೌಶಲ್ಯಕಲಾ ವಸ್ತುಗಳ ಗುಣನಿಯಂತ್ರಣ ಕಾರ್ಯ ಯೋಜನೆಯ ಕಕ್ಷೆಗೆ ಒಳಪಟ್ಟಿವೆ. ಮಿರ್ಜಾಪುರ್, ಘಾಜಪುರ್, ಬದೋಹಿ, ಎಲ್ಲೂರು ಮತ್ತು ವಾರಂಗಲ್‌ಗಳ ರತ್ನಗಂಬಳಿಗಳು, ಕಾಶ್ಮೀರದ ನಾಮ್ದಾಗಳು, ವಾರಣಾಸಿಯ ಜರತಾರಿ ವಸ್ತ್ರಗಳು ಮತ್ತು ಕಲಾತ್ಮಕ ರೇಷ್ಮೆ ಬಟ್ಟೆಗಳು, ಫರುಕ್ಕಾಬಾದ್, ಲಕ್ನೋ, ಲೂಧಿಯಾನಾ, ಪಾಂಡ್ಯೇರ್ ಮತ್ತು ಮುಂಬಯಿಯ ಹಸ್ತ ಮುದ್ರಿತ ಹತ್ತಿ ಜವಳಿ ಬಟ್ಟೆಗಳು, ಜಯಪುರ್, ಮುರಾದಾಬಾದಿನ ಹಿತ್ತಾಳೆಯ ಪಾತ್ರೆಗಳು, ಮೈಸೂರು ಮತ್ತು ಮದರಾಸಿನ ರತ್ನಗಂಬಳಿಗಳು, ಪಶ್ಚಿಮ ಬಂಗಾಳದ ಹಸ್ತಮುದ್ರಿತ ರೇಷ್ಮೆ ಬಟ್ಟೆಗಳು, ವಾರಣಾಸಿಯ ಆಗ್ರಾ ಮತ್ತು ಬರಾಟಿಯ ಜರಿ ವಸ್ತುಗಳು ಜಯಪುರ್, ಮುರ್ಷಿದಾಬಾದುಗಳ ಹಸ್ತದಂತ ವಸ್ತುಗಳು— ಇವೇ ಮೊದಲಾದವುಗಳನ್ನು ಈಗ ಗುಣನಿಯಂತ್ರಣ ಕಾರ್ಯ ಯೋಜನೆಗೆ ಒಳಪಡಿಸಲಾಗಿದೆ.

ಹೊರ ದೇಶಗಳಿಗೆ ನಾವು ಉನ್ನತ ದರ್ಜೆಯ ವಸ್ತುಗಳನ್ನು ಪೂರೈಸುವುದು ಅಗತ್ಯವಾಗಿದೆ. ರಫ್ತು ಅಭಿವೃದ್ಧಿಯ ದೃಷ್ಟಿಯಿಂದ ವಸ್ತುಗಳ ಮಟ್ಟವನ್ನು ಕಾಯ್ದುಕೊಳ್ಳುವುದು ಮಹತ್ವದ್ದಾಗಿದೆ. ರಫ್ತು ವ್ಯಾಪಾರವು ನಮ್ಮ ದೇಶದ ಆರ್ಥಿಕ ಅಭಿವೃದ್ಧಿಯ ಜೀವನಾಡಿಗಳಲ್ಲಿ ಒಂದಾಗಿದೆ. ಹೊರ ದೇಶಗಳಲ್ಲಿ ಭಾರತದ ವಸ್ತುಗಳಿಗೆ ಮಾರುಕಟ್ಟೆಗಳನ್ನು ದೊರಕಿಸಲು, ರಫ್ತು ವ್ಯಾಪಾರವನ್ನು ಅಭಿವೃದ್ಧಿಗೊಳಿಸಲು, ರಫ್ತಾಗುವ ವಸ್ತುಗಳ ಮಟ್ಟ ಅವನತಿ ಹೊಂದದಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ

ಭಾರತದ ರಫ್ತು ವ್ಯಾಪಾರ ಕ್ಷೇತ್ರದಲ್ಲಿ—ವಿದೇಶಿ ವಿನಿಮಯ ಗಳಿಕೆಗೆ ಸಂಬಂಧಿಸಿದಂತೆ ಕುಶಲಕಲಾ ವಸ್ತುಗಳಿಗೆ ಈಗ ವಿಶಿಷ್ಟ ಸ್ಥಾನ ದೊರೆತಿದೆ. ೧೯೬೧-೬೨ರಲ್ಲಿ ೧೯.೩೦ ಕೋಟಿ ರೂ. ಮೌಲ್ಯದ ಉನ್ನತ ಗುಣಾಂಶದ ಕುಶಲಕಲಾ ವಸ್ತುಗಳು ರಫ್ತಾದರೆ, ೧೯೬೨-೬೩ರಲ್ಲಿ ೩೦.೭ ಕೋಟಿ ರೂ ಮೌಲ್ಯದ ಕುಶಲಕಲಾ ವಸ್ತುಗಳು ರಫ್ತಾದವು. ಹೊರ ದೇಶಗಳಲ್ಲಿನ ಆಮದು ವ್ಯಾಪಾರಿಗಳು ಮತ್ತು ಗ್ರಾಹಕರಿಗೆ ಈಗ ಭಾರತೀಯ ಕುಶಲಕಲಾ ವಸ್ತುಗಳ ಗುಣಾಂಶದ ಬಗ್ಗೆ ದೃಢವಾದ ನಂಬುಗೆ ಇದೆ.

೧೯೬೪—೬೫ರಲ್ಲಿ ರಾಜ್ಯ ಸರ್ಕಾರವು ಉನ್ನತ ಗುಣಾಂಶದ ಹಸ್ತಿದಂತ ಮತ್ತು ಮರದ ಕೆತ್ತನೆ ಕಲಾಕೃತಿಗಳನ್ನು ತಯಾರಿಸುವೆಂದು ನಿರೀಕ್ಷಿಸಲಾಗಿದೆ ರಾಜ್ಯ ಸರ್ಕಾರವು ಈ ದಿಶೆಯಲ್ಲಿ ಈಗಾಗಲೇ ಪೂರ್ವಸಿದ್ಧತೆ ಕಾರ್ಯಕೈಗೊಂಡಿದೆ ಇನ್ನು ಕೆಲವು ತಿಂಗಳೊಳಗಾಗಿಯೇ ಮೈಸೂರಿನ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟ್‌ನಲ್ಲಿ ಪರೀಕ್ಷಣಾ ಕೇಂದ್ರಗಳನ್ನು ತೆರೆಯುವುದೆಂದೂ ನಿರೀಕ್ಷಿಸಲಾಗಿದೆ.

ವಿವೇಕಾನಂದ ಸ್ವಾಮಿ

ರಾಮಕೃಷ್ಣರ ಪರಮ ಹಂಸರ|
ನೇಮದ ಪ್ರೇಮದ ಸಂದೇಶದ|
ಭೂಮ ಮೂರ್ತಿ ವಿವೇಕಾನಂದ |
ಸ್ವಾಮಿಯು ವಾಕ್ಸ್ಮ್ಯಕ ಸವಿಯೊ|| ೧ ||

ಪ್ರಾಣಾತ್ಮಕನು ನೆಲೆಯಾಗಿರುವ|
ದೀನಾನಾಥರ ಸೇವೆಯನು|
ಸ್ವಾನುಭಾವದಿ ಮಾಡಿದರೊಲುಮೆಯ|
ನಾನುವನು ದೇವನು ನಿಜವು || ೨ ||

ಭಾರತಧರ್ಮದ ರೀತಿಯ ಸಾರವ|
ಸಾರಲಮೇರಿಕಾ ದೇಶವನು|
ಸಾರಿದೆ, ಸೇರಿದೆ ಭಾಷಣ ವೇದಿಕೆ|
ತೋರಿದೆ ಸರ್ವಜನಾದರಣೆ || ೩ ||

ಪ್ರಾಚೀನಾಚಾರ್ಯವರ್ಯರು ಪೇಳ್ದ|
ವಿಚೀನ ಧರ್ಮ ಕರ್ಮಗಳ|
ಯೋಜನೆ ಮಾಡುತ ಯೋಜನೆ
ನಿಸ್ಸ್ವಯ |
ಲಾಜರಿಸುವುದೇ ಮಾನವತೆ || ೪ ||

ಇಹದಲ್ಲಿ ಸರ್ವ ಸಮಾನತೆಯಿಂದಲಿ|
ಬಹುದೈ ಪಂದಲಿ ಸಾರೂಪ್ಯ|
ಇಹಪರಸೇರಿಸರ ಜೀವನ ಮಾರ್ಗದ|
ಲಿಪುದಿದು ಧರ್ಮದ ಸೇತುವೆಯು|| ೫||

ಭಾರತ ವೀರರೇ ಏಳಿರಿ, ನಡೆಯಿರಿ|
ಸಾರಿರಿ ಗುರಿ ಮುಟ್ಟುವ ತನಕ|
ಧೀರರ ವರ್ತನೆ ತೋರಿರಿ ಪೈರಿಗೆ|
ಸಾರಿರಿ ಧರ್ಮಕೆ ವಿಜಯವನು || ೬ ||

ಕೆ. ವೆಂಕಟ್ರಾಯಾಚಾರ್ಯ, ಸುರತ್ಕಲ್.

ಹೆಚ್ಚಿದ ಬಡ್ಡಿ ದರ

ಸ್ಥಿರ ಠೇವಣಾತಿಗಳ ಮೇಲೆ
ಬಡ್ಡಿಯ ದರಗಳು

4% ರಿಂದ 6⅛%

ಇದೇ ತಾರೀಕು 17 ಅಗೋಸ್ತು, 1964ರಿಂದ ನಿಮ್ಮ ಸ್ಥಿರ ಠೇವಣಾತಿಗಳ ಮೇಲೆ ಸಾಲಿಯಾನ್ ಸೇಕಡಾ 6⅛ ತನಕ ಬಡ್ಡಿ ಕೊಡಲಾಗುವುದೆಂದು ತಿಳಿಸಲು ಸಂತೋಷಪಡುತ್ತೇವೆ. ಹೆಚ್ಚಿನ ವಿವರಗಳಿಗೆ ನಿಮ್ಮ ಹತ್ತಿರದ ಸಿಂಡಿಕೇಟ್ ಬ್ಯಾಂಕಿನ ಶಾಖೆಯಲ್ಲಿ ವಿಚಾರಿಸಿರಿ.

ಅರ್ಧ ವರ್ಷಕ್ಕೊಮ್ಮೆ ಬಡ್ಡಿಯ ಪಾವತಿ

1 ರಿಂದ 7 ವರುಷಗಳ ಅವಧಿ

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಪ್ರಧಾನ ಕಚೇರಿ: ಮಣಿಪಾಲ.

ಶಾಖೆಗಳು: 192

ಚಲಾವಣಾ ನಿಧಿ: ರೂ. 60 ಕೋಟಿಗೂ ಮಿಕ್ಕಿದೆ.

ಆರೋಗ್ಯ ಭಾಗ್ಯ

ಕ್ಷಯರೋಗದಿಂದ

ಕ್ಷಯರೋಗವು ಪ್ರತಿವರ್ಷವೂ ಸಹಸ್ರಾರು ಮಕ್ಕಳನ್ನು ಆಹುತಿ ತೆಗೆದುಕೊಳ್ಳುತ್ತಿದೆ. ಅನೇಕರನ್ನು ಅಂಗವಿಕಲರನ್ನಾಗಿ ಮಾಡುತ್ತಿದೆ. ಮಕ್ಕಳು ರಾಷ್ಟ್ರದ ಸಂಪತ್ತು. ಅವರು ನಾಳಿನ ಪೌರರು. ಮಕ್ಕಳಿಗೆ ತಗಲುವ ಈ ಪೀಡೆಯಿಂದ ರಾಷ್ಟ್ರಕ್ಕೆ ಅಪಾರ ನಷ್ಟವಾಗುತ್ತದೆ. ಮಾನವ ಜನಾಂಗದ ಭೀಕರ ಶತ್ರುವಾಗಿರುವ ಈ ರೋಗವನ್ನು ನಿವಾರಿಸಲು ಅದರ ವಿರುದ್ಧ ನಿರಂತರ ಹೋರಾಟ ನಡೆಸುವುದೂ ಅನಿವಾರ್ಯವಾಗಿದೆ.

ಇಂದು ವಿವಿಧ ರೋಗಗಳಿಂದ ಬಳಲುತ್ತಿರುವ ಪ್ರತಿ ಐದು ಮಕ್ಕಳಲ್ಲಿ ಒಂದು ಮಗು ಕ್ಷಯ ರೋಗದಿಂದ ಬಳಲುತ್ತಿದೆ. ಈ ರೋಗದಿಂದ ನರಳುತ್ತಿರುವ ಹಾಗೂ ಅದರಿಂದ ಮರಣ ಹೊಂದಿದ ಮಕ್ಕಳಿಗೆ ಸಂಬಂಧಿಸಿದ ಅಂಕಿ–ಅಂಶಗಳಿಗಿಂತಲೂ ವಾಸ್ತವಿಕ ಪರಿಸ್ಥಿತಿಯು ರೋಗದ ಭೀಕರ ಸ್ವರೂಪದ ಕಲ್ಪನೆ ಮಾಡಿಕೊಡುತ್ತದೆ. ಮಕ್ಕಳು ಕ್ಷಯರೋಗದ ಚಿಹ್ನೆಗಳನ್ನು ತೋರಿಸದಿದ್ದಾಗಲೂ ಕ್ಷಯರೋಗಾಣುಗಳು ಮಕ್ಕಳ ಶರೀರದಲ್ಲಿ ಪ್ರವೇಶಿಸಿರಬಹುದಾದ ಸಾಧ್ಯತೆಗಳೂ ಇವೆ. ಕ್ಷಯರೋಗಕ್ಕೆ ಸಂಬಂಧಿಸಿದಂತೆ ನಡೆದ ಪ್ರಯೋಗ ಪರೀಕ್ಷೆಗಳಿಂದ ಈ ಸಂಗತಿ ವ್ಯಕ್ತಪಟ್ಟಿದೆ.

ಕ್ಷಯರೋಗಾಣುಗಳು ಗಾಯದ ಮೂಲಕ ಅಥವಾ ಶ್ವಾಸನಾಳ ಮೂಲಕ ಶರೀರವನ್ನು ಪ್ರವೇಶಿಸುತ್ತವೆ. ಕ್ಷಯರೋಗವು ಆರಂಭವಾದ ದಿನದಿಂದ ರೋಗಿಯ ದೇಹದ ಜೀವಕೋಶಗಳು ಸಾರಜನಕ ಪದಾರ್ಥಗಳನ್ನು ಸಹಿಸುವುದಿಲ್ಲ.

ಕ್ಷಯರೋಗದ ಪ್ರಸಾರವು ಮಕ್ಕಳಲ್ಲಿ ವಿಶೇಷವಾಗಿದೆ. ೧೦ ವರ್ಷ ವಯೋಮಿತಿಯೊಳಗಿನ ಮಕ್ಕಳಿಗೂ ಶೇ ೧೦ ರಷ್ಟು! ೧೫ ವರ್ಷ ವಯೋಮಿತಿಯೊಳಗಿನ ಮಕ್ಕಳಲ್ಲಿ ಶೇ೭೦ರಷ್ಟು ಮಂದಿ ಕ್ಷಯರೋಗದಿಂದ ನರಳುತ್ತಿದ್ದಾರೆಂದು ಸಮೀಕ್ಷೆಗಳಿಂದ ವ್ಯಕ್ತಪಟ್ಟಿದೆ. ಆರಂಭದಲ್ಲಿ ಕ್ಷಯರೋಗವು ಸೌಮ್ಯವಾಗಿ ಕಂಡುಬಂದರೂ ಅನಂತರ ಅದು ತ್ವರಿತವಾಗಿ ಹಬ್ಬುತ್ತದೆ.

ಕ್ಷಯರೋಗದಲ್ಲಿ ಅನೇಕ ನಮೂನೆಗಳಿವೆ. ಮೈತುಂಬ ಸಾಸಿವೆ ಕಾಳಿನೋಪಾದಿಯಲ್ಲಿ ಗುಳ್ಳೆಗಳೇಳುವುದರಿಂದ ಬರುವ ಒಂದು ತೆರನಾದ ಜ್ವರದಿಂದ ಉಂಟಾಗುವ ಕ್ಷಯ ಮತ್ತು ಮಿದುಳನ್ನು ಆವರಿಸುವ ಪೊರೆಯ ಕ್ಷಯ ಇವು ಹೆಚ್ಚು ಅಪಾಯಕಾರಿಯಾಗಿವೆ. ಕ್ಷಯರೋಗವು ಪ್ರಬಲವಾಗಿ ಶ್ವಾಸಕೋಶಗಳ ಕ್ಷಯವಾಗಿ ಕಾಣಿಸಿಕೊಳ್ಳಲೂ ಬಹುದು.

ಎಷ್ಟು ಜನ ಮಕ್ಕಳಿಗೆ ಕ್ಷಯರೋಗ ತಗಲಿದೆ ಎಂಬುದನ್ನು ಅರಿತುಕೊಳ್ಳುವುದರಿಂದ ಸಮಾಜದಲ್ಲಿ ಈ ರೋಗದ ಪ್ರಾಬಲ್ಯವನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಕ್ಷಯರೋಗದ ಮೇಲೆ ಗಣನೀಯ ಪ್ರಮಾಣದ ಹತೋಟಿ ಸಾಧಿಸಿರುವ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ೧೦ ವರ್ಷದ ಮಕ್ಕಳಲ್ಲಿ ಶೇ. ೫ಕ್ಕಿಂತಲೂ ಕಡಿಮೆ ಮಕ್ಕಳಿಗೆ ಕ್ಷಯರೋಗ ತಗಲಿದೆ. ಅಮೇರಿಕಾದ ಅನೇಕ ರಾಜ್ಯಗಳಲ್ಲಿ ಕ್ಷಯರೋಗದಿಂದ ನರಳುವ ಮಕ್ಕಳನ್ನು ಕಾಣುವುದೇ ಅಪರೂಪ. ಅಜ್ಞಾನಿಗಳೂ ತಮ್ಮ ಮೇಲಿನ ಹೊಣೆಗಾರಿಕೆಯ ಅರಿವು ಇಲ್ಲದ ಕೆಲವು ಕ್ಷಯರೋಗಿಗಳು ಉಗುಳುವುದು ಮತ್ತು ಕರವಸ್ತ್ರದ ಸಹಾಯವಿಲ್ಲದೆ ಕೆಮ್ಮುವುದು ಭಾರತದಲ್ಲಿ ಕ್ಷಯರೋಗ ಪ್ರಸಾರಕ್ಕೆ ಮುಖ್ಯ ಕಾರಣಗಳಾಗಿವೆ.

ಅನೇಕ ಸಂದರ್ಭಗಳಲ್ಲಿ ಶ್ವಾಸಕೋಶದ ಕ್ಷಯದಿಂದ ನರಳುತ್ತಿರುವ ವಯಸ್ಕರಿಂದಲೇ ಮಕ್ಕಳಿಗೆ ಕ್ಷಯರೋಗವು ಹಬ್ಬುತ್ತದೆ. ಕ್ಷಯರೋಗ ತಗಲಿದ ರೋಗಿಯು ಕರವಸ್ತ್ರದ ಸಹಾಯವಿಲ್ಲದೆ ಕೆಮ್ಮುವಾಗ ಅವನ ಉಗುಳಿನಲ್ಲಿರುವ ರೋಗ ಜಂತುಗಳು ಸುತ್ತಲೂ ಹರಡಿ ರೋಗವು ಹಬ್ಬುತ್ತದೆ. ರೋಗಿಯ ಬಳಿಯಲ್ಲಿದ್ದ ಮಕ್ಕಳು ಶ್ವಾಸೋಚ್ಛ್ವಾಸ ಮಾಡುವಾಗ ರೋಗಾಣುಗಳು ಮಕ್ಕಳ ಶರೀರದಲ್ಲಿಯೂ ಪ್ರವೇಶಿಸುತ್ತವೆ. ನೆಲದ ಮೇಲೆ ಬಿದ್ದ ರೋಗಿಯ ಉಗುಳಿನಲ್ಲಿ ಕ್ಷಯರೋಗಾಣುಗಳು ಬಹಳ ಕಾಲದ ವರೆಗೂ ಇರಬಲ್ಲವು. ಮಕ್ಕಳು ಮಣ್ಣಿನಲ್ಲಿ ಆಟವಾಡುವಾಗ ಅನೇಕ ಸಂದರ್ಭಗಳಲ್ಲಿ ರೋಗಿಯ ಉಗುಳಿನಲ್ಲಿನ ರೋಗಾಣುಗಳು ಮಕ್ಕಳ ಶ್ವಾಸೋಚ್ಛ್ವಾಸದ ಮೂಲಕ ಅವುಗಳ ಶರೀರದಲ್ಲಿ ಪ್ರವೇಶಿಸುತ್ತವೆ. ಚಿಕ್ಕ ಮಕ್ಕಳಿಗೆ ಕೈಗೆ ಸಿಕ್ಕಿದುದನ್ನೆಲ್ಲ ಬಾಯಲ್ಲಿಟ್ಟುಕೊಳ್ಳುವ ಅಭ್ಯಾಸವಿರುತ್ತದೆ. ಅಂಥ ಸಂದರ್ಭಗಳಲ್ಲಿಯೂ ರೋಗಾಣುಗಳು ಮಕ್ಕಳ ಶರೀರವನ್ನು ಪ್ರವೇಶಿಸುತ್ತವೆ. ಚಿಕ್ಕ ಮಕ್ಕಳು ಕ್ಷಯ ರೋಗಿಯ ಸಮೀಪದಲ್ಲಿರದಂತೆ ನೋಡಿಕೊಳ್ಳುವುದೂ ಮಹತ್ವದ್ದಾಗಿದೆ.

ಶಿಶುಗಳು, ಮತ್ತು ಚಿಕ್ಕ ಮಕ್ಕಳಲ್ಲಿ ಕ್ಷಯರೋಗ ಹಬ್ಬಲು ರೋಗಗ್ರಸ್ತರಾದ ವಯಸ್ಕರು ಅದರಲ್ಲಿಯೂ ರೋಗಗ್ರಸ್ತರಾದ ತಾಯಿಯೇ ಕಾರಣಳಾಗುತ್ತಾಳೆ. ತಾಯಿಯು ಕ್ಷಯರೋಗದಿಂದ ನರಳುತ್ತಿದ್ದರೆ ಬಹುತೇಕ ಪ್ರಸಂಗಗಳಲ್ಲಿ ಶಿಶುಗಳಿಗೂ ಕ್ಷಯ ರೋಗ ತಗಲುತ್ತದೆ. ಕ್ಷಯರೋಗದಿಂದ ನರಳುವ ದಾದಿ, ಅಥವಾ ಈ ರೋಗದಿಂದ ನರಳುವ ಇನ್ನಿತರ ಸೇವಕರಿಂದಲೂ ಮಕ್ಕಳಿಗೆ ಕ್ಷಯರೋಗ ತಗಲುವ ಸಂಭವವಿದೆ. ಕ್ಷಯರೋಗಿಯಾದ ಶಿಕ್ಷಕನಿಂದ ಅಥವಾ ಅದೇ ರೋಗದಿಂದ ಬಳಲುವ ಮಿತ್ರನಿಂದ ಶಾಲೆಗಳಲ್ಲಿನ ಇನ್ನುಳಿದ ವಿದ್ಯಾರ್ಥಿಗಳಿಗೂ ಕ್ಷಯರೋಗ ಹರಡುತ್ತದೆ. ಮನೆಯಲ್ಲಾಗಲಿ ಅಥವಾ ಹೊರಜಗತ್ತಿನಲ್ಲಾಗಲೀ ಮಕ್ಕಳು ಕ್ಷಯರೋಗದಿಂದ ಪಾರಾಗಲು ಯತ್ನಿಸಿದರೆ ಕಂಡಕಂಡಲ್ಲಿ ಉಗುಳುವ ರೋಗಿಗಳಿಂದ ತುಂಬಿರುವ ನಮ್ಮ ಸಮಾಜದಲ್ಲಿ ಅವರು ಪ್ರತಿ ಹೆಜ್ಜೆ ಹೆಜ್ಜೆಗೂ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಭಾರತದಲ್ಲಿನ ಪಶುಗಳು ಕ್ಷಯರೋಗದಿಂದ ಬಳಲುತ್ತಿಲ್ಲವೆಂಬುದು ನಿಜವಾಗಿಯೂ ನಮ್ಮೆಲ್ಲರ ಅದೃಷ್ಟವೆಂದೇ ಹೇಳಬಹುದು. ರೋಗಗ್ರಸ್ತವಾದ ಪಶುಗಳ ಹಾಲಿನಿಂದ, ಆಹಾರ ಪದಾರ್ಥಗಳನ್ನು ಮತ್ತು ಹಾಲಿನ ಸರಬರಾಜಿನಲ್ಲಿ ನಿರತವಾಗಿರುವ ಕ್ಷಯರೋಗಿಗಳಿಂದಲೂ ಈ ರೋಗ ಹಬ್ಬುತ್ತದೆ.

ಕ್ಷಯರೋಗಾಣುಗಳು ಶರೀರವನ್ನು ಪ್ರವೇಶಿಸಿದ ದಿನದಿಂದಲೇ ರೋಗಾಣುಗಳ ವಿರುದ್ಧ ಹೋರಾಟ ಆರಂಭವಾಗುತ್ತದೆ. ರೋಗಾಣುಗಳ ಸಂಖ್ಯೆ ಮತ್ತು ಶರೀರದ ಪ್ರತಿಬಂಧಕ ಸಾಮರ್ಥ್ಯ ಇವುಗಳ ಬಲದ ಮೇಲೆಯೇ ರೋಗಾಣುಗಳ ನಾಶ ಅಥವಾ ರೋಗದ ಪ್ರಾಬಲ್ಯವು ಅವಲಂಬಿಸಿದೆ. ರೋಗಾಣುಗಳು ಮತ್ತು ಶರೀರದ ರಕ್ಷಣಾ ವ್ಯವಸ್ಥೆಯ ನಡುವೆ ನಡೆದ ಹೋರಾಟದಲ್ಲಿ ಶರೀರದ ರಕ್ಷಣಾ ವ್ಯವಸ್ಥೆಯು ದುರ್ಬಲವಾದರೆ, ರೋಗಾಣುಗಳು ಪ್ರಾಬಲ್ಯ ಹೆಚ್ಚಿ ಅವು ದೇಹದ ತುಂಬೆಲ್ಲ ಹರಡಿಕೊಳ್ಳುತ್ತವೆ. ಪರಿಣಾಮವಾಗಿ ಮೈತುಂಬ ಸಾಸಿವೆ ಕಾಳಿನಂತೆ ಗುಳ್ಳೆಗಳೆದ್ದು, ಒಂದು ತೆರನಾದ ಜ್ವರ ಬರಲು ಆರಂಭವಾಗಿ ಅದರಿಂದ ಕ್ಷಯರೋಗ ಕಾಣಿಸಿಕೊಳ್ಳುತ್ತದೆ. ಮಿದುಳಿಗೆ ಆವರಿಸಿರುವ ಪೊರೆಗೆ ತಗಲುವ ಕ್ಷಯವೂ ಅಪಾಯಕಾರಿಯಾಗಿದೆ. ಮೊದಮೊದಲು ರೋಗವು ಸೌಮ್ಯರೂಪದ್ದಾಗಿದ್ದು ಕ್ರಮಶಃ ಅದು ವಯಸ್ಕರಲ್ಲಿ ಕಂಡುಬರುವ ಶ್ವಾಸಕೋಶದ ಕ್ಷಯಕ್ಕೆ ಆಸ್ಪದ ಕೊಡುತ್ತದೆ. ಸೌಮ್ಯ ಸ್ವರೂಪದ ಕ್ಷಯದಿಂದ ಎಲುಬು ಮತ್ತು ಕೀಲುಬಂಧಗಳ ಕ್ಷಯ ಆರಂಭವಾಗುತ್ತದೆ. ರೋಗ ಪ್ರತಿಬಂಧಕ ಸಾಮರ್ಥ್ಯ ಕುಗ್ಗಿದರೆ, ರೋಗ ಪ್ರಬಲವಾಗಿ ದೀರ್ಘಾವಧಿಯ ವರೆಗೂ ಪೀಡಿಸುತ್ತದೆ.

ನಮ್ಮ ಎಳೆಯ ಯೋಧರ ಶರೀರದಲ್ಲಿ ಮುಖ್ಯವಾಗಿ ಜೀವನ್ಮರಣ ಹೋರಾಟ ನಡೆದಿರುತ್ತದೆ. ಈ ಹೋರಾಟ ನಡೆದಾಗ ಯಾವುದೇ ಅನಾರೋಗ್ಯದ ಲಕ್ಷಣಗಳೂ ಕಂಡುಬರುವುದಿಲ್ಲ. ಕ್ಷಯರೋಗಕ್ಕೆ ಸಂಬಂಧಿಸಿದಂತೆ ನಡೆಸಲಾಗುವ ಪ್ರಯೋಗ ಪರೀಕ್ಷೆಯೇ ದೇಹದ



ಕೇಂದ್ರ ಆರೋಗ್ಯ ಮಂತ್ರಿ ಶಾಹೆಯವರು ಪ್ರಾರಂಭಿಸಿದ ಸಾರ್ವತ್ರಿಕ ರೇಡಿಯೋಗ್ರಫೀ ಯೋಜನೆಯಂತೆ ಪರಿಶೀಲನೆಗೆಂದು ಬಂದ ಜನ ಸಮೂಹವನ್ನೂ ಒಬ್ಬಾತನು ಎಕ್ಸ್‌ರೇ ಪ್ರಯೋಗಕ್ಕೆ ಗುರಿಯಾಗುತ್ತಿರುವುದನ್ನೂ ಈ ಚಿತ್ರದಲ್ಲಿ ನೋಡಬಹುದು.

ಸಂರಕ್ಷಣೆ

ಒಳಭಾಗದಲ್ಲಿ ಹೋರಾಟ ನಡೆದಿದೆ ಎಂಬುದನ್ನು ಪ್ರಕಟಪಡಿಸುತ್ತದೆ. ರೋಗವು ಪ್ರಬಲವಾದಾಗ ಅದರ ಲಕ್ಷಣಗಳೂ ಕಂಡುಬರುತ್ತವೆಯಾದರೂ ಸೌಮ್ಯವಾಗಿದ್ದಾಗ ಇಂಥ ಲಕ್ಷಣಗಳು ಕಂಡ ಬರುವುದು ಅಪರೂಪವೆಂದೇ ಹೇಳಬಹುದು. ಕ್ಷಯರೋಗವು ಸೌಮ್ಯವಾಗಿದ್ದಾಗ ತೂಕ ಕಡಿಮೆಯಾಗುವಿಕೆ; ಮಂದ ಜ್ವರ, ಕೆಮ್ಮು ಇವೇ ಮೊದಲಾದ ಚಿಹ್ನೆಗಳು ಕಂಡುಬರುತ್ತವೆ.

ಶರೀರದ ರೋಗ ಪ್ರತಿಬಂಧಕ ಸಾಮರ್ಥ್ಯ ಕುಗ್ಗದಂತೆ ನೋಡಿಕೊಳ್ಳುವುದೇ ಕ್ಷಯ ರೋಗ ನಿವಾರಣೆಯ ದಿಶೆಯಲ್ಲಿ ಮಹತ್ವದ ಸಂಗತಿಯಾಗಿದೆ.

ಚರ್ಮವನ್ನು ಪರೀಕ್ಷಿಸಿದಾಗ, ಮಕ್ಕಳಿಗೆ ಕ್ಷಯ ರೋಗವಿದ್ದುದು ಕಂಡುಬಂದರೆ, ಬೇರೆ ಇನ್ನಾವ ರೋಗದ ಲಕ್ಷಣಗಳು ಇರದಿದ್ದರೆ ಅಂಥ ಸಂದರ್ಭಗಳಲ್ಲಿ ಮಕ್ಕಳ ರೋಗ ಪ್ರತಿಬಂಧಕ ಶಕ್ತಿಯನ್ನು ಹೆಚ್ಚಿಸಲು "ಇಸೋನಿಯ ಜಾಯ್ಡ್" ಅಥವಾ "ಕೆಮೊ ಪ್ರೊಫಿಲ್ಯಾಕ್ಸಿಸ್" ಔಷಧಿಯನ್ನು ಕೊಡಬೇಕು. ಶಕ್ತಿಯುತವಾದ ಈ ಔಷಧಿಯನ್ನು ಗುಳಿಗೆಗಳ ರೂಪದಲ್ಲಿ ಮಕ್ಕಳಿಗೆ ಕೊಡಲಾಗುತ್ತದೆ. ಎಳೆಯ ಮಕ್ಕಳಿಗೆ ಈ ಗುಳಿಗೆಗಳನ್ನು ಕೊಡುವಾಗ ಅವುಗಳನ್ನು ಕುಟ್ಟಿ ಪುಡಿಮಾಡಿ, ಜೇನುತುಪ್ಪ ಇಲ್ಲವೇ ಹಾಲಿನಲ್ಲಿ ಬೆರಸಿಕೊಡಬೇಕು. ಕನಿಷ್ಠ ಒಂದು ವರ್ಷದ ವರೆಗೂ ಈ ಚಿಕಿತ್ಸೆ ನಡೆಯಬೇಕು.

ಈ ಸಂಬಂಧವಾಗಿ ಮಾಹಿತಿ ಸಂಗ್ರಹಿಸಿ, ಅವರಿಗೆ ರೋಗ ಪ್ರತಿಬಂಧಕ ಚುಚ್ಚುಮದ್ದು ಕೊಡಬೇಕು. ಸಮಾಜದಲ್ಲಿ ಕ್ಷಯ ರೋಗದ ಪ್ರಾಬಲ್ಯವಿರುವವರೆಗೂ ನಮ್ಮ ಮಕ್ಕಳು ಸುರಕ್ಷಿತರಾಗಿರಲಾರರು ಎಂಬ ಕಟುಸತ್ಯವನ್ನು ನಾವು ಅರಿತುಕೊಳ್ಳಬೇಕು. ನಮ್ಮ ಭಯಂಕರ ಶತ್ರುವಿನ ಮೇಲೆ ಸಂಪೂರ್ಣ ವಿಜಯ ಸಾಧಿಸುವವರೆಗೂ ನಾವು ವಿಶ್ರಮಿಸಬಾರದು.

ಭಾರತದಲ್ಲಿ ಕ್ಷಯ ರೋಗವನ್ನು ತಡೆಗಟ್ಟುವ ಸಾಮೂಹಿಕ ಕಾರ್ಯಕ್ರಮವೆಂದು ೧೯೪೮ರಲ್ಲಿ ಬಿ ಸಿ ಜಿ ದಾಕು ಚುಚ್ಚಲು ಪ್ರಾರಂಭವಾಯಿತು. ಇದರಂತೆ ಪರಿಶೀಲನೆ ನಡೆಸಿ ಕ್ಷಯ ರೋಗ ಪೀಡಿತರಿಗೆ ಆವಶ್ಯಕ ಔಷಧಿಗಳನ್ನು ಪೂರಯಿಸಲಾಯಿತು. ಟಿ ಬಿ ಕ್ಲಿನಿಕ್‌ಗಳನ್ನು ಅಲ್ಲಲ್ಲಿ ತೆರೆದ ರೋಗಿಗಳಿಗೆ ಸರಿಯಾದ ಚಿಕಿತ್ಸೆಯು ನಡೆಯುವಂತೆ ಈಗ ಮತ್ತ ವರ್ಜಿಸಲಾಗುತ್ತಿದೆ. ಭಾರತ ಸರಕಾರವು ರಾಷ್ಟ್ರೀಯ ಟಿ ಬಿ ಸಂಸ್ಥೆಯನ್ನು ಸ್ಥಾಪಿಸಿ, ಈ ವಿಭಾಗದ ಕೆಲಸಗಾರರಿಗೆ ಸೂಕ್ತ ತರಬೇತಿಯ ವ್ಯವಸ್ಥೆ ಮಾಡಿದೆ. ವಿವಿಧ ರಾಜ್ಯಗಳಲ್ಲಿ ರೋಗಿಗಳನ್ನು ನೋಡಿಕೊಳ್ಳುವ ಕೇಂದ್ರಗಳಲ್ಲಿ ರೋಗಿಗಳಿಗೆ ಕೈಕಸಬುಗಳಲ್ಲಿ ತರಬೇತಿ ನೀಡುವ ಯೋಜನೆಯೊಂದನ್ನು ಬಳಕೆಗೆ ತಂದಿದೆ.

ಗ್ವಿಂಡಿಯಲ್ಲಿರುವ ಬಿ ಸಿ ಜಿ ಲೆಬೊರೆಟರಿಯು ಭಾರತಕ್ಕೆ ಬೇಕಾದ ಲಸಿಕೆಗಳನ್ನು ಒದಗಿಸುತ್ತದೆ. ಅಷ್ಟಾಗಿಯೂ ಕೆಲವು ದೇಶಗಳಿಗೂ ಅದನ್ನ ನಿರ್ಯಾತ ಮಾಡುತ್ತಿದೆ. ಬೇರೆ ಬೇರೆ ಕೇಂದ್ರಗಳಲ್ಲಿ ಈ ರೋಗಕ್ಕೆ ಸಂಬಂಧಿಸಿದ ಸಂಶೋಧನೆಗಳು ನಡೆಯುತ್ತಲೇ ಇವೆ. ದಿನದಿಂದ ದಿನಕ್ಕೆ ಕ್ಷಯರೋಗವನ್ನು ನಿಯಂತ್ರಣಕ್ಕೊಳಪಡಿಸುವ ಕಾರ್ಯವು ಯಶಸ್ವಿಯಾಗುತ್ತ ಬರುತ್ತಿರುವುದು ಸಂತಸದ ಸುದ್ದಿ.

ಕ್ಷಯರೋಗಿಗಳನ್ನೆಲ್ಲಾ ಆಸ್ಪತ್ರೆಗೆ ತಂದು ಚಿಕಿತ್ಸೆ ನಡೆಸುವುದಕ್ಕಿಂತ ರೋಗಿಗಳ ಮನೆಯಲ್ಲಿಯೇ ಅದಕ್ಕೆ ಸೌಕರ್ಯ ಕಲ್ಪಿಸಿಕೊಡುವುದು ಇಂದು ನಮ್ಮ ಅಶಯ. ಪ್ರತಿ ಜಿಲ್ಲೆಯ ಕೇಂದ್ರದಲ್ಲಿ ಇದಕ್ಕೆ ಅನುಕೂಲತೆಗಳನ್ನು ಒದಗಿಸಿಕೊಡುವ ಆಸ್ಪತ್ರೆಗಳು ಸ್ಥಾಪಿತವಾಗುತ್ತಿವೆ. ಗೃಹಚಿಕಿತ್ಸಾ ಸೇವೆಯನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕಿಳಿಸಲು ಮತ್ತು ಅದನ್ನು ಜನರ ಮನೆಬಾಗಿಲಿಗೆ ಒಯ್ಯಲು ಈ ಆಸ್ಪತ್ರೆಗಳಲ್ಲಿ ಯೋಗ್ಯ ಸಲಕರಣೆ, ತರಬೇತಿ ಪಡೆದ ಸಿಬಂಧಿ ಮತ್ತು ರೋಗಿಗಳಿಗೆ ಧರ್ಮಾರ್ಥ ಹಂಚಲು ಔಷಧಿಗಳು ಆಗತ್ಯ. ಕ್ರಮವತ್ತಾಗಿ ಔಷಧಿಗಳ ವಿತರಣೆ ಮತ್ತು ಸೇವನೆಯು ನಡೆಯುವಂತಾಗಲು ತರಬೇತಾದ ಸ್ವಯಂಸೇವಕರೂ ಬೇಕು. ಈ ದಿಶೆಯಲ್ಲಿ ಭಾರತದ ಕ್ಷಯರೋಗದ ಸಂಸ್ಥೆಯು ಟಿ ಬಿ ಮೊಹರುಗಳ ಮಾರಾಟ ಚಳವಳವನ್ನು ಪ್ರತಿ ವರ್ಷವೂ ಸಂಘಟಿಸುತ್ತಿದೆ. ಇದು ಗಾಂಧಿ ಜಯಂತಿಯಂದು ಪ್ರಾರಂಭವಾಗಿ ಪ್ರಜಾಪ್ರಭುತ್ವ ಪ್ರಭುತ್ವ ದಿನದಂದು ಕೊನೆಗೊಳ್ಳುವುದು.

ಕ್ಷಯದಂಥಹ ರಪ್ರ ದುರಂತಹೇತುವಾದ ರೋಗದಿಂದ ನಮ್ಮವರ ರಕ್ಷಣಾ ಕಾರ್ಯದಲ್ಲಿ ತನುಮನಧನಗಳಿಂದ ಸಹಕರಿಸುವುದು ನಮ್ಮೆಲ್ಲರ ಕರ್ತವ್ಯ.



ಟ್ರಾಂಬೇಯ ಅಣು ಶಕ್ತಿ ಕೇಂದ್ರದ ವಿಜ್ಞಾನಿಗಳು ಕರ್ತವ್ಯತತ್ಪರರಾಗಿದ್ದಾರೆ.

ಶಾಂತಿಗಾಗಿ ಅಣುಶಕ್ತಿ

ಪರಮಾಣು ಶಕ್ತಿಯನ್ನು ಶಾಂತಿ ಕಾರ್ಯಗಳಿಗೆ ವಿನಿಯೋಗಿಸುವಲ್ಲಿ ಜಾಗತಿಕ ಆಸ್ಥೆಯು ದಿನದಿಂದ ದಿನಕ್ಕೆ ಹೆಚ್ಚುತ್ತ ಬರುತ್ತಿದೆ. ಭಾರತದಲ್ಲಿಯೂ ಅದನ್ನು ಮಾನವ ಕಲ್ಯಾಣ ಕಾರ್ಯಗಳಿಗೆ ಮಾತ್ರ ಬಳಸಲಾಗುವದೆಂದೂ ಅಣುಬಾಂಬನ್ನು ಭಾರತವು ತಯಾರಿಸುವಪ್ರಶ್ನೆಯನ್ನು ನಿರಾಕರಿಸಿದೆಯಾದರೂ ಇಂತಹ ಕೃತಿಗಳಲ್ಲಿ ಭಾರತಕ್ಕೆ ಆಸಕ್ತಿಯಿಲ್ಲವೆಂದು ಪ್ರಧಾನಿ ಲಾಲ ಬಹದೂರ ಶಾಸ್ತ್ರಿಯವರು ಘೋಷಿಸಿದ್ದಾರೆ. ಭಾರತಕ್ಕೆ ಆವಶ್ಯವಾದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು, ಅಧಿಕ ಆಹಾರೋತ್ಪಾದನೆಯಲ್ಲಿ ನೆರವಾಗುವ ರೇಡಿಯೋ ಐಸೋಟೋಪ್‌ಗಳನ್ನು ತಯಾರಿಸಲು ಈ ಭೀಮ ಶಕ್ತಿಯನ್ನು ಉಪಯೋಗಿಸಬಹುದು. ಬಯಲೋಜಿ, ಉದ್ಯಮ, ಔಷಧಗಳ ಪ್ರಗತಿಗೂ ಇದು ಬಳಸಲ್ಪಡುವುದು. ಭಾರತದಲ್ಲಿ ಟ್ರಾಂಬೆಯಲ್ಲಿ ಮಾತ್ರವಲ್ಲ, ತಾರಾಪುರದಲ್ಲಿಯೂ ಅಣು ಶಕ್ತಿ ಕೇಂದ್ರಗಳು ಈ ದಿಸೆಯಲ್ಲಿ ಏಕಪ್ರಕಾರವಾಗಿ ಕಾರ್ಯ ಮಾಡುತ್ತಿವೆ, ಮತ್ತು ಯಶಸ್ವಿನ ದಾರಿಯಲ್ಲಿ ಮುನ್ನಡೆಯುತ್ತಿವೆ.

Read &

Advertise in

NAVAYUGA

DEEPAVALI

SPECIAL

ಟಿ ಬಿ ಸೆನಿಟೋರಿಯಂನಲ್ಲಿರುವ ನಾಲ್ವರು ಕೇರಂ ಆಡುವುದರಲ್ಲಿ ತಲ್ಲೀನರಾಗಿರುವುದನ್ನು, ಒಬ್ಬಾತ ಮಹಾತ್ಮಾ ಗಾಂಧಿಯವರ ಚಿತ್ರ ಬರೆಯುತ್ತಿರುವುದನ್ನೂ ಕಾಣಬಹುದು.

ಅಮೆರಿಕೆಗೆ ಭಾರತದಲ್ಲಿ ಆಸಕ್ತಿ

"ಅಮೆರಿಕದ ಪ್ರೌಢ ಶಾಲೆಗಳಲ್ಲಿ ಭಾರತದ ಅಧ್ಯಯನಗಳನ್ನು ಕುರಿತ ಆಸಕ್ತಿ ಭರದಿಂದ ಬೆಳೆಯುತ್ತಿದೆ. ಭಾರತದ ಇತಿಹಾಸ ಹಾಗೂ ಸಂಸ್ಕೃತಿಗಳ ವಿಷಯದಲ್ಲಿ ಇದುವರೆಗೆ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಿಗೆ ಮಾತ್ರ ಪರಿಮಿತವಾಗಿದ್ದ ಆಸಕ್ತಿ ಈಗ ಹೈಸ್ಕೂಲು ಮಟ್ಟಗಳಲ್ಲೂ ಕುದುರುತ್ತಿದೆ. ಇನ್ನು ಮುಂದೆ ಅಮೆರಿಕದ ಶಾಲಾ ವಿದ್ಯಾರ್ಥಿಗಳು ಕೂಡ ಹೆಚ್ಚು ಹೆಚ್ಚಾಗಿ ಭಾರತದ ವ್ಯವಹಾರಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳಲಿದ್ದಾರೆ" ಎಂದು ಭಾರತಕ್ಕೆ ಬಂದಿರುವ ನ್ಯೂಯಾರ್ಕಿನ ಅಧ್ಯಾಪಕ ಜೇಂಸ್ ಲೋಬೆಲ್ ಹೇಳಿದ್ದಾರೆ.

ಸೈರಾಕ್ಯೂಸ ವಿಶ್ವವಿದ್ಯಾನಿಲಯದ ಸಹಕಾರದಿಂದ ನ್ಯೂಯಾರ್ಕಿನ ಶಿಕ್ಷಣ ಶಾಖೆಯು ದಕ್ಷಿಣ ಏಶ್ಯದ, ಮುಖ್ಯವಾಗಿ ಭಾರತದ ಪರಿಚಯ ಪಡೆಯುವ ಸಲುವಾಗಿದ್ದ ವಿಶೇಷಾಧ್ಯಯನ ಕಾರ್ಯಕ್ರಮದ ಆಶ್ರಯದಲ್ಲಿ ಭಾರತದಲ್ಲಿ ಅನೇಕ ವಾರಗಳನ್ನು ಕಳೆದ ೨೦ ಮಂದಿ ಅಮೆರಿಕದ ಚರಿತ್ರೆಯ ಅಧ್ಯಾಪಕರಲ್ಲಿ ಲೋಬೆಲ್ ಅವರೂ ಒಬ್ಬರು.

ಅಧ್ಯಾಪಕರ ಸಂದರ್ಶನ

ನ್ಯೂಯಾರ್ಕ ರಾಜ್ಯದ ಅಧ್ಯಾಪಕರುಗಳು ಜೂನ್ ೨೯ನೇ ತಾರೀಖು ಭಾರತಕ್ಕೆ ಬಂದು ದಿಲ್ಲಿ, ಚಂಡೀಘರ್, ಜೈಪುರ, ಆಗ್ರಾ, ಲಕ್ನೋ, ಬನಾರಸ ಹಾಗೂ ಕಲ್ಕತ್ತಾಗಳಿಗೆ ಭೇಟಿಯಿತ್ತರು. ಜುಲೈ ೨೯ನೇ ತಾರೀಖು ಅವರ ಪೈಕಿ ೧೦ ಮಂದಿ ಫಿಲಿಪೈನ್ಸಿಗೆ ತೆರಳಿದರು. ಉಳಿದವರು ಕಾಶ್ಮೀರ, ಮೈಸೂರು ಹಾಗೂ ಅಸ್ಸಾಂಗಳನ್ನು ಬಿಟ್ಟು ಉಳಿದ ಭಾರತದ ಪ್ರದೇಶಗಳಿಗೆ ಭೇಟಿ ಇತ್ತರು. ತಮ್ಮ ಭೇಟಿಯನ್ನು ಕುರಿತು ತಮ್ಮ ಜೀವನದ ಅತ್ಯಾಕರ್ಷಕವಾದ ಅನುಭವಗಳಲ್ಲಿ ಇದೂ ಒಂದು" ಎಂದು ಅವರು ತಿಳಿಸಿದರು.

"ಭಾರತದ ಸಮಗ್ರವಾದ ಆಧುನಿಕೀಕರಣದ ಪ್ರಯತ್ನಗಳನ್ನು ನೋಡುವ ಸಲುವಾಗಿ ನಾವು ಭಾರತಕ್ಕೆ ಬಂದೆವು. ಆದುದರಿಂದ ನಮ್ಮ ಓಡಾಟ ಪ್ರವಾಸಿಗರ ಪಥಗಳಿಂದ ದೂರವಾಗಿತ್ತು. ನಾವು ಅನೇಕ ಜಲವಿದ್ಯುತ್ ಹಾಗೂ ಕೈಗಾರಿಕಾ ಯೋಜನೆಗಳಿಗೆ ಭೇಟಿಯಿತ್ತೆವು. ಭಾಕ್ರ ನಂಗಲ್ ಯೋಜನೆಗಳು, ಆನಂದ ಕೋ-ಆಪರೇಟಿವ ಸೊಸೈಟಿ ಇಂತಹ ಘಟಕಗಳು ನಮ್ಮನ್ನು ಆಕರ್ಷಿಸಿದವು. ಹೈದರಾಬಾದಿಗೆ ಸಮೀಪದ ಪ್ರಾಕ್ಸಿ ವ್ಯವಸಾಯದಂತ ವ್ಯಾವಸಾಯಿಕ ವೈವಿಧ್ಯತೆಯಲ್ಲಿ ನಮಗೆ ಅಪಾರವಾದ ಆಸಕ್ತಿ ಉಂಟಾಯಿತು" ಎಂದಿದ್ದಾರೆ ಲೋಬೆಲ್.

ಭಾರತದ ಆಕರ್ಷಣೆ

"ನಿಮ್ಮನ್ನು ಬಹುವಾಗಿ ಆಕರ್ಷಿಸಿದ ವಸ್ತು ಅಥವ ಸಂಗತಿಯಾವುದು?" ಎಂಬ ಪ್ರಶ್ನೆಗೆ "ಭಾರತದಲ್ಲಿ ಚೈತನ್ಯ ಶಾಲಿಗಳಾದ ತರುಣ ಮೇಧಾವಿಗಳಿದ್ದಾರೆ. ಅವರಿಗೆ ತಮ್ಮ ದೇಶದ ಅಗತ್ಯಗಳೆಂಬುದು ಗೊತ್ತು. ಅದನ್ನು ಸಾಧಿಸಲು ಅವರು ದುಡಿಯುತ್ತಿದ್ದಾರೆ ಎಂಬುದು ಖಚಿತ. ಈ ಪೈಕಿ ಬಹು ಸಮರ್ಥರಾದ ಸ್ತ್ರೀಯರೂ ಅನೇಕರಿದ್ದಾರೆ. ಅವರಿಗೆ ಭಾರತದ ಅಭಿವೃದ್ಧಿಯ ವಿಷಯದಲ್ಲಿ ಉತ್ಕಟವಾದ ಆಸಕ್ತಿಯಿದೆ. ಆದುದರಿಂದ ಭಾರತದ ಗುರಿಯಾವುದೇ ಇರಲಿ, ಅದನ್ನು ಸಾಧಿಸುವುನು ಖಚಿತ ಎಂಬ ನಂಬುಗೆ ನನ್ನದು" ಎಂದು ಲೋಬೆಲ್ ಉತ್ತರಿಸಿದರು.

ಈ ತಂಡವು ಕೇರಳದಲ್ಲಿ ಭೇಟಿಗಾರರು, ಮತ್ಸ್ಯ ಕೈಗಾರಿಕೆಯನ್ನು ಭರದಿಂದ ಬೆಳೆಸುವ ಕಾರ್ಯದಲ್ಲಿ ಉದ್ಯುಕ್ತರಾಗಿರುವ ತರುಣರ ಗುಂಪೊಂದನ್ನು ಭೇಟಿ ಮಾಡಿದರು. ಅವರು ಅತ್ಯಾಧುನಿಕ ರೀತಿಯ ಮತ್ಸ್ಯಗ್ರಹಣ ವಿಧಾನಗಳನ್ನು ಬಳಸುತ್ತಿದ್ದಾರೆ. ಇತರ ಕಡೆಗಳಲ್ಲಿ ಕೂಡ ಸಂದರ್ಶಕರು "ಪ್ರಗತಿಯನ್ನು ಭರದಿಂದ ಸಾಧಿಸಲು ದುಡಿಯುತ್ತಿದ್ದ ಅನೇಕ ತಂಡಗಳನ್ನು" ಭೇಟಿ ಮಾಡಿದರು.

ಕಡಿಮೆ ವೇತನ!

ಶಿಕ್ಷಣದ ಕ್ಷೇತ್ರದಲ್ಲಿ ಭಾರತದ ಭರದ ಬೆಳವಣಿಗೆಗಳನ್ನು ಸಂದರ್ಶಕರು ಮೆಚ್ಚಿಕೊಂಡರು. ಆದರೆ ಉಪಾಧ್ಯಾಯರುಗಳಿಗೆ ಅದರಲ್ಲೂ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳಿಗೆ ಕೊಡುವ ಅಲ್ಪ ಮಟ್ಟದ ವೇತನಗಳ ಪರಿಸ್ಥಿತಿಯನ್ನು ಕಂಡು ಗೊಂದಲಕ್ಕೆ ಈಡಾದರು. "ಪ್ರಾಥಮಿಕ ಶಿಕ್ಷಣ ಬಹು ಮುಖ್ಯವಾದುದು. ಆ ಶಿಕ್ಷಣ ಒಳ್ಳೆಯ ಮಟ್ಟದ್ದಾಗಿರಬೇಕು. ಇಲ್ಲವಾದರೆ ಫಲ ಮರಳಿನ ಮೇಲೆ ಕಟ್ಟಿದ ಮನೆಯಂತೆ ಆಗುವುದು" ಎಂದು ಲೋಬೆಲ್ ಹೇಳಿದರು. ಸಂದರ್ಶಕ ಅಧ್ಯಾಪಕರು ಪಂಚಾಯಿತಿ ವ್ಯವಸ್ಥೆಯ ಸ್ವಾರಸ್ಯಕ್ಕೆ ಮಾರು ಹೋದರು "ಆಡಳಿತದಲ್ಲಿ ಭಾಗವಹಿಸುವ ಜನರ ಸಂಖ್ಯೆ ಬೆಳೆದಂತೆ, ಸರಕಾರದಲ್ಲಿ ತಮ್ಮ ಪಣವೂ ಬಂದಿದೆ ಎಂಬ ಸಂಗತಿಯ ಅರಿವು ಅವರಿಗುಂಟಾಗುವುದು. ಪ್ರಕೃತ ಪಂಚಾಯಿತಿಗಳು, ರಸ್ತೆ ನಿರ್ಮಾಣ ಅಥವಾ ಶಾಲಾ ನಿರ್ಮಾಣಗಳಂತಹ ಸಣ್ಣ ಯೋಜನೆಗಳನ್ನು ಮಾತ್ರವೇ ಕೈಗೊಂಡಿದ್ದರೂ, ಸ್ವಸಹಾಯ ಹಾಗೂ ಸಹಕಾರಗಳ ಗಣನಾರ್ಹ ಪಾಠ ಅವ್ವರಿಂದಲೇ ದೊರೆಯುತ್ತದೆ" ನ್ಯೂಯಾರ್ಕ್ ರಾಜ್ಯದ ಶಾಲೆಗಳಲ್ಲಿ ಪಶ್ಚಿಮೇತರವಾದ ವಿಶೇಷತಃ ಭಾರತದ ಸಂಸ್ಕೃತಿಯ ಅಧ್ಯಯನ ವ್ಯವಸ್ಥೆಗೆ ತಮ್ಮ ಭಾರತದ ಸಂದರ್ಶನದಿಂದ ನೇರವಾದ ಪ್ರಯೋಜನವಿದೆ: ಶಾಲೆಯ ಪಾಠಾವಳಿಯಲ್ಲಿ ಭಾರತವನ್ನು ಕುರಿತ ತೀವ್ರವಾದ ಅಲ್ಪಾವಧಿಯ ಪಾಠಕ್ರಮವನ್ನು ಅಥವಾ ಒಂದು ಟರ್ಮಿನ ಪಾಠ ಕ್ರಮವನ್ನು ಈ ಶಾಲೆಗಳು ಆರಂಭಿಸಬಹುದು" ಎಂದು ಅವರು ಸೂಚಿಸಿದರು.

ಪ್ರತ್ಯಕ್ಷ ದರ್ಶನ

ಈ ಭೇಟಿಯ ಫಲವಾಗಿ ಸೂಕ್ತ ವ್ಯವಸ್ಥೆಯನ್ನು ಏರ್ಪಡಿಸುವ ಭರವಸೆ ತಮ್ಮಲ್ಲಿ ಮೂಡಿದೆ ಎಂದರು. "ಭಾರತವನ್ನು ಕುರಿತು ಬಹುವಾಗಿ ಓದಿದ್ದೆವು. ಆದರೆ ನಾವೇ ಸ್ವತಃ ನೋಡುವುದರಲ್ಲಿ ವ್ಯತ್ಯಾಸವಿದೆ; ಹೆಚ್ಚಿನ ಪ್ರಯೋಜನವಿದೆ. ಉದಾಹರಣೆಗೆ ಭತ್ತದ ಬೆಳೆಯ ವಿಷಯವನ್ನೇ ತೆಗೆದುಕೊಳ್ಳಿ—ಬೆಳೆವ ವಿಧಾನ, ನೆಲದ ಗುಣಮಟ್ಟ, ಮಳೆ ಇತ್ಯಾದಿ ಮುಖ್ಯಾಂಶಗಳ ಪರಿಶೀಲನೆ ಸ್ವಾರಸ್ಯಕರ, ಭತ್ತದ ಗದ್ದೆಗೆ ಹೋದರೇ ಸಾಕು ಹೊಸ ಅನುಭವ ಲಭಿಸುತ್ತದೆ" ಎಂದರವರು.

'ಅಮೆರಿಕದ ಶಾಲಾ ಅಧ್ಯಾಪಕರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಭಾರತಕ್ಕೆ ಬರುವರೇ' ಇವರಿಗೆ ಕೇಳಿದ ಪ್ರಶ್ನೆ.

"ಹಾಗೆಂಬುದು ನನ್ನ ನಂಬುಗೆ. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶ ಅಮೆರಿಕದ ಎಲ್ಲಾ ೫೦ ರಾಜ್ಯಗಳ ಉಪಾಧ್ಯಾಯರುಗಳಿಗೂ ಲಭಿಸಬೇಕೆಂದು ಚೆಸ್ಟರ್ ಬೋಲ್ಸ್ ಹೇಳಿದ್ದಾರೆ. ಹೀಗಾದಾಗ ಭಾರತದ ವಿಷಯದಲ್ಲಿ ಅಮೆರಿಕದ ಮಕ್ಕಳ ಆಸಕ್ತಿ ಹೊಸ ಗಣನಾರ್ಹ ಘಟ್ಟವನ್ನು ಪ್ರವೇಶಿಸುವುದು" ಎಂದರವರು.

ಅಮೆರಿಕೆಯಲ್ಲಿ ಶಿಕ್ಷಣ

"ಹದಿನಾರನೇ ವಯಸ್ಸಿನ ವರೆಗೆ ಶಾಲಾ ಗಮನ ಕಡ್ಡಾಯವಾದುದು. ಶಾಲೆಗಳನ್ನು ಬಹುವಾಗಿ ಶಾಲಾ ಜಿಲ್ಲೆಗಳು ನಡೆಸುತ್ತವೆ; ಉಪಾಧ್ಯಾಯರುಗಳಿಗೆ ಸಂಬಳವನ್ನು ಕೊಡುತ್ತವೆ. ಇದೆಲ್ಲಕ್ಕೂ ಬೇಕಾದ ಹಣವನ್ನು ಸ್ಥಳೀಯ ತೆರಿಗೆಗಳ ಮೂಲಕ ಸಂಗ್ರಹಿಸಿಕೊಳ್ಳುತ್ತವೆ. ರಾಜ್ಯ ಸರಕಾರಗಳೂ ಒಂದಿಷ್ಟು ಸಹಾಯ ನೀಡುತ್ತವೆ. ವೃತ್ತಿ ತರಬೇತಿಯ ಶಾಲೆಗಳಿಗೂ ಮಧ್ಯಾಹ್ನದ ಹೊತ್ತು ಉಚಿತವಾಗಿ ಬಿಸಿ ಉಪಹಾರವನ್ನು ವಿದ್ಯಾರ್ಥಿಗಳಿಗೆ ಒದಗಿಸುವುದಕ್ಕು ಕೇಂದ್ರ ಸರಕಾರ ಸಹಾಯ ಧನ ನೀಡುತ್ತದೆ ಪ್ರತಿ ಶಾಲಾ ಜಿಲ್ಲೆಯಲ್ಲೂ ಒಂದೊಂದು ಶಿಕ್ಷಣ ಮಂಡಳಿ ಇರುತ್ತದೆ. ಈ ಮಂಡಳಿಯ ಸದಸ್ಯರು, ಶೈಕ್ಷಣಿಕರಲ್ಲ, ಜನಸಾಮಾನ್ಯರು. ಈ ಮಂಡಳಿಯ ಮುಖ್ಯ ಕೆಲಸ ಮೇಲ್ವಿಚಾರಣೆ. ನೀತಿಗಳ ನಿರೂಪಣೆ, ಹಣ ಸಂಗ್ರಹಣ ವೆಚ್ಚದ ಮೇಲ್ವಿಚಾರಣೆ ಇವೆಲ್ಲವೂ ಈ ಮಂಡಳಿಗೆ ಸೇರಿದ್ದು. ಶಿಕ್ಷಣದ ಮೇಲ್ವಿಚಾರಣೆಯನ್ನು ಶಾಲೆಗಳ ಸೂಪರಿಂಟೆಂಡೆಂಟರು ನೋಡಿಕೊಳ್ಳುತ್ತಾರೆ ಶಾಲಾ ಶಿಕ್ಷಣ ವ್ಯವಸ್ಥೆ ವಿಸ್ತರಿಸಬೇಕು, ಮಕ್ಕಳು ಹೆಚ್ಚು ಹೆಚ್ಚಾಗಿ ಶಿಕ್ಷಣವನ್ನು ಪಡೆಯಬೇಕು ಎಂಬ ತತ್ವಕ್ಕೆ ಅಮೆರಿಕ ಬದ್ಧ ಎಂಬುದು ಸುಸ್ಪಷ್ಟ. [illegible] ಸೆಕೆಂಡರಿ ಶಿಕ್ಷಣ ಬಹುಮಟ್ಟಿಗೆ ಸರ್ವವ್ಯಾಪಕವಾಗಿದೆ. ಪ್ರೌಢ ಶಿಕ್ಷಣ ಕೂಡ ಜನಪ್ರಿಯವಾಗುತ್ತಿದೆ. ಸೆಕೆಂಡರಿ ಶಿಕ್ಷಣವನ್ನು ಮುಗಿಸುವ ಮಕ್ಕಳಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ಯಾವುದಾದರೂ ಒಂದು ಬಗೆಯ ಕಾಲೇಜು ಅಥವ ತಾಂತ್ರಿಕ ಶಿಕ್ಷಣಕ್ಕೆ ಸೇರುತ್ತಾರೆ" ಎಂದರು ಲೋಬೆಲ್.



ಸುಖ-ದುಃಖ

ಅಭಿನಂದನೀಯ ಪ್ರಧಾನಿ

ಪ್ರಧಾನ ಮಂತ್ರಿ ಲಾಲಬಹದೂರ ಶಾಸ್ತ್ರಿಯವರು ತಮ್ಮ ಮೇಲೆ ಮಾಡಿದ ಅವಿಶ್ವಾಸ ಗೊತ್ತುವಳಿಯ ಧಾಳಿಯಿಂದ ಯಶಸ್ವಿಯಾಗಿ ವಿಜಯಿಯಾದರು. ಇದಕ್ಕಾಗಿ ಅವರನ್ನು ಅಭಿನಂದಿಸುವವರು ಇರಬಹುದು. ಶಾಸ್ತ್ರಿಗಳು ನಿಜಕ್ಕೂ ಅಭಿನಂದನೀಯರು. ಕಾಂಗ್ರೆಸ್ ನಿಚ್ಚಳ ಬಹುಮತವನ್ನು ಲೋಕ ಸಭೆಯಲ್ಲಿ ಪಡೆದಿರುವುದರಿಂದ ಮತ್ತು ಈ ಸದಸ್ಯರು ಒಮ್ಮತದಲ್ಲಿಯೇ ಇರುವುದರಿಂದ ಅವಿಶ್ವಾಸ ಗೊತ್ತುವಳಿಯೊಂದು ನಾಟಕ ಮಾತ್ರ ಈ ಸಂದರ್ಭದಲ್ಲಿ ಶಾಸ್ತ್ರಿಗಳು ತೋರಿದ ಗಂಡುಗಲಿತನಕ್ಕಾಗಿ, ಸರಕಾರದ ಸ್ಥಿರ ನಿಲುಮೆಗಾಗಿ ನಾವು ಅವರನ್ನು ಅಭಿನಂದಿಸಬೇಕು. ಶಾಸ್ತ್ರಿಯವರ ನಾಯಕತ್ವದಲ್ಲಿ ಭಾರತವು ಪ್ರಗತಿ-ಸಮೃದ್ಧಿ ಪಥದಲ್ಲಿ ಮುಂದುವರಿಯುವುದೆಂದು ಲೋಕಸಭೆಯಲ್ಲಿ ನಡೆದ ಚರ್ಚೆ ಸಾರಿ ಹೇಳುತ್ತದೆ. ಇದಕ್ಕಾಗಿ ಶಾಸ್ತ್ರಿಗಳು ಅಭಿನಂದನೀಯರು.

—ನಾಯಕ್ ಪಿ. ಎಸ್.

ಸರಕಾರ—ಹಿಂದೀ ಪ್ರಚಾರ

ಕೆಲವು ತಿಂಗಳುಗಳಿಗೆ ಮೊದಲು ನಿಮ್ಮ ಪತ್ರಿಕೆಯ ಇದೇ ಕಲಂನಲ್ಲಿ ಮೈಸೂರು ಸರಕಾರವು ರಾಜ್ಯದ ಸ್ವಯಂಪ್ರೇರಿತ ಹಿಂದೀ ಪ್ರಚಾರ ಸಂಸ್ಥೆಗಳಿಗೆ ನೀಡಿದ್ದ ಮಾನ್ಯತೆಯನ್ನು ಹಿಂತೆಗೆದು ಈ ವರ್ಷದಿಂದ ತಾನೇ ಹಿಂದೀ ಪರೀಕ್ಷೆಗಳನ್ನು ನಡೆಸಲು ನಿರ್ಧರಿಸಿರುವುದನ್ನು ಆಕ್ಷೇಪಿಸಿದ ಪತ್ರವೊಂದು ಪ್ರಕಟವಾಗಿತ್ತು. ಸರಕಾರದಿಂದ ಹಿಂದೀ ಪ್ರಚಾರದ ಕಾರ್ಯವು ಒಳ್ಳೇ ರೀತಿಯಲ್ಲಿ ನಡೆಯಲಿಕ್ಕಿಲ್ಲವೆಂಬುದಕ್ಕೆ ಇದುವರೆಗೂ ಅದು ನಿರ್ದಿಷ್ಟ ನಿಲುಮೆ ತಳೆಯದುದೇ ಸಾಕ್ಷಿ. ಅದರ ಯೋಜನೆಯಂತೆ ಇದೇ ದಶಂಬರದಲ್ಲಿ ಪರೀಕ್ಷೆಗಳು ನಡೆಯಬೇಕು. ಪಠ್ಯ ಪುಸ್ತಕಗಳ ರಚನೆಯೇ ಮೊದಲಾದ ಕೆಲಸಗಳು ನಡೆದಂತೆ ತೋರುವುದಿಲ್ಲ. ಆದುದರಿಂದ ನಮ್ಮ ಸರಕಾರ ಹೊಸತಕ್ಕೆ ಕೈಹಾಕುವುದನ್ನು ಬಿಟ್ಟು ಇದ್ದುದನ್ನೇ ಚಲೋರೀತಿಯಲ್ಲಿ ಮುಂದುವರಿಸಿದರೆ ಒಳ್ಳೆಯದು.

— ಸುಧಾಕರ ರಾವ್.

ಅಕ್ಕಿಯ ಅಭಾವ ಧಾರಣೆ

ಸರಕಾರವು ಅಕ್ಕಿಯ ಬೆಲೆಯನ್ನು ಗೊತ್ತು ಮಾಡಿದಂದಿನಿಂದ ಅಕ್ಕಿಯೇ ಸಿಗದಂತಾಗಿದೆ ತನ್ನೊಡನೆ ಸಾಕಷ್ಟು ಸಂಗ್ರಹವಿದೆಯೆಂದು ಹೆದರಿಸುವ ಸರಕಾರವು ತನ್ನ ಸಂಗ್ರಹವನ್ನು ಬಿಡುಗಡೆಗೊಳಿಸಿ ನ್ಯಾಯ ಬೆಲೆಯಲ್ಲಿ ಎಲ್ಲ ನಾಗರಿಕರಿಗೆ ಸಿಗುವಂತೆ ಸರಿಯಾದ ಏರ್ಪಾಡನ್ನು ಮಾಡಲು ಹಿಂಜರಿಯಬಾರದು. ಸರಕಾರವು ಈಗ ತಳೆದ ನೀತಿಯು ಅಕ್ಕಿಯ ಕೃತಕ ಕೊರತೆ ಮತ್ತು ಬ್ಲಾಕ್ ಮಾರ್ಕೆಟ್ ಪದ್ಧತಿಯನ್ನೇ ಪ್ರೋತ್ಸಾಹಿಸುವಂತಿದೆ. ಇದರಿಂದ ಪ್ರಜೆಗಳಿಗೆ ಹೇಳಲಾಗದ ಅನ್ಯಾಯ-ಕಷ್ಟ ಪರಂಪರೆಗಳುಂಟಾಗುತ್ತವೆ

—ಮಹಾಬಲ ಶೆಟ್ಟಿ

ಕೃಷಿಕ ಕ್ಷೇತ್ರ

ಧಾನ್ಯಗಳ ಬೋರ್ಡು ರಚನೆಯಾಗಲಿ

ಭಾರತದಲ್ಲಿ ಆಹಾರಾಭಾವವು ಕಾಣಿಸಿಕೊಂಡದ್ದು ಇಂದು ನಿನ್ನೆಯಲ್ಲ. ಇದನ್ನು ನೀಗಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಪ್ರಯತ್ನಮಾಡುತ್ತಿರುವುದೂ ಇತ್ತೀಚೆಗಿನ ಸುದ್ದಿಯಲ್ಲ. ೧೯೪೩ರಲ್ಲಿಯೇ 'ಹೆಚ್ಚು ಆಹಾರ ಬೆಳೆಯಿರಿ' ಚಳವಳವು ಅಂದಿನ ಬ್ರಿಟಿಷ್ ಇಂಡಿಯಾ ಸರಕಾರದಿಂದ ಪ್ರಾರಂಭವಾಗಿತ್ತು. ೧೯೪೭ರ ಅನಂತರವೂ ಇದು ಮುಂದುವರಿಯಿತು. ೧೯೫೦—೫೧ರಲ್ಲಿ ಸಾಮೂಹಿಕ ಉತ್ಪಾದನಾ ಕಾರ್ಯಕ್ರಮವೂ ೧೯೫೩ರಲ್ಲಿ ಜಪಾನೀ ಮಾದರಿಯ ಕೃಷಿ ಪದ್ಧತಿಯೂ ಭಾರತದಲ್ಲಿ ಪ್ರಚಾರಕ್ಕೆ ಬಂದುವು. ಇತ್ತೀಚೆಗೆ ಆಹಾರ ಮಂಡಳಿಯೂ ಆಹಾರದ ಬಿಕ್ಕಟ್ಟಿಗೆ ಸಂಬಂಧಿಸಿ ಕೆಲವು ಸಿಫಾರಸುಗಳನ್ನು ಮಾಡಿದೆ. ಭೂಸುಧಾರಣೆಯಾಗಲೀ ಕಾಗದ ಪತ್ರಗಳ ಯೋಜನೆಯಾಗಲೀ ಪರಿಸ್ಥಿತಿಯನ್ನು ಸುಧಾರಿಸಲು ಸಮರ್ಥವಾಗಿಲ್ಲವೆಂಬುದು ನಮ್ಮ ಅನುಭವ. ಭಾರತದಲ್ಲಿ ಬಹು ಸಂಖ್ಯಾಕರು ಅಕ್ಕಿಯನ್ನೇ ಉಪಯೋಗಿಸುವುದರಿಂದ ಸಾಮಾನ್ಯ ೫೦ ಲಕ್ಷ ಟನ್‌ಗಳಷ್ಟು ಧಾನ್ಯವನ್ನು ಸರಕಾರ ಕೊರತೆ ಪೂರೈಕೆಗಾಗಿ ಸಂಗ್ರಹಿಸಬೇಕಾಗಬಹುದು.

ಸ್ವಾತಂತ್ರ್ಯ ದೊರೆತ ವೇಳೆ ಸ್ವಾಭಾವಿಕವಾಗಿ ಉಳಿಕೆಯ ರಾಜ್ಯಗಳಾಗಿದ್ದ ಸಿಂಧ, ಪಂಜಾಬಿನ ಪಶ್ಚಿಮ ಭಾಗ ಮತ್ತು ಬಂಗಾಳದ ಕಣಿವೆಯ ಪ್ರದೇಶವು 'ಭಾರತ'ದಿಂದ ಪ್ರತ್ಯೇಕವಾಯಿತು. ಇವು ಕಾಲುವೆ ನೀರ ಪೂರೈಕೆಯಿಂದ ಅಧಿಕ ಗೋಧಿಯನ್ನು ಬೆಳೆಸುತ್ತಿದ್ದುವು. ಬರ್ಮಾವು ಭಾರತದಿಂದ ಬೇರ್ಪಟ್ಟಂದಿನಿಂದ ಅಕ್ಕಿಯ ಕೊರತೆಯೂ ವಿಪರೀತವಾಯಿತು. ಭಾರತದಲ್ಲಿ ಬೆಳೆಯುವ ಧಾನ್ಯಗಳ ಪ್ರಮಾಣವೂ ಇತರ ದೇಶಗಳೊಡನೆ ತುಲನೆ ಮಾಡಿದರೆ ಬಹಳ ಕಡಿಮೆ. ಇಲ್ಲಿ ಒಂದು ಎಕ್ರೆಯಲ್ಲಿ ೭೫೦ ರಾತಲು ಬೆಳೆದರೆ, ಜಪಾನದಲ್ಲಿ ೩,೫೦೦ ರಾತಲು, ಚೀನಾದಲ್ಲಿ ೨,೪೦೦ ರಾತಲು, ಈಜಿಪ್ತದಲ್ಲಿ ೩,೦೦೦ ರಾತಲು, ಅಮೆರಿಕೆಯಲ್ಲಿ ೨,೦೦೦ ರಾತಲು ಬೆಳೆಯುತ್ತದೆ. ವೈದಿಕ ಕಾಲದ ವ್ಯವಸಾಯ ಕ್ರಮ, ತನ್ನ ಕಾರ್ಯದಲ್ಲಿ ರೈತನಿಗಿರುವ ನಿರುತ್ಸಾಹ, ವೈಜ್ಞಾನಿಕ ವಿಧಾನಗಳ ಅನಭಿಜ್ಞತೆಗಳೇ ನಮ್ಮ ಅಲ್ಪ ಉತ್ಪತ್ತಿಗೆ ಮೂಲ ಕಾರಣಗಳು.

ಕೊರತೆಯನ್ನು ತುಂಬಲು ವಿದೇಶಗಳಿಂದ ಆಯಾತ ಮಾಡುವ ಕ್ರಮ ನಮಗೆ ಹಿತಕರವಲ್ಲ. ಇಂಗ್ಲೆಂಡದಂತಹ ಉದ್ಯಮ ಪ್ರಧಾನವಾದ ಕೃಷ್ಯುತ್ಪತ್ತಿಯನ್ನು ಹೆಚ್ಚಿಸಲು ಏನೇನೂ ಸಾಧ್ಯವಿಲ್ಲದ ದೇಶಗಳಿಗೆ ಮಾತ್ರ ಇದು ಹೇಳಿಸುವಂತಹುದು. ನಮಗಿದು ವಿದೇಶ ವಿನಿಮಯದ ಮೇಲೆ ದುಷ್ಪರಿಣಾಮ ಬೀರುವ, ನಮ್ಮ ಕೃಷಿ ಕ್ಷೇತ್ರಕ್ಕೇನೇ ಅಪಮಾನಕಾರಕವಾದ ಕೃತ್ಯ. ಇತರ ಎಲ್ಲ ದೇಶಗಳಿಗಿಂತಲೂ ಕೃಷಿಯೋಗ್ಯವಾದ ಭೂಮಿಯ ಪ್ರಮಾಣ ಭಾರತದಲ್ಲಿ ಹೆಚ್ಚಿದೆ. ಆಸ್ಟ್ರೇಲಿಯಾ ಮತ್ತು ಬ್ರೆಜಿಲ್‌ಗಳಲ್ಲಿ ವಿಸ್ತೀರ್ಣದಲ್ಲಿ ಸೇ. ೨.೫ ರಷ್ಟು ಮಾತ್ರ ಇಂತಹ ಭೂಮಿಯಿದೆ. ಈ ಪ್ರಮಾಣವು ಕೆನೆಡಾದಲ್ಲಿ ಸೇ. ೪, ಚೀನಾ, ರಶ್ಯ ಮತ್ತು ಅರ್ಜೆಂಟೀನಾದಲ್ಲಿ ಸೇ. ೯ ರಿಂದ ೧೧, ಅಮೆರಿಕೆಯಲ್ಲಿ ಸೇ. ೨೫ ಇದ್ದರೆ, ನಮ್ಮ ದೇಶದಲ್ಲಿ ಸೇ. ೪೫ರಷ್ಟಿದೆ. ಹಿರಾಕುಡ್, ಬಾಕ್ರಾನಂಗಲ್ ಮೊದಲಾದ ನೀರಾವರಿ ಯೋಜನೆಗಳು ಈಗಾಗಲೇ ನೀರಾವರಿಗೊಳಪಟ್ಟ ಭೂಮಿಗೆ ಮತ್ತಷ್ಟು ನೀರನ್ನೊದಗಿಸುತ್ತವೆ. ನೀರಾವರಿಗೆ ಹೊಸತಾಗಿ ಒಳಪಡಿಸಲ್ಪಡುವ ಭೂಭಾಗವು ಮಿತ ಪ್ರಮಾಣದಲ್ಲಿಯೇ ಇವೆ. ಆದುದರಿಂದಲೇ ಈ ಯೋಜನೆಗಳು ನಮ್ಮ ಸಮಸ್ಯಾ ಪರಿಹಾರಕ್ಕೆ ಸಾಕಷ್ಟು ನೆರವು ನೀಡುತ್ತಿಲ್ಲ. ಹಾಗಾಗಿ ನಮ್ಮ ಉತ್ಪಾದನೆಯನ್ನು ಹೆಚ್ಚಿಸಲು ನಮಗಿರುವ ಮಾರ್ಗ ಒಂದೇ ಒಂದು ಅಧಿಕ ಶ್ರಮದಿಂದ ಅಧಿಕ ಉತ್ಪಾದನೆಯನ್ನು ತೆಗೆಯುವುದು. ಇದಕ್ಕೆ ಮಳೆಯ ನೀರನ್ನೇ ನಂಬಿ ಕುಳಿತರೆ ಪ್ರಯೋಜನವಿಲ್ಲ. ಏಕೆಂದರೆ, ಅತಿವೃಷ್ಟಿ ಅನಾವೃಷ್ಟಿಗಳು ಮಾತ್ರವಲ್ಲ ಅಕಾಲ ವೃಷ್ಟಿಯೂ ನಮ್ಮ ಕಲ್ಪನಾ ಸಾಮ್ರಾಜ್ಯವನ್ನು ಉರುಳಿಸಿಬಿಡಬಲ್ಲವು. ಆದುದರಿಂದ ಆವಶ್ಯಕತೆ ತಲೆದೋರಿದಾಗ ಆವಶ್ಯವಾದ ನೀರಿನ ಪೂರೈಕೆ, ಉತ್ತಮ ಬೀಜಗಳ ಆಯ್ಕೆ ಮತ್ತು ಅಗತ್ಯಬೀಳುವ ಗೊಬ್ಬರಗಳ ಒದಗ — ಇವು ಮೂರು ಪ್ರಮುಖ ಪಾತ್ರ ವಹಿಸುವಂತಾಗಬೇಕು. ನದೀ ಮಂಡಲಗಳ ನೀರಾವರಿ ಕಾಲುವೆಗಳಿರುವ ಪ್ರದೇಶಗಳಲ್ಲಿ ಈ ಬಗೆಯ "ಅಧಿಕ ಶ್ರಮ"ದ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು ಸಾಧ್ಯವಿದೆ.

ಈಗ ಕಾಫಿಬೋರ್ಡು ಇರುವಂತೆ 'ಆಹಾರಧಾನ್ಯಗಳ ಬೋರ್ಡು' ಒಂದನ್ನು ಸ್ಥಾಪಿಸಿ ಅದರ ಮೂಲಕ ಈ ಗುರಿಯನ್ನು ಮುಟ್ಟುವುದು ಸಾಧ್ಯ. ವೈಜ್ಞಾನಿಕ ಶಿಕ್ಷಣ ಪಡೆದ ಕೃಷಿ ಕರ್ಮಿಯ ನೇತೃತ್ವದಲ್ಲಿ ಇದನ್ನು ಸ್ಥಾಪಿಸಬಹುದು. ಸಾಮಾನ್ಯವಾಗಿ ಒಂದು ಲಕ್ಷ ಎಕ್ರೆಯ ವಿಸ್ತೀರ್ಣಕ್ಕೆ ಇಂತಹ ಒಂದೊಂದು ಬೋರ್ಡನ್ನು ರಚಿಸಬಹುದು. ಇದು ರೈತನಿಗೆ ವೈಜ್ಞಾನಿಕ ವ್ಯವಸಾಯ ಪದ್ಧತಿಯನ್ನು ಕಲಿಸಿಕೊಡಬೇಕು. ಆತನಿಗೆ ಉತ್ತಮ ತಳಿಯ ಬೀಜ, ರಾಸಾಯನಿಕ ಗೊಬ್ಬರ ಮೊದಲಾದವುಗಳನ್ನು ಪೂರೈಸಬೇಕು. ಅಗತ್ಯ ಬಿದ್ದಲ್ಲಿ ಆರ್ಥಿಕ ಮುಂಗಡವನ್ನೂ ನೀಡಬೇಕು. ವರ್ತಕರ—ಸಾಹುಕಾರರ ಕಪಿ ಮುಷ್ಟಿಯಿಂದ ರೈತನನ್ನು ಸಂಪೂರ್ಣ ಬಿಡುಗಡೆ ಮಾಡಬೇಕು. ತಾನು ನೀಡಿದ 'ಸಹಾಯ'ವು ಯಥಾ ಯೋಗ್ಯವಾಗಿ ಉಪಯೋಗಿಸಲ್ಪಟ್ಟಿದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಬೇಕು. ತಾಲೂಕು ತಾಲೂಕುಗಳಲ್ಲಿ ಬೋರ್ಡು ತನ್ನ ಶಾಖೆಯನ್ನು ತೆರೆಯಬಹುದು. ಭತ್ತದ ಮೂಲ ಬೆಲೆಯನ್ನು ಇದು ನಿರ್ಧರಿಸಬೇಕು. ಹೀಗೆ ಬೆಲೆ ನಿರ್ಧರಿಸುವಾಗ ಅದರ ಉತ್ಪತ್ತಿ ಕಾರ್ಯದಲ್ಲಿ ತಗಲಿದ ವೆಚ್ಚವನ್ನು ಗಮನದಲ್ಲಿಟ್ಟುಕೊಳ್ಳಬೇಕು. ರೈತನ ಉಪಯೋಗಕ್ಕೆ ಬೇಕಾದಷ್ಟು ಧಾನ್ಯಗಳನ್ನು ಆತನಿಗೆ ಬಿಟ್ಟು ಉಳಿದುದನ್ನು ತಾನೇ ಕೊಂಡುಕೊಳ್ಳಬೇಕು.

ಕೊಂಡುಕೊಂಡ ಭತ್ತವನ್ನು ಅಕ್ಕಿಯಾಗಿಸಿ, ಕೂಡಿಸಿಟ್ಟುಕೊಳ್ಳಬೇಕು. ಹೀಗೆ ಮಾಡುವುದರಿಂದ ರೈತನಿಗೆ ಕೃಷಿಗೆ ಬೇಕಾದ ಸಂಪೂರ್ಣ ಸಹಾಯವು ನಿರಾತಂಕವಾಗಿ ದೊರೆಯುವುದು. ಆತನ ಉತ್ಪತ್ತಿಗೆ ನ್ಯಾಯವಾದ ಬೆಲೆಯೂ ಸಿಕ್ಕುವುದು. ಕಾಫಿ ಬೋರ್ಡಿನ ಕಾರ್ಯ ವಿಧಾನಗಳಿಂದ ಕಾಫಿಯ ಉತ್ಪತ್ತಿಯನ್ನು ಹೆಚ್ಚಿಸುವುದು ಸಾಧ್ಯವಾಗಿರುವಾಗ, ಈ ಆಹಾರ ಧಾನ್ಯಗಳ ಬೋರ್ಡು ಕೂಡ ಯಶಸ್ವಿಯಾಗಲಾರದೇಕೆ?

ನಮ್ಮ ರೈತರಿಂದು ಕೃಷಿಯಲ್ಲಿ ಹೆಚ್ಚಿನ ಉತ್ಸಾಹ ತೋರುವುದಿಲ್ಲವೆನ್ನಲಾಗುತ್ತಿದೆ. ಇದಕ್ಕೆ ಕಾರಣವಿಲ್ಲದಿಲ್ಲ. ಆತನಿಂದು ಕೆಲವೊಂದು ವ್ಯಕ್ತಿಗಳ ಹಂಗಿನಲ್ಲಿಯೇ ಇರಬೇಕಾಗಿದೆ. ಆತನಿಗೆ ನೀರೂ ಜೋಡು ಇತ್ಯಾದಿ ಆವಶ್ಯಕ ಸಾಧನಗಳು ಸರಿಯಾಗಿಲ್ಲ. ಕೃಷಿ ಪದ್ಧತಿ, ಹಾಕುವ ಗೊಬ್ಬರ ಪರಿಷ್ಕೃತವಾಗಿಲ್ಲ. ಮುಖ್ಯವಾಗಿ ಆವನ ಬೆಳೆಗೆ ನ್ಯಾಯವಾದ ಬೆಲೆ ದೊರೆಯುವುದೇ ಇಲ್ಲ. ಆಹಾರ ಧಾನ್ಯಗಳ ಬೋರ್ಡೊಂದು ಆತನಿಗೆ ಈ ಎಲ್ಲ ವಿಷಯಗಳಲ್ಲಿ ನೆರವಾದರೆ, ಶ್ರಮಕ್ಕೆ ತಕ್ಕ ಪ್ರತಿಫಲ, ದುಡಿಮೆಗೆ ನೆರವು, ಮಾರ್ಗದರ್ಶನ ಮೊದಲಾದುವು ಕ್ರಮವತ್ತಾಗಿ ಸಿಗುವಾಗ ಆತನೇಕೆ ಹಿಂದುಳಿಯುತ್ತಾನೆ?

ಆಹಾರ ಧಾನ್ಯಗಳ ವಿಷಯವನ್ನು ಲಘುವಾಗಿ ತಿಳಿಯುವ ಕಾಲವಿದಲ್ಲ. ಈ ರಂಗದಲ್ಲಿ ಕ್ರಾಂತಿಕಾರಿ ಪರಿವರ್ತನೆಯಾದರೆ ಮಾತ್ರ ಅಧಿಕ ಅನ್ನ ಬೆಳೆದೀತು; ನಾವು ಉಳಿದೇವು.

ಕೇಂದ್ರ ಸರಕಾರವು ಯೋಜಿಸಿರುವ ಆಹಾರ ಧಾನ್ಯಗಳ ಕಾರ್ಪೊರೇಶನ್‌ನ ಕಾರ್ಯ ವಿಧಾನವಿನ್ನೂ ಸರಿಯಾಗಿ ತಿಳಿದಿಲ್ಲ. ಇಲ್ಲಿ ಸೂಚಿಸಲಾದ ಬೋರ್ಡ್ ಮಾಡಬಹುದಾದ ಎಲ್ಲ ಕೆಲಸಗಳನ್ನೂ ಈ ಕಾರ್ಪೊರೇಶನ್ ಮಾಡುವುದಾದರೂ ಚಿಂತೆಯಿಲ್ಲ; ಅಥವಾ ಕಾರ್ಪೊರೇಶನಿನ ಅಂತರ್ಗತವಾಗಿ ಇಂತಹ ಬೋರ್ಡ್‌ಗಳನ್ನು ರೂಪಿಸಿದರೂ ಸರಿಯೇ.

ಆಹಾರದ ಅಭಾವ ರಾಷ್ಟ್ರೀಯತೆಗೊಂದು ಕಳಂಕ; ಆಹಾರವನ್ನೂ ಅದನ್ನು ಬೆಳೆಯುವ ರೈತನನ್ನೂ ರಕ್ತ ಹೀರುವ ವರ್ತಕರ ಕೈಗೊಪ್ಪಿಸಿ ಕೊಡುವುದು ಅನ್ಯಾಯ ಮತ್ತು ಅಭಾವದ ಪರಮಾವಧಿಯೆಂಬುದನ್ನು ಇಂದಿನ ಪರಿಸ್ಥಿತಿ ತೋರಿಸಿ ಕೊಟ್ಟಿದೆ. ಇದನ್ನು ನಾವು ಮರೆಯುವಂತಿಲ್ಲ.

In the Court of the Civil Judge of South Kanara Mangalore.

R. E. P. No. 182 of 1963.
In O. S. No. 87 of 1954.

Between:
Thonse Gopalkrishna Pai ... Petitioner. (D 1)
and
Gulabi Shedthi ... . Respondent. (P2)

To Respondent:
Gulabi Shedthi,
wife of K. Bhujanga Shetty,
residing at Varambally village
Udipi Taluk Brahmavar Post.

Please take notice that the above R. E. P. filed against you is posted to 28th October 1964 for your appearance. If you fail to appear at 11 a. m. on that date, the matter will be decided in your absence.

(By order of Court)
M. Aunappa Kamath.
Advocate for Petitioner.

ನವಯುಗದ ವಾಚಕರಿಗೆ
ಇನ್ನೊಂದು ವಿಶೇಷ ಸಂಚಿಕೆ—
ಎಂದಿನಂತೆ ಪ್ರಕಟವಾಗುವ
ದೀಪಾವಳಿ ವಿಶೇಷಾಂಕ
ವೈವಿಧ್ಯಪೂರ್ಣ ಲೇಖನ, ಕವನ, ಕಥೆಗಳೊಂದಿಗೆ
ತಾ. 29-10-64ಕ್ಕೆ ಪ್ರಕಟವಾಗುವುದು.
ಕರ್ನಾಟಕದ ಎಲ್ಲಾ ಕಡೆಗಳಲ್ಲೂ ಮುಂಬಯಿಯಲ್ಲೂ ವಿಶೇಷ ಪ್ರಸಾರವಾಗುವ ಈ ಸಂಚಿಕೆಯು
ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.
ದರಗಳಿಗೆ ಬರೆಯಿರಿ:
ಮೆನೇಜರ್, ನವಯುಗ, ಉಡುಪಿ.
ಚಿಕ್ಕ—ಚೊಕ್ಕ ಲೇಖನಗಳನ್ನು ಆಮಂತ್ರಿಸಲಾಗಿದೆ.

ವಿಜ್ಞಾನ ವಿಸ್ಮಯ

ಹಾಲಿವುಡ್ಡಿಗೂ ಎದುರುಂಟು!

ಯುರೋಪಿನಲ್ಲಿಯೇ ಅತ್ಯಾಧುನಿಕವಾದ ಸ್ಟುಡಿಯೋ ಎಂದರೆ ಪಶ್ಚಿಮ ಜರ್ಮನಿಯ ಹ್ಯಾಂಬರ್ಗಿನಲ್ಲಿರುವ "ಸ್ಟುಡಿಯೋ ಹ್ಯಾಂಬರ್ಗ್" ಎಂಬುದು. ಇದರಲ್ಲಿ ಚಲಚ್ಚಿತ್ರಗಳಿಗೂ, ಟೆಲಿವಿಷನ್ನಿಗೂ ಚಿತ್ರೀಕರಣ ನಡೆಸಬಹುದು. ಇಲ್ಲಿಯ ವಿದ್ಯುಚ್ಛಾಲವು ಸ್ವಯಂಚಾಲಿತವಾಗಿರುವುದರಿಂದ ಉಳಿದೆಡೆಗಳಲ್ಲಿ ಚಿತ್ರೀಕರಣ ಮಾಡುವ ವೆಚ್ಚದಲ್ಲಿ ಶೇಕಡಾ ೫೦ರಷ್ಟನ್ನು ಇಲ್ಲಿ ಉಳಿತಾಯ ಮಾಡಬಹುದಾಗಿದೆ.

ಟೆಲಿವಿಷನ್ನಿನ ಉಗಮದಿಂದಾಗಿ ಸಿನಿಮಾ ಉದ್ಯಮಕ್ಕೆ ಭಾರಿ ಪೆಟ್ಟು ಬಿದ್ದಂತಾಗಿದೆ—ಎಂದು ಹಲವಾರು ದೇಶಗಳು ಹೇಳಿವೆ ಇದನ್ನು ಸಮರ್ಥಿಸುನಂತೆ ಪಶ್ಚಿಮ ಜರ್ಮನಿಯಲ್ಲಿಯೂ ೧೯೫೮—೫೯ರಲ್ಲಿ ಚಿತ್ರೋದ್ಯಮವು ಟೆಲಿವಿಷನ್ನಿನ ಆಗಮನದಿಂದ ಮೂಲೆಗೊತ್ತರಿಸಲ್ಪಟ್ಟಿತ್ತು. ವರ್ಷದಲ್ಲಿ ನೂರಾರು ಚಿತ್ರಗಳು ತಯಾರಾಗುತ್ತಿದ್ದುದು ಕನಸಿನ ಮಾತಾಗಿ ನಾಲ್ಕೈದು ಚಿತ್ರಗಳು ತಯಾರಾಗುವುದೇ ಮಹಾ ಪ್ರಯಾಸವೆನಿಸಿತು. ಯಾವ ಸ್ಟುಡಿಯೋಗೆ ತೆರಳಿದರೂ ಸಿನೆಮಾ ಚಿತ್ರೀಕರಣಕ್ಕೆ ಸ್ಥಳದೊರಕುತ್ತಿರಲಿಲ್ಲ. ಪರಿಸ್ಥಿತಿಯನ್ನು ಇದೇ ರೀತಿ ಮುಂದುವರೆಯಲು ಬಿಟ್ಟರೆ, ಸಿನೆಮಾ ಕೈಗಾರಿಕೆಯೇ ನಶಿಸಿ ಹೋದೀತೆಂದು ಪ್ರಖ್ಯಾತ ಚಲಚಿತ್ರೋದ್ಯಮಿಯಾದ ಗ್ಯೂಲಾ ಟ್ರೆಬಿಷ್ ಎಂಬುವರು ಸಿನೆಮಾ ಹಾಗೂ ಟೆಲಿವಿಷನ್‌ಗಳೆರಡನ್ನೂ ಚಿತ್ರೀಕರಿಸಬಹುದಾದಂತಹ ಒಂದು ಹೊಸ ಸ್ಟುಡಿಯೋವನ್ನು ಹ್ಯಾಂಬರ್ಗಿನಲ್ಲಿ ಸ್ಥಾಪಿಸಿದರು.

ಈ ಸ್ಟುಡಿಯೋ ಹ್ಯಾಂಬರ್ಗನ್ನು ಸಾಮಾನ್ಯವಾಗಿ ಸ್ಟುಡಿಯೋ ನಗರವೆಂದೇ ಕರೆಯುತ್ತಾರೆ. ಅಷ್ಟು ದೊಡ್ಡದಾಗಿದೆ. ಈ ಸ್ಟುಡಿಯೋ, ಹಾಲಿವುಡ್ಡಿನ ಯಾವುದೇ ಸ್ಟುಡಿಯೋವಿನೊಂದಿಗೂ ಪೋಟಿಯಿಡುವಷ್ಟು, ನವೀನ ರೀತಿಯಲ್ಲಿ ಸುಸಜ್ಜಿತವಾಗಿರುವ ಈ ಸ್ಟುಡಿಯೋ ಅತ್ಯಾಧುನಿಕ ಯಂತ್ರಗಳಿಂದ ಕೂಡಿದೆ.

ಇಲ್ಲಿ ೩೦೦ರಿಂದ ೧೦೦೦ ಚದರ ಗಜಗಳ ವಿಸ್ತೀರ್ಣವಿರುವ ಹತ್ತು ಚಿತ್ರ ನಿರ್ಮಾಣ ವಿಭಾಗಗಳಿವೆ ಇವೆ ಅಲ್ಲದೆ ಎರಡು ಸಂಗೀತವನ್ನು ರಿಕಾರ್ಡ್ ಮಾಡುವ ವಿಭಾಗಗಳೂ ಇವೆ. ಸೆಟ್ಟಿಂಗ್‌ಗಳನ್ನು ಜೋಡಿಸುವ ಭಾಗಗಳನ್ನೂ, ರಂಗಸಜ್ಜಿಕೆಗೆ ಬೇಕಾಗುವ ಸಾಮಾನುಗಳನ್ನೂ ತಯಾರಿಸುವ ವಿಭಾಗವೂ ಇಲ್ಲಿದೆ. ಸ್ವಯಂಚಾಲಿತ ಯಂತ್ರಗಳಿಗೆ ಇಲ್ಲಿ ಮುಖ್ಯ ಆದ್ಯತೆಯನ್ನು ನೀಡಲಾಗಿದೆ: ಒಂದು ಸೆಟ್ಟಿಗೆ ಸಂಬಂಧಪಟ್ಟ ದೃಶ್ಯಗಳ ಚಿತ್ರೀಕರಣವು ಸಾಗುತ್ತಿರುವಾಗಲೇ ಮುಂದಿನ ಸೆಟ್ಟಿನ ಚಿತ್ರೀಕರಣಕ್ಕೆ ಬೇಕಾದ ತಯಾರಿಗಳನ್ನು ಇಲ್ಲಿ ಮಾಡಿಕೊಳ್ಳಬಹುದು. ಚಿತ್ರಕ್ಕೆ ಬೇಕಾದ ವಸ್ತುಗಳನ್ನೆಲ್ಲಾ ಇಲ್ಲಿಯೇ ತಯಾರು ಮಾಡಿಟ್ಟು ಬೇಕೆಂದಾಗ ಅವುಗಳನ್ನು ಜೋಡಿಸಿ ಬಳಸಿಕೊಳ್ಳಬಹುದು.

ಈ ಸ್ಟುಡಿಯೋದಲ್ಲಿರುವ ವಿದ್ಯುಚ್ಛಾಲವು ಸ್ವಯಂಚಾಲಿತವಾಗಿರುವುದರಿಂದ ಇದನ್ನು ನಿಯಂತ್ರಿಸಲು ಹೆಚ್ಚು ಸಿಬ್ಬಂದಿಯ ಅವಶ್ಯಕತೆಯೇ ಇಲ್ಲ. ಕೇವಲ ನಾಲ್ಕೇ ಮಂದಿ ಸಾಕು. ಸೆಟ್ಟಿನ ಮೇಲಿರುವ ಈ ಸಿಬ್ಬಂದಿಯ ಮುಖ್ಯಸ್ಥನು ನಿರ್ದೇಶಕನ ಆದೇಶದ ಮೇಲೆ ಮೈಕ್ರೋಫೋನಿನ ಮೇಲೆ ಸೂಚನೆಗಳನ್ನು ನೀಡುತ್ತಾನೆ. ಸ್ವಯಂಚಾಲಿತ ಯಂತ್ರವನ್ನು ನಿಯಂತ್ರಿಸುವವನ ಕೊಠಡಿಯು ಸ್ಟುಡಿಯೋದ ಯಾವುದೋ ಮೂಲೆಯಲ್ಲಿದೆ. ಅವನು ಅಲ್ಲಿನ ಕೆಲವು ಗುಂಡಿಗಳನ್ನು ಅಮುಕುವುದರಿಂದ ಬೇಕಾದ ದೀಪಗಳು ಆರಿ ಹತ್ತುವುವು. ಎಲ್ಲವೂ ಕಣ್ಣಿವೆಗಳನ್ನು ಮುಚ್ಚಿ ತೆರೆಯುವಷ್ಟರಲ್ಲಿ ನಡೆಯುತ್ತವೆ.

ಚಿತ್ರೀಕರಣಕ್ಕೆ ಸಂಬಂಧಪಟ್ಟ ಈ ಎಲ್ಲಾ ಕಾರ್ಯಗಳೂ ಸ್ಟುಡಿಯೋದಲ್ಲಿ ಅದೂ ಇಷ್ಟು ಶೀಘ್ರವಾಗಿ ನಡೆಯುವುದರಿಂದ, ಬೇರೆ ಕಡೆಗಳಲ್ಲಿ ಚಿತ್ರ ತೆಗೆಯುವಾಗ ತಗುವ ವೆಚ್ಚದಲ್ಲಿ ಶೇಕಡಾ ಇಪ್ಪತ್ತೈದರಷ್ಟನ್ನು ಮಿಗಿತಾಯ ಮಾಡಬಹುದ. ಕ್ಯಾಮರಾ ಕೆಲಸ ಮಾಡುವುದೂ ವಿದ್ಯುಚ್ಛಕ್ತಿಯ ಸಹಾಯದಿಂದಲೇ. ಇಲ್ಲಿ ಮೂರು ಅತಿ ಶಕ್ತಿಯುತವಾದ ಕ್ಯಾಮರಾಗಳು ಯಾವ ಎಡೆ ತಡೆಗಳೂ ಇಲ್ಲದೆ ಕೆಲಸ ಮಾಡುತ್ತವೆ. ಇದೇ ಕ್ಯಾಮರಾಗಳಿಂದ ಟೆಲಿವಿಷನ್ ಚಿತ್ರೀಕರಣವೂ ನಡೆಯುತ್ತದೆ.

ಈ ಸ್ಟುಡಿಯೋದಲ್ಲಿರುವ ಅತಿ ತೀಕ್ಷ್ಣವಾದ ದೀಪಗಳಿಗಾಗಿಯೇ ೩೦ ಲಕ್ಷ ಮಾರ್ಕುಗಳನ್ನು ವೆಚ್ಚ ಮಾಡಲಾಗಿದೆ ಇಲ್ಲಿ ೪,೦೦,೦೦೦ ಲೀಟರ್ ನೀರು ಹಿಡಿಸುವ ಈಜುವ ಕೊಳವಿದ್ದು ಇದರ ನಾಲ್ಕು ಗೋಡೆಗಳನ್ನು ಗಾಜಿನಿಂದ ನಿರ್ಮಿಸಲಾಗಿದೆ. ಈ ನೀರನ್ನು ಎಷ್ಟು ಬೇಕೆಂದರೆ ಅಷ್ಟು ಬಿಸಿ ಮಾಡಬಹುದು. ಗಾಜಿನ ಗೋಡೆಗಳಿರುವುದರಿಂದ ಈಜುವ ದೃಶ್ಯಗಳನ್ನು ಸುಖವಾಗಿ ಚಿತ್ರೀಕರಿಸಬಹುದು. ನಮ್ಮಲ್ಲಿರುವ ಸ್ಟುಡಿಯೋಗಳಲ್ಲಿ ಚಿತ್ರೀಕರಣ ಸಮಯಗಳಲ್ಲಿ ಗಂಟೆ ಹೊಡೆದು ಸದ್ದಾಗದಂತೆ ಇರಬೇಕೆಂದು ಎಚ್ಚರಿಕೆ ಕೊಡಲಾಗುತ್ತದೆ. ಹ್ಯಾಂಬರ್ಗಿನ ಈ ಸ್ಟುಡಿಯೋದ ಎಲ್ಲಾ ಭಾಗಗಳೂ ಸೌಂಡ್ ಪ್ರೂಫ್ ಆಗಿರುವುದರಿಂದ ಆ ತೊಂದರೆಯೂ ಇಲ್ಲ.

ಹ್ಯಾಂಬರ್ಗಿನ ಈ ಸ್ಟುಡಿಯೋವಿಗೆ ವಿರಾಮ ಎಂಬುದೇ ಇಲ್ಲದಂತೆ ಸರ್ವದಾ ಸಿನೇಮಾ ಹಾಗೂ ಟೆಲಿವಿಷನ್‌ಗಳ ಚಿತ್ರೀಕರಣವು ಸಾಗುತ್ತಲೇ ಇರುತ್ತದೆ. ಅದಕ್ಕೆ ಮುಖ್ಯ ಕಾರಣ ಅದರ ಪರಿಪೂರ್ಣತೆ! ಹಾಲಿವುಡ್ಡನ್ನು ಇದು ಮೀರಿಸಿ ನಿಂತಿದೆ!

ಅಸ್ತಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ತಮಾ ನಿವಾರಕ ಮೂಲಿಕೆಯನ್ನು ದಿ. 21-10-64 ಯುಗಾದಿ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಖೀರಿನಲ್ಲಿ ತೆಗೆದುಕೊಳ್ಳುವುದರಿಂದ ಅಸ್ತಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ.

Shri Mahatma Sidh Baba Sewa Ashram
P. O. Chitrakot, (Uttar Pradesh)

ಕೃತಿ ಪರಿಚಯ



ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ಸ.

ಪಾವನ ಶ್ರೀ ಕಟೀಲು:

ಲೇಖಕರ : ಶ್ರೀ ಕೊಡತ್ತೂರು ಅನಂತ ಪದ್ಮನಾಭ ಉಡುಪ

ಪ್ರಕಾಶಕರು: ಯುಗ ಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ. ಕ.

ಪುಟಗಳು: ೬೨. ಬೆಲೆ: ರೂ ೧=೦೦

ದುಷ್ಟ ಅರುಣಾಸುರನನ್ನು ಭ್ರಮರ ರೂಪದಲ್ಲಿ ಶಕ್ತಿ ದೇವಿಯು ಅವತರಿಸಿ ನಂದಿನೀ ನದೀ ತಟಿಯಲ್ಲಿ ವಧಿಸಿ ಲೋಕ ಕಲ್ಯಾಣ ವೆಸಗಿದ ಸನ್ನಿವೇಶವು ಕಟೀಲು ಕ್ಷೇತ್ರದಲ್ಲಿ ಶ್ರೀ ದುರ್ಗಾ ಪರಮೇಶ್ವರಿಯನ್ನು ನೆಲಸುವಂತೆ ಮಾಡಿತು. ದಕ್ಷಿಣ ಕನ್ನಡ ಜಿಲ್ಲೆಯ ದುರ್ಗಾ ಮಂದಿರಗಳಲ್ಲಿ ಕಟೀಲಿನದು ತನ್ನ ವೈಶಿಷ್ಟ್ಯಗಳನ್ನೂ ಮಹಾತ್ಮ್ಯೆಯನ್ನೂ ಉಳಿಸಿಕೊಂಡಿದೆ. ಪ್ರಕೃತಿ ರಮ್ಯವಾದ ಈ ಕ್ಷೇತ್ರವು ಇತ್ತೀಚೆಗೆ ಜೀರ್ಣೋದ್ಧಾರ ಹೊಂದಿದೆ. ಧಾರ್ಮಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ರಂಗಗಳಲ್ಲಿ ಇದು ಉಲ್ಲೇಖನೀಯ ಸ್ಥಾನ ಸಂಪಾದಿಸಿದೆ, ಪ್ರಕೃತದ ಗ್ರಂಥವು ಈ ದುರ್ಗಾಕ್ಷೇತ್ರದ ಒಂದು ವಿಸ್ತೃತ ಕೈಪಿಡಿಯಾಗಿದೆ.

ಕೃತಿಯ ಮೊದಲಿಗೆ ಧರ್ಮ ಮತ್ತು ಶಕ್ತಿಯ ಆರಾಧನೆಗೆ ಸಂಬಂಧಿಸಿದ ಐದು ಲೇಖನಗಳು ಧಾರ್ಮಿಕ ವಿಚಾರಗಳನ್ನು ನಮಗೆ ತಿಳಿಸಿ, ದೇವೀ ಉಪಾಸನೆಯ ಸೂಕ್ಷ್ಮೋತ್ತರಗಳನ್ನು ವಿವರಿಸುತ್ತದೆ. ಮುಂದಿನ ಮೂರು ಅಧ್ಯಾಯಗಳು ಕಟೀಲಿನ ಸ್ಥಾನ ಅದರ ಪರಿಚಯೇತಿಹಾಸಗಳನ್ನೂ ದೇವಿಯ ಕಾರುಣ್ಯದಿಂದ ನಡೆದ ಕೆಲವು ರೋಮಾಂಚನಕಾರಿ ಸತ್ಯ ಘಟನೆಗಳನ್ನೂ ನಮಗೆ ತಿಳಿಸಿ ಹೇಳುತ್ತವೆ. ಸ್ಥಳೀಯ ದೇವಾಲಯವು ನಡೆಸಿಕೊಂಡು ಬರುವ ಹಾಯರ್ ಎಲಿಮೆಂಟರಿ ಶಾಲೆ, ಹೈಸ್ಕೂಲು, ಬಯಲಾಟದ ಮೇಳ ಮೊದಲಾದುವುಗಳ ಸೂಕ್ಷ್ಮ ಪರಿಚಯ, ದೇವಳದಲ್ಲಿ ನಡೆದ ಬ್ರಹ್ಮಕಲಶೋತ್ಸವ, ಮೈಸೂರಿನ ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜ ಒಡೆಯರ ಮೊದಲಾದವರಿಗೆ ನೀಡಲಾದ ಮಾನಪತ್ರ, ದೇವಾಲಯದ ವಿವಿಧ ಭಕ್ತ ಭಜಕರ ಬಳಗಗಳ ರಾಜಾದಿ—ಮೊದಲಾದುವೆಲ್ಲವೂ ಕೃತಿಗೆ ಜೋಡಿಸಲ್ಪಟ್ಟಿವೆ ಹೀಗೆ ಕಟೀಲಿಗೆ ಸಂಬಂಧಪಟ್ಟ ಎಲ್ಲ ವಿವರಗಳನ್ನೂ ಒಳಗೊಂಡ ಈ ಪುಸ್ತಕ ಕಟೀಲಿನ ಸಂಪೂರ್ಣ ಪರಿಚಯವನ್ನು ಮಾಡಿಕೊಡುತ್ತದೆ. ಕ್ಷೇತ್ರದ ವಿವಿಧ ಚಟುವಟಿಕೆಗಳಿಗೆ ಸಂಬಂಧಿಸಿದ ಚಿತ್ರಗಳೂ ಇಲ್ಲಿವೆ.

ಧಾರ್ಮಿಕ ಕ್ಷೇತ್ರಗಳ ತವರೂರು ದಕ್ಷಿಣ ಕನ್ನಡದ ಪ್ರಸಿದ್ಧ ಶಕ್ತಿದೇವಿಯ ಆವಾಸಸ್ಥಾನದ ಪರಿಚಯವನ್ನು ಕನ್ನಡಿಗರಿಗೆ ಶ್ರೀ ಉಡುಪರು ಮಾಡಿಕೊಟ್ಟಿರುವುದು ಸ್ತುತ್ಯಾರ್ಹ. ಇಂತಹ ಕ್ಷೇತ್ರಗಳ ಪರಿಚಯದಿಂದ ಭಗವದ್ಭಕ್ತಿ ಮತ್ತು ಧಾರ್ಮಿಕ ಭಾವನೆಗಳು ಮರಳಿ ಜಾಗೃತವಾಗುವುದು ಸಾಧ್ಯ. ಅನನ್ಯ ಪ್ರಾಕೃತಿಕ ದೃಶ್ಯೋಪೇತ ಪರಮಪವಿತ್ರ ಕಟೀಲನ್ನು ಒಮ್ಮೆಯಾದರೂ ಸಂದರ್ಶಿಸುವಂತೆ ಈ ಪುಸ್ತಕ ಪ್ರೇರಣೆ ಖಂಡಿತಕ್ಕೂ ನೀಡುವುದು; ಒಮ್ಮೆ ತನ್ನಲ್ಲಿಗೆ ಬಂದವರನ್ನು ಶ್ರೀ ಕ್ಷೇತ್ರವು ಮತ್ತೂ ಮತ್ತೂ ಆಕರ್ಷಿಸುವುದು ಸುನಿಶ್ಚಿತ.

ತರಂಗಿಣಿ— ಸಣ್ಣ ಕಥಾ ಪ್ರಧಾನ ಸಚಿತ್ರ ಮಾಸ ಪತ್ರಿಕೆ 'ತರಂಗಿಣಿ'ಯ ಸಪ್ಟೆಂಬರ ೬೪ರ ಸಂಚಿಕೆ ನಮ್ಮ ಕೈಸೇರಿದೆ. ಕನ್ನಡದಲ್ಲಿ ಸಣ್ಣ ಕಥೆಗಳಿಗೇನೇ ಮೀಸಲಾಗಿದ್ದ 'ಕತೆಗಾರ'ದ ಮಾದರಿಯನ್ನು ಇದು ಅನುಸರಿಸದೆ, ಕವನ, ನಗೆ ಬರಹಗಳಿಗೂ ಅವಕಾಶ ಕಲ್ಪಿಸಿಕೊಟ್ಟಿದೆ. ಕಾದಂಬರಿಯು ಇಂದಿನ ಯುಗದಲ್ಲಿ ಸಣ್ಣ ಕಥೆಗಳು ಎಲ್ಲೆಂದರಲ್ಲಿ ತಲೆ ಹಾಕುತ್ತಿದ್ದರೂ ಅವುಗಳ ಗುಣದ ಬಗ್ಗೆ ನಿರಾಶೆಯೇಳುತ್ತಿದೆ. ಹಾಗಿರುವಾಗ ಸಣ್ಣ ಕಥೆಗಳಿಗೆ ವಿಶೇಷ ಪ್ರಾಧಾನ್ಯ ನೀಡಿ, ಕಥಾ ಸಂಕಲನದಂತೆ ಪ್ರಕಟವಾಗುವ ಈ ಮಾಸಿಕ ನಮ್ಮ ಲೇಖಕ ಬಂಧುಗಳ ಉತ್ತಮ ಕಥೆಗಳಿಗೆ ಪ್ರಕಟಣಾ ಸಾಧನವಾಗಲಿ ಎಂದು ಹಾರೈಸಬೇಕು. ನಮ್ಮ ಕೈ ಸೇರಿದ ಸಂಚಿಕೆಯು ಈ ಹಾರೈಕೆಯನ್ನು ಸತ್ಯವಾಗಿಸುವುದೆಂಬುದನ್ನು ತೋರಿಸುತ್ತಿದೆ. ಸಾಹಿತ್ಯಾಭಿಮಾನಿಗಳು, ಓದುಗರು ಕಾದಂಬರಿಗಳಿಂದಲೇ ತೃಪ್ತರಾಗದೆ ತಮ್ಮ ದೃಷ್ಟಿಪಥದಲ್ಲಿ ಸಣ್ಣ ಕಥೆಗಳನ್ನೂ ಗಮನಿಸಬೇಕು. ಈ ಮಾಸಿಕವನ್ನು ಪ್ರೋತ್ಸಾಹಿಸಬೇಕು.

ಸಂಪಾದಕರು: ಶ್ರೀ ಕಟೀಲು ಗಣಪತಿ ಶರ್ಮ.

ಕಛೇರಿ: ಮಾರ್ಕೆಟ್ ಸ್ಕ್ವೈಯರ್,
ಸೆಕೆಂಡ್ ಬ್ಲಾಕ್, ಜಯನಗರ,
ಬೆಂಗಳೂರು-೧೧.

ಬಿಡಿ ಸಂಚಿಕೆಯ ಬೆಲೆ: ರೂ. ೦—೫೦.

ಗೋರಾ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction, Madras.

ವಿನೋದ ವಿಚಾರ

ನಮಸ್ಕಾರ ಪದ್ಧತಿ

ಬರೆದವರು
ಶ್ರೀ ಭಾಸ್ಕರ ಭಂಡಾರಿ, ಮಂಜೇಶ್ವರ.

ಆಧುನಿಕ ಕಾಲದಲ್ಲಿ ಬೆಳಗ್ಗಿನಿಂದ ಸಂಜೆಯ ತನಕ ಎಲ್ಲಿ ನೋಡಿದರೂ ಕೊಡಬೇಕಾಗುವ, ಕೊಡಲ್ಪಡುವ 'ನಮಸ್ಕಾರ'ಗಳಿಗೇನೂ ಕಡಿಮೆಯಿಲ್ಲ. ಕುಬೇರನ ಭಂಡಾರದಲ್ಲಿ ಸಂಪತ್ತಾದರೂ ಬರಿದಾಗಬಹುದು. ಆದರೆ ಈಗಿನ ಸಮಾಜದಲ್ಲಿ 'ನಮಸ್ಕಾರ' ಬರಿದಾಗದು! ಅಂಗಡಿ ಹೋಟೇಲುಗಳಲ್ಲೂ, ಕೋರ್ಟು ಕಛೇರಿಗಳಲ್ಲೂ ಶಾಲಾ ಕಾಲೇಜುಗಳಲ್ಲೂ, ಎಲ್ಲೆಲ್ಲೂ 'ನಮಸ್ಕಾರ'ವೇ ತಾಂಡವಾಡುತ್ತಿದೆ ಆದರೆ ಈ ನಮಸ್ಕಾರದ ನಿಜವಾದ ಅರ್ಥವನ್ನು ತಿಳಿದುಕೊಂಡವರು ಅಥವಾ ತಿಳಿಯಲಪೇಕ್ಷಿಸುವವರೆಷ್ಟು ಮಂದಿ?

ನಮಸ್ಕಾರವೆಂದರೆ, ಅದು ಕೇವಲ ಒಂದು ರೂಢಿಯ ಮಾತಲ್ಲ. ಅದಕ್ಕೆ ಕೊಡುವ ಸಮಯ, ವ್ಯಕ್ತಿ, ಅದನ್ನು ಸ್ವೀಕರಿಸುವ ವ್ಯಕ್ತಿ, ಸ್ಥಳ ಇತ್ಯಾದಿಗಳನ್ನು ಹೊಂದಿಕೊಂಡು ಬೇರೆಬೇರೆ ಅರ್ಥಗಳಿವೆ. ಆದುದರಿಂದ ಅವುಗಳನ್ನು ಮುಖ್ಯವಾಗಿ ನಾವು ಭಕ್ತಿ ಗೌರವಗಳ ನಮಸ್ಕಾರ, ಪ್ರೀತಿ ವಿಶ್ವಾಸ, ಸಹಾನುಭೂತಿಗಳ ನಮಸ್ಕಾರ, ಗುರುತಿಸುವ ನಮಸ್ಕಾರ ಎಂಬುದಾಗಿ ವಿಭಾಗಿಸಬಹುದು. ಭಕ್ತನು ಭಗವಂತನಿಗೆ ಭಕ್ತಿಯ, ಶಿಷ್ಯನು ಗುರುವಿಗೆ ಅಥವಾ ಕಿರಿಯನು ಹಿರಿಯನಿಗೆ ಗೌರವದ, ಒಡೆಯನು ನೌಕರನಿಗೆ ಅಥವಾ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಪ್ರೀತಿ ಸಹಾನುಭೂತಿಗಳ ನಮಸ್ಕಾರಗಳನ್ನು ಸಲ್ಲಿಸುವುದು ಯಥೋಚಿತವಾಗಿದೆ ಅಂತೆಯೇ ಒಂದು ವ್ಯಕ್ತಿಯನ್ನು ನಾವು ಒಮ್ಮೆ ಕಂಡು ಒಂದೆರಡು ಮಾತಾಡಿದರೆ, ಕೆಲದಿನಗಳ ಬಳಿಕ ಅದೇ ವ್ಯಕ್ತಿಯನ್ನು ಕಂಡಾಗ ನೀಡುವ ನಮಸ್ಕಾರವನ್ನು "ಗುರುತಿಸುವ ನಮಸ್ಕಾರ" ಎನ್ನಬಹುದು.

ಆದರೆ ನಮಸ್ಕಾರದ ಈ ಆಳವಾದ ಅರ್ಥವನ್ನು ಮನನ ಮಾಡಿಕೊಂಡವರು ಅಥವಾ ಅದರಂತೆ ವರ್ತಿಸುವವರು ಸಮಾಜದಲ್ಲಿ ಬಹು ವಿರಳ. ಬದಲಾಗಿ ಈ ನಮಸ್ಕಾರವನ್ನು ಜನತೆ ಮೇಲು ಕೀಳಿನ ಅಳತೆಗೋಲೆಂದು ಭಾವಿಸಿದಂತಿದೆ. ಇದಕ್ಕೆ ನಾವು ನಿತ್ಯ ಜೀವನದಲ್ಲಿ ಅನುಭವಿಸಬಹುದಾದ ಒಂದು ಜೀವಂತ ಉದಾಹರಣೆಯನ್ನು ಕೇಳಿ.

ಸಾಮಾನ್ಯವಾಗಿ ಸ್ವಲ್ಪ ದೊಡ್ಡ ವ್ಯಕ್ತಿ (ದೊಡ್ಡವನೆಂದು ಮನಸ್ಸಿನಲ್ಲಿ ಎಣಿಸಿಕೊಂಡ ವ್ಯಕ್ತಿ) ಯನ್ನು ಕಂಡಾಗ "ನಮಸ್ಕಾರ ಸಾರ್" ಎನ್ನೋಣ. ಆಗ ಆತನೂ "ನಮಸ್ಕಾರನಮಸ್ಕಾರ" ಎನ್ನುತ್ತಾ ತುಸು ಎಡೆಯ ಬ್ಬಿಸಿ, ಮುಖವರಳಿಸಿ, "ಏನೊ?" ಎನ್ನುತ್ತಾ ಉಭಯ ಕುಶಲೋಪರಿಗತೊಡಗುತ್ತಾರೆ. ಆದರೆ ಅದೇ ವ್ಯಕ್ತಿ ತಿರಿಗೊಮ್ಮೆ ದೊರೆತಾಗ, ನಮ್ಮಿಂದ ಯಾವಾಗ ವಂದನೆ ಸಲ್ಲುತ್ತದೋ ಎಂದು ನಿರೀಕ್ಷಿಸುತ್ತಿರುತ್ತದೆ. ಪಕ್ಕನೆ ನಾವು ನಮಸ್ಕರಿಸಿ ಬಿಟ್ಟರಾಯಿತ. ಇಲ್ಲವಾದರೆ ಆ ವ್ಯಕ್ತಿ ಮುಖ ತಿರುಗಿಸಿಕೊಂಡೇ ಹೋಗುವುದು. ಹೀಗೆ ಅಲ್ಲಿ ಒಂದು ಅಪರಿಚಿತ ವರ್ತನೆ ಹಾಗೂ ವಾತಾವರಣವು ನೆಲಸುವುದು. ಇದರಂತೆ ಅಧ್ಯಾಪಕರು ವಿದ್ಯಾರ್ಥಿಗಳ ಪ್ರತಿಯೂ, ಒಡೆಯರು ನೌಕರರ ಪ್ರತಿಯೂ ವರ್ತಿಸುತ್ತಾರೆ ಅವರ ಮನಸ್ಸಿನಲ್ಲಿ ತಾವೇ ಮೊದಲಾಗಿ ನಮಸ್ಕರಿಸಿ ಬಿಟ್ಟರೆ ತಮ್ಮ ಡಿಗ್ನಿಟಿಗೆ ಕಡಿಮೆ ಸಾಗುತ್ತದೆ ಎಂಬ ಭಾವನೆಯಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಆದರೆ ಇಂತವರಿಗೆ ಈ ವಿಚಾರವನ್ನು ನೆನಪಿಡುವುದು ಅನಿವಾರ್ಯವಾಗಿದೆ ಏನೆಂದರೆ ತಾವು ತಮ್ಮ ನೌಕರರಿಗೆ ಅಥವಾ ವಿದ್ಯಾರ್ಥಿಗಳಿಗೆ ಕೊಡುವ 'ನಮಸ್ಕಾರ'ಗಳು ಭಯ ಭಕ್ತಿಯದ್ದಾಗಿರದೆ, ದಯೆ ವಾತ್ಸಲ್ಯ ಸಹಾನುಭೂತಿಗಳದ್ದಾಗಿದೆ—ಎಂದು.

ಯಾವುದೇ ವಿಚಾರದಲ್ಲಾಗಲೀ ಕೇವಲ ಅನುಕರಣ ಉತ್ತಮವಲ್ಲ. ಆದರಂತೆ ಎಲ್ಲರೂ ನಮಸ್ಕರಿಸುತ್ತಾರೆ ಆದುದರಿಂದ "ಹತ್ತರೊಂದಿಗೆ ಹನ್ನೊಂದು" ಎಂಬಂತೆ ನಾವೂ ನಮಸ್ಕರಿಸಬಾರದು. ಬದಲಾಗಿ ಸಮಯ, ಸ್ಥಳ, ವ್ಯಕ್ತಿಗಳನ್ನು ಅರ್ಥ ಮಾಡಿಕೊಂಡು, ಅರ್ಥವಾದ ನಮಸ್ಕಾರಗಳನ್ನು ನೀಡಬೇಕೇ ಹೊರತು, ಸುಮ್ಮನೆ ಈ "ರೂಢಕ್ರಿಯೆ"ಯ ನಮಸ್ಕಾರದಿಂದ ಏನೂ ಪ್ರಯೋಜನವಾಗಲಾರದು. ಮಾತ್ರವಲ್ಲ ನಮಸ್ಕಾರವನ್ನು "ಮೇಲು ಕೀಳಿನ ಅಳತೆಗೋಲೆ"ಂದು ನೆನೆದು ಮುಖ ದೊಡ್ಡದು ಮಾಡುವ ಅಹಂಕಾರಿಗಳನ್ನು, ಸ್ವಾಭಿಮಾನಶೂನ್ಯರು ಯಾರೂ ದೊಡ್ಡವರೆನಲಾರರು.

ಆದರೆ ನನ್ನದು ಮಾತ್ರ ಅವರಿಗೆ ದೂರದಿಂದಲೇ ದೊಡ್ಡ ನಮಸ್...ಕಾರ!

ನಿಜ ಅರಿತಾಗ ಕಾವ್ಯ ಅರಿತು

(ನಾಲ್ಕನೇ ಪುಟದಿಂದ)

ಮುಂದೆಂದೂ ಆಕೆಯ ಮುಖವನ್ನೇ ನೋಡಲಾರೆನೆಂದು ನಿರ್ಧರಿಸಿಯೇ ಹಿಂತೆರಳಿದನು. ನಾಲ್ಕು ದಿನ ಆಲದ ಮರದಡಿ ಸ್ಥಳ ಖಾಲಿಯಾಗಿಯೇ ಉಳಿಯಿತು.

ಒಂದು ದಿನ ಚಂದ್ರನು ಯೋಚಿಸಲು ಯೋಗ್ಯವಾದ ಪರಿಹಾರ ಸ್ಥಳವನ್ನೇ ಬಯಸಿ ಹೊರಟಿದ್ದನು. ಅಲ್ಲಿ ಇಲ್ಲಿ ಸುತ್ತಾಡಿ ಕೊನೆಗೆ ಆಲದ ಮರದ ಬಳಿಗಾಗಿಯೇ ಬಂದಿದ್ದನು. ಆಗತಾನೆ ಚಂದ್ರನ ಬೆಳಕು ಭೂಮಿಯ ಮೇಲೆ ಹರಡಿತ್ತು. ಕಟ್ಟೆಯ ಮೇಲೊಂದು ವ್ಯಕ್ತಿಯ ಕಪ್ಪು ನೆರಳೊಂದು ಕಾಣುತಿತ್ತು. ಆದಾರಾಗಿರಬಹುದೆಂದು ನೋಡುವ ಕುತೂಹಲವಿಲ್ಲದಿದ್ದರೂ ಬಳಿ ಸಾರಿದನು. ಯಾವುದೋ ಗಾಢ ಆಲೋಚನೆಯಲ್ಲಿ ಮುಳುಗಿದಂತಿತ್ತು ಮಬ್ಬು ಬೆಳಕಿನಲ್ಲಿ ಸುಮನಳೆಂದು ತಿಳಿದಾಗ ಆಶ್ಚರ್ಯಚಕಿತನಾದನು. ಒಬ್ಬಳೇ ಕುಳಿತು "ಯಾರನ್ನೋ ಕಾಯುತ್ತಿರಬಹುದೆಂ"ದೇ ಯೋಚಿಸಿದನು.

ಸುಮನ ಕತ್ತಲಾವರಿಸಿದುದನ್ನು ನೋಡಿ ಮೇಲೆದ್ದು ಹೊರಟಾಗ ಬಳಿಯಲ್ಲಿಯೇ ನಿಂತ ಚಂದ್ರನ ಗುರುತು ಸಿಕ್ಕದೆ ಹೋಗಲಿಲ್ಲ. ಕೋಪದಿಂದ ಕುದಿಯುತ್ತಿದ್ದ ಮನ ಸೇಡಿಗಾಗಿ ಹಾತೊರೆಯುತ್ತಿತ್ತು.

"ಏನು, ಅವಳನ್ನು ಎಲ್ಲಿ ಬಿಟ್ಟು ಬಂದಿರಿ? ಮತ್ತಾವ ಮಿಗವನ್ನು ಹೊಂಚು ಹಾಕಲು ಹೊರಟಿದ್ದೀರಿ?" ಕತ್ತಲಿನಲ್ಲಿ ಮುಖ ಕಾಣದಿದ್ದರೂ ಮಾತು ಬಿರುಸಾಗಿತ್ತು.

ಸುಮನಳ ಮಾತು ಕೇಳಿ ಚಂದ್ರ ತಬ್ಬಿಬ್ಬಾದನು, ಆದರೂ ಧೈರ್ಯಗೆಡದೆ "ಹೆಂಗಸರಂತೆ ನಾವೇನೂ ವಂಚಕರಲ್ಲ" ಎಂದನು.

"ಬಹಳ ಸಂಭಾವಿತರು ನೀವು ಒಬ್ಬಳಿಗೆ ಮಾತು ಕೊಟ್ಟು ಮತ್ತೊಬ್ಬಳ ಜೊತೆಗೆ ಸಂಪರ್ಕ ಬೆಳೆಸುವುದು ಗಂಡಸರ ಹುಟ್ಟುಗುಣ"

"ಚೆನ್ನಾಗಿ ಅರಿತಿದ್ದರೆ ನೀನು ಈ ಮಾತನ್ನಾಡುತ್ತಿದ್ದೆಯಾ?"

"ಕಣ್ಣಾರೆ ಕಂಡುದಕ್ಕಿಂತಲೂ ಹೆಚ್ಚೇನೂ ಬೇಕಿಲ್ಲ."

"ಆದರೆ ಅವಳಾರು ಎಂಬುದನ್ನು ನೀನು ತಿಳಿದ ಕೊಳ್ಳದೆ ನೀನೀ ಮಾತನ್ನಾಡುವುದು ಸರಿಯಲ್ಲ. ಆದರೆ ನಿನ್ನ ವರ್ತನೆಯನ್ನು ನಾನು ಚೆನ್ನಾಗಿ ಬಲ್ಲೆ!"

'ನನ್ನ ನಡತೆಯಲ್ಲಿ ನೀವೇನು ತಪ್ಪು ಕಂಡಿರಿ? ಆಡಿದಂತೆ ಆಡುವುದು ಹೇಡಿಗಳ ಲಕ್ಷಣ. ತಮ್ಮ ತಪ್ಪನ್ನು ಮರೆಮಾಚುವ ಉಪಾಯ.'

"ಒಬ್ಬ ಗಂಡಿಗೆ ಮಾತು ಕೊಟ್ಟು ಮತ್ತೊಬ್ಬರೊಡನೆ ತಿರುಗಾಡುವವರನ್ನು ಏನನ್ನಬೇಕೋ ತಿಳಿಯದಾಗಿದೆ!'

"ಈ ಮಾತುಗಳನ್ನು ಯಾರನ್ನು ಕುರಿತು ಆಡುತ್ತೀರೋ ಎಂಬುದೇ ತಿಳಿಯುತ್ತಿಲ್ಲ."

"ಮತ್ತಾರನ್ನು ನಿನ್ನನ್ನೇ! ಈಗ ಕೆಲ ದಿನ ಕೆಳಗೆ ಯಾರೊಡನೆ ಬೀದಿಯಲ್ಲಿ ಹೋಗುತ್ತಿದ್ದೆ?'

"ಗಂಡಸರೆಲ್ಲರೂ ಪ್ರೇಮಿಗಳಾಗರು. ಇದನ್ನು ನೀವಿನ್ನೂ ಅರಿಯದ್ದು ತುಂಬಾ ವಿಷಾದ.'

"ಹಾಗಾದರೆ ಅಂದು ಯಾರೊಡನೆ ಹೊರಟಿದ್ದೆ? ಅದನ್ನಾದರೂ ಹೇಳಬಹುದಲ್ಲ?"

"ಚಿಕ್ಕಮ್ಮನ ಮಗ; ನನ್ನ ಅಣ್ಣನೊಡನೆ. ಅದಕ್ಕಾಗಿಯೇ ಇಷ್ಟೊಂದು ಆರೋಪವೇ?"

"ನಾನು ಕೂಡ ನನ್ನ ದೊಡ್ಡಮ್ಮನ ಮಗಳು ಕಲಾವತಿಯೊಡನೆ ಹೋಗಬೇಕಾಯ್ತು'

"ಇದನ್ನು ನಾನು ಹೇಗೆ ನಂಬಲಿ?"

"ನಿನ್ನ ಮಾತುಗಳು ಎಷ್ಟು ಸತ್ಯವೋ ನನ್ನದು ಕೂಡಾ ಅಷ್ಟೇ ಸತ್ಯ."

"ನಿಜವಾಗಿಯೂ ನೀವು ನನ್ನನ್ನು ಮರೆತಿಲ್ಲವೇ?" ಆಶ್ಚರ್ಯದಿಂದಲೇ ನುಡಿದಳು.

"ನೀನೂ ನನ್ನನ್ನು ಮರೆತಿಲ್ಲವೆಂದೇ ಭಾವಿಸಲೇ?", ಆತನೂ ಆಶ್ಚರ್ಯಗೊಂಡಿದ್ದನು.

"ಖಂಡಿತವಾಗಿಯೂ ನಾನು ನಿಮ್ಮವಳು" ಎಂದಾಗ ಆತನತ್ತ ಕೈಚಾಚಿದ್ದಳು.

"ನಿಜ ಅರಿತಾಗ ಏರಿದ ಕಾವು ಆರಿತಲ್ಲಾ! ಅದೇ ಆನಂದ!" ಎಂದು ಸುಮನಳ ಕೈ ಹಿಡಿದನು. ಆಗಲೇ ರತಿಯು ಮೋಡಗಳೆಡೆಯಲ್ಲಿ ಇಣಿಕಿ ಮುಗುಳ್ನಗೆ ಸೂಸುತ್ತಿದ್ದನು ಪ್ರೇಮಿಗಳಿಬ್ಬರೂ ಒಂದುಗೂಡಿದ್ದರು.

— —

ನಿಮ್ಮ ಆಕಾಂಕ್ಷೆಗಳ ಸಾಧನೆಗಾಗಿ ಮತ್ತು ಅನಿಶ್ಚಿತ ಅವಶ್ಯಕತೆಗಳಿಗಾಗಿ ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್", ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ನಮ್ಮ-ನಮ್ಮವರು

ಲಾಲ್ ಬಹದೂರ್

ಕಾಮನ್‌ವೆಲ್ತ ಪ್ರಧಾನಿ ಪರಿಷತ್ತಿನಲ್ಲಿ ಭಾಗವಹಿಸಲು ಅನಾರೋಗ್ಯದಿಂದ ಅಶಕ್ತರಾದ ಲಾಲಬಹದೂರರು ಈಗ ಅಲಿಪ್ತ ರಾಷ್ಟ್ರಗಳ ಪರಿಷತ್ತಿನಲ್ಲಿ ಮಹತ್ವದ ಪಾತ್ರ ವಹಿಸುತಿದ್ದಾರೆ ಕ್ಯಾರೋವಿನಲ್ಲಿ ೪೮ ರಾಷ್ಟ್ರಗಳ ಪ್ರತಿನಿಧಿಗಳು ಒಂದುಸೇರಿ ಪಾಳಯಾತೀತ ನೀತಿಯನ್ನು ಯಶಸ್ವಿಗೊಳಿಸುವುದರ ಬಗ್ಗೆ ಗಂಭೀರನಾದ ವಿಚಾರ ವಿನಿಮಯವನ್ನು ಮಾಡುತ್ತಿರುವರು. ದಿವಂಗತ ಪ್ರಧಾನಿ ಜವಾಹರಲಾಲ ನೆಹರುರವರು ಇದೇ ಮಾದರಿಯ ಒಲ್ಗ್ರೇಡ್ ಸಮ್ಮೇಳನದಲ್ಲಿ ನಿರ್ವಹಿಸಿದಂತೆಯೇ ಶಾಸ್ತ್ರಿಯವರೂ ಅನುಪಮ ವ್ಯಕ್ತಿತ್ವ ಮತ್ತು ಭಾರತೀಯ ಉದಾತ್ತತೆಗಳಿಂದ ಅದರಲ್ಲಿ ಯಶಸ್ವಿಯಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ಸಂದೇಹವಿಲ್ಲ ಭಾರತೀಯರೆಲ್ಲರೂ ಇದನ್ನೇ ಎದುರು ನೋಡುತ್ತಿದ್ದಾರೆಂದರೆ ಅತಿಶಯೋಕ್ತಿಯಲ್ಲ

ಶಾಸ್ತ್ರಿಯವರದು ಮೊತ್ತಮೊದಲ ವಿದೇಶ ಯಾತ್ರೆಯು ಇದು ಇದುವರೆಗೆ ಅವರು ಹೊರ ದೇಶಗಳಿಗೆ ಹೋದದ್ದಿಲ್ಲ, ಭಾರತದ ಪ್ರಧಾನಿಯವರು ಪ್ರಚಲಿತ ಪರಿಷತ್ತಿನಲ್ಲಿ ಬೇರೆ ಬೇರೆ ರಾಷ್ಟ್ರ ಮುಖಂಡರನ್ನು ಕಾಣುವ ಸುಯೋಗವೊದಗಿದೆ. ಭಾರತದ ನೀತಿಯ ಬಗ್ಗೆ ಜಗತ್ತಿನ, ಮುಖ್ಯವಾಗಿ ಆಫ್ರೇಸ್ಯದ ಸದಭಿಪ್ರಾಯವನ್ನು ಪಡೆಯುವುದು ಇಂದು ಅತಿ ಅಗತ್ಯ ಜವಾಹರಲಾಲರು ಮೆಟ್ಟಿ ತೋರಿಸಿದ ದಾರಿಯಲ್ಲೇ ಭಾರತ ಮುಂದೆಯೂ ಮುಂದುವರಿಯುವುದೆಂಬುದನ್ನು ಮೊದಲಾಗಿ ಮಂದಟ್ಟು ಮಾಡಬೇಕು ಚೀನಾದ ಸಾಮ್ರಾಜ್ಯವಾದ, ಪಾಕಿಸ್ತಾನದ ಕುತಂತ್ರಗಳ ಬಗ್ಗೆಯೂ ಅದು ಜನಾಭಿಪ್ರಾಯ ಮೂಡಿಸಬೇಕಾಗಿದೆ. ಇದಕ್ಕೆಲ್ಲಾ ಪರಿಷತ್ತು ವೇದಿಕೆಯೊಡನೆ ಕೋದರೂ ಖಾಸಗಿ ಸಂದರ್ಶನದ ಅವಕಾಶವನ್ನು ಶಾಸ್ತ್ರಿಯವರು ಉಪಯೋಗಿಸಿಕೊಂಡರೆ ಆಶ್ಚರ್ಯವಿಲ್ಲ ೬ಗನೆಯ ವರ್ಷಕ್ಕೆ ಪಾದಾರ್ಪಣ ಮಾಡಿದ ದೇವತಾ ಮನುಷ್ಯ ಶಾಸ್ತ್ರಿಯವರು ಭಾರತದ ಮೇಲ್ಮೆ—ಗೌರವಗಳನ್ನು ಉಳಿಸಿಕೊಳ್ಳುವುದು ಖಂಡಿತ.



ಕೆ. ಕೆ. ಪೈ.

ಸಿಂಡಿಕೇಟ್ ಬ್ಯಾಂಕಿನ ಡಿಪ್ಟಿ ಚೀಫ್ ಆಫೀಸರರೂ ಉಡುಪಿಯ ಸಂಗೀತ ಸಭೆಯ ಅಧ್ಯಕ್ಷರೂ ಆದ ಶ್ರೀ ಕೆ. ಕೆ. ಪೈಯವರದು ಬಹುಮುಖ ಪ್ರತಿಭೆ. ಅದು ಮುಟ್ಟದ ಸೋಗೆಯಿಲ್ಲವೆಂಬಂತೆ ಇವರು ಮುಟ್ಟದ ವಿಷಯವಿಲ್ಲ ರಾಜಕೀಯ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸಾಹಿತ್ಯ ಕಲಾದಿ ಹಲವಾರು ರಂಗಗಳಲ್ಲಿ ಇವರು ಆಸ್ಥೆಯಿಂದ ದುಡಿಯುತ್ತಾರೆ ಜನಬೆಂಬಲವನ್ನು ಗಳಿಸುವ ಕಲೆಯೂ ಇವರಿಗೆ ಸಿದ್ಧಿಸಿದೆ. ಕಳೆದ ದಶಂಬರದಲ್ಲಿ ಪುರಂದರ ದಾಸರ ನಾಲ್ಕನೆಯ ಶತಮಾನೋತ್ಸವವನ್ನು ಕರ್ನಾಟಕ್ಕೇನೇ ಆದರ್ಶವೆನಿಸ..' ರೀತಿಯಲ್ಲಿ ಸಂಗೀತ ಸಭೆಯವರು ಆಚರಿಸಿದ್ದರು ಇದೇ ತಾ ೧೦ ರಿಂದ ೧೮ ರವರೆಗೆ ಕಲಾ ಪ್ರದರ್ಶನವೊಂದನ್ನು ಇವರು ಸಂಘಟಿಸಿದ್ದಾರೆ

ಈ ಪ್ರದರ್ಶನವು ಇಡಿಯ ಕರ್ನಾಟಕದ ಮಟ್ಟದಲ್ಲಿ ನಡೆಯುವುದೆಂದೂ ಇದರ ಅಂಗವಾಗಿ ಕಲಾಧ್ಯಾಪಕರ ಸೆಮಿನಾರೇ ಮೊದಲಾದವುಗಳೂ ನಡೆಯುವುವು ಎಂದೂ ತಿಳಿಯುತ್ತದೆ. ಕಲೆಯ ಬಗ್ಗೆ ಆಸಕ್ತಿ ಹೆಚ್ಚಿಸುವ ದೃಷ್ಟಿಯಿಂದ ಇಂತಹ ಪ್ರದರ್ಶನಗಳು ಎಲ್ಲೆಲ್ಲೂ ಜರಗಬೇಕು. ಉಡುಪಿಯು ಇತರ ಹಲವಾರು ರಂಗಗಳಲ್ಲಿ ದೇಶಕ್ಕೇನೇ ಆದರ್ಶವನ್ನು ಹಾಕಿಕೊಟ್ಟಂತೆ ಕಲಾರಂಗಕ್ಕೂ ಹಾಕಿಕೊಟ್ಟಂತಾಗಿದೆ. ಇದಕ್ಕಾಗಿ ಸಂಗೀತ ಸಭೆಯ ಅಧ್ಯಕ್ಷ ಪೈಯವರನ್ನೂ ಅವರೊಂದಿಗೆ ಸಂಪೂರ್ಣವಾಗಿ ಸಹಕರಿಸುತ್ತಿರುವ ಪ್ರದರ್ಶನ ಸಮಿತಿಯ ಸದಸ್ಯರನ್ನೂ ಅಭಿನಂದಿಸಲೇ ಬೇಕು.

ಪ್ರಚಲಿತ ಪ್ರದರ್ಶನವನ್ನು ತಾ ೧೦ ರಂದು ಶೈಕ್ಷಣಿಕ ಮಂತ್ರಿ ಶ್ರೀ ಕಂಠಿಯವರು ಉದ್ಘಾಟಿಸುವರೆಂದೂ ತಾ ೧೮ ರಂದು ರಾಜ್ಯಪಾಲ ಶ್ರೀ ನಾಗೇಶರು ಮುಕ್ತಾಯ ಭಾಷಣ ಮಾಡುವರೆಂದೂ ತಿಳಿಯುತ್ತದೆ, ರಾಜ್ಯದ ಮೂಲೆ ಮೂಲೆಗಳ ಕಲಾವಿದರು ಇದರಲ್ಲಿ ಸಕ್ರಿಯವಾಗಿ ಭಾಗ ವಹಿಸಲಿರುವುದರಿಂದ ಇಂತಹ ಕಲಾಮಹೋತ್ಸವವನ್ನು ನೋಡಿ ಆನಂದಿಸಲು ಯಾರೂ ಮರೆಯಬಾರದು.

ಎಲ್ಲೆಲ್ಲಿ ಏನೇನು?

ವಿದಾಯಸತ್ಕಾರ

ತಿರ್ಥಪ ರಿಕ್ರಿಯೇಶನ್ ಕ್ಲಬ್ಬಿನ ಸದಸ್ಯರೂ ಸಬ್ ಪೋಸ್ಟ್ ಆಫೀಸಿನ ಕ್ಲಾರ್ಕರೂ ಆಗಿದ್ದು ಶಿವಮೊಗ್ಗಕ್ಕೆ ವರ್ಗಾಯಿಸಲ್ಪಟ್ಟ ಶ್ರೀ ಎಚ್, ಎನ್ ಎ. ಅಸ್ನಾದಿಯವರಿಗೆ ಕ್ಲಬ್ಬಿನ ಆಶ್ರಯದಲ್ಲಿ ಡಾ| ವ್ಯ ಆರ್. ಶೆಟ್ರ ಅಧ್ಯಕ್ಷತೆಯಲ್ಲಿ ವಿದಾಯ ಕೂಟವೊಂದನ್ನು ಏರ್ಪಡಿಸಲಾಗಿತ್ತು 'ಅಧ್ಯಕ್ಷರೂ' ಡಾ| ಯು ಕೆ ಆಚಾರ್ ಡಾ|, ಕೆ ಆರ್ ವೆಂಕಟಕೃಷ್ಣ ಮತ್ತು ಬಿ. ಜಯರಾಮ ಶೆಟ್ಟರೂ ಅಸ್ನಾದಿಯವರ ಗುಣಗಾನಮಾಡಿದರು ಶ್ರೀ ಅಸ್ನಾದಿಯವರು ಕಾಲೋಚಿತ ಭಾಷಣವಿತ್ತ ಬಳಿಕ ಶ್ರೀ ಎನ್. ಎಂ ಎಲ್ಲಪ್ಪ ಶೆಟ್ಟರು ಧನ್ಯವಾದವಿತ್ತರು

ಮಹಾಸಭೆ

ಹಿರ್ಗ ಎಗ್ರಿಕಲ್ಚರಲ್ ಕೋ-ಒಪರೇಟಿವ್ ಬ್ಯಾಂಕಿನ ಮಹಾಸಭೆಯು ತಾ. ೨೭-೯-೬೪ರಂದು ಅಧ್ಯಕ್ಷ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿ ವರದಿ ಮಂಜೂರಾತಿಯಾದ ಬಳಿಕ ಹೊಸ ವರ್ಷಕ್ಕೆ ಡೈರೆಕ್ಟರರಾಗಿ ಶ್ರೀಗಳಾದ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆ, ಎ, ಸಂಜೀವ ಹೆಗ್ಡೆ, ಕೆ ಆನಂದ ಶೆಟ್ಟಿ, ಬಿ ಮಹಾಬಲ ಹೆಗ್ಡೆ, ಬಿ ಸದಾನಂದ ಹೆಗ್ಡೆ, ಗುರುರಾಜ ಉಪಾಧ್ಯ, ಮಂಜುನಾಥ ನಾಯ್ಕ, ಗೋವಿಂದ ನಾಯ್ಕ, ಗಣೇಶ ಹೆಗ್ಡೆ ಸಂಕಯ್ಯ ಶೆಟ್ಟಿ, ಸೀತಾರಾಮ ಶೆಟ್ಟಿ, ಇವರು ಆರಿಸಲ್ಪಟ್ಟರು ಆನಂತರ ತಾ ೧ರಂದು ನಡೆದ ಡೈರೆಕ್ಟರರ ಸಭೆಯಲ್ಲಿ ಶ್ರೀ ಬಾಳ್ಕಟ್ಟಬೀಡುಕೃಷ್ಣಯ್ಯಹೆಗ್ಡೆಯರು ಅಧ್ಯಕ್ಷರಾಗಿಯೂ ಎ. ಸಂಜೀವ ಹೆಗ್ಡೆಯರುಉಪಾಧ್ಯಕ್ಷರಾಗಿಯೂ, ಕೆ ಆನಂದ ಶೆಟ್ಟರು ಪಿಟಾಸ್ಟಿಯವರಾಗಿಯೂಆರಿಸಲ್ಪಟ್ಟರು

ದಸರಾ ಮಹೋತ್ಸವ

ಉಡುಪಿ ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದಲ್ಲಿ ನವರಾತ್ರಿ ಮಹೋತ್ಸವದ ಅಂಗವಾಗಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದೇವಸ್ಥಾನದವರೇ ಕಮಿಟಿ ಮಾಡಿ ಶ್ರೀ ರಮಾನಾಥ ಕುಡ್ವರ ಮುಂದಾಳುತನದಲ್ಲಿ ನಡೆಸುವರೆಂದೂ ಶ್ರೀ ರಾಘವೇಂದ್ರ ಕೃಷ್ಣ ಭಟ್ಟರಿಗೆ ಭಕ್ತ ಮಂಡಳಿಯ ಪರವಾಗಿ ಬಂದ ಅರ್ಜಿಗಳನ್ನು ಅವರು ಕಮಿಟಿಗೇ ಕೊಟ್ಟಿರುವರೆಂದೂ ಊರ ಪರಪೂರ ಮಂಡಳಿಯವರು ಕಮಿಟಿಗೇನೇ ಬರೆದು ಕೊಳ್ಳಬೇಕೆಂದೂ ಶ್ರೀ ಭಟ್ಟರು ತಿಳಿಸುತ್ತಾರೆ,

ಕನ್ನಡ ಸಂಘ

ಮದ್ರಾಸು, ಸ ೧೩—ಸಂಘದ ಆವರಣದಲ್ಲಿ ದಿನಾಂಕ ೯ರಿಂದ ೧೩ರ ವರೆಗೆ ವಿನಾಯಕ ಚತುರ್ಥಿ ಮಹೋತ್ಸವವು ಜರುಗಿತು ದಿನಾಂಕ ೯ರಂದು ಮದ್ರಾಸಿನ ಪಚ್ಚೆಯಪ್ಪ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಶ್ರೀ ಅನ್ನಾಮಲೈ ಅವರಿಂದ "ಜಗತ್ತಿನ ನಾನಾ ಕಡೆಗಳಲ್ಲಿ ಕಂಡುಬರುವ ವಿನಾಯಕನ ಅಸ್ತಿತ್ವ"ದ ಬಗ್ಗೆ ಭಾಷಣವಾಯಿತು, ಶ್ರೀ ವಿ.ಜಿ. ನಾಗರಾಜ ಅವರು ಅಧ್ಯಕ್ಷತೆ ವಹಿಸಿದ್ದರು. ಎರಡನೆ ದಿವಸ ದಕ್ಷಿಣ ರೈಲ್ವೆಯ ಶ್ರೀ ಕೃಷ್ಣರಾವ್ ಅವರ ಅಧ್ಯಕ್ಷತೆಯಲ್ಲಿ ಶ್ರೀ ಪಲ್ಲಾವರಂ ಕೃಷ್ಣಮೂರ್ತಿರಾಯರಿಂದ ದಾಸರ ಕೀರ್ತನೆಗಳ ಸುಶ್ರಾವ್ಯ ಭಜನೆ ನಡೆಯಿತು. ಮೂರನೆಯ ದಿನ ಶ್ರೀಮತಿ ರಮಾನಾಥನ್ ಯ್ಯನವರಿಂದ ವೀಣಾವಾದನ ನಡೆಯಿತು, ಸಂಘದ ಮಾಜಿ ಅಧ್ಯಕ್ಷರಾಗಿದ್ದ ಶ್ರೀ ಶರ್ಮ ಅವರು ಅಧ್ಯಕ್ಷತೆ ವಹಿಸಿದ್ದರು ನಾಲ್ಕನೆಯ ದಿನ ಶ್ರೀಮತಿ ಕಲ್ಲಾಡಕುರ್ಚಿ ಲಕ್ಷ್ಮೀ ಸುಬ್ರಹ್ಮಣ್ಯಂ ಎಂಬವರಿಂದ ಸಂಗೀತ ಕಚೇರಿ ಜರುಗಿತು ಕೊನೆಯ ದಿನ ಪೂಜೆ, ಮಂತ್ರಪುಷ್ಪ ಮಹಾಮಂಗಳಾರತಿ ಅದ ಮೇಲೆ ಮೆರವಣಿಗೆಯೊಂದಿಗೆ ಹೋಗಿ ಗಣೇಶನನ್ನು ವಿಸರ್ಜಿಸಲಾಯಿತು.

ರತ್ನಾ ಕ್ಲಿನಿಕ್ ಪ್ರಾರಂಭೋತ್ಸವ

ಡಾ| ಆರ್ ಎಸ್ ಪರೋಡಿ ಇವರು ತಾ 27—9—64 ರಂದು ಹರಿಹರದಲ್ಲಿ ಭಂಗಾಳೆ ತುಳುಜಪ್ಪನವರ ಕಟ್ಟಡದಲ್ಲಿ "ರತ್ನಾ ಕ್ಲಿನಿಕ್" ಎನ್ನುವ ಚಿಕಿತ್ಸಾಲಯವನ್ನು ತೆರೆದಿರುತ್ತಾರೆ

"ನಿಮಗೆ ಸ್ವಂತ ಮನೆ" ಯೋಜನೆ

ಪಾಲಿಸಿದಾರರಿಗೆ ಮನೆ ಕಟ್ಟಿಕೊಳ್ಳಲು ಅಥವಾ ಇದ್ದ ಮನೆಗೆ ಬದಲಾವಣೆ ಮಾಡಲು ಅಥವಾ ಹೊಸತಾಗಿ ಕಟ್ಟಿಸಲಾದ ಮನೆ ಕೊಂಡುಕೊಳ್ಳಲು ನೆರವಾಗುವ ಉದ್ದೇಶದಿಂದ ಲೈಫ್ ಇನ್‌ಶೂರೆನ್ಸ್ ಕಾರ್ಪೊರೇಶನು ಪ್ರಾರಂಭಿಸಿರುವ "ನಿಮಗೆ ಸ್ವಂತ ಮನೆ" ಯೋಜನೆಯು ತಾ 15-10-64ರಿಂದ ಮಂಗಳೂರು ನಗರ ಪ್ರದೇಶಕ್ಕೆ ಅನ್ವಯಿಸುವುದೆಂದು ತಿಳಿದು ಬರುತ್ತದೆ ಈ ಯೋಜನೆಯು ಆಗಾಗಲೇ ಮೈಸೂರು ರಾಜ್ಯದ ಮಣಿಪಾಲ ಸಹಿತ ಉಡುಪಿ, ಹುಬ್ಬಳ್ಳಿ, ಧಾರವಾಡ, ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಜಾರಿಯಲ್ಲಿದೆ

ಕೇಳಿಕೆ ದಿನಾಚರಣೆ

ಉಡುಪಿ—ಅ. ಭಾ. ವಿಮಾ ನೌಕರರ ಸಂಘದ ನಿರ್ದೇಶನದಂತೆ ಸ್ಥಳೀಯ ಜೀವ ವಿಮಾ ನೌಕರರ ಸಂಘದ ಆಶ್ರಯದಲ್ಲಿ ತಾ. 25 ರಂದು ಸ್ಥಳೀಯ ನೌಕರರು ಕೇಳಿಕೆಗಳ ದಿನವನ್ನಾಚರಿಸಿದರು ಮೌನ ಪ್ರದರ್ಶನ, ಮೆರವಣಿಗೆಗಳಾದ ಮೇಲೆ ಯೂನಿಯನ್ ಕಾರ್ಯಾಲಯದಲ್ಲಿ ಶ್ರೀ ಪಿ ವಿ ಪ್ರಭುಗಳ ಅಧ್ಯಕ್ಷತೆಯಲ್ಲಿ ಸಭೆ ನಡೆದು ಶ್ರೀ ಬಿ ಪಿ. ಕೆದ್ಲಾಯರು ಮಂಡಿಸಿದ ಹೇಳಿಕೆಗಳ ಕುರಿತಾದ ನಿರ್ಣಯವನ್ನು ಅಂಗೀಕರಿಸಲಾಯಿತು, ಉಡುಪಿ ಕಚೇರಿಯ ವರ್ಗಾವಣೆ ತಡೆಯಬೇಕು, ಯಾಂತ್ರೀಕರಣ ಸಲ್ಲದು, ನೌಕರರಿಗೆ ಕೊಡಬೇಕಾದ ಸವಲತ್ತುಗಳ ಕುರಿತು ಮಾತುಕತೆ ನಡೆಸಬೇಕು ಇವೇ ಮೊದಲಾದ ನಿರ್ಣಯಗಳಾದುವು.

ಬೆಳ್ತಂಗಡಿ

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O S. 150/64.

ವಿನ್‌ಸೆಂಟ್ ಇಸಿಡೋರ್ ರೇಗೊ —ವಾದಿ

ಮತ್ತು

ಅಬ್ದುಲ್ ರಹಿಮಾನ್ ಬ್ಯಾರಿ ಕೂಡಾ

—ಪ್ರತಿವಾದಿರು

ನೋಟೀಸು

7ನೇ ಪ್ರತಿವಾದಿ ಆತಿಕಮ್ಮ, ಅಬ್ದುಲ್ ರಹಿಮಾನ್ ಬ್ಯಾರಿಯ ಹೆಂಡ್ತಿ, ಹಾಸನ ಜಿಲ್ಲೆಯ ಬೇಲೂರು ಎಂಬಲ್ಲಿರುವವಳು

8ನೇ ಪ್ರತಿವಾದಿ-ಐಸಮ್ಮ, ಹಾಮದೆ ಬ್ಯಾರಿಯ ಹೆಂಡ್ತಿ ಬಂಟ್ವಾಳ ತಾಲೋಕು ಹೊಸಂಗಡಿ ಎಂಬಲ್ಲಿರುವವಳು.

ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ಅಡವು ಧರ್ಮಾವೇಜಿನ ದಾವೆಯು ನೋಟೀಸಿನ ಬಗ್ಗೆ ತಾರೀಕು 19-10-1964ಕ್ಕೆ ಇಟ್ಟಿರುತ್ತದೆ ಆ ದಿವಸ ನೀವು ಪೂರ್ವಾಹ್ನ ಘಂಟೆ 11ಕ್ಕೆ ಈ ಕೋರ್ಟಿನ ಮುಂದೆ ಬಂದು, ಏನಾದರೂ ಆಕ್ಷೇಪ ಹೇಳುವುದಿದ್ದರೆ ಬರೆದ ಮೂಲಕ ಹೇಳುವುದು, ಇಲ್ಲದಿದ್ದಲ್ಲಿ ನಿಮ್ಮನ್ನು ಗೈರಾಯಿ ಮಾಡಿ ದಾವೆಯನ್ನು ಮುಂದಿನ ತನ್ನಿಯಿಂದ ತೀರ್ಮಾನಿಸಲಾಗುವುದುಎಂತ ಈ ಕೋರ್ಟಿನ ಅಪ್ಪಣೆಯಂತೆ ಮಾಡಿದನೋಟೀಸು

R N Bhide,
Advocate for Plaintiff.

ಬೆಳ್ತಂಗಡಿ, ತಾ 1-10 1964.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R E. P 167/1964 O. S 229/56.

ಬ್ರಹ್ಮಯ ಶೆಟ್ಟಿ — ಅರ್ಜಿದಾರ,

ಮತ್ತು

ವೇದಾವತಿ ಕೂಡಾ — ಎದ್ರಿಗು.

2ನೇ ಎದ್ರಿ—ವಜ್ರ ಕುಮಾರಿ, ವೇದಾವತಿಯವರ ಮಗಳು ಪುತ್ತೂರು ತಾಲೂಕು ಪುತ್ತೂರು ಕಸ್ಬಾ ಗ್ರಾಮದ ನೆಲ್ಲಿಕಟ್ಟೆ ಎಂಬಲ್ಲಿ.

ಸದ್ರಿ ಅರ್ಜಿದಾರರಿಗೆ ಡಿಕ್ರಿ ವಿಧಿ ಮೇರೆಗೆ ಬರಾ ಹಣಗಳ ವಸೂಲಿ ಬಗ್ಗೆ ನಿಮ್ಮ ಹಕ್ಕಿನ ಸ್ಥಿರಾಸ್ತಿ ಜಪ್ತಿ ನಡ್ಸಿ ಏಲಂ ಹಾಕಿಸಬೇಕೆಂದು ಮಾಡಿದ ಮೇಲಿನ ಅಮಲ್ದಾರಿಯು ನಿಂಮ ಜವಾಬ್ದಾರಿ ಬಗ್ಗೆ ತಾರೀಕು 30-10-1964ಕ್ಕೆ ವ್ಯಾದೆ ಯಿರುವುದರಿಂದ ನಿಮಗೇನಾದರೂ ಆಕ್ಷೇಪಣೆಯಿದ್ದಲ್ಲಿ ಅ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಬಯಾನಿಸಿಕೊಳ್ಳತಕ್ಕದ್ದೆಂತಲೂ ತಪ್ಪಿದರೆ ನಿಂಮನ್ನು ಗೈರ್ವಾ ಮಾಡಿ ಮುಂದರಿಸಲಾಗುವುದೆಂತಲೂ ಕೋರ್ಟಿನ ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗಿದೆ

(Sd) N Subramanyam.
Advocate for Petr.

ಕೋರ್ಟುಕಚೇರಿ ಪುತ್ತೂರು, ತಾ 30-9-1964.

ಗೋಪ ರಾಜ್ಯದಲ್ಲಿ

ಮಹಾರಾಣಿಯವರ ಜಂಬೂ ಸವಾರಿ

'ಏನು, ಮುಸುಕು ಎಳಕೊಂಡು ಮಲಗಿದ್ದಿ?'

"..........."

"ಏನಂತೆ? ಯಾಕಪ್ಪಾ ಹೀಗೆಲ್ಲಾ ಮಲಗಿದ್ದು?"

"...........'

'ಮಾತಾಡಬಾರದೇನೆ? ಏನದು ಗರಾ ಬಡಿದಿರೋದಾಂತೆ?"

"..........."

"ಗಂಟೆ ಇನ್ನೂ ಎಂಟು; ಆಗ್ಲೇ ಹೀಗೆ ಗಾಢನಿದ್ರೆಯಾದ್ರೆ....?"

"ಗತಿಯೇನೂಂತಲ್ವೆ?'

"ಸದ್ಯ ಎಚ್ಚರಿದೇಂತಾಯ್ತು."

"ಬದುಕಿದ್ಯೆ ಬಡ ಜೀವವೇ ಎನ್ನಿ...."

"ಏಕೆ ಹಾಗೆಲ್ಲಾ ನಮ್ಮನ್ನ ನಾವೇ ಬಡಪ್ರ್ಯಾಂತ ಹೇಳಿಕೊಳ್ಳಬೇಕೂಂತ?"

"ಮತ್ತೇನಂತೆ ಶ್ರೀಮಂತ್ರಾಂತ ಅಂದುಕೊಳ್ಳಬೇಕೆ?"

"ಹಾಗಾದ್ರೂ ಏಕೇಂತ?"

"ಮತ್ತೆ ಹೀಗೆ ಅಂತಃಪುರವಾಸಿಯ ಹಾಗೇ...."

"ಛೆ....ಛೆ ..ಏನು ಮಾತಿದು? ಶಾಂತಂ ಪಾಪಂ ಶಾಂತಂ ಪಾಪಂ...."

"ಸಾಕು ಕಿವಿ ಮುಚ್ಚಿಕೊಳ್ಳೋದು. ನಿಮ್ಮದು ಯಾವಾಗ್ಲೂ ಹೀಗೇನೇ...."

"ಹೇಗಂತೆ ?"

"ನನಗೇನಾದ್ರೂ ಹೇಳ್ಬೇಕೂಂತಿರೋ ದಿನ ನೀವು ಕಿವಿ ಮುಚ್ಚಿಕೊಳ್ಳೋದು..'

"ಎಲ್ಲಿ? ಇಗೋ ಕರ್ಣದ್ವಂದ್ವವು ತೆರೆದೇ ಇದೆಯಲ್ಲಾ"

"ಮತ್ತೆ ಮುಚ್ಚಿಕೊಂಡದ್ದೇಕಂತೆ?"

"ಅಶುಭ ವಾಕ್ಯವನ್ನು ಆಲಿಸದಂತೆ...."

"ಓ ನಾನೀಗ ಅಂದದ್ದು ಅಶುಭವಾಯ್ತಲ್ಲ...ಸಾಕು ಬಿಡಿ ಅಂದ್ರೆ....ನಾನನ್ನೋ ಅಶುಭ ವಾಕ್ಯೆಂಬುದನ್ನು ಕೇಳಿದ ಮೇಲೆ ತಾನೇ ಕಿವಿ ಮುಚ್ಕೋದ ? ಒಳ್ಳೆ ಕಥೆ ನೋಯಪ್ಪ...."

"ನೀನನ್ನೋದು ಸರೀನೇ....ಆದರೂ ಸಂಪ್ರದಾಯವಾಗಿ ಬಂದಿರೋ ಪದ್ಧತಿ."

"ನಿಮ್ಮ ಸಂಪ್ರದಾಯಾನೆಲ್ಲಾ ಈ ಜಾತ್ಯತೀತ ಯುಗದಲ್ಲಿ ಅಗ್ನಿಗಾಹುತಿ ನೀಡಬೇಕು"

"ನಾಳೆ ಸೂರ್ಯೋದಯಕ್ಕೆ ಮೊದಲು ಎದ್ದವಳೇ ಈ ಮಹಾ ಸಂಪ್ರದಾಯ ಯಜ್ಞಕ್ಕೆ ಓಂಕಾರ ಮಾಡಿ ಬಿಡೋವ."

....ಓ ...ಸಾಕೂಂದ್ರೆ...ಒಳ್ಳೆ ಬುದ್ಧಿವಂತ್ರು ನೀವು. ನಾಳೇನೂ ಬೇಗ ಹೋಗೋಕಿಲ್ಲ ತಾನೆ? ನಾನು ಸೂರ್ಯೋದಯವಾದ ನಂತರವೇ ಏಳೋವ್ರು...."

"ಸರೀನ್ನ ಸೂರ್ಯವಂಶದವಳಾಗೋದು....?

"ಏನಂದ್ರಿ....ಬೇಡಪ್ಪಾ ಬೇಡ. ಪಾಪ ತರಣಿವಂಶಜೆಯಾಗಿ ಸೀತೆ ಪಟ್ಟಕಷ್ಟವೇ ಸಾಕು; ಅದೇನೂ ನನಗೆ ಬೇಡ .. ನನ್ನ ಶತ್ರುಗಳಿಗೂ ಬೇಡ....?

"ಸದ್ಯ ಅಷ್ಟಾದ್ರೂ ಸದ್ಭಾವನೆಯಿದೆಯಲ್ಲಾ?"

"ಮತ್ತೆ ನನ್ಗೆ ಎಲ್ಲಿ ಅದ್ರ ಲೋಪವಿದೆ? ಅಲ್ಲಾ ತನ್ನ ತಪ್ಪು ತನಗೆಲ್ಲಿ ಅರಿವಾಗುತ್ತೆ?"

"ಎಲ್ಲಿ ಹೇಳಿ ನೋಡೋಣ ...ಸಾಧ್ಯವಾದ್ರೆ ತಿದ್ಕೋಕೆ ಪ್ರಯತ್ನ ಮಾಡ್ತೇನೆ."

"ಪಾಪ, ನೀನೂ ತಿದ್ದಿಕೊಳ್ಳೋಳು....'

"ಅಷ್ಟು ಶುಭದಲ್ಲಿ ನನ್ನ ನಿಷ್ಪ್ರಯೋಜಕಳೆಂದು ಸಿದ್ಧಾಂತ ಮಾಡಿಬಿಟ್ರಲ್ಲ.."

"ಕೋಪಿಸ್ಕೋಬೇಡವೆ. ನಾನು ಹೇಳೋದನ್ನ ಕೇಳು. ಗಂಡ ಬರೋದಕ್ಕೆ ಮೊದ್ಲು ನಿದ್ದೆ ಹೋಗೋದು ತಪ್ಪೂಂತ ಎಷ್ಟು ಬಾರಿ ಹೇಳಿದ್ದೆ?"

ಮತ್ತೆ ನೀವು ಬರೋದು ಯಾಕೆ ತಡವಾಗುತ್ತೆ? ನೀವು ಮಾಡೋದು ತಪ್ಪಲ್ಲ; ನಾನು ನಿಂತ್ರೂ ತಪ್ಪು, ಕೂತ್ರೂ ತಪ್ಪು..."

"ನಿಂತ್ರೂ ಕೂತ್ರೂ ಅಲ್ಲ ರಾಣಿ, ಮಲಗಿದ್ರೆ ತಪ್ಪು. ನಿದ್ದೆ ಬಾರ್ದೇನೂ ಬಂದವರಂತೆ ತೋರ್ಸಿಕೊಂಡ್ರೆ ಮಹಾಪರಾಧ.."

"ಸಾಕು ಬಿಡೀಂದ್ರೆ...ಸಿಕ್ತು ಇವತ್ತೊಂದು ನಿಮಗೆ ಕೆಣಕೋಕೆ. ಕೆಲಸ ಮಾಡಿ ದಣಿದು ಒರಗಿಕೊಂಡ್ರೆ ಅಲ್ಲೇ ನಿದ್ದೆ ಬಂದು ಬಿಟ್ಟದ್ದು ನನ್ನ ತಪ್ಪು. ಅಗ್ಲಪ್ಪ, ಒದಗಲಿ ನನಗೆ ಕುಂಭೀಪಾಕ."

"ಅಯ್ಯಯ್ಯೋ, ಅಂತಹ ಅಭದ್ರ ಆಡಬೇಡ. ಅಲ್ಲ, ನೀನು ಮಲಗೀನ್ನ ನಿದ್ದೇನೂ ಬಂತೂನ್ನು, ಆದು ಆಹಾಳು ನಿದ್ದೆಯ ತಪ್ಪಲ್ಲದೆ ನಿನ್ನದು ನನ್ನದು ಹೇಗೆ?"

"ಒಳ್ಳೆ ನ್ಯಾಯಾಧೀಶರು. ಇಬ್ರು ಅಪರಾಧಿಗಳನ್ನೂ ಮುಕ್ತಗೊಳಿಸಿ ಮೂರನೆಯವನ ಮೇಲೆ ಆರೋಪ ಸಿದ್ಧ ಮಾಡಿದ್ರಿ..."

"ಹ್ಹ ಹ್ಹ ಹ್ಹ... ಅಲ್ಲ, ನೀನೇನೊ ಕೇಳಬೇಕೂಂತಂದಿಯಲ್ಲಾ...."

"ಓ, ಹೌದು.. ನೋಡಿ ಇವತ್ತು ಯಾವ ತಾರೀಕು?

"ತಾರೀಕು, ನಿನ್ನೆ ಮೂರು. ಇಂದು....

"ನಾಲ್ಕು ಅಲ್ವೆ...."

"ಹ್ಞಾಂ... ನಿನ್ನ ಲೆಕ್ಕ ತಪ್ಪಾಗೋದುಂಟೆ?"

"ನಿಮ್ಮ ಅವೆಲ್ಲಾ ಬೇಡ ದಸರಾ ಶುರು ..."

"ಓ, ತಿಳೀತು ಬಿಡು. ನೀನು ದಸರಾ ನೋಡೋಕೆ ಹೋಗಬೇಕೂಂತ ಅಂದಿದ್ದಿಯಲ್ಲಾ....'

'ಸರಿ. ಅಷ್ಟಾದ್ರೂ ಜ್ಞಾಪಕವಿದೆಯಲ್ಲಾ ಸದ್ಯ. ಯಾವಾಗ ಹೊರಡೋದು?]

"ದಸರಾ ಶುರುವಾಗುತ್ತೇನ್ನ ಜಂಬೂ ಸವಾರಿ ನೋಡಬೇಕೆಂತಲ್ವೆ ನಿನ್ನದು?"

'ಮೈಸೂರಿನ ಮಹಾರಾಜರ ಜಂಬೂ ಸವಾರಿ ಲೋಕಪ್ರಸಿದ್ಧವಂತೆ.'

"ಹೌದು..."

'ಅದನ್ನ ನೋಡೋಕೆ ಎಲ್ಲಿಲ್ಲದ ಜನ ಬರ್ತಾರಂತೆ ...'

'ಹ್ಞಾಂ ...'

'ಹಾಗಿರುವಾಗ ..'

'ನಾವೂ ಏಕೆ ನೋಡಬಾರದೂಂತ ಅಲ್ವೆ?'

"ನೀವು ಮೈಸೂರಿಗೆ ಕರೆದುಕೊಂಡು ಹೋಗ್ತೀನಂತ ಅಂತಿದ್ರಿ."

"ಈಗ್ಲೆ ಹೊರಡೋಣಾಂತ ಆಸೆ?"

"ಹ್ಞಾಂ ..."

"ಹೊರಡಬಹುದು....'

"ಯಾವಾಗ?"

"ಹೊರಡಬಹುದೂನ್ನು ....ಅದ್ರೆ...."

"ನೋಡಿ, ನಾನು ಹೇಳೋದಕ್ಕೆ ನೀವು ಒಂದಲ್ಲ ಒಂದು ವಿಘ್ನ ತಂದು ಹಾಕ್ತಲೇ ಇರ್ತೀರಿ."

ಅಲ್ಲ ಕಣೇ ನಾನು ತಂದು ಹಾಕಿರೋ ವಿಘ್ನ ಅಲ್ಲ ಇದು...'

"ಮತ್ತೆ?"

"ನೋಡು ಈ ಕಾರ್ಡನ್ನ...."

"ಯಾರದ್ದು?"

"ಯಾರದ್ದೂಂದ್ರೆ? ಯಾರೋ ಒಬ್ಬ ಬರೆದಿರೋದು....'

"ಏನು ಬರ್ದಿದ್ದಾನೆ ಅದ್ರಲ್ಲಿ? ನೀವೇ ಸ್ವಲ್ಪ ಓದಿ ಬಿಡಿ..."

ಊರಿಗೆ ಅರಸನಾದ್ರೂ ಮನೆ ಹೆಂಡ್ತಿಗೆ ಕಾಸ್ತಾರ ಅನ್ನೋದು ಸುಳ್ಳಲ್ಲ...."

"ಅಂತಹ ಮಾತ್ಯಾಕೆ ಆಡ್ತೀರಿ? ಬೇಡ, ಇಲ್ಲಿ ಕೊಡಿ, ನಾನೇ ಓದ್ತೇನೆ .." ಓ, ಇದೇನಂತೆ?"

"ಯಾವುದು?"

"ಮೈಸೂರಲ್ಲಿ ಅನ್ನ ಸಿಗೋದಿಲ್ಲ. ಯಾರೂ ದಸರಾಕ್ಕೆ ಬರಬಾರದು, ಬಂದ್ರೆ ಉಪವಾಸ ಬಿದ್ದು ಸಾಯಬೇಕಾದೀತು ಅಂತ ಇದೆ ಇದ್ರಲ್ಲಿ"

"ಸಾಕಲ್ಲ, ಇನ್ನು ಬೇಕೇ ನಿನ್ಗೆ ದಸರಾ...."

'....ಅಲ್ಲ ಅಷ್ಟು ಬರಗಾಲವೇ ಅಲ್ಲಿ ...?'

'ಯಾರಿಗೆ ಗೊತ್ತು? ಶುದ್ಧ ಅಪಚಾರವಾಗಿದ್ದಿಕ್ಕೂ ಸಾಕು. ಆದ್ರೂ....'

'ಹಾಗೆ ಇಲ್ಲೂ ಇದೆಯಲ್ಲಾ ಅಭಾವ ದಿನವಿಡೀ ಕ್ಯೂ ನಿಂತ್ರೂ ದಿನದ ಅಕ್ಕಿ ಸಿಗೋದಿಲ್ಲ...ಅಲ್ಲ. ಅವ ಯಾಕೆ ಹಾಗೆ ಬರೆದಾನಂತೆ?"

'ಯಾರೋ ಒಬ್ಬ ಯಾಕೋ ಬರದಾನ್ನ '

'ಈ ಜನ್ರೇ ಹಾಗೆ. ಏನೋ ಉಂಟು ಇಲ್ಲ ಅಂತ ಇದ್ದು, ಕೊನೆಗೆ ಉಂಟೂಂತಾರೆ ...'

...ಅದಿರ್ಲಿ . ಹಾಗಾದ್ರೆ ಗಳಿಕ್ಕೆ ಹೊರಡೋದು ಖಂಡಿತಾನ್ನು .."

'ಹೌದು ...ಅಲ್ಲ ಗಳಿಕ್ಕೇನೆ?'

'ಹ್ಞಾಂ...'

"ಜಂಬೂಸವಾರಿ....?"

'ಗಾಕ್ಕೆ...'

"ಅಯ್ಯೋ.... ಆಗೋದಿಲ್ಲ ..ಆಗೋದಿಲ್ಲ...."

"ಏನಂತೆ?"

"ಅಲ್ರಿ, ನನಗೆ ತಿಂಗಳಾಗುತ್ತೆ"

ಓ....ಸರಿಹೋಯ್ತಲ್ಲ ಹಾಗಾದ್ರೆ...ಅಲ್ಲ. .ಆದ್ರೆ ಏನಂತೆ? ದೂರ ನಿಲ್ಲೋ ಸಂಪ್ರದಾಯವನ್ನ ಬಿಟ್ಟು ಬಿಡೋದು..."

ಛೆ...ಛೆ...ಎಂಥಾ ಮಾತಾಡ್ತೀರಿ? ಎಲ್ಲಾದ್ರೂ ಉಂಟೆ?"

'ಮತ್ತೆ ನೀನೇ ಅಂದೆಯಲ್ಲ'

"ಏನೋ ಮಾತಿಗೆ ಅಂದ್ರೆ...."

"ಅಂದ್ರೆ ನೀನೂ ಸಂಪ್ರದಾಯ ಮುರಿಯೋದಕ್ಕೆ ತಯಾರಿಲ್ಲಾನ್ನು...."

"ರಾಜ ಮಹಾರಾಜರೇ ತಯಾರಿಲ್ಲದಿರೋವಾಗ...ಅದಿರ್ಲಿ...ಸಾಕು ಇವತ್ತಿಗೆ. ಬೇಗ ಬಡಿಸ್ತೇನೆ- ಬನ್ನಿ..."

"ಅಂತೂ ಮಹಾರಾಣಿಯವ್ರ ಜಂಬೂಸವಾರಿ ಇಲ್ಲೇ ಆಯ್ತು. ಅನ್ನಪೂರ್ಣೆಯ ಆಜ್ಞೆ ಮೀರಲಾದೀತೆ?"

"ಸಾಕು ಸಾಕು ನಿಮ್ಮ ಅಣಕ. ಬನ್ನಿ ಮತ್ತೆ ಬೇಗ...."

ಮತ್ತೆ ಅಲ್ಲ ಕಣೇ...ಈಗ್ಲೆ....ಈಗ್ಲೆ ಬಂದೆ"

— ಗೋರಾ.

ಸಾಹಿತ್ಯ ವೇದಿಕೆಯ ಮೇಲೆ ಈಗ ಇನ್ನೊಂದು ಬಲಿ?

(ಎರಡನೇ ಪುಟದಿಂದ)

ಅನ್ನಿಸುತ್ತದೆ. ಬಂಗಾಲದಲ್ಲಿ ಜನರು ನನ್ನ ಕಾದಂಬರಿಗಳೆಲ್ಲವನ್ನೂ ನಾನು ಅನುಭವಿಸಿರುತ್ತೇನೆ ಎಂದೇ ತಿಳಿದಿರುತ್ತಾರೆನ್ನುವದನ್ನು ನೀನು ನೋಡಿಲ್ಲ. ಈ ಕಾರಣದಿಂದಲೇ ಸಜ್ಜನ ಸಮಾಜದಲ್ಲಿ ನನಗೆ ಚಿಲುಮೆ ಕೊಡುವದು ವರ್ಜಿಸಲ್ಪಟ್ಟಿದೆ! ಜನರಲ್ಲಿ ಈ ಕುರಿತು ಎಷ್ಟೊಂದು ಅಪವಾದ ಹರಡಿಕೊಂಡಿದೆ!"

ಶರತ್ ಚಂದ್ರರು ಈ ಅಪವಾದಗಳಿಂದ ದೂರಸರಿದು ಇಂದಿಗೆ ಇಪ್ಪತ್ತಾರು ವರ್ಷಗಳು ಕಳೆದಿವೆ. ಅವರು ನಿರ್ಮಿಸಿದ ಸಾಹಿತ್ಯ ಸೃಷ್ಟಿಯ ಆಧಾರದಿಂದಲೇ, ಅವರ ಜೀವನದ ಕುರಿತು ಕಲ್ಪನೆಮಾಡಿದವರಿದ್ದಾರೆ! ಅವರು ಕಣ್ಮುಚ್ಚಿದ ಬಳಿಕವೂ ಈ 'ಸಜ್ಜನ'ರು ಶರತ್ ಜೀವನಕ್ಕೆ ಸಂಬಂಧಿಸಿದ ವಿಷಯಗಳನ್ನು ಕಲ್ಪಿಸಿ ಹೇಳಲು ಅದೆಷ್ಟೋ ಪ್ರಯತ್ನಿಸಿದ್ದಾರೆ. ಇದ್ದರೂ, ಶರತ್‌ಚಂದ್ರರು ಬದುಕಿದ್ದಾಗ ಅನುಭವಿಸಿದ ನೋವು ಈಗ ಇಲ್ಲ! ಅವರ ಸಾಹಿತ್ಯ ಇಂದಿನವರೆಗೆ ಅಮರವಾಗಿದೆ; ನಮ್ಮ ಕಣ್ಮುಂದಿದೆ. ನಾಳೆ ಏನಾದರಾಗಲಿ, ಇಂದು ಶರತ್ ಸಾಹಿತ್ಯಕ್ಕೆ ಮನ್ನಣೆ ಇದೆ. [ಎಂತಹ ಸುಯೋಗ!]

ಮುಕ್ತಿಬೋಧರ ಕುರಿತಾಗಿ ಈಗ ಜನಾಸಕ್ತಿ ಬೆಳೆದಿದೆ. ಅವರ ಕಾವ್ಯ ಸೃಷ್ಟಿಯ ಕುರಿತಾಗಿ ಮುಕ್ತ ಕಂಠದಿಂದ ಆಡಿಕೊಳ್ಳುವವರು ಮುಂದೆ ಬಂದಿದ್ದಾರೆ.

ಅವರು ೧೯೧೭ನೆಯ ಇಸ್ವಿಯ ನವಂಬರ್ ತಿಂಗಳ ೧೩ನೆಯ ತಾರೀಕಿಗೆ ಜನ್ಮತಳೆದರು. ಅಂದಿನಿಂದ ನಲ್ವತ್ತೇಳು ವರ್ಷ ಅನುಭವಿಸಬೇಕಾದುದನ್ನು ಅನುಭವಿಸಿದರು. ಜನರ ಉತ್ತಮ ವಿಚಾರ ವಿಕಾಸಕ್ಕಾಗಿ ಜೀವ ತೇದರು. ಈಗಷ್ಟೆ ಅವರ ಪಾಡು ಪಟ್ಟ ಜೀವನ ಕೊನೆಗೊಂಡಿದೆ. ಈಗಷ್ಟೆ ಅವರ ಕಾವ್ಯ ಕೃಷಿ ಎಂತಹ ಫಲ ಬಿಟ್ಟಿದೆ ಎಂಬತ್ತ ಬುದ್ಧಿವಂತರ ದೃಷ್ಟಿ ಬಿದ್ದಿದೆ. ಅವರು ಮಕ್ಕಳನ್ನು, ಸಹಧರ್ಮಿಣಿಯನ್ನು ಬಿಟ್ಟು ಹೋದರು. ಇದ್ದ ಕೆಲವು ಆತ್ಮೀಯರನ್ನು ಬಿಟ್ಟು ಅಗಲಿದರು. ಅವರ ರಚನೆಯನ್ನೂ ಅವರು ಬಿಟ್ಟು ಕಣ್ಮರೆಯಾದರು. ಅವರನ್ನು ಹಿಂಬಾಲಿಸಿಕೊಂಡು ಬಂದಿದ್ದ ದಾರಿದ್ರ್ಯವನ್ನೂ ಜೊತೆಗೊಯ್ಯಲಿಲ್ಲ!

ಕಳೆದ ತಿಂಗಳ ತಾರೀಖು ಹನ್ನೆರಡು ಮಹಾ ಕವಿ ಮುಕ್ತಿಬೋಧರ ಶವ ಯಾತ್ರೆ ಹೊರಟಿತ್ತು. ಅವರು ಸಮಾಜದ ಗಣ್ಯ ವ್ಯಕ್ತಿಯಾಗಿರಲಿಲ್ಲ. ರಾಜ್ಯಕೀಯ ರಂಗದ ಪುಢಾರಿಯಾಗಿರಲಿಲ್ಲ; ಮಂತ್ರಿಯಾಗಿಲಿಲ್ಲ

ಅಂತೆಯೇ ಅವರನ್ನು ಕೊನೆಯ ಬಾರಿ ಬೀಳ್ಕೊಡಲು ಹೆಚ್ಚು ಮಂದಿ ಬರಲಿಲ್ಲ. ಬಂದಿದ್ದವರು ಅರ್ವತ್ತು ಎಪ್ಪತ್ತು ಜನ; ಅವರೊಡನೆ ಹೊರಟಿತ್ತು ಮುಕ್ತಿಬೋಧರ ಅಂತಿಮ ಯಾತ್ರೆ!

NAVAYUGA 8—10—1964

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯವಾಣಿ

(ಜ್ಯೋತಿಷವು ಅದೃಷ್ಟವಾದವಲ್ಲ ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು ನಮ್ಮ ಹಲವು ಮಂದಿ ವಾಚಕರ ಸೂಚನೆಯ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸಲಾರಂಭಿಸಿದ್ದೇವೆ. ಸಂ. ನ.)

೮-೧೦-೬೪ರಿಂದ ೧೪-೧೦-೬೪ರ ವರೆಗೆ

೧. ಮೇಷ

ಸುಖಸ್ಥಾನದಲ್ಲಿ ಕುಳಿತ ಶುಭನೋರ್ವನನ್ನುಳಿದು ಇತರ ಗ್ರಹರೆಲ್ಲರೂ ಸದ್ಯ ನಿಮಗನುಕೂಲರಾಗಿರುವುದರಿಂದ ನಿಮ್ಮ ಸಂಕಲ್ಪಗಳೆಲ್ಲವು ನಿರ್ವಿಘ್ನದಿಂದ ಕಾರ್ಯರೂಪಕ್ಕೆ ಬರಲಿವೆ. ಪ್ರತಿಯೊಂದು ಕಾರ್ಯವೂ ನಿಮ್ಮೆಣಿಕೆಗಿಂತಲೂ ಅಧಿಕವಾದ ಫಲವನ್ನು ಕೊಟ್ಟೀತು. ನಿಮ್ಮ ಕರ್ತವ್ಯದಕ್ಷತೆಯ ಕಂಡು ಶತ್ರು ವರ್ಗವೂ ಕೂಡಾ ಮೂಗಿನ ಮೇಲೆ ಬೆರಳಿಡಲಿದೆ. ಎಷ್ಟಾದರೂ ಕೂಡಾ ನಿಮ್ಮ ಮನಸ್ಸಿಗೆ ಮಾತ್ರ ನೆಮ್ಮದಿಯಿರದು. ದುರ್ಜನರ ಸಹವಾಸದಿಂದಾಗಿ ಧನಹಾನಿ, ಮಾನ ಚ್ಯುತಿಗೂ ಒಳಗಾಗುವ ಸಂಭವವಿದೆ. ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಬಯಕೆಗಳು ಸಫಲಗಳಾಗುವವು.

೨. ವೃಷಭ

ನಿಮ್ಮ ಕರ್ತವ್ಯವನ್ನು ನೀವು ನಿರ್ವಹಿಸುವಿರಿ. ಆದರೆ ಪರಿಶ್ರಮಕ್ಕೆ ತಕ್ಕ ಫಲ ಲಭಿಸದು ಹಿರಿಯರ ಸಹಕಾರವು ನಿಮಗಿಂದು ಲಭಿಸದು. ಅಷ್ಟೇಕೆ ಮನೆಯ ಜನರೂ ನಿಮಗೆ ವಿಪರೀತವಾಗಿ ವರ್ತಿಸಲಿರುವರು. ದೂರದೃಷ್ಟಿಯ ಅಭಾವದಿಂದಾಗಿ ಕೆಲವೊಮ್ಮೆ ಆರಂಭಿಸಿದ ಕಾರ್ಯವನ್ನು ಅರ್ಧದಲ್ಲೇ ನಿಲ್ಲಿಸಬೇಕಾದ ಪರಿಸ್ಥಿತಿಯೂ ಬರಲಿದೆ. ಆರ್ಥಿಕ ಬಿಕ್ಕಟ್ಟಿನಿಂದಾಗಿ ದಿನಚರಿಯು ಕಷ್ಟವಾದೀತು. ಕಫದೋಷವು ಆಗಾಗ ಕಂಡು ಬರಲಿದೆ, ಅರ್ಧಾಂಗಿಯ ಆರೋಗ್ಯವು ಕೂಡಾ ಚೆನ್ನಾಗಿರದು. ವಾರಾದಿಯ ಮೂರು ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಿಗವಕಾಶವಿರದು.

೩. ಮಿಥುನ

ನಿಮ್ಮ ಭಾಗ್ಯಪತಿಯಾದ ಶನೈಶ್ಚರನು ಸ್ವಕ್ಷೇತ್ರದಲ್ಲಿದ್ದರೂ ಲಾಭಪತಿಯಾದ ಕುಜನು ಧನಸ್ಥಾನದಲ್ಲಿ ನೀಚನಾಗಿ ಕುಳಿತಿರುವ ಕಾರಣ ಹಣದ ಅಡಚಣೆಯು ವಿಶೇಷವಾಗಲಿದೆ. ದುಡಿಮೆಯ ಬಹ್ವಂಶವನ್ನು ನೀವಿಂದು ಸದ್ವಿನಿಯೋಗ ಮಾಡುವಿರಿ. ಆದರೂ ಜನತೆಯೊಳು ಸಂಸ್ಕಾರ ಕಲಹಗಳು ಹೆಚ್ಚಲಿವೆ. ನೌಕರಿ ವರ್ಗದವರಿಗೂ ವ್ಯಾಪಾರೀ ಜನತೆಗೂ ಈ ವಾರವು ಹೆಚ್ಚಿನ ಅನಿಷ್ಟದಾಯಿಯಾಗಿ ಪರಿಣಮಿಸದು, ಸರಕಾರೀ ಅಧಿಕಾರಿಗಳ ಕೀಡೆಗೆ ಸಿಲುಕುವ ಸಂಭವವಿದೆ. ತಾ. 9ರಿಂದ 13ರವರೆಗಿನ ದಿನಗಳಲ್ಲಿ ನಿಮ್ಮ ಕೆಲವೊಂದು ಸಂಕಲ್ಪಗಳು ಸಿದ್ಧಿಸಲಿವೆ,

೪. ಕರ್ಕಟಕ

ವಿರೋಧಿ ವರ್ಗದವರ ಕಾಟವಧಿಕವಾಗಿದ್ದರೂ ನೀವು ನಿಮ್ಮ ಕರ್ತವ್ಯದಿಂದ ಪರಾಙ್ಮುಖರಾಗಲಾರಿರಿ. ಧನ ಭಾಗ್ಯ ಲಾಭಪತಿಗಳ ಅನುಗ್ರಹದಿಂದಾಗಿ ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚಿನ ಫಲ ಲಾಭವಾದೀತು. ಜನತೆಯ ಬೆಂಬಲ, ಬಂಧುಗಳ ನೆರವುಗಳ್ಳ ನಿಮಗೆ ಸಮಾಜದಲ್ಲಿ ಗಣನೀಯ ಸ್ಥಾನ ಲಭಿಸಲಿದೆ. ವಾಹನಾದಿಗಳಲ್ಲಿನ ಪ್ರಯಾಣವು ಅನಿಷ್ಟಕರವಾಗಿ ಪರಿಣಮಿಸೀತು ಕೆಲವೊಂದು ಗೃಹತಾಪತ್ರಯಗಳು ನಿಮ್ಮ ಮನಸ್ಸಿನ ನೆಮ್ಮದಿಯನ್ನು ಕೆಡಿಸಲಿವೆ. ವಾರಾಂತ್ಯದ 3 ದಿನಗಳಲ್ಲಿ ಧನ ಲಾಭಸುಖ ಭೋಗಗಳಂ ಪಡೆವಿರಿ.

೫. ಸಿಂಹ

ಸ್ವಯಂ ಯಾವ ಕಾರ್ಯವನ್ನೂ ನಿರ್ವಹಿಸುವ ಶಕ್ತಿ ನಿಮಗಿರದು, ಹಿರಿಯರ ಸಹಾಯವೂ ಲಭಿಸಲೊಲ್ಲದು ಆದಕಾರಣದಿಂದಾಗಿ ನಿಮ್ಮ ಕಾರ್ಯಕಲಾಪಗಳು ಮಂದಗತಿಯಿಂದ ಸಾಗಲಿವೆ, ಶತ್ರು ವರ್ಗದವರು ಶಕ್ತಿಮೀರಿ ಉಪದ್ರವಿಸಲಿರುವರು. ಸಮಾಜದಲ್ಲೂ ನಿಮಗಿಂದು ಹಿಂದಿನಂತೆ ಸ್ಥಾನಮಾನಗಳು ಲಭಿಸಲಾರವು. ಭೂಸಂಬಂಧವಾದ ವ್ಯವಹಾರದಲ್ಲಿ ತುಂಬಾ ನಷ್ಟವುಂಟಾಗಲಿದೆ. ಆದರೂ ಆರ್ಥಿಕ ಬಿಕ್ಕಟ್ಟು ನಿಮಗಿಂದು ಉಂಟಾಗಲಾರದು, ಸ್ವಂತಸುಖ ಭೋಗಕ್ಕಾವ ಕೊರತೆಯೂ ಇರದು. ವಾರದ ಆದ್ಯಂತ ದಿನಗಳು ತುಂಬ ಅನುಕೂಲವಾಗಿವೆ.

೬. ಕನ್ಯಾ

ನೀವಿಂದು ಆಡಿದ್ದೇ ಮಾತು, ಮಾಡಿದ್ದೇ ಕಾರ್ಯ, ಯಾರೂ ನಿಮಗಿಂದು ಇದಿರು ಹೇಳಲಾರರು, ಎಂತಹ ಮಹತ್ಕಾರ್ಯವೇ ಇರಲಿ ನಿಮಗದು ತೃಣಸಮವೆನಿಸೀತು. "ಪರರ ಹಂಗಿಲಿಗೆಲುವ ಕರ್ಣನಾನಲ್ಲ" ಎಂಬ ಗಾದೆಯಂತೆ ನೀವಿಂದು ಯಾರೊಬ್ಬರ ಸಹಾಯವನ್ನೂ ಬಯಸಲಾರಿರಿ ನಿಮ್ಮ ಪ್ರತಿಯೊಂದು ಉದ್ಯಮಗಳೂ ನಿರೀಕ್ಷೆಗಿಂತಲೂ ಹೆಚ್ಚಿನ ಫಲವನ್ನು ಕೊಡಲಿವೆ ಗೃಹ ಕೃತ್ಯಕ್ಕೆ ಬೇಕಾದ ಸಕಲ ವಸ್ತುವಡವೆಗಳಿಗೂ ನಿಮ್ಮಲ್ಲಿ ಕೊರತೆಯಿಲ್ಲದ ಕಾರಣ ಸುಖದಿಂದ ದಿನ ಕಳೆವಿರಿ. ತಾ. 9—10—11 ಈ ದಿನಗಳು ಅತ್ಯುತ್ತಮವಾಗಿವೆ.

೭. ತುಲಾ

ನಿಮ್ಮ ಕರ್ತವ್ಯವನ್ನು ನೀವು ನಿರ್ವಹಿಸುವಿರಾದರೂ ಕೆಲಸಕ್ಕೆ ತಕ್ಕುದಾದ ಫಲವನ್ನು ಮಾತ್ರ ಕಾಣಲಾರಿರಿ. ಧನಪ್ರದನಾದ ಕುಜನು ನೀಚನಾಗಿದ್ದು ಭಾಗ್ಯಪತಿಯೂ ಕೂಡ ವ್ಯಯಕ್ಕೆ ಬಂದಿರುವ ಕಾರಣ ಇಂದು ನಿಮಗೆ ಹಣದ ಅಡಚಣೆ ವಿಶೇಷವಾದೀತು ಆದರೂ ಸನ್ಮಿತ್ರರ ಬೆಂಬಲದಿಂದಾಗಿ ಈ ತಗಾದೆಗಳಿಂದ ಪಾರಾಗುವಿರಿ. ಗುರು ಹಿರಿಯರ ಅನುಗ್ರಹಕ್ಕೆ ಪಾತ್ರರಾದ ನಿಮಗೆ ಸಮಾರಂಭದಲ್ಲಿ ಸ್ಥಾನವಿರದು. ಸ್ವಾಮಿ ಸೇವಕರೊಳೂ ತಂದೆ ಮಕ್ಕಳೊಳೂ ಪರಸ್ಪರ ಕಲಹ ವೈಮನಸ್ಸುಗಳುಂಟಾಗಲಿವೆ. ತಾರೀಕು 11, 12, 13 ಈ ದಿನಗಳಲ್ಲಿ ಮನಸ್ಸಿಗೆ ನೆಮ್ಮದಿ ದೊರಕೀತು

೮. ವೃಶ್ಚಿಕ

ಸುರಗುರುವಿನ ಪೂರ್ಣಾನುಗ್ರಹ ಪಡೆದಿರುವ ನಿಮಗೆ ಹಿಡಿದ ಕಾರ್ಯದಲ್ಲಿ ಕಷ್ಟ ಪರಾಜಯಗಳುಂಟಾಗಲಾರವು. ನಿಮ್ಮ ಲಾಭ ಸ್ಥಾನದಲ್ಲಿಂದು ಬುಧನು ಉಚ್ಚನಿರುವುದರಿಂದ ನೀವೆಣಿಸಿರುವುದಕ್ಕಿಂತಲೂ ಹೆಚ್ಚಿನ ಧನವು ನಿಮ್ಮ ಕೈ ಸೇರಲಿದೆ. ಕಂಡದ್ದನ್ನು ಕಂಡಂತೆ ಹೇಳುವ ಸ್ವಭಾವದವರಾದ ನಿಮಗೆ ಈ ವಾರದಲ್ಲಿ ಮೋಸಮಾಡಿದವರ ಕೂಡೆ ಕಲಹವಾದೀತು. ವಿಷಯಾದಿಗಳ ಕಡೆ ಮನಸೋತು ಹೆಚ್ಚಿನ ಧನವನ್ನು ವ್ಯರ್ಥ ಹಾಳು ಮಾಡುವಿರಿ. ಪಿತ್ತ ದೋಷವು ಆಗಾಗ ಕಾಣಿಸಲಿದೆ. ತಾ. 9, 10, 14, ಈ ದಿನಗಳಲ್ಲಿ ವಿಜಯ ಧನಲಾಭಗಳಾಗುವುವು.

೯. ಧನು

ನಿಮ್ಮ ಅದೃಷ್ಟವಿಂದು ಸುಧಾರಿಸುತ್ತಾ ಬರುತ್ತಿದೆ. ಆರ್ಥಿಕ ತಗಾದೆಗೆ ಸಿಲುಕಿ ಹಣ್ಣಾಗಿಯಾದ ನೀವಿಂದು ಅದರಿಂದ ಮುಕ್ತರಾಗಿ ಕೈಯಲ್ಲೂ ಸ್ವಲ್ಪ ಧನ ಸಂಚಯಿಸುವಿರಿ. ಪ್ರಬಲರಾದ ಪ್ರತಿಪಕ್ಷಿಗಳನ್ನು ಪ್ರತಿಭಟಿಸುವ ನಿಮಗೆ ವ್ಯಾಪಾರ ವ್ಯವಹಾರಾದಿಗಳಲ್ಲಿ ಒಳ್ಳೆಯ ಫಲಪ್ರಾಪ್ತಿಯೂ ಕೀರ್ತಿಯೂ ಲಭಿಸಲಿದೆ. ಗೃಹ ತಾಪತ್ರಯದಿಂದ ನೀವಿಂದು ಮುಕ್ತರಾಗಿದ್ದರೂ ಕಫ ದೋಷವು ನಿಮ್ಮನ್ನು ಆಗಾಗ ಪೀಡಿಸಲಿರುವುದು. ತಾ. 8, 11, 12, 13 ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ ಸುಖಭೋಗಗಳನ್ನು ಪಡೆವಿರಿ,

೧೦. ಮಕರ

ಹಿಂದಿನಂತೆ ಅನುಕೂಲತೆಗಳು ನಿಮಗಿಂದು ಕಾಣಲಾರವು. ಮನೆಯ ಜನರೊಳು ಪರಸ್ಪರ ವೈಮನಸ್ಸು ಉಂಟಾಗಲಿದೆ. ಲೇವಾದೇವೀನಿಮಿತ್ತ ಕಲಹವುಂಟಾಗಿ ಕೋರ್ಟು ಕಚೇರಿಗಳವರೆಗೂ ಹೋಗುವ ಪ್ರಸಂಗ ಬರಲಿದೆ. ಜನತೆಯ ಸಹಕಾರವು ಚೆನ್ನಾಗಿದ್ದರೂ ರಾಜಕೀಯದಲ್ಲಿ ವಿಜಯವು ದುರ್ಲಭವಾದೀತು. ಅಪಥ್ಯವನ್ನು ಕೂಡಾ ನೀವಿಂದು ತ್ಯಜಿಸಬೇಕಾಗಿ ಬರಲಿದೆ ಪ್ರವಾಸವು ನಷ್ಟ ಕಷ್ಟದಾಯಿಯಾಗಿ ಪರಿಣಮಿಸುವದು. ತಾ. 8, 9, 10, 14 ಈ ದಿನಗಳು ಇತರ ದಿನಗಳಿಗಿಂತ ಲೇಸು.

೧೧. ಕುಂಭ

ಮುಂದಿಟ್ಟ ಹೆಜ್ಜೆಯನ್ನು ಹಿಂದಿಡುವ ಸ್ವಭಾವದವರು ನೀವಲ್ಲವಾದರೂ ಇಂದು ವಿರೋಧ ಪ್ರತಿರೋಧಗಳ ಆಧಿಕ್ಯದಿಂದಾಗಿ ಕೆಲವೊಂದು ಕಾರ್ಯಗಳನ್ನು ಅರ್ಧದಲ್ಲಿ ಕೈಬಿಡಬೇಕಾಗಿ ಬರುವದು. ನಿಮ್ಮ ಅಪ್ತೇಷ್ಟ ವರ್ಗದವರೇ ನಿಮ್ಮ ಮೇಲೆ ಪ್ರತಿಕ್ರಿಯೆಯನ್ನು ಗೈಯಲು ಮುಂದಾಗುವರು. ಪ್ರವಾಸ ದಕ್ಷಿಣ ಪುಣ್ಯಕ್ಷೇತ್ರ ತೀರ್ಥಾದಿಗಳ ದರ್ಶನ ಯೋಗವಿದೆ. ವಿಷಾಗ್ನಿಗಳ ಭಯವು ಕಂಡು ಬರುವುದು. ಸೋದರರೊಳು ಮನಸ್ತಾಪವುಂಟಾಗುವ ಸಂಭವವಿದೆ ತಾ. 9ರಿಂದ 13ರ ವರೆಗಿನ ದಿನಗಳು ಅನಿಷ್ಟಕಾರಿಗಳಲ್ಲವು.

೧೨. ಮೀನ

ದುರ್ದೈವವೇ ಮೂರ್ತಿಮತ್ತಾಗಿ ಬಂದು ನಿಮ್ಮನ್ನಿಂದು ಪೀಡಿಸುತ್ತಿರುವುದೆಂದರೂ ತಪ್ಪಾಗದು. ನಿಮ್ಮ ಯಾವತ್ತೂ ಬಯಕೆಗಳು ತಿರುಕನ ಕನಸಿನಂತಾಗಲಿವೆ, ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದ ನೀವು ಹೆರವರಿಗೆ ಮುಖ ತೋರಿಸಲು ನಾಚುವಿರಿ. ವಿಜಾತಿಯವರೊಡನೆ ಕಲಹವಾದೀತು, ಹೆಚ್ಚಿನ ನಿಮ್ಮ ಕಾರ್ಯಕಲಾಪಗಳು ಅರ್ಧಕ್ಕೆ ನಿಂತುಹೋಗಲಿವೆ, ಅಂತೂ ವಿಸ್ತಿಕ್ರಮಿ ನ್ಯಾಯದಿಂದೀವಾರವನ್ನು ನೀವು ಕಳೆಯ ಬೇಕಾಗಿದೆ ಜಾಗ್ರತರಾಗಿದ್ದಷ್ಟೂ ಉತ್ತಮ. ವಾರಾಂತ್ಯದ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಲಾರವು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ ಎರಡೂವರೆ (ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ. ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ. ಎರಡು (ಟ.ಖ ಪ್ರತ್ಯೇಕ)

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಸ್ಥಮಾ ರೋಗಿಗಳ ತಿಳುವಳಿಕೆಗೆ

ರಜಿಸ್ಟ್ರಿಯಾದ ಚಿತ್ರಕೂಟ ಅಸ್ತಮಾ ನಿವಾರಕಬೂಟಿಯನ್ನು ತಾ. 21-10-64ನೇ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವುದರಿಂದ ಅಸ್ತಮಾ, ಸೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga
Baba Avurvedashram,
P. O. Chitrakot U. P.

Edited, Printed & Published by K. H. Shetty, at the Navayuga Press, Udipi, S. India

ನವಯುಗ

ಸಂಪುಟ ೪೪]   ಅಕ್ಟೋಬರ, ೧೫, ೬೪   [ಸಂಚಿಕೆ ೭

ಗೇಹ ರಾಜ್ಯದಲ್ಲಿ

ಕಾಲವೇನೋ ನಿರವಧಿ, ಆದರೆ...

"ನೋಡೀಂದ್ರೆ...."

"ನೋಡ್ತಲೇ ಇದ್ದೇನಲ್ಲಾ ..."

"ಇಲ್ಲಿ ಕೇಳೀಂಗ್ರೆ...."

"ಕಿವಿಗಳು ತೆರೆದೇ ಇವೆ...."

"ಕಿವಿ ತೆರೆದ ಮಾತ್ರಕ್ಕೆ ಕೇಳಿಸ್ತೇನು?'

'ಕೇಳಿಸ್ತದೇನೇ ನಿನ್ಗೆ ಉತ್ರ ಹೇಳೋದೇನು?"

'ನಾಕೂಂದ್ರೆ, ಸ್ವಲ್ಪ ಇತ್ತ ಗಮನ ಹರಿಸೀಂದ್ರೆ...."

"ಯಾವುದಕ್ಕಪ್ಪ ಇದಿಷ್ಟೆಲ್ಲಾ ದೊಡ್ಡ ಪೀಠಿಕೆ?"

"ಪೀಠಿಕೇನೂ ಅಲ್ಲ ಪ್ರಸ್ತಾಪನೇನೂ ಅಲ್ಲ...."

'ಮತ್ತೆ"...."

'ನೀವು ಹೇಳೂಂತಾದ್ರೆ ಹೇಳ್ತೇನೆ."

'ಅಯ್ಯೋ ಮಹರಾಯ್ತಿ, ನಿನಗೂ ಹೇಳೂಂತ ಹೇಳ್ಬೇಕೇನು?"

'ಅಂದ್ರೆ?...."

"ಬೇಡಾಂತಂದ್ರೂ ತಡೆಯೋದಷ್ಟು ಇಷ್ಟೊಂದು ನಮ್ರವಾಗೋದಂದ್ರೆ...."

"ಕಬ್ಬಿಣ ವಿ ದುವಾದಂತೇನ್ನಿ..."

'ಕಬ್ಬಿಣವೇನೋ ಮಿದು ಆಗಬಹುದು; ಆದರೆ, ಅದಕ್ಕೆ ಬಿಸ್ಪು ಎಲ್ಲಿಂದ ಹುಟ್ಟಿತೂಂತ?"

"ಮಳೆ ಬಂದೇ ನದಿಯಲ್ಲಿ ನೆರೆಯೇರಬೇಕೆಂದಿಲ್ಲಾಂತ ಹೇಳ್ತಿದ್ರಲ್ಲ ನೀವು...."

"ಗಾಳಿಯೂದ್ರೂ ಬೀಸಬೇಕಲ್ಲ?ಓ... ತಿಳೀತು ಬಿಡು. ಸದ್ಯ ಅಷ್ಟಾದ್ರೂ ಬುದ್ಧಿ ಬಂತಲ್ಲ. ಪ್ರಾಯಃ ನೀನೊಬ್ಳೇ ಸರಿಯಾಗಿ ಅರ್ಥಮಾಡಿಕೊಂಡೆಯೆನ್ನು...."

"ಹ್ಞಾಂ...ಏನೋ ಕುಸು ಪ್ರಯತ್ನವನ್ನಾದ್ರೂ ಮಾಡೋಣಾಂತ..."

"ಮಾಡೋಣ, ಮಾಡೋಣ ಯಶಸಿಗ್ಗಿದ್ರೂ ಪ್ರಯತ್ನಿಸೋದಕ್ಕೇನಂತೆ?"

"ಸಾಕು ಬಿಡೀಂದ್ರೆ ...ನಾನು ಏನು ಹೇಳಿದ್ರೂ, ಏನು ಮಾಡಿದ್ರೂ ನಿಮ್ಗೆ ಕೊಂಕು ಮಾತಾಡೋದು, ತಪ್ಪು ಹುಡುಕೋದಷ್ಟೇ ಕೆಲ್ಸ...."

"ಅದ್ಕೇ ಹೇಳೋದು, ನಿನ್ಗೆ ಬುದ್ಧಿ ಸಾಲ್ದೂಂತ. ಅಲ್ಲ,ಆಡೋದು ಕೊಂಕಲ್ಲ; ಅದ್ರ ವಿಮರ್ಶೆ, ಹುಡುಕೋದು ತಪ್ಪಲ್ಲ, ಮಾಡೋದು ವಿವೇಚನೆ. ತಾನೂ ತಮ್ಮೂ ದೊಡ್ಡೂಂತ ಸಾಧಿಸೋ ಸ್ವಾರ್ಥ ಲೋಲುಪ ನರಕುನ್ನಿಗಳು ಮಾತ್ರ ಅದನ್ನು ಸಹಿಸೋದಿಲ್ಲ...."

"ನೀವು ಉದ್ದುದ್ದ ಮಾತಿಗೆ ತೊಡಗಿದ್ರೆ ನನಗೊಂದೂ ಅರ್ಥವಾಗೋಲ್ಲ."

"ಅರ್ಥವಾದ್ರೂ ಅಷ್ಟೆ; ಆಗ್ಲಿಲ್ಲಾಂತಂದ್ರೂ ಅಷ್ಟೆ"

"ನೋಡು, ನೀನೊಂದು ಕೆಲ್ಸ ಮಾಡಿದ್ರೆ ಅದ್ರಲ್ಲಿ ನಾನು ದೋಷ ಕಂಡ್ಕೊಂಡ್ರೆ ತಪ್ಪೇನು?"

"ಅದನ್ನೇ ಹೇಳಿದ್ದಲ್ಲ, ನನ್ನ ಕೆಲ್ಸಾನ ಟೀಕೆ ಮಾಡೋದೇ ನಿಮ್ ಕೆಲ್ಸಾಂತ...."

"ಅದೇ ಅಂದದ್ದು, ನೀನು ಮಾಡೋ ಕೆಲ್ಸ, ನಿನ್ನ ಅಜ್ಞಾನದಿಂದಲೋ ಅತಿಜ್ಞಾನದಿಂದಲೋ ಅಥವಾ ನನ್ನದರಿಂದಲೋ ನನ್ಗೆ ಹಿಡಿಸ್ಲಿಲ್ಲಾಂತಾದ್ರೆ, ನಾನು ನನ್ನ ಮನಸ್ಸಿಗೆ ತೋರೋ ವಿಷಯಾನ್ನ ಅನ್ನಬಾರದು ಅಲ್ವೆ?"

"ವಾಕ್ ಸ್ವಾತಂತ್ರ್ಯವಿದೆಯಲ್ಲಾ?"

"ಇದೇನ್ನ. ಅಭಿಪ್ರಾಯ ಪ್ರಕಟಿಸುವುದು ಎಲ್ಲರ ಅಧಿಕಾರ. ಆದ್ರೆ, ಅಧಿಕಾರವಿದೇಂತ ಅದನ್ನು ದುರುಪಯೋಗ ಮಾಡೋದಕ್ಕಾಗುತ್ತ್ಯೆ?"

"ಸತ್ಯವಾದರೂ ಪ್ರಿಯವಾದುದನ್ನೇ ನುಡಿಯ ಬೇಕೂಂತಲ್ವೆ ಸೂಕ್ತಿ?"

'ಹಾಗೇನೇ ಕೆಟ್ಟದರಲ್ಲೂ ಒಳಿತನ್ನು ಮಾತ್ರ ಕಾಣಬೇಕು..."

'ನಾನು ಅನ್ನೋದೂ ಹಾಗೇನೇ. ಮಾತು ಮಾತಿಗೆ ನನ್ನ ಮೇಲೆ ತಪ್ಪು ಸಾಧಿಸೋ ನೀವು...."

"ಸರಿ ಹೋಯ್ತು ಬಿಡೆ. ನಾನು ನೇಯ್ದ ಹಗ್ಗದಿಂದಲೇ ನನ್ನ ಬಿಗಿದು ಬಿಟ್ಟೆ ಯಲ್ಲ?"

"ನಾನು ಬಿಗಿದು ಬಿಟ್ರೂ ತಪ್ಪಿಸಿಕೊಳ್ಳೋ ರಹಸ್ಯ ನಿಮಗೆ ತಿಳಿದೇ ಇದೆಯಲ್ಲ...."

"ಸಧ್ಯ ಅಷ್ಟು ಗೌರವವಿದೇಂತ ಸಂತೋಷ. ನೋಡೋಣ. ನೀನನ್ನೋ ರೀತಿ ಹೇಗೆ...."

"ಹೇಗೆ?"

"ಅಡುಗೆಗೆ ಉಪ್ಪು ಹಾಕದೆಯಿದ್ರೂ ಬೇಯ್ಸಿಯಾದ್ರೂ ಹಾಕ್ತಾಳೇಂತ ತೃಪ್ತಿ ಪಡಬೇಕು."

'ಒಂದು ದಿನ ಉಪ್ಪು ಹಾಕದೆ ಹೋದ್ರೆ ಏನಾಗೋದಂತೆ? ಅದೂ ಅಲ್ದೆ ಮತ್ತಾದ್ರೂ ಅದ್ನ ಸೇರಿಸ್ಬಹುದಲ್ಲಾ...?

'ಮತ್ತೆಯೇನನ್ನೂ ಮಾಡ್ಬಹುದು, ಮಾಡಿದ ಅಡುಗೆಯನ್ನ ತಿಪ್ಪೆಗ್ಹಾಕಿದ್ರೂ ಎಸೀಬಹುದು."

'ತಿಪ್ಪೆಗೆಸೆಯುವವ್ರು ಮಾಡೋ ಕಷ್ಟವನ್ನಬಲ್ಲರೇನು?'

'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ. ಒಬ್ಬ ಲೇಖಕ ಬಹುದಿನ ರಾತ್ರಿ ನಿದ್ದೆ ಬಿಟ್ಟು ಒಂದು ಕಾದಂಬರಿ ಬರೆಯುತ್ತಾನೆ. ಅದನ್ನ ಯಾರಾದರೂ ಟೀಕಿಸಿದರೆ, ಅತನಿಗೆ ಉದ್ರೇಕ ಬರೋದು ಸ್ವಾಭಾವಿಕ.'

'ಅಲ್ವೆ ಮತ್ತೆ? ಅಡುಗೆಯನ್ನಬಯ್ಯೋರು ಒಂದು ದಿನ ಅಡುಗೆ ಮಾಡಬೇಕು. ಕೃತಿಯನ್ನನಿಂದಿಸೋರು ಒಂದು ಕೃತಿಬರೀಬೇಕು. ಚಿತ್ರಗಳನ್ನ, ಸಂಗೀತವನ್ನತೆಗಳೋರು ಒಂದು ಚಿತ್ರವನ್ನ ಒಂದು ಹಾಡನ್ನ ಒದರೋಬೇಕು."

"ನಿನ್ನ ಕಥೆ ಕೇಳೋವಾಗ ನಗು ಬರುತ್ತೆ. ಅಡುಗೆ ರುಚಿಯಾಗ್ಲಿಲ್ಲಂತನ್ನೋಕೆ ನಾಲಿಗೆಯಿದ್ರೆ ಸಾಲ್ದೆ? ಕೃತಿಯನ್ನ ಕಟು ವಿಮರ್ಶೆ ಮಾಡೋಕೆ ವಿವೇಚನಾ ಶಕ್ತಿಯಿದ್ರೆ ಸಾಲ್ದೆ? ಚಿತ್ರವನ್ನ ಅರ್ಥ ಮಾಡಿಕೊಳ್ಳೋ ಶಕ್ತಿ ಮತ್ತು ಹಾಡನ್ನ ಕೇಳೋ ಶಕ್ತಿಯಿದ್ರೆ ಅವುಗಳ ದೋಷ ಹೇಳೋಕೆ ಸಾಲದೇನು?"

"ಅಂದ್ರೆ, ರಚಿಸೋ ಕಲೆಯೊಂದು, ಗುಣಾವಗುಣಗಳನ್ನ ಎತ್ತಿಹೇಳೋ ಕಲೆಯೊಂದು. ಅಲ್ವೆ? ಹಾಗಾದ್ರೆ ವಿಮರ್ಶಕನಿಗೆ ಕೃತಿ ರಚಕನ ಕಷ್ಟ ಸುಖವೊಂದೂ ಬೇಡಾಂತನ್ನಿ.'

'ನೋಡು ವಿಮರ್ಶಕ ವಿಮರ್ಶೆ ಮಾಡುವುದು ಲೇಖಕನನ್ನಲ್ಲ; ಆತನು ಎಷ್ಟು ಓದಿದ್ದಾನೆ, ಎಷ್ಟು ರಾತ್ರಿ ಎಷ್ಟು ದಿನ ನಿದ್ದೆಗೆಟ್ಟಿದ್ದಾನೆ, ಎಷ್ಟು ಸಾರಿ ಬರೆದು ಅಳಿಸಿದ್ದಾನೆ— ಇತ್ಯಾದಿಯನ್ನಲ್ಲ. ತನ್ನ ಮುಂದಿರೋ ಕೃತಿಯನ್ನು ತನ್ನ ದೃಷ್ಟಿಯಲ್ಲಾತ ವಿಮರ್ಶಿಸುತ್ತಾನೆ. ಉತ್ತಮ ಸಹೃದಯನಾದ ವಿಮರ್ಶಕನ ವಿಮರ್ಶೆ ಸತ್ಯವಾಗಿಯೇ ಹೊರ ಬರುತ್ತೆ. ಇದರಿಂದ ಕೃತಿಗಾರನೇನೂ ರೊಚ್ಚಿಗೇಳಬೇಕಾಗಿಲ್ಲ; ವಿಮರ್ಶಕನೂ ಹಿಗ್ಗಬೇಕಾಗಿಲ್ಲ, ಇಬ್ಬರೂ ಅವರವರ ಕರ್ತವ್ಯ ಮಾಡಿದ್ದಾರೆ.'

'ಏನೋ, ಆದ್ರೆ, ಕಂಡದ್ದು ಕಂಡಂತೆ ಹೇಳಿದರೆ....?'

'ಕೆಂಡದಂತಹ ಕೋಪವಲ್ವೆ? ವಿಮರ್ಶಕನೇನೂ ಸರ್ವಜ್ಞನಾಗಲಾರ. ಆತ ತನ್ನ ಮತವನ್ನು ಮಾತ್ರ ತನ್ನ ಅಳವಿನ ಮೂಸೆಯಲ್ಲಿ ಅಳೆದು ಬಹಿರಂಗ ಪಡುತ್ತಾನೆ. ಮತ್ತೆ ನೋಡು, ವಿಮರ್ಶೆಯ ಬಗ್ಗೆ ಗಟೇ ಹೇಳಿದ್ದಾರೆ....'

'ಯಾರವರು?"

"ಜರ್ಮನಿಯ ಪ್ರಸಿದ್ಧ ಲೇಖಕರು.'

'ಏನೆಂದು?'

"ಪ್ರತಿಯೊಬ್ಬ ವಿಮರ್ಶಕನ ಅಭಿಪ್ರಾಯವನ್ನು ನಾವು ಮನ್ನಿಸುತ್ತ ಹೋದರೆ, ಲೇಖಕನ ಕೃತಿಯ ಎಲ್ಲ ಅಕ್ಷರಗಳನ್ನೂ ಅಳಿಸಿ ತೆಗೆಯಬೇಕಾದೀತು."

• "ಹಾಗೆಯೇ ಚಿತ್ರದ ಎಲ್ಲ ಬಣ್ಣ ರೇಖೆಗಳೂ ಮಾಸುವಾದಾವು...."

"ಹ್ಞೂಂ, ಹಾಗೆನ್ನು...."

"ನೋಡಿ, ನಾವು ಪ್ರದರ್ಶನಕ್ಕೆ ಹೋದೆವಲ್ಲ..."

"ಹೌದು. ಚಿತ್ರಕಲಾ ಪ್ರದರ್ಶನಕ್ಕೆ"

"ಅಲ್ಲಿ ನಾವು ನೋಡುತ್ತಾ ಬರುತಿದ್ದೆವು. ಒಂದು ಚಿತ್ರ ಕಂಡಿತು. ಏನೋ ಕೂಡಿಸುವ ಮೂರು ಗುರುತುಗಳನು ಬೇರೆ ಬೇರೆ ಬಣ್ಣಗಳಿಂದ ಬರೆದಿದ್ದರು. ನಮ್ಮ ಬೇಬಿ ಹೇಳಿದಳು ಇದೆಂತಹದಪ್ಪಾ, ಇದೂ ಕಲೆಯಂತೆ ಕಲೆ....ಸುಮ್ಮನೆ...ಅಷ್ಟರಲ್ಲೇ ಲೀಲಾ ಅಂದ್ಳು ಅದು ಮೋಡರ್ನ್ ಆರ್ಟ್ ಅಂತ."

"ನೋಡು ಪ್ರದರ್ಶನ ನೋಡಿ ಬರೋಕೆ ಹೋದವರಿಗೆ ಅದನ್ನ ವಿಮರ್ಶೆ ಮಾಡೋ ಕೆಲ್ಸ ಯಾಕೆ? ಪಾಪ,ಸದ್ಯ ಅದ್ರ ರಚಯಿತ ಅಲ್ಲಿ ಇರ್ಲಿಲ್ಲಾಂತತೋರುತ್ತೆ."

'ಇದ್ದಿದ್ರೆ ಏನು ದೂರ ದೂಡುತ್ತಿದ್ನೆ?'

'ಅಷ್ಟೆಲ್ಲಾ ಮಾಡೋಕೆ ಅವ್ರೇನು ರಾಜಕಾರಣಿಗಳಲ್ಲ ನೋಡು. ಮತ್ತೇನು ಮಾಡ್ತಿದ್ದ? ಪಕ್ಕದ ಮೂಲೇ ಹೋಗಿ ಕಣ್ಣೀರು ಸುರೀತಿದ್ದ..."

'ಯಾಕೇಂತ?"

'ಮತ್ಯಾಕೆ? ನನ್ನ ಕೃತಿಯನ್ನ ಅರ್ಥ ಮಾಡಿಕೊಳ್ಳೋ ಶಕ್ತಿಯಿರೋರು ಇಲ್ಲಲ್ವಾಂತ."

'ಅಂದ್ರೆ ಹೆತ್ತವ್ರಿಗೆ ಹೆಗ್ಗಣಾನೂ ಮುದ್ದೇ...."

'ಹಾಗಲ್ಲ ಕಣೆ. ತನ್ನದು ಎಂಬೋ ಅಭಿಮಾನ ಎಲ್ರಿಗೂ ಇರೋದು ಸಹಜ."

'ಹಾಗೆ ಅತ್ತು ಮಾಡೋದೇನು?'

'ಒಬ್ಬ ಸಂಸ್ಕೃತ ಕವಿ ಹೇಳಿದ್ದಾನೆ. ತನ್ನ ಕಾವ್ಯವನ್ನು ಅರ್ಥ ಮಾಡಿ ಕೊಳ್ಳೋ ಜನ ಈಗ ಇಲ್ಲವಾದ್ರೂ ನಿರವಧಿಯಾದ ಕಾಲದಲ್ಲಿ ಯಾರಾದ್ರೂ ಹುಟ್ಟಿಯೇ ಹುಟ್ಟುತ್ತಾರೇಂತ.'

'ಪಾಪ, ಅವ ಹೇಳ್ಕೊಂಡಷ್ಟೇ ಬಂತು. ನಿರವಧಿ ಕಾಲದಲ್ಲಿ ಸಂಸ್ಕೃತ ಮೃತ ಭಾಷೆಯಾಗಿರೋವಾಗ..."

"ಅದೆಲ್ಲಾ ಇರ್ಲಿ ಈಗ ಬಾಯಾರಿ ಜೀವನ್ಮೃತವಾಗ್ತಾ ಇದ್ದೀನಿ. ತುಸು ನೀರೋ ಹಾಲೋ......"

"ಅಯ್ಯೋ ಮಾತಾಡೋ ಭರದಲ್ಲಿ ಕಾಫಿ ಕೊಡೋಕೂ ಮರ್ತೇ ಹೋಯ್ತು. ಬಂದೆ...ಅಂಗಿ ಕಳಚಿ...."

"...ಹ್ಞಾಂ...ಬೇಗ ಬಾ ..."

"ಬಂದೆ...."

—ಗೋರಾ

ನವಯುಗದ ವಾಚಕರಿಗೆ

ಇನ್ನೊಂದುವಿಶೇಷ ಸಂಚಿಕೆ—

ಎಂದಿನಂತೆ ಪ್ರಕಟವಾಗುವ

ದೀಪಾವಳಿ ವಿಶೇಷಾಂಕ

ವೈವಿಧ್ಯಪೂರ್ಣ ಲೇಖನ, ಕವನ, ಕಥೆಗಳೊಂದಿಗೆ

ತಾ. 29-10-64ಕ್ಕೆ ಪ್ರಕಟವಾಗುವುದು.

ಕರ್ನಾಟಕದ ಎಲ್ಲಾ ಕಡೆಗಳಲ್ಲೂ ಮುಂಬಯಿಯಲ್ಲೂ ವಿಶೇಷ ಪ್ರಸಾರವಾಗುವ ಈ ಸಂಚಿಕೆಯು

ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ದರಗಳಿಗೆ ಬರೆಯಿರಿ:

- ಮೆನೇಜರ್, ನವಯುಗ, ಉಡುಪಿ.

ಚಿಕ್ಕ—ಚೊಕ್ಕ ಲೇಖನಗಳನ್ನು ಆಮಂತ್ರಿಸಲಾಗಿದೆ.

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಠಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚೀಟಿಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಸೋವಿಯತ್‌ನ ತಾಷ್ಕೆಂತ್
ವಿಮಾನ ನಿಲ್ದಾಣದಲ್ಲಿ
ಪುಷ್ಪಗುಚ್ಛಗಳೊಂದಿಗೆ ಶಾಲಾ
ಮಕ್ಕಳಿಂದ ಸ್ವಾಗತಿಸಲ್ಪಡುತ್ತಿರುವ
ಡಾ| ರಾಧಾಕೃಷ್ಣನ್

ನವಯುಗ

ಸಂಪುಟ ೪೪ ಸಂಚಿಕೆ ೭	ಉಡುಪಿ ೧೫—೧೦—೧೯೬೪	Vol. 44 No. 7

ಚೀನಾದ ಇರಾದೆ

ಕೈರೋದಲ್ಲಿ ಸೇರಿದ ನಿರ್ಲಿಪ್ತ ರಾಷ್ಟ್ರಗಳ ಸಮ್ಮೇಳನದಲ್ಲಿ ಭಾರತದ ಮೇಲೆ ಮಾಡಿರುವ ಚೀನೀಯ ಆಕ್ರಮಣದ ಪ್ರಸ್ತಾಪವೂ ಬಂತು. ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷ ನಸ್ಸೇರ ಮತ್ತು ಪ್ರಧಾನಿ ಶಾಸ್ತ್ರಿಯವರ ನಡುವಣ ಮಾತುಕತೆಯ ವೇಳೆಯಲ್ಲೂ ಕೊಲಂಬೋ ರಾಷ್ಟ್ರಗಳು ಗಡಿ ವಿವಾದವನ್ನು ಪರಿಹರಿಸಲು ತಮ್ಮ ಪ್ರಯತ್ನವನ್ನು ಮುಂದುವರಿಸುವವೆಂಬ ಆಶಯವೂ ಪ್ರಕಟವಾಗಿತ್ತು. ಆದರೂ ಗಡಿಯಲ್ಲಿ ನಡೆಯುತ್ತಿರುವ ಸೇನಾ ಜಮಾವಣೆ ಮತ್ತು ಸೈನಿಕ ಚಟುವಟಿಕೆಗಳು ಚೀನೀಯರನ್ನು ನೇರ ದಾರಿಗೆ ತರಲು ಸಾಧ್ಯವಿಲ್ಲವೆಂಬುದನ್ನು ಸಾರುತ್ತವೆ. ಇತ್ತೀಚೆಗೆ ಪೀಕಿಂಗಿನಿಂದ ಹೊರಟ ಪ್ರಕಟಣೆಯೊಂದು ಇದನ್ನೇ ಪುಷ್ಟೀಕರಿಸುತ್ತದೆ.

ಭಾರತ ಸರಕಾರವು ಕೆಲವು ದಿನಗಳಿಗೆ ಮೊದಲು ಪೀಕಿಂಗಿಗೆ ಪತ್ರಗಳನ್ನು ಬರೆದು ಗಡಿಯಲ್ಲಿ ಅದು ಮಾಡುತ್ತಿರುವ ಕಿರುಕುಳವನ್ನು ವರ್ಣಿಸಿತ್ತು. ಇದನ್ನು ಕಾಣುವಾಗ, ಗಡಿ ವಿವಾದದಲ್ಲಿ ಯಾವ ಪ್ರಗತಿಯೂ ಇಲ್ಲವೆಂದು ಹೇಳಲೇ ಬೇಕು. ಜುಲೈ ತಿಂಗಳಲ್ಲಿ ಲಡಖದ ರಜಾಂಗಳ ಮತ್ತು ನೇಫಾದ ಲೋಂಗ್ಜು ಬಳಿಯಲ್ಲಿ ಆಕ್ರಮಣಕಾರಿ ಚಟುವಟಿಕೆಗಳನ್ನು ಚೀನಾ ಮಾಡಿತ್ತು. ಆಗಸ್ಟದಲ್ಲಿ ಸಿಕ್ಕಿಮದ ಗಡಿಯನ್ನೂ ದಾಟಿತ್ತು. ಆದರೆ, ಚೀನಾವು ಇವನ್ನು ಒಪ್ಪಿಕೊಳ್ಳಲಿಲ್ಲ. ರಜಂಗಳವು ವಾಸ್ತವಿಕ ನಿಯಂತ್ರಣ ರೇಖೆಯ ಆಚೆಗಡೆಯೇ ಇದೆಯೆಂಬುದನ್ನು ಅದು ಪ್ರತಿಪಾದಿಸಿದೆ. ಅಂದರೆ, ಕೊಲಂಬೋ ಸಲಹೆಯನ್ವಯ ಅದು ೨೦ ಕಿಲೋಮೀಟರು ಹಿಂದೆ ಸರಿಯಲು ಸಿದ್ಧವಿಲ್ಲವೆನ್ನುವಾಗ, ಲಡಖದಲ್ಲಿರುವ ತನ್ನ ಸೇನಾ ಠಾಣ್ಯಗಳನ್ನು ಹಿಂತೆಗೆದುಕೊಳ್ಳಲು ತಯಾರಾಗುವುದೆಂತು?

ಪೀಕಿಂಗಿನಿಂದ ಇತ್ತೀಚೆಗೆ ಹೊರಟ ಹೇಳಿಕೆಯೊಂದು ಇದನ್ನೇ ವಿವರಿಸುತ್ತದೆ. ಮೆಕಮಹೋನ ರೇಖೆಯನ್ನು ಚೀನಾವು ಒಪ್ಪುವುದೇ ಇಲ್ಲ. ಕೊಲಂಬೊ ಸಲಹೆಗಳನ್ವಯ ಚೀನಾವು ಈ ರೇಖೆಯನ್ನೂ ತುಸು ಒಪ್ಪಬೇಕಾಗುತ್ತದೆ. ಭಾರತವೇ ತನ್ನ ೯೦ ಸಾವಿರ ಚದರ ಮೈಲುಗಳಷ್ಟು ಭೂಮಿಯನ್ನು ಅಪಹರಿಸಿದೆಯೆಂದು ಅಪಲಾಪವನ್ನೂ ಅದು ಮಾಡುತ್ತಿದೆ. ಕೊಲಂಬೊ ಸಲಹೆಗಳನ್ನು ತಾತ್ವಿಕವಾಗಿ ಒಪ್ಪಿರುವುದರಿಂದ ತಾನು ಸಂಧಾನದ ಮಾತುಕತೆಗಳಿಗೆ ಯಾವ ಸಮಯದಲ್ಲಾದರೂ ಎಲ್ಲಾದರೂ ಬರಲು ಸಿದ್ಧನಿರುವೆನೆಂದು ಚೀನ ಹೇಳುತ್ತದೆ. ಈ ದಿಸೆಯಲ್ಲಿ ಭಾರತವೇ ಹಿಂಜರಿಯುತ್ತಿದೆಯೆಂಬ ದೋಷಾರೋಪಣೆಯನ್ನು ಮತ್ತೂ ಮತ್ತೂ ಮಾಡುತ್ತಿದೆ. ಇದರಿಂದ ನಾವು ಒಂದು ಸಂಗತಿಯನ್ನು ತಿಳಿಯಬಹುದು. ಚೀನೀಯರ ಅಭಿಪ್ರಾಯ ಅಥವಾ ಮನಸ್ಸು ಯಾವ ರೀತಿಯಲ್ಲೂ ಹಿಂದಿಗಿಂತ ಬದಲಾಗಿಲ್ಲ. ಅದುದರಿಂದಲೇ ಕೈರೋ ಹೇಳುವಂತೆ ಚೀನಾ--ಭಾರತ ಗಡಿ ವಿವಾದದ ಬಗ್ಗೆ ಹೊಸ ವಿಧಾನವಗಳು ಕಾಲ ಪರಿಪಕ್ವವಾಗಿಲ್ಲ. ಅಂದರೆ, ಸಂಧಾನ-ಮಾತುಕತೆಗಳ ಹಾಡನ್ನು ಹಾಡುವ ಚೀನಾದ ಮುಂದೆ ಭಾರತವು ಮಣಿಯಲು ಸಿದ್ಧವಾದರೆ ಮಾತ್ರ ಸಂಧಾನ, ಇಲ್ಲವಾದರೆ, ಸಂಗ್ರಾಮವೆಂಬುದೇ ಇದರ ಅರ್ಥವೆ? ಮೊದಲಿನಿಂದಲೂ ಕೆನ್ನಾಲಿಗೆ ಚಾಚುವುದರಲ್ಲೇ ಪರಿಣತವಾದ ಚೀನಾದ ಇಂಗಿತವು ಇದಕ್ಕಿಂತ ಬೇರೆಯಿರಲಾರದು.

ಒಂದು ಮೋಜೂ ನಡೆದಿದೆ. ಪೀಕಿಂಗಿನಲ್ಲಿ ನಡೆಯುವ ಅಣು ಸಂಬಂಧಿ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಲು ಚೀನಾ ಭಾರತವನ್ನು ಆಹ್ವಾನಿಸಿದೆ. ಗಡಿ ವಿವಾದದ ಪ್ರಶ್ನೆ ಬೇರೆ, ಇದು ಬೇರೆಯೆಂದು ವರ್ಣಿಸಿದ ಅದು ಇಂತಹ ವಿಚಾರ ಗೋಷ್ಠಿಗಳಲ್ಲಿ ಉಭಯ ರಾಷ್ಟ್ರಗಳು ಒಂದುಗೂಡುವುದು ಶಾಂತ ವಿಧಾನಗಳಿಂದ ಗಡಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅತ್ಯಾವಶ್ಯಕವೆಂದೂ ವಾದಿಸುತ್ತದೆ. ಪೀಕಿಂಗ್ ಏನೇ ಬೊಗಳಲಿ, ಭಾರತಕ್ಕೆ ತನ್ನ ಹಿತಸಾಧಿಸಲು ತಿಳಿದಿದೆ. ಚೀನಾವು ಅಣು ಬಾಂಬನ್ನು ತಯಾರಿಸಿ ಅಣ್ವಸ್ತ್ರ ಹೊಂದಿರುವ ರಾಷ್ಟ್ರ ಪಂಕ್ತಿಯಲ್ಲಿ ತಲೆಯೆತ್ತಿ ನಿಲ್ಲಲು ಹವಣಿಸುತ್ತಿರುವ ರಾಷ್ಟ್ರ. ತಾನು ಮೊದಲು ಅಣು ಬಾಂಬನ್ನು ತಯಾರಿಸಿ ಆನಂತರ ನಿಶ್ಶಸ್ತ್ರೀಕರಣ ಮಾತುಕತೆಗಳಲ್ಲಿ ಭಾಗವಹಿಸುವೆನೆಂದದರ ವಾದ. ಆದರೆ, ಭಾರತದ ಸ್ಥಿತಿ ಹೀಗಲ್ಲ. ತಾನು ಇನ್ನು ಕೆಲವೇ ತಿಂಗಳುಗಳಲ್ಲಿ ಅಣು ಬಾಂಬನ್ನು ತಯಾರಿಸಬಲ್ಲುದಾದರೂ ಶಾಂತಿಗಾಗಿಯೇ ಅಣು ಶಕ್ತಿಯನ್ನು ಬಳಸುವ ದೃಢ ನಿಲುವು ತೊಟ್ಟ ದೇಶವಿದು. ಹಾಗಿರುವಾಗ ಶಾಂತಿಪ್ರಿಯ ಭಾರತವು ಕ್ರಾಂತಿಕಾರಿ ಕೆಂಪು ಚೀನಾದೊಡನೆ ಎಂತು ಅಣು ಸಂಬಂಧಿ ಗೋಷ್ಠಿಯಲ್ಲಿ ಕೂಡುವುದು ಸಾಧ್ಯವಾದೀತ? ಇದನ್ನು ಪೀಕಿಂಗ್ ಅರಿಯದಿಲ್ಲ. ಸಂದರ್ಭಕ್ಕೆ ತಕ್ಕಂತೆ ತನ್ನ ಮಾತಿನ ಧಾಟಿಯನ್ನು ಬದಲಾಯಿಸಿ ಮಂಕು ಬಳಿಯುವ ಕಲೆಯಲ್ಲಿ ನಿಸ್ಸೀಮರಾದ ಕೆಂಪು ಚೀನಾದ ಬೇಳೆ ಭಾರತದಲ್ಲಿ ಬೇಯಲಿಲ್ಲ

ವಚನ ಸುಧೆ

ನಾನಾಶ್ರಾಂತಾಯ ಶ್ರೀರಸ್ತಿ ||
(ಐತರೇಯ ಬ್ರಾಹ್ಮಣ, ೭—೧೫)

O ಪುರುಷಾರ್ಥಗಳನ್ನು ಗಳಿಸದವನಿಗೆ ಸಂಪತ್ತು ಪ್ರಾಪ್ತವಾಗುವುದಿಲ್ಲ

OO ಪರಿಶ್ರಮ ಶೀಲನೂ ಉದ್ಯೋಗಿಯೂ ಪುರುಷಾರ್ಥಿಯೂ ಆದವನು ಮಾತ್ರ, ಸರ್ವವಿಧದ ಧನ, ಶೋಭೆ ತೇಜ ಯಶ ಮೊದಲಾದುದನ್ನು ಸಂಪಾದಿಸ ಬಲ್ಲನು. ಪರಿಶ್ರಮಿಯಲ್ಲದವನಿಗೆ ಯಶಸ್ಸು ಕೈಗೂಡುವುದಿಲ್ಲ, ಆಲಸ್ಯವು ಎಲ್ಲ ಹಾನಿಗಳಿಗೂ ಮೂಲವಾದುದರಿಂದ ಅದನ್ನು ದೂರೀಕರಿಸಿ ಪರಿಶ್ರಮಶೀಲರಾಗಬೇಕು.

ಸಂಗತಿಗಳು ಚೀನಾದ ಆಕ್ರಮಣ ಭೀತಿಯನ್ನು ಹೆಚ್ಚಿಸುತ್ತಲೇ ನಡೆಯುತ್ತಿವೆ. ಆದುದರಿಂದ ನಮ್ಮ ರಕ್ಷಣೆಯ ಹೊಣೆಗಾರಿಕೆನ್ನು ಸರಕಾರ ಮಾತ್ರವಲ್ಲ ಪ್ರತಿ ಭಾರತೀಯ ಪ್ರಜೆ ಅರಿತುಕೊಂಡು ಸಮೃದ್ಧಿ, ಸುರಕ್ಷೆಯ ಪಥದಲ್ಲಿ ನಡೆಯಬೇಕು.

ಒಪ್ಪುವ ತಪ್ಪು

ಭಾರತದಲ್ಲಿ ಅಮೇರಿಕೆಯ ರಾಯಭಾರಿಗಳಾಗಿರುವ ಚೆಸ್ಟರ್ ಬೌಲ್ಸರು ಭಾರತಕ್ಕೆ ಅಮೇರಿಕೆಯು ಸರ್ವಪ್ರಕಾರದಿಂದಲೂ ಸಹಾಯ ನೀಡಿ ಅದನ್ನು ಸಮೃದ್ಧ ರಾಷ್ಟ್ರವನ್ನಾಗಿ ಕಟ್ಟಲು ನೆರವಾಗುವುದೆಂಬ ಆಶ್ವಾಸನವನ್ನು ನೀಡಿದ್ದಾರೆ. ಇದು ನಿಜ. ಭಾರತದ ಯೋಜನೆಗಳಲ್ಲಿ ಅಮೇರಿಕೆಯು ಕಳಕಳಿ ವಹಿಸುತ್ತಿರುವುದನ್ನು ನಾವು ಕಾಣಬಹುದು. ಸದ್ಯ ನಮ್ಮ ದೇಶದಲ್ಲಿ ತಲೆದೋರಿದ ಆಹಾರಾಭಾವದ ವಿಕಟ ಪರಿಸ್ಥಿತಿಯಲ್ಲಿ ಅದು ವಿಪುಲ ಪ್ರಮಾಣದಲ್ಲಿ ಗೋಧಿ ಮತ್ತು ಅಕ್ಕಿಗಳನ್ನು ಕಳಿಸಿ ಕೊಡುತ್ತಿದೆ. ಆಹಾರಧಾನ್ಯಗಳನ್ನು ಆಯಾತವನ್ನು ಇನ್ನೂ ಇನ್ನೂ ಮಾಡುತ್ತಿರುವುದು ನಾಚಿಗೆಗೇಡು. ವೈಯುಕ್ತಿಕ ಭೂಸ್ವಾಮ್ಯ, ಗೊಬ್ಬರದ ಉತ್ತಮ ಉಪಯೋಗ ಮತ್ತು ಬೆಳೆ ಪದ್ಧತಿಗಳ ಮೂಲಕ ಆಹಾರ ಸ್ವಾವಲಂಬನೆಯನ್ನು ಭಾರತವು ಸಾಧಿಸಬೇಕೆಂದ, ಬೌಲ್ಸ್ ಹೇಳಿದ್ದಾರೆ. ಇಂತಹ ಸಲಹೆ ನಮಗೆ ಹೊಸತಲ್ಲವಾದರೂ, ಇದನ್ನು ಕಾರ್ಯರೂಪಕ್ಕಿಳಿಸುವಲ್ಲಿಯೇ ನಾವು ಜಾರುತಿದ್ದೇವೆಂದು ಒಪ್ಪಿಕೊಳ್ಳುವುದು ಅಗತ್ಯವಲ್ಲವೆ?

ನರಸಣ್ಣನ ಸರಸ



ಸರಕಾರ ಮಾಡಿದ ಒಂದೊಂದೇ ಶಾಸನಗಳು ಸಂವಿಧಾನಕ್ಕೆ ವಿರೋಧವೆಂತ ಸಿದ್ಧವಾಗುತ್ತಿರುವಾಗ, ನೀನು ಮಾಡಿದ್ದು ಅನ್ಯಾಯ ವಾಗೋದೇನು ಮಹಾ?

ಲೇಖಕ: ಕೆ. ರಾಮಕೃಷ್ಣ ಭಟ್ಟ

ದರ್ಖಾಸ್ತು ಖಾಯಂ ಆಯ್ತು

ತಾನು ನೋಡಿದ್ದೇನು?

ನಿಜವೆ? ಅಲ್ಲ ಸ್ವಪ್ನವೇ? ಸ್ವಪ್ನ ಖಂಡಿತಕ್ಕೂ ಅಲ್ಲ. ನಿಜ. ತನ್ನ ಈ ಕಣ್ಣುಗಳೆದುರು ಕಂಡದ್ದು ಹೌದು— ನೋಡಿದ ಅಪರಾಧ ಈ ಕಣ್ಣುಗಳಿಗಿದೆ. ಏಕೆ ತಾನು ಬರಬೇಕಿತ್ತು ಆ ಸಲ್ಲದ ಹೊತ್ತಿನಲ್ಲಿ?

ತನ್ನ ಬರುವಿಕೆಯನ್ನು ನಿರೀಕ್ಷಿಸುವ ಹೊತ್ತೇ ಅಲ್ಲ...

ತಲೆ ಸಿಡಿತ ಜೋರಾಯಿತು. ಲೀವ್ ಬರೆದು ಹಾಕಿ ನೇರವಾಗಿ ಮನೆಗೆ ಬಂದೆನು.

ಮೈ ಬಿಸಿಯೂ ಇತ್ತು... ಫೈಲುಗಳನ್ನು ಬಿಡಿಸಿ ಕುಳಿತರೂ ಕೆನ್ನೆ ಟಪ್.... ಟಪ್.... ಹೊಡೆಯುತ್ತಲೇ ಇತ್ತು. ಸ್ವಲ್ಪ ಅಮೃತಾಂಜನವನ್ನಾದರೂ ಕೆನ್ನೆಗೆ ತಿಕ್ಕಬಹುದೇಂದರೆ ಆ ಪ್ರೀತಿಯ ಕೈ ಕವಲಿಗೆ ಹೋಗಿತ್ತು ಚೊಚ್ಚಲ ಬಾಣಂತನಕ್ಕೆ—

ತಂದೆ ತಾಯಿ ಅವರೂ ಹೋಗಿದ್ದರು ಸೊಸೆಯನ್ನು ನೋಡಿಬರಲೆಂದು—

ತಲೆ ಸಿಡಿತ ಸಹಿಸದಾಯಿತು...

ಮನೆಗೆ ಹೋದೆನು...

ಹೋಗಲೇ ಬಾರದಿತ್ತು ಆ ಸಮಯದಲ್ಲಿ— ತನಗೇನು ಗೊತ್ತು? ಅಲ್ಲಿ ಆ ದೃಶ್ಯ ಜರಗುತ್ತಿತ್ತೆಂದು. ತಾನು ಒನ್ನೆಯೂದರೂ ನೋಡಬೇಕೆಂದು ದೇವರು ಇಚ್ಛಿಸಿದನೋ ಏನೊ?

ತನ್ನ ತಂಗಿ ಸುಮತಿ....

ಛಿ ... ಛಿ ... ನಂಬಲಾರೆ....

ಮೊದಲು ಹಾಗೇ ಅಭಿಪ್ರಾಯವಿತ್ತು.

ಈಗ ಬದಲಿದೆ

ಕಣ್ಣ ಮುಂದೆ ಕಂಡಾಗ.... ಬೇರೆ ಪ್ರಮಾಣಗಳೇಕೆ?

ಮನಸ್ಸು ಮತ್ತೆ ಮತ್ತೆ... ಮತ್ತೆ ಅದೇ ದೃಶ್ಯವನ್ನು ಕಲ್ಪಿಸಿಕೊಳ್ಳುತ್ತ... ಕುರುಡನಾಗಿದ್ದರೆ ಲೇಸಾಗಿತ್ತು...

ನನ್ನ ಸುಮೂ........ ಮುದ್ದಿನ ತಂಗಿ ಸುಮೂ....

ಅಣ್ಣಾ.... ಅಣ್ಣಾ... ಎಂದು ಕರೆಯುತ್ತಿದ್ದ ಬಾಯಿ ಈಗ ಹೇಗೆ ಕರೆದೀತು....

ದೇವರು ಏಕೆ ತೋರಿಸಿದ ಈ ದೃಶ್ಯವನ್ನು.

ಅವರಲ್ಲೊ ಒಂದು ಉದ್ದೇಶವಿದೆ. ಮನಸ್ಸು ಪ್ರತಿ ನುಡಿಯಿತು.... ನಿನ್ನಿಂದಲೇ ನೆರವೇರಬೇಕು... ಕುರುಡು ಪ್ರೀತಿಯಿಂದ ಮುಸುಕಿದ ತನ್ನ ಮನಸ್ಸು ಈಗ ಪರಿಕಳಚಿತು..... ..

ರವಿ ಯೋಚಿಸಿದನು. ಫೈಲಿನ ಮುಂದೆ ಕುಳಿತು ರಿಕಾರ್ಡುಗಳನ್ನು ಪಟ್ಟಿ ಮಾಡುವಾಗ, ರಿಕಾರ್ಡುಗಳು ಪಟ್ಟಿ ಆಗುತ್ತದೆಯೆ ಹೊರತು ಮನಸ್ಸಿನ ದೃಶ್ಯ ಪಟ್ಟ ಆಗ ಒಡೆ ಇಲ್ಲ.

ಒಂದು ದರ್ಖಾಸ್ತು ರಿಕಾರ್ಡು ಮಾಡಿ ಕೊಡಬೇಕು ಇಗೊಳ್ಳಿ ಸಾರ್........ ಅಡಿಕೆ ತೋಟದವರು ಎರಡು ನೋಟುಗಳನ್ನು ಮುಂದಿಟ್ಟರು... ಛಿ : ಛಿ.. ಬೇಡ ... ಬೇಡ.... ರವಿ ಅದನ್ನು ಆತ್ತ ನೂಕಿದನು. ಕಿಸೆಗೆ ಹಾಕಿ.. ಪೇದೆ ಕಣ್ಣು ಸನ್ನೆ ಮಾಡಿದನು ಭಟ್ಟರಿಗೆ.

ತಂಗಿಯ ಯೋಚನೆಯಿಂದ ತಲೆ ಬಿಸಿಯಾದ ರವಿ ನೋಟುಗಳನ್ನು ಅತ್ತ ನೂಕಿದ.

ಒಮ್ಮೆ ಹೋಗಿ ಭಟ್ರೆ.... ಹೋಗಿ... ಹೋಗಿ... ಭಟ್ರನ್ನೂ ಅತ್ತ ನೂಕಿದನು.

ಯೋಚನೆ ಮತ್ತೆ ಮುಸುಕಿತು.

o o o

ರವಿಗೆ ಮನೆಯಲ್ಲೂ ಸುಖವಿಲ್ಲ. ಸದಾ ಚಿಂತೆ .. ಮನಸ್ಸನ್ನು ಹುಳವಾಗಿ ಕೊರೆದು ಕೊಲ್ಲುವ ಚಿಂತೆ. ಏಕೆ? ಏಕೆ ಹೀಗೆ? ಅದೇ ಚಿಂತೆ.... ಅವನಿಗೆ.

ಸುಮತಿ... ಮುದ್ದಿನ ತಂಗಿ... ತನ್ನಿಂದ ತುಂಬಾ ಕಿರಿಯಳು ಹತ್ತು ವರ್ಷಕ್ಕೆ ಅವಳು ಕಿರಿಯವಳು.... ಅವಳನ್ನು ನಾನೇ ಎತ್ತಿ ಕೊಂಡಿದ್ದೆನು. ಅಮ್ಮನೊಡನೆ ಊಟ ಮಾಡೋಲ್ಲ ಅಂತ ಹಠ ಹಿಡಿದಿದ್ದರೆ... ರವಿ.... ನಿನ್ನ ತಂಗಿಯನ್ನು ನೀನೇ ಉಣ್ಣಿಸು... ಕೊಂಡಾಟದ ತಂಗಿ ಹೆಚ್ಚು ಮುದ್ದುಮಾಡಿದರೆ ಹೀಗೆ .... ನಿದ್ದೆ ಮಾಡೋಲ್ಲ ಅಂತ ಗಂಟೆಕಟ್ಟಿ ತೊಟ್ಟಿಲ ಹಗ್ಗ ನಾಲ್ಕು ಹಿಡಿದು ಗರ.... ಗರ.... ಅಂತ ತೂಗಿದ್ದು .... ನಿದ್ದೆ ಮಾಡಿಸಲೂ ಅಣ್ಣನೇ ಬರಬೇಕು.... ಹಠ ಮಾಡುತ್ತಾಳೆ ಈ ಸುಮು.... ರವಿ.... ನೀನೇ.... ಸ್ನಾನವನ್ನು ಮಾಡಿಸಬೇಕಂತೆ...., ಅಮ್ಮ ಹುಸಿ ಕೋಪ ನಟಿಸುತ್ತಿದ್ದರು.

ಬಾರೇ ಸುಮು.... ನಾನೇ ನಿನ್ನ ಅಣ್ಣ.. ಮೀಯಿಸುತ್ತೇನೆ.... ನಾನೇ ದೊಡ್ಡ ಬಾಯಿ ಹಾಂ ಮಾಡಿಸುತ್ತೇನೆ.... ಅನ್ನುತ್ತಿದ್ದೆ.... ಮಾತ್ರವಲ್ಲ ಸೊಂಟದಲ್ಲಿ ಎತ್ತಿಕೊಂಡು ಚಂದಿರ ಮಾಮನ ತೋರಿಸಿಕೊಂಡು ಊಟ ಮಾಡಿಸುತ್ತಿದ್ದೆನು.

ಪೇಟೆಯಿಂದ ಬರುವಾಗ ಬಿಸ್ಕತು, ಚಾಕ್‌ಲೇಟು ತಂದುಕೊಡುತ್ತಿದ್ದೆನು. ಅಣ್ಣ ಬಂದ ಅಣ್ಣ ದ್ರಾಕ್ಷೆ ತಂದಿದ್ದಾನೆ... ಕೈ ತಟ್ಟಿ ಹಾರಿ ಬರುತ್ತಿದ್ದಳು ತಂಗಿ ತನ್ನ ಸೊಂಟದ ನೇರಕ್ಕೆ—... ಒಮ್ಮೆ ಈ ಸುಮುನಿಗೆ ನೀರು ಕೋಟಲೆಯಾಗಿತ್ತು.... ಮೈಯಿಡಿ ಬೊಕ್ಕೆ.... ಹೇಗೆ ಮಲಗಲೂ ಆಗದು.... ರಾತ್ರಿಯಿಡಿ ದೀಪ ಹಚ್ಚಿಟ್ಟು ಗಾಳಿ ಬೀಸುತ್ತಿದ್ದೆನು.... ಕೊತ್ತಂಬರಿ ನೆನೆಹಾಕಿ ಅದರ ತಿಳಿ ನೀರನ್ನು ಕಣ್ಣಿನ ಉರಿ ಶಮನ ಮಾಡಲು ಬಿಂದು ಬಿಂದುವಾಗಿ ಬಿಡುತ್ತಿದ್ದೆನು.

ಅಣ್ಣಾ.... ಅಣ್ಣ.... ನನ್ನ ಹತ್ತಿರವೇ ಬಾ ಅಣ್ಣ.... ಯಾರೋ ಬರುತ್ತಾರೆ... ಕರೆಯುತ್ತಾರೆ ಅಂದಿನ್ನವಳು ಕನವರಿಸುತ್ತ.

ಸುಮು........ ಹಾಗೆಲ್ಲ ಹರಟಬಾರದು. ಬೇಗ ಗುಣವಾಗುತ್ತೆ.... ಎಲ್ಲಿ ಮದ್ದು ಕುಡಿ ಅಂತ ಬಾಯಿ ತೆರೆಸಿ ಮದ್ದು ಕುಡಿಸಿದ್ದೆನು ನೀರುಕೋಟಲೆ ಗುಣವಾದ ಒಂಭತ್ತನೆಯ ದಿನ ಹುಣಸೆ ಸಪ್ಪುಜಜ್ಜಿ ಬಿಸಿ ನೀರಿಗೆ ಹಾಕಿ ಕುದಿಸಿ ಕಷಾಯ ಮಾಡಿ ಸ್ನಾನವನ್ನು ನಾನೇ ಮೀಯಿಸಿದ್ದೆನು.

ನಿನ್ನ ಪ್ರೀತಿಯ ತಂಗಿ ಸುಮು... ಹೀಗೆ ಸಾಕಿ ಮನೆಯಲ್ಲಿಟ್ಟುಕೊಳ್ಳಲಾಗುತ್ತದೆಯೆ.... ಮತ್ತೆ ಕೊಡಬೇಕಲ್ಲ ಬೇರೊಬ್ಬರ ಕೈಗೆ ಪರಿಹಾಸ ಮಾಡುತ್ತಿದ್ದರು ತಾಯಿ.

ನನ್ನ ಸುಮು. ನನ್ನ ತಂಗಿ.... ಯಾರಿಗೂ ಕೊಡಲಾರೆ. ನನಗೆ ಬೇಕು ಅನ್ನುತ್ತಿದ್ದೆನು—ತಿಳಿವು—ಪ್ರಪಂಚ ಜ್ಞಾನ ಮಾಡುವ ಮುನ್ನ.

ಮತ್ತೆ ಪ್ರಪಂಚ ಎಂದರೆ ಹೇಗೆ ಎನ್ನುವುದರ ಅರಿವಾಯಿತು. ವಿದ್ಯಾಭ್ಯಾಸಕ್ಕೆ ದೂರ ಮದ್ರಾಸಿಗೆ ಹೋಗಬೇಕಾಯಿತು ಸುಮುವನ್ನು ದೀರ್ಘವಾಗಿ ಬಿಟ್ಟಿರಲೇ ಬೇಕಾಯಿತು.

ರಜೆಯಲ್ಲಿ ಬಂದರೆ—

ಅಣ್ಣ.... ಅಣ್ಣ.... ಅಣ್ಣ... ನನಗೆ ಸೀರೆ.... ರವಕೆ ಹಾರಾಡುತ್ತಿದ್ದಳು. ಮುಂಚಿನಂತೆ ಮೈಗೆ ಬೀಳುತ್ತಿರಲಿಲ್ಲ. ನಾಚಿಕೆ ಹುಟ್ಟಿಕೊಂಡಿತ್ತು ಆಕೆಯಲ್ಲಿ.

ಮತ್ತೆ ತನಗೆ ತಾಲೂಕು ತಾಶಿಲ್ದಾರನ ಕೆಲಸವೂ ಸಿಕ್ಕಿತು.



ಊರಲ್ಲಿ ಯೇನೆಲ್ಲ ಬೇಕಾಯಿತು. ಬೆಳಗ್ಗಿನಿಂದ ಸಾಯಂಕಾಲದ ವರೆಗೆ ಕೆಲಸ.... ಕತ್ತೆ.... ಜೀವನದಲ್ಲಿ ದುಡಿ.... ದುಡಿದು ಕತ್ತೆಯಾಗಿದ್ದೇನೆ.... ಮದುವೆಯೂ ಆಯಿತು ... ಈಗ ಆಕೆಯ ಕತ್ತೆ... ಒಟ್ಟಾರೆ ಜೀವನವೇ ಹೀಗೆ.... ರಿಕಾರ್ಡು ಹಿಡಿದರೂ ಮನಸ್ಸು ಯೋಚನೆಯ ಸುಳಿಯಲ್ಲಿ ಹೊಯ್ದಾಡುತಿತ್ತು.

ಅಣ್ಣ.... ಅಣ್ಣಾ... ಯಾರೋ ಬಂದಿದ್ದಾರೆ.... ಸುಮತಿ ಮೃದುವಾಗಿ ಹೇಳಿದಳು

ಯಾರು.... ಯಾರು"?.... ಯೋಚನೆ ಬದಿಗೆ ಸರಿಯಿತು.... ರವಿ ಎಚ್ಚರನಾದ.

ಬರ ಹೇಳು.... ಅಲ್ಲಿಂದ ಕದಲಲಿಲ್ಲ. ಜವಾನನೂ ಇದ್ದಾನಣ್ಣ.... ನಿನ್ನ ಪೇದೆ ತನಿಯ.... ಅವನೂ ಬಂದಿದ್ದಾನೆ....

ಹಾವು ಮೆಟ್ಟಿದಂತಾಯಿತು ರವಿಯ ಮನಸ್ಸಿಗೆ.

ಜಿಗ್ ಅಂದಿತು........ ನೆಳೆ ಮಿಂಚು ಹಾ.... ಬರಹೇಳು....

ಅವರು ಒಳಕ್ಕೆ ಬಂದರು.

ಸ್ವಾಮಿ... ದರ್ಖಾಸ್ತು ಮಾಡಿಸಿಕೊಡಬೇಕು ಸ್ವಾಮಿ.... ನೀನೇ ಉಳಿಸುವವರು... ಕುಮ್ಕಿ.... ನಮ್ಮ ಕುಮ್ಕಿ ಸ್ಥಳವನ್ನೇ ಅರಿಸಿದ್ದಾರೆ ... ಶಾನ ಭೋಗರು ಲಂಚ ತಕೊಂಡು ಹೀಗೆಲ್ಲ ತಕರಾರು ಮಾಡಿದರು ಸ್ವಾಮಿ... ನೀವೇ ಉಳಿಸಬೇಕು. ಸ್ವಾಮಿ...

ಬಂದ ಬಿಳಿ ಕರಟು ತೊಟ್ಟ ತರುಣ ನಾಲ್ಕು ನೋಟುಗಳನ್ನು ರವಿ ರಿಕಾರ್ಡುಗಳ ಎಡೆಗೆ ಸೇರಿಸಿದನು.

(ಜನ್ನೆರಡನೇ ಪುಟ ನೋಡಿರಿ)

6¼%

ಫಿಕ್ಸೆಡ್ ಡಿಪಾಜಿಟುಗಳ ಮೇಲೆ ತಾರೀಕು 1—9—64ರಿಂದ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು:—

	1ರಿಂದ 3 (ತಿಂಗಳು)	4ರಿಂದ 12 (ತಿಂಗಳು)	2 ವರ್ಷ	3 ವರ್ಷ	4 ವರ್ಷ	5 ವರ್ಷ	6 ವರ್ಷ	7—10 (ವರ್ಷ.
	% p a.	% p a.	% p a.	% p.a.	% p a.	% p a	% p a	% p a
ರೂ. 4999ರ ವರೆಗಿನ ಡಿಪಾಜಿಟುಗಳ ಮೇಲೆ:-	4¾	5	5¼	5½	5¾	6	6⅛	6¼
ರೂ. 5000 ಮತ್ತು ಮೇಲ್ಪಟ್ಟ ಡಿಪಾಜಿಟುಗಳ ಮೇಲೆ:-	5	5¼	5½	5¾	6	6	6¼	6¼

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

ರಿಜಿಸ್ಟರ್ಡ್ ಆಫೀಸು: ಕೋರ್ಟು ರಸ್ತೆ, (ಶೆಡ್ಯೂಲ್ಡ್ ಬ್ಯಾಂಕ್) ಸ್ಥಾಪನೆ:
ಉಡುಪಿ, ದ. ಕ. (ಮೈಸೂರು ರಾಜ್ಯ) 1920

ನಂಬಿದರೆ ನಂಬಿ

ದುರ್ಭಾಗ್ಯವೇ ಕಾರು ನಡೆಸಿತು

ಅದು ಆರು ಜನರು ಕೂತುಕೊಳ್ಳುವ ಮೋಟಾರು ಕಾರು. ಕಣ್ಣಿಗೆ ಹೊಳೆಯುವ ಕೆಂಬಣ್ಣ. ಮೃದುಲ ಸೀಟುಗಳು. ಮೊದಲಿನ ಮಹಾ ಯುದ್ಧದ ಮೊದಲಿನ ಕಾರುಗಳಲ್ಲಿ ಅತ್ಯಾಧುನಿಕವೆನಿಸುವ ಎಲ್ಲ ಸೌಲಭ್ಯಗಳೂ ಅದರಲ್ಲಿದ್ದುವು. ಹೊಚ್ಚ ಹೊಸತದು; ಅದು ವರೆಗೆ ಇನ್ನೂರು ಮೈಲು ಕೂಡ ಓಡಿಲ್ಲ. ಆದರೂ ಅದನ್ನು ೨೮ ಜೂನ್ ೧೯೧೪ರಂದು ಚೆನ್ನಾಗಿ ತೊಳೆದರು; ಚಕಮಕಿಸಿದರು. ಅದಿನ ಇಬ್ಬರು ವಿಶೇಷ ವ್ಯಕ್ತಿಗಳು ಬೋಸ್ನಿಯಾದ ರಾಜಧಾನಿ ಸೆರಾಜೆವೋಗೆ ಯಾತ್ರೆ ಮಾಡಲಿದ್ದರು.

ಆ ವ್ಯಕ್ತಿಗಳು ಮತ್ತಾರೂ ಅಲ್ಲ, ಆಸ್ಟ್ರಿಯಾದ ಯುವರಾಜ ಆರ್ಚ್ ಡ್ಯೂಕ್ ಫ್ರಾಂಜ್ ಫರ್ಡಿನಂಡ್ ಮತ್ತು ಆತನ ಪತ್ನಿ ಡಚೆಸ್ ಹೋಹೆನ್‌ಬರ್ಗ್. ಇವರು ಮೊದಲೇ ಗೊತ್ತುಪಡಿಸಿದ ಸಮಯದಲ್ಲಿ ಬೋಸ್ನಿಯಾದ ಗವರ್ನರನ ಮಹಲಿನಿಂದ ಹೊರಬಿದ್ದು ಕಾರಿನಲ್ಲಿ ಕುಳಿತರು. ಆ ಕಾರು ಮೊದಲೇ ನಿರ್ಧರಿಸಿದ್ದ ಊರಿನತ್ತ ಇವರನ್ನು ಹೊತ್ತುಕೊಂಡು ಹೊರಟಿತು. ಆ ಯಾತ್ರೆಯನ್ನು ಬೋಸ್ನಿಯಾದ ಅಧಿಕಾರಿಗಳು ಏರ್ಪಡಿಸಿರಲಿಲ್ಲ; ಅವರಿಗೂ ಮೇಲಿನ ಪ್ರಭುತ್ವದವರು ನಿರ್ಧರಿಸಿದ್ದರು.

ಕಾರಿನ್ನೂ ಬಹುದೂರ ಗಮಿಸಿರಲಿಲ್ಲ. ಸೆರಾಜೆವೋನಂತಹ ಪುಟ್ಟ ನಗರದಲ್ಲಿ ಕಾರಿನ ದೃಷ್ಟಿಯಲ್ಲಿ ಬಹಳದೂರವೆಂಬುದೆಲ್ಲಿ? ಅಷ್ಟರಲ್ಲೇ ಗಾಳಿಯಲ್ಲಿ ಸರಕ್ಕನೆ ಬಂದು ಕಾರಿನ ಪಕ್ಕಕ್ಕೆ ಜಾರಿ ನಡುಬೀದಿಯಲ್ಲಿ ಬಿದ್ದು ಪಟ್ಟೆಂದು ಒಡೆಯಿತು ಒಡೆಯಿತು! ಬಾಂಬು. ಬಂದು ಕಾರಿನೊಡನೆ ಹೋಗುತ್ತಿದ್ದ ನಾಲ್ವರು ಅಂಗರಕ್ಷಕ ಅಶ್ವಾರೋಹಿಗಳು ಗಾಯಗೊಂಡರು. ಮೆರವಣಿಗೆ ಅರೆಕ್ಷಣ ಸ್ತಬ್ಧವಾಯ್ತು. ಯುವರಾಜರು ಗಾಯಾಳುಗಳಿಗೆ ಅವಶ್ಯಕ ಚಿಕಿತ್ಸೆ ನಡೆಸುವ ಆಜ್ಞೆಯಿತ್ತು; ಕಾರನ್ನು ಮುನ್ನಡೆಸಿದರು. ಆದರೆ ಆ ನಡುವೆ ಏನಾಯಿತೆಂದು ಯಾರೂ ಅರಿಯರು. ಡ್ರೈವರನಿಗೆ ಸೆರಾಜೆವೋವಿನ ರಾಜಮಾರ್ಗಗಳ ಮತ್ತು ಅಂದಿನ ಮೆರವಣಿಗೆಯ ಕಾರ್ಯಕ್ರಮಗಳ ಸಂಪೂರ್ಣ ಪರಿಚಯವಿತ್ತು. ಆದರೂ ಆತನು ಕಾರನ್ನು ಒಂದು ಅಡ್ಡ ಓಣಿಯಲ್ಲಿ ತಿರುಗಿಸಿದ. ಆ ಓಣಿಯು ನಡುಬೀದಿಯೇ ಒಂದಾಗಿತ್ತು!

ಒಂದು ಮನೆ ಬಾಗಿಲಿನಿಂದ ಒಬ್ಬ ಯುವಕ ಎದ್ದು ಬಂದನು. ಆವನ ಕೈಯಲ್ಲಿ ಪಿಸ್ತೂಲಿತ್ತು; ಬಾಯಿ ಅಪಶಬ್ದಗಳ ಮಳೆಸುರಿಸುತ್ತಿತ್ತು. ಆತ ನೆಗೆದು ಓಡುತ್ತಿದ್ದ ಕಾರಿನ ಕಾಲ್ಮಣೆಯನ್ನು ಹತ್ತಿ ಯುವರಾಜ ಮತ್ತು ಯುವರಾಣಿಯ ಮೇಲೆ "ಪಾಯಿಂಟು ಬ್ಲಾಂಕ್ ರೇಂಜ್"ನಿಂದ ಗೋಲಿ ಹಾರಿಸತೊಡಗಿದ. ಅಂಗರಕ್ಷಕರು ಆತನನ್ನು ಎಳೆದು ತಮ್ಮ ವಶಕ್ಕೆ ತರುವಷ್ಟರಲ್ಲಿ ರಾಜದಂಪತಿಗಳ ಪ್ರಾಣಪಕ್ಷಿ ಹಾರಿಹೋಗಿದ್ದುವು!

ಈ ಘಟನೆಯು ಮೊದಲನೆಯ ಮಹಾ ಯುದ್ಧಕ್ಕೆ ನಾಂದಿಯಾಯಿತು. ಎರಡು ಕೋಟಿ ನರಬಲಿ ತೆಗೆದುಕೊಂಡು ಯುದ್ಧ ಶಾಂತವಾಯಿತು. ಇದು ರಾಜಕೀಯ ಕೊಲೆ; ಇದರಲ್ಲಿ ಆ ಬಡಕಾರಿನದೇನು ತಪ್ಪು ಎಂದು ಕೇಳಬಹುದು. ಆದರೆ, ಮುಂದೆ ಓದಿದಾಗ ಇದಕ್ಕೆ ಉತ್ತರ ನೀವೇ ಹೇಳಬಲ್ಲಿರಿ.

ವಿಶ್ವಕದನ ಕಿಡಿಯಾಗುತ್ತಿರುವುದಕ್ಕೆ ಆರೇಳು ದಿನಗಳೊಳಗೆ ಐದನೆಯ ಆಸ್ಟ್ರಿಯನ್ ಸೇನೆಯ ಪ್ರಖ್ಯಾತ ಸೇನಾಪತಿ ಜನರಲ್ ಪೋತ್ಯೋರೇಕನು ಸೆರಾಜೆವೋದ ಗವರ್ನರನ ಮಹಲಲ್ಲಿ ತಂಗಿದನು. ಮಹಲಿನೊಡನೆ ಗವರ್ನರನ ಗ್ಯಾರೇಜೂ ಜನರಲ್ಲನ ವಶಕ್ಕೆ ಬಂತು; ಆ ಕೆಂಪು ಕಾರು ಕೂಡಾ. ಇಪ್ಪತ್ತೊಂದು ದಿನಗಳ ನಂತರ ವಾಲೀವೋ ಸಮರದಲ್ಲಿ ಆ ಸುವಿಖ್ಯಾತ ಜನರಲ್ಲನು ಸೋತು ಹೋದ. ಆತನನ್ನು ಪದಚ್ಯುತಗೊಳಿಸಿ ವಿಯನ್ನಾಕ್ಕೆ ಮರಳಿ ಕರೆಸಿಕೊಂಡರು. ಅಲ್ಲವನು ಹುಚ್ಚನಾಗಿ ಕೊನೆಗೆ ಒಂದು ಭಿಕ್ಷುಕರ ಮನೆಯಲ್ಲಿ ಸತ್ತು ಹೋದ.

ಜನರಲ್ ಪೋತ್ಯೋರೇಕನ ಸೇನೆಯಲ್ಲೊಬ್ಬ ಕೇಪ್ಟನ್ ಇದ್ದ. ಆವನಿಗೆ ಕಾರು ಮೆಚ್ಚುಗೆಯಾಯ್ತು; ಅದನ್ನು ಉಪಯೋಗಿಸ ತೊಡಗಿದ. ಒಂಬತ್ತು ದಿನ ಕಳೆಯುವಷ್ಟರಲ್ಲೇ ವೇಗವಾಗಿ ಓಡುತ್ತಿದ್ದ ಕಾರು ರಸ್ತೆಯಲ್ಲಿ ನಡೆಯುತ್ತಿದ್ದ ಇಬ್ಬರು ರೈತರ ಮೇಲೆ ಹರಿಯಿತು. ಅಲ್ಲೇ ಒಂದು ಗೋಡೆಗೆ ಬಡಿದು ಮಗುಚಿ ಬಿತ್ತು. ಸೈನಿಕರು ಕೇಪ್ಟನ್ನನ ಹೆಣವನ್ನು ಕಾರಿನಡಿಯಿಂದ ಎತ್ತಿ ತೆಗೆದು ಕಾರನ್ನು ಗವರ್ನರನ ಗ್ಯಾರೇಜಿಗೆ ಮುಟ್ಟಿಸಿದರು.

ಯುದ್ಧ ಕೊನೆಗೊಂಡ ಬಳಿಕ ಯುಗೊಸ್ಲಾವಿಯಾದ ಹೊಸ ಗವರ್ನರನು ಈ ಕಾರಿನ ಒಡೆಯನಾದ. ಅವನದನ್ನು ರಿಪೇರಿ ಮಾಡಿಸಿದ. ಇಂಜಿನಿಯರರು ಅತ್ಯಪೂರ್ವವೆಂಬಂತೆ ಅದನ್ನು ರಿಪೇರಿ ಮಾಡಿದರು. ಕಾರು ಹೊಸತಾಗಿ ಮೊರ್ಪಟ್ಟಿತು. ನಾಲ್ಕು ತಿಂಗಳುಗಳಲ್ಲಿ ಕಾರು ಗವರ್ನರನಿಗೆ ನಾಲ್ಕು ದುರ್ಘಟನೆಗಳನ್ನು ತಂದು ಹಾಕಿತು. ಕೊನೆಯದರಲ್ಲಿ ಯಜಮಾನನ ಬಲಗೈಯೇ ತುಂಡಾಯಿತು.

ಇಷ್ಟರಲ್ಲೇ ಆ ಕೆಂಪು ಕಾರು ಸಾಕಷ್ಟು ಅಪನಿಂದೆಯನ್ನು ಗಳಿಸಿತ್ತು. ಅದನ್ನು ಕೊಂಡುಕೊಳ್ಳಲು ಯಾರಾದರೂ ಮುಂದೆ ಬಂದಾರೆಂದು ಗವರ್ನರನು ಊಹಿಸಿಯೂ ಇರಲಿಲ್ಲ. ಆದುದರಿಂದ ಅದನ್ನು ಬಿಚ್ಚಿ ಹಾಕಲು ಆಜ್ಞೆಯಿತ್ತ. ಆದರೆ, ಆ ಕಾರಿಗೆ ಇನ್ನೂ ಹಲವು ಜೀವಗಳೊಂದಿಗೆ ಸೆಣಸಬೇಕಾಗಿತ್ತು! ಡಾ। ಸ್ರಕಿಸ್ ಎಂಬ ವೈದ್ಯನು ಕವಡೆ ಬೆಲೆಯಲ್ಲಿ ಅದನ್ನು ಕೊಂಡುಕೊಂಡ. ಆದರೆ, ಅದೆಷ್ಟು ಪ್ರಯತ್ನಿಸಿದರೂ ಅವನಿಗೆ ಚಾಲಕನೇ ದೊರೆಯಲಿಲ್ಲ. ಹಾಗಾಗಿ ಕೇಳಿದಷ್ಟು ವೇತನ ಕೊಡಲು ಮುಂದೆ ಬಂದರೂ ಯಾರೂ ಅದನ್ನು ಬಯಸಲಿಲ್ಲ. ನಿರುಪಾಯನಾದ ಡಾಕ್ಟರನು ತಾನೇ ಕಾರ ನಡೆಸತೊಡಗಿದ.

ಆರು ತಿಂಗಳ ಕಾಲ ಎಲ್ಲವೂ ಸರಿಯಾಗಿತ್ತು. ಡಾಕ್ಟರ ಎಲ್ಲರೊಡನೆಯೂ ಹೇಳುತ್ತ ತಿರುಗಾಡಿದ — "ಜನರು ಬಹಳ ಕೆಟ್ಟವರು. ಸುಮ್ಮಸುಮ್ಮನೆ ಕಾರನ್ನು

(ಹನ್ನೊಂದನೇ ಪುಟ ನೋಡಿರಿ)

ಹೊಸ ದಿಗಂತದತ್ತ

ದಿ ಚಾಲಪುರಂ ಬ್ಯಾಂಕ್ ಲಿಮಿಟೆಡ್
ಚಾಲಪುರಂ ಕಲ್ಲೀಕೋಟೆ-2

ಲೀನವಾಗಲಿದೆ

ದಿ ವಿಜಯ ಬ್ಯಾಂಕ್ ಲಿಮಿಟೆಡ್
ನೊಂದಿಗೆ
ಮಂಗಳೂರು-3

ಕೇರಳದಲ್ಲಿ ಅರವತ್ತು ವರ್ಷಗಳಿಂದ ಕಾರ್ಯನಿರತವಾಗಿರುವ ಇನ್ನೊಂದು ಬ್ಯಾಂಕು 'ವಿಜಯ ಬ್ಯಾಂಕ್ ಲಿಮಿಟೆಡ್' ಜೊತೆ ಒಂದಾಗಲಿದೆಯೆಂದು ಪ್ರಕಟಿಸಲು ವಿಜಯ ಬ್ಯಾಂಕ್ ಹರ್ಷಿಸುತ್ತದೆ. ಇದೇ ಚಾಲಪುರಂ ಬ್ಯಾಂಕ್ ಲಿಮಿಟೆಡ್.

1964 ರ ಅಕ್ಟೋಬರ್ 17 ರಂದು 'ಚಾಲಪುರಂ ಬ್ಯಾಂಕ್ ಲಿಮಿಟೆಡ್' ಸಂಸ್ಥೆಯು 'ವಿಜಯ ಬ್ಯಾಂಕ್ ಲಿಮಿಟೆಡ್' ನೊಡನೆ ಒಂದುಗೂಡಲಿದೆ.

ಈಗ ಕಲ್ಲೀಕೋಟೆಯ ಚಾಲಪುರಂ, ವೈನಾಡ್‌ನಲ್ಲಿನ ಕಾಲ್ಪೆಟ್ಟ, ಕೊಟ್ಟಕ್ಕಾಲ್, ಮಂಜೇರಿ ಮನ್ನಾರ್‌ಘಾಟ್, ಪೆರಿಂತಲ್‌ಮನ್ನ, ಪೊನ್ನಾನಿ ಮತ್ತು ತಿರೂರು — ಈ ಸ್ಥಳಗಳಲ್ಲಿನ ಚಾಲಪುರಂ ಬ್ಯಾಂಕ್ ಲಿಮಿಟೆಡ್‌ನ ಎಂಟು ಶಾಖೆಗಳೂ 1964ರ ಅಕ್ಟೋಬರ್ 17 ರಿಂದ ವಿಜಯಾ ಬ್ಯಾಂಕಿನ ಹೊಸ ಶಾಖೆಗಳಾಗಿ ಕೆಲಸಮಾಡುವುವು.

ಚಾಲಪುರಂ ಬ್ಯಾಂಕ್ ಲಿಮಿಟೆಡ್‌ನ ಎಲ್ಲ ಠೇವಣಿದಾರರು ಮತ್ತು ಗಿರಾಕಿಗಳನ್ನು ವಿಜಯ ಬ್ಯಾಂಕ್ ಲಿಮಿಟೆಡ್ ಹಾರ್ದಿಕವಾಗಿ ಸ್ವಾಗತಿಸಿ ವಿಜಯಾ ಬ್ಯಾಂಕಿನ ವಿಶ್ವಾಸಾಂತ ಸೇವಾ ಸಂಪ್ರದಾಯದ ಭರವಸೆ ನೀಡುತ್ತದೆ.

ಈಗ ಕೇರಳದಲ್ಲಿ 14 ಶಾಖೆಗಳನ್ನು ಹೊಂದಿರುವ ವಿಜಯಾ ಬ್ಯಾಂಕ್ ಅತ್ಯುತ್ತಮ ಬ್ಯಾಂಕಿಂಗ್ ಸೇವೆ ಸಲ್ಲಿಸಲು ಹೊಸ ದಿಗಂತದತ್ತ ಮುನ್ನಡೆಯುತ್ತಿದೆ.

ವಿಜಯಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಛೇರಿ. ವಿಜಯಾ ಬ್ಯಾಂಕ್ ಬಿಲ್ಡಿಂಗ್
ಲೈಟ್‌ಹೌಸ್ ಹಿಲ್‌ರಸ್ತೆ, ಮಂಗಳೂರು-3

ಅಧ್ಯಕ್ಷರು: ಎಂ. ಸುಂದರರಾಮ ಶೆಟ್ಟಿ
ಕಾರ್ಯದರ್ಶಿ: ಪಿ. ಜಯರಾಮ ಶೆಟ್ಟಿ

ವಿಚಿತ್ರ ಆತ್ಮವಂಚನೆ

ಅಕ್ಷಯ ಚಿನ್ನೆಗೆ ಅರ್ಧ ಚಂದ್ರ?

ಬರೆದವರು: ಶ್ರೀ ಶಿವಶಂಕರ.

ಅಕ್ಷಯ ಚಿನ್ನೆಯ "ಭೂದಾನ"ಕ್ಕೆ ತನ್ನನ್ನು ಪುರೋಹಿತನನ್ನಾಗಿ ಸಮರ್ಪಿಸಿಕೊಳ್ಳಲು ಜಯಪ್ರಕಾಶರು ಸಿದ್ಧತೆ ನಡೆಸಿದಾಗ ಭಾರತದ ಹಲವಾರು ಪಕ್ಷಗಳು ಪ್ರಕಟಿಸಿದ ಪ್ರತಿಕ್ರಿಯೆಯನ್ನು ಕಳೆದ ವಾರ ಕಂಡಿರುವೆವು. ಜಯಪ್ರಕಾಶರು ರಾಜಕೀಯದ ಕುರಿತು ತಳೆಯುತ್ತಿರುವ ಧೋರಣೆಯಂತೆಯೇ ಇದೆ ಇತರ ಪಕ್ಷಗಳು ಅವರತ್ತ ತಳೆಯುವ ಧೋರಣೆ. ಅಕ್ಷಯ ಚಿನ್ನೆಯ ಭೂದಾನಕ್ಕೆ ಕಾಂಗ್ರೆಸಿಗರು ಮೊದಲು ಒಪ್ಪಿರಲಿಲ್ಲ. ರಾಮಸುಭಾಗಸಿಂಘರಂತಹ ಸುಬಗರು ಆಗ ಎದುರಿಸಿದ್ದರು. ಆದರೆ ಅನಂತರ ಜಯಪ್ರಕಾಶರ ಗ್ರಹಗತಿ ಬದಲಾಯಿತು. ಅವರ ಬೆಂಬಲಕ್ಕೆ ಲಕ್ಷ್ಮೀ ಮೆನನ್ ಬಂದರು. ಪ್ರಧಾನಿ ಲಾಲಬಹದ್ದೂರರು ಕೂಡಾ ಪರೋಕ್ಷವಾಗಿ ತನ್ನ ಬಾಹ್ಯಿಕ ಬೆಂಬಲವನ್ನು ವ್ಯಕ್ತಪಡಿಸಿರುವರು. ಕೆಲ ಪತ್ರಿಕೆಗಳು ಮೇರೆ ಮೀರಿ ತಮ್ಮ ಅಭಿಪ್ರಾಯವನ್ನು ಬಹಿರಂಗಪಡಿಸಿರುತ್ತವೆ. ಜಯಪ್ರಕಾಶರ 'ಭೂದಾನ'ಕ್ಕೆ ಅಡ್ಡಿ ಬರುವವರನ್ನು ಒಂದು ಆಂಗ್ಲ ದೈನಿಕವು ಭ್ರಾಂತರ ಕೂಟವೆಂದು ಕರೆದಿರುತ್ತದೆ. ಅವರ ಅಭಿಪ್ರಾಯಗಳನ್ನು ಅರ್ಧಂಬರ್ಧ ಅರಿತುಕೊಂಡಿರುವುದರಿಂದ ಭ್ರಾಂತರು ಗಲಾಟೆ ಮಾಡುತ್ತಿದ್ದಾರೆ," ಅದರಲ್ಲೂ ಜಯಪ್ರಕಾಶರನ್ನು "ದೇಶದ್ರೋಹಿ" ಎಂದು ಸಂಬೋಧಿಸಿರುವುದು ಅವರ ಮನಸ್ಸಿಗೆ ಬಹಳ ನೋವಾಗಿರುತ್ತದೆ. ಈ ದೇಶದ ಕೆಲವು ಜನರು ಅದೆಷ್ಟು ದಾನ ವಿರೋಧಿಗಳು ಹಾಗೂ ಗಟ್ಟಿ ಮನಸ್ಸಿನವರಿದ್ದಾರೆ! ಜನರ ಪ್ರಾಮಾಣಿಕ ಸೇವಕನನ್ನು, ಅವನ ಅಭಿಪ್ರಾಯವು ಅದೆಷ್ಟು ಹಿಡಿಸದಿದ್ದರೂ, ಟೀಕೆಯ ಗುರಿಯನ್ನಾಗಿ ಮಾಡಿಕೊಳ್ಳಲು ಅವರು ನಾಚಿಕೆಪಟ್ಟುಕೊಳ್ಳಬೇಕಾಗಿತ್ತು"—ಈ ರೀತಿ ಆಂಗ್ಲ ದೈನಿಕವು ಸಂಪಾದಕೀಯದಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತದೆ.

ತನ್ನ ಮಾತೃಭೂಮಿಯ ಭೂಭಾಗವನ್ನು ಆಕ್ರಮಣಗಾರರಿಗೆ ಭೂದಾನ ಮಾಡಲು ಹೇಳಿದಾಗ ಅದನ್ನು ಯಾರಾದರೂ ಟೀಕಿಸಿದಾಗ ಅವರನ್ನು ಭ್ರಾಂತರೆನ್ನುವದು ಸರಿಯೋ, ತಪ್ಪೋ ಎಂಬುದನ್ನು ಭ್ರಾಂತರೇ ನಿಶ್ಚಯಿಸಲಿ

ತನ್ನ ವಾತ್ಸಲ್ಯಮಯ ಮಾತೃಭೂಮಿಯ ಭೂಪ್ರದೇಶವನ್ನು ಯಾರಿಗಾದರೂ ಬಿಟ್ಟು ಕೊಡುವ ಹಕ್ಕು ಪ್ರಜೆಗಳಿಗಿದೆಯೇ? ಯುದ್ಧದಲ್ಲಿ ಸೋಲುವದು ಬೇರೆ ವಿಷಯವಿದೆ. ಇಂದು ಈ ಜನಾಂಗ ಸೋತರೆ ಮುಂಬರುವ ಪೀಳಿಗೆ ಪುನರ್ ಸ್ವಾತಂತ್ರ್ಯಕ್ಕಾಗಿ ಸಂಗ್ರಾಮ ನಡೆಸೀತು. ತಾವಾಗಿ ಬಿಟ್ಟು ಕೊಟ್ಟಲ್ಲಿ ಮತ್ತೆ ಕೇಳುವುದಾದರೂ ಹೇಗೆ? ಯಾರಾದರೂ ಅದ್ಯಾಕೆ ಬಿಟ್ಟು ಕೊಡುತ್ತಾರೆ?

ಅಕ್ಷಯ ಚಿನ್ನೆ ತನ್ನ ಭೂಪ್ರದೇಶವೆನ್ನುತ್ತದೆ ಕಮ್ಯೂನಿಸ್ಟ್ ಚೈನಾ. ಅದು ನಮಗೆ ಸೇರಿದ್ದೆನ್ನುತ್ತಾರೆ ಭಾರತದ ಪ್ರಜೆಗಳು—ಕಮ್ಯೂನಿಸ್ಟರನ್ನು ಬಿಟ್ಟು. ಹಾಗಿದ್ದರೂ ಅದನ್ನು ಗುತ್ತಿಗೆಗೆ ಕೊಟ್ಟುಬಿಡೋಣ ಎನ್ನುತ್ತಾರೆ ಕೆಲವರು. ಇಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ:

ನ್ಯಾಯಾಧೀಶರ ಮುಂದೆ ಒಂದು ದೂರು ವಿಚಾರಣೆಗಾಗಿ ಬರುತ್ತದೆ. ಇಬ್ಬರು ಹೆಂಗಸರು ಎರಡು ಶಿಶುಗಳನ್ನು ತೆಗೆದುಕೊಂಡು ನ್ಯಾಯಾಂಗಣಕ್ಕೆ ಬರುತ್ತಾರೆ. ಅವರಲ್ಲಿ ಒಬ್ಬಳ ಮಗು ಸತ್ತಿರುತ್ತದೆ. ಜೀವದಲ್ಲಿರುವ ಮಗುವಿಗಾಗಿ ಇಬ್ಬರೂ ಜಗಳವಾಡಿಕೊಳ್ಳುತ್ತಿದ್ದಾರೆ. ಅದು ತನ್ನದೆನ್ನುತ್ತಾರೆ ಇಬ್ಬರೂ. ನ್ಯಾಯಾಧೀಶ ಆಲೋಚಿಸಿದ, ಏನು ಮಾಡುವುದೆಂದು. ಕೊನೆಗೊಂದು ಉಪಾಯ ಅವನಿಗೆ ಹೊಳೆಯಿತು. ಪುನಃ ಇಬ್ಬರ ಬಳಿಯೂ ಕೇಳಿದ ನ್ಯಾಯಾಧೀಶ—ಆ ಜೀವಂತ ಮಗು ಯಾರದ್ದೆಂದು. ಇಬ್ಬರೂ ತಮ್ಮದೆಂದು ಸಾಧಿಸಿದರು. ಆಗ ನ್ಯಾಯಾಧೀಶನು ಅಲ್ಲಿದ್ದ ಕಾವಲುಗಾರರ ಬಳಿ, ಮಗುವನ್ನು ಕಡಿದು ಇಬ್ಬರಿಗೂ ಹಂಚಲು ಹೇಳಿ, ಇನ್ನೇನಾದರೂ ಹೇಳಲಿಕ್ಕಿದೆಯೇ ಎಂದು ಕೇಳಿದನು. ಅವರಲ್ಲೊಬ್ಬಳು ಆಗಲೇ ಆಗಬಹುದೆಂದಳು. ಆದರೆ ಇನ್ನೊಬ್ಬಳು ಪ್ರಾರ್ಥಿಸಿಕೊಂಡಳು ಹಾಗೆ ಮಾಡಕೂಡದೆಂದು. "ಎಲ್ಲಾದರೂ ಇರಲಿ ಆ ಶಿಶು, ಜೀವಂತವಾಗಿರಲೆಂದು ಅವಳು ನ್ಯಾಯಾಧೀಶನನ್ನು ಕೇಳಿಕೊಂಡಳು. ಅದುವೇ ಹೆತ್ತ ಕರುಳಿನ ಕರೆ. ಅದನ್ನು ಕಡಿಯಲು ಅವಳು ಬಿಟ್ಟಾಳೆ? ಆದರೆ ಇನ್ನೊಬ್ಬಳಿಗೆ ಅದೇನು ನಷ್ಟ. ಆ ಮಗುವೂ ಸತ್ತುಹೋಗಲೆಂಬುದೇ ಆಕೆಯ ಆಶೆ. ಆಗ ನ್ಯಾಯಾಧೀಶನಿಗೆ ಗೊತ್ತಾಯಿತು, ಯಾರದ್ದು ಆ ಮಗುವೆಂಬುದು.

ಈ ಕಥೆಯು ನಮ್ಮ ರಾಜಕೀಯ ದೃಷ್ಟಿಯಲ್ಲಿ ನೋಡೋಣ. ಜಗತ್ತಿಗೇನೇ ಒಬ್ಬ ನ್ಯಾಯಾಧೀಶ ಇದ್ದರೆ ಅವರು ಏನು ಹೇಳಿಯಾರು? ಅಕ್ಷಯ ಚಿನ್ನೆಯ ಅಂಗುಲ ಅಂಶವನ್ನೂ ಬಿಟ್ಟು ಕೊಡುವದಿಲ್ಲವೆಂದು ಕಮ್ಯೂನಿಸ್ಟ್ ಚೈನಾ ಹೇಳುತ್ತದೆ. ನಮ್ಮ ದೇಶದಲ್ಲಿರುವ ಭೂದಾನಿಗಳಾದರೋ ಅಕ್ಷಯ ಚಿನ್ನೆಯನ್ನು ಕಮ್ಯೂನಿಸ್ಟ್ ಚೈನಾಕ್ಕೆ ಗುತ್ತಿಗೆ ಬಿಟ್ಟು ಕೊಡೋಣ ಎಂದು ಉಪದೇಶಮಾಡುತ್ತಿದ್ದಾರೆ, ಅವರ ಹಿಂದೆಯೂ ಜಯಕಾರ ಹಾಕುವ ಪುಢಾರಿಗಳೂ ಪತ್ರಿಕೆಗಳೂ ಇವೆ. ನಮ್ಮ ತಾಯ್ನಾಡಿನ ಅಂಗವನ್ನು ಬಿಟ್ಟು ಕೊಡಲು ಒಪ್ಪುತ್ತೇವೆಂದರೆ ನಿಜವಾಗಿ ಆ ಭೂಪ್ರದೇಶ ನಮಗೆ ಸೇರಿದ್ದು ಅಲ್ಲವೆಂದಾಗಬಹುದು. ಆದರೆ ಅದನ್ನು ಒಪ್ಪಿಕೊಳ್ಳಲು ಭೂದಾನಿಗಳೂ ಸಿದ್ಧರಿಲ್ಲ. ಅಂದಮೇಲೆ ಅದರ ಅರ್ಥವೇನು?

ಆಕ್ರಮಣಗಾರರು ಭಾರತವನ್ನು ಭೋಗ ಭೂಮಿ ಎಂದು ಕರೆದರೂ ಇದು ನಮಗೆ ಪವಿತ್ರ ವಾತ್ಸಲ್ಯಮಯಿ ಮಾತೃಭೂಮಿ ಇದೆ. ಅದನ್ನು ನಾವು "ತಾಯಿ" ಎಂದೇ ಕರೆಯುತ್ತೇವೆ. ನಮ್ಮ ಪಾದವು ಆಕೆಯನ್ನು ಸ್ಪರ್ಶಿಸುತ್ತಿರುವದಕ್ಕೆ ಬೆಳಿಗ್ಗೆ ಎದ್ದೊಡನೆಯೇ ನಾವು ಆಕೆಯ ಬಳಿ ಕ್ಷಮೆ ಕೇಳುತ್ತೇವೆ. ಹಾಗಿರುವಾಗ ಅಕ್ಷಯ ಚಿನ್ನೆಯನ್ನು ಬಿಟ್ಟು ಕೊಡುವದು ಹೇಗೆ?

ಅದಕ್ಕೆ ಭೂದಾನಿಗಳು ಹೇಳುವ ಉತ್ತರ ಹಾಸ್ಯಾಸ್ಪದವೇ ಇದೆ. ಕಮ್ಯೂನಿಸ್ಟ್ ಚೈನೀಯರು ಆ ಪ್ರದೇಶವನ್ನು ಆಕ್ರಮಿಸಿಕೊಂಡು ಬಿಟ್ಟಿದ್ದಾರೆ ಅದನ್ನು ಅವರು ಬಿಟ್ಟು ಕೊಡುವದಿಲ್ಲ. ಅದಕ್ಕಾಗಿ ರಕ್ತಪಾತ ನಡೆಸುವದು ಸರಿಯೇ? ಸ್ವಲ್ಪ ಒಪ್ಪಿಕೊಂಡು ಶಾಂತ ರೀತಿಯಲ್ಲಿ ಹೋಗಬೇಕೆಂದವರು ಉಪದೇಶಿಸುತ್ತಿದ್ದಾರೆ.

ಅವರಿಗೆ ಒಂದೇ ಒಂದು ಪ್ರಶ್ನೆ: ನಿಮ್ಮ ತಾಯಿಯನ್ನು ಆತತಾಯಿಯೋರ್ವ ಬಲಾತ್ಕಾರದಿಂದ ಹಿಡಿದುಕಟ್ಟಿಕೊಂಡು ಹೋಗಿ ಬಂಧನದಲ್ಲಿಟ್ಟುಕೊಂಡಿದ್ದಾನೆ. ಆಗ ನೀವೇನು ಮಾಡುವಿರಿ? ಸುಲಭದಲ್ಲಿ ಆತ ಬಿಟ್ಟುಕೊಡಲಾರ; ಕೊಡುವದಿದ್ದಲ್ಲಿ ಅದೇತಕ್ಕೆ ಕೊಂಡು ಹೋಗುತ್ತಿದ್ದ? ಅವನ ಬಳಿ ಜಗಳವೇತಕ್ಕೆ? ನಗರ ಕಾವಲುಗಾರರು ಹೋಗಿ ಗಲಾಟೆ ಮಾಡುವದು ....ಇವೆಲ್ಲಾ ಏತಕ್ಕೆ? ಸಾಯಲಿ. ಅವಳು ಅಲ್ಲೇ ಇರಲಿ. ಆತತಾಯಿ ಅವಳನ್ನು ಇಟ್ಟುಕೊಂಡು ನಿಮಗೆ ಸ್ವಲ್ಪ ಹಣ ಕೊಟ್ಟರೆ ಸಾಕು. ಅಲ್ಲವೆ? ತಿಂಗಳು ತಿಂಗಳು ಕೊಟ್ಟರೆ ಮತ್ತಷ್ಟು ಒಳ್ಳೆಯದು ಅಲ್ಲವೇ? ಅದರಲ್ಲೂ ಆಕೆ ಮುದುಕಿಯಾಗಿದ್ದಲ್ಲಿ ಹೇಳುವದೇ ಬೇಡ. ಏನೂ ಬೆಳೆಯದೆ, ಜನವಸತಿ ಇಲ್ಲದ ಹಿಮ ಪ್ರದೇಶ ಅಕ್ಷಯ ಚಿನ್ನೆಯ ಹಾಗೆ ಆ ಮುದುಕಿ ಇದ್ದಾಳೆ. ಆಕೆಯ ಸ್ಥಿತಿ ಹೇಗೂ ಇರಲಿ. ಶಾಂತ ರೀತಿಯಲ್ಲಿ ನಿಮಗೆ ಹಣ ಬಂದರೆ ಸರಿ ಅಲ್ಲವೇ? ಅಪಮಾನ—ಅದು ಇರುವದಾದರೂ ಎಲ್ಲಿ?

ತರ್ಕ ಹೀಗೆ ಇದೆಯಾದರೂ ಜಗತ್ತಿಗೇ ಉಪದೇಶಿಸುವ ಮಹಾನ್ ವ್ಯಕ್ತಿಗಳಲ್ಲೂ "ಸಂಕೋಚ ಮನೋಭಾವವೆ" ಇದ್ದೇ ಇರುತ್ತದೆ. ೧೯೪೭ರಲ್ಲಿ ಮಾತೆಯ ಅಂಗ ವಿಚ್ಛೇದನ ಪಾಪಕೃತ್ಯ ನಡೆದಾಗ ಇಲ್ಲಿಯ "ಜಗಜ್ಯೋತಿ"ಗಳು ಹಿಂದೂಗಳಿಗೆ ಉಪದೇಶ ಮಾಡುತ್ತಿದ್ದರು. ಉಪದೇಶದಲ್ಲಿ ಸ್ಪರ್ಧೆಯೇ ಸರಾಗವಾಗಿ ನಡೆಯುತ್ತಿತ್ತು. ಆಗ ಜವಾಹರಲಾಲ ನೆಹ್ರೂಜೀಯವರು ತಮ್ಮ ಮುದ್ದಿನ ಮಗಳು ಇಂದಿರಾಳೊಂದಿಗೆ ಹೋಗುತ್ತಿದ್ದಾಗ ಉದ್ದೇಶಪೂರ್ವಕವಾಗಿ ಓರ್ವ ತರುಣ ಇಂದಿರಾ ಗಾಂಧಿಗೆ ಡಿಕ್ಕಿ ಹೊಡೆದನಂತೆ. ಜವಾಹರಲಾಲಜೀಗೆ ತಟ್ಟನೆ ಕೋಪ ಬಂತಂತೆ....

ವಾಸ್ತವ್ಯಸ್ಥಿತಿ ಹೀಗಿದೆ ಊರಿಗೆ ಉಪದೇಶಮಾಡುವುದು ಬಹಳ ಸುಲಭ. ಅದಕ್ಕೆ ಶಕ್ತಿ—ತಂತ್ರ ಎಲ್ಲಾ ಇರಬೇಕೆನ್ನುವದೇನೋ ನಿಜ. ಬೇರುಬಾರಿ ಬಿಟ್ಟು ಕೊಡು. ಅಕ್ಷಯ ಚಿನ್ನೆ ಬಿಟ್ಟು ಕೊಡುವ. ಅದು ಬಿಟ್ಟುಕೊಡುವ, ನೇಫಾ ಬಿಟ್ಟು ಕೊಡುವ. ಕಾಶ್ಮೀರ ಬಿಟ್ಟುಕೊಡುವ, ಅದು ಬಿಟ್ಟು ಕೊಡುವ, ಇದು ಬಿಟ್ಟುಕೊಡುವ ಎನ್ನುವ ಮಹಾನ್ ಪುಢಾರಿಗಳು ದಿಲ್ಲಿ ಗದ್ದುಗೆಯನ್ನು ಬಿಟ್ಟು ಕೊಡಲು ಸಿದ್ಧರಿದ್ದಾರೆಯೇ? ಅಧಿಕಾರ ಗದ್ದುಗೆಗೆ ಗಟ್ಟಿಯಾಗಿ ಅಂಟಿಕೊಳ್ಳಲು ಅದೇನೇನೋ ಆಟವಾಡುತಿದ್ದಾರೆ. ಅವರ ಮನಸ್ಸಿನಲ್ಲಿ ಇರುವುದಾದರೂ ಗೋಡೆ ಬಿದ್ದರೆ ಜಗಲಿ ಮೇಲೆ ತಾನೆ? ತಾನು ಕೋಣೆಯೊಳಗೆ ಇದ್ದೇನೆ—ನಂತ್ರೇನು? ಅಬ್ಬಾ ಭಾರೀ ಧೈರ್ಯವಂತರು!

ಇಂತಹ ಬಿಟ್ಟು ಕೊಡುವ ಭೂದಾನಿಗಳನ್ನು ಯಾರಾದರೂ 'ದೇಶದ್ರೋಹಿ'ಗಳೆಂದು ಕರೆದರೆ ದೇಶ ಭಕ್ತರಿಗೆ ಕೋಪ ಬಂದೀತೇ? ದೇಶಕ್ಕಾಗಿ ಅವರು ಬಹಳ ತ್ಯಾಗ ಮಾಡಿರಬಹುದು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಅವರು ತಪ್ಪು ಮಾಡುವಾಗ ಸುಮ್ಮನಿರುವುದು ಸರಿಯೇ? ಒಬ್ಬರು ಉತ್ತಮ ಮಾರ್ಗದರ್ಶಕರು ಇದ್ದಾರೆ. ಬಹಳ ಪಾದ ಯಾತ್ರೆ ಮಾಡಿದ್ದಾರೆ. ಅದು ದೃಷ್ಟಿ ದೋಷದಿಂದಲೋ, ಬೇರೆ ಯಾವ ಕಾರಣದಿಂದಲೋ ಅವರು ಪ್ರಪಾತದತ್ತ ನಡೆಯುವಾಗ ಅವರನ್ನು ತಡೆಯದೆ, ಹೋ, ಮಾರ್ಗದರ್ಶಕರು ಹೋಗುತ್ತಿದ್ದಾರೆ, ನಾವು ಹೋಗೋಣವೆಂದು ಯಾರಾದರೂ ಹಿಂದೆಯೇ ನಡೆಯುತ್ತಾರೆಯೇ?

ಕೆಲವು ಕನ್ನಡ ಪತ್ರಿಕೆಗಳೂ ಜಯಪ್ರಕಾಶ ನಾರಾಯಣರ ಈ 'ಭೂದಾನ'ಕ್ಕೆ ಜಯವಾಗಲೆಂದು ಬರೆದಿವೆ. ಅದರಲ್ಲಿಯೂ ಒಂದು ಪತ್ರಿಕೆಯು ಲಾಠಿಯಿಂದ ಅಕ್ಷಯ ಚಿನ್ನೆಯನ್ನು ರಕ್ಷಿಸಿಕೊಳ್ಳಲು ಸಾಧ್ಯವಿಲ್ಲವೆಂಬುದನ್ನು ಜಯಪ್ರಕಾಶರ ಸಮಾಲೋಚನೆಯನ್ನು ಎದುರಿಸುವವರು ಅರಿತುಕೊಳ್ಳಬೇಕೆಂದು "ಬುದ್ಧಿವಾದ" ಹೇಳಿದೆ. ಅದೆಷ್ಟು "ಹಾಸ್ಯಾಸ್ಪದ, ನಗೆ ನಾಟಕವಾಗಿದೆ. ಈ ಬುದ್ಧಿವಾದ, ಬಲಾತ್ಕಾರಕ್ಕೆ ಮಣಿಯದೆ ಮರಣವನ್ನಪ್ಪಿರುವವರ ಜೀವನ ಚಿತ್ರ ನಮ್ಮ ಕಣ್ಮುಂದೆ ಇಲ್ಲವೇನು?

ಎಲ್ಲರೂ ಹೇಡಿಗಳೇ ಇದ್ದಾರೇನು? ಅಕ್ಷಯ ಚಿನ್ನೆಯನ್ನು ಚೈನಾಕ್ಕೆ ಗುತ್ತಿಗೆಗೆ ಕೊಡಬೇಕೆನ್ನುವದು ಬಹಳ ದೊಡ್ಡ ಮಾತು. ಆದರೂ ಹಾಗೆ ಹೇಳುವ ಕನ್ನಡ ಪತ್ರಿಕೆಗಳು ಕಾಸರಗೋಡನ್ನು ಕೇರಳಕ್ಕೆ ಗುತ್ತಿಗೆಗೆ ಕೊಡಲು, ಹಾಗೆಯೇ ಬೆಳಗಾವನ್ನು ಮಹಾರಾಷ್ಟ್ರಕ್ಕೆ ಗುತ್ತಿಗೆಗೆ ಬಿಟ್ಟು ಕೊಟ್ಟು ಪ್ರಾಂತ್ಯಗಳ ಗಡಿವಿವಾದವನ್ನು ಬಗೆಹರಿಸಿಕೊಳ್ಳಲು ಸೂಚಿಸಿಯಾವೆ? ಇದು ಬಹಳ ಚಿಕ್ಕ ಮಾತು ಇದೆ ಆದರೂ ಕನ್ನಡ ಪತ್ರಿಕೆಗಳು ಹಾಗೆ ಮಾಡಲಾರವು. ಅವುಗಳಿಗೆ ಪ್ರಚಾರದ ಹೆದರಿಕೆ ಇದೆ.

ಸ್ವಾರ್ಥ (ಪ್ರಚಾರ) ಬೇಕು. ಸ್ವಾಭಿಮಾನ ಬೇಕಾಗಿಲ್ಲ! ಅಕ್ಷಯ ಚಿನ್ನೆಗೆ ಅರ್ಧ ಚಂದ್ರ ಪ್ರಯೋಗ ಮಾಡಲು ಇವರು ಸಿದ್ಧ ಆದರೆ ತಮ್ಮ ಸ್ವಾರ್ಥಕ್ಕಿಲ್ಲ! ಹೀಗಿದೆ ವಿಚಿತ್ರ ವಿಶ್ವ!!

READ &
ADVERTISE IN
NAVAYUGA WEEKLY

ಮಹಿಳಾಮಂಡಳ

ನಾಡು ಕಟ್ಟುವ ಮಹಿಳಾಮಣಿ

ಶ್ರೀ ಸ. ನಾರಾಯಣ.

ಮಹಿಳೆಯರಿಗೆ ಶಿಕ್ಷಣ ಎಂದರೆ ಓದಿನ ಅವಶ್ಯಕತೆ ಇದೆಯೆ? ಎನ್ನುವ ಪ್ರಶ್ನೆಗೆ ಒದು ಬೇಕಷ್ಟೇ ಅಲ್ಲ—ಅತ್ಯವಶ್ಯವಾಗಿ ಬೇಕು ಎನ್ನುವ ಉತ್ತರ ದೊರೆಯುತ್ತದೆ; ಉತ್ತರ ಸಮಂಜಸವಾದುದೇ ಆಗಿದೆ. ಆದರೆ ಹೆಣ್ಣಿಗೆ ಎಂತಹ ಶಿಕ್ಷಣ ದೊರೆಯಬೇಕು? ಎನ್ನುವುದೇ ಎಲ್ಲರ ಮುಂದಿರುವ ಪ್ರಶ್ನೆ.

ಆದರ್ಶ ಗೃಹಿಣಿಯಾಗಿ, ಮಾತೆಯಾಗಿ, ಮಡದಿಯಾಗಿ ಎಲ್ಲರ ಏಳಿಗೆಗಾಗಿ ಸದಾ ಕಂಕಣ ತೊಟ್ಟು ದುಡಿಯುವ ಮಹಿಳೆ ತಕ್ಕಷ್ಟು ವಿದ್ಯೆ, ವಿನಯ, ಸಂಸ್ಕೃತಿಗಳ ಶಿಕ್ಷಣ ತಿಳುವಳಿಕೆಗಳನ್ನು ಪಡೆದಿರಬೇಕೆನ್ನುವುದು ಸಹಜವಾದುದು. ಇಂದು ಜನತೆಯ ಜೀವನದ ಉದ್ದೇಶ್ಯಗಳು, ಲೌಕಿಕ ಜ್ಞಾನಕ್ಕಾಗಲಿ ಹೆಚ್ಚು ಪ್ರಾಧಾನ್ಯ ಕೊಡದೆ ನಡೆದಿರುವ ಅರ್ಥಹೀನ ವಿದ್ಯೆಯು ಪರಂಪರೆ ಸ್ತ್ರೀ, ಪುರುಷರಿಬ್ಬರನ್ನು ಅರ್ಥ ಶೂನ್ಯರನ್ನಾಗಿಯೇ ಮಾಡಿದೆ. ಅದರಲ್ಲಿಯೂ ಇಂದಿನ ವಿದ್ಯೆಯಿಂದ ಮಹಿಳೆಯರ ಮೇಲಾಗಿರುವ ಪರಿಣಾಮ ವಿಶೇಷವಾದುದು.

ಗಿಳಿ ಪಾಠದಂತಹ ಪುಸ್ತಕದ ಓದೇ ಬೇರೆ. ಅನುಭವ, ಪಾಂಡಿತ್ಯಗಳ ಉನ್ನತ ಜ್ಞಾನವೇ ಬೇರೆ-ಎರಡಕ್ಕೂ ಅಜಗಜಾಂತರವಿದೆ! ಸಂಗತಿಯನ್ನು ಪೆಚ್ಚಾಗಿ ಅರಿಯುವ ಶ್ರಮವನ್ನು ಯಾರೂ ವಹಿಸಲಿಲ್ಲ. ಇಂದು ಶಾಲೆ, ಕಾಲೇಜುಗಳಲ್ಲಿ ಹೆಣ್ಣು ಮಕ್ಕಳಿಗೆ ದೊರೆಯುತ್ತಿರುವ ವಿದ್ಯೆ ಅರ್ಥಹೀನವಾದುದು, ಸಮಾಜ, ಸಂಸಾರ, ಜೀವನಗಳ ಮಟ್ಟದಲ್ಲಿ ಮಹಿಳೆಯದೇ ವಿಶಿಷ್ಟ ಪಾತ್ರ. ಮಹಿಳೆಯರಿಂದ ಒಂದು ಜನಾಂಗ, ಪೀಳಿಗೆಯು ಉನ್ನತಿಯ ಮಾರ್ಗವನ್ನು ಹಿಡಿಯಬಹುದು ಇಲ್ಲವೇ ಅವನತಿಯ ಹಾದಿಯನ್ನು ಹಿಡಿಯಬಹುದು. ಇಂದಿನ ಶಾಲಾ ಕಾಲೇಜುಗಳ ಶಿಕ್ಷಣ ಮಹಿಳೆಯರ ಜ್ಞಾನಾಭಿವೃದ್ಧಿಗಾಗಲಿ, ಭಾವೀ ಜೀವನದ ತರಬೇತಿಗಾಗಲಿ ಗಮನ ಹರಿಸಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

ಇಂದು ಅಳತೆ ಮೀರಿ ಬೆಳೆದಿರುವ ಅಶಿಸ್ತು, ಅಸಹಕಾರ, ಸ್ವೇಚ್ಛಾಚಾರ, ಮೊದಲಾದುವುಗಳಿಗೆ ಕಾರಣ ನಮ್ಮ ಶಿಕ್ಷಣವೆಂದರೂ ಅಡ್ಡಿಯಿಲ್ಲ. ಮಕ್ಕಳು ಬೆಳೆಯುವ ಮನೆಯಲ್ಲಿ, ವಿದ್ಯೆ ಕಲಿಯುವ ಶಾಲೆಯಲ್ಲಿ, ಬದುಕುತ್ತಿರುವ ಸಮಾಜದಲ್ಲಿ ಎಲ್ಲಿಯೂ ಶಿಸ್ತಿನ ಸುಳಿವಿಲ್ಲ. ಹಾಗಾದಲ್ಲಿ ಈ ಜನತೆಯ ಗತಿಏನು? ಮಕ್ಕಳಿಗೆ ಮನೆಯೇ ಮೊದಲ ಪಾಠ ಶಾಲೆ ಅದರಲ್ಲಿಯೂ ತಾಯಿದೇವಿಯೇ ಮೊದಲ ಗುರು; ಆ ಗುರು ಉತ್ತಮ ವ್ಯಕ್ತಿಯಾಗಿ ಆದರ್ಶಗಳ ಬಗೆಯಾಗಿ, ಶಿಸ್ತು, ಸದಾಚಾರ, ಸದ್ವರ್ತನೆಗಳ ಮೂರ್ತಿಯಾಗಿದ್ದರೆ ಆ ಮನೆಯ ಮಕ್ಕಳು ಬೇರೆಡೆಯಲ್ಲಿ ಹೆಚ್ಚು ಶಿಕ್ಷಣ ಪಡೆಯ ಬೇಕಾದ ಅವಶ್ಯಕತೆಯಿಲ್ಲ. ಇಂದು ಭಾರತದಲ್ಲಿರುವ ಪ್ರತಿ ಕುಟುಂಬದ ತಾಯಿಯೂ ಉತ್ತಮ ಜನಾಂಗವನ್ನು ರಾಷ್ಟ್ರಕ್ಕೆ ನೀಡುವ ಮುಖ್ಯ ಗುರು ವಾಗಬೇಕಾಗಿದೆ.

ಮಹಿಳೆಯ ಪಾತ್ರ ಎಲ್ಲ ಕ್ಷೇತ್ರಗಳಲ್ಲಿ ಯೂ ವೈಶಿಷ್ಟ್ಯಪೂರ್ಣವಾದುದಾಗಿಯೂ ಜವಾಬ್ದಾರಿಯುತವಾದುದು. ಒಂದು ಸಂಸಾರದ ಪೂರ್ಣ ಹೊಗೆ ಹೊತ್ತು ಬಾಳುವ ಮಹಿಳೆಗೆ ಗೃಹಿಣಿಯಾಗುವ ಮುಂಚೆ ಅಂದರೆ ಕುಮಾರಿಯಾಗಿರುವ ವಯಸ್ಸಿನಲ್ಲಿ (ಕಿರಿಯ ವಯಸ್ಸಿನಲ್ಲಿ) ಉತ್ತಮ ಶಿಕ್ಷಣ ದೊರೆಯ ಬೇಕಾದುದು ಅಗತ್ಯ.

ನಮ್ಮ ಧರ್ಮ, ಸಮಾಜ, ಸಂಸಾರದ ಹಿರಿಯರು ಹಾಗೂ ಸತ್ಸಂಪ್ರದಾಯಗಳ ಅನುವರ್ತಿಗಳಾದ ಪೂರ್ವಿಕರು ಪುರುಷರಿಗೆ, ಸ್ತ್ರೀಯರಿಗೆ ಪ್ರತ್ಯೇಕವಾದ ಕೆಲವು ಕರ್ತವ್ಯ, ನಿಬಂಧನೆ, ಕಾರ್ಯ ಕ್ಷೇತ್ರಗಳನ್ನು ನಿಯಮಿಸಿದ್ದಾರೆ. ವಿಶ್ವವಿದ್ಯಾಲಯಗಳ ಪದವಿಯಾಗಲಿ, ಶಾಲಾ ಕಾಲೇಜುಗಳಲ್ಲಿ ಕಲಿತ ರಸಾಯನ ಶಾಸ್ತ್ರ, ಭೌತ ಶಾಸ್ತ್ರ, ಬೀಜ ಗಣಿತ, ರೇಖಾಗಣಿತಗಳಾಗಲಿ ಗೃಹಿಣಿಗೆ ಯಾವ ಬಗೆಯಲ್ಲಿಯೂ ಸಹಾಯಕವಾಗಲಾರವು. (ವಿಶ್ವವಿದ್ಯಾಲಯಗಳಲ್ಲಿ ಓದಲೇ ಬಾರದೆಂಬ ವಾದವಲ್ಲ; ಎಷ್ಟು ಜನರಿಗೆ ಇದರಿಂದ ಅನುಕೂಲವಿದೆ— ಅಲ್ಲದೆ ಬಹುಮತವನ್ನು ಅನುಸರಿಸಿ ವಿಮರ್ಶೆ ನಡೆಸಿದೆ). ಅದಕ್ಕೆ ಬದಲಾಗಿ ಗೃಹಕಾರ್ಯ ನಿರ್ವಹಣೆ, ಸಂಗೀತ, ಕಸೂತಿ, ಕುಶಲ ಕಲೆಗಳ ಶಿಕ್ಷಣ ಶಾಲಾಕಾಲೇಜುಗಳಲ್ಲಿ ಪ್ರತಿ ಮಹಿಳೆಗೂ ದೊರೆಯಬೇಕಾದುದು ಅತ್ಯಗತ್ಯ.

ಹೆಣ್ಣು ಮಕ್ಕಳು ವಿವಾಹ ಪೂರ್ವದಲ್ಲಿ ಅಂದರೆ ತಂದೆತಾಯಿಗಳ ಪಾಲನೆ ಪೋಷಣೆಯಲ್ಲಿರುವಾಗ ಶಾಲಾಕಾಲೇಜುಗಳಲ್ಲಿ ಓದುತ್ತಿದ್ದರೂ ಶಾಲೆ ಕಾಲೇಜುಗಳಲ್ಲಿ ವ್ಯಯ ಮಾಡುವ ಕಾಲ ಅತ್ಯಲ್ಪ. ವಿಶೇಷವಾಗಿ ದಿನದ ಹೆಚ್ಚು ವೇಳೆಯನ್ನು ಮನೆಯಲ್ಲಿಯೇ ಕಳೆಯುವುದು ನಿಜ. ಆ ಸಂದರ್ಭದಲ್ಲಿ ತಾಯಿಯ ಸಲಹೆ, ಸೂಚನೆಗಳಂತೆ ಅವರೊಂದಿಗೆ ಕೆಲ ಬಗೆಯ ಕೆಲಸ ಕಾರ್ಯಗಳನ್ನು ಕಲಿಯುವುದರಲ್ಲಿ ಯಾವ ತೊಂದರೆಯೂ ಇಲ್ಲ. ಇಂದಿನ ಕೆಲ ಮಹಿಳೆಯರಿಗಂತೂ ಕೆಲಸ ಮಾಡುವುದಿರಲಿ ಕೆಲಸ ಮಾಡುವವರನ್ನು ಕಂಡರೇ ಬೇಸರ. ಇಂದಿನ ಇಂತಹ ಉದ್ಯೋಗಗಳಿಗಿಂತ ಸೋಲೆ ಮುಂದಿನ ಪೀಳಿಗೆ ಅವಲಂಬಿಸಿದೆ. ಅವರ ಗತಿ ಕಾಲಾಯ ತಸ್ಮೈನಮಃ

ಹಿಂದಿನ ಪತಿವ್ರತಾ ಶಿರೋಮಣಿಯರ ಆದರ್ಶ ಸಂಪ್ರದಾಯವನ್ನೇ ಅನುಸರಿಸಿ ಬಾಳಿ ಎಂದು ಈ ಲೇಖಕ ವಾದಿಸುತ್ತಿಲ್ಲ. ಆದರೆ ಇಂದಿನ ಭಾರತೀಯ ನಾರೀ ರತ್ನಗಳ ಹೆಸರಿಗೆ ಕಳಂಕ ತರಬೇಡಿ, ಇಂದಿನ ವಿಜ್ಞಾನ ನವ ನಾಗರೀಕಯುಗದ ಮಾರ್ಪಾಡಿಗನುಸಾರವಾಗಿ ಭಾರತೀಯರಾಗಿಯೇ ಬಾಳಿ, ಭಾರತದ ಮಹಿಳೆಯರ ಕೀರ್ತಿಯನ್ನು ಉಳಿಸಿ, ಬೆಳೆಸಿ ಎಂದು ನನ್ರವಾಗಿ ಸೂಚಿಸ ತಕ್ಕವನಷ್ಟೆ.

(ಹತ್ತನೇ ಪುಟ ನೋಡಿರಿ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S 295/64

Betwen

ಗೌತಮಯ್ಯ... ವಾದಿ

ಮತ್ತು

ತುಂಗು ಪೂಜಾರ್ತಿ ಕೂಡಾ —ಪ್ರತಿವಾದಿರು.

ನೋಟೀಸು

ಉಡುಪಿ ತಾಲೂಕು ಕೋಟೆ ಗ್ರಾಮದ ಅಂಬಾಡಿ ಎಂಬಲ್ಲಿರುವ ಕಾರ್ಕ ದೂಟಿಕಾರ ವಿಧವೆ— I ನೇ ಪ್ರತಿವಾದಿ ತುಂಗುಪೂಜಾರ್ತಿ ಮತ್ತು ಕೊಂಚಿ ಪೂಜಾರ್ತಿ ಮಗ 10 ನೇ ಪ್ರತಿವಾದಿ ಕೊದ್ದಪೂಜಾರಿ ಇವರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

ನಿಮ್ಮಿಂದ ಕೂಡಾ ಬರಾ ಗೇಣಿ ಬಾಕಿ ವಸೂಲು ಕೇಳಿ ಮಾಡಿದ ಸದ್ರಿ ವ್ಯಾಜ್ಯವು ತಾ. 28—10.1964ಕ್ಕೆ ಇಟ್ಟಿದೆ ಈ ಬಾಬಿನಲ್ಲಿ ನಿಮ್ಮ ಆಕ್ಷೇಪ ಏನಾದರೂ ಇದ್ದರೆ ನೀವು ಅದಿವಸ ಬೆಳಿಗ್ಗೆ 11ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಉತ್ತರಿಸಿ ಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮನ್ನು ಶಿವಾಯ ಮಾಡಲಾದೀತು

P. N. Krishnamoorthy Rao
Advocate,

Udipi. S. K Dated 3-10-1964

ಮತ್ತೆರಡು

ಹೊಸ

ಶಾಖೆಗಳು ......

ವಿಶಾಲವಾಗಿ ಹಬ್ಬಿರುವ ಸಿಂಡಿಕೇಟ್ ಬ್ಯಾಂಕಿನ
ಶಾಖಾ ಸಮುದಾಯಕ್ಕೆ ಇನ್ನೆರಡು ಹೊಸ ಶಾಖೆಗಳು—

ಬಸವ ಕಲ್ಯಾಣ (ಬೀದರ ಜಿಲ್ಲೆ) — ಮತ್ತು — ಕೋಟಗಿರಿ (ನೀಲಗಿರಿ ಜಿಲ್ಲೆ)

ಎಂಬಲ್ಲಿ
ತಾರೀಕು 7—10—'64ರಂದು ತೆರೆಯಲ್ಪಟ್ಟಿವೆ
ಎಂದು ತಿಳಿಸಲು ಸಂತೋಷಪಡುತ್ತೇವೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 194

ಚಲಾವಣಾ ನಿಧಿ: ರೂ. 60 ಕೋಟಿಗೂ ಮಿಕ್ಕಿದೆ.

ದಕ್ಷಿಣ ಕನ್ನಡ ಬೆಳ್ತಂಗಡಿ

ಮುನ್ಸಿಫ್ ಕೋರ್ಟಿನಲ್ಲಿ

O. S. 16ˌ/64

ಅನಂತರಾಜ ರೆಟ್ಟಿ— ವಾದಿ

ಮತ್ತು

ಅನಂತರಾಜ ಕಡಂಬ ಮತ್ತು— ಪ್ರತಿವಾದಿರು

ಕೂಡಾ

ಆರನೇ ಪ್ರತಿವಾದಿಗೆ: ಸುಸಂದ ಕುಸುಮಾಜಿಯ ಮಗಳು ಬೆಳ್ತಂಗಡಿ ತಾಲೂಕು ಕೊಕ್ಕಡಿ ಎಂಬಲ್ಲಿರುವವಳು:—

ನೋಟೀಸು

ವಾದಿಯು ಎದ್ರಿಯ ಮೇಲೆ ಮಾಡಿದ ಅದವು ದಸ್ತಾವೇಜಿನ ದಾವೆಯ ಎದ್ರಿಯ ನೋಟೀಸಿನ ಬಗ್ಗೆ ತಾ 30.10.1964 ಕ್ಕೆ ಇಟ್ಟಿರುತ್ತದೆ. ಆದುದರಿಂದ ಆರನೇ ಪ್ರತಿವಾದಿಯು ಆ ದಿವಸ ಈ ಕೋರ್ಟ ಮುಂದೆ ಘಂಟೆ 11 ಕ್ಕೆ ಹಾಜರಾಗಿ ಏನಾದರೂ ಆಕ್ಷೇಪ ಹೇಳುವುದಿದ್ದರೆ ಬರಹಮೂಲಕ ಹೇಳಿಕೊಳ್ಳತಕ್ಕದು ತಪ್ಪಿದಲ್ಲಿ ನಿಮ್ಮನ್ನು ಶಿವಾಯಿ ಎಂತ ಮಾಡಿ ದಾವೆಯನ್ನು ಮುಂದಿನ ತನ್ಖೆಯಿಂದ ತೀರ್ಮಾನಿಸಲಾಗುವುದೆಂದು ಕೋರ್ಟಿನ ಅಪ್ಪಣೆಮೇರೆಗೆ ಮಾಡಿದ ನೋಟೀಸು.

R. N. Bhide.
Advocate for Plaintiff

ಬೆಳ್ತಂಗಡಿ ತಾ. 7—10—1964



ಟ್ರಾಂಬೆಯ ಜರಲೀನಾ ಆಣವಿಕ ಭಟ್ಟಿಯ ಅಂತರಿಕ ದೃಶ್ಯ.

ಭಾರತ ದರ್ಶನ

ಅಣುಯುಗದಲ್ಲಿ

ಭಾರತೀಯ ಸಂಸತ್ತು ಅಣುಶಕ್ತಿ ಕಮಿಶನನ್ನು ಸ್ಥಾಪಿಸುವ ಕಾನೂನನ್ನು ಹೀಗೆ ವರ್ಣಿಸಿತ್ತು: "ಭಾರತೀಯ ಜನತೆಯ ಒಳಿತಿಗಾಗಿ ಮತ್ತು ಇತರ ಶಾಂತಿಮಯ ಕಾರ್ಯಗಳಿಗಾಗಿ ಅಣುಶಕ್ತಿಯ ವಿಕಾಸ, ನಿಯಂತ್ರಣ ಮತ್ತು ಉಪಯೋಗದ ವ್ಯವಸ್ಥೆಗಾಗಿ ಮಾಡುವ ಕಾನೂನು" ಅಂದಿನಿಂದ ಭಾರತವು ತನ್ನ ಸಂಕಲ್ಪ ಸಾಧನೆಯಲ್ಲಿ ದ್ರುತಗತಿಯಿಂದ ಮುಂದುವರಿಯುತ್ತಿದೆ.

೧೯೫೬ರ ಅಗಸ್ತದಲ್ಲಿ ಬೊಂಬಾಯಿಗೆ ಹತ್ತಿರದ ಟ್ರಾಂಬೆಯಲ್ಲಿ ಭಾರತೀಯ ಆಣವಿಕ ಭೌತಶಾಸ್ತ್ರಜ್ಞ ಡಾ| ಹೋಮಿ ಬಾಬಾರವರ ನೇತೃತ್ವದಲ್ಲಿ "ಅಪ್ಸರಾ" ಎಂಬ ಅಣವಿಕ ಕೇಂದ್ರವು ಪ್ರಾರಂಭವಾಗತೊಡಗಿತು. ಇದು ಇಡಿಯ ಏಶಿಯಾದಲ್ಲೇ ಮೊತ್ತಮೊದಲ ಅಣುಶಕ್ತಿ ಕೇಂದ್ರವಾಗಿತ್ತು. ೧೯೬೦ರಲ್ಲಿ ಕೆನೆಡಾದ ಸಹಾಯದಿಂದ ಕೆನೆಡಾ-ಇಂಡಿಯಾ ರಿಯಾಕ್ಟರ್ ಎಂಬ ಇನ್ನೊಂದು ಕೇಂದ್ರವು ಪ್ರಾರಂಭವಾಗಿದೆ. ಇದರಿಂದ ೪೦,೦೦೦ ಕಿಲೋವಾಟ್ ವಿದ್ಯುತ್ತು ತಯಾರಿಯಾಗುವುದು. ಮುಂದಿನ ವರ್ಷ ಟ್ರಾಂಬೆಯ ವೈಜ್ಞಾನಿಕರು ಜರಲೀನಾ ಎಂಬ ಮೂರನೆಯ ಕೇಂದ್ರವೊಂದನ್ನು ಪ್ರಾರಂಭಿಸಿದರು.

ಅಮೇರಿಕೆಯು ಭಾರತದ ಸುಖ-ಸಮೃದ್ಧಿಗಳನ್ನು ರಕ್ಷಿಸಲು ಕಳೆದ ೧೦ ವರ್ಷಗಳಿಂದ ಸಹಾಯ ಮಾಡುತ್ತಿದೆ. ೧೦೦ಕ್ಕೂ ಮಿಕ್ಕಿದ ಭಾರತೀಯರು ಅಮೇರಿಕೆಯಲ್ಲಿ ಅಣುವಿಕ ಇಂಜನಿಯರಿಂಗದಲ್ಲಿ ತರಬೇತಿ ಪಡೆಯುತಿದ್ದಾರೆ.

ಭಾರತದಲ್ಲಿ ವಿದ್ಯುಚ್ಛಕ್ತಿಯ ಬೇಡಿಕೆಯು ದಿನೇದಿನೇ ಹೆಚ್ಚುತ್ತಿದೆ. ಇಲ್ಲಿ ಔದ್ಯಮಿಕ ನಗರ ಮತ್ತು ಇದ್ದಲು ಭಂಡಾ ಗಳು ದೂರದೂರವಿರುವುದರಿಂದ ಇದ್ದಲು ಪೂರೈಕೆಯು ಜಿಗುಟಿನ ಪ್ರಕ್ರಿಯ ಗುತ್ತಿದೆ. ಇದಕ್ಕಾಗಿಯೇ ಅಣುಶಕ್ತಿಯಿಂದ ವಿದ್ಯುತ್ತನ್ನು ತಯಾರಿಸುವತ್ತ ಅಗ್ರ ಪ್ರಾಶಸ್ತ್ಯವನ್ನು ನೀಡಲಾಗಿದೆ. ಬೊಂಬಾಯಿಯ ೬೦ ಮೈಲು ಉತ್ತರದಲ್ಲಿ ತಾರಾಪುರವಿದೆ. ಇಲ್ಲಿ ತೊಡಗಿದ ಮೊತ್ತಮೊದಲ ಭಾರತೀಯ ಅಣುಶಕ್ತಿ ವಿದ್ಯುದಾಗಾರವು ೧೯೬೭ರಲ್ಲಿ ಸಂಪೂರ್ಣಗೊಂಡು ೩,೮೦,೦೦೦ ಕಿಲೋವಾಟ್ ಶಕ್ತಿಯನ್ನು ಉತ್ಪಾದಿಸುವುದು. ಆ ವೇಳೆಗೆ ಮಹಾರಾಷ್ಟ್ರ ಮತ್ತು ಗುಜರಾಥಗಳ ೮ ಲಕ್ಷ ಕಿಲೋವಾಟ್ ಅಧಿಕ ವಿದ್ಯುತ್ತನ್ನು ಬೇಡಬಹುದು. ಇದರ ಬಹುಪಾಲನ್ನು ತಾರಾಪುರವು ತುಂಬಿಸಿ ಕೊಡುವದು. ಇದ್ದಲಿನಿಂದ ಇಷ್ಟು ಶಕ್ತಿಯನ್ನು

ಅಯೋವಾದಲ್ಲಿ ಒಬ್ಬ ಭಾರತೀಯ ವೈಜ್ಞಾನಿಕ ರೇಡಿಯೋ ಆಕ್ಟಿವ್ ರಾಸಾಯನಿಕ ಗೊಬ್ಬರದ ಪ್ರಯೋಗದ ವಿಷಯವಾಗಿ ಸಂಶೋಧನಾ ತತ್ಪರನಾಗಿದ್ದಾನೆ.



ಟ್ರಾಂಬೆಯ ಭಾರತ—ಕೆನೆಡಾ ಸಹಯೋಗದಿಂದ ನಿರ್ಮಾಣವಾದ ಆಣವಿಕ ಕೇಂದ್ರದ ವಿಹಂಗಮ ದೃಶ್ಯ.

ಪಾದಾರ್ಪಣ

ಉತ್ಪಾದಿಸಲು ೫ ಕೋಟಿ ರೂಪಾಯಿ ವೆಚ್ಚ ತಗಲಿದರೆ, ಅಣು ವಿದ್ಯುತ್ತು ಕೇವಲ ೨½ ಕೋಟಿ ರೂಪಾಯಿಗಳಲ್ಲಿ ಸಿಗುತ್ತದೆ.

ತಾರಾಪುರದ ಅಣುಶಕ್ತಿ ವಿದ್ಯುದಾಗಾರವು ಸಂಪೂರ್ಣವಾಗಿ ಅಮೇರಿಕೆಯ ನೆರವಿನಿಂದ ಕಟ್ಟಲ್ಪಡುತ್ತದೆ. ಈ ವಿದ್ಯುದಾಗರವು ನಿರ್ಮಾಣಗೊಂಡ ಬಳಿಕ, ರಾಜಸ್ಥಾನದ ಕೋಟಾದಲ್ಲಿನ ರಾಣಾಪ್ರತಾಪ ಸಾಗರ ಅಣೆಕಟ್ಟಿನ ಬಳಿ ಎರಡನೆಯ ಅಣವಿಕ ವಿದ್ಯುದಾಗಾರವು ರಚಿತವಾಗುವುದು. ೩೭ ಕೋಟಿ ರೂಪಾಯಿಗಳ ವೆಚ್ಚದಲ್ಲಿ ತಯಾರಾಗುವ ಈ ವಿದ್ಯುದಾಗಾರವು ಎರಡು ಲಕ್ಷ ಕಿಲೋ ವಾಟ್ ವಿದ್ಯುಚ್ಛಕ್ತಿಯನ್ನು ಒದಗಿಸುವುದು. ಇದು ೧೯೭೦ ರ ಸುಮಾರಿನಲ್ಲಿ ಸಂಪೂರ್ಣವಾಗುವ ಆಶಯವಿದೆ.

ಕಲ್ಯಾಣಕಾರಿ ಕಾರ್ಯಗಳಿಗಾಗಿ ಅಣುಶಕ್ತಿ ಉಪಯೋಗದ ಕಾರ್ಯಕ್ರಮಗಳಂತೆ ಭಾರತದ ಮೂರನೆಯ ಅಣುಶಕ್ತಿವಿದ್ಯುದಾಗಾರವು ಮದ್ರಾಸದ ಮಹಾಬಲಿಪುರದ ಬಳಿಯ ಕಾಲಪಕ್ಕಂನಲ್ಲಿ ಸ್ಥಾಪಿತವಾಗಲಿದೆ.

ಟ್ರಾಂಬೆಯಲ್ಲಿನ ಮೂರು ಅಣವಿಕ ಭಟ್ಟಿಗಳಿಂದ ಸಾಕಷ್ಟು ರೇಡಿಯೋ ಐಸೋಟೋಪ್‌ಗಳು ಉಪಲಬ್ಧವಿರುವುದರಿಂದ ಶತಮಾನಗಳಿಂದ ನಡೆದುಬಂದ ಶಾರೀರಿಕ, ಜೈವಿಕ ಮತ್ತು ಕರ್ಷಕ ಸಮಸ್ಯೆಗಳನ್ನು ಯಶಸ್ವಿಯಾಗಿ ಪರಿಹರಿಸಲು ಭಾರತೀಯ ವೈಜ್ಞಾನಿಕರು ಶಕ್ತರಾಗಿದ್ದಾರೆ.

ಉಷ್ಣವಲಯದಲ್ಲಿ-ಅತಿ ಅನುಕೂಲವಾದ ಫಸಲುಗಳ ಜಾತಿಗಳನ್ನು ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಮಂಡಳವು ಶೋಧಿಸಿದೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯು ರೇಡಿಯೊ ಕೋಬಾಲ್ಟಿನ ಮೂಲಕ ಕ್ಯಾನ್ಸರ ರೋಗದ ಚಿಕಿತ್ಸೆಯನ್ನು ಮಾಡುವ ವಿಷಯವಾದ ಶೋಧನೆ ಮಾಡುತ್ತಿದೆ. ದಿಲ್ಲಿಯ ಪಟೇಲ್ ಚೆಸ್ಟ್ ಇನ್ಸ್ಟಿಟ್ಯೂಟ್ ಕಂಠ ಗ್ರಂಥಿ ಮತ್ತು ಜೀವನ ಹಾನಿಕಾರಕ ಅನ್ಯ ರೋಗಗಳಿಗೆ ರೇಡಿಯೋ ಐಸೋಟೋಪ್‌ಗಳ ಮೂಲಕ ಉಪಚಾರ ಮಾಡುವ ವಿಧಾನಗಳನ್ನು ಹುಡುಕುತ್ತಿದೆ.

ಹತ್ತು ವರ್ಷಗಳಿಗೆ ಮೊದಲು ಭಾರತವು ಮಾನವ ಕಲ್ಯಾಣಕ್ಕಾಗಿಯೇ ಅಣುಶಕ್ತಿಯನ್ನು ಉಪಯೋಗಿಸುವ ದೃಢ ನಿರ್ಧಾರ ಮಾಡಿತ್ತು. ಇಂದಿಗಾದರೂ ಭಾರತದ ನಿರ್ಧಾರವು ಬದಲಾಗಿಲ್ಲ. ಡಾ| ಬಾಬಾ ಹೇಳುವಂತೆ ಭಾರತವು ಅಣುಬಾಂಬು ತಯಾರಿಸಬಲ್ಲುದಾದರೂ ಅದಕ್ಕೆ ಸಿದ್ಧವಿಲ್ಲ. ಭಾರತವು ಶಾಂತಿಪ್ರಿಯ ದೇಶ; ಶಾಂತಿಗಾಗಿಯೇ ಅಣುಶಕ್ತಿಯನ್ನು ಬಳಸುವ ದೇಶ.



ತಾರಾಪುರದ ಅಣವಿಕ ವಿದ್ಯುದಾಗಾರದ ನಿರ್ಮಾಣ ಕಾರ್ಯವು ದ್ರುತಗತಿ ಗತಿಯಲ್ಲಿ ಮುಂದುವರಿಯುತ್ತಿದೆ.



ಅರಣ್ಯ ಪ್ರದೇಶವಾಗಿದ್ದ ತಾರಾಪುರದಲ್ಲಿ ಇಂದು ಹೊಸ ಮನೆ—ಮಾರ್ಗಗಳನ್ನು ನಾವು ಕಾಣಬಹುದು. ೧೯೬೨ರಷ್ಟರಲ್ಲಿ ಇಲ್ಲಿ ಭಾರತೀಯ ಪ್ರಪ್ರಥಮ ಅಣವಿಕ ವಿದ್ಯುದಾಗಾರವು ತಯಾರಾಗುವುದು.

ಟ್ರಾಂಬೆಯ ಅಣುಶಕ್ತಿ ಕೇಂದ್ರದಲ್ಲಿ ಪ್ಲುಟೋನಿಯಂ ಮತ್ತು ಯುರೇನಿಯಂಥ ಸ್ವತಂತ್ರ ಹಾಗೂ ವಿದ್ಯುದಣು ಉಪಕರಣಗಳ ವರ್ಕ್‌ಶಾಪ್ ಇರುವುದು. ಇಲ್ಲಿ ಸುಲಲಿತವಾಗಿ ಕಾರ್ಯ ಮಾಡುವ ಕರ್ಮಚರರನ್ನು ಇಲ್ಲಿ ನೋಡಬಹುದು.

ನಾಡುಕಟ್ಟುವ ಮಹಿಳಾಮಣಿ

(ಏಳನೇ ಪುಟದಿಂದ)

ಭಾರತದ ಭವ್ಯ ಇತಿಹಾಸ ಪರಂಪರೆಯಲ್ಲಿ ಬೆಳಗಿ ಮೆರೆಯುದ ಮಹಿಳೆಯರ ಜೀವನವನ್ನು ನೆನಪಿಗೆ ತಂದು ಕೊಂಡರೆ ಭಾರತದ ಕೀರ್ತಿಯ ವಿಶಿಷ್ಟತೆ, ನಮ್ಮ ಹೆಗ್ಗಳಿಕೆ ತಾನಾಗಿಯೇ ಅರಿವಾಗುತ್ತದೆ. ಇಂದು ಎಲ್ಲರಿಗಿಂತಲೂ ಮುಖ್ಯವಾಗಿ ಮಹಿಳೆ ತಾನು ಉತ್ತಮ ಗೃಹಿಣಿಯಾಗಿ, ಪತ್ನಿಯಾಗಿ, ತಾಯಿಯಾಗಿ, ಗೆಳತಿಯಾಗಿ, ತನ್ನ ಕೈಲಾದ ಮಟ್ಟಿನ ರಾಷ್ಟ್ರ ಸೇವೆ ಸಲ್ಲಿಸುತ್ತೇನೆನ್ನುವ ಸಂಕಲ್ಪ ಮಾಡಬೇಕು. ಜನತೆ, ಜನಾಂಗ, ಸಂಸಾರ, ಸಮಾಜ ಎಲ್ಲವರ ಏಳಿಗೆವ ಮಹಿಳೆಯರನ್ನೇ ಅವಲಂಬಿಸಿದೆ ಎನ್ನುವ ಅಂಶವನ್ನು ಅವರು ಮರೆಯದಿರುವುದು ಒಳಿತು.

ವೇದಗಳ ಶ್ಲೋಕ ರಚಿಸಿದ ರೋಮಷ, ಲೋಪಾಮುದ್ರೆ, ವೇದದಲ್ಲಿ ಜ್ಞಾನಿಗಳೆಂದು ಕೀರ್ತಿ ಪಡೆದಿರುವ ಗಾರ್ಗಿ, ಮೈತ್ರೇ, ಅದಿತಿ ಮೊದಲಾದವರು ಆಚಾರ್ಯ ಶಂಕರ, ಮಂಡನ ಮಿಶ್ರರ ವಾದದಲ್ಲಿ ಅಧ್ಯಕ್ಷ ಸ್ಥಾನ ವಹಿಸಿದ್ದ ಉಭಯ ಭಾರತಿ, ಮೀರಾ, ಮಹಾ ರಾಣಿ ಲಕ್ಷ್ಮೀಬಾಯಿ, ಕಸ್ತೂರಿಬಾ, ಶಾರದಾ ದೇವಿ, ಸಂಚಿ ಹೊನ್ನಮ್ಮ, ಅಕ್ಕ ಮಹಾದೇವಿ, ಗಂಗಾದೇವಿ ಮೊದಲಾದವರು ಯಾವ ವಿಶ್ವವಿದ್ಯಾಲಯದ ಪದವೀಧರರೂ ಅಲ್ಲ. ಲೋಕವನ್ನು ಅಚ್ಚರಿಗೊಳಿಸುವಂತಹ ಪಾಂಡಿತ್ಯ ಅವರದಾಗಿತ್ತು. ಕನ್ನಡ ನಾಡಿನ ಹೊಯ್ಸಳ ಸಿಂಹಾಸನಾಧೀಶ್ವರ ವಿಷ್ಣುವರ್ಧನನ ಪಟ್ಟ ಮಹಿಷಿ ಶಾಂತಲಾ ದೇವಿಯು ಸಂಗೀತ ನೃತ್ಯಾದಿ ಲಲಿತ ಕಲೆಗಳ ಆರಾಧನೆ ಪೋಷಿಸಿಗೆ ಪ್ರತಿ ಮಹಿಳೆಯೂ ಹೆಮ್ಮೆ ಪಡುವಂತಹ ಸಂಗತಿ.

ಅದಿಯಿಂದ ಇಂದಿನ ವರೆಗೆ ಲೋಕದಲ್ಲಿ ಅಚ್ಚಳಿಯದೆ ತಮ್ಮ ಕೀರ್ತಿಯನ್ನು ಉಳಿಸಿಕೊಂಡಿರುವ ಭಾರತದ ಮಹಿಳಾಮಣಿಗೂ ತಮ್ಮ ಹೆಸರನ್ನು ಉಳಿಸಿಕೊಂಡುದು ಹಿಂದಿನವರೆಂಬ ಕಾರಣದಿಂದಲ್ಲ, ಅವರ ಪುಣ್ಯಜೀವನ, ಅಂತಃಕರಣ ಪೂರ್ಣ ಬಾಳ್ವೆ, ಆದರ್ಶಪೂರ್ಣ ಸತ್‌ಸಂಪ್ರದಾಯ, ಸದಾಚಾರ, ಸದ್ಗುಣಗಳ ದೆಸೆಯಿಂದ. ವ್ಯಕ್ತಿಯ ಹಿರಿಮೆಯನ್ನು ಅಳೆಯುವ ಮಾನದಂಡ ಪ್ರತಿಷ್ಠೆ, ಅಧಿಕಾರ, ಹಣ, ವೈಭವವಲ್ಲ. ನಿಷ್ಕಪಟ ವಿಹೇನತಃ ಜೀವನ, ಬಾಳಿನಲ್ಲಿ ಅನುಸರಿಸಿದ ಸದ್ಗುಣಗಳಷ್ಟೆ.

ಅಂದಿನ ಮಹಿಳೆಯರು ಇಂದಿನ ನವೀನ ಯುಗದ ನವ ನಾಗರೀಕ ಸ್ತ್ರೀಯರಂತೆ ಪದವೀಧರರೂ ಆಗಿರಲಿಲ್ಲ. ಅಲಂಕಾರ ಸಾಮಗ್ರಿಗಳನ್ನು ಉಪಯೋಗಿಸುತ್ತಿರಲಿಲ್ಲ ಅಂದಮಾತ್ರಕ್ಕೆ ಅವರಲ್ಲಿ ಜ್ಞಾನ, ಸೌಂದರ್ಯ ಉಳಿದಿರಲಿಲ್ಲವೆ? ಇಂದು ಬಹಿರಾಡಂಬರದ ಅಲಂಕಾರ ಸೌಂದರ್ಯಗಳಿಗೆ ಮನ ಸೋತಿರುವ ಮಹಿಳಾಮಣಿಯ, ಅಲಂಕಾರ ಸೌಂದರ್ಯಕ್ಕಿಂತಲೂ ಆತ್ಮ ಸೌಂದರ್ಯ ದೈವಿಕ ಹಾಗೂ ಶಾಶ್ವತ ಎಂಬುದನ್ನು ನೆನಪಿನಲ್ಲಿ ಇರಿಸಿ ಕೊಳ್ಳುವುದು ಸೂಕ್ತ.

ಕಾಲ ಬದಲಾಗ ಬಹುದಷ್ಟೆ. ಜಗತ್ತು ಶಾಶ್ವತವಾಗಿಯೇ ಉಳಿದಿರುತ್ತದೆ. ವಾಲ್ಮೀಕಿ, ವ್ಯಾಸ, ವಶಿಷ್ಠರಂತಹ ಋಷಿವರೇಣ್ಯರು, ರಾಮ, ಸೀತೆ, ಕೃಷ್ಣ ಭೀಮಾರ್ಜುನರಂತಹ ಮಾನವರು, ಪೃಥ್ವಿರಾಜ, ಶಿವಾಜಿಯಂತಹ ವೀರರು, ಶಂಕರ, ರಾಮಾನುಜ, ಬಸವಣ್ಣನವರಂತಹ ಸಂತರು, ವಿವೇಕಾನಂದ ರಾಮಕೃಷ್ಣರಂತಹ ಯೋಗಿಗಳು, ಗಾಂಧಿಯಂತಹ ಯುಗ ಪ್ರವರ್ತಕರು ಬಾಳಿದ ಭೂಮಿಯಲ್ಲಿಯೇ ಇದ್ದೇವೆ. ನೆಲ, ಜಲ, ಬೆಟ್ಟ, ರವಿ, ಆಕಾಶ, ವಾಯು ಯಾವುವೂ ಬದಲಾಗಿಲ್ಲ; ಮಾನವನ ಮನಸ್ಸು ಮಾನವೀಯತೆಯನ್ನೇ ಮರೆತಿದೆಯಷ್ಟೆ.

'ನಮಾತೃ ಪರದೇವತಾ' ಎಂದು ಸಾರಿದ ಪುಣ್ಯ ಭೂಮಿಯಲ್ಲಿ ಬೆಳೆದಿದ್ದೇವೆ. 'ಮಾತೃ ದೇವೋ ಭವ' ಎಂದು ತಾಯಿಯನ್ನು ಪೂಜಿಸುತ್ತೇವೆ. ಪ್ರತಿಯೊಬ್ಬ ಮಹಿಳೆಯೂ ತಾಯಿ ಎಂದು ಅರಿಯಬೇಕಾದುದು ಅತ್ಯಗತ್ಯ.

ಮಗುವಿಗೆ ಮೊದಲ ಗುರುವಾಗುವ ತಾಯಿ ಮೊದಲೇ ಶಿಕ್ಷಣ ಪಡೆದು ಉತ್ತಮ ತಾಯಿಯಾಗುವುದು ಒಳಿತು. ಹೆಣ್ಣು ತನ್ನ ಹಿರಿಮೆಯನ್ನು ಅರಿತು ತನ್ನ ಕ್ಷೇತ್ರಗಳಲ್ಲಿ ಮನೆಯ ಮಮತೆಯ ಮಗಳಾಗಿ, ನೀಡಿದ ಮನೆಯ ಮೆಚ್ಚಿನ ಸೊಸೆಯಾಗಿ, ಸಂಸಾರದ ಉತ್ತಮ ಗೃಹಿಣಿಯಾಗಿ, ಮೆಚ್ಚಿನ ಮಡದಿಯಾಗಿ, ತಾಯಿಯಾಗಿ ವರ್ತಿಸಬೇಕಾದುದು ಅತ್ಯಗತ್ಯ ಇವುಗಳಿಗೆ ಸೂಕ್ತ ಶಿಕ್ಷಣ ದೊರೆಯ ಬೇಕಾದುದು ಅಷ್ಟೇ ಸೂಕ್ತ.

ಮಹಿಳೆಯರ ಮುನ್ನಡೆ ಶಿಕ್ಷಣ, ಸ್ವಾತಂತ್ರ್ಯ, ಸ್ಥಾನ-ಮಾನಗಳಿಗೆ ಯಾರೂ ವಿರೋಧಿಸಲಾರರು,- ವಿರೋಧಿಸಲೂಬಾರದು. ಆದರೆ ಮಹಿಳೆ ತನ್ನನ್ನು ತಾನರಿತು ಬಾಳಿದರೆ ಸಂಸಾರ ಸಮಾಜ, ರಾಷ್ಟ್ರಗಳ ಉದ್ಧಾರ-ಅಷ್ಟೇ ಅಲ್ಲ, ಅವಳ ಜನ್ಮವೂ ಸಾರ್ಥಕ, ಅವಳನ್ನು ಪಡೆದ ನಾಡೂ ಧನ್ಯ.

ದೀಪಾವಳಿಗೆ

ಪ್ರಕಟವಾಗಲಿದೆ

ಕು. ಗೋ. ರವರ

ಅಕ್ಕನ ಮದುವೆ

(ಬರಹಗಳ ಸಂಕಲನ)

ಭಾರ್ಗವ ಪ್ರಕಾಶನ,

ಚಿಕ್ಕಮಗಳೂರು.

ಬೆಳ್ತಂಗಡಿ ಮುನ್ಸಿಫ್ ಕಮ್ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ

O. S. No. 190/64.

ಕೆ. ಮಹಮ್ಮದ್ —ವಾದಿ.

ರಾಮಣ್ಣ ಗೌಡ ಸಹಾ —ಪ್ರತಿವಾದಿಯ,

ಬೆಳ್ತಂಗಡಿ ತಾಲ್ಲೂಕು ಇಂದಬೆಟ್ಟು ಗ್ರಾಮದಲ್ಲಿರುವ ಶ್ರೀ ಪುವಣಿ ಗೌಡರ ಮಗಳು. ಪ ಶ್ರೀ ಅಣ್ಣು ಗೌಡರ ಪತ್ನಿ, ಸದ್ರಿ ವಾದೆಯ 9ನೇ ಪ್ರತಿವಾದಿ ದೇಕಮ್ಮ ಹೆಂಗುಸಿಗೆ.

ವಾದಿಯು ತನಗೆ ಬರಬೇಕಾದ ಅಡವು ಪತ್ರ ಚೀಟಿನ ಬಡ್ಡಿ ಬಾಕಿ ವಗೈರೆ ರೂಪಾಯಿ 230–00ಕ್ಕೆ ನಿಮ್ಮ ವಗೈರೆಯ ಮೇಲೆ ಮಾಡಿದ ದಾವೆಯು ತಾ. 19-10-64ಕ್ಕೆ ತನಿಖೆಗೆ ಇಟ್ಟಿರುತ್ತದೆ ಸದ್ರಿ ದಾವೆ ಕುರಿತು ಆಕ್ಷೇಪ ಇದ್ದಲ್ಲಿ, ಸದ್ರಿ ವ್ಯಾದೆದಿನ ಬೆಳಿಗ್ಗೆ ಗಂಟೆ 11ಕ್ಕೆ ಕೋರ್ಟಿನ ಮುಂದೆ ಹಾಜ್ರಾಗಿ ಉಪಹರಿಸಲು ತಪ್ಪಿದಲ್ಲಿ, ನಿಮ್ಮನ್ನು ಏಕಪಕ್ಷ ಮಾಡಿ ತೀರ್ಮಾನಿಸಲಾಗುವುದು

(By order of the Court).

B. K. Suryanarayana Rao.
Advocate for Pltf

ಬೆಳ್ತಂಗಡಿ, ತಾ. 7.10.64.

ನಿಮ್ಮ ಆಕಾಂಕ್ಷೆಗಳ ಸಾಧನೆಗಾಗಿ ಮತ್ತು ಅನಿಶ್ಚಿತ ಅವಶ್ಯಕತೆಗಳಿಗಾಗಿ ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್ ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿ ಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428.

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಸದಾ ಸುಸ್ವಾಗತ

ಉಡುಪಿಯಲ್ಲಿ ಪ್ರಥಮ ಶ್ರೇಣಿಯ ಹಾಗೂ ಪ್ರಪ್ರಥಮ ವಸತಿ ಮತ್ತು ಭೋಜನ ಮಂದಿರ

ರೋಯಲ್ ಮಹಾಲ್

ತೃಪ್ತಿದಾಯಕ ಸಮಾನ ಸೇವೆಯ ಸರ್ವಾನುಕೂಲತೆಗಳಿಂದೊಡಗೂಡಿರುವ ಅತ್ಯಾಧುನಿಕ ಮಾದರಿಯ ಬೋರ್ಡಿಂಗ್ ಮತ್ತು ಲಾಜಿಂಗ್.

ವ್ಯವಸ್ಥಾಪಕ: ಕೆ. ವೆಂಕಟ್ರಮಣ ಭಟ್.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ.

ಮಂಗಳೂರು ಸಬ್‌ಕೋರ್ಟ್

O.S. 108/52.
R.E P. No. 66/1964.

ದಿ ಕರ್ನಾಟಕ ಸ್ಟೋರ್ಸ್ Ltd ಉಡುಪಿ- by its President B Vasudeva Rao —ಅರ್ಜಿದಾರ

ಮತ್ತು

ಆರ್. ಎಂ ಅಂದ್ರಾದೆ—ಬಸ್ತ್ಯಾಂವ್ ಅಂದ್ರಾದೆರ ಮಗ—ಉಡುಪಿ ಕಸಬ ಕಾಡಬೆಟ್ಟು —ಎದುರಿ

ಇವರೊಳಗೆ—.

ಸದ್ರಿ ಎದುರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ಮೇಲ್ಕಂಡ ಅಮಲ್‌ಜಾರಿಯಲ್ಲಿ ಅರ್ಜಿದಾರನು ಹಾಜರುಪಡಿಸಿದ ಸ್ಥಿರಾಸ್ತಿ ಯೇಲಂ ಬಿಸ್ತ್ಯಾರಿನ ಯೇಲಂ ಶರ್ತ ನಿರ್ಣಯಿಸುವರೆ ತಾ. 28-10-1964ಕ್ಕೆ ಇಟ್ಟಿದೆ. ಆ ಕುರಿತು ಎದುರಿಗೆ ಆಕ್ಷೇಪ ಹೇಳತಕ್ಕದ್ದಿದ್ದರೆ ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಪೂರ್ವಾಹ್ನ 10 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂತ ತಿಳಿಸಲಾಗಿದೆ.

V. R. KIDIYUR,
Advocate for Petitioner.

ಉಡುಪಿ, 8 10-64.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ.

S. C. No. 103/1964.

N. ರಾಕು ಬಲ್ಲಾಳ —ವಾದಿ,

ಮತ್ತು

S. ಸುಧಾಕರ ಸೆಟ್ಟಿ, ಕುಂದಾಪುರ ಎಕ್ಸ್‌ಕೇಟರಾಗಿದ್ದ S. ರಾಮಣ್ಣ ಸೆಟ್ಟಿ ಮಗ, ಕುಂದಾಪುರ ಕಸಬಾ —ಪ್ರತಿವಾದಿ.

ಇವರೊಳಗೆ—

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ—

ನರಸಿಂಹ ಉಪಾಧ್ಯಾಯರಿಗೆ ಪ್ರತಿವಾದಿಯು ತಾ. 12.4-1961ರಲ್ಲು ರೂಪಾಯಿ 1000-00ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ಖ್ಯಾವಜು ವಸೂಲಿ ಹಕ್ಕನ್ನು ವಾದಿಗೆ ಸದ್ರಿ ನರಸಿಂಹ ಉಪಾಧ್ಯಾಯರು ತಾ 2.9-1964ರಲ್ಲು ಎಂಡೋರ್ಸ್‌ಮೆಂಟ್ ಮಾಡಿಕೊಟ್ಟಂತೆ ವಾದಿಯು ಪ್ರತಿವಾದಿಯ ಮೇಲೆ ಸದ್ರಿ ಡಿಮಾಂಡ್ ನೋಟಿನ ಅಸಲು ಬಡ್ಡಿ ಖ್ಯಾವಜು ಪರೀ ನೋಟೀಸು ಖರ್ಚು ಕೂಡಾ ರೂ. 1870.50ಕ್ಕೆ ದಾಖಲು ಮಾಡಿರುವ ಮೇಲ್ಕಂಡ ವ್ಯಾಜ್ಯವನ್ನು ಪ್ರತಿವಾದಿಯ ಅಕೈರ ನೋಟೀಸು ಬಗ್ಗೆ ತಾ. 6.11-64ಕ್ಕೆ ಇಟ್ಟಿರುವುದ್ರಿಂದ ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿಗೆ ಉದಾಹರಣೆ ಕೊಟ್ಟು ವ್ಯವಹರಿಸುವುದಿದ್ದಲ್ಲಿ ಮೇಲ್ಕಂಡ ತಾ. 6-11-64ನೇ ದಿವಸ ಹಗಲು 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಏಕಪಕ್ಷ ಮಾಡಿ ಸದ್ರಿ ವ್ಯಾಜ್ಯವನ್ನು ಫೈಸಲು ಮಾಡಲ್ಪಡುವುದು.

P. V. ACHARYA,
Vakil for Plaintiff.

ಉಡುಪಿ, ತಾ. 8-10-64.

ಅಭಿಪ್ರಾಯ

ಕಂದಾಯದ ಏರಿಕೆ ರೈತನ ಮೇಲೆ ದಬ್ಬಾಳಿಕೆ

ಭೂಕಂದಾಯವನ್ನು ಹೆಚ್ಚಿಸಲು ಸರಕಾರ ಮಾಡಿರುವ ನಿರ್ಧಾರದಿಂದ ರೈತರಿಗೆ ತುಂಬಾ ತೊಂದರೆಯಾಗುತ್ತದೆ. ಅದ್ದರಿಂದ ಆ ನಿರ್ಧಾರವನ್ನು ಕೈಬಿಡಬೇಕೆಂದು ಸರಕಾರವನ್ನು ಒತ್ತಾಯಪಡಿಸುವ ನಿರ್ಣಯವನ್ನು ಕೊಡಗ ಹಳ್ಳಿಯಲ್ಲಿ ಸೇರಿದ್ದ ರೈತರ ಸಮ್ಮೇಳನವು ಅಂಗೀಕರಿಸಿದೆ.

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಮಾಜಿ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಪಿ. ವರದರಾಜ್‌ರವರು ಸ್ವಾಗತ ಭಾಷಣಮಾಡಿ ಸಭೆ ಕರೆದಿರುವ ಉದ್ದಿಶ್ಯವನ್ನು ವಿವರಿಸಿದರು.

ಅಸೆಂಬ್ಲಿಯ ಸದಸ್ಯರಾದ ಶ್ರೀ. ಎ. ಜಿ. ಬಂದಿ ಗೌಡರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದರು. ಶ್ರೀ ಗೌಡರು ತಮ್ಮ ಭಾಷಣದಲ್ಲಿ ಸರ್ಕಾರ ಕಂದಾಯ ಹೆಚ್ಚಿಸಲು ಮಾಡಿದ ನಿರ್ಧಾರಕ್ಕೆ ಯಾವ ಆಧಾರವೂ ಇಲ್ಲವೆಂದರು. ರೆವಿನ್ಯೂ ಕೋಡಿಗೆ ಅದು ವಿರೋಧವಾಗಿದೆಯೆಂದರು. ರೆವಿನ್ಯೂ ಕೋಡಿನಂತಾದರೆ ೩೦ ವರ್ಷಕ್ಕೊಮ್ಮೆ ಭೂಮಿಯನ್ನು ಸರ್ವೆ ಮಾಡಿ ಭೂಗುಣಾನುಸಾರ ಕಂದಾಯ ನಿಗದಿ ಮಾಡಬೇಕಾಗುತ್ತದೆ. ಅದು ೧/೩ಕ್ಕಿಂತ ಹೆಚ್ಚಿರಬಾರದು. ಈಗ ಸರ್ಕಾರ ಕೆಲವು ಕಡೆ ಒಂದಕ್ಕೆ ಎರಡು ಹೆಚ್ಚಿಸಿದೆ. ಇದನ್ನು ರೈತರು ಪ್ರತಿಭಟಿಸಲೇಬೇಕೆಂದರು.

ಮೈಸೂರು ಪುರಸಭೆಯ ಮಾಜಿ ಅಧ್ಯಕ್ಷರಾದ ಶ್ರೀ ಎಸ್. ಸಂಜೀವಯ್ಯನವರು ಮಾತನಾಡಿ ಎಲ್ಲೋ ಅಣೆಕಟ್ಟು ಕಟ್ಟಿ ಅಲ್ಲಿಯ ರೈತರಿಗೆ ನೀರೊದಗಿಸಲು ಬೆನ್ನೂರಿನ ರೈತರಿಗೆ ಕಂದಾಯ ಹಾಕುವುದು ಯಾವ ನ್ಯಾಯ? ಸರ್ಕಾರದ ಈ ಸಿದ್ಧಾಂತವನ್ನು ಸಾಮೂಹಿಕವಾಗಿ ವಿರೋಧಿಸಬೇಕೆಂದರು.

ಮೈಸೂರಿನ "ವಿಜಯ" ಪತ್ರಿಕೆ ಸಂಪಾದಕರಾದ ಶ್ರೀ ಎ. ರಾಮಣ್ಣನವರು ಮಾತನಾಡಿ ರೈತನು ಸಂಘಟಿತನಾಗದಿದ್ದರೆ ರೈತನ ಕಷ್ಟವನ್ನು ಕೇಳುವವರೇ ಇಲ್ಲ. ಸರ್ಕಾರ ಸ್ವೇಚ್ಛಾವರ್ತಿಯಾಗಿ ರೈತನ ಮೇಲೆ ಹೊರೆಹೊರಿಸುತ್ತಿದೆ. ಭೂಕಂದಾಯದಿಂದ ಸರ್ಕಾರಕ್ಕೆ ಕೇವಲ ನಾಲ್ಕು ಕೋಟಿ ರೂಪಾಯಿ ಮಾತ್ರ ಬರುತ್ತಿದೆಯೆಂದು ಸರ್ಕಾರ ಹೇಳುತ್ತಿದೆ. ನೇರವಾಗಿ ರೈತ ಭೂಕಂದಾಯ ಕೊಡುವುದಾದರೂ ಇತರ ವಿಧವಾದ ತೆರಿಗೆಗಳೆಲ್ಲಾ ರೈತನ ಮೇಲೆ ಬೀಳುತ್ತವೆಂಬುದರ ಅರಿವು ಸರ್ಕಾರಕ್ಕಿಲ್ಲದಿರುವುದು ಆಶ್ಚರ್ಯವೆಂದರು.

ಆಹಾರ ಅಭಾವದ ವಿಚಾರವನ್ನು ಶ್ರೀ ರಾಮಣ್ಣನವರು ಪ್ರಸ್ತಾಪಿಸಿ ಇದಕ್ಕೆ ಸರಕಾರವೇ ಜವಾಬ್ದಾರಿ ಎಂದರು. ಸರ್ಕಾರದ ಅನಿರ್ದಿಷ್ಟ ನೀತಿಯು ಭೂಸುಧಾರಣೆಯಿಂದ ವ್ಯವಸಾಯದ ಮಟ್ಟ ತೀರಾ ಇಳಿದಿದೆಯೆಂದರು. ಸರ್ಕಾರಕ್ಕೆ ಧೈರ್ಯವಿದ್ದರೆ ಭೂ ಸುಧಾರಣೆ ಜಾರಿಗೆ ತರಬೇಕು. ಇಲ್ಲವಾದರೆ ಕೈ ಬಿಡಬೇಕೆಂದರು - ಆಹಾರದ ಮೇಲೆ ಅರ್ಧ ಹತೋಟಿಯಿಡಲು ಹೋಗಿ ಇಂದು ಆಹಾರ ಪದಾರ್ಥಗಳೇ ಇಲ್ಲದಂತಾಗಿದೆ. ಹತೋಟಿ ಇರಲೇ ಬಾರದೆಂದರು.

ಮೈಸೂರು ತಾಲೂಕು ಬೋರ್ಡು ಸದಸ್ಯರಾದ ಶ್ರೀ ಚಿನ್ನಸ್ವಾಮಿ, ಟಿ. ನರಸೀಪುರದ ತಾಲ್ಲೂಕು ಬೋರ್ಡು ಸದಸ್ಯರಾದ ಕೆ. ಜಿ. ರಾಮಸ್ವಾಮಿಯವರು ಮಾತನಾಡಿ ಸರ್ಕಾರದ ನೀತಿಯನ್ನು ಟೀಕಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಎಸ್. ಚನ್ನಯ್ಯನವರು ಮಾತನಾಡಿ ಕಂದಾಯ ಹೆಚ್ಚಿಸುವ ನೀತಿಗಾಗಿ ದೇಶದ ಎಲ್ಲೆಡೆಗಳಲ್ಲಿ ಪ್ರತಿಭಟನೆ ನಡೆಯುತ್ತಿದೆ. ರೈತನ ಮೇಲೆ ಹೊರಲಾರದ ಹೊರೆಯನ್ನು ಹೊರಿಸಿದರೆ ಅದನ್ನು ಸಹಿಸಿಕೊಂಡು ಸುಮ್ಮನಿರಲು ಸಾಧ್ಯವಿಲ್ಲ. ಸರ್ಕಾರ ದುಂದು ವೆಚ್ಚಮಾಡಿ ಹಣ ಪೋಲುಮಾಡಿ ಅದನ್ನು ರೈತರು ಕೊಡಬೇಕೆನ್ನುವುದು ಸರಿಯಾದ ನೀತಿಯಲ್ಲವೆಂದರು.

ದುರ್ಭಾಗ್ಯವೇ ಕಾರು ನಡೆಸಿತು

(ಐದನೇ ಪುಟದಿಂದ)

ಬಯ್ಯುತ್ತಿದ್ದರು" ಆದರೆ, ಒಂದು ದಿನ ಬೆಳಗ್ಗೆ ಕಾರು ರಸ್ತೆಯಿಂದ ಜಾರಿ ಮುಗ್ಗರಿಸಿ ಬಿದ್ದುದು ಗೋಚರವಾಯ್ತು. ಬಳಿಯಲ್ಲೇ ಡಾ॥ ಸ್ಟಿಕಿಸನೂ ಮಲಗಿದ್ದ. ರಾತ್ರಿ ಓಡಿಸಿದ್ದ ಕಾರು ಮುಗ್ಗರಿಸಿ ಬಿದ್ದು ಡಾಕ್ಟರನ ಪ್ರಾಣಕ್ಕೆ ಸಂಚಕಾರ ತಂದಿತ್ತು.

ಕಾರಿಗೇನೂ ಹಾನಿಯಾಗಿರಲಿಲ್ಲ. ಒಬ್ಬ ಶ್ರೀಮಂತನು ಕಾರನ್ನು ಡಾಕ್ಟರನ ಪತ್ನಿಯಿಂದ ಕೊಂಡುಕೊಂಡು ಒಂದು ವರ್ಷ ಆನಂದದಿಂದ ಉಪಯೋಗಿಸಿದ. ಮುಂದೊಂದು ದಿನ ಆತನ ಪ್ರಾಣಕ್ಕೂ ಅದು ಸಂಚಕಾರ ತಂದಿತು. ಕಾರಿನ ಮುಂದಿನ ಯಜಮಾನನೊಬ್ಬ ಡಾಕ್ಟರನಾದ; ಅವನ ಪ್ರಾಕ್ಟೀಸ್ ಅತ್ಯುತ್ತಮವಿತ್ತು. ಈ ಕಾರು ಬಂದದ್ದೇ ಬಂದದ್ದು, ಬರುವ ರೋಗಿಗಳ ಸಂಖ್ಯೆ ಇಳಿಯತ್ತ ಬಂದು ಕೆಲವೇ ದಿನಗಳಲ್ಲಿ ನಿಂತೇ ಹೋಯ್ತು. ಡಾಕ್ಟರ ಬೆಚ್ಚಿ ಬಿದ್ದ, ಮಿತ್ರರ ಸಲಹೆಯಂತೆ ಕಾರನ್ನು ಸ್ವಿಜರ್ಲೆಂಡಿನ ಒಬ್ಬ ರೇಸ್ ಡ್ರೈವರನ ಕುತ್ತಿಗೆಗೆ ಕಟ್ಟಿ ಬಿಟ್ಟ.

ಡ್ರೈವರನು ಡೋಲಾಮೈಟ್‌ನ ರೇಸಿನಲ್ಲಿ ಕಾರನ್ನು ಓಡಿಸಿದ; ಒಂದು ಗೋಡೆಗೆ ಡಿಕ್ಕಿ ಹೊಡೆದು ತನ್ನ ಪ್ರಾಣವನ್ನು ಕಳೆದುಕೊಂಡ.

ಕೊನೆಗೆ ಆ ಕೆಂಪು ಕಾರು ಮರಳಿ ಸರಜೆವೊಗೆ ಬಂತು, ಒಬ್ಬ ಶ್ರೀಮಂತ ರೈತನ ಆಸ್ತಿಯಾಯಿತು. ಕೆಲ ತಿಂಗಳ ಕಾಲ ಅದು ರೈತನ ಸೇವೆಯನ್ನು ಒಳ್ಳೆಯ ರೀತಿಯಲ್ಲೇ ಮಾಡಿತು. ಒಂದು ದಿನ ಏನು ಗರ ಬಡಿಯಿತೋ ನಡುರಸ್ತೆಯಲ್ಲಿ ನಿಂತುಬಿಟ್ಟಿತು. ಹೊರಡುವ ಯೋಚನೆಯೇ ಅದಕ್ಕಾಗಲಿಲ್ಲ. ಮನೆ ಬಹ ದೂರವಿತ್ತು. ರೈತ ತನ್ನ ಮನೆಯತ್ತ ಹೋಗುವ ಗಾಡಿಯನ್ನು ನಿಲ್ಲಿಸಿ ಅದರ ಚಾಲಕನೊಡನೆ ತನ್ನ ಕಾರನ್ನು ಕಟ್ಟಿ ಎಳೆದುಕೊಂಡು ಮನೆ ಮುಟ್ಟಿಸುವಂತೆ ಪ್ರಾರ್ಥಿಸಿದ.

ಗಾಡಿಗಾರ ಒಪ್ಪಿದ. ಹಗ್ಗದಿಂದ ಕಾರನ್ನು ಕಟ್ಟಿ ಒಯ್ಯತೊಡಗಿದ. ಆತನು ಹತ್ತು ಗಜ ದೂರವನ್ನು ಕ್ರಮಿಸಿರಲಿಲ್ಲ) ಕಾರು ಒಮ್ಮಿಂದೊಮ್ಮೆಲ್ಲೇ (ಸ್ಟಾರ್ಟ್ ಆಯಿತು - ಕೆಲ ಕಾಲ ಮೊದಲು ಬಂದಾದಂತೆ. ಕುದುರೆ ಮತ್ತು ಗಾಡಿಗಳನ್ನು ಉರುಳಿಸಿ, ಹಗ್ಗವನ್ನು ತುಂಡರಿಸಿ, ಆ ಕಾರು ರಸ್ತೆಯ ಮೇಲೆ ಓಡಿತು. ಒಂದು ತಿರುವಿನಲ್ಲಿ ಉರುಳಿ ಬಿತ್ತು. ಆದರೆ, ಅದಕ್ಕೆ ಮೊದಲೇ ರೈತನ ಮತ್ತು ಗಾಡಿಗಾರನ ಪ್ರಾಣವನ್ನು ತೆಗೆದುಕೊಂಡಿತ್ತು.

ಈ ಬಾರಿ ಕಾರಿಗೆ ತುಂಬ ಪೆಟ್ಟಾಗಿತ್ತು. ಆದರೂ ಈ ಮುರಿದ ಗಾಡಿಗೆ ಗಿರಾಕಿ ಸಿಕ್ಕಿಯೇ ಬಿಟ್ಟ. ಕಾರು ಮಾರುವ ಟೈಬರ್ ಹರ್ಷ ಫೀಲ್ಡ್‌ನಿವನ್ನು ಕೊಂಡ ಕೊಂಡ. ಕಾರನ್ನು ರಿಪೇರಿ ಮಾಡಿಸಿ ಅವನು ನೀಲಿ ಬಣ್ಣ ಕೊಡಿಸಿದ. ಅದರ ಇತಿಹಾಸವನ್ನು ಜನರು ಮರೆಯುವಂತೆ ಮಾಡಿದ. ಆದರೆ, ಕೆಟ್ಟ ವಿಷಯಗಳನ್ನು ಮನುಷ್ಯರು ಮರೆತು ಬಿಡುವುದುಂಟೆ?

ತಿಂಗಳುಗಟ್ಟಲೆ ಗ್ರಾಹಕರನ್ನು ನಿರೀಕ್ಷಿಸುತ್ತಲೇ ಹರ್ಷಫೀಲ್ಡನು ನಿರಾಶನಾದ. ಮುಂದೆ, ತಾನೇ ಅದನ್ನು ಉಪಯೋಗಿಸಿಕೊಂಡ. ಒಂದು ದಿನ ಆತ ಮಿತ್ರರೊಡನೆ ಯಾವುದೋ ಮದುವೆಗೆಂದು ಹೋಗುವಾಗ, ಮುಂದೆ ಬರುವ ಕಾರೊಂದಕ್ಕೆ ಈ ಕಾರು ಡಿಕ್ಕಿ ಹೊಡೆಯಿತು. ಹರ್ಷಫೀಲ್ಡನೂ ನಾಲ್ವರು ಮಿತ್ರರೂ ಮೃತ್ಯುವಿಗೆ ತುತ್ತಾದರು.

ಈ ಸಮಯದಲ್ಲಿ ಈ ಕಾರಿನ ಮಹಿಮೆ ದೂರ ದೂರಕ್ಕೂ ಹರಡಿತ್ತು. ಸರಕಾರವು ತನ್ನ ಖರ್ಚಿನಿಂದ ಅದನ್ನು ರಿಪೇರಿ ಮಾಡಿಸಿ ಆಸ್ಟ್ರಿಯಾದ ಒಂದು ವಸ್ತು ಸಂಗ್ರಹಾಲಯಕ್ಕೆ ಕೊಟ್ಟು ಬಿಟ್ಟಿತು. ಅಲ್ಲಿ ಅದು ಎರಡನೆಯ ಮಹಾ ಯುದ್ಧದವರೆಗುಳಿಯಿತು. ಒಂದು ದಿನ ಶತ್ರುಗಳು ವಿಯನ್ನಾದ ಮೇಲೆ ಬಾಂಬುಗಳ ದಾಳಿ ಮಾಡಿದಾಗ, ಮ್ಯೂಜಿಯಮ್ಮಿನೊಡನೆ ಈ ಕಾರೂ ನಾಶವಾಯಿತು.

ಪ್ರಥಮ ಮಹಾ ಯುದ್ಧಕ್ಕೆ ಜನ್ಮವಿತ್ತ ಆ ಕೆಂಪು ಕಾರನ್ನು ದ್ವಿತೀಯ ಮಹಾ ಯುದ್ಧವೇ ನುಂಗಿದುದು ಉಚಿತವೇ ಅಲ್ಲವೆ?

ಈಗ ಹೇಳಿ, ದುರ್ಭಾಗ್ಯವೇ ಆ ಕೆಂಪು ಕಾರನ್ನು ಮುನ್ನಡೆಸುತಿತ್ತು!

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ಡಾ॥ ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ ಎರಡೂವರೆ (ಟ ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು

ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ: ರೂ 1-25 (ಟ ಖ. ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್ ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ. ಎರಡು (ಟ ಖ ಪ್ರತ್ಯೇಕ)

ನವಭಾರತ ಪುಸ್ತಕ ಭಂಡಾರ, ಉಡುಪಿ.

‘NAVAYUGA’ Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction, Madras.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.,

ವಾರ್ಷಿಕ ಚಂದಾ ರೂ. ೧೦

ದರ್ಖಾಸ್ತು ಖಾಯಂ ಆಯ್ತು

(ನಾಲ್ಕನೇ ಪುಟದಿಂದ)

ಭಲೆ.... ಹಾಗಿರಬೇಕು.... ಪೇದೆ ತನಿಯ ಮೀಸೆಗೆ ಕೈಹಾಕಿದನು.

ನೀವು ಯಾರು? ರವಿ ಕೇಳಿದನು ಉಗುಳು ನುಂಗುತ್ತ.

ಮೊನ್ನೆ ಆಫೀಸಿಗೆ ಬಂದಿದ್ದರಲ್ಲ ಅವರ ಸುಪುತ್ರರವರು.... ಇನ್ನೂ ತರುಣರು.... ಡಾಕ್ಟರ್ ಓದುತ್ತಾರಂತೆ... ಪೇದೆ ಕಿರಿದಾಗಿ ನಕ್ಕನು. ಸರಿ.... ಸರಿ... ದರ್ಖಾಸ್ತು ಮಾಡಿಸಿ ಕೊಡಲು ಯತ್ನಿಸುತ್ತೇನೆ.... ರವಿಯ ಮನಸ್ಸು ಪರಿಶುದ್ಧವಾಗಿದ್ದರೂ ಈ ಸರ್ತಿ ಸೋತು ಹೋಯಿತು.

ರಿಕಾರ್ಡಿನ ಎಡೆಯಲ್ಲಿ ಕುಳಿತ ನೋಟು ಅವನನ್ನು ಹೀಯಾಳಿಸಿತು. ಬಂದ ವ್ಯಕ್ತಿಯ ಗತ್ತು, ಗೌರವ ದೀನತೆಯನ್ನು ಕಂಡು ನೋಟನ್ನು ತೆಗೆದು ಬಿಸಾಕಲು ಧೈರ್ಯವೇ ಬರಲಿಲ್ಲ.

೦ ೦ ೦

ಪಾಪ... ಆ ಭಟ್ರ ಮಗ ಡಾಕ್ಟರ್ ಕಲಿಯುತ್ತಾನಂತೆ.... ತನ್ನ ಪೇದೆ ತನಿಯಪ್ಪ ಹೇಳಿದನು.

ಒಳ್ಳೆ ಹುಡುಗ. ಮುಖ ಕೆಂಪು ಕೆಂಪಾಗಿತ್ತು ತನ್ನ ಮನೆಗೆ ಬಂದು ಲಂಚ ಕೊಡುವಾಗ.

ಬಹುಶಃ ಮೊದಲ ಅನುಭವವಿರಬೇಕು.... ಅಪ್ಪನಿಂದಾಗದ ಕೆಲಸವನ್ನು ಈಗ... ತರುಣ ಸಾಧಿಸಿದ್ದಾನೆ.... ಎಲ್ಲ ಪೇದೆ ತನಿಯಪ್ಪನ ಮಸಲತ್ ಇರಬೇಕು...

ತನ್ನ ಸಂಕಷ್ಟ ಹೇಳಿ ತೀರದು.... ಇಡೀ ಸಂಸಾರ ಭಾರವನ್ನು ಹೆಗಲ ಮೇಲೆ.... ತನ್ನ ಸಂಪಾದನೆಯನ್ನೇ ಹೊಂದಿಕೊಂಡಿದೆ.

ತಂದೆ—ತಾಯಿ.... ಹೆಂಡತಿ... ಮದುವೆಗೆ ತಯಾರಾಗಿ ನಿಂತ ತಂಗಿ. ಕಾಲೇಜು ಕಲಿಯುವ ತಮ್ಮ..... ಅವನಿಗೂ ತಿಂಗಳು .... ತಿಂಗಳು ಹಣ ಕಳುಹಿಸಲೇ ಬೇಕು...... ಎಷ್ಟಾದರೂ ಮಧ್ಯಮ ವರ್ಗದ ಕುಟುಂಬ. ಬರೀ ಉಪ್ಪಿನಲ್ಲಿ ಹಾಲು, ಮಜ್ಜಿಗೆಯಿಲ್ಲದೆ ಉಣಲಾಗುತ್ತದೆಯೆ.... ಆಕೆ ತವರಿನಲ್ಲಿ ಹಾಲು, ಮಜ್ಜಿಗೆಯಲ್ಲೇ ಕೈ ತೊಳೆದವಳು ...

ಹಾಲಿಲ್ಲದೆ ನನ್ನಿಂದಾಗದು... ರಾತ್ರಿ ಹಾಲು ಕುಡಿದೇ ಮಲಗುವುದು ನನ್ನ ನಿಯಮ.... ತೊಗ್ರಿಯಿಲ್ಲದೆ ಹೇಗೆ ಹುಳಿ ಮಾಡಲಿ...... ಸಾಗರದಲ್ಲೇ ಬೆಳೆದವಳು ನನ್ನಾಕೆ. ಮದುವೆಗೆ ನಿಂತ ತಂಗಿಯನ್ನು ಬಿಟ್ಟು ತಾನು ಮದುವೆಯಾದುದೇ ಅಪರಾಧ.

ತಂದೆಯೂ ಹೇಳಿದರು—

ರವಿ... ನಿನ್ನ ಮದುವೆಗೇನು ಅವಸರ ... ಸುಮತಿಯನ್ನು ಈ ಋತುವಿನಲ್ಲಿ ಮದುವೆ ಮಾಡಿಬಿಡುವ.... ಮತ್ತೆ ನಿನಗೆ ತರಬಹುದು... ನೀನು ಹುಡುಕಿದ್ದು ಒಳ್ಳೇ ಸಂಬಂಧವೇನೇ ಆಗಿದೆ— ಇನ್ಸ್‌ಪೆಕ್ಟರ್ ಭೀಮು ನನ್ನ ಬಾಲ್ಯದ ಗೆಳೆಯ.... ಅವನ ಮಗಳು ಜಾನಕಿ.... ಗುಣವಂತೆ... ಒಳ್ಳೆಸಂಬಂಧ.... ಅವರೆ ಅವಸರವಾಯಿತು.... ಎಂದಿಗೂ ತಂದೆಯವರು ಮತ್ತೆ ತಕರಾರು ಮಾಡಲಿಲ್ಲ. ಮದುವೆಗೆ ಲಗ್ನವಿಡಿಸಿದರು .... ಮದುವೆಯೂ ಆಯಿತು.... ಈಗ ಯೋಚಿಸಿದರೆ— ಅವಸರವೇ ಆಯಿತು ಅನ್ನಿಸುತ್ತೆ....

ಅಂದು ಸುಮತಿಯು ಏಕಾಕಿನಿಯಾಗಿ ನೋಡಿದ ವೇಳೆ ಹೃದಯಕ್ಕೆ ಪಿಕ್ಕಾಸು ಹಾಕಿದಂತಾಗಿದೆ. ಅಲ್ಲ.... ಅದನ್ನು ನೋಡಲೇ ಬಾರದಿತ್ತು ಏನು ಮಾಡುವುದು ಮತ್ತೆ? ತಲೆ ಸಿಡಿತ ಅಂತ ಅಪರೀಕ್ಷಿತ ಹೊತ್ತಿನಲ್ಲಿ ಬಂದ ತನಗೆ ಕಂಡದ್ದೇನು?

ತನ್ನ ಕೋಣೆಯಲ್ಲಿ....

ತನ್ನ ಡಬ್ಬಲ್ ಹಾಸಿಗೆಯಲ್ಲಿ....

ಛಿ ... ಛಿ.... ಯೋಚಿಸಲೂ ಬಾರದು...

ತನ್ನ ನಿತ್ಯ ಮುಖ ನೋಡುವ ಕೆಳ ನೌಕರ ವಾಮನರಾಯ. ಲೀವ್ ಬರೆದು ಹಾಕಿ ನೇರವಾಗಿ ನನ್ನನ್ನು ನೋಡಲೆಂದು ನನ್ನ ಮುಖ ನೋಡಿ ಮನೆಗೇ ಬಂದಿದ್ದಾನೆ.

ಅಣ್ಣ ಇಲ್ಲವೇ ಸುಮು... ಅಂತ ಕೇಳುತ್ತಾ ಬಂದನಂತೆ.

ಇಲ್ಲ ವಾಮಣ್ಣ.. ಈಗ ತಾನೇ ಹೋದರು... ಅಂದಳಂತೆ ಸುಮತಿ. ಹ... ಹ... ಹಿ... ಹಿ ..ಎಂದು ಹಲ್ಲು ಕಿರಿದು ವಾಮನ ಸುಮತಿಯನ್ನು ಸೆಳೆದುಕೊಂಡನಂತೆ ಮನೆಯಲ್ಲಿ ಯಾರ ಸುಳಿವೂ ಇಲ್ಲದ್ದನ್ನು ಕಂಡು.

ಅದೇ ಹೊತ್ತಾಯಿತು ತಾನು ಬಂದು ಸೇರಿಕೊಂಡದ್ದು.

ಸುಮೂ... ನನ್ನ ತಂಗಿ... ಇದೇನು ಎಂದು ಚೀರಿಕೊಳ್ಳಬೇಕೆಂದು ಬಾಯಿ ತೆರೆದೆನು.

ಆದರೆ ಚೀರಬಾರದು...... ಏನೋ, ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿದ್ದಾಳೆಂದು ವಿವೇಕ ಎಚ್ಚರಿಸಿತು. ತಾನು .... ನೋಡಿಯೂ ನೋಡದಂತೆ ಹೊರಟು ಹೋದೆನು.

ಅಣ್ಣ ...ಅಣ್ಣ... ನೀನು ಬಂದೆಯೊ, ಪೆಚ್ಚು... ಪೆಚ್ಚಾಗಿತ್ತು ಸುಮತಿಯ ಮಾತು ಮತ್ತು ಮುಖ.

ಹಿ.... ಹಿ... ಎಂದು ಜಾರಿಕೊಂಡನು ವಾಮನ.

ಇನ್ನು ಕಾಲಿಟ್ಟೆಯೋ.... ಜಾಗ್ರತೆ.... ಮುಖಕ್ಕೆ ಎರಡೇಟು ಬಿಗಿದು ಹೊರಕ್ಕಟ್ಟಿದೆನು. ಆದರೆ ತಂಗಿಯನ್ನು ಏನೂ ಮಾಡಲು ಕೈ ಬರಲಿಲ್ಲ. ತನ್ನ ಪ್ರೀತಿಯ ತಂಗಿ.... ತಾನೇ ಸಾಕಿ ಸಲಹಿದ .... ಅತ್ತಾಗ ಜೋಜೋ ಹಾಡಿ ಮಲಗಿಸಿ ನಿದ್ರಿಸಿದ ತಂಗಿ.... ಒಡಹುಟ್ಟಿದ ಕಿರುತಂಗಿ. ತನ್ನಿಂದ ನೇರವಾಗಿ ಹತ್ತು ವರ್ಷದ ನಂತರ ಹುಟ್ಟಿದ ತಂಗಿ.... ಮುದ್ದು ತಂಗಿ.. ಹೊಡೆಯಲೂ ಇಲ್ಲ.... ಗದರಿಸಲೂ ಇಲ್ಲ.

ಅವಳ ವಿವರಣೆ ಕೇಳಿದೆ ಅಷ್ಟೆ.... ಕಿವಿಗೆ ಕೈಹಿಡಿದುಕೊಂಡು....

ಅಣ್ಣ.... ಅಣ್ಣ .... ಇದೊಂದೇ ಸಾರಿ.... ಒಂದೇ ಸಾರಿ ತಪ್ಪಿದೆ.... ಇನ್ನು ನಿಜಕ್ಕೂ ತಪ್ಪಲಾರೆ....... ಸುಮತಿ ಕಂಬನಿ ಮಿಡಿದಳು

ಹೌದು.... ಯೌವನದ ಸಹಜ ಆಕಾಂಕ್ಷೆ ಆಕೆಗೂ ಇದೆ.... ಅವಳನ್ನು ನಿಲ್ಲಿಸಿ ತಾನು ಮದುವೆಯಾದುದೇಕೆ ಜಾನಕಿಯನ್ನು...ತನ್ನ ಬಾಯಿಂಕೆ ಇಂಗಲಾಗಿ... ಹಾಗೆ ಆಕೆಗೂ.... ಮದುವೆ ಮಾಡಲೇ ಬೇಕು.. ನೆಕ್‌ಲೇಸ್... ಎರಡೆರಡು ಬಳೆ.... ಕುಮಾರಿ ಚೈನ್... ಹಣ... ಸಿಕ್ಕಿದೆಯಲ್ಲ ಅಡಿಕೆ ಭಟ್ರ ಮಗನ ನೋಟುಗಳು... ಹೌದು ಅದನ್ನೇ ಬಳಸುವುದು.... ಪಾಪ ...ಅವನ ಕುಮ್ಕಿ ಸ್ಥಳವನ್ನು ಆಕ್ರಮಿಸಿದ್ದಾರೆ... ಶಾನುಭೋಗರನ್ನು ಒಳ ಕೈಮಾಡಿ ಸೋದರತ್ತೆ ಮಗ ಭಾವ ಆಗಮ ರಿಕಾರ್ಡು ಮಾಡಿಸಿ....ಗುಟ್ಟಾಗಿ ಎರಡು ವರ್ಷ ಇಟ್ಟು ಈಗ ಡಿ. ನೋಟೀಸು ಮಾಡಿಸಿದ್ದಾನಂತೆ... ದರ್ಖಾಸ್ತು ಮಣೆಗಾರರು ... ಒಟ್ಟಾರೆ ರವಿನ್ಯೂಸಲ್ಲಿ ಲಂಚದ್ದೇ ಕಾರುಬಾರು ಆ ದರ್ಖಾಸ್ತು ರಿಕಾರ್ಡು ರದ್ದು ಮಾಡಿಸಿ ಮಾಮಣ್ಣ ಭಟ್ರಿಗೇ ಕೊಡಿಸಬೇಕು.. ಅದಕ್ಕಾಗಿ ಕೊಟ್ಟಿದ್ದಾರೆ ನಾಲ್ಕು ಪಚ್ಚೆ ನೋಟುಗಳು.... ಇದಕ್ಕೆಲ್ಲ ದಲ್ಲಾಳಿ ತನಿಯಪ್ಪ... ಭಟ್ರ ಮಗನ ಹೆಸರು.... ಮರೆತನಲ್ಲ.... ಹಾ... ಹಾ... ಮೋಹನ ....ಎಷ್ಟಾದರೂ ಈಗಿನವ... ಚಲೋ ಹುಡುಗ ...ಹುಂ... ಆಗುತ್ತೆ.... ಅದೇ ಹಣವನ್ನು ಬಳಸುವುದು.... ಸುಮತಿಯ ಮದುವೆ ಮುಗಿಸಲೇ ಬೇಕು... ಹೀಗೇ ಮನೆಯಲ್ಲಿಟ್ಟುಕೊಳ್ಳಬಾರದು...

ಆಕ್ರಮಣ ಮಾಡುತ್ತಾರೆ ... ಸರಕಾರಿ ಸ್ಥಳವನ್ನು ಅನಾಧೀನವೆಂದು ಪರಿಗಣಿಸುತ್ತಾರೆ.

ಹಾಗೆ ಮದುವೆಯಾಗದ ಹೆಣ್ಣು ಅನಾಧೀನ.... ಆಕ್ರಮಣ ಎರಡೂ ಕಡೆ ನಡೆಯುತ್ತೆ....

ತನ್ನ ಅನುಭೋಗ.... ತನ್ನ ಅನುಭೋಗ ಎಂದೇ ವಾದ ಹೂಡುತ್ತಾರೆ.

ಅಲ್ಲಿ ಭಾವನಿಂದಲೇ ಆಕ್ರಮಣ.... ಇಲ್ಲಿ ತಂಗಿಯ ಮೇಲೆ ವಾಮನನಿಂದ ಆಕ್ರಮಣ.... ತನ್ನ ಆಫೀಸು ನೌಕರನಿಂದ.

ನಿತ್ಯ ಮನೆಗೆ ಹೋಗಿ ಬರುವ ವಾಮನನಿಂದ ಅಂದರೆ....

ಹೇಗೆ ನಂಬುವುದು ಈ ಕಾಲದಲ್ಲಿ ಬಲಕ್ಕೆ.... ಎಡದ ಕೈಯನ್ನು ನಂಬುವ ಹಾಗಿಲ್ಲ...

ಅಷ್ಟನ್ನು [illegible]ಗಿತ್ತು ಈ ಕಣ್ಣುಗಳು.... ನೋಡಿತು. ಇನ್ನಾದರೂ ಎಚ್ಚರಗೊಂಡು ಕಾರ್ಯೋನ್ಮುಖನಾಗಬೇಕು... ವರ.... ವರ... ಅದೇ ಮುಂದಿನ ಸಮಸ್ಯೆ.

ವಾಮನ.... ನನ್ನ ರಿಕಾರ್ಡು ಕಟ್ಟು ಹೊರಮ್ಮ ಹಳೆ ಕೋಟು, ಪಿರಾಯಿ ತೊ





ಜವ ವಾಮನ....ಆಗಲಿಕ್ಕೇ ಇಲ್ಲ..

ಮತ್ತೆ...?

ದರ್ಖಾಸ್ತು ರಿಕಾರ್ಡು ಮಾಡಲೇ ಬೇಕು. ಕುಮ್ಕಿ ಸ್ಥಳದ ಆಕ್ರಮಣ ನಡೆದಿದೆ.

ಮಾಪಣ್ಣ ಭಟ್ಟರ ಮಗ ಮೋಹನರಾಯನ ಹೆಸರಿನಲ್ಲೇ ದರ್ಖಾಸ್ತು ಪಟ್ಟೆ ಮಾಡಿಸುವುದು.... ಒಂದು ನಿರ್ಧಾರಕ್ಕೆ ಬಂದನು ರವಿ ರಿಕಾರ್ಡು ಕಟ್ಟುಗಳನ್ನು ಬಿಡಿಸಿಟ್ಟುಕೊಂಡು

ಹುಂ....ಅದೇ ಒಳ್ಳೇ ನಿರ್ಣಯ... ಭಲೆ ತೀರ್ಪು—ಮರು ನುಡಿಯಿತು ವಿವೇಕ

ಅಸ್ತವ್ಯಸ್ತವಾದ ರವಿಯ ಮನಸ್ಸು ದಡ ಮುಟ್ಟಿತು.

o o o o

"ಮಾಪಣ್ಣ ಭಟ್ರೆ, ನಿಮ್ಮ ಹೆಸರಿಗೆ ದರ್ಖಾಸ್ತು ಖಾಯಂ ಮಾಡಿದ್ದೇನೆ....

ನಿಮ್ಮ ಭಾವನ ಹೆಸರಿಗೆ ಆದ ಆಕ್ರಮಣ ರಿಕಾರ್ಡನ್ನು ರದ್ದು ಮಾಡಿ ನಿಮ್ಮ ಹೆಸರಿಗೇ ಖಾಯಂ ಮಾಡಿದ್ದೇನೆ. ನಿಮ್ಮದೇ ಕುಮ್ಕಿ ಸ್ಥಳವಲ್ಲವೆ?" ರವಿ ತೀರ್ಪು ಕೊಟ್ಟನು ತಹಶೀಲ್ದಾರರ ಸ್ಥಾನದಲ್ಲಿ ಕುಳಿತು.

ದೇವರು ದೊಡ್ಡವನು ಸ್ವಾಮಿ... ಸತ್ಯವಿದ್ದಂತೆಯೇ ಆಗುವುದು....ಸತ್ಯಕ್ಕೆ ಜಯವಿದ್ದೇ ಇದೆ...ಮಾಪಣ್ಣ ಭಟ್ರ ಹೃದಯ ತುಂಬಿ ಬಂತು.

ನಿಮ್ಮ ಮಗ ಕಾಣುವುದಿಲ್ಲವಲ್ಲ.. ಎಲ್ಲಿ ಹೋಗಿದ್ದಾನೆ....? ರವಿಯ ಕುತೂಹಲ ಕೆರಳಿತು

ಎಲ್ಲಿ ಹೋಗಿದ್ದಾನೋ ಗೊತ್ತಿಲ್ಲ— ಏನಾದರೂ ಕೊಡಬೇಕೆಂದು ಭಟ್ರ ಹೃದಯ ದೊಡ್ಡದಾಯಿತು.

ಇಲ್ಲಿ ಕೊಡುವುದು ಹೇಗೆ? ಮನೆಗೆ ಹೋಗುವ. ಪೇಟೆ ಶನಿಯಪ್ಪ ಭಟ್ರ ಕಿವಿಯಲ್ಲಿ ಉಸುರಿದ. ಅದೇ ಒಳ್ಳೆಯದೆಂದು ಭಟ್ರು ನಿರ್ಣಯಿಸಿದರು.

ರಾಯರು ಮನೆಗೆ ಸಾಯಂಕಾಲ ಹೋಗುತ್ತಾರೆ.... ನಾನೇ ಕರೆದುಕೊಂಡು ಹೋಗುತ್ತೇನೆ.. ನಿಮ್ಮ ಮಗನನ್ನು ಬರಮಾಡಿ.... ಅವರ ಮೇಲೆ ರಾಯರಿಗೆ ಒಳ್ಳೆ ಅಭಿಪ್ರಾಯವಿದೆ. ಒಟ್ಟಿಗೇ ಹೋಗುವ.... ಶನಿಯಪ್ಪ ಸೂಚನೆ ಕೊಟ್ಟನು. ಭಟ್ರು ಕೊಡಬೇಕಾದ ಹಣವನ್ನು ಕವರಿನಲ್ಲಿ ತುಂಬಿಸಿ ಹಿಡಿದು ಕೊಂಡರು,

ಒಟ್ಟಿಗೇ ರವಿಯ ಮನೆಗೆ ಹೋದರು.

ಭಟ್ರಿಗೆ ಆಶ್ಚರ್ಯ....ಅಲ್ಲಿ ತನ್ನ ಮಗನೇ ನಿಂತಿದ್ದಾನೆ. ಕಣ್ಣು ತಿಕ್ಕಿ ನೋಡಿದರು ಹೌದು ತನ್ನ ಸುಪುತ್ರ ಮೋಹನ... ಸ್ಟೆತಸ್ಕೋಪು ಭುಜದ ಮೇಲೆ ಹಾಕಿಕೊಂಡು ಅತ್ತಿತ್ತ ಹೆಜ್ಜೆ ಹಾಕುತ್ತಿದ್ದನು.

ಏನೋ ಮೋಹನ ಇಲ್ಲಿಗೆ ಯಾವಾಗ ಬಂದೆ?.. ಭಟ್ರು ಗದರುವ ರೀತಿಯಲ್ಲಿ ಮುಖ ಸೊಟ್ಟಗೆ ಮಾಡಿದರು.

ತಹಶಿಲ್ದಾರರ ತಂಗಿಗೆ ಸುಖವಿಲ್ಲ.... ಜ್ವರ ಅಂತ ಫೋನು ಮೂಲಕ ತಿಳಿಸಿದರು...ಹಾಗಾಗಿ ಕಾರು ಇತ್ತಲಾಗಿಯೇ ತಿರುಗಿಸಿದೆನೆ— ಮೋಹನ ಕಕ್ಕಾಬಿಕ್ಕಿಯಾದನು.

ರವಿಯೂ ಅದೇ ಕಾಲಕ್ಕೆ ಬಂದನು.

ಬನ್ನಿ ಭಟ್ರೆ...ಬನ್ನಿ...ಹೀಗೆ ಕುಳಿತುಕೊಳ್ಳಿ.... ರವಿಯ ತಂದೆ ಉಪಚರಿಸಿದರು.

ನೀವು ಡಾಕ್ಟರರ ತಂದೆಯೋ? ಕನ್ನಡಕ ಮೂಗಿನ ತುದಿಗೇರಿಸಿ ವಿಚಾರಿಸಿದರು ರವಿಯ ತಂದೆ ವಾಮನ ರಾಯರು.

ಹೌದು ...ಇಲ್ಲೇ ಸಾಕ....ಜಗಲಿಯ ಮೂಲೆಯಲ್ಲಿ ಕುಳಿತರು ಭಟ್ರು ಹಳೆ ಬೈರಾಸು ಹಾಸಿಕೊಂಡು.

ಛೆ..ಛೆ...ಅಲ್ಲಿ ಕೂಡದು..ಒಳಕ್ಕೆ ಬನ್ನಿ ..ಸೋಫದಲ್ಲೇ ಕುಳಿತುಕೊಳ್ಳಿ— ರವಿ ಭಟ್ರ ಕೈಹಿಡಿದು ಎಬ್ಬಿಸಿ ಒಳಕ್ಕೆ ಕರೆತಂದನು ತುಂಬಾ ಉಪಕಾರ ಮಾಡಿದಿರಿ...

ಹಿ ಹಿ ...ಹು..ಎನ್ನುತ್ತಾ ಜೇಬಿನಿಂದ ಕವರು ತೆಗೆದು ಭಟ್ರು ರವಿಯ ಕೈಗಿರಿಸಿದರು. ಛೆ . ಛೆ... ಇದೆಲ್ಲ ಯಾಕೆ? ....ಏನು ಉಪಕಾರವಂತು... ನೋಡಿ ಇನ್ನೊಂದು ದರ್ಖಾಸ್ತು ಖಾಯಂಮಾಡುತ್ತೇನೆ ...ಇದು ಕೋರ್ಟುಹುಕುಂ.. ಇದು ಮಾತ್ರ ನಿಮ್ಮಮಗನಿಗೆ ಖಾಯಂಪಟ್ಟೆ . ತಿಳಿಯಿತಲ್ಲ ...ಅವರು ಆಗಲೆ ಡಾಕ್ಟರ್-ಆಗಿದ್ದಾರೆ ...ಬನ್ನಿ ಒಳಕ್ಕೆ ಬನ್ನಿ....ನಾವೂ ಪಾಲುಗೊಳ್ಳುವ....ರೋಗಿಯ ಚಿಕಿತ್ಸೆಗೆಂದು ನಿಮ್ಮ ಮಗನಿತ್ತ ಬರುತ್ತಾರೆ....ರವಿ ಅಧಿಕಾರ ಚಲಾಯಿಸಿದನು.

ಏನೊಪ್ಪ ...ಒಂದೂ ಅರ್ಥವಾಗುವುದಿಲ್ಲ...ನಿಮ್ಮಂಥವ ದೊಡ್ಡವರೊಡನೆ ಸರಕಾರದ ಅಧಿಕಾರಿಗಳೊಡನೆ ನನ್ನದೇನು ಮಾತು ಭಟ್ರು ಪಿಳಿ....ಪಿಳಿ ನೋಡಿದರು .ಬನ್ನಿ ಭಟ್ರೆ ...ಎಲ್ಲ ತಿಳಿಯುತ್ತೆ

ರವಿ ಭಟ್ರನ್ನು ಒಳಕ್ಕೆ ಕರೆದುಕೊಂಡು ಹೋದನು.

ಜಾನಕಿ ಚಹಾದಾನಿ ಹಿಡಿದು ಬಂದಳು. ಹಿಂದೆಯೇ ನೈಲಾನ್ ಸೀರೆ ಉಟ್ಟ ಸುಮತಿ ನಗು ಬೀರುತ್ತಾ ತಿಂಡಿ ತಟ್ಟೆ ಹಿಡಿದು ಬಂದಳು.

ನಿಮ್ಮ ಮಗನ ಹೆಸರಿಗೆ ಇದೇ ದರ್ಖಾಸ್ತು ಖಾಯಂ ಮಾಡಿದ್ದೇನೆ ಹೇಗೆ ಭಟ್ರೆ...ತಕರಾರು ಇದ್ದರೆ ಹೇಳಿ...

ಛೆ...ಛೆ.. ನಮ್ಮ ಭಾಗ್ಯ ನಿಮ್ಮ ನೆಂಟರಾಗುವುದು. ಈಗಲೂ ಭಟ್ರ ಹೃದಯ ವಿಸ್ತಾರವಾಯಿತು.

ಒಳ್ಳೆಯ ದರ್ಖಾಸ್ತು.... ಮೋಹನ ಸುಮತಿಯ ಮುಖ ನೋಡಿ ನಕ್ಕನು.

ತುಂಟ ನಗೆ ಚಿಮ್ಮಿತು.

ಸುಮತಿ ಅರಳಿದಳು.

o o o

"ಅಣ್ಣಾ . ನನ್ನಣ್ಣಾ . ಹೋಗಿ ಬರುತ್ತೇನಣ್ಣಾ.." ಸುಮತಿ ತನ್ನ ಗಂಡ ಮೋಹನನ ಹಿಂದೆ ಹೊರಟು ನಿಂತಳು ಆಯಿತು ಸುಮ.., ಪುಟ್ಟ ತಂಗಿ... ದೊಡ್ಡದಾಗಿ ಹೇಳಿದನು ರವಿ— ಅನಂತರ ತಗ್ಗಿದ ಧನಿಯಲ್ಲಿ ತಂಗಿ..ನನ್ನ ತಂಗಿ... ಇದು ಹೊಸ ಜನ್ಮ ನಿನಗೆ..ಹೊಸ ಜೀವನ...ಹೊಸತಾಗಿ ಬಾಳು ತಂಗಿ. ಹಿಂದಿನದೆಲ್ಲವನ್ನು ಮರೆತು ಜೀವನವನ್ನು ಹೊಸದಾಗಿ ಬಾಳು...ತಪ್ಪು ಮಾನವ ಸ್ವಭಾವ ಘಟನೆ... ಕೆಲವೊಂದು ಪರಿಸ್ಥಿತಿಯ ಒತ್ತಡದಿಂದಾಗುತ್ತದೆ. ತಿದ್ದಿಕೊಳ್ಳುವುದು ದೈವ ಸ್ವಭಾವ... ಪುಟ್ಟ ತಂಗಿ ಇದ್ದ ಮನೆ, ಚೊಕ್ಕ ಮನೆ ಎರಡನ್ನೂ ಬೆಳಗು.. ಎಂದು ಹರಸಿದನು,

ಅಣ್ಣಾ...ನೀನು ಅಣ್ಣನಲ್ಲ.. ನನ್ನ ಭಾಗದ ದೇವರು..ಆನಂದಾಶ್ರು ಸುರಿಯಿತು ತಾನೇ ತಾನಾಗಿ.

ಸುಮ.. ಬಾರೇ...ಮೋಹನ ಚಡಪಡಿಸಿದನು ಹೊಸ ಹೆಂಡತಿಯನ್ನು ಕೂರಿಸಿಕೊಳ್ಳಲು ತನ್ನ ಹತ್ತಿರ ಕಾರಿನಲ್ಲಿ.

ಅಯ್ಯೋ ನಿಮ್ಮ ಅವಸರವೆ.. ಸುಮತಿ ತಂದೆ–ತಾಯಿ ಅತ್ತಿಗೆ ಅವರೆಲ್ಲರ ಕಾಲು ಹಿಡಿದು ಹೊರಟಳು

ಮತ್ತೊಮ್ಮೆ ಅಣ್ಣನನ್ನು ನೋಡಿದಳು ನಮ್ಮೀರ್ವರಲ್ಲೇ ಆ ಕೆಟ್ಟ ಘಟನೆ ನಾಶವಾಗಲಿ.., ಯಾರಿಗೂ ತಿಳಿಯದಿರಲಿ ...ಕಿರು ನಗೆಯ ಸನ್ನೆ ಮಾಡಿತು ಈರ್ವರ ತುಟಿಗಳಲ್ಲಿ.. ಭರ್ ...ಭರ್ ಸದ್ದೇಳಿಸುತ್ತಾ ಕಾರು ಹೋಯಿತು.

ರವಿ ಬಾಗಿಲ ಮರೆಯಲ್ಲಿ ನಿಂತು ಕಾರು ದೂಳೆಬ್ಬಿಸಿ ಮರೆಯಾಗುವುದನ್ನೇ ನೋಡಿದನು.

ಅಬ್ಬ ...ಒಂದು ಭಾರ ಇಳಿಯಿತು. ರವಿಯ ಮನಸ್ಸು ಹಗುರವಾಯಿತು.

o o o o

ಹತ್ತು ವರ್ಷಗಳು ಹೇಗೆ ಕಳೆಯಿತೋ ಈ ವರ್ಷಗಳು... ರವಿ ಯೋಚಿಸಿದನು...

ತನ್ನ ತಂಗಿ ಎರಡು ಮಕ್ಕಳ ತಾಯಿ. ಈಗ ಮತ್ತೆ ತವರಿಗೆ ಬಂದಿದ್ದಾಳೆ ಅಣ್ಣ ಗೋಪುಗೆ ಉಪನಯನ ಮಾಡುತ್ತಾರಂತೆ...ಎಲ್ಲರೂ ಬರಬೇಕಣ್ಣ....ಎರಡು ದಿನ ಮುಂಚಿತವಾಗಿ ಬಂದು ಎಲ್ಲ ಸುದಾರಿಕೆ ನೀನೇ ಮಾಡಬೇಕಣ್ಣ ..ಸರ್ವ ಕಾರಭಾರವನ್ನೂ ತನ್ನ ಹೆಗಲ ಮೇಲೆ ಹಾಕಿದಳು...ಆಯಿತು ಸುಮ ...ಆಯಿತು ... ನಾನೇ ನಿಂತು ಎಲ್ಲವನ್ನೂ ಮಾಡಿ ಮುಗಿಸುತ್ತೇನೆ... ಅಂದೆನಷ್ಟೆ

ಎಷ್ಟು ನಿಶ್ಚಿಂತವಾಗಿದೆ ತಂಗಿಯ ಮನಸ್ಸು.... ಏನೋ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿದ್ದಳು ಅಷ್ಟೆ. ವಾಮನರಾಯರು ಸಿದ್ಧ. ಅಳಿಯನ ಉಪನಯನ ... ನಾಲ್ಕು ನೋಟುಗಳು ...ಹಾಗೇ ಇವೆ .. ಚಿನ್ನದ ಸರ ಮಾಡಿಸಿ ಕೊಡಬೇಕು. .ಅಂದಿನ ಕಷ್ಟದ ದಿನಗಳಲ್ಲಿ ತೆಗೊಂಡ ನೋಟುಗಳು ...ಈಗ ಋಣ ಸಂದಾಯಿಸಲು ಒಳ್ಳೇ ಸಮಯ .

ಉಪನಯನದ ದಿನ ಭಟ್ಟರ ಕಾಯಿ ಬಟ್ಟಲಿಗೇ ಅರ್ಪಣವಾಯಿತೆಂದು ರವಿಯ ಮನಸ್ಸು ನುಡಿಯಿತು.

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ಟು ತಿಂಗಳಾಂತ್ಯಕ್ಕೆ "ನವಯುಗ"ದ 43ನೆಯ ವರ್ಷವು ಮುಗಿದು ಸಪ್ಟೆಂಬರ ತಿಂಗಳಿಂದ 44ನೆಯ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರಿತ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿ ವಿನಂತಿ. ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ವೆಚ್ಚವಿಲ್ಲದೆ ಪಾವತಿ ಮಾಡಬಹುದು, ಇಲ್ಲವೆ ಮನಿಯಾರ್ಡರುಮಾಡಬಹುದು ವಿ.ಪಿ. ಕಳುಹಿದರೆ 70 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿ ಕೊಡುವಂತೆ ಬಿನ್ನವಿಸುತ್ತೇನೆ.

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧.

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯ ಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ.

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.



ಎಲ್ಲೆಲ್ಲಿ ಏನೇನು?

ಉಡುಪಿಯಲ್ಲಿ
ಚಿತ್ರ ಕಲಾ ಉತ್ಸವ

ಉಡುಪಿಯ ಸಂಗೀತ ಸಭಾದವರ ನೇತೃತ್ವದಲ್ಲಿ ಆಕ್ಟೋಬರ ತಾ. 10 ರಿಂದ ತಾ. 18 ರವರೆಗೆ ಚಿತ್ರಕಲಾ ಪ್ರದರ್ಶನ, ಕಲಾ ಶಿಕ್ಷಕರ ಸಮ್ಮೇಲನ, ಕಲಾಧ್ಯಾಪಕರ ಸೆಮಿನಾರ್ ಮೊದಲಾದ ಕಾರ್ಯಕ್ರಮಗಳಿಂದ ಕೂಡಿದ ಕಲಾ ಉತ್ಸವವು ಉಡುಪಿಯಲ್ಲಿ ಸಂಭ್ರಮಯುಕ್ತವಾಗಿ ಪ್ರಾರಂಭವಾಯಿತು. ಕಲಾ ಉತ್ಸವದ ಉದ್ಘಾಟನೆಯು ಬೊಂಬಾಯಿಯ ವಿಖ್ಯಾತ ಸರ್ಜನ್ ಕರ್ನಲ್ ವಿ ಆರ್. ಮಿರಾಜ್‌ಕರರ ಅಧ್ಯಕ್ಷತೆಯಲ್ಲಿ ಆಕ್ಟೋಬರ ತಾ 10ರಂದು ಸಂಜೆ ದೇಶದ ವಿಖ್ಯಾತ ಕಲಾವಿದ ಪದ್ಮಶ್ರೀ ಕೆ. ಕೆ. ಹೆಬ್ಬಾರರಿಂದ ನಡೆಯಿತು. ಆರಂಭದಲ್ಲಿ ಸಂಗೀತಸಭಾದ ಅಧ್ಯಕ್ಷ ಶ್ರೀ ಕೆ. ಕೆ. ಪೈಗಳು ಸ್ವಾಗತ ಭಾಷಣಮಾಡಿದರು ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀ ಮನೋಜ್ಞತೀರ್ಥ ಶ್ರೀ ಪಾದಂಗಳವರು ಆಶೀರ್ವಚನ ಮಾಡಿದರು. ಶ್ರೀ ಎಂ. ಜನಾರ್ದನ ಅವರು ಸಂದೇಶಗಳನ್ನೋದಿದರು. ಶ್ರೀ ಎಚ್. ಡಿ. ಎಸ್. ಪೈಗಳು ಅಂತ್ಯದಲ್ಲಿ ಧನ್ಯವಾದಗಳನ್ನರ್ಪಿಸಿದರು ಉತ್ಸವದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲು ಮೈಸೂರು ರಾಜ್ಯಪಾಲ ಜನರಲ್ ಎಸ್. ಎಂ. ಶ್ರೀ ನಾಗೇಶರು ತಾ. 18 ರಂದು ಉಡುಪಿಗೆ ಆಗಮಿಸಲಿರುವರು

ಕಲಾ ಉತ್ಸವದ ಅಂಗವಾಗಿ ಬೃಹತ್ಪ್ರಮಾಣದ ಚಿತ್ರ ಕಲಾಪ್ರದರ್ಶನವು ಜರಗುತ್ತಿದ್ದು ಈ ಪ್ರದರ್ಶನದಲ್ಲಿ ಕೆನರಾ ಜಿಲ್ಲೆಗಳ ಬಹುಮಂದಿ ಕಲಾವಿದರು ಭಾಗವಹಿಸಿದ್ದಾರೆ ನೆಹಲಿಯ ಯುನೆಸ್ಕೊದವರ ವಿಶ್ವ ಚಿತ್ರ ಕಲಾ ಪ್ರದರ್ಶನವೊಂದು ಇದೇ ವೇಳೆ ಜರಗುತ್ತಿರುವುದಲ್ಲದೆ, ಪಾಶ್ಚಾತ್ಯ ದೇಶಗಳ ಪ್ರಸಿದ್ಧ ಕಲಾವಿದರ ಕೃತಿಗಳ ಪ್ರದರ್ಶನವು ಕೂಡಾ ನಡೆಯುತ್ತಿದೆ. ಪ್ರದರ್ಶನಕ್ಕಾಗಿ ಕೃತಿಗಳನ್ನು ಒದಗಿಸುವಲ್ಲಿ ಇಟಲಿ, ಫ್ರಾನ್ಸ್, ಜರ್ಮನಿ ಮತ್ತು ಬ್ರಿಟನ್ ದೇಶಗಳ ಭಾರತದಲ್ಲಿನ ರಾಯಭಾರಿ ಕಚೇರಿಗಳು ತುಂಬಾ ಸಹಕಾರ ನೀಡಿವೆ. ಚಿತ್ರಕಲಾ ಪ್ರದರ್ಶನದೊಂದಿಗೆ ಭಾರತೀಯ ಮತ್ತು ವಿದೇಶಗಳ ಶ್ರೇಷ್ಠ ದರ್ಜೆಯ ಕಲಾಗ್ರಂಥಗಳ ಪ್ರದರ್ಶನವೂ ಜರಗುತ್ತಿದೆ. ಕೇಂದ್ರ ಲಲಿತಕಲಾ ಅಕಾಡೆಮಿ ಮತ್ತು ಪರದೇಶಗಳ ಹಲವಾರು ಸಂಸ್ಥೆಗಳ ನೆರವಿನಿಂದ ಈ ಕಲಾ ಉದ್ಗ್ರಂಥಗಳ ಪ್ರದರ್ಶನವು ನಡೆಯುತ್ತಿದೆ.

ಕಲಾ ಪ್ರದರ್ಶನಗಳ ಜತೆಗೆ ಅಕ್ಟೋಬರ ತಾ 11ರಿಂದ ತಾ 13ರ ವರೆಗೆ ಮಂಗಳೂರಿನ ವಿಸ್ತರಣಾ ಕಾರ್ಯ ಕೇಂದ್ರದವರ ಆಶ್ರಯದಲ್ಲಿ ಚಿತ್ರಕಲಾಧ್ಯಾಪಕರ ಸೆಮಿನಾರ್ ಒಂದನ್ನು ಜರಗಿಸಲಾಯಿತು. ಆಕ್ಟೋಬರ ತಾ. 14ರಿಂದ ತಾ 16ರ ವರೆಗೆ ಮೈಸೂರು ರಾಜ್ಯದ ಚಿತ್ರಕಲಾ ಶಿಕ್ಷಕರ ದ್ವಿತೀಯ ಸಮ್ಮೇಲನವು ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ. ಎಮ್. ನಾಡಗೌಡರ ಅಧ್ಯಕ್ಷತೆಯಲ್ಲಿ ಆರಂಭವಾಗಿದೆ. ಸಮ್ಮೇಲನದ ಉದ್ಘಾಟನೆಯು ಅಕ್ಟೋಬರ ತಾ. 14 ರಂದು ರಾಜ್ಯದ ಶಿಕ್ಷಣ ಮಂತ್ರಿ ಶ್ರೀ ಎಸ್. ಆರ್. ಕಂಠಿಯವರಿಂದ ನೆರವೇರಿತು.

ಉತ್ಸವದ ಅಂಗವಾಗಿ ಅಕ್ಟೋಬರ 17ರಂದು ದಕ್ಷಿಣ ಕನ್ನಡದ ಪ್ರತಿಭಾವಂತ ಶಿಲ್ಪ ಕಲಾವಿದ ಶ್ರೀ ರಂಜಾಳ ಗೋಪಾಲ ಶೆಣೈಯವರನ್ನು ಸನ್ಮಾನಿಸುವ ಸಮಾರಂಭವೊಂದು ದೇಶದ ಹಿರಿಯ ಕಲಾವಿದ ಶ್ರೀ ಆಕ್ಬರ್ ಪದಮ್‌ಸಿಯವರ ಅಧ್ಯಕ್ಷತೆಯಲ್ಲಿ ಜರುಗುವುದು.

ಉತ್ಸವದ ಅಂಗವಾಗಿ ಜರೆಗುವ ಉಪನ್ಯಾಸ ಕಾರ್ಯಕ್ರಮಗಳಲ್ಲಿ ನಾಡಿನ ಹೆಸರಾಂತ ಕಲಾವಿದರಾದ ಡಾ| ಶಿವರಾಮ ಕಾರಂತ, ಶ್ರೀಗಳಾದ ಅ. ನ. ಸುಬ್ಬರಾವ್, ಪಿ. ಆರ್. ತಿಪ್ಪೇಸ್ವಾಮಿ ಮೊದಲಾದವರು ಭಾಗವಹಿಸುವರು. ಕಲಾ ಉತ್ಸವದ ಸ್ಮಾರಕ ಸಂಪುಟವೊಂದು ಸಿದ್ಧವಾಗುತ್ತಲಿದ್ದು ಅದನ್ನು ಈ ಸಂದರ್ಭದಲ್ಲಿ ಪ್ರಕಾಶಗೊಳಿಸಲಾಗುವುದು.

ಈ ಪ್ರದರ್ಶನ ಕಲಾ ಸಮ್ಮೇಲನಾದಿ ಕಾರ್ಯಕ್ರಮಗಳ ಅಂಗವಾಗಿ ಪ್ರತಿದಿನ ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿವೆ. ಉತ್ಸವದ ಎಲ್ಲಾ ಕಾರ್ಯಕ್ರಮಗಳು ಉಡುಪಿಯ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಮಂಟಪದಲ್ಲಿ ಜರಗುತ್ತಿವೆ. ಸಮಾರೋಪ ಸಮಾರಂಭದಲ್ಲಿ ಮೈಸೂರು ರಾಜ್ಯಪಾಲರು ಪ್ರದರ್ಶನದಲ್ಲಿ ಭಾಗವಹಿಸಿದ ಕಲಾವಿದರಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸುವರು.

ದಿ| ಎ ಬಿ. ಶೆಟ್ಟಿ ತೈಲಚಿತ್ರ ಅನಾವರಣ

ಪುತ್ತೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ತಾ. 27 9 1964ರಂದು ಮಂಗಳೂರಿನ ಎ. ಬಿ. ಶೆಟ್ಟಿ ಮೆಮೋರಿಯಲ್ ಕಮಿಟಿಯವರು ದಾನವಾಗಿ ಕೊಟ್ಟ ದಿ| ಎ. ಬಿ. ಶೆಟ್ಟರ ತೈಲಚಿತ್ರದ ಅನಾವರಣ ಸಮಾರಂಭವು ಮಾಜಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಸುಂಜಯ್ಯ ಹೆಗ್ಡೆ ಇವರ ಅಧ್ಯಕ್ಷತೆಯಲ್ಲಿ ರಿಟಯರ್ಡ್ ಇಂಡಸ್ಟ್ರಿಯಲ್ ಡೈರೆಕ್ಟರ್ ಶ್ರೀ ಬಿಟ್ಟಿಗುತ್ತು ಮಹಾಲಿಂಗ ಅಡ್ಯಂತಾಯ ಇವರಿಂದ ನೆರವೇರಿಸಲ್ಪಟ್ಟಿತು. ಎಡ್ವಕೇಟ್ ಶ್ರೀ ಎ. ಅಮ್ಮು ಶೆಟ್ಟರು ಸ್ವಾಗತಿಸಿದ ಬಳಿಕ ಶ್ರೀ ಪಿ ಎಸ್. ತಿಮ್ಮಪ್ಪ ಶೆಟ್ಟಿ, ಡಾ| ಕೆ. ಬಾಳಪ್ಪ ಶೆಟ್ಟಿ, ಕೆ. ಸ. ಬ್ಬಣ್ಣ ಪಕ್ಕಳ ಅವರು ಸಂದರ್ಭೋಚಿತ ಭಾಷಣ ಮಾಡಿದರು. ಡಾ|| ಎಸ್. ಎನ್. ರೈಯವರು ಧನ್ಯವಾದಗಳನ್ನರ್ಪಿಸಿದರು.

ರೋಟರಿ ಚಟುವಟಿಕೆಗಳು

ಉಡುಪಿಯ ರೋಟರಿಕ್ಲಬ್ ಆರಂಭವಾದಾಗಿನಿಂದ ಸಮಾಜದ ಸೇವೆಯಲ್ಲಿ ಒಳ್ಳೆಯ ಪ್ರಗತಿ ನಡೆಸಿದೆ. ಎಂದು ಕ್ಲಬ್ಬಿನ ಮಾಜಿ ಅಧ್ಯಕ್ಷ ಶ್ರೀ ಆರೂರು ಲಕ್ಷ್ಮೀ ನಾರಾಯಣ ರಾವ್ ರವರು ತಾ. 6-10-64 ರಂದು ಅಧ್ಯಕ್ಷ ಡಾ| ಎ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿದ ಕ್ಲಬ್ಬಿನ ಆರನೆ ವಾರ್ಷಿಕೋತ್ಸವ ಸಮಾರಂಭದಲ್ಲಿ ನುಡಿದರು. ಡಾ|| ಕೆ. ಪಿ. ಗಣೇಶನ್‌ರವರು ಮಾತನಾಡಿ ಕ್ಲಬ್ಬು ಚೆನ್ನಾಗಿ ಕೆಲಸಮಾಡುತ್ತಿದೆಂದರು.

ಈ ಕ್ಲಬ್ಬು ಇದ್ದದಲ್ಲೇ ಎರಡು ಇಂಟರಾಕ್ಟ್ ಕ್ಲಬ್ಬುಗಳನ್ನು ಆರಂಭಿಸಲಿದೆ. ಎಂದು ಮಾಜಿ ಅಧ್ಯಕ್ಷ ರಮೇಶ ಪೈಯವರು ತಿಳಿಸಿದರು. ಬರುವ ದಿನಾಂಕ 14ರಂದು ಈ ಕ್ಲಬ್ ಆರಂಭಿಸುವ ವಾಣಿಜ್ಯ ಮತ್ತು ಕೈಗಾರಿಕಾ ಛೇಂಬರನ್ನು ರೋಟರಿ ಜಿಲ್ಲಾ ಗವರ್ನರ್ ಡಾ| ಟಿ. ಎಂ. ಎ ಪೈಯವರು ಉಡುಪಿಯಲ್ಲಿ ಉದ್ಘಾಟಿಸುವರೆಂದು ಅವರು ಪ್ರಕಟಿಸಿದರು.

ಇಲ್ಲಿನ ಕಸ್ತೂರಬಾ ಮೆಡಿಕಲ್ ಕಾಲೇಜಿನಲ್ಲಿ ಕನ್ನಡ ನಾಟಕ ಮಹೋತ್ಸವವನ್ನು ಕುಂದಾಪುರ ರೋಟರಿ ಕ್ಲಬ್ಬಿನ ಮಾಜಿ ಅಧ್ಯಕ್ಷರಾದ ಡಾ| ಎಚ್. ವೆಂಕಟರಮಣಯ್ಯನವರು ಉದ್ಘಾಟಿಸಿದರು.

ಶ್ರೀ ವಿಶ್ವಬ್ರಾಹ್ಮಣ ಸಮಾಜಾಭ್ಯುದಯ ಸಭಾ

ಉಡುಪಿ, ಈ ಸಂಸ್ಥೆಯ ವಾರ್ಷಿಕೋತ್ಸವವು ತಾ 11ರಲ್ಲು ಮಂಗಳೂರು "ವಿಶ್ವಕರ್ಮ" ಪತ್ರಿಕಾ ಸಂಪಾದಕ, ಶ್ರೀ ಬಿ. ಹರಿಶ್ಚಂದ್ರಾಚಾರ್ಯರ ಹಿಂತನದಲ್ಲಿ ಸಮಾವೇಶಗೊಂಡಿತು. ಶ್ರೀ ಉ. ಬೈ. ಭಾಸ್ಕರಾಚಾರ್ಯರಿಂದ ಭಗವತ್ಪ್ರಾರ್ಥನೆಯಾದ ಬಳಿಕ, ಅಧ್ಯಕ್ಷ ಶ್ರೀ ಎಚ್. ವೆಂಕಟರಮಣಾಚಾರ್ಯರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಬಿ. ಸಂಜೀವಾಚಾರ್ಯರು ಗತ ವರ್ಷದ ವರದಿ, ಲೆಖ್ಖಪತ್ರಗಳನ್ನು ಸಭೆಯ ಮುಂದಿಟ್ಟು ಶುಭ ಸಂದೇಶಗಳನ್ನು ಓದಿದರು ಕಾರ್ಯ ಸಮಿತಿಯ ಚುನಾವಣೆಯಾದ ಬಳಿಕ ಸಭಿಕರಲ್ಲಿ ಶ್ರೀಗಳಾದ ಕುಂಜೂರು ರಾಘವಾಚಾರ್ಯ ಉ ಬೈ. ಭಾಸ್ಕರಾಚಾರ್ಯ ಯಂ. ಚಂದ್ರಶೇಖರಾಚಾರ್ಯ (ಹಿಂದೀ ರತ್ನ), ಪಿ. ಯಂ ದಾಮೋದರಾಚಾರ್ಯ ಮತ್ತು ಬಿ. ಸಂಜೀವಾಚಾರ್ಯರು, ಸಂಘದ ಆವಶ್ಯಕತೆ, ಸಮಾಜಾಭ್ಯುದಯ ಗುರಿ ಸಾಧನೆ ಮುಂತಾದ ಕುರಿತಾಗಿ ಉಪನ್ಯಾಸವಿತ್ತರು. ಸಭಾಧ್ಯಕ್ಷರು ನಮ್ಮ ಸಮಾಜವು ಆರ್ಥಿಕ ಹಾಗೂ ಸಾಮಾಜಿಕ ದೃಷ್ಟಿಯಿಂದ ಬಹಳ ಹಿಂದುಳಿದಿದೆ. ಇದನ್ನು [illegible] ನಾವು ಸೂಕ್ತ ಕ್ರಮವನ್ನು ಕೈಗೊಂಡಿಲ್ಲ ನಮ್ಮ ಸಮಾಜವು ಅನಾದಿ, ಪ್ರಾಚೀನ ಸಂಸ್ಕೃತಿ ಪ್ರತಿಷ್ಠೆಯುಳ್ಳದ್ದು ಎಂದಷ್ಟೇ ಸಂತುಷ್ಟರಾಗದೆ ನಾವು ಸಮಾಜಾಭ್ಯುದಯದ ರಚನಾತ್ಮಕ ಕಾರ್ಯ ತತ್ಪರರಾಗಬೇಕು. ಉತ್ತಮ ಭವಿಷ್ಯ ನಿರ್ಮಾಣದ ಹೊಣೆಗಾರಿಕೆಯು ನಮ್ಮ ಯುವಕರದ್ದಾಗಿರುತ್ತದೆ ಎಂದು ನುಡಿತಾದ ಭೋದಪ್ರದ ಭಾಷಣವಿತ್ತರು.

ಸಮಾರಂಭದ ಅಂಗವಾಗಿ ಮಂಗಳೂರಿನ ಶ್ರೀ ಕಾಳಿಕಾಂಬಾ ಕೃಪಾ ಪೋಷಿತ ಯಕ್ಷಗಾನ ಮಂಡಳಿಯವರಿಂದ "ಶ್ರೀ ಕೃಷ್ಣ ರಾಯಭಾರ" ವೆಂಬ ಕಥಾ. ಭಾಗವೂ ಶ್ರೀ ಮಲ್ಪೆ ಶಂಕರ ನಾರಾಯಣ ಸಾಮಗರಿಂದ 'ಭಕ್ತ ಮಾರ್ಕಂಡೇಯ' ಎಂಬ ಹರಿ ಕೀರ್ತನೆಯೂ ಜರಗಿತು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

R I A 491/64 O. S. 19/62

ಸತ್ಯನಾರಾಯಣ ಕಾಮತ್.. ಅರ್ಜಿದಾರ

ಮತ್ತು

ಲಕ್ಷ್ಮೀನಾರಾಯಣ ಕಾಮತ್ ಕೂಡಾ....

ಎದ್ರಿರು.

ಉಡ್ಪಿ ತಾಲೂಕು ಮೂಡಬೆಟ್ಟು ಗ್ರಾಮದ ಕಟಪಾಡಿಯಲ್ಲಿರುವ ವಾಮನ ಸುಬ್ರಾಯ ಕಾಮತರ ಮಗಂದಿರಾದ 2ನೇ ಎದ್ರಿ ಮಾಧವ ಕಾಮತ್, 5ನೇ ಎದ್ರಿ ಪುಂಡಲೀಕ್ ಕಾಮತ್ ಮತ್ತು 6ನೇ ಎದ್ರಿ ಸುಬ್ಬಣ್ಣ ಕಾಮತರಿಗೆ:—

ಅರ್ಜಿದಾರನು ಸದ್ರಿ O S 19/62 ರಲ್ಲಾದ ಪ್ರಿಲಿಮಿನರಿ ಡಿಕ್ರಿ ವಿದಿ ಮೇರೆಗೆ ಫೈನಲ್ ಡಿಕ್ರಿ ಕೇಳಿ ದಾಖಲು ಮಾಡಿದ ಅರ್ಜಿಯು ತಾರೀಖು 7-11-64ಕ್ಕೆ ತನ್ನಿಗೆ ಇಟ್ಟಿದೆ ಎಂದು ತಿಳಿಸೋಣಾಗಿದೆ.

(By order)

ಪಿ. ರಾಮಚಂದ್ರ ರಾವ್,

ಎಡ್ವಕೇಟ್ B. A.B L.

ಉಡುಪಿ, 12-10-64.

ನಮ್ಮ-ನಮ್ಮವರು

ಕಾಮರಾಜ

ತಮಿಳುನಾಡಿನ ಅನಭಿಷಿಕ್ತ ದೊರೆಯೆನಿಸಿದ್ದ ಕಾಮರಾಜರು ಕಾಂಗ್ರೆಸ್ ಅಧ್ಯಕ್ಷರಾದ ಮೇಲೆ ಒಂದಲ್ಲ ಹಲವು ಗಂಡಾಂತರಗಳನ್ನು ಎದುರಿಸುತ್ತಲೇ ಬಂದಿದ್ದಾರೆ. ಸ್ವಸಾಮರ್ಥ್ಯ ಮತ್ತು ಯೋಗ್ಯತೆಯಿಂದಲೇ ಉನ್ನತಿಗೆ ಬಂದ ನಾಡಾರರು ಎದುರಾದ ಗಂಡಾಂತರಗಳನ್ನು ಧೈರ್ಯದಿಂದ ಎದುರಿಸಿದ್ದಾರೆ. ನೆಹರು ಉತ್ತರಾಧಿಕಾರಿಯ ಆಯ್ಕೆಯ ಸಮಯದ ಅವರ ತಾಳ್ಮೆ ಮತ್ತು ಕಾರ್ಯ ವಿಧಾನಕ್ಕೆ ಎಲ್ಲೆಲ್ಲೂ ಸ್ವಾಗತ ದೊರಕಿತ್ತು. ಕೈರಾನರ ಸ್ಥಾನಕ್ಕೆ ರಾಮಕಿಶನರನ್ನು ತರುವಲ್ಲಿಯೂ ಇವರು ಮೆಚ್ಚುಗೆ ಪಡೆದರು. ಉತ್ತರ ಪ್ರದೇಶ ಮತ್ತು ಒರಿಸ್ಸಾಗಳಲ್ಲಿ ಮಾತ್ರ ಇವರಿಗೊಂದು ಆಹ್ವಾನವೇ ಬಂದಂತಿದೆ. ಕೇರಳದಲ್ಲಿ ಕಾಂಗ್ರೆಸಿಗರಿಂದಾಗಿಯೇ ಉರುಳಿದ ಕಾಂಗ್ರೆಸ್ ಸರಕಾರವನ್ನು ಕಾಮರಾಜರು ತನ್ನ ಕಣ್ಣುಗಳಿಂದಲೇ ಕಾಣಬೇಕಾಯಿತು. ಈ ಭಿನ್ನಮತೀಯರು 'ಕೇರಳ ಕಾಂಗ್ರೆಸ್' ಎಂಬ ಹೊಸತೊಂದು ಪಕ್ಷವನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ನೀತಿಯ ಮೇಲೆಯೇ ಸ್ಥಾಪಿಸಿ ಕೊಳ್ಳುವರಂತೆ. ಇದು ಅಖಿಲ ಭಾರತ ವ್ಯಾಪ್ತಿಯನ್ನು ಹೊಂದಲಾರದು ನಿಜ. ಆದರೆ, ಭಿನ್ನಾಭಿಪ್ರಾಯಗಳಿರುವ ಹೆಚ್ಚಿನ ರಾಜ್ಯದಲ್ಲಿ ಮರಿ ಕಾಂಗ್ರೆಸ್‌ಗಳು ಹುಟ್ಟಿಕೊಂಡರೆ, ಆಗ ತಾಯಿ ಕಾಂಗ್ರೆಸಿನ ಗತಿ ಯೇನಾದೀತು ಎಂಬುದನ್ನು ಕಾಮರಾಜರು ಈಗ ಪರಿಶೀಲಿಸ ಬೇಕು.

ಡಾ| ನಾಗಪ್ಪ ಆಳ್ವಾ

ರಾಜ್ಯದ ಆರೋಗ್ಯ ಸಚಿವ ಡಾ| ನಾಗಪ್ಪ ಆಳ್ವ ಅವರು ಇತ್ತೀಚೆಗೆ ನಮ್ಮ ಜಿಲ್ಲೆಗೆ ಬೆಟ್ಟಿಯಿತ್ತು ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಭಾರತವು ಸ್ವಾತಂತ್ರ್ಯ ಪಡೆದ ಬಳಿಕ ಆರೋಗ್ಯ ರಕ್ಷಣೆಯ ಕ್ಷೇತ್ರದಲ್ಲಿ ಅಪಾರ ಕಾರ್ಯವನ್ನು ಸಾಧಿಸಿದೆ- ಹಳ್ಳಿ ಹಳ್ಳಿಗೆ ಪ್ರಾಥಮಿಕ ಚಿಕಿತ್ಸೆ ದೊರಿಯುವಂತೆ ಆರೋಗ್ಯ ಕೇಂದ್ರಗಳ ವ್ಯವಸ್ಥೆಯಾಗ ಬೇಕು; ಈ ದೆಸೆಯಲ್ಲಿ ನಾವು ಮುಂದಿದ್ದೇವೆ ಡಾ| ಆಳ್ವಾ ಹೇಳಿವಂತೆ, ಕಾಯಕಷ್ಟದಿಂದ ಶಾರೀರಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕ; ಪೌಷ್ಟಿಕ ಆಹಾರದ ಸೇವನೆಯೂ ರೋಗಗವನ್ನು ತಡೆಗಟ್ಟುವುದು. ಹಾಲು— ತರಕಾರಿ— ಹಣ್ಣು ಹಂಪಲಗಳನ್ನು ಹೆಚ್ಚಾಗಿ ಉಪಯೋಗಿಸುವುದರಿಂದ ನಾವು ನೀರೋಗಿಗಳಾಗಿರಬಹುದು ರೋಗವನ್ನು ಬಂದವೇಲೆ ಗುಣಪಡಿಸುವುದಕ್ಕಿಂತ ರೋಗ ಬಾರದಂತೆ ತಡೆಯುವುದು ಒಳ್ಳೆಯದು ಇದನ್ನು ಜನ ಸಾಮಾನ್ಯರು ಅರಿತುಕೊಳ್ಳಬೇಕು.

ಮಾನ್ಯ ಸಚಿವರು ಉಡುಪಿಯ ಅಜ್ಜರಕಾಡಿನಲ್ಲಿ ನಿರ್ಮಾಣವಾಗುತ್ತಿರುವ ಸರಕಾರಿ ಆಸ್ಪತ್ರೆಯ ಹೊಸ ಕಟ್ಟಡವನ್ನು ಪರಿಶೀಲಿಸಿದರು. ಆದರ ಪೂರ್ಣತೆಗೆ ಆವಶ್ಯವಾದ ಹಣವನ್ನು ಮಂಜೂರು ಮಾಡುವುದಾಗಿ ಹೇಳಿದರು ಈ ಹೇಳಿಕೆಯು ಶೀಘ್ರ ಕಾರ್ಯರೂಪಕ್ಕೆ ಬಂದು ಕಟ್ಟಡದ ಕಾರ್ಯ ಮುಗಿದು ಆಸ್ಪತ್ರೆಯು ಅಲ್ಲಿ ನೆಲೆಯಾಗುವ ದಿನವನ್ನೇ ಉಡುಪಿಯ ನಾಗರಿಕರು ಎದುರುನೋಡುತ್ತಿದ್ದಾರೆ.

ಕನ್ನಡ ಸಾಹಿತಿಯೊಬ್ಬರ ನಿಧನ

ಸುರತ್ಕಲ್ಲು—ಕನ್ನಡ ಸಾಹಿತಿಗಳಲ್ಲೊಬ್ಬರಾದ ಶ್ರೀ ಸುರತ್ಕಲ್ಲು ಸುಬ್ಬರಾಯರು ತಾ. ೭ರಂದು ದಿವಂಗತರಾದರು. ಇವರು ಭಾಷಣಕಾರರೂ, ಗ್ರಂಥಕಾರರೂ ಆಗಿದ್ದರು.

Advertise in
NAVAYUGA
DEEPAVALI ISSUE
& get best value
for your investment.

ವೈದ್ಯಕೀಯ ಸಂಶೋಧನೆ

ವಾಹನ ಚಾಲಕರಿಗೆ ಉತ್ತಮ ಆಹಾರ

ಕಾರುಗಳ ಸಂಖ್ಯೆ ಹೆಚ್ಚಾಗುತ್ತಿರುವ ವೇಗವನ್ನೂ ಮೀರಿ ಕಾರು ಚಾಲಕರ ಸಂಖ್ಯೆ ಅಧಿಕವಾಗುತ್ತ ಬರುತ್ತಿದೆ. ಕಾರು ಚಾಲಕರಿಗೆ "ಸಿ" ಜೀವ ಸತ್ವದ ಆವಶ್ಯಕತೆ ತುಂಬ ಇದೆಯೆಂದು ವೈಜ್ಞಾನಿಕ ಸಂಶೋಧನೆಗಳು ಸಾರುತ್ತವೆ. ಚಾಲಕರಲ್ಲಿ "ಸಿ" ಜೀವಾತುವಿನ ಅಂಶ ಹೆಚ್ಚಾಗಿದ್ದಷ್ಟು ಅವರು ಹೆಚ್ಚು ಚುರುಕಾಗಿರುತ್ತಾರೆ. ರಾತ್ರಿ ವೇಳೆಯು ಚಾಲನೆ ನಡೆಸುವವರಿಗೆ ಈ ಜೀವಾತು ಲಭಿಸಿದರೆ, ಅವರು ಅತಿ ಸಾಮರ್ಥ್ಯ ಮತ್ತು ಜಾಗರೂಕತೆಗಳಿಂದ ಕಾರು ನಡೆಸುವರು; ಅಪಘಾತಗಳನ್ನು ತಪ್ಪಿಸುವ ಚಮತ್ಕಾರ ಕೌಶಲ್ಯಕೂ ಈ ಜೀವಾತುವಿಗೂ ಅತಿ ನಿಕಟವಾದ ಸಂಬಂಧ.

ಜೀವಾತುಗಳ ರಹಸ್ಯಗಳೆಲ್ಲವನ್ನೂ ಕಂಡು ಹಿಡಿಯುವುದು ಮಾನವನಿಗೆ ಇನ್ನೂ ಸಾಧ್ಯವಾಗಿಲ್ಲ. ಈ ದಿಸೆಯಲ್ಲಿ ವೈದ್ಯಶಾಸ್ತ್ರವು ಪ್ರಯತ್ನ ಮಾಡುತ್ತಿದೆ ನಿಜ. ಆದರೆ, ಇವು ಮಾನವ ಶರೀರದಲ್ಲಿ ಯಾವ ಯಾವ ಮಾರ್ಪಾಡುಗಳನ್ನು ಮಾಡುತ್ತಿದೆ ಎಂದು ವೈದ್ಯ ಶಾಸ್ತ್ರವೇ ಅರಿತಿಲ್ಲ. ಆದರೂ 'ಸಿ' ಜೀವತ್ವದ ಬಗ್ಗೆ ಪಶ್ಚಿಮ ಜರ್ಮನಿಯ ತಜ್ಞ ಡಾ॥ ಗ್ರಾಸ್ ಜೊಹಾನ್ ಎಂಬವರು ಸಾಕಷ್ಟು ಸಂಶೋಧನೆ ಮಾಡಿದ್ದಾರೆ. ತನ್ನ ಸಂಶೋಧನೆಗಳ ಫಲಿತಾಂಶವನ್ನೂ ಅವರು ಬಯಲು ಮಾಡಿದ್ದಾರೆ.

ಈ ಜೀವಾತು ಶರೀರದಲ್ಲಿ ಹೆಚ್ಚಾಗಿ ಸೇರುವುದರಿಂದ ಲವಲವಿಕೆಯು ಹೆಚ್ಚಾಗುವುದು. ಮುಖ್ಯವಾಗಿ ಕಾರು ಸಾರಥಿಗಳು ಅಧಿಕ ಚುರುಕಾಗಿರ ಬೇಕಾಗಿದ್ದರೆ, ಇದನ್ನು ಹೆಚ್ಚಾಗಿ ಸೇವಿಸಲೇ ಬೇಕು. ಕೆಲವು ಚಾಲಕರು ತಮ್ಮಲ್ಲಿ ಉತ್ಸಾಹವನ್ನು ತುಂಬಲು ಕಾಫಿ ಮುಂತಾದ ಪಾನೀಯಗಳು ಬೇಕೆಂದು ಅವನ್ನು ಹೆಚ್ಚು ಸೇವಿಸುವುದುಂಟು. ಆದರೆ ಅದರಿಂದ ಕೆಟ್ಟ ಪರಿಣಾಮಗಳೇ ಸಂಭವಿಸುತ್ತವೆ.

ಕಾರು ಚಾಲಕರಾರೂ "ಸಿ" ಜೀವಾತು ಸೇವನೆಯ ಬಗ್ಗೆ ಇದುವರೆಗೆ ಗಮನ ಹರಿಸಿದ್ದಿಲ್ಲ. ಉಳಿದವರಾದರೂ ಅವರು ಈ ಜೀವಾತುವನ್ನು ಏಕೆ ಹೊಂದಿರ ಬೇಕೆಂದು ಯೋಚಿಸಿದ್ದು ಇಲ್ಲ. ಜೀವಾತು "ಸಿ"ಯು ಶರೀರದ ಬೇರೆ ಬೇರೆ ಅಂಗಗಳ ಕ್ರಿಯೆಯ ಮೇಲೆ ಮಾಡುವ ಪ್ರಭಾವವನ್ನು ಮಾತ್ರ ಪರಿಶೀಲಿಸಲಾಗಿತ್ತಲ್ಲದೆ ಇಡಿಯ ಶರೀರದ ಮೇಲೆ ಅದರಿಂದಾಗುವ ಪ್ರತಿಕ್ರಿಯೆಯೇನೆಂದು ಯಾರೂ ಅಭ್ಯಾಸ ಮಾಡಿರಲಿಲ್ಲ. ಡಾ॥ ಗ್ರಾಸ್ ಜೊಹಾನು ಇಂತಹ ಅಪೂರ್ವ ಪರಿಶೀಲನೆಯನ್ನು ಮಾಡಿದ್ದಾರೆ.

ಅವರು ೧೫ ರಿಂದ ೪೦ ವರ್ಷ ವಯಸ್ಸಿನೊಳಗಣ ೨೨ ಕಾರು ಚಾಲಕರನ್ನು ಪರೀಕ್ಷಿಸಿದರು. ಅವರಿಗೆ 'ಸಿ' ಜೀವಾತುವಿರುವ ಔಷಧಿಯನ್ನು ಕೊಟ್ಟರು. ಇವರಲ್ಲಿ ಕೆಲವರಿಗೆ ಅನೇಕ ದಿನಗಳ ಕಾಲ ಕೊಂಚ ಕೊಂಚವಾಗಿ ವಿಟಮಿನ್ ಪದಾರ್ಥಗಳನ್ನು ಕೊಟ್ಟರು. ಮತ್ತು ಕೆಲವರಿಗೆ ಅಲ್ಪಾವಧಿಯವರೆಗೆ ಮಾತ್ರ ಅಧಿಕ ಪ್ರಮಾಣದಲ್ಲಿ ಅವನ್ನೇ ನೀಡಿದರು. ಆಗ ಅಧಿಕ ಜೀವ ಸತ್ವವನ್ನು ಅಲ್ಪ ಕಾಲದಲ್ಲಿ ಪಡೆಯುವುವಕ್ಕಿಂತ ಅಲ್ಪ ಪ್ರಮಾಣದಲ್ಲಿ ದೀರ್ಘಕಾಲ ಅದನ್ನು ಪಡೆಯುವುದು ಲಾಭದಾಯಕವೆಂದು ಕಂಡುಬಂತು.

ವಾಹನ ಚಾಲಕರು ಎಷ್ಟು ಹೆಚ್ಚಾಗಿ "ಸಿ" ಜೀವಾತುಗಳನ್ನು ಪಡೆಯುತ್ತಾರೆಯೋ ಅಷ್ಟು ಒಳ್ಳೆಯದೆಂದು ಈ ಪರಿಶೀಲನೆಯಿಂದ ತಿಳಿದು ಬಂತು. ಇದರಿಂದ ಅವರ ಚಿತ್ತೈಕಾಗ್ರತೆಯು ಅಧಿಕವಾಗಿ ಎಂತಹ ಸನ್ನಿವೇಶದಲ್ಲಿಯೂ ವಿವೇಚನೆಯಿಂದ ಕಾರು ಓಡಿಸುವ ಶಕ್ತಿಯು ಹೆಚ್ಚುವುದೆಂದೂ ಅಪಘಾತಗಳನ್ನು ನಿವಾರಿಸುವ ಸಾಮರ್ಥ್ಯವು ಜಾಸ್ತಿಯಾಗುವುದೆಂದೂ ವ್ಯಕ್ತವಾಯಿತು.

ಕಾರು ಚಾಲಕರು ಸಾಮಾನ್ಯವಾಗಿ ಮಧ್ಯರಾತ್ರಿಯನಂತರ, ಅವರಲ್ಲೂ ರಾತ್ರಿ ಎರಡುತಾಸುಗಳು ಕಳೆದ ಬಳಿಕ, ಕಣ್ಣು ಕೂರುವುದು ಹೆಚ್ಚು. ಕಾರು ಓಡಿಸುವುದರಲ್ಲಿ ಉತ್ಸಾಹವು ಕುಂದಿ ಹತೋಟಿಯು ತಪ್ಪುವಂತಾಗುತ್ತದೆ. ತಮಗೆ ತಾವೇ ಮುಚ್ಚಿಕೊಳ್ಳುವ ಕಣ್ಣುಗಳನ್ನು ಅವರು ಬಿಡಲಾರದೆ ಬಿಡಲೇ ಬೇಕಾಗುತ್ತದೆ. ಇಂತಹ ಅಜಾಗ್ರತಾವಸ್ಥೆಯಲ್ಲಿ ವಿಪತ್ತುಗಳು ಸಂಘಟಿಸುವುದೂ ಸ್ವಾಭಾವಿಕ. ಆದುದರಿಂದ ವಾಹನ ಚಾಲಕರಲ್ಲಿ 'ಸಿ' ಜೀವಾತುವಿನ ಬಳಕೆಯು ಅಧಿಕವಾಗುತ್ತ ಬಂದಲ್ಲಿ ಶರೀರದ ಮೇಲಾಗುವ ಪ್ರಭಾವದಿಂದ ಎಚ್ಚರಿಕೆಯಿಂದಲೇ ಇವರಿರುವುದು ಸಾಧ್ಯವಾಗುತ್ತದೆ. ನೀವೂ ವಾಹನಗಳ ಡ್ರೈವರಾಗಿದ್ದಲ್ಲಿ ಸಿ ಜೀವಾತುವು ಅಧಿಕವಿರುವ ಆಹಾರ ವಸ್ತುಗಳನ್ನು ವ್ಯವಸ್ಥಿತ ರೀತಿಯಲ್ಲಿ ಸ್ವೀಕರಿಸಲು ಪ್ರಾರಂಭಿಸಿರಿ; ಶುಭಸ್ಯ ಶೀಘ್ರಂ.

ಕೃತಿ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ಭಾವನಾ: (ಸಂಘದ ಗೆಳೆಯ ಕಥೆಗಾರರು ಬರೆದುದು)

ಪ್ರಕಾಶಕರು: ಕನ್ನಡ ಸಂಘ, ಕುಂದಾಪುರ.

ಪುಟಗಳು: ೧೦೬ ಬೆಲೆ: ರೂ. ೧/-

ಇದು ಕುಂದಾಪುರದ ಕನ್ನಡ ಸಂಘದ ಮೊದಲ ಪ್ರಕಟಣೆ ಇನ್ನೂ ಹಳೆಯರಾಗದ ಕಥೆಗಾರರ ವಿವಿಧ ಕತೆಗಳ ಸಂಕಲನವಿದು. ಯುಗ ಕಾದಂಬರಿಯದಾದರೂ ಕಥಾ ಸಾಹಿತ್ಯವೂ ಜೀವಂತವುಳಿಯಬೇಕಾದಲ್ಲಿ ಇಂತಹ ಪ್ರಯತ್ನ ಸಾಗುತ್ತಿರಬೇಕು. ಕೇವಲ ಕಾದಂಬರಿಯೊಂದು ಹುಲುಸಾಗಿ ಬೆಳೆದ ಮಾತ್ರಕ್ಕೆ ಸಾಹಿತ್ಯ ಕ್ಷೇತ್ರ ಹಸನಾಗುವುದಿಲ್ಲವೆಂಬುದನ್ನು ಮರೆಯಬಾರದು.

ನವಗಿರಿನಂದರ 'ಕೆಡುಕಿನೊಳಗೂ ಒಳಿತುಂಟು' ಎನ್ನುವುದು ಮಧ್ಯಮ ವರ್ಗದ ಸಂಸಾರವೊಂದರ ಸತ್ಯ ಚಿತ್ರವನ್ನು ಮುಂದಿಡುತ್ತದೆ; ಇದಲ್ಲದು ಯಶಸ್ವಿಯೂ ಆಗಿದೆ. ನಾ. ಡಿ' ಸೋಜರ "ಬೇಡಿ ಪಡೆದವ" ಸಂಸಾರ ಹಿಂಜರಿಯುವ ಒರಟು ಹುಡುಗಿಯು ಅನುಭವದ ಪಾಠದಿಂದ ಅದಕ್ಕೆ ಹೊಂದಿಕೊಳ್ಳುವ ಸನ್ನಿವೇಶವನ್ನು ವರ್ಣಿಸುತ್ತದೆ. ಒಳ್ಳೆಯ ಕಥೆಯಿದು. ಉದ್ಯಾವರ ನಾರಾಯಣ ಆಚಾರ್ಯರ ಒಡೆದ ಕನ್ನಡಿ' ಯು ಕನ್ನಡದಲ್ಲಿ ಒಂದು ಉತ್ತಮ ಕಥೆ. "ನಡೆಯುವುದೆಲ್ಲ ನಾಟಕವಲ್ಲ"ದಲ್ಲಿ ವ್ಯಾಸರಾವ್ ನಿಂಜೂರರು ಬಳಸಿದ ತಂತ್ರ ನವ್ಯವಾಗಿದೆ. ವಿಠಲ ಕುಮಾರರ 'ಅನಿರೀಕ್ಷಿತ'— ಅನಿರೀಕ್ಷಿತ ಘಟನೆಯೊಂದರಿಂದ ಪ್ರೇರಿತವಾಗಿದ್ದರೂ ಸಾಮಾನ್ಯವಾದ ಕಥೆ. ಕೆ. ವಿಶ್ವಂಭರ ಉಪಾಧ್ಯಾಯರ "ಮಾವ" "ಕಾಕೀ' ಎನ್ನುವ ಹಿಂದೀ ಕಥೆಯನ್ನೂ ಎನ್. ಕೆ. ಹೆಬ್ಬಾರರ "ಅಂದಿನಿಂದ ಇಂದಿಗೂ ಎಲ್ಲ ಹೀಗೆ ನಡೆದಿದೆ" 'ಬೀಸ ಸಾಲ್ ಕೆ ಬಾದ್' ಚಲಚಿತ್ರವನ್ನೂ ನೆನಪಿಗೆ ತಂದುಕೊಡುತ್ತವೆ. ಆದರೂ ಇಲ್ಲಿ ಅಳವಡಿಸಿದ ಶೈಲಿ-ತಂತ್ರಗಳು ಮನೋಹರವಿವೆ. ದೊಡ್ಡ ಸುಖಾಂತ ಕಾದಂಬರಿಯೊಂದಕ್ಕೆ ತಕ್ಕುದಾದ ವಸ್ತುವನ್ನು ಸೆರೆ ಹಿಡಿಯುವ ಪ್ರಯತ್ನವನ್ನು 'ಸೀತಾ ಪರಿತ್ಯಾಗ'ದಲ್ಲಿ ಎನ್. ನಾರಾಯಣ ಬಲ್ಲಾಳರು ಮಾಡಿದ್ದಾರೆ.

ಕಥೆಗಳು ಹಾಗೆಯೇ ಇರಬೇಕು ಹೀಗೆಯೇ ಇರಬೇಕು—ಎಂದು ಹೇಳುವುದು ಉಚಿತವಲ್ಲವಾದರೂ ಸರ್ವಸಾಮಾನ್ಯ ಸ್ವೀಕೃತ ಲಕ್ಷಣಗಳನ್ನು ಬಿಡುವುದು ಮಾತ್ರ ಉಚಿತವಲ್ಲ. ಈ ಲಕ್ಷಣಗಳನ್ನು ಬಿಡುವುದರಲ್ಲಿ ಕಾಣುವುದೇ ನವ್ಯತೆಯಾದರೆ, ಅದಕ್ಕೇನೂ ಹೇಳುವಂತಿಲ್ಲ. ಈ ದೃಷ್ಟಿಯಿಂದ ಇಲ್ಲಿನ ಕಥೆಗಳನ್ನು ನೋಡುವಾಗ, ಸಣ್ಣ ಕಥೆಗಳ ಜನ್ಮಭೂಮಿಯಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಥಾ ಲೇಖಕರ ಬಳಗವೊಂದು ಬೆಳೆಯುತ್ತ ಬರುತ್ತಿದೆ; ಕನ್ನಡದ ಕಥಾ ಸಾಹಿತ್ಯಕ್ಕೆ ಈ ಬಳಗದಿಂದ ಉತ್ತಮ ಸೇವೆ ಸಲ್ಲಲಿದೆಯೆಂದು ವಿಶ್ವಾಸವಿಡಬಹುದು. ಇಲ್ಲಿ ಕಾಣುವ ಕಥೆಗಾರರೆಲ್ಲ ಕಥಾಪ್ರಿಯರಿಗೆಲ್ಲ ಪರಿಚಿತರೇ, ಇವರ ಪಥ ಶುಭವಾಗಲಿ.

—ಗೋರಾ.

ಸಿಹಿ-ಕಹಿ

ನವಯುಗದ ಒಳ್ಳೆಯ ಕೆಲಸ

ನಿಮ್ಮ ಈ ವಾರದ (ತಾ. ೧-೧೦-೬೪) ಸಂಚಿಕೆಯಲ್ಲಿ 'ಆಹಾರದ ಕೊರತೆಗೆ ಕಾರಣವೇನು" ಎನ್ನುವ ಶ್ರೀ ಎ. ಉಮಾನಾಥ ಹೆಗ್ಡೆ, ಪಡೂರು ಇವರು ಬರೆದ ಲೇಖನವನ್ನು ಓದಿ ಸಂತೋಷವಾಯಿತು. ಅದೇ ಪ್ರಕಾರ ಬೇರೆ ಬೇರೆ ತಾಲೂಕುಗಳಿಂದ ಸಾಗುವಳಿ ಮಾಡುವವರ ಅನುಭವಗಳನ್ನು ಆಗಿಂದಾಗ್ಗೆ ಪ್ರಕಟಿಸಿದರೆ ರೈತರಿಗೆ ಒಳ್ಳೆಯದಾದೀತು. ಆ ಪ್ರಕಾರ ಒಂದು ಕಲಂನ್ನು ಅದೇ ವಿಷಯ ಬರೆಯುವರಿಗೆ ಕಾದಿಟ್ಟರೆ ಒಳ್ಳೆಯದು.

ವಾರದ ಭವಿಷ್ಯ ಕೊಟ್ಟದ್ದು ಸಹಾ ಒಳ್ಳೆಯದು. ಕೆಲವು ಓದುಗರಿಗೆ ಅದರಲ್ಲಿ ಹೆಚ್ಚಿನ ನಂಬಿಕೆಯಿದೆ.

—ಡಾ॥ ಎಂ. ಆರ್. ಶೆಟ್ಟಿ.

[ಕೃಷಿಗೆ ಸಂಬಂಧಪಟ್ಟ ಸ್ವಅನುಭವಗಳನ್ನೂ ವಿಚಾರಾತ್ಮಕ ಲೇಖನಗಳನ್ನೂ 'ನವಯುಗ'ವು ಸದಾ ಮುಕ್ತಹಸ್ತದಿಂದ ಸ್ವಾಗತಿಸುತ್ತದೆ. ಕೃಷಿ ಕ್ಷೇತ್ರದಲ್ಲಿ ದುಡಿಯುವವರು ಬರೆದು ಕಳುಹಿಸಿದಲ್ಲಿ ಅದನ್ನು ಪ್ರಕಟಗೊಳಿಸುವ ಪ್ರಯತ್ನ ಮಾಡಲಾಗುವುದು. ಸಂ. ನ]

ಪರ್ಯಾಯ ವ್ಯವಸ್ಥೆ ಬೇಕು

ಸರಕಾರವು ರೈತನು ಬೆಳೆದ ಬತ್ತಕ್ಕೆ ದರಗಳನ್ನು ಗೊತ್ತುಮಾಡಿ ಆಜ್ಞೆ ಹೊರಡಿಸಿದ್ದು ನ್ಯಾಯವೇ. ಆದರೆ, ಹಳ್ಳಿಯ ವ್ಯಾಪಾರಿ ವರ್ಗದವರು, ಲಾಭವನ್ನೇ ಗಣಿಸುತ್ತಿರುವ ಸಾಹುಕಾರರು ಆ ಬೆಲೆ ರೈತನಿಗೆ ನೀಡಲು ಹಿಂಜರಿದರೆ ಏನು ಮಾಡಬೇಕು? ಫುಡ್ ಟ್ರೇಡಿಂಗ್ ಕಾರ್ಪೊರೇಷನ್ ಇನ್ನೂ ಅಸ್ತಿತ್ವಕ್ಕೆ ಬರಬೇಕಷ್ಟೆ. ರಾಜ್ಯ ಸರಕಾರವು ರೈತನಿಂದ ಬತ್ತಕೊಳ್ಳುವ ಪರ್ಯಾಯ ವ್ಯವಸ್ಥೆಯನ್ನು ಮಾಡದೆ ಇದ್ದರೆ, ಅದು ಗೊತ್ತು ಮಾಡಿದ ಬೆಲೆಯು ರೈತನಿಗೆ ಸಿಗುವುದೇ ಇಲ್ಲವೆಂದರೂ ತಪ್ಪಾಗದು

—ವಾಸುದೇವ.

ಸೂತ್ರಧಾರಿತನವೇಕೆ?

ಪಾಕಿಸ್ತಾನದ ಅಧ್ಯಕ್ಷ ಆಯೂಬಖಾನರು ಇತ್ತೀಚೆಗೆ ಭಾರತದ ಮೇಲೆ ಉಗುಳಿದ ಬೆಂಕಿಯು ಶಾಸ್ತ್ರಿ-ಆಯೂಬ ಭೆಟ್ಟಿಯನ್ನಾಗಲೀ, ವಿದೇಶ ಮಂತ್ರಿ ಅಥವಾ ಗೃಹ ಮಂತ್ರಿಗಳ ಸಂದರ್ಶನವನ್ನಾಗಲೀ ಸಮರ್ಥಿಸುವಂತಿಲ್ಲ. ಅವರ ನಿಲುವೆಯಲ್ಲಿ ಯಾವ ಪರಿವರ್ತನೆಯೂ ನಡೆದಿಲ್ಲವೆಂಬುದನ್ನು ಮಾತ್ರ ಅದು ಬಹಿರಂಗಪಡಿಸುತ್ತದೆ. ಅಷ್ಟು ಮಾತ್ರವಲ್ಲದೆ ಕಾಶ್ಮೀರ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಎತ್ತುವ ಪ್ರಯತ್ನ ಪಾಕ್ ಮಾಡುವುದೆಂದೂ ವದಂತಿಯಿದೆ. ಹಾಗಾದಲ್ಲಿ ಮಾತುಕತೆ—ವಿಚಾರ ವಿನಿಮಯ—ಸೌಹಾರ್ದ ಪ್ರದರ್ಶನಗಳ ನಾಟಕದ ಸೂತ್ರಧಾರತನ ಆಯೂಬರಿಗೇಕೆ?

—ವಾಮನ ನಾಯ್ಕ, ಎಸ್.

NAVAYUGA 15—10—1964

Registered with the Registrar of News Papers for India under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

೧೫-೧೦-೬೪ರಿಂದ ೨೧-೧೦-೬೪ರ ವರೆಗೆ

೧. ಮೇಷ

ದಿನದಿಂದ ದಿನಕ್ಕೆ ಪ್ರಾಬಲ್ಯವಾಗುತ್ತಿರುವ ನಿಮ್ಮ ದೈವವು ನಿಮ್ಮನ್ನಿಂದು ಗೃಹತಾಪತ್ರಯಗಳಿಗೀಡು ಮಾಡಲಿದೆ. ಮಕ್ಕಳ ಆರೋಗ್ಯ ಕೆಡುವುದು. ಸ್ವಯಂ ಯೋಜನೆಯೊಂದನ್ನು ನಿರ್ವಹಿಸಲು ಶಕ್ತರಿದ್ದರೂ ಕುಜನರ ನೆರವನ್ನು ಬಯಸಿ ಜನ ನಿಂದೆಗೆ ಪಾತ್ರರಾದೀರಿ. ಖರ್ಚಿಗೆ ಸಾಕಷ್ಟು ದುಡಿಮೆಯಿರುವುದರಿಂದ ಹಣದ ತೊಂದರೆಯು ನಿಮಗೆ ಕಾಣಿಸದು. ಕೋರ್ಟು ಕಚೇರಿಗಳ ವ್ಯವಹಾರಕ್ಕೆ ಈ ಸಮಯವು ಒಳ್ಳೆಯದಲ್ಲ. ತಾ. 19 20 ರಲ್ಲಿ ಅಧಿಕ ವ್ಯಯ, ವಾಕ್ಕಲಹಗಳು ಕಾಣಿಸಲಿವೆ.

೨. ವೃಷಭ

ಕರ್ತವ್ಯ ದಕ್ಷರಾದ ನಿಮಗಿಂದು ದೈವವೂ ಅನುಕೂಲವಾಗಿರುವುದರಿಂದ ಯಾವತ್ತೂ ನಿಮ್ಮ ಕಾರ್ಯ ಕಲಾಪಗಳು ನಿರ್ವಿಘ್ನದಿಂದ ಸಾಗುವವಲ್ಲದೆ ನಿರೀಕ್ಷೆಗಿಂತಲೂ ಅಧಿಕ ಫಲವನ್ನು ನೀಡಲಿವೆ. ಜನತೆಯ ನೆರವು ನಿಮಗಿಲ್ಲವಾದರೂ ಪ್ರಬಲರಾದ ವಿರೋಧಿಗಳನ್ನು ಪ್ರತಿಭಟಿಸಲು ಸಮರ್ಥರಾದ ನಿಮಗೆ ವಿಶೇಷತಃ ರಾಜಕೀಯದಲ್ಲಿ ವಿಜಯ ಲಾಭಗಳು ದೊರಕುವವು. ಸ್ವಂತ ಆರೋಗ್ಯದತ್ತ ಹೆಚ್ಚಿನ ಗಮನವಿರಲಿ. ತಾ. 17ರಿಂದ 20 ರವರೆಗಿನ ದಿನಗಳಲ್ಲಿ ಮಿತ್ರ ಸಮಾಗಮ ಬಹುವಿಧ ಲಾಭಗಳಾಗಲಿವೆ.

೩. ಮಿಥುನ

ನಿಮ್ಮ ದೈವವಿಂದು ತೀರಾ ಹೀನಾವಸ್ಥೆಗಿಳಿದಿರುವುದರಿಂದ ಸರ್ವತ್ರ ನಿಮ್ಮ ವಿರುದ್ಧ ವಿರೋಧ ಪ್ರತಿರೋಧಗಳೇ ಕಾಣಿಸಲಿವೆ. ಹೆರವರ ಮಾತಿಗೆ ಕೈಹಿಡಿದ ಅರ್ಧಾಂಗಿ ಹಡೆದ ಮಕ್ಕಳೂ ಕೂಡ ಇಂದು ನಿಮ್ಮ ಕೂಡೆ ಕುಸ್ತಿಗೆ ನಿಲ್ಲಲಿರುವರು. ಕಾಸು ಇಲ್ಲದವರ ಕಲ್ಲಿಗೆ ಸಮನೆಂಬ ಗಾದೆಯು ನಿಮಗಿಂದು ಅನುಭವಕ್ಕೆ ಬರಲಿದೆ. ಆರ್ಥಿಕ ದುರವಸ್ಥೆಯಿಂದ ಪರಿತಪಿಸುತ್ತಿದ್ದ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ಮಿತ್ರರ ನೆರವಿನಿಂದಾಗಿ ಸ್ವಲ್ಪ ನೆಮ್ಮದಿ ದೊರಕೀತು.

೪. ಕರ್ಕಟ

ನಿಮ್ಮ ಸುಖಲಾಭಪತಿಯಾದ ಶುಕ್ರನು ಧನಸ್ಥಾನದಲ್ಲೂ ಭಾಗ್ಯಪತಿಯಾದ ಗುರುವು ಲಾಭದಲ್ಲೂ ನಿಂತಿರುವುದರಿಂದ ಈ ವಾರದಲ್ಲಿ ನಿಮ್ಮ ಆರ್ಥಿಕ ಮಟ್ಟವು ಉತ್ತಮ ಸ್ಥಿತಿಗೆ ಏರಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ಒಳ್ಳೆಯ ಫಲ ಲಭಿಸುವದು. ಉದ್ಯೋಗದಲ್ಲಿ ಪ್ರಗತಿ ಹೊಂದಲಿರುವಿರಿ. ಸಾಕಷ್ಟು ಜನತೆಯ ನೆರವು ನಿಮಗಿರುವುದಾದರೂ ಕೋರ್ಟು ಕಛೇರಿಗಳ ವ್ಯವಹಾರದಲ್ಲಿ ವಂಚಿತರಾಗುವ ಸಂಭವವಿದೆ. ತಾ. 15, 16, 21 ಈ ದಿನಗಳು ಉತ್ತಮವಾಗಿವೆ.

೫ ಸಿಂಹ

ಸುಖಭಾಗ್ಯಪತಿಯಾದ ಅಂಗಾರಕನು ಇಂದು ವ್ಯಯಸ್ಥಾನದಲ್ಲಿ ನೀಚನಾಗಿ ನಿಂತಿರುವ ಕಾರಣ ಆದಾಯದ ವಿಚಾರದಂತಿರಲಿ ಹಿಂದೆ ದುಡಿದಿಟ್ಟ ಧನವು ಇಂದು ಮಾಯವಾಗಲಿದೆ. ಮೇಲಿಂದ ಮೇಲೆ ಅಧಿಕಾರಿ ವರ್ಗದವರಿಂದ ತಂಟೆತಕರಾರುಗಳು ಬರಲಿವೆ. ವ್ಯಾಪಾರದಲ್ಲಿ ಕೊಂಚ ಲಾಭ ಕಾಣಿಸಿದರೂ ಬಹುಮುಖವಾದ ಖರ್ಚುಗಳು ನಿಮ್ಮನ್ನು ಇತಿ ಕರ್ತವ್ಯತಾ ಮೂಢರನ್ನಾಗಿ ಮಾಡುವವು. ದೇಹ ಮನಸ್ಸುಗಳಿಗೆ ಕಿಂಚಿತ್ತು ಸುಖ ನೆಮ್ಮದಿಯಿಲ್ಲವೆಂದರೆ ತಪ್ಪಾಗದು. ವಾರಾದಿಯ ದಿನಗಳಲ್ಲಿ ಹೆಚ್ಚಿನ ದೋಷಗಳು ಅನುಭವಕ್ಕೆ ಬರಲಾರವು.

೬. ಕನ್ಯಾ

ನಿಜಕ್ಕೆ ಸುದೈವಿಗಳೆಂದರೆ ನೀವೇ ಸರಿ. ನಿಮ್ಮ ಯಾವತ್ತು ಸಂಕಲ್ಪಗಳಿಂದು ನಿರ್ವಿಘ್ನದಿಂದ ಕಾರ್ಯರೂಪಕ್ಕೆ ಬರಲಿವೆ. ಮಾತ್ರವಲ್ಲ ನಿಮ್ಮ ನಿರೀಕ್ಷೆಗಿಂತಲೂ ಅಧಿಕವಾದ ಫಲವು ಅನಾಯಾಸವಾಗಿ ದೊರೆತೀತು. ಎಂತಹ ಮಹತ್ಕಾರ್ಯವೂ ನಿಮಗಿಂದು ತೃಣಸಮಾನವೆನಿಸಲಿದೆ. ನಿಮ್ಮ ಕರ್ತವ್ಯದಕ್ಷತೆಯಂ ಕಂಡ ಶತ್ರು ವರ್ಗದವರು ಮೃಗರಾಜನಂ ಕಂಡ ಹರಿಣಗಳಂತೆ ಮಾಯವಾಗುವರು. ತಾ. 17ರಿಂದ 20ರವರೆಗಿನ ದಿನಗಳು ಅತ್ಯುತ್ತಮವಾಗಿರುವುವು.

೭. ತುಲಾ

ನಿಮ್ಮ ಧನಲಾಭಪತಿಗಳಾದ ಕುಜರವಿಗಳಿಂದು ನೀಚರಾಗಿದ್ದು ಬೃಹಸ್ಪತಿಯೂ ಅಷ್ಟಮಕ್ಕೆ ಬಂದಿರುವುದರಿಂದ ಇಂದಿನ ದಿನಗಳು ತುಂಬ ದುಃಖದಾಯಿಗಳಾಗಿ ಪರಿಣಮಿಸಲಿವೆ. ತಾನೊಂದೆಣಿಸಿದರೆ ದೈವವೊಂದೆಣಿಸಿತೆಂಬ ಗಾದೆಯಂತೆ ನಿಮ್ಮ ಕಾರ್ಯಗಳೆಲ್ಲವೂ ವಿಫಲಗಳಾಗುವವು. ಗೃಹ ತಾಪತ್ರಯಗಳಿಂದಲೂ ಆರ್ಥಿಕ ಬಿಕ್ಕಟ್ಟಿನಿಂದಲೂ ಸಂತ್ರಸ್ತರಾದ ನಿಮಗೆ ಬಾಲ್ಯಸ್ನೇಹಿತರ ನೆರವು ದೊರೆಯಲಿದೆ. ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಕೆಲವೊಂದು ಬಯಕೆಗಳು ಈಡೇರುವುವು.

೮. ವೃಶ್ಚಿಕ

ಮಾನಸಿಕ ದೌರ್ಬಲ್ಯ ದೇಹಾಲಸ್ಯಗಳಿಂದ ಬಳಲುತ್ತಿದ್ದ ನಿಮಗೆ ಈ ವಾರವು ತುಂಬಾ ಕಷ್ಟದಾಯಿಯಾಗಿ ಪರಿಣಮಿಸೀತು. ಗೃಹ ತಾಪತ್ರಯಗಳು ನಿಮ್ಮನ್ನು ನೆಮ್ಮದಿಯಿಂದಿರಗೊಡಲೊಲ್ಲವು. ಕರ್ಮಪತಿಯಾದ ರವಿಯು ವ್ಯಯದಲ್ಲಿ ನೀಚನಾಗಿದ್ದು ಜೊತೆಯಲ್ಲಿ ಲಾಭಾಧಿಪನಾದ ಬುಧನೂ ಸೇರಿಹ ಕಾರಣ ಅನವಶ್ಯಕವಾಗಿ ಧನ ವ್ಯಯಿಸುವಿರಿ. ಆದರೂ ಧನಪತಿಗಳಾದ ಸುರಗುರುಗಳ ಪೂರ್ಣ ದೃಷ್ಟಿ ನಿಮ್ಮ ಮೇಲಿರುವುದರಿಂದ ಹಣದ ಬಿಕ್ಕಟ್ಟು ಬರಲಾರದು. ವಾರದ ಅದ್ಯಂತ ದಿನಗಳಲ್ಲಿ ಗೃಹ ಸುಖ ವಿಜಯ ನೆಮ್ಮದಿಗಳನ್ನು ಪಡೆವಿರಿ.

೯. ಧನು

ನಿಮ್ಮ ಬಯಕೆಗಳಿಂದು ಬಹ್ವಂಶ ಕೈಗೂಡಲಿವೆ. ಪ್ರಬಲರಾದ ಶತ್ರು ವರ್ಗದವರು ನಾನಾತರದಿಂದ ತೊಡಕು ತೊಂದರೆಗಳನ್ನು ತಂದೊಡ್ಡಿದರೂ ಸ್ವಯಂ ಸಮರ್ಥರಾದ ನೀವು ಮುಂದಿಟ್ಟ ಹೆಜ್ಜೆಯನ್ನು ಎಂದೂ ಹಿಂದಿಡಲಾರಿರಿ. ನಾನಾ ತರದಿಂದ ಧನಾಗಮವಾಗುವುದು. ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷೆಗೂ ಮಿಕ್ಕಿ ಧನಲಾಭವಾಗುವುದು. ರಾಜಕೀಯ ವ್ಯವಹಾರಗಳಿಗೆ ಇಂದಿನ ದಿನಗಳು ಒಳ್ಳೆಯದಿಲ್ಲವು. ತಾ. 16, 17, 18ರಲ್ಲಿ ಕಾರ್ಯ ಸಿದ್ಧಿ ವಿಜಯ ಭೋಗಗಳಂ ಪಡೆಯುವಿರಿ.

೧೦. ಮಕರ

ನಿಮ್ಮ ದುರ್ದಿನಗಳಿಂದು ದೂರವಾದವು. ನೀವು ಕೈಗೊಂಡ ಕಾರ್ಯಗಳು ನಿರರ್ಗಳವಾಗಿ ಗುರಿ ಸೇರಲಿವೆ. ಹಿಂದಿನ ಸಾಲ ಕಡಗಳಿಂದ ಮುಕ್ತರಾಗಿ ಸಾಕಷ್ಟು ಧನವನ್ನು ಸಂಗ್ರಹಿಸುವಿರಿ. ಸಮಾಜದಲ್ಲೂ ನಿಮಗಿಂದು ಒಳ್ಳೆಯ ಸ್ಥಾನ ಮಾನಗಳು ಲಭಿಸುವವು. ಮನೆಯಲ್ಲಿ ಸತಿ ಪತಿಗಳಲ್ಲಿ ಆಗಾಗ ಘರ್ಷಣೆಯುಂಟಾಗಲಿದೆ. ಕೆಲವಂಶ ಧನವೂ ದುರ್ವ್ಯಯವಾಗುವ ಸಂಭವವಿದೆ. ತಾ. 15, 19, 20 ಈ ದಿನಗಳು ತುಂಬ ಅನುಕೂಲವಾಗಿ ಪರಿಣಮಿಸುವವು.

೧೧. ಕುಂಭ

ಅಂಗಾರಕನು ನೀಚನಾಗಿದ್ದರೂ ಉಚ್ಚಯ ಸ್ಥಾನದಲ್ಲಿದ್ದು ನಿಮ್ಮ ಹಿತವನ್ನು ಸಾಧಿಸಲಿರುವನು. ಮಿಕ್ಕ ಎಲ್ಲಾ ಗ್ರಹರೂ ಪ್ರತಿಕೂಲರಾಗಿ ನಿಂತಿಹ ಈ ಕಾಲದಲ್ಲಿ ನಿಮ್ಮ ಶಕ್ತಿ ಸಾಹಸಗಳು ಗಾಳಿಯೊಡನೆ ಗುದ್ದಾಡಿದಂತೆ ವಿಫಲವಾಗಲಿವೆ. ಉದ್ಯಮ ವ್ಯಾಪಾರಗಳಲ್ಲಿ ಸೋಲು ನಷ್ಟಗಳುಂಟಾಗುವವು. ಗೃಹ ತಾಪತ್ರಯಗಳಿಂದ ಪೀಡಿತರಾದ ನಿಮಗೆ ಹಣದ ಲೇವಾದೇವಿ ನಿಮಿತ್ತ ಕಲಹವುಂಟಾಗಿ ಕೋರ್ಟುಕಛೇರಿಗಳಿಗೆ ಹೋಗುವ ಪರಿಸ್ಥಿತಿ ಬರಲಿದೆ. ಸಾಹಸಿಗಳಾದ ನಿಮಗೆ ತಾ. 17, 18, 21ರಲ್ಲಿ ವಿಜಯ ಲಾಭಗಳುಂಟಾಗಲಿವೆ.

೧೨. ಮೀನ

ಲಾಭಪತಿಯಾದ ಶನೈಶ್ಚರನು ವ್ಯಯದಲ್ಲಿ ನಿಂತಿದ್ದು ಅನೇಕ ದುರ್ವ್ಯಯಗಳಿಗೆ ನಿಮ್ಮನ್ನು ಗುರಿಮಾಡಲಿರುವನು. ಆಪತ್ತಿಗಾಗಿ ಸಂಗ್ರಹಿಸಿದ್ದ ಧನವೂ ಇಂದು ಉಳಿಯಲಾರದು. ಕೋರ್ಟು ಕಛೇರಿಗಳ ವ್ಯವಹಾರದಲ್ಲಿ ಧನಹಾನಿಯಾಗುವದಲ್ಲದೆ ಪ್ರತಿಪಕ್ಷಿಗಳಿಂದ ಪರಾಜಯ ಹೊಂದಲಿರುವಿರಿ. ವಾತಪ್ರಕೋಪವು ನಿಮಗಿಂದು ಆಗಾಗ ಕಾಣಿಸಬಹುದು. ಶ್ರಮಜೀವಿಗಳಿಗೂ ಸೇವಕ ವರ್ಗಕ್ಕೂ ಈ ವಾರವು ತೀರ ಕಷ್ಟದಾಯಿಯಾಗಿ ಪರಿಣಮಿಸಲಿದೆ. ತಾ. 15, 19, 20ರಲ್ಲಿ ಇದ್ದುದರಲ್ಲಿ ಉತ್ತಮವಾಗಿ ಕಾಣಿಸುವದು.

ಉಪಯುಕ್ತವಾದ ಕೆಲವು ಪುಸ್ತಕಗಳು

	ರೂ. ನ
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ (ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು (ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು.ಶಿ.ಹರಿದಾಸ ಭಟ್)	2=00
ಹಿರೋಶಿಮಾದಿಂದ ಜಿನೇವ (ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ (ವೀರಪ್ಪ ಯುಗಟಿ)	1=75
ಭಾರತೀಯ ಮಹಾಪುರುಷರು (ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ (ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಕಿರು ಕತೆಗಳು (ಅನು: ಕು.ಶಿ.ಹರಿದಾಸ ಭಟ್)	1=75
ಕುಲವಿಲ್ಲದ ಹೆಣ್ಣು (ಪಿ. ವೆಂಕೋಬಾಚಾರ್ಯ)	1=50
ಚಿತ್ರಾಂಗದೆ (ಅನು: ಕೆ. ಕೆ. ಶೆಟ್ಟಿ)	0=60
ರವೀಂದ್ರರ ಕತೆಗಳು (ಹನುಮಂತ ರಾವ್ ಮೊಂಬ್ರೇಕರ)	0=90
ಹಸುರು ಹಂಸ (ನಚಿಕೇತ)	2=00
ಭಾವಾರ್ಜನೆ (ನಚಿಕೇತ)	1=25
ಋಣ ಯಾತ್ರೆ (ನಚಿಕೇತ)	1=50
ಗೀತೆಯ ಕೈಗನ್ನಡಿ (ಹೊಸಕೆರೆ ಚಿದಂಬರಯ್ಯ)	1=00

ವಿವರವಾದ ಕೆಟಲಾಗಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ

'ನಚಿಕೇತ'ರ

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ನವಯುಗ ಪ್ರೆಸ್, ಉಡುಪಿ.

ಜಾಹೀರಾತುದಾರರಿಗೆ

ಸಂತಸದ ಸುದ್ದಿ

ನವಯುಗ

ಎಲ್ಲೆಲ್ಲಿ ಪ್ರಸಾರದಲ್ಲಿದೆ

ಬಲ್ಲಿರಾ?

ದಕ್ಷಿಣ ಕನ್ನಡದ ಎಲ್ಲೆಡೆಗಳಲ್ಲಲ್ಲದೆ ಮುಂಬಯಿಯಲ್ಲಿ ವಿಶಾಲ ಪ್ರಚಾರದಲ್ಲಿದೆ

ಕರ್ನಾಟಕದ ಈ ಕೆಳಗಿನ ಪ್ರಮುಖ ಕೇಂದ್ರಗಳಲ್ಲಿಯೂ ಪ್ರಸಾರದಲ್ಲಿದೆ.

ಬೆಂಗಳೂರು, ಮೈಸೂರು, ಹಾಸನ, ಸಕಲೇಶಪುರ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, ಹಿರಿಯೂರು ಶಿವಮೊಗ್ಗ, ತೀರ್ಥಹಳ್ಳಿ, ಭದ್ರಾವತಿ, ಹರಿಹರ, ಧಾರವಾಡ, ಹುಬ್ಬಳ್ಳಿ, ಸಾಗರ, ಸಿರ್ಸಿ, ಮಂಡ್ಯ, ಮೂಡಿಗೆರೆ, ಬೇಲೂರು, ತರಿಕೆರೆ, ಕೊಪ್ಪ, ಕಡೂರು, ಬೀರೂರು, ಹೊನ್ನಾವರ, ಬೆಳಗಾಂವ್, ಅರಕೋಲು, ಅಗಲಂರು, ಹೊಳಲ್ಕೆರೆ, ನರಸಿಂಹರಾಜಪುರ, ಕೃಷ್ಣರಾಜಪೇಟೆ, ಅರೆಹಳ್ಳಿ, ಬೇಗೋಡು, ಶೃಂಗೇರಿ, ಸೊರಬ, ರಾಯಚೂರು, ಯಾದಗಿರಿ, ಗಬ್ಬೂ, ಅರಸೀಕೆರೆ, ಗಂಗಾವತಿ, ಇತ್ಯಾದಿ.

Edited, Printed & Published by K. H.Shetty, at the Navayuga Press, Udipi, S. India

ನವಯುಗ

ಸಂಪುಟ ೪೪] ಅಕ್ಟೋಬರ, ೨೨, ೬೪ [ಸಂಚಿಕೆ ೮

Navayuga nationalist kannada weekly

೧೦ ಪೈಸೆ

ಗೋಪ ರಾಜ್ಯದಲ್ಲಿ

ಅಧಿಕಾರದಂಡ ಹಸ್ತಾಂತರ

"ಏನಿದಂತೆ? ಭಾರೀ ಬೇಗನೇ ಬಂದು ಬಿಟ್ರಿ?"

"ನೋಡು, ಮನೆಗೆ ಬರೋದಕ್ಕೂ ನಿನ್ನ ಅಪ್ಪಣೆ ಆಗಬೇಕೇನು?"

"ಅಲ್ಲಾ, ಏನು ಬೇಗಾಂತಂದ್ರೆ ನೀವು ಬೇರೇನೇ ಹೇಳ್ತೀರಿ.'

"ಅಂದ್ರೆ ಮಹಾರಾಣಿಯವ್ರ ಅಜ್ಞೆಯಾಗ್ಲಿಲ್ಲಾಂತ ಕೋಪ ಬಂದಿಲ್ಲ ತಾನೆ?'

'ಏನು ಮಾತಾಡ್ತೀರಾ ನೀವು? ನಿಮ್ಮ ಮೇಲೇನೇ ನಾನು ಕೋಪಿಸ್ಕೊಂಡ್ರೆ..."

"ಸದ್ಯ ಅಷ್ಟಾದ್ರೂ ಸಹಾನುಭೂತಿಯಿದೆ ತಾನೆ? ಧನ್ಯನನ್ಮಾ ನಾನು ಧನ್ಯನವ್ಮಾ....'

"ಧನ್ಯರೆಲ್ಲರೂ ಧನ್ಯರು. ಏನೋ ಭಾರೀ ವಿಚಾರಗುಂಗಿನಲ್ಲಿ ಬಿದ್ದಿರೋವಂತಿದೆ..."

'ಯಾರು?"

'ಮತ್ಯಾರು? ನೀವೆ...."

"ಹ್ಞಾಂ.... ನಾನೇ... ಹೌದು ಹೌದು...."

'ಏನಂತೆ?'

'...ನೋಡು, ಒಂದಲ್ಲ, ಎರಡಲ್ಲ.... ಮೂರು.... ಅಲ್ಲ ಮತ್ತಿನ್ನೆಷ್ಟೋ– ಹೊಸ ಹೊಸ ವಿಚಾರಗಳನ್ನು ತಿಳಿದು ಅರಿಕೆ ಮಾಡೋಣಾಂತ ಬೇಗ ಬಂದ್ರೆ...."

"ಓ.. ಹಾಗೋ.... ಇರ್ಲಿ... ಅದೆಲ್ಲಾ ನನಗೆ ಹೇಗೆ ಗೊತ್ತಾಗ್ಬೇಕು? ಅದೂ ವಿದ್ಯಾ ದಶಮಿ ಹಬ್ಬದ ನಡುವೆ ನಿಮ್ಮ ಹೊಸ ಸಂಗ್ತಿ ತಿಳಿಯೋ ಕುತೂಹಲಾನ್ರೂ ಯಾರಿಗಿದೇಂತ...."

"ಅಂದ್ರೆ ...ನಾನನ್ನೋ ಅಗತ್ಯವಿಲ್ಲಾನ್ನು..."

"ಛೆ...ಛೆ.... ಏನು ಮಾತಾಡ್ತೀರಾ? ಹಬ್ಬದ ಸಡಗರದಲ್ಲಿ ಯಾವುದು ಕಿವಿಗೆ ಬಿದ್ರೂ ನೆನಪಿನಲ್ಲಿ ನಿಲ್ಲೋದಿಲ್ಲಾಂತಂದ..."

"ಹಾಗಂತ ಈಗ.... ಈಗ...."

"ಏನಿಲ್ಲ... ಏನೂ ವಿಶೇಷವಿಲ್ಲ. ಎಲ್ಲಾ ಮುಗಿದು ಬಿಟ್ಟಿದೆ ನೋಡಿ..."

"ಅಂದ್ರೆ...."

"ಅಂದಿದ್ನಲ್ಲಾ, ಹಿಂದೊಮ್ಮೆ...."

"ಏನೂಂತ?..."

"ತುಸು ನೆನಪು ಮಾಡಿಕೊಳ್ಳಿ...."

"ಇಂದು ವಿದ್ಯಾದಶಮಿ...."

"ಮೈಸೂರ್ನಲ್ಲಿ..."

'ಜಂಬೂ ಸವಾರಿ...ಹ್ಞಾಂ ತಿಳೀತು ತಿಳೀತು. ಅಂತೂ ನೀನು ಊಹಿಸಿದ್ದು ಸರಿಯೇ ಆಯಿತೆನ್ನು. ಒಂದು ವೇಳೆ ಹೋಗ್ತಿದ್ರೆ ಒಂದೂವರೆಯಾಗಿ ಹೋಗ್ತಿತ್ತು..."

"ಆದಿರ್ಲಿ, ಸದ್ಯ ನೀವೇನೇನೋ ಹೇಳ್ಬೇಕೂಂತ ಅಂತಿದ್ರಲ್ಲ...'

"ಹೌದು ಹೌದು ಒಂದು ಮಾತು ನೆನಪಿಸ್ಲಿ.'

"ಏನು?"

"ಕೇಳೋರ್ಗೆ ಬೇಕಾದಷ್ಟು ಸುದ್ದಿ ತ್ತಿರೋದ್ರತ್ತ ಗಮನ ಹರಿದಿದೆ; ಆದ್ರೆ ಹೇಳೋವರ್ಗೆ ಎಷ್ಟು ಎಷ್ಟಾಗಿ ಹೇಳೋಕೆ ಅವಕಾಶವಿಲ್ಲ.'

"ಇದ್ರಲ್ಲೇನು ಹೊಸ್ತಿದೇಂತ ಹೇಳ್ತಾ ಇದ್ದೀರಿ?'

"ಮಾಮೂಲನ್ನಾದ್ರೂ ಆಗಾಗ ನೆನಪಿಗೆ ತಂದು ಕೊಡ್ದೇ ಹೋದ್ರೆ ಮುಂದೆ ಮರ್ತೇ ಹೋಗುತ್ತೆ..'

"ನಿಮ್ಮ ಲೆಕ್ಕಾಚಾರ ಭಾರಿ ಲಾಯಕ್ಕು...."

"ಇರ್ಲಿ. ಈಗ ನಿನ್ಗೆ ತಿಳಿಸ್ಬೇಕು, ಏನನ್ನು?"

"ಅದೇ ಅಂದಿರಲ್ಲಾ ಬಿಸಿ ಬಿಸಿ ಸುದ್ದಿ"

"ಹೌದು ಹೌದು....ನೋಡು ಒಂದಲ್ಲ ಎರಡಲ್ಲ...."

"ಹತ್ತಿರ್ಲಿ, ನಾನು ಕೇಳೋಕೆ ತಯಾರಾಗಿ ಆಗ಼್ಲೇ ಕೂತಿದ್ದೇನೆ. ಲೆಕ್ಕ ಮಾಡೋದನ್ನ ಬಿಟ್ಟು, ಸಂಗ್ತಿ ಏನೆಂದು ದಯಮಾಡಿ ತಿಳ್ಸಿ."

"ಸರಿ, ತಿಳಿಸ್ತೇನೆ. ತಿಳಿಸ್ತೇನೆ. ಗಾಬ್ರಿಯಾಗೋಬೇಡ. ದೊಡ್ಡ ದೊಡ್ಡ ಸಂಗ್ತಿಯಾದ್ರೂ ಕೂಡ಼್ಲೇ ಭೂಕಂಪವಾಗೋದಿಲ್ಲ..''

"ವರ್ಣನೇನ ಬೆಂಕಿಗೆ ಹಾಕಿ. ಇರೋದನ್ನ ಬೇಗ ಹೇಳಿ.''

"ಹೇಳ್ತೀನೆ ಅಂದೆನಲ್ಲ....ಅವಸರ ಮಾಡಬೇಡ....''

"ಥೂ ನೀವೊಂದು. ಹೇಳ್ತೀನೆ ಹೇಳ್ತೀನೆ ಅಂತ ಈ ಪೀಠಿಕೆ ಹಾಕಿ ಐದು ನಿಮಿಷ ಆಯ್ತು. ಹರಿಕಥೆಗಿಂತ ಪ್ರಸ್ತಾವನೆ ಹೆಚ್ಚಾಯ್ತು ಅಂದ ಹಾಗೆ...''

"ಸಾಕು ಸಾಕೇ. ನಾನು ಅನ್ನೋದೆಲ್ಲಾ ನಿನಗೆ ಹರಿಕಥೆ ಥರಾನೆ! ಏನ. ಭಾರಿ ಸೊಕ್ಕು ಬಂದು ಬಿಟ್ಟಿದೆಯಲ್ಲ.. ಅಲ್ಲ, ಹರಿಕಥೆ ದಾಸಾಂತ ಬೇರೆಡೆಗೂ ಸಾರಿಬಿಡು..."

"ಇಲ್ಲ ಮಾರಾಯ್ರೆ....ಇಲ್ಲ....ತಪ್ಪಾತು ಬಿಡಿ..."

"ಕಪಾಳಕ್ಕೆ ನಾಲ್ಕು ಬಾರ್ಸಿ ಮತ್ತೆ ಸಾರಿ ಅಂತನ್ನೊ ದುಷ್ಟತನ ಆ ಪರಂಗಿಯವ್ರಿಗೇನೇ ಇರ್ಲಿ... ನಮ್ಗೇ ನೂ ಬೇಡ...."

"ಒಂದು ವಿಷ್ಯ ಕೇಳ್ತೀನಿ...'

"ನಿನ್ನ ವಿಷಯಾನು ಬೇಡ, ಗಿಷಯಾನು ಬೇಡ...."

"ಏನು ಭಾರಿ ಸಿಟ್ಟು ಬಂದು ಬಿಡ್ತೇ?'

"ಸಿಟ್ಟೂನೂ ಇಲ್ಲ; ಗಿಟ್ಟೂನು ಇಲ್ಲ."

"ನೀವು ಇಲ್ಲಾಂತಂದ್ರೂ ನಂಗೆ ತಿಳಿಯೋದಿಲ್ವೆ?"

"ಏನು ತಿಳಿಯೋದು ನಿನ್ಗೆ....?"

"ಅಲ್ಲ, ನನ್ನ ದೇವರ ಮಾನ್ಸ ನಂಗೆ ಗೊತ್ತಿಲ್ವೆ?'

"ನಿನ್ಗೆ ಗೊತ್ತಿರೋದೊಂದು ಮಣ್ಣು ...ಹ್ಞಾಂ, ತಡ ಮಾಡಿದ್ರೆ ಮತ್ತೆ ಏಕಾದಶೀ ವ್ರತ ಆಚರಿಸಬೇಕಾದೀತು."

"ನಾಳೆ ಹೇಗೂ ಏಕಾದಶೀನೇ ಅಲ್ವೆ?"

"ಹೌದಾದ್ರೂ ಅದನ್ನ ಆಚರಿಸೋ ತಾಕತ್ತು ಬೇಕಲ್ವೆ? ಹ್ಞಾಂ... ಏನೋ ಕೇಳಬೇಕೂಂತಂದೆಯಲ್ಲಾ....'

'ಹಾಳಾದು, ನೋಡಿ, ಮರೆಗಿಯುವ್ರು ಅನ್ನುತ್ತಲ್ಲ ನೆನ್ಪಿಗೆ ಬಂತು. ಅಲ್ಲಿ ಯಾರು ಗೆದ್ರಂತೆ?"

"ಓ ... ಇಂಗ್ಲೆಂಡಿನಲ್ಲಿ...ಹಾಳು, ೧೩ ವರ್ಷ ನಿರಂತರ ಏಕಚಕ್ರಾಧಿಪತಿಗಳಾಗಿದ್ದ ಕನ್ಸರ್‌ವೇಟರು ಬಿದ್ದು ಹೋದ್ರು....'

"ಅಂದ್ರೆ, ಲೇಬರ್ ಪಕ್ಷ ಗೆದ್ದು ಬಿಟ್ಟೂನ್ನಿ. ಬಹುಮತ....'

'ಹಿಂದೊಮ್ಮೆ ಲೇಬರ್ ಸರಕಾರವಿತ್ತಲ್ಲ ಅಲ್ಲಿ? ಆಗ ಬಹುಮತ....'

'ಸದ್ಯ ಬರೇ ವಶಕೋನಾಕ್ಕೆ ಹಿಂದೊಮ್ಮೆ ಲೇಬರ್ ಸರಕಾರಇತ್ತಲ್ಲಿ ಅಲ್ಲಿ ಆಗ ಬಹುಮತ'

"ಪ್ರಾಯ: ಆರು ಇರ್ಬೇಕು, ಅಷ್ಟೆ."

"ಅಂತೂ ಈಗ ಹೆರಾಲ್ಡ್ ವಿಲ್ಸನ್ ಪ್ರಧಾನಿ ಯಾಗ್ತಾರೆ...."

"ಆಗ್ತಾರೆ ಏನು, ಆಗಿಯೂ ಆಯ್ತು ...."

"ಏನಂದ್ರಿ... ಇಷ್ಟು ಬೇಗ?"

"ಅದಕ್ಕೇ ನೋಡು ಇಂಗ್ಲೆಂಡನ್ನೆ ಪ್ರಜಾಸತ್ತೆಯ ರಾಣಿ ಅನ್ನೋದು. ತನ್ನ ಬಹುಮತ ಲೇಬರ್ ಪಕ್ಷಕ್ಕೆ ಹೋದದ್ದೇ ತಡ, ಹೋಮ್ ರಾಜಿ ನಾಮೆಯಿತ್ತರು. ರಾಣಿ ವಿಲ್ಸನರಿಗೆ ಕರೆಯಿತ್ತರು."

"ಪರವಾಗಿಲ್ಲ ಕಂಡ್ರಿ ನಮ್ಮ ಮಟ್ಟಿಗೆ ಈ ಸ್ಥಿತ್ಯಂತರ ತುಂಬ ಒಳ್ಳೆಯದಾಗ ಬಹುದು...."

"ಆದರೂ ಆಗಬಹುದು, ಮತ್ತೆ ನೋಡುರಕ್ಷದಲ್ಲಿ...."

"ಏನು, ಏನಾಯ್ತು?"

"ಕ್ರುಶ್ಚೇವರ ಪತನವಾಯ್ತು..."

ಏನ್‌ತೀರಿ ನೀವು....ತಲೆಗಿಲೆ ಸರಿಯಾಗಿದೆ ತಾನೆ?"

ನೋಡಿಬಿಡು ಮತ್ತೆ...?

"ನೋಡಿ ಬಿಡ್ತಿದ್ದೆ...ಆದ್ರೆ ಮಾಡೋದೇನು ಹೇಳಿ, ನಾನು ಪರೀಕ್ಷೆಗೆ ಬಂದು ನೀವು ತಲೆ ಕೊಟ್ಟು ಚಳಿ ಮಾಡಿಕೊಳ್ಬೇಕಲ್ಲಾಂತ. ಹೌದೆ, ನೀವು ಅಂದದ್ದು ನಿಜವೆ?"

"ನಾನು ಸುಳ್ಳು ಹೇಳೋದುಂಟೆ?"

'ಆತ್ಮಸ್ತುತಿ ಮಾಡಿಕೊಳ್ಬೇಡಿ ಮತ್ತೆ : ಏನಂತೆ? ಯಾಕಂತೆ?"

"ಏನೋ ಯಾಕೋ.... ಕ್ರುಶ್ಚೇವರು ವೃದ್ಧಾಪ್ಯ ಮತ್ತು ಅನಾರೋಗ್ಯದ ಕಾರಣದಿಂದ ರಾಜಿಯಿತ್ತರಂತೆ. ಕೋಸಿಗಿನ್ ಪ್ರಧಾನಿಯಾಗಿ, ಬ್ರೆಜ್ನೇವ್ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಗೊಂಡಿದ್ದಾರೆ. ರಾಜಕಾರಣರಂಗದಲ್ಲಿ ಭಾರಿ ಬದಲಾವಣೆಯಾಗಿದೆಯಂತೆ...."

'ಹ್ಞಾಂ ...ಇದ್ರ ಹಿನ್ನೆಲೆ....'

'ಕೆಲವು ಆಂತರಿಕವೆಂದರೆ ಮತ್ತೆ ಕೆಲವರು ಬಾಹ್ಯವೆನ್ನುತ್ತಾರೆ.'

"ಕೆಂಪು ಚೀನೀಯರ ಪುಂಡಾಟವಿದೆಯೋ ಅಂತ...."

"ಅದೇ ಬಾಹ್ಯ ಕಾರಣವಾದ್ರೆ, ಭಾರತಕ್ಕೆ ಸಂಚಕಾರ ಬಂತು. ಆದ್ರೂ, ಈಗ ಆಯ್ಕೆಯಾಗಿರುವವರು ಕ್ರುಶ್ಚೇವರ ಸಹಕಾರಿಗಳಾಗೇ ಇದ್ದವರಾದ್ರಿಂದ ವಿದೇಶ ನೀತಿಯಲ್ಲಿ ಹೆಚ್ಚಿನ ಬದಲಾವಣೆಯಾಗದೂಂತ ತೋರುತ್ತೆ..."

"ಆದ್ರೂ ನೋಡಿ, ಅದನ್ನ ನಂಬಿರೋದಕ್ಕೆ ಸಾಧ್ಯವೆ? ಬದಲಾದ್ರೆ ....ನಮ್ಮ ಮಿಗ್ ಕಾರಖಾನೆ, ಬುಕಾರೋ ಉಕ್ಕು ಎಲ್ಲಾ ಕನಸಿನ ಮಂಡಿಗೆ...."

"ಸದ್ಯ ಹಾಗಾಗದಿರಲೀಂತ ವಿಜಯದಶಮಿಯ ಸುದಿನ ಪ್ರಾರ್ಥಿಸುವ."

"ಸರಿ. ಮತ್ತೆ ಸದ್ಯ ಮಾಡೋದಾದ್ರೂ ಏನು?'

"ಇನ್ನೂ ವಿಷಯವಿದೆ. ಚೀನಾ ಆಟಂ ಬಾಂಬು ಹಾರಿಸಿ ಬಿಟ್ಟಿತಂತೆ....''

"ಎಲ್ಲಿ? ಯಾರ ಮೇಲೆ?"

"ಯಾರ್ಯಾರ ಮೇಲಲ್ಲ ಕಣೇ. ಪರೀಕ್ಷಾರ್ಥವಾಗಿ ತಮ್ಮ ದೇಶದ ವಾಯುವ್ಯ ಭಾಗದಲ್ಲಿ ಹಾರಿಸಿತಂತೆ.'

"ನಾವು ಮಾತ್ರ ಬಾಂಬು ತಯಾರಿಸಲು ಹೋಗುವುದಿಲ್ಲ ನೋಡಿ. ಒಂದು ದಿನ ನಾವು ಈ ಬಾಂಬನ್ನೇ ಅಮೆರಿಕೆಯಿಂದ ತರಿಸಿಕೊಳ್ಳೋ ಕಾಲ ಬರುತ್ತೆ...

"ಸಾಕು ಸಾಕೆ... ಹದ್ರ ಬೇಡ... ಅಂತಹ ಕಾಲ ಬರೋದಿಲ್ಲ...'

"ಈ ಟೋಪಿಯವರ್ಗೆ ಭರವಸೆ ಕೊಡೋದಂದ್ರೆ ಭಾರೀ ಇಷ್ಟ...."

"ಆ ಸುದ್ದಿ ಅಲ್ಲೇ ಬಿಟ್ಟು ಹೊಸ ವಿಚಾರವಿದ್ರೆ ಮುಂದುವರಿ...."

'ಅಂತೂ ರಷ್ಯ, ಬ್ರಿಟನ್‌ಗಳ ನಾಯಕತ್ವ ಬದಲಾಯ್ತೂನ್ನಿ. ಇನ್ನು ಅಮೆರಿಕೆ..."

'ನೋಡಬೇಕು, ಗೋಲ್ಡ್‌ವಾಟರ್ ಬರೋ ಸಂದರ್ಭವಿಲ್ಲಾಂತಾದ್ರೂ ಬರೋದೇ ಇಲ್ಲ ಅಂತ ಅನ್ನೋದು ಸಾಧ್ಯವಿಲ್ಲ..."

'ಒಳ್ಳೇ ರಾಜಕಾರಣಿಯ ಹಾಗೆ ಮಾತಾಡ್ತೀರಲ್ಲಾ... ನಿಮ್ಮನ್ನೆ ರಾಜಕಾರಣದ ವಕ್ತಾರರನ್ನಾಗಿ ಮಾಡ್ತಿದ್ರೆ....''

"ಸಾಕು ಬಿಡೇ...ಇನ್ನು ಅದೊಂದು ಬಾಕಿ...."

"ಇರ್ಲಿ, ಪಾಕಿಸ್ತಾನದ ಕತೆ..."

"ಅಯೂಬರ ಕಥೇನೂ ಜಾನ್ಸನರ ಕಥೇನೂ ಒಂದೇ."

"ಅಂತೂ ವಿಜಯದಶಮಿ ತುಂಬ ವಿಚಿತ್ರ ವಾರ್ತೆ ತಂದು ನೀಡಿತು."

"ವಿಚಿತ್ರವೇನು?, ನಿರೀಕ್ಷಿತವಲ್ಲವಾದ್ರೆ ಅನಿರೀಕ್ಷಿತವಲ್ಲ....''

"ಏಕೆ?'

"ಲೇಬರ್ ಅಲ್ಪ ಬಹುಮತದಿಂದ ಗೆಲ್ಲಬಹುದೂಂತ ಮೊದಲೇ ಊಹಿಸಲಾಗಿತ್ತು. ಕ್ರುಶ್ಚೇವರ 'ಆರೋಗ್ಯ' ಕೆಡುತ್ತಿರುವುದೂ ಇದು ಮೊದಲನೆ ಸಲವಲ್ಲ. ಚೀನ ಮೊದಲೇ ಅಣುಬಾಂಬಿನ ಸುದ್ದಿ ಸಾರಿದೆ ನೀನೂ ಹತ್ತು ದಿನದ ಮೊದಲೇ ಸೂಚನೆ ಕೊಟ್ಟಿದ್ದೆಯಲ್ಲಾ...."

"ಹ್ಹ...ಹ್ಹ....ಹ್ಹ .... ಆ ಯೆಸ್ಸೇ. ವಿಲ್ಸನ್ ಎಲ್ಲಿ, ಕೊಸಿಗಿನ್ ಎಲ್ಲಿ, ನೀವೆಲ್ಲಿ?'

"ಎಲ್ಲಿಯೋ ಇರ್ಲಿ.... ಕನ್ಸರ್‌ವೇಟಿವ ೧೩ ದಿನಗಳ ಆಳಿಕೆ ನಂತ್ರ ೫ ದಿನ ಲೇಬರ್ ಅಧಿಕಾರಕ್ಕೆ ಬಂದದ್ದು ನಿಜತಾನೇ?"

'ಹ್ಞಾ... ಸರೀನ್ನಿ.... ಇನ್ನೂ ಇನ್ನೂ ಮಾತಾಡ್ತಾ ಕೂತ್ರೆ ಲೇಬರ್ ಆಳಿಕೆಯಲ್ಲಿ ನಿಮ್ಮ ಏಕಾದಶೀ ವ್ರತವಾಚರಿಸಬೇಕಾದೀತು. ಹೋಗಿ ಸದ್ಯ ಚಿಮಣಿ ಬೆಂಕಿ ಸೊಟ್ಟೆ ನೋಡಿ ಇಲ್ಲೇ ಇದೆ. ಆಚೆಮನೆ ರಾಮುವಿಂದ ತರ್ಸಿ ಇಟ್ಟಿದ್ದೇನೆ....

"ಹ್ಞಾ ... ಅಧಿಕಾರದಂಡ ಕೈಸೇರಿತು. ಯಥಾ ಶಕ್ತಿ ಕರ್ತವ್ಯ ನಿರ್ವಹಣೆಗಾಗಿ ಪರಿಶ್ರಮಿಸುವ ಭರವಸೆ ನೀಡಿ ಪ್ರತಿಜ್ಞೆ ಮಾಡುತ್ತೇನೆ....'

'ಒಳ್ಳೇ ನಾಟಕ ಕಂಡ್ರಿ..."

"ಮತ್ತೇನಂತೆ? ಹ್ಹ...ಹ್ಹ....ಹ್ಹ...."

— ಗೋರಾ.

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦
ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಗದದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಫೋಟೋ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ದ್ರಾಕ್ಷೆ ಕೊಯ್ಯುತ್ತಿರುವ ಬಲ್ಗೇರಿಯಾ ತರುಣಿ

ನವಯುಗ

ಸಂಪುಟ ೪೪	ಉಡುಪಿ	Vol 44
ಸಂಚಿಕೆ ೮	೨೨—೧೦—೧೯೬೪	No. 8

ಅಕ್ಟೋಬರ ಹದಿನಾರು

ಅಕ್ಟೋಬರ ಹದಿನಾರು ಶುಕ್ರವಾರ ಭಾರತದಲ್ಲಿ ವಿಜಯದಶಮಿಯ ಹಬ್ಬವನ್ನು ಸಸಂಭ್ರಮ ಆಚರಿಸುತ್ತಿದ್ದಂತೆಯೇ ವಿಶ್ವದ ರಾಜತಾಂತ್ರಿಕ ರಂಗದಲ್ಲಿ ಮಹತ್ವದ ಕ್ರಾಂತಿಯೇ ಆವಿರ್ಭವಿಸಿತೆಂದು ಹೇಳಬಹುದು. ಈ ಕ್ರಾಂತಿಯ ಹಿನ್ನಲೆಯ ಕೆಲ ವಂಶಗಳು ಅನಿರೀಕ್ಷಿತವೆಂಬಂತೆ ಕಂಡು ಬರಲಾರವಾದರೂ ಅವೂ ಕ್ರಾಂತಿಯ ಅವಿಭಾಜ್ಯ ಅಂಗಗಳೆಂದೇ ಹೇಳಬೇಕಾಗುತ್ತದೆ. ಕಾಮನ್‌ವೆಲ್ತಿನ ಹಿರಿಯ ದೇಶ, ವಿಶ್ವದ ಪ್ರಾಚೀನ ಪ್ರಜಾಪ್ರಭುತ್ವ ಪರಂಪರೆಯ ಬ್ರಿಟನ್ನಿನಲ್ಲಿ ಕಳೆದ ಹದಿಮೂರು ವರ್ಷಗಳ ಕಾಲ ಆಳುತ್ತಿದ್ದ ಟೋರಿ ಪಕ್ಷವು ಸೋತು ಕೇವಲ ಬಹುಮತ ಮಾತ್ರ ಗಳಿಸಿದ ಲೇಬರ್ ಪಕ್ಷಕ್ಕೆ ಅಧಿಕಾರವನ್ನು ಬಿಟ್ಟುಕೊಟ್ಟ ದಿನವದು. ೪೮ ವರ್ಷ ಪ್ರಾಯದ ಹೆರಾಲ್ಡ್ ವಿಲ್ಸನರು ತಾವು ೧೦ನೆಯ ವಯಸ್ಸಿನಲ್ಲಿ ಕಂಡಿದ್ದ ಕನಸನ್ನು ಮತ್ತೆ ಮೂವತ್ತೆಂಟು ವರ್ಷಗಳ ನಂತರ ನನಸಾಗುತ್ತಿರುವುದನ್ನು ಕಂಡರು. ಚರ್ಚಿಲ್ಲರು ಪ್ರಧಾನಿಪಟ್ಟವನ್ನು ಅಂತೋನಿ ಈಡನ್ನರಿಗೆ ಕೊಟ್ಟುಹೋದ ಬಳಿಕ ಟೋರಿ ಪಕ್ಷದ ಆಡಳಿತವು ಜನರಿಗೆ ಕೆಲವೊಮ್ಮೆ ಬೇಸರವನ್ನೂ ತಂದಿತ್ತು. ಆದುದರಿಂದಲೇ ಅತ್ಯಲ್ಪ ಬಹುಮತದಿಂದಲಾದರೂ ಕೂಲಿಗಾರ ಪಕ್ಷವನ್ನದು ಈ ಬಾರಿ ಆರಿಸಿತು. ಹಿಂದಿನ ಬಾರಿ ಕೂಲಿಗಾರ ಪಕ್ಷವು ಅಧಿಕಾರದಲ್ಲಿದ್ದಾಗ ರೂಪಿಸಿದ ನೀತಿಯಂತೆ ತನ್ನ ವಸಾಹತುಗಳಲ್ಲಿ ಹೆಚ್ಚಿನವಕ್ಕೆ ಬ್ರಿಟನ್ನು ಸ್ವಾತಂತ್ರ್ಯ ನೀಡಿತು; ವಸಾಹತ ವಾದದ ವಿರುದ್ಧ ಧ್ವನಿಯು ಬಲವಾಗುತ್ತಿರುವ ಇಂದಿನ ಕಾಲದಲ್ಲಿ ಈ ಕೂಲಿಗಾರ ಸರಕಾರವು ಉಚಿತ ಪಾತ್ರ ವಹಿಸಿ ವಸಾಹತು ನಿರ್ಮೂಲನಕ್ಕೆ ಸಂಪೂರ್ಣ ಬೆಂಬಲ ನೀಡುವುದೆಂದು ನಂಬಬಹುದು. ಭಾರತವು ಹಿಂದೆ ಈ ಪಕ್ಷವು ಅಧಿಕಾರಕ್ಕೆ ಬಂದುದರಿಂದಲೇ ಸ್ವತಂತ್ರ ಹೊಂದಿರುವುದರಿಂದ ಬ್ರಿಟನ್—ಭಾರತಗಳ ಸಂಬಂಧ ಇನ್ನೂ ದೃಢವಾಗುವುದೆಂದು ಹೇಳಬಹುದು. ಮುಖ್ಯವಾಗಿ, ಆರ್ಥಿಕ ಪುನರುತ್ಥಾನ ಮತ್ತು ಚೀನೀಯ ಆಕ್ರಮಣದಿಂದ ರಕ್ಷಣೆಯ ಸಂಬಂಧದಲ್ಲಿ ನಮ್ಮ ನೆರವಿಗಿದು ಮುಂದೆ ಬರುವುದೆಂದು ನಂಬಬಹುದು.

ಮೋಸ್ಕೋದಲ್ಲಿ ಕ್ರುಶ್ಚೇವರು ಪತನಗೊಂಡ ವಾರ್ತೆ ಭಾರತೀಯರು ಬೆಚ್ಚಿಬೀಳುವಂತೆ ಮಾಡಿತು. ಸಾಮಾನ್ಯವಾಗಿ ಕಮ್ಯುನಿಸ್ಟ್ ಜಗತ್ತಿನಲ್ಲಿ ನಡೆಯುವುದು ಇದೇ ರೀತಿಯೆಂಬುದಕ್ಕೆ ಹಿಂದಿನಿಂದಲೂ ಉದಾಹರಣೆಗಳು ಲಭಿಸುತ್ತವೆ. ೭೦ ವರ್ಷದ ನಿಕಿಟಾ ಕ್ರುಶ್ಚೇವರು ಪಕ್ಷದ ಸದಸ್ಯರ ಮತವನ್ನು ಕಡೆಗಣಿಸಿ, ಏಕ ಸತ್ತಾಧಿಕಾರಿಯಂತೆ ವರ್ತಿಸುತ್ತಿದ್ದರೆಂದೂ, ಅನಾರೋಗ್ಯದ ಕಾರಣದಿಂದ ಅವರು ರಾಜಿನಾಮೆಯಿತ್ತರೆಂದೂ ತಿಳಿಯುತ್ತದೆ. ಇದು ಎಷ್ಟರ ಮಟ್ಟಿಗೆ ನಂಬುಗೆಗೆ ಅರ್ಹವೆಂದು ಈಗಲೇ ಹೇಳುವಂತಿಲ್ಲ. ರಶ್ಯದ ಭಾವೀ ಧೋರಣೆಗಳು ಹೇಗೆ ಇರುವುವು ಎಂಬುದನ್ನು ತಿಳಿದ ಮೇಲೆಯೇ ಕ್ರುಶ್ಚೇವರು ತಾವಾಗಿ ಪತಿತರಾಗಲು ಒಪ್ಪಿದರೇ ಅಥವಾ ಅವರನ್ನು ಒತ್ತಾಯದಿಂದ ಪತಿತಗೊಳಿಸಲಾಯಿತೇ ಎಂದು ಹೇಳಬಹುದು. ಇದುವರೆಗೆ ತಿಳಿದು ಬಂದಂತೆ ಕ್ರುಶ್ಚೇವರ ನೀತಿಯನ್ನೇ ಇಂದಿನ ಪ್ರಧಾನಿ ಕೋಸಿಗಿನ್ ಅನುಸರಿಸುವರೆಂದು ಹೇಳಬಹುದು. ಕೆಂಪು ಚೀನಾವನ್ನು ಕ್ರುಶ್ಚೇವರು ಬಹಿರಂಗವಾಗಿ ಖಂಡಿಸುತ್ತಿದ್ದುದರಿಂದ ಅವರು ಚೀನೀಯ ಸಾಮ್ರಾಜ್ಯವಾದವನ್ನು ದ್ವೇಷಿಸುತ್ತಿದ್ದರೆಂದು ಭಾರತೀಯರು ನಂಬಿದ್ದಾರೆ. ಕ್ರುಶ್ಚೇವರ ಈ ನೀತಿಯಿಂದಾಗಿಯೇ ಅವರು ಪದಚ್ಯುತರಾದುದಾದರೆ, ಭಾರತಕ್ಕೆ ದೊಡ್ಡ ಆಘಾತ ತಟ್ಟಿತೆಂದೇ ಹೇಳಬಹುದು. ರಶ್ಯ ನಮ್ಮ ಪಂಚವಾರ್ಷಿಕ ಯೋಜನೆ, ಸಂರಕ್ಷಣೆಗಳಿಗೆ ಉದಾರವಾಗಿ ನೆರವು ನೀಡಿದ್ದಲ್ಲದೆ ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೆಂದು ಸಾರುತ್ತಿರುವ ಏಕಮಾತ್ರ ಮಹಾರಾಷ್ಟ್ರವಾಗಿತ್ತು. ಇನ್ನೀಗ ಅವರ ನೀತಿಯಲ್ಲಿ ಬದಲಾವಣೆ ಬಂದರೆ, ಆಗ ನಮ್ಮ ಪಾಡು ಏನೆಂದು ಹೇಳಬರುವುದಿಲ್ಲ, ನಾವು ಎಚ್ಚರಿಕೆಯಿಂದಿರಬೇಕಾಗಿದೆಯೀಗ.

ಇನ್ನೊಂದು ಅತೀವ ಸ್ಫೋಟಕ ಸಮಾಚಾರವೆಂದರೆ, ಕೆಂಪು ಚೀನಾವು ಅಣುಬಾಂಬನ್ನು ಸ್ಫೋಟಗೊಳಿಸಿದ್ದು. ಅಮೆರಿಕೆ, ರಶ್ಯಗಳಂತೆಯೇ ಚೀನಾವೂ ಅಣ್ವಸ್ತ್ರಗಳನ್ನು ತಯಾರಿಸಲು ಇದರಿಂದ ಪ್ರಾರಂಭ ಮಾಡಿದಂತಾಯಿತು. ತಾನು ಅಣುಬಾಂಬನ್ನು ತಯಾರಿಸಿದ ನಂತರವೇ ನಿಶ್ಶಸ್ತ್ರೀಕರಣದ ಮಾತುಕತೆಯಲ್ಲಿ ಭಾಗ ವಹಿಸುವುದಾಗಿ ಚೀನಾ ಸಾರಿತ್ತೆಂಬುದನ್ನು ಮರೆಯಬಾರದು. ಚೀನೀಯ ವಿಜ್ಞಾನಿಗಳು ಭೀಕರ ಪರಿಣಾಮದ ಅಣು ಬಾಂಬನ್ನು ತಯಾರಿಸುವ ದೊಡ್ಡ ಕಾರಖಾನೆಯನ್ನು ಕಟ್ಟುವಲ್ಲಿ ಉತ್ಸಾಹ ವಹಿಸುತ್ತಿದ್ದಾರೆ. ಆಫ್ರೋ-ಏಶ್ಯಾವನ್ನು ನಡುಗಿಸುವ ಹೇರಾಸೆಯಿಂದ ಕೂಡಿದ ಚೀನಾದಕ್ಕೆಯಲ್ಲಿ ಅಣುಬಾಂಬು ಇರುವುದೆಂದರೆ, ಮಂಗನ ಕೈಯಲ್ಲಿ ಉರಿಯುವ ಕೊಳ್ಳಿ ಇತ್ತಂತೆ. ಇದರಿಂದ ಚೀನಾದೊಡನೆ ಗಡಿ ವಿವಾದಿಗಳನ್ನು ಹೊಂದಿರುವ ಭಾರತದಂತಹ ದೇಶವು ಕಂಗಾಲಾಗುವುದು ಸ್ವಾಭಾವಿಕ. ಹಾಗಿರುವಾಗ, ಭಾರತವು ಅಣುಶಕ್ತಿಯನ್ನು ಕೇವಲ ಶಾಂತಿ ಕಾರ್ಯಗಳಿಗೆ ಮಾತ್ರ ಉಪಯೋಗಿಸಬೇಕೆ? ಅಥವಾ ಅದರಿಂದ ಅಣ್ವಸ್ತ್ರಗಳನ್ನೂ ತಯಾರಿಸಿಕೊಂಡು ಶಕ್ತಿಸಂಪನ್ನವಾಗಬೇಕೇ ಎಂಬುದನ್ನು ವಿಚಾರಿಸಿಕೊಳ್ಳುವ ಕಾಲವೀಗ ಬಂದಿದೆ.

ವಚನ ಸುಧೆ

ಯೋ ಉಪನಿಷತ್ಸು ಧರ್ಮಾಸ್ತೇ ಮಯಿ ಸಂತು॥

(ಉಪನಿಷದ್ ಶಾಂತಿ)

೦ ತತ್ವಜ್ಞಾನ ಗ್ರಂಥಗಳಲ್ಲಿ ಧರ್ಮವೆಂದು ಉಲ್ಲೇಖಿತ ಗೊಂಡವು ನನ್ನಲ್ಲಿ ನೆಲೆಯಾಗಲಿ.

೦೦ ತತ್ವಜ್ಞಾನದ ಶ್ರೇಷ್ಠ ಗ್ರಂಥಗಳಲ್ಲಿ ಮನುಷ್ಯನ ಉನ್ನತಿಗೆ ಸಾಧಕ ಧರ್ಮವೆಂದು ಹೇಳಿರುವ ಎಲ್ಲವೂ ನನ್ನ ಮನಸ್ಸಿನಲ್ಲಿ ಸ್ಥಿರವಾಗಿ ನೆಲೆ ನಿಲ್ಲಲಿ. ಅಧರ್ಮಕ್ಕನುಸಾರವಾಗಿ ನಾನು ನಡೆಯುವಂತಾಗಲಿ—ಎಂಬ ಅಭಿಲಾಷೆ ಎಲ್ಲರಲ್ಲೂ ಇರಬೇಕು.

ನಾಲ್ಕನೆಯ ಯೋಜನೆ

ಭಾರತದ ನಾಲ್ಕನೆಯ ಯೋಜನೆಯು ರೂ ೨೧,೫೦೦ ಕೋಟಿ ರೂಪಾಯಿಗಳದ್ದಾಗುವುದೆಂದು ಈಗ ಕೇಂದ್ರ ಸರಕಾರವು ಗೊತ್ತುಮಾಡಿದೆ. ಇದರಲ್ಲಿ ೫೦೦ ಕೋಟಿಯನ್ನು ಕೊರತೆ ಧನ ವಿನಿಯೋಗದಿಂದ ಮತ್ತು ೨೫೦೦ ಕೋಟಿ ವಿದೇಶೀ ಸಹಾಯದಿಂದ ತುಂಬಿಕೊಳ್ಳುವ ವಿಚಾರವಿದೆ. ಈಗಿನ ಅಂದಾಜಿನಂತೆ ಸುಮಾರು ೩೦೦೦ ಕೋಟಿ ರೂಪಾಯಿಗಳನ್ನು ಮಾತ್ರ ತೆರಿಗೆ ಇತ್ಯಾದಿಗಳಿಂದ ತುಂಬಿಸಿಕೊಳ್ಳಬೇಕಾಗುವುದು. ಅಂದರೆ, ಸುಮಾರು ೧೫,೫೦೦ ಕೋಟಿ ರೂಪಾಯಿಗಳ ವರಮಾನವು ಈಗಿರುವ ಆರ್ಥಿಕ ನೀತಿಯಿಂದಲೇ ದೇಶದಲ್ಲಿ ಸಂಗ್ರಹಿತವಾಗುವ ನಿರೀಕ್ಷೆಯಿದೆ. ವಿದೇಶೀಯ ಮತ್ತು ಕೊರತೆ ಧನ ವಿನಿಯೋಗದ ಮೊತ್ತವು ಮುಂದಿನ ಯೋಜನೆಯಲ್ಲಿ ತುಲನಾತ್ಮಕವಾಗಿ ಕಡಿಮೆಯಾಗಿರುವುದನ್ನು ನಾವು ಗಮನಿಸುವುದು ಅಗತ್ಯ. ಆದರೂ ಕೆಲವೊಂದು ಹೊಸ ತೆರಿಗೆಗಳನ್ನು ಹೇರಬೇಕಾಗುವುದು. ಹೀಗೆ ತೆರಿಗೆ ಹೊರಿಸುವ ಜವಾಬ್ದಾರಿಯನ್ನು ರಾಜ್ಯ ಸರಕಾರಗಳೇ ವಹಿಸಬೇಕೆಂದು ತಿಳಿಯಿದೆ. ಆದರೆ ಅವು ತಮ್ಮ ಅಸಮರ್ಥತೆಯನ್ನು ಈಗಾಗಲೇ ಪ್ರಕಟಿಸಿವೆ. ಆದುದರಿಂದ ರಾಷ್ಟ್ರೀಯ ಅಭಿವೃದ್ಧಿ ಮಂಡಳದ ಸಭೆಯಲ್ಲಿ ನಿಯೋಜಿತ ನಾಲ್ಕನೆಯ ಯೋಜನೆಯು ಕರಡು ಚರ್ಚೆಗೆತ್ತಿಕೊಂಡಾಗ ಬಿಸುಬಿಸಿ ವಾತಾವರಣವೂ ಮೂಡಬಹುದು. ರಾಜ್ಯ ಸರಕಾರಗಳು ೩೦೦೦ ಕೋಟಿ ರೂಪಾಯಿಗಳನ್ನು ಐದು ವರ್ಷಗಳಲ್ಲಿ ಮಿತವ್ಯಯದಿಂದಲೇ ಗಳಿಸುವುದು ಸಾಧ್ಯವಿಲ್ಲವೆ?

ನರಸಣ್ಣನ ಸರಸ



ಜನಮತವೇನೇ ಇರಲಿ, ಧನಮತ ನನ್ನ ಪರವಿರುವ ತನಕ ಈ ಸ್ಥಾನವನ್ನು ಖಂಡಿತ ಕೊಟ್ಟು ಬಿಟ್ಟುಕೊಡಲಾರೆ.

·ನ.ಉ

ಮೈಮರೆತ ಮಾನವತೆ

ಕತೆಗಾರ್ತಿ
ಶ್ರೀಮತಿ ಪಿ. ಯಶೋದಾ ಯಸ್. ಚೆನ್ನಿ.

"ಸಂಧ್ಯಾ!"

"ಏನಮ್ಮಾ?" ಪುಸ್ತಕದಿಂದ ತಲೆಯೆತ್ತದೆಯೇ ಕೇಳಿದಳು ಸಂಧ್ಯಾ.

"ತಿಳಿದೂ ತಿಳಿದೂ ಏನೂ ಗೊತ್ತಿಲ್ಲದವರಂತೆ ಆಡಬೇಡ ಮಗೂ. ಅಲ್ಲದೆ ಹೀಗೇ ಎಷ್ಟು ದಿನಾಂತ ಇರೋದು ಸಾಧ್ಯ? ಇಲ್ಲಿ ನೋಡು ಸಂಧ್ಯಾ, ಸ್ವಲ್ಪ ಮುಖ ನೋಡಿ ಸರಿಯಾಗಿ ಮಾತಾಡು" ಬೇಸರದಿಂದ ನುಡಿದರು ಸುಶೀಲಮ್ಮ.

ಸಂಧ್ಯಾ ಇನ್ನು ಸುಮ್ಮನಿರುವುದು ಅಸಾಧ್ಯವೆಂಬುದನ್ನರಿತು ಅನಿವಾರ್ಯವಾಗಿ ತಲೆಯೆತ್ತಿದಳು. ಸುಶೀಲಮ್ಮನವರು ಅಷ್ಟರಿಂದಲೇ ತೃಪ್ತರಾದವರಂತೆ ಮಾತು ಮುಂದುವರಿಸಿದರು.

"ಹುಡುಗನಿಗೆ ಮನೇಲೂ ಒಳ್ಳೆ ಅನುಕೂಲ ಉಂಟಂತೆ. ಅಲ್ಲದೆ ಹುಡುಗ ಧಾರವಾಡದಲ್ಲಿ ಸೈಕ್ಯಾಲಜಿ ಮೇಸ್ತ್ರಂತೆ"

"ಹೂಂ."

"ಆದರೆ... ವರದಕ್ಷಿಣೆ ಮಾತ್ರ ಮೂರು ಸಾವಿರ ಕೊಟ್ಟೇ ತೀರ್ಬೇಕಂತೆ. ಹಣದ ವಿಚಾರ ನಿಶ್ಚಯವಾದ ಮೇಲೆ ಉಳಿದ ವಿಚಾರ ನಿರ್ಣಯಿಸೋದಂತೆ"

ಸಂಧ್ಯಾ ಮೌನವಾಗಿ ಕುಳಿತುದನ್ನು ನೋಡಿ ಸುಶೀಲಮ್ಮ ಸಮಾಧಾನದಿಂದ ಮಾತು ಮುಂದುವರಿಸಿದರು.

"ಸಂಧ್ಯಾ! ನಾನೆನ್ನುವುದಾದರೆ ದಿನಕರನ ಓದಿಗೆಂದಿಟ್ಟ ಮೂರು ಸಾವಿರ ತೆಗೆದು ಮದುವೆ ಮುಗಿಸಿ ಬಿಡೋದು. ಆ ಮೇಲೆ ಏನಾದರೂ ಆಗಲಿ."

"ಅಂದರೆ... ದಿನಕರ ಈಗಲೇ ಕೆಲಸಕ್ಕೆ ಸೇರಿ ಓದಿಗೆ ತಿಲತರ್ಪಣ ಕೊಡಲಿ ಎಂದೇ?"

"ಉದ್ವಿಗ್ನಳಾಗಿ ಪ್ರಶ್ನಿಸಿದಳು ಸಂಧ್ಯಾ.

"ಬೇರೆ ದಾರಿಯೇ ಇಲ್ಲವಲ್ಲ ಮಗೂ," ಹತಾಶರಾಗಿ ನುಡಿದರು ತಾಯಿ.

"ಅಮ್ಮಾ! ಅದಕ್ಕೇ ನಾನೆನ್ನುವುದು. ಹೆಣ್ಣಿಗಿಂತಲೂ ಹಣವೇ ಮುಖ್ಯವೆನ್ನುವ ಮದುವೆಯ ಮಾರುಕಟ್ಟೆಯಲ್ಲಿ ನಾನು ಪಶುವಾಗಿ ಬಲಿಯಾಗಲಾರೆ. ಅಲ್ಲದೆ ದಿನಕರ ಇನ್ನೂ ಸಣ್ಣವ. ಈಗಲೇ ಅವನು ಸಂಸಾರದ ಜವಾಬ್ದಾರಿ ಹೊರುವಷ್ಟು ಶಕ್ತನಾಗಿಲ್ಲ. ಅವನು ಕಾಲೇಜು ಸೇರಲಿ. ನಾನು ಏನಾದರೂ ಉದ್ಯೋಗಕ್ಕೆ ಸೇರಿದರೆ ಜೀವನ ನಡೆಯುತ್ತೆ. ಇದು ಖಂಡಿತ. ಈ ವರಗಳ ಧನಪಿಪಾಸೆ ಹಿಂಗಿಸಲು ನಾವು ಶಕ್ತರಲ್ಲ ಅಮ್ಮಾ. ಅಂತಹ ಮದುವೆಯ ಅಗತ್ಯವೇ ನನಗಿಲ್ಲ"

"ಆದರೆ.... ಸಂಧ್ಯಾ...."

"ನೀನು ಸುಮ್ಮನಿರಮ್ಮಾ. ನಾನು ಚೆನ್ನಾಗಿ ಯೋಚಿಸಿ ನಿರ್ಧರಿಸಿದ್ದೇನೆ. ಅನಾವಶ್ಯಕವಾಗಿ ಬೆಳೆಸುವುದರಿಂದ ಪ್ರಯೋಜನವಿಲ್ಲ." ಎಂದು ಮುಚ್ಚಿಟ್ಟ ಪುಸ್ತಕವನ್ನು ಕೈಗೆತ್ತಿಕೊಂಡಳು ಸಂಧ್ಯಾ.

ಮಗಳ ದೃಢ ನಿರ್ಧಾರ ವಾಣಿಯ ಅನುಭವವಿದ್ದ ಸುಶೀಲಮ್ಮ ನಿಟ್ಟುಸಿರೆಳೆದು ಮೌನ ತಳೆದರು.

○ ○ ○

ಆಫೀಸಿನ ಯಾಂತ್ರಿಕ ದುಡಿತದಿಂದ ಬೇಸತ್ತ ಸಂಧ್ಯಾ ಸಂಜೆಯ ಬೇಸರ ಕಳೆಯಲೆಂದು ಸಮುದ್ರ ತೀರದತ್ತ ತೆರಳುವಳು. ಅಲ್ಲಿ ಮರಳ ರಾಶಿಯ ಮೇಲೆ ಕಾಲು ಚಾಚಿ ಕುಳಿತು ಕುಣಿವ ತೆರೆಗಳತ್ತ ದೃಷ್ಟಿ ಹಾಯಿಸುವಳು. ದುಡಿದು ಸೋತ ಜೀವಕ್ಕೆ ತುಸು ನೆಮ್ಮದಿ ನೀಡುವ ರಮ್ಯ ನೋಟ! ಆದರೆ ಆಗಲೂ ದೊರೆತ ಕ್ಷಣಿಕ ಶಾಂತಿಯನ್ನು ಕೆದಕುವ ಕೊಂಕು ಮಾತುಗಳು ಬೇಡ ಬೇಡವೆಂದರೂ ಹೃದಯವನ್ನು ಸುಡುತಿತ್ತು.

"ಯಾರಾಕೆ? ಯಾರಾಗಿರಬಹುದು?"

"ವಿರಹ ವ್ಯಥೆಯೋ!"

"ಸಂಗಾತಿ ಬೇಕೇ?"

"ಸನ್ಯಾಸಿನಿಯ ಸೋಗೇ"

"ಥೂ.... ಹೊಲಸು ಜನ...!" ಎಂದುಕೊಂಡು ಸಂಧ್ಯಾ ಅಲ್ಲಿ ಕುಳಿತಿರಲಾರದೆ ವೇಗವಾಗಿ ಮನೆಯತ್ತ ಧಾವಿಸುವಳು.

"ಕಾಫಿ ಕುಡಿ ಮಗೂ" ಸೋತು ಬಂದ ಮಗಳಿಗೆ ತಾಯ ಆದರದ ಮಾತು! ಕಾಫಿಯನ್ನಿತ್ತ ತಾಯಿ ಒಳಗೆ ಅಡುಗೆ ಕೆಲಸಕ್ಕೆಂದು ತೆರಳುವರು.

ಆಗ ತಮ್ಮ ಕೈಯಲ್ಲಿ ಬೇಟ್ ಹಿಡಿದುಕೊಂಡು ಕಾಲೇಜಿನ ಆಟದ ಮೈದಾನದತ್ತ ಉತ್ಸಾಹದಿಂದ ನಡೆಯುವ.

ಸಂಧ್ಯಾ ಓದಲೆಂದು ತೆರೆದ ಪುಸ್ತಕ ತೆರೆದಂತೆಯೇ ಉಳಿಯುವುದು. ಬರೆದು ಸೋತ ಕೈಬೆರಳುಗಳು ನಡುಗುವುವು. ಕಣ್ಣೆವೆಗಳು ಭಾರವಾಗಿ ಮುಚ್ಚಿಕೊಳ್ಳುವುವು.

"ಅಯ್ಯೋ.... ಸೋತೆ...." ಎಂದು ಚೀರಬೇಕೆನಿಸುವುದು.

ಆದರೆ ಹೇಗೆ.... ಯಾರೊಡನೆ... ಹೇಗೆ ಕೂಗಿ ಹೇಳಲಿ?

ಹೆಣ್ಣನ್ನು ಪ್ರಾಣಿಗಿಂತಲೂ ಕೀಳಾಗಿ ಕಂಡು ಹಣಕ್ಕಾಗಿಯೇ ಮದುವೆಯಾಗುವ ಪಶು ಮಾನವನಿಂದ ದೂರವೇ ಉಳಿಯ ಬಯಸಿ ತನ್ನದೇ ಆದ ಆದರ್ಶದ ಕಲ್ಪನಾ ಸಾಮ್ರಾಜ್ಯದಲ್ಲಿ ಕೆಚ್ಚೆದೆಯುವವಳಾಗಿ ಬಾಳುವ ಆಕಾಂಕ್ಷೆ! ಆ ಕನಸಿನ ರಾಜ್ಯ ಎಷ್ಟೊಂದು ಸುಖಮಯವಾಗಿತ್ತು!

ಆದರೆ... ಯಾಕೋ ಬೇಸರ... ತಲೆಭಾರ.... ಯೋಚನೆ.... ಕೊರಗು...

ಅಕ್ಕರೆಯ ಮಾತೆಯೂ ಈಗ ಆಕೆಯನ್ನು ಆತ್ಮೀಯತೆಯಿಂದ ವಿಚಾರಿಸಲಾರರು. ತಿಂಗಳಿಗೊಮ್ಮೆ ತಂದಿತ್ತ ಹಣವನ್ನು ನಗು ನಗುತ್ತಾ ತೆಗೆದುಕೊಳ್ಳುವಾಗ ಅವರೂ ವ್ಯವಹಾರಜ್ಞರಂತೆ ಕಾಣಿಸುತ್ತಾರೆ. ಅವರ ದೃಷ್ಟಿಯಲ್ಲಿ ಸಂಧ್ಯಾ ವೃದ್ಧಾಪ್ಯಕ್ಕಿರುವ ಊರುಗೋಲು ಮಾತ್ರ! ಅಷ್ಟೆ!

○ ○ ○

ಸಂಧ್ಯಾ ಮೊಣಕಾಲ ಮೇಲೆ ತಲೆಯೂರಿ ಕೈಬೆರಳುಗಳಲ್ಲಿ ಮರಳ ರಾಶಿಯ ಮೇಲೆ ಗೀಚುತ್ತಾ ಯಾರೂ ಕಾಣಲಾರರೆಂದು ತಿಳಿದು ಸಮುದ್ರ ದಡದ ಮೂಲೆಯ ಮರಗಳ ಗುಂಪಿನ ಬಳಿ ಕುಳಿತಿದ್ದಳು. ಆಕೆ ಉದ್ಯೋಗಕ್ಕೆ ಸೇರಿ ಆಗಲೇ ಐದು ವರ್ಷಗಳುರುಳಿ ಬಿಟ್ಟಿದ್ದವು.

"ರಾಜಾ... ಹೀಗೇ ಎಷ್ಟು ದಿನ ಇರೋದು? ನಾನಂತೂ ಒಂದರಗಳಿಗೆಯೂ ನಿಮ್ಮನ್ನು ಬಿಟ್ಟಿರಲಾರೆ."

ಯಾರೂ ಇರಲಾರರೆಂದು ಧೈರ್ಯವಾಗಿ ಏಕಾಂತ ಚಿಂತನೆಗೆ ಕುಳಿತ ನಿರ್ಜನ ಪ್ರದೇಶದಲ್ಲೂ ಮರಗಳೆಡೆಯಿಂದ ಪ್ರಣಯಿಗಳ ಉತ್ಕಂಠಿತ ಧ್ವನಿ ಕೇಳಿಸುತ್ತಿತ್ತು.

ಸಂಧ್ಯಾ ಬೆಚ್ಚಿಬಿದ್ದಳು.

"ಕಲ್ಪನಾ... ನನ್ನ ರಾಣೀ ಕೇವಲ ಇನ್ನೊಂದು ವರ್ಷ ತಾಳಿಕೊಂಡಿರು. ಆ ಮೇಲೆ ನನ್ನ ಓದು ಮುಗಿದು ಕೆಲಸಕ್ಕೆ ಸೇರ್ತೇನೆ. ಅಕ್ಕನ ಹಂಗಿನ ಅನ್ನಕ್ಕೆ ಕೊನೆಯಾಗುತ್ತೆ"

ಸಂಧ್ಯಾ ಬೆವರಿದಳು.

ಹೌದು... ದಿನಕರನ ಧ್ವನಿ.... ಆದರೆ... ಅದೇನು.... ಈ ರೀತಿಯ ಮಾತು....!

ಸಂಧ್ಯಾ ಹಿಂತಿರುಗಿ ನೋಡಿದಳು.

ನೈಲಾನ್ ಸೀರೆಯ ಬಣ್ಣದ ಚಿಟ್ಟೆಯೊಂದಿಗೆ ಮೈಮರೆತ ಆತನಿಗೆ ಇಹಲೋಕದ ಅರಿವೇ ಇದ್ದಂತಿರಲಿಲ್ಲ.

"ಅಕ್ಕನ ಹಂಗಿನ ಅನ್ನಕ್ಕೆ ಕೊನೆ?'

ಅಯ್ಯೋ.... ಇಷ್ಟೆಯೋ... ತನ್ನ ಅಪಾರ ತ್ಯಾಗ.... ಸಾವಿರ ಸಂಕಷ್ಟಗಳಿಗೆಲ್ಲ ಆತ ಕಟ್ಟಿದ ಬೆಲೆ ಎಷ್ಟೊಂದು ತುಚ್ಛವಾಗಿದ್ದು! ಆ ಮೇಲೆ ಅವನಿಗೆ ನನ್ನ ಹಂಗಿಲ್ಲ. ದೇಹವನ್ನು ಸವೆಸಿ ರಕ್ತವನ್ನು ಬೆವರನ್ನಾಗಿ ಹರಿಸಿ, ತನ್ನೆಲ್ಲ ಸುಖ ಸಂತೋಷಕ್ಕೂ ತಿಲಾಂಜಲಿಯನ್ನಿತ್ತು ಆದರ್ಶದ ಕನಸಿನಲ್ಲಿ ಮೈಮರೆತ ತನ್ನನು ಪಾತಾಳಕ್ಕಿಳಿಸಿ ಬಿಟ್ಟಿದ್ದ.

ತಮ್ಮನಿಗೆ ದೊಡ್ಡ ಹುದ್ದೆ ದೊರೆಯುತ್ತೆ. ಆ ಮೇಲೆ ತಾನು ನಿರಾತಂಕವಾಗಿ ಉಸಿರಾಡ ಬಹುದು. ಬೇಡವೆನಿಸಿದರೆ ಈ ಯಾಂತ್ರಿಕ ದುಡಿತವನ್ನು ನಿಲ್ಲಿಸಿ ಹಾಯಾಗಿರಬಹುದೆಂದು ಎಂದೆಲ್ಲ ಕಂಡ ಕನಸು ನುಚ್ಚುನೂರಾಯಿತೇ?

"ವಲ್ಲ—ಅದೊಂದು ನಿಮ್ಮ ಅಕ್ಕ.... ಅವರದೊಂದು ರೀತಿಯೇ ಬೇರೆ ಅಲ್ಲ.... ಅವರೇನು ಮದುವೆಯಾಗ್ಲಿಲ್ಲ?''

ಸಂಧ್ಯಾ ಕಿವಿ ನಿಮಿರಿಸಿದಳು.

"ಅದೊಂದು ಶುದ್ಧ ಗುಗ್ಗು! ಸನ್ಯಾಸಿನಿಯಂತೆ ಜೀವಿಸ್ತದಂತೆ ಅದಕ್ಕೆ ಬುದ್ಧಿಯಿಲ್ಲ ಕಲ್ಪನಾ." ಎಂದು ನಕ್ಕ ದಿನಕರನೊಂದಿಗೆ ಕಲ್ಪನಾಳ ನಗುವೂ ಬೆರೆಯಿತು. ಸಂಧ್ಯಾ ತನ್ನೆರಡು ಕೈಗಳಿಂದಲೂ ಕಿವಿ ಮುಚ್ಚಿಕೊಂಡಳು. ಆಕೆಯ ತಲೆ ತಿರುಗಿತು. ತಾನು ಕುಳಿತ ಭೂಮಿಯೇ ನಡುಗುತ್ತಿರುವಂತೆ ತೋರಿತು. ಕಣ್ಣು ಕತ್ತಲೆ ಬಂದು ಬಿದ್ದುಬಿಟ್ಟಳವಳು.

ಆ ಅಭಾಗಿನಿಗಾಗಿ ಭೋರ್ಗರೆವ ಸಮುದ್ರ ತಣ್ಣನೆಯ ಗಾಳಿ ಬೀಸಿತು. ಚಲಿಸದೆ ನಿಂತ ಮರಗಳು ಅಲುಗತೊಡಗಿದುವು. ಆದರೆ ಮಾನವ ಜೀವ ಮಾತ್ರ ಅವಳಿಗಾಗಿ ಒಂದೇ ಒಂದು ಸಹಾನುಭೂತಿಯ ಸ್ವರವನ್ನೂ ಎತ್ತಲಿಲ್ಲ, ಅಳಲಿಲ್ಲ.

"ಅಯ್ಯೋ.... ಪಾಪ..." ಎನಲಿಲ್ಲ.

○ ○ ○



6¼%

ಫಿಕ್ಸೆಡ್ ಡಿಪಾಜಿಟುಗಳ ಮೇಲೆ ತಾರೀಕು 1—9—64ರಿಂದ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು:—

	1ರಿಂದ 3 (ತಿಂಗಳು) % p.a.	4ರಿಂದ 12 (ತಿಂಗಳು) % p.a.	2 ವರ್ಷ % p.a.	3 ವರ್ಷ % p.a.	4 ವರ್ಷ % p.a.	5 ವರ್ಷ % p.a.	6 ವರ್ಷ % p.a.	7—10 (ವರ್ಷ) % p.a.
ರೂ. 4999ರ ವರೆಗಿನ ಡಿಪಾಜಿಟುಗಳ ಮೇಲೆ:-	4½	5	5¼	5½	5¾	6	6¼	6¼
ರೂ. 5000 ಮತ್ತು ಮೇಲ್ಪಟ್ಟ ಡಿಪಾಜಿಟುಗಳ ಮೇಲೆ:-	5	5¼	5½	5¾	6	6	6¼	6¼

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

ರಿಜಿಸ್ಟರ್ಡ್ ಆಫೀಸು: ಕೋರ್ಟು ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ)
(ಶೆಡ್ಯೂಲ್ಡ್ ಬ್ಯಾಂಕ್)
ಸ್ಥಾಪನೆ: 1920

ದಶಮಿಯ ಒಸಗೆ

ಅಕ್ಷಯ ಚಿಹ್ನೆಯೊಂದಿಗೆ ಅಂತ್ಯ

ಬರೆದವರು: ಶ್ರೀ ಶಿವಶಂಕರ

ಅಕ್ಷಯ ಚಿಹ್ನೆಯೊಂದಿಗೆ ಅಂತ್ಯವೆನ್ನುವಾಗ ಯಾವುದರ ಅಂತ್ಯ ಅಂತ್ಯವೆಂಬುದನ್ನು ಪ್ರತ್ಯೇಕವಾಗಿ 'ನವಯುಗ' ವಾಚಕ ವೃಂದಕ್ಕೆ ಹೇಳಬೇಕಾಗಿರುವದಿಲ್ಲ. ಕಳೆದ ಕೆಲವು ಸಂಚಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳಿಂದ ಅವರಿಗದು ಮನದಟ್ಟಾಗಿರಬಹುದು; ಆದರೂ ಕೆಲವೊಮ್ಮೆ ಕೆಲ ದೊಡ್ಡ ಜನರೆನಿಸಿಕೊಂಡವರೇನಾದರೂ ಅಪ್ಪಿತಪ್ಪಿಯೂ ನುಡಿದಲ್ಲಿ ಅವರ ಹಿಂಬಾಲಕರಿಗೆ ಅದುವೇ ದೊಡ್ಡ ಬದನೆಕಾಯಿ ವಾಕ್ಯವಾಗಿ ಬಿಡುತ್ತದೆ. ಒಡನೆ ಅವರು ತಮ್ಮ ಪ್ರಭಾವದಿಂದ ಪತ್ರಿಕೆಗಳಲ್ಲಿ ಪ್ರಚಾರ ಸಿಗುವಂತೆ ಪ್ರಯತ್ನಿಸುತ್ತಾರೆ. ಆಗ ಶ್ರೀ ಸಾಮಾನ್ಯನ ಮನಸ್ಸಿನಲ್ಲಿ 'ಶಾಂತಿ-ಸಂಧಾನಗಳ' ಮುಂದೆ ಎಲ್ಲವೂ ಶೂನ್ಯವೆನ್ನುವ ಮನೋಭಾವ ತಾನೇತಾನಾಗಿ ಬಂದುಬಿಡುತ್ತದೆ. ಆಗ ಅದನ್ನು ವಿರೋಧಿಸುತ್ತಿದ್ದವರೂ ತಮ್ಮ ವಾದ ಸಮರ್ಥನೆ ಹಾಗೂ ಜನತೆಯ ಅದರಲ್ಲ ಶ್ರೀ ಸಾಮಾನ್ಯನ ಹಿತದೃಷ್ಟಿಯಿಂದ ತಾನೂ ಕೆಲವು ದೊಡ್ಡ ಜನರ ಮಹನೀಯರ, ಗಣ್ಯ ಜವಾಬ್ದಾರಿಯುತ ವ್ಯಕ್ತಿಗಳ ಮುಂದಿಡಬೇಕಾಗುತ್ತದೆ. ಮುಖ್ಯಾರ್ಥದಲ್ಲಿ ಬದಲಾವಣೆಯಾಗದಿದ್ದರೂ ಆ ಒಂದು ದೊಡ್ಡತನದ ಮುದ್ರೆ ಅದಕ್ಕಿರುತ್ತದೆ.

ಶ್ರೀ ಜಯಪ್ರಕಾಶ ನಾರಾಯಣರು ಪಾಕಿಸ್ತಾನಕ್ಕೆ ಹೋದಾಗ ಲೋಕಸಭೆಯಲ್ಲಿ ಕೆಲವು ಸದಸ್ಯರು ಪ್ರಧಾನಿ ಶಾಸ್ತ್ರೀಯವರ ಬಾಯಿಯಿಂದ ಕೆಲ ಮಾತುಗಳನ್ನು ಹೊರಗೆಡಹಿಸಲು ಪ್ರಯತ್ನಿಸಿದರು. ಉಪಾಯಗಾರ ಲಾಲಬಹದೂರರು ಅತ್ತ 'ಹೂಂ' ಅನ್ನಲಿಲ್ಲ, ಇತ್ತ 'ಊಹೂಂ' ಎನ್ನಲಿಲ್ಲ. ಶಾಂತರಾಗಿದ್ದರು. ಅಲ್ಲದೆ ಅಕ್ಷಯ ಚಿಹ್ನೆಯನ್ನು ಬಿಟ್ಟುಕೊಡುವ ಮಾತಿಗೆ ಅವರು ಅದಿನ್ನೂ ಒಪ್ಪಿರುವದಿಲ್ಲ.

ಪರರಾಷ್ಟ್ರ ಸಂಪರ್ಕ ಸಚಿವ ಸ್ವರಣಸಿಂಘರು ಕೆಲವೊಮ್ಮೆ ಅತ್ತಿತ್ತ ಅಪ್ಪಿತಪ್ಪಿ ಏನೇನೋ ಆಡಿದ್ದರೂ ಕಮ್ಯೂನಿಸ್ಟ್ ಚೈನೀಯರ ಅತ್ಯಾಚಾರ ಹಾಗೂ ಮೋಸದ ಕುರಿತು ಸ್ವಲ್ಪ ಗಂಭೀರವಾಗಿಯೇ ರಾಜ್ಯಸಭೆಯಲ್ಲಿ ಮಾತಾಡಿದಾರೆ. ೧೪,೫೦೦ ಚದರ ಮೈಲು ಪ್ರದೇಶವನ್ನು ಕಮ್ಯೂನಿಸ್ಟ್ ಚೈನಾವು ಆಕ್ರಮಿಸಿಕೊಂಡಿದೆಯೆಂದೂ ಕೊಲಂಬೋ ಸೂತ್ರದ ಪ್ರಕಾರ ಆ ೧೪,೫೦೦ ಚದರ ಮೈಲು ಪ್ರದೇಶದಿಂದ ಇಪ್ಪತ್ತು ಕಿಲೋಮೀಟರು ಹಿಂದೆ ಸರಿಯಬೇಕಾಗಿತ್ತಾದರೂ, ಅದಕ್ಕೆ ಒಪ್ಪಲೂ ಅವರು ಸಿದ್ಧರಿಲ್ಲವೆಂದು ಶ್ರೀ ಸ್ವರಣಸಿಂಘರು ಸ್ಪಷ್ಟಪಡಿಸಿದರು.

ರಕ್ಷಣಾ ಮಂತ್ರಿ ಶ್ರೀ ಯಶವಂತರಾವ ಚವ್ಹಾಣರು ಇನ್ನೂ ಒಂದು ಹೆಜ್ಜೆ ಧೀರತನದಿಂದ ಮುಂದರಿದಿದ್ದಾರೆ. ಅವರು ಪೂನಾದಲ್ಲಿ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಇತ್ತೀಚೆಗೆ ಕೆಲ ಮಾತುಗಳನ್ನಾಡಿರುವರು. ಅವರು ಇತ್ತೀಚೆಗೆ ರಶ್ಯಾಕ್ಕೆ ಹೋಗಿ ಬಂದಿರುವುದನ್ನು ಇಲ್ಲಿ ಜ್ಞಾಪಕಪಡಿಸಿಕೊಟ್ಟಿದ್ದಾರೆ ಅವರು ತಮ್ಮ ಭಾಷಣದಲ್ಲಿ "ಲೆನಿನ್ ಗ್ರೇಡಿನ ಜನತೆಯು ಕೊರತೆ, ಹಸಿವು, ಗುಂಡಿನ ದಾಳಿ ಮತ್ತು ಸಾವಿನ ಮಧ್ಯೆ ೯೦೦ ದಿನಗಳಿದ್ದರು. ಆದರೂ ಅವರು ಜರ್ಮನರಿಗೆ ಶರಣಾಗತರಾಗಲಿಲ್ಲ ಆದರೆ ಇಲ್ಲಿನ ನಮ್ಮ ದೇಶದಲ್ಲಿ, ನಿಜವಾಗಿ ಯುದ್ಧ ನಿಂತಿದೆಯಾದರೂ ಆರ್ಥಿಕ ಅಭಿವೃದ್ಧಿಗೆ ಅಡೆತಡೆ ಬಂದು ಮತ್ತು ಕ್ರಯ ಸ್ವಲ್ಪ ಏರಿಬಿಟ್ಟಿದ್ದೇ ತಡ, ನಮ್ಮಲ್ಲಿರುವ ಮುತ್ಸದ್ದಿಗಳು ಅಕ್ಷಯ ಚಿಹ್ನೆಯನ್ನು ಬಿಟ್ಟುಕೊಡೋಣವೆಂದು ಹೇಳಲಾರಂಭಿಸಿರುವರೆಂದು ತಿಳಿಸಿರುವರು.

ನಮ್ಮ ಈ ಮುತ್ಸದ್ದಿಗಳು ಯಾರು? ಮೊತ್ತ ಮೊದಲನೆಯ ಹೆಸರು ಶ್ರೀ ಜಯಪ್ರಕಾಶ ನಾರಾಯಣರದ್ದೇ ಇರುತ್ತದೆ. ಅನಂತರ ಬರುವದು ಶ್ರೀಮತಿ ಲಕ್ಷ್ಮೀ ಮೆನನ್ ಹಾಗೂ ಇತರ ಕಾಂಗ್ರೆಸ್ಸಿನಲ್ಲಿರುವ ದೊಡ್ಡ ವ್ಯಕ್ತಿಗಳ ಹೆಸರುಗಳು ಏಕೆ ಗೋಪಾಲನಂಗೆ ಇಲ್ಲಿ ಸ್ಥಳವಿಲ್ಲ ಯಾಕೆಂದರೆ ಅವರು ಕಮ್ಯೂನಿಸ್ಟರಿದ್ದು ಚೈನೀ ಕಮ್ಯೂನಿಸ್ಟರಿಗೆ ಸ್ವಾಗತ ತವಕ ಪಡುವವರಿದ್ದಾರೆ.

ಕ್ರಯ ಏರಿಕೆಗೂ ಅಕ್ಷಯ ಚಿಹ್ನೆ ಗುತ್ತಿಗೆಗೂ ನಿಜವಾಗಿ ಏನೂ ಸಂಬಂಧವಿರುವದಿಲ್ಲ ಶ್ರೀ ಯಶವಂತರು ಒಂದೇ ಕಲ್ಲಿನಿಂದ ಎರಡು ಹಣ್ಣುಗಳನ್ನು ಉದುರಿಸಲು ಇಲ್ಲಿ ಪ್ರಯತ್ನಿಸಿದ್ದಾರೆ. ಅಧಿಕಾರಾರೂಢ ಪಕ್ಷದ ತಪ್ಪಿನ ಹೊರೆಯನ್ನು ಪೂರ್ಣವಾಗಿ ಆಕ್ರಮಣಗಾರರ ತಲೆಯ ಮೇಲೆ ಹಾಕಿ ಕಾಂಗ್ರೆಸ್ ಧ್ವಜವನ್ನು ಹಾರಾಡಿಸಲು ಅವರು ಪ್ರಯತ್ನಿಸಿದ್ದಾರೆ. ಆಕ್ರಮಣದಿಂದ ನಮಗೆ ಭಾರೀ ಆಘಾತವಾಗಿರುವದರಲ್ಲಿ ಸಂದೇಹವಿಲ್ಲ. ಆದಕ್ಕೆ ಕಾರಣ ಯಾರು? ತ್ರಿವಿಷ್ಟಪದ ಮೋಸದ ಆಕ್ರಮಣವನ್ನು ಸಹಿಸಿದವರ್ಯಾರು? ಆಕ್ರಮಣ ನಡೆದಾಗ ರಹಸ್ಯವಾಗಿಟ್ಟವರ್ಯಾರು? ಆಕ್ರಮಣ ನಡೆದಿದೆ ಎಂದವರನ್ನು 'ಯುದ್ಧಪ್ರಿಯರು' 'ರಣಕಹಳೆಗಳೆಂದು' ಮೂದಲಿಸಿದವರ್ಯಾರು?... ಇದೆಲ್ಲಾ ತಿಳಿಯದೆ ಶ್ರೀ ಯಶವಂತರು ಮಾತಾಡಿರುವದಿಲ್ಲ. ತಮ್ಮ ಪಕ್ಷದ ಘನತೆಯನ್ನು ಕಾಪಾಡಲಿಕ್ಕಾಗಿ ಮಾತ್ರ ಅವರು ಆ ರೀತಿ ಹೇಳಿರುವರು. ಈ ಲೇಖನಕ್ಕೆ ಅದು ಹೊರಗಿನ ವಿಷಯವಿರುವದರಿಂದ ಇಷ್ಟಕ್ಕೆ ಅದನ್ನು ಬಿಡಲಾಗಿರುತ್ತದೆ.

ಶಾಂತಿ-ಸಂಧಾನ ಶ್ರೀ ಯಶವಂತ ಚವ್ಹಾಣರಿಗೆ ಬೇಕಾಗಿಲ್ಲವೇನು? ಖಂಡಿತವಾಗಿಯೂ ಅವರಿಗೆ ಬೇಕು. ಭೂದಾನಿಗಳ ಶಾಂತಿ ಸಂಧಾನವಲ್ಲ. ಆತ್ಮಗೌರವವುಳ್ಳ, ಸ್ವದೇಶಾಭಿಮಾನಿಗಳ ಶಾಂತಿ ಸಂಧಾನ ಅವರಿಗೆ ಬೇಕಾಗಿದೆ. ಅಕ್ಷಯ ಚಿಹ್ನೆಯ ಅನಂತರ ಅಂತ್ಯವೆಲ್ಲಿ ಎಂಬ ಪ್ರಶ್ನೆಗೂ ಅವರೂ ಬದಲಿತ್ತಿದ್ದಾರೆ.

"ಚೈನಾದೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕೆಂದಿದ್ದರೆ ಒಂದು ರೀತಿಯದ್ದು ಮಾತ್ರ ಇದೆ, ಅದು ಗೌರವದ್ದೇ ಇದೆ. ಸರಕಾರವು ನ್ಯಾಯ ಹಾಗೂ ಗೌರವಗಳ ಮೇಲೆ ಆಧಾರಿತ ಒಪ್ಪಂದ ಮಾರ್ಗವನ್ನು ಕಂಡುಹಿಡಿಯುತ್ತದೆ ಹಾಗೂ ಯೋಚಿಸುತ್ತದೆ. ಆದರೆ ನಾವು, ಭಾರತದ ಜನತೆ, ಪಾಕಿಸ್ತಾನಕ್ಕೆ ಕಾಶ್ಮೀರವನ್ನಿತ್ತು ಮತ್ತು ಅಕ್ಷಯ ಚಿಹ್ನೆಯನ್ನು ಕೊಟ್ಟು ಒಪ್ಪಂದ ಮಾಡಿಕೊಳ್ಳಲು ಯೋಚಿಸಿದರೆ, ಆಗ ಸ್ವತಂತ್ರ ರಾಷ್ಟ್ರೀಯರಾಗಿ ಗೌರವದಿಂದ ಬಾಳುವ ಹಕ್ಕನ್ನು ಕಳೆದುಕೊಳ್ಳುತ್ತೇವೆ."

ಇವು ರಾಜಕೀಯ ಅರಿಯದ ತರುಣರ ಮಾತ್ರವಲ್ಲ, ಭಾರತದ ರಕ್ಷಣೆಯ ಜವಾಬ್ದಾರಿಯನ್ನರಿತುಕೊಂಡಿರುವ ಯಶವಂತ ಚವ್ಹಾಣರ ಮಾತುಗಳಿವೆ. ಇನ್ನಾದರೂ 'ಭ್ರಾಂತರು' ರಾಜಕೀಯ ಅರಿಯದವರು 'ಹಟವಾದಿಗಳೆಂ'ದು ಜಯಪ್ರಕಾಶರ ಅಕ್ಷಯ ಚಿಹ್ನೆ ಭೂದಾನಕ್ಕೆ ವಿರೋಧಿಸುವವರನ್ನು ಹೀಗಳೆಯುವ ಪತ್ರಿಕೆಗಳೂ, ಪ್ರಮುಖರೂ ರಾಜಕೀಯ ಉದ್ಯಮಿಗಳೂ ಜವಾಬ್ದಾರಿಯುತವಾಗಿ ವರ್ತಿಸಿಯಾರು, ವರ್ತಿಸಿಯಾರು.

ನಮ್ಮ ನಾಶಕ್ಕೆ ನಾವು ಮುಂದಾಗುವದು ಸರಿಯೇ?

ಸರ್ವಶ್ರೀ ಲಾಲಬಹದೂರ, ಸ್ವರಣಸಿಂಘ ಹಾಗೂ ಯಶವಂತ ಚವ್ಹಾಣರ

(೮ನೇ ಪುಟ ನೋಡಿರಿ)

ಲಕ್ಷಾಂತರ ಜನರು ನಮ್ಮ ವಸ್ತುಪ್ರದರ್ಶನ ರಂಗಕ್ಕೆ ಭೇಟಿಕೊಟ್ಟಿರುತ್ತಾರೆ:

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)

ಬ್ಯಾಂಕಿಗಿಂತ ಹಿರಿದಾದ ಸೇವಾಸಂಸ್ಥೆ ಈ ಬ್ಯಾಂಕ್

ಮಂಗಳೂರು | ಬೆಂಗಳೂರು

ಭಾರತದಲ್ಲಿ 235ಕ್ಕೂ ಮಿಕ್ಕಿದ ಶಾಖೆಗಳು

ಭಾರತ ದರ್ಶನ

ಆಧುನಿಕ ಬಂದರು-- ಖಾಂಡ್ಲ



ಖಾಂಡ್ಲದಲ್ಲಿ ಹಡಗುಗಳಿಗೆ ಸಾಮಾನುಗಳನ್ನು ಹೇರುವ ಮತ್ತು ಅವುಗಳಿಂದ ಇಳಿಸುವ ಜೆಟ್ಟಿ.

ಖಾಂಡ್ಲದ ಬಂದರಿನಲ್ಲಿ ಕಾಣುವ ಭೀಮಾಕೃತಿಯ ಕ್ರೇನ್‌ಗಳು.

ಒಂದು ಸ್ವತಂತ್ರ ದೇಶಕ್ಕೆ ಆಯಾತ ನಿರ್ಯಾತ ಹಾಗೂ ಸಾರಿಗೆ ಸಂಪರ್ಕಗಳು ಅನಿವಾರ್ಯವಾಗಿವೆ. ಈ ದಿಸೆಯಲ್ಲಿ ಬಂದರಗಳು ಮಾಡುವ ಕೆಲಸ ಅವರ್ಣನೀಯ. ವಿದೇಶಗಳೊಡನೆ ನಾವು ಮಾಡುವ ಎಲ್ಲ ವ್ಯಾಪಾರವೂ ನಮ್ಮ ಬಂದರುಗಳನ್ನೇ ಹೊಂದಿಕೊಂಡಿದೆ. ದೊಡ್ಡ ಮತ್ತು ಸಮರ್ಥ ಬಂದರುಗಳಿಲ್ಲದ ದೇಶದ ವ್ಯಾಪಾರ ವಹಿವಾಟುಗಳು ಬೆಳೆಯುವುದು ಸಾಧ್ಯವಿಲ್ಲ.

ಭಾರತವು ಬಹುದೊಡ್ಡ ದೇಶ. ಇದರ ಮೂರು ದಿಕ್ಕುಗಳಲ್ಲಿಯೂ ವಿಶಾಲ ಸಾಗರಗಳಿವೆ. ಬಹು ಹಿಂದಿನ ಕಾಲದಿಂದಲೂ ಭಾರತದ ಸುದೀರ್ಘ ಕರಾವಳಿಯಲ್ಲಿ ಅನೇಕ ಹಡಗು ನಿಲ್ದಾಣಗಳಿದ್ದುವು. ಇವುಗಳ ಮೂಲಕ ದೇಶ-ವಿದೇಶಗಳೊಡನೆ ಸಂಪರ್ಕವನ್ನು ಇಲ್ಲಿನ ಬೇರೆ ಬೇರೆ ರಾಜ ಮಹಾರಾಜರು ಇಟ್ಟುಕೊಂಡಿದ್ದರು. ವಿದೇಶಗಳ ದಂಡಯಾತ್ರೆಯನ್ನು ಮಾಡಿದ ವೀರ ರಾಜರೂ ಇದ್ದರು. ಸಮುದ್ರ ವ್ಯಾಪಾರದ ಕೇಂದ್ರವಾಗಿ ಬಂದರು ಸ್ಥಳಗಳು ಅಂದು ಮಾಡಿದ್ದ ಕಾರ್ಯವು ನಿಜಕ್ಕೂ ಪ್ರಶಂಸನೀಯ. ವ್ಯಾಪಾರಾದಿಗಳು ಉತ್ಥಾನ ಪರಿಸ್ಥಿತಿಯಲ್ಲಿದ್ದಾಗಲೇ ನಮ್ಮ ನಾಡೂ ಉನ್ನತ ಸ್ಥಿತಿಯಲ್ಲಿತ್ತು. ಎಂದು ಸಮುದ್ರ ವ್ಯಾಪಾರವು ಕ್ಷೀಣವಾಗಿ ಬಂತೋ ಅಂದು ನಮ್ಮ ಸ್ಥಿತಿಗಳೂ ಹೀನವಾಗುತ್ತ ಬರತೊಡಗಿದುವು.

ಭಾರತವು ಸ್ವತಂತ್ರವಾಗುವುದಕ್ಕೆ ಮೊದಲು ಪಶ್ಚಿಮದ ಕರಾವಳಿಯ ಬಂದರುಗಳಲ್ಲಿ ಕರಾಚಿಯೂ ಸೇರಿತ್ತು. ಗುಜರಾತ, ಸಿಂಧ ಪಂಜಾಬ ಮೊದಲಾದ ರಾಜ್ಯಗಳ ಆಯಾತ ನಿರ್ಯಾತಗಳು ಈ ಬಂದರದ ಮೂಲಕ ಸಾಗುತಿತ್ತು. ಭಾರತದಿಂದ ಪಾಕಿಸ್ತಾನವು ಪ್ರತ್ಯೇಕವಾದಾಗ ಕರಾಚಿಯು ನಮ್ಮ ಕೈತಪ್ಪಿ ಹೋಯಿತು. ಆದುದರಿಂದ ಪಶ್ಚಿಮ ಕರಾವಳಿಯ ಉತ್ತರೋತ್ತರ ಭಾಗದಲ್ಲೊಂದು ಬಂದರನ್ನು ಕಟ್ಟುವುದು ಅತ್ಯಗತ್ಯವಾಯಿತು. ಇಲ್ಲವಾದರೆ, ಸಾಂದ್ರವಾದ ಬೊಂಬಾಯಿಯ ಮೇಲೆ ಮತ್ತಷ್ಟು ಭಾರ ಬೀಳುತಿತ್ತು.

ಇದನ್ನು ಪರ್ಯಾಲೋಚಿಸಿ ಗುಜರಾತದ 'ಖಾಂಡ್ಲ'ವನ್ನು ಪ್ರಬುದ್ಧ ಬಂದರವನ್ನಾಗಿ ಕಟ್ಟುವ ಯೋಜನೆಯೊಂದನ್ನು ರೂಪಿಸಲಾಯಿತು ಇದನ್ನು ಅತಿತ್ವರಿತವಾಗಿಯೇ ಕೈಗೊಂಡು ಸಂಪೂರ್ಣ ಮಾಡಲಾಯಿತು. ಅಂದು ತೀರ ಹಳ್ಳಿಯಂತಿದ್ದ ಮೀನುಗಾರರ ವಸತಿಯಾಗಿದ್ದ ಖಾಂಡ್ಲ ಇಂದು ದೇಶದ ಪ್ರಬುದ್ಧ ಬಂದರುಗಳಲ್ಲಿ ಒಂದಾಗಿ ದೇಶದ ಆರ್ಥಿಕ ಪುನರುತ್ಥಾನದ ಮಹಾ ಕಾರ್ಯದಲ್ಲಿ ಭಾಗಿಯಾಗುತ್ತಿದೆ.

ಇಂದು ಖಾಂಡ್ಲ ಪವಿತ್ರಭೂಮಿ ಭಾರತದ ಒಂದು ಮಹಾ ದೇವಾಲಯ. ಇಲ್ಲಿ ಜನತಾ ಜನಾರ್ದನನ ಸೇವೆ ಪ್ರತಿಕ್ಷಣ ನಡೆಯುತ್ತಿದೆ. ಆಧುನಿಕ ಭಾರತದ ನಿರ್ಮಾಣ ಕಾರ್ಯದಲ್ಲಿ ಇದು ಸಲ್ಲಿಸುವ ಸೇವೆ ಅಶ್ಯಪೂರ್ವವಾದುದು.



ಆಧುನಿಕ ಸಮುದ್ರ ಬಂದರ ಖಾಂಡ್ಲದ ಒಂದು ಹೃದಯಂಗಮ ದೃಶ್ಯ.

ಶುದ್ಧ ಹರಟೆ

ವೈದ್ಯನೂ ವಕೀಲನೂ

ಹರಟಿದವರು: ಶ್ರೀ ಪಂಪ ಐತಾಳ.

ಸುಭಾಷಿತದಲ್ಲೊಂದು ನಗೆ ಹನಿ ಯಿದೆ, ಒಂದೂರು. ಅಲ್ಲಿ ಇಬ್ಬರು ವೈದ್ಯರಿದ್ದರು. ಅವರಿಬ್ಬರೊಟ್ಟಿಗೆ ಒಂದು ದಿನ ಎಲ್ಲೊ ಹೋದರು. ಎರಡು ದಿನಗಳ ನಂತರ ಹಿಂತಿರುಗಿ ಬರುವಾಗ ಊರ ಸ್ಮಶಾನದಲ್ಲಿ ಯಾರದೋ ಹೆಣಕ್ಕೆ ಚಿತೆ ತಯಾರಾಗುತ್ತಿದ್ದುದನ್ನು ನೋಡಿ ಅವರಿಬ್ಬರಿಗೂ ಬಹು ಅಚ್ಚರಿಯಾಯ್ತಂತೆ "ನಾವೀರ್ವರೂ ಊರಲ್ಲಿಲ್ಲದಾಗ ಇಂತಹ ಘಟನೆ ನಡೆಯುವುದೊಂದರೆ?— ಇದರಲ್ಲಿ ಇನ್ನಾರೋ ವೈದ್ಯನ ಕೈವಾಡ ಇರಲೇ ಬೇಕು" ಎಂದು. ಇದೇ ಸುಭಾಷಿತ ಇನ್ನೊಂದೆಡೆ ಹೀಗೆನ್ನುತ್ತದೆ. ಯಮಧರ್ಮರಾಯ ತನ್ನ ಕೆಲಸವನ್ನೆಲ್ಲ ತನ್ನ ಏಜಂಟನಾದ ವೈದ್ಯ ಮಹಾಶಯನಿಗೊಪ್ಪಿಸಿ ತಾನು ಮೇಲೆ ಕಾಲು ಹಾಕಿಕೊಂಡು ಕುಳಿತು ಮಜಾಮಾಡುತ್ತಾನೆ ಎಂದು. ಆದರೆ ಯಮನಿಂದ ಈ ಅಸಿಸ್ಟೆಂಟನಾದ ವೈದ್ಯನಾದ ಜಾಣ ಯಮ ವ್ಯಕ್ತಿಯ ಪ್ರಾಣವನ್ನು ಮಾತ್ರ ಕೊಂಡರೆ ಈ ವೈದ್ಯ (ಇವನಿಗೆ ಕನ್ನಡ ಜನರು ಡಾಕ್ಟ್ರು ಅನ್ನುತ್ತಾರೆ) ಮೊದಲು ವ್ಯಕ್ತಿಯಲ್ಲಿರುವ ಹಣವನ್ನು ಸುಲಿದು, ಹಣ್ಣು ಹಣ್ಣು ಮಾಡಿ ಕೊನೆಗೆ ಪ್ರಾಣವನ್ನೂ ನಿಷ್ಕರುಣೆಯಿಂದ ಅಪಹರಿಸುತ್ತಾನೆ. ಇಷ್ಟೇ ವ್ಯತ್ಯಾಸ ಈ ಇಬ್ಬರಲ್ಲಿ ಆದುದರಿಂದ ಯಮನಿಂದಲೂ ವೈದ್ಯನೇ ಒಂದು ಪಾಲು ಮೇಲೆ ಎಂದು ಒಪ್ಪಿಕೊಳ್ಳಬಹುದಷ್ಟೆ? ವೈದ್ಯ ಜನೋಪಕಾರಿ! ಇನ್ನೊಂದ್ ಮಾತಿದ ಮಹನೀಯರ ಕುಟುಂಬಕ್ಕಂತೂ ಈತನೇ ಸಾಕ್ಷಾತ್ ದೈವ. "ಇನ್ನ್ಯಾಕ್ ವಾಡು! ವೈದ್ಯನಲ್ಲಿಗೆ ಓಡು" ಎಂಬುದು ನವೀನ ಗಾದೆಗಳಲ್ಲೊಂದಾಗಿದೆ. ಜೀವನದಲ್ಲಿಯೇ ಜಿಗುಪ್ಸೆಯುಂಟಾದವರು ಆತ್ಮಹತ್ಯೆಗೆಳಸಬೇಕೆಂದಿಲ್ಲ. ಕೂಡಲೇ ವೈದ್ಯನಲ್ಲಿಗೆ ಹೋದರೆ ಸರಿ! ಅವನಿಗೆ 'ಸ್ವರ್ಗಸುಖ'ವೇ ಸಿಗುತ್ತದೆ. ಆದುದರಿಂದ ವೈದ್ಯನ ಟ್ರೀಟ್‌ಮೆಂಟಿನ ನಂತರ ವ್ಯಕ್ತಿಗೆ ಮತ್ತಾವ ರೋಗವೂ ತಗಲುವ ಭಯವೇ ಇಲ್ಲ.

ವೈದ್ಯ 'ನಾಲ್ಕು' ಜನರಿಗೆ ಬೇಕಾದವನ. ವೈದ್ಯನಿಂದಲೇ 'ನಾಲ್ಕು' ಜನರಿಗೆ ಸದಾ ಕೆಲಸ ಸಿಗುತ್ತದೆ—ಹೆಣ ಹೊರುವ ಕೆಲಸ! ಈ 'ನಾಲ್ಕು' ಜನರು ವೈದ್ಯನನ್ನೆಂದಿಗೂ ತೆಗಳುವುದೇ ಇಲ್ಲ. ವೈದ್ಯರೇ ಇಲ್ಲದಿದ್ದಲ್ಲಿ ಈ 'ನಾಲ್ಕು' ಜನರ ಗತಿ ಮಣ್ಣುಪಾಲಾಗುತ್ತಿತ್ತು. ವೈದ್ಯನ ಚಿಕಿತ್ಸಾಲಯ ಸುಡುಗಾಡಿನ ಸಮೀಪದಲ್ಲಿದ್ದಷ್ಟೂ ಈ ನಾಲ್ಕು ಜನರಿಗೆ ಸುಲಭ.

ವೈದ್ಯನೇ ಇಲ್ಲದಿದ್ದಲ್ಲಿ ಈ ಪ್ರಪಂಚ ಜನಸ್ತೋಮದಿಂದ ತುಂಬಿ ಹೋಗುತ್ತಿತ್ತು. ಜನಸಂಖ್ಯೆ ಏರುವಿಕೆಯೇ ಇಂದಿನ ಮಹಾ ಮಹಾ ರಾಜಕಾರಣಿಗಳಿಗೆ ಜ್ವಲಂತ ಸಮಸ್ಯೆಯಾಗಿ ಅವರಿಗೆ ಭಾಷಣಾದಿ ಕಾರ್ಯಕ್ರಮಗಳಿಗೆ ಹಾಜರಾಗಲು ಅಸಾಧ್ಯವಾಗುತ್ತಿತ್ತು. ವೈದ್ಯ ಬಡವರನ್ನು ಕೊಲ್ಲುವುದರ ಮೂಲಕ ದೇಶದ ಬಡತನವನ್ನು ಹೋಗಲಾಡಿಸುತ್ತಾನೆ. ಆದುದರಿಂದ ನಮ್ಮ ಭಾರತ ಸರಕಾರ ವೈದ್ಯವರ್ಗಕ್ಕೆ ಎಷ್ಟು ಕೃತಜ್ಞತೆ ಸೂಚಿಸಿದರೂ ಅದು ಅಲ್ಪವೇ. ವೈದ್ಯನಿಲ್ಲದಿದ್ದರೂ ಸಹ ಕೆಲವರು ಪರಲೋಕವಾಸಿಗಳಾದರು, ಹಾಗಿದ್ದರೆ ಅದು "ಆಕಸ್ಮಿಕ ನಿಧನ"ದ ಪಟ್ಟಿಗೆ ಸೇರುತ್ತದೆ.

ವಕೀಲನೂ ಸಹ ವೈದ್ಯನಂತೆಯೇ—ಕೆಲ ವಿಚಾರಗಳಲ್ಲಿ! ಆದರಾತ ಜನರನ್ನು ಸಾಯಿಸುವುದಿಲ್ಲ, ಸತ್ತವರ ಹಾಗೆ ಮಾಡುತ್ತಾನೆ ಅಷ್ಟೆ! ಈ ವಕೀಲ ಸದಾ ಸತ್ಯಾನ್ವೇಷಿ, ಅವನಿಗೆ ಸತ್ಯ ಯಾವುದೆಂದು ತಿಳಿದಿರಲೇಬೇಕು— ಏತಕ್ಕೆಂದರೆ ಆತ ಯಾವಾಗಲೂ ಅದರಿಂದ ದೂರವೇ ಇರಬೇಕಲ್ಲ? ಸುಳ್ಳನ್ನು ಸತ್ಯವನ್ನಾಗಿಯೂ ಸತ್ಯವನ್ನು ಸುಳ್ಳನ್ನಾಗಿ ಪರಿವರ್ತಿಸುವುದರಲ್ಲಿ ವಕೀಲರನ್ನು ಮೀರಿಸುವವರು ನಭೂತೋ ನ ಭವಿಷ್ಯತಿ! ಸುಳ್ಳಿನ ಸೃಷ್ಟಿಕರ್ತನೇ ವಕೀಲ! ಎಂದಾದರೊಮ್ಮೆ ವಕೀಲನಿಂದ ಸತ್ಯವೂ ಆಡಲ್ಪಟ್ಟರೆ ಅದು ಚಿತ್ರಗುಪ್ತನ ದಫ್ತರಿನಲ್ಲಿ ಖಂಡಿತ "ಮಹಾ ಅಪರಾಧ"ವೆಂದು ನಮೂದಿಸಲ್ಪಡುತ್ತದೆ.

ವಕೀಲನ ಸಹಾಯದಿಂದ ಕಳೆದುಹೋದ ಕೋಳಿಯ ಮರಿಯನ್ನಾದರೂ ಪಡೆಯಲು ಸಾಧ್ಯ. ಆದರೆ ಅದಕ್ಕಾಗಿ ನಾವು ನಮ್ಮಲ್ಲಿರುವ ಆನೆಯನ್ನು ಕಳೆದುಕೊಳ್ಳಬೇಕಾದುದು ಅನಿವಾರ್ಯ. ನಮ್ಮಲ್ಲೇನಾದರೂ ನಮ್ಮದು ಯಾ ಸ್ವತ್ತು ಇರುವವರೆಗೆ ವಕೀಲರು ನಮ್ಮ ಪರ—ನಾವು ದಿವಾಳಿಯಾದ ಮರುದಿನವೇ ವಕೀಲ ನಮ್ಮಿಂದ ಹರದಾರಿ ದೂರ. ಈ ಲಾಯರರಿಂದಲೇ (ಲೈ ಎಂಬ ಆಂಗ್ಲ ಶಬ್ದದಿಂದಲೇ ಲಾಯರ್ ಪದ ಹುಟ್ಟಿತೆಂದು ಕೆಲ ವೈಯ್ಯಾಕರಣಿಗಳ ಮತ) ಕೋರ್ಟಿನಲ್ಲಿ ಮಾತ್ರ ವಕೀಲರ ಮನೆಯಲ್ಲಿ ಜೊಡಣಿಯೊದುರು ಇವರು ಯಾವಾಗಲೂ ಅಪರಾಧಿಗಳೇ. ಸತ್ಯವಂತರಿಗೆ ಎತ್ತಲೂ ಭಯವಿಲ್ಲ—ವಕೀಲರತ್ತಣಿಂದಲ್ಲದೆ! ವಕೀಲರ ತಪ್ಪಿನಿಂದ ಮಾನವರು ತ್ರಿಶಂಕುಗಳಾಗಿ ತೊಳಲಾಡಬೇಕಾಗುತ್ತದೆ. ಆದರೆ ವೈದ್ಯನ ತಪ್ಪಿನಿಂದವರು ನೆಲದಡಿಯಲ್ಲಿ ಶಾಶ್ವತ ಸ್ಥಾನವನ್ನು ಪಡೆಯುತ್ತಾರೆ. ವಕೀಲನನ್ನು ಹಿಡಿದು ಆಸ್ತಿ ಮನೆ ಕಳೆದುಕೊಂಡವನಿಗೆ ಈ ಜಗತ್ತಿನಲ್ಲಿ ಸ್ಥಳವಿಲ್ಲ – ಅವರಿಗೆ ಮತ್ತೆ ವೈದ್ಯನೇ ಗತಿ! ವಕೀಲರು ಹಣವಿರುವವರಿಗೆ ಉಪಕಾರಿಗಳು, ವೈದ್ಯರು ಬಡವರಿಗೆ ಉಪಕಾರಿಗಳು. ಆತ ಅವರಿಗೆ ಮೋಕ್ಷ ದೊರಕಿಸುತ್ತಾನೆ, ಹಣ ಕೈಯಲ್ಲಿಲ್ಲದವರಿಗೆಂದಿಗೂ ವಕೀಲರ ಭಯವೇ ಇಲ್ಲ. ವಕೀಲ ಎಂದಿಗೂ ಅಂಥವರ ಕೇಸ್ ಹಿಡಿಯುವುದೇ ಇಲ್ಲ.

ವೈದ್ಯನ ಕೈ ಹಿಡಿದಾತನಿಗೆ ಮನೆಯೇ ಆಸ್ಪತ್ರೆಯಾಗುತ್ತದೆ. ಸದಾ ಅವನಿಗೆ ಗಾಡನೆನ್ನುವ ರೋಗದ ಭಯ. ವಕೀಲನ ಕೈ ಹಿಡಿದವಳಿಗೆ ಭಯವೇ ಇಲ್ಲ. ಏಕೆಂದರೆ ಅವಳೆದುರು ಅವನಿಗೆ ತಾಳಿ ಬಿಗಿದ ಪ್ರಾಣಿ ಸದಾ ಅಪರಾಧಿಯೇ.

ವೈದ್ಯ ಮೊದಲು ಹಣ ಸುಲಿದರೂ ಕೊನೆಗೆ ಕರುಣೆಯಿಂದ ಸಾವನ್ನಾದರೂ ದಯಪಾಲಿಸುತ್ತಾನೆ, ಆದರೆ ವಕೀಲ–? ಅದೂ ಇಲ್ಲ. ಹಣವನ್ನು ಸುಲಿಯುತ್ತಾನೆ. ಹೆಣವನ್ನಾಗಿ ಪರಿವರ್ತಿಸುವುದೂ ಇಲ್ಲ. ಆದುದರಿಂದ ವಕೀಲನಿಂದ ವೈದ್ಯನೇ ಜನೋಪಕಾರಿ ಎಂದು ನುಡಿಯಲ್ಲಿ ಸಂದೇಹವೇ ಬೇಡ. ವಕೀಲನಿಗಿರುವ ಶಿಕ್ಷೆಯೊಂದೇ—ಆತನೇ ರೋಗಿಯಾದಾಗ, ವೈದ್ಯನಿಗಿರುವ ಶಿಕ್ಷೆಯೂ ಒಂದೇ—ಆತನೇ ವಕೀಲನತ್ತ ನಡೆಗಾರನಾದಾಗ! ಆಗ ತಿಳಿದೀತು ಮಜಾ!

ಅಮೃತ ಬಿಂದು

ಆತ್ಮರಕ್ಷಣೆ ಪ್ರಥಮ ಕರ್ತವ್ಯವಾದರೆ ಸ್ವಾರ್ಥತ್ಯಾಗ ಪ್ರಥಮ ಧರ್ಮ!

ಂ ಂ ಂ

ಜನತೆ ಬಡವರಿಗೆ ಅನ್ನ ಹಾಕುವುದು ತಾವು ತಿಂದ ಅನ್ನ ಆನಂದದಿಂದ ಅರಗಲೆಂದು.

ಂ ಂ ಂ

ಕಂಜನಿ ಮಿಡಿದು ಬಿತ್ತುವವನು ಆನಂದಬಾಷ್ಪದೊಡನೆ ಕೊಯ್ಯುವನು.

ಂ ಂ ಂ

ನಮ್ಮ ನಿವೃತ್ತಿಯನ್ನು ನೆನೆದು ಜಗತ್ತು ದುಃಖಿಸುವಂತಾಗುವವರೆಗೆ ನಾವು ಜಗತ್ತಿನಿಂದ ನಿವೃತ್ತರಾಗ ಬಾರದು.

ಂ ಂ ಂ

ಬಡಗಡಿಸಲಾದರೂ ಅಲ್ಲಿರುವವರ ಹೃದಯವರಿಯವಾದಾದರೆ ಅಲ್ಲಿ ಯೂ ಅರಮನೆಯಲ್ಲಿರುವಂತೆ ಸ್ವರ್ಗ ನರಕಗಳಿವೆ.

ಂ ಂ ಂ

ಅಪವಾದ ಹುಟ್ಟಿಸುವವನ ನಾಲಗೆ ಕತ್ತರಿಸಲ್ಪಡಬೇಕು, ಅಪವಾದ ಕೇಳುವವನ ಕಿವಿ ಕತ್ತರಿಸಲ್ಪಡಬೇಕು.

ಂ ಂ ಂ

ಸ್ವಾರ್ಥತ್ಯಾಗವನ್ನು ಕಲಿಯದ ಪರಮೋಚ್ಚ ವಿದ್ಯಾವಂತನಿಗಿಂಥಾ ಸ್ವಾರ್ಥತ್ಯಾಗವನ್ನರಿತ ಅವಿದ್ಯಾವಂತ ಸಹಸ್ರಪಾಲು ಮೇಲು.

ಂ ಂ ಂ

ನಮ್ಮ ಮಟ್ಟಿಗೆ ನಾವೇ ನಮಗೆ ವಿಶ್ವಾಸಘಾತುಕರೂ, ಕೃತಘ್ನರೂ ಆಗಿರುವಾಗ ಇತರರು ಹಾಗಿರುವದರಲ್ಲಿ ಆಶ್ಚರ್ಯವೇನು?

ಂ ಂ ಂ

ಕಣ್ಣೆಂದಾಗ ಹೇಗೆ ಕಣ್ಣಿನ ರೆಪ್ಪೆಗಳೂ ಕಣ್ಣಿಗೆ ಸೇರಿದವುಗಳೋ ಅದರಂತೆ ಕೆಲಸವೆಂದಾಗ ವಿಶ್ರಾಂತಿಯೂ ಅದರಲ್ಲೇ ಅಡಕವಾಗಬೇಕು.

ಂ ಂ ಂ

ಇನ್ನೊಬ್ಬರ ಮೇಲೆ ಹೋರಿಸಿದ ಕಳಂಕಯೂ ಅಪವಾದದ ಕಥೆಯು ಚಕ್ರ ಸುತ್ತಿದಂತೆ ಸುತ್ತುತ್ತಿರುತ್ತದೆ. ಮುಟ್ಟಿದವರೆಲ್ಲರೂ ಅದಕ್ಕೆ ಎಣ್ಣೆ ಸವರುತ್ತಲೇ ಇರುತ್ತಾರೆ.

ಂ ಂ ಂ

ತಾನು ಮಾಡಿದ್ದೆಲ್ಲವೂ ನ್ಯಾಯ ಯೋಗ್ಯ, ತಾನು ಅನುಭವಿಸಿದ್ದೇ ಸುಖ ಎಂದು ತನ್ನ ಹಿಂದಿನ ಕಾರ್ಯಗಳನ್ನು ನೆನಸಿ ಹೆಮ್ಮೆ ಪಡುವ ಮನುಷ್ಯನು ವಯಸ್ಸಿಗನಾದರೂ ಮಗು ಬುದ್ಧಿಯವನೆಂದು ತಿಳಿಯಬೇಕು.

ಂ ಂ ಂ

ಪಶ್ಚಾತ್ತಾಪಕ್ಕಿಂಥಾ ಮಿಗಿಲಾದ ದೈವಿಕ ಗುಣ ಬೇರಿಲ್ಲ. ತನ್ನ ತಪ್ಪನ್ನು ಕಂಡು ಪಶ್ಚಾತ್ತಾಪ ಪಡದಿರುವದು ಮಹಾ ತಪ್ಪು.

' NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction, Madras.

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಪೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧.

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ.

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು
ನವಯುಗ ಪ್ರೆಸ್, ಉಡುಪಿ.

ವಿನೋದದಲ್ಲಿ ವಿಚಾರ—

ಪ್ರಶ್ನality

ವಿಚಾರಿ: ಶ್ರೀ ಭಾಸ್ಕರ ಭಂಡಾರಿ, ಮುಜಿಬೈಲು.

"ನೋಡಯ್ಯಾ! ಏನು Kennady Persanality ಅವನದು"? ಎಂದು ನಮ್ಮ ಗೆಳೆಯ ರವಿಶಂಕರ್ ನಮ್ಮೂರ ಗುಂಡನ ಕಡೆಗೆ ಬೆಟ್ಟು ತೋರಿದಾಗ ನನಗಾದ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. ಗುಂಡನೋ ನೋಡಲು ಕಾಣುವಾಗ ಗುಂಡುಕಲ್ಲಿನಂತೆಯೇ ಇದ್ದರೂ ಅವನ ಮುಂದೆಯೊಳಗೆ ಏನಿದೆ ಎಂದು ಹೆಚ್ಚಿನವರಿಗೆ (ನನ್ನ ಹೊರತು) ತಿಳಿಯದು. ಸಂಜೆ ಗಂಟೆ ಎಂಟು ಹೊಡೆಯುತ್ತಲೆ, ಮೂಗಿನ ಪಾರದ ವರೆಗೆ ಉಂಡು ಮರುದಿನ ಗಂಟೆ ಹನ್ನೆರಡಾದರೂ ಏಳದೆ ಕಾಡು ಕೋಣದಂತೆ ಗೊರಕೆ ಹೊಡೆಯುವ ಅವನ ಗುಟ್ಟು ಯಾರಿಗೂ (ಅವನ ಮಡದೀ ಮಣಿಯ ವಿನಹ) ಗೊತ್ತಿರಲಾರದು. ಏಕೆಂದರೆ ಯಾರೋ ಗಳಿಸಿದ ಪುಣ್ಯದ ಫಲದಿಂದಾಗಿಯೇ ಅವನು ಅಂತಹ ಚತುರೆಯ ಕೈ ಹಿಡಿದಿರಬೇಕು ಏಕೆಂದರೆ ಆತ ಗೊರಕೆ ಹೊಡೆಯುವುದು ಹೊರಗೆ ಕೇಳಿಸಿದರೂ "ಅವರು ಈಗ ತಾನೇ ಹೊರ ಹೋದರು" ಎಂದು ಕೆ ಕಣ್ಣು ಮಿಟುಕಿಸಿಕೊಂಡು ಬಳುಕಿಸಿ ಹೇಳಿದಾಗ ಯಾರೂ ಒಪ್ಪಲೇ ಬೇಕಾಗಿತ್ತು. ಯಾರದೂ ಮಾತೇಕೆ? ನಾನೇ ಅನೇಕ ಸಲ ಪೆಚ್ಚು ಮೋರೆ ಹಾಕಿ ಹಿಂದಿರುಗಿದುದುಂಟು "ಇಂತಹ ಬೆಲ್ಲದ ಬೈಲು ಬೇರ್ಕಪ್ಪನನ್ನು ಲೋಕ ವಿಖ್ಯಾತ ಕೆನ್ನಡಿಯವರಿಗೆ ಹೇಗೆ ಹೋಲಿಸಿದಿರಯ್ಯಾ?" ಎಂದು ಕೇಳಿಯೇ ಬಿಟ್ಟೆ ನಾನು ಗೆಳೆಯರಲ್ಲಿ.

"ಅದೇಕಯ್ಯಾ ಹಾಗೆ? ಮತ್ತೇನು ಅವ ಕೆನ್ನಡಿಯಂತೆಯೇ ಇದ್ದಾನೆ ಕಣ್ಣು ಬಿಟ್ಟು ನೋಡು!" ಎಂದರು ನಮ್ಮ ಮಿತ್ರ.

"ಆಯಿತು. ಹಾಗಾದರೆ ಪರ್ಸನಾಲಿಟಿ ಎಂದರೇನು"?

"ಅದೇ ನೋಡು ಒಬ್ಬ ವ್ಯಕ್ತಿ ಬಹಳ ಸುಂದರನಾಗಿ ಸುಶರೀರಿಯಾಗಿ ಆಕರ್ಷಕನಾಗಿದ್ದರೆ "ಅವನ ಪರ್ಸನಾಲಿಟಿ ಬಹಳ ಒಳ್ಳೆದಿದೆ ಎನ್ನುತ್ತೇವೆ" ಎಂದರವರು. ಅವರ ಈ ಸಂಕುಚಿತ ದೃಷ್ಟಿಕೋನವನ್ನು ಕಂಡಾಗ "Persanality" ಶಬ್ದದ ಸಿಕ್ಕು ಬಿಡಿಸದೆ ನನ್ನ ಮನಸ್ಸೊಪ್ಪಲಿಲ್ಲ. ಆದಕ್ಕಾಗಿ ಆರಂಭಿಸಿದೆ—

"ನೋಡಿ ಸ್ವಾಮಿ, ಈ ಪರ್ಸನಾಲಿಟಿಯ ಸಿಕ್ಕು ನಿಮಗೆ ಮಾತ್ರ ಸಿಕ್ಕಿಲ್ಲ. ಈ ದಿನಗಳಲ್ಲಿ ಎಲ್ಲೆಲ್ಲಿಯೂ ತಾಂಡವವಾಡುತ್ತಿದೆ. ಶಾಲೆ ಕೋಲೇಜುಗಳಲ್ಲಿಯೂ ಅದೊಂದು ರೋಗವೆ. ಆಗಿ ಹೋಗಿದೆ. ಆಂಗ್ಲ ವಿದ್ಯಾಭ್ಯಾಸದ ಅರ್ಥ ತಿಳುವಳಿಕೆಯೇ ಇದಕ್ಕೆ ಕಾರಣವಾಗಿರಬಹುದು. ಇದೊಂದು ಶಬ್ದ ಮಾತ್ರ ಇಲ್ಲ, ಇನ್ನೂ ಅನೇಕ ಶಬ್ದಗಳಿವೆ. ಇನ್ನೊಂದು ದಿನ ಹೇಳುತ್ತೇನೆ. ನೋಡಿ, ಪರ್ಸನಾಲಿಟಿಗೆ ಕನ್ನಡದಲ್ಲಿ "ವ್ಯಕ್ತಿತ್ವ" ಎನ್ನುತ್ತೇವೆ. ವ್ಯಕ್ತಿತ್ವ ಉತ್ತಮ ಎಂದರೆ ಅಥವಾ ಎನ್ನಬೇಕಾದರೆ ಮುಖ್ಯವಾಗಿ ಅದು ಇರುವವ ವ್ಯಕ್ತಿಯಾಗಿರಬೇಕು. ಕಾಣಲು ಉತ್ತಮ ಆಕಾರದಿಂದ ಕಂಡರೂ ರಾಕ್ಷಸೀ ಸ್ವಭಾವದವನೋ ಪಶು ವರ್ಗದ ಸಮೀಪಿಯೋ ಆದರೆ ಹೇಗೆ? ಆದುದರಿಂದ ವ್ಯಕ್ತಿತ್ವ ಎಂಬುದು ನೀವು ತಿಳಿದಂತೆ ಒಂದೇ ಶಬ್ದದ ನಿರ್ವಚನವಲ್ಲ ಅದಕ್ಕೆ ಅನೇಕ ಅಂಗಗಳಿವೆ. ನೀವು ಹೇಳಿದ "ಈ ಬಾಹ್ಯಾಕಾರ" ಅವುಗಳಲ್ಲಿ ಒಂದು. ಅದರೊಂದಿಗೆ ವ್ಯಕ್ತಿಯಲ್ಲಿ ವಿದ್ಯೆ (ವಿಶಾಲ ಅರ್ಥದಲ್ಲಿ) ಪ್ರತಿಭೆ, ಚಾತುರ್ಯ, ಧೈರ್ಯ, ಕ್ಷಮಾಗುಣ ಅಥವಾ ವಿನಯ ಶೀಲತೆ, ಮತ್ತು ಎಲ್ಲವುಗಳಿಂದಲೂ ಹೆಚ್ಚಾಗಿ ಉತ್ತಮ ಹೃದಯ ಮುಖ್ಯವಾಗಿದೆ. ಇವುಗಳು ಒಂದಾಗಿ ನವರಸಗಳಂತೆ ಬೆರೆತರೆ ಮಾತ್ರ ಒಂದು ಪೂರ್ಣ ವ್ಯಕ್ತಿತ್ವವಾಗುತ್ತದೆ. ಹೊರತಾಗಿ ಅವುಗಳಲ್ಲಿ ಒಂದಾದ ದೇಹಾಕೃತಿಗೆ ನಾವು ಪೂರ್ಣ ಹೆಸರನ್ನು ಕೊಟ್ಟು ಬಿಟ್ಟರೆ ಶರೀರದ ಒಂದು ಭಾಗವಾದ ಕಣ್ಣಿಗೋ ಮೂಗಿಗೋ, ಕಿವಿಗೋ "ಶರೀರ" ಎಂದು ಹೆಸರಿಸಿದಂತಾಗುತ್ತದೆ. ಶರೀರ ಕುರೂಪವಾಗಿದ್ದರೂ ವ್ಯಕ್ತಿತ್ವ ಶ್ರೇಷ್ಠವಾಗಿರಬಹುದು. "ಮಹಾತ್ಮಾ ಗಾಂಧೀಜಿ"ಯವರಿಗಿಂತ ಸುಂದರ ಸ್ವರೂಪರು ಅನೇಕರಿದ್ದರೂ ಅವರು ಸಾಧಿಸಿದ ಕಾರ್ಯ ಯಾರು ಸಾಧಿಸಬಲ್ಲರು? ಅದೇಕೆ; ಮೊನ್ನೆ ತಾನೇ ಅಮೇರಿಕದಲ್ಲಿ ಗೌರವಿಸಲ್ಪಟ್ಟ ನಮ್ಮೂರ ಗಣಪನನ್ನು ನೀವಿನ್ನೂ ಮರೆತಿರಾ? ಆ ಕಿಟ್ಟನ ಮಗ ಸಂಕು ಅವನ ಮುಖ ಶಂಕುವಿನಾಕೃತಿಯಿದ್ದರೂ ಮೊನ್ನೆ ತಾನೇ ರಾಷ್ಟ್ರಾಧ್ಯಕ್ಷರಿಂದ "ಪದ್ಮಶ್ರೀ" ಪಡೆದನಲ್ಲಾ—ನೋಡಿ ನೋಡಿ ಅವೆಲ್ಲಾ ನಿಜವಾದ ವ್ಯಕ್ತಿತ್ವಗಳು—ಎನ್ನುತ್ತಾ ನಾನು ಭಾಷಣ ಬಿಗಿದು ಉಗುಳು ನುಂಗಿದಾಗ—

"ಅದೂ ಸರಿ ಕಣಯ್ಯಾ" ಎನ್ನುತ್ತಾ ರವಿಶಂಕರ್ ನಿಟ್ಟುಸಿರೆಳೆದರು. ಬಳಿಕ ಮೌನವಾಗಿಯೇ ಮನೆ ಸೇರಿದೆವು.

— — —

ಅಕ್ಷಯ ಚಿಹ್ನೆಯೊಂದಿಗೆ ಆಂತ್ಯ

(ಏಳನೇ ಪುಟದಿಂದ)

ಅಥವಾ ಪ್ರಧಾನಿ. ಪರರಾಷ್ಟ್ರ ಸಂಪರ್ಕ ಸಚಿವ ಹಾಗೂ ರಕ್ಷಣಾ ಮಂತ್ರಿಗಳ ಮಾತನ್ನು ಒಪ್ಪಿಡಿ ಬರೆದು ಈಗ ಯೋಚಿಸುವ. ವಿಜಯಾಶಮಿ ಮೊನ್ನೆ ತಾನೇ ಕಳೆಯಿತು. ಆ ದಿನ ಹಲವಾರು ದುಷ್ಟ ಶಕ್ತಿಗಳ ಆಕ್ರಮಣಗಾರರ ಮುಕ್ತಾಯವಾಯಿತು. ದಾನವ ಶಕ್ತಿ ಧೂಳೀಪಟವಾಯಿತು. ಮಾನವ ಶಕ್ತಿ, ದೈವಿಕ ಶಕ್ತಿ ದಶ ದಿಶೆಗಳಲ್ಲಿ ಹರಡಿತು. ಅಕ್ಷಯ ಚಿಹ್ನೆಯನ್ನಾಗಲೀ, ಕಾಶ್ಮೀರವನ್ನಾಗಲೀ ಅಂದರೆ ನಮ್ಮ ರಾಷ್ಟ್ರದ ಗೌರವವನ್ನು ನಾವು ಬಿಟ್ಟುಕೊಡಲು ಸಿದ್ಧರಿಲ್ಲ. ಶಕುನಿಗಳ ಬುದ್ಧಿವಾದ ನಮಗೆ ಬೇಕಾಗಿಲ್ಲ ಶಲ್ಯ ತಂತ್ರವತ್ತವೂ ಎಚ್ಚರಿಕೆಯಿಂದಿರಬೇಕು. ಆಗ ಭಾರತ ಮಾತೆ ನಮ್ಮನ್ನು ಹರಸುವಳು. ಆಕೆಯ ಕಣ್ಣೀರನ್ನೊರಸುವ ದೃಢ ಸಂಕಲ್ಪ ನಮ್ಮದಾಗಬೇಕು. ಆವಳನ್ನು ಗುಲಾಮಗಿರಿಗೆ ದೂಡಿ ಬಾಳುವ ನಾಯಿ ಜೀವನ ನಮ್ಮದಾಗಬಾರದು. ಪಾಂಚಾಲಿಯ ಸೆರಗನ್ನೆಳೆದವನ ಗತಿ ಏನಾಯ್ತು? ಅಭಿಮನ್ಯುವನ್ನಾಕ್ರಮಿಸಿರುವವನ ಗತಿಯೂ ಅದೇ ಆಗಬೇಕಲ್ಲವೇ? ಅದರಲ್ಲಿ ಸಂದೇಹ ಏಕೆ?

ಸಿಂಹ ಘರ್ಜನೆ ಮೊಳಗುತ್ತದೆ. ನರಿ ಕತ್ತೆಕಿರುಬಗಳ ಕೂಗಾಟ ನಿಂತುಹೋಗುತ್ತದೆ. ಮಾತೆ ಭಾರತಿ, ಹರಸಮ್ಮನು.

"ಭಾರತ ಮಾತೆಗೆ ಜಯವಾಗಲಿ."

ನಗು ನೀನು . . .

ಜಗವೆ ನಿನ್ನೊಡನೆ ನಗುತಲಿಹುದು

ಭಜಾರಿ....?

ರಾಯರು — (ಹೆಂಡತಿಗೆ—) ಏನ್ ಹೇಳ್ತಿ? ಶಾಂತಿ, ರಾಜುಗೆ ಏನಾಗಿದೆ....?

ಹೆಂಡತಿ— ಶಾಂತಿ ಸುದ್ದಿ ಎತ್ತಬೇಡಿ ಅಂತ ಎಷ್ಟು ಸಲ ಹೇಳಬೇಕು? ಕಳೆದಸಲ ಅವರ ಮನೆಯಲ್ಲಿ ಅತ್ತಿಗೆಯ ಮುಂದೆ ಅವಳು ಹೀಗೆ ಹೇಳಬೇಕೆ — ಭಜಾರಿ! ನಾನು ಪ್ರೀತೀಲಿ ನನ್ನ ಸೊಸೆ—ಶಾಂತಿ ಅಂದಾಕ್ಷಣ; ಅವಳು 'ಅಪ್ಪನ ಹಣ ದಾರಿಸಿಕೊಂಡು ಹುಬ್ಬಳ್ಳಿ ಮೋಟಾರು ಹತ್ತಿದವನ ನಾನು ಮದ್ವೆಯಾಗೋದಿಲ್ಲ..." ಹಾಗೆ ಅನ್ನಬೇಕೆ ಆ ಕಳ್ಳಿ!?

o o o o

ಅದೇನ್ ಮಹಾ?...

ಕಿಟ್ಟು— ಪ್ರತಿಯೊಬ್ಬನೂ ಮದುವೆಯಾದ ಹೊಸದರಲ್ಲಿ ಒಂದು ವಿಚಾರ ಪೂರ್ಣ ಪ್ರೇಮ ಕಾದಂಬರಿಯನ್ನು ಬರೆಯಬಹುದು, ಎಂತ ಅನಿಸುತ್ತಾ ಇದೆ...

ಪುಟ್ಟು— ಅದೇನ್ ಮಹಾ? ಮದುವೆಯಾದ ಹೊಸದರಲ್ಲಿ ಒಂದಲ್ಲ ಐದು— ಬೃಹತ್ ಪ್ರೇಮ ಕಾದಂಬರಿಯನ್ನು ಬರೆಯಬಹುದು!? ಅದೇನ ಮಹಾ?.... ನಲ್ಲೆಯೊಡನೆ ನಡೆದ ಮಾತುಕತೆಯನ್ನೆ ಬರೆದರಾಯಿತು. ನಿಜವಾಗಿ ಹೇಳಬೇಕಾದರೆ ನಾನೂ ಒಂದು ಕಾದಂಬರಿ ಬರಿತಾ ಇದ್ದೀನಿ....

o o o o

ಒಂದೇ ಉತ್ತರ.

ಆತ— (ಆಕಸ್ಮಾತ ಚಾಕದಲ್ಲಿ ಸಂಧಿಸಿದ ಗೆಳೆಯನಿಗೆ—) "ನನ್ನ ಗುರುತು ಸಿಕ್ಕಿತೊ...? ಈಗಲೂ ಹೋಟೆಲದಲ್ಲಿಯೆ ಇದ್ದೀಯೋ—ಮದ್ವೆಗಿದ್ವೆ ಆಗಿದ್ದೆಯೋ?.."

ಇತ— ಹೌದು —

ಆತ— ಮದ್ವೆ ಆಗಿದ್ದೆಯೋ—ಹೋಟೆಲಿನಲ್ಲಿ ಇದ್ದೆಯೋ?

ಇತ— ಹೌದು—(ನಗುತ್ತ....) ಒಂದೇ ಉತ್ತರ...(....?....)

o o o o

ಶಾಂತಿ ಬಾಹಿರ—ಅರ್ಥರಹಿತ!....

ಭಾಷಣಕಾರರು— (ತಮ್ಮ ಭಾಷಣದಲ್ಲಿ...)

"ಯುದ್ಧ ಎಷ್ಟು ಶಾಂತಿಬಾಹಿರವಾಗಿದೆ ಅಂದರೆ....

ಸಭಿಕರಲ್ಲೊರ್ವ— ... ನಿಮ್ಮ ವಿಚಾರಗಳೆಷ್ಟೋ ಅರ್ಥರಹಿತವಾಗಿದೆ."!?

o o o o

ಚಿತ್ರಕಲೆ!

ರಮೇಶ— ಈ ಹೊತ್ತಿನ ಪರೀಕ್ಷೆ ಹೇಗಾಯಿತು?

ಉಮೇಶ— 'ಕಂಚಿಕಟ್ಟೆ ಆಟ' ಬಿದ್ದಿತ್ತು. ನಂದೂ ಬಹಳ ಚಲೊ ಆಗಿದೆ. ನೋಡುವವ—ಹುಂಗಗಳ ಆಟಅಂತ ತಿಳಿದು ಕೊಂಡಾನು ಅಂತ—ಚಿತ್ರದ ಕೆಳಗೆ ಕತೆಯನ್ನೆ ಬರೆದುಬಿಟ್ಟಿದ್ದೇನೆ! ?....

ಕಳ್ಳರಾರು?....

ಗಂಡ— (ಚಿಕ್ಕ ಮಗನ ಕಿವಿ ಹಿಂಡಿ) ನೀನಲ್ಲದೆ ಮತ್ಯಾರು? ಅಂಗಿ ಕಿಸೆಯಲ್ಲಿ ಇದ್ದ ಎಂಟಾಣೆ ತೆಗೆದುಕೊಂಡೋಗಿ ಏನ್ ಮಾಡಿದ—

ಹೆಂಡ್ತಿ— ಮಾಣಿ ...ಇಲ್ಲಿತನಕ ಮನೆಯಲ್ಲೆ ಇದ್ದಿಲ್ಲಾ ಅಂದ್ರೇ....

ಗಂಡ— ಮತ್ಯಾರು? ಹಾಗಾದರೆ ಕಿಸೆಯಲ್ಲಿ ಇದ್ದ ಹಣ ಯಾರು ತೆಗೆದರು— ಆತನಲ್ಲದೇ ಮತ್ಯಾರು ಇದ್ದಾರೆ ಇಲ್ಲಿ?...

ಹೆಂಡ್ತಿ— ನಾನು ಇಲ್ಲೆ ಇದ್ವೆ....!?
(....??....)

—ಪಿ. ಎನ್. ಹೆಗಡೆ—ಶಂಭು,
ಹೊಸಾಕುಳಿ

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ನಿಮ್ಮ ಆಕಾಂಕ್ಷೆಗಳ ಸಾಧನೆಗಾಗಿ ಮತ್ತು ಅನಿಶ್ಚಿತ ಅವಶ್ಯಕತೆಗಳಿಗಾಗಿ ಇಂದೇ ಪ್ರಾರಂಭಿಸಿರಿ—ನಿರ್ದಿಷ್ಟ ಮತ್ತು ಕ್ರಮಬದ್ಧ ಉಳಿತಾಯ.

ಆಕರ್ಷಣೀಯ ಬಡ್ಡಿ ದರದಲ್ಲಿ

ನಿಮ್ಮ ಹಣವು ಸೇವಿಂಗ್ಸ್, ಖಾತೆಯಲ್ಲಿ, ರಿಕರಿಂಗ್ ಮತ್ತು ನಿರಖು ಠೇವಣಾತಿಗಳಲ್ಲಿ ವೃದ್ಧಿಹೊಂದುವುದನ್ನು ಕಂಡು ಸಂತೋಷಿಸುವಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರಸ್ತೆ, ಮಂಗಳೂರು—3.

ನುಡಿ ಮುತ್ತುಗಳು

ಸಂಗ್ರಹಕರು

ಯು. ನಾರಾಯಣ ಸೇರಿಗಾರ.

ವಿದ್ಯೆ ಓದುವುದರಿಂದ ಬರುವುದಿಲ್ಲ. ಬಲ್ಲಾ ಆಗುವುದು ಗುರುವಿನ ಆಶೀರ್ವಾದದಿಂದ.

—ಪ್ರೇಮಚಂದ್.

ಮೊಗ್ಗನ್ನು ಅರಳಿಸಿ ಜಗತ್ತಿಗೇ ಅದರ ಸೌಂದರ್ಯ, ನಳುಗೆಂಪನ್ನು ನೀಡುವುದು ಪ್ರೇಮ; ಅರಳಿದ ಹೂವನ್ನು ಬಾಡಿಸಿ ಕೊಲ್ಲುವ ಬಿಸಿಲು ಕಾಮ.

—ತ. ರಾ. ಸು.

ಪ್ರೇಮ, ಕೀರ್ತಿ—ಇವೇ ಕವಿಗಳ ಆಹಾರ.

— ಷೆಲ್ಲಿ.

ದಡ್ಡನ ಹೃದಯ ಅವನ ಬಾಯಿಯಲ್ಲಿರುತ್ತದೆ; ಬುದ್ಧಿವಂತನ ಬಾಯಿ ಅವನ ಹೃದಯದಲ್ಲಿರುತ್ತದೆ.

— ಫ್ರಾಂಕ್ಲಿನ್.

ತಿಳಿದಿರುವುದಕ್ಕಿಂತ ಕಡಿಮೆ ಮಾತನಾಡು.

— ಶೇಕ್ಸ್‌ಪಿಯರ್.

ಪ್ರಕೃತಿ ಎರಡು ಕಿವಿಯನ್ನು ಕೊಟ್ಟದೆಯಾದರೂ ಒಂದೇ ಬಾಯಿಯನ್ನು ಕೊಟ್ಟಿದೆ.

— ಬೆಂಜಮಿನ್ ಡಿಸ್ರೇಲಿ.

ಹೆಚ್ಚು ತಿಳಿದವರು ಕಡಿಮೆ ಮಾತನಾಡುತ್ತಾರೆ, ಕಡಿಮೆ ತಿಳಿದವರು ಹೆಚ್ಚು ಮಾತನಾಡುತ್ತಾರೆ.

—ರೂಸ್ಸೋ.

'ನನಗೆ ಸಾಕಷ್ಟಿದೆ' ಎಂದು ಯಾರು ತಿಳಿಯಬಲ್ಲರೋ ಅವರು ಶ್ರೀಮಂತರು.

—ಲಾಓಟ್ಸೆ.

ಸಂಗೀತವೇ ಪ್ರೇಮದ ಆಹಾರ.

— ಶೇಕ್ಸ್‌ಪಿಯರ್.

ಕತ್ತಿಯ ಮೂಲಕ ಹಗೆಯನ್ನು ಗೆಲ್ಲಬಹುದು. ಆದರೆ ಸಂಗೀತದ ಮೂಲಕ ಹಗೆಯನ್ನು ಸ್ನೇಹಿತನನ್ನಾಗಿ ಮಾಡಿಕೊಳ್ಳಬಹುದು.

— ರವೀಂದ್ರನಾಥ ಠಾಗೋರ್.

ಸಾಲ ಕೊಡುವುದರಿಂದ ಹಣವೂ, ಅದರ ಜೊತೆಗೆ ತೆಗೆದುಕೊಂಡವನ ಸ್ನೇಹವೂ ಕಳೆದು ಹೋಗುತ್ತದೆ.

—ಷೇಕ್ಸ್‌ಪಿಯರ್.

ಸಾಲವನು ಕೊಂಬಾಗ ಹಾಲೋಗರುಂಡಂತೆ ಸಾಲಿಗರು ಬಂದೆಳೆವಾಗ ಕಿಬ್ಬದಿಯ ಕೀಲು ಮುರಿದಂತೆ!

— ಸರ್ವಜ್ಞ.

ಯುದ್ಧಕ್ಕಿಂತ ಸಂಧಿ ಮಾಡುವ ವಿದ್ಯೆ ಶ್ರಮ ಸಾಧ್ಯ.

—ರವೀಂದ್ರನಾಥ ಠಾಗೋರ್.

ಶಾಂತಿ ಬೇಕಾದಲ್ಲಿ ಹೋರಾಟಕ್ಕೆ ಸಿದ್ಧ ಎಂದು ತೋರಿಸಬೇಕಾದುದೇ ನೀನು ಮಾಡಬೇಕಾದ ಕೆಲಸ.

— ಟಿ. ಆರ್. ಲೋವೆಲ್.

ನಗು ಕತೆ

ಗುರುವಿನ ಗುರು–ಗುಗ್ಗುರು

ಅದೊಂದು ಶಾಲೆ. ಆ ಶಾಲೆಯಲ್ಲಿ ಒಬ್ಬ ಉಪಾಧ್ಯಾಯರು. ಅವರು ಮಕ್ಕಳನ್ನು ಚತುರತೆಯಿಂದ ಕಲಿಸುತ್ತಿದ್ದರು. ಅವರ ಚತುರತೆಯನ್ನು ಊರಿಗೆ ಊರೇ ಕೊಂಡಾಡುತಿತ್ತು.

ಮಕ್ಕಳಿಗೆ ಕಲಿಸುವಾಗ ಒಂದೊಂದು ಉದಾಹರಣೆ ಕಥೆ ಹೇಳುವುದು ಅವರ ವಾಡಿಕೆ.

ವಾಡಿಕೆಯಂತೆ ಒಂದು ದಿನ—

"ಬೆಳಗ್ಗೆ ಬೇಗನೆ ಏಳಬೇಕು. ನಿತ್ಯಾಹ್ನಿಕ ತೀರಿಸಿ ಮುಂದಿನ ಕೆಲಸ ಮಾಡಬೇಕು. ಅದಕ್ಕೊಂದು ಉದಾಹರಣೆ—

ಒಂದು ಕಾಡಿನಲ್ಲಿ ಒಂದು ಮರವಿತ್ತು. ಆ ಮರದಲ್ಲಿ ಒಂದು ಹಕ್ಕಿ. ಆ ಹಕ್ಕಿ ಯಾವಾಗಲೂ ತಡವಾಗಿ ಏಳುತಿತ್ತು.

ಆದರೆ ಒಂದು ದಿನ ಅಕಸ್ಮಾತ್ ಅದು ಬೇಗನೆ ಎದ್ದಿತು. ಮರದ ಕೊಂಬೆಯ ಮೇಲೆ ಒಂದು ಹುಳ, ಅಚೆ ಈಚೆ ಹೋಗುವುದನ್ನು ನೋಡಿತು. ಗಬಕ್ಕನೆ ಆ ಹಕ್ಕಿಯು ಆ ಹುಳುವನ್ನು ನುಂಗಿತು. ಬೇಗ ಎದ್ದುದರಿಂದ ಆ ಹುಳು ಸಿಕ್ಕಿತು ಎಂದು ಅಂದಿನಿಂದ ಆ ಹಕ್ಕಿಯು ಬೇಗನೆ ಏಳಲು ಪ್ರಾರಂಭಿಸಿತು. ಅಂತೆಯೇ ದಿನವೂ ಹುಳು ಸಿಕ್ಕುತಿತ್ತು! ಉಪಾಧ್ಯಾಯರ ಕಥೆ ಮುಗಿಯಿತು. ಶಿಷ್ಯೋತ್ತಮರಲ್ಲೊಬ್ಬರಾದ ಗಿಟ್ಟೆ ಮಾತ್ರ ಎದ್ದು ನಿಂತು ಹೇಳಿದ—

"ಆದರೆ ಆ ಹುಳುವು ನಿತ್ಯ ಬೇಗ ಎದ್ದುದರಿಂದ ಆ ಹಕ್ಕಿಗೆ ಆಹಾರವಾಗಬೇಕಾಯಿತಲ್ಲ! ಅದೇ ನಿಧಾನವಾಗಿ ಎದ್ದಲ್ಲಿ, ಹಕ್ಕಿ ಆಹಾರಕ್ಕಾಗಿ ಹಾರಿ ಹೋಗುತ್ತಿದ್ದು. ಹುಳು ಬದುಕಿ ಉಳಿಯುತಿತ್ತು"

ಉಪಾಧ್ಯಾಯರು ಅಂದಿನಿಂದ ಮಕ್ಕಳಿಗೆ ಕಥೆ ಹೇಳುವುದನ್ನು ಬಿಟ್ಟರು.

—ನೂಮೂ ವಿನಾಸಕರ್.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

S. C. 263/64.

ಸುಬ್ರಾಯ ಗೌಡ —ವಾದಿ.

ಪಿ. ಎ. ದಾಮೋದರ ಪಿಳ್ಳೆ, ಚೆಂಡೆಹಿತ್ಲು ಅಪ್ಪಯ್ಯ ಪಣಿಕ್ಕರರ ಮಗ, ಪುತ್ತೂರು ತಾಲ್ಲೂ, ಬಿಳಿನೆಲೆ ಗ್ರಾಮದ ಚೆಂಡೆಹಿತ್ಲು ಎಂಬಲ್ಲಿರುವವ —ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದ್ರೆ–

ಮೇಲಿನ ದಾವೆಯು ವಾದಿಗೆ ನೀವು ತಾ. 30-7-61ರಲ್ಲು ಬರೆಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಅಸಲು ಬಡ್ಡಿ ಖರ್ಚು ಬರಮಾಡಿಕೊಳ್ಳುವರೆ ದಾಖಲು ಮಾಡಿದ ಮೇಲಿನ ದಾವೆಯು ತಾ. 28-10-64ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ನೀವು ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ನಿಮ್ಮ ಉಜಾಸರಣೆಯನ್ನು ದಾಖಲು ಮಾಡತಕ್ಕದ್ದು ತಪ್ಪಿದ್ರೆ ನಿಮ್ಮ ಗೈರುಹಾಜ್ರಿಯಿಂದ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟಿನ ಹುಕುಂ ಪ್ರಕಾರ

Pundarika, M K.
Advocate for Plaintiff.

ಪುತ್ತೂರು, ತಾ. 9-10-62.

ಪುತ್ತೂರು ಪಿ. ಮುನ್ಸಿಫ್ ಕೋರ್ಟಿನಲ್ಲಿ

S. I. A. 180/64. S. C. 240/64

ನಾರಾಯಣ ಕೆದಿಲಾಯ .... ವಾದಿ.

ಮತ್ತು

ಸಂಕಪ್ಪ ಗೌಡ ಕೂಡಾ... ಪ್ರತಿವಾದಿರು.

2ನೇ ಪ್ರತಿವಾದಿ ನಾಗಪ್ಪ ಗೌಡರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಸದ್ರಿ ವಾದಿಯು ನಿಮ್ಮ ಮೇಲೆ ಕೊಡಾ ಮಾಡಿದ ಗೇಣಿ ಬಾಕಿಯ ವ್ಯಾಜ್ಯದ ನಿಮ್ಮ ಹಾಜ್ರು ಬಗ್ಗೆ ತಾ 22-11 64ಕ್ಕೆ ಇಟ್ಟಿದೆ ಆದ್ದರಿಂದ ನೀವು ಸ್ವತಹಾ ಅಥವಾ ವಕೀಲರ ಮುಖಾಂತ್ರವಾಗಲೀ ಆ ದಿನ 10 ಗಂಟೆಗೆ ಸರಿಯಾಗಿ ಹಾಜರಾಗಿ ಉತ್ತರಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷ ವಿಚಾರಣೆಯಿಂದ ತೀರ್ಮಾನ ನಡೆಯಲಾಗುವುದು. ತಿಳಿದಿರಲಿ.

Badekila Ishwara Bhat,
Advocate for Plaintiff.

ಪುತ್ತೂರು, ತಾ. 12—10—64.

ಕ್ಷಯರೋಗದ ವಿರುದ್ಧ ಹೋರಾಡಲು ಸಹಕರಿಸಿರಿ!

ಈ ನಿಯಮಗಳನ್ನು ಪಾಲಿಸಿರಿ:

ನಿಮಗೆ ಸ್ವಸ್ಥವಿಲ್ಲದಿದ್ದರೆ ನಿಮ್ಮ ಡಾಕ್ಟರರನ್ನು ಕೇಳಿರಿ ಮತ್ತು ಅವರ ಸಲಹೆಯನ್ನು ಬಿಡದೆ ಪಾಲಿಸಿರಿ. ಡಾಕ್ಟರರ ಅಭಿಪ್ರಾಯದಂತೆ ನೀವು ಕ್ಷಯರೋಗಕ್ಕೆ ತುತ್ತಾಗಿದ್ದರೆ ಅವರು ಸಮೀಪದ ಕ್ಷಯರೋಗ ಚಿಕಿತ್ಸಾ ಮಂದಿರಕ್ಕೆ ಹೋಗಲು ಹೇಳುವರು.

ಈ ಕ್ಷಯರೋಗ ಚಿಕಿತ್ಸಾ ಮಂದಿರಗಳು ನಿಮ್ಮ ಸೇವೆಗಾಗಿಯೇ ಇವೆ. ನೀವು ಮಾತ್ರ ಡಾಕ್ಟರರ ಸಲಹೆಯನ್ನು ಪಾಲಿಸಿ ಅವರೊಡನೆ ಸಹಕರಿಸಬೇಕು. ಅವರು ಕೊಟ್ಟ ಔಷಧಗಳನ್ನು ಅವರು ಹೇಳಿದ ಪ್ರಕಾರ ನೀವು ಸೇವಿಸಲೇ ಬೇಕು. ಇದಕ್ಕೆ ತಪ್ಪಿನರೆ ನಿಮ್ಮ ಜೀವಕ್ಕೆ ಗಂಡಾಂತರ ಬರುವುದಲ್ಲದೆ ಡಾಕ್ಟರರ ಪ್ರಯತ್ನವೂ ನಿಷ್ಫಲವಾಗುವುದು.

ನಿಮಗೆ ಕ್ಷಯರೋಗ ತಗಲಿದೆಯಾದರೆ ಈ ಪ್ರಾಮುಖ್ಯ ಸಂಗತಿಯನ್ನು ಗಮನದಲ್ಲಿಟ್ಟುಕೊಳ್ಳಿರಿ: ನೀವು ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗಬೇಕೆಂದಿಲ್ಲ. ಡಾಕ್ಟರರ ಸಲಹೆಯನ್ನು ಪಾಲಿಸಿದರೆ ನಿಮ್ಮ ಮನೆಯಲ್ಲೇ ನಿಮಗೆ ಚಿಕಿತ್ಸೆ ಕೊಡಬಹುದು ವಿಶೇಷ ಕಾರಣಗಳೇನಾದರೂ ಇದ್ದರೆ ಮಾತ್ರ ಡಾಕ್ಟರರು ಆಸ್ಪತ್ರೆಗೆ ಸೇರಲು ಹೇಳುವರು.

ನಿಮ್ಮ ಸಹೋದರರಿಗೆ ಡಾಕ್ಟರರು ಹೇಳುವ ಪ್ರಕಾರ ಚಿಕಿತ್ಸೆಯನ್ನು ಪಡೆಯುವಂತೆ ಸಹಾಯ ಮಾಡಿರಿ.

ನಿಮ್ಮ ಸಹಾಯಕ್ಕಾಗಿ ನಿಮ್ಮ ಟಿ ಬಿ ಸಂಸ್ಥೆಯೊಡನೆ ಸಹಕರಿಸಿರಿ. ಅಧಿಕ ಸಂಖ್ಯೆಯಲ್ಲಿ ಟಿ ಬಿ ಮೊಹರುಗಳನ್ನು ಖರೀದಿಸಿರಿ. ಒಂದು ಮುದ್ರೆಯ ಬೆಲೆ 10 ಪೈಸೆ ಮಾತ್ರ. ಮೊಹರುಗಳು ದೊರೆಯುವ ಸ್ಥಳ: ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಂಘ, ಮಂಗಳೂರು ಮತ್ತು ಅದರ ವಿವಿಧ ಏಜನ್ಸಿಗಳು

15ನೇ ಟಿ ಬಿ ಮೊಹರು ಮಾರಾಟ ಚಳವಳ

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಂಸ್ಥೆಯಿಂದ ನಡೆಸಲ್ಪಡುವಂಥಾದ್ದು.)

ಈ ಸ್ಥಳದ ದಾತೃಗಳು:

Seth Mafatlal Charity Trust, Bombay.

ನಮ್ಮ - ನಮ್ಮವರು



ಎಸ್. ಆರ್. ಕಂಠಿ

ಕರ್ನಾಟಕದ ಶಿಕ್ಷಣ ಮಂತ್ರಿ ಶಿವಪ್ಪ ರುದ್ರಪ್ಪ ಕಂಠಿಯವರು ಹಳೆಯ ಮೈಸೂರು— ಉತ್ತರ ಕರ್ನಾಟಕದಲ್ಲಿ ಬೇಕೆಂಬಷ್ಟು ಟೀಕೆ ಟಿಪ್ಪಣಿಗಳಿಗೆ ವಿದ್ಯಾರ್ಥಿ ಸಂಪಿನ ಕಾಲದಲ್ಲಿ ಒಳಗಾಗಿದ್ದರು. ಆದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವರ ಗೌರವ ಇನ್ನೂ ಹಾಗೇ ಉಳಿದಿದೆ. ಈ ಜಿಲ್ಲೆಯು ಶಿಕ್ಷಣ ರಂಗದಲ್ಲಿ ಮಾಡಿರುವ ಕ್ರಾಂತಿ ಮತ್ತು ಹೊಂದುತ್ತಿರುವ ಪ್ರಗತಿಗಳು ಅವರಿಗೆ ಸಂತೋಷವನ್ನುಂಟು ಮಾಡಿವೆ; ಮುಂದೆಯೂ ಮಾಡುತ್ತಿವೆ.

ನಮ್ಮ ಜಿಲ್ಲೆಯಲ್ಲಿ ಬಂಡವಾಳಧನವನ್ನು ವಸೂಲು ಮಾಡಿ ಅಭ್ಯರ್ಥಿಗಳಿಗೆ ಪ್ರವೇಶ ನೀಡುವ ವೃತ್ತಿಪರ ಕಾಲೇಜುಗಳಿವೆ. ಕೇಂದ್ರ ಶಿಕ್ಷಣ ಸಚಿವ ಶ್ರೀ ಛಾಗ್ಲಾರು, ಪಗದಿ ವಸೂಲು ಮಾಡುವುದನ್ನೂ 'ಕಾಳಸಂತೆ' ಎಂದು ವರ್ಣಿಸಲು ಮುಂದಾಗಿದ್ದಾರೆ. ಸರಕಾರವು ಅಧಿಕ ಸಂಖ್ಯೆಯಲ್ಲಿ ಇಂತಹ ಕಾಲೇಜುಗಳನ್ನು ತೆರೆಯಲು ಅಸಮರ್ಥವಿರುವಾಗ, ಅಧಿಕ ವೆಚ್ಚ ಬರುವ ಇವನ್ನು ಖಾಸಗಿ ರಂಗದಲ್ಲಿ ವಿದ್ಯಾರ್ಥಿ ಪಾಲಕರ ಸಹಾಯದಿಂದ ತೆರೆಯುವುದೇಕೆ ತಪ್ಪು ಎಂದು ಕೇಳುತ್ತಾರೆ, ಶ್ರೀ ಕಂಠಿಯವರು. ಇಲ್ಲಿ ಶ್ರೀಮಂತರಿಗೆ ಮಾತ್ರ ಪ್ರವೇಶ ದೊರೆಯಲಿ. ಸರಕಾರಿ ಕಾಲೇಜುಗಳಲ್ಲಿ ಬಡವರು ಪ್ರವೇಶ ಪಡೆಯುವುದು ಸಾಧ್ಯವಿಲ್ಲವೆ?

ಮಾನ್ಯ ಕಂಠಿಯವರೆನ್ನುವಂತೆ, ನಮ್ಮ ರಾಜ್ಯದ, ಸರಕಾರದ ಮತ್ತು ವಿಶ್ವವಿದ್ಯಾಲಯದ ಕುರಿತು ಕೇಂದ್ರದವರಿಗೆ ತಪ್ಪು ಗ್ರಹಿಕೆಯನ್ನು ಯಾರೋ ಕೊಟ್ಟಿರಬೇಕು —ಈ ಗ್ರಹಿಕೆಯನ್ನು ದೂರಮಾಡುವುದು ರಾಜ್ಯ ಶಿಕ್ಷಣ ಖಾತೆಯ ಕರ್ತವ್ಯ ತಾನೆ?

ಬಿ. ವಿ. ಬಾಳಿಗಾ

ಮಾನ್ಯ ಬಂಟ್ವಾಳ ವೈಕುಂಠ ಬಾಳಿಗಾರವರು ಕಳೆದ ಮೂರು ಚುನಾವಣೆಗಳಲ್ಲೂ ಗೆದ್ದು ರಾಜ್ಯ ವಿಧಾನ ಸಭೆಯ ಸದಸ್ಯರಾಗಿ ಆಯ್ಕೆಗೊಂಡ ಮಹಾವ್ಯಕ್ತಿ. ಅವರು ಸಾಮಾನ್ಯ ಸದಸ್ಯರಾಗಿದ್ದರು, ಮಂತ್ರಿಯಾಗಿದ್ದರು, ಇದೀಗ ವಿಧಾನ ಸಭಾಧ್ಯಕ್ಷರ ಗುರುತರ ಹೊಣೆಗಾರಿಕೆಯ ಪದದಲ್ಲಿ ವಿರಾಜಿಸುತ್ತಿದ್ದಾರೆ. ಯಾವ ಕರ್ತವ್ಯವನ್ನೂ ದಕ್ಷತೆಯಿಂದ ನಿರ್ವಹಿಸುವ ಶಕ್ತಿಯಿವರಲ್ಲಿದೆ ಎಂತಲೇ ಅವರ ಸ್ಥಾನಮಾನಗಳು ಉನ್ನತವಾಗಿಯೇ ಇವೆ.

ಉಡುಪಿಯಲ್ಲೊಂದು ಚೇಂಬರ್ ಆಫ್ ಕಾಮರ್ಸನ್ನು ಅವರು ತಾ. ೧೬ರಂದು ಉದ್ಘಾಟಿಸಿದರು. ಈ ಸಂಸ್ಥೆಯನ್ನು ಉಡುಪಿಯ ರೋಟರಿ ಕ್ಲಬ್ ಸಂಘಟಿಸಿದ್ದು ಉದ್ಯಮ ಮತ್ತು ಕೃಷಿ ವಿಭಾಗಗಳನ್ನು ಮುಖ್ಯವಾಗಿ ಇದು ತೆಗೆದುಕೊಂಡಿದೆ. ಉಡುಪಿ ತಾಲೂಕು, ಹಾಗೂ ಜಿಲ್ಲೆಯ ಉತ್ತರದ ಭಾಗವು ಕೃಷಿಗೆ ಹೆಸರಾದುದು; ಮೀನುಗಾರಿಕೆಯ ಬೃಹತ್ ಕೇಂದ್ರ; ಅನೇಕ ಉದ್ದಿಮೆಗಳೂ ಈ ವಲಯದಲ್ಲಿ ಈಗ ಸ್ಥಾಪನೆ ಹೊಂದುತ್ತಿವೆ. ಹಾಗಿರುವಾಗ ಚೇಂಬರ್ ಪ್ರಾರಂಭವಾಗುವುದನ್ನು ಮತ್ತು ಇದರಿಂದ ವ್ಯಾಪಾರ —ವಾಣಿಜ್ಯ ಪ್ರಗತಿ ಹೊಂದುವುದನ್ನು ಮಾನ್ಯ ಬಾಳಿಗಾ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಮಾನ್ಯ ಬಾಳಿಗಾರ ಆಶೀರ್ವಾದ ಕಾರ್ಯಶೀಲರ ಮೇಲೆ ಸದಾ ಇದ್ದೇ ಇದೆ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O S 200 of 1964

P ಸುಬ್ಬರಾವ್, ಜನರಲ್ ಏಜಂಟ್-
K. ವೆಂಕಟ್ ರಾವ್— ವಾದಿ

ಮತ್ತು

ದಯಾನಂದ ನಾಯ್ಕ— ವಾಮನ ನಾಯ್ಕರ ಮಗ ಉದ್ಯಾವರ ಹೆಜಮಾಡಿ ಮಂಗಳೂರು ಗ್ರಾಮದ ಚೆಗಂಚೆಟ್ಟು.... ಪ್ರತಿವಾದಿ

ಯವರಿಗೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ತಾರೀಕು 6—2—1962 ನೇ ರಿ. ನಿ. ಮೂಲ ಗೇಣಿ ಎದುರ್ನಾಡಿ ವಾದಿಗೆ ಬರತಕ್ಕ ಕಳೆದ ಜಯ ಸಂ|ರದ ಲಾಗಾಯ್ತು ಶೋಭಕೃತು ಸಂವತ್ಸರದ ವರೆಗಿನ ಬಾಕಿ ಮೂಲಗೇಣಿ ಬಾಕಿ ಬಗ್ಗೆ ವಾದಿಯು ದಾಖಲು ಮಾಡಿದ ಮೊಕದ್ದಮೆ ದಾವೆಯು ತಾರೀಕು 23—10—1964 ಕ್ಕೆ ಇಟ್ಟಿದೆ ಉದಾಹರಿಸು ಪಂಥಾದಿದ್ದರೆ ಆ ದಿವಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Balachandra Rao
Advocate for Plaintiff

Udipi 19-10-1964

ನಿರೀಕ್ಷಿಸಿರಿ!

ದೀಪಾವಳಿ ಸಂಚಿಕೆ
ಮುಂದಿನ ವಾರ
ಪ್ರಕಟವಾಗುವುದು.

ವಿಜಯ ದಶಮಿ ಸಂಬಂಧ ಪ್ರೆಸ್ಸಿಗೆ ರಜೆ ಇದ್ದುದರಿಂದ ಈ ವಾರ 12 ಪುಟಗಳನ್ನಷ್ಟೇ ಕೊಡಲಾಗಿದೆ.

ಎಲ್ಲೆಲ್ಲಿ ಏನೇನು?

ಉಡುಪಿಯಲ್ಲಿ ವೈಭವದ ಚಿತ್ರಕಲಾ ಉತ್ಸವ

ರಾಜ್ಯಪಾಲರಿಂದ ಸಮಾರೋಪ

ಉಡುಪಿಯ ಸಂಗೀತ ಸಭೆಯ ನೇತೃತ್ವದಲ್ಲಿ ತಾ. ೧೧ರಂದು ಪ್ರಾರಂಭವಾದ ಚಿತ್ರಕಲೋತ್ಸವದ ಅಂಗವಾಗಿ, ಮೈಸೂರು ರಾಜ್ಯದ ಮಾನ್ಯ ವಿದ್ಯಾಸಚಿವರಿಂದ ಉದ್ಘಾಟಿತವಾದ ಕಲಾಧ್ಯಾಪಕರ ಸಮ್ಮೇಳನವು ತಾ. ೧೪ರಿಂದ ೧೬ರ ತನಕ ನಡೆಯಿತು. ಇದರಲ್ಲಿ ಕರ್ನಾಟಕದ ಹಲವಾರು ಕಲಾ ಶಿಕ್ಷಕರೂ ಕಲಾವಿದರೂ ಪ್ರತ್ಯಕ್ಷವಾಗಿ ಭಾಗವಹಿಸಿದ್ದರು. ಡಾ| ಶಿವರಾಮ ಕಾರಂತರೇ ಮೊದಲಾದವರು ವಿಚಾರಪೂರ್ಣವಾದ ಭಾಷಣಗಳನ್ನು ನೀಡಿದರು.

ತಾ. ೧೭ರಂದು ಶಿಲ್ಪಿ ಶ್ರೀ ಆರ್. ಗೋಪಾಲ ಶೆಣೈಯವರನ್ನು ಸತ್ಕರಿಸಲಾಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ವಹಿಸಿದ್ದರು. ನಗರ ಸಭೆಯ ಪರವಾಗಿ ಶ್ರೀ ಪಿ. ರಂಗನಾಥ ಶೆಣೈ ಅವರು ನಾಗರಿಕ ಚಿನ್ನ ಪತ್ತಳೆಯನ್ನು ಅರ್ಪಿಸಿದರು. ಡಾ| ಕೆ. ಬಿ. ರಾಮಕೃಷ್ಣ ರಾವ್ ಮತ್ತು ಶ್ರೀ ಅ. ನ. ಸುಬ್ಬರಾಯರು ಮುಖ್ಯ ಅತಿಥಿಗಳ ಕಲಾಪ್ರಜ್ಞತೆಯನ್ನು ಪ್ರಶಂಸಿಸಿದರು.

ತಾ. ೧೮ರಂದು ಸಮಾರೋಪ ಸಮಾರಂಭವು ರಾಜ್ಯಪಾಲ ಜನರಲ್ ಶ್ರೀ ನಾಗೇಶರಿಂದ ನೆರವೇರಿತು. ಡಾ| ಟಿ. ಮಾಧವ ಪೈಯವರು ಸ್ವಾಗತಿಸಿದ ಬಳಿಕ ನಗರಸಭಾಧ್ಯಕ್ಷ ಶ್ರೀ ಪಿ. ರಂಗನಾಥ ಶೆಣೈ ಅವರು ಮಾನಪತ್ರ ಒಪ್ಪಿಸಿದರು. ಮಾನ್ಯ ಗವರ್ನರರು ಚಿತ್ರಕಲೋತ್ಸವದ ಬಗ್ಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಇದು ಉಳಿದ ಜಿಲ್ಲೆಗಳಿಗೆ ಆದರ್ಶವಾಗಿದೆ ಎಂದರು. ಭಾಗವಹಿಸಿದ ಕಲಾವಿದರಿಗೆ ಪ್ರಶಸ್ತಿ ಪತ್ರಗಳನ್ನಿತ್ತರು. ಸಂಗೀತ ಸಭೆಯ ಅಧ್ಯಕ್ಷ ಶ್ರೀ ಕೆ. ಕೆ. ಪೈಯವರು ಒಂಬತ್ತು ದಿನಗಳ ತನಕ ನಡೆದ ಈ ಚಿತ್ರಕಲೋತ್ಸವದ ಯಶಸ್ಸಿಗಾಗಿ ನೆರವಾದವರಿಗೆ ಧನ್ಯವಾದವರ್ಪಿಸಿದರು.

ತಾ. ೧೧ರಿಂದ ೧೯ರ ತನಕ ನೆರವೇರಿದ ಈ ಉತ್ಸವದಲ್ಲಿ ಕೆನರಾ ಜಿಲ್ಲೆಗಳ ಅನೇಕ ಕಲಾವಿದರ ಉತ್ತಮ ಕೃತಿಗಳು, ರಂಗವಲ್ಲಿಗಳು ಜನಮನಾಕರ್ಷಕವಾಗಿದ್ದುವು. ಪ್ರತಿದಿನವೂ ಸಾವಿರಾರು ಪ್ರೇಕ್ಷಕರು ಇದನ್ನು ಕಂಡು ತೃಪ್ತಿಪಟ್ಟಿದ್ದರು. ಸಂಜೆಯ ಸಭಾ ಕಾರ್ಯಕ್ರಮ ಮತ್ತು ರಾತ್ರೆ ನಡೆಯುತ್ತಿದ್ದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೂ ಪ್ರಶಂಸನೀಯವಾಗಿದ್ದುವು. ಒಟ್ಟಿನಲ್ಲಿ ಸಂಗೀತ ಸಭೆಯು ನಿರ್ವಹಿಸಿದ ಈ ಗುರುತರ ಜವಾಬ್ದಾರಿಯುತ ಕಾರ್ಯಕ್ರಮವು ಉಡುಪಿಯ ಇತಿಹಾಸಕ್ಕೊಂದು ಅಪೂರ್ವ ಶೋಭೆಯನ್ನು ತಂದುಕೊಟ್ಟಿದೆಯೆಂದರೆ ಅತಿಶಯೋಕ್ತಿಯಲ್ಲ.

ಪರ್ಕಳ ಹೈಸ್ಕೂಲ್

ಪರ್ಕಳ ಅ. ೧೪— ಸಮಾಜದಲ್ಲಿ ಬದಲಾವಣೆಗಳಾಗಿರುವ ಪ್ರಕಾರ ಶಿಕ್ಷಣ ಕ್ರಮದಲ್ಲೂ ಬದಲಾವಣೆಗಳಾಗಬೇಕು ಎಂದು ಶ್ರೀ ಶಿರೂರು ಮಠದ ಶ್ರೀ ಶ್ರೀ ಲಕ್ಷ್ಮೀಮನೋಜ್ಞ ತೀರ್ಥ ಶ್ರೀಪಾದಂಗಳವರು ಪರ್ಕಳ ಪ್ರೌಢ ಶಾಲೆಯ ಕಟ್ಟಡದ ಶಂಕುಸ್ಥಾಪನೆ ಮಾಡುತ್ತ ಹೇಳಿದರು.

ಶಿಕ್ಷಣ ಮಂತ್ರಿ ಶ್ರೀ ಎಸ್. ಆರ್. ಕಂಠಿಯವರು ಅಧ್ಯಕ್ಷ ಭಾಷಣ ಮಾಡುತ್ತಾ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚಾಗಿ ಶಾಲೆಗಳನ್ನೂ, ಕಾಲೇಜುಗಳನ್ನೂ, ಆರಂಭಿಸಬೇಕೆಂದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ೧೪೦ ಪ್ರೌಢ ಶಾಲೆಗಳೂ, ೧೫ ಕಾಲೇಜುಗಳೂ ಇವೆಯಲ್ಲದೆ, ವಿಶ್ವ ವಿದ್ಯಾಲಯದ ಪರೀಕ್ಷೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ತೇರ್ಗಡೆಯಾಗುತ್ತಾ ಒಳ್ಳೆಯ ಪ್ರಗತಿ ಸಾಧಿಸಲಾಗಿದೆ. ಎಂದರು.

ವಿದ್ಯಾಭ್ಯಾಸವು ಜೀವನವನ್ನು ಅರಳಿಸುತ್ತದೆಂದು ಡಾ|| ಟಿ. ಎಂ. ಎ. ಪೈಯವರು ಹೇಳಿದರು. ಶಾಲೆಯ ವ್ಯವಸ್ಥಾಪಕ ಶ್ರೀ ರಮೇಶ ಪೈಯವರು ಸ್ವಾಗತಿಸಿದರು.

ಮುಲ್ಕಿಯಲ್ಲಿ ಕುಟುಂಬ ಯೋಜನಾ ತರಬೇತಿ ಶಿಬಿರ

ದಕ್ಷಿಣ ಕನ್ನಡ ಜಿಲ್ಲೆಯ 64-65 ನೇ ಇಸವಿಯ ಮಂಜೂರಾದ 10 ಕುಟುಂಬ ಯೋಜನಾ ತರಬೇತಿ ಶಿಬಿರಗಳ ಪೈಕಿ ಪ್ರಥಮ ಶಿಬಿರವು ತಾ. 3-10-64 ರಿಂದ 5-10-64 ತನಕ ಮಂಗಳೂರು ತಾಲೂಕು ಅಭಿವೃದ್ಧಿ ಬೋರ್ಡಿನ ನೇತೃತ್ವದಲ್ಲಿ ಮುಲ್ಕಿ ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ಜರಗಿತು. ಪ್ರಥಮ ದಿನದ ಶಿಬಿರವು ಮಾಜಿ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ಯಂ ಮಹಾತ್ರಿಯವರಿಂದ ಉದ್ಘಾಟಿಸಲಾಯಿತು. ಡಾ| ಕೆ. ಬಾಬು ಶೆಟ್ಟಿಯವರು ಸ್ವಾಗತಿಸಿದರು. ಜಿಲ್ಲೆಯ ಗೌರವ ಕುಟುಂಬಯೋಜನಾ ಕಾರ್ಯಕರ್ತೆ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ಶಿಬಿರ ಉದ್ದೇಶಗಳನ್ನು ವಿವರಿಸಿದರು. ತಾರೀಕು 4—10—64 ರಂದು ಬೆಳಿಗ್ಗೆ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿ ಡಾ| ಎಚ್. ಟಿ. ಮನೋರಮಾ, ಡಾ| ಪಿ. ಕೃಷ್ಣಮೂರ್ತಿಯವರು ಉಪನ್ಯಾಸವಿತ್ತರು. ಅದೇ ಸಮಯ ಉಡುಪಿ ಸರಕಾರಿ ಆಸ್ಪತ್ರೆಯ ಸರ್ಜನರಾದ ಡಾ| ಎಮ್. ಎಸ್. ಶೆಟ್ಟಿಯವರು ಮುಲ್ಕಿ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಗಂಡಸರಿಗೆ ಕುಟುಂಬ ಯೋಜನಾ ಶಸ್ತ್ರಚಿಕಿತ್ಸೆಯನ್ನು ಮಾಡಿದರು. ಅಲ್ಲದೆ ಪುರುಷರ ಶಸ್ತ್ರ ಚಿಕಿತ್ಸೆಯ ವಿಚಾರ ಉಪನ್ಯಾಸವನ್ನಿತ್ತರು. ಸ್ಥಳೀಯ ಮೆಡಿಕಲ್ ಆಫೀಸರ್ ಡಾ| ಕೆ. ಬಾಬು ಶೆಟ್ಟಿಯವರು ಗರ್ಭನಿರೋಧಕ ಉಪಕರಣಗಳನ್ನು ಉಪಯೋಗಿಸುವ ವಿಚಾರದಲ್ಲಿ ಭಾಷಣ ಮಾಡಿದರು. ಶ್ರೀಮತಿ ಗುಲಾಬಿ ಮತ್ತು ಪ್ರೇಮಲತಾರವರು ಹೆಂಗಸರಿಗೆ ಗರ್ಭನಿರೋಧಕ ಉಪಕರಣಗಳ ಕುರಿತು ವಿವರಿಸಿದರು.

ತಾ. 5-10-64ರಂದು ಸಮಾರೋಪ ಸಮಾರಂಭವು ಆರೋಗ್ಯ ಮಂತ್ರಿ ಡಾ| ನಾಗಪ್ಪ ಆಳ್ವರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಡಾ| ಸಂಜೀವನಾಥ ಎಮ್. ಎಲ್. ಎ. ಅವರು ಶಿಬಿರದ ಸಮಾರೋಪ ಭಾಷಣ ಮಾಡಿದರು. ಶಿಬಿರಾರ್ಥಿಗಳ ಪೈಕಿ ಮಿಸ್ ತೆರೆಸಾ ಮೆನೆಜಸ್, ಕೆ. ಜಿ ಮಾಡ್ಯೆ ಮತ್ತು ಕೆ. ಎಸ್. ಸುವರ್ಣರು ಮಾತಾಡಿದರು. ಆರಂಭದಲ್ಲಿ ಶ್ರೀ ಬಿ. ರಾಜೀವ ಭಂಡಾರಿಯವರು ಸ್ವಾಗತಿಸಿದರು.

ಶ್ರೀ ಚಂಡಿಕಾ ಯಾಗ

ಉಡುಪಿಯ ಶ್ರೀ ಸುಬ್ರಹ್ಮಣ್ಯ ಯುವಕ ಸಂಘದವರು ವೇ| ಮೂ| ಎ. ಶ್ರೀನಿವಾಸ ಭಟ್ಟರ ಆಧ್ವರ್ಯತನದಲ್ಲಿ ವಿಜಯದಶಮಿಯಂದು ಶ್ರೀ ಚಂಡಿಕಾ ಯಾಗವನ್ನು ಯಶಸ್ವಿಯಾಗಿ ಪೂರೈಸಿದರು. ಸುಮಾರು ೨೦೦ ಜನ ಸಮಾಜ ಬಾಂಧವರು ಇದರಲ್ಲಿ ಭಾಗವಹಿಸಿದ್ದರು. ಸಂಜೆ ಶ್ರೀ ಹರಿಶ್ಚಂದ್ರ ಉಪಾಧ್ಯಾಯರ ನೇತೃತ್ವದಲ್ಲಿ ಮಹಾಸಭೆಯು ಜರಗಿತು. ಸಂಧ್ಯಾವಂದನ ಮತ್ತು ಸಂಸ್ಕೃತ ಹಾಗೂ ವೈದಿಕ ವಿದ್ಯೆಯ ಅಧ್ಯಯನಗಳ ಕಡೆಗೆ ಸಮಾಜ ಬಾಂಧವರು ವಿಶೇಷ ಗಮನ ನೀಡಬೇಕೆಂಬುದಾಗಿ ಡಾ| ಟಿ. ಕೆ. ಪಿ. ಶರ್ಮ, ವೇ| ಮೂ| ದಾಮೋದರ ಶಾಸ್ತ್ರಿ ಮೊದಲಾದವರು ವಿನಂತಿಸಿಕೊಂಡರು.

ನೆಹರು ಹೈಸ್ಕೂಲ್

ಅಲೆವೂರು, ಅ. ೧೪— ಶಿಕ್ಷಣವನ್ನು ವ್ಯಾಪಾರವನ್ನಾಗಿ ಮಾಡಲಾಗಿದೆ ಎಂಬ ಅಭಿಪ್ರಾಯವನ್ನು ನಾವು ಒಪ್ಪುವುದಿಲ್ಲವೆಂದು ಮೈಸೂರು ರಾಜ್ಯದ ಶಿಕ್ಷಣ ಮಂತ್ರಿ ಶ್ರೀ ಎಸ್. ಆರ್. ಕಂಠಿ ಅವರು ನೆಹರೂ ಪ್ರೌಢಶಾಲೆಯ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿದ ಸಂದರ್ಭದಲ್ಲಿ ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ| ಟಿ. ಎಂ. ಎ. ಪೈಯವರು ಇಷ್ಟು ಬೇಗ ಈ ಶಾಲೆ ರೂಪುಗೊಳ್ಳುವಂತೆ ಶ್ರಮಿಸಿರುವವರನ್ನು ಅಭಿನಂದಿಸಿದರು. ಆರಂಭದಲ್ಲಿ ಶಾಲೆಯ ವ್ಯವಸ್ಥಾಪಕ ಶ್ರೀ ಟಿ. ರಮೇಶ ಪೈಯವರು ಸ್ವಾಗತಿಸಿದರು. ಶ್ರೀ ಕೆ. ರಂಗಪ್ಪ ಭಟ್ ರವರು ಈ ವರೆಗೆ ಮಾಡಿರುವ ಪ್ರಗತಿಯನ್ನು ಶ್ರೀ ಎಫ್. ದಾಂತಿಯವರು ವಂದನೆಗಳನ್ನರ್ಪಿಸಿದರು.

ಪರಿಚಯ

ಚಿತ್ರದುರ್ಗದ ಮುರುಘರಾಜೇಂದ್ರ ಮಠ

ಚಿತ್ರದುರ್ಗದ ಶ್ರೀಮುಚ್ಚಿನ್ಮೂಲಾದ್ರಿ ಬೃಹನ್ಮಠ ಮಹಾ ಸಂಸ್ಥಾನದ ಪೀಠ ಭಾರತದ ವೀರಶೈವ ಭಕ್ತಕೋಟಿಗೂ ಇತರ ಜನತೆಗೂ ಪರಮಪೂಜನೀಯವಾದ ಜಗದ್ಗುರು ಪೀಠವಾಗಿದೆ. ಪುರಾತನವಾದ ಈ ಪೀಠಕ್ಕೆ ಹಲವು ಶತಮಾನಗಳ ಐತಿಹ್ಯವಿದ್ದು ನಾಡಿನ ಧಾರ್ಮಿಕ—ಸಾಮಾಜಿಕ ಜೀವನ ಸುಧಾರಣೆಗೆ ಈ ಪೀಠದಿಂದ ಅಪಾರ ಸ್ಫೂರ್ತಿ ಸಂದಿದೆ, ಸಲ್ಲುತ್ತಿದೆ.

"ಸಂಸಾರವನ್ನು ಶಿವಮಯವಾಗಿ ಮಾಡುವುದೇ ವೀರಶೈವರ ಜೀವನ ಗುರಿ" ಎಂದ ಸಾರಿದ ಭಕ್ತಿಭಂಡಾರಿ ಶ್ರೀ ಬಸವೇಶ್ವರರು ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಶ್ರೀಮನ್ನಿರಂಜನ ಜಗದ್ಗುರು ಶೂನ್ಯ ಸಿಂಹಾಸನವನ್ನು ಸ್ಥಾಪಿಸಿದರು. ಶ್ರೀ ಪ್ರಭುದೇವರು ಈ ಸಿಂಹಾಸನದ ಮೂಲ ಪುರುಷರು. ಕಾಲಾನಂತರದಲ್ಲಿ ಈ ಶೂನ್ಯ ಪೀಠದಿಂದ ಹಲವು ಶಾಖೋಪಶಾಖೆಗಳು ನಾಡಿನ ನಾನಾ ಕಡೆ ಸ್ಥಾಪಿತವಾದವು. ಈ ಪರಂಪರೆಯಲ್ಲಿ ಅತ್ಯಂತ ಮುಖ್ಯವೂ, ಪ್ರಸಿದ್ಧವೂ ಆದದ್ದು ಚಿತ್ರದುರ್ಗದ ಚಿನ್ಮೂಲಾದ್ರಿಯ ಮುರುಘರಾಜೇಂದ್ರ ಬೃಹನ್ಮಠ.

ಬೃಹನ್ಮಠದ ಸ್ವಾಮಿಗಳವರಲ್ಲಿ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮಿಗಳವರು. ಪೀಠದ ಕೀರ್ತಿ ಪ್ರತಿಷ್ಠೆಗಳು ವಿಶೇಷವಾಗಿ ಹರಡಲು ಕಾರಣರಾದರು.

ಕರ್ನಾಟಕದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಅಭಿವೃದ್ಧಿಗೆ ಈ ಮಠದ ಶ್ರೀ ಸ್ವಾಮಿಗಳವರಿಂದ ಮಹೋನ್ನತ ಸೇವೆ ಸಲ್ಲುತ್ತಿದೆ.

ಶ್ರೀ ಬೃಹನ್ಮಠದ ಸ್ವಾಮಿಗಳವರು ನಾಡಿಗೆ ಸಲ್ಲಿಸುತ್ತಿರುವ ಉಪಕಾರದ ಚಟುವಟಿಕೆಗಳು ಬಹು ಮುಖವಾದುದು. ಈ ಮಠದ ಶಾಖೋಪಶಾಖೆಗಳಾಗಿ ಸುಮಾರು 4,000 ಮಠಗಳಿವೆ. ರಾಜ್ಯದಲ್ಲೇ ಅಲ್ಲದೆ ಗೋವಾ, ಉತ್ತರ ಪ್ರದೇಶ, ಮಹಾರಾಷ್ಟ್ರ, ತಮಿಳು ನಾಡು ಮುಂತಾದ ರಾಜ್ಯಗಳಲ್ಲೂ ಈ ಪರಂಪರೆಯ ಮಠಗಳಿವೆ. ಶ್ರೀ ಬೃಹನ್ಮಠದ ಆಶ್ರಯದಲ್ಲಿ ಕನ್ನಡ ನಾಡಿನಲ್ಲೂ ಹೊರಗಿನ ರಾಜ್ಯಗಳಲ್ಲೂ ಸುಮಾರು 75 ವಿದ್ಯಾರ್ಥಿ ನಿಲಯಗಳು ನಡೆಯುತ್ತಿದ್ದು ಅವುಗಳಲ್ಲಿ ಸುಮಾರು ಹತ್ತು ಸಹಸ್ರ ವಿದ್ಯಾರ್ಥಿಗಳು ಆಶ್ರಯ ಹೊಂದಿದ್ದಾರೆ. ಚಿತ್ರದುರ್ಗದ ಮಠವು ಧಾರವಾಡ, ಬೆಳಗಾವಿ, ಬಳ್ಳಾರಿ ಮುಂತಾದ ನಾಡಿನ ಪ್ರಮುಖ ಸ್ಥಳಗಳಲ್ಲಿ ಹಲವು ಶಾಲೆಗಳಿಗೆ ನೆರವಾಗುವುದರ ಜತೆಗೆ ಕಾಲೇಜುಗಳ ಸ್ಥಾಪನೆ ನಿರ್ವಹಣೆಗೂ ಸಹಾಯ ಮಾಡಿದೆ.

ಮೈಸೂರಿನಲ್ಲಿ "ಪ್ಯಾಥಲಾಜಿಕಲ್ ಲ್ಯಾಬರೇಟರಿ" ನಿರ್ಮಾಣ, ಚಿತ್ರದುರ್ಗದಲ್ಲಿ ಒಂದು ಹೆರಿಗೆ ಆಸ್ಪತ್ರೆ ದೊಡ್ಡ ಪೇಟೆ ಕಕ್ಕೇರಿಯಲ್ಲಿ ಒಂದು ಆಸ್ಪತ್ರೆ— ಇವು ವೈದ್ಯ ಸೌಕರ್ಯ ಕ್ಷೇತ್ರದಲ್ಲಿ ಈ ಮಠವು ನೀಡಿರುವ ಕೆಲವು ಪ್ರಮುಖ ಸಹಾಯಗಳು.

ರಾಜ್ಯದ ಅನೇಕ ಕೈಗಾರಿಕೆಗಳ ಅಭಿವೃದ್ಧಿಗೂ ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಮಠದಿಂದ ಗಮನಾರ್ಹ ಸಹಾಯ ಪ್ರೋತ್ಸಾಹ ಲಭಿಸಿದೆ. ಮೈಸೂರು ಬ್ಯಾಂಕ್ ಸ್ಥಾಪಿತವಾದಾಗ ಮೊದಲು ಅದರಲ್ಲಿ ಪ್ರಮುಖವಾಗಿ ಷೇರುಗಳನ್ನು ಪಡೆದು ಅದರ ಸ್ಥಾಪನೆಗೆ ನೆರವಾದವರು ಈ ಮಠದ ಸ್ವಾಮಿಗಳವರು.

ಬ್ಯಾಂಕಿಂಗ್ ಉದ್ಯಮ, ಸಹಕಾರ ಸಂಸ್ಥೆಗಳು, ಕಾಗದದ ತಯಾರಿಕೆ, ಎಣ್ಣೆ ಗಿರಣಿಗಳು, ಹತ್ತಿ ಒಟ್ಟೆ ಕಾರ್ಖಾನೆಗಳು, ನಾನಾ ಎಂಜಿನಿಯರಿಂಗ್ ಉದ್ಯಮಗಳು, ಚಲನಚಿತ್ರೋದ್ಯಮ- ಹೀಗೆ ಬಹುಮುಖ ರೀತಿಯಲ್ಲಿ ನಾಡಿನ ಆರ್ಥಿಕಾಭಿವೃದ್ಧಿಗೆ ಈ ಮಠದಿಂದ ಹೆಚ್ಚಿನ ನೆರವು ದೊರೆತಿದೆ.

ಸಾಮಾಜಿಕ ಕ್ಷೇತ್ರದಲ್ಲಿ ಈ ಮಠವು ಭವ್ಯವಾದ ಜಾಗೃತ ದೃಷ್ಟಿಯಿಂದ ಜನಪದದ ಕಲ್ಯಾಣಕ್ಕೆ ಮಾರ್ಗದರ್ಶನ ನೀಡುತ್ತ ಬಂದಿದೆ. ಅನೇಕ ಪ್ರತಿಭಾವಂತರು ವಿದೇಶಗಳಲ್ಲಿ ಉನ್ನತ ವ್ಯಾಸಂಗ ಪಡೆದು ಬರಲು ಇಲ್ಲಿನ ಜಗದ್ಗುರುಗಳು ಸಹಾಯ ಮಾಡಿದ್ದಾರೆ ರಾಜ್ಯಾದ್ಯಂತ ಅಕ್ಕಮಹಾದೇವಿ ಸಮಾಜಗಳಿಗೆ ಸಹಾಯ ಮಾಡಿ ಮಹಿಳೆಯರ ಮುನ್ನಡೆಯನ್ನು ಪ್ರೋತ್ಸಾಹಿಸಿದ್ದಾರೆ.

ಪರಮತ ಸಹಿಷ್ಣುತೆಯಲ್ಲಿ ಈ ಮಠದ ಆದರ್ಶ ವಿಶಿಷ್ಟವಾದುದು. ಲಿಂಗೈಕ್ಯರಾದ ಶ್ರೀ ಜಯವಿಭವ ಮಹಾ ಸ್ವಾಮಿಗಳವರು ಹೊಸದುರ್ಗ ತಾಲ್ಲೂಕಿನ ಜಾನಕಲ್‌ನಲ್ಲಿ ಮುಸ್ಲಿಮರಿಗಾಗಿ ಒಂದು ಮಸೀದಿಯನ್ನು ಕಟ್ಟಿಸಿಕೊಟ್ಟರು. ಹೀಗೆ ಜಾತಿ, ಮೇಲು—ಕೀಳು ಮುಂತಾದ ಭಾವನೆಗಳನ್ನು ದೂರೀಕರಿಸಿ ಏಕ್ಯಪ್ರೇಮ, ಜನಸೇವೆಗಳ ಘನ ಆದರ್ಶವನ್ನು ಈ ಮಠದ ಸ್ವಾಮಿಗಳವರು ಬೆಳೆಸುತ್ತ ಬಂದಿದ್ದಾರೆ.

ಈ ಶತಮಾನದಲ್ಲೇ ಕನ್ನಡನಾಡಿಗೆ ಈ ಮಠದಿಂದ ಸಲ್ಲುತ್ತಿರುವ ಸಹಾಯೋಪಕಾರಗಳು ಮಹತ್ವಪೂರ್ಣವಾದವು. ನಾಡಿನ ಧರ್ಮ, ಸಂಸ್ಕೃತಿ, ಸಾಹಿತ್ಯ, ಸಮಾಜ ಜೀವನಗಳ ಅಭಿವೃದ್ಧಿಗೆ ಇಲ್ಲಿನ ಸ್ವಾಮಿಗಳವರು ಬಹುಮುಖ ಪ್ರೋತ್ಸಾಹ ನೀಡುತ್ತ ಬಂದಿದ್ದಾರೆ.

ಕರ್ನಾಟಕ ಏಕೀಕರಣಕ್ಕೆ ಈ ಮಠದಿಂದ ಸಂದಿರುವ ವಿಶಿಷ್ಟ ಸೇವೆ ಉಲ್ಲೇಖನಾರ್ಹ. ಅಖಿಲ ಕರ್ನಾಟಕ 7ನೇ ಏಕೀಕರಣ ಪರಿಷತ್ತು 1937ರಲ್ಲಿ ಧಾರವಾಡದಲ್ಲಿ ಸೇರಿದ್ದಾಗ ಲಿಂಗೈಕ್ಯ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಸ್ವಾಮಿಗಳವರು ಅದನ್ನು ಉದ್ಘಾಟಿಸಿ ಅತ್ಯಂತ ಮನನೀಯವಾದ ಭಾಷಣ ಮಾಡಿದರು. ಶ್ರೀ ಸ್ವಾಮಿಗಳವರು "ನಮ್ಮ ಕುಲವು ಕನ್ನಡ ಕುಲ. ನಮ್ಮ ಸಂಸ್ಕೃತಿ ಕನ್ನಡ. ಇಂತಹ ಕನ್ನಡ ಕುಲದ ಉದ್ಧಾರವಾಗಬೇಕಾದರೆ ಜಾತಿ, ಮತ, ಪಂಥಗಳ ತೊಡಕನ್ನು ತರದೆ ಸಮಸ್ತ ಕರ್ನಾಟಕದ ಉದ್ಧಾರವು ಕನ್ನಡ ದೇಶದ ಏಕೀಕರಣದಲ್ಲೇ ಇರುತ್ತದೆಂದು ತಿಳಿದು ಸರ್ವರೂ ಪ್ರಯತ್ನಿಸಬೇಕು" ಎಂದು ಕರೆಯಿತ್ತರು.

೧೯೩೪ರಲ್ಲಿ ಮಹಾತ್ಮಾ ಗಾಂಧಿಯವರು ಕರ್ನಾಟಕ ಪ್ರವಾಸ ಕಾಲದಲ್ಲಿ ಹಾವೇರಿಗೆ ಬಂದಾಗ ಸ್ವಾಮಿಗಳವರೂ ಮಹಾತ್ಮರೂ ಹರಿಜನೋದ್ಧಾರ, ಖಾದಿ, ಅಹಿಂಸೆ ಮುಂತಾದ ವಿಷಯಗಳನ್ನು ಚರ್ಚಿಸಿದರು.

ತಾ|| ೨೦—೫—೬೪ರಂದು ಲಿಂಗೈಕ್ಯರಾದ ಶ್ರೀ ಜಗದ್ಗುರು ಜಯವಿಭವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಸುಮಾರು ಹದಿನೈದು ವರ್ಷ ಕಾಲ ಪಟ್ಟಾಧಿಕಾರದಲ್ಲಿದ್ದು ತಮ್ಮ ಧರ್ಮನಿಷ್ಠೆ, ಉದಾರ ಮನೋಭಾವಗಳಿಂದ ಪ್ರಸಿದ್ಧರಾಗಿದ್ದರು. ಸ್ವಾವಲಂಬನೆಯ ಆದರ್ಶವನ್ನು ಪ್ರತಿಪಾದಿಸುತ್ತ ಅವರು ಮಠಕ್ಕೆ ಸೇರಿದ ಜಮೀನುಗಳ ಬೇಸಾಯದಲ್ಲಿ ಮತ್ತು ಪಶುಪಾಲನೆಗೆ ವಿಶೇಷ ಆಸ್ಥೆ ವಹಿಸಿದ್ದರು.

೧೯೧೦ರಲ್ಲಿ ಜಮಖಂಡಿ ತಾಲ್ಲೂಕಿನ ಕಾಜಿಬೀಳಗಿ ಗ್ರಾಮದಲ್ಲಿ ಸತ್ಕುಲಪ್ರಸೂತರಲ್ಲಿ ಜನಿಸಿದ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾ ಸ್ವಾಮಿಗಳವರ ಬಾಲ್ಯ ವಿದ್ಯಾಭ್ಯಾಸ ಅದೇ ಗ್ರಾಮದಲ್ಲಿ ಆರಂಭವಾಯಿತು. ಐದು ವರ್ಷ ವಯಸ್ಸಾಗುವ ವೇಳೆಗೇ ಅವರು ಶ್ರೀ ಮದಭಾವಿ ಶಿವಯೋಗಿಗಳ ಕೃಪಾಪೋಷಣೆ ದಿವ್ಯ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಶ್ರೀ ಜಯವಿಭವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಪ್ರೋತ್ಸಾಹದಿಂದ ಅವರು ಕಾಶಿಗೆ ತೆರಳಿ ಇಪ್ಪತ್ತು ವರ್ಷಗಳಿಗೂ ಹೆಚ್ಚು ಕಾಲ ಅಲ್ಲಿ ಶಾಸ್ತ್ರ ಪುರಾಣೇತಿಹಾಸಗಳನ್ನು ಅಧ್ಯಯನ ಮಾಡಿದರು. ವ್ಯಾಕರಣದಲ್ಲಿ ವಿಶೇಷ ಪಾಂಡಿತ್ಯ ಗಳಿಸಿ 'ವ್ಯಾಕರಣಾಚಾರ್ಯ' ಎಂಬ ಪದವಿಯನ್ನು ಗಳಿಸಿದ ಶ್ರೀ ಸ್ವಾಮಿಗಳವರು ಕನ್ನಡ, ಸಂಸ್ಕೃತ, ಹಿಂದಿ, ಮರಾಠಿ, ಇಂಗ್ಲಿಷ್ ಭಾಷೆಗಳನ್ನು ಬಲ್ಲ ಬಹುಭಾಷಾ ವಿದರಾಗಿದ್ದಾರೆ.

ಲಿಂಗೈಕ್ಯ ಶ್ರೀ ಶ್ರೀ ಜಯವಿಭವ ಮುರುಘರಾಜೇಂದ್ರ ಸ್ವಾಮಿಗಳವರು ಅಸ್ವಸ್ಥರಾದಾಗ ಅವರ ಬೆಂಗಳೂರು ಮೊಕ್ಕಾಂನಲ್ಲಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರನ್ನು ಬರಮಾಡಿಕೊಂಡು ತಾರೀಕು 13 5-1964ರಂದು ಬಸವಜಯಂತಿಯ ಶುಭದಿನ ಅವರಿಗೆ ಉತ್ತರಾಧಿಕಾರವನ್ನು ದಯಪಾಲಿಸಿದರು. ಇವರ ಸಿಂಹಾಸನಾರೋಹಣವು ತಾ. 16ರಂದು ವೈಭವದಿಂದ ನೆರವೇರಿತು.

ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು ವಹಾಮೇಧಾವಿಗಳು. ನಾಡಿನ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಸ್ಥಿರವಾಗಿ ಜ್ಞಾನಪ್ರಸಾರ ಮಾಡುವಂತಹ ಮಹಾವಿದ್ಯಾಲಯಗಳನ್ನು ಬೆಳೆಸಬೇಕೆಂದು ಅವರು ಬಹುವಾಗಿ ಅಪೇಕ್ಷಿಸುತ್ತಾರೆ ಅವರ ಅಧಿಕಾರಾವಧಿಯಲ್ಲಿ ಶ್ರೀ ಬೃಹನ್ಮಠದ ಕೀರ್ತಿ ಪ್ರತಿಷ್ಠೆಗಳು ಅತಿಶಯವಾಗಿ ಬೆಳೆದು ತನ್ಮೂಲಕ ನಾಡಿಗೂ ಅಧಿಕ ಉಪಕಾರವಾಗುವುದು ನಿಸ್ಸಂಶಯ.

— —

ವಾರ್ಷಿಕೋತ್ಸವ

ತಾ. 15ರಂದು ಉಡುಪಿ ಹಿಂದಿ ಸೇವಾ ಸದನದ ವಾರ್ಷಿಕೋತ್ಸವವು ಡಾ|| ಟಿ. ಮಾಧವ ಪೈ ಅವರ ಅಧ್ಯಕ್ಷತೆಯಲ್ಲಿ ಜರಗಿತು. ನಗರಸಭಾಧ್ಯಕ್ಷ ಶ್ರೀ ಕೆ. ರಂಗನಾಥ ಶೆಣೈ ಅವರು ಸ್ವಾಗತಿಸಿದರು. ಶ್ರೀ ಎ. ಪುಂಡಲೀಕ ಕಾಮತರು ವರದಿಯನ್ನು ಓದಿದರು. ಶ್ರೀ ಎ. ಕೃಷ್ಣರಾಯರು ಶ್ರೀ ಲಕ್ಷ್ಮೀನಾರಾಯಣ ಕಿಣಿಯವರ 'ಬದಲ್ ಗಯಾ ಜಮಾನಾ" ಹಿಂದೀ ಕಾದಂಬರಿಯ ವಿಮರ್ಶೆಗೈದರು. ಶ್ರೀಮತಿ ಶಾರದಾ ಮಾಧವ ಪೈ ಅವರು ಪ್ರಮಾಣ ಪತ್ರಗಳನ್ನು ವಿತರಣೆ ಮಾಡಿದರು. ಶಿಕ್ಷಕ ಶ್ರೀ ಉ. ಲ. ಕಿಣಿಯವರು ಧನ್ಯವಾದವರ್ಪಿಸಿದರು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O.S 287/1964

ಕೆ ಜಗನ್ನಾಥ ಹೆಗ್ಡೆ, ವಾದಿ

ಮತ್ತು

ಚಂದಯ್ಯ ಹೆಗ್ಡೆ ಕೂಡಾ— ಪ್ರತಿವಾದಿರು ಇವರೊಳಗೆ

ಪ್ರತಿವಾದಿಯರು.—

10) ಶಂಕರ ಹೆಗ್ಡೆ—ಅಮ್ಮಾಜಿ ಹೆಗ್ಡತ್ತಿ ರ ಮಗ

11) ರಾಧಮ್ಮ ಹೆಗ್ಗಡ್ತಿ-ಕೊರಗಿ ಹೆಗ್ಗಡ್ತಿ ಮಗಳು

10 ನೇ ಯವನು ಕಾರ್ಕಳ ತಾಲ್ಲೂಕು ಮುದ್ರಾಡಿಗ್ರಾಮ—

11 ನೇಯವಳು ಉಡುಪಿ ತಾಲ್ಲೂಕು ಕುಕ್ಕೆಹಳ್ಳಿಗ್ರಾಮ

ಇವರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ :—

ನಿಮ್ಮ ಕುಟುಂಬದ ಆಸ್ತಿಗಳಿಗೆ ನೀವು ಕೆ ಪಟ್ಟ ರಿಸೀವರ್ P. V. ಆಚಾರ್ಯರು ವಾದಿಗೆ ತಾರೀಕು. 17—7—1917 ರಲ್ಲು ರೂಪಾಯಿ 1500|—ಕ್ಕೆ ರಿಜಿಸ್ಟ್ರಿ ಸಹಿ ಬರಕೊಟ್ಟ ಈಡು ದಸ್ತಾವೇಜಿನ ಬಾಬ್ತು ಬಾಕಿಯುವ ಹ್ಯಾಸೇಜನ್ನು ಬರಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು, 20—10—1964 ಕ್ಕೆ ಯಿಟ್ಟಿದೆ—. ಉಪಾಹರಿಕುವಂಥಾದ್ದರೆ ಆ ದಿನ್ನ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಬಿದು ಮಾಡಿಕೊಳ್ಳಬಹುದು — ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Balachandra Rao

Advocate for Plaintiff

Udipi 19—10—1964

ಬೆಳ್ತಂಗಡಿ ಮುನ್ಸಿಫ್ ಕಂ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ

R. I. A. 97/1964 in

O. S. 257/1958 Puttur, D. M. C.

ಸುಮನಾಜಿ ಅತಿಕ್ಕಾರಿ ಕೂಡಾ —

ಅರ್ಜಿದಾರರು.

ಮತ್ತು

ಸಾವಿತ್ರಿ ಕೂಡಾ— ಎದ್ರಿರು,

೯ನೇ ಎದ್ರಿ ತಿಮ್ಮಯ್ಯ ಗೌಡ, ಲಿಂಗು ಹೆಂಗ್ಸಿನ ಮಗ,

10ನೇ ಎದ್ರಿ ದೂಮ ಗೌಡ, ಮೋಂಟ ಗೌಡನ ಮಗ, ಬೆಳ್ತಂಗಡಿ ತಾಲ್ಲೂಕು ನಡ ಗ್ರಾಮದಲ್ಲಿರುವವರು—

ಮೇಲ್ಕಾಣಿಸಿದ O S 257/1958 ರಲ್ಲು ಆದ ಪ್ರಿಲಿಮಿನರಿ ಡಿಕ್ರಿ ಪ್ರಕಾರ ಫೈನಲ್ ಡಿಕ್ರಿ ಆಗುವಂತೆ ಮಾಡಿದ ಅರ್ಜಿಯು ತಾ. 27 10-1964ಕ್ಕೆ ಇಟ್ಟಿದೆ. ಆ ದಿನ್ನ ನೀವಾಗಲೀ ವಕೀಲರ ಮುಖಾಂತರವಾಗಲೀ ಹಾಜರಾಗಿ ನಿಮ್ಮ ಆಕ್ಷೇಪಗಳೇನಾದರೂ ಇದ್ದರೆ ಹಾಕಬೇಕು, ಇಲ್ಲವಾದಲ್ಲಿ ನಿಮ್ಮನ್ನು ಬಿಟ್ಟು ಮಾಡಿ ಮುಂದಿನ ತಕ್ಕುದಾದ ತೀರ್ಮಾನಿಸಲಾಗುವುದು.

P. A Ariga,

Advocate for Petitioners.

ಬೆಳ್ತಂಗಡಿ, 17—10—1964.

NAVAYUGA 22-10-1964

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

೨೨-೧೦-೬೪ರಿಂದ ೨೮-೧೦-೬೪ರ ವರೆಗೆ

೧. ಮೇಷ

ರತ್ನಾಕರನೆಂದು ದಿಟವಾಂಕಿತ ಸಮುದ್ರ ರಾಜನಿಗೂ ಇಳಿತ ಭರತಗಳು ತಪ್ಪಿದ್ದಿಲ್ಲವು. ಅಂಥ ಮೇಲೆ ಸಾಮಾನ್ಯ ಮನುಷ್ಯರ ಪಾಡೇನು? ಒಂದೆರಡು ವಾರಗಳ ಹಿಂದೆ ಸುಖ ಸಂತಸದಿಂದ ಮೆರೆದಾಡುತ್ತಿದ್ದ ನೀವಿಂದು ರೋಗ ದುಃಖಾದಿಗಳಿಂದ ಬಳಲುವ ಪರಿಸ್ಥಿತಿ ಬಂದಿದೆ. ಹಿಂದುಮುಂದಿನ ವಿಚಾರ ನೋಡದೆ ಕಾರ್ಯಪ್ರವೃತ್ತರಾಗಿ ಹೆಚ್ಚಿನ ನಷ್ಟ ಶೋಕಕ್ಕೆ ಗುರಿಯಾಗುವಿರಿ. ಆರೋಗ್ಯವು ಹಿಂದಿನಿಂತ ಸುಧಾರಿಸುವುದಾದರೂ ಆರ್ಥಿಕ ಭಾಗದಲ್ಲಿ ತುಂಬಾ ಸಂಗಾಳಾಗುವಿರಿ. ತಾ. 22, 25, 26 ಮನಸ್ಸಿಗೆ ಕೊಂಚ ನೆಮ್ಮದಿ ದೊರಕೀತು.

೨. ವೃಷಭ

ಜನ್ಮಪತಿಯಾದ ಶುಕ್ರನೂ ಸುಖಪತಿಯಾದ ರವಿಯೂ ಇಂದು ನೀಚರಾಗಿರುವುದರಿಂದ ನಿಮ್ಮ ತನುಮನಗಳಿಗೆ ಸುಖ ನೆಮ್ಮದಿಗಳು ದೊರೆಯಲಾರವು. ಕರ್ತವ್ಯದಕ್ಷರಾದ ನೀವು ಅನುದಿನದ ಹಿರಿಗೆ ಸಾಕಷ್ಟು ದುಡಿಯುವಿರಾದ್ದರಿಂದ ಹಣದ ತಗಾದೆ ಕಾಣಿಸದು. ಸಾಂಸಾರಿಕ ದೋಷದಿಂದಾಗಿ ಜನನಿಂದೆಗೂ ಧನಹಾನಿಗೂ ಗುರಿಯಾಗಲಿರುವಿರಿ. ಪ್ರವಾಸದಲ್ಲಿ ಹೆಚ್ಚಿನ ಕಷ್ಟನಷ್ಟಗಳುಂಟಾದಾವು ಗ್ರಹತಾಪತ್ರಯದಿಂದ ಮುಕ್ತರಾದ ನಿಮಗೆ ತಾ. 23, 24, 27, 28 ಈ ದಿನಗಳು ಅನಿಷ್ಟಕಾರಿಗಳಾಗಲಾರವು

೩. ಮಿಥುನ

ನಿಮ್ಮ ಪರಿಸ್ಥಿತಿಯು ಬಹುಮಟ್ಟಿಗೆ ಸುಧಾರಿಸಲಿದೆ. ಕರ್ಮ ಲಾಭಪತಿಗಳಾದ ಗುರು ಶನಿಗಳು ಉಚ್ಚಸ್ಥಾನಕ್ಕೆ ಪ್ರವೇಶಿಸುವುದರಿಂದಾಗಿ ನಿಮ್ಮ ಹೆಚ್ಚಿನ ಕಾರ್ಯವು ನಿರ್ವಿಘ್ನದಿಂದ ಕೊನೆಗೊಂಡಲಿದೆ. ಸಾಂಪತ್ತಿಕ ಭಾಗವು ವೃದ್ಧಿಗೊಳ್ಳುವುದು. ವ್ಯವಹಾರ ಚತುರರಾದ ನೀವು ಶತ್ರುಗಳ ಬಲೆಗೆ ಸಿಲುಕಲಾರಿರಿ. ಇಷ್ಟಾದರೂ ನಿಮ್ಮ ಗ್ರಹತಾಪತ್ರಯವು ಕಡಿಮೆಯಾಗಲಾರದು. ಮನೆಯ ಜನರೊಳು ಸೋದರವರ್ಗದೊಳು ಸದಾ ಮನಸ್ತಾಪ ಕಲಹಗಳುಂಟಾಗಲಿವೆ. ತಾ. 22, 25, ರಲ್ಲಿ ಮೃಷ್ಟಾನ್ನ ಭೋಜನ ಸುಖ ಭೋಗಗಳನ್ನು ಪಡೆಯುವಿರಿ.

೪. ಕರ್ಕಟ

ನಿಮ್ಮ ಆರೋಗ್ಯವಿಂದು ಮುಂಚಿಗಿಂತ ಸುಧಾರಿಸಿದರೂ ಆರ್ಥಿಕ ಬಿಕ್ಕಟ್ಟು ಹೆಚ್ಚಲಿದೆ. ಅಧಿಕಾರಿಗಳ ವಕ್ರದೃಷ್ಟಿಯು ನಿಮ್ಮ ಮೇಲೆ ಬೀಳುವುದರಿಂದ ಸ್ಥಾನಚಲನೆಯೂ ಉಂಟಾದೀತು. ವಿರೋಧಿಗಳ ಪೀಡೆಯೂ ಅಧಿಕವಾಗಲಿದೆ. ಕೋರ್ಟುಕಛೇರಿಗಳ ವ್ಯವಹಾರಗಳಲ್ಲಿ ವ್ಯರ್ಥ ಧನವ್ಯಯವಾಗುವುದಲ್ಲದೆ ಪರಾಜಯ ಉಂಟಾದೀತು. ಮಾತು ಮಾತಿಗೆ ಕಲಹವಾಗಲಿದೆ ಗೃಹೋಪಕರಣಗಳಲ್ಲಿ ಯಾವ ತರದ ಕೊರತೆಯಿಲ್ಲದ ನಿಮಗೆ ದಿನಯಾಪನೆಯು ದುಸ್ತರವಾಗದು ತಾ. 22, 23, 24, 27, 28 ಈ ದಿನಗಳು ಅನುಕೂಲವಾಗಿವೆ.

೫. ಸಿಂಹ

ಪಿತ್ತ ದೋಷದಿಂದಾಗಿ ಇಂದು ನಿಮ್ಮ ಆರೋಗ್ಯಕ್ಕೆ ಧಕ್ಕೆಯುಂಟಾದೀತು. ಆರಂಭಿಸಿದ ಕಾರ್ಯಗಳಲ್ಲಿ ಕೆಲವೊಂದು ವಿಘ್ನ ವಿಚ್ಛೇದಗಳು ಪ್ರಾಪ್ತವಾದರೂ ಕಾರ್ಯವನ್ನು ಕೊನೆಗಾಣಿಸಿಯೇ ತೀರುವಿರಿ. ಪ್ರವಾಸದಲ್ಲಿ ಅಪಘಾತಗಳ ಭಯವಿದೆ. ಸುಹಜ್ಜನರ ಮತ್ತು ಬಂಧುವರ್ಗವುಳ್ಳ ನಿಮಗೆ ಸಾಮಾಜಿಕ ರಂಗದಲ್ಲಿ ಒಳ್ಳೆ ಸ್ಥಾನ ಲಭಿಸುವುದು. ತಾ. 23ರಿಂದ 26ರ ವರೆಗಿನ ದಿನಗಳಲ್ಲಿ ಧನಲಾಭ ವಿಜಯ ಸಂತಸಗಳು ಲಭಿಸಲಿವೆ.

೬. ಕನ್ಯಾ

ಒಂದೊಮ್ಮೆಗೇ ನಿಮ್ಮ ಪರಿಸ್ಥಿತಿಯಲ್ಲಿ ಹಲವು ಮಾರ್ಪಾಟಾಗಲಿವೆ. ಈ ಹಿಂದೆ ನಿಮ್ಮಿಂದ ಉಪಕೃತರಾದವರೇ ನಿಮಗಿಂದು ಪ್ರತಿಕೂಲರಾಗಿ ವರ್ತಿಸುವರು. ಧನಾಗಮವೂ ಕೂಡಾ ಮುಂಚಿನಂತಿರಲಾರದಾದರೂ ಹಣದ ತೊಡಕು ಕಾಣಿಸದು. ನಿಮ್ಮ ಪರಿಶ್ರಮಕ್ಕೆ ತಕ್ಕುದಾದ ಫಲವು ಲಭಿಸುವುದರಿಂದ ನಿರಾಶರಾಗಬೇಕಿಲ್ಲ. ರಾಜಕೀಯದಲ್ಲಿ ನಿಮಗಿಂದು ಯಶಸ್ಸು ಸಿಗಲಾರದು. ಸ್ವಂತ ಆರೋಗ್ಯದತ್ತ ಹೆಚ್ಚಿನ ಗಮನವಿರಲಿ ತಾ. 25, 26, 27, 28 ಅನುಕೂಲ.

೭. ತುಲಾ

ಗಂಡಾಂತರದಿಂದ ನೀವಿಂದು ಬಿಡುಗಡೆ ಹೊಂದಿರೆನ್ನ ಬಹುದು ಸುರಗುರುಗಳ ಪೂರ್ಣ ದೃಷ್ಟಿಯು ನಿಮ್ಮ ಮೇಲೆ ಇರುವುದರಿಂದ ಹೆಚ್ಚಿನ ನಿಮ್ಮ ಸಂಕಲ್ಪಗಳು ಕಾರ್ಯರೂಪಕ್ಕೆ ಬರಲಿವೆ. ನಾನಾ ತರದಿಂದ ನಿಮಗಿಂದು ಧನಾಗಮವಾಗಲಿದೆ. ಎಂತಹ ಪ್ರಬಲ ಎದುರಾಳಿಯನ್ನೂ ನೀವಿಂದು ಎದುರಿಸಲಿರುವಿರಿ. ಜನಾನುರಾಗವನ್ನು ಗಳಿಸಿದ ನಿಮಗೆ ಸರ್ವತ್ರ ಸ್ಥಾನ ಮಾನಗಳು ಲಭಿಸುವುದು. ಮನೆಯಲ್ಲಿ ಸ್ವಾಮಿ ಸೇವಕರೊಳಗೆ ತಿಕ್ಕಾಟ ಉಂಟಾದೀತು. ತಾ 22, 27, 28ರಲ್ಲಿ ಇಷ್ಟಸಿದ್ಧಿ ಧನ ಲಾಭ ಸುಖ ಭೋಗಗಳನ್ನು ಪಡೆವಿರಿ.

೮. ವೃಶ್ಚಿಕ

ನಿಮಗಿಂದು ಆಯಕ್ಕಿಂತ ದ್ವಿಗುಣ ವ್ಯಯವಾಗುವುದಾದರೂ ಪರಿಸ್ಥಿತಿಯು ಮುಂಚಿಗಿಂತ ಸುಧಾರಿಸಲಿದೆ. ವ್ಯಾಪಾರ ವ್ಯವಹಾರಗಳು ನಿರಾತಂಕವಾಗಿ ಸಾಗಲಿವೆ ನಾನಾ ರೀತಿಯಿಂದ ಧನ ಸಂಪಾದಿಸುವಿರಿ. ಆದರೆ ಮನೋದೌರ್ಬಲ್ಯವು ನಿಮ್ಮನ್ನು ಬಹುವಾಗಿ ಪೀಡಿಸಲಿದೆ ಗುರು ಹಿರಿಯರ ಆಗ್ರಹಕ್ಕೆ ಗುರಿಯಾದ ನಿಮಗೆ ಜನತೆಯ ಸಹಕಾರವು ದುರ್ಲಭವಾಗುವುದು. ಪ್ರವಾಸದಲ್ಲಿ ಕಷ್ಟ ನಷ್ಟಗಳುಂಟಾಗುವವು. ವಾರಾದಿಯ 3 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೯. ಧನು

ಕರ್ತವ್ಯದಕ್ಷರೂ ಕಾರ್ಯವಿಚಕ್ಷಣರೂ ಆದ ನಿಮಗೆ ಈ ವಾರದಲ್ಲಿ ಹೆಚ್ಚಿನ ತಾಪತ್ರಯಗಳೇನೂ ಕಾಣಿಸಲಾರವು. ಶತ್ರುಗಳ ಕಾಟದಿಂದ ಮುಕ್ತರಾಗುವಿರಿ. ನಿಮ್ಮ ಸಂಕಲ್ಪದಂತೆ ಎಲ್ಲಾ ಕಾರ್ಯಗಳು ಸಿದ್ಧಿಸಲಿವೆ. ನಿಶ್ಚಿಂತರಾದ ನಿಮಗೆ ವಾದದಲ್ಲಿ ಸಿದ್ಧಿ ಕಾಣಿಸಿಕೊಂಡೀತು. ವಿನಾಕಾರಣ ವಾಕ್ಕಲಹವಾಗುವ ಸಂಭವವಿದೆ. ವ್ಯಾಪಾರಿಗಳಿಗೆ ಅನಿರೀಕ್ಷಿತ ನಷ್ಟವುಂಟಾದೀತು. ಪ್ರವಾಸವು ಸುಖಕರವೂ ಫಲಪ್ರದಾಯಿಯೂ ಆಗಿಯೂ ಪರಿಣಮಿಸಲಿದೆ. ತಾ. 23ರಿಂದ 26ರ ವರೆಗಿನ ದಿನಗಳು ತುಂಬಾ ಅನುಕೂಲವಾಗಿವೆ

೧೦. ಮಕರ

ನಿಮ್ಮ ಅದೃಷ್ಟವಿಂದು ಸ್ವಲ್ಪ ವಕ್ರವಾಗಿರುವ ಕಾರಣ ಆತ್ಮೀಯರ ಕೂಡೆ ಕಲಹ ಮನಸ್ತಾಪಗಳುಂಟಾಗುವ ಸಂಭವವಿದೆ. ಗ್ರಹ ತಾಪತ್ರಯಗಳು ಮುಂಚಿಗಿಂತ ಕಡಿಮೆಯಾದರೂ ವಿರೋಧಿಗಳ ಕಾಟವು ಹೆಚ್ಚೀತು ಆದರೂ ಕಾರ್ಯದಕ್ಷರಾದ ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ಸಿಗುವುದರಿಂದ ದಿನ ಯಾಪನೆಯು ಕಷ್ಟವಾಗಲಾರದು. ವಾಹನಾದಿಗಳಲ್ಲಿ ಪ್ರಯಾಣದಲ್ಲಿ ಅಪಘಾತಾದಿಗಳುಂಟಾದಾವು. ವಾರಾಂತ್ಯದ 4 ದಿನಗಳಲ್ಲಿ ಸುಖ ನೆಮ್ಮದಿಗಳು ದೊರೆಯಲಿವೆ.

೧೧. ಕುಂಭ

ಗ್ರಹ ಬಲದಿಂದ ವಂಚಿತರಾದ ನಿಮಗೆ ಸದ್ಯದ ದಿನಗಳನ್ನು ನೆಮ್ಮದಿಯಿಂದ ಕಳೆಯುವುದು ದುಸ್ತರವಾದೀತು. ಮಧುವಿಲ್ಲದ ಸುಮಗಳನ್ನು ಮಧುಕರಗಳು ನಿರಾಕರಿಸುವಂತೆ ನಿರ್ಧನರಾದ ನಿಮ್ಮತ್ತ ಯಾರೂ ಸುಳಿಯಲಾರರ. ಆತ್ಮೀಯರೇ ವಿರೋಧಿಗಳಾಗಿ ಪರಿವರ್ತಿಸುವರು. ಸುತ್ತಲೂ ನಿರಾಶೆಯ ಕಾರ್ಮೋಡಗಳೇ ಕವಿದಿರುತ್ತ ನಿಮಗೆ ತಾ. 22, 27, 28ರಲ್ಲಿ ಕಿಂಚಿತ್ ಆಶಾಕಿರಣವು ಕಾಣಿಸಲಿದೆ.

೧೨. ಮೀನ

ನಿಮ್ಮ ಧನ ಭಾಗ್ಯಪತಿಯಾದ ಕುಜನು ನೀಚದಿಂದ ಮುಕ್ತನಾಗುವನು. ಧನ ಸ್ಥಾನದಲ್ಲಿ ಬೃಹಸ್ಪತಿಯು ಬಂದಿಹನಾದ ಕಾರಣ ಇಂದು ನಿಮ್ಮ ಆರ್ಥಿಕ ಮಟ್ಟವು ಉತ್ತಮವಾಗಲಿದೆ. ಜನತೆಯ ಸಹಕಾರ ಬಂಧುಗಳ ನೆರವೂ ನಿಮಗಿಂದು ಲಭಿಸುವುವು. ಹಿಡಿದ ಕೆಲಸವನ್ನು ಮಧ್ಯದಲ್ಲೆಂದೂ ಕೈ ಬಿಡಲಾರಿರಿ. ಏಳರವರೆ ಶನಿಯ ಕಾಟದಿಂದಾಗಿ ಅನಿರೀಕ್ಷಿತ ಅನರ್ಥಗಳೊದಗಿದರೂ ತಾ. 23, 24ರಲ್ಲಿ ಬಹು ಮಟ್ಟಿನ ಅಭೀಷ್ಟಗಳು ಸಿದ್ಧಿಸುವವು.

ದೀಪಾವಳಿಗೆ
ಪ್ರಕಟವಾಗಲಿದೆ
ಕು. ಗೋ. ರವರ
ಅಕ್ಕನ ಮದುವೆ
(ಬರಹಗಳ ಸಂಕಲನ)
ಭಾರ್ಗವ ಪ್ರಕಾಶನ,
ಚಿಕ್ಕಮಗಳೂರು.

ಸಿಂಡಿಕೇಟ್ ಬ್ಯಾಂಕಿನ
195 ನೇ ಶಾಖೆ

ವಿಶಾಲವಾಗಿ ಹಬ್ಬಿರುವ ಸಿಂಡಿಕೇಟ್ ಬ್ಯಾಂಕಿನ
ಶಾಖಾ ಸಮುದಾಯಕ್ಕೆ ಇನ್ನೊಂದು ಹೊಸ ಶಾಖೆ—

ಬೊಂಬಾಯಿ — ಬ್ರೋಚ್ ಸ್ಟ್ರೀಟ್

ಎಂಬಲ್ಲಿ
ಬೇಗನೇ ತೆರೆಯಲ್ಪಡುವುದೆಂದು ತಿಳಿಸಲು
ನಾವು ಸಂತೋಷಪಡುತ್ತೇವೆ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಶಾಖೆಗಳು: **194**

ಚಲಾವಣಾ ಸಂಪತ್ತು: ರೂ. **60** ಕೋಟಿಗೂ ಮಿಕ್ಕಿದೆ.

Edited, Printed & Published by K. H. Shetty, at the Navayuga Press, Udipi, S. India

ನವಯುಗ

ದೀಪಾವಳಿ ಸಂಚಿಕೆ—೧೯೬೪

Navayuga *nationalist kannada weekly*

೩೦ ಪೈಸೆ

DEEPAVALI
SPECIAL 1964

7%

ದೀಪಾವಳಿಯ ಶುಭಾಶಯಗಳೊಂದಿಗೆ

ತಾರೀಕು **20-10-64**ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p a.	7ರಿಂದ 11 ತಿಂಗಳು. % p. a.	12ರಿಂದ 23 ತಿಂಗಳು. % p. a.	24ರಿಂದ 35 ತಿಂಗಳು. % p. a.	36ರಿಂದ 47 ತಿಂಗಳು. % p a.	48ರಿಂದ 59 ತಿಂಗಳು. % p. a	60ರಿಂದ 83 ತಿಂಗಳು. % p. a	84ರಿಂದ 120 ತಿಂಗಳು % p a.
ರೂ **5,000**ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ **5,000** ಮತ್ತು ಮೇಲಿನ ಡಿಪಾಜಿಟುಗಳ ಮೇಲೆ:-	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

[ಶೆಡ್ಯೂಲ್ಡ್ ಬ್ಯಾಂಕ್]

ರಿಜಿಸ್ಟರ್ಡ್ ಆಫೀಸು:— ಕೋರ್ಟು ರಸ್ತೆ,
ಉಡುಪಿ, ದ. ಕ. (ಮೈಸೂರು ರಾಜ್ಯ)

ಸ್ಥಾಪನೆ:—
1920.

ಯಾವುದೇ ಸುಸಂದರ್ಭವಿರಲಿ—

ಶೆಟ್ಟಿ ಐಸ್‌ಕ್ರೀಮ್

ನಿಂದ ಅದು ಅಧಿಕ ಸವಿಯಾಗಬಲ್ಲುದು.

ಏಕೆಂದರೆ, ಶೆಟ್ಟಿ ಐಸ್‌ಕ್ರೀಮ್ ರುಚಿಕರ ಮಾತ್ರವಲ್ಲ, ಅದು ಒಂದು ಉತ್ತಮವಾದ ಪೌಷ್ಟಿಕ ಆಹಾರವಾಗಿದೆ.
ಅದು ಶುದ್ಧವಾದ ಹಾಲು ಮತ್ತು ಸಸ್ಯಜನ್ಯ ವಸ್ತುಗಳಿಂದಲೇ ತಯಾರಿಸಲ್ಪಟ್ಟಿದೆ.

ಶೆಟ್ಟಿ ಐಸ್‌ಕ್ರೀಮ್ ಮತ್ತು ಭೇಲ್‌ಪುರಿ ಜಗತ್ಪ್ರಸಿದ್ಧವಾಗಿವೆ.

ಮದುವೆ, ಮುಂಜಿ ಶಾಲಾ ಕೊಲೇಜು ಪಾರ್ಟಿಗಳು ಕೂಟಗಳು ಮತ್ತು ಇತರ ಎಲ್ಲಾ ಸಮಾರಂಭಗಳಲ್ಲಿಯೂ
ವಿತರಣೆಯ ಸುವಿಧಿ ಪಡೆಯಬಹುದು.
ನೂರು ಐಸ್‌ಕ್ರೀಮ್ ಬಾರುಗಳಿಂದ ಒಂದು ಸಾವಿರ ಅತಿಥಿಗಳಿಗೆ ಅತೀ ಸುಂದರವಾದ ಕ್ರಮದಲ್ಲಿ ಸಂತುಷ್ಟಿಗೊಳಿಸಲು ಸಾಧ್ಯವಿದೆ.

ವಿಚಾರಿಸಿರಿ:

Shetty Ice Cream,
PANAMBUR.
Phone: 13.

ಶೆಟ್ಟಿ ಐಸ್‌ಕ್ರೀಮ್,
ಪಣಂಬೂರು.
ಟೆಲಿಫೋನ್: 13.

ಶೆಟ್ಟಿ ಐಸ್‌ಕ್ರೀಮ್ ಈ ಕೆಳಗಿನವರಲ್ಲಿಯೂ ಸಿಗುತ್ತದೆ.

1. ಜಪ್ಪು, ಮಂಗಳೂರು — ರೋಯಲ್ ಎಯರೇಟರ್ಸ್.
2. ಬಜ್ಪೆ — ಮೆರ್ರಿ ಸ್ಟೋರ್ಸ್.
3. ಪುತ್ತೂರು — ಹೊಟೇಲ್ ಶಿವಕೀರ್ತಿ.
4. ಮೂಡಬಿದಿರೆ — ಶ್ರೀ ರಾಯೀ ಪಾಂಡುರಂಗ ಶೈ.
5. ಪಾಣೆಮಂಗಳೂರು— ಶ್ರೀ ಎ. ರಾಮಚಂದ್ರ ಪೈ.
6. ವಿಟ್ಲ— ಶೆಟ್ಟಿ ಕೋಲ್ಡ್ ಡ್ರಿಂಕ್ ಹೌಸ್.
7. ಶಿರ್ವ— ಹೆಗ್ಡೆ ಕೋಲ್ಡ್ ಡ್ರಿಂಕ್ ಹೌಸ್.

ಸದ್ಯವೇ ಈ ಕೆಳಗಿನವರಲ್ಲಿ ಸಿಗುವುದು
ಕೊಡಿಯಾಲಬೈಲು, ಮಂಗಳೂರು — ಟ್ರಾನ್ಸ್‌ಪೋರ್ಟರ್ ಸರ್ವಿಸ್

ಸಂಪುಟ ೪೪
ಸಂಚಿಕೆ ೯

Vol. 44
No. 9

ಸಂಚಾಲಕ-ಸಂಪಾದಕ
ಕೆ. ಹೊನ್ನಯ್ಯ ಶೆಟ್ಟಿ

ದೀಪಾವಳಿ ಸಂಚಿಕೆ ೧೯೬೪

ಹೃದಯ ಬೆಳಗಲಿ ದೀಪಾವಳಿ!

ಸೊಡರುಗಳನ್ನು ಉರಿಸಿಟ್ಟು ಬಾಹ್ಯಾಂತರಂಗವನ್ನು ಪ್ರಕಾಶದ ಮುಂದೆ ತೆರೆದಿಡುವ ಹಬ್ಬ ದೀಪಾವಳಿ ವರುವರುಷವೂ ಬರುತ್ತಿದೆ; ಬಂದಂತೆಯೇ ಹೋಗುತ್ತಿದೆ. ಕಾಲಚಕ್ರವನ್ನು ದಮನಿಸಲು ಕಾಲಸುರುಷನನ್ನುಳಿದವರೆಲ್ಲ ಅಶಕ್ತರೇ. ಈ ವರುಷವೂ ದೀಪಾವಳಿ ಬರುತ್ತದೆ, ಸೃಷ್ಟಿಯು ಸೌಂದರ್ಯವನ್ನು ತನ್ನ ಬೆಳಕಿನಲ್ಲಿ ವರ್ಧಿಸುತ್ತದೆ; ರಸಿಕನಿಗೆ ರಸಾಯನವನ್ನುಣ್ಣಿಸುತ್ತದೆ. ಇದು ಪ್ರಕೃತಿ ಸಹಜವಾದುದು. ಸುಖೀ ರಾಜ್ಯದಲ್ಲಿ ಇಂತಹ ರಸ ಹೀರುತ್ತ ತನ್ನ ತಾನೇ ಮರೆಯಬಹುದು. ಆದರೆ, ಭಾರತೀಯರು ಆನಂದ ಪರವಶತೆಯಲ್ಲೇ ಲೋಲರಾಗುವುದು ಸಾಧ್ಯವೆ? ಹಾಗಿದ್ದರೂ ದೀಪಾವಳಿಯು ಸಾಂಕೇತಿಕ ರಸದೂಟದ ಹಬ್ಬ. ಅದನ್ನು ನಾವು ಈಗಾಗಲೇ ನಿರಾಡಂಬರವಾಗಿ ಆಚರಿಸಲು ಕಲಿತಿದ್ದೇವೆ; ಮತ್ತೂ ಸರಳವಾದ ಆಚರಣೆ ಅಗತ್ಯವೆಂದು ಈ ವರ್ಷದ ದೀಪಾವಳಿ ನಮಗೆ ಕರೆ ಕೊಡುತ್ತಿದೆ.

ಶತ್ರು ಚೀನೀಯರು ನಮ್ಮ ಮನೆಗೆ ಬೆಂಕಿಯಿಟ್ಟು ವರ್ಷವೆರಡು ಸಂದುವು. ಅಂದು ನಾವು ದೀಕ್ಷೆ ತೊಟ್ಟೆವು: "ಕ್ರೂರ ಕೆಂಪು ಚೀನವನ್ನು ನಮ್ಮ ದೇಶದಿಂದ ದೂರವೋಡಿಸದೆ ವಿಶ್ರಮಿಸಲಾರೆವು; ದೇಶದ ಸಮಗ್ರತೆಯನ್ನುಳಿಸಲು ತಲೆ ಹಾರಿ ಹೋಗಲಿ, ನೆತ್ತರು ಚಿಮ್ಮಿ ಹಾರಲಿ, ನಾವು ಹಿಂಜರೆಯಲಾರೆವು." ಈ ಪ್ರತಿಜ್ಞೆಯನ್ನು ಇಂದೂ ನಾವು ಪುನರುಚ್ಚರಿಸುತ್ತಿದ್ದೇವೆ. ಅತ್ತ ಚೀನಾವು ಅಟಂಬಾಂಬನ್ನು ಸ್ಫೋಟ ಮಾಡಿದೆ; ಇತ್ತ ಪಾಕಿಸ್ತಾನವು ಭಾರತ ವಿರೋಧಿ ನೀತಿಯನ್ನು ಬೇಕೆಂಬಂತೆ ಮುಂದುವರಿಸುತ್ತಿದೆ. ಇದುವರೆಗೆ ಭಾರತದ ನೀತಿಯನ್ನು ಬೆಂಬಲಿಸುತ್ತ ಬಂದ ಸೋವಿಯತ್ತಿನ ನಾಯಕತ್ವದಲ್ಲಾದ ಬದಲಾವಣೆ ಭಾರತದ ಮೇಲೆ ಪರಿಣಾಮ ಬೀರಲಾರದೆಂದು ಹೇಳುವುದು ಹೇಗೆ? ಮುಂದಿನ ಎರಡು–ನಾಲ್ಕು ತಿಂಗಳುಗಳಲ್ಲಿನ ವಿದ್ಯಮಾನಗಳು ಜಾಗತಿಕ ನಾಯಕತ್ವದಲ್ಲೇ ಪರಿವರ್ತನೆಯಾಗುವುದನ್ನು ತೋರಿಸಿಕೊಟ್ಟರೂ ಕೊಡಬಹುದು. ಹಾಗಿರುವಾಗ ನಮ್ಮ ಇಂದಿನ ದೀಪಾವಳಿಯ ಸುತ್ತಮುತ್ತ ಗಾಢಾಂಧಕಾರವೇ ಪರಡಿರುವುದನ್ನು ಕಾಣುತ್ತೇವೆ. ಸುತ್ತ ಬೆಳಕು ಹರಡಿದ್ದರೆ, ಅದನ್ನು ವಿರೋಧಿಸಬಲ್ಲ ದೊಡ್ಡ ಬತ್ತಿಯನುರಿಸಿ ದೀಪಾವಳಿಯಾಚರಿಸ ಬೇಕು; ಸುತ್ತ ಕತ್ತಲೇ ಕವಿದಿರುವಾಗ ಪುಟ್ಟ ಮೋಂಬತ್ತಿಯಾದರೂ ತನ್ನ ಕಿರಣವನ್ನು ಎತ್ತಲೂ ಬೀರಬಲ್ಲುದು. ಇಂದು ನಾವು ಎಣ್ಣೆ ಬತ್ತಿಗಳ ಸೊಡರು ಉರಿಸಿ ಆಡಂಬರಶೀಲರಾಗ ಬೇಕಿಲ್ಲ; ನಮ್ಮ ಹೃದಯ ಹಣತೆಯಲ್ಲಿ ವೀರ ಸ್ನೇಹದ ದೀಪವುರಿಸಬೇಕು.

ವಿಶ್ವಮಾನವ ಜವಾಹರರಿಲ್ಲದ ದೀಪಾವಳಿಯಿಂದು ಬಂದಿದೆ. ನಾವೆಲ್ಲರರಿತಿದ್ದೇವೆ, ನೆಹರು ಕುಟುಂಬ-ದೇಶಗಳ ಸೀಮೆಯನ್ನು ಮೀರಿ ಹಾರಿದ ಅಮರ ವ್ಯಕ್ತಿ. ಭಾರತೀಯರಲ್ಲಿ ಒಂದು ಸಂಪ್ರದಾಯ: ಕುಟುಂಬದಲ್ಲಿ ಯಾರಾದರೊಬ್ಬರು ಮಡಿದಲ್ಲಿ, ಒಂದು ವರ್ಷದ ವರೆಗೆ ಶುಭ ಸಮಾರಂಭಗಳು ಹಬ್ಬ ಹರಿದಿನಗಳು ವೈಭವದಿಂದ ನಡೆಯುವುದಿಲ್ಲ. ನೆಹರೂ ಮಾನವ ಕುಟುಂಬದ ಮಹಾನ್ ವ್ಯಕ್ತಿ. ಮಾನವತೆಯ ಕೈವಾರಿಗಳು ಈ ದೀಪಾವಳಿಯನ್ನು ವಿಜೃಂಭಣೆಯಿಂದ ಆಚರಿಸಲಾರರು. ಹಾಗಿರುವಾಗ, ಭಾರತೀಯರ ಈ ಹಬ್ಬವಿಂದು ಸಂಪ್ರದಾಯ ಪಾಲನೆಗೆ ಮಾತ್ರ ಯೋಗ್ಯ. ಸೂತಕದ ವೇಳೆಯಲ್ಲಿ ಮನೆಗೆ ಬೆಂಕಿ ಬಿದ್ದಿರುವಾಗ ಸಂಭ್ರಮದಿಂದ ಹಬ್ಬವಾಚರಿಸುತ್ತ ಮೈ ಮರೆಯುವ ದಿನವಿದಲ್ಲ; ನಮ್ಮ ಹೃದಯದೊಳಗೆ ಪ್ರಜ್ಞಾ ದೀಪವುರಿಸಿ, ಅದರ ಬೆಳಕಿನಲ್ಲಿ ಆತ್ಮಶೋಧಗೆಯ್ದು ಮಾನವತೆಯನ್ನು ಕಾಡುವ ಸಕಲ ದುಷ್ಟ ಶಕ್ತಿಗಳ ದಮನ ಮಾಡುವ ಪವಿತ್ರ ಶಕ್ತಿಯನ್ನು ಪಡೆಯಬೇಕು; ಈ ಸಿದ್ಧಿಗಾಗಿ ಪ್ರಯತ್ನಶೀಲರಾಗಬೇಕು; ಆದರಲ್ಲಿ ಯಶಗಳಿಸಬೇಕು.

ದೀಪಾವಳಿ ಸಂಚಿಕೆ

ದೀಪಾವಳಿಯು ಬಹುದೊಡ್ಡ ಹಬ್ಬ. ನಾವು ಆಚರಿಸಲಿ, ಬಿಡಲಿ, ಅದು ಬರುತ್ತದೆ, ಹೋಗುತ್ತದೆ. ಈ ದಿನದ ನೆನಪನ್ನು ಮಾಡಿಕೊಂಡು ಬಂದ ಗಂಡ ದೂರ ಮಾಡಲು ಕೃತಿಶೀಲರಾಗುವುದು ಮಾತ್ರ ಅಗತ್ಯ. ಅದಕ್ಕಾಗಿಯೇ ಸರಳ ಸುಂದರವಾಗುವಂತೆ ಈ ಸಂಚಿಕೆಯನ್ನು ತಯಾರಿಸುವ ಪ್ರಯತ್ನ ಮಾಡಿದ್ದೇವೆ. ದುಃಖದಲ್ಲಿಯೇ ಸುಖವರಸುವುದು ಮಾನವ ಪ್ರಕೃತಿದತ್ತ ಶಕ್ತಿ. ಈ ಸಂಚಿಕೆಯನ್ನು ಸಿದ್ಧಪಡಿಸುವಲ್ಲಿ ಲೇಖಕ ಬಂಧುಗಳು ಸಹಕರಿಸಿದ್ದಾರೆ; ಜಾಹೀರಾತುದಾರರು ನೆರವಿತ್ತಿದ್ದಾರೆ. ನಮ್ಮ ವಾಚಕ ವೃಂದದ ಸಹಾನುಭೂತಿ ಸದಾ ಇದ್ದೇ ಇದೆ. ಇವರೆಲ್ಲರಿಗೂ ಅಲ್ಲದೆ ವಿಶ್ವ ಜೀವಕೋಟಿಗೂ ಈ ವರ್ಷದ ದೀಪಾವಳಿಯು ಶುಭಪ್ರದವಾಗಲಿಯೆಂದು ಹಾರೈಸುತ್ತೇವೆ.

ನವಯುಗವು ಜನಮನವ ಬೆಳಗಲಿ!

ಡಾ। ಕೆ. ನಾಗಪ್ಪ ಆಳ್ವ,
ಆರೋಗ್ಯ ಸಚಿವ

ವಿಧಾನ ಸೌಧ
ಬೆಂಗಳೂರು ೧.
ತಾ. 19—10—1964

29—10—1964ರಂದು ನವಯುಗವು ದೀಪಾವಳಿ ವಿಶೇಷ ಸಂಚಿಕೆಯನ್ನು ಪ್ರಕಟಿಸುವುದೆಂಬ ಸುದ್ದಿ ಕೇಳಿ ಸಂತೋಷವಾಯಿತು. ರುಚಿಕರವೂ, ವಿಚಾರಪೂರ್ಣವೂ ಆದ ಲೇಖನಗಳನ್ನೊಳಗೊಂಡ ಈ ವಿಶೇಷಾಂಕಕ್ಕೂ ಹಾಗೆಯೇ ನಿಮ್ಮ ಪತ್ರಿಕೆಗೂ ನನ್ನ ಹಾರ್ದಿಕ ಶುಭಾಶಯ.

ಕೆ. ಎನ್. ಆಳ್ವ.

ರಂ. ರಾ. ದಿವಾಕರ
ಮಾಜಿ ರಾಜ್ಯಪಾಲರು

ಲೋಕ ಶಿಕ್ಷಣ ಟ್ರಸ್ಟ್
ಹುಬ್ಬಳ್ಳಿ.
೨೦ನೇ ಅಕ್ಟೋಬರ 1964

ಅನುಭವಸಂಪನ್ನರಾದ ನೀವು ಪ್ರಕಟಿಸುವ ವಿಶೇಷಾಂಕವು ಆಕರ್ಷಣೀಯವಾಗಿರುವುದೆಂದು ನಾನು ನಂಬಿದ್ದೇನೆ. ನಿಮ್ಮ ಯತ್ನವು ಜಯಪ್ರದವಾಗಲಿ.

ರಂ. ರಾ. ದಿವಾಕರ.

ನವಯುಗವು ರಾಜಕೀಯವನ್ನು ರಾಜನೀತಿಯಾಗಿ ಪರಿವರ್ತಿಸುವ ಆಯುಧವಾಗಲಿ !

ಬಿ. ವೈಕುಂಠ ಬಾಳಿಗ
ವಿಧಾನ ಸಭಾಧ್ಯಕ್ಷ

ಕ್ಯಾಂಪ್ ಮಂಗಳೂರು—3
ವಿಧಾನ ಸೌಧ
ಬೆಂಗಳೂರು-1
21 ಅಕ್ಟೋಬರ 1964

ಜನ್ಮವೆತ್ತಿದಂದಿನಿಂದಲೂ "ನವಯುಗ"ವು ಸೇವೆಯ ಸತ್ಸಂಪ್ರದಾಯವನ್ನು ಬೆಳೆಸಿಕೊಂಡಿರುವುದನ್ನು ನಾನು ಬಲ್ಲೆ. ಇಂದು ಆಹಾರದ ಉತ್ಪಾದನೆಯ ಬಗ್ಗೆ ಎಲ್ಲರೂ ಆಲೋಚಿಸಬೇಕಾದ ಪ್ರಮೇಯ ಒದಗಿದೆ. "ನವಯುಗ"ವು ಈ ದಿಶೆಯಲ್ಲಿಯೂ ಪ್ರಯತ್ನ ಪರವಾಗುವುದೆಂಬ ಆಸೆ ನನಗಿದೆ. ನಮ್ಮ ವಿಶಾಲವಾದ ರಾಷ್ಟ್ರದಲ್ಲಿ ನಮಗೆ ಸ್ವಸಂಪೂರ್ಣತೆಯನ್ನೊದಗಿಸಲು ಬೇಕೆನಿಸುವಷ್ಟು ಸಂಪನ್ಮೂಲಗಳಿವೆ. ಆಹಾರಕ್ಕಾಗಿ ಪರಾವಲಂಬನೆಯು ನಮ್ಮನ್ನು ನಿವೀರ್ಯರನ್ನಾಗಿ ಮಾಡೀತು. ಇಂಥ ಅಸಹಾಯ ಪರಿಸ್ಥಿತಿ ನಮ್ಮ ನಾಡಿಗೆ ಶೋಭೆಯಲ್ಲ ಈ ಸಮಸ್ಯೆಯ ಪರಿಹಾರದಲ್ಲಿಯೂ "ನವಯುಗ"ವು ನಾಡಿನಲ್ಲಿಉತ್ಸಾಹದ ಸಿಂಚನವನ್ನು ಮಾಡಲಿ ಎಂದು ಹಾರೈಸುತ್ತೇನೆ.

ಬಿ ವಿ ಬಾಳಿಗ.

ಶ್ರೀ ಎಸ್. ಎಸ್. ಕೊಳ್ಕೆಬೈಲ್, ಬಿ. ಎ, ಎಲ್ಎಲ್‌ಬಿ, ಎಂ. ಎಲ್. ಎ.

ಪ್ರಿಯರೇ.

"ನವಯುಗ"ವು ವಿಶೇಷ ಸಂಚಿಕೆಯ ರೂಪದಲ್ಲಿ ಹೊರ ಬರುವುದೆಂದರೆ ಅದು ಅತೀವ ಸಂತೋಷದ ಸುದ್ದಿ ನೀವಿಟ್ಟುಕೊಂಡಿರುವ ತತ್ತ್ವ ಮತ್ತು ಜನಾಭಿರುಚಿಯ ಸುಮಧುರ ಹೊಂದಾಣಿಕೆಯನ್ನು ನಿಮ್ಮ ಸಂಚಿಕೆಗಳಲ್ಲಿ ಕಂಡುಕೊಂಡಿದ್ದೇನೆ. ಈಗಾಗಲೇ ಜಿಲ್ಲೆಯ ಉತ್ತಮ ಸಾಪ್ತಾಹಿಕವಾಗಿರುವ 'ನವಯುಗ' ಇಡಿಯ ಕರ್ನಾಟಕದ ಕನ್ನಡಿಗರೆಲ್ಲರ ಪ್ರೋತ್ಸಾಹನೆ ಪಡೆಯಲಿ, ನಾಡನುಡಿಯ ಸೇವೆ ನಿರಂತರವಾಗಿ ನಡೆಯುತ್ತಿರಲಿ.

ನನ್ನ ದೀಪಾವಳಿಯ ಶುಭಕಾಮನೆಗಳನ್ನು ಸ್ವೀಕರಿಸಿರಿ.

ಕುಂದಾಪುರ, 26-10-64. ಎಸ್. ಎಸ್. ಕೊಳ್ಕೆಬೈಲ್.

ಕೆ. ಕೆ. ಪೈ, ಬಿ ಕಾಮ್.,
ಡೆಪ್ಯೂಟಿ ಚೀಫ್ ಅಫೀಸರ್,

ಸಿಂಡಿಕೇಟ್ ಬ್ಯಾಂಕ್ ಲಿ.
ಮಣಿಪಾಲ.
20 ಅಕ್ಟೋಬರ್, 1964.

ನವಯುಗದ ವಿಶೇಷಾಂಕದ ಕುರಿತ ಪತ್ರ ಮುಟ್ಟಿ ಸಂತೋಷವಾಯಿತು.

ನಿಮ್ಮ ಪತ್ರಿಕೆಯನ್ನು ನಾನು ಸದಾ ಓದುವವನಾಗಿದ್ದು ಅದರಲ್ಲಿ ವ್ಯಕ್ತವಾಗುವ ರಾಷ್ಟ್ರೀಯ ಅಭಿಪ್ರಾಯಗಳನ್ನು ನಾನು ಮೆಚ್ಚಿದ್ದೇನೆ 'ನವಯುಗ'ವನ್ನು ನವೀಕರಿಸಿ ಅದರ ಬಾಹ್ಯ ಮತ್ತು ಅಂತರಾಂಗಿತಸೌಂದರ್ಯವನ್ನು ಹೆಚ್ಚಿಸಲು ನೀವು ಪ್ರಯತ್ನಿಸುತ್ತಿದ್ದೀರೆಂಬುದು ಪ್ರಶಂಸನೀಯವಾಗಿದೆ. ನಮ್ಮ ವಾರ ಪತ್ರಿಕೆಗಳು ಬರಿಯ ಸುದ್ದಿಯ ಪ್ರಸಾರವನ್ನಷ್ಟೇ ಗುರಿಯಾಗಿಟ್ಟುಕೊಳ್ಳದೆ ತಾವು ವ್ಯವಹರಿಸುತ್ತಿರುವ ಪಟ್ಟಣ ಅಥವಾ ಜಿಲ್ಲೆಗ ಸ್ಫೂರ್ತಿಯನ್ನು ನೀಡುವ ಸಾಧನಗಳಾಗಬೇಕೆಂದು ನನಗೆ ಅನಿಸುತ್ತದೆ

ನಿಮ್ಮ ದೀಪಾವಳಿ ಸಂಚಿಕೆಯು ನಿಮಗೆ ಯಶೋಲಾಭವನ್ನುಂಟುಮಾಡಲಿ.

ಕೆ. ಕೆ. ಪೈ.

ಬಿ. ಮಂಜಯ್ಯ ಹೆಗ್ಡೆ, ಬಿ. ಎ., ಬಿ. ಎಲ್.,
ಅಡ್ವೋಕೇಟ್.

ಮಂಗಳೂರು-3,
20ನೇ ಅಕ್ಟೋಬರ 1964.

ಕಷ್ಟನಷ್ಟಗಳ ಪರವೆಯಿಲ್ಲದೆ, ಆರ್ಥಿಕ ಅಡಚಣೆಗಳನ್ನು ಗಮನಿಸದೆ, ನೀವು

ನಿರಂತರವಾಗಿ ಬಹುಕಾಲದಿಂದಪ್ರಸ್ತುಕಟಿಸುತ್ತಿರುವ "ನವಯುಗ"ಕ್ಕೆ ಹೃದಯಪೂರ್ವಕ ನನ್ನ ಅಭಿನಂದನೆಗಳು.

ನಮ್ಮ ಗ್ರಾಮೀಣ ಜನತೆ ಪತ್ರಿಕಾ ವಾಚನಾಭಿರುಚಿಯನ್ನು ಬೆಳೆಸಿ, ನೂತನ ವಿಚಾರಗಳನ್ನು ಹೊಂದಿಸುವ ಪ್ರಯತ್ನದಲ್ಲಿ ನವಯುಗವು ಯಶಸ್ವಿಯಾಗಿದೆ ಎಂದು ನಾನು ಬಲ್ಲೆ. ಮೂಢ ನಂಬಿಕೆಗಳಿಂದಲೂ, ಕುರುಡು ಆಚಾರವಿಚಾರಗಳಿಂದಲೂ ಆನ್ಯಶನಾದ ಒಂದು ಜನವರ್ಗಕ್ಕೆ ಹೊಸ ತಿಳುವಳಿಕೆಯನ್ನು ನೀಡಿ ಅದರ ನಡವಳಿಕೆಯನ್ನು ತಿದ್ದಿ ಅದನ್ನು ಹೊಸ ಕಾಲಮಾನಕ್ಕೆ ಯೋಗ್ಯವನ್ನಾಗಿ ಮಾಡಿದ ಶ್ರೇಯಸ್ಸು ನಿಮ್ಮದು.

ಪತ್ರಿಕೆಗಳು ಪ್ರಜಾತಂತ್ರಾತ್ಮಕ ಸಮಾಜದಲ್ಲಿ ಬೆಲೆಯುಳ್ಳ ಕೆಲಸವನ್ನು ಮಾಡಬೇಕಾಗುತ್ತದೆ. ರಚನಾತ್ಮಕ ದೃಷ್ಟಿ-ಧ್ಯೇಯಗಳನ್ನಿರಿಸಿಕೊಂಡು ಹೊಣೆಯರಿತು ವರ್ತಿಸಬೇಕಾಗುತ್ತದೆ. ವಿಧಾನ ಸಭೆಗಳಲ್ಲಿ ಶಾಸಕರು ಸುಲಭದಲ್ಲಿ ವರದಕ್ಷಿಣೆಯನ್ನು ನಿಷೇಧಿಸಬಹುದು, ಮದ್ಯಪಾನವನ್ನು ಪ್ರತಿಬಂಧಿಸಬಹುದು. ಭ್ರಷ್ಟಾಚಾರದ ಮೇಲೆ ಕಠಿಣ ಕಟ್ಟಳೆಯನ್ನು ವಿಧಿಸಬಹುದು ಆದರೆ ಇವು ಕಾಗದದಿಂದ ಕಾರ್ಯರಂಗಕ್ಕಿಳಿಯಬೇಕಾದರೆ ಸಾರ್ವಜನಿಕ ಅಭಿಪ್ರಾಯದ ಬೆಂಬಲವು ಬೇಕೆಂಬುದು ಸ್ವತಃಸಿದ್ಧ. ಅಂಥ ಬೆಂಬಲವು ಪತ್ರಿಕಾಪ್ರಪಂಚದಿಂದಲೇ ದೊರಕುವುದು ಸಾಧ್ಯ. ಎಲ್ಲಾದರೂ ಆ ಬೆಂಬಲವಿಲ್ಲದೆ ಹೋದರೆ ಶಾಸನದ ಗತಿ ಏನಾಗುವುದೆಂಬುದನ್ನು ಅನುಭವದಿಂದ ನಾವು ಬಲ್ಲೆವಷ್ಟೆ.

ಇಂದು ನಮ್ಮ ಸುತ್ತಲಿನ ವಾತಾವರಣ ತೀರ ಕಲಂಕಿತವಾಗಿದೆ ಸಂಜಾಬಿನ ಕೈರೋಣರ ಭ್ರಷ್ಟಾಚಾರವು ಎಲ್ಲ ರಾಜ್ಯಗಳಲ್ಲೂ ಸಾಮಾನ್ಯ ನಿಯಮವಾಗಿದೆ, ಬೇಲಿಯೇ ಹೊಲವನ್ನು ಮೇಯುವ ಕಲಿಕಾಲವು ಸರ್ವತ್ರ ರೂಢವಾಗಿದೆ ಎಂದು ಎಲ್ಲರೂ ಹೇಳುತ್ತಿದ್ದಾರೆ ರಾಜಕೀಯಸ್ಥ ಜನಗಳ ಮಾತಿನ ಮಲ್ಲತನದಿಂದ ಆಡಳಿತದ ಕಾರ್ಯಶಕ್ತಿಯು ಹೆಚ್ಚದು, ಸದಾಚಾರದ ನೈರ್ಮಲ್ಯವೂ ಉತ್ಪನ್ನವಾಗದು

ಕಾಮರಾಜ ಯೋಜನೆ—ಈಗೆಲ್ಲಿದೆ? ತಲೆ ಮರೆಸಿಕೊಂಡು ಕೂತಿದೆಯೇ? ಅಧಿಕಾರದಾಹ, ಸ್ವಾರ್ಥಪ್ರಿಯತೆ-ಇವುಗಳ ಹಾವಳಿಯಿಂದ ಆಳುವ ಪಕ್ಷವು ಹತವೀರ್ಯವಾಗಿದೆ. ರಾಜಕೀಯದಲ್ಲಿ ನೀತಿಗೆ ಸ್ಥಾನವೇ ಇಲ್ಲವೆಂಬಂತೆ ನಾಯಕರ ವರ್ತನೆ ಕುಲಗೆಟ್ಟಿದೆ. ಪ್ರಜಾತಂತ್ರವು ಒಡೆದ ಮಡಿಕೆಯಂತೆ ಅಪಸ್ವರವನ್ನು ಹೊರಡಿಸುತ್ತಿದೆ ಆರ್ಥಿಕ ಸಮಸ್ಯೆಯೂ ಆಹಾರ ಸಮಸ್ಯೆಯೂ ರಾಹುಕೇತುಗಳಂತೆ ನಮ್ಮ ಸಮಾಜವನ್ನು ನುಂಗಲು ಬಯಸುತ್ತಿವೆ. ಇವುಗಳ ನಿವಾರಣೆಯ ಉಪಾಯವನ್ನರಿಯದ ಸರ್ಕಾರ ಕಂಗೆಟ್ಟು ಎಸವುತ್ತಿದೆ. ಸಾರ್ವಜನಿಕ ಸಂಸ್ಥೆಗಳ ಒಳಗೆ ಹೆಗ್ಗಣಗಳು ಪ್ರವೇಶಿಸಿ ರಾಷ್ಟ್ರ ಜೀವನದ ನರನಾಡಿಗಳನ್ನೇ ಕೊರೆದುಹಾಕಿವೆ. ಸಾಮಾಜಿಕ ಅಸಮಾನತೆಯು ಮತ್ತೆ ಮೆರೆದಾಡುತ್ತಿದೆ.

ಇಂಥ ಮಾತು ನಾಡಿನ ಮೂಲೆ ಮೂಲೆಗಳಲ್ಲೂ ಪ್ರತಿಧ್ವನಿಸುತ್ತಿರುವುದರಿಂದ ಇದರಲ್ಲಿ ಸತ್ಯಾಂಶವಿರಲೇ ಬೇಕಲ್ಲವೆ? ಆದರೆ ನಾಡಿನ ನಾಯಕರು ಕಿವುಡರಂತೆ ವರ್ತಿಸುತ್ತಿದ್ದಾರೆ ಏಕೆ?

ನಿಮ್ಮ ಪತ್ರಿಕೆಯು ರಾಜಕೀಯವನ್ನೂ ರಾಜನೀತಿಯಾಗಿ ಪರಿವರ್ತಿಸುವ ಒಂದು ಆಯುಧವಾಗಲಿ, ರಾಷ್ಟ್ರ ಜೀವನವನ್ನು ಕಲುಷಿತಗೊಳಿಸುವ ವ್ಯಕ್ತಿ—ಸಂಸ್ಥೆಗಳನ್ನು ನಿರ್ದಾಕ್ಷಿಣ್ಯವಾಗಿಯೂ ಸತ್ಯವಾಗಿಯೂ ಟೀಕಿಸುವ ಧೈರ್ಯ ನಿಮ್ಮಲ್ಲಿ ಉಡುಗದಿರಲಿ. ಸಮಾಜದಲ್ಲಿ ಶಾಂತಿಯನ್ನೂ ನೈರ್ಮಲ್ಯವನ್ನೂ ಸ್ಥೈರ್ಯವನ್ನೂ ಉಂಟುಮಾಡುವ ಪ್ರಯತ್ನದಲ್ಲಿ ನೀವು ಯಶಸ್ಸಂಪಾದನೆ ಮಾಡಿದರೆ ನಾಡು ಉಳಿದೀತು.

ಬಿ ಎಂ ಹೆಗ್ಡೆ.

ಶ್ರೀ ಎಂ ಮಧ್ವರಾಜ್, ಬಿ ಎ, ಎಂ. ಎಲ್. ಎ. ಅವರಿಂದ

ಗೆಳೆಯರೇ,



ದೀಪಾವಳಿಯ ಶುಭ ಸಂದರ್ಭದಲ್ಲಿ "ವಿಶೇಷ ಸಂಚಿಕೆ"ಯನ್ನು ನೀವು ಹೊರಡಿಸುವುದು ಅಭಿನಂದನೀಯ. ಹೊರಗೆ ದೀಪವುರಿಸಿ ಹೊರಗನ್ನು ಹೆಚ್ಚಾಗಿ ನೋಡುವುದನ್ನು ಬಿಟ್ಟು ನಮ್ಮ ನಮ್ಮೊಳಗೆ ದೀಪ ಹಚ್ಚಿ ನೋಡಿಕೊಳ್ಳುವ ಅಗತ್ಯ ಇಂದಿದೆಯೆಂದು ನನಗನ್ನಿಸುತ್ತದೆ. ನಿಮ್ಮ ವಿಶೇಷ ಸಂಚಿಕೆ ಇಂತಹದೊಂದು ದೀಪವಾಗಿಯೇ ಮುಂದೆಯೂ ಉಳಿಯುವುದೆಂಬ ವಿಶ್ವಾಸ ನನಗಿದೆ.

ಮಲ್ಪೆ, 23-10-1964 ಎಂ. ಮಧ್ವರಾಜ್

'ನವಯುಗ'ದ ಸೇವೆ ಗಮನಾರ್ಹವಾಗಿದೆ

ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್
ಶ್ರೀ. ಟಿ. ಎ. ಪೈ ಅವರಿಂದ

ದೀಪಾವಳಿ— ಮತ್ತೆ ಬಂದಿದೆ ಗತ ವರುಷದೆಡೆಯು ಹಿನ್ನೋಟ ನಮ್ಮ ನೆಚ್ಚಿನ ನಾಯಕ ನೆಹರೂರವರ ಅಗಲುವಿಕೆಯ ಶೋಕದಿಂದ ನಮ್ಮ ಅಂತಃಕರಣವನ್ನು ಕಳಕಳಿಸುತ್ತಿರುವಂತೆ ಮುಂದಿನ ಆಹಾರ ಭ್ರಷ್ಟಾಚಾರ ಮುಂತಾದ ಸಮಸ್ಯೆಗಳ ಭೀಕರ ದೃಶ್ಯ ನಮ್ಮನ್ನು ದಂಗು ಬಡಿಸುಸುತ್ತಿದೆ.

ಸ್ವಾತಂತ್ರ್ಯ ಪ್ರಾಪ್ತಿಗಾಗಿ ದುಡಿಯುವಾಗ ಭಾರತೀಯರಲ್ಲಿದ್ದ ಉದಾತ್ತ ಧ್ಯೇಯಗಳು, ಸದಾಚಾರ, ಐಕ್ಯತೆ, ನಿಷ್ಕಾಮಪೂರ್ಣ ಸೇವೆಗಳು ಇಂದು ಅಷ್ಟೇ ಪ್ರಮಾಣದಲ್ಲಿ ನಮ್ಮಲ್ಲಿವೆಯೆ? ನಾವು ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿರುವೆವೆ? ಎಂದು ಯೋಚಿಸುವಾಗ ನಮಗೆ ತೃಪ್ತಿದಾಯಕ ಉತ್ತರ ಸಿಗುತ್ತಿಲ್ಲ.

ಕೂಗು ಘೋಷಣೆಗಳನ್ನೇ ಹಾಕಿ, ಅಂಡಲೆದು ಆಹಾರ ಸಮಸ್ಯೆಯನ್ನು ನೀಗಿಸಲು ಬಯಸುವ, ಕೆಲಸದ ಸಮಯವನ್ನು ಮಂದಗಾಮಿತನದಿಂದ ವ್ಯಯಿಸಿ ಉತ್ಪಾದನೆಯನ್ನು ಕುಂಠಿತಗೊಳಿಸಿ ಅಧಿಕ ವೇತನವನ್ನು ಕೇಳುವ ವಿನಾಶಕಾರಿ ಪ್ರವೃತ್ತಿಗಳನ್ನು ಬೆಳೆಸಲು ಪ್ರಯತ್ನವು ನಡೆಯುತ್ತಿದೆ ಎಂಬ ಮಾತು ಆಹುದಾದರೆ ಅದು ನಮ್ಮನ್ನು ಅಭಿವೃದ್ಧಿಯೆಡೆಗೆ ನಡೆಸಬಲ್ಲುದೆ? ಎಂಬುದನ್ನು ನಾವು ಯೋಚಿಸಬೇಕು. ದೇಶದ ಕೃಷಿಯ ಅಭಿವೃದ್ಧಿಗಾಗಿ, ರಾಷ್ಟ್ರದ ಆರ್ಥಿಕ ಪ್ರಗತಿಗಾಗಿ ನಾವೇನು ಸೇವೆ ಸಲ್ಲಿಸಿದ್ದೇವೆ ಎಂಬ ಕುರಿತು ವಿವೇಚಿಸಬೇಕು.

ಜನತೆಯಲ್ಲಿ ಇಂತಹ ವಿಚಾರ ಪ್ರಚೋದನೆಗಾಗಿ— ತನ್ಮೂಲಕ ನಾಡಿನ ಪ್ರಗತಿಗಾಗಿ— ರಚನಾತ್ಮಕ ಲೇಖನಗಳನ್ನು ಪ್ರಕಟಿಸುತ್ತಿರುವ "ನವಯುಗ"ದ ಈ ದೀಪಾವಳಿ ಸಂಚಿಕೆಯನ್ನು ನಾನು ಸ್ವಾಗತಿಸುತ್ತೇನೆ. ಸಂಪಾದಕ ಶ್ರೀ ಶೆಟ್ಟರನ್ನು ಅಭಿನಂದಿಸುತ್ತೇನೆ.

ಇಂತಿ,
ಸೇವೆಯಲ್ಲಿ ನಿಮ್ಮವ,
ಟಿ. ಅನಂತ ಪೈ

ಶಿಕ್ಷಣ ಸಚಿವ ಶ್ರೀ ಎಸ್. ಆರ್. ಕಂಠಿ, ಅವರಿಂದ

ತಾವು 29ನೆಯ ಅಕ್ಟೋಬರದಂದು 'ನವಯುಗ'ದ ದೀಪಾವಳಿ ವಿಶೇಷಾಂಕ ಹೊರಡಿಸುವ ಸುದ್ದಿ ಕೇಳಿ ಸಚಿವ ಶ್ರೀ.ಕಂಠಿಯವರಿಗೆ ಹರ್ಷವೆನಿಸಿದೆ. ವಿಶೇಷಾಂಕವು ಸರ್ವಾಂಗ ಸುಂದರವಾಗಿ ಹೊರಡುವುದೆಂದು ಅವರು ಭಾವಿಸುತ್ತಾರೆ. ನವಯುಗ ಮುದ್ರಣಾಲಯಕ್ಕೂ ಪತ್ರಿಕೆಗೂ ಅವರು ಯಶಸ್ಸನ್ನು ಕೋರುತ್ತಾರೆ.

ಬೆಂಗಳೂರು, 22.10.64 **ಖಾಸಗಿ ಕಾರ್ಯದರ್ಶಿ**

ಸುಪ್ರೀಂ ಕೋರ್ಟಿನ ಎಡ್ವಕೇಟ್ ಶ್ರೀ ಕೆ. ಆರ್ ಕಾರಂತ, ಅವರಿಂದ.

ಮೂವತ್ತು— ನಾಲ್ವತ್ತು ವರ್ಷಗಳ ಕೆಳಗೆ ದಿವಂ|| ಶ್ರೀ ಎ. ಬಿ ಶೆಟ್ಟರಿಂದ ಸ್ಥಾಪನೆಗೊಂಡು ಇಷ್ಟುಕಾಲ ಕನ್ನಡಿಗರಿಗೆ, ವಿಶೇಷತಃ ದಕ್ಷಿಣ ಕನ್ನಡಿಗರಿಗೆ 'ನವಯುಗ"ವು ಸಲ್ಲಿಸಿದ ಸೇವೆ ಗಮನಾರ್ಹವಾಗಿದೆ. ಸಾಪ್ತಾಹಿಕಗಳು ಬದುಕುವುದೇ ಕಷ್ಟವಾಗಿರುವ ನಮ್ಮ ರಾಷ್ಟ್ರದಲ್ಲಿ "ನವಯುಗ"ವು ಉತ್ಕರ್ಷಕ್ಕೆ ಬಂದು ಬಾಳಿದುದೇ ಒಂದು ಸಾಧನೆಯಲ್ಲವೆ?

ನವಯುಗಕ್ಕೆ ನನ್ನ ಶುಭಾಶಯಗಳು

ಬೆಂಗಳೂರು, 23—10—64 ಕೆ. ಆರ್. ಕಾರಂತ.

ಮೈಸೂರು ಹೈ ಕೋರ್ಟಿನ ನ್ಯಾಯಮೂರ್ತಿ ಕೆ ಎಸ್ ಹೆಗ್ಡೆ, ಅವರಿಂದ

ದಿವಂ|| ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿತವಾದಂದಿನಿಂದಲೂ ನವಯುಗವು ರಾಷ್ಟ್ರೋನ್ನತಿಯ ಘನೋದ್ದೇಶಗಳನ್ನು ಧ್ಯೇಯವಾಗಿರಿಸಿಕೊಂಡಿದೆ. ರಾಷ್ಟ್ರ ವಿಮೋಚನೆಯ ಕೆಲಸದಲ್ಲಿ ಅದು ಪ್ರಮುಖ ಪಾತ್ರವನ್ನು ವಹಿಸಿತ್ತು. ಈಗಲೂ ವಹಿಸಬಲ್ಲುದು. ಇಂದು ನಮ್ಮ ರಾಷ್ಟ್ರದಲ್ಲಿ ಪ್ರತಿಯೊಬ್ಬನೂ ಪ್ರಾಮಾಣಿಕವಾಗಿಯೂ ದುಡಿಯುವಂತಾಗಬೇಕು. ಗಳಿಸಿದ ಸ್ವಾತಂತ್ರ್ಯವನ್ನು ವಿಚ್ಛಿನ್ನಗೊಳಿಸಲು ಹವಣಿಸುವ ಅನೇಕ ದುಷ್ಟ ಶಕ್ತಿಗಳನ್ನು ದಮನ ಮಾಡಬೇಕಾಗಿದೆ. ರಾಷ್ಟ್ರ ಜೀವನವನ್ನು ಲಂಚರುಷವತ್ತುಗಳು ಕೊರೆದು ಹಾಳುಮಾಡುತ್ತಿವೆ ಎಂಬ ವದಂತಿ ಎಲ್ಲೆಡೆಯೂ ವ್ಯಾಪಿಸಿದೆ. ಯುದ್ಧಾನಂತರ ರಾಷ್ಟ್ರ ರಚನೆಗೆ ಜರ್ಮನರು ಬದ್ಧಕಂಕಣರಾದಂತೆ ನಾವಾದರೂ ರಾಷ್ಟ್ರವನ್ನುಳಿಸಲು ಮುಂದಾಗಬೇಕು. ಐಕ್ಯ, ಪ್ರಾಮಾಣಿಕತೆ, ದುಡಿಮೆ—ಇವು ಮೂರು ಜೀವಸೂತ್ರಗಳ ಪ್ರಚಾರಕ್ಕೆ ನವಯುಗವು ದೇಶಾಭಿಮಾನದಿಂದ ದುಡಿಯಲೆಂದು ನಾನು ಹಾರ್ದಿಕವಾಗಿ ಹಾರೈಸುತ್ತೇನೆ.

ಬೆಂಗಳೂರು, 23—10—64 ಕೆ. ಎಸ್. ಹೆಗ್ಡೆ.

THE UDIPI ELECTRIC STORES,
CHURCH ROAD, UDIPI.

Phone: **129**

Electrical Contractors

All Electrical Installations are undertaken

'ಸಾಧನ' (ನಿಷ್ಪಕ್ಷಪಾತದ ಕನ್ನಡ ವಾರಪತ್ರಿಕೆ)

ಪುಟ ೧೨ ವಾರ್ಷಿಕ ಚಂದಾ ವಿಶೇಷ ಸಂಚಿಕೆಗಳ ಸಹಿತ ರೂ. ೬-೦೦

§ ಎಲ್ಲ ರಾಜಕೀಯ ಪಕ್ಷಗಳ ನಿರ್ಭೀತ ಸ್ಪಷ್ಟ ಅಭಿಪ್ರಾಯಕ್ಕೆ

§ ಕರ್ನಾಟಕದ ನೆಲ, ನಡೆ-ನುಡಿಗಳ ಸಂಕ್ಷಿಪ್ತ ಸುಂದರ ಪರಿಚಯ ಹಾಗೂ ಕಥೆ, ಕವನ, ಮಕ್ಕಳ ವಿಭಾಗಗಳೊಂದಿಗೆ ಉಜ್ವಲ ಸಮಂಜಸ ವಿಚಾರಗಳಿಂದ ಬಹುಬೇಗನೇ ಜನಪ್ರಿಯವಾದ ನಿಷ್ಪಕ್ಷಪಾತದ ವಾರಪತ್ರಿಕೆ.

ಕರ್ನಾಟಕದ ಎಲ್ಲ ದೊಡ್ಡ ಊರುಗಳಲ್ಲಿಯೂ
ಏಜಂಟರುಗಳನ್ನು ಕೋರಲಾಗಿದೆ

ಮಾದರಿ ಸಂಚಿಕೆಗಾಗಿ ಬರೆಯಿರಿ— ಮೆನೇಜರ,

ಸಾಧನ ವಾರಪತ್ರಿಕೆ, ಹೊನ್ನಾವರ (ಉ. ಕ)

ಪ್ರಕಟಣೆ

ಬೇಕಾಗಿದೆ

ಉಡ್ಪಿ ತಾಲೂಕು ಕೃಷಿ ಉತ್ಪನ್ನ ಸಹಕಾರಿ ಮಾರಾಟ ಸಂಘ, Ltd.,
ಉಡುಪಿ.

ಈ ಸಂಘಕ್ಕೆ ರಾಸಾಯನಿಕ ಗೊಬ್ಬರವನ್ನು ಇಡುವರೇ ಗೋದಾಮು ಬಾಡಿಗೆಗೆ ಅಗತ್ಯವಿರುತ್ತದೆ. ಗೋದಾಮಿನ ಹತ್ತಿರದ ವರೆಗೆ ಲೋರಿಗಳು ಬಂದು ಹೋಗುವರೇ ರಸ್ತೆಗಳಿರತಕ್ಕದ್ದು— ಈ ರೀತಿಯ ಉಡ್ಪಿ ಟೌನಿನ ಸಮೀಪವಾಗಿ ಗೋದಾಮುಗಳಿದ್ದರೆ— ಗೋದಾಮಿನ ವಿಸ್ತಾರ, ತಿಂಗಳೊಂದರ ಬಾಡಿಗೆ ವಗೈರೆ ವಿವರಗಳಿಗೆ ಬರಹ ಮೂಲಕ ತಿಳಿಸಬೇಕಾಗಿ ಈ ಮೂಲಕ ಸಾರ್ವಜನಿಕರಿಗೆ ತಿಳಿಸೋಣಾಗಿಯದೆ.

(By order)

M. V HEGDE,
Manager.

ಸರ್ವರಿಗೂ ದೀಪಾವಳಿಯ ಶುಭಾಶಯಗಳು
ಸದಾ ಸುಸ್ವಾಗತ
ಉಡುಪಿಯಲ್ಲಿ ಪ್ರಥಮ ಶ್ರೇಣಿಯ ಹಾಗೂ ಪ್ರಪ್ರಥಮ ವಸತಿ
ಮತ್ತು ಭೋಜನ ಮಂದಿರ

ರೋಯಲ್ ಮಹಾಲ್

ತೃಪ್ತಿದಾಯಕ ಸಮಾನ ಸೇವೆಯ ಸರ್ವಾನುಕೂಲತೆಗಳಿಂದೊಡಗೂಡಿರುವ ಅತ್ಯಾಧುನಿಕ ಮಾದರಿಯ
ಬೋರ್ಡಿಂಗ್ ಮತ್ತು ಲಾಜಿಂಗ್.

ವ್ಯಾಲಕ: ಕೆ. ವೆಂಕಟ್ರಮಣ ಭಟ್.

BUY THE IDOL OF YOUR CHOICE!

NEW ART

proudly present

the spectacle of our spiritual heritage



Plastic idols in gold, silver or any lacquer

Manufactured by: **NEW ART INDUSTRIES**

Telephone 84023] RAM BAUG, G. B. ROAD, MALAD, **BOMBAY—64** [Telegram: NEWART, MALAD

ನಿಮ್ಮ ಆಯ್ಕೆಯ ಪ್ರತಿಮೆಗಳನ್ನು ಕೊಂಡುಕೊಳ್ಳಿರಿ!

ನ್ಯೂ ಆರ್ಟ್ ನಮ್ಮ ಅಧ್ಯಾತ್ಮಿಕ ಪರಂಪರೆಯ ದೃಶ್ಯಗಳನ್ನು ನೀಡಲು ಹೆಮ್ಮೆಪಡುತ್ತದೆ.

ಚಿನ್ನ, ಬೆಳ್ಳಿ, ಅಥವಾ ಯಾವದೇ ಲೋಹದಲ್ಲಿ ಪ್ಲಾಸ್ಟಿಕ್ ಪ್ರತಿಮೆಗಳು

ನಿರ್ಮಾಪಕರು: ನ್ಯೂ ಆರ್ಟ್ ಇಂಡಸ್ಟ್ರೀಸ್

ಟೆಲಿಫೋನ್: 84023] ರಾಮ್ ಭಾಗ್, ಜಿ. ಬಿ. ರೋಡು, ಮಲಾಡ್, ಬೊಂಬಾಯಿ-೬೪ [ಟೆಲಿಗ್ರಾಂ: 'ನ್ಯೂಆರ್ಟ್', ಮಲಾಡ್.

ನೀಳಾಲೋಚಕಿ ನೀಲಾ

ಬಡತನದ ಬೇಗೆಯಲಿ ನೊಗವಿದ್ದ ನೀತಿ
ಎಡವಿದಳು ಮಂಗಳಮ್ಮನ ಮಾತ ಮೇಲೆ
ಬಡವೆ ಬಡಬಡಿಸಿದರು ಬಡವೆಯಾಗುಳಿದು
ಬೆಡಗಿನಿಂ ಮಡಿದಳಾ ಸಾಗರವನೆರೆದು ||

ಬರೆದವರು
ಡಾ| ಕೆ. ಎಂ. ಬಲ್ಲಾಳ್, ಡಿ.ಎಸ್.ಎ.ಸಿ., ಕುಂಜಾರ್‌ಗಿರಿ

ನೀಲಾಳ ಸಂತಸ ತುತ್ತ ತುದಿಯನ್ನಡರಿತ್ತು. ಹಸಿದು, ಬಾಯಾರಿ, ಕದಡಿ, ಕಂಗೆಟ್ಟು ಕಳವಳಗೊಂಡಾಗ (ಅಮೃತ)ಪೀಯೂಷವನ್ನೇ ತಂದು ನೀಡಿದಂತಾಗಿತ್ತು ಆಕೆಗೆ—

ಊರಿನ ಮನೆ ಮನೆಗೆ ಬೆಳಗುಮುನ್ನ ತೆರಳಿ ಕಾರ್ಯ ಕೆಲಸಗಳನ್ನೆಲ್ಲಾ ತೀರಿಸಿ, ಅವರಿತ್ತುದರಲ್ಲೇ ತೃಪ್ತಿ ಹೊಂದಿ, ಅವರ ಬೈಗುಳನ್ನು ಕೇಳಿಕೊಂಡು, ಬಾಳ ಝರಿಯಲ್ಲಿ ಹುಲ್ಲು ಕಡ್ಡಿಯಾಗಿ ತೇಲಿ ಹೋಗುತ್ತಿದ್ದ ನೀಲಾ ತನ್ನ ಹತ್ತರ ವಯಸ್ಸಿನಲ್ಲೇ ತಬ್ಬಲಿಯಾಗಬೇಕಾಯ್ತು:

ಊರಿಗೆ ಮಾರಿಯಂತೇ ಹಾರಿ ಬಂದ ಸಿಡುಬುಪಿಡುಗು ಆಕೆಯ ಬಡ ತಂದೆತಾಯ್ಗಳನ್ನು ತನ್ನ ಕರಾಳ ಹಸ್ತದ್ವಯದಿಂದ ಬಾಚಿ, ನೋಡದು ನುಂಗಿತು ನೀಲಾ ಅನಾಥಳಾದಳು. ತಂದೆತಾಯ್ಗಳ ಶವದಿದಿರು ಖಿನ್ನ ಮುಖ ಮುದ್ರೆಯಿಂದ, ಕೆದರಿದ ಕೂದಲಿನಿಂದ, ಕೂರಿದ ನೀಲಾಳ ಬಗ್ಗೆ ಯಾರೊಬ್ಬರ ಹೃದಯವೂ ಕರಗಿ ಕಾರುಣ್ಯದ ಕಾಸಾರವಾಗಲಿಲ್ಲ, ಕೆಲವರಿಗೆ ಅನುಕಂಪ ಮೂಡಿದ್ದರೂ, ಕರೆದೊಯ್ದು ಸಾಕುವ ಸಹಾನುಭೂತಿ ಯಾರೂ ತೋರಿಸಲಿಲ್ಲ....

ಅಂದಿನಾರಭ್ಯ ನೀಲಾ ಅಮ್ಮ ಬದುಕಿದ್ದಾಗ ಹೇಳಿಕೊಟ್ಟಿದ್ದ ಕೆಲಸ ಬೊಗಸೆಗಳನ್ನು ತನ್ನ ಜೀವನ ತೇರನ್ನು ಎಳೆಯಲೋಸುಗ ಬಳಸುವುದು ಅಪರಿಹಾರ್ಯವಾಯಿತು. ಜೀತದ ಜೀವದ ನೀಲಾ, ಸೂರ್ಯದೇವ ಮೂಡುವ ಮುನ್ನ ಎದ್ದು ತೆರಳಿ, ಊರಿನ ಮನೆ ಮನೆಯ, ಪಾತ್ರೆಪಡಗ ತೊಳೆದು, ಬಟ್ಟೆ ಒಗೆದು, ಕಸ ಗುಡಿಸಿ, ತನ್ನ ಹೊಟ್ಟೆ ಹೊರೆಯಲುಪಕ್ರಮಿಸಿದಳು—

ಹೀಗೇ ಸಾಗುತಿತ್ತು ಆಕೆಯ ಜೀವನವು! ಆಕೆಯ ಪ್ರಾಯವೂ ಏರುತ್ತಲೇ ಇತ್ತು; ತಾರುಣ್ಯದ ಸೌಂದರ್ಯ ಹೊರ ಹೊಮ್ಮುತಿತ್ತು; ಸುತ್ತಮುತ್ತಲ ಜನ ಹಲ ಬಗೆಯ ದೃಷ್ಟಿಯಿಂದ ನಿರುಕಿಸುತ್ತಿದ್ದರು ನೀಲಾಳನ್ನು ಪೊಂತಕಾರಿ ಯುವಕರು ತಮ್ಮ ನಲ್ನೋಟ; ನಲ್ನಗೆ; ನಲ್ನುಡಿಗಳಿಂದ ಒಳ ಸಾರಲೆತ್ನಿಸಿದರೆ; ಹರೆಯದ ಯುವತಿಯರು ಮಾತ್ಸರ್ಯಪೂರಿತ ಕೆಕ್ಕರ ನೋಟದಿಂದ, ವ್ಯಂಗ್ಯಾತ್ಮಕ ಇರಿತದ ನಗುವಿನಿಂದ ಗಾಸಿಗೊಳಿಸುತ್ತಿದ್ದರು.

ನೀಲಾ ಮಾತ್ರ ದುಡಿಮೆಯ ಯಂತ್ರವಾಗಿದ್ದಳು!

ಹೊತ್ತಾರೆ ಎದ್ದು ತಂಗಳೂಟ ಗೈದು ಹೊರಟರೆ, ಗುಡಿಸಲು ಸೇರುವಾಗ ಮುಚ್ಚಂಜೆ ಕವಿಯುತಿತ್ತು ದುಡಿದು ಹಣ್ಣಾದ ಹರಯದ ಬಾಲೆ, ಬಸವಳಿದು, ಬಳಿಗೆ ಬಂದ ನಿದ್ರಾಂಗನೆಯ ತೋಳ ತೆಕ್ಕೆಯಲ್ಲಿ ಹಾಯಾಗಿ ನಿದ್ರಿಸುತ್ತಿದ್ದಳು. ನಿದ್ರೆ ಕಣ್ಣಿಗೆ ಹತ್ತಿದಾಗ, ನೀಲಾ ಈ ಜಗದ ಜಂಜಡ ಮರೆಯುತ್ತಿದ್ದಳು. ಈ ತೆರನ ಯಾಂತ್ರಿಕ ಬಾಳಿನಿಂದ ಆರು ವರುಷ ಇರಿಸು ಮುರಿಸಾದ ನೀಲಾಳಿಗೆ ಮಂಗಳಮ್ಮನ ಪ್ರಲೋಭನೆ ಹುಚ್ಚು ಹಿಡಿಸಿತ್ತು:

ಆಕೆಯ ಹೃದಯದ ಆದ ಆಕಾಂಕ್ಷೆ ಉಡ್ಡಾಣಗೈದು ಹಾರತೊಡಗಿತು ಪ್ರಾಯದ ಸ್ವಭಾವ ಸಿದ್ಧವಾದ ಹುಮ್ಮಸ್ಸು ಅದಕ್ಕೆ ಆಜ್ಯ ಹುಯ್ದಿತ್ತು! ನೀಲಾ ದುರಾಲೋಚನೆ ಇಲ್ಲದೆ ಪ್ರೋತ್ಸಾಹಿಸಿದ್ದ ಮಂಗಳಮ್ಮನ ಮಾತಿನ ಮೋಡಿಗೆ ಸೈಗುಟ್ಟಿದಳು. ಮಂಗಳಮ್ಮ ಮುಂಬಾಯಿಯ ಸೂಳೆ, ಜರತಾರಿ ಸೀರೆ, ವಜ್ರದ ಬೆಂಡೋಲೆ, ಚಿನ್ನದ ಬಳೆ, ಕತ್ತಿನ ಹಾರ, ಮೂಗಿನ ಹೊಳೆವ ಮುತ್ತಿನ ನತ್ತು - ಇವುಗಳಿಂದ ಮಂಗಳಮ್ಮ ಮಹಾತಾಯಿಯಂತೇ ಕಂಡಳು—ನೀಲಾಳಿಗೆ- "ಊರ್ನಲ್ಲಿ ಚಾಕ್ರಿ ಮಾಡ್ಕೊಂಡು, ಬೈಗಳು ತಿನ್ಕೊಂಡು ದುಡ್ದು ಸಾಯೋದಕ್ಕಿಂತ, ಬೊಂಬಾಯಲ್ಲಿ ರಾಣೀ ಹಂಗೇ ಮಜಾ ಮಾಡ್‌ಬಹುದು"—ಆಶೆಯ ಜಾಲ ಬೀಸಿ ಕಣ್ಣು ಮಿಟುಕಿಸಿದಳು ಮಂಗಳಮ್ಮ.....

ನೀಲಾಳ ಎದೆ ಜೋರಾಗಿ ನಡುಗಿತು! "ಸೂಳೆಯ ಬಾಳು" —ಕಿವಿ ಗಡಚಿಕ್ಕುವ ಕರ್ಕಶ ಧ್ವನಿ ಸುತ್ತಲೂ ಕೇಳಿದಂತಾಯ್ತು. ನೀಲಾಳ ನಿರಾಸಕ್ತಿ, ಭಯ ವಿಹ್ವಲತೆ ಕಂಡು ಮಂಗಳಮ್ಮ ಸೊಂಟದಲ್ಲಿ ಸಿಕ್ಕಿಸಿದ್ದ ಹಣದ ಚೀಲ ತೆಗೆದು, ಹತ್ತರ ಎರಡು ನೋಟುಗಳನ್ನು ನೀಲಳ ಕೈಗೆ ತುರುಕಿದಳು, "ಹೀಗೇನ...ಸಂಪಾದಿಸ್ಬೋದು"....ಎಂದುಸುರುತ್ತಾ ಚಿನ್ನ ತಟ್ಟಿ ಹುಟ್ಟಿದ ರಭ್ಯ ಇಷ್ಟು ಹಣದ ಮುಖ ಕಾಣದ ನೀಲಾಳಿಗೆ ಮಿಂಚು ಸೋಕಿದಂತಾಯಿತು. "ನಾ ಡ್ದು ಹೋಗ್ತೀನಿ, ನೀನೂ ಬಾ ಕಣ.... ನನ್ನ ಜೊತೇಲಿ" ಎಂದಳು ವಿಜಯೋತ್ಸಾಹದ ಹರ್ಷದ ದನಿಯಲ್ಲಿ. ನೀಲಾ ಒಪ್ಪಿ "ಹೂಂ"ಗುಟ್ಟಿದಳು.

ಮಂಗಳಮ್ಮ ಹೊರಡುವ ದಿನ ನೀಲಾಳೂ ಊರಿಗೆ ಕೈಮುಗಿದು ಹೊರಟಳು. ಹೊಸ ಸೀರೆ, ಮೈತುಂಬಾ ಆಭರಣ ಸುವಾಸನೆ ಸೂಸುವ ಪೌಡರ್; ಕೇಶ ತೈಲಗಳಿಂದ ನೀಲಾ ಸಾಲಂಕೃತ ವಧುವಿನಂತಾದಳು. ನೀಲಾಳಿಗೆ ಸ್ವರ್ಗದಲ್ಲಿದ್ದಂತೇ ಭಾಸವಾಯ್ತು ಅವಳ ಸಂತಪ್ತ ಮನ ಸಂತೃಪ್ತವಾಗಿತ್ತು ಅಂದು, ಮಡಿದ ಮಾತಾಪಿತೃರ ಸ್ಮರಣೆ ಅವಳ ಕಂಗಳಲ್ಲಿ ನೀರು ತರಿಸಿತ್ತು....

ಆದರೆ, ನಾಲ್ಕು ದಿನದ ಮಂಗಳಮ್ಮನ ಮಮತೆಯ ಮುಲ್ಲಳ ಆದನ್ನು ತೊಡೆದಿತ್ತು—ಕಡೆದಿತ್ತು. ಉಗಿಬಂಡಿ ತೀವ್ರಗತಿಯಲ್ಲಿ ಹುಬ್ಬಳ್ಳಿಯ ಶಹರನ್ನು ತೊರೆದು, ಮುಂಬಾಯಿ ನಗರದ ಹಾದಿಗುಂಟ ಸಾಗುತಿತ್ತು ನೀಲಾಳ ಹೃದಯ ಢವಗುಟ್ಟುತಿತ್ತು; ಢಾಳವಾಗಿ ಉರಿಯುತ್ತಿದ್ದ ಬಂಡಿಯ ದೀಪ ಅವಳ ಕಣ್ಣು ಕುಕ್ಕುತಿತ್ತು. ದೀಪದ ಬೆಳಕಿನಲ್ಲಿ ಮಂಗಳಮ್ಮ ಗಾಡಿಯಲ್ಲಿ ಕೂತಿದ್ದ ಗಂಡು ಜಾತಿಯನ್ನು ಮೋಹಾಂಧಳಾಗಿ ದಿಟ್ಟಿಸಿ ನಗುವುದು ನೀಲಾಳಿಗೆ ದೃಗ್ಗೋಚರವಾದಾಗ ತೀರಾ ನಾಚಿಗೆಯಾಗುತಿತ್ತು; ಆದರೆ, ನೀಲಾಳ ಆಶೆ, ಗಾಳಿಗೋಪುರ ಹಿರಿದಾಗಿತ್ತು.

ಮುಂಬಾಯಿ ನಗರದ ಬಳಿ ಬಂದಾಗ ನೀಲಾ ಬಿಡುಗಣ್ಣಿನಿಂದ ಆ ಮಹಾಶಹರನ್ನು ನಿರುಕಿಸಹತ್ತಿದಳು. ದುರ್ದಮ್ಯ ಭೀತಿ, ಅವರ್ಣನೀಯ ಕುತೂಹಲ, ಕಾತುರ ಅವಳನ್ನು ಮೂಕಳನ್ನಾಗಿ ಮಾಡಿದ್ದುವು ಅದ್ಭುತವಾದ ಪವಾಡವನ್ನು ಈಕ್ಷಿಸಿದ ಶಿಶುವಾಗಿದ್ದಳವಳು. ಗಗನಸ್ಪರ್ಶಿಯಾದ ಮಹಡಿಯ ಮಹಲುಗಳು; ಇರುವೆ ಸಾಲಿನಂತೆ ಸಂಚರಿಸುವ ಜನ ಜಾತ್ರೆ; ಕರ್ಣಕರ್ಕಶವಾದ ನಾದಗೈಯುತ್ತಾ ಓಡಿಯಾಡುವ ಕಾರು; ಟ್ರೇಮ್; ಟ್ರೈನ್‌ಗಳು ನೀಲಾಳನ್ನು ಸಾಲಭಂಜಿಕೆಯನ್ನಾಗಿ ಮಾಡಿದ್ದುವು. ಟ್ಯಾಕ್ಸಿಯಲ್ಲಿ ಮಂಗಳಮ್ಮನ ಜತೆ ಕೂರಿದ ನೀಲಾಳನ್ನು ಟ್ಯಾಕ್ಸಿ ಗಾರ್ದಭ ಧ್ವನಿ ಗೈಯುತ್ತಾ ಕೊಂಡೊಯ್ದಿತು—ನಿತ್ಯ ಸುಮಂಗಲೆಯರ ಸತ್ಯ ಧಾಮಕ್ಕೆ. ಅಪಾಯದ ಸೂಚ್ಯವಾದ ಕೆಂಪು ದೀಪದ ಸಾಲು ಕಟ್ಟಡದ ಭವ್ಯ ಮುಡಲಿಗೆ. ಕಟ್ಟಡದ ಒಳಗೆ ಕಾಲಿರಿಸಿದ ನೀಲಾಳನ್ನು ವೇಶ್ಯಾ ಬಾಲಿಕೆಯರು ಚಣದೊಳಗೆ ಮುತ್ತಿ ವಿವಿಧ ಪ್ರಶ್ನಾವಳಿಗಳನ್ನೊಡ್ಡಿದರು. ನೀಲಾ 'ಕಮಕ್ ಕಿಮಕ್' ಎನ್ನದೆ ಪಿಳಿ ಪಿಳಿ ಕಣ್ಣುಬಿಟ್ಟಳು ಮಾತ್ರ. 'ಕಾಮದ

ದೀಪಾವಳಿಯ ಶುಭಾಶಯಗಳು

ಸ್ಥಾಪನೆ: 1914
ಫೋನ್ ನಂಬ್ರ. 428
ಟೆಲಿಗ್ರಾಂ: 'ಸುದರ್ಶನ'

ಜಗತ್ಪ್ರಸಿದ್ಧವಾದ
ಜೈ ಹಿಂದ್
ಹಂಚುಗಳನ್ನೇ
ಸದಾ ಉಪಯೋಗಿಸಿರಿ

ತಯಾರಕರು:
ಸುದರ್ಶನ ಟೈಲ್ ವರ್ಕ್ಸ್
ಬೋಳಾರ, ಮಂಗಳೂರು-೧

ರುದ್ರ ವೇದಿಕೆಯಲ್ಲಿ ಛಿದ್ರವಾಗಲು ಹೊಸ ಹಸು ಬಂದಿದೆ' ಎಂಬಂತೇ ಹೆಣ್ಣುಗಳು ಮುಖ ಮುಖ ನೋಡಿಕೊಂಡು ಹಲ್ಲು ಕಿಸಿದರು. ಅವರ ಪಿಸು ಮಾತು, ಮುಸು ಮುಸು ನಗು ನೀಲಾಳಿಗೆ ಅಲಗಿಕ್ಕಿ ತಿರುವಿದಂತಾಯಿತು. —ಆ ನಸು ಬೆಳಕಿನ ಕೊಠಡಿಯಲ್ಲಿ.

ಮೂರು ದಿನಗಳು ಸಂದುವು!

ನೀಲಾಳ ಹೊಸ ಸೀರೆ; ಆಭರಣ ನಿರ್ದಾಕ್ಷಿಣ್ಯವಾಗಿ ಮಂಗಳಮ್ಮ ಕಿತ್ತುಕೊಂಡು ಸಾದಾ ಸೀರೆ, ಹಿತ್ತಾಳೆ ಬೆಂಡೋಲೆ ಉಡುಗೊರೆಯಾಗಿ ನೀಡಿದಳು. ಈಗ ಮಂಗಳಮ್ಮ ನೀಲಾಳಿಗೆ ತಾಯಿಯಾಗಿ ಕಾಣದೆ, ಕಾಳಿಯಂತೆ ಕಾಣಿಸಹತ್ತಿದಳು; ಮೊದಲಿನ ಆ ಮಮತೆಯ ಸ್ಥಾನದಲ್ಲಿ ಅಧಿಕಾರದ ಕಠೋರ ವಾಣಿ ಆವಿರ್ಭವಿಸಿತ್ತು.

ನಾಲ್ಕನೇ ದಿನ ರಾತ್ರಿ ನೀಲಾ ಅದೇ ತಾನೇ ಊಟ ಮುಗಿಸಿ, ಮೊಗಸಾಲೆಯಲ್ಲಿ ಅಲಂಕೃತಳಾಗಿ ನಿಂತು ನಿಟ್ಟಿಸುತ್ತಿದ್ದಳು—ರಹರನ್ನು. ಮಂಗಳಮ್ಮನ ಕರೆ ಅವಳನ್ನು ಎಚ್ಚರಿಸಿತು ಮಂಗಳಮ್ಮನ ಆದೇಶದಂತೇ ನೀಲಾ ತಯಾರಾದಳು. ಹೊರಗೆ ಕಾರಿನ ಹಾರ್ನ್ ಸದ್ದು ನೀಲಾಳಿಗೆ ಕೇಳಿಸಿತು. ಒಮ್ಮೆಲೇ ಆ ನಾದವನ್ನಾಕ ರೋಮಾಂಚಕವಾಯ್ತು; ಕ್ಷಣದಲ್ಲೇ ಹರ್ಷ ಪುಲಕಿತವಾಯ್ತು. ನೋಟದ ಕಂತೆ ಅವಳ ಚಿತ್ರ ಫಲಕದಲ್ಲಿ ಪುಂಖಾನುಪುಂಖವಾಗಿ ಹಾದು ಹೋದುವು......

ಪಹರೆಯ ಪಠಾಣ್,—ವೃದ್ಧ ನಿರ್ಬಲ ಬಾಬುವನ್ನು ನೀಲಳ ಕೊಟಡಿಗೆ ಕರೆತಂದು, ಬಿಟ್ಟು ಕದವೆಳೆದು ಕೊಂಡ. ನೀಲಳ ಪರಿಸ್ಥಿತಿ ವೃಕ್ಷಬದ್ಧವಾಗಿತ್ತು; ತನ್ನ ಅಜ್ಜನ ಹರಯ—ಲತೆಗೆ ತನ್ನ ಕಾಯ, ಕಂಗಳಿಂದ ಅಶ್ರು ಹನಿ ಜಗುಳಿದುವು ನೀಲ ಕಂಪಿಸುತ್ತಿದ್ದಳು ಕಾಮುಕನ ತನ್ನ ಒಚ್ಚ ಬಾಯಿ ಬಿಟ್ಟು ನಗುತಿತ್ತು; ಬಳಿಗೆ ಮದಾಂಧದಿಂದ ಧಾವಿಸಿದ ಬಾಬು ತನ್ನ ಕೈಗಳಿಂದ ಬರಸೆಳೆದು ಅಪ್ಪಿ ಆಲಂಗಿಸಿದನು ನೀಲಾ [ನಿಶ್ಚೇತನಳಾಗಿದ್ದಳು; ಪ್ರತಿ ಕ್ರಿಯೆ ಗೈಯ್ಯದ ಗೊಂಬೆಯಂತಾಗಿದ್ದಳು; ಸತ್ತ ಹೆಣ್ಣಾಗಿದ್ದಳವಳು. ಕಾಮುಕನು ತೃಪ್ತಿ ತುಂದಿಲನಾಗಿ ಹತ್ತು ರೂಪಾಯಿ ಮೂರು ನೋಟುಗಳನ್ನು ಬಿಸುಟು ಬೀಸುಗಾಲು ಹಾಕುತ್ತಾ, ನಗುತ್ತಾ ಹೊರಟು ಹೋಯಿತು ರಾತ್ರಿಯ ಗಾಢ ಮೌನದಲ್ಲಿ ಬಾಬುವಿನ ಕಾರು ಹೋದ ಸದ್ದು ಸಹಾ ನೀಲಳಿಗೆ ಕೇಳಿಸದ್ವಾಯ್ತು. ಅತ್ತು ಕೆಂಪಾದ ಕಣ್ಣನ್ನು ಹೊಸಗುತ್ತಾ ಬಿದ್ದಿದ್ದ ನೀಲಾ ಮಂಗಳಮ್ಮನ ದಾಮುಗಾಲಿನ ನಡಿಗೆಯಿಂದ ಮುದ್ದೆಯಾದಳು. ನೆಲದಲ್ಲಿ ಬಿದ್ದ ಮೂರು ನೋಟುಗಳನ್ನು ಮಂಗಳಮ್ಮ ಎತ್ತಿಕೊಂಡು, ತಾತ್ಸಾರ ನೋಟದಿಂದ, ನಗುತ್ತಾ ಹೊರಟು ಹೋದಳು—

ಅಂದಿನಿಂದ ನೀಲಾಳಿಗೆ ಇದು ನಿತ್ಯದ ದಿನಚರಿಯಾಯಿತು. ದುಡಿಮೆ ತನ್ನದು; ಫಲ ಒಡತಿಗೆ. ಚಿಕ್ಕಾಸು ಸಹಾ ತನ್ನ ಪಾಲಿಗಿಲ್ಲವಾಯ್ತು. ಪಂಜರದ ಮೃಗ ಜೀವನವಾಯಿತು ಮಂಗಳಮ್ಮನ ಪ್ರೀತಿ. ಆದರೆ, ಒಲವು ಎಲ್ಲವೂ ಕಾಪಟ್ಯವಾಯಿತು. ಕಾರುಣ್ಯಗ ಮಾತಿನ ಬದಲು ಕಾಠಿಣ್ಯವಾಯಿತು; ದಯೆ, ಮಾರ್ದವತೆ, ಮಾನವ ಪ್ರೇಮ ಅನುಕಂಪ ಅಲ್ಲಿ ಯಾರಿಗೂ ಇರಲಿಲ್ಲ. ಜಗತ್ತಿನ ದಾರ್ಜನ್ಯದ ಪಡಿನೆಳಲಾಗಿತ್ತು ಆ ತಾಣ.

ನೀಲಾ ಅತ್ತಳು. ಗತಾವಲೋಕನದಿಂದ ಮನಸ್ಸು ತೀರಾ ಹೈರಾಣವಾಗಿ, ಮಮ್ಮಲ ಮರುಗುತಿದ್ದಳು, ಕರುಳು ಈಡಾಡುವಂತೆ, ಅಳು ಕಾಸನ ರೋಧನವಾಯ್ತು. 'ಸೂಳೆಯ ಬಾಳು—ನಿತ್ಯ ಗೋಳು' ಎಂಬುದು ನೀಲಾಳಿಗೆ ಚೆನ್ನಾಗಿ ಅರಿವಾಗಿತ್ತು. ಆದರೆ, ಈಗವಳು ಸಂಪೂರ್ಣ ಜಾರಿ ಬಿದ್ದ ಹೆಣ್ಣಾಗಿದ್ದಳು ಈಗವಳು ವಿಟಪುರುಷರ ಭೋಗದ ಸಾಧನವಾಗಿದ್ದಳು. ಕುಡುಕ—ಕುಂಟ, ಕುರುಡ—ಹೆಳವ, ಶ್ರೀಮಂತ-ದಲಿತ, ರೋಗಿ—ನಿರೋಗಿ, ಯಾರೇ ಬರಲಿ, ತಾನವರಿಗರ್ಪಿತವಾಗುವುದು ಅನಿವಾರ್ಯವಾಗಿತ್ತು. ದೇಹ ಗಳಿತವಾಯ್ತು ಮೈಯೆಲ್ಲಾ ಬಾತುಕೊಂಡಿತ್ತು. ವಿಲಕ್ಷಣ ನೋವು ಕಾವುಗಳಿಂದ ನೀಲಾ ವೃದ್ಧೆಯಂತಾಗಿದ್ದಳು.

ತಿಂಗಳೆರಡು ಉರುಳಿದುವು!

ನೀಲಾಳ ರೋಗ ಉಲ್ಬಣಿಸುತ್ತಲೇ ಇತ್ತು. ಔಷಧಿ ಉಪಚಾರಗಳ ಹೆಸರೇ ಇರಲಿಲ್ಲ. ದನಿ ಹಿಂಗಿತು. ನಡೆದರೆ ಏದುಸಿರು ಬರುತಿತ್ತು. ಕುಳಿತರೆ ಕುಳರು ಹಿಡಿದಂತಾಗುತಿತ್ತು; ನಿಂತರೆ ತಲೆ ತಿರುಗುತಿತ್ತು; ಮೈಯಲ್ಲಿ ಸುಟ್ಟ ಗಾಯದಂತೆ ಬಾಸುಂಡೆಗಳು ಎದ್ದು ಉರಿಯುತಿದ್ದುವು. ಆದರೂ ಹಸಿದ ಕಾಮದ ಹೆಬ್ಬುಲಿಗಳಿಗೆ ದೇಹವರ್ಪಿಸದೆ ನಿರ್ವಾಹವಿರಲಿಲ್ಲ ನಿರಾಕರಿಸಿದಾಗ, ಮಂಗಳಮ್ಮ ಚಾಟಿಯಿಂದ ಝಾಡಿಯುತ್ತಿದ್ದಳು; ಊಟ, ಕಾಫಿಗೆ ಸೊನ್ನೆ ಬೀಳುತಿತ್ತು ಆ ದಿನ.

ಉಗ್ರ ಯಮಯಾತನೆ ನೀಲಾಳಿಗೆ ಅಸಹ್ಯವಾಯ್ತು. ಗಿರಾಕಿಗಳೇ ಹೇಸುವಷ್ಟು; ಕ್ಯಾಕರಿಸಿ ಉಗುಳುವಷ್ಟು ಆಕೆಯ ರೋಗ ಉಲ್ಬಣಿಸಿತ್ತು, ದುರ್ವಾಸನೆ ದೂರಕ್ಕೂ ಹರಡುತಿತ್ತು, ಮಂಗಳಮ್ಮನಿಗೂ, ಇವಳ 'ಸೇವೆ' ಸಾಕೆನಿಸುವಷ್ಟಾಯಿತು. ಗಿರಾಕಿಗಳು ಇವಳಿದ್ದ ಕೊಠಡಿಯ ಸನಿಹಕ್ಕೆ ತಪ್ಪಿ ಕೂಡಾ ಹೋಗದಾದರು "ಭೂಮಿ ಭಾರ—ಅನ್ನ ದಂಡ" ಎಂದು ಭಾವಿಸಿದ್ದ ಮಂಗಳಮ್ಮ ಒಂದು ನಡು ರಾತ್ರಿ ಪಹರೆಯವನಿಂದ ಹೊರದಬ್ಬಿಸಿದಳು......

ಒಂದೆಡೆಯಲ್ಲಿ ಹಸಿವಿನ ಸಂಕಟ, ಇನ್ನೊಂದೆಡೆ ದೇಹಕ್ಕಂಟಿದ ಭಯಂಕರ ವ್ಯಾಧಿ ಕೋಟಲೆಗಳ ಉಗ್ರ ಯಾತನೆ: ನಿರ್ಗತಿಕಳಾದ ನೀಲಾಳ ಕರೆಗೆ! ಮೊರೆಗೆ "ಓ" ಗೊಡುವವರಾರೂ ಇರಲಿಲ್ಲ; ಏಳುತ್ತಾ ಬೀಳುತ್ತಾ ಸಾಗಿದ್ದ ನೀಲಾ ಮನದಲ್ಲಿ "ಯಮ ನಿರ್ಧಾರ"ಗೈದು ಮುಂದುವರಿಯುತ್ತಲೇ ಇದ್ದಳು—ಈ ಕ್ರೂರ ಜಗತ್ತಿನಿಂದ ಪಾರಾಗಲು ......!

ರಾತ್ರಿಯ ಗಂಭೀರ ಸ್ಮಶಾನ ಮೌನದಲ್ಲಿ ಭೀಕರವಾಗಿ ಭೋರ್ಗರೆವ ಕಡಲ ತೆರೆಗಳನ್ನು ಕಂಡು ಒಮ್ಮೆ ನೀಲಾ ನಕ್ಕಳು; ಗಹಗಹಿಸಿ, ಪಿಶಾಚಿಯಂತೇ ನಕ್ಕಳು; ಕಾಲೆಳೆಯುತ್ತಾ ಮುಂದೆ ಮುಂದೆ ಸಾಗಿದ್ದ ನಿರ್ಭಾಗ್ಯಳನ್ನು ಸಮುದ್ರ ಸ್ವಾಗತಿಸಿ, ಘೋಷಿಸಿ ಶಾಂತವಾಯ್ತು.

ಚಂದ್ರಶೇಖರ ಆಜಾದ್

ಕಾರಿದರು ಸ್ವಾತಂತ್ರ್ಯ ವೀರನವ ರಕ್ತ
ಹಾರಿದರು ಹರಣ ತಾನಾಗ ಪರಬಕ್ತ
ಸಾಂದ್ರಗುಣವಂತ ಮೇಣ್ ಮಾಧೀರ ಮೂರ್ತಿ
ಚಂದ್ರಶೇಖರ ಪಡೆದ ಅಚಂದ್ರ ಕೀರ್ತಿ.

ಬರೆದವರು
ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆ ಪರಾರಿ, ಬೊಂಬಾಯಿ.



ಭಾರತದಲ್ಲಿ ಸತ್ತಾರೂಢವಾಗಿದ್ದ ಆಂಗ್ಲ ಸರಕಾರವನ್ನು ನಡುಗಿಸಿದಂತಹ ಯಾರಾದರೊಬ್ಬ ಕ್ರಾಂತಿಕಾರಿಯನ್ನು ನೆನೆಯುವುದಾದರೆ ಮೊತ್ತಮೊದಲು ನೆನಪಿಗೆ ಬರುವ ಹೆಸರು 'ಚಂದ್ರಶೇಖರ ಆಜಾದರದು'. ೧೯೨೫ರಲ್ಲಿ ನಡೆದ ಕಾಕೋರೀ ಷಡ್ಯಂತ್ರದ ಒಳಗೆ ಪರಾರಿಯಾದ ಇವರು ಸುಮಾರು ಆರು ವರ್ಷಗಳ ಕಾಲ ಉತ್ತರ ಭಾರತದ ವಿಭಿನ್ನ ಹಳ್ಳಿಪಟ್ಟಣಗಳಲ್ಲಿ ಪೋಲೀಸರೆಯರಿಗೇ ತಿರುಗುತ್ತಾ ತನ್ನ ಪಕ್ಷದ ಕೆಲಸವನ್ನು ಮಾಡಿದರು ಸಾವಿರಾರು ರೂಪಾಯಿಗಳನ್ನು ಬಹುಮಾನ ವೀಯುವುದಾಗಿ ಸರಕಾರ ಘೋಷಿಸಿತು ಪೋಲೀಸರಿಗೆ ತಲೆನೋವೆನಿಸುವಂತೆ ಮಾಡಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಕಟ್ಟಕೊನೆಗೆ ತನ್ನ ಒಬ್ಬ ದ್ರೋಹಿ ಸಂಗಡಿಗನ ವಿಶ್ವಾಸ ಘಾತಕ್ಕೆ ಬಲಿಯಾದ ಕಾರಣ ಇವರನ್ನು ಪೋಲೀಸರು ಗೊತ್ತು ಹಚ್ಚಿದರಾದರೂ, ಪೋಲೀಸರೊಡನೆಯೂ ಅತ್ಯಂತ ವೀರತನದಿಂದ ಕಾದಾಡಿ ಅವರು ಹುತಾತ್ಮರಾದರು. ಕೇವಲ ಭಾರತೀಯ ಕ್ರಾಂತಿಕಾರೀ ಇತಿಹಾಸದಲ್ಲಿ ಮಾತ್ರವಲ್ಲ ಅನ್ಯ ಅನೇಕ ದೇಶಗಳ ಏತದ್ ವಿಷಯಕ ಇತಿಹಾಸದಲ್ಲಿ ಕೂಡಾ ಒಬ್ಬ ಏಕಾಕಿ ಕ್ರಾಂತಿಕಾರೀ ಸೇನಾನಿ ಇಷ್ಟೊಂದು ಸುದೀರ್ಘ ಸಮಯದ ತನಕ ಇಷ್ಟು ದೊಡ್ಡ ವಿಶ್ವವ್ಯಾಪೀ ಸಾಮ್ರಾಜ್ಯದೊಡನೆ ಹೋರಾಡಿದ ಘಟನೆ ಪ್ರಾಯಶಃ ಅಲಭ್ಯವೆನ್ನಬಹುದು.

ದಿನ ರಾತ್ರಿಗಳ ವ್ಯತ್ಯಾಸವನ್ನು ಗಮನಿಸದೆ ತನ್ನ ಕಾರ್ಯಕ್ಕಾಗಿ ಚಂದ್ರಶೇಖರ್ ಆಜಾದ್ ಅವರು ತಿರುಗಾಡುತ್ತಲೇ ಇರುತ್ತಿದ್ದರು, ಒಂದು ದಿನ ಅವರು ನೆಲಗಡಲೆ ಮಾರುವವನ ವೇಷ ಧರಿಸಿಕೊಂಡು ಪೋಲೀಸು ಠಾಣೆಗೆ ನೆಲಗಡಲೆ ಮಾರಲು ಹೊರಟರು ಹೀಗೆ ನಾನಾ ವೇಷ ಧರಿಸಿ ಆಗಾಗ ಪೋಲೀಸ್ ಸ್ಟೇಶನಿಗೆ ಹೋಗಿ ಅವರ ರಹಸ್ಯಗಳನ್ನರಿತುಕೊಂಡು ಬರುವುದು ಇವರಿಗೆ ಸಾಮಾನ್ಯ ವಿಷಯವಾಗಿತ್ತು. ಅಂದೂ ಇವರು ಪೋಲೀಸು ಸ್ಟೇಶನಿಗೆ ಹೋದಾಗ ಅಲ್ಲಿ ಗೋಡೆಯ ಮೇಲೆ 'ಆಜಾದ'ನನ್ನು ಹಿಡಿದು ಕೊಟ್ಟವರಿಗೆ ಬಹುಮಾನವೀಯುವುದಾಗಿ ಸರಕಾರ ಸಾರಿದ್ದ ಘೋಷಣಾಪತ್ರ ಅಂಟಿಸಲಾಗಿತ್ತು. ಆಜಾದ್ ಆ ಗೋಡೆಯ ಬಳಿ ಹೋಗಿ ಗಟ್ಟಿಯಾಗಿ ಆ ಪೋಸ್ಟರನ್ನು ಓದತೊಡಗಿದರು. ಅಲ್ಲಿಯೇ ಒಬ್ಬ ಪೋಲೀಸ್—ಕಾನ್‌ಸ್ಟೇಬಲ್ ನಿಂತಿದ್ದ. ಲವನಿಗೇ ಓದಿಹೇಳುತ್ತಿರುವಂತೆ ಗಟ್ಟಿಯಾಗಿ ಆ ಪೋಸ್ಟರನ್ನು ಓದಿದ್ದ ಬಳಿಕ ಅವರು ಆ ಪೋಲೀಸಿನತ್ತ ತಿರುಗಿ—"ಅಲ್ಲಯ್ಯಾ, ಈ ಮನುಷ್ಯನನ್ನು ಹಿಡಿದುಕೊಡುತ್ತಿದ್ದರೆ ಒಳ್ಳೆಯದಿತ್ತು. ಇತ್ತೀಚೆಗೆ ನೆಲಗಡಲೆಯ ವ್ಯಾಪಾರದಲ್ಲೂ ಬಹಳ ನುಕ್ಸಾನು (ನಷ್ಟ) ಆಗಿದೆ, ಒಂದು ಲಾಭವಾದರೂ ಆಗುತಿತ್ತು" ಎಂದರಂತೆ

ಆಗ ಆ ಸಿಪಾಹಿ—"ಅದೇನೋ ಸರಿ, ಆದರೆ ಅವನೆಲ್ಲಿಯಾದರೂ ಗುಂಡು ಹಾರಿಸಿದರೇ?" ಎಂದನಂತೆ

ಆಗ ಆಜಾದ್ ನಗುತ್ತಾ ಅಂದರಂತೆ—"ಹೂಂ ಅದೂನೂ ನಿಜ ಅನ್ನಿ ಜಮಾದಾರ್ರೇ. ಇಲ್ಲದಿದ್ದರೆ ಪೋಲೀಸರು ಇಷ್ಟರ ತನಕ ಅವನನ್ನು ಬಿಡುತ್ತಿದ್ದರೇ?"

ಕಾನ್ಪುರದ ಪ್ರಮುಖ ಸಿ.ಐ.ಡಿ. ಅಧಿಕಾರಿಯೊಬ್ಬ ಅಜಾದರನ್ನು ಸೆರೆಹಿಡಿಯಲು ಬಹಳಷ್ಟು ಪ್ರಯತ್ನಪಡುತ್ತಲಿದ್ದ. ಅಜಾದರನ್ನು ಗುರುತಿಸಲೋಸುಗ ಆತ ಪ್ರಯಾಸಪಡುತ್ತಿದ್ದ' ಈ ಸುದ್ದಿ ಅಜಾದರಿಗೆ ತಿಳಿಯುತ್ತಲೇ ಅವರು ಒಂದು ರಾತ್ರಿ ಆ ಅಧಿಕಾರಿಯ ಮನೆಗೆ ಹೋದರಂತೆ. ಸಂಯೋಗವಶಾತ್ ಆ ಅಧಿಕಾರಿ ಮನೆಯಲ್ಲಿರಲಿಲ್ಲ ಇವರು ಅಜಾದರೇ ಇರಬೇಕೆಂದು ಸಂದೇಹಿಸಿದ ಆ ಅಧಿಕಾರಿಯ ಪತಿಪರಾಯಣೆ ಹೆಂಡತಿ 'ಅಜಾದ'ರ ಎದುರು ಕೈಜೋಡಿಸಿ ತನ್ನ ಪತಿಯ ಪ್ರಾಣಭಿಕ್ಷೆಯನ್ನು ಬೇಡಿದಳಂತೆ. ದಯಾಳು ಅಜಾದ್ 'ಆಗಲಿ, ನಿನ್ನ ಪತಿಯನ್ನು ನಾನು ಕೊಲ್ಲುವುದಿಲ್ಲ' ಎಂದಾಕೆಗೆ ವಚನವಿತ್ತು ಹಿಂತಿರುಗಿ ಬಂದರಂತೆ.

ಅಜಾದರ ನೇತೃತ್ವದಲ್ಲಿ ಕ್ರಾಂತಿಕಾರಿಗಳು, ಲಾಹೋರದಲ್ಲಿ ಸಹಾಯಕ ಪೋಲೀಸ್ ಕಪ್ತಾನ್ ಸೇಂಡರ್ಸನನ್ನು ಗುಂಡಿಕ್ಕಿ ಕೊಂದು ಲಾಲಾ ಲಜಪತರಾಯರ ಸಾವಿನ ಸೇಡು ತೀರಿಸಿಕೊಂಡಾಗ ಸಹಜ

(ಎಪ್ಪತ್ತೇಳನೇ ಪುಟ ನೋಡಿರಿ)

ಲೇಖಕರು

ನವೀನತೆಯ ಸೊಗಸು

ವರುಷ ವರುಷಕೆ ಬಿಡದೆ ಬರುವ ದೀವಳಿಗೆ
ಮರುಕೊಳಿಸಿದರು ಇಲ್ಲಿ ಮನಕೆ ಬೇಸರಿಗೆ
ಇರುಳಲಿ ಮನೆ ಬೆಳಗು ಕೊಡುವ ಬಲು ಶಿಸಿಲು
ತರುತಲಿದೆ ಜನಗಣಕೆ ನಾವೀನ್ಯ ಸೊಗಸು ||

ಬರೆದವರು
ಶ್ರೀ ಮೂಡರಬೆಟ್ಟು ರಂಗ ರಾವ್.

ಒಂದು ಹೊಸ ಬಗೆಯ ಆಟದ ಬೊಂಬೆಯನ್ನು ನೋಡಿದ ಕೂಡಲೇ ಮಗುವಿನ ಮುಖವಿಡೀ ನಗುವಿನಿಂದ ಮಯವಾಗುತ್ತದೆ. ಆ ದಿನ ಆ ಬೊಂಬೆಯೊಂದಿದ್ದರೆ ಆಯಿತು ಅದಕ್ಕೆ, ಊಟ ಬೇಡ, ನಿದ್ದೆ ಬೇಡ. ಆದರೆ ಮರುದಿನ ಆ ಉತ್ಸಾಹವಿರುವುದಿಲ್ಲ. ಮತ್ತೆ ಮೂರೆರಡು ನಾಳೆಗಳು ಕಳೆಯುತ್ತಲೇ ಆ ಬೊಂಬೆ ಯಾವ ಮೂಲೆಯಲ್ಲಿಯೋ ಕಸದ ಕುಪ್ಪೆಯಲ್ಲಿಯೋ!

ಮಗುವಿನ ಮನಸ್ಸು ಇನ್ನೊಂದು ಹೊಸತಿನ ಮೇಲೆ ಹರಿದಾಡುತ್ತಿರುತ್ತದೆ. ಆ ಮಗುಗಳೇ ದೊಡ್ಡವರಾಗಿ ನಮ್ಮ ನಿಮ್ಮ ಹಾಗೆ ಆದಾಗ ಮಾತ್ರ ಏನಂತೆ? ಏನೋ ಒಂದು ಹೊಸತನ್ನರಸುವುದೇ ಜೀವವರ ಮುಖ್ಯ ಆಕಾಂಕ್ಷೆಯಲ್ಲವೆ? ದಿನಾ ನೋಡಿದ್ದನ್ನೇ ನೋಡುತ್ತ, ಮಾಡಿದ್ದನ್ನೆ ಮಾಡುತ್ತ, ತಿಂದದ್ದನ್ನೇ ತಿನ್ನುತ್ತ ಇದ್ದರೆ ಸ್ವಾರಸ್ಯವಿರುವುದಿಲ್ಲ. ನಿಜ. ಆದರೆ ನವನಿಗೆ ಕಾಣುವುದೇನು? ದಿನಾ ಒಂದೇ ಬಗೆಯ ಸೂರ್ಯನೇ ಉದಿಸುತ್ತಾನೆ. ಒಂದೇ ಬಗೆಯ ಗಾಳಿ, ಒಂದೇ ಬಗೆಯ ನೀರು, ಒಂದೇ ಬಗೆಯ ಭೂಮಿ- ಹೀಗೆ ಅಸಲು ಮೂಲದಲ್ಲೇ ಒಂದೇ ಬಗೆಯದಿದ್ದು, ಕೇವಲ ಅನಸ್ವಾರಸ್ಯವೇ ಕಾಣಿಸುತ್ತಿದ್ದರೆ ಲೋಕವೆಂಬೋ ಅಳಿದು ಹೋಗುತ್ತಿತ್ತಲ್ಲ! ಹಾಗಾಗಿಲ್ಲವೇಕೆ?

ಇಂದಿನ ಮೇಲೆ 'ನಾಳೆ' ಬರುವುದು ಅನಿವಾರ್ಯ; ಅದಕ್ಕಾಗಿ ಚಿಂತಿಸಿ ಫಲವೇನು? ಹುಟ್ಟಿದವ ಒಂದು ದಿನ ಸಾಯುವುದು ನಿಶ್ಚಯ, ಅದಕ್ಕಾಗಿ ದಿನಾ ಅಳಬೇಕೆ? ಹೀಗಿರುವುದು ಅವಿವೇಕವೆಂಬ ಜ್ಞಾನದಿಂದ ಮಾನವರು ಪ್ರತಿ ಹೊಸ ದಿನವನ್ನೂ ಉತ್ಸಾಹದಿಂದ ಸ್ವಾಗತಿಸುವರೆಂಬರ್ಥವೆ? ಅದೂ ಅಲ್ಲ; ಇಂತಹ ಉತ್ಸಾಹವು ಬಲವಂತದ ಉತ್ಸಾಹವಾಗಿರುತಿತ್ತು. ಹಾಗಾದರೆ ಮತ್ತೇನೆನ್ನುವಿರಾ?

ಅಸಲು ಪ್ರಕೃತಿಯಲ್ಲೇ ಹೊಸತನಗಳುಂಟಾಗುವ ಏರ್ಪಾಡುಗಳಿರುವುದನ್ನು ಮೊದಲು ನೋಡಿ, ಅದಕ್ಕೆ ವಂದಿಸೋಣ. ದಿನಾ ಒಂದೇ ಸೂರ್ಯನು ಬೆಳಗಿದರೂ ಅವನ ಆಸನ ಸ್ವರೂಪಿಗಳಾದ ಮೇಘಮಂಡಲಗಳು ಹೊಸ ಹೊಸ ಆಕೃತಿಗಳಿಂದಲೂ, ಹೊಸಹೊಸ ವರ್ಣಮಿಶ್ರಣಗಳಿಂದಲೂ ದಿನಗಳನ್ನು ನಾವೀನ್ಯಗೊಳಿಸುವುದನ್ನು ನೋಡಿದಿರಾ? ಗಾಳಿಯೂ ಒಮ್ಮೆ ಜೋರು, ಒಮ್ಮೆ ಮಂದ. ಒಮ್ಮೆ ಸ್ತಬ್ಧ, ಒಮ್ಮೆ ರಭಸ. ಒಮ್ಮೆ ಉಷ್ಣ, ಒಮ್ಮೆ ತಂಪು ಹೀಗೆ ನಮಗೆ ನವೀನತೆಯನ್ನೊದಗಿಸುತ್ತಿರುತ್ತದೆ. ಋತುಭೇದಗಳಿಗೆ ತಕ್ಕ ಹಾಗೆ ನೆಲವೂ ನವನವೀನತೆಗಳನ್ನು ಪ್ರದರ್ಶನ ಮಾಡುತ್ತದೆ.

ಇಂತಹ ಪ್ರಕೃತಿಯಲ್ಲಿ ಬೆರೆತಿರುವುದರಿಂದಲೇ ನಮ್ಮ ಉತ್ಸಾಹದ ಬುನಾದಿ ಭದ್ರವಾಯಿತು. ಆದರ ಮೇಲೆ ಮನುಷ್ಯರು ಆಶಾವಾದಿಗಳಾಗಿದ್ದಾರಲ್ಲ! ಇಂತಹ ಆಶಾವಾದಿತ್ವವು ಸಾಯದಂತೆ ನೋಡಿಕೊಳ್ಳುವವಳೇ ಪ್ರಕೃತಿ ಮಾತೆಯಾದ ರಾತ್ರಿದೇವಿ. ಅವಳು ಪ್ರತಿರಾತ್ರಿಯೂ ಮಾನವರನ್ನು ಕೊಂದುಬಿಡುತ್ತಾಳೆ ಆಗ ಮರುದಿನವು ಹೊಚ್ಚ ಹೊಸತಾಗಿ ಕಾಣಿಸುತ್ತದೆ; ಆಶಾವಾದಿತ್ವ ಚಿಗುರುತ್ತಾ ಇರುತ್ತದೆ.

ಆದರೆ ಹಗಲೂ ರಾತ್ರಿಯೂ ನಿದ್ರೆ ಮಾಡುವವರಿಗೂ, ಕೆಲಸ ಮಾಡದೆಯುಂಡಾಗಿರುವ ಉದಾಸೀನದವರಿಗೂ, ರಾತ್ರಿಯಲ್ಲಿ ಬಲವಂತದಿಂದ ಜಾಗರಣೆ ಮಾಡುವವರಿಗೂ ಯಾವುದೊಂದು ನವ್ಯತೆಯೂ ಕಾಣಲಾರದು. ಅಂತಹ ಪ್ರಕೃತಿ ವಿರೋಧಕರಿಗೆ ತಲೆಯ ಮೇಲೆಯೂ, ಕಾಲ ಕೆಳಗೂ ಸ್ವತಃ ತಮ್ಮ ದೇಹವು ಭಾರವಾಗಿ ಪರಿಣಮಿಸುತ್ತದೆ.

ಹೀಗೆ ಪ್ರಕೃತಿದತ್ತವಾದ ಶರೀರದ ಜತೆಯಲ್ಲಿ ಇನ್ನೂ ಅನೇಕ ನವೀನತಾ ಮಾರ್ಗಗಳನ್ನು ಕರ್ತವ್ಯನಿಷ್ಠ ಕರ್ಮಶೀಲ ಮಾನವರು ತಮ್ಮ ಯೋಚನೆಯ ಬಲದಿಂದ ಕಲ್ಪಿಸಿಕೊಂಡಿರುತ್ತಾರೆ.

ಅನ್ನವೇನೋ ಪ್ರಾಣಕ್ಕೆ ಆಧಾರವಾದುದು, ಆದರೆ ರುಚಿಯಿಲ್ಲದುದು, ಸಪ್ಪೆ. ಅದಕ್ಕೆ ಒಂದೊಂದು ದಿನ ಒಂದೊಂದು ಬಗೆಯ ಮೇಲೋಗರಗಳನ್ನು ಯೋಜಿಸಿಕೊಂಡು ರುಚಿಯ ವೈವಿಧ್ಯಗಳೊಂದಿಗೆ ಉತ್ಸಾಹದಿಂದ ಊಟ ಮಾಡುತ್ತಾನೆ ಮನುಷ್ಯ. ಹಾಗೆಯೇ ಇತರ ಕಾರ್ಯಗಳಲ್ಲಿಯೂ ತನ್ನ ಯೋಚನಾ ಶಕ್ತಿಯನ್ನು ಹರಿಯಿಸಿ ಹೊಸ ಹೊಸ ಕಾರ್ಯಕ್ರಮಗಳಿಂದ ಸ್ವಾರಸ್ಯಗೊಳಿಸಿಕೊಳ್ಳುತ್ತಾನೆ. ದಿನಾ ಉದಿಸುವ ಸೂರ್ಯ, ದಿನಾ ಬೀಸುವ ಗಾಳಿ, ದಿನಾ ಕಾಣುವ ಆಕಾಶ, ದಿನಾ ತುಳಿಯುವ ಬೀದಿ, ದಿನಾ ವಾಸಿಸುವ ಮನೆ ಹೀಗೆ ಎಲ್ಲದರಲ್ಲೂ ಹೊಸತನವನ್ನು ಬರಿಸಿಕೊಂಡು ಉತ್ಸಾಹದಿಂದ ಬಾಳುವೆ ಸಾಗಿಸುವುದೇ ಮನುಷ್ಯರದೊಂದು ವೈಶಿಷ್ಟ್ಯವಾಗಿದೆ.

ಈ ಬಗೆಯ ದಿನಚರಿಗಳಲ್ಲಿಯೂ ಬೇಸರ ಗೀಸರ ಬಂದು ನಿಂತರೆ, ಅವುಗಳನ್ನು ಹಾರಿಸಿಕೊಳ್ಳಲಿಕ್ಕಾಗಿಯೇ ಹಬ್ಬ ಹರಿದಿನಗಳನ್ನು ಅಳವಡಿಸಿಟ್ಟಿದ್ದಾರೆ ಸೂರ್ವಿಕರು ಎಂದಿನಿಂದಲೋ! ಅದೂ ಕಾಲದಿಂದರೆ ಮುಂಜಿ,ಉಪನಯನ,'ನಾಸಿಕಾ ಭೇಧನ, ಕರ್ಣಧಾರಣ, ಮದುವೆ ಹೀಗೆ ಷೋಡಶ ಮತ ಸಂಸ್ಕಾರಗಳುಂಟು; ದೈವಿಕ ಸಂಬಂಧವಾದ ಪೂಜೆ, ನಮಸ್ಕಾರಗಳುಂಟು; ಉತ್ಸವಗಳುಂಟು; ಹುಟ್ಟು ಹಬ್ಬಗಳುಂಟು, ಇನ್ನೂ ಅನೇಕ ಬಗೆಯ ಆಟ, ನೋಟ, ವಿನೋದಗಳುಂಟು. ಈ ಬಗೆಯ ಎಲ್ಲಾ ಉತ್ಸಾಹದಾಯಕ ಸಾಧನಗಳನ್ನು ಮೇಳವಿಸಿಕೊಂಡು ವರುಷಕ್ಕೊಮ್ಮೆ ಬರುವಂತಹುದು ಈ ದೀಪಾವಳಿ. ದೊಡ್ಡ ಹಬ್ಬ.

ಹೌದು. ಹಬ್ಬಗಳಲ್ಲಿ ದೀಪಾವಳಿಗಿರುವಷ್ಟು ಮಹತ್ವವು ಬೇರೆ ಹಬ್ಬಗಳಿಗಿಲ್ಲವೆಂದೂ ಹೇಳಬಹುದು ಹಾಗಂತ ಬೇರೆ ಹಬ್ಬಗಳನ್ನು ಕೀಳುಗಳೆದಂತಾಯಿತೆಂದು ತಿಳಿದು ಬಿಡಬೇಡಿ. ಎಲ್ಲ ಹಬ್ಬಗಳಲ್ಲಿಯೂ ಒಂದೊಂದು ವಿಶೇಷವಿದ್ದೇಯಿದೆ. "ನಗುತ್ತಾ ಬಂತು ನಾಗರ ಪಂಚಮಿ, ಅಳುತ್ತಾ ಹೋಯ್ತು ದೀಪಾವಳಿ" ಎಂಬ ನಾಮತಿ ನೀವು ಕೇಳಿಬಹುದು. ನಾಗರ ಪಂಚಮಿ ಬರಲು ಪ್ರಾರಂಭವಾದ ಮೇಲೆ, ಅಷ್ಟಮಿ, ಚೌತಿ, ನವರಾತ್ರಿಗಳಂತ ಮುಖ್ಯ ಹಬ್ಬಗಳೂ, ವರಮಹಾಲಕ್ಷ್ಮಿ, ಅನಂತವ್ರತ, ಮಹಾಲಯ ಅಮಾವಾಸ್ಯೆಗಳಂತಹ ಪುಣ್ಯತಿಥಿಯ ಹಬ್ಬಗಳೂ ಬಂದು ಬಂದು, ಅದಕ್ಕೆ ಸಂಬಂಧಿಸಿದ ಬೇರೆ ಬೇರೆ ವಿಭಾಗದವರನ್ನು ನಲಿಸಿ ನಗಿಸಿ ಹೋದಾಗ, ಎಲ್ಲ ವಿಭಾಗದ ಜನತೆಯನ್ನೂ ಆಕ್ರಮಿಸಿಕೊಂಡು ಕೋಲಾಹಲಿಸಿಕೊಂಡು ಹೋಗುತ್ತದೆ ದೀಪಾವಳಿ. ಅಲ್ಲಿಗೆ ಪರ್ವಕಾಲ ಮುಗಿದ ಹಾಗಾಗುತ್ತದೆ. ನೆಂಟರಿಷ್ಟರಿಂದ ತುಂಬಿದ ಮನೆ ಥಕ್ಕನೆ ಖಾಲಿಯಾದ ಹಾಗಾಗುತ್ತದೆ. ಅದಕ್ಕೇ ಅಂತ ಕಾಣುತ್ತದೆ. ದೀಪಾವಳಿಯನ್ನು 'ದಿವಾಳಿ' ಎಂತಲೂ ಹೇಳುವುದುಂಟು. ಹಬ್ಬಗಳನ್ನೆಲ್ಲ ದಿವಾಳಿ ತೆಗೆಸುವ ಈ ಹಬ್ಬಕ್ಕೆ ಇದೂ ಒಂದು ಸಾರ್ಥಕವಾದ ಹೆಸರೇ ಸರಿ.

ಹಬ್ಬಗಳ ಗುಂಪಿನಲ್ಲಿ ದೀಪಾವಳಿ ಕಡೆಯ ಹಬ್ಬವಾದುದರಿಂದ ಇದರಲ್ಲೊಂದು ವಿಶೇಷ ಅಕ್ಕರೆ, ವಿಶೇಷ ಹಿರಿಮೆ ಇರುವುದೂ ಸಹಜವೇ. ಕನ್ನಡ ಜಿಲ್ಲೆಯಲ್ಲಿ ಇದು ಉತ್ಥಾನ ದ್ವಾದಶಿಯ ವರೆಗೆ, ಸುಮಾರು ೧೫ ದಿನಗಳ ವರೆಗೆ ಸಾಗುವ ಹಬ್ಬ! ಆ ಮೇಲೆ ಬರುವ "ಪೊಂಗಲ್" "ಮಕರ ಸಂಕ್ರಮಣ", "ಶಿವರಾತ್ರಿ"ಗಳು ದೀಪಾವಳಿಗಿಂತ ಸಣ್ಣವೆನಿಸಿವೆ. ದೀಪಾವಳಿ ಭಾರತ ದೇಶದೊಳಗೆಲ್ಲಾ, ಒಂದೊಂದು ವಿಧವಾಗಿ ಆಚರಿಸಲ್ಪಡುವ ಸಾರ್ವಜನಿಕ ಹಬ್ಬ.

ದೀಪಾವಳಿ ಹಬ್ಬವನ್ನು ಬೇರೆ ಬೇರೆ ಪ್ರಾಂತದವರು ಬೇರೆ ಬೇರೆ ವಿಧವಾಗಿ ಆಚರಿಸಿದರೂ ಎಲ್ಲರಿಗೂ ವಿವಿಧವಾದ ಉತ್ಸಾಹಗಳು ಇದರಲ್ಲಿ ಎಡೆಯುಂಟು. ಮೊತ್ತ ಮೊದಲು ಮಕ್ಕಳು ತಾನೇ ಮಾನವರ ಆನಂದಕ್ಕಿರುವ ಜೀವಂತ ಬೊಂಬೆಗಳು? ಮಕ್ಕಳ ಆನಂದವೇ ದೊಡ್ಡವರ ಆನಂದವೆಂಬುದನ್ನು ಅಲ್ಲೆಂಬವರುಂಟೆ? ಅಂತಹ ಮಕ್ಕಳಿಗೆಲ್ಲ ಉತ್ಸಾಹದಾಯಕವಾದ ಪಟಾಕಿ ಹೂಬಾಣಗಳಿಗೆ ಅವಕಾಶವಿರುವ ಹಬ್ಬವಿದು. ಎಂತಹ ಬಡವರಾದರೂ ನಾಲ್ಕು ಪಟಾಕಿಗಳನ್ನಾದರೂ ಕೊಂಡುಕೊಳ್ಳದಿರುವುದಿಲ್ಲ. ರುಚಿರುಚಿಯಾದ ತಿಂಡಿಗಳಿಗೂ ಅವಕಾಶವಿದೆ, ಇವುಗಳಿಂದ ಪ್ರಭಾವಿತರಾಗುವ ಮಕ್ಕಳು ದೀಪಾವಳಿ ಪ್ರವೇಶಿಸುವುದಕ್ಕೆ ಒಂದು ತಿಂಗಳಿರುವಾಗಲೇ ಉತ್ಸಾಹದಿಂದ ನಲಿದಾಡುವಾಗ ಹಿರಿಯರಿಗೆ ಆನಂದವಾಗುವುದರಲ್ಲಿ ಏನಾಶ್ಚರ್ಯ? ಮಕ್ಕಳಿಗೆ ಇಷ್ಟು ಮಹತ್ವ ಕೊಟ್ಟಿರುವ ಹಬ್ಬವು ಬೇರೆ ಯಾವುದಾದರೂ ಉಂಟೆ?

ಪರಮ ದರಿದ್ರರಾದವರಿಗೆ ಕೂಡ ಈ ಹಬ್ಬವು ಬಡಕಲೆನಿಸುವುದಿಲ್ಲ. ಹಣ ಖರ್ಚು ಮಾಡಿ ಹಬ್ಬದಾನಂದವನ್ನು ಪಡೆಯಲವಕಾಶವಿಲ್ಲದ ಇವರಿಗೆ, ಇವರ ಆಶ್ರಯದಾತೃಗಳ ಮೂಲಕವಾಗಿ ಇವರನ್ನೂ ಆನಂದಪಡಿಸಲೆತ್ನಿಸುವ ಹಬ್ಬವಿದು ದೊಡ್ಡವರು ಕಿರಿಯರಿಗೂ ಬಡವರಿಗೂ, ಕೆಲಸದಾಳು ಹೋಳುಗಳಿಗೂ ಹೊಸ ಬಟ್ಟೆ, ಹಣ ಮುಂತಾದ ಬಹುಮಾನ ಕೊಟ್ಟು ಆದರಿಸಬೇಕೆಂದು ಈ ಹಬ್ಬ ವಿಧಿಸುತ್ತದೆ. ದೊಡ್ಡ ದೊಡ್ಡ ಸಂಘ ಸಂಸ್ಥೆ ಆಫೀಸುಗಳ ಮೇಲೆ ಕೂಡ ಈ ಹಬ್ಬದ ಆ ಅಧಿಕಾರವುಂಟು. "ದೀಪಾವಳಿ ಇನಾಮು" "ದೀಪಾವಳಿ ಬೋನಸ್" ಎಂಬ ಮಾತು ಈ ಹಬ್ಬದೊಂದಿಗೆ ಸೋಣಿಸಿಕೊಂಡದ್ದು, ಬಡವರನ್ನು ಕೂಡ ಈ ಹಬ್ಬ ಸಮೀಪದಿಂದ ನೋಡುತ್ತದೆನ್ನಲು ಸಾಕ್ಷಿಯಾಗಿದೆ.

ಯುವಕ ಯುವತಿಯರಿಗೆ, ಈ ಹಬ್ಬದ ವೈಶಿಷ್ಟ್ಯವೇ ಬೇರೆ. ಅವರಿಗೆ ಅದೊಂದು ಅನಿರ್ವಾಚ್ಯ ಆನಂದದಾಯಕವಾದುದು. ಮನಸ್ಯ ಜನ್ಮದಲ್ಲಿ ಮದುವೆಗಿಂತ ಮೇಲಿನ ಪರ್ವಕಾಲವಿಲ್ಲವಷ್ಟೆ? ಅದಕ್ಕೂ ದೀಪಾವಳಿಗೂ ಸಂಬಂಧವಿರುವುದರಿಂದ, ದೀಪಾವಳಿಗೊಂದು ಪ್ರತ್ಯೇಕ ಮಹತ್ವ ಬಂತು. ಹೊಸ ಮದುಮಕ್ಕಳಿಗೆಲ್ಲ ಮೊದಲನೆ ದೀಪಾವಳಿಯೆಂದು ಆದೊಂದು ಪ್ರತ್ಯೇಕ ದೀಪಾವಳಿಯೇ. 'ಅಳಿಯ ದೇವರು' ಬರುವ ಹಬ್ಬ. ಹೀಗೊಂದು ಸಂಬಂಧವಿಲ್ಲದಿರುತ್ತಿದ್ದರೆ, ಪ್ರತಿ ವರ್ಷವೂ ಬರುವ ದೀಪಾವಳಿ ಸಪ್ಪೆಯಾಗಿ ಬಿಡುತಿತ್ತು, ಹಿಂದೆ ಬಂದಂತೆಯೇ

(ಇಪ್ಪತ್ತೆರಡನೇ ಪುಟ ನೋಡಿರಿ)

ಭರ್ತೃಹರಿ - ಆತನ ಸುಭಾಷಿತಗಳು

ಜನಪದಕೆ ಅತಿಸರಳವಾಗಿ ನೀತಿಯನು
ಮನಮುಟ್ಟಿ ಬರೆದಿಹನು ಕವಿ ಭರ್ತೃಹರಿಯು
ಈ ಸುಭಾಷಿತದ ಬಲ ಪರಿಜ್ಞಾನ ಜನಕೆ
ಈಸುವರೆ ಬೇಕು ಭವಸಾಗರದ ದಡಕೆ ‖

ಬರೆದವರು

ಶ್ರೀ ಯು. ನಾ. ಉಡುಪ, ವಿದ್ವಾನ್, ಕೋಟೇಶ್ವರ.

ಭಾರತೀಯ ಸಂಸ್ಕೃತಿಯಲ್ಲೇ ಸುಭಾಷಿತಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಇವು ಮೊದಲು ಸ್ತೋತ್ರಪ್ರಾರ್ಥನೆಗಳಿಂದ ಆರಂಭಿಸಿ ಮುಂದೆ ನೀತಿನಿಯಮಗಳ ಕಡೆಗೆ ಹೊರಳಿದುವು. ವೈದಿಕ ಸಂಸ್ಕೃತಿಯೆಲ್ಲಾ ಸುಭಾಷಿತಗಳೇ. ವೇದವೇದಾಂತಗಳು ಬೋಧಿಸುವುದೂ ಇದನ್ನೇ. ಸ್ಮೃತಿ ಪುರಾಣಗಳು ಹೇಳುವುದೂ ಇದನ್ನೇ, ಶ್ರೀ ಶಂಕರ, ಮಧ್ವ, ರಾಮಾನುಜರು ಘೋಷಿಸಿದುದೂ ಇದನ್ನೇ. ಆದರೆ ಪ್ರತಿಯೊಂದು ಸಂಪ್ರದಾಯದವನೂ ಹೇಳಿದ ಮಾರ್ಗದಲ್ಲಿ ಭಿನ್ನತೆ ಇದೆ. ವೇದೋಪನಿಷತ್ತುಗಳು ಪ್ರಭುಸಮ್ಮಿತ ಮಾರ್ಗವನ್ನು ಹಿಡಿದಿವೆ. ಪುರಾಣೇತಿಹಾಸಗಳು ಮಿತ್ರಸಮ್ಮಿತ ಪಂಥವನ್ನು ಆಹ್ವಾನಿಸಿವೆ. ಕಾವ್ಯನಾಟಕಗಳು ಕಾಂತಾಸಮ್ಮಿತ ಮಾರ್ಗದಲ್ಲಿ ಸುಭಾಷಿತಗಳನ್ನು ಉಪದೇಶಿಸುತ್ತಿವೆ. ಅಂದರೆ, ಎಲ್ಲರ ಧ್ಯೇಯಗಳೂ ಒಂದೇ. 'ನಹಿ ಕಲ್ಯಾಣ ಕೃತ್ ಕಶ್ಚಿದ್ದುರ್ಗತಿಂ ತಾತಗಚ್ಛತಿ' ಕಲ್ಯಾಣ ಕಾರ್ಯಗಳನ್ನು ಮಾಡುವವರಾರೂ ಅಧೋಗತಿಯನ್ನು ಹೊಂದುವುದಿಲ್ಲ. ಈಶ್ವರ ಸಂಕಲ್ಪಾನುಸಾರ ನಡೆಯುವುದೂ, ಸತ್ಯವೂ ಸೇವರು. 'ಋತಂ ಸತ್ಯಂ ಪರಂಬ್ರಹ್ಮ' 'ಸತ್ಯಮೇವಜಯತೇ ನಾನೃತಂ' 'ಸತ್ಯಂ ವದ, ಧರ್ಮಂ ಚರ' ದಾಟಿ ಹೋಗುವುದಕ್ಕೆ ಕಷ್ಟಗಳಾದ ದುರ್ಗಗಗಳನ್ನು ಸರ್ವರೂ ದಾಟುವವರಾಗಲಿ! ಮಂಗಳ ವಸ್ತುಗಳನ್ನು ಸರ್ವರೂ ನೋಡುವವರಾಗಲಿ! ಸರ್ವರೂ ಸೌಖ್ಯವನ್ನು ಪಡೆಯಲಿ! ಸರ್ವರೂ ಸರ್ವಸ್ಥಳಗಳಲ್ಲೂ ನಲಿದಾಡಲಿ! 'ಸರ್ವಸ್ತರತು ದುರ್ಗಾಣಿ, ಸರ್ವೋ ಭದ್ರಾಣಿ ಪಶ್ಯತು, ಸರ್ವಸ್ಸುಖಮವಾಪ್ನೋತು, ಸರ್ವಸ್ಸರ್ವತ್ರನಂದತು' 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' "ಜೈಹಿಂದ್" "ಜಯಕರ್ನಾಟಕ"—ಇವೆಲ್ಲಾ ಸುಭಾಷಿತಗಳೇ.

ಭಾರತ ಸಂಸ್ಕೃತಿಯು ಅಜರಾಮರವಾದುದು ಸುಭಾಷಿತಗಳಿಂದಲೇ. ಈ ಸಂಸ್ಕೃತಿಯಿಂದ ಸುಭಾಷಿತಗಳನ್ನು ಕಿತ್ತೀ ನಾಶ ಮಾಡಿದಂದೇ ಭಾರತ ಸಂಸ್ಕೃತಿಯು ಹೇಳಹೆಸರಿಲ್ಲದೆ ಹೋಗುವುದು. ನಶ್ವರ ವಿಶ್ವದಲ್ಲಿ ಸುಭಾಷಿತಗಳು-ನೀತಿಧರ್ಮಗಳು ಮಾತ್ರ ಅವಿನಶ್ವರಗಳು. ಇತ್ತ ಮಾನವನಿಗೆ ಜನ್ಮ ಸಾರ್ಥಕಗೊಳಿಸಲು ಬೋಧಿಸುವುವು, ಇವು ಮನುಷ್ಯರ ಅನುಭವದ ವಿಷಯಗಳು. ಇವನ್ನು ಆಚಾರಕ್ಕೆ ತಂದುಕೊಂಡ ಮಾನವನು ಸುಖಿಯಾಗುವನು.

ಸಂಸ್ಕೃತ ಸಾಹಿತ್ಯದಲ್ಲಿ ಸುಭಾಷಿತ ಗ್ರಂಥಗಳೆಲ್ಲಾ ಲಘು ಕಾವ್ಯಗಳ ವರ್ಗಕ್ಕೆ ಸೇರುತ್ತವೆ. ಇವುಗಳಲ್ಲಿ ಹೆಚ್ಚಿನವುಗಳೆಲ್ಲಾ ಶತಕಗಳು. ಇನ್ನುಳಿದವನ್ನು ನೀತಿಸಾರ, ನೀತಿರತ್ನ, ನೀತಿಪ್ರದೀಪನೇ ಮೊದಲಾದ ಹೆಸರಿನಿಂದ ಕರೆಯುತ್ತಾರೆ. ಶತಕಗಳಲ್ಲಿ ನೂರಕ್ಕೆ ಕಡಿಮೆ ಇಲ್ಲದಷ್ಟು ಶ್ಲೋಕ-ಪದ್ಯಗಳಿರಬೇಕೆಂಬ ನಿಯಮವಿದೆ. ಈ ವರ್ಗದ ಸಂಸ್ಕೃತ ಸಾಹಿತ್ಯದಲ್ಲೇ ಭರ್ತೃಹರಿಯು ಅಗ್ರೇಸರನು. ಇವನ ಸುಭಾಷಿತಗಳು ತುಂಬಾ ಜನಪ್ರಿಯವಾದುವು. ಬಾಣನ ಮಾವನಾದ ಮಯೂರ ಕವಿಯ ಸೂರ್ಯಶತಕ, ಶ್ರೀ ಶಂಕರಾಚಾರ್ಯರು ಅಮರುಕನೆಂಬ ಕಾಶ್ಮೀರ ರಾಜನ ದೇಹದಲ್ಲಿ ಪರಕಾಯ ಪ್ರವೇಶ ಮಾಡಿ ಸರಸ್ವತಿಯ ಸಮಸ್ಯೆಗೆ ಉತ್ತರವಾಗಿ ಬರೆದ ಅಮರುಕಶತಕ, ಬಾಣನ ಚಂಡೀಶತಕ, ಆನಂದವರ್ಧನನ ದೇವೀ ಶತಕ, ವರರುಚಿಮೇ ಕಾಳಭಟ್ಟರ ಸುಭಾಷಿತಗಳು—ಇವುಗಳಲ್ಲೊಂದೂ ಭರ್ತೃಹರಿಯ ಶತಕಗಳಷ್ಟು ಪ್ರಸಿದ್ಧವಾಗಿಲ್ಲ. ಸಂಸ್ಕೃತ ಸಾಹಿತ್ಯದಲ್ಲಿ ತಲೆಮಾತ್ರ ಹಾಕಿದ ವಿದ್ಯಾರ್ಥಿಗೂ ಭರ್ತೃಹರಿಯ ಶ್ಲೋಕದ ಪರಿಚಯವಿದೆ. ಸಾರಾಂಶ—ಭರ್ತೃಹರಿ ಮಹಾ ಕವಿಯು ಸಂಸ್ಕೃತ ಸಾಹಿತ್ಯವನ್ನು ಬೆಳಗಿಸಿದ ಕವಿಗಳಲ್ಲೊಬ್ಬ.

ಭರ್ತೃಹರಿಯು ಬೌದ್ಧಮತೀಯನೆಂದೂ, ಇವನು ಕ್ರಿ. ಶ. ೬೫೦ರಲ್ಲಿ ದಿವಂಗತನಾದನೆಂದೂ ಇತ್ಸಿಂಗನೆಂಬ ಪ್ರವಾಸಿ ಹೇಳಿದ್ದಾನೆ. ಆದರೆ ಇವನು ಸುಭಾಷಿತಕಾರನಾದ ಭರ್ತೃಹರಿಯಾಗಿರಲಿಕ್ಕಿಲ್ಲ. ಈ ಸುಭಾಷಿತಕಾರನೊಬ್ಬ ರಾಜನೆಂದೂ ವದಂತಿ ಇದೆ. ಇವನು ಮೊದಲು ಗೃಹಸ್ಥಾಶ್ರಮಿಯಾಗಿದ್ದು ಆ ಮೇಲೆ ಸನ್ಯಾಸ ಸ್ವೀಕರಿಸಿದನೆಂದೂ, ಸನ್ಯಾಸಿಯಾದ ಮೇಲೆ ಪುನಃ ಗೃಹಸ್ಥಾಶ್ರಮಿಯಾದನೆಂದೂ ಹೇಳುತ್ತಾರೆ. ಕಾಳಿದಾಸನಂತೆ ಭರ್ತೃಹರಿಯೂ ಹಲವು ಕಲ್ಪನಾ ಕಥೆಗಳಿಗೆ ಕಾರಣ ಪುರುಷನಾಗಿದ್ದಾನೆ. ಈ ಕಟ್ಟುಕಥೆಗಳಿಗೆ ಈತನೊಬ್ಬನೇ ನೀತಿ—ಶೃಂಗಾರ - ವೈರಾಗ್ಯ ಶತಕಗಳನ್ನು ಬರೆದು, ಒಂದೊಂದು ಶತಕದಲ್ಲಿ ಒಂದೊಂದು ವಿರುದ್ಧ ವಿಷಯಗಳನ್ನು ಎತ್ತಿ ಹಿಡಿದುದೂ ಕಾರಣವಾಗಿರಬಹುದು. ಇವನು ನೀತಿ ಶತಕದಲ್ಲಿ 'ವಿದ್ಯಾನಾಮ ನರಸ್ಯರೂಪ ಮಧಿಕಂ, 'ವಿದ್ಯಾ ಗುರೂಣಾಂಗುರುಃ' 'ಪೂಜ್ಯತೇ ನಹಿಧನಂ, ವಿದ್ಯಾವಿಹೀನಃ ಪಶುಃ' ಎಂದು ವಿದ್ಯೆಯನ್ನು ಪ್ರಶಂಸಿಸಿ, ಧನದ ಮಹಿಮೆಯನ್ನು ಹೇಳುವಾಗ 'ಸರ್ವೇಗುಣಾಃ ಕಾಂಚನಮಾಶ್ರಯಂತೇ' ಎಂದು ಹೇಳಿದ್ದಾನೆ. ಹೀಗೇ ಶೃಂಗಾರ ಶತಕದಲ್ಲೂ ಸ್ತ್ರೀ ಪ್ರಶಂಸೆ ಇರುವಂತೆಯೇ ಸ್ತ್ರೀ ನಿಂದೆಯೂ ಇದೆ. ಈ ಶತಕದಲ್ಲಿ ಒಂದೆಡೆ ಜೀವನದ ಸಾರಸರ್ವಸ್ವವೇ ಶೃಂಗಾರವೆಂದು ಹೇಳಿ, ಇನ್ನೊಂದುಕಡೆ ಶೃಂಗಾರವೇ ಎಲ್ಲಾ ಅನರ್ಥಗಳಿಗೂ ಮೂಲವೆಂದಿದ್ದಾನೆ. ವೈರಾಗ್ಯ ಶತಕದಲ್ಲಿ 'ಯುಕ್ತಂ ಕೇವಲಮೇತದೇವ ಸುಧಿಯಾಂ ಯಜ್ಜಹ್ನು ಕನ್ಯಾಪಯಃ ಪೂತಗ್ರಾವ ಗಿರೀಂದ್ರ ಕಂದರ ತಟೀ ಕುಂಜೇ ನಿವಾಸಃ ಕ್ವಚಿತ್' ವಿದ್ವಾಂಸರು ಗಂಗಾ ನದಿಯ ನೀರಿನಿಂದ ಪರಿಶುದ್ಧವಾದ ಶಿಲೆಗಳುಳ್ಳ ಹಿಮವತ್ಪರ್ವತದ ಗುಹಾ ಪ್ರದೇಶದ ಲತಾ ಗೃಹದಲ್ಲಿ ವಾಸ ಮಾಡುವುದೇ ಯೋಗ್ಯವಾದದ್ದು—ಎಂದು ಇನ್ನೊಂದು ಧ್ಯೇಯವನ್ನು ಮುಂದಿಟ್ಟಿದ್ದಾನೆ. 'ಪ್ರೇಂಖತ್ಯಾಸ್ತಾರುಣ್ಯಾಂಕಿಮಿವ ನಹಿರಮ್ಯಂ ಮೃಗದೃಶಃ' ತಾರುಣ್ಯವುಳ್ಳ ಹರಿಣಾಕ್ಷಿಯರ ಯಾವ ವ್ಯಾಪಾರವು ಮನೋಹರವಾಗಿರುವುದಿಲ್ಲ? 'ಪುಣ್ಯಂ ಕುರುಷ್ವ್ಯದಿತೇಷುತವಾಸ್ತಿವಾಂಛಾ ಪುಣ್ಯೈರ್ವಿನಾನಹಿಭವಂತಿ ಸಮೀಹಿತಾರ್ಥಾಃ' 'ಸ್ತ್ರೀಯರಲ್ಲಿ ನಿನಗೆ ಆಶೆ ಇದ್ದದ್ದೇ ಆದರೆ ಪುಣ್ಯವನ್ನು ಮಾಡು. ಸುಕೃತವಿಲ್ಲದೆ ಇಷ್ಟಾರ್ಥಗಳು ಈಡೇರಲಾರವು'. ಈ ಹಾರ್ದಿಕತೆಯೂ ಕವಿಯಲ್ಲಿ ಪ್ರತ್ಯೇಕವಾಗಿದೆ.

ಶ್ಲೋ॥ ಕದಾವಾರಣಸ್ಯಾಮಮರ |
ತಟಿನೀ ರೋಧಸಿ ವಸನ್ವಸಾನಃ
ಕೌಪೀನಂ ಶಿರಸಿನಿದ ॥
ಧಾನೋಂಜಲಿಪುಟಂ ॥
ಅಯೀ ಗೌರೀನಾಥ ತ್ರಿಪುರಹರ |
ಶಂಭೋತ್ರಿನಯನ
ಪ್ರಸೀದೇ ತಿಕ್ರೋಶನ್ನಿಮಿಷ |
ಮಿವನೇಷ್ಯಾಮಿ ದಿವಸಾನ್ ॥

"ಯಾವಾಗ ಕಾಶಿಯ ಭಾಗೀರಥಿಯ ತೀರದಲ್ಲಿ ವಾಸ ಮಾಡುತ್ತಾ ಕೌಪೀನವನ್ನು ಮಾತ್ರ ಉಟ್ಟುಕೊಂಡು, ತಲೆಯ ಮೇಲೆ ಕರಸಂಪುಟವನ್ನಿಟ್ಟುಕೊಂಡು 'ಎಲೈ ಪಾರ್ವತೀ ಪತಿಯೇ, ತ್ರಿಪುರ ಸಂಹಾರಿಯೇ, ಶಂಭೋ ಪ್ರಸನ್ನನಾಗು' ಎಂದು ಉಚ್ಚ ಸ್ವರದಿಂದ ಹಂಬಲಿಸುತ್ತ ಅನೇಕ ದಿವಸಗಳನ್ನು ಒಂದು ನಿಮಿಷದಂತೆ ಕಳೆದೇನು?' ಇದೂ ಭರ್ತೃಹರಿಯ ಒಂದು ಬಯಕೆ ಮತ್ತು ಪ್ರಾರ್ಥನೆ.

ಭರ್ತೃಹರಿಯು ಜೀವನದ ಸಂಧ್ಯಾಕಾಲದಲ್ಲಿ ದೇವ ದೇವನ ಸಾಕ್ಷಾತ್ಕಾರಕ್ಕಾ

(ಇಪ್ಪತ್ತೈದನೇ ಪುಟ ನೋಡಿ)

ನಮ್ಮ ಗ್ರಾಹಕರಿಗೂ ಹಿತೈಷಿಗಳಿಗೂ

ದೀಪಾವಳಿಯ ಶುಭಾಶಯಗಳು

Phone: 131. Tel: GOLDKING

ಸಂದರ್ಶಿಸಿರಿ :—

ತಾಜಾ ಬ್ಲೂ ಜಾಗರ್ ವಜ್ರಗಳಿಗೂ ಮತ್ತು ಅತ್ಯಾಧುನಿಕ ಫೇಶನಿನ ಚಿನ್ನಾಭರಣಗಳಿಗೂ, ಬೆಳ್ಳಿಯ ಉಡುಗೊರೆ ವಸ್ತುಗಳಿಗೂ ಪ್ರಖ್ಯಾತಿಯಾದ

ಎಸ್. ಎಲ್. ಶೇಟ್ ಡಾಯಮಂಡ್ ಹೌಸ್

ಮನೆಯ ನಿತ್ಯೋಪಯೋಗದ ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಫೇನ್ಸಿ ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲ್ ಸೆಂಟರ್



Prop: S. L SHET.

ಮತ್ತು ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ

ಐಡಿಯಲ್ ಫೊಟೋ ಹೌಸ್

ಆಗ್ಫಾ ಕೋಡಕ್ ಮತ್ತು ಇಲ್‌ಫೋರ್ಡು ಇವುಗಳ ಡೀಲರ್ಸ್.

ಕಾರ್ನಾಡ್ ಸದಾಶಿವ ರಾವ್ ರೋಡ್,

ಹಂಪನಕಟ್ಟಾ, ಮಂಗಳೂರು-1.

ಕಾವ್ಯಕೆ ಗುರು ಕುಮಾರವ್ಯಾಸ

ಕನ್ನಡದ ಕಾವ್ಯಕುಲತಿಲಕನೊಬ್ಬನರಸು
ಕನ್ನಡದ ಕವಿಕುಲದೊಳಿವನೆ ಬಲು ಗಡಸು
ಕವಿಕುವರ ವ್ಯಾಸನಿಗೆ ಬಹುಮುಖದ ಪ್ರತಿಭೆ
ಭವಿಕೃಷ್ಣಚರಿತೆಯಲಿ ಹಿರಿತನ ಸುಲಭ ||

ಬರೆದವರು
ಶ್ರೀ ಪಿ. ಎಸ್. ಸತ್ಯನಾರಾಯಣ ರಾವ್, ಚಿತ್ರದುರ್ಗ.

ಕನ್ನಡ ನಾಡಿನಲ್ಲಿ ಗದುಗಿನ ನಾರಣಪ್ಪ ಆತನ ಕರ್ನಾಟಕ ಭಾರತ ಕಥಾ ಮಂಜರಿಯನ್ನು ಅರಿಯದಿರುವವರು ಅತಿ ವಿರಳ. ಕವಿ ನಾರಣಪ್ಪ ತನ್ನ ಕರ್ನಾಟ ಭಾರತ ಕಥಾ ಮಂಜರಿ ಕಾವ್ಯದ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅದ್ವಿತೀಯ ಸ್ಥಾನ, ಕೀರ್ತಿಯನ್ನು ಸಂಪಾದಿಸಿದ್ದಾನೆ. ಪಂಡಿತ ಪಾಮರಾದಿಯಾಗಿ ಸರ್ವಜನ ಪ್ರಿಯವಾದ ಶ್ರೇಷ್ಠ ಕಾವ್ಯ ಗದುಗಿನ ಭಾರತ. ಕರ್ನಾಟಕದಲ್ಲಿ ತೊರವೆಯ ರಾಮಾಯಣ ಜೈಮಿನಿ ಭಾರತ ಮತ್ತು ಗದುಗಿನಭಾರತ(ಕರ್ನಾಟ ಭಾರತ ಕಥಾ ಮಂಜರಿ)ಹಳ್ಳಿಯ ನಿರಕ್ಷರಕುಕ್ಷಿಗಳಿಗೂ ಚಿರಪರಿಚಿತವಾದ, ಅಮ್ನಾಯಮಾನವಾದ ಕಾವ್ಯಗಳು. ಇವು ಮೂರರ ಪೈಕಿ ಗದುಗಿನ ಭಾರತದ ಹಿರಿಮೆ ಯಥಾವತ್ತಾದುದು ಪಂಡಿತರು ಮಾತ್ರವಲ್ಲದೆ ಒಂದಕ್ಷರವನ್ನು ಓದಲು ಬರೆಯಲು ಬಾರದ ಹಳ್ಳಿಗರ ಮನಸ್ಸನ್ನು ಸೂರೆಗೊಂಡು ವಿಸ್ತಾರವಾದ ಹೊಗಳಿಕೆಯಿಂದ ಮೆರೆಯುವ ಗದುಗಿನ ಭಾರತಕ್ಕೆ ನಿರಕ್ಷರಸ್ಥರೂ ವ್ಯಾಖ್ಯಾನ ನೀಡುವುದನ್ನು ಇಂದೂ ಕಾಣಬಹುದು. ಇದಕ್ಕೆ ಗದುಗಿನ ಭಾರತದ ಸರಳ ವೈಭವಪೂರ್ಣ ಶೈಲಿ, ಗದುಗಿನ ನಾರಣಪ್ಪನ ಪ್ರತಿಭಾಪೂರ್ಣ ಕಾವ್ಯ ಕಥನಾ ಶಕ್ತಿಯೇ ಕಾರಣ.

ಗದುಗಿನ ಭಾರತ ಅಥವಾ ಕರ್ನಾಟ ಭಾರತ ಕಥಾ ಮಂಜರಿಯ ಕರ್ತೃ ನಾರಣಪ್ಪ. ಆತನ ಕಾವ್ಯನಾಮ ಕುಮಾರ ವ್ಯಾಸ ಯೋಗೀಂದ್ರನೆಂದು. ಗದುಗಿನ ನಾರಣಪ್ಪ ಕುಮಾರ ವ್ಯಾಸನೆಂದೇ ಪ್ರಖ್ಯಾತನಾಗಿದ್ದಾನೆ; ಕೀರ್ತಿಪಡೆದು ಜನಪ್ರಿಯ ಕವಿಯಾಗಿ ಮೆರೆದಿದ್ದಾನೆ.

ನಾರಣಪ್ಪನ ಜೀವಿತಕಾಲ, ಮತ, ಕಾವ್ಯ ರಚಿಸಿದ ಆ ಸ್ಥಾನ ಯಾವುದೂ ಸ್ಪಷ್ಟವಾಗಿ ಹೇಳುವಂತಿಲ್ಲ ಎಲ್ಲ ವಿಷಯಗಳಲ್ಲಿಯೂ ಭಿನ್ನಾಭಿಪ್ರಾಯಗಳಿವೆ. ನಾರಣಪ್ಪನ ವಿಷಯವಾಗಿ ಅಲ್ಪ ಸ್ವಲ್ಪ ಪರಿಚಯ ಮಾಡಿಕೊಡಲು ಗದುಗಿನ ವೀರನಾರಾಯಣ ಸ್ವಾಮಿ ದೇವಾಲಯದ ಕೆಲವು ಶಿಲಾ ಶಾಸನಗಳು ಮತ್ತು ಕೆಲವು ಜನರ ಬಳಿ ಉಳಿದು ಬಂದಿರುವ ತಾಮ್ರ ಪಟ್ಟಗಳು ಸಹಾಯ ಮಾಡುತ್ತವೆ.

ಗದುಗಿನ ದೇವಾಲಯದಲ್ಲಿ ಇಂದಿಗೂ ನಾರಣಪ್ಪ ತನ್ನ ಕಾವ್ಯವನ್ನು ಬರೆದ ಸ್ಥಳವನ್ನು ತೋರಿಸುತ್ತಾರೆ. ಒಟ್ಟಿನಲ್ಲಿ ಕವಿ ತನ್ನ ಕೃತಿಯನ್ನು ವೀರ ನಾರಾಯಣನಿಗೆ ಅರ್ಪಿಸಿರುವುದು ವಿದಿತ.

ಕವಿ ನಾರಣಪ್ಪ ತನ್ನ ಕರ್ನಾಟಕ ಭಾರತ ಕಥಾ ಮಂಜರಿಯನ್ನು ಬರೆದು ಮುಗಿಸಿ ಪ್ರಾಯಶಃ ಕ್ರಿ. ಶ. ೧೪೩೦ರಲ್ಲಿ ತನ್ನ ಮನೆ ದೇವರು (ಇಷ್ಟ ದೈವ) ಗದುಗಿನ ವೀರನಾರಾಯಣನಿಗೆ ಅರ್ಪಿಸಿರಬಹುದೆಂದು ನಂಬಬಹುದಾಗಿದೆ. ಈ ಕಾಲವೇ ಕವಿಯ ಜೀವಿತ ಕಾಲ ಎಂಬುದಕ್ಕೆ ಬಹುಬಗೆಯ ಆಧಾರ, ಸಾಕ್ಷ್ಯಗಳಿವೆ.

ನಾರಣಪ್ಪನ ಸ್ಥಳ ಧಾರವಾಡ ಜಿಲ್ಲೆಯ ಗದುಗಿನ ಸಮೀಪದ ಕೋಳಿವಾಡ ಗ್ರಾಮ. ಆತನ ಪೂರ್ವಿಕರು ಕರಣಿಕರು (ವ್ಯನುಭೋಗರು) ಎಂಬುದು ಸ್ಪಷ್ಟವಾಗಿದೆ. ಅಲ್ಲದೆ ಕವಿಯ ಪೂರ್ವಿಕರು ವಿಜಯನಗರದ ರಾಸ್ಥಾನದ ಹಿರಿಯ ಹುದ್ದೆಗಳಲ್ಲಿ ಇದ್ದಿರಬಹುದೆಂದು ಕಾಣಬರುತ್ತದೆ. ಗಜ ಸೇನಾಧಿಪತಿಗಳಾಗಿದ್ದರೆಂದು ಪ್ರತೀತಿ ಇದೆ. ನಾರಣಪ್ಪನ ತಂದೆ ಲಕ್ಕರಸಯ್ಯ ಅಥವಾ ಲಕ್ಷ್ಮಣ ದೇವ ವಿಜಯನಗರದ ಅರಸು ಒಂದನೇ ದೇವರಾಯ (ಪ್ರೌಢದೇವರಾಯ ಕ್ರಿ. ಶ. ೧೪೦೬–೧೪೨೨) ನ ಬಳಿ ಅಮಾತ್ಯನಾಗಿದ್ದನೆಂದೂ ದೊರೆಯ ಮರಣಾನಂತರ ತನ್ನ ಇನಾಮಿನ ಕೋಳಿವಾಡಕ್ಕೆ ಹಿಂತಿರುಗಿದನೆಂದೂ ತಿಳಿಯಬರುತ್ತದೆ

ಹಲವು ವರ್ಷಗಳವರೆಗೆ ಮಕ್ಕಳಿಲ್ಲದ ಲಕ್ಕರಸಯ್ಯ ವೀರನಾರಾಯಣನ ಕರುಣೆಯಿಂದ ಓರ್ವ ಮಗನನ್ನು ಪಡೆದು ಮಗನಿಗೆ ದೇವರ ಹೆಸರನ್ನೇ ಇಟ್ಟು ದೇವರಿಗೇ ಅರ್ಪಿಸಿರ ಬಹುದೆಂದು ನಂಬಬಹುದಾಗಿದೆ. ಚಿಕ್ಕ ವಯಸ್ಸಿನಿಂದಲೇ ನಾರಣಪ್ಪ ವೀರನಾರಾಯಣನ ಭಕ್ತನಾಗಿ ಸೇವೆ ಸಲ್ಲಿಸಿದ್ದಾನೆ.

ಕವಿಯ ಕಾಲ ಪ್ರೌಢದೇವರಾಯನ ಆಳ್ವಿಕೆ (ಕ್ರಿ. ಶ. ೧೪೦೬ –೧೪೨೨)ಯ ಕಾಲವೇ ಅಥವಾ ಕೃಷ್ಣದೇವರಾಯನ ಆಳ್ವಿಕೆಯ ಆರಂಭ ಕಾಲದಲ್ಲಿಯೋ (೧೫೦೯—೧೫೨೯) ಎಂಬ ವಿವಾದವಿದೆ. ನಾರಣಪ್ಪನ ಜೀವನಕಾಲ ಕೃಷ್ಣದೇವರಾಯನ ಆಳ್ವಿಕೆಯ ಕಾಲ ಎಂದು ಹೇಳುವುದು ಅಷ್ಟು ಸಾಧುವಲ್ಲ. ನಾರಣಪ್ಪ ಭಾರತದ ಮೊದಲ ಆದಿಪರ್ವದಿಂದ ಚತ್ತನೆಯ ಗದಾ ಪರ್ವದ ವರೆಗೆ ಮಾತ್ರ ಬರೆದಿದ್ದು—ಉಳಿದ ಎಂಟು ಪರ್ವಗಳನ್ನು ಕೃಷ್ಣದೇವರಾಯನ ಅಪ್ಪಣೆಯ ಮೇರೆಗೆ ಆಸ್ಥಾನ ಕವಿ ತಿಮ್ಮಣ್ಣ ಬರೆದು ಮುಗಿಸಿರುವುದು ಸರ್ವರಿಗೂ ವಿದಿತವಾಗಿರುವ ಸಂಗತಿಯೇ ಆಗಿದೆ.

ಯಾವ ಕಾರಣದಿಂದಲೋ ಕವಿ ಜೀವನದಲ್ಲಿ ಬೇಸರ ಹೊಂದಿ, ವೈರಾಗ್ಯ ತಾಳಿ ಭಗವತ್ಸೇವೆ, ಕಾವ್ಯ ರಚನೆಗೆ ತನ್ನ ಕಾಲವನ್ನು ವಿನಿಯೋಗಿಸಿದ್ದಾನೆ.

ಕವಿ ನಾರಣಪ್ಪ ತನ್ನ ಕಾವ್ಯದಲ್ಲೆಲ್ಲಿಯೂ ತನ್ನ ನಿಜನಾಮಧೇಯವನ್ನು, ಜೀವಿತಕಾಲ ಜೀವನದ ಸಂಗತಿಗಳನ್ನು ಸೂಚಿಸಿಲ್ಲ. ಅಲ್ಲದೆ ಆರಂಭದಿಂದ ಅಂತ್ಯದ ವರೆಗೆ 'ಕುಮಾರವ್ಯಾಸ ಯೋಗೀಂದ್ರ" ಎನ್ನುವ ಅಂಕಿತದಲ್ಲಿಯೇ ಕಾವ್ಯ ಬರೆದು ಪ್ರಕಾಶಿಸಿದ್ದಾನೆ.

ಯಾವ ಸ್ಫೂರ್ತಿಯ ಪ್ರೇರಣೆಯಿಂದಲೋ ತನ್ನ ಕರ್ನಾಟ ಭಾರತ ಕಥಾಮಂಜರಿಯನ್ನು ಕವಿ ನಾರಣಪ್ಪ ವೈಭವಯುತವಾಗಿ ರಚಿಸಿ ತನ್ನ ಆರಾಧನಾ ದೇವತೆಯಾದ ಗದುಗಿನ ವೀರನಾರಾಯಣಗೆ ಭಕ್ತಿಯಿಂದ ಸಮರ್ಪಿಸಿದ್ದಾನೆ.ಕವಿಯ ಕಾವ್ಯ ರಚನೆ, ಜೀವಿತ ಸಂಗತಿಗಳ ಬಗೆಗೆ ನಾನಾ ವಿಧವಾದ ಕಟ್ಟುಕತೆ, ಊಹೆಯ ಸಂಗತಿಗಳು ಬಳಕೆಯಲ್ಲಿವೆ. ಯಾವ ಪೂರ್ವಪಕ್ಷ, ಪರಿಣಾಮಕಾರಿಯಾದ, ಸತ್ಯ ಸಂಗತಿಯನ್ನು ತೋರಬಲ್ಲ ವಿಷಯಗಳಿಲ್ಲ.

ಕರ್ನಾಟಕ ಭಾರತ ಕಥಾಮಂಜರಿಯ ಮೂಲಕವೇ ನಾರಣಪ್ಪನ ವ್ಯಕ್ತಿತ್ವ ಪಾಂಡಿತ್ಯವನ್ನು ಗಮನಿಸುವುದಾದರೆ ನಾರಣಪ್ಪ ಶ್ರೇಷ್ಠ ಪಂಡಿತ ಎಂದು ನಿಸ್ಸಂದೇಹವಾಗಿ ಹೇಳಬಹುದು. ಅವನಿಗೆ ಸಂಸ್ಕೃತ ವ್ಯಾಕರಣ ಮಹಾಭಾರತವಲ್ಲದೆ ಶಾಸ್ತ್ರ, ಸಂಗೀತ, ಜ್ಯೋತಿಷ್ಯ, ಸ್ಮೃತಿ, ಪುರಾಣ, ಸಾಹಿತ್ಯ, ಸಂಸ್ಕೃತ ಸಾಹಿತ್ಯ, ಭಾಸ ಪ್ರಣೀತ ಸಂಪಾದಿ ಕೃತಿಗಳು ಪಂಪ ಭಾರತ, ಲಕ್ಷಣ ಗ್ರಂಥ ನಿಘಂಟುಗಳು ಅವನಿಗೆ ಕರತಲಾಮಲಕವಾಗಿದ್ದವು ಎಂದು ಸ್ಪಷ್ಟವಾಗಿ ಕಾಣುತ್ತದೆ. ಅವನ ನಾಲಿಗೆಯಲ್ಲಿ ಶಬ್ದ ಭಂಡಾರವೇ ನಲಿದಾಡುತ್ತು. ತನ್ನ ಕಾವ್ಯದಲ್ಲಿ ನಾರಣಪ್ಪ ಪ್ರಯೋಗಿಸಿರುವ ಶಬ್ದ ಸಂಪತ್ತು, ಭಾಷಾ ವೈಖರಿ, ರಚನಾ ಶೈಲಿ ಆತನು ಸಹಜ ಪ್ರತಿಭೆಯ ಪಂಡಿತ ಎಂದು ಎತ್ತಿ ಸಾರುತ್ತವೆ

ಕರ್ನಾಟಕಭಾರತ ಕಥಾಮಂಜರಿಯು ಮೂಲ ವ್ಯಾಸ ಕೃತ ಸಂಸ್ಕೃತ ಭಾರತದ ಆಧಾರದಿಂದಲೇ ರೂಪುಗೊಂಡುದು. ಆದರೆ ವ್ಯಾಸ ಕೃತಿಯ ಪ್ರತಿಕೃತಿಯಲ್ಲ ವ್ಯಾಸರನ್ನು ಮೀರಿಸಿದ ಪ್ರತಿಭೆ ಈ ಕಾವ್ಯದಲ್ಲಿ ಕಂಡುಬರುತ್ತದೆ. ಭಾರತದ ಮೊದಲ ಹತ್ತು ಪರ್ವಗಳನ್ನು ಮಾತ್ರ ನಾರಣಪ್ಪ ರಚಿಸಿದ್ದಾನೆ ಆದಾವ ಕಾರಣದಿಂದಲೋ ಅವನು ಮುಂದಿನ ಎಂಟು ಪರ್ವಗಳನ್ನು ಬರೆದು ಮುಗಿಸಲು ಸಾಧ್ಯವಾಗಲಿಲ್ಲ, ಸಮರ್ಥನಾಗಲಿಲ್ಲ. ರಚಿಸಿರುವ ಭಾಗವಷ್ಟೇ ಅವನ ಕವಿತಾಶಕ್ತಿಯನ್ನು ಎತ್ತಿಹಿಡಿದಿದೆ. ತನ್ನ ಹತ್ತು ಪರ್ವಗಳ ಕಾವ್ಯವನ್ನು ರಚಿಸಿದ ಕಾಲ ನಾರಣಪ್ಪನ ಅಂತಿಮ ಕಾಲವಿರಬಹುದು. ಆ ಕೃತಿಯ ಮುಕ್ತಾಯದೊಂದಿಗೆ ಅವನ ಕಾಲವೂ ಮುಗಿದಿರಬಹುದೆಂದು ಹೇಳಬಹುದು. ನಾರಣಪ್ಪ ಕರ್ನಾಟ ಭಾರತ ಕಥಾಮಂಜರಿಯಲ್ಲದೆ 'ಐರಾವತ' ಎನ್ನುವ ಕಾವ್ಯವನ್ನೂ ಬರೆದನೆಂದು ಪ್ರತೀತಿ. ಆದರೆ ಆ ಕಾವ್ಯ ಉಪಲಬ್ಧವಿಲ್ಲ ನಾರಣಪ್ಪ ತನ್ನ ಸಹಜ ಶೈಲಿಯಲ್ಲಿ ವ್ಯಾಸ ಭಾರತದ ಒಂದೊಂದು ಸಂಧಿಯ ಪದ್ಯ ಭಾಗವನ್ನು ತನ್ನ ಒಂದೊಂದು ಪದ್ಯದಲ್ಲಿಯೇ ಅಳವಡಿಸಿ ತನ್ನ ಸಾಮರ್ಥ್ಯವನ್ನು ತೋರಿದ್ದಾನೆ. ಕರ್ನಾಟ ಭಾರತ ಕಥಾ ಮಂಜರಿ ಭಾಮಿನೀ ಷಟ್ಪದಿಯಲ್ಲಿರುವ ಕಾವ್ಯ. ಕನ್ನಡ ಕಾವ್ಯಶ್ರೇಣಿಯಲ್ಲಿ ಉನ್ನತ ಸ್ಥಾನದಲ್ಲಿ ಮೆರೆಯುವ ಮಹಾಗ್ರಂಥ ಜನಮನವನ್ನು ಹರ್ಷಗೊಳಿಸುವ 'ಜ್ಞಾನಸಿಂಧು.'

ನಾರಣಪ್ಪ ತನ್ನ ಕಾವ್ಯದಲ್ಲಿ ನವರಸಗಳನ್ನು ನಿರೂಪಿಸಿ ಒಪ್ಪೊಟ್ಟ ಪ್ರಮುಖ ವ್ಯಕ್ತಿಗೆ ಗೊತ್ತಾದ ಒಂದು ರಸಪೂರ್ಣ ಸೂತ್ರವನ್ನಿತ್ತು ಅವರನ್ನು ಎತ್ತಿ ಆರಿಸಿದ್ದಾನೆ, ಆದರೆ ಅವನ ಭಕ್ತಿ ಭಾವ ವಿಶೇಷವಾದುದು ಕರ್ನಾಟ ಭಾರತ ಕಥಾಮಂಜರಿಯಲ್ಲಿ ಭಕ್ತಿರಸಕ್ಕೆ ದೊರೆತಿರುವ ಸ್ಥಾನ ಅದ್ವಿತೀಯವಾದುದು. ಅಮರವಾದುದು.

ಭಕ್ತಿಭಾವ ಪರವಶನಾಗಿ ಭಗವಂತನಿಗೆ ತನ್ನ ಸರ್ವಸ್ವವನ್ನೂ ಅರ್ಪಿಸಿ ತ್ರಿಕರಣ ಪೂರ್ವಕವಾಗಿ ಶರಣಾಗಿ ಭಗವಂತನನ್ನು ಸ್ತುತಿಸುತ್ತಾನೆ. ಅವನ ಭಕ್ತಿ ಭಾವ ಪರವಶತೆ ಎಣೆ ಇಲ್ಲದ ಹಿರಿಯದಾಗಿದೆ ನಾರಣಪ್ಪನಿಗೆ ಗದುಗಿನ ವೀರನಾರಾಯಣನಲ್ಲಿ ನಿಷ್ಠೆಯಾದ ಶ್ರದ್ಧಾಭಕ್ತಿ. ಅವನ ಕಾವ್ಯಕ್ಕೆ ವೀರನಾರಾಯಣನೇ ನಾಯಕ, ಸೂತ್ರಧಾರಿ, ನಿರ್ದೇಶಕ, ಪ್ರಧಾನ ನಟ ಅವನ ಸಂಕಲ್ಪವಿಲ್ಲದೆ ಅಣುವೂ ಚಲಿಸದು. ಕಾವ್ಯದಲ್ಲಿ ಆದಿಯಿಂದ ಅಂತ್ಯದ ವರೆಗೆ ಕಾಣಬರುವ ಶ್ರೀ ಕೃಷ್ಣನೇ ವೀರನಾರಾಯಣ. ವೀರನಾರಾಯಣನೇ ಶ್ರೀಕೃಷ್ಣ.

ನಾರಣಪ್ಪನ ಮಾತಿನಲ್ಲಿಯೇ ಹೇಳುವುದಾದರೆ "ಅವನು ಕವಿಯೂ ಅಲ್ಲ ಕಾವ್ಯ ಬರೆದವನೂ ಅಲ್ಲ" "ವೀರನಾರಾ

(ಮುಂದಿನ ಪುಟ ನೋಡಿರಿ)

For all your requirements in—

School and College Text Books
Exercise and Note-Books
Stationery and Toilet Requisites
Guides Annotations, etc etc.

VISIT

THE KANARA COLLEGE BOOK CO.

Regd. Publishers, Book-Sellers and Stationers,

Post Box No. 708,

MANGALORE-3.

ದೇಶದ ಪ್ರಗತಿ-ಒಂದು ಪರಿಶೀಲನೆ

ಉದ್ದಗಲ ಯೋಜನೆಯ ಯೋಜಕರುಯಿಲ್ಲೊ
ದೊಡ್ಡದಿದ ಅಣೆಕಟ್ಟು ಕಾರ್ಖಾನೆಯಲ್ಲೊ
ಹರಿಸಿದರು ಮನವದರ ಉಪಯೋಗವೆಷ್ಟು
ವೆಂಬುದನು ಕಂಡರೇ ಪ್ರಗತಿ ಸಾಕಷ್ಟು ‖

ಬರೆದವರು
ಶ್ರೀ ಮ. ರಾಜೀವ, ಎಂ. ಎ., ಬಿ. ಟಿ, ಬೆಂಗಳೂರು.

ದೇಶವಿಂದು ಆರ್ಥಿಕ ಯೋಜನೆಯ ದಿಸೆಯಲ್ಲಿ ದೂರ ಸರಿದಿದೆ. ಆದರೆ ಯೋಜನೆಯ ಪರಿಣಾಮವಾಗಿ ದೇಶವು ಪ್ರಗತಿಯನ್ನು ಪಡೆದಿದೆಯೋ ಎಂದು ಅವಲೋಕಿಸುವುದು ಅಗತ್ಯ. ಅದನ್ನು ಹಲವು ರೀತಿಯಲ್ಲಿ ಅರ್ಥ ಮಾಡಬಹುದು. ಜನರ ಜೀವನ ಮಟ್ಟ ಹೆಚ್ಚಿದೆಯೋ ಎಂದು ಅರ್ಥ ಮಾಡುವುದು ಅತಿ ಮುಖ್ಯ. ಅಂತಹ ಅಧ್ಯಯನವನ್ನು ಮಾಡುವುದು— ಈ ದಿಟ್ಟತನದ ಯೋಜನಾ ಕಾರ್ಯಕ್ರಮದಲ್ಲಿ ನಾವು ಮುಂದುವರಿಯುತ್ತಿರುವಾಗ—ಅತಿ ಅವಶ್ಯ.

ಜೀವನ ಮಟ್ಟ ಕೇವಲ ಆರ್ಥಿಕ ಕಲ್ಪನೆಯಲ್ಲ. ಅದರಲ್ಲಿ ಅನೇಕ ಮಾನವೀಯ ಮೌಲ್ಯಗಳ ಪ್ರಶ್ನೆಯೂ ಸೇರಿಕೊಂಡಿದೆ. ಹತ್ತಾರು ಉಕ್ಕಿನ ಕಾರ್ಖಾನೆಗಳ ಸ್ಥಾಪನೆ, ನೂರಾರು ಬಟ್ಟೆ ಗಿರಣಿಗಳ ಉತ್ಪಾದನೆ, ಹಲವಾರು ನೀರಾವರಿ ಅಣೆಕಟ್ಟುಗಳ ರಚನೆ, ನೌಕಾಂಗಣಗಳ ನಿರ್ಮಾಣ— ಆರ್ಥಿಕ ಅಭಿವೃದ್ಧಿಯ ಸಂಕೇತವಲ್ಲ. ಇಂದು ಅಂಕೆ ಸಂಖ್ಯೆಗಳಿಂದಲೇ ಆರ್ಥಿಕ ಬೆಳವಣಿಗೆಯನ್ನು ಅಳೆಯುವ ಹವ್ಯಾಸ ನಡೆದಿದೆ. ಆರ್ಥಿಕ ಬೆಳವಣಿಗೆಯ ಹಲವಾರು ಮುಖಗಳಲ್ಲಿ, ಯೋಜನೆಯ ಯಶಸ್ಸಿನ ಫಲಿತಾಂಶದ ಪ್ರತೀಕಗಳಲ್ಲಿ—ಆರ್ಥಿಕ ಅಂತರಗಳು ಕಡಿಮೆಯಾಗುವುದು ಒಂದು ಮುಖ್ಯ ಲಕ್ಷಣವಾಗಿದೆ. ಒಂದು ದಶಕದ ಯೋಜನಾವಧಿಯಲ್ಲಿ ಸಂಪತ್ತಿನ ಕೇಂದ್ರೀಕರಣ ಅಧಿಕಗೊಂಡಿದೆಯೋ, ಕ್ರಮಾಗತವಾಗಿದೆಯೋ ಎಂಬುದು ಮುಖ್ಯವಾಗಿದೆ.

ಈ ದೃಷ್ಟಿಯಿಂದ ಯೋಜನೆಯ ದಿಟ್ಟತನದ ದೊಡ್ಡ ಹೆಜ್ಜೆಗಳನ್ನು ಅಳೆಯಬೇಕಾಗಿದೆ. ಸಂಪತ್ತಿನ ವಿತರಣೆಯ ಏರುಪೇರುಗಳ ನಿರ್ಮೂಲನ ಯೋಜನೆಯ ಉದ್ದೇಶಗಳಲ್ಲೊಂದಾಗಿದೆ. ಈ ದಿಸೆಯಲ್ಲಿ ನಾವೆಷ್ಟು ಮುಂದುವರಿದಿದ್ದೇವೆ ಈ ಗುರಿಯನ್ನು ಮುಟ್ಟುವ ಲಕ್ಷಣಗಳನ್ನು ಯೋಜನಾ ಕಾರ್ಯಕ್ರಮಗಳು ತೋರಿಸಿವೆಯೊ? ಇವನ್ನು ತಿಳಿದುಕೊಳ್ಳಲು ಸರಕಾರವು ನೇಮಕ ಮಾಡಿರುವ ಮಹಲನೋಬಿಸ್ ಸಮಿತಿಯು ತನ್ನ ವರದಿಯನ್ನು ಪೂರ್ಣಗೊಳಿಸಿದೆ. ಈ ವರದಿಯಂತೆ ಸಂಪತ್ತಿನ ಸ್ವಾಮಿತ್ವದ ಬಗ್ಗೆ ಗಮನ ತೆಗೆದುಕೊಳ್ಳುವ ಬದಲು ಸಂಪತ್ತಿನ ನಿಯಂತ್ರಣದ ಕಡೆಗೆ ನಮ್ಮ ದೃಷ್ಟಿ ಹರಿಯಿಸುವುದು ಅಗತ್ಯ. ಖಾಸಗಿ ಆಸಕ್ತಿಗಳು, ಸಂಪತ್ತಿನ ಕೇಂದ್ರೀಕರಣದ ಸಾಧನಗಳಾಗಿವೆಯೆಂಬುದೇನೋ ನಿಜ. ವ್ಯಕ್ತಿಗಳ, ಹಾಗೂ ಸಂಸ್ಥೆಗಳು ಸಂಪತ್ತಿನ, ಉತ್ಪಾದನಾ ಸಾಧನಗಳ ಕೇಂದ್ರಗಳಾಗಿ ಸಂಪತ್ತಿನ ವಿತರಣೆಯಲ್ಲಿ ವಿಶೇಷ ಏರುಪೇರುಗಳನ್ನುಂಟು ಮಾಡಿವೆ. ಇಂದು ಸರಕಾರವೇ ಈ ಅಂತರಗಳುಂಟಾಗಲು ಕಾರಣವಾಗಿದೆ. ಸರಕಾರದ ಧೋರಣೆಯೇ ಆರ್ಥಿಕ ಕೇಂದ್ರೀಕರಣಕ್ಕೆ ಸಹಾಯಕವಾಗಿರುವುದು ಒಂದು ವಿಶೇಷ. ಸಾಮಾಜಿಕ ಉದ್ದೇಶಗಳಿಂದ ಸ್ಥಾಪನೆಯಾಗಿರುವ ಸರಕಾರದ ಸಂಸ್ಥೆಗಳು—ಆ ಉದ್ದೇಶಗಳನ್ನೀಡೇರಿಸಲು ತಡೆಯಾಗಿ ನಿಂತಿರುವುವು. ಆದುದರಿಂದಲೇ ಇಂದು ಸರಕಾರವು Monopolies Commissionನನ್ನು ನೇಮಕ ಮಾಡಬೇಕಾಗಿದೆ. ಮಹಲನೋಬಿಸ್ ವರದಿಯು ಒಂದು ದೃಷ್ಟಿಯಿಂದ ನಮ್ಮ ಯೋಜನಾಗಾರರ ಅಸಮರ್ಥತೆಯ ಖಂಡನೆ ಕೂಡಾ ಆಗಿರುತ್ತದೆ. ಕಳೆದ ದಶಕದಲ್ಲಿ ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವ ಕಾರ್ಯದಲ್ಲಿ ಯೋಜನೆಯು ವಿಫಲಗೊಂಡಿದೆ ಮಾತ್ರವಲ್ಲ ಅದು ಸಂಪತ್ತು ಕೆಲವೇ ಕೈಗಳಲ್ಲಿ, ಕಂಪೆನಿಗಳಲ್ಲಿ ಕೇಂದ್ರೀಕರಣವಾಗಲು ಸಹಾಯಕವಾಗಿದೆಯೆಂದೂ ಈ ವರದಿಯು ಸ್ಪಷ್ಟಪಡಿಸಿದೆ. ಹಾಗಾದರೆ ಹೇಳುವುದೊಂದು, ಕಾರ್ಯತಃ ಆಗುವುದು ಬೇರೊಂದು; ಆದರ್ಶವೊಂದು ಆಗುವುದು ಮತ್ತೊಂದಲ್ಲವೇ?

ಯೋಜನಾವಧಿಯಲ್ಲಿ ಹಿರಿಯ ಮಾಲ್ಯಕರು ಮತ್ತೂ ಹೆಚ್ಚಿನ ಸಂಪತ್ತನ್ನು ಸಂಪಾದಿಸಿದ್ದಾರೆಂಬುದು ಸತ್ಯ ಸಂಗತಿಯಾಗಿದೆ. ಇಲ್ಲದಿದ್ದಲ್ಲಿ ಅಧಿಕಗೊಂಡ ಸಂಪತ್ತು ಬಹು ಮಂದಿ ಬಡವರ ದಾರಿದ್ರ್ಯವನ್ನು ಹೋಗಲಾಡಿಸಲು ಯಾಕೆ ಹೆಚ್ಚು ಸಹಾಯಕವಾಗಿಲ್ಲವೆಂಬ ಸಹಜ ಪ್ರಶ್ನೆಯೇಳುವುದು. ಮೊದಲ ಹಾಗೂ ದ್ವಿತೀಯ ಯೋಜನಾವಧಿಯಲ್ಲಿ ಆರ್ಥಿಕ ಸಮಾನತೆಯನ್ನು ಸಾಧಿಸುವ ಉದ್ದೇಶವು ಎಷ್ಟರ ಮಟ್ಟಿಗೆ ಸಾಂಪತ್ತಿಕ ಅಂತರಗಳನ್ನು ಕಡಿಮೆ ಮಾಡಿದೆ? ಆರ್ಥಿಕ ಸಂಪತ್ತಿನ ಕೇಂದ್ರೀಕರಣವನ್ನು ತಡೆಯುವ ಸರಕಾರದ ಕಾರ್ಯಕ್ರಮಗಳು ಉದ್ದೇಶ ಸಾಧನೆಯಲ್ಲಿ ಸಾಕಷ್ಟು ಯಶಸ್ಸನ್ನು ಗಳಿಸಿವೆ ಎಂದು ಮಹಲನೋಬಿಸ್ ವರದಿಯು ಹೇಳಿರುತ್ತಿದೆ. ಆದರೆ ಇದಿಷ್ಟು ಸಾಲದು. ಸಾರ್ವಜನಿಕ ಕ್ಷೇತ್ರದ ವಿಸ್ತರಣೆ, ಸಹಕಾರ ವಿಭಾಗದ ಬೆಳವಣಿಗೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಪ್ರೋತ್ಸಾಹ ಮುಂತಾದ ಧೋರಣೆಗಳಿಂದ ಆರ್ಥಿಕ ಅಂತರಗಳನ್ನು ತೊಡೆದು ಹಾಕಬಹುದೆಂದು ಆ ವರದಿಯ ಅಭಿಪ್ರಾಯಪಟ್ಟಿರುತ್ತದೆ. ಇಂತಹ ನೀತಿಯು ಆರ್ಥಿಕ ವ್ಯವಸ್ಥೆಯ ವಿಷಮತೆಗಳನ್ನು ನಿರ್ಮೂಲಗೊಳಿಸಲು ಸಹಾಯಕವಾಗಿದೆ. ಸರಕಾರವು ಆರ್ಥಿಕ ಅಂತರಗಳನ್ನು ಅಧಿಕಗೊಳಿಸುವಂತಹ ನೀತಿಯನ್ನು ಅನುಸರಿಸುವುದಿಲ್ಲವೆಂದ ಮಾತ್ರಕ್ಕೆ ಅದು ಯೋಜನೆಯ ಉದ್ದೇಶಗಳನ್ನು ಸಾಧಿಸುವ ಹಾದಿಯಲ್ಲಿದೆಯೆಂದ ಹಾಗಾಗುವುದಿಲ್ಲ. ವಾಸ್ತವಿಕವಾಗಿ ಸಂಪತ್ತಿನ ವಿತರಣೆಯ ಪದ್ಧತಿಯಲ್ಲಾಗಲೀ, ಪರಿಸ್ಥಿತಿಯಲ್ಲಾಗಲೀ ಯಾವ ವ್ಯತ್ಯಾಸವನ್ನೂ ಕಾಣಲಾಗುವುದಿಲ್ಲ. ಪರಿಸ್ಥಿತಿಯು ಅವ್ಯವಸ್ಥಿತವಾಗಿದೆಯೆಂಬುದು ವಾಸ್ತವಿಕ ಸಂಗತಿಯಾಗಿದೆ. ಡಾ| ಆರ್. ಕೆ. ಹಜಾರಿಯವರ ಅಧ್ಯಯನವು ಇಂತಹ ಅವ್ಯವಸ್ಥೆಯ ಉತ್ತಮ ಉದಾಹರಣೆಗಳನ್ನು ನೀಡುತ್ತದೆ. ಅವರ ಅಧ್ಯಯನವು ಜ್ಯಾಂಟ್ ಸ್ಟಾಕ್ ಕಂಪೆನಿಗಳ ಕುರಿತಾಗಿವೆ. ಯೋಜನಾವಧಿಯಲ್ಲಿ ಬಡವರು ಬಡವರಾಗಿದ್ದಾರೆ; ಶ್ರೀಮಂತರು ಶ್ರೀಮಂತರಾಗಿದ್ದಾರೆ ಎಂಬ ಆರೋಪಕ್ಕೆ ಅದು ಸಾಕ್ಷಿಯನ್ನೊದಗಿಸುತ್ತದೆ. ಕಂಪೆನಿಗಳ ಕಥೆಯೂ ಅದೇ ವಾದವನ್ನು ಪುಷ್ಟೀಕರಿಸುತ್ತದೆ. ೧೯೬೦-೬೧ರಲ್ಲಿ ದೇಶದ ಒಟ್ಟು ಕಂಪೆನಿಗಳಲ್ಲಿ ಶೇಕಡಾ ೮೬ರಷ್ಟು ಕಂಪೆನಿಗಳು ೫ ಲಕ್ಷಕ್ಕಿಂತಲೂ ಕಡಿಮೆ ಭಂಡವಾಳವಿರುವ ಕಂಪೆನಿಗಳಾಗಿದ್ದುವು ಒಟ್ಟು ಭಂಡವಾಳದಲ್ಲಿ ಅವುಗಳ ಪಾಲು ಶೇಕಡಾ ೧೪.೬ರಷ್ಟಾಗಿತ್ತು. ಐದು ಲಕ್ಷಕ್ಕಿಂತಲೂ ಹೆಚ್ಚು ಭಂಡವಾಳವಿರುವ ಕಂಪೆನಿಗಳು ದೇಶದ ಎಲ್ಲಾ ಕಂಪೆನಿಗಳಲ್ಲಿ ಶೇಕಡಾ ೧೪ರಷ್ಟಾಗಿತ್ತು. ಆದರೆ ಅವುಗಳು ಒಟ್ಟು ಭಂಡವಾಳದ ಶೇಕಡಾ ೮೫ರಷ್ಟು ಪಾಲನ್ನು ಪಡೆದಿದ್ದುವು. ಒಂದಲ್ಲ ಒಂದು ವಿಧಾನದಲ್ಲಿ ೨೦೫ ಕೋಟಿ ರೂಪಾಯಿಯ ಭಂಡವಾಳವಿರುವ ೧೬೩೬ ಕಂಪೆನಿಗಳನ್ನು ದೇಶದ ಹತ್ತು ದೊಡ್ಡ ಭಂಡವಾಳ ವರ್ಗಗಳು ನಿಯಂತ್ರಿಸಿವೆ. ಇದು ೧೯೫೧ರ ಪರಿಸ್ಥಿತಿಯಾಗಿದ್ದರೆ ೧೯೫೮ರಲ್ಲಿ ಈ ವರ್ಗಗಳ ವರ್ಚಸ್ಸಿನ ಕ್ಷೇತ್ರವು ಮತ್ತೂ ವಿಶಾಲವಾಗಿತ್ತು. ಅವುಗಳು ೯೩೫ ಕಂಪೆನಿಗಳನ್ನು ನಿಯಂತ್ರಿಸುತ್ತಿದ್ದುವು. ಅಂದರೆ ಆರ್ಥಿಕ ಸಮಾನತೆ ಕೇವಲ ಆದರ್ಶವಾಗಿದೆ. ಕಾರ್ಯಾಚರಣೆಯಲ್ಲಿ ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ನುಂಗುತ್ತಿವೆ. ಬೃಹದಾಕಾರ ಬೆಳೆಯುತ್ತಿವೆ. ಸಂಪತ್ತಿನ ವಿಕೇಂದ್ರೀಕರಣದ ಬದಲು ಕೇಂದ್ರೀಕರಣವೇ ವಾಸ್ತವಿಕವಾಗಿ ಅಧಿಕವಾಗುತ್ತಿದೆ.

ಇಲ್ಲಿ ಒಂದು ಮುಖ್ಯ ಪ್ರಶ್ನೆಯು ಏ

(ಇಪ್ಪತ್ತನೂರನೇ ಪುಟ ನೋಡಿರಿ)

"ತೆಂಗಿನ ವ್ಯವಸಾಯ"

— ಕನ್ನಡ ಆವೃತ್ತಿ —

ಭೂಮಿಯ ಆಯ್ಕೆ, ಬೀಜಗಳು, ಸಸಿಗಳಿಗೆ ತಗಲುವ ರೋಗ ಮತ್ತು ಕ್ರಿಮಿ ಕೀಟಗಳು ಇವೇ ಮೊದಲಾದ ತೆಂಗಿನ ವ್ಯವಸಾಯಕ್ಕೆ ಸಂಬಂಧಿಸಿದ ಕೈಪಿಡಿ.

ಅಂಚೆ ವೆಚ್ಚ ಸಹಿತ ಪ್ರತಿ ಒಂದರ ಬೆಲೆ:
ರೂ. 1=48.

ಪ್ರತಿಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಸೆಕ್ರೆಟರಿ
ಇಂಡಿಯನ್ ಸೆಂಟ್ರಲ್ ಕೋಕನಟ್ ಕಮಿಟಿ
ಎರ್ನಾಕುಳಂ-1

ರಾಜಧಾನಿಯ ರಾಮಾಯಣ

ನಮ್ಮ ದೇಶದ ರಾಜಧಾನಿ ಹೊಸದಿಲ್ಲಿ
ಮೆರೆಯುತಿದೆ ಕಾಳಿಂದಿಯಾ ಪಕ್ಕದಲ್ಲಿ
ಹೋಗುವವರ ಉತ್ಸಾಹದಿಂದಿದ್ದರೆಲ್ಲಾ
ಹೊಕ್ಕ ಬಳಿಕೆಂದು ಮರಳುವವೆಂಬರಲ್ಲಾ ॥

ಬರೆದವರು

ಶ್ರೀ ಕೃಷ್ಣಾನಂದ ಹೆಗ್ಡೆ, ಹೊಸದಿಲ್ಲಿ.

ಲೇಖಕರು

ನೂರಾರು ವರ್ಷಗಳ ಹಿಂದೆ ಮೊದಲ ಬಾರಿ ದಿಲ್ಲಿಗೆ ಕಾಲಿಟ್ಟಾಗಲೂ ಅದೇ ಯೋಚನೆ ಇಲ್ಲಿ ಮೂರು ವೈಸ್‌ರಾಯಿಗಳನ್ನು ಕಳೆದ ಮೇಲೂ ಅದೇ:

"ಇಲ್ಲಿಂದೊಮ್ಮೆ ಓಡಿ ಹೋಗಬೇಕು" ಎಂದು.

ಬೇಸಿಗೆಯ ಶಾಖ ೧೧೮° Fಗೆ ಮುಟ್ಟಿ, ನೆಲ, ಜಲ, ಗಾಳಿ ಮತ್ತು ಸಮಸ್ತ ಪ್ರಪಂಚವೇ ಕುದಿಯತೊಡಗಿದಾಗ ನಾನು ಯೋಚಿಸುತ್ತೇನೆ

"ಇಲ್ಲಿಂದ ಓಡಿ ಹೋಗಬೇಕು"

ಚಳಿಗಾಲದ ಶೀತಲತೆ ೩೪° Fಗೆ ಇಳಿದು, ತಣ್ಣಗಿನ ಗಾಳಿ ಎಲುಬು ಕೊರೆಯತೊಡಗಿದಾಗ ನಾನು ಯೋಚಿಸುತ್ತೇನೆ:

"ಓಡಿ ಹೋಗಬೇಕು."

ಎಲ್ಲಿಗೆ?

o o o

ನಗರದ ಪಕ್ಕದಲ್ಲಿ ಯಮುನೆ ಹರಿಯುತ್ತಿದ್ದಾಳೆ, ಸಾಮಾನ್ಯವಾಗಿ ಆಕೆ ಸೌಮ್ಯ ಸ್ವರೂಪಿ. ರೌದ್ರಾವತಾರ ತಾಳಿದರೆ ಆಕೆ ವಿನಾಶಿನಿ. ಈಗ ತಾನೇ ಕಳೆದ ಮಳೆಗಾಲದಲ್ಲಿ ರಾಜಧಾನಿಯಲ್ಲಿ ಇಪ್ಪತ್ತು ವರ್ಷಗಳಲ್ಲಿ ಎಂದೂ ಆಗದಷ್ಟು ಮಳೆ ಸುರಿಯಿತು. ಯಮುನೆ ಉಕ್ಕಿ ಹರಿದಳು. ದಿಲ್ಲಿಯ ಆಸುಪಾಸಿನ ಪ್ರದೇಶಗಳೆಲ್ಲ ನೀರಲ್ಲಿ ಮುಳುಗಿ ಹೋದವು. ಅಲ್ಲಲ್ಲಿ ನೀರಾವರಿಗೆಂದೋ, ಕಶ್ಮಲ ಪ್ರತಿಬಂಧಕ್ಕೆಂದೋ ನಿರ್ಮಿಸಿದ ಮಣ್ಣಿನ ಅಣೆಕಟ್ಟುಗಳು ಒಂದೊಂದಾಗಿ ಕುಸಿಯತೊಡಗಿದವು. ನೂರಾರು ಗುಡಿಸಲುಗಳು ತೇಲಿ ಹೋದವು. ಅಸಹಾಯಕರಾದ ಜನ 'ಗೋಳೋ' ಎಂದು ಅತ್ತರು.

ಬಳಿಕ ಒಂದು ದಿನ ನೀರಿನ ಉಬ್ಬರ ನಿಂತಿತು. ಆದರೆ ನೆರೆಯ ಕುರುಹು ಅಳಿಯಲಿಲ್ಲ. ಇನ್‌ಫ್ಲುಯೆಂಜಾದಿಂದ ಆರಂಭವಾದ ನಾನಾ ಪಿಡುಗುಗಳು ಹಡೆಯುತ್ತಿದವು.

ರಾಜಧಾನಿಯ ಕೊಳಚೆ ಕಶ್ಮಲವೆಲ್ಲ ಶೇಖರವಾಗಿರುವ ಮೈದಾನಿನಲ್ಲೂ ನೆರೆ ನೀರು ತುಂಬಿತು. ಈ ಸ್ಥಳವನ್ನು ಪಕ್ಕದಲ್ಲೇ ಹರಿಯುವ ಯಮುನಾ ನದಿಯಿಂದ ಬೇರ್ಪಡಿಸುವ ಮಣ್ಣಿನ ಅಣೆಕಟ್ಟು ಉಕ್ಕೇರುತ್ತಿರುವ ನೀರಿನ ರಭಸಕ್ಕೆ ಕುಸಿಯಿತು

ಕೊಳೆತು ನಾರುವ ಕಶ್ಮಲವೆಲ್ಲ ಯಮುನಾ ನದಿಗೆ ಹರಿಯತೊಡಗಿತು.

ರಾಜಧಾನಿಗೆ ಕುಡಿಯುವ ನೀರಿನ ಪೂರೈಕೆಯಾಗುವುದು ಯಮುನಾ ನದಿಯಿಂದ. ನಗರದ ನಳ್ಳಿಗಳಲ್ಲಿ ದೋಷಯುಕ್ತವಾದ ನೀರು ಪೂರೈಕೆಯಾಗತೊಡಗಿತು.

ಒಂದೆರಡು ದಿನ ಈ ಭಯಂಕರ ಪ್ರಮಾದ ಯಾರ ದೃಷ್ಟಿಗೂ ಬೀಳಲಿಲ್ಲ. ಕ್ಲೋರೈಡ್ ಅಂಶ ಉನ್ನತಾವಸ್ಥೆಗೇರಿದ್ದ ನೀರನ್ನು ಜನ ಅಪಾಯದ ಅರಿವಿಲ್ಲದೆ ಉಪಯೋಗಿಸುತ್ತಿದ್ದರು.

ಬಳಿಕ ಒಂದು ದಿನ ಮುಂಜಾನೆ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಯನ್ನೋದಿ ದಿಲ್ಲಿಯ ಪ್ರಜೆಗಳು ನಡುಗಿದರು—

"ರಾಜಧಾನಿಗೆ ವಿಶೇಷ ಕಶ್ಮಲಯುಕ್ತ ನೀರಿನ ಪೂರೈಕೆ....ಸಾಂಕ್ರಾಮಿಕ ರೋಗಗಳು ಹರಡುವ ಸಂಭವ."

ನಗರ ನಿಗಮ (ಮುನಿಸಿಪಲ್ ಕಾರ್ಪೊರೇಶನ್‌ಗೆ ಸ್ಥಳೀಯ ಹೆಸರು) ಜನರಿಗೆ ಎಚ್ಚರ ಕೊಟ್ಟಿತು—"ನೀರು ಬಿಸಿ ಮಾಡಿ ಕುಡಿಯಿರಿ"

ಮಂಜುಗಡ್ಡೆ, ಸೋಡಾ ಮತ್ತಿತರ ತಂಪು ಪಾನೀಯಗಳ ತಯಾರಿಕೆಗೆ ಪ್ರತಿಬಂಧಕ ಆಜ್ಞೆ ಹೊರಟಿತು.

ಸ್ವಲ್ಪ ದಿನ ಕಳೆದ ಮೇಲೆ ಆರೋಗ್ಯಾಧಿಕಾರಿಗಳು ಕೆಲವು ಹೋಟೇಲುಗಳ ಪಾಕಶಾಲೆಗೆ ಅಪರೀಕ್ಷಿತ ಧಾಳಿ ನಡೆಸಿ, ಅಲ್ಲಿನ ಚಿತ್ರಕ್ಕೆ ಅಪಚಾರವಾಗುತ್ತಿರುವುದನ್ನು ಕಣ್ಣಾರೆ ಕಂಡರು.

ಐದು ವಾರಗಳಲ್ಲಿ ದಿಲ್ಲಿ ತುಂಬ ಹೆಪಿಟೈಟಿಸ್, ಗ್ಯಾಸ್ಟ್ರೋ ಎಂಟ್ರೈಟಿಸ್, ಜಾಂಡಿಸ್ ಮುಂತಾದ ಅಂಟುರೋಗಗಳು ತಲೆದೋರುವ ಸಂಭವವಿದೆ ಎಂದು ಆರೋಗ್ಯ ತಜ್ಞರು ಅಭಿಪ್ರಾಯಪಟ್ಟರು.

ಯಮುನೆಯ ನೆರೆ ಇಳಿಯಿತು. ಶುದ್ಧ ನೀರಿನ ಪೂರೈಕೆಯಾಗುತ್ತಿದೆ ಎಂದು ನಗರ ನಿಗಮ ಪ್ರಕಟಿಸಿತು.

ಒಂದು ಮಳೆಗಾಲವೇನೋ ಕಳೆಯಿತು. ಮುಂದಿನ ಮಳೆಗಾಲ?

"ದೇವರೇ ದಿಲ್ಲಿಯನ್ನು ಕಾಪಾಡಬೇಕು"

ನಳ್ಳಿ ನೀರಿನೊಂದಿಗೆ ಬಂದ ಒಂದು ಚೇಳು ಪಾರ್ಲಿಮೆಂಟಿನ ತನಕ ಹೋಯಿತು.

ಕೆಲವೊಮ್ಮೆ ತಂಪು ಪಾನೀಯಗಳ ಬಾಟ್ಲಿಗಳಲ್ಲಿ ನುಸಿಗಳು ಸೇರಿಕೊಂಡಿರುತ್ತವೆ. ಮಂಜುಗಡ್ಡೆಯೊಳಗೆ ಇಲಿ ಸತ್ತು ಬಿದ್ದಿರುತ್ತದೆ. ಹಾಲಿನ ಬಾಟ್ಲಿಯೊಳಗೆ ಕೀಟ ಕೊಳೆತಿರುತ್ತದೆ

ಇವೆಲ್ಲ ರಾಜಧಾನಿಯಲ್ಲಿ ದೊಡ್ಡ ಸುದ್ದಿ ಮಾಡುವುದಿಲ್ಲ.

o o o

ರಾಜಧಾನಿಯ ಬಸ್ಸುಗಳಿಗೆ ಯಾವ ವಿಶೇಷಣಗಳೂ ಕಡಿಮೆ ಅನ್ನಿಸುತ್ತಿಗೆ: ಅಸಮರ್ಪಕ, ಅಸಮರ್ಥ, ಅಯೋಗ್ಯ, ಎಲ್ಲವೂ ಕಡಿಮೆಯೇ

ದಿಲ್ಲಿಯ ಮೂವತ್ತು ಲಕ್ಷ ಜನರಿಗಿರುವ ಸಾರ್ವಜನಿಕ ಬಸ್ಸುಗಳ ಸಂಖ್ಯೆ ಏಳುನೂರು. ಸಕ್ರಿಯ ಸೇವೆಗೆ ಒದಗುವ ಬಸ್ಸುಗಳು ಅದಕ್ಕಿಂತ ಎಷ್ಟೋ ಕಡಿಮೆ

ಮುಂಜಾನೆ ಆಫೀಸುಗಳಿಗೆ ಹೋಗುವ ಜನ, ಸಂಜೆ ಮನೆಗೆ ಮರಳುವ ಜನ ನಿಲ್ದಾಣಗಳಲ್ಲಿ ಬಸ್ಸಿಗಾಗಿ ಮೈಲುದ್ದ ಕ್ಯೂ ನಿಂತು ಕಾಯುತ್ತಾರೆ. ಯಾವ ಬಸ್ಸೂ ಸಮಯಕ್ಕೆ ಸರಿಯಾಗಿ ಬರುವುದಿಲ್ಲ. ಬಂದ ಬಸ್ಸುಗಳು ಕೆಲವೇ ಮಂದಿಯನ್ನು ತುಂಬಿಕೊಂಡು ಹೋಗಿ ಬಿಡುತ್ತವೆ. ಮುಂದಿನ ಬಸ್ಸಿಗಾಗಿ ಅರ್ಧ ಗಂಟೆ ಕಾಯಬೇಕು. ಇನ್ನೊಂದು ಬಸ್ಸು ಬಂದ ಮೇಲೂ ಅಷ್ಟೇ. ಬರುವಾಗಲೇ ತುಂಬಿಕೊಂಡು ಬರುತ್ತದೆ. ನಾಲ್ಕು ಜನ ಹತ್ತಿದರೆ ಸರಿ, ಹೊರಟಿತು. ಕ್ಯೂವಿನ ಉದ್ದ ಹನುಮಂತನ ಬಾಲದಂತೆ ಬೆಳೆಯುತ್ತದೆ

ಇಷ್ಟಕ್ಕೇ ಮುಗಿಯಲಿಲ್ಲ. ಬಸ್ಸು ಬರುವ ತನಕ ಜನ ಸಾಲುಗಟ್ಟಿ ಕ್ಯೂ ನಿಲ್ಲುತ್ತಾರೆ. ಬಸ್ಸು ಬಂದಾಕ್ಷಣ ಕ್ಯೂ ಮಾಯ! ಜನ ಬಸ್ಸಿಗೆ ಮುತ್ತಿಗೆ ಹಾಕುತ್ತಾರೆ. ಶಕ್ತಿಗೆ ಅಂತಿಮ ಜಯ.

ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸಲು ಯಾರೂ ಯೋಚಿಸುವುದಿಲ್ಲ. ಕಾರಣ, ಬೆಳಗ್ಗೆ ಮತ್ತು ಸಾಯಂಕಾಲ ಎರಡು ಹೊತ್ತು ಬಿಟ್ಟರೆ, ಉಳಿದ ಸಮಯದಲ್ಲಿ ಪ್ರಯಾಣಿಕರ ಸಂಖ್ಯೆ ಕಡಿಮೆ. ಇದರಿಂದ ನಷ್ಟವಾಗುತ್ತದೆ, ಎನ್ನುವ ಭಯ.

ಹೆಚ್ಚಿನ ಬಸ್ಸುಗಳು ಕೊಳಕು, ಮುರುಕು. ಇವುಗಳಲ್ಲಿ ಪ್ರಯಾಣ ಮಾಡಿದಾಗ ದೊಡ್ಡ ಸಾಹಸದಲ್ಲಿ ಗೆದ್ದ ಅನುಭವವಾಗುತ್ತದೆ

ಟ್ಯಾಕ್ಸಿ ದರ ದುಬಾರಿ ಕಿಲೋಮೀಟರಿಗೆ 70 ಪೈಸೆ. ನಮಗೆ ಬೇಕಾದೆಡೆ ಟ್ಯಾಕ್ಸಿವಾಲ ಬರುವನೆಂಬ ನಂಬಿಕೆಯಿಲ್ಲ. ರಾತ್ರಿ ಹತ್ತುವರೆ ಗಂಟೆಯ ಮೇಲೆ ಬಸ್ಸು ಚಲಾವಣೆ ನಿಂತುಬಿಟ್ಟಾಗಲಂತೂ ಆತ ಹೇಳಿದ ದರಕ್ಕೆ ಒಪ್ಪಿ ಟ್ಯಾಕ್ಸಿ ಹತ್ತಬೇಕು.

ಸ್ಕೂಟರ್-ರಿಕ್ಷಾ ದರ ಕಿಲೋಮೀಟರಿಗೆ 35 ಪೈಸೆ. ಆದರೆ 50 ಪೈಸೆಗಿಂತ ಕಡಿಮೆ ಯಾರೂ ತೆಗೆದುಕೊಳ್ಳುವುದಿಲ್ಲ. ನಾವು ಹೋಗಬೇಕಾದಲ್ಲಿಗೆ ಆತನಿಗೆ ಬರಲು ಇಷ್ಟವಿಲ್ಲವೆಂದಾದರೆ "ಸಾಧ್ಯವಿಲ್ಲ" ಎಂದು ಬಿಡುತ್ತಾನೆ. ಟ್ಯಾಕ್ಸಿ ಹಾಗೂ ಸ್ಕೂಟರ್—ರಿಕ್ಷಾಗಳ ದರ ಇಷ್ಟನ್ನು ಇಳಿಸಬೇಕೆಂಬ ಚಳವಳಿ ನಡೆಯುತ್ತಲಿದೆ

(ಇಪ್ಪತ್ತೊಂದನೇ ಪುಟ ನೋಡಿರಿ)

TOP CHOICE
at
LOW COST

Fair Price Shop

Kulyadikars' Nutan Silks,

Phone: 115
BADAGUPET,
UDIPI.

Phone: 232A
HAMPANKATTA,
MANGALORE.

(Shop for shopping with confidence)

ಇಂದಿನ ದೀಪಾವಳಿ

ಎಣ್ಣೆ ನೀರಿಲ್ಲದಿದ್ದರೆ ಚಿಂತೆ ಬೇಡ
ಬೆಣ್ಣೆ ಸವಿಯೂಟವಿಂದೇನೂ ಬೇಡ
ದೇಶಭಕ್ತಿಯ ತೈಲ ಚಣಚಣಕು ಸುರಿದು
ಹೃದಯ ಹಣತೆಯುನ್ನೀಸಿ ಆಡುವ ಬಲಹಿಂದು

ಬರೆದವರು
ಶ್ರೀ ಶಿವಶಂಕರ

ಕಾಲಚಕ್ರ ಗರಗರನೆ ಎಡೆಬಿಡದೆ ನಿರಂತರವಾಗಿ, ಯಾರಿಗಾಗಿಯೂ ಕಾದು ನಿಲ್ಲದೆ ತಿರುಗುತ್ತಾ ಇರುತ್ತದೆ. ಅದಕ್ಕೆ ಬಿಡುವು ಎಂಬುದೇ ಇಲ್ಲ. ಅದೀಗ ದೀಪಾವಳಿಯನ್ನು ಕರೆಸುತ್ತದೆ.

ಅಂದು, ನರಕಾಸುರನ ಬಂಧನದಲ್ಲಿದ್ದ ಭಗಿನಿಯನ್ನು ಭಗವಾನ್ ಶ್ರೀ ಕೃಷ್ಣನು ಬಿಡುಗಡೆ ಗೊಳಿಸಿದ್ದನು. ನರಕಾಸುರ ನೀಯುತ್ತಿದ್ದ ನರಕ ಯಾತನೆಯು ಕೊನೆಯಾಯಿತೆಂದು ಜನರು ಹರ್ಷಗೊಂಡರು. ಆನಂದದಿಂದ ಎಣ್ಣೆ ಸ್ನಾನವಾಡಿದರು.

ಇಂದು ಆ ನರಕಾಸುರನಿಲ್ಲದಿದ್ದರೂ ನರಕ ಸದೃಶ ಯಾತನೆಯೂ ಯುವರ್ಣ್ರ ಪೈಶಾಚಿಕ ವರ್ತನೆಯು ಮನುಷ್ಯರೂಪದಲ್ಲಿರುವ ಪ್ರಾಣಿಗಳನ್ನು ಕಾಣ ಬಹುದು, ದೇಶ ವಿಭಜನೆಯ ಕ್ರೂರ ಘಾತಕದ ಸಮಯದಲ್ಲಿ ಮಾತ್ರವಲ್ಲ ಅದು ನಡೆದು ಹದಿನೇಳು ವರ್ಷಗಳುರುಳಿದ ಮೇಲೂ ಪಾಕಿಸ್ಥಾನವೆಂದು ಈಗ ಕರೆಯಲ್ಪಡುತ್ತಿರುವ ಪ್ರದೇಶದಲ್ಲಿ ನಮ್ಮ ಭಗಿನಿಯರು ಅಯುಬಾಸುರನ ಬಂಧನದಲ್ಲಿದ್ದಾರೆ. ಅಲ್ಲಿಂದ ತಪ್ಪಿಸಿಕೊಂಡು ಬರುವವರ ಸಂಖ್ಯೆಗೇನೂ ಬರಗಾಲವಿಲ್ಲ. ಆದರೆ ಹಾಗೆ ಬರಲು ಎಲ್ಲರಿಗೂ ಸಾಧ್ಯವೇನು?

ಬ್ರಹ್ಮದೇಶ, ಲಂಕೆ, ಆಫ್ರಿಕಾ ಹಾಗೂ ಇತರ ನಾಡುಗಳಲ್ಲಿರುವ ಭಾರತೀಯರು ಇಂದು ಅಭಿಮಾನ— ಗೌರವಗಳಿಂದ ಬಾಳುವಂತಿಲ್ಲ ಅಲ್ಲಿಂದ ಅವ್ಯಾಹತವಾಗಿ ಪ್ರವಾಹರೂಪದಲ್ಲಿ ಭಾರತೀಯರು ಬರುತ್ತಿದ್ದಾರೆ. ಕೆಲ ಚಿಕ್ಕ ಪುಟ್ಟ ಕಾರಣಗಳಿಗಾಗಿ ಕೆಲವರನ್ನು ಬರಲಿಕ್ಕೂ ಅಲ್ಲಿಯ ಸರಕಾರಗಳು ಬಿಡುವುದಿಲ್ಲ.

ಉತ್ತರದಲ್ಲಿ ಚೈನಾ ಸಹಸ್ರಾರು ಚದರ ಮೈಲು ಭೂಪ್ರದೇಶವನ್ನು ಆಕ್ರಮಿಸಿಕೊಂಡು ಮುನ್ನಡೆಯುತ್ತ ಬರುತ್ತಿದೆ, ಅಂದರೆ ನೇಫಾ, ಲಡಖ್ ಹಾಗೂ ಅಕ್ಸಾಯ ಚಿನ್ ಮುಂತಾದೆಡೆಗಳಲ್ಲಿರುವ ಜನತೆ—ನಮ್ಮ ಸ್ವದೇಶ ಬಾಂಧವರು—ಅವರ ಬಂಧನದಲ್ಲಿದ್ದಾರೆ.

ಹೀಗಿರುವಾಗ ನಾವು ಯಾರ ಬಿಡುಗಡೆಯ ಸಂತೋಷಾರ್ಥವಾಗಿ ಎಣ್ಣೆ ಸ್ನಾನ ಮಾಡುವುದು? ಈಗ ಸಂತೋಷ ವಿಲ್ಲವೆಂದಮಾತ್ರಕ್ಕೇನೆ ಪರಂಪರಾನುಗಳವಾಗಿ ಬಂದಿರುವ ಕೆಲವು ಅಭ್ಯಾಸಗಳನ್ನು ಬಿಡಲಿಕ್ಕಾಗುತ್ತದೆಯೇ? ಅಭ್ಯಾಸ ಬಲದಂತೆ ಸಂಪ್ರದಾಯದಂತೆ ಈ ವರ್ಷವೂ ಎಣ್ಣೆಸ್ನಾನ ಮಾಡೋಣವೆನ್ನುವಾಗ ಮತ್ತೆ ಕೆಲವು ವಿಷಯಗಳು ಜ್ಞಾಪಕಕ್ಕೆ ಬರುತ್ತವೆ. ಮೊದಲನೆಯದು ಎಣ್ಣೆಗೆ ಸಂಬಂಧಪಟ್ಟದ್ದು.

ಅಹಮದಾಬಾದಿನ ಅಂಗನೆಯರು ಅಡುಗೆಗೆ—ಸ್ನಾನದ ಮಾತು ಹಾಗಿರಲಿ—ಎಣ್ಣೆ ದೊರಕದಿದ್ದ ಕಾರಣ ವಿದ್ಯಾ ಮಂತ್ರಿ ಕುಮಾರಿ ಇಂದುಮತಿ ಚಿಮನಲಾಲರ ನಿವಾಸ ಸ್ಥಾನದಲ್ಲಿ ಸೇರಿ ತಮ್ಮ ಬೇಡಿಕೆಯನ್ನು ಮುಂದಿಟ್ಟರು. ವಿದ್ಯಾ ಮಂತ್ರಿಗೂ ಎಣ್ಣೆಗೂ ಏನು ಸಂಬಂಧವೆಂಬುದು ಬೇರೆ ವಿಷಯ ವಿದ್ಯಾ ಮಂತ್ರಿಯವರು ಸೀಗೆಕಾಯಿ ಅಲ್ಲ. ಹೆಣ್ಣಿನ ಸುಖ-ಕಷ್ಟ ಹೆಣ್ಣಿಗನೇ ಬೇಗ ಅರ್ಥವಾಗುತ್ತದಂತೆ. ಸ್ತ್ರೀ ಮಂತ್ರಿ ಇರುವಾಗ ನಾರಿಯರು ಅವರ ಬಳಿ ಹೋಗಿ ಬೇಡಿಕೆಯನ್ನು ಈಡೇರಿಸಿಕೊಡಲು ಕೇಳಿಕೊಳ್ಳುವದು ಸ್ವಾಭಾವಿಕ. ಏನೇ ಇರಲಿ, ಸ್ನಾನದ ಮಾತು ಬದಿಗಿರಲಿ, ದೈನಂದಿನ ಅಡುಗೆಗೂ ಅಲ್ಲಿ ಎಣ್ಣೆ ಸಿಗುವದಿಲ್ಲವೆಂದಾಯಿತು. ಈ ವಿಷಯ ಅಹಮದಾಬಾದಿಗೇನೇ ಸೀಮಿತವಾಗಿರುವದಿಲ್ಲ. ಕಲ್ಕತ್ತದಲ್ಲೂ ಎಣ್ಣೆಗಾಗಿ ಬಹಳ ಮಾತುಕತೆ ನಡೆದಿದೆ. ಇದರಲ್ಲಿ ಇನ್ನೊಂದು ಮುಖ್ಯ ವಿಷಯವೆಂದರೆ ಶುದ್ಧ ಎಣ್ಣೆ ಎಲ್ಲಿಯೂ ಸಿಗದಿರುವದು. ಕ್ರಯದ ಮಾತೂ ಇದೆ. ಸಾಮಾನ್ಯ ಮಾನವ, ದಿನಕ್ಕೆ ಮೂರೂವರೆ ಆಣೆ ಅಥವಾ ಇಪ್ಪತ್ತೆರಡು ಪೈಸೆ ಗಳಿಸುವವ ಇಂದು ಎಣ್ಣೆಕೊಳ್ಳುವದಾದರೂ ಹೇಗೆ? ಈ ಪರಿಸ್ಥಿತಿಯಲ್ಲಿ ತೈಲಾಭ್ಯಂಗ ಮಾಡಿಕೊಳ್ಳುವದಾದರೂ ಹೇಗೆ?

ಬಿಡಿ ಎಣ್ಣೆ ಸಿಗದಿದ್ದರೂ ಚಿಂತಿಲ್ಲ-ಸಂಪ್ರದಾಯಕ್ಕೆ ಭಂಗಬಾರದಂತೆ ಏನೋ ನಮ್ಮಿಂದಾದಷ್ಟಾದರೂ ನಡೆಯಿಸೋಣವೆಂದು ಬರೀ ನೀರಿನ ಸ್ನಾನವಾದರೂ ಮಾಡಲು ಮನಸ್ಸಾಗುವದು ಸಹಜವಿದೆ. ಅದಕ್ಕಾಗಿ ತಂಬಿಗೆ ತೆಗೆದು ಗಂಗಾ, ಯಮುನಾ, ಸಿಂಧೂ, ಕಾವೇರಿ, ಗೋದಾವರಿ......ಎನ್ನುವಾಗಲೇ ಮನೆಯಾಕೆ ರೀ,ರೀ ಎನ್ನುತ್ತಾಳೆ. ಏನಿದು ಅಪಶಕುನವೆಂದು ಹಾಗೆ ನಿಂತುಕೊಂಡು ಆಲೈಸಿದರೆ "ರೀ, ನೀರು ನಿಂತೈತೆ" ಶಬ್ದ ಕೇಳಿ ಬರುತ್ತದೆ. ಇದನ್ನು ವಿವರವಾಗಿ ಕೇಳುವ ಇಚ್ಛೆ ಯಾರಿಗಾದರೂ ಇದ್ದಲ್ಲಿ ಅವರು ಬೆಂಗಳೂರಿನ ಬೆಡಗಿನ ಬಿನ್ನಾಣಗಿತ್ತಿಯರ ಬಳಿ ಕೇಳಿಕೊಳ್ಳಬೇಕು. ಆಗ ಗೊತ್ತಾಗುತ್ತದೆ. ನಲ್ಲಿ ನೀರಿನ ಆಸೆ ಬಿಟ್ಟುಬಿಟ್ಟು ನಾರಿಯರ ನೇತ್ರಗಳ ನೀರಿನಿಂದಲೇ ಇಂದು ಮೀಯುವ ಮಂದಿ ಬಹಳ. ಅದು ಗಂಡ-ಹೆಂಡತಿ ಒಂದೇ ಕಡೆ ಇರುವಲ್ಲಿಯ ಮಾತು. ಅವರು ದೂರ ದೂರ ಇದ್ದಲ್ಲಿ ಆಚಾರ್ಯ ಕೃಪಲಾನಿಯವರ ಅವಸ್ಥೆಯೇ ಅವರಿಗೂ. ಶ್ರೀ ಕೃಪಲಾನಿಯವರು ಲೋಕಸಭೆಯಲ್ಲಿ ತನ್ನ ಸ್ವಂತ ವಿಷಯವನ್ನು ಹೊರಗೆಡಹಿದರು. ತಾನು ಸ್ನಾನ ಮಾಡದೆ ಇಪ್ಪತ್ತು ದಿನಗಳಾಗಿವೆಯೆಂದು ಅವರು ಹೇಳಿದರು. ಹೀಗಿರುವಾಗ ಕೇವಲ ನೀರಿನಿಂದಲಾದರೂ ಸ್ನಾನ ಮಾಡುವುದು ಹೇಗೆ?

ಹೋಗಲಿ, ಅದೇನು ಮಹಾ? ಮನುಷ್ಯರ ವಿಷಯ ಬಿಟ್ಟುಬಿಡುವ. ಅವರು ಹೇಗಾದರೂ ಸುಧಾರಿಸಿಕೊಂಡಾರು. ಆದುದರಿಂದ ಅವರು ಗೋಪೂಜೆಯನ್ನಾದರೂ ಮಾಡಲಿ—ಎನ್ನುವಾಗ ಹಳ್ಳಿಯ ರೈತನ ಮಾತು ಕೇಳಿಬರುತ್ತದೆ. "ನಿಮ್ಮ ಬೊಂಬಾಯಿ ನೋಡಿ, ದಿಲ್ಲಿ ನೋಡಿ, ಅರ್ಧಾಣೆ ಮಾತು ಹಾಗಿರಲಿ, ಹಳ್ಳಿಯಲ್ಲಿ ಎಣ್ಣೆ ಒಂದಿಷ್ಟು ಸಿಗುವದಾದರೂ ನೀರಿಗೇನೂ ಬರಗಾಲವಿಲ್ಲ. ಬರಗಾಲ ದಾಟಿ ಹೋಗಿದೆ"ನ್ನುತ್ತಾನೆ ಬೋರೆ ಗೌಡ. ಆದರಿಂದ ಆನಂದಗೊಂಡು ಮುದದಿಂದ ಅವರು ಗೋಪೂಜೆ ಮಾಡಲು ಮುಂದೆ ಬಂದಾರು. ಆಗ ಪೇಟೆಯವರಿಗೂ ಹಳ್ಳಿಯವರಿಗೂ ಜ್ಞಾಪಕಕ್ಕೆ ಒಂದು ವಿಷಯ ತಟ್ಟನೆ ಬರುತ್ತದೆ. "ನಾವು ಇಲ್ಲಿ ಪೂಜೆ ಮಾಡುತ್ತಿದ್ದೇವೆ. ಆದರೆ ಅಲ್ಲಿ...? ದಿನನಿತ್ಯ ಸಾವಿರಾರು ಗೋವುಗಳ ಕೊಲೆ ನಡೆಯುತ್ತಿದೆ. ಭಾರತ ಸರಕಾರ ಅದನ್ನು ತಡೆಯುವುದು ಹಾಗಿರಲಿ, ಹೊಸ ಹೊಸ ಆಧುನಿಕ ಯಂತ್ರ ಸುಸಜ್ಜಿತ ಕಸಾಯಿ ಕಾರ್ಖಾನೆಗಳನ್ನು ತೆರೆಯುತ್ತಿದೆ!" ಆಗ ಅವರ ಚಿತ್ತ ವಿಚಲಿತವಾಗುತ್ತದೆ ನಾವು ಪೂಜೆ ಮಾಡುವದಾದರೂ ಏತಕ್ಕೆ? ಅವರು ಕೊಲೆ ಮಾಡಲೇನು? ಈ ಪರಿಸ್ಥಿತಿಯಲ್ಲಿ ಗೋಪೂಜೆ ಮಾಡುವದಾದರೂ ಹೇಗೆ?

ಬೇಡ, ಬೇಡ, ಈ ಪೂಜೆ, ವ್ರತ ಇದೆಲ್ಲಾ ಇಂದು ಬೇಡ. ಏನೋ ದೊರಕುತ್ತಿರುವದರಲ್ಲಿ ಒಂದಿಷ್ಟು ಹೊಟ್ಟೆಗೂ ಒಂದಿಷ್ಟು ಬಟ್ಟೆಗೂ ಮಾಡಿಕೊಳ್ಳುವ ಎಂದು ಇಪ್ಪತ್ತೆರಡು ನೈಸೆ ಮಾನವ ಮಾರುಕಟ್ಟೆಗೆ ಹೋದರೆ ಅವನಿಗಿಂದು ಏನು ಸಿಗುತ್ತದೆ? ಅಷ್ಟು ಮುಂದಕ್ಕೆ ಹೋದರೂ ಯಾವುದೋ ಒಂದು ಅವ್ಯಕ್ತ ಲಗಾಮು ಅವನನ್ನು ಹಿಡಿದು ನಿಲ್ಲಿಸುತ್ತದೆ. ಭಾರತೀಯರು ಕೇವಲ ಭೋಗಗಳಿಗಾಗಿ ಇರುವವರಲ್ಲ. ಆದುದರಿಂದಲೇ ಅವರು ಪರಿಸ್ಥಿತಿಯತ್ತ ನೋಟ ಬೀರುತ್ತಾರೆ.

ಸಿರಿ-ಸಂಪತ್ತಿನ ಆಗಾರವೆನಿಸಿಕೊಂಡಿದ್ದ ಭಾರತದ ನಾಡು ಏಕೆ ದೀನ ಸ್ಥಿತಿಗೆ ಬಂದಿರುತ್ತದೆ? ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೂ ಉದ್ದಕ್ಕೆ ದೀಪಗಳನ್ನು ಉರಿಸಿದ್ದ ಭಾರತೀಯರು ಇಂದು ಒಂದು ದೀಪವಿಡಲೂ ಏಕೆ ಕತ್ತು ಉದ್ದ ಮಾಡಬೇಕಾಗಿರುತ್ತದೆ? ದೀಪಕ್ಕೆ ಕೊರತೆ ಬಂತೇನು? ಎಣ್ಣೆಯ ಅಭಾವವೇನು? ಅದರಲ್ಲೂ ಸಂಬಳ ಸಿಗುವ ಸಮಯವದು.

ಭೌತಿಕ ವಸ್ತುಗಳ ಅಭಾವವೆಂದು ದೀಪಾವಳಿ ಹಬ್ಬವನ್ನಾಚರಿಸದೆ ಇರಲು ಸಾಧ್ಯವೇನು? ತುರ್ತುಪರಿಸ್ಥಿತಿಗನುಸಾರವಾಗಿ ಆಚರಿಸುವ ರೀತಿ ಹೇಗೆ? ದೀಪಾವಳಿಯು ಶುಭಪರ್ವದಂದು ಅನೇಕ ಮಹಾ ಪುರುಷರುಗಳ ಜನನವಾಗಿದು

(ಇಪ್ಪತ್ತೊಂದನೆಯ ಪುಟ ನೋಡಿ)

WITH BEST COMPLIMENTS FROM:

NITIN INDUSTRIES

Manufacturers of

Ever Hot Tiffin Carriers, Tea Carriers

and

Aluminium School Bags for Bazaars,
Aluminium Card Cans,
Doffing Cans etc.
for Textile Mills.

24-B, Hamam Street,
Fort, Bombay-1.

Gram: Vannitin. Tel: 256431.

ಕಳ್ಳನಾದರೂ ಆತ ಅಪರಾಧಿಯಲ್ಲ

ನಿರ್ಗತಿಕ ಕಮ್ಮಾರ ತಾ ಕದ್ದು ಕೊಂಡೂ
ಅಪರಾಧಿಯಾಗಲಿಲ್ಲವು ನ್ಯಾಯದೆದುರು
ದೀನದಲಿತರ ಸೇವೆ ಮಾನವತೆ ಮರ್ಮ
ಅದ ತೊರೆದಾಗಲೇ ದಾನವರ ಧರ್ಮ ॥

ಅನುವಾದಕರು
ಶ್ರೀ ಕೆ. ಎಸ್. ಭಟ್, ಶಿರಾಡಿಪಾಲ್.

ಆ ಕಮ್ಮಾರನ ಮನೆಯಲ್ಲಿ ಅವನ ಮಕ್ಕಳೂ ಸೇರಿ ಒಟ್ಟಿಗೆ ಏಳು ಮಂದಿ ಇದ್ದರು. ಸನ್ 1957ರ ಆ ಕಷ್ಟದ ಕಾಲದಲ್ಲಿ—ಈ ಬಡ ಕುಟುಂಬ ಕಂಗೆಟ್ಟಿತು. ಆ ವರ್ಷ ವೃಷ್ಟಿಯ ವರ್ಷವಾದುದರಿಂದಲ್ಲ ಈ ಕಮ್ಮಾರನಿಗೆ ಕೆಲಸವೇ ಇಲ್ಲದಂತಾಗಿತ್ತು. ಕೊನೆಗೆ ಆತ ಸಿಕ್ಕಿ ಸಿಕ್ಕಿದ ಕಡೆಯಲ್ಲೆಲ್ಲ ಸಾಲಮಾಡಿ ತಂದು ತನ್ನ ಸಂಸಾರವನ್ನು ಸಾಕಿದ. ಆದರೆ ಕೊನೆಗೂ ಆತನಿಂದ ತನ್ನ ಪರಿವಾರವನ್ನು ಸಾಕಲಾಗಲಿಲ್ಲ. ಮನೆಯಲ್ಲಿದ್ದ ಚಿಲ್ಲರೆ ಸಾಮಾನು ಪಾತ್ರೆ ಪರಡಿ ಇವೆಲ್ಲವೂ ಉದರ ಪೋಷಣಕ್ಕಾಗಿಯೇ ಪೂರಿ ಹೋಯಿತು! ಇಷ್ಟಾದರೂ ಒಳ್ಳೆಯ ದಿನಗಳು ಬರಲಿಲ್ಲ. ಅಖಂಡವಾಗಿ ಮೂರು ದಿನ ಉಪವಾಸ ಮಾಡಿದ ಆತನ ಮಕ್ಕಳು ಜೀವನ್ಮೃತರಾಗಿದ್ದ ಆ ಸ್ಥಿತಿಯನ್ನು ಮಕ್ಕಳ ತಂದೆಯಾದ ಆ ಕಮ್ಮಾರ ನೋಡಲಾರದಾದ! ಆಹಾರಕ್ಕಾಗಿ ಕಾಡಿ ಬೇಡಿ, ಅತ್ತು ಕೊನೆಗೆ ಅಳುವುದಕ್ಕೂ ಚೈತನ್ಯವಿಲ್ಲದ ಆ ಪುಟ್ಟ ಮಕ್ಕಳ ಸ್ಥಿತಿ ಕಮ್ಮಾರನ ಹೃದಯವನ್ನೇ ಕರಗಿಸಿತ! ಆದರೆ ಆತ ಎಲ್ಲಿಂದಲೂ ಏನನ್ನೂ ತರಲಾರದವನಾಗಿದ್ದ. ಯಾರನ್ನು ಕೇಳಿದರೂ, ಒಂದು ಒಪ್ಪೊತ್ತಿನ ಊಟಕ್ಕೂ ಸಿಕ್ಕಲಾರದ ಆ ಪರಿಸ್ಥಿತಿಯಲ್ಲಿ ಆ ಕಮ್ಮಾರನು ಒಂದು ಹೊಸ ಬೀಗದ ಕೈಗೊಂಚಲು ಮತ್ತು ಒಂದು ಇಕ್ಕಳವನ್ನು ಹಿಡಿದುಕೊಂಡು ಮನೆಯಿಂದ ಹೊರ ನಡೆದನು. ಆತನ ಆಗಿನ ಪರಿಸ್ಥಿತಿ ಆತ ಎಂದೂ ಯೋಚಿಸದ ಆತನಿಂದ ಆಗದ ಕೆಲಸವನ್ನೂ ಮಾಡಿಸಿ ಬಿಟ್ಟಿತು! ದಿನವೂ ಆತ ಅದನ್ನೇ ಮಾಡತೊಡಗಿದ. ಸಂಜೆಗೆ ಮನೆ ಸೇರುವಾಗ ಜೋಳ, ಗೋಧಿ, ಅಥವಾ ಬೆಳ್ಳಿಯ ಪಾತ್ರೆ, ಇಲ್ಲದಿದ್ದರೆ ನಗದಿ ಹಣ ಇತ್ಯಾದಿ ಏನನ್ನಾದರೂ ಆತ ತಂದೇ ತರುತ್ತಿದ್ದ. ಆದರೆ ಎಲ್ಲಿಂದ? ಎಂಬುದು ಯಾರಿಗೂ ಗೊತ್ತಿರಲಿಲ್ಲ. ಅಂತು ಆ ಬಡ ಕುಟುಂಬದವರು ಈಗ ಹೊಟ್ಟೆ ತುಂಬ ಊಟ ಮಾಡುತ್ತಿದ್ದರು.

ಹೀಗೇ ನಡೆಯುತ್ತಿರಲು ಒಂದು ದಿನ ಜನಾಬ್ ಸಿಂಹ ಎಂಬ ಅಧಿಕಾರಿಯೋರ್ವರ ಮನೆಯಿಂದ ಈ ಕಮ್ಮಾರನು ಅಕ್ಕಿ ಗೋಧಿ ಮೊದಲಾದ ದವಸ ಧಾನ್ಯಗಳನ್ನು, ತನ್ನ ಕ್ರಮದಂತೆ ತಂದನು. ಆದರೆ ಸಂದರ್ಭ ವಶಾತ್ ಇದು ತಿಳಿದುಹೋಯಿತು! ಕೂಡಲೇ ಆತನನ್ನು ಹಿಡಿದು ಚೆನ್ನಾಗಿ ಹೊಡೆದು ಬಳಿಕ ಪೋಲೀಸರ ವಶಕ್ಕೊಪ್ಪಿಸಲಾಯಿತು. ಆತನ ಬೀಗದಕೈ ಗೊಂಚಲೂ ಸಿಕ್ಕಿತು. ಪೋಲೀಸಿನವರು ಕಳವಿನ ಅಪರಾಧವನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತ ಆ ಕಮ್ಮಾರನನ್ನು ಚೆನ್ನಾಗಿ ಹೊಡೆದ, ಹೊಡೆದು ಹಿಂಸಿಸಿ ಅರ್ಧ ಜೀವ ಮಾಡಿಬಿಟ್ಟರು! ಇಷ್ಟಾದರೂ ಆ ಕಮ್ಮಾರನು ಬಾಯಿ ಬಿಡಲಿಲ್ಲ! "ನಾನು ಏನು ಹೇಳುವುದಿದ್ದರೂ ಅದನ್ನು ಕೋರ್ಟಿನಲ್ಲಿ ಹೇಳುತ್ತೇನೆ! ಹೊಡೆಯಬೇಡಿ ನನ್ನನ್ನು" ಎಂಬ ಒಂದೇ ಸೊಲ್ಲು ಆತನ ಬಾಯಿಯಿಂದ ಬರುತ್ತಿತ್ತು. ಹೀಗಾಗಿ ಪೋಲೀಸರ ಹೊಡೆತ ವ್ಯರ್ಥವಾಯಿತು.

ಕೆಲವು ದಿನಗಳ ಬಳಿಕ ಆ ಕೇಸು ಕೋರ್ಟಿಗೆ ತರಲ್ಪಟ್ಟಿತು. ಕೈಗಳಿಗೆ ಬೇಡಿ ಇದ್ದಂತೆಯೇ ಆ ಕಮ್ಮಾರನನ್ನು ಕೋರ್ಟಿಗೆ ಕರೆತಂದು ವಿಚಾರಣೆಯ ಗೂಡಿನಲ್ಲಿ ನಿಲ್ಲಿಸಲಾಯಿತು. ಹೊಸ ಬೀಗದ ಕೈಗಳ ತಯಾರಿ, ಮೋಸದಿಂದ ಬೀಗ ತೆಗೆಯುವಿಕೆ, ಮತ್ತು ಕಳ್ಳತನ, ಇವೇ ಮೊದಲಾದ ಅಪರಾಧಗಳು ಆತನ ಮೇಲೆ ಹೊರಿಸಲ್ಪಟ್ಟಿದ್ದುವು "ಈ ರೀತಿ ಕಳವು ಮಾಡುವ ಈ ಕಸುಬುದಾರರಿಗೆ ಕಠಿಣ ಶಿಕ್ಷೆ ವಿಧಿಸದಿದ್ದರೆ, ಕಳ್ಳತನ ಹೆಚ್ಚಾದೀತು!" ಎಂದು ಮಾತಾಗಿ ಇದ್ದ ಪೋಲೀಸ್ ರಿಪೋರ್ಟಿನ ಉಲ್ಲೇಖ ಓದಲ್ಪಟ್ಟಿತು. ಕೊನೆಗೆ ಗೂಡಿನಲ್ಲಿ ನಿಂತ ಅಪರಾಧಿ ಕಮ್ಮಾರನ ವಿಚಾರಣೆಗೆ ಪ್ರಾರಂಭವಾಯಿತು.

ಕಮ್ಮಾರನು ಕಣ್ಣೀರು ಸುರಿಸುತ್ತ ಹೇಳತೊಡಗಿದ— "ಸ್ವಾಮೀ! ನಾನು ಅಪರಾಧಿಯಾಗಿ ಇದೇ ಮೊದಲ ಬಾರಿಗೆ ಕೋರ್ಟಿನ ಮುಖ ನೋಡಿದ್ದಾಗಿದೆ. ನಾನು ವ್ಯಭಿಚಾರ ಅಥವಾ ಕುಡಿತ— ಮೊದಲಾದ ದುಶ್ಚಟಗಳಿಗಾಗಿ ಈ ಅಪರಾಧವನ್ನು ಮಾಡಿದ್ದಲ್ಲ. ಈ ಕಸುಬಿನವನು ನಾನಲ್ಲ! ನಾನು ಬೀಗ ತೆಗೆದು ದವಸಧಾನ್ಯ, ಅಕ್ಕಿ, ಅದು ಸಿಕ್ಕದಿದ್ದರೆ ಬೆಳ್ಳಿಯ ಪಾತ್ರೆ-ಹಣ,-ಮುಂತಾದ್ದನ್ನು ಕಳವು ಮಾಡಿದ್ದು ನಿಜ. ಹುಜೂರ್! ಇದು ನನ್ನ ಅಪರಾಧ! ಆದರೆ ಕಳ್ಳತನ ಮಾಡಿ ಶ್ರೀಮಂತನಾಗಬೇಕೆಂದು ನಾನು ಬಯಸಿದ್ದಿಲ್ಲ! ನನ್ನ ಮುದ್ದು ಮಕ್ಕಳು— ಆಹಾರ ವಿಲ್ಲದೆ ಮೂರು ದಿನ ಉಪವಾಸ ಮಾಡಿದನಂತರ ಆಹಾರ ವಿಲ್ಲದೆ ಅವು ನನ್ನೆದುರಿಗೇ ಜೀವಂತ ಸಾಯುವುದನ್ನು ನೋಡಲಾರದೆ, ಅವರ ಹೊಟ್ಟೆಗಾಗಿ, ಕೇವಲ ಹೊಟ್ಟೆಗಾಗಿ ಈ ಕಳ್ಳತನ ಮಾಡಿದ್ದೇನೆ! ನನ್ನ ಮಕ್ಕಳು ಹೊಟ್ಟೆಗಿಲ್ಲದೆ ತಿಂಡಿಯನ್ನು ಬೇಡುತ್ತ ತಮ್ಮ ತಾಯಿಯ ಕಾಲು ಹಿಡಿದು ಬೇಡುವ ಆ ನೋವಿನ ದೃಶ್ಯ! ಹೊರಗೆಸೆದ ಎಲೆಯುಳ್ಳಿಯ ಸಿಪ್ಪೆಯನ್ನು ಹೆಕ್ಕಿ ತಿನ್ನುವ ಆ ದುರವಸ್ಥೆ! ಸ್ವಾಮೀ! ಅದನ್ನು ನೋಡಲಾರದೆ ಈ "ಕಳವು" ಪ್ರಾರಂಭಿಸಿದೆ, ನಾನು ಈ ಊರಿನ ಕಮ್ಮಾರನಾಗಿದ್ದೇನೆ. ಹೊಟ್ಟೆಗಿಲ್ಲದ, ಈ ಊರಿನ ಜಮೀನ್‌ದಾರರಲ್ಲಿ ವ್ಯಾಪಾರಿಗಳಲ್ಲಿ ಅಧಿಕಾರಿಗಳಲ್ಲಿ ಅಂಗಲಾಚಿ ಬೇಡಿದೆ! ಹುಜೂರ್! ಆದರೆ ಇದೇ ಊರಿನ ಕೆಲಸಗಾರನಾದ ನನಗೆ ಅವರಾರೂ ಒಪ್ಪೊತ್ತಿಗೆ ಬೇಕಾದ ದವಸ ಧಾನ್ಯಗಳನ್ನೂ ಕೊಡಲಿಲ್ಲ! ಈ ಸ್ಥಿತಿಯಿಂದಾಗಿ ನಾನು ಕೆಟ್ಟದಾರಿಯನ್ನು ಹಿಡಿಯಬೇಕಾಯಿತು. ಪೋಲೀಸಿನವರು ನನ್ನನ್ನು ಹೊಡೆದು ತುಳಿದು ನನ್ನ ಮೂಳೆ ಮುರಿದಿದ್ದಾರೆ! ಹುಜೂರ್! ಆದರೂ ಈ ಹಸಿವೆ ಹೆಚ್ಚಾಗಿದೆಯೇ ಹೊರತು ಕಡಿಮೆಯಾಗಿಲ್ಲ! ಈ ಪೋಲೀಸಿನವರು ನನ್ನನ್ನು ಕೊಂದು ಹಾಕಿದ್ದರೆ ಉಪಕಾರವಾಗುತ್ತಿತ್ತು ಸ್ವಾಮಿ! ನಾನು ಹೇಳಿದ್ದುದು ಸತ್ಯ! ನನಗೆ ಯಾವ ಶಿಕ್ಷೆಯನ್ನಾದರೂ ಕೊಡಿ! ಅನುಭವಿಸುತ್ತೇನೆ!" ಎಂದು ಹೇಳುತ್ತಲೇ ಕೆಳಗುರುಳಿ ಆತ ಬಿದ್ದುಬಿಟ್ಟನು. ಮೆಜಿಸ್ಟ್ರೇಟರ ಆಜ್ಞೆಯಂತೆ ಆತನಿಗೆ ತಣ್ಣೀರು ಚಿಮುಕಿಸಿ ಗಾಳಿ ಹಾಕಲಾಯಿತು. ಸ್ವಲ್ಪ ಹೊತ್ತು ಕಳೆದೊಡನೆ ಆತ ಎದ್ದು ಕುಳಿತನು.

ಅಪರಾಧಿಯ ಹೇಳಿಕೆಯನ್ನು ಕೇಳಿದ ಮೆಜಿಸ್ಟ್ರೇಟರು ಕೊನೆಗೆ ತೀರ್ಪನ್ನಿತ್ತರು. ಅವರ ತೀರ್ಪು ಹೀಗಿತ್ತು—

"ಹೊಟ್ಟೆಯ ಹಸಿವನ್ನು ತಡೆಯಲಾರದೆ ದುಃಖಿಸುತ್ತಿರುವ ಮಕ್ಕಳ ಆ ದಯನೀಯ ಪರಿಸ್ಥಿತಿಯನ್ನು ನೋಡಲಾರದ ಹೆತ್ತ ಕರುಳು—ತಂದೆ ತಾಯಂದಿರ ಬುದ್ಧಿ ಶೂನ್ಯವಾಗಿದ್ದು ಅವರು ಹೊಟ್ಟೆಗಾಗಿ ಇಂತಹ ಅಪರಾಧ ಮಾಡಿದರೆ- ಅಂಥವರು ಕ್ಷಮೆಗೆ ಪಾತ್ರರಾಗುತ್ತಾರೆ. ಇಂತಹ ಕಷ್ಟಮಯ ಕಾಲದಲ್ಲಿ ಶ್ರೀಮಂತರೂ ಸಮಾಜವೂ ನಿರ್ಗತಿಕರಾದ ಬಡವರಿಗೆ ಅಲ್ಪಸ್ವಲ್ಪವನ್ನಾದರೂ ದಾನರೂಪವಾಗಿ ಕೊಡದೆ ಸಹಕರಿಸದೆ ಬಡವರನ್ನು ಬದುಕಿಸದೆ ಇರುವುದಾದರೆ ಇದು ನಮ್ಮ ದೇಶದ ಮಹಾ ದೌರ್ಭಾಗ್ಯವೇ ಸರಿ! ಈಗ ಅಪರಾಧಿಯಾಗಿರುವ ಈ ಬಡ ಕಮ್ಮಾರನಿಗೆ ಅವನ ಮಕ್ಕಳ ಪೋಷಣೆಗಾಗಿ ನನ್ನ ಸಂಬಳದ ಹಣದಿಂದ ಪ್ರತಿ ತಿಂಗಳೂ ಇಪ್ಪತ್ತೈದು ರೂಪಾಯಿಗಳ ಉಪಾದಾನ ಕೊಡಲ್ಪಡುವುದು!" ಎಂಬುದಾಗಿ ಮೇಜಿಸ್ಟ್ರೇಟರು ಕೊಟ್ಟ ತೀರ್ಪನ್ನು ಓದಿ ಹೇಳಿದಾಗ—ಅದನ್ನು ಕೇಳಿದ ಕೋರ್ಟಿನಲ್ಲಿ ನೆರೆದ ನೂರಾರು ಜನರು ಆಶ್ಚರ್ಯಚಕಿತರಾಗಿ, ಆ ನ್ಯಾಯಾಧೀಶರ ಆದರ್ಶವನ್ನು ಕಂಡು ಅತ್ಯಂತ ಆನಂದಿತರಾದರು.

(ಹಿಂದೀ 'ಕಲ್ಯಾಣ'ದಿಂದ)

ಆಕ್ರಮಣಶೀಲ ವೈರಿಯನ್ನು ಅಳಿಸಿ, ಭಾರತದ ಭವ್ಯ ಪರಂಪರೆಯ ಧ್ವಜವನ್ನು ಎತ್ತಿ ಹಿಡಿಯೋಣ!

WITH THE BEST COMPLIMENTS OF THE SEASON—

From

Jyothi Talkies

MANGALORE.

ದೀಪಾವಳಿಯ ಶುಭಾಶಯಗಳು—

ಜ್ಯೋತಿ ಟಾಕೀಸ್

ಮಂಗಳೂರು.

ಕೋಟಿಯೊದೆಗಳೊಕ್ಕೂಟ *

"ಕರ್ಮಣ್ಯಕರ್ಮ ಯಃ ಪಶ್ಯೇತ್
ಅಕರ್ಮಣಿಚ ಕರ್ಮ ಯಃ
ಸಬುದ್ಧಿಮಾನ್ ಮನುಷ್ಯೇಷು
ಸಯುಕ್ತಃ ಕೃತ್ಸ್ನ ಕರ್ಮಕೃತ್"

—ಗೀತಾ

ಬಾನು ಬುವಿಯು ದೂರೆಂದು ದೂರುವರು
ಶ್ರೀ ದಿಗಂತ ಕಂಡಿಹರೆ?
ಪ್ರಕೃತಿ ಸ್ವರೂಪ ಬೇರೆಂದು ಸಾರುವರು
ಪ್ರೇಮ ಸಂಧಿಯ ಕಂಡಿಹರೆ?

ಕಡಲು ನೀರೊರತೆ ನೆಲದ ಮಣ್ಣೆಲ್ಲ
ಪವನ ತೆರೆಗಳಲ್ಲಿವೆ;
ಗಿರಿಯ ಘನಭಾರ ಧರೆಯು ಹೊರಬಲ್ಲ
ವಿವಿಧ ಪಲ್ಲವ ಕಪ್ಪುವಿವ.

ಎಸೆತು ರೂಪವಸಿತಿಗೆ ವಿರೂಪವು
ಬೆಳಕು ಕತ್ತಲೆಗಳಂತು;
ಕೃಷ್ಣವೇಣಿ ಗೌರಾಂಗಿಗೊಪ್ಪಲು
ಚೆಲುವ ಚೆಲ್ಲುವುದು ಮತ್ತು.

ಸುತ್ತ ಜಗವು ತಿಳ ಕರಿತ ಪಲ್ಲುಗಳು
ಮನ್ನೆ ನ ಲಗಾ ಸುಳಿವು;
ನಲ್ಲ ಗೋಡ ಮೆದೆ ಕಂಬ ಕಲ್ಲುಗಳು
ಮುದ್ದು ಪ ರುತಿಯ ನಿಲುವು.

ಒಪ್ಪ ನ್ರೇಪಿದೆ ಅಪ್ಪೆ ತೋಟವು
ಕಾಂತ ಕಬ್ಬಿಣದ ಕೂಟ;

ಲಜ್ಜೆ ನೊಗವಿರಲು ಸಜ್ಜೆ ಸೊಗವಿಂಲು
ಸತಿಯ ಬೇಟೆರದೂಟ

ಕುಂಭಕರ್ಣ ದಶಕಂಠ ಶೂರ್ಪಣಖಿ
ಲಂಕೆಯಲ್ಲಿ—ಮಾಯ ತನಯೆ;
ಮುಳ್ಳು ನೊಣಳೆ ಕೆಸಂಡಿದ ಕೆಡಿಯ ಕಡೆ
ನಿಲ್ಲು—ತಾವರೆಯ ಮನೆಯೆ.

ಆಳವೆಷ್ಟಿಹುದೊ ಅಗಲವಷ್ಟಿಹುದು
ಜಲಧಿಗದುವೆ ಗಾಂಭೀರ್ಯ;
ಮೇಲೆಯೆತ್ತಲು ಕೆಳಗೆವೊತ್ತಲು
ಶ್ರೀ ತ್ರಿವಿಕ್ರಮನ ಕಾರ್ಯ.

ಅಣುವಿಗಿಂತಲಣು ಮಹತಿಗಿಂಮಹತು
ದೇವನಿದ್ದು ಕಂಡಿಲ್ಲ;
ಸಸ್ಯಶ್ಯಾಮಲೆಯು ಸುಜಲೆ ಸುಫಲೆಯು
ಆಕ್ಕಿಯಿದ್ದು ಕ್ವಂಡಿಲ್ಲ.

ದೇಶ ಕೋಸಲದಿ ರಾಜ ದಶರಥ
ಕೈಕೆ ಮಂಥರೆಯರಲ್ಲಿ
ನಾ ಸ್ವತಂತ್ರನು ನಾ ಸುಮಂತ್ರನು
ದೂರು ಸೇರುತಿದೆ ಡಿಲ್ಲಿ.

ಕೆಂಚು ನೆತ್ತರಿನ ಮೊಂಸ ಮುದ್ದೆಯಲಿ
ಕೆಚ್ಚಲೊಳಗೆ ನೊರೆ ಹಾಲು;
ಗುಂಡಿ ಗೊಬ್ಬರದ ಹೊಂಡ ಗದ್ದೆಯಲಿ
ಹಚ್ಚ ಹಸಿರು ತೆನೆ ಕಾಳು.

ಪುಣ್ಯಕೋಟಿ ಪಶು, ವ್ಯಾಘ್ರನರ್ಬುದನು
ಹೃಗಯ ಸಂಪ್ರೀತಿ ಚೆಚ್ಚೆ;



ಕವಿ. ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.

† † †

ಅಣ್ಣ ತಂಗಿಯನು ಕೊಂದು ತಿಂದನೆ?
ದೇವದೇವಗದು ಮೆಚ್ಚೆ?

ವಿವಿಧ ರೀತಿಗಳ ವಿವಿಧ ನೀತಿಗಳ
ವಿವಿಧ ಜನರ ಜಗವೊಂದೇ;
ಈ ವಿಕಾರಗಳು ಯೊಪ್ರಕಾರಗಳು
ಭಿನ್ನವಲ್ಲ ಬುಡವೊಂದೇ!

ಕೋಟಿಯೊದೆಗಳೊಕ್ಕೂಟವಾಗಲಿ
ಸುಮನ ಮನಗಳರಳಿರಲಿ,
ಕಾಲಕೂಟದುರಿಯಿಂದ ಬೆಂದರೂ
ಕೊನೆಗೆ ಸೊದೆಯ ಸೊಗವಿಂಲಿ.

---

* ಮೈಸೂರಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ತಾ. 16—10—64ರಂದು ಜರಗಿದ ವಿವಿಧ ಭಾಷೆಗಳ ಕವಿಗಳ ಸಮ್ಮೇಳನದಲ್ಲಿ ಹಾಡಿದುದು.

Heartiest Deepavali Greetings
To all our patrons and well wishers.......

JAI BHARATH MILLS PRIVATE LIMITED

Regd. Office **Upendra Baug,**
UDIPI, S. K.

Phone 22 Telegram Protection

Manufacturers:

PURE AND FRESH—
COCONUT OIL, GINGELLY OIL
&
OILCAKES.

Distributors for:
Famous KELAGUR TEA.

Depots at

1) **"Chittaranjan Buildings"**
UDIPI.
Phone 11

2) **"Syndicate Bank Building"**
MANGALORE-1

Managing Agents

THE GENERAL INVESTMENT & COMMERCIAL CORPORATION, PRIVATE LIMITED
UDIPI

ಮಕ್ಕಳ ಮಮತೆಯ
"ಬಿಕ್ಕೊ" ರವರ

ಗ್ಲುಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು—ರುಚಿಕರ ಸೇವನೆಗೆ ಪ್ರಸಿದ್ಧಿಪಟ್ಟಿವೆ.

ಹಣ್ಣಿನ ಶರಬತ್ತುಗಳು ಅತಿಥಿಗಳ ಆದರದ ಸತ್ಕಾರಕ್ಕೆ ಅನುಕೂಲ.

ನಮ್ಮ ಎಲ್ಲಾ ತಯಾರಿಕೆಗಳು, ಮಂಗಳೂರು ಭವಂತಿ ರಸ್ತೆಯಲ್ಲಿರುವ ನಮ್ಮ ಡಿಪೋದಲ್ಲಿ ಸದಾ ದೊರಕುತ್ತವೆ.

ತಯಾರಕರು

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್,
ಕಾಪು, ದ. ಕ.

ಕನ್ನಡ ಸಾಹಿತ್ಯದಲ್ಲಿ ಯುವಜನರ ಚೇತನ

ಬರುವನಕ ಹಸಿರೊಂದು ಪೈಸುರಿದು ದುಡಿದು
ಬಂದ ಬಳಿಕೇನನೂ ಮಗನ ಕೊಡಬಹುದು
ಎಂಬ ಅನುಭವದಿಂದ್ರಜಾಲ ಶಕ್ತಿಯನು
ಕನ್ನಡದ ಹಿರಿ ಜನರು ತುಂಬುತಿರ್ಪರೇನು?

ಬರೆದವರು
ಶ್ರೀ ಎಸ್. ನಾರಾಯಣ ಬಲ್ಲಾಳ.

ಸಾಹಿತಿಗಳು ರಾಜಕಾರಣಿಗಳಾಗುವುದು ಸುಲಭ. ಆದರೆ ರಾಜಕಾರಣಿಗಳೆಲ್ಲಾ ಸಾಹಿತಿಗಳಾಗುವುದು ಸಾಧ್ಯವಿಲ್ಲ.

ಸಾಹಿತ್ಯಕ್ಕೂ, ರಾಜಕಾರಣಕ್ಕೂ ಇರುವ ವ್ಯತ್ಯಾಸವನ್ನು ಮೇಲಿನ ಮಾತು ಬಹು ಸುಂದರವಾಗಿ ತಿಳಿಸುತ್ತದೆ. ದಿ| ಮುದವೀಡು ಕೃಷ್ಣರಾಯರು ಬರಹಗಾರರಾಗಿದ್ದು, ಕನ್ನಡದ ರಾಜಕೀಯದಲ್ಲಿ ದುಡಿದವರು ಸಾಹಿತ್ಯದಲ್ಲಿ ಕೆಲವು ರಾಜಕಾರಣಿಗಳ ಚುಂಚು ಪ್ರವೇಶವನ್ನು ಅವರು ತೀವ್ರವಾಗಿ ಖಂಡಿಸಿದರು.

ಲೇಖನಿಯು ಪೂನೆ ರಾಜ್ಯದ ಇತಿಹಾಸವನ್ನು ಬಾಚಿ ಉರುಳಿಸಿದ ಉದಾಹರಣೆ ಇದೆ. ಆದರೆ ರಾಜನ ಶಕ್ತಿ ಸಾಹಿತ್ಯದ ಸಾರ್ವಭೌಮತ್ವ ಮಾಡಲು ಎಂದಿಗೂ ಸಾಧ್ಯವಾಗಿಲ್ಲ.

ಆದರೆ ನಮ್ಮ ಜನ ರಾಜಕಾರಣಿಗೆ ನೀಡುವ ಗೌರವವನ್ನ ಸಾಹಿತಿಗೆ ನೀಡುವುದಿಲ್ಲ. ಸಾಹಿತಿಯಿಂದ ಒಂದು ಚಿರಂಜೀವವಾದ ಕಾರ್ಯ ನಿರ್ವಹಿಸಲ್ಪಡುತ್ತದೆ. ಅವನ ಲೇಖನಿಯ ಪ್ರವಾಹವು ಕಾಲಾಂತರದ ವರೆಗೆ ಜನತೆಯ ಮನದಲ್ಲಿ ಸುಪ್ತ ಭಾವವನ್ನು ಕೆರಳಿಸುತ್ತ, ಅವನ ಕಾರ್ಯಕ್ಕೆ ಪ್ರಚೋದನೆ ನೀಡಬಲ್ಲುದು. ರಾಜಕಾರಣಿಯಾದರೋ ಅವನ ದೇಹದಲ್ಲಿ ಜೀವವಿರವಷ್ಟು ಕಾಲ ಜನಪ್ರಿಯತೆ ಪಡೆಯಬಹುದು. ಅವನ ಮರಣ ನಂತರವೂ ಕೆಲವು ಕಾಲ ಅವನ ಹೆಸರು ವೀರಗಾಥೆಯಾಗಬಹುದು. ಆದರೆ ಜನ ಜೀವನದ ದಿಕ್ಕು ದಿನ ದಿನವೂ ಬದಲಾಗುತ್ತಿರುವ ಈ ಸಂಧಿಗ್ಧದಲ್ಲಿ ರಾಜಕಾರಣಿಯ ಅಂದಿನ ಘೋಷಣೆ ಇಂದು ಮಕ್ಕಳಾಟಕೆಯಾಗಿ ತೋರುವುದು ಇಲ್ಲದಿಲ್ಲ.

ನಾವು ಕ್ರಿಸ್ತ ಪೂರ್ವದಲ್ಲೂ ಇದ್ದ ಸಾಹಿತಿಗಳ ಬಗ್ಗೆ ತೋರುವ ಆಸಕ್ತಿ, ಅವರ ಬರೆಹಗಳ ಬಗ್ಗೆ ನೀಡುವ ಗೌರವ ಅವರ ಲೇಖನಿಯು ಹಿಡಿತದ ಬಗ್ಗೆ ಸಂಶೋಧಿಸಲು ತೋರುವ ತವಕವನ್ನೇ ಒಬ್ಬ ರಾಜಕಾರಣಿಯ ಜೀವನದ ವಿಮರ್ಶೆಯಲ್ಲಿ ತೋರುವುದಿಲ್ಲ.

ಕನ್ನಡದ ಪರಿಸ್ಥಿತಿ

ಸದ್ಯದ ಪರಿಸ್ಥಿತಿಯಲ್ಲಿ ಕನ್ನಡ ಸಾಹಿತ್ಯದ ಪ್ರಗತಿ ಪಥವು ಕಡೆಯ ನಿಂತಿದೆಯೋ ಎಂದು ಭಾಸವಾಗುತ್ತದೆ. ಕನ್ನಡ ನಾಡಿನಲ್ಲಿ ದಿನ-ದಿನಕ್ಕೆ ಲೇಖಕರ ಸಂಖ್ಯೆ ಹೆಚ್ಚುತ್ತಿದೆ. ಆಧುನಿಕ ವಿಜ್ಞಾನದ ವಿಶಾಲ ಅನುಭವದೊಂದಿಗೆ, ತಜ್ಞ ವಿವೇಚನೆಯೊಂದಿಗೆ ನಮ್ಮ ಎಳೆಯ ತರುಣರು ಸ್ಫೂರ್ತಿಯುತರಾಗಿ ತಮ್ಮ ಸಾಹಿತ್ಯವನ್ನು ರಚಿಸುತ್ತಿರುವುದು ಆಶಾದಾಯಕವಾಗಿದೆ. ನಮ್ಮ ಎಳೆಯ ವರ್ಗದ ಸಾಹಿತ್ಯವು ಚೇತೋಹಾರಿಯಾಗಿದೆ ಒಂದು ಹೊಸ ವೈಶಿಷ್ಟ್ಯದ ಜಾಡನ್ನು ತುಳಿದಿದೆ ಎಂಬುದನ್ನು ನಾವು ಒಪ್ಪಬೇಕು

ಇಂತಹ ಪರಿಸ್ಥಿತಿ ಈಗ ಐದು-ಹತ್ತು ವರ್ಷಗಳ ಹಿಂದೆ ಇರಲಿಲ್ಲ. ಸಾಹಿತ್ಯವು ಕೇವಲ ಕೆಲವರೊಂದು ನಾಂದಿಗೆ ದೊರೆತ ವರಪ್ರದಾನ. ಅದಕ್ಕೆ ವಿಶೇಷ ಜ್ಞಾನ ಬೇಕು, ಅನುಭವಬೇಕು, ಸತತ ಅಭ್ಯಾಸವಿರಬೇಕು ಎಂದು ಕೆಲವರು ಅದರ ಬಗ್ಗೆ ಪ್ರಯತ್ನದ ಆಸಕ್ತಿಯನ್ನೇ ತೋರಲಿಲ್ಲ ಇನ್ನು ಕೆಲವರು ಕಥೆ ಬರೆಯುವವರಾಗಿಯೇ ಕಥೆ ಬರೆದರು. ಅವರು ಅಭ್ಯಾಸ, ಅನುಭವ ಅಥವಾ ತಿಳುವಳಿಕೆಯ ಗೊಡವೆಗೆ ಹೋಗದೆ ಕೇವಲ "ಕೀರ್ತಿಯ ಬಿಸಿಲ್ಗುದುರೆ"ಯನ್ನೇರಲೆಂದು ಆಶಿಸಿದರು. ಇದರಿಂದ ಸಾಹಿತ್ಯವೇನೋ ಬೆಳೆಯಿತು ಸಾಹಿತ್ಯದ ರಾಶಿಯೇ ಬಿಟ್ಟದಷ್ಟೇರಿತು ಆದರೆ ಅದು ರಸ ವಾಹಿನಿಯಾಗದೆ ನೀರಸ ಕೊಳಚೆಯೇ ಹೆಚ್ಚಾಗಿ ಹರಿಯುವಂತಾಯಿತು.

ಸಾಹಿತ್ಯವು ಮನುಷ್ಯನ ಸುಪ್ತ ಶಕ್ತಿಗೆ ದೇವರು ನೀಡುವ ಒಂದು ವರವೆಂಬುದು ನಿಜವಾದರೂ, ಅದು ಜನ್ಮಾಂತರ ಪ್ರಕೃತಿ ವಿಶೇಷವಾಗಿರದೆ ಸತತ ಅಭ್ಯಾಸ, ಅನುಭವದ ದೋಣಿಯ ಬಗ್ಗೆ ಉತ್ಸಾಹ ಹಾಗೂ ತಿಳುವಳಿಕೆಯ ಆಸಕ್ತಿ ಇದ್ದವರಿಗೆಲ್ಲಾ ಸಾಧಿಸಿಕೊಳ್ಳಲು ಸಾಧ್ಯವಿದೆ ಎಂದು ಹೇಳಬಹುದು ಐದು ವರ್ಷಗಳ ಇತ್ತೀಚೆಗೆ ನಮ್ಮ ಸಾಹಿತ್ಯದಲ್ಲಿ ಒಂದು ಹೊಸಚೇತನ ಮೂಡಿದಂತೆ ಕಾಣುತ್ತದೆ. ಈ ಚೇತನವು ಪ್ರವಹಿಸಲು ಕಾರಣ ಹಿರಿಯ ಸ್ಥಾಪಕಹಿತಾಸಕ್ತಿಯ ಲೇಖಕರಾಗಿರದೆ, ಎಳೆಯ ತರುಣ ವರ್ಗವರೇ ಎಂದು ನಿರ್ವಿವಾದವಾಗಿ ಹೇಳಬಹುದು.

ನವಪೀಳಿಗೆಯ ಲೇಖಕರು

ಈಗ ಸಾಹಿತ್ಯರಂಗದಲ್ಲಿ ತೋರಿ ಬರುತ್ತಿರುವ ಹೊಸ ಹೆಸರುಗಳಲ್ಲಿ ಹೆಚ್ಚಿನರು ಕಾಲೇಜಿನ ವಿದ್ಯಾರ್ಥಿಗಳು, ಮಧ್ಯಮ ತರಗತಿಯ ವಿದ್ಯಾವಂತರನೇಕರು, ಉಪಾಧ್ಯಾಯರು ಆಗಿದ್ದಾರೆ. ಅವರ ವಿಷಯ ಸಂಗ್ರಹದಲ್ಲಿ ನಾವಿನ್ಯತೆಯಿದೆ. ಜೀವನವನ್ನು ವಿಶ್ಲೇಷಿಸುವಲ್ಲಿ ಒಂದು ಹೊಸ ಮಾರ್ಗವಿದೆ. ಹೀಗಾಗಿ ಕೆಲವು ಸಮಯಗಳಿಂದ ಬಡವಾಗಿದ್ದ ಕನ್ನಡ ಸಾಹಿತ್ಯ ರಸ ಸೃಷ್ಟಿಯಾದಾಗಿದೆ.

ಆದರೆ ಇಂದು ಅವ್ಯಾಹತವಾಗಿ ಕೇವಲ ಈ ಎಳೆಯರ ಉತ್ಸಾಹವೇ ಕೊನೆಯವರೆಗ ಮುಂದುವರಿಯುವಂತಿಲ್ಲ. ಅವರ ಉತ್ಸಾಹಕ್ಕೆ ಹಿರಿ ಸಾಹಿತಿಗಳ, ಅನುಕೂಲವಂತರ, ಕನ್ನಡ ಅಸಂಖ್ಯಾತ ಓದುಗರ ನೆರವೂ ಅಗತ್ಯ.

ಇಂದು ಎಳೆಯ ಸಾಹಿತಿಗಳ ಉತ್ಸಾಹವನ್ನು ಎರಡು ವಿಧದಲ್ಲಿ ಅದುಮಿ ಹಿಡಿಯುತ್ತಾರೆ.

ಒಬ್ಬ ಉತ್ಸಾಹಿ ಯುವಕ ಸಾಹಿತಿ ಅದೆಷ್ಟೇ ಒಳ್ಳೆಯ ವೈಚಾರಿಕ ಕಾದಂಬರಿ ಬರೆದರೂ ಅದನ್ನು "ಮಾರ್ಕೆಟ್"ನಲ್ಲಿ ಕೇಳುವವರಿಲ್ಲ ಇಂದು ಕನ್ನಡದ ಹೆಚ್ಚಿನ ಓದುಗರು ಕನ್ನಡದ ಕೆಲವೇ ಅಗ್ರಮಾನ್ಯ ಸಾಹಿತಿಗಳ ಪುಸ್ತಕಕ್ಕೆ ಪ್ರಧಾನ ಪ್ರಾಶಸ್ತ್ಯ ಕೊಡುತ್ತಾರೆ. ನಮ್ಮ ಜನ ಸಾಹಿತ್ಯದ ಬಗ್ಗೆ ಉತ್ಸಾಹ ತೋರುವಂತೆಯೇ ಹೊಸತಿಗಾಗಿ, ಹೊಸ ಬರೆಗಾರರಿಗಾಗಿಯೂ ಸಹಾನುಭೂತಿ ತೋರಬೇಕು.

ಪ್ರೋತ್ಸಾಹದ ಕೊರತೆ

ಎರಡನೆಯದಾಗಿ ನಮ್ಮ ಸಾಹಿತ್ಯಕ್ಕೆ ಸರಕಾರದ ಪ್ರೋತ್ಸಾಹವಿಲ್ಲ ನಮ್ಮ ಭಾರತದ ಇತರ ಭಾಷಾ ಸಾಹಿತ್ಯಗಳ ಬಗ್ಗೆ ಆಯಾ ಸರಕಾರವು ತೋರುವ ಆಸ

(ಇಪ್ಪತ್ತೊಂಭತ್ತನೇ ಪುಟ ನೋಡಿ)

Authorised Distributors:

M/S. KARKERA SONS & COMPANY

KARKERA MANSION,

MAIDAN WEST ROAD, **MANGALORE-1**

ಸಮಾಜ ವಿಕಾಸ ಹಾಗೂ ಕುಟುಂಬ ಯೋಜನೆ

ಭಾರತವ ಕಾಡುತಿವೆ ಹಲವಾರು ಪ್ರಶ್ನೆ
ಭಾರತದ ನಿಬಂದಿರುವುದದು ಯಕ್ಷ ಪ್ರಶ್ನೆ
ಎಲ್ಲ ಪ್ರಶ್ನೆಗು ಇಂದು ಒಂದೆ ಉತ್ತರವು
ಸಲ್ಲಲಿತವಾದ ಕುಟುಂಬ ಯೋಜನೆಯು||

ಬರೆದವರು
ಶ್ರೀ ರೋಹಿದಾಸ್ ನಾಯಕ

ದಿನೇ ದಿನೇ ಹದಗೆಡುತ್ತಿರುವ ಆಹಾರ ಸಮಸ್ಯೆ ಹಾಗೂ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಜನಸಂಖ್ಯೆಯಿಂದ ಅರ್ಥಶಾಸ್ತ್ರಜ್ಞರು ದಂಗಾಗಿದ್ದಾರೆ. ಇಂದು ಪ್ರತಿ ತಾಸು-ತಾಸಿಗೆ, ನಿಮಿಷ ನಿಮಿಷಕ್ಕೆ ಪ್ರಜಾಭಿವೃದ್ಧಿಯಾಗುತ್ತಲಿದೆ. ಅದನ್ನು ನಿಯಂತ್ರಿಸುವದ ಗೋಸ್ಕರ ವಿಜ್ಞಾನಿಗಳು ಕೆಲವು ಕೃತ್ರಿಮವಾದ ಸಂತಾನ—ನಿರೋಧ ಕ್ರಮಗಳನ್ನು ಕಂಡು ಹಿಡಿದಿದ್ದಾರೆ. ಅದಕ್ಕೆ "ಕುಟುಂಬ ಯೋಜನೆ" ಎಂದು ಹೆಸರು. ಅದನ್ನು ಪಂಚವಾರ್ಷಿಕ ಯೋಜನೆಯವರು ತಮ್ಮ ಸಮಿತಿಯ ಮೂಲಕ ಸ್ವೀಕರಿಸಿ ಕುಟುಂಬ ಯೋಜನೆಯ ಬಗ್ಗೆ ಈ ಕೆಳಗಿನಂತೆ ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ.

'Under present circumstances, an increase in manpower resources does not strengthen the economy; but, in fact it weakens it. It retards economic progress and limits seriosuly the expansion of social services, so essential for civilised existance. In planning *for a rising standerd of life and for* improvement in the health of nation, family planning is a vital step"

ಇಂದಿಗೆ ಎರಡು ಸಾವಿರ ವರ್ಷಗಳ ಹಿಂದೆ ಜಗತ್ತಿನ ಜನಸಂಖ್ಯೆ ಕೇವಲ ಇಪ್ಪತ್ತೈದು ಕೋಟಿ ಮಾತ್ರವಿತ್ತು. ಈಗ ನಮ್ಮ ಭಾರತದ ಜನಸಂಖ್ಯೆಯೇ ೪೫ ಕೋಟಿಗೆ ಸಮೀಪಿಸುತ್ತಿದೆ. ಈ ರೀತಿ ಅಸಾಧಾರಣವಾದ ಜನಸಂಖ್ಯೆಯ ಹೆಚ್ಚಳ ವಿಜ್ಞಾನಿಗಳನ್ನು ದಂಗುಬಡಿಸಿದರೆ ಆಶ್ಚರ್ಯವೇನು? ೧೭೯೮ರಲ್ಲಿ 'ಮಾಲ್ಥಸ್' ಎಂಬ ಆಂಗ್ಲ ಅರ್ಥಶಾಸ್ತ್ರಜ್ಞನು 'ಜನಸಂಖ್ಯೆಯು ಭೂಮಿತಿ ದಾಮಾಶಯದಲ್ಲಿ (ಅಂದರೆ ೨,೪,೮) ಈ ಪ್ರಕಾರವಾಗಿ ಮತ್ತು ಆಹಾರ ಪೂರೈಕೆಯು ಅಂಕ ಗಣಿತ ದಾಮಾಶಯದಲ್ಲಿ (ಅಂದರೆ ೨-೩-೪-೫) ಈ ಪ್ರಕಾರವಾಗಿ ಏರುತ್ತದೆ-ಎಂದು ಬರೆದಿರುವದು ಹುಸಿಯಲ್ಲ. ಅವನ ಈ ತತ್ವವನ್ನು ಕೆಲವು ರಾಷ್ಟ್ರಗಳು ಒಪ್ಪದಿದ್ದರೂ ಭಾರತದಂಥ ದೇಶಕ್ಕೆ ಅದು ಸರಿಯಾಗಿದೆ?

ಈ ರೀತಿ ದಿನೇ ದಿನೇ ಅಭಿವೃದ್ಧಿಯಾಗುತ್ತಿರುವ ಜನಸಂಖ್ಯೆಯ ವಿಚಾರವಾಗಿ ಅವಲೋಕಿಸಿದರೆ, ವಿಜ್ಞಾನ ಪ್ರಗತಿಯೇ ಇದಕ್ಕೆ ಕಾರಣ ಎನ್ನಬಹುದು. ಮನುಷ್ಯನು ತನ್ನ ಬುದ್ಧಿ ಶಕ್ತಿಯ ಸಹಾಯದಿಂದ ವಿಜ್ಞಾನವನ್ನು ಆಳವಾಗಿ ಮಾಡಿಕೊಂಡದಲ್ಲದೆ ಮರಣ ಸಂಖ್ಯೆಯನ್ನೂ ತಡೆ ಹಿಡಿಯುವಷ್ಟು ಸಾಮರ್ಥ್ಯಶಾಲಿಯಾಗಿದ್ದಾನೆ. ವಿಜ್ಞಾನ ಪ್ರಗತಿಯಾಗುವದಕ್ಕಿಂತ ಮುಂಚೆ, ಪ್ಲೇಗು, ಮಾರಿ(ಬೇನೆ, ಪೈಲಿ ಮುಂತಾದವುಗಳಿಂದ ಜನರು ಸಾಯುತ್ತಿದ್ದರು, ಆದರೆ ಈಗ ಔಷಧ ಮತ್ತು ಪ್ರತಿಬಂಧಕ ಉಪಾಯಗಳಿಂದ ಈ ಸಾಯುವ ಸಂಖ್ಯೆ ಕಡಿಮೆಯಾಗಿದೆ. ಆದರೆ ಮರಣ ಸಂಖ್ಯೆಯಂತೆ ಜನಸಂಖ್ಯೆ ಕಡಿಮೆಯಾಗುತ್ತಿಲ್ಲ ಇದರ ಪರಿಣಾಮವಾಗಿ ಇತಿಹಾಸದಲ್ಲಿ ಎಂದೂ ಕಾಣದ ಜನಸಂಖ್ಯೆಯ ಏರಿಕೆಯನ್ನು ಈಗಿನ ಇತಿಹಾಸ ಸಾರುತ್ತಲಿದೆ.

ಪ್ರಪಂಚದಲ್ಲಿಯ ಇಂದಿನ ಜನಸಂಖ್ಯೆ ಸುಮಾರು ೩೫೦ ಕೋಟಿಯಾಗಬಹುದೆಂದು ಊಹಿಸಲಾಗಿದೆ ಇದರಲ್ಲಿ ಸರಿ ಅರ್ಧಪಾಲು ಜನಸಂಖ್ಯೆ ಭಾರತ ಹಾಗೂ ಚೀನಾ ರಾಷ್ಟ್ರಗಳದ್ದೇ ಆಗುತ್ತದೆ. ಹೀಗಾಗಿ ಚೀನಾದಲ್ಲಿ ವಸತಿ ಸೌಕರ್ಯಕ್ಕೆ ಏರ್ಪಾಡು ಮಾಡಲಾಗದೆ ಸುಮಾರು ೧೦ ಕೋಟಿಯಷ್ಟು ಜನರ ವಾಸ ಜವಳು ಭೂಮಿ ಹಾಗೂ ನದಿಯಲ್ಲಾಗಿದೆ ಕೆಲವರಂತೂ ದೋಣಿಗಳ ಮೇಲೆಯೆ ಮನೆ ಕಟ್ಟಿ ವಾಸಮಾಡುವದಾಗಿದೆ. ಇನ್ನು ಈ ದೇಶಗಳಲ್ಲಿ ಆಹಾರ ಸಮಸ್ಯೆಯ ಅಭಾವ ಪದೇ ಪದೆ ಆಗುತ್ತಿರುತ್ತದೆ. ಹೋದ ವರ್ಷ ಚೀನದ ಬರಗಾಲದಲ್ಲಿ ಕೋಟಿಗಟ್ಟಲೆ ಜನರು ಸತ್ತಿದ್ದು ಹೀಗೆಯೇ.

ಇನ್ನು ಭಾರತದಲ್ಲಿ ಈ ವರ್ಷ ಆಹಾರದ ಅಭಾವ ಎಂದೂ ಕಂಡರಿಯದ ಮಟ್ಟಕ್ಕೆ ತಲುಪಿದೆ. ಆಹಾರದ ಅಭಾವ ದಿನೇ ದಿನೇ ಹದಗೆಡುತ್ತಿದ್ದರೂ ಜನಸಂಖ್ಯೆ ಪರಿಮಾಣ ಕಡಿಮೆಯಾಗುತ್ತಿಲ್ಲ. ಕೆಲವರ ಅಭಿಪ್ರಾಯದಂತೆ ನಮ್ಮ ದೇಶದಲ್ಲಿ ದಿನಾಲು ಸುಮಾರು ಐವತ್ತು ಸಾವಿರ ಜನರು ಹುಟ್ಟುತ್ತಾರಂತೆ. ಭಾರತದ ಪ್ರಸಿದ್ಧ ಜೀವ ವಿಜ್ಞಾನ ತಜ್ಞ, ಡಾ| ಚಂದ್ರಶೇಖರ ಇವರು ಜನಸಂಖ್ಯೆ ಇದೇ ರೀತಿಯಲ್ಲಿ ಬೆಳೆಯುತ್ತ ಹೋದರೆ ೧೯೮೬ನೇ ವರ್ಷದೊಳಗಾಗಿ ಭಾರತದ ಜನಸಂಖ್ಯೆ ೧ ಮಹಾಪದ್ಮವಾಗುವದರಲ್ಲಿ ಸಂದೇಹವಿಲ್ಲ' ಎಂದು ಹೇಳಿದ್ದಾರೆ ಸುಪ್ರಸಿದ್ಧ ಬರಹಗಾರ ಅಲ್ಡನ್ ಹಕ್ಸ್ಲೇ ಹೇಳುವದೇನಂದರೆ "ಇಂದಿನ ಯುಗವು ಸ್ಪುಟ್ನಿಕ್" ಯುಗವಾಗಿರದೆ ಮೀರಿದ ಜನಸಂಖ್ಯೆಯ ಯುಗವಾಗಿದೆ" ಎಂದಿದ್ದಾರೆ.

ನಮ್ಮ ದೇಶವನ್ನು ಸುತ್ತ ಮುತ್ತಲಿನ ರಾಷ್ಟ್ರಗಳಿಗೆ ಹೋಲಿಸಿದರೆ ನಮ್ಮ ದೇಶದ ಜನಸಂಖ್ಯೆಯು ಅರಿವಾಗುತ್ತದೆ ನಮಗೆ.

೧೯೫೦-೫೮ರ ಅವಧಿಯಲ್ಲಿ ಅಮೇರಿಕೆಯಲ್ಲಿ ೨೮.೫. ಇಂಗ್ಲೆಂಡದಲ್ಲಿ ೧೮.೧, ಫ್ರಾನ್ಸ್ ೧೮, ಜರ್ಮನಿ ೧೭—ಈ ಪ್ರಕಾರ ಜನಸಂಖ್ಯೆ ಏರಿದರೆ ಭಾರತದಲ್ಲಿ ೨೫ ಜನಸಾಂದ್ರತೆಯು ಕೂಡ ಕೆನಡಾದಲ್ಲಿ ೩, ಅಮೇರಿಕೆಯಲ್ಲಿ ೫೦, ರಷ್ಯಾ ೨೩ ಆದರೆ ಭಾರತದಲ್ಲಿ ೨೮೭.

ಆದರೆ ಜನಸಂಖ್ಯೆಯು ಹೆಚ್ಚಳದಂತೆ ಆಹಾರ ಧಾನ್ಯದ ಹೆಚ್ಚಳಿಕೆಯಾಗುತ್ತಿಲ್ಲ. ಒಕ್ಕಲುತನದ ಸುಧಾರಣೆ ವೈಜ್ಞಾನಿಕ ಸಂಶೋಧನೆ ಮುಂತಾದವುಗಳು ಜನಸಂಖ್ಯೆಯ ಏರುಪಿಕೆಯೊಡನೆ ಸರಿಸಾಟಿಯಾಗಲಾರವು. ಆದ್ದರಿಂದ ಹೆಚ್ಚಾದ ಜನಸಂಖ್ಯೆಯು, ಹಸಿವೆಯಿಂದ ಕಂಗಾಲಾಗುವ ಜನರ, ಗೋಳು ತಪ್ಪಿಸಬೇಕಾದರೆ 'ಕುಟುಂಬ ಯೋಜನೆ' ಅವಶ್ಯವಾದದ್ದು. ಬ್ರಹ್ಮಚರ್ಯ, ಮದುವೆಯ ಮುಂದೂಡುವಿಕೆ ಮೊದಲಾದವುಗಳು ಯಶಸ್ವಿಯಾಗಲಾರವು. ಯಾಕೆಂದರೆ ಜನರ ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳುವದು ಅಸಾಧ್ಯ. ಅದು ನಿಜವಾದ ಸನ್ಯಾಸಿಗಳಿಗೆ ಮಾತ್ರ ಸಾಧ್ಯ ಎಂದು ಪ್ರೊ. ಉಮಾಕಾಂತ ಶಾಸ್ತ್ರಿಯವರ ತರ್ಕ. ಆದ್ದರಿಂದ ಯೋಜನಾಬದ್ಧ ಸಂತಾನ ನಿಯಮಗಳೇ ಸೂಕ್ತವಾದದ್ದೆಂದು ತಿಳಿದಿದ್ದಾರೆ.

ಒಂದು ಕುಟುಂಬದಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕಾದರೆ, ಸುಖ-ಶಾಂತಿಗಳು ನೆಲೆಸಬೇಕಾದರೆ ಮತ್ತು ತಾಯಂದಿರ ಆರೋಗ್ಯ ದೃಷ್ಟಿಯಿಂದ ಸಂತತಿ ನಿಯಮತೆ ಯೋಗ್ಯವಾದದ್ದು, ಯೋಜನಾಬದ್ಧ ಸಂತಾನ ಕ್ರಮವು ಕೇವಲ ಸಮಾಜಕ್ಕಲ್ಲದೆ ಪ್ರತಿ ವ್ಯಕ್ತಿಯ ಸಮಸ್ಯೆಗೂ ಪರಿಹಾರ ನೀಡುವಂಥಹದಾಗಿದೆ. ಜನರ ಜೀವನ ಮಟ್ಟ ಏರಲೂ, ಮನುಷ್ಯನು ಸುಖಿಯಾಗಬೇಕಾದರೂ ಯೋಜನಾಬದ್ಧ ಸಂತಾನ ಕ್ರಮ ಅಥವಾ ಕುಟುಂಬ ಯೋಜನೆಯೇ ಏಕಮೇವ ಸಾಧನವಾಗಿದೆ.

ಆದ್ದರಿಂದ ಕುಟುಂಬ ಯೋಜನೆ ದೇಶದ ತುಂಬ ಪಸರಿಸುವಂತಾಗಬೇಕು. ಅಲ್ಲಲ್ಲಿ ಯೋಜನಾಕೇಂದ್ರಗಳನ್ನು ಸ್ಥಾಪಿ

ದೀಪಾವಳಿಯ
ನಮ್ಮ ಗ್ರಾಹಕರಿಗೆ, ಹಿತೈಷಿಗಳಿಗೆ
ಶುಭ ಸಂತೋಷಗಳನ್ನು ತರಲಿ!

'ಶೀರಾ' ಉಕ್ಕಿನ ಫರ್ನಿಚರುಗಳಿಂದ
ನಿಮ್ಮ ಮನೆ-ಆಫೀಸುಗಳು ಸುಸಜ್ಜಿತವಾಗಿರಲಿ

ಇಬ್ಬಗೆಯ ಉಪಯೋಗಕ್ಕೆ ಸೋಫಾ-ಕಂ-ಬೆಡ್
ಸೋಫಾವನ್ನು ರಾತ್ರಿಯಲ್ಲಿ ಬೆಡ್ ಆಗಿ
ಉಪಯೋಗಿಸಬಹುದು

ಶೀರಾ ಉಕ್ಕಿನ ಕ್ಯಾಬಿನೆಟ್ಟುಗಳು ಮೂರು ಸೈಜುಗಳಲ್ಲಿ ದೊರೆಯುತ್ತವೆ.
ಕಿಟಿಕಿ-ಬಾಗಿಲುಗಳು, ಕಂಪಾಂಡ್-ಗೇಟ್‌ಗಳು, ರೋಲಿಂಗ್ ಶಟ್ಟರ್ಸ್ ರೂಫ್ ಟ್ರಸ್ಸಸ್ ಮೊದಲಾದ ಸ್ಟೀಲಿನ ಕಟ್ಟಡ ಸಾಹಿತ್ಯ ಸಾಮಗ್ರಿಗಳೂ ದೊರೆಯುತ್ತವೆ.
ಚಿತ್ತದ ವೈವಿಧ್ಯಪೂರ್ಣ ಫರ್ನಿಚರುಗಳೂ ಸಿಗುತ್ತವೆ.

ವೈವಿಧ್ಯತೆಯು ನಮ್ಮ ವೈಶಿಷ್ಟ್ಯ

ಸಂದರ್ಶಿಸಿರಿ:

ಶಾಸ್ತ್ರಿ ಅಂಡ್ ಕಂಪೆನಿ,
ಹಂಪನಕಟ್ಟೆ, ಮಂಗಳೂರು.

Phone: 788 Grams: 'Shastrico'

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ವ್ಯಾಜ್ಯ ನಂ. 275/64.

ಅನಂತರಾಮ ಕೆದಿಲಾಯ— ವಾದಿ.

ಮತ್ತು

ದೈಯಕ್ಕ ಹೆಂಗ್ಸು ಕೂಡಾ—

ಪ್ರತಿವಾದಿರು.

1ನೇ ಪ್ರತಿವಾದಿ

ದೈಯಕ್ಕ ಹೆಂಗ್ಸು, ಕಂಞ ಪೂಜಾರಿ ಸೊಸೆ ಪುತ್ತೂರು ತಾಲ್ಲೂಕು ಕುರಿಯ ಗ್ರಾಮದ ಮೂಡಲ ಎಂಬಲ್ಲಿ.

ಮೇಲ್ಕಂಡ ವ್ಯವಹರಣೆಯಲ್ಲಿ ವಾದಿಯು ಗೇಣಿ ಬಾಕಿ ಬಗ್ಗೆ ನಿಮ್ಮ ಮೇಲೆ ಸದ್ರಿ ಕೋರ್ಟಿನಲ್ಲಿ ಹೂಡಿದ ದಾವೆಯು ನವಂಬರ ೬ನೇ ತಾರೀಕಿಗೆ ನಿಮ್ಮ ವಿವಾದಾಂಶವನ್ನು ನಿರ್ಧರಿಸುವರೆಯೂ ನಿಮ್ಮ ಹಾಜರಾತಿ ಬಗ್ಗೂ ಇಟ್ಟಿರುತ್ತದೆ. ಆದುದರಿಂದ ಸದ್ರಿ ವಾಯಿದೆಯ ದಿವಸ ಬೆಳಗ್ಗೆ 11ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷೆ ಮಾಡಿ ದಾವೆಯನ್ನು ಮುಂದುವರಿಸಲಾದೀತು ಎಂತ ಕೋರ್ಟಿನ ಹುಕ್ಕುಂ ಪ್ರಕಾರ ತಿಳಿಸಲಾಗಿಯದೆ.

S.D/ N. Subramanyam.
Advocate for Plaintiff

ಮೊಕ್ಕಾಂ ಪುತ್ತೂರು ತಾ. 22.10.1964

ಸಿ ಯೋಗ್ಯ ಡಾಕ್ಟರರನ್ನು ನಿಯಮಿಸಬೇಕು. ಜವಾಬ್ದಾರಿಯಿಲ್ಲದೆ ಮಕ್ಕಳನ್ನು ಹೆತ್ತು ಸಾಕಲಾರದ ಜನರಲ್ಲಿ ವಿದ್ಯಾಪ್ರಸಾರ ಕಡ್ಡಾಯವಾಗಿ ಆಗುವಂತಾಗಬೇಕು. ಈಗ ಕೆಲವೆಡೆ ಈ ಯೋಜನಾ ಕೇಂದ್ರದ ಕಾರ್ಯ ಯಶಸ್ವಿಯಾಗಿ ಪ್ರಸಾರವಾಗುತ್ತಿದೆ.

ನಮ್ಮ ಯೋಜನಾ ಆಯೋಗದ ಕಾರ್ಯಕರ್ತರು ಇದನ್ನು ಬಹುಮಟ್ಟಿಗೆ ಯಶಸ್ವಿ ಗೊಳಿಸಿದ್ದಾರೆ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ೭೫ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಖರ್ಚುಮಾಡಿರುವರು ಅವುಗಳಲ್ಲಿ ೨೨ ಹಳ್ಳಿಗಳಲ್ಲೂ, ೧೨೦ ಪಟ್ಟಣಗಳಲ್ಲೂ ಸಂತಾನ ನಿಯಂತ್ರಣಾ ಯೋಜನಾ ಕೇಂದ್ರಗಳನ್ನು ಮೊಟ್ಟಮೊದಲಿಗೆ ತೆರೆಯಲಾಯಿತು. ಎರಡನೇ ಯೋಜನೆಯಲ್ಲಿ ೫ ಕೋಟಿ ರೂಪಾಯಿ ಖರ್ಚು ಮಾಡಿದ್ದಾರಲ್ಲದೆ ೨೫೦೦ ಯೋಜನಾಕೇಂದ್ರಗಳನ್ನು ತೆರೆದಿದ್ದಾರೆ. ಮೂರನೇ ಯೋಜನೆಯಲ್ಲಿ ೫೦ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಮಂಜೂರು ಮಾಡಿದ್ದಾರೆ "ಜ್ಯೂಲಿಯನ್ ಹಕ್ಸಲೇ" ಇವರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ "ಆರ್ಥಿಕ ದೃಷ್ಟಿಯಿಂದಲೇ ವಿಚಾರಿಸಿದರೆ ಜನಸಂಖ್ಯೆಯ ನಿಯಂತ್ರಣಕ್ಕಾಗಿ ಮಾಡುವ ಖರ್ಚು ಬಂಡವಾಳಗಳನ್ನು ತೊಡಗಿಸುವ ವಿಧಾನಗಳಲ್ಲಿ ಕುಟುಂಬ ಯೋಜನೆಯೂ ಒಂದು"ಎಂದು.

ಕುಟುಂಬಯೋಜನೆಯಲ್ಲಿಯ ಕೆಲವು ದೋಷಗಳು.

(೧) ಕೆಲವರು ಅಭಿಪ್ರಾಯ ಪಡುವದೇನಂದರೆ ಇದು ತಾಯಂದಿರ ಹಾಗೂ ಮಕ್ಕಳ ಆರೋಗ್ಯಕ್ಕೆ ಹಾನಿಯನ್ನು ತಂದೊಡ್ಡುವದು ಎಂದು.

(೨) ಇಂಥ ಸುಲಭ ಮತ್ತು ಸರಕಾರದ ಪುಕ್ಕಟೆ ಯೋಜನೆಯಿಂದ ನವತರುಣ ತರುಣಿಯರ, ಸ್ವಭಾವ, ವರ್ತನೆ ಕೆಡಬಹುದೆಂಬ ಭಯ ಕೆಲವರಿಗೆ ಇದೆ. ಅವರ ನೈತಿಕ ಮಟ್ಟ ಕುಗ್ಗಬಹುದು. ಪಾಪಕ್ಕಾಗಿ, ಸಮಾಜಕ್ಕಾಗಿ, ಹೆದರುವ ಅವರಿಗೆ ಉತ್ತಮ ಮಾರ್ಗ ಸಿಕ್ಕಿದಂತಾಗುವದು. ಇದ ನಿಜವಾಗಿಯೂ ಧರ್ಮಕ್ಕೆ, ವ್ಯಭಿಚಾರಗಳಿಗೆ, ಸಮಾಜದ ಕಟ್ಟಳೆಗಳಿಗೆ, ಸಾಂಸ್ಕೃತಿಕ ಮತ್ತು ನೈತಿಕ ಪ್ರಗತಿಗೆ ವಿರುದ್ಧವಾಗಿದೆಯೆಂದು ಕೆಲವರ ಮತ. ಸ್ವೇಚ್ಛಾಪ್ರವೃತ್ತಿಯ ಮಾರ್ಗ ಕುಟುಂಬಯೋಜನೆಯಿಂದಲೇ ಆಗುವದೆಂದು ಬಹುಮಂದಿ ತಿಳಿದಿರುವರು.

(೩) ಗಾಂಧಿ ನೆಹರು, ರವೀಂದ್ರರಂತಹ ಸಮಾಜಕ್ಕೆ ಅವಶ್ಯಕ ವ್ಯಕ್ತಿಗಳ ಹುಟ್ಟನ್ನೇ ನಿಷೇಧಿಸಿದಂತಾಗುವದು.

(೪) ಈ ಕುಟುಂಬ ಯೋಜನೆಯ ಪದ್ಧತಿಯು ಅಂದರೆ ಗರ್ಭನಿರೋಧಗಳ ಉಪಯೋಗ ಮೊದಲಾದುವುಗಳು ಮಾನಸಿಕ ತೊಂದರೆಗೆ ಕಾರಣವಾಗುವದು ಒಪರೇಶನ್ ಮಾಡಿಸಿಕೊಂಡು, ನಂತರ ಮೊದಲಿದ್ದ ಮಕ್ಕಳನ್ನು ಕಳೆದುಕೊಂಡು ಹುಚ್ಚರಾದ ಉದಾಹರಣೆ ಒಂದೆರಡಲ್ಲ.

(೫) ಕೆಲವು ಸಾರಿ ಒಪರೇಶನ್ ಮಾಡಿಸಿಕೊಂಡು ನಂತರದಲ್ಲೂ ಕೆಲವರಿಗೆ ಗರ್ಭ ನಿಲ್ಲುವ ಸಂಭವವುಂಟು. ಅದು ಹೇಗೆಂದರೆ ಸ್ನಾಯುಗಳ ಪುನರ್ಮಿಲನ. ಈ ರೀತಿ ಗರ್ಭಧಾರಣೆಯಾದ ನಂತರದಲ್ಲಿ ಪತಿ-ಪತ್ನಿಯರಲ್ಲಿ ಅವಿಶ್ವಾಸದಿಂದ ಹಾದಿಪಾಲಾದ ತಾಯಂದಿರ ಉದಾಹರಣೆಯೂ ಉಂಟು.

ಹೀಗೆ ಇಷ್ಟೆಲ್ಲ ತೊಂದರೆಗಳಿದ್ದರೂ ಕೂಡ ಕುಟುಂಬ ಯೋಜನೆಯ ಪದ್ಧತಿ ಹೆಚ್ಚು ಉಪಯುಕ್ತವಾದದ್ದು. ಇಲ್ಲವಾದರೆ ಬರಗಾಲಗಳಿಂದ, ಹೊಟ್ಟೆಗಿಲ್ಲದೆ ಬಾಳಿ, ಬಳಲಿ ಬೆಂಡಾಗಿ ಸಾಯುವ ಪರಿಸ್ಥಿತಿಬರಬಹುದು. ಆದ್ದರಿಂದ ಇಂದು ಭಾರತದಂಥ ಜನದಟ್ಟಣೆಯ ದೇಶಗಳಿಗೆ ಕುಟುಂಬ ಯೋಜನೆ ಅವಶ್ಯವಾದದ್ದು.

ಮುಖಚಿತ್ರ

ದೀಪಮಾಲೆಯ ಹೊಂಬೆಳಕಿನಲ್ಲಿ ಜಲ,ಭೂಮಿ ಮತ್ತುಗೋವುಗಳ ಪೂಜೆಯು ದೀಪಾವಳಿಯ ಮೂರುದಿನಗಳ ಮುಖ್ಯಾಂಗ. ಪೂಜೆಗೆ ಮತ್ತು ಅಲಂಕಾರಕ್ಕೆ ಅತ್ಯುಪಯುಕ್ತವಾದುದು ಪುಷ್ಪರಾಜ—ಕಮಲ. ಪ್ರಪಂಚದ ಬೇರೆಡೆ ಬೇರೆ ಬೇರೆ ರೀತಿಯಾಗಿ ದೀಪಾವಳಿಯನ್ನಾಚರಿಸುವಂತೆಯೇ ಭಾರತೀಯ ಕಮಲವನ್ನು ಹೋಲುವ ಕಮಲದ ಹೂಗಳೂ ಪ್ರಕೃತಿದತ್ತವಾಗಿವೆ ಮುಖ ಚಿತ್ರದಲ್ಲಿ ಭಾರತೀಯ ತಾವರೆಯ ಸೋದರಿ ಕ್ಯಾಸ್ಪಿಯನ್ ತಾವರೆಯನ್ನು ಕಾಣಬಹುದು.

ಆದ್ದರಿಂದ ನಮ್ಮ ದೇಶಾಭ್ಯುದಯದ ಮಹಾ ಪವಿತ್ರ ಕಾರ್ಯದಲ್ಲಿ ವಿವಾಹಿತ ವ್ಯಕ್ತಿಯ ಆಳಲ ಸೀಮಿತ ಸಂತಾನ; ಜನ ಸಂಪತ್ತೇ ದೇಶದ ಸಂಪತ್ತು; ನಿಜ. ಬಹುಜನ ಆರೋಗ್ಯ ದೇಹದಾರ್ಢ್ಯಗಳಿಲ್ಲದೆ ಎಲುಬು ಗೂಡುಗಳಾದರೇನು ಪ್ರಯೋಜನ? ಉದ್ಯೋಗವಿಲ್ಲದೆ ಸೋಮಾರಿಗಳಾದರೇನು ಸುಖ? ಸರ್ಕಾರ ತಾನೇ ಎಷ್ಟು ಆಹಾರ, ಉದ್ಯೋಗಗಳನ್ನು ಒದಗಿಸುವದು ಸಾಧ್ಯ?"

ಉಡ್ಪಿ ಸಬ್ ಕೋರ್ಟಿನಲ್ಲಿ.

D. P. no 115/1964

N M ಅಡ್ಯಂತಾಯ ಕೂಡಾ—ಅರ್ಜಿದಾರರು.

ಮತ್ತು

ನಾರಾಯಣ ಹೆಗ್ಡೆ ಕೂಡಾ— ಎದ್ರಿರು.

ಇವರೊಳಗೆ,

ಈ ಮೂಲಕ ಸದ್ರಿ ವ್ಯವಹರಣೆಯ 7ನೆ ಎದ್ರಿ ಸೀತಾರಾಮ ಹೆಗ್ಡೆ – ನಾರಾಯಣ ಹೆಗ್ಡೆರ ಅಳಿಯ, ಉಡ್ಪಿ ತಾಲ್ಲೂಕು ಯೇಣ ಗುಡ್ಡೆ ಗ್ರಾಮದ ಯೇಣಗುಡ್ಡೆ ದೊಡ್ಡಮನೆಯಲ್ಲಿರುವವರಿಗೆ ಈ ಮೂಲಕ ತಿಳಿಸುವದೇನಂದ್ರೆ

ಏ ವಾರ್ಡು ದಿಕ್ರಿ ಬಗ್ಗೆ ಅರ್ಜಿದಾರರು ದಾಖಲು ಮಾಡಿದ ಮೇಲಿನ ದಾವಾ ನಿಮ್ಮ ಹಾಜರಿಗೆ 11–11–1964 ಕ್ಕೆ ಇಟ್ಟಿದೆ ಆದ್ದರಿಂದ ನೀವು ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲ್‌ದ್ವಾರಾ ಹಾಜರಾಗಿ ಉದಾರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಸಿಪಕ್ಷ ಮಾಡಿ ಸದ್ರಿದಾವಾ ಯೇಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗಿದೆ.

By order the court.

M. J. Hegde

Advocate for petitioners

Karkala 22-10-64

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್, ನಂಜನಗೂಡು.

ಸುಮಾರು ಐವತ್ತು ವರ್ಷಗಳಿಂದ ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್ - ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರಬತ್ತಿ, ಹೇರ್ ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹ

ಪ್ರತಿನಿತ್ಯ ಅತ್ಯುತ್ತಮ ರೀತಿಯಲ್ಲಿ ತಯಾರಾಗುತ್ತಲಿವೆ.

ಶಾಖೆಗಳು: ಮೈಸೂರು, ಬೆಂಗಳೂರು ಮತ್ತು ಮಂಗಳೂರು. ಡಿಪೋ: ಟಿ. ನರಸೀಪುರ.

ಸೋಲ್ ಏಜಂಟರು:— [ಕರ್ನಾಟಕದಾಚೆಗೆ] ದಿ ಯುನೈಟೆಡ್ ಕನ್ಸರ್ನ್ಸ್ 54, ಬಂದರುಬೀದಿ, ಮದ್ರಾಸ್.

ಮನೆಗೆ ಬಂದ ನಾಯಿ

ಬರೆದವರು
ಕುಮಾರಿ ಬಿ. ಎನ್. ನೇತ್ರಾವತಿ—ಬೆಂಗಳೂರು

ಪಾತ್ರವರ್ಗ:—

೧. ಪ್ರಾಣೇಶ— ಪುಟ್ಟ ಹುಡುಗ.
೨. ವಿಶ್ವನಾಥ - ಪ್ರಾಣೇಶನ ಅಣ್ಣ
೩. ರಂಗ— ಪ್ರಾಣೇಶನ ಗೆಳೆಯ.
೪. ಗಣೇಶ— ವಿಶ್ವನಾಥನ ಗೆಳೆಯ.
೫. ತಾಯಿ–ವಿಶ್ವಪ್ರಾಣೇಶರ ತಾಯಿ.

§ * §

ವಿಶ್ವ— ಏ...ಪ್ರಾಣೇಶಾ....

ಪ್ರಾಣೇಶ— ....

ವಿಶ್ವ— ಏ, ಪ್ರಾಣೇ...ಅಮ್ಮ ನಿನ್ನ ಕರೀತಿದ್ದಾಳೆ ನೋಡೊ....

ಪ್ರಾಣೇಶ— ಹೋಗೋ....ಏನಿಲ್ಲ... ನನಗೆ ತಂದುಕೊಡು ಚೆಂಡನ್ನ.

ವಿಶ್ವ— ಏ...ಅದು ನಂದಲ್ವೋ.... ಅದು ನಮ್ಮ ಸ್ಕೂಲಿನದು....

ಪ್ರಾಣೇಶ — ಊಂ...ಸ್ಕೂಲ್‌ನಲ್ಲಿ ಚೆಂಡು ಯಾರು ಕೊಡ್ತಾರೋ, ಬರೀ ಸುಳ್ಳು...

ವಿಶ್ವ— ಅಯ್ಯೋ, ಬೇಕಾದರೆ ಕೇಳಿಸ್ತೀನಿ ಬಾ....

ಪ್ರಾಣೇಶ— ಹೂಂ...ನೀವು ಮಾತ್ರ ಕ್ರಿಕೆಟ್ ಆಡಬಹುದು, ನನ್ಯಾಕೆ ಸೇರಿಸಿಕೊಳ್ಳಲ್ಲ?

ವಿಶ್ವ— "ನಿಂಗೆ ಆಡಕ್ಕೆ ಬರೋಲ್ವೋ..."

ಪ್ರಾಣೇಶ— ಹುಂ....ಎಲ್ಲಾ ಬರುತ್ತೆ....ನಿಂಗೇನು ಗೊತ್ತು ...ಹಾಗಾದರೆ ನಂಗೊಂದು ಚೆಂಡು ತಂದುಕೊಡು— ನಾನು, ರಂಗ ಆಡಿಕೋತೀವಿ...."

ತಾಯಿ— "ಲೋ ವಿಶ್ವಾ...ತಗೋ ಈ ರೂಪಾಯಿ...ಅವನಿಗೆ ಮೊದಲು ಒಂದು ಚೆಂಡು ತಂದು ಕೊಡು— ನಿಮ್ಮ ಜಗಳ ನಾನು ನೋಡಲಾರೆ.... ಪ್ರಾಣೇಶಾ ನೀನು ಬಾರೋ, ಕಾಫಿ ಕುಡಿಯೋ ಹೊತ್ತಿಗೆ ತಂದುಕೊಡ್ತಾನೆ ...

ಪ್ರಾಣೇಶ— ತಂದುಕೊಡಲೇ ಬೇಕು- ನಾನು ಕಾಫಿ ಕುಡಿದು ಬರೋದರಲ್ಲಿ...

ರಂಗ— ರೀ ಪ್ರಾಣೇಶಇದಾನಾ?

ತಾಯಿ— ಇದಾನೆ, ಬರ್ತಾನೆ ಕೂತ್ಕೊಳ್ಳಪ್ಪಾ....

ಪ್ರಾಣೇಶ— ಯಾರು? ಓಹೋ, ರಂಗನಾ? ಒಂದ್ನಿಮಿಷ ಇರೋ, ನಮ್ಮಣ್ಣ ಚೆಂಡು ತಂದ್ಕೊಡ್ತಾನೆ..ಇಬ್ಬರೂ ಆಡೋಣ....

ರಂಗ— ಅಗೋ ಬಂದೇಬಿಟ್ಟ ನಿಮ್ಮಣ್ಣ...

ವಿಶ್ವ— ಏ ಪ್ರಾಣೇಶ, ಕಿತ್ಕೋಬೇಡವೋ, ನಾನೇ ಕೊಡ್ತೀನಿ....

ಪ್ರಾಣೇಶ— ಕೊಡು ಮತ್ತೆ....

ಗಣೇಶ—ವಿಶ್ವನಾಥ್, ವಿಶ್ವನಾಥ್.... (ಬಾಗಿಲು ತಟ್ಟಿದ ಶಬ್ದ ನಾಯಿ ಬೊಗಳಿದ ಶಬ್ದ.)

ಪ್ರಾಣೇಶ— ಏ ವಿಶ್ವ.... ನಿನ್ನ ಫ್ರೆಂಡ್ ಬಂದ ಹೋಗೋ....ಸದ್ಯ ಹೋದ ...ಚೆಂಡು ಬಂತು... ಆಡೋಣ ಬಾರೋ ರಂಗ....

ವಿಶ್ವ— ಒಳಕ್ಕೆ ಬಾ. ಗಣೇಶ್ ...

ಗಣೇಶ— ನಾಯಿ ಇದೆಯಲ್ಲೋ...

ವಿಶ್ವ— ಇರಲಿ ಬಿಡೋ....ನೀನು ಬಾ ಒಳಕ್ಕೆ .... ಅದೇನು ನಿನ್ನ ಜೊತೆಯಲ್ಲೇ ಇರುತ್ತೆ ... ನೀನು ಹಿಡಿದುಕೊಳ್ಳದಿದ್ರೆ ಓಡಿಹೋಗುತ್ತೇನು— ಎಲ್ಲಾದ್ರೂ?

ಗಣೇಶ— ಇಲ್ಲ.. ನಮ್ಮ ನಾಯಿ ಮಾತ್ರ ಹಾಗೆಲ್ಲಾ ಹೋಗೊಲ್ಲಪ್ಪಾ....ಒಳ್ಳೆ ಜಾತಿನಾಯಿ...

ವಿಶ್ವ— ಅದು ಮರಿ ಹಾಕಿದ್ರೆ ನಂಗೂ ಒಂದು ಕೊಡು ಗಣೇಶ್...

ಗಣೇಶ— ಆಗಲಿ.

ತಾಯಿ— ಏ... ವಿಶ್ವಾ, ಪ್ರಾಣೇಶ್ ಬನ್ರೋ ಎಲ್ರೂ ...

ವಿಶ್ವ— ಬಂದೇ ಮ್ಮ.... ಗಣೇಶ್ ಒಂದ್ನಿಮಿಷ... ಟಿಫಿನ್ ಮುಗಿಸ್ಕೊಂಡು ಬಂದ್ಬಿಡ್ತೀನಿ ಕೂತಿರ್ತಿಯೊ?

ಗಣೇಶ ಇಲ್ಲಪ್ಪ.... ಇಲ್ಲೇ ನಮ್ಮಕ್ಕನ ಮನೆಗೆ ಹೋಗಬೇಕು —ಈಗ....

ವಿಶ್ವ— ಏ... ಕೂತ್ಕೊಳ್ಳೋ ಬಂದ್ಬಿಡ್ತೀನಿ...

ಗಣೇಶ— ಇಲ್ವೋ ನಮ್ಮಮ್ಮ ಬೆಳಗ್ಗೇನೇ ಹೋಗು ಅಂದ್ರು... ನಾನೇ ಮರೆತುಬಿಟ್ಟೆ... ಅದಕ್ಕೆ ಈಗ್ಲೇ ಹೋಗ್ಬೇಕು ಅಂದದ್ದು... ಇಲ್ದಿದ್ರೆ ಚೆನ್ನಾಗಿ ಬೈಸ್ಕೋಬೇಕು ಅಷ್ಟೆ...

ವಿಶ್ವ— ಹಾಗಾದರೆ ಬೇಗ ಬಂದುಬಿಡು....

ಗಣೇಶ— ಹುಂ, ಆಗಲಿ.......ಇನ್ನು ಕಾಲ್ಗಂಟೇಲಿ ಹೋಗಿ ಬಂದ್ಬಿಡ್ತೀನೆ....

ವಿಶ್ವ— ನೋಡು...ಹೇಳ್ಬಿಟ್ಟು ಕೈಕೊಟ್ಟೀಯೆ, ನಿಂಗೆ ಸರಿಯಾಗಿ ಪೂಜೆ ಮಾಡ್ಬಿಡ್ತೀನಿ ಅಷ್ಟೆ—ಹ್ಯಾಗೂ ಗಣೇಶನ ಹಬ್ಬ ಹತ್ರ ಬರ್ತಾ ಇದೆ....

ಗಣೇಶ— ಇಲ್ಲ ಕಣೋ—ಬೇಗ ಬರ್ತೀನಿ...ನಾನಿನ್ನು ಹೊರಡ್ತೀನಿ ವಿಶ್ವ...

(ನಾಯಿ ಬೊಗಳಿದ ಶಬ್ದ)

ವಿಶ್ವ— ಹುಂ....ಆಗಲಿ, ಏ ಪ್ರಾಣೇಶಾ...ಅಮ್ಮ ಕರೀತಾಳೆ ಬಾರೋ....

ಪ್ರಾಣೇಶ— ರಂಗ.......ಒಳಕ್ಕೆ ಬಾರೋ ..ನಮ್ಮಮ್ಮ ಕರೀತಿದಾರೆ....ತಿಂಡಿ ತಿಂದ್ಕೊಂಡು ಬಂದ್ಬಿಡ್ತೀನಿ....

ರಂಗ— ನಮ್ಮಕ್ಕಾನೂ ಕರೀತಿದಾಳೋ, ಕಾಫೀಗೆ....ನಾನೂ ಕಾಫೀ ಕುಡ್ಕೊಂಡು ಬೇಗ ಬಂದ್ಬಿಡ್ತೀನಿ....

ಪ್ರಾಣೇಶ— ಸರಿ ಹಾಗಾದರೆ....

ವಿಶ್ವ— ಏ, ಪ್ರಾಣೇ...ನಿನ್ನ ಚೆಂಡು ಕೊಡೋ....ಹೇಗೆ ಪುಟ ಎಗರತ್ತೇಂತ ನೋಡ್ತಿರ್ತೀನಿ...

ಪ್ರಾಣೇಶ—ಅಲ್ಲಿ ಬಿದ್ದಿದೆ ನೋಡೋ

ವಿಶ್ವ— ಎಲ್ಲೋ?

ಪ್ರಾಣೇಶ - ಅಲ್ಲೇ

ವಿಶ್ವ— ಎಲ್ಲಿ....ಇಲ್ವಲ್ಲೋ?

ಪ್ರಾಣೇಶ - ಓ ನಂಗೊತ್ತು, ನೀನೇ ಎಲ್ಲೋ ಬಚ್ಚಿಟ್ಟಿರಬೇಕು....

ವಿಶ್ವ - ಓ! ಇದು ಸರಿಹೋಯ್ತು.... ನಾನೀಗ್ತಾನೆ ತಿಂಡಿ ತಿಂದ್ಕೊಂಡು ಹೊರಗೆ ಬರ್ತಿದ್ದೀನಿ, ನಂಗೇನೋ ಗೊತ್ತು— ನಿನ್ನ ಚೆಂಡು....

ಪ್ರಾಣೇಶ— ಮತ್ತೆ? ನಾನೂ ಈಗ ತಿಂಡಿ ತಿಂದ್ಕೊಂಡು ಬರೋವಷ್ಟರಲ್ಲಿ ಯಾರು ತಗೊಂಡರು—ಅದನ್ನ?

ವಿಶ್ವ— ನಂಗೊತ್ತಿಲ್ಲಪ್ಪ....

ಪ್ರಾಣೇಶ— ಅಮ್ಮಾ, ಚೆಂಡು ಕಳೆದು ಹೋಯ್ತು...

ತಾಯಿ —ಈಗತಾನೆ ತರಿಸಿಕೊಟ್ಟೆ ... ಆಗಲೇ ಎಲ್ಲೋ ಹಾಕಿಬಿಟ್ಟರು....ಹುಡುಕೋ ಎಲ್ಲಾ ಕಡೇನೂ....

ಪ್ರಾಣೇಶ— ಹುಡುಕಿದೇಮ್ಮಾ ಸಿಗಲಿಲ್ಲ....ಈ ವಿಶ್ವನೇ ಎತ್ತಿಟ್ಟಿರಬೇಕು...

ವಿಶ್ವ— ಅಯ್ಯೋ ... ನಂಗೇನಮ್ಮ ಗೊತ್ತು?

ಪ್ರಾಣೇಶ— ನಂಗದೆಲ್ಲ ಗೊತ್ತಿಲ್ಲ ಈಗ ನೀನೇ ತಂದ್ಕೊಡು...

ವಿಶ್ವ— ಹುಂ...ನಂಗಿದೆ ಕೆಲಸಾಂತ ತಿಳ್ಕೊಂಡು ಬಿಟ್ಟಿದೀಯೇನೋ, ಹೋಗ್ಲೋಗು....ನಂಗೊತ್ತಿಲ್ಲ....

ಪ್ರಾಣೇಶ— ಊಂ....ನೋಡಮ್ಮಾ..

ಗಣೇಶ— ವಿಶ್ವನಾಥ್ .... ವಿಶ್ವನಾಥ್...(ನಾಯಿ ಬೊಗಳಿದ ಶಬ್ದ).

ವಿಶ್ವ— ಓಹೋ...ಬಾ, ಗಣೇಶ್ ....ಹೇಳಿದ್ದಾಗೆ ಬೇಗನೇ ಬಂದ್ಬಿಟ್ಟೆ...

ಗಣೇಶ— ಹುಂ....ಮತ್ತೆ....

ವಿಶ್ವ— ನಿನ್ನ ನಾಯಿ ಎಲ್ಲೋ?

ಗಣೇಶ— ಅಲ್ಲೇ ಇದೆ ಕಣೋ—ಅದ್ಯಾವುದೋ ಚೆಂಡು ಇಟ್ಕೊಂಡು ಆಡ್ತಾ ಇದೆ...

ವಿಶ್ವ — ಎಲ್ಲಿ....ಹಾಗಾದರೆ ನೋಡೋಣ....

ರಂಗ— ಏ ಪ್ರಾಣೇಶಾ....ಆಡೋಣ ಬಾ....ನಿನ್ನ ಚೆಂಡು ಎಲ್ಲಿ?

ಪ್ರಾಣೇಶ — (ಅಳುವ ದನಿಯಲ್ಲಿ) ಕಳೆದು ಹೋಯ್ತು ಕಣೋ....

ವಿಶ್ವ— ಕಳೆದಿಲ್ವೋ...ಇಗೋ ನನ್ನ ಫ್ರೆಂಡ್ ಗಣೇಶನ ನಾಯಿ ಇಟ್ಕೊಂಡಿದೆ ..

ಪ್ರಾಣೇಶ— ಎಲ್ಲಿ? ಎಲ್ಲಿ? (ಆಶ್ಚರ್ಯದ ಧ್ವನಿಯಲ್ಲಿ)

ಗಣೇಶ— ಇಗೋ....ಇಲ್ಲೇ....

ವಿಶ್ವ— ಅಗೋ ನೋಡೋ....ಆ ನಾಯಿ ಚೆಂಡಿಟ್ಕೊಂಡು ಆಟ ಆಡ್ತಾ ಇದೆ....

ಪ್ರಾಣೇಶ— ಹಾಗಾದ್ರೆ ನಾನೂ ಆ ನಾಯಿ ಜೊತೇಲೇ ಆಡ್ತೀನಿ..

ರಂಗ— ನಾನು?

ಪ್ರಾಣೇಶ— ನೀನೂ ಬಾ....ಈಗ ನಮ್ಮನೇಗೆ ಬಂದಿರೋ ನಾಯೀನೂ ಸೇರಿ ಒಟ್ಟು ಮೂರು ಜನ ನಮ್ಮ ಆಟಕ್ಕೆ...

ವಿಶ್ವ— ಅಂತೂ ಒಳ್ಳೇ ಆಟ ಆಡಿತು ....ನಮ್ಮನೇಗೆ ಬಂದ ನಾಯಿ. (ನಾಯಿ ಬೊಗಳಿದ ಶಬ್ದ)

(ಆಕಾಶವಾಣಿಯ ಕೃಪೆಯಿಂದ)

ದೀಪಾವಳಿಯ
ಹಾರ್ದಿಕ ಶುಭಾಶಯಗಳು
ಶೆಣೈಯವರ
ಮಂಗಳೂರು ನಶ್ಯ
ಸುದೀರ್ಘವಾದ ಬಾಳಿಕೆಯು ಇದರ ಗುಣ.
ಸ್ವರ್ಣ ವರ್ಣಯುಕ್ತ ಹಾಗೂ ಶಕ್ತಿದಾಯಕವಾದುದು.
Well-known for:–
Long Standing Quality,
Golden Colour & Strength
SHENOY'S
MANGALORE SNUFF
Trade enquiries to Manufacturers: –
M/s. H. Venkatraya Shenoy,
HALEANGADY, S. Kanara.

ದಿ| ಶ್ರೀ ಸುರತ್ಕಲ್ಲು ಸುಬ್ಬರಾಯರು

ಕಡಲತಡಿ ಕನ್ನಡದ ಪರಭಕ್ತನಾಗಿ
ಒಡಲ ಸವೆದರು ಕನ್ನಡದ ಕೀರ್ತಿಗಾಗಿ
ಕನ್ನಡದ ಕುವರನಿಗೆ ಮೋಕ್ಷ ದೊರೆವಂತೆ
ಕನ್ನಡದ ಜನಮನವ ಹರಸದೇನಂತೆ?

ಬರೆದವರು
ವಿದ್ವಾನ್ ಶ್ರೀ ಕೆ ವೆಂಕಟರಾಮಾಚಾರ್ಯ.

(ಜನನ-13-8-1897 ಮರಣ-7-10-64)

ಇಸ್ವಿ 1957 ರ ಮಾರ್ಚ್ ತಿಂಗಳ ಕೊನೆಗೊಂದು ದಿನ ನನ್ನ ಮಿತ್ರ 'ಆ ವಿಷಯವೇನಾಯಿತು'' ಎನ್ನುತ್ತಾ ನನ್ನೆಡೆಗೆ ತವಕದಿಂದ ಬಂದರು. ಆದರೆ ಈ ಮಿತ್ರರೆಂದ "ಆ ವಿಷಯ"ವೇನೆಂದು ನನಗೆ ಪಟ್ಟನೆ ಹೊಳೆದಿಲ್ಲ. "ಶ್ರೀ ವಿದ್ವಾನ್ ಸುರತ್ಕಲ್ಲು ಸುಬ್ಬರಾಯರು ಇದೀಗ ಅರುವತ್ತರ ಗಡಿಯಲ್ಲಿದ್ದಾರೆ. ಅವರು ಕಾಸರಗೋಡು, ಮೂಲ್ಕಿ, ಸುರತ್ಕಲ್ ಹೈಸ್ಕೂಲುಗಳಲ್ಲಿ ಕನ್ನಡ ಭಾಷಾಪಂಡಿತರಾಗಿ ಅನೇಕ ವಿದ್ಯಾರ್ಥಿಗಳಿಗೆ ಜ್ಞಾನದಾನ ಮಾಡಿದ್ದಾರೆ, ಈ ಮೂವತ್ತು ವರ್ಷಗಳ ಅವಧಿಯಲ್ಲಿ ಅವರು ಹಲವೆಡೆಯ ಸಾಹಿತ್ಯಕ ಹಾಗೂ ಯಕ್ಷಗಾನ ಕೂಟಗಳ ಸಭೆಗಳಿಗೆ ಭಾಷಣಕಾರರಾಗಿಯೂ, ಅಧ್ಯಕ್ಷರಾಗಿಯೂ ಕನ್ನಡ ರಸಿಕ ಶ್ರಾವಕರಿಗೆ ಹಲವಾರು ವಿಷಯಂಗಳನ್ನು ತಿಳಿಯಿಸಿದ್ದಾರೆ ಅದುಮಾತ್ರವಲ್ಲ, ನೀತಿವಲ್ಲರಿ, ಕೌರವನ ಕೃತಿಸೋಪಾನ, ಭಕ್ತಿಸಾಮ್ರಾಜ್ಯ, ದೇವರ ಮಹಿಮೆ ಇತ್ಯಾದಿ ಕೃತಿಗಳನ್ನು ಬರೆದಿದ್ದಾರೆ. ಭಾಷಣ ಲೇಖನಗಳಲ್ಲಿ ಮಾತ್ರವಲ್ಲ, ದಿನನಿತ್ಯದ ಸಂಭಾಷಣೆಯಲ್ಲೂ, ಅವರು ನುಡಿಗಳನ್ನು ಕ್ರಮವತ್ತಾಗಿ ಅಚ್ಚು ಪೋಣಿಸಿಯೇ ಮಾತಾಡುವರು. ಇಂತಹ ಹಿರಿಯ ಕನ್ನಡ ಪಂಡಿತ ಸಾಹಿತಿಗಳಿಗೆ ಅರುವತ್ತರ ಗಡಿಯಲ್ಲಿ ಸನ್ಮಾನಿಸುವುದು ಅವರ ಶಿಷ್ಯರ ಹಾಗೂ ಮಿತ್ರರ ಪಾಲಿನ ಕರ್ತವ್ಯವಲ್ಲವೇ? ಈ ಬಗ್ಗೆ ನಾಲ್ಕಾರು ಮಂದಿ ಹಿರಿಯರೊಂದಿಗೆ ನಾವು ವಿಚಾರ ಮಾಡಬೇಕು" ಎಂದು ಕೆಲವು ದಿನಗಳ ಹಿಂದೆ ನಾವಿಬ್ಬರು ಆರಾಮವಾಗಿ ಅಂದುಕೊಂಡಂತೆ, 'ಆ ವಿಷಯವೇನಾಯ್ತು' ಎಂದು ಆ ನನ್ನ ಮಿತ್ರರಾದ ಶ್ರೀ ಬಿ. ಪದ್ಮನಾಭ ಸೋಮಯಾಜಿಯವರು ಪ್ರಶ್ನಿಸಿದರು. "ಇಂತಹ ದೊಡ್ಡ ಕೆಲಸಕ್ಕೆ ನನ್ನಂತಹ ಕಿರಿಯರು ವಿಚಾರ ಮಾಡಿದರೆ ಆದಾವ ಹಿರಿಯರು ಒಪ್ಪಬೇಕು. ಒಬ್ಬರೊಡನೆ ಮಾತಾಡಿದಾಗ ಅಷ್ಟೇನೂ ಮುತುವರ್ಜಿಯ ಉತ್ತರ ಬಂದಿಲ್ಲ ಹಾಗಾಗಿ ನಾನು ಈ ವಿಷಯ ಮರೆತೆ"ನೆಂದು ಹೇಳಿದೆ! ಶ್ರೀ ಸೋಮಯಾಜಿಯವರು ಅಷ್ಟಕ್ಕೆ ಅದನ್ನು ಕೈ ಬಿಡಲಿಲ್ಲ ಇನ್ನೂ 2—3 ಮಂದಿಯೊಡನೆ ಮಾತಾಡಿಕೊಳ್ಳಬೇಕೆಂದು ಹುರುಪಿನಿಂದ ಮಾತಾಡಿದರು. (ಅವರೊಂದಿಗಿದ್ದ ಮತ್ತೊಬ್ಬ ಅಧ್ಯಾಪಕರು "ಓಹೋ ಇಂತಹ ವಿಚಾರ ಇನ್ನಳಿದ ಎಲ್ಲಾ ಕನ್ನಡ ಅಧ್ಯಾಪಕರಿಗೆ ಮಾದರಿಯಾಗಲಿ" ಎಂದು ಕೊಂಕು ನುಡಿದರು. ಅವರೇನೋ ಪ್ರತಿದಿನದಂತೆ ಕಕ ನುಡಿಯಾಡಿದ್ದರೂ, ನಾನತ್ತ ಗಮನಿಸಲಿಲ್ಲ). ಅನಂತರ ಒಬ್ಬಿಬ್ಬರು ಹಿರಿಯರೊಡನೆ ಈ ವಿಷಯ ಗುಣುಗುಟ್ಟಿದೆನು, "ಇದರಿಂದೇನೂ ರಾಜಕೀಯವಿಲ್ಲ. ಅವರ ಶಿಷ್ಯರು ಹಾಗೂ ಮಿತ್ರರು ಒದವಿಸುದುದರಿಂದಲೇ ಈ ಕಾರ್ಯ ನಡೆಯಲಿ. ನಾವೊಂದಿಷ್ಟು ಉಲ್ಲಾಸದಿಂದ ಓಡಾಡಬೇಕಾದೀತು. ಹಿರಿಯರಿಗೆ ಕಿರಿಯರ ಕಾಣಿಕೆಯಾಗಲಿ" ಎಂದು. ಅಂತೆ, ಒಂದೆರಡು ವಾರಗಳ ವೇಳೆ ಪುನಃ ಈ ಬಗ್ಗೆ ವಿಚಾರ ವಿನಿಮಯಕ್ಕಾಗಿ ಮಂಗಳೂರಲ್ಲಿರುವ ಶ್ರೀ ಸುಬ್ಬರಾಯರ ಕೆಲವು ಮಂದಿ ಮಿತ್ರರು ಹಾಗೂ ಶಿಷ್ಯರನ್ನು ಕಾಣಲು ನಾವಿಬ್ಬರು ಧಾವಿಸಿದೆವು ಅಂತೂ ಇದೊಂದು ಸತ್ಕಾರ ಸಮಾರಂಭವು ನಡೆಯ ಬೇಕಾದುದೆಂದು, ಆ ಬಗ್ಗೆ ಸಮಿತಿಯೊಂದನ್ನು ನಿರವಿಸಬೇಕೆಂದು ನಿರ್ಧಾರವಾಯಿತು. ಶ್ರೀ ಕಕ್ಕಿಲ್ಲಾಯರು (ಕಾಸರಗೋಡಿನಲ್ಲಿರುವ ವಕೀಲರು), ಶ್ರೀ ಜನಾರ್ದನಾಚಾರ್ಯರು (ಕರೂರಿನಲ್ಲಿರುವ ಡಾಕ್ಟರ್), ಶ್ರೀ ವಾಸುದೇವರಾವ್ (ವಿದ್ಯಾದಾಯಿನೀ ಹೈಸ್ಕೂಲ್ ಮುಖ್ಯೋಪಾಧ್ಯಾಯರು), ಶ್ರೀ ಪಿ ಶ್ರೀನಿವಾಸರಾಯರು (ಮಂಗಳೂರಿನ ವಕೀಲರು) ಮೊದಲಾದವರುಳ್ಳ ಸತ್ಕಾರ ಸಮಿತಿಯು ನಿರೂಪಣೆಯಾಯ್ತು. ಅದೇ ಮಹಾನವಮಿ ವೇಳೆಗೆ ಸುರತ್ಕಲ್ಲು ಹೈಸ್ಕೂಲಿನಲ್ಲಿ ನಡೆವ ದಸರಾ ಪೂಜೆಯ ದಿನ ಈ ಸತ್ಕಾರ ಸಮಾರಂಭ ನಡೆಯಬೇಕೆಂದು ನಿಶ್ಚಯಿಸಿತ್ತು)ಶ್ರೀ ಸುಬ್ಬರಾಯರನ್ನು ಸತ್ಕರಿಸುವ ಆ ಸಭೆಗೆ ಅಧ್ಯಕ್ಷರಾಗಿ ಶ್ರೀ ಕಡಂಗೋಡ್ಲು ಶಂಕರ ಭಟ್ಟರನ್ನು ಕೇಳಿಕೊಳ್ಳುವುದೆಂದೂ ಅಂದಾಜು ಮಾಡಿದ್ದಾಯಿತು.) ಊರು—ಪರವೂರುಗಳಲ್ಲಿರುವ ಹಲವಾರು ಮಂದಿಗೆ ವಿನಂತಿ ಪತ್ರ ಮುದ್ರಿಸಿ ಕಳುಹಿದ್ದಾಯ್ತು. ತಿಂಗಳೆರಡರ ಅವಧಿಯಲ್ಲಿ ತೊಡಗಿದ ಈ ವಿಚಾರಕ್ಕೆ ಹಲವೆಡೆಗಳಲ್ಲಿದ್ದ ಪ್ರಿಯಂತರ ಶಿಷ್ಯರು ಹಾಗೂ ಅಭಿಮಾನಿ ಮಿತ್ರರು ಮುಕ್ತಹಸ್ತದಿಂದ ನೆರವಾದರು. ಈ ಸನ್ನಿಲವಾಗಿ ಶ್ರೀ ಸುಬ್ಬರಾಯರಿಗೆ ಐನೂರು ರೂಪಾಯಿಗಳ ನಿಧಿಯನ್ನು ಒಪ್ಪಿಸಿತು. ಸತ್ಕಾರ ಸಭೆಯು ಇದರಿಂದ ಹರ್ಷಿತವಾಗಿತ್ತು! ಕನ್ನಡದ ಅಧ್ಯಾಪಕರಿಗೆ ಈ ತೆರದ ಸತ್ಕಾರವು ನವನೆನಪಾಗಿ ಉಳಿಯಿತು.

ಸರಸ್ವತಿಯೂ ಲಕ್ಷ್ಮಿಯೂ ಒಂದೆಡೆ ನಿಲುವುದು ವಿರಳವೆಂಬ ಮಾತಿದೆ. ಶ್ರೀ ಸುಬ್ಬರಾಯರು ಅಷ್ಟೇನೂ ಧನಿಕರಲ್ಲ, ಹಿರಿಯರಿಂದ ತನ್ನಪಾಲಿಗೆ ಬಂದ ಚಿಕ್ಕ ಆಸ್ತಿಯ ಹಾಗೂ ತನ್ನ ಶಾಲಾ ಸಂಬಳದ ಆಧಾರದಿಂದ ನಾಲ್ಕೆಂಟು ಮಕ್ಕಳು ಹಾಗೂ ಸ್ವದಂಪತಿಗಳ ಜೀವನ ನಿರ್ವಹಿಸಬೇಕಿತ್ತು. ಶ್ರೀ ಮುಸ್ನೂರು ಶಿವರಾಮಯ್ಯನ ಅಳಿಯಂದಿರಾದ ಇವರಿಗೆ ಪದ್ಯಗಳನ್ನು ಓದಿ ಸಮಧುರ ಕಂಠದಿಂದ —ತನ್ನದೇ ಆದ ಶೈಲಿಯಿಂದ— ವಿವರಿಸುವುದೆಂದರೆ ಪ್ರಾಣ. ಕುಮಾರವ್ಯಾಸ, ಲಕ್ಷ್ಮೀಶ, ಷಡಕ್ಷರಿ, ಮುದ್ದಣ ಮೊದಲಾದ ಕನ್ನಡ ಕವಿಗಳ ಕೃತಿಗಳಿಂದ ಆಯ್ದ ಹಲವಾರು ಪದ್ಯಗಳು ಇವರಿಗೆ ಮುಖೋದ್ಗತವಾಗಿದ್ದುವು. ಅವುಗಳ ಸವಿಯನ್ನು ತಾನು ಉಣ್ಣುವುದರೊಂದಿಗೆ ಸಭಾಸದರಿಗೂ ಉಣ್ಣಿಸುವುದೆಂದರೆ ಇವರಿಗೆ ಅಭಿಮಾನದ ಕರ್ತವ್ಯವಾಗಿತ್ತು. ವಿಮರ್ಶೆಯ ಪ್ರಸಂಗದಲ್ಲಂತೂ ಕಟ್ಟುನಿಟ್ಟಾದ ಮಾತುಗಳನ್ನು— ಆಧಾರಯುಕ್ತವಾಗಿ —ಹೇಳುವುದರಿಂದ, ಅದನ್ನು ಕೇಳುವವರಿಗೆ ತುಸ ಮುನಿಸಾದರೂ, ಅವು ಯಥಾರ್ಥ ವಚನಗಳಾದುದರಿಂದ ಸ್ವೀಕರಣೀಯಗಳಾಗಿದ್ದುವು 40 ವರ್ಷದ ಹಿಂದೆ ಸುರತ್ಕಲ್ಲು "ಸರ್ವೋಪಧೇಕ ಗ್ರಂಥಮಾಲೆ"ಯನ್ನು ಸೋದರ ಶ್ರೀ ಎಸ್. ಆರ್. ಹೆಬ್ಬಾರರೊಂದಿಗೆ ನಡೆಸಿದ್ದರು. ಇತ್ತೀಚೆಗೆ ತೊಡಗಿದ ಸುರತ್ಕಲ್ಲು 'ವಿಜಯ ಸಾಹಿತ್ಯ ಮಾಲೆ'ಯ ವೇಳೆ ತುಂಬಾ ವಿಶ್ವಾಸ ವಹಿಸಿದ್ದರು. ಇವರೊಡನೆ ಒಮ್ಮೆ ಮಾತಾಡಿದವರು ಇವರ ನಿಷ್ಕಪಟಹೃದಯ, ಸರಸ ಹಾಗೂ ನಿರರ್ಗಳ ವಾಣಿ, ಪ್ರಾಮಾಣಿಕ ರೀತಿ ಮೊದಲಾದವನ್ನು ಮರೆಯಲಾರರು! ಇವರು ಕನ್ನಡದ ಅಭಿಮಾನಿ ಪಂಡಿತರಾಗಿ ಮೆರೆದರು! (ಸಾಧಾರಣ 68 ವರ್ಷ ಪ್ರಾಯದ ಇವರಿಗೆ 2—3 ತಿಂಗಳಿಂದ ದೇಹಾಲಸ್ಯವಿತ್ತು. ಇವರ ಒಬ್ಬ ಮಗ ಹಾಗೂ ಎಂಟು ಹೆಣ್ಣು ಮಕ್ಕಳು ಮತ್ತು ಹೆಂಡತಿ ಮತ್ತು ಸಾಹಿತ್ಯ ಬಂಧುಗಳು ಇವರ ವಿಯೋಗದಿಂದ ತುಂಬಾ ಖಿನ್ನರಾಗುವುದು ತಪ್ಪಲ್ಲ. ತಾ. 7-10-64ರ ರಾತ್ರೆ 12-50ಕ್ಕೆ ಇವರು ಪರಂಧಾಮವನ್ನೈದಿದರು. ದ. ಕ. ಜಿಲ್ಲೆಯ ಕನ್ನಡದ ಹಿರಿಯ ಪಂಡಿತರೊಬ್ಬರು ಕಣ್ಮರೆಯಾದರು ಶ್ರೀ ದೇವರು ಸನ್ಮಾನನೀಯ ದಿ. ಶ್ರೀ ಸುಬ್ಬರಾಯರಿಗೆ ಸದ್ಗತಿಯನ್ನು ನೀಡಲೆಂದು ಬೇಡಿ, ಈ ಬರಹ ಸದ್ಯಃ ನಿಲ್ಲಿಸುವೆನು.)

† † †

ಸುಭಾಷಿತಗಳು

೧ ಧೀರ

ಶ್ಲೋಕ.|| ಕಾಂತಾಕಟಾಕ್ಷ ವಿಶಿಖಾ ನ
ಲುನಂತಿ ಯಸ್ಯ|
ಚಿತ್ತಂ ನ ನಿರ್ದಹತಿ ಕೋಪ
ಕೃಶಾನು ತಾಪಃ|
ಕರ್ಷಂತಿ ಭೂರಿ ವಿಷಯಾಂಶ್ಚ ನ
ಲೋಭ ಪಾಶಾಃ|
ಲೋಕತ್ರಯಂ ಜಯತಿ
ಕೃತ್ಸ್ನಮಿದಂ ಸಧೀರಃ||

ಉ.ಮಾ|| ಆವನ ಚಿತ್ತಭಿತ್ತಿಯ
ಬಲಾಜನ ಕೇಕರದಿಂದೆ ಸೀಳದಿ|
ನ್ನಾವನ ಚಿತ್ತಕಾನನಮ ಕೋಪ
ಕೃಶಾನ ವಿಂಪೆ ಬೇಯದಿ|
ನ್ನಾವನ ಚಿತ್ತಮೆಂಬ ಪಶು ಲೋಭದ
ನೇಣಿನೆ ಬಂಧಮೊಂದದಿ|
ನ್ನಾವಗೆ ಧೀರ ಮೂಜಗಮನೆಲ್ಲಮ
ನಾಜಪ ಗೆಲ್ಗೆ ನಿಶ್ಚಯಂ||

(ನೀತಿವಲ್ಲರಿ: ದಿ| ಶ್ರೀ ಸುರತ್ಕಲ್ಲು
ಸುಬ್ಬರಾವ್)

೨. ವಿದ್ಯೆ

ಶ್ಲೋಕ|| ವಿದ್ಯಾ ನಾಮ ನರಸ್ಯ ರೂಪ
ಮಧಿಕಂ ಪ್ರಚ್ಛನ್ನ ಗುಪ್ತಂ ಧನಂ|
ವಿದ್ಯಾ ಭೋಗಕರೀ ಯಶಃಸುಖಕರೀ
ವಿದ್ಯಾ ಗುರೂಣಾಂ ಗುರುಃ|
ವಿದ್ಯಾ ಬಂಧುಜನೋ ವಿದೇಶಗಮನೇ
ವಿದ್ಯಾ ಪರಂದೈವತಂ|
ವಿದ್ಯಾ ರಾಜಸು ಪೂಜ್ಯತೇ ನಹಿ ಧನಂ
ವಿದ್ಯಾವಿಹೀನಃ ಪಶುಃ ||

ಚಂ.ಮಾ|| ಮನುಜಗೆ ಬಿಜ್ಜೆಯುಗ್ಗದ
ಪೇರ್ ಸೊಬಗಂ ಸ್ಥಿರಮಿರ್ಪ ವಿತ್ತಮುಂ
ವಿನುತಸುಖೋಪಭೋಗಕರ ಮಿ
ಜಗದೊಳ್ ಜಸದಾಗರಂ ಕರಂ|
ಜನಪತಿ ಪೂಜಿತಂ ಪರತರಂ
ಪರದೇಶದೆ ಬಾಂಧವ ಸಮಂ|
ತನುಪರ ವಿದ್ಯೆಯೋಲ್ ಪರದೈವಮು
ಬಿಜ್ಜೆಯನೊಂದದಂ ಮೃಗಂ||

(ನೀತಿವಲ್ಲರಿ. ದಿ. ಶ್ರೀ ಸುರತ್ಕಲ್ಲು
ಸುಬ್ಬರಾವ್)

ಸಂ: "ಜಯಂತ", ಸುರತ್ಕಲ್ಲು.

ನಾವಿಕನಿಗೆ!

— ೧ —

ಆಚೆ ದಡಕೆನ್ನನೊಯ್ದು ಮುಟ್ಟಿಸೈ ನಾವಿಕನೆ
ಭೋರ್ಗರೆವ ಸಾಗರದೊಳಾ ಈಸಲಾರೆ!
ಕ್ರೂರ ಜಲಜಂತುಗಳು ಎನ್ನ ನುಂಗಲಿಕೆಂದು
ಬಾಯ್ದೆರೆಯುತಿವೆ ಬದುಕಲಾರೆ!

— ೨ —

ಕೈಸೋತು ಕಾಲ್ಸೋತು ಮುಳುಗೇಳುತಿಹೆನಯ್ಯಾ
ಕಾಣಲಾರದು ಎನಗೆ ದಾರಿ ಬೇರೆ
ದಡಸೇರಿ ಬದುಕ ಬೇಕೆಂಬಾಸೆ ಮನದೊಳಗೆ
ಮಿಡಿಯುತಿದೆ ಬಾರಯ್ಯ ಬೇಗ ಬಾರೆ!

— ೩ —

ಸಂಕಟದ ಸಮಯದಲಿ ಮೋಜು ಮಾಡು—
ವರೇನೋ? ದಂಡೆಯಲಿ ನಿಂತು?
'ಬೆಕ್ಕಿನಾಟವು ಇಲಿಗೆ ಪ್ರಾಣ ಸಂಕಟವೆಂಬ'
ನಾಣ್ಣುಡಿಯು ನೆನಸಿಲ್ಲವೆ? ಎಂತು?

— ೪ —

ಆಳವರಿಯದೆ ನೀರಿಗಿಳಿದೆನು ನಾನು, ಪಡಕ–
ಭಟ್ಟನ ತೆರದಿ ಕಥೆಯಾಯ್ತು ಈಗ!
ಎನ್ನ ರಕ್ಷಣೆಗೆಂದು ನಾವನೋಡಿಸಿಕೊಂಡು
ಹುಟ್ಟು ಹಾಕುತ ಬಾರೋ ಬೇಗ ಬೇಗ!

— ೫ —

ಬೇಡಿಕೊಳುವೆನು ನಿನಗೆ ಜೀವ ಜನುಮದ ಗೆಳೆಯ
ಬಾಳಸಾಗರವ ದಾಟಿಸೈ ಶರಣು ಬಂದೆ,
ಅಜ್ಞಾನದಲಿ ಮಾಡಿದಪರಾಧವನು ಗಣಿಸದೆ ನಿನ್ನ
ನಾವಿನಲಿ ದಡಕೊಯ್ದು ಮುಟ್ಟಿಸೈ ತಂದೆ!

— ದಿಗಂಬರ ಜೋಶಿ, ಬೆಳಗಾವಿ.

ಬಾನಿಂದ ನೆಲಕ್ಕೆ

ನೆಲದ ಕಂಪನು ಮರೆತು ಗರುಡ ಗತಿಯಲಿ
ಬಾನ ಮೇಲೆ ನಡೆವಲ್ಲಿ ನೆಲದ ಮಗ, ನೀನೆಂಬ
ಎಚ್ಚರಿಕೆ ಬಂತು!

ಅಚ್ಛೋದ ಸರಸಿಯಲಿ ಬೆರಳಿನಲಿ ಮೀಟಕ್ಕೆ
ಕುಣಿವ ಕಮಲವ ಕಂಡು ಹಿಗ್ಗುತಿರಲು
ಕಮ್ಮಾರ ಕುಲುಮೆಯಲಿ ಬೆಂದ ಜೀವದ
ಬಿಸಿಯ ಕಮರುಗಾಳಿಯು ಕಣ್ಣುಗೊಂಬೆಯನು
ತಟ್ಟಿ ತೆರೆಸುತಿತ್ತು.
ಕೃತಯುಗದ ಮಹಿಮೆಯನು ಈ ಜಗದ
ಮಂಡಿಯಲಿ ಹೊಗಳಿ ಹಾಡಲು ಯಾರೊ
ಎಳೆದು ತಂದು ತೋರಿದರು ಗುಟ್ಟು ಬಯಲು
ಮಾಡುವ ನಿಜದ ಮುಖದ ಮನೆಯೊಳಗಿಟ್ಟು
ನಡೆವ ಕಬಂಧಗಳನು:

" ಈ ಊರಿನಲಿ ಈತ ಧರ್ಮಾತ್ಮ, ಸಭೆ-ಸಮಾರಂಭ-
ಗಳ ಅಧ್ಯಕ್ಷ! ಈತನ ಮನೆಯಲಿದೆ ಕತ್ತಲೆಯ
ಕೋಣೆಯಲಿ ತೂಗುಹಾಕಿದ ನೆತ್ತರೊಸರುವ
ದೀನ ರುಂಡ ಮಾಲೆ!"
"ಇವನೊಬ್ಬ ಮನೆಯ ಮಕ್ಕಳಿಗೊಬ್ಬ ತಂದೆ ಬೇಕೆಂದೆ
ಅವಳ ಕೊರಳಿಗೆ ತಾಳಿ ಕಟ್ಟಿಬಿಟ್ಟ; ಈಗ ಇವರೀ
ಈ ಊರಿಗೆ ಅಪೂರ್ವ ಮಾದರಿ ಸಂಸಾರ."
"ಈಕೆಯ ನೋಡೋ,
ಹತ್ತಾರು ಕೈಗಳು ಈಕೆಯ ಕತ್ತನು ಹಿಸುಕ
ಹೊರಟಿವೆ; ಮೂರು ಕಾಲಿನ ಗಂಡ ನಗುತಿರುವನು.
ನಿಂತು ನೋಡುವ ಪ್ರೇಮಿ ನಿರುಪಾಯನು."
ಹೀಗೆ ನೂರುಸಾವಿರ ನಿತ್ಯರೋಗಿಗಳ ವಿಹಾರ.
ಹಗಲುಗನಸಿನ ನಡೆವ ಹೆಣಗಳದೆ ಸಂಚಾರ!

ತಲೆ ತಿರುಗಿತು; ನನ್ನಾ ಕಿವಿ ದಿಸೆಯಲ್ಲಿ ಸಿಡಿಲು
ಆರ್ಭಟಿಸಿತು: "ನಾಕೆನ್ನ ಸಂಜೆಯ ಬಣ್ಣದಲಿ
ಆಡಿ, ಬೆಳದಿಂಗಳಲಿ ಈಜಿ ಮೆರೆದದ್ದು
ತಂಗಾಳಿಯನು ಹಿಡಿದು ತಂದದ್ದು.
ಚೆಂದುಟಿಯ ಚೆನ್ನೆಯನು ಹಾಡಿ ಹೊಗಳಿದ್ದು."
ಮನೆಯ ಅಂಗಳ ತುಂಬ ಕೊಳೆ ಕೆಸರು.
ಕೋಳಿಯಾಗಿ ಕಾಲ್ಕೆದಲಿ ಹುಳುಹುಪ್ಪಟೆಗಳ ಮೆಲ್ಲು!
ಹದ್ದಾಗಿ ಬಂದು ಕೊಳೆತ ಹೆಣಗಳ ತಿನ್ನು.
ಈಗ ದುರ್ವಾಸನೆಯ ಸಹಿಸದೆ ನಿರ್ವಾಹವಿಲ್ಲ.
ಈ ಕೀಳು ಕೊಳೆಯ ಮಧ್ಯೆ ಮೂಡಿದ ಮಂದಹಾಸವೂ
ಒಂದು ಭ್ರಮೆ!
ಮೊದಲು ಕೊಳೆಗಳ ತೊಳೆದು ಪರಿಶುದ್ಧನಾಗಿ
ದೇವ ಪೂಜೆಗೆ ಬಾ!
ಆ ಮೇಲೆ ವಾಮನನಾಗಿ ಮುಗಿಲೆತ್ತರಕೆ ಬೆಳೆದು
ಬಾನೊಳಗೆ ಆಡು.

ಯಾರೊ ಊದಿದ ಪಾಂಚಜನ್ಯ ಧ್ವನಿಗೆ
ಹೊಸ ಶಕ್ತಿ ತೋರಿದರು ನಾನು ಕಂಗಾಲಾದೆ.
ಸುತ್ತಲೂ ಸುರಿವ ಅಗ್ನಿವರ್ಷಕೆ
ನೆತ್ತರ ಕಡಲು ಬತ್ತುವುದ ಕಂಡು
ಗಟ್ಟಿ ನೆಲವನು ಅದುಮಿ ಹಿಡಿದುಕೊಂಡೆ.

—ಶ್ರೀ ಯು. ಕೆ. ವಿ. ಆಚಾರ್ಯ.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂಬ ಚಿಂತೆ ಬೇಡ!

ಅನ್ಯರ ಸಹಾಯ ವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗಿಷ್ ಸುಲಭವಾಗಿ ಕಲಿಯಬಹುದಾದ
ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.
—ಸಾದಾ ಪ್ರತಿ 2:00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿಸಿದರೆ ಪ್ರತಿಯೊಂದನ್ನು ಕಳಿಸಲಾಗುವುದು.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೊಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್
ಶ್ರೀನಿವಾಸ್ ಬ್ರದರ್ಸ್ ಪುತ್ತೂರಲ್ಲಿ ಪ್ಯಾಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ. ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುರಲವ	0=50
ಚಿತ್ರಾಂಗದೆ	0=60

"ನಚಿಕೇತ"ರ
ನವೀನ ಕಾದಂಬರಿಗಳು —

ಋಣ ಯಾತ್ರೆ
ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ.

ಹಸುರು ಹಂಸ
ಬೆಲೆ ರೂ 2—00

ಪ್ರತಿಗಳು ಸಿಗುವ ಸ್ಥಳಗಳು:–
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ರಾಜಧಾನಿಯ ರಾಮಾಯಣ

(ಹನ್ನೊಂದನೇ ಪುಟದಿಂದ)

ಇವೆಲ್ಲ ತಾಪತ್ರಯಗಳಿಂದ ತಪ್ಪಿಸಿಕೊಳ್ಳಲು ದಿಲ್ಲಿಯ ಶ್ರೀ ಸಾಮಾನ್ಯನು (ಇಲ್ಲಿನ ಭಾಷೆಯಲ್ಲಿ 'ಬಾಬೂ') ಸೈಕಲ್ಲಿನ ಮೇಲೆ ಹೋಗುತ್ತಾನೆ. ಹೀಗಾಗಿ ಪೂನೆಯನ್ನು ಬಿಟ್ಟರೆ ಭಾರತದಲ್ಲಿ ಎರಡನೆಯ ಸೈಕಲ್ ನಗರವೆಂದರೆ ದಿಲ್ಲಿ. ಸೈಕಲ್ ಯುಗದ ಪ್ರತೀಕ, ನಮ್ಮ ರಾಜಧಾನಿ.

° ° °

ನಗರದ ಹಾಲು ಪೂರೈಕೆ ವ್ಯವಸ್ಥೆಯನ್ನು ಕೆಲವು ವರ್ಷಗಳಿಂದ ಸರಕಾರ ನೋಡಿಕೊಳ್ಳುತ್ತಿದೆ.

ದಿಲ್ಲಿಯ ಆಸುಪಾಸಿನ ಹಳ್ಳಿಗಳಲ್ಲಿ ಹಾಲು ಮಾರುವವರಿಂದ ಹಾಲು ಕೊಂಡು ಕೊಂಡು, ಅದನ್ನು ಶುದ್ಧೀಕರಿಸಿ, ಬಾಟ್ಲಿಗಳಲ್ಲಿ ತುಂಬಿಸಿ ನಗರದ ಪ್ರಜೆಗಳಿಗೆ ಒದಗಿಸುವ ವ್ಯವಸ್ಥೆ ಇಲ್ಲಿಯದು.

ಏಳೆಂಟು ತಿಂಗಳ ಹಿಂದೆ ದಿಲ್ಲಿಯ ಸುತ್ತಮುತ್ತಲೂ ನೆರೆ ಬಂದಿತು. ಆಕ್ಷಣದಿಂದ ಎಮ್ಮೆಗಳು ಪೂರ್ತಿ ಹಾಲು ಕೊಡಲು ಕೇಳಲಿಲ್ಲ. ಅದರಿಂದಾಗಿ ನಗರದ ಹಾಲು ಪೂರೈಕೆ ಅರ್ಧಕ್ಕರ್ಧ ಕಡಿಮೆಯಾಯಿತು. ನಾಗರಿಕರು ಖಾಸಗಿ ಹಾಲು ವ್ಯಾಪಾರಿಗಳಿಗೆ ಮೊರೆ ಹೋಗಬೇಕಾಯಿತು.

ಖಾಸಗಿಯವರು ಇಂಥ ಸುವರ್ಣ ಸಂದರ್ಭ ಬಿಟ್ಟಾರೆಯೆ? ಹಾಲಿನ ಬೆಲೆ ಗಗನಕ್ಕೇರಿತು.

ಏರಿದ ನೆರೆ ಇಳಿಯಿತು. ಪುನಃ ಏರಿತು; ಪುನಃ ಇಳಿಯಿತು ಆದರೆ ಎಮ್ಮೆಗಳು ಹಿಂದಿನಂತೆ ಹಾಲು ಕೊಡಲೂ ಇಲ್ಲ. ಹಾಲಿನ ಬೆಲೆ ಇಳಿಯಲೂ ಇಲ್ಲ.

° ° °

"ಮನೆ ಬಾಡಿಗೆಗೆ ಇದೆ"

ದಿಲ್ಲಿಯಲ್ಲಿ ಈ ಬೋರ್ಡು ಕಾಣಸಿಗುವುದು ಸರ್ವಸಾಮಾನ್ಯ. ಯಾವ ಹೊತ್ತಿಗೆ, ಯಾವ ತರದ ಮನೆ ಬೇಕಾದರೂ ತಕ್ಷಣ ದೊರೆಯುತ್ತದೆ.

ಇದಕ್ಕೆ ನಾವು ತೆರುವ ಬೆಲೆ, ಹೆಚ್ಚೆಂದರೆ ದಲ್ಲಾಳಿಗೆ ಅರ್ಧ ತಿಂಗಳ ಬಾಡಿಗೆ ಮೊತ್ತ.

ಮನೆ ಬಾಡಿಗೆಯ ದರ: ಒಂದು ಕೋಣೆಯ ಮನೆ: ೧೦೧; ಎರಡು ಕೋಣೆ: ರೂ, ೧೬೦, ಮೂರು ಕೋಣೆ: ರೂ. ೨೨೫ ನಾಲ್ಕು ಕೋಣೆ: ೪೦೦ ಕೆಲವು ಕಾಲನಿಗಳಲ್ಲಂತೂ ಐನೂರಕ್ಕಿಂತ ಕಡಿಮೆಯ ಮನೆಯಿಲ್ಲ.

ಒಬ್ಬಾತ ಮನೆ ಖಾಲಿ ಮಾಡಿದನೆಂದರೆ, ಅನಂತರ ಬರುವಾತನು ನೂರಕ್ಕೆ ಇಪ್ಪತ್ತೈದು ಪಾಲು ಹೆಚ್ಚಿಗೆ ಹಣ ಕೊಡಬೇಕು.

ಕೆಲವು ಮನೆ ಮಾಲಿಕರು ಬಾಡಿಗೆ ರಶೀದಿ ಕೊಡಲು ಒಪ್ಪುವುದಿಲ್ಲ. ರಶೀದಿ ಬೇಕಾದರೆ ಬಾಡಿಗೆ ಇನ್ನೂ ಸ್ವಲ್ಪ ಹೆಚ್ಚು. ದಿನದಿಂದ ದಿನಕ್ಕೆ ಬಾಡಿಗೆ ದರ ಹೆಚ್ಚುತ್ತಿದೆ.

ದಿಲ್ಲಿಯ ಖಾಸಗಿ ಕಾಲನಿಗಳಲ್ಲಿ ಅಧಿಕಾಂಶ ಮನೆಗಳೆಲ್ಲ ಒಂದು ಕಾಲದಲ್ಲಿ ನಿರಾಶ್ರಿತರಾಗಿದ್ದವರ ಸೊತ್ತಾಗಿವೆ,

ದೇಶ ವಿಭಜನೆಯಾದಾಗ ಸುಮಾರು ಎಂಟು ಲಕ್ಷ ಮಂದಿ ಹಿಂದುಗಳು ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದರು. ಮನೆಮಾರೆಲ್ಲ ಇದ್ದಲ್ಲೇ ಬಿಟ್ಟು, ತೊಟ್ಟ ಬಟ್ಟೆಯಲ್ಲಿ ಓಡಿಕೊಂಡು ಬಂದವರೇ ಹೆಚ್ಚು. ಭಾರತ ಸರಕಾರ ಇವರಿಗೆ ಸಾಕಷ್ಟು ಸೌಕರ್ಯಗಳನ್ನು ಒದಗಿಸಿತು. ಸೈಟುಗಳನ್ನು ಕೊಳ್ಳಲು, ಮನೆ ಕಟ್ಟಲು, ವ್ಯಾಪಾರ ಆರಂಭಿಸಲು ಸಹಾಯ ನೀಡಿತು.

ಇಂತಹ ಮನೆ ಮಾಲಿಕರಿಗೆ ತಿಂಗಳಿಡೀ ದುಡಿದು ಸಂಪಾದಿಸಿದ ಹಣದಲ್ಲಿ ಸಿಂಹದ ಪಾಲು ಕೊಟ್ಟುಕೊಂಡು, ನಿತ್ಯವೂ ಒಂದನೇ ತಾರೀಕನ್ನು ಕಾಯುತ್ತಾ ದಿನದೂಡುವ ಪ್ರಾರಬ್ಧ ದಿಲ್ಲಿಯ ಬಾಬುಗಳ ಹಣೆಯಲ್ಲಿ ಬರೆದಿದೆ

ದಿಲ್ಲಿಯ ನಿವಾಸಿಗಳಲ್ಲಿ ಬಹ್ವಂಶ ಮಂದಿ ಸರಕಾರೀ ಆಫೀಸುಗಳಲ್ಲಿ ದುಡಿಯುವ ಬಿಳಿ ಕಾಲರಿನ ಬಾಬುಗಳು. ಹೀಗಾಗಿ ನಮ್ಮ ರಾಜಧಾನಿ ಪ್ರಧಾನತಃ ಬಾಬೂ ನಗರ; ಮಧ್ಯಮ ವರ್ಗದ ನಗರ.

ಬಡಪಾಯಿ ಬಾಬುವನ್ನು ಮಾತ್ರ ದೇವರೇ ಕಾಪಾಡಬೇಕು. ಏಕೆಂದರೆ ಆತನನ್ನು ಕಾಪಾಡುವ ತೊಂದರೆಯನ್ನು ಬೇರೆ ಯಾರೂ ವಹಿಸಿಕೊಂಡಂತೆ ಕಾಣುವುದಿಲ್ಲ.

ಇಂದಿನ ದೀಪಾವಳಿ

(ಹನ್ನೆರಡನೇ ಪುಟದಿಂದ)

ತ್ತದೆ. ಅಂಧಕಾರಮಯ ಜಗತ್ತಿನಲ್ಲಿ ಅವರು ಜ್ಯೋತಿಗಳಾಗಿ ಬೆಳಗಿರುವರು. ಅದು ಮಾತ್ರವಲ್ಲ, ಅಂದಿನಿಂದ ಹೊಸ ವರ್ಷ ಪ್ರಾರಂಭವಾಗುತ್ತದೆ. ಆಕ್ರಮಣಗಾರರನ್ನು ಹೊಡೆದಟ್ಟಿ ಹಬ್ಬವನ್ನಾಚರಿಸಿದ ದಿನವದು. ಇಂದಿನ ಪರಿಸ್ಥಿತಿಯಲ್ಲಿ ನಮಗದು ಉತ್ಸಾಹದಾಯಕ ಹಾಗೂ ಪ್ರೇರಣೆ ಉಂಟುಮಾಡುವ ದಿನವಿದೆ. ದೇಶದೊಳಗಿರುವ ಕಾಳಸಂತೆಕೋರರ–ರಾಜಕೀಯ ಉದ್ಯಮಿಗಳ ಹಂಚಿಕೆ ಮುಂತಾದ ಜಾಡ್ಯಗಳಿಂದ ನಾವು ನರಳುತ್ತಿರುವದು ಮಾತ್ರವಲ್ಲದೆ ಪಾಕಿಸ್ತಾನ-ಚೈನಾವನ್ನು ಎದುರಿಸ ಬೇಕಾಗಿರುತ್ತದೆ. ಈ ಎಲ್ಲಾ ರಾಷ್ಟ್ರಘಾತುಕ ದುಷ್ಕೃತ್ತಿಗಳ ನಾಶ ಮಾಡಲು ದೀಪಾವಳಿ ಇಂದು ನಮಗೆ ಸಂದೇಶವೀಯುತ್ತಿದೆ. ಎಣ್ಣೆ ಸಿಗದಿದ್ದರೆ ಚಿಂತಿಲ್ಲ, ಸ್ನಾನ ಮಾಡಲೂ ನೀರು ಸಿಗದಿದ್ದರೂ ಸಹಿಸೋಣ ಅವೆಲ್ಲವನ್ನೂ ಸರಿದೂಗಿಸಿಕೊಳ್ಳಲು ಸಾಧ್ಯ. ಆದರೆ ಆಕ್ರಮಣವನ್ನು ಮಾತ್ರ ಸಹಿಸಿಕೊಳ್ಳುವದು ಸಾಧ್ಯವಲ್ಲ. ಹಾಗಿರುವಾಗ ಶತ್ರುಗಳ ಆಕ್ರಮಣಗಾರರ ರಕ್ತದಿಂದ ಸ್ನಾನಮಾಡಲು ನಮ್ಮ ಧೀರ ಸೇನಾನಿಗಳು ಮುಂದಾಗುವದರಲ್ಲಿ ಆಶ್ಚರ್ಯವಿಲ್ಲ. ದೀಪ ಉರಿಸಲು ಎಣ್ಣೆ ಸಿಗದಿದ್ದರೂ ನಮ್ಮ ಹೃದಯ ಹಣತೆಯ ಜ್ಯೋತಿ ಆರದಿರಲಿ. ದೇಶಭಕ್ತಿಯೆಂಬ ಎಣ್ಣೆಗೆ ಕೊರತೆಬಾರದಿರಲಿ ಆ ಎಣ್ಣೆ ಶುದ್ಧವಾಗಿರಲಿ—ಬೆರಕೆ ಬೆರೆಯದಿರಲಿ. ಆಗ ಮಾತ್ರ ಆ ದಿವ್ಯ ಜ್ಯೋತಿಯ ಸಹಾಯದಿಂದ ಆಕ್ರಮಣಗಾರರನ್ನು ಹೊಡೆದಟ್ಟಿ ಉತ್ಸಾಹ ಆನಂದ ಸಂತೋಷ ಹಾಗೂ ಪೂರ್ಣ ಮನಸ್ಸಿನಿಂದ ದೀಪಾವಳಿ ಆಚರಿಸಲು ಸಾಧ್ಯ. ಇಂದಿನ ಪರಿಸ್ಥಿತಿಯಲ್ಲಿ ಇಷ್ಟೇ ಸಾಧ್ಯ.

DEEPAVALI GREETINGS TO ALL PATRONS:

HOOGLY INK CO.
(BOMBAY) LIMITED.

Manufacturers of quality Printing Inks for over 50 Years.

Kumpta Street, Fort, **BOMBAY**.

Associate Companies:

HOOGLY INK CO. LIMITED,
CALCUTTA — MADRAS — DELHI.

The Richardson Printing Ink Co. Ltd.,
ENGLAND.

LOCAL DEALER:

The Universal Trading Corporation,
KATAPADI. (SOUTH KANARA DT.)

Deepavali Greetings!

For FESTIVE Occasion
For CASUAL Wear
For Ladies Gents and Children

You get all you need in wide variety

To choose the BEST in CLOTHING

JAYANTILAL BROTHERS

Hampankatta, MANGALORE-I

Always a SHOP for CHOICEST WEDDING Sarees

'ಬನ್ನಿ ಬನ್ನಿ ಕೇಳಿ ಕೇಳಿ ಐಕ್ಯದಮರಗಾನ'

ಬನ್ನಿ ಬನ್ನಿ ಕೇಳಿ ಕೇಳಿ ಐಕ್ಯದಮರಗಾನ
ಭಾರತಾಂಬೆಯ ಮಂತ್ರವಾಣಿ, ಅವಳ ಪಂಚಪ್ರಾಣ!
ಅವಳ ಮುದ್ದು ಮಕ್ಕಳಿಂಗೆ ಅದೇ ಸರ್ವ ತ್ರಾಣ
ಅದೇ ಅವಳ ಶಿಕ್ಷೆ, ರಕ್ಷೆ, ರೀತಿ, ನೀತಿ, ಮಾನ!
"ಅಸ್ತ್ಯುತ್ತರಸ್ಯಾಂದಿಶಿ ದೇವತಾತ್ಮಾ
ಹಿಮಾಲಯೋನಾಮನಗಾಧಿರಾಜಃ
ಪೂರ್ವಾಪರೌತೋಯನಿಧೀವಗಾಹ್ಯ
ಸ್ಥಿತಃ ಪೃಥಿವ್ಯಾ ಇವ ಮಾನದಂಡಃ"
ಇದು ನಮ್ಮ ರಾಷ್ಟ್ರ ಕವಿ ಕಾಳಿದಾಸನ ಕಾವ್ಯ ವಾಣಿ-
ಇದುವೆ ನಮಗಿಂದಿಗೂ ರಾಷ್ಟ್ರ ಗಡಿ ಗೌರವದ ವಜ್ರವಾಣಿ!
ನಮ್ಮ ಐಕ್ಯಧ್ವಜವೆ ಉನ್ನತ ಹಿಮಾಚಲ ಶ್ರೇಣಿ,
ಅದನೆತ್ತಿ ನಿತ್ತಿರುವಳಮ್ಮ, ಭಾರತ ರಾಣಿ, ಲೋಕ ಕಲ್ಯಾಣಿ!

(೨)

ನೋಡಿ, ನೋಡಿ, ಅವಳ ವಿಪುಲ ವಿಮಲ ವರ್ಣ ವೈಭವ,
ತುಂಬಿ, ತುಂಬಿ, ತುಳುಕಿ ಹರಿವ ವಜ್ರ ವೀರ್ಯದನುಭವ!
—ಸಿಂಧು, ಗಂಗಾ ಯಮುನೆ, ಗೋದಾವರಿ
ಕೃಷ್ಣೆ, ನರ್ಮದೆ, ತುಂಗಭದ್ರೆ, ಕಾವೇರಿ—
ನದಿ ರೂಪಗಳ ತಾಳಿ ಪರ್ವತಾಳಿಯ ಸೀಳಿ,

ಜಲ ರಾಶಿಗಳಾಗಿ ಸಾಗಿ,
ಧನ ಕನಕ ಧೇನು ಧಾನ್ಯಗಳ ಸಂಸ್ಕೃತಿಯಾಗಿ,
ಸ್ನೇಹ—ಸಹಕಾರವಾಗಿ,
ಒಂದೆ ನೆಲ, ಒಂದೆ ಕುಲ, ಒಂದೆ ಛಲದಿಂ ಬಾಳಿ
ಬೆ ಳ ಗು ತಿ ಹ ವು
ಐಕ್ಯಗಾನ ಹಾಡಿ ನಲಿಯುತಿಹವು —
"ಬನ್ನಿ ಮಕ್ಕಳೆ ಬನ್ನಿ, ಒಂದಾಗಿ ಬನ್ನಿ
ಜಾತಿಮತ ಭಿನ್ನತೆಯ ಬದಿಗೊತ್ತಿ ಬನ್ನಿ!
ಹೊಲೆಯ—ಹಾರುವರೆಂಬ ಭೇದವೆಮಗಿಲ್ಲ,
ಹಿಂದೂ ಮುಸಲ್ಮಾನ ಕ್ರೈಸ್ತರೊಂದೆಲ್ಲ.
ನುಡಿಯ ಗಡಿ ನಮಗಿಲ್ಲ, ಮಾತ್ಸರ್ಯವಿಲ್ಲ,
ಎಲ್ಲ ರಾಜ್ಯವ ಬಳಸಿ ಹರಿಯುತಿಹೆವಲ್ಲ!
ನೀವು ಬಿತ್ತುವ ಬಿತ್ತ ರಾಗಿ ಜೋಳಗಳ
ಮಾಡುವೆವು ಮುತ್ತು ಮಾಣಿಕ್ಯ ರಾಶಿಗಳ!
ಬನ್ನಿ ಮಕ್ಕಳೆ ಬನ್ನಿ ಒಂದಾಗಿ ಬನ್ನಿ,
ಜಾತಿಮತ ಭಿನ್ನತೆಯ ಬದಿಗೊತ್ತಿ ಬನ್ನಿ!
ಡಂಭ ದರ್ಪಗಳೆಂಬ ಮೈಲಿಗೆಯ ಬಿಟ್ಟು,
ಕಾಯ ಕಷ್ಟದ ನೀತಿ ನಿಷ್ಠೆಯನೆ ತೊಟ್ಟು,
ಸತ್ಯದಿಂ ಬನ್ನಿ, ವಿನಯದಿಂ ಬನ್ನಿ,
ಒಂದೆ ಸೂತ್ರದಿ ಸುರಿದ ಮಣಿಗಳೊಲು ಬನ್ನಿ,
ವಿವಿಧ ಗುಣರೂಪಗಳ ಏಕಾತ್ಮವೆನ್ನಿ!
ದುರ್ಬಲರ ತುಳಿಯದಿರಿ, ಅಜ್ಞರನು ಹಳಿಯದಿರಿ,
ದ್ರವ್ಯಾಧಿಕಾರ ಸರ್ವಸ್ವವೆಂದರಿಯದಿರಿ!
ನಮ್ಮ ದಡಗಳೊಳೆಷ್ಟೊ ಸಾಮ್ರಾಜ್ಯಗಳು ಎದ್ದು
ನಾಶಗೊಂಡಿವೆ ತಮ್ಮ ದುಷ್ಕೃತ್ಯದಿಂ ಬಿದ್ದು.
ಅಂದಿನಿಂತೆಯೆ ನಾವು ಹರಿಯುತಿಹೆವಿಂದೂ-
ಐಕ್ಯಗಾನವನಂತೆ ಹಾಡುತಿಹೆವಿಂದೂ—
ಬನ್ನಿ ಮಕ್ಕಳೆ ಬನ್ನಿ ಒಂದಾಗಿ ಬನ್ನಿ,
ಭೌತಿಕದ ಭೇದಗಳ ಬದಿಗೊತ್ತಿ ಬನ್ನಿ!
ನಮ್ಮ ನಿರ್ಮಲ ನೀರೆ ನಿಮಗಮೃತ ಧಾರೆ
ಸಕಲ ನಾಗರಿಕತೆಗು ಇದುವೆ ಮೂಲಾಧಾರೆ

(೩)

ಈ ಭಾರತ ದೇಶ! ಏನಿದರ ವಿಲಾಸ!
ಎಂತಿದರ ವಿಕಾಸ!!
ಗಮಗಮಿಸುವ ಕಸ್ತೂರಿ ಕೇಸರಗಳ ಕಾಶ್ಮೀರ!
ಥಳಥಳಿಸುವ ಬದ್ರಿಯು, ಕೈಲಾಸವು, ಕೇದಾರ!
ಕಚ್ಛದಿಂದ ಕಾಮರೂಪವರೆಗಿದೆ ವಿಸ್ತಾರ,
ಭೂವಿರ ಕನ್ಯಾಕುಮಾರಿ ತೆಂಕಣ ತುದಿ ತೀರ!

ಇದು ಗುಲಾಬಿ, ಅದು ಮಲ್ಲಿಗೆ, ಸೇವಂತಿಗೆ, ಜಾಜಿ
ಇದು ಪಾಟಲ, ಅದು ಬಕುಲ, ಇದು ಶಿರೀಷರಾಜಿ,
ಕನ್ನೈದಿಲೆ, ಕೆಂದಾವರೆ, ಮಿಸುನಿಯ ಮಂದಾರ—
ಇಂತಿದೆ ಭಾರತ ರಾಜ್ಯಗಳೈಸಿರಿ, ಸಿಂಗಾರ!
ವಿವಿಧ ವರ್ಣ, ವಿವಿಧ ಗಂಧ, ವಿವಿಧ ರೂಪಲೀಲಾ
ಪ್ರತಿಯೊಂದಕು ತನ್ನದೆ ಆಗಿಹ ಪರಿಮಳ ಜಾಲ!
ಗಿಡಗಿಡದಲಿ ಹಕ್ಕಿ ಪಕ್ಕಿ ಹಾಡುತಿಹವು ಸೊಕ್ಕಿ—
ಹಿಂದಿ, ತಮಿಳು, ಕನ್ನಡ, ತೆಲುಗಿನ ರಾಗದೊಳುಕ್ಕಿ!
ಏನು ಮಧುರ! ಏನು ಚದುರ! ಏನಿದರರ್ಥ?
ಸಂತೋಷದಿ ನವಿಯದವರ ಬಾಳು ವ್ಯರ್ಥ, ವ್ಯರ್ಥ!

(೪)

ಇದು ಭಾರತ ದೇಶ!
ಋಷಿ ಮುನಿಗಳು ಕವಿ ವೀರರು ಬೀರಿದ ಸಂದೇಶ—
"ಆಕಾಶಾತ್ಪತಿತಂ ತೋಯಂ
ಯಥಾಗಚ್ಛತಿ ಸಾಗರಂ
ಸರ್ವದೇವ ನಮಸ್ಕಾರಃ
ಕೇಶವಂ ಪ್ರತಿಗಚ್ಛತಿ."
ಎಲ್ಲ ಹೊಳೆಗಳು ಒಂದೆ ಕಡಲ ಸೇರ್ವಂತೆ,
ಎಲ್ಲ ಧರ್ಮಕು ಸತ್ಯವೊಂದೆ ಕೊನೆಯಂತೆ.
ಸಕಲ ಜೀವಿಗಳ ಚೈತನ್ಯವೊಂದೇ
ಸಕಲ ಜೀವಿಗಳ ಸುಖ ದುಃಖವೊಂದೇ
ಸತ್ಯವೊಂದೇ ಧರ್ಮ, ಸೇವೆಯೊಂದೇ ಕರ್ಮ!
ಇದು ಸಫಲ ಜೀವನದ ಮರ್ಮ!
ನ್ಯಾಯ ನೀತಿಗೆ ಬಗ್ಗಿ, ಧೈರ್ಯ ಸ್ಥೈರ್ಯದಿ ಹಿಗ್ಗಿ
ಮುನ್ನಡೆವುದೇ ಐಕ್ಯಧರ್ಮ!

—ಜಿ. ಆರ್. ಪಾಂಡೇಶ್ವರ್.

16—10—63ರಂದು ಶಿರಸಿಯಲ್ಲಿ ಜರಗಿದ "ಯೋಜನಾ" ಕವಿ ಸಮ್ಮೇಳನದಲ್ಲಿ ಓದಿದ್ದು.

ಕೆಲವು I. T. L.
ಸುಪ್ರಸಿದ್ಧ ತಯಾರಿಕೆಗಳು

ಐಟಿಯಾಲ್ 3 :- ಆಧುನಿಕ ದ್ರವರೂಪದ ಕ್ರಿಮಿನಾಶಿನಿ.

ಗ್ರೈಪ್ ಸಿರಪ್ :- ನಿಮ್ಮ ಮುದ್ದು ಕಂದನ ಅಜೀರ್ಣ ವ್ಯಾಧಿಗಳನ್ನು ಪರಿಹರಿಸಿ ಆರೋಗ್ಯ ಕಾಪಾಡುವ ಒಂದು ಸಿರಪ್.

ವೈಟೋಮಾಲ್ಟ್ :- ವಿಟಮಿನ್ಸ್ A, B, C ಮತ್ತು D ಗಳಿಂದ ಕೂಡಿದ ಒಂದು ಶಕ್ತಿವರ್ಧಕ ಟಾನಿಕ್.

ತಯಾರಕರು

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರೆಟರಿ ಲಿ.,

ಮಲ್ಲೇಶ್ವರಂ ಬೆಂಗಳೂರು-3.

ವ್ಯಾಪಾರದ ಡಿಪೋ:— 35/37, ತಂಬುಚೆಟ್ಟಿ ರಸ್ತೆ, ಮದರಾಸು-1.
71/4, ಆರ್ಕಾಟ ಶ್ರೀನಿವಾಸಾಚಾರ್ ರಸ್ತೆ, ಬೆಂಗಳೂರು-2.

ದೇಶದ ಪ್ರಗತಿ- ಒಂದು ಪರಿಶೀಲನೆ

(ದತ್ತನೇ ಪುಟದಿಂದ)

ಳುತ್ತದೆ. ಸಂಪತ್ತು ಕಡಿಮೆಯಿರುವಂತಹ ದೇಶದಲ್ಲಿ, ಇಂತಹ ಅಸಮಾನತೆಯು ಆರ್ಥಿಕ ಬೆಳವಣಿಗೆಗೆ ಅನುಕೂಲವಾಗಿಯೇ? ಅದು ಜನರ ಉತ್ಸಾಹವನ್ನು ಕೆಡಿಸುವುದಿಲ್ಲವೋ? ಇಂತಹ ಕುತೂಹಲದ ಪ್ರಶ್ನೆಗಳು ಸಹಜ. ಕೆಲವೇ ವರ್ಗಗಳ ಹಿತಾಸಕ್ತಿಗಳ, ಸಂಗಡಗಳ ಅಭಿವೃದ್ಧಿಯನ್ನು ದೇಶದ ಅಭಿವೃದ್ಧಿಯೆಂದು ಹೇಳುವುದಾದರೂ ಹೇಗೆ? ದೇಶದ ಬಹುಮಂದಿಯ ಅಭಿವೃದ್ಧಿಯು ಇದರಲ್ಲಡಗವಾಗಿಲ್ಲವೆಂಬುದು ಸತ್ಯ. ಹಾಗಿರುವಲ್ಲಿ ಈ ಅಭಿವೃದ್ಧಿಯು ತೋರಿಕೆಯ ಅಭಿವೃದ್ಧಿಯಾಗಿದೆ. ಕೆಲವೇ ವರ್ಗಗಳ ಹಿತ, ಕೆಲವೇ ವಿಭಾಗಗಳ ಅಭಿವೃದ್ಧಿ ಸಮಾಜದ ಎಲ್ಲಾ ಪ್ರಜೆಗಳ ಹಿತವಲ್ಲ. ಸಾಮಾಜಿಕ ಹಾಗೂ ಆರ್ಥಿಕ ನೀತಿಗಳು ಸಮಗ್ರ ಪ್ರಜೆಗಳ ಹಿತವು ಪ್ರತ್ಯೇಕ ಸಂಗಡ ಹಾಗೂ ವರ್ಗಗಳ ಹಿತಗಳಿಗಿಂತ ಸಾರ್ವಭೌಮವೆಂದು ತಿಳಿದು ನಿರೂಪಿಸಲ್ಪಟ್ಟಿರಬೇಕು. ಅಂತಹ ನೀತಿಗಳು ಹಾಗೆ ನಿರೂಪಿಸಲ್ಪಡಲು ಪ್ರತಿಯೊಬ್ಬನ ಹಿತವನ್ನು ಸೀಮಿತಗೊಳಿಸಬೇಕು "ಇದ್ದವರಿಗೆ ಎಲ್ಲಾ ವಸ್ತುಗಳು, ಇಲ್ಲದವರಿಗೆ ಏನಿಲ್ಲ"—ಎಂಬ ನೀತಿಯು ಇಂತಹ ಘೋರಣೆಗೆ ತೀರಾ ವಿರುದ್ಧವಾದುದು (Problems of Economic Planning-E F W Durbin)

ನಮ್ಮ ದೇಶದಲ್ಲಿ ಆಧುನೀಕರಣದ ಹೆಸರಲ್ಲಿ ಸಮಾಜದ ಅವ್ಯವಸ್ಥೆಗಳು ಮತ್ತೂ ವಿಷಮಗೊಳ್ಳುತ್ತಿವೆ. ಅಭಿವೃದ್ಧಿಯ ಹೆಸರಿನಲ್ಲಿ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಯು ಅಡಿಮೇಲಾಗುವಂತಿದೆ. ಪ್ರಧಾನ ಪ್ರಶ್ನೆಗಳು ಮಹತ್ವವನ್ನು ಕಳಕೊಳ್ಳುತ್ತಿವೆ. ಅವಶ್ಯವಲ್ಲದ ವಿಷಯ ಹಾಗೂ ವಸ್ತುಗಳು ಆಧುನೀಕರಣದ ಹೆಸರಿನಲ್ಲಿ, ಅಭಿವೃದ್ಧಿಯ ನೆಪದಿಂದ ದೇಶಕ್ಕೆ ನುಗ್ಗುತ್ತಿವೆ. ಆಧುನೀಕರಣ, ಯಾಂತ್ರೀಕರಣ, ನವೀಕರಣ ಆರ್ಥಿಕ ಬೆಳವಣಿಗೆಯ ಕಾರಣಗಳಲ್ಲ. ಅವುಗಳು ಪರಿಣಾಮಗಳು ಮಾತ್ರ. ರೆಯೋನ್, ನೈಲೋನ್, ಟ್ರಾನ್ಸಿಸ್ಟರ್, ವೈಯಿಂಗ್ ಮಶೀನ್, ಕಂಪ್ಯೂಟರ್- ಇವುಗಳೆಲ್ಲಾ ನಮ್ಮ ನಗರಗಳಲ್ಲಿ ಆಕರ್ಷಣೆಗಳಾಗಿವೆ. ಆದರೆ ಅವುಗಳು ಅಭಿವೃದ್ಧಿಯ ಸಂಕೇತಗಳೆಂದು ತಿಳಿಯುವುದು ತಪ್ಪು. ಇಂತಹ ತಪ್ಪು ಗ್ರಹಿಕೆಗಳಲ್ಲಿ ಅಸೂಯೆ, ಅಸಮಾಧಾನ ಹಾಗೂ ಅಸಂತೋಷಕ್ಕೆ ಕಾರಣವಾಗಿದೆ. ಭಾರತದಂತಹ ದೇಶದಲ್ಲಿ ಅಭಿವೃದ್ಧಿಯು ಮೂಲತಃ ಎರಡು ಮುಖ್ಯ ಪ್ರಶ್ನೆಗಳ ಪರಿಹಾರವನ್ನು ಹೊಂದಿಕೊಂಡಿದೆ. ಮೊದಲ ಪ್ರಶ್ನೆಯು ಅಧಿಕ ಆಹಾರ ಉತ್ಪಾದನೆಯದ್ದಾಗಿದೆ. ಕಳೆದ ಹಲವಾರು ವರ್ಷಗಳಿಂದ ಆಹಾರದ ಪ್ರಶ್ನೆಯು ತೀರಾ ವಿಷಮಾವಸ್ಥೆಗೆ ಬಂದಿದೆ. ಇದಕ್ಕಾಗಿಯೇ ನಮ್ಮ ಹಣವೆಲ್ಲ ವೆಚ್ಚವಾಗುತ್ತಿದೆ. ವಿದೇಶಿ ವಿನಿಮಯ ವ್ಯಯವಾಗುತ್ತಿದೆ. ಯಾವ ದೇಶವೂ ನಮ್ಮಂತೆ ನಿರಂತರವಾಗಿ ನೆರೆಕರೆಯ ರಾಜ್ಯಗಳಿಂದ ಮಿತ್ರ ರಾಷ್ಟ್ರಗಳಿಂದ ಆಹಾರವನ್ನು ಆಮದು ಮಾಡುವಂತಿಲ್ಲ. ಅದಕ್ಕೊಂದು ಮಿತಿಯಿದೆ. ದೇಶದ ಕೃಷಿ ಅಭಿವೃದ್ಧಿಯಿಂದ ಮಾತ್ರ ಈ ಪ್ರಧಾನ ಪ್ರಶ್ನೆಯನ್ನು ಬಗೆಹರಿಸಬಹುದು. ಆದರೆ ಕೃಷಿಯ ಬಗ್ಗೆ ಎಲ್ಲರಿಗೂ ನಿರಾಸಕ್ತಿ. ದೇಶದ ಯಾವ ಮುಖ್ಯಮಂತ್ರಿಯೂ ಕೃಷಿಖಾತೆಯನ್ನು ಈವರೆಗೆ ನಿರ್ವಹಿಸಿಲ್ಲ. ಎರಡನೆಯ ಮುಖ್ಯಪ್ರಶ್ನೆ, ಉದ್ಯೋಗಾವಕಾಶಗಳದ್ದಾಗಿದೆ. ಈ ಎರಡು ಯೋಜನೆಯ ಅವಧಿಯಲ್ಲಿ ಉದ್ಯೋಗ ಅವಕಾಶಗಳನ್ನೊದಗಿಸಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ನಿರುದ್ಯೋಗ ಸಮಸ್ಯೆಯು ನಿತ್ಯ ಭೀಕರವಾಗುತ್ತಿದೆ. ಜನಸಂಖ್ಯೆಯ ಹೆಚ್ಚಳ ಈ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿದೆ. ಭಾರತದಂತಹ ಹಿಂದುಳಿದ ದೇಶದಲ್ಲಿ ಉದ್ಯೋಗದ ಪ್ರಶ್ನೆಯು ಜನರ ಜೀವನ ಮಟ್ಟದ ದೃಷ್ಟಿಯಲ್ಲಿ ಅತಿ ಮಹತ್ವದ್ದಾಗಿದೆ. ಈ ಭಾರತೀಯ ಆರ್ಥಿಕ ವ್ಯವಸ್ಥೆಯ ಮೇಲೆ ನಿರುದ್ಯೋಗದ ಈ ಭಾರವು ಅತಿ ಬಲವಾದುದಾಗಿದೆ. ನಿರುದ್ಯೋಗಿಗಳ ಭಾರವು ನಮ್ಮ ಆರ್ಥಿಕ ನೀತಿಯನ್ನು ಅಂಕೆಮೊಂಕೆಗೊಳಿಸುತ್ತವೆ. (A Philosophy of India Economic Development—Richard Gregg)

ಇಂದು ವಸ್ತುಗಳ ಉತ್ಪಾದನೆ ಹಾಗೂ ಅವುಗಳ ಅಂಕೆಸಂಖ್ಯೆಗಳ ಕುರಿತು ಪ್ರಕಟಣೆಯನ್ನು ಹೊರಡಿಸುವ ಹವ್ಯಾಸವು ಪ್ರಬಲವಾಗುತ್ತಿದೆ. ಈ ಪ್ರಕಟಣೆ ಪ್ರಗತಿಯ ಮಾದಿಯಲ್ಲ, ವಸ್ತುಗಳಿಗಿಂತ ಜನರು ಮುಖ್ಯ. ಜನರು ಅತಿ ಮಹತ್ವದ ಭಂಡವಾಳವೆಂಬುದನ್ನು ಮರೆಯಬಾರದು. ಜನರ ಆಸಕ್ತಿ, ಉತ್ಸಾಹಗಳು ಎಲ್ಲಾ ಆರ್ಥಿಕ ನೀತಿಗಳ ಯಶಸ್ಸಿನ ಮೂಲ ಚೈತನ್ಯವಾಗಿದೆ. ಜನ-ಭಂಡವಾಳದ ಕೊರತೆಯೇ ನಮ್ಮ ದೊಡ್ಡ ಕೊರತೆಯಾಗಿದೆ. ಯೋಜನೆಗಾರರು ಜನರನ್ನು ಮುಖ್ಯ ಭಂಡವಾಳವೆಂದು ಪರಿಗಣಿಸದಿರುವ ಪ್ರಮಾಣದ ಕಡೆಗೆ ಪ್ರೊ| ಗಾಲ್ಬ್ರೈತ್ ನಮ್ಮ ಗಮನ ಸೆಳೆಯುತ್ತಾರೆ. (The Affluent Society—J. K. Galbraith). ಇನ್ನೊಂದು ಪ್ರಶ್ನೆ. ಇಂದು ಎಲ್ಲವನ್ನೂ ಗಾತ್ರದ ರೂಪದಿಂದ ಅಳೆಯಲಾಗುತ್ತಿದೆ, ಅನ್ಯಾದಲ್ಲಿ ಈ ಕಾರ್ಖಾನೆ ಅತಿ ದೊಡ್ಡ ಕಾರ್ಖಾನೆ, ಜಗತ್ತಿನಲ್ಲೇ ಅತಿ ಎತ್ತರವಾದ ಕಟ್ಟಡ, ಬೃಹತ್ ಅಣೆಕಟ್ಟು, ಎಂಬಿತ್ಯಾದಿ ಹಾಣಡಂಗುರ ನಿತ್ಯ ನಡೆಯುತ್ತಿದೆ. ಗಾತ್ರ, ಯಾ ವೆಚ್ಚ ಮಾಡಲಾಗುವ ಹಣದ ಕುರಿತು ತುಂಬಾ ಪ್ರಚಾರ ನಡೆಯುತ್ತಿದೆ. ಆ ವೆಚ್ಚದಿಂದಾಗುವ ಪ್ರಯೋಜನ ಮುಖ್ಯ ವಿಷಯವಾಗಿದೆ. ಎಷ್ಟು ಹೆಚ್ಚು ಆಹಾರ ಬೆಳೆದಿದೆ, ಎಷ್ಟು ಕಾರ್ಖಾನೆಗಳು ಸ್ಥಾಪನೆ ಮಾಡಲಾಗಿವೆ ಎಂಬ ಪ್ರಶ್ನೆಗಳಿಗಿಂತಲೂ ಅವು ಎಷ್ಟು ಸಹಾಯಕವಾಗಿವೆ, ಎಷ್ಟು ಹೆಚ್ಚಿನ ಅವಕಾಶಗಳನ್ನು ಜನರಿಗೊದಗಿಸಿವೆ ಎಂಬುದನ್ನು ನಾವು ತಿಳಿಯಬೇಕಾಗಿದೆ. ಕಮ್ಯೂನಿಟಿ ಡೆವಲಪ್‌ಮೆಂಟ್ ಕಾರ್ಯಕ್ರಮಗಳ ಪರಿಶೀಲನಾ ವರದಿಗಳು ಈ ದೃಷ್ಟಿಯಿಂದ ಯೋಜನಾ ಅಭಿವೃದ್ಧಿ ಕಾರ್ಯಗಳನ್ನು ಅಳೆಯಬೇಕೆಂದು ಡಾ| ಪಾಲ್ ಟೇಲರ್ ಅಭಿಪ್ರಾಯಪಟ್ಟಿರುವುದು ನಮ್ಮ ಗಮನವನ್ನು ಸೆಳೆಯಬೇಕಾಗಿದೆ (Community Development- Paul Taylor).

ತಪ್ಪು ಕಲ್ಪನೆಗಳು—ಬೃಹತ್ ಯೋಜನೆಗಳ ಬಗ್ಗೆ ನಮ್ಮ ಭಾವನೆಗಳು— ನಮ್ಮ ನ್ಯೂನತೆಗಳಾಗಿವೆ ಅನುಕರಣೆ ನಮ್ಮ ಇನ್ನೊಂದು ಹಿರಿಯ ಅಪರಾಧವಾಗಿದೆ. ದೊಡ್ಡ ಉಕ್ಕಿನ ಕಾರ್ಖಾನೆಗಳು, ದೊಡ್ಡ ಅಣೆಕಟ್ಟುಗಳು, ದೊಡ್ಡ ಎಣ್ಣೆ ಶುದ್ಧೀಕರಣ ಕೇಂದ್ರ—ಎಲ್ಲವೂ ದೊಡ್ಡದಾಗಿರಬೇಕು ಎಂಬ ಅಭಿಪ್ರಾಯದಿಂದಲೇ ನಮ್ಮ ಯೋಜನೆಗಳು ನಿರೂಪಿಸಲ್ಪಟ್ಟಂತಿವೆ. ಆದರೆ ಅವುಗಳ ಪ್ರಯೋಜನ ಮಾತ್ರ ದೊಡ್ಡ ಪ್ರಮಾಣದ್ದಾಗಿಲ್ಲ. ದೊಡ್ಡ ಪ್ರಮಾಣದಲ್ಲಿ ದುಡ್ಡು ವೆಚ್ಚವಾದುದಲ್ಲದೆ ಇರುವ ಯೋಜನೆಗಳು ಒಂದು ದಶಕದಲ್ಲಾಗಲೀ ಯಾವ ದೊಡ್ಡ ಪ್ರಮಾಣದ ಪ್ರತಿಫಲವನ್ನು ತರುವಂತಹದ್ದಲ್ಲ. ಉದಾಹರಣೆಗಾಗಿ ಹನ್ನೆರಡು ಮಿಲಿಯ ಡಾಲರು ವೆಚ್ಚದ ಎಣ್ಣೆ ಶುದ್ಧೀಕರಣದ ಕೇಂದ್ರವೊಂದು ೩೫೦ ಮಂದಿಗೆ ಉದ್ಯೋಗವನ್ನೊದಗಿಸುತ್ತದೆ. ಎರಡು ಕೋಟಿ ರೂಪಾಯಿ ವೆಚ್ಚದ ರೆಯೋನ್ ಕಾರ್ಖಾನೆ ೫೦ ಮಂದಿಗೂ ಉದ್ಯೋಗವನ್ನೊದಗಿಸುವುದಿಲ್ಲ. ಅಷ್ಟೂ ಅಲ್ಲದೆ ಅದಕ್ಕೆ ಅಗತ್ಯವಿರುವ ಮರದ ಗೋಡು ಕೂಡಾ ವಿದೇಶದಿಂದ ಆಮದು ಆಗುತ್ತದೆ! ಅದು ವಿದೇಶಿ ವಿನಿಮಯವನ್ನು ಉಳಿಸುವುದೂ ಇಲ್ಲ, ಉದ್ಯೋಗವನ್ನು ಒದಗಿಸುವುದೂ ಇಲ್ಲ. ಅಷ್ಟೇ ಅಲ್ಲ, ಆಮದುಗಳಿಂದಾಗಿ, ನಮ್ಮ ಅಲ್ಪಸ್ವಲ್ಪ ವಿದೇಶಿ ವಿನಿಮಯವನ್ನೂ ಅದು ಕರಗಿಸುತ್ತದೆ! ಆದುದರಿಂದಲೇ ನಾವು ಅಮೇರಿಕಾ, ಬ್ರಿಟನ್, ರಷ್ಯಾಗಳ ಮಾದರಿಯ ಬದಲು ಜಪಾನು ದೇಶದ ಕೈಗಾರಿಕಾ ಬೆಳವಣಿಗೆಯ ಮಾರ್ಗವನ್ನನುಸರಿಸಬೇಕಾಗಿದೆ. ನಾವು ಗುಡಿ ಕೈಗಾರಿಕೆಗಳ, ಸಣ್ಣ ಉದ್ಯಮಗಳ ಬೆಳವಣಿಗೆಗೆ ಬೇಕಾದ ಸಹಾಯ ನೀಡಬೇಕಾಗಿದೆ. ನಮ್ಮ ಆರ್ಥಿಕ ಬೆಳವಣಿಗೆಯ ಈ ಹಂತದಲ್ಲಿ ಮುಂದುವರಿದ ಕೈಗಾರಿಕಾ ರಾಷ್ಟ್ರಗಳ ಬೆಳವಣಿಗೆಯ ಅನುಕರಣೆಯು ನಮಗೆ ಆದರ್ಶವಾಗಲಾರದು. ನಾಲ್ಕೈದು ಬೃಹತ್ ಉಕ್ಕಿನ ಕಾರ್ಖಾನೆಗಳ ಸ್ಥಾಪನೆ ರೆಯೋನ್, ಇಲೆಕ್ಟ್ರೋನಿಕ್ ಕೈಗಾರಿಕೆಗಳ ಎರಡು ಮೂರು ದೊಡ್ಡ ಕಾರ್ಖಾನೆಗಳ ರಚನೆ, ಸಿಮೆಂಟ್, ಕೃತಕ ಗೊಬ್ಬರದ ಒಂದೆರಡು ಹಿರಿಯ ಯೋಜನೆಗಳ ಬದಲು ದೇಶದಾದ್ಯಂತ ಹರಡಿರುವ ಸಣ್ಣ ಪ್ರಮಾಣದ ಗುಡಿಕೈಗಾರಿಕೆಗಳ ಸಣ್ಣ ಸಣ್ಣ ಉದ್ಯಮಗಳು ಅಕಾಶಗಂಗೆ, ನಮಗೆ ಅನುಕೂಲವಾದ ಆದರ್ಶವಾಗಿದೆ. (The Plan under pressure- Barbara ward)

ನಮ್ಮ ಯೋಜನೆಯ ಯಶಸ್ಸು ಮೂಲತಃ ಕೃಷಿ ಕ್ಷೇತ್ರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೊಂದಿಕೊಂಡಿದೆ ಎಂಬುದನ್ನು ಅಲ್ಲಗಳೆಯುವುದರಿಂದ ಉಂಟಾಗಿದೆ. ನಮ್ಮ ದೇಶದಲ್ಲಿ ಬಾರ್ಬರಾ ವಾರ್ಡ್‌ರವರು ಹೇಳಿರುವಂತೆ, ಕೃಷಿಯು ಕೇವಲ ಮಾತಿನ ಸುರಿಮಳೆಯಲ್ಲಿ ಮಹತ್ವ ಪಡೆದಿರುತ್ತದೆ. ಕೃತಿಯಲ್ಲಿ ಅದು ಅತಿ ಹಿಂದುಳಿದಿದೆ. ವಾಸ್ತವಿಕವಾಗಿ ಅದು ಅತಿ ಅವ್ಯವಸ್ಥೆಯಲ್ಲಿದೆ. ನಾವು ಉಕ್ಕಿನ ಕಾರ್ಖಾನೆಗಳನ್ನು ಮಾತ್ರ "ಭವಿಷ್ಯತ್ತಿನ ಭವ್ಯ ಮಂದಿರ"ಗಳೆಂದು ಭಾವಿಸುತ್ತೇವೆ. ಕೃಷಿ ಕ್ಷೇತ್ರದ ದುಸ್ಥಿತಿ ದೇಶವನ್ನು ದುರಂತದ ದಾರಿಗೊಯ್ಯಬಹುದು. ಈ ಕ್ಷೇತ್ರದ ಅತ್ಯಲ್ಪವಾದ ಉತ್ಪಾದನೆಯು ಭಾರತದ ಭವಿಷ್ಯದ ಬಗ್ಗೆಯೇ ಭೀತಿಯನ್ನು ಉಂಟುಮಾಡುವಂತಹದ್ದಾಗಿದೆ. ಉದಾಹರಣೆಗಾಗಿ ಭಾರತದಲ್ಲಿ ಕಲಾ ಒಂದು ಎಕ್ರೆಯ ಹತ್ತಿ ಉತ್ಪಾದನೆಯು ೯೦ ಪೌಂಡುಗಳಷ್ಟಾಗಿದೆ ಅದು ಈಜಿಪ್ಟಿನಲ್ಲಿ ೫೪೦ ಪೌಂಡುಗಳಷ್ಟು, ಪಾಕಿಸ್ತಾನದಲ್ಲಿ ೨೩೦ ಪೌಂಡುಗಳಷ್ಟು ಇದೆ. ಭಾರತದ ಈ ಅತ್ಯಲ್ಪ ಉತ್ಪಾದನೆಯು ಕೃಷಿಕ್ಷೇತ್ರದ ಭವಿಷ್ಯವನ್ನು ಮಾತ್ರವಲ್ಲ ಔದ್ಯೋಗಿಕರಂಗದ ಅಭಿವೃದ್ಧಿಯನ್ನೂ ದೇಶದ ಪ್ರಗತಿಯನ್ನೂ ಬೆದರಿಸುತ್ತದೆ!

ನಮ್ಮ ದೇಶದ ಜನರು ತಮ್ಮ ಭವಿಷ್ಯತ್ತಿನ ಬಗ್ಗೆ ತಮ್ಮ ದೇಶದ ಬಗ್ಗೆ ಸಮ್ಯಕ್ ದೃಷ್ಟಿಯನ್ನು ವ್ಯಾವಹಾರಿಕ ಮನೋವೃತ್ತಿಯನ್ನು ಪಡೆಯುವುದು ಅವಶ್ಯವಿದೆ. ಮಾನವ ಮೌಲ್ಯಗಳನ್ನು ತ್ಯಾಗ ಮಾಡದೆ ಕನಿಷ್ಠ ಕಾಲಾವಧಿಯಲ್ಲಿ ಗರಿಷ್ಠ ಗಾತ್ರದ ಪ್ರಯೋಜನವನ್ನು ಪಡೆಯುವುದು ಬುದ್ಧಿಶಕ್ತಿಯ ಕೌಶಲ್ಯವಾಗಿದೆ ಮಾತ್ರವಲ್ಲದೆ, ನಮ್ಮ ಕಾಲದ ಹಾಗೂ ಸಮಾಜದ ಕರೆಯಾಗಿದೆ. ಕಾಲದ ಸಂದೇಶಕ್ಕೆ ಸರಿಯಾಗಿ ನಮ್ಮ ಅವಶ್ಯಕತೆಗಳಿಗೆ ಅನುಗುಣವಾದ ರೀತಿಯಲ್ಲಿ ನಡೆಯುವುದರಲ್ಲಿಯೇ ನಾಡಿನ ಹಾಗೂ ನಮ್ಮ ಭವಿಷ್ಯತ್ತು ಹೊಂದಿಕೊಂಡಿದೆ.



ಕಾವ್ಯಕೆ ಗುರು ಕುಮಾರವ್ಯಾಸ

(೯ನೇ ಪುಟದಿಂದ)

ಯಣನೇ ಕವಿ ಲಿಪಿಕಾರ ಕುಮಾರವ್ಯಾಸನಪ್ಪ." ಶ್ರೀಕೃಷ್ಣನ ಸ್ತೋತ್ರ ಮಾಡುವುದೆಂದರೆ ನಾರಣಪ್ಪನಿಗೆ ಎಲ್ಲಿಲ್ಲದ ಭಕ್ತಿ, ಶ್ರದ್ಧೆ, ಆಸಕ್ತಿ. ಶ್ರೀಕೃಷ್ಣ ಗಾಯನವಾಗಬೇಕೆಂದರೆ ಮುಗಿಯಿತು. ಭಗವಂತನನ್ನೇ ಧ್ಯಾನಿಸುತ್ತಾ ಮೈಮರೆತು ನಿಂತುಬಿಡುತ್ತಾನೆ. ಇದು ಅವನ ಭಕ್ತಿಯ ಉತ್ಕಲತೆ.

ನಾರಣಪ್ಪ ಮತ್ತೊಂದು ಸಂಗತಿಯನ್ನೂ ಸ್ಪಷ್ಟಪಡಿಸುತ್ತಾನೆ. ಭಾರತದ ಕಥೆ ಅವನ ಪಾಲಿಗೆ ಕೌರವರ—ಪಾಂಡವರ ದಾಯಾದಿ ಮತ್ಸರದ ಕಾಳಗದ ಕಥೆಯಲ್ಲ. ಪಾಂಡವರ ಭಕ್ತಿ ಧರ್ಮ, ಸತ್ಯ ಶ್ರದ್ಧೆಗಳನ್ನೂ ಪ್ರತಿಬಿಂಬಿಸುವ ಕಾವ್ಯವೂ ಅಲ್ಲ ದುಷ್ಟ ಕೌರವರ ವಿನಾಶದ ಚರಿತ್ರೆಯಂತೂ ಮೊದಲೇ ಅಲ್ಲ. ಅದು ಶ್ರೀ ಕೃಷ್ಣ ಚರಿತ್ರೆ. ಸಾಧು ಸಂರಕ್ಷಣ, ದಾನವ ದಮನ, ಧರ್ಮ ಸಂಸ್ಥಾಪನೆಗಾಗಿ ಅವತರಿಸಿ ಬಂದ ಜಗನ್ನಾಥ ಸೂತ್ರಧಾರಿಯ ದಿವ್ಯ ಕಥೆ. ಆದರಿಂದಲೆ 'ತಿಳಿಯ ಹೇಳುವೆ ಕೃಷ್ಣ ಕಥೆಯನು" ಎಂದಿದ್ದಾನೆ. ಅವನು ರಚಿಸಿ ಪ್ರಚುರಪಡಿಸಿದ ಕಾವ್ಯ ಕೌರವ—ಪಾಂಡವರ ಕಥೆಯೇ ಆದರೂ ಕಾವ್ಯದಲ್ಲಿ "ಪದುಮನಾಭನ ಮಹಿಮೆ ವಿಚಾರ" ವನ್ನು ಮಾತ್ರ ವಿಶೇಷವಾಗಿ ಪ್ರಸ್ತಾಪಿಸುತ್ತಾನೆ.

ಹರಿಯ ಸೂತ್ರ ಮಹಿಮೆ ಮೊದಲಾದವುಗಳಿಂದ ನಾರಣಪ್ಪ ವೈಷ್ಣವ ಎಂದು ಹೇಳುವಂತಿಲ್ಲ. ನಾರಾಯಣನಲ್ಲಿರುವಷ್ಟೇ ಭಕ್ತಿ, ಶ್ರದ್ಧೆಗಳು ಶಿವನಲ್ಲಿಯೂ ಅವನಿಗಿವೆ. ಒಟ್ಟಿನಲ್ಲಿ ಅವನ ಕಾವ್ಯವನ್ನು ಗಮನಿಸಿದರೆ ಹರಿಹರರಲ್ಲಿ ಭೇದವೆಣಿಸದ ಭಾಗವತ ಸಂಪ್ರದಾಯದ ಕವಿ ಎಂದು ಹೇಳಲಾಗಿದೆ. ನಾರಾಯಣ ಸ್ತೋತ್ರಕ್ಕೆ ಕವಿಯ ನಾಲಿಗೆ ಒಲಿದು ನುಡಿದಂತೆ ಶಿವನ ಸ್ತೋತ್ರಕ್ಕೂ ಒಲಿದು ನುಡಿದಿದೆ.

ಕವಿನಾರಣಪ್ಪ ತನ್ನ ಕಥಾ ನಾಯಕ ಶ್ರೀ ಕೃಷ್ಣನಿಗೆ ಒಂದು ಕ್ಷಣವೂ ಬಿಡುವು ಕೊಡದುದಿಲ್ಲ. ಎಲ್ಲ ಕ್ಷೇತ್ರಗಳ ಘಟನೆಗಳ ಹಿನ್ನೆಲೆಯಲ್ಲಿಯೂ ಅವನ ಕೈವಾಡ ಇದ್ದೇ ಇದೆ. ಅವನು ಸರ್ವಾಂತರ್ಯಾಮಿ: ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣನಾದವನಿಗೆ ವಿರಾಮ ದೊರಕುವುದು ಸಾಧ್ಯವೇ—ಎಂದಿಗೂ ಇಲ್ಲ. ಶ್ರೀಕೃಷ್ಣನ ಪ್ರವೇಶ, ಸಲಹೆ, ಅವನ ಒಪ್ಪಿಗೆ ಇಲ್ಲದೆ ಪಾಂಡವರು ಒಂದು ಅಡಿಯನ್ನು ಇಡಲಾರರು. ಆದಿಯಿಂದ ಅಂತ್ಯದವರೆಗಿನ ಪ್ರತಿ ಸನ್ನಿವೇಶ, ಘಟನೆಗಳಲ್ಲಿಯೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕಂಡು ತಾನು ರಚಿಸಿದ ಲೀಲಾ ನಾಟಕವಾದ 'ಪಾಂಡವ ಕೌರವರ ಕಥೆ'ಯನ್ನು ಮುಗಿಸುತ್ತಾನೆ. ನಾರಣಪ್ಪನ ಶ್ರೀ ಕೃಷ್ಣ, ಭಾರತದ ಕೇಂದ್ರ ವ್ಯಕ್ತಿ, ಅಷ್ಟೇ ಅಲ್ಲ ಮಹಾಶಕ್ತಿ.

ಪಾಂಡವರನ್ನು ತನ್ನ ಪ್ರಾಣಗಳಂತೆ ರಕ್ಷಿಸಿ, ಪೋಷಿಸಿಕೊಂಡು ಬರುತ್ತಾನೆ ಶ್ರೀಕೃಷ್ಣ. ನಾರಣಪ್ಪನದು ಪ್ರತಿಭಾಪೂರ್ಣ ಕಾವ್ಯ ರಚನಾ ಶಕ್ತಿ. ಅವನು ಎಲ್ಲಿಯೂ ತಡವರಿಸಿಲ್ಲ, ನಿಂತಿಲ್ಲ. ಅವನ ಹೃದಯಾಂತರಾಳದಿಂದ ಕಾವ್ಯಗಂಗೆ ಸುಲಲಿತವಾಗಿ ಹರಿದು ನಡೆದಿದ್ದಾಳೆ. ದ್ರೌಪದಿಯ ಕರುಣಪೂರಿತ ನೋಟ, ಧರ್ಮನಂದನನ ಧರ್ಮವಿಚಾರದೃಷ್ಟಿ, ಭೀಮನ ಪರಾಕ್ರಮ ಮತ್ತು ಭಕ್ತಿ, ಅರ್ಜುನನ ವೀರ ಸಾಹಸ ಮನೋಭಾವ, ದುರ್ಯೋಧನನ ಛಲ, ಶಕುನಿಯ ಕುಟಿಲತನ, ಕರ್ಣನ ನಿಷ್ಠೆ, ಮಿತ್ರ ಪ್ರೇಮ, ಭೀಷ್ಮ, ದ್ರೋಣಾದಿಗಳ ಹಿರಿಯ ವ್ಯಕ್ತಿತ್ವ, ದುಶ್ಶಾಸನನ ಕರಾಳ ಮೂರ್ತಿ, ಧೃತರಾಷ್ಟ್ರನ ಅಸಹಾಯಕ ಪರಿಸ್ಥಿತಿ, ವಿದುರನ ನೀತಿ, ಅಭಿಮನ್ಯುವಿನ ಪರಾಕ್ರಮ, ಉತ್ತರನ ಪೌರುಷ (ವಿನೋದಕ್ಕೆ ಖ್ಯಾತಿ) ಎಲ್ಲವೂ ಕವಿತಾ ಶಕ್ತಿಯ ಪ್ರತ್ಯಕ್ಷ ಪ್ರತಿಮೆಗಳು.

ಅರ್ಜುನ ಶ್ರೀ ಕೃಷ್ಣನಿಗಷ್ಟೇ ಅಲ್ಲ ನಾರಣಪ್ಪನಿಗೂ ಪ್ರಿಯನಾದ ವ್ಯಕ್ತಿ. ಕೃಷ್ಣಾರ್ಜುನರದು ಅಮರ ಮೈತ್ರಿ, ಮೇಲಾಗಿ ಬಂಧುತ್ವ. ಆ ಒಂದು ಸವಿ ಸಹಜೀವನದ ಫಲವಾಗಿಯೇ ಶ್ರೀ ಕೃಷ್ಣ ಅರ್ಜುನನ ರಥದ ಸಾರಥಿಯಾಗುತ್ತಾನೆ. ಮಹಾಭಾರತವೆನ್ನುವ ಮಹಾರಥದ ಸಾರಥಿಯಾಗಿ ಮೆರೆಯುತ್ತಾನೆ. ಧರ್ಮಕ್ಕೆ ಸತ್ಯಕ್ಕೆ ದೇವರ ಬೆಂಬಲವಿದೆ. ಸತ್ಯ ಧರ್ಮಗಳಿಗೆ ಆರಂಭದಲ್ಲಿ ಕಷ್ಟ—ನಷ್ಟಗಳಾದರೂ ಅಂತ್ಯದಲ್ಲಿ ಜಯವಿದೆ, ಅವುಗಳನ್ನು ಯಾವ ಶಕ್ತಿಗಳೂ ಅಲುಗಿಸಲು ಸಾಧ್ಯವಿಲ್ಲ ಎಂಬುದನ್ನು ಎತ್ತಿ ತೋರಿಸಿದ್ದಾನೆ ನಾರಣಪ್ಪ. ಪಾಂಡವರಿಗೆ ಸಹಿಸಲಸಾಧ್ಯವಾದ ಎಡರು—ತೊಡರುಗಳು ಒದಗಿದುವು. ಶ್ರೀಕೃಷ್ಣ ಅವರ ಬೆಂಬಲಿಗನಾಗಿರುವಾಗ ಯಾವ ಭಯ? ಕಷ್ಟದ ಮೋಡಗಳು ಓಡಿ ಹೋದವು. ಪಾಂಡವರು ತಮ್ಮ ಹೋರಾಟದಲ್ಲಿ ಜಯಗಳಿಸಿದರು, ಇದಕ್ಕೆ ಕಾರಣ ದೈವ ಬೆಂಬಲ ಎಂಬುದನ್ನು ಮರೆಯುವಂತಿಲ್ಲ.

ಕುಮಾರ ವ್ಯಾಸನ (ನಾರಣಪ್ಪ) ಕರ್ನಾಟ ಭಾರತ ಕಥಾಮಂಜರಿ ಪ್ರತಿ ಮನೆಯಲ್ಲಿಯೂ ನಿತ್ಯ ಪೂಜೆಗೆ ಅರ್ಹವಾದ ಗ್ರಂಥವಷ್ಟೇ ಅಲ್ಲ, ಪಠಿಸಿ ಮನನ ಮಾಡಿಕೊಳ್ಳಬೇಕಾದ ಮಹಾಕಾವ್ಯ.

ನಿಮ್ಮ ಮನೆಯಲ್ಲಿ ಸದಾ ಆನಂದ ಜ್ಯೋತಿಯು
ಬೆಳಗುತ್ತಿರಬೇಕೆ?
ಹಾಗಾದರೆ
ನಂದಾ ದೀಪ
ಎಂಬ ಉತ್ಕೃಷ್ಟ ಚಿಕ್ಕ ಕತೆಗಳ
ಚೊಕ್ಕ ಪುಸ್ತಕವೊಂದರ ಪ್ರತಿಯನ್ನಿಟ್ಟುಕೊಳ್ಳಿ.
ದಿ। ಕೊರಡ್ಕಲ್ ಶ್ರೀನಿವಾಸ ರಾಯರ
ಹನ್ನೊಂದು ಕತೆಗಳ ಸಂಗ್ರಹ.
ಪ್ರತಿಯೊಂದು ಕತೆಯೂ ನಿಮ್ಮ ಹೃದಯದಲ್ಲೊಂದು
ಹೊಸ ದೀಪವನ್ನು ಬೆಳಗಿಸುವುದು.
ತ್ರಿವರ್ಣ ಮುಖಪತ್ರದಿಂದೊಡಗೂಡಿದೆ. ಬೆಲೆ 0—88 ಪೈಸೆ, ಟ. ಖ. ಬೇರೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ಕವಿತಾ ವಿತಾನ

ತರಕಾರಿ ಬೇಕೇ?

ಕಂಸ ಐತಾಳ, ಹಾರ್ಯಾಡಿ.

ಬೆಳುದಿಂಗಳಿನ ಬಣ್ಣ ಮುದ್ದುಮೋಹಕ ಮೊಗವು
ಚಿಗರೆಗಂಗಳ ಚೆಲುವ ತರುಣಿ ಆಕೆ!
ಪ್ರತಿ ದಿನವೂ ಮುಂಜಾನೆ ಬಂದವಳು, ನಸು ನಗುತ,
ಕೇಳುವಳು, 'ಓ! ಅಮ್ಮ ತರಕಾರಿ ಬೇಕೇ?'

'ತೊಂಡೆ, ಹಾಗಲಕಾಯಿ, ಹೀರೆ, ಪಡುವಲಕಾಯಿ,
ಬೆಂಡೆ, ಅಲಸಂದೆ, ನಿಮಗಾವ ತರಕಾರಿ?
ಬೇಕೆಂದು ಕೇಳುತ್ತ ಮೋಡಿಯಲಿ ಅವುಗಳನು
ಗಂಟು ಹಾಕುವಳೆಮಗೆ, ಅಬ್ಬ! ವೈಯ್ಯಾರ!

ಅವಳ ಮುಖ ಶಶಿಯಂತೆ, ದೇಹವ್ರೋಲತೆಯಂತೆ,
ಎಲ್ಲ ಅವಳೊಡನೆ ಮಾಡುವರು ವ್ಯಾಪಾರ,
ಆಕೆಯೋ ಚೌಕಾಶಿ ಮಾಡುವಳು ಮಹಾಂತಿ,
ಆದರೇನ್? ಆಕೆಯಾ ಮಾತೇ ಬಹು ಮಧುರ.

'ಒಳ್ಳೆ ಬದನೆಯ ಕಾಯಿ, ಕೊಳ್ಳಿ ರಾಯರೇ ನೀವು'
ಕೇಳುವಳು ನೋಟದಲಿ ಬಲೆಯ ಬೀಸಿ,
ರಾಯರೂ ಕೊಳ್ಳುವರು—ಆ ಕೊಳೆತ ಬದನೆಯನು
ಆಕೆ ಹೇಳಿದ ಕ್ರಯವ ಕೊಡುತ ನಗೆ ಸೂಸಿ;

ಅವಳಿರದ ಸ್ಥಳವಿಲ್ಲ ಅನವರತ ತಿರುಗಾಟ,
ಮುಂಜಾನೆಯಿಂದ ಸಂಜೆಯ ತನಕ ಅಲೆತ.
ಮನೆಯಲಿರುವುದು ಅವಳ ಮುದಿ ತಂದೆಯೊರ್ವನೆ, —
ಅವನಿಗಾಗಿಯೇ ಅವಳ ಈ ತರದ ದುಡಿತ.

ಬಾಳ ಸಂಗಾತಿಗೆ

ನಿರ್ಮಲೆಯ ಜೊತೆಗೂಡಿ
ಕಳೆದಿರುವ ಈ ಬಾಳು
ಜನ್ಮಜನ್ಮಾಂತರಕು
ಮರೆಯೆ ನನ್ನಾಣೆ.

ನನ್ನ ನಿನ್ನಯ ಪ್ರೇಮ
ಸೌಂದರ್ಯದಾರಾಮ
ಹೊಸ ಚಿಗುರ ಬಳ್ಳಿಯಲಿ
ಅರಳಿರುವ ನವಸುಮ.

ವಿಶ್ವ ಚೇತನವೆಲ್ಲ
ಸ್ತಬ್ಧವಾಗಿಯೆ ಇರಲಿ
ಭವದ ಸಾಗರವೆನ್ನ
ಇದಿರಾಗಲಿ.

ನೀನೆನ್ನ ಬಾಳಿನಲಿ
ನನ್ನ ಚೇತನವಾಗಿ
ನಾ ನಿನ್ನ ಜೊತೆಗೂಡಿ
ಒಂದಾಗಿ ಸಾಗಿ.

ನನ್ನ ನಿನ್ನಯ ಮನದೆ
ಮೊದಲ ಬಾರಿಯ ಭೇಟಿ
ಎಲ್ಲರಂತಲ್ಲ ಇದು
ಹೊಚ್ಚ ಹೊಸದಾಟ

ಬಾಳ ಕಡಲನು ದಾಟಿ
ಹೃದಯ ವೀಣೆಯ ಮೀಟಿ
ಸಂಸಾರ ಸಾಗರದೆ
ನೀನೆ ಸರದಾರಿ

ನಿನ್ನ ಕಂಡಾದಿನದೆ
ನಾನಿಂತು ಮೈಮರೆತೆ
ಅಂದೆ ರಚಿಸಿದೆ ನಾನು
ನವ್ಯ ಕವಿತೆ

ನಿನ್ನ ಮೋಹದ ದನಿಗೆ
ಹೃನ್ಮನದೆ ನಾ ಸೋತೆ
ಆಗ ನೀ ಬಂದೆನ್ನ
ಕಣ್ಣೆದುರು ನಿಂತೇ

ನೀರಜದ ಹೋಲಿಕೆಯ
ನಿನ್ನ ಕಣ್ಣಿನ ನೋಟ
ಕಲಿಸಿತ್ತು ಮನದಲ್ಲೇ
ಪ್ರೇಮ ಪಾಠ

ನಾಲ್ಕು ವರ್ಷದೆ ನಿನ್ನ
ಜೊತೆಯಲ್ಲೇ ಒಡನಾಟ
ಅರಿವಾಗಲೇ ಇಲ್ಲ
ಕಾಲನೋಟ.

ಸಗ್ಗದಲಿ ನರಕದಲಿ
ನೀನೆನ್ನ ಜೊತೆಗಾತಿ
ಎಂದು ಮರೆಯೆನು ನಾನು
ಈ ಸಂಗತೀ

ಮಾತಿನಲಿ ಮೀರುವಳೇ
ನಿನ್ನ ಆ ಸರಸತಿ?
ಜನ್ಮ ಜನ್ಮದಿ ನೀನೆ
ನನ್ನ ಸಂಗಾತಿ

ಎ. ವಿ. ಲಕ್ಷ್ಮೀನಾರಾಯಣ ರಾವ್,
ಬೆಳವಿನ ಕೊಡಿಗೆ.

ಭರ್ತೃಹರಿ - ಆತನ ಸುಭಾಷಿತಗಳು

(ಎಂಟನೇ ಪುಟದಿಂದ)

ಗಿ ಹಂಬಲಿಸುತ್ತಿದ್ದಂತೆ ವೈರಾಗ್ಯ ದರ್ಶಕವು ಹೇಳುತ್ತಿದೆ. ಇವನ ನೀತಿ—ಶೃಂಗಾರ ವೈರಾಗ್ಯ ಶತಕಗಳು ಜೀವನದ ಸಮಸ್ಯೆಯನ್ನು ಬಿಡಿಸಿವೆ. ಬಾಲ್ಯದಲ್ಲಿ ಮಾನವನು ನೀತಿಯನ್ನು ಚೆನ್ನಾಗಿ ರಕ್ತದಲ್ಲಿ ಕರಗಿಸಿಕೊಳ್ಳಬೇಕು; ತಾರುಣ್ಯ ಯೌವ್ವನಗಳಲ್ಲಿ ಶೃಂಗಾರವನ್ನು ಸೇವಿಸಬೇಕು ವೃದ್ಧಾಪ್ಯದಲ್ಲಿ ವೈರಾಗ್ಯಕ್ಕೆ ಶರಣು ಹೋಗಬೇಕು. ಇದೇ ಕವಿಯ ಜೀವನದ ಪ್ರದೀಪವಾಗಿರಬಹುದು. ಇವನ್ನು ಕಲ್ಪನಾ ಕಥೆಯಂತೆ ಚಂಚಲ ಪ್ರಕೃತಿಯವನಾಗಿದ್ದರೆ, ಇಂತಹ ಲಲಿತ ಮನೋಹರಗಳಾದ ಶತಕಗಳನ್ನೆಂದೂ ಬರೆಯಲು ಸಮರ್ಥನಾಗುತ್ತಿರಲಿಲ್ಲ. ಒಬ್ಬ ಭರ್ತೃಹರಿಯು ವಾಕ್ಯ ಪದೀಯವೆಂಬ ವ್ಯಾಕರಣವನ್ನು ಬರೆದಿದ್ದಾನೆನ್ನುತ್ತಾರೆ ಬಹುಶಃ ಸುಭಾಷಿತಕಾರ ಭರ್ತೃಹರಿಯೂ, ವೈಯಾಕರಣಿ ಭರ್ತೃಹರಿಯೂ ಒಬ್ಬನೇ ಆಗಿರಬಹುದು.

ಇತ್ಸಿಂಗನು ಹೇಳಿದ ಬೌದ್ಧ ಮತಾನುಯಾಯಿ ಭರ್ತೃಹರಿಯು ಶತಕಕಾರನಲ್ಲವೆಂಬುದು ಸತ್ಯ. ತನ್ನ ವೈರಾಗ್ಯ ಶತಕದಲ್ಲಿ ಈತನೇ 'ಮದನಾಂತಕಾಂಘ್ರಿಯುಗಳಂ ಮನಸ್ತು ನಾನ್ಯಗತಿಃ' ಶಿವನ ಪಾದಗಳನ್ನು ಬಿಟ್ಟು ತನಗೆ ಬೇರೆ ಆಶ್ರಯವೇ ಇಲ್ಲವೆಂದಿದ್ದಾನೆ

ಶ್ಲೋ|| ಮಹೇಶ್ವರೇವಾ ಜಗತಾಮಧೀಶ್ವರೇ
ಜನಾರ್ದನೇ ವಾಜಗದಂತರಾತ್ಮನೀ
ನವಸ್ತು ಭೇದಪ್ರತಿಪತ್ತಿರಸ್ತಿ ಮೇ।
ತಥಾಪಿ ಭಕ್ತಿಸ್ತರುಣೇಂದು ಶೇಖರೇ||

'ಸಕಲ ಜಗನ್ನಿಯಾಮಕನಾದ ಜಗದೀಶ್ವರನಲ್ಲಿಯೂ, ಸಕಲ ಜಗದಂತರ್ಯಾಮಿಯಾಗಿರುವ ಮಹಾ ವಿಷ್ಣುವಿನಲ್ಲಿಯೂ, ಈತನು ಬೇರೆ, ಆತನು ಬೇರೆಯೆಂಬ ಭೇದ ಭಾವನೆ ಸರ್ವಥಾ ನನಗಿಲ್ಲ. ಆದರೂ ಚಂದ್ರ ಶೇಖರನಾದ ಸದಾಶಿವನಲ್ಲೇ ನನಗೆ ಅಧಿಕ ಭಕ್ತಿಯಿರುವುದು' ಈ ಶ್ಲೋಕವೊಂದೇ ಈತನು ಪರಮಶೈವನೆಂಬುದನ್ನು ಸ್ಪಷ್ಟಪಡಿಸುತ್ತದೆ.

ಭರ್ತೃಹರಿ ಮಹಾ ಕವಿಯು ಯಾವ ಕಾಲದಲ್ಲಿ ಬದುಕಿದ್ದನು? ಯಾವ ಮಹಾರಾಜನ ಆಸ್ಥಾನವನ್ನು ಬೆಳಗಿದ್ದನು?— ಇವು ಯಾವುವೂ ಈತನ ಗ್ರಂಥದಿಂದ ನಿರ್ಧಾರವಾಗುವಂತಿಲ್ಲ. ಈತನು ಸ್ವಲ್ಪ ಕಾಲ ಮಹಾರಾಜನೊಬ್ಬನ ಆಶ್ರಯದಲ್ಲಿದ್ದು ಆ ಮೇಲೆ ಅದನ್ನು ತಿರಸ್ಕರಿಸಿ ಬಂದಂತೆ ಊಹಿಸಲು ಸಾಧ್ಯವಿದೆ. 'ರಾಜನೇ, ನಿನಗೆ ನನ್ನಲ್ಲಿ ವಿಶ್ವಾಸವಿಲ್ಲದಿದ್ದರೆ, ನನಗೂ ನಿನ್ನಲ್ಲಿ ಅನಾದರವೇ,' 'ಉರ್ವೀ ಮಹಿ ಕಿಮೀಶ್ವರೈಃ' ಐಶ್ವರ್ಯವಂತರಿಂದ ನನಗೇನಾಗಬೇಕು? 'ರಾಜನನ್ನು ಮೆಚ್ಚಿಸಲು ನಾವು ನಟರಲ್ಲ, ಗಾಯಕರಲ್ಲ, ಸುಂದರಸ್ತ್ರೀಯರೂ ಅಲ್ಲ' ಇಂತಹ ಈತನ ಮಾತುಗಳು ರಾಜಾಶ್ರಯವನ್ನು ತಿರಸ್ಕರಿಸಿ ಬಂದ ವ್ಯಕ್ತಿಯ ಮಾತುಗಳಂತೆ ತೋರುವುದಿಲ್ಲವೇ? ಈ ಕವಿಯು ನಿಷ್ಠುರ ಸತ್ಯವಾದಿ.

ಈ ಕವಿಯು ಯಾವುದೋ ಒಂದು ಪ್ರಸಿದ್ಧ ರಾಜಧಾನಿಯು ಶತ್ರುಗಳಿಂದ ಧೂಳೀಪಟವಾದುದನ್ನು ಕಂಡು, ಕಾಲನ ಮಹಿಮೆಯನ್ನು ಹೇಳುವಾಗ ಉಸಿರ್ಗರೆದಿದ್ದಾನೆ

ಶ್ಲೋ|| ಸಾರಮ್ಯಾನಗರೀ ಮಹಾಂಶ್ಚ
ನೃಪತಿ ಸ್ಸಾಮಂತ ಚಕ್ರಂಚತ-
ತ್ಪಾರ್ಶ್ವೇತಸ್ಯಚ ಸಾವಿದಗ್ಧ
ಪರಿಷತ್ತಾಶ್ಚಂದ್ರ ಬಿಂಬಾನನಾಃ ॥
ಉದ್ವೃತ್ತಸ್ಸ ಚರಾಜಪುತ್ರನಿವಹ
ಸ್ತೇ ವಂದಿನಸ್ತಾಃ ಕಥಾ
ಸ್ಸರ್ವಂಯಸ್ಯವಶಾದಗಾತ್ಸ್ಮೃತಿಪಥಂ
ಕಾಲಾಯತಸ್ಮೈನಮಃ ||

"ಆ ಸೌಂದರ್ಯದ ರಾಜಧಾನಿ, ಅದನ್ನಾಳುತಿದ್ದ ರಾಜ, ಆತನಿಗೆ ಶರಣಾಗತರಾದ ಸಾಮಂತಸಮೂಹ, ಆ ರಾಜನ ಆಶ್ರಯದಲ್ಲಿದ್ದ ವಿದ್ವತ್ ಸಭೆ, ಚಂದ್ರಾನನೆಯರ ಸಮೂಹ, ಪ್ರಮತ್ತ ರಾಜಪುತ್ರರು, ಘೋಷಿಸುವ ವಂದಿಗಳು—ಇವರೆಲ್ಲಾ ಯಾವ ಕಾಲನ ಮಹಿಮೆಯಿಂದ ಅದೃಶ್ಯರಾದರೋ ಆ ಕಾಲನನ್ನು ವಂದಿಸುತ್ತೇನೆ"

ಈ ಮಹಾಕವಿಯು ಅಲ್ಲಾವುದ್ದೀನ ಖಿಲ್ಜಿಯ ಕಾಲದಲ್ಲೋ ಅಥವಾ ಬೇರೊಬ್ಬ ಮುಸ್ಲಿಂ ರಾಜನ ಆಡಳಿತೆಯ ಕಾಲದಲ್ಲೋ ಇದ್ದಿರಬೇಕು. ಆ ಕಾಲದಲ್ಲಿ ವಿದ್ವಾಂಸರು ಮತ್ಸರಗ್ರಸ್ತರಾಗಿದ್ದರು-ರಾಜರು ಗರ್ವಿಷ್ಟರಾಗಿದ್ದರು. ಉಳಿದವರೆಲ್ಲಾ ಅಜ್ಞಾನಿಗಳು. ಇದರಿಂದ ಸುಭಾಷಿತಗಳು ಪ್ರೋತ್ಸಾಹವಿಲ್ಲದೆ ನಾಶಹೊಂದುವುದರಲ್ಲಿದ್ದುವು.

ಸುಭಾಷಿತಗಳನ್ನು ಕೇವಲ ವಾಚಿಸುವುದರಿಂದ ಏನೂ ಪ್ರಯೋಜನವಿಲ್ಲ. ಇವು ಹೃದಯದಾಳಕ್ಕಿಳಿದು ತಂಪನ್ನುಂಟು ಮಾಡಬೇಕು ಪಂಡಿತ ರಾಜ ಜಗನ್ನಾಥನಿಗೂ ಸುಭಾಷಿತಗಳು ನಡತೆಯ ಮೇಲೆ ಏನೂ ಪರಿಣಾಮ ಮಾಡಲಿಲ್ಲವೆಂದು ಆತನೇ ಭಾಮಿನೀ ವಿಲಾಸ ಕಾವ್ಯದಲ್ಲಿ ಹೀಗೆ ನಿಟ್ಟುಸಿರುಬಿಟ್ಟಿದ್ದಾನೆ!

ಶ್ಲೋ|| ಉಪನಿಷದಃ ಪರಿಪೀತಾ ಗೀತಾಪಿ
ಚಹಂತ ಮತಿಪಥಂ ನೀತಾ
ತದಪಿ ನಹಾ ವಿಧುವದನಾ ಮಾನಸ
ಸದನಾತ್ ಬಹಿರ್ಯಾತಿ॥

"ಉಪನಿಷತ್ತುಗಳನ್ನು ಹೀರಿಯಾಯಿತು. ಗೀತೆಯನ್ನು ಸ್ಮೃತಿ ಪಥದಲ್ಲಿ ಕಂಡುಕೊಂಡಾಯಿತು. ಆದರೆ ಆ ಚಂದ್ರವದನೆ ಮಾತ್ರ ನನ್ನ ಚಿತ್ತ ಸದನದಿಂದ ಹೊರಗೆ ಹೋಗುವುದಿಲ್ಲ. ಪಾಂಡಿತ್ಯವೂ ಆಚಾರವೂ ಎರಡು ಧ್ರುವಗಳಾಗಿರುವುದೇ ಹೆಚ್ಚು. ಓದಲು ಒಂದು ಶಕ್ತಿ ಸಾಕಾದರೆ ಆಚರಣೆಗೆ ತರಲು ನೂರು ಶಕ್ತಿಗಳು ಬೇಕು!

○ ○ ○

ತಿಳಿದೂ ತಿಳಿಯದ ಅವಿವೇಕಿಯನ್ನು—ಮೂರ್ಖನನ್ನು ಸರಿಪಡಿಸುವುದು ಅಸಾಧ್ಯ ಕಾರ್ಯ. ಇವನನ್ನು ಜ್ಞಾನಿಯನ್ನಾಗಿ ಮಾಡಲು ಬ್ರಹ್ಮನಿಂದಲೂ ಅಸಾಧ್ಯ. ಸಮಸ್ತಕ್ಕೂ ಶಾಸ್ತ್ರದಲ್ಲಿ ಚಿಕಿತ್ಸೆ ಹೇಳಿದೆ. ಮೂರ್ಖತನಕ್ಕೆ ಔಷಧಿಯೇ ಇಲ್ಲ 'ಜ್ಞಾನಲವ ದುರ್ವಿದಗ್ಧಂ ಬ್ರಹ್ಮಾಪಿನರಂ ನರಂ ಜಯತಿ" 'ಸರ್ವಸ್ಯೌಷಧಮಸ್ತಿ ಶಾಸ್ತ್ರ ವಿಹಿತಂ ಮೂರ್ಖಸ್ಯನಾಸ್ತ್ಯೌಷಧಂ'

○ ○ ○

ಲಾಭಾಲಾಭಗಳೆಲ್ಲಾ ದೈವಾಧೀನಗಳು. ಸಣ್ಣ ಬಾವಿ ಅಥವಾ ಸಮುದ್ರದಿಂದಾದರೂ ತೆಗೆದುಕೊಂಡು ಹೋದ ಪಾತ್ರಕ್ಕಿಂತ ಹೆಚ್ಚಿ ನೀರನ್ನು ತರಲಾರೆವು. 'ಕೂಪೇಪಶ್ಯಪಯೋನಿಧಾವಪಿ ಘಟೋ ಗೃಹ್ಣಾತಿ ತುಲ್ಯಂಜಲಂ' ದೈವವೇ ರಕ್ಷಕವಾದದ್ದು; ಪೌರುಷವು ವ್ಯರ್ಥವು. 'ದೈವಮೇವಶರಣಂ ಧಿಗ್ಧಿಗ್ವೃಥಾ ಪೌರುಷಂ,

○ ○ ○

ಶೀಲ ಸದಾಚಾರಗಳು ಎಲ್ಲಾ ಕಾಲದಲ್ಲೂ ಭೂಷಣ. 'ಸರ್ವೇಷಾಮಪಿ ಸರ್ವ ಕಾರಣಮಿದಂ ಶೀಲಂ ಪರಂಭೂಷಣಂ'

○ ○ ○

ವಿಪತ್ತಿನಲ್ಲಿ ಧೈರ್ಯ, ಅಭ್ಯುದಯ ಕಾಲದಲ್ಲಿ ಕ್ಷಮೆ, ವಿದ್ವಾಂಸರ ಸಭೆಯಲ್ಲಿ ವಾಕ್ಪಟುತ್ವ, ಯುದ್ಧದಲ್ಲಿ ಪರಾಕ್ರಮ, ಕೀರ್ತಿಯಲ್ಲಿ ಆದರ, ಶಾಸ್ತ್ರಾಭ್ಯಾಸದಲ್ಲಿ ಆಸಕ್ತಿ—ಇವು ಮಹಾತ್ಮರ ಗುಣಗಳು, 'ವಿಪದಿ ಧೈರ್ಯಮಥಾಭ್ಯುದಯೇ ಕ್ಷಮಾ ಸದಸಿ ವಾಕ್ಪಟುತಾ ಯುಧಿ ವಿಕ್ರಮಃ ಯಶಸಿ ಚಾಭಿರತಿ ವ್ಯಸನಂ ಶ್ರುತೌ ಪ್ರಕೃತಿ ಸಿದ್ಧಮಿದಂ ಹಿಮಹಾತ್ಮಾನಾಂ'

○ ○ ○

ಪರರ ಸೇವೆ ಮಾಡುವುದು ಅಶಕ್ಯ. ಇದು ಯೋಗಿಗಳಿಗೂ ಅಗಮ್ಯ ವಿಚಾರ, 'ಸೇವಾಧರ್ಮಃ ಪರಮಗಹನೋ ಯೋಗಿನಾಮಪ್ಯಗಮ್ಯಃ'

○ ○ ○

ದುರ್ಜನನು ಎಷ್ಟು ವಿದ್ಯಾವಂತನಾದರೂ ಪರಿತ್ಯಾಜ್ಯನು. ಸರ್ಪವು ಮಾಣಿಕ್ಯದಿಂದಲಂಕೃತವಾದರೂ ಸ್ವೀಕಾರಕ್ಕೆ ಅಯೋಗ್ಯವೇ ಸ್ಸೆ. 'ಮಣಿನಾ ಭೂಷಿತ ಸ್ಸರ್ಪಃ ಕಿಮಸೌ ನಭಯಂಕರಃ

○ ○ ○

ರಾಜನೀತಿಯು ವಾರಾಂಗನೆಯಂತೆ ಅನೇಕರೂಪವುಳ್ಳದ್ದು. "ವಾರಾಂಗನೇವ ನೃಪನೀತಿರನೇಕರೂಪಾ"

○ ○ ○

ರಾಜ್ಯವನ್ನು ಚೆನ್ನಾಗಿ ಪಾಲಿಸಿದರೆ ಕಲ್ಪವೃಕ್ಷದಂತೆ ಫಲ ದೊರೆಯುತ್ತದೆ "ಅನಿಶಂ ಪರಿಪುಷ್ಯಮಾಣೇ ನಾನಾ ಫಲಂ ಫಲತಿ ಕಲ್ಪಲತೇವ ಭೂಮಿಃ"

○ ○ ○

ಮಕ್ಕಳು ಮುದ್ದಿನಿಂದಲೂ, ಕುಲವು ಕುಪುತ್ರರಿಂದಲೂ, ಶೀಲವು ದುರ್ಜನ ಸಂಗದಿಂದಲೂ, ಕೃಷಿಯು ಆರೈಕೆ ನೋಡುವುದರಿಂದಲೂ, ಸಂಪತ್ತು ಅವಿನಯದಿಂದಲೂ ನಾಶವಾಗುವುದು

○ ○ ○

ವಿದ್ಯೆಯು ಮನುಷ್ಯನ ಮಹಾಭೂಷಣ. ಪುರುಷನಿಗೆ ಕೇಯೂರಾದಿ ಆಭರಣಗಳು ಭೂಷಣವಲ್ಲ. ಎಲ್ಲಾ ಅಲಂಕಾರಗಳು ನಾಶವಾಗುವುವು: ವಾಗ್ಭೂಷಣಕ್ಕೆ ಅಳಿವಿಲ್ಲ. ಉತ್ತಮ ವಾಕ್ಯೇ ಮನುಷ್ಯನ ಭೂಷಣ. "ಕೇಯೂರಾಣಿ ನ ಭೂಷಯಂತಿ ಪುರುಷಂ" "ವಾಣ್ಯೇಕಾ ಸಮಲಂಕರೋತಿ ಪುರುಷಂ" "ಕ್ಷೀಯಂತೇ ಖಿಲ ಭೂಷಣಾನಿ ಸತತಂ, ವಾಗ್ಭೂಷಣಂ ಭೂಷಣಂ"

○ ○ ○

ನಿಜವಾದ ಸುಖಕ್ಕೆ ಮನಸ್ತೃಪ್ತಿಯೇ ಮುಖ್ಯಕಾರಣ, ಇದೊಂದಿದ್ದಲ್ಲಿ ಧನಿಕನಿಗೂ ದರಿದ್ರನಿಗೂ ವ್ಯತ್ಯಾಸವಿಲ್ಲ. "ಮನಸಿಚಪರಿತುಷ್ಟೇ ಕೋರ್ಥವಾನ್ ಕೋದರಿದ್ರಃ"

○ ○ ○

ಮಾನವನು ಜೀವನದಲ್ಲೆಲ್ಲಾ ಪುಣ್ಯವನ್ನು ಸಂಗ್ರಹಿಸುತ್ತಿರಬೇಕು. ವೃದ್ಧಾಪ್ಯದಲ್ಲಿ ನೋಡುವ ಎಂದರೆ ಸಾಧ್ಯವಾಗಲಾರದು. ಬೆಂಕಿ ಹಿಡಿದಾಗ ಬಾವಿ ತೋಡುವುದು ಅವಿವೇಕಿಗಳ ಕಾರ್ಯ. "ಸಂದೀಪ್ತೇ ಭವನೇತುಕೂಪಖನನಂ ಪ್ರತ್ಯುದ್ಯಮಃಕೀದೃಶಃ"

ಮನುಷ್ಯನು ದೈವಾನುಗ್ರಹಕ್ಕೆ ಪಾತ್ರನಾದಂತೆ ಪ್ರಾಪಂಚಿಕ ಸುಖಗಳಿಂದ ವಿಮುಖನಾಗುತ್ತಾ ಬರುವನು. ಒಂದು ಕಾಲದಲ್ಲಿ ಮಹಾಶೃಂಗಾರಿಯಾಗಿದ್ದ ಭರ್ತೃಹರಿಯು ವೃದ್ಧಾಪ್ಯದಲ್ಲಿ ಶಿವಸಾನಿಧ್ಯಕ್ಕಾಗಿ ಹಾತೊರೆಯುತ್ತಾನೆ. "ಸಂಸಾರ ದುಃಖ ಗಹನಾಜ್ಜಗದೀಶರಕ್ಷ" ಎಂದು ಮೊರೆಯಿಡುತ್ತಾನೆ. "ಮತ್ಸಮಃ ಪಾತಕೀನಾಸ್ತಿ ಪಾಪಘ್ನೀ ತ್ವತ್ಸಮೋ ನಹಿ" ಎಂದು ಕಣ್ಣೀರು ತುಂಬಿಕೊಳ್ಳುತ್ತಾನೆ. ಭಕ್ತಿದಾರಿದ್ರ್ಯವನ್ನು ಹೋಗಲಾಡಿಸು, ಭವರೋಗವ್ಯಾಧಿಯನ್ನು ಪರಿಹರಿಸು ಎಂದು ಬೇಡುವನು.

ಶ್ಲೋ||—
ಗಂಗಾತೀರೇ ಹಿಮಗಿರಿ
ಶಿಲಾಬದ್ಧಪದ್ಮಾಸನಸ್ಯ
ಬ್ರಹ್ಮಧ್ಯಾನಾಭ್ಯಸನ ವಿಧಿನಾ
ಯೋಗನಿದ್ರಾಂಗತಸ್ಯ ॥
ಕಿಂತೈರ್ಭಾವ್ಯಂ ಮಮಸುದಿವ
ಸೈರ್ಯತ್ರತೇ ನಿರ್ವಿಶಂಕಾಃ
ಕಂಡೂಯಂತೇ ಜರಠಹರಿಣಾ
ಸ್ಸ್ವಾಂಗಮಂಗೇ ಮದೀಯೇ ||

ಗಂಗಾನದಿಯ ತೀರದಲ್ಲಿರುವ ಹಿಮವತ್ಪರ್ವತದ ಬಳಿಯಲ್ಲಿ ದಿವ್ಯವಾದ ಶಿಲಾತಳದ ಮೇಲೆ ಪದ್ಮಾಸನದಲ್ಲಿ ಕುಳಿತು ಬ್ರಹ್ಮಧ್ಯಾನ ಪರಾಯಣನಾಗಿ ಯೋಗನಿದ್ರೆಯೊಳಿರುವಾಗ ಆ ಪ್ರಾಂತದಲ್ಲಿದ್ದ ವೃದ್ಧ ಜಿಂಕೆಗಳು ತಮ್ಮ ಶರೀರದಲ್ಲುಂಟಾದ ತುರಿಕೆಯನ್ನು ಕಳೆದುಕೊಳ್ಳಲು ನಿರ್ಭೀತಿಯಿಂದ ನನ್ನ ದೇಹಕ್ಕೆ ಉಜ್ಜುತ್ತಿರಲು, ಆ ರೀತಿಯಿಂದ ಕಳೆಯುವ ದಿವಸಗಳನ್ನು ಸರ್ವದಾ ಭಾವಿಸುತ್ತೇನೆ. ಅದೇ ನನಗೆ ಸುದಿವಸ!

ಈ ಬಯಕೆಯು ವೃದ್ಧಾಪ್ಯದಲ್ಲಿ ಪುಣ್ಯ ಜೀವಿಗಳ ಮನಸ್ಸಿನಲ್ಲಿ ಮಾತ್ರ ಹುಟ್ಟಬಲ್ಲದು ಈ ಮಹಾಕವಿಯು ಸುಭಾಷಿತಗಳನ್ನು ಮೆಲುಕಾಡಿಸುದು ಸಾರ್ಥಕವಾಯಿತು!

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction, Madras.

ನವೀನತೆಯ ಸೊಗಸು

(೩೪ನೇ ಪುಟದಿಂದ)

ಬಂದು ಹೊಸತೇನೂ ಕಾಣದ ಕಾಟಾಚಾರ ಹಬ್ಬವಾಗಿ ಬಿಡುತ್ತಿತ್ತು. ಜಾಣಾಕ್ಷವಾದ ದೀಪಾವಳಿ ಹಬ್ಬವು, ಪ್ರತಿ ವರ್ಷವೂ ಹೊಸ ಹೊಸ ದಂಪತಿಗಳನ್ನು ತನ್ನೊಂದಿಗೆ ಕಟ್ಟಿಕೊಳ್ಳದಿರುವುದಿಲ್ಲ ಅಂತೆಯೇ ಈ ಹಬ್ಬಕ್ಕೊಂದು ಅನಿವಾರ್ಯ ಸೊಗಸು ಪ್ರತಿ ವರ್ಷವೂ ಆಗುವ ಮದುವೆಗಳು, ಅನಂತರದ ದೀಪಾವಳಿ ಹಬ್ಬದ ಟಾನಿಕ್ಕುಗಳೇ

ಹೌದಲ್ಲ, ಮದುವೆಯಾದ ಮೇಲೆ ಮೊದಲು ಬರುವ ದೀಪಾವಳಿ ನವ ವಧೂವರರ ಪಾಲಿಗೆ ಸಂಜೀವಾಮೃತ ಅಂದು ಹೊಸ ಅಳಿಯನನ್ನು ಆಹ್ವಾನಿಸಿ ಉಪಚರಿಸದಿದ್ದರೆ ದೀಪಾವಳಿಗೆ ಕೋಪ ಬಂದೀತು ತಾನು ಹುಟ್ಟಿದ ಮನೆಯಲ್ಲೇ, ತನ್ನ ಪ್ರಿಯನೊಂದಿಗೆ ಕೂಡಿಕೊಳ್ಳುವ ಸುವರ್ಣ ಸಂಧಿಯನ್ನು ನವ ವಧುವಿಗೆ ಒದಗಿಸಿ ಕೊಡುತ್ತಾನೆ ದೀಪಾವಳಿ ಮಹಾರಾಯ.

ಇದಕ್ಕೆ ಸಂಬಂಧಪಟ್ಟ ಪುರಾಣ ಕಥೆಗಳೂ ಉಂಟು. ಕೃಷ್ಣ ಸತ್ಯಭಾಮ, ನರಕಾಸುರ, ಧನಲಕ್ಷ್ಮಿ, ಬಲಿ, ವಾಮನ, ಶಕಪುರುಷ ಮಹಾವೀರ ಮುಂತಾದ ಮಹತೋಮಹಿಮ ಪುಣ್ಯಶಾಲಿಗಳಾದ ಅನೇಕ ಪ್ರಾಚೀನರೆಲ್ಲ ಅಂಗವಹಿಸಿಕೊಂಡಿದ್ದಾರೆ ಈ ದೀಪಾವಳಿಯಲ್ಲಿ. ಮುಖ್ಯವಾಗಿ ನರಕಾಸುರನ ವಧೆಯಿಂದ ವಿಜಯಿಯಾದ ಕೃಷ್ಣನು ತನ್ನ ಪ್ರಿಯಳ ಕೈಯಿಂದ ಎಣ್ಣೆಯೊತ್ತಿಸಿ ನೀರೆರೆದುಕೊಂಡು ಸ್ನಾನಮಾಡಿ ವಿಜಯ ಘೋಷಣೆ ನಡೆಸಿದ್ದಾನೆ. ಆ ವಿಜಯ ಸಂಭ್ರಮದ ಕುರುಹಾಗಿ ಪಟಾಕಿ ಬಾಣಗಳು ಹಾರುತ್ತವೆ ದೀಪಮಾಲಿಗಳು ಬೆಳಗುತ್ತವೆ. ಪ್ರಿಯಳ ಕೈಯಿಂದ ತೈಲಸೇವೆ ಮಾಡಿಸಿಕೊಳ್ಳಬಹುದು. ತಾಯಿಮಕ್ಕಳಿಗೂ ಅಣ್ಣ ಅಕ್ಕ ತಮ್ಮ ತಂಗಿಯರಿಗೂ ಸೊಗಸನೀವ ಹಬ್ಬ. ಮುದುಕಿ ಮುತ್ತೈದೆ ತನ್ನ ವೃದ್ಧ ಪತಿಗೆ ಎಣ್ಣೆಯೊತ್ತಿ ನೀರೆರೆದು ಆನಂದಿಸುವ ಹಬ್ಬವೈಯ್ಯಾ ಇದೂ!

ಅಮಾವಾಸ್ಯೆಯ ದಿನ ತೈಲಾಭ್ಯಂಜನಕ್ಕೆ ನಿಷೇಧವಿದ್ದರೂ ದೀಪಾವಳಿ ಅಮಾವಾಸ್ಯೆಗೆ ಆ ನಿಷೇಧವಿಲ್ಲ ಅಭ್ಯಂಜನದ ಮಹತ್ವವನ್ನು ತೋರಿಸಲಿಕ್ಕೆ ಇದೂಂದು ನಿದರ್ಶನ.

ವಾರಕ್ಕೊಂದು ತೈಲಾಭ್ಯಂಜನ ಮಾಡಬೇಕೆಂದು ಆರೋಗ್ಯ ಶಾಸ್ತ್ರವು ಹೇಳುತ್ತದಷ್ಟೆ? ಅಂಥಾದ್ದೆಲ್ಲಾ ಈಗ ಊಹರೂಪವಾಗಿ ಹೋಯಿತಷ್ಟೆ? ಆದರೆ ವರುಷಕ್ಕೊಮ್ಮೆ ದೀಪಾವಳಿಯ ಪ್ರಾರಂಭವನ್ನು ಎಣ್ಣೆಯೊತ್ತಿಸಿಕೊಂಡು ಸ್ನಾನ ಮಾಡಿಯೇ ಪ್ರಾರಂಭಿಸಬೇಕೆಂದು ವಿಧಿಸಿದವರಿಗೆ ನಿಜವಾಗಿಯೂ ದೂರದೃಷ್ಟಿಯಿತ್ತು ಅವರ ದೂರದೃಷ್ಟಿಯನ್ನು ಈಗಿನ ವಿಚಾರವಂತರೂ ಒಪ್ಪುತ್ತಾರೆ ದೀಪಾವಳಿ ಬರುವ ಕಾಲವು ಬಿಸಿಲು ಕಾಲ, ಮಳೆಗಾಲಗಳು ಕಳೆದು ಚಳಿಗಾಲ ಪ್ರವೇಶ ಮಾಡುವ ಸಂಧಿ ಕಾಲ ಕೊಳೆ ಕೆಸರಿನಲ್ಲಿ ಹುಟ್ಟಿದ ನಾನಾ ವಿಧದ ಸೊಳ್ಳೆ ಕ್ರಿಮಿಕೀಟಾದಿಗಳನ್ನು, ಯಥೇಷ್ಟವಾಗಿ ಮದ್ದು ಬಾಣಗಳನ್ನು ಸುಟ್ಟು ಹೊಗೆಯೇಳಿಸಿ ಕೊಲ್ಲುವ ಉಪಾಯವನ್ನು ಈ ದೀಪಾವಳಿ ಮಾಡುತ್ತದೆಂದೂ ವಿಶೇಷ ಜ್ಞಾನಿಗಳು ಹೇಳುವುದುಂಟು.



ಧನಲಕ್ಷ್ಮಿ ಪೂಜೆಯಿಂದ ವ್ಯಾಪಾರಿಗಳು ತಮ್ಮ ಗಿರಾಕಿಗಳಿಂದ ಬರುವ ಸಾಲವನ್ನು ವಸೂಲು ಮಾಡಿಕೊಳ್ಳುವ ವ್ಯವಹಾರ ಚಾತುರ್ಯಕ್ಕೂ ಆ ದೀಪಾವಳಿರಾಯ ತನ್ನಲ್ಲಿ ಅಳವಡಿಸಿಕೊಂಡಿದ್ದಾನೆ ಇಾತಕ ವಿವಿಧ ಗುಣ ವೈಭವಗಳಿಂದೊಪ್ಪುವ ದೀಪಾವಳಿಗೆ ಪ್ರತಿ ವರ್ಷವೂ ನವನವೀನವಾದ ಸ್ವಾಗತವು ಕಾದಿಟ್ಟ ನಿಧಿಯೂಗಿದ್ದರೆ ಏನ ಶ್ಚರ್ಯ?

ಹರಿಕೆ..... ಹರಕೆ

ಕವಿ-ಶ್ರೀ ಮುಚಿಬೈಲು ಭಾಸ್ಕರ ಭಂಡಾರಿ.

ಹೃದಯ ವೃಂದಾವನದಿ
ಭಾವ ಸುಮಲತೆ ನೆಟ್ಟು
ನೀರೆರೆಯುತಿಹೆ, ದೇವ! ಹರಸು! ಕುಸುಮಿಸಲಿ
ಅದಿ ನಿನಗೆ ಕಾಣಿಕೆಯು
ನೊಪ್ಪಿಸುವೆ ಹರಕೆಯದು!
ನಿನ್ನ ಕೃಪೆಯೂ ವರ್ಷ ಸುರಿಯುತಿರಲಿ!

ಅದೋ ನೋಡು! ಜೀವನದ
ಕಷ್ಟ ಕಾರ್ಪಣ್ಯಗಳ
ವೈಶಾಖ ವಿಕಟನಗೆ ಬೀರುತಿಹನು!
"ಕಲ್ಪನೆಯ ಸವಿಗನಸ
ಕಾಣ ತರು ಎಲೆ ಕವಿಯೆ
ಭಾವನೆಯ ಲತೆ ಕರಟಲಿದೆ" ಯೆನ್ನುತಿಹನು ||

"ನೀನು ಕಂಟಕನಲ್ಲವೇನ ?
ದೇವ ದಯೆ ಮಳೆಗರೆಯೆ
ಮತ್ತೆ ಚಿಗುರಲು ಬಹುದು ನನ್ನ ತೋಟ"
ಅದಕಾಗಿ ದುಡಿಯುವೆನು
ಅದಕಾಗಿ ಮಡಿಯುವೆನು!
ಅದೆ ನನ್ನ ಕರ್ತವ್ಯ' ಬಿದ ವಿನಾಟ! ||

ಒರಗೆಯ ಕೆಲ ಜನರು
ಒರೆ ನೋಟದಿ ಕಂಡು
"ಮೂಢಿಯಿವ" ನೆನುತ ಕಣ್ಣೊತ್ತುತಿಹರು!
"ದಾರಿಗದ್ದವ ಕಟ್ಟಿ
ಬೇಕು ಇವಗೆ"ಂದೆನುತ
ನಿಂದೆ ಅವಮಾನಗಳ ಕರೆವೆನಿವರು||

'ರೋಗಿಗೌಷದ ರುಚಿಸ'
ದಿದನರಿವೆ, ಇರಬಹುದು
ಹುಳುಕುಗಳ ಎತ್ತಿ ತೋರುವುದೆ ತಪ್ಪು!
ಹೊಗಳಲಿದೆ, ತೆಗಳಲಿದೊ,
ಎಲ್ಲ ನಿನಗರ್ಪಿತವು
ಎನ್ನ ಮಾನದಾ ದಿವ್ಯ ನಿನಗಿರಲು ಒಪ್ಪು!

ಬಾವ ಸುಮಗಳನೆಲ್ಲ
ಭಕ್ತಿ ದಾರದಿ ಹೆಣೆದು
ಮುಡಿಸುವೆನು ಕುಸುಮಗಳು ದೇವ ಸ್ವೀಕರಿಸು!
"ಪ್ರತಿಭೆ' ಯೆಂಬುವ ದೀಪ
ಮಾಲೆಗಳ ತಾ ಬೆಳಗೆ
ದೀಪಾವಳಿಯ ದಿನದ ನನ್ನ ಸವಿಯೋ ಹರಕು!

— ಶುಭಂ —

ಚಂದ್ರಶೇಖರ ಆಜಾದ್

(ಆರನೇ ಪುಟದಿಂದ)

ವಾಗಿಯೇ ಆಂಗ್ಲ ಸರಕಾರ ರೊಚ್ಚಿಗೆದ್ದಿತು. ಅವರ ನೌಕರ ಶಾಹಿಯೆಲ್ಲವೂ ಆಜಾದ್, ಭಗತ್ ಸಿಂಗ್ ಮತ್ತವರ ಸಂಗಡಿಗರನ್ನು ಸೆರೆ ಹಿಡಿಯಲು ಪಣ ತೊಟ್ಟು ಮುಂದುವರಿಯಿತು. ಲಾಹೋರ್‌ನಿಂದ ಯಾವೊಬ್ಬ ಕ್ರಾಂತಿಕಾರಿಯೂ ಹೊರಗೆ ಹೊರಟು ಹೋಗದಂತೆ ನಾಲ್ಕು ಸುತ್ತಲೂ ಸಶಸ್ತ್ರ ಪೋಲೀಸರು ನಿಂತಿದ್ದರು. ಲಾಹೋರ್ ರೈಲ್ವೆ ಸ್ಟೇಶನಿನಲ್ಲಂತೂ ಸಶಸ್ತ್ರ ಪೋಲೀಸರ ಸಂಖ್ಯೆ ಅಪಾರವಾಗಿತ್ತು. ಆದರೂ ಮರುದಿನ ಮುಂಜಾನೆಯ ರೇಲ್ವೆಯ ಫಸ್ಟ್ ಕ್ಲಾಸಿನ ಭೋಗಿಯಲ್ಲಿ ಆಸೀನರಾಗಿ ಭಗತ್ ಸಿಂಹ ಮತ್ತು ದುರ್ಗಾ ಬಾಭಿ (ಕ್ರಾಂತಿಕಾರಿ ಭಗವತೀ ಚರಣರ ಕ್ರಾಂತಿಕಾರಿಣೀ ಪತ್ನಿ) ಆಂಗ್ಲ ಅಧಿಕಾರಿ ಮತ್ತು ಅವನ ಮೇಮ್‌ರಂತೆ ವೇಷ ಧರಿಸಿ ಕಲ್ಕತ್ತೆಗೆ ಹೊರಟು ಹೋದರು. ಆಜಾದ್ ಅವರು ಒಬ್ಬ ಸನ್ಯಸ್ಥ ಬ್ರಾಹ್ಮಣನಂತೆ ಕೊರಳಲ್ಲಿ ತುಳಸೀ ಮಣಿಯ ಮಾಲೆ ತೊಟ್ಟು, ರಾಮನಾಮಿ ಶಾಲನ್ನು ಹೊದೆದುಕೊಂಡು ಪೋಲೀಸರೆದುರಿಂದಲೇ ನುಸುಳಿ ಅದೇ ರೇಲ್ವೆಯ ಮೂರನೇ ವರ್ಗದ ಡಬ್ಬಿಯಲ್ಲಿ ಕುಳಿತು ಅದೆಲ್ಲಿಗೋ ಹೊರಟು ಹೋದರು.

ಒಮ್ಮೆ ಯಾವುದೋ ಒಂದು ಸ್ಟೇಶನಿನಲ್ಲಿ ಆಜಾದರು ಇಳಿಯಬೇಕಾಗಿತ್ತು. ಅದು ಹೇಗೋ ಪೋಲೀಸರಿಗೆ ಈ ಸುದ್ದಿ ತಿಳಿದಿತ್ತು. ಹಲವಾರು ಪೋಲೀಸರೊಂದಿಗೆ ಕೆಲವು ಅಧಿಕಾರಿಗಳೂ ಸ್ಟೇಶನಿನಲ್ಲಿ ನಿಂತಿದ್ದರು. ಆಜಾದರು ರೈಲಿನಿಂದಿಳಿಯುತ್ತಲೇ ನಾಲ್ಕೂ ದಿಕ್ಕಿಗೆ ಕಣ್ಣು ಹರಿಸಿದರು. ಪೋಲೀಸರು ಸುತ್ತುಗಟ್ಟಿ ನಿಂತಿರುವುದನ್ನು ಕಂಡರೂ ಕಾಣದವರಂತೆ ನಿರ್ಭೀಕತೆಯಿಂದ ಮುಂದುವರಿದು ಅವರು ಮುಖ್ಯ ದ್ವಾರದಿಂದಲೇ ಹೊರ ಬಿದ್ದರು, ಬಾಗಿಲ ಬಳಿ ಒಬ್ಬ ಹಿರಿಯ ಪೋಲೀಸ ಅಧಿಕಾರಿ ನಿಂತಿದ್ದ, ಆಜಾದರು ಅವನ ಬದಿಯಿಂದಲೇ ಹೋಗಿ ಅವನೆಡೆಗೆ ಒಂದು ಗಟ್ಟಿಯಾದ ಘರ್ಜನೆಯಿತ್ತು ಅವನನ್ನು ಕಣ್ಣಿನಿಂದಲೇ ನುಂಗುವವರಂತೆ ದುರುಗುಟ್ಟಿ ನೋಡಿ ಮುಂದುವರಿದರು. ಕ್ಷಣಾರ್ಧದಲ್ಲಿ ಅವರು ಮಾಯವಾಗಿ ಬಿಟ್ಟರು. ಈ ಪ್ರತ್ಯಕ್ಷ ಯಮ ದರ್ಶನಗೈದ ಅಧಿಕಾರಿ ಕಂಗಾಲಾಗಿ ನಿಶ್ಚೇತನವಾಗಿ ನಿಂತುಬಿಟ್ಟಿದ್ದ. ಇನ್ನೂ ಒಮ್ಮೆ ಹೀಗೇ ಆಗಿತ್ತು. ಒಬ್ಬ ಗುಪ್ತ ಪೋಲೀಸಿನವ ಆಜಾದರನ್ನು ಬಹಳ ಹಿಂಬಾಲಿಸುತ್ತಿದ್ದ. ಇದರಿಂದ ರೋಸಿಹೋದ ಆಜಾದರು ಒಂದು ದಿನ ನೆಟ್ಟಗೆ ಅವನ ಬಳಿ ಹೋಗಿ, ಅವನ ಹೆಗಲ ಮೇಲೆ ಕೈಯಿಟ್ಟು—"ನೋಡಪ್ಪಾ ಹೆಚ್ಚು ಗಲಾಟೆ ಮಾಡಬೇಡ, ಅದು ಆರೋಗ್ಯಕ್ಕೆ ಒಳ್ಳೆಯದಲ್ಲ. ಅನಂತರ ಏನಾದರೂ ಆದರೆ ನನ್ನನ್ನು ದೂರಿಕೊಳ್ಳಬಾರದು" ಎಂದಂದು ಮುಂದುವರಿದರಂತೆ. ಅನಂತರ ಆ ಪೋಲೀಸಿನವ ಅವರನ್ನು ಹಿಂಬಾಲಿಸುವುದನ್ನೇ ಬಿಟ್ಟುಬಿಟ್ಟನಂತೆ.

ಇಂತಹ ಅದೆಷ್ಟೋ ಘಟನೆಗಳು ಆಜಾದರ ಜೀವನದಲ್ಲಿ ತುಂಬಿಕೊಂಡಿವೆ. ಅವು ಅವರನ್ನು ಭಾರತದ ಸ್ವಾತಂತ್ರ್ಯದ ಕ್ರಾಂತಿಯ ಒಬ್ಬ ಪ್ರಮುಖ ವೀರ ಸೈನಿಕನೆಂದು ಸಿದ್ಧಗೊಳಿಸಲು ಪರ್ಯಾಪ್ತವೆನಿಸಬಹುದು. ಪೋಲೀಸರೊಡನೆ ಹೋರಾಡುತ್ತಲೇ ತನ್ನ ಮರಣ ಸಂಭವಿಸುವುದು ಎಂದವರಿಗೆ ತಿಳಿದಿತ್ತು. ಆದರೂ ನಮ್ಮ ಪವಿತ್ರ ದೇಶದ ಮೇಲೆ ಶಾಸನಗೈಯುವುದು ಅಥವಾ ಭಾರತೀಯ ಸಂತಾನವನ್ನು ಗುಲಾಮರಂತೆ ಕಂಡು ತಿಳಿಯುವುದು ಒಂದು ತಮಾಷೆಯ ವಿಷಯವಲ್ಲ. ಅದಷ್ಟು ಸುಲಭವೂ ಅಲ್ಲ— ಎಂಬುದನ್ನು ಅವರು ಸಿದ್ಧಗೈದು ತೋರಲಪೇಕ್ಷಿಸುತ್ತಿದ್ದರು. ಎಂದಿನ ತನಕ ಭಾರತದಲ್ಲಿ ಒಬ್ಬನಾದರೂ ಸ್ವಾಭಿಮಾನೀ ವೀರ ಜೀವಂತವಿರುತ್ತಾನೋ ಅಂದಿನ ತನಕ ಅವನೊಬ್ಬನೇ ಸಾಕು ವಿದೇಶೀ ಶಾಸನವನ್ನು ನಡುಗಿಸಲಿಕ್ಕೆ ಎಂದವರಿಗೆ ಸಾಧಿಸಲಿಕ್ಕಿತ್ತು. ಅವರು ಕವಿಯಾಗಿರಲಿಲ್ಲ ಆದರೆ ಒಂದು ದಿನ ಮಾತನಾಡುತ್ತಿದ್ದಾಗ ಮಾತಿನ ಮಧ್ಯೆಯೇ ಒಂದು ಕವಿತೆ ರಚಿಸಿ ಬಿಟ್ಟಿದ್ದರು

ದುಶ್ಮನ್ ಕೀ ಗೋಲಿಯೋಂ ಕಾ| ಹಂಸಾಮ್ನಾ ಕರೇಂಗೇ|
ಆಜಾದ್ ಹೀ ರಹೇ ಹೈ,| ಆಜಾದ್ ಹೀ ರಹೇಂಗೇ||

ಅವರ ಈ ಕವಿತೆ ಅದೆಷ್ಟು ಸತ್ಯವಾಗಿತ್ತು ಎಂಬುದಕ್ಕೆ ಭಾರತೀಯ ಸ್ವಾತಂತ್ರ್ಯದ ಸಶಸ್ತ್ರ ಕ್ರಾಂತಿಕಾರೀ ಇತಿಹಾಸ ಸಾಕ್ಷಿಯಿದೆ. ನಿಸ್ಸಂದೇಹವಾಗಿ ಅವರು ಆಜಾದೇ ಆಗಿದ್ದರು. ಜೀವಂತವಾಗಿ ಅವರನ್ನು ಯಾರೂ ಹಿಡಿಯಲಾಗಲಿಲ್ಲ. ಕೊನೆಗೆ ಪೋಲೀಸರು ಎದುರಾದಾಗಲೂ ಅವರೊಡನೆ ಹೋರಾಡುತ್ತಲೇ ವೀರ ಗತಿ ಪ್ರಾಪ್ತಿಗೈದರು. ವೀರತನ, ಸಾಹಸ ಮತ್ತು ಬಲಿದಾನದ ಇಂತಹ ಆದರ್ಶ ಇಂದಿನ ದೇಶವಾಸಿಗಳಿಗೆ ಖಂಡಿತವಾಗಿಯೂ ಪೂಜನೀಯ ಹಾಗೂ ಅನುಕರಣೀಯವೆನಿಸುವುದರಲ್ಲಿ ಸಂಶಯವಿಲ್ಲ.

ತನ್ನ ಅಂತರ್ಯ ಸುಂದರವಾಗಿರಬೇಕೆಂದು ದೇವರ ಮುಂದೆ ನಿಂತು ಆರಾಧಿಸುವುದು ಧರ್ಮವೆನಿಸಿದರೆ, ತನ್ನ ಮುಖ ಚಂದವಿರಬೇಕೆಂದು ಕನ್ನಡಿಯ ಮುಂದೆ ನಿಂತು ತಪಸ್ಸು ಮಾಡುವುದು ನಾಗರಿಕತೆಯೆನಿಸುತ್ತದೆ.

o o o

ಭಗವಂತನ ಕೃಪೆಯಿಲ್ಲದೆ ಒಂದು ಮೊಟ್ಟೆಯೊಡೆದು ಮರಿಯಾಗದು ಎಂದು ನಂಬುವ ಜನ, ಭಗವಂತನ ಕೃಪೆ ಇಲ್ಲದೆ ಒಂದು ರಾಜ್ಯವು ಬೆಳೆದು ಅಭಿವೃದ್ಧಿಯಾದೀತೆಂದು ನಂಬುವುದು ಆಶ್ಚರ್ಯ.

TRANSPORT COMMANDS TRADE AND WE COMMAND TRANSPORT

For all your Transport by road consult any one of our following offices

THE UNITED STORES

(H. O. MERCARA. Coorg)

(Transport Contractors & Fleet Owners)

(In the approved list of INDIAN BANKS ASSOCIATION, Bombay)

Administrative office:

Bibi Alabi Road, Post Box No. 97,
BUNDER, MANGALORE-1.
Phone: 962

Branches:—

Mahadevpet,
MERCARA.
Phone: 33.

11, Arcot Srinivasachar Street,
BANGALORE—2.
Phone: 70580 Grams: UNISTORES

1279, Sayyaji Rao Road,
Opp: Ediga Bus Stand,
MYSORE.

Near City Bus Stand,
UDIPI.
Phone: 201.

Booking office:

Bibi Alabi Road, Bunder.
MANGALORE-1.
Phone: 346.

Delivery office:

Azzizuddin Road, Bunder,
MANGALORE-1.

31, Old Bangalipura Street, Carnac Bridge,
BOMBAY-3.
Phone: 323516. Grams: QUIKUNIT

No. 54, Sembudoss Street,
MADRAS-1.
Phone: 29555. Grams: UNISTORES.

Agents and Associates:

THROUGHOUT THE IMPORTANT TOWNS IN INDIA

Full lorry-loads to Small parcels carried with ZEAL and CARE   If transport is a problem to you, we are at your door to solve it.

ನಿಸ್ವಾರ್ಥ ಸೇವೆಯನ್ನು ಮಾಡೋಣ

ಭಾರತದ ಯುವಕ ಯುವತಿಯರೊಂದು ಮಾತು
ಅರಿತುಕೊಳ್ಳುವುದು ನಿಮ್ಮ ಸಿನ್ನೆಲೆಯು ಪೂತು !
ಆ ಸ್ವಾರ್ಥರೋಗ ಸ್ಪರ್ಶವು ಇನ್ನು ಸಾಕು
ನಿಸ್ವಾರ್ಥ ಭಾವನೆಯ ಕರ್ತವ್ಯ ಬೇಕು, ॥

ಬರೆದವರು

ಶ್ರೀ ಶಿರ್ತಾಡಿ ವಿಲಿಯಂ ಪಿಂಟೊ, ಬಿ ಎ ಎಲ್‌ಎಲ್. ಬಿ., ಉಡುಪಿ.

ಲೇಖಕರು

ಭಾರತದ ಯುವಕ ಯುವತಿಯರೇ, 'ಇಂದೇಕೆ ನೀವು ಈ ಆಲಸ್ಯವನ್ನು ಕೈಕೊಂಡು, ನಮ್ಮ ಭಾರತ ಮಾತೆಯ ಕಡೆಗೆ ನಿರ್ಲಕ್ಷ್ಯ ಭಾವವನ್ನು ತೋರಿಸುತ್ತಿರುವಿರಿ? ಭಾರತ ಮಾತೆಯನ್ನು ಪರದಾಸ್ಯ ಸಂಕಲೆಯಿಂದ ಬಿಡಿಸಲು ನೀವು ಕಾಲೇಜು, ಶಾಲೆಗಳನ್ನು ತ್ಯಜಿಸಿದಿರಿ—ಕಾರಾಗೃಹವಾಸ ಅನುಭವಿಸಿದಿರಿ—ಸತ್ಯಾಗ್ರಹಗಳಲ್ಲಿ ಭಾಗವಹಿಸಿ ತಮ್ಮ ಸಂಪತ್ತು ಯೌವನವನ್ನೆಲ್ಲ ಆ ದಿವ್ಯ ಮಾತೆಯ ಮಡಿಯಲ್ಲಿ ಮುಡಿಪಾಗಿಟ್ಟಿರಿ. ಆ ದೇಶ ಪ್ರೇಮ, ಸ್ವರಾಜ್ಯದೊರೆತೊಡನೆ ಮಾಯವಾಗಿರಬಹುದೇ? ಅಂದಿನ ಸ್ಫೂರ್ತಿ ಇಂದಿಗೆ ಸತ್ತು ಹೋಯಿತೇ? ಹೊತ್ತು ಸಲಹಿದ ಭಾರತ ಮಾತೆಯನ್ನು ಮರೆಯಲು ಕಾರಣವಾದರೂ ಏನು? ಹಾ! ಇದೇನು ಭಾರತ ಮಾತೆಯ ದುರ್ದೈವವಾಗಿರಬಹುದೇ? ಅಥವಾ ಭಾರತೀಯರು ನಿದ್ರಾವಸ್ಥೆಯಲ್ಲಿರುವ ಸಮಯವಾಗಿರಬಹುದೇ? ಒಂದು ವೇಳೆ ನಿದ್ರಾವಸ್ಥೆಯನ್ನು ಕೈಕೊಂಡಿರವುದಾದರೆ, ಪುನಃ ಆ ಭಾರತೀಯ ಪೌರುಷ ಪರಾಕ್ರಮ ಎದ್ದು ಬೆಳಗುವುದೆಂದು?

'ಭಾರತ'ವೆಂದರೆ ಕೇವಲ ಉತ್ತರದ ಹಿಮಾಲಯ, ಗಂಗಾ–ಸಿಂದು ನದಿಗಳು, ಅದರಲ್ಲಿರುವ ಖನಿಜ ಅರಣ್ಯ ಸಂಪತ್ತಲ್ಲ. ಆ ಮಾತೆಯ ಉದರದಲ್ಲಿ ಜನ್ಮವೆತ್ತ ೪೫ ಕೋಟಿ ಸುಪುತ್ರ ಪುತ್ರಿಯರೆ ಭಾರತವಾಗಿದೆ, ದೇಶಸೇವೆ ಎಂದರೆ ಆ ಸಮಸ್ತ ಪ್ರಜೆಗಳ, ಪುರೋಭಿವೃದ್ಧಿಗಾಗಿ ನಾವು ನಿಸ್ವಾರ್ಥತೆಯಿಂದ ಮಾಡುವ ಕರ್ತವ್ಯ. ಅಸಹ್ಯ ಬಡತನ, ರೋಗರುಜೆ, ಅಜ್ಞಾನ, ತಿಳಿಗೇಡಿತನ ನಮ್ಮ ರಾಷ್ಟ್ರದಲ್ಲಿ ತಾಂಡವವಾಡುತ್ತಿವೆ. ೨೭ ಕೋಟಿಕ್ಕೂ ಮಿಕ್ಕಿದ ಅಸಂಖ್ಯಾತ ಜನರ ದಿನದ ಸಂಪಾದನೆ ೫ ಆಣೆಗಿಂತಲೂ ಕಡಿಮೆ! ಎಂತಹ ಕರಾಳ ಬಡತನ! ಊಟಲು ಅನ್ನವಿಲ್ಲ— ಉಡಲು ಬಟ್ಟೆ ಇಲ್ಲ, ಉಳಕೊಳ್ಳಲು ತಾವಿಲ್ಲ ಅದರ ಮೇಲೆ ಹೊಸ ಹೊಸ ರೋಗಗಳ ಧಾಳಿ—ಚೈನಾ ಧಾಳಿಗಿಂತಲೂ ಬಲವತ್ತರವಾಗಿದೆ.

ಈ ಮೇಲಿನ ಸಮಸ್ಯೆಗಳ ಸಾಲಿಗೆ ಸ್ವಾತಂತ್ರ್ಯನಂತರ ನೂರಾರು, ಹೊಸ ರೂಪದ ಸಮಸ್ಯೆಗಳು ಹೆಡೆ ಎತ್ತಿದ ಘಟಸರ್ಪದಂತೆ ಬಂದು ಸೇರಿ ದಿನೇ ದಿನೇ ಭಾರತದ ಸಾಮಾನ್ಯ ನಾಗರಿಕನನ್ನು—ವಿಷದ ತಮ್ಮ ಕೊಂಡಿಯಿಂದ ಕಚ್ಚುತ್ತಿವೆ. ಆ ಕಾಳಿಂಗ ಸರ್ಪಗಳು ಯಾವುವು ಎಂದರೆ—ಜಾತೀಯತೆ, ಲಂಚರುಷುವತ್ತು ಸಾರ್ವಜನಿಕ ಕ್ಷೇತ್ರದಲ್ಲಿ ವಿದ್ವಾಂಸರಿಗೆ ಚುರುಕು ಮತಿಯವರಿಗೆ ಸ್ಥಾನ ಇಲ್ಲದಿರುವುದು, ಸ್ವಜಾತಿ ಪಕ್ಷಪಾತ ಸಂಕುಚಿತ ಭಾಷಾ ಪ್ರೇಮ ಇತ್ಯಾದಿಗಳು. ಈ ಘಟಸರ್ಪಗಳ ಕಡಿತದಿಂದ ಭಾರತದಲ್ಲಿ ಸ್ವಾತಂತ್ರ್ಯ ನಂತರ ಸತ್ತ ಜನಗಳ ಸಂಖ್ಯೆ ಅಷ್ಟಿಷ್ಟಲ್ಲ ಯೋಗ್ಯತೆಗೆ ಸರಕಾರಿ ಉದ್ಯೋಗಗಳಲ್ಲಿ ಸ್ಥಾನವಿಲ್ಲದುದರಿಂದ ಅಯೋಗ್ಯರೇ ಎಲ್ಲೆಲ್ಲೂ ಅಧಿಕಾರ ನಡೆಸಿ ಯೋಗ್ಯತೆಯ ಜನ 'ಬೀದಿ ಭಿಕಾರಿ' ಯಾಗ ಬೇಕಾಗಿ ಬಂದ, ಈ ಪರಿಸ್ಥಿತಿ ಹೃದಯವುಳ್ಳ ಯಾರನ್ನೂ ಕರಗಿಸದೆ ಇರದು ಲಂಚಕೋರತನದಿಂದಾಗಿ ಹಚ್ಚ ಹಗಲಿನಲ್ಲಿಯೇ ಸತ್ಯದ ಕೊಲೆಯಾಗುತ್ತಿದ್ದು—ಸತ್ಯ ಮತ್ತು ಧರ್ಮದಿಂದ ನಡೆದುಕೊಂಡು ಬರುವ ಜನ—ನಾವು ಈ ಮಾರ್ಗದಲ್ಲಿ ನಡೆಯುವುದು ಪಾಪವೆ? ಎನ್ನುವಷ್ಟರ ವರೆಗೆ ಬಂದಿದೆ. ಪ್ರತಿಯೊಂದು ಆಫೀಸಿನ ಗೋಡೆ ಕಂಬಗಳು ಕೂಡಾ—ಲಂಚಕ್ಕೆ ಕೈ ಚಾಚುವ ದೃಶ್ಯ ಶೋಚನೀಯ. ನಮ್ಮ ಸಮಾಜದಲ್ಲಿ 'ಸಮಾಜ ಸೇವಕರೆಂ'ದು ಬಿಲ್ಲೆ ಹಚ್ಚಿ ಕೊಂಡ—ಜನಕ್ಕೆ ಕೊರತೆಯಿಲ್ಲ. ಅಧಿಕಾರ ಲಾಲಸೆಯಿಂದ ಗೋಮುಖ ವ್ಯಾಘ್ರಗಳಂತಿರುವ ಈ ಜನಗಳು ಸಂಪೂರ್ಣ ನಾಶವಾಗದೆ, ನಮ್ಮ ರಾಷ್ಟ್ರದ ಏಳಿಗೆ ಎಂದಿಗೂ ಆಗದು ಮೂರು ಪಂಚವಾರ್ಷಿಕ ಯೋಜನೆಗಳ ನಂತರವೂ ನಾವು ಅಧಃಪತನಕ್ಕೆ ಇಳಿಯಲು ನಿಸ್ವಾರ್ಥಿ ಸಮಾಜ ಸೇವಕರ ಕೊರತೆಯೇ ಕಾರಣವಾಗಿದೆ. ಲಕ್ಷಗಟ್ಟಲೆ ಜನಗಳು ಹೊಟ್ಟೆಗಿಲ್ಲದೆ ನರಳುತ್ತಿರುವಾಗ್ಯೆ ಅವರ ಹಣದಿಂದ ಮೆರೆಯುತ್ತಿರುವ ಗೋಮುಖ ವ್ಯಾಘ್ರಗಳು ದೇಶ ದ್ರೋಹಿಗಳಲ್ಲದೆ ಇನ್ನೇನು? ಸುಶಿಕ್ಷಿತ ವಿದ್ಯಾವಂತ ಯುವಕ ಯುವತಿಯರು ಈ ದೇಶ ದ್ರೋಹಿಗಳ ವಿರುದ್ಧ ಹೋರಾಡಬೇಕಾದ ಕಾಲ ಸನ್ನಿಹಿತವಾಗುತ್ತಿದೆ. ನಮ್ಮ ನಾಡಿನ ಇತಿಹಾಸವು ನಮ್ಮಲ್ಲಿ ಧೈರ್ಯ, ಪರಾಕ್ರಮ, ತ್ಯಾಗ ಬುದ್ಧಿಯನ್ನುಂಟುಮಾಡಿ, ನಮ್ಮ ಪುರೋಭಿವೃದ್ಧಿಗೆ ಸಹಾಯವಾಗಲಿ.

ನಿಸ್ವಾರ್ಥ ಸೇವೆಯಿಂದ ಮನಸ್ಸಿಗೆ ಸಿಕ್ಕುವ ಆನಂದ ಸ್ವರ್ಗ ಸುಖಕ್ಕೆ ಸಮಾನಾದುದು. ಆ ಸೇವಾಕರ್ತ ಫಲಾಪೇಕ್ಷೆ ಇಲ್ಲದೆ ಮಾನವನಾಗಿ ಜನ್ಮತಾಳಿದಕ್ಕೆ ಎಂತಹ ಕರ್ತವ್ಯಗಳನ್ನು ಸಮಾಜಕ್ಕೆ ಮಾಡಲಿಕ್ಕಿದೆಯೋ ಅದನ್ನು ಮಾಡುತ್ತಾ ಹೋಗುತ್ತಾನೆ. ತಾನು ಮಾಡುವ ಕೆಲಸಗಳಿಂದ ನಾಳೆ ತನಗೆ ಸಮಾಜದಲ್ಲಿ 'ಪದ್ಮವಿಭೂಷಣ' 'ಭಾರತರತ್ನ' - ಎಂ.ಎಲ್‌ಎ ಗಿ ಟಿಕೇಟು—ಸಿಕ್ಕಲಿ ಎಂಬ ಆಶೆ ಆತನಲ್ಲಿಲ್ಲ- ತನ್ನ ಕರ್ತವ್ಯದಲ್ಲಿ ಜಯ ಸಿಕ್ಕಿದೊಡನೆ ಆತನಲ್ಲಿ ಉತ್ಸಾಹ ಹುರುಪು ಹೊರಹೊಮ್ಮುತ್ತದೆ ಸೋಲಾದರೂ ಸರಿಯೇ ಆತ ತನ್ನ ಮುಖ ಚಪ್ಪಗೆಮಾಡಿ ಕೊಂಡು ದುಃಖ ಪಡುವುದಿಲ್ಲ ಬದಲಾಗಿ 'ನನ್ನ ಕರ್ತವ್ಯ ಮಾಡಿದ. ಫಲ ಕೊಡುವುದು ದೇವರ ಕೈಯಲ್ಲಿದೆ' ಎಂದು ಸಮಾಧಾನ ಪಟ್ಟುಕೊಳ್ಳುತ್ತಾನೆ ವಿಷಯಾಪೇಕ್ಷೆಯಿಂದ, ಯಾವುದೋ ಒಂದು ಸ್ಥಾನ ಗಿಟ್ಟಿಸಿಕೊಳ್ಳಬೇಕೆಂಬ ನೆಪದಿಂದ ಸಮಾಜ ಸೇವೆ ಮಾಡುವಾತ ತಾನು ಬಯಸಿದ ಸ್ಥಾನ ಸಿಕ್ಕದಿದ್ದಲ್ಲಿ ನಿರಾಶನಾಗಿ, ಬೊಬ್ಬಿಟ್ಟು ದೇವರನ್ನು ದೂರಿ ಕಡೆಗೆ ಹುಚ್ಚನಾಗುತ್ತಾನೆ.

ಸಂಘ ಸಂಸ್ಥೆಗಳನ್ನು ಸ್ಥಾಪನೆ ಮಾಡುವುದರಲ್ಲಿ ನಾವು ಬಹಳ ಜಾಣರು—ಆರಂಭ ಶೂರರು, ಉದ್ಘಾಟನೆಯಾದೊಡನೆ ಅದರ ಯಶಸ್ಸಿಗೆ ಬೇಕಾದ ಸಹಕಾರ ಕೊಡಲು ನಾವು ಸಿದ್ಧರಿಲ್ಲ. ಒಬ್ಬೊಬ್ಬನು ಆ ಸಂಘದ ಒಂದೊಂದು ಸ್ಥಾನದ ಮೇಲೆ ಆಶೆ ಇಟ್ಟುಕೊಂಡಿರುತ್ತಾರೆ. ಅದು ಸಿಕ್ಕದೆ ಹೋದಲ್ಲಿ ಅಸಹಕಾರಕ್ಕೆ ನಾಂದಿಯಾದಂತಾಯಿತು. ಭಿನ್ನಾಭಿಪ್ರಾಯ ಘರ್ಷಣೆ ಪ್ರಾರಂಭವಾಗಿ ಸಂಘ ಎಷ್ಟು ಬೇಗ ಹುಟ್ಟಿತೊ, ಅಷ್ಟೇ ಬೇಗ ಸತ್ತಾಯಿತು. ನಮ್ಮ ರಾಷ್ಟ್ರದಲ್ಲಿ ಸಂಘ ಸಂಸ್ಥೆಗಳಲ್ಲಿ ಜಟಾಪಟಿ ನಡೆಯಲು ಮುಖ್ಯ ಕಾರಣ-ಸದಸ್ಯರಲ್ಲಿರುವ ಸ್ವಾರ್ಥ, ಅಸೂಯೆ. ಆದುದರಿಂದ ನಿಸ್ವಾರ್ಥತೆಯಿಂದ ದುಡಿಯದೆ ಸಂಘ ಸಂಸ್ಥೆಗಳು ನಮ್ಮಲ್ಲಿ ಬದುಕಲಾರವು.

ಸಂಸ್ಥೆಯ ಹೆಚ್ಚಿನ ಎಲ್ಲ ಸದಸ್ಯರಿಗೆ ಇತರರಿಗೆ ಅಪ್ಪಣೆ ಕೊಡಲು ಆಸೆ. ತಾವು ಇನ್ನೊಬ್ಬರು ಹೇಳಿದ ಹಾಗೆ ಅನುಸರಿಸಲು ಸಿದ್ಧವಿಲ್ಲದಿದ್ದರೂ ಬೇರೆಯವರು ತಾವು ಹೇಳಿದ್ದು ಕೇಳಬೇಕೆಂಬ ಅಭಿಲಾಷೆ. ಎಲ್ಲರಿಗೂ ನಾಯಕನಾಗಬೇಕೆಂಬ ಹಂಬಲ. ಹಂಬಲಿಸಿ ಪ್ರಯೋಜನವಿಲ್ಲ, ಪ್ರತಿಫಲಾಪೇಕ್ಷೆ ಇಲ್ಲದೆ ದುಡಿದು ನಾಯಕತ್ವಕ್ಕೆ ಯೋಗ್ಯತೆ ಪಡೆದರೆ ಮಾತ್ರ ನಾವು ಬಯಸದಿದ್ದರೂ ನಾಯಕತ್ವದ ಪಟ್ಟ ನಮಗೆ ಸಿಗುತ್ತೆ. "ಯಾರು ಸಿರ್ದಾರನೋ ಅವನೇ ಸರದಾರ"

ನಿಷ್ಕಾಮ ಸೇವೆಯನ್ನು ಮಾಡಿ ಹೆಸರುಗಳಿಸಿದ ಮಹಾಪುರುಷರುಗಳ ದೃಷ್ಟಾಂತಗಳನ್ನು ಯುವಕರು ಅನುಸರಿಸಬೇಕು. ಮಹಾರಾಷ್ಟ್ರ ಸಾಮ್ರಾಜ್ಯ ನಿರ್ಮಾಪಕನಾದ ಛತ್ರಪತಿ ಶಿವಾಜಿಯು ನಿಷ್ಕಾಮ ಸೇವಕರಲ್ಲಿ ಅತ್ಯಂತ ಶ್ರೇಷ್ಠನ. ಅವನು ತನ್ನ ಧರ್ಮ ಮತ್ತು ದೇಶದ ಸಲವಾಗಿ ತನು, ಮನ, ಧನಗಳನ್ನೆಲ್ಲವನ್ನು ಮೀಸಲಾಗಿಟ್ಟು ನಿಸ್ವಾರ್ಥತೆಯಿಂದ ದುಡಿದು ಕೀರ್ತಿಶೇಷನಾದನು. ಮಹಾತ್ಮಾ ಗಾಂಧಿಯವರಿಗೆ ನಿಸ್ವಾರ್ಥ ಸೇವೆಯಲ್ಲಿ ಬಹುದೀಕ್ಷೆ. ಗಾಂಧಿಯವರ ಪೂರ್ಣ ಯಶಸ್ಸು ಅವರ ಅಪ್ರತಿಮ ಆತ್ಮಶಕ್ತಿ ಮತ್ತು ಅಪೂರ್ವ ತ್ಯಾಗವನ್ನು ಹೊಂದಿಕೊಂಡಿದೆ.

ನಿಸ್ವಾರ್ಥ ಸೇವೆಯ ಅಗತ್ಯವನ್ನು ಮನಗೊಂಡ ಯುವಕ, ಯುವತಿಯರೇ ಈ ಶೋಚನೀಯಾವಸ್ಥೆಯನ್ನು ಬಗೆಹರಿಸಲು ಮುಂದಕ್ಕೆ ಬರಲಾರಿರ? ನಮ್ಮ ದೇಶವಿಂದು ಇಂತಹ ಕಷ್ಟದ ಪರಿಸ್ಥಿತಿಯಲ್ಲಿರುವಾಗ 'ನಾವು ಭಾರತೀಯರು' ಎನ್ನುತ್ತ ನಮ್ಮಗೆ ಕುಳಿತುಕೊಳ್ಳಬೇಡಿ ಭಾರತದ ಯುವಕನ್ಯಂದ ನಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಸೊಂಟ ಕಟ್ಟಿ ಮುಂದೆ ಬಾರದಿದ್ದರೆ, ನಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಪರದೇಶಗಳಿಂದ ಯುವಕರನ್ನು ತರಿಸಿಕೊಳ್ಳಬೇಕೆ? ಯಾವುದೇ ರಾಷ್ಟ್ರ ಊರ್ಜಿತಾವಸ್ಥೆಯನ್ನು ಹೊಂದಬೇಕಾದರೆ ಅಲ್ಲಿಯ ಯುವಜನವೃಂದ ನಿಸ್ವಾರ್ಥತೆಯಿಂದ ಹಗಲು ರಾತ್ರಿ ದುಡಿಯಬೇಕು.

ಆದುದರಿಂದ ಭಾರತದ ತರುಣ ತರುಣಿಯರೇ ಇನ್ನಾದರೂ ನಿಸ್ವಾರ್ಥತೆಯಿಂದ ದುಡಿಯಲು, ದಲಿತ ವರ್ಗದವರ ಉದ್ಧಾರ ಮಾಡಲು ಎದ್ದೇಳಿರಿ. ಸ್ಪೃಶ್ಯ ಅಸ್ಪೃಶ್ಯ, ಬಡವ-ಶ್ರೀಮಂತ, ಬ್ರಾಹ್ಮಣ- ಅಬ್ರಾಹ್ಮಣ ಇತ್ಯಾದಿ ಬೇಧಭಾವಗಳನ್ನು ಬಿಡದೆ ನಿಸ್ವಾರ್ಥತೆಯಿಂದ ದುಡಿದು ಭಾರತ ಮಾತೆಯ ಸಂಕಷ್ಟವನ್ನು ಹೋಗಲಾಡಿಸಲು ಬದ್ಧಕಂಕಣರಾಗುವ, ಬನ್ನಿ.

ಜಾಹೀರಾತುದಾರರಿಗೆ

ಸಂತಸದ ಸುದ್ದಿ

ನವಯುಗ

ಎಲ್ಲೆಲ್ಲಿ ಪ್ರಸಾರದಲ್ಲಿದೆ

ಬಲ್ಲಿರಾ?

ದಕ್ಷಿಣ ಕನ್ನಡದ ಎಲ್ಲೆಡೆಗಳಲ್ಲಲ್ಲದೆ ಮುಂಬಯಿಯಲ್ಲಿ ವಿಶಾಲ ಪ್ರಚಾರದಲ್ಲಿದೆ

ಕರ್ನಾಟಕದ ಈ ಕೆಳಗಿನ ಪ್ರಮುಖ ಕೇಂದ್ರಗಳಲ್ಲಿಯೂ ಪ್ರಸಾರದಲ್ಲಿದೆ.

ಬೆಂಗಳೂರು, ಮೈಸೂರು, ಹಾಸನ, ಸಕಲೇಶಪುರ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, , ಹಿರಿಯೂರು ಶಿವಮೊಗ್ಗ, ತೀರ್ಥಹಳ್ಳಿ, ಭದ್ರಾವತಿ, ಹರಿಹರ, ಧಾರವಾಡ, ಹುಬ್ಬಳ್ಳಿ, ಸಾಗರ, ಸಿರ್ಸಿ, ಮಂಡ್ಯ, ಮುಡಿಗೆರೆ, ಬೇಲೂರ, ತರಿಕೆರೆ, ಕೊಪ್ಪ, ಕಡೂರು, ಬೀರೂರು, ಹೊನ್ನಾವರ, ಬೆಳಗಾಂವ್, ಅಂಕೋಲಾ, ಜಗಳೂರು, ಹೊಳಲ್ಕೆರೆ, ನರಸಿಂಹರಾಜಪುರ, ಕೃಷ್ಣರಾಜಪೇಟೆ, ಅರೆಹಳ್ಳಿ, ಬೇಗೋಡು, ಶೃಂಗೇರಿ, ಸೊರಬ, ರಾಯಚೂರು, ಯಾದಗಿರಿ, ಗುಬ್ಬಿ, ಅರಸೀಕೆರೆ, ಗಂಗಾವತಿ, ಇತ್ಯಾದಿ.

ಕನ್ನಡ ಸಾಹಿತ್ಯದಲ್ಲಿ ಯುವಜನರ ಚೇತನ

(ಹದಿನೈದನೇ ಪುಟದಿಂದ)

ಕ್ರಿಯನ್ನು ನಮ್ಮ ಕನ್ನಡದ ಸರಕಾರ ತೋರದಿರುವುದು ದುರ್ದೈವವಲ್ಲದೆ ಮತ್ತೇನು? ಇಂದು ಕನ್ನಡ ಸಾಹಿತ್ಯದಲ್ಲಿ ವೈವಿಧ್ಯ ಹಾಗೂ ನಾವೀನ್ಯತೆ ಹೆಚ್ಚಬೇಕೆಂದು ಬಯಸುವ ನಾವು ಹಾಗೂ ನಮ್ಮ ಸರಕಾರ ಅಂತಹ ನಿರ್ಮಾಣಕ್ಕೆ ಯಾವ ರೀತಿಯ ಪ್ರಚೋದನೆ ನೀಡಿದ್ದಾರೆ?

ಇಂದು ಕನ್ನಡ ಸಾಹಿತ್ಯದಲ್ಲಿ ಪಾರಿಭಾಷಿಕ ಶಬ್ದಕೋಶವಿಲ್ಲ; ವಿಶ್ವಕೋಶವಿಲ್ಲ. ಕನ್ನಡ ಸಾಹಿತ್ಯದ ಬಗ್ಗೆ ಅಧಿಕೃತ ವೈಚಾರಿಕ ಗ್ರಂಥಗಳ ನಿರಂತರ ಪ್ರಕಟಣೆಗಳಿಲ್ಲ. ಸರಕಾರವು ಒಳ್ಳೆಯ ಕನ್ನಡ ಸಾಹಿತ್ಯಕ್ಕಾಗಿ ಬಹುಮಾನದ ನಾಟಕಗಳನ್ನೇನೋ ಆಗಾಗ್ಯೆ ಮಾಡುತ್ತಿದ್ದರೂ ಕನ್ನಡದ ಲೇಖಕನ ನೆಮ್ಮದಿಗಾಗಿ ಒಂದು ವ್ಯಾಪಕ ಮಟ್ಟದ ಕಾರ್ಯವನ್ನು ಕೈಗೊಂಡಿದ್ದ ಕಾಣುವುದಿಲ್ಲ.

ಸಾಹಿತ್ಯದಲ್ಲಿ ರಾಜಕಾರಣವು ತನ್ನ ಕಾಯಕ ನಡೆಸುವ ಒಂದು ಪ್ರವೃತ್ತಿ ಎಲ್ಲ ಭಾಷೆಗಳಂತೆ ಕನ್ನಡದಲ್ಲೂ ಇದೆ. ಕನ್ನಡದ ಪ್ರಕಾಶಗಳು ಹೆಚ್ಚಿನವು ಸ್ವತಂತ್ರವಾಗಿದ್ದರೂ, ಈ ಪ್ರಕಾಶನಗಳ ಬೆಳವಣಿಗೆಯು ಅಂತಿಮವಾಗಿ ರಾಜಕಾರಣಿಗಳ ಕೃಪಾಶ್ರಯದಲ್ಲೇ ಸೀಮಿತವಾಗಿರುವುದರಿಂದ ಸ್ವತಂತ್ರ ಪ್ರಕಾಶನದ ಸಂಸ್ಥೆಗಳಾದರೂ ತಮ್ಮ ಉದ್ಧಾರವನ್ನು ತಮ್ಮಷ್ಟಕ್ಕೆ ನಿರೂಪಿಸಲು ಅಶಕ್ತವಾಗಿವೆ.

ಇಂದು ಕನ್ನಡ ಸಾಹಿತ್ಯ ಪರಿಷತ್ತು ಇದೆ. ಇದು ನಿಜವಾಗಿಯೂ ಕನ್ನಡದ ಅಭಿಮಾನದ ಆಸ್ತಿ. ಈ ಸರಸ್ವತಿಯ ಕೇಂದ್ರವು ಬಿ. ಎಂ. ಶ್ರೀ, ಮಾಸ್ತಿಯವರ ಪವಿತ್ರ ಬೆವರಿನಿಂದ ಬೆಳೆದ ಸಂಸ್ಥೆ. ಇದು ಹುಚ್ಚು ಉತ್ಸಾಹದ, ಅನುಭವ ಸ್ಥಿತಿಯ, ಜವಾಬ್ದಾರಿ ಇಲ್ಲದ ಭಾವುಕರ ಕೈಗೆ ಸಿಕ್ಕಿದ್ದೇ ಆಗಿದ್ದರೆ ಇಲ್ಲಿರುವ ಪುಸ್ತಕಗಳು, ಮೇಜು, ಕುರ್ಚಿಗಳು ಎಂದೋ ಮಾಯವಾಗಿ ಬಿಡುತ್ತಿತ್ತೋ ಏನೋ? ಆದ್ದರಿಂದಲೇ ಟೀಕೆ ಮಾಡಿ ದೂರ ನಿಂತವರು ನಿಜವಾಗಿಯೂ ಕನ್ನಡ ಸಾಹಿತ್ಯದ ಬಗ್ಗೆ ದುಡಿಯಬಲ್ಲವರಲ್ಲ ಎಂಬುದು ಜನರಿಗೆ ತಿಳಿದುದರಿಂದಲೇ ಸಾಹಿತ್ಯ ಪರಿಷತ್ತು ಈ ವರೆಗೂ ಉಳಿದಿದೆ. ಸಾಹಿತ್ಯ ಪರಿಷತ್ತಿನ ಉಚ್ಛ್ರಾಯ ಸ್ಥಿತಿಯನ್ನಾಶಿಸುವ ಮಂದಿ ಮೊದಲು ಅದಕ್ಕೆ ಜನರ ನೆರವನ್ನು ಯಾವ ರೀತಿ ಪಡೆಯಲು ಸಾಧ್ಯವಿದೆ ಎಂದು ಯೋಚಿಸಬೇಕು.

ಸಾಹಿತಿಗಳ ಅಡಚಣೆ

ಇಂದು ರಾಜಕಾರಣವು ಸಾಹಿತ್ಯವನ್ನು ಅಡ್ಡ ದಾರಿಗೆ ತಿರುಗಿಸುತ್ತಿದೆ ಎಂಬ ಅಪರೋಕ್ಷ ಟೀಕೆ ಕೇಳಿ ಬರುತ್ತಿದೆ. ರಾಜಕಾರಣದ ಲಾಭವನ್ನು ಪಡೆದುಕೊಂಡು ಸಾಹಿತ್ಯವನ್ನು ಪರಿಪೋಷಿಸಿದರೆ ಅದು ಅನ್ಯಾಯವಲ್ಲ. ರಾಜಕಾರಣಿಗಳು ಸಾಹಿತಿಗಳ ಸ್ಥಾನದಲ್ಲಿ ನಿಂತು ನಿರ್ದೇಶಿಸಿದರೆ ಮಾತ್ರ ತಪ್ಪಾಗುತ್ತದೆ. ಇಂದು ಸಾಹಿತ್ಯದ ಬಗ್ಗೆ ಪ್ರೋತ್ಸಾಹದ ಮಾತನ್ನಾಡುವ ರಾಜಕಾರಣಿಗಳು ತಮ್ಮ ಪ್ರಭಾವವನ್ನು ಬೆಳೆಸಲು ಯತ್ನಿಸುತ್ತಿದ್ದರೂ, ಕನ್ನಡ ಸಾಹಿತ್ಯ ಪರಿಷತ್ತು ಅಂತಹ ಮನೋಭಾವದ ಪ್ರವಾಹಕ್ಕೆ ಅಡ್ಡ ಗೋಡೆಯಾಗಿದೆ ಎಂಬುವನ್ನು ಒಪ್ಪಲೇ ಬೇಕು.

ಆದರೆ ಇಂದು ಸಾಹಿತಿಗಳ ನಿಜವಾದ ಯೋಗ್ಯತೆಯನ್ನು ಜನತೆಗೆ ತಿಳಿಸಬಲ್ಲ ಪತ್ರಿಕೆಗಳು ಬಂಡವಾಳ ಶಾಹಿಗಳ, ರಾಜಕಾರಣಿಗಳ ಕೈಗೊಂಬೆಗಳಾಗಿರುವುದರಿಂದ ಅದು ದೊಡ್ಡ ಆತಂಕವಾಗಿದೆ. ಯಾವುದೇ ಲೇಖಕನ ಪ್ರಬುದ್ಧಮಾನ ಪರಿಚಯ ನೀಡುವ ಹಾಗೂ ಪ್ರಸರಿಸುವ ಶಕ್ತಿ ಪತ್ರಿಕೆಗಳಿಗಿವೆ. ಕನ್ನಡದ ಕೆಲವೇ ಪ್ರಖ್ಯಾತ ಪತ್ರಿಕೆಗಳು ಸ್ವತಂತ್ರ ಮನೋಭಾವನೆಯವುಗಳಾಗಿರದೆ ಒಂದಲ್ಲ ಒಂದು ಪ್ರಬಲ ಶಕ್ತಿಯ ಹಿನ್ನೆಲೆಯ ಪೋಷಕವಾಣಿಗಳಾಗಿವೆ. ಇದು ಸಾಹಿತಿಗಳಿಗೆ ಬಂದಿರುವ ತೊಂದರೆ.

ಆದರೂ ಕನ್ನಡ ಸಾಹಿತ್ಯದ ರಸಪ್ರವಾಹ ಹರಿದಿದೆ. ಕೆಲವೊಂದು ಹಿರಿಯ ಅನುಭವಿಗಳ ಪ್ರೇರಣೆಯಿಂದ ಕನ್ನಡದ ಯುವಜನ ಲೇಖಕರು ಉತ್ಸಾಹಿತರಾಗಿ ಮುಂದುವರಿಯುತ್ತಿದ್ದಾರೆ. ಈ ಮುನ್ನಡೆಯು ಅವ್ಯಾಹತವಾಗಿ ಸಾಗುವಂತೆ ರಾಜಕಾರಣಿಗಳು ಬೆಂಬಲ ನೀಡಬಹುದಾಗಿದೆ. ರಾಜಕಾರಣಿಗಳು ಸಾಹಿತಿಗಳಿಗೆ ಸೂತ್ರ ಕಟ್ಟಿ ಮುಂದಕ್ಕೆ ಎಳೆಕೊಂಡು ಹೋಗುವವರಾಗದೆ, ಹಿನ್ನೆಲೆಯಲ್ಲಿ ನಿಂತು ಅವರ ದಣಿವಿಗೆ ಯೋಗ್ಯ ಪಡಿನೆಲನ್ನು ನೀಡುವಂತಾಗಬೇಕು.

≡ ಸರ್ವರಿಗೂ ದೀಪಾವಳಿಯ ಶುಭಾಶಯಗಳು ≡

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

ವಿವಿಧ ನಮೂನೆಯ, ಹೊಸ ಮಾದರಿಯ, ಜನಾಕರ್ಷಣೆಯ ಎಲ್ಲಾ ವಿಧದ ಸಾಮಾನುಗಳಿಗೂ, ರೇಡಿಯೋ, ಟ್ರಾನ್ಸಿಸ್ಟರ್, ಉಡುಗರೆ ವಸ್ತುಗಳಿಗೂ ಸಂದರ್ಶಿಸಿರಿ.

ಚಿನ್ನ ನಿಯಂತ್ರಣವಾಯಿತೆಂದು ಹೆದರಬೇಕಾಗಿಲ್ಲ!

14 ಕೆರೆಟ್ ಚಿನ್ನದಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವ ಎಲ್ಲಾ ತರದ ಆಭರಣಗಳನ್ನು ತಯಾರಿಸಿ ಕೊಡುವೆವು.

ಬೆಳ್ಳಿಯ ಎಲ್ಲಾ ವಿಧದ ಸಾಮಾನುಗಳು ಯಾವಾಗಲೂ ನಮ್ಮಲ್ಲಿಯೋಗ್ಯ ಬೆಲೆಗೆ ಮಾರಾಟಕ್ಕೆ ಸಿದ್ಧವಾಗಿವೆ.

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ಪ್ರೊ.: ಯು. ರಾಘವೇಂದ್ರ ಕೃಷ್ಣ ಭಟ್.

ತೆಂಕಪೇಟೆ ::: ಫೋನ್: 66 ::: ಉಡುಪಿ.

WRITING MAKETH AN EXACT MAN!

FOR THIS EXACTING SERVICE USE THE WELL-TRIED AND TESTED

CHANDRA PENS

KNOWN, NEEDED AND EXPORTED TO EUROPE, ASIA AND AFRICA

MANUFACTURED BY:

CHANDRA INDUSTRIES

P. B. 7355 ANDHERI, BOMBAY-58

TELEPHONE: 86445 TELEGRAM: CHANDRAPEN, ANDHERI

SOLE DISTRIBUTORS:

JAYESH (OVERSEAS) ASSOCIATES,

OLD NAGARDAS ROAD, ANDHERI, BOMBAY-58.

ಬರವಣಿಗೆಯು ಮಾನವನನ್ನು ಪರಿಷ್ಕರಿಸುತ್ತದೆ!

ಈ ಗಾಢವಾದ ಸೇವೆಗಾಗಿ ಚೆನ್ನಾಗಿ ಪರಿಶೀಲಿಸಿ ಶೋಧಿಸಲ್ಪಟ್ಟ

ಚಂದ್ರಾ ಪೆನ್ ಗಳನ್ನೇ ಉಪಯೋಗಿಸಿರಿ.

ಯುರೋಪು, ಏಸ್ಯಾ, ಮತ್ತು ಆಫ್ರಿಕಾಗಳಲ್ಲಿ ಪ್ರಸಿದ್ಧವಾಗಿ ಆವಶ್ಯಕವೆನಿಸಿ ರಫ್ತಾಗುತ್ತಿವೆ.

ತಯಾರಕರು: **ಚಂದ್ರಾ ಇಂಡಸ್ಟ್ರೀಸ್**

ಟೆಲಿಫೋನ್. 86445 ಪಿ. ಬಿ 7355 ಅಂಧೇರಿ, ಬೊಂಬಾಯಿ— 58 ಟೆಲಿಗ್ರಾಂ: 'ಚಂದ್ರಾಪೆನ್' ಅಂಧೇರಿ

ಏಕೈಕ ವಿತರಣೆಗಾರರು:

ಜಯೇಶ್ (ಓವರ್‌ಸೀಸ್) ಎಸೋಸಿಯೇಟ್ಸ್,

ಓಲ್ಡ್ ನಗರ್‌ದಾಸ್ ರೋಡು, ಅಂಧೇರಿ, ಬೊಂಬಾಯಿ—58

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨೯-೧೦-೬೪ರಿಂದ ೪-೧೧-೬೪ರ ವರೆಗೆ

೧. ಮೇಷ

ಶನೈಶ್ಚರನೊಬ್ಬನನ್ನು ಬಿಟ್ಟು ಇತರ ಎಲ್ಲಾ ಗ್ರಹರೂ ನಿಮಗೆ ಪ್ರತಿಕೂಲರಾಗಿರುವ ಕಾರಣ ಈ ವಾರವನ್ನು ಸ್ವಲ್ಪ ಕಷ್ಟದಿಂದಲೇ ಕಳೆಯಬೇಕಾಗಿದೆ. ಎಂತಹ ತೊಡಕು ತೊಂದರೆಗಳೂ ಬಂದರೂ ನೀವು ನಿಮ್ಮ ಕರ್ತವ್ಯವನ್ನು ಬಿಡಲಾರಿರಿ. ಆದರೇನು, ಶ್ರಮಕ್ಕೆ ತಕ್ಕ ಫಲ ಲಭಿಸದು. ಪುತ್ರ ಮತ್ತು ಕಳತ್ರ ಸ್ಥಾನ ಪತಿಗಳಾಗಿದ್ದ ರವಿ ಶುಕ್ರರಿಂದು ನೀಚರಾಗಿರುವ ಕಾರಣ ಹೆಂಡತಿ ಮಕ್ಕಳ ಆರೋಗ್ಯವು ಕೆಡುವುದಲ್ಲದೆ ತಂದೆ ಮಕ್ಕಳೊಳು ಗಂಡ ಹೆಂಡಿರೊಳು ಅನುದಿನ ಕಲಹ ಕಚ್ಚಾಟಗಳು ಉಂಟಾದಾವು. ವಾರಾಂತ್ಯದ 4 ದಿನಗಳು ಇದ್ದುದರಲ್ಲಿ ಉತ್ತಮವಾಗಿ ಕಾಣುವುವು.

೨. ವೃಷಭ

ಸ್ವಯಂ ನೀವು ಅಸಮರ್ಥರಿದ್ದರೂ ಮಿತ್ರಜನರ ಬೆಂಬಲವು ಚೆನ್ನಾಗಿರುವ ಕಾರಣ ಇಂದಿನ ದಿನಗಳು ಸುಗಮವಾಗಿ ಸಾಗಲಿವೆ. ದುಡಿಮೆಯ ಬಹ್ವಂಶವನ್ನು ಸದ್ವಿನಿಯೋಗ ಮಾಡಲಿರುವಿರಿ. ನಿಮ್ಮ ಸ್ವಂತ ಆರೋಗ್ಯವು ಕಫ ವಾತ ದೋಷದಿಂದ ಕೆಡುವ ಸಂಭವವಿದೆ. ಕುಜನರ ಮಾಯಾಜಾಲಕ್ಕೆ ಸಿಲುಕಿ ಸ್ವಲ್ಪ ಕಷ್ಟ, ನಷ್ಟಗಳನ್ನು ಅನುಭವಿಸಲಿರುವಿರಿ. ಎಷ್ಟೇ ಜಾಗರೂಕರಾಗಿ ವರ್ತಿಸಿದರೂ ಜನಾಪವಾದದಿಂದ ಮುಕ್ತರಾಗಲಾರಿರಿ. ತಾ. 29, 3, 4 ಈ ದಿನಗಳು ಉಳಿದ ದಿನಗಳಿಗಿಂತ ಉತ್ತಮವಾಗಿವೆ

೩. ಮಿಥುನ

ನಿಮ್ಮ ಪರಿಶ್ರಮಕ್ಕಿಂತಲೂ ಅಧಿಕವಾದ ಫಲ ಲಭಿಸುವುದರಿಂದಲೂ ಖರ್ಚಿನ ಭಾಗಗಳು ಕಡಿಮೆಯಾಗುದರಿಂದಲೂ ಇಂದು ನಿಮ್ಮ ಆರ್ಥಿಕ ಮಟ್ಟ ಉತ್ತಮದ ಸ್ಥಿತಿಗೆ ಬರಲಿದೆ. ಪ್ರಬಲರಾದ ಪ್ರತಿ ಸ್ಪರ್ಧಿಗಳನ್ನು ಎದುರಿಸಲು ಶಕ್ತರಾದ ನಿಮಗೆ ರಾಜಕೀಯ ಕ್ಷೇತ್ರದಲ್ಲಿ ವಿಜಯವಿದೆ. ಆದರೆ ಗೃಹಕೃತ್ಯದಲ್ಲಿನ ಅವ್ಯವಸ್ಥೆಯಿಂದಾಗಿ ಮನಸ್ಸಿಗೆ ನೆಮ್ಮದಿ ಇರದು. ನೀರೋಗಿಗಳಾದ ನಿಮಗೆ ತಾ. 30, 31 ಈ ದಿನಗಳಲ್ಲಿ ಕಾರ್ಯಸಿದ್ಧಿ ಧನ ಲಾಭ, ಜಯಗಳುಂಟಾದಾವು.

೪. ಕರ್ಕಟಕ

ಪಿತ್ತೋದ್ರೇಕ ದೋಷದಿಂದ ನಿಮ್ಮ ಆರೋಗ್ಯವಿಂದು ಕೆಡುವಂತಿದೆ. ಆತ್ಮೀಯರ ವಿರಹ ದುಃಖಕ್ಕೆ ನೀವಿಂದು ಎರವಾಗಲಿರುವಿರಿ. ಪ್ರವಾಸದಲ್ಲಿ ಕಪಟಿಗಳ ವಂಚನೆಗೆ ಸಿಲುಕಿ ನಷ್ಟಹೊಂದಲಿರುವಿರಿ. ಜಾಗ್ರತೆ ಕೋರ್ಟು ಕಚೇರಿಗಳ ಕಾರ್ಯಗಳನ್ನು ಸಧ್ಯಕ್ಕೆ ಕೈ ಬಿಡುವುದೊಳ್ಳಿತು. ಸಮಯ ಸಾಧಕರಿಂದ ಶತ್ರು ವರ್ಗದವರಿಂದ ನಿಮ್ಮ ಧನ, ಮಾನಗಳಿಗೆ ಧಕ್ಕೆ ತಗಲುವ ಸಂಭವವಿದೆ. ತಾ. 1, 2 ಇದ್ದುದರಲ್ಲಿ ಅನುಕೂಲವಾಗಿ ಕಾಣಿಸೀತು.

೫ ಸಿಂಹ

ನಿಮ್ಮ ಧನ ಸ್ಥಾನದಲ್ಲಿಂದು ನೀಚನಾದ ಶುಕ್ರನಿರುವುದರಿಂದ ಕಂಟ್ರ್ಯಾಕ್ಟು ಮೊದಲಾದ ವ್ಯವಹಾರಗಳಲ್ಲಿ ಮತ್ತು ಸಟ್ಟಾ ದ್ಯೂತಾದಿ ಮೂಲಕ ಹೆಚ್ಚಿನ ಧನಾಗಮವಾಗಲಿದೆ. ಪಶು ಭೃತ್ಯಾದಿ ಗೃಹೋಪಕರಣಗಳಲ್ಲೇನೂ ಕೊರತೆ ಇಲ್ಲದಿರುವುದರಿಂದ ಸಂಸಾರ ರಥವು ಸುಗಮವಾಗಿ ಸಾಗಲಿದೆ. ವಾಹನಾದಿಗಳಲ್ಲಿನ ಪ್ರಯಾಣದಲ್ಲಿ ಅಪಘಾತಗಳ ಸಂಭವವಿದೆ. ರಾಜಕೀಯ ರಂಗದಲ್ಲಿ ಪರಾಭವ ಆದೀತು. ತಾ. 30.31.3.4 ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ, ನಾನಾ ತರದಿಂದ ಧನಾಗಮವೂ ಆಗಲಿದೆ.

೬. ಕನ್ಯಾ

ಹೆಚ್ಚಿನ ನಿಮ್ಮ ಕಾರ್ಯಕಲಾಪಗಳಿಗೆ ಮೇಲಿಂದ ಮೇಲೆ ವಿಘ್ನ ಬರಲಿದೆಯಾದರೂ ಹಿಡಿದ ಕಾರ್ಯವನ್ನು ನೀವೆಂದೂ ಮಧ್ಯದಲ್ಲಿ ಕೈಬಿಡಲಾರಿರಿ. ನಿಮ್ಮ ನಿರೀಕ್ಷೆಯಂತೆ ಫಲ ಲಭಿಸದಿದ್ದರೂ ಪರಿಶ್ರಮವು ವ್ಯರ್ಥವಾಗಲಾರದು. ನಿಮ್ಮ ದೈನಂದಿನ ಖರ್ಚುವೆಚ್ಚಗಳ ಸಲುವಾಗಿ ಚಿಂತಿಸಲವಕಾಶವಿಲ್ಲ. ಕಫ ಪಿತ್ತ ದೋಷದಿಂದಾಗಿ ಆರೋಗ್ಯಕ್ಕೆ ಸ್ವಲ್ಪ ಹಾನಿಯಿದೆ. ರಾಜಕೀಯ ವ್ಯವಹಾರಗಳಲ್ಲಿ ವಿಘ್ನ ವಿರೋಧಗಳು ಹೆಚ್ಚಲಿವೆ ತಾ. 29, 1, 2ರಲ್ಲಿ ಲಾಭ, ಸುಖ ಭೋಗಗಳನ್ನು ಪಡೆಯುವಿರಿ.

೭, ತುಲಾ

ನಿಮ್ಮ ಧನಪತಿಯಾದ ಕುಜನಿಂದು ಲಾಭ ಸ್ಥಾನಕ್ಕೆ ಬಂದಿಹನು. ಸುರಗುರುಗಳ ಅನುಗ್ರಹಕ್ಕೆ ಪಾತ್ರರಾದ ನಿಮಗೆ ಈ ವಾರದಲ್ಲಿ ಕೈಗೊಂಡ ಕಾರ್ಯಗಳಲ್ಲಿ ನಿರೀಕ್ಷೆಗಿಂತಲೂ ಅಧಿಕವಾದ ಫಲ ಲಭಿಸಲಿದೆ. ಸಮಾಜದಲ್ಲೂ ಒಳ್ಳೆಯ ಯಶಸ್ಸು ಸ್ಥಾನಮಾನಗಳು ಲಭಿಸುವುವು. ಕೆಲವೊಂದು ಗೃಹತಾಪತ್ರಯಗಳಿಂದ ಮನಸ್ಸಿಗೆ ನೆಮ್ಮದಿ ಇರದು. ನೌಕರಿ ವರ್ಗದವರಿಗೂ ಕುಶಲ ಕಲಾ ಜೀವಿಗಳಿಗೂ ಇಂದಿನ ದಿನಗಳು ಸುಗಮವಾಗಿ ಸಾಗಲಿವೆ. ತಾ. 1, 2ರಲ್ಲಿ ಅಧಿಕ ವ್ಯಯ, ದೇಹಾಲಸ್ಯಗಳು ಕಾಣಿಸಬಹುದು.

೮. ವೃಶ್ಚಿಕ

ಮುಂಚಿಗಿಂತ ನಿಮ್ಮ ಪರಿಸ್ಥಿತಿಯಿಂದು ಬಹು ಮಟ್ಟಿಗೆ ಸುಧಾರಿಸಲಿವೆ. ಪರರ ನೆರವಿಂದು ದುರ್ಲಭವಾದರೂ ಸ್ವಯಂಶಕ್ತರಾದ ನೀವು ದಿನಯಾಪನೆಗೆ ಸಾಕಷ್ಟು ದುಡಿಯುವಿರಿ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅಧ್ಯಯನಕ್ಕೆ ಹೆಚ್ಚಿನ ವಿಘ್ನ ವಿಡ್ಡಾರಗಳು ಬರಲಿವೆ. ಅಧಿಕಾರಿ ವರ್ಗದವರ ವಕ್ರದೃಷ್ಟಿಗೆ ಗುರಿಯಾದ ನಿಮಗೆ ಸ್ಥಾನ ಚಲನೆಯೂ ಉಂಟಾದೀತು. ಪ್ರವಾಸದಲ್ಲಿ ಕಷ್ಟ ನಷ್ಟಗಳುಂಟಾಗಲಿವೆ. ತಾ. 30ರಿಂದ 2ರ ವರೆಗಿನ ದಿನಗಳು ಸುಗಮವಾಗಿ ಸಾಗಲಿವೆ.

೯. ಧನು

ನಿಮ್ಮ ಪೌರುಷಕ್ಕೆ ಸರಿಯಾಗಿ ದೈವಬೆಂಬಲವಿರುವುದರಿಂದ ನಿಮ್ಮ ಬಯಕೆಗಳು ನಿರ್ವಿಘ್ನದಿಂದ ನೆರವೇರಲಿವೆ. ಜನತೆಯ ಸಹಕಾರ ಬಂಧು ವರ್ಗದವರ ನೆರವುಳ್ಳ ನಿಮಗೆ ಎಂತಹ ಮಹತ್ಕಾರ್ಯವೂ ಸುಲಭಸಾಧ್ಯವಾದೀತು. ಆದರೆ ಕೋರ್ಟು ಕಚೇರಿಗಳ ವ್ಯವಹಾರಗಳಲ್ಲಿ ಹೆಚ್ಚಿನ ಧನವ್ಯಯವೂ ವಿಪಕ್ಷೀಯರಿಂದ ಪರಾಭವವೂ ಉಂಟಾದೀತು ನಿಷ್ಕಾರಣವಾಗಿ ಕಲಹಗಳುಂಟಾದಾವು. ವಾರಾಂತ್ಯದ 4 ದಿನಗಳು ಸರ್ವಾಭೀಷ್ಟ ಪ್ರದಗಳಿವೆ.

೧೦. ಮಕರ

ಪ್ರಬಲರಾದ ಪ್ರತಿಸ್ಪರ್ಧಿಗಳನ್ನು ನೀವಿಂದು ಎದುರಿಸಬೇಕಾಗಿ ಬರಲಿದೆ. ಆಕಸ್ಮಿಕವಾಗಿ ಸಂಭವಿಸುವ ಅನರ್ಥಗಳಿಗಾಗಿ ನಿಮ್ಮ ಕೆಲವೊಂದು ಕಾರ್ಯಗಳು ಅರ್ಧದಲ್ಲೇ ನಿಂದು ನಿಲ್ಲುವುವು. ಸತತೋದ್ಯಮಿಗಳಾದ ನೀವು ಅನುದಿನದ ಖರ್ಚಿಗೆ ಸಾಕಷ್ಟು ದುಡಿಯುವಿರಿ ವ್ಯವಹಾರ ನಿಮಿತ್ತವಾಗಿ ಕೋರ್ಟು ಮನೆಗೆ ತಿರುಗುವ ಪ್ರಸಂಗ ಬರಲಿದೆ. ಸ್ವಜನಾಧಿ ಕ್ರೋಧಕ್ಕೆ ಎರವಾದ ನಿಮ್ಮ ಮನಸ್ಸಿಗೆ ನೆಮ್ಮದಿಯಿರಲಾರದು ವಾರಾಂತ್ಯದ ಎರಡು ದಿನಗಳಲ್ಲಿ ನಿಮ್ಮ ಕೆಲವೊಂದು ಬಯಕೆಗಳು ಪೂರ್ಣವಾಗುವುವು.

೧೧ ಕುಂಭ

ಸುಖ ಭಾಗ್ಯಪತಿಯಾದ ಶುಕ್ರನು ನೀಚನಾಗಿದ್ದರೂ ಅನುಕೂಲಸ್ಥಾನವನ್ನು ಹೊಂದಿರುವುದರಿಂದ ನೀಚ ಜನರಿಂದಲೂ ಸ್ತ್ರೀಯರಿಂದಲೂ ಧನಲಾಭವಾಗುವ ಯೋಗವಿದೆ. ಇತರ ಗ್ರಹರೆಲ್ಲರೂ ವಿಮುಖರಾಗಿರುವ ಕಾರಣ ನಿಮ್ಮ ಖರ್ಚು ವೆಚ್ಚಗಳನ್ನು ನಿರ್ವಹಿಸುವ ಸಲುವಾಗಿ ಸಾಲ ಮಾಡುವಿರಿ. ಸತಿ ಪತಿಯರಲ್ಲಿ ವಿರಸ ಹೆಚ್ಚಲಿದೆ. ದೇಹಾಲಸ್ಯ ಶತ್ರುಜನರ ಕಾಟದಿಂದಾವೃತ್ತರಾದ ನಿಮಗೆ ತಾ. 29, 3, 4 ಈ ದಿನಗಳು ಸ್ವಲ್ಪ ಸುಖದಾಯಿಗಳಾಗಿ ಪರಿಣಮಿಸಲಿವೆ.

೧೨. ಮೀನ

ನಿಮ್ಮ ಶ್ರಮವಿಂದು ಸಾರ್ಥಕವಾಗುವುದು, ಪ್ರಬಲ ಪ್ರತಿಪಕ್ಷಿಗಳನ್ನು ಎದುರಿಸಲು ಶಕ್ತರಾದ ನಿಮಗೆ ಭೂ ಸಂಬಂಧವಾದ ವ್ಯವಹಾರದಲ್ಲೂ, ಕೃಷಿ ಕ್ಷೇತ್ರಗಳಲ್ಲೂ ಹೆಚ್ಚಿನ ಲಾಭವಾಗುವುದು ದ್ಯೂತ ಪ್ರೇಮಿಗಳಿಗೆ ಅನುಕೂಲ ಸಮಯವಿದು. ಏಳೂವರೆ ಶನಿಯ ಕಾಟದಿಂದಾಗಿ ಆಕಸ್ಮಿಕ ಪ್ರವಾಸ ಅನರ್ಥಗಳೊದಗಲಿವೆ, ನಿರೋಗಿಗಳಾದ ನಿಮಗೆ ವಾರಾದಿಯ 5 ದಿನಗಳು ಸುಖ ಲಾಭ ವಿಜಯದಾಯಿಗಳಾಗಿವೆ.

— — —

ದೀಪಾವಳಿಗೆ
ಪ್ರಕಟವಾಗಲಿದೆ
ಕು. ಗೋ. ರವರ
ಅಕ್ಕನ ಮದುವೆ
(ಬರಹಗಳ ಸಂಕಲನ)
ಭಾರ್ಗವ ಪ್ರಕಾಶನ,
ಚಿಕ್ಕಮಗಳೂರು.

DEEPAVALI GREETINGS

OGALE TOTALLY ENCLOSED MOTORS

1 HP to 15 HP for Economy & Service to Industry and Irrigation

Sole Distributors: M/s. A. C. E C INDIA PRIVATE LTD., Bombay, Delhi, Madras & Bangalore.

……………Authorised Agent for South Kanara:……………

MR. U. SADIYA,

Licensed Electrical Contractor Class 'A'

Car Street, ... UDIPI, S. K.

ಇನ್ನೆರಡು ಹೊಸ ಶಾಖೆಗಳು…….

ವಿಶಾಲವಾಗಿ ಹಬ್ಬಿರುವ 'ಸಿಂಡಿಕೇಟ್ ಬೇಂಕಿನ'
ಶಾಖಾ ಸಮುದಾಯಕ್ಕೆ ಇನ್ನೆರಡು ಹೊಸ ಶಾಖೆಗಳು

ಬೊಂಬಾಯಿ— ಬ್ರೋಚ್ ಸ್ಟ್ರೀಟ್ ಮತ್ತು ಮೆಟ್ಟುಪಾಳಯಂ (ಮದ್ರಾಸು ರಾಜ್ಯ)

ಎಂಬಲ್ಲಿ
ಬೇಗನೇ ತೆರೆಯಲ್ಪಡುವುವೆಂದು ತಿಳಿಸಲು ನಾವು ಸಂತೋಷಪಡುತ್ತೇವೆ.

ಸಿಂಡಿಕೇಟ್ ಬೇಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು 194 ಚಲಾವಣಾ ನಿಧಿ: ರೂ. 60 ಕೋಟಿಗೂ ಮಿಕ್ಕಿದೆ.
ಪ್ರಪಂಚದಾದ್ಯಂತ ಬ್ಯಾಂಕಿಂಗ್ ವ್ಯವಹಾರಕ್ಕೆ.



ನಮ್ಮ ಗ್ರಾಹಕರಿಗೆ

ದೀಪಾವಳಿಯು

ಆನಂದವನ್ನೀಯಲಿ!

ಶ್ರೀ
ಆನಂದ ಟೈಪ್ ಫೌಂಡ್ರಿ
ಹುಬ್ಬಳ್ಳಿ.

ಮೈಸೂರ ರಾಜ್ಯದಲ್ಲಿಯ
ಮುದ್ರಣ ಇತಿಹಾಸದಲ್ಲಿಯೇ
ಒಂದು ಅದ್ಭುತ ಪ್ರಗತಿ!!

ಅತ್ಯಾಧುನಿಕ— ಸ್ವಯಂಚಾಲಿತ ಮುದ್ರಣ ಮೊಳೆಯನ್ನು ಎರಕ ಹೊಯ್ಯುವ ಯಂತ್ರಗಳನ್ನು ಪರದೇಶದಿಂದ ತರಿಸಿಕೊಂಡು ಜಪಾನೀ ತಜ್ಞರ ಸಲಹೆಯನ್ನು ಪಡೆದು ಇಂಗ್ಲೀಷ, ಕನ್ನಡ, ಹಿಂದೀ ಮರಾಠೀ, ಸಂಸ್ಕೃತ ಲಿಪಿಯ ಅಕ್ಷರಗಳನ್ನು ಬೇಕಾದಷ್ಟು ಎರಕ ಹೊಯ್ದು ಕೊಡಬಲ್ಲೆವೆಂದು ಹೇಳಲು ಹೆಮ್ಮೆಯೆನಿಸುತ್ತದೆ.

ಬೇಗನೆ ಬೇರೆ ಭಾಷೆಗಳ ಲಿಪಿಯ ಅಕ್ಷರಗಳನ್ನು ಎರಕ ಹೊಯ್ದು ಕೊಡಲು ಆ ಶಾಖೆಗಳನ್ನು ತೆರೆಯಲಿರುವೆವು.

ವಿವಿಧ ಪ್ರಕಾರ ಮುದ್ರಣ ಸಲಕರಣೆಗಳನ್ನೂ ನಾವು ಪೂರೈಸುವೆವು.

ಕನ್ನಡ ಮುದ್ರಣ ಲೋಪದೋಷಗಳನ್ನೆಲ್ಲ ನಿವಾರಿಸಿ ನಿರ್ದೋಷವಾದ ಗಟ್ಟಿ ಮುಟ್ಟಾದ ಟೈಪುಗಳನ್ನು ಒತ್ತಕ್ಷರಗಳನ್ನು ಎರಕ ಹೊಯ್ದವರೆಂದರೆ ಶ್ರೀ ಆನಂದ ಟೈಪ್ ಫೌಂಡ್ರಿಯು ಮುದ್ರಣದ ನಿಮ್ಮ ಎಲ್ಲಾ ಆವಶ್ಯಕತೆಗಳಿಗೂ ನಮ್ಮೆಡೆಗೇ ಬನ್ನಿ! ನಂಬಿ ಬನ್ನಿ!

SRI
ANANDA TYPE FOUNDRY,

KOPPIKAR ROAD,

HUBLI.

ಎಸ್. ಎ. ವಿ. ನಾಯುಡು
ಪ್ರೊಪ್ರೈಟರ್.

ALWAYS BETTER IN SERVICE

for everything in

LETTER-PRESS &
OFFSET PRINTING

IN ELEGANT GET-UP
AND
NEAT EXECUTION

**PROCESS BLOCK-MAKING
UNDERTAKEN**

MANIPAL POWER PRESS

MANIPAL, S. Kanara

INSIST ON ....

Waterfalls–Glendale–Brooklands

TEAS

POPULAR EVERYWHERE

You can book your requirements through:

PUNJA & CO., MULKI,

Phone No. Off.: 26. Res. 36.

KOTHARI & SONS, MADRAS.



Rs. 250

GETS YOU A NEW 1963

himalux

Buy a HIMALUX
—the refrigerator
you can afford

HIMALUX is the registered trade mark of Himalux Private Limited

Manufactured by
VINAR LTD
Calcutta-16

ON HIRE-PURCHASE

Himalux, the quality refrigerator can be yours now for a down payment of only Rs 250 (plus local taxes). Pay the balance in 12 monthly instalments of Rs 87·50 Paise Lose no time—check with your nearest Himalux dealer today.

Telephone 362 & 186 Telegram "ARVIND"

ARVIND MOTORS

BALMATTA ROAD : : MANGALORE-1

MODERN GARAGE

UDIPI

(ESTD. 1950)

Offers

The Car & Truck Owners, the service of a well equipped

Service Station

Benz Service a Speciality

Supervision by

Technically Qualified Staff

Phone: 65

ಹಾರ್ದಿಕ ಶುಭಾಶಯಗಳು—

'ಹೋಟೇಲ್ ಗಾರ್ಡನ್'

ಚರ್ಚ್ ರೋಡು, ಉಡುಪಿ

ನಗರದ ಕೇಂದ್ರ ಸ್ಥಾನದಲ್ಲಿರುವ
ಅತ್ಯಾಧುನಿಕ ಮಾದರಿಯ
ಮಾಂಸಾಹಾರಿ ಹೋಟೇಲ್

ತಜ್ಞ ಅಡಿಗೆಯವರಿಂದ ತಯಾರಿಸಲ್ಪಡುವ
ಮರಿ ಕೋಳಿಯ ಬಿರಿಯಾನಿ, ಮತ್ತು
ಮೊಗಲ್ ಅಡಿಗೆ ಇವು ನಮ್ಮ
ವೈಶಿಷ್ಟ್ಯಗಳಲ್ಲಿ ಕೆಲವು.

ದಯಮಾಡಿ ಒಮ್ಮೆ ಸಂದರ್ಶಿಸಿರಿ!
ಮತ್ತು ಸಂತೃಪ್ತರಾಗಿರಿ!!

We wish all our Patrons & well-wishers

A Happy Deepavali.



K. VASUDEVA KINI

Proprietor:

Sharada Industries

RICE, OIL, FLOUR & SAW MILLS

KATAPADI, S. KANARA.

Phone: 132

1964 ಸುವರ್ಣ ಮಹೋತ್ಸವದ ಸುಸಂದರ್ಭ 1964

ನಮ್ಮ ಗಿರಾಕಿಗಳಿಗೂ ಹಿತೈಷಿಗಳಿಗೂ ದೀಪಾವಳಿಯ ಶುಭಾಶಯಗಳು!

ದಿ. ಕೆನರಾ ನರ್ಸರಿ ರಿಸರ್ಚ್ ಗಾರ್ಡನ್ಸ್

ಸ್ಥಾಪನೆ 1914

(ದಿವಂಗತ ಕಾಪು ಮುದ್ದಣ್ಣ ಶೆಟ್ಟರಿಂದ ಸ್ಥಾಪನೆಯಾದದ್ದು)

ಪೋಸ್ಟ್:— ಉಳಿಯಾರಗೋಳಿ, ಕಾಪು. ದ. ಕನ್ನಡ

೫೦ ವರ್ಷಗಳ ಅನುಭವದಿಂದ ಸಿದ್ಧಪಡಿಸಿದ ವಿವಿಧ ಜಾತಿಯ ಕಸಿ ಗಿಡಗಳಿಗೆ ದಕ್ಷಿಣ ಭಾರತದಲ್ಲೆಲ್ಲಾ ಹೆಸರುವಾಸಿಯಾದುದು

- ಮಾವು * ಚಿಕ್ಕು (ಸಪೋಟ) * ಪೇರಳೆ * ಅಂಜೂರ * ಪನ್ನೇರಳೆ * ಜಂಬುನೇರಳೆ * ಸೀತಾಫಲ * ಮಾದಳ * ಸಕ್ಕರೆಕಂಚು * ಅನಾನಸ್ * ಲಿಂಬೆ * ನೇರಳೆ * ದಾಳಿಂಬ ಇತ್ಯಾದಿ ಗಿಡಗಳಿಗೂ
- ಒಳ್ಳೆಯ ಜಾತಿಯ ಹೂವಿನ ಗಿಡಗಳಿಗೂ ವಿಚಾರಿಸಿರಿ
- ವಿಶೇಷವಾಗಿ ಚಿಕ್ಕು, ಮಾವು ಹಣ್ಣುಗಳನ್ನು ಮತ್ತು ತೆಂಗಿನ ಸಸಿಗಳನ್ನು ಸಪ್ಲೈ ಮಾಡಲಾಗುವುದು

❖ ಸಪೋಟ (ಚಿಕ್ಕು) ನಮ್ಮ ವಿಶೇಷತೆ ❖

ಅನೇಕ ಸರಕಾರಿ ಪ್ರದರ್ಶನಗಳಲ್ಲಿ ಪ್ರಶಸ್ತಿಗಳನ್ನೂ ಸುವರ್ಣ ಪದಕಗಳನ್ನೂ ಪಡೆದಿದೆ ವ್ಯಾಪಾರಿಗಳು ಮತ್ತು ಕಮಿಷನ್ ಏಜಂಟರು ವ್ಯವಹರಿಸಿ ಹೆಚ್ಚಿನ ಮಾಹಿತಿಗೆ ಬರೆಯಿರಿ—

The Canara Nursery Research Gardens

Post: Uliargoli, Kaup, S K

ದೀಪಾವಳಿಯ ಸಲುವಾಗಿ

ಸರ್ವರಿಗೂ ನಮ್ಮ ಹಾರ್ದಿಕ ಶುಭಾಶಯಗಳು.

ಗಮನಾರ್ಹ ಬದಲಾವಣೆ ! ಠೇವಣಾತಿದಾರರಿಗೆ ಸುಸಂದರ್ಭ !!

ನಿರಖು ಠೇವಣಿಗಳ ಮೇಲೆ

ಪರಿಷ್ಕರಿಸಿದ ಆಕರ್ಷಣೀಯ ಬಡ್ಡಿ ದರ !!!

91 ದಿನಗಳಿಗೆ ಮೇಲ್ಪಟ್ಟ 6 ತಿಂಗಳ ಒಳಗಿನ ಅವಧಿಯ ಠೇವಣಾತಿಗಳಿಗೆ— 4¼%

6 ತಿಂಗಳಿಂದ ಮೇಲ್ಪಟ್ಟ		1 ವರ್ಷ ಒಳಗಿನ ಅವಧಿಯ		,,		5¼%
1 ವರ್ಷದಿಂದ	,,	2 ವರ್ಷಗಳ ಒಳಗಿನ	,,	,,		5½%
2	,,	, 3	,	,,	,	5¾%
3	,,	,, 5	,,	,,	,,	6%
5	,,	,, 7	,,	,,	,,	6¼%
7	,,	,, 9	,,	,,	,,	6½%
9 ವರ್ಷಗಳಿಗೆ ಮೇಲ್ಪಟ್ಟು			....		...	6¾%

5 ವರ್ಷ ವ ಅವುಗಳಿಗೆ ಮೇಲ್ಪಟ್ಟ ಅವಧಿಯ ಧಾರ್ಮಿಕ ಸಂಸ್ಥೆಗಳ ಠೇವಣಾತಿಗಳಿಗೆ 6¾%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ನೀಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಯಾವುದೇ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು:-

"ವಿಜಯ ಬ್ಯಾಂಕ್ ಬಿಲ್ಡಿಂಗ್", ಲೈಟ್‌ಹೌಸ್ ಹಿಲ್ ರೋಡ್,

ಮಂಗಳೂರು-3.

ಸರ್ವರಿಗೂ ದೀಪಾವಳಿಯ ಶುಭಾಶಯಗಳು

Phone: 19

ನೆಲ್ಲಿ ಪ್ರಕಾಶ್

ಮನೋಹರ ಕೆಫೆ

ಅತ್ಯಾಧುನಿಕ ಮಾದರಿಯ

ಬೋರ್ಡಿಂಗ್ ಮತ್ತು ಲೋಜಿಂಗ್

ಶಿವಮೊಗ್ಗ

ನೂತನವಾಗಿ ನಿರ್ಮಿಸಿದ ಏಯರ್ ಕಂಡೀಶನ್ಡ್ ರೂಮುಗಳು ಬಾತ್‌ರೂಮ್ ಲಗ್ತೀಕರಿಸಿದೆ.

ನಯನ ಮನೋಹರವೂ ಆಹ್ಲಾದಕರವೂ ಆದ

ರೂಫ್ ಗಾರ್ಡನ್ಸ್ ಇತ್ಯಾದಿ

ಪಿ. ಕೆ. ಜನಾರ್ದನ ನೆಲ್ಲಿ

ಪ್ರೊಪ್ರೈಟರ್.

NELLI PRAKASH

MANOHARA CAFE

BOARDING & LODGING

SHIMOGA.

Prop: **P. K. Janardana Nelli**

AVAYUGA 29—10—1964
Registered with the Registrar
f News Papers for India
nder No. R. N. 3546/'57

REGD. No. B. G. 176
LICENCE No. 31
Licensed to Post without Prepayment

ನಿಮ್ಮ ಮಗು, ...

ಇಂದು ಪುಟ್ಟ ಹೆಜ್ಜೆ ಇಡುತ್ತಿದ್ದಾನೆ.....

ನಾಳೆ ಪಠ್ಯಪುಸ್ತಕ ಒಂದು ಬೇಕೆನ್ನುತ್ತಾನೆ!!



....ಆಗ ಅವನ ಭವಿಷ್ಯವನ್ನು ರೂಪಿಸುವುದಕ್ಕೆ
ಶಾಲೆಯಲ್ಲಿ ಸದ್ವಿದ್ಯೆ ದೊರೆಯಬೇಕು.
ಇದನ್ನು ಈಡೇರಿಸಲು ತಮಗೆ ಬೇಕಾದ ಆಸರೆ—
ಒಂದು ಕ್ರಮದಲ್ಲಿ ಕೂಡಿಟ್ಟ ಹಣ.
ಇದಕ್ಕಾಗಿ ಇಂದಿನಿಂದಲೇ ನಿಮ್ಮ ಉಳಿತೆಹಣವನ್ನು
ಕೂಡಿಡಲು ಸಿಂಡಿಕೇಟ್ ಬ್ಯಾಂಕಿನಲ್ಲಿ ಒಂದು
ಸೇವಿಂಗ್ಸ್ ಖಾತೆಯನ್ನು ತೆರೆಯಿರಿ. ಹೀಗೆ
ಕೂಡಿಟ್ಟ ಹಣ ಅದರ ಬಡ್ಡಿ ಸೇರಿ ನಿಮ್ಮ ಮಗುವಿನ
ಶಾಲೆ, ಕಾಲೇಜುಗಳ ವಿದ್ಯಾಭ್ಯಾಸವನ್ನು
ಸುಗಮವಾಗಿ ನೆರವೇರಿಸಬಲ್ಲುದು.

—ಆದರೆ, ಇದನ್ನು ಪ್ರಾರಂಭಿಸಲು ಒಳ್ಳೆಯ ಘಳಿಗೆ ಇದೇ....

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಸ್ಟರ್ಡ್ ಆಫೀಸು: ಮಣಿಪಾಲ

Edited, Printed & Published by K. H.Shetty. at the Navayuga Press, Udipi, S. India

ಸಂಪುಟ ೪೪]　ನವೆಂಬರ, ೫, ೬೪　[ಸಂಚಿಕೆ ೧೦

leading nationalist weekly

೨೦
ಪೈಸೆ

ಗೇಹ ರಾಜ್ಯದಲ್ಲಿ

ಇಷ್ಟೇ ಅಲ್ಲ, ಇನ್ನೇನೇನೋ ಆಗುತ್ತೆ

"ಇದು ಎಲ್ಲಿಯಾದ್ರೂ ಉಂಟೇಂತ..?'

'ಯಾವುದೇ ಅದು....?"

"ನೋಡಿ, ಇಲ್ಲಿ ಬರೆದಿರೋ ವರದಿ....'

'ನೋಡೋದಿರ್ಲಿ, ನೋಡಿದವಳು ನೀನೇ ಏನೂಂತ ಹೇಳ್ಬಿಟ್ರಿ...?"

"ಪಾಪ, ನೋಡ್ಬಿಟ್ರೆ ಕಣ್ಣು ಕುರುಡಾಗುತ್ತೆ ಅಲ್ವೆ?'

"ಹಾಗಲ್ವೆ, ನಾನು ಪುನಃನೋಡಿತಿಳಿದುಕೊಳ್ಳೋ ಬದ್ಲು,ನೀನೇಹೇಳಿಬಿಟ್ರೆ ನಿರ್ಧಾರಕ್ಕೆ ಬರೋದು ಸರಳವಾಗುತ್ತೇಂದೆ...."

"ಪಾಪ, ಭಾರಿ ದೊಡ್ಡ ಬ್ಯಾಂಕರ್ರಂತೆ ಮಾತಾಡ್ತಾ ಇದ್ದೀರಲ್ಲಾ?'

"ಅಲ್ಲ, ಇದ್ದಕ್ಕಿದ್ದ ಹಾಗೆ ಎಲ್ರನ್ನೂ ಬಿಟ್ಟು ಬ್ಯಾಂಕರ ಸುದ್ದಿಯೇಕೆ ಬಂತೂಂತ...'

"ಅದೋ, ಮತ್ತೇನಿಲ್ಲ....ಮೊನ್ನೆ ನಾನೂ ಸುಶೀಲಳ್ನೂ ಹೋಗಿದ್ದೆವಲ್ಲ,

"........ಹೌದು ಅವಳಿಗೆ ಕೆಲ್ಸ ಬೇಕೂಂತ...."

"....ಹ್ಞೂಂ...ಆವತ್ತು ನಾವು ಮೆನೇಜರ್ರ ಮುಂದೆ ಕೂತಿದ್ದೆವು. ಆಗ ಒಬ್ರು ಏನೇನೋ ಹಿಡ್ಕೊಂಡು ಬಂದ್ರು, ಪಾರ್ಟಿ ಹತ್ತು ಕೇಳ್ತಾನೆ, ಏಳು ರಿಕೆಮೆಂಡ್ ಆಗಿದೆ. ಆದ್ರೂ ಆತ ಹತ್ತೇಬೇಕು ಅಂತಾನೆ. ಏನು ಮಾಡೋದು ಅಂತ ಕೇಳಿದ್ರು .."

"ಸರಿ ಸರಿ ಬಿಡು. ನೀವೇ ನೋಡಿ ಏನ್ಮಾಡೋದಂತ ಹೇಳಿ, ನಾನು ದಸ್ಕತ್ತು ಹಾಕುತ್ತೇ" ಅಂದ ಅಲ್ಲ ಆ ಮೆನೇಜರ?

"ಸರೀನ್ನಿ. ಹಾಗೇ 'ಇಂದು ನೀವು...."

'ಅಲ್ವೆ, ತಿಂಗ್ಳಕೊನೆಗಾಗುವಾಗ ಕಾಫಿಗೆ ಕಾಸಿಲ್ಲದ ನನ್ನನ್ನ ಬ್ಯಾಂಕರ ಅಂದೆಯಲ್ಲ...ಕೆಟ್ಟು ಹೋಯ್ತು ಕಣೇ ಕೆಟ್ಟು ಹೋಯ್ತು...'

ಏನದು, ಒಳ್ಳೆದಿರೋದು ಮತ್ತೆ ಈಗ ಕೆಟ್ಟಿರೋದು?...."

"ಇರೋದೇನು? ನಾನು ಹದಿನಾರು ವರ್ಷದವನಿದ್ದಾಗ ಒಬ್ಬ ನನ್ನಕೈ ನೋಡಿ ಧನ ರೇಖೆ ಸರಿಯಾಗಿದೆ. ಶುಕ್ರದೆಸೆ ಬರುತ್ಲೇ ಧನವಂತರಾಗ್ತೀರಿ ಅಂದಿದ್ದ. ಈ ಸಂತೋಷದ ಸುದ್ದಿ ತಿಳಿಸಿದ ಅವನಿಗೆ ಕಾಫಿ ಪುಡಿ ತರೋಕೆ ಅಮ್ಮ ಕೊಟ್ಟಿದ್ದ ನಾಲ್ಕಾಣೆಯನ್ನೂ ಕೊಟ್ಟು ಮತ್ತೆ ಬೀಸಾಡಿ ಹೋಯ್ತೂಂತ ಸುಳ್ಳು ಹೇಳಿದ್ದೆ...."

"ಪೆಟ್ಟೂ ತಿಂದಿದ್ದೆ ಅನ್ನೋಕೆ ನಾಚಿಗೆಯಾಗುತ್ತೆ ಅಲ್ವೆ?"

"ನಿಮ್ಮಂದ ನನಗೆಲ್ಲಿಯದಪ್ಪ ನಾಚಿಕೆ..."

"ಅದನ್ನೆಲ್ಲಾ ಬಿಟ್ಟೀ...."

"ಚೀ ಚೀ ಹಾಗೆಲ್ಲಾ ಮಾತಾಡ ಬೇಡ್ವೆ...ಯಾರಾದ್ರೂ ಕೇಳಿದ್ರೆ...."

"ಕೇಳ್ತಾರಂತೆ. ಯಾರಪ್ಪ ಇಲ್ಲಿರೋದು? ನರಭೂತಾನೂ ಇಲ್ಲ...."

"ನಿಂಗೊತ್ತಿಲ್ಲ ಕಣೆ..ಈ ಕಾಲದಲ್ಲಿ ಮರಗಿಡಗಳಿಗೆ ಮಾತ್ರವಲ್ಲ, ಈಮೇಜು ಕುರ್ಚಿಗಳಿಗೂ ಕಿವಿಗಳಿವೆ.

'ಇರಬಹುದೂನ್ನಿ. ಸರ್ವಂ ಖಲ್ವಿದಂ ಬ್ರಹ್ಮ ಅಂತ ವಾದಿಸುತ್ತ ಮೇಜಿನ ಅಂಚನ್ನ ಕಿವಿಯನ್ನುತ್ತಾರೆ. ಅದಕ್ಕೂ ತನ್ನದೇ ಆದ ಭಾಷೆಯಿದೇ ಅಂತಾರೆ—ಅದೂ ಮಾತಾಡುತ್ತೆ ಅಂತ ವಾದಿಸ್ತಾರೆ.?

"ಪರ್ವಾಗಿಲ್ಲ ಕಣೇ ನೀನು. ನಿನ್ನ ಏನೋ ಅಂತ ತಿಳಿದಿದ್ದೆ. ಈಗ ನೋಡಿದಾಗ...'

"ವಿದ್ಯಾರೇಖೆ ನೆಟ್ಟಗಿದೆ ಅನ್ನೋದು ತಾನೆ?"

"ಇಲ್ಲದೆ ಉಂಟೇ ಮತ್ತೆ...ನೋಡೋಣ ನಿನ್ನ ಆ ಬೃಹಸ್ಪತಿ ರೇಖೆ...."

"ಇಲ್ಲ...ಇಲ್ಲಾ... ಬೇಡಾಂದ್ರೆ...."

"ಯಾಕೆ ಬೇಡಾ? ತಾ, ಇಲ್ಲಿ ನೋಡೋಣ...."

"ಬೇರೆಯವ್ರು ನೋಡಿದ್ರೆ ಅದು. ಹಾರಿ. ಹೋಗುತ್ತಂತೆ...."

"ಹ್ಞಾಂ..ಏನಂದಿ? ಅದ್ಕೇ ಇರಬೇಕು ನಿನ್ನ ಬ್ಯಾಂಕರ ದಿವಾಳಿ ತೆಗೆದಿರೋದು., ಬೇಡ ಕಣೇ ಬೇಡ....ನೀನು ಯಾರಿಗೂ ಕೈತೋರಿಸ್ಬೇಡ ಮತ್ತೆ...ಆದ್ರೂ..."

"ನಾನು ನೋಡಿದ್ರೆಹಾರಿಹೋಗಲಾರದೂಂತ ತಾನೆ? ನೀವನ್ನೋದು..."

"ಅಲ್ಲ, ನಾನು ಬೇರೆ ನೀನು ಬೇರೆಯಲ್ಲ. ಹಾಗಿರುವಾಗ..."

"ನೀವು ಕೈಹಿಡಿದಾಗ್ಲೇ ನನ್ನ ಕೆಯಿಂದ ಹಾರಿ ನಿಮ್ಮನ್ನ ಸೇರಿಕೊಂಡಿದೆ ನೋಡಿ."

"ಅಬ್ಬಬ್ಬಾ ಹುಡುಗಿಯೇ ..ಏನು ಜಾಣ್ಮೆ....ಪಾಪದ ಗಂಡ ಸಿಕ್ಕಿದ್ರೆ..."

"ಶೂ.... ಬಾಯಿಮುಚ್ಚಿ... ಯಾರಾದ್ರೂ ಕೇಳಿದ್ರೆ ಮತ್ತೆ...."

"ಕೇಳೋಕೆ ಯಾರಿದ್ದಾರೆ ಇಲ್ಲಿ?"

"ನನ್ನ ಖೊಟ್ಟಿ ನಾಣ್ಯವನ್ನ ನನಗೇನೇ ದಾಟಿಸಿಬಿಟ್ರಿ. ಪರ್ವಾಗಿಲ್ಲಾ ನೀವು...."

"ಅಷ್ಟಿದ್ದದ್ದರಿಂದ್ಲೇ ನಿನ್ನ ಕೈಹಿಡಿದು ಇದು ವರೆಗೆ ಉಳಿದು ಬಂದಿದ್ದೇನೆ...."

"ಸಾಕು, ನೀವೊಬ್ರು.... ಯಾರಂತೆ ನಿಮ್ಮನ್ನ ಕೈಹಿಡಿಯಾಕೆ ಹೇಳಿದವ್ರು?"

"ಯಾರಾದ್ರೆ ಏನಂತೆ? ನಾನೂ ಬಂದೆನ್ನು. ನೀನೂ ಬಂದಿದ್ದಿ. ಆದದ್ದರಿಂದ್ಲೇ..."

'ನಾನೇನೂ ಬರ್ಲಿಲ್ಲ...,

'ಮತ್ತೆ ನಿನ್ಹೇಗೆ ಇಲ್ಲಿ ಬಂದೆ?"

'ನೀವೇ...'

'ನೀನು ಬಂದದ್ರಿಂದ ತಾನೇ....'

'ಅದೆಲ್ಲಾ ಇರ್ಲಿ .. ನೋಡಿ. ಪೂರ್ವ ಪಾಕಿಸ್ತಾನದಲ್ಲಿ ಚುನಾವಣಾ ಪ್ರಚಾರ ಬಹಳ ತುರುಸಿಂದ ನಾಗ್ತಿದೆಯಂತೆ.'

'ಇರಬಹುದು, ನಮ್ಗೇನಂತೆ?"

'ಅಯ್ಯಯ್ಯ, ಪದ್ಯ ಹೇಳೋರೂ ಅರ್ಥ ಹೇಳೋದೂ ನೀವೇ ಆದ್ರೆ ಹೇಗೆ?"

'ಯಾಕೆ? ಏನಾಯ್ತೀಗ?"

'ಅಲ್ಲಾ, ಇಂದು ಪ್ರಪಂಚ ಚಿಕ್ಕದಾಗಿದೆ. ವಿಶ್ವದ ಯಾವ ದೇಶದಲ್ಲಿ ಏನು ನಡೆದ್ರೂ ಅದ್ರ ಪರಿಣಾಮ ನಮ್ಮ ಮೇಲೆ ಬೀಳುತ್ತೆ ಅಂತ...ಹಾಗಿರುವಾಗ"

"ಹ್ಞೂಂ .... ಮುಂದುವರಿಸು ನಿನ್ನ ವಾರ...."

"ನಮ್ಮ ನೆರೆಯ ಪಾಕಿಸ್ತಾನದಲ್ಲಿ...."

"ಹಾಗಲ್ವೆ, ಚುನಾವಣೆಯನ್ನುತ್ಲೂ ಹುರಿಯಾಳುಗಳು ಪ್ರಚಾರ ಮಾಡೋದ್ರಲ್ಲಿ ವಿಶೇಷವೇನಿದೇಂತ ಹಾಗಂದೆ..."

"ಇದು ಬರೇ ಪ್ರಚಾರ ಮಾತ್ರವಲ್ಲ ವಂದ್ರೆ..."

"ಮತ್ತೆ....?"

"ಅಪಪ್ರಚಾರ ಕೂಡ."

"ರಾಜಕೀಯ ಅಂದ್ರೆ ಅದೂ ಇದ್ದದ್ದೇ. ಚುನಾವಣೆಯ ವೇಳೆ ತುಸು ಹೆಚ್ಚಾಗುತ್ತೆ...ಅಷ್ಟೆ."

"ಅದೇನೇ ಇರ್ಲಿ. ಇಂತಹ ಹೇಸಿಗೆಯನ್ನ ನಾನೆಲ್ಲೂ ಕಂಡಿಲ್ಲ; ಕೇಳಿಲ್ಲ...."

"ಅದಿಲ್ದೇ ಹೋದರೆ ರಾಜಕೀಯ ಇದ್ದರೆ ತಾನೆ?'

"ಛೆ....ಹಾಗಾದ್ರೆ ಜನ್ರೆಲ್ಲಾ ಯಾಕೆ ಅದ್ರತ್ತ ಹೊಕ್ಕೊಡ್ತಾರೆ?'

"ಯಾಕೇಂತಂದ್ರೆ? ಅದೂ ರಕ್ತಗತವಾಗಿ ಬಿಟ್ಟಿದೇನ್ನು. ಸಂಸಾರ ನಿಸ್ಸಾರಾಂತ ಸಾವಿರಾರು ಪುರುಷರು ಹೇಳಿ ಮಹಾತ್ಮರಾಗಿ ಹೋದರೂ ಸಂಸಾರದ ಹೂಟ ನಿಂತಿದೆಯೆ? ಹಾಗೆಯೇ ಈ ರಾಜಕೀಯ ಹೊಲಸು ಹೊಲಸು ಅನ್ನೋರು ಒಂದು ದಿನ ಅಪರೋಕ್ಷ ಜ್ಞಾನಿಗಳಾಗ್ತಾರೆ."

'ಆಗ಼್್ಲೂ ರಾಜಕೀಯ ಉಳಿಯುತ್ತೇನ್ನಿ'

"ಮತ್ತೆ? ಜನ ಇರೋವರ್ಗೆ ರಾಜ ಇರ್ತಾನೆ. ರಾಜಕೀಯವಿರುತ್ತೆ. ಆಳಿದ ಊರಿಗೆ ಉಳಿದವನೇ ಗೌಡಾಂತ ಗಾದೇನೂ ಇದೆ ನೋಡು."

'ಹ್ಞೂನ್ನಿ. ಅಂತೂ...'

"ಅದೆಲ್ಲಾ ಇರ್ಲಿ. ಸದ್ಯ, ಏನದು ನೀನು ಎತ್ತಿಕೊಂಡಿರೋ ವಿಷಯ?'

'ಮತ್ತೇನಿಲ್ಲ. ಢಾಕ್ಕಾದಲ್ಲಿ ಅಧ್ಯಕ್ಷ ಆಯೂಬಖಾನರ ಮೇಲೆ ಚಪ್ಪಲಿಗಳ ಮಳೆ ಸುರಿಯಿತ್ತಂತೆ....'

'ಏನು, ಚಪ್ಪಲಿಗಳ ಮಳೆಯೆ? ಏನೋಪ್ಪ, ಕೆಂಪು ಮಳೆ, ಹಳದಿ ಮಳೆ ಬೀಳುತ್ತೇಂತ ಓದಿದ್ದ ಈಗ..."

"ಅಯ್ಯೋ, ನೀವೊಬ್ರು... ನಾನು ಅಷ್ಟು ಮುಖ್ಯ ಎಂದು ತಿಳಿದು ಹೇಳಿದ್ರೆ ನೀವು ಕುಶಾಲು ಮಾಡ್ಲಿಕ್ಕೆ ಹೋಗಿದ್ದೀರಿ...."

'ಛೆ ಛೆ ... ಕುಶಾಲಲ್ಲವೇ ಅದು. ಆ ಸಾಲು. ಇರ್ಲಿ- ನಮಗೇನಂತೆ ಅದ್ರಿಂದ...'

"ನಮ್ಗೇನು, ಹೇಗೂ ಆಗುತ್ತಲ್ಲಾಂತ...."

ನೀನೇನು ಹೇಳ್ತಿಯೂ ಚುನಾವಣೆಯಲ್ಲಿಗೆಲ್ಲೊಂದೊಂದನ್ನೇ ಗುರಿಯಾಗಿಟ್ಟುಕೊಂಡ್ರೆ ಇಷ್ಟೇ ಅಲ್ಲ, ಇನ್ನೂ ಏನೇನೋ ಆಗುತ್ತೆ...."

'ಅಲ್ಲಾದ್ರೆ ನೋಡಿ, ಫಾತಿಮಾರು ಹೆಂಗಸೂಂತ ಅಷ್ಟು ಸಸಾರ ಮಾಡೋದೆ? ಹೆಂಗಸಾದ್ರೆ ಏನಂತೆ? ಸುಲ್ತಾನ್ ರಜಿಯಾ ರಾಣಿ ಆಗ್ಲಿಲ್ವೆ? ಇಂಗ್ಲೆಂಡಿನ ರಾಣಿಯರ ಕತೆ ಯಾರು ಅರಿತಿಲ್ಲ....'

'ಅದೆಲ್ಲಾ ಅಲ್ಲಿ ಇಟ್ಟಿರು. ಅಧಿಕಾರದ ಮೋಹದ ಮುಂದೆ ಅನ್ಯಾಯ, ಅತ್ಯಾಚಾರ, ಅನೀತಿ ಎಲ್ಲಾ ಹುಲ್ಲು ಕಡ್ಡಿ. ಅಲ್ದೆ ನೋಡು, ಹಿಂದೊಮ್ಮೆ ಅದೇ ಢಾಕ್ಕಾದಲ್ಲಿ ವಿಧಾನ ಸಭಾಧ್ಯಕ್ಷರ ಮೇಲೆ ಸಭಾಸದರು ಚಪ್ಪಲಿ ಎಸೆದು ಕೊಂದು ಬಿಟ್ಟಿದ್ದಾರೆ...."

'ಅಂದ್ರೆ.... ಯಥಾ ರಾಜಾ ತಥಾ ಪ್ರಜಾ...."

'ನೀನು ಏನು ಬೇಕಾದ್ರೂ ಅಂದುಕೋ. ನಿನಗೆ ವಿಚಾರ ಸ್ವಾತಂತ್ರ್ಯವಿದೆ ತಾನೆ?"

'ಹೌದು ಹೌದ, ಸ್ವಾತಂತ್ರ್ಯ ಇದೆ, ಅದೂ ನಿಮ್ಮ ಕೈ ಹಿಡಿದ ಮೇಲೆ...."

(ಹದಿನೈದನೇ ಪುಟ ನೋಡಿರಿ)

6½%

ಬಡ್ಡಿ

ನಿಮ್ಮ ನಿರಖು ಠೇವಣಾತಿಗಳಿಗೆ
ವರ್ಷಕ್ಕೆ 6½% ತನಕ ಬಡ್ಡಿ ಕೊಡಲಾಗುವುದು.
ಹೆಚ್ಚಿನ ಮಾಹಿತಿಗೆ ದಯಮಾಡಿ ನಿಮಗೆ ಸಮೀಪದ
ನಮ್ಮ ಶಾಖಾ ಮೆನೇಜರರ ಸಂಪರ್ಕ ಬೆಳೆಸಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)

ಬ್ಯಾಂಕ್ ಅಷ್ಟೇ ಅಲ್ಲ—ವಿಶೇಷ ವೈಶಿಷ್ಟ್ಯತೆಯ
ಬ್ಯಾಂಕಿಂಗ್ ಸಂಸ್ಥೆಯೂ ಹೌದು

ರಿಜಿಸ್ಟರ್ಡ್ ಆಫೀಸು: ಮಂಗಳೂರು • ಆಡಳಿತ ಕಚೇರಿ: ಬೆಂಗಳೂರು

ವಿಶ್ವದಾದ್ಯಂತ ಪ್ರತಿನಿಧಿಗಳು
ಭಾರತದಲ್ಲಿ 235ಕ್ಕೂ ಹೆಚ್ಚಿನ ಶಾಖೆಗಳು

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿ ಜಂಬುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ದೀಪಾವಳಿಯ ಸವಿನೆನಪನ್ನು ಮರುಕೊಳಿಸುವ

ಬಲಿ-ವಾಮನ

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೧೦	೫—೧೧—೧೯೬೪	No. 10

ವಚನಸುಧೆ

ತನ್ಮೇ ಮನಃ
ಶಿವಸಂಕಲ್ಪ ಮಸ್ತು ||
(ಯಜುರ್ವೇದ, ೩೪-೧)

೦ ನನ್ನ ಆ ಮನಸ್ಸು ಪವಿತ್ರ ವಿಚಾರ ಮಾಡುತ್ತಿರಲಿ.

೦೦ ಮನಸ್ಸಿನಲ್ಲಿ ಯಾವಾಗಲೂ ಶುಭ ಮತ್ತು ಪವಿತ್ರ ವಿಚಾರಗಳು ಮೂಡುತ್ತಿರಲಿ, ದುರ್ವಿಚಾರಗಳು ಹುದುಗದಿರಲಿ. ಇದಕ್ಕಾಗಿ ಎಲ್ಲರೂ ಪ್ರಯತ್ನಿಸುತ್ತಿರಲಿ. ಸದಾ ಮನಸ್ಸನ್ನುಗ್ಗೆಳೆಸುವ ದುರ್ವಿಚಾರಗಳಿಗೆ ಅವಕಾಶ ನೀಡದೆ ಅವುಗಳಿಂದ ದೂರವಿರುವ ಧೈರ್ಯ ತುಂಬುತ್ತಿರಲಿ.

ಮಾತುಕತೆಯ ಯಶಸ್ಸು

ಶಕ್ತಿಯೊಂದೇ ಸಮಸ್ಯಾಪರಿಹಾರಕ್ಕೆ ಸೂತ್ರವೆಂದು ನಂಬಿರುವ ವಿಶ್ರಾಂತ ಜಗತ್ತಿಗೆ ಶಾಂತ ವಾತಾವರಣದ ವಿಚಾರ ವಿನಿಮಯವು ಎಂತಹ ಕಾರ್ಯವನ್ನು ಮಾಡಬಲ್ಲುದು ಎಂದು ಭಾರತ ಮತ್ತು ಸಿಂಹಳಗಳು ತೋರಿಸಿಕೊಟ್ಟಿವೆ. ಸಿಲೋನಿನಲ್ಲಿ ಸುಮಾರು ಹತ್ತು ಲಕ್ಷ ಭಾರತೀಯ ಮೂಲದ ಜನರಿದ್ದಾರೆಂದು ತಿಳಿದು ಬಂದಿದೆ. ಇವರಿಗೆ ಯಾವ ದೇಶದ ನಾಗರಿಕ ಹಕ್ಕು ಕೊಡಬೇಕು ಎಂಬ ಸಮಸ್ಯೆಯು ಕಳೆದ ಕಾಲು ಶತಮಾನದಿಂದಲೂ ಉಭಯ ರಾಷ್ಟ್ರಗಳ ನಡುವೆಯಿತ್ತು. ದಿ| ಭಂಡಾರ ನಾಯಕೆಯವರು ಪ್ರಧಾನ ಮಂತ್ರಿಯಾಗಿದ್ದಾಗ ದಿ| ಪ್ರಧಾನಿ ನೆಹರು ಮತ್ತವರೊಡನೆ ಮಾತುಕತೆಗಳು ನಡೆಯಲು ಚಾಲನೆ ದೊರೆಯಿತು. ಎರಡು ರಾಷ್ಟ್ರಗಳಲ್ಲಿ ವಿವಾದ ತೀರ್ಮಾನದ ಬಗ್ಗೆ ದಿನೇ ದಿನೇ ಕಾಳಜಿ ಹೆಚ್ಚುತ್ತ ಬಂದದ್ದು ಮಾತ್ರವಲ್ಲ, ತೀರ್ಮಾನಕ್ಕೆ ಬರಲೇ ಬೇಕೆಂಬ ನಿರ್ದಿಷ್ಟ ಉದ್ದೇಶವೂ ಕೂಡಿತು. ಈ ಕಾರಣದಿಂದಲೇ ಬಹಳ ಹಳೆಯದಾದ ಈ ಬಹುದೊಡ್ಡ ಸಮಸ್ಯೆಯು ಉಭಯ ರಾಷ್ಟ್ರಗಳಿಗೂ ಗೌರವ ಪ್ರಾಯವಾಗುವಂತೆ ಸಿರಿಮಾವೊ ಭಂಡಾರ ನಾಯಕೆ ಮತ್ತು ಲಾಲ ಬಹದೂರರ ಮಾತುಕತೆಗಳಲ್ಲಿ ನಿರ್ಣಯವಾಯಿತು.

ಸದ್ಯ ಆದ ಒಡಂಬಡಿಕೆಯಂತೆ ಮೂರು ಲಕ್ಷ ಭಾರತೀಯ ಮೂಲದವರಿಗೆ ನಾಗರಿಕಾಧಿಕಾರ ನೀಡಲು ಸಿಂಹಳವು ಮುಂದೆ ಬರಿದೆ. ೫ ಲಕ್ಷ ಜನರನ್ನು ಮುಂದಿನ ೧೫ ವರ್ಷಗಳಲ್ಲಿ ಕರೆದು ಕೊಳ್ಳಲು ಭಾರತವು ಒಪ್ಪಿಕೊಂಡಿದೆ. ಇನ್ನುಳಿದವರ ಬಗ್ಗೆ ನಿರ್ಧಾರಕ್ಕೆ ಬರಲು ಮುಂದಿನ ವರ್ಷ ಮತ್ತೆ ಮಾತುಕತೆನಡೆಸಲು ಇಬ್ಬರು ಪ್ರಧಾನಿಗಳೂ ಒಪ್ಪಿದ್ದಾರೆ. ಇದರಂತೆ ಭಾರತವು ಸುಮಾರು ೫ ಲಕ್ಷ ಜನರಿಗೆ ತಕ್ಕ ಪುನರ್ವಸತಿಯನ್ನು ಮಾಡಿ ಕೊಡಬೇಕಾಗುತ್ತದೆ. ಹೆಚ್ಚಾಗಿ ಸಿಲೋನಿನಲ್ಲಿರುವ ಭಾರತೀಯರು ತಮಿಳರು. ಇವರ ಪುನರ್ನಿವೇಶನದ ಭಾರವನ್ನು ಮದ್ರಾಸ ಸರಕಾರಕ್ಕೆ ಮಾತ್ರ ಒಪ್ಪಿಸದೆ ಪಾಕಿಸ್ತಾನದಿಂದ ಬಂದಿರುವ ನಿರಾಶ್ರಿತರ ಪುನರ್ವಸತಿಯ ಕಾರ್ಯವನ್ನು ರಾಜ್ಯಗಳಿಗೂ ಹಂಚಿಕೊಟ್ಟಂತೆಯೇ ಎಲ್ಲರಿಗೂ ಇವರ ಒಂದೊಂದಂಶವನ್ನು ವಹಿಸಿಕೊಡಬೇಕೆಂದು ಮದ್ರಾಸದ ಮುಖ್ಯಮಂತ್ರಿ ಭಕ್ತವತ್ಸಲಮ್ ಹೇಳಿದ್ದಾರೆ. ಈ ಸೂಚನೆಯನ್ನು ಕೇಂದ್ರ ಪುನರ್ನಿವೇಶನ ಮಂತ್ರಿ ತ್ಯಾಗಿಯವರು ಸ್ವೀಕರಿಸುವುದು ಸ್ವಾಭಾವಿಕ. ಸಿಲೋನಿನಿಂದ ಮರಳಿ ಬರಲಿರುವ ಭಾರತೀಯರು ತವರ್ಮನೆಯೊಡನೆ ತಮ್ಮ ಸಂಪರ್ಕವನ್ನೂ ತರುವುದಕ್ಕೆ ಶ್ರೀಮತಿ ಭಂಡಾರನಾಯಕೆಯವರು ಒಪ್ಪಿರುವುದು ಅತೀವ ಗಮನಾರ್ಹ. ಇದಕ್ಕಿಂತ ಉದಾರವಾದ ರೀತಿಯಲ್ಲಿ ಈ ನಾಗರಿಕಾಧಿಕಾರದ ಪ್ರಶ್ನೆ ಬಗೆಹರಿಯಲಾರದು ಎಂದೆನಿಸುತ್ತದೆ. ಜಗತ್ತಿನ ಏಕಮೇವ ಮಹಿಳಾ ಪ್ರಧಾನಿಯಾದ ಶ್ರೀಮತಿಯವರೂ ಐದು ತಿಂಗಳೂ ತುಂಬದ ಪ್ರಧಾನಿ ಶಾಸ್ತ್ರಿಯವರೂ ಈ ಹಳೆಯ ಪ್ರಶ್ನೆಯ ಪರಿಹಾರ ಕಂಡು ಹಿಡಿದುದು ಅವರ ಮುತ್ಸದ್ದಿಕನಕ್ಕೊಂದು ಜ್ವಲಂತ ಉದಾಹರಣೆ.

ಇಲ್ಲಿ ಒಂದು ಪ್ರಶ್ನೆ ಮಾಡಬಹುದು. ಸಿಂಹಳವು ೫ ಲಕ್ಷ ಭಾರತೀಯರನ್ನು ಹಿಂದೆ ಕಳಿಸುವುದರಿಂದ ಭಾರತಕ್ಕೆ ಪುನರ್ವಸತಿಯ ಕಷ್ಟ ಮತ್ತೆ ಪ್ರಾಪ್ತವಾಯಿತು ಎಂದು. ತೋರಿಕೆಯ ಮಟ್ಟಿಗೆ ಇದು ಸಹಜವಾದರೂ, ನಮ್ಮ ನಾಗರಿಕರನ್ನು ನಾವೇ ನೋಡಿಕೊಳ್ಳುವುದು ಅತ್ಯಗತ್ಯ. ಉಳಿದ ಮೂರು ಲಕ್ಷ ಜನರಿಗೂ ಸಿಂಹಳ ನಾಗರಿಕಾಧಿಕಾರ ಕೊಡದೆ ಹೋದಲ್ಲಿ ಅವರನ್ನೂ ಭಾರತವು ಮರಳಿ ಕರೆಯಲೇ ಬೇಕಾಗುವುದು. ಹಾಗಿರುವಾಗ "ವಿಪತ್ತು" ಸಣ್ಣದರಲ್ಲಿಯೇ ಪರ್ಯವಸಾನವಾಯಿತೆಂದು ಸಂತೋಷ ಪಡಬೇಕು. ಹಳೆಯ ಪ್ರಶ್ನೆಯೊಂದು ಪರಿಹಾರ ಗೊಂಡುದಕ್ಕೆ ಮಿಗಿಲಾಗಿ ತೃಪ್ತಿ ಪಡೆಯಲೇ ಬೇಕು. ಉಳಿದ ಸಮಸ್ಯೆಗಳೂ ಮಾತುಕತೆಗಳಿಂದ ಇತ್ಯರ್ಥವಾಗ ಬಲ್ಲವೆಂಬ ನೀತಿಗೆ ಬಲ ಬಂದಿತು. ಭಾರತದೊಡನೆ ಇಲ್ಲಸಲ್ಲದ ಸಮಸ್ಯೆಗಳನ್ನು ಇಟ್ಟು ಕೊಂಡಿರುವ ಪಾಕಿಸ್ಥಾನ ಮತ್ತು ಕೆಂಪು ಚೀನಾಗಳು ತಮ್ಮ ಆಡಂಬರ ಆಟೋಪಗಳನ್ನು ಬಿಟ್ಟುಕೊಟ್ಟು ವಿವಾದವನ್ನು ಸ್ನೇಹಮಯ ವಾತಾವರಣದಲ್ಲಿ ಬಗೆಹರಿಸಲು ಇಚ್ಛಿಸುವವಾದರೆ, ಭಾರತವು ಸದಾ ಸಿದ್ಧವೆಂದೂ ಪರಿಹಾರ ಕಂಡುಹಿಡಿಯಲು ಅದು ಅತೀವ ಉತ್ಸುಕವಾಗಿರುವುದೆಂದೂ ಈ ಒಡಂಬಡಿಕೆ ತೋರಿಸಿಕೊಟ್ಟಿತು.

ಎಚ್. ಸಿ. ದಾಸಪ್ಪ

ಕೇಂದ್ರ ಸರಕಾರದಲ್ಲಿ ಉದ್ಯಮ ಮತ್ತು ಪೂರೈಕೆಯ ಸಚಿವರಾಗಿದ್ದ ಏಕಮೇವ ಕನ್ನಡಿಗ ಎಚ್. ಸಿ. ದಾಸಪ್ಪನವರು ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ ಆಕಸ್ಮಿಕವಾಗಿ ನಿಧನರಾದ ವಾರ್ತೆ ಎಲ್ಲರನ್ನೂ ದಂಗು ಬಡಿಸಿತು. ಕೇಂದ್ರ ಸಚಿವರಾಗಿ ಅವರು ನಿಯುಕ್ತರಾಗಿ ಒಂದು ವರ್ಷವಿನ್ನೂ ಸಂದಿಲ್ಲವಾದರೂ ತಮ್ಮ ಕಾರ್ಯತತ್ಪರತೆಯಿಂದ ಇವರು ಹಿಂದಿನಿಂದಲೂ ಅಖಿಲಭಾರತೀಯ ವ್ಯಕ್ತಿಯಾಗಿದ್ದರು. ಮಹಾತ್ಮಾ ಗಾಂಧೀಜಿಯವರ ಶಿಷ್ಯರಲ್ಲಿ ಒಬ್ಬರಾಗಿದ್ದ ದಾಸಪ್ಪನವರು ಅವರ ಆಶ್ರಮದಲ್ಲಿಯೂ ಕೆಲ ಕಾಲವಿದ್ದು ಕೃತಿಶೀಲರಾಗಿ ರಚನಾತ್ಮಕ ಕಾರ್ಯಗಳಲ್ಲಿ ತತ್ಪರರಾದರು. ಖಾದಿ, ಸ್ವದೇಶಿ, ಅಸ್ಪೃಶ್ಯತೆ ಹಿಂದೀ ಪ್ರಚಾರ— ಮೊದಲಾದ ರಚನಾತ್ಮಕ ಕಾರ್ಯಸಾಧನೆಯಲ್ಲಿ ದಾಸಪ್ಪನವರದು ಎತ್ತಿದ ಕೈ. ಸವರ್ಣ ಆಡಳಿತೆದಾರರು, ನಾಯಕರು ದಾಸಪ್ಪನವರು ಎಂಬುದಕ್ಕೆ ಅವರ ರಾಜಕೀಯ ಜೀವನವೇ ಉದಾಹರಣೆ. ಇವರ ಮೃತ್ಯುವಿನಿಂದ ನಿರಾಡಂಬರ ಕೃತಿಶೀಲ ಗಾಂಧೀವಾದಿಯೊಬ್ಬರು ಕಣ್ಮರೆಯಾದರು. ಅವರ ತೆರವಾದ ಸಚಿವ ಸ್ಥಾನವನ್ನು ಮತ್ತೊಬ್ಬರು ಪೂರ್ತಿ ಮಾಡಬಲ್ಲರು; ಆದರೆ, ನಿಷ್ಠಾವಂತ ಸಮಾಜ ಸೇವಕನ ಸ್ಥಾನವನ್ನು ಯಾರೂ ಪೂರ್ತಿ ಮಾಡಲಾರರು. ದಿವಂಗತರ ಕುಟುಂಬದ ದುಃಖದಲ್ಲಿ ನಾವೂ ಭಾಗಿಯಾಗುವುದಲ್ಲದೆ, ಅವರ ಆತ್ಮಕ್ಕೆ ಚಿರ ಶಾಂತಿ ಲಭಿಸಲಿ ಎಂದು ಆ ಶಾಂತಿಧಾಮನಲ್ಲಿ ಪ್ರಾರ್ಥಿಸುತ್ತೇನೆ.

ಸರ್ವರಿಗೂ

ದೀಪಾವಳಿಯ

ಶುಭಾಶಯಗಳು!

ನರಸಣ್ಣನ ಸರಸ



"ಭ್ರಷ್ಟಾಚಾರ ಭ್ರಷ್ಟಾಚಾರಾಂತ ಸಂದಾ ಬೊಬ್ಬೆ ಹಾಕಿ ಮುಂದಿನ ಇಲೆಕ್ಷನ್ನಿಗೆ ಕ್ಯಾಂಡಿಡೇಟ್ ಇಲ್ಲದಂತೆ ಪ್ರಚಾರ ಮಾಡುತ್ತಿದ್ದಾರಲ್ಲೋ...."

"ಹಾಗಲ್ಲ, ಇಲಿಗಳ ಬದಲು ಹೆಗ್ಗಣಗಳೇ ಇಲೆಕ್ಷನ್ನಿಗೆ ಬೇಕು ಅನ್ನುತ್ತಾರೆ, ಅವರು, ನಮ್ಮ ಕಾವ್ಯ ಶೈಲಿಯಲ್ಲಿ."

ಕಥಾ ಪ್ರಪಂಚ

ಹೀಗಿದೆ ಈ ಜೀವನ

ಮಲೆಯಾಳಿ ಮೂಲ: ತಕಷಿ ಶಿವಶಂಕರ ಪಿಳ್ಳೈ.
ಕನ್ನಡಾನುವಾದ: ಹಾರ್‍ಯಾಡಿ ಮಹಾಬಲೇಶ್ವರ ಐತಾಳ.

ಏನು ಮಾಡಲಿ?

ಕಾಯಿಲೆಯಿಂದ ನರಳುತ್ತ ಮಲಗಿರುವ ಮಡದಿಗೆ ಮದ್ದನ್ನು ತರದೆ ಗತ್ಯಂತರವಿದ್ದಿರಲಿಲ್ಲ. ಅಲ್ಲದೆ ಇನ್ನು ಒಂದೆರಡು ದಿನಗಳೊಳಗೆ ಹುಡುಗರ ಸ್ಕೂಲಿನ ಫೀಸನ್ನೂ ತುಂಬಿಸುವುದೂ ಅನಿವಾರ್ಯವಾಗಿತ್ತು. ಈ ಊರಿಗೆ ವರ್ಗವಾಗಿ ಬಂದು ಕೆಲವೇ ದಿನಗಳಾಗಿದ್ದುದರಿಂದ ಯಾರಾದರೂ ಪರಿಚಿತರೊಡನೆ ಕೈಗಡ ಕೇಳಲೂ ಸಾಧ್ಯವಿದ್ದಿರಲಿಲ್ಲ. ಏಕೆಂದರೆ ಸಾಲ ಕೊಡುವಂತಹ ಪರಿಚಿತರಾರೂ ಇದ್ದಿರಲಿಲ್ಲ. ತಿಂಗಳ ಕೊನೆಯ ದಿನಗಳು! ಏನು ಮಾಡಲಿ? ಯೋಚಿಸಿ ಯೋಚಿಸಿ ತಲೆ ಬಿಸಿಯಾಗಿತ್ತು. ಕಡಿಮೆಯೆಂದರೂ ಇಪ್ಪತ್ತು ರೂಪಾಯಿಗಳಾದರೂ ಬೇಕೇಬೇಕು, ಎಲ್ಲಿಂದ ತರಲಿ? ಅಡವು ಇಟ್ಟು ಹಣ ತರೋಣವೆಂದರೂ ಅಹ ನನ್ನ ಬಳಿಯಲ್ಲಿ ಚಿನ್ನದ ಒಡವೆಗಳಾಗಲೀ, ಅಥವಾ ಬೇರೇನಾದರೂ ಬಹು ಮೂಲ್ಯದ ವಸ್ತುಗಳಾಗಲೀ ಇದ್ದಿರಲಿಲ್ಲ. ಇರುವವುಗಳನ್ನೂ ಅಷ್ಟರಲ್ಲಿಯೇ ಅಡವಿಟ್ಟು, ಸಿಗುವಷ್ಟು ಹಣವನ್ನು ತಂದಾಗಿತ್ತು, ಇನ್ನುಳಿದಿರುವುದು ಮಡದಿಯ ಮಾಂಗಲ್ಯ ಸೂತ್ರವೊಂದೇ.

ಈಗ ಹಣವನ್ನೆಲ್ಲಿಂದ ತರಲಿ? ಯಾರು ಕೊಟ್ಟಾರು? ಯಾರೊಡನೆ ಕೇಳಲಿ? ಇವೇ ವಿಚಾರಗಳಲ್ಲಿ ತನ್ಮಯನಾಗಿ ಮುಂಜಾನೆಯಿಂದ ಸಂಜೆಯವರೆಗೂ ಎಲ್ಲೆಲ್ಲಿಯೋ ಅಲೆದಾಡಿದೆ. ಅಲ್ಪಸ್ವಲ್ಪ ಪರಿಚಯ ಇರುವವರೊಡನೆಲ್ಲ ಅಂಗಲಾಚಿದೆ. ವ್ಯರ್ಥವಾಯಿತು.

ಆದರೂ ಆತ್ಮ ವಿಶ್ವಾಸವನ್ನು ಕಳೆದುಕೊಳ್ಳಲಿಲ್ಲ, ನಿರಾಶನಾಗಲಿಲ್ಲ. ಎಲ್ಲಾದರೂ ಸಿಕ್ಕೀತು, ಯಾರಾದರೂ ಕೊಟ್ಟಾರು, ಎಂಬ ಆಶಾಕಿರಣದ ಬೆನ್ನು ಹಿಡಿದು ಮತ್ತೂ ನಾಲ್ಕಾರು ಕಡೆಗಳಿಗೆ ಹೋಗಿಬರಲು ನಿರ್ಧರಿಸಿದೆ.

- ಮನೆಯಿಂದ ಹೊರಡುವಾಗಲೂ— "ಇಂದು ಹಣವನ್ನು ತೆಗೆದು ಕೊಂಡೇ ಮನೆಗೆ ಮರಳುತ್ತೇನೆ"–ಎಂದು ಹೆಂಡತಿಯೊಡನೆ ಹೇಳಿಬಂದಿದ್ದೆ

ದಾರಿಯಲ್ಲಿ ಹೋಗುತ್ತಿದ್ದಾಗ ಅಕಸ್ಮತ್ತಾಗಿ ಒಂದು ಕಾರು ನನ್ನ ಸಮೀಪದಲ್ಲಿಯೇ ಬಂದು ನಿಂತಿತು. ನಾನು ಆಶ್ಚರ್ಯದಿಂದ ತಲೆ ಎತ್ತಿ ನೋಡಿದೆ. ವೇಷ ಭೂಷಣಗಳಿಂದ ಶ್ರೀಮಂತರಾಗಿ ಕಾಣಿಸುತ್ತಿದ್ದವರೊಬ್ಬರು ಕಾರಿನಿಂದಿಳಿದು, ನನ್ನ ಬಳಿಬಂದು, ನನ್ನ ಕೈಯನ್ನು ಬಲವಾಗಿ ಹಿಡಿದು ಅಲುಗಾಡಿಸುತ್ತ ನನ್ನನ್ನೇನೋಡುತ್ತ ನಗತೊಡಗಿದರು ಥಕ್ಕನೆ ನನಗವರ ಗುರುತು ಸಿಗಲಿಲ್ಲ ನನಗೆ ನೆನಪಿದ್ದಂತೆ ಪರಿಚಯದವರಲ್ಲಿ ಅಂತಹ ಧನಿಕರಾರು ಇದ್ದಿರಲಿಲ್ಲ.

"ಏನು ಗುರುತು ಸಿಗಲಿಲ್ಲವೇ? ಏ ಮಹಾರಾಯ! ನಾನಲ್ಲವೇ?"— ಅವರು ನನ್ನನ್ನು ಆತ್ಮೀಯವಾದ ಏಕವಚನದಲ್ಲಿಯೇ ಸಂಬೋಧಿಸಿದರು.

ನನಗೆ ವಿಸ್ಮಯವಾಯಿತು.

"ಯಾರಪ್ಪಾ ಈ ಮಹಾನುಭಾವರು?"— ಎಂದು ತಲೆಮರಿಸಿಕೊಂಡೆ.

ಹೋ! ಈಗ ಗುರುತು ಸಿಕ್ಕಿತು.

ಕಂಡೊಡನೆಯೇ ಗುರುತು ಸಿಗದಿದ್ದುದಕ್ಕಾಗಿ ನನಗೆ ವಿಷಾದವಾಯಿತು ಕ್ಷಣಕಾಲ ನಾನು ನಿರುತ್ತರನಾದೆ.

"ಜೋಣಿ ಕುಟ್ಟಿ!....ನೀನು......ಇಲ್ಲಿ"

"ನೀನು ನನ್ನನ್ನು ಸಂಪೂರ್ಣವಾಗಿ ಮರೆತೇ ಬಿಟ್ಟಿರಬೇಕೆಂದು ಭಾವಿಸಿದ್ದೆ. ಪರವಾಯಿಲ್ಲ. ಈಗಲಾದರೂ ಗುರುತು ಸಿಕ್ಕಿತಲ್ಲ! ?

"ನಾನು ನನ್ನ ಜೋಣಿಯನ್ನು ಮರೆಯಲು ಸಾಧ್ಯವೇ? ಛೇ! ಎಂತಹ ಮಾತನಾಡುತ್ತೀ?"

ಸುಮಾರು ಇಪ್ಪತ್ತು ವರ್ಷಗಳ ಹಿಂದೆ —ನಾವಿಬ್ಬರೂ ತ್ರಿವೇಂದ್ರಮ್‌ನ ಕಾಲೇಜೊಂದರಲ್ಲಿ ವಿದ್ಯಾರ್ಥಿಗಳಾಗಿದ್ದಾಗ— ಒಂದೇ ರೂಮಿನಲ್ಲಿ ಮೂರು ವರ್ಷ ಒಟ್ಟಿಗೇ ವಾಸಿಸಿದ್ದೆವು. ಅಂದಿನ ಆ ಹೂವೇ ಸ್ಮೃತಿಗಳು ಮನಃಪಟಲದಲ್ಲಿ ಪುನಃ ಪ್ರತಿಬಿಂಬಿತವಾಗ ತೊಡಗಿದವು. ಈ ದೀರ್ಘಾವಧಿಯಲ್ಲಿ ಅದೆಷ್ಟೋ ಬಾರಿ ನಾನು ನನ್ನೀ ಮಿತ್ರನನ್ನು ನೆನೆಸಿಕೊಂಡಿದ್ದೇನೆ. ಅವನಿಗೂ ನನ್ನ ನೆನಪಾಗಿರಬಹುದು ಆದುದರಿಂದ ಆತ ನನ್ನನ್ನು ಕಂಡೊಡನೆಯೇ ಗುರುತಿಸಿದ. ನಾನು ಮಾತ್ರ ಅವನನ್ನು ಕೂಡಲೇ ಗುರುತಿಸಲಾರದಾದೆನಲ್ಲ ಎಂದು ನನಗೆ ತುಂಬ ವ್ಯಥೆಯಾಯಿತು.

ನಾನು ಮನೆಯಿಂದ ಯಾವ ಕೆಲಸಕ್ಕಾಗಿ ಹೊರಟಿದ್ದೆನೆಂಬುದನ್ನು ತಾತ್ಕಾಲಿಕವಾಗಿ ಮರೆತೆ. ಮಿತ್ರನೂ 'ಕಾರನ್ನೇರು' - ಎಂದು ಒತ್ತಾಯಿಸಿದ. ನಾನು ಅವನ ಮಾತನ್ನು ಮೀರಲಾರದೆ ಅವನ ಜೊತೆಯಲ್ಲಿ ಹೊರಟು ಬಿಟ್ಟೆ. ಕಾರಿನೊಳಗೆ ಇನ್ನೂ ಇಬ್ಬರು ಮಹನೀಯರು ಸಿಗರೇಟು ಸೇದುತ್ತ ಆರಾಮವಾಗಿ ಕುಳಿತಿದ್ದರು.

ಕಾರು ಹೊರಟಿತು.

ಜೋಣಿ ತನ್ನ ಮಿತ್ರರೊಡನೆ ಹೇಳತೊಡಗಿದ.— "ನಾನು ನನ್ನ ಈ ಬಾಲ್ಯದ ಸ್ನೇಹಿತ— ಗೋಪಿಯನ್ನು ನನ್ನ ಗುರುವೆಂದು ಭಾವಿಸಿದ್ದೇನೆ. ನಾನು ಕಾಲೇಜಿಗೆ ಸೇರಿದ ಮೊದಲ ದಿನಗಳಲ್ಲಿ ಬರೀ ಬೆಪ್ಪನಾಗಿದ್ದಿದ್ದೆ. ಆಗ ಈ ಗೋಪಿಯೇ ನನ್ನ ಘನಿಷ್ಟ ಮಿತ್ರನಾಗಿದ್ದಿದ್ದ. ಕಾಲೇಜು ಬಿಟ್ಟನಂತರ....."

"ಕಾಲೇಜು ಬಿಟ್ಟನಂತರ ಏನಾಯಿತು ಎಂಬುದೆಲ್ಲ ನಮಗೆ ಚೆನ್ನಾಗಿ ಗೊತ್ತಿದೆ."— ಕಾರಿನಲ್ಲಿದ್ದವರೊಬ್ಬರು ವಾಕ್ಯವನ್ನು ಪೂರ್ತಿಗೊಳಿಸಿದರು.

ಜೋಣಿ ನುಡಿದದ್ದು ನಿಜವಾಗಿತ್ತು.

ಆಗ ಜೋಣಿ ತುಂಬ ಸಾಧು ಸ್ವಭಾವದವನಾಗಿದ್ದ. ಆದರೆ ನಾನು ಮಾತ್ರ ನನ್ನ 'ಕಿತಾಪತಿ' ಗಳಿಂದಾಗಿ ಕಾಲೇಜಿನಲ್ಲಿ ತುಂಬಾ ಪ್ರಖ್ಯಾತನಾಗಿಬಿಟ್ಟಿದ್ದೆ. ನಾನು ಕಾಲೇಜು ಬಿಟ್ಟಬಳಿಕ ನನ್ನ ಸ್ಥಾನಕ್ಕೆ ಜೋಣಿ ಬಂದಿದ್ದ.

ಜೋಣಿ ಪುನಃ ಹೇಳಿದ- "ಈ ಗೋಪಿಯೇ ನನಗೆ ಶರಾಬು ಕುಡಿಯಲು ಕಲಿಸಿದ ಮೊದಲ ಗುರು!"

ಅಕಸ್ಮಾತ್ ನನಗೆ ಅಂದಿನ ಆ ಘಟನೆ ನೆನಪಾಯಿತು ನಗರದಲ್ಲಿ ಅತ್ಯಂತ ಪ್ರಸಿದ್ಧವಾಗಿದ್ದ ಬಾರಿಗೆ ನಾನೇ ಜೋಣಿಯನ್ನು ಮೊದಲಬಾರಿ ಕರೆದು ಕೊಂಡು ಹೋಗಿದ್ದೆ,

ಜೋಣಿಯು ಗೆಳೆಯರೆಲ್ಲರತ್ತ ಮುಗುಳ್ನಗುತ್ತ ನುಡಿದ.— "ಜೋಣಿಯು ಇಂತಹ ಸಂಭಾವಿತ ಗುರುಗಳಿಂದಲೇ ಉಪದೇಶಪಡೆದುದರಿಂದಾಗಿ ಇಂದಿಗೂ ಆ ವಿದ್ಯೆಯನ್ನು ಮರೆಯಲಿಲ್ಲ. ಗುರುಗಳು ಇನ್ನೂ ಏನೇನನ್ನು ಕಲಿಸಿದ್ದಾರೆ?....'

"ತುಂಬಾ ಕಲಿಸಿದ್ದಾರೆ.'—ಜೋಣಿ ನನ್ನನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತ ಹೆಮ್ಮೆಯಿಂದ ಹೇಳಿದ—"ಅದಂತಿರಲಿ. ಆ ಮೇಲೆ ನೀನು ಎಂದಾದರೂ 'ಆ ಹುಡುಗಿ'ಯನ್ನು ಪುನಃ ಕಂಡಿರುವೆಯಾ? ನಮ್ಮ ಹಾಸ್ಟೆಲಿನ ಹಿಂದುಗಡೆಯ ಮನೆಯಲ್ಲಿದ್ದಳಲ್ಲ...?"

ಗತಕಾಲದ ಅದೆಷ್ಟೋ ಘಟನೆಗಳು ನನ್ನ ಕಣ್ಣುಗಳ ಎದುರು ಚಲಚ್ಚಿತ್ರದಂತೆ—ಒಂದಾದ ಮೇಲೊಂದರಂತೆ— ಕ್ರಮವಾಗಿ ಆವಿರ್ಭವಿಸಿ ಕುಣಿದಾಡತೊಡಗಿದುವು.

ಆ ಬಡಪಾಯಿ ಹುಡುಗಿ!

ಆಕೆ, ಯಾವುದೋ ಒಂದು ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಬಡ ಗುಮಾಸ್ತನೊಬ್ಬನ ಮಗಳಾಗಿದ್ದಳು. ಅವನಿಗೆ ನಾಲ್ಕಾರು ಹೆಣ್ಣು ಮಕ್ಕಳಿದ್ದುದರಿಂದಲೂ, ತುಂಬ ದರಿದ್ರನಾಗಿದ್ದುದರಿಂದಲೂ, ಆರ್ಥಿಕ ಅಭಾವದಿಂದಾಗಿ ವಯಸ್ಸು ಮೀರಿದ ಮಗಳಿಗೆ ಮದುವೆ ಮಾಡಲು ಅಶಕ್ತನಾಗಿದ್ದ. ಇನ್ನೂ ಅವಳ ಮದುವೆಯಾಗಿಲ್ಲವೆಂಬುದು ನಮಗೆ ಗೊತ್ತಾಗಿತ್ತು ಹಾಸ್ಟೆಲಿನ ಸಮೀಪದಲ್ಲಿಯೇ ಅವಳ ಮನೆಯಿದ್ದುದರಿಂದ ಪ್ರತಿ ದಿನವೂ ಹತ್ತಾರು ಬಾರಿ ಆಕೆ ನಮ್ಮ ದೃಷ್ಟಿಗೆ ಬೀಳುವುದು ಸ್ವಾಭಾವಿಕವಾಗಿತ್ತು. ಕ್ರಮೇಣ ನಾವು ಆಕೆಯನ್ನು ಕಂಡಾಗಲೆಲ್ಲ ಮುಗುಳು ನಗತೊಡಗಿದೆವು ಒಮ್ಮೊಮ್ಮೆ ಅವಳೂ ನಮ್ಮ ನಗುವಿಗೆ ಪ್ರತ್ಯುತ್ತರ ರೂಪವಾಗಿ ನಗುತ್ತಿದ್ದಳು.

ಅತ್ಯಾಚಾರ!

ಆ ಅತ್ಯಾಚಾರದ ಘೃಣಿತಕತೆಯನ್ನು ನೆನಪು ಮಾಡಿಕೊಳ್ಳುವುದೇ ನನಗಿಂದು ಅಸಹ್ಯವಾಗುತ್ತಿದೆ.

ತಾರುಣ್ಯದ ಮಬ್ಬಿನಲ್ಲಿ ಏನೆಲ್ಲ ಅಧಿಕ ಪ್ರಸಂಗ ಮಾಡಿಬಿಟ್ಟೆನಲ್ಲಾ ಎಂದು ನನಗೀಗ ಪಶ್ಚಾತ್ತಾಪವಾಗುತ್ತಿದೆ.

ಹೌದು, ಒಂದು ದಿನ ನಾವಿಬ್ಬರೂ ಸೇರಿಕೊಂಡು ಆ ಮುಗ್ಧೆಯನ್ನು ವಂಚಿಸಿ ಬಿ

(ಹನ್ನೆರಡನೇ ಪುಟ ನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p a.	7ರಿಂದ 11 ತಿಂಗಳು. % p a.	12ರಿಂದ 23 ತಿಂಗಳು. % p. a.	24ರಿಂದ 35 ತಿಂಗಳು. % p. a.	36ರಿಂದ 47 ತಿಂಗಳು. % p. a.	48ರಿಂದ 59 ತಿಂಗಳು. % p. a	60ರಿಂದ 83 ತಿಂಗಳು. % p. a	84ರಿಂದ 120 ತಿಂಗಳು. % p a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ.-	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.
[ಶೆಡ್ಯೂಲ್ಡ್ ಬ್ಯಾಂಕ್] ಶ್ರೀ
ರಿಜಿಸ್ಟರ್ಡ್ ಆಫೀಸು:— ಕೋರ್ಟು ರಸ್ತೆ, ಉಡುಪಿ, ದ ಕ. (ಮೈಸೂರು ರಾಜ್ಯ) ಸ್ಥಾಪನೆ:— 1902

ಭಾರತದಲ್ಲಿ ತುಂಬಿದ್ದಾರೆ

ವಿಚಿತ್ರ ಬಗೆಯ ದೇಶಭಕ್ತರು

ಬರೆದವರು: ಶ್ರೀ ಶಿವಶಂಕರ.

ವಿಶ್ವವೇ ವಿಚಿತ್ರವೆನ್ನುತ್ತಾರೆ ಕೆಲವರು. ವಿಶ್ವದಲ್ಲಿ ಏನು ವಿಚಿತ್ರನಾಗಿಲ್ಲವಾದರೂ ರಾಜಕೀಯವಂತೂ ಬಹಳ ವಿಚಿತ್ರ. ಅದೆಂತಹ ರಾಜಕೀಯವೇ ಇರಲಿ ಅದಕ್ಕೆ ದೇಶಭಕ್ತ ಶಿರೋನಾಮೆ ಸದಾ ಸಿದ್ಧ. ದೇಶ ಭಕ್ತರೆಂದು ಕರೆದುಕೊಳ್ಳುವದು ಒಂದು ಅಭ್ಯಾಸವಾಗಿ ಬಿಟ್ಟಿದೆ. ಇದೊಂದು ಮಂತ್ರವೇ ಸರಿ. ಈಗಿನ ಪರಿಸ್ಥಿತಿಯಲ್ಲಿ ನಮ್ಮ ದೇಶದಲ್ಲೂ ವಿಚಿತ್ರ ವಿಧದ ದೇಶಭಕ್ತರಿದ್ದಾರೆ. ಕಾಂಗ್ರೆಸ್ಸಿಗರು ತಾವೂ ದೇಶಭಕ್ತರೆಂದು ಕೊಳ್ಳುತ್ತಾರೆ. ಅವರು ದೇಶವಿಭಜನೆಯ ಪಾಪಕೃತ್ಯಕ್ಕೆ ಒಪ್ಪಿಗೆ ಇತ್ತರು. ಸ್ವರಾಜ್ಯ ಸಿಗಬೇಕೆಂದು ಒಂದಿಷ್ಟು ನೆಲ(!)ವನ್ನು ಬಿಟ್ಟುಕೊಟ್ಟರೆಂದಿಟ್ಟು ಕೊಳ್ಳೋಣ.

ಕಮ್ಯೂನಿಸ್ಟರು ಕೂಡಾ ತಾವು ದೇಶಭಕ್ತರೆಂದು ಹೇಳಿಕೊಳ್ಳುತ್ತಿದ್ದಾರೆ. ಹಾಗಾದರೆ ವಿಶ್ವದ ಕಾರ್ಮಿಕರು ಒಂದಾಗುವ ಮಾತು ಎಲ್ಲಿ ಬರುತ್ತದೆ? ಇವರೂ ಪಾಕಿಸ್ಥಾನ ಪ್ರೇತ ರಚನೆಗೆ ಮುಂದಾದವರಿದ್ದಾರೆ. ಚೈನಾ ಆಕ್ರಮಣ ನಡೆಸಿಯೇ ಇಲ್ಲವೆಂದೂ, ಭಾರತದ ಗಡಿ ಪ್ರದೇಶ ಚೆನ್ನಾಗಿ ಗುರುತಿಸಲ್ಪಡದಿರುವ ಕಾರಣ ಬಂಡವಾಳಶಾಹಿ ರಾಷ್ಟ್ರ ಚೈನಾಕ್ಕೆ ಮೋಸ ಮಾಡಿ, ಹೆದರಿಸಿ-ಬೆದರಿಸಿ ಓಡಿಸಿರುವ ಸ್ಥಳದಲ್ಲಿ ತಿಳಿಯದೆ ಭಾರತೀಯರ, ಹೋಗಿರುವ ಕಾರಣ ನಾವು ಹಿಂದಕ್ಕೆ ಬಂದು ಚೈನಾಕ್ಕೆ ಭೂಪ್ರದೇಶ ಬಿಟ್ಟುಕೊಟ್ಟು ಒಪ್ಪಂದ ಮಾಡಿಕೊಳ್ಳಬೇಕೆಂದು ಇವರು ಎಡೆಬಿಡದೆ ಹೇಳುತ್ತಿದ್ದಾರೆ.

ಭಾರತೀಯ ಜನಸಂಘದವರು ತಾವು ಅಪ್ಪಟ ದೇಶಭಕ್ತರೆಂದು ಹೇಳಿಕೊಳ್ಳುತ್ತಿದ್ದಾರೆ ಆದರೆ ಅವರನ್ನುಳಿದು ಇತರ ಪಕ್ಷಗಳವರು ಜಾತೀಯ ವಾದಿಗಳೆಂದು ಮೂದಲಿಸುತ್ತಿದ್ದಾರೆ. ಇವರು ತಮ್ಮೆದುರಿಗೆ ಅಖಂಡ ಭಾರತದ ಚಿತ್ರವನ್ನಿಟ್ಟುಕೊಂಡಿದ್ದಾರೆ ಭಾರತದ ಕಣಕಣವನ್ನು ಪವಿತ್ರವೆಂದು ಗೌರವಿಸುವೆವೆನ್ನುತ್ತಾರೆ.

ಹಾಗೆಯೇ ಸಂಯುಕ್ತ ಸಮಾಜವಾದಿಗಳು ಹಾಗೂ ಸ್ವತಂತ್ರ ಪಕ್ಷದವರೂ ತಾವು ದೇಶಭಕ್ತರೆಂದುಕೊಳ್ಳುತ್ತಾರೆ. ಆದರೆ ಈ ಎರಡು ಪಕ್ಷಗಳೂ ಕಾಂಗ್ರೆಸ್ಸ್ ಮತ್ತು ಕಮ್ಯೂನಿಸ್ಟ್ ಪಕ್ಷಗಳ ಹಾಗೆ ಮುಸ್ಲಿಂ ಲೀಗ್ ಹಾಗೂ ಅಂತಹ ಇತರ ಜಾತೀಯ ಪಕ್ಷಗಳೊಂದಿಗೆ ಚುನಾವಣೆಯ ಕಾಲದಲ್ಲಿ ಭುಜಕ್ಕೆ ಭುಜ ಕೊಡುತ್ತವೆ. ಆದರಲ್ಲಿ ಸ್ವತಂತ್ರ ಪಕ್ಷ ಇನ್ನೂ ಒಂದು ಹೆಜ್ಜೆ ಮುಂದರಿದು ದ್ರಾವಿಡ ಮುನ್ನೇತ್ರ ಕಳಗವಿನೊಂದಿಗೆ, ಅಂದರೆ ದೇಶ ವಿಚ್ಛೇದನಕಾರಿ ದುಃಶಕ್ತಿಯೊಂದಿಗೆ, ಜೊತೆಗೂಡಿ ಕಾಂಗ್ರೆಸ್ಸನ್ನು ಎದುರಿಸುತ್ತಿದೆ. ದ್ರಾವಿಡ ಕಳಗಂ, ಅಕಾಲಿದಳ, ನಾಯರ್ ಸಂಘ, ಕ್ರಿಶ್ಚಿಯನ್ ಕೂಟ ಇತ್ಯಾದಿ ಜಾತೀಯ ಗುಂಪುಗಳೊಂದಿಗೆ ಕಾಂಗ್ರೆಸ್ ಚುನಾವಣಾ ಸಂಬಂಧವನ್ನಿಟ್ಟುಕೊಂಡಿರುವಾಗ ತನ್ನ ವ್ಯವಹಾರ ಆದೇಶ ದೃಷ್ಟಿಯಿಂದು ಸ್ವತಂತ್ರ ಪಕ್ಷ ಕೇಳುತ್ತದೆ.

ಸ್ವಾತಂತ್ರ್ಯ ಗಳಿಕೆ ಹಾಗೂ ಚುನಾವಣೆ ಒಂದು ಪಕ್ಕಕ್ಕಿರಲಿ. ಈಗ ಐದು ಪಕ್ಷಗಳಿಗೂ ಒಂದು ಪರೀಕ್ಷಾಕಾಲ ಬಂದಿದೆ.

ಅಕ್ಷಯ ಚಿನ್ಹೆ ಹಾಗೂ ಕಾಶ್ಮೀರವನ್ನು ಕೈ ಬಿಡಬೇಕೇ ಎಂಬ ಪ್ರಶ್ನೆ ಆ ಐದು ಪಕ್ಷಗಳ ಮುಂದೂ ಬಂದು ನಿಂತಿದೆ. ಈ ವಿಷಯದ ಮೇಲೆ ಕಾಂಗ್ರೆಸ್ಸಿಗರಲ್ಲಿ ಖಂಡಿತ ಒಮ್ಮತವಿಲ್ಲ. ಕಾಶ್ಮೀರದಲ್ಲಿ ಒಂದು ಭಾಗವನ್ನು ಆಗಲೇ ಪಾಕಿಸ್ಥಾನ ಆಕ್ರಮಿಸಿ ವಶಪಡಿಸಿಟ್ಟುಕೊಂಡಿದೆ. ಹಾಗೆಯೇ ಅಕ್ಷಯ ಚಿನ್ಹೆಯ ಬಳಿ ಚೈನೀ ಕಮ್ಯೂನಿಸ್ಟರಿದ್ದಾರೆ. ಮುಸಲ್ಮಾನರು ಬಹುಸಂಖ್ಯಾತರಾಗಿರುವ ಪ್ರದೇಶವನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಟ್ಟು ಸಂಧಾನ ಮಾಡಿಕೊಳ್ಳಬೇಕೆಂದು ಕೆಲ ಕಾಂಗ್ರೆಸ್ಸಿಗರು ಹೇಳಿದರೆ, ಆದಾಗಲೇ ಚೈನಾವು ಅಕ್ಷಯ ಚಿನ್ಹೆಯನ್ನು ಆಕ್ರಮಿಸಿ ವಶಪಡಿಸಿಕೊಂಡಿದ್ದು ಅದನ್ನು ಬಿಟ್ಟುಕೊಡಲೊಪ್ಪದಿರುವ ಕಾರಣ ಅದನ್ನು ಚೈನಾಕ್ಕೆ ಭೂದಾನವಿತ್ತು ಒಪ್ಪಂದ ಮಾಡಿಕೊಳ್ಳಬೇಕೆಂದು ಇತರ ಕಾಂಗ್ರೆಸ್ಸಿಗರು ಹೇಳುತ್ತಿದ್ದಾರೆ. ಹುಲ್ಲು-ಮುಳ್ಳು ಕೂಡ ಇಲ್ಲದ ಪ್ರದೇಶವನ್ನು ಬಿಟ್ಟು ಕೊಡುವದರಲ್ಲಿ ತಪ್ಪೇನೆಂದು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರೊಬ್ಬರು, ಹೇಳಿದ್ದಾಗ, ತನ್ನ ತಲೆಯ ಮೇಲೆ ಕೂದಲಿಲ್ಲದ ಕಾರಣ ಅದನ್ನು ಕಡಿದು ಹಾಕುವದು ಸರಿಯೇ ಎಂದು ಕಾಂಗ್ರೆಸ್ಸಿನ ಮಹಾನೀಯರೊಬ್ಬರು ಪ್ರಶ್ನೆ ಹಾಕಿದ್ದರು. ಇದೇ ಕಾಂಗ್ರೆಸ್ಸಿಗರಲ್ಲಿ ಒಮ್ಮತವಿಲ್ಲವೆಂಬುದನ್ನು ಪ್ರಕಟಪಡಿಸುತ್ತದೆ. ಅಲ್ಲದ ಇತ್ತೀಚೆಗೆ ಭೂದಾನಿ ಜಯಪ್ರಕಾಶ ನಾರಾಯಣರು ಅಕ್ಷಯ ಚಿನ್ಹೆಯನ್ನು ಚೈನಾಕ್ಕೆ ಬಿಟ್ಟುಕೊಡೋಣವೆಂದಾಗ ಕೆಲವು ಪ್ರಮುಖ ಕಾಂಗ್ರೆಸ್ಸಿಗರೂ ಅದಕ್ಕೆ ಒಪ್ಪಿದ್ದರು. ಒಂದು ರೀತಿಯ ನಾಟಕ ಇದೀಗ ಆರಂಭವಾಗಿರುತ್ತದೆ. ಆದರಲ್ಲಿ ಜಯಪ್ರಕಾಶ ನಾರಾಯಣರು ನಾಯಕನ ಪಾತ್ರವನ್ನು ವಹಿಸುವರು. ಹೀಗೆ ಜಯಪ್ರಕಾಶರನ್ನು ಮುಖವಾಡವನ್ನಾಗಿಟ್ಟುಕೊಂಡ ತಮ್ಮ ಬೇಳೆ ಬೇಯಿಸಿಕೊಳ್ಳಲು ಕೆಲವು ಮುಖಂಡರು ಪ್ರಯತ್ನಿಸುತ್ತಿದ್ದಾರೆ

ಪಾಕಿಸ್ತಾನವು ಇದೀಗ ಚೈನಾದೊಡನೆ ಚೆಲ್ಲಾಟವಾರಂಭಿಸಿದೆಯಾದರೂ ಅಮೇರಿಕದ ಆಲಿಂಗನದಿಂದ ಬಿಡುಗಡೆ ಹೊಂದಿರುವದಿಲ್ಲ ಹಾಗಿರುವದರಿಂದ ಕಾಶ್ಮೀರವನ್ನು ಪಾಕಿಸ್ಥಾನಕ್ಕೆ ಬಿಟ್ಟುಕೊಡಲು ಒಪ್ಪಬಾರದೆಂದು ಕಮ್ಯೂನಿಸ್ಟರು ಆಗಾಗವಾದರೂ ಆಡುತ್ತಿದ್ದಾರೆ. ಅದೇ ಅಕ್ಷಯ ಚಿನ್ಹೆಯ ವಿಷಯದಲ್ಲಿ! ಜಯಪ್ರಕಾಶರಿಗೆ ಜಯವಾಗಲೆಂದು ಅವರು ತಮ್ಮ ಪೂರ್ಣಶಕ್ತಿಯನ್ನುಪಯೋಗಿಸಿ ಜಯಕಾರ ಹಾಕುತ್ತಿದ್ದಾರೆ. ಚೈನಾಕ್ಕೆ ಬಿಟ್ಟುಕೊಡಲು ಅವರು ಸಿದ್ಧರು. ಪಾಕಿಸ್ತಾನದ ಪ್ರಶ್ನೆ ಬರುವಾಗ ಇವರು ದೇಶಭಕ್ತರು!

ಅದಕ್ಕೆ ಸರಿಯಾಗಿದ್ದಾರೆ ಸಂಯುಕ್ತ ಸಮಾಜವಾದಿಗಳು. ಕೆಲವರು ತಮ್ಮ ಸ್ವರವನ್ನೆತ್ತಿರುವದರಲ್ಲಿ ಸಂದೇಹವಿಲ್ಲ. ಆದರೂ ಈ ಪಕ್ಷಕ್ಕೆ ಜಯಪ್ರಕಾಶರ ಮೇಲೆ ಗೌರವ-ಭಕ್ತಿ-ಪ್ರೀತಿ ಇತ್ಯಾದಿ ಇರುವದು ಸ್ವಾಭಾವಿಕವಿದೆ. ಇದರಲ್ಲೂ ಕೆಲವರು ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಭೂದಾನ ಮಾಡಿಬಿಡೋಣವೆನ್ನುವವರು ಇದ್ದಾರೆ. ಆದರೆ ಈ ಪಕ್ಷದಲ್ಲಿ ಒಮ್ಮತ ಎಂಬುದು ಇಲ್ಲ. ಅಕ್ಷಯ ಚಿನ್ಹೆಯನ್ನು ಭೂದಾನ ಮಾಡುವಾಗ ಆ ದೇಶಭಕ್ತಿಯ ಜ್ವಾಲೆ ಆದೆಲ್ಲಿ ಆರಿಹೋಗುತ್ತೋ, ಏನೋ! ಚೈನಾ ಬಹು ದೊಡ್ಡ ರಾಷ್ಟ್ರವಿದ್ದು, ಆಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾಗಿದೆ. ಹಾಗಿರುವಾಗ ಯುದ್ಧ ಮಾಡಿ, ಸೋತು, ಗುಲಾಮರಾಗುವುದಕ್ಕಿಂತ ಅಷ್ಟನ್ನು ಬಿಟ್ಟುಕೊಟ್ಟು ಸಂಧಾನ ಮಾಡಿಕೊಳ್ಳೋಣವೆಂಬುದು ಅವರ ಆಲೋಚನೆ. ಅದರ ಫಲಿತಾಂಶ ಏನಾಗಬಹುದು ಎನ್ನುವದನ್ನು ಅವರು ಆಲೋಚಿಸುವದಿಲ್ಲ. ಕೆಲ ಮುಸಲ್ಮಾನರು ಪ್ರತ್ಯೇಕ, ಸ್ಥಾನ, ಪಾಕಿಸ್ತಾನ, ಬೇಕೆಂದು ಹಟ ಹಿಡಿದಾಗ 'ಅಸ್ತು' ಎಂದು ಕಾಂಗ್ರೆಸ್ಸಿಗರು ಒಪ್ಪಿದುದರಿಂದ ಇಂದು ಕಾಶ್ಮೀರ ಸಮಸ್ಯೆ ತಲೆ ಎತ್ತಿ ನಿಂತಿರುತ್ತದೆ. ಹಾಗಿರುವಾಗ ಚೈನಿ ಡ್ರೇಗನ್ ಅಕ್ಷಯ ಚಿನ್ಹೆಯಿಂದ ತೃಪ್ತಿಗೊಂಡೀತೇ? ಸರ್ವಥಾ ಇಲ್ಲ,

ಅಯ್ಯೋ! ಅಕ್ಷಯ ಚಿನ್ಹೆಯನ್ನು ಕಳೆದುಕೊಳ್ಳುವದುಂಟೇ ಎನ್ನುತ್ತಾರೆ ರಾಜಾಜಿಯವರ ಸ್ವ. ಪಕ್ಷದವರು. ಆದರೆ ಇದೇ ಸ್ವತಂತ್ರ ಪಕ್ಷದವರು ಕಾಶ್ಮೀರವನ್ನು ಪಾಕಿಸ್ಥಾನಕ್ಕೆ ಬಹುಮಾನವಾಗಿ ಕೊಡೋಣವೆನ್ನುತ್ತಿದ್ದಾರೆ ಅಕ್ಷಯ ಚಿನ್ಹೆಯ ಮಾತೆತ್ತಿದಾಗ ದೇಶಭಕ್ತಿಯ ಚಿಲುಮೆ ಇವರಲ್ಲಿ ಪುಟಿದೇಳುತ್ತಿದೆ. ಆದರೆ ಕಾಶ್ಮೀರದ ಮಾತೆತ್ತಿದಾಗ ಅದು ಬತ್ತಿ ಹೋಗುತ್ತಿದೆ. ಎಷ್ಟು ವಿಚಿತ್ರ! ಕಾಶ್ಮೀರವನ್ನು ಕೊಟ್ಟು, ಪಾಕಿಸ್ತಾನದೊಂದಿಗೆ ರಾಜಿಮಾಡಿಕೊಂಡು ಚೈನಾವನ್ನೆದುರಿಸಲು ಸ್ವತಂತ್ರ ಪಕ್ಷದ ಮುಂದಾಳುಗಳು ಸೂಚಿಸುತ್ತಿದ್ದಾರೆ. ಚೈನೀ ಕಮ್ಯೂನಿಸ್ಟರನ ಆಕ್ರಮಣಗಾರರಿದ್ದಾರೆ, ಅಂತೆಯೇ ಪಾಕಿಸ್ತಾನಿ ಮತಾಂಧರೂ ಆಕ್ರಮಣಗಾರರಿದ್ದಾರೆಂಬ ಸಾದಾ ಸರಳ ಸತ್ಯವನ್ನೊಪ್ಪಿಕೊಳ್ಳಲು ಸ್ವತಂತ್ರ ಪಕ್ಷದವರು ಹಿಂಜರಿಯುತ್ತಿದ್ದಾರೆ.

ಭಾರತೀಯ ಜನಸಂಘದವರಾದರೋ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಡಲು ಒಂದೇ ಒಂದು ಶರ್ತದ ಮೇಲೆ ಒಪ್ಪಬಹುದು ಅದು ಯಾವುದೆಂದರೆ ಕಾಶ್ಮೀರ ಪಾಕಿಸ್ತಾನಕ್ಕೆ ಹೋಗಲಿ; ಪಾಕಿಸ್ತಾನ ಬಾಕಿ ಸ್ಥಾನದೊಂದಿಗೆ ಸೇರಬೇಕೆಂಬುದೆ ಅವರ ಶರ್ತ. ಅಕ್ಷಯ ಚಿನ್ಹೆಯ ಅಣುವನ್ನು ಚೈನೀ ಕಮ್ಯೂನಿಸ್ಟ್ ಪಾದಕ್ಕೆ ಸೋಕಲು ಬಿಡಬಾರದೆಂದು ಇವರು ಹಟ ಹಿಡಿಯುತ್ತಿದ್ದಾರೆ. ಉಳಿದಿರುವ ಮಾರ್ಗ ಪುನಃ ಭಾರತೀಯರು 'ಗಾಂಡೀವಧಾರಿ'ಗಳಾಗುವದು. ಆದರೆ ಅದು ಇಂದು ಸಾಧ್ಯವೇ? ನಮ್ಮ ಸೈನ್ಯ ಬಲ ಅಷ್ಟು ಚೆನ್ನಾಗಿದೆಯೇ? ಎಂಬ ಪ್ರಶ್ನೆಯೂ ಬರುತ್ತದೆ. ಗುಲಾಮಿ ಜೀವನಕ್ಕಿಂತ ಸಾವೇ ಲೇಸೆಂದಾಗ ರಜಪೂತರ ಮಾತುಗಳನ್ನಾಡುತ್ತಾರೆ

ಮುಸ್ಲಿಂ ಲೀಗಿನವರಂತೂ ಕಾಶ್ಮೀರ ಪಾಕಿಸ್ತಾನಕ್ಕೆ ಹೋಗಲೇ ಬೇಕೆನ್ನುವರು. ಅಕ್ಷಯ ಚಿನ್ಹೆಯ ವಿಷಯದಲ್ಲಿ ಚೈನಾಕ್ಕಾದರೂ ಹೋಗಲಿ, ರಷ್ಯಾಕ್ಕಾದರೂ ಹೋಗಲಿ, ನಮಗೆ ಸಿಗುವ ಪಾಲು ಸಿಗಲೆಂದು ಅವರು ಹೇಳುತ್ತಿದ್ದಾರೆ.

ಇವೆಲ್ಲಕ್ಕೂ ವಿಚಿತ್ರವಾಗಿ ಎದ್ದು ನಿಂತವರು ದ್ರಾವಿಡ ಮುನ್ನೇತ್ರ ಕಳಗವಿನವರು. ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಡಬೇಕೆಂದು ಇವರು ಹೇಳುತ್ತ ಬಂದಿದ್ದರೂ, ನಂತರ ತಣ್ಣಗಾದರು. ಅಕ್ಷಯ ಚಿನ್ಹೆಯ ಮಾತನ್ನು ಚೈನೀ ಕಮ್ಯೂನಿಸ್ಟರೆತ್ತಿದಾಗ ಇತರ ಭಾರತೀಯರಂತೆ ದ್ರಾ. ಮು. ಕ.ದವರೂ ಅದನ್ನು ವಿರೋಧಿಸಿದ್ದರು. ಇದು ವಿಚಿತ್ರವೇ ಸರಿ.

ಹೀಗೆ ವಿವಿಧ ವಿಚಿತ್ರ ರೀತಿಯ ದೇಶಭಕ್ತರನ್ನು ನಾವಿಂದು ಭಾರತದಲ್ಲಿ ಕಾಣಬಹುದು. ಇವರೆಲ್ಲರಲ್ಲಿರುವ ಮಿಥ್ಯ ದೇಶಭಕ್ತಿಯನ್ನು ಹೋಗಲಾಡಿಸಿ ನೈಜ ದೇಶಭಕ್ತಿಯನ್ನು ತುಂಬಿಸಲಿಕ್ಕಾಗಿಯೇ ವಿಕ್ರಮ ಶಕೆಯ ಹೊಸ ವರ್ಷ ಆರಂಭವಾಗಿರುತ್ತದೆ. ಆಕ್ರಮಣಗಾರರನ್ನು ವಿಕ್ರಮಾದಿತ್ಯನು ಹೊಡೆದಟ್ಟಿದ ದಿವಸವದು. ಅದೇ ರೀತಿ ಇಂದು ಹೂಣರೂ ವಿಲಿಂಭರೂ ಭಾರತೀಯರ ಮೇಲೆ ಆಕ್ರಮಣ ನಡೆಸಿದ್ದಾರೆ. ವಿಕ್ರಮಾದಿತ್ಯನ ಪರಂಪರೆಯ ಭಾರತೀಯರು ಅದನ್ನು ಎದುರಿಸಲು ಸಿದ್ಧರಿದ್ದಾರೆಯೇ?—ಇಲ್ಲವೇ ಪೊಳ್ಳು ದೇಶಭಕ್ತಿಯ ಮಿಥ್ಯ ವಾದವನ್ನು, ಶಬ್ದ ಜಾಲವನ್ನು, ಹೇಡಿ ತಪ್ಪಿಸಿಕೊಳ್ಳಲು ಪ್ರಯತ್ನಿಸುವರೋ? ಅವರ ಧೈರ್ಯದ ಆಳವನ್ನು ಕಂಡುಕೊಳ್ಳಲಿಕ್ಕಾಗಿ ಕಮ್ಯೂನಿಸ್ಟ್ ಚೈನಾ ಇನ್ನೊಂದು ನಾಟಕವನ್ನು ಆಡಿರುತ್ತದೆ. ಆ ನಾಟಕವು ಯಾವುದು? ಅದಕ್ಕೆ ನಮ್ಮ ಪ್ರತಿಕ್ರಿಯೆ ಏನೆಂಬುದನ್ನು ಮುಂದಿನ ವಾರ ನೋಡುವ.

INSIST ON ....
Waterfalls—Glendale—Brooklands
TEAS
POPULAR EVERYWHERE
You can book your requirements through:
PUNJA & CO., MULKI,
Phone No Off 26. Res: 36.
KOTHARI & SONS, MADRAS.

ಪಾಕಿಗೆ ಪೇಚಾಟ

ಗಡಿನಾಡಿನಲ್ಲಿ ಪಠಾಣರ ಹೋರಾಟ

ಇತ್ತೀಚೆಗೆ ಪಾಕಿಸ್ತಾನಿ ಸೈನಿಕರು ಮತ್ತು ಜಲವಾನ್-ಕೂಜುದಾರ್ ಪ್ರದೇಶಗಳ ಪಠಾಣರ ನಡುವೆ ಸಶಸ್ತ್ರ ಘರ್ಷಣೆ ನಡೆಯಿತು. ಈ ಘರ್ಷಣೆಯು ಪಠಾಣರ ಪ್ರದೇಶದಲ್ಲಿ ಮುನ್ನುಗ್ಗುವ ಪಾಕ್ ಸರ್ಕಾರದ ನೀತಿಯ ಮೇಲೆ ಬೆಳಕು ಚೆಲ್ಲಿದೆ. ಈ ಕದನದಲ್ಲಿ ಪಾಕಿಸ್ತಾನಿ ಸೈನಿಕರಿಗೆ ಭಾರೀ ನಷ್ಟ ನೋವುಗಳುಂಟಾದವು. ಸೋಲನ್ನು ತಪ್ಪಿಸಿಕೊಳ್ಳಲು ಪಾಕ್ ಸರ್ಕಾರವು ಅಧಿಕ ಸೇನೆಯನ್ನು ರವಾನಿಸಿತು. ಪಠಾಣರು ತಮ್ಮ ಕುಟುಂಬಗಳನ್ನು ಸುರಕ್ಷಿತ ಸ್ಥಳಗಳಿಗೆ ಕಳುಹಿಸಿ ಹೋರಾಟ ಮುಂದುವರಿಸಿರುವರು.

ಪಠಾಣರ ಸಹಸ್ರಾರು ರಾಜಕೀಯ ಕಾರ್ಯಕರ್ತರನ್ನು ಬಂಧಿಸಿ, ಬೆಲೂಚಿಸ್ತಾನ್‌ನ ಅನೇಕ ಪ್ರದೇಶಗಳ ಮೇಲೆ ಬಾಂಬು ದಾಳಿಯಂಥ ಉಗ್ರ ಮಿಲಿಟರಿ ಕ್ರಮಗಳನ್ನು ಕೈಗೊಂಡ ನಂತರವೂ ಈ ಘರ್ಷಣೆ ಸಂಭವಿಸಿರುವುದು ಪಾಕಿಸ್ತಾನ್ ಸರ್ಕಾರಕ್ಕೆ ವಿವಂಚನೆಯನ್ನುಂಟುಮಾಡಿದೆ.

ಪಾಕಿಸ್ತಾನ ಸರ್ಕಾರದ ಈ ಉಗ್ರ ಮಿಲಿಟರಿ ಕ್ರಮಗಳು, ದಬ್ಬಾಳಿಕೆ, ದೌರ್ಜನ್ಯದ ಕೃತಿಗಳಿಂದಾಗಿ, ಪಠಾಣರ ಕೋಪಕೆರಳಿ ಹೋರಾಟ ಮತ್ತಷ್ಟು ಬಲಗೊಂಡಿತು. ಪಠಾಣರು ಸ್ವಾತಂತ್ರ್ಯಕ್ಕಾಗಿ ದೃಢಸಂಕಲ್ಪ ಕೈಗೊಂಡಿದ್ದಾರೆ. ಕೆಲ ಸಮಯದ ಹಿಂದೆ ಪಾಕಿಸ್ತಾನ ಸರ್ಕಾರವು ಗುಡ್ಡಗಾಡು ಪ್ರದೇಶಗಳಲ್ಲಿ ಪಠಾಣರ ಸ್ವಾತಂತ್ರ್ಯ ಹೋರಾಟವನ್ನು ದಮನ ಮಾಡಲು ಭಾರೀ ಸೇನೆಯನ್ನು ಕಳುಹಿಸಿತು. ಪಾಕ್ ವಿಮಾನ ಬಲವು ಪಠಾಣರ ಅನೇಕ ಹಳ್ಳಿಗಳ ಮೇಲೆ ನಿರಂತರ ಬಾಂಬ್ ದಾಳಿ ಮಾಡಿತು. ೧೯೬೪ರ ಮಾರ್ಚಿನಿಂದ ಅಕ್ಟೋಬರ್ ವರೆಗಿನ ಅವಧಿಯಲ್ಲಿ ಅದು ನಿಶ್ಶಸ್ತ್ರರಾದ ಪಠಾಣರ ಹಳ್ಳಿಗಳ ಮೇಲೆ ೧೫ ಬಾರಿ ಬಾಂಬ್ ದಾಳಿ ನಡೆಸಿತೆಂದೂ ಫಕ್ತೂನ್ ಮೂಲಗಳಿಂದ ವ್ಯಕ್ತಪಟ್ಟಿದೆ. ಈ ಬಾಂಬ್ ದಾಳಿಗಳಲ್ಲಿ ಅನೇಕ ಸಲ ೧೯ ಫೈಟರ್ ವಿಮಾನಗಳೂ ಭಾಗವಹಿಸಿದ್ದುವು. ಈ ಬಾಂಬ್ ದಾಳಿಯಲ್ಲಿ ಅನೇಕ ಕಟ್ಟಡಗಳು ನೆಲಸಮವಾದುವಲ್ಲದೆ ಪಠಾಣರ ಅನೇಕ ಸ್ತ್ರೀ-ಪುರುಷರು ಮಕ್ಕಳು ಹತರಾದರು,

ಪಶ್ಚಿಮ ಮತ್ತು ವಾಯುವ್ಯ ಪ್ರದೇಶಗಳಲ್ಲಿನ ಪಠಾಣರು ಪಾಕ್ ಸರ್ಕಾರವು ತಮ್ಮ ಪ್ರದೇಶಗಳನ್ನು ಪಾಕಿಸ್ತಾನದಲ್ಲಿ ವಿಲೀನಗೊಳಿಸಿರುವ ಬಗೆಗೆ ಅಸಮಾಧಾನ ವ್ಯಕ್ತಗೊಳಿಸುತ್ತಿದ್ದಾರೆ. ಪಾಕ್ ಸರ್ಕಾರವು ಈ ವರೆಗೂ "ರಾಜಕೀಯ ಏಕಮತ್ಯ"ದ ಹೆಸರಿನಲ್ಲಿ ಪಠಾಣರ ಶೋಷಣೆ ಮಾಡುತ್ತಾ ಬಂದಿದ್ದು ಪಠಾಣರ ದುಃಖ ದುಮ್ಮಾನಗಳಿಗೆ ಕೊನೆ ಮಾಡಲು ಇಲ್ಲವಾಗಿದೆ. ಈ ಮೊದಲಿನ ವ್ಯವಸ್ಥೆಯಲ್ಲಿ ಪಠಾಣರಿಗಿದ್ದ ಆಡಳಿತ ಮತ್ತು ರಾಜಕೀಯ ಸ್ಥಾನಮಾನಗಳೂ ಇಂದು ಇಲ್ಲವಾಗಿವೆ. ಈ ಎಲ್ಲ ಸ್ಥಾನಮಾನಗಳನ್ನು ಪಶ್ಚಿಮ ಪಂಜಾಬಿನ ಜನರೇ ಆಕ್ರಮಿಸಿಕೊಂಡಿದ್ದಾರೆ.

ಪಶ್ಚಿಮ ಪಾಕಿಸ್ತಾನದ ಇತರ ಪ್ರಾಂತಗಳ ಜನರಂತೆಯೇ ಗಟ್ಟಿಗರು ಶೂರರು, ಆಗಿರುವ ಪಠಾಣರಿಗೂ ರಾಜಕೀಯ ಹೋರಾಟದ ಒಂದು ಹಿನ್ನೆಲೆಯಿದೆ. ಹೊಸ ಆಡಳಿತದ ಹತೋಟಿಯಲ್ಲಿ ಅವರು ಅನುಭವಿಸಬೇಕಾಗಿ ಬಂದ ಆರ್ಥಿಕ ದುರ್ದೆಸೆಯಿಂದ ಅವರ ಸ್ವಾತಂತ್ರ್ಯ ಹೋರಾಟ ಮತ್ತಷ್ಟು ಬಲಗೊಂಡಿದೆ.

ವಿಭಜನೆಯ ಯೋಜನೆ ಕಾರ್ಯಗತವಾಗುವ ಮೊದಲೇ ದೂರಾಂಡ್ ರೇಖೆಯ ಎರಡೂ ಪಕ್ಕದಲ್ಲಿದ್ದ ಫಕ್ತೂನ್ ನಿವಾಸಿಗಳು ತಮ್ಮ ಪ್ರದೇಶದ ಭವಿಷ್ಯದ ಬಗೆಗೆ ಚಿಂತಿಸಲು ಆರಂಭಿಸಿದರು. ಈ ಪ್ರದೇಶದ ಪರಮಾಧಿಕಾರ ಬ್ರಿಟನ್ನಿಗೆ ಸೇರಿದ್ದೆಂದು ಫಕ್ತೂನ್ ನಿವಾಸಿಗಳಿಗೆ ಪರಮಾಧಿಕಾರವಿಲ್ಲ ಎಂದೂ ಪ್ರತಿಪಾದಿಸುವ ಸಿದ್ಧಾಂತಕ್ಕೆ ಫಕ್ತೂನಿಗಳು ವಿರೋಧಿಯಾಗಿದ್ದರು. ವಿಭಜನೆಯ ನಂತರ ಉತ್ತರಾಧಿಕಾರಿ ರಾಷ್ಟ್ರವಾದ ಪಾಕಿಸ್ತಾನಕ್ಕೆ ಬ್ರಿಟನ್ ಗಿರಿಜನರ ಈ ಸ್ವತಂತ್ರ ಪ್ರದೇಶದ ಮೇಲಿನ ಹಕ್ಕನ್ನು ಬಿಟ್ಟುಕೊಟ್ಟಿತೆಂಬ ವಾದವು ಸಂವಿಧಾನದ ದೃಷ್ಟಿಯಿಂದ ಸಮರ್ಥನೀಯವಲ್ಲ

ಅಫ್ಘಾನಿಸ್ತಾನ್ ಮತ್ತು ಬ್ರಿಟಿಷ್ ಸರ್ಕಾರಗಳು ಫಕ್ತೂನಿಸ್ತಾನಕ್ಕೆ ಸಂಬಂಧಪಟ್ಟಂತೆ ಮಾಡಿಕೊಂಡ ಒಪ್ಪಂದಗಳು. ಉಪಖಂಡದಿಂದ ಬ್ರಿಟಿಷರು ನಿರ್ಗಮಿಸಿದ ನಂತರವೂ ಕ್ರಮಬದ್ಧವಾಗಿಯೇ ಉಳಿದಿವೆಯೆಂದೂ ಗಿರಿಜನರ ಈ ಸ್ವತಂತ್ರ ನಾಡಿನ ಮೇಲೆ ಯಾವ ಹಕ್ಕು ಇದೆ? ಎನ್ನುವುದು ಈಗಲೂ ಒಂದು ವಿವಾದಾಸ್ಪದ ವಿಷಯವಾಗಿದೆಯೆಂದೂ ಅನೇಕ ಜನ ಫಕ್ತೂನಿಗಳು ಅಭಿಪ್ರಾಯಪಟ್ಟಿದ್ದಾರೆ.

ಸಂವಿಧಾನ ಸಂಬಂಧವಾದ ಈ ಅಂಶವನ್ನು ಬಿಟ್ಟರೆ, ಗುಡ್ಡಗಾಡು ಪ್ರದೇಶವೂ ಸೇರಿ ಗಡಿಯಲ್ಲಿ ಪಠಾಣರ ಸ್ವತಂತ್ರನಾಡು ರಚಿತವಾಗಬೇಕೆಂದೂ ಫಕ್ತೂನಿಗಳು ಆರಂಭಿಸಿರುವ ಜನತಾ ಆಂದೋಲನವು ಗಮನಿಸಬೇಕಾದ ಇನ್ನೊಂದು ಅಂಶವಾಗಿದೆ. ವಿಭಜನೆಗಿಂತಲೂ ಮುಂಚೆಯೇ ಆರಂಭವಾಗಿರುವ ಈ ಆಂದೋಲನವು ಈಗ ಹೆಚ್ಚು ಹೆಚ್ಚು ಮೂರ್ತರೂಪ ಪಡೆಯುತ್ತಿದೆ. ೧೯೪೭ ಡಿಸೆಂಬರ್ ೨೧ರಂದು ಗಡಿನಾಡಿನ ಪ್ರಧಾನ ಮಂತ್ರಿ ಡಾ|| ಖಾನ್ ಸಾಹೇಬ್ ಅವರು ಪತ್ರಿಕೆಗಳಿಗೆ ನೀಡಿರುವ ಹೇಳಿಕೆಗಳಲ್ಲಿ "ಗಡಿನಾಡಿನ ಜನ ಎಂದೂ ಗುಂಪುಗಳು ಪಂಗಡಗಳ ವಿಷಯವಾಗಿ ಆಲೋಚಿಸಿದವರಲ್ಲ. ಅವರಿಗೆ ಸ್ವಾತಂತ್ರ್ಯ ದೊರೆಯಲೇ ಬೇಕು, ದೊರೆಯುತ್ತದೆ. ಗಡಿನಾಡಿನ ಜನ ಒಕ್ಕೊರಲಿನಿಂದ ತಮ್ಮ ಪ್ರದೇಶ ವಿಲೀನವಾಗಕೂಡದೆಂದು ಕೂಗಿದರೆ ಯಾರೂ ಅವರ ನಿರ್ಧಾರವನ್ನು ಬದಲಿಸಲಾರರು ಎಂದು ಹೇಳಿದ್ದಾರೆ ೧೯೪೭ರ ಜೂನ್ ೩ರಂದು ಲಾರ್ಡ್ ಲೂಯಿಸ್ ಮೌಂಟ್ ಬ್ಯಾಟನ್ ಅವರು ಭೌಗೋಳಿಕ ಮತ್ತು ಇತರ ಕಾರಣಗಳಿಂದಾಗಿ ವಾಯುವ್ಯ ಸರಹದ್ದಿನ ಪ್ರಾಂತ್ಯಕ್ಕೆ ಒಂದು ವಿಶಿಷ್ಟ ಸ್ಥಾನವಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ವಾಯುವ್ಯ ಸರಹದ್ದಿನ ಪ್ರಾಂತ್ಯಕ್ಕೆ ಪ್ರತ್ಯೇಕ ಅಸ್ತಿತ್ವವಿದೆಯೆಂದು ಒಪ್ಪಿಕೊಂಡಿರುವುದರಿಂದ ವಿಭಜನೆಯ ಕಾಲದಲ್ಲಿ ಈ ಪ್ರದೇಶದ ಜನರಿಗೆ ಪಾಕಿಸ್ತಾನದಿಂದ ಪ್ರತ್ಯೇಕವಾಗಿ ಉಳಿಯುವ ಹಕ್ಕನ್ನು ನೀಡಬೇಕಾಗಿತ್ತು. ಆದರೆ ಈ ಹಕ್ಕನ್ನು ನಿರಾಕರಿಸಲಾಗಿದೆ.

ಪಾಕಿಸ್ತಾನ ಸರ್ಕಾರವು ಪಠಾಣರ ಬೇಡಿಕೆಯನ್ನು ದುರ್ಬಲಗೊಳಿಸಲು ಜನಮತಗಣನೆಯ ಆಹ್ವಾನನೆ ನೀಡಿತು. ಜನಮತಗಣನೆಯ ಕಾಲದಲ್ಲಿ ಅವರಿಗೆ ನೀಡಿದ ಸ್ವಾತಂತ್ರ್ಯ ಸಂಕುಚಿತವಾಗಿತ್ತು. ಆಗ ಅವರನ್ನು ಭಾರತ ಇಲ್ಲವೇ ಪಾಕಿಸ್ತಾನಕ್ಕೆ ಸೇರಬೇಕೆಂದು ಕೇಳಲಾಯಿತು. ಸ್ವತಂತ್ರವಾಗಿ ಉಳಿಯುವ ಮೂರನೆಯ ಮಾರ್ಗವೇ ಅವರಿಗೆ ಇರಲಿಲ್ಲ.

ಖಾನ್ ಅಬ್ದುಲ್ ಗಫಾರ್ ಖಾನ್ ಅವರು ೧೯೪೭ರ ಜೂನ್ ೨೧ರಂದು ಬನ್ನೂನಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಾ "ಪಠಾಣರು ಪಾಕಿಸ್ತಾನ್-ಪಠಾಣಿಸ್ತಾನ್ ಸಿದ್ಧಾಂತದ ಆಧಾರದ ಮೇಲೆ ನಡೆಯುವ ಜನಮತಗಣನೆಯಲ್ಲಿ ಭಾಗವಹಿಸಲು ಸಿದ್ಧರಿರುವರು, ಆದರೆ ಹಿಂದೂಸ್ತಾನ್ ಪಾಕಿಸ್ತಾನ್ ಸಿದ್ಧಾಂತದ ಆಧಾರದ ಮೇಲೆ ಮಾತ್ರ ಅವರು ಭಾಗವಹಿಸಲಾರರು" ಎಂದೂ ಸ್ಪಷ್ಟಗೊಳಿಸಿದರು. ಅದೇ ವರ್ಷದ ಜೂನ್ ೨೮ರಂದು ಚಾರಸದ್ದಾನಲ್ಲಿ ಮತ್ತೊಂದು ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ "ಫಕ್ತೂನಿಗಳಿಗೆ ಸ್ವಯಮಾಡಳಿತ ಅಧಿಕಾರವುಳ್ಳ ಸ್ವತಂತ್ರ ಪಠಾಣಿಸ್ತಾನ್ ಬೇಕು

(ಹತ್ತನೇ ಪುಟ ನೋಡಿರಿ)

ಪುತ್ತೂರು ಮು ಕೋರ್ಟಿನಲ್ಲಿ,

O. S. 131/ 64

ಪರಮೇಶ್ವರಿ ಸಹಾ— ವಾದಿರು
ಪಕೀರ ರೈ ಸಹಾ— ಪ್ರತಿವಾದಿರು.
ಪ್ರತಿವಾದಿರು

23) ಪಗಾಡ್ತಿ— ಅರ್ಕೈ ರೈಗಳ ಮಗಳು ಕೆದಂಬಾಡಿ ಗ್ರಾಮದಲ್ಲಿ— ಪುತ್ತೂರು ತಾಲ್ಲೂಕು
24) ಕಮಲ— ಅರ್ಕೈರೈಗಳ ಮಗಳು
27) ಜೇನಮತಿ
28) ಸೋಮಪ್ಪ
29) ಪುರಂದರ
} ವ್ಯಾನರರು ಅರ್ಕೈ ರೈಯವರ ಮೊಮ್ಮಕ್ಕಳು--ಗಾಡಿಗೆಯೂನ ತಂದೆ ಮುತ್ತಪ್ಪ ರೈ ಇವರೆಲ್ಲರೂ ಮಡಿಕೇರಿ ತಾಲ್ಲೂಕು ಮೂರ್ನಾಡಿನಲ್ಲಿರುತ್ತಾರೆ.

31) ಪೆಂಕಪ್ಪ ರೈ- ರಾಮಣ್ಣ ರೈಗಳ ಮಗ. ಮಡಿಕೇರಿ ತಾಲ್ಲೂಕು ಸೋಮವಾರಪೇಟೆ.

ಇವರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ವಾದಿ ಆಸ್ತಿಯನ್ನು 61 ಪಾಲು ಮಾಡಿ 20 ಪಾಲುಗಳನ್ನು ವಾದಿಗೂ ಮತ್ತು 12 ಪಾಲುಗಳನ್ನು 2 ನೇ ವಾದಿಗೂ ಕೊಡಬೇಕಾಗಿ ಮಾಡಿದ ದಾವೆಯನ್ನು ತಾ 9-11-64 ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ ಸದ್ರಿ ದಿವಸ ಈ ಕೋರ್ಟಿನ ಮುಂದೆ ಹಾಜರಾಗಿ ಉಪಯರಿಸತಕ್ಕದ್ದು ತಪ್ಪಿದಲ್ಲಿ ನಿಮ್ಮನ್ನು [illegible] ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/-M. Sadashiva Rao
Vakil for petitionar.

ಪುತ್ತೂರು 26—10—64

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೇಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ. ಪ್ರತ್ಯೇಕ)

ನವಭಾರತ ಪುಸ್ತಕ ಭಂಡಾರ, ಉಡುಪಿ.

ನೀವು ಕಿವುಡರೆ?

ಅಲ್ಲಿ, ಕಿವುಡತನವೂ ದೂರವಾಗುತ್ತಿದೆ!

ಧ್ವನಿ ಚಿಕಿತ್ಸೆಗೆ ಜಗತ್ತಿನಲ್ಲಿ ವಿಶೇಷ ಮಹತ್ವವಿದೆ. ಜೆಕೊಸ್ಲೊವಾಕಿಯದಲ್ಲಿರುವ ಅನೇಕ ಚಿಕಿತ್ಸಾ ಕೇಂದ್ರಗಳಲ್ಲಿ ೩೦೦೦ ಕ್ಕಿಂತಲೂ ಹೆಚ್ಚು ಜನ ತಜ್ಞರಿದ್ದಾರೆ ಮಾತಿನ ಅಥವಾ ಶ್ರವಣ ಶಕ್ತಿಯ ದೋಷ ಪೀಡಿತರಾದ ಮಕ್ಕಳಿಗೆ ಬಾಲ್ಯದಿಂದಲೇ ಚಿಕಿತ್ಸೆ ನಡೆಯುತ್ತದೆ ದೋಷಗಳನ್ನು ತಿದ್ದಲು ವಿಶೇಷ ಶಿಕ್ಷಣಾಲಯಗಳೂ ಇವೆ. ಪ್ರೊ. ಜೆ. ಸೊವಾಕ್‌ರವರೂ, ಪ್ರೊ. ಮಿಲೊಸ್ಲಾವ್ ಸಿಮನ್‌ರವರೂ ಈ ವ್ಯವಸ್ಥೆಯ ನೇತೃತ್ವ ವಹಿಸಿದ್ದಾರೆ.

ಮೊರಾವಿಯಂ ಓಲೊಮೊವುಸ್ ಪಟ್ಟಣದ ಶ್ರವಣ ದೋಷ ಚಿಕಿತ್ಸಾಲಯದಲ್ಲಿ, ಮಾತನಾಡದಿರುವ ಕಿವುಡರೆಂದೆನಿಸಿಕೊಂಡಿರುವ ಮಕ್ಕಳಿಗೆ ಚಿಕಿತ್ಸೆ ನಡೆಯುತ್ತದೆ. ಹತ್ತು ವರ್ಷಗಳ ಚಿಕಿತ್ಸೆಯ ತರುವಾಯ ಆ ಮಕ್ಕಳು ಯುವಕರಾಗಿ, ಮಾತನಾಡ ಬಲ್ಲವರಾಗಿ ಒಂಬತ್ತನೆಯ ತರಗತಿಯ ವರೆಗಿನ ಶಿಕ್ಷಣ ಪಡೆದು ಹೊರಬರುತ್ತಾರೆ.

ಈ ಶಿಶು ವಿದ್ಯಾಲಯದ ತರಗತಿಗಳು ಸಾಮಾನ್ಯವಾಗಿದ್ದರೂ ಅಲ್ಲಿ ಮಕ್ಕಳು ಹೆಚ್ಚು ಶ್ರಮ ಪಡಬೇಕಾಗುತ್ತದೆ. ಅವರಿಗೆ ಉಳಿದಿರುವ ಶ್ರವಣ ಶಕ್ತಿಯ ಸದುಪಯೋಗವನ್ನು ಮಾಡಿಕೊಳ್ಳಲಾಗುತ್ತದೆ. ಉಪಾಧ್ಯಾಯರು ಗಟ್ಟಿಯಾಗಿ ಸುವ್ಯಕ್ತವಾಗಿ ಶಬ್ದಗಳನ್ನು ಉಚ್ಚರಿಸುತ್ತ ಧ್ವನಿ ಪರಿಚಯವನ್ನು ಮಕ್ಕಳಿಗೆ ಮಾಡಿಕೊಡುತ್ತ, ಮಾತನಾಡಲು ಅವರಿಗೆ ಪ್ರೋತ್ಸಾಹ ಕೊಡುತ್ತಾರೆ. ಮಕ್ಕಳೂ ತುಟಿಯೋದನ್ನು ಅಭ್ಯಾಸ ಮಾಡುತ್ತಾರೆ. ಉಪಾಧ್ಯಾಯರ ತುಟಿಯ ಚಲನೆಯನ್ನು ಮತ್ತು ತಮ್ಮ ತುಟಿಯ ಚಲನೆಯನ್ನೂ ಹೋಲಿಸಲು ವಿಶಿಷ್ಟ ಕನ್ನಡಿಯನ್ನು ಬಳಸಲಾಗುತ್ತದೆ. ಬೇರೆ ಬೇರೆ ಶಬ್ದಗಳಿಂದ ಉಂಟಾಗುವ ಕಂಪನವನ್ನು ಗುರುತಿಸಲು ಅವರು ಗಂಟಲನ್ನೂ ತಲೆಯ ತುದಿಯನ್ನೂ ಮುಟ್ಟಿ ನೋಡಿಕೊಳ್ಳುತ್ತಿರುತ್ತಾರೆ.

ಬಗೆಬಗೆಯ ಉಪಕರಣಗಳ ಶಬ್ದಗಳನ್ನು ಗುರುತಿಸುವುದನ್ನು ಅವರು ಬೇರೆ ತರಗತಿಗಳಲ್ಲಿ ಕಲಿಯುತ್ತಾರೆ. ಶಾಲೆಯ ಪ್ರತಿಯೊಂದು ವ್ಯಾಸಂಗಾವಧಿಯಲ್ಲಿಯೂ ಅವರು ಸುಮಾರು ನೂರು ಶಬ್ದಗಳನ್ನು ಓದಲು ಬರೆಯಲು ಕಲಿಯುತ್ತಾರೆ.

ಒಂದು ವರ್ಷದ ಸಿದ್ಧತೆಯ ಪಾಠಕ್ರಮದ ತರುವಾಯ ಮಕ್ಕಳನ್ನು ಮೊದಲನೆಯ ದರ್ಜೆಗೆ ಸೇರಿಸಲಾಗುತ್ತದೆ. ತಮ್ಮ ಮಾತುಗಾರಿಕೆಯನ್ನು ಅವರು ಅಭಿವೃದ್ಧಿಗೊಳಿಸಿಕೊಳ್ಳುತ್ತ ಮುಂದಿನ ತರಗತಿಗಳಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಾರೆ. ಅತ್ಯಾಧುನಿಕ ವಿದ್ಯುತ್—ಧ್ವನಿ ವೈಜ್ಞಾನಿಕ ಯಂತ್ರಗಳನ್ನೂ ವೈಯ್ಯಕ್ತಿಕ ಕರ್ಣವಾಣಿ ಯಂತ್ರಗಳನ್ನೂ ಬಳಸಲಾಗುತ್ತದೆ. ಈ ಯಂತ್ರಗಳನ್ನು ಜೆಕೊಸ್ಲೊವಾಕಿಯಾದ ಕಾರಖಾನೆಗಳು ತಯಾರಿಸುತ್ತವೆ.

ಈ ತರಬೇತಿ ಮತ್ತು ಶಾಲಾ ಶಿಕ್ಷಣದ ಜತೆಗೆ ಈ ಮಕ್ಕಳಿಗೆ ವೈದ್ಯಕೀಯ ಚಿಕಿತ್ಸೆಯನ್ನೂ ನಡೆಸಲಾಗುತ್ತದೆ. ಅವರಿಗೆ ಉಳಿದ ಶ್ರವಣ ಶಕ್ತಿಯನ್ನು ಬಲಪಡಿಸಲು ಚುಚ್ಚು ಮದ್ದುಗಳ ವಿಶೇಷ ಚಿಕಿತ್ಸೆ ನಡೆಯುತ್ತದೆ— ಆರು ತಿಂಗಳಿಗೊಮ್ಮೆ ಕಾಲಕಾಲದಲ್ಲಿ ಅವರ ಶ್ರವಣ ಶಕ್ತಿಯನ್ನು ಶ್ರವಣ ಮಾಪಕ ಯಂತ್ರಗಳ ಸಹಾಯದಿಂದ ಪರೀಕ್ಷಿಸಲಾಗುತ್ತದೆ.

ಈ ವಿದ್ಯಾಲಯದಲ್ಲಿ ಅನೇಕ ವರ್ಷ ಚಿಕಿತ್ಸೆ ಶಿಕ್ಷಣ, ತರಬೇತು ಪಡೆದ ವಿದ್ಯಾರ್ಥಿಗಳು ಸಮಾಜದ ಅಮೂಲ್ಯ ಸದಸ್ಯರಾಗುತ್ತಾರೆಂದರೆ ಅದರಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ಒಂಬತ್ತು ತರಗತಿಗಳ ಮೂಲ ಶಿಕ್ಷಣ ಮುಗಿಸಿ, ಅವರು ತಮ್ಮ ವಯಸ್ಸಿನ ಇತರ ಮಕ್ಕಳಂತೆಯೇ ಎಲ್ಲ ಅವಕಾಶಗಳನ್ನೂ ಪಡೆಯುತ್ತಾರೆ. ಅದರಲ್ಲಿ ಅತ್ಯಂತ ಪ್ರತಿಭಾವಂತರಾದವರು ವ್ಯಾಸಂಗವನ್ನು ಮುಂದುವರಿಸುತ್ತಾರೆ. ಅದರಲ್ಲ ಕೆಲವರು ಪದವೀಧರರೂ ಆಗುತ್ತಾರೆ. ಆ ಉಳಿದವರು ವಿಶಿಷ್ಟ ವೃತ್ತಿಗಳ ತರಬೇತನ್ನು ಪಡೆಯುತ್ತಾರೆ.

ಈ ವಿದ್ಯಾಲಯದ ವಿದ್ಯಾರ್ಥಿಗಳು ತಮ್ಮ ವ್ಯಾಸಂಗಾವಧಿಯಲ್ಲಿಯೇ ಸ್ಥಳೀಯ ಶಬ್ದಿಣ—ಉತ್ಪಾದನಾ ಕಾರ್ಖಾನೆಯಲ್ಲಿ ತರಬೇತು ಪಡೆಯುತ್ತಾರೆ. ಕಾರಖಾನೆಯ ಯುವಕ ಕಾರ್ಮಿಕರು ತಮ್ಮ ಈ ಬಂಧುಗಳಿಗೆ ಸಹಾಯ ಮಾಡುತ್ತಾರೆ, ಅನೇಕ ಸಂದರ್ಭಗಳಲ್ಲಿ ಶಿಶು ವಿದ್ಯಾಲಯದ ಪದವೀಧರರು ತಮ್ಮ ವಯಸ್ಸಿನ ಇತರ ಕೆಲಸಗಾರರನ್ನು ಮೀರಿಸಿರುವುದೂ ಉಂಟು.

ಪಲಾಸ್ಕಿ ವಿಶ್ವವಿದ್ಯಾಲಯದ ವೈದ್ಯಕೀಯ ವಿದ್ಯಾಲಯದ ಕರ್ಣ ಚಿಕಿತ್ಸಾಲಯದೊಡನೆ ಈ ಶಿಶು ವಿದ್ಯಾಲಯವು ವಿಶೇಷ ಸಂಪರ್ಕವನ್ನು ಹೊಂದಿದೆ

ಜೆಕೊಸ್ಲೊವಾಕಿಯದಲ್ಲಿ ಇಂತಹ ವಿದ್ಯಾಲಯಗಳು ಇನ್ನೂ ಇವೆ. ಇವು ಹೀಗೆ ಅದೃಷ್ಟ ಹೀನರಾಗಿರುತ್ತಿದ್ದ ಮಕ್ಕಳಿಗೆ ಇಂದು ಸಹಜವಾದ ಫಲಪ್ರದವಾದ ಜೀವನವನ್ನು ಸಾಧ್ಯಗೊಳಿಸಿವೆ. ನಮ್ಮ ದೇಶದಲ್ಲೂ ಈ ಚಿಕಿತ್ಸೆ ಸಾಧ್ಯವೆನಿಸಬಹುದೆ?

ಕ್ಷಯರೋಗದ ವಿರುದ್ಧ ಅಸ್ತ್ರಗಳು

ಕ್ಷಿಪ್ರ ರೋಗನಿದಾನ

ಕ್ಷಯರೋಗದ ಶೋಧನೆ, ಎದೆಯ ಕ್ಷ-ಕಿರಣ ಮತ್ತು ಪ್ರಯೋಗ ಶಾಲೆಯ ಶೋಧನೆಗಳಿಂದ ಕ್ಷಯರೋಗದ ಸಂಶಯವಿಲ್ಲದ ರೋಗಿಗಳನ್ನೂ ಕಂಡು ಹಿಡಿಯಬಹುದು. ಕುಟುಂಬದಲ್ಲಿನ ಬಿಂದು ವಿಧ್ಯಮಾನವು ಎಲ್ಲರ ಪರೀಕ್ಷೆಯಿಂದ ಚಟುವಟಿಕೆಯ ಅಂಟುರೋಗ ಹಬ್ಬುವಿಕೆಯ ಇತರ ವಿಧ್ಯಮಾನಗಳನ್ನು ಕೂಡ ಪರಿಶೋಧಿಸಲು ಸಹಾಯಕವಾಗುವುದು. ಕ್ಷಿಪ್ರ ರೋಗ ನಿದಾನವು ಕ್ಷಿಪ್ರ ಚಿಕಿತ್ಸೆಯೆನಿಸುವುದು.

ಚಿಕಿತ್ಸೆ

ಐಸೋನಿಯಾಝಿಡ್, ಸ್ಟ್ರೆಪ್ಟೊಮೈಸಿನ್, ಪಿಎಎಸ್ ಮತ್ತು ಥಾಯಸೆಟಾಝೋನ್ ಇವುಗಳು ಹೆಚ್ಚಾಗಿ ಉಪಯೋಗಿಸುವ ಔಷಧಿಗಳು. ಇವುಗಳು ಒಬ್ಬ ರೋಗಿಯಲ್ಲಿರುವ ಎಲ್ಲಾ ರೋಗಾಣುಗಳನ್ನು ಯಾವಾಗಲೂ ನಾಶಪಡಿಸದಿದ್ದರೂ ಬೆಳೆಯುವುದನ್ನು ತಡೆಗಟ್ಟುತ್ತವೆ, ಎಲ್ಲಾ ಕ್ಷಯರೋಗಿಗಳಿಗೆ ಪ್ರಯೋಗನೂಡಿ ಔಷಧಗಳನ್ನು ಬಿಡದೆ ದೀರ್ಘ ಕಾಲ ಕೊಡುವುದರಿಂದ ಹೆಚ್ಚಿನವರು ಗುಣ ಹೊಂದುವರು.

ಕ್ಷಯರೋಗದ ವಿರುದ್ಧ ಈ ಅಸ್ತ್ರಗಳಿಗೆ ನಿಧಿ ಅಗತ್ಯ. ಅಗತ್ಯವಿರುವ ನಿಧಿಗಳನ್ನೆತ್ತಲು ಮುದ್ರೆ ಮಾರಾಟ ಚಳವಳವು ಸಾಧನವಾಗಿರುವುದು,



ಕ್ಷಯರೋಗ ಮುದ್ರೆಗಳನ್ನು ಕೊಂಡುಕೊಂಡು ನಿಮ್ಮ ರಾಜ್ಯದ ಕ್ಷಯರೋಗ ಸಂಸ್ಥೆಗಳನ್ನು ಬಲಪಡಿಸಿರಿ. ಒಂದು ಕ್ಷಯರೋಗ ಮುದ್ರೆಯಬೆಲೆ ಹತ್ತು ಪೈಸೆ ಮಾತ್ರ.

ಮುದ್ರೆಗಳು ಇವರಲ್ಲಿ ದೊರೆಯುವುವು:–ದಕ್ಷಿಣ ಕನ್ನಡ ಜಿಲ್ಲಾ ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್,
ಮಂಗಳೂರು ಮತ್ತು ಅದರ ಇತರ ಏಜನ್ಸಿಗಳು.

15ನೇ ಕ್ಷಯರೋಗ ಮುದ್ರೆ ಮಾರಾಟ ಚಳವಳ

(ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, ನ್ಯೂ ಡಿಲ್ಲಿ—ಇವರ ನೋಡಿಗಾರಿಕೆಗೊಳಪಟ್ಟುದು.)

ಸ್ಥಳ ದಾನ ಮಾಡಿದವರು:
ಆಂಗ್ಲೊ-ಫ್ರೆಂಚ್ ಟೆಕ್ಸ್‌ಟೈಲ್ಸ್ ಲಿ., ಪಾಂಡಿಚೇರಿ.

ವೈದ್ಯಕೀಯ

ಚಲಿಸುವ ಆಸ್ಪತ್ರೆಗಳು

ವೈದ್ಯಸೌಕರ್ಯಗಳಿಲ್ಲದ ಗ್ರಾಮಾಂತರ ಪ್ರದೇಶಗಳಲ್ಲಿರುವವರ ಸೌಕರ್ಯಕ್ಕಾಗಿ ಪಶ್ಚಿಮ ಜರ್ಮನಿಯು ಇದುವರೆಗೆ ಮೂವತ್ತೇಳು 'ಚಲಿಸುವ ಆಸ್ಪತ್ರೆ' ಗಳನ್ನು ದಾನ ಮಾಡಿದೆ. ಶಸ್ತ್ರ ಚಿಕಿತ್ಸೆಗೆ ಬೇಕಾದ ಉಪಕರಣಗಳು, ಔಷಧಗಳು ಕೂಡ ಇದರಲ್ಲಿವೆ. ಕಾಲ್ನಡೆಗಳ ಚಿಕಿತ್ಸೆಗೂ ಇದರಲ್ಲಿ ಅನುಕೂಲ್ಯವಿದೆ. ಭಾರತಕ್ಕೂ ಇಂತಹ ಒಂದು ಆಸ್ಪತ್ರೆ ದೊರೆತಿದೆ.

'ಅಯ್ಯೋ, ಖಾಯಿಲೆ ಹೆಚ್ಚುತ್ತಿದೆ. ಈಗ ಏನು ಗತಿ? ಈ ಹಳ್ಳಿಗಾಡಿನಲ್ಲಿ ಸರಿಯಾದ ವೈದ್ಯರೂ ಇಲ್ಲ' ಎಂದು ಹೇಳಿ ಅಳುತ್ತ ಕುಳಿತುಕೊಳ್ಳುವ ಕಾಲವು ದೂರಾಗುತ್ತ ಬರುತ್ತಿದೆ. ಗ್ರಾಮಾಂತರ, ದ್ವೀಪಾಂತರ ಆಷ್ಟೇಕೆ, ನಾಗರಿಕತೆಯ ಕುರುಹೇ ಇಲ್ಲದ ಪ್ರದೇಶಗಳಿಗೂ ವೈದ್ಯಕೀಯ ಚಿಕಿತ್ಸೆಯನ್ನು ನೀಡಬಲ್ಲ ಚಲಿಸುವ ಆಸ್ಪತ್ರೆಗಳು ಒಂದು ವರ ಪ್ರಸಾದವೆಂದೇ ಹೇಳಬೇಕು. ಇವು ನೆಲ ಜಲಗಳಲ್ಲಿ ಸಂಚರಿಸ ಬಲ್ಲವು. ಸಾಂಕ್ರಾಮಿಕ ರೋಗಗಳು ಹರಡದಂತೆ ಹಳ್ಳಿ ಹಳ್ಳಿಗಳಿಗೆ ಚುಚ್ಚು ಮದ್ದನ್ನು ನೀಡಲು ಇದು ಅತ್ಯುಪಯುಕ್ತವಾದುದು.

ಜರ್ಮನಿಯು ಏಷ್ಯಾ, ಆಫ್ರಿಕಾ, ದಕ್ಷಿಣ ಅಮೆರಿಕೆಗಳ ಮೂವತ್ತೇಳು ದೇಶಗಳಿಗೆ ಈ ಆಸ್ಪತ್ರೆಗಳನ್ನು ಕಳಿಸಿಕೊಟ್ಟಿದೆ. ಭಾರತ. ಇಂಡೋನೇಶ್ಯ, ಜಪಾನ್, ಉತ್ತರ ಮತ್ತು ಪಶ್ಚಿಮ ಆಫ್ರಿಕೆಯ ದೇಶಗಳು ಇವನ್ನು ಹೊಂದಿವೆ.

ದೇಶ—ಭಾಷೆ—ಮತ ಮೊದಲಾದುವನ್ನು ಗಣಿಸದೆ ಎಲ್ಲರಿಗೂ ವೈದ್ಯಕೀಯ ಸೌಲಭ್ಯ ನೀಡುವುದೇ ಈ ಆಸ್ಪತ್ರೆಗಳ ತಯಾರಿಯ ಉದ್ದೇಶ. ಸಾಂಕ್ರಾಮಿಕ ರೋಗಗಳ ಪ್ರಸಾರವನ್ನು ನಿಯಂತ್ರಿಸಿ ಪ್ರಜೆಗಳು ಅಪಮೃತ್ಯುವಿಗೊಳಗಾಗುವುದನ್ನು ಆದಷ್ಟು ಕಡಿಮೆ ಮಾಡುವ ಸಲುವಾಗಿಯೇ ಈ ಆಸ್ಪತ್ರೆಗಳಿವೆ.

ಚಲಿಸುವ ಆಸ್ಪತ್ರೆಗಳನ್ನು ಹಾನೋವರ ಬಳಿಯ ಲ್ಯಾಂಗೆನ್ ಹ್ಯಾಗೆನ್‌ನಲ್ಲಿ

(೧೦ ನೇ ಪುಟ ನೋಡಿರಿ)

ಭಾರತ ದರ್ಶನ

ಪ್ರಗತಿಯ ದಾರಿಯಲ್ಲಿ

ಸಾರ್ವಭೌಮ ರಾಷ್ಟ್ರ ಭಾರತದ ಪ್ರಜೆಗಳಾದ ನಾವು ದೀಪಾವಳಿಯ ದಿವ್ಯ ಪ್ರಕಾಶದಲ್ಲಿ ನಮ್ಮ ಕಡೆಗೇನೇ ಕುಸು ನೋಡಿಕೊಳ್ಳುವುದವಶ್ಯ. ಸ್ವಾತಂತ್ರ್ಯ ಪ್ರಾಪ್ತಿಯ ವೇಳೆಯಲ್ಲಿ ನಾವು ಹತವೀರ್ಯರಂತಿದ್ದೆವು. ನಮ್ಮ ದೇಶವೆಲ್ಲಾ ಬರಿದೋ ಬರಿದಾಗಿತ್ತು ಸ್ವಾತಂತ್ರ್ಯ ಜ್ಯೋತಿಯಾ ಹೊಂಬೆಳಕಿನಲ್ಲಿ ಪ್ರಗತಿ ಮಾರ್ಗದತ್ತ ನಾವು ಗಮಿಸಲಾರಂಭಿಸಿದೆವು. ಯೋಜನೆಗಳನ್ನು ರೂಪಿಸಿದೆವು., ಅವನ್ನು ಅನುಷ್ಠಾನಕ್ಕೆ ತಂದೆವು, ಈ ಸಮಯದಲ್ಲಿ ನಾವೆದ್ದೆವು; ಎದ್ದು ಬಿದ್ದೆವು, ಬಿದ್ದು ಮತ್ತೆ ಎದ್ದೆವು ಏಕನಿಷ್ಠೆಯಿಂದ ಸಮಾಜವಾದಿ ಮಾದರಿಯ ಸಮಾಜವನ್ನು ಪ್ರಜಾಪ್ರಭುತ್ವದ ಅಡಿಗಲ್ಲಿನ ಮೇಲೆ ಕಟ್ಟುವಲ್ಲಿ ನಾವಿಂದು ನಿರತರಾಗಿದ್ದೇವೆ.

ದೊಡ್ಡ ದೊಡ್ಡ ವಿಮಾನ— ಯಂತ್ರಾದಿಗಳಿಂದ ಹಿಡಿದು ಚಿಕ್ಕ ಪುಟ್ಟ ಗುಂಡಿಸೂಜಿಗಳ ವರೆಗೂ ಎಲ್ಲವೂ ವಿದೇಶಗಳಿಂದ ನಮ್ಮ ಮಾತೃ ಭೂಮಿಗೆ ಹಂದುಸುರಿಯ ಬೇಕಾದ ಕಾಲವೊಂದಿತ್ತು. ಆದರೆ, ಇಂದು ಹೀಗಿಲ್ಲ. ನಮ್ಮ ಆಂತರಿಕ ಬುದ್ಧಿಶಕ್ತಿ, ಸಂಪನ್ಮೂಲ ಮತ್ತು ಜನಶಕ್ತಿಯಿಂದ ಹಾಗೂ ನಮ್ಮ ವಿದೇಶೀ ಮಿತ್ರರ ನೆರವಿನಿಂದ ನಾವು ಸಾಕಷ್ಟು ಮುಂದುವರಿದಿದ್ದೇವೆ. ಪ್ರತಿಯೊಂದಕ್ಕೂ ವಿದೇಶಗಳ ಮುಖ ನೋಡುವ ದಿನ ಬಹು ಬೇಗನೆ ತಪ್ಪಿ, ಸ್ವಾವಲಂಬಿಯಾಗುವ ದಿನ ಬರಬೇಕು. ಶತ್ರು ಭೀತಿಯಿಲ್ಲದೆ, ಸ್ವಾವಲಂಬಿಗಳಾಗಿ ಬದುಕುವ ದಿನವನ್ನು ನಾವೆಲ್ಲ ಎದುರು ನೋಡುತ್ತಿರಬೇಕು, ಆ ದಿನವೇ ನಮಗೆಲ್ಲರಿಗೂ ಹುಮ್ಮಸದ ದೀಪಾವಳಿ.

ಸಾಂಪ್ರದಾಯಿಕ ದೀಪಾವಳಿಯ ಬೆಳಕಿನಲ್ಲಿ ನಾವು ನಮ್ಮನ್ನೇ ನೋಡಿಕೊಂಡರೆ, ನಿರಾಶರಾಗುವ ಅಗತ್ಯವಿಲ್ಲ ನಾವು ಮುಂದರಿದ ಗತಿಯು ಉತ್ತಮೋತ್ತಮವೆನ್ನುವಂತಿಲ್ಲವಾದರೂ ಅಭಿಮಾನಾಸ್ಪದವಾಗಿದೆ. ಇಲ್ಲಿ ನಮ್ಮ ಪ್ರಗತಿ ಪಥಗಮನದ ಕೆಲವು ಮೈಲುಗಲ್ಲುಗಳನ್ನು ಉಲ್ಲೇಖಿಸಬಹುದು.

ಚಿತ್ರ ೧.

ಲಾಮಾ ಮತ್ತು ಗೋಂಪಾ ಎಂಬ ಜಾತಿಯ ಜನರು ಲಡಖದಲ್ಲಿ ವಾಸ ಮಾಡುತ್ತಿದ್ದಾರೆ ಹಿಮಾಲಯದ ಈ ಉತ್ತುಂಗ ಸೋಪಾನಗಳಲ್ಲಿಯೂ ಸಾಕ್ಷರತೆಯು ಪ್ರಸಾರ ಭರದಿಂದ ಸಾಗುತ್ತಿದೆ. ೬ರಿಂದ ೧೨ ವರ್ಷ ಮಿತಿಯೊಳಗಿನ ಎಲ್ಲ ಹುಡುಗ ಹುಡುಗಿಯರಿಗೂ ಶಿಕ್ಷಣ ಸೌಲಭ್ಯವನ್ನು ಒದಗಿಸುವುದು ನಮ್ಮ ಹೆಗ್ಗುರಿ. ಇದಕ್ಕಾಗಿ ಪ್ರತಿ ಗ್ರಾಮದಲ್ಲಿಯೂ ಕನಿಷ್ಟ ಒಂದಾದರೂ ಪ್ರಾಥಮಿಕ ಶಾಲೆಯನ್ನು ತೆರೆಯುವ ದೃಢನಿರ್ಧಾರ ನಮ್ಮದು. ಈ ಚಿತ್ರದಲ್ಲಿ ಲೇಹದ ನೂತನ ಶಾಲೆಯೊಂದರಲ್ಲಿ ಲಡಾಖದ ಬಾಲ ಬಾಲಿಕೆಯರು ಅಧ್ಯಯನ ನಿರತರಾಗಿರುವುದನ್ನು ಕಾಣಬಹುದು

೨



ಚಿತ್ರ ೨.

ಭಾರತವು ಜಾತ್ಯತೀತ ರಾಷ್ಟ್ರ. ಅದು ಯಾವ ಮತವನ್ನಾಗಲೀ ಧರ್ಮವನ್ನಾಗಲೀ ಪುರಸ್ಕರಿಸುವುದಿಲ್ಲ. ಅಂದರೆ ಎಲ್ಲಾ ದರ್ಮಾವಲಂಬಿಗಳು ತಂತಮ್ಮ ಧರ್ಮವನ್ನು, ಆಚಾರಗಳನ್ನು ಯಾವ ಅಡೆತಡೆಗಳೂ ಇಲ್ಲದೆ ಆಚರಿಸಲು ಸ್ವತಂತ್ರರಿದ್ದಾರೆ. ಸರಕಾರವು ಅದರಲ್ಲಿ ಕೈ ಹಾಕುವುದಿಲ್ಲ. ನಮ್ಮ ಸಂವಿಧಾನವು ನಮಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಕೊಡಮಾಡಿದೆ. ಈ ಚಿತ್ರವು ಲಡಖದ ಲಾಮಾಗಳ ಅಂತಿಮ ವಿಶ್ರಾಂತಿ ಪಡೆಯುವ "ಚೋರ್ಟನ್" ಗಳನ್ನು ತೋರಿಸುತ್ತದೆ ಭಾರತದಲ್ಲೆಲ್ಲಾ ಆಯಾಯ ಧರ್ಮೀಯರ ಪ್ರತಿ ಪ್ರತ್ಯೇಕ ಅಂತಿದು ವಿಶ್ರಾಮ ಭೂಮಿಗಳಿರುತ್ತವೆ.

ಚಿತ್ರ ೩

ಇದ್ದಲಿಗ ಹೆಸರಾದ ಬಿಹಾರ ರಾಜ್ಯದಲ್ಲಿ ಕಥರಾ ಎಂಬುದೊಂದು ಕ್ಷೇತ್ರ ಹಜಾರಿಬಾಗ ಜಿಲ್ಲೆಯಲ್ಲಿ ಇದು ಇದೆ. ಗನಿ

ಭಾರತ

ಗಳಿಂದ ಎತ್ತಿದ ಇದ್ದಲನ್ನು ರೇಲ್ವೆ ವೆಗೂನ್ ಮತ್ತು ಟ್ರಕ್ಕುಗಳಲ್ಲಿ ತುಂಬಿಸುವ ಈ ದೃಶ್ಯ ರೋಮಾಂಚಕಾರಿಯಲ್ಲವೇ?

ಚಿತ್ರ ೪.

ಉದ್ಯಮೋನ್ನತಿಗೆ ಇದ್ದಲು ಅತ್ಯವಶ್ಯ. ಕೆಲವೆಡೆ ವಿದ್ಯುದುತ್ಪಾದನೆಗೂ ಹೆಚ್ಚಿನೆಡೆ ರೇಲ್ವೆಗಳನ್ನು ನಡೆಸುವುದಕ್ಕೂ ಇದ್ದಲನ್ನು ಹೊಂದಿಕೊಂಡಿರುವುದು ಅತ್ಯಗತ್ಯ. ಮಧ್ಯ ಪ್ರದೇಶದ ಕುರೇಸಿ ಯಾವಲ್ಲಿನ ೫೫೦ ಗಡಿ ಆಳದ ಗನಿಯೊಂದರಲ್ಲಿ ಭೀಮಾಕಾರದ ಯಂತ್ರವೊಂದು ಇದ್ದಲೆತ್ತುವುದನ್ನು ಇಲ್ಲಿ ನೋಡಬಹುದು. ಇದು ಪ್ರತಿದಿನ ಆರು ಸಾವಿರ ಜನರ ಕೆಲಸವನ್ನು ಮಾಡುತ್ತಿದೆ.

ಚಿತ್ರ ೫

ಚೀನಾ ಅಟಂಬಾಂಬು ಸಿಡಿಸಿತು. ಭಾರತವು ಮನದಂದರೆ ಅಟಂಬಾಂಬನ್ನು ತಯಾರಿಸಬಹುದಾದ ಟ್ರಾಂಬೆಯ ಅಣುಶಕ್ತಿ ಕೇಂದ್ರವಿದು.

೩



೪



೫

ಗಡಿನಾಡಿನಲ್ಲಿ ಪಠಾಣರ ಹೋರಾಟ

(ಆರನೇ ಪುಟದಿಂದ)

ಗಿದೆ. ಪಠಾಣವನ್ನು ವಿದೇಶೀ ಆಳ್ವಿಕೆಯಿಂದ ಮುಕ್ತಗೊಳಿಸುವುದೇ ಈ ಕ್ರಮದ ಮುಖ್ಯ ಗುರಿ. ಈ ಬೇಡಿಕೆಯನ್ನು ಈಡೇರಿಸಿಕೊಡುವುದಕ್ಕಾಗಿಯೇ ನಾವು ಕಾಂಗ್ರೆಸ್ಸಿಗೆ ಬೆಂಬಲ ನೀಡಿದೆವು. ನಮ್ಮೆಲ್ಲರ ಏಕಮೇವ ಶತ್ರುವಿನ ವಿರುದ್ಧ ಹೋರಾಡಿದೆವು ಎಂದು ಹೇಳಿದರು.

ಪಠಾಣಿಸ್ತಾನದ ಸ್ವಾತಂತ್ರ್ಯ ಬೇಡಿಕೆಯು ಬ್ರಿಟಿಷರಿಗೆ ಒಪ್ಪಿತವಾಗಲಿಲ್ಲ ಇದಕ್ಕೆ ಪ್ರತಿಯಾಗಿ ಅವರು ಪಠಾಣಿಸ್ತಾನವು, ವಿಭಜನೆಯಿಂದಾಗಿ ನಿರ್ಮಾಣಗೊಳ್ಳುವ ಎರಡು ರಾಷ್ಟ್ರಗಳ ಪೈಕಿ ಯಾವುದಾದರೂ ಒಂದು ರಾಷ್ಟ್ರದಲ್ಲಿ ವಿಲೀನವಾಗಬೇಕೆಂದು ಒತ್ತಾಯ ಮಾಡಿದರು.

ಜಾತೀಯ ತಳಹದಿಯ ಮೇಲೆ ಜನಮತಗಣನೆ ನಡೆಸದೆ ಪ್ರಾದೇಶಿಕ ಮತ್ತು ಕುಟುಂಬ ತಳಹದಿಯ ಮೇಲೆ ನಡೆಸಿದರೆ, ಜಾತೀಯ ಪ್ರಚಾರಕ್ಕೆ ಅವಕಾಶ ದೊರೆಯದೆಂದೂ ಜಾತೀಯ ಸಂಸ್ಥೆಯು ಮುಸ್ಲಿಂಲೀಗ್ ಮತ್ತು ಇತರ ಸಾಮ್ರಾಜ್ಯಶಾಹಿಗಳ ಭಾವನೆಯಾಗಿತ್ತು. ಜಾತೀಯ ಬುನಾದಿಯ ಮೇಲೆ ನಡೆದ ಈ ಜನಮತಗಣನೆಯನ್ನು ಬಹಿಷ್ಕರಿಸುವುದೇ ಪಠಾಣರಿಗೆ ಉಳಿದ ಒಂದೇ ಒಂದು ಮಾರ್ಗವಾಗಿತ್ತು. ಮುಸ್ಲಿಂಲೀಗ್ ಇಂತಹ ಒಂದು ಪರಿಸ್ಥಿತಿಯಿಂದ ಅನುಚಿತ ಲಾಭ ಪಡೆದು ಇಸ್ಲಾಂ ಧರ್ಮ ಆಪತ್ತಿನಲ್ಲಿದೆಯೆಂದು ಕೂಗೆಬ್ಬಿಸಿತು. ಅನೇಕ ಜನ ಧರ್ಮಾಂಧರು ಈ ಬಗ್ಗೆ ತೀವ್ರ ಆಂದೋಲನವನ್ನೇ ಆರಂಭಿಸಿದರು. ಪಾಕ್ ಸರಕಾರವು ಸರ್ವಶಕ್ತಿಯಿಂದ ಶ್ರಮಿಸಿದರೂ ಜನಮತಗಣನೆಯಲ್ಲಿ ಕೆಲವೇ ಮತಗಳಿಂದ ಜಯಗಳಿಸಿತು.

ಮಿ| ಜಿನ್ನಾ ಅವರು ಪಠಾಣರಿಗೆ ಅವರ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಬರುವುದಾಗಿ ಆಶ್ವಾಸನವಿತ್ತಿದ್ದರಿಂದ ಪಾಕಿಸ್ತಾನವು ಅಲ್ಪ ಮತಗಳಿಂದ ಜಯಗಳಿಸಿತು. ಜಿನ್ನಾ ಅವರು ೧೯೪೭ ಜೂನ್ ೩೦ರಂದು ಪಾಕಿಸ್ತಾನದ ಸಂವಿಧಾನದ ಸಭೆಯಲ್ಲಿ ಮಾತನಾಡುತ್ತಾ «ಸಂವಿಧಾನ ಸಭೆಯು ಗಡಿನಾಡ ಪ್ರಾಂತ್ಯಗಳಿಗೆ ಸ್ವಯಮಾಡಳಿತ ಹಕ್ಕನ್ನು ನೀಡುವ ಸಂವಿಧಾನವನ್ನು ರಚಿಸಬೇಕು. ಗಡಿ ಪ್ರಾಂತ್ಯಗಳ ಜನ ಈ ಚೌಕಟ್ಟಿಗೆ ಒಳಪಟ್ಟು ತಮ್ಮ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವ್ಯವಹಾರಗಳನ್ನು ಅಭಿವೃದ್ಧಿಗೊಳಿಸಿಕೊಳ್ಳಬೇಕು. ಈ ಪ್ರಾಂತ್ಯವು ಆಡಳಿತ ವ್ಯವಹಾರಗಳಲ್ಲಿ ಪಾಕ್ ಒಕ್ಕೂಟದ ಒಂದು ಭಾಗವಾಗಿರಬೇಕು" ಎಂದೂ ಅಭಿಪ್ರಾಯಪಟ್ಟರು. ಇದು ಜನಮತಗಣನೆಗೆ ಮೊದಲಿನ ಮಾತು. ಮತಗಣನೆ ನಡೆದ ನಂತರ ಪರಿಸ್ಥಿತಿ ತುಂಬಾ ಹದಗೆಟ್ಟಿತು. ಪಾಕಿಸ್ತಾನವು ಅಸ್ತಿತ್ವದಲ್ಲಿ ಬರುವುದೇ ತಡ ಪಾಕ್ ಸರ್ಕಾರವು ಪಠಾಣರ ಮುಂದಾಳುಗಳಾದ ಖಾನ್ ಅಬ್ದುಲ್ ಗಫಾರ್ ಖಾನ್ ಇವರೇ ಮೊದಲಾದ ಅನೇಕ ನಾಯಕರನ್ನು ಸೆರೆಹಿಡಿಯಿತು.

ಪಾಕಿಸ್ತಾನ ಸರ್ಕಾರವು ಮುಂದಾಳುಗಳೇ ಇಲ್ಲದೆ ಪಠಾಣರಿಗೆ ಜಿನ್ನಾ ಅವರು ಪರಕೀಯ ಹಸ್ತಕ್ಷೇಪದ ವಿರುದ್ಧ ನೀಡಿರುವ ಆಶ್ವಾಸನವನ್ನು ಆಚರಣೆಯಲ್ಲಿ ತರಲು ಸರ್ವ ವಿಧದಲ್ಲೂ ಯತ್ನಿಸುವುದಾಗಿ ಭರವಸೆ ನೀಡಿತು. ಗುಡ್ಡಗಾಡು ಪ್ರದೇಶಗಳಿಂದ ಸೇನೆಯನ್ನು ಹಿಂತೆಗೆದುಕೊಂಡು ಸೌಹಾರ್ದದ ನಟನೆ ಮಾಡಿತು. ಕಾಶ್ಮೀರದ ಮೇಲೆ ಆಕ್ರಮಣ ನಡೆಸಲು ದಾಳಿಕಾರರ ಬಲವನ್ನು ಸಂಘಟಿಸುವುದೇ ಈ ಕ್ರಮದ ಉದ್ದೇಶವಾಗಿತ್ತು. ಕಾಶ್ಮೀರದಲ್ಲಿ ಹೋರಾಟ ಮುಗಿದ ಕೂಡಲೇ ಫಕ್ತೂನಿಸ್ತಾನಕ್ಕೆ ಮನ್ನಣೆ ನೀಡುವುದಾಗಿಯೂ ಪಾಕ್ ಸರ್ಕಾರವು ಸ್ಪಷ್ಟಗೊಳಿಸಿತು. ಇಂತಹ ಒಂದು ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಪಠಾಣರ ಬೇಡಿಕೆಯನ್ನು ಇಂದು ಪರಿಶೀಲಿಸಬೇಕಾಗಿದೆ. ಸ್ವಾತಂತ್ರ್ಯ ಪ್ರೇಮಿಯಾದ ಪಠಾಣರಿಗೆ ಬ್ರಿಟಿಷರು ಪರಕೀಯರೂ ಆಕ್ರಮಣಕಾರರೂ ಆಗಿರುವಂತೆ ಪಾಕಿಸ್ತಾನಿಗಳೂ ಆಗಿದ್ದಾರೆ. ಪಠಾಣರ ಸ್ವಾತಂತ್ರ್ಯ ಬೇಡಿಕೆಯನ್ನು ದಿನದಿನವೂ ಬದಿಗೊತ್ತುತ್ತಾ ನಡೆದ ಪಾಕ್ ಸರ್ಕಾರದ ಕೃತಿ ಪಠಾಣರಿಗೆ ವಂಚನೆಯನ್ನುಂಟು ಮಾಡಿತು.

ಪಾಕಿಸ್ತಾನದ ಗೌರ್ನರ್ ಜನರಲ್ಲರು ೧೯೫೦ ರಂದು ಜಿನ್ನಾ ಅವರ ಆಶ್ವಾಸನವನ್ನು ರದ್ದುಗೊಳಿಸಿದರು. ಇಡೀ ಪಠಾಣ ಪ್ರದೇಶವು ಪಾಕಿಸ್ತಾನದ ಒಂದು ಭಾಗವೆಂದು ಸಾರಿದರು. ಎಲ್ಲೆಲ್ಲೂ ದಬ್ಬಾಳಿಕೆ, ದೌರ್ಜನ್ಯ ತಾಂಡವವಾಡತೊಡಗಿತು. ಪಠಾಣರ ಪ್ರಾಂತ್ಯವುದ್ದಕ್ಕೂ ಪಾಕಿಸ್ತಾನದ ಸೇನೆಯು ಬಿಡಾರ ಹಾಕಿತು. ಪಾಕಿಸ್ತಾನದ ವಿಮಾನ ಬಲದ ವಿಮಾನಗಳು ಪಠಾಣರ ಸ್ವಾತಂತ್ರ್ಯ ಹೋರಾಟವನ್ನು ನಡೆಬಡಿಯಲು ನಿರಂತರವಾಗಿ ಬಾಂಬಿನ ಮಳೆಗರೆದವು. ಪಾಕ್ ಸರ್ಕಾರದ ಈ ಅಮಾನುಷ ದಬ್ಬಾಳಿಕೆ ಅತ್ಯಾಚಾರಗಳು ಪಠಾಣರ ಸ್ವಾತಂತ್ರ್ಯ ಹೋರಾಟವನ್ನು ಇನ್ನಷ್ಟು ಬಲಗೊಳಿಸಿದವು.

ಪೂರ್ವ ಪಾಕಿಸ್ತಾನಕ್ಕಿಂತಲೂ ಪಶ್ಚಿಮ ಪಾಕಿಸ್ತಾನದ ಜನಸಂಖ್ಯೆ ಹೆಚ್ಚಿಸುವ ಉದ್ದೇಶದಿಂದ ಪಾಕಿಸ್ತಾನ ಸರ್ಕಾರವು ೧೯೫೫ರ ಮಾರ್ಚಿ ೨೯ ರಂದು ವಾಯವ್ಯ ಸರಹದ್ದಿನ ಪ್ರಾಂತ್ಯ ಮತ್ತು ಪ್ರಾಂತ್ಯಗಳನ್ನು ಪಶ್ಚಿಮ ಪಾಕಿಸ್ತಾನದ ಒಂದು ಘಟಕದಲ್ಲಿ ವಿಲೀನಗೊಳಿಸಲು ನಿರ್ಧರಿಸಿತು. ಹೀಗೆ ಮಾಡುವಾಗ ಪಾಕ್ ಸರ್ಕಾರವು ಸಂಬಂಧಿಸಿದ ಯಾರೊಂದಿಗೂ ಸಮಾಲೋಚನೆ ನಡೆಸಲಿಲ್ಲ.

ಕೆಂಪಂಗಿ ನಾಯಕ ಖಾನ್ ಅಬ್ದುಲ ಗಫಾರ್ ಖಾನ್ ಅವರು ಈ ಕ್ರಮವನ್ನು ಹೊಸ ತಮಾಷೆ ಎಂದು ಬಣ್ಣಿಸಿದರು. ವಾಯುವ್ಯ ಸರಹದ್ದು ಪ್ರಾಂತ್ಯದ ಶಾಸನ ಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಿ. ಷರೀಫ್ ಅವರು ಪಾಕಿಸ್ತಾನವು ಪಠಾಣಿಸ್ತಾನದ ಜನರ ಅನುಮತಿ ಇಲ್ಲದೆ ವಿಲೀಯನ ನಿರ್ಣಯವನ್ನು ಕೈಗೊಂಡಿದೆಯೆಂದು ಪ್ರತಿಭಟಿಸಿದರು. ಜನರಲ್ಲಿಯೇ ಪರಮಾಧಿಕಾರವಿರುವುದರಿಂದ ಜನಾಭಿಪ್ರಾಯ ಅರಿತುಕೊಳ್ಳುವುದು ಅಗತ್ಯವಾಗಿತ್ತೆಂದೂ ಅವರು ಹೇಳಿದರು. ಉನ್ನತ ಹುದ್ದೆಗಳಲ್ಲಿನ ಕೆಲವೇ ಜನ ಒಂದು ದೇಶದ ಪರಮಾಧಿಕಾರಕ್ಕೆ ಸಂಬಂಧಿಸಿದಂತೆ ಏಕ ಪಕ್ಷೀಯ ನಿರ್ಣಯ ಕೈಗೊಂಡಿದ್ದುದು ತೀರಾ ಅಸಮಂಜಸವಾಗಿದೆ ಎಂದೂ ಅಭಿಪ್ರಾಯಪಟ್ಟರು.

ಅಲ್ಪಾವಧಿಯಲ್ಲಿಯೇ ಸರಹದ್ದಿನ ಪ್ರಾಂತ್ಯದ ಮುಖ್ಯ ಮಂತ್ರಿ ಸರ್ದಾರ್ ಅಬ್ದುಲ್ ರಷೀದ್ ಅವರೂ ಸೇರಿ ಪ್ರಾಂತ್ಯದ ಎಲ್ಲ ಪಠಾಣರು ಪಾಕಿಸ್ತಾನದ ವಿರುದ್ಧ ದಂಗೆ ಎದ್ದರು ೧೯೫೫ರ ಜುಲೈ ೩೧ರಂದು ನಡೆದ ಪಠಾಣರ ಸಾರ್ವಜನಿಕರ ಸಭೆಯು ಪಾಕ್ ಸರ್ಕಾರದ ನಿರ್ಣಯವನ್ನು ಖಂಡಿಸಿತು. ಸರ್ದಾರ್ ಅಬ್ದುಲ್ ರಷೀದರು ವಿಲಯನವನ್ನು ಪ್ರತಿಭಟಿಸಿ ಮುಖ್ಯ ಮಂತ್ರಿ ಪದವಿಗೆ ರಾಜೀನಾಮೆಯನ್ನಿತ್ತರು. ಪಾಕ್ ಸರ್ಕಾರವು ತಮಗೆ ದ್ರೋಹ ಬಗೆದಿದೆಯೆಂದು ಪಠಾಣಸ್ತಾನದ ಜನರಿಗೆ ಮನವರಿಕೆಯಾಗಿರುವುದರಿಂದ ಗಡಿ ಪ್ರಾಂತ್ಯದಲ್ಲಿ ಪರಿಸ್ಥಿತಿ ಗಂಭೀರವಾಗಿದೆಯೆಂದು ಹೇಳಿ ಅವರು ಪಾಕ್ ಸಂವಿಧಾನ ಸಭೆಗೆ ಎಚ್ಚರಿಕೆಯನ್ನಿತ್ತರು.

ಪಠಾಣ ರಾಜ್ಯದ ಉದ್ದಗಲಕ್ಕೂ ಹಬ್ಬಿರುವ ಪಾಕ್ ಸರ್ಕಾರದ ಅತ್ಯಾಚಾರದ ಕ್ರಮಗಳು ಕೊನೆಗೆ ಏನನ್ನೂ ಸಾಧಿಸದಿದ್ದರೂ ಪಠಾಣರ ಸ್ವಾತಂತ್ರ್ಯ ಹೋರಾಟವನ್ನು ಮತ್ತಷ್ಟು ಬಲಗೊಳಿಸಿವೆ. ಸಾಮೂಹಿಕ ಬಂಧನಗಳು, ದುರ್ಗಮವಾದ ಪ್ರದೇಶದ ಮೇಲೆ ಎಡೆಬಿಡದೆ ಬಾಂಬು ಧಾಳಿ ನಡೆಸಿದುದು ಇವೇ ಮೊದಲಾದ ಹೀನ ಕೃತಿಗಳನ್ನು ಸರ್ದಾರ ಬಹದ್ದೂರ್‌ಖಾನ್ ಅವರು ಉಗ್ರವಾಗಿ ಖಂಡಿಸಿದರು, ಪಾಕ್ ಸರ್ಕಾರವು ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಸದಸ್ಯ ಮೀಯ್ಯೆರ್ ಭಕ್ಷ್ ಖಾನ್ ಮಾಡಿ ಅವರನ್ನು ಹಿಂಸಾತ್ಮಕ ಕೃತ್ಯಗಳ ಅಪಾದನೆಯ ಮೇಲೆ ಬಂಧಿಸಿತು.

ಪಾಕ್ ಸರ್ಕಾರವು ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ವಿರುದ್ಧ ನಿರಂತರವಾಗಿ ಹೋರಾಡಿದ ವೀರ ಯೋಧರು, ಮತ್ತು ರಾಷ್ಟ್ರೀಯ ನಾಯಕರನ್ನೇ ಆಯ್ದುಕೊಂಡು ಅವರನ್ನು ಚಿತ್ರಹಿಂಸೆಗೆ ಗುರಿಪಡಿಸುತ್ತಿವೆ. ಅಸಮಾನ ಪರಾಕ್ರಮಿಗಳೂ ದೇಶಾಭಿಮಾನಿಗಳೂ ಆದ ಪಠಾಣರ ಮೇಲೆ ಇದು ಎಷ್ಟು ದಿನ ಪ್ರಭುತ್ವ ನಡೆಸಬಹುದು? ಎಂಬುದು ಒಂದು ಮಹತ್ವದ ಪ್ರಶ್ನೆ. ಮಹಮ್ಮದೀಯ ಧರ್ಮ ಮತ್ತು ಇತಿಹಾಸದ ಅಲ್ಪಸ್ವಲ್ಪದ ಸಂಬಂಧವನ್ನುಳಿದು ಪಾಕಿಸ್ತಾನಿಗಳಿಗೂ ಪಠಾಣಿಗಳಿಗೂ ಬೇರಾವ ಸಂಬಂಧವೂ ಇಲ್ಲ. ಶತಶತಮಾನಗಳ ನಿಕಟ ಸಂಬಂಧವುಳ್ಳ ಪಾಕಿಸ್ತಾನದ ನೆರೆಹೊರೆಯ ರಾಷ್ಟ್ರಗಳು ಈ ಬಗ್ಗೆ ಹೆಚ್ಚು ಕ್ರಮಬದ್ಧವಾದ ರೀತಿಯಲ್ಲಿ ಬೇಡಿಕೆ ಮಂಡಿಸಬಲ್ಲವು ಎಂಬುದನ್ನು ಪಾಕ್ ಸರ್ಕಾರವು ನೆನಸಿನಲ್ಲಿಡಬೇಕು.

(೧೨ ನೇ ಪುಟದಿಂದ)

ತಯಾರಿಸಲಾಗುತ್ತಿದೆ. ಇಷ್ಟರಲ್ಲೇ ೧೩೫ ವಾಹನಗಳು ಸಿದ್ಧವಾಗಿವೆ. ಒಂದು ಗಾಡಿಯ ಬೆಲೆ ೨೫೦೦೦ದಿಂದ ೫೦೦೦೦ ಡಾಲರ್ ಆಗುವುದು. ಏಳು ದಂತ ಚಿಕಿತ್ಸೆಯ ವಾಹನಗಳನ್ನೂ, ನಾಲ್ಕು ವೈದ್ಯ ಚಿಕಿತ್ಸೆಯ ವಾಹನಗಳನ್ನೂ ಟ್ರಿನಿಡಾಡ್‌ಗೆ ಕಳಿಸಿದೆ, ಕಣ್ಣುಗಳ ಚಿಕಿತ್ಸೆಗೆ ಬೇಕಾದ ಸಲಕರಣೆಗಳುಳ್ಳ ವಾಹನಗಳನ್ನು ಭಾರತ, ಸಹರಾ ಮತ್ತು ಟರ್ಕಿಗಳಿಗೆ ಕಳಿಸಲಾಗುತ್ತಿದೆ

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.

ಬೆಲೆ: ಸಾದಾ ಪ್ರತಿ ರೂ. ೧.

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."

—ಲೋಕಮಾನ್ಯ ತಿಲಕ.

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. **1-50**ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 43ನೆಯ ವರ್ಷವು ಮುಗಿದು ಸಪ್ಟಂಬರ ತಿಂಗಳಿಂದ 44ನೆಯ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ತ್ವರೆಯಾಗಿ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿಯೂ ವಿನಂತಿಸಿದ್ದೆವು. ಇನ್ನೂ ಕಳಿಸದವರು ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚೂ ಇಲ್ಲದೆ ಪಾವತಿ ಮಾಡಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು ವಿ ಪಿ ಮಾಡಿದರೆ 70 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿ ಕೊಡುವಂತೆ ಇನ್ನೊಮ್ಮೆ ಬಿನ್ನವಿಸುತ್ತೇವೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ವಿ.ಪಿ. ಮಾಡಬೇಕಾಗುತ್ತದೆ.

• ಆರು ತಿಂಗಳು •

ಆರು ತಿಂಗಳು ಹಗಲು ಆರು ತಿಂಗಳು ಇರುಳು!
ನೀರು ಬಿಳಿ ನೆಲವಾದ
ಗಾಳಿ ಬಲು ಘನವಾದ
ಬಾನು ಬಿದ್ದಿರುವಂಥ ಊರು!
೦ ೦ ೦ ೦

ನಿಂತಿತ್ತು ಉಗಿ ಹಡಗ ಹೊಗೆಯ ಕಾರಿ
ಹಲವು ಬಂಡುಗ ತಿಂಡಿ ತಿನಸು ಹೇರಿ
ಜನ ಬಂತು, ಧರಿಸಿ ಸೂಟು
ಬಾಯಲ್ಲಿ ಉರಿವ ಸಿಗರೇಟು!
ನಾವಿಕರ ಬೀಳ್ಕೊಡುವ ಬಂಧು ಬಳಗ
ಅಣಿಯಾಯ್ತು ಪಯಣಕ್ಕೆ ನಿಂತ ಹಡಗ.
ಆಲಿಂಗನ, ಚುಂಬನ, ಸ್ನೇಹದ ಮಾತು, ಕಣ್ಣೀರು!
ಕೈಕುಲುಕು, ಬಿಗಿ ಮುದ್ರೆ, ಜತ ನುಡಿ, ಮುಗುಳ್ನಗು!
ಮತ್ತೊಮ್ಮೆ ಮ್ಲಾನ ಮುಖ
ಕೊರಳಿನಲಿ ದುಃಖ!
ರೆಪ್ಪೆ ಹೊಡೆಯದ ನೋಟ! ಕೊನೆಗೆ ಟಾಟಾ ಟಾಟಾ
ಒಳಗೆ ಅರುವತ್ತು ಮಂದಿ ನಾವಿಕರು
ಜೀವನವ ನೀರಿನಲಿ ಸವೆದ ಸಾಧಕರು!
ಬಲು ದೂರ ಧ್ರುವ ಖಂಡ!
ಹೊರಟಿತ್ತವರ ತಂಡ!
ತರಬಹುದು ಹೊಸತು ಶೋಧನೆ ಗೆಲವು ಕೀರ್ತಿ!
ಬರಬಹುದು ಚಳಿ ಜ್ವರ ನಡುಕ ಮರಣ ಭೀತಿ!
೦ ೦ ೦ ೦

ಬರುತಿತ್ತು ವಾರ್ತೆ—ಕ್ಷೇಮ, ಸಾಗುವೆವು ಮುಂದೆ
ಭಯವಿಲ್ಲ. ಗುರಿಯ ಮುಟ್ಟುವೆವು ಇಂದೆ!
ಹವೆಯು ಅನುಕೂಲ
ಇರಬಹುದು ಬಹುಕಾಲ
ಕೊನೆಗೊಂದು ದುರ್ದಿನದಿ ಹಾಳಾಯ್ತು ವೈರ್‌ಲೆಸ್!
ದಿನನಿತ್ಯ ಕಾದಿದ್ದ ಜನವಾಯ್ತು 'ನ್ಯೂಸ್‌ಲೆಸ್'!
ಕಂಡವರಿಲ್ಲ, ಕೇಗದವಿಲ್ಲ, ಅಜ್ಞಾತ ವಾಸ!
ಮನೆಯಲ್ಲಿ ಮಡದಿ ಮಕ್ಕಳಿಗೆಲ್ಲ ಉಪವಾಸ!
ಅಲ್ಲಿ ಒಂದೇ ಹಗಲು!
ಇಲ್ಲಿ ಮುಗಿಯದ ಇರುಳು!
ಏನೇನೋ ಊಹೆ, ಕಲ್ಪನೆ, ಸುಖಸ್ವಪ್ನ ಆಶೆ!
ಆಗಾಗ ಸಂಶಯ, ಭೀತಿ, ಯಾತನೆ, ನಿರಾಶೆ!
ಚಳಿಗೆ ಕಂಬಳಿ ಹೊದೆದು ಮಧ್ಯಾಹ್ನ ತನಕ
ನಿದ್ರಿಸುವ ಜನಕೆಲ್ಲಿ ನಾವಿಕರ ಮರುಕ?
ವರ್ಷಕೊಂದೇ ಸ್ರೊಂದು ರಾತ್ರೆ!
ಹೋಗಿತ್ತು ತೀರ್ಥಯಾತ್ರೆ!
ದಕ್ಷಿಣಾಯನ ಕಳೆದು ಉತ್ತರಾಯಣ ಬಂತು!
ಜನತೆಗೀ ನಾವಿಕರ ನೆನಪು ಮಾಸುತಲಿತ್ತು.
೦ ೦ ೦ ೦

ಕೊನೆಗೊಮ್ಮೆ ಕಂಗೆಟ್ಟ ಐವತ್ತು ಮಂದಿ!
ಎಲ್ಲಿಯೋ ದಡಕೆ ಬಂದಿಹರೆಂಬ ಸುದ್ದಿ
ಬೆಳಗಿತು ಹೃದಯ ದೀಪ
ಹರಿಸಿತಾನಂದ ಬಾಷ್ಪ!
ನಿರಾಶೆಯ ಕೋಶದೊಳಗಿನ ಜನರು ಎಚ್ಚತ್ತರು
ನಾವಿಕರ ಮಾದಿಸಲು ಧಾವಿಸಿದರು.

ಭವಾನೀ ಪ್ರಿಯ, ಮಾಯಿಪ್ಪಾಡಿ.

ಹೋರಾಡ ಬನ್ನಿ

— ೧ —

ಎದ್ದೇಳಿರೊಂದಾಗಿ ಓಡೋಡಿ ಬನ್ನಿ
ಶತ್ರುಗಳ ನಾಶಕ್ಕೆ ಸಿಡಿಲಾಗಿ ಬನ್ನಿ
ತಾಯ್ನೆಲದ ಸಿರಿಗಾಗಿ ಹೋರಾಡಬನ್ನಿ
ಕೆಚ್ಚೆದೆಯ ನಿಜಸತ್ವ ತೋರಿಸಲು ಬನ್ನಿ

— ೨ —

ನಡೆಯೊಂದೆ ನುಡಿಯೊಂದೆ ಗುರಿಯೊಂದೆ ಎನ್ನಿ
ಒಂದಾಗಿ ಇದಿರಾಳಿಯನ್ನು ಸುಡಲು ಬನ್ನಿ
ಎಂದೆಂದು ನಾವೊಂದು ಭಾರತದ ಜನತೆ
ಎದ್ದೇಳಿ ಬೆಳಗಿಸುವ ನಿಜಯಶದ ಹಣತೆ

— ೩ —

ಈದೇಶವೀ ಮನವದೇ ಜನತೆಯೊಂದು
ನಾಡೊಂದೆ ಗುಡಿಯೊಂದೆ ನಮಗೆಂದು ಎಂದು
ಯುಗ ಯುಗದ ಗಾಳಿಯಲಿ ಯಶದ ಸಿರಿಧ್ವನಿಸೆ
ಹೋರಾಡ ಲೋಡೋಡಿ ಬನ್ನಿರೈ ಜಯಿಸೆ

—ಕಾ. ಶ ನಾ. ಭ. ವಿಶಾರದ.
ಚಿಕ್ಕ ಸೊಡ್ಲಾಗು ದ. ಕೊಡಗ.

ಕೃತಿ ಪರಿಚಯ



ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸು ವವರು ದಯಮಾಡಿ ಎರಡೆರಡು ಪ್ರತಿಗಳನ್ನು ಕಳಿಸಬೇಕಾಗಿ ವಿನಂತಿ. ಸಂ. ನ.

ಸಂಸ್ಕೃತ—(ಸುರ ಭಾರತೀ ವ ದೇವ ಭಾಷಾ)

ಲೇಖಕ—**ಪ್ರಕಾಶಕರು**: ಡಾ॥ ಐ. ಕೆ. ಪಿ. ಶರ್ಮಾ, ಮಂಗಳೂರು—೬.

ಪುಟಗಳು: ೭೦ ಬೆಲೆ ರೂ ೦-೭೫

'ಭಾಷಾಸು ಮುಖ್ಯಾ ದಿವ್ಯಾ ಗೀರ್ವಾಣ ಭಾರತೀ' ಎಂದು ಪ್ರಸಿದ್ಧವಾದ ಸುರಭಾರತೀ ವ ದೇವ ಭಾಷೆ ಸಂಸ್ಕೃತದ ಅಧ್ಯಯನ ಮತ್ತು ಪ್ರಚಾರದ ಪ್ರಾಮುಖ್ಯವನ್ನು ಉದ್ದೇಶವಾಗಿಟ್ಟು ಕೊಂಡ ಒಂದು ಉಪಯುಕ್ತ ಪುಸ್ತಕವಿದು. ಎಳೆತನದಲ್ಲಿ ಸಂಸ್ಕೃತವನ್ನು ಕಲಿಯುವ ಅವಕಾಶದಿಂದ ವಂಚಿತರಾಗಿ ಅವಕಾಶವಿದ್ದರೂ ಅದನ್ನು ಕಡೆಗಣಿಸಿ ಮುಂದೆ 'ನಾವು ಸಂಸ್ಕೃತ ಕಲಿಯಲಿಲ್ಲ; ದೊಡ್ಡ ಅಪರಾಧವಾಯಿತು' ಎನ್ನುವವರ ವರ್ಗವಿಂದು ಹೆಚ್ಚುತ್ತಿದೆ. ಇಂತಹ ಉದ್ಗಾರ ಹೃದಯಾಂತರಾಳದಿಂದಲೇ ಬಂದರೂ ಅದರಿಂದ ಪ್ರಯೋಜನವಿಲ್ಲ. ವಿದ್ಯೆಯನ್ನು ಕಲಿಯಲು ಮಿತಿಯಿಲ್ಲ ಮೇರೆಯಿಲ್ಲ.

ಬೇರೆ ಬೇರೆ ದೇಶಗಳಲ್ಲಿ ಸಂಸ್ಕೃತ ಭಾಷೆಯ ಅಧ್ಯಯನಕ್ಕೆ ಪ್ರೋತ್ಸಾಹ ಹೆಚ್ಚುತ್ತಿರುವಂತೆ ನಮ್ಮ ದೇಶದಲ್ಲದು ಹ್ರಾಸವಾಗುತ್ತ ಬರುತ್ತಿದೆ ಇಂದು ಸಂಸ್ಕೃತದ ವಿದ್ವಾಂಸರು ತ್ರಿಶಂಕು ಸ್ವರ್ಗದಲ್ಲಿಯೇ ನಡೆಯುತಿದ್ದಾರೆ. ಇಂತಹ ಪರಿಸ್ಥಿತಿ ತಪ್ಪಿದರೆ ಮಾತ್ರ ಸಂಸ್ಕೃತದ ಬಗ್ಗೆ ಗೌರವ ಬೆಳೆದೀತು. ಶಿಕ್ಷಣ ಮಂತ್ರಿಶಾಖೆಯೂ, ವಿಶ್ವವಿದ್ಯಾಲಯಗಳೂ ಇದನ್ನು ಅರಿತು ಕಾರ್ಯಸಿದ್ಧವಾಗ ಬೇಕು; ಜನತೆ ಸಂಸ್ಕೃತಾಧ್ಯಯನಕ್ಕೆ ಮುಂದುಬರಬೇಕು.

ಡಾ॥ ಐ. ಕೆ. ಪಿ ಶರ್ಮಾ ಅವರು ಅವಿರತ ಶ್ರಮ ಮತ್ತು ಅಧ್ಯವಸಾಯದ ಸಹಾಯದಿಂದ 'ಸಂಸ್ಕೃತ'ವೆಂಬ ಈ ಹೊತ್ತಗೆಯನ್ನು ಬರೆದಿದ್ದಾರೆ. ಸಂಸ್ಕೃತದ ಹಿರಿಮೆಯನ್ನಿವರು ಕಣ್ಣಿಗೆ ಕಟ್ಟುವಂತೆ ವರ್ಣಿಸಿ ಅದರ ಪ್ರಚಾರ ಮತ್ತು ಅಧ್ಯಯನಗಳು ಮುಂದೆ ಸಾಗುವ ಅವಶ್ಯಕತೆಯನ್ನು ಪ್ರತಿಪಾದಿಸಿದ್ದಾರೆ. ಸಂಸ್ಕೃತವು ಮೃತ ಭಾಷೆಯಲ್ಲ; ಅದನ್ನುಳಿದರೆ ಉಳಿದೆಲ್ಲ ಭಾಷೆಗಳೂ ಮೃತ ಭಾಷೆಗಳೆಂಬುದನ್ನು ಪ್ರಮಾಣ ಪೂರ್ವಕ ವಿವೇಚಿಸುವ ಪ್ರಯತ್ನ ಮಾಡಿದ್ದಾರೆ ಇದು ಸ್ತುತ್ಯ. ಸಂಸ್ಕೃತದ ಅಧ್ಯಯನಕ್ಕೆ ಈ ಪುಸ್ತಕ ಪ್ರೇರಕ ಶಕ್ತಿಯಾದರೂ ಆಗಬಹುದು; ನಮ್ಮ ದೇಶದಲ್ಲಿ ಸಂಸ್ಕೃತದ ಜೀವನ್ಮೃತಾವಸ್ಥೆಯನ್ನು ಎತ್ತಿ ತೋರಿಸುವ ಸಜೀವ ಕೃತಿಯಿದು.

ಎಲ್ಲ ಭಾರತೀಯ ಭಾಷೆಗಳಿಗೆ ಮೂಲ ಸಂಸ್ಕೃತವೆಂದು ಡಾ॥ ಶರ್ಮಾ ವಾದಿಸಿದ್ದಾರೆ. ದ್ರಾವಿಡ ಭಾಷೆಗಳ ಮೂಲ ಭಾಷೆ ಬೇರೆಯಿದೆಯೆಂದು ಆಧುನಿಕ ವಿದ್ವಾಂಸರು ಪ್ರತಿಪಾದಿಸುತ್ತಾರೆ; ಈ ವಾದವೇ ಇಂದು ಸಾರ್ವಮಾನ್ಯವಾಗಿ ಮಾನ್ಯವಾಗಿದೆ. ಸಂಸ್ಕೃತ ಭಾಷೆಯು ದ್ರಾವಿಡ ಭಾಷೆಗಳನ್ನೂ ಪುಷ್ಟಿಗೊಳಿಸಿದೆಯೆಂಬ ವಿಷಯದಲ್ಲಿ ಯಾರಲ್ಲಿಯೂ ಭಿನ್ನಾಭಿಪ್ರಾಯವಿಲ್ಲ. ಭಾರತದ ರಾಷ್ಟ್ರಭಾಷೆಯಾಗಲು ಸಂಸ್ಕೃತವೇ ಅರ್ಹವೆಂದು ಡಾ॥ ಶರ್ಮಾ ಹೇಳುತ್ತಾರೆ. ಆದರೆ, ಇಂದು ಇಂತಹ ಆಶೆ ಕಟ್ಟಿಕೊಳ್ಳುವುದರಿಂದ ಹೆಚ್ಚಿನ ಲಾಭವಾಗದೆಂದೇ ಹೇಳಬೇಕು

'ಸಂಸ್ಕೃತ'ವು ಪೂಜ್ಯವಾಗಿದೆ, ಸುಸಂಸ್ಕೃತವಾಗಿದೆ; ಗ್ರಾಹ್ಯವಾಗಿದೆ. ಎಲ್ಲರೂ 'ಸಂಸ್ಕೃತ'ವನ್ನು ಕೊಂಡು ಸಂಸ್ಕೃತಾಧ್ಯಯನವನ್ನು ತಮ್ಮ ಬಿಡುವಿನ ಸಮಯದ ಹವ್ಯಾಸವನ್ನಾಗಿಟ್ಟುಕೊಂಡು ತಿಳುವಳಿಕೆ ಹೊಂದಿ ನಮ್ಮ ಸಂಸ್ಕೃತಿಯನ್ನು ಅರಿತು ಸುಸಂಸ್ಕೃತರಾಗಿ ಬಾಳುವಂತಾಗಬೇಕು. ಸಂಸ್ಕೃತಾಧ್ಯಯನದಿಂದ ತಮ್ಮ ಮಾತೃ ಭಾಷೆಯ ಜ್ಞಾನ ಭಂಡಾರವೂ ಉನ್ನತವಾಗುವುದೆಂಬುದನ್ನು ಮರೆಯಬಾರದು. ಡಾ॥ ಶರ್ಮಾರವರ ಈ ಹೊತ್ತಗೆ ಸಂಸ್ಕೃತದ ಮೇಲೆ ಕವಿದಿರುವ ಕೃತಕಾಂಧಕಾರವನ್ನು ದೂರ ಮಾಡುವ ಬೆಳಗು ನೀಡಲು; ಇದರ ಬೆಳಗು ಎಲ್ಲೆಲ್ಲೂ ಹರಡಲಿ.

— ಗೋಪಾ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428.

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ.

O. S No 344/1964.

ಕುಂಞ ರಾಮ ಮಣಿಯಾಣಿ—ವಾದಿ.
ಅಬ್ದುಲ್ ಖಾದ್ರಿ ಬ್ಯಾರಿ— ಪ್ರತಿವಾದಿ.

ಸದ್ರಿ ಪ್ರತಿವಾದಿ ಅಬ್ದುಲ್ ಖಾದ್ರಿ ಬ್ಯಾರಿ ಸಂಪಾಜೆ ಮಮ್ಮುದೆ ಬ್ಯಾರಿ ಮಗ ಸಂಪಾಜೆ ಗ್ರಾಮ, ಪುತ್ತೂರು, ತಾಲೂಕು ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ

ಸದ್ರಿ ವಾದಿಯು ನಿಮ್ಮ ಮೇಲೆ ಮಾಡಿದ ದಾವೆಯು ತಾರೀಕು 12—11—64 ಕ್ಕೆ ನಿಮ್ಮ ಹಾಜರಿ ಬಗ್ಗೆ ಇಟ್ಟಿರುವುದರಿಂದ, ಆ ದಿನ ಬೆಳಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ನಿಮ್ಮ ಉದಾಹರಣೆಯನ್ನು ದಾಖಲು ಮಾಡತಕ್ಕದ್ದು. ತಪ್ಪಿದಲ್ಲಿ ನಿಮಗೆ ಏಕಪಕ್ಷ ತೀರ್ಪು ನೀಡಲಾದೀತು.

ಬಿ. ಟಿ. ರೈ
Advocate for Plaintiff
ಪುತ್ತೂರು ತಾರೀಕು 20.10.1964

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R. E. P. 263/64. O. S. 2/54.

ಕೊರಗಪ್ಪ ರೈ .... ಅರ್ಜಿದಾರ.
ಚೆನ್ನಪ್ಪ ಸಫಾ ... ಎದುರುದಾರ.

5ನೇ ಎದುರು: — ಮಂಜಪ್ಪ ರೈ, ಕೂವಕ್ಕ ಮಗ— ಚಿಕ್ಕ ಮೂಡ್ನೂರು ಗ್ರಾಮದ ಕೆಡ್ಯಾಳ—

ಸದ್ರಿ 5ನೇ ಎದುರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುತ್ತದೇನೆಂದರೆ—

ನಿಮ್ಮಿಂದ ಕೂಡಾ ಅರ್ಜಿದಾರಗೆ ಬರತಕ್ಕ ಡಿಕ್ರಿ ಹಣ್ಣಲಾಕಿಗೆ ನಿಮ್ಮೆಲ್ಲರ ಹಕ್ಕಿನ ಅರ್ಯಾಪು ಗ್ರಾಮದ ಸ. ನಂ. 120/1 ರಲ್ಲಿರುವ ಅಡಿಕೆ ಫಸಲನ್ನು ಜಪ್ತು ಪಡಿಸಬೇಕಾಗಿ ದಾಖಲು ಮಾಡಿದ ಮೇಲಿನ ಅರ್ಜಿಯನ್ನು ತಾ. 12—11—64 ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ ಆ ದಿವಸ ಈ ಕೋರ್ಟಿನ ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಬಿಟ್ಟು ನೂಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು

Sd/ M. Sadashiva Rao.
Vakil for Petitioner.
ಪುತ್ತೂರು, ತಾ. 28—10—1964.

ಹೀಗಿದೆ ಈ ಜೀವನ

(ನಾಲ್ಕನೇ ಪುಟದಿಂದ)

ಟ್ಟಿದ್ದೆವು! ನಾವಂದು ನಿಜಕ್ಕೂ ಪಶುಗಳಾಗಿದ್ದೆವು!

ಜೋಣಿ ಪುನಃ ಪ್ರಶ್ನಿಸಿದ – "ನಾವು ಹಾಸ್ಟೆಲ್ ಬಿಡುವಾಗ ಆಕೆ ಗರ್ಭಿಣಿಯಾಗಿದ್ದಳಲ್ಲವೇ?"— ವಿಕಾರ ಶೂನ್ಯವಾಗಿ, ಅತ್ಯಂತ ನಿಷ್ಪ್ರಕರವಾಗಿ, ಅದೇನೂ ಒಂದು ಮಹತ್ವದ ವಿಷಯವೇ ಅಲ್ಲವೇನೋ ಎಂಬಂತೆ ಅಲಕ್ಷ್ಯದಿಂದ ಜೋಣಿ ಮಾತನಾಡುತ್ತಿದ್ದ.

ನಾನು ಎಷ್ಟೋ ಸಲ ಆಕೆಯ ಕುರಿತು ಆಲೋಚಿಸಿದ್ದೇನೆ. ಮತ್ತೆ ಅದೆಷ್ಟೋ ಸಲ ನನ್ನ ಕುಕೃತ್ಯಕ್ಕಾಗಿ, ದುಃಖದಿಂದ ವ್ಯಾಕುಲನಾಗಿ, ಮಾನಸಿಕ ಸ್ಥೈರ್ಯವನ್ನು ಕಳೆದು ಕೊಂಡಿದ್ದೇನೆ. 'ಅಯ್ಯೋ! ಹೀಗೆ ಮಾಡಬಾರದುದನ್ನು ಮಾಡಿ ಬಿಟ್ಟೆನಲ್ಲ!' ಎಂದು ಪಶ್ಚಾತ್ತಾಪ ದಗ್ಧನಾಗಿ ಕಂಬನಿ ಸುರಿಸಿದ್ದೇನೆ.

ಜೋಣಿ ಇನ್ನೂ ಒಂದು ಘಟನೆಯನ್ನು ನೆನಪಿಸಿದ—"ಆ ಕ್ಷೌರಿಕನ ಮಗಳು ಅದೆಷ್ಟು ಸುಂದರಿಯಾಗಿದ್ದಳು! ಅವಳೀಗ ಎಲ್ಲಿರುವಳೋ...."

ಜೋಣಿ ಕುಟ್ಟಿಯು ಗತಕಾಲದ ನಮ್ಮ ಪತಿತ ಜೀವನದ ಒಂದೊಂದೇ ಪುಟವನ್ನು ತೆರೆದು ತೋರಿಸ ತೊಡಗಿದ್ದ.

ಅಷ್ಟರಲ್ಲಿ ಅವನ ಶ್ರೀಮಂತ ಗೆಳೆಯರಲ್ಲೊಬ್ಬ ನಡುವೆ ಬಾಯಿ ಹಾಕಿದ:

"ಓಹೋ! ನಿಮ್ಮ ಚರಿತ್ರೆ ಇಷ್ಟೆಲ್ಲ ವಿಸ್ತಾರವಾಗಿದೆಯೋ?"

ಆಗ ಜೋಣಿ ಗರ್ವದಿಂದ ನುಡಿದ—"ಅಷ್ಟೇ ಅಲ್ಲ. ಒಮ್ಮೆ ನಾವಿಬ್ಬರೂ ಒಟ್ಟು ಸೇರಿಕೊಂಡು ಕಳ್ಳತನ ಕೂಡ ಮಾಡಿದ್ದೆವು, ಗೊತ್ತೆ?'

ಆ ಮೇಲೆ ಜೋಣಿ ಹಿಂದಿನ ಹಲವಾರು ಘಟನೆಗಳನ್ನು ವಿವರಿಸತೊಡಗಿದ. ನಾನು ಅವೆಲ್ಲವನ್ನೂ ಎಂದೋ ಮರೆತಾಗಿತ್ತು. ಅವುಗಳನ್ನು ಸ್ಮೃತಿಪಟಲದ ಮೇಲೆ ತಂದುಕೊಳ್ಳುವುದೂ ನನಗೆ ಅಪ್ರಿಯವಾಗಿತ್ತು. ನನ್ನ ಹುಡುಗಾಟಿಕೆಯ ಔದ್ಧತ್ಯದ ಕಾರ್ಯಗಳಿಗಾಗಿ ನಾನು ಹಲವಾರು ಬಾರಿ ಪಶ್ಚಾತ್ತಾಪ ದಗ್ಧನಾಗಿ ಕಣ್ಣೀರು ಸುರಿಸಿದ್ದೆ. ಆದರೆ ಈ ಇಪ್ಪತ್ತು ವರ್ಷಗಳ ದೀರ್ಘಾವಧಿಯ ನಂತರ ಅಂದಿನ ಆ ಎಲ್ಲ ಘಟನೆಗಳ ವಿಶಾಲ ಛಾಯಾ ಚಿತ್ರವೊಂದು ನನ್ನೆದುರು ಮೂರ್ತಿಮತ್ತಾಗಿ ಉಪಸ್ಥಿತವಾಯಿತು. ನೋಡಿ ನಾನು ದಂಗಾದೆ! ಓ! ನಾನು ಏನೆಲ್ಲ ಮಾಡಬಾರದ ಕೆಲಸಗಳನ್ನು ಮಾಡಿಬಿಟ್ಟೆ! ಅಯ್ಯೋ ದೇವರೇ!

ಮದುವೆಯಾದ ಬಳಿಕ ನಾನು ಹಿಂದಿನ ಎಲ್ಲ ದುಷ್ಟತನಗಳನ್ನೂ ತ್ಯಜಿಸಿದ್ದೆ. ದುರಭ್ಯಾಸಗಳನ್ನು ದೂರಗೊಳಿಸಿದ್ದೆ. ಹೇಗೆ? ಏಕೆ?... ಅದು ನನಗೇ ಗೊತ್ತಿಲ್ಲ. ಪತ್ನಿಯ ಸೌಂದರ್ಯದಿಂದ ಪ್ರಭಾವಿತನಾಗಿ ನಾನು ಸಂಭಾವಿತನಾದುದಂತೂ ಖಂಡಿತ ಅಲ್ಲ. ಏಕೆಂದರೆ ನನ್ನಾಕೆ ಸುಂದರಿಯಾಗಿರಲಿಲ್ಲ ತುಂಬ ಪಾಪದವಳು! ಹಳ್ಳಿಯಲ್ಲಿ ಹುಟ್ಟಿ ಬೆಳೆದ ಮುಗ್ಧೆ! ನನ್ನ ಮೇಲೆ ತನ್ನ ಪ್ರಭಾವ ಬೀರುವಷ್ಟು ಚಾತುರ್ಯವಾಗಲೀ, ನನ್ನನ್ನು ತನ್ನ ಹಿಡಿತದಲ್ಲಿರಿಸಿಕೊಳ್ಳಬಲ್ಲ ಸಾಮರ್ಥ್ಯವಾಗಲೀ ಅವಳಲ್ಲಿದ್ದಿರಲಿಲ್ಲ. ನನ್ನ ಮೇಲೆ ಅಧಿಕಾರನಡೆಸುವುದಂತೂ ದೂರ ಉಳಿಯಿತು. ಆದರೂ ನಾನು ಮದುವೆಯಾದ ನಂತರ ಸಂಭಾವಿತನಾಗಿದ್ದೆ. ಇಂದು ಅದೇ ನನ್ನ ಹೆಂಡತಿಗಾಗಿ ಕಡಿಮೆ ಯೆಂದರೂ ಇಪ್ಪತ್ತು ರೂಪಾಯಿಗಳು ನನಗೆ ಅಗತ್ಯ ಬೇಕಾಗಿವೆ. ಅದಕ್ಕಾಗಿಯೇ ನಾನು ಮನೆಯಿಂದ ಹೊರಟ್ಟಿದ್ದೆ. ಆದರೆ ಇಲ್ಲಾದರೋ ನನ್ನ ಬಾಲ್ಯಸ್ನೇಹಿತ— ಈ ಜೋಣಿ— ಪೂರ್ವ ಸ್ಮೃತಿಗಳ ಹೊಲಸನ್ನು ಸುತ್ತಲೂ ಎರಚುತ್ತಿದ್ದಾನೆ.

ಜೋಣಿ ಹೇಳುವುದನ್ನೆಲ್ಲ ಕೇಳುತ್ತ ಕುಳಿತಿದ್ದ ನನಗೇ ನಾಚಿಕೆಯಾಯಿತು, ತಲೆಯನ್ನು ತಗ್ಗಿಸಿ ಕೊಳ್ಳುವಂತಾಯಿತು.

ಅಷ್ಟರಲ್ಲಿಯೇ ನಾವು ಕುಳಿತಿದ್ದ ಕಾರು ನಗರವನ್ನು ಬಿಟ್ಟು ಬಹುದೂರ ಬಂದಾಗಿತ್ತು. ಟಾರು ರಸ್ತೆಯ ಮೇಲೆ ಕಾರು ನಾಕಷ್ಟು ದೂರ ಸಾಗಿ ಬಂದಿತ್ತು. ಅಕಸ್ಮಾತ್ ನಾನು ಈ ಸುಷುಪ್ತ್ಯವಸ್ಥೆಯಿಂದ ಎಚ್ಚರಗೊಂಡೆ. ಮನೆಯಿಂದ ಏತಕ್ಕಾಗಿ ನಾನು ಹೊರಟಿದ್ದೇನೆಂಬುದು ಇದ್ದಕ್ಕಿದ್ದಂತೆಯೇ ನನಗೆ ನೆನಪಾಯಿತು.

ಚಕಿತನಾಗಿ ನಾನು ಜೋಣಿಯನ್ನು ಪ್ರಶ್ನಿಸಿದೆ— "ಜೋಣಿ! ನನ್ನನ್ನು ಎಲ್ಲಿಗೆ ಕರೆದೊಯ್ಯುತ್ತಿರುವಿ?"

ತಾರುಣ್ಯ ಸಹಜವಾದ ಉತ್ಸಾಹದಿಂದ ಜೋಣಿ ಉತ್ತರಿಸಿದ— "ಒಂದು ಜನಶೂನ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ ನಿನ್ನ ಕತ್ತು ಹಿಚುಕಿ ಕೊಂದು ಹಾಕಬೇಕೆಂದಿದ್ದೇನೆ."

ಅಟ್ಟಹಾಸದ ಕಾರಂಜಿ ಚಿಮ್ಮಿತು ಕಾರಿನಲ್ಲಿ.

ಆಗಲೇ ನಾವೆಲ್ಲರೂ ನಗರದಿಂದ ಬಹುದೂರ ಬಂದಿದ್ದೆವು.

ನಾನು ವಿನಯದಿಂದ ಅರಿಕೆ ಮಾಡಿಕೊಂಡೆ— "ಜೋಣಿ! ನಾನೀಗ ಮನೆಗೆ ಹೋಗಲೇಬೇಕು. ಅತ್ಯಗತ್ಯವಾದ ಒಂದು ಕೆಲಸವಿದೆ...."

ಜೋಣಿ ತಮಾಷೆಮಾಡ ತೊಡಗಿದ— "ಮೊಲೆಯುಣ್ಣುವ ಹಸುಗೂಸು! ಪಾಪ! ಅಮ್ಮನ ಬಳಿ ಹೋಗಬೇಕೇನೋ....!"

ಮತ್ತೆ ನಗು!

ನಾನು ನಿರ್ಧಾರದ ಸ್ವರದಲ್ಲಿ ಪುನಃ ನುಡಿದೆ— "ನಾನೀಗ ಮನೆಗೆ ಹೋಗಲೇಬೇಕು. ಮನೆಯಲ್ಲಿ ಹೇಳಿ ಸಹ ಬಂದಿಲ್ಲ."

ಜೋಣಿ ನನ್ನ ಮಾತನ್ನು ಲಕ್ಷ್ಯ ಮಾಡಲೇ ಇಲ್ಲ. ಹೇಳಿದ— "ಅಮ್ಮನವರ ಅನುಮತಿಯಿಲ್ಲದೆ ಅಮ್ಮಾವ್ರ ಗಂಡ ಎಲ್ಲಿಗೂ ಹೋಗುವುದೇ ಇಲ್ಲವೆಂದು ಕಾಣುತ್ತಿದೆ. ಅಲ್ಲವೇ?"

"ಹಾಗೇನಿಲ್ಲ. ಆಕೆ ನನ್ನ ದಾರಿ ಕಾಯುತ್ತ ಕುಳಿತಿರಬಹುದು ಅದಕ್ಕಾಗಿ..."

ಜೋಣಿ ತುಂಬಾ ಹಟಮಾರಿ ಸ್ವಭಾವದವನು. ನನಗದು ಗೊತ್ತಿತ್ತು. ಆತ ತನ್ನ ಸ್ವಭಾವಕ್ಕೆ ತಕ್ಕಂತೆ ನುಡಿದ— "ಹೆಂಡತಿ-ಮಕ್ಕಳಿರುವುದು ಪ್ರಪಂಚದಲ್ಲಿ ನಿನಗೊಬ್ಬನಿಗೇ ಅಲ್ಲ. ಮರಿ; ಬಿಡು ದಾರಿ ಕಾದರೆ ಕಾಯುತ್ತಾಳೆ. ಹೆಂಡತಿ ಗಂಡನ ದಾರಿ ಕಾಯುತ್ತಾಳೆ, ಅಷ್ಟೇ ಅಲ್ಲವೇ? ಬೇರಾರ ದಾರಿ ಕಾಯುವುದಲ್ಲವಲ್ಲ! ಹೋದರಾಯಿತು, ಸುಮ್ಮನಿರು."

ಇಪ್ಪತ್ತು ವರ್ಷಗಳ ನಂತರ ಜೋಣಿಯ ಹಟಮಾರಿತನವನ್ನು ಪುನಃ ಕಾಣುತ್ತಿದ್ದೇನೆ. ಅವನ ದೃಢನಿರ್ಧಾರದ ಮುಖಭಂಗಿಯನ್ನು ಕಂಡು ನನ್ನ ಹೃದಯ ಅಪೂರ್ವವಾದ ಆನಂದದಿಂದ ತರಲಿತವಾಯಿತು.

ಇಷ್ಟು ವರ್ಷಗಳ ನಂತರ ಇಂದು ಅನಿರೀಕ್ಷಿತವಾಗಿ ಕಾಣಲು ಸಿಕ್ಕಿದ್ದೀಯೆ, ಒಂದಿಷ್ಟು ಮಜಾಮಾಡೋಣವೆಂದರೆ ನೀನಾದರೋ ಮನೆ ಮನೆಯೆಂದು ಮಂತ್ರ ಪಠಿಸಲು ಪ್ರಾರಂಭಿಸಿಬಿಟ್ಟಿರುವಿ; —ಜೋಣಿ ಬೇಸರದಿಂದ ನುಡಿದ.

ಕಾರು ಒಂದೇ ಸಮನೆ ಓಡುತ್ತಿತ್ತು.–

ಜೋಣಿ ಉಲ್ಲಾಸದಿಂದ ಹಾಡತೊಡಗಿದ— "ಪ್ಯಾರ್ ಕಿಯಾತೋ ಡರ್‌ನಾ ಕ್ಯಾ?..."

ಅವನ ಮುಖದಿಂದ ಪಂಚಿತವಾದ ಆ ಹಾಡನ್ನು ಕೇಳಿ ನನಗೆ ಕಚಗುಳಿಯಿಟ್ಟಂತಾಯಿತು.

ಕಾರು ರಭಸದಿಂದ ಓಡುತ್ತಿತ್ತು ಆದರೆ ನನ್ನ ಹೃದಯವನ್ನು ಮನೆ ತನ್ನತ್ತ ಎಳೆಯುತ್ತಿತ್ತು. ರುಗ್ಣೆಯಾದ ನನ್ನ ಮಡದಿ ಹಾಸಿಗೆಯಲ್ಲಿ ಮಲಗಿಕೊಂಡು—ಮದ್ದು ತೆಗೆದುಕೊಂಡು ಈಗ ಬಂದಾರು. ಇನ್ನೊಂದು ಕ್ಷಣಕ್ಕೆ ಬಂದಾರು—ಎಂದು ನನ್ನ ದಾರಿ ಕಾಯುತ್ತಿರಬಹುದು.

ನಾವು ಒಂದು ಟೀ ಎಸ್ಟೇಟನ್ನು ತಲುಪಿದೆವು ಎಸ್ಟೇಟಿನ ಮಧ್ಯ ಭಾಗದಲ್ಲಿ ಸುಂದರವಾದ ಒಂದು ಬಂಗಲೆಯಿತ್ತು. ನಮ್ಮ ಕಾರು ಅದೇ ಭವ್ಯ ಬಂಗಲೆಯ ಎದುರು ನಿಂತಿತು. ನಾವೆಲ್ಲರೂ ಕಾರಿನಿಂದಿಳಿದೆವು. ಅಷ್ಟರಲ್ಲಿ ಬಂಗಲೆಯೊಳಗಿನಿಂದ ನೌಕರನೊಬ್ಬ ಓಡು ತೋಡುತ್ತ ನಾವಿದ್ದಲ್ಲಿಗೆ ಬಂದ.

ಆ ಬಂಗಲೆ ಪಾಶ್ಚಾತ್ಯ ಕಲಾತ್ಮಕ ರೀತಿಯಲ್ಲಿ ಶೃಂಗರಿಸಲ್ಪಟ್ಟಿತ್ತು. ಆದರೆ ಬಂಗಲೆಯಲ್ಲಿ ಹೆಂಗಸಾಗಲೀ ಮಕ್ಕಳಾಗಲೀ ಇದ್ದಂತೆ ಕಾಣಿಸಲಿಲ್ಲ.

ನಾವೆಲ್ಲರೂ ನಡುಮನೆಯಲ್ಲಿ ಹೋಗಿ ಕುಳಿತು ಕೊಂಡೆವು. "ನಿನಗೇನು ಬೇಕು? ಬ್ರಾಂಡಿಯೋ? ವ್ಹಿಸ್ಕಿಯೋ?"–ಜೋಣಿ ನಗುತ್ತ ನನ್ನತ್ತ ತಿರುಗಿ ಪ್ರಶ್ನಿಸಿದ.

"ಏನೂ ಬೇಡ ಮಹಾರಾಯ, ನಾನೀಗ ಕುಡಿಯುವುದನ್ನು ಬಿಟ್ಟಿದ್ದೇನೆ."

ಜೋಣಿಯ ಗೆಳೆಯರಲ್ಲೊಬ್ಬ ಹೇಳಿದ—"ತುಂಬಾ ಸಂಭಾವಿತರಂತೆ ಕಾಣುತ್ತಿದ್ದಾರೆ. ಆದರೆ ಈ ಕಾಲದಲ್ಲಿ ಇಷ್ಟೊಂದು ಸಂಭಾವಿತರಾಗಿರುವ ಆವಶ್ಯಕತೆಯಿಲ್ಲ

"ನಾನು ಸಂಭಾವಿತನೆಂದು ನಾನೇನೂ ಹೇಳಿಕೊಳ್ಳಲಾರೆ. ಆದರೆ ಕುಡಿಯುವುದನ್ನಂತೂ ನಾನು ಸಂಪೂರ್ಣವಾಗಿ ತ್ಯಜಿಸಿದ್ದೇನೆ ಎಂದಿಷ್ಟೇ ಹೇಳಬಲ್ಲೆ."–ನಾನು ಮರುನುಡಿದೆ.

ಜೋಣಿ ತುಂಬಾ ಸಿಟ್ಟಾದವನಂತೆ ಮುಖ ಸಿಂಡರಿಸಿಕೊಂಡು ಹೇಳಿದ— "ನೀನು ಇವತ್ತು ಕುಡಿಯಲೇ ಬೇಕು. ನನ್ನದಿದು ಕೊನೆಯ ತೀರ್ಮಾನ. ನೀನು ನನ್ನ ಈ ಅಪೇಕ್ಷೆಯನ್ನು ಈಡೇರಿಸಲೇ ಬೇಕು."

ನಾನು ಉಭಯಸಂಕಟದಲ್ಲಿ ಸಿಕ್ಕಿಬಿದ್ದೆ. ಇದೆಲ್ಲಿಯ ಪ್ರಾರಬ್ಧ ಗಂಟುಬಿತ್ತಪ್ಪಾ, ಎಂದು ಚಿಂತಿಸ ತೊಡಗಿದೆ. ಆದರೆ ಗೆಳೆಯನ ಒತ್ತಾಯದ ಎದುರು ನಾನೇ

ಗಮನಾರ್ಹ ಬದಲಾವಣೆ ! ಠೇವಣಾತಿದಾರರಿಗೆ ಸುಸಂದರ್ಭ !!

ನಿರಖು ಠೇವಣಿಗಳ ಮೇಲೆ

ಪರಿಷ್ಕರಿಸಿದ ಆಕರ್ಷಣೀಯ ಬಡ್ಡಿ ದರ !!!

91 ದಿನಗಳಿಗೆ ಮೇಲ್ಪಟ್ಟ 6 ತಿಂಗಳ ಒಳಗಿನ ಅವಧಿಯ ಠೇವಣಾತಿಗಳಿಗೆ—4¼%

6 ತಿಂಗಳಿಂದ	ಮೇಲ್ಪಟ್ಟ	1 ವರ್ಷ ಒಳಗಿನ ಅವಧಿಯ			,,	5¼%
1 ವರ್ಷದಿಂದ	,,	2 ವರ್ಷಗಳ ಒಳಗಿನ	,,		,	5½%
2 ,,	,,	3	,,	,,	,,	5¾%
3 ,,	,,	5	,,	,,	,,	6%
5 ,,	,,	7	,,	,,	,,	6¼%
7 ,,	,,	9	,,	,,	,,	6½%
9 ವರ್ಷಗಳಿಗೆ ಮೇಲ್ಪಟ್ಟು			....		....	6¾%

5 ವರ್ಷ ವ ಅವುಗಳಿಗೆ ಮೇಲ್ಪಟ್ಟ ಅವಧಿಯ ಧಾರ್ಮಿಕ ಸಂಸ್ಥೆಗಳ ಠೇವಣಾತಿಗಳಿಗೆ 6¾%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ನೀಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಯಾವುದೇ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು:-

"ವಿಜಯ ಬ್ಯಾಂಕ್ ಬಿಲ್ಡಿಂಗ್", ಲೈಟ್‌ಹೌಸ್ ಹಿಲ್ ರೋಡ್,

ಮಂಗಳೂರು – 3.



ನೂ ಮಾಡುವಂತಿರಲಿಲ್ಲ. ಅವನನ್ನು ವಿರೋಧಿಸುವ ಸಾಮರ್ಥ್ಯ ನನ್ನಲ್ಲಿದ್ದಿರಲಿಲ್ಲ.

ತುಂಬಾ ರಾತ್ರಿಯಾಗಿ ಬಿಟ್ಟಿತ್ತು. ಮನೆಯಲ್ಲಿ ನನ್ನ ಹೆಂಡತಿ ಮಕ್ಕಳು ಎಲ್ಲರೂ ನನ್ನ ಮಾರ್ಗ ನಿರೀಕ್ಷೆಯಲ್ಲಿದ್ದಿರಬಹುದು. ಅರುಣಾ 'ಅಪ್ಪಾ' 'ಅಪ್ಪಾ'—ಎಂದು ಅಳಲು ಪ್ರಾರಂಭಿಸಿರಬಹುದು. ನಾನು ಇಷ್ಟು ರಾತ್ರಿಯಾದರೂ ಮನೆ ಸೇರದಿದ್ದುದನ್ನು ಕಂಡು ಅವರೆಲ್ಲರೂ ತುಂಬ ದಿಗಿಲುಗೊಂಡಿರಬಹುದು.

ನಾನು ಕೊನೆಯ ಪ್ರಯತ್ನವೆಂದು ಪುನಃ ನಮ್ರನಾಗಿ ಜೋಣಿಯನ್ನು ಪ್ರಾರ್ಥಿಸಿದೆ— "ನನಗೀಗ ಮನೆಗೆ ಹೋಗಬೇಕು.

ಹೆಂಡತಿಗೆ ಕಾಯಿಲೆ, ಪರಿಸ್ಥಿತಿ ಚಿಂತಾಜನಕವಾಗಿದೆ"–ಹೆದರುತ್ತ–ಹೆದರುತ್ತ ನಾನು ಹೇಳಿದೆ. ನಗರದಲ್ಲಿ ನಮ್ಮ ಮನೆಯ ಅಕ್ಕಪಕ್ಕದಲ್ಲಿ ನಮ್ಮ ಗುರುತು ಪರಿಚಯದವರಾರೂ ಇಲ್ಲವೆಂದೂ ಹೇಳಿದೆ. ಜೋಣಿ ಅದೇನೂ ಮಹತ್ವದ ಸಂಗತಿಯೇ ಅಲ್ಲವೆಂಬಂತೆ ನಿರ್ಲಕ್ಷ್ಯವಾಗಿ ನಗತೊಡಗಿದ. ಅವನ ಭಯಾನಕ ನಗುವಿನ ಶಬ್ದ ಕೇಳಿ ನಾನಂತೂ ತೀರ ಅಧೀರನಾದೆ, ಅಸ್ಥಿರನಾದೆ, ಎಂತಹ ಪಾಶವಿಕ ನಗು!

ಅವನ ಅಟ್ಟಹಾಸ ನಿಲ್ಲಲೇ ಇಲ್ಲ.

ಅಷ್ಟರಲ್ಲಿ ಮತ್ತೊಂದು ಕಾರು ಹೊರಗಡೆ ಬಂದು ನಿಂತ ಶಬ್ದ ಕೇಳಿಸಿತು. ಉತ್ಸುಕತೆಯಿಂದ ಜೋಣಿ ಮತ್ತವನ ಮಿತ್ರರು ಬಾಗಿಲಿನತ್ತ ಧಾವಿಸಿದರು, ನಾನೂ ಅತ್ತ ಕಡೆ ನೋಡತೊಡಗಿದೆ. ಬಹುಶಃ ಯಾರೋ ಅತಿಥಿಗಳು ಬಂದಿರಬಹುದೆಂದು ನನೆಂದು ಕೊಂಡೆ. ಆದರೆ ಕಾರಿನಿಂದ ಮೂವರು ಮಹಿಳೆಯರು ಇಳಿಯುತ್ತಿರುವುದು ನನ್ನ ದೃಷ್ಟಿಗೆ ಬಿತ್ತು.

ಅವರಲ್ಲಿ ಯಾರೊಬ್ಬರೂ ಜೋಣಿಯ ಮತ್ತವನ ಮಿತ್ರರ ಮಡದಿಯರಲ್ಲವೆಂದು ನೋಡಿದೊಡನೆಯೇ ನಾನು ಊಹಿಸಿದೆ. ಅಷ್ಟೇ ಏಕೆ? ಅವರು ಯಾರ ಹೆಂಡಂದಿರೂ ಅಲ್ಲ, ಅಥವಾ ಎಲ್ಲರ ಹೆಂಡಂದಿರು ಎಂದರೂ ಸರಿಯೇ.

ಎಲ್ಲರೂ ಅಂದವಾಗಿ, ಆಕರ್ಷಕವಾಗಿ ಶೃಂಗರಿಸಿಕೊಂಡಿದ್ದರು. ಪಾರದರ್ಶಕವಾದ ನೈಲಾನ್ ಸೀರೆಗಳನ್ನು ಉಟ್ಟುಕೊಂಡಿದ್ದರು. ಶೃಂಗಾರ ಸಿನೆಮಾ ನಟಿಯರನ್ನೂ ಮೀರಿಸುವಂತಿತ್ತು, ಎಲ್ಲ ಸರಿ. ಆದರೆ ಯಾರಲ್ಲಿಯೂ ಒಬ್ಬ ಸದ್ಗೃಹಿಣಿಯಲ್ಲಿರಬೇಕಾದ ಶೀಲವೆಂಬ ಪದಾರ್ಥ ಮಾತ್ರ ಎಳ್ಳಷ್ಟು ಇದ್ದಿರಲಿಲ್ಲ. ಅಲ್ಲದೆ ಜೋಣಿ ಮತ್ತವನ ಮಿತ್ರರ ಮಡದಿಯರೇ ಒಂದು ವೇಳೆ ಬಂದುದಾಗಿದ್ದರೆ ಇವರೆಲ್ಲರೂ ಇಷ್ಟೊಂದು ಉತ್ಸುಕತೆಯಿಂದ, ತತ್ಪರತೆಯಿಂದ ಅವರನ್ನು ಸ್ವಾಗತಿಸುತ್ತಿದ್ದರೇ ಎಂಬುದೂ ಸಂಶಯವೇ. ಜೋಣಿ ಮತ್ತವನ ಮಿತ್ರರು ತುಂಬಾ ಉದ್ವಿಗ್ನರಾಗಿದ್ದರು.

ನಿಸ್ಸಂಕೋಚವಾಗಿ ಮೂವರು ಧಾರ್ತೀಯ ಮಹಿಳೆಯರೂ ಮನೆಯೊಳಗೆ ಅಡಿಯಿಟ್ಟರು.

ಒಬ್ಬಾಕೆ ಕಡೆಗಣ್ಣೋಟ ಬೀರುತ್ತ ಪ್ರಶ್ನಿಸಿದಳು— "ಜೋಣಿ ಅಣ್ಣಾ! ಈ ಬಾಟ್ಲಿಗಳನ್ನು ಇನ್ನೂ ಏಕೆ ಒಡೆಯಲೇ ಇಲ್ಲ?"

ಮತ್ತೊಬ್ಬಾಕೆ ನುಡಿದಳು— 'ಬಹುಶಃ ನಾವೆಲ್ಲರೂ ಬಂದ ನಂತರ ಒಡೆಯುವುದೆಂದು ಯೋಚಿಸಿರುವರೋ ಏನೋ ......'

ಅವರು ಮಾತನಾಡುವ ರೀತಿಯನ್ನೂ, ಅವರ ಹಾವಭಾವ, ಬೆಡಗು ಬಿನ್ನಾಣಗಳನ್ನೂ ಕಂಡು ಇವರು ಖಂಡಿತವಾಗಿಯೂ ವೇಶ್ಯೆಯರೇ ಹೌದು ಎಂದು ನನಗನ್ನಿಸಿತು. ಹಾಗಾದರೆ....? ಇನ್ನೇನೆಲ್ಲ ಇಲ್ಲಿ ನಡೆಯಲಿಕ್ಕಿದೆ? ನಾನು ಊಹಿಸಲೂ ಅಶಕ್ತನಾದೆ. ಪೂರ್ವದ ಪಾಪಕರ್ಮಗಳು ಹೊಸ ಪರಿಸ್ಥಿತಿಯಲ್ಲಿ ನನ್ನ ಮುಂದೆ ನವೀನ ರೂಪ ಧರಿಸಿ ಎದುರಾಗುತ್ತಿವೆಯೋ ಎಂದು ನನಗನ್ನಿಸಿ ಒಮ್ಮೆಗೇ ಭಯಭೀತನಾದೆ. ಜೋಣಿಯು ಆ ಮೂವರಲ್ಲಿ ಒಬ್ಬಳನ್ನುದ್ದೇಶಿಸಿ— "ನೀನು ಒಂದು ಬಾಟ್ಲಿಯ ಮುಚ್ಚಳ ತೆಗೆದು "ಈ ನನ್ನ ಮಿತ್ರನಿಗೆ ಕುಡಿಸು"—ಎಂದು ಅಪ್ಪಣೆ ಮಾಡಿದ,

ಆಕೆ ಒಮ್ಮೆ ನನ್ನತ್ತ ನೋಡಿದಳು. ಹಸಿದ ಹೆಬ್ಬುಲಿಯೊಂದು ಕುರಿ ಮರಿಯನ್ನು ನೋಡುವಂತಿತ್ತು ಅವಳ ನೋಟ! ಅವಳು ಮಾತ್ರವಲ್ಲ; ಎಲ್ಲರೂ ನನ್ನನ್ನೇ ನೋಡ ತೊಡಗಿದರು.

ನನ್ನಲ್ಲಿ ಉಳಿದುಳಿದ ವಿಚಾರ ಶಕ್ತಿಯೂ ಕ್ಷಣೇ ಕ್ಷಣೇ ಕ್ಷೀಣವಾಗತೊಡಗಿತ್ತು. ಅದೇ ವಿಚಿತ್ರ ಪರಿಸ್ಥಿತಿಯಲ್ಲಿ ಏನು ಮಾಡಬೇಕೆಂದು ತೋಚದೆ ನಾನು ಸುಮ್ಮನೆ ಮೂಕನಂತೆ ಕುಳಿತಿದ್ದೆ.

ಆ ಯುವತಿ ಬಾಟ್ಲಿಯ ಮುಚ್ಚಳ ತೆಗೆದಳು, ಗ್ಲಾಸಿಗೆ ಬಗ್ಗಿಸಿದಳು. ಒಂದಿಷ್ಟು ಸೋಡಾವಾಟರ್ ಬೆರಸಿದಳು. ಗ್ಲಾಸನ್ನು ಹಿಡಿದುಕೊಂಡು ನನ್ನ ಬಳಿ ಬಂದು ಗ್ಲಾಸನ್ನು ನನ್ನ ತುಟಿಗೆ ತಗುಲಿಸಿದಳು.

"ಊಹುಂ! ನಾನು ಕುಡಿಯುವುದಿಲ್ಲ, ನನಗೆಬೇಡ."

ಅಲ್ಲಿದ್ದವರೆಲ್ಲರೂ ನನ್ನ ಮಾತು ಕೇಳಿ ಗಹಗಹಿಸಿ ನಕ್ಕರು. ಜೋಣಿ ಹೇಳಿದ— "ನೀನು ಬುದ್ಧಿವಂತಳು ಹೌದಾಗಿದ್ದರೆ ಇವನಿಗೆ ಕುಡಿಸಲೇ ಬೇಕು, ನೋಡೋಣ."

ಅಷ್ಟರಲ್ಲಿ ಮತ್ತೊಬ್ಬಾಕೆ ನಗೆಯುತ್ತ ನನ್ನ ಬಳಿ ಬಂದು ತನ್ನ ಕೋಮಲವಾದ ಕೈಗಳಿಂದ ನನ್ನ ಗಲ್ಲವನ್ನು ಹಿಡಿದೆತ್ತಿ ನುಡಿದಳು— "ಸುಮ್ಮನೆ ಕುಡಿಯಿರಿ. ಹಟ ಮಾಡಬೇಡಿ.'

ಮತ್ತೇನಾಯಿತೋ ನನಗೆ ಗೊತ್ತಿಲ್ಲ. ಬೆಳಗ್ಗೆ ಎಚ್ಚರವಾದಾಗ ನನ್ನ ಪಕ್ಕದಲ್ಲಿ ಆ ಮೂವರಲ್ಲೊಬ್ಬಳು ಮಲಗಿದ್ದುದನ್ನು ಕಂಡೆ.

ನಿನ್ನೆ ರಾತ್ರಿ ಏನೆಲ್ಲ ನಡೆಯಿತು?
ನನಗೊಂದೂ ನೆನಪಿಲ್ಲ.

ಓ ದೇವರೇ' ನಾನು ನನ್ನ ಕೈಹಿಡಿದಾಕೆಗೆ ದ್ರೋಹವೆಸಗಿದೆನೇ? ಆಕೆ ಉತ್ಕಂಠಿತಳಾಗಿ ನನ್ನ ದಾರಿ ಕಾಯುತ್ತಿದ್ದಿರಬಹುದು ಎಂದು ಅನ್ನಿಸಿ ನನಗೆ ನನ್ನ ಮೇಲೆಯೇ ಎಲ್ಲಿಲ್ಲದ ಸಿಟ್ಟುಬಂತು. ತಟಕ್ಕನೆ ನಾನು ಹೊದ್ದಿದ್ದ ರಗ್ಗನ್ನು ಜಾಡಿಸಿ ಎದ್ದು ಕುಳಿತೆ. ಆಗಲೇ ಹನ್ನೊಂದು ತಾಸಾಗಿ ಬಿಟ್ಟಿತ್ತು. ಆಫೀಸಿಗೆ ಹೋಗುವ ವೇಳೆಯೂ ಮೀರಿ ಹೋಗಿದೆ! ನಾನು ಹುಚ್ಚನಂತೆ ಆ ಬಂಗಲೆಯೊಳಗೆ ಅತ್ತಿಂದಿತ್ತ ಓಡಾಡಿದೆ. ಎಲ್ಲ ಕೋಣೆಗಳಲ್ಲೂ ಜೋಣಿಗಾಗಿ ಹುಡುಕಾಡಿದೆ. ಬಂಗಲೆಯ ಹಿಂಬದಿಯ ಒಂದು ಕೋಣೆಯಲ್ಲಿ ಆತ ಮಲಗಿದ್ದ. ಅವನ ಪಕ್ಕದಲ್ಲೂ ಯುವತಿಯೊಬ್ಬಳು ಮಲಗಿದ್ದಳು. ಲಜ್ಜೆಯಿಂದ ನನಗೆ ತುಂಬ ಸಂಕೋಚವಾಯಿತು. ಬಾಗಿಲ ಬಳಿಯಲ್ಲಿಯೇ ನಾಲ್ಕಾರು ಕ್ಷಣ ನಿಂತುಕೊಂಡೆ ಆ ಮೇಲೆ ಮೆಲ್ಲನೆ ಜೋಣಿಯನ್ನು ಕರೆದೆ.

ಆತ ಕಣ್ಣು ತೆರೆದ

"ಜೋಣಿ, ನಾನೀಗ ಹೋಗಬೇಕು."

"ಹೋಗು, ಯಾರು ಬೇಡವೆಂದವರು?"—ಜೋಣಿ ನಿರ್ವಿಕಾರನಾಗಿ ನುಡಿದು ತನ್ನ ಡ್ರೈವರನನ್ನು ಕೂಗಿ ಕರೆದ. ಆಗ ನನಗೆ ತುಸು ಸಮಾಧಾನವಾಯಿತು. ಎರಡು ತಾಸಿನೊಳಗೆ ಮನೆ ಸೇರಬಹುದೆಂದು ಭಾವಿಸಿದೆ.

ಡ್ರೈವರ್ ಬಾಗಿಲ ಬಳಿ ಬಂದು ನಿಂತ.

ಆಗಲೂ ಜೋಣಿಯ ಪಕ್ಕದಲ್ಲಿ ಆ ಯುವತಿ ಮಲಗಿಯೇ ಇದ್ದಳು.

ಜೋಣಿ ಎದ್ದು ಕುಳಿತು ಡ್ರೈವರನಿಗೆ ಆಜ್ಞೆ ಮಾಡಿದ—"ಇವನನ್ನು ಕೂಡಲೇ ಕೊಟ್ಟಾಯಮ್‌ಗೆ ಬಿಟ್ಟು ಬಾ."

ಹಲವಾರು ಸಮಸ್ಯೆಗಳು ನನ್ನೆದುರು "ಧು"ತ್ತೆಂದು ಬಂದು ನಿಂತುವು. ಕಡಿಮೆಯೆಂದರೂ ಇಪ್ಪತ್ತು ರೂಪಾಯಿಗಳು! ಹಣವಿಲ್ಲದೆ ಹೆಂಡತಿಗೆ ಮದ್ದನ್ನು ಹೇಗೆ ಕೊಂಡು ಹೋಗಲಿ? ಹುಡುಗರ ಸ್ಕೂಲ್ ಫೀಸನ್ನು ಹೇಗೆ ತುಂಬಿಸಲಿ?

ಕೇವಲ ಇಪ್ಪತ್ತು ರೂಪಾಯಿ ಗಳನ್ನು ನನ್ನ ಈ ಶ್ರೀಮಂತ ಮಿತ್ರ ಕೊಡಲಾರನೆ?

ಹೆದರುತ್ತ ನಾನು ಜೋಣಿಯನ್ನು ಯಾಚಿಸಿದೆ—"ಜೋಣಿ! ನನಗೀಗ ಇಪ್ಪತ್ತು ರೂಪಾಯಿಗಳು ಬೇಕು. ಹೆಂಡತಿಗೆ ವಿಪರೀತ ಕಾಯಿಲೆ! ಮದ್ದು ತೆಗೆದುಕೊಂಡು ಹೋಗಬೇಕು ..."

ನನ್ನ ಮಾತು ಮುಗಿಯುವುದಕ್ಕೆ ಮೊದಲೇ ಜೋಣಿ ಉತ್ತರ ನೀಡಿದ—"ರೂಪಾಯಿ? ಈಗ ಎಲ್ಲಿದೆ? ನನ್ನ ಬಳಿಯಲ್ಲೀಗ ಒಂದು ಪೈಸಾ ಸಹ ಇಲ್ಲ."

ಇಷ್ಟನ್ನು ನುಡಿದು ಆತ ಪುನಃ ಹಾಸಿಗೆಯ ಮೇಲುರುಳಿ ಪಕ್ಕದಲ್ಲಿದ್ದ ಆ ಯುವತಿಯನ್ನು ತಬ್ಬಿಕೊಂಡು ರಗ್ಗನ್ನೆಳೆದುಕೊಂಡ.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

S. C. 290/1964.

ಜೆ. ಯಸ್. ಚಿನ್ನಪ್ಪ ಗೌಡ — ವಾದಿ

ಮತ್ತು

ಯಚ್. ಕೂರಪ್ಪ ಗೌಡ — ಪ್ರತಿವಾದಿ.

ಪುತ್ತೂರು ತಾಲ್ಲೂಕು ನಾಲ್ಕೂರು ಗ್ರಾಮದ ಹಾಲೆಮಜಲು ಕೋಮಪ್ಪ ಗೌಡರ ಮಗ ಕೂರಪ್ಪ ಗೌಡರೀಗೆ —

ವಾದಿಗೆ ನಿಮ್ಮಿಂದ ಬರಾ ಸಣದ ನಿವೃತ್ತಿಗಳಿಗೆ ಮಾಡಿದ ಮೋಟಿನ ದಾವೆಯು ನಿಮ್ಮ ಹಾಜರಾತಿಗೆ ತಾ. 23–11–1964 ನೇ ಹಗಲು ಗಂಟೆ 11ಕ್ಕೆ ಈ ಕೋರ್ಟಿನಲ್ಲಿ ಇಟ್ಟಿರುತ್ತದೆ. ಆ ದಿವ್ಸ ನೀವು ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಕೋರ್ಟಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು ಎಂತ ಈ ಮೂಲಕ ನಿಮಗೆ ತಿಳಿಸಲಾಗಿಯದೆ.

(By order of the court)

M. Raghava. B. A, B L.

Advocate for Plaintiff.

ಪುತ್ತೂರು, 24—10—1964.





ನಮ್ಮ-ನಮ್ಮವರು



ಸರ್ದಾರ ಸ್ವರ್ಣಸಿಂಗ್

ವಿದೇಶ ಮಂತ್ರಿ ಖಾತೆಗೊಬ್ಬ ಪ್ರತ್ಯೇಕ ಮಂತ್ರಿಯನ್ನು ನೇಮಿಸುವ ಕಾರ್ಯವನ್ನು ಪ್ರಧಾನಿ ಶಾಸ್ತ್ರಿಯವರು ಮುತ್ಸದ್ಧಿತನದಿಂದಲೇ ಮಾಡಿದ್ದರೆಂದು ಆಗ ತಿಳಿಯಲಾಗಿತ್ತು. ಆಗ ಆಸ್ಥಾನಕ್ಕೆ ಸರ್ದಾರ ಸ್ವರ್ಣ ಸಿಂಗರನ್ನೇ ಆಯ್ದುಕೊಂಡಾಗ, ಅವರಿಂದ ದೇಶವು ಬಹಳಷ್ಟನ್ನು ನಿರೀಕ್ಷಿಸಿಯೂ ಇತ್ತು. ಈ ನಿರೀಕ್ಷೆಯು ನಿಷ್ಫಲವಾಗಲಿಲ್ಲ; ಇದು ನಮ್ಮ ಸೌಭಾಗ್ಯ.

ದಿ| ಪ್ರಧಾನಿ ನೆಹರುರವರಿಗೆ ವಿದೇಶ ವ್ಯವಹಾರ ಖಾತೆಯಲ್ಲಿ ಅವಕಾಶವೊದಗಿದಾಗ ಸಹಾಯ ಮಾಡುವುದಕ್ಕೆ ಮುಂದಾಗಿದ್ದ ಸರ್ದಾರರು ಈಗ ಅದೇ ಖಾತೆಯಲ್ಲಿ ಮುಂದುವರಿದಿದ್ದಾರೆ; ವಿದೇಶ ವ್ಯವಹಾರ ಶಾಖೆಯು ಇಂದು ಸಜೀವವಾಗುತ್ತಿರುವುದು ಅವರ ಕರ್ತವ್ಯದಕ್ಷತೆಗೊಂಡು ದ್ಯೋತಕ. ಸಿಂಹಳದಲ್ಲಿರುವ ಭಾರತೀಯ ಮೂಲದ ನಾಗರಿಕರ ಭೀಕರ ಹಾಗೂ ಸುದೀರ್ಘ ಸಮಸ್ಯೆಯನ್ನು ಅಲ್ಪಾವಧಿಯಲ್ಲಿಯೇ ಉಭಯತರರಿಗೂ ಗೌರವ ತರುವಂತೆ ಪರಿಹರಿಸಿದ ಕೀರ್ತಿಯಲ್ಲಿ ಪ್ರಧಾನಿಗಳಾದ ಶಾಸ್ತ್ರಿ ಮತ್ತು ಭಂಡಾರನಾಯಕೆಯವರಂತೆಯೇ ಸರ್ದಾರರ ಪಾಲೂ ಬಹುತೇಕವಿದೆ. ಕೆಲವು ವಾರಗಳಿಗೆ ಮೊದಲು ಅವರು ಸಿಂಹಳಕ್ಕೆ ಬೆಟ್ಟಿಯಿತ್ತಾಗ ಇದಕ್ಕೆ ತಕ್ಕಂತೆ ಭೂಮಿಯನ್ನು ಹಸನು ಮಾಡಿ ಬಂದಿದ್ದರೆಂಬುದು ಸೂರರಷ್ಟು ನಿಜ.

ಇದೇ ರೀತಿಯಲ್ಲಿ, ನೆರೆಯ ರಾಷ್ಟ್ರಗಳ ಸಂಬಂಧವನ್ನು ದೃಢಗೊಳಿಸುವುದು ಅತ್ಯಗತ್ಯವಾದುದರಿಂದ ಪಾಕಿಸ್ತಾನ-ಚೀನಾಗಳೊಡನಿರುವ ಭಿನ್ನಾಭಿಪ್ರಾಯಗಳನ್ನೂ ಉಚಿತ ರೀತಿಯಲ್ಲಿ ಪರಿಹರಿಸಲು ಸರ್ದಾರರು ಪ್ರಯತ್ನಿಸುವರು. ಆದರೆ, ಏಕಪಕ್ಷೀಯ ತೀರ್ಮಾನಕ್ಕೆ ಕಟ್ಟುಬಿದ್ದು ಭಾರತೀಯ ಪರಂಪರೆ ಮತ್ತು ಗೌರವಕ್ಕೆ ಎರವಾಗಿ ಕಲೆವಾಗುವಂತೆ ಯಾವ ಕಾರ್ಯವನ್ನೂ ಅವರು ಕೈಗೊಳ್ಳಲು ಮನಬಾರಲಾರರು. ಇದನ್ನು ಸತ್ಯವಾಗಿಸುವಲ್ಲಿ ಅವರು ಮುಂದುವರಿಯಲಿ

ಇಂದಿರಾ ಗಾಂಧಿ

ಕ್ರೆಮ್ಲಿನ್‌ನಲ್ಲಿ ಕ್ರುಶ್ಚೇವರ ಪತನವೆಷ್ಟು ವಿಸ್ಮಯಕಾರಿಯಾಗಿತ್ತೋ ಅಷ್ಟು ಅನಿರೀಕ್ಷಿತವಾಗಿದೆ ಸುದ್ದಿ ಮತ್ತು ಪ್ರಸಾರ ಶಾಖೆಯ ಮಂತ್ರಿ ಇಂದಿರಾ ಗಾಂಧಿಯವರ ಮೋಸ್ಕೋ ಸಂದರ್ಶನ. ವರದಿಗಳನ್ನು ನಂಬುವುದಾದರೆ, ಬಲ್ಗೇಡಿನಿಂದ ಮೊಸ್ಕೋ ಸಂದರ್ಶನವು ಶ್ರೀಮತಿಗಾಂಧಿಯವರ ಖಾಸಗೀ ವಿಷಯವಾದರೂ ಅವರು ರಷ್ಯದ ಬದಲಾದ ನಾಯಕತ್ವದಿಂದ ಭಾರತದ ಮೇಲೆ ಆಗಬಹುದಾದ ಪ್ರಭಾವವನ್ನು ಅರಿತುಕೊಳ್ಳುವುದಕ್ಕಾಗಿಯೇ ಅಲ್ಲಿಗೆ ಹೋದರೆಂದು ಊಹಿಸಬಹುದು

ಸೋವಿಯತ್ತಿನ ಅಧ್ಯಕ್ಷ ಮಿಕೋಯಾನ್ ಹಾಗೂ ಮತ್ತಿತರ ಉನ್ನತ ಪದಾಧಿಕಾರಿಗಳು ಭಾರತ ಬಗ್ಗೆ ರಶ್ಯವು ಕ್ರುಶ್ಚೇವರು ನಿರ್ವಹಿಸಿದ್ದ ನೀತಿಯನ್ನೇ ಮುಂದುವರಿಸುವುದೆಂದೂ ಭಾರತಕ್ಕೆ ನೀಡಲಾಗುತ್ತಿರುವ ಯಾವ ನೆರವಿನಲ್ಲೂ ಯಾವ ಬಗೆಯಲ್ಲೂ ಕಡಿತವಾಗುವುದಿಲ್ಲವೆಂದೂ ಭರವಸೆಯಿತ್ತರೆಂದು ತಿಳಿಯುತ್ತದೇ. ಕ್ರುಶ್ಚೇವರ ಪದಚ್ಯುತಿಗೆ ಯಾವುದೇ ಕಾರಣ ಇರಲಿ, ಭಾರತದ ಬಗ್ಗೆ ಅವರು ತೋರಿದ ಉದಾರತೆಯು ಕಾರಣವಲ್ಲವೆಂಬ ವಿಷಯವೂ ಹೊರಪಟ್ಟಿದೆ ಇದ್ದರೂ ಇರಬಹುದು. ಇದೇ ಬಗೆಯ ಆಶ್ವಾಸನವನ್ನು ನೀಡುವುದರಲ್ಲಿ ಕಮ್ಯುನಿಸ್ಟರು ಬಲು ಗಟ್ಟಿಗರು. ಆದರೆ, ಮಾನವತಾವಾದಿ ಕಮ್ಯುನಿಸ್ಟರು ಕ್ರುಶ್ಚೇವರ ಭಾರತ ನೀತಿಯನ್ನು ವಿರೋಧಿಸಲಾರರು. ಈಗ, ಅಧಿಕಾರಕ್ಕೆ ಬಂದಿರುವ ನಾಯಕರ ನಿಜರೂಪ ಬಯಲಾಗಬೇಕಾದರೆ, ಇನ್ನೂ ಕೆಲಕಾಲ ಕಾದು ನೋಡಬೇಕು; ಅದುವರೆಗೆ ತೀರ ಎಚ್ಚರಿಕೆಯಿಂದಿರಬೇಕು.

ಇಂದಿರಾಗಾಂಧಿಯವರು ದಿ| ನೆಹರುರವರೊಡನೆಯೂ, ಸ್ವತಂತ್ರವಾಗಿಯೂ ಹಲವಾರು ದೇಶಗಳನ್ನು ಸಂದರ್ಶಿಸಿದ್ದರಿಂದ ಅಲ್ಲಿಂದ ಅಲ್ಲಿನ ಜನಹೃದಯವನ್ನು ಅರಿತುಕೊಳ್ಳಬಲ್ಲವರು. ಅವರು ಮೋಸ್ಕೋನಿಂದ ಮರಳುವಾಗ ಇಂದಿನ ಕ್ರೆಮ್ಲಿನ್‌ನ ಹೃದಯವನ್ನೂ ತಿಳಿದು ಬರುವುದು ಖಂಡಿತ. ಈ ದೃಷ್ಟಿಯಿಂದ ಶ್ರೀಮತಿಯವರ ಮೋಸ್ಕೋ ಸಂದರ್ಶನ ಖಾಸಗಿಯಿದ್ದರೂ ರಾಜಕೀಯ ಪರಿಣಾಮವನ್ನು ಹೊತ್ತು ತಂದೇ ತರುತ್ತದೆ.

ಡಾ| ನಳಿನೀ ಪರಮೇಶ್ವರನ್

ಭಾರತೀಯರು ಇತರ ಅತೀವ ಮುಂದುವರಿದ ರಾಷ್ಟ್ರಗಳ ನಾಗರೀಕರಿಗೆ ಯಾವುದರಲ್ಲೂ ಕಡಿಮೆಯಿಲ್ಲ. ಅನೇಕ ಭಾರತೀಯರು ವಿದೇಶಗಳಲ್ಲಿ ಉಚ್ಚ ಸ್ಥಾನದಲ್ಲಿದ್ದು ತಮ್ಮ ಕರ್ತವ್ಯ ದಕ್ಷತೆಯಿಂದ ತಮಗೂ ತಮ್ಮ ಮಾತೃ ಭೂಮಿಗೂ ಕೀರ್ತಿಯನ್ನು ತರುತ್ತಾರೆ. ಮಹಿಳೆಯರೂ ಈ ಕಾರ್ಯದಲ್ಲಿ ಹಿಂದುಳಿಯದೆ ಡಾ| ನಳಿನೀ ಪರಮೇಶ್ವರನ್‌ರಂತೆ ಮುಂದುವರಿಯಬೇಕು.

ಉಡುಪಿಯ ಸುವಿಖ್ಯಾತ ಅಡ್ವೊಕೇಟರೂ ಸಾರ್ವಜನಿಕ ಸೇವಾಕರ್ತರೂ ಆದ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಪುತ್ರಿ ಡಾ| ನಳಿನೀ ಪರಮೇಶ್ವರನ್ನರು ೧೯೫೫ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಿಂದ ಎಂ. ಬಿ ಬಿ.ಎಸ್. ಡಿ. ಜಿ ಓ. ಪದವಿ ಪಡೆದರು. ಅನಂತರ ಮಣಿಪಾಲದ ಕಸ್ತೂರ್ಬಾ ಮೆಟರ್ನಿಟಿ ಹಾಸ್ಪಿಟಲ್‌ನಲ್ಲಿ ಸುಮಾರು ಎರಡು ವರ್ಷಗಳ ಕಾಲ ಮೆಡಿಕಲ್ ಆಫೀಸರಾಗಿ ಸೇವೆ ಸಲ್ಲಿಸಿದರು. ಮುಂದೆ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಅನಾಟಮಿ ವಿಭಾಗದ ಡೆಮೋನ್‌ಸ್ಟ್ರೇಟರಾಗಿ ಒಂದು ವರ್ಷ ಕೆಲಸ ಮಾಡಿದರು.

ಡಾ| ನಳಿನಿ ಪರಮೇಶ್ವರನ್ ಇಂಗ್ಲೆಂಡಿನ ಬರ್ಮಿಂಗ್‌ಹೇಮ್ ಮೆಡಿಕಲ್ ಕಾಲೇಜಿನ ರಿಜಿಸ್ಟ್ರಾರರಾದ ತಮ್ಮ ಪತಿ ಡಾ| ವಿ. ಪರಮೇಶ್ವರನ್, ಎಂ. ಆರ್. ಸಿ. ಪಿ. (ಲಂಡನ್)ರನ್ನು ಕೂಡಿಕೊಳ್ಳಲು ಇದೇ ಸಪ್ಟಂಬರ ೨೧ರಂದು ಬರ್ಮಿಂಗ್‌ಹೇಮಿಗೆ ತೆರಳಿದರು. ವಿದ್ಯಾರ್ಥಿದೆಸೆಯಲ್ಲಿಯೇ ಕುಶಾಗ್ರಮತಿಯೆಂದು ಹೆಸರು ಪಡೆದ ಇವರು ಮಣಿಪಾಲದಲ್ಲಿಯೂ ಉತ್ತಮ ಆದರ್ಶ ಡಾಕ್ಟರರೆಂದು ಕೀರ್ತಿಪಡೆದಿದ್ದರು. ಇಂತಹ ಯಶಸ್ವೀ ಮಹಿಳಾ ಡಾಕ್ಟರ್ ಇದೇ ತಿಂಗಳ ಒಂದನೇ ತಾರೀಕಿನಿಂದ ಬರ್ಮಿಂಗ್‌ಹೇಮ್‌ನ ಲೋರೆಂಟೊ ಮೆಟರ್ನಿಟಿ ಹಾಸ್ಪಿಟಲ್‌ನ ರಿಜಿಸ್ಟ್ರಾರರಾಗಿ ನೇಮಕವಾಗಿರುವುದು ಕನ್ನಡಿಗರಿಗೆ ಮಾತ್ರವಲ್ಲ, ಭಾರತಕ್ಕೇ ಒಂದು ಮಹಾಭೂಷಣ, ಈ ಹುದ್ದೆಗೆ ನೇಮಕಗೊಂಡ ಮೊತ್ತಮೊದಲ ಭಾರತೀಯರೆಂದರೆ, ಡಾ| ನಳಿನೀ ಪರಮೇಶ್ವರನ್. ಶ್ರೀಮತಿಯವರು ತಮ್ಮ ಹೊಸ ಪದವಿಯಲ್ಲಿ ಪರಿಪೂರ್ಣ ಯಶಗಳಿಸಿ, ತಮಗೂ ತಮ್ಮವರಿಗೂ ದೇಶಕ್ಕೂ ಕೀರ್ತಿತರಲೆಂದು ಹಾರೈಸುತ್ತೇನೆ.

ನಾಡಹಬ್ಬ

ರಂಗಂಪೇಟ ಕನ್ನಡ ಸಾಹಿತ್ಯ ಸಂಘದ ಆಶ್ರಯದಲ್ಲಿ ತಾ. 8—10—64ರಿಂದ ತಾ. 12ರ ವರೆಗೆ ನಾಡಹಬ್ಬವು ಮೆರವಣಿಗೆ, ಧ್ವಜವಂದನೆ, ಸಾರ್ವಜನಿಕ ಸಭೆ ಮೊದಲಾದ ಕಾರ್ಯಕ್ರಮಗಳಿಂದ ನೆರವೇರಿತು. ಶ್ರೀಗಳಾದ ವಿ. ಎಂ. ಬೆಳಗಲಿ, ಇಟಗಿ ರಾಘವೇಂದ್ರ, ಶ್ರೀ ಎಂ. ಎಲ್. ಭಾವಿ ಕಟ್ಟಿ, ಎಂ ಆರ್. ಬುದ್ಧಿವಂತ ಶೆಟ್ಟಿ ಮೊದಲಾದವರು ಭಾಷಣಗಾರರಾಗಿದ್ದರು. ದಿನಂಪ್ರತಿ ಮನರಂಜನೆ ಕಾರ್ಯಕ್ರಮಗಳಿದ್ದುವು.

ರೂರಲ್ ಆಸ್ಪತ್ರೆ ಉದ್ಘಾಟನೆ

ಕಳೆದ ತಾ 1೧ರಂದು ಕುಂಬ್ಳಾಲ್ ನಗರದಲ್ಲಿ ರೂರಲ್ ಆಸ್ಪತ್ರೆಯ ಉದ್ಘಾಟನೆಯು ಶ್ರೀ ಎಮ್. ಮಧ್ವರಾಜ, ಎಂ ಎಲ್. ಎ ಇವರ ಅಧ್ಯಕ್ಷತೆಯಲ್ಲಿ ಎಲ್. ಐ. ಸಿ. ಯ ಅ| ಬ್ರಾಂಚ್ ಮೆನೇಜರ್, ಶ್ರೀ ಎಸ್ ಅಣ್ಣಯ್ಯ ಹೆಗ್ಡೆಯವರಿಂದ ನೆರವೇರಿಸಲ್ಪಟ್ಟಿತು ಸಂಘದ ಅಧ್ಯಕ್ಷ ಡಾ| ಪಿ. ಸಿ ರೈಯವರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಪಿ ಜಗನ್ನಾಥ ಶೆಟ್ಟರು ವರದಿಯನ್ನು ಸಭೆಯ ಮುಂದಿಟ್ಟರು ಶ್ರೀಗಳಾದ ವಕೀಲ್ ಪಿ. ಶಿವಾಜಿ ಶೆಟ್ಟಿ ದಾಂತಿ, ಬಿ. ಕಾಳಪ್ಪ ಶೆಟ್ಟಿ ಇವರು ಭಾಷಣವಿತ್ತರು.

ಭಾಷಣ

ಮಂಗಳೂರು, ದಿನಾಂಕ ೧೪ ೧೦-೬೪ರಂದು ಫಳ್ನೀರ್ ಕೃಷ್ಣಾಚಾರ್ ಸಭಾ ಮಂಟಪದಲ್ಲಿ ಶ್ರೀ ಕೆ ದೇವದಾಸ ನಾಯರ್ಕರವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನ ಸಾಹಿತಿಗಳಾದ ಶ್ರೀ ಟಿ. ನ. ಸುಂದರರಾಯರು 'ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ' ಎಂಬ ವಿಷಯವಾಗಿ ಭಾಷಣ ಮಾಡಿದರು. ಶ್ರೀ ಕೆ. ವಾಸುದೇವ ಕಾಮತ್‌ರವರು ಅಧ್ಯಕ್ಷ ಭಾಷಣದ ನಂತರ ಸರ್ವರಿಗೂ ವಂದನೆಗಳನ್ನರ್ಪಿಸಿದರು.

ಅಮೆರಿಕದ ಅಧ್ಯಕ್ಷ ಪೀಠ

ಉಡುಪಿ—ಬರುವ ನವೆಂಬರ್ ೪ರಂದು ಅಮೆರಿಕದ ಲಕ್ಷಾಂತರ ಪ್ರಜೆಗಳು ಮತದಾನ ಮಾಡಿದಾಗ ಅಮೆರಿಕದ ಸರಕಾರವು ಕ್ರಮಬದ್ಧವಾಗಿ ಬದಲಾವಣೆಗೊಳ್ಳಲಿದೆ ಎಂದು ಬೆಂಗಳೂರಿನಲ್ಲಿ ಅಮೆರಿಕದ ವಾರ್ತಾ ಸಂಸ್ಥೆಯ ಅಧಿಕಾರಿಯಾಗಿರುವ ಶ್ರೀ ಗ್ಲೆನ್ ಎಲ್. ವುಡ್‌ರವರು ತಾ 27.10.64ರಂದು ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯನ್ನುದ್ದೇಶಿಸಿ "ಅಮೆರಿಕದ ಅಧ್ಯಕ್ಷ ಪೀಠ" ಎಂಬ ವಿಷಯದ ಮೇಲೆ ಮಾತನಾಡುತ್ತಾ ಹೇಳಿದರು.

ಸಭಾಧ್ಯಕ್ಷತೆಯನ್ನು ಉಪಾಧ್ಯಕ್ಷರಾದ ಶ್ರೀ ಕೆ. ಕೆ. ಪೈಯವರು ವಹಿಸಿದ್ದರು. ಅಮೆರಿಕದ ಸಾರ್ವತ್ರಿಕ ಚುನಾವಣೆ ಹಾಗೂ ಸಮಾನ ಹಕ್ಕುಗಳಿಗಾಗಿ ವಾಶಿಂಗ್ಟನ್‌ನಲ್ಲಿ ನಡೆದ ಮತಪ್ರದರ್ಶನ ಕುರಿತ ಚಲಚ್ಚಿತ್ರಗಳನ್ನು ಪ್ರದರ್ಶಿಸಲಾಯಿತು.

ಇಂಟರ್ ಏಕ್ಟ್ ಕ್ಲಬ್

ಮಣಿಪಾಲ ದಿನಾಂಕ 23.10.64ರಂದು ರೋಟೇರಿಯನ್ ಯಲ್ ಕೆ. ಚೆಟ್ಟಿ ಇವರು ಮಣಿಪಾಲ ಹೈಸ್ಕೂಲಿನ ವಿದ್ಯಾರ್ಥಿಗಳನ್ನುದ್ದೇಶಿಸಿ "ರೋಟರಿ ಕ್ಲಬ್" ಹಾಗೂ 'ಇಂಟರ್ ಏಕ್ಟ್ ಕ್ಲಬ್ಬಿ'ನ ಕುರಿತಾಗಿ ಸ್ವಾರಸ್ಯವಾಗಿಯೂ ಬೋಧಪ್ರದವಾಗಿಯೂ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ ಮುಖ್ಯೋಪಾಧ್ಯಾಯ ಶ್ರೀ ಕಲ್ಮಾಡಿ ರಾಮರಾಯರು ಮೊದಲು ಸ್ವಾಗತಿಸಿ ಅತಿಥಿಗಳ ಭಾಷಣದ ಬಳಿಕ ಧನ್ಯವಾದ ಸಮರ್ಪಿಸಿದರು.

ಕುಂಭಾಶಿ

ಬೋರ್ಡ್ ಶಾಲೆಯಲ್ಲಿ ಶಾರದಾ ಪೂಜೆಯು ಜರಗಿದ ನಂತರ ಕೃಷ್ಣಪ್ಪ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಕಾರಟರು ಭಾಷಣ ಮಾಡಿದರು.

ಮಹಾಧಿವೇಶನ

ಉಡುಪಿಯ ಯಕ್ಷಗಾನ ಕಲಾ ಮಂಡಲದ ಮಹಾಧಿವೇಶನವು ತಾ. 21.10.64 ರಂದು ಸಂಘದ ಅಧ್ಯಕ್ಷ ಶ್ರೀ ಸೂಲ್ಯ ದೇಜಪ್ಪ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿ ಈ ವರೆಗಿನ ವರದಿಗಳನ್ನು ಮಂಜೂರು ಮಾಡಲಾತು. ಮುಂದಿನ ವರ್ಷಕ್ಕೆ 15 ಜನರ ಕಾರ್ಯ ನಿರ್ವಾಹಕ ಸಮಿತಿಯನ್ನು ರಚಿಸಲಾತು, ಸೂಲ್ಯ ದೇಜಪ್ಪ ಶೆಟ್ರು (ಅಧ್ಯಕ್ಷ) ಸೀತಾನದಿ ಗಣಪಯ್ಯ ಶೆಟ್ರು (ಉಪಾಧ್ಯಕ್ಷ) ಕೆ. ನಾರಾಯಣ ಶೆಟ್ರು (ಕಾರ್ಯದರ್ಶಿ ಮತ್ತು ಕೋಶಾಧಿಕಾರಿ) ಆಗಿ ಆರಿಸಲ್ಪಟ್ಟರು ಅಧ್ಯಕ್ಷರು ಸಂಘದ ಅಭಿವೃದ್ಧಿಗಾಗಿ ಸರ್ವರ ಸಹಕಾರ ಕೋರಿ ಮಾತಾಡಿದರು ಕಾರ್ಯದರ್ಶಿಗಳು ಧನ್ಯವಾದಗಳನ್ನರ್ಪಿಸಿದರು.



ನಗು ನೀನು ಜಗವೆ ನಿನ್ನೊಡನೆ ನಗುತಲಿಹುದು

ಸುಖ-ದುಃಖ

ಸಮಾಧಾನವೇನಂತು?

ರಶ್ಯದ ಕ್ರೆಮ್ಲಿನ್‌ನಲ್ಲಿ ಉಂಟಾದ ಮಹತ್ವದ ಬದಲಾವಣೆಗಳಿಂದ ಭಾರತದ ಮೇಲೆ ಯಾವುದೇ ದುಷ್ಪರಿಣಾಮ ಬೀರಲಾರದು ಎಂದು ರಶ್ಯನ್ ರಾಯಭಾರಿ ಅಂದಿದ್ದರು. ಮಾಸ್ಕೋವನ್ನು ಸಂದರ್ಶಿದಾಗ, ನಮ್ಮ ಸುದ್ದಿ ಮತ್ತು ಪ್ರಸಾರ ಶಾಖಾ ಮಂತ್ರಿ ಇಂದಿರಾ ಗಾಂಧಿಯವರಿಗೂ ಇದೇ ರೀತಿಯ ಆಶ್ವಾಸನೆ ದೊರಕಿಯಿತು. ಸೈನಿಕ ಹಾಗೂ ಮೈತ್ರಿತರ ನೆರವಿನಲ್ಲಿ ಯಾವ ಕಡಿತವೂ ಆಗುವುದಿಲ್ಲ ಎಂದಿದ್ದಾರೆ, ರಶ್ಯನ್ ನಾಯಕರು. ಕ್ರುಶ್ಚೇವರ ಪತನಕ್ಕೆ ಅವರು ಭಾರತದ ಬಗ್ಗೆ ಉದಾರ ನೀತಿಯಿಂದ ವರ್ತಿಸುತಿದ್ದುದೂ ಒಂದು ಕಾರಣವೆಂಬ ವಾರ್ತೆಯೂ ದಟ್ಟವಾಗಿ ಹರಡಿದೆ. ಈ ವಿರೋಧಾಭಾಸದಲ್ಲಿ ಭಾರತೀಯರು ಏನೆಂದು ಸಮಾಧಾನಪಟ್ಟುಕೊಳ್ಳಬೇಕು? ತಮ್ಮ ರಕ್ಷಣೆಯ ಸಿದ್ಧತೆಯನ್ನು ತಾವೇ ಮಾಡಿಕೊಳ್ಳುವತ್ತ ಧಾವಿಸ ಬೇಕಲ್ಲವೆ?

—ವಾಸುದೇವ ರಾವ್.

ಕೃತಿಗೆ ಮೊದಲು ಮಾತು ಬೇಡ

ಅಕ್ಕಿಯಿಲ್ಲ-ಉಂಟುಗಳ ನಡುವೆಯೂ ಗ ರೇಶನಿಂಗ್ ಪ್ರವೇಶಮಾಡಿದೆ. ಈ ಶಬ್ದವು ರೇಡಿಯೋದಲ್ಲಿ ಪ್ರಸಾರಗೊಂಡ ಕೂಡಲೇ ಪೇಟೆಗಳಲ್ಲಿ ಅಕ್ಕಿಯಿಲ್ಲದಾಯಿತು. ಪತ್ರಿಕೆಗಳಲ್ಲಿ ಪ್ರಕಟಗೊಂಡೊಡನೆಯೇ ಹಳ್ಳಿಗಳಲ್ಲೂ ಕಾಣೆಯಾಗುತ್ತ ಬರುತ್ತಿದೆ. ನಮ್ಮ ನಾಯಕರು ಕಾರ್ಯವನ್ನು ಹಿಂದೆ ದೂಡಿ ಬಾಯಿಯನ್ನು ಮುಂದೆ ಮಾಡುತ್ತಿರುವುದೇ ಅವ್ಯವಸ್ಥೆಗೆ ಮೂಲವಾಗುವುದೆಂಬುದನ್ನು ನಾವು ಕಾಣುತ್ತಲೇ ಬಂದಿದ್ದೇವೆ. ಇನ್ನಾದರೂ ನಮ್ಮ ಮುಖಂಡರು ಅನಿರ್ದಿಷ್ಟ ನೀತಿಯನ್ನು ಹೊರಗೆಡಹಡೆ ಸರಿಯಾದ ನೀತಿಯನ್ನು ರೂಪಿಸಿ, ತಡ ಮಾಡದೆ ಅದನ್ನು ಅನುಷ್ಠಾನಕ್ಕೆ ತರಲು ಪ್ರಾರಂಭಿಸುವರೆ?

—ಗುರುರಾಜ ಪ್ರಸಾದ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ.

RIA 122/1964 in
O. S. 125/61 Sub court
Mangalore.

ಪುಷ್ಪಾವತಿ— ಅರ್ಜಿದಾರಳು.

ಮತ್ತು

ಶಿವದೇವಿ ಕೂಡಾ— ಎದುರಿಲು

2 ನೇ ಎದುರಿ ಬ್ಬಾಲಿನಿ, ಜಾಕು ಹೆಂಗ್ಸು ಮಗಳು, ಬಾಲಣಗುತ್ತು ಎಂಬಲ್ಲಿರುವವಳು ಹೊಸಅಂಗಡಿ ಗ್ರಾಮ— ಪೆರಿಂಜ.-

5ನೇ ಎದುರಿ ಪದ್ಮರಾಜ ಪೂವಣಿ—

6 ನೇ ಎದುರಿ ನೇಮಿರಾಜ ಪೂವಣಿ

ಚೆಲುವನ್ನು ಹೆಂಗ್ಸಿನ ಮಕ್ಕಳು,ಪಡುಕೋಡಿಗುತ್ತು ಎಂಬಲ್ಲಿರುವವರು— ಹೊಸಂಗಡಿ ಗ್ರಾಮ—ಪೆರಿಂಜ

7 ನೇ ಎದುರಿ ಚಂದನದೇವಿ.—

ಮತ್ತು 8,-9,- 12, 13 ಮತ್ತು 14 ಎದುರಿಯರು, ಚಂದನದೇವಿಯ ಮೈನರ್ ಮಕ್ಕಳು— ಕಾವಳ ಪಡೂರು ಗ್ರಾಮದ ಅಲಂಪೋರಿ ಎಂಬಲ್ಲಿರುವವರು—

ಮೇಲ್ಕಂಡ ವ್ಯಾಜ್ಯದಲ್ಲಿ ಅದ ಪ್ರಿಲಿಮಿನರಿ ಡಿಕ್ರಿ ವಿಧಿ ಪ್ರಕಾರ ಫೈನಲ್ ಡಿಕ್ರಿ ಆಗುವಂತೆ ಅರ್ಜಿದಾರಳು ಮಾಡಿದ ಮೇಲ್ಕಂಡ ಅರ್ಜಿಯು ತಾ.7-11.1964 ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇದೆ. ಆ ದಿವಸ 11 ಗಂಟೆಗೆ ನೀವು ಸ್ವತಹ ಅಥವಾ ವಕೀಲರ ಮುಖಾಂತರವಾಗಲೀ ಹಾಜರಾಗದಿದ್ದಲ್ಲಿ ನಿಮುನ್ನು ಶಿಕ್ಷಾ ಮಾಡಿ ಮುಂದಿನ ಕ್ರಮಯಿಂದ ತೀರ್ಮಾನಿಸಲಾಗುವುದು.

N· J· KADAMBA·
Advocate for Plaintiff

ಬೆಳ್ತಂಗಡಿ ತಾರೀಕು 27.10.1964

ಪಸ್ಟ್ ಕ್ಲಾಸ....

ಶಾರದಾ ಪೂಜೆಯ ಅಂಗವಾಗಿ ನೆರವೇರಿದ ವಿನೋದಾವಳಿ ಕಾರ್ಯಕ್ರಮದಲ್ಲಿ ಸುಂದರ ಹುಡುಗಿಯೊರ್ವಳು ಸಿನೆಮಾ ಗೀತವಂದನ್ನು ಹಾಡುತ್ತಿದ್ದಳು. ಆಗ—

ಒಬ್ಬ— ಪಸ್ಟ ಕ್ಲಾಸ..."

ಇನ್ನೊಬ್ಬ— ಹಾರ್ಮೋನಿಯಂ, ವೀಣೆ, ತಬಲೆಯನ್ನು ಮೀರಿ ನಿಂತಿದೆ(ಇವಳ) ಸಂಗೀತ!....

ಪರಿವರ್ತನೆ....

ರಾಯರು— ಗೋವಿಂದಾ, ನಿಮ್ಮಣ್ಣನ ಕಟ್ಟಿಗೆ ಡಿಪೋಕ್ಕೆ ಬೆಂಕಿ ಬಿದ್ದು ಸಾವಿರಗಟ್ಟಲೆ ರೂಪಾಯಿ—ಮುಳುಗಿ ಹೋಯ್ತಂತಲ್ಲಾ....

ಗೋವಿಂದ — ಹಣ ಮುಳುಗಿದ್ದು ಬ್ಯಾಂಕದ್ದೇ ಇರಬೇಕು. ನಿಜವಾಗಿ ಬೆಂಕಿ ಬೀಳಲಿಲ್ಲ— ಬೆಂಕಿ ಹಾಕಿ — ಕೊಂಡ, ರಾಯರೆ ...ಈಗ ನಮ್ಮಣ್ಣನದು ಇದ್ದಲಿ ಡಿಪೋ...!

ಕಾಂಗ್ರೆಸ್ಸಿನ ಸುದೈವ

ದಿ| ಪ್ರಧಾನಿ ನೆಹರೂರವರ ಸೋದರಿ ವಿಜಯ ಲಕ್ಷ್ಮಿ ಪಂಡಿತರು ರಾಜಕೀಯದಲ್ಲಿ ಪ್ರತ್ಯಕ್ಷ ಭಾಗವಹಿಸಲು ನಿರ್ಧರಿಸಿ ರಾಜ್ಯಪಾಲ ಪದಕ್ಕೆ ರಾಜಿನಾಮೆಯಿತ್ತು ಫುಲಪುರ ಮತದಾರ ಕ್ಷೇತ್ರದಲ್ಲಿ ಲೋಕಸಭೆಗೆ ನಡೆಯುವ ಚುನಾವಣೆಯಲ್ಲಿ ಭಾಗವಹಿಸಿದುದು ಕಾಂಗ್ರೆಸಿನ ಸುದೈವ ಇಲ್ಲವಾದರೆ, ಆ ಕ್ಷೇತ್ರಕ್ಕೆ ಯಾರನ್ನು ಆರಿಸಬೇಕು ಎಂಬ ಪ್ರಶ್ನೆ ಕಾಂಗ್ರೆಸ್ ಹೈಕಮಾಂಡಿನ ತಲೆ ತಿನ್ನುತಿತ್ತು. ಆದರೆ ಕಳೆದ ಮೂರು ಬಾರಿಯೂ ನೆಹರೂರವರು ಆರಿಸಿ ಬಂದುದು ಅದೇ ಕ್ಷೇತ್ರದಿಂದ. ಈಗ ಅಲ್ಲಿ ಮತ್ತೆ ಆರಿಸಿ ಬರಬಹುದಾದರೂ ನೆಹರೂ ಮನೆತನದವರು. ಇನ್ನು ಮುಂದೆಯೂ......ಅಂದರೆ, ಫುಲಪುರ ಮತದಾರ ಕ್ಷೇತ್ರ ನೆಹರೂ ಮನೆತನದವರಿಗೇ ಮೀಸಲಾದೀತೆ?

—ವಿನೋದ ಕುಮಾರ.

ಚಹಾ?

ಕಾರ್ಡಿನ ಗಿರಾಕಿ— ಇಂಥ ಪರಿಸ್ಥಿತಿಯಲ್ಲಿ....ಬ್ರಾಂಚ್ ಪೋಸ್ಟಮಾಸ್ತರರಿಗೆ ಮೂವತ್ತು—ರೂಪಾಯಿ ಪಗಾರ ಅಂದ್ರೆ (ನಿಮಗೆ) ಚಹಾ ಕುಡಿಯಲಿಕ್ಕೆ ಸಾಲುತ್ತದೆಯೇನ್ರಿ....?

ಪೋಸ್ಟಮಾಸ್ಟರ್— ಪೋಸ್ಟ ಆಫೀಸ್‌ದಿಂದ ಒಂದುವರೆ ಮೈಲು ನಡೆದುಕೊಂಡೆ ಹೋಗಬೇಕು — ಚಹಾ ಕುಡಿಯಬೇಕಾದ್ರೆ....

ತುರ್ತಪರಿಸ್ಥಿತಿ....

ಚಿಕ್ಕ ಹುಡುಗರಿಬ್ಬರು 'ಅಪ್ಪ-ಅಮ್ಮ' ಆಟವಾಡುತ್ತಿದ್ದರು—

"ನಿಂದು ದಿನಾ ಇದ್ದೆ ಇದೆಯಲ್ಲಾ.... ಒಂದೆ ಹಾಡು—ಸ್ನೊ, ಪೌಡರು, ಲಿಪ್‌ಸ್ಟಿಕ್, ಲವ್‌ಲೋಕ್—ಚಪ್ಪಲಿ, ಬಳೆ, ರಿಬ್ಬನ್, ಹೇರ್‌ಪಿನ್ನು, ಸೋಪು, ಹೀಗೆ ಹೇಳ್ತಾ ಕುಳಿತರೆ—ಅಂಗಡಿ ಸಾಲ ಏನ್ ನಿನ್ನ ಅಪ್ಪ ತೀರ್ಸಲಿಕ್ಕೆ ಬರ್‍ತಾ..."

"ಮೊದಲನೆ ತಾರೀಕು! ಆ ಪಾತು (ಪಾರ್ವತಿ) ಉಟ್ಟುಕೊಂಡಂತ ಆನಂದ ಕಲರ್ ಜಾರ್ಜೆಟ ಸೀರೆ ತಂದಹೊರ್‍ತು ಮನೆಗೆ ಬರಬಾರ್‍ದು...ತಿಳಿತೇನ್ರಿ?

— ? —

ಹೆಂಡತಿ— (ಗಂಡನ ಕೋಟಿನೊಳಗಿಂದ ಹಣ ತೆಗೆದುಕೊಳ್ಳುತ್ತ....) ಈ ಸಲ ಹತ್ತು ರೂಪಾಯಿ ಹೆಚ್ಚಿಗೆ ತಗೆದು ಕೊಡಿದ್ದೆನ್ರೀ !...!....ಬರುವ ತಿಂಗಳ (ನಿಮ್ಮ) ಪಗಾರದಲ್ಲಿ ಇದನ್ನ ಕೂಡಿಸಿಯೆ ಇಪ್ಪಕೊಟ್ಟು ಬಿಡ್ರಿ...?

—ಶೀ. ಪಿ. ಎಸ್. ಹೆಗ್ಡೆ—ಶಂಭು.

ಇಷ್ಟೇ ಅಲ್ಲ, ಇನ್ನೇನೇನೋ ಆಗುತ್ತೆ

(ಎರಡನೇ ಪುಟದಿಂದ)

"ಅಯ್ಯೋ, ಏನಾಯ್ತು ನಿನ್ನ ಸ್ವಾತಂತ್ರ್ಯಕ್ಕೆ ಧಕ್ಕೆ?"

"ನನಗೊಂದು ನೈಲಾನ್ ಸೀರೆ ಬೇಕೂಂತ ಹೇಳಿ ವರ್ಷ ಒಂದಾಯ್ತು. ಇನ್ನೂ ಬರ್‍ಲಿಲ್ಲ."

"ಅಲ್ಲ, ಸ್ವಾತಂತ್ರ್ಯದ ಹಕ್ಕಿಗೂ ನೈಲಾನ್ ಸೀರೆಗೂ ಸಂಬಂಧ?"

"ಹಾಗಾದ್ರೆ ನನಗೆ ನೈಲಾನ್ ಸೀರೆ ಉಡೋ ಸ್ವಾತಂತ್ರ್ಯ ಇದೆಯೋ ಇಲ್ಲವೆ?"

"ಇದೇಂತ ಇಟ್ಟುಕೋ..."

"ನಿಮ್ಮ ಆ ಇಟ್ಟುಕೊ-ಗಿಟ್ಟುಕೋ ಎಲ್ಲಾ ಬೇಡ. ಸರಿಯಾಗಿ ಹೇಳಿ..."

"ಅಯ್ತಪ್ಪ...ಇದೆ....ಇದೆ..."

"ಸರಿ, ತಂದುಕೊಡಿ ಹಾಗಾದ್ರೆ...."

"ಅಯ್ಯೋ, ತಂದುಕೊಡದಿರೋ ಸ್ವಾತಂತ್ರ್ಯ ನನಗೂ ಇದೆಯಲ್ಲ..."

"ಅಯ್ತಲ್ಲಾ..ಹ್ಞೂ, ಹೋಗ್ಲಿ ಬಿಡಿ ನನಗಿರೋ ಸ್ವಾತಂತ್ರ್ಯ ಇಷ್ಟೆ. ನೀವು ಹೇಳಿದ್ದನ್ನ ಕೇಳಕೊಂಡು ಸುಮ್ಮನಿರೋದು."

"ಹಾಗಲ್ಲವೇ. ನಿನ್ನ ನನ್ನ ಸ್ವಾತಂತ್ರ್ಯ ಒಂದರೊಡನೊಂದು ಹೊಂದಿಕೊಂಡು ಹೋಗ್ಬೇಕು. ಆದ್ರೆ ಅದು ನಿಜವಾದ ಸ್ವಾತಂತ್ರ್ಯ..."

"ಊಟಕ್ಕೆ ಬಡಿಸೋ ಸ್ವಾತಂತ್ರ್ಯ ನನಗಿದೆ ತಾನೆ.?"

'ಬಡಿಸಿದ್ದನ್ನ ಉಣ್ಣೋ ಸ್ವಾತಂತ್ರ್ಯ ನನಗೂ ಇದೆ ತಾನೆ?"

"ಇದ್ರಲ್ಲೇ ಆಯ್ತು ನಿಮ್ದು. ಹ್ಞೂಂ ಸಾಕಿನ್ನು. ಏಳಿ. ಊಟ ಮಾಡೋದಿದ್ರೆ ಬನ್ನಿ ಒಳ್ಗೆ...."

"ರಾಣಿ ಬನ್ನೀಂತ ಕರೆಯುವಾಗ ಬಾರದುಳಿಯುವುದುಂಟೆ....?"

"ಪಾಪ...ನನ್ನ ರಾಜಾ...."

— ಗೋರಾ.

ವಿಶೇಷಾಂಕದ ಉದ್ಘಾಟನೆ

ಕಿನ್ನಿಗೋಳಿ, ತಾ. 14— ಯುಗಪುರುಷದ ದಸರಾ ವಿಶೇಷಾಂಕದ ಉದ್ಘಾಟನೆಯು ವಿಧಾನಸಭಾ ಸದಸ್ಯ ಶ್ರೀ ಕೆ. ಆರ್. ಆಚಾರ್ ಇವರ ಅಧ್ಯಕ್ಷತೆಯಲ್ಲಿ ಎಂ. ಜಿ.ಎಂ. ಕಾಲೇಜಿನ ಪ್ರಿನ್ಸಿಪಾಲ್, ಕು. ಶಿ. ಹರಿದಾಸ್ ಭಟ್ಟರಿಂದ ನೆರವೇರಿಸಲ್ಪಟ್ಟಿತು. ಶ್ರೀಗಳಾದ ಜೆ. ಬಿ. ಲಿಂಗಣ್ಣ, ಕೆ. ಎಸ್. ಪದ್ಮನಾಭಾಚಾರ್ಯ, ಮನಮೋಹನ ಕಾಮತ್ ಮೊದಲಾದವರು ಪತ್ರಿಕೆಗೆ ಶುಭ ಕೋರಿದರು. ಅಧ್ಯಕ್ಷರ ಭಾಷಣಾನಂತರ ಸಂಪಾದಕ ಕೊಡತ್ತೂರ್ ಅನಂತ ಪದ್ಮನಾಭ ಉಡುಪರು ಧನ್ಯವಾದಗಳನ್ನು ಅರ್ಪಿಸಿದರು.

ಶ್ರೀ ಶಾರದಾ ಕಲಾ ಮಂಡಳಿ

ಪರ್ಕಳ ತಾ. 12, ಶಾರದಾ ಪೂಜೆ ನೆರವೇರಿದ ಬಳಿಕ ಬಿ. ಇ. ಎಂ. ಶಾಲಾ ಮಠದಲ್ಲಿ ಮಂಡಳಿಯ ವಿದ್ಯಾರ್ಥಿಗಳಿಂದ ಸಂಗೀತ, ನೃತ್ಯಸಂಗೀತ, ಕೋಲಾಟವಾದನಗಳಾದುವು. ಶ್ರೀ ಪಿ. ಗುರುರಾಜ ಜೋಯಿಸರು ಬಹುಮಾನ ವಿತರಣೆ ಮಾಡಿದರು. ಆರಂಭದಲ್ಲಿ ಶ್ರೀ ನಾರಾಯಣ ಸೆಟ್ಟಿಗಾರರು ಸ್ವಾಗತಿಸಿದರು. ಅಂತ್ಯದಲ್ಲಿ ಮುರಲೀಧರ ತಂತ್ರಿಗಳು ಧನ್ಯವಾದಗಳನ್ನರ್ಪಿಸಿದರು.

ರಿಕ್ರಿಯೇಶನ್ ಕ್ಲಬ್

ಶಿರ್ವ, ತಾ. 9-10-1964ರಲ್ಲಿ ಪ್ರದರ್ಶಬಾದಿನ ಆಲ್ವಿನ್ ಮೆಟಲ್ ವರ್ಕ್ಸ್‌ನಲ್ಲಿರುವ ಶ್ರೀ ಯು. ರಘುಪತಿ ಆಚಾರ್‌ರವರನ್ನು ಸತ್ಕರಿಸುವರೆ ಡಾ| ವೈ. ಆರ್. ಶೆಟ್ರಿ ಅಧ್ಯಕ್ಷತೆಯಲ್ಲಿ ಸಮಾರಂಭವೇರ್ಪಡಿಸಲಾಯ್ತು. ಶ್ರೀ ಎಂ. ಮೆಂಡೋನ್ಸಾ, ಶ್ರೀ ಎಂ. ಪರಲಮಾರ್ಲ, ಡಾ| ಕೆ. ವೆಂಕಟಕೃಷ್ಣರವರು ಮುಖ್ಯ ಅತಿಥಿಗಳ ಶ್ರೇಯೋಭಿವೃದ್ಧಿ ಕೋರಿ ಭಾಷಣವಿತ್ತರು. ಶ್ರೀ ಆಚಾರ್ ತನ್ನನ್ನು ಸತ್ಕರಿಸಿದುದಕ್ಕೆ ಆಭಾರ ಸಲ್ಲಿಸಿದರು.

ತಾ. 10-10-64ರಂದು, ಕ್ಲಬ್ಬಿನ ಸದಸ್ಯರೂ ಮಂಗೇರಿಯಾ ಇನ್‌ಸ್ಪೆಕ್ಟರರೂ ಆಗಿದ್ದು ಫ್ಯಾಮಿಲಿ ಪ್ಲಾನಿಂಗ್ ಫೀಲ್ಡ್ ವರ್ಕರ್ ಆಗಿ ಕೋಟಕ್ಕೆ ವರ್ಗಾಯಿಸಲ್ಪಟ್ಟ ಶ್ರೀ ಎಂ. ತಿಮ್ಮಪ್ಪರವರನ್ನು ಸತ್ಕರಿಸುವರೆಯೂ ಡಾ| ವೈ. ಆರ್. ಶೆಟ್ರಿ ಅಧ್ಯಕ್ಷತೆಯಲ್ಲಿ ವಿದಾಯಕೂಟವೇರ್ಪಟ್ಟಿತ್ತು.

ದಸರಾ ಉತ್ಸವ

ಶಾಂತಾವರ, ದಿನಾಂಕ ೧೩-೧೦-೬೪ರಂದು ಚೇಲಾಡಿ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ದಸರಾ ಉತ್ಸವವು ಬೆಂಗಳೂರಿನ ಹೆಸರಾಂತ ಲೇಖಕರಾದ ಶ್ರೀ ಬ. ನ. ಸುಂದರರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ವಿದ್ವಾನ್ ಶ್ರೀ ಕೆ. ಎಸ್. ಪದ್ಮನಾಭಾಚಾರ್ಯರು ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ದಕ್ಷಿಣ ಕನ್ನಡ ಜಿಲ್ಲೆಯ ಪಾಠಶಾಲಾ ಅಧಿಕಾರಿಗಳಾದ ಶ್ರೀ ಎಲ್. ಸುಬ್ರಹ್ಮಣ್ಯ ಅಯ್ಯರ್‌ರವರು 'ನಮ್ಮ ಶಿಕ್ಷಣ ಹಾಗೂ ದೇಶ ರಕ್ಷಣೆ" ಎಂಬ ವಿಷಯವಾಗಿ ಭಾಷಣ ಮಾಡಿದರು. ವಿದ್ವಾನ್ ಶ್ರೀ ಕೆ. ಬಾಲಕೃಷ್ಣ ಆಚಾರ್ಯರವರು ಶ್ರೀ ವನವಿಹಾರಿ ವಿರಚಿತ ಭಕ್ತಿಗೀತೆಗಳನ್ನು ಹಾಡಿದರು. ವಿದ್ವಾನ್ ಶಿರೋಮಣಿ ಶ್ರೀ ಕೆ. ಶ್ಯಾಮ ಭಟ್ಟರು ಸಾಹಿತ್ಯದ ಅವಶ್ಯಕತೆಯನ್ನು ಕುರಿತು ಭಾಷಣ ಮಾಡಿದರು. ಮಂಗಳೂರಿನ ಶ್ರೀ ಕೆ. ಪ ಹರಿದಾಸ್‌ರವರು ಕವಿತಾವಾಚನ ಮಾಡಿದರು. ಯಕ್ಷಗಾನದ ನಂತರ ಸಭೆ ಮುಗಿಯಿತು.

NAVAYUGA 5—11—1964
Registered with the Registrar
of News Papers for India
under No. R. N 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ನಾಲಿಗ್ರಾಮ.

೫-೧೧-೬೪ರಿಂದ ೧೧-೧೧-೬೪ರ ವರೆಗೆ

೧. ಮೇಷ.

ನಿಮ್ಮ ಉದ್ಯಮಗಳಿಂದು ಬಹ್ವಂಶ ಸಫಲಗಳಾಗಲಿವೆ. ಆರ್ಥಿಕ ಭಾಗದಲ್ಲಿ ಕೊಂಚ ಸುಧಾರಣೆಯಾಗಲಿದೆ. ಕೃಷಿ ವಿಭಾಗದಲ್ಲೂ ಭೂಸಂಬಂಧ ವ್ಯವಹಾರದಲ್ಲೂ ಕೆಲವಂಶ ನಷ್ಟವಾಗಲಿದೆ. ಅಧಿಕಾರಿಗಳ ಕೃಪೆಗೆ ಪಾತ್ರರಾದ ಸೇವಕ ವರ್ಗದವರು ತಂತಮ್ಮ ಉದ್ಯಮದಲ್ಲಿ ಭಡತಿ ಹೊಂದಲಿರುವರು. ಕಫ ದೋಷದಿಂದಾಗಿ ಆರೋಗ್ಯಕ್ಕೆ ಸ್ವಲ್ಪ ಹಾನಿಯಿದೆ. ವ್ಯಾಪಾರಿವರ್ಗಕ್ಕೀ ಕಾಲವು ಪ್ರತಿಕೂಲವಿದೆ. ವಾರಾಂತ್ಯದ ೩ ದಿನಗಳಲ್ಲಿ ಆಕಸ್ಮಿಕ ಧನಲಾಭ ಗೃಹ ಸುಖಗಳನ್ನು ಪಡೆವಿರಿ.

೨ ವೃಷಭ

ಕೆಲವೊಂದು ವಾರಗಳಿಂದ ನಿಮ್ಮ ಅದೃಷ್ಟವು ಹ್ರಾಸವಾಗುತ್ತಿದೆ. ಕುಹಕಿಗಳ ಮಾಯಾಜಾಲಕ್ಕೆ ಸಿಲುಕಿ ನಷ್ಟ, ಜನರ ಅಪವಾದಕ್ಕೂ ಗುರಿಯಾಗುವ ಸಂಭವವಿದೆ. ಇಂದಿನ ನಿಮ್ಮ ದುಡಿಮೆಯು ಸಮುದ್ರಕ್ಕೆ ಇಂಗು ಕದಡಿದಂತಾದೀತು. ಗೃಹತಾಪತ್ರಯಗಳಿಗೆ ಸಿಲುಕಿದ ನಿಮ್ಮ ಮನಸ್ಸಿಗೆ ಕೊಂಚವೂ ನೆಮ್ಮದಿ ಇರಲಾರದು. ಕಫ ವಾತಪ್ರಕೋಪಕ್ಕೆ ಗುರಿಯಾದ ನಿಮಗೆ ವಾರಾದಿಯ ೩ ದಿನಗಳು ಹೆಚ್ಚಿನ ಅನಿಷ್ಟ ಕಾರಿಗಳಾಗಲಾರವು.

೩. ಮಿಥುನ

ಕೀರ್ತಿ ಕಾಮಿಗಳಾದ ನಿಮಗೆ ಈ ವಾರವು ತುಂಬ ಅನುಕೂಲವಾಗಿರುವದು. ನಿಮ್ಮ ಸಂಕಲ್ಪಗಳನ್ನು ಕಾರ್ಯರೂಪಕ್ಕೆ ತರಲು ಇಂದು ಒಳ್ಳೆಯ ಸಮಯವಾಗಿದೆ. ಪ್ರಬಲರಾದ ಶತ್ರುಗಳೂ ನಿಮ್ಮ ಇದಿರಿನಲ್ಲಿ ಮುಂಗ್ಸಿಯಂ ಕಂಡ ಸರ್ಪದಂತಾಗುವರು. ಯಾವೊಂದು ತೆರನಾದ ತಾಪತ್ರಯಗಳು ಇಲ್ಲದೆ ನಿಶ್ಚಿಂತೆಯಿಂದ ಕಾಲ ಕಳೆವ ನಿಮ್ಮ ಆರ್ಥಿಕ ಭಾಗಕ್ಕೆ ಕುಹಕಿಗಳ ವೃಷ್ಟಿ ಬಿದ್ದಿದೆ. ಜಾಗ್ರತರಾಗಿರಿ. ವಾರಾದಿಯ ೪ ದಿನಗಳು ನಿಮ್ಮ ಬಯಕೆಗಳನ್ನು ಈಡೇರಿಸಲು ಸಮರ್ಥಗಳಾಗಿವೆ.

೪. ಕರ್ಕಟ

ದುರ್ವಿಧಿಯು ನಿಮ್ಮನ್ನಿಂದು ಮೂರ್ತಿಮತ್ತಾಗಿ ಬಂದು ಕಾಡುತಿದೆಯೆಂದರೂ ತಪ್ಪಾಗದು. ಮಾತನಾಡಿದವರೊಡನೆ ಕಲಹ ನಿಷ್ಠುರಗಳಾಗಲಿವೆ. ಅಷ್ಟೇಕೆ ಕೈ ಹಿಡಿದ ಅರ್ಧಾಂಗಿ, ಪಡೆದ ಮಕ್ಕಳೂ ಕೂಡಾ ಶತ್ರುಗಳಂತೆ ಕಾಡುವರು. ನಿಂತಿಯ ಕಾರ್ಮೋಡಗಳು ನಿಮ್ಮನ್ನು ಕಣ್ಣಿದ್ದೂ ಕುರುಡರನ್ನಾಗಿ ಮಾಡಲಿವೆ. ಮುಂದೇನು ಮಾಡಬೇಕೆಂದೂ ತಿಳಿಯದ ನಿಮಗೆ ವಾರದ ಅಂತ್ಯಾರ್ಧದಲ್ಲಿ ಆಶಾ ಜ್ಯೋತಿಯು ಕಾಣಲಿದೆ.

೫ ಸಿಂಹ

ನಿಮಗಿಂದು ಬೇಕುಬೇಕಾದ ಸುಖ ಸೌಕರ್ಯಗಳಿದ್ದರೂ ಮನೋದೌರ್ಬಲ್ಯವು ಅಧಿಕವಾಗಿರುವುದರಿಂದ ಯಾವ ಕೆಲಸಕ್ಕೂ ಮುಂದಾಗಿ ಪ್ರವೃತ್ತಿ ಮಾಡಲಾರಿರಿ. ನೀವು ಕೈಗೊಂಡ ಕಾರ್ಯಗಳಿಂದು ನಿರ್ವಿಘ್ನದಿಂದ ಕೊನೆ ಹೊಂದಲಿವೆ. ಮಾತ್ರವಲ್ಲ ನಿರೀಕ್ಷೆಗಿಂತಲೂ ಅಧಿಕ ಫಲವನ್ನು ಕೊಡಲಿರುವವು. ವಿರೋಧಿಗಳ ಕಾಟವಧಿಕವಾಗಿದ್ದರೂ ನಿಮಗದರಿಂದೇನೂ ತೊಂದರೆಯಾಗದು. ವಾರಾಂತ್ಯದ 2 ದಿನಗಳಲ್ಲಿ ನಿಮ್ಮ ಎಲ್ಲಾ ಬಯಕೆಗಳೂ ಪೂರ್ಣವಾಗಲಿವೆ.

೬. ಕನ್ಯಾ

ಆರೋಗ್ಯ ವಿಚಾರದಲ್ಲಿ ನೀವಿಂದು ಕೊಂಚ ಜಾಗರೂಕತೆ ವಹಿಸುವುದೊಳಿತು. ನಿರೀಕ್ಷೆಗಿಂತಲೂ ಅಧಿಕವಾಗಿ ಖರ್ಚುಗಳು ಪ್ರಾಪ್ತವಾಗುವುದರಿಂದ ಹಣದ ತೊಡಕು ಅಧಿಕವಾಗಲಿದೆ. ಪ್ರವಾಸದಲ್ಲಿ ಹಲವಾರು ತರದ ವಿಘ್ನ ವಿಡಂಬರಗಳುಂಟಾಗುವವು. ರಾಜಕೀಯ ರಂಗದಲ್ಲಿ ಪ್ರತಿಪಕ್ಷಿಗಳಿಂದ ಪರಾಜಯ ಹೊಂದುವ ಸಂಭವವಿದೆ. ಕಷ್ಟಸಹಿಷ್ಣುಗಳಾದ ನಿಮಗೆ ವಾರಾದಿಯ ೩ ದಿನಗಳು ಅನುಕೂಲವಾಗಿ ಪರಿಣಮಿಸಲಿವೆ.

೭. ತುಲಾ

ಬಹು ತೀಕ್ಷ್ಣ ನಿಮ್ಮ ಬಯಕೆಗಳಿಂದು ಕಾರ್ಯರೂಪಕ್ಕೆ ಬರಲಿವೆ. ಎಂತಹ ದುಃಸಾಧ್ಯವೆನಿಸಿದ ಕಾರ್ಯದಲ್ಲೂ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡುವ ಪರಿಸ್ಥಿತಿ ಒದಗಲಾರದು. ಜನತೆಯ ನೆರವುಳ್ಳ ನಿಮಗೆ ಸಮಾಜದಲ್ಲಿ ಗಣ್ಯ ಸ್ಥಾನಲಭಿಸಲಿದೆ. ಚಿಕ್ಕಪುಟ್ಟ ಗೃಹಚ್ಛಿದ್ರಗಳು ನಿಮ್ಮ ಮನಸ್ಸಿಗೆ ನೋವನ್ನುಂಟುಮಾಡುವುದಾದರೆ ತಾ. ೬—೮—೯ ಈ ದಿನಗಳಲ್ಲಿ ಸುಖ ಭೋಗ ಲಾಭಗಳಂ ಪಡೆಯುವಿರಿ.

೮. ವೃಶ್ಚಿಕ

ಗಾಳಿಗೆಸ್ತುಂಬಿಟ್ಟ ದೀಪದಂತೆ ಅತೀವ ಚಂಚಲಚಿತ್ತರಾದ ನಿಮಗೆ ಅಧಿಕಾರಿಗಳ ಹಿಡಿಸ್ವಜನರ ವಿರೋಧ ಹೆಚ್ಚಲಿದೆ. ವ್ಯಯಕ್ಕೆ ತಕ್ಕುದಾದ ಆದಾಯವೂ ಇರೋಣದರಿಂದ ಹಣದ ವಿಚಾರದಲ್ಲಿ ನಿಶ್ಚಿಂತರಿರುವಿರಿ. ವಿನಾಕಾರಣ ವಾಕ್ಕಲಹವಾಗುವ ಸಂಭವವಿದೆ. ವಿದ್ಯೋಪಜೀವಿಗಳಿಗೆ ದಿನ ಯಾಪನೆಯು ಕಷ್ಟವಾದೀತು. ತಾ. 6, 7, 10, 11, ಇತರ ದಿನಗಳಿಗಿಂತ ಉತ್ತಮ

೯. ಧನು

ನಿಮ್ಮ ಯಾವತ್ತೂ ಕಾರ್ಯಕಲಾಪಗಳು ನಿಷ್ಕಂಟಕವಾಗಿ ಮುಂದುವರಿಯಲಿವೆ. ನಿರೀಕ್ಷಿಸಿದ ಗುರಿಯನ್ನು ಅನಾಯಾಸದಿಂದ ಮುಟ್ಟುವಿರಿ. ಖರ್ಚು ಹಿಂದಿಗಿಂತ ಅಧಿಕವಾಗುವದರಿಂದ ಹಣದ ಅಡಚಣೆಯುಂಟಾಗದು. ಮಿತಭಾಷಿಗಳಿಗೂ ಕೂಡಾ ಮಾತುಮಾತಿಗೆ ಕಲಹವಾಗುವಂತಿದೆ. ನಿತ್ಯತ್ರುಗಳಿಂದ ನಿಮಗೆ ತಾ. 5, 8, 9 ಈ ದಿನಗಳಲ್ಲಿ ಆಕಸ್ಮಿಕ ಲಾಭ, ಜನಮನ್ನಣೆ ಕೀರ್ತಿಗಳು ಲಭಿಸುವವು.

೧೦. ಮಕರ

ಶತ್ರುಜನರ ಕಾಟವಿಂದು ಅಸಹನೀಯವೆನಿಸೀತು. ಮಾತ್ರವಲ್ಲ ನಿಮ್ಮವರೇ ನಿಮ್ಮ ಮೇಲೆ ಎರಡೆಣಿಸಲಿದ್ದಾರೆ. ಪರರ ನೆರವಿಲ್ಲದೆ ಯಾವೊಂದು ಕಾರ್ಯವನ್ನೂ ಸಾಧಿಸಲಾರಿರಿ. ಕೋರ್ಟುಕಚೇರಿಗಳ ವ್ಯವಹಾರದಲ್ಲಿ ಮತ್ತು ಕೃಷಿ ವಿಭಾಗದಲ್ಲಿ ಸ್ವಲ್ಪ ನಷ್ಟವಾದೀತು. ಪರಿಶ್ರಮಕ್ಕೆ ತಕ್ಕ ಫಲ ದೊರೆತರೂ ದಿನಯಾಪನೆ ಸ್ವಲ್ಪ ಕಷ್ಟಕ್ಕೆ ಬರಲಿದೆ. ತಾ. 8. 9ರಲ್ಲಿ ಅನಿರೀಕ್ಷಿತ ಖರ್ಚು ದೇಹಾಲಸ್ಯ ಕಂಡುಬರಲಿದೆ.

೧೧. ಕುಂಭ

ಗಾಢಾಂಧಕಾರದಲ್ಲಿ ಸಿಲುಕಿರ ತಕ್ಕ ನಿಮಗಿಂದು ದಿಗಂತದಲ್ಲಿ ಕಿರಣಗಳು ಕಾಣಿಸುತ್ತಿವೆ. ನಿಮ್ಮ ಸುಖ ಭಾಗ್ಯಪ್ರದನಾದ ಶುಕ್ರನು ಅಷ್ಟಮದಲ್ಲಿ ನೀಚನಾಗಿ ನಿಂತಿರುವ ಕಾರಣ ಆರ್ಥಿಕ ದುರವಸ್ಥೆ ಮತ್ತು ಚಿಂತೆಗಳು ನಿಮ್ಮನ್ನು ಬಿಟ್ಟಿರಲಾರವು. ಗೃಹತಾಪತ್ರಯಗಳಿಂದ ಮುಕ್ತರಾದ ನಿಮಗೆ ಮಿತ್ರವರ್ಗದವರ ನೆರವಿಂದು ಲಭಿಸಲಿದೆ. ತಾ. ೮ರಿಂದ 9 ರವರೆಗಿನ ದಿನಗಳು ಕೊಂಚ ಸುಖದಿಂದ ಕಳೆವವು.

೧೨ ಮೀನ

ಕರ್ತವ್ಯದಕ್ಷರಾದ ನೀವು ಶಕ್ತಿ ಮೀರಿ ಶ್ರಮಿಸುವಿರಿ. ಆದರೆ ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ಲಭಿಸದಿದ್ದರೂ ಹಣದ ಅಡಚಣೆಯುಂಟಾಗದು. ಸ್ತ್ರೀ ಜನರ ಸಂಪರ್ಕದಿಂದಾಗಿ ಕಲಹ ವಿನಾಕಾರಣ ಜನಾಪವಾದಕ್ಕೂ ಗುರಿಯಾಗುವಿರಿ. ದುಡಿಮೆಯು ಬಹ್ವಂಶ ವ್ಯರ್ಥವಾಗಿಹೋಗಲಿದೆ. ನಿರೋಗಿಗಳಾದ ನಿಮಗೆ ವಾರಾಂತ್ಯದ 4 ದಿನಗಳಲ್ಲಿ ಮಿತ್ರಜನರ ಸಮಾಗಮ ಧನಲಾಭ ವಿಜಯಗಳುಂಟಾಗುವವು.

— —

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ
O S. 101/64.

ಜತ್ತಪ್ಪ ಗೌಡ .... ವಾದಿ.
ದ್ಯಂಧಿನೆ ಬ್ಯಾರಿರುಸಹಾ....ಪ್ರತಿವಾದಿರು.
ಪ್ರತಿವಾದಿರು

2) ಕುಂಞಪಳ್ಳಿ ಬ್ಯಾರಿ } ಅಬ್ದುಲ್
3) ಮೊಯಿದಿನಕುಟ್ಟಿ ಬ್ಯಾರಿ } ಕಾದ್ರಿ ಬ್ಯಾರಿ ಮಕ್ಕಳು.
6) ಹಸನಾರ ಬ್ಯಾರಿ — ಪೋಕರೆ ಬ್ಯಾರಿ ಮಗ— ಮುಂಡಕೋಲು ಗ್ರಾಮ.

2, 3ನೇಯವರು, ದೇಲಂಪಾಡಿ ಗ್ರಾಮದ ಮುಯ್ಯಾಲ —

ನಿಮಗೆ ಕೋರ್ಟು ಪ್ಹಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ದಾವಾ B ಶೆಡ್ಯೂಲು ಆಸ್ತಿಯನ್ನು 12 ಪಾಲು ಮಾಡಿ ಒಂದು ಪಾಲನ್ನು ವಾದಿಗೆ ಕೊಡಿಸ ಬೇಕಾಗಿ ನಿಮ್ಮೆಲ್ಲರ ಮೇಲೆ ಕೂಡಾ ಮಾಡಿದ ನೇಲಿನ ದಾವೆಯನ್ನು ನಿಮ್ಮ ನೋಟೀಸಿನ ಬಗ್ಗೆ ತಾ. 12-11-64ಕ್ಕೆ ಇಟ್ಟಿರುತ್ತದೆ, ಆ ದಿವಸ ಬೆಳಿಗ್ಗೆ 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಬಿಟ್ಟು ನ್ಯಾಯ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/ M. Sadashiva Rao.
Vakil for petitioner.
ಪುತ್ತೂರು, ತಾ 28-10-64.

ಇನ್ನೊಂದು ಹೊಸ ಶಾಖೆ.......
ವಿಶಾಲವಾಗಿ ಹಬ್ಬಿರುವ ಸಿಂಡಿಕೇಟ್ ಬ್ಯಾಂಕಿನ
ಶಾಖಾ ಸಮುದಾಯಕ್ಕೆ ಇನ್ನೊಂದು ಹೊಸ ಶಾಖೆಯು

ಬ್ರೋಚ್ ಸ್ಟ್ರೀಟ್
(ಬೊಂಬಾಯಿ)

ಎಂಬಲ್ಲಿ ಇದೇ ನವಂಬರ 7, 1964ರಲ್ಲು ತೆರೆಯಲ್ಪಡುವುದೆಂದು
ತಿಳಿಸಲು ನಾವು ಸಂತೋಷಪಡುತ್ತೇವೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು. 195 ಚಲಾವಣಾ ನಿಧಿ: ರೂ. 60 ಕೋಟಿಗೂ ಮಿಕ್ಕಿದೆ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

Edited, Printed & Published by K. H. Shetty. at the Navayuga Press, Udipi, S. India

ನವಯುಗ

ಸಂಪುಟ ೪೪]   ನವಂಬರ, ೧೨, ೬೪   [ಸಂಚಿಕೆ ೧೧

NAVAYUGA

leading nationalist weekly

೨೦
ಪೈಸೆ

ಗೇಹ ರಾಜ್ಯದಲ್ಲಿ

ನೆಹರೂ ಇಲ್ಲದ ಮಕ್ಕಳ ದಿನ

"ಹೌದ್ರಿ, ಇವತ್ತು ತಾರೀಕು...?"

"ತಾರೀಕು ..ಅಲ್ಲಾ ಈ ದಿನವೇ ಏಕಪ್ಪಾ ತಾರೀಕಿನ ಜ್ಞಾಪಕಾಂತ..."

'ಯಾಕೆ ಅಂದ್ರೆ....ತಿಳೀದಿದ್ರೆ ಕೇಳ್ಬಾರ್ದೇನು?'

"ನೋಡು, ಕೇಳಲೇ ಬಾರದೂಂತ ನಾನೆಲ್ಲಿ ಹೇಳಿದ್ದೆ? ಬಂದ ತಕ್ಷಣ ತಾರೀಕು ಗೀರೀಕೂಂತ ತಾರೀಫು ಮಾಡ್ಲಿಕ್ಕೆ ಸುರು ಮಾಡಿದ್ರೆ...."

'ಹೋಗ್ಲಿ ನೀವೊಂದು ನಾನು ಏನು ಮಾತಾಡಿದ್ರೂ ನಿಮಗದೊಂದು ತಾರೀಫು ಆಗುತ್ತೆ ಅಲ್ವೆ?'

"ಅಯ್ಯಯ್ಯ, ನಿನ್ನ ಮುಖವೆ? ಯಾಕೆ ಹೀಗೆಲ್ಲಾ ಕಾಡ್ತಾ ಇದ್ದೀಯ?"

"ಹೌದು ನಾನು ಬದುಕಿಕೋದೇ ಕಾಡೋಕ್ಕೆ. ಬೇಡಾಂತಿದ್ರೆ ಕೊಟ್ಬಿಡಿ ಇಲಿ ಪಾಷಾಣಾದ್ರೂ....'

'ಅಯ್ಯೋ........ಎಲ್ಲಿಂದ ಎಲ್ಲಿಗೆ ಹೋಯ್ತೀ ಇದು? ಅಲ್ಲಾ, ನೀನು ನನಗೆ ಬೇಡಾಂತ್ಲೇ ತಿಳಿಯೋಣ, ಇಲಿ ಪಾಷಾಣಾನೂ ಕೊಡೋಣಾಂತನ್ನು. ಆದ್ರೆ ಅದಕ್ಕೆ ತೆರೋಕಾದ್ರೂ ಒಂದೈವತ್ತು ಪೈಸೆಯಾದ್ರೂ ಬೇಡ್ವೆ?"

"ಅಂದ್ರೆ ಇಷ್ಟು ಜಲ್ದೀಲಿ ಕಿಸೆ ಖಾಲಿ ಮಾಡಿ ಕೂತೂ ಆಯ್ತೆ?"

"ಕಿಸೆ ಖಾಲಿಯಾದದ್ದು ಇಂದೇ ಅಂತಿಯ?"

"ಮತ್ತೆ..."

"ಮತ್ತೂ ಇಲ್ಲ ಗಿತ್ತೂ ಇಲ್ಲ. ನನ್ನ ಕಾಸಿನ ಬಂಡವಳ ಮುಗಿದು ಹೋಗಿ ದಿನ ಏಳು ಕಳೆದು ಹೋಯ್ತು. ಇನ್ನೀಗ ಉಳಿದಿರೋದು ಮುತ್ತಿನ...."

"ಹೋಗೀಂದ್ರೆ...ಅಲ್ಲಾ ಮದ್ವೆ ಆಗಿ ಇಷ್ಟು ದಿವಸವಾಯ್ತು. ಇನ್ನೂ ನಿಮ್ಮ..."

"ಸಾಕು ಸಾಕು... ಅದೆಲ್ಲಾ ಎತ್ಬೇಡ. ಇರ್ಲಿ ಇರ್ಲಿ ನಿನ್ನದು ನಿನ್ನ ಬಳಿ ನನ್ನದು ನನ್ನ ಬಳಿ...."

"ಹೌದು....ಜೀವಹೋಗ್ಲೀಂತ ಅನ್ನಿಸಿದ್ರೆ ಐವತ್ತು ಪೈಸೇನೂ ಇಲ್ಲದವ್ರ ಬಳಿ ಭಾರಿ ಇರುತ್ತೆ...."

"ನೋಡು, ಪೈಸೇಲಿ ಮುಡಗಿರೋದೇನೂಂತ?"

'ಅದೊಂದು ಪೈಸೆ. ಅಲ್ಲ ನೋಡಿ, ಒಂದು ಪೈಸೆ ಹಿಡಿದು ಕೊಂಡು ಏನು ಮಾಡೋಕಾಗುತ್ತೆ ಈ ದಿನ?'

"ಅದು ಸರಿಕಣೇ. ಬೇಡೋ ಭಿಕ್ಷುಕನಿಗೂ ಪೈಸೆ ಅಂದ್ರೆ ಅಷ್ಟೂ ಸಸಾರ. ನಾಯಿನೂ ಅದನ್ನ ಮೂಸೋದಿಲ್ಲ...."

"ಅದಕ್ಕೆ ಕರ್ಬೇಕು ನಾಯಿಪೈಸೆ ತೆಗೆದು ಪೈಸೇಂತ ನಾಮಕರಣ ಮಾಡಿರೋದು."

'ಹ್ಹ ಹ್ಹ ಹ್ಹ... ಸರಿಯನ್ನು.'

"ಅಲ್ಲ, ನನ್ನ ಸವಾಲು ಹಾಗೆ ಉಳೀತಲ್ವೆ?"

"ಯಾವುದದು?"

"ಅದೇ ತಾರೀಕು...."

'ಅದು ನೆನಪಿಲ್ಲ ಸರಿಯಾಗಿ...ಏಳು.... ಅಲ್ಲ,ಅಲ್ಲ, ಎಂಟೂಂತ ತೋರುತ್ತೆ...ಸರಿ ಸರಿ, ಎಂಟು.... ಎಂಟೇ ಎಂಟು...'

'ಅಲ್ಲಾ ಅದಕ್ಕೆ ಅಷ್ಟೆಲ್ಲಾ ಆಲೋಚನೆ ಏನೂಂತ...'

"ಯೋಚನೆಯೆಲ್ಲಿಂದ ಬಂತೆ? ಈ ತಿಂಗ್ಳು ಒಂದನೇ ತಾರೀಕು ಬಾನುವಾರ. ಕಿಸೆ ಖಾಲಿಯಾಗಿ ಏಳು ದಿನವಾಯ್ತೂಂತಂದ್ರೆ ತಾರೀಕು ಎಂಟು ಆಗ್ಲೇ ಬೇಕು ಅಲ್ಲ?"

"ಸರಿಯಾಯ್ತು ಬಿಡಿ. ನಿಮ್ಮ ತಾತನವ್ರು ಹತ್ತು-ಹದಿನೈದರ ಕಾಲದಲ್ಲಿದ್ರಂತೆ—ಅತ್ತೆ ಹೇಳೋದು ಕೇಳಿದ್ದೆ. ನೀವೆಲ್ಲ ನೂರು-ನೂರೈವತ್ತರ ಕಾಲದಲ್ಲಿದ್ದೀರಿ ಮತ್ತೆ...."

ಓ, ಹಾಗೋ... ಸರಿಯೆನ್ನು. ಅದೆಲ್ಲ ಮಹಾರಾಣಿ- ಮಹಾರಾಜರ ಕಾಲ. ಈಗ ಹೇಗೆ ನೋಡು..."

"ಕಾಲಕ್ಕೆ ಏನಾಗಿದಂತೆ? ಸುಂಸುಮ್ನೆ ಕಾಲವನ್ನು ಬಯ್ತೀರಷ್ಟೆ..."

"ನೋಡು, ಅಂದು ಅಕ್ಕಿ ಮುಡಿಗೆ ಎರಡು ಎರಡೂವರೆ ಕಾಲ. ಇಂದು ಮೂವತ್ತು - ನಲ್ವತ್ತರ ಕಾಲವಲ್ವೆ? ಅದ್ರ ಮೇಲೆ ಏನು ಕೇಳಿದ್ರೂ ಉಂಟು ಅನ್ನೋಕಾಲ ಅದಾದ್ರೆ ಇಲ್ಲಾಂತನ್ನೋ ಕಾಲ ಈಗ ಬೇರೆ. .."

"ಅದು ಸರೀನ್ನಿ."

"ಯಾವುದು?"

"ಈಗ ಇಲ್ಲಾಂತನ್ನೋ ಕಾಲ..."

"ಅಬ್ಬಬ್ಬ ಭಾರಿ ಘಾಟಿ ಹುಡುಗಿ ಕಣೇ ನೀನು...."

'......ಅಷ್ಟು ಘಾಟಿಯಾದ್ರಿಂದ್ಲೇ ನಿಮ್ಮೊಂದಿಗೆ ..."

"ಸಾಕು ಬಿಡು ಆ ವಿಚಾರ...ಈಗ... ಈಗ...ಹ್ಞಾಂ....ನಿನ್ನೆ ತಾರೀಕು ಯಾಕೇಂತ...."

"ಓ, ಹೌದೂಂದ್ರೆ, ಇದು ನವಂಬರ ತಿಂಗ್ಳಲ್ವೆ?'

"ಹೌದು ನವಂಬರ ಸಾವಿರದೊಂಭೈನೂರ ಅರುವತ್ತನಾಲ್ಕ'

"ಅದೇ....ಹದಿನಾಲ್ಕನೆ ತಾರೀಕು...."

"ದೀಪಾವಳಿ ಕಳೆದು ಹೋಯ್ತು. ಇನ್ನು ಮತ್ತೆ ಒಂದನೇ ತಾರೀಕು ಬರಬೇಕಷ್ಟೆ...."

„ಅಯ್ಯೋ ನೀವೊಂದು ಎಲಾದ್ರು.... ಅಲ್ಲ ಒಂದನೇ ತಾರೀಕು ನಿಮಗೆ ಬರೋದಾದ್ರೂ ಏಕೇಂತ?"

"ಒಳ್ಳೆ ಮಾತು ಹೇಳಿದ ನೀನು. ಅಂದು ಬರದಿದ್ರೆ, ದಿನ ಯಾತನೆ ಪಡೋದಾದ್ರೂ ಹೇಗೇಂತ?"

"ಅಲ್ಲಾ, ಮೂವತ್ತನೇ ತಾರೀಕಿಗೂ ಒಂದನೇ ತಾರೀಕಿಗೂ ವ್ಯತ್ಯಾಸವನ್ನರಿಯದವರಿಗೂ...."

"ಅರಿಯದವನಿಗೇನೆ? ಅದು ಸರಿ ಗೊತ್ತಿದೆ ಎನ್ನು. ಮೂವತ್ನೇ ತಾರೀಕಿಗೆ ಯಾರಾದ್ರೂ ಒಂದೈದು ರೂಪಾಯ್ಕೊಟ್ಬೀರ್ತಾರೆ..."

"ಇವತ್ತೊಂದು....ಅಲ್ಲಾ ನವಂಬರ ಗಳ ಒಂದು ವಿಶೇಷ ದಿನವಲ್ವೇ?"

"ಯಾರಿಗೆ?"

"ಯಾರಿಗೇಂದ್ರೆ...,ಎಲ್ರಿಗೂ, ನನಗೂ ನಿಮಗೂ...."

"ಯಾಕೆ?"

(ಹದಿನೈದನೇ ಪುಟ ನೋಡಿರಿ)

ನಿಮ್ಮ ಉಳಿತಾಯವನ್ನು ಸಿಂಡಿಕೇಟ್‌ನಲ್ಲಿ ತೊಡಗಿಸಿರಿ ಮತ್ತು
ನಿಮ್ಮ ಹಣದ ಮೇಲೆ ಹೆಚ್ಚು ಆದಾಯವನ್ನು ಗಳಿಸಿರಿ!

ವಾಯಿದೆ ಠೇವಣಾತಿಗಳ ಮೇಲಣ ಬಡ್ಡಿ ದರವನ್ನು ಹೆಚ್ಚಿಸಲಾಗಿದೆ.

ಈಗ ಚಾಲ್ತಿಯಲ್ಲಿರುವ ಬಡ್ಡಿ ದರಗಳು.

ಕೆಳಗೆ ಕಾಣಿಸಿದ ಅವಧಿಗೆ ಅಥವಾ ಹೆಚ್ಚಿಗೆ	ಆದರೆ ಈ ಕೆಳಗೆ ಕಾಣಿಸಿದ ಅವಧಿಗಿಂತ ಕಡಿಮೆ	ಬಡ್ಡಿ ದರ
15 ದಿವಸಗಳು.	45 ದಿವಸಗಳ ವರೆಗೆ	1.25%
46 ದಿವಸಗಳು.	90 ದಿವಸಗಳ ವರೆಗೆ	2.50%
91 ದಿವಸಗಳು.	6 ತಿಂಗಳು	$4\frac{1}{8}\%$
6 ತಿಂಗಳು.	1 ವರ್ಷ.	$4\frac{5}{8}\%$
1 ವರ್ಷ.	2 ವರ್ಷ.	$5\frac{1}{8}\%$
2 ವರ್ಷ.	3 ವರ್ಷ.	$5\frac{3}{8}\%$
3 ವರ್ಷ.	5 ವರ್ಷ	$5\frac{5}{8}\%$
5 ವರ್ಷ.	7 ವರ್ಷ.	$6\frac{1}{8}\%$
7 ವರ್ಷ.	9 ವರ್ಷ.	$6\frac{3}{8}\%$
9 ವರ್ಷ.	ಮತ್ತು ಹೆಚ್ಚಿನ ಅವಧಿಗೆ	$6\frac{5}{8}\%$

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಶಾಖೆಗಳು: 195. ರಜಿಸ್ಟರ್ಡ ಆಫೀಸು: ಮಣಿಪಾಲ.

ಚಲಾವಣಾಸಂಪತ್ತು 60 ಕೋಟಿಗೂ ಮಿಕ್ಕಿದೆ ....ವಿಶ್ವವ್ಯಾಪೀ ಬ್ಯಾಂಕಿಂಗ್ ಬಗ್ಗೆ.



Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು ಕಾಲು ಕಾಗದದ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದಖಾತೆಗೆ ಜಮಾ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಪಂಚಶೀಲ—ಶಾಂತಿಯ ಕಹಳೆ ಮೊಳಗಿಸಿದ ದಿ| ನೆಹರೂ

ನವಯುಗ

ಸಂಪುಟ ೪೪	ಉಡುಪಿ	Vol 44
ಸಂಚಿಕೆ ೧೧	೧೨—೧೧—೧೯೬೪	No. 11

ವಚನಸುಧೆ

ವಾಚಂ ಪುನಂತಿ
ಕವಯೋ ಮನೀಷಿಣಃ॥

(ಋಗ್ವೇದ, ೯–೬೩–೭)

O ಕವಿ ಮತ್ತು ಜ್ಞಾನಿಗಳು ಸುವಿಚಾರದಿಂದಲೇ ತಮ್ಮ ಮಾತನ್ನು ಪವಿತ್ರಗೊಳಿಸುತ್ತಾರೆ.

OO ಕವಿಯು ದೂರದರ್ಶಿಯಾಗಿರುವನು. ಜ್ಞಾನಿಯು ತನ್ನ ಮನಸ್ಸನ್ನು ಸ್ವಾಧೀನ ಇರಿಸಿಕೊಳ್ಳುವನು. ಈ ಬಗೆಯ ಶ್ರೇಷ್ಠ ಜನರು ತಮ್ಮ ಮಾತಿನ ಪವಿತ್ರತೆಯನ್ನು ಸುವಿಚಾರಗಳಿಂದ ಸಂರಕ್ಷಿಸಿಕೊಳ್ಳುತ್ತಾರೆ. ಇವರು ದುರ್ವಿಚಾರದ ಒಂದು ಶಬ್ದವನ್ನೂ ಆಡಲಾರರು.

ವ್ಯಾಪಾರವು ಧರ್ಮ ಬಿಡದಿರಲಿ

ಆಹಾರಧಾನ್ಯಗಳ ಊಹಾಪಣವನ್ನು ಮಾಡುತ್ತಿರುವ ಬೆಲೆಯನ್ನು ನಿಯಂತ್ರಿಸಲು ಮತ್ತು ಅವುಗಳ ವಿತರಣೆಯನ್ನು ಸರಿಯಾಗಿ ಮಾಡಲು ಅನುಕೂಲವಾಗುವಂತೆ ರಾಷ್ಟ್ರಪತಿಯವರೊಂದು ಸುಗ್ರೀವಾಜ್ಞೆಯನ್ನು ಹೊರಡಿಸಿದ್ದಾರೆ. ಸುಗ್ರೀವಾಜ್ಞೆಯು ತನ್ನ ಉದ್ದೇಶಗಳನ್ನು ಸಂಯೋಗಿ ಈಡೇರಿಸಿ ಕೊಡುವಂತಾಗಲಿ ಎಂದು ಈ ಸಂದರ್ಭದಲ್ಲಿ ಆಶಿಸಬೇಕಾಗಿದೆ. ಈ ಆಜ್ಞೆಯನ್ವಯ ಆಹಾರ ಧಾನ್ಯಗಳನ್ನು ಕೂಡಿ ಹಾಕುವುದು ಅಕ್ರಮವೆನಿಸುತ್ತದೆ. ಸುಗ್ಗಿಯ ಸಮಯದಲ್ಲಿಯೇ ಮಾರುಕಟ್ಟೆಯಲ್ಲಿ ಆಹಾರಧಾನ್ಯಗಳು ಕಾಣದೆ ಇರುವುದೆಂದರೆ, ವರ್ತಕ ಸಮಾಜದ ಸಂಗ್ರಹ ಬುದ್ಧಿಯೇ ಇದಕ್ಕೆ ಮೂಲಕಾರಣವೆಂದು ಹೇಳಲೇ ಬೇಕು ಏಕೆಂದರೆ, ವಾಸ್ತವವಾಗಿ ಹೆಚ್ಚಿನ ರೈತರು ತಾವು ಬೆಳೆದ ಧಾನ್ಯಗಳನ್ನು ಕೂಡಿಡುವಷ್ಟು ಭಾಗ್ಯ ಪಡೆದು ಬಂದಿರುವುದಿಲ್ಲ. ಬೆಳೆ ಕೈಗೆ ಬಂದೊಡನೆಯೇ ಹೇಗೆ ಆಯಿತೋ ಹಾಗೆಯೇ ಪೇಟೆಯಲ್ಲಿ ಮಾರುವುದು ಅವರ ಜನ್ಮಸಿದ್ಧ ಹಕ್ಕಾಗಿ ಪರಿಣಮಿಸಿದೆ. ಈ ದೃಷ್ಟಿಯಿಂದ ನಾವು ವಿಚಾರ ಮಾಡುವುದಾದರೆ, ರಾಷ್ಟ್ರಪತಿಯವರ ಆಜ್ಞೆಯು ತುಂಬ ಪರಿಣಾಮಕಾರಿಯಾಗಬಲ್ಲುದು.

ಕಳೆದ ಮಳೆಗಾಲದಲ್ಲಿ ದೇಶ ತುಂಬ ಆಹಾರದ ಅಭಾವದ ಮತ್ತು ಬೆಲೆಯೇರಿಕೆಯ ಕೂಗು ಪ್ರತಿಧ್ವನಿಸುತ್ತಿದ್ದಾಗ, ಗರಿಷ್ಠ ಬೆಲೆಯನ್ನು ಸರಕಾರ ನಿರ್ಧರಿಸಿತ್ತು. ಆದರೆ, ದೇಶದ ಹೆಚ್ಚಿನ ವರ್ತಕರು ಆಹಾರಧಾನ್ಯಗಳನ್ನು ಮುಕ್ತ ಪೇಟೆಯಲ್ಲಿ ಮಾರುವುದನ್ನೇ ನಿಲ್ಲಿಸಿ ಬಿಟ್ಟರು. ಹಿಂದುಗಡೆ ಒಂದಕ್ಕೆ ಎರಡು ಲಾಭವಿಟ್ಟು ಮಾರಿದರು. ಅವರು ಅಪರಾಧಿಗಳೆಂದು ಸ್ಪಷ್ಟವಾಗಿ ತಿಳಿದಿದ್ದರೂ ಕಾನೂನಿನ ಕತ್ತರಿಯಿಂದ ತಪ್ಪಿಸಿಕೊಳ್ಳುತ್ತಿದ್ದರು. ದೇಶದಲ್ಲಿ ಕೃತಕ ಅಭಾವವನ್ನುಂಟು ಮಾಡಿ ಅವರು ಪರಿಸ್ಥಿತಿಯನ್ನೇ ಅಲ್ಲೋಲಕಲ್ಲೋಲ ಮಾಡಿದರು. ಇದರಿಂದಾಗಿಯೇ ಅಲ್ಲಲ್ಲಿ ಆಹಾರಧಾನ್ಯಗಳ ಸಂಗ್ರಹಗಳು ಲೂಟಿಯಾದುವು— ಹಸಿದ ಹೊಟ್ಟೆ ಯಾವ ಪಾಪವನ್ನೂ ಮಾಡಿಸಿಯೇ ಬಿಡುತ್ತದೆ. ಇಂತಹುದಕ್ಕೆ ಅವಕಾಶ ಕೊಡದ ಕೆಲವು ವ್ಯಾಪಾರಿಗಳೂ ಇಲ್ಲವೆಂದಿಲ್ಲ. ಆದರೆ ಸ್ಥಾಲೀಪುಲಾಕನ್ಯಾಯದಿಂದ ತೂಗುವಾಗ, ವ್ಯಾಪಾರಿ ವರ್ಗದ ಮೇಲೆ ಜನತೆ ರೊಚ್ಚಿಗೆದ್ದರೆ ಆಶ್ಚರ್ಯವಿಲ್ಲ ವ್ಯಾಪಾರಿಯೂ ಸಾಮಾಜಿಕ ಧರ್ಮವನ್ನು ಪರಿಪಾಲಿಸಬೇಕು; ಲಾಭಬಡುಕತನವೊಂದೇ ಅತನ ಧರ್ಮವಾಗಲಾರದು. ಸಮಾಜಕ್ಕೆ ಆವಶ್ಯಕವಾದ ಪದಾರ್ಥಗಳನ್ನು ಒದಗಿಸಿಕೊಟ್ಟು, ತನ್ನ ಸೇವೆಗೆ ತಕ್ಕಂತೆ ಪ್ರತಿಫಲವನ್ನು ಪಡೆಯುವುದೇ ವ್ಯಾಪಾರಿಯ ಧರ್ಮವಾಗಿರಬೇಕು.

ಇದು ವರೆಗೆ ದೇಶವು ಎದುರಿಸುತ್ತಿದ್ದ ಗಂಭೀರ ಪರಿಸ್ಥಿತಿಯಲ್ಲಿ ವ್ಯಾಪಾರಿಗಳು ಉಪಯುಕ್ತ ನಡವಳಿಕೆಯನ್ನು ತೋರಿಸದಿದ್ದುದರಿಂದಲೇ ಈಗ ಸುಗ್ರೀವಾಜ್ಞೆ ಹೊರಡಿಸುವುದು ಅನಿವಾರ್ಯವಾಯಿತು. ಏಕೆಂದರೆ, ಆಹಾರಕ್ಕಾಗಿ ನಾಗರಿಕರು ಬಾಹಾಕಾರವೆಬ್ಬಿಸುವುದನ್ನು ಕಂಡು ಸುಮ್ಮನಿರುವುದು ಜನತಾ ಸರಕಾರಕ್ಕೆ ಭೂಷಣವಲ್ಲ. ಸಾಮಾಜಿಕ ಅನ್ಯಾಯವನ್ನು ಯಾವ ವಿಧದಿಂದಲಾದರೂ ಪ್ರತಿಭಟಿಸಲೇಬೇಕು; ಅದು ಸರಕಾರದ ಕರ್ತವ್ಯ ಸದ್ಯ, ಹೊರಟ ಆಜ್ಞೆಯು ಸರಕಾರಕ್ಕೆ ಇಂತಹ ಕಾರ್ಯಕ್ರಮ ಕೈಗೊಳ್ಳಲು ಸಾಕಷ್ಟು ಅಧಿಕಾರವನ್ನು ನೀಡುತ್ತದೆ. ಈ ವಿಷಯದಲ್ಲಿ ಸರಕಾರವು ಉಗ್ರಾತಿಉಗ್ರ ಕ್ರಮಗಳನ್ನು ಕೈಗೊಳ್ಳಲೇ ಬೇಕು. 'ನಾವು ಕುಟ್ಟಿದಂತೆ ಮಾಡುತ್ತೇವೆ, ನೀವು ಅತ್ತಂತೆ ಮಾಡಿ" ಎನ್ನುವ ನೀತಿಯನ್ನು ಅದು ಸ್ವೀಕರಿಸಿದರೆ, ಈ ಆಜ್ಞೆಯಿಂದ ಯಾವ ಲಾಭವೂ ಜನಸಾಮಾನ್ಯರಿಗೆ ಒದಗಲಾರದು. ಹಾಗಾಗುವಲ್ಲಿ ಇದನ್ನು ಹೊರಡಿಸುವ ಆಗತ್ಯವೂ ಇರಲಿಲ್ಲ. ಪ್ರಧಾನ ಮಂತ್ರಿ ಅಥವಾ ಮತ್ತೊಬ್ಬನು ಏಕಾಕಿಯಾಗಿ ಈ ಆಜ್ಞೆಯಿಂದ ಪರಿಸ್ಥಿತಿಯನ್ನು ಸುಧಾರಿಸುವುದು ಸರ್ವಥಾ ಶಕ್ಯವಿಲ್ಲ. ಸರಕಾರದ ಎಲ್ಲ ಅಧಿಕಾರಿಗಳೂ ಸಾಮಾಜಿಕ ನ್ಯಾಯನೀತಿಯನ್ನು ಅರಿತುಕೊಂಡು ಯಾರ ಒತ್ತಾಯ—ಹಲಗು—ದಾಕ್ಷಿಣ್ಯಗಳಿಗೆ ಬೀಳದೆ ಕಟ್ಟುನಿಟ್ಟಿನಿಂದ ಈ ಆಜ್ಞೆಯನ್ನು ಕಾರ್ಯರೂಪಕ್ಕೆ ತರಬೇಕು. ಈಗಲೇ ಆಹಾರಧಾನ್ಯಗಳಿಲ್ಲವೆಂಬ ತಿರುಬೊಬ್ಬೆ ಹಾಕತೊಡಗಿರುವ ಅಪರಾಧಿ ವರ್ತಕರನ್ನು ಹುಡುಕಿ ಸಮಾಜದ ಸುಖಕ್ಕಾಗಿ ದುಡಿಯಬೇಕು.

ಈ ಸಂದರ್ಭದಲ್ಲಿ ಒಂದು ಮಾತನ್ನು ಆವಶ್ಯ ಹೇಳಬೇಕು. ಮೊದಲೇ ಹೇಳಿದಂತೆ ವರ್ತಕರೆಲ್ಲರೂ ದರೋಡೆಕೋರರಾಗಲಾರರು. ಹಾಗಾಗುತ್ತಿದ್ದರೆ, ಪರಿಸ್ಥಿತಿಯು ಇನ್ನೂ ವಿಕೋಪಕ್ಕೆ ಹೋಗುತ್ತಿತ್ತು. ದೇಶದ ಗಂಭೀರ ಪರಿಸ್ಥಿತಿಯನ್ನೂ ಸಮಾಜದ ದುರವಸ್ಥೆಯನ್ನೂ ಕಂಡು ಮನ ಮರುಗಿದವರೂ ಇದ್ದಾರೆ. ಇಂತಹವರೆಲ್ಲರೂ ಮುಂದೆ ಬಂದು ಸರಕಾರಕ್ಕೆ ನೆರವಾಗಬೇಕು; ಸಮಾಜವನ್ನು ಉಳಿಸಬೇಕು ಎಲ್ಲ ವರ್ತಕರೂ ನ್ಯಾಯಮಾರ್ಗವನ್ನು ಅನುಸರಿಸಿದರೆ, ಎಲ್ಲವೂ ಸುಗಮವಾಗುವುದು. ಉಗ್ರಕ್ರಮಗಳನ್ನು ಕೈಗೊಳ್ಳುವ ಪ್ರಸಂಗವೇ ಬರಲಾರದು. ಸಮಾಜದಲ್ಲಿ ಅತೃಪ್ತಿ ತಾಂಡವಾಡಿದರೆ, ಲೂಟಿ—ದರೋಡೆಗಳು ನಡೆಯುವುದು ಸರ್ವಸಾಮಾನ್ಯವೇ ಅಲ್ಲವೆ? ಇದಕ್ಕೆ ಎಂದಿಗೂ ಅವಕಾಶ ಕೊಡಬಾರದು.

ಹೊಣೆಗಾರರ ಮಾತು

ಹಿಂದೊಮ್ಮೆ ಸಂರಕ್ಷಣಾ ಮಂತ್ರಿ ಯಶವಂತರಾವ್ ಬಲವಂತರಾವ್ ಚವಾನರು ಗೋವೆಯನ್ನು ಮಹಾರಾಷ್ಟ್ರದಲ್ಲಿ ಲೀನ ಮಾಡುವುದಕ್ಕೆ ಅನುಕೂಲಾಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಕನ್ನಡದ ಬೆಳಗಾವಿಯೇ ಮೊದಲಾದ ಭಾಗಗಳನ್ನೂ ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಅವರ ಅಭಿಪ್ರಾಯವಿದ್ದಂತಿತ್ತು. ಇತ್ತೀಚೆಗೆ ಕೇಂದ್ರ ಸರಕಾರವು ಗೋವೆಯು ಕೇಂದ್ರಾಧೀನ ಪ್ರದೇಶವಾಗಿಯೇ ಇನ್ನೂ ಕೆಲಕಾಲ ಮುಂದುವರಿಯಬೇಕೆಂಬ ಸಿದ್ಧಾಂತವನ್ನು ಮತ್ತೊಮ್ಮೆ ಉಚ್ಚರಿಸಿತು. ಪ್ರಧಾನಿ ಶಾಸ್ತ್ರಿಯವರೇ ಇದನ್ನು ಬೆಂಬಲಿಸಿದ್ದಾರೆ. ಗೋವೆಯು ಮಹಾರಾಷ್ಟ್ರದಲ್ಲಿ ಸೇರುವುದು, ಕರ್ನಾಟಕದತ್ತ ಕೂಡುವುದು ಇಲ್ಲವೇ ಪ್ರತ್ಯೇಕ ಕೇಂದ್ರ ಘಟಕವಾಗಿಯೇ

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



"ರಾಯರೇ, ರಾಷ್ಟ್ರಪತಿಯವರ ಸುಗ್ರೀವಾಜ್ಞೆ ಬಂದಿದೆಯಂತೆ, ಆಹಾರ ಧಾನ್ಯಗಳ ಸಂಗ್ರಹಕಾರರನ್ನ ದಂಡಿಸಲು?"

'ಬರ್ಲಿ ಕಣೋ, ಅದರ ಮೇಲೆ ವಾಲೀ ಆಜ್ಞೇನೂ ಬರ್ಲಿ ರಾಮನ ಬಲವಿದ್ರೆ ತಾನೇ ಸುಗ್ರೀವನಿಗೆ ಬಲಬರೋದು? ಅದು ನಮ್ಮ ಕಡೆಗಿರುವ ವರೆಗೆ ಹಾಯಾಗಿ ಇರಬಹುದಲ್ಲಾ?'

ಕಥಾ ಪ್ರಪಂಚ

ಹಾಲಾಹಲದಿಂದ ಬಲುದೂರ...

ಬರೆದವರು: ಶ್ರೀ ಹಿ. ಎಸ್. ಎಸ್.



'ಯಾಕ್ರೀ ವೈಲಿ ಹುಷಾರಿಲ್ವೇ.... ಹಾಗೆ ಕೂತಿದ್ದೀರ...."

'ಚನ್ನಾಗಿದ್ದೆ ನನಗೇನಾಗಿದೆಯು?"

"ಬಂದುಎಷ್ಟು ಹೊತ್ತಾಯ್ತು ಒಂದು ಮಾತೂ ಆಡದೆ ರೂಮಿನಲ್ಲಿ ಕೂತು ಏನು ಮಾಡುತ್ತಿದ್ದೀರ.......ನೀವು ಎಂದೂ ಹೀಗೆ ಇದ್ದವರೇ ಅಲ್ಲ...."

'ತುಂಬ ಬೇಸರವಾಯ್ತು ಕಮಲ ಅಷ್ಟೆ" ಎಂದ ರಂಗಣ್ಣ.

'ಹಾ.... 'ಎಂದು ಬೆಚ್ಚಿ ಕೇಳಿದಳು ಕಮಲ.

ಮೇಜಿನ ಮೇಲಿದ್ದ ಕವರನ್ನು ಹೆಂಡತಿಯ ಕೈಗೆ ಕೊಡುತ್ತಾ ರಂಗಣ್ಣ 'ನೀನೇ ನೋಡಿಕೋ ಕಮಲ ಎಲ್ಲ ಗೊತ್ತಾಗುತ್ತದೆ" ಎಂದ.

ಗಾಬರಿ ಗೊಂಡವಳಂತೆ ಪತ್ರವನ್ನು ಬಿಚ್ಚಿ ಓದಿದಳು ಕಮಲ. ಅದು ಯಾವ ಬಂಧು ಮಿತ್ರರ ಪತ್ರವೂ ಅಲ್ಲ ರಂಗಣ್ಣನ ವರ್ಗದ ಆರ್ಡರ್.

o o o o

ರಂಗಣ್ಣ ಇಂಜನಿಯರ್ ಪದವಿ ಪಡೆದೊಡನೆಯೇ ಬೆಂಗಳೂರಿನಲ್ಲಿಯೇ ಕೆಲಸಕ್ಕೆ ಸೇರಿದ. ಕೆಲಸಕ್ಕೆ ಸೇರಿದ ಒಂದು ವರ್ಷದೊಳಗಾಗಿಯೇ ಕಮಲ ಅವನ ಮಡದಿಯಾದಳು. ಕಮಲ ಮನೆ ಸೇರಿದ ಎರಡು ತಿಂಗಳುಗಳೊಳಗಾಗಿಯೇ ರಂಗಣ್ಣನಿಗೆ ಬೆಂಗಳೂರಿನಿಂದ ಕೊಡಗಿಗೆ ವರ್ಗವಾಯಿತು. ಕೊಡಗಿನಲ್ಲಿ ಎರಡು ತಿಂಗಳೂ ಪೂರ್ತಿಯಾಗಿ ಕಳೆದಿರಲಿಲ್ಲ. ಆ ವೇಳೆಗೆ ಅವನನ್ನು ಕೊಡಗಿನಿಂದ ಗುಲ್ಬರ್ಗ ವಿಭಾಗಕ್ಕೆ ವರ್ಗಾಯಿಸಿದ್ದರು. ಲೋಕೋಪಯೋಗಿ ಖಾತೆಯ ಮುಖ್ಯಾಧಿಕಾರಿಗಳು ಕಳುಹಿಸಿದ್ದ ಆರ್ಡರನ್ನು ಕೈಯಲ್ಲಿ ಹಿಡಿದೇ ಮನೆಗೆ ಬಂದಿದ್ದ.

ರಂಗಣ್ಣನ ಮನಸ್ಸು ವರ್ಗದ ಆರ್ಡರನ್ನು ಕಂಡೊಡನೆಯೇ ಅಸ್ತವ್ಯಸ್ತವಾಯಿತು. ಅದಕ್ಕೆ ಕಾರಣವೂ ಇಲ್ಲದಿರಲಿಲ್ಲ.

o o o o

'ಇದೇನು ವರ್ಗ ಮಾಡಿದಾರ್ರೀ....ಇಲ್ಲಿಗೆ ಬಂದು ಎರಡು ತಿಂಗಳು ಕೂಡ ಮುಗಿದಿಲ್ಲ ರಾಜ್ಯದ ದಕ್ಷಿಣದ ತುದಿಯಿಂದ ಉತ್ತರದ ತುದಿಗೆ ಎತ್ತಿ ಹಾಕಿದ್ದಾರೆ..." ಎಂದಳು ಕಮಲ.

'ಸರ್ಕಾರದ ಆಜ್ಞೆ ಕಮಲ...ನಾನು ಎಲ್ಲ ಅಧಿಕಾರಿಗಳ ಹಾಗೆ ದೊಡ್ಡವರ ಮಾತಿನಂತೆ ಕುಣಿದು...ಉಧಾರಿಗಳ ಕೈಗೊಂಬೆಯಾಗಿ....ಕಂಟ್ರಾಕ್ಟರುಗಳ ಮಾಗಿನ ನೇರಕ್ಕೆ ವರ್ತಿಸಿ ಅವರು ಕೊಡುವ ಹಣ ಸ್ವೀಕರಿಸಿದ್ದಿದ್ದರೆ ನಾನೂ ಒಳ್ಳೆಯವನೇ ಆಗಿರುತ್ತಿದ್ದೆ....ನಾನೇನು ಮಾಡಲಿ ಅದು ಯಾವುದಕ್ಕೂ ನನ್ನ ಮನಸ್ಸು ಒಪ್ಪುವುದಿಲ್ಲ. ಇಷ್ಟು ಜನರ ವಿರೋಧಿಯಾಗಿರುವ ನನ್ನನ್ನು ದಕ್ಷಿಣದಿಂದ ಉತ್ತರ ತುದಿಗೆ ಹಾಕಿದ್ದಾರೆ ಅಷ್ಟೆ; ಪುಣ್ಯಕ್ಕೆ ಅಂಡಮಾನ ನಿಕೋಬಾರ್‌ಗೆ ಹಾಕಿಲ್ಲವಲ್ಲ" ಎಂದು ಒಣ ನಗೆ ನಕ್ಕ ರಂಗಣ್ಣ.

"ಇದೇನ್ರೀ ನಿಮ್ಮ ಸರ್ಕಾರ....ಪ್ರಜಾ ರಾಜ್ಯ...ರಾಮ ರಾಜ್ಯ...ಸ.ಮೀ ರಾಜ್ಯ ಅಂತ ಗಂಟೆಗಟ್ಟಲೆ ಭಾಷಣ ಮಾಡ್ತಾರಲ್ರೀ ಇದೇನೇನ್ರಿ ನಿಮ್ಮ ಸರ್ಕಾರ ಸಾಧಿಸೋದು" ಎಂದು ಉದ್ವಿಗ್ನಳಾಗಿಯೇ ನುಡಿದಳು ಕಮಲ.

'ಸರ್ಕಾರನ ಹಾಗೆಲ್ಲ ಅನ್ನಬಾರದು ಕಮಲ."

'ಇಲ್ಲ ನಿಮ್ಮ ಸರ್ಕಾರದ ಹುಚ್ಚುತನ ನೋಡಿ...ಹಾಗೆ ಒಂದು ಲೋಟ ಹಾಲು ಕೊಡುತ್ತೇನೆ ಕುಡಿದು ಸಂತೋಷಪಡಿ."

'ಹಾಲು ಕುಡಿದು ಸಂತೋಷಪಡುವ ಕಾಲವು ಬರುತ್ತೆ."

"ಬರುತ್ತೆ....ಎಲ್ಲ...ಬರುತ್ತೆ.... ಮೂಗು ಹಿಡಿದು ತಪಸ್ಸು ಮಾಡಿ."

"ನನಗಿರ ಬೇಕಾದ ಫಲ ನಿನಗೆ ಬಂದು ಬಿಟ್ಟಿದೆಯಲ್ಲೇ!"

"ಈಗ ಯಾವ ಮಾತೂ ಬೇಡ. ಮಾಡಿದ ಅಡಿಗೆ ಆರುತ್ತಿದೆ. ಆ ಮೇಲೆ ನಿಧಾನವಾಗಿ ಮಾತನಾಡೋಣ....ಮೊದಲು ಊಟಕ್ಕೇಳಿ..." ಎಂದು ಟವೆಲ್ ಎತ್ತಿ ಕೊಟ್ಟಳು ಕಮಲ.

ರಂಗಣ್ಣ ಮರುಮಾತಿಲ್ಲದೆ ಎದ್ದ.

o o o

ರಂಗಣ್ಣನಿಗೆ ಊಟ ಮಾಡುತ್ತಿದ್ದರೂ ನಡೆದ ಪ್ರಸಂಗಗಳು ನೆನಪಿಗೆ ಬರುತ್ತಿದ್ದವು.

"ಇದೇನ್ರೀ ಊಟ ಮಾಡೋದು ಬಿಟ್ಟು ಏನೋ ಯೋಚಿಸುತ್ತಿದ್ದೀರಿ" ಎಂದು ಎಚ್ಚರಿಸಿದಳು ಕಮಲ.

"ನನಗೆ ಹಸಿವೆಯೇ ಇಲ್ಲ ಕಮಲ.... ಏನು ಮಾಡಬೇಕೋ ಒಂದೂ ತೋಚುತ್ತಿಲ್ಲ...."

ಕಮಲಳ ಕಣ್ಣಲ್ಲಿ ನೀರು ಬಂತು. ಪಕ್ಕಕ್ಕೆ ತಿರುಗಿ ಕಣ್ಣೀರು ಒರೆಸಿಕೊಂಡು-

"ನಾನೊಂದು ಮಾತು ಹೇಳ್ತೀನೆ ಕೇಳ್ತೀರಾ...."

"ಏನು...?"

"ಮನ ಒಪ್ಪದ ಕೆಲಸ ಮಾಡುವುದರಿಂದ ಪ್ರಯೋಜನವಿಲ್ಲ...ನಿಮಗೆ ಇಷ್ಟೆ ಇಲ್ಲವಾದಲ್ಲಿ ನಾಳೆಯೇ ರಾಜಿನಾಮೆ ಬರೆದು ಕೊಡಿ...ಈ ಊರಲ್ಲವಾದರೆ ಇನ್ನೊಂದು ಊರು....ಒಟ್ಟಿನಲ್ಲಿ ನಿಮ್ಮ ಮನಸ್ಸಿನ ತೊಳಲಾಟ ನೋಡಲಾರೆ" ಎಂದು ಧೈರ್ಯವಹಿಸಿ ಕೇಳಿದಳು ಕಮಲ.

"ಕಮಲ. ."

"ಏನ್ರೀ...."

"ಇಲ್ಲಿಯ ವರೆಗೂ ನಿನಗೆ ಒಂದು ವಿಷಯ ತಿಳಿಸದೆ ಮುಚ್ಚಿಟ್ಟಿದ್ದೇನೆ. ನಿನಗೆ ತಿಳಿಸಲು ಇದು ಒಳ್ಳೇ ಸಮಯ. ..ಸ್ವಲ್ಪ ಹೇಳಿಬಿಡುತ್ತೇನೆ ಕೇಳ್ತೀಯಾ?"

"ಊಟ ಮುಗಿಸಿ ಕೈತೊಳೆದಾದರೂ ಬನ್ನಿ."

ರಂಗಣ್ಣ ಊಟವನ್ನು ಅಷ್ಟಕ್ಕೆ ನಿಲ್ಲಿಸಿ ಕೈ ತೊಳೆಯಲು ಎದ್ದ.

ಕಮಲ ತನ್ನ ತಟ್ಟೆಗೆ ಅನ್ನ ಬಡಿಸಿಕೊಂಡು ಊಟಮಾಡಲು ಕುಳಿತಳು. ರಂಗಣ್ಣ ಕೈ ತೊಳೆದು ಬಂದು ಮೊದಲ ಸ್ಥಾನದಲ್ಲಿಯೇ ಕುಳಿತ.

"ನಾನು ಊಟ ಬಿಟ್ಟೆ ಅಂತ ನೀನು ಅರ್ಧ ಊಟಕ್ಕೆ ಏಳಬೇಡ."

"ನಾನೇನು ನಿಮ್ಮ ಹಾಗೆ ಯಾವುದನ್ನೂ ಹಚ್ಚಿಕೊಂಡು ಒದ್ದಾಡುವುದಿಲ್ಲ.''

"ನನ್ನ ಪಾಲಿನ ಒರಟುತನ ನಿನಗೆ ಇದೆಯಲ್ಲ ಬಿಡು. ಅಷ್ಟೇ ಸಂತೋಷ ,"

(ಹದಿಮೂರನೇ ಪುಟ ನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p.a.	7ರಿಂದ 11 ತಿಂಗಳು. % p.a.	12ರಿಂದ 23 ತಿಂಗಳು. % p.a.	24ರಿಂದ 35 ತಿಂಗಳು. % p.a.	36ರಿಂದ 47 ತಿಂಗಳು. % p.a.	48ರಿಂದ 59 ತಿಂಗಳು. % p.a	60ರಿಂದ 83 ತಿಂಗಳು. % p.a	84ರಿಂದ 120 ತಿಂಗಳು. % p.a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ:-	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

[ಶೆಡ್ಯೂಲ್ಡ್ ಬ್ಯಾಂಕ್] ಶ್ರೀ

ರಿಜಿಸ್ಟರ್ಡ್ ಆಫೀಸು:— ಕೋರ್ಟು ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

ಚೀನೀಯ ಅಣುಗುಂಡಿನ ಮುಂದೆ

ಬೊಗಳುವ ನಾಯಿ ...?

ಬರೆದವರು: ಶ್ರೀ ಶಿವಶಂಕರ.

ಕಳೆದ ತಿಂಗಳಲ್ಲಿ ತಟಸ್ಥ ರಾಷ್ಟ್ರಗಳ ಸಮ್ಮೇಳನವು ಕೈರೋದಲ್ಲಿ ಜರಗಿದಾಗ ಭಾರತದ ಪ್ರಚಲಿತ ಪ್ರಧಾನಿ ಲಾಲಬಹದ್ದೂರ ಶಾಸ್ತ್ರಿಯವರು ಬಹಳ ಶಾಂತವಾಗಿ ತಮ್ಮ ವಾದವನ್ನು, ಅಭಿಪ್ರಾಯವನ್ನೂ, ಇಚ್ಛೆಯನ್ನು ಮಿಕ್ಕ ರಾಷ್ಟ್ರಗಳ ಮುಂದೆ ಮಡಗಿದ್ದರು. ಚೈನಾ-ಭಾರತಗಳ ನಡುವೆ ರಾಜಿ ಮಾಡಿಸಲು ಮಿಕ್ಕ ರಾಷ್ಟ್ರಗಳು ಪ್ರಯತ್ನಿಸಬೇಕೆಂದು ಅವರು ಹೇಳಿದರು. ಚೈನಾವು ಅಣುಗುಂಡು ಪ್ರಯೋಗ ನಡೆಸುವ ಕುರಿತು ಆಗ ಪತ್ರಿಕೆಗಳು ದಪ್ಪಕ್ಷರಗಳಲ್ಲಿ ಪ್ರಕಟಿಸುತ್ತಿದ್ದುವು. ಚೈನಾವು ಮಾರಕಾಸ್ತ್ರಗಳನ್ನು ಪ್ರಯೋಗಿಸದಂತೆ ಬುದ್ಧಿವಾದ ಹೇಳಲು ಕೆಲವು ತಟಸ್ಥ ರಾಷ್ಟ್ರಗಳು ಮುಂದಾಗಬೇಕೆಂದು ಅವರು ಸೂಚಿಸಿದರು. ಬೆಕ್ಕಿಗೆ ಗಂಟೆಕಟ್ಟಲು ಯಾರೂ ಮುಂಬಕ್ಕೆ ಬರಲಿಲ್ಲ. ಚೈನಾ ಅಣುಗುಂಡು ಪ್ರಯೋಗವನ್ನು ನಡೆಸಿತು. ಅಣ್ವಸ್ತ್ರಗಳುಳ್ಳ ರಾಷ್ಟ್ರಗಳಲ್ಲಿ ಈಗ ಚೈನಾವೂ ಒಂದು. ಚೈನಾದ ಬಳಿ ಅಣ್ವಸ್ತ್ರ ಇರುವದರ ಕುರಿತು 'ನವಯುಗ'ವು ತನ್ನ ದಿನಾಂಕ ೨೪-೧೦-೬೪ರ ಸಂಚಿಕೆಯಲ್ಲಿ ಸ್ಪಷ್ಟಪಡಿಸಿರುತ್ತದೆ.

ತಟಸ್ಥ ರಾಷ್ಟ್ರಗಳ ಸಮ್ಮೇಳನದಲ್ಲಿ ನಮ್ಮ ಪ್ರಧಾನಿಯವರು ಕೋಲಂಬೋ ಸಲಹೆಯಂತೆ ಚೈನಾವು ಹಿಂದಕ್ಕೆ ಹೋಗುವಂತೆ ಉಳಿದ ತಟಸ್ಥ ರಾಷ್ಟ್ರಗಳು ಕೇಳಕೊಳ್ಳಬೇಕೆಂದು ಕೇಳಿದಾಗ ಚೈನಾವು ಒಡನೆ ಸ್ವರವೆತ್ತಿತು. ತಾನೇ ಬಹಳಷ್ಟು ಹಿಂದಕ್ಕೆ ಹೋಗಿದ್ದು ಭಾರತವೇ ಆಕ್ರಮಣ ನಡೆಸಿರುತ್ತದೆಂದು ಕಮ್ಯೂನಿಸ್ಟ ಚೈನಾವು ಅಪಪ್ರಚಾರ ನಡೆಸಿತು. ಗಡಿಯಲ್ಲಿ ಭಾರೀ ಪ್ರಮಾಣದಲ್ಲಿ ಅವರ ಸೇನೆ ಶೇಖರಣೆಯಾಗುತ್ತಿದೆಯೆಂದು ರಕ್ಷಣಾ ಮಂತ್ರಿಯವರೇ ಹೇಳುತ್ತಿದ್ದಾರೆ.

ಈಗ ನಮ್ಮ ನಿಲುವೇನು?

ಚೈನಾ ಅಣುಗುಂಡು ಪ್ರಯೋಗ ನಡೆಸಿತು. ರಷ್ಯಾದಲ್ಲಿ ಕ್ರುಶ್ಚೇವ್ ರಾಜೀನಾಮೆ ಇತ್ತು ಕೊಸಿಗಿನ್ ಮತ್ತು ಬ್ರೆಝ್ನೇವ್ ಅಧಿಕಾರಕ್ಕೆ ಬಂದರು.

ಚೈನಾ ಅಣುಗುಂಡು ಪ್ರಯೋಗ ನಡೆಸಿತೆನ್ನುವದನ್ನು ಕೇಳಿದೊಡನೆ ನಮ್ಮ ಶಾಂತ ಶಾಸ್ತ್ರಿಯವರು, ಅದು ಜಗತ್ತಿಗೇನೇ ನಡುಕವನ್ನುಂಟು ಮಾಡಿಸಿದೆಂದು ಹೇಳಿದರು. ಶಾಂತಿಗೆ ಭಂಗ ಬಂತೆಂದೂ ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ತಾನೊಂದು ದೊಡ್ಡ ಯುದ್ಧ ಸಾಮಗ್ರಿಗಳುಳ್ಳ ರಾಷ್ಟ್ರವಾಗಬೇಕೆಂದು ಚೈನಾ ಚಡಪಡಿಸುತ್ತಿದೆ. ಇದು ಮನುಷ್ಯ ವರ್ಗಕ್ಕೇನೇ ಭ್ರಾಂತಿಯನ್ನುಂಟುಮಾಡುತ್ತದೆಂದೂ ಅವರು ಹೇಳಿದರು. ಶಾಸ್ತ್ರಿಯವರ ಸರಳ ಮಾತಿನಲ್ಲಿ ಯಾರಿಗೂ ಸಂದೇಹ ಬರುವಂತಿಲ್ಲ. ತಾನೊಂದು ಮಹಾನ್ ರಾಷ್ಟ್ರವಾಗಬೇಕೆಂಬ ಇಚ್ಛೆ, ಲವಲವಿಕೆ ಸಾಧಾರಣವಾಗಿ ಎಲ್ಲಾ ರಾಷ್ಟ್ರಗಳಿಗೂ ಇರುತ್ತದೆ. ಹೇಗಾದರೂ ಗದ್ದುಗೆಯ ಮೇಲೆ ಕಾಯಬೇಕೆಂದು ಪ್ರಯತ್ನಪಡುವ ಪ್ರಮುಖರಿರುವ ರಾಷ್ಟ್ರಗಳಿಗೆ ಆ ಕಲ್ಪನೆಯೂ ಇರಲಾರದು.

ಚೈನಾದ ಬಣ್ಣ ಬಯಲಾಯಿತೆಂದು ಕಾನೂನು ಮಂತ್ರಿ ಶ್ರೀ ಅಶೋಕ ಸೇನರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಅಣುಗುಂಡು ಪ್ರಯೋಗ ನಡೆಸಿ, ಮಾರಕಾಸ್ತ್ರ ನಿರ್ಮಾಪಕನೆಂಬ ಬಿರುದ ಪಡೆಯುವದರಲ್ಲಿ ಚೈನಾವೇನೋ ಪ್ರಥಮ ರಾಷ್ಟ್ರ ಇರುವದಿಲ್ಲ. ಅಣುಶಕ್ತಿಯುಳ್ಳ ರಾಷ್ಟ್ರಗಳೆಂದು ದೊಡ್ಡ ಪ್ರಬಲ ರಾಷ್ಟ್ರಗಳೆನಿಸಿಕೊಂಡಿರುವಾಗ ಬಣ್ಣ ಬಯಲಾದರೆ ತಾನೇ ಚೈನಾಕ್ಕೆ ತನ್ನ ಬೇಳೆ ಬೇಗನೆ ಬೇಯಿಸಿಕೊಳ್ಳಲು ಸಾಧ್ಯ?

ಅದೊಂದು ಭಯಂಕರ ಸುದ್ದಿ ಎಂದಿರುವರು ಇದ್ಯಾ ಮಂತ್ರಿ ಶ್ರೀ ಛಾಗ್ಲಾರವರು. ಅಲ್ಲವೇ, ಮತ್ತೆ? ಚಿಕ್ಕ ಪುಟ್ಟ ರಾಷ್ಟ್ರಗಳನ್ನು ಭಯ ಬೀಳಗೊಳಿಸಿ ಬಗಳೊಳಗೆ ಹಾಕಿಕೊಳ್ಳಲು ಅದು ಸುಲಭೋಪಾಯ ಇದೆ.

ಈ ರೀತಿ ನಮ್ಮ ಮಂತ್ರಿಗಳು ಮಾತಾಡುತ್ತಿರುವಾಗ ರಕ್ಷಣಾ ಮಂತ್ರಿಯವರ ಭಿನ್ನ ರೀತಿಯ ಸ್ವರ ಕೇಳಿಬರುತ್ತಿದೆ. ಅದುವೇ ರಕ್ಷಣಾ ಮಂತ್ರಿಗೂ ಮಿಕ್ಕ ಮಂತ್ರಿಗಳಿಗೂ ಇರುವ ವ್ಯತ್ಯಾಸವಿದೆ. ಸಂದರ್ಭ ಭಯಂಕರವಾಗಿದೆಯೆಂದು ಅವರು ಹೇಳಿದರು ಇತರ ಮಂತ್ರಿಗಳ ಹಾಗೆ ಶಬ್ದ ಪ್ರವಾಹ ಹರಿಸಿಬಿಟ್ಟಲ್ಲಿ ರಕ್ಷಣಾ ಮಂತ್ರಿಗಳ ಜವಾಬ್ದಾರಿ ಮುಗಿಯುತ್ತದೆಯೇ?— ನಿರ್ವಾಹವಿಲ್ಲ, ಆದುದರಿಂದಲೇ ಈ ಘಟನೆಯು ನಮಗೆ ಸಂಬಂಧಪಟ್ಟದ್ದೆಂದು ನಾವು ಭಾವಿಸಬೇಕೆಂದು ಅವರು ಹೇಳಿರುವರು. ಅಲ್ಲಿಗೇನೇ ಅವರ ಜವಾಬ್ದಾರಿ ಮುಗಿಯುವದಿಲ್ಲ. ನಾವು ಬಹಳ ಜಾಗ್ರತೆಯಿಂದಿರಬೇಕು ಮತ್ತು ಎಲ್ಲಾ ಸಂದರ್ಭಗಳನ್ನು ಎದುರಿಸಲು ಸದಾ ಸಿದ್ಧರಾಗಿರಬೇಕೆಂದು ಅವರು ಮುನ್ನೆಚ್ಚರಿಕೆ ಕೊಟ್ಟಿರುವರು. ಭಯಂಕರ ಸಂಧರ್ಭ ಬಂದೊದಗುವಂತೆ ಮಾಡಿದವರ್ಯಾರು?

ನಮ್ಮ ದೇಶಕ್ಕೆ ಆಪತ್ತು ಬಂದೊದಗಿದಾಗ ನಾವು ಅದನ್ನು ಎದುರಿಸಬೇಕಿನ್ನಾರು ಎದುರಿಸುವರು? ಅದನ್ನು ಎದುರಿಸಲು ಸಿದ್ಧರಾಗಬೇಕೆಂದೊಡನೆ ಅದಕ್ಕಾಗಿ ದಿನಗಟ್ಟಲೆ ಕಾದು ನಿಲ್ಲುವವರಿಂದ ರಾಷ್ಟ್ರ ರಕ್ಷಣೆ ಸಾಧ್ಯವಾದೀತೇ? ಅದಕ್ಕೆ ಸೇನೆ ಇದ್ದೇ ಇದೆ. ಸೇನೆಯ ಶಕ್ತಿಯಾಗಿ ಸಾರ್ವಜನಿಕರು ಇರಬಹುದು. ಅಷ್ಟೇ. ಅವರು ಚೈನಾದ ಗುಂಡುಗಳಿಗೆ ಎದೆಗೊಟ್ಟಾರು, ಅಷ್ಟೆ. ಬೇರೇನೂ ಸಾಧ್ಯವಿಲ್ಲ.

ಅದನ್ನರಿತೇ ರಾಷ್ಟ್ರಾಧ್ಯಕ್ಷ ಡಾ| ರಾಧಾಕೃಷ್ಣರು ಜನತೆಗೆ ಸ್ಪಷ್ಟ ಎಚ್ಚರಿಕೆಯನ್ನಿತ್ತಿರುವರು. ಸರ್ವ ರಾಷ್ಟ್ರಗಳೂ ನಿಶಸ್ತ್ರೀಕರಣಕ್ಕೊಪ್ಪುವ ವರೆಗೆ ನಾವೂ ಬಲಶಾಲೀ ರಾಷ್ಟ್ರವಾಗಿರಬೇಕು. ಅದಕ್ಕಾಗಿ ಬಲಶಾಲೀ ಸೈನ್ಯ ಇರಬೇಕು. ಅದೇ ಆಧುನಿಕ ಆಯುಧ ಪ್ರಯೋಗ ಅರಿತಿರುವ ಸೇನೆ ಇರಬೇಕು. ಇಲ್ಲದಿದ್ದಲ್ಲಿ ಆಶ್ಚರ್ಯದ ರೀತಿಯಲ್ಲಿ ಪುನಃ ಆಕ್ರಮಣಕ್ಕೆ ಬಲಿಯಾಗ ಬೇಕಾದೀತು. ಇವು ರಾಷ್ಟ್ರಾಧ್ಯಕ್ಷರ ಸ್ಪಷ್ಟ ಎಚ್ಚರಿಕೆಯ ಮಾತುಗಳಿವೆ. ಹೌದು, ನಮ್ಮ ಬಳಿ ಉತ್ತಮ ಸೇನೆ ಇದೆ. ಅವರೆಲ್ಲರೂ ಯೋಧರಿದ್ದಾರೆ. ಹಾಗಿದ್ದರೂ, ಯೋಧರಿಗೂ ಆಧುನಿಕ ಅಸ್ತ್ರಗಳ ಅವಶ್ಯಕತೆ ಇದ್ದೇ ಇದೆ. ನಾವು ಆ ದಾರಿಯಲ್ಲಿ ಅದೆಷ್ಟು ಮುಂದುವರಿದಿದ್ದೇವೆ?

ಹಾಗಿದ್ದರೂ ಅರ್ಥ ಅಮಾತ್ಯ ಟಿ. ಟಿ. ಕೃಷ್ಣಮಾಚಾರಿಯವರು ಭಾರತವು ಅಣ್ವಸ್ತ್ರ ತಯಾರಿಸುವದಿಲ್ಲವೆಂದು ಸ್ಪಷ್ಟವಾಗಿ ಸೂಚಿಸಿದ್ದಾರೆ.

ರಾಷ್ಟ್ರಾಧ್ಯಕ್ಷರು ಹೇಳುತ್ತಾರೆ ನಮ್ಮ ಬಳಿ ಬಲಶಾಲೀ ಶಸ್ತ್ರಾಸ್ತ್ರ ಸುಸಜ್ಜಿತ ಸೇನೆ ಇರಬೇಕೆಂದು. ನಾವು ಮಾರಕಾಸ್ತ್ರಗಳನ್ನು ತಯಾರಿಸುವುದೇ ಇಲ್ಲವೆಂದು ಅರ್ಥಮಂತ್ರಿ ಹೇಳುತ್ತಿದ್ದಾರೆ. ಇದರಲ್ಲಿ ಯಾರ ಮಾತಿಗೆ ಬೆಲೆ ಜಾಸ್ತಿ? ಸೇನಾ ಶಕ್ತಿಯಲ್ಲಿ ಅಣುಶಕ್ತಿ ಬರುವದಿಲ್ಲವೇನು?

ಭಾರತವು ಇಷ್ಟಪಟ್ಟರೆ ಕೇವಲ ಹದಿನೆಂಟು ತಿಂಗಳುಗಳೊಳಗೆ ಅಣು ಗುಂಡುಗಳನ್ನು ತಯಾರಿಸಲು ಸಮರ್ಥವಿದೆಯೆಂದು ಅಣುಶಕ್ತಿ ಸಮಿತಿಯ ಮುಖ್ಯಾಧಿಕಾರಿ ಡಾ| ಬಾಬಾ ಹೇಳುತ್ತಿದ್ದಾರೆ.

ಡಾ| ರಾಧಾಕೃಷ್ಣ ಹಾಗೂ ಡಾ| ಬಾಬಾರವರ ಮಾತು ಕೇಳುವಾಗ ಹಿಂದೆ ಅಧಿಕಾರ ಗದ್ದುಗೆಯ ಆರೋಹಣ ಸಮಯದಲ್ಲಿ ಯಶವಂತ ಚವ್ಹಾನರು ಹೇಳುತ್ತಿದ್ದ ಮಾತುಗಳು ಜ್ಞಾಪಕಕ್ಕೆ ಬರುತ್ತಿವೆ. ಶತ್ರುವನ್ನು ಹೊಡೆದಟ್ಟದೆ ತಾನು ಮಹಾರಾಷ್ಟ್ರಕ್ಕೆ ಮರಳುವದಿಲ್ಲವೆಂದು ಅವರು ಹೇಳುತ್ತಿದ್ದರು. ಆದರೆ ನಿಜವಾಗಿ ನಡೆದದ್ದೇನು? ಅಷ್ಟೇ ಅಲ್ಲ, ಶತ್ರು ಬಾಗಿಲಲ್ಲಿ ಹೊಂಚು ಹಾಕುತ್ತಿರುವಾಗ ಅವರು ಮನೆಯೊಳಗೆ ರಾಜಕೀಯ ಚದುರಂಗದಾಟವನ್ನಾಡುವದರಲ್ಲಿ ಕಾಲ ಕಳೆದರು; ಚುನಾವಣಾ ಪ್ರಚಾರಕ್ಕೆ ಧಾವಿಸಿದರು. ಚೈನಿ ಆಕ್ರಮಣಗಾರರಿಗಿಂತಲೂ ಎದುರು ಪಕ್ಷದವರು ವಿರೋಧಿಗಳೇನು? ಸಿಂಹ ಘರ್ಜನೆಯ ಅರ್ಥವಾದರೂ ಏನು?

ಸಿಂಹಘರ್ಜನೆ ಎಂದೊಡನೆ ಒಂದು ಘಟನೆ ಜ್ಞಾಪಕಕ್ಕೆ ಬರುತ್ತಿದೆ. ಜರ್ಮನರ ಜಂಘಾ ಬಲವನ್ನಡಗಿಸಿದ ಚರ್ಚಿಲರನ್ನು ಸನ್ಮಾನಿಸುವಾಗ ಅಧ್ಯಕ್ಷಯವರು ಅವರನ್ನು ಸಿಂಹವೆಂದು ಕರೆದರು. ಮರು ಉತ್ತರ ಕೊಡುವಾಗ ಚರ್ಚಿಲರು ಬ್ರಿಟನಿನ ಸಿಪಾಯಿಗಳೆಲ್ಲರೂ ಸಿಂಹಗಳೇ ಇದ್ದಾರೆ, ಅವರ ಪರವಾಗಿ ತಾನು ಘರ್ಜಿಸಿದ್ದೆ ಅಷ್ಟೆ ಎಂದರು. ಈ ಮಾತಿನ ಇನ್ನೊಂದು ಅಹಂಕಾರದ ಅರ್ಥ ಇಲ್ಲಿ ಬೇಡ.

ಶತ್ರುವನ್ನಟ್ಟದೆ ತಾನು ಊರಿಗೆ ಮರಳುವುದಿಲ್ಲವೆನ್ನುತ್ತಾರೆ ರಕ್ಷಣಾ ಮಂತ್ರಿಯವರು. ಶತ್ರುವನ್ನು ಮಣ್ಣು ಮುಕ್ಕಿಸುವ ಸಾಮರ್ಥ್ಯ ನಮ್ಮಲ್ಲಿರಬೇಕೆನ್ನುತ್ತಾರೆ ರಾಷ್ಟ್ರಾಧ್ಯಕ್ಷರು. ಕೇವಲ ಹದಿನೆಂಟು ತಿಂಗಳುಗಳೊಳಗೇನೇ ಅಣು ಗುಂಡನ್ನು ತಯಾರಿಸಲು ಭಾರತವು ಸಮರ್ಥವಾಗಿದೆನ್ನುತ್ತಾರೆ ಅಣು ಶಕ್ತಿ ಸಮಿತಿಯ ಮುಖ್ಯಾಧಿಕಾರಿಯವರು. ಹಿಂದಿನ ಪ್ರಧಾನಿಯವರು ಒಂದಂಗುಲವನ್ನೂ ಬಿಟ್ಟುಕೊಡಲಾರೆನೆಂದು ಜೋರಾಗಿ ಹೇಳುತ್ತಿದ್ದರು. ಈ 'ಘರ್ಜನೆ'ಗಳಿಗೆ ಏನು ಹೇಳುವದು? ಕನ್ನಡದಲ್ಲಿ ಒಂದು ಗಾದೆ ಇದೆಯಲ್ಲಾ? ಬೊಗಳುವ ನಾಯಿ ಕಚ್ಚುವದಿಲ್ಲ; ಕಚ್ಚುವ ನಾಯಿ ಬೊಗಳುವುದಿಲ್ಲವೆಂದು. ನಮ್ಮ ಪರಿಸ್ಥಿತಿ ಅಲ್ಲಿಗೆ ಬಂದಿರುತ್ತದೆ. ಇದಕ್ಕೆ ಕಾರಣ ಯಾರು? ಯೋಧರೆನಿಸಿಕೊಂಡಿರುವ ಸೇನೆಯ ನಡುವೆ ಕಾಸಿನ ರಾಜಕೀಯದ ಪ್ರಚಾರ ಮಾಡಿದವರ್ಯಾರು? ಅವರಿಗೆ ಉತ್ತಮ ರಾಷ್ಟ್ರೀಯ ಪತ್ರಿಕೆಗಳ ಸರಬರಾಯಿ ಮಾಡದೆ ಹಳದಿ ಪತ್ರಿಕೆಗಳನ್ನೇ ಸರಬರಾಯಿ ಮಾಡಿದವರ್ಯಾರು? ಅವರನ್ನು ರಸ್ತೆ ನಿರ್ಮಾಣ ಹಾಗೂ ಕಾಫಿ ಸೋಸುವ ಯಂತ್ರಗಳ ನಿರ್ಮಾಣ ಅಲ್ಲದೆ ಅಂತಹ ಯಾಂತ್ರಿಕ ಮಾನವರನ್ನಾಗಿ ಮಾಡಿದವರ್ಯಾರು? ಅವರೆಲ್ಲ ವೀರತೆಯ ಮಾತೆತ್ತದೆ ಶರಣಾ, ಪ್ರತಿಭಟನಾಪತ್ರ, ಒಪ್ಪಂದಗಳ ಪರಿಚಯ ಮಾಡಿಸಿ ಕೊಟ್ಟವರ್ಯಾರು...? ಪ್ರಶ್ನೆಗಳಿಗೆ ಅಂತ್ಯವೇ ಇಲ್ಲ.

ಈಗ ನಾವೇನು ಮಾಡುವದು? ಚೈನಾದ ಬಳಿ ಹದಿನೆಂಟು ತಿಂಗಳು ಅವಕಾಶ ಬೇಡುವದೇನು? ಇಲ್ಲಿಯ ಯಾಂತ್ರಿಕ ಅಥವಾ ಔದ್ಯೋಗಿಕ ರಂಗಗಳನ್ನು ಮಾತ್ರ ವಿಶಾಲಗೊಳಿಸುವದೇನು? ಕುರಿ ಮರಿಯನ್ನು ಮುದ್ದಿನಿಂದ ಬೆಳೆಸಿಟ್ಟು ತೋಳದ ಬಾಯಿಗೆ ಕೊಟ್ಟು ಬಿಡಬಹುದೇನ? ಅಸ್ತ್ರಗಳಿಗೆ ನಾವು ಅಂಜುವದು ಸರಿಯಲ್ಲ. ಆಧುನಿಕ ಅಸ್ತ್ರಗಳ ಸಿದ್ಧತೆಯಲ್ಲಿ ನಾವೂ ಮುಂದಿರಲೇ ಬೇಕು. ನಮ್ಮ ಬಳಿ ಅಜೇಯ ಶಕ್ತಿ ಇದ್ದರೇನೇ ಉಳಿದವರು ನಮ್ಮವರಾಗಿರುತ್ತಾರೆ. ಇಲ್ಲದಿದ್ದಲ್ಲಿ ಗುಳುಂಕರಿಸಲು ಸ್ಪರ್ಧೆ ನಡೆಸುತ್ತಾರೆ. ರಾಷ್ಟ್ರಾಧ್ಯಕ್ಷರ ಹಿತ ಹಾಗೂ ಮಿತ ವಚನಗಳತ್ತ ಗಮನ ಹರಿಸಿ ಎಚ್ಚರಿಕೆಯಿಂದಿರಲೇ ಬೇಕು; ಪುನಃ ಮೋಸ ಹೋಗುವದು ಸರಿಯಲ್ಲ.

INSIST ON.......

Waterfalls—Glendale—Brooklands

TEAS

POPULAR EVERYWHERE

You can book your requirements through:

PUNJA & CO., MULKI,

Phone No. Off: 25. Res: 36.

KOTHARI & SONS, MADRAS.

ನೆಹರೂ ಮೊಳಗಿಸಿದ

ಶಾಂತಿಯ ಕಹಳೆ – ಪಂಚಶೀಲ

ಬರೆದವರು: ಶ್ರೀ ಕೆ ಎಸ್ ಪಟ್ಲ, ಕಠೋಪಾಡಿ

ಭಾರತದ ಭಾಗ್ಯಾಕಾಶದಲ್ಲಿ ಮಿನುಗುತ್ತಿದ್ದ ದಿವ್ಯ ತಾರೆಯೊಂದು ಕಂತಿ, ಭಾರತೀಯರು ಕತ್ತಲೆಯ ಪಥದಲ್ಲಿ ಎಡವಿ ನಡೆಯಬೇಕಾದೀತೋ – ಎಂದು ಶಂಕೆಗೊಳಗಾಗಿದ್ದ ನಾವು ಇಂದು ಶ್ರೀ ಲಾಲಬಹದ್ದೂರ್ ಶಾಸ್ತ್ರಿಗಳು ಆ ಸ್ಥಾನವನ್ನು ಭರ್ತಿಗೊಳಿಸಿರುವುದರಿಂದ ತೃಪ್ತಿಯ ಉಸಿರನ್ನು ಬಿಡುವಂತಾಗಿದೆ

ಶ್ರೀ ನೆಹರೂಗಳು ಇನ್ನು ಇಲ್ಲವಾದರೂ ಅವರು ಹಾಕಿಕೊಟ್ಟಿರುವ ಹತ್ತು ಹಲವು ಆದರ್ಶಗಳನ್ನು ನಾವು ನಮ್ಮ ದಿನಗಳಲ್ಲಿ ಅನುಷ್ಠಾನದಲ್ಲಿಟ್ಟುಕೊಳ್ಳುವುದು ಬಹುವಿಧದಿಂದ ಅನುಕರಣೀಯ.

ಕಳೆದ ಬಾರಿ ಚೀನೀಯರು ನಮ್ಮ ಮೇಲೆಸಗಿದ್ದ ಆಕ್ರಮಣದ ವೇಳೆ ದೇಶದ ಎಲ್ಲೆಡೆಗಳಿಂದ ಕೇಳಿ ಬರುತ್ತಿದ್ದ ಸೊಲ್ಲೆಂದರೆ ವಿಶ್ವಶಾಂತಿಯ ತಾರಕ ಮಂತ್ರವಾದ ಪಂಚಶೀಲದ ಕೊಲೆಗಾರನೆನಿಸಿದ ಚೌ-ಎನ್ ಲಾಯಿಯನ್ನು ಸಂಬೋಧಿಸಿ, "ಈ ಪಂಚಶೀಲವೆಂಬುದೇನು?" ಎಂದು ಕೇಳಿದುದೂ ಇದೆ.

ಪಂಚಶೀಲಕ್ಕೂ ಭಾರತಕ್ಕೂ ಬಹಳ ಹಿಂದಿನ (ಅಂದರೆ ಭಗವಾನ್ ಬುದ್ಧನ) ಕಾಲದಿಂದಲೂ ನಿಕಟವಾದ ಸಂಬಂಧವಿತ್ತೆಂದು ತಿಳಿದು ಬರುತ್ತದೆ

ಆತನ ಕಾಲದಲ್ಲಿ ಜನತೆಯ ಆಚಾರ-ವ್ಯವಹಾರಾದಿಗಳು ಉಚ್ಚ ಧ್ಯೇಯದಿಂದ ಕೂಡಿದ ಐದು ಬಗೆಯ ನಿಯಮಗಳಿಂದ ಆಧಾರಿತವಾಗಿ ಸಾಗುತ್ತಿತ್ತು. ಆದುದರಿಂದಲೇ ನಿಜವಾದ ಬೌದ್ಧಾನುಯಾಯಿಯು ಜಗತ್ತಿನ ಯಾವೆಡೆಗೆ ತನ್ನ ಸಂದೇಶವನ್ನು ಒಯ್ದನೋ ಅಲ್ಲೆಲ್ಲಾ ಬೌದ್ಧ ಧರ್ಮವು—ಅನಾಯಾಸವಾಗಿ ಪಸರಿ, ಪಂಚಶೀಲವು ತನ್ನ ಪರಿಮಳವನ್ನು ವಿವಿಧ ದೇಶಗಳಿಗೆ ಬೀರುವಂತಾಯಿತು.

ಅದನ್ನೇ ದಿ। ಪ್ರಧಾನಿಯವರು ಪುನಃ ತಮ್ಮ ಕಾಲದಲ್ಲಿ ಬಳಕಿಗೆಳೆದು ನಾವೂ ಅದನ್ನು ನಮ್ಮ ಜೀವನಕ್ಕೆ ಅಳವಡಿಸಿಕೊಂಡು ಶಾಂತಿಯ ಸಿರಿಯನ್ನು ಕಾಣುವಂತೆಸಗಿದರು. ಜಗತ್ತಿನ ಎಲ್ಲಾ ರಾಷ್ಟ್ರಗಳೂ ಇದರ ಯಥಾರ್ಥತೆಯನ್ನರಿತು, ಈ ತತ್ವಪ್ರಣಾಳಿಕೆಗೆ ತಮ್ಮ ಒಪ್ಪಿಗೆಯನ್ನು ಈಯಲು ಮುಂದೆ ಬಂದಿವೆ

ಬೌದ್ಧರ ಕಾಲದಲ್ಲಿ ಪಂಚಶೀಲವು ಒಬ್ಬ ವ್ಯಕ್ತಿಯು ವ್ಯಕ್ತಿಯಾಗಿ ಶೋಭಿಸಬೇಕಿದ್ದರೆ ಯಾವ ಯಾವ ಉಚ್ಚ ನಿಯಮಗಳನ್ನು ಪಾಲಿಸಲೇ ಬೇಕೆಂದು ಸೂಚಿಸಿದ್ದರೆ, ಇಂದದು ರಾಷ್ಟ್ರ ರಾಷ್ಟ್ರಗಳು ಶಾಂತಿ ಮತ್ತು ಸಹಯೋಗದಿಂದ ಉನ್ನತಿಯೆಡೆಗೆ ಸಾಗುವ ಪಥಕ್ಕೆ ಕೈದೀವಿಗೆಯಾಗಿದೆ.

ಬೌದ್ಧರ ಕಾಲದ ಜನಜೀವನದ ಐದು ನಿಯಮಗಳು ಇವು: 1) ಪ್ರಾಣಿಹಿಂಸೆ ಮಾಡದಿರುವುದು, 2) ಕಳ್ಳತನ ಮಾಡದಿರುವುದು, 3) ಮನಸ್ಸನ್ನು ಅಂಕೆಯಲ್ಲಿರಿಸಿಕೊಂಡಿರುವುದು, 4) ಸುಳ್ಳಾಡದಿರುವುದು, ಮತ್ತು 5) ಅಮಲು ಸೇವನೆ ಮಾಡದಿರುವುದು.

ಈ ಮೇಲಿನ ನಿಯಮಗಳ ಪಾಲನೆಯಿಂದ ದಾನವನೂ ಮಾನವನಾಗಬಹುದು! ಇಂದು ಮಾನವನ ಉದಾತ್ತೀಕರಣ ಮಾತ್ರವಲ್ಲದೆ, ಇನ್ನೂ ಹೆಚ್ಚಿನ ಒಂದು ಸಾಧನೆಯಿದರಿಂದ ಸಾಧಿಸಬೇಕಾಗಿದೆ. ದೇಶದೇಶಗಳೊಳಗೆ ಯುದ್ಧಗಳು ಸಂಭವಿಸಿ ಅಶಾಂತಿ ತಲೆದೋರದಂತೆಸಗಬೇಕಾಗಿದೆ.

ಈ ಬಗೆಗಾಗಿ ಭಾರತವು ಬಹಳ ಕಾಲದಿಂದ ಚಿಂತಿಸಿತ್ತು. ಯುದ್ಧ ಸಾಮಾಗ್ರಿಗಳ ಸಂಗ್ರಹಕ್ಕೆ ಹೋಗದೆ, ಕೇವಲ ಶಾಂತಿಯನ್ನು ಸಾರುವುದರಲ್ಲೇ ಪ್ರವೃತ್ತವಾಗಿತ್ತು. ಅದರ ಫಲವಾಗಿ ೧೯೫೪ರಲ್ಲಿ ಚೌ-ಎನ್-ಲಾಯಿಯವರು ಭಾರತಕ್ಕೆ ಆಗಮಿಸಿದರು. ಪ್ರಧಾನಿ ನೆಹರು ಮತ್ತು ಚಾರೊಳಗೆ ನಡೆದ ದೀರ್ಘ ಚರ್ಚೆಯಲ್ಲಿ, ಪರಸ್ಪರ ದೇಶಗಳ ಮೈತ್ರೀ ಸಂಬಂಧಕ್ಕೆ ಸರಿಬೀಳುವ ಐದು ಸಿದ್ಧಾಂತಗಳನ್ನು ರಚಿಸುವುದರೊಂದಿಗೆ ಒಪ್ಪಂದವೂ ಮುಗಿದುಹೋಯಿತು!; ಈ ಸಿದ್ಧಾಂತಗಳ ಒಳಿತನ್ನು ಕಂಡುಕೊಂಡ ಜಗತ್ತಿನ ಅನೇಕ ರಾಷ್ಟ್ರಗಳೂ ತಮ್ಮ ತೃಪ್ತಿಯನ್ನು ಸೂಚಿಸುವುದರೊಂದಿಗೆ, ತಾವೂ ಅದರಂತೆ ನಡೆಯುವ ನಿರ್ಧಾರ ಕೈಗೊಂಡುವು

ಅಂತು ರಚಿಸಲ್ಪಟ್ಟ ರಾಷ್ಟ್ರ-ರಾಷ್ಟ್ರಗಳ ಪರಸ್ಪರ ದವ್ಯಾವಹಾರಿಕ ಸಿದ್ಧಾಂತಗಳು ಇಂತಿವೆ:

(1) ಒಬ್ಬರು ಇನ್ನೊಬ್ಬರ ಸ್ವಾತಂತ್ರ್ಯಕ್ಕೆ ಮನ್ನಣೆ ಕೊಡುವುದು.

(2) ಪ್ರತಿ ದೇಶದವರೂ ರಾಷ್ಟ್ರದ ಗಡಿಯಲ್ಲಿ ಆಕ್ರಮಣ ಮಾಡದೆ ಅವುಗಳ ಅಧಿಕಾರಕ್ಕೆ ಮನ್ನಣೆಯೀಯುವುದು.

(3) ಇನ್ನೊಂದು ದೇಶದ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ಕೈಯಿಕ್ಕದಿರುವುದು

(4) ಒಬ್ಬರು ಇನ್ನೊಬ್ಬರ ಮೇಲೆ ಆಕ್ರಮಣ ಮಾಡದಿರುವುದು.

(5) ಉಭಯ ರಾಷ್ಟ್ರಗಳೂ ಒಂದು ಇನ್ನೊಂದರ ಏಳ್ಗೆಗಾಗಿ ಚಿಂತಿಸುವುದು ಹಾಗೂ ತಮ್ಮ ಪಥದಲ್ಲಿ ತಾವು ಸಾಗಿ ಶಾಂತಿಯ ಸಹಬಾಳ್ವೆ ನಡೆಸುವುದು.

ಪುರಾತನ ಕಾಲದಲ್ಲಿಯೇ ಭಾರತವು ಪಂಚಶೀಲವನ್ನು ವಿಶ್ವದ ಮುಂದೆ ಎತ್ತಿ ತೋರಿಸಿದ್ದರೂ, ಪಂಡಿತ ನೆಹರೂಗಳ ಕಾಲದಲ್ಲೇ ಅದಕ್ಕೆ ಹೆಚ್ಚಿನ ಶೋಭೆ ಬಂದಿತು, ಚೌ—ಎನ್ ಲಾಯಿಯಂತಹ ವಿವೇಕ ಹೀನರಿಂದ ಅದು ಮಲೀನವಾಯಿತು. ಅಂತಾದುದು ದುಃಖಕರ!

ನೆಹರೂ, ಇನ್ನಿಲ್ಲದಿದ್ದರೂ ಅವರ ಶಾಂತಿಮಂತ್ರವಾದ ಪಂಚಶೀಲದ ನಿಯಮಗಳು ನಮ್ಮ ಮುಂದೆ ಸದಾ ಇರುತ್ತವೆ. ಜಗತ್ತಿಗೆ ಇದಕ್ಕಿಂತ ಹೆಚ್ಚಿನ ಕಾಣಿಕೆಯಾಗಿ ಭಾರತ ಯಾವುದನ್ನು ಕೊಟ್ಟೀತು?

ಇನ್ನು ಮುಂದೆಯೂ, ಎಲ್ಲಾದರೂ ರಕ್ತದೋಕುಳಿಯಾಡುವ ಆಸೆಯಿಂದಿರುವ ಜನತೆಯಿದ್ದಲ್ಲಿ; ಅಂತಹವರಿಗೆ ಸದ್ಬುದ್ಧಿಯನ್ನೀಯುವ ಕಾರ್ಯದಲ್ಲಿ, ಸ್ವರ್ಗಸೇರಿರುವ ನಮ್ಮ ಪ್ರಧಾನಿಗಳ ದಿವ್ಯಾತ್ಮ ಅವ್ಯಕ್ತದೆಡೆಯಿಂದಲೂ, ವಿವೇಕದ ಬೆಳಕನ್ನು ಚೆಲ್ಲುತ್ತಲಿದ್ದು, ಜಗತ್ತು ವಿನಾಶದತ್ತ ಸಾಗದಂತೆ ಅನುಗ್ರಹಿಸಲೆಂದು ನಾವೆಲ್ಲ ಹಾರೈಸೋಣ.

ಬೆಳ್ತಂಗಡಿ ಮುನ್ಸಿಫ್ ಕಂ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ

O S No. 220/6 .

ಮರಿಯಾ ಲೋಬೊ ... ವಾದಿ.

M ರತ್ನಾಕರ ಕುಡ್ವ ಸಹಾ ....

ಪ್ರತಿವಾದಿರು

ಸದ್ರಿ ವ್ಯಾಜ್ಯದ 6ನೇ ಪ್ರತಿವಾದಿ, ಸಿಲ್ವೆಸ್ಟರ್ ಲೋಬೊ ಮಿಂಗೇಲ್ ಲೋಬೋರ ಮಗ. ಬೆಳ್ತಂಗಡಿ ತಾಲ್ಲೂಕು ಬೆಳ್ತಂಗಡಿ ಕಸಬಾ ಗ್ರಾಮಸ್ಥ, ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ವಾದಿಯು, ಪುತ್ತೂರು ಡಿ ಮು ಕೋರ್ಟಿನ S E A. 200/62ನೇ ಭಾಧ್ಯತೆ ಅರ್ಜಿಯ ತೀರ್ಪಿನ ರದ್ದಿ ವಗೈರೆ ನಿವೃತ್ತಿಗಳ ಬಗ್ಗೆ ವಾದಿ ನಿಮ್ಮ ಮೇಲೆ ಹೂಡಾ ಮಾಡಿದ ಮೇಲಿನ ವ್ಯಾಜ್ಯ ತಾ 16_11_64 ಕ್ಕೆ ಇಟ್ಟಿರುತ್ತದೆ ಆ ಬಗ್ಗೆ ನಿಮಗೇನಾದರೂ ಆಕ್ಷೇಪಗಳಿದ್ದಲ್ಲಿ ಆ ದಿನ ಹಗಲು ಗಂಟೆ 11ಕ್ಕೆ ಕೋರ್ಟಿನ ಮುಂದೆ ಹಾಜರಾಗಿ ಉದಪರಿಸತಕ್ಕದ್ದು ತಪ್ಪಿದ್ರೆ ನಿಮ್ಮನ್ನು ಏಕಪಕ್ಷ ಮಾಡಿ ತೀರ್ಮಾನಿಸಲಾದೀತು

(By order of the court)

B K Suryanarayana Rao
Advocate for Plaintiff

Belthangady
ತಾ 27—10—64

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧.

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction, Madras.

ಅಮೆರಿಕೆಯಲ್ಲಿ

ಜಾನ್ಸನ್ ವಿಜಯ - ಶಾಂತಿಯ ಸಂಕೇತ

ಲಿಂಡನ್ ಬಿ ಜಾನ್ಸನ್

ಆರಡಿ ಮೂರು ಇಂಚು ಎತ್ತರದ ಲಿಂಡನ್ ಬಿ ಜಾನ್ಸನರು, ಅಷ್ಟೇ ಎತ್ತರದ ಅಮೆರಿಕದ ಅಧ್ಯಕ್ಷ ಪದಕ್ಕೆ, ಅಮೆರಿಕದ ಇತಿಹಾಸದಲ್ಲಿಯೇ ಅತ್ಯಧಿಕ ಬಹುಮತದಿಂದ ಆರಿಸಿ ಬಂದಿದ್ದಾರೆ. ತನ್ನ ಪ್ರತಿಸ್ಪರ್ಧಿ ಬೇರಿ ಮೋರಿಸ್ ಗೋಲ್ಡ್‌ವಾಟರರನ್ನು ೧೫,೭೬೧,೬೫೬ ಮತಗಳಿಂದ ಅವರು ಸೋಲಿಸಿ ತನ್ನ ಎತ್ತರಕ್ಕೆ ತಕ್ಕ ವಿಜಯವನ್ನು ಪಡೆದಿದ್ದಾರೆ. ಇಲೆಕ್ಟೊರಾಲ್ ಕಾಲೇಜು ವೋಟುಗಳಲ್ಲಿ ೪೮೬ ಮತಗಳನ್ನು. ಅಂದರೆ ಅವರು ನಾಲ್ಕು ವರ್ಷಗಳ ಪೂರ್ಣಾವಧಿಯು ತನಕ ಅಧ್ಯಕ್ಷರಾಗಿ ಉಳಿಯುವುದಕ್ಕೆ ಬೇಕಾದ ಮತಗಳಿಗಿಂತ ೨೧೬ ಹೆಚ್ಚು ಮತಗಳನ್ನು ಪಡೆದು ವಿಜಯದ ಪತಾಕೆ ಹಾರಿಸಿದ್ದಾರೆ.

ಐವತ್ತಾರು ವಯಸ್ಸಿನ ಜಾನ್ಸನರು, ಈಗ್ಗೆ ಮೂವತ್ತುಮೂರು ವರ್ಷಗಳಿಂದ ತನ್ನ ದೇಶಸೇವೆಯಲ್ಲಿ ನಿರತರಾಗಿದ್ದಾರೆ ೧೯೩೭ರಲ್ಲಿ ಟೆಕ್ಸಸಿನ ಕಾಂಗ್ರೆಸಿಗರೊರ್ವರ ಕಾರ್ಯದರ್ಶಿಯಾಗಿ ಸಾರ್ವಜನಿಕರಂಗ ಪ್ರವೇಶಿಸಿದ ಜಾನ್ಸನರು, ನಾಲ್ಕೇ ವರ್ಷಗಳಲ್ಲಿ ಟೆಕ್ಸಾಸ್ ಪ್ರಾಂತ್ಯದ ನೇಶನಲ್ ಯುತ್ ಫೆಡರೇಶನಿನ ಆಡಳಿತದಾರರಾಗಿ ಅಂದಿನ ಅಧ್ಯಕ್ಷ ರೂಸ್‌ವೆಲ್ಟರಿಂದ ನೇಮಿಸಲ್ಪಟ್ಟರು. ಎರಡನೆ ಜಾಗತಿಕ ಯುದ್ಧದ ವೇಳೆ, ನೌಕಾ ಸೇನೆಯಲ್ಲಿ ಲ್ಯೂಟಿನೆಂಟ್ ಕಮಾಂಡರ್ ಆಗಿ ಸೇರಿದ ಜಾನ್ಸನರು ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್‌ಗಳಲ್ಲಿ ಸೇವೆ ಸಲ್ಲಿಸಿ, ಅಪಾರ ಸಾಹಸ ತೋರಿಸಿದರು.

೧೯೪೮ರಲ್ಲಿ ಸೆನೇಟರರಾಗಿ ಆಯ್ಕೆ ಹೊಂದಿದ ಜಾನ್ಸನರು, ತನ್ನ ೪೪ನೆಯ ವಯಸ್ಸಿನಲ್ಲೇ ಸೆನೇಟಿನಲ್ಲಿ ಡೆಮೊಕ್ರೆಟಿಕ್ ಪಕ್ಷದ ನಾಯಕರಾದರು. ಪ್ರಭಾವಯುತವಾದ ವ್ಯಕ್ತಿತ್ವ ಹೊಂದಿದ ಜಾನ್ಸನರು ೧೯೬೦ರ ಚುನಾವಣೆಯಲ್ಲಿ ಉಪಾಧ್ಯಕ್ಷ ಪದಕ್ಕೆ ಆಯ್ಕೆ ಹೊಂದಿದರು. ಜಾನ್ಸನರ ವಿಜಯದ ಕುರಿತು ಜಗತ್ತಿನ ಎಲ್ಲಾ ರಾಷ್ಟ್ರನಾಯಕರುಗಳೂ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ

'ಶಾಂತಿ ಹಾಗೂ ಸಮೃದ್ಧಿ'ಗಾಗಿ ದುಡಿಯುವ ಭರವಸೆಯನ್ನು ಜಾನ್ಸನರು ಇತ್ತಿದ್ದಾರೆ ಅವರ ಡೆಮೊಕ್ರೆಟಿಕ್ ಪಕ್ಷದ ಚುನಾವಣಾ ಘೋಷಣೆಯಲ್ಲಿ ವ್ಯಕ್ತಪಡಿಸಿದಂತೆ 'ಜಗತ್ತಿನ ಹಿಂದುಳಿದ ರಾಷ್ಟ್ರಗಳ ಕಲ್ಯಾಣ, ಹಾಗೂ ಸರ್ವರಿಗೆ ಸ್ವಾತಂತ್ರ್ಯ"ದ ಕುರಿತು ಜಾನ್ಸನರು ದುಡಿಯುವರೆಂಬುದರಲ್ಲಿ ಅನುಮಾನವಿಲ್ಲ.

ಬೇರಿ ಮೋರಿಸ್ ಗೋಲ್ಡ್‌ವಾಟರ್

ಅಮೆರಿಕದ ಮಾತ್ರವಲ್ಲ ಜಗತ್ತಿನಲ್ಲೇ ವಿವಾದಾತ್ಮಕ ವ್ಯಕ್ತಿಯೆನಿಸಿರುವ ಬೇರಿ ಗೋಲ್ಡ್‌ವಾಟರರು ರಿಪಬ್ಲಿಕನ್ ಪಕ್ಷದ ಉಮೇದ್ವಾರರಾಗಿ, ಅಮೆರಿಕೆಯ ಅಧ್ಯಕ್ಷಪದಕ್ಕೆ ಸ್ಪರ್ಧಿಸುವರೆಂದು ತಿಳಿದಾಗ, ಅವರ ವ್ಯಕ್ತಿತ್ವದ ಕುರಿತು ಇನ್ನೂ ಹೆಚ್ಚಿನ ಬೆಳಕು ಬಿತ್ತು ಇಂದೀಗ ಅವರು ಜಾನ್ಸನರೆದುರು ಪ್ರಚಂಡ ಸೋಲನ್ನು ಒಪ್ಪಿಕೊಳ್ಳಬೇಕಾಗಿದೆ ಆದರೂ ತನಗೊದಗಿದ ಈ ಸೋಲಿನಿಂದ ವಿಮಂಚನೆಗೊಳಗಾಗದೆ ಜಾನ್ಸನರಿಗೆ ಅಭಿನಂದನೆಗಳನ್ನು ಗೋಲ್ಡ್‌ವಾಟರರು ಕಳುಹಿಸಿರುತ್ತಾರೆ.

ಐವತ್ತೈದು ವಯಸ್ಸಿನ ಎರಿಜೋನಾ ಪ್ರಾಂತ್ಯದಿಂದ ಆರಿಸಿಬಂದ ಸೆನೇಟರ್ ಗೋಲ್ಡ್‌ವಾಟರರು ವ್ಯಾಪಾರೀ ರಂಗದ ಒಬ್ಬ ಪ್ರತಿಭಾನ್ವಿತ ವ್ಯಕ್ತಿ ವ್ಯಾಪಾರಿಗಳ ಉದ್ದಿಮೆದಾರರ ಸಂಸ್ಥೆಗಳ ಪರಿಯಾರವಾಗಬೇಕಾದರೆ, ಆವರೇ ಸರಕಾರದೊಳಗೆ ಪ್ರವೇಶಿಸಬೇಕೆಂಬ ವಾದದ ಗೋಲ್ಡ್‌ವಾಟರು ಫೀನಿಕ್ಸ್ ನಗರ ಕೌನ್ಸಿಲಿಗೆ ಸ್ಪರ್ಧಿಸಿ ಮೊತ್ತಮೊದಲ ರಾಜಕೀಯ ರಂಗ ಪ್ರವೇಶಿಸಿದರು. ಈ ಸಿದ್ಧಾಂತದ ಆಧಾರದ ಮೇಲೆಯೇ ಅವರು ೧೯೫೨ರಲ್ಲಿ ಅಮೆರಿಕದ ಸೆನೆಟಿಗೆ ಕೂಡಾ ಸ್ಪರ್ಧಿಸಿ ಗೆದ್ದರು. ೧೯೫೮ರಲ್ಲಿ ಪುನಃ ಸೆನೇಟ್ ಚುನಾವಣೆಗೆ ನಿಂತರು

ಸಾರ್ವಜನಿಕ ಹಕ್ಕು ಬಾಧ್ಯತೆಗಳಲ್ಲಿ ಅವರಿಗೆ ವಿಶ್ವಾಸ ಇದೆ. ವರ್ಣಭೇದ ತೊಲಗಿ ಎಲ್ಲಾ ವರ್ಣಗಳವರೂ ಒಂದೇ ಶಾಲೆಯಲ್ಲಿ ಓದುವಂತಾಗಬೇಕೆಂಬ ಹಂಬಲ ಉಳ್ಳವರು ಅವರಾಗಿದ್ದಾರೆ. ಆದರೂ, ಅವರು ೧೯೬೪ರ ಸಾರ್ವಜನಿಕ ಹಕ್ಕು ಬಾಧ್ಯತಾ ಕಾನೂನಿಗೆ ವಿರುದ್ಧವಾಗಿ ಓಟು ಮಾಡಿದರು. ಇದಕ್ಕೆ ಅವರು ಕೊಡುವ ಕಾರಣವೆಂದರೆ ಆ ಕಾನೂನಿನ ಕೆಲವಂಶಗಳು ಘಟನೆಗೆ ಅನುಗುಣವಾಗಿಲ್ಲವೆಂಬುದು. ಕಮ್ಯುನಿಸಂನ ಪ್ರಭಾವದಿಂದ ಜಗತ್ತನ್ನು ಅಮೆರಿಕವೊಂದೇ ರಕ್ಷಿಸಬಹುದೆಂಬ ವಿಶ್ವಾಸ ತಳೆದವರು ಅವರು. ಅವರ ಅತಿಯಾದ ವಿಚಾರಧಾರೆಗಳಲ್ಲಿ ಅಮೆರಿಕೆಯ ಜನತೆಗೆ ವಿಶ್ವಾಸ ಹುಟ್ಟಲಿಲ್ಲವೇನೊ? ಹಾಗಾಗಿ ಅವರು ಬರೀ ಆರು ಪ್ರಾಂತ್ಯಗಳಲ್ಲಿ ಗೆದ್ದು ಬಂದರು.

ಹ್ಯೂಬರ್ಟ್ ಎಚ್. ಹಂಫ್ರಿ

ಜಾನ್ಸನರ ವಿಜಯದಿಂದ, ಉಪಾಧ್ಯಕ್ಷ ಪದ ಡೆಮೊಕ್ರೆಟಿಕ್ ಅಭ್ಯರ್ಥಿ ಹ್ಯೂಬರ್ಟ್ ಎಚ್. ಹಂಫ್ರಿಯವರ ಕೊರಳಿಗೆ ತಾನಾಗಿಯೇ ಬಿದ್ದಿದೆ ೫೩ರ ಹಂಫ್ರಿಯವರು ಔಷಧ ವ್ಯಾಪಾರಿಯಾಗಿದ್ದವರು, ಕಾಲೇಜಿನ ಪ್ರೊಫೆಸರರಾಗಿ, ಸೆನೇಟರರಾಗಿ, ಮೇಯರರಾಗಿ, ಇದೀಗ ಉಪಾಧ್ಯಕ್ಷ ಪದಕ್ಕೇರಿದ್ದಾರೆ ಔಷದ ಮಾರಾಟ ಹಾಗೂ ಅಭ್ಯಾಸ ಮಾಡಿದ ಹಂಫ್ರಿಯವರು, ತನ್ನ ತಂದೆಯ ಔಷದದ ಅಂಗಡಿಯಲ್ಲಿ ದುಡಿದ ಬಳಿಕ, ಮೂರು ವಿಶ್ವವಿದ್ಯಾಲಯಗಳಲ್ಲಿ ರಾಜಕೀಯ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು.

ಎರಡನೇ ಜಾಗತಿಕ ಯುದ್ಧದ ಕಾಲದಲ್ಲಿ ಅವರು ಸರಕಾರೀ ಹುದ್ದೆಗೆ ಸೇರಿದರು ಮಿನಿಯಾಪೋಲಿಸ್ ನಗರದ ಮೇಯರರಾಗಿ ಅವರು ಆಯ್ಕೆಹೊಂದಿದ ವರುಷವೇ ಅಮೆರಿಕೆಯಲ್ಲಿ ಮೊತ್ತಮೊದಲನೆಯದಾದ ಮುನಿಸಿಪಲ್ ಫೇರ್ ಎಂಪ್ಲೋಯ್‌ಮೆಂಟ್ ಪ್ರೇಕ್ಟಿಸ್ ಕಮಿಶನ್ನನ್ನು ಆರಂಭಿಸಿ, ಉದ್ಯೋಗದಲ್ಲಿ ವರ್ಣಭೇದದ ಗಂಡಾಂತರವನ್ನು ದೂರಾಗಿಸಲು ಯತ್ನಿಸಿದರು ಡೆಮೊಕ್ರೆಟಿಕ್ ಪಕ್ಷದ ವಿಪ್ ಆಗಿದ್ದ ಹಂಫ್ರಿಯವರು ಪಕ್ಷದಲ್ಲಿ ಬಹುಜನ ಪ್ರಿಯರೆನಿಸಿಕೊಂಡಿದ್ದರ. ಈಗ ಉಪಾಧ್ಯಕ್ಷ ಸ್ಥಾನವೇರಿ ಅವರು ಮಾಡಬೇಕಾದ ಕಾರ್ಯಗಳು ಬಹಳ ಇವೆ.

ವಿಲಿಯಂ ಇ. ಮಿಲ್ಲರ್

ರಿಪಬ್ಲಿಕನ್ ರಾಷ್ಟ್ರೀಯ ಸಮಿತಿಯ ಅಧ್ಯಕ್ಷರಾಗಿ ಕಳೆದ ೩ ವರ್ಷಗಳಿಂದ ದುಡಿಯುತ್ತಿರುವ ವಿಲ್ಯಂ ಇ ಮಿಲ್ಲರ್‌ರು, ರಿಪಬ್ಲಿಕನ್ ಪಕ್ಷದಿಂದ ಉಪಾಧ್ಯಕ್ಷ ಪದಕ್ಕೆ ಹುರಿಯಾಳಾಗಿದ್ದರು ಅವರು ರಾಜಕೀಯ ಚತುರರು, ಮತ ಪಡೆಯುವ ಚಾಣಾಕ್ಷ, ತೀವ್ರಗಾಮಿ ಎಂದು ಹೆಸರಾದವರು. ನೋಟ್ರೆಡಾಂ ವಿಶ್ವವಿದ್ಯಾಲಯದ ಪದವೀಧರರಾದ ಮಿಲ್ಲರರು ಕಾಯಿದೆ ತಜ್ಞರೂ ಹೌದು.

ಎರಡನೇ ಜಾಗತಿಕ ಯುದ್ಧದ ಕಾಲದಲ್ಲಿ ಕಮಿಶನ್ಡ್ ಆಫೀಸರರ ಹುದ್ದೆಗೆ ಏರಿದ ಮಿಲ್ಲರರು ೧೯೪೫ರಲ್ಲಿ ನಾಜೀ ಅಪರಾಧಿಗಳ ವಿಚಾರಣೆಗೆ ನೇಮಿಸಲಾದ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಲ್ಲಿ ಒಬ್ಬರಾಗಿದ್ದರು. ಸೈನ್ಯ ಸೇವೆಯಿಂದ ಬಿಡುಗಡೆ ಹೊಂದಿದ ಬಳಿಕ ಅವರು ತನ್ನ ಹುಟ್ಟು ಜಿಲ್ಲೆಯ ಎಟಾರ್ನಿ ಜನರಲರಾಗಿ ನೇಮಿಸಲ್ಪಟ್ಟರು ೧೯೫೦ರಲ್ಲಿ ಕಾಂಗ್ರೆಸಿಗೆ ಸ್ಪರ್ಧಿಸಿದ ಮಿಲ್ಲರರು ಅದರಲ್ಲಿ ಗೆದ್ದು, ಮರು ಆಯ್ಕೆ ಹೊಂದಿ, ೧೯೬೧ರಲ್ಲಿ ರಿಪಬ್ಲಿಕನ್ ರಾಷ್ಟ್ರೀಯ ಸಮಿತಿಯ ಅಧ್ಯಕ್ಷ ಪದಕ್ಕೂ ಏರಿದರು!

ರಿಪಬ್ಲಿಕನ್ ಪಕ್ಷವನ್ನು ಉಳಿಸಬಲ್ಲ ಶಕ್ತಿ ಅವರೊಬ್ಬರೇ ಎನ್ನುತ್ತಾರೆ ಅಂತೂ ಅವರೀಗ ಸೋಲೊಪ್ಪಿಕೊಂಡರೂ, ಅವರ ವಿಚಾರಗಳ ಕುರಿತು ಅವರಿಗಿರುವ ವಿಶ್ವಾಸ ಸೋಲುವುದಿಲ್ಲ.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ

ಸಾಮಾನ್ಯ ರೋಗಗಳು

ಡಾ| ಕೆ.ಎಲ್. ಐತಾಳ, ಎಂ.ಬಿ ಬಿ.ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್ ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ

ಕಲಾದರ್ಶನ

ಕನ್ನಡ ಜಿಲ್ಲೆಗಳ

ಈ ವರ್ಷದ ದಸರಾದ ಸಂದರ್ಭದಲ್ಲಿ ಉಡುಪಿಯ ಸಂಗೀತ ಸಭೆಯ ನೇತೃತ್ವದಲ್ಲಿ ಚಿತ್ರಕಲೋತ್ಸವವು ವೈಭವೋಪೇತವಾಗಿ ನಡೆದ ಸಂಗತಿಯನ್ನು ನವಯುಗದ ವಾಚಕ ವರ್ಗವು ಅರಿತಿದೆ. ಈ ಉತ್ಸವವು ಒಂಬತ್ತು ದಿನಗಳ ವರೆಗಿದ್ದು ಸಾವಿರಾರು ಜನರ ಹೃನ್ಮನಗಳನ್ನು ಆಕರ್ಷಿಸಿತ್ತು. ಇದನ್ನು ನೋಡಿದವರು ಮತ್ತೆಂದಿಗೂ ಮರೆಯಲಾರರು. ಉತ್ಸವದ ಅಂಗವಾಗಿ ಹಲವಾರು ಕಾರ್ಯಕ್ರಮಗಳು ಸಂಯೋಜಿತವಾಗಿದ್ದುವು. ಚಿತ್ರಕಲಾ ಅಧ್ಯಾಪಕರ ಸೆಮಿನಾರ್ ಮತ್ತು ಕರ್ನಾಟಕ ಚಿತ್ರಕಲಾಧ್ಯಾಪಕರ ವಿಚಾರ ಗೋಷ್ಠಿಗಳು ಮನನೀಯವಾಗಿದ್ದುವು.

ಉತ್ಸವದ ಪ್ರಮುಖ ಅಂಗಗಳಲ್ಲಿ ಕೆನರಾ ಚಿತ್ರಕಲಾ ಪ್ರದರ್ಶನವು ಒಂದು. ಇದರಲ್ಲಿ ಉತ್ತರ–ದಕ್ಷಿಣ ಕನ್ನಡ ಜಿಲ್ಲೆಗಳ, ಬೇರೆ ಬೇರೆ ಕಲಾವಿದರ ೨೭೩ ಕೃತಿಗಳು ಪ್ರದರ್ಶಿತವಾಗಿದ್ದುವು ಇವುಗಳಲ್ಲಿ ಬಂಗಾಳದ ಮನೀಷಿದೇಯವರ ೧೨ ಶ್ರೇಷ್ಠ ಕೃತಿಗಳೂ ಅಡಕವಾಗಿದ್ದುವು ನಮ್ಮ ಜಿಲ್ಲೆಯ ಪ್ರಖ್ಯಾತ ಶಿಲ್ಪಿ ಶ್ರೀ ರಂಜಾಳ ಗೋಪಾಲ ಶೆಣೈಯವರು ಕೆತ್ತಿದ ಎರಡು, ಮೂಡಬಿದರೆಯ ಶ್ರೀ ಎಂ. ವಿ. ಭಟ್ಟರ ಒಂದು ಶಿಲ್ಪಕಲಾಕೃತಿಯೂ ಇದರಲ್ಲಿ ಸೇರಿದ್ದುವು.

ಯುರೋಪಿನ ಹಲವಾರು ವರ್ಣ ಚಿತ್ರಗಳ ಪುನರ್ಮುದ್ರಣವೂ ಆಕರ್ಷಕವಾಗಿತ್ತು. ಒಟ್ಟು ೨೪೧ ಕೃತಿಗಳು ಭಾರತದ ಬೇರೆಬೇರೆಡೆಯಿರುವ ಕನ್ನಡ ಜಿಲ್ಲಾ ಕಲಾವಿದರವೇ ಆಗಿದ್ದುವು ಇಷ್ಟೊಂದು ಜನ ಕಲಾವಿದರ ಕೃತಿಗಳನ್ನು ಅವರ ಕಲಾ ಚಾತುರ್ಯವನ್ನು ಒಂದೆಡೆ ಪ್ರದರ್ಶಿಸಿದ ಸಾಹಸವು ಚಿರ ಸ್ಮರಣೀಯವೇ ಆಗಿದೆ.

ಇಲ್ಲಿ ಚಿತ್ರಕಲಾ ಪ್ರದರ್ಶನದಲ್ಲಿ ಕಂಡು ಬಂದ ಕೆಲವೊಂದು ಚಿತ್ರಗಳನ್ನು ನೋಡಬಹುದು.

ಕಾರ್ಕಳದ ಶ್ರೀ ರಂಜಾಳ ಗೋಪಾಲ ಶೆಣೈಯವರದು ಉತ್ಕೃಷ್ಟವಾದರಿಯ ಕಲೆ ಕಲಾ ಶಿಕ್ಷಕರಾಗಿ ಉದ್ಯೋಗವನ್ನಾರಂಭಿಸಿದ ಶ್ರೀ ಶೆಣೈ ಅವರಿಂದ. ೬೭ರ ಗಡಿಯನ್ನೂ ದಾಟಿದ್ದಾರೆ. ಕರ್ನಾಟಕವು

೨

೩

ಕಲಾಕೃತಿಗಳು

ಬಹಳ ಪ್ರಾಚೀನ ಕಾಲದಿಂದಲೇ ಶಿಲ್ಪಕಲೆಯ ತವರೂರು. ಬೇಲೂರು-ಹಳೇಬೀಡುಗಳ ಶಿಲ್ಪಕಲಾ ಚಾತುರ್ಯವನ್ನು ತಿಳಿಯದವರಾರು? ಕಾರ್ಕಳದ ಗೋಮಟನನ್ನು ಯಾರೂ ಮರೆಯಲಾರರು. ಹಾಗೆಯೇ ಅಲ್ಲಿಯ ವೆಂಕಟರಮಣ ದೇವಾಲಯದಲ್ಲಿ ಕಂಡ ಬರುವ ಶ್ರೀ ಶೆಣೈಯವರ ಕಲಾ ನೈಪುಣ್ಯವು ಪ್ರಶಂಸನೀಯವೇ ಆಗಿದೆ. ಇಂತಹ ವಿಖ್ಯಾತ ಶಿಲ್ಪಿಯನ್ನು ಗೌರವಿಸುವ ಸತ್ಸಂಪ್ರದಾಯವನ್ನು ಉಡುಪಿಯಲ್ಲಿ ನಡೆದ ಚಿತ್ರಕಲೋತ್ಸವವು ಹಾಕಿಕೊಟ್ಟಿದೆ. ಶ್ರೀ ಶೆಣೈಯವರ ಶಿಲ್ಪಕಲಾ ಜಾಣ್ಮೆಯನ್ನು ಇಲ್ಲಿರುವ ಕೆಲವು ಚಿತ್ರಗಳು ತೋರಿಸುತ್ತವೆ.

ಹೀಗೆ ಎಲ್ಲ ವಿಧದಿಂದಲೂ ಉಡುಪಿಯಲ್ಲಿ ಜರಗಿದ ಈ ಉತ್ಸವವು ಭವ್ಯ ಸಂಪ್ರದಾಯವನ್ನು ಹಾಕಿಕೊಟ್ಟಿದೆ. ಉಳಿದ ಜಿಲ್ಲೆಗಳಿಗೆ ಮಾತ್ರವಲ್ಲ ರಾಜ್ಯಗಳಿಗೆ-ದೇಶಕ್ಕೆ ಒಂದು ಮಾದರಿ ಎನ್ನುತೋರಿಸಿಕೊಟ್ಟಿದೆ. ಜೀವನವೇ ಕಲಾಮಯವಾಗಿರುವಾಗ, ಕಲಾಕೃತಿಗಳ ಮತ್ತು ಕಲಾಕರ್ತೃಗಳ ಬಗೆಗೆ ಸಮಾಜ ಎಚ್ಚರವಾಗಿರುವುದು ಅತ್ಯಗತ್ಯವೆಂದು ಅದು ಸಾರಿ ಹೇಳಿದೆ.

ಚಿತ್ರಗಳು

೧ ಶ್ರೀ ಜಿ ಎಸ್ ಶೆಣೈ— "ಜ್ಞಾನವೃದ್ಧ ಸಾಧು

೨ ಶ್ರೀ ಕೆ. ಎಸ್. ರಾವ್—"ಆತ್ಮಾನಂದದಲ್ಲಿ"

೩. ಶಿಲ್ಪಿ ಗೋಪಾಲ ಶೆಣೈ ಅವರು ಶಿಲ್ಪಕಲಾ ಮೂರ್ತಿ ಕೆತ್ತನೆಯಲ್ಲಿ ತಲ್ಲೀನರಾಗಿದ್ದಾರೆ.

೪ ಶ್ರೀ ಆರ್. ಗೋಪಾಲ್ ಶೆಣೈ— "ಕಾರ್ಕಳದ ವೆಂಕಟರಮಣ ದೇವಾಲಯದ ಸ್ತಂಭಗಳು.

೫ ಶಿಲ್ಪಿ ಗೋಪಾಲ ಶೆಣೈ ಇತರ ಕೆಲಸಗಾರರೊಂದಿಗೆ

೬ ಶ್ರೀ ಆರ್ ಕೆ. ದೇವಾಡಿಗ— "ನನ್ನ ಸ್ನೇಹಿತ'

೭ ಡಾ| ಕೆ. ಸತ್ಯಶಂಕರ— "ಮಾಹನ ಬೆಳಕಿನಲ್ಲಿ ದೂರದ ನೋಟ"

೮ ಶ್ರೀ ಆರ್. ಗೋಪಾಲ ಶೆಣೈ— 'ಕೋದಂಡ ರಾಮ" (ಶಿಲ್ಪಕೃತಿ)

೯ ಶ್ರೀ ಆರ್ ಕೆ. ದೇವಾಡಿಗ— "ಮಾಯಾ ಜಿಂಕೆ"

೪

೫

೮

೯

ಮಕ್ಕಳಿಗಾಗಿ ಹೆಣೆದ

ಮಹಾಪುರುಷರ ಕಥೆಗಳು

೧. ಕಣ್ಣಪ್ಪನ ಕಥೆ

ಬರೆದವರು.
ವಿದ್ವಾನ್ ಸುರತ್ಕಲ್ಲು ಸುಬ್ಬರಾವ್ ಮತ್ತು
ವಿದ್ವಾನ್ ಕೆ. ವೆಂಕಟರಾಯಾಚಾರ್ಯ ಸುರತ್ಕಲ್ಲು.

ಕನ್ನಡ ಸಾಹಿತ್ಯದಲ್ಲಿ ಶಿವಶರಣಂನೇಕರ ಪವಿತ್ರ ಚರಿತ್ರೆಗಳು ಪ್ರಸಿದ್ಧವಾಗಿವೆ. ಅವೆಲ್ಲವೂ ವಿಶೇಷವಾಗಿ ಭಕ್ತಿಯ ಶಕ್ತಿಯನ್ನು ಬಣ್ಣಿಸುವವು. ಭಗವಂತನು ಭಕ್ತಿಯಿಂದಲೇ ತೃಪ್ತನಲ್ಲದೆ, ಬಾಹ್ಯದ ಆಚರಣೆ, ವಿದ್ಯೆ, ಜಾತಿ, ಧನ ಮೊದಲಾದವುಗಳಿಂದ ಅಲ್ಲವೆಂಬುದು ಈ ಶಿವಶರಣರ ಕಥೆಗಳಿಂದ ಸಮರ್ಪಕವಾಗಿ ಸಿದ್ಧವಾಗುತ್ತದೆ.

ಅವರಲೊಬ್ಬನು ನಮ್ಮ ಕಥೆಯ ಕಣ್ಣಪ್ಪನು. ಇವನು ಪಂಡಿತನಲ್ಲ, ಶಾಡಾಡಿ; ಕುಲೀನನಲ್ಲ, ಕುಲಹೀನ; ಧನಿಕನಲ್ಲ, ದರಿದ್ರ; ಅವ ಸಾಧನ ಸಂಪತ್ತಿಯೂ ಇವನಲ್ಲಿಲ್ಲ. ಇರುವುದೆಂದರೆ ಭಕ್ತಿಸಾಧನವೊಂದೇ ಅದೊಂದರಿಂದಲೇ ಇವನು ವಿಶ್ವೇಶ್ವರನಾದ ಶಿವನ ಪೂರ್ಣ ಕೃಪೆಗೆ ಪಾತ್ರನಾಗಿ ಸದ್ಗತಿಯನ್ನು ಪಡೆದನು. ಈ ಮಹಾತ್ಮನ ಪುಣ್ಯ ಕಥೆಯು ಮನೋಜ್ಞವಾಗಿದೆ!

ಸಂಪತ್ಸಮೃದ್ಧವಾದ ಚೋಳ ದೇಶದಲ್ಲಿ 'ವೇಣಿ'ವೆಂಬ ಪರ್ವತವಿದೆ. ಅದು ನದಿಗಳ ಹುಟ್ಟುದಾಣವಾಗಿ, ಅನೇಕ ಅಡವಿಗಳ ಬೀಡಾಗಿದ್ದಿತು. ಆ ಅಡವಿಗಳಲ್ಲಿ ಗಿಡಮರ ಬಳ್ಳಿಗಳು ದಟ್ಟವಾಗಿ ತುಂಬಿದ್ದುವು. ಹುಲಿ ಕರಡಿ ಮೊದಲಾದ ಕ್ರೂರ ಮೃಗಗಳು ಹಿಂಡು ಹಿಂಡಾಗಿ ನೆಲಸಿದ್ದುವು. ಇಂತಹ ಭೀಕರ ಕಾನನಗಳಿಂದ ಕೂಡಿದ ಆ ಬೆಟ್ಟದ ತಪ್ಪಲಲ್ಲಿದ್ದ ಗೋಥಪುರವು ಕಣ್ಣಪ್ಪನೆಂಬ ಬೇಡನ ವಾಸಸ್ಥಾನವಾಗಿತ್ತು.

ಕಣ್ಣಪ್ಪನ ಹುಟ್ಟು ಹೆಸರು 'ಧೀರ'ನೆಂದು. ನಾಗನೆಂಬ ವ್ಯಾಧನೇ ಇವನ ತಂದೆ. ತಾಯಿ ದತ್ತಾ ಎಂಬವಳು. ಈ ಗಂಡಹೆಂಡಿರಿಗೆ ಬಹುಕಾಲವಾದರೂ ಮಕ್ಕಳಾಗಲಿಲ್ಲ. ಇದರಿಂದ ವ್ಯಸನಗೊಂಡ ದಂಪತಿಗಳು ಸಮೀಪದ ಗುಡಿಯ 'ವಲ್ಲೀ' ದೇವಿಗೆ ಹರಕೆ ಹೊತ್ತರು, ಆ ದೇವೀ ಪ್ರಸಾದದಿಂದ ಈ 'ಧೀರ'ನೆಂಬ ಮಗನನ್ನು ಪಡೆದರು. ಹೆತ್ತವರ ಮಮತೆಯ ಪಾಲನೆಯಿಂದ ಬಾಲಕನು ಸುಪುಷ್ಟನಾಗಿ ಬಳೆದು, ಓರಗೆಯ ಗೆಳೆಯರೊಂದಿಗೆ ಆಡತೊಡಗಿದನು, "ಗಾಥ", "ನಾರ್ಣ"ರೆಂಬೀರ್ವರು ಇವನ ಓರಗೆಯ ಗೆಳೆಯರು ಆವಾಗಲೂ ಧೀರನು ಅವರ ಜೊತೆಯಲ್ಲೇ ಇರುತ್ತಿದ್ದನು. ಸ್ವಲ್ಪ ದೊಡ್ಡವರಾದ ಮೇಲೆ ಇವರು ಮೂವರೂ ತಮ್ಮ ಕುಲವೃತ್ತಿಯಾದ ಮೃಗಪಕ್ಷಿಗಳ ಬೇಟೆಯಲ್ಲಿ ಕಾಲ ಕಳೆಯುತ್ತಿದ್ದರು.

ಧೀರನು ಹೆಸರಿನಂತೆ ಧೀರನೇ ಆಗಿದ್ದನು, ತನ್ನ ಶಬರ ವೃತ್ತಿಗೆ ಅನುಗುಣನಾಗಿ ವೀರನೂ ಆಗಿದ್ದನು. ಸೊಕ್ಕಿನ ಮೃಗಪಕ್ಷಿಗಳಿಗೆ ಅನುಗುಣನಾಗಿ ವೀರನೂ ಆಗಿದ್ದನು.

ಒಮ್ಮೆ ಧೀರನು ಗೆಳೆಯರೊಡನೆ ಎಂದಿನಂತೆ ಬಿಲ್ಲು ಬಾಣಗಳನ್ನು ಧರಿಸಿ ಬೇಟೆಗಾಗಿ ಕಾಡನ್ನು ಸೇರಿದನು. ಬಲು ಹೊತ್ತು ಸುತ್ತಿದರೂ, ಅರಣ್ಯದಲ್ಲಿ ಇವರ ಕಣ್ಣಿಗೆ ಮೃಗವೊಂದೂ ಕಾಣಿಸಲಿಲ್ಲ. ಹೀಗೆ ಬೇಟೆ ದೊರೆಯದುದರಿಂದ ಧೀರನು ಕಡು ಗುಂದಿದನು. ಮನದಲ್ಲಿ ಬಲು ನೊಂದು ಮರುಗುತ್ತಿರುವಾಗ ಕೂಡಲೆ ಮುಂಗಡೆಯಲ್ಲೊಂದು ಜಿಂಕೆ ಬರುತ್ತಿರುವುದು ಗೋಚರವಾಯಿತು. ಆಗ ಇವನ ಹರ್ಷದ ಹೆಚ್ಚಳವನ್ನು ಹೇಳುವುದೇನು? ಅತ್ಯುತ್ಸಾಹದಿಂದ ಬಿಲ್ಲಿಗೆ ಬಾಣವನ್ನೇರಿಸಿ ಗುರಿಯಿಟ್ಟನು. ಜಿಂಕೆಯು ತನ್ನೆದುರಿಗೆ ಸರಕ್ಕನೆ ಬರುವ ಸರಳಿಗೆ ಗುರಿಯಾಗದೆ ತಪ್ಪಿಸಿಕೊಂಡು ಪುಟನೆಗೆದು ಓಡತೊಡಗಿತು, ಧೀರನು ನಾರ್ಣನನ್ನು ಅಲ್ಲೇ ನಿಲ್ಲಿಸಿ, ಗಾಥನೊಂದಿಗೆ ಜಿಂಕೆಯ ಬೆನ್ನಟ್ಟಿಕೊಂಡು ಓಡಿದನು.

ಆ ಜಿಂಕೆ ಸಾಮಾನ್ಯವೆ? ಅದು ಬೇರೆ ಜಿಂಕೆಗಳಂತಲ್ಲ, ಪೂರ್ವಜನ್ಮದಲ್ಲಿ ತನ್ನ ಗಣವರನಾಗಿದ್ದ ಧೀರನ ಉನ್ನತಿಯನ್ನು ಬಯಸಿ, ದಯಾಸಾಗರನಾದ ಶಂಕರನು ನಿರ್ಮಿಸಿ ಕಳುಹಿದ ಮಾಯಾ ಮೃಗವಾಗಿದ್ದಿತ್ತು! ಅದು ವೇಗವಾಗಿ ಓಡಿ, ಧೀರನು ನೋಡುತ್ತಿರುವಂತೆಯೇ, ಕಾನನ ಮಧ್ಯದಲ್ಲಿ ಕಂಗೊಳಿಸುವ ಶ್ರೀಕಾಲಹಸ್ತೀಶ್ವರನ ಆಲಯವನ್ನು ಪ್ರವೇಶಿಸಿ ಆ ಮಹೇಶ್ವರನ ಲಿಂಗದಲ್ಲಿ ಅಡಗಿತು. ಒಡನೆ ಕದಗಳು ಮುಚ್ಚಿಕೊಂಡವು ಧೀರನು ಬೆಕ್ಕಸ ಬೆರಗಾದನು. ಆದರೂ ತೊಡಲೆ ದೇಗುಲದ ಬಾಗಿಲ ಬಳಿ ಬಂದು ಕೈಜೋಡಿಸಿಕೊಂಡು, 'ದೇವಾ! ದಯಾಸಾಗರಾ! ಬಾಗಿಲನ್ನು ತೆರೆ!' ಎಂದು ಕೂಗಿದನು.

ಭಕ್ತಿಯ ಅಧೀನನಲ್ಲವೇ ಭಗವಂತನು? ಶರಣನ ಮೊರೆಯನ್ನಾಲಿಸಿ ದೇವನು ಕರುಣಿಸಿದನು, ಕದಗಳು ತಾವಾಗಿಯೇ ತೆರೆಯಲ್ಪಟ್ಟುವು ಆಗ ಧೀರನಿಗಾದ ಸಂತಸವನ್ನು ಹೇಳಲಳವಲ್ಲ. ಅವನು ಶಿವಲಿಂಗವನ್ನು ನೋಡಿದನು. "ಹೇ ಶಂಕರನೇ! ಈ ಕಾಡಿನ ನಡುವೆ ನೀನೊಬ್ಬನೇ ಇರುವೆಯೊ? ನಿನ್ನ ಆರೈಕೆಗೆ ಯಾರೂ ಇಲ್ಲ ಆಹಾರವಿಲ್ಲದೆ ಬಹಳ ಬಡವಾಗಿರುವೆ ಇನ್ನು ನಿನಗೆ ಆ ಚಿಂತೆಬೇಡ, ನಾನು ಇಲ್ಲೇ ಇದ್ದು ಪ್ರತಿದಿನವೂ ಆಹಾರವನ್ನು ಒದಗಿಸುವೆ"ನೆಂದು ನುಡಿದು ಶಿವಲಿಂಗದ ಮುಂಗಡೆ ಕುಳಿತನು.

ಮತ್ತೆ ಧೀರನು ಗಾಥನನ್ನು ಕರೆದು, 'ನಾನೀ ಲಿಂಗವನ್ನು ಪೂಜಿಸುತ್ತಾ ಇಲ್ಲಿಯೇ ಇರುವೆನು. ಇನ್ನು ನಾನು ಮನೆಗೆ ಬಾರೆನು' ಎಂದು ತನ್ನ ನಿರ್ಧಾರವನ್ನು ಅರುಹಿದನು. ಗಾಥನು ಬಲುಬಗೆಯಿಂದ ಹೇಳಿಯೂ ಗೆಳೆಯನ ಮನಸ್ಸನ್ನು ತಿರುಗಿಸಲಾರದೆ, ನಾರ್ಣನಿದ್ದಲ್ಲಿಗೆ ಬಂದು ಅವನನ್ನೊಡಗೊಂಡು ಊರಿಗೆ ಬಂದನು. ಧೀರನ ತಂದೆಗೆ ಈ ಸಮಾಚಾರ ಗೊತ್ತಾಗಿ ಬೇಸರಗೊಂಡನು. ಅವನು ಮಗನ ಮೇಲಿನ ಆಶೆ ಬಿಟ್ಟು, ದೇವರೇ ಕಾಪಾಡಲೆಂದು ಸುಮ್ಮನಾದನು.

ಇತ್ತ ಧೀರನು ಗುಡಿಯ ಬಳಿಯಲ್ಲಿದ್ದ ಒಣ ಕಟ್ಟಿಗೆಗಳನ್ನು ತಂದು ಹೊತ್ತಿಸಿ ಬೆಳಕು ಮಾಡಿದನು. 'ದೇವನೇ! ಸುಖವಾಗಿ ನಿದ್ರಿಸು. ನಾನೂ ಇಲ್ಲೇ ಇರುವೆನು ಭಯವಿಲ್ಲ!' ಎಂದು ಅಲ್ಲೇ ತಾನೂ ಮಲಗಿದನು. ರಾತ್ರಿ ಕಳೆಯಿತು. ಸೂರ್ಯನು ಉದಯಗಿರಿಯನ್ನೇರಿದನು ಆಗಲೇ ಧೀರನು ಎದ್ದು ಶಿವನ ಮುಂದೆ ನಿಂತು— 'ಶಂಕರಾ! ಸುಖ ನಿದ್ರೆಯಾಯಿತೇ? ಹಸಿವಾಗುವುದೇ? ಇದೋ, ಈಗಲೇ ಹೋಗಿ ನಿನ್ನ ಭೋಜನಕ್ಕೆ ಮೃಗಮಾಂಸವನ್ನು ತಂದೀವೆನು' ಎಂದು ನುಡಿದು ಶಿವಲಿಂಗವನ್ನಪ್ಪಿ ಮುದ್ದಿಸಿ ಮರೆದು ಕಾಡಿಗೆ ಹೋದನು.

ಮತ್ತೆ ಸ್ವಲ್ಪ ಹೊತ್ತಿನಲ್ಲೇ ಹಣೆಯಲ್ಲಿ ಭಸ್ಮ, ಕೊರಳಲ್ಲಿ ರುದ್ರಾಕ್ಷಿ ಮಾಲೆಗಳನ್ನು ಧರಿಸಿದ ಬ್ರಾಹ್ಮಣನು ಪೂಜಾ ಸಾಮಗ್ರಿಗಳನ್ನು ಹಿಡಿದುಕೊಂಡು ದೇವಾಲಯವನ್ನು ಪ್ರವೇಶಿಸಿದನು. ಗುಡಿಯೊಳಕ್ಕೆ ಕಸಗಳು ಅಲ್ಲಲ್ಲಿ ಬಿದ್ದಿದ್ದುವು. ಅದನ್ನು ನೋಡಿದ ಅರ್ಚಕನಿಗೆ ಆಶ್ಚರ್ಯವಾಯಿತು. ಬಳಿಕ ದೇವಾಲಯವನ್ನೆಲ್ಲ ಶುದ್ಧಗೊಳಿಸಿ ವಿಧಿವಿಹಿತವಾಗಿ ಪೂಜೆಯನ್ನು ಮಾಡಿದನು. "ಸರ್ವಶಕ್ತನಾದ ಶಿವನೇ! ನಿನ್ನೀ ಮಂದಿರವನ್ನು ಭ್ರಷ್ಟಗೊಳಿಸುವ ದುರಾಚಾರಿಗಳನ್ನು ಇಲ್ಲಿಗೆ ಬಾರದ ಹಾಗೆ ಮಾಡಲಾರೆಯಾ' ಎಂದು ಅರ್ಚಕನು ಪ್ರಾರ್ಥಿಸಿ ಭದ್ರವಾಗಿ ಬಾಗಿಲು ಮುಚ್ಚಿ ಹೊರಟುಹೋದನು.

ಇತ್ತ ಬೇಡನು ಕೊಬ್ಬಿದ ಮೃಗವನ್ನು ಕೊಂದು, ಮಾಂಸವನ್ನು ಬೇಯಿಸಿದನು. ಅದು ರುಚಿಯಾಗಿದೆಯೋ, ಇಲ್ಲವೋ ಎಂದು ತುಸು ತಿಂದುನೋಡಿ, ರುಚಿಯಾಗಿರುವುದನ್ನು ಮಾತ್ರವೇ ಹಿಡಿದುಕೊಂಡು ವೇಗವಾಗಿ ಬಂದನು. ಗುಡಿಯ ಬಾಗಿಲು ಮುಚ್ಚಿದುದನ್ನು ನೋಡಿದನು. 'ದೇವಾ! ನಿನ್ನ ಸೇವೆಗೆಂದು ಮಾಂಸವನ್ನು ತಂದಿರುವೆನು. ಬಾಗಿಲನ್ನು ತೆಗೆ' ಯೆಂದು ದೈನ್ಯದಿಂದ ಬೇಡಿಕೊಂಡನು. ಬಾಗಿಲುಗಳು ತಾವಾಗಿಯೇ ತೆರೆದುವು. ಆತ್ಮಾನಂದದಿಂದ ಗುಡಿಯ ಒಳಹೊಕ್ಕು, ಆಗ ತಾನೇ ಅರ್ಚಕನು ಶಿವಲಿಂಗದ ತಲೆಗೇರಿಸಿದ್ದ ಪತ್ರಪುಷ್ಪಾದಿ ನಿರ್ಮಾಲ್ಯವನ್ನು ತನ್ನ ಪಾದದಿಂದಲೇ ಇಳುಹಿದನು. ತಾನು ಬಾಯಿಯೊಳಗೆ ತುಂಬಿಕೊಂಡು ತಂದ ನೀರಿನಿಂದ ಅಭಿಷೇಕವನ್ನು ಮಾಡಿ, ತಲೆಯಲ್ಲಿರಿಸಿ ತಂದ ಕಾಡು ಹೂಗಳನ್ನು ಲಿಂಗದ ಮೇಲಿರಿಸಿ, ತಂದಿರುವ ಹೊಸ ಮಾಂಸವನ್ನು ಮುಂದಿರಿಸಿದನು. 'ದೇವಾ! ಶಂಕರಾ! ಈ ಕಿಂಕರನು ಅರ್ಪಿಸಿದ ಮಾಂಸವನ್ನು ಸ್ವೀಕರಿಸಬೇಕು' ಎಂದು ಅತಿ ಭಕ್ತಿಯಿಂದ ಅಡಿಗೆರಗಿ ಬೇಡಿದನು. "ಇದೋ ನವಿಲಿನ ಮಾಂಸವು, ಇದೋ ಗಿಳಿಯ ಅಡಗು, ಇದೋ ಪಾರಿವಾಳದ್ದು, ಇದೋ ಹಂದಿಯ ಮಾಂಸ, ಇದೋ ಜಿಂಕೆಯದು, ಇದೋ ಬಲು ಕಾಯಿಸಿದ ಮೀನುಗಳು, ಇವನ್ನೆಲ್ಲಾ ತಿನ್ನು. ನೀನು ತಿನ್ನುವುದಿಲ್ಲಾದರೆ, ಈ ಬೆಟ್ಟದ ತುದಿಯಿಂದ ನಾನು ಕೆಳಗೆ ಬಿದ್ದು ಸಾಯುವೆನು' ಎಂದು ಅಂಗಲಾಚಿದನು!

ಭಗವಂತನು ಅಂತಃಶುದ್ಧಿಯನ್ನು ಪರಿಕಿಸುವನಲ್ಲದೆ ಬಾಹ್ಯಾಚರಣೆಯನ್ನಲ್ಲವಷ್ಟೆ! ಆದೇ ಆತನು ಬೇಡುವ ಬಾಹ್ಯಾಚರಣೆ ಹೇಗಿದ್ದರೂ, ಅದನ್ನು ಲಕ್ಷಿಸದೆ, ಆತನ ಭಕ್ತಿಯೊಂದನ್ನೇ ಗಣಿಸಿ, ಆ ಮಾಂಸವನ್ನೆಲ್ಲಾ ಸ್ವೀಕರಿಸಿದನು. ಧೀರನು ರಾತ್ರಿಯಿಡಿ ಬಿಲ್ಲುಬಾಣಗಳನ್ನು ಧರಿಸಿ ಶಿವಲಿಂಗದ ಮುಂಗಡೆ ಕಾದು ನಿಂತು, ಶಿವನು ನಿದ್ರಿಸುವಂತೆ ಭಾವಿಸಿದನು. ಮತ್ತೆ ಮುಂಜಾವ ಹೊತ್ತಿಗೆ ಕಾಡಿಗೆ ಮಾಂಸಕ್ಕಾಗಿ ನಡೆದನು.

ಹೀಗೆ ನಾಲ್ಕಾರು ದಿನಗಳ ವರೆಗೆ ಹಗಲಲ್ಲಿ ಬ್ರಾಹ್ಮಣನು, ರಾತ್ರಿಯಲ್ಲಿ ಬೇಡನು ಪೂಜಿಸುವುದು ಸಾಗಿತು. ಅನಂತರ ಆ ಬ್ರಾಹ್ಮಣನಿಗೆ ಇದನ್ನು ಸಹಿಸಲಾಗಲಿಲ್ಲ. ಸಿಟ್ಟು ನೆತ್ತಿಗೇರಿತು. "ಇಂತಹ ಅಕೃತ್ಯವನ್ನೆಸಗುವ ನೀಚನನ್ನು ನಾಳೆಯೇ ಕಂಡು ಹಿಡಿದು ಕೊಂದಲ್ಲದೆ ಬಿಡೆನು" ಎಂದು ಪ್ರತಿಜ್ಞೆಯನ್ನು ಮಾಡಿದನು,

ಶಂಕರನು ಕಿಂಕರನ ಸಂಕಟವನ್ನು ನಿವಾರಿಸದೆ ಇರುವನೇ? ಆ ರಾತ್ರಿಯೇ ಬ್ರಾಹ್ಮಣನಿಗೆ ಕನಸಿನಲ್ಲಿ ಶಿವನು ಕಾಣಿಸಿಕೊಂಡು. "ಎಲೈ ಬ್ರಾಹ್ಮಣ! ನನ್ನನ್ನು ಪ್ರತಿದಿನವೂ ಪೂಜಿಸುತ್ತಿರುವವನು ಒಬ್ಬ ಬೇಡನು, ಅವನ ನಿಶ್ಚಲ ಭಕ್ತಿಗೆ ನಾನು ಬಹಳ ಮೆಚ್ಚಿದ್ದೇನೆ. ಅವನನ್ನು ಕೊಲ್ಲಬೇಕೆಂಬ ದುರ್ಭಾವನೆಯನ್ನು ದೂರ ಮಾಡು. ಅವನ ಭಕ್ತಿಯ ಪ್ರಭಾವವನ್ನು ನಾಳೆಯೇ ನಿನಗೆ ತೋರುವೆನು. ಆಗ ಅವನ ಮಹಿಮೆ ಅಸಾಧಾರಣವೆಂದು ನೀನೇ ತಿಳಿದುಕೊಳ್ಳುವೆ" ಎಂದು ಅದೃಶ್ಯನಾದನು.

ಬ್ರಾಹ್ಮಣನು ಸ್ವಪ್ನ ಸೂಚಿತವಾದಂತೆ ಆ ಬೇಡನ ಭಕ್ತಿಯನ್ನು ಪ್ರತ್ಯಕ್ಷ ಪರೀಕ್ಷಿಸಬೇಕೆಂದು ಬಗೆದನು. ಮರುದಿನ ಎಂದಿನಂತೆ ಶಿವನನ್ನು ಪೂಜಿಸಿ, ಗುಡಿಯ ಲ್ಲೊಂದೆಡೆ ಅಡಗಿ ಕುಳಿತುಕೊಂಡನು. ಸಂಜೆಗೆ ಭಕ್ತವರನಾದ ಬೇಡನು ಗುಡಿಯನ್ನು ಪ್ರವೇಶಿಸಿ ಪರಮೇಶ್ವರನಿಗೆ ಪೊಡಮಟ್ಟನು, ಎದ್ದುನಿಂತು ಭಕ್ತಿಪೂರ್ವಕ ಶಿವಲಿಂಗವನ್ನು ನಿರೀಕ್ಷಿಸಿದನು ನೋಡುವುದೇನು? ಲಿಂಗದ ಎಡ ಕಣ್ಣಿನಿಂದ ಧಾರೆ ಧಾರೆಯಾಗಿ ನೆತ್ತರು ಸುರಿಯುತ್ತಿದ್ದಿತು. ಬೇಡನ ಕಳವಳವನ್ನು ಹೇಳಿ ತೀರದು! "ಅಯ್ಯೋ! ನನ್ನ ದೇವನ ದುರವಸ್ಥೆಯೇ! ದೇವನು ಕಣ್ಣಿನ ರೋಗದಿಂದ ಪೀಡಿತನಾಗಿದ್ದಾನೆ. ಇದನ್ನು ನಾನು ನೋಡಿಕೊಂಡು ಸುಮ್ಮನಿರುವುದು ಸರಿಯೇ? ಇದಕ್ಕೇನು ಮಾಡಲಿ? ಹೇಗಿದು ಗುಣವಾದೀತು" ಎಂದು ಚಿಂತಿಸಿದನು. ಆವ ಉಪಾಯವೂ ಅವನಿಗೆ ತೋರಲಿಲ್ಲ. ಹಠಾತ್ ಅವನಿಗೊಂದು ಯೋಚನೆ ಹೊಳೆಯಿತು. ಒಡನೆ ಉತ್ಸಾಹದಿಂದ ಉಬ್ಬಿ

(ಹದಿನಾರನೇ ಪುಟ ನೋಡಿರಿ)

ಸಮಾಜ ಶಾಸ್ತ್ರ

ದಾಂಪತ್ಯದಲ್ಲಿ ಯಾರ ಮಾತಿಗೆ ಬೆಲೆ?

ನಿಮ್ಮ ಮನೆಯಲ್ಲಿ ಯಾರ ಕಾರಭಾರ ನಡೆಯುತ್ತದೆ? ಕೌಟುಂಬಿಕ ಸಮಸ್ಯೆ ಮತ್ತು ಆವಶ್ಯಕತೆಗಳು ಮುಂದೆ ಬಂದಾಗ ಯಾರ ಮಾತಿಗೆ ನಿಮ್ಮಲ್ಲಿ ಮಾನ್ಯತೆ ಯಿದೆ?

ಮನೆವಾಳ್ತೆಯ ಸಂಬಂಧದಲ್ಲಿಯೂ ವಿಜ್ಞಾನವು ಕಾರ್ಯ ಪ್ರವೃತ್ತವಾಗಿದೆ. ಯಾರು ಯಾರನ್ನು ಹೇಗೆ ಪ್ರಭಾವಿತಗೊಳಿಸಬಲ್ಲರು ಎಂಬುದನ್ನದು ವಿವೇಚಿಸಿದೆ.

ಈ ಸಂಗತಿಯನ್ನು ತಿಳಿಯಲು ಆಯೋವಾ ರಾಜ್ಯ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಪ್ರಾಧ್ಯಾಪಕ ವಿಲಿಯಂ ಎಫ್. ಕೆನಕೆಲ್‌ರ ನಿರ್ದೇಶನದಲ್ಲಿ ೭೫೦ ದಂಪತಿ ಸಮೂಹಗಳಲ್ಲಿ ೫೦ ಜೋಡಿಗಳನ್ನು ಆರಿಸಲಾಯಿತು.

ಆಯ್ಕೆ ಹೊಂದಿದ ದಂಪತಿಗಳಿಗೆ ಹೀಗೆ ಆದೇಶ ನೀಡಲಾಯಿತು: "ನಿಮಗೀಗ ಮುನ್ನೂರು ಡಾಲರ್‌ಗಳನ್ನು ಕೊಟ್ಟಿದ್ದೇವೆಯೆಂದು ಭಾವಿಸಿರಿ. ಅದನ್ನು ಉಳಿಸಬಾರದು, ಅಥವಾ ಈ ಮೊದಲೇ ನೀವಿಬ್ಬರೂ ಕೊಂಡುಕೊಳ್ಳಲು ನಿರ್ಧರಿಸಿದ ಯಾವುದೇ ವಸ್ತುವನ್ನು ಕೊಳ್ಳಲು ಉಪಯೋಗಿಸಬಾರದು. ಸತಿಪತಿಯರಿಬ್ಬರೂ ಪರಾಮರ್ಶಿಸಿ ಈ ಮೊತ್ತವನ್ನು ಯಾವುದಕ್ಕಾಗಿ ವ್ಯಯಿಸಬೇಕೆಂದು ಅರ್ಧ ತಾಸಿನಲ್ಲಿ ಒಂದು ನಿರ್ಣಯಕ್ಕೆ ಬನ್ನಿರಿ. ಕೊಂಡುಕೊಳ್ಳುವ ವ್ಯಕ್ತಿಗತ ಮತ್ತು ಮನೆವಾಳ್ತೆಯ ಒಂದು ಪಟ್ಟಿಯನ್ನು ತಯಾರಿಸಿ ಕೊಡಿರಿ."

ಪ್ರತಿಯೊಂದು ಕುಟುಂಬದ ನಡುವೆ ನಡೆಯುವ ವಾರ್ತಾಲಾಪವನ್ನು ಕೇಳಲು ಒಬ್ಬೊಬ್ಬ ನಿರೀಕ್ಷಕನನ್ನು ನೇಮಿಸಲಾಯಿತು. ಅದನ್ನು ಟೇಪಿನಲ್ಲಿ ರೆಕಾರ್ಡ್ ಮಾಡಲಾಯಿತು. ಮಾತುಕತೆಯ ನಡುವೆ ಯಾವ ಯಾವ ವಸ್ತುವನ್ನು ಕೊಂಡುಕೊಳ್ಳುವ ಸೂಚನೆ ಬಂತು, ಪತಿ ಪತ್ನಿಯರಲ್ಲಿ ಯಾರು ಆ ಸೂಚನೆಯನ್ನು ಮಂಡಿಸಿದರು, ಸೂಚಿತ ವಸ್ತುವಿನ ಬೆಲೆಯೇನು, ಕೊನೆಯಲ್ಲಿ ಅದನ್ನು ಖರೀದಿಸುವ ಸಂಬಂಧದಲ್ಲಿ ಒಂದು ನಿರ್ಣಯಕ್ಕೆ ಬರುವುದು ಸಾಧ್ಯವಾಯಿತೇ ಇಲ್ಲವೇ ಎಂದು ಮುಂತಾದುವುಗಳ ತಾಳಿಕೆಯೊಂದನ್ನು ತಯಾರಿಸಲಾಯಿತು.

ಇದರಿಂದ ಪ್ರತ್ಯೇಕ ಪತಿ ಮತ್ತು ಪತ್ನಿಯರ ವ್ಯಕ್ತಿತ್ವದ ಪ್ರಭಾವವನ್ನು ಸ್ಪಷ್ಟವಾಗಿ ತಿಳಿಯಲಾಯಿತು. ಸ್ತ್ರೀ ಅಥವಾ ಪುರುಷರಲ್ಲಿ ಅಂತಿಮ ಸೂಚಿ ತಯಾರಿಸುವಲ್ಲಿ ಯಾರ ಕೈವಾಡ ಅಧಿಕವಾಗಿತ್ತು ಎಂಬುದನ್ನು ಆಧರಿಸಿ ಪ್ರಭಾವ ಕ್ರಮಾಂಕವನ್ನು ಗೊತ್ತುಮಾಡಲಾಯಿತು.

ಪತಿ ಪತ್ನಿಯರ ಮೂಲಕ ಕೊನೆಗೆ ಸ್ವೀಕೃತವಾದ ಸೂಚಿಯ ವಸ್ತುಗಳಲ್ಲಿ ಸ್ತ್ರೀಯೂ ಪುರುಷರು ಸೂಚಿಸಿದವುಗಳಲ್ಲಿ ಮೂರರಲ್ಲೊಂದಂಶಕ್ಕಿಂತ ಕಡಿಮೆಯಿದ್ದರೆ, ಅವನನ್ನು ಅಲ್ಪ ಪ್ರಭಾವಶಾಲಿ ವ್ಯಕ್ತಿತ್ವಶಾಲಿಯೆಂದು ತಿಳಿಯಲಾಯಿತು. ಮೂರರಲ್ಲೊಂದಂಶಕ್ಕಿಂತ ಹೆಚ್ಚಾಗಿ ಮೂರರಲ್ಲೆರಡಂಶಕ್ಕದವರೆಗಿದ್ದರೆ ಅವನನ್ನು ಅತ್ಯಂತ ಪ್ರಭಾವಶಾಲಿ ವ್ಯಕ್ತಿತ್ವವಿರುವವನೆಂದು ಗೊತ್ತುಮಾಡಲಾಯಿತು.

ವಸ್ತುಗಳನ್ನು ಆಯ್ದುಕೊಳ್ಳುವ ವೇಳೆ ಪ್ರತ್ಯೇಕ ಪತಿ ಮತ್ತು ಪತ್ನಿಯರ ವ್ಯವಹಾರ ವಿಶ್ಲೇಷಣೆಯ ಬಗ್ಗೆ ವಿಶೇಷ ಗಮನ ನೀಡಲಾಯಿತು. ಮಾತುಕತೆಯಲ್ಲಿ ಯಾರು ಎಷ್ಟು ಭಾಗವಹಿಸಿದರು, ಸೂಚನೆ ಮುಂದಿಡುವಲ್ಲಿ ಯಾರು ಎಷ್ಟು ತತ್ಪರತೆಯನ್ನು ತೋರಿಸಿದರು, ಯಾರ ಅಭಿಪ್ರಾಯವು ಬಹುಶಃ ಮಾನ್ಯವಾಯಿತು ಮತ್ತು ಮಾತುಕತೆಯನ್ನು ಸಹಜವಾಗಿಸುವಲ್ಲಿ ಯಾರು ಎಷ್ಟು ಮಟ್ಟಿನ ಪಾತ್ರ ವಹಿಸಿದರು ಎಂಬುದನ್ನೂ ಲಕ್ಷ್ಯದಲ್ಲಿಟ್ಟುಕೊಳ್ಳಲಾಯಿತು.

ವ್ಯಕ್ತಿತ್ವವನ್ನು ಅಳೆಯುವ ಈ ಪದ್ಧತಿಯಲ್ಲಿ ಪ್ರಭಾವಶಾಲಿಯೆಂದು ಪರಿಗಣಿತರಾದವರಲ್ಲಿ ನೇಕಡಾ ೭೮ರಷ್ಟು ಪತಿಗಳು ಅಧಿಕ ಮಾತನಾಡಿದರು. ಮಧ್ಯಮ ಶ್ರೇಣಿಯ ಪ್ರಭಾವ ಶಾಲಿ ಪತಿಗಳು ಸ್ವೇಚ್ಛೆಯಂತೆ ಮಾತುಕತೆಯಲ್ಲಿ ಸಕ್ರಿಯವಾಗಿ ಭಾಗ ವಹಿಸಿದರು. ನಗಣ್ಯ ಪ್ರಭಾವಶಾಲಿ ಪತಿಗಳು ತುಟಿ ಬಿಚ್ಚುವದರಲ್ಲಿ ಬಹಳ ಹಿಂದುಳಿದಿದ್ದರು ಇವರಿಂದಾಗಿ ಪತಿಯು ತನ್ನ ಪತ್ನಿಯನ್ನು ಮಾತುಕತೆಯಲ್ಲಿ ಹಿಂದೆ ತಳ್ಳಿದಂತೆ ತನ್ನ ವ್ಯಕ್ತಿತ್ವವನ್ನು ಪ್ರಭಾವಶಾಲಿಗೊಳಿಸಬಲ್ಲನೆಂದು ಅನ್ವೇಷಕರು ನಿರ್ಧರಿಸಿದ್ದಾರೆ.

ಆದರೆ, ಪತ್ನಿಯರ ವಿಚಾರ ಇನ್ನೊಂದು. ಗಂಡನು ಅಷ್ಟು ಮಾತನಾಡಿದರೂ ಪ್ರಭಾವಶಾಲಿ ಹೆಂಡತಿಯು ತನ್ನ ಮಾತಿಗೆ ಆತನನ್ನು ಒಲಿಸಿಯೇ ತೀರುತ್ತಾಳೆ. ಮಾತಿನ ಪ್ರಮಾಣ, ಸೂಚನೆಯ ಗಣನೆ ಹೆಚ್ಚಿದಷ್ಟು ಆಕೆ ತನ್ನ ಬಾಳ ಸಂಗಾತಿಯನ್ನು ಪ್ರಭಾವಿತಗೊಳಿಸುತ್ತಾಳೆ. ನಿಜವಾಗಿ ಅತ್ಯಧಿಕ ಪ್ರಭಾವಶಾಲೀ ವ್ಯಕ್ತಿತ್ವದ ಪತ್ನಿಯರು ಬಹಳ ಕಡಿಮೆ ಸೂಚನೆಗಳನ್ನು ಮುಂದಿಟ್ಟಿದ್ದರು.

ಗಂಡರಾದವರು ಒಂದು ಮಾತನ್ನು ಮರೆಯಬಾರದು. ನಿಮ್ಮ ಸೂಚನೆಯೊಂದನ್ನು ಹೆಂಡತಿ ಒಪ್ಪಿಕೊಳ್ಳದಿದ್ದರೆ, ಕೈಕಟ್ಟಿ ಕುಳಿತುಕೊಳ್ಳಬೇಡಿ. ಕೂಡಲೇ ಬೇರೊಂದು ಸೂಚನೆ ಮುಂದೆ ತನ್ನಿ.

ಡಾ| ಕೆನಕೆಲರ ಮೇಲಿನ ಸಂಶೋಧನೆಯಿಂದ ದಂಪತಿಗಳ ಮಾತುಕತೆಯ ಲಹರಿಯ ಪರಿಚಯವೂ ಸಾಕಷ್ಟಾಗುತ್ತದೆ. ತನ್ನ ಸಂಗಾತಿಯನ್ನು ಸಂತುಷ್ಟವಿರಿಸಲು ನಗುವಿನೊಡನೆ ಮಾತನಾಡುವ ಕ್ಷಮತೆ, ಹಿರಿಯವರ ಗೌರವಕ್ಕೆ ಕುಂದು ತರದಂತೆ ಆತನ ಮೇಲೆ ಉಚಿತ ಸ್ನೇಹ ಪ್ರದರ್ಶಿಸುವುದ.—ಇವೂ ಮಾತುಕತೆಯಲ್ಲಿ ನಿಪುಣರೆಂಬುದಕ್ಕೆ ನಿದರ್ಶನ. ಈ ವಿಧಾನವನ್ನನುಸರಿಸಿದ ದಂಪತಿಗಳು ತಮ್ಮ ಗುರಿಯನ್ನೂ ಮುಟ್ಟಿದ್ದರು. ಮಹಿಳೆಯರು ಈ ವಿಧಾನವನ್ನವಲಂಬಿಸಿದರೆ, ಅವರು ಬಹಳ ಸರಳವಾಗಿ ಗೆಲ್ಲಬಲ್ಲರು. ಪುರುಷರಿಗೆ ಇದರಿಂದ ಹೆಚ್ಚಿನ ಲಾಭವಿಲ್ಲ. ಕೂಟನೀತಿಯನ್ನವಲಂಬಿಸುವ ಪತಿಯರು ಜಯ ಗಳಿಸಲಾರರು. ಜೋರ, ಜೋರಾಗಿ ಅಥವಾ ಬಹಳ ಹೆಚ್ಚಾಗಿ ಮಾತನಾಡಿದ ಪತಿಗಳೇ ಉತ್ತಮ ಅಥವಾ ಮಧ್ಯಮ ವರ್ಗದ ಪ್ರಭಾವಶಾಲಿಗಳಾಗಿ ಕಂಡು ಬಂದಿದ್ದಾರೆ.

ಹೆಂಡಂದಿರು ಪತಿಯಂದಿರಿಗೆ ತಿಳಿ ಹೇಳುವ ಆಟವನ್ನು ನಿಧಾನವಾಗಿ ಚಾತುರ್ಯದಿಂದ ಆಡಿದರೆ ಮಾತ್ರ ಯಶಗಳಿಸುವರು. ಮಾತುಕತೆಯ ನಡು ನಡುವೆ ತಮ್ಮ ಪತಿಯನ್ನು ಹೊಗಳಿ ಆತ ತನ್ನನ್ನು ವಿಶಿಷ್ಟ ಮತ್ತು ಸಮ್ಮಾನಿತ ವ್ಯಕ್ತಿಯೆಂದು ತಿಳಿದು ಕೊಳ್ಳುವಂತೆ ಮಾಡಿದರೆ, ಪತ್ನಿಗೆ ಜಯ ನಿಶ್ಚಿತ. ಆತನ ಆತ್ಮಸಮ್ಮಾನವನ್ನು ಎಚ್ಚರಿಸುತ್ತಿರುವುದು, ಅವನ ಚಾಟೂಕ್ತಿಗೆ ನಗುವುದು ಜಯದ ಗುಟ್ಟು. ಒಮ್ಮೊಮ್ಮೆ ಆತ ಮೂರ್ಖತನದ ಮಾತಾಡಿದರೂ ರೇಗಬಾರದು. ಮಾತನಾಡುವಾಗ ಯಾವುದಾದರೂ ಕಠಿಣ ಪರಿಸ್ಥಿತಿಯನ್ನೆದುರಿಸುವ ಸಂದರ್ಭ ಬಂದರೆ ಹೆದರಬಾರದು, ಚತುರತೆಯಿಂದ ವಿಷಯ ಬದಲಾಯಿಸಬೇಕು; ಯಜಮಾನರು ಸಾಮಾನ್ಯ ಸ್ಥಿತಿಗಿಳಿದರೆಂದು ಖಾತ್ರಿಯಾದ ನಂತರ ಮತ್ತೆ ಅದೇ ವಿಷಯವನ್ನು ಮುಂದಿಡಬೇಕು. ಇಂತಹ ಮಾತುಕತೆಯಲ್ಲಿ ಪತ್ನಿಯ ಮುಂದೆ ಪತಿ ಸೋತರೂ ಸೋಲಿನಲ್ಲೇ ಸಂತೋಷ ಕಾಣುತ್ತಾನೆ.

ಸಾಮಾನ್ಯವಾಗಿ ಗಂಡನೇ ಹೆಂಡತಿಗಿಂತ ಪ್ರಭಾವಶಾಲಿಯಾಗಿರುತ್ತಾನೆ. ಆದರೆ, ಮೇಲಿನ ನಿರೀಕ್ಷಣೆಯಿಂದ ಗಂಡ ತಾನು ತಿಳಿದುಕೊಂಡಷ್ಟು ಪ್ರಭಾವಶಾಲಿಯಲ್ಲವೆಂದು ತಿಳಿಯುತ್ತದೆ. ಆದರೆ, ಮಹಿಳೆಯರು ತೋರಿಕೆಗೆ ಹಾಗೆ ತೋರದಿದ್ದರೂ ವಾಸ್ತವವಾಗಿ ಅಧಿಕ ಪ್ರಭಾವಶಾಲಿಯಾಗಿರುತ್ತಾರೆ.

ಅಧ್ಯಯನಕ್ಕಾಗಿ ಆಯ್ಕೆಯಾದ ೫೦ ದಂಪತಿಗಳನ್ನು ಎರಡು ಪಂಗಡಗಳಲ್ಲಿ ವಿಂಗಡಿಸಿದ್ದರು. ಒಂದು ಪಂಗಡವನ್ನು ಪುರುಷರೂ ಇನ್ನೊಂದನ್ನು ಸ್ತ್ರೀಯರೂ ಪರೀಕ್ಷಿಸಿದರು. ಮಹಿಳೆಯರ ನಿರೀಕ್ಷಣೆಯ ಪಂಗಡದಲ್ಲಿ ಮಹಿಳೆಯರೇ ಅಧಿಕ ಅಂಕ ಪಡೆದರು; ಅವರಲ್ಲಿ ಪ್ರಭಾವಿತಗೊಳಿಸುವ ಶಕ್ತಿ ಇಮ್ಮಡಿಯಾಗಿತ್ತು; ಮಹಿಳೆಯರ ಮುಂದೆ ಪುರುಷರು ತುಸು ಸಂಕುಚಿತರಾಗಿದ್ದರು. ಅವರ ಮಾತುಕತೆಗಳೂ ಆಕರ್ಷಕವಿರಲಿಲ್ಲ. ಆದುದರಿಂದ ಅವರಲ್ಲಿ ವಿಜಯಿಯಾದವರ ಸಂಖ್ಯೆಯೂ ಕಡಿಮೆಯಿತ್ತು.

ಇದರಿಂದ ಒಂದು ಮಾತು ದೃಢವಾಯಿತು. ಗಂಡಸರ ಮುಂದೆ ಗಂಡನೂ ಹೆಂಗಸರ ಮುಂದೆ ಹೆಂಡತಿಯೂ ಮಾತುಕತೆಯಲ್ಲಿ ವಿಜಯಿಯಾಗುತ್ತಾರೆ. ಈ ಸಂಶೋಧನೆಯಲ್ಲಿ ಹೊಸತೇನಾದರೂ ಇದೆಯೇ?

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಶ್ರೀ ಕೆ.ಕೆ. ಶೆಟ್ಟಿ, ಎಂ ಎಲ್‌ಸಿ ಯವರ

ಸನಕಾಲಿಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷಪಶು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:–

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಸನ್ಯಾಸಿಯವರು ಕೈಕೊಂಡ ಪ್ರಯೋಗ

ಬಾಲವಿಷ್ಣು ತೈಲ

ಈ ತೈಲವು ಬಾಲಗ್ರಹ ಮತ್ತು ಶೂಲಗ್ರಹ ರೋಗದ ಬೇರನ್ನೇ ಕಿತ್ತು ಮಕ್ಕಳ ಚಿಹ್ನೆಯನ್ನು ಸಂಪೂರ್ಣ ಗುಣಪಡಿಸಿ ಶರೀರವನ್ನು ಪುಷ್ಟೀಕರಿಸುತ್ತದೆ.

ಕುಪ್ಪಿ ೧ರ ರೂ. 2-87 — ಬಾಟ್ಲಿ ಪ್ಯಾಕಿಂಗ್ ರೂ. 3-19

(ಪಿ. ಪಿ. ಖರ್ಚು ಬೇರೆ – ಲಗ್ಗೇಜ ಖರ್ಚು ಬೇರೆ)

ತಯಾರಕರು:—

ಎ. ಸುಬ್ಬಯ್ಯ ಪಕ್ಕಳ, ಮುಗೇರು —

ಬಾಲವಿಷ್ಣು ತೈಲ ಔಷಧಾಲಯ, ಪುತ್ತೂರು, ದ. ಕ.

ವಿಜ್ಞಾನ ವಾರ್ತೆ

ಬಾಹ್ಯಾಕಾಶದಲ್ಲಿ ಜೀವಸಂಚಾರ ಸಾಧ್ಯವೆ?

ಅತ್ಯಂತ ಸರಳ ಸೂಕ್ಷ್ಮ ಜೀವಿಗಳೂ ಅವುಗಳ ಜೀವಾಣುಗಳೂ ಬಾಹ್ಯಾಕಾಶದಲ್ಲಿ ಸಂಚರಿಸಲು ಅನುಕೂಲ ಪರಿಸ್ಥಿತಿಗಳಿರುವ ಇತರ ಜಗತ್ತುಗಳನ್ನು ತಲಪಬಲ್ಲವೆ? ಅದು ಅಸಾಧ್ಯವಿರುವ ಪಕ್ಷದಲ್ಲಿ, ಭೂಮಿಯ ಮೇಲೆ ಸಂಭವಿಸಿರುವಂತೆಯೇ ಇತರ ಗ್ರಹಗಳಲ್ಲಿಯೂ ಅತ್ಯಂತ ಸರಳ ಜೀವಿಗಳು ಸ್ವತಂತ್ರವಾಗಿ ಹುಟ್ಟಿರಲೇ ಬೇಕು.

ಸೂಕ್ಷ್ಮ ಜೀವಾಣುಗಳನ್ನು ಊರ್ಧ್ವ ವಾತಾವರಣಕ್ಕೆ ಕೊಂಡೊಯ್ದು ಗ್ರಹಾಂತರ ಅಂತರಿಕ್ಷದಲ್ಲಿ ಸೌರ ಕಿರಣ ಪ್ರಸಾರದ ಮೂಲಕ ಹೊರ ದೂಡಿದ ಪಕ್ಷದಲ್ಲಿ, ಅವು ಹೇಗೆ ಜೀವಂತವಾಗಿ ಉಳಿಯ ಬಹುದೆಂಬುದನ್ನು ಊಹಿಸುವುದು ಕಷ್ಟ, ಅವು ಕಠಿಣ ಸೌರ ಕಿರಣ ಪ್ರಸಾರವನ್ನೂ ಉನ್ನತ ಚೈತನ್ಯದ ಮೂಲ ವಿಶ್ವ ಕಿರಣ ಪ್ರಸಾರವನ್ನೂ ಸಹಿಸಬೇಕಾಗುವುದು.

ಗ್ರಹಾಂತರ ಆಕಾಶದಲ್ಲಿ ಸೌರ ಕಿರಣದ ಪ್ರಸಾರದ ಪರಿಣಾಮವನ್ನು ಧೂಮಕೇತುಗಳು ವ್ಯಕ್ತಪಡಿಸುತ್ತವೆ. ಭೂಮಿಯ ವ್ಯಾಸಾರ್ಧದಷ್ಟು ದೂರದಲ್ಲಿ ಅವುಗಳ ಅಂತರ್ಭಾಗಗಳು ಸ್ಫೋಟಗೊಂಡು ಅನಿಲ ಮತ್ತು ಧೂಳು ಪ್ರವಾಹಗಳನ್ನೂ ಸೂರ್ಯನ ಕಡೆಗೆ ಚಿಮ್ಮುತ್ತವೆ. ಈ ಪ್ರವಾಹಗಳೇ ಧೂಮಕೇತುಗಳ ಬಾಲಗಳು. ಈ ಧೂಮಕೇತುವಿನ ಪ್ರಥಕ್ಕರಣದಿಂದ ಉಲ್ಕಾವೃಷ್ಟಿಯುಂಟಾಗುತ್ತದೆ. ಈ ಅಸ್ಥಿರ ಘನ ಕಿರಣಗಳು ಮುಖ್ಯವಾಗಿ ಶಾಖ ನಿರೋಧಕ ವಸ್ತುಗಳನ್ನು ಒಳಗೊಂಡಿರುತ್ತವೆ. ಆದರೆ ಸೌರ ಶಕ್ತಿಯಿಂದ ಅವು ಸಡಿಲಗೊಳ್ಳುತ್ತವೆ. ಎಂದರೆ, ಸಾಮಾನ್ಯ ವಸ್ತುಗಳು ಬಾಹ್ಯಾಕಾಶದಲ್ಲಿ ಬಹುಕಾಲ ಇರಲಾರವು. ಅವು ಬೇಗ ಬೇರ್ಪಡುತ್ತವೆ.

ರಕ್ಷಣಾವರಣವಿಲ್ಲದ ಆಕಾಶಕಾಯಗಳಾದ ಉಲ್ಕಾ ಶಿಲೆಗಳು ಅನೇಕ ಸಲ ಭೂಮಿಯ ಮೇಲೆ ಬೀಳುತ್ತವೆ, ಬಾಹ್ಯಾಕಾಶದಲ್ಲಿ ಅತ್ಯಂತ ಸುಸ್ಥಿರ ಮೂಲಾಣುಗಳು ಬಹು ಕಾಲದ ವರೆಗೆ ಉಳಿದಿದ್ದರೆ ಏನು ಸಂಭವಿಸುತ್ತದೆಯೆಂಬುದನ್ನು ಅವು ರುಜುವಾತು ಪಡಿಸುತ್ತವೆ. ಉಲ್ಕಾಶಿಲೆಯ ಕಬ್ಬಿಣದ ಪರಮಾಣು ಬೀಜಾಂಶಗಳು ವಿಶ್ವಕಿರಣಗಳಿಂದ ನಾಶಗೊಳ್ಳುತ್ತವೆಯೆಂದು ಸ್ಪಷ್ಟವಾಗಿ ವ್ಯಕ್ತಪಡುತ್ತದೆ; ಹೆಚ್ಚುಕಡಿಮೆ ಪ್ರಕಾಶ ವೇಗದಲ್ಲಿ ಬಾಹ್ಯಾಕಾಶ ಸಂಚಾರ ಮಾಡುವ ಪ್ರೋಟಾನುಗಳು ಅಥವಾ ಪರಮಾಣು ಬೀಜಾಂಶಗಳು ಅನೇಕ ಶತಕೋಟಿ ಎಲೆಕ್ಟ್ರಾನ್—ವೋಲ್ಟುಗಳ ಚೈತನ್ಯಗಳನ್ನೊಯ್ಯುತ್ತವೆ. ಅವು ಯಾವ ಕಣ ಅಥವಾ ಪರಮಾಣು ರಚನೆಯನ್ನಾದರೂ ನಾಶಗೊಳಿಸಬಲ್ಲವು.

ಹ್ರಸ್ವತರಂಗದ ಸೌರ ಮತ್ತು ವಿಶ್ವಕಿರಣ ಪ್ರಸಾರಗಳ ಅಪಾಯಕರ ಪರಿಣಾಮಗಳಿಗೆ ಎಡೆಕೊಡದಂತೆ ಅಸ್ಥಿರ ಪ್ರೋಟಾನ್ ಸಂಯುಕ್ತಗಳನ್ನು ವಾತಾವರಣ ರಕ್ಷಣೆಯಿಲ್ಲದಿದ್ದ ಪಕ್ಷದಲ್ಲಿ ಭೂಮಿಯ ಮೇಲೆ ಜೀವನ ಅಸಾಧ್ಯ. ಈ ಮಾತು ಬೇರೆ ಗ್ರಹಗಳಿಗೂ ಅನ್ವಯಿಸುತ್ತದೆ. ವಾತಾವರಣದಲ್ಲಿಯೂ ಮೇಸೊಸ್ ಮತ್ತು ಎಲೆಕ್ಟ್ರಾನ್‌ಗಳಂತಹ ಕಡಿಮೆ ಚೈತನ್ಯದ ಕಣಗಳಿರುತ್ತವೆ ಅವು ಭೂವಾತಾವರಣದ ಮೂಲಕ ಹಾಯ್ದು, ಭೂಮಿಯ ಮೇಲ್ಮೈಯನ್ನು ತಲಪಿದಾಗ ಜೀವಾಣುಗಳ ಪ್ರೋಟಾನ್ ಗಳಲ್ಲಿ ಉತ್ಪರಿವರ್ತನೆಗಳನ್ನೂ ಉಂಟುಮಾಡಬಲ್ಲವು. ಜೀವಾಣುಗಳು ಗ್ರಹಾಂತರ ಆಕಾಶದಲ್ಲಿ ಸ್ವತಃ ತಾವಾಗಿಯೇ ಆಗಲಿ ಅಥವಾ ಸೂಕ್ಷ್ಮವಾಯು ದುಂಧುವಿನ ಪ್ರಯೋಗಲೀ ವಿಶ್ವಕಿರಣ ಪ್ರಸಾರದ ಸರ್ವ ನಾಶಕಾರೀ ಪರಿಣಾಮದ ಕಿರಣ ದಾಟಿ ಹೋಗಲಾರವೆಂಬುದನ್ನು ಇದು ತೋರಿಸುತ್ತದೆ.

ಇಂತಹ ಜೀವ ವರ್ಗಾವಣೆಯನ್ನು ಸಾಧ್ಯಗೊಳಿಸುವ ಅಂಶಗಳು ಬೇರೆ ಯಾವುದಾದರೂ ಇವೆಯೆ? ಭೂ ವಾತಾವರಣದಿಂದ ಧೂಳಿನ ಕಣಗಳನ್ನು ಅಥವಾ ಸೂಕ್ಷ್ಮ ಜೀವಿಗಳನ್ನು ಹೊರ ದೂಡುವುದು ಯಾವಾಗ ಸಾಧ್ಯ? ಸೆಕಂಡಿಗೆ ಅನೇಕ ಸಾವಿರಾರು ಕಿಲೋಮೀಟರು ವೇಗದಲ್ಲಿ ಸಂಚರಿಸುವ ಸೌರರಶ್ಮಿ ಕಣಗಳು ಅವುಗಳ ಮಧ್ಯೆ ನುಗ್ಗಿದಾಗ ಇದು ಸಾಧ್ಯವಾಗಬಹುದು. ಇಂತಹ ಸೌರ ಚಂಡಮಾರುತಗಳು ಚಂದ್ರಾನಿಲಗಳನ್ನು ಬಾಹ್ಯಾಕಾಶಕ್ಕೆ ಕೊಂಡೊಯ್ಯುತ್ತವೆ, ಇದರಿಂದ ಚಂದ್ರಮಂಡಲವು ಸ್ವಂತ ವಾತಾವರಣವನ್ನು ಹೊಂದಿರುವುದು ಸಾಧ್ಯವಾಗಿಲ್ಲ. ಅಸ್ಥಿರ ಜಟಿಲ ಜೀವಕೋಶಗಳಿಗೆ ಈ ಸೌರ ರಶ್ಮಿ ಕಣಗಳ ಪ್ರವಾಹಗಳು ಅತ್ಯಂತ ಹಾನಿಕರವಾಗಿವೆ.

ಒಟ್ಟಿನಲ್ಲಿ ಹೇಳುವುದಾದರೆ, ಸೂಕ್ಷ್ಮ ಜೀವಾಣುಗಳು ಗ್ರಹಾಂತರಾಕಾಶದಲ್ಲಿ ಯಾವ ಚೈತನ್ಯ ಹಾನಿಯೂ ಇಲ್ಲದೆ ಸ್ಥಳಾಂತರಿಸುವುದು ಅಸಾಧ್ಯವೆಂದು ತೀರ್ಮಾನಿಸಬೇಕಾಗುತ್ತದೆ. ಯಾವ ವಿಶ್ವಕಾಯದ ಮೇಲಾದರೂ, ಗ್ರಹದ ಮೇಲೆಯಾದರೂ ಜೀವಿಗಳು ಸ್ವತಂತ್ರವಾಗಿ ರೂಪುಗೊಳ್ಳಬೇಕಾಗುತ್ತದೆ.

ಇಂಗಾಲ ಸಂಯುಕ್ತ ಉಲ್ಕಾ ಶಿಲೆಗಳು ಅಪರೂಪವಾಗಿ (ಸುಮಾರು ೩ ಶತಾಂಶ) ಬೀಳುತ್ತವೆ. ಅವುಗಳಲ್ಲಿ ಜೈವಿಕ ಸಂಯುಕ್ತಗಳು ದೊರೆತಿವೆ. ವಾತಾವರಣವನ್ನು ಪ್ರವೇಶಿಸಿದಾಗ ಅವು ಉಜ್ವಲ ಪ್ರಕಾಶದಿಂದ ಬೆಂಕಿ ಚೆಂಡುಗಳಂತೆ ನುಗ್ಗುತ್ತವೆ. ಇದಕ್ಕೆ ಕೆಲವು ರಸಾಯನಿಕ ಪ್ರತಿಕ್ರಿಯೆಗಳೇ ಕಾರಣವಾಗಿರಬೇಕು. ಈ ಉಲ್ಕಾಶಿಲೆಗಳಲ್ಲಿ ಸುಮಾರು ೧೩-೨೦ ಶತಾಂಶದಷ್ಟು ಇಂಗಾಲವಿರುತ್ತದೆ. ಮಿಕ್ಕದ್ದೆಲ್ಲ ಜಲಜನಕ, ಸಾರಜನಕ, ಗಂಧಕ, ಕ್ಲೋರೀನ್ ಮತ್ತಿತರ ಮೂಲಾಣುಗಳನ್ನು ಹೊಂದಿರುತ್ತದೆ. ಅವುಗಳಲ್ಲಿರುವ ಜೈವಿಕ ಸಂಯುಕ್ತಗಳನ್ನು ಯಾವ ಜೀವಿಗಳೂ ರೂಪಿಸಲಾರವೆಂದು ತನಿಖೆಗಳಿಂದ ಕಂಡುಬಂದಿದೆ.

ಇಂಗಾಲ ಸಂಯುಕ್ತ ಉಲ್ಕಾ ಶಿಲೆಗಳು ರಂಧ್ರಮಯವಾಗಿರುತ್ತವೆ. ಅವು ವಾತಾವರಣದಲ್ಲಿ ಹಾಯುವಾಗ ಗಾಳಿಯ ಸೂಕ್ಷ್ಮ ಜೀವಿಗಳನ್ನು ಹೀರಿಕೊಳ್ಳಲೂಬಹುದು. ಸೋವಿಯತ್ ನಾಡಿನ ವಿಜ್ಞಾನಿಗಳಾದ ಅಲೆಗ್ಸಾಂಡರ್ ಇಂಡೆನೆಲೆಸ್ಕಿ ಮತ್ತು ಸಾಚಿತ್ ಅಬೀಜೋವ್‌ರವರ ಸಂಶೋಧನೆಗಳಿಂದ ಇದೇ ವಿಷಯ ವ್ಯಕ್ತಪಟ್ಟಿದೆ. ಆದುದರಿಂದ ಉಲ್ಕಾಶಿಲೆಗಳು ಸೂಕ್ಷ್ಮ ಜೀವಿಗಳನ್ನು ತರುತ್ತವೆಯೆಂಬ ವಾದವನ್ನು ನಂಬುವುದಕ್ಕೆ ಯಾವ ಆಧಾರಗಳೂ ಇಲ್ಲವಾದರೂ ಅವುಗಳಲ್ಲಿ ಅಜೀವ ಜನಿತ ಜಟಿಲ ಜೈವಿಕ ಸಂಯುಕ್ತಗಳಿರಬಹುದೆಂಬ ಮಾತು ನಿರ್ವಿವಾದವಾದುದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ. ಪ್ರತ್ಯೇಕ)

ನವಭಾರತ ಪುಸ್ತಕ ಭಂಡಾರ, ಉಡುಪಿ.

ನುಡಿಮುತ್ತುಗಳು

ಏನಿರಬೇಕು ಏನಿರಬಾರದು ಎಂದು ತಿಳಿದುಕೊಳ್ಳುವುದು ಅರಿವು. ಏನಿದೆ ಏನಿಲ್ಲ ಎಂದು ತಿಳಿಯದಿರುವುದೇ ಮರೆವು. ಅರಿವು ದೇವರ ಕುರುಹು, ಮರೆವು ಜೀವನ ಕುರುಹು.

—ದ. ರಾ. ಬೇಂದ್ರೆ.

o o o

ಒಂದು ರಾಷ್ಟ್ರದ ನಿಜವಾದ ಸಂಪತ್ತು ಆ ದೇಶದ ಜನರ ಮೇಲಿರುತ್ತದೆ.

—ರಿಚರ್ಡ್ ಎಲ್ಡಿಂಗ್ಟನ್.

o o o

ಹೇಗೆ ಓರ್ವ ಮಾನವನು ಸಾಯುತ್ತಾನೆಂಬುದು ಮುಖ್ಯವಲ್ಲ, ಹೇಗೆ ಆತನು ಬಾಳಿದನೆಂಬುದು ಗಮನೀಯವಾಗಿದೆ.

—ಡಾ| ಜೋನ್ಸನ್

o o o

ಹೆಂಗಸಿಗೆ ಗಂಡನ ಹೃದಯದಲ್ಲಿ ಎಂದು ಸ್ಥಿರವಾದ ಜಾಗ ಸಿಕ್ಕುವುದೋ ಅಂದೇ ಅವಳು ಗೃಹಿಣಿಯಾಗುವುದು.

— ಶ್ರೀನಿವಾಸ.

o o o

ನಾವು ಮೊದಲು ಘಟನೆಗಳನ್ನು ಅರ್ಥ ಮಾಡಿಕೊಳ್ಳೋಣ. ಅನಂತರ ಅದಕ್ಕಿರುವ ಕಾರಣಗಳನ್ನು ಶೋಧಿಸಬಹುದು.

—ಎರಿಸ್ಟಾಟಲ್.

o o o

ಜೀವನವೆ ಸಾಹಿತ್ಯ

— ಪುರಾಣಿಕ.

o o o

ನೊಂದ ಜೀವಕ್ಕೆ ಪ್ರೀತಿಯು ಮಾತು ಔಷಧಿಯೆ? ಸಹಾನುಭೂತಿ ನೋವನ್ನು ಶಮನ ಮಾಡುವ ಬದಲು ಕೆಡಿಸುತ್ತದೆ.

— ಬೇಚಿ.

ಸಂಗ್ರಹ: ಸಚಿತ್ರ, ಯೋಶಸ್ಕ.

ಹಾಲಾಹಲದಿಂದ ಬಲುದೂರ...

(ನಾಲ್ಕನೇ ಪುಟದಿಂದ)

"ಅಲ್ರೀ ಅದೇನೂ ಘಟನೆ—ವಿಷಯ ಅಂದ್ರಲ್ಲ. ಏನ್ರೀ ಅಂತಹುದು...ನಿಮ್ಮಂತಹವರನ್ನು ಕಂಡರೆ ಮೊದಲೇ ಅಧಿಕಾರ ಚಲಾಯಿಸುತ್ತಾರೆ ಅದರಲ್ಲಿ ಸ್ವಲ್ಪ ವಿರೋಧಿಗಳಾಗಿ ಅವರ ತಾಳಕ್ಕೆ ಕುಣಿಯದಿದ್ದರಿನ್ನೇನು ಹರಾಜು ಹಾಕುತ್ತಾರೆ." ಎಂದಳು ಕಮಲ.

"ನನ್ನನ್ನು ಹರಾಜು ಹಾಕಿದರೆ ಬಲಿ ಕಟ್ಟಿಕೊಂಡು ಕೊಳ್ಳಲು ನೀನೇ ಇದ್ದೀಯಲ್ಲ" ಎಂದು ಹೆಂಡತಿಯನ್ನು ಅಭಿಮಾನದಿಂದ ನೋಡಿದ ರಂಗಣ್ಣ ಪತ್ನಿಗೆ ಹಿಂದಿನ ಸಂಗತಿಯನ್ನು ತಿಳಿಸಲು ಪ್ರಾರಂಭಿಸಿದ.

೦ ೦ ೦

ಮಿಕ್ಕೆಲ್ಲರಂತೆ ಇಂಜನಿಯರರನ್ನೂ ರಾಷ್ಟ್ರದ ಅಡಿಗಲ್ಲು ಎನ್ನುವ ಸಂಗತಿ ಎಲ್ಲರಿಗೂ ಗೊತ್ತು ಕಮಲ. ನನಗೆ ಹಣ ಸಂಪಾದಿಸಿ ಕೆಲವು ಆದರ್ಶಗಳಿಂದ ಬಾಳಬೇಕೆಂಬ ಆಸೆ ಇದ್ದ ಹಾಗೆ ರಾಷ್ಟ್ರೋನ್ನತಿಯ ಕಾರ್ಯದಲ್ಲಿ ಸಮಭಾಗಿಯಾಗಿ ನಿಸ್ಪೃಹತೆಯಿಂದ ದುಡಿಯಬೇಕೆನ್ನುವ ಆಸೆ ಮೊದಲಿಂದಲೂ ಇತ್ತು. ಆದಕ್ಕೆಂದೇ ಮನೆಯಲ್ಲಿ ಬಡತನದ ರುದ್ರ ನೃತ್ಯ ನಡೆಯುತ್ತಿದ್ದರೂ ಇಂಜನಿಯರಿಂಗ್ ಕಾಲೇಜಿಗೆ ಸೇರಿ ಬಂದ ಕಷ್ಟನಷ್ಟಗಳನ್ನು ಅನುಭವಿಸಿ ಬಿ. ಇ. ಪದವೀಧರನಾದೆ.

ಪದವಿ ಪಡೆದ ಕೆಲವು ತಿಂಗಳುಗಳಲ್ಲಿಯೇ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸಕ್ಕೆ ನಿಂತೆ. ಇದೆಲ್ಲ ನಿನಗೆ ಗೊತ್ತಿರುವ ಸಂಗತಿಯೇ, ಬೆಂಗಳೂರಿನಿಂದ ಇಲ್ಲಿಗೆ ವರ್ಗವಾಯಿತು.

ನಾನು ಎಲ್ಲಿದ್ದರೂ ಅಧಿಕಾರ, ದೊಡ್ಡಸ್ತಿಕೆಯ ಮಾತುಗಳಿಗೆ ಅಂಜದ ಆಸೆಗೆ ಮನಸ್ಸು ಕೊಟ್ಟವನಲ್ಲ. ಈ ಕಾಲದಲ್ಲಿ ಇದೇ ದೊಡ್ಡ ದ್ರೋಹ ಕಮಲ. ಚತುರೋಪಾಯಗಳಿಂದಲೂ ನನ್ನನ್ನು ತಮ್ಮ ಕಾರಸ್ಥಾನಕ್ಕೆ ಸೇರಿಸಿಕೊಳ್ಳಲು ಹವಣಿಸಿದರು ಹಲವಾರು ಜನ. ಪುಣ್ಯವಶಾತ್ ಎಲ್ಲದರಿಂದಲೂ ಪಾರಾದೆ.

ದೇಶದ—ರಾಷ್ಟ್ರದ ಉದ್ಧಾರಕ್ಕಾಗಿಯೇ ರೂಪುಗೊಂಡು, ದಕ್ಷತೆಯಿಂದ ದುಡಿಯಬೇಕಾಗಿರುವ ಲೋಕೋಪಯೋಗಿ ಇಲಾಖೆಯಲ್ಲಿ ನಡೆಯುತ್ತಿರುವಷ್ಟು ಅನ್ಯಾಯ, ಪ್ರಸಂಗಗಳು ಎಲ್ಲಿಯೂ ನಡೆಯುತ್ತಿಲ್ಲ. ರಾಷ್ಟ್ರದ ಉದ್ಧಾರವಾಗಬೇಕು, ಜನತೆಗೆ ಶಾಂತಿ ಸುಖ ಬೇಕು! ಹೇಗೆ ಬರುತ್ತದೆ?

ಇಲ್ಲಿಯ ಎಕ್ಸಿಕ್ಯೂಟಿವ್ ಇಂಜನಿಯರ್ ಹಾಗೂ, ಮಿಕ್ಕ ಅಧಿಕಾರಿ ವರ್ಗದವರು ಮತ್ತು ಕಂಟ್ರಾಕ್ಟರುಗಳು ನಾನು ಇಲ್ಲಿಗೆ ಬಂದಂದಿನಿಂದಲೂ ನನ್ನನ್ನು ತಮ್ಮ ಬಲೆಗೆ ಕೆಡವಲು ಹವಣಿಸಿದರು. ಉಪಾಯಾಂತರದಿಂದ ಪಾರಾಗಿ ಬಂದೆ.

ಒಂದು ತಿಂಗಳ ಹಿಂದೆ ಹೊಸದಾಗಿ ನಿರ್ಮಾಣವಾಗುತ್ತಿರುವ ರಸ್ತೆಯೊಂದನ್ನು ಪರೀಕ್ಷಿಸಿ ಸರ್ಕಾರಕ್ಕೆ ವರದಿ ಒಪ್ಪಿಸಲು ಹೋದೆ. ಅಲ್ಲಿ ನಾನು ಕಂಡ ದೃಶ್ಯ ಕಳೆ ತಗ್ಗಿಸುವಂತಿತ್ತು. ರಸ್ತೆಯ ಕಂಟ್ರಾಕ್ಟರು ಹಾದಿಯಲ್ಲಿ ಬರುವ ಹಳ್ಳ ಒಂದಕ್ಕೆ ಸೇತುವೆ ನಿರ್ಮಿಸಲು ಸರ್ಕಾರದಿಂದ ಒಂದಕ್ಕೆ ಎರಡಾಗಿ ಸಿಮೆಂಟು, ಕಬ್ಬಿಣ, ಕಲ್ಲು ಮೊದಲಾದವುಗಳಿಗೆ ಹಣ ಪಡೆದುಕೊಂಡು ಸೇತುವೆಯನ್ನು ಅಲ್ಪ ಹಣದಲ್ಲಿಯೇ ಕಟ್ಟಿ ಮುಗಿಸಿದ್ದರು. ಆ ವರೆವಿಗೆ ನಿರ್ಮಾಣಗೊಂಡಿದ್ದ ರಸ್ತೆಯ ಪರಿಸ್ಥಿತಿಯೂ ಅದೇ ಆಗಿತ್ತು.

ಅವ್ಯವಸ್ಥಿತ ಕೆಲಸವನ್ನು ಕಂಡು ವಿವರಣೆ ಕೊಡುವಂತೆ ಕೇಳಿದೆ. ಕಂಟ್ರಾಕ್ಟರ್ ವಿವರಣೆಕೊಡುವ ಬದಲು ಮೂರು ಹಸಿರುನೋಟು ಕೊಟ್ಟ. ಹಣವನ್ನು ಮುಖಕ್ಕೆ ಎಸೆದು 'ನಾನು ಎಲ್ಲರಂತೆ ಲಂಚಕೋರನಲ್ಲ, ನಿಮ್ಮ ಕೆಲಸವನ್ನು ಸರಕಾರಕ್ಕೆ ತಿಳಿಸುತ್ತೇನೆ' ಎಂದೆ.

'ಸ್ವಾಮಿ, ನಿಮ್ಮದು ಬಿಸಿರಕ್ತ.... ನಿಮಗೆ ಪ್ರಪಂಚ ಗೊತ್ತಿಲ್ಲ... ಬಂದ ಲಕ್ಷ್ಮಿಯನ್ನು ತಳ್ಳಬೇಡಿ... ಇಷ್ಟೇ ಅಲ್ಲ ಮುಂದೆ ಮರ್ಯಾದೆ ಮಾಡುತ್ತೇನೆ .... ನನ್ನ ಮಾತು ಕೇಳಿ... ಯಾವ ವಿಷಯವನ್ನೂ ಹೊರಗೆ ಬಿಡಬೇಡಿ....ಒಂದು ವೇಳೆ ನೀವೇನಾದರೂ ಮುಂದಕ್ಕೆ ಹೋದರೆ ನಿಮಗೆ ತೊಂದರೆ.... ನನಗೂ ಸಾಕಷ್ಟು ಅಧಿಕಾರಿಗಳ, ಪ್ರಭಾವಶಾಲಿಗಳ ಬೆಂಬಲವಿದೆ. ಹತ್ತು ವರ್ಷದಿಂದ ಈ ಕೆರೆಯಲ್ಲಿ ಈಜಿದ್ದೇನೆ' ಎಂದು ನಕ್ಕ ಕಂಟ್ರಾಕ್ಟರ್.

ತನಿಖೆ ನಡೆಸಿ ಹಿಂತಿರುಗಿ ಇಂಜನಿಯರ್ ಅವರಿಗೆ ವರದಿಯನ್ನು ಸಲ್ಲಿಸಿದೆ. ಅವರು ವಕ್ರದೃಷ್ಟಿಯಿಂದ ನೋಡಿದರಷ್ಟೆ—ಏನೂ ಹೇಳಲಿಲ್ಲ. ಮರುದಿನ ಅವರ ಕಛೇರಿಯಿಂದ ಕರೆ ಬಂತು. ಹೋಗಿ ಕಂಡೆ.

"ಕಂಟ್ರಾಕ್ಟರ್ ವೀರಣ್ಣ ಗೌಡರ ಸಂಗಡ ನೀವು ವಿರೋಧ ಕಟ್ಟಿಕೊಳ್ಳಬಾರದಿತ್ತು ರಂಗಣ್ಣನವರೇ .... ನಿಮ್ಮದು ಹುಡುಗು ಬುದ್ಧಿ.... ದೇಶಕ್ಕೆ ದೇಶವೇ ಅನೀತಿಯಲ್ಲಿ ತೇಲುತ್ತಿದೆ. ನೀವೊಬ್ಬರು ನೀತಿವಂತರಾದರೇನು ಪ್ರಯೋಜನ? ಈ ವರದಿಯಿಂದ ಅವರಿಗೇನು ನಷ್ಟವಿಲ್ಲ.... ವರದಿಯೇ ಮಂಗಮಾಯವಾಗುತ್ತದೆ. ಮುಂದೆ ನಿಮಗೇ ತೊಂದರೆ. ನಮಗೇನಂತೆ. ನಾವು ಸರ್ಕಾರದ ಕೋಪಕ್ಕೆ ಒಳಗಾಗಬಾರದು... ಕಂಟ್ರಾಕ್ಟರರ ವಿರೋಧಕ್ಕೂ ಒಳಗಾಗ ಬಾರದು" ಎಂದರು ಜೀವಮಾನವನ್ನೆಲ್ಲಾ ಸರ್ಕಾರಿ ಸೇವೆಯಲ್ಲಿಯೇ ಮುಗಿಸಿದ್ದ ಇಂಜನಿಯರ್.

"ಆತ್ಮಕ್ಕೆ ವಿರೋಧವಾದ ಯಾವ ಕೆಲಸವನ್ನೂ ಮಾಡಲಾರೆ ಸಾರ್. ಬೀದಿ ತಿರುಗಿ ಭಿಕ್ಷೆ ಬೇಡಿ ಜೀವಿಸಿದರೂ ಚಿಂತೆ ಇಲ್ಲ... ಇನ್ನೊಬ್ಬರು ಕೊಡುವ ಹಣಕ್ಕೆ ಕೈ ಒಡ್ಡುವುದಿಲ್ಲ... ಅನ್ಯಾಯ ಅನೀತಿಯನ್ನು ಕಂಡು ಸೈರಿಸುವುದೂ ಇಲ್ಲ. ಎಲ್ಲರಿಗೂ ಹಣ, ಅಧಿಕಾರ ಕಾಪಾಡಬಹುದು. ಆದರೆ ನನ್ನನ್ನು ಕಾಪಾಡುವುದು ನನ್ನ ಧರ್ಮ ನೀತಿಯೊಂದೇ" ಎಂದೆ.

"ನಿಮಗೆ ಹೆಚ್ಚಿಗೆ ಏನೂ ಹೇಳಲಾರೆ ರಂಗಣ್ಣ. ನಿಮಗೆ ದೇವರು ಒಳ್ಳೆಯದು ಮಾಡಲಿ... ನಿಮ್ಮ ಆದರ್ಶ ನಿಮ್ಮನ್ನಗಲದಿರಲಿ. ಹಾಗೆಯೇ ಯಾವ ಕಾಲಕ್ಕೆ ಏನೋ ಮುಂದಿನ ಪ್ರಯಾಣಕ್ಕೆ ಸಿದ್ಧರಾಗಿರಿ" ಎಂದು ಅಂದೇ ಇಂಜನಿಯರ್ ನನ್ನನ್ನು ಎಚ್ಚರಿಸಿದ್ದರು.

ಇಂಜನಿಯರ್ ಹೇಳಿದ ಮಾತು ನಿಜವಾಯಿತು ಕಮಲ ಕಂಟ್ರಾಕ್ಟರ್ ವೀರಣ್ಣ ಗೌಡ ಬಿಡದೆ ತನ್ನ ಸೇಡನ್ನು ತೀರಿಸಿಕೊಂಡ. ನನ್ನ ಸತ್ಯ ನಿಷ್ಠೆಗೆ ಸರ್ಕಾರದಿಂದ ಪ್ರತಿಫಲವೂ ದೊರೆಯಿತು. ನನಗೆ ಬಂದಿರುವುದು ವರ್ಗದ ಆಜ್ಞೆಯಲ್ಲ ಕಮಲ ನನ್ನ ಕಾರ್ಯದಕ್ಷತೆಗೆ ಸರ್ಕಾರದ ಪುರಸ್ಕಾರ.

ಯೋಗ್ಯತೆ, ಪ್ರತಿಭೆ, ಸತ್ಯನಿಷ್ಠ ದುಡಿಮೆಗೆ ಅವಕಾಶ, ಸ್ಥಾನ— ಮಾನವಿಲ್ಲದ ನಾಡಿನಲ್ಲಿ ಎಷ್ಟು ದುಡಿದರೆ ಏನು ಪ್ರಯೋಜನ ಕಮಲ? ಇದನ್ನರಿತೇ ನನ್ನ ಬಹು ಸಂಖ್ಯಾತ ಗೆಳೆಯರು ಬೊಂಬಾಯಿ ಸೇರಿಕೊಂಡರು. ನಾನು ಹಾಗೆ ಮಾಡಬಹುದಿತ್ತು. ಇಂದು ಹೋದರೂ ಕೆಲಸ ದೊರೆಯುತ್ತದೆ; ಆದರೆ ವೃದ್ಧರಾಗಿ ಹಳ್ಳಿಯಲ್ಲಿರುವ ತಂದೆ ತಾಯಿಗಳಿಗೆ, ಓದುತ್ತಿರುವ ತಮ್ಮಂದಿರಿಗೆ ಸಹಾಯಮಾಡುವ ಉದ್ದೇಶ್ಯ ಇಲ್ಲಿಯೇ ನಿಂತೆ" ಎಂದು ಅಲ್ಲಿಗೇ ನಿಲ್ಲಿಸಿದ ರಂಗಣ್ಣ ಸ್ವಲ್ಪಕಾಲ ಸುಮ್ಮನೆ ಕುಳಿತ.

೦ ೦ ೦

"ಈಗ ನೀನೇ ಹೇಳು ಕಮಲ ನಾನು ಅನುಸರಿಸಿದ ಮಾರ್ಗ ತಪ್ಪೇ? ನಾನು ಆ ವರಅಡಿಯಾಳಂತೆ ವರ್ತಿಸಿ, ಲಂಚ ಸ್ವೀಕರಿಸಬೇಕಿತ್ತೇ? ನನ್ನ ಕನಸು ಕನಸೇ ಆಯಿತು ಕಮಲ. ಆದರ್ಶದ ಗೋಪುರ ಉರುಳಿಬಿತ್ತು...ನನ್ನ ಅನುಸರಣೆ ಸಾಧುವಲ್ಲವೆ? ಹೇಳು ಕಮಲ... "ಎಂದು ಉದ್ವಿಗ್ನನಾಗಿ ನುಡಿದ ರಂಗಣ್ಣ.

"ನಿಮ್ಮದು ತಪ್ಪು ಎಂದು ಯಾವ ಬಾಯಿಂದ ಹೇಳಲಿ. ನಿಮ್ಮ ಆದರ್ಶ, ಧರ್ಮ ನೀತಿಗಳೇ ನಿಮ್ಮನ್ನು ಬೆಂಗಾವಲಾಗಿ ಕಾಯುತ್ತವೆ. ಇದಕ್ಕಿಂತಲೂ ಹೆಚ್ಚಾಗಿ ನಾನೇನೂ ಹೇಳಲಾರೆ" ಎಂದಳು ಕಮಲ.

"ಇನ್ನು ಪ್ರಯಾಣದ ಸಿದ್ಧತೆಯಾಗಬೇಕಲ್ಲ ಕಮಲ."

"ಎಲ್ಲ ಆಗುತ್ತದೆ. ನಿಮಗೇಕಿಷ್ಟು ಆತುರ"

"ಮೊದಲು ಈ ಸ್ಥಳ, ಅಧಿಕಾರಿಂದಿಂದ ಬಿಡುಗಡೆಯಾದರೆ ನನಗೆ ಪುನರ್ಜನ್ಮ ಬರುತ್ತದೆ."

"ಕೂಲಿ ಮಾಡಿ ಜೀವಿಸಿದರೂ ಸಂತೋಷ....ಆದರೆ ಹಾಲಾಹಲಕ್ಕಿಂತಲೂ ಮಿಗಿಲಾದ ಲಂಚ ಎನ್ನುವ ವಿಷದಿಂದ ನೀವು ದೂರವಿದ್ದೀರಲ್ಲ, ಅಷ್ಟೇ ನನಗೆ ಹೆಮ್ಮೆ. ಕೆಲದಿನ ತೊಂದರೆಯಾಗಬಹುದು.... ಅನುಭವಿಸಿದರಾಯ್ತು.....ನೀವು ಮೊದಲು ರಾಜಿನಾಮೆ ಬರೆದಿಟ್ಟು ಬೊಂಬಾಯಿಗೆ ಪತ್ರ ಹಾಕಿ....ದೇವರಿಟ್ಟಂತಾಗಲಿ" ಎಂದು ತಡೆಬಡೆ ಇಲ್ಲದೆ ಹೇಳಿದಳು ಕಮಲ.

ರಂಗಣ್ಣನಿಗೆ ಹೆಂಡತಿಯ ಮಾತಿನಿಂದ ಅಮಿತಾನಂದವಾಯಿತು. ಹಿಂದಿನ-ಮುಂದಿನ ಜೀವನದ ಚಿತ್ರ ಕಣ್ಣ ಮುಂದೆ ಸುಳಿಯಿತು. ಅವ್ಯಕ್ತ ಶಕ್ತಿಯೊಂದು ಅವನಿಂದ ಮಾತನಾಡಿಸಿತು. "ನೀನು ಈ ವಿಷಯ ಕೇಳಿ ಏನೆನ್ನುವೆಯೋ ಎಂದುಕೊಂಡಿದ್ದೆ ಕಮಲ. ಭ್ರಷ್ಟಾಚಾರ ಅನೀತಿಗಳ ಬಗೆಗೆ ನನಗಿಂತಲೂ ಹೆಚ್ಚು ತಿರಸ್ಕಾರ ನಿನಗಿದೆ" ಎಂದ ರಂಗಣ್ಣ.

ಕಮಲ ಮುಖದಲ್ಲಿ ಮಂದಹಾಸ ಸುಳಿಯಿತು.

"ಸಾಕು.... ನನಗೆ ನಿಮ್ಮ ಹೊಗಳಿಕೆ ಬೇಕಿಲ್ಲ... ಅನೀತಿ—ಅಧರ್ಮ—ಅಸತ್ಯಗಳಿಗೆ ಬಲಿಯಾಗಿ ತಲೆಬಾಗಬಹುದು, ಆದರೆ ಅವುಗಳಿಂದ ಮುಕ್ತರಾಗಲು ಸಾಧ್ಯವಿಲ್ಲ. ಮಾನವನ ರಕ್ಷಣೆಗೆ ಅವನು ಅನುಸರಿಸಿದ ಸತ್ಯ ಧರ್ಮಗಳೇ ವಜ್ರಕೋಟೆಗಳಂತೆ ಕಾಪಾಡುತ್ತವೆ. ಇಷ್ಟು ಸಾಕು ಉಳಿದ ಮಾತು ನಾಳೆಗೆ ನಿಶ್ಚಿಂತೆಯಿಂದ ಮಲಗಿ ನಿದ್ದೆ ಮಾಡಿ" ಎಂದು ಮಾತಿಗೆ ಮಂಗಳ ಹಾಡಿದಳು ಕಮಲ.

ರಂಗಣ್ಣನಿಗೆ ಅನಿರ್ವಚನೀಯ ಆನಂದವಾಗಿತ್ತು. ಅಶಾಂತಿಯ ಅಗ್ನಿಕುಂಡದಲ್ಲಿ ಬೆಂದಿದ್ದ ಅವನ ಆತ್ಮಪಕ್ಷಿ ಶಾಂತಿ ವರ್ಷದಿಂದ ಪುನಶ್ಚೇತನ ಪಡೆದು ಕಲ್ಪನಾಕಾಶದಲ್ಲಿ ತೇಲಲು ಹೊರಟಿತ್ತು.

ಗಮನಾರ್ಹ ಬದಲಾವಣೆ ! ಠೇವಣಾತಿದಾರರಿಗೆ ಸುಸಂದರ್ಭ !!

ನಿರಖು ಠೇವಣಿಗಳ ಮೇಲೆ ಪರಿಷ್ಕರಿಸಿದ ಆಕರ್ಷಣೀಯ ಬಡ್ಡಿ ದರ !!!

91 ದಿನಗಳಿಗೆ ಮೇಲ್ಪಟ್ಟ 6 ತಿಂಗಳ ವಳಗಿನ ಅವಧಿಯ ಠೇವಣಾತಿಗಳಿಗೆ—	4¾%
6 ತಿಂಗಳಿಂದ ಮೇಲ್ಪಟ್ಟ 1 ವರ್ಷ ವಳಗಿನ ಅವಧಿಯ ,,	5¼%
1 ವರ್ಷದಿಂದ ,, 2 ವರ್ಷಗಳ ವಳಗಿನ ,, ,,	5½%
2 ,, ,, 3 ,, ,, ,,	5¾%
3 ,, ,, 5 ,, ,, ,,	6%
5 ,, ,, 7 ,, ,, ,,	6¼%
7 ,, ,, 9 ,, ,, ,,	6½%
9 ವರ್ಷಗಳಿಗೆ ಮೇಲ್ಪಟ್ಟು	6¾%

5 ವರ್ಷ ವ ಅವುಗಳಿಗೆ ಮೇಲ್ಪಟ್ಟ ಅವಧಿಯ ಧಾರ್ಮಿಕ ಸಂಸ್ಥೆಗಳ ಠೇವಣಾತಿಗಳಿಗೆ 6¾%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ನೀಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಯಾವುದೇ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು:-

"ವಿಜಯ ಬ್ಯಾಂಕ್ ಬಿಲ್ಡಿಂಗ್", ಲೈಟ್‌ಹೌಸ್ ಹಿಲ್ ರೋಡ್,

ಮಂಗಳೂರು – 3.

ನಮ್ಮ-ನಮ್ಮವರು

ಡಾ। ರಾಧಾಕೃಷ್ಣನ್

ದೇಶದಲ್ಲಿ ಆಹಾರ ಪರಿಸ್ಥಿತಿ ಇನ್ನೂ ಚಿಂತಾಜನಕವಾಗಿಯೇ ಇರುವುದು ಎಲ್ಲರಿಗೂ ಆಶ್ಚರ್ಯವನ್ನು ಉಂಟು ಮಾಡಿದೆ. ಸುಗ್ಗಿಯ ಬಳಿಕವಾದರೂ ಆಹಾರ ಸಾಮಗ್ರಿಗಳ ಅಭಾವ ತೊಲಗಿ, ಬೆಲೆಗಳು ಇಳಿಮುಖವಾಗಬಹುದೆಂಬ ಆಶೆಯನ್ನು ಜನರು ತಾಳಿದ್ದರು ಆದರೆ ಪರಿಸ್ಥಿತಿ ಮಾತ್ರಾ ಹಾಗೆಯೇ ಮುಂದುವರಿಯುತ್ತಿದೆ. ಜೀವನಾವಶ್ಯಕ ವಸ್ತುಗಳ ಬೆಲೆಯು ಕಳೆದ ವರ್ಷಕ್ಕಿಂತ ದ್ವಿಗುಣಿತವಾಗಿದೆಯೆಂದರೆ, ಪರಿಸ್ಥಿತಿ ಯಾವ ಮಟ್ಟ ಮುಟ್ಟಿದೆ ಎಂದು ತಿಳಿಯಬಹುದು.

ಈ ಪರಿಸ್ಥಿತಿಯನ್ನು ಸರಕಾರವಾದರೂ ನೋಡಿ ಕಣ್ಣು ಮುಚ್ಚಿ ಕುಳಿತಿಲ್ಲ, ಆಹಾರದ ಅಭಾವವು ಕೃತಕವಾದುದು, ಬೆಲೆ ಏರಿಕೆಗೆ ಕಾರಣ ಕಳ್ಳ ದಾಸ್ತಾನುಗಾರರೆಂದೇ ಅದೀಗ ಮನಗಂಡಿದೆ. ವರ್ತಕರನ್ನು ಮತ್ತು ದಾಸ್ತಾನುಗಾರರನ್ನು, ಸರಿಯಾದ ರೀತಿಯಲ್ಲಿ ವರ್ತಿಸುವಂತೆ ಹಲವು ಬಾರಿ ರಾಷ್ಟ್ರನಾಯಕರು ಕೇಳಿಕೊಂಡರೂ, ಅವರಲ್ಲಿ ಹಲವರು ಇನ್ನೂ ಲಾಭಬಡುಕತನದಲ್ಲೇ ಮುಳುಗಿರುವುದು ಕಂಡು ಬಂದಿದೆ.

ಈ ಎಲ್ಲಾ ಪರಿಸ್ಥಿತಿಯನ್ನು ಮನಗಂಡ ರಾಷ್ಟ್ರಪತಿಗಳು ಅವಶ್ಯಕಸಾಮಗ್ರಿಗಳ ತಿದ್ದುಪಡಿಶಾಸನವನ್ನು ಈಗಿಂದೀಗಲೇ ಜ್ಯಾರಿ ಮಾಡುವ ಸುಗ್ರೀವಾಜ್ಞೆಯೊಂದನ್ನು ಹೊರಡಿಸಿದ್ದಾರೆ. ಆಹಾರ ಅವಶ್ಯಕ ಸಾಮಗ್ರಿಗಳ ಕಾಯಿದೆ ಮತ್ತು ಆಹಾರ ಕ್ರಿಮಿನಲ್ ಕಾನೂನು ತಿದ್ದುಪಡಿ ಕಾಯಿದೆಗಳ ಅವಶ್ಯಕ ವಿಭಾಗಗಳಲ್ಲಿ ತಿದ್ದುಪಡಿ ಮಾಡಿಕೊಂಡಿರುವ ಈ ಶಾಸನವು ಜೀವನಾವಶ್ಯಕಸಾಮಗ್ರಿಗಳನ್ನು ಸಂಗ್ರಹಿಸುವವರನ್ನು ಮತ್ತು ಅವುಗಳಿಂದ ಲಾಭಗಳಿಸುವವರನ್ನು ಕ್ಷಿಪ್ರ ವಿಚಾರಣೆಗೊಳಪಡಿಸಬೇಕೆಂದು ಪ್ರಧಾನಿ ಶಾಸ್ತ್ರಿಯವರು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಮಾಡಿದ ಘೋಷಣೆಯನ್ನು ಕಾರ್ಯಗತಗೊಳಿಸುತ್ತದೆ. ಕಾಯಿದೆ ಉಲ್ಲಂಘನೆ ಮಾಡಿದವರಿಗೆ ಸಜೆ ಹಾಗೂ ದಂಡವನ್ನು ವಿಧಿಸುವ ಅಧಿಕಾರವನ್ನು ಈ ಶಾಸನವು ವಿಶೇಷ ಅಧಿಕಾರಿಗಳಿಗೆ ನೀಡುತ್ತದೆ.

ರಾಷ್ಟ್ರಪತಿಯವರು ಸುಗ್ರೀವಾಜ್ಞೆ ಹೊರಡಿಸುವಲ್ಲಿಯವರೆಗೆ ನಮ್ಮ ಆಹಾರ ಪರಿಸ್ಥಿತಿ ಮುಟ್ಟಿದುದು ತೀರಾ ವಿಷಾದಕರ. ನಮ್ಮ ರಾಷ್ಟ್ರಪತಿಗಳು ಅಧಿಕಾರಕ್ಕೆ ಬಂದಂದಿನಿಂದ ಸುಗ್ರೀವಾಜ್ಞೆ ಹೊರಡಿಸುವುದು ಇದೇ ಮೊದಲ ಬಾರಿ. ಈ ಆಜ್ಞೆಯು ನಿರೀಕ್ಷಿತ ಫಲವನ್ನು ತಂದುಕೊಟ್ಟಲ್ಲಿ, ಆಗ ಸುಗ್ರೀವಾಜ್ಞೆಗೆ ನಿಜವಾಗಿಯೂ ಬೆಲೆ ಇರುತ್ತದೆ. ಪರಿಣಾಮ ಏನೆಂದು ಕಾದು ನೋಡಬೇಕಷ್ಟೆ!

(ಮೂರನೇ ಪುಟದಿಂದ)

ಮುಂದುವರಿಯುವುದು— ಗೋವೆಯ ಜನತೆಯನ್ನೇ ಹೊಂದಿಕೊಂಡಿದೆಯೆಂಬುದನ್ನು ಯಾರೂ ಮರೆಯಬಾರದು. ಗೋವೆಯ ನಾಗರಿಕರು ನಿರ್ಧರಿಸಬೇಕಾದ ಕೇಂದ್ರ ಸರಕಾರವು ಮನ್ನಿಸಬೇಕಾದ ಈ ವಿಚಾರಗಳಿಗೆ ಚವಾಣರಾಗಲಿ, ನಾಯಕರಾಗಲಿ ಅಥವಾ ಮತ್ತಾರೇ ಇರಲಿ ಹೊಣೆಗಾರಿಕೆಯ ಸ್ಥಾನದಲ್ಲಿರುವ ವ್ಯಕ್ತಿಗಳು ಸಾರ್ವಜನಿಕವಾಗಿ ತಮ್ಮ ವ್ಯಕ್ತಿಗತ ಅಭಿಪ್ರಾಯಗಳನ್ನು ಹೊರಗೆಡಹದಿರುವುದು ಶ್ರೇಯಸ್ಕರ. ಉರಿಯುವ ಬೆಂಕಿಗೆ ತುಪ್ಪ ಸುರಿಯುವುದರಿಂದ ಬೆಂಕಿಯೆಂದಿಗೂ ಆರಲಾರದೆಂಬುದನ್ನು ಜವಾಬ್ದಾರಿಯುಳ್ಳವರು ಮರೆಯುವುದೆಂದರೆ, ಅದು ತುಂಬ ಶೋಚನೀಯವಲ್ಲವೇ?

ಬಿ. ಕಾಳಪ್ಪ ಶೆಟ್ಟಿ

ಜನತಾ ಸಂಪರ್ಕವೊಂದೇ ಜನತೆಯ ಒಲವು, ಪ್ರೀತಿ, ವಿಶ್ವಾಸಗಳನ್ನು ದೊರಕಿಸಬಲ್ಲುದು. ಈ ಮಾತು ಶ್ರೀ|| ಬಿ. ಕಾಳಪ್ಪ ಶೆಟ್ಟರ ವ್ಯಕ್ತಿತ್ವದಿಂದ ಸತ್ಯವೆಂದು ತೋರುತ್ತದೆ. ಅವರು ಆರಂಭದಿಂದಲೂ ಜನಸಾಮಾನ್ಯರ ನಿಕಟ ಸಂಪರ್ಕವಿಟ್ಟುಕೊಂಡವರು. ಅವರ ಕಷ್ಟ-ಸುಖಗಳಲ್ಲಿ ಭಾಗಿಯಾದವರು. ಆದುದರಿಂದಲೇ ಅವರು ಜನಸಾಮಾನ್ಯರ ಪ್ರೀತಿಗೆ ಪಾತ್ರರಾಗಿದ್ದಾರೆ. ಉಡುಪಿಗೆ ಸಮೀಪದ ಬೈಲೂರು ಪಂಚಾಯತ್ ಕ್ಷೇತ್ರಕ್ಕೊಳಪಟ್ಟ ಜನತೆ ಅವರನ್ನು ಒಂಭತ್ತು ವರ್ಷಗಳ ದೀರ್ಘ ಅವಧಿಯ ತನಕ ತನ್ನ ಅಧ್ಯಕ್ಷನನ್ನಾಗಿ ಆರಿಸಿ ಗೌರವಿಸಿತು. ಪ್ರಾಯಶಃ ಇಷ್ಟು ದೀರ್ಘಕಾಲ ಎಡೆಬಿಡದೆ ಒಂದು ಸ್ಥಾನದಲ್ಲಿದ್ದವರು ಕೆಲವೇ ಮಂದಿ.

ಕಾಳಪ್ಪ ಶೆಟ್ಟರು ಸಾರ್ವಜನಿಕ ರಂಗದಲ್ಲಿ ಸೇವೆ ಆರಂಭಿಸಿದ ರೀತಿಯೇ ಶ್ಲಾಘನೀಯವಾದುದು. ಪಂಚಾಯತ್ ಅಧ್ಯಕ್ಷರಾಗಿ ಅವರು ದೀರ್ಘ ಕಾಲದ ಅನುಭವ ಪಡೆದು, ಆ ಬಳಿಕ ಉಡುಪಿ ತಾಲೂಕು ಬೋರ್ಡಿನ ಸದಸ್ಯರೂ ಆದರು. ಇಂದು ಉಡುಪಿ ತಾಲೂಕು ಬೋರ್ಡಿನಲ್ಲಿ ಅವರು ಒಬ್ಬ ಪ್ರಭಾವೀ ಸದಸ್ಯರಾಗಿದ್ದಾರೆ. ಹಲವಾರು ಸ್ಟೇಂಡಿಂಗ್ ಕಮಿಟಿಗಳ ಸದಸ್ಯರೂ ಆಗಿದ್ದಾರೆ. ಉಡುಪಿ ತಾಲೂಕು ಬೋರ್ಡಿನ ಅಧ್ಯಕ್ಷ ಶ್ರೀ ಮಧ್ವರಾಜರಿಗೆ, ಹಲವು ಕಾರ್ಯಗಳಲ್ಲಿ ಸ್ವತಃ ಪೂರ್ವಕ ನೆರವಿತ್ತು ದುಡಿದ ವ್ಯಕ್ತಿ ಶ್ರೀ|| ಶೆಟ್ಟರು.

ಅವರೆಂದೂ ಅಧಿಕಾರ ಸ್ಥಾನ, ಉದ್ದೆಗಳನ್ನು ಬಯಸಿದವರಲ್ಲ. ಆದರೆ ಅವುಗಳೇ ಅವರ ಕಾಲ ಬಳಿಗೆ ಬರುತ್ತವೆ. ಕಳೆದ ಮಹಾ ಚುನಾವಣೆಯಲ್ಲಿ ಅವರು ಕಾಂಗ್ರೆಸ್ ಅಭ್ಯರ್ಥಿಯ ಯಶಸ್ಸಿಗಾಗಿ ದುಡಿದ ರೀತಿ, ಎಲ್ಲಾ ಕಾಂಗ್ರೆಸ್ ಕೆಲಸಗಾರರ ಮೆಚ್ಚುಗೆ ಪಡೆಯಿತು. ಅಂತಲೇ ಉಡುಪಿ ಮಂಡಲ ಕಾಂಗ್ರೆಸ್ ಅವರನ್ನು ತನ್ನ ಅಧ್ಯಕ್ಷನನ್ನಾಗಿ ಆರಿಸಿತು. ಈಗ ಉಡುಪಿ ಮಂಡಲ ಕಾಂಗ್ರೆಸಿನ ಅಧ್ಯಕ್ಷರಾಗಿ ಅವರು ದುಡಿಯುತ್ತಾರೆ.

ಉಡುಪಿಯಲ್ಲಿ ನಡೆಯುವ ಯಾವ ಸಾರ್ವಜನಿಕ ಕಾರ್ಯದಲ್ಲೂ ಶೆಟ್ಟರ ಕೈವಾಡವಿಲ್ಲದಿಲ್ಲ. ಕಳೆದ ಬಾರಿ ಉಡುಪಿಯಲ್ಲಿ ಜರಗಿದ ಮೋದಿಯವರ ನೇತ್ರ ಚಿಕಿತ್ಸಾ ಶಿಬಿರದ ಯಶಸ್ಸಿಗಾಗಿ ದುಡಿದವರಲ್ಲಿ ಇವರೂ ಒಬ್ಬರು. ಪ್ರಧಾನಿ ನೆಹರುರವರು ದಿವಂಗತರಾದುದರ ಸ್ಮಾರಕಾರ್ಥ ಉಡುಪಿಯಲ್ಲಿ ಬಡವರಿಗೆ ಅಕ್ಕಿಯನ್ನು ಹಂಚುವ ಕಾರ್ಯಕ್ರಮದ ನಿಯೋಜಕರಲ್ಲಿ ಇವರೂ ಒಬ್ಬರು. ಶ್ರೀ ಶೆಟ್ಟರಲ್ಲಿ ಕಾರ್ಯಮಾಡುವ ಯೋಗ್ಯತೆ, ಉತ್ಸಾಹ ಇದೆ. ಜನತೆಯ ಒಲವರಿತು ನಡೆಯುವ ಅವರು ಇನ್ನೂ ಹೆಚ್ಚಿನ ಜನಸೇವೆ ಮಾಡುವಂತಾಗಲಿ ಎಂದು ಹಾರೈಸುತ್ತೇವೆ.

ಎಲ್ಲೆಲ್ಲಿ ಏನೇನು?

"ನಿಮಗೆ ಸ್ವಂತ ಮನೆ" ಯೋಜನೆ

ಎಲ್. ಐ. ಸಿ ಯ "ನಿಮಗೆ ಸ್ವಂತ ಮನೆ" ಯೋಜನೆಯನ್ನು 16-10-64ರಿಂದ ಅಧಿಕ ಸ್ಥಳಗಳಿಗೆ ವಿಸ್ತರಿಸಲಾಗಿದೆ. ಈ ಸ್ಥಳಗಳು: ಕೊಲ್ಹಾಪುರ್, ಸಾಂಗ್ಲಿ, ಅಮ್ರಾವತಿ, ಭಾವ್‌ನಗರ್, ಜಾಮ್‌ನಗರ್, ಟುಟಿಕೋರಿನ್, ಗುಂಟೂರು, ವಿಶಾಖಪಟ್ಟಣಮ್, ಮಂಗಳೂರು, ಕಲ್ಲಿಕೋಟೆ, ಫರಿದಾಬಾದ್, ಕೋರ, ಧನ್‌ಬಾದ್, ರಾಂಚಿ, ದುರ್ಗ್, ಗೋರಖ್‌ಪುರ್, ಮತ್ತು ಗಝಿಯಾಬಾದ್, ಈ ಯೋಜನೆಯನ್ನು ಬೇಗನೆ ಗೋವ ಮತ್ತು ಗಾಂಧಿ ಧಾಮ್‌ಗೆ ವಿಸ್ತರಿಸಲಾಗುವುದು.

ಜನವರಿ 1, 1964ರಂದು 26 ಸ್ಥಳಗಳಲ್ಲಿ ಜಾರಿಗೆ ತಂದು ಅನಂತರ ಏಪ್ರಿಲ್ 1, 1964ರಂದು 80 ಅಧಿಕ ಸ್ಥಳಗಳಿಗೆ ವಿಸ್ತರಿಸಲಾಗಿರುವ "ನಿಮಗೆ ಸ್ವಂತ ಮನೆ" ಯೋಜನೆಯು ಒಳ್ಳೆಯ ಪ್ರತಿಕ್ರಿಯೆಯನ್ನುಂಟು ಮಾಡಿರುತ್ತದೆ.

ಕನ್ನಡ ಪ್ರಬಂಧ ಸ್ಪರ್ಧೆ

ಸುರತ್ಕಲ್ಲು ವಿಜಯ ಸಾಹಿತ್ಯ ಮಾಲೆಯ ವತಿಯಲ್ಲಿ ದಿ| ಸುರತ್ಕಲ್ಲು ಸುಬ್ಬರಾಯರ ಸ್ಮಾರಕಾರ್ಥ ಪ್ರಬಂಧ ಸ್ಪರ್ಧೆಯೊಂದು ಏರ್ಪಡಿಸಲಾಗಿದೆ "ಕನ್ನಡ ಕವಿತೆಗಳು" ಎಂಬ ವಿಷಯ ಹತ್ತು ಪುಟಗಳಲ್ಲಿ ಬರೆದು, ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳ ವಿದ್ಯಾರ್ಥಿ ವೃಂದವು ತಮ್ಮ ಮುಖ್ಯೋಪಾಧ್ಯಾಯರ ಪತ್ರದೊಂದಿಗೆ ನವಂಬರದೊಳಗೆ ಕಳುಹಿಸಬೇಕು. ಉತ್ತಮ ಪ್ರಬಂಧಕ್ಕೆ ಪ್ರತಿ ಭಾಗದಲ್ಲಿ ಹತ್ತು ರೂಪಾಯಿಗಳ ಬಹುಮಾನ ಕೊಡಲಾಗುವುದೆಂದು ಶ್ರೀ ಕೆ. ವೆಂಕಟರಾಯಾಚಾರ್ಯರು ತಿಳಿಸುತ್ತಾರೆ

ಶಂಕರ್ ವಿಟ್ಠಲ್ ಮೋಟರ್ ಕಂಪೆನಿಯವರ ಸ್ತುತ್ಯ ಕಾರ್ಯ

ಮಂಗಳೂರಿನ ಶಂಕರ್ ವಿಟ್ಠಲ್ ಮೋಟರ್ ಕಂಪೆನಿಯವರು 16 ವರ್ಷದೊಳಗಿನ ಸುಮಾರು 150 ವಿದ್ಯಾರ್ಥಿಗಳನ್ನು ನಂದಿಗುಡ್ಡೆಯಿಂದ ಶಾಲಾದಿನಗಳಲ್ಲಿ ಗಣಪತಿ ಹೈಸ್ಕೂಲ್ ಮಿಲಾಗ್ರಿಸ್ ಹೈಸ್ಕೂಲ್, ಸರಕಾರ ಹೆಮ್ಮಕ್ಕಳ ತರಬೇತಿ ಶಾಲೆಗಳಿಗೆ ಬೆಳಗ್ಗೆ ಮತ್ತು ಮಧ್ಯಾಹ್ನ ಧರ್ಮಾರ್ಥವಾಗಿ ಎರಡೆರಡು ಬಾರಿ ಪ್ರಯಾಣ ಸೌಕರ್ಯ ಒದಗಿಸುತ್ತಿರುವುದು ಸ್ತುತ್ಯಾರ್ಹವಾಗಿದೆ. ಇದು ಚಿಕ್ಕ ಮತ್ತು ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹೆಚ್ಚಿನ ಸೌಕರ್ಯ ಮತ್ತು ಭದ್ರತೆಯಾಗಿದೆ.

ಇಂಟರ್ ಮೀಡಿಯೇಟ್ ಪರೀಕ್ಷೆಗೆ ಉಡುಪಿಯಲ್ಲಿ ಪರೀಕ್ಷಾ ಕೇಂದ್ರ

ನವದೆಹಲಿಯ ಸೆಂಟ್ರಲ್ ಬೋರ್ಡ್ ಆಫ್ ಹಾಯರ್ ಎಜುಕೇಶನಿನ ಇಂಟರ್ ಆರ್ಟ್ಸ್ ಪರೀಕ್ಷಾ ಕೇಂದ್ರವೊಂದು ಉಡುಪಿಯಲ್ಲಿ ಮಂಜೂರಾಗಿದೆ. ಕರ್ನಾಟಕ ಮೊದಲಾದ ವಿಶ್ವವಿದ್ಯಾಲಯಗಳಿಂದ ಮಾನ್ಯತೆ ಪಡೆದ ಈ ಪರೀಕ್ಷೆ (1965) ಯಲ್ಲಿ ಕೂತು ಕೊಳ್ಳಬಯಸುವವರು ತಡಮಾಡದೆ, ಕಾರ್ಯದರ್ಶಿ, ಹಿಂದೀ ಪ್ರಚಾರ ಪರಿಷತ್ತು, ಸಂತೆಕಟ್ಟೆ ಉಡುಪಿ ಇವರನ್ನು ಮುಖತಃ ಭೆಟ್ಟಿ ಮಾಡಬಹುದು.

ಶ್ರೀ ಬಿ. ಎಂ ಕಾರ್ಯಪ್ಪನವರು ಮನಿಲಾದಲ್ಲಿ

ಅಂತರ್ ರಾಷ್ಟ್ರೀಯ ಕ್ಷಯರೋಗ ಯೂನಿಯನ್‌ನ ಈಸ್ಟರ್ನ್ ರೀಜನಲ್ ಕಮಿಟಿಯ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳೂ ಭಾರತದ ಕ್ಷಯರೋಗ ಸಮಿತಿಯ ಕಾರ್ಯದರ್ಶಿಗಳೂ ಆದ ಶ್ರೀ ಬಿ ಎಂ ಕಾರ್ಯಪ್ಪನವರು ಈಸ್ಟರ್ನ್ ರೀಜನಲ್ ಕಮಿಟಿಯ ಸಭೆಯಲ್ಲಿ ಭಾಗವಹಿಸುವುದಕ್ಕಾಗಿ ಮನಿಲಾ ಫಿಲಿಪ್ಪೈನ್ಸ್‌ಗೆ ತೆರಳಿರುತ್ತಾರೆ. ತಾ. 30-10-64ರಿಂದ ನವಂಬರ 2ರ ತನಕ ಜರಗಿದ ಈ ಸಭೆಯಲ್ಲಿ ಎಲ್ಲಾ ಪೌರ್ವಾತ್ಯ ದೇಶಗಳ 35 ಟಿ ಬಿ ಪರಿಣತರು ಭಾಗವಹಿಸಿದ್ದರು. ಫಿಲಿಪ್ಪೈನ್ಸ್‌ನ ಅಧ್ಯಕ್ಷ ಶ್ರೀ ಡಯೋಸ್ ಡಾಡೋ ಮಕಪಾಗಲ್ ಇವರಿಂದ ಈ ಸಭೆಯು ಉದ್ಘಾಟಿಸಲ್ಪಟ್ಟಿತು. ಶ್ರೀ ಕಾರ್ಯಪ್ಪನವರು ಮನಿಲಾದಿಂದ ಹಿಂದಿರುಗುವಾಗ ನೇರವಾಗಿ ಟಿ. ಬಿ. ಸಮಿತಿಗಳೂ ಅಲ್ಲಿಯ ವಿವಿಧ ಟಿ ಬಿ ಸಂಸ್ಥೆಗಳೂ ಹೇಗೆ ಕಾರ್ಯವೆಸಗುತ್ತವೆ ಎಂಬುದನ್ನು ಪರಿಶೀಲಿಸುವುದಕ್ಕಾಗಿ ಹೋಂಗ್‌ಕೋಂಗ್ ಮತ್ತು ಬ್ಯಾಂಗ್‌ಕೋಂಗ್‌ಗಳಿಗೆ ಸಂದರ್ಶನ ನೀಯುವರು

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 316/1964

ನರ್ಸಿ ಶೆಡ್ತಿ ಕೂಡಾ... ವಾದಿರು.

ಮತ್ತು

ಪ್ರತಿವಾದಿರು:—

3) ಸಾಧು ಶೆಟ್ಟಿ } ರಾಮಕ್ಕ ಶೆಡ್ತಿ ಮಕ್ಕಳು.
4) ಭುಜಂಗ ಶೆಟ್ಟಿ }

9) ಅಣ್ಣ ಶೆಟ್ಟಿ— ಶೇಷಮ್ಮ ಶೆಡ್ತಿ ಮಗ—3, 4 ನೇಯವರು ಉಡುಪಿ ತಾಲೂಕು ನಂಬ್ರ 52 ನೇ ಹೇರೂರು ಗ್ರಾಮದಲ್ಲಿಯೂ 9 ನೇಯವನು ಉಡುಪಿ ತಾಲೂಕು ಅರೂರು ಗ್ರಾಮದ ಕುರ್ಡುಂಜೆಯಲ್ಲಿಯೂ ಯಿರುವವರು—

ಸದ್ರಿ ಪ್ರತಿವಾದಿರಿಗೆ ಈ ನೂಲಕತಿಳಿಸಿ ಪಡಿಸುವುದೇನೆಂದ್ರೆ—

ವಾದಿ ಪ್ರತಿವಾದಿರ ಕುಟುಂಬದ ಬಾಬ್ತು ಸ್ಥಿರಚರ ಸೊತ್ತುಗಳಲ್ಲಿ ಹಿಸೆ ವಸ್ತ್ರಿರೆ ಸಿನ್ತಿಗಳು ಕೇಳಿ ವಾದಿರು ದಾಖಲು ಮಾಡಿದ ಮೇಲಂಡ ದಾವೆಯು ತಾ. 19-11-64ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಯಿಟ್ಟಿದೆ— ಉವಾದ ಪರಿಶುಮಾಧ್ದು ಯಿದ್ದರೆ ಆ ದಿವಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು,

K. Balachandra Rao
Advocate for Plaintiffs.

Udipi,, 10—11—64.

ನೆಹರೂ ಇಲ್ಲದ ಮಕ್ಕಳ ದಿನ

(ಎರಡನೇ ಪುಟದಿಂದ)

"ಪಾಪ, ಎಲ್ರು ಹಣೆ ಬರಹಾನೇ ಹೀಗೆ?"

'ಹೇಗೆ?'

'ದಾಕ್ಟ್ರು ಹೇಳಿದ್ದಾರೆ. ನೋಡಿ ಸತಿಯೂ ಸುತ ಹಿತರೆಲ್ಲ...'

'ನಿನ್ನ ದಾಕ್ಟ್ರನ್ನ ಆಚೆ ಬಿಸಾಡು. ಒಬ್ಬ ನನ್ನ ಉಸ್ರಿಗೆಗೆ ಏರಿಸಿ ತಿಪ್ಪೆಗೆಸೆದೂ ಆಯ್ತು ಇನ್ಯಾವನನ್ನ ತಾನೇ ಏರಿಸಲಿಕ್ಕಿದೆ?'

"ಯಾಂಸ್ನೋಂತಂದ್ರೆ.... ಕನಕದಾಸರ ನಾಲ್ಕನೆಯ ಶತಮಾನೋತ್ಸವ..."

"ಅಲ್ಲ, ಈ ದಾಸರಿಗೂ ನಾಲ್ಕನೆಯ ಶತಮಾನೋತ್ಸವಕ್ಕೂ ಏನೋಪ್ಪ ಬಾದರಾಯಣ ಸಂಬಂಧ?"

"ಏನೋಂತಂದ್ರೆ.... ದಾಸ ಜೀವದಲ್ಲಿರೋವಾಗ ನಾವು ಹುಟ್ಟಿಲ್ಲ. ಈಗ್ಲಾದ್ರೂ ಅವ್ರನ್ನ...."

"ಹೌದೇ ಓ ಸರಿಯಾಯ್ತು. ನಿನ್ನ ಪೀಠಿಕೆಯೆಲ್ಲಾ ಯಾಕೇಂತ ಯೋಚಿಸ್ತಾ ಇದ್ದೆ. ನೆಹ್ರೂ ಜಯಂತಿ ಬಂತು ಕಣೇ...."

ಸದ್ಯ ಈಗ್ಲಾದ್ರೂ ಬಂತಲ್ಲ ನೆನ್ಪು. ಮೂರು ಕಾಸಿನ ನೆನ್ಪನ್ನಾದ್ರೂ ಕೊಂಡು ಕೊಳ್ಳೇಂತ ಹೇಳೋಳಿದ್ದೆ...."

ಮತ್ಯಾಕೆ ಹೇಳ್ಲಿಲ್ಲ?"

"ಅಲ್ಲ ಒಂದು ಕಾಸೂನೂ ಇಲ್ದಿದ್ದ್ರೂಂತ ಗೊತ್ತಾದ ಮೇಲೆ...."

"ಏನಾದ್ರೂ ಮಾಡ್ತಿದ್ದೇನ್ನು...."

"ಮಾಡೋದೊಂದು ಮಣ್ಣು.... ಎಂಟ್ನೇ ತಾರೀಕಿಗೇನೇ ಒಂದು ಕಾಸೂ ಇಲ್ದಿದ್ದವ್ರಿಗೆ ಮತ್ತೆ ಮೂರು ಕಾಸಾದ್ರೂ ಯಾರು ಕೊಡ್ತಾರೇಂತ..."

"ಏ...ಸಾಕು ಸಾಕು ಕಣೇ ..ನಿನ್ನ ಹಣೆ ಬರಹವೇ ಹೀಗೆ...ನನ್ನನ್ನ...."

"ಶೂ....ಹಾಗೆಲ್ಲಾ ಹೇಳ್ಬೇಡಿ ... ಏನೋ ತಮಾಷೆಗೆ ಹೇಳ್ದೆ ಅಷ್ಟೆ... ಕೋಪಿಸ್ಕೋ ಬೇಡಿ ಮತ್ತೆ....ನೋಡಿ, ನಾಳ್ದು ಮಕ್ಕಳ ದಿನ ಅಲ್ವೆ?"

".... ...."

"ನೆಹ್ರೂ ಜಯಂತಿಯನ್ನ ಮಕ್ಳ ದಿನವನ್ನಾಗಿ ಆಚರಿಸ್ತೀವೆ ನೋಡಿ,..."

".... ...."

"ಛಾರೀ ಸಿಟ್ಟು ಬಂತು ಅಲ್ವೆ? ನಿಮ್ಮ ಮೂಕ್ಕೆ ನಾಲ್ಕು ಭತ್ತ ಸುರಿದ್ರೆ ಅರಳಾಗಿ ಉದುರುತ್ತೆ..'

"ಹ್ಞಾಂ...ಸುರಿದು ಬಿಡು ಮತ್ತೆ ..."

'ಅಲ್ಲಾ ಸುರೀತಿದ್ದೆ. ಆದ್ರೆ...."

"ಏನಾಯ್ತು?'

"ಆಗೋದೇನು? ಭತ್ತವೇ ಇಲ್ಲಾಂತಂದ್ರೆ...'

'ಅಲ್ಲಾ, ಮೊನ್ನೆ ತಂದಿರೋ ಅಕ್ಕೀಲಿ ಸಮಕ್ಕೆ ಸಮ ಭತ್ತ ಇತ್ತೂಂತಂದೆಯಲ್ಲ...'

"ಅಂದದ್ದೂ ಹೌದು, ಇದ್ದದ್ದೂ ಹೌದು ಆದ್ರೆ ಅದನ್ನ ಕೆಲಸದಾಕೆ ಕೋಳಿಗೇಂತ ಒಯ್ದು ಬಿಟ್ಳು....'

"ಏನೋ...ಅಲ್ಲಾ ಕೋಳಿಗೇ ಹಾಕಿದ್ಲೋ...ಅಥ್ವಾ ಮತ್ತೆ ಬೇಯಿಸಿ ಅಕ್ಕಿ ಮಾಡಿ ಮಕ್ಳ ಹೊಟ್ಟೆಗೆ ಹಾಕಿದ್ಳೋಂತ....'

"ಪಾಪ, ಇದ್ರೂ ಇರಬಹುದೇನ್ರಿ. ಇಂದಿನ ಕಾಲಸ್ಥಿತಿ ಹಾಗೂ ಬಂದು ನಿಂತಿದೆ..."

ಸದ್ಯ ನೆಹರೂ ತಾತ ನಮ್ಮನ್ನು ಬಿಟ್ಟು ಹೋದದ್ದು ಒಳ್ಳೇದೇ ಆಯ್ತೇನ್ನು...."

"ಎಲ್ರೂ ನೆಹ್ರೂ ಇನ್ನಷ್ಟು ಕಾಲ ಇರಬೇಕಿತ್ತೂಂತ ಅನ್ನೋವಾಗ...."

"ಇರಬೇಕಿತ್ತು ನಿಜ. ಆದ್ರೆ ಈಗಿನ ಸ್ಥಿತೀಲಿ ಇರದಿದ್ದದ್ದೇ ಚೆನ್ನ ಅನ್ನಿಸ್ತಿದೆ.."

"ಅಲ್ಲಾ, ನೀವೆಂದು ನೆಹ್ರೂ ಸದಾ ಅಮರರು ಅಂತ ಲೆಕ್ಚರೇ ಬಿಟ್ಟಿದ್ರಲ್ಲ...."

"ನೆಹ್ರೂ ಅಮರರು ಹೌದು. ಆದ್ರೆ ಅವರ ಭೌತಿಕ ರೂಪ ಈಗಇದ್ದು ಅಕ್ಕೀ ಭತ್ತದ ಕಾಳು ಆಯ್ದು ಮಕ್ಳ ಹೊಟ್ಟೆ ಹೊರೆಯೋದನ್ನ ಕಂಡ್ರೆ..."

"ಶಾಂತಂ ಪಾಪಂ...."

"ಹ್ಞಾಂ....ಅದ್ಕೇ ಅಂ..... ನೆಹ್ರೂ ಇಲ್ಲದ ಮಕ್ಕಳ ಹಬ್ಬ ಹೇಗೆ ನಡೆಯುತ್ತೆ ನೋಡ ...."

"ಪಾಪ....ಯಾಂದ್ರೂ ಏನು ಮಾಡ್ತಾರೆ?"

"ಮಾಡೋದೇನು? ಅವರವ್ರ ತಲೆಗೆ ಅವರವ್ರದ್ದೇ ಕೈ..."

"ಅವರವ್ರು ಏನ್ಬೇಕಾದ್ರೂ ಮಾಡಿಕೊಂಡಿರ್ಲಿ. ನಾವು ಮಾತ್ರ ಹಾಗಿರ್ಬಾರ್ದು..."

"ಮತ್ತೆ...."

"ನನ್ನ ತಲೆಗೆ ನೀನು ನಿನ್ನದಕ್ಕೆ ನಾನು....'

"ಪರವಾಗಿಲ್ವೇ ನೀನು....ಅಂತೂ ದಡಕ್ಕೆ ಬಂದೇವ ಅಟ್ಟಿದೇನ್ನ"

"ಸಮುದ್ರಕ್ಕೆ ಧೈರ್ಯದಿಂದ ನೆಗೆದವ್ರು ದಡ ಸೇರದಿರೋಕಾಗುತ್ಯೆ?"

"ಅದು ಸರೀನ್ನು. ಒಂದು ವೇಳೆ ನಾವಾಗಿ ದಡ ಸೇರದಿದ್ರೂ, ಸಮುದ್ರವೇ ಒಂದು ದಿನ ಒಂದು ಕಡೆಯಲ್ಲಿ ದಡ ಸೇರಿಸೇ ಬಿಡುತ್ತೆ..."

"ಹ್ಞಾಂ....ನಾಕ, ದಿನಾಚರಣೆ ಬೇಗ ಬರ್ತಾ ಇದೆ. ಅವರಿಗಾದ್ರೂ ಮಕ್ಳ ಹಾಗೇ ಇರೋಣಾಂತ .."

"ಓಹೋಹೋ....ಅಗತ್ಯವಾಗಿ. ಅದಕ್ಕೇ ನಡ್ರಿ?"

—ಗೋರಾ.

ಭಾರತರತ್ನ ಜವಹರಲಾಲ

ಭಾರತ ರತ್ನ ಜವಹರಲಾಲ
ನಿನ್ನನು ಮರೆಯುವರ್ಯಾರಿಹರು?
ಚಣಚಣ ಬರುವುದು ನಿನ್ನಯ ನೆನಪು
ಕಣ್ಣೊಳಗಿರುವುದು ನಿನ್ನಯ ರೂಪು!
ನಿರ್ಮಲ ಮನವು ನಿನ್ನಯ ಹೃದಯ
ಸತ್ಯದ ದೇಗುಲವಾಗಿಹುದು
ಜಾತಿಯವಾದ ವರ್ಗದ ಭೇದ
ಜಗದಲಿ ಜಗಳಕೆ ಇದುವೇ ವೇದ
ರಾಷ್ಟ್ರದ ಐಕ್ಯವೆ ಎಲ್ಲರ ಸೌಖ್ಯ
ಅನುದಿನ ಅರುಹಿದೆ ಭಾಷ್ಯೈಕ್ಯ
ಮಾನವ ಸುಖಕೆ ತಿಳುಹಿದೆ ಇದನೆ
ಸಮಾಜವಾದದ ಸಮಾಜ ರಚನೆ
ನಿನ್ನಯ ಮಾರ್ಗ ಮಾನವ ವರ್ಗ
ತುಳಿದರೆ ಮುಂದಕೆ ಪಾವನ ಸ್ವರ್ಗ
ಮೆರೆಯಿತು ಲೋಕದಿ ನಿನ್ನಯ ಕೀರ್ತಿ
ದೊರೆಯಿತು ಜಗಕೆ ನವನವ ಸ್ಫೂರ್ತಿ
ಸತ್ಯ ಅಹಿಂಸೆಯು ತ್ಯಾಗದ ಮೂರ್ತಿ
ಜವಹರಲಾಲನೆ ನಮೋನಮೋ
ನಿನ್ನಯ ಮುಡಿತ ಜಗಕತಿ ಹಿಡಿತ
ಪಾವನ ಚರಿತ ಅದು ಜನ ಜನಿತ
ಆತ್ಮಕೆ ಶಕ್ತಿ ದೇಶದ ಭಕ್ತಿ
ನೀಡಿದೆ ನಮಗೆ ನವತರ ಶಕ್ತಿ
ಅಬಲರ ಶೋಕ ಬಡವರ ದುಃಖ
ನೀಗಿಪ ಕೆಲಸವೆ ನಿನಗದು ಸುಖವು
ದೇಶದ ರಥವನು ನಡೆಸಿದ ವೀರ
ಕೀರ್ತಿಯ ಬಾವುಟ ಹಾರಿಸಿದೆ
ಭಾರತ ಪುತ್ರ ಲೋಕದ ಮಿತ್ರ
ಜವಹರಲಾಲನೆ ನಮೋ ನಮೋ
ಮಾನವ ಸಂಸ್ಕೃತಿ ಪುಳಕಿಸಲು ದುಡಿದೆ
ಜಗದಲಿ ಮನ್ನಣೆ ಕೀರ್ತಿಯ ಪಡೆದೆ
ಸತ್ಯ ಅಹಿಂಸೆಯು ಪ್ರೇಮದ ಜ್ಯೋತಿ
ಜಗದಲಿ ಬೆಳಗಿದೆ ಗಾಂಧಿಯ ನೀತಿ
ರಾಮನು ಶಾಮನು ಕ್ರಿಸ್ತನು ಅಲ್ಲ
ಗಾಂಧಿಯು ತೆರದಲಿ ನೀ ನಮಗೆಲ್ಲ
ಜನಗಣ ಮನದಧಿ ನಾಯಕ ನೀನೆ
ಜವಹರ ಲಾಲನೆ ನಮೋ ನಮೋ!

—ಡಾ| ಯು ಚಂದ್ರಶೇಖರ,
ಕುಡುಮಲ್ಲಿಗೆ.

ನಗು ನೀನು.... ಜಗವೆ ನಿನ್ನೊಡನೆ ನಗುತಲಿಹುದು

೧

ವ್ಯಾಪಾರಿಯೊಬ್ಬನ ಸಂದರ್ಶನಕ್ಕಾಗಿ ಹೊಸ ಪತ್ರಿಕೋದ್ಯೋಗಿಯೊಬ್ಬನನ್ನು ಕಳುಹಿಸಲಾಗಿತ್ತು. ವ್ಯಾಪಾರಿ ತುಂಬಾ ಧನಿಕನಾಗಿದ್ದ. ಆ ವ್ಯಾಪಾರಿ ಯಾವ ರೀತಿಯಿಂದ ಅಷ್ಟೊಂದು ಹಣವನ್ನು ಸಂಪಾದಿಸಿದನೆಂಬುದನ್ನು ತಿಳಿದು, ಪತ್ರಿಕೆಯಲ್ಲಿ ಆತನ ಆದರ್ಶ ಜೀವನವನ್ನ ಪ್ರಕಟಿಸುವುದು ಮುಖ್ಯೋದ್ದೇಶವಾಗಿತ್ತು.

ವ್ಯಾಪಾರಿ ಪತ್ರಿಕೋದ್ಯೋಗಿಯೊಡನೆ ಹೇಳತೊಡಗಿದ:-- "ಅದೊಂದು ದೊಡ್ಡ ಕತೆ, ಬೇಗನೆ ಮುಗಿಯುವಂತಿಲ್ಲ. ಆದುದರಿಂದ ಆ ಕತೆ ಮುಗಿಯುವ ವರೆಗೆ ದೀಪವನ್ನು ಆರಿಸಿ ಬಿಡುತ್ತೇನೆ..."

ಪತ್ರಿಕೋದ್ಯೋಗಿ: – "ರೀ ಇನ್ನು ಆ ಕತೆಯನ್ನು ಹೇಳುವ ಅವಶ್ಯಕತೆಯೇ ಇಲ್ಲ. ನನಗೆಲ್ಲವೂ ಗೊತ್ತಾಗಿ ಬಿಟ್ಟಿತು."

೨

"ನಿನಗೆ ಮರಣ ದಂಡನೆ ವಿಧಿಸಲು ಸರಕಾರಕ್ಕೆ ಐನೂರು ರೂಪಾಯಿಗಳು ಖರ್ಚಾಗುತ್ತವೆಂಬುದನ್ನು ನೀನು ಬಲ್ಲೆಯಾ?"

"ಹೌದೇ! ಹಾಗಾದರೆ ಕೇವಲ ಇನ್ನೂರೈವತ್ತು ರೂ.ಗಳನ್ನು ನನಗೆ ಕೊಡಿರಿ. ನಾನೇ ಗುಂಡು ಹಾಕಿಕೊಂಡು ಸಾಯುತ್ತೇನೆ"

೩

ಸಂಪಾದಕರು ಮಹತ್ವಾಕಾಂಕ್ಷಿಯಾದ ನವಯುವಕನೊಂದಿಗೆ ಹೀಗೆಂದರು– "ನಿಮ್ಮ ಕವಿತೆಯನ್ನು ಯಾವ ಕಾರಣಕ್ಕಾಗಿ ಪ್ರಕಟಿಸಬೇಕೆಂಬುದನ್ನು ದಯವಿಟ್ಟು ನನಗೆ ತಿಳಿಸಬಲ್ಲಿರಾ?"

ಕವಿಯಿಂದ— "ನಾನು ನನ್ನ ಕವಿತೆಯ ಜೊತೆಯಲ್ಲಿ ಅದು ಅಸ್ವೀಕೃತವಾದರೆ ಹಿಂದಿರುಗಿಸಲೋಸುಗ ಸಾಕಷ್ಟು ಅಂಚೆ ಚೀಟಿಗಳನ್ನು ಯಾವಾಗಲೂ ಇರಿಸುತ್ತೇನೆ"

"ಹೌದು. ಅದರಿಂದ ಏನಾದ ಹಾಗಾಯಿತು?"

"ನೀವು ನನ್ನ ಕವಿತೆಯನ್ನು ಪ್ರಕಟಿಸಿದರೆ ಅಂಚೆ ಚೀಟಿಗಳು ನಿಮ್ಮದಾಗುತ್ತವೆ"

೪

ಸಿನೆಮಾ ಮಂದಿರದ ಗೇಟ್ ಕೀಪರ್: "ನೀವು ತುಂಬಾ ತಡವಾಗಿ ಬಂದಿರಿ. ಆಟ ಪ್ರಾರಂಭವಾಗಿ ಬಿಟ್ಟಿದೆ ನಿಮ್ಮನ್ನೀಗ ಒಳಗೆ ಬಿಡುವಂತಿಲ್ಲ."

'ಚಿಂತಾಯಿಲ್ಲ. ನೀನು ಬಾಗಿಲು ತೆರೆ ನಾನು ಸ್ವಲ್ಪವೂ ಗದ್ದಲ ಮಾಡದೆ ಒಳಗೆ ಹೋಗುತ್ತೇನೆ.'

"ಹಾಗಲ್ಲ. ರಾಯರೇ, ಬಾಗಿಲು ತೆರೆದರೆ ಒಳಗಿರುವವರೆಲ್ಲರೂ ಹೊರಗೆ ಓಡಿಹೋಗುತ್ತಾರೆ."

೫

ಪಂಡಿತ ಮೋತಿಲಾಲ್ ನೆಹರೂ ಅವರು ತಮ್ಮ ವಿನೋದ ಸ್ವಭಾವಕ್ಕಾಗಿ ತುಂಬಾ ಹೆಸರುವಾಸಿಯಾಗಿದ್ದರು. ಒಮ್ಮೆ ಅವರಿಗೆ ನೆಗಡಿಯಾಯಿತು ಆಗ ಅವರು ಖಾದಿ ಬಟ್ಟೆಗಳನ್ನು ತೊಡಲು ಪ್ರಾರಂಭಿಸಿಬಿಟ್ಟಿದ್ದರು. ಆಗಲೇ ಸಜ್ಜನರೊಬ್ಬರು ಅವರ ಯೋಗಕ್ಷೇಮ ವಿಚಾರಿಸಲು ಬಂದರು.

ಮೋತಿಲಾಲ್ ಗಂಭೀರವಾಗಿ ನುಡಿದರು "ಏನು ಹೇಳಲಿ? ಗಾಂಧೀರಾಜ್ಯದಲ್ಲಿ ಯಾರೊಬ್ಬರಿಗೂ ನೆಗಡಿ ಸಹ ಆಗುವಂತಿಲ್ಲ."

"ನೆಗಡಿಗೂ ಗಾಂಧೀ ರಾಜ್ಯಕ್ಕೂ ಯಾವ ಸಂಬಂಧ?" —ವಿಸ್ಮಿತರಾಗಿ ಆ ಸಜ್ಜನರು ಪ್ರಶ್ನಿಸಿದರು.

ಮೋತಿಲಾಲ್ ಉತ್ತರಿಸಿದರು – "ಖದ್ದರಿನ ಕರ್ಚೀಫಿನಿಂದ ಒರಸಿ ಒರಸಿ ಮೂಗೇ ಮಾಯವಾಗುವಾಗ ನೆಗಡಿಯೆಲ್ಲಿ ಆಗಬೇಕು?"

೬

'ನಾನು ಹೇಳುವ ಮಾತನ್ನು ನೀನು ಗುಟ್ಟಾಗಿಡ ಬಲ್ಲೆಯಾ?'

'ಓಹೋ, ಆದರೆ ನಾನು ಯಾರ ಹತ್ತಿರವಾದರೂ ಅದನ್ನು ಹೇಳಿದಾಗ ಅದನ್ನು ಅವರು ಗುಟ್ಟಾಗಿಡುವುದಿಲ್ಲ'

೭

ಒಬ್ಬ ಯಾತ್ರಿಕ ಸಮಯ ಕಳೆಯಲಿಕ್ಕಾಗಿ ಸಹ ಯಾತ್ರಿಕನೊಂದಿಗೆ ಮಾತುಕತೆಗೆ ಪ್ರಾರಂಭಿಸಿದ—'ನಿಮ್ಮನ್ನೆಲ್ಲೋ ನೋಡಿದಂತಿದೆ. ಬಹುಶಃ ನಾವು ಎಲ್ಲೋ ಒಮ್ಮೆ ಪರಸ್ಪರ ಸಂಧಿಸಿ ಮಾತುಕತೆಯಾಡಿರಬೇಕೆಂದು ನನಗನ್ನಿಸುತ್ತಿದೆ.'

'ಇದ್ದರೂ ಇರಬಹುದು. ನಾನು ಬರೇಲಿಯ ಸೆರೆಮನೆಯಲ್ಲಿ ಮೂವತ್ತು ವರ್ಷಗಳಿಂದಲೂ ಇದ್ದು ಇಂದೇ ಬಿಡುಗಡೆಯಾಗಿ ಬರುತ್ತಿದ್ದೇನೆ'

ಮಾತುಕತೆ ಅಲ್ಲಿಗೇ ನಿಂತಿತು!

ಸಂಗ್ರಹ: ಶ್ರೀ ಹಾಯರ್ಗಾಡಿ
ಮ. ಐತಾಳ.

ನಮ್ಮ-ನಮ್ಮವರು

ಡಾ॥ ರಾಧಾಕೃಷ್ಣನ್

ದೇಶದಲ್ಲಿ ಆಹಾರ ಸಂಸ್ಥಿತಿ ಇನ್ನೂ ಚಿಂತಾಜನಿಕವಾಗಿಯೇ ಇರುವುದು ಎಲ್ಲರಿಗೂ ಆಶ್ಚರ್ಯವನ್ನು ಉಂಟು ಮಾಡಿದೆ. ಸುಗ್ಗಿಯ ಬಳಿಕವಾದರೂ ಆಹಾರ ಸಾಮಗ್ರಿಗಳ ಅಭಾವ ತೊಲಗಿ, ಬೆಲೆಗಳು ಇಳಿಮುಖವಾಗಬಹುದೆಂಬ ಆಶೆಯನ್ನು ಜನರು ತಾಳಿದ್ದರು ಆದರೆ ಪರಿಸ್ಥಿತಿ ಮಾತ್ರ ಹಾಗೆಯೇ ಮುಂದುವರಿಯುತ್ತಿದೆ. ಜೀವನಾವಶ್ಯಕ ವಸ್ತುಗಳ ಬೆಲೆಯು ಕಳೆದ ವರ್ಷಕ್ಕಿಂತ ದ್ವಿಗುಣಿತವಾಗಿದೆಯೆಂದರೆ, ಪರಿಸ್ಥಿತಿ ಯಾವ ಮಟ್ಟ ಮುಟ್ಟಿದೆ ಎಂದು ತಿಳಿಯಬಹುದು.

ಈ ಪರಿಸ್ಥಿತಿಯನ್ನು ಸರಕಾರವಾದರೂ ನೋಡಿ ಕಣ್ಣು ಮುಚ್ಚಿ ಕುಳಿತಿಲ್ಲ, ಆಹಾರದ ಅಭಾವವು ಕೃತಕವಾದುದು, ಬೆಲೆ ಏರಿಕೆಗೆ ಕಾರಣ ಕಳ್ಳ ದಾಸ್ತಾನುಗಾರರೆಂದೇ ಅದೀಗ ಮನಗಂಡಿದೆ. ವರ್ತಕರನ್ನು ಮತ್ತು ದಾಸ್ತಾನುಗಾರರನ್ನು, ಸರಿಯಾದ ರೀತಿಯಲ್ಲಿ ವರ್ತಿಸುವಂತೆ ಹಲವು ಬಾರಿ ರಾಷ್ಟ್ರ ನಾಯಕರು ಕೇಳಿಕೊಂಡರೂ, ಅವರು ಹಲವರು ಇನ್ನೂ ಲಾಭಬಡಕತನದಲ್ಲೇ ಮುಳುಗಿರುವುದು ಕಂಡು ಬಂದಿದೆ.

ಈ ಎಲ್ಲಾ ಪರಿಸ್ಥಿತಿಯನ್ನು ಮನಗಂಡ ರಾಷ್ಟ್ರಪತಿಗಳು ಆವಶ್ಯಕಸಾಮಗ್ರಿಗಳ ತಿದ್ದುಪಡಿಶಾಸನವನ್ನು ಈಗಿಂದೀಗಲೇ ಜಾರಿಮಾಡುವ ಸುಗ್ರೀವಾಜ್ಞೆಯೊಂದನ್ನು ಹೊರಡಿಸಿದ್ದಾರೆ. ಆಹಾರ ಆವಶ್ಯಕ ಸಾಮಗ್ರಿಗಳ ಕಾಯಿದೆ ಮತ್ತು ಗಿಹಾರ ಕ್ರಿಮಿನಲ್ ಕಾನೂನು ತಿದ್ದುಪಡಿ ಕಾಯಿದೆಗಳ ಆವಶ್ಯಕ ವಿಭಾಗಗಳಲ್ಲಿ ತಿದ್ದುಪಡಿ ಮಾಡಿಕೊಂಡಿರುವ ಈ ಶಾಸನವು ಜೀವನಾವಶ್ಯಕಸಾಮಗ್ರಿಗಳನ್ನು ಸಂಗ್ರಹಿಸುವವರನ್ನು ಮತ್ತು ಅವುಗಳಿಂದ ಲಾಭಗಳಿಸುವವರನ್ನು ಕ್ಷಿಪ್ರ ವಿಚಾರಣೆಗೊಳಪಡಿಸಬೇಕೆಂದು ಪ್ರಧಾನಿ ಶಾಸ್ತ್ರಿಯವರು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಮಾಡಿದ ಘೋಷಣೆಯನ್ನು ಕಾರ್ಯಗತಗೊಳಿಸುತ್ತದೆ. ಕಾಯಿದೆ ಉಲ್ಲಂಘನೆ ಮಾಡಿದವರಿಗೆ ಸಜೆ ಹಾಗೂ ದಂಡವನ್ನು ವಿಧಿಸುವ ಅಧಿಕಾರವನ್ನು ಈ ಶಾಸನವು ವಿಶೇಷ ಅಧಿಕಾರಿಗಳಿಗೆ ನೀಡುತ್ತದೆ.

ರಾಷ್ಟ್ರಪತಿಯವರು ಸುಗ್ರೀವಾಜ್ಞೆ ಹೊರಡಿಸುವಲ್ಲಿಯ ವರೆಗೆ ನಮ್ಮ ಆಹಾರ ಪರಿಸ್ಥಿತಿ ಮುಟ್ಟಿದುದು ತೀರಾ ವಿಷಾದಕರ. ನಮ್ಮ ರಾಷ್ಟ್ರಪತಿಗಳು ಅಧಿಕಾರಕ್ಕೆ ಬಂದಂದಿನಿಂದ ಸುಗ್ರೀವಾಜ್ಞೆ ಹೊರಡಿಸುವುದು ಇದೇ ಮೊದಲ ಬಾರಿ. ಈ ಆಜ್ಞೆಯು ನಿರೀಕ್ಷಿತ ಫಲವನ್ನು ತಂದು ಕೊಟ್ಟಲ್ಲಿ, ಆಗ ಸುಗ್ರೀವಾಜ್ಞೆಗೆ ನಿಜವಾಗಿಯೂ ಬೆಲೆ ಇರುತ್ತದೆ. ಪರಿಣಾಮವು ಎಷ್ಟೆಂದು ಕಾದು ನೋಡಬೇಕಷ್ಟೆ!

ಬಿ. ಕಾಳಪ್ಪ ಶೆಟ್ಟಿ

ಜನತಾ ಸಂಪರ್ಕವೊಂದೇ ಜನತೆಯ ಒಲವು, ಪ್ರೀತಿ, ವಿಶ್ವಾಸಗಳನ್ನು ದೊರಕಿಸಬಲ್ಲುದು. ಈ ಮಾತು ಶ್ರೀ॥ ಬಿ. ಕಾಳಪ್ಪ ಶೆಟ್ಟರ ವ್ಯಕ್ತಿತ್ವದಿಂದ ಸತ್ಯವೆಂದು ತೋರುತ್ತದೆ. ಅವರು ಆರಂಭದಿಂದಲೂ ಜನ ಸಾಮಾನ್ಯರ ನಿಕಟ ಸಂಪರ್ಕವಿಟ್ಟುಕೊಂಡವರು. ಅವರ ಕಷ್ಟ-ಸುಖಗಳಲ್ಲಿ ಭಾಗಿಯಾದವರು. ಆದುದರಿಂದಲೇ ಅವರು ಜನ ಸಾಮಾನ್ಯರ ಪ್ರೀತಿಗೆ ಪಾತ್ರರಾಗಿದ್ದಾರೆ. ಉಡುಪಿಗೆ ಸಮೀಪದ ಬೈಲೂರು ಪಂಚಾಯತ್ ಕ್ಷೇತ್ರಕ್ಕೊಳಪಟ್ಟ ಜನತೆ ಅವರನ್ನು ಒಂಭತ್ತು ವರ್ಷಗಳ ದೀರ್ಘ ಅವಧಿಯ ತನಕ ತನ್ನ ಅಧ್ಯಕ್ಷನನ್ನಾಗಿ ಆರಿಸಿ ಗೌರವಿಸಿತು. ಪ್ರಾಯಶಃ ಇಷ್ಟು ದೀರ್ಘಕಾಲ ಎಡೆಬಿಡದೆ ಒಂದು ಸ್ಥಾನದಲ್ಲಿದ್ದವರು ಕೆಲವೇ ಮಂದಿ.

ಕಾಳಪ್ಪ ಶೆಟ್ಟರು ಸಾರ್ವಜನಿಕ ರಂಗದಲ್ಲಿ ಸೇವೆ ಆರಂಭಿಸಿದ ರೀತಿಯೇ ಶ್ಲಾಘನೀಯವಾದುದು. ಪಂಚಾಯತ್ ಅಧ್ಯಕ್ಷರಾಗಿ ಅವರು ದೀರ್ಘ ಕಾಲದ ಅನುಭವ ಪಡೆದು, ಆ ಬಳಿಕ ಉಡುಪಿ ತಾಲೂಕು ಬೋರ್ಡಿನ ಸದಸ್ಯರೂ ಆದರು. ಇಂದು ಉಡುಪಿ ತಾಲೂಕು ಬೋರ್ಡಿನಲ್ಲಿ ಅವರು ಒಬ್ಬ ಪ್ರಭಾವೀ ಸದಸ್ಯರಾಗಿದ್ದಾರೆ. ಹಲವಾರು ಸ್ಟೇಂಡಿಂಗ್ ಕಮಿಟಿಗಳ ಸದಸ್ಯರೂ ಆಗಿದ್ದಾರೆ. ಉಡುಪಿ ತಾಲೂಕು ಬೋರ್ಡಿನ ಅಧ್ಯಕ್ಷ ಶ್ರೀ ಮಧ್ವರಾಜರಿಗೆ, ಹಲವು ಕಾರ್ಯಗಳಲ್ಲಿ ಸ್ವತ್ಪೂರ್ವಕ ನೆರವಿತ್ತು ದುಡಿದ ವ್ಯಕ್ತಿ ಶ್ರೀ॥ ಶೆಟ್ಟರು.

ಅವರೆಂದೂ ಅಧಿಕಾರ ಸ್ಥಾನ, ಉಪ್ಪರಿಗೆಗಳನ್ನು ಬಯಸಿದವರಲ್ಲ. ಆದರೆ ಅವುಗಳೇ ಅವರ ಕಾಲ ಬಳಿಗೆ ಬರುತ್ತವೆ ಕಳೆದ ಮಹಾ ಚುನಾವಣೆಯಲ್ಲಿ ಅವರು ಕಾಂಗ್ರೆಸ್ ಅಭ್ಯರ್ಥಿಯ ಯಶಸ್ಸಿಗಾಗಿ ದುಡಿದ ರೀತಿ, ಎಲ್ಲಾ ಕಾಂಗ್ರೆಸ್ ಕೆಲಸಗಾರರ ಮೆಚ್ಚುಗೆ ಪಡೆಯಿತು. ಅಂತಲೇ ಉಡುಪಿ ಮಂಡಲ ಕಾಂಗ್ರೆಸ್ ಅವರನ್ನು ತನ್ನ ಅಧ್ಯಕ್ಷನನ್ನಾಗಿ ಆರಿಸಿತು. ಈಗ ಉಡುಪಿ ಮಂಡಲ ಕಾಂಗ್ರೆಸಿನ ಅಧ್ಯಕ್ಷರಾಗಿ ಅವರು ದುಡಿಯುತ್ತಾರೆ.

ಉಡುಪಿಯಲ್ಲಿ ನಡೆಯುವ ಯಾವ ಸಾರ್ವಜನಿಕ ಕಾರ್ಯದಲ್ಲೂ ಶೆಟ್ಟರ ಕೈವಾಡವಿಲ್ಲದಿಲ್ಲ. ಕಳೆದ ಬಾರಿ ಉಡುಪಿಯಲ್ಲಿ ಜರಗಿದ ಮೋದಿ ಯವರ ನೇತ್ರ ಚಿಕಿತ್ಸಾ ಶಿಬಿರದ ಯಶಸ್ಸಿಗಾಗಿ ದುಡಿದವರಲ್ಲಿ ಇವರೂ ಒಬ್ಬರು. ಪ್ರಧಾನಿ ನೆಹರುರವರು ದಿವಂಗತರಾದುದರ ಸ್ಮಾರಕಾರ್ಥ ಉಡುಪಿಯಲ್ಲಿ ಬಡವರಿಗೆ ಅಕ್ಕಿಯನ್ನು ಹಂಚುವ ಕಾರ್ಯಕ್ರಮದ ಪ್ರಯೋಜಕರಲ್ಲಿ ಇವರೂ ಒಬ್ಬರು. ಶ್ರೀ ಶೆಟ್ಟರಲ್ಲಿ ಕಾರ್ಯಮಾಡುವ ಯೋಗ್ಯತೆ, ಉತ್ಸಾಹ ಇದೆ. ಜನತೆಯ ಒಲವರಿತು ನಡೆಯುವ ಅವರು ಇನ್ನೂ ಹೆಚ್ಚಿನ ಜನಸೇವೆ ಮಾಡುವಂತಾಗಲಿ ಎಂದು ಹಾರೈಸುತ್ತೇವೆ.

(ಮೂರನೇ ಪುಟದಿಂದ)

ಮುಂದುವರಿಯುವುದು— ಗೋವೆಯ ಜನತೆಯನ್ನೇ ಹೊಂದಿಕೊಂಡಿದೆಯೆಂಬುದನ್ನು ಯಾರೂ ಮರೆಯಬಾರದು. ಗೋವೆಯ ನಾಗರಿಕರು ನಿರ್ಧರಿಸಬೇಕಾದ ಕೇಂದ್ರ ಸರಕಾರವು ಮನ್ನಿಸಬೇಕಾದ ಈ ವಿಚಾರಗಳಿಗೆ ಜವಾನರಾಗಲಿ, ನಾಯಕರಾಗಲಿ ಅಥವಾ ಮತ್ತಾರೇ ಇರಲಿ ಹೊಣೆಗಾರಿಕೆಯ ಸ್ಥಾನದಲ್ಲಿರುವ ವ್ಯಕ್ತಿಗಳು ಸಾರ್ವಜನಿಕವಾಗಿ ತಮ್ಮ ವ್ಯಕ್ತಿಗತ ಅಭಿಪ್ರಾಯಗಳನ್ನು ಹೊರಗೆಡಹದಿರುವುದು ಶ್ರೇಯಸ್ಕರ. ಉರಿಯುವ ಬೆಂಕಿಗೆ ತುಪ್ಪ ಸುರಿಯುವುದರಿಂದ ಬೆಂಕಿಯೆಂದಿಗೂ ಆರಲಾರದೆಂಬುದನ್ನು ಜವಾಬ್ದಾರಿಯುಳ್ಳವರು ಮರೆಯುವುದೆಂದರೆ, ಅದು ತುಂಬ ಶೋಚನೀಯವಲ್ಲವೇ?

ಎಲ್ಲೆಲ್ಲಿ ಏನೇನು?

"ನಿಮಗೆ ಸ್ವಂತ ಮನೆ" ಯೋಜನೆ

ಎಲ್. ಐ. ಸಿ ಯ "ನಿಮಗೆ ಸ್ವಂತ ಮನೆ" ಯೋಜನೆಯನ್ನು 15-10-64ರಿಂದ ಅಧಿಕ ಸ್ಥಳಗಳಿಗೆ ವಿಸ್ತರಿಸಲಾಗಿದೆ. ಈ ಸ್ಥಳಗಳು: ಕೊಲ್ಹಾಪುರ್, ಸಾಂಗ್ಲಿ, ಅಮ್ರಾವತಿ, ಭಾವ್‌ನಗರ್, ಜಾಮ್‌ನಗರ್, ಟುಟಿಕೋರಿನ್, ಗುಂಟೂರು, ವಿಶಾಕಪಟ್ಟಣಮ್ ಮಂಗಳೂರು, ಕಲ್ಲಿಕೋಟೆ, ಫರಿದಾಬಾದ್, ಕೋರ್, ಧನ್‌ಬಾದ್, ರಾಂಚಿ, ದುರ್ಗ್, ಗೋರಖ್‌ಪುರ್, ಮತ್ತು ಗಝಿಯಾಬಾದ್, ಈ ಯೋಜನೆಯನ್ನು ಬೇಗನೆ ಗೋವ ಮತ್ತು ಗಾಂಧಿ ಧಾಮ್‌ಗೆ ವಿಸ್ತರಿಸಲಾಗುವುದು.

ಜನವರಿ 1, 1964ರಂದು 26 ಸ್ಥಳಗಳಲ್ಲಿ ಜಾರಿಗೆ ತಂದು ಅನಂತರ ಎಪ್ರಿಲ್ 1, 1964ರಂದು 30 ಅಧಿಕ ಸ್ಥಳಗಳಿಗೆ ವಿಸ್ತರಿಸಲಾಗಿರುವ "ನಿಮಗೆ ಸ್ವಂತ ಮನೆ" ಯೋಜನೆಯು ಒಳ್ಳೆಯ ಪ್ರತಿಕ್ರಿಯೆಯನ್ನುಂಟು ಮಾಡಿರುತ್ತದೆ.

ಕನ್ನಡ ಪ್ರಬಂಧ ಸ್ಪರ್ಧೆ

ಸುರತ್ಕಲ್ಲು ವಿಜಯ ಸಾಹಿತ್ಯ ಮಾಲೆಯ ವತಿಯಲ್ಲಿ ದಿ| ಸುರತ್ಕಲ್ಲು ಸುಬ್ಬರಾಯರ ಸ್ಮಾರಕಾರ್ಥ ಪ್ರಬಂಧ ಸ್ಪರ್ಧೆಯೊಂದು ಏರ್ಪಡಿಸಲಾಗಿದೆ "ಕನ್ನಡ ಕವಿತೆಗಳು" ಎಂಬ ವಿಷಯ ಹತ್ತು ಪುಟಗಳಲ್ಲಿ ಬರೆದು, ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳ ವಿದ್ಯಾರ್ಥಿ ವೃಂದವು ತಮ್ಮ ಮುಖ್ಯೋಪಾಧ್ಯಾಯರ ಪತ್ರದೊಂದಿಗೆ ನವಂಬರದೊಳಗೆ ಕಳುಹಿಸಬೇಕು. ಉತ್ತಮ ಪ್ರಬಂಧಕ್ಕೆ ಪ್ರತಿ ಭಾಗದಲ್ಲಿ ಹತ್ತು ರುಪಾಯಿಗಳ ಬಹುಮಾನ ಕೊಡಲಾಗುವುದೆಂದು ಶ್ರೀ ಕೆ. ವೆಂಕಟರಾಯಾಚಾರ್ಯರು ತಿಳಿಸುತ್ತಾರೆ

ಶಂಕರ್ ವಿಟ್ಠಲ್ ಮೋಟರ್ ಕಂಪೆನಿಯವರ ಸ್ತುತ್ಯ ಕಾರ್ಯ

ಮಂಗಳೂರಿನ ಶಂಕರ್ ವಿಟ್ಠಲ್ ಮೋಟರ್ ಕಂಪೆನಿಯವರು 16 ವರ್ಷದೊಳಗಿನ ಸುಮಾರು 150 ವಿದ್ಯಾರ್ಥಿಗಳನ್ನು ನಂದಿಗುಡ್ಡೆಯಿಂದ ಶಾಲಾದಿನಗಳಲ್ಲಿ ಗಣಪತಿ ಹೈಸ್ಕೂಲ್ ಮಿಲಾಗ್ರಿಸ್ ಹೈಸ್ಕೂಲ್, ಸರಕಾರಿ ಹೆಮ್ಮಕ್ಕಳ ತರಬೇತಿ ಶಾಲೆಗಳಿಗೆ ಬೆಳಗ್ಗೆ ಮತ್ತು ಮಧ್ಯಾಹ್ನ ಧರ್ಮಾರ್ಥವಾಗಿ ಎರಡೆರಡು ಬಾರಿ ಪ್ರಯಾಣ ಸೌಕರ್ಯ ಒದಗಿಸುತ್ತಿರುವುದು ಸ್ತುತ್ಯಾರ್ಹವಾಗಿದೆ. ಇದು ಚಿಕ್ಕ ಮತ್ತು ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹೆಚ್ಚಿನ ಸೌಕರ್ಯ ಮತ್ತು ಭದ್ರತೆಯಾಗಿದೆ.

ಇಂಟರ್ ಮೀಡಿಯೇಟ್ ಪರೀಕ್ಷೆಗೆ ಉಡುಪಿಯಲ್ಲಿ ಪರೀಕ್ಷಾ ಕೇಂದ್ರ

ನವದೆಹಲಿಯ ಸೆಂಟ್ರಲ್ ಬೋರ್ಡ್ ಆಫ್ ಹಾಯರ್ ಎಜುಕೇಶನಿನ ಇಂಟರ್ ಆರ್ಟ್ ಪರೀಕ್ಷಾ ಕೇಂದ್ರವೊಂದು ಉಡುಪಿಯಲ್ಲಿ ಮಂಜೂರಾಗಿದೆ. ಕರ್ನಾಟಕ ಮೊದಲಾದ ವಿಶ್ವವಿದ್ಯಾಲಯಗಳಿಂದ ಮಾನ್ಯತೆ ಪಡೆದ ಈ ಪರೀಕ್ಷೆ (1965) ಯಲ್ಲಿ ಕೂತು ಕೊಳ್ಳ ಬಯಸುವವರು ತಡಮಾಡದೆ, ಕಾರ್ಯದರ್ಶಿ, ಹಿಂದೀ ಪ್ರಚಾರ ಪರಿಷತ್ತು, ಸಂತೆಕಟ್ಟೆ ಉಡುಪಿ ಇವರನ್ನು ಮುಖತಃ ಭೆಟ್ಟಿ ಮಾಡಬಹುದು.

ಶ್ರೀ ಬಿ. ಎಂ. ಕಾರ್ಯಪ್ಪನವರು ಮನಿಲಾದಲ್ಲಿ

ಅಂತರ್ ರಾಷ್ಟ್ರೀಯ ಕ್ಷಯರೋಗ ಯೂನಿಯನ್‌ನ ಈಸ್ಟರ್ನ್ ರೀಜನಲ್ ಕಮಿಟಿಯ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳೂ ಭಾರತದ ಕ್ಷಯರೋಗ ಸಮಿತಿಯ ಕಾರ್ಯದರ್ಶಿಗಳೂ ಆದ ಶ್ರೀ ಬಿ ಎಂ ಕಾರ್ಯಪ್ಪನವರು ಈಸ್ಟರ್ನ್ ರೀಜನಲ್ ಕಮಿಟಿಯ ಸಭೆಯಲ್ಲಿ ಭಾಗವಹಿಸುವುದಕ್ಕಾಗಿ ಮನಿಲಾ ಫಿಲಿಪ್ಪೈನ್ಸ್‌ಗೆ ತೆರಳಿರುತ್ತಾರೆ. ತಾ. 30-10-64ರಿಂದ ನವಂಬರ 3ರ ತನಕ ಜರಗಿದ ಈ ಸಭೆಯಲ್ಲಿ ಎಲ್ಲಾ ಪೌರ್ವಾತ್ಯ ದೇಶಗಳ 35 ಟಿ ಬಿ. ಪರಿಣತರು ಭಾಗವಹಿಸಿದ್ದರು ಫಿಲಿಪ್ಪೈನ್ಸ್‌ನ ಅಧ್ಯಕ್ಷ ಶ್ರೀ ಡಯೋಸ್ ದಾಡೋ ಮೆಕಪಾಗಲ್ ಇವರಿಂದ ಈ ಸಭೆಯು ಉದ್ಘಾಟಿಸಲ್ಪಟ್ಟಿತು. ಶ್ರೀ ಕಾರ್ಯಪ್ಪನವರು ಮನಿಲಾದಿಂದ ಹಿಂದಿರುಗುವಾಗ ನೇಶನಲ್ ಟಿ. ಬಿ. ಸಮಿತಿಗಳೂ ಅಲ್ಲಿಯ ವಿವಿಧ ಟಿ. ಬಿ ಸಂಸ್ಥೆಗಳೂ ಹೇಗೆ ಕಾರ್ಯವೆಸಗುತ್ತವೆ ಎಂಬುದನ್ನು ಪರಿಶೀಲಿಸುವುದಕ್ಕಾಗಿ ಹೋಂಗ್‌ಕೋಂಗ್ ಮತ್ತು ಬ್ಯಾಂಗ್‌ಕೋಂಗ್‌ಗಳಿಗೆ ಸಂದರ್ಶನ ನೀಡುವರು

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 316/1964

ನರ್ಸಿಶೆಟ್ತಿ ಕೂಡಾ... ವಾದಿರು.

ಮತ್ತು

ಪ್ರತಿವಾದಿರು:—

3) ನಾರುಶೆಟ್ಟಿ } ರಾಮಕ್ಕ ಶೆಡ್ತಿ
4) ಭುಜಂಗ ಶೆಟ್ಟಿ } ಮಕ್ಕಳು.

9) ಅಣ್ಣಣ್ಣ ಶೆಟ್ಟಿ— ಶೇಷಮ್ಮ ಶೆಡ್ತಿ ಮಗ—3, 4 ನೇಯವರು ಉಡ್ಪಿ ತಾಲೂಗು ನಂಬ್ರ 52 ನೇ ಹೇರೂರು ಗ್ರಾಮದಲ್ಲಿಯೂ 9 ನೇಯವನು ಉಡ್ಪಿ ತಾಲೂಕು ಆರೂರು ಗ್ರಾಮದ ಕುರ್ದುಂಜೆಯಲ್ಲಿಯೂ ಯಿರುವವರು—

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿ ಪ್ರತಿವಾದಿರ ಕುಟುಂಬದ ಬಾಬ್ತು ಸ್ಥಿರಚರ ಸೊತ್ತುಗಳಲ್ಲಿ ಹಿಸೆ ವಗೈರೆ ನಿವೃತ್ತಿಗಳು ಕೇಳಿ ವಾದಿರು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾ. 19-11-64ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಯಿಟ್ಟದೆ—ಉಜ್ರ ಹರಿಸುವದೇನಾದ್ದು ಯಿದ್ದರೆ ಆ ದಿವಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಬಹುದು. ತಪ್ಪಿದ್ದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K.. Balachandra Rao
Advocate for Plaintiffs.

Udipi,, 10—11—64.

ನೆಹರೂ ಇಲ್ಲದ ಮಕ್ಕಳ ದಿನ

(ಎರಡನೇ ಪುಟದಿಂದ)

"ಪಾಪ, ಎಲ್ರು ಹಣೆ ಬರಹಾನೇ ಹೀಗೆ!"

'ಹೇಗೆ?'

'ದಾಸ್ರು ಹೇಳಿದ್ದಾರೆ. ನೋಡಿ ಸತಿಯ ಸುತ ಹಿತರಿಲ್ಲ "

'ನಿನ್ನ ದಾಸ್ರನ್ನ ಆಚೆ ಬಿಸಾಡು ಒಬ್ಬ ನನ್ನ ಉಳ್ಸಿರಿಗೆ ಎರಿಸಿ ತಪ್ಪಿಗೆಸೆದರೆ ಆಯ್ತು ಇನ್ಯಾವನನ್ನ ತಾನೇ ಏರಿಸಲಿಕ್ಕಿದೆ?'

ಯಾಕೆನ್ನೋಂತಂದ್ರೆ ಕನಕದಾಸರ ನಾಲ್ಕನೆಯ ಶತಮಾನೋತ್ಸವ."

"ಅಲ್ಲ ಈ ದಾಸಂಗೂ ನಾಲ್ಕನೆಯ ಶತಮಾನೋತ್ಸವಕ್ಕೂ ಏನೋಪ್ಪ ಬಾದರಾಯಣ ಸಂಬಂಧ?'

"ಏನೂಂತಂದ್ರೆ, ಪಾಪ ಜೀವದಲ್ಲಿರೋವಾಗ ನಾವು ಹುಟ್ಟಿಲ್ಲ ಈಗ್ಲಾದ್ರೂ ಅಪ್ಪನ್ನ "

"ಹೌದೇ ಓ ಸರಿಯಾಯ್ತು ನನ್ನ ಸೀರಿಕೆಯೆಲ್ಲಾ ಯಾಕೇಂತ ಯೋಚಿಸ್ತಾ ಇದ್ದೆ. ನೆಹ್ರೂ ಜಯಂತಿ ಬಂತು ಕಣೇ '

ನಮ್ಗೆ ಈಗ್ಲಾದ್ರೂ ಬಂತಲ್ಲ ನೆನ್ಪ ಮೂರು ಕಾಸಿನ ನನ್ನನ್ನಾದ್ರೂ ಕೊಂಡುಕೊಳ್ಳೇಂತ ಹೇಳೋಳಿದ್ದೆ."

ಮತ್ಯಾಕ ಹೇಳ್ಲಿಲ್ಲ?"

"ಅಲ್ಲ ಒಂದು ಕಾಸೂನೂ ಇಲ್ದಿದ್ದ್ವ್ರೂಂತ ಗೊತ್ತಾದ ಮೇಲೆ."

"ಏನಾವ್ರು ಮಾಡ್ತಿದ್ದೇನ್ನ "

"ಮಾಡೋದೊಂದು ಮಣ್ಣು... ಎಂಟ್ನೇ ತಾರೀಕಗೇನೇ ಒಂದು ಕಾಸೂ ಇಲ್ದಿದ್ದವ್ರಿಗೆ ಮತ್ತೆ ಮೂರು ಕಾಸಿ ದ್ರ್ಯಾರು ಕೊಡ್ತಾರೇಂತ "

ಏ, ಸಾಕು ಸಾಕು ಕಣೇ ನಿನ್ನ ಹಣೆ ಬರಹವೇ ಹೀಗ ನನ್ನಪ್ಪ "

'ಶೂ ಹಾಗಲ್ಲಾ ಹೇಳ್ಬೇಡಿ ಏನೋ ತಮಾಷೆಗೆ ಹೇಳ್ದೆ ಅಷ್ಟೆ ಕೋಪಿಸ್ಕೋಬೇಡಿ ಮತ್ತೆ ನೋಡಿ, ನಾಳ್ದು ಮಕ್ಕಳ ದಿನ ಅಲ್ವೆ'

"· · '

"ನೆಹ್ರೂ ಜಯಂತಿಯನ್ನ ಮಕ್ಕಳ ದಿನವನ್ನಾಗಿ ಆಚರಿಸ್ತೀವೆ ನೋಡಿ.'

" · '

'ಛೇ! ಏಟ್ಟು ಬಂತು ಅಲ್ವೆ? ನಿಮ್ಮ ಮಕ್ಕೆ ನಾಲ್ಕು ಭತ್ತ ಸುರಿದ್ರೆ ಅರಳಾಗಿ ಉದುರುತ್ತೆ '

"ಹ್ಞೂಂ ಸುರಿದು ಬಿಡು ಮತ್ತೆ '

'ಅಲ್ಲಾ ಸುರೀತಿದ್ದೆ ಅದ್ರೆ."

"ಏನಾಯ್ತು?"

"ಆಗೋದೇನು? ಭತ್ತವೇ ಇಲ್ಲಾಂತಂದ್ರೆ.'

'ಅಲ್ಲಾ, ಮೊನ್ನೆ ತಂದಿರೋ ಅಕ್ಕೀಲಿ ಸಮಕ್ಕೆ ಸಮ ಭತ್ತ ಇತ್ತೂಂತಂದೆಯಲ್ಲ'

"ಅಂದದ್ದೂ ಹೌದು, ಇದ್ದದ್ದೂ ಹೌದು ಆದ್ರೆ ಅದನ್ನ ಕೆಲಸದಾಕೆ ಕೋಳಿಗೇಂತ ಬಿಡ್ಸಿ ಬಿಟ್ಟು.'

"ಏನೋ ಅಲ್ಲಾ ಕೋಳಿಗೇ ಹಾಕಿದ್ಲೋ ಇಲ್ಲಾ ಮತ್ತೆ ಬೇಯಿಸಿ ಅಕ್ಕಿ ಮಾಡಿ ಮಕ್ಕಳ ಹೊಟ್ಟೆಗೆ ಹಾಕಿದ್ಲೋಂತ.'

'ಪಾಪ. ಇಷ್ಟೊಬ್ಬರು ನೆಹ್ರೂ ಇಂದಿನ ಕಾಲ್ದಲ್ಲಿ ಯಾರಿಗೂ ಒಂದು ಸ್ಥಿತಿಬೇ."

ಸತ್ಯ, ನೆಹರೂ ತಾತ ನಮ್ಮನ್ನ ಬಿಟ್ಟು ಹೋದದ್ದೆ ಒಳ್ಳೇದೇ ಆಯ್ತಪ್ಪ "

'ಎಲ್ರೂ ನೆಹ್ರೂ ಇನ್ನಷ್ಟು ಕಾಲ ಇರಬೇಕಿತ್ತೂಂತ ಅನ್ನೋವಾಗ .."

'ಇರಬೇಕಿತ್ತು ನಿಜ. ಆದ್ರೆ ಈಗಿನ ಸ್ಥಿತೀಲಿ ಇರದಿದ್ದದ್ದೇ ಚೆನ್ನ ಅನ್ನಿಸ್ತದೆ "

'ಅಲ್ಲಾ, ನೀವೆಂದು ನೆಹ್ರೂ ಸದಾ ಅಮರರು ಅಂತ ಲೆಕ್ಚರ್ ಬಿಟ್ಟಿದ್ರಲ್ಲ.'

"ನೆಹ್ರೂ ಅಮರರು ಹೌದು. ಆದ್ರೆ ಅವರ ಭೌತಿಕ ರೂಪ ಈಗಿದ್ದು ಅಕ್ಕೀ ಭತ್ತದ ಕಾಳು ಆಯ್ದು ಮಕ್ಳ ಹೊಟ್ಟೆ ಹೊರೆಯೋದನ್ನ ಕಂಡ್ರೆ '

"ಶಾಂತಂ ಪಾಪಂ "

ಹೆಣ್ಣಿ ... ನೆಹ್ರೂ ಇಲ್ಲದ ಮಕ್ಕಳ ಹಬ್ಬ ಹೇಗೆ ನಡೆಯುತ್ತೆ ನೋಡ .."

"ಪಾಪ ಯಾರಾದ್ರು ಏನು ಮಾಡ್ತಾರೆ?'

"ಮಾಡೋದೇನು? ಅವರವ್ರ ತಲೆಗೆ ಅವರವ್ರದ್ದೇ ಕೈ..."

"ಅವರವ್ರು ಏನ್ಬೇಕಾದ್ರೂ ಮಾಡಿಕೊಂಡಿರ್ಲಿ ನಾವು ಮಾತ್ರ ಹಾಗಿರ್ಬಾರದು."

"ಮತ್ತೆ "

"ನನ್ನ ತಲೆಗೆ ನೀನು ನಿನ್ನ ಕೈಗೆ ನಾನು.'

ಹರವಾಗಿಲ್ವೇ ನೀನು ಅಂತೂ ದಡಕ್ಕೆ ಒಂದೇವ ಬಿಟ್ಟಿದೇನ."

"ಸಮುದ್ರಕ್ಕೆ ಧೈರ್ಯದಿಂದ ನೆಗೆದವ್ರು ದಡ ಸೇರಬಿಡೋದಾಗುತ್ಯೆ?'

ಅದು ಸರೀನ್ನು ಒಂದು ವೇಳೆ ನಾವಾಗಿ ದಡ ಸೇರದಿದ್ರೂ, ಸಮುದ್ರವೇ ಒಂದು ದಿನ ಒಂದು ಕಡೆಯಲ್ಲಿ ದಡ ಸೇರಿಸೇ ಬಿಡುತ್ತೆ "

"ಹ್ಞೂಂ ಮಕ್ಕಳ ದಿನಾಚರಣೆ ಬೇಗ ಬರ್ಲಿ ಇವೆ ಆವರೆಗಾದ್ರೂ ಮಕ್ಳು ಹಾಗೇ ಇರೋದೇನಂತ '

"ಓಹೋಹೋ ಅಗತ್ಯವಾಗಿ ಅದಕ್ಕೆ ನಡ್ದಿ?"

—ಗೋರಾ.

ಭಾರತರತ್ನ ಜವಹರಲಾಲ

ಭಾರತ ರತ್ನ ಜವಹರಲಾಲ
ನಿನ್ನನು ಪೋಲುವರ್‍ಯಾರಿಹರು?
ಜಣಜಣ ಒರುವುದು ನಿನ್ನಯ ನೆನಪು
ಕಣ್ಣೊಳಗಿರುವುದು ನಿನ್ನಯ ರೂಪು!
ನಿರ್ಮಲ ಮನವು ನಿನ್ನಯ ಹೃದಯ
ಸತ್ಯದ ದೇಗುಲವಾಗಿಹುದು
ಜಾತಿಯುವ ದ ವರ್ಗ ಭೇದ
ಜಗದಲಿ ಜಗಳಕೆ ಇದು ನೇ ವೇದ
ರಾಷ್ಟ್ರದ ಐಕ್ಯವೆ ಎಲ್ಲರ ಸೌಖ್ಯ
ಅನುದಿನ ಅರುಹಿದೆ ಭಾವೈಕ್ಯ
ಮಾನವ ಸ ಖಕೆ ತಿಳಿಹಿದೆ ಇವನೆ
ಸಮಾಜವಾದದ ಸಮಾಜ ರಚನೆ
ನಿನ್ನಯ ಮಾರ್ಗ ಮಾನವ ವರ್ಗ
ತುಳಿದರೆ ಮುಂದಕೆ ಪಾವನ ಸ್ವರ್ಗ
ಮೆರೆಯಿತು ಲೋಕವಿ ನಿನ್ನಯ ಕೀರ್ತಿ
ದೂರೆಯಿತು ಜನಕ ನವನವ ಸ್ಫೂರ್ತಿ
ಸತ್ಯ ಅಹಿಂಸೆಯ ತ್ಯಾಗದ ಮೂರ್ತಿ
ಜವಹರಲಾಲನೆ ನಮೋನಮೋ
ನಿನ್ನಯ ದುಡಿತ ಜಗಕತಿ ಹಿಡಿತ
ಪಾವನ ಚರಿತ ಓದು ಜನ ಜನಿತ
ಆತ್ಮಕೆ ಶಕ್ತಿ ದೇಶದ ಭಕ್ತಿ
ನೀಡಿದೆ ನವ ಗ ನವತರ ಶಕ್ತಿ
ಆಜಲರ ಶೋಕ ಬಡವರ ದುಃಖ
ನೀಗಿಪ ಕೆಲಸವೆ ನಿನಗದು ಸ ಖವು
ದೇಶದ ರಥವನು ನಡೆಸಿದ ವೀರ
ಕೀರ್ತಿಯ ಬಾವುಟ ಹಾರಿಸಿದೆ
ಭಾರತ ಪುತ್ರ ಲೋಕದ ಮಿತ್ರ
ಜವಹರಲಾಲನೆ ನಮೋ ನಮೋ
ಮಾನವ ಸಂಸ್ಕೃತಿ ಪುಳಕಿಸಲು ದುಡಿದೆ
ಜಗದಲಿ ಮನ್ನಣೆ ಕೀರ್ತಿಯ ಪಡೆದೆ
ಸತ್ಯ ಅಹಿಂಸೆಯ ಪ್ರೇಮದ ಜ್ಯೋತಿ
ಜಗದಲಿ ಬೆಳಗಿದೆ ಗಾಂಧಿಯ ನೀತಿ
ರಾಮನು ಶಿವನು ಕಿಸ್ತನು ಅಲ್ಲ
ಗಾಂಧಿಯು ತೋರಲಿ ನೀ ನಡೆಗೆಲ್ಲ
ಜನಗಣ ಮನಕಧಿ ನಾಯಕ ನೀನೆ
ಜವಹರಲಾಲನೆ ನಮೋ ನಮೋ!

—ಡಾ| ಯು ಚಂದ್ರಶೇಖರ,
ಕುಡುಮಲ್ಲಿಗೆ

ನಗು ನೀನು .... ಜಗವೆ ನಿನ್ನೊಡನೆ ನಗುತಲಿಹುದು

೧

ವ್ಯಾಪಾರಿಯೊಬ್ಬನ ಸಂದರ್ಶನಕ್ಕಾಗಿ ಹೊಸ ಪತ್ರಿಕೋದ್ಯೋಗಿಯೊಬ್ಬನನ್ನು ಕಳುಹಿಸಲಾಗಿತ್ತು ವ್ಯಾಪಾರಿ ತುಂಬಾ ಧನಿಕನಾಗಿದ್ದ ಆ ವ್ಯಾಪಾರಿ ಯಾವ ರೀತಿಯಿಂದ ಅಷ್ಟೊಂದ ಹಣವನ್ನು ಸಂಪಾದಿಸಿದನೆಂಬ ದನ್ನು ತಿಳಿದು, ಪತ್ರಿಕೆಯಲ್ಲಿ ಆತನ ಆದರ್ಶ ಜೀವನವನ್ನ ಪ್ರಕಟಿಸ ವುದು ಮುಖ್ಯೋದ್ದೇಶವಾಗಿತ್ತು.

ವ್ಯಾಪಾರಿ ಪತ್ರಿಕೋದ್ಯೋಗಿಯೊಡನೆ ಹೇಳತೊಡಗಿದ:-- "ಅದೊಂದು ದೊಡ್ಡ ಕತೆ, ಬೇಗನೆ ಮುಗಿಯುವಂತಿಲ್ಲ ಅದು ದರಿಂದ ಆ ಕತೆ ಮುಗಿಯುವ ವರೆಗೆ ದೀಪವನ್ನು ಆರಿಸಿ ಬಿಡುತ್ತೇನೆ..."

ಪತ್ರಿಕೋದ್ಯೋಗಿ - "ರಿ ಇನ್ನು ಆ ಕತೆಯನ್ನು ಹೇಳುವ ಅವಶ್ಯಕತೆಯೇ ಇಲ್ಲ ನನಗೆಲ್ಲವೂ ಗೊತ್ತಾಗಿ ಬಿಟ್ಟಿತು."

೨

"ನಿನಗೆ ಮರಣ ದಂಡನೆ ವಿಧಿಸಲು ಸರಕಾರಕ್ಕೆ ಐನೂರು ರೂಪಾಯಿಗಳು ಖರ್ಚಾಗುತ್ತವೆಂಬುದನ್ನು ನೀನು ಬಲ್ಲೆಯಾ?"

ಹೌದೇ! ಹಾಗಾದರೆ ಕೇವಲ ಇನ್ನೂರೈವತ್ತು ರೂಗಳನ್ನು ನನಗೆ ಕೊಡಿರಿ ನಾನೇ ಗುಂಡು ಹಾಕಿಕೊಂಡು ಸಾಯುತ್ತೇನೆ"

೩

ಸಂಪಾದಕರು ಮಹತ್ವಾಕಾಂಕ್ಷಿಯಾದ ನವಯುವಕನೊಂದಿಗೆ ಹೀಗೆಂದರು– 'ನಿಮ್ಮ ಕವಿತೆಯನ್ನು ಯಾವ ಕಾರಣಕ್ಕಾಗಿ ಪ್ರಕಟಿಸಬೇಕೆಂಬುದನ್ನು ದಯವಿಟ್ಟು ನನಗೆ ತಿಳಿಸಬಲ್ಲಿರಾ?"

ಕವಿಯೆಂದ— "ನಾನು ನನ್ನ ಕವಿತೆಯ ಜೊತೆಯಲ್ಲಿ ಅದು ಅಸ್ವೀಕೃತವಾದರೆ ಹಿಂದಿರುಗಿಸಲೋಸುಗ ಸಾಕಷ್ಟು ಅಂಚೆ ಚೀಟಿಗಳನ್ನು ಯಾವಾಗಲೂ ಇರಿಸುತ್ತೇನೆ"

"ಹೌದು ಅದರಿಂದ ಏನ ದ ಹಾಗಾಯಿತು?"

"ನೀವು ನನ್ನ ಕವಿತೆಯನ್ನು ಪ್ರಕಟಿಸಿದರೆ ಅಂಚೆ ಚೀಟಿಗಳು ನಿಮ್ಮದಾಗುತ್ತವೆ"

೪

ಸಿನೆಮಾ ಮಂದಿರದ ಗೇಟ್ ಕೀಪರ್ "ನೀವು ತುಂಬಾ ತಡವಾಗಿ ಬಂದಿರಿ ಆಟ ಪ್ರಾರಂಭವಾಗಿ ಬಿಟ್ಟಿದೆ ನಿಮ್ಮನ್ನೀಗ ಒಳಗೆ ಬಿಡ ವಂತಿಲ್ಲ"

'ಪರವಾಯಿಲ್ಲ ನೀನು ಬಾಗಿಲು ತರ ನಾನು ಸ್ವಲ್ಪವೂ ಗದ್ದಲ ಮಾಡದೆ ಒಳಗೆ ಹೋಗುತ್ತೇನೆ."

"ಹಾಗಲ್ಲ ರಾಯರೇ, ಬಾಗಿಲು ತೆರೆದರೆ ಒಳಗಿರುವವರೆಲ್ಲರೂ ಹೊರಗೆ ಓಡಿಹೋಗುತ್ತಾರೆ"

೫

ಪಂಡಿತ ಮೋತಿಲಾಲ್ ನೆಹರೂ ಅವರು ತಮ್ಮ ವಿನೋದ ಸ್ವಭಾವಕ್ಕಾಗಿ ತುಂಬಾ ಹೆಸರವಾಸಿಯಾಗಿದ್ದರು ಒಮ್ಮೆ ಅವರಿಗೆ ನೆಗಡಿಯಾಯಿತು ಆಗ ಅವರು ಮಾದಿ ಒಟ್ಟಿಗಳನ್ನು ತೊಡಲು ಪ್ರಾರಂಭಿಸಿಬಿಟ್ಟಿದ್ದರು ಆಗಲೇ ಸಜ್ಜನರೊಬ್ಬರು ಅವರ ಯೋಗಕ್ಷೇಮ ವಿಚಾರಿಸಲು ಬಂದರು

ಮೋತಿಲಾಲ್ ಗಂಭೀರವಾಗಿ ನುಡಿದರು"ಏನು ಹೇಳಲಿ? ಗಾಂಧೀರಾಜ್ಯದಲ್ಲಿ ಯಾರೊಬ್ಬರಿಗೂ ನೆಗಡಿ ಸಹ ಆಗುವಂತಿಲ್ಲ"

"ನೆಗಡಿಗೂ ಗಾಂಧೀ ರಾಜ್ಯಕ್ಕೂ ಯಾವ ಸಂಬಂಧ?"—ವಿಸ್ಮಿತರಾಗಿ ಆ ಸಜ್ಜನರು ಪ್ರಶ್ನಿಸಿದರು

ಮೋತಿ ಲಾಲ್ ಉತ್ತರಿಸಿದರು - "ಖದ್ದರಿನ ಕರ್ಚೀಫಿನಿಂದ ಒರಸಿ ಒರಸಿ ಮೂಗೇ ಮಾಯವಾಗುವಾಗ ನೆಗಡಿಯೆಲ್ಲಿ ಆಗಬೇಕು?"

೬

'ನಾನು ಹೇಳುವ ಮಾತನ್ನ ನೀನು ಗುಟ್ಟಾಗಿಡ ಬಲ್ಲೆಯಾ?'

'ಓಹೋ, ಆದರೆ ನಾನು ಯಾರ ಹತ್ತಿರವಾದರೂ ಅದನ್ನು ಹೇಳಿದಾಗ ಅದನ್ನು ಅವರು ಗುಟ್ಟಾಗಿಡುವುದಿಲ್ಲ'

೭

ಒಬ್ಬ ಯಾತ್ರಿಕ ಸಮಯ ಕಳೆಯಲಿಕ್ಕಾಗಿ ಸಹ ಯಾತ್ರಿಕನೊಂದಿಗೆ ಮಾತುಕತೆಗೆ ಪ್ರಾರಂಭಿಸಿದ-'ನಿಮ್ಮನ್ನೆಲ್ಲೋ ನೋಡಿದಂತಿದೆ ಬಹುಶಃ ನಾವು ಎಲ್ಲೋ ಒಮ್ಮೆ ಪರಸ್ಪರ ಸಂಧಿಸಿ ಮಾತುಕತೆಯಾಡಿರ ಬೇಕೆಂದು ನನಗನ್ನಿಸುತ್ತಿದೆ'

'ಇದ್ದರೂ ಇರಬಹುದು ನಾನು ಬರೇಲಿಯ ಸೆರೆಮನೆಯಲ್ಲಿ ಮೂವತ್ತು ವರ್ಷಗಳಿಂದಲೂ ಇದ್ದ ಇಂದೇ ಬಿಡುಗಡೆಯಾಗಿ ಬರುತ್ತಿದ್ದೇನೆ'

ಮಾತುಕತೆ ಅಲ್ಲಿಗೇ ನಿಂತಿತು!

ಸಂಗ್ರಹ: ಶ್ರೀ ಹಾವಯಾಡಿ
ಮ ಐತಾಳ.

NAVAYUGA 12-11-1964
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೨-೧೧-೬೪ರಿಂದ ೧೮-೧೧-೬೪ರ ವರೆಗೆ

೧. ಮೇಷ.

ಕಷ್ಟಪಟ್ಟು ದುಡಿಯುವಿರಿ, ಆದರೆ ದುಡಿಮೆಯ ಬಹ್ವಂಶವು ನಿಮ್ಮ ಅನುಭೋಗಕ್ಕೆ ಲಭಿಸಲಾರದು. ಸ್ವಜನರ ವಿರೋಧ ವಿಯೋಗಗಳಿಗೆ ಎರವಾಗುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟವೇ ಅಧಿಕವಾದೀತು. ಅರ್ಧಾಂಗಿಯ ಆರೋಗ್ಯವು ಕೂಡ ಕಫ, ವಾತ ಪ್ರಕೋಪದಿಂದ ಕೆಡಲಿದೆ. ಅಂತಃಶತ್ರುಗಳ ಕಾಟವು ಅಸಹನೀಯವಾದೀತು. ಆಕಸ್ಮಿಕ ಧನಲಾಭದ ಯೋಗವು ತಾ. 12, 15, 16 ರಲ್ಲಿ ಕಂಡುಬರಲಿದೆ

೨ ವೃಷಭ

ಸಮುದ್ರದ ಅಲೆಗಳಂತೆ ವಿಪತ್ಪರಂಪರೆಗಳು ಮೇಲಿಂದ ಮೇಲೆ ಬರಲಿವೆ. ಸ್ವಯಂ ಅಸಮರ್ಥರಾದ ನಿಮಗೆ ಹೊರವರ ನೆರವು ಲಭಿಸದ ಕಾರಣ ನಿಮ್ಮೆಲ್ಲಾ ಬಯಕೆಗಳು ತಿರುಕನ ಕನಸಿನಂತಾದಾವು. ದೇಹಾಲಸ್ಯ, ಸಂಸಾರಿಕ ತಾಪತ್ರಯ ಅಪ್ತೇಷ್ಟರ ವಿರಹ ಆಯಾಧಿಕ್ಯ ಇತ್ಯಾದಿಗಳಿಂದ ನಿಮ್ಮ ತನುಮನಗಳಿಗೆ ಈ ಸಪ್ತಾಹ ಸುಖಶಾಂತಿಯು ದೊರಕದೆಂದರೆ ಅತಿಶಯೋಕ್ತಿಯಾಗದು. ವಾರಾದಿಯ 3 ದಿನಗಳು ಮತ್ತು ತಾ. 17, 18 ಈ ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೩. ಮಿಥುನ

ದೈವಬಲ ಸಂಪನ್ನರಾದ ನಿಮ್ಮ ಪೌರುಷ ಪ್ರದರ್ಶನಕ್ಕಿಂದು ಸುಸಂದರ್ಭ ಒದಗಿಯದು. ಸ್ವಯಂಶಕ್ತರಾದ ನಿಮ್ಮ ಯಾವತ್ತೂ ಉದ್ಯಮ ವ್ಯವಹಾರಗಳು ಏನೊಂದೂ ಅಡೆತಡೆಗಳಿಲ್ಲದೆ ಕೊನೆಗೊಂಡಲಿವೆ. ಮಧು ತುಂಬಿದ ಸುಮವನ್ನು ಮಧುಕರಗಳು ಬಂದು ಮುತ್ತುವಂತೆ ಸಕಲರೂ ನಿಮ್ಮನ್ನಿಂದು ಆಶ್ರಯಿಸಲಿರುವರು. ಕೋರ್ಟು ಕಚೇರಿಗಳ ವ್ಯವಹಾರಗಳಲ್ಲಿ ಪರಿಣಾಮವು ನಿಮ್ಮಂತೆಯೇ ಆಗಲಿದೆ. ನಿಶ್ಚಿಂತರೂ ನಿರಾಮಯರೂ ಆದ ನಿಮಗೆ ತಾ. 13ರಿಂದ 16 ರ ವರೆಗಿನ ದಿನಗಳು ಕೀರ್ತಿ ಲಾಭ ಸುಖದಾಯಿಗಳಾಗಿವೆ.

೪. ಕರ್ಕಾಟ

ದುರ್ವಿಧಿಯು ನಿಮ್ಮನ್ನಿಂದು ವಿಶೇಷವಾಗಿ ಕಾಡುತ್ತಿರುವುದು. ಶತ್ರುವರ್ಗದವರು ಪ್ರತೀಕಾರಾಸಕ್ತರಾಗುವರು. ಗೃಹಕೃತ್ಯದಲ್ಲಿ ಅವ್ಯವಸ್ಥೆಯು ಹೆಚ್ಚಲಿದೆ. ಸೋದರ ಜನರೊಳು ಮನಸ್ತಾಪ ಉಂಟಾಗುವುದು. ಹೆಂಡತಿ ಮಕ್ಕಳೊಡನೆ ಅನುದಿನ ಕಲಹವಾಗಲಿವೆ. ಶ್ರಮವಹಿಸಿ ದುಡಿದರೂ ದಿನದ ಖರ್ಚನ್ನು ನಿರ್ವಹಿಸಲಾಗದೆ ಹೆರವರ ಕೂಡೆ ಸಾಲಮಾಡುವ ಪರಿಸ್ಥಿತಿ ಒಂದೀತು. ವಾತ ಪ್ರಕೋಪದಿಂದ ಪೀಡಿತರಾದ ನಿಮಗೆ ವಾರದ ಕೊನೆಯ 4 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೫. ಸಿಂಹ

ನಿಸರ್ಗತಃ ಶುಭರಾದ ಬುಧ ಗುರು ಶುಕ್ರರ ಕೃಪೆಗೆ ಪಾತ್ರರಾಗಿರುವ ನಿಮಗೆ ಈ ವಾರವು ಸುಖದುಃಖಗಳಿಂದ ಸಮ್ಮಿಶ್ರವಾಗಿರುವುದು. ಖರ್ಚುಗಳು ಹಲವಾರಿದ್ದರೂ ಆದಾಯವನ್ನು ತಿಶ್ರಮಿಸಲಾರದು. ರಾಜಕೀಯದಲ್ಲಿ ಪ್ರತಿಪಕ್ಷೀಯರ ಕೈ ಮೇಲಾಗಲಿದೆ. ಶ್ರಮಜೀವಿಗಳಿಗೂ ಸೇವಕವರ್ಗಕ್ಕೂ ಈ ವಾರವು ಹೆಚ್ಚಿನ ಒಳ್ಳೆಯದಲ್ಲವು. ಅಧಿಕಾರಿಗಳ ಕೃಪೆಗೆ ಪಾತ್ರರಾದ ನಿಮಗೆ ಉದ್ಯೋಗದಲ್ಲಿ ಭಡತಿಯ ಯೋಗವಿದೆ. ಪಿತ್ಥದೋಷದಿಂದ ಆರೋಗ್ಯಕ್ಕೆ ಹಾನಿಯುಂಟಾದೀತು. ತಾರೀಕು 12, 17, 18 ಈ ದಿನಗಳಲ್ಲಿ ಕಾರ್ಯ ವಿಜಯ ಧನಲಾಭಗಳುಂಟಾಗಲಿವೆ.

೬. ಕನ್ಯಾ

ನಿಮ್ಮ ಶ್ರಮವಿಂದು ಸಾರ್ಥಕವಾಗಲಿದೆ. ಪ್ರತಿಪಕ್ಷೀಯ ಜನರಿಂದ ಕೆಲವೊಂದು ವಿಘ್ನ ವಿಡಂಬರಗಳು ಬಂದರೂ ಹಿಡಿದ ಕಾರ್ಯವನ್ನು ಕೊನೆಗಾಣಿಸಯೇ ತೀರುವಿರಿ. ಆರ್ಥಿಕ ಪರಿಸ್ಥಿತಿಯು ಮುಂಚಿಗಿಂತ ಸುಧಾರಿಸುವದರಿಂದ ದಿನಯಾಪನೆಯು ಸುಗಮವಾದೀತು. ಆಪ್ತಜನರ ವಿರಹದಿಂದಲೂ ಕಫವಾತ ಪ್ರಕೋಪದಿಂದುಂಟಾದ ದೇಹಾಲಸ್ಯದಿಂದಲೂ ದುಃಖಿತರಾದ ನಿಮಗೆ ವಾರಾದಿಯ 3 ದಿನಗಳಲ್ಲಿ ಸುಖ ವಿಜಯಗಳು ಲಭಿಸಲಿವೆ.

೭. ತುಲಾ

ನಿಮ್ಮ ಧನಪತಿಯಿಂದು ಲಾಭಕ್ಕೈದಿಹನು ಮಾತ್ರವಲ್ಲ, ಸುರಗುರುವಿನ ಪೂರ್ಣ ದೃಷ್ಟಿಯೂ ನಿಮ್ಮ ಮೇಲಿರುವದರಿಂದ ನಿಮ್ಮ ಸಂಕಲ್ಪಗಳು ಅನಾಯಾಸದಿಂದ ಕಾರ್ಯರೂಪಕ್ಕೆ ಬರಲಿವೆ. ಜನತೆಯ ಸಹಕಾರ, ಬಂಧುಗಳ ನೆರವುಳ್ಳ ನಿಮಗೆ ಸರ್ವತ್ರ ಸ್ಥಾನಮಾನಾದರಗಳು ಲಭಿಸಲಿವೆ. ಆರ್ಥಿಕ ಮುಗ್ಗಟ್ಟಿನಿಂದ ಮುಕ್ತರಾಗಿ ಸುಖ ಜೀವನವನ್ನು ಸಾಗಿಸುವಿರಿ. ಮಕ್ಕಳ ಆರೋಗ್ಯಕ್ಕೆ ಕೊಂಚ ಧಕ್ಕೆ ಉಂಟಾಗಲಿದೆ. ತಾ. 13ರಿಂದ16 ವರೆಗಿನ ದಿನಗಳು ಸರ್ವೋತ್ಕೃಷ್ಟಗಳಾಗಿವೆ.

೮. ವೃಶ್ಚಿಕ

ಶ್ರಮ ವಹಿಸಿ ನೀವಿಂದು ದುಡಿದಿರಾದರೂ ನಿಮ್ಮ ಪರಿಶ್ರಮವು ಬಹ್ವಂಶ ನೀರಲ್ಲಿ ಸ್ಯದ ಹೋಮದಂತೆ ವಿಫಲವಾಗಲಿದೆ. ಆಯಾಧಿಕ ವ್ಯಯ ವಾಗುವುದರಿಂದ ಹೆರವರ ಕೂಡೆ ಸಾಲಮಾಡುವ ಪರಿಸ್ಥಿತಿಯುಂಟಾದೀತು. ಹೆಂಡತಿ ಮಕ್ಕಳು ವಿರಹ ಆಪ್ತೇಷ್ಟರ ವಿಯೋಗ ದುಃಖಿತರಾದ ನಿಮಗೆ ಸಾಂಸಾರಿಕ ತಾಪತ್ರಯಗಳೂ ಹೆಚ್ಚಲಿವೆ. ವಿದ್ಯೋಪಜೀವಿಗಳಿಗೀ ಕಾಲವು ತುಂಬಾ ಪ್ರತಿಕೂಲವಿಹುದು. ವಾರಾಂತ್ಯದ 4 ದಿನಗಳು ಸ್ವಲ್ಪ ಉತ್ತಮವಾಗಿ ತೋರುವವು.

೯. ಧನು

ಸ್ವಯಂ ಶಕ್ತರಾದ ನಿಮಗೆ ಜನತೆಯ ನೆರವೂ ಸಾಕಷ್ಟಿದ್ದರೂ ಹೆಜ್ಜೆ ಹೆಜ್ಜೆಗೂ ವಿಘ್ನ ವಿಡಂಬರಗಳನ್ನು ಎದುರಿಸಬೇಕಾಗಿ ಬರಲಿದೆ. ದುಡಿಮೆಗಿಂತ ದ್ವಿಗುಣ ವ್ಯಯ ವಾಗುವುದರಿಂದ ಹಣದ ಬಿಕ್ಕಟ್ಟು ಅಧಿಕವಾದೀತು. ಭೂಸಂಬಂಧವಾದ ವ್ಯವಹಾರದಲ್ಲಿ ಕಷ್ಟ ನಷ್ಟಗಳುಂಟಾದಾವು. ವ್ಯಾಪಾರಿಗಳಿಗೆ ಅನಿರೀಕ್ಷಿತ ನಷ್ಟ ಸಂಭವಿಸುವ ಯೋಗವಿದೆ. ಮಿತ ಭಾಷಿಗಳಿಗೂ ಕೂಡಾ ಇಂದು ಕಲಹ ತಪ್ಪದು ತಾ. 12, 17, 16 ಇವುದರಲ್ಲಿ ಅನುಕೂಲವಾಗಿವೆ.

೧೦. ಮಕರ

ವಿಪಕ್ಷೀಯರಿಂದ ಮೇಲಿಂದ ಮೇಲೆ ತೊಡಕು ತೊಂದರೆಗಳು ಬರಲಿವೆ. ನೀವಿಂದು ಹೊಸತಾಗಿ ಯಾವ ಉದ್ಯಮವನ್ನೂ ಸಾಧಿಸಲಾರಿರಿ. ಗುರುಹಿರಿಯರ ಕೂಡೆ ವಿರೋಧ ಉಂಟಾಗುವದು. ಪ್ರವಾಸದಲ್ಲಿ ಅಪಘಾತಗಳ ಭೀತಿಯಿದೆ, ಕಜ್ಜಿ ಹುಣ್ಣು ಮೊದಲಾದ ಚರ್ಮರೋಗಗಳು ಕಾಣಿಸಿಕೊಳ್ಳುವವು ನಿಮ್ಮ ಪರಿಶ್ರಮವಿಂದು ಸಫಲವಾಗುವುದರಿಂದ ಹಣದ ಕೊರತೆಯು ನಿಮಗಿರದು. ತಾ. 13, 14ರಲ್ಲಿ ಮೃಷ್ಟಾನ್ನ ಭೋಜನ ಮನಶ್ಶಾಂತಿ ದೊರೆಯಲಿದೆ.

೧೧. ಕುಂಭ

ನಿಮ್ಮ ಪರಿಸ್ಥಿತಿಯಿಂದು ಮುಂಚಿಗಿಂತ ಎಷ್ಟೋ ಸುಧಾರಿಸಲಿದೆ, ಶ್ರಮ ಸಹಿಷ್ಣುಗಳಾದ ನೀವು ಹಿಡಿದ ಕಾರ್ಯವನ್ನು ಎಷ್ಟೇ ಅಡೆತಡೆಗಳೂ ಬಂದರೂ ಕೊನೆಗಾಣಿಸುವಿರಿ. ಹಣದ ಕೊರತೆಯು ನಿಮಗಿಂದು ಕಾಣಿಸದು. ಮನೆಯೊಳಗೆಯೂ ಕೂಡೆ ದಿನನಿತ್ಯ ಕಲಹವಾದೀತು. ಉದ್ಯೋಗಿಗಳಿಗೆ ಸ್ಥಾನಚಲನೆಯ ಯೋಗವಿದೆ. ಕೃಷಿ ವಿಭಾಗದಲ್ಲಿ ಕೊಂಚ ನಷ್ಟವುಂಟಾದೀತು. ತಾ. 12, 16, 16 ಈ ದಿನಗಳು ನಿಮಗನುಕೂಲವಾಗಿವೆ.

೧೨. ಮೀನ

ಕರ್ತವ್ಯ ದಕ್ಷರಾದ ನೀವಿಂದು ಎಂತಹ ಎಡರು ತೊಡರುಗಳು ಬಂದರೂ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರಿರಿ ಎಂತಹ ದುಃಸಾಧ್ಯವಾದ ಕಾರ್ಯವೂ ನಿಮಗಿಂದು ತೃಣಸಮವೆನಿಸೀತು. ಆರ್ಥಿಕ ಪರಿಸ್ಥಿತಿಯು ಮುಂಚಿಗಿಂತ ಉತ್ತಮವಾಗಲಿದೆ. ಕೆಲವೊಂದು ಗೃಹತಾಪತ್ರಯಗಳು ನಿಮ್ಮನ್ನು ನೆಮ್ಮದಿಯಿಂದಿರಲು ಬಿಡಲಾರವು. ನಿರ್ಧನಿಗಳಾದ ನಿಮಗೆ ತಾ. 13, 14, 17, 18 ಈ ದಿನಗಳಲ್ಲಿ ಸುಖಭೋಗ ಲಾಭಗಳು ಲಭಿಸಲಿವೆ.

ಮಹಾಪುರುಷರ ಕಥೆಗಳು

(ಹತ್ತನೇ ಪುಟದಿಂದ)

'ಇದೇ ಸರಿಯಾದ ಯೋಚನೆ. ಹೀಗೆಯೇ ಮಾಡಬೇಕು. ದೇವನ ಕಣ್ಣಿಗೆ ಪ್ರತಿಯಾಗಿ ನನ್ನ ಕಣ್ಣನ್ನೇ ಕಿತ್ತು ಇಡುವೆನು' ಎಂದು ಆನಂದದಿಂದ ಕುಣಿದನು. ಕೂಡಲೆ ಕೈಯಲ್ಲಿದ್ದ ಬಾಣದ ತುದಿಯಿಂದ ತನ್ನ ಎಡಗಣ್ಣನ್ನು ಮೀಟಿ ತೆಗೆದು ಲಿಂಗದ ಕಣ್ಣಿಗೆ ಇರಿಸಿದನು. ಅದು ಸರಿಯಾಗಿ ಹೊಂದಿ ಶೋಭಿಸಿತು, ನೆತ್ತರು ಸುರಿಯುವುದು ನಿಂತಿತು, ಆಗ ಭಕ್ತನ ಸಂತೋಷಕ್ಕೆ ಮೇರೆಯಿಲ್ಲ.

ಮರುಗಳಿಗೆಯಲ್ಲೇ ಲಿಂಗದ ಇನ್ನೊಂದು ಕಣ್ಣಿನಲ್ಲಿ ರಕ್ತ ಸ್ರಾವವಾಗಲು ತೊಡಗಿತು. ಭಕ್ತನದನ್ನು ನೋಡಿ 'ಹಾ! ದೇವಾ! ಇದೇನಿದು? ಇನ್ನೊಂದು ಕಣ್ಣಿಗೂ ಬಂದಿತೇ ಈ ರೋಗ? ಇರಲಿ ಇದಕ್ಕೆನ್ನು ಅಂಜಬೇಡ. ನನ್ನ ಇನ್ನೊಂದು ಕಣ್ಣಿಲ್ಲವೇ? ಅದನ್ನು ಅರ್ಪಿಸಿ ನಿನ್ನ ಈ ನೇತ್ರರೋಗವನ್ನು ನಿವಾರಿಸುವೆನು" ಎಂದು ಗಟ್ಟಿಯಾಗಿ ಹೇಳಿದನು. ಕೂಡಲೆ ಅತ್ಯಾನಂದದಿಂದ ಮೊದಲಿನಂತೆ ತನ್ನ ಮತ್ತೊಂದು ಕಣ್ಣನ್ನು ಕೀಳಲುಜ್ಜುಗಿಸಿದನು!

ಅಷ್ಟರಲ್ಲಿ ಭಕ್ತವತ್ಸಲನಾದ ಮಹಾದೇವನು ಪತ್ನಿಯಾದ ಪಾರ್ವತೀ ದೇವಿಯೊಡನೆ ಲಿಂಗದಲ್ಲಿ ಆವಿರ್ಭವಿಸಿ,— "ಭಕ್ತಶ್ರೇಷ್ಠನೇ ತಡೆತಡೆ. ನಿನ್ನೀ ಸಾಹಸವನ್ನು ನಿಲ್ಲಿಸು. ನಿನ್ನ ನಿಷ್ಕಳಂಕ ಪ್ರೇಮದಿಂದ ನಾನು ಅತೀವ ಸಂತುಷ್ಟನಾಗಿದ್ದೇನೆ" ಎಂದು ಕೈ ಹಿಡಿದು ನಿಲ್ಲಿಸಿದನು. ಭಕ್ತಶ್ರೇಷ್ಠನಾದ ಬೇಡನು ಸರ್ವೇಶ್ವರನ ದಿವ್ಯ ಮಂಗಳ ವಿಗ್ರಹವನು ಕಣ್ದಣಿಯೆ ನೋಡಿ, ಸಂತೋಷಾತಿರೇಕದಿಂದ ರೋಮಾಂಚನವನ್ನು ಹೊಂದಿದನು. ಗದ್ಗದ ಕಂಠದಿಂದ ಬಾರಿಬಾರಿಗೂ ಕೊಂಡಾಡುತ್ತಾ ಮೃಡನ ಅಡಿದಾವರೆಗಳಿಗೆ ಅಡಿಗಡಿಗೆ ಎರಗಿದನು. ಅಡಗಿದ್ದ ಅರ್ಚಕನೂ ಬೇಡನ ದೆಸೆಯಿಂದ ಮಹೇಶನ ಮಂಗಳ ಮೂರ್ತಿಯನ್ನು ನೋಡಿದನು. ಅವನು ದೇವದೇವನಿಗೂ ಬೇಡನಿಗೂ ಪೊಡಮಟ್ಟನು. ಆಗಲೇ ಆಗಸದತ್ತಣಿಂದ ಜಾಜಗಿಸುವ ವಿಮಾನವು ಕೆಳಕ್ಕಿಳಿಯಿತು. ಭಾಗ್ಯಶಾಲಿಯಾದ ಬೇಡನು ಪರಶಿವನ ಆಜ್ಞೆಯಿಂದ ಅದರಲ್ಲಿ ಕುಳಿತು ಶಿವಲೋಕಕ್ಕೈದಿ, ಉತ್ತಮವಾದ ಗಣಪದವಿಯನು ಪಡೆದು ಧನ್ಯನಾದನು

ನಿಷ್ಕಪಟ ಭಕ್ತಿಯಿಂದ ಶಿವನಿಗೆ ಕಣ್ಣನ್ನರ್ಪಿಸಿದ ದಂದರ್ಭದಿಂದನೆಂಬೀ ಬೇಡನು 'ಕಣ್ಣಪ್ಪ'ನೆಂದು ಲೋಕವಿಖ್ಯಾತನಾಗಿ ಸರ್ವದಾ ಸಜ್ಜನರ ಸ್ತೋತ್ರಕ್ಕೆ ಪಾತ್ರನಾದನು. ಕಣ್ಣಪ್ಪನು 'ಅರುವತ್ತಮೂರು ಪುರಾತನರ'ಲ್ಲಿ ಒಬ್ಬನೆಂದು ಹೆಸರುಗೊಂಡಿದ್ದಾನೆ. (ಈಗಲೂ ಕಣ್ಣಪ್ಪನ ವಿಗ್ರಹಕ್ಕೆ ಮೊದಲು ಪೂಜಿಸಿ, ಬಳಿಕ ದೇವನಿಗೆ ಪೂಜಿಸುವ ಕ್ರಮವಿದೆಯಂತೆ!) ಇವನ ಚರಿತೆಯನ್ನು ಹಲವರು ಬರೆದಿದ್ದಾರೆ. ಶಿವಭಕ್ತರಲ್ಲಿ ಇವನು ಮೇಲು ಹಂತದವನು.

"ಮೃಡನ ದೃಷ್ಟಿಯೊಳು ತಾ ರುಜೆಯು
ಡರಿದತಿಭೀತಿ |
ವಿಡಿದು ನಿಜಲೋಚನವಿತ್ತ ಕಣ್ಣಪ್ಪ!
ನಡಿಗಳಂ ಪೊತ್ತು ಬಿಡದಿರ್ಪೆ ||"

(ಶ್ರೀ ನಿಜಗುಣ ಶಿವಯೋಗಿಗಳು)

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 43ನೆಯ ವರ್ಷವು ಮುಗಿದು ಸಪ್ಟೆಂಬರ ತಿಂಗಳಿಂದ 44 ನೆಯ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯ್ಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಅದನ್ನು ತ್ವರ್ಯ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿಯೂ ವಿನಂತಿಸಿದ್ದೆವು. ಇನ್ನೂ ಕಳಿಸದವರು ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚು ಇಲ್ಲದೆ ಪಾವತಿ ಮಾಡಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು ವಿ ಪಿ ಮಾಡಿದರೆ 70 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿ ಕೊಡುವಂತೆ ಇನ್ನೊಮ್ಮೆ ಬಿನ್ನವಿಸುತ್ತೇವೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ವಿ.ಪಿ. ಮಾಡಬೇಕಾತ್ತದೆ.

Edited, Printed & Published by K. H. Shetty, at the Navayuga Press, Udipi, S. India

ಸಂಪುಟ ೪೪]   ನವಂಬರ, ೧೯, ೬೪   [ಸಂಚಿಕೆ ೧೨



leading nationalist weekly

೨೦ ಪೈಸೆ

ಗೇಹ ರಾಜ್ಯದಲ್ಲಿ

ಮನೆಗೆದ್ದು ಊರು ಗೆಲ್ಲಬೇಕು

"ನೋಡಿಂದ್ರೆ, ಅಕ್ಕಿ ಇನ್ನೂ ಬರಲಿಲ್ಲ ವಲ್ಲಾ?"

"ಬರಲಿಲ್ವೆ? ಕಳಿಸ್ತೇನೇಂತ ಹೇಳಿದ್ದ.'

"ಅವನು ಹೇಳ್ದಂತ ನೀವು ಹೋಗ್ಬಿಟ್ರೆ?"

"ವತ್ತೇನು ಮಾಡ್ಬೇಕಿತ್ತೂಂತ ?"

'ಏನೂ ಮಾಡ್ಬೇಡಿ ನಾಳೇ ದಿನಾ ಉಪವಾಸ ಇದ್ಬು ಬಿಡ್ರಿ "

"ಏಕಾದಶಿ ನಿನ್ನೆ ತಾನೇ ಕಳ್ದು ಹೋಯ್ತು ವತ್ತೆ..."

'ಮತ್ತೂ ಇಲ್ಲ ಗಿತ್ತೂ ಇಲ್ಲ ನಾಳೆಗೆ ಅಕ್ಕಿನೂ ಇಲ್ಲ"

"ನೋಡು, ನಿನಗೆ ಅದೆಷ್ಟು ಬಾರಿ ಹೇಳಿದ್ದೆ? ಕೊನೆಯ ತಾಸಿನಲ್ಲಿ ಇಲ್ಲಾಂತನ್ನ ಬೇಡ, ನಾಲ್ಕು ದಿನ ಮೊದ್ಲೇ ."

"ಅಲ್ಲಾ, ಹೇಳಿ ಹೇಳಿ ಸಾಕಾಯ್ತು ನನ್ಗೆ ಒಂದು ವಾರದಿಂದ ಬಂಬ್ಡಿ ಬಾರ್ಸ್ಡ್ದೇ ಒಂತು ಅಂತೂ ವರ್ತು ಹೋಯ್ತು, ಅಂವ ಇಲ್ಲಿಲ್ಲಾಂತ ಸುಳ್ಳೋ ಖಳ್ಳೋ ಹೇಳಿ ಏವತ್ತು ಜೀವಿಸಾದ್ರೆ ."

"ಇಷ್ಟು ಬೇಗ ನನ್ನನ್ನ ಸುಳ್ಳುಗಾರಾಂತ ಮಾಡಿಬಿಟ್ಟೆಯಲ್ಲ! ನಿನ್ನ ಕೈ ಹಿಡಿದದ್ದಕ್ಕೆ ಸಾರ್ಥಕವಾಯ್ತು '

'ಅಲ್ಲಾ, ನಾನಾದ್ರೂ ಮತ್ತೇನೆನ್ಬೇಕೂಂತ? ನಿಮ್ಗೆ ಗಂಡಸ್ರಿಗೆ ವಯಸ್ಸು ಮೀರ್ತಾ ಬಂದಂತೆ ಸಂಸಾರದ ಹೂಟಾನೆ ಮರ್ತು ಹೋಗುತ್ತೆ "

"ನನ್ನನ್ನ ಇಲ್ಲಿ ಮತ್ತೆ ಗಂಡಸ್ರ ಜಾತಿಯನ್ನ ನೀನು ನಿಂದಿಸೋದಿದೆ ನೋಡು ಇದು ಮಾತ್ರ ಸಹಿಸೋಕ್ಕಾಗೋದಿಲ್ಲ."

"ಮತ್ತೆ ನಿಮ್ಮ ಈ ಬುದ್ಧಿಗೆ ಏನನ್ಬೇಕೂಂತ?'

"ಅನ್ನೋದೇನಂತೆ? ನೋಡು ನನ್ನನ್ನ ಬೇಕಾದ್ರೂ ನೀನು ಬೇಕಾದಂತೆ ಅಂದ್ಕೋ ಆದ್ರೆ ಬೇರೆಯವರನ್ನ ಅಂದ್ಕೊಳ್ಳೋದುಂಟು ನೋಡು, ಇದ ಮಾತ್ರ ಕೂಡ್ದು "

'ಅದು ಸರೀನ್ನಿ. ಆದ್ರೆ, ಇಂದು ನಡಿಯೋದು ಮಾತ್ರ ಬೇರೆನ್ನಿ.'

'ಹ್ಞಾಂ..'

ಏನೂ? ಹ್ಞಾಂತ ಮಾತ್ರ ಅಂದು ಸುಮ್ಮನಾದ್ರಿ!"

ನೀನನ್ನೊ ಮಾತು ಒಪ್ಪಿಕೊಳ್ಳೋ ವಂತಿದೇಂತ ಅಂದೆ'

"ಅಷ್ಟು ಸುಲಭವಾಗಿ ನೀವು ಒಪ್ಪಿಕೊಳ್ಳೋರಲ್ಲ"

'ನೀನಂದೆಯಲ್ಲ, ಇಂದು ನಡೆಯೋದೆಲ್ಲಾ ಬೇರೇಂತ. ಅದು ನೂರಕ್ಕೆ ನೂರರಷ್ಟು ಸರಿಯಾದ್ದು. ಮನೆಗೆದಿಯೋದಕ್ಕೆ ಆಗದವ್ರು ಊರುಗೆದಿಯೋದಕ್ಕೆ ಹೋಗ್ತಾರೆ."

'ಅಂದ್ರೆ ?"

"ಅಂದ್ರೆ ಏನು? ನೋಡು, ಇಂದು ನಿನ್ನ ಸಮಸ್ಯೆಯನ್ನೇ ಎತ್ತಿಕೋ...'

'ನನ್ನದೇನೂ ಸಮಸ್ಯೆಯಿಲ್ಲ. ನೋಡಿ; ಅದೆಲ್ಲಾ ಹ ಗಿಲ್ಲಿ, ನಾಳೆ ಪ್ರಶ್ನೆಯನ್ನ ಹೇಗೆ ಬಗೆಹರಿಸಬೇಕು ಹೇಳಿ?"

"ನಾಳೇ ಪ್ರಶ್ನೆ ಏನದು?'

"ಅದೇ ನಮ್ಮ ಹೊಟ್ಟೆ ಕೇಳೋ ಪ್ರಶ್ನೆ..'

'ಅದೇ ತಾನೇ? ನೋಡು, ಇಂದು ದೇಶದಲ್ಲಿ ಅದೇ ಪ್ರಶ್ನೆ—ಸಮಸ್ಯೆ ತಾಂಡವವಾಡುತ್ತಿದೆ"

"ದೇಶದ ಕತೆ ಬಿಡ್ರಿ, ಮನೇ ಕತೆಗೆ ಬನ್ರಿ "

"ನೋಡ, ಸುಗ್ಗಿಯ ಕಾಲ ಬಂದ ಕೂಡ್ಲೆ ಈ ಪ್ರಶ್ನೆ ಸರಳವಾಗಿ ಬಗೆ ಹರಿಯುತ್ತೇಂತ ಮೊದ್ಲ ಹೇಳ್ತಾ ಇದ್ರು ಆದ್ರೆ ಈ ಕಾಲದಲ್ಲೇ ಹೀಗಾದ್ರೆ ಮುಂದೆ ಏನಾದೀತೂಂತ ನಾಕ್ತ.."

"ನಾನೂ ಯೋಚಿಸೋದು ಅದನ್ನೇ, ನೋಡಿ, ಕೇರಳಕ್ಕೆ ಸಾವಿರಗಟ್ಟಲೆ ಟನ್ ಆಹಾರ ಪೂರೈಕೆ ಮಾಡಬೇಕಾಗಿ ಬಂದಿದೆಯಂತೆ!"

"ಹೌದು ಅದೇ ಪರಿಸ್ಥಿತಿ ಉಳಿದೆಡೆಯಲ್ಲೂ ಇದೆ ನೋಡು. ಒಂದೊಂದು ಮನೆಗೆ ಎರಡೆರಡು ಕಿಲೋ ಕೊಂಚಬೇಕಾದ್ರೂ ಒಟ್ಟು ಒಷ್ಟು ಬೇಕು?"

ನಮಗಾದ್ರೆ ಅಷ್ಟು ಸಾಕು, ಆದ್ರೆ ದೊಡ್ಡ ದೊಡ್ಡ ಸಂಸಾರಗಳ ಕತೆಯೇನು ಹೇಳಿ ಪಾಪ, ಮಕ್ಕಳುಮರಿಗಳು ಹಸಿವೇಂತ ಕೂಗೋದನ್ನ ಕೇಳಿ ತೆಪ್ಪಗೆ ಕೂತಿರೋದಾದ್ರೂ ಹೇಗೆ?"

"ಹೇಗೇಂತಂದ್ರೆ, ಪರಿಸ್ಥಿತಿಯೆಲ್ಲವನ್ನೂ ಕಲಿಸಿಕೊಡುತ್ತದೆ"

'ಅಭಾವ ಪರಿಸ್ಥಿತಿ ಅದಕ್ಕೇ ಬಂದಿರೋದೂಂತ ತೋರುತ್ತೆ. ಅಲ್ಲಾ ನೋಡಿ, ಆಹಾರವಿಲ್ಲಾಂತ ಡಣಾಡಂಗುರ ಹೊಯ್ದು ವರೂ ನಿಮ್ಮ ಟೋಪಿಯವ್ರು. ಪರಿಸ್ಥಿತಿ ಎದುರಿಸ್ತೇವೇಂತ ಸಾರಿದವ್ರೂ ಅವ್ರೇ ಅದು ಹದಗೆಟ್ಟಿಲ್ಲಾಂತ ಹೇಳಿಕೆ ಕೊಟ್ಟವ್ರೂ ಅವ್ರೇ ಸುಧಾರಿಸುತ್ತಿದೆ, ತುಂಬಾ ಸುಧಾರಿಸಿದೆ, ಅಭಾವವಿಲ್ಲಾಂತ ಹೇಳುತ್ತಾ ಬಂದವ್ರೂ ಅವ್ರೇ ನಗ್ಗ ಕಾಲಕ್ಕೆ ಎಲ್ಲಾ ಸರಿ ಹೋಗುತ್ತೇಂತ ವಿಶ್ವಾಸ ದಾನ ಮಾಡಿದವ್ರೂ ಅವ್ರೇ ಮತ್ತೆ ಈಗ ಕೈಕಾಲು ಬಿಡೋವ್ರೂ ಅವ್ರೇ .

'ಅವ್ರು ಏನೇ ಮಾಡ್ಲಿ, ಅದೆಲ್ಲಾ ನಮಗೇಕೆ? ನಾವೀಗ ನಮ್ಮದನ್ನ ಯೋಚನೆ ಮಾಡಬೇಕು .'

'ಅದು ಹಾದೂನ್ನಿ. ಆದ್ರೆ ಹೀಗೆಲ್ಲಾ ಬಡಾಯಿ ಬಿಡೋದ್ರಿಂದ ಪ್ರಯೋಜನವಾದ್ರೂ ಏನೂಂತ?" ನೋಡಿ, ನಾನು ಹೇಳೋದ್ರೆ ಹೀಗೆಲ್ಲಾ ಆಡೋದಕ್ಕಿಂತ ಒಂದು ಕೆಲ್ಸ ಮಾಡಿ ಬಿಡಬೇಕು .'

"ಏನದು?'

'ಅಲ್ಲಾ, ಈಗ ನಿಮ್ಮ ಸರ್ಕಾರದವ್ರು ಹೇಳುವುದ್ರ ಅರ್ಥವೇನಂದ್ರೆ, ನಮ್ಮಿಂದ ಪರಿಸ್ಥಿತಿ ಸುಧಾರಿಸೋದಕ್ಕೆ ಸಾಧ್ಯವಿಲ್ಲಾಂತ ತಾನೆ?'

'ಛೆ, ಛೆ . ಹಾಗೆಲ್ಲಿ ಅಂದಿದ್ದಾರೆ? ಅವರು ಕೈ ಮೀರಿ ಪ್ರಯತ್ನಿಸುತ್ತಿದ್ದಾರೆ ಅವಶ್ಯ ಕಂಡ್ರೆ ರೇಶನಿಂಗ್ ಕೂಡಾ ಜ್ಯಾರೀಗೆ ತರೋ ವಿಚಾರವಿದೆ."

"ನಾಕು ಅದೊಂದು. ಸಮುದ್ರದಲ್ಲಿ ಮುಳುಗುವವನಿಗೆ ಹುಲ್ಲುಕಡ್ಡಿ ಆಧಾರವಾದಂತೆ ಅಲ್ಲಾ, ಈ ಸರ್ಕಾರ ನೋಡಿ, ಏನೋ ಯಾರೋ ಚೀಟಿ ಕೊಟ್ಟಿದ್ದಾರೆ. ಹಸ್ತಾಂತಿದ್ರೆ ಅರು ಕೊಡ್ತಾರೆ, ಅದೂ ಇವತ್ತಿಲ್ಲ ನಾಳೆ ನಾಡದೂಂತ ರಾಗ ಬೇರೆ ಹಾಗೇ ಅಲ್ವೆ ನಿಮ್ಮ ಈ ರೇಶನಿಂಗು? ಬರೀ ಆ ಕಾರ್ಡಿನ ನಾಲಿಗೆಯಿಂದ ನೆಕ್ಕಿದ್ರೆ ಹೊಟ್ಟೆ ತುಂಬುತ್ತೆ?"

"ಹಾಗಾಗ್ಲಿಕ್ಕಿಲ್ಲ ಬಿಡು..."

"ಬಿಡೋದು ಹಿಡಿಯೋದೆಲ್ಲಾ ನೀವು. ನಿಮ್ಮ ಆಶೆ ವಿಶ್ವಾಸವೆಲ್ಲಾ ನೀರಲ್ಲಿ ಹೋಮವಾದದ್ದನ್ನ ಈಗ್ಲೇ ನೋಡಿಯೂ ಯ್ತಿಲ್ಲ?"

"ಸಾಕಪ್ಪ, ಈಗ ನೀನೆನ್ನೋದಾದ್ರೂ ಏನು?"

"ಏನೂಂದ್ರೆ? ನಮ್ಮಿಂದ ಆಹಾರಧಾನ್ಯ ಹೊರಗೆ ತರೋಕೆ ಅಗ್ದಿದ್ರೆ ಜನ್ರಿಗೆ ಅಷ್ಟೇ ಕೂಡ್ಲಿ ಯಾವ ಮಂತ್ರಿಯೂ ಅಧಿಕಾರಿಯೂ ತಿಳಿಯದಂತೆ, ತಿಳಿದೂ ತಿಳಿಯದಂತೆ ಕೂಡಿಟ್ಟಿರೋದನ್ನ ಮೂರು ಹೊತ್ತಲ್ಲಿ ಹೊರಕ್ಕೆ ತರುತ್ತೆ ."

"ಇದು ಒಳ್ಳೆ ಕಥೆಯಾಯ್ತಲ್ಲ?"

"ಎಂತಹ ಕಥೆ?"

"ಕಥೆ ಎಂಥದು? ಅರಾಜಕತೆ .?

'ನೀವು ಹೀಗೇ ಮಾಡ್ತಾ ಹೋದ್ರೆ ಮತ್ತೆ ಆಗೋದಾದ್ರೂ ಏನು?"

'ಏನೋಪ್ಪ. .ಹ್ಞಾಂ...ನೋಡು, ಇದ್ರ ಪ್ರಯೋಗ ನಾಳೇನೇ ಮಾಡಿ ಬಿಡೋಣ ..'

'...ಓ, ಸರಿಯಾಯ್ತು ಬಿಡಿ..."

"ಯಾಕೆ? ..'

"ಹದ್ರ ಬೇಡಿ ಮತ್ತೆ, ಇನ್ನೂ ಮೂರ್ನಾಲ್ಕು ದಿನಕ್ಕಾಗೋವಷ್ಟು ಇದೆ ನೋಡ್ರಿ .'

"ಭಲೆ... ನಿನ್ನ ತಲೆಗೆ ಕೊಡಬೇಕು ."

ಬೇಡಿ ಮತ್ತೆ .'

"ಬೇಡೀಂತಂದ್ರೂ.. ಮತ್ತೆ ಸುಳ್ಳು ಹೇಳೋದಕ್ಕೆ ಹೆದರಿಸೋದಕ್ಕೆ ಒಂದು ನಿಮಿತ್ತ ಬೇಡ್ವೆ..'

"ಅಯ್ಯೋ... ಬಿಡೀಂದ್ರೆ . ಒಳ್ಗೆ ಬಿಸ್ಸಿ ಕೂಗ್ತಾ ಇದೆ. ಬಂದೆ..'

"ಹ್ಞಾಂ ನಾನೂ ಹಿಂದೇನೆ, ಬಂದೆ.."

—ಗೋರಾ.

ಜವಾಹರಲಾಲ ನೆಹರು ಸಾಮೂಜಿಕ ಅಭಿವೃದ್ಧಿ ಯೋಜನೆಯನ್ನು ಉದ್ಘಾಟಿಸುವ ದೃಶ್ಯ. (2—10—1962)

In the Matter of the Companies Act 1956

and

Karnataka Tiles Private Limited

Notice under Section 485 of the Companies Act 1956)

Notice is hereby given that by Special Resolutions passed by an extra-ordinary General Meeting of the Karnataka Tiles Private Limited, Chikkansal Road, Coondapur on 6th November 1964 it has been resolved to wind up the Company voluntarily and to appoint Sri G Kushala Hegde as Liquidator of the Company with effect from 6th November 1964 on a remuneration of Rs 500/-

Coondapoor,
7th November, 1964

Y. Manjaya Shetty,
Managing Director.

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ। ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ನೋಟೀಸು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಶಿಲ್ಪಿ

ರಂಜಾಲ ಗೋಪಾಲ ಶೆಣೈ

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೧೨	೧೯—೧೧—೧೯೬೪	No 12

ವಚನ ಸುಧೆ

ವಾಚಂ ವದತ ಭದ್ರಯಾ॥

(ಅಥರ್ವವೇದ, ೩—೩೦—೩)

O ಶುಭಗ ವಚಸಿದ ಮಾತನ್ನೇ ಆಡಿರಿ.

OO ಮನಸ್ಸಿನಲ್ಲಿ ಶುಭವಿಚಾರಗಳನ್ನು ಚಿಂತಿಸಿರಿ. ವದನದಿಂದ ಸುವಾಕ್ಯಗಳನ್ನು ಉಚ್ಚರಿಸಿರಿ. ಎಂದಿಗೂ ಕೆಟ್ಟ ಶಬ್ದಗಳು ಹೊರಡದಿರಲಿ. ಅಶುಭ ಶಬ್ದವನ್ನು ಸುರಿದರೆ, ನಿಮ್ಮ ವಾಣಿ ಪತಿತವಾಗುವುದು; ನಿಮಗೆ ಹಾನಿತಟ್ಟುವುದು.

ಅಸಹಾಯಕ ಮಿತ್ರ

ಸುಮಾರು ಎರಡು ತಿಂಗಳುಗಳಿಂದಲೂ ಒರಿಸ್ಸಾ ರಾಜ್ಯದ ಭುವನೇಶ್ವರ ರಾಜಧಾನಿಯಲ್ಲಿ ಗೊಂದಲದ ವಾತಾವರಣವು ಕೆರಳಿರುವುದು ಈಗ ಮುಖ್ಯ ಮಂತ್ರಿಯವರ ಮೇಲೆ 'ದಂಡಾಧಿಕಾರ' ಪ್ರಯೋಗವಾಗುವಂತಾದುದೂ ಶೋಚನೀಯ. ಇಂತಹ ಹದಗೆಟ್ಟ ಪರಿಸ್ಥಿತಿಗೆ ಅಲ್ಲಿನ ಸರಕಾರದಲ್ಲಿ "ನ್ಯಾಯ ಭೇದ"ವನ್ನು ಪ್ರತಿಭಟಿಸುವ ಶಕ್ತಿಯಿಲ್ಲದಿರುವುದೇ ಕಾರಣವೆನ್ನಲೇ ಬೇಕಾಗುತ್ತದೆ. ಕೆಲವು ಅವ್ಯಕ್ತ ವ್ಯಕ್ತಿಗಳೂ ಈ "ವಿದ್ಯಾರ್ಥಿ ಪ್ರತಿಭಟನೆ"ಯ ಸೂತ್ರಧಾರತನವನ್ನು ವಹಿಸಿದ್ದಾರೆಂಬ ವದಂತಿ ಮನಸ್ಸು ಇಂದು ನಂಬುವಂತಾಗಿದೆ. ವಿರೋಧಿ ಪಕ್ಷಗಳು ಅಥವಾ ಅತೃಪ್ತ ಕಾಂಗ್ರೆಸ್ ರಾಜಕಾರಣಿಗಳು ಪ್ರಾರಂಭದಿಂದಲೂ ವಿದ್ಯಾರ್ಥಿಗಳಿಗೆ ಪ್ರಚೋದನೆಯಿತ್ತಿದ್ದರೇ ಅಥವಾ ಮಧ್ಯಾವಧಿಯಲ್ಲಿ ತಮ್ಮ ಬೇಳೆಬೇಯಿಸಲಿಟ್ಟರೇ ಎಂಬುದರ ವಿಮರ್ಶೆಯಿಂದು ಅನಗತ್ಯ. ಪರಿಸ್ಥಿತಿ ಕೈಮೀರಿದುದಂತೂ ಸತ್ಯ

ಮುಖ್ಯ ಮಂತ್ರಿ ಮಿತ್ರರು ಸಂಪು ಹಿಂತೆಗೆಯುವುದಕ್ಕೆ ಮೂಲವಾದ ತನ್ನ ಭರವಸೆಗಳನ್ನು ಈಡೇರಿಸಲಿಲ್ಲವೆಂದು ವಿದ್ಯಾರ್ಥಿಗಳು ಆರೋಪಹೊರಿಸಿದ್ದರೆ ಸರಕಾರವು ಈ ಒಪ್ಪಂದವನ್ನು ಮಾಡಿಕೊಳ್ಳುವಲ್ಲಿಯೇ ಜಾರಿ ಬಿದ್ದಿದೆ. ವಿದ್ಯಾರ್ಥಿಗಳ ನ್ಯಾಯಭೇದನ ಪಕ್ಷ ಅಸಹನೀಯ ಹಾಗೂ ಒಂಭತ್ತು ಜೀವಗಳನ್ನು ಬಲಿ ತೆಗೆದುಕೊಂಡ ವರ್ತನೆಯನ್ನೂ ಕಡೆಗಣಿಸಿ, ಬಂಧಿತರನ್ನು ಬಿಡುಗಡೆ ಮಾಡಲು ಒಪ್ಪಿದ್ದೇ ತಪ್ಪು. ಹಿಂಸಾಚರಣೆಗಾಗಿ ಬಂಧಿತರಾದ ಒಂಭತ್ತು ವಿದ್ಯಾರ್ಥಿಗಳನ್ನು ಒಡಂಬಡಿಕೆಯನ್ವಯ ಬಿಟ್ಟುಬಿಡಲಾಯಿತು. "ಅನ್ಯಾಯದ ವಿಜಯ"ದಿಂದ ಉಬ್ಬಿದ ವಿದ್ಯಾರ್ಥಿಗಳು ನೆರೆಯೂರ ವಿದ್ಯಾರ್ಥಿ ನೇತಾರರನ್ನೂ ಬಿಟ್ಟುಬಿಡುವಂತೆ ಬಲಾತ್ಕಾರ ಹೇರಿದರೆ, ಅದು ಸ್ವಾಭಾವಿಕವೇ. ಇನ್ನೇ ಇತರರೂ ಬೆಂಬಲಿಸುತ್ತ ಬಂದಿದ್ದಾರೆ. ಅರಾಜಕತೆಯಲ್ಲದೆ ಮತ್ತೇನು ಅಲ್ಲಿ ಉಳಿದಂತಾಯಿತು? ವಿದ್ಯಾರ್ಥಿಗಳು ರಾಜ್ಯ ಶಾಸನ ಸಭೆಯ ಮೇಲೆ ದಾಳಿ ಮಾಡಿದಂದೇ ಮುಖ್ಯ ಮಂತ್ರಿಗಳು ಅವರೊಡನೆ ಒಡಂಬಡಿಕೆಗೆ ಬಂದರೆಂಬುವನ್ನು ನಾವು ಮರೆಯುವಂತಿಲ್ಲ. ಇದರಿಂದ ಇನ್ನು ಹೆಚ್ಚಿನ ಅನ್ಯಾಯ, ಗೊಂದಲ ಮತ್ತು ಶಿಸ್ತುಗೇಡಿತನಕ್ಕೆ ಉತ್ತೇಜನ ನೀಡಿದಂತಾಯಿತು. ಹಿಂಸೆಯನ್ನು ಮಾಡುವುದು, ನ್ಯಾಯವನ್ನು ಭೇದಿಸುವುದು ಮಾತ್ರ ಶಾಸನ ಬಾಹಿರವಲ್ಲ; ಇವಕ್ಕೆ ಪ್ರೇರಣೆ ನೀಡುವುದೂ ನ್ಯಾಯ ಸಮ್ಮತವಲ್ಲ; ಇದನ್ನು ವ್ಯಕ್ತಾವ್ಯಕ್ತವಾಗಿ ಉತ್ತೇಜಿಸುವುದು ಅಲ್ಲವೇ ಉದ್ರೇಕಿಸುವುದು ಕೂಡ ನ್ಯಾಯಕ್ಕೆ ಮಸಿ ಬಳಿದಂತೆ. ಸರಕಾರವು ಈ ಸಂಬಂಧದಲ್ಲಿ ಅನುಸರಿಸಿದ ನೀತಿಯು ಅವಹೇಳನಾತ್ಮಕವಾಗಿದೆ. ಅನ್ಯಾಯವಾದ, ಅಕಾರಣವಾದ ತಮ್ಮ ಅಥವಾ ತಮ್ಮನ್ನು ಮುಂದೆಮಾಡಿದವರ ಬೇಡಿಕೆಗಳನ್ನು ದಂಡಪ್ರಯೋಗದಿಂದಲಾದರೂ ಸಾಧಿಸಿಯೇ ತೀರುತ್ತೇವೆ ಎಂಬ ಮನೋಭಾವ ಅವರಲ್ಲಿ ಮೂಡುವುದಕ್ಕೆ ದಾರಿ ಮಾಡಿಕೊಟ್ಟಿದೆ. ಕಳೆದ ಸಪ್ಟಂಬರ ೨೨ರಿಂದ ಅಲ್ಲಿ ನಡೆದ ಸಮಸ್ತ ಸನ್ನಿವೇಶಗಳ ಮೇಲೆಯೂ ವಿಚಾರಣೆ ಮಾಡಲು ನ್ಯಾಯ ವಿಚಾರಣಾ ಸಮಿತಿಯೊಂದನ್ನು ನೇಮಿಸುವ ಬಗ್ಗೆ ಸರಕಾರ ಮತ್ತು ವಿದ್ಯಾರ್ಥಿಗಳ ಕ್ರಿಯಾ ಸಮಿತಿಗಳ ನಡುವೆ ಒಡಂಬಡಿಕೆಯಾಗಿತ್ತು. ವಿದ್ಯಾರ್ಥಿಗಳ ಹೆತ್ತವರೂ ಇದರಲ್ಲಿ ಸೇರಿಕೊಂಡಿದ್ದರು. ಆದರೆ, ಅವರೂ ಇಂದು ನ್ಯಾಯ ದಾರಿಯಲ್ಲಿ ನಡೆಯುತ್ತಿರುವಂತೆ ತೋರುವುದಿಲ್ಲ. ಏಕೆಂದರೆ, ವಿದ್ಯಾರ್ಥ್ಯೇತರ ಗೊಂದಲಗಾರರನ್ನು ಬಿಡುಗಡೆ ಮಾಡುವ ಪ್ರಶ್ನೆಯು ಒಡಂಬಡಿಕೆಯಲ್ಲಿ ಬಂದಿಲ್ಲ. ಆದರೂ ಅವರು ಇಂದು ನ್ಯಾಯ ತಪ್ಪಿ ನಡೆಯುತ್ತಿರುವ ತಮ್ಮ ಮಕ್ಕಳನ್ನು ನ್ಯಾಯ ಮಾರ್ಗದಿಂದ ಏಕೆ ನಡೆಸುತ್ತಿಲ್ಲವೆಂದು ಅರ್ಥವಾಗುತ್ತಿಲ್ಲ. ತಮ್ಮ ಮಕ್ಕಳು ತಮ್ಮ ಕೈಮೀರಿ ಹೋಗಿದ್ದಾರೆಂದು ಅವರು ಕಂಡುಕೊಂಡಿರುವುದಾದರೆ, ಇದಕ್ಕಿಂತ ದೊಡ್ಡ ದೌರ್ಭಾಗ್ಯ ಬೇರೊಂದಿಲ್ಲವೆನ್ನಲೇ ಬೇಕಾಗಿದೆ.

ಬೇಕಾದ್ದೊಂದು ಬೇಕಾಗಿರುವುದು ನ್ಯಾಯ ಮತ್ತು ಸಮೃದ್ಧಿ. ನಾಳಿನ ನಾಗರಿಕರಾದ ಇಂದಿನ ವಿದ್ಯಾರ್ಥಿ ಸಮೂಹವು ಶಿಸ್ತನ್ನು ಪರಿಪಾಲಿಸಿ, ನ್ಯಾಯ ಮಾರ್ಗದಲ್ಲಿ ನಡೆದು ಸಮೃದ್ಧಿಯನ್ನು ಸಾಧಿಸಬೇಕು. ಅದು ಬಿಟ್ಟು ಬಿಟ್ಟರೆ ಅದರಿಂದ ಯಾರಿಗೆ ಲಾಭ? ಒರಿಸ್ಸಾದ ಸರಕಾರವು ತೀರ ದುರ್ಬಲವಾದ ನೀತಿಗೆ ಶರಣು ಹೋಗಿರುವುದು ಶೋಭನೀಯವಲ್ಲ. ಅನ್ಯಾಯವನ್ನು ಪ್ರತಿಭಟಿಸುವ ಶಕ್ತಿಯಿಲ್ಲದ ಶರಣಾಗತ ನೀತಿಯನ್ನು ಅನುಸರಿಸುವ ಸರಕಾರದಿಂದ ಯಾರೂ ಏನನ್ನೂ ಬಯಸುವುದು ಸಾಧ್ಯವಿಲ್ಲ. ಬೀರೇನ್ ಮಿತ್ರಾ ಅವರು ತನ್ನ 'ಬೀರತನ'ವನ್ನು ತೊರೆದು ಅಜ್ಞಾನದ ನೀತಿಯನ್ನು ಸ್ವೀಕರಿಸಿ ಸೋಲೊಪ್ಪಿಕೊಂಡ ಪ್ರಸಂಗ ಇತರ ರಾಜ್ಯಗಳಲ್ಲೂ ಪ್ರಭಾವ ಬೀರದಿರುವುದು ಸಾಧ್ಯವಿಲ್ಲ. ಹೀಗೇ ನಡೆದರೆ, ನಮ್ಮ ಪ್ರಜಾಸತ್ತೆಯ ಗತಿ ಏನು ಎಂದು ಎಲ್ಲರೂ ಚಿಂತಿಸಬೇಕಾಗಿದೆ. ಇದು ಕೇವಲ ಒರಿಸ್ಸಾ ಸರಕಾರದ ಮಾತ್ರವಲ್ಲ, ಭಾರತದ ಎಲ್ಲಾ ರಾಜ್ಯ ಸರಕಾರಗಳೂ ಪಾಠ ಕಲಿಯಬೇಕಾದ ಘಟನೆ. ನ್ಯಾಯವನ್ನುಳಿಸಲಾರದ ಸರಕಾರ ನ್ಯಾಯಾಸನದಲ್ಲಿ ಮಂಡಿಸಿದರೆ, ಕುರ್ಚಿ ಮಾತ್ರ ಬೆಚ್ಚಗಾದೀತು. ಇದನ್ನು ಮೀರಿದ ದುರ್ದೈವ ಇನ್ನೊಂದಿದೆಯೆ?

ಅಯ್ಯೂಬರು ಅನರ್ಹರೆ?

ಇಸ್ಲಾಮ ಧರ್ಮದ ತಳಹದಿಯಲ್ಲಿ ಮಹಿಳೆಯೋರ್ವಳು ಪಾಕಿಸ್ತಾನದ ಅಧ್ಯಕ್ಷಳಾಗುವುದು ಅಧಾರ್ಮಿಕವೆಂದು ಪ್ರಚಾರ ಮಾಡುತ್ತ ಬಂದು ಫಾತಿಮಾ ಜಿನ್ನಾರವರ ವಿರುದ್ಧ ಧರ್ಮಾಸ್ತ್ರವೆಸೆದ ಪಾಕ್ ಅಧ್ಯಕ್ಷ ಮೇಜರ್ ಜನರಲ್ ಅಯ್ಯೂಬ್‌ಖಾನರು ತಾವಾಗಿಯೇ ಆ ಸ್ಥಾನಕ್ಕೆ ಸ್ಪರ್ಧಿಸಲು ಮತ್ತು ಇರಲು ಅನರ್ಹರೆಂಬ ಆಕ್ಷೇಪವನ್ನು ಎದುರಿಸಬೇಕಾಗಿ ಬಂದಿದೆ. ಅಯ್ಯೂಬರು ಸೇನೆಯ ಅಧಿಕಾರದಿಂದ ನಿವೃತ್ತರಾಗಿ ಪೆನ್ಶನ್ ಸೇವೆಯಲ್ಲಿ ತಾ ೩೦ ೬-೬೦ರಿಂದ ಸೇರಿದ್ದಾರೆ ಎಂಬ ೨೦-೧೦-೬೪ರ ಗಜೆಟ್ ಪ್ರಕಟಣೆಯೇ ಇದನ್ನು ಎತ್ತಿದಂತಿದೆ. ಪಾಕ್ ಸಂವಿಧಾನದಂತೆ ಅಲ್ಲಿನ ಅಧ್ಯಕ್ಷ, ರಾಜ್ಯಪಾಲ ಅಥವಾ ಮಂತ್ರಿ ಪದವಿಯಲ್ಲಿರುವವನು ಪಾಕ್ ಸೇನೆಯಲ್ಲಿ ಅಥವಾ ಪಾಕ್ ಖಜಾನೆಯಿಂದ ವೇತನ ಪಡೆಯುವ ಹುದ್ದೆಯಲ್ಲಿ ಇರಬಾರದು. ಆದರೆ, ಇವರು ತನ್ನ ಪೆನ್ಶನನ್ನೂ ಅಧ್ಯಕ್ಷೀಯ ವೇತನವನ್ನೂ ಪಡೆಯುತ್ತಿದ್ದಾರೆ. ಇಂತಹ ಇಕ್ಕಟ್ಟಿನ ಪ್ರಸಂಗದಲ್ಲಿ ಸಿಕ್ಕಿಬಿದ್ದ ಅಯ್ಯೂಬಖಾನರು ಅಂದು ಹೇಗೆ ಜಾರಿಬಿದ್ದರೆಂದು ತಿಳಿಯದು. ಅಂತಿಮ ಅಧ್ಯಕ್ಷೀಯ ಚುನಾವಣೆಯ ಸಂಧ್ಯಾಕಾಲದಲ್ಲೇ ಇಂತಹ ಗಂಡಾಂತರಕ್ಕೆ ಅವರು ಜಾರಿದುದು ಅವರ ಮುಳುವಿಗೆ ಕಾರಣವಾದರೂ ಅಚ್ಚರಿಯಿಲ್ಲ "ಸಾಮಾಜಿಕ ನೀತಿ"ಯ ಪ್ರಶ್ನೆಯ ಮುಂದೆ ಅಪರಾಧಿಗಳಾದ ಅಯ್ಯೂಬರು ಬೋನಿನಿಂದ ಹೇಗೆ ನುಸುಳಿಕೊಳ್ಳುವರೆಂಬುದನ್ನು ನೋಡಬೇಕಾಗಿದೆ.

ನರಸಣ್ಣನ ಸರಸ



"ಹೆದರ ಬೇಡಿ ಹೆದರ ಬೇಡಿ ಅಂತ ಹೇಳುವಾರ ನೂರಾಯ್ತು ರಾಯ್ರೇ....ಇನ್ನೂ ಬೆದರಿಕೆ ದೂರವಾಗೋ ಲಕ್ಷಣಾನೇ ಕಾಣಸೋದಿಲ್ಲ ..."

"ಹೆದರ ಬೇಡಿ ಅಂದೆನಲ್ಲ ... ನಾಲ್ಕು ದಿನ ಕಳೆಯುತ್ತಲೇ ಎಲ್ಲಾ ಸರಿಹೋಗುತ್ತೆ ..."

"ಅಲ್ಲಿವರೆಗೆ...."

"ಹೆದರಬೇಡಿ, ಹೆದರಬೇಡಿ .."

ಕಥಾ ಪ್ರಪಂಚ

ಸಂಬಳದ ದಿನ

ಬರೆದವರು: ಶ್ರೀ ಕು. ಗೋ

ಸಂಜೆಯ ಚಳಿಗಾಳಿ ಸಮುದ್ರದ ಅಲೆಗಳಂತೆ ಅರ್ಭಟಿಸುತ್ತಾ ಜೋರಾಗಿ ಬೀಸುತ್ತಿತ್ತು. ಮಫ್ಲರ್ ಸುತ್ತಿಕೊಂಡು, ಹೊತ್ತುಗೊತ್ತಿಲ್ಲದೆ ಬರುವ ಮಳೆಯಿಂದ ಸ್ವಲ್ಪವಾದರೂ ರಕ್ಷಿಸಿಕೊಳ್ಳೋಣವೆಂದು ಕೊಡೆ ಹಿಡಿದುಕೊಂಡು ಹೀಗೆ ಸುತ್ತಾಡಿ ರಸ್ತೆಯ ಧೂಳನ್ನಾದರೂ ಸೇವಿಸಿಕೊಂಡು ಬರೋಣವೆಂದು ಹೊರಟಿದ್ದೆ. ಶಂಕರನ ಸವಾರಿ ಎದುರಿನಿಂದ ಬರುತಿದ್ದುದು ಕಾಣಿಸಿತು. ಕೈಕಾಲುಗಳನ್ನಾಡಿಸುತ್ತಾ ಏನೋ ಯೋಚಿಸುತ್ತಿರುವವನಂತೆ ಪಾದಗಳನ್ನೇ ನೋಡುತ್ತಾ ಅಕ್ಕಪಕ್ಕಕ್ಕೆ ದೃಷ್ಟಿಯನ್ನೇ ಹಸರಿಸದೆ ಬಸ್ಸು ಹಿಡಿಯಲು ಓಡುವವರಂತೆ ಹೋಗುತ್ತಿದ್ದ. "ಏನೋ ಶಂಕರಾ" ಎಂದೆ. ಗಾಳಿಯ ದೆಸೆಯಿಂದ ಆ ಮಾತು ಶಂಕರನ ಕಿವಿಗೆ ಬೀಳಲಿಲ್ಲ. ಅಡ್ಡಗಟ್ಟಿ ನಿಲ್ಲಿಸಿ "ನಮಸ್ಕಾರ ಎಂದೆ. ತಾನೂ "ನಮಸ್ಕಾರ" ಎಂದು ನನ್ನನ್ನು ನೋಡದೇ ಹೊರಟ. ರಟ್ಟೆ ಹಿಡಿದು ನಿಲ್ಲಿಸಿ ಕೇಳಿದೆ— "ಏನಯ್ಯಾ ಮಾತನಾಡಿಸಿದರೂ ಮಾತನಾಡದೆ ಓಡ್ತಾ ಇದ್ದೀಯಲ್ಲಾ. ಅಂಥ ಅವಸರವೇನು? ಯಾರಾದರೂ ಅಟ್ಟಿಸಿಕೊಂಡು ಬರುತಿದ್ದಾರೆಯೋ?"

"ಹೌದು."

"ಯಾರು?"

"ಸಂಬಳದ ದಿನ."

ಸಂಬಳದ ದಿನ? ಹಾಗಂದ್ರೆ ಯಾರಯ್ಯಾ? ಅಂಥ ಹೆಸರೂ ಇರುತ್ತೆಯೋ?

ಉಫ್! ನಿನಗೆ ಇನ್ನು ಗೊತ್ತಿಲ್ಲವೇ? ನಾಳೆ ಸಂಬಳದ ದಿನ. ಈ ಸಂಬಳದ ದಿನ ಯಾಕಪ್ಪಾ ಬರುತ್ತೆ ಎನಿಸುವಂತಾಗಿದೆ ನನಗೆ.

ನನ್ನ ಎಡಗೈ ತಲೆ ಕೆರೆಯಲಾರಂಭಿಸಿತು. ಶಂಕರನ ಮಾತು ಕೇಳಿ ಸ್ವಲ್ಪ ನಗುವೂ ಬಂತು, ಸ್ವಲ್ಪ ಆಶ್ಚರ್ಯವೂ ಆಯ್ತು—ಸಂಬಳದ ದಿನ ಎಂದಿಗೆ ಬಂದೀತು, ಸಂಬಳ ಎಷ್ಟು ಹೊತ್ತಿಗೆ ಸಿಕ್ಕೀತು ಎಂದು ಜಾತಕ ಪಕ್ಷಿಯಂತೆ ತವಕ ಪಡುವ ನೌಕರರಿರುವಾಗ ಈ ಪ್ರಾಣಿ ಸಂಬಳದ ದಿನವನ್ನೇ ದ್ವೇಷಿಸುತ್ತಿದೆಯಲ್ಲಾ ಎಂದು ತಿಳಿದು. ಇದರಲ್ಲಿ ಏನೋ ರಹಸ್ಯವಿದೆ ಎಂದು ಭಾವಿಸಿದೆ. ಕಾಮತರ ಹೋಟೆಲಿಗೆಳೆದುಕೊಂಡು ಹೋಗಿ ಕಾಫಿ ಕೊಡಿಸಿದೆ. ಆತ ಗ್ಲಾಸು ಬರಿದು ಮಾಡಿದ ಮೇಲೆ ಅದು ಸರಿ, ಸಂಬಳದ ದಿನ ಬಂದರೆ ನಿನಗೆ ಆಗುವ ತೊಂದರೆಯಾದರೂ ಏನು? ಎಲ್ಲರೂ ಸಂಬಳ ಬೇಗನೇ ಸಿಗಲಿ ಎಂದು ಒದ್ದಾಡುತಿದ್ದರೆ ನೀನು ಅಯ್ಯೋ ಅನ್ನುತ್ತಿದ್ದೀಯಲ್ಲಾ ಕಾರಣವೇನು? ಎಂದೆ.

ಸುಮ್ಮನಿರಪ್ಪಾ ನಿನಗೆ ಅದೆಲ್ಲಾ ಹೇಗೆ ಗೊತ್ತಾಗುತ್ತೆ? ಅವರವರ ಕಷ್ಟ ಅವರವರಿಗೇ ಗೊತ್ತು.

ಅದು ಸರಿ. ಆದರೆ ಆ ಕಷ್ಟವೇನೆಂಬುದನ್ನು ಹೇಳಿದರೆ ಇನ್ನೊಬ್ಬರೂ ತಿಳಿದುಕೊಳ್ಳಬಹುದಲ್ಲಾ?

ಅವೆಲ್ಲಾ ಹೇಳಿ ಪ್ರಯೋಜನವಿಲ್ಲ! ನಿನಗ್ಯಾಕೆ ಅಷ್ಟು ಆಸಕ್ತಿ ಅದನ್ನು ತಿಳಿದುಕೊಳ್ಳಲು?

"ಆಸಕ್ತಿ ನನಗೆ ಮಾತ್ರವಲ್ಲ, ನಿನ್ನ ಮಾತು ಕೇಳಿದವರಿಗೆಲ್ಲಾ ಹುಟ್ಟಲೇ ಬೇಕು. ಸಂಬಳ ಬರುತ್ತೇಂತಂದ್ರೆ ಎಲ್ಲರೂ ಖುಷಿಯಾಗ್ತಾರೆ. ಆದರೆ ನೀನು ಮಾತ್ರ ಅಳ್ತಾ ಇದ್ದೀಯಪ್ಪ!

ಎಂತಹ ಖುಷಿ ಬುಡ್ಯಾ ಮಸಣದ್ದು ತಲೆಗಳೆದ್ರೆ ಕಾಲಿಗಿಲ್ಲ. ಕಾಲಿಗೆಳೆದ್ರೆ ತಲೆಗಿಲ್ಲ. ಅಂಥ ಸಂಬಳ ತೆಗೆದು, ಕೊಂಡ್ರೂ ಅದನ್ನು ಸರಿಯಾಗಿ ಒಂದರ್ಧ ಘಂಟೆ ಕೈಯಲ್ಲಿ ಹಿಡಿದು ಕೊಳ್ಳೋಣವೆಂದರೆ ಅಷ್ಟು ಯೋಗ್ಯತೆಯೂ ನನಗಿಲ್ಲ. ಅಂತ ಸಂಬಳ ಬಂದರೆಷ್ಟು ಬಿಟ್ಟರೆಷ್ಟು ನೀನೇ ಹೇಳು!

ಖರ್ಚು ಮಾಡದೆ, ಬಂದ ಹಣವನ್ನು ಹಾಗೇ ಇಡಲು ಸಾಧ್ಯವೇ? ಆದರೂ ಖರ್ಚು ಸ್ವಲ್ಪ ಕಡಿಮೆ ಮಾಡಬೇಕು. ಹತ್ತು ಉಳಿಸುವಲ್ಲಿ ಐದನ್ನಾದರೂ ಉಳಿಸಬಹುದಲ್ಲಾ.

ಚೆನ್ನಾಗಿ ಹೇಳಿದೆ. ಆದರೆ ಉಳಿಸುವುದಾದರೂ ಎಲ್ಲಿಯದನ್ನು? 'ಉಳಿಸುವುದಾದರೂ ಹೇಗೆ?

ಅದನ್ನೂ ಹೇಳಿಕೊಡಬೇಕೆ?

ನೀನು ಹೇಳಿಕೊಡುವುದು ಬೇಡ, ನಾನೇ ಹೇಳ್ತೀನೆ, ಕಿವಿ ಕೊಟ್ಟು ಕೇಳು ಎಂದು ಶುರುಮಾಡಿದ ಶಂಕರ ತನ್ನ ವೃತ್ತಾಂತವನ್ನು.

"ನೋಡು ರಾಜ, ನನಗೆ ಬರುವ ಸಂಬಳ ಎಷ್ಟೆಂಬುದು ನಿನಗೆ ಗೊತ್ತೇ ಇದೆ. ಏನೋ ನೂರರ ಮೇಲೆ ಹತ್ತೋ ಹದಿನೈದೋ ಹೆಚ್ಚು ಅಷ್ಟೆ. ಕೇಳುವವರಿಗೆ ಬಹಳ ಜಾಸ್ತಿ ಎಂದು ತಿಳಿಯಬಹುದು. ಆದರೆ ನೋಡು, ಆಫೀಸಿನಲ್ಲಿ ಸಂಬಳದ ಹಣವನ್ನು ಎಣಿಸುತ್ತಿರುವಾಗಲೇ ನಾಲ್ಕಾರು ಜನ ಪಿಳಪಿಳದೆ ಕಣ್ಣು ಬಿಟ್ಟುಕೊಂಡು ನನ್ನನ್ನೇ ನೋಡುತ್ತಾರೆ. ಒಬ್ಬ ನಮ್ಮ ಯೂನಿಯನ್ನಿನ ಕ್ಯಾಷಿಯರ್, ಇನ್ನೊಬ್ಬ ನಮ್ಮ ಕ್ಲಬ್ಬಿನ ಕೋಶಾಧಿಕಾರಿ, ಮತ್ತೊಬ್ಬ ಹಿಂದಿನ ತಿಂಗಳು ಸಾಲವಾಗಿ ಹಣ ಕೊಟ್ಟವ, ಮಗದೊಬ್ಬ ಸಾಲ ಕೇಳಿದವ— ಹೀಗೆ ಬಕಪಕ್ಷಿಗಳ ಸಂಖ್ಯೆ ಬೆಳೆಯುತ್ತಲೇ ಇರುತ್ತದೆ. ಹೋಟೇಲಿನವನು ಆಗಲೇ ಪುಸ್ತಕ ಕೊಟ್ಟು ಕಳುಹಿಸುತ್ತಾರೆ, ಇನ್‌ಷೂರೆನ್ಸ್ ಏಜಂಟ ಪ್ರೀಮಿಯಂ ಕಟ್ಟುವ ತಾರೀಕನ್ನು ಹತ್ತಾರು ಬಾರಿ ಹೇಳುತ್ತಾರೆ. ಇನ್ನೊಬ್ಬ ಏಜಂಟ ಆಗಲೇ ತಾಗಿರುತ್ತಾರೆ ಇನ್ನೊಂದು ಪ್ರಪೋಸಲ್ ಬರೆಸಿಕೊಳ್ಳಲು, ಹೀಗೆ ನೋಡು, ನನ್ನ ಸಂಬಳದಲ್ಲಿ ಯೂನಿಯನ್ನಿಗೆ ತಿಂಗಳಿಗೆ ಎಂಟಾಣೆ, ಕ್ಲಬ್ಬಿಗೆ ಒಂದು ರೂಪಾಯಿ ಆಫೀಸಿಗೆ ಕಾಫಿ ತಂದುಕೊಡುವ ಹೋಟೇಲಿನವರಿಗೆ ಮಾತ್ರ ಒಂಭತ್ತು ರೂಪಾಯಿ, ಊಟದ ಹೋಟೇಲಿಗೆ ಮೂವತ್ತೆರಡು ರೂಪಾಯಿ. ತಿಂಡಿ ತಿನ್ನುವ ಹೋಟೆಲಿಗೆ ಇಪ್ಪತ್ತೆಂಟು ರೂಪಾಯಿ, ಡೋಬಿಗೆ ಒಟ್ಟು ಆರೂಕಾಲು ರೂಪಾಯಿ, ರೂಂ ಬಾಡಿಗೆ ಹನ್ನೆರಡು ರೂಪಾಯಿ, ಲೈಟ್ ಚಾರ್ಜು ಮೂರು ರೂ, ಸೀರಿಗೆ ಒಂದೂವರೆ ರೂಪಾಯಿ, ಕಕ್ಕಸಿಗೆ ಎಂಟಾಣೆ, ಎಷ್ಟಾಯ್ತು ಹೇಳು"

"ಒಟ್ಟಿಗೆ ತೊಂಭತ್ತಮೂರು ಮುಕ್ಕಾಲು ರೂಪಾಯಿ ಆಯ್ತು" ಎಂದೆ ಎಲ್ಲ ಲೆಕ್ಕ ಹಾಕಿ.

"ನೋಡು ಎಷ್ಟಾಗುತ್ತೆ. ಖರ್ಚು ಇಷ್ಟೇ ಆಗಿದ್ದರೆ ಹೆದರುತ್ತಿರಲಿಲ್ಲ ನಾನು. ಇದರಲ್ಲಿ ಇನ್‌ಷೂರೆನ್ಸ್ ಪ್ರೀಮ್ಯಂ ತಿಂಗಳಿಗೆ ಎಂಟು ರೂಪಾಯಿ. ನಮ್ಮ ಆಫೀಸಿನಲ್ಲಿ ತಿಂಗಳಿಗೊಬ್ಬರೋ ಇಬ್ಬರೋ ಟ್ರಾನ್ಸ್‌ಫರ್ ಆಗಿ ಅಥವಾ ಇನ್ನೇನೋ ಆಗಿ ಹೋಗುತ್ತಾರೆ. ಅವರು ಹೋಗುವಾಗ ಸುಮ್ಮನೆ ಕಳುಹಿಸಿದರೆ ಆಗುತ್ತದೆಯೋ? ಅವರು ಮಾಡಿರುವ ಹಾಗೂ ಮುಂದೆ ಮಾಡುವಂತಹ ದುಷ್ಕಾರ್ಯಗಳನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಆಡಂಬರಕ್ಕಾಗಿ ಒಂದು ಟೀಪಾರ್ಟಿ ಏರ್ಪಾಡು ಮಾಡಿ ಒಂದೆಳೆಯ ಹೂವಿನ ಸರವನ್ನಾದರೂ ಹಾಕಿ, ನಮ್ಮೆಲ್ಲರ ನೆನಪು ಸದಾ ಅಲ್ಲದಿದ್ದರೂ ಆ ಕ್ಷಣವಾದರೂ ಆ ಮನುಷ್ಯನಿಗೆ ಬರಲಿ ಎನ್ನುವಂತೆ ಕೈಗೇನಾದರೂ ಕೊಟ್ಟು ಕಳುಹಿಸಬೇಕಾದ್ದು ಧರ್ಮವಲ್ಲದಿದ್ದರೂ ಧರ್ಮವೆಂದು ತಿಳಿದು ನಡೆಯಬೇಕಲ್ಲವೆ? ಇದಕ್ಕಾಗಿಯೇ ತಿಂಗಳಿಗೆ ಐದಾರು ರೂಪಾಯಿಗಳನ್ನು ತೆಗೆದಿರಿಸ ಬೇಕಾಗುತ್ತದೆ. ಇದಲ್ಲದೆ. ಇನ್ನು ಮದುವೆಯಾಗುವ ಮಹಾಶಯರು ಬೇರೆ ಇರುತ್ತಾರೆ. ಎಂತೂ ಸಹೋದ್ಯೋಗಿಗಳು. ಜೊತೆಯಲ್ಲೇ ನಮ್ಮಷ್ಟೇ ಕೆಲಸ ಮಾಡದಿದ್ದರೂ ಕೆಲಸ ಮಾಡುವವರಂತೆ ನಟಿಸುವವರು ಸ್ನೇಹಿಗಳಂತೆ ತೋರಿಸಿ ಕೊಳ್ಳುವವರು ವಿವಾಹ ಮಹೋತ್ಸವದ ಪತ್ರಿಕೆಗೆ ಕುಂಕುಮ ಅರಶಿನ ಹಚ್ಚಿ ಕಳುಹಿಸಿದ ಮೇಲೆ ಒಂದು ತಂತಿಯನ್ನಾದರೂ ಕಳುಹಿಸ ಬೇಕಾದ್ದು ಧರ್ಮ ನೋಡು. ಅನಂತರ ಏನಾದರೂ ಉಡುಗೊರೆ ಕೊಡಬೇಕಾದ್ದು ಕರ್ಮ ನೋಡು ನಮ್ಮದು. ಹೀಗೆ ಇದಕ್ಕೊಂದೇ ತಿಂಗಳಿಗೆ ಐದಾರು ರೂಪಾಯಿ ಆಗುತ್ತೆ...."

"ಹೌದು ಒಟ್ಟಿಗೆ ನೂರಮೂರೂ ಕಾಲು, ನೂರೈದೂಕಾಲು ರೂಪಾಯಿ ಆಗುತ್ತೆ" ಎಂದೆ ಆತ ಹೇಳದೆ. ಎರಡು ಐದಾರಗಳನ್ನೂ ಸೇರಿಸಿ.

"ಇಷ್ಟೇ ಅಲ್ಲ ಮಹರಾಯ ಇನ್ನೂ ಖರ್ಚಿದೆ. ತಿಂಗಳು ಅಂತ್ಯ ಆಗುವ ವರೆಗೆ ನನಗೆ ಸುಮಾರು ಹತ್ತು ಹದಿನೈದಾದರೂ ಕಾಗದ ಬರುತ್ತೆ ಎಲ್ಲದರಲ್ಲೂ ಮೊದಲು ಸಕ್ಕರೆಯಂಥ, ಮುತ್ತಿನಂಥ ಮಾತುಗಳಿದ್ದು ಕೊನೆಗೆ "ಒಂದಿಪ್ಪತ್ತೈದು ರೂಪಾಯಿ ಇದ್ದರೆ ಕಳುಹಿಸು, ಅನುಕೂಲವಾದಾಗ ಹಿಂದಿರುಗಿಸುತ್ತೇನೆ" ಎಂದು. ಅವರೆಲ್ಲರಿಗೂ "ಈಗ ಕಳುಹಿಸುವುದಕ್ಕಾ

(ಹದಿಮೂರನೇ ಪುಟ ನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p.a.	7ರಿಂದ 11 ತಿಂಗಳು. % p.a.	12ರಿಂದ 23 ತಿಂಗಳು. % p.a.	24ರಿಂದ 35 ತಿಂಗಳು. % p.a.	36ರಿಂದ 47 ತಿಂಗಳು. % p.a.	48ರಿಂದ 59 ತಿಂಗಳು. % p.a.	60ರಿಂದ 83 ತಿಂಗಳು. % p.a.	84ರಿಂದ 120 ತಿಂಗಳು % p.a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ:-	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.
[ಶೆಡ್ಯೂಲ್ಡ್ ಬ್ಯಾಂಕ್] ಶ್
ರಿಜಿಸ್ಟರ್ಡ್ ಆಫೀಸು:— ಕೋರ್ಟು ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

ಆತ್ಮಶೋಧ

ಚೀನೀ ಅಣು ಗುಂಡೆಬ್ಬಿಸಿದ ಅಲೆ

ಬರೆದವರು: ಶ್ರೀ ಶಿವಶಂಕರ

ಕಳೆದ ವಾರ 'ಬೊಗಳುವ ನಾಯಿ....' ಓದಿದಾಗ ಕೆಲವರ ಮೂಗು ಬಹಳಷ್ಟು ದೊಡ್ಡದಾಗಿರಬಹುದು. ಆನೆ ಹೋಗುತ್ತಿರುವಾಗ ಯಾವದೋ ನಾಯಿ ಬೊಗಳಿದೆಂದು ಅವರು ಆಕ್ಷೇಪಿಸಿರಬಹುದು. ನಿಜವಾಗಿ ಅದು ಸತ್ಯಕ್ಕೆ ಬಹ ದೂರದ ಮಾತಿದೆ. ಕಾಂಗ್ರೆಸ್ಸಿಗರೆಲ್ಲರೂ ಅಣುಗುಂಡು ತಯಾರಿಕೆಗೆ ಈಗ ವಿರುದ್ಧವಾಗಿದ್ದಾರೆನ್ನುವದು ಸರಿಯಲ್ಲ. ಅದಕ್ಕಿಂತಲೂ ಅಲ್ಲಿ ಅಡ್ಡಗೆರೆ ಹಾಕಿ ಕಾಣಿಸಬೇಕಾಗಿದ್ದ ವಿಷಯ ನಮ್ಮ ಅರ್ಭಟದ ಕುರಿತು ಇದೆ. ಕೇವಲ ಹದಿನೆಂಟು ತಿಂಗಳು ಅವಧಿಯೊಳಗೆನೇ ಅಣುಗುಂಡನ್ನು ತಯಾರಿಸಲು ಸಿದ್ಧತೆ ಹಾಗೂ ಸಾಧ್ಯತೆ ಇದೆಯಾದರೂ ಅದು ಮಾರಕಾಸ್ತ್ರವಿರುವದರಿಂದ ಶಾಂತಿ-ಸಮಾಧಾನ ಪ್ರಿಯರಾಗಿರುವ ನಾವು ಅದನ್ನು ತಯಾರಿಸುವ ಗೋಜಿಗೆ ಹೋಗುವದೇ ಇಲ್ಲನೆಂದು ಎಡೆಬಿಡದೆ ಪ್ರಚಾರ ನಡೆಸಿರುವೆವು. ಈ ರೀತಿ ಪ್ರಚಾರ ನಡೆಸಿದೊಡನೆ ಪ್ರಪಂಚ ನಮ್ಮನ್ನು ಇದ್ದಕ್ಕಿದ್ದಂತೆ ನಂಬಿ ಬಿಡತ್ತದೇನು? ಭಾರತೀಯರಿಗೆ ಸುಳ್ಳು ಹೇಳಲು ಗೊತ್ತಿಲ್ಲ, ಕದಿಯಲಿಕ್ಕೆ ಗೊತ್ತಿಲ್ಲ, ಅವರು ಬೇಗ ಉಪಯೋಗಿಸುವದಿಲ್ಲ....ಪರದೇಶದವರು ಆ ರೀತಿ ಬರೆದಿದ್ದೇನೋ ನಿಜ. ಆದರೆ ಆ ಕಾಲ ಎಂದೋ ಹೋಗಿ ಬಿಟ್ಟದೆ. ಅಂದರೆ ಎಲ್ಲಾ ಭಾರತೀಯರು ಹಾಗೆನ್ನುವದು ಸರಿಯಲ್ಲ. ನಮ್ಮ ನಾಗರೀಕತೆಯ ಗಾಳಿ ತಾಗದೆ ದೂರ ಇರುವವರು ಇಂದೂ ಹಾಗೆಯೇ ಇರಬಹುದು. ರಾಜಕಾರಣದಲ್ಲಿ ಮಾತ್ರ ಹಾಗಲ್ಲ. ನಾವು ಹೇಳಿದ್ದೆಲ್ಲವನ್ನೂ ಗಮ್ಮನೆ ಜಗತ್ತಿಂದು ನಂಬಲು ಸಿದ್ಧವಿಲ್ಲ. ಅದಕ್ಕೆ ನಾವೇ ಕಾರಣ. ದೇಶ ವಿಭಜನೆಗೆ ನಾವು ಒಪ್ಪುವದಿಲ್ಲವೆಂದೆವು, ಭಾಷಾವಾರು ಪ್ರಾಂತ್ಯ ರಚನೆ ಸಾಧ್ಯವಿಲ್ಲವೆಂದೆವು, ಗುಜರಾತ-ಮಹಾರಾಷ್ಟ್ರ ವಿಂಗಡಿಸುವದಿಲ್ಲವೆಂದೆವು. ನಾಗಾಲ್ಯಾಂಡು ಪ್ರತ್ಯೇಕಿಸುವದಿಲ್ಲವೆಂದೆವು....ಹೀಗೆ ಸಮಯಕ್ಕನುಗುಣವಾಗಿ ಏನೇನೋ ಹೇಳಿಕೊಂಡಿದ್ದೆವು ಅದರಂತೆ ನಾವು ನಡೆದುಕೊಂಡಿದ್ದೇವೆಯೇ? ಪರಿಸ್ಥಿತಿ ಹೀಗಿರುವಾಗ ಇಂದು ಅಣು-ಬಾಂಬನ್ನು ನಾವು ತಯಾರಿಸುವದಿಲ್ಲವೆಂದೊಡನೆ ಜಗತ್ತು ನಂಬಿ ಬಿಡಲು ಸಿದ್ಧವಿಲ್ಲ. ಕೇವಲ ನಮ್ಮ ಹಿಂದಿನ ಸಂಸ್ಕೃತಿ—ಕಲಾಚಾರದ ಬಂಡವಾಳದ ಮೇಲೆ ನಾವಿಂದು ಜೀವಿಸಲು ಸಾಧ್ಯವಿಲ್ಲ. ಪ್ರಪಂಚ ನಮ್ಮನ್ನು ಖಂಡಿತವಾಗಿ ಸಂಶಯ ದೃಷ್ಟಿಯಿಂದ ಕಂಡೇ ತೀರುತ್ತದೆ. ಮತ್ತು ದೀಪಾವಳಿಯ ಸಮಯದಲ್ಲೇ ಆಗಲಿ, ಯಾರಾದರೂ ಭಾರೀ ಶಬ್ದದ ಘಟಾಕಿ ಹೊಡೆದಿದ್ದಲ್ಲಿ ಅದನ್ನೇ ಅಣುಗುಂಡೆಂದು ಉಪ್ಪು-ಖಾರ ಹಚ್ಚಿ ಪ್ರಕಟಿಸದೆ ಇದ್ದಲ್ಲಿ ಅವರ ಮನಸ್ಸಿಗೆ ಶಾಂತಿ ದೊರಕಲಾರದು. ಯಾವನೋ ಒಬ್ಬ ಪರದೇಶದ ವ್ಯಾಪಾರಿಯು ಬಳಿ ನಮ್ಮ ನಾಡಿನವ "ಲಂಚ" ಕೇಳಿದನಂತೆ. ಭಾರತದ ಮೂಲೆಕೋಟೆಗೇನೇ ಸಹಸ್ರನಾಮ ಹಾಕಿ ಬಿಟ್ಟನಾತ. ಅವನ ದೇಶಸ್ಥರಾದರೋ, ಅದು ಹಾಗೆ ಹೀಗೆ ಎಂದೆಲ್ಲಾ ಸುತ್ತು ಬಳಸಿಕೊಂಡಾದರೂ ಅದೇ ಶಬ್ದಕ್ಕೆ ತಮ್ಮ ಸ್ವರವನ್ನೂ ಕೂಡಿಸಿಬಿಟ್ಟರು. ಅಲ್ಲಿಗಾಯಿತು; ಭಾರತೀಯರೆಲ್ಲರೂ ಲಂಚ ಕೋರರು, ಮೋಸಗಾರರು ಎಂಥಾದ ಮಹಾ ವಿಶೇಷಣಾ ಸಾಮ್ರಾಜ್ಯದ ಮಹಾನ್ ಸಾಮ್ರಾಟರಾದರು! ಇದೇನೂ ಕಟ್ಟುಕತೆಯಲ್ಲ, ಕಲ್ಪನೆಯ ರಚನೆಯೂ ಅಲ್ಲ. ನೈಜ ಘಟನೆ ಬಹಳ ಹಳೆಯ ಘಟನೆಯೂ ಅಲ್ಲ. ಇನ್ನೂ ಆ ಕುರಿತು ಪತ್ರಿಕೆಗಳಲ್ಲಿ ಪತ್ರಗಳು ಪ್ರಕಟವಾಗುತ್ತಿವೆ. ಹೀಗಿರುವಾಗ ಪ್ರಪಂಚವನ್ನು ನಂಬಿಸಲು ನಾವು ಪದೇಪದೇ ಗಿಳಿಯಂತೆ ಆ ಶಬ್ದಗಳನ್ನು ಪುನರುಚ್ಚರಿಸಬೇಕಾಗಿಲ್ಲ. ಮಾತು ಕಮ್ಮಿಯಾಗಬೇಕು, ಕೃತಿ ಜಾಸ್ತಿಯಾಗಬೇಕು. ಅದನ್ನು ಸ್ಪಷ್ಟಪಡಿಸಲೆಂದೇ "ಬೊಗಳುವ ನಾಯಿ...?" ಎಂಬ ಪ್ರಶ್ನೆಯನ್ನು ಹಾಕಲಾಗಿರುತ್ತದೆ.

ಅಣುಗುಂಡು ತಯಾರಿಸುವದೇ ಇಲ್ಲವೆನ್ನುವ ಪ್ರಧಾನಿ ಲಾಲಬಹದೂರ ಶಾಸ್ತ್ರೀಜೀಯವರು ಅಹಮದಾಬಾದಿನಲ್ಲಿ ಭಾಷಣಮಾಡುತ್ತಿದ್ದಾಗ "ನಮ್ಮ ಸರ್ವಶಕ್ತಿಯನ್ನುಪಯೋಗಿಸಿ ಚೈನಿ ಆಕ್ರಮಣಗಾರರನ್ನೆದುರಿಸುವ"ವೆಂದಿದ್ದರು. ನಮ್ಮ ಸರ್ವಶಕ್ತಿ ಎಂದರೇನು? ನಮ್ಮ ಗೀಳಮಾತಿನಂತೆ ಅದು ಅಣುಶಕ್ತಿ ಇರುವದಿಲ್ಲ. ಕೇವಲ ಮಾನವ ಶಕ್ತಿ ಮಾತ್ರವೇನು? ಸಾಮ್ರಾಜ್ಯ ದಾಹದಿಂದ ತತ್ತರಿಸುತ್ತಿದ್ದು, ಕಮ್ಯೂನಿಜಮ ನ ಅಮಲಿನಿಂದ ತೂರಾಡುತ್ತಿರುವ ಕಮ್ಯೂನಿಸ್ಟ್ ಚೈನೀಯರು, ಅದೂ ಕಳ್ಳು ಕುಡಿದ ಕಪಿ ಕೊಳ್ಳಿ ಹಿಡಿದುಕೊಂಡಿರುವಂತೆ, ಈಗ ಅಣುಗುಂಡು ಸಹಿತ ಧಾಳಿ ನಡೆಸುವಾಗ ಆಹಾರ ಅಭಾವದಿಂದ ಕಷ್ಟ ಪಡುತ್ತಿರುವ ಮಾನವ ಶಕ್ತಿ ಅದೇನು ಮಾಡಲು ಸಾಧ್ಯ? ಲಾಲಬಹದೂರಶಾಸ್ತ್ರೀಜೀಯವರು ಜವಾಹರಲಾಲ ನೆಹ್ರೂಜೀ ಇರುವದಿಲ್ಲ. ಅವರು ಹಸಿದು ಕಂಗೆಟ್ಟಿರುವ ಜನತೆಗೆ ಬೆಲ್ಟನ್ನು ಮತ್ತಷ್ಟು ಬಿಗಿದುಕೊಳ್ಳಲು ನೆಹ್ರೂಜಿಯವರಂತೆ ಹೇಳದೆ ರಾಮಾಯಣ ಹೇಳಲಿಕ್ಕಾರಂಭಿಸಿಯಾರು. ವೈಜ್ಞಾನಿಕ ಪ್ರಗತಿಯಲ್ಲಿ ಲಂಕೆ ಬಹಳ ಮುಂದರಿದಿತ್ತು. ಅವರ ಬಳಿ ನಾನಾ ವಿಧಗಳ ನಾನಾ ಅಸ್ತ್ರಗಳಿದ್ದುವು, ವಾಹನ ಸೌಕರ್ಯಗಳಿದ್ದುವು. ಆದರೆ ಶ್ರೀ ರಾಮಚಂದ್ರನ ಬಳಿ ಅದೇನಿತ್ತು? ನಾಲ್ಕಾರು ಮಂಗಗಳು ಮಾತ್ರ! ಆದರೂ ಶ್ರೀ ರಾಮಚಂದ್ರನಿಗೆ ಜಯವಾಗಲಿಲ್ಲವೇನು? ಧರ್ಮಕ್ಕೆ ಜಯ ಆಗುತ್ತದೆ, ಅದು ಲೋಕನಿಯಮ....ನಮಗೂ ಹಾಗೇನೇ. ಧರ್ಮ ವಿಜಯ ಕಟ್ಟಿಟ್ಟ ಗಂಟು...ಕೊನೆಯಲ್ಲಿ ನಮಗೇನೇ ಗೆಲುವು ..ಶಾಸ್ತ್ರೀಜೀಯವರ ಉಪನ್ಯಾಸ ಮುಂದರಿಯ ಬಹುದು. ಆಗ ಒಬ್ಬನೆದ್ದು ಮೆಲ್ಲಗೆ 'ಸ್ವಾಮಿ ಶಾಸ್ತ್ರೀಜೀಯವರೇ, ಶ್ರೀ ರಾಮಚಂದ್ರ ಕೋದಂಡ ರಾಮನಾಗಿದ್ದ, ಅವನ ಬಳಿ ವಜ್ರಾಯುಧವಿತ್ತು... ನಮ್ಮ ಬಳಿ ಅದೇನಿದೆ?' ಪ್ರಶ್ನೆ ಹಾಕಿಬಿಟ್ಟರೆ ಶಾಂತ ಉಪನ್ಯಾಸ ಮಂದಿರದಲ್ಲಿ ಅಣುಗುಂಡು ಹಾಕಿದಂತಾಗಲಿಕ್ಕಿಲ್ಲವೇ? ಆಗ ಗಲಿಬಿಲಿಯಿಂದ ಶಾಸ್ತ್ರೀಜೀಯವರು ಅತ್ತಿತ್ತ ಕತ್ತು ತಿರುಗಿಸಿದೊಡನೆ ಮತ್ತೊಬ್ಬನೆದ್ದು 'ಸ್ವಾಮಿ ಶಾಸ್ತ್ರೀಜೀಯವರೇ, ಕುರುಕ್ಷೇತ್ರದಲ್ಲಿ ಅರ್ಜುನನು ತಾನು ಯುದ್ಧ ಮಾಡವುದಿಲ್ಲವೆಂದು ಬಿಲ್ಲನ್ನು ಬಿಟ್ಟುಬಿಟ್ಟಾಗ ಶ್ರೀಕೃಷ್ಣ ಪರಮಾತ್ಮನು ಅವನ ಮೋಹವನ್ನು ಹೋಗಲಾಡಿಸಿ ಅವನನ್ನು ವೀರನನ್ನಾಗಿ ಪರಿವರ್ತಿಸಿ ಯುದ್ಧ ಮಾಡಿಸಿ ಗೆಲಿಸಿ ಬಿಟ್ಟಿದ್ದಾನೆ. ಹಾಗೇನೇ ಪ್ರಧಾನಿಜೀಯವರೇ ಅಣುಗುಂಡನ್ನು ತಯಾರಿಸುವದಿಲ್ಲವೆಂಬ ಪ್ರಪಂಚದ ಮೋಹವನ್ನು ಬಿಟ್ಟು ಬಿಟ್ಟು ಸನ್ನದ್ಧರಾಗೋಣ'ವೆಂದು ಹೇಳಿದರೆ ಪರಿಸ್ಥಿತಿ ಹೇಗಾದೀತು?

ಆಗಿನ ಪರಿಸ್ಥಿತಿ ಏನಾಗಬಹುದು, ಅಥವಾ ಈಗಿನ ಪರಿಸ್ಥಿತಿ ಅಂದರೆ ಚೈನಿ ಅಣುಗುಂಡೆಬ್ಬಿಸಿರುವ ಅಲೆಯ ವಿಷಯ ಅಂದರೆ ಜನತೆಯ ಅಭಿಪ್ರಾಯಗಳನ್ನು ಅಲ್ಲದೆ ಅಣುಗುಂಡು ತಯಾರಿಸದೆ ಬೇರೆ ದಾರಿಯೇ ಇಲ್ಲವೇ ಎಂಬುದನ್ನು ಮುಂದಿನ ವಾರ ಕ್ರಮಶಃ ನೋಡುವ.

ಅಹಮದಾಬಾದಿನಲ್ಲಿ ಶ್ರೀ ಲಾಲಬಹದೂರರು 'ನಮ್ಮ ಸರ್ವ ಶಕ್ತಿ' ಎಂದಿರುವರಂತೆ, ಬೊಂಬಾಯಿಗೆ ಬಂದಿದ್ದಾಗ ಚೌಪಾಟಿಯಲ್ಲಿ ಭಾಷಣಮಾಡುತ್ತ 'ಭಾರತೀಯರೆಲ್ಲರೂ ಒಂದಾದಲ್ಲಿ ಅದೆಂತಹ ಆಕ್ರಮಣವನ್ನೂ ಎದುರಿಸಲು ಸಾಧ್ಯವೆಂದರು. ಪತ್ರಿಕೆಗಳಲ್ಲಿ ಅದನ್ನೋದಿದಾಗ ಅದೇ ರೀತಿ ಆ ಸೇತು-ಹಿಮಾಚಲ ಅನವರತ ಅದೇ ಮಾತನ್ನು ಹೇಳುತ್ತ ಅದಕ್ಕಾಗಿ ತನ್ನ ಜೀವನವನ್ನೇ ಮುಡುಪಾಗಿಟ್ಟಿರುವ ರಾಷ್ಟ್ರೀಯ ಸ್ವಯಂ-ಸೇವಕ ಸಂಘದ ನೇತಾ ಶ್ರೀ ಗುರೂಜೀಯವರ ಚಿತ್ರ ಕಣ್ಮುಂದೆ ಬರುವದು ಸ್ವಾಭಾವಿಕವಿದೆ. ಒಂದು ಚೀನಾವನ್ನಲ್ಲ ಹತ್ತು ಚೀನಾಗಳನ್ನು ಹೊಸಗಿ ಹಾಕಲು ಸಾಧ್ಯ— ಅದೆಂತು ಎಂಬುದನ್ನು 'ನವಯುಗ'ವು ಆದಾಗಲೇ ವಾಚಕರಿಗೆ ತಿಳಿಸಿರುತ್ತದೆ. ಶ್ರೀ ಲಾಲಬಹದೂರರ ಮಾತಿಗೂ ಶ್ರೀ ಮಾಧವರ ಮಾತಿಗೂ ಏನು ವ್ಯತ್ಯಾಸವೆಂದರೆ, ಪ್ರಧಾನಿಯವರು ಭಾರತೀಯರೆನ್ನುವಾಗ ಮುಂಗುಸಿ- ಹಾವು ಸರ್ಪ ವಗೈರೆಗಳನ್ನು ಸೇರಿಸಿ ಮಿಶ್ರ ಐಕ್ಯತೆಯ ಕುರಿತು ಹೇಳಿದ್ದಲ್ಲಿ, ಶ್ರೀ ಗುರೂಜೀಯವರು ಹಿಂದೂ ಸಂಘಟನೆಯ ಕುರಿತು ಹೇಳಿದ್ದಾರೆ. ಪ್ರಯೋಗತಃ ಯಾವದು ಸಾಧ್ಯವೆಂಬುದನ್ನು ಕಾಣಬೇಕಾದಲ್ಲಿ ನಾವು ಇಂದು ಕಷ್ಟಪಡ ಬೇಕಾಗಿಲ್ಲ. ಈ ಸಂಘಟನಾ ಸಂಜೀವಿನಿ ಮಾತಿನ ಪ್ರವಾಹದಿಂದ ಬರಲು ಸಾಧ್ಯವೇನು? ಇಲ್ಲಿ ಇನ್ನೊಂದು ಮುಖ್ಯ ವಿಷಯವೆಂದರೆ, ಚೈನಿ ಆಕ್ರಮಣವನ್ನೆದುರಿಸಲು ಮಾತ್ರ ಭಾರತೀಯರೆಲ್ಲರನ್ನೂ ಸಂಘಟನಾ ಸೂತ್ರದಲ್ಲಿ ಪೋಣಿಸಿದರೆ, ಆಕ್ರಮಣ ಮುಗಿದ ಮೇಲೆ ಸ್ವಾಭಾವಿಕವಾಗಿ ಆದಾರ ಕಡಿದು ಹೋಗಿ ಬಿಡುತ್ತದೆ. ಅದನ್ನೇ ನಾವಿಂದು ಎಲ್ಲೆಲ್ಲೂ ಕಾಣುತ್ತಿದ್ದೇವೆ ಬ್ರಿಟಿಷರನ್ನು ಓಡಿಸುವದಕ್ಕೆ ಅಂದು ಹೆಚ್ಚಿನ ಭಾರತೀಯರು ಒಂದಾಗಿದ್ದರು. ಆದರೆ ನಂತರ ಇಂದು ನಡೆಯುತ್ತಿರುವದಾದರೂ ಏನು? ಅಧಿಕಾರ ದಾಹ, ಖ್ಯಾತಿಯ ಕಾಟದಿಂದ ಮಾಡಕೂಡದಂತಹ ಕುಕಾರ್ಯವನ್ನೂ ನಮ್ಮಲ್ಲನೇಕರು ಇಂದು ಮಾಡುತ್ತಿಲ್ಲವೇನು? ಅಷ್ಟು ದೂರ ಏತಕ್ಕೆ? ಅಂದಿನ ಪ್ರಧಾನಿಯವರು ಬಹಳ ರಹಸ್ಯವಾಗಿಟ್ಟುಕೊಂಡಿದ್ದ ಚೈನೀ ಆಕ್ರಮಣದ ಗುಟ್ಟು ಬಯಲಾದೊಡನೆ ಹೆಚ್ಚಿನ ಜನತೆ ಒಂದಾಗಲಿಲ್ಲವೇನು? ಆದರೆ ಅದು ಕ್ಷಣಿಕ ಕ್ರಮಶಃ ಅದು ಕಮ್ಮಿಯಾಗುತ್ತ ಬಂತು. ಆದರ ಸದುಪಯೋಗವನ್ನಂದು ಅಧಿಕಾರ ಲಗಾಮನ್ನು ಹಿಡಿದುಕೊಂಡಿರುವ ನೇತಾಗಳಿಗೆ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಬದಲು ದುರುಪಯೋಗವೇ ನಡೆಸಲಾಗಿದೆಂದು ಹೇಳಲಾಗುತ್ತಿದೆ.

ಇಂದ ಬೇಕಾಗಿರುವದು ಮಾತಿನ ಚತುರತೆಯಲ್ಲ, ಕೃತಿ ಬೇಕಾಗಿರುವದು. ಕಲಿಯುಗದಲ್ಲಿ ಸಂಘಟನೆವೇ ಶಕ್ತಿ ಎನ್ನಲಾಗಿದೆ. ಶಾಸ್ತ್ರೀಜೀಯವರೂ ಅದನ್ನೇ ಹೇಳಿದ್ದಾರೆ. ಅದು ಕೇವಲ ಉಪದೇಶದ ಭಾಷಣವಾಗದಿರಲಿ.

— —

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction, Madras.

INSIST ON.......

Waterfalls—Glendale—Brooklands

TEAS

POPULAR EVERYWHERE

You can book your requirements through:

PUNJA & CO., MULKI,

Phone No. Off: 26. Res: 36.

KOTHARI & SONS, MADRAS.

'ನಚಿಕೇತ'ರ

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ನವಯುಗ ಪ್ರೆಸ್, ಉಡುಪಿ.

ಅಭಿಪ್ರಾಯ

ಯಕ್ಷಗಾನದ ಮೂಲಕ ಕಲೆಗೆ ಪ್ರೋತ್ಸಾಹ

ಬರೆದವರು
ಡಾ| ಯು. ಚಂದ್ರಶೇಖರ, ಕುಡುಮಲ್ಲಿಗೆ.

ಇತ್ತೀಚೆಗೆ ಕಾರ್ಕಳ ಜೈಹಿಂದ್ ಸಿನೆಮಾ ಮಂದಿರದಲ್ಲಿ ಜರಗಿದ ಯಕ್ಷಗಾನ ಆಟ ಹಲವರಿಗೆ ಗೊತ್ತಿರುವ ವಿಚಾರ. ಕಲೆಯಲ್ಲಿ ನುರಿತ ಗಣ್ಯವ್ಯಕ್ತಿಗಳನ್ನು ಸೇರಿಸಿ, ಭಾರತೀಯ ಸಂಸ್ಕೃತಿಯ ಪ್ರಚಾರ ಮಾಡಿಸಿದ ಮಹನೀಯರಿಗೆ ಧನ್ಯವಾದ.

ಇಂತಹ ಆಟಗಳನ್ನು ಜನರಿಗೆ ಭಾರವಾಗದ ರೀತಿಯಲ್ಲಿ ಆಗಾಗ ಅಲ್ಲಲ್ಲಿ ಜರಗಿ, ಈ ಕಲಾವಿದರಿಗೆ ಪ್ರೋತ್ಸಾಹವನ್ನೂ ಕಲೆಯ ಬೆಳವಣಿಗೆಗೆ ಸಹಕಾರವನ್ನೂ ಜನತೆ ಮತ್ತು ಜನತಾ ಸರಕಾರ ಒದಗಿಸಿ ಕೊಡುವುದು ಎಷ್ಟು ಅಗತ್ಯ ಎಂಬುದು ಮೊನ್ನೆ ಆ ವಿದ್ವನ್ಮಣಿಗಳ ಸಭೆಯಲ್ಲಿ ನನ್ನಂತೆ ಆ ಒಂದು ರಾತ್ರಿ ನಿದ್ದೆ ಬಿಟ್ಟ ಹಲವಾರು ಮಹನೀಯರ ಅನುಭವಕ್ಕೆ ಬಂದಿರಲೇಬೇಕು.

ಯಕ್ಷಗಾನ ಕಲಾವಿದರೂ ಯಕ್ಷಗಾನ ಕಲಾಪೋಷಕರೂ, ಅಲ್ಲದೆ ಯಕ್ಷಗಾನ ಕಲಾ ಪ್ರೇಮಿಗಳೂ ಬಹುಜನರು ಸೇರಿ, ಆ ಕಲಾದೇವಿಯ ಆರಾಧನೆಯನ್ನು ಮಾಡಿರುತ್ತಾರೆ. ಅದು ಎಷ್ಟು ಉತ್ತಮ ಆಟವಾಗಿತ್ತು ಎನ್ನುವುದಕ್ಕೆ— ಅಂದುರಾತ್ರಿ ಸ್ವಾಗತ ಭಾಷಣದ ಸಮಯ ಸಭೆಯಲ್ಲಿ ಕುಳಿತವರು ಬೆಳಿಗ್ಗೆ ಮಂಗಳಾರತಿಯನ್ನು ಪೂರೈಸಿಯೇ ಸಭಾಮಂದಿರದಿಂದ ಹೊರಬಂದಿದ್ದರು; ಅದೇ ಆ ಸಭೆಯ ಹೆಚ್ಚುಗಾರಿಕೆಯ ಸಂಕೇತ. ಆ ಸಾಲಿನಲ್ಲಿ ನಾನೂ ಒಬ್ಬ ಸೇರಿದ್ದೇನಾಗಿ ಸಂತೋಷದಿಂದ ಹೇಳಬಲ್ಲೆ.

ಒಂದೊಂದೇ ಪಾತ್ರದ ವಿಚಾರ ಹೇಳುವುದಾದರೆ ಯಾವುದೂ ಒಂದಕ್ಕೊಂದು ಕಡಿಮೆಯಲ್ಲ ಎಂಬುದನ್ನು ಅವರವರೇ ತಮ್ಮ ಪಾತ್ರವನ್ನು ಪರಿಪೂರ್ಣ ಮಾಡಿ ತೋರಿಸಿದ್ದಾರೆ

ಶ್ರೀ ಶ್ರೇಣಿ ಗೋಪಾಲಕೃಷ್ಣ ಭಟ್ಟರು ಕಥಾ ನಾಯಕ ಕರ್ಣನ ಪಾತ್ರವನ್ನು ಜನ ಮೆಚ್ಚುವ ಮತ್ತು ಮರೆಯಲಾರದ ರೀತಿಯಲ್ಲಿ ತನ್ನ ಪಾತ್ರವನ್ನು ಪೂರ್ತಿಗೊಳಿಸಿದ್ದಾರೆ. ವಿದ್ವನ್ಮಣಿಗಳ ಸಾಲಿನಲ್ಲಿ ಅವರೂ ಒಬ್ಬ ಮಣಿಯಾಗಿ ರಂಜಿಸಿದ್ದರು.

ಚಿಕ್ಕ ವಯಸ್ಸಿನಲ್ಲಿ ನಾನು ಅದೆಷ್ಟೋ ಸಲ ಭಾರತದ ಕರ್ಣನೆಂದು ಕೀರ್ತಿಗಳಿಸಿದ್ದ ದಿ| ನಾರಾಯಣ ಕಿಲ್ಲೆಯವರ ಕರ್ಣನನ್ನು ಕಂಡು ಕೇಳಿ ಆ ರಸದೂಟವನ್ನು ಸವಿದಿದ್ದೆ ನಮ್ಮನ್ನಮ್ಮನವರು ಅಗಲಿ ದೂರವಾದರೂ ಅವರು ನಮ್ಮ ಹತ್ತಿರ ಇದ್ದಾರೆಯೋ ಎಂಬಂತೆ ಶ್ರೀ ಶ್ರೇಣಿಯವರು ಅವರನ್ನು ಹತ್ತಿರಕ್ಕೆಳೆದು ತರುತ್ತಿದ್ದಾರೆ.

ಮುಸುಕಿನೊಳಗಿನ ಗುದ್ದಿನಂತೆ ಅಲ್ಲಲ್ಲಿ ಜಾತೀಯತೆಯ ರೋಗಕ್ಕೆ ಶ್ರೀಯುತರ ಕರ್ಣನ ಪಾತ್ರವು ದಿವ್ಯ ಔಷಧಿಯೆಂದೇ ಹೇಳಬೇಕು. ದೂರ್ವಾಸರಿಂದ ಪಡೆದ ಐದು ಮಂತ್ರಗಳಲ್ಲಿ ಮೂರು ಮಂತ್ರಗಳಿಂದ ಧರ್ಮರಾಯ, ಭೀಮ, ಪಾರ್ಥರನ್ನು ಪಡೆದು, ಮತ್ತೊಂದು ಮಂತ್ರವನ್ನು ತಂಗಿ ಮಾದ್ರಾ ದೇವಿಗೆ ಕೊಟ್ಟು ನಕುಲ ಸಹದೇವರನ್ನು ಪಡೆದ ಕುಂತಿಯು ಇನ್ನೊಂದು ಮಂತ್ರವನ್ನು ಏನು ಮಾಡಿದಳು ಎಂಬುದನ್ನು ಆ ಕಾಲದಲ್ಲಿ ಯಾರೂ ತಿಳಿಯದೆ ಹೋಗಿದ್ದರಾದರೆ ಅದು ಕರ್ಣನ ದುರಾದೃಷ್ಟವೇ ಎಂಬುದು ಸಹಜ. ಅಂದು ತಾಯಿಗೇ ಬೇಡವಾದ ಕೂಸು ಮುಂದೆ ದಾನಶೂರ ಕರ್ಣನೆಂಬ ಕೀರ್ತಿಯನ್ನು ಗಳಿಸಿ, ಭಾರತದ ಭವ್ಯ ಮಣಿಯಾಗಿ ಬಾಳಿ, ಕೊನೆಗೆ ಧರ್ಮಸಂಕಟದಲ್ಲಿ ಸಿಲುಕಿದರೂ ಮಾನವು ಪ್ರಾಣಕ್ಕಿಂತ ಮೇಲು, ಸುಖವೆಂದರೆ ಬರೇ ಇಂದ್ರಿಯ ಸುಖವಲ್ಲ; ಸುಪುತ್ರಸ್ತ್ರೀಯರು ಜೀವನ ಸಂಗಾತಿ! ಅದು ನೆರಳಿನೋಪಾದಿ ಜೊತೆಯಾಗಿ ಬರುವ ವಿಷಯ; ನಿಜವಾದ ಸ್ನೇಹ ಎಂದರೇನು? ಇತ್ಯಾದಿ ಧರ್ಮದ ತಿರುಳನ್ನು ಹೃದಯಂಗಮವಾಗಿ ತನ್ನ ಕರ್ಣನ ಪಾತ್ರದಲ್ಲಿ ತೋರಿಸಿ, ಅಂದು ಶ್ರೀ ಶ್ರೇಣಿಯವರು ತಾನು ಹುಟ್ಟು ಕಲಾವಿದನೆಂಬುದನ್ನು ನಮಗೆಲ್ಲ ಮನಗಾಣಿಸಿದರು.

ಅಂದು ಕರ್ಣನ ರಥಕ್ಕೆ ಸಾರಥಿಯಾದ ಶಲ್ಯನ ಪಾತ್ರವನ್ನು ವಹಿಸಿದ್ದವರು ಬಡಗುತಿಟ್ಟಿನ ಯಕ್ಷಗಾನ ಪಿತಾಮಹರೂ ಯಕ್ಷಗಾನ ಪ್ರೇಮಿಗಳಿಗೆ ಚಿರಪರಿಚಿತರೂ ಆದ ಮಲ್ಪೆ ಶ್ರೀ ಶಂಕರನಾರಾಯಣ ಸಾಮಗರು.

ಶಲ್ಯನ ಪಾತ್ರದಲ್ಲಿ ಅವರು— ಮನುಷ್ಯ ತನ್ನ ಪ್ರಾರಬ್ಧಕ್ಕೆ ಸಿಕ್ಕಿಬಿದ್ದು ಏನೆಲ್ಲಾ ಆಗಿ ಹೋಗುತ್ತಾನೆಂಬುದನ್ನು ವಿವರಿಸುವಾಗ ಅದನ್ನು ಕೇಳುತ್ತಿದ್ದ ನಾವು ನಮ್ಮನ್ನೇ ಮರೆತು ಅವರ ಮಾತಿನಲ್ಲಿ ತಲ್ಲೀನರಾಗಿದ್ದೆವು; ಎಲ್ಲರಿಗೂ ಪರಮಾನಂದವನ್ನುಂಟು ಮಾಡಿದ ಅವರ ಚುರುಕು ಬುದ್ಧಿ, ವಾಕ್ಚಾತುರ್ಯ, ಸಂದರ್ಭೋಚಿತ ಮಾತು ಅದು ಶಲ್ಯತಂತ್ರದಂತೆಯೇ ಅವರಿಗೊಂದು ವರಪ್ರದಾನವೆಂದೇ ಹೇಳಬಹುದು.

ಪಂಡಿತರೂ ಯಕ್ಷಗಾನ ತಪಸ್ವಿಗಳೂ ಆಗಿದ್ದ ಶ್ರೀ ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳು ತಮ್ಮ ಮಹಾ ಅನುಭವಗಳನ್ನು ಕೌರವನ ಪಾತ್ರಕ್ಕೆ ತುಂಬಿ ಮಾತಾಡುತ್ತಾ—ಅಂಜುಬುರುಕ ತನವು ಮಾನವನ ಅಧೋಗತಿಯ ಚಿಹ್ನೆ, ವೀರನಿಗೆ ಸಾವು ತೃಣ ಸಮಾನ, ಮಾನವನು ತನ್ನ ಗುರಿ ಸಾಧಿಸುವದರಲ್ಲಿ ತನ್ನ ಸರ್ವಸ್ವವನ್ನು ಬಲಿಕೊಟ್ಟಾದರೂ ಕರ್ತವ್ಯ ನಿಷ್ಠೆಯನ್ನು ಬದಲಿಸದೆ ಪೂರೈಸಲೇಬೇಕು; ಧೀರತನ, ರಾಜಕೀಯ ಕುಶಲತೆ, ರಾಜ್ಯಾಡಳಿತೆಯ ನಿಯಮ ಇತ್ಯಾದಿ ಅವರ ಅನುಭವಪೂರಿತ ವಾಣಿಯಿಂದ—ದುರ್ಯೋಧನನನ್ನು ಸುಯೋಧನನನ್ನಾಗಿ ತೋರಿಸಿ, ಶ್ರೀ ಶಾಸ್ತ್ರಿಗಳು ಯಕ್ಷಗಾನ ಕಲಾ ಶಾಸ್ತ್ರಿಗಳಾಗಿ ಮೆರೆದರು ಅಂದು ಕೌರವನ ಪಾತ್ರದಲ್ಲಿ!

ಶ್ರೀಕೃಷ್ಣನ ಪಾತ್ರವಹಿಸಿದ ಮಲ್ಪೆ ಶ್ರೀ ರಾಮದಾಸ ಸಾಮಗರು ಅವರಣ್ಣ ಶಂಕರನಾರಾಯಣ ಸಾಮಗರ ಅನುಮತಿಯಂತೆ ಅವರ ಮಾರ್ಗದಲ್ಲೇ ಮುಂದರಿಯುತ್ತಿರುವುದು ತುಂಬಾ ಸಂತೋಷ. ಇವರು ಚಿಕ್ಕ ವಯಸ್ಸಿನಲ್ಲೇ ಯಕ್ಷಗಾನ ಕಲಾವಿದರಾಗಿ, ಹರಿದಾಸರಾಗಿ, ನಮ್ಮ ಕನ್ನಡ ನಾಡಿನಲ್ಲಿ ಮಾತ್ರವಲ್ಲ ಹೊರಗಿನ ಪ್ರಾಂತ್ಯಗಳಲ್ಲೂ ಕೀರ್ತಿ ಗಳಿಸಿದ್ದಾರೆ. ಎಲ್ಲರ ಮೆಚ್ಚುಗೆಯನ್ನು ಪಡೆದಿದ್ದಾರೆ,

ಶ್ರೀ ರಾಮದಾಸ ಸಾಮಗರು ಶ್ರೀಕೃಷ್ಣನ ಸ್ಥಾನದಲ್ಲಿ ನಿಂತು ಮಹಾ ಶಕ್ತಿ ಸ್ವರೂಪನೆನಿಸಿ, ಸಭಿಕರನ್ನೆಲ್ಲಾ ತನ್ನ ಭಕ್ತರನ್ನಾಗಿ ಮಾಡಿಸಿಕೊಳ್ಳುವ ಅವರ ಜಾಣ್ಮೆ ವರ್ಣನಾತೀತವಾದಂತಿತ್ತು. ಅನಂತ ಸೃಷ್ಟಿಯೇ ಪರಮಾತ್ಮನ ಸ್ವರೂಪವಾಗಿದ್ದರೂ, ಧರ್ಮವು ಗ್ಲಾನಿಯಾದಾಗ, ದುಷ್ಟ ಪ್ರವೃತ್ತಿಗಳು ಹೆಚ್ಚಿದಾಗ, ಆ ಮಹಾಶಕ್ತಿಯು ಮಾನವನಾಗಿ ಜನಿಸಿ ಬಂದು, ಧರ್ಮ ರಕ್ಷಣೆಗಾಗಿ ಮಾನವರಿಲ್ಲ ಹೇಗೆ ವರ್ತಿಸಬೇಕು?"ಎಂತು ಹೋರಾಟ ಮಾಡಬೇಕು? ಎಂಬುದನ್ನು ಜನಸಾಮಾನ್ಯರಿಗೂ ಅರ್ಥವಾಗುವಂತೆ ವಿವರಿಸಿ ತೋರಿಸಿ, ಶ್ರೀಕೃಷ್ಣನನ್ನು ನಮ್ಮ ಹೃದಯ ಮಂದಿರದಲ್ಲಿ ನಿಲ್ಲಿಸಿದರು.

ಅರ್ಜುನನ ವೇದಿಕೆಯಲ್ಲಿ ಕಾಣಿಸಿಕೊಂಡವರು ಪೆರ್ಲ ಕೃಷ್ಣ ಭಟ್ಟರು. ಅವರು ವೀರ ಪಾರ್ಥನೇ ಆಗಿ ಕಂಡು ಬಂದರು. ಉತ್ಸಾಹ, ಸಾಹಸ, ಧೈರ್ಯ, ಬುದ್ಧಿ, ಭಕ್ತಿ, ಪರಾಕ್ರಮಗಳೊಂದಿಗೆ ತನಗೆ ದೈವ ಬಲವೂ ಇದೆ ಎಂಬುದನ್ನು ಅವರು ತನ್ನ ಪಾತ್ರದಲ್ಲಿ ತುಂಬಿ ತೋರಿದರು., ಧೈರ್ಯ, ಸ್ಥೈರ್ಯ ಶೂರತನ ಇತ್ಯಾದಿ ಉತ್ತಮ ಗುಣಗಳನ್ನು ಜೀವನದಲ್ಲಿ ಗಳಿಸಬಹುದಾಗಿದ್ದರೂ ತುಂಬಿದ ಬಂಧುಬಳಗದೊಡನೆ ಬಾಳಿ ಬದುಕಲು ಭಾಗ್ಯವೇ ಬೇಕು ಎಂಬ ಅವರ ಮಾತು ಕಟು ಸತ್ಯ. ಬಹಳಷ್ಟು ಸಾಹಸದ ಕಾರ್ಯವನ್ನು ಮಾಡಿ, ಮೂರು ಲೋಕದ ಗಂಡ ಎಂದು ಕೀರ್ತಿ ಗಳಿಸಿದ್ದರೂ, ಸ್ವರ್ಗವನ್ನೇ ತನ್ನ ತಂದೆಯ ಮನೆಯನ್ನಾಗಿ,ಮಿತ್ರ ಭಗವಂತನ ಸ್ನೇಹಭಾವನನ್ನಾಗಿ ಪಡೆದಿದ್ದರೂ, ಈ ಬಂಧುತ್ವದಬೇನೆಯಲ್ಲಿ ಬೆಂದ ನೊಂದ ಪಾರ್ಥನನಾಡೇನೆಂಬುದನ್ನು ಕೃಷ್ಣ ಭಟ್ಟರು ತನ್ನ ಪಾತ್ರದಲ್ಲಿ ಬಹು ಚೆನ್ನಾಗಿ ವ್ಯಕ್ತಪಡಿಸಿದ್ದರು.

ಇನ್ನುಳಿದ ಒಂದೇ ಒಂದೇ ಪಾತ್ರ ಎಂದರೆ-ಚೊಕ್ಕಾಡಿ ಸೀತಾರಾಮಯ್ಯನವರ ಧರ್ಮರಾಯ. ಆಹಾ!ಎಂತಹ ಧರ್ಮರಾಯ! ನಮ್ಮ ಮಹಾಭಾರತದ ಪುರಾಣದಲ್ಲಿ ನಾವು ಕಲ್ಪಿಸಿಕೊಂಡ ಪೂಜ್ಯ ಮಹಾವ್ಯಕ್ತಿ ಆ ಧರ್ಮರಾಯನನ್ನೇ ಪ್ರತ್ಯಕ್ಷ ಕಂಡಂತಾಯಿತು! ಸಹನೆಯ ಪರಿಪೂರ್ಣತೆ, ಧರ್ಮ ರಕ್ಷಣೆಗಾಗಿಯೇ ತನ್ನ ಬಾಳು, ಪರರ ಹಿತ ಚಿಂತನೆಯೇ ತನ್ನ ಗುರಿ ಎಂದೆಂಬ ಆ ಧರ್ಮಮೂರ್ತಿಯೇ ಜನ್ಮವೆತ್ತಿ ನಮ್ಮ ಮುಂದೆ ನಿಂತಂತಿತ್ತು ಅವರ ಪಾತ್ರ. ಭೌತಿಕ ಸಂಪತ್ತುಗಳನ್ನು ಕೈಯೆತ್ತಿ ಪರರಿಗೆ ಕೊಟ್ಟ ಮಾತ್ರಕ್ಕೆ ಯಾರೂ ಧರ್ಮರಾಯನೆನಿಸಿಕೊಳ್ಳಲಾರ, ಧರ್ಮರಕ್ಷಣೆಗಾಗಿ ತನ್ನ ಪ್ರಾಣವನ್ನೇ ಪಣವಾಗಿಟ್ಟು ಜೀವನದಲ್ಲಿ ಅದಕ್ಕಾಗಿ ಹೋರಾಡಿದವನೇ ಧರ್ಮರಾಯನೆನಿಸಿಕೊಳ್ಳಬಲ್ಲ; ಮಾನವನು ತನ್ನ ವೈರಿಯನ್ನು ತಾನೆ ತನ್ನ ದುಷ್ಟ ಬುದ್ಧಿಯಿಂದ ನಿರ್ಮಿಸಿಕೊಳ್ಳುತ್ತಾನೆಯೇ ಹೊರತು, ಹುಟ್ಟಿನಿಂದ ಯಾರು ಯಾರಿಗೂ ದ್ವೇಷಿಗಳಲ್ಲ ಎಂಬ ಚಿತ್ರವನ್ನು ನಮ್ಮ ಚಿತ್ತದಲ್ಲಿ ತುಂಬಿಸಿ ಕೊಟ್ಟಿರುವರು. ಧರ್ಮ ಸಂಕಟದಲ್ಲಿ ಬಿದ್ದು ಬಹಳವಾಗಿ ನೊಂದ ಧರ್ಮರಾಯನ ಆ ಮಾತು ಎಂತಹ ಕಲ್ಲೆದೆಯನ್ನೂ ಕರಗಿಸುವಂತಾಗಿತ್ತು. ಪ್ರತಿ ಮನೆ ಮನೆಗಳಲ್ಲಿಯೂ ದುರ್ಯೋಧನರು ತುಂಬಿರುವ ಈ ಕಾಲದಲ್ಲಿ ಇಂತಹ ಧರ್ಮರಾಯರು ಎಷ್ಟಿದ್ದರೂ ಬೇಕು.

ಈ ಯಕ್ಷಗಾನ ಆಟಕ್ಕೆ ಭಾಗವತ

(ಹನ್ನೊಂದನೇ ಪುಟ ನೋಡಿರಿ)

ಗಮನಾರ್ಹ ಬದಲಾವಣೆ ! ಠೇವಣಾತಿದಾರರಿಗೆ ಸುಸಂದರ್ಭ !!

ನಿರಖು ಠೇವಣಿಗಳ ಮೇಲೆ
ಪರಿಷ್ಕರಿಸಿದ ಆಕರ್ಷಣೀಯ ಬಡ್ಡಿ ದರ !!!

91 ದಿನಗಳಿಗೆ ಮೇಲ್ಪಟ್ಟ 6 ತಿಂಗಳ ವಳಗಿನ ಅವಧಿಯ ಠೇವಣಾತಿಗಳಿಗೆ—					4¾%
6 ತಿಂಗಳಿಂದ ಮೇಲ್ಪಟ್ಟ	1 ವರ್ಷ ವಳಗಿನ ಅವಧಿಯ		,,		5¼%
1 ವರ್ಷದಿಂದ ,,	2 ವರ್ಷಗಳ ವಳಗಿನ	,,	,,		5½%
2 ,, ,,	3	,,	,,	,,	5¾%
3 ,, ,,	5	,,	,,	,,	6%
5 ,, ,,	7	,,	,,	,,	6¼%
7 ,, ,,	9	,,	,,	,,	6½%
9 ವರ್ಷಗಳಿಗೆ ಮೇಲ್ಪಟ್ಟು		....		....	6¾%

5 ವರ್ಷ ವ ಅವುಗಳಿಗೆ ಮೇಲ್ಪಟ್ಟ ಅವಧಿಯ ಧಾರ್ಮಿಕ ಸಂಸ್ಥೆಗಳ ಠೇವಣಾತಿಗಳಿಗೆ 6¾%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ನೀಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ
ನಮ್ಮ ಯಾವುದೇ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

ರಿಜಿಸ್ಟರ್ಡ್ ಆಫೀಸು:-
"ವಿಜಯ ಬ್ಯಾಂಕ್ ಬಿಲ್ಡಿಂಗ್", ಲೈಟ್‌ಹೌಸ್ ಹಿಲ್ ರೋಡ್,
ಮಂಗಳೂರು - 3.

ಶಬ್ದ ಚಿತ್ರ

ಲಿಂಡನ್ ಬಿ. ಜಾನ್‌ಸನ್

ಕಳೆದ ನವೆಂಬರಿನಲ್ಲಿ ಅಧಿಕಾರ ಸ್ವೀಕರಿಸಿದ ಅಮೆರಿಕಾಧ್ಯಕ್ಷ ಲಿಂಡನ್ ಬೈನ್ಸ್ ಜಾನ್ಸನ್ ಅವರಿಗೆ ಈ ಪದವಿಗೆ ಬೇಕಾದ ಸಿದ್ಧತೆ ಹಾಗೂ ಅನುಭವದ ಹಿನ್ನೆಲೆ ಅದ್ವಿತೀಯವಾಗಿತ್ತು.

ಜಾನ್ಸನ್ ಅಮೆರಿಕದ ಅಧ್ಯಕ್ಷ ಪದವಿಗೆ ಬಂದ ೩೬ನೆಯ ವ್ಯಕ್ತಿ ಮತ್ತು ಉಪಾಧ್ಯಕ್ಷ ಸ್ಥಾನದಿಂದ ಅಧ್ಯಕ್ಷ ಸ್ಥಾನಕ್ಕೆ ಬಂದವರಲ್ಲಿ ಎಂಟನೆಯವರು. ಅಧ್ಯಕ್ಷ ಕೆನೆಡಿಯವರು ೧೯೬೦ರಲ್ಲಿ ಅವರನ್ನು ಉತ್ತರಾಧಿಕಾರಕ್ಕೆ ಅರ್ಹರೆಂದು ಸ್ವತಃ ಆಯ್ಕೆ ಮಾಡಿದ್ದರು.

ಈ ಉಭಯ ವ್ಯಕ್ತಿಗಳೂ ಡೆಮೊಕ್ರೆಟಿಕ್ ಪಕ್ಷದಿಂದ ಅಧ್ಯಕ್ಷತೆಯ ನಾಮಕರಣಕ್ಕೆ ಸ್ಪರ್ಧಿಸುತ್ತಿದ್ದಾಗ, ಶ್ವೇತಭವನದಲ್ಲಿ ತನ್ನ ಉತ್ತರಾಧಿಕಾರಿಯಾಗಲಿದ್ದ ಈ ವ್ಯಕ್ತಿಯ ಬಗೆಗೆ ಸೆನೇಟರ ಕೆನೆಡಿ ಹೀಗೆಂದಿದ್ದರು:

“ನನಗೆ ಈ ಪದವಿ ಬೇಡವೆಂದಾದರೆ, ನಾನು ಲಿಂಡನ್ ಅವರಿಗೆ ಅವಕಾಶ ಕೊಡುವೆನು. ಅವರು ನನಗೆ ತಿಳಿದಂತೆ ಅಮೆರಿಕದ ರಾಜಕೀಯದಲ್ಲಿ ಅತಿ ಸಮರ್ಥ ವ್ಯಕ್ತಿ. ದೇಶದ ಬಗೆಗೆ ಅಧ್ಯಕ್ಷರಲ್ಲಿ ಸಹಜವಾಗಿ ಇರಬೇಕಾದ ಆಸಕ್ತಿ ಅವರಲ್ಲಿದೆ.”

ಆ ಸಮಯದಲ್ಲಿ ಜಾನ್ಸನ್ ಅವರು ಕಾಂಗ್ರೆಸ್‌ನಲ್ಲಿ ೨೩ ವರ್ಷಗಳಿಂದ ಸದಸ್ಯರಾಗಿದ್ದರು. ಅವರು ತನ್ನ ೨೮ನೆಯ ವಯಸ್ಸಿನಲ್ಲಿ ಅಮೆರಿಕದ ಪ್ರತಿನಿಧಿ ಸಭಾ ಸದಸ್ಯರಾದರು, ೪೦ನೆಯ ವಯಸ್ಸಿನಲ್ಲಿ ಸೆನೇಟರರಾದರು. ೧೯೫೩ರಲ್ಲಿ, ಸೆನೇಟರರಾಗಿ ಕೇವಲ ನಾಲ್ಕು ವರ್ಷಗಳ ನಂತರ, ಅವರು ಸೆನೇಟಿನಲ್ಲಿ ಡೆಮೊಕ್ರೆಟಿಕ್ ಪಕ್ಷದ ನಾಯಕರಾಗಿ ಚುನಾಯಿತರಾದರು. ೧೯೬೧ನೇ ಜನವರಿಯಲ್ಲಿ ಉಪಾಧ್ಯಕ್ಷ ಪದವಿಯನ್ನು ಸ್ವೀಕರಿಸುವ ವರೆಗೆ, ಅವರು ಈ ಹುದ್ದೆಯಲ್ಲಿದ್ದರು.

೧೯೫೫ರಿಂದ ೧೯೬೧ರ ವರೆಗೆ, ಅಧ್ಯಕ್ಷರು ರಿಪಬ್ಲಿಕನ್‌ರಾದರೂ, ಕಾಂಗ್ರೆಸಿನ ಉಭಯ ಸದನಗಳಲ್ಲಿ ಡೆಮೊಕ್ರೆಟಿಕ್ ಪಕ್ಷದವರು ಬಹುಸಂಖ್ಯಾತರಾಗಿದ್ದರು.

ಈ ವರ್ಷಗಳಲ್ಲಿ ಜಾನ್ಸನ್ ಅವರು ಪ್ರಭಾವಶಾಲಿ ಸ್ಥಾನಕ್ಕೆ ಏರಿದರು. ಅಧ್ಯಕ್ಷ ಐಸನ್ ಹೋವರ್‌ರ ನಂತರ, ಅವರೇ ಅತ್ಯಂತ ಪ್ರಭಾವಶಾಲಿ ಎಂದು ಪರಿಗಣಿಸಲಾಗುತ್ತಿತ್ತು. ಟೆಕ್ಸಾಸಿನ ಈ ಸೆನೇಟರರು— ೪೬ನೆಯ ವಯಸ್ಸಿನಲ್ಲಿ ಸೆನೆಟ್ ನಾಯಕರಾಗಿ ಚುನಾಯಿತರಾದ ಅವರು, ಸೆನೆಟ್ ನಾಯಕರಾದ ವ್ಯಕ್ತಿಗಳ ಪೈಕಿ ಅತಿ ಕಿರಿಯರು—“ಅಧ್ಯಕ್ಷರ ಕ್ರಮ ಸರಿಯಿದ್ದರೆ, ಅದಕ್ಕೆ ಸಮರ್ಥನೆ ಕೊಡಬೇಕು” ಎಂಬ ಅಭಿಪ್ರಾಯಕ್ಕೆ ತನ್ನ ಪಕ್ಷದವರನ್ನು ಒಪ್ಪಿಸಿದರು. ಇದರಿಂದಾಗಿ ಅಧ್ಯಕ್ಷ ಐಸೆನ್‌ಹೋವರ್‌ರಿಗೆ ವಿದೇಶ ಧೋರಣೆಯ ಕ್ಷೇತ್ರದಲ್ಲಿ ಉಭಯ ಪಕ್ಷಗಳ ನಿರಂತರ ಬೆಂಬಲ ಲಭಿಸಿತು.

ಅಧ್ಯಕ್ಷ ಕೆನೆಡಿಯವರು ಜಾನ್ಸನ್ ಅವರಿಗೆ ಅಮೆರಿಕದ ಇತಿಹಾಸದಲ್ಲಿ ಮುಂಚಿನ ಯಾವ ಉಪಾಧ್ಯಕ್ಷರಿಗೂ ಇಲ್ಲದಿದ್ದಂಥ ಹೆಚ್ಚಿನ ಹೊಣೆಗಾರಿಕೆಗಳನ್ನು ಕೊಟ್ಟು, ಜಾನ್ಸನ್ ಅವರ ಅನುಭವದ ಸದುಪಯೋಗ ಮಾಡಿದರು. ಅಧ್ಯಕ್ಷರ ಎಲ್ಲ ಮುಖ್ಯ ನಿರ್ಣಯಗಳನ್ನು ಅವರಿಗೆ ತಿಳಿಸಲಾಗುತ್ತಿತ್ತು. ಅವರು ಅಧ್ಯಕ್ಷರ ಸಮಾನ ಅವಕಾಶಗಳ ಸಮಿತಿಯ ಅಧ್ಯಕ್ಷರಾಗಿ ಕಾರ್ಮಿಕ ಮುಖಂಡರುಗಳೊಡನೆ, ಉದ್ಯಮಿಗಳೊಡನೆ ಮತ್ತು ಪೌರ ಹಕ್ಕುಗಳ ಸಂಸ್ಥೆಗಳೊಡನೆ ವ್ಯವಹರಿಸಿದರು. ಅವರು ನ್ಯಾಷನಲ್ ಏರೋನಾಟಿಕ್ಸ್ ಎಂಡ್ ಸ್ಪೇಸ್ ಕೌನ್ಸಿಲ್ ಮತ್ತು ಶಾಂತಿದಳದ ಸಲಹೆಗಾರ ಸಮಿತಿಯ ಮುಖ್ಯಸ್ಥರಾಗಿ ಕೆಲಸ ಮಾಡಿದರು. ಅಧ್ಯಕ್ಷ ಕೆನೆಡಿಯವರ ನಿಯೋಗಿಯಾಗಿ ಪ್ರಪಂಚದ ಎಲ್ಲೆಡೆಗಳ ೩೦ ದೇಶಗಳಿಗೆ ಸಂದರ್ಶನ ಕೊಟ್ಟರು.

೧೯೬೩ನೇ ನವೆಂಬರ್ ೨೨ರಂದು ಕೊಲೆಗಾರನ ಗುಂಡು ಅಧ್ಯಕ್ಷ ಕೆನೆಡಿಯವರನ್ನು ಕೆಡವಿದಾಗ, ಲಿಂಡನ್ ಜಾನ್ಸನ್ ಅವರು ಅಮೆರಿಕಾ ಸರಕಾರಕ್ಕೆ ಯಾವ ರೀತಿಯ ಮುಖಂಡತ್ವವನ್ನು ಒದಗಿಸುವರೆಂದು ಪ್ರಪಂಚವು ಕುತೂಹಲದಿಂದ ನೋಡುತ್ತಿತ್ತು. ಅವರ ಸಾಮರ್ಥ್ಯವು ಬಹಳ ಆಶಾದಾಯಕವಾಗಿದೆ ಎಂದು ಪ್ರಪಂಚಕ್ಕೆ ಬೇಗನೆ ತಿಳಿದು ಬಂತು. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಉ ಥಾಂಟ್ ಅವರ, ಶ್ವೇತಭವನಕ್ಕೆ ಭೇಟಿಕೊಟ್ಟಾಗ ಅಧ್ಯಕ್ಷ ಜಾನ್‌ಸನ್ ಅವರೊಡನೆ ಮಾತಾಡಿದಾಗ ಹೀಗೆಂದರು:

“ನೀವು ಆ ನಿರ್ಣಾಯಕ ಸಂಧಿಯಲ್ಲಿ ವ್ಯಕ್ತಪಡಿಸಿದ ದೃಢತೆಯು ತಲ್ಲಣಿಸಿದ ಪ್ರಪಂಚದಲ್ಲಿ ಈ ಮಹಾ ರಾಷ್ಟ್ರದ ಬಗೆಗೆ ಭರವಸೆಯನ್ನು ಪುನಃ ಮೂಡಿಸಲು ಬಹಳ ಸಹಾಯಕವಾಯಿತು.”

ಅಧ್ಯಕ್ಷರಾಗಿ ಜಾನ್ಸನ್ ಅವರು, ರಾಷ್ಟ್ರದಲ್ಲಿ ಒಗ್ಗಟ್ಟು ಸಾಧಿಸಲು, ಆರ್ಥಿಕ ಜೀವನವನ್ನು ಬಲಪಡಿಸಲು, ಎಲ್ಲ ನಾಗರಿಕರಿಗೆ ಸಮಾನ ನ್ಯಾಯದ ಭರವಸೆಯೊದಗಿಸಲು, ಧಾಳಿಯ ವಿರುದ್ಧ ರಕ್ಷಣೆಗಾಗಿ ಅಮೆರಿಕದ ಮಿಲಿಟರಿ ಬಲವನ್ನು ಕಾಪಾಡಲು ಮತ್ತು ಪ್ರಪಂಚದಲ್ಲಿ ಶಾಂತಿ ಸ್ಥಾಪನೆಗಾಗಿ, ಸಾಧ್ಯವಿದ್ದುದನ್ನು ಮಾಡಲು ತಮ್ಮ ಮುಖ್ಯ ಪ್ರಯತ್ನಗಳನ್ನು ಕೇಂದ್ರೀಕರಿಸಿದರು.

ದ್ವಿತೀಯ ಪ್ರಪಂಚದ ಯುದ್ಧದ ನಂತರ ಅಮೆರಿಕದ ಪ್ರತಿಯೊಬ್ಬ ಅಧ್ಯಕ್ಷ

(ಹತ್ತನೇ ಪುಟ ನೋಡಿರಿ)

ನಿಮ್ಮ ಉಳಿತಾಯವನ್ನು ಸಿಂಡಿಕೇಟ್‌ನಲ್ಲಿ ತೊಡಗಿಸಿರಿ ಮತ್ತು ನಿಮ್ಮ ಹಣದ ಮೇಲೆ ಹೆಚ್ಚು ಆದಾಯವನ್ನು ಗಳಿಸಿರಿ!

ಠಾಯಿದೆ ಠೇವಣಾತಿಗಳ ಮೇಲಣ ಬಡ್ಡಿ ದರವನ್ನು ಹೆಚ್ಚಿಸಲಾಗಿದೆ.

ಈಗ ಚಾಲ್ತಿಯಲ್ಲಿರುವ ಬಡ್ಡಿ ದರಗಳು.

ಕೆಳಗೆ ಕಾಣಿಸಿದ ಅವಧಿಗೆ ಅಥವಾ ಹೆಚ್ಚಿಗೆ	ಅದರೆ ಈ ಕೆಳಗೆ ಕಾಣಿಸಿದ ಅವಧಿಗಿಂತ ಕಡಿಮೆ	ಬಡ್ಡಿ ದರ
15 ದಿವಸಗಳು.	45 ದಿವಸಗಳ ವರೆಗೆ	1.25%
46 ದಿವಸಗಳು.	90 ದಿವಸಗಳ ವರೆಗೆ	2.50%
91 ದಿವಸಗಳು.	6 ತಿಂಗಳು	$4\frac{1}{8}$%
6 ತಿಂಗಳು.	1 ವರ್ಷ.	$4\frac{5}{8}$%
1 ವರ್ಷ.	2 ವರ್ಷ.	$5\frac{1}{8}$%
2 ವರ್ಷ.	3 ವರ್ಷ.	$5\frac{3}{8}$%
3 ವರ್ಷ.	5 ವರ್ಷ	$5\frac{3}{4}$%
5 ವರ್ಷ	7 ವರ್ಷ.	$6\frac{1}{8}$%
7 ವರ್ಷ.	9 ವರ್ಷ.	$6\frac{3}{8}$%
9 ವರ್ಷ.	ಮತ್ತು ಹೆಚ್ಚಿನ ಅವಧಿಗೆ	$6\frac{5}{8}$%

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಶಾಖೆಗಳು: 195. ರಜಿಸ್ಟರ್ಡ್ ಆಫೀಸು: ಮಣಿಪಾಲ.

ಚಲಾವಣಾಸಂಪತ್ತು 60 ಕೋಟಿಗೂ ಮಿಕ್ಕಿದೆ, ...ವಿಶ್ವವ್ಯಾಪೀ ಬ್ಯಾಂಕಿಂಗ್ ಬಗ್ಗೆ.



ಬಲ್ಗೇರಿಯಾದಲ್ಲಿ

ಗ್ರಾಮೀಣ ಜೀವನದಲ್ಲಿ

೩೦ ವರ್ಷಗಳ ಜನತಾ ಪ್ರಭುತ್ವದ ಬಳಿಕ ಇಂದು ಬಲ್ಗೇರಿಯಾದ ಹಳ್ಳಿಗಳು ಹಲವು ಕಾರಣಗಳಿಂದ ಪುಟ್ಟ ಪಟ್ಟಣವನ್ನು ಹೋಲುತ್ತವೆ ಬಲ್ಗೇರಿಯಾದ ಜನರಿಂದು ಬಹಳ ಉನ್ನತರಾಗಿದ್ದಾರೆ ಕೃಷಿ ಜನರ ಜೀವನ ಮಟ್ಟದಲ್ಲಾದ ಪ್ರಗತಿಯೇ ಈ ಉತ್ಕರ್ಷಕ್ಕೆ ಕಾರಣ. ಇಂದು ಹಳ್ಳಿಗಳಲ್ಲಿ ಕಾಣಲಾಗುವ ಪ್ರಗತಿಯನ್ನು ತೂಗಿ ನೋಡಲು ೩೦ ವರ್ಷಗಳ ಹಿಂದೆ ಬಲ್ಗೇರಿಯಾದ ರೈತನ ಜೀವನ ಸ್ಥಿತಿಗಳು ಹೇಗಿದ್ದುವೆಂದು ತಿಳಿಯುವುದು ಅಗತ್ಯ. ಗ್ರಾಮೀಣ ಅಧ್ಯಯನ ಸಂಸ್ಥೆಯು ನೀಡಿದ ವಿವರಣೆಗಳಿಂದ ಅಂದು ಬಲ್ಗೇರಿಯಾದ ರೈತರು ಬದುಕಲು ಅಸಾಧ್ಯವಾದ ರೀತಿಯಲ್ಲಿದ್ದರೆಂದು ತಿಳಿಯುತ್ತದೆ. ಅಂದು ರೈತನು ತನ್ನ ಆದಾಯದ ಸೇ. ೮೫ರಷ್ಟನ್ನು ಆಹಾರ ಮತ್ತು ಬಟ್ಟೆಬರೆಗಳಿಗಾಗಿ ವ್ಯಯಿಸುತ್ತಿದ್ದನು. ತನ್ನ ಜೀವನ ಮಟ್ಟದ ಉನ್ನತಿಗಾಗಿ ಬರೀ ೧೮೧ ಸೇಕಡಾದಷ್ಟನ್ನು ಬಳಸಲು ಶಕ್ತನಾಗಿದ್ದನು. ಬ್ರೆಡ್ ಮತ್ತು ಬೀನ್ಸ್‌ಗಳಿಂದ ನೂರಕ್ಕೆ ೭೫ ಕೆಲೊರಿಯಷ್ಟು ಆಹಾರ ಪಡೆಯುತ್ತಿದ್ದನು. ನೂರರಲ್ಲಿ ಐವತ್ತು ರೈತರು ಮಾತ್ರ ಗೋಧಿಯ ಬ್ರೆಡ್ಡನ್ನು ತಿನ್ನುತ್ತಿದ್ದರು. ಉಳಿದವರು ತಿನ್ನುವ ಬ್ರೆಡ್ಡು ರೈ, ಜೋಳದ ಹಿಟ್ಟು ಮತ್ತು ಬಟಾಟೆಗಳಿಂದ ತಯಾರಾಗುತ್ತಿತ್ತು. ಜನತಾ ಪ್ರಭುತ್ವಕ್ಕೆ ಮೊದಲು ಸೇ. ೬೦ರಷ್ಟು ಶಾಲೆಗಳು ಉತ್ತಮ ಕಟ್ಟಡಗಳಲ್ಲಿ ನಡೆಯುತ್ತಿದ್ದುವು. ಸೇ. ೪೦ ಮನೆಗಳಲ್ಲಿ ಪ್ರತ್ಯೇಕವಾದ ಅಡುಗೆಮನೆಯಿತ್ತು. ಗ್ರಾಮೀಣ ಅರ್ಥವ್ಯವಸ್ಥೆಯು

ಒಸ್ಟ್ರಾವ್ ಗ್ರಾಮದಲ್ಲಿ ನವೀನವಾಗಿ ನಿರ್ಮಿಸಿದ ಪಾರ್ಕ್.

ಪದಾರ್ಥ ವಿನಿಮಯದಿಂದಲೇ ನಡೆಯುತ್ತಿತ್ತು. ಅವರು ತಮ್ಮ ಕೈಯಿಂದಲೇ ತಯಾರಿಸಿದ ಪದಾರ್ಥಗಳನ್ನು ತಮ್ಮ ಅವಶ್ಯಕತೆಯ ಸೇ ೭೦ರಷ್ಟು ಪಡೆಯುತ್ತಿದ್ದರು ಕೃಷಿಯ, ಅಲ್ಪ ಉಳಿತಾಯವನ್ನು ಅವರು ಮಾರುಕಟ್ಟೆಗೆ ಕೊಂಡೊಯ್ದಾಗ, ತಮ್ಮ ಅಗತ್ಯಗಳಿಗೆ ಬೇಕಾಗುವಷ್ಟು ಪ್ರತಿಫಲವನ್ನು ಪಡೆಯುತ್ತಿದ್ದಿಲ್ಲ. ಹೆಚ್ಚಿನ ರೈತರಿಗೆ ಹರಿವ ನೀರು, ವಿದ್ಯುತ್, ಸಿನೆಮಾ ಮತ್ತು ರೇಡಿಯೋ ಎಂದರೇನೆಂಬುದರ ಕಲ್ಪನೆಯೂ ಇರಲಿಲ್ಲ

ಸಮಾಜವಾದದ ತಳಹದಿಯ ಪುನರ್ರಚನೆ, ಹಳ್ಳಿಗಳಲ್ಲಿ ಸಹಕಾರಿ ಪದ್ಧತಿಯ ಅನುಷ್ಠಾನಗಳು ತೀವ್ರವಾದ ಆರ್ಥಿಕಾಭಿವೃದ್ಧಿ ಮತ್ತು ಪ್ರಗತಿಯ ನಿಜ ಸಂಸ್ಕೃತಿಯನ್ನುಂಟುಮಾಡಿದುವು ಇಂದು ರೈತರು ತಮ್ಮ ಉತ್ಪನ್ನದಲ್ಲಿ ಸೇ. ೬೦ನ್ನು ಆಹಾರ ಮತ್ತು ಉಡುಗೆ ತೊಡುಗೆಗಳಿಗಾಗಿ, ೧೩.೫ ಸೇಕಡಾವನ್ನು ತಮ್ಮ ಗೃಹಾಕೂಲತೆ ಮತ್ತು ಸೌಕರ್ಯಗಳಿಗಾಗಿ ವೆಚ್ಚಮಾಡುತ್ತಾರೆ ಜನತಾ ಪ್ರಭುತ್ವದ ಈ ಅವಧಿಯಲ್ಲಿ ೬। ಲಕ್ಷ ಹಲವು ಕೋಣೆಗಳುಳ್ಳ ಸುಸಜ್ಜಿತ ಮನೆಗಳು ಕಟ್ಟಲ್ಪಟ್ಟಿವೆ, ಇದರಿಂದ ಗ್ರಾಮೀಣ ಜಿಲ್ಲೆಗಳಲ್ಲಿ ಹೊಸ ಉತ್ಸಾಹವೂ ಮೂಡಿದೆ. ಸುಮಾರು ೩॥ ಸಾವಿರ ಹಳ್ಳಿಗಳಿಗೆ ನೀರು ಸರಬರಾಯಿಯ ವ್ಯವಸ್ಥೆಯಿದೆ. ೪,೬೦೦ ಹಳ್ಳಿಗ

ಳಿಗೆ ವಿದ್ಯುತ್ ಪೂ
ವಿರ ಹಳ್ಳಿಗಳಲ್ಲಿ ಧ
ಯಿದೆ, ಶೇ. ೯೨
ಲ್ಲಿ ಇಂದು ಸುಖ
ದೆ ಅಡಿಗೆಗೂ
ಬಳಸಿಕೊಳ್ಳುತಿದ್ದಾ
ಮಿಲಿಯ ಕಿಲೋವ
ಉಪಯೋಗಿಸಲ್ಪಟ್ಟ
ಪ್ರಮಾಣ ನಾಲ್ಕು
ಹತ್ತು ವರ್ಷಗಳ
ಕ ಮತ್ತಿತರ ವ
೨॥ ಪಾಲಷ್ಟು ಹೆ
ಣಗಳು, ರೇಡಿಯೋ
ತೋಪ ಸಾಧನಗ

ಚಿತ್ರ ಕಲೋತ್ಸವದ ಮೂರು ದೃಶ್ಯಗಳು

ಉಡುಪಿಯ ಚಿತ್ರಕಲಾ ಉತ್ಸವದ ಸಮಾರೋಪ ಸಮಾರಂಭದಲ್ಲಿ ಸಂಗೀತ ಸಭಾದ ಅಧ್ಯಕ್ಷ ಶ್ರೀ ಕೆ. ಕೆ. ಪೈಯವರು ಉತ್ಸವದ ಯಶಸ್ವಿಯತೆಗೆ ಕಾರಣರಾದವರನ್ನು ಅಭಿನಂದಿಸುತ್ತಿರುವ ದೃಶ್ಯ. ಚಿತ್ರದಲ್ಲಿ ಸಮಾರಂಭದ ಅಧ್ಯಕ್ಷ ರಾಜ್ಯಪಾಲ ಜನರಲ್ ಶ್ರೀ ಎಸ್. ಎಂ ಶ್ರೀ ನಾಗೇಶ್, ಶ್ರೀ ಪಿ ಎಂ. ಮುಜಾಹಿದ್, ಡಾ| ಟಿ ಎಂ. ಎ. ಪೈ, ಶ್ರೀ ಟಿ. ಆರ್. ಶೆಣೈ, ಶ್ರೀ ಎಂ ಮಧ್ವರಾಜ್ ಮೊದಲಾದವರನ್ನು ಕಾಣಬಹುದು.

ಉಡುಪಿಯ ಚಿತ್ರಕಲಾ ಉತ್ಸವದ ಅಂಗವಾಗಿ ಜರಗಿದ ರಾಜ್ಯ ಚಿತ್ರಕಲಾ ಶಿಕ್ಷಕರ ಸಮ್ಮೇಳನದ ಉದ್ಘಾಟನೋತ್ಸವದ ಸಂದರ್ಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷ ಡಾ| ಪಿ ಎಂ ಎ. ಪೈಯವರು ಸ್ವಾಗತ ಭಾಷಣವನ್ನೋದುತ್ತಿರುವ ದೃಶ್ಯ. ಚಿತ್ರದಲ್ಲಿ [illegible] ಟಿ. ಎಂ ಎ ಪೈಯವರ ಜತೆಗೆ ರಾಜ್ಯದ ವಿದ್ಯಾಮಂತ್ರಿ ಶ್ರೀ ಎಸ್. ಆರ್. ಕಂಠಿ ಮತ್ತು ಸಮ್ಮೇಳನದ ಅಧ್ಯಕ್ಷ ಶ್ರೀ ಪಿ. ಎಂ. ನಾಡಗೌಡರನ್ನು ಕಾಣಬಹುದು.

ನವೀನ ಧಾರೆ

ವೇಬರ್ ಹಳ್ಳಿಯ ಒಂದು ರಸ್ತೆ.

ಬಲ್ಗೇರಿಯದ ಹಳ್ಳಿಯೊಂದರಲ್ಲಿ ಸಹಕಾರಿ ಬೇಸಾಯಗಾರರ ಹೊಸ ಮನೆ

ಾಗಿದೆ, ೨ ಸಾ
ಿಕ ವ್ಯವಸ್ಥೆ
ಚ್ಚಿನ ಹಳ್ಳಿಗಳ
ಗಳಿಗಾಗಿಯಲ್ಲ
ುಚ್ಛಕ್ತಿಯನ್ನು
ರಲ್ಲಿ ಏಳು
ವಿದ್ಯುತ್ತು ಅಲ್ಲಿ
ರ್ಗೊರಲ್ಲಿ ಆ
ಗಿತ್ತು. ಇದೇ
ಯಲ್ಲಿ ಔದ್ಯಮಿ
ಮಾರಾಟವು
ಗೃಹೋಪಕರ
ಗಳು, ಸಂಗೀ
ತ್ತು ದೂರದರ್ಶ

ಕಗಳು ಹೀಗೆ ಮಾರಾಟಗೊಂಡ ವಸ್ತುಗಳಲ್ಲಿ ಅಗ್ರ ಪ್ರಾಶಸ್ತ್ಯವನ್ನು ಪಡೆದಿದ್ದವು.

ಇಂದು ಬಲ್ಗೇರಿಯಾದ ಹಳ್ಳಿಗಳಲ್ಲಿ ಸಹಕಾರಿ ತಳಹದಿಯ ಮೇಲೆ ಬೇಕರಿ ಮತ್ತು ಲಾಂಡ್ರಿಗಳನ್ನು ಸ್ಥಾಪಿಸಲಾಗಿದೆ ಆಧುನಿಕ ಉಪಹಾರ ಮಂದಿರಗಳು, ಕಿರಾಣಿ ಅಂಗಡಿಗಳು, ಅಭಿವೃದ್ಧಿ ಕೇಂದ್ರಗಳು ಕಾಣ ಸಿಗುತ್ತವೆ. ೫೦೦೦ ಉದ್ಯಾನಗಳು ಮತ್ತು ಪಾರ್ಕ್‌ಗಳು ಅಲ್ಲಿದ್ದು ಇವುಗಳ ಒಟ್ಟು ವಿಸ್ತೀರ್ಣವು ೨|| ಸಾವಿರ ಹೆಕ್ಟೇರ್‌ಗಳಾಗುವುದು, ಹಳ್ಳಿಗಳ ಹೆಚ್ಚಿನ ಮಾರ್ಗಗಳೆಲ್ಲ ತಾರು ಹಾಕಿದುದರಿಂದ ಸುಂದರವಾಗಿವೆ.

ಸಹಕಾರಿ ವ್ಯವಸಾಯ ಕ್ಷೇತ್ರಗಳಿಂದ ಆರ್ಥಿಕ ಸಹಾಯ ಪಡೆತ್ತಿರುವ ನರ್ಸರಿ ಮತ್ತು ಕಿಂಡರ್‌ಗಾರ್ಟನ್ ಶಾಲೆಗಳು ಹೆಚ್ಚಿನ ಹಳ್ಳಿಗಳಲ್ಲಿ ಕಂಗೊಳಿಸುತ್ತವೆ. ಇವುಗಳಲ್ಲಿ ಶಾಲಾ ಪ್ರಾಯಕ್ಕಿಂತ ಚಿಕ್ಕ ರೈತ ಮಕ್ಕಳು ಸೇರಿ ಕೊಂಡಿದ್ದಾರೆ. ಶಾಲಾ ಮಕ್ಕಳಿಗೆ ಉಚಿತ ಭೋಜನದ ವ್ಯವಸ್ಥೆಯನ್ನೂ ಹೆಚ್ಚಿನ ಸಹಕಾರಿ ವ್ಯವಸಾಯ ಕ್ಷೇತ್ರಗಳು ಒದಗಿಸುತ್ತವೆ.

ಬಲ್ಗೇರಿಯಾದ ರೈತರಿಂದು ಸಾಂಸ್ಕೃತಿಕ ಮನರಂಜನೆಗಾಗಿ ಹೆಚ್ಚು ವೆಚ್ಚ ಮಾಡಬಲ್ಲವರಾಗಿದ್ದಾರೆ. ಪ್ರತಿ ಹಳ್ಳಿಯಲ್ಲಿಯೂ ತನ್ನದೇ ಆದ ಲೈಬ್ರರಿ ಕ್ಲಬ್, ಕಲಾ ಚಟುವಟಿಕೆ ಮತ್ತು ಸಿನೆಮಾ ಪ್ರದರ್ಶನಗಳಿಗಾಗಿ ಪ್ರತ್ಯೇಕ ವಿಶಾಲ ಭವನಗಳೂ ಇವೆ.

ಚಿತ್ರ ಕಲೋತ್ಸವದ ಉದ್ಘಾಟಕ ಪದ್ಮಶ್ರೀ ಕೆ. ಕೆ. ಹೆಬ್ಬಾರರು ಪ್ರದರ್ಶಿತ ಚಿತ್ರವೊಂದನ್ನು ವೀಕ್ಷಿಸುತ್ತಿರುವುದು.

ಲಿಂಡನ್ ಬಿ. ಜಾನ್‌ಸನ್

(ಏಳನೇ ಪುಟದಿಂದ)

ರೂ ಘೋಷಿಸಿರುವ ವಿದೇಶ ಧೋರಣೆಯ ಮುಖ್ಯಾಂಶಗಳನ್ನೇ ಅವರು ಮುಂದುವರಿಸಿಕೊಂಡು ಬಂದಿರುತ್ತಾರೆ. ವಿಶ್ವಸಂಸ್ಥೆಗೆ ಬೆಂಬಲ, ಅಲ್ಪಾಭಿವೃದ್ಧಿ ದೇಶಗಳಿಗೆ ಸಹಾಯ, ರಾಷ್ಟ್ರಗಳೆಲ್ಲವೂ ಹೊರಗಿನ ಹಸ್ತಕ್ಷೇಪದಿಂದ ನಿರಂತರವಾಗಿ ಸ್ವತಂತ್ರರಾಗಿರಬೇಕು ಎಂಬ ತತ್ವಕ್ಕೆ ಅಮೆರಿಕ ಬದ್ಧವಾಗಿದೆ ಎಂಬ ಆಶ್ವಾಸನೆಗಳು — ಇವೇ ಆ ಮುಖ್ಯಾಂಶಗಳು.

ಕನ್‌ಫೆಡರೇಟ್ ಸೈನ್ಯದಕ್ಷಿಣ ಸೈನಿಕರೊಬ್ಬರ ಮೊಮ್ಮಗನಾಗಿರುವ, ದಕ್ಷಿಣ ಭಾಗದಲ್ಲಿ ಜನಿಸಿದ ಜಾನ್ಸನ್ ಅವರು ನಿಗ್ರೋಗಳ ಸಮಾನ ಹಕ್ಕುಗಳ ಧ್ಯೇಯಕ್ಕೆ ಮುಡಿಪಾಗಿರುವರು.

ಅಧ್ಯಕ್ಷರಾಗುವ ಮುಂಚೆ ಮತ್ತು ಅಧ್ಯಕ್ಷರಾದ ಮೇಲೂ ಅವರು ಪೌರ ಹಕ್ಕುಗಳಿಗೆ ಶ್ರಮಿಸಿದರು. ಸೆನೆಟಿನಲ್ಲಿ ಬಹುಸಂಖ್ಯಾತರ ಮುಖಂಡರಾಗಿ, ಅವರು, ಫೆಡರಲ್ ಪೌರಹಕ್ಕುಗಳ ಶಾಸನವನ್ನು ಜಾರಿಗೆ ತರಲು ಅಧ್ಯಕ್ಷ ಐಸೆನ್ ಹೋವರ್‌ರಿಗೆ ಸಹಾಯ ಮಾಡಿದರು. ಇದಕ್ಕೆ ಮುಂಚೆ ೮೦ ವರ್ಷಗಳಿಂದ ಇಂಥ ಶಾಸನವಿರಲಿಲ್ಲ.

ಅಧ್ಯಕ್ಷರಾಗಿ ಜಾನ್ಸನ್ ಅವರು ಪ್ರಥಮತಃ ಅಧ್ಯಕ್ಷ ಕೆನಡಿಯವರು ಮಂಡಿಸಿದ ಮತ್ತು ೧೯೬೪ನೇ ಜುಲೈಯಲ್ಲಿ ಕಾಂಗ್ರೆಸ್ ಮಂಜೂರು ಮಾಡಿದ, ಕ್ರಾಂತಿಕಾರಕವಾದ ಪೌರಹಕ್ಕುಗಳ ಶಾಸನಕ್ಕೆ ಸಾರ್ವಜನಿಕರ ಬೆಂಬಲ ದೊರಕಿಸಲು ಅವಶ್ಯವಿರುವ ಮುಖಂಡತ್ವವನ್ನು ಒದಗಿಸಿದರು.

ಅಧಿಕಾರ ಸ್ವೀಕರಿಸಿದ ತರುಣದಲ್ಲೇ ಜಾನ್ಸನ್ ಅವರು, ೧೯೬೫ನೇ ಆರ್ಥಿಕ ವರ್ಷದಲ್ಲಿ ಫೆಡರಲ್ ಬಡ್ಜೆಟನ್ನು ೯೭, ೮೦೦ ಮಿಲಿಯ ಡಾಲರುಗಳಿಗೆ ಇಳಿಸಲು, ಕಡಿಮೆ ಸಿಬ್ಬಂದಿಯೊಡನೆ ವಿಸ್ತರಿಸುತ್ತಿರುವ ಸರಕಾರೀ ಹೊಣೆಗಾರಿಕೆಗಳನ್ನು ನಿರ್ವಹಿಸಲು ಮತ್ತು ಸರಕಾರೀ ಕಾರ್ಯಗಳೆಡೆ ಕ್ಷಮತೆಯನ್ನು ಹೆಚ್ಚಿಸಲು ತೀವ್ರ ಚಳವಳವನ್ನು ಆರಂಭಿಸಿದರು. ಈ ಕ್ರಮಗಳಿಂದಾಗಿ ರಾಷ್ಟ್ರದ ಆರ್ಥಿಕ ಜೀವನವನ್ನು ಉತ್ತೇಜಿಸಲು, ಆಡಳಿತದ ತೆರಿಗೆ ಇಳಿವರಿ ಕಾರ್ಯಕ್ರಮಕ್ಕೆ ಕಾಂಗ್ರೆಸಿನ ಅನುಮೋದನೆ ದೊರೆಯಿತು.

ರೈಲ್ವೇ ವ್ಯವಸ್ಥಾಪಕರ ಮತ್ತು ಕಾರ್ಮಿಕರ ನಡುವೆ ನಾಲ್ಕು ವರ್ಷಗಳಿಂದಿದ್ದ ಒಂದು ವಿವಾದವನ್ನು ಇತ್ಯರ್ಥಗೊಳಿಸುವ ಕಾರ್ಯದಲ್ಲಿ ಅಧ್ಯಕ್ಷರು ಸ್ವತಃ ಮಧ್ಯಸ್ತಿಕೆ ವಹಿಸಿದರು. ಈ ವಿವಾದ ಇತ್ಯರ್ಥವಾಗದೆ, ಮುಷ್ಕರ ಉಂಟಾಗುತ್ತಿದ್ದರೆ, ರಾಷ್ಟ್ರದ ಆರ್ಥಿಕ ಜೀವನ ಕುಸಿದು ಬೀಳುತ್ತಿತ್ತು.

ಅಮೆರಿಕದ ಮಿಲಿಟರಿ ಶಕ್ತಿಯನ್ನು, ಶತ್ರುಗಳ ದಾಳಿಯನ್ನು ಇದಿರಿಸಲು ಅಥವಾ ಮಿತ್ರ ರಾಷ್ಟ್ರಗಳಿಗೆ ಅವರ ಸ್ವಾತಂತ್ರ್ಯ ರಕ್ಷಣೆಗೆ ನೆರವಾಗಲು ಸದಾ ಸಿದ್ಧವಾಗಿರಿಸಲು, ಅಂಥ ಮಿಲಿಟರಿ ಶಕ್ತಿಯ ಸಂವರ್ಧನೆಗೆ ಅವರು ಶ್ರಮಿಸಿದ್ದಾರೆ. ಶಾಂತಿ ಸಾಧನೆಗಾಗಿ ಅವರು, ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ಘೋಷಣೆ ಮಾಡಿದ್ದಾರೆ, ಜಿನೀವಾ ನಿಶ್ಶಸ್ತ್ರೀಕರಣ ಸಮ್ಮೇಳನದಲ್ಲಿ ಐದು ಮಹತ್ವದ ಸಲಹೆಗಳನ್ನು ಮಂಡಿಸಿದ್ದಾರೆ ಮತ್ತು ವಿದಳನೀಯ ನ್ಯೂಕ್ಲಿಯರ್ ಶಸ್ತ್ರೋಪಯೋಗಿ ವಸ್ತುಗಳ ಉತ್ಪಾದನೆಯಲ್ಲಿ ಸಮಗ್ರ ಇಳಿವರಿಯಾಗಬೇಕೆಂದು ಆಜ್ಞೆ ಮಾಡಿದ್ದಾರೆ.

ಅಮೆರಿಕದಲ್ಲಿ ಅಲ್ಲಲ್ಲಿ ಇರುವ ದಾರಿದ್ರ್ಯವನ್ನು ನಿವಾರಿಸಲು ಮತ್ತು ಬಡ ಅಮೆರಿಕನ್ನರಿಗೆ ಉತ್ತಮ ಶಿಕ್ಷಣ, ಆರ್ಥಿಕ ಮತ್ತು ಸಾಮಾಜಿಕ ಅವಕಾಶಗಳನ್ನು ಪಡೆಯಲು ಸಹಾಯ ಮಾಡಲು ಮತ್ತು ಅಮೆರಿಕದಲ್ಲಿ "ಭವ್ಯ ಸಮಾಜದ" ನಿರ್ಮಾಣಕ್ಕಾಗಿ ಅವರು ರಾಷ್ಟ್ರವ್ಯಾಪಿ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ. ನಗರಗಳ ಜನನಿಬಿಡತೆ, ಶಿಕ್ಷಣ ಮತ್ತು ನೈಸರ್ಗಿಕ ಮತ್ತು ಮಾನವೀ ಸಂಪನ್ಮೂಲಗಳ ರಕ್ಷಣೆ ಮುಂತಾದ ಭವಿಷ್ಯದ ಸಮಸ್ಯೆಗಳನ್ನಿದಿರಿಸಲು ಅವರು ತಜ್ಞರನ್ನು ನೇಮಿಸಿದ್ದಾರೆ.

ಲಿಂಡನ್ ಜಾನ್ಸನ್ ಅವರು ತಮ್ಮ ಕಾರ್ಯವನ್ನು ನಿರ್ವಹಿಸುವಾಗ, ಜನರೊಡನೆ ನೇರಗಾಗಿ ವ್ಯವಹರಿಸಬೇಕು ಎಂಬ ತತ್ವವನ್ನು ಅನುಸರಿಸುತ್ತಾರೆ. ಕೆಲವು ಬಾರಿ ಅವರು ಶ್ವೇತಭವನಕ್ಕೆ ಸುದ್ದಿಗಾರರನ್ನು ಆಮಂತ್ರಿಸಿ, ಪೂರ್ವಸಿದ್ಧತೆಯಿಲ್ಲದ ಪತ್ರಿಕಾಗೋಷ್ಠಿಯನ್ನು ಏರ್ಪಡಿಸುತ್ತಾರೆ. ನಗರದಿಂದ ಹೊರಗೆ ಸಂಚರಿಸುವಾಗ ಅನೇಕ ಬಾರಿ ಜನರೊಡನೆ ಬೆರೆಯುತ್ತಾರೆ ಶ್ವೇತ ಭವನದ ಬಯಲಲ್ಲಿ ನಡೆಯುತ್ತಿರುವಾಗ, ಗೇಟಿನ ಬಳಿ ನೋಡುತ್ತಿರುವ ಪ್ರವಾಸಿಗರ ಬಳಿಗೆ ಬಂದು ಸಾಧ್ಯವಾದಷ್ಟು ಜನರೊಡನೆ ಕೈಕುಲುಕುತ್ತಾರೆ.

ಜಾನ್ಸನ್ ದೊಡ್ಡ ಗಾತ್ರದ ವ್ಯಕ್ತಿ, ಅವರ ಎತ್ತರ ಆರು ಅಡಿ ಮೂರು ಇಂಚು, ಭಾರ ೧೯೫ ಪೌಂಡುಗಳಷ್ಟು. ಅವರಲ್ಲಿ ಅಪರಿಮಿತ ಉತ್ಸಾಹ, ಚೈತನ್ಯ ತುಂಬಿ ತುಳುಕುತ್ತಿದೆ. ದಿನದ ಕೆಲಸದ ಮಧ್ಯೆ ಅವರು ವಿಶ್ರಾಂತಿಗಳನ್ನು ಅನುಭವಿಸುವರಾದರೂ, ಕಾರ್ಯಶೀಲತೆಯೇ ಅವರ ಮುಖ್ಯ ಲಕ್ಷಣ. ವಾರದಲ್ಲಿ ಆರು ದಿನಗಳ ವರೆಗೆ ಪ್ರತಿದಿನ ೧೮ ಗಂಟೆಗಳ ವರೆಗೆ ಅವರು ನಿರ್ವಹಿಸುವ ಕಾರ್ಯದಿಂದ ಉದ್ಭವಿಸುವ ವಿಷಯಗಳನ್ನು ನೋಡಿಕೊಳ್ಳಲು ಎರಡು ಸರದಿಗಳಲ್ಲಿ ಕಾರ್ಯದರ್ಶಿಗಳು ಕೆಲಸ ಮಾಡಬೇಕಾಗುತ್ತದೆ

ಇಂಥ ಚೈತನ್ಯದಿಂದಾಗಿಯೇ ಅವರಿಗೆ ಬಾಲ್ಯದ ದೀನಸ್ಥಿತಿಯಿಂದ, ಅಧ್ಯಕ್ಷ ಪದವಿಗೇರಲು ಸಾಧ್ಯವಾಯಿತು. ಅವರು ಟೆಕ್ಸಾಸಿನ ಪರ್ವತ ಪ್ರದೇಶದ ಒಂದು ಗೇಣಿ ಹೊಲದಲ್ಲಿ ೧೯೦೮ನೇ ಆಗಸ್ಟ್ ೨೭ರಂದು ಜನಿಸಿದರು.

ಸಾರ್ವಜನಿಕ ಸೇವೆಯ ಮನೋಭಾವವನ್ನು ಅವರು ತನ್ನ ತಾಯ್ತಂದೆಯರಿಂದ ಪಡೆದರು. ಅವರ ತಂದೆ ಸಾಮ್ಯುವೆಲ್ ಈಲೀ ಜಾನ್ಸನ್ ಜೂನಿಯರ್ ಅವರು ರೈತರಾಗಿದ್ದರು, ಶಾಲಾ ಶಿಕ್ಷಕರಾಗಿದ್ದರು, ಟೆಕ್ಸಾಸ್ ರಾಜ್ಯದ ಶಾಸನ ಸಭೆಯ ಸದಸ್ಯರೂ ಆಗಿದ್ದರು. ಅವರ ತಾಯಿ ರೆಬೆಕಾ ಬೈನ್ಸ್ ಜಾನ್ಸನ್‌ರೂ ಸಾರ್ವಜನಿಕ ಸೇವಾ ಮನೋಭಾವದ ಕುಟುಂಬದಲ್ಲಿ ಜನಿಸಿದವರು.

ಲಿಂಡನ್ ಜಾನ್ಸನ್ ಅವರು ಟೆಕ್ಸಾಸಿನ ಸಾನ್ ಮಾರ್ಕೋಸ್‌ನ ಸೌತ್‌ವೆಸ್ಟ್ ಸ್ಟೇಟ್ ಟೀಚರ್ಸ್ ಕಾಲೇಜಿನಲ್ಲಿ ಕಲಿಯಲು ಬೇಕಾದ ಹಣದ ಸಂಪಾದನೆಗಾಗಿ ಹಲವು ಉದ್ಯೋಗಗಳನ್ನು ನಿರ್ವಹಿಸಿದರು. ಅವರು ದ್ವಾರಪಾಲಕರಾಗಿ ಮತ್ತು ಕಾಲೇಜ್ ಅಧ್ಯಕ್ಷರಿಗೆ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಕೈಯಲ್ಲಿದ್ದ ಹಣ ಬಹಳ ಕಡಿಮೆಯಾದಾಗ, ಅವರು ಒಂದು ವರ್ಷದ ವರೆಗೆ ಕಾಲೇಜನ್ನು ಬಿಟ್ಟರು, ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕೆಲಸಮಾಡಿ ತಮ್ಮ ಶಿಕ್ಷಣವನ್ನು ಮುಂದುವರಿಸಲು ಸಾಕಷ್ಟು ಹಣಸಂಪಾದಿಸಿದರು.

ಕಾಲೇಜಿನಿಂದ ಪದವೀಧರರಾದ ನಂತರ, ಅವರು ಒಂದು ವರ್ಷದ ವರೆಗೆ, ಹೂಸ್ಟನ್ನಿನ ಒಂದು ಹೈಸ್ಕೂಲಿನಲ್ಲಿ ಸಾರ್ವಜನಿಕ ಭಾಷಣ ಕಲೆ ಮತ್ತು ಚರ್ಚಾಗೋಷ್ಠಿಗಳಲ್ಲಿ ಭಾಗ ವಹಿಸುವ ಕಲೆಯನ್ನು ಕಲಿಸಿದರು. ಇದೇ ಅವಧಿಯಲ್ಲಿ ಡೆಮೊಕ್ರಟಿಕ್ ಪಕ್ಷದ ಕಾಂಗ್ರೆಶ್ನಲ್ ಸ್ಪರ್ಧಿಯೊಬ್ಬರು ಚುನಾಯಿತರಾಗಲು ಸಹಾಯ ಮಾಡಿದರು. ೧೯೩೧ರಲ್ಲಿ ಜಾನ್ಸನ್ ಅವರು ಚುನಾಯಿತರಾಗಲು ತನ್ನ ಸಹಾಯ ಪಡೆದ ಪ್ರತಿನಿಧಿ ಸಭಾ ಸದಸ್ಯರ ಕಾರ್ಯದರ್ಶಿಯಾಗಲು ವಾಷಿಂಗ್ಟನ್‌ಗೆ ತೆರಳಿದರು.

ಅಂದಿನಿಂದ ಅವರು ನಿರಂತರವಾಗಿ ಉತ್ಕರ್ಷಗೊಳ್ಳುತ್ತಲೇ ಮುನ್ನಡೆದಿದ್ದಾರೆ ೧೯೩೫ರಲ್ಲಿ ಅವರನ್ನು ರಾಷ್ಟ್ರೀಯ ಯುವಜನ ಆಡಳಿತದ ಟೆಕ್ಸಾಸ್ ಸ್ಟೇಟ್ ಡೈರೆಕ್ಟರಾಗಿ ನೇಮಿಸಲಾಯಿತು. ಅವರು ಯುವಜನರಿಗೆ ಉದ್ಯೋಗಗಳನ್ನು ಮತ್ತು ಶೈಕ್ಷಣಿಕ ಅವಕಾಶಗಳನ್ನು ಒದಗಿಸಲು ಸಹಾಯ ಮಾಡಿದರು.

೧೯೩೭ರಲ್ಲಿ ಜಾನ್ಸನ್ ಅವರು ಟೆಕ್ಸಾಸ್‌ನಿಂದ ಅಮೆರಿಕದ ಪ್ರತಿನಿಧಿ ಸಭೆಗೆ ಚುನಾಯಿತರಾದರು. ಅಧ್ಯಕ್ಷ ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್‌ರಿಗೆ ಬೆಂಬಲ ಕೊಡಬೇಕೆಂಬುದು ಅವರ ಪ್ರಚಾರದ ಮುಖ್ಯಾಂಶವಾಗಿತ್ತು.

ವಾಶಿಂಗ್ಟನ್‌ನಲ್ಲಿ ರೂಸ್‌ವೆಲ್ಟರು ಟೆಕ್ಸಾಸಿನ ಈ ಉತ್ಸಾಹೀ ತರುಣನನ್ನು ಸ್ವಾಗತಿಸಿದರು, ತಮ್ಮ ನಿಕಟ ಸಹವರ್ತಿಯನ್ನಾಗಿ ಮಾಡಿದರು. ಪ್ರತಿನಿಧಿ ಸಭೆಯ ನೌಕಾ ವ್ಯವಹಾರಗಳ ಸಮಿತಿಯ ಸದಸ್ಯರಾಗಿ ಅವರನ್ನು ನೇಮಕ ಮಾಡಿದರು. ಆ ನೇಮಕವು, ಕಾಂಗ್ರೆಸ್ಸಿನ ಉಭಯ ಸದನಗಳ, ಸಶಸ್ತ್ರ ಬಲಗಳ ಬಗೆಗೆ ವ್ಯವಹರಿಸುವ ಸಮಿತಿಗಳಲ್ಲಿ, ಅವರ ನಿರಂತರವಾದ ೨೪ ವರ್ಷಗಳ ಸೇವೆಯ ಪ್ರಾರಂಭವಾಗಿತ್ತು.

ಕಾಂಗ್ರೆಸ್ ಸದಸ್ಯರಾಗಿ, ಜಾನ್ಸನ್‌ರ ಪ್ರಾರಂಭದ ವರ್ಷಗಳು, ಅಮೆರಿಕದ ಮಹಾ ಆರ್ಥಿಕ ದುಸ್ಥಿತಿಯಿಂದಾಗಿ ನರಳುತ್ತಿದ್ದ ರೈತರ ಮತ್ತು ಕಾರ್ಮಿಕರ ಸ್ಥಿತಿಯನ್ನು ಸುಧಾರಿಸುವ ಪ್ರಯತ್ನಗಳಿಗೆ ಮುಡಿಪಾಗಿದ್ದುವು. ವಿದೇಶಗಳ ಸರ್ವಾಧಿಕಾರೀ ಪ್ರಭುತ್ವಗಳಿಂದ ಒದಗಬಹುದಾದ ಗಂಡಾಂತರಗಳ ಬಗೆಗೆ ರಾಷ್ಟ್ರದ ಜಾಗೃತಿಯನ್ನು ಹೆಚ್ಚಿಸಲೂ ಅವರು ಪ್ರಯತ್ನಿಸಿದರು.

೧೯೪೧ನೇ ಎಪ್ರಿಲ್ ತಿಂಗಳಲ್ಲಿ ಅಮೆರಿಕದ ಪರ್ಲ್‌ಹಾರ್ಬರ್ ಮೇಲೆ ಧಾಳಿಯಾಗುವುದಕ್ಕೆ ಎಂಟು ತಿಂಗಳ ಮುಂಚೆ, ಜಾನ್ಸನ್ ಅವರು ಅಮೆರಿಕದಲ್ಲಿ ಆಗ ರೂಢವಾಗಿದ್ದ ಪ್ರತ್ಯೇಕತಾವಾದದ ವಿರುದ್ಧ ವಾದಿಸಿದರು. "ನಮ್ಮ ಭವಿಷ್ಯವು, ಪ್ರಪಂಚದ ಭವಿಷ್ಯದ ಒಂದಂಶ. ನಮಗೆ ತಿಳಿದಿರುವಂಥ ನಮ್ಮ ದೇಶದ ಪ್ರಗತಿಯಿಂದ ಪ್ರಜಾಪ್ರಭುತ್ವದ ಭವಿಷ್ಯವನ್ನು ಬೇರ್ಪಡಿಸಲು" ಸಾಧ್ಯವಿಲ್ಲವೆಂದರವರು.

ಪರ್ಲ್ ಹಾರ್ಬರ್ ಪ್ರಕರಣದ ನಂತರ, ಜಾನ್ಸನ್ ಅವರು ಸಶಸ್ತ್ರ ಬಲಗಳಲ್ಲಿ ಕೆಲಸ ಮಾಡಲು ಹೋದ, ಅಮೇರಿಕದ ಕಾಂಗ್ರೆಸ್ಸಿನ ಪ್ರಥಮ ಸದಸ್ಯರು. ಅಮೆರಿಕದ ನೌಕಾ ಬಲದಲ್ಲಿ ಲೆಫ್ಟಿನೆಂಟ್ ಕಮಾಂಡರಾಗಿ, ಅವರು ನೈಋತ್ಯ ಪೆಸಿಫಿಕ್‌ನಲ್ಲಿ ಕೆಲಸಮಾಡಿದ್ದರು.

ಯುದ್ಧರಂಗದ ಸಂಚಾರದ ನಂತರ ಅವರು ಕಾಂಗ್ರೆಸ್ಸಿನ ಕಾರ್ಯಗಳಿಗೆ ಹಿಂದಿರುಗಿದರು, ಅಧ್ಯಕ್ಷ ರೂಸ್‌ವೆಲ್ಟರ ಯುದ್ಧ ಕಾಲದ ಸಿದ್ಧತಾ ಕ್ರಮಗಳಿಗೆ ಬೆಂಬಲವಾಗಿ ಶಾಸನ ಸಭೆಯಲ್ಲಿ ಮುಖ್ಯ ಪಾತ್ರ ವಹಿಸಿದರು.

೧೯೩೪ರಲ್ಲಿ ಜಾನ್ಸನ್‌ರು ಕ್ಲಾಡಿಯಾ ಆಲ್ಟಾ ಜಾನ್ಸನ್‌ರನ್ನು ಮದುವೆಯಾದರು.

ಜಾನ್ಸನ್ ದಂಪತಿಗಳಿಗೆ ಇಬ್ಬರು ಪುತ್ರಿಯರಿದ್ದಾರೆ, ೨೦ ವರ್ಷದ ಲಿಂಡಾ ಬರ್ಡ್ ಜಾರ್ಜ್ ವಾಷಿಂಗ್ಟನ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿ, ೧೭ ವರ್ಷದ ಲೂಸಿ ಬೈನ್ಸ್ ನ್ಯಾಷನಲ್ ಕೆಥೆಡ್ರೆಲ್ ಸ್ಕೂಲಿನಲ್ಲಿ ಕಲಿಯುತ್ತಿದ್ದಾಳೆ.

ಜಾನ್ಸನ್ ದಂಪತಿಗಳು ತಮ್ಮ ರಜಾ ದಿನಗಳ ಹೆಚ್ಚಿನಂಶವನ್ನು ಟೆಕ್ಸಾಸ್‌ನ [illegible] ೪೦೦ ಎಕರೆಗಳ "ಎಲ್‌ಬಜೆ" ಪಶುಪಾಲನಾ ಕ್ಷೇತ್ರದಲ್ಲಿ ಕಳೆಯುತ್ತಾರೆ ಇದು ಅಧ್ಯಕ್ಷರ ಜನ್ಮಸ್ಥಳಕ್ಕೆ ಸಮೀಪವಾಗಿರುವ ಸ್ಥಳ. ಅಧ್ಯಕ್ಷ ಜಾನ್ಸನ್‌ರು ತಮ್ಮ ಉತ್ತಮ ತಳಿಯ ಹೆರ್ಟ್‌ಫರ್ಡ್ ಪಶುಗಳನ್ನು ಎಲ್ಲ ಸಂದರ್ಶಕರಿಗೆ ತೋರಿಸಲು ಹೆಮ್ಮೆಪಡುತ್ತಾರೆ. ಜಾನ್ಸನ್‌ರು ಪಶುಪಾಲನಾ ಕ್ಷೇತ್ರದಲ್ಲಿರುವಾಗ ಅದು ತಾತ್ಕಾಲಿಕ ಶ್ವೇತಭವನವಾಗುತ್ತದೆ. ಅಲ್ಲಿರುವಾಗಲೂ ಅಧ್ಯಕ್ಷರು ವ್ಯವಹಾರ ನಡೆಸುತ್ತಾರೆ, ಪತ್ರಿಕಾಗೋಷ್ಠಿಗಳನ್ನು ಏರ್ಪಡಿಸುತ್ತಾರೆ, ವರದಿಗಳನ್ನು ಓದುತ್ತಾರೆ ಮತ್ತು ಸಹಾಯಕರೊಡನೆ ಮತ್ತು ಅಧಿಕಾರಿಗಳೊಡನೆ ಸಮಾಲೋಚಿಸುತ್ತಾರೆ.

"ಬಲಿಷ್ಠವಾಗಿರುವ, ಆರ್ಥಿಕ ಅನುಕೂಲತೆಯಿರುವ, ದಯಾಳುವಾಗಿರುವ ಸರಕಾರವೇ ಬಾಳುವ ಸರಕಾರ" ಎಂದು ಅಧ್ಯಕ್ಷ ಜಾನ್ಸನ್ ಹೇಳಿದ್ದಾರೆ.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

R E P. 267/64 (O. S. 138/61)

Between

ಶಿವರಾಮ ಶೆಟ್ಟಿ — ಅರ್ಜಿದಾರ

ಮತ್ತು

ಸಂಕಮ್ಮ ಶೆಡ್ತಿ — ಎದ್ರಿಳು,

ನೋಟೀಸು

ಉಡುಪಿ ತಾಲೂಕು ಸಿಲುವಳ್ಳಿ ಗ್ರಾಮದ ಕೌಡಿಯಲ್ಲಿರುವ ಸುಬಕ್ಕ ಸೆಡ್ತಿರ ಮಗಳು ಸಂಕಮ್ಮ ಸೆಡ್ತಿಗೆ ಈ ಮೂಲಕ ಹೇಳುವುದೇನೆಂದ್ರೆ:—

ಅರ್ಜಿದಾರನು ಉಡ್ಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿರುವ REP 13/62 ರಂತೆ ಡಿಪೋಜಿಟಿನಲ್ಲಿರುವ ಕೆಲವು ಹಣದ ಜಮ ವಗೈರೆ ಕೇಳಿ ಅರ್ಜಿ ಕೊಟ್ಟಿರುವುದರಿಂದ ಆ ಕುರಿತು ನಿನ್ನ ಆಕ್ಷೇಪ ಏನಾದರೂ ಇದ್ದರೆ ತಾ. 26—11—1964ನೇ ಹಗಲು 11 ಗಂಟೆ ಈ ಕೋರ್ಟು ಮುಂದೆ ಹಾಜರಾಗಿ ಉದಪರಿಕಿಸಿಕೊಳ್ಳತಕ್ಕದ್ದು. ಇಲ್ಲದಿದ್ದರೆ ನಿನ್ನನ್ನು ಶಿವಾಯ್ ಮಾಡಲಾದೀತು.

P. N. Krishnamoorthy Rao,
Advocate.
Udipi, S. K. Dated 2-11-1964

ಆಹಾರ ಸಮಸ್ಯೆಯಲ್ಲಿ

ಸರಕಾರವು ಗಂಡುತನ ತೋರಿಸಬೇಕು

ದೇಶವನ್ನು ಕಾಡುತ್ತಿರುವ ಬಲವತ್ತರವಾದ ಸಮಸ್ಯೆಗಳ ಸ್ಥಾನವನ್ನಿಂದು ಆಹಾರ ಧಾನ್ಯಗಳು ಪಡೆದಿವೆ. ಕಳೆದ ಮಳೆಗಾಲದಲ್ಲಿ ಬಿಗಡಾಯಿಸಿದ ಈ ಪ್ರಶ್ನೆಯು ಸುಗ್ಗಿಯ ನಂತರವಾದರೂ ಸರಳವಾದೀತೆಂದು ಅಂದು ಊಹಿಸಿದ್ದೇ ಬಂತು, ಆದರೆ, ಪರಿಸ್ಥಿತಿಯೇನೂ ಸುಧಾರಿಸಿದ ಲಕ್ಷಣಗಳು ಗೋಚರಕ್ಕೆ ಬಂದಿಲ್ಲ. ಆಹಾರ ಧಾನ್ಯ ವ್ಯಾಪಾರದ ಕಾರ್ಪೊರೇಶನ್ ರಚಿಸುವ ಸರಕಾರದ ಇರಾದೆಯು ಕಾರ್ಯರೂಪಕ್ಕೆ ಬರಬೇಕಾದರೆ ಇನ್ನೂ ಸುಮಾರು ಎರಡು ತಿಂಗಳ ಕಾಲ ಕಾಯಬೇಕಷ್ಟೆ. ಅದುವರೆಗೆ ಪರಿಸ್ಥಿತಿಯನ್ನು ಹೀಗೆಯೇ ಉಳಿಯಗೊಟ್ಟರೆ, ಇದರ ಅಂತ್ಯವೆಲ್ಲಿ ಎಂದು ಈಗಲೇ ಹೇಳುವುದು ಕಷ್ಟವಾದೀತು. ಮಿತಿ ಮೀರಿರುವ ಬೆಲೆಯೇರಿಕೆ ಹಾಗೂ ಕೃತಕ ಅಭಾವದ ಪರಿಣಾಮವನ್ನು ಗಂಭೀರವಾಗಿ ಪರ್ಯಾಲೋಚಿಸಬೇಕು, ಅದಕ್ಕೆ ಸೂಕ್ತವಾದ ಪರಿಹಾರವನ್ನಾದರೂ ಅರಸಬೇಕು. ಈ ದಿಸೆಯಲ್ಲಿ ಕಾಲವ್ಯಯ ಮಾಡುವುದು ಅಕ್ಷಮ್ಯ ಅಪರಾಧವಾದೀತು

ಇಂದು ನಾವು ಪರಿಶೀಲಿಸಬೇಕಾದ ಪ್ರಶ್ನೆಯೆಂದರೆ, ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುವುದು ಹೇಗೆ ಎಂದು. ಎಲ್ಲರೂ ಹೇಳುವಂತೆ ಮತ್ತು ತಿಳಿದಿರುವಂತೆ ಅಭಾವವನ್ನು ದೂರೀಕರಿಸಲು ಅಧಿಕ ಉತ್ಪಾದನೆಯನ್ನೇ ಸೂಕ್ತ ಮಾರ್ಗವೆನಿಸಿದೆ. ಸ್ವಾತಂತ್ರ್ಯ ನಂತರದಲ್ಲಿ ದೇಶದಲ್ಲಿ ಆಹಾರೋತ್ಪಾದನೆಯು ಹೆಚ್ಚಿದೆ, ನೀರಾವರಿ ಸೌಲಭ್ಯ, ಕೃತಕ ಗೊಬ್ಬರಗಳ ಬಳಕೆ, ಉತ್ತಮ ತಳಿಯ ಬೀಜ–ಇತ್ಯಾದಿಗಳಿಂದ ಇದ ಸಾಧ್ಯವಾಗಿದ ಆದರೂ ಆಹಾರೋತ್ಪಾದನೆಯು ತನ್ನ ಗುರಿಯನ್ನು ಮುಟ್ಟಲಿಲ್ಲ ಇದಕ್ಕೆ ಮುಖ್ಯವಾಗಿ ಮೂರು ಕಾರಣಗಳನ್ನು ಕೊಡಬಹುದು :

೧ ಆಹಾರದ ಉತ್ಪಾದನೆಯು ನಮ್ಮ ದೇಶದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯ ಪರಿಮಾಣದಲ್ಲಿ ಏರುತ್ತಿಲ್ಲ. ಶಾಂತಿ ಕಾಲದ ಕಾರಣದಿಂದ ಮತ್ತು ಉತ್ತಮ ಆರೋಗ್ಯ ಸೌಕರ್ಯಗಳಿಂದ ಮರಣ ಪ್ರಮಾಣವು ಕಡಿಮೆಯಾಗುತ್ತ ಬರುತ್ತಿದೆ. ಆದರೆ ಜನನ ಪ್ರಮಾಣವು ಇಳಿಮುಖವಾಗುತ್ತಿಲ್ಲ ಆದುದರಿಂದ ನಾವು ಬೆಳೆದ ಆಹಾರವು ನಮಗೆ ಸಾಕಾಗುವುದಿಲ್ಲ, ವಿದೇಶಗಳಿಂದ ಆಮದು ಮಾಡಿಕೊಳ್ಳುವ ಪ್ರಮಾಣವು ಹೆಚ್ಚಾಗಲೇಬೇಕಾಗಿದೆ

೨ ರೈತನಿಗೆ ದೊರೆಯಬೇಕಾದ ಕೃಷಿಕ ಸೌಲಭ್ಯಗಳು ಇನ್ನೂ ಎಲ್ಲರಿಗೂ ದೊರೆಯುತ್ತಿಲ್ಲ ಸರಕಾರದ ಮರ್ಜಿಯಂತೆ ನೀಡಲಾಗುತ್ತಿರುವ ಸೌಕರ್ಯ ಸೌಲಭ್ಯಗಳು ಸರಿಯಾಗಿ ಕಾರ್ಯರೂಪಕ್ಕೆ ಇನ್ನೂ ಬರುತ್ತಿಲ್ಲ. ಕೆಲವೆಡೆ ಒಂದಂತೆ ಗೋಚರವಾದರೂ ಅವು ಕೆಲವೇ ಜನರ ಕೈವಾಡದಿಂದ ನ್ಯಾಯವಾದ ರೈತನ ಕೈಗೆ ಸಿಲುಕುವುದು ಕಠಿನವಾಗಿದೆ, ಅಥವಾ ಇಂತಹ ಸೌಲಭ್ಯಗಳು ತನಗೆ ದೊರೆಯುವುದೆಂಬ ಸಾಮಾನ್ಯ ಕಲ್ಪನೆಯೇ ಹಳ್ಳಿಯ ರೈತನಿಗಿರುವುದಿಲ್ಲ ಆತ ತನ್ನ ಅತಿ ಪ್ರಾಚೀನ ರೀತಿಯಲ್ಲೇ ಇಂದಿಗೂ ಮುಂದುವರಿಯುತ್ತಿದ್ದಾನೆ ಹೀಗಾಗಿ ನಿರೀಕ್ಷಿತ ಪರಿಣಾಮ ಸಾಧ್ಯವಾಗದಂತಾಗಿದೆ

೩. ಸರಕಾರದ ಭೂಸುಧಾರಣಾ ಶಾಸನವು ತ್ರಿಶಂಕು ಸ್ವರ್ಗವಾಗಿದ್ದರಿಂದ ಮುಕ್ತಿ ಪಡೆಯದ ಕಾರಣ ರೈತರಲ್ಲಿ ವಿಶ್ವಾಸ ಮೂಡದಂತಾಗಿದೆ ಗೇಣಿ ಕೊಡದಿರುವುದರಿಂದ ಒಕ್ಕಲೆಬ್ಬಿಸುವ ಅಧಿಕಾರ ದಣಿಗೆ ಇಲ್ಲದಿರುವುದರಿಂದ ಒಕ್ಕಲಾದರೂ ಕೃಷಿ ಕಾರ್ಯದಲ್ಲಿ ಮೈಮುರಿದು ದುಡಿಯುವ ದಕ್ಷತೆ ತೋರುವದಿಲ್ಲ. ಕೂಡಿದಷ್ಟು ಬಡಿದ, ಬಡಿದಷ್ಟು ತಿಂದ, ನಾಳೆಯ ಯೋಚನೆಯನ್ನು ಇಂದು ಮಾಡಿ ತಲೆಗೆ ಯಾಕೆ ಬೆಪ್ಪು ಮಾಡಿಕೊಳ್ಳಬೇಕು ಎಂಬ ಒಂದು ಅಲಕ್ಷ್ಯದ ವಾತಾವರಣವೇ ಕೃಷಿಕ ಸಮಾಜದಲ್ಲಿ ಮೂಡಿದಂತಿದೆ ಇದರಿಂದ ವರ್ಷದಿಂದ ವರ್ಷಕ್ಕೆ ಉತ್ಪಾದನೆಯಲ್ಲಿ ಇಳಿಮುಖವೇ ಆಗುತ್ತ ಬಂದರೂ ಆಶ್ಚರ್ಯ ಪಡಬೇಕಿಲ್ಲ

ಇನ್ನು ರೈತನು ಬೆಳೆದ ಧಾನ್ಯಕ್ಕೆ ನ್ಯಾಯವಾದ ಬೆಲೆ ಬಾರದ [illegible] ವುದು ಆತನ ಆರ್ಥಿಕ ಮುಗ್ಗಟ್ಟಿಯಿಂದ ಸಾಹುಕಾರರು [illegible] ದ ಲಾಭಗಳಿಸುವುದು, ರೈತನ [illegible] ವ್ಯಾಪಾರಿಗಳ ಸಂಗ್ರಹ ಬುದ್ಧಿ [illegible] ಪೂರಕ ಕಾರಣಗಳು. ರೈತನಿಂದ ಧಾನ್ಯ ಪಡಕೊಳ್ಳುವ ಬಗ್ಗೆ ಕನಿಷ್ಟ ಮಿತಿಯನ್ನು ಹೇರಲಾಗಿದೆ ನಿಜ, ಆದರೆ, ಮಳೆಗಾಲದಲ್ಲಿ ತಂದ ಸಾಲಕ್ಕಾಗಿ ಭತ್ತ ಕೊಡುವ ಹೆಚ್ಚಿನ ರೈತರಿಗೆ ಈ ಕನಿಷ್ಟ ಬೆಲೆ ದೊರೆಯುತ್ತಲೇ ಇಲ್ಲವೆಂಬುದನ್ನು ಮರೆಯಬಾರದು. ಸಹಕಾರಿ ಸಂಘವೊಂದು ರೈತನಿಂದ ಧಾನ್ಯ ಖರೀದಿಸಲು ನಿರಾಕರಿಸಿದ ಘಟನೆಯೊಂದು ಮದ್ರಾಸು ರಾಜ್ಯದಿಂದ ವರದಿಯಾಗಿದೆ ಇಂತಹ ಒಂದಲ್ಲ ನೂರು ಪ್ರಸಂಗಗಳು ನಡೆಯುತ್ತಲೇ ಇರಬಹುದು.

ಜನಸಂಖ್ಯೆಯ ಹೆಚ್ಚಳವನ್ನು ತಡೆಯಲು ಮರಣಸಂಖ್ಯೆಯನ್ನು ಹೆಚ್ಚಿಸಬೇಕೆಂದು ಯಾರೂ ಹೇಳುವುದಿಲ್ಲ ಜನನ ಪ್ರಮಾಣವನ್ನು ಕಡಿಮೆ ಮಾಡುವುದೇ ಇದಕ್ಕಿರುವ ಉಪಾಯ ಮಿತಕುಟುಂಬ ಯೋಜನೆಯ ಪ್ರಚಾರ ಕಾರ್ಯವು ನಿರಂತರವಾಗಿ ಸಾಗುತ್ತಿರುವುದಾದರೂ ಇದು ಯಶಸ್ವಿಯಾಗಿ ನಡೆದಿಲ್ಲವೆಂದೇ ಹೇಳಬೇಕು. ಗರ್ಭಪಾತವನ್ನು ಕಾನೂನುಬದ್ಧಗೊಳಿಸುವ ಒಂದು ವಿಚಾರವೂ ಪರ್ಯಾಲೋಚನೆಯಲ್ಲಿರುವುದು ಕೇಳುತ್ತೇವೆ. ಇದರಿಂದ ಜನನ ನಿಯಂತ್ರಣವಾಗಬಹುದಾದರೂ ಅನೈತಿಕ ವ್ಯವಹಾರಗಳು ಹೆಚ್ಚಿ ಜನತೆಯ ನೈತಿಕ ಮಟ್ಟವು ಕೀಳಾಗಿಳಿಯುವ ಭೀತಿಯೂ ಇದೆ. ಕಾನೂನಿನ ಬಲದಿಂದ [illegible] ನುಮಂತನನ್ನು ತಹಬಂದಿಗೆ ತರುವುದು ಎಂದಿಗೂ ಅಪೇಕ್ಷಣೀಯವಲ್ಲ, ಜನತೆಯ ಸಂಯಮ ಶಕ್ತಿ ಹೆಚ್ಚಿಯೇ ಜನನ ನಿಯಂತ್ರಣವನ್ನು ಸ್ವೇಚ್ಛೆಯಿಂದ ತಡೆ ಹಿಡಿಯಬೇಕಲ್ಲದೆ ಒತ್ತಾಯದಿಂದ, ಬಲಾತ್ಕಾರದಿಂದ ಅಥವಾ ಅಪ್ರಾಕೃತಿಕ ವಿಧಾನಗಳಿಂದ ಇದನ್ನು ಸಾಧಿಸಬಹುದಾದರೂ ಇದರಿಂದ ಆಗುವ ದುಷ್ಪ್ರಯೋಜನಗಳು ಅತಿರೇಕ. ಅಲ್ಲದೆ, ಇದರಿಂದಲೇ ಆಹಾರ ಸಮಸ್ಯೆ ಪರಿಹಾರವಾಗುವುದೆಂದು ಎದೆತಟ್ಟಿ ಸಾರುವಂತೆಯೂ ಇಲ್ಲ

ರೈತನಿಗೆ ನೀಡುವ ಸೌಲಭ್ಯಗಳನ್ನು [illegible] ಮೇಲೆ ನೀಡಬೇಕು. ಕಸಿ, ಹಳ್ಳಿಗಳಲ್ಲಿ ಇರುವ ಗ್ರಾಮ ಸೇವಕರಿದ್ದಾರೆ, ಅವರ ಮೇಲ್ವಿಚಾರಕರಿದ್ದಾರೆ, ರೈತನಿಗೆ ಅಗತ್ಯವಾದ ವಿವರಗಳನ್ನು ನೀಡುತ್ತಿದ್ದಾರೆಯೇ? ಆತನಿಗೆ ಕೃಷಿಕಾರ್ಯದ ಉತ್ತಮ ವಿಧಾನವನ್ನನುಸರಿಸಲು ನೆರವಾಗುತ್ತಿದ್ದಾರೆಯೆ? ಪಂಚವಾರ್ಷಿಕ ಯೋಜನೆಯಲ್ಲಿ ಅವರಿಗೆ ದೊರೆಯುತ್ತಿರುವ ವಿವಿಧ ಸೌಲಭ್ಯಗಳ ಕಲ್ಪನೆಯನ್ನು ಅವರಲ್ಲಿ ಮೂಡಿಸುತ್ತಿದ್ದಾರೆಯೆ? ಆತನಿಗೆ ನೆರವಾಗುತ್ತಿದ್ದಾರೆಯೆ? [illegible] ವಾಗಿ ಹಿಂದಿನ ವರ್ಷದಂತೆ ಮುಂದುವರಿಯುತ್ತದೆ ತಹಸೀಲುದಾರರೂ ಹೀಗೆಯೇ ಮಾಡುತ್ತಾರೆ. ಇದೇ ಕಲ್ಪನಾ ಸಾಮ್ರಾಜ್ಯದ ಅಂಕೆ ಸಂಖ್ಯೆ ಮತ್ತೆ ವಾಸ್ತವಿಕತೆಯ ರೂಪವನ್ನು ಪಡೆಯುತ್ತದೆ ಹೀಗಾದಲ್ಲಿ ಏನು ಪ್ರಯೋಜನ? ಸರಕಾರೀ ನೌಕರರೆಲ್ಲ ತಾವು ಸಮಾಜದ ಸೇವಕರ,

(ಹದಿನಾರನೇ ಪುಟ ನೋಡಿರಿ)

ಯಕ್ಷಗಾನ ಮೂಲಕ ಕಲೆಗೆ ಪ್ರೋತ್ಸಾಹ

(ಆರನೇ ಪುಟದಿಂದ)

ರಾಗಿ ಶೋಭಿಸಿದವರು ಶ್ರೀ ನರಸಿಂಹ ದಾಸರು. ತೆಂಕು ಬಡಗು ಎಂಬ ಈ ಎರಡು ತಿಟ್ಟುಗಳಲ್ಲಿ ಲಯಬದ್ಧವಾಗಿ ಇಂಪಾಗಿ ಹಾಡಬಲ್ಲ ಇವರು ದಿನೇ ದಿನೇ ಪ್ರಗತಿಪರವಾಗಿ ಮುನ್ನಡೆಯುತ್ತಿರುವುದು ತುಂಬಾ ಸಂತೋಷಕರ ಹಾಡುಗಾರಿಕೆಯಲ್ಲಿ ಸಾಮಾನ್ಯವಾಗಿ ಎರಡು ವಿಧ, ಹಾಡು ಕೇಳ ಕೂತವರು ಹಾಡು ಕೇಳುತ್ತಲೇ ಮಲಗಿ ನಿದ್ರಿಸುವುದು ಒಂದು ವಿಧ! ಇನ್ನೊಂದು ನಿದ್ರೆ ಬಿಟ್ಟು ಕೇಳುತ್ತಿರುವುದು ಶ್ರೀಯುತ ನರಸಿಂಹದಾಸರ ಹಾಡುವಿಕೆಯಲ್ಲಿ ಹೊಸತೇ ಆದ ಮತ್ತೊಂದು ಕ್ರಮ, ನಿದ್ದೆ ಬಂದವನು ನಿದ್ದೆ ಬಿಟ್ಟು ಎದ್ದು ಕುಳಿತು ಆಸಕ್ತಿಯಿಂದ ಮೈಮರೆತು ಕೇಳುತ್ತಿರುವುದು!

ಮೃದಂಗ ವಾದಕರಾದ ಹಿರಿಯಡ್ಕ ಶ್ರೀ ಗೋಪಾಲರಾಯರು ನನ್ನ ಗೆಳೆಯರಲ್ಲೊಬ್ಬರು. ಭಾಗವತರು ಬಾಯಲ್ಲಿ ಹಾಡಿದುದನ್ನು ಅಷ್ಟೇ ಮೃದು ಮಧುರವಾಗಿ ಇವರು ಕೈಗಳಿಂದ ಮೃದಂಗದಲ್ಲಿ ನುಡಿಸುತ್ತಿದ್ದರು!

ಮೃದಂಗ ವಾದನಕ್ಕೇನಾದರೂ ರಾಷ್ಟ್ರ ಪ್ರಶಸ್ತಿಯೋ ಇನ್ನಾವ ಮನ್ನಣೆಯ ಮಣೆಯೋ ದೊರಕುವುದಿದ್ದರೆ, ಕಾಣುವವರ ಕೈವಾಡ ನಡೆಯದಿದ್ದಲ್ಲಿ, ಆ ಗೌರವ ಶ್ರೀಯುತ ಹಿರಿಯಡ್ಕ ಗೋಪಾಲರಾಯರಿಗೇ ದೊರಕುವುದು ಖಂಡಿತ.

ನವನಾಗರಿಕತೆಯು ತುತ್ತ ತುದಿಗೇರುತ್ತಿರುವ ಈ ಕಾಲದಲ್ಲಿ ಯಕ್ಷಗಾನ ಎಂದರೆ ತಿರಸ್ಕಾರದಿಂದ ಕಾಣುವವರ ಕಣ್ಣಿಗೆ ಅಂಜನವನ್ನು ಹಚ್ಚುವಂತಹ ಇಂತಹ ಕೂಟಗಳು ಅಲ್ಲಲ್ಲಿ ಆಗಾಗ ನೆರವೇರಿ, ಮಾನವನು ತನ್ನ ನೀತಿಯ ನೆಲೆಗಟ್ಟಲ್ಲೆ ನಿಂತು ಬಾಳಿ ಬದುಕುವಂತಾಗಲಿ, ಮನುಷ್ಯತ್ವವನ್ನು ಗಳಿಸಿ, ಉಳಿಸಿ, ಬೆಳೆಸಿ ಕೊಳ್ಳುವುದಕ್ಕೆ ಸಹಾಯವಾಗಲಿ, ಭಾರತೀಯ ಸಂಸ್ಕೃತಿಯು ತಿರುಳು ಬೆಳಗುವಂತಾಗಲಿ ಇಂತಹ ವಿದ್ವನ್ಮಣಿಗಳನ್ನು ಪಡೆದ ಯಕ್ಷಗಾನ ಕಲಾದೇವಿಯು ನಿಜವಾಗಿಯೂ ಧನ್ಯ, ಸನ್ಮಾನ್ಯೆ.

ಜೈ ಹಿಂದ್.

ಟೆಲಿಗ್ರಾಂ 'ಸುದರ್ಶನ' ಸ್ಥಾಪನೆ 1914 ಫೋನ್ ನಂಬ್ರ 428

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O P 34/1964

ಲೀಲಾರಾಮ ೧ ಕಾರ್ಕಳ K ದೇವರಾಯರ ಮಗ [illegible] ಶ್ರೀಮ ಚಿಂತಕರ ಆಜ್ಞೆ ಸೀತಾ—

ಅರ್ಜಿದಾರರು

ಈ ಮೂಲಕ ಕೋರ್ಟಿನ ಹುಕುಂ ಪ್ರಕಾರ ಸರ್ವ ಜನರಿಗೆ ತಿಳಿಸುವುದೇನೆಂದರೆ—

ಪ್ಯಾನರ ಅಜಿ ದಾರನ ತಂದೆ [illegible] ಕಪಟ್ಟ K ದೇವರಾಯರಿಗೆ ನೆಶನಲ್ ಸೇವಿಂಗ್ಸ್ ಸರ್ಟಿಫಿಕೇಟು ಮುಖಾಂತ್ರ ಬರತಕ್ಕ ರೂ 1000|- ಮತ್ತು ಅದರ ಬಡ್ಡಿ, ಬ್ಯಾಂಕಿನ S B ಲೆಕ್ಕದಲ್ಲಿರತಕ್ಕ ರೂ 128.00 ಮತ್ತು ಬಡ್ಡಿ, ಮತ್ತು ಮುಂಜೇಶ್ವರ ಶ್ರೀ ಮದನಂತೇಶ್ವರ ದೇವರ ಭಂಡಾರದಲ್ಲಿ ಜಮಾವಾಗಿ ಡಿಪೋಜಿಟ್ಟು ಇಟ್ಟ ರೂ 1000|- ಕೂಡಾ ಜುಮ್ಲಾ ರೂ 3628 00 ನ್ನು ಬರತಕ್ಕದ್ದರ ಕುರಿತು ಅಜಿದಾರರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ [illegible] ಮೇಲಂತ ಅರ್ಜಿಯು ತಾರೀಕು [illegible]—11—64 ಕ್ಕೆ ವಿಚಾರಣೆಗಿರುವುದರಿಂದ, ಆಕ್ಷೇಪಣೆ ಇದ್ದವರು [illegible] ಕೋರ್ಟಿನ ಮುಂದೆ ಹಾಜರಾಗಿ [illegible] ತಿಳಿಸಲಾಗಿದೆ

(Sd) C V Shastry
Advocate for Petitioner

ಪುತ್ತೂರು ತಾ 10–11 1964

ಚಿಕ್ಕ ಮಕ್ಕಳ ಶಾಲೆ

ಮಕ್ಕಳ ಸ್ಕೂಲ್ ಮನೇಲಲ್ವೇ?

ಬರೆದವರು: ಶ್ರೀ ಬ. ನ. ಸುಂದರ ರಾಯರು.

ಕರ್ಣಾಟಕ ಪ್ರಹಸನ ಪ್ರಪಿತಾಮಹ ಪಂಡಿತ ಮಂಡಲಾಗ್ರೇಸರ, ಚಂಡ ಪ್ರಚಂಡ, ಗುಂಡೂ ವಿಧವಾಭಿನಯ ವಿಶಾರದ ದಿ| ಟಿ. ಪಿ. ಕೈಲಾಸಂರವರು ಬರೆದಿರುವ 'ಟೊಳ್ಳುಗಟ್ಟಿ' ನಾಟಕವನ್ನು ಅನೇಕ ಮಂದಿ ನೋಡಿರಬಹುದು ಅಥವಾ ಓದಿರಬಹುದು. ಆ ನಾಟಕವನ್ನು ಓದಿದಾಗ ನಮಗೆ ಕಂಡುಬರುವ ಮುಖ್ಯಾಂಶವಿಷ್ಟೆ, 'ಟೊಳ್ಳು ತಂದೆಯ ಕೈಯಲ್ಲಿ ಬೆಳೆದ ಹುಡುಗ ಟೊಳ್ಳಾದ. ಗಟ್ಟಿ ತಾಯಿಯ ಕೈಯಲ್ಲಿ ಬೆಳೆದ ಮಗ ಗಟ್ಟಿಯಾದ'. ಅರ್ಥಾತ್ ತಾಯಿಯೇ ಪ್ರಥಮದಲ್ಲಿ ಶಿಕ್ಷಕಳು ಎಂದು ಹೇಳಿದ ಹಾಗಾಯಿತು. ಮನೆಯಲ್ಲಿ ತಾಯಂದಿರೇ ಶಿಕ್ಷಕರಾಗಬೇಕು. ಆಗದೆ ವಿಧಿಯಿಲ್ಲ, ಆಕೆ, ವಿದ್ಯಾವಂತೆಯಾಗಲಿ ಆಗದಿರಲಿ, ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ ಯಾವುದಾದರೊಂದು ನಡತೆಯನ್ನು ಕಲಿಸಿಯೇ ಕಲಿಸುತ್ತಾಳೆ. ಅದು ಒಳ್ಳೆಯದಾಗಿರಬಹುದು ಅಥವಾ ಕೆಟ್ಟದಾಗಿರಬಹುದು. ತಾಯಿ ವಿದ್ಯಾವತಿಯಾಗಿದ್ದು, ಒಳ್ಳೆಯ ನಡತೆವಂತಳಾದರೆ ಮಕ್ಕಳಿಗೂ ಒಳ್ಳೆಯ ನಡತೆ ಬಂದೇ ಬರುತ್ತದೆ. ಅದಕ್ಕೆ ವ್ಯತಿರಿಕ್ತವಾಗಿದ್ದರೆ ಮಕ್ಕಳೂ ದುರ್ನಡತೆಯಲ್ಲಿ ನಿರತರಾಗುತ್ತಾರೆ.

ಇದಕ್ಕೆ ನೂರಾರು ಉದಾಹರಣೆಗಳನ್ನು ಕೊಡಬಹುದು. ಉದಾಹರಣೆಗೆ ಮದುವೆಗೆ ಕನ್ಯೆಯನ್ನು ಆರಿಸುವಾಗ ವರನೋ ಅವನ ತಾಯಿ ತಂದೆಯರೋ ಆ ಕನ್ಯೆಯ ಬಗ್ಗೆ ಅನೇಕ ಪ್ರಶ್ನೆಗಳನ್ನು ಹಾಕಿ ತೃಪ್ತಿಕರವಾದ ಉತ್ತರಗಳು ಬಂದಲ್ಲಿ ಸಮಾಧಾನ ಹೊಂದುತ್ತಾರೆ. ತಾಯಿ ಎಂಥವಳು? ಹುಡುಗಿ ಎಂಥವಳು, ಎಲ್ಲಿ ಹೋಗುತ್ತಾಳೆ, ಬರುತ್ತಾಳೆ, ಯಾರ ಜತೆ ಸೇರುತ್ತಾಳೆ? ಅವಳ ಹವ್ಯಾಸಗಳೇನು, ಓದಿದವಳೆ ಅಲ್ಲವೆ? ಇತ್ಯಾದಿ ಪ್ರಶ್ನೆಗಳನ್ನು ಕೇಳುವುದು ಸರ್ವರಿಗೂ ತಿಳಿದ ಸಂಗತಿಯೇ ಆಗಿದೆ.

ಅಂದರೆ ತಾಯಿಯಲ್ಲಿ ಸುಗುಣಗಳಿದ್ದಲ್ಲಿ ಮಕ್ಕಳಿಗೂ ಆ ಗುಣಗಳು ತಾನಾಗಿಯೇ ಬರುತ್ತವೆ.

ಇದೇ ರೀತಿಯಾಗಿ ತಾಯಿಯಲ್ಲಿರುವ ಕೆಲವು ಗುಣಗಳನ್ನು ಗಂಡುಮಕ್ಕಳೂ ಪಡೆಯುತ್ತಾರೆ. ಬಾಲ್ಯಾವಸ್ಥೆಯಲ್ಲಿ ಗಂಡುಮಕ್ಕಳೂ ಹೆಣ್ಣು ಮಕ್ಕಳೊಡನೆ ಬೆರೆತು ಆಟಪಾಟಗಳನ್ನಾಡಿಕೊಂಡು ತಾಯಿ ತಂದೆಯರ ಅನುಕರಣ ಮಾಡುತ್ತವೆ. ಇಂಥ ಆಟಪಾಟಗಳನ್ನು ಯಾರು ತಾನೇ ನೋಡಿಲ್ಲ? "ಅಪ್ಪ ಅಮ್ಮ"ನ ಪಾತ್ರಗಳನ್ನು ವಹಿಸಿಕೊಂಡೇ ಅಡಿಗೆ ಮಾಡುವುದು, ಬಡಿಸುವುದು ಪಾಠಹೇಳಿಕೊಡುವುದು—ಇತ್ಯಾದಿ ವಿನೋದಕರವಾದ ಆಟಗಳನ್ನು ಆಡುತ್ತವೆ. ಈ ಎಲ್ಲ ಆಟಗಳಲ್ಲಿಯೂ ಅನುಕರಣ ಶಕ್ತಿಯೇ ನಾವು ಗಮನಿಸಬೇಕಾದ ಅಂಶ

ಮಕ್ಕಳು ಹೇರಳವಾಗಿ ಕಾಲ ಕಳೆಯುವುದು ಮನೆಯಲ್ಲಿ. ಆದ್ದರಿಂದ ತಾಯಿಯನ್ನೇ ಅವು ಹೆಚ್ಚಾಗಿ ಗಮನಿಸುತ್ತವೆ. ತಾಯಿಯಂತೆಯೇ ಅವು ರೂಢಿಗೊಳ್ಳುತ್ತವೆ. ಹೊತ್ತಿಗೆ ಸರಿಯಾಗಿ ಏಳುವುದು, ಮುಖ ತೊಳೆಯುವುದು, ಸ್ನಾನ ಮಾಡುವುದು, ಬಟ್ಟೆಹಾಕಿ ಕೊಳ್ಳುವುದು, ಶಿಸ್ತಿನಿಂದ ಓಡಿಯಾಡುವುದು.

ಶಾಲೆಗೆ ಸಮಯಕ್ಕೆ ಸರಿಯಾಗಿ ಹೋಗುವುದು, ಪುಸ್ತಕಗಳನ್ನು ಚೆನ್ನಾಗಿಟ್ಟುಕೊಳ್ಳುವುದು—ಇತ್ಯಾದಿ ಗುಣಗಳು ತಾಯಿ ವಿದ್ಯಾವತಿಯೂ ಸುಸಂಸ್ಕೃತಳೂ ಶ್ರೇಷ್ಠ ಗೃಹಿಣಿಯೂ ಆಗಿದ್ದಲ್ಲಿ ಸ್ವಭಾವತಃ ತಾಯಿಯಿಂದ ಲಭಿಸುತ್ತದೆ.

ತಂದೆಯಾದವನು ಸಾಮಾನ್ಯವಾಗಿ ಹೆಚ್ಚು ಕಾಲ ಮನೆಯಲ್ಲಿರುವುದಿಲ್ಲ. ಅವನು ಜೀವನೋಪಾಯಕ್ಕಾಗಿ ಹೊರಗಡೆ ಇರಬೇಕಾದುದು ಸಹಜವೇ ಅಲ್ಲವೇ? ಹೀಗಾಗಿ ಮಕ್ಕಳು ತಾಯಿಯಲ್ಲಿ ಅಪಾರ ಪ್ರೇಮವನ್ನಿಡುತ್ತವೆ

ತಮ್ಮ ಕಷ್ಟ ಸುಖಗಳನ್ನು ತಾಯಿಯಲ್ಲಿ ಆ ಮಕ್ಕಳು ತೋಡಿಕೊಳ್ಳುತ್ತವೆ. ಕೆಲವು ಸಂದರ್ಭಗಳಲ್ಲಿ ತಾಯಿ ಮಕ್ಕಳ ಪರವಾಗಿ ವಕೀಲಳಾಗಬೇಕಾಗುತ್ತದೆ. ಇಂಥ ಪ್ರಸಂಗಗಳನ್ನು ಪ್ರತಿಯೊಬ್ಬ ತಂದೆಯೂ ಬಲ್ಲನು. ಎಲ್ಲರ ಮನೆಯಲ್ಲಿಯೂ ಇದು ಸಾಧಾರಣವಾಗಿ ಕಾಣತಕ್ಕ ಸಂಗತಿಯೇ.

ಈ ಮಕ್ಕಳಲ್ಲಿ ನಾನಾ ವಿಧಗಳಿವೆ ಕೆಲವು ಚುರುಕು ಬುದ್ಧಿಯುಳ್ಳವು. ಕೆಲವು ತಾಯಿ ತಂದೆಗಳಿಗೇ ಬುದ್ಧಿ ಕಲಿಸುತ್ತವೆ. ಕೆಲವು ಹರಳೆಣ್ಣೆಯ ಹಾಗೆ ಜಡವಾಗಿ ಬಿದ್ದಿರುತ್ತವೆ. ಇನ್ನು ಕೆಲವು ಮನೆಗೆಲಸಗಳಲ್ಲಿಯೇ ನಿರತರಾಗಿ ಓದಿನಲ್ಲಿ ಮುಂದಾಗುವುದಿಲ್ಲ. ಮತ್ತೆ ಕೆಲವು ಓದಿನಲ್ಲಿ ಮುಂದಾಗಿ ಕೆಲಸಕ್ಕೇ ಸೋಮಾರಿಗಳಾಗುತ್ತವೆ ಹಿರಿಯ ಮಗ ಅಥವಾ ಹಿರಿಯ ಮಗಳು ಹೇಗಿದ್ದರೆ ಹಾಗೆ ಇತರ ಮಕ್ಕಳೂ ಆಗುತ್ತವೆ. ಆದ್ದರಿಂದಲೇ 'ಹಿರಿಯಕ್ಕನ ಚಾಳಿ ಮನೆಗೆಲ್ಲಾ' ಎಂಬ ಗಾದೆ ಹುಟ್ಟಿರುವುದು.

ಸುಪ್ರಸಿದ್ಧ ನಗೆಬರಹಗಾರರಾದ ಶ್ರೀ ನಾ. ಕಸ್ತೂರಿಯವರು ಬರೆದಿರುವ 'ಯದ್ವಾತದ್ವಾ' ಎಂಬ ಪುಸ್ತಕದಲ್ಲಿ ಕೆಲವು ಸ್ವಾರಸ್ಯವಾದ ಚಿತ್ರಗಳಿವೆ ಅವುಗಳಲ್ಲಿ ಒಂದು ಹೀಗಿದೆ— ಮೋಟಾರ್ ಹಾರನ್ ಶಬ್ದವನ್ನು ಕೇಳಿ ಒಂದು ಮಗು ಆ ಮೋಟಾರ್ ಮಾಲಿಕನ ಬಗ್ಗೆ ಎಲ್ಲ ವಿಚಾರಗಳನ್ನೂ ಹೇಳಬಲ್ಲುದು. ಹಾರನ್ ಜೋರಾಗಿದ್ದಾಗ ಆತನಿಗೆ ಹಣ ಬಂದಿದೆಯೆಂದೂ, ಹಾರನ್ ಸ್ವಲ್ಪ ಇಳಿಮುಖವಾದಾಗ ಆತನು ಸ್ವಲ್ಪ ಇಕ್ಕಟ್ಟಿಗೆ ಸಿಕ್ಕಿರುವನೆಂದೂ. ಇತ್ಯಾದಿಯಾಗಿ ಆ ಮಗುವೇ ಹೇಳಬಲ್ಲುದು. ಈಗಿನ ಮಕ್ಕಳು ಎಷ್ಟು ಜಾಣರಾಗಿದ್ದಾರೆಂಬುದನ್ನು ನಾವು ಇಲ್ಲಿ ಗಮನಿಸಬೇಕಾದ ವಿಷಯ.

ಇನ್ನೊಂದು ಕತೆ ಹೀಗಿದೆ— ಒಂದು ನಾಯಿಗೆ ಕಾಯಿಲೆ ಬಂದಾಗ ಅದನ್ನು ಅದರ ಯಜಮಾನ ಪಶುವೈದ್ಯಶಾಲೆಗೆ ಕರೆದುಕೊಂಡು ಹೋಗುತ್ತಾನೆ. ಅಲ್ಲಿ ಅದು ಗುಣಮುಖ ಹೊಂದಿದ ವೇಳೆ ಆ ನಾಯಿ ಇನ್ನೆರಡು ನಾಯಿಗಳನ್ನು ಪಶುವೈದ್ಯ ಶಾಲೆಗೆ ಕರೆದುಕೊಂಡು ಹೋಗುತ್ತದೆ. ಆ ಎರಡು ನಾಯಿಗಳು ಇನ್ನೆರಡು ನಾಯಿಗಳನ್ನೂ, ಆ ಇನ್ನೆರಡು ನಾಯಿಗಳು ಮತ್ತೆರಡು ನಾಯಿಗಳನ್ನೂ ಕರೆದುಕೊಂಡು ಹೋಗುತ್ತವೆ. ಹೀಗೆಯೇ ಕತೆಯನ್ನು ಹೇಳುತ್ತಿದ್ದರೆ ಆ ಪುಟ್ಟ ಮಗು ಈ ಕತೆಯನ್ನೂ ಮುಂದುವರಿಸುತ್ತದೆ, ಕತೆಯಲ್ಲಿ ಆ ನಾಯಿಗಳು ಪಶುವೈದ್ಯಶಾಲೆಯ ಡಾಕ್ಟರಿಗೆ ಬೇಸರ ಬರುವಂತೆ ಮಾಡುತ್ತವೆ. ಹೀಗೆ ಸಾಗಿದೆ ಆ ಕತೆ.

ಇದರಿಂದ ಮಕ್ಕಳು ಎಷ್ಟು ಚುರುಕಾಗಿರುತ್ತಾರೆಂಬುದನ್ನು ನಾವು ಮನಗಾಣಬಹುದು.

ಮನೆಯಲ್ಲಿ ತಾಯಿಯಾದವಳು ಪ್ರಥಮ ಗುರುವೆಂಬುದನ್ನು ಹಿಂದೆಯೇ ಹೇಳಿದೆಯಷ್ಟೆ. ಚಿಕ್ಕ ವಯಸ್ಸಿನಲ್ಲಿ ಆಕೆ ಹೇಳಿಕೊಟ್ಟದ್ದು ಶಾಶ್ವತವಾಗಿ ಉಳಿದಿರುತ್ತದೆಯಲ್ಲದೆ ಚಿಕ್ಕಂದಿನಲ್ಲಿ ಕಲಿತ ವಿದ್ಯೆಯೇ ಮುಂದೆ ನೆರವಾಗತಕ್ಕದ್ದು. ಬಾಲ್ಯದ ಮಹತ್ವ ಬಹಳ ಮುಖ್ಯವಾದದ್ದು. ಆ ಬಾಲ್ಯದಲ್ಲಿ ಮಕ್ಕಳು ಬಹಳ ಕಾಟ ಕೊಡುತ್ತವೆ. ಅಥವಾ ಬಹಳ ಚೇಷ್ಟೆ ಮಾಡುತ್ತವೆ. ಇದಕ್ಕಾಗಿ ಹಲವಾರು ಮಂದಿ ತಾಯಿ ತಂದೆಯರು ಮಕ್ಕಳನ್ನು ಮನೆಯಿಂದ ಹೊರಕ್ಕೆ ತಳ್ಳಲು ಯತ್ನಿಸುತ್ತಾರೆ ಹಾಗೆ ಹೊರಕ್ಕೆ ತಳ್ಳುವುದ ಎಂದರೆ ಶಾಲೆಗೆ ಕಳುಹಿಸುವುದು ಎಂದರ್ಥ. ವಿದ್ಯಾರ್ಜನೆಗಾಗಿ ಶಾಲೆಗೆ ಹೋಗಲಿ ಎನ್ನುವುದಿಲ್ಲ ಕೇವಲ ಮನೆಯಲ್ಲಿ ಗಲಾಟೆಯನ್ನು ಕಡಿಮೆ ಮಾಡಿಕೊಳ್ಳುವುದಕ್ಕಾಗಿ ಎಂಬುದು ಅವರ ಅಭಿಪ್ರಾಯ. 'ಮಕ್ಕಳ ಪಾಠಶಾಲೆಗಳು ದೇವಸ್ಥಾನಗಳಿಗೆ ಸಮ. ಜ್ಞಾನವೇ ಜೀವನದ ಜ್ಯೋತಿ ಹಾಗೂ ರಾಷ್ಟ್ರದ ದೀಪ' ಎಂಬುದು ಸಾಧು ವಾಸವಾನಿಯವರ ವಾದ. ಮಕ್ಕಳ ಜೀವನದಲ್ಲಿ ಮೊದಲು ಆರು ವರ್ಷಗಳು ಬಹಳ ಮಹತ್ವ ಪೂರಿತವಾದವು.

ಮಗುವಿನ ವಿದ್ಯೆ ಆರಂಭವಾಗುದೆಲ್ಲಿ–ಎಂದು ವಿಚಾರಿಸಿದರೆ ಅದು ತಾಯಿಯ ಗರ್ಭದಲ್ಲಿಯೇ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ ಭಕ್ತ ಪ್ರಹ್ಲಾದ, ಅಭಿಮನ್ಯು, ಭಗವಾನ್ ಬುದ್ಧ—ಇತ್ಯಾದಿ ಮಹಾ ಪುರುಷರ ಜೀವನ ಚರಿತ್ರೆಗಳೇ ಈ ಸಿದ್ಧಾಂತಕ್ಕೆ ಸಾಕ್ಷಿಗಳಾಗಿವೆ. ಜನನವಾದ ನಂತರ ತಾಯಿಯೇ ಮಗುವಿನ ಪ್ರಥಮ ಗುರುವಾಗುತ್ತಾಳೆ.

ಈ ಮಕ್ಕಳ ಶಿಕ್ಷಣದ ಬಗ್ಗೆ ಹಲವು ಮೂಢ ನಂಬಿಕೆಗಳು ಜನಜನಿತವಾಗಿವೆ. ಅವುಗಳಲ್ಲಿ ಮುಖ್ಯವಾದವು ಎಂದರೆ, ಕಾರ್ಖಾನೆ ಕೆಲಸಗಾರರ ಮಕ್ಕಳಿಗೆ ಮಾತ್ರ ಶಿಶುವಿಹಾರಗಳು ಬೇಕು ಎನ್ನುವುದು, ಮಕ್ಕಳನ್ನು ಮಾತನಾಡಿಸುವಾಗ ತೊದಲ್ನುಡಿಗಳಿಂದಲೇ ಮಾತನಾಡಿಸುವುದು, ಮಕ್ಕಳಿಗೆ ಭಯವನ್ನು ಹುಟ್ಟಿಸುವ ರೀತಿಯಲ್ಲಿ ಗೊಗ್ಗಯ್ಯ ಎಂದು ಮುಂತಾಗಿ ಹೇಳಿ ಹೆದರಿಸುವುದು— ಇತ್ಯಾದಿ ವಿಷಯಗಳು. ಗಮನಾರ್ಹವಾಗಿವೆ. ಈ ವಿಧವಾದ ದೋಷಗಳು ಪರಿಹಾರವಾಗಬೇಕು. ಮಕ್ಕಳಿಗೆ ನಾವು ಸರಿಯಾದ ದಾರಿಯನ್ನು ತೋರಿಸಿಕೊಡಬೇಕು. ಕೆಲವು ತಾಯಿತಂದೆಯರು ಮಕ್ಕಳನ್ನು ಆಡುವುದಕ್ಕೆ ಬಿಡುವುದಿಲ್ಲ. ಕಾರಣವೇನೆಂದರೆ ಬಟ್ಟೆಗಳು ಕೊಳೆಯಾಗುತ್ತವೆ ಎಂದು. ಬಟ್ಟೆಗಳು ನಾಜೂಕಾಗಿರಬೇಕೆಂದು ಆಟವನ್ನೇ ತ್ಯಜಿಸಿಬಿಟ್ಟರೆ ಮಕ್ಕಳಿಗೆ ಸಂತೋಷ ಸಮಾಧಾನಗಳು ಹೇಗೆ ಬರಬೇಕು? ಆಗ ನಾವು ತಮಗೆ ತಿಳಿಯದಂತೆಯೇ ಅಳುವಿನ ಮಕ್ಕಳು ಆಗುತ್ತವೆ. ಕೆಲವು ಮಕ್ಕಳು ಕಳ್ಳ ಪೋಲೀಸ್ ಆಟ, ರೈಲಾಟ, ಅಂಗಡಿ ಆಟ— ಇತ್ಯಾದಿಗಳನ್ನು ಆಡುತ್ತವೆ ಆಗ ಹಿರಿಯರಾದವರು ಆಟ ಪಾಟಗಳನ್ನು ನೋಡಿ. ನಲಿಯಬೇಕೇ ವಿನಾ ಮಕ್ಕಳನ್ನು ಬೈದು ತೇಜೋವಧೆ ಮಾಡಬಾರದು. ಮಕ್ಕಳಿಗೆ ನಾವು ಸ್ವಾವಲಂಬನ ಶಕ್ತಿಯನ್ನು ಕಲಿಸಿಕೊಡಬೇಕು. ಅವರ ಪುಸ್ತಕಗಳನ್ನು ಅವರೇ ತೆಗೆದಿಡುವುದು, ಅವರ ಊಟದ ತಟ್ಟೆಗಳನ್ನು ಅವರೇ ತೊಳೆಯುವುದು, ಅವರ ಬಟ್ಟೆಗಳನ್ನು ಅವರೇ ಧರಿಸಿಕೊಳ್ಳುವುದು— ಇತ್ಯಾದಿ ವಿಷಯಗಳಲ್ಲಿ ಹಿರಿಯರು ಮಾರ್ಗದರ್ಶಕರಾಗಿ ಸಾಧ್ಯವಾದಷ್ಟನ್ನೂ ಮಕ್ಕಳಿಂದಲೇ ಮಾಡಿಸಬೇಕು ಹೀಗೆ ಮಾಡುವುದರಿಂದ ಮಕ್ಕಳಲ್ಲಿ ಸ್ವಾವಲಂಬನ ಶಕ್ತಿ ತಾನಾಗಿ ಮೂಡುತ್ತದೆ.

ಮಕ್ಕಳೇನಾದರೂ ಪ್ರಶ್ನೆಗಳನ್ನು ಹಾಕಿದಲ್ಲಿ ನಾವು ಸಮಾಧಾನದಿಂದ ಉತ್ತರ ಕೊಡಬೇಕು. ಆ ಪ್ರಶ್ನೆಗಳು ಸ್ವಾರಸ್ಯವಾಗಿರಬಹುದು, ಅಥವಾ ವಿಚಿತ್ರವಾಗಿರಬಹುದು ಅಥವಾ ಬಹು ಕಠಿಣವಾಗಿರಬಹುದು; ಆಗಲೂ ನಾವು ಅವರಿಗೆ ಅರ್ಥವಾಗುವಂತೆ ವಿವರಿಸಿ ಸಮಾಧಾನ ಮಾಡಬೇಕೇ ಹೊರತು ಅವರನ್ನು ಗದರಿಸುವುದಾಗಲೀ, ಅವಹೇಳನ ಮಾಡುವುದಾಗಲೀ ಮಾಡಬಾರದು. ಸಾಮಾನ್ಯವಾಗಿ ಮೇಲೆ ಹೇಳಿದ ವಿಷಯಗಳೆಲ್ಲವೂ ತಾಯಿ ತಂದೆಗಳಿಗೇ ಹೆಚ್ಚಾಗಿ ಅನ್ವಯಿಸುತ್ತವೆ. ಆದ್ದರಿಂದಲೇ 'ಮಕ್ಕಳ ಶಾಲೆ ಮನೇಲಲ್ವೆ' ಎಂದು ದಿ| ಕೈಲಾಸಂ ಹೇಳಿರುವುದು.

ಮಕ್ಕಳ ಮಾತು ಎನ್ನುವುದು ಮಕ್ಕಳ ಸ್ತುತಿ ಮಾಡುವುದೊಂದೇ ಸಾಲದು. ಅವುಗಳ ಸಂಗಡ ಸ್ವಲ್ಪ ಹೊತ್ತು ನಲಿದಾಡಿದರೆ ಸಾಕು, ನಮ್ಮ ಆಯಾಸವೆಲ್ಲವೂ ಪರಿಹಾರವಾಗುತ್ತದೆ. ಅವುಗಳೊಡನೆ ತಿರುಗಾಡಲು ಹೋದರೆ ಎಷ್ಟೋ ಆನಂದವಾಗುತ್ತದೆ

ಒಟ್ಟಿನಲ್ಲಿ 'ಮಕ್ಕಳ ಶಾಲೆ ಮನೇಲಲ್ವೇ?' ಎನ್ನುವುದು ಸತ್ಯವಾದ ಮಾತು. ಇದರಲ್ಲಿ ಯಾವ ಸಂದೇಹವೂ ಇಲ್ಲ.



ನಿಮಗೂ ಗೊತ್ತಿರಲಿ

ಅಲ್ಲಿ ಕ್ರೀಡೆಗಳಿಗೆ ಮಹತ್ವವಿಲ್ಲ

ಜನಭರಿತವಾದ ಟೋಕಿಯೋ ನಗರವು ಇತ್ತೀಚೆಗೆ ಹದಿನೆಂಟನೆಯ ಒಲಂಪಿಕ್ ಪಂದ್ಯಗಳ ಕೇಂದ್ರವಾಗಿತ್ತು. ಐದು ಉಂಗುರಗಳೂ ಒಲಂಪಿಕ್ ಧ್ವಜ ವಿಶಾಲವಾದ ಕ್ರೀಡಾಂಗಣದ ಮೇಲೆ ವಿಜೃಂಭಿಸುತ್ತಿತ್ತು. ವಿಶ್ವದ ನೂರಾರು ರಾಷ್ಟ್ರಗಳಿಂದ ಸಹಸ್ರಾರು ಜನ ಕ್ರೀಡಾಪಟುಗಳು—ರಾಷ್ಟ್ರಗಳ ನಡುವಣ ವೈರವನ್ನೂ—ಮತ್ಸರವನ್ನೂ ಮರೆತು ಧ್ವಜದ ಅಡಿಯಲ್ಲಿ ಕ್ರೀಡೆಗಳ ವಿಜಯ ದುಂದುಭಿ ಮೊಳಗಿಸಲು ಸೇರಿದ್ದರು.

ಜಪಾನಿನಿಂದ ಸ್ವಲ್ಪದೂರ—ಸಾಗರದಾಚೆ ಇರುವ ಒಂದು ದೇಶದಲ್ಲಿ ಕ್ರೀಡೆಗಳಿಗೆ ಒಂದು ವಿಶಿಷ್ಟ ಉದ್ದೇಶವಿದೆ. ಕ್ರೀಡಾ ನೈಪುಣ್ಯಕ್ಕೆ ವಿಶಿಷ್ಟ ಅರ್ಥವಿದೆ. ಚೀಣಾದಲ್ಲಿ ಕ್ರೀಡೆಗಳು ಕ್ರಾಂತಿಯ ಗುರಿ ತಲುಪುವ ಸಾಧನ ಮಾತ್ರ. ಕ್ರೀಡೆಗಳಲ್ಲಿ ರಾಜಕೀಯ ಹೆಚ್ಚಿದಷ್ಟೂ ರಾಜನೈತಿಕ ಪ್ರಗತಿ ಎಂದೂ ಪೀಕಿಂಗ್ ಆಡಳಿತಾಧಿಕಾರಿಗಳು ಭಾವಿಸಿದ್ದಾರೆ.

"ಕ್ರೀಡೆಗಳಿಗಾಗಿಯೇ ಕ್ರೀಡೆ" ಎಂಬ ನಾಣ್ಣುಡಿಯು ಚೀಣಾದಲ್ಲಿ ಅರ್ಥಹೀನವಾಗಿದೆ. ಮಿ| ಶುಫು ಅವರು ೧೯೬೪ರ ಎಪ್ರಿಲ್ ೭ರಂದು "ಪೀಕಿಂಗ್ ರೆವ್ಯೂ" ಪತ್ರಿಕೆಯಲ್ಲಿ ಬರೆದ ಲೇಖನವು ಈ ಸಂಗತಿಯನ್ನು ಇನ್ನಷ್ಟು ದೃಢೀಕರಿಸುತ್ತದೆ. ಅವರು ತಮ್ಮ ಲೇಖನದಲ್ಲಿ "ಚೀಣೀ ಅಧಿಕಾರಿಗಳು ಜನತೆಯ ದೇಹದ ಸ್ಥಿತಿ-ಗತಿಗಳನ್ನು ಉತ್ತಮಗೊಳಿಸಲು ವ್ಯಾಯಾಮ ಕ್ರೀಡೆಗಳ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸುತ್ತಿದ್ದಾರೆ. ಸಮಾಜವಾದೀ ನಿರ್ಮಾಣ ಕಾರ್ಯದಲ್ಲಿ ಅವರು ಪ್ರಧಾನ ಪಾತ್ರ ನಿರ್ವಹಿಸಲೆಂಬುದೇ ಈ ಕ್ರಮದ ಉದ್ದೇಶವಾಗಿದೆ" ಎಂದೂ ಅಭಿಪ್ರಾಯಪಟ್ಟಿದ್ದಾರೆ.

೧೯೫೦ರನ್ನು ಹಿಡಿಯೇ ಚೀಣಾ ಸರಕಾರವು ಕ್ರೀಡೆಗಳ ಸಂಬಂಧವಾದ ಕಾರ್ಯನೀತಿಯನ್ನು ಪ್ರಕಟಿಸಿತು. "ಮಹಾ ಮುನ್ನೆಗೆತ" ಯೋಜನೆಯು ಕಾರ್ಮಿಕರು ಆರೋಗ್ಯ ಸಂಬಂಧವಾಗಿ ಮಂಡಿಸುವ ಬೇಡಿಕೆಗಳನ್ನು ಗಮನಿಸಿ ಸಾಮೂಹಿಕ ಕ್ರೀಡಾ ಕಾರ್ಯಚಟುವಟಿಕೆಗಳನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ ಎಂದೂ ಪ್ರಕಟಣೆಯಲ್ಲಿ ಹೇಳಲಾಗಿತ್ತು. ದೇಶದಲ್ಲಿ ಸಮಾಜವಾದೀ ವ್ಯವಸ್ಥೆಗಾಗಿ, ಹೊರದೇಶಗಳಲ್ಲಿ ವಿಧ್ವಂಸಕ ಕಾರ್ಯಗಳಿಗಾಗಿ ಚೀಣೀಯರನ್ನು ಸಜ್ಜುಗೊಳಿಸುವುದೇ ಪೀಕಿಂಗ್ ಸರಕಾರದ ಏಕಮೇವ ಗುರಿಯಾಗಿದೆ.

ಚೀಣಾದ ವ್ಯಾಯಾಮ, ಸಂಸ್ಕೃತಿ ಮತ್ತು ಕ್ರೀಡೆಗಳ ಸಂಬಂಧವಾದ ಆಯೋಗವು ತೀರ ಇತ್ತೀಚೆಗೆ ಅಂದರೆ ೧೯೬೪ ಜುಲೈ ೨೫ರಂದು ಕ್ರೀಡೆಗಳ ಸಂಬಂಧವಾಗಿ ಹೊಸ ಸಲಹೆ ನೀಡಿದೆ. ಈಜುಗಾರಿಕೆ, ಸಿಗ್ನಲ್ ಕಮ್ಯೂನಿಕೇಶನ್ ಗುಂಡು ಹೊಡೆಯುವುದು ಪರ್ವತಾರೋಹಣ ಇವೇ ಮೊದಲಾದ ಕಾರ್ಯ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಧಾನ್ಯ ನೀಡಬೇಕೆಂದೂ ಅದು ಸೂಚಿಸಿದೆ. "ಪೀಪಲ್ಸ್ ಡೇಲಿ" ಪತ್ರಿಕೆಯು ಆಯೋಗದ ಶಿಫಾರಸನ್ನು ಸ್ವಾಗತಿಸುತ್ತ "ದೇಶಪ್ರೇಮಿ ತ್ಯಾಗ ಸ್ವೀಕರಾಗಲು ಇದೊಂದು ಅತ್ಯುತ್ತಮ ವಿಧಾನ"ವೆಂದೂ ಹೇಳಿದೆ

ಚೀಣಾದಲ್ಲಿ ರಾಜಕೀಯವು ಕ್ರೀಡೆಗಳ ಮೇಲೆ ಗಹನವಾದ ಪ್ರಭಾವ ಬೀರಿದೆ ಚೀಣಾದ ಪತ್ರಿಕೆಗಳಲ್ಲಿನ ಕ್ರೀಡೆಗಳ ಸಂಬಂಧವಾದ ವರದಿಗಳು ಅನೇಕ ಸಲ ರಾಜಕೀಯ ವಿವರಣೆಗಳಂತೆ ಕಂಡುಬರುತ್ತವೆ. ಪೀಕಿಂಗ್ ರೆವ್ಯೂ ಪತ್ರಿಕೆಯು ೧೯೬೦ರಲ್ಲಿ ಚೀಣಾಕ್ಕೆ ಸೋವಿಯತ್ ರಷ್ಯಾದ ವಾಲಿಬಾಲ್ ತಂಡವು ಭೆಟಿನೀಡಿದಾಗ ಪ್ರಕಟಿಸಿದ ವರದಿಯೂ ಬಹುಮಟ್ಟಿಗೆ ಇಂತಹುದೇ ಆಗಿದೆ

ಚೀಣೀಯರ ಟೇಬಲ್ ಟೆನಿಸ್ ತಂಡವು ವಿದೇಶಿ ಕ್ರೀಡೆಗಳಲ್ಲಿ ಜಯಗಳಿಸಿದಾಗ 'ಪೀಕಿಂಗ್‌ಡೇಲಿ' ಪತ್ರಿಕೆಯು ಚೀಣೀ ಕ್ರೀಡಾ ಪಟುಗಳನ್ನು ಅಭಿನಂದಿಸುತ್ತಾ "ಸಂಕಷ್ಟಗಳನ್ನು 'ಗತ್ತುಗಾರಿಕೆಯಿಂದ' ಎದುರಿಸುವ ತತ್ವವನ್ನು ಚೆನ್ನಾಗಿ ಅರಿತುಕೊಂಡ ಅವರು ತಮ್ಮ 'ವೈರಿಗಳನ್ನು' ದೃಢ ವಿಶ್ವಾಸದಿಂದಲೂ ಧೈರ್ಯದಿಂದಲೂ ಎದುರಿಸಿದರು" - ಎಂದೂ ಪ್ರಕಟಿಸಿತು. ವೈರಿಗಳನ್ನು ಗತ್ತುಗಾರಿಕೆಯಿಂದ ಎದುರಿಸು ಇವೇ ಮೊದಲಾದ ಪದಗಳನ್ನು ಮಾವೋ ಅವರ ಗ್ರಂಥದಿಂದ ಎತ್ತಿಕೊಳ್ಳಲಾಗಿದೆ.

೧೯೬೦ರ ೫ನೇ ತಿಂಗಳಲ್ಲಿ ಚೀಣೀ ಪರ್ವತಾರೋಹಿಗಳ ತಂಡವು ಎವರೆಸ್ಟ್ ಶಿಖರವನ್ನು ಏರಿತು. ಚೀಣೀ ಅಧಿಕಾರಿಗಳು ಈ ಸುದ್ದಿಯನ್ನು ಪ್ರಕಟಿಸುತ್ತಾ ಪರ್ವತಾರೋಹಣ ತಂಡದಲ್ಲಿನ ಆರು ಜನ ಚೀಣೀಯರ ಪೈಕಿ ಐವರು ಆಡಳಿತ ಪಕ್ಷದವರೂ ಉಳಿದವರು ಈ ಹಿಂದೆ ಜೀತದಾಳುಗಳಾಗಿದ್ದರೆಂದೂ ತಿಳಿಸಿದರು.

ಚೀಣೀ ಆಡಳಿತಗಾರರು ಕ್ರೀಡೆಗಳ ವಿಷಯದಲ್ಲಿ ಅನುಸರಿಸುತ್ತಿರುವ ಕಾರ್ಯನೀತಿಯ ಉದ್ದೇಶವನ್ನು ಅವರ ರಾಜಕೀಯ ಉದ್ದೇಶಕ್ಕಿಂತ ಯಾವುದೇ ರೀತಿಯಲ್ಲಿ ಭಿನ್ನವಾಗಿಲ್ಲ. ವಿಶ್ವದ ಎಲ್ಲ ರಾಷ್ಟ್ರಗಳ ಕ್ರೀಡಾಪಟುಗಳು ಸಮಾನ ತಳಹದಿಯ ಮೇಲೆ ಭಾಗವಹಿಸುವ ಅಂತಾರಾಷ್ಟ್ರೀಯ ಕ್ರೀಡೆಗಳನ್ನು ರಾಜಕೀಯ ಉದ್ದೇಶದ ಸಾಧನಗಳನ್ನಾಗಿ ಬಳಸಿಕೊಂಡರೆ ಅವುಗಳ ಅಸ್ತಿತ್ವಕ್ಕೆ ಭಂಗ ಬರುವುದೆಂದೂ ಅಂತಾರಾಷ್ಟ್ರೀಯ ಒಲಂಪಿಕ್ ಕಾರ್ಯಕಾರಿ ಸಮಿತಿಯು ಕಳೆದ ವರ್ಷ ಸ್ವೀಕರಿಸಿದ ಗೊತ್ತುವಳಿಯಲ್ಲಿ ಹೇಳಲಾಗಿದೆ. ಚೀಣೀಯರ ವಿಚಾರಧಾರೆಯಲ್ಲಿ ಇಂಥ ವಿಚಾರಗಳಿಗೆ ಸ್ಥಾನವಿಲ್ಲ.

ವಿಶ್ವ ಕ್ರೀಡಾ ಮಹೋತ್ಸವ, ಚೀಣಕ್ಕೆ ವಿದೇಶೀ ಅತಿಥಿಗಳ ಭೇಟಿ, ಮತ್ತು ಚೀಣೀಯರು ಹೊರದೇಶಗಳಿಗೆ ಭೇಟಿ ನೀಡುವ ಪ್ರಸಂಗಗಳನ್ನು ಪೀಕಿಂಗ್ ಆಡಳಿತಗಾರರು ಸದವಕಾಶಗಳೆಂದೂ ಭಾವಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಅವರು ರಾಷ್ಟ್ರರಾಷ್ಟ್ರಗಳ ನಡುವೆ ಭೇದ ಕಲ್ಪಿಸಿ ಪೀಕಿಂಗ್‌ನ ತತ್ವ ಪ್ರಚಾರ ಕೈಗೊಳ್ಳುತ್ತಾರೆ.

ಬ್ರೆಜಿಲ್ ಕ್ರೀಡಾಪಟುಗಳ ತಂಡವೊಂದು ಇತ್ತೀಚೆಗೆ ಚೀಣಾಕ್ಕೆ ಭೇಟಿ ನೀಡಿತು. ಕ್ರೀಡೆಗಳ ಹೆಸರಿನಲ್ಲಿ ಪೀಕಿಂಗ್ ನಡೆಯುತ್ತಿರುವ ಕುಹಕ ಕೃತ್ಯಗಳು ಆಗ ನಷ್ಟವಾಗಿ ಬೆಳಕಿಗೆ ಬಂದವು.

ತಂಡದ ಸದಸ್ಯರು ೧೯೬೪ ಮೇ ೨೬ರಂದು ಹಾಂಗ್‌ಕಾಂಗ್‌ನ ಪತ್ರಿಕೆಯೊಂದಕ್ಕೆ ಸಂದರ್ಶನ ನೀಡಿದರು. ತಮ್ಮ ಚೀಣಾ ಭೇಟಿಯ ಬಗ್ಗೆ ಪ್ರಸ್ತಾಪಿಸುತ್ತಾ ಚೀನೀ ನಾಯಕರು, ತಮ್ಮ ಕೈ ಕುಲುಕಿದ ಕ್ಷಣದಿಂದಲೇ ಬ್ರೆಜಿಲ್‌ನಲ್ಲಿ ಬಂಧಿತರಾದ ಚೀಣೀ ಗೂಢಚಾರರ ಬಗೆಗೆ ತೊಡಗಿದರೆಂದು ಹೇಳಿದರು.

ಎಡೆಬಿಡದೆ ಅವರು ರಾಜಕೀಯ ಪ್ರಶ್ನೆಗಳನ್ನು ಕೇಳತೊಡಗಿದಾಗ ತಂಡದ ಮುಂದಾಳುಗಳು ಈಬಗೆಯ ಪ್ರಶ್ನೆಗಳನ್ನು ನಿಲ್ಲಿಸದಿದ್ದರೆ ತಮ್ಮ ತಂಡದ ಪ್ರವಾಸವನ್ನು ರದ್ದುಗೊಳಿಸುವುದಾಗಿ ಬೆದರಿಕೆ ಹಾಕಬೇಕಾಯಿತೆಂದೂ ಸದಸ್ಯರೊಬ್ಬರು ತಿಳಿಸಿದರು.

ಅಂತರಾಷ್ಟ್ರೀಯ ಕ್ರೀಡಾ ಸಂಸ್ಥೆಗಳಲ್ಲಿ ಒಡಕು ಹುಟ್ಟಿಸುವ ಕೆಲಸವನ್ನು ಚೀಣೀಯರು ಅವಿರತವಾಗಿ ನಡೆಸಿದ್ದಾರೆ. ಚೀಣಾ ಕ್ರೀಡೆಗಳ ವಿಷಯದಲ್ಲಿ ಅನುಸರಿಸುತ್ತಿರುವ ಕುಹಕ ನೀತಿಯು ಅವರು ಹೇಳಿಕೊಳ್ಳುವಷ್ಟು ಪರಿಣಾಮಕಾರಿಯಾಗಿಲ್ಲ. ಚೀಣೀಯರ ದೃಷ್ಟಿಯಲ್ಲಿ ಕ್ರೀಡೆಗಳಿಗೆ ಯಾವ ಮಹತ್ವವೂ ಇಲ್ಲ.

ಸಂಬಳದ ದಿನ

(ನಾಲ್ಕನೇ ಪುಟದಿಂದ)

ಗುವುದಿಲ್ಲ" ಎಂದು ಬರೆಯದೆ ಇದ್ದರೆ ಅವರು ಕತ್ತು ಉದ್ದ ಮಾಡಿಕೊಂಡು ಕುಳಿತಾರು ಎಂಬ ಹೆದರಿಕೆಯಿಂದ ಏನಾದರೂ ಗೀಚಿ ಹಾಕುವುದು ಬೇಡವೇ. ಇಷ್ಟಕ್ಕೇ ಐದು ರೂಪಾಯಿ ಖರ್ಚು ಮಾಡುತ್ತೇನೆ...."

"ಸರಿ, ನೂರ ಎಂಬತ್ತೊಂದು, ನೂರ ಹತ್ತೂ ಕಾಲು ಆಯ್ತು."

"ಇನ್ನೆಂಥದು ಉಳಿಯಿತು ಮಣ್ಣು ಅಲ್ಲ. ಆ ಮೇಲೆ ಉಳಿದ ಏಳೆಂಟು ರೂಪಾಯಿ ಚಿಲ್ಲರೆ ಅದು ಇದು ಅಂತ ಹಾಳಾಗಿ ಹೋಗುತ್ತೆ. ನನಗೊಬ್ಬನಿಗೇ ಇಷ್ಟು ಖರ್ಚು ಆಗುತ್ತಿರುವಾಗ ಮುಂದೆ ಬಾಳುವುದಾದರೂ ಹೇಗೆ ಅಂತ ನನಗೆ ಗೊತ್ತಾಗೋಲ್ಲಪ್ಪ ಅದೆಲ್ಲಾ. ಇರಲಿ, ನಿನ್ನ ಕೈಯಲ್ಲಿ ಏನಾದರೂ ಇದ್ದರೆ ಒಂದು ಇಪ್ಪತ್ತೈದು ರೂಪಾಯಿ ಕೊಟ್ಟಿರು. ನಾಳೆ ಸಂಬಳ ಬಂದೊಡನೆಯೇ ಕೊಡುತ್ತೇನೆ."

ಶಂಕರನ ಆ ಸಂಬಳದ ದಿನ ಇನ್ನೂ ಬರಲಿಲ್ಲವೆಂದು ಕಾಣಿಸುತ್ತೆ. ಆ ಇಪ್ಪತ್ತೈದು ರೂಪಾಯಿ ಆರು ತಿಂಗಳು ಕಳೆದರೂ ಇನ್ನೂ ಬಂದಿಲ್ಲ ಈಚೆಗೆ ಶಂಕರನ ಸುಳಿವೂ ಕಣ್ಣಿಗೆ ಬೀಳಲಿಲ್ಲ—ಎಲ್ಲಿಗೆ ಹೋದನೋ ಏನಾದನೋ?

ಮುರುಕು ದೇಗುಲ

೧

ಕಗ್ಗಲ್ಲಿನ ಶಿರದಲಿಹುದು
ಶಿವದೇಗುಲ ನೋಟ
ಬೆಂದೊಡಲಿನ ಕಂಗಳಿಗಿದು
ಚಿರ ದುಃಖದ ಊಟ!

೨

ಶಿರ ಕೆಡೆದಿಹ ಗುಡಿಗೋಪುರ
ಎತ್ತಣ ಆಧಾರ?
ಶಿವಲಿಂಗದ ಸಾನ್ನಿಧ್ಯದಿ
ಹಾವಿನ ಸಂಚಾರ!

೩

ಧೂಪಾರತಿ ದೀಪಂಗಳು
ನೈವೇದ್ಯಗಳಿಲ್ಲ!
ಆ ವೇದದ ಸಂಮಂತ್ರದ
ಸುಸ್ವರವಿಂದಿಲ್ಲ!

೪

ಉರಿಬಿಸಿಲಲಿ ಸುರಿಮಳೆಯಲಿ
ಶಿರವೊಡ್ಡಿದ ಶಿವನೆ!
ಓ ಭಯಹರ ಗಂಗಾಧರ
ಪೊರೆ ಕರುಣಾಕರನೆ!

೫

ಗತಕಾಲದ ವಿಭವಂಗಳು
ಸವಿನೆನಪಿನ ಊಟ!
ಗಿರಿಜಾ ಪತಿ ಮಂದಿರದಲಿ
ಉರಗಾವಳಿ ಬೇಟ!

೬

ಮುಳ್ಳಿನ ಗಿಡ ಕದ ಕಾಯ್ದಿದೆ
ಸುತ್ತಲು ವೈಚಾಚಿ!
ಬಳ್ಳಿ ನಿಕರ ಶಿರವೆತ್ತಿದೆ
ಶಿವಲಿಂಗವ ಬಾಚಿ!

೭

ಕಾದಿರುವನು ಬಾಗಿಲ ಬಳಿ
ಶಿವವಾಹನ ನಂದಿ!
ಹುಲುಹುಳುಗಳ ಜಾಲಕದಲಿ
ಶಿವಲಿಂಗವು ಬಂಧಿ!

೮

ಗತವಿಭವದ ಸಿರಿನೋಟಕೆ
ಈಗಿದು ಬರಿ ಕೊರಗು!
ನಂದಿದೆ ನಂದಾದೀಪಿಕೆ
ಸುತ್ತಲು ಕರಿ ಸೆರಗು!

—ಯು. ನಾರಾಯಣ ಸೇರಿಗಾರ;
ಉದ್ಯಾವರ

(ಉಡುಪಿಯ ಸಮೀಪವಿರುವ ಉದ್ಯಾವರದ ಶಂಭುಕಲ್ಲಿನ ಮೇಲೆ ಗುಡಿಗೋಪುರಗಳನ್ನು ಕಳೆದುಕೊಂಡು ದುರ್ಗತಿಗೊಳಗಾದ ಶಿವಾಲಯವೊಂದನ್ನು ಕಂಡು)

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦



ನಮ್ಮ - ನಮ್ಮವರು

ಡಾ| ಕೆ. ಎಲ್. ಶ್ರೀಮಾಲಿ.

ಹೆತ್ತವರಿಂದ ಕ್ಯಾಪಿಟೇಶನ್ ಫೀ ಪಡೆದು, ತಾಂತ್ರಿಕ ಕಾಲೇಜುಗಳನ್ನು ತೆರೆದು ಅವರ ಮಕ್ಕಳಿಗೆ ಅಂತಹ ಕಾಲೇಜುಗಳಲ್ಲಿ ಸೀಟು ಕೊಡುವ ಕ್ರಮದ ಕುರಿತು ಕೆಲವು ವರ್ಷಗಳಿಂದ ವಾದ ವಿವಾದ ನಡೆಯುತ್ತಾ ಇದೆ. ಇದರಿಂದ ಸೀಟುಗಳ ಕಾಳಸಂತೆ ನಡೆದು, ಶ್ರೀಮಂತರ ಮಕ್ಕಳಿಗೆ ಮಾತ್ರ ಅವಕಾಶ ದೊರೆಯುತ್ತದೆ ಎಂಬ ವಾದ ಒಂದು ಕಡೆಯದು. ಎಲ್ಲರಿಗೂ ಸಮಾನಾವಕಾಶವುಳ್ಳ ನಮ್ಮ ಪ್ರಜಾರಾಜ್ಯದಲ್ಲಿ ಈ ರೀತಿ ದುಡ್ಡು ಪಡೆದು ಸೀಟು ಕೊಡುವುದು ತಪ್ಪು ಎಂದು ಕೆಲವರು ಹೇಳಿದ್ದುಂಟು.

ಮಣಿಪಾಲದ ಎಕೆಡೆಮಿಯ ಸಂಸ್ಥೆಗಳನ್ನು ಕುರಿತೇ ಈ ಟೀಕೆ ಎಂದು ಬೇರೆ ಹೇಳಬೇಕಾಗಿಲ್ಲ. ಆದರೆ ಎಕಡೆಮಿಯ ಶಿಕ್ಷಣ ಸಂಸ್ಥೆಗಳ ಪ್ರಗತಿ ಹಾಗೂ ಅಲ್ಲಿನ ಶಿಕ್ಷಣ ಮಟ್ಟವನ್ನು ಕಂಡವರು, ಎಕೆಡೆಮಿಯ ಸಾಧನೆಗಳನ್ನು ಪ್ರತ್ಯಕ್ಷ ಪರಾಂಬರಿಸಿದವರು ಮೇಲಿನ ಟೀಕೆಗೆ ಬೆಲೆ ಇಲ್ಲ ಎನ್ನುತ್ತಾರೆ. ಈ ಕುರಿತು ಕಳೆದ ತಾ. ೧೩ರಂದು ಉಡುಪಿ ಎಂ.ಜಿ.ಎಂ. ಕಾಲೇಜಿನ ನೂತನ ಲೈಬ್ರೆರಿ ಕಟ್ಟಡವನ್ನು ಉದ್ಘಾಟಿಸುತ್ತಾ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಡಾ| ಶ್ರೀಮಾಲಿಯವರು ಆಡಿದ ಮಾತುಗಳು ಮನನೀಯವಾಗಿವೆ. ಶೈಕ್ಷಣಿಕ ಸೌಲಭ್ಯವನ್ನು ನೀಡುವುದಕ್ಕೆ ಸರಕಾರಕ್ಕೆ ಸಾಧ್ಯವಾಗದಿರುವಾಗ ಖಾಸಗಿ ಪ್ರಯತ್ನದ ಮೂಲಕ ಸರಕಾರದ ಈ ಹೊಣೆಯನ್ನು ಹೊರಲು ಸಾರ್ವಜನಿಕರು ಮುಂದೆ ಬಂದಾಗ ಅದನ್ನೇಕೆ ನಿರಾಕರಿಸಬೇಕೆಂದು ಶ್ರೀಮಾಲಿಯವರು ಪ್ರಶ್ನಿಸಿದ್ದಾರೆ. ಕ್ಯಾಪಿಟೇಶನ್ ಫೀ ಕೊಟ್ಟು ಶ್ರೀಮಂತರ ಮಕ್ಕಳೇ ಇಂತಹ ವಿದ್ಯಾಸಂಸ್ಥೆಗಳಲ್ಲಿ ಪ್ರಯೋಜನ ಹೊಂದುತ್ತಿರುವರೆಂಬ ಅಪವಾದವೇನೋ ಇದೆ. ಆದರೆ, ಏನೇ ಆಗಲಿ ಶ್ರೀಮಂತರ ಮಕ್ಕಳ ವಿದ್ಯಾಭ್ಯಾಸದ ಹೊಣೆಯನ್ನಾದರೂ ಈ ಸಂಸ್ಥೆಗಳು ನಿರ್ವಹಿಸಿದಂತಾಗಲಿಲ್ಲವೇ? ಎಂದು ಅವರು ಕೇಳಿದರು.

ಈ ಮಾತುಗಳನ್ನು ಶಿಕ್ಷಣ ಮಂತ್ರಿಖಾತೆಯವರು ಮನನ ಮಾಡಿಕೊಳ್ಳಬೇಕು. ಬರಿಯ ಟೀಕೆ ಟಿಪ್ಪಣಿಗಳಿಗೆ ಕಿವಿಗೊಡದೆ, ಸಮಸ್ಯೆಯನ್ನು ನವೀನ ದೃಷ್ಟಿಕೋನದಿಂದ ವಿಶ್ಲೇಷಿಸಬೇಕು. ಶ್ರೀಮಾಲಿಯವರು ಈ ಸಮಸ್ಯೆಯನ್ನು ನಿಷ್ಪಕ್ಷಪಾತವಾಗಿ ವಿಮರ್ಶಿಸಿದ್ದಾರೆ. ಅವರು ಶಿಕ್ಷಣ ತಜ್ಞರು. ಕೇಂದ್ರ ಶಿಕ್ಷಣ ಮಂತ್ರಿಗಳಾಗಿ ದುಡಿದವರು. ಅನುಭವಿಗಳು. ಅವರ ಮಾತುಗಳಲ್ಲಿ ಸತ್ಯಾಂಶ ಅಡಗಿದೆ ಎಂಬುದರಲ್ಲಿ ಅನುಮಾನವೇ ಇಲ್ಲ.

ಶ್ರೀ ಟಿ. ಅನಂತ ಪೈ.

ಎಕೆಡೆಮಿಯ ಶಿಕ್ಷಣ ಸಂಸ್ಥೆಗಳ ಯಶಸ್ಸಿನ ಗುಟ್ಟು, ಆ ಸಂಸ್ಥೆಗಳ ಹಿಂದೆ ದುಡಿಯುತ್ತಿರುವ ವ್ಯಕ್ತಿಗಳ ವ್ಯಕ್ತಿತ್ವವನ್ನು ಹೊಂದಿಕೊಂಡಿದೆ. ಎಕೆಡೆಮಿಯು ಸ್ಥಾಪಿಸಿದ ಮೊದಲನೆಯ ಕಾಲೇಜು, ಉಡುಪಿಯ ಎಂ. ಜಿ. ಎಂ. ಕಾಲೇಜು. ಸರ್ವ ಉಪಕರಣಗಳಿಂದ ಸುಸಜ್ಜಿತವಾದ ಈ ಕಲಾಶಾಲೆಯು ಶಿಕ್ಷಣದಲ್ಲಿ ಉನ್ನತ ಮಟ್ಟದ ಸಂಪ್ರದಾಯವನ್ನು ಉಳಿಸಿಕೊಂಡ, ಬೆಳೆಸಿಕೊಂಡು ಬಂದಿದೆ. ಇದೀಗ ತನ್ನದೇ ಆದ ಪ್ರತ್ಯೇಕ ಲೈಬ್ರೆರಿ ಕಟ್ಟಡಕ್ಕೆ ತನ್ನ ಲೈಬ್ರೆರಿಯನ್ನು ವರ್ಗಾಯಿಸಿದ ಈ ಕಾಲೇಜು ಸ್ವಯಂಪೂರ್ಣವಾಗಿದೆ ಎನ್ನಲಡ್ಡಿಯಿಲ್ಲ. ಸುಮಾರು ಎರಡು ಲಕ್ಷ ರೂ. ಬೆಲೆ ಬಾಳುವ ಇಪ್ಪತ್ತನಾಲ್ಕು ಸಾವಿರಕ್ಕಿಂತಲೂ ಹೆಚ್ಚು ಪುಸ್ತಕಗಳನ್ನೊಳಗೊಂಡಿರುವ, ಈ ಕಾಲೇಜಿನ ಪುಸ್ತಕ ಭಂಡಾರದಂತಹ ಭಂಡಾರ ಮೈಸೂರು ರಾಜ್ಯದ ಇನ್ಯಾವ ಕಾಲೇಜಿನಲ್ಲೂ ಇಲ್ಲ.

ಹೊಸ ಲೈಬ್ರೆರಿ ಕಟ್ಟಡದ ಉದ್ಘಾಟನೆಯ ಸಂದರ್ಭ ಕಾಲೇಜಿನ ಕರೆಸ್ಪಾಂಡೆಂಟರಾದ ಶ್ರೀ ಟಿ. ಅನಂತ ಪೈಗಳು ಮಾತಾಡುತ್ತಾ, ಈ ಕಾಲೇಜಿನಲ್ಲಿ ಪದವಿಯೋತ್ತರ ಶಿಕ್ಷಣವನ್ನು ಆರಂಭಿಸುವ ಇಚ್ಛೆ ಇದೆ ಎಂದೂ, ಇದಕ್ಕೆ ವಿಶ್ವವಿದ್ಯಾಲಯ ಅನುಮತಿ ಈಯಬೇಕೆಂದೂ ಉಪಕುಲಪತಿ ಶ್ರೀಮಾಲಿಯವರ ಸಮ್ಮುಖದಲ್ಲಿ ಹೇಳಿದರು. ಉಡುಪಿಯ ಎಂ. ಜಿ. ಎಂ. ಕಾಲೇಜಿನಲ್ಲಿ ಪದವಿಯೋತ್ತರ ಶಿಕ್ಷಣವನ್ನು ಆರಂಭಿಸುವುದು ನಿಜಕ್ಕೂ ಅಗತ್ಯದ್ದೆನಿಸಿದೆ. ನಮ್ಮ ಜಿಲ್ಲೆಯ ವಿದ್ಯಾರ್ಥಿಗಳು ಪದವಿಯೋತ್ತರ ಶಿಕ್ಷಣಕ್ಕಾಗಿ ಮೈಸೂರು, ಧಾರವಾಡ, ಬೆಂಗಳೂರುಗಳೆಂದು ಇನ್ನು ಅಲೆದಾಡಬೇಕಾಗಿದೆ. ಎಲ್ಲಾ ವಿಧದ ಸೌಲಭ್ಯಗಳೂ ಇರುವ ಈ ಕಾಲೇಜಿನಲ್ಲಿ ಪದವಿಯೋತ್ತರ ಶಿಕ್ಷಣ ಆರಂಭಿಸುವುದಕ್ಕೆ ಮೈಸೂರು ವಿಶ್ವವಿದ್ಯಾಲಯ ಅನುಮತಿ ಈಯಬೇಕು.

ವಿಶ್ವವಿದ್ಯಾಲಯವು ಅಪೇಕ್ಷಿಸುವ ಯಾವುದೇ ಸೌಕರ್ಯ ಹಾಗೂ ಸಲಕರಣೆಯನ್ನು ಪೂರೈಸುವ ಸ್ಥಿತಿಯಲ್ಲಿ ಎಂ. ಜಿ. ಎಂ. ಕಾಲೇಜಿನ ಆಡಳಿತ ವರ್ಗವಿದೆ. ಹಾಗಾಗಿ, ಮೈಸೂರು ವಿಶ್ವವಿದ್ಯಾಲಯವು ಈ ಕುರಿತು ಮೀನಮೇಷ ಮಾಡದೆ, ಶ್ರೀ ಪೈಗಳಂತೆ, ಈ ವಿಚಾರವನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕೆಂದು ನಾವೂ ಕೇಳಿಕೊಳ್ಳುತ್ತೇವೆ.

ದ. ಕ. ಬೆಳ್ತಂಗಡಿ ಮುನ್ಸಿಫ್ ಕಂ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ.

R. E P. no 34/1964

(S. C. no 496/42)

ಮುಹಾಬಲ ಪ್ರಭು.(ವಾದಿ)ಅರ್ಜಿದಾರ,

ಎಲಿಯಪ್ಪ ಯಾನೆ ನೂವಪ್ಪ

(ಪ್ರತಿವಾದಿ) ಎದ್ರಿ.

ಸದ್ರಿ—ಎದ್ರಿ—ಎಲಿಯಪ್ಪ ಯಾನೆ ನೂವಪ್ಪ, ಮುತ್ತಪ್ಪ ಶೆಟ್ರ ಸೊಸೆ—ಬೆಳ್ತಂಗಡಿ ತಾಲ್ಲೂಕು ಕೊಪೆಟ್ಟು ಗ್ರಾಮಸ್ಥರು ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ಮೇಲ್ಕಂಡ ಅರ್ಜಿದಾರನು ನಿಮ್ಮ ಮೇಲೆ ಮೂಲಗೇಣಿ ಬಾಕಿ ಕುರಿತಾಗಿ ಪಡೆದ S C 496/42 ನೇ ಡಿಕ್ರಿ ಕುರಿತು ಪುತ್ತೂರು ಡಿ ಮು, ಕೋರ್ಟಿನಲ್ಲಿ ನಡಿಸುತ್ತಿರುವ R E P. 187/63ರಲ್ಲಿ ಜಪ್ತಾದ ನಿಮ್ಮ ಪಕ್ಕದ ಆಸ್ತಿಯನ್ನು ಏಲಂಪಡಿಸ ಬೇಕಾಗಿಯೂ, ಏಲಂನಲ್ಲಿ ದರಖಾಸ್ತಿಗೆ ನಿಲ್ಲುವರೇ ತನಗೂ ಪರ್ಮಿಶನ್ ಕೊಡಿಸ ಬೇಕೆಂತ ಇತ್ಯಾದಿ ಸದ್ರಿದ ಮೇಲಿನ ಅಮ್ಲಿಕ್ಯಾರಿಯಲ್ಲಿ ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ತಾ 27—11—1964ಕ್ಕೆ ಮುದ್ದತಿ ಇಟ್ಟಿರುತ್ತದೆ. ಆ ಕುರಿತು ನಿಮಗೇನಾದರೂ ಆಕ್ಷೇಪ ಇದ್ದರೆ ಸದ್ರಿ ಮುದ್ದತಿ ದಿನ ಪೂರ್ವಾಹ್ನ ಗಂಟೆ 11ಕ್ಕೆ ಸದ್ರಿ ಕೋರ್ಟು ಮುಂದೆ ಸ್ವತಃ ಯಾ ವಕೀಲರ ದ್ವಾರಾ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಗೈರ್ಹಾಜರಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲ್ಪಡುವದು.

ಕೋರ್ಟು ಹುಕುಂ ಪ್ರಕಾರ

B K. Sooryanarayana Rao,
Advocate for Petitioner.

ಬೆಳ್ತಂಗಡಿ, ತಾ 11.11.1964.

ಲೈಬ್ರೆರಿ ಕಟ್ಟಡದ ಉದ್ಘಾಟನೆ

ಉಡುಪಿ ಎಂ. ಜಿ. ಎಂ ಕಾಲೇಜಿನ ಹೊಸ ಲೈಬ್ರೆರಿ ಕಟ್ಟಡಗಳ ಶೋಭಾಯಮಾನ ಉದ್ಘಾಟನಾ ಸಮಾರಂಭವು ತಾ 13 ರಂದು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ| ಕೆ ಎಲ್. ಶ್ರೀಮಾಲಿಯವರಿಂದ ನೆರವೇರಿತು. ಆರಂಭದಲ್ಲಿ ಕರಸ್ಪಾಂಡೆಂಟ್ ಶ್ರೀ ಟಿ ಎ. ಪೈಗಳು ಸ್ವಾಗತಿಸಿದರು. ಅಂತ್ಯದಲ್ಲಿ ಕಾಲೇಜ್ ಟ್ರಸ್ಟಿನ ಅಧ್ಯಕ್ಷ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರು ಧನ್ಯವಾದಗಳನ್ನರ್ಪಿಸಿದರು.

ಮಕ್ಕಳ ದಿನಾಚರಣೆ

ಉಡುಪಿ ಬೋರ್ಡು ಹೈಸ್ಕೂಲಲ್ಲಿ ಸಾರ್ವತ್ರಿಕ ಮಕ್ಕಳ ದಿನಾಚರಣೆಯು ಹೆಡ್ಮಾಸ್ಟರ್ ಬಿ. ಎನ್ ಆಚಾರ್ಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು, ಎನ್. ಸಿ. ಸಿ. ಎ. ಸಿ. ಸಿ ಮತ್ತು ಸ್ಕೌಟ್ಸ್ ಇವರ ಪಥಚಲನವಾದ ಬಳಿಕ ಸಿಹಿತಿಂಡಿ ಹಂಚಲಾಯಿತು.

ಕನ್ನಡ ಸಂಘ

ವಾಸ್ಕೋಡಗಾಮ— ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಕಳೆದ ತಾ, 2 ರಂದು ಕನ್ನಡ ಸಂಘವು ಉದ್ಘಾಟಿಸಲ್ಪಟ್ಟಿದೆ. ಪ್ರಾಸ್ತುತ ವರ್ಷಕ್ಕೆ ಇದರ ಅಧ್ಯಕ್ಷರಾಗಿ ಶ್ರೀ ಜಿ. ಬಿ ಕುಲಕರ್ಣಿಯವರು ಆರಿಸಲ್ಪಟ್ಟಿದ್ದಾರೆ.

ಒಪರೇಶನ್ ಥಿಯೇಟರಿಗೆ ಅಡಿಗಲ್ಲು ಹಾಗೂ ಎಕ್ಸರೇ ಪ್ಲಾಂಟ್‌ನ ಉದ್ಘಾಟನೆ.

ಶಿರ್ವ ತಾ 8 ಉಡುಪಿ ತಾಲೂಕು ಬೋರ್ಡ್ ಮತ್ತು ಮೆಡಿಕಲ್ ರಿಲೀಫ್ ಎಸೋಸಿಯೇಶನ್ ಆಶ್ರಯದಲ್ಲಿ ನಿರ್ಮಾಣವಾಗಲಿರುವ ಒಪರೇಶನ್ ಥಿಯೇಟರ್ ಕಟ್ಟಡಕ್ಕೆ ಜಿಲ್ಲಾಧಿಕಾರಿ ಶ್ರೀ ಪಿ ಎಂ. ಮುಜಾಹಿದ್ ಅವರು ಅಡಿಗಲ್ಲನ್ನಿಡುವ ಸಮಾರಂಭವನ್ನು ನೆರವೇರಿಸಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ| ಎಚ್. ಎಸ್ ನಾಯಕರು ಎಕ್ಸರೇ ಪ್ಲಾಂಟನ್ನು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ಕೆ. ಪೈಗಳು ವಹಿಸಿದ್ದರು. ಆರಂಭದಲ್ಲಿ ಶ್ರೀ ಎಂ. ಮಧ್ವರಾಜ್ ಎಂ. ಎಲ್. ಎ. ಅವರು ಸ್ವಾಗತಿಸಿದರು. ಡಾ| ಕೆ. ಆರ್ ವಿ. ಕೃಷ್ಣನವರು ಸಂಘದ ವರದಿಯನ್ನೊಪ್ಪಿಸಿದರು. ಎಂ. ಆರ್. ಎಸ್ ಹೆಗ್ಡೆಯವರು ಸಂದೇಶಗಳನ್ನೋದಿದರು. ಅಂತ್ಯದಲ್ಲಿ ಡಾ| ವೈ. ಆರ್. ಶೆಟ್ಟರು ವಂದನಾರ್ಪಣೆಗೈದರು.

ವಾರ್ಷಿಕೋತ್ಸವ

ಮುಂಬಯಿ, ಮೊಗವೀರ ವ್ಯವಸ್ಥಾಪಕ ಮಂಡಳಿಯ 51ನೇ ವಾರ್ಷಿಕೋತ್ಸವ ಹಾಗೂ ಮೊಗವೀರ ರಾತ್ರಿ ಶಾಲೆಯ ಪಾರಿತೋಷಕ ವಿತರಣಾ ಸಮಾರಂಭವು ತಾ 6-11-1964 ರಂದು ಸರ್ ಕಾವಸ್ಜಿ ಜಹಂಗೀರ್ ಸಭಾಸದನದಲ್ಲಿ ಮೇಯರ್ ಡಾ| ಬಿ ಕೆ. ದಿವಿಗಿಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಮಂಡಳಿಯ ಅಧ್ಯಕ್ಷ ಶ್ರೀ ಎಸ್. ಕೆ. ಪಡುಬಿದ್ರಿಯವರು ಸ್ವಾಗತಿಸಿದರು.

ಶ್ರೀಮತಿ ರಮಾಬಾಯಿ ದಿವಿಗಿಯವರು ಬಹುಮಾನ ವಿತರಣೆ ಮಾಡಿದರು.

ಸಭಿಕರ ಪೈಕಿ ಶ್ರೀಗಳಾದ ಕೆ ಎಸ್. ಧಾರಿಯಾ, ಜಿ ಎನ್. ವೈದ್ಯ, ಬಿ ಎಂ ಕೋಡಿಕಲ್, ಟಿ ಕೆ ಉಪ್ಪೂರ್ ಎ. ಬಿ. ಮಂಗಳವೇಡೆ ಮತ್ತು ಡಬ್ಲ್ಯೂ. ಎಂ. ಕರಂಬೈಯ ಇವರು ಮಂಡಳಿಯ ಕಾರ್ಯಚಟುವಟಿಗಳನ್ನು ಪ್ರಶಂಸಿಸಿ ಮಾತನಾಡಿದರು.

ಶ್ರೀ ಆರ್. ಎಲ್ ಕೋಟ್ಯಾನರಿಂದ ಉಪಕಾರ ಸ್ಮರಣೆಯಾದ ಬಳಿಕ ವಿವಿಧ ವಿನೋದಾವಳಿ ಕಾರ್ಯಕ್ರಮಗಳಾದುವು.

ಉದ್ಘಾಟನೆ

ಸುರತ್ಕಲ್, 8—ಕಡಂಬೋಡಿಯ ಸುಪ್ರಸಿದ್ಧ ಜಮೀನ್ದಾರರಾದ ಶ್ರೀ. ಟಿ. ಕೇಶವರಾಯರಿಂದ ಸ್ಥಾಪಿಸಲ್ಪಟ್ಟ ಸೋ ಮಿಲ್‌ನ ಉದ್ಘಾಟನೆಯು ಶ್ರೀ. ಕೆ ಬೋಜ ಪಂಡಿತ್ ರಾವ್ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಪದ್ಮನಾಭ ಸೋಮಯಾಜಿಗಳು ಸ್ವಾಗತ ಭಾಷಣ ಮಾಡಿದರು. ಡಾ| ಎಂ ಪಿ ಕಾಮತರು ಯಂತ್ರದ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ ಸಂಜೀವ ಮಲ್ಲಿಯವರು ಧನ್ಯವಾದವನ್ನು ಅರ್ಪಿಸಿದರು.

ಬೊಂಬಾಯಿ ಪ್ರೋಚ್ ಸ್ಟ್ರೀಟ್ ಶಾಖೆ

ಬೊಂಬಾಯಿಯಲ್ಲಿ ಸಿಂಡಿಕೇಟ್ ಬ್ಯಾಂಕಿನ ಇನ್ನೊಂದು ಶಾಖೆಯು ಪ್ರೋಚ್ ಸ್ಟ್ರೀಟ್ ಎಂಬಲ್ಲಿ ತಾ. 7-11-64ರಂದು ತೆರೆಯಲ್ಪಟ್ಟಿರುವುದು. ಇದು ಮುಂಬೈಯಲ್ಲಿ ಐದನೆ ಶಾಖೆಯಾಗಿದೆ ಉಳಿದವುಗಳು ಫೋರ್ಟ್, ಮಾಂಡ್ವಿ, ಮಾತುಂಗಾ ಮತ್ತು ಮುಲುಂದಗಳಲ್ಲಿವೆ. ಈ ಹೊಸ ಶಾಖೆಯಿಂದಾಗಿ ಬ್ಯಾಂಕಿನ ಶಾಖೆಗಳ ಸಂಖ್ಯೆ 196ಕ್ಕೇರಿದಂತಾಯಿತು.

ಸದ್ಯದಲ್ಲೇ ಇನ್ನೆರಡು ಹೊಸ ಶಾಖೆಗಳು ನವದೆಹಲಿ ಮತ್ತು ಆಂಧ್ರಪ್ರದೇಶದ ಅಲ್ವಾಲ್‌ಗಳಲ್ಲಿ ತೆರೆಯಲ್ಪಡುವವು.

ಮಿತ್ರವೃಂದ, ಜಗಳೂರು

ತಾ 9.11.64 ರಂದು, ಜಗಳೂರು ಸಹಕಾರಿ ಬ್ಯಾಂಕಿನ ಆವರಣದಲ್ಲಿ ಶ್ರೀ ಡಾ|| ಬಿ. ಯಂ ಶೆಟ್ರ ಅಧ್ಯಕ್ಷತೆಯಲ್ಲಿ ಸಭೆಸೇರಿ, ರಾಜ್ಯ ಮಟ್ಟದ ವಾಲಿಬಾಲ್ ಮತ್ತು ಬ್ಯಾಡ್ಮಿಂಟನ್ ಟೋರ್ನಮೆಂಟನ್ನು ಡಿಸೆಂಬರ್ 25,26,27 ರಂದು ನಡೆಸಬೇಕೆಂದು ತೀರ್ಮಾನಿಸಲಾಯಿತು ಇದೇ ಸಂದರ್ಭದಲ್ಲಿ ಡಾ|| ಬಿ ಯಂ. ಶೆಟ್ರು ಅಧ್ಯಕ್ಷ ಶ್ರೀ ಜೆ. ಋಷಿ. ಕಣ್ಣ ತಮ್ಮಣ್ಣನವರು ಶ್ರೀ. ಜೆ. ಬಿ. ರಾಜರಾವ್ ಇವರು ಕಾರ್ಯದರ್ಶಿಗಳಾಗಿ, ಶ್ರೀ ಯಂ. ಬಿ ಮಹೇಶ್ವರಪ್ಪನವರು ಖಜಾಂಚಿಯಾಗಿ ಇರುವ ನೂತನ ಸಮಿತಿಯನ್ನು ರಚಿಸಲಾಯಿತು.

ಸಿಂಡಿಕೇಟ್ ಬೇಂಕ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು:— ಮಣಿಪಾಲ. ದ. ಕನ್ನಡ)

ಬ್ರಾಂಚ್ ಆಫೀಸು:— ಉಪ್ಪಿನಂಗಡಿ,

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲದ ಅಸಲು ಮತ್ತು ಅದರ ಮೇಲಣ ಬಡ್ಡಿಯನ್ನು ವಸೂಲು ಕೊಡದೆ ಇದ್ದುದರಿಂದ ಸದ್ರಿಯವರ ಸಾಲವನ್ನು ಬರಮಾಡಿಕೊಳ್ಳುವರೆ ರಜಿಸ್ಟ್ರ ನೋಟೀಸು ಕೊಟ್ಟಲ್ಲಿ ನೋಟೀಸು ಪಡಕೊಂಡು ಪಾವತಿ ಮಾಡದೆ ಇರುವುದರಿಂದಲೂ ಅಥವಾ ನೋಟೀಸ್ ಅನ್‌ಕ್ಲೈಮ್ ಆಗಿ ವಾಪಸ್ ಬಂದಿರುವುದರಿಂದಲೂ ಈ ಮೂಲಕ ತಿಳಿಸುವುದೇನೆಂದರೆ ಸದ್ರಿಯವರು ಸದ್ರಿ ಸಾಲದ ಅಸಲು ವ ಬಡ್ಡಿ ವ ಇನ್ನಿತರ ಖರ್ಚುಗಳನ್ನು ಪಾವತಿ ಮಾಡಿ ಚಿನ್ನಾಭರಣಗಳನ್ನು ತಾ. 28.11.1964ರ ಒಳಗೆ ಬಿಡಿಸಿ ಕೊಳ್ಳದೆ ಇದ್ದಲ್ಲಿ ಸದ್ರಿ ಈಡಿಟ್ಟ ನಗಗಳನ್ನು ತಾ. 5.12.1964ನೇ ಶನಿವಾರ ಗಂಟೆ 2.30ಕ್ಕೆ ಸರಿಯಾಗಿ ಯಾ ನಮಗೆ ಯುಕ್ತ ಕಂಡ ಯಾವುದೇ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಸಾಲದ ನಂಬ್ರ	ಸಾಲ ಪಡೆದ ತಾರೀಕು	ಹೆಸರು ಮತ್ತು ವಿಳಾಸ	ಮೊಬಲಗು ರೂಪಾಯಿ
31/61	9.1.61	ಅಬ್ಬಾಸು ಬ್ಯಾರಿ; ಬಾವ್ಯ ಬ್ಯಾರಿಯ ಮಗ, ಕೋಲಿಕೆಲಸದವ; ಕೆ. ಸಿ. ಫಾರ್ಮ ಪೋಸ್ಟು.	25=00
278/61	18-3.61	ಜಾರಪ್ಪ ಪೂಜಾರಿ, ಏಲ್ಯಣ್ಣ ಪೂಜಾರಿಯ ಮಗ, ಅನ್‌ಪಲ್ಲ, ತಾಲೂಕು ಸಕ್ಲೇಶ್‌ಪುರ.	80=00
312/61	28.3.61	ಚೋಯಿರಗೌಡ, ಸುವಯ್ಯ ಗೌಡನ ಮಗ, ಪುದ್ದೊಟ್ಟು, ಕಣಿಯೂರು ಗ್ರಾಮ, ಪೋಸ್ಟು ಕಣಿಯೂರು	16=00
1100/61	28.2.61	ಯ್ಯಂ. ಅಬ್ದುಲ್ಲ; ಪಳ್ಳಿ ಬ್ಯಾರಿಯ ಮಗ, ವ್ಯಾಪಾರಸ್ಥ, ಕೊಕ್ಕಡ ಗ್ರಾಮ, ಪೋಸ್ಟು ಕೊಕ್ಕಡ.	110=00
206/62	5.3.62	ಕೃಷ್ಣಪ್ಪ ಪೂಜಾರಿ, ಜಾರಪ್ಪ ಪೂಜಾರಿಯ ಅಳಿಯ, ಅಡೇಕಲ ಹಿರೇ ಬಂಡಾಡಿ ಗ್ರಾಮ, ಪೋಸ್ಟು ಹಿರೇ ಬಂಡಾಡಿ.	120=00
423/62	31.3.62	ಗುಡ್ಡಪ್ಪ ಸೆಟ್ಟಿ, ಕರಿಯಪ್ಪ ಸೆಟ್ಟಿಯ ಅಳಿಯ, ಪಿಲಿಕಲ, ಉರುವಾಲ ಗ್ರಾಮ, ಪೋಸ್ಟು ಕರಾಯ	75=00
489/62	2.4.62	ಮಮ್ಮದೆ ಬ್ಯಾರಿ, ದಾಬಯ್ಯ ಬ್ಯಾರಿಯ ಮಗ, ಕರವೇಲು, ನೆಕ್ಕಿಲಾಡಿ ಗ್ರಾಮ, ಪೋಸ್ಟು ಉಪ್ಪಿನಂಗಡಿ.	35=00
588/62	24.4.62	ದರ್ಣಪ್ಪ ಪೂಜಾರಿ, ಸಾಂತಪ್ಪ ಪೂಜಾರಿಯ ಅಳಿಯ, ಹಿರೇ ಬಂಡಾಡಿ ಗ್ರಾಮ, ಪೋಸ್ಟು ಹಿರೇ ಬಂಡಾಡಿ	55=00
656/62	16.5.62	ಪಕೀರಗೌಡ, ಮಾಯಿಲ ಗೌಡನ ಮಗ, ಕಂಡಾಜೆ, ಬಿಳಿಯೂರು ಗ್ರಾಮ ಪೋಸ್ಟು ಪೆರ್ನೆ.	10=00
670/62	16.5.62	ಎಸ್. ಕಮಲಾಕ್ಷ ಯಾನೆ ವಾಸುದೇವ ಪೈ, ವರ್ಗದಾರ್, ನೇಜಿಗಾರ ಇಳಂತಿಲ ಗ್ರಾಮ ಪೋಸ್ಟು ಇಳಂತಿಲ,	565=00
871/62	11.6.62	ಕೃಷ್ಣಪ್ಪ ಪೂಜಾರಿ, ಜಾರಪ್ಪ ಪೂಜಾರಿಯ ಅಳಿಯ, ಬಂಟ್ರಪಾಲು, ಹಿರೇ ಬಂಡಾಡಿ ಗ್ರಾಮ, ಪೋಸ್ಟು ಹಿರೇ ಬಂಡಾಡಿ	50=00
910/62	14.6.62	ಕೆ. ಜನಾರ್ಧನ ಆಚಾರಿ, ವೀರಪ್ಪ ಆಚಾರಿಯ ಮಗ, ಅಕ್ಕಸಾಲಿಗ, ಪೋಸ್ಟು ಉಪ್ಪಿನಂಗಡಿ.	46=00
1069/62	4.7.62	ಕೃಷ್ಣಪ್ಪ ಪೂಜಾರಿ; ಜಾರಪ್ಪ ಪೂಜಾರಿಯ ಅಳಿಯ, ಬಂಟ್ರಪಾಲು, ಹಿರೇ ಬಂಡಾಡಿ ಗ್ರಾಮ, ಪೋಸ್ಟು ಹಿರೇ ಬಂಡಾಡಿ.	50=00
1187/62	19.7.62	ಎಲ್ಲಣ್ಣ ಪೂಜಾರಿ; ಅಪ್ಪಯ್ಯ ಪೂಜಾರಿಯ ಅಳಿಯ, ಮಾಡಾಯಿಮೂಲೆ, ಉರುವಾಲು ಗ್ರಾಮ, ಪೋಸ್ಟು ಉರುವಾಲು.	32=00
1601/62	21.8.62	ಸಂಜೀವ ಸಫಲ್ಯ, ನಾರಾಯಣ ಸಫಲ್ಯನ ಮಗ, ಪೋಸ್ಟು ಉಪ್ಪಿನಂಗಡಿ.	20=00
1614/62	30.8.62	ಸೂಪಿ ಬ್ಯಾರಿ, ಮೊಯಿದಿನೆ ಬ್ಯಾರಿಯ ಮಗ, ಪೆರಾಜೆ ಗ್ರಾಮ, ಜೋಗಿಬೆಟ್ಟು. ಪೋಸ್ಟು ನೇರಳಕಟ್ಟೆ	80=00
1656/62	4.9.62	ಲೋಕಯ್ಯ ಗೌಡ, ಕಾಂತು ಗೌಡನ ಮಗ, ಬೀದಿನ ಬೈಲು, ಪಟ್ರಮೆ ಗ್ರಾಮ, ಪೋಸ್ಟು ಧರ್ಮಸ್ಥಳ.	110=00
340/63	20.5.63	ಕೃಷ್ಣಪ್ಪ ಪೂಜಾರಿ, ಜಾರಪ್ಪ ಪೂಜಾರಿಯ ಅಳಿಯ, ಬಂಟ್ರಪಾಲು ಹಿರೇ ಬಂಡಾಡಿ ಗ್ರಾಮ, ಪೋಸ್ಟು ಹಿರೇ ಬಂಡಾಡಿ.	70=00
379/63	28.5.63	ವಿಠಲ ಮಲೆಕುಡಿಯ, ಕುಕ್ಕ ಮಲೆಕುಡಿಯನ ಮಗ, ರೈತ, ಮುರಂಗಲ, ಹತ್ಯಡ್ಕ ಗ್ರಾಮ, ಪೋಸ್ಟು ಅರಸಿನಮಕ್ಕಿ.	20=00
462/63	15.6.63	ಚೆನ್ನಪ್ಪ ಗೌಡ, ಮೋಂಟ ಗೌಡನ ಮಗ, ಎಣ್ಣೆಹೊಳೆ. ಲೊಳ್ಳಬಾಡಿ ಗ್ರಾಮ, ಪೋಸ್ಟು ಕೊಂಬಾರು	27=00
466/63	15.6.63	ಎಮ್. ಪಿ. ಕ್ರಾಸ್ತೆ, ಕ್ಯಾಟರ್ ಬಾಳಿಗದ್ದೆ ಎಸ್ಟೇಟ್, ಪೋಸ್ಟು ಮೂಡಿಗೆರೆ.	30=00
605/63	18.7.63	ಬಿ. ಕಷ್ಣ ರೈ, ಪಕೀರ ರೈಯ ಅಳಿಯ, ನಡುಮನೆ, ನೆಲ್ಯಾಡಿ ಗ್ರಾಮ, ಪೋಸ್ಟು ನೆಲ್ಯಾಡಿ.	115=00
931/63	26.9.63	ಬೆಳಿಯಪ್ಪ ಗೌಡ, ಅಣ್ಣು ಗೌಡನ ಮಗ, ರೈತ, ಮುರುವಂತಿಲ, ಕೊಕ್ಕಡಗ್ರಾಮ, ಪೋಸ್ಟು ಕೊಕ್ಕಡ.	165=00
1034/63	19.10.63	ಕೆ. ವೆಂಕಪ್ಪ ಹೆಗ್ಡೆ, ತನ್ನಯ ಹೆಗ್ಡೆಯ ಮಗ, ವರ್ಗದಾರ, ಕಡೇಶ್ವಾಳ್ಯ ಗ್ರಾಮ, ಕಶೆಕೋಡಿ, ಪೋಸ್ಟು ಕಡೇಶ್ವಾಳ್ಯ	175=00
1051/63	23.10.63	ಅಪ್ಪಿ ಲೋಬೋ, ದಾವಿದ್‌ಲೋಬನ ಮಗ, ರೈತ, ಬಿಳಿಯೂರು ಗ್ರಾಮ. ಪೋಸ್ಟು ಪೆರ್ನೆ.	100=00

ಬೇಂಕಿನ ಆಫೀಸು:— ಉಪ್ಪಿನಂಗಡಿ,
ತಾರೀಕು 12.11.1964.

(Sd) H. P. Pai
Manager

ಆಹಾರ ಸಮಸ್ಯೆ

ಈಗ ನಮ್ಮ ದೇಶದಲ್ಲಿರುವ ಆಹಾರ ಸಮಸ್ಯೆ ಜನರಿಗೆ ಸೇರಿದ ಸಮಸ್ಯೆಯಾಗಿದೆ ಎಂದು ಸಿಂಡಿಕೇಟ್ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಎ. ಪೈಯವರು ತಾ. 10.11.64ರಂದು ಉಡುಪಿಯಲ್ಲಿ ತಿಳಿಸಿದರು.

ಭಾರತದ ಆಹಾರ ಕಾರ್ಪೋರೇಶನ್ನಿನ ಅಧ್ಯಕ್ಷರಾಗಿ ನಿಯುಕ್ತರಾಗಿರುವ ಶ್ರೀ ಪೈಯವರು ರೋಟರಿ ಕ್ಲಬ್ಬಿನಲ್ಲಿ ಭಾಷಣ ಮಾಡುತ್ತಾ ಪ್ರತಿಯೊಬ್ಬರೂ ಆಹಾರವನ್ನು ಮಿತವಾಗಿ ಬಳಸುವುದನ್ನು ಕಲಿಯಬೇಕೆಂದರು. ಹೆಚ್ಚು ಆಹಾರ ಉತ್ಪಾದನೆ, ಆಹಾರಕಿಲ್ಲದವರ ಬಗ್ಗೆ ಆಲೋಚಿಸಬೇಕಾದುದು ಅಗತ್ಯವೆಂದರು.

ಉಪಾಧ್ಯಕ್ಷ ಶ್ರೀ ಕೆ ಕೆ. ಪೈಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪ್ರವಾಸ ಮಾಡಿ ತಾ. 10ರಂದು ಹಿಂತಿರುಗಿದ ಶ್ರೀ ಟಿ. ಎ ಪೈಯವರು ಪ್ರವಾಸದ ಅನುಭವಗಳನ್ನೂ ಸಹ ತಿಳಿಸಿದರು. ಶ್ರೀ ಎ. ಜೆ. ಅಲ್ಸೆಯವರು ವಂದನೆಗಳನ್ನರ್ಪಿಸಿದರು.

ಚಂಪಾಷಷ್ಠಿ ಮಹಾರಥೋತ್ಸವ

ಸುಬ್ರಹ್ಮಣ್ಯ, ದಕ್ಷಿಣ ಕನ್ನಡ ಜಿಲ್ಲಾ ಮುಜರಾಯಿ ಖಾತೆ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಪೂರ್ವಶಿಷ್ಟ ಸಂಪ್ರದಾಯ ಪ್ರಕಾರ ಇದೇ ಕ್ರೋಧಿ ಸಂವತ್ಸರದ ಕಾರ್ತಿಕ ಬಹುಳ ೧೨ಯು ಚಂದ್ರವಾರ ತಾ 30—11—64ರಿಂದ ಉತ್ಸವವು ಪ್ರಾರಂಭವಾಗಿ ತಾ 2—12—64ರಲ್ಲು ಲಕ್ಷದೀಪೋತ್ಸವ, ತಾ. 8-12—64ರಲ್ಲು ಪಂಚಮಿ ತೇರು ಉತ್ಸವ, ತಾ 9.12.64ರಲ್ಲು ಪಂಚಮಿ ರಥೋತ್ಸವ, ತಾ. 10.12.64ರಲ್ಲು ಚಂಪಾ ಷಷ್ಠೀ ಮಹಾರಥೋತ್ಸವ, ತಾ. 11.12.64ರಲ್ಲು ಅವಭೃತೋತ್ಸವವೇ ಮೊದಲಾದ ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗಲ್ಪಡುತ್ತವೆ.

KARNATAKA TILES PRIVATE LIMITED

(Now in Voluntary Liquidation.)

Registered Office:- Chikkansal Road, Coondapoor,
South Kanara District.

Notice is hereby given that movable and immovable properties owned by the above named company at Coondapoor are available for sale. Interested parties to purchase the same are requested to forward their offers in writing to the undersigned so as to reach him not later than 5 P. M. on 30—11—64. Any offers received after 5 P. M. on 30—11—64 will not be considered. The undersigned is also at liberty to reject the offers without assigning any reasons.

Whatever right, title and interest the company holds in the properties are offered for sale and the bidder shall accept such title as the company has. The purchaser is solely responsible for the profit or loss that arise out of this transaction.

Along with the offer a sum of Rs. 25000/- has to be deposited with the undersigned as earnest money and it will be refunded without interest in case the offer is not accepted.

The person whose offer is accepted shall abide by and comply with all the terms and conditions of the acceptance order regarding time and payment of consideration and execution of Documents etc Failing to comply with any of the terms and conditions of the acceptance order the sum deposited shall stand forfeited to the undersigned and the undersigned will either rescind the contract or resell the properties and claim from the previous successful bidder the deficiency in price (if any) on such resale but he shall not be entitled to claim any increase in the price.

The intending purchasers are requested to contact the undersigned for details regarding movable and immovable properties.

G Kushala Hegde,
Advocate
Liquidator.

Coondapoor,
14-11-1964.

NAVAYUGA 19-11-1964
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೯-೧೧-೬೪ರಿಂದ ೨೫-೧೧-೬೪ರ ವರೆಗೆ

೧. ಮೇಷ.

ಕೃಷ್ಣಪಕ್ಷದ ಚಂದ್ರನಂತೆ ದಿನದಿಂದ ದಿನಕ್ಕೆ ನಿಮ್ಮ ಅದೃಷ್ಟವು ಕ್ಷೀಣಿಸುತ್ತದೆ. ಲಾಭ ಗತ ಶನೈಶ್ಚರನೋರ್ವನನ್ನುಳಿದು ಇತರ ಗ್ರಹಮಂಡಲವೇ ನಿಮಗಿಂದು ಪ್ರತಿಕೂಲನಾಗಿ ನಿಂತಿಹುದು. ಕಾರ್ಯಾರಂಭಕ್ಕಿಂತ ಮುಂಚಿತವಾಗಿಯೇ ವಿಘ್ನಗಳು ಉಪಸ್ಥಿತವಾಗುವವು. ನೀವಿಂದು ಹೆಚ್ಚಿನ ಕಾಲವನ್ನು ನಿರುದ್ಯೋಗದಿಂದ ಕಳೆಯಬೇಕಾಗಿ ಬರಲಿದೆ. ಗೃಹತಾಪತ್ರಯ ದೇಹಾಲಸ್ಯ ಆರ್ಥಿಕ ಮುಗ್ಗಟ್ಟುಗಳಿಂದ ಪೀಡಿತರಾದ ನಿಮಗೆ, ತಾ. 19 – 23 — 23 ಸ್ವಲ್ಪ ಸುಖಕರವಾಗಿ ಕಾಣಿಸೀತು.

೨ ವೃಷಭ

ಚಿಂತಾಸಾಗರದಲ್ಲಿ ಮುಳುಗೇಳ ತಕ್ಕ ನಿಮಗೆ ಇಂದು ಯಾರೊಬ್ಬರ ನೆರವೂ ಲಭಿಸಲಾರದು. ಶತ್ರುವರ್ಗದವರು ಸಮಯಸಾಧಿಸಿ ತಮ್ಮ ಪ್ರತೀಕಾರವನ್ನೆಸಗುವರು. ಹಿಡಿ ಹೊನ್ನು ಹಿಡಿದರೂ ಮಣ್ಣಾಗಿ ಪರಿಣಮಿಸೀತು. ರಾಜಕೀಯದಲ್ಲಿ ಶತ್ರುವರ್ಗದವರಿಂದ ಮುಖಭಂಗವಾಗಲಿದೆ. ಅಧಿಕಾರಿ ವರ್ಗದವರ ಅವಕೃಪೆಗೆ ಪಾತ್ರರಾದ ನಿಮಗೆ ಸ್ಥಾನಾಂತರ ಪ್ರಾಪ್ತಿಯು ಸಂಭವನೀಯ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅಧ್ಯಯನಕ್ಕೆ ತುಂಬಾ ತೊಡಕುಂಟಾದೀತು. ಆಕ್ಷೇಪ ಕಷ್ಟದಿಂದ ದಿನಗಳೆವ ನಿಮಗೆ ತಾ. 20, 21, 21, 25 ಹೆಚ್ಚಿನ ದೋಷಕಾರಿಗಳಾಗಲಾರವು.

೩. ಮಿಥುನ

ಮನೋರಥವಂತೆ ಸಕಲ ಕಾರ್ಯಗಳೂ ಪರಿಪೂರ್ಣವಾಗುವುವು. ಬಂಧು ಮಿತ್ರರ ಕೊಡುಗೈ ಸಹಕಾರವು ನಿಮಗಿಂದು ಲಭಿಸುವುದರಿಂದ ರಾಜಕೀಯದಲ್ಲಾಗಲಿ ಸಾಮಾಜಿಕ ಕ್ಷೇತ್ರದಲ್ಲಾಗಲಿ ಕೀರ್ತಿ ವಿಜಯಗಳನ್ನು ಸಾಧಿಸುವಿರಿ. ಹಲವಾರು ತೆರದಿಂದ ಧನವು ನಿಮ್ಮ ಕೈ ಸೇರಲಿದೆ. ಚಿಕ್ಕ ಪುಟ್ಟ ಗೃಹ ತಾಪತ್ರಯಗಳು ಆಗಾಗ ಕಾಣಿಸಬಹುದಾದರೂ ತಾ 19, 23, 23 ಈ ದಿನಗಳನ್ನು ನಿಶ್ಚಿಂತೆಯಿಂದ ಕಳೆಯುವಿರಿ.

೪. ಕರ್ಕಟಕ

ಹಿಂದಿನ ವಾರಕ್ಕಿಂತ ನಿಮ್ಮ ಪರಿಸ್ಥಿತಿಯಿಂದು ಎಷ್ಟೋ ಸುಧಾರಿಸಲಿದೆ. ಪರಿಶ್ರಮಕ್ಕೆ ತಕ್ಕ ಫಲ ಲಭಿಸುವದಾದರೂ ಖರ್ಚಿನ ಭಾಗಗಳು ಹಲವಾರು ಇರುವುದರಿಂದ ಹಣದ ಬಿಕ್ಕಟ್ಟು ಕಡಿಮೆಯಾಗದು. ನೀಚ ಜನರೊಡನೆ ವಿರೋಧ ಕಲಹಗಳುಂಟಾಗಲಿವೆ. ಪಿತ್ತೋದ್ರೇಕ ಪ್ರಕೋಪದಿಂದ ಆರೋಗ್ಯವು ಚೆನ್ನಾಗಿರದು. ವಿನಾಕಾರಣ ವಾಕ್ಕಲಹವಾದೀತು. ಕೋರ್ಟು ಕಚೇರಿಗಳ ವ್ಯವಹಾರಕ್ಕೀ ಕಾಲವು ಅನುಕೂಲವಿಲ್ಲವು. ತಾ. 22, 23ರಲ್ಲಿ ಅಧಿಕ ವ್ಯಯ ಉಂಟಾದೀತು.

೫. ಸಿಂಹ

ಸುರಗುರುವಿನ ಪೂರ್ಣ ದೃಷ್ಟಿಯು ನಿಮ್ಮ ಮೇಲಿದ್ದರೂ ಇಂದಿನ ದಿನಗಳು ಸ್ವಲ್ಪ ದುಃಖದಾಯಕವಾಗಿ ಪರಿವರ್ತಿಸಲಿವೆ. ಸಾಂಸಾರಿಕ ತಾಪತ್ರಯಗಳು ನಿಮ್ಮ ಮನೋನೆಮ್ಮದಿಗೆ ಭಂಗತರಲಿವೆ. ಸಜ್ಜನರ ಪ್ರೀತಿಯಿಂದಾಗಿ ಆರಂಭಿಸಿದ ಕೆಲವೊಂದು ಕಾರ್ಯಗಳನ್ನು ಮಧ್ಯದಲ್ಲೇ ಕೈ ಬಿಡಬೇಕಾದೀತು. ನಾನಾ ತರದ ಖರ್ಚು ವೆಚ್ಚಗಳು ಸದಾ ಪ್ರಾಪ್ತವಿದ್ದರೂ ಬಂಧು ಜನರ ನೆರವಿನಿಂದಾಗಿ ಸುಧಾರಿಸಿಕೊಳ್ಳುವಿರಿ. ತಾ. 20 ರಿಂದ 23ರವರೆಗಿನ ದಿನಗಳು ಸುಖ ನೆಮ್ಮದಿಯನ್ನೀಯುವವು,

೬. ಕನ್ಯಾ

ಗುರ್ವಂಗಾರಕರು ನಿಮಗಿಂದು ಪ್ರತಿಕೂಲವಾಗಿ ನಿಂತರೂ ಇತರ ಗ್ರಹರೆಲ್ಲರ ಅನುಗ್ರಹಂ ಪಡೆದ ನಿಮಗೆ ಸದ್ಯದ ದಿನಗಳು ಸುಖಕರವಾಗಿ ಪರಿಣಮಿಸುವವು. ಸ್ವಯಂಸಕ್ತರಾದ ನೀವು ಯಾರೊಬ್ಬರ ನೆರವನ್ನೂ ಬಯಸಲಾರಿರಿ. ನಿಮ್ಮ ಪ್ರಯತ್ನಕ್ಕೆ ತಕ್ಕ ಫಲವು ಲಭಿಸುವುದರಿಂದ ದಿನಗಳು ಸುಗಮವಾಗಿ ಸಾಗಲಿವೆ. ಸ್ವಂತ ಆರೋಗ್ಯದತ್ತ ಹೆಚ್ಚಿನ ಗಮನ ಕೊಡಿರಿ. ವಾರಾಂತ್ಯದ 4 ದಿನಗಳು ಕಾರ್ಯ ವಿಜಯ ಧನ ಲಾಭದಾಯಕಗಳಾಗಿವೆ.

೭. ತುಲಾ

ಸಾಧಿಸಿದರೆ ಸಬಳ ನುಂಗಬಹುದೆಂಬ ಗಾದೆಯಂತೆ ನೀವಿಂದು ಯತ್ನಿಸಿದರೆ ನಿಮಗಾವ ಕಾರ್ಯವೂ ಅಶಕ್ಯವೆನಿಸದು. ಪ್ರಬಲರಾದ ಶತ್ರುವರ್ಗದವರೂ ನಿಮಗಿಂದು ಮಣಿಯುವರು. ನಿಮ್ಮ ಪ್ರಯತ್ನಕ್ಕಿಂತಲೂ ಅಧಿಕವಾದ ಫಲವು ಅನಾಯಾಸದಿಂದ ಲಭಿಸಲಿದೆ. ವ್ಯವಹಾರ ಚತುರರಾದ ನಿಮಗೆ ಉದ್ಯೋಗ ವ್ಯಾಪಾರ ಕೋರ್ಟು ಕಾರ್ಯಗಳಲ್ಲೂ ವಿಜಯ ಲಾಭಗಳುಂಟಾಗಲಿವೆ. ತಾ. 19, 24, 25 ಈ ದಿನಗಳು ತುಂಬಾ ಅನುಕೂಲವಿರುವುವು.

೮. ವೃಶ್ಚಿಕ

ನೀವಿಂದು ಕೆಲಸವನ್ನೇನೋ ಮಾಡುವಿರಿ. ಆದರೆ ಕೆಲಸಕ್ಕೆ ತಕ್ಕ ಫಲವು ಮಾತ್ರ ಕಾಣಸಿಗಲೊಲ್ಲದು. ಜನತೆಯೊಡನೆ ವಿರೋಧ ಕಲಹವುಂಟಾಗಲಿವೆ. ಮನೋದೌರ್ಬಲ್ಯವುಳ್ಳ ನಿಮಗೆ ವ್ಯವಹಾರದಲ್ಲಿ ತುಂಬಾ ಅಡೆತಡೆಗಳು ಪ್ರಾಪ್ತವಾಗಲಿವೆ. ಖರ್ಚಿಗೆ ತಕ್ಕ ಆದಾಯವೂ ಇರುವುದರಿಂದ ಹಣದ ಕೊರತೆಯು ನಿಮಗಿಂದು ಕಾಣಿಸಲಾರದು. ಆಧಿ ವ್ಯಾಧಿಗಳಿಂದ ಪೀಡಿತರಾದ ನಿಮಗೆ ವಾರಾದಿಯ ಮೂರು ದಿನಗಳು ಅನುಕೂಲವಿವೆ.

೯. ಧನು

ಕರ್ತವ್ಯ ದಕ್ಷರೂ ಕಾರ್ಯ ಸಾಧಕರೂ ಆದ ನಿಮಗೆ ಈ ವಾರವು ಸ್ವಲ್ಪ ಅನುಕೂಲವಾಗಿ ಪರಿಣಮಿಸಲಿದೆ. ರಾಜಕೀಯೇತರ ಚಟುವಟಿಕೆಗಳಲ್ಲಿ ವಿಜಯಿಗಳಾಗುವಿರಿ. ನಿಮ್ಮ ನಿರೀಕ್ಷೆಗಿಂತಲೂ ಅಧಿಕವಾದ ಫಲ ಲಭ್ಯವಾಗುವುದರಿಂದ ದಿನಗಳು ಸುಖದಿಂದ ಕಳೆವವು. ಹೆಂಡತಿ ಮಕ್ಕಳ ಆರೋಗ್ಯವು ಉತ್ತಮವಾಗಿರದು. ವ್ಯಾಪಾರಿ ವರ್ಗದವರು ಹೆಚ್ಚಿನ ಲಾಭಹೊಂದಲಿರುವರು. ತಾ. 20 ರಿಂದ 23ರ ವರೆಗಿನ ದಿನಗಳು ತುಂಬಾ ಅನುಕೂಲವಾಗಿವೆ.

೧೦. ಮಕರ

ನಿಮ್ಮ ಸುಖಲಾಭ ಪತಿಯಾದ ಅಂಗಾರಕನು ಅಷ್ಟಮದಲ್ಲಿಹನು. ರವ್ಯೇತರ ಸಕಲ ಗ್ರಹರೂ ಸಿದ್ಧ ನಿಮ್ಮ ಮೇಲೆ ಮುನಿದಿರುವ ಕಾರಣ ನಿಮ್ಮ ಪ್ರಯತ್ನಗಳೆಲ್ಲವೂ ನೀರಲ್ಲಿಟ್ಟ ಹೋಮದಂತೆ ವಿಫಲವಾಗಲಿವೆ. ಶತ್ರು ಜನರ ಕಾಟವು ಅಸಹನೀಯವಾಗುವುದು. ಗೃಹ ತಾಪತ್ರಯ ದೇಹಾಲಸ್ಯಗಳಿಂದಾಗಿ ಆಪತ್ತಿಗಾಗಿದ್ದ ಧನವನ್ನು ವ್ಯಯಿಸುವಿರಿ. ಬಂಧು ವರ್ಗದವರೊಳಗಿನ ಮನಸ್ತಾಪವು ಅಧಿಕವಾಗಲಿದೆ. ವಾರಾಂತ್ಯದ 4 ದಿನಗಳಲ್ಲಿ ಹೆಚ್ಚಿನ ತೊಂದರೆಗಳುಂಟಾಗಲಾರವು.

೧೧. ಕುಂಭ

ಧನಪತಿಯಿಂದು ಪ್ರತಿಕೂಲನಾಗಿದ್ದರೂ ಸುಖಭಾಗ್ಯಪತಿಯಾದ ಶುಕ್ರನು ಸ್ವಕ್ಷೇತ್ರಕ್ಕೆ ಬಂದಿಹ ಕಾರಣ ನಿಮ್ಮ ತನುಮನಗಳಿಗೆ ಸುಖಶಾಂತಿ ಲಭಿಸಲಿದೆ. ಹಿಡಿದ ಕಾರ್ಯವನ್ನು ಸುಗಮವಾಗಿ ಕೊನೆಹಾಯಿಸುವಿರಿ. ವ್ಯಾಪಾರಿ ವರ್ಗದವರಿಗಿದೊಂದು ಒಳ್ಳೆಯ ಸುಸಂಧಿಯಾಗಿಹುದು. ನಿಷ್ಕಾರಣವಾಗಿ ವಾಕ್ಕಲಹವಾಗುವ ಸಂಭವವಿದೆ. ಸತಿಪತಿಗಳಲ್ಲಿ ವಿರಸ ಹೆಚ್ಚೀತು, ತಾ 19, 24, 25 ಈ ದಿನಗಳಲ್ಲಿ ನಿಮ್ಮ ಬಯಕೆಗಳು ಪೂರ್ಣವಾಗುವವು.

೧೨. ಮೀನ

ಶುಕ್ಲ ಪಕ್ಷದ ಚಂದ್ರನೋಪಾದಿಯಲ್ಲಿ ನಿಮ್ಮ ಅದೃಷ್ಟವಿಂದು ದಿನದಿಂದ ದಿನಕ್ಕೆ ವೃದ್ಧಿ ಹೊಂದಲಿರುವುದು. ಬಂಧುವರ್ಗದವರೂ, ಮಿತ್ರವೃಂದವು ಕೂಡಾ ಸಕಲ ವಿಧದಿಂದ ನಿಮಗಿಂದು ನೆರವಾಗುವರು. ಎಂತಹ ಮಹತ್ಕಾರ್ಯವನ್ನು ಕೂಡಾ ನೀವಿಂದು ತೃಣ ಸಮವಾಗಿ ಗಣಿಸುವಿರಿ. ಹಣದ ಲೇವಾದೇವಿ ನಿಮಿತ್ತ ಕೆಲವೊಮ್ಮೆ ಕೋರ್ಟಿಗೆ ಹೋಗುವ ಪರಿಸ್ಥಿತಿ ಬರಲಿದೆ. ಅಂತೂ ನಿಶ್ಚಿಂತೆಯಿಂದ ದಿನಗಳೆವ ನಿಮಗೆ ತಾ. 20, 21 ಅತೀವ ಉತ್ತಮ ದಿನಗಳಾಗಿವೆ.

ಸರಕಾರವು ಗಂಡುತನ ತೋರಿಸಬೇಕು

(ಹನ್ನೊಂದನೇ ಪುಟದಿಂದ)

ಅವರಿಗೆ ಅಧಿಕಾಧಿಕ ಸೌಲಭ್ಯಗಳ ಪರಿಚಯ ಮಾಡಿಸಿ, ಅವನ್ನು ಒದಗಿಸಿ ಕೊಡುವಲ್ಲಿ ಪುನಃಪೂರ್ವಕ ನೆರವಾಗಬೇಕೆಂಬ ಭಾವನೆ ಮೂಡದ ವರೆಗೆ ರೈತನ-ಕೃಷಿಕ್ಷೇತ್ರದ ಯಾವ ಸುಧಾರಣೆ ಸೌಲಭ್ಯಗಳು ಎಲ್ಲರಿಗೂ ದೊರೆಯುವುದು ಶಕ್ಯವಿಲ್ಲ—ಈ ಕಾರಣದಿಂದ ಉತ್ಪಾದನೆ ಹೆಚ್ಚುವುದೂ ಸಾಧ್ಯವಿಲ್ಲ

ಈಗೀಗಿನ ದಿನಗಳಲ್ಲಿ ತೆಂಗು, ಅಡಿಕೆ ಮುಂತಾದ ಹಣದ ಬೆಳೆಗಳಿಗೆ ಅಧಿಕ ಪ್ರಾಶಸ್ತ್ಯ ದೊರೆತಿರುವುದನ್ನು ನಾವು ಅಲ್ಲಗಳೆಯುವಂತಿಲ್ಲ. ಒಂದು ಎಕ್ರೆ ಜಮೀನಿನಲ್ಲಿ ಆಹಾರ ಧಾನ್ಯ ಬೆಳೆಸುವುದಕ್ಕಿಂತ ರೊಕ್ಕದ ಬೆಳೆ ಲಾಭಕಾರಿಯಾದುದರಿಂದ ತೋಟಗಾರಿಕೆಗೆ ಬೆಲೆ ಹೆಚ್ಚಿರುವುದನ್ನು ನಾವು ಕಾಣುತ್ತೇವೆ. ಹೀಗಾಗಿ ಆಹಾರ ಧಾನ್ಯಗಳು ಬೆಳೆಯುತ್ತಿರುವ ಭೂಮಿಯ ಪ್ರಮಾಣವಿಂದು ದಿನೇ ದಿನೇ ಹ್ರಾಸವಾಗುತ ಬರುತ್ತಿದೆ. ಇದಕ್ಕೆ ಯಾವ ಪರಿಹಾರವಿದೆ? ಕಡಿಮೆ ಭೂಮಿಯನ್ನು ಹೆಚ್ಚು ಬೆಳೆ ತೆಗೆವ ಯೋಜನೆಯನ್ನು ರೈತರೆಲ್ಲರಿಗೂ ತಿಳಿಸಿ ಹೇಳಬೇಕು; ಅವರು ಇದನ್ನು ಕಾರ್ಯರೂಪಕ್ಕಿಳಿಸುವಂತೆ ಸೂಕ್ತ ಎಚ್ಚರಿಕೆ ತೆರೆದು ಕೊಳ್ಳಬೇಕು.

ಉಳುವವನಿಗೆ ಭೂಮಿಯನ್ನು ಕೊಡುವಂತಹ ನೀತಿಯನ್ನು ಆಳುವ ಪಕ್ಷವು ಬಹಳ ಹಿಂದೆಯೇ ಒಪ್ಪಿಕೊಂಡಿದೆ. ಇದೀಗ ಈ ನೀತಿಯಂತೆ ರೂಪಿತವಾದ ಮಸೂದೆಗಳಿಗೂ ಸಂವಿಧಾನ ಮನ್ನಣೆ ಒದಗಿದೆ. ಭೂಸ್ವಾಮಿತ್ವದ ಪ್ರಶ್ನೆಯನ್ನು ಅನಿರ್ದಿಷ್ಟ ಸ್ಥಿತಿಯಿಂದ ನಿರ್ದಿಷ್ಟ ಸ್ಥಿತಿಗೆ ತರುವುದರಿಂದ ತುಂಬ ಲಾಭವಾಗಬಹುದು. ಆದರೆ, ನಮ್ಮ ರಾಜ್ಯ ಸರಕಾರಗಳು ಇದರತ್ತ ತೀವ್ರಗಮನ ಹರಿಸುತ್ತಿರುವಂತೆ ಗೋಚರವಾಗುತ್ತಿಲ್ಲ. ಚುನಾವಣೆಗಳ ವೇಳೆಯಲ್ಲಿ ಮಾತ್ರವೇ ಆಳುವ ಪಕ್ಷ ಭೂ ಸುಧಾರಣೆಯನ್ನು ಉಲ್ಲೇಖಿಸುತ್ತದೆ. ಅದನ್ನು ಅನುಷ್ಠಾನಕ್ಕೆ ತರುವಲ್ಲಿ ಮೀನ ಮೇಷ ಎಣಿಸುತ್ತಿದೆ. ಇಂತಹ ದೋಲಾಯಮಾನ ಸ್ಥಿತಿಯಿಂದ ಅಧಿಕೋತ್ಪಾದನೆಯ ಗುರಿ ಈಡೇರುವುದು ಸಾಧ್ಯವಿಲ್ಲ. ಈ ಬಗೆ ಇದಮಿತ್ಥಂ ಎಂಬ ನಿರ್ಧಾರ ಅತಿ ಶೀಘ್ರದಲ್ಲಿ ಆಗಲೇ ಬೇಕು

ರೈತನು ಹುಟ್ಟಿನಿಂದ ಬಡವನಾಗಿದ್ದಾನೆ. ಆತನೂ ಅರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರಿಯಲು ಪೇಚಾಡಿದರೂ ಯಶ ಮಾತ್ರ ಅವನ ಪಾಲಿಗೆ ನಾಸ್ತಿಯಾಗಿದೆ. ಇದರಿಂದಾಗಿಯೇ ಸಾಹುಕಾರರು ಅವನಲ್ಲಿ ಉಳಿದಿರುವ ರಕ್ತವನ್ನೂ ಹೀರಲು ಮುಂದಾಗಿದ್ದಾರೆ. ಇತರ ಕೈಯಿಂದ ರೈತನ ಬಿಡುಗಡೆ ಹೊಂದದ ತನಕ ಆತನಿಗೆ ಮುಕ್ತಿಯಿಲ್ಲ; ಮುಕ್ತಿಯಿಲ್ಲದೆ ಉತ್ಸಾಹವಿಲ್ಲ; ಉತ್ಸಾಹವಿಲ್ಲದೆ ದುಡಿಮೆಯಿಲ್ಲ, ದುಡಿಮೆಯಿದೆ ಉತ್ಪಾದನೆಯೆಲ್ಲಿಂದ?

ರೈತನು ಬೆಳೆದ ಬೆಳೆಗೆ ನ್ಯಾಯವಾದ ಬೆಲೆ ಆತನು ಸುರಿಸಿದ ಬೆವರಿಗೆ ಬೆಲೆ ಗೊತ್ತಾಗಬೇಕು. ವ್ಯಾಪಾರಿಗಳ ಸಂಗ್ರಹ ಬುದ್ಧಿಯನ್ನು ಬಗ್ಗು ಬಡಿಯುವ ಕಾನೂನಾದರೆ ಸಾಲದು, ಈ ಕಾನೂನನ್ನು ಕಟ್ಟುನಿಟ್ಟಾಗಿ ಕಾರ್ಯರೂಪಕ್ಕೆ ತರುವ ಎದೆಗಾರಿಕೆ ಸರಕಾರಕ್ಕಿರಬೇಕು. ಮೋಡಗಳನ್ನು ಕೂಡಿಸಿ ಗುಡುಗಾಡಿದರೆ ಮಳೆ ಬರುವುದಿಲ್ಲ ಬೊಗಳುವ ನಾಯಿ ಕಚ್ಚುವುದಿಲ್ಲ. ನ್ಯಾಯದ ಮುಂದೆ ಯಾರಾದರೂ ತಲೆ ತಗ್ಗಿಸುವಂತೆ ಮಾಡುವ ಧೈರ್ಯ ಗಂಡೆದೆ ಇದ್ದರೆ ಮಾತ್ರ ಕೃತಕ ಅಭಾವ ಪರಿಸ್ಥಿತಿಯನ್ನು ಎದುರಿಸಬಹುದು.

ಈ ಬಾರಿಯು ಬೆಳೆ ಚೆನ್ನಾಗಿಯೇ ಬಂದಿದೆ. ಹೆಚ್ಚಿನ ರೈತರು ಇದನ್ನು ಮಾರಿಕೈ ತೊಳೆದುಕೊಂಡೂ ಆಯಿತು. ಆದರೆ, ದೇಶದಲ್ಲಿ ಮಾತ್ರ ಧಾನ್ಯವಿಲ್ಲ! ಇನ್ನು ರೇಶನಿಂಗ್ ಪದ್ಧತಿಯನ್ನು ತರುವ ವಿಚಾರವಿದೆಯಂತೆ! ಸಂಗ್ರಹವನ್ನು ಹೊರ ತೆಗೆಯದೆ ಇದ್ದಲ್ಲಿ ಹಂಚಲು ಧಾನ್ಯವಾದರೂ ಎಲ್ಲಿಂದ ಬರಬೇಕು? ಅದನ್ನು ಹೊರ ತೆಗೆದರೆ, ರೇಶನಿಂಗ್‌ನ ಅಗತ್ಯವಿರಲಾರದು.

ರಾಷ್ಟ್ರಪತಿಯವರು ಹೊರಡಿಸಿದ ಸುಗ್ರೀವಾಜ್ಞೆಯು ತನಗೆ ನೀಡಿದ ಅಧಿಕಾರಗಳನ್ನು ಸರಕಾರ ಉಚಿತ ರೀತಿಯಲ್ಲಿ ಉಪಯೋಗಿಸಿಕೊಂಡರೆ, ಆಗ ರೇಶನಿಂಗ್‌ನ ಅಗತ್ಯ ಕಾಣಿಸಲಾರದು. ದೇಶದಲ್ಲಿ ಬೆಳೆದಿರುವ ಆಹಾರ ವಸ್ತುಗಳಲ್ಲದೆ ವಿದೇಶಗಳಿಂದಲೂ ನಾವು ಆಮದು ಮಾಡಿಕೊಳ್ಳುತ್ತಿದ್ದೇವೆಂಬುದನ್ನು ಮಾತ್ರ ಮರೆಯಬಾರದು. ಏಕಾದಶಿ ಆಚರಿಸಲು ಉಪದೇಶಿಸಿದ ಮಾತ್ರಕ್ಕೆ ಪರಿಸ್ಥಿತಿ ಸುಧಾರಿಸುವುದಿಲ್ಲ.

Edited, Printed & Published by K. H. Shetty, at the Navayuga Press, Udipi, S. India

ನವಯುಗ

ಸಂಪುಟ ೪೪] ನವಂಬರ, ೨೭, ೭೪ [ಸಂಚಿಕೆ ೧೯

NAVAYUGA

leading nationalist weekly

೨೦
ಪೈಸೆ

ಗೇಹ ರಾಜ್ಯದಲ್ಲಿ

ಸಹನಾಶೀಲತೆಗೆ ಪ್ರಶಸ್ತಿಪತ್ರ

'ನೋಡೀಂದ್ರೆ......, ಇವತ್ತು ನಮ್ಮ ರುಕ್ಕು ಬಂದಿದ್ಳು..."

'ಯಾರು? ರುಕ್ಕು? ಓ ರುಕ್ಮಿಣಿ ಅಲ್ವೆ?'

'ಹೌದು ಅವಳೇ ..."

'ಹ್ಞೂಂ...ಏನಂತೆ ವಿಶೇಷ?'

'ವಿಶೇಷವೇನು? ಒಂದೈದು ರೂಪಾಯಿ ಇದ್ರೆ ಕೊಡೀಂತಂದ್ಳು...'

'ರೂಪಾಯಿಯೇ? ಏನ್ಮಾಡಿದೆ? ಕೊಟ್ಬಿಟೋ ಅಥ್ವಾ...."

'ಅಲ್ಲಾ, ಇದ್ದದ್ದನ್ನೆಲ್ಲಾ ಮುಂಜಾನೇನೇ ಇಸ್ಕೊಂಡು ಹೋಗಿದ್ರಿ....ಮತ್ತೆ ..."

'ಓ, ಹೌದೂಂದೆ ...ಪಾಪ, ಯಾವುದಕ್ಕೋ ಅಷ್ಟು ಆಗತ್ಯವಿತ್ತು?'

'ಯಾವುದಕ್ಕೇಂದ್ರೆ? ರೂಪಾಯಿಯ ಅಗತ್ಯ ಎರೋದು ನಿಮಗೆ ಮಾತ್ರಾಂತ ತೋರುತ್ತೆ....'

'ಹಾಗಲ್ಲ ಕಣೇ...ನೋಡು, ಗಾದೇ ಮಾತು ಕೇಳ್ಲಿಲ್ವಾ ನೀನು? ಹಣ ಕಂಡರೆ..."

'ನಿಮ್ಮ ಗಾದೇ ಮಾತನ್ನೆಲ್ಲಾ ಗದ್ದೆಗೆ ಹಾಕ್ತಿದ್ರೆ ಒಳ್ಳೆ ಗೊಬ್ಬರಾದ್ರೂ ಸಿಕ್ತಿತ್ತು."

"ನೋಡು, ನಾನನ್ನೋ ಮಾತ್ನ ಸರಿಯಾಗಿ ಕೇಳಿ...."

"ಹ್ಞೂಂ, ..ಮುಂದ್ವರ್ಸಿ ಪೂರ್ವಾಪರ ವಿವೇಚನೆ ಮಾಡಿ..."

"ಹೌದು ಹೌದು, ಮತ್ತೆ ಮಾತಾಡ್ಬೇಕು...."

"ವಿವೇಚನೆ ಮಾಡೋ ಶಕ್ತೀನೆಲ್ಲಾ ನೀವೊಬ್ರೇ ಗುತ್ತಿಗೆ ಹಿಡಿದಿರೋವಾಗ..'

"ಅಂತಹ ಗುತ್ತಿಗೆಯಿಂದ ಲಾಭಾದ್ರೂ ಏನೂಂತ?"

"ಅಂದ್ರೆ, ನಿಮ್ಗೆ ಬೇಕಾಗಿರೋದು ಲಾಭ ತರೋ ಗುತ್ತಿಗೆ ಮಾತ್ರಾಂತಾಯ್ತು,"

"ನನ್ಗೇಂದೇನು? ಎಲ್ರಿಗೂ ಹಾಗೇ ಅಲ್ವೆ?"

"ಆ ಎಲ್ರ ಕತೆ ಹಾಗಿರ್ಲಿ. ನಿಮ್ದು ಏನೂಂತ..."

"ಅಲ್ಲಾ, ನನ್ದು ಮತ್ತೇನಾದ್ರೂ ಇರುತ್ಯೆ?"

"ಹಾಗಾದ್ರೆ ನಷ್ಟವಪ್ಪ ಕೆಲಸವಂತೂ ನಿಮ್ಗೆ ಬೇಡಾಂತಾಯ್ತು."

"ಹ್ಹ ಹ್ಹ....ಅದಿರ್ಲಿ, ಈಗ ಹೇಳು, ನಿನ್ನ ರುಕ್ಕು ಹಾಗೆಲ್ಲಾ ಸುಮ್ಮನ್ನೆ ಬರೋವ್ಳಲ್ಲ..."

"ಸದ್ಯ ಅಷ್ಟಾದ್ರೂ ಸಮಾಧಾನ ಏದೆಯಲ್ಲ....?"

"ನೋಡಿ ಹಿಂದೊಂದ್ಸಲ ಬಂದು ಹದಿನೈದು ರೂಪಾಯಿ ಒಯ್ದಿದ್ಲು. ಹೇಳಿದ್ಳು ಆಗ, ನಮ್ಮವ್ರಿಗೆ ಸಂಬ್ಳ ಸಿಕ್ಕಿದ ದಿನ್ವ ತಪ್ಪದೆ ತಂದು ಕೊಡ್ತೀನೀಂತ. ಒಂದು ತಿಂಗ್ಳಾದ್ರೂ ಬರ್ಲಿಲ್ಲ. ಮತ್ತೊಂದು ದಿನ ರಾತ್ರೆ ಎಂಟರ ಹೊತ್ಗೆ ಬಂದು ಮುಟ್ಟಿಸಿದ್ಳು."

"ಅಂದ್ರೆ ಅಷ್ಟೊ ದಿನಾ...."

'ಮತ್ತೆ ಅನ್ನೋದೇನು ಪಾಪಾಂತ ಅನ್ನಿಸ್ತೆ. ಸಿಗೋ ನೂರು ರೂಪಾಯಿಯೂ ಹೊತ್ತು ಹೊತ್ತಿಗೆ ಸರಿಯಾಗಿ ಸಿಗೋದಿಲ್ಲಾಂತ ಕಣ್ಣೀರು ಸುರಿಸಿದ್ಳು....'

'ಹ್ಞೂಂ.... ಅವ್ಳ ಗಂಡ ಶಾಲಾ ಅಧ್ಯಾಪಕನಿರ್ಬೇಕು ಅಲ್ವೆ?'

'ಬರೇ ಶಾಲೇ ಅಲ್ಲ. ಅದ್ರ ಹಿಂದೆ ಖಾಸಗೀಂತ ಸೇರ್ಸಿಕೊಳ್ಳಿ.'

"ಖಾಸಗೀಂತೇನು? ಎಲ್ರದ್ದೂ ಹಣೆಬರಹ ಒಂದೇ"

"ಅಂದ್ರೆ, ಇದೆಲ್ಲಾ ನಿಮ್ಗೊತ್ತಿದೇಂತಾಯ್ತು."

"ನನ್ಗೇಂತೇನು? ಲೋಕಕ್ಕೇ ಗೊತ್ತಿರೋ ಸಂಗ್ತಿ ಯಿದು."

'ಲೋಕಕ್ಕೇ ಗೊತ್ತಿದ್ರೂ ನಮ್ಸರಕಾರಕ್ಕೆ ಗೊತ್ತಿಲ್ಲ ನೋಡಿ."

"ನಮ್ಸರಕಾರ ಈ ಲೋಕದಲ್ಲಿಲ್ಲ ಕಣೇ....'

'ನೋಡಿ, ಯಾವಾಗ್ಲೂ ನಾನು ಹಾಗಾಂತಂದ್ರೆ ನಿಮ್ಗೆ ಮೂಗಿನ್ತುದೀಲಿ ಸಿಟ್ಟು ಏರುತ್ತೆ ...'

'ಇರೋ ವಿಷಯವನ್ನ ಹೇಳೋಕೆ ಲಜ್ಜೆಯೇಕೆ? ತಪ್ಪು ಮಾಡಿದ್ರೂ ಅದನ್ನ ಒಪ್ಪಿಕೋ ಬೇಕು.'

'ಬರೇ ಒಪ್ಪಿಕೊಂಡೇನು ಪ್ರಯೋಜನಾಂತ? ತಿದ್ದಿಕೊಳ್ಳಲಾರದವ್ರು ಒಪ್ಪಿದ್ರೇನು, ಬಿಟ್ರೇನು?'

'ನಮ್ಸರಕಾರ ಶಿಕ್ಷಕರ ಉನ್ನತಿಗಾಗಿ ಬೇಕಷ್ಟು ಯೋಜನೆ ಮಾಡ್ತಾ ಇದೆ..."

'ನಿಮ್ಯೋಜನೆಗಳನ್ನೆಲ್ಲಾ ಒಲೆಗೆ ಹಾಕಿ. ಅವುಗಳಲ್ಲಿ ಯಾವುದು ಜ್ಯಾರಿಗೆ ಬಂದಿದೆ ಹೇಳಿ...?

'ನೋಡು, ತ್ರಿವಿಧ ಸೌಲಭ್ಯಗಳನ್ನ ಎಲ್ರಿಗೂ ಒದಗಿಸಿ ಕೊಟ್ಟಿದೆಯಲ್ಲಾ...'

'ಸರಿಯಾಯ್ತು ಬಿಡಿ. ನೋಡಿ, ನಿಮ್ಮ ಡೈರೆಕ್ಟರೋ ಯಾರೋ ಅಂದ್ರಂತೆ, ಅದು ತ್ರಿಶಂಕು ಸ್ವರ್ಗದಲ್ಲಿದೇಂತ.'

'ಏನಂತೆ? ಎಲ್ಲಿ ನೋಡಿದ್ದೇ ನೀನು?'

"ಇಲ್ಲಿ ನೋಡಿ, ಈ ಪೇಪ್ರಿನಲ್ಲೇ ಇದೆ...."

"ಇಲ್ಲಿ ಕೊಡು ನೋಡೋಣ....ಓ, ಹೆಚ್ಚಿನ ಸಿಬ್ಬಂದಿ ಕೊಡದೆ ಹೋದ್ರೆ ಆರ್ಥಿಕ ನೆರವು ಇಲ್ಲದೆ ಹೋದ್ರೆ...ಓ, ಹಾಗಾದ್ರೆ ಇದೆಲ್ಲಾ ಕನಸಿನ ಮಂಡಿಗೇನೇ ಸೈ."

"ಮತ್ತೆ ನೋಡಿ, ಇವತ್ತಿನ ಸುದ್ದಿ... ಕೇಂದ್ರದ ಶಿಕ್ಷಣ ಸಚಿವರ ಹೇಳಿಕೆ ನೋಡಿ..."

"...ತ್ರಿವಿಧ ಸೌಲಭ್ಯಗಳ ಯೋಜನೆ, ಶಾಲಾ ಶಿಕ್ಷಕರ ಮಕ್ಕಳಿಗೆ ಉಚಿತ ಶಿಕ್ಷಣ, ಸರಕಾರಿ ಮತ್ತು ಖಾಸಗಿ ಶಾಲೆಗಳಲ್ಲಿಯ ಶಿಕ್ಷಕರಿಗೆ ಸಮಾನ ವೇತನ... ಹೌದೇ, ತುಂಬಾ ಇದೆ. ಅವುಗಳಲ್ಲಿ ಪ್ರಶಸ್ತಿ ನೀಡುವುದೂ ಒಂದು!"

"ನೋಡಿ, ಇದನ್ನೆಲ್ಲಾ ನೋಡುವಾಗ ಏನಿದು ಹುಚ್ಚು ಅನ್ನಿಸ್ತದೆ."

"ಮತ್ತೆ ನೋಡು, ರಾಷ್ಟ್ರಪತಿ ರಾಧಾಕೃಷ್ಣನ್ನರ ಮಾತು— ಶಿಕ್ಷಕರ ಸೇವಾ ನಿಯಮಗಳನ್ನು ಸುಧಾರಿಸುವ ವಿಷಯದಲ್ಲಿ ಸರಕಾರ ನೀಡಿದ ಆಶ್ವಾಸನವನ್ನುಬೇಗನೇ ಕಾರ್ಯರೂಪಕ್ಕಿಳಿಸ ಬೇಕು."

"ಅಲ್ಲಾ ಅವ್ರು ಹೇಳಿದ ಮಾತ್ರಕ್ಕೆ ಎಲ್ಲಾ ಸರಿಯಾಗುತ್ತೆಯೆ? ನೋಡಿ, ಎಲ್ಲಿವರೆಗೇಂದ್ರೆ, ತಿಂಗಳ ಸಂಬಳ ಕೊಡೋದ್ರಲ್ಲಿಯೂ ಒಂದು ನಿಶ್ಚಿತ ದಿನ ಇಲ್ವಾದ್ರೆ...."

"ಅಷ್ಟೆ ಮಾತ್ರವಲ್ಲ, ಕೆಲವೊಮ್ಮೆ ಒಂದು ಎರಡು ಮೂರು ತಿಂಗಳ ಕಾಲ ವೇತನಾನೂ ಕೈಗೆ ದೊರೆಯೋದಿಲ್ಲಾಂತೆ...."

"ಹೀಗೆಲ್ಲಾ ಆದ್ರೆ ಅವ್ರು ಹೇಗೆ ಬದುಕ ಬೇಕೂಂತ....ಅವ್ರಿಗೆ ಹೊಟ್ಟೆ ಇಲ್ವೇಂತ....?"

"ಇದೆ ಇದೆ. ಖಂಡಿತಕ್ಕೂ ಇದೆ."

"ಮತ್ತೆ ಹೇಳ್ತಾರಲ್ಲ, ಶಿಕ್ಷಕರ ದೂರು ನ್ಯಾಯವೇ ಆದರೂ ಅವರು ಚಳವಳಿಗೆ ಕೈಹಾಕಬಾರದೂಂತ"

"ಸತ್ಯ, ಅವ್ರೂ ಚಳವಳಿ ಮಾಡಿದ್ರೆ ಮತ್ತೆ ದೇಶದ ಗತಿ?"

"ಅಂದ್ರೆ ನಿಮ್ಮ ಅಂಚೆತಂತಿಯವ್ರು ಎಲ್ಜೈಸಿಯವ್ರು, ಬೇಂಕಿನವ್ರು, ಧಕ್ಕೆಯವ್ರು, ರೇಲ್ವೆಯವ್ರು, ಕಾರ್ಖಾನೆಯವ್ರು ಇನ್ನೂ ಯಾರ್‍ಯಾರೆಲ್ಲಾ ಚಳವಳಿ ಮಾಡ್ಬಹುದು. ಇವ್ರು ಮಾತ್ರ ತಮ್ಮ ದೂರು ನ್ಯಾಯಾದ್ರೂ ಹಾಗೆ ಮಾಡಬಾರದು. ಅಲ್ಲಾ, ಒಂದು ಮಾತು ಹೇಳ್ತೀನೆ, ನಿಮ್ಮ ಸರಕಾರದವ್ರು ಸುಮ್ನೆ ಸಹನಾ ಶೀಲರಾದ ಅಧ್ಯಾಪಕರಿಗೆ ಏನು ಮಾಡಿದ್ದಾರೇಂತ?

'ಇನ್ನೇನು, ಎಲ್ಲಾ ಮಾಡುವುದ್ರಲ್ಲಿದ್ದಾರೆ...."

'ಹೌದು, ಮಾಡ್ತೇವೆ ಮಾಡ್ತೇವೇಂತ ಹೇಳುತ್ಲೇ ಇದ್ದಾರೆ. ಪರ್ವತ ಪ್ರಸವ ಅಂದ ಹಾಗೆ ತ್ರಿವಿಧ ಸೌಲಭ್ಯ ತಂದ್ರೆ ಮುದುಕನ ಮದುವೆಗೆ ಮುನ್ನೂರು ವಿಘ್ನಾಂತ ಹಣದ ಅಭಾವ. ಇನ್ನು ಏರಿದ ತುಟ್ಟಿ ಬತ್ತೇನಾದ್ರೂ ಬೇಗನೇ ಕೊಡೀಂತ ಖಾಸಗಿಯವ್ರು ಕೇಳಿದ್ರೆ, ಅದಕ್ಕೇ ಬೇರೆ ಜಿ. ಓ. ಬೇಕೂಂತ....ಉಳಿದ ಎಲ್ರಿಗೂ ವೆಚ್ಚ ಮಾಡೋಕೆ ನಿಮ್ಮಲ್ಲಿ ಹಣ ಏದೆ, ಆದ್ರೆ ಪಾಪ, ಅವ್ರಿಗೆ ಕೊಡೋದಕ್ಕೆ ಅದೇ ಇಲ್ಲ. ಮುನ್ಸಿದ್ರೆ ತಾನೇ ಮಾರ್ಗ ತೋರೋದು?"

"ಮುಗಿಯಿತೇ ನಿನ್ನ ಉಪನ್ಯಾಸ?"

"ಹೌದು, ನಾನು ಏನು ಹೇಳಿದ್ರೂ ನಿಮ್ಗೆ ಅದೊಂದು ಉಪನ್ಯಾಸವೇ..."

"ಹಾಗಲ್ವೆ, ನಿನ್ನ ಮಾತನ್ನ ನನ್ನ ಮುಂದೆ ಅನ್ನೋದಕ್ಕಿಂತ ಉಪಾಧ್ಯಾಯರ ಸಭೇಲಿ ಅನ್ನುತಿದ್ರೆಬೀಳುತಿತ್ತು...'

"ಏನು?"

"ಪ್ರಚಂಡ ಕರತಾಡನ!"

"ಸಾಕು ಸ್ವಲ್ಪ ಸುಮ್ನಿರೀಂದ್ರೆ..."

"ನೋಡು. ನಾನೊಂದು ಯೋಚ್ನೆ ಮಾಡಿದ್ದೀನಿ."

"ಏನಪ್ಪಾ ಅಂತಹ ಯೋಚನೆ?"

"ಮತ್ತೇನಿಲ್ಲಾ, ಮುಂದಿನ ಬಾರಿ ಒಂದು ಜಾಹೀರಾತು ಕೊಟ್ಟುಬಿಡೋದು...."

'ಜಾಹೀರಾತು? ಏನೂಂತ?'

'ಬೇಕಾಗಿದೆ....'

'ಏನು?'

"ಅಧ್ಯಾಪಕರ ದಿನಾಚರಣೆಯ ಅಧ್ಯಕ್ಷ ಪೀಠ!"

"ಗುರುವಾಯ್ತು ಇವ್ರದ್ದೊಂದು ತಮಾಷೆ..."

"ತಮಾಷೆಯಲ್ವೇ ಇದು ನಿಜಕ್ಕೂ...

"ನೀವು ಏನು ಬೇಕಾದ್ರೂ ಅಂದುಕೊಳ್ಳಿ. ನಾನೆಲ್ಲಿಯಾದ್ರೂ ತಪ್ಪಿದ್ರೆ ಹೇಳಿ...."

"ತಪ್ಪೋದು, ಅದ್ರಲ್ಲೂ ನೀನು!"

"ಸುಮ್ನಿರೀಂದ್ರೆ, ಸಾಕು ನಿಮ್ಮ ಬಡಾಯಿ."

"ನೋಡು, ನಾನು ಏನಂದ್ರೂ ನಿನಗೆ ಬಡಾಯಿಯಾಗುತ್ತೆ..."

"ಅದು ಹಾಗಿರ್ಲ್ರಿ, ಮತ್ತೆ ನೋಡಿ....'

"ನೋಡತ್ಲೆ ಇದ್ದೇನಲ್ಲಾ...."

"ಹೌದು, ನೋಡಿ, ನಾನು ಆಚೆ ಮನೆಯವ್ರಿಂದ ಕಡ ತಂದು ರುಕ್ಕೂಗೆ ಹಣ ಕೊಟ್ಟೆ; ಐದು ರೂಪಾಯಿ ಇಲ್ಲಿ ಕೊಟ್ಟುಬಿಡಿ."

"ಅದು ನನ್ಗೂ ಗೊತ್ತು ಕಣೇ....ಅಲ್ಲಾ ಅಕೆಗೆ ಅಷ್ಟು ತರಾತುರಿಯೇನೂಂತ?"

"ಅಷ್ಟೂ ತಿಳಿಯೋದಿಲ್ವೆ? ತಿಂಗಳ ಕೊನೆಯ ಪಕ್ಷ, ರುಕ್ಕಿಗೆ ಫೀಸು ಕಟ್ಬೋದಿದೆಯಂತೆ."

'ಹ್ಞೂಂ...ಉಚಿತ ಶಿಕ್ಷಣದ ಯುಗವಲ್ವೆ ಇದು? ಅದ್ಕೇ ಅತ್ಯಂತ ಸಹನಾಶೀಲರಾದ ಅಧ್ಯಾಪಕರಿಗೆ ಪ್ರಶಸ್ತಿ ನೀಡೋದಿರ್ಬೇಕು...."

'ನೋಡಿ, ನೀವು ಇನ್ನೂ ಇನ್ನೂ ಮಾತಾಡ್ಬೇಡಿ. ಹಸಿವೆಯಿದ್ರೆ ಬನ್ನಿ ಮತ್ತೆ. ನನ್ಗೆ ನಿದ್ದೆ ಕಣ್ಣೇಲಿ ಕಾಣಿದಾಡುತ್ತೆ...."

'ಪಾಪ. ಮೂರು ದಿನ ದೀಪದ ಮಹಿಮೆ ಹೌದು, ಕಡೆಗೆ ಹಾಲು ಸುರಿಯೋ ಬದ್ಲು ನೀರು ಸುರಿದ್ರೆ...ಹ್ಞೂ, ಹೋಗು ಒಟ್ಟು ನಾನೂ ಬಂದು ಬಿಟ್ಟೆ?

"ಹ್ಞೂಂ...."

—ಗೋರಾ.

'ನಚಿಕೇತ'ರ

ಹೃದಯಸ್ಪರ್ಶಿ

ನವೀನ ಕಾದಂಬರಿಗಳು

ಹಸುರು ಹಂಸ

ಬೆಲೆ: ರೂ. ಎರಡು.

ಋಣ ಯಾತ್ರೆ

ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ

ಬೆಲೆ ರೂ. 2—00

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ,

ನವಭಾರತ ಬುಕ್ ಡಿಪೊ, ಉಡುಪಿ.

Estd: 1921
NAVAYUGA
Leading Kannada Weekly
UDIPI, S Kanara
(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:
ನೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

++

ಜಾಹೀರಾತು ದರಗಳು:
ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಗದದ ಒಂದೇ ಮಗ್ಗುಲಲ್ಲಿ ಬದಿ ಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ರಿಪೋರ್ಟ್ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಅಮೇರಿಕದ 24 ವಿದ್ಯಾರ್ಥಿಗಳಲ್ಲಿ ಮರಿಯಾ ಇಸಾಕ್ಸ್ ಮತ್ತು ಹೆರಿಯಟ್ ಗೋಲ್ಡ್‌ಸ್ಟೋರ್ ಎಂಬಿಬ್ಬರು ದಿಲ್ಲಿಯ ಪುಸ್ತಕ ಭಂಡಾರವೊಂದನ್ನು ಸಂದರ್ಶಿಸಿದಾಗ ಹಿಂದಿಯ ಪ್ರಥಮ ಪರಿಚಯ ಮಾಡಿಕೊಳ್ಳುತ್ತಿರುವುದು.

ನವಯುಗ

ಸಂಪುಟ ೪೪	ಉಡುಪಿ	Vol 44
ಸಂಚಿಕೆ ೧೩	೨೬—೧೧—೧೯೬೪	No. 13

ವಚನ ಸುಧೆ

ಅಮೇಧ್ಯೋ ವೈ ಪುರುಷೋ
ಯದನೃತ ವದತಿ|
ತೇನ ಪೂತಿರಂತರತೋ ಮೇಧ್ಯಾ||
(ಶತಪಥ ಬ್ರಾಹ್ಮಣ ೧.೧ ೧.೧)

O ಅಸತ್ಯವನ್ನಾಡುವ ಕಾರಣದಿಂದಾಗಿಯೇ ಮನುಷ್ಯನು ಅಪವಿತ್ರನಾಗುತ್ತಾನೆ. ಆದುದರಿಂದ ಅಂತರ್ಯದಲ್ಲಿ ಪವಿತ್ರನಾಗಬೇಕು.

OO ಆಡುವ ಅಸತ್ಯ ಅಪವಿತ್ರ. ಸತ್ಯವಾದಿ ಮಾತ್ರ ಪವಿತ್ರನು; ಸತ್ಯ ಮಾತ್ರ ಪವಿತ್ರವು. ಅಸತ್ಯವನ್ನು ಯಾರೂ ನುಡಿಯಬಾರದು. ಎಲ್ಲರೂ ಸತ್ಯ ಸಂಧರಾಗಬೇಕು.

ಗೋವೆ ಯಾರದು?

ಗೋವೆಯನ್ನು ಪೋರ್ಚುಗೀಸರ ದಾಸ್ಯದಿಂದ ಮುಕ್ತಗೊಳಿಸಿಕೊಡನೆಯೇ ಎದ್ದ ಪ್ರಶ್ನೆ ಎಂದರೆ, ಅದನ್ನು ಯಾವ ರಾಜ್ಯದಲ್ಲಿ ವಿಲೀನಗೊಳಿಸಬೇಕು ಎಂಬುದು. ಆಗ ಪ್ರಧಾನಿಯಾಗಿದ್ದ ಪಂ| ನೆಹರೂರವರು ಕೇಂದ್ರಾಧೀನ ಪ್ರದೇಶವಾಗಿಯೇ ಅದನ್ನು ಮುಂದುವರಿಸಿಕೊಂಡು ಹೋಗುವುದಾಗಿ ಘೋಷಿಸಿದ್ದರು. ಕಳೆದ ವರ್ಷವೂ ಅಖಿಲ ಭಾರತೀಯ ಕಾಂಗ್ರೆಸ್ಸು ಇದನ್ನೇ ದೃಢಪಡಿಸಿ ಹತ್ತು ವರ್ಷಗಳ ವರೆಗೆ ಗೋವೆಯು ಇದೇ ರೀತಿ ಮುಂದುವರಿಯಬೇಕೆಂದೂ ಈ ಅವಧಿಯಲ್ಲಿ ಭಾರತದ ಉಳಿದ ರಾಜ್ಯಗಳಂತೆಯೇ ಅದು ಅಭಿವೃದ್ಧಿ ಹೊಂದಬೇಕೆಂದೂ ಅನಂತರ ತಮ್ಮ ಭವಿಷ್ಯವನ್ನು ಗೋವಾಂತಕರೇ ನಿರ್ಣಯಿಸಬೇಕೆಂದೂ ಒಪ್ಪಿಕೊಂಡಿತ್ತು. ಇದು ನ್ಯಾಯೋಚಿತವಾಗಿದೆ.

ಆದರೆ, ಮಹಾರಾಷ್ಟ್ರೀಯರು ಬೇರೆಯೇ ಯೋಚನೆ ಮಾಡಿದ್ದಾರೆ. ಯಾರು ಏನೇ ಹೇಳಲಿ, ಗೋವೆಯು ತಮ್ಮ ರಾಜ್ಯದಲ್ಲಿ ಸೇರ್ಪಡೆಗೊಳ್ಳಬೇಕೆಂದು ಅವರ ವಾದ. ವಾದಶೂರರಾದ ಅವರು ತಮ್ಮ ವಾದದ ನಡುವೆ ಇತರರು ಮಾತನಾಡಲು ಅವಕಾಶವನ್ನೇ ಕೊಡುವುದಿಲ್ಲವೆಂದ ಮೇಲೆ ಮಾತು ಕೇಳುವುದು ಅಷ್ಟರಲ್ಲಿಯೇ ಉಳಿಯಿತು. ಮಹಾರಾಷ್ಟ್ರ—ಕರ್ನಾಟಕ ಗಡಿ ವಿವಾದದಲ್ಲಿ ಅವರು ಹಿಡಿದ ಪಟ್ಟು, ಮಾಡುತ್ತಿರುವ ಕೀಟಲೆಗಳೇ ಇದಕ್ಕೆ ಜ್ವಲಂತ ನಿದರ್ಶನ. ಇದಕ್ಕೆ ಸರಿಯಾಗಿಯೇ ಎನ್ನುವಂತೆ ಕೇಂದ್ರ ಸಚಿವ ಸ್ಥಾನದಂತಹ ಉಚ್ಚ ಪದವಿಯಲ್ಲಿರುವ ಎಸ್. ಕೆ. ಪಾಟೀಲ್, ವೈ. ಬಿ. ಚವಾನ ಮೊದಲಾದವರೂ, ಮಹಾರಾಷ್ಟ್ರದ ಪದಾಧಿಕಾರಿಗಳೂ ಆಗಾಗ ಅವಸ್ವರವನ್ನೆಬ್ಬಿಸಿ, ಅವರ ವಾದಕ್ಕೆ ಪುಷ್ಟಿ ನೀಡುತ್ತಾರೆ. ತಮ್ಮ ಹೊಣೆಗಾರಿಕೆಯೇನು, ತಮ್ಮ ಮಾತಿನ ಪರಿಣಾಮವೇನು ಎಂಬುದನ್ನು ಕಿಂಚಿತ್ತೂ ಆಲೋಚಿಸದೆ, ಮರಾಠಿ ಜನರ, ಭಾಷೆಯ ಮೇಲಿನ ಸಂಕುಚಿತ ವ್ಯಾಮೋಹದಿಂದ ದೂರದೃಷ್ಟಿಯಿಲ್ಲದೆ ನಿಜಕ್ಕೂ ಶೋಚನೀಯ. ನ್ಯಾಯವಾದುದನ್ನು ಆಡಿದರೆ ಯಾರೂ ಅಲ್ಲಗಳೆಯಲಾರರು. ಆದರೆ ಸ್ವೇಚ್ಛೆಗೆಟ್ಟ ಮಾತುಗಾರಿಕೆಯು ಹೊರನಾಡವರೂ ರೊಚ್ಚಿಗೆಬ್ಬಿಸುವುದು ಸ್ವಾಭಾವಿಕ. ಗೋವೆಯು ಮಹಾರಾಷ್ಟ್ರದಲ್ಲಿ ಸೇರಲಿ, ಕರ್ನಾಟಕದಲ್ಲಿಯೇ ಕೂಡಲಿ, ಅದು ಭಾರತದ ಒಂದು ಅವಿಭಾಜ್ಯ ಅಂಗ. ಗೋವಾಂತಕರು ಭಾರತೀಯರು. ಅವರ ಸಂಸ್ಕೃತಿ ಶುದ್ಧ ಭಾರತೀಯ. ಈ ವಿಶಾಲ ಭಾವನೆಯನ್ನು ಸಂಕುಚಿತವಾಗಿಸುವುದು ಯಾರಿಗೂ ಶೋಭನೀಯವಲ್ಲ. ಗೋವಾಂತಕರೇ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕಲ್ಲದೆ ಮರಾಠಿಗರಲ್ಲ; ಕನ್ನಡಿಗರಲ್ಲ. ಆದರೆ, ಮರಾಠಿಗಳು ಮಾತ್ರ ಈ ಅಮರ ಸತ್ಯ ತತ್ತ್ವವನ್ನು ಒಪ್ಪುವುದಿಲ್ಲ; ಇದು ಅನ್ಯಾಯದ ಪರಮಾವಧಿಯಲ್ಲದೆ ಬೇರೆಯಲ್ಲ.

ಹಾಗೆ ನೋಡುವುದಾದರೆ, ಗೋವೆಯ ಸಂಬಂಧ ಹೆಚ್ಚಿರುವುದು ಕನ್ನಡ ನಾಡಿನೊಂದಿಗೆ. ಅವರ ಗಡಿಯು ಕನ್ನಡದೊಂದಿಗೆ ಬಹು ಉದ್ದವಾಗಿದೆ. ಅಲ್ಲಿನವರಿಗೆ ಅವಶ್ಯಕ ವಸ್ತುಗಳ ಪೂರೈಕೆ ಕನ್ನಡದಿಂದಾಗುತ್ತಿದೆ. ಗೋವೆಯಲ್ಲಿರುವ ಅಧಿಕ ಸಂಖ್ಯಾಕರಾದ ಕೊಂಕಣಿ ಭಾಷೆಯನ್ನು ಆಡುವವರ ಸಂಖ್ಯೆ ಹೆಚ್ಚಿರುವುದು ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ. ಮಹಾರಾಷ್ಟ್ರದಲ್ಲಿ ಅವರ ಸಂಖ್ಯೆ ಇರುವುದಾದರೂ ಅದು ಅತ್ಯಲ್ಪ. ಅಲ್ಲಿನವರು ಧಾರ್ಮಿಕವಾಗಿಯೂ ಕನ್ನಡ ಜಿಲ್ಲೆಗಳನ್ನು ಹೊಂದಿಕೊಂಡಿದ್ದಾರೆ. ಕನ್ನಡ ಜಿಲ್ಲೆಗಳಿಗೂ ಕೊಂಕಣಿಗರು ಗೋವೆಯಿಂದಲೇ ಬಂದವರು. ಹಾಗಿರುವಾಗ ಅವರ ಪೂರ್ವದವರಿಂದಿರುವ ಕನ್ನಡದಲ್ಲಿಯೇ ಗೋವೆಯು ಸೇರುವುದು ನ್ಯಾಯವಾದುದು. ಇದನ್ನು ಗೋವಾಂತಕರೂ ಒಪ್ಪಲೇಬೇಕು. ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಭೌಗೋಳಿಕ, ಆರ್ಥಿಕ ವ್ಯವಹಾರ—ಹೀಗೆ ಯಾವ ಸಂದರ್ಭವನ್ನೆತ್ತಿಕೊಂಡರೂ ಕನ್ನಡದಲ್ಲೇ ಗೋವೆಯು ಸೇರಿಕೊಳ್ಳುವುದು ಸಮರ್ಥನೀಯವಿದೆ. ಕೊಂಕಣಿ ಭಾಷೆಯು ಮರಾಠಿಯ ಒಂದು ರೂಪವೆಂದು ಮರಾಠಿಗಳು ಹೇಳಬಹುದು; ಆದರೆ ಕೇವಲ ೮೦೦—೧೦೦೦ ವರ್ಷಗಳಿಗೆ ಮೊದಲು ಮರಾಠಿ ಭಾಷೆಯೇ ಇರಲಿಲ್ಲ; ಇಂದಿನ ಮಹಾರಾಷ್ಟ್ರ ಕನ್ನಡದ ಗಂಡುನೆಲವಾಗಿಯೇ ಉಳಿದಿತ್ತು. ಗೋವೆ ಅಂತೂ ರಾಜಕೀಯವಾಗಿಯೂ ಕನ್ನಡದ ಭಾಗವಾಗಿಯೇ ಇತ್ತು.

ಕರ್ನಾಟಕದ ಮುಖ್ಯಮಂತ್ರಿ ನಿಜಲಿಂಗಪ್ಪನವರು ಮರಾಠಿ ನಾಯಕರಂತೆ ಹಠಬುದ್ಧಿಯಾಗಲಿಲ್ಲ. ಅವರು ಅಭಿಪ್ರಾಯಿಸಿದಾಗ ಇವರು ಪದೇ ಪದೇ ಉಚ್ಚರಿಸಿದ್ದರು: ಗೋವೆಯು ಗೋವಾಂತಕರದು; ಅವರ ಭವಿಷ್ಯವನ್ನು ಅವರೇ ನಿರ್ಧರಿಸಬೇಕು ಎಂದು. ಆದರೆ, ಮರಾಠಿಗರ ನಿಡಿಗೇಡಿತನದಿಂದ ಆಗಬಹುದಾದ ಅನ್ಯಾಯವನ್ನು ಕನ್ನಡಿಗರು ಸಹಿಸುವುದು

(ಹದಿನಾಲ್ಕನೇ ಪುಟ ನೋಡಿರಿ)

ಸಾರ್ವಜನಿಕರ ಅವಗಾಹನೆಗೆ

ಶ್ರೀ ಧರ್ಮಸ್ಥಳ ಕ್ಷೇತ್ರದ

ವಾರ್ಷಿಕ ಲಕ್ಷದೀಪೋತ್ಸವವು

ಇದೇ ತಿಂಗಳ ನವಂಬರ ತಾರೀಕು 29 ರಿಂದ ದಶಂಬರ ತಿಂಗಳ 3ನೇ ತಾರೀಕಿನ ವರೆಗೆ ನಡೆಯಲಿದೆ.

●

ಕಡೇಯ 2 ದಿವಸಗಳಲ್ಲಿ ವರ್ಷಂಪ್ರತಿ ನಡೆಯುವಂತೆ ಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು ನಡೆಯಲಿವೆ.

ನರಸಣ್ಣನ ಸರಸ

"ಸರ್, ಬೆಂಗಳೂರಿಗೆ ಅತ್ಯಗತ್ಯವೆನಿಸಿದ್ರೆ ಮಾತ್ರ ರೀಸನಿಂಗ್ ತರ್ತಾರಂತೆ...."

"ಬೆಂಗಳೂರಿನ ಕತೆ ಹಾಗಿರ್ಲಿ, ನಮ್ಮೂರಿಗಂತೂ ಅದು ಬೇಕೇ ಬೇಕು. ಇಲ್ಲಾದ್ರೆ, ನಾವು ಕೂಡಿಟ್ಟದ್ದನ್ನು ಮಾರೋದಾದ್ರೂ ಏನು?"

ಕಥಾ ಪ್ರಪಂಚ

ಭಿಕ್ಷುಕ ನೀಡಿದ ಪಾಠ

ಬರೆದವರು
ಶ್ರೀಮತಿ ದೇವಕಿ ಶೆಟ್ಟಿ, ಬೀರೂರು.

ಆ ಮುದುಕನಿಗೆ ವಯಸ್ಸಾಗಿತ್ತು. ಕಣ್ಣು ಕುರುಡಾಗಿರಲಿಲ್ಲ. ಆದರೆ ಸರಿಯಾಗಿ ಕಾಣಿಸುತ್ತಲೂ ಇರಲಿಲ್ಲ. ತನ್ನ ಊರುಗೋಲೇ ಅವನ ದಾರಿ ದೀಪ. ಅದರ ಸಹಾಯದಿಂದಲೂ, ಪೂರ್ಣ ಕಿವುಡಾಗದ ಕಿವಿಗಳ ಸಹಾಯದಿಂದಲೂ, ಮಸಕುಮಸಕಾಗಿ ಕಾಣುತ್ತಿರುವ ಪರೆ ಕಟ್ಟಿರುವ ಕಣ್ಣುಗಳ ಸಹಾಯದಿಂದಲೂ, ಎಲ್ಲದಕ್ಕಿಂತ ಹೆಚ್ಚಾಗಿ ತನ್ನ ಗಟ್ಟಿಮುಟ್ಟಾದ ಆಯುಷ್ಯದ ಬಲದಿಂದಲೂ ಇಷ್ಟು ಯಾವ ವಾಹನಗಳಡಿಗೂ ಬೀಳದೆ ಆ ಮುದುಕ ಭಿಕ್ಷೆ ಬೇಡುತ್ತಲೇ ಇರುವನು. ವಾರಕ್ಕೊಮ್ಮೆ ಮನೆಮನೆಗಳಿಗೆ ಅಲೆಯುತ್ತಿದ್ದನಲ್ಲದೆ ಬೇರೆ ದಿನಗಳಲ್ಲಿ ಅವನನ್ನು ಬಸ್‌ಸ್ಟೇಂಡಿನಲ್ಲಿಯೇ ನೋಡಬಹುದಾಗಿತ್ತು. ಶನೀಶ್ವರನ ವರಪ್ರಸಾದ ಶನಿವಾರವೇ ಸಿಗುವುದೇನೋ ಏನೋ ಅಂದು ಮಾತ್ರ ಅವನು ಬವನ ಖಾಳುಂ ಮನೆಗಳಲ್ಲಿ ಹಾಜರಾಗಿರುತ್ತಿದ್ದನು. ಅಂತಾದರೂ ಅವನಿಗೆ ಹೇರಳ ಧರ್ಮ ಸಿಗುವುದೆಂದಲ್ಲ. ನಮ್ಮಂತಹ ಕಲಿಯುಗದ ಧರ್ಮಾತ್ಮರು ಎಷ್ಟು ಕೊಡಬಲ್ಲರು? ಕಾಟ ತಪ್ಪಿಸಿಕೊಳ್ಳಲೆಂದು ಒಂದು ಪೈಸೆ, ಇಲ್ಲವಾದರೆ ಒಂದು ದೋಸೆ, ಅಥವಾ ಒಂದು ಹಿಡಿ ಜರಡಿಯಲ್ಲಿ ಮೇಲೆ ನಿಂತ ಹಿಟ್ಟು ಅವನ ಜೋಳಿಗೆ ಸೇರುತ್ತಿತ್ತು. ಅದು ಇತ್ತೀಚೆಗಂತೂ ೫-೬ ಮನೆಗಳಿಗಿಂತ ಹೆಚ್ಚಾಗಿ ಒಂದು ಹೆಜ್ಜೆಯೂ ಮುಂದಿಡಲಾರದಷ್ಟು ಸೊರಗಿದ್ದಾನೆ. ಆದರೆ ಅವನು ಸೊರಗಿರುವುದು ಮತ್ತು ನಿತ್ರಾಣದಿಂದ ಅಲ್ಲಲ್ಲಿ ಕುಳಿತು, ಎದ್ದು, ನಡುಕದೊಂದಿಗೆ ನಡೆಯುವುದು ನಮಗ್ಯಾರಿಗೂ ಕಾಣಿಸುತ್ತಿಲ್ಲ. ಮತ್ತೆ ಅದನ್ನೆಲ್ಲ ಗಮನಿಸಿ ಮರುಗುವುದು ನಮ್ಮೀನ ಜನಗಳಿಗೆ ಅಗತ್ಯವೂ ಇಲ್ಲದಾಗಿದೆ. ಅವನ ಒಂದು ದಿನದ ಭಿಕ್ಷೆಯೆಂದರೆ ಒಂದು ಹೊತ್ತಿನ ಅರೆಹೊಟ್ಟೆ, ಅಷ್ಟೆ. ಅವರೂ ಬದುಕಿರುವನಲ್ಲ! ಅವನಿಗೆ ಜೀವವೇನೋ ಬೇಡವಾಗಿದ್ದರೂ, ದೇವರ ಆಣತಿಯಂತೆ ಅವನು ಬದುಕಲೇ ಬೇಕಾಗಿತ್ತು. ಅವನ ಸಂಸಾರವೂ ಸಣ್ಣದಿರಲಿಲ್ಲ. ಮನೆಯಲ್ಲಿ ಕೈಕಾಲಿಗೆ ನೀರು ಕೊಟ್ಟು ಜೋಳಿಗೆಯನ್ನು ಇಸಿದುಕೊಂಡು ಅಂದಿನ ಭಿಕ್ಷೆಯನ್ನು ಕಣ್ಣರಳಿಸಿ ನೋಡುವ ಅರ್ಧಾಂಗಿ, ಅಲ್ಲ ಅರ್ಧ ಅಸ್ಥಿಪಂಜರ ಮನೆಯಲ್ಲಿ, ತಪ್ಪಾಯಿತು, ಮರದ ಕೆಳಗಿಲ್ಲದಿದ್ದರೂ, ಸಣ್ಣದೊಂದು ಜೋಪಡಿಯಲ್ಲಿ, ಮುದುಕನನ್ನೇ ತಿಂದು ಬಿಡುವಂತೆ ಅವನು ಅಷ್ಟು ದೂರದಿಂದ ಬರುವುದನ್ನೇ ಹಸಿದ ಕಣ್ಗಳಿಂದ ಬತ್ತಿದ ದೇಹಗಳಿಂದ ಮುದುಕನ ಮೇಲೆ ಮುಗಿಬೀಳಲು ಸಮಯವನ್ನೇ ಕಾಯುತ್ತಿದ್ದ ಮೂರು ನಾಲ್ಕು ಮೊಮ್ಮಕ್ಕಳೆಂದು ಕರೆಯಲ್ಪಡುವ ಎಲುಬಿನ ಹಂದರಗಳು ಓಡೋಡಿ ಬರುತ್ತಿದ್ದವು. ಎಷ್ಟು ಹಸಿದಿದ್ದರೂ ತಿನ್ನದೆ ಇಟ್ಟುಕೊಂಡಿದ್ದ ಹಳಸಿದ ತಿನಸನ್ನು ಮಕ್ಕಳ ಕೈಗೆ ಮುದುಕ ಕೂಡಲೇ ಹಾಕಿ ಬಿಡುತ್ತಿದ್ದ, ತನ್ನ ದೇಹ, ಸತ್ತು ಪ್ರಾಣ ರಕ್ಷಣೆಗಾಗಿ ಸ್ವಲ್ಪ ತಡವಾದರೆ ಮಕ್ಕಳ ಕಿರಿಚಾಟ, ಪರಚಾಟದಲ್ಲಿ ತನ್ನ ದೇಹ ವಾಲಿ ಬಿಟ್ಟರೆ ಮತ್ತೆ ತಲೆಯೊಡೆದೇ! ಕಾಲು ಮುರಿದೇ! ಮಗನ ಜೋಪಡಿಯಲ್ಲಿ ಅನ್ನವಿಲ್ಲದೆ ಕಾಲ ಕಳೆಯ ಬೇಕಾಗಬಹುದು. ಸೊಸೆಯೆಂಬ ಮಾಳಿಯ ಹೆಂಗಸು ಕೂಡಾ ನಿತ್ಯ ಸಹಸ್ರ ನಾಮ ಸುರಿಸುವುದನ್ನು ಕೇಳ ಬೇಕಾಗಬಹುದು. ಹೀಗಾಗಿ ಮಕ್ಕಳನ್ನು, ದೂರದಿಂದಲೇ ಬರುವಾಗ ಅವರ ಕಿರಿಚಾಟ, ಬೈದಾಟ ಹೊಡೆದಾಟಗಳಿಂದ ಗುರುತಿಸಿ ಹತ್ತಿರ ಬರುವಾಗಲೇ ಇದ್ದುದನ್ನು ಕೊಟ್ಟು ಬಿಡುತ್ತಿದ್ದ. ಹಾಗೂ ಹೀಗೂ ಜೋಪಡಿಯೊಳಗೆ ಬರುತ್ತಾ ಬರುತ್ತಾ ಸೊಸೆಯೆಂಬ ಮುದ್ದು ಹೆಂಗಸು ತನ್ನ ಹೊಟ್ಟೆ ಸಂಕಟ ತಾಳಲಾರದೆ ಕಿರಿಚಾಡುತ್ತಿರುವುದನ್ನು ಕೇಳುತ್ತಲೇ ಇರಬೇಕಾಗುತ್ತದೆ. ಇದು ಅವರೆಲ್ಲರ ನಿತ್ಯ ಅಭ್ಯಾಸ.

ಮುದುಕ ಬೇಡುತ್ತಿದ್ದನಾದರೂ ಕಾಡಿಸುತ್ತಿರಲಿಲ್ಲ. ಎಲ್ಲರೆದುರಿಗೂ ಕೈ ನೀಡುತ್ತಿದ್ದ. ಕೈಯಲ್ಲೇನಾದರೂ ಇದ್ದರೆ ಗಂಟಿನಲ್ಲಿ ನೇರಿಸಿಕೊಳ್ಳುತ್ತಿದ್ದ. ಇಲ್ಲವಾದರೆ ಮುಂದುವರೆಯುತ್ತಿದ್ದ. ಅಪರೂಪಕ್ಕೆ ಒಂದು ಹೊತ್ತು ಹೊಟ್ಟೆ ತುಂಬುವಷ್ಟು ಕೂಳು ಸಿಗುತ್ತಲೂ ಇತ್ತು. ಅಂತೇ ಎರಡೆರಡು ದಿನಗಳು ಉಪವಾಸ ಬೀಳುವ ದಿನಗಳಿಗೂ ಕಡಮೆಯೇನೂ ಇರಲಿಲ್ಲ.

ಒಂದು ದಿನ ಬಹಳ ಜನ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದರು. ನಾವೂ ಕೂಡ. ಆ ಮುದುಕ ಒಂದು ಕಡೆ ನಿಂತು ಕೈಯೊಡ್ಡುತ್ತಿದ್ದ. ಆದರೆ ಅಂದು ಅವನಿಗೆ ಒಬ್ಬೊಬ್ಬರೆದುರಿಗೂ ಹೋಗಿ ಗೋಗರೆಯಲಾಗುತ್ತಿರಲಿಲ್ಲವೆಂದು ಕಾಣುತ್ತಿತ್ತು. ಮುಂದೆ ನಿಂತು ಗೋಗರೆದರೂ ಪೈಸಾ ಬಿಸಾಡದ ಜನ ಇನ್ನು ಅವನ ಬಳಿ ಹೋಗಿ ಏನಾದರೂ ಕೊಡಬೇಕೆನ್ನುವ ಧರ್ಮ ಬುದ್ಧಿ ಯಾರಿಗೆ ಹುಟ್ಟಬೇಕು. ಬಹುಶಃ ಅಂದು ಅವನಿಗೇನೂ ಸಿಕ್ಕಿರಲಿಕ್ಕಿಲ್ಲ. ಅವನನ್ನು ನೋಡಿಯೂ ನೋಡದಂತೆ ದಾಟಿ ಹೋದವರಲ್ಲಿ ನಾವೂ ಇದ್ದೆವಲ್ಲ.

ಆದರೆ ಉಪಕಾರ ಮಾಡಲಾಗದಿದ್ದರೂ ಅಪಕಾರ ಮಾಡಬೇಕೆನ್ನುವ ಜನ ನಮ್ಮಲ್ಲಿ ಕಡಿಮೆ ಇರುವುದಿಲ್ಲ. ದಾನವಮಾಡಲಾಗದಿದ್ದರೆ ದಾನವರಾಗಿಯಾದರೂ ಇರೋಣ ಎನ್ನುವ ಮನೋಭಾವದವರು ಕೆಲವರು. ಹಾಗೆ ಕೈ ತುರಿಸುತ್ತಲೋ ನಾಲಗೆ ತುರಿಸುತ್ತಲೋ ಇರುವ ಕೆಲವು ಜನ ನಾಲಗೆಗೂ, ಕೈಗೂ ಏನಾದರೂ ಕೆಲಸ ಕೊಡುತ್ತಲೇ ಇರುವುದು ಒಳ್ಳೆದೆಂದು ಏನಾದರೂ ಕಾಲು ಕೆರೆದು ಜಗಳ ತೆಗೆಯುತ್ತಾರೆ. ಆದರೆ ಅದಕ್ಕೆ ಸರಿಯಾದ ಪಾತ್ರ ಸಿಗಬೇಕಷ್ಟೆ.

ಆ ದಿನ ಏನು ಕಾರಣವೋ ಏನೋ ಬಸ್ಸು ಬಹಳ ಹೊತ್ತು ಬಂದಿರಲಿಲ್ಲ. ಒಂದೂವರೆ ಗಂಟೆಯಿಂದಲೂ ಬಸ್ಸಿಗಾಗಿ ಕಾದು ಕಾದು ಬರುವ ಬಸ್ಸಿನ ಡ್ರೈವರ್ ಕಂಡಕ್ಟರಿಗೆಲ್ಲ ಸಹಸ್ರನಾಮವಾಗಿತ್ತು. ನಮಗೂ ಜೀವನವೇ ಬೇಸರವೆನಿಸುವಷ್ಟು ಬೇಸರಬಂದಿತ್ತು. ಎಲ್ಲರೂ ನಮ್ಮನಮ್ಮವರೊಳಗೇ ನಿನ್ನಿಂದಾಗಿಯೇ ಇವತ್ತು ಈ ಗತಿಯಾಯಿತು ಎಂದು ಒಬ್ಬರ ಮೇಲೊಬ್ಬರು ದೋಷಾರೋಪಣೆ ಹೊರಿಸಿಕೊಳ್ಳುತ್ತಿದ್ದೆವು ಎಷ್ಟು ಉತ್ಸಾಹದಿಂದ ವನೆಬಿಟ್ಟಿದ್ದೇವೋ ಅಷ್ಟು ಉತ್ಸಾಹ ಬಸ್ಸು ಹತ್ತುವಾಗ ಉಳಿಯಲಿಲ್ಲ. ಹೀಗೇ ಬಸ್ಸಿಗೆ ಕಾಯುತ್ತಿರುವಾಗ ಆ ಮುದುಕನ ಕಡೆಗೆ ಬಾಯಿ ಹೋಗುವುದು ಕೇಳಿಬಂತು ಎಲ್ಲ ಮುಖಗಳೂ ಸ್ವಲ್ಪ ಉಲ್ಲಾಸಗೊಂಡಂತೆ ಅತ್ತ ತಿರುಗಿದುವು. ಹೊತ್ತು ಕಳೆಯಲು ಏನೋ ಡೊಂಬರಾಟ ನೋಡಲು ಸಿಕ್ಕಿದಂತೆ.

ನಾಲ್ಕೈದು ಜನ ಸೇರಿ ಆ ಮುದುಕನನ್ನು ಪೂದಲಿರುತ್ತಿದ್ದರು. ಫಿನ್ಲೇ ಪಂಚೆ ಉಟ್ಟು, ಮೈಸೂರು ಸಿಲ್ಕಿನ ಶರ್ಟ ಶೇಟ್ರುವರೊಬ್ಬರು ಎಡದ ಕೈ ಬೆರಳುಗಳಿಂದ ಮೀಸೆಯ ಮೇಲಿರಿಸಿ ಆ ಕೈಗೆ ಆಧಾರವಾಗಿ ಬಲದ ಕೈಯನ್ನು ತಮ್ಮ ಹೊಟ್ಟೆಯ ಮೇಲೆ ಅಡ್ಡಲಾಗಿ ನಿಲ್ಲಿಸಿದ್ದರು. ಮೊದಲು ಅವರು ಮುದುಕನಿಗೇನೋ ಅಂದಿರಬೇಕು. ನಾವ್ಯಾರೂ ಗಮನ ಕೊಟ್ಟಿರಲಿಲ್ಲ. ಆದರೆ ನಾವು ಅತ್ತ ನೋಡಿದಾಗ ಅವರ ಹಣದಿಂದ ಕಾಫಿ ತಿಂಡಿ ದಕ್ಕಿಸಿಕೊಂಡವನೊಬ್ಬ ಹೇಳುತ್ತಿದ್ದ. "ನೀವು ಹೇಳೋದೇ ಸರಿ ರಾಯರೇ, ನೋಡಿ ಹೇಗೆಲ್ಲ ಸೋಗು ಹಾಕುತ್ತಿದ್ದಾರೆಂದು. ಒಳ್ಳೆ ಧಾಂಡಿಗನಾಗಿದ್ದಾನೆ. ಬೆಳಗೆಲ್ಲ ಕುರುಡು ಕುಂಟರಂತೆ ಸೋಗು ಹಾಕಿಕೊಂಡು ಭಿಕ್ಷೆ ಎತ್ತುತ್ತಾರೆ ರಾತ್ರಿಯೆಲ್ಲ ಮನೆಮನೆಗೆ ಕನ್ನ ಹೊಡೆದು ಮನೆಯಲ್ಲಿ ಚಿನ್ನ ಬೆಳ್ಳಿ ತುಂಬುತ್ತಾರೆ. ನೀವೇನೇ ಹೇಳಿ ಈ ಕಳ್ಳ ವೇಷಧಾರಿಯ ಹತ್ತಿರ ಇವತ್ತೇನೆಂದರೂ ನಾಲ್ಕೆಂಟು ಸಾವಿರವಾದರೂ ಇದ್ದೇ ಇದೆ."

"ಇದೆಲ್ಲಾ ಈ ಪ್ರಜಾಸರ್ಕಾರದ ಕಾರುಭಾರು. ಅವರೇ ಗಂಟು ಕಳ್ಳರು. ಇನ್ನು ಅವರ ಪ್ರಜೆಗಳು ಇವರು (ತಾನೇನಲ್ಲವೆಂಬಂತೆ) ಎಲ್ಲ ಸುಖ, ವೈಭವ, ಶಿಸ್ತು, ಕ್ರಮ, ಆ ನಮ್ಮ ಇಂಗ್ಲಿಷರ ಕಾಲದಲ್ಲೇ ಆಗಿಹೋಯಿತು. ನಮ್ಮಂತಹ ಸ್ವಾಭಿಮಾನಿಗಳು, ಮರ್ಯಾದಸ್ತರು ಆ ಮೊದಲಿನ ನೀತಿ, ನಿಯಮದಿಂದ ಬಾಳುವ ಕಾಲವಂತೂ ಇದಲ್ಲ..." ಇನ್ನು ಎಷ್ಟೋ ಹೊಲಸು ಮಾತುಗಳು.

ಆಶ್ಚರ್ಯವೆಂದರೆ ಆ ಮನುಷ್ಯನ ಮಾತಿಗೆ ಒಬ್ಬರೂ ಪ್ರತಿ ನುಡಿಯಲಿಲ್ಲ. ಮತ್ತೂ ಆ ಇಂಗ್ಲಿಷರ ಪಕ್ಷಪಾತಿ ಹಿಂದೂ ಮನುಷ್ಯನ ಪರವಾಗಿಯೇ ಸಹಾನುಭೂತಿಯಿಂದ ಕೆಲವರು ನೋಡುವಂತಿತ್ತು.

(ಹದಿಮೂರನೇ ಪುಟ ನೋಡಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p. a.	7ರಿಂದ 11 ತಿಂಗಳು. % p. a.	12ರಿಂದ 23 ತಿಂಗಳು. % p. a.	24ರಿಂದ 35 ತಿಂಗಳು. % p. a.	36ರಿಂದ 47 ತಿಂಗಳು. % p. a.	48ರಿಂದ 59 ತಿಂಗಳು. % p. a.	60ರಿಂದ 83 ತಿಂಗಳು. % p. a.	84ರಿಂದ 120 ತಿಂಗಳು. % p. a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ:-	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

[ಶೆಡ್ಯೂಲ್ಡ್ ಬ್ಯಾಂಕ್]

ರಿಜಿಸ್ಟರ್ಡ್ ಆಫೀಸು:— ಕೋರ್ಟು ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ)   ಸ್ಥಾಪನೆ:— 1920

ಮಹಿಳಾಮಂಡಳ

ಅನಾಹುತಗಳಿಂದ ಮಕ್ಕಳನ್ನು ಉಳಿಸಿರಿ



ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ಅಪಘಾತಗಳಿಗೆ ಸಿಕ್ಕಿ ಸಾಯುವ ಮಕ್ಕಳ ಸಂಖ್ಯೆಯು ಹೆಚ್ಚುತ್ತಿರುವದು ಎಲ್ಲರಿಗೂ ಕಳವಳವನ್ನುಂಟುಮಾಡಿದೆ. ಒಂದೊಂದು ಊರಿನಲ್ಲಿಯೂ, ಆಟದ ಮೈದಾನಗಳು ಸಾಕಷ್ಟಿಲ್ಲವೆಂಬುದನ್ನು ಇದು ಎತ್ತಿ ತೋರಿಸಿದರೂ, ತಾಯಿತಂದೆಗಳ ಕರ್ತವ್ಯದಲ್ಲೂ ಲೋಪವಿದೆಯೆಂದು ತಿಳಿಸುತ್ತದೆ. ತಾಯಿತಂದೆಯರು ಮಕ್ಕಳು ಬೀದಿಗಳಲ್ಲಿ ಆಡದಂತೆ ಪೂರ್ಣ ಎಚ್ಚರಿಕೆ ವಹಿಸಬೇಕಾದುದು ಅಗತ್ಯ.

ಜಗತ್ತಿನ ಒಂದೊಂದು ದೇಶದಲ್ಲಿಯೂ ಸಾಂಕ್ರಾಮಿಕ ರೋಗಗಳಿಂದ ಸಾಯುವ ಮಕ್ಕಳ ಸಂಖ್ಯೆಗಿಂತ, ರಸ್ತೆ ಅಪಘಾತಗಳಲ್ಲಿ ಸಾಯುವ ಮಕ್ಕಳ ಸಂಖ್ಯೆಯೇರಿಕೆ ತೀರಾ ಕಳವಳ ಕಾರಕವೂ, ಚಿಂತಿಸಬೇಕಾದ ವಿಷಯವೂ ಆಗಿದೆ. ಪಶ್ಚಿಮ ಜರ್ಮನಿಯ ಬವೇರಿಯಾ ಪ್ರಾಂತ್ಯ ಒಂದರಲ್ಲೇ ೧೯೬೨ರಲ್ಲಿ ೨೨ ವಯಸ್ಸಿಗೊಳಪಟ್ಟ ವ್ಯಾಧಿಗೆ ತುತ್ತಾಗಿ ಸತ್ತವರ ಸಂಖ್ಯೆಯು ೨೨೨ ಇದ್ದು ಅಪಘಾತಗಳಿಗೆ ಸಿಕ್ಕಿ ಸತ್ತ ಎಳೆಯರ ಸಂಖ್ಯೆಯು ೪೨೭ ಎಂದು ತಿಳಿದು ಬಂದಿದೆ. ಈ ಸಂಖ್ಯೆಯಲ್ಲಿ ಸೇಕಡಾ ನಲವತ್ತರಷ್ಟು ರಸ್ತೆಗಳಲ್ಲಾಡುತ್ತಿರುವ ಮಕ್ಕಳದ್ದೇ ಎಂದು ಬವೇರಿಯಾದ ಪ್ರಕಟನೆಯೊಂದು ತಿಳಿಸುತ್ತದೆ.

ಇದರಿಂದ ಮಕ್ಕಳು ಆಡುವ ಮೈದಾನಗಳ ಅವಶ್ಯಕತೆಯನ್ನು ನಾವು ಅರಿತುಕೊಳ್ಳಬಹುದಾಗಿದೆ. ಆಟದಮೈದಾನಗಳು ಅಲ್ಲಲ್ಲಿ ಹೆಚ್ಚಾಗಿದ್ದುವೆಂದರೆ, ಮಕ್ಕಳು ಬೀದಿಯಲ್ಲಾಡುವುದನ್ನು ಬಿಟ್ಟು ಸಹಜವಾಗಿಯೇ ಮೈದಾನಗಳಿಗೆ ಹೋಗುತ್ತಾರೆ. ನಗರ ನಿರ್ಮಾಪಕರು, ನಗರ ನಿರ್ಮಾಣವನ್ನು ಕೈಗೊಳ್ಳುವಾಗಲೇ ಮಕ್ಕಳ ಆಟದ ಮೈದಾನಗಳ ಬಗ್ಗೆ ಪೂರ್ಣ ಗಮನವನ್ನು ನೀಡಬೇಕು. ತಾಯಂದಿರು ತಮ್ಮ ಅಡಿಗೆ ಕೋಣೆಯಿಂದಲೇ, ಆಟದ ಮೈದಾನದಲ್ಲಿರುವಂತಹ ತಮ್ಮ ಮಕ್ಕಳನ್ನು ಗಮನಿಸಲು ಅನುಕೂಲಿಸುವಂತಹ ರೀತಿಯಲ್ಲಿ ಆಟದ ಮೈದಾನಗಳನ್ನು ನಿರ್ಮಿಸಬೇಕು. ಈ ಮೈದಾನಗಳ ನಿರ್ಮಾಣ ಒಂದರಿಂದಲೇ ರಸ್ತೆಯಲ್ಲಿ ನಡೆಯುವ ಮಕ್ಕಳ ಅನ್ಯಾಯದ ಕೊಲೆಯನ್ನು ತಪ್ಪಿಸಲು ಸಾಧ್ಯ ಎಂದು ಪಶ್ಚಿಮ ಜರ್ಮನಿಯ ಸಾಮಾಜಿಕ ಕಾರ್ಯಕರ್ತರಾದ ಪ್ರೊಫೆಸರ್ ಡಾ|| ಹೆಚ್. ಹಾರವ್‌ಸೆನ್ ತಿಳಿಸಿದ್ದಾರೆ. ಅಲ್ಲದೆ, ಉದ್ಯಾನಗಳು ಮಕ್ಕಳ ಬುದ್ಧಿ ಶಕ್ತಿಯನ್ನು ವಿಕಾಸಗೊಳಿಸುವಂತಿರಬೇಕು, ಅವುಗಳೊಂದಿಗೆ ಬರುವ ದೊಡ್ಡವರು ಕುಳಿತುಕೊಳ್ಳುವಸಲುವಾಗಿ ಅಲ್ಲಲ್ಲಿ ಬೆಂಚುಗಳನ್ನು ಹಾಕಿರಬೇಕು.

ಅಪಘಾತಗಳು ಹೊರಗೆ, ಬೀದಿಯಲ್ಲಷ್ಟೇ ಅಲ್ಲದೆ ಮನೆಯೊಳಗೂ ನಡೆಯುತ್ತವೆ. ಈ ಅಪಘಾತಗಳಿಗೆ ತಾಯಿತಂದೆಯರೇ ಪೂರ್ಣ ಜವಾಬ್ದಾರಿ. ಮಕ್ಕಳಿಗೆ ಸಹಜವಾಗಿಯೇ ಕುತೂಹಲ ಜಾಸ್ತಿ. ವಿದ್ಯುತ್ ತಂತಿಯನ್ನು ಆಡುವ ವಸ್ತುವೆಂದು ಹಿಡಿಯ ಹೋಗಿ ಸತ್ತಿರುವ ಮಕ್ಕಳೆಷ್ಟೋ! ಒಲೆಯ ಮೇಲೆ ಕುದಿಯುತ್ತಿರುವ ನೀರನ್ನು ಸುರಿದುಕೊಂಡು ಸತ್ತ ಮಕ್ಕಳೆಷ್ಟೋ! ತಗಣೆ ಔಷಧಿಮುಂತಾದ ವಿಷಗಳನ್ನು ತಿಂದು ಸತ್ತ ಮಕ್ಕಳೆಷ್ಟೋ! ಇದಕ್ಕೆಲ್ಲಾ ಕಾರಣರಾರು? ಇಂತಹ ವಸ್ತುಗಳೆಲ್ಲಾ ಮಗುವಿನ ಕೈಗೆ ದೊರಕುವಂತೆ ಇಟ್ಟವರು ಯಾರು? ಈ ವಿಷಯದಲ್ಲಿ ತಂದೆತಾಯಿರನ್ನಲ್ಲದೆ, ಅನ್ಯರನ್ನು ನಿಂದಿಸಿ ಫಲವೇ ಇಲ್ಲ. ಕೈಮೀರಿ ಹೋದ ಮೇಲೆ ತಲೆ ಚಚ್ಚಿಕೊಂಡರೆ ಪ್ರಯೋಜನವಿರುವುದಿಲ್ಲ.

ಜರ್ಮನಿಯ ಫ್ರೀಬರ್ಗ್ ವಿಶ್ವವಿದ್ಯಾಲಯದ ಡಾ|| ಆರ್. ಕ್ಯಾಡಿಕ್ ತಾವು ಇದುವರೆಗೆ ಮೂರು ವರ್ಷಗಳೊಳಗಿನ ೧೭೦೦ ಮಕ್ಕಳಿಗೆ ಚಿಕಿತ್ಸೆ ನೀಡಿರುವುದಾಗಿಯೂ ಅದರಲ್ಲಿ ಮೂರನೆಯ ಒಂದು ಭಾಗದಷ್ಟು ಮೇಲೆ ತಿಳಿಸಿದಂತಹ ಅಪಘಾತಗಳಿಗೆ ತುತ್ತಾದ ಪ್ರಸಂಗವೆಂದೂ ಹೇಳಿದ್ದಾರೆ. ಯಾವ ಅಪಾಯಕರ ವಸ್ತುವೂ ಅಜ್ಞಾನೀ ಮಕ್ಕಳ ಕೈಗೆ ಎಟುಕದಂತೆ ತಾಯಿತಂದೆಯರು ಬಹು ಎಚ್ಚರಿಕೆಯಿಂದ ವರ್ತಿಸಬೇಕೆಂದು ಕ್ಯಾಡಿಕ್ ಎಚ್ಚರಿಸಿದ್ದಾರೆ.

ಒಲೆಯಲ್ಲಿ ಉರಿಯುತ್ತಿರುವ ಕೊಳ್ಳಿಗಳನ್ನು ಎಳೆದು ಬಟ್ಟೆಗೆ ಬೆಂಕಿ ಹಚ್ಚಿಕೊಳ್ಳುವ ಮಕ್ಕಳ ಸಂಖ್ಯೆಯೂ ಗಾಬರಿಗೊಳಿಸುವಂತಿದೆ. ಬೆಂಕಿ ಹತ್ತಿದ ಮಕ್ಕಳು ಉಳಿಯುವುದೇ ಕಷ್ಟ. ಹಾಗೆ ಉಳಿದರೂ ಕಲೆಗಳು ನಿಂತು ಬಿಡುವುವು. ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುವಾಗಲೇ ಕಲೆಗಳು ನಿಲ್ಲದಂತೆ ವೈದ್ಯರು ಎಚ್ಚರಿಕೆ ವಹಿಸಬೇಕು.

ಆಧುನಿಕ ಜಗತ್ತಿನ ಸಪ್ತ ರೋಗಗಳು

೧. ತತ್ವ ಇಲ್ಲದ ರಾಜಕಾರಣ.
೨. ದುಡಿತ ಇಲ್ಲದ ದುಡ್ಡು.
೩. ಆತ್ಮ ನಾಶದ ಸುಖಭೋಗ
೪. ಚಾರಿತ್ರ್ಯವಿಲ್ಲದ ಜ್ಞಾನ.
೫. ನೀತಿ ಬಿಟ್ಟ ವ್ಯಾಪಾರ.
೬. ಮಾನವತೆ ಇಲ್ಲದ ವಿಜ್ಞಾನ.
೭. ತ್ಯಾಗವಿಲ್ಲದ ಪೂಜೆ.

—ಮ. ಗಾಂಧಿ.

ಯಶಸ್ಸಿನ ಮುನ್ನಡೆಯಲ್ಲಿ ಮತ್ತೊಂದು ಹೆಜ್ಜೆ

ಸಿಂಡಿಕೇಟ್ ಬ್ಯಾಂಕು

ಭಾರತದ ರಾಜಧಾನಿಗೆ ಪದಾರ್ಪಣ ಮಾಡುತ್ತಿದೆ.

ಸಿಂಡಿಕೇಟ್ ಬ್ಯಾಂಕು ಶೀಘ್ರವೇ ತನ್ನೆರಡು ಶಾಖೆಗಳನ್ನು ದೆಹಲಿಯ ಈ ಕೆಳಗಿನ ವಿಭಾಗಗಳಲ್ಲಿ ತೆರೆಯುವುದೆಂದು, ತಿಳಿಸಲು ತುಂಬಾ ಸಂತೋಷ ಪಡುತ್ತೇವೆ.

ಮಥೋ ಮೇನ್ಶನ್,
29A/1, ಅಸಫ್ ಆಲಿ ರಸ್ತೆ,
ನ್ಯೂ ಧಿಲ್ಲಿ-1

★

ಅಜಮಲ್‌ಖಾನ್ ರಸ್ತೆ,
ಧಿಲ್ಲಿ-5

ತನ್ನ 195 ಶಾಖಾ ಸಮುದಾಯದಲ್ಲಿ— ರಾಜ್ಯಮಟ್ಟದ ಮುಖ್ಯ ಪಟ್ಟಣಗಳಾದ ಬೊಂಬಾಯಿ ಮದ್ರಾಸು ಬೆಂಗಳೂರು, ತಿರುವನಂತಪುರ ಮತ್ತು ಹೈದರಾಬಾದ್‌ಗಳಲ್ಲಿ ಶಾಖೆಗಳನ್ನು ಹೊಂದಿದ ಸಿಂಡಿಕೇಟ್ ಬ್ಯಾಂಕು ಈಗ ಭಾರತದ ರಾಜನಗರಿಯನ್ನು ಪ್ರವೇಶಿಸುವುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: **ಮಣಿಪಾಲ**

ಶಾಖೆಗಳು 195.

ಚಲಾವಣಾ ಸಂಪತ್ತು 60 ಕೋಟಿಗೂ ಮಿಕ್ಕಿ.



SYNDICATE BANK LIMITED
REGD. OFFICE, MANIPAL ESTD 1925



In the Court of the Munsiff Udipi

O. P. No. 43/64

K. Sunanda Shetty ... Petitioner
vs
Devamma Shedthi ... Respondent

The abovenamed Petitioner has applied for a Succession Certificate in respect of a moiety of the Insurance amount under Policy No. 12514705 which stood in the name of her late husband A. Sundara Shetty. Any person having any objection to the grant of the said Certificate may appear before this Court either in person or by Pleader on 7—12—64 at 11 A. M.

K. L. Aithal,
Vakil for Petitioner
17—11—64.

ಭಾರತದ ಮೇಲೆ

ಚೈನಿ ಅಣುಗುಂಡೆಬ್ಬಿಸಿರುವ ಅಲೆ

ಬರೆದವರು: ಶ್ರೀ ಶಿವಶಂಕರ.

ಅದೇನೇ ಆಗಲಿ, ಅಣುಗುಂಡನ್ನು ನಾವು ತಯಾರಿಸುವುದಿಲ್ಲವೆಂದು ನಮ್ಮ ಪ್ರಧಾನಿ ಶ್ರೀ ಶಾಸ್ತ್ರಿ ಲಾಲಬಹದೂರರು ಹೇಳಿದ್ದಾರೆ. ಇದ ಚೈನೀಯರಿಗೆ ಇತ್ತಿರುವ ಆಶ್ವಾಸನೆಯಲ್ಲ ಜಗತ್ತಿಗೆ ಪ್ರಕಟಪಡಿಸಿರುವ ನಮ್ಮ ಸಾತ್ವಿಕ ಗುಣವಿದೆ. ರಕ್ಷಣಾ ಮಂತ್ರಿ ಶ್ರೀ ಯಶವಂತ ಚವ್ಹಾಣರೂ ಅಣುಗುಂಡನ್ನು ತಯಾರಿಸುವದಿಲ್ಲವೆಂದೂ ಅಮೇರಿಕದ ಅಣು ಕೊಡೆಯನ್ನು ಸ್ವೀಕರಿಸುವದಿಲ್ಲವೆಂದೂ ಸ್ಪಷ್ಟವಾಗಿ ಹೇಳಿದ್ದಾರೆ. ಭಾರತದಲ್ಲಿ ಇರುವ ಶಕ್ತಿಯಿಂದಲೇ ಚೈನೀ ಆಕ್ರಮಣವನ್ನೆದುರಿಸಲಾಗುವದೆಂದೂ ಅವರು ಹೇಳಿರುವರು. ಭಯಪಡುವ ಆವಶ್ಯಕತೆ ಇಲ್ಲವೆಂದೂ, ಆಧುನಿಕ ಜಗತ್ತಿನಲ್ಲಿ ಅಣುಗುಂಡುಗಳೊಂದಿಗೂ ಬಾಳಲು ಕಲಿಯಬೇಕೆಂದೂ ಅವರು ಉಪದೇಶವನ್ನಿತ್ತಿರುವರು. ಅಣುಗುಂಡು ತಯಾರಿಸುವ ಕುರಿತು ಅವರ ಅಭಿಪ್ರಾಯವನ್ನು ಕೇಳಿದಾಗ, ಅವರು ಉತ್ತರ ಸುಭದ್ರವಲ್ಲವೆಂದೂ, ಆರ್ಥಿಕ ಪರಿಸ್ಥಿತಿ ಮಾತ್ರ ಅದಕ್ಕೆ ಕಾರಣವಲ್ಲದೆ, ಪ್ರಪಂಚದ ಅಭಿಪ್ರಾಯವೂ ಮುಖ್ಯವೆಂದಿರುವರು. ಭಾರತಕ್ಕೆ ಸಾಧ್ಯವಿದ್ದರೂ ಅದೆಂತಹ ಭಯಂಕರ ಹಾಗೂ ಅಪಾಯಕಾರಿ ಸನ್ನಿವೇಶದಲ್ಲೂ ಅಣುಗುಂಡನ್ನು ತಯಾರಿಸುವದಿಲ್ಲವೆಂದು ಪ್ರಪಂಚ ತಿಳಿದುಕೊಂಡಿದೆಂದು ಅವರು ಹೇಳಿರುವರು. ಚೈನಾ ನಡಿಸಿರುವ ಅಣುಗುಂಡು ಪ್ರಯೋಗದ ಭಾರತೀಯ ಸೈನಿಕರ ನೈತಿಕ ಮಟ್ಟದ ಮೇಲೆ ಪರಿಣಾಮವನ್ನು ಬೀರಿಲ್ಲವೆಂದೂ ರಕ್ಷಣಾ ಮಂತ್ರಿಗಳು ನಮ್ಮ ಸೇನೆಯ ಪರವಾಗಿ ಹೇಳಿದ್ದಾರೆ. ಸೇನೆಯ ನೈತಿಕ ಮಟ್ಟದ ಕುರಿತು ಸಾರ್ವಜನಿಕರು "ಇದಮಿತ್ಥಂ" ಅನ್ನುವದು ಸ್ವಲ್ಪ ಕಷ್ಟವೇ ಸರಿ. ಕಮೂನಿಷ್ಟ ಚೈನಿಸಿಪದೆ ಭಾರೀ ಆಕ್ರಮಣವನ್ನು ನಡೆಸಿದಾಗ ಇದ್ದ ಉಡುಗೆ ಅಸ್ತ್ರಗಳಲ್ಲೇ ಅವರನ್ನೆದುರಿಸಲು ಉತ್ಸಾಹದಿಂದ ಸಾಗಿದ್ದ ಸೇನೆಗೆ ಅಣುಗುಂಡು ಪ್ರಯೋಗ ಏನು, ಜಲಪ್ರಳಯ ಗುಂಡೇನು, ಎಲ್ಲಾ ಒಂದೇ ಇದೆ. ಆಕ್ರಮಣದ ಹೆಸರು ಕೇಳಿದೊಡನೆ ಓಡಿ ಬರುತ್ತಿರುವ ಸೇನಾಧಿಕಾರಿಗಳಿರುವಾಗ ಬಡಸೇನೆಯಾದರೂ ಅದೇನು ಮಾಡೀತು? ಆಕ್ರಮಣವನ್ನು ನಿಜವಾಗಿ ಎದುರಿಸುವವರು ಸೈನಿಕರೇ ಇದ್ದರೂ ಅವರ ಮನಸ್ಸಿನ ಆಗು ಹೋಗುಗಳನ್ನು ಶ್ರೀ ಸಾಮಾನ್ಯನು ಓದುವದು ಸ್ವಲ್ಪ ಕಷ್ಟವೇ ಸರಿ. ಆದರೆ ತನ್ನ ಸುತ್ತಮುತ್ತಲಿನ ವಾತಾವರಣದ ಕಾವು—ತಂಡಿಯನ್ನು ಅತಿ ಸುಲಭವಾಗಿ ಅರ್ಥಮಾಡಿಕೊಳ್ಳಬಲ್ಲನು.

ಮೊದಲನೆಯದಾಗಿ ಭಾರತದಲ್ಲಿರುವ ರಾಜಕೀಯ ಪಕ್ಷಗಳ ಅಭಿಪ್ರಾಯವೇನೆಂಬುದನ್ನು ಕಾಣುವ. ಆದರೆ ಈಗಿನ ಪರಿಸ್ಥಿತಿಯಲ್ಲಿ ಶ್ರೀ ಸಾಮಾನ್ಯನಿಗೆ ಅದೂ ಸುಲಭ ಸಾಧ್ಯವಲ್ಲ ಯಾಕೆಂದರೆ ಪಕ್ಷಕ್ಕೊಂದು ಅಭಿಪ್ರಾಯವೆನ್ನುವದು ಅಪರೂಪ. ಎಲ್ಲರಿಗೂ ವ್ಯಕ್ತಿ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯವಿರುವಾಗ ಒಂದೇ ಅಭಿಪ್ರಾಯ ಎಲ್ಲರಲ್ಲಿ ಇರುವದಾದರೂ ಹೇಗೆ? ಈಗ ಅತೀ ದೊಡ್ಡ ಪಕ್ಷವೆನಿಸಿಕೊಂಡಿರುವದು ಹಾಗೂ ಅಧಿಕಾರಲಗಾಮನ್ನು ಹಿಡಿದುಕೊಂಡಿರುವುದು ಕಾಂಗ್ರೆಸ್ ಪಕ್ಷ. ಆ ಪಕ್ಷದವರೇ ಇರುವ ಪ್ರಧಾನಿ ಹಾಗೂ ರಕ್ಷಣಾ ಮಂತ್ರಿಯವರು ಅಣುಗುಂಡನ್ನು ಭಾರತ ತಯಾರಿಸುವದೇ ಇಲ್ಲವೆಂದು ಘಂಟಾಘೋಷವಾಗಿ ಹೇಳುತ್ತಿರುವಾಗ ದರೂ ಎಲ್ಲರ ಅಭಿಪ್ರಾಯವೂ ಹಾಗೇನೇ ಇರುವದಿಲ್ಲ. ಸರ್ವ ಶ್ರೀ ರಾಮಸುಭಾಗಸಿಂಘ; ಮಹಾವೀರ ತ್ಯಾಗಿ ಅಥವಾ ಹನುಮಂತಯ್ಯನವರನ್ನು ಕಂಡು ವಿಚಾರಿಸಿದರೆ ಸತ್ಯ ಸಂಗತಿ ತಿಳಿದೀತು ಏನಿದ್ದರೂ ಕಾಂಗ್ರೆಸ್ಸು ಅಣುಗುಂಡು ತಯಾರಿಗೆ ಇಂದು ವಿರುದ್ಧ ಸ್ವರ ಎತ್ತಿದೆನ್ನಬಹುದು. ಸದಸ್ಯರ ಸಾಧಾ ಅಭಿಪ್ರಾಯವನ್ನು ತೆಗೆದುಕೊಂಡು ಮಾಡುವದಾದರೂ ಏನು?

ಸ್ವತಂತ್ರ ಪಾರ್ಟಿಯವರಲ್ಲಂತೂ ಅದ್ಯಾವಾಗಲೂ ಒಮ್ಮತವೆಂಬುದಿರುವದಿಲ್ಲ. ಪ್ರತೀಯೊಂದು ವಿಷಯದಲ್ಲೂ ಹಾಗೆಯೇ. ಹಾಗಿರುವಾಗ ಅಣುಗುಂಡಿನಂತಹ ಭಾರೀ ವಿಷಯದಲ್ಲಿ ಅವರು ಒಮ್ಮತವನ್ನು ಪ್ರಕಟಪಡಿಸುವುದಾದರೂ ಹೇಗೆ? ಹಾಗೆ ಪ್ರಕಟಪಡಿಸಿದಲ್ಲಿ ಪಕ್ಷಕ್ಕೆ ಆ ಹೆಸರಾದರೂ ಏಕೆ? ಅದರ ಸ್ಥಾಪಕಾಚಾರ್ಯ ರಾಜಗೋಪಾಲಾಚಾರಿಯವರು ಅಣುಗುಂಡು ತಯಾರಿಸ ಕೂಡದೆಂದು ಹೇಳುವ ಉಸಿರಿನಲ್ಲೇ ರಕ್ಷಣೆಗಾಗಿ ಭಾರತವನ್ನು ಅಮೇರಿಕಕ್ಕೆ ಒತ್ತೆ ಇಡಬೇಕೆಂದೂ ಅವರು ಹೇಳುತ್ತಿದ್ದಾರೆ! ನಾವೇತಕ್ಕೆ ಅಣುಗುಂಡನ್ನು ತಯಾರಿಸಬಾರದೆನ್ನುವದಕ್ಕೆ ಅವರಿತ್ತಿರುವ ಉತ್ತರ ತಮಾಷೆಯ ವಿಷಯವೇ ಇದ್ದು, ಚಿಕ್ಕ ಮಕ್ಕಳಿಗೆ ಅಜ್ಜ ಕತೆ ಹೇಳಿದ ಹಾಗೆಯೇ ಕಮ್ಯೂನಿಸ್ಟರಂತಹ ದೇಶ ದ್ರೋಹಿಗಳು (ಕಾಂಗ್ರೆಸ್ಸಿನಲ್ಲಿ ಬಹಳ ಮಂದಿ ಕಮ್ಯೂನಿಸ್ಟ್ ಸಹಚರರಿದ್ದಾರೆ) ನಮ್ಮ ರಕ್ಷಣಾ ವಿಭಾಗದಲ್ಲಿ ಸೇರಿಬಿಟ್ಟು, ಶತ್ರುವಿಗೆ ರಹಸ್ಯಗಳನ್ನು ತಿಳಿಸುತ್ತಾರಲ್ಲದೆ, ವಿಘ್ನಗಳನ್ನು ತಂದೊಡ್ಡಲು ಸಾಧ್ಯವಿರುವದರಿಂದ ಎಲ್ಲಾ ಜವಾಬ್ದಾರಿಯನ್ನು ಅಮೆರಿಕಕ್ಕೆ ಬಿಟ್ಟುಕೊಡಬೇಕೆಂದು ಶ್ರೀ ರಾಜಗೋಪಾಲಾಚಾರಿ "ಹಿರಿಯ ಮುತ್ಸದ್ದಿ ರಾಜಕಾರಣಿ" ಹೇಳುತ್ತಿದ್ದಾರೆ. ಕ್ರುಶ್ಚೇವರ ಪತನದಿಂದಾಗಿ ರಷ್ಯಾ ಬೇರೆ, ಚೈನಾ ಬೇರೆ ಎಂದು ಇಂದು ವಿಂಗಡಿಸಲು ಸಾಧ್ಯ ಇಲ್ಲದಿರುವ ಕಾರಣ ನಾವು ಅಮೇರಿಕದ ಆಶ್ರಯವನ್ನು ಪಡೆಯಬೇಕೆಂದೂ ಅವರು ತಿಳಿಸಿರುವರು.

ಶ್ರೀ ಮಸಾನಿ, ಸ್ವತಂತ್ರ ಪಾರ್ಟಿಯ ಪ್ರಮುಖರು, ಇನ್ನೂ ಮುಂದರಿದು ಭಾರತಕ್ಕೆ ತನ್ನನ್ನು ತಾನೇ ಕಾಪಾಡಿಕೊಳ್ಳಲು ಸಾಧ್ಯ ಇಲ್ಲದಿರುವದರಿಂದ ಅಮೇರಿಕದ ಕೊಡೆಯೊಳಗೆ ಹೋಗಬೇಕೆಂದಿದ್ದಾರೆ

ಇವರಿಬ್ಬರೂ ಹೀಗೆನ್ನುವಾದರೂ ಅಣುಗುಂಡನ್ನು ಭಾರತವೇ ತಯಾರಿಸಬೇಕೆನ್ನುವ ಸ್ವತಂತ್ರ ಪಾರ್ಟಿಯ ಮುಂದಾಳುಗಳೂ ಇದ್ದಾರೆ. ಭಾರತೀಯ ವಿಧ್ಯಾಭವನದ ಖ್ಯಾತಿ ಇರುವ ಕನ್ನಯ್ಯಾಲಾಲ ಮುನ್ಶಿಜಿಯವರು ಅವರಿಗೆ ಅಗ್ರೇಸರರು ಅದೇ ಇಂದಿನ ಅತ್ಯಂತ ಅವಸರದ ವಿಷಯವಿದೆನ್ನುತ್ತಾರೆ ಅವರು. ಹೇಗೆ ಮಾಡಿಯಾದರೂ ಭಾರತ ಅಣುಗುಂಡನ್ನು ತಯಾರಿಸಲೇಬೇಕೆನ್ನುವದು ಅವರ ಹಿರಿಯಾಸೆ ಚೈನಾವಂತೂ ಆಕ್ರಮಣವನ್ನು ಮುಂದರಿಸದೆ ಬಿಡದಿರುವದರಿಂದ ನಾವು ನಮ್ಮ ರಕ್ಷಣೆಗೆ ಸಿದ್ಧವಾಗಿರಬೇಕೆನ್ನುವದು ಅವರ ಹಿತೋಕ್ತಿ. ರಕ್ಷಣಾ ದೃಷ್ಟಿಯಲ್ಲಿ ಪ್ರಗತಿಹೊಂದಿ ಬಾಹ್ಯ ಆಕ್ರಮಣಗಾರ ಶತ್ರುಗಳನ್ನು ಹೊಡೆದಟ್ಟಿ ಪ್ರಬಲರಾದೆವೆಂದರೆ ನಂತರ ಕ್ರಮಶಃ ಆರ್ಥಿಕ ಹಾಗೂ ಔದ್ಯೋಗಿಕ ಭದ್ರಯನ್ನು ಕಾಪಾಡಿಕೊಳ್ಳಲು ಸಾಧ್ಯವೆನ್ನುವದು ಅವರ ಅಭಿಪ್ರಾಯ. ಇತರ ಸ್ವತಂತ್ರ ಮುಂದಾಳುಗಳಿಗೂ ಇವರಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ರಕ್ಷಣಾ ದೃಷ್ಟಿಯಲ್ಲಿ ಭಾರತವನ್ನು ಅಮೇರಿಕಕ್ಕೆ ಒತ್ತೆ ಇಡಬೇಕೆಂದುಅವರೆಲ್ಲರೂ ಹೇಳಿದಲ್ಲಿ ಇವರು ಅನವರತವೂ ಅಮೇರಿಕದ ಬೆಂಬಲದ ಮೇಲೆ ಅವಲಂಬಿಸಿಕೊಂಡಿರಲು ಸಾಧ್ಯವಿಲ್ಲವೆನ್ನುವದಿದೆ. ಇದು ಬಹಳ ಮುಖ್ಯ ವಿಷಯವಿದೆ. ಚೈನಾ ಭಾರತದ ಮೇಲೆ ಅಣುಗುಂಡು ಹಾಕಿದಲ್ಲಿ ಅಮೇರಿಕ ಬಂದು ಚೈನಾದ ಮೇಲೆ ಅಣುಗುಂಡು ಹಾಕೀತು, ಅಲ್ಲದೆ, ರಷ್ಯಾ ನಮಗೆ ಸಹಾಯ ಮಾಡೀತೆನ್ನುವದು ತುಚ್ಛ ಅಭಿಪ್ರಾಯವೆನ್ನುತ್ತಾರೆ ಮುನ್ಶಿಜಿಯವರು.

ಹಿಂದೆ ಕಮ್ಯೂನಿಸ್ಟ್ ಪಕ್ಷದವರಲ್ಲಿ ಒಂದೇ ಅಭಿಪ್ರಾಯವಿರುತ್ತಿತ್ತು. ಈಗ ಅವರೂ ನಾಟಕಕ್ಕೆ ಆರಂಭಿಸಿದ್ದಾರೆ. ಎರಡು ಪಕ್ಷಗಳನ್ನಾಗಿ ಮಾಡಿಕೊಂಡಿದ್ದಾರೆ. ಕೆಲ ಭಂಡನಾಳಶಾಹಿಗಳು ಎರಡು ಪತ್ರಿಕೆ ನಡೆಸುತ್ತಾರಂತೆ. ಯಾವಾಗ ನೋಡಿದರೂ ಒಂದಕ್ಕೊಂದು ಚೈಯುತ್ತಾರೆ ವಿರೋಧಾಭಿಪ್ರಾಯಗಳನ್ನು ಪ್ರಕಟಿಸುತ್ತಿರುತ್ತವೆ ಆ ಪತ್ರಿಕೆಗಳು. ಉತ್ಸಾಹೀ ಜನತೆ ನೋಡುವ ಎಂದೂ ಎರಡನ್ನೂ ಕೊಂಡುಕೊಳ್ಳುತ್ತಾರೆ. ಉಪಾಯಗಾರನು ಹಾಗೆ ಹಣ ಮಾಡಿಕೊಳ್ಳುತ್ತಾನೆ. ಕಮ್ಯೂನಿಸ್ಟರ ನಾಟಕವೂ ಹಾಗೆಯೇ ಇದೆ. ಅದರಲ್ಲೂ ಈಗ ಕ್ರುಶ್ಚೇವ ಪತನದ ನಂತರ ಹೇಳುವದೇ ಬೇಡ. ಅವರೊಳಗೆ ಒಳಗಿಂದೊಳಗೆ ಅದೇನು ಭಿನ್ನಾಭಿಪ್ರಾಯವಿದ್ದರೂ ಭಾರತ ಅಣುಗುಂಡು ತಯಾರಿಸಕೂಡದು ಹಾಗೂ ಅಮೇರಿಕದ ಕೊಡೆಯನ್ನು ತೆಗೆದುಕೊಳ್ಳಬಾರದೆಂದು ಡಂಗುರ ಹೊಡೆಯುವಂತೆ ಹೇಳುತ್ತಿದ್ದು, ಸರಕಾರದ ಆಪ್ತಮಿತ್ರರಂತೆ ಈ ವಿಷಯದಲ್ಲಿ ವರ್ತಿಸುತ್ತಿದ್ದಾರೆ. ಚೈನಿ ಕಮ್ಯೂನಿಸ್ಟರ ಆಕ್ರಮಣದ ಸಮಯ ಬೇರಿನ್ಯಾರೂ ಇಷ್ಟು ಚೆನ್ನಾಗಿ ಈ ವಾದವನ್ನು ಸಮರ್ಥಿಸಲು ಪ್ರಯತ್ನಿಸಿಯಾರು?

ತುದಿಯಿಂದ ಕೊನೆಯ ವರೆಗೆ ಏಕಾಭಿಪ್ರಾಯವನ್ನು ಪ್ರಕಟಪಡಿಸಿರುವ ಏಕಮೇವ ಪಕ್ಷವೆಂದರೆ ಭಾರತೀಯ ಜನಸಂಘವಿದೆ. ಬೇಡವೆಂದು ಕಮ್ಯೂನಿಸ್ಟರು ಪರಸ್ಪರ ಎತ್ತಿರುವಂತೆ ಬೇಕೆಂದು ಏಕಸ್ವರವೆತ್ತಿರುವವರು ಭಾರತೀಯ ಜನಸಂಘದವರು. ಇವರು ಹಿಂದಿನಿಂದಲೂ ಭಾರತ ಸರ್ವ ಪ್ರಕಾರದಲ್ಲೂ ಬಲಶಾಲೀ ರಾಷ್ಟ್ರವಾಗಿರಬೇಕೆಂದು ಹೇಳುತ್ತಿದ್ದಾರೆ. ಸರ್ವಪ್ರಕಾರ ಎನ್ನುವಾಗ ಅಣುಶಕ್ತಿಯೂ ತನ್ನಿಂದ ತಾನೇ ಅದರೊಳಗೆ ಅಡಕವಾಗುತ್ತದೆ. ಅವರ ಪ್ರಧಾನ ಕಾರ್ಯದರ್ಶಿಯವರು ತಮ್ಮ ಅಭಿಪ್ರಾಯವನ್ನು ಪತ್ರಿಕೆಗಳಿಗೆ ತಿಳಿಸಿದ್ದಾರೆ. ಪುಣ್ಯವಶಾತ್, ಭಾರತವನ್ನು ಅಮೇರಿಕಕ್ಕೆ ಒತ್ತೆ ಇಡಬೇಕೆಂದು ಇವರು ಹೇಳುತ್ತಿರುವದಿಲ್ಲ.

ಅಪ್ಪಟ ಗಾಂಧೀ ಅನುಯಾಯಿಗಳೆನ್ನಿಸುತ್ತಿದ್ದ ಸಂಯುಕ್ತ ಸಮಾಜವಾದಿಗಳಲ್ಲಿ ಯಾವಾಗಲೂ ಏಕಾಭಿಪ್ರಾಯವಿರಲು ಸಾಧ್ಯವಿಲ್ಲ. ಯಾಕೆಂದರೆ ಪಕ್ಷ ಇದ್ದಕ್ಕಿದ್ದಂತೆ ಅದು ಬದಲಾಗುತ್ತಿರುತ್ತದೆ. ಹಾಗಿದ್ದರೂ ಅದರ ಮುಖಪತ್ರಿಕೆಯು ಅಣುಗುಂಡನ್ನು ತಯಾರಿಸಲೇ ಬೇಕೆಂದು ಸಂಪಾದಕೀಯದಲ್ಲಿ ತಿಳಿಸುತ್ತದೆ ಆ ಪಕ್ಷದೊಳಗಿರುವ ಸಮಾಜವಾದಿಗಳು (ಸೋಷ್ಯಾಲಿಸ್ಟರು) ಅಣುಗುಂಡು ತಯಾರಿಕೆಗೆ ವಿರೋಧವಾಗಿರುವದಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಅದು ಬಹಳ ಮುಖ್ಯವೆನ್ನುತ್ತಾರೆ. ರಕ್ಷಣೆಯ ಭರವಸೆ ಇಲ್ಲದಿರುವಾಗ ಇತರ ವಿಷಯಗಳಲ್ಲಿ ಪ್ರಗತಿ ಹೊಂದಿ ಏನು ಫಲ ಎಂದು ಅವರು ಕೇಳುತ್ತಿದ್ದಾರೆ.

ಚಿಕ್ಕಪುಟ್ಟ ಪಕ್ಷಗಳ ಅಭಿಪ್ರಾಯವನ್ನು ಇಲ್ಲಿ ಕೊಡಲಾಗಿರುವದಿಲ್ಲ. ಹಾಗಿದ್ದರೂ ಕೆಲ ವ್ಯಕ್ತಿಗಳ ಅಭಿಪ್ರಾಯವನ್ನು ಮುಂದಿನ ವಾರ ಕೊಡಲಾಗುವದು, ಅಲ್ಲದೆ ಅಣುಗುಂಡು ತಯಾರಿಯಿಲ್ಲದೆ ಬೇರಾವ ದಾರಿಯಾದರೂ ಭಾರತದ ರಕ್ಷಣೆಗಾಗಿ ಇದೆಯೇ ಎಂಬುದರ ಕುರಿತು ಕೂಡಾ ವಿವರಿಸಲು ಪ್ರಯತ್ನ ಪಡಲಾಗುತ್ತದೆ.

INSIST ON.......
Waterfalls—Glendale—Brooklands
TEAS
POPULAR EVERYWHERE
You can book your requirements through:
PUNJA & CO., MULKI,
Phone No Off: 26. Res: 36.
KOTHARI & SONS, MADRAS.

ನಿಸ್ವಾರ್ಥ ಸೇವಾ ಪ್ರತೀಕ

ಮಮತೆಯ ಮೂರ್ತಿ - ಮಾತೆ

ಬರೆದವರು: ಶ್ರೀ ಪಿ. ಕೆ. ಶೆಟ್ಟಿ, ಕರೋಪಾಡಿ.

ಮನುಷ್ಯನಾಗಿ ಜನ್ಮವೆತ್ತಿದವನಿಗೆ ತನ್ನ ಜೀವನದಲ್ಲಿ ತಾಯಿಗಿಂತ ಮಿಗಿಲಾದ ಬಂಧುವಿಲ್ಲವೆಂದು ಪ್ರತಿಯೊಬ್ಬನೂ ತಿಳಿದಿರಬೇಕಾದ ವಿಷಯ. ಆದುದರಿಂದಲೇ ನಾವಿಂದು ಮಾತೆಗೆ ಮಿಗಿಲಾದ ದೇವರಿಲ್ಲ ಎಂದು ಬಾರಿ ಬಾರಿಗೂ ಅನ್ನುತ್ತಿದ್ದೇವೆ; ಹೆಚ್ಚೇಕೆ ಅಂತೆಯೇ ಆಕೆಯನ್ನು ದೇವರಿಗೆ ಸಮವೆಂದು ತಿಳಿದು ಭಕ್ತಿಯಿಂದ ಪೂಜಿಸುತ್ತೇವೆ.

ಹೌದು, ತಾಯಿಯು ನಿಜವಾಗಿಯೂ ಮಮತೆಯ, ಶುದ್ಧಾಂತಃಕರಣದ ಒಂದು ಮೂರ್ತಿಯೇ ಆಗಿದ್ದಾಳೆ. ನಮ್ಮ ಕುಟುಂಬದಲ್ಲಿ ಅನೇಕ ಸಂಬಂಧಿಕರು ನಮಗೆ ಇರಬಹುದು. ಆದರೆ ಅವರು ಪರಸ್ಪರರನ್ನು ಪ್ರೀತಿಸುವ ರೀತಿಯೇ ಬೇರೆ. ಅವರ ಪ್ರೀತ್ಯಾದರಗಳು ಕೇವಲ ಕೌಟುಂಬಿಕ ಮರ್ಯಾದೆಯೊಂದನ್ನು ತೋರ್ಪಡಿಸುವುದಕ್ಕಲ್ಲದೆ, ಅಂತರಿಕವಾಗಿ ಅವೆಲ್ಲಾ ಟೊಳ್ಳೇ! ಅನುಪಮವಾದ ಮಾತಾಪಿತರ ಸ್ನೇಹವು ಮಾತ್ರ ವಾತ್ಸಲ್ಯಪೂರಿತವಾದುದಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರು ಭಯ (ಬೆದರಿಕೆ) ಮತ್ತು ಶಿಕ್ಷೆಗಳಿಂದ ಒಂದು ವರ್ಷದಲ್ಲಿ ಕಲಿಸುವ ವಿಷಯಗಳನ್ನು ತಾಯಿಯು ಒಂದು ದಿನದಲ್ಲಿ ಕಲಿಸಬಲ್ಲಳಂತೆ! ಇದು ಆಕೆಯಲ್ಲಿರುವ ಸಹಜವಾದ ಸ್ನೇಹದ ಆಧಾರದಿಂದ. ಅದಕ್ಕಾಗಿಯೇ ಅಧ್ಯಾಪಕನು ಶಾಲಾ ವಾತಾವರಣವರಣದಲ್ಲಿ ಸಹಜ ಸ್ನೇಹದ ಆಧಾರದಿಂದ. ಅದಕ್ಕಾಗಿಯೇ ಅಧ್ಯಾಪಕನು ಶಾಲಾವಾತಾವರಣದಲ್ಲಿ ಸಹಜ ಸ್ನೇಹದ ವಿಶಾಲ ಹೊಲದಲ್ಲಿ ತಾಯಿಯಂತೆಯೇ ಮಕ್ಕಳನ್ನು ಕಲಿಯುವಿಕೆಗೆ ಹೊಂದಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗುತ್ತಾನೆ. ಅದರಿಂದ ಬೋಧನೆಯೂ ಸರಳವಾಗಿ, ಮಗುವಿಗೂ ಶಾಲೆಯೆಂದರೆ ಸೆರೆಮನೆಯೆನ್ನುವ ಭಯದಭಾವನೆ ತೊಲಗುವುದು.

ತಾಯಿಯು ತನ್ನ ಮಗುವಿನ ಕಷ್ಟ-ಸುಖಗಳಲ್ಲಿ ಸಹಭಾಗಿಯಾಗಿ ಸಮಾನ ಕಷ್ಟಸುಖಗಳನ್ನು ಅನುಭವಿಸುತ್ತಾಳೆ. ತನ್ನ ಕಂದನ ಸುಖಕ್ಕಾಗಿ ಏಳ್ಗೆಗಾಗಿ ಸಕಲವನ್ನೂ ತ್ಯಾಗಮಾಡಿ ಎಂತಹ ಕಷ್ಟವನ್ನೂ ಸಹಿಸಲು ಸಿದ್ಧಳಾಗುತ್ತಾಳೆ. ಕುಟುಂಬದಲ್ಲಿ ಕೆಲವೊಮ್ಮೆ ಅಂತಃಕಲಹಗಳೆದ್ದು ಪ್ರಬುದ್ಧ ತಂದೆ ಮಕ್ಕಳು ವಿಭಕ್ತ ಕುಟುಂಬಗಳಾಗಬೇಕಾಗಿ ಬಂದಾಗ ತಾಯಿ ತನ್ನ ಮಕ್ಕಳನ್ನು ಬೇರೆಕಳುಹಿಸಲು ತುಂಬಾ ಸಂಕಟ ಪಡುತ್ತಾಳೆ, ಕಣ್ಣೀರ ಕೋಡಿಯನ್ನೇ ಹರಿಸುತ್ತಾಳೆ!

ಪುರಾಣೇತಿಹಾಸಗಳಲ್ಲಿ ಕೂಡಾ ಈ ತೆರನಾದ ಹಲವು ಉದಾಹರಣೆಗಳು ನಮಗೆ ದೊರೆಯುತ್ತವೆ. ಪಿತೃ ವಾಕ್ಯ ಪರಿಪಾಲನೆಗಾಗಿ ಕಾಡಿಗೆ ಹೊರಟುನಿಂತ ಶ್ರೀರಾಮನನ್ನು ಕೌಸಲ್ಯೆ ತಡೆದು "ಕೈಕೆಯಿಯ ಮನದಿಂಗಿತದಂತೆ ನಾವು ಬಡವರಾಗಿ ಅಯೋಧ್ಯೆಯಲ್ಲೇ ಇರೋಣ, ಭರತನೇ ಪಟ್ಟಕ್ಕೊಡೆಯನಾಗಿರಲಿ. ಅರಮನೆಯ ಸುಖೋಪಭೋಗಗಳನ್ನು ತೊರೆದು ಕ್ರೂರ ಮೃಗಗಳ ಬೀಡಾದ ಕಾಡಿನಲ್ಲಿ ನೀನಿರುವುದನ್ನು ನಾನೆಂತು ಸಹಿಸಿರಲಿ" ಎಂಬುದಾಗಿ ಬಹುರೀತಿಯಲ್ಲಿ ವ್ಯಥಿಸಿದ್ದನ್ನು ಕೇಳಿದಾಗ ನಮಗೆ ಆ ಮಾತೆಯ ಹೃದಯದ ಅರಿವಾಗುತ್ತದೆ.

ಹಾಗೆಯೇ ಹರಿಶ್ಚಂದ್ರನ ಮಡದಿ ಚಂದ್ರಮತಿಯ ವಿಲಾಪವೂ ಅಲ್ಪವೇನಲ್ಲ. ಕಾರಿರುಳಲ್ಲಿ ಕಾಡಸಟುವಿನಲ್ಲಿ ಚೇತನಾಹೀನವಾಗಿ ಬಿದ್ದುಕೊಂಡಿದ್ದ ತನ್ನ ಕಂದನನ್ನು ಎತ್ತಿ ಮುದ್ದಾಡಿದ ದೃಶ್ಯ ನಮ್ಮ ಕಣ್ಮುಂದೆ ನಿಂತಾಗ ಅಲ್ಲಿಯೂ ಆ ಮಾತೆಯ ಕರುಳ ಮೊರೆ ನಮ್ಮ ನರನಾಡಿಗಳಲ್ಲಿ ರಕ್ತ ಹೆಪ್ಪಾಗುವಂತೆಸುತ್ತದೆ. ಇಂತಿದೆ. ಮಾತಾ ಪುತ್ರರ ಮಮತೆಯ ಮರ್ಮ!

ಮಾತೆ ತನ್ನ ಪ್ರೋತ್ಸಾಹನೆಯಿಂದ ಮಗನು ಅಸಾಧ್ಯವಾದುದನ್ನು ಸಾಧಿಸುವಂತೆಸಗುತ್ತಾಳೆ. ಮಗುವಿನ ಚಿತ್ತಭಿತ್ತಿಯಲ್ಲಿ ತನ್ನ ಇಂಗಿತದ ಪ್ರಭಾವದ ಅಚ್ಚೊತ್ತುವುದರಲ್ಲಿ ಮಾತೆಯ ಪಾಲು ಹಿರಿದು,

ಚರಿತ್ರೆಯಲ್ಲಿ ಮಹಾ ರಾಷ್ಟ್ರದಧಿಪತಿ ಶಿವಾಜಿಯ ಹೆಸರನ್ನು ನಾವು ಕೇಳುತ್ತೇವೆ. ತನ್ನ ತಾಯಿಯ ತೋಳ ತೊಟ್ಟಿಲಲ್ಲಿ ಬೆಳೆಯುತ್ತಿರುವಾಗಲೇ ಪುರಾಣಗಳಲ್ಲಿ ಪ್ರಕಾಶಿಸುತ್ತಿರುವ ರಾಜಾಧಿರಾಜರ ಪರಾಕ್ರಮ, ಅವರ ದಿಗ್ವಿಜಯ, ರಾಜ್ಯಭಾರ ಕ್ರಮಾದಿಗಳ ಕಥೆಗಳನ್ನು ಆ ತಾಯಿ ಹೇಳುತ್ತಿದ್ದಳಂತೆ. ಅದರ ಪ್ರಭಾವದಿಂದ ಸ್ಫೂರ್ತಿಗೊಂಡ ಶಿವಾಜಿಯ ಧಮನಿಗಳಲ್ಲೆಲ್ಲಾ ವೀರತೆಯ ಬಿಸಿ ರಕ್ತ ಒಸರಿ, ಅವನೇ ಮುಂದೆ ರಾಜ್ಯ ಸಂಪಾದನೆಗೈದು ಛತ್ರಪತಿಯೆನಿಸಿಕೊಂಡ!

ಮಾತೆಯು ಧರ್ಮಮಯಿಯೂ ಹೌದು. ತನ್ನ ಕಂದನ ಏಳ್ಗೆಗಾಗಿ ಜೀವ ಬಿಡಲೂ ಆಕೆ ಸಿದ್ಧಳು! ಒಂದೊಮ್ಮೆ ತನ್ನ ಮಗ ಕಾಯಿಲೆ ಬಿದ್ದರೆ ಆಕೆಗೆ ತನ್ನ ಮಗನ ಆರೋಗ್ಯವನ್ನು ಕಾಣುವ ತನಕ ತನ್ನ ಆರೋಗ್ಯದ ಅರಿವೂ ಮರೆಯುವುದುಂಟು.

ಕೆಲವರ ಅಭಿಪ್ರಾಯದಂತೆ ತಂದೆಯು ವೃದ್ಧಾಪ್ಯದಲ್ಲಿ ತನ್ನ ಮಕ್ಕಳು ತನಗೆ ನೆರವಾಗಬೇಕು ಎಂಬುದಕ್ಕಾಗಿ ಮಕ್ಕಳನ್ನು ಪಾಲಿಸುತ್ತಾನಂತೆ; ತಾಯಿಯು ಅಂತಹ ಯಾವ ಆಸೆ ಆಕಾಂಕ್ಷೆಗಳನ್ನೂ ನೆನೆಸುವವಳಲ್ಲ!

ಒಟ್ಟಿನಲ್ಲಿ ತಾಯಿ ತಂದೆಗಳು ಪ್ರತ್ಯಕ್ಷವಾಗಿ ಕಾಣಸಿಗುವ ದೇವರುಗಳೆಂದರೆ ತಪ್ಪಲ್ಲ. ಅಂತಹ ದೇವತಾ ಸಂಪನ್ನರನ್ನು ಪುತ್ರರಾಗಿರುವವರೆಲ್ಲರೂ ತನುಮನಗಳಿಂದ, ಪೂಜ್ಯ ಭಾವನೆಯಿಂದ ಪೂಜಿಸುತ್ತಲಿದ್ದರೆ, ಮಕ್ಕಳು ತಮ್ಮ ಯಶಸ್ಸು ಕೀರ್ತಿಗಳನ್ನು ಗಳಿಸುವುದರೊಂದಿಗೆ ತಮ್ಮ ಬಾಳನ್ನು ಬಂಗಾರವಾಗಿಸಬಹುದು! ಮಾತೃ ದೇವೋ ಭವ.



ಮಾನ್ಯ ಶ್ರೀ ಬಿ. ಡಿ. ಜತ್ತಿಯವರಿಂದ ಅನಾವರಣ ಮಾಡಲ್ಪಟ್ಟ ಅಮೃತ ಶಿಲಾ ವಿಗ್ರಹ.

ಕೆನರಾ ಬ್ಯಾಂಕ್ ಸಂಸ್ಥಾಪಕ

ಶ್ರೀ ಎ. ಸುಬ್ಬರಾವ್ ಪೈಯವರ

ದಿವ್ಯ ಸ್ಮರಣೆ

(19—11—1852 ರಿಂದ 25—7—1909)

ಕೆನರಾ ಬ್ಯಾಂಕಿನ ಡೈರೆಕ್ಟರುಗಳು, ನೌಕರರು ಮತ್ತು ಆಡಳಿತ ವರ್ಗದವರಾದ ನಾವು ನಮ್ಮ ಬ್ಯಾಂಕಿನ ಸಂಸ್ಥಾಪಕರಾದ ಶ್ರೀ ಎ. ಸುಬ್ಬರಾವ್ ಪೈಯವರಿಗೆ ನಮ್ಮ ಅತ್ಯಂತ ಭಕ್ತಿಪೂರ್ವಕ ಗೌರವಾರ್ಪಣೆಯನ್ನು ಅರ್ಪಿಸುತ್ತೇವೆ.

ಶ್ರೀ ಸುಬ್ಬರಾವ್ ಪೈಯವರು 112 ವರ್ಷಗಳ ಹಿಂದೆ ಮಂಗಳೂರಿನಲ್ಲಿ ಜನಿಸಿದರು. ಅವರು ಸಂಸ್ಥಾಪಿಸಿದ ಹಲವಾರು ಸಮಾಜಹಿತ ಸಂಸ್ಥೆಗಳಲ್ಲಿ ಒಂದಾದ ಕೆನರಾ ಬ್ಯಾಂಕ್ 1906ರಲ್ಲಿ ಸ್ಥಾಪಿತವಾಯಿತು.

ಶ್ರೀ ಪೈಯವರ ಸಮಗ್ರ ಜೀವನವು ಜನತೆಯ ಸೇವೆಗಾಗಿಯೇ ಮುಡುಪಾಗಿದ್ದಿತು. ಇದರಿಂದಾಗಿ ಅವರು ಮಂಗಳೂರಿನ ಸಂತರೆಂದೂ ಋಷಿಗಳೆಂದೂ ಪ್ರಖ್ಯಾತರಾದರು.

ಶ್ರೀ ಪೈಯವರ ನೆನಪನ್ನು ಚಿರಸ್ಮರಣೀಯವಾಗಿರಿಸಲು ಅವರ ಅಮೃತಶಿಲಾ ವಿಗ್ರಹವನ್ನು ಕೆನರಾ ಬ್ಯಾಂಕಿನ ಆಡಳಿತ ಕಛೇರಿ ಕಟ್ಟಡದಲ್ಲಿ ಸೋಮವಾರ ತಾ. 16ನೇ ನವೆಂಬರ್ 1964 ರಂದು ಮೈಸೂರು ರಾಜ್ಯದ ಅರ್ಥ ಸಚಿವ ಮಾನ್ಯ ಶ್ರೀ ಬಿ. ಡಿ. ಜತ್ತಿಯವರು ಅನಾವರಣ ಮಾಡಿದರು.

ಶ್ರೀ ಪೈಯರ 112ನೇ ಪವಿತ್ರ ಜನ್ಮದಿನದಂದು ನಾವು ನಮ್ಮ ಗ್ರಾಹಕರ ಸೇವೆಯನ್ನು ಇನ್ನೂ ಉತ್ತಮವಾಗಿ ಮತ್ತು ಇನ್ನೂ ಹೆಚ್ಚಿನ ಶ್ರದ್ಧೆಯಿಂದ ನಿರ್ವಹಿಸಲು ಸಂಕಲ್ಪಿಸಿದ್ದೇವೆ.

ಕೆನರಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಮಂಗಳೂರು.

ಆಡಳಿತ ಕಛೇರಿ: ಬೆಂಗಳೂರು.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction, Madras.

ನಿರಾಡಂಬರತೆಯ ನೆಲೆವನೆ

ಮಲ್ಲಾಡಿ ಹಳ್ಳಿಯ

ನಮ್ಮಲ್ಲಿ ಕೆಲವರು ಮಾಡಿದ ಸಾಮಾನ್ಯ ಕಾರ್ಯಗಳೂ ಪ್ರಚಾರದ ಬಲದಿಂದ ಸಾರ್ವಜನಿಕರ ದೃಷ್ಟಿಯಲ್ಲಿ ಮಹತ್ಕಾರ್ಯಗಳೆನ್ನಿಸಿಕೊಳ್ಳುತ್ತವೆ ಆದರೆ, ಹಲವರು ಮಾಡಿರುವ ಮಹತ್ಕಾರ್ಯಗಳೂ ಪ್ರಚಾರದ ಅಭಾವದಿಂದ ಸಾರ್ವಜನಿಕರ ದೃಷ್ಟಿಗೆ ಬೀಳದೆ ಇರುವುದೂ ಉಂಟು ಇಂದಿನ ಮುಂದುವರಿದ ಜಗತ್ತಿನಲ್ಲಿ ಪ್ರಚಾರವು ಒಂದು ಪ್ರಬಲ ಸಾಧನವಾಗಿ ಉಳಿದಿದೆಯಾದರೂ ಹಲವರು ಸಾರ್ವಜನಿಕ ಸೇವಾಸಕ್ತರು ಇಂತಹ ಪ್ರಚಾರವನ್ನು ಇಚ್ಛಿಸುವುದಿಲ್ಲ. ಅವರಿಗೆ ತಮ್ಮ ಉದ್ದೇಶ ಸಾಧನೆಯಾದರೆ ತೀರಿತು. ಇತರರಿಂದ ಶಹಭಾಸ್‌ಗಿರಿ ಪಡೆಯುವ ಆಶೆ ಅವರಿಗಿರುವುದಿಲ್ಲ ಇಂತಹ ನಿರಾಡಂಬರ ಜೀವಿ, ಪ್ರಚಾರಕ್ಕೊಳಗಾಗದ ನಿಸ್ಪೃಹ ಸೇವಾ ಮನೋಭಾವದ ಮಹನೀಯರೊಬ್ಬರು ಹಲವು ವರ್ಷಗಳ ಹಿಂದೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯನ್ನು ಬಿಟ್ಟು ಇಂದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಮಲ್ಲಾಡಿ ಹಳ್ಳಿಯಲ್ಲಿ ಒಂದು ಸವಾಡವನ್ನೇ ನಿರ್ಮಿಸಿದ್ದಾರೆ ಅವರೇ ಮಲ್ಲಾಡಿ ಹಳ್ಳಿಯ ಅನಾಥ ಸೇವಾಶ್ರಮದ ಸೂತ್ರಧಾರರಾದ ಶ್ರೀ ರಾಘವೇಂದ್ರ ಸ್ವಾಮೀಜಿಯವರು

ಅನಾಥ ಸೇವಾಶ್ರಮದ ನಿರ್ಮಾತೃ
ಶ್ರೀ ಶ್ರೀ ರಾಘವೇಂದ್ರ ಸ್ವಾಮೀಜಿಯವರು

ಅವರು ತನ್ನನ್ನು 'ತಿರುಕ'ನೆಂದೇ ಕರೆದುಕೊಳ್ಳುತ್ತಿದ್ದಾರೆ. ಕಾರಣ ಅವರು ಮಲ್ಲಾಡಿ ಹಳ್ಳಿಯಲ್ಲಿ ಸಾಧಿಸಿದ ಅದ್ಭುತಗಳೆಲ್ಲವನ್ನೂ ತಿರುಕನಾಗಿ ತಿರುಪೆ ಎತ್ತಿಯೇ ಸಾಧಿಸಿದ್ದಾರೆ. ನಮ್ಮಲ್ಲಿ ರಾಜಕೀಯ ಬಲದಿಂದ ಸಂಘ ಸಂಸ್ಥೆಗಳನ್ನು ಕಟ್ಟಿದವರಿದ್ದಾರೆ ಅಧಿಕಾರ ಹಾಗೂ ಸಂಪತ್ತಿನ ಬಲದಿಂದ ಅದ್ಭುತ ಕಾರ್ಯಗಳನ್ನು ಸಾಧಿಸಿದವರಿದ್ದಾರೆ ಆದರೆ ಕೇವಲ ಜೋಳಿಗೆಯ ಬಲದಿಂದ, ನಿಸ್ಪೃಹ ಸೇವೆಯ ಬಲದಿಂದ, ಆಧ್ಯಾತ್ಮಿಕ ಶಕ್ತಿಯ ಬಲದಿಂದ ಸಂಘ ಸಂಸ್ಥೆಗಳನ್ನು ಕಟ್ಟಿದವರು ವಿರಳ! ಅಂತಹ ವಿರಳ ಸಂಖ್ಯೆಯ ಆಧ್ಯರ್ಯಗಳಲ್ಲಿ ಮಲ್ಲಾಡಿ ಹಳ್ಳಿಯ 'ತಿರುಕ'ರು ಒಬ್ಬರು ಒಂದು ಕಾಲ ಹಳ್ಳಿಯ ಕೊಂಪೆಯಾಗಿದ್ದ ಮಲ್ಲಾಡಿ ಹಳ್ಳಿ, ಮಲ್ಲರು ಆಡಿದ ಹಳ್ಳಿಯೆನಿಸಿತ್ತು. ಇಂದು ಆ ಮಲ್ಲಾಡಿ ಹಳ್ಳಿಯು ಬದಲಾಗುತ್ತಿರುವ ಭಾರತದ ಹಳ್ಳಿಗಳಿಗೆ ಉಚ್ಚ ಆದರ್ಶವಾಗಿದೆ

೧೯೪೩ನೇ ಇಸವಿಯ ಮಾಘ ಬಹುಳ ಪ್ರಮೋದಗಯ ಗುರುವಾರದಂದು ಮಲ್ಲಾಡಿ ಹಳ್ಳಿಗೆ ಅದೃಷ್ಟ ಒಲಿಯಿತು. ತಿರುಕರು ತನ್ನ ರಚನಾತ್ಮಕ ಸೇವಾ ದೀವಿಗೆಯ ಪ್ರಕಾಶದಿಂದ ತಾನೂ ಪುನೀತರಾಗಿ ಸುತ್ತಣ ಜನಕೋಟಿಯನ್ನು ಬೆಳಕಿನೆಡೆಗೊಯ್ಯುವ ಒಂದು ಕನಸನ್ನು ಕಂಡು ಇಲ್ಲೊಂದು ಅನಾಥಸೇವಾಶ್ರಮವನ್ನಾರಂಭಿಸಿದರು ಅವರು ಹಚ್ಚಿಸಿಟ್ಟ ದೀವಿಗೆಯು ಒಂದಕ್ಕೆ ಹತ್ತಾಗಿ, ಹತ್ತಕ್ಕೆ ನೂರಾಗಿ, ಇಂದು ಸುತ್ತೆಲ್ಲ ತನ್ನ ಸೇವಾ ಪ್ರಕಾಶವನ್ನು ಚೆಲ್ಲುತ್ತ ಉರಿಯುತ್ತಿದೆ. ಭಾರತದ ಭಾವೀ ಪೀಳಿಗೆಯವರಾದ ಇಂದಿನ ಯುವಕ ಯುವತಿಯರಿಗೆ, ಮಕ್ಕಳಿಗೆ ಉತ್ತಮ ಶಿಕ್ಷಣ ಈಯುವ, ಅವರಿಗೆ ಧಾರ್ಮಿಕ, ಆಧ್ಯಾತ್ಮಿಕ ಶಿಕ್ಷಣ ಈಯುವ, ಅವರು ಭಾರತದ ಸರ್ವತಂತ್ರ ಸ್ವತಂತ್ರ ಪ್ರಜೆಗಳಾಗಿ ಬದುಕುವುದಕ್ಕೆ ಯೋಗ್ಯವಾದ ಶಿಕ್ಷಣವನ್ನು ಈಯುವ ಹಲವಾರು ಶಿಕ್ಷಣ ಸಂಸ್ಥೆಗಳು ಇಂದು ಇಲ್ಲಿ ಇವೆ.

ಮಲ್ಲಾಡಿ ಹಳ್ಳಿಯ ನೂರಕ್ಕೂ ಮಿಕ್ಕಿದ ಎಕರೆ ಭೂಮಿಯಲ್ಲಿ ಇಂದು ನಾವು ತಿರುಕರ ಸಾಧನೆಗಳನ್ನು ಕಾಣುತ್ತಿದ್ದೇವೆ ವಿಶಾಲವಾದ ಈ ಪ್ರದೇಶವನ್ನು ಸುತ್ತಿ, ಅವುಗಳಲ್ಲಿರುವ ವಿಶೇಷ ಸಂಗತಿಗಳನ್ನು ತಿಳಿದುಕೊಳ್ಳಬೇಕಾದರೆ ದಿನ ಒಂದು ಸಾಲದು ಈ ಮಲ್ಲಾಡಿ ಹಳ್ಳಿಯಲ್ಲಿ ಯಾವುದಿಲ್ಲ, ಯಾವುದಿದೆ ಎನ್ನುವುದು ಕಠಿಣವಾಗಿದೆ ಪ್ರತಿನಿತ್ಯವೂ ಭಜನೆ, ಪೂಜೆ, ಕೀರ್ತನೆಗಳು ಜರಗುತ್ತಿರುವ ಶ್ರೀ ಸದ್ಗುರು ಪರತತ್ವ ಸ್ವಾಮಿ ಮಂದಿರ, ಧಾರ್ಮಿಕ ಕಾರ್ಯಗಳಿಗೆ ಪೂರಕವಾಗಿರುವ ತಪೋವನ; ತಪೋವನದಲ್ಲಿ ಸಾಲು ಸಾಲಾಗಿ ನಿಂತಿರುವ ಸಾಧನಾ ಮಂಟಪಗಳು, ಯೋಗಮಂದಿರ, ಗಾಂಧೀಜಿ ಸ್ಮಾರಕ ಮಂದಿರ ನಮ್ಮ ಆಧ್ಯಾತ್ಮಿಕ ಕೃಷಿಯನ್ನು ತಣಿಸುತ್ತವೆ ತಪೋವನದ ನೈಜತೆಗೆ ಮೆರುಗನ್ನು ಈಯುತ್ತ ಅಲ್ಲಲ್ಲಿ ಓಡಾಡುತ್ತಿರುವ ಜಿಂಕೆಗಳು, ಗರಿಗೆದರಿ ಕುಣಿಯುತ್ತಿರುವ ನವಿಲುಗಳು, ಹಾರಾಡುತ್ತಿರುವ ನಾನಾ ಜಾತಿಯ ಪಕ್ಷಿಗಳು, ಮರದಿಂದ ಮರಕ್ಕೆ ಜಿಗಿದು, ತಮ್ಮ ಚೇಷ್ಟೆಗಳಿಂದ ನಮ್ಮನ್ನು ನಗಿಸುವ ಕೋತಿಗಳು, ಪೊದೆಗಳಿಂದ ಪೊದೆಗಳಿಗೆ ಜಿಗಿದು ಆಟ ಆಡುವ ಅಚ್ಚ ಬಿಳಿಯ ಮೊಲಗಳು ನಮ್ಮನ್ನು ಪುರಾಣ ಕಾಲದ ಋಷಿಗಳ ತಪೋವನದತ್ತ ಸೆಳೆದೊಯ್ಯುತ್ತವೆ. ಆಧ್ಯಾತ್ಮಿಕ ಸಾಧಕರಿಗೆ ಸೂರ್ಯನಮಸ್ಕಾರ, ಗುರು ನಮಸ್ಕಾರ, ಯೋಗಾಸನ, ಪ್ರಾಣಾಯಾಮ, ಧ್ಯಾನ ಮೊದಲಾದ ಯೋಗ ಸಂಬಂಧವಾದ ಶಿಕ್ಷಣವನ್ನು ಇಲ್ಲಿ ಕೊಡಲಾಗುತ್ತಿದೆ.

ಮಲ್ಲಾಡಿಹಳ್ಳಿಯ ಹೈಯರ್ ಸೆಕೆಂಡರಿ ಶಾಲೆ ಸುತ್ತು ಮುತ್ತಲ ಹಳ್ಳಿಗಳ ವಿದ್ಯಾರ್ಥಿಗಳಿಗೆ ಆಧುನಿಕ ಶಿಕ್ಷಣವನ್ನು ಈಯುತ್ತಿದೆ ಈ ಶಾಲೆಯಲ್ಲಿ ಮೈಸೂರು ಸರಕಾರ ಒಂದು ಪ್ರಾಯೋಗಿಕ ಶಾಲೆಯಾಗಿ ಅಂಗೀಕರಿಸಿ, ಇದಕ್ಕೆ ಧನ ಸಹಾಯವನ್ನು ಇತ್ತಿದೆ. ವಿದ್ಯಾರ್ಥಿಗಳು ಆಶ್ರಮವಾಸಿಗಳಾಗಿ ದುಡಿಮೆಯ ಜತೆ, ವಿದ್ಯಾರ್ಜನೆಯನ್ನು ಮಾಡುವ ಅವಕಾಶ ಇಲ್ಲಿದೆ. ವಿಶಾಲವಾದ ಭೂಮಿಯಲ್ಲಿ ಕೃಷಿ ಮಾಡಿ, ಆಶ್ರಮವನ್ನು ಸ್ವಾವಲಂಬಿಯಾಗಿ ಮಾಡುವ ಉದ್ದೇಶ ತಿರುಕರದು. ಅವರು ಈ ದಿಸೆಯಲ್ಲಿ ಕಾರ್ಯೋನ್ಮುಖರಾಗಿಯೂ ಇದ್ದಾರೆ. ತೆಂಗು ತೋಟದಲ್ಲಿ ಸಸಿಗಳು ನೀಲೆತ್ತು ಬರುತ್ತವೆ. ಹೊಲಗಳಲ್ಲಿ ಕಾಲಕ್ಕೆ ತಕ್ಕ ದವಸಧಾನ್ಯಗಳನ್ನು ಬೆಳೆಸುತ್ತಿದ್ದಾರೆ. ಇದು ಇಂದು ಶಿಕ್ಷಣ ಸಂಸ್ಥೆಗಳಿಗೊಂದು ಮಾದರಿಯಲ್ಲವೆ?

ಅನಾಥ ಸೇವಾಶ್ರಮವು ಸೇವೆಗಾಗಿಯೇ ಮೀಸಲಾಗಿರಿಸಿಟ್ಟ ಆಶ್ರಮ. ಇಲ್ಲಿ ಆಯುರ್ವೇದ ಚಿಕಿತ್ಸಾಲಯ ಮತ್ತು ಅದಕ್ಕೆ ಸಂಬಂಧಪಟ್ಟ ಪ್ರಯೋಗ ಶಾಲೆಯೂ ಇದೆ ನುರಿತ ವೈದ್ಯರಿಂದ ರೋಗ ಚಿಕಿತ್ಸೆಯು ನಡೆಸಲ್ಪಡುತ್ತವೆ. ರೋಗಿಗಳಿಗೆ ಉಚಿತ ಊಟದ ಜತೆಗೆ ಮುಫತ್ತಾದ ಚಿಕಿತ್ಸೆಯೂ ಲಭಿಸುತ್ತದೆ. ಹೊರರೋಗಿಗಳಲ್ಲದೆ, ಒಳ ರೋಗಿಗಳಿಗೆ ರುಗ್ಣಾಲಯವೂ ಇದೆ. ಸ್ವತಃ ತಿರುಕರೇ ಹಲವೊಮ್ಮೆ ರೋಗಿಗಳಿಗೆ ಚಿಕಿತ್ಸೆ ಮಾಡಿ, ಅವರ ಯೋಗಕ್ಷೇಮ ವಿಚಾರಿಸುತ್ತಾರೆ.

ಮಲ್ಲಾಡಿ ಹಳ್ಳಿಯ ಇನ್ನೊಂದು ವೈಶಿಷ್ಟ್ಯ ಅಲ್ಲಿನ ವ್ಯಾಯಾಮ ಶಾಲೆ. ಮಲ್ಲರು ಆಡಿದ ಹಳ್ಳಿ ಇದಾದುದರಿಂದ ಇಲ್ಲಿಯ ವ್ಯಾಯಾಮ ಶಾಲೆ ನಮ್ಮ ಯುವಕರನ್ನು ಮಲ್ಲರನ್ನಾಗಿ ಮಾಡುವ ಉದ್ದೇಶದಿಂದ ಶ್ರಮಿಸುತ್ತಿದೆ ಇಷ್ಟು ಮಾತ್ರವಲ್ಲದೆ ಶ್ರೀ ಶಿವಾನಂದ ಧರ್ಮಶಾಲೆ, ಭೋಜನ ಶಾಲೆ, ಅತಿಥಿ ಸತ್ಕಾರ ಗೃಹಗಳು ವ್ಯಾಸಪೀಠವೆಂಬ ಸಭಾಗೃಹ, ಅನ್ನಪೂರ್ಣ ಮಂದಿರವೆಂಬ ಪಾಕಶಾಲೆಗಳೂ ಇವೆ. ಅಂಚೆ ಮನೆ, ಸಹಕಾರ ಸಂಘಗಳೂ, ವಾಚನಾಲಯ ಮತ್ತು ಗ್ರಂಥ ಭಂಡಾರಗಳೂ ತಮ್ಮ ಕಾರ್ಯವೆಸಗುತ್ತವೆ ವಿದ್ಯಾರ್ಥಿಗಳಿಗೆ ವಸತಿ ಗೃಹಗಳು, ಉಪಾಧ್ಯಾಯರ ಶಿಕ್ಷಣ ತರಬೇತಿ ಶಾಲೆ ಹಾಗೂ ವಸತಿ ಗೃಹಗಳೂ ಇವೆ. ಸರ್ವೋದಯ ಮುದ್ರಣಾಲಯವೆಂಬ ಅಚ್ಚಿನ ಮನೆಯೂ ಇಲ್ಲಿದೆ. ಒಟ್ಟಿನಲ್ಲಿ ಇಲ್ಲಿ ಏನಿದೆ, ಏನಿಲ್ಲ ಎಂದು ಹೇಳುವುದು ಕಠಿಣ.



ಗೋಶಾಲೆ

ಅನಾಥ ಸೇವಾಶ್ರಮ

ರಾಷ್ಟ್ರೀಯ ವಿವಿಧೋದ್ದೇಶ ಹಾಯರ್ ಸೆಕೆಂಡರಿ ಶಾಲಾ ಕಟ್ಟಡ

ಈ ಎಲ್ಲಾ ಸಂಘ ಸಂಸ್ಥೆಗಳ ಹಿನ್ನೆಲೆಯಲ್ಲಿ ದುಡಿಯುತ್ತಿರುವ ವ್ಯಕ್ತಿ ಶ್ರೀ ರಾಘವೇಂದ್ರ ಸ್ವಾಮೀಜಿ ಅಥವಾ ತಿರುಕರು. ಅವರು ಸಾದಾ ಸರಳ ಜೀವಿ. ಎಲ್ಲವನ್ನೂ ತಾನು ಆಚರಣೆಗೆ ತಂದು ಇತರರಿಗೆ ಉಪದೇಶಿಸುವ ಹವ್ಯಾಸದವರು ಅವರು. ಅವರೇ ಸ್ವತಃ ಹೋಗಿ ಗದ್ದೆಗಳಲ್ಲಿ ದುಡಿಯುತ್ತಾರೆ. ಮೇಲಿನ ಚಿತ್ರದಲ್ಲಿ ಕಾಣುವುದೇ ,ಅವರ ನಿತ್ಯದ ಉಡುಪು. ಮಲ್ಲಾಡಿ ಹಳ್ಳಿ ಬಿಟ್ಟು ಹೊರಗೆ ಹೋಗುವಾಗ ಒಂದು ಚಡ್ಡಿ ಹಾಗೂ ಒಂದು ಬನಿಯನು ತೊಡುತ್ತಾರೆ. ಇಷ್ಟೇ ಅವರ ಉಡಿಗೆ ತೊಡಿಗೆ. ಇಷ್ಟೆಲ್ಲ ಸಂಘ ಸಂಸ್ಥೆಗಳನ್ನು ಕಟ್ಟಲು ಬಿಡುಗ್ಯೆಯ, ಬರಿ ಜೋಳಿಗೆಯ ವ್ಯಕ್ತಿಗೆ ಹೇಗೆ ಸಾಧ್ಯವಾಯಿತು? ಅದೇ ಜೋಳಿಗೆಯ ಬಲದಿಂದ ಎನ್ನುತ್ತಾರವರು. ಅವರು ಸಂಪತ್ತು ತುಂಬಿದ ಮಠಗಳ ಅಧಿಕಾರಿಗಳೂ ಅಲ್ಲ, ರಾಜಕೀಯ ಸಂಸ್ಥೆಗಳ ನೆರವಿದ್ದ ಧಂಡವಾಳ ಶಾಹಿಗಳೂ ಅಲ್ಲ; ಬರಿಗೈಯಿಂದ ಈ ಜಿಲ್ಲೆ ಬಿಟ್ಟು ಹೋದ ಅವರು, ಜನತೆಯ ಸಹಕಾರ ಹಾಗೂ ತನ್ನ ಸೇವೆಗಳಿಂದ ಮಲ್ಲಾಡಿ ಹಳ್ಳಿಯನ್ನು ಈ ಸ್ಥಿತಿಗೆ ತಂದರು.

ಅವರಿಗಿಂದು ವಯಸ್ಸಾಗಿದೆ. ಹಾಗೆಂದು ಅವರ ಚಟುವಟಿಕೆಗಳು ಕುಗ್ಗಿಲ್ಲ, ಅವರು ಮಲ್ಲಾಡಿ ಹಳ್ಳಿಯ ಕುರಿತು ಇನ್ನು ಭವ್ಯ ಚಿತ್ರವನ್ನು ಇರಿಸಿ ಕೊಂಡಿದ್ದಾರೆ. ಅಲ್ಲಿ ಒಂದು ಪಾಲಿಟೆಕ್ನಿಕ್ ಶಾಲೆ, ಆಯುರ್ವೇದ ಶಿಕ್ಷಣ ಶಾಲೆ, ಮೂಲ ಶಿಕ್ಷಣ ಶಾಲೆ, ಲಲಿತ ಕಲಾ ಶಾಲೆ, ನಾಟಕ ಮಂದಿರ, ಮಹಿಳಾ ಸೇವಾಶ್ರಮ, ಅನಾಥ ಶಿಶು ಪೋಷಣಾಲಯಗಳನ್ನು ತೆರೆಯಬೇಕೆಂಬ ಆಶೆಯನ್ನು ಅವರು ಇರಿಸಿಕೊಂಡಿದ್ದಾರೆ. ಇಷ್ಟಲ್ಲದೆ ಒಂದು ಪ್ರಥಮ ದರ್ಜೆಯ ಕಾಲೇಜನ್ನು ತೆರೆಯುವ ಹಂಬಲ ಅವರಿಗಿದೆ. ಇದಕ್ಕೆಲ್ಲಾ ದಾರಿಯೇನು? ಹಣವೆಲ್ಲಿಂದ ಎಂದರೆ ಅವರೆನ್ನುತ್ತಾರೆ, "ಅದೇ ತಿರುಪೆ, ಭಿಕ್ಷೆ, ಯಾಚನೆ. ಆದರೆ ಭಿಕ್ಷೆಗೆ ಕೈಯೊಡ್ಡುವುದರಲ್ಲಿ ನಮಗೆ ಸಂಕೋಚವಿಲ್ಲ.....ನಾಚಿಕೆಯಿಲ್ಲ.....ದಾಕ್ಷಿಣ್ಯವಿಲ್ಲ. ಯಾಕೆಂದರೆ ನಾವು ಬೇಡುವುದು ನಮ್ಮ ಹೊಟ್ಟೆಗಾಗಿಯಲ್ಲ. ದೇಶದ ಕಲ್ಯಾಣಕ್ಕಾಗಿ ಆದುದರಿಂದಲೇ ಹೆಮ್ಮೆಯಿಂದಲೇ ನಾವು ನಮ್ಮ ಭಿಕ್ಷಾಪಾತ್ರೆಯನ್ನು ಜನತೆಯ ಇದಿರು ಚಾಚುತ್ತೇವೆ." ಜೋಳಿಗೆಯ ಬಲದಿಂದ ಮಲ್ಲಾಡಿ ಹಳ್ಳಿಯನ್ನು ಮುಕ್ತಿನ ಹಳ್ಳಿಯನ್ನಾಗಿ ಮಾಡಿದ ತಿರುಕರ ಕನಸು ನನಸಾಗದೆ ಉಳಿದೀತೆ?

ವಯಸ್ಸಾಯಿತೆಂದು ಅವರ ಉತ್ಸಾಹದ ಒರತೆ ಬತ್ತಿಲ್ಲ. ಅವರ ಆಶ್ರಮದ ಪ್ರತಿಯೊಂದು ಕಲ್ಲನ್ನೂ ಬಲ್ಲರು. ಕಟ್ಟಡದ ಪ್ರತಿ ಕಲ್ಲೂ ಅವರ ಸೇವಾ ಮನೋಭಾವಕ್ಕೆ ಸಾಕ್ಷಿ ನುಡಿಯುತ್ತದೆ. ಇಷ್ಟೆಲ್ಲಾ ಕಾರ್ಯಗಳ ಮಧ್ಯೆ ಸ್ವಾಮೀಜಿಯವರು 'ತಿರುಕ' ನಾಮಧೇಯರಾಗಿ ಹಲವಾರು ಸಾಹಿತ್ಯ ಕೃತಿಗಳನ್ನು ರಚಿಸಿದ್ದರು ನಾಟಕಗಳು, ಕಾದಂಬರಿಗಳು, ಕವನ ಸಂಗ್ರಹಗಳು, ಏಕಪಾತ್ರಾಭಿನಯಗಳು, ಕಥಾಸಂಕಲನಗಳು, ವಚನ ಸಾಹಿತ್ಯ, ಕೀರ್ತನ ಸಾಹಿತ್ಯ ಹೀಗೆ ಸಾಹಿತ್ಯದ ಹತ್ತು ಹಲವಾರು ಕ್ಷೇತ್ರಗಳಲ್ಲಿ ಅವರು ಕೈಯಾಡಿಸಿದ್ದಾರೆ.

ಇಷ್ಟಾದರೂ ಅವರು ಸರಳ ಜೀವಿಗಳು, ನಿರಾಡಂಬರ ಜೀವಿಗಳು. ಹೊಳಲ್ಕೆರೆ ರೈಲು ನಿಲ್ದಾಣದಿಂದ ಆರು ಮೈಲುಗಳಷ್ಟು ದೂರದಲ್ಲಿರುವ ಮಲ್ಲಾಡಿ ಹಳ್ಳಿಗೆ ನೀವೊಮ್ಮೆ ಹೋಗಿ 'ತಿರುಕನ ಕನಸು' ನನಸಾದುದನ್ನು ಕಾಣಬೇಕು.

ಜವಾಹರಲಾಲ ನೆಹರು ಭಾರತೀಯ ಸಂವಿಧಾನಕ್ಕೆ ಸಹಿಮಾಡುತ್ತಿರುವುದನ್ನು ಇಲ್ಲಿ ಕಾಣಬಹುದು:(24—1—1950)

ಅಮೆರಿಕೆಯಲ್ಲಿ ಅದ್ವಿತೀಯ ವಿಜಯ ಭೇರಿ ಬಾರಿಸಿದ ಅಧ್ಯಕ್ಷ ಜಾನ್ಸನ್ ಮತ್ತು ಆಯ್ಕೆಗೊಂಡ ಉಪಾಧ್ಯಕ್ಷ ಹಂಪ್ರಿ ವಿಜಯೋತ್ಸವಾಚರಣೆಯಲ್ಲಿ ತಲ್ಲೀನರಾಗಿದ್ದಾರೆ.



ಅಣುವಿನಲ್ಲಡಕವಾದ ಅಪೂರ್ವ ಶಕ್ತಿಯಿಂದ ಇಂತಹ ವಿದ್ಯುದಾಗಾರಗಳನ್ನು ರಚಿಸಿ ಶಕ್ತಿಯ ಸದುಪಯೋಗ ಮಾಡಿಕೊಳ್ಳಬಹುದು. ಆದರೆ ಅದನ್ನು ಅಣುಗುಂಡುಗಳಲ್ಲಿ ಹುದುಗಿಸಿ ಮಾನವನ ಸರ್ವನಾಶದಲ್ಲಿ ತೊಡಗಿಸಬೇಕೆಂಬ ಅಪಸ್ವರ ಭಾರತದಲ್ಲೂ ಎದ್ದಿದೆ.

ಸಂಭೆತ್ತು

ವಿಜ್ಞಾನ ವಿಸ್ಮಯ

ಜಾನುವಾರುಗಳಿಗೆ ಕೃತಕಾಹಾರ

ದನಕರುಗಳಿಗೆ ಬೇಕಾದ ಕೃತಕ ಮೇವನ್ನು ತಯಾರಿಸುವುದರಲ್ಲಿ ಆಹಾರ ತಜ್ಞರು ಯಶಸ್ವಿಗಳಾಗಿದ್ದಾರೆ. ಕೃತಕ ಮೇವನ್ನು ತಿನ್ನುವ ಹಸುಗಳು ಅಧಿಕ ಹಾಲನ್ನು ಕೊಡುವುವೆಂತಲೂ, ಆ ಹಾಲು ರುಚಿಯಲ್ಲಾಗಲೀ ವಾಸನೆಯಲ್ಲಾಗಲೀ, ಯಾವುದೇ ವಿಧವಾದ ವ್ಯತ್ಯಾಸವನ್ನೂ ಹೊಂದಿರುವುದಿಲ್ಲವೆಂದೂ ತಿಳಿದು ಬಂದಿದೆ. ಮೇವಿನ ಅಭಾವವಿರುವ ರಾಷ್ಟ್ರಗಳಿಗೆ ಈ ಸಂಶೋಧನೆಯು ಬಹಳ ಉಪಯುಕ್ತವಾಗಲಿದೆ. ಈ ಬಗೆಯ ಮೇವನ್ನು ಕೃತಕರೀತಿಯಲ್ಲಿ ತಯಾರಿಸುವ ಮಾರ್ಗವೊಂದನ್ನು ಫಿನ್‌ಲೇಂಡಿನ ನೋಬೆಲ್ ಪ್ರಶಸ್ತಿವಿಜೇತ ವಿಜ್ಞಾನಿಯಾದ ಪ್ರೊಫೆಸರ್ ಆರ್ಟೂರಿ ವಿರ್ಟಾನೆನ್ ಕಂಡು ಹಿಡಿದಿದ್ದಾರೆ. ಇದರ ಸೂತ್ರವನ್ನು ಆಧಾರವಾಗಿಟ್ಟುಕೊಂಡು, ಅನೇಕ ದೇಶಗಳ ವಿಜ್ಞಾನಿಗಳು ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಪಶು ಸಂಗೋಪನದಲ್ಲಿ ಈ ಸಂಶೋಧನೆಯು ಕ್ರಾಂತಿಯನ್ನೇ ಉಂಟು ಮಾಡಿರುವುದರಿಂದ ಇದರ ಬಗ್ಗೆ ಎಲ್ಲಾ ದೇಶಗಳಲ್ಲಿಯೂ ತೀವ್ರ ಆಸಕ್ತಿಯನ್ನು ವ್ಯಕ್ತಪಡಿಸಲಾಗಿದೆ.

ಏಷ್ಯಾ, ಆಫ್ರಿಕಾ, ದಕ್ಷಿಣ ಅಮೇರಿಕಾದ ಹಲವಾರು ಭಾಗಗಳಲ್ಲಿ ದನಕರುಗಳಿಗೆ ಸರಿಯಾದ ಮೇವು ದೊರಕದಿರುವುದರಿಂದ, ಅಲ್ಲಿ ಹಾಲು ಅಪೂರ್ವ ವಸ್ತುಗಳಲ್ಲೊಂದಾಗಿದೆ. ಕೃತಕ ಮೇವನ್ನು ಕಂಡುಹಿಡಿಯಲಾಗಿರುವುದರಿಂದ ಈ ಕಷ್ಟವು ಇನ್ನುಮುಂದಾದರೂ ತೀರಬಹುದೆಂದು ನಿರೀಕ್ಷಿಸಲಾಗಿದೆ. ಕೃತಕ ಮೇವು ಜಾನುವಾರುಗಳಿಗೆ ಒಗ್ಗಿ ಹೋದ ಮೇಲೆ ಅವುಗಳಲ್ಲಿ ಪುಷ್ಟ ಬೆಳವಣಿಗೆಯು ಕಂಡುಬರುವುದಲ್ಲದೆ, ಅವುಗಳು ಕೊಡುವ ಹಾಲಿನ ರುಚಿಯಲ್ಲಿ ಯಾವದೇ ವಿಧವಾದ ದೋಷವು ಕಂಡುಬರುವುದಿಲ್ಲವೆಂದು ತಿಳಿದು ಬಂದಿದೆ.

ಪಶ್ಚಿಮ ಜರ್ಮನಿಯ ಸ್ಟಟ್‌ಗಾರ್ಟ್‌ನಲ್ಲಿರುವ ಹೋಹೇನ್‌ಹಿಮ್ ವ್ಯವಸಾಯ ಕಾಲೇಜಿನ ಕಾಲ್ನಡಿಗೆಗಳ ಆಹಾರ ಸಂಶೋಧಕ ವಿಭಾಗವು ಕಳೆದ ಕೆಲವು ವರ್ಷಗಳಿಂದ ಈ ವಿಭಾಗದಲ್ಲಿ ಸತತ ಪ್ರಯೋಗಗಳನ್ನು ನಡೆಸುತ್ತಿದೆ. ಈ ಸಂಶೋಧನೆಗೆ ಭವ್ಯ ಭವಿತವ್ಯವಿದೆಯೆಂದು ಈ ಕಾಲೇಜಿನ ಡೈರೆಕ್ಟರಾದ ಪ್ರೊಫೆಸರ್ ವಾಲ್‌ಬಿಯರರು ಹೇಳಿದ್ದಾರೆ. ಈ ಪ್ರಯೋಗಗಳು ಇನ್ನೂ ಆರಂಭ ದೆಶೆಯಲ್ಲಿರುವುದರಿಂದ, ಈ ಕೃತಕ ಮೇವನ್ನು ಮಾರು ಕಟ್ಟೆಯಲ್ಲಿಡುವ ಮುನ್ನ ಬೇಕಾದಂತೆ ಪ್ರಯೋಗಗಳನ್ನು ನಡೆಸಬೇಕೆಂದೂ ಅವರು ನುಡಿದಿರುವರು.

ಸಾಧಾರಣವಾಗಿ ಅತಿ ಹೆಚ್ಚಾಗಿ ಕ್ಷೀರ ಕ್ಷೇತ್ರಗಳನ್ನು ಹೊಂದಿರುವ ದೇಶಗಳಲ್ಲಿನ ಕಾಲ್ನಡಿಗೆಗಳು ೨೦೦ ಪೌಂಡ್ ಸಸಾರ ಜನಕವನ್ನೊಳಗೊಂಡಿರುವ ೬೦೦೦ ಪೌಂಡ್ ಹಾಲನ್ನು ನೀಡುತ್ತವೆ. ಹಸುಗಳು ಮೇವಿನಲ್ಲಿರುವ ಸಸಾರ ಜನಕಗಳಲ್ಲಿ ಅರ್ಧದಷ್ಟನ್ನು ಮಾತ್ರ ಹಾಲಿನಲ್ಲಿ ಹಿಂದಿರುಗಿಸುವುದರಿಂದ, ಕೃತಕ ಮೇವಿನಲ್ಲಿ ಎರಡರಷ್ಟು ಪ್ರಮಾಣಬೇಕಾದದ್ದು ಅತ್ಯಾವಶ್ಯಕ

ಪರೀಕ್ಷಾರ್ಥವಾಗಿ ಹಸುಗಳಿಗೆ ಹಸಿರು ಮೇವನ್ನು ನೀಡುವ ಬದಲು ಸ್ಟಾರ್ಚ್ ಸಾಕ್ಕರೀನ್ ಸೆಲ್ಯುಲೋಸ್, ಕಾರ್ಬಾಮೈಡ್, ಅಮ್ಮೋನಿಯಂಸಲ್ಫೇಟ್, ಅನ್‌ಸೀಡ್ ಎಣ್ಣೆ ಮುಂತಾದುವುಗಳ ಮಿಶ್ರಣದ ಕೃತಕ ಮೇವನ್ನು ಒದಗಿಸಲಾಯಿತು. ಅಲ್ಲದೆ, ನಾಲ್ಕರಿಂದ ಆರು ಪೌಂಡುಗಳಷ್ಟು ಸೆಲ್ಯುಲೋಸನ್ನು ದನಗಳಿಗೆ ನೀಡಲಾಯಿತು. ಈ ಮಿಶ್ರಣವು ಸಹಜವಾದ ಮೇವಿಗಿಂತ ಯಾವುದೇ ವಿಧದಲ್ಲಿ ಕಡಿಮೆಯಿಲ್ಲವೆಂದು ಪ್ರಯೋಗಾನಂತರ ತಿಳಿದು ಬಂದಿತು. ಕೃತಕ ಮೇವನ್ನು ತಿಂದ ದನಗಳು ವರ್ಷಕ್ಕೆ ೪೨೫೦ ಪೌಂಡುಗಳಷ್ಟು ಹಾಲನ್ನು ನೀಡಿದವು.

ಸಹಜವಾದ ಮೇವನ್ನು ತಿನ್ನುವ ದನಗಳು ನೀಡುವ ಹಾಲಿಗಿಂತ ಈ ಪ್ರಮಾಣವು ಕಡಿಮೆಯಾಗಿದ್ದಿರ ಬಹುದು. ಆದರೆ ಸಹಜ ಮೇವಿನ ದನಗಳ ಹಾಲಿನಲ್ಲಿ ಸೇ. ೪.೭ ಕೊಬ್ಬು ಇದ್ದಲ್ಲಿ ಕೃತಕ ಮೇವಿನದರಲ್ಲಿ ಸೇ. ೬.೧೪ ಇರುವುದೆಂದು ತಿಳಿದು ಬಂದಿದೆ. ಒಣಗಿದ ಹುಲ್ಲು, ಕಬ್ಬಿನ ಸಿಪ್ಪೆ ಮುಂತಾದುವುಗಳಿಂದಲೇ ಕೃತಕ ಮೇವನ್ನು ತಯಾರಿಸಬಹುದಾಗಿರುವುದರಿಂದ ಮೇವಿನ ತೊಂದರೆಯಿಂದಾಗಿ ಕಾಲ್ನಡಿಗೆಗಳಿಲ್ಲವೆನ್ನುವ ದೇಶಗಳಲ್ಲಿ ಸಹಾ ಇನ್ನು ಮುಂದೆ ಕೃತಕ ಮೇವಿನ ಸಹಾಯದಿಂದ ದನಕರುಗಳನ್ನು ಸಾಕಬಹುದು.

ಆದರೆ ಈ ಪ್ರಯೋಗಗಳು ಇನ್ನೂ ಪರಿಪೂರ್ಣಾವಸ್ಥೆಯನ್ನು ಮುಟ್ಟಿಲ್ಲದಿರುವುದರಿಂದ ಸ್ಟಟ್‌ಗಾರ್ಟ್‌ನಲ್ಲಿರುವ ಸಂಶೋಧನಾ ಕೇಂದ್ರದಲ್ಲಿ ಈ ವಿಷಯವಾಗಿ ಸತತ ಸಂಶೋಧನೆಗಳನ್ನು ನಡೆಸಲಾಗುತ್ತಿದೆ.

ಸುಖ - ದುಃಖ

ರೇಶನಿಂಗ್ ಭೀತಿ

ಆಹಾರದ ಅಭಾವದಿಂದ ಕಂಗೆಟ್ಟ ಸರಕಾರವು ರೇಶನಿಂಗ್‌ನ್ನು ಜ್ಯಾರಿಗೊಳಿಸುವ ವಿಚಾರದಲ್ಲಿದೆಯೆಂದು ತಿಳಿಯುತ್ತದೆ. ಶಾಸನಗಳು ತಮಗೆ ನೀಡಿದ ಅಧಿಕಾರವನ್ನು ಉಚಿತ ರೀತಿಯಲ್ಲಿ ಬಳಸಲಾರದ ಆಡಳಿತ ಯಂತ್ರವು ರೇಶನಿಂಗ್‌ನ್ನು ಸ್ವಾಗತಿಸಲೂ ಬಹುದು. ಇದರಿಂದ ಯಾರಿಗೆ ಲಾಭವೆಂದು ನೋಡಬೇಕು. ಹಿಂದೆ ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿ ಜ್ಯಾರಿಗೆ ಬಂದ ರೇಶನಿಂಗ್ ಯುಗದಲ್ಲಿ ಲಕ್ಷಾಧಿಪತಿಗಳಾದವರ ಸಂಖ್ಯೆ ಕಡಿಮೆಯಿಲ್ಲ. "ಪ್ರತಿಬಂಧ"ವೇ ಅನ್ಯಾಯಗಳಿಗೆ ಮೂಲವೆಂಬುದು ಎಲ್ಲರೂ ಕಂಡುಕೊಂಡ ಸಂಗತಿಯಾಗಿರುವಾಗ ಈಗ ರೇಶನಿಂಗ್ ಜ್ಯಾರಿಗೆ ಬಂದರೂ ಅದರಿಂದ ಕಾಳಸಂತೆಯ ಕದೀಮರಷ್ಟೇ ಮತ್ತೂ ಸಿರಿವಂತರಾಗ ಬಹುದಷ್ಟೇ ಹೊರತು ಜನ ಸಾಮಾನ್ಯರಿಗೆ ಹೆಚ್ಚಿನ ಲಾಭವಾಗಲಾರದು.

ಇಲ್ಲಿ ಇನ್ನೊಂದು ವಿಷಯವನ್ನು ಮರೆಯಬಾರದು. ಬೇಕಾದುದಕ್ಕಿಂತ ಹೆಚ್ಚು ಕೊಂಡು ಆಹಾರವನ್ನು ಅನಾವ್ಯಯ ಮಾಡುವವರು ಇಂದು ಯಾರೂ ಇಲ್ಲವೆಂದೇ ಹೇಳಬೇಕು. ರೇಶನಿಂಗ್ ಅನಾವ್ಯಯವನ್ನು ತಪ್ಪಿಸಲಾದರೆ, ಈ ಕಾರಣದಿಂದ ನಿರುಪಯುಕ್ತ. ಎಲ್ಲರಿಗೂ ಉಚಿತ ಪ್ರಮಾಣದಲ್ಲಿ ವಿತರಣೆ ಮಾಡುವುದಷ್ಟೇ ರೇಶನಿಂಗ್‌ನ ತತ್ವಗಳಲ್ಲಿ ಮುಖ್ಯವಾದುದು. ಆಹಾರ ಧಾನ್ಯಗಳ ಸಾಗಾಟ—ಮಾರುವೆಗಳ ಮೇಲೆ ಯಾವ ಪ್ರತಿಬಂಧವನ್ನೂ ಹೇರದೆ 'ನಿರಾತಂಕ ವ್ಯಾಪಾರ'ಕ್ಕೆ ಆಸ್ಪದ ಮಾಡಿಕೊಟ್ಟರೆ, ವಿತರಣೆ ಏಕೆ ಸರಿಯಾಗಲಾರದು? ಈ ಹಿಂದೆ ಆಗಿದ್ದಿಲ್ಲವೆ? ಇದರ ಮೇಲೆ, ಕೊರತೆ ಬೀಳುವಷ್ಟು ಧಾನ್ಯಗಳನ್ನು ಆಯಾತಗೊಳಿಸುವುದಂತೂ ಇದ್ದೇ ಇದೆ. ಸಾಮಾಜಿಕ ನ್ಯಾಯವನ್ನು ಸಂರಕ್ಷಿಸಲು ಸರಕಾರವೂ ನ್ಯಾಯ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಮಾರಲೂ ಬಹುದು.

ಒಂದು ವೇಳೆ ರೇಶನಿಂಗ್ ಅನಿವಾರ್ಯವೇ ಎನಿಸಿದರೆ, ಜನತೆಯ ಪಾಡು ನಾಯಿ ಪಾಡಾದೀತು. ಪಟ್ಟಣಿಗರಿಗಿಂತಲೂ ಅಧಿಕ ಸಂಖ್ಯಾತರಾದ ಹಳ್ಳಿಗರೇ ಈ ರಾಕ್ಷಸನ ಬಾಯಿಗೆ ಬಲಿಯಾಗುವರು. ಆದುದರಿಂದ ಹೊಸ ಹೆಜ್ಜೆಯನ್ನಿಡುವುದಕ್ಕೆ ಮೊದಲು ನೂರು ಸಲ ಅದರ ಗುಣಾವಗುಣಗಳನ್ನು ಕೂಲಂಕಷವಾಗಿ ಯೋಚಿಸಬೇಕು. ಲಂಚಾವತಾರಕ್ಕೆ ಮುಟ್ಟುಗೋಲು ಹಾಕಲಿಟ್ಟ ದಿಟ್ಟ ಹೆಜ್ಜೆಯನ್ನು ಮತ್ತೆ ಹಿಂದಿಡುವುದು ಸರಕಾರಕ್ಕೆ ಶೋಭನೀಯವಲ್ಲ–ಈ ವಿಚಾರದಲ್ಲಿ ಒಂದು ನಿರ್ಧಾರಕ್ಕೆ ಬಾರದೆ ಹೇಳಿಕೆ ನೀಡುವುದೂ ಅಭಿಪ್ರಾಯ ಪ್ರಕಟಿಸುವುದೂ ಶಾಸಕರಿಗೆ ಉಚಿತವಲ್ಲ. ಪ್ರಜಾಪ್ರಭುತ್ವದಲ್ಲೂ ಸಾಮಾಜಿಕ ನ್ಯಾಯ—ಭದ್ರತೆಗಳ ದೃಷ್ಟಿಯಿಂದ ರಹಸ್ಯವಾಗಿಡುವ ಕೆಲವೊಂದು ವಿಚಾರಗಳಾದರೂ ಇಲ್ಲವೆ?

—ಬಿ. ಎಲ್. ಎ.

ಗಮನಾರ್ಹ ಬದಲಾವಣೆ! ಠೇವಣಾತಿದಾರರಿಗೆ ಸುಸಂದರ್ಭ!!

ನಿರಖು ಠೇವಣಿಗಳ ಮೇಲೆ

ಪರಿಷ್ಕರಿಸಿದ ಆಕರ್ಷಣೀಯ ಬಡ್ಡಿ ದರ !!!

91 ದಿನಗಳಿಗೆ ಮೇಲ್ಪಟ್ಟ 6 ತಿಂಗಳ ಒಳಗಿನ ಅವಧಿಯ ಠೇವಣಾತಿಗಳಿಗೆ—4¾%

6 ತಿಂಗಳಿಂದ ಮೇಲ್ಪಟ್ಟ		1 ವರ್ಷ ಒಳಗಿನ ಅವಧಿಯ		,,		5¼%
1 ವರ್ಷದಿಂದ	,,	2 ವರ್ಷಗಳ ಒಳಗಿನ	,,	,,		5½%
2	,,	,, 3	,,	,,	,,	5¾%
3	,,	,, 5	,,	,,	,,	6%
5	,,	,, 7	,,	,,	,,	6¼%
7	,,	,, 9	,,	,,	,,	6½%
9 ವರ್ಷಗಳಿಗೆ ಮೇಲ್ಪಟ್ಟು			....		....	6¾%

5 ವರ್ಷ ವ ಅವುಗಳಿಗೆ ಮೇಲ್ಪಟ್ಟ ಅವಧಿಯ ಧಾರ್ಮಿಕ ಸಂಸ್ಥೆಗಳ ಠೇವಣಾತಿಗಳಿಗೆ 6¾%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ನೀಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಯಾವುದೇ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು:-

"ವಿಜಯ ಬ್ಯಾಂಕ್ ಬಿಲ್ಡಿಂಗ್", ಲೈಟ್‌ಹೌಸ್ ಹಿಲ್ ರೋಡ್,

ಮಂಗಳೂರು - ೩.

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.

ಬೆಲೆ: ಸಾದಾ ಪ್ರತಿ ರೂ. ೧.

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯ ಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."

—ಲೋಕಮಾನ್ಯ ತಿಲಕ.

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ಮಕ್ಕಳಿಗಾಗಿ ಹಣೆದ

ಮಹಾಪುರುಷರ ಕಥೆಗಳು

೨. ಪುರಂದರ ದಾಸರ ಕಥೆ

ಬರೆದವರು.
ವಿದ್ವಾನ್ ಸುರತ್ಕಲ್ಲು ಸುಬ್ಬರಾವ್ ಮತ್ತು
ವಿದ್ವಾನ್ ಕೆ. ವೆಂಕಟರಾಯಾಚಾರ್ಯ ಸುರತ್ಕಲ್ಲು.

ಮಾನವನ ಜೀವನದ ಉದ್ದೇಶವೇ ಇಹಪರ ಸುಖಗಳನ್ನು ಸಂಪಾದಿಸುವುದು. ಅದಕ್ಕೆ ಪರಮಾತ್ಮನ ಪರಮಾನುಗ್ರಹವೇ ಮುಖ್ಯ ಕಾರಣವಾಗಿದೆ. ಪರಮಾತ್ಮನ ಪ್ರೀತಿಗೆ ಪಾತ್ರನಾಗಲು ಮನುಷ್ಯನು ಅನುಸರಿಸಬಹುದಾದ ಮಾರ್ಗಗಳು ಹಲವು ಇವೆ. ಅವುಗಳಲ್ಲಿ ಜ್ಞಾನಮಾರ್ಗ, ಕರ್ಮಮಾರ್ಗ, ಭಕ್ತಿ ಮಾರ್ಗ ಎಂಬವು ಮುಖ್ಯವಾದವುಗಳು. ಇವುಗಳಲ್ಲಿ ಭಕ್ತಿ ಮಾರ್ಗವೇ ಅನುಸರಣೆಗೆ ಸರ್ವಶ್ರೇಷ್ಠವಾದುದೆಂದು ಸಜ್ಜನರ ಮತ. ಉಳಿದ ಮಾರ್ಗಸಾಧನೆ ಯಲ್ಲಿ ತೊಡಕುಗಳು ಹೆಚ್ಚು. ಭಕ್ತಿಮಾರ್ಗವು ಅಪಾಯರಹಿತವಾದುದರಿಂದ ಇದರಲ್ಲಿ ಸಿದ್ಧಿಯನ್ನು ಪಡೆಯುವುದು ಸುಲಭ. ಭಕ್ತಿಯೆಂದರೆ ಪೂಜ್ಯರಲ್ಲಿ ಇರಿಸಿದ ನಿರಂತರವಾದ-ನಿಷ್ಕಾರಣವಾದ ಪ್ರೀತಿ. ಭಗವಂತನಲ್ಲಿ ಇರಿಸಿದ ಪ್ರೀತಿಯೇ ಭಗವದ್ಭಕ್ತಿಯೆನಿಸುವುದು. ಪುರಾತನಗಳಾದ ವೇದೋಪನಿಷತ್ತುಗಳಲ್ಲಿಯೇ ಈ ಭಕ್ತಿಯ ಉಗಮವಾಗಿದೆ. ಮುಂದೆ ಭಾಗವತಾದಿ ಪುರಾಣಗಳಲ್ಲಿ ಇದರ ಮಹಿಮೆ ವಿಸ್ತಾರವಾಗಿ ವರ್ಣಿತವಾಗಿದೆ.

ಶ್ರೀ ಶಂಕರಾಚಾರ್ಯರ ಗ್ರಂಥಗಳಲ್ಲಿ ಶಿವ ವಿಷ್ಣು ಮೊದಲಾದ ದೇವರ ಭಕ್ತಿಯು ಪ್ರತಿಪಾದಿತವಾಗಿದೆ. ಶ್ರೀ ರಾಮಾನುಜಾಚಾರ್ಯರೂ ಈ ಭಕ್ತಿಭಾವನೆಯ ಪೋಷಕರಾಗಿದ್ದಾರೆ. ಅನಂತರ ಶ್ರೀ ಮಧ್ವಾಚಾರ್ಯರೂ ತಮ್ಮ ಗ್ರಂಥಗಳಲ್ಲಿ ಹರಿಭಕ್ತಿಯನ್ನು ಸಮರ್ಪಕವಾಗಿ ವಿವೇಚಿಸಿದ್ದಾರೆ. ಇವೆಲ್ಲಾ ಗ್ರಂಥಗಳು ಸಂಸ್ಕೃತದಲ್ಲಿವೆ. ಇನ್ನು ಭಕ್ತಿಭರಿತವಾದ ಹರಿಕೀರ್ತನೆಗಳನ್ನು ಮೊತ್ತಮೊದಲು ಕನ್ನಡದಲ್ಲಿ ರಚಿಸಿ ಹಾಡಿದವರು ಶ್ರೀ ಮಧ್ವಾಚಾರ್ಯರ ಶಿಷ್ಯರಾದ ಶ್ರೀ ನರಹರಿಯತಿಗಳು. ಆ ಕಾಲದಲ್ಲಿ ದೇಶೀಯ ಭಾಷೆಗಳಲ್ಲಿ ಬರೆವ ಈ ಕ್ರಮವು ಕನ್ನಡದಲ್ಲಿ ಹೆಚ್ಚು ಬಳಕೆಯಲ್ಲಿರಲಿಲ್ಲ. ಇದು ಊರ್ಜಿತವಾದದು ಆ ಬಳಿಕ ವಿಜಯನಗರದ-ಶ್ರೀ ಕೃಷ್ಣದೇವರಾಯನ ಕಾಲದಲ್ಲಿ. ಆಗ ಶ್ರೀ ವಾದಿರಾಯರು, ಶ್ರೀ ವ್ಯಾಸರಾಯರು, ಶ್ರೀ ವಾದಿರಾಜರೆಂಬ ಯತಿತ್ರಯರೂ; ಪುರಂದರ, ಕನಕ, ವಿಜಯರೆಂಬ ಹರಿದಾಸತ್ರಯರೂ ಈ ಕ್ರಮವನ್ನು ಅಭಿವೃದ್ಧಿಗೊಳಿಸಿದರು. ಹಾಗಾಗಿ, ಭಕ್ತಿ ತತ್ತ್ವ ಗ್ರಂಥಗಳನ್ನು ಸಂಸ್ಕೃತದಲ್ಲಿ ಬರೆಯುವುದಕ್ಕೆ 'ವ್ಯಾಸಕೂಟ'ವೆಂದೂ ದೇಶೀಯ ಭಾಷೆಗಳಲ್ಲಿ ಬರೆಯುವುದಕ್ಕೆ 'ದಾಸಕೂಟ'ವೆಂದೂ ಈ ಕಾಲದಲ್ಲಿ ರೂಢಿಯಾಯಿತು.

ತಮಿಳಿನ ಆಳ್ವಾರರಂತೆ, ಕನ್ನಡದ ಶಿವಶರಣರಂತೆ ಹರಿದಾಸರು ಭಕ್ತಿ ಗೀತೆಗಳನ್ನು ರಚಿಸಿದರು. ಈ ಕೀರ್ತನ ಸಾಹಿತ್ಯದಲ್ಲಿ ವಿವಿಧ ರಾಗ ದಾಟಿಗಳನ್ನು ಪ್ರಯೋಗಿಸಿದರು. ಜನಸಾಮಾನ್ಯರಲ್ಲಿ ತತ್ತ್ವಪ್ರಚಾರವನ್ನು ಮಾಡುವ ಸಮುದ್ದೇಶದಿಂದ ವಿರಚಿತವಾದ ಈ ಹರಿಕೀರ್ತನಗಳಲ್ಲಿ ಸಂಗೀತವೂ ಸಾಹಿತ್ಯ ಸೌಂದರ್ಯವೂ ಸೇರಿಕೊಂಡಿವೆ. ಆದುದರಿಂದ 'ರನ್ನಕ್ಕೆ ಚಿನ್ನದ ಕೂಟವಾದಂತೆ' ಇವು ಜನರ ಕಿವಿ ಮನಗಳನ್ನು ಸೆಳೆಯುತ್ತಿವೆ. ನಮ್ಮ ಧಾರ್ಮಿಕ ಜ್ಞಾನದ ಉನ್ನತಿಗೂ, ಸಾಮಾಜಿಕ ವ್ಯವಹಾರದ ಏಳಿಗೆಗೂ ಸರಳ ಕೀರ್ತನೆಗಳು ವಿಶೇಷತಃ ಸಹಾಯಕಗಳಾಗುತ್ತಿವೆ ಅಲ್ಲದೆ ಜನರನ್ನು ಸುಸಂಸ್ಕೃತರನ್ನಾಗಿಸ ವುದಕ್ಕೂ ಇವು ಸಹಕಾರಿಗಳು, ಇಂತಹ ಕೀರ್ತನಗಳನ್ನು ಕನ್ನಡದಲ್ಲಿ ರಚಿಸಿ, ಜನತೆಯನ್ನುದ್ಧರಿಸುವುದಕ್ಕೆ ಪ್ರಯತ್ನಿಸಿದ ಪುಣ್ಯ ಪುರುಷರಲ್ಲಿ ಪುರಂದರದಾಸರು ಒಬ್ಬರು. ಪುಣ್ಯಪ್ರದವಾದ ಇವರ ಜೀವನಚರಿತೆಯನ್ನೂ ಕೆಲವು ಕೀರ್ತನೆಗಳನ್ನೂ ಇಲ್ಲಿ ಸಂಕ್ಷೇಪವಾಗಿ ಸೂಚಿಸುತ್ತೇವೆ.

ಪಂಡರಪುರವು ಭಕ್ತಿಯ ಕೇಂದ್ರ ಸ್ಥಳವೆಂದು ಹಿಂದಿನಿಂದಲೂ ಹೆಸರುಗೊಂಡಿದೆ ಶ್ರೀ ವಿಠಲನು ಪರಮ ಭಕ್ತನಾದ ಪುಂಡಲೀಕನಿಗೆ ಒಲಿದು ಇಟ್ಟಿಗೆಯಲ್ಲಿ ನಿಂತಸ್ಥನಿದು ಎಂದು ಇತಿಹಾಸವಿದೆ. ಇಲ್ಲಿ ಶ್ರೀ ವಿಠಲನ ದೇಗುಲವಿದ್ದು, ಅದು ನಮ್ಮ ದೇಶದ ಪವಿತ್ರಕ್ಷೇತ್ರಗಳಲ್ಲೊಂದೆಂದು ಪ್ರಸಿದ್ಧವಾಗಿದೆ. ಆ ಕಾರಣವೇ, ಭರತ ಖಂಡದ ಎಲ್ಲೆಡೆಗಳಿಂದಲೂ ಗುಂಪು ಗುಂಪಾಗಿ ಭಕ್ತ ಜನರು ಅಲ್ಲಿಗೆ ಬಂದು ಹೋಗುತ್ತಿದ್ದಾರೆ, ಈ ಪಂಢರ ಪುರಕ್ಕೆ ಸಮೀಪದಲ್ಲಿರುವುದೇ ಪುರಂದರಗಡವೆಂಬ ಪ್ರಸಿದ್ಧ ಪಟ್ಟಣವು. ಈ ನಗರಕ್ಕೆ ಈ ಹೆಸರು ಪುರಂದರ ದಾಸರಿಂದ ಬಂದಿತೋ, ಅಥವಾ ಪುರಂದರ ಗಡದಿಂದಲೇ ನಮ್ಮ ಕಥಾನಾಯಕನಿಗೆ ಪುರಂದರ ವಿಠಲನೆಂಬ ಈ ಹೆಸರು ವಿಖ್ಯಾತವಾಯಿತೋ ಹೇಳಲಾಗುವುದಿಲ್ಲ. (ವಿಷ್ಣುವಿಗೆ "ಆದಿದೇವಃ ಪುರಂದರಃ" ಎಂದು ಸಹಸ್ರ ನಾಮ ಸ್ತೋತ್ರದಲ್ಲಿ ಹೇಳುವುದರಿಂದ, ಪುರಂದರ ನೆಂದರೆ ಶ್ರೀ ಹರಿಯೆಂದೇ ತಿಳಿಯುವುದುಚಿತವಾಗುತ್ತದೆ) ಇದು ಹೇಗಿದ್ದರೂ, ಈ ಪ್ರದೇಶವು ೬-೭ನೆಯ ಶತಕದಲ್ಲಿ ಕನ್ನಡವೊಂದು ಭಾಗವಾಗಿತ್ತೆಂಬ ಉಲ್ಲೇಖವಿದೆ (ಮರಾಠಿಯ ಭಕ್ತ ಕವಿ[illegible] [illegible] ವಿಠಲಾ ಕರ್ನಾಟಕು" ಎಂದಿದ್ದಾರೆ, ಹದಿನೈದನೆಯ ಶತಮಾನದಲ್ಲಿ ಬೇರೆ ಬೇರೆ ಪಂಥಾಚರಣೆಯವರು ಭಾರತದ ರಾಜ್ಯಗಳನ್ನಾಕ್ರಮಿಸಿ, ತಮ್ಮ ಮತಗಳನ್ನು ಪ್ರಚಾರಮಾಡುತ್ತಿದ್ದರು. ಆಗ ಅಲ್ಲಿ ಶೈವ, ವೀರಶೈವ, ವೈಷ್ಣವ, [illegible], [illegible] ಮೊದಲಾದ ಮತ[illegible] ಅವರಿಗಳಿಗೆ ಆಗಾಗ ವಾದಗಳಾಗುತ್ತಿದ್ದುವು; ಘರ್ಷಣಗಳಾಗುತ್ತಿದ್ದುವು; ಇಂತಹ ಸಂದಿಗ್ಧ ಸಂದರ್ಭದಲ್ಲಿಯೂ, ಸಾಮಾನ್ಯಜನರನೇಕರು ಏನೂ ತಿಳಿಯದೆ, ಯಾವ ಗೋಜಿಗೂ ಹೋಗದೆ, ತಮ್ಮಷ್ಟಕ್ಕೆ ತಾವು ಸುಖಾಸಕ್ತರಾಗಿದ್ದರು. ಅಂತಹವರಲ್ಲೊಬ್ಬನಾಗಿದ್ದನು ನಮ್ಮ ಕಥೆಗೆ ನಾಯಕನಾದ ಶ್ರೀನಿವಾಸ ನಾಯಕನು.

ಶ್ರೀನಿವಾಸನಾಯಕನು ಚಿನ್ನದ ವ್ಯಾಪಾರಿ ವರದಪ್ಪನಾಯಕನ [illegible] [illegible] [illegible] [illegible] [illegible] [illegible] ದ ಮೇಲೆ, [illegible] [illegible] ಸಂಪಾದಿಸುತ್ತಿದ್ದನು ಅಪಾರ ಸಂಪತ್ತಿನಿಂದ ಮೆರೆಯುತ್ತಿದ್ದ ಈ ನಾಯಕನನು ಕುರಿತು ಆ ಕಾಲದಲ್ಲಿ "ನವಕೋಟಿ ನಾರಾಯಣ"ನೆಂಬ ಪ್ರತೀತಿಯಿತ್ತು, ಹೀಗೆ ಇವನು ಎಣೆಯಿಲ್ಲದ ಧನಾಢ್ಯನಾಗಿದ್ದರೂ, ಎಣೆಗಾಣದ ಕಡು ಲೋಭಿ. ಹಣವೆಂದರೆ ಪ್ರಾಣಕ್ಕಿಂತಲೂ ಪರಮಪ್ರೀತಿಯಿವನಿಗೆ ಅದು ಕಾರಣ ಚಿಕ್ಕಾಸನ್ನಾದರೂ ಎಂದೂ ದಾನಧರ್ಮಗಳಿಗೆ ವಿನಿಯೋಗಿಸಿದವನಲ್ಲ. ಇಂತಹ ಜಿಪುಣನಾದ ಶ್ರೀನಿವಾಸನಾಯಕನು ಮಹಾತ್ಯಾಗಿ ಪುರಂದರದಾಸರಾಗಿ ಬದಲಾವಣೆಯಾದ ಬಗೆ ಅತೀವ ಚಮತ್ಕಾರಿಕವಾದದು!

ಶ್ರೀನಿವಾಸನಾಯಕನ ಪೂರ್ವ ಪುಣ್ಯ ವಿಶೇಷವಿದ್ದುದರಿಂದಲೋ ಏನೊ, ಭಗವಂತನಿಗೆ ಇವನನ್ನುದ್ಧರಿಸಬೇಕೆಂಬ ದಯೆ ಹುಟ್ಟಿತು.ಅದೇ ಆ ದಯಾಮಯನು ಒಮ್ಮೆ ಒಬ್ಬ ವೃದ್ಧ ವಿಪ್ರನ ವೇಷದಿಂದ ಇವನ ಅಂಗಡಿಗೆ ಬಂದು ಸ್ವಲ್ಪ ಹಣವನ್ನು ಬೇಡಿದನು. ನಾಯಕನು "ನಾಳೆ ಬಾ! ಕೊಡುವೆನು" ಎಂದು ಪ್ರತಿದಿನವೂ ಅವನನ್ನು ಹಿಂದಕ್ಕೆ ಕಳುಹಿಸುತ್ತಿದ್ದನು. ಹೀಗೆ ಹಲವು ದಿನಗಳ ವರೆಗೂ ಅವನು ಒಂದೇ ಬಂದು ಹೋಗಿ ಬಳಲಿದನ; ಆದರೂ ಹಿಡಿದ ಹಟವನ್ನು ಬಿಡಲಿಲ್ಲ. ಕೊನೆಗೆ ಒಮ್ಮೆ ಇವನಿತ್ತ ಸವೆದ ಕಾಸು ಕೊಳ್ಳದೆ, ನೇರವಾಗಿ ಇವನ ಮನೆಗೈದಿ ಇವನ ಹೆಂಡತಿಯೊಡನೆ ಹಣವನ್ನು ಬೇಡಿದನು. ಆಕೆ—ಕವಡೆ ಏನು ತಾನೆ ಮಾಡಲಾಪಳು? ಪತಿಯು ಮಹಾ ಧನಿಕನಾದರೂ, ತನ್ನ ಬಳಿಯಿರಿಸಿಕೊಳ್ಳಲು ಇದುವರೆಗೆ ಚಿಕ್ಕಾಸನ್ನೂ ಕೊಟ್ಟವನಲ್ಲ. ಇಂತು ಬೇಡಿದವನಿಗೆ ಏನಾದರೂ ಕಾಸು ನೀಡಲು ತನಗೆ ಸಾಧ್ಯವಾಗದುದಕ್ಕಾಗಿ ವ್ಯಸನವನ್ನು ತಾಳಿದಳು. ಆಗ ಆ ಬ್ರಾಹ್ಮಣನು "ಆ ನಿನ್ನ ಮೂಗುತಿಯನ್ನಾದರೂ ಕೊಟ್ಟು ಕರುಣಿಸು" ಎಂದನು. ಆಕೆ ಒಡನೆ ಅದನ್ನು ತೆಗೆದು ಅವನಿಗರ್ಪಿಸಿದಳು. ಅವನು ಅದನ್ನು ಮಾರುವುದಕ್ಕೆಂದು ನಾಯಕನ ಅಂಗಡಿಗೇ ಹೋದ ಶ್ರೀನಿವಾಸ ನಾಯಕನಿಗೆ ಆ ಮೂಗುತಿ ತನ್ನ ಪತ್ನಿಯದಾಗಿರಬೇಕೆಂಬ ಸಂಶಯ ಹುಟ್ಟಿತು. ಆ ಬ್ರಾಹ್ಮಣನನ್ನು ತುಸ ನಿಲ್ಲೆಂದು ಹೇಳಿ, ಮೂಗುತಿಯನ್ನು ಭದ್ರವಾಗಿ ಬಚ್ಚಿಟ್ಟು, ಮನೆಗೆ ಬಂದನು. ಪತ್ನಿಯೊಡನೆ ಮೂಗುತಿಯೆಲ್ಲಿದೆಯೆಂದ ವಿಚಾರಿಸಿದನು. ಆ ಸಾಧ್ವಿ [illegible] [illegible] ದನು, ನುಡಿಯಲು ಬೆದರಿದಳು ಆದರೆ, ಮೂಗುತಿಯನ್ನು ತೋರದಿದ್ದರೆ ಪತಿಯು ಅತಿಯಾಗಿ ಶಿಕ್ಷಿಸುವನೆಂದು ಎಣಿಸಿದಳು. ಇದಕ್ಕಿಂತ ಪ್ರಾಣತ್ಯಾಗವೇ ಹಿತವೆಂದು ಯೋಚನೆ ಆವಳಿಗೆ ಉಂಟಾಯಿತು. ಕೂಡಲೇ ಒಳಕ್ಕೆ ನಡೆದು, ದೇವರ ಮುಂದೆ ಭಕ್ತಿಯಿಂದ ಮೊರೆಯಿಟ್ಟಳು ಅನಂತರ [illegible] [illegible] [illegible] ವಿಷವನ್ನು ಸಿದ್ಧಗೊಳಿಸಿ ಕುಡಿಯುತಿರ್ದ[illegible] ಎತ್ತಿದಳು, [illegible] ಆಕೆಯು ಸಂತಸದಿಂ ತೀರದು. ಕೂಡಲೆ ಅದನ್ನು ಪತಿಗೆ ತಂದೀಯಲು, ವಿಸ್ಮಯಗೊಂಡ ನಾಯಕನು ಅಂಗಡಿಗೆ ಹೋಗಿನೋಡಲು,ಅಲ್ಲಿ ಭದ್ರವಾಗಿರಿಸಿದ್ದ ಮೂಗುತಿ ಮಾಯವಾಗಿತ್ತು! ಬ್ರಾಹ್ಮಣನೂ ಕಣ್ಮರೆಯಾಗಿದ್ದನು ಈ ವಿಚಿತ್ರಗಳಿಂದ ನಾಯಕನು ಚಕಿತನಾದನು!

ಕೂಡಲೆ ನಾಯಕನು ಮನೆಗೆ ಬಂದು ಈ ಕೌತುಕದ ಕಾರಣವನ್ನು ಕುರಿತು ಪತ್ನಿಯೊಡನೆ ವಿಚಾರಿಸಿದನು ಆ ಸಾಧ್ವಿಯಿಂದ ನಿಜ ಸಂಗತಿಯೆಲ್ಲಾ ವ್ಯಕ್ತವಾಯಿತು. ಇದರಿಂದ ದೇವರ ದಿವ್ಯ ಮಹಿಮೆಯೂ, ಆಕೆಗೆ ದೇವರಲ್ಲಿದ್ದ ನಿಶ್ಚಲ ಭಕ್ತಿಯೂ ಇವನಿಗೆ ಮನವರಿಕೆಯಾಯಿತು. ಆ ವರೆಗಿನ ತನ್ನ ಲೋಭತನಕ್ಕೆ ಅತೀವ ಪಶ್ಚಾತ್ತಾಪಗೊಂಡು ತನ್ನನ್ನು ತಾನೇ ಹಳಿದುಕೊಂಡನು. ಅಕಸ್ಮಾತ್, ಇವನ ಮನಸ್ಸಿನಲ್ಲಿ ಜ್ಞಾನೋದಯವಾಯಿತು ಅದುವರೆಗಿದ್ದ ಐಶ್ವರ್ಯದ ಮೇಲಣ ಆಸೆಯು ತೀರಾ ತೊಲಗಿತು. ಬಳಿಕ ತನ್ನಲ್ಲಿದ್ದ ದ್ರವ್ಯರಾಶಿಯನ್ನು ಬಡಬಗ್ಗರಿಗೂ, ಸಾಧುವೃಂದಕ್ಕೂ ದಾನಗೊಟ್ಟು, ಕಡು ವೈರಾಗ್ಯಶಾಲಿಯಾದನು; ಐಹಿಕ ಸುಖಸಾಧನಗಳು ಅಸ್ಥಿರವೆಂದೂ, ಭಗವಂತನ ಭಕ್ತಿಯೇ ಸುಸ್ಥಿರ ಸುಖದ ಸಾಧನವೆಂದೂ ಈ ನಾಯಕನು ಬಗೆದನು!

ಅದರಿಂದ ಪಂಪಾ ಕ್ಷೇತ್ರಕ್ಕೆ ಹೋಗಿ, ಅಲ್ಲಿದ್ದ ಶ್ರೀ ವ್ಯಾಸರಾಯ ಗುರುಗಳಿಂದ ಮಂತ್ರೋಪದೇಶವನ್ನು ಪಡೆದನು. ಆ ವೇಳೆ, ಅವರ ಕೀರ್ತನೆಗಳ ಮಾದರಿಯಲ್ಲಿಯೇ ತಾನೂ ರಚಿಸತೊಡಗಿದನು. ಅವರು ಅನುಗ್ರಹಿಸಿದ "ಪುರಂದರ ವಿಠಲ"ನೆಂಬ ಅಂಕಿತದಿಂದ ಬರೆದುದರಿಂದ ಪುರಂದರದಾಸನೆಂದೇ ಪ್ರಸಿದ್ಧನಾದನು.



ಪುರಂದರ ದಾಸರ ಕಥೆ

(ಹಿಂದಿನ ಪುಟದಿಂದ)

ಪುರಂದರದಾಸರ ಕೀರ್ತನೆಗಳೆಲ್ಲ ಬಹಳ ಸೊಗಸಾಗಿವೆ. ಭಕ್ತಿಬೋಧಕವಾಗಿವೆ. 'ದಾಸರೆಂದರೆ ಪುರಂದರ ದಾಸರಯ್ಯ' ಎಂದು ಸ್ವತಃ ಇವರ ಗುರುಗಳಾದ ವ್ಯಾಸರಾಯರೇ ಹೊಗಳಿದ್ದಾರೆಂದ ಮೇಲೆ ಈ ಪುರಂದರದಾಸರ ಮಹಿಮೆ ವಿಶೇಷಕ್ಕೆ ಬೇರೆ ಶ್ಲಾಘನೆ ಬೇಕೇ?

ಇವರ ಕಾಲ ದೇಶಮತಗಳು ಯಾವವೆಂದು ತುಸ ತಿಳಿಯತಕ್ಕವು. ಪುರಂದರ ದಾಸರು ಪುರಂದರಗಡದಲ್ಲಿ ಕ್ರಿ. ಶ. ೧೪೮೦ರಲ್ಲಿ ಜನಿಸಿದರೆಂದೂ, ಕ್ರಿ. ಶ. ೧೫೬೪ನೇ ಜನವರಿ ತಾ. ೧೦ರಲ್ಲಿ ಗದ್ವಾಲಿನ ಹತ್ತಿರ ವನಪರ್ತಿಯೆಂಬಲ್ಲಿ ವೈಕುಂಠ ವಾಸಿಗಳಾದರೆಂದೂ ಹೇಳುತ್ತಾರೆ. ಕೆಲವರೆನ್ನುವಂತೆ 'ಕನ್ನಡ ಕವಿ ಕುಮಾರವ್ಯಾಸನೂ, ಪುರಂದರದಾಸನೂ ಸಮಕಾಲಿಕ'ರೆನ್ನಲು ಅಷ್ಟು ಪ್ರಬಲವಾದ ಆಧಾರವಿಲ್ಲ. ಇದು ವರೆಗೆ ತಿಳಿದಂತೆ ಕುಮಾರ ವ್ಯಾಸನು ಹದಿಮೂರನೆಯ ಶತಕದವನು, ಪುರಂದರದಾಸರು ಹದಿನೈದು — ಹದಿನಾರನೆಯ ಶತಕದವರು. ಇವರು ಮೊದಲು ಸ್ಮಾರ್ತ ಬ್ರಾಹ್ಮಣರಾಗಿದ್ದರೆಂದೂ, ವ್ಯಾಸರಾಯರಿಂದ ಮಂತ್ರೋಪದೇಶವಾಗಿ 'ಹರಿದಾಸ'ರಾದ ಬಳಿಕ ಮಧ್ವಮತಾನುಯಾಯಿಗಳಾದರೆಂದೂ ಹೇಳುವುದು ಸಮಂಜಸವಾಗಿದೆ. ಇವರ ಕೀರ್ತನೆಗಳಿಂದಲೂ ಈ ವಿಚಾರ ತುಸ ಸ್ಪಷ್ಟವಾಗುತ್ತದೆ.

ಪುರಂದರದಾಸರ ಪೂರ್ವ ವಿಚಾರ ಹೆಚ್ಚು ತಿಳಿಯದಿದ್ದರೂ ಮುಂದಿನ ಜೀವನಕ್ಕೆ ಸಂಬಂಧಿಸಿದ ಕೆಲವು ಕತೆಗಳಿವೆ. ಅವುಗಳಲ್ಲೊಂದೆರಡನ್ನು ಎತ್ತಿ ಬರೆಯುವುದು ಹೆಚ್ಚಾಗಲಾರದು. ಒಂದು ತಡವೆ ಪುರಂದರರು 'ಯಂತ್ರೋದ್ಧಾರಕ ಮುಖ್ಯಪ್ರಾಣ'ನ ಪೂಜೆಗೆ ಮಗನಾದ ಮಧ್ವಪನನ್ನು ಕಳುಹಿದರು. ಆತನು ಭಕ್ತಿಪೂರ್ವಕ ಅರ್ಪಿಸಿದ ನೈವೇದ್ಯವನ್ನು ಹನುಮನು ಉಂಡನು. ಹೀಗೆ ನಾಲ್ಕಾರು ದಿನಗಳು ನಡೆದ ಬಳಿಕಲೊಮ್ಮೆ ನೈವೇದ್ಯವನ್ನು ಹಿಂದಿರುಗಿ ತಾರದುದನ್ನರಿತು ಹರಿದಾಸರು ಆ ಬಗೆಗೆ ಮಗನನ್ನು ವಿಚಾರಿಸಿದರು. ಅವನು ನಡೆದ ಸಂಗತಿಯನ್ನರುಹಿದನು. ಹರಿದಾಸರು ಮರುದಿನವೇ ಮುಖ್ಯಪ್ರಾಣನ ಸನ್ನಿಧಿಗೆ ಮಗನೊಡನೆ ಹೋಗಿ, ಅವನ ಹೇಳಿಕೆಯನ್ನು ಪರೀಕ್ಷಿಸಿದರು. ಆಗ ಅವರ ಸಮಕ್ಷದಲ್ಲೇ ಹನುಮನ ವಿಗ್ರಹವು ಮುಂದಿರಿಸಿದ ನೈವೇದ್ಯವನ್ನು ಭುಂಜಿಸಿತು. ಇದರಿಂದ ಅವರು ಅಚ್ಚರಿಗೊಂಡು, ಮಗನ ಭಗವದ್ಭಕ್ತಿಗೆ ಮೆಚ್ಚಿ, ಮನದಾರೆ ಕೊಂಡಾಡಿದರು. ಒಮ್ಮೆ ಇವರ ಊಟದ ಹಂತಿಗೆ ಇವರ ಶಿಷ್ಯನಾದ ಅಪ್ಪಣ್ಣ ಭಾಗವತನ ರೂಪದಲ್ಲಿ ದೇವರು ಬಂದು, ತುಪ್ಪದ ಬಿಂದಿಗೆ ತಂದರೆಂದೂ ಕೇಳುತ್ತದೆ. ಇವುಗಳಿಂದ ಭಕ್ತಿಯ ಮಹಿಮೆ ತಿಳಿಯುತ್ತದೆ.

ಪುರಂದರದಾಸರಲ್ಲದೆ ಇವರ ಹೆಂಡತಿ ಮಕ್ಕಳೂ ಭೃತ್ಯನೂ ಹರಿಕೀರ್ತನೆಗಳನ್ನು ರಚಿಸಿದ್ದರೆಂದು ವದಂತಿ. ಇದರ ಬಗೆಗೆ ಇನ್ನೂ ಹೆಚ್ಚು ಆಧಾರ ದೊರೆಯಲಿಲ್ಲ. ಇತ್ತೀಚೆಗೆ ದೊರೆತ ಶಾಸನವೊಂದರಲ್ಲಿ ಪುರಂದರದಾಸರ ಮೂವರು ಪುತ್ರರ ಹೆಸರು ಮಾತ್ರ ತೋರುತ್ತದೆ. ಲಕ್ಷ್ಮಣದಾಸ, ಹೇಬಣ (ಹೆಬ್ಬಣ್ಣ) ದಾಸ, ಮಧ್ವಪದಾಸ ಎಂಬಿವರೇ ಆ ಮೂವರು. ಇವರೆಲ್ಲ ವಸಿಷ್ಠ ಗೋತ್ರದ ಯಾಜುಶ್ಶಾಖೆಯ ಬ್ರಾಹ್ಮಣರೆಂದು ಅದರಲ್ಲಿ ಸೂಚಿತವಾಗಿದೆಯಂತೆ! ಇವರಲ್ಲಿ 'ಮಧ್ವಪ'ನ ಹೆಸರು ಈ ಮೇಲಿನ ಕತೆಯಲ್ಲಿದೆ, ಉಳಿದವರ ವಿಚಾರಗಳು ತಿಳಿದಿಲ್ಲ!

ಪುರಂದರದಾಸರು 'ಹರಿದಾಸ ಕೂಟ'ದ ಪ್ರಚಾರಕ್ಕಾಗಿ ಕನ್ನಡದ ಅನೇಕ ತೀರ್ಥ ಕ್ಷೇತ್ರಗಳನ್ನು ಸಂಚರಿಸಿ, ಅಲ್ಲಿನ ದೇವರನ್ನು ಬೇರೆ ಬೇರೆಯಾಗಿ ಕೀರ್ತಿಸಿದ್ದರು. ಅವುಗಳಲ್ಲಿ ಮುಖ್ಯವಾಗಿ ಹಂಪೆಯ ವಿರೂಪಾಕ್ಷ, ಯಂತ್ರೋದ್ಧಾರಕ ಮುಖ್ಯಪ್ರಾಣ, ವೇಲಾಪುರದ (ಬೇಲೂರು) ಚೆನ್ನಕೇಶವ, ಗದುಗಿನ ವೀರನಾರಾಯಣ, ಪಂಢರಪುರದ ವಿಠಲ, ಶೃಂಗೇರಿಯ ಶಾರದೆ, ತೊರವೆಯ ನರಹರಿ, ಗೌರೀಪುರದ ಹರಿ, ಉಭಯ ಕಾವೇರಿ ಮಧ್ಯದ ರಂಗನಾಥ, ತಿರುಪತಿಯ ವೆಂಕಟರಮಣ, ಭದ್ರಾಚಲದ ರಾಮ, ಘಟಿಕಾಚಲದ ಹನುಮಂತ, ಸೋದೆಯ ಹಯವದನ, ಉಡುಪಿಯ ಕೃಷ್ಣ. ಮೊದಲಾದ ದೇವರನ್ನು ಕುರಿತು ರಚಿಸಿದ ಕೀರ್ತನೆಗಳು ಪ್ರಸಿದ್ಧವಾಗಿವೆ.

ಹರಿ ಕೀರ್ತನೆಗಳು ಸಂಗೀತ ರೀತಿಯಲ್ಲಿ ಹೆಚ್ಚಾಗಿ ಬರೆದಿವೆ. ಸಂಗೀತ ವಿಷಯಕ ಗ್ರಂಥಗಳನ್ನು ಬರೆದವರಲ್ಲಿ ಶಾರ್ಙ್ಗದೇವ, ವಿದ್ಯಾರಣ್ಯರು ಹೆಸರುಗೊಂಡವರು. ಪುಂಡರೀಕ ವಿಠಲನು ಸಂಗೀತ ಸಂಬಂಧವಾದ ನಾಲ್ಕು ಗ್ರಂಥಗಳನ್ನು ಬರೆದನು. ಇವನು ಪುರಂದರದಾಸರ ಸಮಕಾಲೀನನು. ಇದೇ ಕಾಲದ ರಾಮಾಮಾತ್ಯನು ಒಂದು ಗ್ರಂಥ ಬರೆದನೆಂದು ಗೊತ್ತಾಗಿದೆ. ಆದರೆ, ನಮ್ಮ ಪುರಂದರದಾಸರು ಸಂಗೀತ ಲಕ್ಷಣ ಸಮನ್ವಿತಗಳಾದ ಹಲವು ಗೀತೆಗಳನ್ನು ರಚಿಸಿ ಹಾಡಿದ್ದರೇ ಹೊರತು, ಸಂಗೀತ ಕಲೆಯನ್ನು ಕುರಿತು ಪ್ರತ್ಯೇಕ ಗ್ರಂಥ ರಚಿಸಿದಂತೆ ತಿಳಿದುಬಂದಿಲ್ಲ. ಅನಂತರದ ಗ್ರಂಥಕಾರರು 'ಪುರಂದರ ವಿಠಲನು ಸಂಗೀತದ ಆಚಾರ್ಯ'ನೆಂಬಷ್ಟು ಹೊಗಳಿದ್ದಾರೆ. ಇದಕ್ಕೆ ಇವರ ಗೀತೆಗಳೆಲ್ಲವೂ ಸಂಗೀತ ಶಾಸ್ತ್ರದ ಸಲ್ಲಕ್ಷಣಕ್ಕೊಳಗಾಗಿ ಸಮರ್ಪಕವಾಗಿರುವುದೇ ಕಾರಣವೆನ್ನಬೇಕು. ತ್ಯಾಗರಾಜರಂತೂ ಪುರಂದರ ದಾಸರ ಬಗ್ಗೆ ಗೌರವವನ್ನು ವ್ಯಕ್ತ ಮಾಡಿದ್ದಾರೆ. ತುಳಜಾಮಹಾರಾಜನು ತುಂಬಾ ಆದರದಿಂದ ಉಲ್ಲೇಖಿಸಿದ್ದಾನೆ. ಇದರಿಂದ, ಪುರಂದರ ದಾಸರು ದಕ್ಷಿಣಾದಿ ಅಥವಾ ಕರ್ನಾಟಕ ಸಂಗೀತಕ್ಕೆ ಆಚಾರ್ಯ ಗುರುವರೆಂದು ಪ್ರಶಸ್ತಿಯನ್ನು ಯಥಾರ್ಥವಾಗಿ ಪಡೆದಿದ್ದಾರೆನ್ನಬಹುದು.

ಪುರಂದರದಾಸರ ಕೀರ್ತನೆಗಳು ಹಲವು ರಾಗಗಳಲ್ಲಿ, ಹಲವು ದಾಟಿಗಳಲ್ಲಿ ರಚಿತವಾಗಿವೆ. ಈ ಹಾಡುಗಳೆಲ್ಲ ಸದ್ಬೋಧಕವಾಗಿವೆ, ಸರಸವಾಗಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ದಿಗ್ದರ್ಶನಾರ್ಥವಾಗಿ ಉದ್ಧರಿಸಿದ್ದೇವೆ.

'ಕೇಳನೋ ಹರಿ ತಾಳನೋ', 'ತಾಳಬೇಕು ತಕ್ಕ ಮೇಳ ಬೇಕು' ಎಂಬ ಹಾಡುಗಳಲ್ಲಿ ಕೀರ್ತನೆಯು ಹೇಗಿರಬೇಕೆಂದು ಸೂಚಿಸಿದ್ದಾರೆ. 'ಒಂದು ಪದವ ಹಾಡುತಲದನು ಹಿಂದ ಕಳೆದು ಮತ್ತೊಂದು ಪಾಡಲು' ದೋಷವೆಂದೂ ಸಾರಿದ್ದಾರೆ. 'ವ್ಯಾಪಾರ ನಮಗಾಯಿತು', 'ಗುಡುಗುಡಿಯನು ಸೇದಿ ನೋಡೋ', 'ತಾಸು ಬಾರಿಸುತಿದೆ ಕೇಳ', 'ಜಂಗಮರು ನಾವು ಜಗದೊಳು' ಮೊದಲಾದೆಡೆಗಳಲ್ಲಿ ತತ್ವ ವಿಚಾರಗಳನ್ನೂ ಲೌಕಿಕ ವಸ್ತು ತುಂಬಿ ರೂಪಿಸಿದ್ದಾರೆ. 'ಮನವ ಶೋಧಿಸಬೇಕು ನಿಚ್ಚ', 'ಋಣವೆಂಬ ಪಾತಕವು ಬಹು ಬಾಧೆ ಪಡಿಸುತಿದೆ' ಯೆಂಬೀ ಪದಗಳಲ್ಲಿ ಸದ್ವರ್ತನೆಯ ಉಪದೇಶಗಳಿವೆ. 'ಡಂಗುರವ ಸಾರಿರಯ್ಯ ಡಿಂಗರಿಗರೆಲ್ಲರು ಭೂಮಂಡಲಕ್ಕೆ ಪಾಂಡುರಂಗ ವಿಠಲ ಪರದೈವವೆಂದು' ಎಂಬಲ್ಲಿ ಪರಮಾತ್ಮನು ಪರದೈವವೆಂಬುದನ್ನು ಘೋಷಿಸಿದ್ದಾರೆ.

'ಮನುಜ ಶರೀರವಿದೇನು ಸುಖ ನೆನೆದರೆ ಘೋರವಿದೇನು ಸುಖ'ವೆಂದು ಮಾರ್ಮಿಕವಾಗಿ ಪ್ರಶ್ನಿಸಿ, ದೇಹ ಸುಖವೇ ಮುಖ್ಯವೆಂದು ತಿಳಿಯುವ ಮೂಢಾತ್ಮರನ್ನು ಕಟುವಾಗಿ ಎಚ್ಚರಿಸಿದ್ದಾರೆ, 'ಅನುಭವದಡುಗೆಯ ಮಾಡಿ', 'ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ ವಿಠಲ ನಾಮ ತುಪ್ಪವೆರಸಿ ಬಾಯಿ ಚಪ್ಪರಿಸಿರೋ' ಎಂದು ರೂಪಕದಿಂದ ವರ್ಣಿಸಿ, ಭಕ್ತಿಯ ವಿಷಯವನ್ನು ಬಗೆಬಗೆಯಾಗಿ ಚಿತ್ರಿಸಿದ್ದಾರೆ. 'ಯಾಕೆನ್ನ ನಿರಾಕರಿಸುವೆ ತಂದೆ ಹರಿಯೇ', 'ಕರುಣಾಕರ ನೀನೆಂಬುವದೇಕೋ ಭರವಸವಿಲ್ಲೆನಗೆ' ಎಂಬೀ ಕೀರ್ತನಗಳಲ್ಲಿ ದೇವನನ್ನು ನೈವಿಧ್ಯದಿಂದ ಬೇಡಿದ್ದಾರೆ. 'ಯಾರು ಬಿಟ್ಟರು ಕೈಯ ನೀ ಬಿಡದಿರು ಕಂಡ್ಯ ನಾರಾಯಣ ಸ್ವಾಮಿ' ಎಂದು ಭಗವಂತನೊಡನೆ ತಾನು ಅನನ್ಯಾಶ್ರಯನೆಂದು ದೈನ್ಯದಿಂದ ನಿವೇದಿಸಿಕೊಂಡಿದ್ದಾರೆ.

'ಹರಿಕೀರ್ತನ ಶ್ರವಣ.... ವರಮಧ್ವಮತ ಶ್ರುತಿಸ್ಮೃತಿಯೊಳ್ ಪ್ರಸಿದ್ಧ' ಎಂದು ನವವಿಧ ಭಕ್ತಿ ಪ್ರಶಂಸೆಯನ್ನು ವಿಶೇಷತಃ ಮಾಡಿದ್ದಾರೆ.

ಇನ್ನು ಕೃಷ್ಣನ ಬಾಲಲೀಲೆಗಳನ್ನು ಕುರಿತು ಹೇಳಿದವು ಹಲವು, ನಾರಾಯಣನ ವಿವಿಧ ರೂಪಗಳ ಸ್ತುತಿಯನ್ನು ಒಳಗೊಂಡವು ಕೆಲವು, ಹರಿಭಕ್ತರ ಸಪುರ್ಪಕ ನಿದರ್ಶನಗಳಿಂದ ಭಗವದ್ಭಕ್ತಿಯ ಪ್ರಭಾವವನ್ನು ಸಮರ್ಥಿಸಿದ ಕೀರ್ತನೆಗಳು ಕೆಲವು, ಶ್ರೀ ಮಧ್ವ ವ್ಯಾಸರಾಯ ವಾದಿರಾಜ ಕನಕದಾಸ ಮೊದಲಾದ ಮಹಾತ್ಮರನ್ನು ಶ್ಲಾಘಿಸಿ ಬರೆದ ಹಾಡುಗಳು ಕೆಲವು ಹೀಗೆ ಪುರಂದರದಾಸರು ನಾನಾ ವಿಧದಲ್ಲಿ ಲವೆಷ್ಟೋ ಕೀರ್ತನೆಗಳನ್ನು ವಿರಚಿಸಿದ್ದಾರೆ. ಇವರ ಪದ್ಯಗಳ ಶೈಲಿ, ಲಾಲಿತ್ಯ, ವರ್ಣನೆಗಳು ಹೃದಯಂಗಮವಾಗಿವೆ; ಅಲ್ಲಲ್ಲಿ ಉಪಮೋತ್ಪ್ರೇಕ್ಷಾದಿ ಅಲಂಕಾರಗಳಿಂದ ಸುಶೋಭಿತವಾಗಿವೆ. ಕನ್ನಡ ನುಡಿಗಟ್ಟುಗಳ ಪ್ರಯೋಗದಿಂದ ಸೊಬಗಾಗಿವೆ. ಕನ್ನಡದಲ್ಲಿ ಇವರಷ್ಟು ಹರಿ ಕೀರ್ತನಗಳನ್ನು ರಚಿಸಿದ ಹರಿದಾಸರಿಲ್ಲವೆಂದು ನಿಸ್ಸಂದೇಹವಾಗಿ ನುಡಿಯಬಹುದು.

ಕನ್ನಡದಲ್ಲಿ ಇವರ ಸುಮನೋಹರ ಕೀರ್ತನೆಗಳು ಅತ್ಯಂತ ಪ್ರಸಿದ್ಧವಾಗಿವೆ. ಧಾರ್ಮಿಕ, ಸಾಹಿತ್ಯಕ, ಸಂಗೀತಕಗಳೆಂಬ ತ್ರಿವಿಧಾತ್ಮಕವಾದ ಇವರ ಕೀರ್ತನೆಯ ಒಂದು ಸೊಲ್ಲಾದರೂ ನಾಲಗೆಯಿಂದ ಹೊರ ಹೊಮ್ಮದ ಕನ್ನಡಿಗನಿಲ್ಲ. ಪ್ರತಿಯೊಂದು ಸೊಲ್ಲೂ 'ತ್ರಿಮಧುರ'ದಂತೆ ರುಚಿ, ಹಿತಕರವೆನ್ನಲು ಅಡ್ಡಿಯಿಲ್ಲ. ಈ ಮಹಾತ್ಮರ ಕೀರ್ತನಗಳನ್ನು ಕುರಿತು ಅದೆಷ್ಟು ಬರೆದರೂ ಕಡಿಮೆಯೇ. ಇವರನ್ನು ಕುರಿತು ಇವರ ಗುರುಗಳಾದ ಶ್ರೀ ವ್ಯಾಸರಾಯರು ಪದ್ಯರೂಪದಲ್ಲಿ ಹೇಳಿದ ಒಂದು ಮಾತನ್ನು ಕಟ್ಟಕಡೆಗೆ ಉದ್ಧರಿಸಿ, ಈ ಸಂಕ್ಷಿಪ್ತ ಚರಿತೆಯನ್ನು ಸಮಾಪ್ತಿಗೊಳಿಸುತ್ತೇವೆ.

'ನೀತಿಯುಳ್ಳವರಿಗೆ ನಿಗಮವೇದ್ಯನ ನಿತ್ಯ | ವಾತಸುತನಲ್ಲಿ ಹನ ವರ್ಣಿಸುತಲಿ |
ಗೀತ ನರ್ತನದಿಂದ ಕೃಷ್ಣನ್ನ ಪೂಜಿಸುವ |
ಪೂತಾತ್ಮ ಪುರಂದರದಾಸರಿವರಯ್ಯ ||'

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 570/64 O. S. 155/63.

ನರಸಿಂಹ ನ್ಯಾಕ — ಅರ್ಜಿದಾರ — vs —
ಮಂಜಪ್ಪ ಗೌಡ ಸಹಾ — ಎದುರು.

1 ಮಂಜಪ್ಪ ಗೌಡ, ಕಿಟ್ಟ ಗೌಡರ ಮಗ. 7. ಚಿನ್ನಮ್ಮ ಹೆಂಗುಸು, ಕಿಟ್ಟ ಗೌಡರ ವಿಧವೆ, 8. ಕಾಂತಪ್ಪ ಶೆಟ್ಟಿ, ದೂಮಂಣ ಶೆಟ್ರ ಅಳಿಯ, ಎಲ್ಲರೂ ಬೆಳ್ತಂಗಡಿ ತಾಲ್ಲೂಕು ಕೊಕ್ಕಡ ಗ್ರಾಮದಲ್ಲಿ.

ಮೇಲ್ಕಂಡ ವ್ಯವಹರಣೆಯಲ್ಲಿ ಫೈನಲ್ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರನು ಹಾಕಿದ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾ. 1—12—1964 ಕ್ಕೆ ಇಟ್ಟಿದೆ. ಸದ್ರಿ ದಿವಸ ನೀವು ಸ್ವತಹ ವ, ವಕೀಲರ ದ್ವಾರಾ ಹಾಜರಾಗಿ ಉತ್ತರ ಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲಾದೀತು

(ಕೋರ್ಟು ಹುಕುಂ ಪ್ರಕಾರ)

(Sd) K. Rama Bhat,
Advocate for Petitioner.

ಪುತ್ತೂರು, 12—11—1964

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O S No. 390/64.

K. P. ಶೆಟ್ಟಿ — ವಾದಿ.

K. M. ಅಂದುಂಞಾ, ಮುಹಮ್ಮದ್‌ರ ಮಗ ಜವುಳಿ ವ್ಯಾಪಾರಿ. ಬೆಳ್ಳಾರೆ ಕಸಬಾ P. O. Bellare, S. K.

— ಪ್ರತಿವಾದಿ—ರಿಗೆ.

ವಾದಿಯು ನಿಮ್ಮ ಡಿ. ಪ್ರೋ. ನೋಟಿನ ಬಾಬು ರೂಪಾಯಿ 4686—03 ನ ಕೋರ್ಟು ಖರ್ಚಿಗೂ ಮಾಡಿದ ಮೇಲಿನ ದಾವೆಯು ತಾ. 30-11-64 ಕ್ಕೆ ಇರುವದಿಂದ ನೀವು ಆ ದಿನ ಈ ಕೋರ್ಟು ಮುಂದೆ ಹಾಜರಾಗಿ ಉತ್ತರಿಸದಿದ್ದಲ್ಲಿ ನಿಮ್ಮನ್ನು ಏಕಪಕ್ಷ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ,

(By order of Court)

(Sd.) B. Sripati Rao,
Advocate for Plff.

ಪುತ್ತೂರು, 9—11—64.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಭಿಕ್ಷುಕ ನೀಡಿದ ಪಾಠ

-೩

(ನಾಲ್ಕನೇ ಪುಟದಿಂದ)

ಮತ್ತೆ ಕೆಲವರು ನಮಗೇಕೆ ಒಣ ಉಸಾಬರಿ ಎಂದು ಸುಮ್ಮನಿದ್ದರು ಅಷ್ಟರಲ್ಲಿ—

ಆ ಮುದುಕ ಅಲ್ಲಿಯೇ ಕುಸಿದು ಬಿದ್ದ ತಲೆ ತಗ್ಗಿಸಿ, ತನ್ನೆರಡೂ ಕೈಗಳನ್ನೂ ನಡುಗುವ ತಲೆಗೆ ಆಧಾರವಾಗಿ ಕೊಟ್ಟ.

ಕೆಲವರಿಗೆ ಆ ಮುದುಕ ಹಾಗೆ ಕುಕ್ಕರಿಸಿದ್ದೇ ಒಳ್ಳೆದಾಯಿತೆಂದು ಆ ಜಬರ್‌ದಸ್ತಿ ಮನುಷ್ಯನಿಂದ ಆ ಮುದುಕ ಕೈಯೊಡ್ಡಿ ನಿಂತು ಗೋಗರೆಯುವುದು ತಪ್ಪಿತೆಂದೂ ಅನಿಸಿರಬೇಕು, ಕೆಲವರು ಆ ಪುಂಡ ಮನುಷ್ಯನಿಗೆ ತಮ್ಮ ನಗುಮುಖದಿಂದಲೇ ನಿಮ್ಮ ಮಾತೇ ಸರಿ ಎಂಬಂತೆ ಸಹಾನುಭೂತಿಯನ್ನು ತೋರಿದರು.

ಆ ಊರಿನ ಪ್ರತೀ ಒಬ್ಬರೂ ಆ ಮುದುಕನನ್ನು ೧೦—೨೦ ವರ್ಷಗಳಿಂದಲೂ ಬಲ್ಲವರಾಗಿದ್ದರೂ ಯಾರೂ ಅವನ ಬಗ್ಗೆ ಒಂದು ಚಕಾರ ಶಬ್ದವೆತ್ತಲಿಲ್ಲ. ಅವನು ಸ್ವಶಕ್ತಿಯಿಂದಲೇ ದುಡಿದು ತಿನ್ನುವ ಮನುಷ್ಯನಾಗಿದ್ದ, ಮತ್ತು ಇತ್ತೀಚೆ ೩-೪ ವರ್ಷಗಳಿಂದ ಮಾತ್ರ ಯಾರಿಗೂ ಕಾಟ ಕೊಡದಂತೆ ಬೇಡಿ ಜೀವನ ನಡೆಸುತ್ತಿದ್ದ. ಆದರೂ ಯಾರೊಬ್ಬರೂ ಆ ಮುದುಕನ ಬಗ್ಗೆ ಒಂದು ಸಹಾನುಭೂತಿಯ ಮಾತಾಡದೆ ತಮ್ಮದೇ ತಮಗೆ ಹೆಚ್ಚೆಂಬಂತೆ ಅತ್ತಿತ್ತ ಓಡಾಡಿದರು.

ಮುದುಕನಿಗೆ ಬಹಳ ಅಪಮಾನವೆನಿಸಿರಬೇಕು ಅವನ ಮುಖ ಅದ್ದಕ್ಕಿದ್ದಂತೆ ಸಿಟ್ಟನಿಂದ ಸೆಡವುಗೊಂಡಂತೆ ಕಂಡಿತು. ಅವನು ಎದ್ದು ಮೆಲ್ಲಗೆ ಆ ನಿಂತಿದ್ದ ಮನುಷ್ಯನ ಹತ್ತಿರ ಬಂದ.

ಆಗ ಆ ಮನುಷ್ಯ.—

"ಏನೋ ಮತ್ತೆ ಬಂದೆ? ಈಗ ನೋಡಿದರೆ ಕುಸ್ತಿಯಾಡಲು ಬಂದಂತೆ ಕಾಣಿಸುತ್ತಿರುವೆ."

"ಖರೆದು ಕುಸ್ತಿ ಮಾಡುವ ಕಾಲವೂ ಇತ್ತು. ಆದರೆ ೨೫ ವರ್ಷಗಳ ಹಿಂದೆ ಈಗಲ್ಲ. ಈಗಂತೂ ಮೂರು ಮೂರು ದಿನಗಳ ಉಪವಾಸದಿಂದ ಈ ನನ್ನ ದೇಹ ಜರ್ಜರಿತವಾಗಿ ಹೋಗಿದೆ. ಇಂತಹ ನಿರಂತರ ಉಪವಾಸದಿಂದ ಕಂಗೆಟ್ಟರೂ ನಾನು ಎಂದೂ ಕಳ್ಳನಾಗಿರಲಿಲ್ಲ, ಕೊಲೆಗಾರನೂ ಆಗಲಿಲ್ಲ. ಮತ್ತೆ ನೀವೀಗ ನನ ಗಂಭೀರ ಮಾತುಗಳನ್ನು ಇನ್ನೊಬ್ಬ ಜೀರ್ಣ ಶರೀರದ ಮುದುಕನಿಗೆ ೪ಗಂಟೆ ವರ್ಷಗಳ ಕೆಳಗೆ ನೀವಂದದ್ದು ನಾನು ಕೇಳುತ್ತಿದ್ದರೆ ಈ ಗಂಡು ವೇಶದ ಹೆಂಗಸರಂತೆ ನಾನೇನೂ ಕೈಗಟ್ಟಿ ನಿಲ್ಲುತ್ತಿರಲಿಲ್ಲ. ಒಂದು ಕೈ ನೋಡಿಬಿಟ್ಟೆಲಾದರೂ ಸೇರುತ್ತಿದ್ದೆ. ಸ್ವಾಭಿಮಾನಿಗಳು ನೀವಲ್ಲ, ಮತು ಇಲ್ಲಿ ನಿಂತಿರುವ ಈ ಜನಗಳಲ್ಲ. ಇಲ್ಲವಾದರೆ ತನ್ನ ದೇಶದ ಅವಮಾನ, ಒಬ್ಬ ಹಿಂದೂ ಪುರುಷನ ಹೊಲಸು ನಾಲಿಗೆಯಿಂದ ಅವಿರುತವಾಗಿ ಅಡೆತಡೆಯಿಲ್ಲದೆ ಹೊರ ಬೀಳುವುದನ್ನು ಒಬ್ಬನೇ ಒಬ್ಬನಾದರೂ ವಿರೋಧಿಸುತ್ತಿರಲಿಲ್ಲವೇ? ಬಡತನದಿಂದ ಯಾರೊಬ್ಬರಿಗೂ ಹೆಚ್ಚಾಗಿ ಉಪಕಾರ ಮಾಡಲಾಗದಿದ್ದರೂ ಉಪದ್ರವವಂತೂ ಎಂದೂ ಕೊಡಲಿಲ್ಲ. ವಿದ್ಯಾವಂತನಲ್ಲದಿದ್ದರೂ ದೇಶಾಭಿಮಾನ ಇಂದಿಗೂ ನನಗಿದೆ. ದೇಶೋದ್ಧಾರಕರ ವೇಷತೊಟ್ಟು ಇಂಗ್ಲಿಷರ ಎಂಜಲಿನ ಸವಿಯನ್ನೇ ಸವಿಯುತ್ತಿರುವ ನೀವೇ ಕಳ್ಳರು, ಕೊಲೆಗಾರರು."

ಪರಿಸ್ಥಿತಿ ಗಂಭೀರವಾಯಿತು. ಆ ಮನುಷ್ಯ ಮತ್ತು ಅವನ ಸಂಗಡಿಗರಿಗೆ ಅವಮಾನದಿಂದ ಕಂಗೆಡುವಂತಾಯಿತು.

"ಅವನ ಮೂಳೆ ಮುರಿಯಿರಿ. ಪೋಲೀಸರನ್ನು ಕರೆಯಿರಿ. ಈ ಹುಚ್ಚ ಏನಾದರೂ ಅನಾಹುತ ಮಾಡಿಯೇ ಹೋಗುತ್ತಾನೆ; ಹಿಡಿಯಿರಿ ಅವನನ್ನು" ಅವರೆಲ್ಲ ಕಿರಿಚಿದರು.

"ಹ್ಞಾ ಹುಚ್ಚು! ಎಂತಹ ಹುಚ್ಚು! ಬರೇ ಹಸಿವು ಅಷ್ಟೆ" ಆ ಮುದುಕ ಮೆಲ್ಲಗೆ ಹೀಗೆಂದು ಒಮ್ಮೆ ಎಲ್ಲರನ್ನೂ ನೋಡುತ್ತಾ ನಡೆದು ಹೋದ.

ಈಗ ಮತ್ತೆ ಜನರ ದೃಷ್ಟಿಕೋನ ತಿರುಗಿತು. ಎಲ್ಲರೂ ಆ ಮನುಷ್ಯ ಮತ್ತು ಅವನ ಸಂಗಡಿಗರನ್ನು ತಿರಸ್ಕಾರ ದೃಷ್ಟಿಯಿಂದ ನೋಡಿದರು.

ಆಗ ಅನುಕಂಪ ತೋರಿದ ಹಿರಿಯ ಮುದುಕರೆಂದರು:

"ಬಡ ಜೀವಗಳನ್ನು ರಕ್ಷಿಸುವ ಅನುಕಂಪವಂತೂ ನಮಗಿಲ್ಲ. ನೀಡಲಾಗದಿದ್ದರೆ ನೀಡುವ ಕೈಗಳನ್ನು ತಡೆಯಲೇಕೆ? ಕರುಣೆ ತೋರಿಸುವುದು ಬೇಡ, ಅನುಕಂಪ ಬೇಡ. ಸಹಾಯವಂತೂ ಮಾಡಲಾಗುವುದಿಲ್ಲ. ಆದರೆ ಬಾಯಿ ತುಂಬಾ ಸಿಹಿ ಮಾತುಗಳಿಗೇನು ಬರ? ನೊಂದಿರುವ ಆ ಬಡ ಜೀವಿಗಳನ್ನು ಬಾಯಿ ತುಂಬಾ ಬೈದು, ಅನಂತ ಶಾಪಗಳಿಂದ ಇರಿಯುವುದೇಕೆ?" ಮತ್ತೆ ಅವರೂ ಬಸ್ ಹತ್ತುವ ಯೋಚನೆಯನ್ನು ಬಿಟ್ಟು ಮನೆಯ ಕಡೆ ಹೊರಟರು. ಹೊರಡುತ್ತಾ ಎಂದರು,

"ಇಲ್ಲ, ಇಲ್ಲ, ಅವನಂತೂ ಇನ್ನು ಒಂದು ಗಂಟೆಯೂ ಪ್ರಾಣದಿಂದಿರಲಾರನ. ಇಪ್ಪತ್ತು ವರ್ಷಗಳಿಂದ ಬಲ್ಲೆ ನಾನವನನ್ನು. ಸ್ವಾಭಿಮಾನಿ ಮುದುಕ ತನ್ನ ಪ್ರಾಯದ ಕಾಲದಲ್ಲಿ ತನ್ನ ಮನೆಯವರ ಚಿಂತೆಯಿಲ್ಲದೆ ದೇಶಕ್ಕಾಗಿ ಒಮ್ಮೆ ಜೈಲೂ ಕಂಡವನು. ಅವಮಾನ ಹೊತ್ತು ಎಂದಿಗೂ ಬದುಕಲಾರ, ಬದುಕಲಾರ. ಮತ್ತು ಅದೇ ಒಳ್ಳೆಯದು' ಎನ್ನುತ್ತಾ ಹೊರಟೇ ಹೋದರು.

ಆಗ, ಆ ಮೂದಲಿಸಿದ ಮನುಷ್ಯನೇ ನಾಚಿಕೆಯಿಂದ ತಲೆ ತಗ್ಗಿಸಿದ ಅವನ ಮತ್ತು ನಮ್ಮೆಲ್ಲರ ತಲೆಯನ್ನು ಇನ್ನೂ ತಗ್ಗಿಸುವಂತೆ ಅಷ್ಟು ಹೊತ್ತು ಅವನಲ್ಲಿ ಭಿಕ್ಷೆಯಿಂದ ಜಮೆಯಾಗಿದ್ದ ನಾಲ್ಕು ಪೈಸಾಗಳೂ, ಅವನ ಒಂದೇ ಒಂದು ಆಧಾರವಾದ ಊರುಗೋಲು ಅವನು ನಿಂತಲ್ಲೇ ಬಿದ್ದು ನಮ್ಮನ್ನು ಅಣಕಿಸುತಿತ್ತು.

ಹಿರಿಯ ಮುದುಕರ ಮಾತು ನಿಜವಾಗಿತ್ತು. ಅಂದೇ ಆ ಮುದುಕನ ಕಳೇಬರವು ಹತ್ತಿರದ ಕೆರೆಯಲ್ಲಿ ತೇಲುತ್ತಿತ್ತು.

ನಗು ನೀನು .... ಜಗವೆ ನಿನ್ನೊಡನೆ ನಗುತಲಿಹುದು

೧

"ಯಾಕಯ್ಯ, ತುಂಬ ಸುಸ್ತಾಗಿರುವಂತಿದೆ?"

"ಏನು ಹೇಳಲಿ, ಸಹಿಸಲಾರದ ತಲೆ ನೋವು."

"ಒಮ್ಮೆ ನನಗೂ ಇದೇ ರೀತಿ ತಲೆ ನೋಯ ತೊಡಗಿತ್ತು, ಆದರೆ ನಾನು ಕಣ್ಣು ಮುಚ್ಚಿ ತೆರೆಯುವಷ್ಟರೊಳಗೆ ಗುಣ ಹೊಂದಿದೆ"

"ಅದು ಹೇಗೆ?"

"ನನ್ನ ಹೆಂಡತಿ ನನ್ನನ್ನು ಅಪ್ಪಿಕೊಂಡು ಒಮ್ಮೆ ನನ್ನ ಹಣೆಗೆ ಮುತ್ತು ಕೊಟ್ಟಳು. ಅದರಿಂದ ನನ್ನ ತಲೆ ನೋವು ಒಂದೇ ಕ್ಷಣದಲ್ಲಿ ಮಾಯವಾಯಿತು."

"ಹಾದೇ? ಹಾಗಾದರೆ ಈಗ ನಿನ್ನ ಹೆಂಡತಿ ಎಲ್ಲಿದ್ದಾಳೆ? ಬೇಗ ಹೇಳು. ನಾನಿನ್ನು ಈ ತಲೆ ನೋವನ್ನು ಸಹಿಸಲಾರೆ"

೨

ಪತ್ನಿ.— "ಇಷ್ಟು ಹೊತ್ತಿನ ವರೆಗೆ ಎಲ್ಲಿ ಹೋಗಿದ್ದಿರಿ?"

ಪತಿ— "ನೋಡು, ಬುದ್ಧಿವಂತಳಾದ ಹೆಂಡತಿಯು ಗಂಡನೊಡನೆ ಈ ರೀತಿ ಪ್ರಶ್ನಿಸಲೇಬಾರದು."

ಪತ್ನಿ— "ಆದರೆ ಬುದ್ಧಿವಂತನಾದ ಗಂಡ ತನ್ನ ಹೆಂಡತಿಗೆ..."

ಪತಿ—"ಸುಮ್ಮನಿರು. ಬುದ್ಧಿವಂತನಾದವನಿಗೆ ಹೆಂಡತಿಯೇ ಇರುವುದಿಲ್ಲ"

೩

"ಡಾಕ್ಟರ್! ನೀವೆಂದಾದರೂ ತಪ್ಪು ಮಾಡಿದ್ದಿದೆಯೇ?"

"ಹೌದು. ಕೇವಲ ಒಂದೇ ಬಾರಿ."

"ಯಾವಾಗ?"

"ಒಬ್ಬ ಶ್ರೀಮಂತನ ರೋಗವನ್ನು ಒಮ್ಮೆ ಎರಡೇ ದಿನಗಳೊಳಗೆ ಗುಣ ಮಾಡಿಬಿಟ್ಟಿದ್ದೆ."

೪

"ಪ್ರಿಯೇ, ನೀನು ಮೊದಲೇ ಹೇಳಿದಂತೆ ಆಪ್ರಿಕಾದಿಂದ ಬಾಲವಿಲ್ಲದ ಮಂಗವನ್ನು ತರಲು ಸಾಧ್ಯವಾಗಲಿಲ್ಲ. ಬೇಸರಿಸಬೇಡ."

"ಪರವಾಯಿಲ್ಲ. ನೀವು ಬಂದಿರಲ್ಲ; ಸಾಕು."

೫

"ನಿನ್ನನ್ನು ಮದುವೆಯಾಗುವಾಗ ನಾನು ತುಂಬ ಮೂರ್ಖನಾಗಿದ್ದೆನೆಂತ ಕಾಣಿಸುತ್ತದೆ."

"ಅದು ನನಗೂ ಗೊತ್ತಿದ್ದಿತ್ತು. ಆದರೆ ಕ್ರಮೇಣ ನೀವು ಸುಧಾರಿಸಬಹುದೆಂದು ನಾನು ಭಾವಿಸಿದ್ದೆ."

—ಸಂಗ್ರಹಕ: ಶ್ರೀ ಹಾರ್ಯೋಡಿ ಮ. ಐತಾಳ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳ
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಮನೆಯೆಂಬಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಪುರುಷರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ. ಪ್ರತ್ಯೇಕ)

ನವಭಾರತ ಪುಸ್ತಕ ಭಂಡಾರ, ಉಡುಪಿ.

(ಮೂರನೇ ಪುಟದಿಂದ)

ಸಾಧ್ಯವಿಲ್ಲ. ಆದುದರಿಂದಲೇ ಅವರೂ ಒಂದು ಹೇಳತೊಡಗಿದ್ದಾರೆ: ಗೋವೆ ಏಕೆ ಕನ್ನಡದಲ್ಲಿ ಸೇರಿಕೊಳ್ಳಬೇಕೆಂಬ ಪ್ರಶ್ನೆಯನ್ನೂ ಗಮನಿಸಬೇಕು ಎಂದು. ಇಲ್ಲಿ ಒಂದು ಮಾತನ್ನು ನಾವು ಮರೆಯಬಾರದು. ಮರಾಠಿಗರು ಇದೇ ವಿಲೀನೀಕರಣ ಕೇಳುತ್ತಾರೆ. ಆದರೆ, ನಾವು ಹಾಗೆನ್ನುವುದಿಲ್ಲ. ಗೋವೆಗಿಂತ ಮೊದಲೇ ವಿಮೋಚನೆಗೊಂಡ ಪಾಂಡಿಚೇರಿ ಮೊದಲಾದವುಗಳ ಬಗ್ಗೆ ಎಲ್ಲಿಯೂ ಗೊಂದಲವೆದ್ದಿಲ್ಲ; ಗೋವೆಯ ವಿಷಯ ಮಾತ್ರ ಏಕೆ ಹೀಗೆ? ಮರಾಠಿಗರ ಹಠವಾದಿತನವೇ ಇದಕ್ಕೆ ಕಾರಣ. ಇದನ್ನು ಮನಗಾಣಬೇಕು. ಗೋವೆಯ ಭವಿಷ್ಯವನ್ನು ನಿರ್ಣಯಿಸುವ ಅಧಿಕಾರ ಮರಾಠಿಗರಿಗೆ ಯಾರೂ ಕೊಟ್ಟಿಲ್ಲ. ಗೋವಾಂತಕರ ಅಧಿಕಾರದಲ್ಲಿ ಹೊರಗಿನವರು ಕೈ ಹಾಕುವುದು ಎಂದಿಗೂ ಸಹನೀಯವಲ್ಲ ಪದಾಧಿಕಾರಿಗಳೂ ಕೇಂದ್ರ ಸರಕಾರದವರೂ ಈ ಸತ್ಯ ಸಂಗತಿಯನ್ನು ಮರೆಯಬಾರದು. ಗಲಭೆ-ಗೊಂದಲಗಳಿಂದ ಧೃತಿಗೆಡಬಾರದು. ನ್ಯಾಯಕ್ಕೆ ಜಲಿವಾಗಬೇಕೇ ಹೊರತು, ಅನ್ಯಾಯವನ್ನು ಶರಣು ಹೋಗಬಾರದು.

ಮಾನವತೆಯ ನೀತಿ

ಬ್ರಿಟನ್ನಿನಲ್ಲಿ ಕನ್ಸರ್ವೇಟಿವ್ ಪಕ್ಷವು ಸೋಲುಂಡು ಕೂಲಿಗಾರ ಪಕ್ಷದ ಪ್ರತಿಷ್ಠಾಪನೆಯಾದ ದಿನವಂದೇ ಅದರ ನೀತಿಯು ಉದಾರವಾಗುವುದೆಂದೂ ಮಾನವೀಯವೆನಿಸುವುದೆಂದೂ ತಿಳಿಯಲಾಗಿತ್ತು. ಈಗದು ಸತ್ಯವೆನಿಸುತ್ತ ಬಂದಿದೆ. ದಕ್ಷಿಣ ಆಫ್ರಿಕೆಯು ಕಾಮನ್‌ವೆಲ್ತನ್ನು ತ್ಯಜಿಸಿದರೂ ಅದರ ಸಂಬಂಧವನ್ನು ಕಡಿದುಕೊಳ್ಳಲು ಬ್ರಿಟನ್ನು ಹಿಂದೆ ಸಿದ್ಧವಿರಲಿಲ್ಲ. ಆದರೆ, ಕೂಲಿಗಾರ ಪಕ್ಷವು ಅದಕ್ಕೆ ಶಸ್ತ್ರಾಸ್ತ್ರಗಳನ್ನು ಒದಗಿಸುವುದಿಲ್ಲವೆಂದು ಘೋಷಿಸಿ, ಅಲ್ಲಿನ ವರ್ಣಭೇದ ನೀತಿಯನ್ನು ಪ್ರತ್ಯಕ್ಷವಾಗಿ ವಿರೋಧಿಸಿದೆ. ಬಾಹ್ಯಾಕ್ರಮಣದಿಂದ ಸಂರಕ್ಷಿಸಿಕೊಳ್ಳಲು ಭಾರತಕ್ಕೆ ನೌಕಾ ಸೇನೆಯ ಸಹಾಯ ನೀಡಲು ಅದು ಮುಂದೆ ಬಂದಿದೆ. ತರಬೇತಿ ಹಾಗೂ ಹಳೆಯ ರಣ ನೌಕೆಗಳ ಸ್ಥಾನದಲ್ಲಿ ಹೊಸವುಗಳ ಸ್ಥಾಪನೆ ಮೊದಲಾದ ಕೆಲವು ಯೋಜನೆಗಳಿಗೆ ಅದು ನೆರವು ನೀಡುವ ಒಡಂಬಡಿಕೆಯನ್ನು ಮಾಡಿಕೊಂಡಿದೆ. ಮುಂದಿನ ದಿನಗಳಲ್ಲಿ ಈ ಬಗೆಯ ಉದಾರ ಮಾನವತಾ ನೀತಿಗಳು ಇನ್ನೂ ಹೆಚ್ಚಾಗಿ ಅನುಸರಿಸಲ್ಪಡಬಹುದೆಂಬ ಆಶೆ ಇದು ಭರವಸೆ ನೀಡುತ್ತಿದೆ.

"...ನಾನು ನಿಮ್ಮ ಬಹಿರ್ಲೇಪನ ತೈಲವನ್ನು ಆಣಿಗಳಿಗೆ ಲೇಪಿಸುತ್ತಿದ್ದು, ದಿನದಿಂದ ದಿನಕ್ಕೆ ಸುಧಾರಿಸುತ್ತಿದ್ದೇನೆ. ನಾನು ಅದೇ ಚಿಕಿತ್ಸೆಯನ್ನು ಮುಂದುವರಿಸಬೇಕೆಂದಿದ್ದೇನೆ. ಆದ್ದರಿಂದ ನನಗೆ ನಾಲ್ಕು ಬಾಟ್ಲಗಳು ಅಗತ್ಯವಿವೆ. ಅವನ್ನು ಸಾಧ್ಯವಾದಷ್ಟು ಬೇಗ ಕಳಿಸಿರಿ..."

(ಸಹಿ) ಎಸ್. ಟಿ. ದಳವಾಯಿ, ಗೋಕಾಕ.

ಪಾದಗಳ ಆಣಿಗಳಿಗೆ

(ಬಹಿರ್ಲೇಪನ ತೈಲ)



ಪಾದಗಳಲ್ಲಿ ಆಣಿಗಳು ಬೆಳೆದು ಜಾತು ನೆಲದಮೇಲೆ ಅಡಿಯಿಡಲಾಗದೆ, ಕಲ್ಲು ಏನಾದರೂ ಒತ್ತಿದಲ್ಲಿ ಪ್ರಾಣವೇ ಹೋಗುವಂತೆ ನರಳುತ್ತಿದ್ದು, ಅದಕ್ಕಾಗಿ ಎಷ್ಟೋ ಚಿಕಿತ್ಸೆ ನಡೆಸಿ ನಿರಾಶರಾಗಿದ್ದಲ್ಲಿ ಈ ತೈಲವನ್ನು ಉಪಯೋಗಿಸಿ. ಆಣಿಗಳು ಮತ್ತೆ ಬರದಂತೆ ಶಾಶ್ವತವಾಗಿ ಗುಣಹೊಂದುವುವು. ಕ್ರಯ ಬಾಟ್ಲಿ ಅಂಚೆ ವೆಚ್ಚ ಸೇರಿ ರೂ. 4. 75.

ಜಗನ್ನಾಥ್ ಅಂಡ್ ಕೋ (ಯು)
ಪಿ. ಬಿ. ನಂ. 1859, ಮದರಾಸು-1

ಎಲ್ಲೆಲ್ಲಿ ಏನೇನು?

ರೋಟರಿ ಸಭೆ

ಮಣಿಪಾಲ, ನ. ೧೫, ನಮ್ಮ ನಾಗಿನ ಯುವ ಜನಾಂಗಕ್ಕಾಗಿರುವ ಎನ್. ಸಿ. ಸಿ. ದಳದ ಮಹತ್ವದ ಕುರಿತು ಮಂಗಳೂರಿನಲ್ಲಿ ಎನ್. ಸಿ. ಸಿ. ಗ್ರೂಪ್ ಕಮಾಂಡರಾಗಿರುವ ಕರ್ನಲ್ ಬಿ. ಸಿ. ಜೋಶಿಯವರು ರೋಟರಿ ಕ್ಲಬ್ ಸಭೆಯಲ್ಲಿ ಭಾಷಣ ಮಾಡಿದರು.

ರೋಟರಿ ಫೌಂಡೇಶನ್ ಸಪ್ತಾಹದ ಆಚರಣೆಯ ಅಂಗವಾಗಿ ಡಾ| ಎಚ್. ಶಾಂತಾರಾಂರವರು ಮಾತನಾಡಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದೇಶಗಳಲ್ಲಿ ಉಚ್ಚ ವಿದ್ಯಾಭ್ಯಾಸ ನಡೆಸುವುದಕ್ಕಾಗಿ ಫೆಲೋಶಿಪ್‌ಗಳನ್ನು ಕೊಟ್ಟು ಅಂತರ್ರಾಷ್ಟ್ರೀಯ ಬಾಂಧವ್ಯವನ್ನು ಹೆಚ್ಚಿಸುವ ಈ ಯೋಜನೆಗೆ ರೋಟರಿ ಸದಸ್ಯರು ಹೆಚ್ಚಾಗಿ ಸಹಾಯ ಮಾಡಬೇಕೆಂದರು.

ನೆಹರು ಜಯಂತಿ

ಕಾಳಾವರ ಬೋ. ಎಲಿ. ಶಾಲೆ, ಕಾಳಾವರ ಮತ್ತು ವಿವೇಕೋದಯ ಎಯಿಡೆಡ್ ಹಾಯರ್ ಎಲಿಮೆಂಟರಿ ಶಾಲೆ ಹೊಂಬಾಡಿ ಮಂಡಾಡಿ, ಈ ಎರಡು ಶಾಲೆಗಳ ಕೂಡುವಿಕೆಯಿಂದ ತಾ. 14-11-64ರಂದು "ನೆಹರು ಜಯಂತಿ" ಮಕ್ಕಳ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಧ್ವಜಾರೋಹಣದ ಬಳಿಕ, ಮಕ್ಕಳ ಆಟದ ಸ್ಪರ್ಧೆ ಜರಗಿ— ಲಘೂಪಹಾರವಾಗಿ ಬೆಳಗಿನ ಕಾರ್ಯಕ್ರಮ ಮುಕ್ತಾಯವಾಯಿತು.

ಮಧ್ಯಾಹ್ನ ಶ್ರೀಪು ಸಂಜೀವ ಸೆಟ್ಟಿ ಮೆನೇಜರ್ ವಿವೇಕೋದಯ ಶಾಲೆ, ಇವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ, ಮಕ್ಕಳಿಂದ ವಿವಿಧ ವಿನೋದಾವಳಿಗಳು ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣಗಳಾದುವು.

ನೆಹರೂ ಜಯಂತಿ

ಬೊಂಬಾಯಿ, ತಾ. 14-ಕರ್ನಾಟಕ ಫ್ರೀ ನೈಟ್ ಹೈಸ್ಕೂಲಿನಲ್ಲಿ ನೆಹರೂ ಜಯಂತಿಯನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಯ್ತು. ಶ್ರೀ ಶಿಮುಂಜೆ ಪರಾರಿಯವರು ಸ್ವಾಗತ ಭಾಷಣಗೈಯುತ್ತಾ ನೆಹರೂ ಅವರ ಎಪ್ಪತ್ತೈದನೇ ಹುಟ್ಟುಹಬ್ಬದ ವಿಶೇಷ ವೈಶಿಷ್ಟ್ಯವನ್ನು ತಿಳಿಸಿದರು ಹಾಗೂ ಅತಿಥಿಗಳನ್ನು ಪರಿಚಯ ಮಾಡಿಕೊಟ್ಟರು. ಶ್ರೀ ಶೇಖರ ಇಡ್ಯ ಮತ್ತು ಪ್ರೊ. ಜಿ. ಶೆಟ್ಟಿ ಅವರು ನೆಹರೂ ಅವರ ಪುಣ್ಯ ಜೀವನದ ಕತೆಯನ್ನು ವಿದ್ಯಾರ್ಥಿಗಳಿಗೆ ವಿವರಿಸಿದ ಬಳಿಕ, ಅಧ್ಯಾಪಕರಾದ ಶ್ರೀ ವೈ. ವಿ. ಅಮೀನ್ ಮತ್ತು ಸುಂದರ ದೇವಾಡಿಗರು ನೆಹರೂ ಅವರು ಮಾಡಿದ ಮಹಾಕಾರ್ಯಗಳನ್ನು ಹೇಳಿದರು. ಹಳೆ ವಿದ್ಯಾರ್ಥಿ ಜಯರಾಮ ಶೆಟ್ಟಿ ಹಾಗೂ ವಿದ್ಯಾರ್ಥಿ ವಿರಲ ಪೂಜಾರಿ ನೆಹರು ಬಗ್ಗೆ ತಮ್ಮ ಅಭಿಪ್ರಾಯಗಳೇನು ಎಂಬುದನ್ನು ತಿಳಿಸಿದರು.

ಕಾರ್ಮಿಕ ಹಕ್ಕು

ಉಡುಪಿ, ತಾ. 9-ಇಲ್ಲಿ ನಡೆಯುತ್ತಿರುವ ಎಲ್. ಐ. ಸಿ. ನೌಕರರ ಕಾರ್ಮಿಕ ಶಿಕ್ಷಣ ತರಬೇತಿ ಕೇಂದ್ರವನ್ನು ಉದ್ದೇಶಿಸಿ ಶ್ರೀ ಶಿರ್ತಾಡಿ ವಿಲಿಯಂ ಪಿಂಟೋರವರು ಭಾಷಣ ಮಾಡುತ್ತ ಘಟನಾಬದ್ಧವಾಗಿ ಸಿಕ್ಕಿರುವ ಕಾರ್ಮಿಕ ಚಳವಳಿಯ ಹಕ್ಕನ್ನು ನಿರಾಕರಿಸಬಾರದೆಂದರು. ಕೇಂದ್ರದ ಸಂಚಾಲಕ ಶ್ರೀ ಎಚ್. ನಾರಾಯಣರಾಯರು ಧನ್ಯವಾದಗಳನ್ನರ್ಪಿಸಿದರು.

ಮಕ್ಕಳ ದಿನ

ಅಳಿಕೆ, ತಾ. 14, ಲೋಕಸೇವಾ ಹೈಸ್ಕೂಲಿನಲ್ಲಿ ಧ್ವಜಾರೋಹಣವಾಗಿ ಶ್ರೀ ಯು. ನಾರಾಯಣ ಭಟ್ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ವಿದ್ಯಾರ್ಥಿಗಳ ಭಾಷಣಗಳ ನಂತರ ಶ್ರೀಮತಿ ಉಮಾ ನಾಯಕ್, ಶ್ರೀ ಯು. ಗಂಗಾಧರ ಭಟ್ಟರು ಭಾಷಣವಿತ್ತರು.

ಲೋಕಸೇವಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿಯೂ ಸಭೆ ಭಾಷಣಗಳಾದುವು. ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಾದ ಮೇಲೆ ಶ್ರೀ ಟಿ. ನಾರಾಯಣ ಭಟ್ಟರು ವಂದನಾರ್ಪಣೆಗೈದರು.

ದಿ| ಎ.ಬಿ. ಶೆಟ್ಟರ ಜನ್ಮದಿನಾಚರಣೆ

ಮಂಗಳೂರು ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ತಾ. 14ನೇ ಸಂಜೆ ಸ್ಥಾಪಕರ ದಿನಾಚರಣೆ ಮತ್ತು ದಿ| ಎ. ಬಿ. ಶೆಟ್ಟರ 83ನೇ ಜನ್ಮದಿನಾಚರಣೆಯು ಭವನದ ಎ. ಬಿ. ಪೂಂಜಾ ಸಭಾ ಭವನದಲ್ಲಿ ಎಡ್ವಕೇಟ್ ಶ್ರೀ ಬಿ. ಮಂಜಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿತು. ಎಡ್ವಕೇಟ್ ಶ್ರೀ ಎಸ್. ಆರ್. ಹೆಗ್ಡೆ, ಶ್ರೀ ಕೆ. ಆರ್. ಆಚಾರ್, ಎಲ್. ಎಲ್. ಸಿ., ಶ್ರೀ ಬಿ. ಬಿ. ಶೆಟ್ಟಿ, ಕೆ. ಸುಬ್ಬಣ್ಣ ಪಕ್ಕಳ, ಬಿ. ಆರ್. ಹೆಗ್ಡೆ ಮೊದಲಾದವರು ಭಾಷಣ ಮಾಡಿದರು. ಕೇಂದ್ರ ಸಚಿವ ಶ್ರೀ ವಾಸಪ್ಪ, ಮತ್ತು ಡಾ| ಎಂ. ಡಿ. ಅಡಪ್ಪರ ತಮ್ಮ ಶ್ರೀ ಹರಿದಾಸ ಅಡಪ ಇವರು ನಿಧನದ ಬಗ್ಗೆ ದುಃಖಸೂಚಕ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಶ್ರೀ ಪಿ. ಎಲ್. ತಿಮ್ಮಪ್ಪ ಶೆಟ್ಟರು ಆರಂಭದಲ್ಲಿ ಸ್ವಾಗತಿಸಿದರಲ್ಲದೆ ಅಂತ್ಯದಲ್ಲಿ ಧನ್ಯವಾದಗಳನ್ನರ್ಪಿಸಿದರು.

ಐ. ಸಿ. ಭಂಡಾರಿಯವರ ನಿಧನ

ಕುಂಬಳೆ, ಈ ಭಾಗದ ಸುಪ್ರಸಿದ್ಧ ಭೂಮಾಲಕರೂ ಸಾರ್ವಜನಿಕ ಕೆಲಸಗಾರರೂ ಪ್ರಸಿದ್ಧ ಇಚ್ಲಂಪಾಡಿ ಮನೆತನದವರೂ ಆಗಿದ್ದ ಶ್ರೀ ಐ. ಸಿ. ಭಂಡಾರಿಯವರು ತಾ. 10ರಂದು ಮಂಗಳೂರಲ್ಲಿ ಚಿಕಿತ್ಸೆ ಪಡೆಯುತ್ತಿರುವಲ್ಲಿ 84ನೇ ವಯಸ್ಸಿನಲ್ಲಿ ನಿಧನರಾದರು. ಕಳೇಬರವನ್ನು ಇಚ್ಲಂಪಾಡಿಯ ಕುಟುಂಬದ ಮನೆಗೆ ತರಲಾಯಿತು. ದಿವಂಗತರು ವಕೀಲರಾಗಿ, ವಿಲೇಜ್ ಮೆಜಿಸ್ಟ್ರೇಟರಾಗಿ, ತಾಲೂಕು ಬೋರ್ಡ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಆಸ್ಪತ್ರೆ ಸಮಿತಿ, ಹೈಸ್ಕೂಲ್ ಸಮಿತಿಗಳ ಅಧ್ಯಕ್ಷರಾಗಿದ್ದರು. ದಿವಂಗತರು ಉದಾರಿಗಳಾಗಿದ್ದರಲ್ಲದೆ ಜಿ. ಯು. ಪಿ. ಶಾಲಾ ಕಟ್ಟಡ ನಿರ್ಮಾಣಕ್ಕೆ ಹೆಚ್ಚಿನ ಧನ ಸಹಾಯ ಮಾಡಿದ್ದರು.

ನವ ದೆಹಲಿ ಮತ್ತು ಅಲ್ವಾಲ್ ಶಾಖೆಗಳು

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನ ಈ ಎರಡು ಹೆಚ್ಚಿನ ಶಾಖೆಗಳು ದಶಂಬರ 7 ರಂದು ತೆರೆಯಲ್ಪಡುವವು. ನವದೆಹಲಿ ಶಾಖೆಯು ರಾಜಧಾನಿಯಲ್ಲಿ ಬ್ಯಾಂಕಿನ ಪ್ರಥಮ ಶಾಖೆಯಾಗಿವುದು. ಅಲ್ವಾಲ್ ಶಾಖೆಯು ತೆರೆಯಲ್ಪಡುವಿಕೆಯಿಂದ ಆಂಧ್ರ ರಾಜ್ಯದಲ್ಲಿ ಒಂದು ಶಾಖೆ ಹೆಚ್ಚಾಗಿ ಒಟ್ಟು ಶಾಖೆಗಳು ಆ ರಾಜ್ಯದಲ್ಲಿ 23 ಆಗುವುವು.

ರಾಜಧಾನಿಯ ಹಳೆ ದೆಹಲಿಯಲ್ಲಿಯೂ ಬ್ಯಾಂಕು ಯಥಾವಕಾಶವಾಗಿ ಮತ್ತೊಂದು ಶಾಖೆಯನ್ನು ತೆರೆಯಲಿದೆ.

ಬ್ಯಾಂಕುಗಳ ವಿಲೀನೀಕರಣ

ಶ್ರೀ ರಂಗರಾಜ ಬ್ಯಾಂಕ್ ಲಿ. ಮೆಟ್ಟುಪಾಳಯಂ, ಮತ್ತು ದಿ ಕೊತ ಮಂಗಲಮ್ ನಂಬೂದ್ರಿ ಬ್ಯಾಂಕ್ ಲಿ., ತ್ರಿಚೂರು ಈ ಎರಡು ಬ್ಯಾಂಕುಗಳ ಸಾಲ ಮೂಲಗಳನ್ನು ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ನವರು ಅನುಕ್ರಮವಾಗಿ ನವಂಬರ್ 23 ಮತ್ತು 26 ರಂದು ವಹಿಸಿ ಕೊಳ್ಳುವರು. ಇವು ಸಿಂಡಿಕೇಟ್ ನವರು ವಹಿಸಿಕೊಂಡ 18 ಮತ್ತು 19 ನೇ ಬ್ಯಾಂಕ್‌ಗಳಾಗಿವೆ. ಈ ಎರಡು ಬ್ಯಾಂಕ್‌ಗಳ ವಿಲೀನೀಕರಣದಿಂದಾಗಿ, ಸಿಂಡಿಕೇಟ್ ಬ್ಯಾಂಕಿಗೆ 197 ಶಾಖೆಗಳಾಗುವುವು.

ಕೇರಳ ರಾಜ್ಯದ ದಿ| ಸೌತ್ ಟ್ರಾವೆಂಕೂರ್ ಬ್ಯಾಂಕ್ ಲಿ, ನೆಯ್ಯೂರ್ ಈ ಬ್ಯಾಂಕು ಡಿಸೆಂಬರ 9 ರಂದು ಸಿಂಡಿಕೇಟ್ ಬ್ಯಾಂಕಿನೊಂದಿಗೆ ಸೇರ್ಪಡೆಯಾಗುವುದು ಆಗ ಸಿಂಡಿಕೇಟ್‌ನ ಶಾಖೆಗಳು 200ಕ್ಕೆ ಏರುವವು.

ಶಾಂತಿ ಸುಧಾ ಕೋಲ್ಡ್ ಡ್ರಿಂಕ್ಸ್‌ನ ಉದ್ಘಾಟನೆ

ಉಡುಪಿ, ನ 16—ಯು. ರಾಮಚಂದ್ರ ರಾವ್ ಮತ್ತು ಸಹೋದರರು ಉಡುಪಿ ಸಿಟಿ ಬಸ್‌ಸ್ಟೇಂಡಿನ ಬಳಿ ನವೀನವಾಗಿ ಆರಂಭಿಸಿದ ಶಾಂತಿ ಸುಧಾ ಕೋಲ್ಡ್ ಡ್ರಿಂಕ್ಸ್‌ನ ಉದ್ಘಾಟನಾ ಸಮಾರಂಭವು ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರಿಂದ ನೆರವೇರಿಸಲ್ಪಟ್ಟಿತು. ಶ್ರೀ ಎಸ್. ಎಲ್. ನಾರಾಯಣ ಭಟ್ಟರೂ, ರಾಜಶೇಖರಯ್ಯನವರೂ ಶುಭ ಹಾರೈಸಿ ಮಾತನಾಡಿದರು. ಶ್ರೀ ಯು. ಎಲ್. ಆಚಾರ್ಯರು ಆರಂಭದಲ್ಲಿ ಸ್ವಾಗತಿಸಿ ಅಂತ್ಯದಲ್ಲಿ ಧನ್ಯವಾದಗಳನ್ನರ್ಪಿಸಿದರು.

ಹರಿಕಥೆ - 'ಚಂದ್ರಹಾಸ'

ದೇಲಂಪಾಡಿ ಮಯ್ಯಾಳ ಶ್ರೀ ಗೋಪಾಲಕೃಷ್ಣ ಎಯ್ಡೆಡ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿನಾಂಕ 10ರಂದು 'ಚಂದ್ರಹಾಸ' ಎಂಬ ಹರಿಕಥಾ ನಿರೂಪಣೆಯು ಹರಿದಾಸರ್ ಶ್ರೀ ಯನ್. ರಾಮಕೃಷ್ಣ ಕಲ್ಲೂರಾಯರವರಿಂದ ಶ್ರೀ ಕೆ. ಸುಬ್ರಾಯ ಭಟ್ಟರವರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತು. ಆರಂಭದಲ್ಲಿ ಶಾಲಾ ಮೆನೇಜರ್ ಶ್ರೀ ಕೆ. ಜಿ. ಕೃಷ್ಣ ಭಟ್ಟರು ಸ್ವಾಗತ ಭಾಷಣ ಮಾಡಿದರು. ಈ ಕಾರ್ಯಕ್ರಮವನ್ನು ಶ್ರೀ ಯನ್. ನಾರಾಯಣ ನ್ಯಾಕರು ಏರ್ಪಡಿಸಿದ್ದು—ಕೊನೆಯಲ್ಲಿ ಶ್ರೀ ವ. ಕೇಶವ ಅವರು ಧನ್ಯವಾದವಿತ್ತರು.

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]
11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.

ನಮ್ಮ ವೈಶಿಷ್ಟ್ಯಗಳು:

- ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರ ಪರೀಕ್ಷೆಯ ಪದವಿ ಪಡೆದವರಿಂದ
- ಮೆಳ್ಳುದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು= ● ಅತ್ಯುತ್ತಮ ಗ್ಲಾಸುಗಳು
● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು.

ಕಂಡವರ ದೃಷ್ಟಿಯಲ್ಲಿ

ಕಾಲ ಬದಲಾದಂತೆ

ಬಿಳಿ ಸೀರೆಯನ್ನುಟ್ಟುಕೊಂಡು ಬಳೆಗಳಿಲ್ಲದ ಕೈಗಳನ್ನು ಬೀಸುತ್ತಾ ಬರಿ ಹಣೆಯ ಬೆವರನ್ನೊರಸಿ ಕೊಳ್ಳುತ್ತಾ ನಡೆಯುತ್ತಿದ್ದಳು ಆ ಇಪ್ಪತ್ತರ ಹರೆಯದ ತರುಣಿ. ಆಕೆಯತ್ತ ಅನುಕಂಪದ ನೋಟ ಬೀರಿದ ವೃದ್ಧೆಯೊಬ್ಬಳು ನೊಂದು ನುಡಿದಳು.

"ಪಾಪ! ಈ ಪ್ರಾಯದಲ್ಲಿ ವಿಧವೆಯಾಗಬಾರದಿತ್ತು." ವೃದ್ಧೆಯ ಪಕ್ಕದಲ್ಲಿ ನಿಂತ ಎಳೆಯ ಹುಡುಗ ಕಿಲ ಕಿಲನೆ ನಕ್ಕು ನುಡಿದ.

"ಅವಳಿಗಿನ್ನೂ ಮದುವೆಯಾಗಿಲ್ಲ ಅಜ್ಜೀ, ಇದು ಫ್ಯಾಶನ್!"

ವೃದ್ಧೆ ಮೂಗಿನ ಮೇಲೆ ಬೆರಳಿಟ್ಟಳು.

ಂ ಂ ಂ

ಕಾಸಿನಗಲದ ಕುಂಕುಮ, ಮುಡಿ ತುಂಬ ಅರಳು ಮಲ್ಲಿಗೆ, ಕೈತುಂಬ ಬಳೆಗಳ ನಿನಾದ. ಜರತಾರೀ ಸೀರೆ ಉಟ್ಟ ಗರತಿ ಗಂಗನಂತಹ ಹೆಣ್ಣನ್ನು ನೋಡಿ ವೃದ್ಧೆಗೆ ಸಂತೃಪ್ತಿಯಾಯಿತು. ಸಂತೋಷವಾಯಿತು.

ಮಹಾ ಮುತ್ತೈದೆಯಾಗಿ ನೂರು ವರ್ಷ ಬಾಳು ಮಹಾ ತಾಯಿ." ಎಂದು ಮನಸ್ಸಿನಲ್ಲೇ ಗೊಣಗಿ ಆಶೀರ್ವದಿಸಿದಳು.

ಹುಡುಗ ಕಿಸಕ್ಕನೆ ನಕ್ಕ.

"ಅಜ್ಜೀ....ಅವಳು ನಿತ್ಯ ಮುತ್ತೈದೆ! ಹ ಹ್ಹ ಹ್ಹ!"

ಮುದುಕಿ ಕಣ್ಣರಳಿಸಿ ನೋಡುತ್ತಲೇ ಇದ್ದಳು. ಆಕೆಗೆ ಎಲ್ಲವೂ ವಿಚಿತ್ರವೆನಿಸಿತು.

ಂ ಂ ಂ

ಉಲ್ಲನ್ ಪೇಂಟು, ಬಿಳಿಯ ಕೋಟು, ಕಾಲಿಗೆ ಬೂಟ್ಸು ಧರಿಸಿದ ಯುವಕನೊಬ್ಬ ದೂರದಿಂದ ಬರುವುದನ್ನು ನೋಡಿಯೇ ಮುದುಕಿ ಮೆಲ್ಲನೆದ್ದು ನಿಂತಳು,

"ಯಾರಪ್ಪಾ ಅವ್ರು? ಸಾಹೇಬ್ರಾ? ದೊಡ್ಡನುಸ್ರಾ?"

"ಅಲ್ಲಜ್ಜೀ ..ಅವ್ರು ದೊಡ್ಡ ಸ್ವಾಮೀಜಿ ಬೀಡಿ ಕಟ್ಟಿದ್ದಾರೆ. ಹಿ ಹ್ಹಿ ಹ್ಹಿ"

ಮುದುಕಿ ಸಿಟ್ಟುಸಿರು ಬಿಟ್ಟು ಕುಳಿತಳು.

ಂ ಂ ಂ

ನೈಲಾನ್ ಸೀರೆ, ಬಣ್ಣದ ಲಂಗ, ಕತ್ತರಿಸಿದ ಕೂದಲು, ತುಟಿಗೆ ಕೆಂಪು, ಮುಖಕ್ಕೆ ಬಣ್ಣ ಬಳಿದುಕೊಂಡ ತರುಣಿ ತರುಣನ ಹೆಗಲ ಮೇಲೆ ಕೈಯಿಟ್ಟುಕೊಂಡು ನಡೆಯುತ್ತಿದ್ದಳು. ಆಕೆ ನಿಮಿಷ ನಿಮಿಷಕ್ಕೂ ಬಳುಕಿ ಕುಣಿಯುತ್ತಿರುವಂತೆ ತೋರುತಿತ್ತು.

"ಇದೇನಪ್ಪ? ಹೆಬ್ಬ, ಹೆಣ್ಣಿನ ಇದೆ ಏನು? ವೇಷಗಳು ಬರ್ತ್ತವೆ."

"ಅಜ್ಜೀ....ಇದೆಲ್ಲ ವೇಷವಲ್ಲ ಜನರ ವೇಷ, ನಿತ್ಯದ್ದೇ ವೇಷ" ಎಂದ [illegible] ಗ [illegible] ಬೀರಿದ.

ಅಷ್ಟರಲ್ಲೇ ಕಿರಿಯ [illegible] ಬಸ್ಸು [illegible] ದಿತೆಂದು ಮುದುಕಿಯ ಮೊಮ್ಮಗ ಕರೆದ. ಮುದುಕಿ ಕಣ್ಣರಳಿಸಿ ಬಾಯಗಲಿಸಿ ನೋಡುತ್ತಲೇ ಬಸ್ಸು ಹತ್ತಿದಳು.

—ಶ್ರೀಮತಿ ಯಶೋದಾ ಯನ್. ಜೆನ್ನಿ.

ಅಡಿಗೆಯ ಮನೆ

ಸಂಬಂಧಿಸಿದ ನಿಯಮಗಳು

(೧) ಯಾವ ವಸ್ತುವನ್ನೂ ಚೆಲ್ಲಬಾರದು, ದುರುಪಯೋಗ ಗೊಳಿಸಬಾರದು

(೨) ಸೋಮಾರಿತನದಿಂದ ಅಡಿಗೆ ಮನೆಯ ಕೆಲಸ ಮಾಡಬಾರದು, ಏನು ಮಾಡಿದರೂ ಚೆನ್ನಾಗಿ ಉಲ್ಲಾಸದಿಂದ ಮಾಡಬೇಕು.

(೩) ಅಡಿಗೆಮನೆಯಲ್ಲಿ ದಡಬಡ ಮಾಡಬಾರದು. ಸಿಟ್ಟಾಗಬಾರದು. ಕೆಟ್ಟ ಶಬ್ದ ಆಡಬಾರದು.

(೪) ಮಾತಾಡುವುದು ಅನಿವಾರ್ಯವೆನಿಸಿದರೆ [illegible] ವಿನೋದ ಮಾತು ಹಾಡು, [illegible] ನಿಂದೆ ಚಾಡಿ ಹೇಳಬಾರದು.

(೫) ಅಡಿಗೆ ಮಾಡುವವರು ಆಡಂಬರ [illegible] ಧರಿಸಬಾರದು.

(೬) ಕೆಮ್ಮು, ಸೀನು ಬಂದರೆ ಕೈವಸ್ತ್ರ ಉಪಯೋಗಿಸಬೇಕು. ಬೆವರು ಬಂದರೆ ಬಟ್ಟೆಯಿಂದ ಒರಸಬೇಕು, ಬೆವರು ಹನಿ ಬೀಳದಂತೆ ಎಚ್ಚರವಿರಬೇಕು.

(೭) ಪಾತ್ರೆಗಳನ್ನು ಒರೆಸಲು ಪ್ರತ್ಯೇಕ ಬಟ್ಟೆ ಇದ್ದು ಅದು ಅಡಿಗೆಮನೆಯಲ್ಲೇ ಇರಬೇಕು. ಪ್ರತಿದಿನ ಸಾಯಂಕಾಲ ಸಾಬೂನು ಹಚ್ಚಿ ಅದನ್ನು ತೊಳೆಯಬೇಕು.

(೮) ಅಡಿಗೆಮಾಡುವವರ ಕೈಯ ಉಗುರುಗಳನ್ನು ಲಕ್ಷ್ಯ ಕೊಟ್ಟು ಕತ್ತರಿಸಿ ಶುಚಿಯಾಗಿಡಬೇಕು

(೯) ಅಡಿಗೆಮನೆಯಲ್ಲಿ ಪದಾರ್ಥ ಬೇಯುತ್ತಿದ್ದಂತೆ ತೆಗೆದು ತಿನ್ನಬಾರದು. ಉಪ್ಪು ಇತ್ಯಾದಿ ಸರಿಯಿದೆಯೇ ಎಂದು ನೋಡುವ ಕೆಲಸವನ್ನು ಜವಾಬ್ದಾರಿ ಇರುವವರೇ ಮಾಡಬೇಕು.

(೧೦) ಅಡಿಗೆ [illegible] ಇತರ [illegible]

[illegible]

(೧೨) ಆದ್ದರಿಂದ ಮೊದಲನೆ [illegible] ವಾದ ಮನುಷ್ಯನಾಗಲು ಏನು ತಿನ್ನುತ್ತಾನೆ, ಹೇಗೆ ತಿನ್ನುತ್ತಾನೆಂಬುದು ಇತರ ಎಲ್ಲಾ ವಿಚಾರಗಳಿಗಿಂಥ ಪ್ರಮುಖ. (ಭೂ)

ನಮ್ಮ-ನಮ್ಮವರು



ಶ್ರೀ|| ಎಸ್. ನಿಜಲಿಂಗಪ್ಪ

ಬಾಯಿ ಇದ್ದರೆ ಮಗ ಬದುಕಿಯಾನು, ಎಂಬ ಗಾದೆ ಮಾತೊಂದಿದೆ. ಇಂದಿನ ಪ್ರಜಾಪ್ರಭುತ್ವ ಯುಗದಲ್ಲಿ ಸತ್ಯಾಂಶಕ್ಕಿಂತಲೂ ಗಟ್ಟಿ ಮಾತನಾಡ ಬೇಕೆಂದೇ ಜನಾಭಿಪ್ರಾಯ ವಾಗುತ್ತದೆ. ಈ ರೀತಿ ಶಬ್ದ ಮಾಡಿ, ಗಲಾಟೆ ಎಬ್ಬಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವುದರಲ್ಲಿ ಮಹಾರಾಷ್ಟ್ರೀಯರು ಗಟ್ಟಿಗರು. ಅವರ ನಾಯಕರೂ ಈ ತತ್ವಕ್ಕೆ ಉತ್ತೇಜನ ನೀಡುವವರೇ! ಗೋವೆಯನ್ನು ಮಹಾರಾಷ್ಟ್ರದಲ್ಲಿ ಕೂಡಲೇ ವಿಲೀನಗೊಳಿಸಬೇಕೆಂದು ಮಹಾರಾಷ್ಟ್ರ ಸರಕಾರದ ಒತ್ತಾಯ. ಇದಕ್ಕೆ ನಮ್ಮ ರಕ್ಷಣಾ ಮಂತ್ರಿ ಚವಾಣರದೂ ಬೆಂಬಲ

ಈ ಸಂದರ್ಭ ಮೈಸೂರು ಸರಕಾರ ಹಾಗೂ ಕನ್ನಡಿಗರು ಸುಮ್ಮನಿದ್ದರೆ ಮಹಾರಾಷ್ಟ್ರೀಯರ ಬೊಬ್ಬೆಗೇ ಬೆಲೆ ಬರಬಹುದು. ಅದಕ್ಕೆಂದೇ ನಮ್ಮ ಪ್ರದೇಶ ಕಾಂಗ್ರೆಸು ಗೋವೆಯ ಕುರಿತು ತೀವ್ರ ಕಾರ್ಯಕ್ರಮವನ್ನು ಕೈಕೊಳ್ಳುವ ನಿರೀಕ್ಷೆ ಇದೆ. ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಕೂಡಾ ಈ ಕನ್ನಡಿಗರಿಗೆ ಭೂಷಣವಾದ ಮಾತುಗಳನ್ನೇ ಆಡಿದ್ದಾರೆ 'ಕೆಲವು ವರ್ಷಗಳ ವರೆಗೆ ಗೋವೆಯು ಪ್ರತ್ಯೇಕವಾಗಿಯೆ ಉಳಿಯಬೇಕು. ಮೈಸೂರು ಮಹಾರಾಷ್ಟ್ರ ಎರಡೂ ಸರಕಾರಗಳು ಅದರ ಅಭಿವೃದ್ಧಿಗೆ ನೆರವು ನೀಯಬೇಕು. ಆಬಳಿಕ ಗೋವನರೇ ತಾವು ಯಾವ ರಾಜ್ಯದಲ್ಲಿ ವಿಲೀನಗೊಳ್ಳಬೇಕೆಂಬುದನ್ನು ನಿರ್ಧರಿಸಲಿ' ಎಂಬ ಹೇಳಿಕೆಯು ಸಮಯೋಚಿತವಾಗಿದೆ. ಗೋವೆಯ ಕುರಿತು ಅವಸರದ ಒತ್ತಾಯಗಳು ನಡೆಯುತ್ತಿರುವಾಗ ಮೈಸೂರು ರಾಜ್ಯವೂ ಗೋವಾ ಮೈಸೂರಿನೊಂದಿಗೆ ಸೇರಬೇಕೆಂಬ ನಿರ್ದಿಷ್ಟ ಬೇಡಿಕೆ ಸಲ್ಲಿಸುವ ಕಾಲ ಸನ್ನಿಹಿತವಾಗಿದೆಯೆಂದೂ ಅವರು ಹೇಳಿರುವುದು ಅವರ ದಿಟ್ಟತನವನ್ನು ತೋರಿಸುತ್ತದೆ. ಗೋವೆಯ ಕುರಿತು ಧೀರತನದ ನಿಲುವು ತಳೆದ ಮುಖ್ಯ ಮಂತ್ರಿಗಳನ್ನು ಈ [illegible] ಅಭಿನಂದಿಸ ಬೇಕಾಗಿದೆ.

ಶ್ರೀ ಬಿ ಮಂಜಯ್ಯ ಹೆಗ್ಡೆ

ದಕ್ಷಿಣ ಕನ್ನಡದ ಜನ ಮರೆಯಲಾಗದ ಕೆಲವೇ ವ್ಯಕ್ತಿಗಳಲ್ಲಿ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಒಬ್ಬರು. ಅವರು ಸ್ಥಳೀಯ ಸರಕಾರ, ಸರಕಾರಿ ಸಂಸ್ಥೆಗಳು, ಬ್ಯಾಂಕಿಂಗ್ ಸಂಸ್ಥೆ, ವಿದ್ಯಾ ಕ್ಷೇತ್ರ, ಸಾರ್ವಜನಿಕ ಸಂಸ್ಥೆ ಹೀಗೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ದುಡಿದ, ಇಂದೂ ದುಡಿಯುತ್ತಿರುವ ಸಾರ್ವಜನಿಕ ಸೇವಾಸಕ್ತರು, ಅವರ ಸೌಜನ್ಯವಾನ ಹಾಗೂ ನಿಷ್ಕಪಟ ಸರಳ ಮನೋಭಾವವು ಅವರನ್ನು ಎಲ್ಲರೂ ಮೆಚ್ಚುವಂತೆ ಮಾಡಿದೆ.



ಶ್ರೀ ಹೆಗ್ಡೆಯವರು ಸುಪ್ರಸಿದ್ಧ ವಕೀಲರು ಅವರು ಎರಡು ಬಾರಿ (೧೯೪೮ ಮತ್ತು ೧೯೫೪) ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಜಿಲ್ಲೆಗೆ ಅಪೂರ್ವ ಸೇವೆ ಸಲ್ಲಿಸಿದವರು. ಅಧ್ಯಕ್ಷರಾಗಿದ್ದಾಗ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಹಲವಾರು ಉತ್ತಮ ಕಾರ್ಯಗಳನ್ನು ಕೈಕೊಂಡು, ಕೃತಕೃತ್ಯವಾಗಿದೆ. ದಕ್ಷಿಣ ಕನ್ನಡದ ಜಿಲ್ಲಾ ವಿದ್ಯಾ ಕೌನ್ಸಿಲಿನ ಸದಸ್ಯರಾಗಿ ಮಂಗಳೂರಿನ ಸ್ವಾಮಿ ಶ್ರದ್ಧಾನಂದ ಸೇವಾ ಶ್ರಮದ ಅಧ್ಯಕ್ಷರಾಗಿ, ಸುಪ್ರಸಿದ್ಧ ಬ್ಯಾಂಕಿಂಗ್ ಸಂಸ್ಥೆಯಾದ ವಿಜಯಾ ಬ್ಯಾಂಕಿನ ಅಧ್ಯಕ್ಷರಾಗಿ ಅವರು ಈ ಹಿಂದೆ ಅಮೂಲ್ಯ ಸೇವೆ ಸಲ್ಲಿಸಿದವರು.

ಅವರ ಸಾರ್ವಜನಿಕ ಸೇವಾ ಕಾಂಕ್ಷೆ ಇನ್ನು ಬತ್ತಿಲ್ಲ ಎಂತಲೇ ಇಂದು ಕೂಡಾ ಅವರು ಜಿಲ್ಲೆಯ ಹಲವಾರು ಸಂಸ್ಥೆಗಳೊಡನೆ ತಮ್ಮ ಸಂಬಂಧವಿರಿಸಿ ಕೊಂಡಿದ್ದಾರೆ ಮಂಗಳೂರು ಹೌಸ್ ಬಿಲ್ಡಿಂಗ್ ಸೊಸೈಟಿ, ಸ್ಥಳೀಯ ಪುಸ್ತಕಾಲಯ ಸಂಸ್ಥೆ, ಜಿಲ್ಲಾ ಕೋಪರೇಟಿವ್ ಸೆಂಟ್ರಲ್ ಮತ್ತು ಬೇಂಕ್, ಹರಿಜನ ಕೋಪರೇಟಿವ್ ಸೊಸೈಟಿ, ವಿಜಯಾ ಬ್ಯಾಂಕ್ ಮೊದಲಾದ ಸಂಸ್ಥೆಗಳಲ್ಲಿ ಪ್ರಕೃತ ಅವರು ಅಧ್ಯಕ್ಷರಾಗಿ, ಸದಸ್ಯರಾಗಿ, ನೈಕಿಕ್ಷರಾಗಿ ಸೇವೆ ಸಲ್ಲಿಸುತ್ತಿರುವರು. ಸೇವೆ ಮಾಡಬೇಕೆಂಬವರಿಗೆ ಸ್ಥಾನ ಮುಖ್ಯವಲ್ಲ, ಕಾರ್ಯಕ್ಷೇತ್ರ ಮುಖ್ಯ ಎಂದು ತಿಳಿದು ದುಡಿದವರು ಶ್ರೀ ಹೆಗ್ಡೆಯವರು ಅಂತಲೇ ಅವರು ಇಂದು ಜನಾನುರಾಗಿಗಳಾಗಿದ್ದಾರೆ ಅವರ ಬಹುಮುಖ ಸಾರ್ವಜನಿಕ ಸೇವೆಯು ಸೌಲಭ್ಯ ಜಿಲ್ಲೆಯ ಜನತೆಗೆ ಕರ್ನಾಟಕಕ್ಕೆ ಇನ್ನು ಲಭಿಸಲಿ ಎಂದು ಹಾರೈಸುತ್ತೇನೆ.

NAVAYUGA 26—11—1964
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨೬-೧೧-೬೪ರಿಂದ ೨-೧೨-೬೪ರ ವರೆಗೆ

೧. ಮೇಷ.

ಬಹಳ ಬಿಕ್ಕಟ್ಟಿನ ಪರಿಸ್ಥಿತಿಯು ನಿಮಗಿಂದು ಒದಗಲಿದೆ, ಸ್ವಶಕ್ತಿಯಿಂದಲೇ ಕಾರ್ಯಪಥದಲ್ಲಿ ಮುಂದರಿಯುವಿರಿ. ಪ್ರಯತ್ನಕ್ಕೆ ತಕ್ಕ ಫಲವು ಲಭಿಸುವುದು, ಆದರೆ ಇಂದಿನ ನಿಮ್ಮ ತಾಪತ್ರಯಗಳು ವಿಪರೀತ ಹೆಚ್ಚಲಿವೆ. ಗೃಹಕೃತ್ಯದಲ್ಲಿ ಪರಸ್ಪರ ಮನಸ್ತಾಪ ಕಲಹಗಳುದಿಸುವವು. ಸಂಸಾರದ ಖರ್ಚು ವೆಚ್ಚಗಳನ್ನು ನಿರ್ವಹಿಸುವುದೇ ದುಃಸಾಧ್ಯವೆನಿಸುವದು. ಕೋರ್ಟು ಕಚೇರಿಗಳ ವ್ಯವಹಾರವು ನಿಮ್ಮ ಮೇಲೆ ಬರಲಿವೆ, ವ್ಯಾಪಾರದಲ್ಲಿ ನಷ್ಟ ಕಲಹಗಳಾದಾವು. ಕಫ ಪಿತ್ಥ ದೋಷದಿಂದ ಆರೋಗ್ಯವು ಕೆಡಲಿದೆ ಅಂತೂ ಕಷ್ಟದಿಂದ ದಿನಗಳೆಯತಕ್ಕ ನಿಮಗೆ ವಾರಾಂತ್ಯದ 5 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು

೨ ವೃಷಭ

ಮೇಲಿಂದ ಮೇಲೆ ಬರತಕ್ಕ ವಿಪತ್ಪರಂಪರೆಗಳು ನಿಮ್ಮ ಮನಸ್ಸಿಗೆ ಈ ಹೊತ್ತು ನೆಮ್ಮದಿಯನ್ನು ಕೊಡಲಾರವು. ಹೆಚ್ಚಿನ ನಿಮ್ಮ ಪ್ರಯತ್ನಗಳು ನೀರಲ್ಲಿ ಗೈದ ಹೋಮದಂತೆ ವಿಫಲವಾಗಲಿವೆ, ಅತ್ಯಲ್ಪಾದಾಯಗಳಾದ ನಿಮ್ಮ ಖರ್ಚು ವೆಚ್ಚಗಳು ಬಹಳಿರುವುದರಿಂದ ಹಣದ ಬಿಕ್ಕಟ್ಟು ಅತಿಯಾಗಲಿದೆ ನೀವೆಷ್ಟೇ ವ್ಯವಹಾರ ಕುಶಲರಿದ್ದರೂ ಕಲಹ ಜನಾಪವಾದಗಳು ತಪ್ಪಲಾರವು. ಆಪ್ತ ಬಂಧುಗಳ ವಿಯೋಗ ದುಃಖದಿಂದು ಏರವಾಗಲಿರುವಿರಿ. ಗೃಹದಲ್ಲಿ ಮಂಗಲ ಕಾರ್ಯಗಳು ಜರಗುವ ಸಂಭವವಿದೆ. ವಾರಾಂತ್ಯದ 2 ದಿನಗಳು ಇದ್ದುದರಲ್ಲಿ ಉತ್ತಮವಿರುವವು.

೩. ಮಿಥುನ

ವ್ಯವಹಾರಜ್ಞರಾದ ನಿಮ್ಮ ಸಕಲ ಬಯಕೆಗಳೂ ಇಂದು ನೆರವೇರುವವು. ನಿರೀಕ್ಷೆಗಿಂತಲೂ ಹೆಚ್ಚಿನ ಫಲವು ಅನಾಯಾಸದಿಂದ ಲಭಿಸಲಿದೆ. ವಿಶೇಷತಃ ಕೋರ್ಟು ಕಚೇರಿಗಳ ವ್ಯವಹಾರಗಳು ನಿಮ್ಮಂತೆಯೇ ಆಗುವವು. ಜನಾದರವಂಗಳಿಸಿದ ನೀವು ಸಮಾಜದಲ್ಲಿ ಒಳ್ಳೆಯ ಸ್ಥಾನಮಾನವನ್ನು ಪಡೆವಿರಿ. ಉದ್ಯೋಗದಲ್ಲಿ ಪ್ರಗತಿ ಹೊಂದಲಿರುವಿರಿ. ನಿರೋಗಿಗಳಾದ ನಿಮಗೆ ವಾರಾಂತ್ಯದ 4 ದಿನಗಳಲ್ಲಿ ವಿಜಾತಿಯವರೊಡನೆ ವಿಶೇಷತಃ ನೀಚ ವರ್ಗದವರೊಡನೆ ಕಲಹವಾಗಲಿದೆ.

೪. ಕರ್ಕಾಟಕ

ನಿಮ್ಮ ಕರ್ತವ್ಯವನ್ನೇನೋ ನಿರ್ವಹಿಸುವಿರಿ, ಆದರೆ ಪ್ರತಿಫಲವು ಮಾತ್ರ ನಿರೀಕ್ಷಿಸಿದಂತಿರದು. ಖರ್ಚುಗಳು ದಿನದಿಂದ ದಿನಕ್ಕೆ ಹೆಚ್ಚಲಿರುವುದರಿಂದ ಹಣದ ತಗಾದೆಯುಂಟಾಗಲಿದೆ, ಕಫ ಪಿತ್ಥ ದೋಷದಿಂದ ಆರೋಗ್ಯವು ಸರಿಯಿರದು. ಶತ್ರು ವರ್ಗದವರು ಸಾಕಷ್ಟು ಉಪದ್ರವಿಸಲಿರುವರು. ಆದರೂ ಗೃಹ ತಾಪತ್ರಯಗಳಿಂದ ಮುಕ್ತರಾದ ನಿಮಗೆ ತಾ 28, 29, ಈ ದಿನಗಳಲ್ಲಿ ಸುಖ ಭೋಗಗಳು ಲಭಿಸಲಿವೆ.

೫. ಸಿಂಹ

ನಿಮ್ಮ ಪ್ರಯತ್ನಗಳು ಹೆಚ್ಚಿನಂಶ ಸಫಲಗಳಾಗುವುದರಿಂದ ದಿನಯಾಪನೆಯು ದುಸ್ತರವಾಗದು. ಜನತೆಯು ಸಹಕಾರವು ನಿಮಗಿಂದು ಚೆನ್ನಾಗಿದ್ದರೂ ಮನೆಯಲ್ಲಿ ಮಾತ್ರ ಸುಖ ನೆಮ್ಮದಿಗಳಿರವು. ತಂದೆ ಮಕ್ಕಳೊಳು ಗಂಡ ಹೆಂಡಿರೊಳು ಸದಾ ಕಲಹ ಮನಸ್ತಾಪಗಳುದಿಸಲಿವೆ, ಮಾತ್ರವಲ್ಲ ಮಕ್ಕಳ ಆರೋಗ್ಯವೂ ಚೆನ್ನಾಗಿರದು, ಭೂಸಂಬಂಧವಾದ ವ್ಯವಹಾರದಲ್ಲಿ ಕೆಲವೊಂದು ನಷ್ಟ ಪರಾಭವಗಳುಂಟಾದಾವು. ತಾ. 26-27 30.1.2 ಈ ದಿನಗಳು ಉಳಿದ ದಿನಗಳಿಗಿಂತ ಉತ್ತಮವಾಗಿರುವವು.

೬. ಕನ್ಯಾ

ಗುರು ಕುಜರಿಂದು ಅನಿಷ್ಟ ಸ್ಥಾನಗಳಾದ ಅಷ್ಟಮ ವ್ಯಯಗಳಲ್ಲಿ ನಿಂತರೂ ಇತರ ಗ್ರಹರ ಪೂರ್ಣ ಬೆಂಬಲವುಳ್ಳ ನಿಮಗೆ ಇಂದಿನ ವಾರವು ಸುಖದಾಯಿಯಾಗಿ ಪರಿಣಮಿಸಲಿದೆ. ವ್ಯಾಪಾರ ನೌಕರಿ ಮೊದಲಾದ ಉದ್ಯಮಿಗಳಿಗೆ ನಿರೀಕ್ಷೆಗಿಂತ ಹೆಚ್ಚಿನ ಫಲ ಲಾಭವಾಗುವುದು, ಗೃಹ ತಾಪತ್ರಯದಿಂದ ಮುಕ್ತರಾದ ನಿಮ್ಮ ತನುಮನಗಳಿಗಿಂದು ಸುಖಶಾಂತಿ ಲಭಿಸಲಿದೆ, ಅನವಶ್ಯಕ ಖರ್ಚುಗಳು ನಿಮಗಿಂದು ಪಾಪವಾದರೂ ಹಣದ ಅಡಚಣೆ ಕಾಣಿಸದು. ತಾ. 28.29 ರಲ್ಲಿ ಸುಖಭೋಗಗಳನ್ನು ಪಡೆವಿರಿ.

೭. ತುಲಾ

ನಿಮ್ಮ ಧನಪತಿ ಯಾದ ಅಂಗಾರಕನಿಂದು ಲಾಭಸ್ಥಾನಕ್ಕೆ ಬಂದಿರುವುದರಿಂದ ಆರ್ಥಿಕ ಪರಿಸ್ಥಿತಿಯು ತುಂಬ ಸುಧಾರಿಸಲಿದೆ. ಹಲವಾರು ತೆರದಿಂದ ಧನಾರ್ಜನೆ ಮಾಡುವಿರಿ. ಆರೋಗ್ಯವು ಕೂಡಾ ಮುಂಚಿಗಿಂತ ಎಷ್ಟೋ ಸುಧಾರಿಸಲಿದೆ, ನಿಮ್ಮ ಸ್ವಂತ ಉಪಭೋಗಕ್ಕೆ ಬೇಕಾದ ವಸ್ತು ಒಡವೆಗಳು ಅನಾಯಾಸದಿಂದ ಲಭಿಸುವವು.ಆದರೆ ಮಿತ್ರಜನರೊಳು ಮನಸ್ತಾಪಕ್ಕೆಡೆಯಾಗುವಂತಹ ಪ್ರಸಂಗ ಬರಲಿದೆ. ಕೆಲವೊಂದು ಗೃಹ ತಾಪತ್ರಯದಿಂದ ಮನಸ್ಸಿಗೆ ನೆಮ್ಮದಿಯಿರದು. ತಾ.26, 27, 30, 1, 2 ಈ ದಿನ ಗಳು ಲಾಭ ಕಾರ್ಯಸಿದ್ಧಿ ವಿಜಯದಾಯಿಗಳಾಗಿವೆ.

೮. ವೃಶ್ಚಿಕ

ವಿಪತ್ತೀಯರಿಂದ ಕೆಲಮಟ್ಟಿನ ತೊಡಕು ತೊಂದರೆಗಳು ಬಂದರೂ ನೀವು ಹಿಡಿದ ಕಾರ್ಯಗಳಲ್ಲಿ ಯಶಸ್ವಿಗಳಾಗುವಿರಿ, ಖರ್ಚಿಗೆ ತಕ್ಕ ಆದಾಯವಿರೋಣದರಿಂದ ಹಣದ ಕೊರತೆಯುಂಟಾಗದು. ನೌಕರಿ ವ್ಯಾಪಾರಾದಿಗಳು ನಿರಾತಂಕವಾಗಿ ಸಾಗಿದರೂ ಮನಸ್ಸಿಗೆ ನೆಮ್ಮದಿಯಿರಲಾರದು. ಪ್ರವಾಸದಲ್ಲಿ ನಷ್ಟ ತೊಂದರೆಗಳುಂಟಾದಾವು. ಕಫ ಪಿತ್ಥ ದೋಷದಿಂದ ಆರೋಗ್ಯ ಕೆಡುವಂತಿದೆ, ವಿನಾ ಕಾರಣ ಮಹಾತ್ಮರೊಡನೆ ಕಲಹವಾಗಲಿದೆ, ವಾರಾದಿಯ ನಾಲ್ಕು ದಿನಗಳು ಸುಖಲಾಭದಾಯಿಗಳಾಗಿವೆ.

೯. ಧನು

ನಿಮ್ಮ ತನು, ಧನ, ಲಾಭಾಧಿಪತಿಗಳ ಪೂರ್ಣ ಬೆಂಬಲವು ನಿಮಗಿಂದು ಲಭಿಸುವುದರಿಂದ ದೇಹಾರೋಗ್ಯ ಮತ್ತು ಆರ್ಥಿಕ ಸಂಪತ್ತು ಇವುಗಳಿಗೇನೂ ಹಾನಿಯಿರದು. ಎಂತಹ ಕಾರ್ಯವೂ ನಿಮಗಿಂದು ತೃಣಸಮವೆನಿಸೀತು. ಜನತೆಯ ಸಹಕಾರವೂ ಬಂಧುಗಳ ನೆರವೂ ಚೆನ್ನಾಗಿದ್ದರೂ ರಾಜಕೀಯ ಕ್ಷೇತ್ರದಲ್ಲಿ ಪ್ರತಿಪಕ್ಷಿಗಳಿಂದ ಪರಾಭವ ಹೊಂದುವಂತಿದೆ. ಪ್ರವಾಸದಲ್ಲಿ ತೀರ್ಥಕ್ಷೇತ್ರಾದಿಗಳ ಸಂದರ್ಶನ ಯೋಗವಿಹುದು. ವಾರಾಂತ್ಯದ 5 ದಿನಗಳು ತುಂಬ ಅನುಕೂಲವಾಗಿವೆ.

೧೦. ಮಕರ

ರವಿಯೋರ್ವನನ್ನುಳಿದು ಇತರ ಎಲ್ಲಾ ಗ್ರಹರೂ ಸಧ್ಯ ನಿಮಗೆ ವಿಮುಖರಾಗಿರುವುದರಿಂದ ಸರ್ವತ್ರ ವಿರೋಧ ವಿವಾದಗಳು ಹೆಚ್ಚಲಿವೆ, ಅತಿವ್ಯಯದಿಂದಾಗಿ ಅಪದ್ಧನವೂ ಕೂಡ ಉಳಿಯಲೊಲ್ಲದು.ವ್ಯಾಪಾರದಲ್ಲಿ ನಷ್ಟವೂ ವ್ಯವಹಾರದಲ್ಲಿ ಪರಾಜಯವೂ ಉಂಟಾದೀತು. ವಿದ್ಯಾರ್ಥಿವಿದ್ಯಾರ್ಥಿನಿಯರಿಗೆ ಅಭ್ಯಾಸಕ್ಕೆಹೆಚ್ಚಿನ ವಿಘ್ನ ವಿಚ್ಛಿದ್ರಗಳು ಬರಲಿವೆ.ಶತ್ರುವರ್ಗದವರ ಕಾಟದಿಂದಾಗಿ ದಿನಯಾಪನೆಯು ಬಹಳ ದುಸ್ತರವಾಗಲಿದೆ, ಆಪ್ತೇಷ್ಟ ವರ್ಗದವರೂ ಕೂಡ ನಿಮ್ಮನ್ನು ಕಣ್ಣೆತ್ತಿ ಸಹ ನೋಡಲಾರರು. ಅತಿ ಕಷ್ಟದಿಂದ ದಿನಗಳೆವ ನಿಮಗೆ ವಾರಾಂತ್ಯದ 3 ದಿನಗಳು ಸ್ವಲ್ಪ ಸಹ್ಯವಾದಾವು.

೧೧. ಕುಂಭ

ನಿಮ್ಮ ಸುಖಭಾಗ್ಯಪತಿಯಾದ ಶುಕ್ರನಿಂದು ತನ್ನ ಮನೆ ಸೇರಿರುವುದರಿಂದ ಹಿಂದಿನ ಆರ್ಥಿಕ ತಗಾದೆಯಿಂದ ಮುಕ್ತರಾಗಿ ನೆಮ್ಮದಿಯಿಂದ ಕಾಲ ಕಳೆವಿರಿ. ಹೆರವರ ನೆರವಿಲ್ಲವಾದರೂ ಹಿಡಿದ ಕಾರ್ಯ ಸ್ವಯಮೇವ ನಿರ್ವಹಿಸುವಿರಿ. ಶ್ರಮ ಜೀವಿಗಳಿಗೆ ದಿನಯಾಪನೆಯು ಸ್ವಲ್ಪ ಕಷ್ಟವಾಗಿ ಕಾಣಿಸಿದರೂ ಕುಶಲ ಕಲಾವಿದರಿಗೂ ವಿದ್ಯೋಪ ಜೀವಿ ನೌಕರಿ ಜನರಿಗೂ ಇಂದಿನ ದಿನಗಳು ಸುಖಸಂತಸದಾಯಿಗಳಾಗಿ ಕಾಣಲಿವೆ, ಗೃಹ ತಾಪತ್ರಯಗಳೇನೂ ಇಲ್ಲವಾದರೂ ಅರ್ಧಾಂಗಿಯ ಕೂಡೆ ಕಲಹವಾದೀತು. ವಾರಾದಿಯ 3 ದಿನಗಳಲ್ಲಿ ಮಿತ್ರರ ಭೆಟ್ಟಿ ಸುಖಭೋಗಗಳು ಲಭಿಸಲಿವೆ.

೧೨. ಮೀನ

ನಿಮ್ಮ ಪರಿಸ್ಥಿತಿಯಿಂದು ತುಂಬ ಸುಧಾರಿಸಲಿದೆ. ನಿರೀಕ್ಷಿಸಿದಂತೆ ಪ್ರತಿಯೊಂದು ಕಾರ್ಯಗಳೂ ಕೊನೆಹೊಂದುವವು. ಬಂಧು ಮಿತ್ರರ ನೆರವುಳ್ಳ ನಿಮಗೆ ಸರ್ವತ್ರ ಸ್ಥಾನಮಾನಾದಾರಗಳು ದೊರೆಯಲಿವೆ. ಆರೋಗ್ಯ ಮತ್ತು ಆರ್ಥಿಕ ವಿಚಾರಗಳಲ್ಲಿ ನೀವಿಂದು ನಿಶ್ಚಿಂತರಾಗಿರುವಿರಿ. ವಿರೋಧಿ ವರ್ಗದವರು ನಿಮ್ಮತ್ತ ಕೂಡ ನೋಡಲಾರರು, ಏನೊಂದೂ ತೊಡಕು ತೊಂದರೆಗಳಿಲ್ಲದೆ ಸುಖದಿಂದ ಕಾಲಯಾಪನೆ ಮಾಡತಕ್ಕ ನಿಮಗೆ ವಾರಾದಿಯ 4 ದಿನಗಳಲ್ಲಿ ಧನಲಾಭ ಗೃಹಸುಖ ವಿಜಯಗಳು ದೊರಕಲಿವೆ.

ಅಗಲಿದ ನಮ್ಮ ಮುಂದಾಳು

ಲೇ:— ಕುಮಾರಿ ಪುಷ್ಪಲತಾ,
ಕುಂಜಾರ್‌ಗಿರಿ.

ನಮ್ಮ ಮುಂದಾಳು ನಮ್ಮ ಮುಂದಾಳು |
ಹೆಮ್ಮೆಯಿಂ ಉಬ್ಬುತಿಹೆ ಜೀವದೊಡಲು ||
ಸುಮ್ಮನೇತಕೆ ಜಗದೆ ಎಲ್ಲ ಮುಂದಾಳು |
ನಮ್ಮ "ಜವಾಹರಲಾಲ್"ರೊಬ್ಬ ಮುಂದಾಳು||

ಪೂಜ್ಯ ಬಾಪೂಜಿಯ ಪಟ್ಟಶಿಷ್ಯನು ಆಗಿ|
ತೇಜದಿಂ ಬೆಳೆ ಶಾಂತಿಪಥದಲ್ಲಿ ಸಾಗಿ||
ಮೂಜದಿರು ಆದರವ ಪಡೆದೆ ನಿಜವಾಗಿ |
ಪೂಜ್ಯನಿದೊ ನಮಿಪೆ ನಾ ನಿನಗೆ ಶಿರಬಾಗಿ ||

ನಿನ್ನ ಸಮತೆಯು ಸ್ವಾಭಿಮಾನ ಧನವು |
ಹೊನ್ನಿನಂತಹ ನಿನ್ನ ವಿಶಾಲ ಮನವು ||
ಮುನ್ನ ಭಾರತಕದುವೆ ಮಾರ್ಗದರ್ಶಕವು |
ಮುನ್ನಡೆಸು ಮುನ್ನಡೆಯಲೆಮ್ಮ ಭಾರತವು ||

ಎಲವೊ ಪಾಕಿಸ್ತಾನ ಶಠಮೂರ್ಖ ಚೀನ |
ಸುಲಭವಲ್ಲವು ಜಗದ ಮುಂದಾಳುತನ||
ಬಲವಿದ್ದರೇನು ಸಾರ್ಥಕತನ ಜನ — |
ರೊಲವು ನಿಮಗಿಹುದೆ ಅದುವೆ ಅಪಮಾನ||

ಭ್ರಾತೃಪ್ರೇಮವು ನಿಮ್ಮೊಳಗೆ ಇನಿತಿಲ್ಲ |
ಮಾತೃವಾದರು ನಿಮ್ಮನೆಂತು ಪೊರೆಯುವಳು||
'ಭ್ರಾತೃಗಳು ನಾವ್"ಎಂದು ಎಂದ
ನೆಹರುಗಳು|
ಶತ್ರುವಾಗಲು ಬಯಸಿ ಬರಿಬರಿದೆ ಹಾಳು |

ಇನ್ನಾದರೂ ಮುಂದಾಳುವಾಗುವೊಡೆ ನೋಡಿ|
ಅನ್ನರನು ಕಾಡುವೊಡೆ ಮುಂದಾಗಬೇಡಿ ||
ಜ್ಞಾನ ಜ್ಯೋತಿ ಜವಾಹರರ ಆದರ್ಶ ನೋಡಿ |
ಮಾನವತೆಯಿಂದ ಬಾಳುವೆಯ ಮಾಡಿ||

ಭಾರತದ ಜ್ಯೋತಿಯೇ ಭಾರತದ ಕೀರ್ತಿಯೇ|
ಭಾರತದ ದಿವ್ಯ ರತ್ನದ ಮೂರ್ತಿಯೇ ||
ಭಾರತದ ಹಿರಿಮೆಯು ನಿನ್ನದಾಗಿದೆಯ್ಯ |
ವೀರ ನಿನಗಿದುವೆ ಸನ್ಮಾನ ದೊರೆಯೇ |

ನಿನ್ನ ಜನ್ಮವು ನಿಜಕು ಪಾವನವದಾಯ್ತು |
ನಿನ್ನ ಜೀವನ ಕಾಣುವೆ ಮಾರ್ಗದರ್ಶನವಾಯ್ತು||
ಮುನ್ನ ಭಾರತವು ನಿನ್ನ ಮರೆಯದಂತಾಯ್ತು |
ಚಿನ್ನದಂತಾ ನೆಹರು ಸ್ಮರಣೀಯ ವಾಯ್ತು ||

ನಿನ್ನ ಕಾಯದ ಜ್ಯೋತಿ ಇಂದು ನಂದಿರೆ
ಬಹುದು |
ರನ್ನದಂತಹ "ಆತ್ಮಜ್ಯೋತಿ" ನಂದಲು
ಬಹುದೆ? ||
ಮುನ್ನ ಆ ದೀವಿಗೆಯು ಕೋಟಿ ಕಂದರ
ಹೃದಯ |
ಮಂದಿರವ ಬೆಳಗುವೊಡೆ ಸಂದೇಹವಿದೆಯೆ? ||

ಘನ ಮಹಾತ್ಮನೆ ನಿನ್ನ ಮಹದಾಸೆಯಿಂದಾಗಿ |
ಮನೆಮನೆಯ ಬಾಲ ಬಾಲೆಯರು ಒಂದಾಗಿ ||
ತನುಮನವ ಮೀಸಲಿಸಿ ದೇಶದೇಳಿಗೆಗಾಗಿ |
ವಿನುತಾತ್ಮರಾಗಿ ವಚನ ಗೈಯುತಲಿರುವೆ
ವಿಂದು-||

—: ಮಿಲನ :—

ಬೆಳಗುವ ಚಂದಿರ ಕಿರಣದಲಿ
ಕುಣಿಯುವ ಚುದದ ತಾಣದಲಿ
ಪ್ರೇಮದ ಕಂಪಿನೊ ಚೆಲ್ಲಿಹುದು
ಸಗ್ಗದ ಸೊಬಗನು ನೀಡಿಹುದು
ಮೋದದಿ ಮುಂದಿಡು ಹೆಜ್ಜೆ
ಬಾರೆಲೆ ಏತಕೆ ಲಜ್ಜೆ! ||೧||

ಸಂತಸಗೊಂಡಿಹ ದಿನವೆಂದು
ಕರೆಯುವೆ ನಲ್ಲೆಯೆ ಬಾ ಮುಂದು
ಒಲವಿನ ಸೊದೆಯನು ನೀನಿಂದು
ಕುಡಿಸುತ ನೀಡೈ ಕೈಮುಂದು
ನೋಡುವ ದೇವನ ಲೀಲೆ
ಮೋಡಿಯ ನರಿಯದ ಬಾಲೆ ||೨||

ಎಸೆಯುವ ನೀಲಾಕಾಶದಲಿ
ಚೆಲುವಿನ ಚುಕ್ಕಿಯು ಮಿನುಗುತಲಿ
ಅಣಕಿಸುವಂತಿದೆ ನೀನಿನ್ನು
ಬರದಿರೆ ಬಾಯ್ವೆ ನಾನಿನ್ನು
ಮದಗಜದಂತೆಯೆ ಮುಂದ
ಮೆಲ್ ನಡಿಗೆಯು ಬಲು ಚಂದ||೩||

ನಿನ್ನನು ಕಂಡನುರಾಗದಲಿ
ಕೂಡುವೆ ನಾ ಬಲು ವೇಗದಲಿ
ಗೆಲುವಿನ ಭೇರಿಯ ಮೊಳಗಿಪೆಯೊ
ಕರುಣದ ಕಿರಣವ ಬೀರುವೆಯೊ
ಪ್ರೇಮದಯೊಕರಿ ನಾರಿ
ನಿಜ ನೀ ಮುನಿದರೆ ಮಾರಿ ||೪||

ನಿರ್ಮಲ ಪ್ರೇಮದ ಸೊದೆಯಿಂದ
ಪಾವನ ನಾಗಿರೆ ಬಲು ಚೆಂದ
ಬಾರೆಯ ನೀರೆಯೆ ನೀ ಮುಂದು
ಕುಣಿಯೆಯ ಧೀಂಕಿಟ ಮುಂಬಂದು
ಬಾಳಿನ ದಾರಿಯ ತುಳಿದು
ಬಂದಿಹೆ ಬಾಲೆಯೆ ಒಲಿದು ||

—ಕಾ. ಶ. ನಾ. ಭ., ವಿಶಾರದ,
ಬೆಕ್ಕೆ ಸೊಡ್ಲೂರು.

Edited, Printed & Published by K. H. Shetty at the Navayuga Press, Udipi, S. India.

ಸಂಪುಟ ೪೪] ದಶಂಬರ, ೩, ೬೪ [ಸಂಚಿಕೆ ೧೪



Phone No. 226
ಫೋನ್ ನಂಬ್ರು: 226

leading nationalist weekly

೨೦
ಪೈಸೆ

ಋಣಾನುಬಂಧ

ಬರೆದವರು
ಶ್ರೀಮತಿ ಸುಮತಿ, ಬೆಂಗಳೂರು.

ಲೇಡಿ ಡಾಕ್ಟರ್ ಲೀಲಾವತಿಯವರಿಗಂತೂ ವಿರಾಮವೆಂಬುದು ಕನಸಿನಲ್ಲಿಯೂ ಇಲ್ಲ. ಬೆಳಗ್ಗೆ ಎಂಟು ಘಂಟೆಗೆ ತಮ್ಮ 'ನರ್ಸಿಂಗ್ ಹೋಂ'ಗೆ ಬಂದು ಬಿಟ್ಟರೆ ಮಧ್ಯಾಹ್ನ ಒಂದು ಘಂಟೆಯ ವರೆಗೂ ಬಿಡುವಿಲ್ಲದಷ್ಟು ಕೆಲಸ. ಪುನಃ ಸಂಜೆ ಆರು ಘಂಟೆಗೆ ಪ್ರಾರಂಭವಾದರೆ ರಾತ್ರಿ ಒಂಭತ್ತಾದರೂ ಆಗುತ್ತಿತ್ತು, ಒಮ್ಮೊಮ್ಮೆ ಹತ್ತು ಘಂಟೆ ಸಹ ಆಗುತ್ತಿತ್ತು. ಈ ಮಧ್ಯೆ 'ಅಡ್ಮಿಟ್' ಆದ ಪೇಷೆಂಟ್‌ಗಳನ್ನೂ ನೋಡಿಕೊಳ್ಳಬೇಕಾಗಿತ್ತು. ಅನೇಕ ವೇಳೆ ನರ್ಸಿಂಗ್ ಹೋಂನಲ್ಲೇ ರಾತ್ರಿಯನ್ನು ಕಳೆಯಬೇಕಾದ ಪ್ರಸಂಗವೂ ಬರುತ್ತಿತ್ತು. ಕೊನೆಗೆ ಒಬ್ಬ ಅಸಿಸ್ಟೆಂಟ್ ನೇಮಕವಾದರು. ಕಾಲಕ್ರಮೇಣ ಒಬ್ಬ ಅಸಿಸ್ಟೆಂಟ್ ಜೊತೆಗೆ ಮತ್ತೊಬ್ಬರು ಕೂಡಿಕೊಂಡರು. ಇವರಲ್ಲದೆ-ಏಳೆಂಟು ಜನ ಕೆಲಸಗಾರರು, ಆಯಾಗಳು- ಹಗಲು ರಾತ್ರಿಯ ಸರದಿಯ ಪ್ರಕಾರ ನೇಮಿಸಿದ್ದರೂ ಕೆಲಸಗಾರರಿಗೆ ಬಿಡುವಿಲ್ಲದಷ್ಟು ಕೆಲಸ ಇದಕ್ಕೆ ಕಾರಣವಿಲ್ಲದೆ ಇಲ್ಲ. ಲೇಡಿ ಡಾಕ್ಟರಿಗೆ ರೋಗಿಗಳೆಂದರೆ ಮಕ್ಕಳ ಸಮಾನ. ರೋಗಿಯಾಗಿ ಬಂದವರು ಒಂದೆರಡು ಕ್ಷಣಗಳಲ್ಲೇ ಡಾಕ್ಟರ ಆಪ್ತರಾಗಿ ಬಿಡುತ್ತಿದ್ದರು ಲೇಡಿ ಡಾಕ್ಟರು ತಮ್ಮ ಹಸನ್ಮುಖಿ, ವಿಶ್ವಾಸದಿಂದ ಕೂಡಿದ ಮಾತುಕತೆಗಳಿಂದಲೇ ರೋಗಿಗಳನ್ನು ಸೆರೆಹಿಡಿದು ತಮ್ಮ ಕಡೆಗೆ ಒಲಿಸಿಕೊಳ್ಳುತ್ತಿದ್ದರು. ಜೊತೆಗೆ ಹಸ್ತಗುಣವೂ ಚೆನ್ನಾಗಿತ್ತು. ಇನ್ನು ಕೇಳಬೇಕೇ? ಕೆಲಸಗಾರರಂತೂ ತಮ್ಮ ಸ್ವಂತ ಕೆಲಸದಷ್ಟೇ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದರು. ಡಾಕ್ಟರಂತೂ ಕೆಲಸಗಾರರ ಕಷ್ಟಸುಖಗಳನ್ನು ತಮ್ಮ ಕಷ್ಟಸುಖಗಳೆಂದೇ ಭಾವಿಸಿ, ಅವರಿಗೆ ನೆರವಾಗುತ್ತಿದ್ದರು. ಏಕೆಂದರೆ ಲೀಲಾವತಿ ಕಷ್ಟದಲ್ಲೇ ಮುಳುಗೆದ್ದವರು. ಅವರಿಗೆ ಆರ್ಥಿಕ ಪರಿಸ್ಥಿತಿ ಸಾಕಷ್ಟು ಸುಧಾರಿಸಿತ್ತಾದರೂ, ಮಾನಸಿಕವಾಗಿ ಸ್ವಲ್ಪವೂ ಸುಖವಿರಲಿಲ್ಲ. ಚಿಕ್ಕಂದಿನಲ್ಲಾದರೋ ಸುಖದ ಸವಿಯನ್ನೇ ಕಾಣದ ಜೀವ ಅದು. ಆದ್ದರಿಂದಲೇ ಇನ್ನೊಬ್ಬರ ಕಷ್ಟ ಸುಖಗಳು ಆಕೆಗೆ ಬಹಳ ಬೇಗ ಅರಿವಾಗುತ್ತಿತ್ತು.

ಆದೇತಾನೇ ಲೀಲಾವತಿಯ ಹೈಸ್ಕೂಲು ಪರೀಕ್ಷೆ ಮುಗಿದಿತ್ತು ಅವಳ ವಿವಾಹವಾಗಿ ಅಂದಿಗೆ ಕೇವಲ ಆರೇ ತಿಂಗಳು ಕಳೆದಿತ್ತು. ಒಂದು ದಿನ ಅವಳ ತಂದೆ ಅಪಘಾತಕ್ಕೊಳಗಾಗಿ ತೀರಿಕೊಂಡರು. ಲೀಲಾವತಿ, ಅವಳ ತಂಗಿ ಸರಳೆ, ತಾಯಿ ಗೌರಮ್ಮ ಅನಾಥರಾದರು. ಆಗ ಗೌರಮ್ಮನ ತಮ್ಮ ರಘುವಿನ ನೆರವು ದೊರೆಯದಿದ್ದರೆ ತಾಯಿ ಮಕ್ಕಳು ಕೆರೆಯನ್ನೋ ಬಾವಿಯನ್ನೋ ಹುಡುಕಿಕೊಳ್ಳ ಬೇಕಾಗಿತ್ತು. ಆ ಸಮಯದಲ್ಲಿ ಇವರ ಭಾಗ್ಯಕ್ಕೆ ರಘು ದೇವರಾಗಿ ಬಂದು ಆಸರೆ ಕೊಟ್ಟಿದ್ದ. ಇದೇ ವೇಳೆಯಲ್ಲಿ ಲೀಲಳ ಅತ್ತೆ ಭವಾನಿಯಮ್ಮ ವರದಕ್ಷಿಣೆಯ ಹಣ ಪೂರ್ತಿ ಸಂದಾಯವಾಗಲಿಲ್ಲವೆಂಬ ನೆಪ ಹೂಡಿ ಸೊಸೆಯನ್ನು ತಮ್ಮ ಮನೆಗೇ ಬರಗೊಡಲಿಲ್ಲ. ಗೌರಮ್ಮನಿಗಾದರೋ ಘಾಯದ ಮೇಲೆ ಬರೆ-ಎಂಬಂತೆ ಪತಿಯ ವಿಯೋಗದ ಜೊತೆಗೆ ಈ ಹೊಸ ವಿಪತ್ತೂ ಬಂದೊದಗಿತ್ತು. ತಾನೇ ಇನ್ನೊಬ್ಬರ ಆಸರೆಯಲ್ಲಿರುವಾಗ ಇನ್ನು ವರದಕ್ಷಿಣೆಯ ಹಣವನ್ನೆಲ್ಲಿ ಒದಗಿಸಿಯಾರು— ಪಾಪ! ಗೌರಮ್ಮನ ಕಷ್ಟ ಸುಖಗಳು ಭವಾನಿಯಮ್ಮನವರ ಮನಸ್ಸನ್ನು ಕರಗಿಸಲಿಲ್ಲ. ಲೀಲಳ ಗಂಡನಾದರೋ ಹಸುವಿನಂತೆ ಸಾಧುವಾದ ಪ್ರಾಣಿ. ತಾಯಿ ಹಾಕಿದ ಗೆರೆ ದಾಟುವವನಲ್ಲ, ತಾಯಿ ಹಾಕಿದ್ದ ತಾಳಕ್ಕೆ ತಕ್ಕಂತೆ ಕುಣಿಯುತ್ತ ಮಾತೃಭಕ್ತನೆನಿಸಿಕೊಂಡು, ಪತಿಯೆನಿಸಿಕೊಂಡ ತನ್ನ ಕರ್ತವ್ಯವನ್ನೆಲ್ಲಾ ಮರೆತಿದ್ದ.

ಲೀಲ ಯಾವ ಮಾತನ್ನೂ ಆಡದೆ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದಳು; ಅವಳ ಮನಸ್ಸಿನ ಮೇಲೆ ಉಂಟಾದ ಪರಿಣಾಮವೆಂದರೆ—ಗಂಡಸು ಎಂದರೆ ಒಂದು ಜುಗುಪ್ಸೆ ಅವಳನ್ನು ಆವರಿಸಿತು. ಕಲ್ಲು ಮನಸ್ಸು ಮಾಡಿದಳು, ಅವರು ಕರೆದರೂ ತಾನೂ ಅತ್ತೆಯ ಮನೆಗೆ ಹೋಗುವದಿಲ್ಲವೆಂದು ಹಠತೊಟ್ಟಳು. ಶಾಲೆಯ 'ಅಧ್ಯಾಪಕರಿಗೆಲ್ಲ ಲೀಲಾ ಅಚ್ಚುಮೆಚ್ಚಿನ ಶಿಷ್ಯಳೆನಿಸಿಕೊಂಡಿದ್ದಳಾದರಿಂದ ಅವರ ನೆರವಿನಿಂದಲೇ ಲೀಲಾ ಕಾಲೇಜನ್ನು ಸೇರಿದಳು. ಶಾಲೆಯಲ್ಲಿ ಬುದ್ಧಿವಂತಳೆನಿಸಿ ದೊರಕಿಸಿಕೊಂಡಿದ್ದ ಸ್ಕಾಲರ್‌ಷಿಪ್ ಈಗ ಲೀಲಾಳಿಗೆ ಅತ್ಯಂತ ಸಹಕಾರಿಯಾಯಿತು. ಬಹಳ ಶ್ರಮ ಪಟ್ಟು ಕಡೆಯವರೆಗೂ ಲೀಲ ಅದನ್ನು ಉಳಿಸಿಕೊಂಡೇ ಬಂದಳು.

ನಾಲ್ಕಾರು ವರ್ಷಗಳಲ್ಲಿಯೇ ಲೀಲಾಳ ವ್ಯಾಸಂಗ ಮುಗಿದು ಎಂ. ಬಿ. ಬಿ. ಎಸ್, ಪದವೀಧರೆಯಾದಳು. ಕೆಲವೇ ದಿನಗಳಲ್ಲಿ ರಘುವಿನ ಸಹಾಯದಿಂದ ಒಂದು ಚಿಕ್ಕ "ಶಾಪ್" ಕೂಡಾ ತೆರೆದದ್ದಾಯಿತು. ಅದೂ ಕೂಡಾ ದಿನೇ ದಿನೇ ಅಭಿವೃದ್ಧಿ ಹೊಂದುತ್ತಾ ಬಂದು, ಅನಂತರ 'ನರ್ಸಿಂಗ್ ಹೋಂ' ಆಗಿ ಮಾರ್ಪಟ್ಟಿತು.

ಯಾವುದು ಸುಮ್ಮನಿದ್ದರೂ ಕಾಲಚಕ್ರ ಮಾತ್ರ ತನ್ನ ಕರ್ತವ್ಯವನ್ನು ಪಾಲಿಸುತ್ತಲೇ ನಡೆದಿರುತ್ತದೆ ಲೀಲಾಳ ತಂಗಿ ಸರಳೆಯೂ ಕೂಡಾ ಪದವೀಧರೆಯೆನಿಸಿಕೊಂಡಳು, ಮುಂದೆ ಅವಳ ಲಗ್ನ. ಈ ಯೋಚನೆ ಬಂದಿತೆಂದರೆ ಗೌರಮ್ಮ ಗಡಗಡ ನಡುಗಿ ಹೋಗುತ್ತಿದ್ದರು. ಲಗ್ನವಾದ ಒಬ್ಬ ಮಗಳು ಪಡುತ್ತಿರುವ ಸುಖ ನೋಡಿ ಅವರು ಸರಳೆಗೆ ಲಗ್ನ ಮಾಡಬಾರದೆಂದೇ ನಿಶ್ಚೈಸಿಕೊಂಡಿದ್ದರು. ಇದೇ ಚಿಂತೆಯಲ್ಲೇ ಮುಳುಗಿದ್ದ ಅವರಿಗೆ ಒಂದು ವಿಧವಾದ ಮನೋಗ್ಲಾನಿ ಆವರಿಸಿತ್ತು. ಆದರೆ ಈ ಚಿಂತೆ ಬಿಟ್ಟದಂತೆ ಬಂದು ಮಂಜಿನಂತೆ ಕರಗಿ ಹೋಗಿತ್ತು. ರಘು ತಾನೇ ಸರಳೆಯನ್ನು ವಿವಾಹ ಮಾಡಿಕೊಳ್ಳುವುದಾಗಿ ತಿಳಿಸಿದಾಗ ಗೌರಮ್ಮನಿಗಾದ ಆನಂದ ಅಪಾರ. ಅದಕ್ಕೆ ಮಿತಿಯೇ ಇರಲಿಲ್ಲ. ತಮ್ಮ ಬಾಳಿನಲ್ಲಿ ಕೇವಲ ದುಃಖವನ್ನೇ ಕಂಡ ಗೌರಮ್ಮನಿಗೆ ಸುಖ ಕಂಡಾಗ ಅದನ್ನು ಸ್ವಾಗತಿಸಿ ಅನುಭವಿಸಲೂ ಒಂದು ವಿಧವಾದ ಭಯವೇ. ಈ ಸುಖದ ಮುಂದೆ ಇನ್ನೇನು ಕಷ್ಟ ಕಾದಿದೆಯೋ- ಎಂಬ ಚಿಂತೆ. ರಘುವಿನೊಂದಿಗೆ ಸರಳೆಯ ವಿವಾಹವೂ ನಿರಾಡಂಬರವಾಗಿ ನಡೆಯಿತು. ಒಂದೆರಡು ವರ್ಷಗಳು ಎಲ್ಲರಿಗೂ ಸುಖಮಯವಾಗೇ ಇತ್ತು. ತಮ್ಮ ಹಾಗೂ ಮಗಳ ಸಂಸಾರ ಕಂಡು ತಮ್ಮ ದುಃಖವನ್ನೆಲ್ಲ ಗೌರಮ್ಮ ಸ್ವಲ್ಪ ಮರೆತರು— ಎಂದಾಗ ವಿಧಿ ಅವರನ್ನು ನೋಡಿ ಕಿಲಕಿಲನೆ ನಕ್ಕು ಅಣಕಿಸಿತು. ಎಲ್ಲರಂತೆ ಸರಳೆ ಗರ್ಭಿಣಿಯಾದಳು. ಲೀಲಳಾದರೋ ಮೈಯೆಲ್ಲ ಕಣ್ಣಾಗಿ ತಂಗಿಯ ಆರೈಕೆಯಲ್ಲಿ ಮುಳುಗಿದ್ದಳು. ಆದರೂ ಸಾರ್ಥಕವೆನಿಸಲಿಲ್ಲ. ಸರಳೆಯ ಶಿಶು ಹುಟ್ಟುವಾಗಲೇ ತಾನೂ ನಿರ್ಜೀವವಾಗಿ, ತಾಯಿಯನ್ನೂ ನಿರ್ಜೀವವಾಗಿಸಿತ್ತು. ಲೀಲಳಂತೂ ಮೂಕಿಯೇ ಆಗಿಬಿಟ್ಟಳು. ಜೊತೆಯಲ್ಲಿ ಹುಟ್ಟಿದ ತಂಗಿಯನ್ನೇ ಉಳಿಸಿಕೊಳ್ಳಲಾಗದ ಈ ವೈದ್ಯ ವೃತ್ತಿ ಇನ್ನೇಕೆ— ಎಂಬ ಉದಾಸೀನತೆ ಆವರಿಸಿತು. ತನ್ನ ವೃತ್ತಿಯನ್ನು ಕಂಡು ತನಗೇ ಒಂದು ಕ್ಷಣ ಜಿಗುಪ್ಸೆಯಾಯಿತು. ಇಲ್ಲಿಗೆ ವಿಧಿಯಾಟ ಮುಗಿದಂತಾಯಿತು. ಇನ್ನು ಗೌರಮ್ಮ, ರಘು— ಅವರ ಪಾಡಂತೂ ಯಾವ ಶತ್ರುವಿಗೂ ಬೇಡವೆನ್ನುವಷ್ಟು ಶೋಚನೀಯವಾಗಿತ್ತು. ಲೀಲ ಮತ್ತೊಮ್ಮೆ ಮನಸ್ಸು ಕಲ್ಲು ಮಾಡಬೇಕಾಯಿತು.

○ ○ ○

ಅಂದು ರಾತ್ರಿ ಲೇಡಿ ಡಾಕ್ಟರ್ ಲೀಲಾವತಿ ಆದೇ ತಾನೇ ನರ್ಸಿಂಗ್ ಹೋಂನಿಂದ ಮನೆಗೆ ಬಂದಿದ್ದರು. ಸ್ವಲ್ಪ ಹೊತ್ತು ಹಾಗೂ ಹೀಗೂ ಕಳೆದು— ಇನ್ನೇನು ಊಟಕ್ಕೆ ಕುಳಿತುಕೊಳ್ಳ ಬೇಕೆನ್ನುವಷ್ಟರಲ್ಲಿ ಆಸ್ಪತ್ರೆಯ ಆಳು ಚೀಟಿಯೊಂದನ್ನು ತಂದು ಕೊಟ್ಟ. ರಾತ್ರಿ ಸರದಿಯ ಅಸಿಸ್ಟೆಂಟ್ ಸರೋಜಮ್ಮನೇ ಆ ಚೀಟಿಯನ್ನು ಕಳುಹಿಸಿದರು ಅದನ್ನು ನೋಡಿದೊಡನೆ ಲೇಡಿ ಡಾಕ್ಟರ್— ತಾಯಿಯನ್ನು ಕುರಿತು—"ಅಮ್ಮಾ ಯಾರೋ ಪೇಷೆಂಟ್ ಬಂದಿದಾರಂತೆ—ಬಹಳ ಸೀರಿಯಸ್ಸಂತೆ —ನಾನು ಹೋಗುತ್ತೇನೆ—" ಎನ್ನುತ್ತ ತಾಯಿಯ ಉತ್ತರವನ್ನೂ ನಿರೀಕ್ಷಿಸದೆ ಕಾರಿನಲ್ಲಿ ಕುಳಿತು ಹೊರಟು ಬಿಟ್ಟರು. ತಾನೇ ಡ್ರೈವ್ ಮಾಡಿಕೊಂಡು ಹೊರಟವರು ಹತ್ತೇ ನಿಮಿಷಗಳಲ್ಲಿ ನರ್ಸಿಂಗ್ ಹೋಂ ಸೇರಿದರು.

ರೋಗಿಯನ್ನು ಒಂದು ಮಂಚದ ಮೇಲೆ ಮಲಗಿಸಲಾಗಿತ್ತು. ಗರ್ಭಿಣಿ ಸ್ತ್ರೀ ನವ ಮಾಸಗಳು ಕಳೆದಿವೆ, ಆದರೆ ರಕ್ತಹೀನತೆಯೇ ಕಾರಣವಾಗಿ ಆಕೆಗೆ ವೇದನೆಯನ್ನು ತಡೆಯಲೂ ಶಕ್ತಿಯಿಲ್ಲ. ಲೇಡಿ ಡಾಕ್ಟರ್ ಹತ್ತಿರಬಂದು ಆಕೆಯನ್ನು ನೋಡಿದರು, ಸೊರಗಿ ಮಲಗಿದ್ದ ಆಕೆಯ ಮುಖ ಎರಡು ವರ್ಷಗಳ ಹಿಂದೆ ತೀರಿಕೊಂಡ ಸರಳೆಯ ತದ್ರೂಪವೇ ಆಗಿತ್ತು. ಲೇಡಿ ಡಾಕ್ಟರ್ ಒಂದು ಕ್ಷಣ ಬೆಚ್ಚಿ—"ಹೀಗೂ ಉಂಟೆ? ಒಬ್ಬರಿದ್ದಂತೆ ಒಬ್ಬರಿರಲು ಸಾಧ್ಯವೆ? 'ಎಂದು ತಮ್ಮಲ್ಲಿ ತಾವೇ ಪ್ರಶ್ನಿಸಿಕೊಂಡರು. ಮರು ಕ್ಷಣ' "ಹೇಗಾದರೂ ಆಗಲಿ, ಈ ತಂಗಿಯನ್ನಾದರೂ ಉಳಿಸಲೇಬೇಕು—"ಎಂದು ತೀರ್ಮಾನಿಸಿಕೊಂಡರು. ಆಕೆಯ ತಲೆಯನ್ನು ವಾತ್ಸಲ್ಯದಿಂದ ನೇವರಿಸುತ್ತ— "ನಿಮ್ಮ ಹೆಸರೇನಮ್ಮ" ಎಂದು ಕೇಳಿದರು ಲೇಡಿ ಡಾಕ್ಟರ್. ಆಕೆ ಪ್ರಯಾಸದಿಂದ ಕಣ್ಣು ಬಿಟ್ಟು— "ನನ್ನ ಹೆಸರು ಶಾಂತ-' ಎಂದರು. ಹಿಂದೆಯೇ 'ಇದು ಎಷ್ಟನೆಯ ಮಗುವಮ್ಮಾ?' ಎಂದು ಡಾಕ್ಟರ್ ಕೇಳಿದಾಗ ಆಕೆ ಕ್ಷೀಣ ಧ್ವನಿಯಲ್ಲಿ 'ಆರನೆ ಯದು' ಎಂದುತ್ತರ ಕೊಟ್ಟರು.

ಇದ್ದ ಸಂಗತಿ ಹೇಳುವುದಾದರೆ ಶಾಂತಮ್ಮ ನಿಜವಾಗಿ ಬದುಕುವ ಸ್ಥಿತಿಯಲ್ಲೇ ಇರಲಿಲ್ಲ, ಆದರೂ ಲೇಡಿ ಡಾಕ್ಟರ್ ವಿಧಿಯೊಡನೆ ಹೋರಾಡಿ ಬಹಳ ಶ್ರಮ ಪಟ್ಟು ಆಕೆಯನ್ನುಳಿಸಿದರು. ಗಂಡು ಮಗು, ನಿಶ್ಶಕ್ತವಾಗಿದ್ದರೂ ಆರೋಗ್ಯವಾಗಿತ್ತು. ಇಷ್ಟು ದಿನ ಶ್ರಮ ಪಟ್ಟಿದ್ದಕ್ಕೆ ಇಂದು ಸಾರ್ಥಕವೆನಿಸಿತ್ತು. ಶಾಂತಳಿಗೆ ಔಷಧ ಕೊಟ್ಟು, ಮಗುವನ್ನು ಮತ್ತೊಮ್ಮೆ ಪರೀಕ್ಷಿಸಿ, ಸರೋಜಮ್ಮನನ್ನು ಮೇಲ್ವಿಚಾರಣೆಗೆ ನೇಮಿಸಿ ಲೇಡಿ ಡಾಕ್ಟ

(ಹದಿನೈದನೇ ಪುಟ ನೋಡಿರಿ)

INSIST ON........
Waterfalls—Glendale—Brooklands
TEAS
POPULAR EVERYWHERE
You can book your requirements through:
PUNJA & CO., MULKI,
Phone No. Off: 26. Res: 36.
KOTHARI & SONS, MADRAS.



Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ: ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಹಾಳೆಯ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಕೆಲಸಗಾರರಿಗೆ ಮಜೂರಿಯಾಗಿ ವಿತರಣೆ ಮಾಡಲು ಫುಲ್ಪುರಿಯೊಡ ಹಳ್ಳಿಯೊಂದರಲ್ಲಿ ಗಾಡಿಗಟ್ಟಲೆ ಬರುತ್ತಿರುವ ಆಹಾರ ಸಾಮಗ್ರಿ (ವಿವರಕ್ಕೆ ಒಳ ಪುಟಗಳನ್ನು ನೋಡುವುದು)

ನವಯುಗ

ಸಂಪುಟ ೪೪ | ಉಡುಪಿ | Vol 44
ಸಂಚಿಕೆ ೧೪ | ೩—೧೨—೧೯೬೪ | No. 14

ಮೂರ್ತಿಗೆ ಜೀವ ಬಂದೀತೆ?

ರಾಜ್ಯಪಾಲರು ಒಂದು ಸಮ್ಮೇಳನದ ನೆಪದಲ್ಲಿ ಒಂದು ಸೇರುವುದು ಮತ್ತು ವಿಚಾರ ವಿಮರ್ಶೆ ಮಾಡುವುದು ಒಂದು ಸಂಪ್ರದಾಯವೆಂಬಂತೆ ಪ್ರಜಾತಂತ್ರಾತ್ಮಕ ಸಾರ್ವಭೌಮ ರಾಷ್ಟ್ರ ಭಾರತದಲ್ಲಿ ನಡೆದು ಬಂದಿದೆ. ಭಾರತದಂತಹ ಮಹಾರಾಷ್ಟ್ರದ ಆಡಳಿತೆಯು ಸುಗಮವಾಗುವಂತೆ ರಾಜ್ಯಗಳೆಂಬ ಆಡಳಿತ ವಿಭಾಗವು ಅತ್ಯವಶ್ಯ; ಈ ರಾಜ್ಯಗಳ ಆಡಳಿತೆಯು ಶಾಸನಾಂಗ ಕಾರ್ಯಾಂಗಗಳ ಮೂಲಕ ನಡೆಯುವುದಾದರೂ ರಾಜ್ಯದ ವರಿಷ್ಠರೆಂದು ರಾಜ್ಯಪಾಲರು ರಾಷ್ಟ್ರಪತಿಯವರ ಪ್ರತಿನಿಧಿಯಂತೆ ನೇಮಕಗೊಳ್ಳುತ್ತಾರೆ. ಇತ್ತೀಚೆಗಿನ ಕೆಲವು ವರ್ಷಗಳಿಂದ ಈ ಪದವಿಯನ್ನು ಸ್ವೀಕರಿಸಲು ಅರ್ಹರಾದವರು ಒಪ್ಪುವದಿಲ್ಲವೆಂಬುದು ಅನುಭವವೇದ್ಯವಾಗಿದೆ. ಇದರಿಂದಾಗಿಯೇ ಸಾಮಾನ್ಯವಾಗಿ ಐದು ವರ್ಷಗಳ ಅವಧಿ ಮುಗಿದ ಬಳಿಕವೂ ಕೆಲವು ರಾಜ್ಯಪಾಲರು ತಮ್ಮ ಹುದ್ದೆಯಲ್ಲಿ ಮುಂದುವರಿಯುವುದು ಅನಿವಾರ್ಯವಾಯಿತು

ಶಾಸನಾಂಗದಲ್ಲಿ ಪಾಲುಗೊಳ್ಳಲು ತಾನು ಮುಂದೆ ತಾನು ಮುಂದೆ ಎಂದು ಮುಂದೆ ಬರುವವರು ನೂರಾರು ಜನರಿರುವ ಭಾರತದಲ್ಲಿ ರಾಜ್ಯಪಾಲರಾಗಲು ಮುಂಬರುವವರಿಲ್ಲದಿರಲು ಕಾರಣವೇನು? ಈ ವಿಚಾರದಲ್ಲಿ ಹಲವು ಅಭಿಪ್ರಾಯಗಳು ಹೊರಪಟ್ಟಿವೆ. ಹಿಂದಿನ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ರಾಷ್ಟ್ರಪತಿ ಹುದ್ದೆಯು ಕೇವಲ ಅಲಂಕಾರಿಕವೆಂದೂ ಅವರ ಅಧಿಕಾರದ ವ್ಯಾಪ್ತಿಯು ಎಲ್ಲಿಯವರೆಗಿದೆ ಎಂಬುದರ ಪರಿಶೀಲನೆಯಾಗಬೇಕೆಂದೂ ಬಯಸಿದ್ದರು. ಸಂವಿಧಾನದನ್ವಯ ರಾಷ್ಟ್ರಪತಿಯವರಿಗೆ ಕೆಲವಾದರೂ ಅಧಿಕಾರಗಳು ಕೊಡಲ್ಪಟ್ಟಿವೆ. ಇವು ಪರ್ಯಾಪ್ತವೇ ಎಂಬುದು ವಿಚಾರಕ್ಕೊಂದು ಮುಖ್ಯಾಂಶ. ಆದರೆ, ರಾಜ್ಯಪಾಲರ ಹುದ್ದೆಯು ಬರೇ ಅಲಂಕಾರಿಕ ಮೂರ್ತಿಯೆಂಬುದು ಹೆಚ್ಚಿನವರ ಅಭಿಪ್ರಾಯ. ಅನುಭವೀ ಮತ್ತು ಯಶಸ್ವೀ ರಾಜ್ಯಪಾಲರೆಂದು ಕೀರ್ತಿ ಪಡೆದ ನಿವೃತ್ತರಾದ ಶ್ರೀ ಶ್ರೀಪ್ರಕಾಶರು ಇದನ್ನು ಹಲವು ಬಾರಿ ಹೇಳಿದ್ದಾರೆ. ಗಾಡಗೀಳರೂ ಇದೇ ಕಾರಣದಿಂದ ಆ ಹುದ್ದೆಯನ್ನು ಬಿಟ್ಟು ಬಂದಿದ್ದಾರೆ. ಇತ್ತೀಚೆಗೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರೂ ಈ ಪದವಿಯು ನಿಷ್ಪ್ರಭಾವಿಯೆಂಬುದರಿಂದ ರಾಜಕಾರಣದಲ್ಲಿ ಸಕ್ರಿಯ ಭಾಗವಹಿಸಲು ಬಯಸಿದುದನ್ನು ಮರೆಯಬಾರದು. ಇದೆಲ್ಲಾ ಕಾರಣದಿಂದ ರಾಜ್ಯಪಾಲ ಹುದ್ದೆಯು ಅನಗತ್ಯವೆಂಬ ಅಪಸ್ವರವೂ ದೇಶದಲ್ಲಿ ಎದ್ದಿತ್ತು. ಇಂದಿನ ಕಾರ್ಯ ವಿಧಾನದಲ್ಲಿ ರಾಜ್ಯಪಾಲರಿಗೆ ನೀಡಿದ ಅಧಿಕಾರ ವ್ಯಾಪ್ತಿಯು ತೀರ ಕಡಿಮೆಯಿರುವುದರಿಂದ ರಾಜ್ಯದ ರಾಜಕಾರಣವನ್ನು ಕಲ್ಲ ಮೂರ್ತಿಯಂತೆ ನೋಡುತ್ತ ಅವರು ಸುಮ್ಮನೆ ಕುಳಿತುಕೊಳ್ಳಬೇಕಾಗುವುದು. ಶಾಸನ ಸಭೆಗಳು ಮಾಡಿದ ಒಂದಲ್ಲ ಹಲವು ಶಾಸನಗಳೂ ನ್ಯಾಯ ವಿರುದ್ಧವೆಂದು ನ್ಯಾಯಾಲಯಗಳು ಘೋಷಿಸುತ್ತಿರುವುದು, ರಾಜ್ಯದ ಆಡಳಿತೆಯಲ್ಲಿ ನಡೆಯುತ್ತಿರುವ ಅನ್ಯಾಯ ಅಸಮರ್ಪಕತೆ ಭ್ರಷ್ಟಾಚಾರ—ತನ್ಮೂಲಕ ಜನತೆಯಲ್ಲಿ ಬೆಳೆಯುತ್ತಿರುವ ಅತೃಪ್ತಿ-ಅಸಂತೋಷ ಮೊದಲಾದುವುಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಹಿಡಿಯಬೇಕಾಗಿದೆ. ದೇಶವನ್ನು ಸ್ವಾಭಾವಿಕವಾಗಿ ಕಾಡುವ ಸಮಸ್ಯೆಗಳನ್ನು ದೂರಮಾಡುವುದೇ ದುಸ್ತರವಿರುವಾಗ, ಕೃತಕ ಸಮಸ್ಯೆಗಳ ಬಗ್ಗೆ ತಲೆ ಕೊಡುವುದಾದರೂ ಏಕೆ? ರಾಜ್ಯಗಳಲ್ಲಿರುವ ರಾಜಕೀಯ ಗುಂಪುಗಾರಿಕೆ ಸ್ವಾರ್ಥಲೋಲುಪತೆಗಳನ್ನು ನಿವಾರಿಸುವುದು ಸಾಧ್ಯವಿಲ್ಲವೆ? ರಾಜ್ಯದ ವರಿಷ್ಠರೆಂದು ರಾಜ್ಯಪಾಲರು ತಮ್ಮ ಕೈಕಟ್ಟಿಕೊಂಡು ಕಲ್ಲ ದೇವರಂತೆ ಸುಮ್ಮನಿರಬೇಕೇ? ಯೋಗ್ಯರಾದವರ ಆತ್ಮ ಇದಕ್ಕೆ ಒಪ್ಪಲಾರದು. ರಾಜ್ಯಪಾಲ–ಮಂತ್ರಿಮಂಡಲಗಳ ನಡುವೆ ಸಮರಸವೆಂಬುದೇ ಇಂದು ದೂರವಾದಂತಿದೆ. ಒರಿಸ್ಸಾದತ್ತ ವಿದ್ಯಾರ್ಥಿಗಳ ಗೊಂದಲವೆದ್ದು ಆಡಳಿತೆಯ ಮೇಲೆ ತೀವ್ರ ಪರಿಣಾಮ ಬಿದ್ದಾಗಲೂ ರಾಜ್ಯಪಾಲರು ತೆಪ್ಪಗೆ ಕುಳಿತಿರಬೇಕಾಯಿತು. ಇಂತಹ ಒಂದಲ್ಲ ನೂರು ಕಾರಣಗಳಿಂದಾಗಿ ರಾಜ್ಯಪಾಲರು ತಮ್ಮ ಅಸಹಾಯಕತೆಯನ್ನು ಈ ಬಾರಿ ಪ್ರದರ್ಶಿಸಿ ಸೂಕ್ತ ಉಪಕಾರ ಮಾಡಿದ್ದಾರೆ

ರಾಜ್ಯಗಳ ಪರಿಷ್ಕೃತ ಅಧಿಕಾರ ವ್ಯಾಪ್ತಿಯ ಬಗ್ಗೆ ಆವಶ್ಯಕ ಪರಿಶೀಲನೆ ನಡೆಸುವ ವಿಶ್ವಾಸವನ್ನು ಪ್ರಧಾನಿ ಶಾಸ್ತ್ರಿ ನೀಡಿದ್ದಾರೆ. ಈ ಪರಿಶೀಲನಾನಂತರವಾದರೂ ಈ ವರಿಷ್ಠ ಪದವಿಯು ಕೇವಲ ಉತ್ಸವ ಮೂರ್ತಿಯಂತಿರದೆ, ರಾಜ್ಯದ ಆಡಳಿತೆಯಲ್ಲಿ ಮಹತ್ವದ ಪಾತ್ರ ವಹಿಸುವುದಕ್ಕೆ ಅನುಕೂಲವಾಗಲಿ; ಜನಸ್ಮೂಲಕ [illegible] ಆಡಳಿತೆಯ ಕುಸಿದು ಕೆಟ್ಟ ಯಂತ್ರಕ್ಕೆ ಹೊಸ ಪ್ರಚೋದನಾ ಶಕ್ತಿಯೊದಗಲಿ, ರಾಜ್ಯಕೀಯ ದಿವಾಳಿಖೋರತನವು ತಲೆದೋರದಿರಲಿ ಎಂದು ಹಾರೈಸಬೇಕಾಗಿದೆ. ಈ ಬಾರಿಯ ರಾಜ್ಯಪಾಲರ ಸಮ್ಮೇಳನವು ಈ ದಿಸೆಯಲ್ಲೊಂದು ಮೈಲುಗಲ್ಲಾಗುವುದೆಂದು ನಂಬುತ್ತೇವೆ.

ವಚನ ಸುಧೆ

ಇದಮಹಮನೃತಾತ್ಸತ್ಯಮುಪೈಮಿ
ತನ್ಮನುಷ್ಯೇಭ್ಯೋ ದೇವಾನುಪೈತಿ॥
(ಶತಪಥ ಬ್ರಾಹ್ಮಣ.೧.೧.೧.೪)

O ಈ ನಾನು ಅಸತ್ಯವನ್ನು ಬಿಟ್ಟು ಸತ್ಯವನ್ನು ಮುಟ್ಟುತ್ತೇನೆ; ಅದು ಮನುಷ್ಯರಿಂದ ದೇವರ ಸಮೀಪಕ್ಕೆ ಒಯ್ಯುತ್ತದೆ.

OO ಅಸತ್ಯವನ್ನು ತ್ಯಜಿಸಿ ಸತ್ಯವ್ರತವನ್ನು ಸ್ವೀಕರಿಸುವುದು ಸಮುಚಿತ. ಇದರಿಂದ ಮಾನವನು ಸಾಧಾರಣ ಮನುಷ್ಯರಿಂದ ಶ್ರೇಷ್ಠನಾಗುತ್ತಾನೆ; ದೇವತ್ವವನ್ನು ಪಡೆಯುತ್ತಾನೆ. ಇದೇ ಸತ್ಯದ ಮಹತ್ತಿಕೆ. ಆದುದರಿಂದ ಯಾರೂ ಸತ್ಯ ಪಥದಿಂದ ದೂರಹೋಗಬಾರದು.

ದೃಢ ನಿಲುವು

ರಶ್ಯದ ಕ್ರೆಮ್ಲಿನ್‌ನಲ್ಲಾದ ಮಹಾ ಪರಿವರ್ತನೆಯ ಬಗ್ಗೆ ಅನೇಕ ಊಹಾಪೋಹೆಗಳು ನಡೆದಿದ್ದುವು. ಭಾರತದ ಮಟ್ಟಿಗೆ ಅದು ತನ್ನ ಹಿಂದಿನ ನೀತಿಯನ್ನೇ ಮುಂದುವರಿಸಿಕೊಂಡು ಬರುವುದೆಂಬ ಆಶ್ವಾಸನವೂ ನಮಗೆ ದೊರೆತಿತ್ತು. ಈಗೀಗ ಇದು ತಿಳಿಯಾಗಿ ಗೋಚರಕ್ಕೆ ಬರುತ್ತಿದೆ. ಕಾಶ್ಮೀರದ ಸಂಬಂಧದಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ಡೊಂಬರಾಟವಾಡುತ್ತಿದ್ದಾಗಲೂ ಭಾರತದ ದೃಢನೀತಿಗೆ ಮುಕ್ತಕಂಠದ ಬೆಂಬಲನೀಡಿದುದು, ಆವಶ್ಯವೆನಿಸಿದಾಗ 'ವಿಟೋ' ಉಪಯೋಗಿಸಿದುದು ಸೋವಿಯತ್ತು ಎಂಬುದನ್ನು ಭಾರತೀಯರೆಂದೂ ಮರೆಯಲಾರರು. ರಶ್ಯವು ಈಗಲೂ ಅದೇ ನೀತಿಯನ್ನು ಹೊಂದಿದೆಯೆಂಬ ಒಗ್ಗ ಸ್ಪಷ್ಟ ತಿಳುವಳಿಕೆಯೀಗ ದೊರೆತಿದೆ. ಇದಕ್ಕಾಗಿ ಸೋವಿಯತ್‌ನ ಹೊಸ ಪ್ರಧಾನಿಯವರನ್ನು ಭಾರತವು ಅಭಿನಂದಿಸುತ್ತದೆ; ಭಾರತ-ಸೋವಿಯತ್‌ಗಳ ನಡುವಣ ಮೈತ್ರಿ ಚಿರವಾಗಲಿಯೆಂದು ಆಶಿಸುತ್ತದೆ.

—"ಎರಡು ತೆನೆ ಹೆಚ್ಚು ಕಾಳನ್ನಾಗಲೀ, ಎರಡು ಕಡ್ಡಿ ಹೆಚ್ಚು ಹುಲ್ಲನ್ನಾಗಲೀ ಬೆಳೆಸುವವನು, ನೂರಾರು ರಾಜಕಾರಣಿಗಳಿಗಿಂತ ಶ್ರೇಷ್ಠ."

—"ಅನ್ಯಾಯದ ಯುದ್ಧಕ್ಕಿಂತ ಅನ್ಯಾಯದ ಶಾಂತಿಯೇ ಮೇಲು.?

ನರಸಣ್ಣನ ಸರಸ



"ಏನೋ, ಏನೋ ಅದು ಗೊಣಗುತ್ತಾ ಇದ್ದೀಯ?"

'ಏನಿಲ್ಲಾ ಸಾರ್, ಗೋವೆಯನ್ನು ಮಹಾರಾಷ್ಟ್ರಕ್ಕೆ ಗಂಟು ಹಾಕೋ ರಕ್ಷಣಾ ಮಂತ್ರಿ ಚವಾಣರ ರಕ್ಷಣೆಗೆ ಈಗ ಯಾರು ಬಂದ್ರಾರೇಂತ ನೋಡಿಯೇ ಬಿಡ್ಬೇಕು ಸಾರ್....'

ಗೇಹರಾಜ್ಯದಲ್ಲಿ

ಮಾತಿನ ಸರಪಳಿ ಯಾವಾಗ ಕಡಿಯುತ್ತೆ ?

"ಬಂದು ಬಿಟ್ರ್ಯಾ? ಯಾವಾಗ ಬರ್ತೀರಂತ ನಿಮ್ಮನ್ನೇ ಕಾದು ಕುಳತಿದ್ದೆ ..."

"ಅಲ್ಲಾ, ನಿನ್ಗೆ ಆಗಿರೋದಾದ್ರೂ ಏನೂಂತ?"

"ಆಗಿರೋದು ನನ್ಗಲ್ಲ, ನಿಮ್ಗೆ...."

"ಎಲಾ ಇವ್ಳಾ, ಏನು ಆಡ್ತಾ ಇದ್ದೀಯ ?'

"ಅಂದೆನಲ್ಲಾ ಆವಾಗ್ಲೇ .. ನಿಮ್ಮನ್ನೇ ಕಾದು ಕೊಂಡಿದ್ದೇಂತ .."

"ಅಂದ್ರೆ, ಅದರ ಅರ್ಥ ...!"

"ಓ ದೇವ್ರೆ, ನಿಮ್ಮ ತಲೆ ಕೆಟ್ಟಿರೋದ? ನಿಮ್ಮೊಡನೆ ಒಂದು ಮಾತನ್ನ ಕೇಳಬೇಕೂಂತ ಎಷ್ಟು ಗಂಟೆ ಬಡಿದಾವತ್ತಿನಿಂದ ಕಾಯ್ತಾ ಇದ್ದೇನೆ. ಅಷ್ಟೆ. ಇನ್ನು ಏನೇನೋ ತಿಳ್ಕೊಂಡು ಅನರ್ಥ ಮಾಡಬೇಡಿ ಮತ್ತೆ ?"

"ಮತ್ತೋ ಹಾಗೇಂತ ಮೊದ್ಲೇ ಹೇಳ್ತಿದ್ರೆ ಇಷ್ಟೆಲ್ಲಾ ಮಾತು— ವಿಚಾರ ಯಾವುದರ ಅಗತ್ಯವೂ ಇಲ್ಲವಾಗಿತ್ತು'

"ನಿಮ್ಮ ತಲೆ ಅಷ್ಟು ದೂರ ಓಡಿ ಹೋಗತ್ತೇಂತ ನನ್ಗೇನು ಕನಸು ಬೀಳ್ಲಿಲ್ಲ ನೋಡಿ"

'ಕನಸು ಬೀಳೋ ಮಾತು ಹಾಗಿರ್ಲಿ. ಅಲ್ಲಾ, ಮಾತಾಡುವಾಗಲಾದ್ರೂ ತುಸು ಎಚ್ಚರವಾಗಿರೋ ಅಗತ್ಯವಿದೇಂತ ಎಷ್ಟು ಬಾರಿ ಹೇಳೋದು?'

'ನೀವು ನಿತ್ಯ ಬರೋವಾಗ ಒಂಬತ್ತು ಹತ್ತು ಆಗ್ಲಿ. ಮತ್ತೆ ಬೆಳಗ್ಗೆ ನಾವೆಲ್ಲ ಏಳ್ಸ ಆಗ ಸರಿಯಾಗಿ ಎಚ್ಚರಾಗತ್ತೆ"

"ಅಯ್ಯೋ, ಇವ್ಳೆ, ಅಲ್ಲ, ಅದ್ಕೂ ಇದ್ಕೂ ಸಂಬಂಧವಾದ್ರೂ ಏನೂಂತ?"

"ಸಂಬಂಧ.. ಅದೇ ನೀವೇ ಹೇಳಿದ್ದಿರಲ್ಲ ಬಾರಿ ರಾಮಾಯಣಾಂತ .."

'ಸುಮ್ನಾಗಿಲ್ಲ ಕಣೇ ನೀನು ನಿನ್ಗೆ ಏನು ಕೊಟ್ಟಿದ್ರೂ ಬ್ರಹ್ಮ ಜ್ಞಾಪಕ ಶಕ್ತಿನಾದ್ರೂ ಸರಿಯಾಗಿ ಇತ್ತಿದ್ದಾನೆ .'

"ಹೌದು ಹೌದು, ಅತ ಕೊಟ್ಟಿರೋದೆಲ್ಲ ನಿಮ್ಗೆ ಮಾತ್ರ, ಪಾಪ..."

'ಅಬ್ಬಾ, ನಿನ್ನ ಮುಖ ಗಂಟು ಬೀಳೋವಾಗ ಅದರ ಸೌಂದರ್ಯ ಮತ್ತೂ ಹೆಚ್ಚುತ್ತೆ ..'

'ಅದನ್ನ ನೋಡೋಕೇಂತ್ಲೇ ನನ್ನ ರೇಗಿಸೋದು ನೀವು ಅಲ್ವೆ?'

'ಅಲ್ವೆ, ನಿನ್ನ ರೇಗಿಸೋದ್ರಿಂದ ನನಗಾಗೋ ಲಾಭವಾದ್ರೂ ಏನೂಂತ?'

"ಅದು ನಿಮ್ಗೇ ಗೊತ್ತು. ಅಂದ್ರಲ್ಲ ಈಗ, ಏನು ಲಾಭ.ಂತ .."

'ಅಲ್ಲ ಕಣೇ, ಹೀಗೇ ತಮಾಷೆಗೆಂದ್ರೆ ನೀನು ಹೀಗೆಲ್ಲಾ ಮಾಡಿದ್ರೆ ಹೇಗೇಂತ..."

"ಹೌದು, ನೀವು ಏನಂದ್ರೂ ಅದು ತಮಾಷೇಂತ ತಿಳ್ಸಿ ಬಿಡ್ತಿರಾ ನಾವಂದ್ರೆ ಮಾತ್ರ ..."

'ಹಳ್ಳಾ ..ಅಂತೂ ಕೋಪ ನೆತ್ತಿಗೇರ್ತಾ ಇದೇಂತ ತೋರುತ್ತೆ"

'ಎಂದ್ರೆ ಇಳ್ಸೋ ವಿಧಾನ ನಿಮ್ಗೂ ಗೊತ್ತಿಲ್ವೆ?"

"ಹ್ಹ ಹ್ಹ ಹ್ಹ ಸದ್ಯ ಅಷ್ಟಾದ್ರೂ ದಯೆಯಿದೆಯಲ್ಲಾ ಬಡವನ ಮೇಲೆ .."

"ಥೂ....ಏನು ಮಾತಿದು? ನೋಡಿ, ಇನ್ನು ಮುಂದೆ ಇಂತಹ ಮಾತಾಡಿದ್ರೆ .."

"ಏನು ಮಾಡ್ತೀಯ?"

"ಏನೂಂದ್ರೆ ... ನೀವು ಇನ್ನೊಮ್ಮೆ ಆಡಿ, ಮತ್ತೆ ನೋಡಿ .."

"ಹ್ಞೂ ಸರಿಯೆನ್ನು ನಿನ್ನ ಮಾತು ಕೇಳೋವಾಗ. ಒಂದು ಕತೆ ನೆನಪಾಗುತ್ತೆ"

'ಹೌದಪ್ಪ, ನನ್ನ ಮಾತೂಂತಂದ್ರೆ ನಿಮಗೆ ಕಥೆ ಕಾದಂಬರಿಯ ಮಾತಿನ್ಹಾಗೆ ತೋರುತ್ತೆ ..."

"ಹಾಗಲ್ವೆ ..."

"ಮತ್ತೆ ಹೇಗೆ?"

"ನೋಡು, ಒಬ್ಬಾತ ಬಡವ ಮನೆ ಮುಂದೆ ನಿಂತು ಗುಡುಗಿದನಂತೆ .."

"ಏನೂಂತ?"

"ಹೇಳ್ತೀನೆ ಕೇಳು ಮಾರಾಯ್ತಿ .."

"ಕತೆ ಹೇಳೋವಾಗ ನಾಲಿಗೆ ಕಡೆ ಮರಿಬಾರದೂಂತ ಅಂತಾರಲ್ಲ ..."

"ಆಯ್ತಪ್ಪ, ಕೇಳು ಮುಂಗತೆಯ .."

"ದೇವ್ರು ಕೊಟ್ಟ ಶ್ರವಣೇಂದ್ರಿಯ ಸರಿಯಾಗೇ ಇದೆ...."

"ಹೊಟ್ಟೆ ಹಸಿಯುತ್ತೆ...."

"ನಿಮ್ಮ ಕತೆ ಹೇಳಿ ನೋಡೋಣ. ಆ ಮೇಲೆ ಹೊಟ್ಟೆ ಮಾತು'

'ಅಯ್ಯೋ ನೀನೊಬ್ಳು - ನಾನು ಕತೆಯ ಮಾತನ್ನೇ ಅಂದದ್ದು."

"ಓ, ಹಾಗೋ, ಸರಿ ಸರಿ. ಹ್ಞೂಂ, ಮುಂದ್ವರ್ಸಿ.'

"ಹೌದು, ಹಸಿವಾಗುತ್ತೆ, ಅನ್ನ ಹಾಕಿ. ಹಾಕ್ತಿದ್ರೆ ನೆರೆಯೂರಲ್ಲಿ ಮಾಡಿದ್ಹಾಗೇ ಮಾಡ್ಬಿಟ್ಟೇನು ..'

'ಬಹುಶಃ ಭಾರಿ ಮಂತ್ರವಾದಿಯಿರ್ಬೇಕು.'

'ಮಂತ್ರವಾದಿಯಲ್ಲದಿದ್ರೂ ತಂತ್ರವಾದಿಯಂತೂ ಖಂಡಿತಕ್ಕೂ. ಪಾಪ, ಮನೆಯಾಕೆ ಹೆದರಿ ಅನ್ನ ಹಾಕಿದ್ಳು ಮತ್ತೆ ಕೇಳಿದ್ಳು, ನೆರೆಯೂರಲ್ಲಿ ಏನು ಮಾಡಿದಿರೀಂತ.'

'ಹ್ಞೂ ..ಅದಕ್ಕೇನಂದ?"

'ಮಾಡೋದೇನು? ಈ ಊರಿಗೆ ಬಂದೆ ಅಂದ.'

"ಪರ್ವಾಗಿಲ್ರಿ ಈ ಕತೆಗೂ ನನಗೂ ಏನು ಸಂಬಂಧಾಂತ...?"

"ನೀನೇ ಅಂದೆಯಲ್ಲಾ...."

"ಅಬ್ಬಾ ನೀನೇ ..ಮಾತಿನಲ್ಲಿ ನಿಮ್ಮನ್ನ ಮೀರಿಸೋದು ಸಾಧ್ಯವಿಲ್ಲ ನೋಡಿ...."

"ಪ್ರಶಸ್ತಿ ಪತ್ರಕ್ಕಾಗಿ ಅಭಿನಂದನೆಗಳು, ಸದ್ಯ, ನೀನೇನೋ ಕೇಳ್ಬೇಕೂಂತ ಕಾದಿದ್ದೆ ಅಂದೆಯಲ್ಲಾ...."

"ಹೌದೂಂದ್ರೆ.. ನೋಡಿ, ನೀವು ಯಾಕೆ ಹೀಗೆಲ್ಲಾ ಮಾಡ್ತೀರೀಂತ?"

'ಅಯ್ಯೋ, ನಾನೇನು ಮಾಡಿದೇಂತ?"

"ನೀವಲ್ರಿ, ನಿಮ್ಮ ಟೋಪಿಯವ್ರು ..."

"ಹಾಗನ್ನು ಏನಾಯ್ತೀಗ?"

"ಆಗೋದೇನು, ನೋಡ್ರಿ—ಟೋಪಿ ಟೋಪಿಯವ್ರೆ ಬಡಿದಾಡೋಕೆ ತೊಡಗಿದ್ರೆ ..?"

"ನಿನ್ನ ಒಗಟನ್ನ ಬಿಡಿಸಿ ಹೇಳಿದ್ರೆ..."

"ಅದೇ ಅಂದೆನಲ್ಲಾ, ನೀವು ಯಾಕೆ ಹೊಡೆದಾಡ್ತೀರೀಂತ?"

"ಏನೇ ಅದ? ಯಾರು ಹೊಡೆದಾಡಿದ್ರು? ಯಾವ ವಿಷಯಕ್ಕೆ? ಎಲ್ಲಿ?"

"ಅಂದ್ರೆ, ನಿಮ್ಗೇನೂ ಗೊತ್ತಿಲ್ಲಾನ್ನಿ ಹಾಗಾದ್ರೆ...."

"ಏನೂಂತ್ಲೇ ಹೇಳ್ದಿದ್ರೆ ಯಾವುದೂಂತ ತಿಳಿಯೋದಾದ್ರೂ ಹೇಗೇಂತೇ"

"ಅದೇ ನೋಡಿ ..."

"ಯಾವುದು?"

"ಅಚೆ ಈಚೆ ಕಣ್ಣಾಡ್ಸಿ ಬಿಟ್ರೆ ಒರೋದೇನಿಲ್ಲ. ನೋಡ್ರಿ, ಗೋವೆ ವಿಷಯದಲ್ಲಿ...."

"ಹಾಗೆ ಬಾ ಮತ್ತೆ ಗೋವೇ ಸಂಬಂಧ ಕರ್ನಾಟಕ — ಮಹಾರಾಷ್ಟ್ರದ ಕಾಂಗ್ರೆಸಿಗರು ಯಾಕೆ ಹಾಗೆ ಮಾಡ್ತಾರೇಂತ ತಾನೇ ನೀನನ್ನೋದು!"

"ಹ್ಞೂಂ ... ಅದೇ ಹೇಳಿ ನೋಡೋಣ."

"ಒಳ್ಳೆ ಯಕ್ಷನ ಹಾಗೆ ಪ್ರಶ್ನೆ ಕೇಳ್ತೀಯ?"

"ಯಾಕೆ ಹಾಗಂತೀರಿ?"

"ಅಲ್ಲಾ, ಹೊಡೆದಾಡೋದು ಅವ್ರು, ನೀನು ಪ್ರಶ್ನೆಗಳನ್ನ ನನಗೆ ಕೇಳಿದ್ರೆ...."

'ಅವ್ರೂ ಟೋಪಿಯವ್ರು ಅಲ್ರಿ?'

'ಏನಾಯ್ತು ಬಿಡು. ಏನೋ, ರಾಜಕೀಯ ಅದ್ರ ಸುದ್ದಿ ನಮಗ್ಯಾಕೇಂತ?'

"ಅಲ್ಲ ಐಕ್ಯಗಾನವನ್ನ ಪ್ರಜೆಗಳ ಮುಂದೆ ಬಾರಿಸೋವ್ರೇ ಈ ರೀತಿಯಾಗಿ ಮಾಡಿದ್ರೆ ಹೇಗೇಂತ?"

"ಅದೆಲ್ಲಾ ಗೂಢಾತ್ಗೂಢ ರಾಜಕಾರಣ. ಹಾದಿಯಲ್ಲಿ ಹೋಗೋ ಮಾರಿಯನ್ನ ನಾವು ಯಾಕೆ ಒಳಗೆ ಬಂದು ಹೋಗೆನ್ನಬೇಕು'?

"ಅಲ್ಲ, ಅದೆಲ್ಲಾ ಇರ್ಲಿ ನಿಮಗದೆಲ್ಲಾ ಗೊತ್ತು. ಗೋವೆ ಮಹಾರಾಷ್ಟ್ರಕ್ಕೆ ಸೇರ್ಲಿ ಕರ್ನಾಟಕ್ಕ ಬರ್ಲಿ, ನಮಗೇನವರಿಂದ ಅನ್ನೋ ಜಾತಿಯವ್ರು ನೀವು"

'ತಪ್ಪಿದಿ ಕಣೇ ನೀನು ತಪ್ಪಿದೆ. ಯಾವ ರಾಜ್ಯಕ್ಕೆ ಹೋದರೂ ಭಾರತದಲ್ಲೇ ಉಳಿಯುತ್ತದೆ. ಎನ್ನೋನ ನಾನು"

"ಅದ್ರಲ್ಲೇನು? ಎರಡೂ ಒಂದೇನ್ನಿ. ಆದ್ರೆ, ನಿಮ್ಮವ್ರು ಹೀಗೆಲ್ಲಾ ಅನ್ನೋದು, ಇನ್ನೂ ಹೇಳೋದಾದ್ರೆ"

"ಹ್ಞೂಂ ಹೇಳಿಬಿಡು, ಮತ್ತೆ"

"ಹೇಳೋದೇನ? ಜನರ ಮೇಲೂ ಸೂಕ್ತ ಕ್ರಮ ಕೈಗೊಳ್ಳಬೇಕೂಂತ ಹೇಳ್ತಿರಲ್ಲಾ'

"ನೋಡು, ನಿನ್ಗೊಂದು ಮಾತು ಹೇಳ್ತೀನಿ. ಯಾರು ಏನು ಅಂದ್ರೂ, ಆಗೋದು ಏನೂ ಇಲ್ಲ ನೋಡು, ನಂದಾ ಚವಾನರ ನಡುವೆ ಈ ಸಂಬಂಧ ಮಾತುಕತೆ ನಡೆಯುತ್ತಂತೆ"

"ಇಲ್ಲಿ ಅದ. ನಿಮ್ಮವ್ರ ಈ ಜಗಳ ಇದೆಯಲ್ಲ, ಒಂದು ತುಂಡು ಮಾಂಸದ ಆಸೆಗೆ ನಾಯಿಗಳೆರಡು ಹೋರಾಡಿದಂತೆ.."

"... .. ...'

"ಯಾರಲ್ಲಿ ಬಲವಿದೆಯೋ ಅವ್ರದಾಗುತ್ತೆ ಗೋವೆ."

"ಅದ್ರೆ ಒಂದು ಮಾತು ನೋಡು. ಮಾಂಸಕ್ಕೆ ಬುದ್ಧಿಯಿಲ್ಲ, ವಿವೇಚನಾ ಶಕ್ತಿಯಿಲ್ಲ ಸ್ವಾತಂತ್ರ್ಯವೂ ಇಲ್ಲ. ಪರಂತು, ಗೋವೆಗೆ ಅದೆಲ್ಲಾ ಇದೆ ನೋಡು. ಪೋರ್ಚುಗೀಸರ ವಿರುದ್ಧ ಎದ್ದು ನಿಂತಂತೆಯೇ ತಮ್ಮ ಹಿತ ಸಂಬಂಧಗಳ ವಿಚಾರದಲ್ಲಿಯೂ ಅದು ಎಚ್ಚರಿಂದ್ಲೇ ಇರುತ್ತೆ..."

"ಸರೀನ್ನಿ. ಸ್ಫೂರ್ತಿಗೊಂದು ಸಮಾಧಾನ ಅದು"

"ಸರಿಯಲ್ಲಾ.. .ನೋಡು ನಾನೂ ಕಾಯ್ತಾ ಇದ್ದೆ ನಿನ್ನ ಹಾಗೇನೇ ..

"ಏನಪ್ಪಾ ಅದು?"

"ನಿನ್ನ ಮಾತಿನ ಸರಪಳಿ ಯಾವಾಗ ಕಡಿಯುತ್ತೇಂತ ..."

"ಪಾಪ, ಗೊತ್ತಾಯ್ತು ಬಿಡಿ, ಬನ್ನಿ ನಿಮ್ಮೊಡನೆ ಮಾತಿಗೆ ಕೂತ್ರೆ ಹೊತ್ತೂ ಗೊತ್ತಾಗೊಂದೂ ಇರೋದಿಲ್ಲ. ಅಚೆ ತೆಂಗಿನ ಕಟ್ಟೆಯಲ್ಲಿ ಬಾಳೆಯಲ್ಲಿ ನೀರಿದೆ. ಬೇಗ ಕೈಕಾಲು ತೊಳೆದುಕೊಂಡು ಬನ್ನಿ.'

'ಆಜ್ಞೆಯನ್ನು ಶಿರಸಾ ವಹಿಸುತ್ತಾನೆ ಈತ."

"ಸಾಕು ಬಿಡೀಂದ್ರೆ...."

"ಬಿಡೋದೇನು? ಒಂದ ನೋಡು ಬೆನ್ನ ಹಿಂದೆ."

—ಗೋರಾ.

ಸುಬ್ರಹ್ಮಣ್ಯ
ಚಂಪಾಷಷ್ಠಿ ಮಹಾರಥೋತ್ಸವ

ದಕ್ಷಿಣ ಕನ್ನಡ ಜಿಲ್ಲಾ ಮಹತೋಭಾರ ಕುಕ್ಕೇ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ತಾ. 30—11—64ರಿಂದ ಉತ್ಸವವು ಪ್ರಾರಂಭವಾಗಿ ತಾ 3-12—64ರಲ್ಲು ಲಕ್ಷ ದೀಪೋತ್ಸವ, ತಾ. 8—12—64ರಲ್ಲು ಹೂವಿನ ತೇರು ಉತ್ಸವ, ತಾ. 9-12-64ರಲ್ಲು ಪಂಚಮಿ ರಥೋತ್ಸವ, ತಾ. 10—12—64ರಲ್ಲು ಚಂಪಾ ಷಷ್ಠಿ ಮಹಾರಥೋತ್ಸವ, ತಾ. 11-12-64ರಲ್ಲು ಅವಭೃತೋತ್ಸವವೇ ಮೊದಲಾದ ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗಲ್ಪಡುತ್ತವೆ.

ಪಿ. ಸೂ ಕಿರುಷಷ್ಠಿ ಉತ್ಸವವು ತಾ. 9—1—1965ಕ್ಕೆ ಜರಗುವುದು.

READ & ADVERTISE IN NAVAYUGA WEEKLY

ಲಘು ಪ್ರಬಂಧ

ಅವನು ಜಿಪುಣನೆ?

ಬರೆದವರು: ಶ್ರೀ ಕು. ಗೋ.

ತುಂಬಿದ ಸಭೆಯಲ್ಲಿ ಎತ್ತಿದ ಬಾಯಿಗೆ ಭರಮಣ್ಣ ತೋಮನನ್ನು ಸಂಬೋಧಿಸಿದ್ದು 'ಜಿಪುಣ' ಎಂದು. ಕೇಳುವ ಕಿವಿ ಇದೆಯೆಂದು ಹೇಳುವ ನಾಲಿಗೆಯೂ ಹಾಗೆಯೇ ಒದರಿ ಬಿಡುವುದೇ! ಭರಮಣ್ಣನಿಗಿರುವ ಧೈರ್ಯವಾದರೂ ಎಷ್ಟು? ಏನೋ ಪಾಪ, ಒಬ್ಬನೇ ಇದ್ದಾಗ ಕೋಣೆಯೊಳಗೆ ಕೂರಿಸಿ ಕಿವಿ ಹಿಡಿದು ಮೆಲ್ಲನೆ ಹೇಳಬಹುದಿತ್ತು—ನೀನು ಶುದ್ಧ ಜಿಪುಣ ಕಣೋ ತೋಮು- ಎಂದು. ಆಗಲಾದರೂ ತೋಮು ಸಾಧಾರಣ ಮಟ್ಟಿಗೆ ಸಹಿಸಿಕೊಳ್ಳುತಿದ್ದ. ಆದರೆ ತುಂಬಿದ ಸಭೆಯಲ್ಲಿ ಹಾಗೆಂದು ಹೇಳಿದರೆ ಮಾನವನಾಗದೆ ಇದ್ದವನು ಕೇಳಿಯೂ ಸಹಿಸಿಕೊಂಡಾನೆಯೇ! ಅಲ್ಲ ಸಹಿಸಿಕೊಳ್ಳಲಾದರೂ ಸಾಧ್ಯವೇ! ತೋಮನೆಂದರೆ ಏನು ಕೈಯಲ್ಲಾಗದ ರಾಜಕಾರಣಿ ಎಂದು ತಿಳಿದು ಬಿಟ್ಟನೇ ಆ ಭಂಡ ಭರಮಣ್ಣ. ಅಲ್ಲ, ಏನೂ ಮಾಡಲಾರದ ಷಂಡನೆಂದು ತಿಳಿದನೇ! ತೋಮನ ತೋಳಿನಲ್ಲಿ ಆ ಘಳಿಗೆಯಲ್ಲಿ ಶಕ್ತಿ ಇರುತಿದ್ದರೆ, ಓಡುವ ಮಿದುಳಿದಿದ್ದರೆ ಆ ಕ್ಷಣವೇ ಭರಮಣ್ಣನ ನಾಲಿಗೆಯನ್ನು ಎರಡು ಮಾಡಿ ನಾಲ್ಕು ಕಾಲಿನ ನಾಯಿಯ ಮುಂದೆ ಬಿಸಾಡುತಿದ್ದನೋ ಏನೋ! ಆದರೆ ಆ ಶಕ್ತಿ ಆ ಯುಕ್ತಿ ಎರಡೂ ಇಲ್ಲದೆಯೋ ಅಥವಾ ಇದ್ದು ಅವನ್ನು ತೋರ್ಪಡಿಸಿಕೊಳ್ಳುವ ಹೇಡಿತನಕ್ಕೆ ಹೋಗುವ ಮನಸ್ಸಿಲ್ಲದೆಯೋ ತೋಮು ಸುಮ್ಮನೇ ಇದ್ದು ಬಿಟ್ಟ. ತನಗಿದ್ದ ಅಲ್ಪ ಸ್ವಲ್ಪ ಮಾನ ಕೂಡಾ ಆ ತುಂಬಿದ ಸಭೆಯಲ್ಲಿ ಹೋಯಿತಲ್ಲಾ ಎಂದು ಆತ ಕೊರಗದಿದ್ದರೂ ಮುಖದ ಭಾವ ಮಾತ್ರ ಹಾಗೆಯೇ ಇತ್ತು. ಪುಣ್ಯ ವಶಾತ್ ಆ ಸಭೆಯಲ್ಲಿ ಮಹಿಳಾ-ಮಣಿಗಳು ಯಾರೂ ಇಲ್ಲದಿದ್ದುದು ದೊಡ್ಡ ಆಪತ್ತನ್ನು ಎದುರಿಸಿದಂತೆಯೇ ಆಗಿತ್ತು ತೋಮನಿಗೆ.

ಅದು ಹೇಗೆಯೋ ಇರಲಿ ಭರಮಣ್ಣ ಹೇಳಿದ ಮಾತು ಸ್ವಲ್ಪಮಟ್ಟಿಗೆ ಅರ್ಥಯವೇ ಆಗಿತ್ತು. ಎಲ್ಲರನ್ನೂ ಬಿಟ್ಟು ಆತ ತೋಮನನ್ನೇ ಜಿಪುಣನೆನ್ನಬೇಕೇ? ಅದು ಖಂಡಿತಾ ಕಲ್ಲುದೇವರು ಒಪ್ಪುವಂಥದಲ್ಲ, ಮೆಚ್ಚುವಂಥಾದ್ದು ಅಲ್ಲವೇ ಅಲ್ಲ. ತೋಮನೆಂದರೇನು ಜಿಪುಣತನವೆಂದರೇನು! ಒಂದಕ್ಕೊಂದು ಹೋಲಿಕೆಇದೆಯೇ, ಸಾಮ್ಯ ಇದೆಯೇ! ಗುರುತಿಯನ್ನು ಸೂಳೆ ಎನ್ನುವುದೇ? ಅನ್ಯಾಯ, ಅನ್ಯಾಯ. ಆ ಜಿಪುಣತನ ತೋಮನ ವಂಶ ಪಾರಂಪರ್ಯಕ್ಕೆ ಬಂದುದಲ್ಲ. ಅವನ ಮುತ್ತಾತ, ತಾತ ಅಪ್ಪಂದಿರಲ್ಲಿ ಸ್ವಲ್ಪವೂ ಇರದ ಜಿಪುಣತನ ಅದೇ ರಕ್ತದಿಂದ ಹುಟ್ಟಿದ ಅಥವಾ ಅದೇ ರಕ್ತವನ್ನು ಹೊತ್ತು ಅವರಿಸಿರುವ ತೋಮನಲ್ಲಾದರೂ ಹೇಗೆ ಬಂದೀತು? ಅವಕ್ಕೇನು ತೋಮನನ್ನು ಕಂಡರೆ ಹೊಟ್ಟೆಕಿಚ್ಚೇ, ಮತ್ಸರವೇ! ಜಿಪುಣತನವನ್ನು ತೋರಿಸಬೇಕಾದವರು ಧನಿಕರಲ್ಲದೆ ಬಡವರೇ! ಹೇಳುವವರು ಹೇಳಿದರೆ ಕೇಳಿದವರು ಅದನ್ನು ಹಾಗೆಂದೇ ನಂಬಿ ಬಿಡುತ್ತಾರೆಯೇ! ಅವರಿಗಾದರೂ ಯೋಚಿಸುವ ತಲೆ ಇಲ್ಲವೇ? ವಿವೇಕ, ವಿವೇಚನೆ ಒಂದೂ ಇಲ್ಲವೇ?.

ತೋಮನನ್ನು "ಜಿಪುಣ" ಎನ್ನುವದಕ್ಕಿಂತ 'ಸರಳ ಜೀವಿ' ಎಂದಿದ್ದರೆ ಎಷ್ಟು ಸಮಂಜಸವಾಗಿರುತ್ತಿತ್ತು, ಹೇಳಿದವನಿಗೂ ಕೇಳಿದವನಿಗೂ ಎಷ್ಟು ಪುಣ್ಯ ಬರುತ್ತಿತ್ತು. ಹಾಗೆಂದು ಕರೆದಿದ್ದರೆ ಭರಮಣ್ಣನ ಅಪ್ಪನ ಗಂಟಾದರೂ ಏನು ಹೋಗುತ್ತಿತ್ತೋ! ತೋಮನ ಜೀವನದ ಗುಟ್ಟರಿಯದೆ, ಅವನ ಧ್ಯೇಯ ಧೋರಣೆಗಳನ್ನರಿಯದೆ ಭರಮಣ್ಣ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವಾದರೂ ಎಲ್ಲಿದೆ? ಅವನಿಗೆ ರವರವ ನರಕ ಕಟ್ಟಿಟ್ಟ ಬುತ್ತಿಯೇ ಆಗದೇ!

ರೂಪಾಯಿಗೆ ಕಾಲಿಟ್ಟವನೇ ಕೂಗಾಡಿದ ತೋಮು—ನನ್ನನ್ನು ಯಾವ ಆಧಾರದ ಮೇಲೆ ಜಿಪುಣ ಎಂದ ಆ ಭರಮು? ಅವನೇನು ಮಹಾ ಧಾರಾಳಿಯೋ, ಧರ್ಮರಾಯನ ಅಪ್ಪನೋ, ದಾನಶೂರ ಕರ್ಣನ ಅಣ್ಣನೋ! ನನ್ನನ್ನು ಜಿಪುಣನನ್ನುತ್ತಾನಲ್ಲ ಆತ. ಆತನಿಗಿರುವ ಧೈರ್ಯವಾದರೂ ಎಷ್ಟು? ಘಟಿಂಗ..."

ಗೋಡೆ ಗಡಗಡನೆ ನಡುಗಿತು, ಮಾಡಿನ ಹಂಚು ಟಪ ಟಪ ಎಂದಿತು. ನನ್ನ ಹಲ್ಲುಗಳು ಕಟ ಕಟ ಎಂದವು... ಶಾಂತಿಯಿಂದಲೇ ಹೇಳಿದೆ— "ನೀನು ಹೆಚ್ಚಾಗಿ ಯಾವುದಕ್ಕೂ ಖರ್ಚು ಮಾಡುವುದಿಲ್ಲ ನೋಡು. ಇದನ್ನು ತಿಳಿದು ಆತ ನಿನ್ನನ್ನು 'ಜಿಪುಣ' ಎಂದಿರ ಬಹುದು. ಹೋಗಲಿ ಬಿಡು, ಎಷ್ಟಾದರೂ ಅನುಭವವಿಲ್ಲದ ಹುಡುಗ ಆತ."

"ಖರ್ಚು ಮಾಡುವುದಿಲ್ಲ ಅಂದ್ರೆ? ಇವನ ಹಾಗೆ ನಾನೇನು ಸೂಳೆಗಾರಿಗೆ ಮಾಡ ಬೇಕೇ, ಹೆಂಡ ಸರಾಯಿ ಕುಡಿಯಬೇಕೇ, ಇಸ್ಪೀಟಾಟ ಆಡಬೇಕೇ. ಅಲ್ಲ, ಇಲ್ಲ ಸಲ್ಲದ ದುಶ್ಚಟಗಳನ್ನು ಅಭ್ಯಾಸ ಮಾಡಿಕೊಂಡಿರ ಬೇಕೇ! ಇಲ್ಲದಿದ್ದರೆ ಕೈಯಲ್ಲಿರುವ ಹಣವನ್ನು ರಸ್ತೆಯಲ್ಲಿ ಚೆಲ್ಲಿಕೊಂಡು ಬರಬೇಕೇ! ಏನಂತೆ ಇವನ ಅರ್ಥ? ಅಥವಾ ಎದುರಿಗೆ ಸಿಕ್ಕಿದವರಿಗೆಲ್ಲಾ ಹೋಟೇಲಿಗೆಳೆದುಕೊಂಡು ಹೋಗಿ ಕಾಫಿಯೆಂಬ ಕಲುಗಟ್ಟಿನಲ್ಲಿ ಸ್ನಾನ ಮಾಡಿಸಬೇಕೇ? ಶುದ್ಧ ಪೋಕರಿ, ನನ್ನನ್ನು 'ಜಿಪುಣ'ನೆನ್ನುವಷ್ಟು ಮುಂದೆ ಬಂದು ಬಿಟ್ಟ. ಆವನು ಒಬ್ಬನೇ ಸಿಕ್ಕಲಿ, ಹುಟ್ಟಿಲೇ ಇಲ್ಲ ಅನ್ನಿಸಿ ಬಿಡುತ್ತೇನೆ. ನನ್ನನ್ನು ಏನೆಂದೋ ತಿಳಿದು ಬಿಟ್ಟ ಬಡಪಾಯಿ......"

ತೋಮನ ಶಬ್ದ ಭಂಡಾರದಲ್ಲಿ ಮಾತುಗಳಿಗೇನು ಕೊರತೆಯೇ? ಒಂದರ ಹಿಂದೊಂದು ಬಂದ ಪದಪುಂಜಗಳು ನನ್ನ ಕಿವಿಯನ್ನೇ ಕಿವುಡು ಮಾಡಿದುವು. ತೋಮನ ಮಾತಿನ ಧಾರಾಳತನವನ್ನು ನೋಡಿದವರಿಗೆ ಅವನು ಖಂಡಿತಾ ಜಿಪುಣನಲ್ಲ ಎಂಬುದು ಮನದಟ್ಟಾಗದೆ ಇರದು. ಪುನಃ ಅವನ ಬಾಯಿಗೆ ಕೋಲು ಹಾಕಿ ವಿಚಾರವನ್ನು ಕೆದಕಿ ಅವನ ಕೋಪವನ್ನು ಮತ್ತೂ ಹೆಚ್ಚಿಸಿ ತಮಾಷೆ ನೋಡುವ ಆಸೆಯೇನಿರಲಿಲ್ಲ ನನಗೆ. "ಹೋಗಲಿ ಬಿಡು, ಅದನ್ನೆಲ್ಲ ಮರೆತು ಅವನನ್ನು ಮನ್ನಿಸು. ಉಳಿದ ವಿಚಾರವನ್ನು ನಾಳೆ ನೋಡಿಕೊಂಡರಾಯಿತು" ಎಂದೆ ನಾನು. ತೋಮು ನಂತರ ಏನು ಹೇಳಿದನೋ ನನಗೆ ತಿಳಿಯಲಿಲ್ಲ.

ತೋಮನ ಬಗ್ಗೆ ನಿಜವಾಗಿಯೂ ಏನನ್ನಾದರೂ ಹೇಳಬೇಕಾದರೆ ಹಿಂದೆ ಮುಂದೆ ನೋಡಬೇಕಾಗುತ್ತದೆ. ಆತ ಯಾವುದಕ್ಕಾಗಿ ಜಿಪುಣತನವನ್ನು ತೋರುತ್ತಾನೆ, ಅವನ ಬಾಳಿನ ಗುಟ್ಟೇನು ಎಂಬುದನ್ನು ಸುಲಭವಾಗಿ ಹೇಳಲು ಸಾಧ್ಯವಿಲ್ಲ. ಅಂತೂ ಅವನು ಖರ್ಚು ಮಾಡುವುದಿಲ್ಲ. ಅದೇನೋ ದಿಟ. ಖರ್ಚಾದರೂ ಏತಕ್ಕೆ ಮಾಡಬೇಕು? ಅವನಿಗೆ ಅಂಥ ಖರ್ಚು ಇರುವುದಾದರೂ ಏನು? ತಂದೆ ತಾಯಿಗಳನ್ನು ಸಾಕಬೇಕೆ, ಹೆಂಡತಿ ಮಕ್ಕಳನ್ನು ನೋಡಿಕೊಳ್ಳಬೇಕೇ, ಸ್ನೇಹಿತರಿಗೆ ಸಹಾಯ ಮಾಡಬೇಕೇ. ಧಾರ್ಮಿಕ ಸಂಸ್ಥೆಗಳನ್ನು ಉದ್ಧಾರ ಮಾಡಬೇಕೇ, ಅಲ್ಲ ತನ್ನ ಉದ್ಧಾರವನ್ನೇ ಮಾಡಿಕೊಳ್ಳಬೇಕೆ! ಇಲ್ಲ, ಇವು ಯಾವುದರ ಯೋಚನೆಯೂ ಅವನಿಗಿಲ್ಲ. ಹುಟ್ಟುವಾಗ ಒಬ್ಬನೇ ಹುಟ್ಟಿದ, ಇರುವಾಗಲೂ ಒಬ್ಬನೇ ಇದ್ದಾನೆ, ಇನ್ನು ಸಾಯುವಾಗಲೂ ಒಬ್ಬನೇ ಸಾಯುತ್ತಾನೆ. ಖರ್ಚಿನ ಬಾಬುಗಳೇ ಇಲ್ಲದಿರುವಾಗ ಅವನು ಖರ್ಚಾದರೂ ಹೇಗೆ ಮಾಡಲಾಗುತ್ತದೆ? ಇದೇ ಕಾರಣಕ್ಕಾಗಿ ಅವನನ್ನು 'ಜಿಪುಣ' ಎಂಬ ಮೂರಕ್ಷರದ ಪದದಿಂದ ಕರೆದು ಅವನನ್ನು ಮೂರು ಕಾಸಿನವನಾಗಿ ಮಾಡುವುದೇ!

ಇತರರಿಗಾಗಿ ಖರ್ಚು ಮಾಡುವುದಿರಲಿ ತನಗಾಗಿ ಕೂಡಾ ಆತ ಹೆಚ್ಚು ಖರ್ಚು ಮಾಡಬೇಕಾಗಿಲ್ಲ. ಸರಳತೆಗೇ ಹೆಚ್ಚಿನ ಪ್ರಾಧಾನ್ಯತೆ ಆವನಲ್ಲಿ. ಆವನಿಗೆ ಮಲಗಲು ಮಂಚ ಬೇಕಾಗಿಲ್ಲ. ಹಾಸಿಗೆ ಬೇಕಾಗಿಲ್ಲ. ಹೊದೆಯಲು ಕಂಬಳಿಯೂ ಬೇಕಾಗಿಲ್ಲ. ಭೂಮಿಯ ಮೇಲೆ ಒಂದು ಚಾಪೆಯನ್ನು ಹಾಕಿ ಅದರಲ್ಲಿ ತೋಳನ್ನೇ ತಲೆಗಿಂಬಾಗಿಟ್ಟು ಮಲಗಿ ತೆಳು ವಸ್ತ್ರವನ್ನೊಂದು ಹೊದೆದು ನಿದ್ರಿಸಿದಾಗ ಆಗುವ ಆನಂದ ಹಂಸತೂಲಿಕಾ ತಲ್ಪದಲ್ಲಿ ಮಲಗಿದವರಿಗಿದೆಯೇ ಎಂಬ ಪ್ರಶ್ನೆ ಹಾಕುತ್ತಾನೆ ತೋಮು. ಅದು ಹೇಗೇ ಇರಲಿ. ತೋಮು ಖರ್ಚು ಮಾಡುವುದಾದರೂ ಏನನ್ನು? ಅವನ ಸಂಪಾದನೆಯಾದರೂ ಎಷ್ಟಿದೆ? ಅದು ಯಾರಿಗೂ ಗೊತ್ತಿಲ್ಲ. ಪಾಪ ಭರಮಣ್ಣನಿಗೂ ತಿಳಿದಿರಲಿಕ್ಕಿಲ್ಲ. ತೋಮನ ದಣಿ ಅವನಿಗೆ ಒಂದು ಕಾಸನ್ನೂ ಕೊಡುವುದಿಲ್ಲವೆಂದು. ಎಲ್ಲವೂ ಅವನಿಗೆ ಅವನ ದಣಿಯಿಂದಲೇ ಸಿಗುತ್ತದೆಂದು!

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p.a.	7ರಿಂದ 11 ತಿಂಗಳು. % p.a.	12ರಿಂದ 23 ತಿಂಗಳು. % p.a.	24ರಿಂದ 35 ತಿಂಗಳು. % p.a.	36ರಿಂದ 47 ತಿಂಗಳು. % p.a.	48ರಿಂದ 59 ತಿಂಗಳು. % p.a.	60ರಿಂದ 83 ತಿಂಗಳು. % p.a.	84ರಿಂದ 120 ತಿಂಗಳು % p.a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ:-	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

[ಶೆಡ್ಯೂಲ್ಡ್ ಬ್ಯಾಂಕ್] ಶ್ರೀ

ರಿಜಿಸ್ಟರ್ಡ್ ಆಫೀಸು:— ಕೋರ್ಟು ರಸ್ತೆ, ಉಡುಪಿ, ದ ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

ಕೃಷಿಕರಂಗ

ಸುಧಾರಿತ ಅಕ್ಕಿಯ ತಳಿಗಳು

ಆ

ಬರೆದವರು

ಶ್ರೀ ಎಂ. ಎಸ್. ಪವಾರ್

ನಮ್ಮ ದೇಶದಲ್ಲ ಆಹಾರದ ಕೊರತೆ ಇಂದು ತೀವ್ರವಾಗಿದೆ. ಆಹಾರದ ಕೊರತೆಯೆಂದ ಕೂಡಲೇ ನಮ್ಮ ಮನಸ್ಸಿಗೆ ಬರುವುದು ಅಕ್ಕಿ ಮತ್ತು ಗೋದಿ ಧಾನ್ಯಗಳ ಅಭಾವ. ಅಕ್ಕಿ ಬೆಳೆಯು ಭಾರತದಲ್ಲಿ ಆವರಿಸಿರುವಷ್ಟು ಪ್ರದೇಶದ ವಿಸ್ತೀರ್ಣ ವಿಶ್ವದ ಇನ್ನಾವ ರಾಷ್ಟ್ರದಲ್ಲೂ ಕಾಣಬರುವುದಿಲ್ಲ. ದೇಶದ ವಿಭಜನೆಯಾಗುವುದಕ್ಕೆ ಮುಂಚಿನಿಂದಲೂ ಭಾರತ ಅಕ್ಕಿಯನ್ನು ಆಮದು ಮಾಡಿಕೊಳ್ಳುತ್ತಲೇ ಬಂದಿದೆ.

ಯುದ್ಧ ಕಾಲದಲ್ಲಿ ಅಕ್ಕಿಯ ಉತ್ಪನ್ನವನ್ನು ಅಧಿಕಗೊಳಿಸಲು ನಾನಾ ಯೋಜನೆಗಳನ್ನು ಆರಂಭಿಸಲಾಯಿತು. ನಂತರ "ಅಧಿಕ ಆಹಾರ ಬೆಳೆಯಿರಿ" ಪ್ರಣಾಳಿಕೆಯ ಮೂಲಕ ಅಕ್ಕಿಯ ಫಸಲನ್ನು ಹೆಚ್ಚಿಸಲು ಪ್ರಯತ್ನಿಸಲಾಯಿತು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಜಪಾನಿ ಪದ್ಧತಿಯನ್ನು ಜನಪ್ರಿಯಗೊಳಿಸಿ ಲಕ್ಷಾಂತರ ಎಕರೆಗಳನ್ನು ಈ ಹೊಸ ಅಕ್ಕಿ ಸಾಗುವಳಿ ಪದ್ಧತಿಗೆ ಒಳಪಡಿಸಲಾಯಿತು

ಕಳೆದ ಹನ್ನೆರಡು ವರ್ಷಗಳ ಕಾಲದಲ್ಲಿ ಅಕ್ಕಿಯ ಉತ್ಪನ್ನ ಶೇಕಡ ೭೪ ಭಾಗ ಅಧಿಕಗೊಂಡಿದೆ.

ಭಾರತದಲ್ಲಿ ಅಕ್ಕಿ ಬೆಳೆಯನ್ನು ತೆಗೆಯುವ ವಿವಿಧ ಪದ್ಧತಿಗಳು ವಿಸ್ಮಯವನ್ನುಂಟು ಮಾಡುತ್ತವೆ. ಅತಿ ದಕ್ಷಿಣದಲ್ಲಿರುವ ಕೇರಳದಲ್ಲಿ ಸಮುದ್ರ ಮಟ್ಟಕ್ಕಿಂತ ಕೆಳಗಡೆ ಮಟ್ಟದಲ್ಲಿ ಅಣೆಕಟ್ಟುಗಳನ್ನು ಕಟ್ಟಿ ಸಮುದ್ರದ ನೀರು ನುಗ್ಗದಂತೆ ತಡೆದು ಅಕ್ಕಿಯನ್ನು ಬೆಳೆಯುತ್ತಾರೆ. ನಾಗಾ ದೇಶದಲ್ಲಾದರೆ ತಾರಸಿ ತಾಣಗಳನ್ನು ಹಾಕಿ ಸಮುದ್ರ ಮಟ್ಟದಿಂದ ಸುಮಾರು ೭೨೦೦ ಅಡಿ ಎತ್ತರದ ವರೆಗೂ ಬೆಳೆಯುತ್ತಾರೆ. ಗುಜರಾತ, ಮಹಾರಾಷ್ಟ್ರ, ಆಂಧ್ರ ಮತ್ತು ಮೈಸೂರು ರಾಜ್ಯಗಳಲ್ಲಿ ಹತ್ತಿ, ಜೋಳ ಮೊದಲಾದ ಶುಷ್ಕಬೆಳೆಯೊಡನೆ ಅಕ್ಕಿ ಬೆಳೆಯನ್ನು ತೆಗೆಯುವುದು ಸರ್ವೇಸಾಮಾನ್ಯ. ಬಂಗಾಳ, ಬಿಹಾರ ಮತ್ತು ಅಸ್ಸಾಮ್ ದೇಶಗಳಲ್ಲಿ ಅಕ್ಕಿ ಬೆಳೆಯನ್ನು ನೀರಿನ ಅಡಿಯಲ್ಲಿ ಬೆಳೆಯುತ್ತಾರೆ.

ಅಕ್ಕಿ ಉತ್ಪನ್ನದಲ್ಲಿ ವಾಯುಗುಣ ಪ್ರಮುಖ ಪಾತ್ರವನ್ನು ವಹಿಸುತ್ತದೆ. ವರ್ಷ ಪೂರ್ತಿ ವಾಯುಗುಣ ಹಿತಕರವಾಗಿರುವ ದಕ್ಷಿಣ ದೇಶದಲ್ಲಿ ಪ್ರತಿ ವರ್ಷವೂ ಮೂರು ಬೆಳೆಯನ್ನು ತೆಗೆಯುತ್ತಾರೆ. ಆದರೆ ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಪ್ರಾಂತಗಳಲ್ಲಿ ಹಿಮವೆಲ್ಲವೂ ಕರಗಿ ಬಿಸಿಲು ಬರಲು ಆರಂಭವಾದ ಕೂಡಲೇ ಒಂದು ಅಲ್ಪಾವಧಿ ಬೆಳೆಯನ್ನು ತೆಗೆಯಲು ಮಾತ್ರ ಸಾಧ್ಯವಾಗುತ್ತದೆ.

ಈ ರೀತಿ ವಿವಿಧ ವಾಯುಗುಣ ಹಾಗೂ ಭೂ ಪರಿಸ್ಥಿತಿಗಳಿಗೆ ಮತ್ತು ಮಣ್ಣಿನ ಲಕ್ಷಣಗಳಿಗೆ ಅನುಗುಣವಾಗಿ ಬೇರೆ ಬೇರೆ ತಳಿಗಳನ್ನು ಬೆಳೆಸುವುದು ಅನಿವಾರ್ಯ. ಕಳೆದ ೫೦ ವರ್ಷಗಳಿಂದ ಸುಧಾರಿತ ಅಕ್ಕಿಯ ತಳಿಗಳನ್ನು ಕಂಡುಹಿಡಿಯುವದರಲ್ಲಿ ನಮ್ಮ ಆಹಾರ ವಿಜ್ಞಾನಿಗಳು ಅತಿಯಾಗಿ ಶ್ರಮಿಸಿದ್ದಾರೆ. ಈ ಶ್ರಮಕ್ಕೆ ತಕ್ಕ ಫಲವು ದೊರಕಿದೆ. ನಮಗೆ ಗೊತ್ತಿರುವಂತೆ ಅಷ್ಟು ಉತ್ತಮವಲ್ಲದ ಸ್ಥಳೀಯ ಅಕ್ಕಿ ತಳಿಗಳು ಸುಮಾರು ೫,೦೦೦ಕ್ಕೂ ಹೆಚ್ಚಾಗಿವೆ ಆಹಾರ ವಿಜ್ಞಾನಿಗಳು ಈ ಎಲ್ಲವನ್ನೂ ಪರೀಕ್ಷಿಸಿ ಈ ಸಾವಿರಾರು ತಳಿಗಳ ಪೈಕಿ ಉತ್ತಮ ದರ್ಜೆಯ ಹಾಗೂ ಅಧಿಕ ಫಲವನ್ನೀಯುವ ತಳಿಗಳನ್ನು ಚುನಾಯಿಸಿದ್ದಾರೆ.

ಪ್ರತಿ ರಾಜ್ಯವೂ ನೆರೆ ರಾಜ್ಯದಲ್ಲಿ ಬಳಕೆಯಲ್ಲಿರುವ ತಳಿಗಳನ್ನು ತನ್ನ ಪ್ರಾಂತದ ಭೂಗುಣಗಳಿಗೆ ಸರಿಹೊಂದುವುದೇ ಎಂಬುದನ್ನು ಪರೀಕ್ಷಿಸಿ ಹಾಗೆ ಸರಿಹೊಂದುವ ತಳಿಗಳನ್ನು ರೂಢಿಗೆ ತರುತ್ತಿದೆ. ಆಂಧ್ರಪ್ರದೇಶದ HR೧೨ ಮತ್ತು HB೧೯ ತಳಿಗಳು ಒರಿಸ್ಸಾದಲ್ಲಿ ಎರಡನೆಯ ಬೆಳೆಯಾಗಿ ತೆಗೆಯಲು ಯೋಗ್ಯವಾಗಿವೆಯೆಂದು ಕಂಡುಬಂದಿದೆ. ಮದ್ರಾಸಿನ GEB ೨೪ ತಳಿಯು ಮೈಸೂರು ಮತ್ತು ಆಂಧ್ರ ಪ್ರದೇಶ ಭೂಗುಣಗಳಿಗೆ ಅನುಗುಣವಾಗಿವೆ. ಸೂಕ್ತ ಕಂಡುಬಂದ ಕಡೆಯಲ್ಲೆಲ್ಲಾ ಹೊರದೇಶದ ತಳಿಗಳನ್ನು ನಮ್ಮ ದೇಶದಲ್ಲಿ ಬೆಳೆಯಲು ಪ್ರೋತ್ಸಾಹವೀಯಲಾಗುತ್ತಿದೆ.

ಸಂಕರ ಕೂಡ ಅಗತ್ಯ

ಅನೇಕ ವೇಳೆ ವಿದೇಶಿ ತಳಿಗಳು ತಮ್ಮ ದೇಶೀ ಭೂಗುಣಗಳಿಗೆ ಹೊಂದಿಕೊಳ್ಳುವುದಿಲ್ಲ. ಆದುದರಿಂದ, ಅಂತಹ ಸಂದರ್ಭಗಳಲ್ಲಿ ದೇಶೀ ತಳಿಗಳೊಡನೆ ವಿದೇಶಿ ತಳಿಗಳನ್ನು ಸಂಕರಗೊಳಿಸುವುದೊಂದೇ ದಾರಿ. ಈಗಾಗಲೇ ಭಾರತ ಹಾಗೂ ಜಪಾನಿನ ಅಕ್ಕಿ ತಳಿಗಳನ್ನು ವ್ಯವಸ್ಥಿತ ರೀತಿಯಲ್ಲಿ ಸಂಕರಗೊಳಿಸುವ ಕಾರ್ಯವನ್ನು ಆರಂಭಿಸಲಾಗಿದೆ. ಇವುಗಳನ್ನು ಆಂಧ್ರ ಪ್ರದೇಶ, ಮೈಸೂರು, ಮಹಾರಾಷ್ಟ್ರ ರಾಜ್ಯಗಳಲ್ಲಿ ಪ್ರಯೋಗಾತ್ಮಕ ರೀತಿಯಲ್ಲಿ ಬಳಸಲಾಗುತ್ತಿದೆ.

ರೋಗಗಳ ಹತೋಟಿ

ಬೆಂಕೆರೋಗ:— ಈ ರೋಗ ಎಷ್ಟು ಪ್ರಬಲವಾದದೆಂಬುವನ್ನು ಇದರ ಹೆಸರೇ ಸೂಚಿಸುತ್ತದೆ. ಬೆಂಕೆರೋಗ ಕೈಮೀರಿ ಉಲ್ಬಣಗೊಂಡದ್ದೇ ಆದರೆ ಸಹಸ್ರಾರು ಎಕರೆ ಭತ್ತದ ಫಲವನ್ನು ನಿರ್ನಾಮಗೊಳಿಸುವುದು. ಇದನ್ನು ಹತೋಟಿಗೆ ತರುವ ಕೆಲವು ರಾಸಾಯನಿಕ ಕ್ರಮಗಳು ಪೂರ್ಣ ಯಶಸ್ವಿಯಾಗಿಲ್ಲ. ಆದುದರಿಂದ ಈ ರೋಗವನ್ನು ನಿರೋಧಿಸುವ ತಳಿಗಳನ್ನು ಉತ್ಪತ್ತಿ ಮಾಡಿ ಆ ತಳಿಗಳಿಂದ ಬೆಳೆ ತೆಗೆಯುವುದೇ ನಮಗೆ ಉಳಿದಿರುವ ದಾರಿ. ಮದ್ರಾಸ್ ರಾಜ್ಯವು ೧೦೨೯ ಮತ್ತು ೧೦೫೦ ಎಂಬೆರಡು ಬೆಂಕೆರೋಗ ನಿರೋಧ ತಳಿಗಳನ್ನು ಇತ್ತೀಚೆಗೆ ಕಂಡು ಹಿಡಿದಿದೆ.

ಆಂಧ್ರ ಪ್ರದೇಶದ MTU-೧ ತಳಿಯನ್ನು ಒರಿಸ್ಸಾದ ಲವಣ ನಿರೋಧ ತಳಿಯಾದ SR—೨೬B ಯೊಡನೆ ಬೆರಕೆ ಮಾಡಿ PVR ೧ ಎಂಬ ಸಂಕರ ತಳಿಯನ್ನು ಬೆಳಕಿಗೆ ತರಲಾಗಿದೆ. ಈ ತಳಿ ಕ್ಷಾರದಿಂದ ಕೂಡಿದ ಮಣ್ಣಿನಲ್ಲಿ ಯಶಸ್ವಿಯಾಗಿ ಬೆಳೆಯುತ್ತದೆ.

ಹೊಸ ಹೊಸ ಅಕ್ಕಿಯ ತಳಿಗಳನ್ನು ಉತ್ಪತ್ತಿ ಮಾಡುವುದು ಎಂದಿಗೂ ಮುಗಿಯದ ಕೆಲಸ. ಏಕೆಂದರೆ ಪ್ರತಿ ಪ್ರಯೋಗದಲ್ಲೂ ನಮಗೆ ದೊರೆಯುವ ಒಂದು ಸುಧಾರಿತ ತಳಿಯನ್ನು ಮೀರಿಸುವ ಮತ್ತೊಂದು ಸುಧಾರಿತ ತಳಿಯನ್ನು ಹೊಂದುವ ಅಭಿಲಾಷೆ ನಮ್ಮಲ್ಲಿ ಆಳವಾಗಿ ಬೇರೂರಿದೆ. ಈ ದಿಕ್ಕಿನಲ್ಲಿ ರೇಡಿಯೋ ಐಸೋಟೋಪುಗಳನ್ನು ಹೆಚ್ಚು ಹೆಚ್ಚಾಗಿ ಬಳಸಲು ಆಹಾರ ವಿಜ್ಞಾನಿಗಳು ಮೊದಲಿಟ್ಟಿದ್ದಾರೆ. ಬಹು ಶೀಘ್ರದಲ್ಲಿಯೇ ಅತ್ಯುತ್ತಮ ಸುಧಾರಿತ ಅಕ್ಕಿ ತಳಿಗಳು ಸ್ಥಳೀಯ ತಳಿಗಳನ್ನು ಸಂಪೂರ್ಣವಾಗಿ ಹೊರಗಟ್ಟುವುದರಲ್ಲಿ ಸಂದೇಹವೇ ಇಲ್ಲ.

ಗಮನಾರ್ಹ ಬದಲಾವಣೆ ! ಠೇವಣಾತಿದಾರರಿಗೆ ಸುಸಂದರ್ಭ !!

ನಿರಖು ಠೇವಣಿಗಳ ಮೇಲೆ

ಪರಿಷ್ಕರಿಸಿದ ಆಕರ್ಷಣೀಯ ಬಡ್ಡಿ ದರ !!!

91 ದಿನಗಳಿಗೆ ಮೇಲ್ಪಟ್ಟ 6 ತಿಂಗಳ ಒಳಗಿನ				ಅವಧಿಯ ಠೇವಣಾತಿಗಳಿಗೆ—	4¼%
6 ತಿಂಗಳಿಂದ ಮೇಲ್ಪಟ್ಟ	1 ವರ್ಷ ಒಳಗಿನ ಅವಧಿಯ			,,	5¼%
1 ವರ್ಷದಿಂದ ,,	2 ವರ್ಷಗಳ ಒಳಗಿನ	,,		,,	5½%
2 ,, ,,	3	,,	,,	,,	5¾%
3 ,, ,,	5	,,	,,	,,	6%
5 ,, ,,	7	,,	,,	,,	6¼%
7 ,, ,,	9	,,	,,	,,	6½%
9 ವರ್ಷಗಳಿಗೆ ಮೇಲ್ಪಟ್ಟು		....		....	6¾%

5 ವರ್ಷ ವ ಅವುಗಳಿಗೆ ಮೇಲ್ಪಟ್ಟ ಅವಧಿಯ ಧಾರ್ಮಿಕ ಸಂಸ್ಥೆಗಳ ಠೇವಣಾತಿಗಳಿಗೆ 6¾%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ನೀಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ

ನಮ್ಮ ಯಾವುದೇ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು:-

"ವಿಜಯ ಬ್ಯಾಂಕ್ ಬಿಲ್ಡಿಂಗ್", ಲೈಟ್‌ಹೌಸ್ ಹಿಲ್ ರೋಡ್,

ಮಂಗಳೂರು – 3.

ನಗು ನೀನು .... ಜಗವೆ ನಿನ್ನೊಡನೆ ನಗುತಲಿಹುದು

೧

"ನಿನ್ನೆ ಮಧ್ಯರಾತ್ರಿ ಕಳೆದ ಮೇಲೆ ನಾನು ಕ್ಲಬ್ಬಿನಿಂದ ಮನೆಗೆ ಮರಳಿದಾಗ ನಮ್ಮ ಮನೆಯೊಳಗೆ ಒಬ್ಬ ಕಳ್ಳ ನುಗ್ಗುತಿದ್ದುದನ್ನು ಕಂಡೆ."

"ಅವನಿಗೇನಾದರೂ ಸಿಕ್ಕಿತೇ?

"ಹೌದು, ನನಗೆ ಸಿಗಬೇಕಾಗಿದ್ದುದು ಅವನಿಗೆ ಸಿಕ್ಕಿತು."

"ಅಂದರೆ?"

"ನನ್ನ ಹೆಂಡತಿ ಆ ಕಳ್ಳನನ್ನು ನಾನೆಂದೇ ಭ್ರಮಿಸಿದ್ದಳು! ಮತ್ತೇನು ಹೇಳಲಿ? ಅವನೀಗ ಆಸ್ಪತ್ರೆಯಲ್ಲಿದ್ದಾನೆ."

೨

"ಹಾಗಾದರೆ ನಿನ್ನ ಕೆಲಸ ಹೋಯಿತೇ?"

"ಹೌದು."

"ಕಾರಣವೇನು?"

"ಹೊಂದಿಕೆಯಾಗಲಿಲ್ಲ,"

"ನಿನಗೂ ನಿನ್ನ ಮಾಲಕರಿಗೂ ಹೊಂದಿಕೆಯಾಗಲಿಲ್ಲವೇ?"

"ಅಲ್ಲ, ಕ್ಯಾಶಿಗೂ, ಕ್ಯಾಶ್ ಬುಕ್ಕಿಗೂ ಹೊಂದಿಕೆಯಾಗಲಿಲ್ಲ "

೩

ಸ್ವಿಜರ್ಲೆಂಡಿನ ಪ್ರಸಿದ್ಧ ಹೋಟೆಲೊಂದರ ಜಾಹೀರಾತು ಪತ್ರಿಕೆಯಲ್ಲಿ ಈ ರೀತಿ ಪ್ರಕಟವಾಗಿತ್ತು— "ನೀವು ಏಕಾಂತವನ್ನು ಬಯಸುವಿರಾದರೆ ನಮ್ಮ ಹೋಟೆಲಿನಲ್ಲಿ ತಂಗಿರಿ ಪ್ರಪಂಚದ ಮೂಲೆ ಮೂಲೆಗಳಿಂದ ಸಾವಿರಾರು ಮಂದಿ ಬಂದು ನಮ್ಮ ಹೋಟೆಲಿನಲ್ಲಿ ತಂಗುತ್ತಾರೆ."

೪

'ಮಾಣೀ, ಇದೇನು ಕಾಫಿಯೋ ಟೀಯೋ? ಕೊಳೆತ ತರಕಾರಿಯಂತೆ ದುರ್ವಾಸನೆ ಬರುತ್ತಿದೆಯಲ್ಲಾ'- ಗಿರಾಕಿ ಸಿಟ್ಟಿನಿಂದ ಪ್ರಶ್ನಿಸಿದ

"ಹಾಗಾದರೆ ಅದು ಕಾಫಿ ಸರ್, ನಮ್ಮಲ್ಲಿನ ಟೀಯಲ್ಲಿ ಹಳೆಯ ಉಪ್ಪಿನಕಾಯಿಯ ವಾಸನೆ ಬರುತ್ತದೆ" - ಮಾಣಿ ಸ್ಪಷ್ಟೀಕರಣ ನೀಡಿದ.

—ಸಂಗ್ರಹಕ: ಶ್ರೀ ಹಾರ್ಯಾಡಿ ಮ. ಐತಾಳ.

ವಿವಿಧ ದೃಷ್ಟಿಗಳಲ್ಲಿ

ಅಣುಗುಂಡು - ಅಹಿಂಸೆ

ಬರೆದವರು: ಶ್ರೀ ಶಿವಶಂಕರ.

ಚೈನಿ ಕಮ್ಯೂನಿಸ್ಟರು ಅಣುಗುಂಡು ಪ್ರಯೋಗ ನಡೆಸಿದಾಗ ಭಾರತದಲ್ಲಿರುವ ರಾಜಕೀಯ ಪಕ್ಷಗಳೆಬ್ಬಿಸಿದ ಪ್ರತಿಧ್ವನಿಯನ್ನು ಕಳೆದ ವಾರ ಕೇಳಿರುವೆವು. ಭಾರತದಲ್ಲಿ ಅಣುಗುಂಡು ತಯಾರಿಸುವದರ ಕುರಿತು ಆಡಳಿತ ಪಕ್ಷ ಕಾಂಗ್ರೆಸ್ಸಿನಲ್ಲಿ ಒಮ್ಮತವಿಲ್ಲವೆಂಬುದನ್ನು 'ನವಯುಗ' ಕಳೆದ ವಾರ ತಿಳಿಸಿರುತ್ತದೆ. ಅದನ್ನು ಸ್ಪಷ್ಟೀಕರಿಸುವ ರೀತಿಯಲ್ಲಿ ಆಲ್ ಇಂಡಿಯಾ ಕಾಂಗ್ರೆಸ್ಸ್ ಕಮಿಟಿ ಮೀಟಿಂಗಿನಲ್ಲಿ ವಾದ-ಪ್ರತಿವಾದ ನಡೆದುವು. ಗದ್ದುಗೆಯ ಮೇಲಿರುವ ಗಣನೀಯ ವ್ಯಕ್ತಿಗಳೂ ಗದ್ದುಗೆಯಿಂದ ತಳ್ಳಲ್ಪಟ್ಟಿರುವ ಮಾಜಿ ಮಂತ್ರಿಗಳೂ (ಉದಾ: ಕೃಷ್ಣಮೆನನ್, ಬಿಜೂ ಪಟ್ನಾಯಕ್...) ಭಾರತವು ಅಣುಗುಂಡನ್ನು ತಯಾರಿಸಲೇ ಕೂಡದೆಂದು ವಾದಿಸಿರುವರು. ಪಕ್ಷದ ದೃಷ್ಟಿಯಲ್ಲಿ ಪ್ರಮುಖ ವ್ಯಕ್ತಿಗಳಾಗಿರುವ ವಿಭೂತಿ ಮಿಶ್ರರಂತಹವರು ಅಣುಗುಂಡನ್ನು ತಯಾರಿಸಲೇಬೇಕೆಂದು ಪಟ್ಟುಹಿಡಿದಿದ್ದರು. ನಮ್ಮ ಆರ್ಥಿಕ ಪರಿಸ್ಥಿತಿ ಅದಕ್ಕೆ ಅನುಕೂಲವಾಗಿಲ್ಲವೆಂದು ಕೆಲ ಕಾಂಗ್ರೆಸ್ಸ್ ಕಮಿಟಿ ಸದಸ್ಯರು ಹೇಳಿದ್ದಕ್ಕೆ ಅವರು ಪರಿಹಾರ ರೂಪವಾಗಿ ಮಂತ್ರಿಗಳು ಖರ್ಚು ಮಾಡುವ ಅನಾವಶ್ಯಕ ಅಂಶವನ್ನು ಕಮ್ಮಿಗೊಳಿಸಿದಲ್ಲಿ ಅಣುಗುಂಡು ತಯಾರಿಸಬಹುದೆಂದು ಕಾಂಗ್ರೆಸ್ ಸುಲ್ತಾನರತ್ತ ಮಾತಿನ ಗುಂಡನ್ನು ಹಾರಿಸಿರುವರು. ಈ ಅಭಿಪ್ರಾಯವನ್ನು ಅನೇಕ ಮುಖಂಡರು ಬಹಿರಂಗಪಡಿಸಿರುವರು. ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿ ದೀನದಯಾಳ ಉಪಾಧ್ಯಾಯರು ಅದಕ್ಕಿಂತಲೂ ಮೇಲ್ಮಟ್ಟಕ್ಕೆ ಹೋಗಿರುವರು. ಈಗ ಯೋಜನೆಗಳಿಗಾಗಿ ಖರ್ಚು ಮಾಡುತ್ತಿರುವದರ ನೂರನೇ ಒಂದಂಶವನ್ನು ಉಳಿಸಿದಲ್ಲಿ ಅದರಿಂದಲೇ ಅಣುಗುಂಡನ್ನು ತಯಾರಿಸಬಹುದೆಂದು ಅವರು ಹೇಳಿರುವರು. ಈ ಎರಡು ವಾದದಲ್ಲೂ ಹುರುಳಿದೆ, ಸತ್ಯಾಂಶವಿದೆ. ನೂರಕ್ಕೆ ನೂರರಷ್ಟು ಅದು ಸಾಧ್ಯವಾಗದಿದ್ದರೂ ಅವನ್ನು 'ಚುನಾವಣಾ ಆಶ್ವಾಸನ' ಎನ್ನಲು ಸಾಧ್ಯವೇ ಇಲ್ಲ.

ಭಾರತ ಅಣುಗುಂಡು ತಯಾರಿಸಕೂಡದೆಂದು ಕೃಷ್ಣಮೆನನರಂತಹವರು ಹೇಳುವದನ್ನು ರಕ್ಷಣಾದೃಷ್ಟಿಯಿಂದ ಬಹಳ ಜಾಗರೂಕತೆಯಿಂದ ನೋಡಬೇಕಾಗಿರುತ್ತದೆ. ನಮ್ಮ ಧೀರ ಯೋಧರ ನಡುವೆ ಭಾವಿ ವೈಮನಸ್ಸು ಹಾಗೂ ಯೋಧ-ಅಧಿಕಾರಿಗಳ ನಡುವೆ ವೈಮನಸ್ಸು ಹಬ್ಬುವಂತೆ ಕಾರಣರಾದವರು ಕೃಷ್ಣಮೆನನ್ ಎನ್ನಲಾಗುತ್ತಿದೆ. ಅವರು ರಕ್ಷಣಾ ಮಂತ್ರಿಯಾಗಿದ್ದ ಸಮಯ ಶಸ್ತ್ರಾಸ್ತ್ರಗಳಲ್ಲಿ ಅಭಿವೃದ್ಧಿಯಾಗಿಲ್ಲವೆನ್ನುವದನ್ನು ಯಾರೂ ಮರೆಯಲು ಸಾಧ್ಯವಿಲ್ಲ. ನಮಗೆ ಸೇನೆಯ ಅವಶ್ಯಕತೆಯಾದರೂ ಏನಿರುತ್ತದೆ? ಸಂಪಿನ ಸಮಯ ಕೂಲಿ ಕೆಲಸಕ್ಕಾಗಿ ಸೈನ್ಯ ಬೇಕೇನು? ಭಾಷಾವಾರು ಬಡಿದಾಟವಾದಲ್ಲಿ ಸೈನ್ಯ ಬೇಕೇನು? ಕಮ್ಯೂನಿಸ್ಟರನ್ನು ಅಧಿಕಾರ ಗದ್ದುಗೆಯಿಂದ ಓಡಿಸಲು ಸೇನೆ ಬೇಕೇನು? ಇದಕ್ಕೆಲ್ಲಾ ಉತ್ತರವೆಂಬಂತೆ ಅವರನ್ನು 'ಕಮ್ಯೂನಿಸ್ಟ್ ಸಹಚರ' ಎನ್ನಲಾಗುತ್ತಿದೆ. ಕಮ್ಯೂನಿಸ್ಟರತ್ತ ಮೃದುಹೃದಯ ಉಳ್ಳವನು ಖಂಡಿತವಾಗಿ ಭಾರತದ ರಕ್ಷಣೆಗೆ ಸುರಂಗವಿಡುವದರಲ್ಲಿ ಸಂದೇಹವಿಲ್ಲ. ಅವರು ಅಣುಗುಂಡನ್ನು ತಯಾರಿಸಕೂಡದೆನ್ನುವದರಲ್ಲಿ ಆಶ್ಚರ್ಯವಿಲ್ಲ.

ಇತ್ತೀಚೆಗೆ ಸೇರಿರುವ ಕಮ್ಯೂನಿಸ್ಟರ ಸಭೆಗಳಲ್ಲಿ (ಕಲ್ಕತ್ತಾ ಹಾಗೂ ಎರ್ನಾಕುಲಂ) ಅಣುಗುಂಡು ತಯಾರಿಸ ಕೂಡದೆನ್ನುವ ತೀರ್ಮಾನಗಳನ್ನವರು ಮುಂದಿಟ್ಟಿದ್ದಾರೆ. ಅದು ಅವರ ಮನಸ್ಸನ್ನು ಸ್ಪಷ್ಟಪಡಿಸುತ್ತದೆ. ಕಮ್ಯೂನಿಸ್ಟರಿಗೆದುರಾಗಿ ಹೋರಾಡಲು ಕಮ್ಯೂನಿಸ್ಟರು ಇಚ್ಛಿಪಟ್ಟಾರೇ?

ಮಧುರೈಯಲ್ಲಿ ಸೇರಿದ್ದ ಭಾರತೀಯ ಜನಸಂಘದ ಮದ್ರಾಸ್ (ತಮಿಳುನಾಡು) ಪ್ರಾಂತೀಯ ಪ್ರತಿನಿಧಿ ಸಭೆಯು ಅಣುಗುಂಡನ್ನು ತಯಾರಿಸಲೇ ಬೇಕೆಂಬ ತೀರ್ಮಾನವನ್ನು ಮುಂದಿಟ್ಟಿರುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಅದು ಹೇಗೆ ಸಾಧ್ಯವೆಂಬುದನ್ನವರು ಸ್ಪಷ್ಟಪಡಿಸಿರುವದಿಲ್ಲ. ಚೈನಿ ಕಮ್ಯೂನಿಸ್ಟರು ಪ್ರಯೋಗ ನಡೆಸಿರುವದರಿಂದ ಅವರನ್ನೆದುರಿಸಲು ಅಣುಗುಂಡನ್ನು ಭಾರತ ತಯಾರಿಸಬೇಕೆಂದು ಭಾರತೀಯ ಜನಸಂಘದವರು ಹೇಳುತ್ತ ಬರುತ್ತಿದ್ದಾರೆ. ನಾಳೆ ಚೈನಾವು ಹೊಸ ವಿಧಾನದ ಇನ್ನೊಂದು ಗುಂಡನ್ನು ಹಾರಿಸಿದಲ್ಲಿ ಅಣುಗುಂಡನ್ನು ತಯಾರಿಸುವದನ್ನು ಅರ್ಧದಲ್ಲೇ ಬಿಟ್ಟು ಆಧುನಿಕ ಅಸ್ತ್ರದತ್ತ ಭಾರತ ಗಮನ ಕೊಡಬೇಕೇ? ಇದಕ್ಕೂ ಜನಸಂಘದವರು ಉತ್ತರ ಕೊಡಬೇಕಾಗಿರುತ್ತದೆ. ನಮ್ಮತೆಯ ಹಿಂದುಗಡೆ ಓಡುತ್ತಿರಲು ಸಾಧ್ಯವೇನು?

ಇವೆಲ್ಲವೂ ಕಳೆದ ವಾರದ ಲೇಖನಕ್ಕೆ ಪುಷ್ಟಿಯನ್ನೀಯಲಿಕ್ಕಾಗಿ ಇವೆ. ಈ ಒಂದು ವಾರದಲ್ಲಿ ಯಾರ ಅಭಿಪ್ರಾಯವೂ ಬದಲಾಗಿರುವದಿಲ್ಲ. ಅವರ ಬದಲು ತಮ್ಮತಮ್ಮವಾದ ಪ್ರಯೋಗ ರೂಪಕ್ಕೆ ಬರಬೇಕೆಂದು ಅವರು ಪ್ರಯತ್ನಿಸುತಿದ್ದಾರೆ. ನಿಜವಾಗಿ ಇದರಲ್ಲಿ ಕಾಂಗ್ರೆಸ್ಸಿಗರನ್ನು ಬಿಟ್ಟರೆ ಬೇರಾರೂ ಅಹಿಂಸೆಯ ದೃಷ್ಟಿಯಿಂದ ಅಣುಗುಂಡು ಬೇಡವೆಂದಿರುವದಿಲ್ಲ. ಅಹಿಂಸೆಯ ದೃಷ್ಟಿಯಿಂದ ಅಣುಗುಂಡು ಬೇಡವಾದಲ್ಲಿ ಸೈನ್ಯದ ಅವಶ್ಯಕತೆಯಾದರೂ ಏನಿದೆ? ಆಧ್ಯಾತ್ಮ ಅಸ್ತ್ರ ನಾಶಕ್ಕಾಗಿ ಇಲ್ಲ? ಆಕ್ರಮಣಗಾರರ ನಾಶಕ್ಕಾಗಿ ತಾನೇ ಅಸಗಳಿರುವದು? ಅಣುಗುಂಡು ಅದಕ್ಕೆ ಅಪವಾದವೇನು? ಇದಕ್ಕೆ ಅಹಿಂಸಾವಾದಿಗಳೇನನ್ನುವರು?

ಮಧುರೈಯಲ್ಲಿ ಕೆಲ ದಿನಗಳ ಹಿಂದೆ ಅಖಿಲ—ಭಾರತೀಯ ಸರ್ವ ಸೇವಾ ಸಂಘದ ಸಭೆ ಸೇರಿತ್ತು. ಅಲ್ಲಿ ಹಲವಾರು ವಿಷಯಗಳ ಕುರಿತು ಚರ್ಚೆ ನಡೆದಿದೆಯಾದರೂ ಈ ಲೇಖನಕ್ಕೆ ಸಂಬಂಧಪಟ್ಟಿರುವ ಅಣುಗುಂಡು ತಯಾರಿಯ ಕುರಿತೂ ಅಲ್ಲಿ ಚರ್ಚೆ ನಡೆದಿರುತ್ತದೆ. ಸರ್ವ ಸೇವಾ ಸಂಘದ ಸಭೆ ಎಂದೊಡನೆ ಸಹಜವಾಗಿ ಅವರು ಅಣುಗುಂಡು ತಯಾರಿಕೆಯ ವಿರುದ್ಧವಾಗಿ ಸ್ವರ ಎತ್ತುವರೆಂಬುದರಲ್ಲಿ ಯಾರಲ್ಲೂ ಸಂದೇಹ ಬರುವಂತಿಲ್ಲ. ಅವರು ತಂದಿದ್ದ ತೀರ್ಮಾನದ ಪ್ರಕಾರ ಚೈನೀಯರು ಪ್ರಯೋಗ ನಡೆಸಿರುವ ಅಣುಗುಂಡಿನಿಂದಾಗಿ ಭಾರತೀಯರಲ್ಲಿ ನರ ದೌರ್ಬಲ್ಯವುಂಟಾಗಿರುತ್ತದೆ. ನಿಜವಾಗಿ ಅದು ಧೈರ್ಯದಿಂದ ಶಸ್ತ್ರಾಸ್ತ್ರ ಪರಿತ್ಯಾಗಕ್ಕೆ ಪ್ರೋತ್ಸಾಹವನ್ನು ನೀಡುವಂತಿದೆ. ಯಾವ ದೇಶವೇ ಆಗಲಿ ಅಣುಗುಂಡು ತಯಾರಿಸುವದನ್ನು ಸರ್ವ ಸೇವಾ ಸಂಘ ವಿರೋಧಿಸಿರುತ್ತದೆ. ಇಲ್ಲಿ ವಿನೋಬಾಜೀಯವರು ಚೈನಿ ಕಮ್ಯೂನಿಸ್ಟರ ಆಕ್ರಮಣವನ್ನು ಎದುರಿಸಲು ಹಿಂದೊಮ್ಮೆ ಸೂಚಿಸಿದ್ದ ಉಪಾಯ ಜ್ಞಾಪಕಕ್ಕೆ ಬರುತ್ತದೆ. ನಗು ಮುಖದ ಎಳೆಗೂಸುಗಳನ್ನು ಗಡಿ ಪ್ರದೇಶಕ್ಕೆ ಆಕ್ರಮಣಗಾರರನ್ನೆದುರಿಸಲು ಕಳುಹಿಸಿಕೊಡ

(ಕತ್ತನೆಯ ಪುಟ ನೋಡಿರಿ)

ಯಶಸ್ಸಿನ ಮುನ್ನಡೆಯಲ್ಲಿ ಮತ್ತೊಂದು ಹೆಜ್ಜೆ!

ಸಿಂಡಿಕೇಟ್ ಬ್ಯಾಂಕು

ಭಾರತದ ರಾಜಧಾನಿಯನ್ನು ಪ್ರವೇಶಿಸುತ್ತಿದೆ.

ನಮ್ಮ ಹೊಸ ದೆಹಲಿಯ ಹೊಸ ಶಾಖೆಯು

ಮಧೋ ಮೇನ್ಶನ್,
29A/1, ಆಸಫ್ ಆಲಿ ರಸ್ತೆ,
ನ್ಯೂ ಢಿಲ್ಲಿ—1

ಎಂಬಲ್ಲಿ

ತಾ. 7—12—1964ರಂದು

ಮತ್ತು

ದೆಹಲಿಯ ಇನ್ನೊಂದು ಶಾಖೆಯು

ಬ್ಲಾಕ್ ಸಂ. 5,
ಪ್ಲಾಟ್ ಸಂ. 65,
W. E A ಅಜ್ಮಲ್ ಖಾನ್ ರಸ್ತೆ,
ಕರೋಲ್ ಭಾಗ್,
ಢಿಲ್ಲಿ—5

ಎಂಬಲ್ಲಿ ಸಹ್ಯವೇ

ತೆರೆಯಲ್ಪಡುವುವೆಂದು ತಿಳಿಸಲು ಸಂತೋಷ ಪಡುತ್ತೇವೆ

ತನ್ನ 197 ಶಾಖಾ ಸಮುದಾಯದಲ್ಲಿ— ರಾಜ್ಯಪಟ್ಟದ ಮುಖ್ಯ ಪಟ್ಟಣಗಳಾದ— ಬೊಂಬಾಯಿ, ಮದ್ರಾಸು, ಬೆಂಗಳೂರು, ತಿರುವನಂತಪುರ ಮತ್ತು ಹೈದರಾಬಾದ್‌ಗಳಲ್ಲಿ ಶಾಖೆಗಳನ್ನು ಹೊಂದಿದ ಸಿಂಡಿಕೇಟ್ ಬ್ಯಾಂಕು ಈಗ ಭಾರತದ ರಾಜನಗರಿಯನ್ನು ಪ್ರವೇಶಿಸುವುದು.



ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು: ಮಣಿಪಾಲ

ಶಾಖೆಗಳು: 197.

ಚಲಾವಣಾ ಸಂಪತ್ತು:
ರೂ. 60 ಕೋಟಿಗೂ ಮಿಕ್ಕಿವೆ.

SYNDICATE BANK LIMITED



ಭಾರತ ದರ್ಶನ

ಆಹಾರ ಸ್ವಾವಲಂಬನೆಯ

೧



೨

ತಾಲತರ ಗ್ರಾಮವು ಅಯೋಧ್ಯೆಯ ಬಳಿಯ ಒಂದು ಹಳ್ಳಿ. ೧೫ ಲಕ್ಷ ಎಕ್ರೆ ವಿಸ್ತಾರವುಳ್ಳ ಈ ಗ್ರಾಮದಲ್ಲಿ ಈ ಮೊದಲು ಬರೇ ೪೦,೦೦೦ ಎಕ್ರೆ ಜಮೀನಿನಲ್ಲಿ ಕೃಷಿಯು ನಡೆಯುತಿತ್ತು. ಉಳಿದ ಭೂಮಿಯೆಲ್ಲವೂ ಬಂಜರಾಗಿಯೇ ಉಳಿದಿತ್ತು. ನೀರಾವರಿಯ ಸೌಲಭ್ಯವಿಲ್ಲದಿರುವುದೇ ಇದಕ್ಕೆ ಕಾರಣ. ಹಳ್ಳಿಯಲ್ಲಿ ನೂರಾರು ಕೆರೆ ಮತ್ತು ಬಾವಿಗಳು ಇದ್ದರೂ ಅವುಗಳಲ್ಲಿ ಕೆಸರು ತುಂಬಿದ್ದುದರಿಂದ ನೀರಾವರಿಗೆ ಅನುಪಯುಕ್ತವಾಗಿದ್ದುವು. ಇಂತಹ ಹಳ್ಳಿಯೊಂದರ ಜನ ಜೀವನವು ಬಹಳಷ್ಟು ಶೋಚನೀಯವಾಗಿತ್ತು, ಆರ್ಥಿಕ ಸ್ಥಿತಿಗತಿಗಳು ತೀರ ಕೆಟ್ಟು ಅವ್ಯವಸ್ಥಿತವಾಗಿತ್ತು.

ಇಂದು ತಾಲತರ ಗ್ರಾಮದಲ್ಲಿ ಹೊಸ ಉತ್ಸಾಹದ ಲಹರಿ ಹರಿಯ ತೊಡಗಿದೆ. ಮುಚ್ಚಿಹೋಗಿದ್ದ ಸುಮಾರು ೩೦೦ ಕೆರೆಗಳಲ್ಲಿ ತುಂಬಿದ್ದ ಕೆಸರನ್ನು ಕಿತ್ತು ತೆಗೆಯಲಾಯಿತು. ಉಳಿದ ಕಡಿಮೆ ಆಳದ ಕೆಲವು ಬಾವಿಗಳನ್ನು ಮತ್ತೂ ತೋಡಿ ಆಳ ಹೆಚ್ಚಿಸಲಾಯಿತು. ಇದರಿಂದಾಗಿ ಈಗ ೧೨ ಸಾವಿರ ಎಕ್ರೆ ಜಮೀನಿನಲ್ಲಿ ಕೃಷಿಯನ್ನು ನಡೆಸುವುದು ಸಾಧ್ಯವಾಗಿದೆ.

ಪಶ್ಚಿಮ ಬಂಗಾಳದ ಬಡ ಹಳ್ಳಿಯೊಂದು ಪುರುಲಿಯಾ. ಮಳೆಗಾಲದಲ್ಲಿ ಮಾತ್ರ ಇಲ್ಲಿ ಭಾರಿ ಮಳೆ ಸುರಿದು ನೆಲವು ನೀರಲ್ಲಿ ಮುಳುಗುತ್ತದೆ; ಉಳಿದ ಸಮಯದಲ್ಲಿ ಅದು ಒಣಗಿಯೇ ಇರುತ್ತದೆ. ಕೆಲವು ತಲೆಮಾರುಗಳಿಗೆ ಮೊದಲು ಅಲ್ಲಿಯ ಜನರು ಹಳ್ಳಗಳಿಗೆ ಅಣೆಕಟ್ಟು ಕಟ್ಟಿ, ಕೆರೆಗಳನ್ನು ತೋಡಿ ನೀರೆತ್ತಿ ಬೆಳೆ ಬೆಳಸುತಿದ್ದರು. ಆದರೆ, ಪ್ರತಿ ವರ್ಷವೂ ತುಂಬುತ್ತಿದ್ದ ಕೆಸರನ್ನು ತೆಗೆಯುವುದಕ್ಕೆ ಅತೀವ ವ್ಯಯ ತಗಲುತಿದ್ದುದರಿಂದ ಕಾಲಕ್ರಮದಲ್ಲಿ ನೀರಾವರಿಯು ಅಸಾಧ್ಯವಾಯಿತು.

ತಾಲತರದಲ್ಲಿ ರಾಧನಾಥ ಮಹತೋವಿನ ಕೆರೆಯು ಇದೇರೀತಿ ಕೆಸರು ತುಂಬಿತ್ತು. ಅವನ ಗದ್ದೆಗಳಿಗೆ ನೀರಾವರಿಯೂ ನಿಂತಿತ್ತು. ಪ್ರತಿ ಎಕ್ರೆಯಲ್ಲಿ ೨೦ ಮಣ ಧಾನ್ಯವನ್ನು ಎತ್ತಿಯೇ ತೃಪ್ತಿಪಡುತ್ತಿದ್ದರು, ಅವನ ಪೂರ್ವಜರು. ಆದರೆ, ಆತನು ೬—೮ ಮಣಗಳಲ್ಲಿಯೇ ತನ್ನ ಅದೃಷ್ಟ ಮುಗಿಯಿಸಿತೆಂದು ತಿಳಿಯಬೇಕಾಯಿತು. ಹಲವಾರು ಬಾರಿ ತನ್ನ ಕೆರೆಯ ಕೆಸರು ತೆಗೆಯಲು ಆತ ಯೋಚಿಸುತ್ತಿದ್ದರೂ ಅದಕ್ಕೆ ಸುಮಾರು ೧೦,೦೦೦ ರೂಪಾಯಿ ತಗಲುತಿದ್ದುದರಿಂದ ಅವನು ದೂರನೇ ಉಳಿಯಬೇಕಾಯ್ತು. ಗ್ರಾಮೀಣ ಅದೃಷ್ಟವಶದಿಂದ ರಾಜ್ಯಸಭಾ ಸದಸ್ಯ ಶ್ರೀ ಸುಧೀರ ಘೋಷರ ದೃಷ್ಟಿ ಈ ಗ್ರಾಮದ ಮೇಲೆ ಬಿತ್ತು. ಇವರು ಭಾರತೀಯ ಸಾಮುದಾಯಿಕ ವಿಕಾಸ ಯೋಜನೆಯ ಪ್ರಾರಂಭಿಕ ಉತ್ಸಾಹೀ ಪುರಸ್ಕರ್ತರಲ್ಲಿ ಒಬ್ಬರಾಗಿದ್ದರು. ಇವರು ಈ ದುಸ್ಥಿತಿಯನ್ನು ಹೇಗೆ ನಿವಾರಿಸಬಹುದೆಂದು ಯೋಚಿಸುತಿದ್ದರು.

ಅಮೆರಿಕೆಯ ಪಿ ಎಲ್. ೪೮೦ ಯೋಜನೆಯಂತೆ "ಹಸಿವೆಯಿಂದ ಮು

ಹೆದ್ದಾರಿ

ಕ್ರ' ಕಾರ್ಯಕ್ರಮದಂತೆ ಭಾರತಕ್ಕೆ ಆಹಾರ ಧಾನ್ಯಗಳನ್ನು ಪೂರೈಸುತ್ತಿದೆ. ಈ ಧಾನ್ಯಗಳನ್ನು ಮಾರಿ ಬಂದ ಹಣವನ್ನು ಭಾರತದಲ್ಲಿಯೇ ಬಳಸಿ ದೇಶದ ಅಭಿವೃದ್ಧಿ ಕಾರ್ಯವಲ್ಲಿ ನೆರವಾಗುತ್ತಿದೆ. ಶ್ರೀ ಸುಧೀರ ಘೋಷರು ಈ ಯೋಜನೆಯ ಉಪಯೋಗವನ್ನು ಮಾಡಿಕೊಂಡರು. ೧೯೬೩ ರಲ್ಲಿ ೬,೪೦೦ ಟನ್ ಅಮೇರಿಕನ್ ಗೋಧಿಯು ಪುರುಲಿಯಾ ಜಿಲ್ಲೆಯ ಕೆರೆಗಳನ್ನು ಆಳ ಮಾಡಲು ದೊರೆಯಿತು. ಆ ವರ್ಷದಿಂದ ೩೦೦ ಕೆರೆಗಳನ್ನು ಆಳ ಮಾಡಲಾಯಿತು; ೨೦೦ ಕೆರೆಗಳ ಕೆಸರನ್ನು ಎತ್ತಲಾಯಿತು. ಈ ೫೦೦ ಕೆರೆಗಳ ನೀರಿನಿಂದ ೧೫೦೦೦ ಎಕ್ರೆ ಜಮೀನು ನೀರಾವರಿಗೆ ಒಳಗಾಗುವುದು ಸಾಧ್ಯವಾಯಿತು.

ತಾಲತರದಲ್ಲಿ ರಾಧಾನಾಥ ಮಹತೋವಿನ ಭೂಮಿಯಲ್ಲೊಂದು ಕೆರೆಯುದೆ. ಇದರ ಸುತ್ತುಮುತ್ತ ಬೇರೆಯವರ ಗದ್ದೆಗಳಿವೆ. ಈ ಸರೋವರವನ್ನು ಆಳ ಮಾಡಿ ಆ ಗದ್ದೆಗಳಿಗೆ ನೀರು ಹಾಯಿಸಲು ರಾಧಾನಾಥನು ಆಕ್ಷೇಪವೆತ್ತಲಿಲ್ಲ. ಆದರೂ ಕೆರೆಯಲ್ಲಿ ಮೀನು ಹಿಡಿಯುವ ಅಧಿಕಾರ ಈಗಲೂ ಆತನಿಗೇನೇ ಸೇರಿದೆ. ಈ ಕೆರೆಯ ರಿಪೇರಿಗಾಗಿ ಸುಮಾರು ೧೦,೦೦೦ ಕಿಲೋ ಅಮೇರಿಕೆಯ ಗೋಧಿಯು ಬೇಕಾಗಿರಬಹುದು. ಇದರಿಂದ ೧೫೦ ಎಕ್ರೆ ಜಮೀನಿನಲ್ಲಿ ಇಂದು ಉತ್ತಮ ಫಸಲನ್ನು ನಾವು ಕಾಣಬಹುದು. ಇದೇ ರೀತಿಯಲ್ಲಿ ನಾವು ಇಡಿಯ ಜಿಲ್ಲೆಯ ಜಮೀನಿನಲ್ಲಿಯೂ ಸದಾ ಬೆಳೆ ಬೆಳೆಯುವಂತೆ ನೀರಾವರಿಯ ಸೌಕರ್ಯವನ್ನು ಒದಗಿಸುವುದು ಸಾಧ್ಯವಾಗಬಹುದು.

ಅಮೇರಿಕೆಯು ಪಿ. ಎಲ್. ೪೮೦ರಂತೆ ಭಾರತಕ್ಕೆ ನೀಡುತ್ತಿರುವ ನೆರವು ದೇಶಕ್ಕೆ ತಕ್ಷಕಾಲದಲ್ಲಿ ಆಹಾರ ಧಾನ್ಯಗಳನ್ನು ಒದಗಿಸುವುದಲ್ಲದೆ, ದೇಶದಲ್ಲಿ ಆಹಾರದ ಉತ್ಪಾದನೆಯಲ್ಲಿ ಹೆಚ್ಚಳವನ್ನು ಸಾಧಿಸಿ ಸ್ವಾವಲಂಬಿಯಾಗುವುದಕ್ಕೂ ಸಹಾಯ ಮಾಡುತ್ತದೆ. ಅಮೇರಿಕನರ ಈ ಉಪಕಾರಕ್ಕಾಗಿ ಭಾರತೀಯರು ಸದಾ ಕೃತಜ್ಞರಾಗಿಯೇ ಇದ್ದಾರೆ.

ತಾಲತರ ಮತ್ತು ಪುರುಲಿಯಾ ಗ್ರಾಮಗಳು ಬಹಳ ಬಡವಾಗಿದ್ದುವು; ಇಂದು ಅವು ಪ್ರಗತಿಯ ಪಥದತ್ತ ಧಾವಿಸುತ್ತಿದೆ. ಮಳೆಯ ನೀರನ್ನೇ ನಂಬಿ ಕಂಗೆಡುತ್ತಿರುವ ನಮ್ಮ ರೈತರಿಗೆ ನೀರಾವರಿ ಸೌಲಭ್ಯಗಳನ್ನೊದಗಿಸಿ, ಉತ್ತಮ ಬೀಜ, ಗೊಬ್ಬರಗಳನ್ನು ಪೂರೈಸಿ ಆರ್ಥಿಕ ನೆರವನ್ನೂ ನೀಡಿದರೆ, ದೇಶವು ಕೆಲವೇ ವರ್ಷಗಳಲ್ಲಿ ಆಹಾರ ಸ್ವಾವಲಂಬನೆಯನ್ನು ಸಾಧಿಸಬಹುದೆಂದು ಎತ್ತಿ ತೋರಿಸುತ್ತಿವೆ. ಈ ದಿಸೆಯಲ್ಲಿ ದೀರ್ಘ ಪ್ರಯತ್ನ ಸಾಗಬೇಕು. ಸುಧೀರರಂತಹ ಜನ ನಾಯಕರು ನಮಗಿಂದು ಬೇಕು.

ಚಿತ್ರಗಳು.

1. ಸಮಾಜ ವಿಕಾಸ ಕಾರ್ಯಕ್ರಮದಲ್ಲಿ ಉತ್ಸಾಹ ತೋರಿಸಿದ ರಾಜ್ಯ ಸಭಾ ಸದಸ್ಯ ಶ್ರೀ ಸುಧೀರ ಘೋಷ್.

2. ಕೆರೆಯಲ್ಲಿ ನೀರು ತುಂಬಿ ಹರಿಯತೊಡಗಿದನಂತರ, ಗ್ರಾಮಸ್ಥರಿಗೆ ಬಟ್ಟೆ ಒಗೆಯುವ ಕೆಲಸ ಬಹಳ ಸುಲಭವೆನಿಸಿತು. ಹಿಂದೆ ಅದೊಂದು ದೊಡ್ಡ ತಲೆನೋವೇ ಆಗಿತ್ತು.

3. ತಾಲತರದಲ್ಲಿರುವ ರಾಧಾನಾಥ ಮಹತೋವಿನ ಕೆರೆಯಲ್ಲಿ ಮಳೆಯ ನೀರು ತುಂಬಿ ಹರಿಯುತ್ತಿದೆ. ಇದರ ನೀರಿನಿಂದ ೧೫೦ ಎಕ್ರೆ ಜಮೀನಿಗೆ ನೀರು ದೊರೆಯುತ್ತಿದೆ.

4. ಪುರುಲಿಯಾ ಜಿಲ್ಲೆಯ ತಾಲತರದ ಮಹಿಳೆಯೊಬ್ಬಳು ಹೊಸತಾಗಿ ನೀರು ತುಂಬಿದ ಕೆರೆಯಿಂದ ಸಂತೋಷದಿಂದ ನೀರು ಹೊತ್ತುಕೊಂಡು ಹೋಗುತಿದ್ದಾಳೆ

5. ಮೊದಲು ಬಂಜರಾಗಿದ್ದ ಭೂಮಿಯಲ್ಲಿ ಹುಡುಗರು ದನ ಮೇಯಿಸುತ್ತಿದ್ದರು. ಈಗ ಇಲ್ಲಿ ಬಿತ್ತನೆಮಾಡಿರುವುದರಿಂದ ಅವರು ಬೇರೆ ಸ್ಥಳವನ್ನು ಆಯ್ದುಕೊಳ್ಳಬೇಕಾಗಿದೆ.

ಅಣುಗುಂಡು-ಅಹಿಂಸೆ

(ಏಳನೇ ಪುಟದಿಂದ)

ಬೇರಾಗಿ ಅವರು ಹೇಳಿದ್ದರು. ಶಸ್ತ್ರ ಸನ್ಯಾಸದಿಂದ ಚೈನೀ ಅಣುಗುಂಡನ್ನೆದುರಿಸ ಬೇಕೆಂದು ಸರ್ವ ಸೇವಾಸಂಘ ಇಂದು ಹೇಳುತ್ತಿದೆ! ಇತರ ದೇಶಗಳು ಸರ್ವ ಸೇವಾ ಸಂಘದ ತೀರ್ಮಾನಕ್ಕೆ ಬೆಲೆ ಕೊಡುತ್ತವೆಯೇ? ದ್ರಾಕ್ಷೆ ಹುಳಿ ಎನ್ನುವ ನರಿಯಂತೆ ಇವರು ಅಣುಗುಂಡು ಸಂಹಾರಕಾಸ್ತ್ರವೆಂದು ಭಾರತೀಯರು ಹೇಳುತ್ತಿದ್ದು ಅದನ್ನು ತಡೆಗಟ್ಟಲು ಕೇಳಿಕೊಳ್ಳುತ್ತಿದ್ದಾರೆಂದು ಅವರು ಭಾವಿಸಲಿಕ್ಕಿಲ್ಲವೇನು?

ಭಾರತ ಅಣ್ವಸ್ತ್ರದ ಪಂದ್ಯಾಟದಲ್ಲಿ ಭಾಗವಹಿಸುವದು ಅನೈತಿಕ ಹಾಗೂ ಆತ್ಮಹತ್ಯೆ ಇದ್ದು, ಅದು ಭಾರತವನ್ನು ಆರ್ಥಿಕ ಹಾಗೂ ರಾಜಕೀಯ ಗುಲಾಮಗಿರಿಗೆ ತಳ್ಳಿ ಬಿಡುತ್ತದೆಂದು ಸರ್ವ ಸೇವಾ ಸಂಘದವರು ಸ್ಪಷ್ಟವಾಗಿ ಸೂಚಿಸಿದ್ದಾರೆ. ಪಂದ್ಯಾಟದ ಪ್ರಶ್ನೆಯನ್ನು ಮೇಲೆ ಭಾರತೀಯ ಜನ ಸಂಘದವರಿಗೆ ಕೇಳಲಾಗಿರುತ್ತದೆ. ಪಂದ್ಯಾಟ ನಡೆಸಲು ಈಗ ಸಾಧ್ಯವೇ ಇಲ್ಲ. ಅನೈತಿಕ ಹಾಗೂ ಆತ್ಮಹತ್ಯೆಯ ಪ್ರಶ್ನೆಗಿಂತಲೂ ಅದು ನಮ್ಮ ಬಲದ ಹಾಗೂ ಸಾಮರ್ಥ್ಯದ ಪ್ರಶ್ನೆಯೇ ಇದೆ. ಗುಲಾಮಗಿರಿಗೆ ಶಸ್ತ್ರ ಕೊಡಲು ಬೇರೆ ಉಪಾಯಗಳಿಲ್ಲವೇನು? ಈಗ ಪಡೆದುಕೊಳ್ಳುತ್ತಿರುವ ಆರ್ಥಿಕ ನೆರವು, ಚೈನಾ ಹಾಗೂ ಕಮ್ಯೂನಿಸ್ಟರತ್ತ ಅಲ್ಲದೆ ಪಾಕಿಸ್ಥಾನಿಗಳಿಗೆ ತೋರಿಸುತ್ತಿರುವ ಅತಿ ಉದಾರತೆ, ಪರದೇಶಿ ಮತ ಪ್ರಸಾರಕರಿಗೆ ಕೊಡುತ್ತಿರುವ ಉತ್ತೇಜನಕಾರಿ ಸ್ವಾಗತ ಇವೂ ಸಾಕು. ನಮ್ಮ ಕೈಗೆ ಪುನಃ ಗುಲಾಮಗಿರಿಯ ಬೇಡಿ ತೊಡಿಸಲು ಇಂದು ಗುಲಾಮಗಿರಿಯ ರೂಪ ಸ್ಪಷ್ಟವಾಗಿ ಕಂಡು ಬರದಿದ್ದರೂ ನಮ್ಮ ವಿದ್ಯಾಭ್ಯಾಸದ ರೂಪ ಹೇಗಿರುತ್ತದೆ? ಇಂದು ಯಾವ ಭಾಷೆ ಅಧಿಕಾರ ಲಗಾಮನ್ನು ಹಿಡಿದುಕೊಂಡಿರುತ್ತದೆ? ಸರ್ವ ಸೇವಾ ಸಂಘದವರಿಗೆ ಇದು ಗೊತ್ತಿಲ್ಲವೇನು?

ಭಾರತೀಯರಲ್ಲಿ ಇನ್ನೊಂದು ದುರ್ಬಲತೆ ಇದೆ. ನಮ್ಮ ಹೃದಯದ ಮೃದುತ್ವವನ್ನು ಕಾಣಿಸಲು ಶತ್ರುವಿಗೆ ಹೃದಯವನ್ನೇ ತೆರೆದು ತೋರಿಸುವ ಪ್ರವೃತ್ತಿ ನಮ್ಮಲ್ಲಿದೆ. ಶತ್ರು ಸುಮ್ಮಗೆ ಬಿಟ್ಟಾನೇ? ಅವನು ಸಂದರ್ಭ ನೋಡುತ್ತಾ ಇದ್ದಾನೆ.

ಅಹಿಂಸೆಯ ಪ್ರಚಾರಕ್ಕಾಗಿ ಕೆಲವೊಮ್ಮೆ ಕೆಲವರ ಭಾರೀ ಭಾರೀ ಶಬ್ದಗಳನ್ನು ಉಪಯೋಗಿಸುವದೂ ಇದೆ. ಸರ್ವ ಸೇವಾಸಂಘ ಆ ಸಾಲಿಗೆ ಸೇರಿರುತ್ತದೆ. ಗುಲಾಮಗಿರಿಯ ಕುರಿತು ಗಮನ ಸೆಳೆದಿರುವ ಸರ್ವ ಸೇವಾ ಸಂಘಕ್ಕೆ ಇದೀಗ ಸೇರಿರುವ ಕೆಥೊಲಿಕರ ಕಾಂಗ್ರೆಸ್ಸಿನ ಕುರಿತು ಹೇಳಲು ಅದ್ಯಾವ ಶಬ್ದವೂ ಸಿಕ್ಕಿರುವದಿಲ್ಲ. ಆದರೆ ಅವರು ಪೋಪರ ಸ್ವಾಗತಕ್ಕೆ ಸಿದ್ಧವಿದ್ದಾರೆ. ತಾನು ಕ್ರಿಸ್ತಮತ ಪ್ರಸಾರಕನಿದ್ದು, ಆ ಪಥದಲ್ಲಿರುವವರಿಗೆ ಪ್ರೋತ್ಸಾಹವನ್ನೀಯಲಿಕ್ಕಾಗಿ ಭಾರತಕ್ಕೆ ಹೋಗಲಿರುವೆನೆಂದು ಪೋಪ್ ಹೇಳಿರುವದನ್ನು ಸರ್ವ ಸೇವಾ ಸಂಘದವರು ಮರೆತಿರುವರೇನು? ಪ್ರಪಂಚದಲ್ಲಿರುವ ಮತಗಳೆಲ್ಲಾ ಪೊಳ್ಳು— ಮಿಥ್ಯ, ಕೆಥೋಲಿಕ ಮತ ಮಾತ್ರ ಸತ್ಯವೆಂದು ಪೋಪ್ ಹೇಳುವುದನ್ನು ಸರ್ವ ಸೇವಾ ಸಂಘದವರು ಮರೆತಿರುವರೇನು? ಇಂತಹ ಕಾಂಗ್ರೆಸ್ಸುಗಳು ಭಾರತವನ್ನು ಗುಲಾಮಗಿರಿ ತಂದೊದಗಿಸುವದಿಲ್ಲವೇನು?

ಇವರೆಲ್ಲರಿಗೂ ಧರ್ಮಸ್ಥಳದ ದೀಪ ಜ್ಞಾನ ಜ್ಯೋತಿಯನ್ನು ತೋರಿಸಬಲ್ಲುದೇನು? ಆದರೆ ಆ ಜ್ಯೋತಿಯನ್ನು ಕಾಣಬಲ್ಲವರ್ಯಾರು? ಕಣ್ಣಿದ್ದವರುತಾನೇ? ಕಣ್ಣಿದ್ದೂ ಕುರುಡರಂತೆ ವರ್ತಿಸುವವರನ್ನು ಅದೇನು ಮಾಡಲು ಸಾಧ್ಯ?

ಬದುಕಿನ ಎರಡು ಮುಖಗಳು

ಸಾಹಿತ್ಯ ಮತ್ತು ಜೀವನ

ಬರೆದವರು: ಶ್ರೀ ರೋಹಿದಾಸ ನಾಯಕ.

ಸಾಹಿತ್ಯದ ಆಧಾರ ಜೀವನ. ಜೀವನವು ಪರಮಾತ್ಮನ ಸೃಷ್ಟಿಯಾದರೆ ಸಾಹಿತ್ಯವು ಮಾನವ್ಯನದು. ಆನಂದವೇ ಜೀವನದ ಮಹತ್ವಪೂರ್ಣ ಉದ್ದೇಶ. ಮನುಷ್ಯನಿಗೆ ಈ ಆನಂದ ಯಾವ ರೀತಿಯಿಂದ ದೊರೆಯುತ್ತದೆ. ಕೆಲವರಿಗೆ ಐಶ್ವರ್ಯದಿಂದ ಅದು ದೊರೆತರೆ ಕೆಲವರಿಗೆ ವಿಲಾಸೀ ಜೀವನದಿಂದ ಅದು ದೊರೆಯಬಹುದು. ಆದರೆ ಇಂತಹ ಆನಂದವು ನಿಜವಾದ ಆನಂದವಾಗಲಾರದು. ಇದಕ್ಕೆ ವ್ಯತಿರಿಕ್ತವಾಗಿ ಸಾಹಿತ್ಯವು ಆನಂದವನ್ನು ಕೊಡಬಲ್ಲದು. ಈ ಆನಂದದ ಆಧಾರ ಸತ್ಯ ಮತ್ತು ಸೌಂದರ್ಯಗಳು. ಲೌಕಿಕ ಸಾಧನಗಳಿಂದ ಪಡೆಯಬಲ್ಲ ಆನಂದವು ಕ್ಷಣಿಕ ಮತ್ತು ನಶ್ವರವಾದದ್ದು. ಆದರೆ ಸತ್ಯ ಮತ್ತು ಸೌಂದರ್ಯದಿಂದ ದೊರೆಯುವ ಆನಂದವು ಅಖಂಡ ಮತ್ತು ಪರಿಪೂರ್ಣವಾದದ್ದು.

ಸಾಹಿತ್ಯವು ನವರಸದಿಂದೊಡಗೂಡಿದ್ದರೂ ಅವುಗಳಲ್ಲಿ ಶೃಂಗಾರ ರಸವೇ ಪ್ರಧಾನವಾದದ್ದು. ಜೀವನದ ಪ್ರತಿಬಿಂಬವನ್ನೇ ಸಾಹಿತ್ಯದಲ್ಲಿ ಒದಗಮಾಡಿಸುವದರಿಂದ ಒಂದು ತೆರನ ಅವ್ಯಕ್ತ ಆನಂದವನ್ನು ಹೊಂದಲು ಸಾಧ್ಯವಿದೆ. ಸಾಹಿತ್ಯವು ಜನಮನದ ಹೃದಯದಿಂದ ಸಂಸ್ಕೃತಿಯ ತೋಟದಲ್ಲಿ ಅರಳುವ ಕುಸುಮವಾಗಿದೆ. ಇದರಿಂದ ಸ್ಪಷ್ಟವಾಗುವದೇನಂದರೆ ಉತ್ತಮ ಸಾಹಿತ್ಯದ ರಚನೆಯು ಸತ್ಯದ ಆಧಾರದ ಮೇಲೆ ನಿರ್ಮಾಣವಾಗಲು ಶಕ್ಯವಿದೆ.

ಸತ್ಯದ ಆಧಾರದ ಮೇಲೆ ಆತ್ಮದ ಸಂಬಂಧವು ಮೂರು ಬಗೆಯದಾಗುತ್ತದೆ. ಮೊದಲನೆಯ ಸಂಬಂಧ ಜಿಜ್ಞಾಸೆ. ಅದು ದಾರ್ಶನಿಕ ವಿಷಯ, ಎರಡನೆಯದು ಜಿಹಾಸೆ. ಇದು ವೈಜ್ಞಾನಿಕ ವಿಷಯಕ್ಕೆ ಸಂಬಂಧಿಸಿದ್ದಾಗಬಹುದು. ಮೂರನೆಯದು ಆನಂದ. ಅದು ಸಾಹಿತ್ಯದಿಂದ ದೊರೆಯಬಲ್ಲುದು. ಸತ್ಯತೆಯ ಹಿನ್ನೆಲೆಯಲ್ಲಿ ಉತ್ತಮ ಸಾಹಿತ್ಯ ನಿರ್ಮಾಣವಾಗಲು ಶಕ್ಯವಿದೆ. ವಿಶ್ವದಲ್ಲಿಯ ಎಲ್ಲ ವಸ್ತುಗಳನ್ನು ಮಾನವ ತನ್ನದೇ ಆದ ಒಂದು ದೃಷ್ಟಿಕೋನದಿಂದ ತುಲನೆ ಮಾಡಿ ನೋಡುತ್ತಾನೆ. ಮತ್ತು ಅದರ ಕುರಿತು ಉತ್ಪನ್ನವಾದ ಆತನ ಆಂತರಿಕ ಆಂದೋಲನವನ್ನು ಯಾವದಾದರೂ ಒಂದು ರೀತಿಯಿಂದ ಹೊರಗೆಡಹಲು ಪ್ರಯತ್ನಿಸುತ್ತಾನೆ ಅದೇನೆಂದು ಅವ್ಯಕ್ತ ಆನಂದ, ಅದೊಂದು ಅವ್ಯಕ್ತ ಭಾವನೆ ಹಾಗೂ ಅದು ಆತ್ಮ ಭಾವನಾ ಪ್ರಪಂಚಕ್ಕೆ ನೆಮ್ಮದಿಯನ್ನು ಗಂಭೀರ ರೀತಿಯಿಂದ ತಂದೊಡ್ಡುವ ಸಾಧನ. ಆ ತೃಪ್ತಿ ಆ ಆನಂದ ಆತನಿಗೊಬ್ಬನಿಗಲ್ಲದೆ ಆ ವೇಳೆಯಲ್ಲಿ ಅದರ ಕುರಿತು ಅದೇ ಭಾವನೆ ಬೇರೊಬ್ಬನಿಗೆ ಬರುವದು ಅಶಕ್ಯ. ಅದ್ದರಿಂದ ಈ ತನ್ನ ಸಾಧನೆಯನ್ನು ಆತ ಯಾವ ತೆರದಿಂದಾದರೂ ವ್ಯಕ್ತಪಡಿಸಲು ಶ್ರಮಿಸುತ್ತಾನೆ. ಕೆಲವರು ಅದನ್ನು ತಮ್ಮ ಪರಿಸರದವರಿಗೆ ತಿಳಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಕೆಲವರು ಅದನ್ನು ಸಾಹಿತ್ಯದ ನೆರವಿನಿಂದ ತಮ್ಮ ಲೆಕ್ಕಣಿಕೆಯಿಂದ ಹೊಸುತ್ತಾರೆ.

ಕೆಲವರು ಅದರಿಂದಲೇ ಹುಮ್ಮಸ್ಸನ್ನು ತಂದು ಕೊಂಡು ಇದ್ದ ಬೇಸರವನ್ನು ಈ ಹುಮ್ಮಸ್ಸಿನಿಂದ ಕಳೆದು ನಾವಧಾನ ಚಿತ್ತವನ್ನು ಪಡೆಯಲು ಉದ್ಯುಕ್ತರಾಗುತ್ತಾರೆ. ಈ ರೀತಿ ಈ ಕಾಲ್ಪನಿಕ ಅಥವಾ ಭಾವನಾತ್ಮಕ ಸಾಹಿತ್ಯದಿಂದ ಜೀವನದಲ್ಲಿ ಆನಂದವನ್ನೂ ತುಸು ನೆಮ್ಮದಿಯನ್ನೂ ಪಡೆಯುತ್ತಾರೆ.

ಜೀವನವೆಂದರೇನು? ಎನ್ನುವದರ ಕುರಿತು ಸ್ಪಷ್ಟೀಕರಣ ಕೊಡುವದು ಸುಲಭ ಸಾಧ್ಯವಲ್ಲ. ಅದರ ಕುರಿತು ವ್ಯಾಖ್ಯೆ ರಚಿಸಲು ಹೋದರೆ ನೂರಾರು ತರ್ಕ ವಿತರ್ಕಗಳಿಂದ ಹೊಸ ಸಾಹಿತ್ಯವೇ ರಚನೆಯಾದೀತು. ಆದರೆ ಇಷ್ಟು ಮಾತ್ರ ನಿಜ, ತಿಂದುಂಡು ಮಲಗಿ ನಿದ್ರಿಸುವದರಲ್ಲಿ ಜೀವನವಿಲ್ಲ. ಅದು ಪಶು ಜೀವನವಲ್ಲದೆ ಮತ್ತೇನು? ಮನುಷ್ಯನೂ ಒಬ್ಬ ಪ್ರಾಣಿ. ಆದರೆ ತಿಂದುಂಡು ಮಲಗುವದು ಆತ ಜೀವಿಸಿರಲು ಮಾತ್ರ ಬೇಕೇ ಹೊರತು ಜೀವನವನ್ನು ರೂಪಿಸಿಕೊಳ್ಳುವದಲ್ಲ. ಮನುಷ್ಯನಲ್ಲಿ ಸಾಧಾರಣವಾಗಿ ಎರಡು ಪ್ರವೃತ್ತಿಗಳು ಒಡಮೂಡಿರುತ್ತವೆ. ಒಂದು ಪ್ರೇರಕ ಪ್ರವೃತ್ತಿ ಇನ್ನೊಂದು ಮಾರಕ ಪ್ರವೃತ್ತಿ. ಪ್ರೇರಕ ಪ್ರವೃತ್ತಿಯು ಆತನ ಉನ್ನತಿಗೆ ಮತ್ತು ಶ್ರೇಯಸ್ಸಿಗೆ ಸಹಾಯಕವಾದರೆ ಮಾರಕ ಪ್ರವೃತ್ತಿಯು ಆತನನ್ನು ಅಧಃಪತನಕ್ಕೆಳೆಯುತ್ತದೆ. ಅದ್ದರಿಂದ ಪ್ರತಿ ಮಾನವನೂ ಈ ಮಾರಕ ಪ್ರವೃತ್ತಿಯ ಮೇಲೆ ಸಂಯಮತೆಯನ್ನು ಇಟ್ಟುಕೊಳ್ಳುವದು ಅವಶ್ಯ.

ಸಾಹಿತ್ಯವು ಕಾಲ, ದೇಶ, ಪರಿಸ್ಥಿತಿಗನುಸಾರವಾಗಿ ಅವುಗಳ ಪ್ರಭಾವಕ್ಕೊಳಗಾಗಿ ಬದಲಾವಣೆಯನ್ನು ಹೊಂದುತ್ತಿರುತ್ತದೆ. ಉತ್ತಮ ಸಾಹಿತ್ಯವು ನಿತ್ಯ ನೂತನವಾಗಿಯೇ ಇರುತ್ತದೆ. ಇಂದು ನೀವು ಒಂದು ಹೊಸ ಸಾಹಿತ್ಯದ ರಚನೆಯನ್ನು ಮಾಡಿದರೆ ಇನ್ನು ಹತ್ತು ವರ್ಷಗಳ ಮೇಲೆ ಅದೇ ರಚನೆ ನೂತನವಾಗಿಯೇ ತೋರಬಹುದು. ಇದರ ಕಾರಣ ಸಾಹಿತ್ಯವು ಚಿರನೂತನವಾಗಿರುವದೇ ಆಗಿದೆ

ಸಾಹಿತ್ಯವು ಇತಿಹಾಸವೂ ಆಗಬಲ್ಲದು. ಇತಿಹಾಸದಿಂದ ತಿಳಿದು ಬರುವದೇನೆಂದರೆ ಆಯಾ ಕಾಲದ ಸಾಂಸ್ಕೃತಿಕ ಚಟುವಟಿಕೆಗಳ ಸ್ಥಿತಿಗತಿ. ಆದ್ದರಿಂದಲೇ ಸಾಹಿತ್ಯಕ್ಕೆ ನಾವು ಇತಿಹಾಸವೂ ಎನ್ನುವದು.

ಮನುಷ್ಯ ತನ್ನ ಸ್ವಭಾವದಿಂದ ದೇವನಿಗೆ ಸಮನಾಗಬಹುದು. ಆದರೆ ಆತನಿಗೆ ಹಾಗಾಗಲು ಉತ್ತಮ ಪರಿಸರದ ಆವಶ್ಯಕತೆ ಇರುತ್ತದೆ. ಸಮಾಜ ಹಾಗೂ ಸುತ್ತಲಿನ ಪರಿಸರ ವಿವಿಧ ರೀತಿಯ ಒಡನಾಟ ಆತನನ್ನು ವಿವಿಧ ತೆರನಾಗಿ ಬದಲಿಸುತ್ತದೆ. ಸಾಹಿತ್ಯವು ಆ ದೇವತ್ವವನ್ನು ಮರಳಿ ಪಡೆಯಲು ಸಹಾಯಕವಾಗುವಂತೆ ಪ್ರೋತ್ಸಾಹಿಸುತ್ತದೆ. ತ್ಯಾಗವು ಭಾರತೀಯ ಸಾಹಿತ್ಯದ ಆದರ್ಶವಾಗಿದೆ. ಆದ್ದರಿಂದಲೇ ಜೀವನದಲ್ಲಿ ತ್ಯಾಗವೇ ಶ್ರೇಷ್ಠವಾದದ್ದು. ಉಪಭೋಗದಿಂದ ಆತ್ಮ ತೃಪ್ತಿಯಾಗಲು ಸಾಧ್ಯವಿಲ್ಲ. ಈ ಭೋಗ ಲಾಲಸೆಗೆ ಸಂಪತ್ತು, ಆಸೆ ಕೆಲಮಟ್ಟಿಗೆ ಸಹಾಯಕವಾಗಬಹುದು. ಆದರೆ ಎಲ್ಲ ಜೀವನವನ್ನು ರೂಪಿಸುವದು ಕಠಿಣವಾಗುತ್ತದೆ ತ್ಯಾಗಮಯ ಜೀವನವು ನಿಜವಾದ ಜೀವನವಾಗಿ ಪರಿಣಮಿಸಬಹುದು. ತ್ಯಾಗದಿಂದ ದೊರೆಯುವ ತೃಪ್ತಿ ಭೋಗದಿಂದ ದೊರೆಯಲಾರದು ಎಂಬುದರಲ್ಲಿ ಸಂದೇಹವಿಲ್ಲ.

ಸಾಹಿತ್ಯದ ಉನ್ನತಿಯು ಒಂದು ದೇಶದ ಉನ್ನತಿಯೂ ಆಗಿದೆ. ಆದ್ದರಿಂದ ಎಲ್ಲರೂ ಸಾಹಿತ್ಯ ನಿರ್ಮಾಣ ಕಾರ್ಯದಲ್ಲಿ ಭಾಗ ತೆಗೆದು ಕೊಳ್ಳುವಂತಾಗಬೇಕು. ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ನಿರ್ಮಲ ಹೃದಯದಿಂದ ಕೆಲಸ ಮಾಡುವುದರಲ್ಲಿ ಶ್ರೇಯಸ್ಸಿದೆ.

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 43ನೆಯ ವರ್ಷವು ಮುಗಿದು ಸಪ್ಟೆಂಬರ ತಿಂಗಳಿಂದ 44ನೆಯ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಅದಷ್ಟು ತ್ವರ್ಯ ಕಳುಹಿಸಿ ಕೊಟ್ಟು ಸಹಕರಿಸಬೇಕಾಗಿಯೂ ವಿನಂತಿಸಿದ್ದೆವು. ಇನ್ನೂ ಕಳಿಸದವರು ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ಖರ್ಚಿಲ್ಲದೆ ಪಾವತಿ ಮಾಡ ಬಹುದು, ಇಲ್ಲವೆ ಮನಿಯಾರ್ಡರು ಮಾಡಬಹುದು ವಿ.ಪಿ. ಮಾಡಿದರೆ 70 ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಹಣ ಕಳುಹಿಸಿ ಕೊಡುವಂತೆ ಇನ್ನೊಮ್ಮೆ ಬಿನ್ನವಿಸುತ್ತೇವೆ. ಇಲ್ಲವಾದರೆ ನಾವು ಅನಿವಾರ್ಯವಾಗಿ ವಿ.ಪಿ ಮಾಡಬೇಕಾಗುತ್ತದೆ.

ಶಾಲೆ, ಕಾಲೇಜು, ಪಂಚಾಯತ ಮೊದಲಾದ ಯಾವತ್ತೂ ವಾಚನ ಭಂಡಾರಗಳಿಗೆ ಯೋಗ್ಯವಾದ— ಕತೆ, ಕಾದಂಬರಿ, ನಾಟಕ, ಕಾವ್ಯ, ಜೀವನ ಚರಿತ್ರೆ ಇತ್ಯಾದಿ ವಿವಿಧ ಪುಸ್ತಕಗಳು

ಕಾದಂಬರಿಗಳು

ಕುಮಾರಿ ಸುನೇತ್ರ	ತಲಚೇರಿಕರ	0	75
ಬಿಳಿ ಕೊಕ್ಕರೆ	ಗೌರೀಶ ಕಾಯ್ಕಿಣಿ	1	25
ರಾಕ್ಷಸನ ಸೋಲು	ಲಿಂಗಣ್ಣಯ್ಯ	1	50
ಹೊನ್ನಿನ ಕಂಬಳ	ಐಯ್ಯಂಗಾರ್	2	75
ಶಾಂತಿ ಸದನ	ನಾಗೇಶ ಶ್ಯಾನುಭೋಗ	1	50
ಕಾಂಚನಾಪುರದ ವಜ್ರ	ಎಸ್.ಎನ್.ಕೋಡಕಣಿ	1	00
ಕೊಲೆಗಾರ?	ಡಿ. ವಿ. ರಾಘವೇಂದ್ರ	1	00
ಸಿದ್ಧಾರ್ಥ	ಬಿ. ಎಸ್. ಆರ್. ಐಯ್ಯಂಗಾರ್	2	00
ಮಾಲತಿ ಮಂದಿರ	ಹೊ. ಗುಡ್ಡಪ್ಪ	2	00
ತರಳ	ಸ್ವಾಮಿ ಸತ್ಯ ಭಕ್ತರು	1	00
ಬಿರುಗಾಳಿ ಭಾಗ ೧	ನಾ. ಸೀ. ಫಡಕೆ	1	50
ವೈಕುಂಠನ ಮೃತ್ಯು ಪತ್ರ	ಶರತ್	1	00
ಮನ್ನೂ ಮದುವೆ	ಎಂ. ಜಿ. ವೆಂಕಟೇಶಯ್ಯ	2	00
ಬೆಂದ ಜೀವಿ	ರುದ್ರ ಮುನಿಸ್ವಾಮಿ	1	25
ಗುಣ	ಪಿ. ವೆಂಕೋಬಾಚಾರ್ಯ	1	38
ಮುಸಂಗಮನ	ಧನ್ವಂತ	1	25
ಬಂಧನ ಬಾಂಧವ್ಯ	ಸೇವ ನಮಿರಾಜಮಲ್ಲ	1	00
ಜ್ಞಾನನೇತ್ರಭಾ	ಧನ್ವಂತ	1	00
ಇವೆತ್	ಪಿ. ವೆಂಕೋಬಾಚಾರ್ಯ	1	75
ಮಾಧವ ಲೀಲೆ	ವೆಂಕಟೇಶಯ್ಯ	1	50
ಯಾತ್ರಿಕ	ಪ. ಕು. ಸನ್ಯಾಲ	1	50
ಪ್ರಿಯತಮೆಯ ಪಿತೂರಿ	ಎನ್. ಗುಂಡಶಾಸ್ತ್ರಿ	1	50
ಜ್ವೀಸ ರಹಸ್ಯ	ಚರಣ	1	00
ಕೈಮಾಂಸ	ಜನಾರ್ಧನ ಗುರ್ಕಾರ	1	50
ತಿರುಗಿದ ಕುರ್ಚಿ	ಬಾಲಚಂದ್ರ	2	00
ಅಧ್ಯಕ್ಷರ ಮಗಳು	ಎನ್ ನರಸಿಂಹಯ್ಯ	2	00
ಸೇತುವೆಯಲ್ಲಿ ಮರಣ ಶಾಧಿಕ್ತು	ಸೇ ನ. ಮಲ್ಲ	1	25
ಅಂತಃಕರಣ	ಅಯ್ಯಂಗಾರ	1	00
ಕೃಪಾನಿಧಿ	,,	1	00
ಜೀವನ ಜೋಕಾಲಿ	ಎಂ ದಸ್ತಗೀರ್	1	50
ಜ್ವಾಲಾಮುಖಿ	ಡಿ ವಿ. ರಾಘವೇಂದ್ರ	0	63
ಭೀಮಕಾಯ	ಎಸ್. ಎಲ್. ಭೈರಪ್ಪ	2	50
ಗುರುಕುಲ	ಶ್ರೀಕೃಷ್ಣ ಪಾಟೀಲ	1	00
ಕಾಂಚನ ಮೃಗ	ವಿ. ಸ. ಖಾಂಡೇಕರ	3	00
ಕಾಂಚನಾ	ಜಿ. ಬಿ. ಪಾಟೀಲ	1	50
ಗೆದ್ದ ಹೆಣ್ಣು	ನವಗಿರಿನಂದ	1	25
ಕರಿಚರ್ಮ	ಸೇವನಮಿರಾಜ ಮಲ್ಲ	2	50
ಪತ್ತೇದಾರನ ಪರಾಜಯ	(ವಿಕ್ರಮರಾಯ)	1	75
ಅಪರಿಚಿತರು	ನವಗಿರಿನಂದ	1	50
ಅಳಿದ ಮೇಲೆ	ಕಾರಂತ	2	75
ಗೋಳಿನ ಬಾಳು	ಪಿ. ಡಿ. ನಾಯಕ್	0	50
ಮಂಗಳ ಗ್ರಹದ ಮಾಯಾಂಗನೆ	ಕಿದಿಯೂರು	0	75
ಶೋಭಾರಾಣಿ	ಆರ್. ಯು. ಪಾಟೀಲ	0	75
ನಗ್ನ ನೃತ್ಯ	ಪ. ಲೊ. ಬಂಕಾಪುರ	0	75
ಮಾಲಿನಿ	ಶೀಲಾ ರಾವ್ ಕಿದಿಯೂರು	0	50
ಹೆಣ್ಣು ಹೃದಯ	(ಪತ್ತೇದಾರಿ) ಎಚಾರ್ರೆ	0	50
ವಿಲಾಸಿನಿ	ಹ. ರಾ. ಕಿದಿಯೂರು	0	50
ಹುಚ್ಚು ಪ್ರಣಯ	— " —	0	60
ಆತ್ಮಗೆದ್ದಿತು	ಶೀಲಾ ರಾವ್ ಕಿದಿಯೂರು	0	50
ಮಿಲನ	ಪಿ. ಚೆನ್ನಬಸವನ್	0	75
ಹಸುರು ಹಂಸ	ನಚಿಕೇತ	2	00
ಮೂರು ಮುಖ	ನಾರಾಯಣ	1	50
ಎಲೆಮರೆಯ ಹೂ	ಸ ರಾವ ರಾಜು	1	15
ನಂಬಿಕೆಯ ನೆರಳು	ವೈ ಮಹಾಲಿಂಗ ಭಟ್ಟ	1	25
ವೃಂದ	ಪಿ. ವೆಂಕೋಬಾಚಾರ್ಯ	1	50
ಕಿಶುಂಕಲಾ	ನಾ. ಸಿ. ಫಡಕೆ	2	75
ಅವಳ ಸಹೋದರರು	ರಮೇಶ	1	25
ಪದ್ಮಾನದಿಯ ನಾವಿಕ	ಶಿವಾನಂದ ಜೋಶಿ	1	50
ದೇವರ ಸಾಮ್ರಾಜ್ಯ	ಕೆ. ಎಸ್. ಪುತ್ತೂರು	2	00
ಬಂಗಾರದ ಹೆಣ್ಣು	ಎಮ್. ದಸ್ತಗೀರ್	0	87
ರಾಧಾರಾಣಿ	ಮಲ್ಲಾರಿ	0	37
ಯುವಮೂಲಕ	ರಾ.ಮೋ. ವಿಶ್ವಾಮಿತ್ರ	1	25
ಈ ಬಾವಿ ಈ ಬಾಳು	ಹಾ. ಮ. ರಾಮಸ್ವಾಮಿ	1	50
ಹೆತ್ತು ಹೆಡೆಯ ಹಾವು	ದು. ನಿ. ಬೆಳಗಲಿ	1	50
ಅವಳೇ ನನ್ನ ಪ್ರೇಯಸಿ	ಕೆ. ಎಲ್. ಅಣ್ಣಿಗೇರಿ	0	75
ನರಭಕ್ಷಕಗಳು	ಜಿ. ಹೆಚ್. ಪೀಟರ್ ಸನ್	0	80
ಮಾಂಗಲ್ಯ	ಎಸ್. ದಸ್ತಗೀರ್	1	50
ಯಾರು ಶಿಕ್ಷಿಸುವರು?	ಕಾರಂತ	6	00
ನಡು ಹಗಲಿನ ಕಗ್ಗತ್ತಲೆ	ಕು. ಶಿ. ಹ. ಭಟ್ಟ	2	50
ಮೋಹದ ಮಾಯಾಜಾಲ	ವೀರಪ್ಪ ಯಗಟಿ	1	75
ಭಾವಾರ್ಜನೆ	ನಚಿಕೇತ	1	25
ಋಣ ಯಾತ್ರೆ	,,	1	50
ಹೃದಯ ವಿದ್ರಾವಕ	ಛಾಯಾಪತಿ	0	28
ಸನ್ಯಾಸಿಯ ಸೆರೆಗಿನಲ್ಲಿ	ಕೆ. ಕೆ. ಶೆಟ್ಟಿ	0	75
ಬಾಳಿನ ಬೆಡಗು	ನಾರಾಯಣ ಭಟ್ಟ	1	25
ಕುಲವಿಲ್ಲದ ಹೆಣ್ಣು	ಪಿ. ವೆಂಕೋಬಾಚಾರ್ಯ	1	50
ಘಂಟನಾದ	ಕು. ಶಿ. ಹರಿದಾಸ ಭಟ್ಟ	2	00
ಶವಗಳ ಸಾಗಾಟ	ಸುಬ್ರಾಯ ಕೃಷ್ಣ ಹೆಗಡೆ	0	62
ನಾಗರ ನಂಜು	ವಿ. ಜಿ. ಕೃಷ್ಣಮೂರ್ತಿ	1	75
ವಿಷವೃಕ್ಷ	ಬಿ. ವೆಂಕಟಾಚಾರ್ಯ	3	50
ಇನ್ಸ್ಪೆಕ್ಟರರಿಗೆ ಚೋರರ ಪತ್ರ	ಡಿ.ಆರ್.ಎಂ.	0	37

ಕಥೆಗಳು

ಅನ್ನಪೂರ್ಣ	ನಿರಂಜನ	1	00
ರೂಪಾ	ಸರೋಜಿನಿ ಮಹಿಷಿ	1	00
ಜನಕ ಮಹಿತಾದರ್ಶ	ಭೀಮಾಚಾರ್ಯ	1	00
ಸಿಟ್ಯಾಕೊ ರಾಯ ನನವ್ವಾಲ	ಬೆಳಗಲಿ	1	00
ಸುಚ್ಚರಿ ರಾಜ್ಯ	ಶಿವಕುಮಾರ	0	75
ಪದ್ಮಂ ಕತೆಗಳು	ವಿ. ಜಿ. ಭಟ್ಟ	1	00
ಆಣೆಕಲ್ಲು (ಸಂಕಲನ—೧)		0	75
ಪುಟ್ಟ ಮಲ್ಲಿಗೆ	ಗೊರೂರು	1	20
ಸನ್ಯಾಸಿ ದಿಬ್ಬ	ಸಿಂಪಿ ಲಿಂಗಣ್ಣ	0	75
ಮೃತ್ಯು ಮಂಥನ	ಕೆ. ಎಲ್. ಅಣ್ಣಿಗೇರಿ	0	75
ಹಂಬಲ	ಕೃಷ್ಣಮೂರ್ತಿ ಕಿತ್ತೂರ	1	00
ಬಲವಂತದ ಮದುವೆ	ಗೊರೂರು	0	50
ಮಾನವನ ಅವತಾರ	ಪ್ರಕಾಶ ಬಾಡ್ಕರ್	0	80
ದೇಶಭಕ್ತ	ಹೆಗಡೆ	0	50
ಪ್ರಣಯ ಕತೆಗಳು	(ನಾಡಿಗೇರ)	0	50
ಕವಾಳ ಮೋಕ್ಷ	ಸಿರಿಪತಿ	2	00
ಮಹಾತ್ಮ	ಜಿ ಆರ್. ಹೆಗಡೆ	1	25
ಮಾರ್ಗದರ್ಶಕ	ಎಂ ವಿ. ಸೀತಾರಾಮಯ್ಯ	1	50
ಬೃಂದಾವನ	ತ್ರಿವಿಕ್ರಮ	0	75
ಬಂಗಾರದಾಕೆ	ಭೀ. ಗ. ಮು. ದೇಸಾಯಿ	0	75
ವಿಜಯಶ್ರೀ	ಮಿರ್ಜಿ ಅಣ್ಣಾರಾಯ	1	00
ಆದರ್ಶ ಚಿತ್ರಗಳು	ಸಂಕಲನ	1	00
ನಾಲ್ಕು ಕಥೆಗಳು	ಬಿ ಈಶ್ವರ ಭಟ್ಟ	1	00
ನಾಟಕ ಕಥೆಗಳು	ಬಿ ಎಮ್. ರಾವ್	0	75
ಪ್ರವಾದಿ	ದೇಸಾಯಿದತ್ತ ಮೂರ್ತಿ	1	25
ಮಹಾಸತಿ	ವರದರಾಜ ರಾವ್	1	25
ಕಾಂಪ್ರೂಫನ ಚರಿತ್ರೆ	M. S. ಪುಟ್ಟಣ್ಣ	0	63
ಕಾಂಗ್ರೆಸ್ಸಿನ ಇತಿಹಾಸ	ಗುರುನಾಥ ಜೋಶಿ	0	75
ಮೈಸೂರು ನಿರ್ಮಾಪಕರು	ರಾಜಾರಾವ್	1	00
ಅವಿವಾಹಿತೆ	ಶ್ರೀನಿವಾಸ ಹಾವನೂರ	1	25
ಸ್ವಪ್ನಸೇನ	ಸ. ಶ್ರೀನಿವಾಸ ಅಚಾರ್	0	50
ಮಣಿ ಮೇಖಲೆ	ಬಿ. ಶಂಕರ ಭಟ್ಟ	0	75
ಮಾರ್ಕಂಡೇಯನ ಸಾಹಸ	"	0	75
ವಿಶಾಖಾ ಮೃಗರ ಮಾತೆ	ಬಿ. ಎಮ್. ರಾವ್	0	60
ಮಂಗಳ ಗಾಂ	ಎಸ್. ಗುರು ರಾವ್	0	38
ಹತೀವರ್ ತಾಯಿ ಭಾಗ ೧	ಅಯ್ಯಂಗಾರ್	0	31
" " ೨	"	0	37
ಕಲ್ಪನಾ ವಿಲಾಸ	ಪಿ. ವೇಣುಗೋಪಾಲ	0	75
ಗಾಯದ ನೋವು	ಪಿ. ವೆಂಕೋಬಾಚಾರ್ಯ	1	25
ಮೋಪಾಸಾನ ಓಲೆಗಳು	"	1	25
ಬದುಕಿನ ಚಿತ್ರಗಳು	ಎನ್. ವಿ. ರಾವ್	1	00
ಕೊನೆಯ ಹಾಡು	ಎಂ. ಎಸ್. ಶೆಟ್ಟಿ	1	50
ಗಾಯ್ ಡಿ. ಮೋಪಾಸನ ಕತೆಗಳು	ಚುಳಕಿ	1	00
ನಮ್ಮ ಬದುಕು	ಆನಂದ ಕಂದ	0	88
ವೃಷ್ಟಿ ಧಾರೆ	ಧನ್ವಂತ	0	75
ಸೈಮನನ ಕಂದೆ	ಸಂಕಲನ	2	50
ಉರ್ದು ಕಥಾವಳಿ	ಗುರುನಾಥ ಜೋಶಿ	0	50
ಬೇಬಿ ಮತ್ತು ಇತರ ಚಿತ್ರಗಳು	ಎನ್. ಶಾರದಪ್ಪ	0	75
ನ್ಯಾಯ ಕ್ಷಮೆ	ಟಿ. ಆರ್. ಭಾಗವತ	0	50
ಮುದ್ದಿನ ಕಣಿ	ಗೊ. ವೆಂ. ಚುಳಕಿ	1	00
ರೂಪದರ್ಶಿಗಳ ಸಂತೆ	ಎಂ ಬಿ. ಮರಕಿಣಿ	0	94
ತಪತ್ರಯ	ಸಂಕಲನ	0	38
ಬಾಳಿನ ಬೆಳೆ	ಯಶೋದಾ ಬಾಯಿ	0	75
ಅತಿ ದೂರದ ಜಗತ್ತಿನಕ್ಕೆ (ಹೆಗಡೆ ಬಂಧುಗಳು)		0	75
ಮುಂಡೇಸು	ದೇವುಡು	0	50
ದೆವ್ವದ ಕಥೆಗಳು	ಎನ್. ಜಿ ಅಡಿಗ	0	50
ವಾರದ ಹುಡುಗ	ನಿರಂಜನ	1	25
ಮಹಾತ್ಮ	ಮಹಾಬಲ ಭಟ್ಟ	0	38
ರಾಗವಿರಾಗ	ಪಂಡರಿನಾಥಾಚಾರ್ಯ	1	75
ಕಲ್ಪನೆಯ ಕನಸು	ಕೆ. ಜೆ. ಶೆಟ್ಟಿ	0	62
ಅಂತರಂಗದ ಕತೆಗಳು	ಸಂಕಲನ	1	25
ಕಥಾ ಕೌಮುದಿ	ಎಸ್. ಗೋಪಿಚಂದ್ರರಾವ್	1	50
ಗೋ ವಿಜಯ	ಮುಖ್ಯಪ್ರಾಣ ಉಪಾಧ್ಯಾಯ	0	55
ಅಮೆರಿಕದ ಆರು ಕತೆಗಳು	ಕು. ಶಿ ಹ. ಭಟ್ಟ	1	75
ರವೀಂದ್ರರ ಕಿರುಕತೆಗಳು	ಮಾಂಜ್ರೇಕರ	0	95
ನ್ಯಾಯ ದೇವತೆಯ ಮಂದಿರದಲ್ಲಿ	ತಲಚೇರಕರ	1	25
ಕಸ್ತೂರಿ	ಶ್ರೀಪತಿ ವಾಣಿ	1	25
ನಾಡ ಕತೆಗಳು	ಸಂಕಲನ	0	25
ಮಧುವನ	"	3	00
ನಂದಾದೀಪ	ಕೊರಡ್ಕಲ್	0	87
ಭಾರತೀಯ ಕಥೆಗಳು	"	1	12
ನಾರೀ ಹೃದಯ	ಸುಬ್ರಹ್ಮಣ್ಯಂ	1	50
ನಗೆ ನೋಟಗಳು	ಕೆ. ವಿ. ಶೆಟ್ಟಿ	1	25
ಅನ್ನ ದೇವರು ಮತ್ತು ಇತರ ಕಥೆಗಳು	ರೈ	1	00
ಆಕಾಶ ಗಂಗೆ	ಎಸ್. ವೆಂಕಟರಾಜ	1	75
ಪರಾಪರಾಧಗಳು	ಎಮ್. ವಿ. ಹೆಗ್ಡೆ	0	75
ಸಪ್ತ ಸಾಗರ	ಎಸ್ ವೆಂಕಟರಾಜ	0	75
ಚಿಗುರು	ಸಂಕಲನ	0	62
ನನ್ನ ಕಥೆಗಳು	ಕೆ ವಿ ಆಚಾರ್ಯ	0	62
ನಕ್ಕರಾಗ ನಗಬಹುದು	ದೇವಕಿ ಎಂ ಶೆಟ್ಟಿ	0	62
ಮದುವೆ ಸೀರೆ	ಸುಬ್ರಹ್ಮಣ್ಯಂ	1	00
ನೀತಿ ವಿನೋದ ಕತೆಗಳು	ವೀರಪ್ಪ ಯಗಟಿ	1	00
ಪ್ರೇಮ ಪ್ರವಾಹ	ಸಂಕಲನ	0	50

ನಾಟಕಗಳು

ಗಬರಾ	ನಾರಾಯಣ	1	00
ನಳಪಾಕ	ಶ್ರೀವತ್ಸಂ	0	75
ನಂದನೋದ್ಯಾನ	ಅರಿ ಶ್ರೀವ	1	75
ಸಂಸ್ಕೃತಿ	ಮಾಧವಾಚಾರ್ಯ	0	75
ನಾಗಾನಂದ	ಹ. ರಾ. ಕಿದಿಯೂರು	0	25
ಬಾಲ ತಪಸ್ವಿನಿ	ಉಳವೀರ	0	38
ನೌಕರಿಯ ಹುಚ್ಚು	ಬಿರಾದಾರ	0	38
ತಿಳಬೇಕೋ ನಗಬೇಕೋ	ಬಾ. ಹೊಸಮನಿ	0	38
ಅದೃಷ್ಟಪ್ರಜ್ಞೆ	ಜ್ಯೋತಿರ್ಮಯ	0	50
ಎರಡು ಧ್ರುವ	ಎ ಎಸ್. ಮೂರ್ತಿ	0	75
ಒಲೀ ಅವಾಂತರ	ರಘುಸುತ	0	65

ಅವಾಂತರದ ಅಳಿಯ	ಎ. ಎಸ್. ಮೂರ್ತಿ	1	00
ಪಾಪ—ಪುಣ್ಯ	ಈಶ್ವರಚಂದ್ರ ಚಿಂತಾಮಣಿ	1	50
ಆರೋಗ್ಯ ಪ್ರತಾಪ	ಕೊರಡ್ಕಲ್	0	62
ಶಂಭುಕ ವಧೆ	ಎಸ್. ಎಸ್. ಜೈನಿ	0	13
ಭಾಗ್ಯ ಲಕ್ಷ್ಮಿ	ಬಿ ಲಕ್ಷ್ಮಣರಾವ್	1	00
ಶಿಲ್ಪಿ	ಕಾಳೆ ತಿಮ್ಮಪ್ಪ	1	50
ಪ್ರತಿಜ್ಞಾ ಪೂರ್ತಿ	ಕೃಷ್ಣ ಹೆಗಡೆ	0	75
ನೇಮಾಪಥ	ಎಸ್. ಎಲ್. ಸುಬ್ರಹ್ಮಣ್ಯಂ	0	50
ಚಿತ್ರಾಂಗದ	ಕೆ. ಕೆ. ಶೆಟ್ಟಿ	0	60
ವಿಲ್ಲಿನ ರಹಸ್ಯ	ತ ಕೆ. ಮೂರ್ತಿ	1	00
ಮುದ್ರಾರಾಕ್ಷಸ	ಕವಲಿ	0	45
ಸ್ವಪ್ನವಾಸವದತ್ತ	,,	0	45
ಪ್ರತಿಮಾ	,,	0	45
ವೇಣಿ ಸಂಹಾರ	,,	0	45
ಸ್ವತಂತ್ರ ಜೀವನೋಪಾಯ	ಕೆ ಎಚ್. ಶೆಟ್ಟಿ	0	25
ಸಂಶಯ ಪಿಶಾಚಿ	ಕೆ. ಕೆ. ಶೆಟ್ಟಿ	0	62
ಕುಶಲವ	,,	0	50
ವ್ಯಭಿಚಾರಿಣಿ ಯಾರು	,,	1	00
ಪುರುಷ ವಧು	,,	0	25
ಹೆಂಡ್ತಿ ಗಂಡನಾದರೆ	,,	0	25
ದೇಶಭಕ್ತ	,,	1	25
ಪ್ರೇಮ ವಿಜಯ	,,	1	00
ರಂಗಭೂಮಿ	ಎಸ್. ವೆಂಕಟರಾಜ	0	62
ಪ್ರಕಾಶ	ಸರಸ್ವತಿ ಬಾಯಿ ರಾಜವಾಡೆ	2	50
ಮೂರು ಪ್ರಹಸನಗಳು	ಕೊರಡ್ಕಲ್	1	25
ಜೀವನ ಸಂಗ್ರಾಮ	ಪಿ ಶೀನ ಸೆಟ್ಟಿ	1	50
ಸ್ವರಾಜ್ಯ ವಿಜಯ	ಎಮ್. ವಿ ಹೆಗ್ಡೆ	0	50
ಧರ್ಮ ಸಂಕಟ	ಕೊರಡ್ಕಲ್	0	37

ವಿವಿಧ ಪುಸ್ತಕಗಳು

ಪರಮಾಣು-ಇಂಧನಾಳಿ	ಶಿವರಾಮ ಕಾರಂತ	3	00
ನವರತ್ನ	ಬಿ ಎಚ್. ಶ್ರೀಧರ	2	50
ಜನಪದ ಕಥನ ಗೀತೆಗಳು	ಕ. ರಾ. ಕೃ	8	50
ಹೆನಪಿಗಾಗಿ	ಸಂಕಲನ	2	00
ಜ್ಞಾನ ಕೋಶ	ಹ. ರಾ. ಕಿದಿಯೂರು	5	00
ಸಂಸ್ಕೃತಿ	ಸಿ. ಆರ್ ಹೊಸಳ್ಳಯ್ಯ	2	00
ಜ್ಯೋತಿರ್ಗನ್ನಡಿ	ರಮಾಕಾಂತ	2	50
ಯಕ್ಷ—ಯಕ್ಷಿ	ಅಂಬೀಕಾತನಯದತ್ತ	1	50
ಸಾಹಿತ್ಯ ಸಮೀಕ್ಷೆ	ಧಾರವಾಡಕರ್	1	50
ಸುಲಭದಲ್ಲಿ ಪ್ರಶ್ನೆ ಪದ್ಧತಿ	ಕೇಶವ ಶರ್ಮ	1	00
ಸಂಸ್ಥಾನಿಕರು	ಗೋವಿಂದಮೂರ್ತಿ	1	50
ಬ್ರಹ್ಮಚರ್ಯವೇ ಜೀವನ	ಶಿವಾನಂದ	3	00
ಉದರದ ಆರೋಗ್ಯ	ಶಿವಾನಂದ	2	00
ಕಾಮ ಶಿಕ್ಷಣ	ಡಾ. ವೆಂಕಟಗಿರಿ ರಾವ್	1	00
ಹಾರ್ಮೋನಿಯಂ ಬೋಧನೆ ಕ್ರಮ		2	00
ಆಧುನಿಕ ರೈತ ಭಾಗ ೧	ಆಕಳವಾಡಿ	0	75
do ಭಾಗ ೨	do.	0	75
ನಮ್ಮ ನೂತನ ರಾಜ್ಯಘಟನೆ	ರಾವ್	0	50
ಭಾರತದ ರಾಜ್ಯಘಟನೆ	ನಾಡಿಗೇರ ಶಿವರಾಮ	1	50
ಮೈಸೂರು ರಾಜ್ಯ	ಆಕಳವಾಡಿ	0	87
ಭಾರತೀಯ ಚರಿತ್ರೆ	ಕವಲಿ	0	50
ತಾಲೂಕು ಬೋರ್ಡುಗಳ ನಿಯಮಗಳು		1	25
ಕುಟುಂಬ ಯೋಜನೆ		0	25
ಭಾರತದಲ್ಲಿ ರಾಜಕೀಯಪಕ್ಷ	ರಾಜಗೋಪಾಲ	0	62
ಭೌತಿಕ ದರ್ಶನ	ಬಡೆಕ್ಕಿಲ ಕೃಷ್ಣ ಭಟ್ಟ	1	00
ಚಂದ್ರಲೋಕಕ್ಕೆ ಪ್ರಯಾಣ	ರಾ. ಆಚಾರ್ಯ	1	00
ಸಾಮಾನ್ಯ ರೋಗಗಳು	ಡಾ॥ ಐತಾಳ	1	00
ಮನೆಮದ್ದು	ಡಾ॥ ಕೊರಡ್ಕಲ್	2	00
ಸುಲಭದಲ್ಲಿ ಇಂಗ್ಲಿಷ್ (ಸಾದಾ)	ಕೊರಡ್ಕಲ್	2	00
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	U L. ಆಚಾರ್	1	50
ಶಿಕ್ಷಣದ ಧ್ಯೇಯಗಳು (ಸಾದಾ ಪ್ರತಿ)	K B ಆರ್. ರಾವ್ & U L. ಆಚಾರ್	2	25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	ಕು. ಶಿ ಭಟ್ಟ	2	00
ಹಿರೋಶಿಮಾದಿಂದ ಜಿನೇವಾ	ರಾ. ಆಚಾರ್ಯ	1	00
ಭಾರತದ ಅಂಗ-ಕಾಶ್ಮೀರ	ರಘುನಂದನರಾವ್	0	31
ಏಶಿಯಾದ ಸಂಪತ್ತು	ಕು. ಶಿ ಹರಿದಾಸ ಭಟ್ಟ	2	00
do ಉತ್ತಮ ಪ್ರತಿ	,,	2	50
ಹರಿಭಕ್ತಿ ಸಾರ		0	19
ವೈಯಕ್ತಿಕ ಆರೋಗ್ಯ	ವಿನಾಯಕರಾವ್	0	15
ಕನ್‌ಫ್ಯೂಷಿಯಸ್	ಶಿವರಾಮರಾವ್	0	40
ಜ್ಞಾನಜ್ಯೋತಿ	ನಾರಾಯಣದಾಸರು	0	50
ವೇದಾಂತರಹಸ್ಯೋಪನ್ಯಾಸಗಳು	ಚಿದಾನಂದ	0	50
ವ್ಯಾಪಾರದಲ್ಲಿ ಹೆಚ್ಚು ಹಣ ಗಳಿಸುವ ಗುಟ್ಟು	ಬಾಪೂ ಶಿರಹಟ್ಟಿ	1	50
ಗಾಂಧೀ ತತ್ವದರ್ಶನ	ಹ ರಾ. ಕಿದಿಯೂರು	1	00
ಹಳ್ಳಿಯ ಚಿತ್ರಗಳು	ಗೊರೂರು	1	25
ಕವಿದರ್ಶನ	ಜವರೇಗೌಡ	1	75
ಗೀತ ಧ್ವನಿ	ಕೆ. ನಾರಾಯಣ ಸ್ವಾಮಿ	1	50
ಹಣದ ವಿನಿಮಯದ ಬೆಲೆ	ರಾಮಕೃಷ್ಣ ರೆಡ್ಡಿ	1	50
ಭಾರತೀಯ ಮಹಾ ವ್ಯಕ್ತಿಗಳು	ಕಿದಿಯೂರು	2	00
ವಿಖ್ಯಾತ ಜೀವಿಗಳು	"	0	75
ಅನ್ನಪೂರ್ಣಾ ಹಣಿ	ಕೌಲಗಿ	0	75
ಮಹಾತ್ಮಾಗಾಂಧಿ	ವಿ.ಎಸ್ ನಾರಾಯಣರಾವ್	2	25
ಅಬ್ರಹಾಂಲಿಂಕನ್	S. ಅನಂತನಾರಾಯಣ	1	50
ಸಂಸ್ಥಾನಿಕರು	ಗೋವಿಂದಮೂರ್ತಿ ದೇಶಾಯಿ	1	50
ಸಂಯುಕ್ತರಾಷ್ಟ್ರ ಸಂಘ	ಸಂಕಲನ	1	50
ಮಹಾತ್ಮಾಗಾಂಧೀಜಿ	ಪಂಡಿತ. ಜಿ ಎ. ಕವಲಿ	0	75
ಮುದ್ರಾರಾಕ್ಷಸ	ಜಿ. ಎ. ಕವಲಿ	0	45
ವಿದ್ಯಾರಣ್ಯರು	ಚಿದಂಬರಾನಂದ	0	40
ಶ್ರೀ ಶಿವಭಕ್ತಪಿತ	ಜಿ. ಎ ಕವಲಿ	0	40
ನೇತಾಜಿ ಸುಭಾಷ್‌ಚಂದ್ರ ಭೋಸ್	"	0	40
ನೈಷಧೀಯ ಚರಿತೆ	"	0	45
ಬಾಲರ ಬಂಧು	ಕೆ. ಜಿ. ಶೆಣೈ ಕಡಂದಲೆ	0	30
ಸಜೀವಿಗಳ ಸಮಸ್ಯೆ	ರಾವ್	1	50
ಗಾಂಧಿಯ ಅರ್ಥಶಾಸ್ತ್ರ	ನಾರಾಯಣರಾವ್	0	25
ನಮ್ಮ ಶರೀರದ ರಚನೆ	ಎಚ್ಚೆಸ್ಕೆ	0	83
ಸತ್ಯರೂಪ ನಿತ್ಯಾನಂದ	ಮಾಲವೀಯ	0	50
ಹಣದ ವಿನಿಮಯದ ಬೆಲೆ	ಜಿ. ಆರ್. ರೆಡ್ಡಿ	1	50
ಗೀತಾ ಧ್ವನಿ	ಕೆ. ನಾರಾಯಣ ಸ್ವಾಮಿ	1	50
ವಿಚಿತ್ರ ವಿಶ್ವ (ಸಂಗ್ರಹ)	ಹ. ರಾ. ಕಿದಿಯೂರು	1	50
ಗಾಂಧಿ ತತ್ವದರ್ಶನ	ಹ ರಾ. ಕಿದಿಯೂರು	1	00
ಗಣ ನಿರೂಪಣೆ	ಚಿದಂಬರಯ್ಯ	0	75
ಗುರು ಶಿಷ್ಯರ ಅವನತಿ	ಶಂಕರ ಜೋಯಿಸ	0	50
ಶಿಶ್ನ ಜ್ಞಾನ	ಮುದ್ದಣ್ಣ ಬಲ್ಲಾಳ	0	50
ಭಾರತದಲ್ಲಿ ಜಾತಿ ಭೇದ	ಸುಬ್ರಹ್ಮಣ್ಯಂ	1	00
ಜೀವನ ಕಲೆ	ಗ. ನಾ. ಪಂಡಿತ	0	62
ಹೀಗಿದೆ ಜಗತ್ತು	ಸಂಚಾರಿ	1	00
ಬಾಳಿನ ಹಾದಿ	ಎಚ್. ಎಸ್. ನೆಗಳೂರ	0	50
ಯಶೋಧರ ಚರಿತೆ	ಕೆ ಪಿ ವೆಂಕಪ್ಪ ಶೆಟ್ಟಿ	1	50
ಸತ್ಯರಾಜಾಪೂರ್ವದೇಶ ಯಾತ್ರೆಗಳು	ರಾ ರಾ.	0	50
ಮುಂದಿನ ದೇವರು	ಕೆ. ಕೆ. ಶೆಟ್ಟಿ	0	25
ಗ್ರಾಮೋದ್ಧಾರ	ಸಣಕಲ್ಲ	0	75
ಕನ್ನಡದಲ್ಲಿ ವಿಡಂಬನ ಸಾಹಿತ್ಯ	ಸ್ವಾಮಿ	1	37
ಬರ್ನ್ಯೋ ನವಪ್ರಜಾ	ಕೈಲಾಸಂ	0	50
ಅಪರೋಕ್ಷಾನುಭೂತಿ	ಹೊ.ಅ.ಮಾ.ಶಾಸ್ತ್ರಿ	0	50
ವೇದಾಂತರೂಪರೇಖೆ	ಚಿದಂಬರಯ್ಯ	0	75
ಗಾಂಧಿ ಮಾರ್ಗ	ಹ. ರಾ ಕಿದಿಯೂರು	0	50
ಗಾಂಧೀ ರೀತಿ	ಹ. ರಾ. ಕಿದಿಯೂರು	0	50
ಮಾನವನ ಸನಾತನ ಧರ್ಮ	ಭಟ್ಟಾಚಾರ್ಯ	0	25
ಯುದ್ಧರಂಗದಿಂದ	ಆರ್. ಎ ರಾವ್	1	25
ಅರವಿಂದ ದರ್ಶನ	ಆರ್. ಕೆ. ಜೋಶಿ	1	00
ಗೀತಾ ಸಾರೋಕ್ತಿ	ಅನಂತ ಅಪಟೆ	0	75
ಅಳಿಯ ಸಂತಾನ ಕಾನೂನು	—	0	50
Aliyasanthana Act	—	0	75
ಗೀತೆಯ ಕೈಗನ್ನಡಿ	ಚಿದಂಬರಯ್ಯ	1	00

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ,
ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ಡಾ॥ ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗುವಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ 1-25 (ಟ ಖ.ಪ್ರತ್ಯೇಕ)

ನವಭಾರತ ಪುಸ್ತಕ ಭಂಡಾರ, ಉಡುಪಿ.

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧.

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯ
ಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು
ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ನಮ್ಮ - ನಮ್ಮವರು

ವಿಜಯಲಕ್ಷ್ಮಿ ಪಂಡಿತ್

ಪ್ರಪಂಚದ ಯಾವ ರಾಷ್ಟ್ರದ ಶಾಸನ ಸಭೆಯೂ, ತಂದೆ, ಮಗ, ಮಗಳು, ಮೊಮ್ಮಗಳು ಅದರ ಸದಸ್ಯರಾಗಿ ಕಾರ್ಯವೆಸಗಿದುದನ್ನು ಕಂಡಿರಲಿಕ್ಕಿಲ್ಲ. ಆದರೆ ಭಾರತದ ಶಾಸನ ಸಭೆ ಮಾತ್ರ ಆ ಭಾಗ್ಯ ಪಡೆದಿದೆ. ಈಚೆಗಿನ ಸುಮಾರು ನಾಲ್ವತ್ತು ವರ್ಷಗಳ ಅವಧಿಯಲ್ಲಿ ನೆಹರೂ ಕುಟುಂಬ ನಮ್ಮ ಶಾಸನಾಂಗದಲ್ಲಿ ಮಹತ್ವದ ಪಾತ್ರ ನಿರ್ವಹಿಸಿದೆ. ಮೋತೀಲಾಲ ನೆಹರೂ ಅವರು ಸ್ವಾತಂತ್ರ್ಯ ಪೂರ್ವದ ಶಾಸನ ಸಭೆಯಲ್ಲಿ ಒಬ್ಬ ಪ್ರಭಾವೀ ಸದಸ್ಯರಾಗಿದ್ದರು. ಅವರ ಪುತ್ರ ಜವಾಹರಲಾಲ ನೆಹರೂರವರು, ಸ್ವಾತಂತ್ರ್ಯದ ಬಳಿಕದ ಹದಿನೇಳು ವರ್ಷಗಳ ಕಾಲದ ಅವಧಿಯಲ್ಲಿ ಲೋಕಸಭೆಯ ನೇತಾರರಾಗಿ ಮಾರ್ಗದರ್ಶನ ಮಾಡಿದರು. ಇದೀಗ ಅವರ ಮಗಳು ಇಂದಿರಾ ಗಾಂಧಿ ಸಚಿವೆಯಾಗಿದ್ದಾರೆ. ಅವರ ತಂಗಿ ಮೊನ್ನೆ ಫುಲಪುರದಲ್ಲಿ ಜರಗಿದ ಉಪಚುನಾವಣೆಯಲ್ಲಿ ಹೆಸರಿಗನುಗುಣವಾದ ವಿಜಯವನ್ನು ಗಳಿಸಿ ಆರಿಸಿ ಬಂದಿದ್ದಾರೆ.

ವಿಜಯಲಕ್ಷ್ಮಿ ಪಂಡಿತರ ಆಯ್ಕೆ ಖಚಿತ ಎಂದು ಎಲ್ಲರೂ ತಿಳಿದಿದ್ದರು. ಕಾರಣ, ಅವರ ವೈಯಕ್ತಿಕ ಪ್ರತಿಭೆ ಹಾಗೂ ನೆಹರೂ ಕುಟುಂಬದ ಮೇಲೆ, ಆ ಹೆಸರಿನ ಮೇಲೆ ಭಾರತದ ಜನರಿಗೆ ಇರುವ ಪ್ರೇಮ. ವಿಜಯಲಕ್ಷ್ಮಿಯವರು ರಾಜಕಾರಣದಲ್ಲಿ ನುರಿತವರು. ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಪ್ರಥಮ ಮಹಿಳಾ ಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದವರು. ಇಂಗ್ಲಂಡ್, ರಶ್ಯ ಅಮೇರಿಕಗಳಲ್ಲಿ ಭಾರತದ ಪ್ರತಿನಿಧಿಯಾಗಿ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಭಾರತದ ನಿಯೋಗದ ನಾಯಕರಾಗಿ ಯುನೈಟೆಡ್ ನೇಶನ್ಸ್ ಜನರಲ ಎಸೆಂಬ್ಲಿಯ ಪ್ರಪ್ರಥಮ ಮಹಿಳಾ ಅಧ್ಯಕ್ಷರಾಗಿ, ರಾಜ್ಯಪಾಲರಾಗಿ ಅವರು ಅಪಾರ ಅನುಭವವನ್ನು ಗಳಿಸಿದ್ದಾರೆ.

ಇದೀಗ ಅಣ್ಣನ ಮರಣದಿಂದ ತೆರವಾದ ಸ್ಥಾನವನ್ನು ತಂಗಿ ತುಂಬಿ ಕೊಟ್ಟಿದ್ದಾಳೆ. ತಂಗಿ ವಿಜಯಲಕ್ಷ್ಮಿಯವರು ಕಾಂಗ್ರೆಸ್ ಸಂಸ್ಥೆಗೆ ಹೆಚ್ಚಿನ ಶಕ್ತಿ ಹಾಗೂ ಬಲವನ್ನು ಒದಗಿಸಿ ಕೊಡುವುದಲ್ಲದೆ, ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಇನ್ನೂ ಹೆಚ್ಚಿನ ಧೈರ್ಯವನ್ನು ಈಯುವ ಸಾಮರ್ಥ್ಯ ಉಳ್ಳವರು. ಮುಂದಿನ ಚುನಾವಣೆಯ ತನಕ ಅವರು ಸಚಿವ ಸ್ಥಾನ ಅಲಂಕರಿಸಲಾರರೆಂಬ ಸುದ್ದಿ ನಿಜವಾದರೆ, ಆಗ ಪಾರ್ಲಿಮೆಂಟಿನ ಚರ್ಚೆಯಲ್ಲಿ (ಅವರ) ಸ್ವರ ಕೇಳಬೇಕು ನಾವು.

ಶ್ರೀ ಆರೂರು ಶ್ರೀಪತಿ ರಾವ್.

"ತಂದೆಯಂತೆ ಮಗ, ಗುರುವಿನಂತೆ ಶಿಷ್ಯ" ಎಂಬ ಮಾತೊಂದು ನಮ್ಮಲ್ಲಿ ರೂಢಿಯಲ್ಲಿದೆ. ಈ ಮಾತಿಗೆ [illegible] ಉಡುಪಿಯ ಸುಪ್ರಸಿದ್ಧ ವಕೀಲರಾದ ಆರೂರು ಲಕ್ಷ್ಮೀನಾರಾಯಣ ರಾಯರ ಪುತ್ರ ಶ್ರೀ ಆರೂರು ಶ್ರೀಪತಿ ರಾಯರು ತಂದೆಯಂತೆ ವಕೀಲರಾಗಿ ಪ್ರಖ್ಯಾತರಾಗದಿದ್ದರೂ, ತಂದೆಯಂತೆ ಸ್ಥಾನಮಾನ [illegible] ಕಾರ್ಯಕ್ಷೇತ್ರವಾದ ಸಹಕಾರಿ ಕ್ಷೇತ್ರದಲ್ಲಿ ಇವರು ಬೆಳೆದು ಬಂದಿರುವರು.

ಬಿ. ಕಾಂ. ಪದವೀಧರರಾದ ಶ್ರೀಪತಿ ರಾಯರು ಇಂದು ಜಿಲ್ಲೆಯ ಸಹಕಾರಿ ಕ್ಷೇತ್ರದಲ್ಲಿ ಸುಪ್ರಸಿದ್ಧರೆನಿಸಿ ಕೊಂಡಿರುತ್ತಾರೆ. ಶಂಕರ್ ವಿಟ್ಠಲ್ ಮೋಟರ್ ಕಂಪೆನಿಯ ವರ್ಕ್ಸ್ ಡೈರೆಕ್ಟರರಾಗಿ ಕೆಲಸ ಆರಂಭಿಸಿದ ರಾಯರು ಇದೀಗ ಹಲವಾರು ರಂಗಗಳಲ್ಲಿ ಹತ್ತು ಹಲವು ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. ಮೋಟಾರು ವಾಹನಗಳ ಬಿಡಿಭಾಗಗಳ ಮಾರಾಟ ಮಾಡುವ ಯುನೈಟೆಡ್ ಟ್ರೇಡಿಂಗ್ ಕಂಪೆನಿ, ಭಾರತದಲ್ಲಿ ಸುಪ್ರಸಿದ್ಧವೆನಿಸಿದ ಆಟೋಮೊಬೈಲ್ ಎಂಜಿನ್ ಮೆಕಾನಿಕ್‌ಗಳ ಮಾರಾಟದ ಏಜೆನ್ಸಿ, ಜಾವಾ ಮೋಟಾರ್ ಸೈಕಲುಗಳ ವಿತರಣ ಹೀಗೆ ಹಲವಾರು ಕ್ಷೇತ್ರದಲ್ಲಿ ಅವರು ಈ ಸಂಸ್ಥೆಗಳ ಮೇಲ್ವಿಚಾರಕರಾಗಿ ದುಡಿಯುತ್ತಿದ್ದಾರೆ. ಅಂಬಾಸಡರ್ ಕಾರುಗಳ ಮಾರಾಟವೂ ಇವರ ಮೂಲಕವೇ ನಡೆಯುತ್ತಿದೆ.

ವಾಹನಗಳ ಕುರಿತಾದ ಸಲಹೆ ಸೂಚನೆ ನೀಡುವುದರಲ್ಲಿ ಇವರು ನಿಪುಣರು. ಇವರ ಸಲಹೆ ಸೂಚನೆಗಳಲ್ಲಿ ಜನರಿಗೆ ನಂಬಿಕೆ ಇರುವುದರಿಂದಲೇ ಎಲ್ಲರೂ ಇವರ ಸಲಹೆ ಕೇಳಲು ಬರುತ್ತಾರೆ. ಮೋಟಾರು ವಾಹನ ಹಾಗೂ ಕಾರುಗಳ ಮಾರಾಟದಲ್ಲಿ ಇವರ ಸಂಸ್ಥೆ ದಾಖಲೆಯನ್ನು ಸ್ಥಾಪಿಸಿದೆ. ಇದಕ್ಕೆ ಕಾರಣ ಈ ಸಂಸ್ಥೆಗಳೆಲ್ಲವುಗಳ ಮೇಲ್ವಿಚಾರಕರಾದ ಶ್ರೀಪತಿ ರಾಯರು.

ಅವರನು [illegible] ನಗುನಗುತ್ತಾ ಇವರು ಉತ್ತಮ ಭಾಷಣಗಾರರೂ ಹೌದು. ಮೋಟಾರುಗಳ ಬಿಡಿ ಭಾಗಗಳನು ಸುಲಭವಾಗಿ ಗುರುತಿಸಬಲ್ಲ ಇವರಿಗೆ ಲಲಿತ ಕಲೆಗಳಲ್ಲಿ ವಿಶೇಷ ಆಸಕ್ತಿ ಇದೆ. ಸಾಹಿತ್ಯದ ಕುರಿತು ಇವರು ಆಸಕ್ತರು. ತರುಣ ಶ್ರೀಪತಿ ರಾಯರು ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಕೀರ್ತಿಗಳಿಸುವರೆಂಬುದಕ್ಕೆ ಸಂದೇಹವಿಲ್ಲ.

ಕ್ಷಯರೋಗದ ಕುರಿತು ನೀವು ತಿಳಿಯಬೇಕಾದುದು

ಶ್ವಾಸಕೋಶದ ಕ್ಷಯರೋಗವು ಅಂಟು ರೋಗವಾಗಿದೆ. ಕ್ಷಯರೋಗವಿರುವ ಮನುಷ್ಯನಿಂದ ಇದು ಒಬ್ಬ ಆರೋಗ್ಯಶಾಲಿ ಜನಕ್ಕೆ ಹರಡಬಲ್ಲದು. ರೋಗಿಯ ಶ್ವಾಸಕೋಶಗಳಲ್ಲಿರುವ ರೋಗ ಹೇತುವಾದ ಕ್ರಿಮಿಗಳು ಕೆಮ್ಮುವಾಗ ಎಂಜಲು ಮತ್ತು ಜೊಲ್ಲಿನಲ್ಲಿ ಹೊರಗೆ ಬರುತ್ತವೆ. ಕ್ಷಯರೋಗವಿರುವ ಮನುಷ್ಯನು ಎಂಜಲನ್ನಾಗಲೀ ಜೊಲ್ಲನ್ನಾಗಲೀ ಉಗುಳಿದರೆ ಕ್ರಿಮಿಗಳು ಹೊರಬಂದು ಯಾವನೇ ಸಾಂಸರ್ಗಿಕ ನಿರೋಗಿಗೆ ಅದು ಅಂಟಿಕೊಳ್ಳುತ್ತದೆ.

ಈ ಕ್ರಿಮಿಗಳು ಹೊಸ ಗಾಳಿ ಮತ್ತು ಸೂರ್ಯನ ಬೆಳಕಿನಲ್ಲಿ ಊರ್ಜಿತಗೊಳ್ಳುವುದಿಲ್ಲ. ಎದೆಯ ಕ್ಷ-ಕಿರಣವೊಂದು ಶ್ವಾಸಕೋಶದ ಕ್ಷಯರೋಗವನ್ನು ಸೂಚನೆಗಳು ತಾವಾಗಿ ಕಾಣಿಸಿಕೊಳ್ಳುವ ಎಷ್ಟೋ ಮೊದಲೇ ತೋರಿಸುತ್ತದೆ. ದಣಿವು ರುಚಿ ಮತ್ತು ಭಾರ ಕಡಿಮೆಯಾಗುವುದು, ಪದೇ ಪದೇ ಕೆಮ್ಮುವುದು, ಜ್ವರ, ರಾತ್ರಿ ಬೆವರುವುದು, ಮತ್ತು ಹಲವು ಸಂದರ್ಭಗಳಲ್ಲಿ ರಕ್ತ ಉಗುಳುವುದು ಇವೇ ಸಾಮಾನ್ಯವಾಗಿ ಕ್ಷಯರೋಗದ ಚಿಹ್ನೆಗಳು. ನಿಮಗೆ ಈ ಚಿಹ್ನೆಗಳಲ್ಲಿ ಯಾವುದಾದರೂ ಒಂದು ಇದೆ ಎಂದು ಅನುಮಾನ ಬಂದರೆ ಕೂಡಲೇ ನಿಮ್ಮ ಡಾಕ್ಟರರನ್ನು ನೋಡಿರಿ. ಎದೆಯ ಒಂದು ಕ್ಷ-ಕಿರಣ ತೆಗೆಸಿರಿ ಮತ್ತು ನಿಮ್ಮ ಕುಟುಂಬದವರೆಲ್ಲರ ಎಕ್ಸ್‌ರೇ ಮಾಡಿಸಿರಿ.

ಟಿ ಬಿ ಮೊಹರು ಮಾರಾಟ ಚಳವಳವು ನಿಮಗೆ ಈ ವಿಚಾರ ಪ್ರಚಾರ ಮಾಡುತ್ತದೆ ಮತ್ತು ಈ ರೋಗದ ಕುರಿತು ಹೆಚ್ಚಿನ ವಿವರ ತಿಳಿಯಲು ನಿಮ್ಮ ರಾಜ್ಯದ ಟಿ ಬಿ ಸಂಘದ ಸಂಪರ್ಕ ಬೆಳೆಸುವುದು ನಿಮ್ಮ ಕೆಲಸವಾಗಿದೆ. ಈ ಚಳವಳದ ಅವಧಿಯಲ್ಲಿ ಟಿ ಬಿ ಮೊಹರುಗಳನ್ನು ಕೊಂಡುಕೊಂಡು ನಿಮ್ಮ ರಾಜ್ಯದ ಟಿ ಬಿ ಸಂಘವನ್ನು ಬಲಪಡಿಸುವುದು ನಿಮ್ಮ ಪಾಲಿನ ಕೆಲಸವಾಗಿದೆ. ಒಂದು ಮೊಹರಿನ ಬೆಲೆ 10 ಪೈಸೆ ಮಾತ್ರ. ಮೊಹರುಗಳು —ದಕ್ಷಿಣ ಕನ್ನಡ ಜಿಲ್ಲಾ ಟಿ ಬಿ ಎಸೋಸಿಯೇಶನ್, ಮಂಗಳೂರು ಮತ್ತು ಅವರ ಬೇರೆ ಬೇರೆ ಏಜನ್ಸಿಗಳಲ್ಲಿ ದೊರೆಯುತ್ತವೆ

15ನೆ ಟಿ ಬಿ ಮೊಹರು ಮಾರಾಟ ಚಳವಳ

(ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ ನ್ಯೂ ಡಿಲ್ಲಿ ಇವರ ಹೊಣೆಗಾರಿಕೆಗೊಳಪಟ್ಟುದು)

ಸ್ಥಳದಾನ ಮಾಡಿದವರು.

Singareni Collieries Co Ltd ,
Hyderabad.

ಓಂ ಶ್ರೀ ಮಂಜುನಾಥಾಯನಮಃ

ಸರ್ವಧರ್ಮ ಮತ್ತು ಕನ್ನಡ ಸಾಹಿತ್ಯ ಸಮ್ಮೇಳನಗಳು

ಧರ್ಮಸ್ಥಳ, ದ. ಕನ್ನಡ

ಮಹಾಶಯರೆ,

ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳ ಮೂವತ್ತೆರಡನೆಯ ಅಧಿವೇಶನವು ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ 1964ನೆಯ ಇಸವಿ ಡಿಸೆಂಬರ್ ತಿಂಗಳು 2 ಮತ್ತು 3 ನೆಯ ತಾರೀಕುಗಳಲ್ಲಿ ನಡೆಯುವುವು ಈ ಸಮ್ಮೇಳನಗಳ ಉದ್ಘಾಟನೆಯನ್ನು ಮೈಸೂರು ರಾಜ್ಯದ ಹಣಕಾಸಿನ ಸಚಿವರಾದ ಸನ್ಮಾನ್ಯ ಶ್ರೀಮಾನ್ ಬಸಪ್ಪ ದಾನಪ್ಪ ಜತ್ತಿ, ಬಿ. ಎ. ಎಲ್. ಎಲ್. ಬಿ. ಅವರು 2-12-1964ನೆಯ ತಾರೀಕು ಬುಧವಾರ ಮಧ್ಯಾಹ್ನ 4 ಗಂಟೆಗೆ ನೆರವೇರಿಸಲು ದಯೆಯಿಟ್ಟು ಸಮ್ಮತಿಸಿರುತ್ತಾರೆ.

ಈ ಸಮ್ಮೇಳನಗಳಿಗೆ ತಾವು ಆಗಮಿಸಬೇಕಾಗಿ ಪ್ರಾರ್ಥನೆ

ಈ ಕೆಳಗೆ ಕಂಡಂತೆ ವಿಶಿಷ್ಟ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ:—

ತಾ॥ 29—11—1964 (ಭಾನುವಾರ)

ರಾತ್ರಿ 10 ಗಂಟೆಗೆ: ಧರ್ಮಸ್ಥಳದ ಲಲಿತಕಲಾ ಸಂಘದ ಸದಸ್ಯರಿಂದ "ಸತ್ಯ ಹರಿಶ್ಚಂದ್ರ" ನಾಟಕಾಭಿನಯ

ತಾ॥ 30—11—1964 (ಸೋಮವಾರ)

ಮಧ್ಯಾಹ್ನ 3 ಗಂಟೆಯಿಂದ

ರಾತ್ರಿ 9 ಗಂಟೆಯ ವರೆಗೆ: ಬೇರೆ ಬೇರೆ ಮಂಡಳಿಯವರಿಂದ ನಾಗಸ್ವರ, ಕೊಳಲು ಮೊದಲಾದ ವಾದ್ಯಗಾಯನ

ರಾತ್ರಿ 9 ಗಂಟೆಗೆ: ದಕ್ಷಿಣ ಕನ್ನಡ ಜಿಲ್ಲೆಯ ಸುಪ್ರಸಿದ್ಧ ಯಕ್ಷಗಾನ ಕಲಾವಿದರಿಂದ ಯಕ್ಷಗಾನ ಕೂಟ.

ತಾ॥ 1—12—1964 (ಮಂಗಳವಾರ)

ರಾತ್ರಿ 8 ಗಂಟೆಗೆ: ಗಾನವಿಶಾರದ ಶ್ರೀಮಾನ್ ಬಿ. ದೇವೇಂದ್ರಪ್ಪ ಮತ್ತು ಮಂಡಳಿಯವರಿಂದ ಸಂಗೀತ ಕಛೇರಿ.

ರಾತ್ರಿ 10—30 ಗಂಟೆಗೆ: ಲಲಿತೋದ್ಯಾನದಲ್ಲಿ ಭಗವಾನ್ ಶ್ರೀ ಮಂಜುನಾಥ ಸ್ವಾಮಿಯ ಪೂಜೆ

(ತಾ॥ 2—12—1964 ಮತ್ತು ತಾ॥ 3—12—1964: ಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು)

ತಾ· 4—12—1964 ಶುಕ್ರವಾರ

ರಾತ್ರಿ 8 ಗಂಟೆಗೆ: ಭಗವಾನ್ ಶ್ರೀ ಚಂದ್ರನಾಥ ಸ್ವಾಮಿ ಬಸದಿಯಲ್ಲಿ ಶ್ರೀ ಸಮವಸರಣ ಪೂಜೆ

ರಾತ್ರಿ 10 ಗಂಟೆಗೆ: ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿ ಯಕ್ಷಗಾನ ಮಂಡಳಿಯವರಿಂದ ಯಕ್ಷಗಾನ ಬಯಲಾಟ

ಸರ್ವ ಧರ್ಮ ಸಮ್ಮೇಳನ ಕಾರ್ಯಕ್ರಮ

ತಾ. 2–12–1964ನೆಯ ಬುಧವಾರ

ಉದ್ಘಾಟಕರು:

ಸನ್ಮಾನ್ಯ ಶ್ರೀಮಾನ್ ಬಿ. ಡಿ. ಜತ್ತಿಯವರು

ಅಧ್ಯಕ್ಷರು:

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ 1108 ನಿಡಿಮಾಮಿಡಿ ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರ ಶ್ರೀ ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು

ಭಾಷಣಕ್ಕೆ ಆರಿಸಲಾದ ವಿಷಯಗಳು:—

(1) ಧರ್ಮ ಮತ್ತು ರಾಷ್ಟ್ರ ಭದ್ರತೆ.
(2) ಧರ್ಮ ಮತ್ತು ಭ್ರಷ್ಟಾಚಾರ ನಿರ್ಮೂಲನ.

ಮಧ್ಯಾಹ್ನ 4 ಗಂಟೆಗೆ

ಪ್ರಾರ್ಥನೆ: ಶ್ರೀ ಬಿ ಎಸ್. ರಾಮಾಚಾರ್ ಅವರು.
ಸ್ವಾಗತ: ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು.
ಉದ್ಘಾಟನೆ: ಸನ್ಮಾನ್ಯ ಶ್ರೀಮಾನ್ ಬಿ ಡಿ. ಜತ್ತಿಯವರು
ಅಧ್ಯಕ್ಷ ಭಾಷಣ: ಶ್ರೀ ಶ್ರೀ ಜಗದ್ಗುರು ಚೆನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು
ಸಂಗೀತ: ಸಂಗೀತ ವಿದ್ವಾನ್ ಶ್ರೀ ಎಸ್. ಚಂದ್ರಪ್ಪ ಮತ್ತು ಮಂಡಲಿಯವರು.

ರಾಷ್ಟ್ರಕವಿ ಶ್ರೀ ಗೋವಿಂದ ಪೈ ಅವರ ಸ್ಮಾರಕ ಗ್ರಂಥದ ಬಿಡುಗಡೆ

ಭಾಷಣಗಳು: ಸರ್ವಶ್ರೀ

(1) ವಿದ್ಯಾ ವಾಚಸ್ಪತಿ ವರ್ಧಮಾನ ಪಾರ್ಶ್ವನಾಥ ಶಾಸ್ತ್ರಿಗಳು
(2) ಪಂಡಿತರತ್ನಂ ಬಿ. ಶಿವಮೂರ್ತಿ ಶಾಸ್ತ್ರಿಗಳು
(3) ಸಿ. ಎಸ್. ಕಬೀರ್ ಬಿ. ಎ. ಅವರು
(4) ಸೈಯದ್ ಅಬು ತುರಾಬ್, ಕತಾಯಿ ಎಂ ಎ., ಅವರು
(5) ಯಚ್. ಬಿ. ರಂಗಸ್ವಾಮಿ ಅಯ್ಯಂಗಾರ್ ಎಂ. ಎ , ಅವರು
(6) ಎಸ್. ಬಿ. ವಸಂತರಾಜಯ್ಯ, ಬಿ. ಎ , ಅವರು
(7) ಎಸ್. ವಿ ಚನ್ನಬಸವೇಶ್ವರರು
(8) ಸಾಮಕ ಗಣೇಶ ಶಾಸ್ತ್ರಿಗಳು
(9) ಎಂ. ಜಿ. ನಂಜುಂಡಾರಾಧ್ಯರು
(10) ಡಿ. ಪದ್ಮನಾಭ ಶರ್ಮರವರು
(11) ಕೆ. ಪಿ. ಶಾಂತಿರಾಜ್ ಅವರು
12) ಕೆ. ಎಸ್. ಧರಣೇಂದ್ರಯ್ಯ, ಎಂ. ಎ , ಬಿ. ಟಿ. ಅವರು

ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮ

ತಾ. 5—12—1964ನೆಯ ಗುರುವಾರ

ಅಧ್ಯಕ್ಷರು:

ಯುನಿವರ್ಸಿಟಿ ಪ್ರೊಫೆಸರ್ ಶ್ರೀಮಾನ್ ತಿ ನಂ ಶ್ರೀಕಂಠಯ್ಯ, ಎಂ. ಎ. ಅವರು

ಭಾಷಣಕ್ಕೆ ಆರಿಸಲಾದ ವಿಷಯಗಳು—

(1) ರಾಷ್ಟ್ರೀಯ ಚಾರಿತ್ರ್ಯವನ್ನು ರೂಪಿಸುವುದರಲ್ಲಿ ಸಾಹಿತ್ಯದ ಪಾತ್ರ.
(2) ಅಣು (ವೈಜ್ಞಾನಿಕ) ಯುಗದಲ್ಲಿ ಸಾಹಿತ್ಯದ ಸ್ವರೂಪ
(3) ಬುದ್ಧಿ ಭಾವಗಳ ಸಾಮರಸ್ಯ ಸಾಧ್ಯವೆ?

ಮಧ್ಯಾಹ್ನ 3 ಘಂಟೆಗೆ—

ಪ್ರಾರ್ಥನೆ: ಶ್ರೀ ಬಿ, ಎಸ್. ರಾಮಾಚಾರ್ ಅವರು.
ಸ್ವಾಗತ: ಶ್ರೀ ಡಿ ರತ್ನವರ್ಮ ಹೆಗ್ಗಡೆಯವರು
ಅಧ್ಯಕ್ಷ ಭಾಷಣ: ಶ್ರೀ ತಿ ನಂ. ಶ್ರೀಕಂಠಯ್ಯನವರು.
ಸಂಗೀತ: ಶ್ರೀಮತಿ ಪಾಪಾ ಚೂಡಾಮಣಿ ಮತ್ತು ಮಂಡಲಿಯವರು.

ಭಾಷಣಗಳು: ಸರ್ವಶ್ರೀ

(1) ಡಾ। ಡಿ ಎಸ್. ಕರ್ಕಿ, ಎಂ. ಎ , ಪಿಎಚ್. ಡಿ. ಅವರು.
(2) ಬಿ. ಎ. ಸನದಿ, ಬಿ ಎ , ಅವರು.
(3) ಶ್ರೀಮತಿ ಪಂ. ಶ. ನಾ. ಕಮಲಮ್ಮ, ಎಂ ಎ , ಅವರು.
(4) ಅ. ನ ಕೃಷ್ಣರಾಯರು
(5) ಕುಮಾರಿ ಎಸ್. ವಿಮಲ, ಬಿ. ಎ , ಅವರು.
(6) ಜಿ. ಬ್ರಹ್ಮಪ್ಪ, ಎಂ. ಎ., ಅವರು.
(7) ಕಾವ್ಯವಾಚನ: ಶ್ರೀಮತಿ ಅನ್ನಪೂರ್ಣಮ್ಮ ರಘುಪತಿ ಶಾಸ್ತ್ರಿಗಳು.
(8) ಹಂ. ಪ. ನಾಗರಾಜಯ್ಯ, ಎಂ. ಎ , ಅವರು.
(9) ಶ್ರೀಮತಿ ಎಸ್. ರತ್ನಮ್ಮ, ಎಂ. ಎ. ಅವರು.
(10) ದಾಮೋದರ ಬಾಳಿಗಾ, ಅವರು.
(11) ಎ. ಬಾಲಕೃಷ್ಣ ಸೆಟ್ಟಿ, ಪೊಳಲಿ, ಅವರು.
(12) ಬ. ನ. ಸುಂದರರಾಯರು
(13) ಮಿಜಾರ್ ಅಣ್ಣಾರಾಯರು.
(14) ಮಂಗಳೂರಿನ ನೃತ್ಯ ವಿದ್ಯಾನಿಲಯದ ಶ್ರೀ ಯು. ಎಸ್. ಕೃಷ್ಣರಾಯರ ಶಿಷ್ಯರಿಂದ ನೃತ್ಯಪ್ರದರ್ಶನ.

ವಂದನಾರ್ಪಣೆ: ಶ್ರೀ ಜಿ. ಸ್ವಾಮಿದಾಸ್, ಅವರು.

ಶಾ. ಶ ಧರಣೇಂದ್ರಯ್ಯ,
ಗೌರವ ಕಾರ್ಯದರ್ಶಿ.

ಡಿ. ರತ್ನವರ್ಮ ಹೆಗ್ಗಡೆ,
ಧರ್ಮಸ್ಥಳ, ದ. ಕನ್ನಡ.

ವಿ. ಸೂ:—ಕಾರಣಾಂತರದಿಂದ ಪ್ರತ್ಯೇಕ ಆಮಂತ್ರಣ ಸಿಗದವರು ಇದೇ ಜಾಹೀರಾತನ್ನು ಆಮಂತ್ರಣವೆಂದು ಭಾವಿಸಿ ಈ ಸಮ್ಮೇಳನದಲ್ಲಿ ಭಾಗವಹಿಸಬೇಕು.

ಋಣಾನುಬಂಧ

(ಎರಡನೇ ಪುಟದಿಂದ)

ರ್ ಅಲ್ಲಿಂದ ಹೊರಟು ಮನೆ ಸೇರುವ ವೇಳೆಗೆ ಘಂಟೆ ಹನ್ನೊಂದುವರೆ ಯಾಗಿತ್ತು. ಅಂದು ಅವರಿಗೆ ಊಟ ಬೇಕಿರಲಿಲ್ಲ. ಶಾಂತಮ್ಮನನ್ನು ಉಳಿಸಿದ ಸಂತೋಷ ಸಂಭ್ರಮಗಳಲ್ಲಿ ಹಸಿವು ಮುಚ್ಚಿಹೋಗಿತ್ತು. ಒಂದು ಲೋಟ ಹಾಲನ್ನು ಮಾತ್ರ ಕುಡಿದು ಮಲಗಿದರು.

ಮಾರನೆಯ ದಿನ ಶಾಂತಮ್ಮನ ಸ್ಥಿತಿ ಸ್ವಲ್ಪ ಸುಧಾರಿಸಿತ್ತು. ಲೇಡಿ ಡಾಕ್ಟರ್ ಆಸ್ಪತ್ರೆಗೆ ಹೋದಾಗ ಆಕೆ ಎಚ್ಚರವಾಗಿದ್ದರು. ಅವರ ಪರಿಶ್ರಮದಿಂದಾಗಿ ಶಾಂತಳ ಸ್ಥಿತಿ ದಿನೇ ದಿನೇ ಸುಧಾರಿಸ ತೊಡಗಿತು. ಡಾಕ್ಟರರಂತೂ ದಿನಕ್ಕೆ ಎರಡುಮೂರಾವರ್ತಿ ಬಂದು ಶಾಂತಳನ್ನು ನೋಡಿಕೊಂಡು ಹೋಗುತ್ತಿದ್ದರು.

ಶಾಂತಮ್ಮನಿಗಾದರೋ — ನನಗಾಗಿ ಈ ಡಾಕ್ಟರು ಏಕೆ ಇಷ್ಟು ತೊಂದರೆಪಟ್ಟುಕೊಳ್ಳುತ್ತಾರೋ–ಎನಿಸುತ್ತಿತ್ತು. ಏಕೆಂದರೆ ಆವಳಿಗೆ ಜೀವನವೇ ಬೇಸರವೆನಿಸಿತ್ತು. ಮನೆಯಲ್ಲಿ ರೋಗಿಯಾದ ಅತ್ತೆ, ಆರೋಗ್ಯವಾಗಿರುವ ವರೆಗೂ ಒಂದು ವಿಧದಲ್ಲಿ ಹಿಂಸೆಕೊಟ್ಟ ಅತ್ತೆ, ಈಗ ರೋಗಿಯಾದ ಮೇಲೆ ಮೊದಲಿಂದ ಕಡೆಯ ವರೆಗೂ ಚಾಕರಿ ನಡೆಯಬೇಕು. ಸಣ್ಣ ಸಣ್ಣ ಮಕ್ಕಳು, ಬಡತನ, ಈ ಕಾರಣಗಳಿಂದ ಆಕೆಗೆ ಬದುಕಿರುವುದೇ ಬೇಡವಾಗಿತ್ತು. ಈ ವಿಚಾರ ಒಮ್ಮೆ ಡಾಕ್ಟರಿಗೆ ಹೇಳಿದಾಗ ಡಾಕ್ಟರು–ನಿಮ್ಮನ್ನು ನೋಡಿದಾಗಿನಿಂದ ನನ್ನ ತಂಗಿಯ ನೆನಪೇ ಬರುತ್ತಿದೆ. ಅವಳನ್ನುಳಿಸಿಕೊಳ್ಳುವ ಭಾಗ್ಯವಂತೂ ನನಗಿಲ್ಲದೇ ಹೋಯಿತು. ನಿಮ್ಮನ್ನು ಉಳಿಸಿದೆನೆಂಬುದೇ ನನಗೊಂದು ದೊಡ್ಡ ಸಮಾಧಾನ" ಎಂದರು. ಈ ಮಾತಿಗೆ ಶಾಂತಮ್ಮ—"ಇದು ನಿಮ್ಮ ಔದಾರ್ಯ ಮತ್ತು ವಿಶ್ವಾಸದ ಗುರುತು. ಆ ಋಣವನ್ನು ನಾನೆಂದಿಗೂ ತೀರಿಸಲಾರೆ" — ಎಂದುತ್ತರ ಕೊಟ್ಟಿದ್ದರು.

ಶಾಂತಮ್ಮನ ಸಂಸಾರ ಚಿತ್ರ ಆಕೆಯ ಮಾತುಗಳಿಂದಲೇ ಡಾಕ್ಟರಿಗೆ ಸಾಕಷ್ಟು ಅರಿವಾಗಿತ್ತು. ಸದ್ಯಕ್ಕೆ ಡಾಕ್ಟರ ಖರ್ಚಿನಿಂದಲೇ ಆಕೆಯ ಔಷಧೋಪಚಾರಗಳು ನಡೆಯುತ್ತಿತ್ತು. ಶಾಂತಮ್ಮ ಮನೆಗೆ ಹೊರಡುವ ದಿನವೂ ಸಮೀಪಿಸಿತು. ಸಾಲವೋ ಸೋಲವೋ ಮಾಡಿ ಶಾಂತಮ್ಮನ ಪತಿ ವಾರ್ಡ್ ಫೀಸ್‌ನ ಹಣವನ್ನು ಪತ್ನಿಯ ಕೈಗೆ ಕೊಟ್ಟು ಹೋಗಿದ್ದ. ಅದನ್ನು ಶಾಂತಮ್ಮ ಡಾಕ್ಟರಿಗೆ ಕೊಡಲು ಹೋದಾಗಲಾಕೆ ಖಂಡಾಖಂಡಿತವಾಗಿ ನಿರಾಕರಿಸಿದರು. ಶಾಂತಮ್ಮನಿಗೆ ಯಾವ ರೀತಿ ಕೃತಜ್ಞತೆ ತೋರಿಸಬೇಕೆಂಬುದೇ ಅರಿವಾಗಲಿಲ್ಲ. ಡಾಕ್ಟರ ವಿಶ್ವಾಸಕ್ಕೆ ಬಡವೆಯಾದ ನಾನು ನಿಜವಾಗಿ ಅರ್ಹಳಾಗಿದ್ದೇನೆಯೇ—ಎನ್ನಿಸಿತು ಆಕೆಗೆ. ಕೇವಲ ಕಣ್ಣೀರಿನಿಂದ ಡಾಕ್ಟರಿಗೆ ಕೃತಜ್ಞತೆಯನ್ನು ಸಲ್ಲಿಸಿದಳು. ಕೊನೆಗೆ ಡಾಕ್ಟರೊಡನೆ–"ಒಮ್ಮೆಯಾದರೂ ನನ್ನ ಮನೆಗೆ ಬಂದು ಹೋಗಬೇಕು.' ಎಂದು ಬೇಡಿಕೊಂಡಳು. ಡಾಕ್ಟರು—'ಆಗಲಿ—ಅದಕ್ಕೇನು ಎಂದಾದರೂ ಒಮ್ಮೆ ಬಂದರಾಯಿತು' — ಎಂದರು ಶಾಂತಮ್ಮ ಅಷ್ಟಕ್ಕೇ ಬಿಡದೆ–ನಾಡಿದ್ದು ಭಾನುವಾರ ಖಂಡಿತ ಬರಬೇಕು. ಸಂಜೆ ನನಗಾಗಿ ಸ್ವಲ್ಪ ವಿರಾಮ ದೊರಕಿಸಿಕೊಂಡು' —ಎಂದು ಪುನಃ ಒತ್ತಾಯಪಡಿಸಿದರು. ಡಾಕ್ಟರಾದರೋ ಶಾಂತಮ್ಮನ ಮನಸ್ಸನ್ನು ನೋಯಿಸಲು ಇಷ್ಟವಿಲ್ಲದೆ ಆಗಲೆಂದು ಒಪ್ಪಿ ವಿಳಾಸವನ್ನು ತೆಗೆದಿಟ್ಟುಕೊಂಡರು.

ಮಾರನೆಯ ದಿನ ಶಾಂತಮ್ಮ ಮನೆಗೆ ಹೊರಟರು ಖಾಲಿಯಾದ ಆಕೆಯ ಮಂಚವನ್ನು ನೋಡಿದಾಗ ಡಾಕ್ಟರಿಗೆ ಏನೋ ಪ್ರಿಯವಸ್ತು ತನ್ನನ್ನು ಬಿಟ್ಟು ಹೋದಂತೆ ಭಾಸವಾಗಿತ್ತು. ಆಸ್ಪತ್ರೆಯ ಅಸಿಸ್ಟೆಂಟ್‌ಗಳು ಈ ವಿಚಾರ ತಿಳಿದು–'ಎಲ್ಲಿಯ ಋಣಾನುಸಂಬಂಧವೋ—ಏನೋ, ಡಾಕ್ಟರನ್ನು ಈ ರೀತಿಯ ವಿಶ್ವಾಸದ ಸೆರೆಯಲ್ಲಿ ಸಿಕ್ಕಿಸಿದೆ' –ಎಂದುಕೊಂಡರು.

° ° °

ಭಾನುವಾರ ಸಂಜೆ ಲೇಡಿ ಡಾಕ್ಟರ ಕಾರು ಶಾಂತಮ್ಮನ ಮನೆಯ ಮುಂದೆ ಬಂದು ನಿಂತಾಗ ಘಂಟೆ ಐದೂವರೆಯಾಗಿತ್ತು. ಆ ಮನೆಯನ್ನು ಪತ್ತೆಮಾಡಬೇಕಾದರೆ ಡಾಕ್ಟರಿಗೆ ಸ್ವಲ್ಪ ಪ್ರಯಾಸವೇ ಆಗಿತ್ತು. ಮನೆಯ ಮುಂದೆ ಕಾರನ್ನು ನಿಲ್ಲಿಸಿದಾಗ ಶಾಂತಮ್ಮನ ದೊಡ್ಡ ಮಗಳು ಮಾಲತಿಯೇ ಸ್ವಾಗತಿಸಿ ಒಳಕ್ಕೆ ಕರೆದುಕೊಂಡು ಹೋದಳು. ಆ ಮನೆಯ ದೃಶ್ಯವನ್ನು ಕಂಡು ಡಾಕ್ಟರ ಕರುಳೇ ಕಿತ್ತು ಬಂದಂತಾಯಿತು. ಅಸ್ತವ್ಯಸ್ತವಾಗಿದ್ದ ಚಿಕ್ಕ ಮನೆ ಅದು. ಒಂದು ಕಡೆ ಬಟ್ಟೆಗಳ ರಾಶಿ, ಇನ್ನೊಂದು ಕಡೆ ಮಕ್ಕಳ ಪುಸ್ತಕಗಳ ರಾಶಿ. ಅದರ ಪಕ್ಕ ಒಂದು ಹಳೆಯ ಮಂಚ- ಅದರ ಬಳಿಯಲ್ಲೇ ತೂಗಾಡುತ್ತಿದ್ದ ತೊಟ್ಟಿಲು. ಇನ್ನೊಂದು ಮೂಲೆಯಲ್ಲಿ ನರಳುತ್ತಾ ಮಲಗಿದ್ದ ಮುದುಕಿಯೊಂದು. ಇಷ್ಟೇ ಅಲ್ಲದೆ ಅರೆ ಬೆತ್ತಲೆಯಾಗಿ ಅಲ್ಲಲ್ಲೇ ಸುತ್ತಾಡುತ್ತಿದ್ದ ಎರಡು ಮಕ್ಕಳು, ತಾಯಿಯ ಮಂಚದ ಬಳಿ ನಿಂತು ಡಾಕ್ಟರನ್ನೇ ದೃಷ್ಟಿಸಿ ನೋಡುತ್ತಿದ್ದ ಇನ್ನೆರಡು ಮಕ್ಕಳು. ಮಾಲತಿಯೇ ಸಧ್ಯದ ಆ ಮನೆಯ ಯಜಮಾನಿ. ಡಾಕ್ಟರು ಮಂಚದ ಬಳಿಯಿದ್ದ ಹಳೆಯ ಕುರ್ಚಿಯೊಂದರಲ್ಲಿ ಕುಳಿತರು. ಕೇವಲ ಹಾಲು ಹಣ್ಣುಗಳಲ್ಲೇ ಡಾಕ್ಟರ ಸತ್ಕಾರ ಮುಗಿದಿತ್ತು.

ಸ್ವಲ್ಪ ಹೊತ್ತಿನಲ್ಲೇ ಶಾಂತಮ್ಮನ ಪತಿಯೂ ಆಗಮಿಸಿದರು. ಲೇಡಿ ಡಾಕ್ಟರಿಗೆ ನಮಸ್ಕಾರ ಹೇಳಿ, ಹೆಂಡತಿಯ ಕಡೆಗೊಮ್ಮೆ ನೋಡಿ, ಮೂಲೆಯಲ್ಲಿ ನರಳುತ್ತ ಮಲಗಿದ್ದ ತಾಯಿಯನ್ನು ವಿಚಾರಿಸಿಕೊಂಡು ಒಳಕ್ಕೆ ನಡೆದರು. ಆ ಮುದುಕಿ ಪಾರ್ಶ್ವವಾಯುವಿಗೆ ತುತ್ತಾಗಿ, ಜೀವಂತ ಶವವಾಗಿತ್ತು. ಲೇಡಿ ಡಾಕ್ಟರರು ಒಮ್ಮೆ ಆ ಮುದುಕಿಯ ಕಡೆ ಗಮನಿಸಿ ನೋಡಿದರು. ಶಾಂತಮ್ಮನ ಪತಿ ಮತ್ತೊಮ್ಮೆ ಹೊರಗೆ ಬಂದಾಗ ಆತನನ್ನೂ ಪುನಃ ದೃಷ್ಟಿಸಿ ನೋಡಿದರು. ಆತನ ಹೆಸರನ್ನೂ ಆ ಮುದುಕಿಯ ಹೆಸರನ್ನೂ ಕೇಳಿ ತಿಳಿದುಕೊಂಡಾಗ... ಹದಿನೈದು ವರ್ಷಗಳ ಹಿಂದಿನ ನೆನಪು ಡಾಕ್ಟರರಿಗೆ ಮರುಕಳಿಸಿತು. ತನ್ನನ್ನು ಮನೆಗೆ ಕಳಿಸಲು ನಿರಾಕರಿಸಿದ್ದ ಅತ್ತೆ, ಗಂಡ— ಎನ್ನಿಸಿಕೊಂಡವರು ಇವರೇ ಎಂಬುದರಲ್ಲಿ ಯಾವ ಸಂಶಯವೂ ಉಳಿಯಲಿಲ್ಲ. ಲೇಡಿ ಡಾಕ್ಟರಿಗಂತೂ ತಲೆ ಗಿರ್ರನೆ ಸುತ್ತತೊಡಗಿತು, ಜೊತೆಗೆ ಆ ಮನೆಯೇ ಸುತ್ತುತ್ತಿರುವಂತೆ ಭಾಸವಾಗತೊಡಗಿತು; ತಾನಂತೂ ನೀರಿನ ಮೇಲೆ ಕುಳಿತಿರುವೆನೇನೋ—ಎನ್ನಿಸಿತ್ತು. ಆದರೂ ಒಂದು ಕ್ಷಣದಲ್ಲಿ ಚೇತರಿಸಿಕೊಂಡು ಲೇಡಿ ಡಾಕ್ಟರು ಮೇಲಕ್ಕೆದ್ದರು. ಶಾಂತಮ್ಮ—"ಇದೇನು ಡಾಕ್ಟ್ರೇ—ಇಷ್ಟುಬೇಗ ಎದ್ದುಬಿಟ್ಟಿರಲ್ಲಾ." ಎಂದು ಕೇಳಿದಾಗ ಲೇಡಿ ಡಾಕ್ಟರರ ಮೈ ನಡುಗುತ್ತಿತ್ತು, ಧ್ವನಿ ಕಂಪಿಸುತ್ತಿತ್ತು. ಮುದುಕಿಯ ಕಡೆ ಕೈಮಾಡಿ ತೋರಿಸುತ್ತಾ 'ಈ ಮುದುಕಿಯೇ ನನ್ನ ಬಾಳನ್ನು ಹಾಳುಮಾಡಿದ್ದು' ಎಂದರು. ಶಾಂತಳಿಗೆ ಏನೂ ಅರ್ಥವಾಗಲಿಲ್ಲ. ಲೇಡಿ ಡಾಕ್ಟರರೇ ಎಲ್ಲಾ ವಿಷಯವನ್ನೆಲ್ಲ ತಿಳಿಸಿದಾಗ ಶಾಂತಮ್ಮ ಮೌನವಾಗಿ ಎಲ್ಲವನ್ನೂ ಕೇಳಿದರು. ಶಾಂತಮ್ಮನ ಪತಿ ಅಪರಾಧಿಯಂತೆ ಯಾವ ಮಾತನ್ನೂ ಆಡದೆ, ತಲೆತಗ್ಗಿಸಿ ನಿಂತಿದ್ದ.

ಮುದುಕಿ ಮಲಗಿದಲ್ಲಿಂದಲೇ ದುರುದುರನೆ ನೋಡುತ್ತಿತ್ತು. ಲೇಡಿ ಡಾಕ್ಟರು ಪುನಃ ನಗುತ್ತ—"ಹಾಗಾದರೆ ನೀವು ಈ ಮನೆಗೆ ಬಂದಾಗ ವರದಕ್ಷಿಣೆಯ ಹಣವನ್ನು ಪೂರ್ತಿ ಕೊಟ್ಟೇ ಒಳಕ್ಕೆ ಕಾಲಿಟ್ಟಿರಬೇಕು" ಎಂದರು. ಮೊದಲೇ ಅತ್ತೆಯ ವಿಚಾರದಲ್ಲಿ ಶಾಂತಮ್ಮನ ಮನಸ್ಸು ರೋಸಿತ್ತು; ಜೊತೆಗೆ ಹಳೆಯ ಕತೆಯನ್ನೂ ಕೇಳಿದ ಮೇಲೆ—ಕೊಡದೇ ಉಂಟೇ? ಮದುವೆ ಆದ್ಮೇಲೆ ಎಲ್ಲಿ ಕೊಡದೇ ಹೋಗ್ತೀರೋ ಅಂತ ಅಪ್ಪನನ್ನ ಮೊದಲೇ ವಸೂಲ್ಮಾಡಿಬಿಟ್ಟರು. ಅದಕ್ಕಾಗಿ ಸಾಲ ಮಾಡಿದ ನಮ್ಮ ತಂದೆ ಅದೇ ಕೊರಗಿನಲ್ಲೇ ಸತ್ತರು. ಆ ಹಣವನ್ನಾದರೂ ವಿತರಣೆಯಿಂದ ಖರ್ಚು ಮಾಡಿದರೇ.... ಅದೂ ಇಲ್ಲ. ಆ ಬಿಸಿನೆಸ್ಸು, ಈ ಬಿಸಿನೆಸ್ಸು—ಅಂತ ಹೇಳಿ ಎಲ್ಲ ಖರ್ಚು ಮಾಡಿ—ಈಗ ಎಲ್ಲರಿಗೂ ಈ ಸ್ಥಿತಿ ತಂದಿಟ್ಟಿದ್ದಾರೆ" ಎಂದು ಹೇಳಿ ಉರಿಯುತ್ತಿದ್ದ ಕೊಳ್ಳಿಗೆ ಮತ್ತಷ್ಟು ತುಪ್ಪ ಸುರಿದರು. ಕಣ್ಣಲ್ಲಿ ಧಾರಾಕಾರವಾಗಿ ನೀರು ಹರಿಯಲಾರಂಭಿಸಿತು. ಶಾಂತಮ್ಮ ಅಳುತ್ತಲೇ ಡಾಕ್ಟರೊಡನೆ –"ನೀವು ಆಸ್ಪತ್ರೆಯಲ್ಲಿ ಹೇಳಿದ್ರಿ— ನಾನು ನಿಮ್ಮ ತಂಗಿ ಇದ್ದ ಹಾಗೇ ಇದ್ದೀನಿ - ಅಂತ ಧರ್ಮ ಕರ್ಮ ಸಂಯೋಗದಿಂದ ಅಕ್ಕನಾಗಿಯೇ ಇದ್ದೀರಿ. ಆದರೆ ತಂಗಿಗೆ ಅಕ್ಕನನ್ನು ಕೇವಲ ಮಾತಿನಲ್ಲೇ ಉಪಚರಿಸುವ ಶಕ್ತಿ ದೇವರು ಕೊಟ್ಟಿರುವನೇ ಹೊರತು— ಒಂದು ದಿನ ಮನೆಯಲ್ಲಿಟ್ಟುಕೊಳ್ಳುವ ಶಕ್ತಿಯನ್ನೂ ಕೊಟ್ಟಿಲ್ಲ. ಆದರೆ ಅವರ ತೃಪ್ತಿಗಾಗಿ ಈ ತಂಗಿಯನ್ನು ಮರೆಯಬೇಡಿ..." ಎಂದರು. ಲೇಡಿ ಡಾಕ್ಟರಿಗೂ ಶಾಂತಮ್ಮನ ಸ್ಥಿತಿಯನ್ನು ಕಂಡು ಕಲ್ಲಾಗಿದ್ದ ಹೃದಯ ಹಗುರವಾಗತೊಡಗಿತು. "ಆಗಲೀ ತಂಗೀ, ನಿನಗೆ ಕಷ್ಟವಾದಾಗ ನನ್ನ ಬಳಿಗೆ ಬಾ ನಾನು ಕೈಲಾದ ಸಹಾಯ ಮಾಡುವೆ" ಎಂದು ವಚನವಿತ್ತರು. ಶಾಂತಮ್ಮ—'ನಿಮ್ಮ ಋಣವನ್ನು ತೀರಿಸಲು ನನಗೆ ಈ ಜನ್ಮದಲ್ಲಿ ಸಾಧ್ಯವಿಲ್ಲ–" ಎನ್ನುತ್ತಿದ್ದಾಗ ಡಾಕ್ಟರು ಮಧ್ಯೆ–"ಶಕ್ತಿಯಿಲ್ಲದೇ ಏನು? ಈ ಚಿನ್ನ ಮಗುವನ್ನು ಒಂದು ವರ್ಷ ಬೆಳೆಸಿ, ನನಗೆ ಕೊಡು, ನಾನೇ ಅವನನ್ನು ದೊಡ್ಡವನನ್ನಾಗಿ ಮಾಡುತ್ತೇನೆ".—ಎಂದರು. ಶಾಂತಮ್ಮ ಹೃದಯಾಂತರಾಳದಿಂದ –"ಅಗತ್ಯವಾಗಿ ಆಗಲಿ—ನಮ್ಮಿಬ್ಬರಿಗೂ ನೀವೇ ತಾಯಿಯಲ್ಲವೇ?" ಎಂದರು. ಶಾಂತಮ್ಮನ ಪತಿ—ಏನನ್ನೋ ಹೇಳಬೇಕೆಂದು ಯೋಚಿಸುತ್ತಿದ್ದಾಗ ಲೇಡಿ ಡಾಕ್ಟರ ಕಾರಿನಲ್ಲಿ ಕುಳಿತು 'ಸ್ಟಾರ್ಟ್' ಮಾಡಿ ಬಿಟ್ಟರು.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

NAVAYUGA 3-12-1964
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೩-೧೨-೬೪ರಿಂದ ೯-೧೨-೬೪ರ ವರೆಗೆ

೧. ಮೇಷ.

ನಿಮ್ಮ ಪರಿಸ್ಥಿತಿಯಲ್ಲಿಂದು ಏನೊಂದೂ ಬದಲಾವಣೆಯು ಕಂಡುಬರಲಾರದು. ಕಷ್ಟಪಟ್ಟು ದುಡಿಯುವಿರೇನೋ ಸಹಜ ಆದರೆ ನಿಮ್ಮ ಶ್ರಮಕ್ಕೆ ತಕ್ಕ ಫಲವು ಕಾಣದಿರುವುದರಿಂದ ಕೆಲವೊಮ್ಮೆ ಉದ್ಯೋಗದಲ್ಲಿ ವೈರಾಗ್ಯ ನಿರೀಹೆಗಳುಂಟಾಗುವವು ಯೆರಡರ ಮಧ್ಯಂತರದಲ್ಲಿ ನಿಮ್ಮ ಆಪ್ತೇಷ್ಟರೂ ಹಿತಚಿಂತಕರೆನಿಸಿದವರೇ ಇಂದು ನಿಮ್ಮ ಮೇಲೆ ಬೀಳುವುದರಿಂದ ಮನಸ್ಸಿಗೆ ತುಂಬಾ ನೋವಾಗಲಿದೆ. ಸ್ತ್ರೀ ನಿಮಿತ್ತವಾಗಿ ಕಲಹ ನಷ್ಟ ಜನಾಪವಾದಕ್ಕೂ ಸಿಲುಕಲಿರುವಿರಿ. ವಾರಾಂತ್ಯದ 2 ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿವೆ.

೨ ವೃಷಭ

"ದೈವೇ ದುರ್ಬಲಕಾಂಗತೇ ತೃಣಮಪಿ ಪ್ರಯೇಣ ವಜ್ರಾಯತೇ' ವಿಧಿಯು ಕೆಟ್ಟ ಕಾಲಕ್ಕೆ ಹುಲ್ಲುಕಡ್ಡಿಯೂ ಕೂಡ ವಜ್ರಾಯುಧದಂತೆ ಪರಿಣಾಮಕಾರಿಯಾಗುವದು. ಅಂತೆಯೇ ನಿಮಗಿಂದು ಯಾವೊಂದು ಅಲ್ಪ ಕಾರ್ಯವನ್ನೂ ಕೂಡ ನಿರ್ವಹಿಸಲು ಸಾಧ್ಯವಾಗಲೊಲ್ಲದು. ಲೋಕವೇ ನಿಮ್ಮ ಭಾಗಕ್ಕೆ ವಿಪರೀತವಾಗಿ ಕಾಣಿಸಲಿದೆ. ಆಪ್ತರ ಸೋಗಿನಿಂದ ದುರ್ಜನರು ನಿಮ್ಮನ್ನು ವಂಚಿಸಲಿರುವರು. ಅಧಿಕ ಚಿಕ್ಕಟ್ಟು ಮನೋರೋಗಗಳು ನಿಮ್ಮನ್ನು ಬಹುವಾಗಿ ಪೀಡಿಸಲಿವೆ. ಆಪತ್ತಿನೊಳು ಆರೆ ಧೈರ್ಯವೆಂಬಂತೆ ಸದ್ಯದ ದಿನಗಳನ್ನು ಕಳೆಯಿರಿ. ವಾರಾದಿಯ 2 ದಿನಗಳು ಹೆಚ್ಚಿನ ದುಃಖದಾಯಿಯಾಗಲಾರವು.

೩. ಮಿಥುನ

ದೈವಾನುಗ್ರಹವಂ ಪಡೆದ ನೀವಿಂದು ಉಪಾಸನಾಗತಿ ಕಾರ್ಯ ಕ್ಷೇತ್ರದಲ್ಲಿ ಮುಂದರಿಯಿರಿ. ನಿಮ್ಮ ನಿರೀಕ್ಷೆಯು ಎಂದೂ ವಿಫಲವಾಗಲಾರದು. ಸಾಮಾಜಿಕ ಕ್ಷೇತ್ರದಲ್ಲಾಗಲಿ ರಾಜಕೀಯ ರಂಗದಲ್ಲಾಗಲಿ ಯಾರೂ ನಿಮ್ಮನ್ನು ಇದಿರಿಸಲಾರರು. ಮುಂದಿಟ್ಟ ಹೆಜ್ಜೆಯನ್ನು ನೀವೆಂದೂ ಎಂದೂ ಹಿಂದಿಸಲಾರಿರಿ. ಪಕ್ಷಿಯಾದರೋ ಮೃಗರಾಜನಂ ಕಂಡ ಹರಿಣಗಳಂತೆ ಮಾಯವಾಗುವರು ನಿಮ್ಮ ಸಂಕಲ್ಪಗಳನ್ನಿಂದು ಕಾರ್ಯರೂಪಕ್ಕೆ ತರಲೆತ್ನಿಸಿರಿ. ವಾರಾದಿಯ 5 ದಿನಗಳು ನಿಮ್ಮ ಬಯಕೆಗಳನ್ನು ಈಡೇರಿಸುವವು.

೪. ಕರ್ಕಟ

ನಿಮ್ಮ ಸುಖ ಲಾಭಪತಿಯಾದ ಶುಕ್ರನು ತನ್ನ ಮನೆಯಲ್ಲೇ ನಿಂತಿಹ ಕಾರಣ ಈ ವಾರದಲ್ಲಿ ಹೆಚ್ಚಿನ ಹಣದ ಅಡಚಣೆ ಕಾಣಿಸದು. ನೌಕರಿ ವ್ಯಾಪಾರಾದಿ ಉದ್ಯಮಗಳಲ್ಲಿ ಸಫಲರಾಗುವಿರಿ, ಗೃಹ ತಾಪತ್ರಯಗಳಿಂದ ಮುಕ್ತರಾದ ನಿಮ್ಮ ಆರೋಗ್ಯವಿಂದು ಅಷ್ಟೊಂದು ಚೆನ್ನಾಗಿರದು. ಮುಖತಃ ಭೆಟ್ಟಿಗಿಂತ ಪತ್ರವ್ಯವಹಾರವು ಒಳ್ಳೆ ಫಲಕಾರಿಯಾಗಲಿದೆ. ಶತ್ರು ಜನರ ಪೀಡೆಗೆ ಸಿಲುಕಿದ ನಿಮಗೆ ವಾರಾಂತ್ಯದ 5 ದಿನಗಳು ಅನುಕೂಲವಾಗಿವೆ.

೫. ಸಿಂಹ

ವ್ಯಾಪಾರ ವ್ಯವಹಾರಗಳು ಹಿಂದಿನಂತೆ ನಿರಾತಂಕವಾಗಿ ಸಾಗುವದಾದರೂ ನೌಕರಿ ವಿಭಾಗದಲ್ಲಿ ಮೇಲಿನ ಅಧಿಕಾರಿಗಳಿಂದ ಕಿರಿ ಕಿರಿ ಹೆಚ್ಚೀತು. ಜನತೆಯ ಬೆಂಬಲವು ಸಾಕಷ್ಟು ಇದ್ದರೂ ಕೋರ್ಟು ಕಚೇರಿಗಳ ವ್ಯವಹಾರಗಳಲ್ಲಿ ಪ್ರತಿಪಕ್ಷಿಗಳಿಂದ ಪರಾಜಿತರಾಗುವಿರಿ. ಗೃಹ ಕೃತ್ಯದ ಅವ್ಯವಸ್ಥೆಯಿಂದಾಗಿ ಮನಸ್ಸಿಗೆ ನೆಮ್ಮದಿಯಿರಲಾರದು. ಆರ್ಥಿಕ ವಿಚಾರದಲ್ಲಿ ನಿಶ್ಚಿಂತರಾದ ನಿಮಗೆ ವಾರಾಂತ್ಯದ 2 ದಿನಗಳಲ್ಲಿ ಕಾರ್ಯಸಿದ್ಧಿ ಯಶಸ್ಸು ಲಾಭಗಳು ಲಭಿಸಲಿವೆ

೬. ಕನ್ಯಾ

ಧನ ಭಾಗ್ಯಪತಿಯಾದ ಶುಕ್ರನ ಅನುಗ್ರಹಕ್ಕೆ ಪಾತ್ರರಾಗಿರುವ ನಿಮಗೆ ಸದ್ಯ ಯಾವ ಕಾರ್ಯವನ್ನೂ ಕೈಕೊಂಡರೂ ನಷ್ಟವಾಗಲೊಲ್ಲದು. ಸಾಹಸಿಗಳೂ ಕರ್ತವ್ಯ ದಕ್ಷರೂ ಆದ ನಿಮ್ಮ ಯಾವತ್ತೂ ಬಯಕೆಗಳು ನಿರ್ವಿಘ್ನದಿಂದ ಪೂರ್ಣವಾಗಲಿವೆ. ಎಷ್ಟೇ ಹಣ ನಿಮ್ಮ ಕೈಸೇರಿದರೂ ದಿನಾಂತ್ಯದಲ್ಲಿ ಕೈ ಬರಿದಾಗುವದು, ಗುರು ಹಿರಿಯರ ಕೂಡೆ ಮನಸ್ತಾಪ ಕಲಹಗಳುಂಟಾದಾವು. ಆರೋಗ್ಯವು ಉತ್ತಮವಾಗಿರದು. ವಾರಾದಿಯ 2 ದಿನಗಳು ಅನುಕೂಲವಾಗಿವೆ.

೭. ತುಲಾ

ನಿಮ್ಮ ಉದ್ಯಮ ವ್ಯವಹಾರಗಳು ನಿರಾತಂಕವಾಗಿ ಸಾಗಲಿವೆ. ನಿಮ್ಮ ನಿರೀಕ್ಷೆಗಿಂತಲೂ ಅಧಿಕವಾದ ಫಲವು ಅನಾಯಾಸದಿಂದ ಲಭಿಸುವದು. ಕೈಬಿಟ್ಟು ಹೋದ ಕೆಲವೊಂದು ವಸ್ತು ಒಡವೆಗಳೂ ಧನವೂ ಕೂಡಾ ಪುನಃ ಕೈ ಸೇರುವವು. ಮಕ್ಕಳ ಆರೋಗ್ಯವು ಚೆನ್ನಾಗಿರದು. ಆಪ್ತೇಷ್ಟ ವರ್ಗದವರೊಡನೆ ಮನಸ್ತಾಪ ತಲೆದೋರೀತು. ಸೇವಕ ಜನತೆಗೀ ವಾರವು ಅಷ್ಟೊಂದು ಸುಖದಾಯಿಯಾಗಲಾರದು. ತಾ. 5, 6, 7 ಈ ದಿನಗಳಲ್ಲಿ ಸುಖ ಭೋಗಗಳು ಲಭಿಸುವವು.

೮ ವೃಶ್ಚಿಕ

ಸ್ವದೇಹಾಲಸ್ಯದಿಂದ ನೀವಿಂದು ಮುಕ್ತರಾದರೂ ಮನೋರೋಗವು ಸದಾ ಕಾಡುತ್ತಿಹುದು ಕುಜನರ ಮಾಯಾಜಾಲಕ್ಕೆ ಸಿಲುಕಿ ವ್ಯರ್ಥ ಧನ ಹಾನಿ ಜನನಿಂದಾಪವಾದಗಳಿಗೆ ಗುರಿಯಾದೀರಿ. ಖರ್ಚಿಗೆ ತಕ್ಕಷ್ಟು ದುಡಿಮೆಯಿಲ್ಲದಿರುವುದರಿಂದ ಹಣದ ತೊಂದರೆ ಕಾಣಿಸದು. ಎಂತಹ ದುಃಸಾಧ್ಯವಾದ ಕಾರ್ಯವಾದರೂ ನಿಮಗಿಂದು ತೃಣ ಸಮವೆನಿಸೀತು. ಗೃಹತಾಪತ್ರಯದಿಂದ ಮುಕ್ತರಾದ ನಿಮಗೆ ತಾ 3, 4, 8, 9, ಈ ದಿನಗಳು ಸುಖ ಲಾಭ ದಾಯಿಯಾಗಿ ಪರಿಣಮಿಸಲಿವೆ.

೯. ಧನು

ಧನ ಜನ ಬೆಂಬಲವುಳ್ಳ ನಿಮಗೆ ಇಂದಿನ ದಿನಗಳು ಸುಗಮವಾಗಿ ಸಾಗಲಿವೆ. ನಿಮ್ಮ ಯಾವತ್ತು ಆಕಾಂಕ್ಷೆಗಳು ಏನೊಂದೂ ತೊಡಕು ತೊಂದರೆಗಳಿಲ್ಲದೆ ಕೊನೆಗಾಣುವವು. ಸಮಾಜದಲ್ಲಿ ಒಳ್ಳೆಯ ಸ್ಥಾನ ಮಾನಗಳನ್ನು ಗಳಿಸುವಿರಿ. ಎಂತಹ ಪ್ರಬಲವಾದ ಇದಿರಾಳಿಯೂ ಇಂದು ನಿಮ್ಮ ದೃಷ್ಟಿಗೇ ಗೋಚರಿಸಲಾರನು ಪಿತ್ತ ದೋಷದಿಂದ ದೇಹಾಲಸ್ಯ ಕಾಣಿಸೀತು. ಹೆಂಡತಿ ಮಕ್ಕಳ ಆರೋಗ್ಯವೂ ಕೆಡಲಿದೆ. ತಾ. 5, 6, 7ರಲ್ಲಿ ಬೇಕು ಬೇಕಾದ ಸುಖ ಭೋಗಗಳಂ ಪಡೆವಿರಿ.

೧೦. ಮಕರ

ನಿಮ್ಮ ಸುಖಲಾಭ ಪತಿಯಾದ ಕುಜನಿಂದು ಅನಿಷ್ಟ ಸ್ಥಾನವಾದ ಅಷ್ಟಮಕ್ಕೆ ಬಂದಿಹನು. ಸಾಲದ್ದಕ್ಕೆ ಭಾಗ್ಯಪತಿಯೂ ವ್ಯಯಗತನಾಗಿರುವನು. ಧನ ಸ್ಥಾನದಲ್ಲಿ ಶನೈಶ್ಚರನು ಕುಳಿತಿಹನು ಈ ಎಲ್ಲಾ ಕಾರಣಗಳಿಂದಾಗಿ ನೀವಿಂದು ಸದಾ ಚಿಂತಾಗ್ರಸ್ತರಾಗಿರುವಿರಿ. ಮಾತ್ರವಲ್ಲ ಶತ್ರು ಜನರು ಶಕ್ಯವಿದ್ದಷ್ಟು ಪ್ರತೀಕಾರವೆಸಗುವರು. ಆದ ಕಾರಣ ನೀವಿಂದು ನಾನಾ ತರದ ಕಷ್ಟ ನಷ್ಟಗಳಿಗೆ ಸಿಲುಕುವ ಸಂಭವವಿದೆ, ಎಷ್ಟೇ ಜಾಗರೂಕರಾಗಿದ್ದರೂ ಕಷ್ಟನಷ್ಟಗಳು ತಪ್ಪಿದ್ದಲ್ಲ ತಾ. 5, 6, 7 ಧನ ಮಾನಗಳಿಗೆ ಹಾನಿ ತಂದೀತು.

೧೧. ಕುಂಭ

ಸುಖದುಃಖಗಳೂ ಲಾಭ ನಷ್ಟಗಳೂ ನಿಮಗಿಂದು ಸಮನಾಗಿ ಪ್ರಾಪ್ತವಾಗಲಿವೆ. ಕರ್ತವ್ಯ ಪರಾಯಣರಾದ ನಿಮ್ಮ ಶ್ರಮಕ್ಕೆ ತಕ್ಕ ಫಲ ದೊರೆವುದಾದರೂ ಗೃಹಕೃತ್ಯದ ಖರ್ಚು ವೆಚ್ಚಗಳು ಕೈ ಬರಿದು ಮಾಡಲಿವೆ. ಅಧಿಕಾರಿಗಳ ವಕ್ರ ದೃಷ್ಟಿಯು ನಿಮ್ಮ ಮೇಲೆ ಬಿದ್ದಿರುವುದರಿಂದ ಸ್ಥಾನ ಚಲನೆಯ ಪ್ರಸಂಗವು ಬರಬಹುದು. ವ್ಯಾಪಾರೀ ಜನತೆಗೀ ಕಾಲವು ಅತೀವ ಅನುಕೂಲವಾಗಿದೆ. ನಿಷ್ಕರವಾದಿಗಳಾದ ನಿಮಗೆ ಹಲ ಕೆಲವರೊಡನೆ ಕಲಹವಾದೀತು. ವಾರಾದಿಯ 6 ದಿನಗಳು ಅನುಕೂಲವಾಗಿವೆ.

೧೨. ಮೀನ

ಬಲ್ಲವರ ಮಾತು ಬೆಲ್ಲಕ್ಕಿಂತ ಸವಿಯೆಂಬ ಗಾದೆಯು ಇಂದು ನಿಮ್ಮ ವ್ಯವಹಾರದಿಂದ ವ್ಯಕ್ತವಾಗುತ್ತದೆ. ಒಳ್ಳೆಯ ವಾಚಾಲರಾದ ನೀವು ವಿರೋಧಿಯನ್ನೂ ಕೂಡ ವಶೀಕರಿಸುವಿರಿ ಸಾಹಸಿಗಳೂ ಕರ್ತವ್ಯ ದಕ್ಷರೂ ಆದ ನಿಮಗೆ ಜನ ಸಾಮಾನ್ಯರ ಬೆಂಬಲವೂ ಇರುವುದರಿಂದ ಸರ್ವತ್ರ ವಿಜಯ ಕೀರ್ತಿ ಲಾಭಗಳನ್ನು ಪಡೆಯುವಿರಿ ಹಣದ ವ್ಯವಹಾರ ನಿಮಿತ್ತ ಕೋರ್ಟು ಕಚೇರಿಗಳಿಗೆ ತಿರುಗುವ ಪ್ರಸಂಗ ಬರಲಿದೆ. ವಾರಾಂತ್ಯದ 5 ದಿನಗಳು ಸುಖಲಾಭ ವಿಜಯದಾಯಿಗಳಾಗಿವೆ.

ಹನಿಗತೆ.

ಸ್ವಾವಲಂಬನದ ಮಾದರಿ.

ಸ್ವಾಮಿ ವಿವೇಕಾನಂದರಿಗೆ ಅಮೇರಿಕೆಯಲ್ಲಿ ಒಬ್ಬ ಬಾಲಕ ಗಂಟು ಬಿದ್ದ ಮತ್ತು ಒಂದು ದುಡ್ಡು ಕೊಟ್ಟು ತನ್ನಲ್ಲಿಯ ಪತ್ರಿಕೆಯನ್ನು ಕೊಂಡುಕೊಳ್ಳಲು ಆಗ್ರಹಪಡಿಸ ಹತ್ತಿದ. ವಿವೇಕಾನಂದರಿಗೆ ಪತ್ರಿಕೆ ಬೇಕಾಗಿರಲಿಲ್ಲ. ಅವರು ಆ ಹುಡುಗನನ್ನು ಕೇಳಿದರು.. 'ತಮ್ಮಾ, ನೀನು ನೊಂದುಕೊಳ್ಳಬೇಡ. ನಿನ್ನಂಥ ಚಿಕ್ಕ ವಯಸ್ಸಿನ ಹುಡುಗರನ್ನು ಈ ರೀತಿ ದುಡಿಯ ಹಚ್ಚಿದ್ದು ನನಗೆ ಸರಿದೋರುವದಿಲ್ಲ. ಇದು ನಿನ್ನ ಬಾಲ್ಯಕಾಲ. ಆಟಪಾಟ ಹಾಗೂ ವಿದ್ಯಾಭ್ಯಾಸದಲ್ಲಿ ವಿನಿಯೋಗವಾಗಬೇಕಾದ್ದು ಅದನ್ನು ಬಿಟ್ಟು ಇಲ್ಲಿನ ಇಂಥ ಎಳೆ ಬಾಲಕರು ಪತ್ರಿಕೆ ಮಾರಿ ಜೀವನ ನಡೆಸಬೇಕಾಗುತ್ತದೆಯೇ? ನಿನಗೆ ಪಾಲಕರಿಲ್ಲವೇ? ಇಲ್ಲವೆ ಅವರು ದಟ್ಟದರಿದ್ರರೇ?"

ಕೇಳಿ ಆ ಬಾಲಕ ವಿನಯಪೂರ್ವಕ ಉತ್ತರ ಕೊಟ್ಟ. 'ಸ್ವಾಮಿ, ನೀವು ತಪ್ಪು ತಿಳಿದುಕೊಂಡಿದ್ದೀರಿ. ನಾನೇನು ಬಡವನಲ್ಲ ನನ್ನ ತಂದೆ ತಾಯಿ ಬಡವರಲ್ಲ. ನಾನು ಶಾಲೆಯಲ್ಲಿ ಓದುತ್ತಿದ್ದೇನೆ. ಮಕ್ಕಳು ಬಾಲ್ಯದಿಂದಲೇ ಶರೀರಶ್ರಮವನ್ನೂ ಹಲಿಕ್ಕೂ, ಸ್ವಾವಲಂಬಿಯಾಗಲಿಕ್ಕೂ ಕಲಿತಿರಬೇಕೆಂಬುದು ನಮ್ಮಲ್ಲಿಯ ಪದ್ಧತಿ. ಪತ್ರಿಕೆ ಮಾರುವುದು ಹೀನ ಕೆಲಸ ಎಂದು ನಾವು ತಿಳಿಯುವದೇ ಇಲ್ಲ. ಇಂತಹ ಚಿಕ್ಕ ಪುಟ್ಟ ಕೆಲಸ ಮಾಡಿಯೇ ನಮಗೆ ಅವಶ್ಯವಿರುವಷ್ಟು ದುಡ್ಡು ನಾವೇ ಗಳಿಸುತ್ತೇವೆ. ನನ್ನ ಮೈ ಮೇಲಿನ ಬಟ್ಟೆಯೆಲ್ಲ ನನ್ನ ದುಡಿತದ ರೊಕ್ಕದಿಂದಲೇ ಮಾಡಿದವು. ನನ್ನ ಬಹಳಷ್ಟು ಖರ್ಚನ್ನು ನಾನೇ ದುಡಿದು ಸಂಪಾದಿಸುತ್ತೇನೆ. ಇದರಲ್ಲಿ ಬಡತನ ಎಲ್ಲಿ ಬಂತು? ನಾಚಿಕೆ ಪಡುವಂತಹದ್ದೇನಿದೇ? ನೀವೇ ಹೇಳಿರಿ, "ಎಂದು.

ಕೇಳಿ ವಿವೇಕಾನಂದರು ಉದ್ಗರಿಸಿದರು "ದೇವರೇ' ಭಾರತದ ಬಾಲಕರಿಗೂ ಇದೇ ರೀತಿ ಸ್ವಾವಲಂಬಿಯಾಗಲು ಕಲಿಸಪ್ಪಾ'ಎಂದು.

In the Court of the District Judge of South Kanara.

O. P No. 73/1964.

Subraya Kannantha and 9 others ... Petitioners.

To

Whomsoever it is concerned.

Notice is hereby given that on 18—7—1964 application was made to this Court by Subraya Kannantha and 9 others for the grant to 1st Petitioner Subraya Kannantha on behalf of Petitioners a certificate under Part X of the Indian Succession Act, 1925, with respect to certain debts and securities of Ananthaya Kannantha of Hallihole village of Kundapur Taluk who died on the 20th day of March 1964, and that the 9th day of December 1964 at 11 A. M has been appointed the hearing thereof when you are at liberty to appear and oppose the same.

And also take notice that you are not required to present any application or petition for the said purpose, and that the address of said Petitioners is as stated above.

(By order of the Court)

(Sd.) M. Ananthayya &
M. Madhava Rao
Advocates for Petitioners.

Dated this 19th day of November, 1964.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈ ಹಿಂದ್ ಹಂಚು**ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಜೋಳಾರ, ಮಂಗಳೂರು-೧

Edited, Printed & Published by K. H. Shetty at the Navayuga Press, Udipi, S. India.

ಸಂಪುಟ ೪೪] ದಶಂಬರ, ೧೦, ೬೪ [ಸಂಚಿಕೆ ೧೫

Phone No. 226
ಫೋನ್ ನಂಬ್ರ: 226

leading nationalist weekly

೨೦
ಪೈಸೆ

ಕಥಾ ಪ್ರಪಂಚ

ಗೆಲವು ಯಾರದು?

ಬರೆದವರು
ಶ್ರೀ ಪಿ. ಎಸ್. ಎಸ್., ಚಿತ್ರದುರ್ಗ.

ಉಷಾ ತಾನು ಹಿಡಿದ ಹಟವನ್ನು ಕೈ ಬಿಡಲು ಸಿದ್ಧವಿರಲಿಲ್ಲ. ಶತಾಯ-ಗತಾಯ ತನ್ನ ಪ್ರಯತ್ನ ಯಶಸ್ವಿಯಾಗಲೇ ಬೇಕೆನ್ನುವುದೇ ಅವಳ ಮನದ ಆಸೆಯಾಗಿತ್ತು.

ಉಷಾಳ ಆಸೆ ಅಂತಹ ಮಹತ್ವಪೂರ್ಣವಾದುದೇನಲ್ಲ. ಸ್ತ್ರೀ ಸಹಜವಾದ ಆಸೆ-ಆಕಾಂಕ್ಷೆಗಳೇ ಅವಳನ್ನು ಕಾಡುತ್ತಿದ್ದವು; ಅಲ್ಲದೆ ಪದವೀಧರೆ, ಜೊತೆಗೆ ಅನುಕೂಲಸ್ಥರ ಮನೆಯ ಮಗಳು ಎಂದ ಮೇಲೆ ಕೇಳಬೇಕ? ಮನೆಯಲ್ಲಿ ಮಾಡೇವಿಯಂತೆ ಕುಳಿತು ಕಾಡು ಹರಟೆ ಅಥವಾ ಅಗ್ಗದ ಕಥೆ ಕಾದಂಬರಿಗಳನ್ನು ಓದುವಬದಲಾಗಿ "ಯಾವುದಾದರೂ ಕಛೇರಿಯಲ್ಲೋ ಅಥವಾ ಶಾಲೆಯಲ್ಲೋ ಕೆಲಸ ಮಾಡಿದರೆ, ವೇಳೆಯೂ ಕಳೆಯುತ್ತದೆ ಜೊತೆಗೆ ವರಮಾನವೂ ಬರುತ್ತದೆ" ಎನ್ನುವುದೇ ಅವಳ ಬಹು ದಿನದ ಹಂಬಲವಾಗಿತ್ತು. ಈ ಬಗೆಯ ಬೇಡಿಕೆಯನ್ನು ಬಹು ದಿನಗಳಿಂದಲೂ ವಿರೋಧಿಸಿ, ಬೇಡವೆಂದೇ ತಿಳಿಸಿದ್ದ ಅವಳ ಪತಿ ಶಂಕರ.

ಕಂಪೆನಿಯೊಂದರ ಹಿರಿಯ ಸಂಸ್ಥೆಯೊಂದರ ಸೇಲ್ಸ್ ಏಜಂಟರಾಗಿದ್ದ ಶಂಕರ ತಿಂಗಳ ಮೂರುವಾರ ಕಾಲವನ್ನು ಬೇರೆ ಬೇರೆ ಊರುಗಳ ಸುತ್ತಾಟದಲ್ಲಿಯೇ ಕಳೆಯಬೇಕಿತ್ತು. ಪ್ರವಾಸ ಕಾಲದಲ್ಲಿ ಪ್ರತಿ ಊರಿಗೂ ಉಷಾ, ಶಂಕರನೊಂದಿಗೆ ತಿರುಗಲು ಸಾಧ್ಯವಿರಲಿಲ್ಲ. ಆದರೆ ಮನೆಯಲ್ಲಿಯೇ ಕುಳಿತು ಕಾಲವನ್ನು ವ್ಯಯ ಮಾಡಲು ಇಚ್ಛೆಪಡಲಿಲ್ಲ.

ಶಂಕರನ ತಂದೆ ಶಿವರಾಮಯ್ಯನವರು ತಮ್ಮ ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದ ಮೇಲೆ ತುಮಕೂರು ಸಮೀಪದ ಸ್ವಗ್ರಾಮದಲ್ಲಿ ನೆಲಸಿದ್ದರು. ಅವರಿಗೆ ಇದ್ದವರಾದರೂ ಇಬ್ಬರೇ ಗಂಡುಮಕ್ಕಳು. ಮೊದಲನೆಯ ಮಗ ವಿದ್ಯಾಭ್ಯಾಸ ಮುಗಿದನಂತರ ಸೇಲ್ಸ್ ಏಜಂಟರಾಗಿ ಕೆಲಸ ಮಾಡುತಿದ್ದ ಶಂಕರ. ಎರಡನೆಯ ಮಗ ರಾಮು ಇಂಜನಿಯರಿಂಗ್ ತರಗತಿಯಲ್ಲಿ ಓದುತ್ತಲಿದ್ದ. ಹಿರಿಯ ಮಗನ ಜೀವನವೇನೋ ಒಂದು ಬಗೆಯ ನಿಲುಗಡೆಗೆ ಬಂದು ನಿಂತಿತ್ತು. ರಾಮುವಿನ ಜೀವನ ಉತ್ತಮಗೊಳ್ಳುವುದು ಎಂಬುದರಲ್ಲಿ ಅವರಿಗೆ ಯಾವ ಸಂದೇಹವೂ ಉಳಿದಿರಲಿಲ್ಲ.

ಉಷಾ ಅಡ್ವೋಕೇಟ್ ಕೇಶವ ರಾಯರ ಪುತ್ರಿ. ಕಾಲೇಜಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆರಂಭವಾದ ಉಷಾ ಮತ್ತು ಶಂಕರನ ಗೆಳೆತನ ಕೊನೆಗೆ ಮದುವೆಯಲ್ಲಿ ಕೊನೆಗೊಂಡಿತ್ತು. ತಮ್ಮ ಮನದಾಸೆಯಂತೆ ಸತಿ ಪತಿಯರಾದುದನ್ನು ಕಂಡು ಇಬ್ಬರೂ ಆನಂದ ಪಟ್ಟಿದ್ದರು. ಆದರೆ ಆನಂದದ ದಿನಗಳು ಬಹು ಕಾಲ ನೆಲೆಯಾಗಿ ನಿಲ್ಲುವಂತೆ ತೋರುತ್ತಿರಲಿಲ್ಲ. ಬೆಂಗಳೂರಿನಂತೆ ಬೃಹತ್ ಭವ್ಯನಗರದ ಜೀವನದ ಹಂಚಿಕೆಯಿದ್ದ ಉಷಾ ಹಳ್ಳಿಯಲ್ಲಿ ಕಾಲವನ್ನು ಕಳೆಯಲು ಬಹು ಪ್ರಯಾಸ ಪಡಬೇಕಾಯಿತು. ಹಳ್ಳಿಯ ಜೀವನದ ವಾತಾವರಣವಾಗಲಿ, ಹಳ್ಳಿಗರ ನಡೆನುಡಿಗಳಾಗಲಿ, ಹಳ್ಳಿಯ ಸಮವಯಸ್ಸಿನ ಹೊಸ ಗೆಳತಿಯರ ಸಹವಾಸವಾಗಲಿ ಅವಳಿಗೆ ನೆಮ್ಮದಿ ನೀಡಲಿಲ್ಲ. ವಿವಾಹ ಪೂರ್ವದಲ್ಲಿಯೇ ಊರೂರು ಸುತ್ತುವ ವೃತ್ತಿಯನ್ನು ಹೊಂದಿರುವ ಶಂಕರನನ್ನು ಮನಸಾರೆ ಮೆಚ್ಚಿ ವರಿಸಿದ್ದ ಉಷಾ ವಿವಾಹಾನಂತರ ಕೆಲಕಾಲ ಹಳ್ಳಿಯಲ್ಲಿ ಜೀವಿಸುವ ವೇಳೆಗೆ ಬೇಸರಪಟ್ಟುಕೊಂಡಿದ್ದಳು.

"ತಿಂಗಳಿನಲ್ಲಿ ಮೂರುವಾರ ಕಾಲ ಅವರು ಪ್ರವಾಸದಲ್ಲಿಯೇ ಇರುತ್ತಾರೆ. ನಾನೊಬ್ಬಳೇ ಮನೆಯಲ್ಲಿದ್ದು ಮಾಡುವುದಾದರೂ ಏನು? ಎಷ್ಟು ಪುಸ್ತಕ ಓದಿದರೂ ಕಾಲ ಹೋಗುವುದಿಲ್ಲ. ಹೇಗೂ ಡಿಗ್ರಿ ಪಡೆದದ್ದಾಗಿದೆ, ಕೆಲವು ಕಾಲ ಯಾವುದಾದರೂ ಇಲಾಖೆಯಲ್ಲಿ ಕೆಲಸ ಮಾಡುತ್ತೇನೆ" ಎಂದು ಉಷಾ ತನ್ನ ಅಭಿಪ್ರಾಯ ತಿಳಿಸಿದಳು. ಅವಳ ವಾದವನ್ನು ಶಂಕರನಾದಿಯಾಗಿ ಅವಳ ಅತ್ತೆ-ಮಾವ, ತಂದೆ-ತಾಯಿ ಯಾರೂ ಒಪ್ಪಲಿಲ್ಲ. ಎಲ್ಲರೂ ಬೇಡವೆಂದೇ ನಿರಾಕರಿಸಿದರು. ಶಂಕರನಂತೂ "ನೀನೂ ಕೂಡಾ ದುಡಿದೇ ಜೀವಿಸ ಬೇಕಿಲ್ಲ ಉಷಾ. ಹೊಟ್ಟೆ ತುಂಬುವಷ್ಟು ಅನ್ನವನ್ನು ಭಗವಂತ ಕೊಟ್ಟಿದ್ದಾನೆ. ಡಿಗ್ರಿ ಪಡೆದ ಮಾತ್ರಕ್ಕೆ ಉದ್ಯೋಗ ಮಾಡಲೇಬೇಕೇ? ಮನೆಯಲ್ಲಿಯೇ ಕಲಿಯುವ ಸಂಗತಿಗಳು ಬೇಕಾದಷ್ಟಿವೆ. ಈ ಕಾಲದಲ್ಲಿ ಮನೆ ಬಿಟ್ಟು ಹೋಗುವುದೇ ಸ್ತ್ರೀಗೆ ಅನುಚಿತ. ಇಂದಿನ ಸಮಾಜದಲ್ಲಿಯಂತೂ ಬಹು ಕಠಿಣ" ಎಂದು ನಾನಾಬಗೆಯಲ್ಲಿ ವಿವೇಕ ಹೇಳಿದ.

ಉಷಾ ಯಾರ ವಿವೇಕದ ಹಿತ ನುಡಿಗಳನ್ನೂ ಒಪ್ಪಲು ಸಿದ್ಧಳಿರಲಿಲ್ಲ. ಅವಳದು ಒಂದೇ ಬಗೆಯ ಹಟ "ನಾನೇಕೆ ಯಾವುದಾದರೂ ಇಲಾಖೆಯಲ್ಲಿ ಕೆಲಸ ಮಾಡಬಾರದು? ಇವರೇಕೆ ತನ್ನನ್ನು ಪ್ರತಿಬಂಧಿಸುತ್ತಾರೆ?" ಏನಾದರೂ ಆಗಲಿ ತಾನು ಕೆಲಸಕ್ಕೆ ಸೇರಿಯೇ ತೀರ ಬೇಕೆಂದು ನಿಶ್ಚಯಿಸಿದಳು.

ಮೊದಮೊದಲು ಎಲ್ಲರೂ ನಾನಾ ಬಗೆಯ ಹಿತವಾದ ಹೇಳಿ ಬೇಸತ್ತರು. ಕೊನೆಗೆ ಉಷೆಯ ವರ್ತನೆಯಿಂದ ಬಹು ನೊಂದು "ಅವಳ ಹಣೆಬರಹ, ಏನಾದರೂ ಮಾಡಿಕೊಳ್ಳಲಿ" ಎಂದುಕೊಂಡು ಸುಮ್ಮನಾದರು. ಶಂಕರ ಉಷಾ ತನ್ನ ಕೈ ಮೀರಿ ಪ್ರತಿಭಟಿಸಿ ನಿಂತುದನ್ನು ಕಂಡು ದಿಗಿಲುಗೊಂಡ. ಕೆಲವು ದಿನ ಪತಿ ಪತ್ನಿಯರಲ್ಲಿ ವಾದ-ವಿವಾದ ನಡೆದು ಇಬ್ಬರೂ ಸೋಲದೆ ಮನಸ್ತಾಪ ಉಂಟಾಯಿತು. ಕೊನೆಗೆ ಶಂಕರ ಬೇಸರದಿಂದ 'ಇಲ್ಲಿಯವರೆಗೂ ಹೇಳಿದುದು ಮುಗಿಯಿತು ಉಷಾ. ಇನ್ನು ಮುಂದಿನದು ನಿನ್ನ ಇಷ್ಟ. ತೊಂದರೆಗೊಳಗಾಗುವುದು ಬೇಡವೆಂದು ತಿಳಿಸಿದರೆ, ನೀ ನಾಗಿಯೇ ಬಯಸಿ ಹೋಗುತ್ತೀಯವೆ; ಅದು ನಿನ್ನ ಹಣೆಯ ಬರಹ. ಏನಾದರೂ ಮಾಡಿಕೋ" ಎಂದು ತಿಳಿಸಿದ. ಕೆಲದಿನಗಳು ಉಷೆಯ ಹೃದಯದಲ್ಲಿ ಎರಡು ಬಗೆಯ ಹೋರಾಟ ನಡೆಯಿತು. ಕೊನೆಗೆ ಏನಾದರೂ ಆಗಲಿ ಕೆಲಸಕ್ಕೆ ಸೇರಿಯೇ ತೀರುವೆನೆಂಬ ದೃಢ ನಿಶ್ಚಯ ಮಾಡಿಕೊಂಡಳು.

ಉಷೆಯ ಪ್ರಯತ್ನಕ್ಕೆ ಯಾರೊಬ್ಬರೂ ಬೆಂಬಲ, ಸಹಕಾರ ನೀಡಲಿಲ್ಲ. ಮನೆಯವರು ಯಾರಿಂದಲೂ ಯಾವ ಬಗೆಯ ಬೆಂಬಲವನ್ನೂ ಕಾಣದ ಉಷೆ ಸ್ವಪ್ರಯತ್ನದಿಂದ ತುಮಕೂರಿನ ಆಫೀಸು ಒಂದರಲ್ಲಿ ಕೆಲಸ ಒಂದಕ್ಕೆ ನೇಮಕಳಾದಳು. ಎಲ್ಲ ಕ್ಷೇತ್ರಗಳಲ್ಲಿಯೂ ಸ್ತ್ರೀಯರಿಗೆ ಮೊದಲ ಸ್ಥಾನ ಕಲ್ಪಿಸಬೇಕಷ್ಟೆ! ಅಂತಹುದರಲ್ಲಿ ಮಹಿಳೆ ತಾನಾಗಿಯೇ ಕೆಲಸ ಹುಡುಕಿಕೊಂಡು ದಿಟ್ಟತನದಿಂದ ಬಂದಿರುವಾಗ ಅವಳನ್ನು ನಿರಾಶೆ ಪಡಿಸಿ ಹಿಂದೂಡುವುದು ಸಾಧ್ಯವೆ? ಅವಳಿಗೆ ಕೆಲಸವಂತೂ ದೊರೆಯಿತು. ಉಷೆ ತನ್ನ ಪ್ರಯತ್ನದಲ್ಲಿ ಜಯಗಳಿಸಿದುದಕ್ಕೆ ಆನಂದಪಟ್ಟಳು.

ಉಷೆ ತಮ್ಮ ಮಾತಿಗೆ ಒಪ್ಪದೆ ಮನಬಂದಂತೆ ವರ್ತಿಸಿ ನೌಕರಿಗೆ ಸೇರಿದುದನ್ನು ಕಂಡು ಅವಳ ಬಂಧು ಮಿತ್ರರು ಬೇಸರ ಪಟ್ಟುಕೊಂಡು ಅವಳೊಂದಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ತಂದೆ-ತಾಯಿ ಮತ್ತು ಅತ್ತೆ-ಮಾವ "ನಿನ್ನ ಇಷ್ಟವಮ್ಮ, ಏನಾದರೂ ಮಾಡಿಕೋ" ಎಂದು ಮೌನ ವಹಿಸಿದರು.

ಉಷೆ ಕೆಲಸ ಮಾಡಲಾರಂಭಿಸಿ ಕೆಲವು ತಿಂಗಳು ಕಳೆದವು. ಹೊಸತಾಗಿ ಕಛೇರಿಗೆ

(ಹದಿನೈದನೇ ಪುಟ ನೋಡಿರಿ)



ಕೆನರಾ ಬ್ಯಾಂಕಿನ ಸಂಸ್ಥಾಪಕ ಶ್ರೀ ಎ. ಸುಬ್ಬರಾವ್ ಪೈ (19—11—1852 ರಿಂದ 25—7—1909) ಅವರ ಖ್ಯಾತಿವೆತ್ತ ದಿವ್ಯ ಸ್ಮರಣೆಗಾಗಿ ಸ್ಥಾಪಿಸಿದ ಅಮೃತ ಶಿಲಾ ವಿಗ್ರಹವೊಂದು ಬೆಂಗಳೂರಿನ ಕೆನರಾ ಬ್ಯಾಂಕಿನ ಆಡಳಿತ ಕಚೇರಿಯಲ್ಲಿ ಮೈಸೂರು ರಾಜ್ಯದ ಅರ್ಥ ಸಚಿವ ಮಾನ್ಯ ಶ್ರೀ ಬಿ. ಡಿ. ಜತ್ತಿಯವರಿಂದ ಅನಾವರಣ ಮಾಡಲ್ಪಟ್ಟಿತು.
ಅನಾವರಣದ ಬಳಿಕ ತೆಗೆಯಲಾದ ಈ ಚಿತ್ರದಲ್ಲಿ ಶ್ರೀ. ಬಿ. ಡಿ. ಜತ್ತಿಯವರು ಬ್ಯಾಂಕಿನ ಅಧ್ಯಕ್ಷ, ಮೆನೇಜಿಂಗ್ ಡೈರೆಕ್ಟರ್, ಜನರಲ್ ಮೆನೇಜರ್ ಮತ್ತಿತರ ಡೈರೆಕ್ಟರರೊಂದಿಗಿರುವುದನ್ನು ಕಾಣಬಹುದು.

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

● ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ

● ಮೆಳ್ಳೆದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು

● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು

Phone No. 226

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಶಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ರವಾನೆ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಮುಂಬರುವ ಬೇಸಗೆಯ ದಿನಗಳಲ್ಲಿಯೂ ಧಾರಾಳ ನೀರು ಇರುವುದರಿಂದ ಕಾಲಿತರ ಗ್ರಾಮದ ಕೃಷಿಕರು ಭತ್ತ ವ್ಯವಸಾಯದ ತಯಾರಿ ನಡೆಸುತ್ತಿದ್ದಾರೆ. (ವಿವರ ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿದೆ)

ನವಯುಗ

ಸಂಪುಟ ೪೪	ಉಡುಪಿ	Vol 44
ಸಂಚಿಕೆ ೧೫	೧೦—೧೨—೧೯೬೪	No. 15

ವಚನ ಸುಧೆ

ಏತದ್ಧ ವೈ ದೇವಾ ವ್ರತಂ
ಚರಂತಿ ಯತ್ ಸತ್ಯಂ।
ತಸ್ಮಾತ್ತೇಯಶೋ
ಯಶೋ ಹ ಭವಂತಿ॥

(ಶತಪಥ ಬ್ರಾಹ್ಮಣ, ೧.೧.೧.೫)

೦ ಸತ್ಯವಾಗಿರುವುದನ್ನು ನಿಶ್ಚಯವಾಗಿಯೂ ವ್ರತವೆಂದು ದೇವತೆಗಳು ಆಚರಿಸುತ್ತಾರೆ. ಇದರಿಂದವರು ಯಶಸ್ಸು ಪಡೆಯುತ್ತಾರೆ.

೦೦ ಸತ್ಯಪಾಲನೆಯೇ ದೇವತೆಗಳ ವ್ರತಾಚಾರ. ಅವರು ಸತ್ಯಪಾಲನಾ ವ್ರತವನ್ನು ಎಂದೂ ಬಿಡುವುದಿಲ್ಲ. ಈ ವ್ರತಾಚರಿಸುವವರು ಯಶಸ್ವಿಗಳೂ ಕೀರ್ತಿವಂತರೂ ಸುಪ್ರಸಿದ್ಧರೂ ಆಗುತ್ತಾರೆ. ಆದುದರಿಂದ ಎಲ್ಲರೂ ಸತ್ಯವ್ರತರಾಗಿರಬೇಕು.

ಎಚ್ಚರವಾಗ ಬೇಡವೆ?

ಸಾರ್ವಜನಿಕರ ಜನಜೀವನದಲ್ಲಿ ಸರಕಾರವು ವಿಶೇಷವಾಗಿ ಹಸ್ತಕ್ಷೇಪ ಮಾಡುವುದು ಅಪೇಕ್ಷಣೀಯವಲ್ಲವೆಂಬುದಿಂದು ಸರ್ವಮಾನ್ಯವಾಗಿದೆ. ಸುಖೀ ರಾಜ್ಯ, ಕಲ್ಯಾಣ ರಾಷ್ಟ್ರವೆಂದರೆ, ಸರಕಾರದ ಕೈವಾಡವು ಎಲ್ಲೆಂದರಲ್ಲಿ ತೋರಿಬರುವುದಲ್ಲ. ರಾಷ್ಟ್ರಪಿತ ಗಾಂಧೀಜಿ ಅಂದು ಹೇಳುತ್ತಿದ್ದಂತೆ, ಇಂದು ಸಂತ ವಿನೋಬಾ ಸಾರುತ್ತಿರುವಂತೆ ಗ್ರಾಮ ಸ್ವಾವಲಂಬನೆಯಿಂದ ಕಟ್ಟಿದ ಗ್ರಾಮರಾಜ್ಯ ಅಥವಾ ಪಂಚಾಯತ್ ರಾಜ್ಯವೇ ಪ್ರಜಾಪ್ರಭುತ್ವದ ಮಹತ್ಸಾಧನೆ. ಆದರೆ, ಇಂದು ನಾವು ಏನನ್ನು ನೋಡುತಿದ್ದೇವೆ? ಜನಾಭಿಪ್ರಾಯದಂತೆ ಆಗುವುದಾದರೆ, ಸರಕಾರವು ಅನಪೇಕ್ಷಣೀಯವಾದ ಹಸ್ತಕ್ಷೇಪದಿಂದಾಗಿ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ಬದಲಾಗಿ ಹದಗೆಡಿಸುತಿದೆ. ಸರಕಾರದ ನೀತಿಯು ಒಳ್ಳೆಯ ಉದ್ದೇಶದಿಂದ ಪ್ರೇರಿತವಾದುದಾದರೂ ಅದನ್ನು ಕಾರ್ಯರೂಪಕ್ಕಿಳಿಸುವ ಆಡಳಿತಾಂಗದ ಶಿಥಿಲತೆಯಿಂದಾಗಿ ಜನ ರೋಸಿ ಹೋಗುವಂತಿದೆ.

ಮುಖ್ಯವಾಗಿ ನಾವಿಂದು ಆಹಾರ, ಸಕ್ಕರೆ ಮತ್ತು ಸಿಮೆಂಟುಗಳ ಪ್ರಶ್ನೆಗಳನ್ನು ಎತ್ತಿಕೊಳ್ಳಬಹುದು. ಮಂತ್ರಿ ಮಹೋದಯರು ತಮ್ಮ ಮಾತುಗಾರಿಕೆಯಿಂದಲೇ ಇಂದು ನಾವು ಕಾಣುವ ಆಹಾರದ ಅಭಾವ ಮತ್ತು ಬೆಲೆಯೇರಿಕೆಯ ಪ್ರಶ್ನೆಯನ್ನು ಮುಂದೆ ತಂದಿದ್ದಾರೆ. ಆಹಾರ ಧಾನ್ಯಗಳ ವಿತರಣೆಯ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸರಿಯಾಗಿ ವರ್ತಿಸುತ್ತಿಲ್ಲ; ಈ ಕಾರಣದಿಂದಾಗಿಯೇ 'ಅಕ್ಕಿ ಇಲ್ಲ' ಎಂಬ ಕೂಗು ಈಗಾಗಲೇ ಗಗನವನ್ನೇರಿದೆ. ಈ ವರ್ಷದ ಸುಗ್ಗಿಯ ಕಾಲ ಪ್ರಾರಂಭವಾದೊಡನೆಯೇ ಆಹಾರ ಪರಿಸ್ಥಿತಿ ಸುಧಾರಿಸುವದೆಂಬ ಮಂತ್ರಿಗಳ ಭರವಸೆಯು ಫಲವಿತ್ತಂತೆ ಗೋಚರವಾಗುತ್ತಿಲ್ಲ. ಸರಕಾರವೂ ಅಧಿಕಾರಿಗಳೂ ವ್ಯಾಪಾರೀವರ್ಗವನ್ನು, ಜಮೀನುದಾರರನ್ನು ಅಥವಾ ಧಾನ್ಯ ಬೆಳೆಯುವ ರೈತನನ್ನು ಬೊಟ್ಟು ಮಾಡಿ ತೋರಿಸಿದರೆ ಅದರಿಂದ ಪರಿಣಾಮ ನೆಟ್ಟಗಾಗುವುದೂ ಇಲ್ಲ; ಅದು ನ್ಯಾಯವೆನ್ನುವುದೂ ಸರಿಯಲ್ಲ.

ಸಿಮೆಂಟು ವಿತರಣೆಯಲ್ಲಿ ಸರಕಾರದ ನೀತಿಯು ಒಂದು ರೀತಿಯಿದ್ದರೂ ಅಧಿಕಾರಿ ವರ್ಗದ ನಡವಳಿಕೆ ತೀರ ವಿಚಿತ್ರವಾಗಿದೆ. ಒಂದು ಕಟ್ಟಡ ಕಟ್ಟುವುದಕ್ಕೆ ಅವಶ್ಯಕತೆಯಿದ್ದಷ್ಟನ್ನು ಕೇಳಿದರೆ, ನೂರು ಕೇಳಿದರೆ ಹತ್ತೂ ದೊರೆಯದ ಪ್ರಸಂಗಗಳು ಎಲ್ಲೆಲ್ಲಿಯೂ ತಾಂಡವವಾಡಿವೆ. ಅದರಲ್ಲೂ ಉಡುಪಿಯವರಿಗೆ ಕಾಪುವಿನಲ್ಲಿ ಕೊಳ್ಳಲು ಸರ್ವೋಟು ಸಿಮೆಂಟಿನ ಉತ್ಪಾದನೆ ಕಡಿಮೆಯಾಗಿದೆ ಎಂಬುದರಲ್ಲಿ ನಿಜಾಂಶವಡಗಿದೆಯೆನ್ನಲು ಬರುವುದಿಲ್ಲ; ಏಕೆಂದರೆ ಒಂದಕ್ಕೆ ಎರಡು ಕೊಡಲು ಸಿದ್ಧರಾದವರಿಗೆ ಬೇಕಷ್ಟು ಪ್ರಮಾಣದಲ್ಲಿ ದೊರೆಯುತ್ತಿದೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯ. ಸರಕಾರಿ ಅಧಿಕಾರಿಗಳಿಗೆ ಈ ರಹಸ್ಯ ತಿಳಿದಿಲ್ಲವೆಂದರೆ ಅದು ನಂಬುವಂತಹ ಮಾತಲ್ಲ. ಮತ್ತೆ ಹೀಗೆ ಏಕಾಗುತ್ತದೆ? ತಿಳಿ ತಿಳಿದೂ ಅವರನ್ನು ಸುಮ್ಮನಿರುವಂತೆ ಮಾಡುವ ಈ ತಂತ್ರ ಯಾವುದು? ಇಂತಹ ಕರ್ತವ್ಯ ಬಾಹಿರತೆಯು ಸಮಾಜದಲ್ಲಿ ಎಂತಹ ಭೀಕರ ಪರಿಣಾಮ ಬೀರಬಹುದು?

ಇನ್ನು ಸಕ್ಕರೆ ಹಂಚುವ ಪರಿಪಾಟ! ಇದು ತೀರಾ ಲಜ್ಜಾಸ್ಪದವಾಗಿದೆ. ಅದೇನೋ ಪುಣ್ಯವಶದಿಂದ ಸಕ್ಕರೆಯು ಕಾರ್ಡಿಗೆ ಕೆಲವೆಡೆ ಹಂಚಲಾಯಿತು, ಜನಸಾಮಾನ್ಯರಿಗೆ. ಆದರೆ, ಅದರಲ್ಲಿ ಬರೆದಷ್ಟು ಸಕ್ಕರೆ ಪಡೆದ ಉದಾಹರಣೆಗಳು ತೀರಾ ಅಪರೂಪ. ವಿತರಣೆಗಾರರು ತಮಗೆ ಕೋಟಾ ಬಂದದ್ದೇ ಕಡಿಮೆಯೆಂದು ಹೇಳಿದರೂ ದುಪ್ಪಟ್ಟು ಬೆಲೆಯಲ್ಲಿ ಅದನ್ನು ಒದಗಿಸಲು ಸಮರ್ಥರಾಗಿದ್ದಾರೆ. ಇದು ಯಾಕೆ ಹೀಗಾಗುತ್ತದೆ? ವಿಶೇಷ ಸಂದರ್ಭಗಳಲ್ಲಿ, ಮದುವೆ—ಮುಂಜಿವೆಗಳಿಗೆಂದು ಪರ್ಮಿಟ್ಟು ನೀಡುವ ಕ್ರಮವೊಂದಿದೆ. ಆದರೆ, ಇದೂ ಸಿಮೆಂಟ್! ಪರ್ಮಿಟ್ಟಿನಂತೆಯೇ. ಕಾಳಸಂತೆಯಲ್ಲಿ ಸುಲಭವಾಗಿ ಸಿಗುವ ಸಕ್ಕರೆ ಬಿಳಿಯ ಮಾರುಕಟ್ಟೆಗೇಕೆ ಬರಲೊಲ್ಲದು? ಹೋಟೇಲು—ಸಿಹಿತಿಂಡಿ (ಪೆಪ್ಪರಮಿಂಟು ಇತ್ಯಾದಿ) ಮಾಡುವ ಕಾರ್ಖಾನೆಗಳ ಪಾಡ! ಇದು ನಾಯಿ ಪಾಡಾಗಿದೆ. ಇಂತಿಷ್ಟು ತಮ್ಮ ಮಹಿವಾಟು ಇದೆ; ಇದಕ್ಕಿಷ್ಟು ಸಕ್ಕರೆ ಬೇಕು ಎಂದು ಪ್ರಮಾಣಪಡಿಸಿದರೂ ಅವರಿಗೆ ಪರ್ಮಿಟ್ಟು ಸಿಗುತ್ತಿಲ್ಲವೆಂದು ಕೇಳುತ್ತೇವೆ. ಒಂದು ಪರ್ಮಿಟ್ಟಿಗಾಗಿ ಮಂಗಳೂರು—ಬೆಂಗಳೂರು ಎಂದು ಅಲೆದಾಡುತ್ತ ಹೋಗುವುದೊಂದು, ಅದರ ವೆಚ್ಚ ಮತ್ತೊಂದು, ಸಾಕಷ್ಟು ಸಕ್ಕರೆ ದೊರೆಯದುದರಿಂದ ತಮ್ಮ ಕಾರ್ಖಾನೆಗಳಿಗೆ ಕೆಲಸವಿಲ್ಲದಿರುವುದು ಬೇರೊಂದು—ಹೀಗೆ ಒಂದಲ್ಲ ನೂರು ಬಗೆಯ ಕಷ್ಟ-ನಷ್ಟಗಳಿಗೆ ಬಲಿಯಾಗಬೇಕೆಂದರೆ, ನ್ಯಾಯವನ್ನು ಕೇಳುವವರೇ ಇಲ್ಲವೆಂದು ಹೇಳಬೇಕಾಗುತ್ತದೆ. ಜಿಲ್ಲಾ ಕೇಂದ್ರಗಳಲ್ಲಿ ಸಾಕಷ್ಟು ಸಂಗ್ರಹವಿದ್ದರೂ ಅದರ ವಿತರಣೆಯಲ್ಲಿ ಅನ್ಯಾಯ, ಅಸಮರ್ಪಕತೆ, ಕೆಲವೊಮ್ಮೆ ನಿಷ್ಕ್ರಿಯತೆಗಳ ಗಾಳಿ ಬಾಗುತ್ತಿದೆಯೆಂದೂ ಕೇಳುತ್ತೇವೆ. ಇದಕ್ಕೆ ಅಧಿಕಾರಿಗಳೇ ಕಾರಣರು ಎಂದು ಹೇಳದೆ ನಿರ್ವಾಹವಿಲ್ಲ.

ಇಲ್ಲಿ ಒಂದು ಮುಖ್ಯ ಪ್ರಶ್ನೆ. ಸರಕಾರವು ಕೈಹಾಕಿದ ರಂಗದಲ್ಲಿ ಅಭಾವ ಪರಿಸ್ಥಿತಿಯೇಕೆ ಬರಬೇಕು? ಇದಕ್ಕೆ ಕಾರಣವೇನ? ಮುಕ್ತ ಪೇಟೆಯಿದ್ದಷ್ಟು ದಿನ ಸರಿಯಾಗಿ ದೊರೆಯುತಿದ್ದ ವಸ್ತು 'ನಿಯಂತ್ರಣ'ದ ಗಾಳಿ ಸೋಂಕಿದೊಡನೆ ಯಾವ ಮಾಯಕಟ್ಟಿಗೆ ಹಾರಿ ಹೋಗುತ್ತದೆ? ಹೇಗೆ ಹೋಗುತ್ತದೆ? ಎಲ್ಲಿಯೂ ದೊರೆಯದ ವಸ್ತುಗಳು ಕಾಳ ಮಾರ್ಕೆಟ್ಟಿನಲ್ಲಿ ಹೇಗೆ ಸಿಗುತ್ತವೆ? ಅಲ್ಲಿಗೆ ಎಲ್ಲಿಂದವು ಪೂರೈಕೆಯಾಗುತ್ತವೆ? ಜನಸಾಮಾನ್ಯರಿಗಿಂತಲೂ ಅಧಿಕಾರಿ ವರ್ಗವು ಇದನ್ನು ಸರಿಯಾಗಿ ಅರಿತಿರಬೇಕು. ಜನತಾ ಸೇವೆಗಾಗಿರುವ ಅಧಿಕಾರಿಗಳ ಜನಕಂಟಕರಾಗಿಯೇ ಮುಂದುವರಿದರೆ, ದೇಶದಲ್ಲಿ ವಿಕ್ಷೋಭೆ ಹರಡಿ ದೊಂಬಿಯೇಳದಿರಲಾರದು. ಹಾಹಾಕಾರವು ಅಷ್ಟರಲ್ಲೇ ನಿಲ್ಲಲಾರದು. ಆದುದರಿಂದ ನಮ್ಮ ನಾಯಕರೆನಿಸಿದವರು, ಶಾಸನ ಸಭಾ ಸದರು, ಎಂ. ಪಿ.ಗಳು—ಇನ್ನು ಅಧಿಕಾರಿಗಳೂ, ವ್ಯಾಪಾರಿಗಳೂ ಎಚ್ಚತ್ತು ಸರಿಯಾಗಿ ವರ್ತಿಸಬೇಕು; ಭ್ರಷ್ಟಾಚಾರ—ಅನ್ಯಾಯಗಳನ್ನು ಪ್ರತಿಭಟಿಸಲು ಹಿಂಜರಿದರೆ, ದೇಶದ ಕಾಲಗತಿ ಕೆಟ್ಟು ಹೋದೀತು, ಪಂಚಾಯತ್ ರಾಜ್ಯವು ಪಂಚಾಂಗಿತ್ತೆ ಬಲ್ಲೇ ಕೊನೆಗೊಳ್ಳುವಂತಾಗ ಬಾರದು.

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ

"ರಾಮಿ, ಸಿನೆಮಾದ ನಾಯಕ ನಂಸ್ಕಾರ ಸೋತತ್ತು, ರಾಜೀನಾಮೆ ಕೊಡಲಿಲ್ಲವಂತೆ, ಇದು ನ್ಯಾಯವಾ?"

"ಪೆದ್ದೀ, ಇದಕ್ಕೂ ಭಾರತದ ಅಪ್ಪನಿಗೆ ವಾರಿ ಸಾಕ್ಷಿ ನೀವಿದ್ದೀರಲ್ಲ ಬಿಡು ಅದಕ್ಕೆ ಮೊನದೇ..."

ಪವರ್

ಗೇಹೆ ರಾಜ್ಯದಲ್ಲಿ

ಬೇಲಿಯೇ ಹೊಲ ಮೇದಿತು

"ಲೇ, ಲೇ...."

"ಯಾರ್ರೀ ಅದು...ಓ, ನೀವಾ?"

"ಅಲ್ಲ, ನಿನ್ನನ್ನ ಈ ಮನೆಯಲ್ಲಿ ಮತ್ತ್ಯಾರೇ ಅದು ಹಾಗಂತ ಕರೆಯೋದು?'

"ನಾನು ಯಾರೋಂತ ಅದ್ಕೊಂಡೆ. ಯಾವಾಗ್ಲೂ ರಾತ್ರಿಯಾದ ಮೇಲೇ ಬರೋರು ಇಂದು ಮಾತ್ರ ನಸ್ಕು ಹರಿಯೋ ಮೊದ್ಲೇ ಬಂದ್ರೆ..."

"ಅಂದ್ರೆ ಯಾವಾಗ್ಲಾದ್ರೂ ಬೇಗ ಮನೆಗೆ ಬರಬಾರದೂಂತೇನು?"

"ನೋಡಿ, ನೀವು ಬೇಗ ಬರಬೇಕೂಂತ ಅದೆಷ್ಟೋ ಬಾರಿ ಹೇಳಿ ಹೇಳಿ ನನ್ಗೆ ಸಾಕಾಗಿ ಹೋಯ್ತು. ಗಂಟೆಗೆ ಒಂದೇ ಸ್ವರಾಂತ ಹೇಳ್ತಾರಲ್ಲಾ ಹಾಗೆ...'

"ಸರಿ ಹೋಯ್ತು ಬಿಡು. ಹ್ಹ ಹ್ಹ....'

"ಏನಪ್ಪಾ ಅದು ನಗೋ ವಿಷ್ಯ...?"

"ಅಲ್ಲ, ಹೇಳಿದೆಯಲ್ಲಾ, ಗಂಟೆಗೊಂದೇ ಸ್ವರಾಂತ....? ಯಾರ ಗಂಟೆಗೇಂತ ತಿಳೀದೆ ನಗು ಬಂದು ಬಿಟ್ತು ಕಣೇ...."

"ಪಂಪ್ಗಿಲ್ರಿ ನೀವು...."

"ಮತ್ತೆ ಮಾತಾಡೋಗ ತುಸ ಎಚ್ಚರವಾಗಿರ್ಬೇಡ್ವೆ?"

"ಸಾಕು ಬಿಡಿ ಆ ಮಾತು. ನಾನು ಏನಂದ್ರೂ ನನ್ನ ಮಾತ್ನಲ್ಲೇ ನನ್ನ ಕಟ್ಟಿ ಬಿಡ್ತೀರಿ ನೀವು."

"ಅಲ್ಲ ಕಣೇ .. ನಿನ್ನಂಥವ್ರನ್ನ ಕಂಡೇ ಹೆಂಗಸರ ಬುದ್ಧಿ ಮೊಣಕಾಲ ಕೆಳಗೇಂತ ಗಾದೆ ಹುಟ್ಬೇಕು...."

"ನಾವು ಯಾಕೆ ಹುಟ್ಟಿದ್ದೇವೇಂತ ಅರೀದವ್ರು ಮತ್ತೆ ಗಾದೆ ಯಾಕೆ ಹುಟ್ಟಿದೇಂತ ಶೋಧನೆ ಮಾಡೋಕೆ ಹೊರಟಿದ್ದಾರೆ...."

"ಸಾಕು ಸಾಕು ಕಣೇ....ನಿನ್ಗೆ... ಇರ್ಲಿ ಬಿಡು. ನನ್ನ ಮುಂದೆ ಅಂದದ್ದರಿಂದ ಬಚಾವಾದೆ. ಮತ್ಯಾರ ಮುಂದಾದ್ರೂ ಅನ್ನುತಿದ್ರೆ...,

"ಏನಾಗ್ತಿತ್ತು?"

'ಆಗೋದೇನು? ಕಪಾಲ ಮೋಕ್ಷ....'

"ಅಯ್ಯಪ್ಪ ಸದ್ಯ ಅಂತಹ ಪರಿಸ್ಥಿತಿ ಉದಿಸ್ಲಿಲ್ಲಾಂತ ಸಮಾಧಾನ ಈಗ ಅದಿರ್ಲಿ, ಏನು ಪಶ್ಚಿಮದಲ್ಲಿ ಸೂರ್ಯೋದಯವಾಯ್ತೂಂತ?"

"ಸೂರ್ಯ ಕಂತಿದ್ರೂ ಚಂದ್ರ ಮೂಡ್ಲಿಲ್ಲ ಕಣೆ.'

"ನಿಮ್ಮ ಒಗಟುಗಿಗಟು ಎಲ್ಲಾ ನನ್ಗೆ ಬೇಡ. ಏನು ಮಾತೂಂತಾದ್ರೂ ಸರಿಯಾಗಿ ಹೇಳಿದ್ರೆ...."

"ನೀನು ಒಗಟಿನ ಹಾಗೆ ಸವಾಲು ಹಾಕಿದ್ರೆ ಆದ್ರೆ ಜವಾಬೂನೂ ಹಾಗೇ ಇರ್ಬೇಕಾಗ್ತದೆಯಲ್ಲಾ...."

"ಹೋಗ್ಲಿ ಅದೆಲ್ಲಾ, ಇಂದು ಬೇಗ್ನೇ ಬಂದು ಬಿಟ್ಟಿರೋದು ಸುಂಸುಮ್ನೆ ಇರ್ಲಿಕ್ಕಿಲ್ಲ".

"ಹ್ಞೂಂ... ಹಾಗೆ ಬಾ. ನೋಡು, ಈವತ್ತು ಹೊಸ ಹೊಸ ಸುದ್ದಿ ಕೇಳಿದೆ, ಹಾಗೇಂತ ನಿನ್ಗೂ ಬೇಗ್ನೇ ತಿಳ್ಸಬಿಡೋಣಾಂತ..."

"ಅದೇತಾನೆ? ವೆಟಿಕನ್‌ನ ಜಗದ್ಗುರುಗಳದ್ದು..."

"ಹ್ಞೂಂ ಅದೂ ಒಂದು...."

"ಅದು ಕೇಳಿದ್ದೆ. ನಮ್ಮ ಮುಂಬಯ್ಗೆ ಬಂದಿದ್ದನಂತೆ; ಪೋಪ ಪಾಲರು ಭಾರತದಲ್ಲಿಯ ಅನಾಥರ ರಕ್ಷಣೆಗೆಂದು ೫೦ ಸಾವಿರ ಡಾಲರುಗಳನ್ನ ನೀಡಿದರಂತೆ."

"ಹೌದು. ಅದೊಂದು ಭಾರೀ ಸುದ್ದಿಯಲ್ವೆ.? ಅಷ್ಟೆ ಮಾತ್ರವಲ್ಲ, ಅವರು ನಮ್ಮ ರಾಷ್ಟ್ರಪತಿಗಳಿಗೆ ಪರಮೋಚ್ಚ ಬಿರುದು ನೀಡಿ ಗೌರವಿಸಿದ್ರು."

'ಅದ್ರಲ್ಲೇನು ವಿಶೇಷಾಂತ? ಡಾ| ರಾಧಾಕೃಷ್ಣನ್ನರಿಗೆ ಅದು ದೊರೆಯಬೇಕಾದ್ದೆ. ಗುಲಾಬಿ ಹೂವನ್ನ ಸೂಡಿದ್ರೆ ಹೂವಿನ ಘನತೆ ಹೆಚ್ಚಲಿಲ್ಲ; ಸೂಡಿದವ್ರ ಮರ್ಯಾದೇನೇ ಹೆಚ್ಚಿತು."

"ಅಂದ್ರೆ ಅದು ವಿಶೇಷವಲ್ಲಾಂತಾಯ್ತು, ಬಿಡು. ನಮ್ಮ ಪ್ರಧಾನಿ ಲಂಡನ್ನಿಗೆ ತಲುಪಿದ್ರು..."

"ಅದು ಮೊದಲೇ ಗೊತ್ತಾಗಿತ್ತಲ್ಲ!"

"ಹೌದು, ಆದ್ರೂ ನೋಡು, ಅವ್ರು ನಿಶ್ಚಿತ ಸಮಯಕ್ಕಿಂತ ೨೫ ನಿಮಿಷ ಬೇಗನೇ ತಲುಪಿದ್ರಂತೆ..."

"ಹ್ಞೂಂ...ಇದಾದ್ರೂ ತುಸ ವಿಶೇಷ ಹಾದು..."

"ಯಾಕೆ?"

"ಇಂಡಿಯನ್ ಪಂಕ್ಚುವಾಲಿಟಿಗೆ ಹೊಸ ಅರ್ಥ ಬರುವಂತೆ ಮಾಡಿದ್ರಲ್ಲಾ..."

"ಓ, ನಿನ್ನ ಬುದ್ಧೀನೇ? ಪಂಪ್ಗಿಲ್ಲ ಕಣೇ ನೀನು..."

"ಮತ್ತೇನಾಯ್ತಂತೆ?"

"ಆಗೋದೇನು? ಇದ್ದದ್ದೇ ಮಾತುಕತೆ, ವಿಚಾರ ವಿನಿಮಯ....ಭೆಟ್ಟಿ-ಸಂದರ್ಶನ."

"ಅದಿರ್ಲಿ...ಅವರು ಹೋದದ್ದಾದ್ರೂ ಯಾಕೇಂತೆ?"

"ಯಾಕೇಂತಂದ್ರೆ!"

"ಅಲ್ಲಾ, ಚೀನೀ ಅಣುಬಾಂಬಿಗೂ ಈ ಭೆಟ್ಟಿಗೂ, ಭಾರತದ ಅಣ್ವಸ್ತ್ರ ತಯಾರೀ ವಿರೋಧ ನೀತಿಗೂ, ಏನದ್ರೂ ಸಂಬಂಧವಿರಬಹುದೇಂತ?"

"ಇದ್ದರೂ ಇರಬಹುದೂನ್ನು, ಭಾರತದ ಸಂರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸುವ ಕುರಿತಾಗಿ ಚವನರು ಮಾಡಿದ ಮಾತುಕತೆ ಈಗ ಮತ್ತೆ ಮುಂದುವರಿಯಬಹುದು. ಅಲ್ಲಿನ ಲೇಬರ್ ಸರಕಾರದಿಂದ ಇನ್ನೂ ಹೆಚ್ಚಿನ ನೆರವನ್ನು ಪಡೆಯುವುದು ಸಾಧ್ಯವಿದೆಯೋ ಎಂಬುದನ್ನು ಅವರು ವಿಚಾರಿಸಬಹುದು. ಚೀನೀಯರ ಮಾರಕಾಸ್ತ್ರದಿಂದ ಉಂಟಾದ ಪರಿಸ್ಥಿತಿಯ ಕುರಿತು ದೀರ್ಘವಾದ ಮಾತುಕತೆ ನಡೆಯಬಹುದು...."

"ಹ್ಞೂಂ....ಅದು ಸರೀನ್ನಿ. ಅಂತೂ ಶಾಸ್ತ್ರಿಯವ್ರು ಐದು ತಿಂಗಳ ನಂತರವಾದ್ರೂ, ಲಂಡನ್ನಿಗೆ ಭೆಟ್ಟಿಯೀಯಲು ಶಕ್ತರಾದರಲ್ಲಾ .. ಅದೀಗ ಸಂತೋಷದ ಸುದ್ದಿ."

"ಸಂತೋಷ ನಿಜಾನ್ನು. ಮತ್ತೆ ಲೇಬರ್ ಸರಕಾರವು ಕಾಮನ್‌ವೆಲ್ತ್ ರಾಷ್ಟ್ರದೊಂದಿಗೆ ಸುಮಧುರ ಸಂಬಂಧವನ್ನೂ ಬಯಸುತ್ತಿರುವುದರಿಂದ ಎಲ್ಲಾ ವಿಷಯದಲ್ಲೂ ಈ ಭೇಟಿ ಲಾಭಕರಾಂತ...."

"ಭಾವಿಸೋಣ. ಮತ್ತೆನೋಡು, ಒಂದು ಮಾತನ್ನ ಅವ್ರು ಸರಿಯಾಗೇ ಅಂದಿದ್ದಾರೆ...."

'ಏನದು?'

'ಬ್ರಿಟನ್ನಿನಿಂದ ಭಾರತಕ್ಕೆ ಸಹಾಯ ಕೇಳುವ ವಿಚಾರ ತಮಗಿಲ್ಲವೆಂದೂ ಆದರೆ, ಪರಸ್ಪರ ತೊಂದರೆ- ಸಮಸ್ಯೆಗಳನ್ನು ತಾವು ಪ್ರಧಾನಿ ವಿಲ್ಸನರೊಡನೆ ಚರ್ಚಿಸುವುದಾಗಿಯೂ ಹೇಳಿದ್ದಾರೆ.

'ಅಲ್ಲೇ ಬಂತಲ್ಲಾ...ಕಾಶ್ಮೀರ.... ಮಾಕಿಸ್ತಾನ...'

'ಹ್ಞೂಂ ..ಸರಿ. ಇನ್ನು ನೋಡು, ಒಂದು ಬಹಳ ಮುಖ್ಯವಾದ ಸುದ್ದಿ....'

'ನೀವು ಮುಖ್ಯ ಮುಖ್ಯಾಂತ ಹೇಳ್ತಾ ಇದ್ದೀರಷ್ಟೇ ಹೊರತು ಅದು ಏನೂಂತ ಅನ್ಲೇ ಇಲ್ಲ ನೋಡಿ..'

"ಈ ಸಂಗ್ತಿಯನ್ನ ಕೇಳಿದ್ರೆ ನಿನಗೆ .."

"ಏನು?...."

"ಏನಿಲ್ಲ ಬಿಡು.... ಆದ್ರೂ...."

"ಆದ್ರೂಂತ ಯಾಕೆ ತಡೆಯುತ್ತೀರಿ ರಾ...."

"ಅಲ್ಲಾ, ಒಮ್ಮೆಗೇ ಅಂದು ಬಿಟ್ರೆ...'

"ಮತ್ತೂ ಮತ್ತೂ, ನೀವ್ಯಾಕೆ ಎಳೀತೀರಿ? ಬೇಗ ಹೇಳಿಬಿಡಿ.....

"ಹೇಳ್ತೀನೆ.... ಸುಖದ ಮೇಲೆ ದುಃಖ ಸಂತೋಷದ ಮೇಲೆ ವ್ಯಸನ...."

'ಹೌದು, ಹಗಲಾದ ಮೇಲೆ ರಾತ್ರಿ... ಅದೆಲ್ಲಾ ನನ್ಗೆ ಗೊತ್ತು. ಏನದೂಂತ ಹೇಳ್ಬಿಡೀಂದ್ರೆ."

'ಹೇಳ್ಬೇ ಬೇಕಲ್ಲಾ..."

'ಈಗ ಆಸೆ ಹುಟ್ಸಿ ಮತ್ತೆ ನಿರಾಸೆ ಮಾಡಿದ್ರೆ..."

"ಅಲ್ಲಾ, ಬೇಜಾರು ಮಾಡಿಕೊಳ್ಳೋ ಬೇಡ,'

"ಇಲ್ಲ ಇಲ್ಲ...ಇಲ್ಲ...."

"ಖಂಡಿತಕ್ಕೂ...."

"ಖಂಡಿತಕ್ಕೂ ..."

"ಆಣೆಯಿಟ್ಟು ಹೇಳು..."

'ಅಯ್ಯೋ ನೀವೊಂದು. ನನ್ನನ್ನ ಎಷ್ಟು ಸತಾಯಿಸ್ತೀರಾ?"

"ಅಲ್ಲಾ, ಮತ್ತೆ ಏನಾದ್ರೂ..."

"ಏನೂ ಇಲ್ಲ...ಇಗೊಳ್ಳಿ....ನಾ ನೇನೂ ಬೇಜಾರು ಮಾಡೋದಿಲ್ಲ....ಆಯ್ತಲ್ಲ?"

"ಸಿಲೋನಿನಲ್ಲಿರುವ ಸಿನ್ನವ್ರ ಸರಕಾರ ಪತನಗೊಂಡಿತು...."

"ಏನಂದ್ರಿ?—ಸಿರಿಮಾವೋ ಸೋತು ಹೋದ್ರೆ....ಇದೇನು ಹೇಳ್ತಾ ಇದ್ದೀರಿ ನೀವು?'

"ಸತ್ಯವನ್ನೇ......ನಾನೂ ಮೊದ್ಲು ನಂಬ್ಲಿಲ್ಲ. ಮತ್ತೆ ನೋಡು ಇದನ್ನ ಓದಿದ ಮೇಲೆ..."

"ನೋಡೋಣ ಇಲ್ಲಿ ಕೊಡಿ...ಸನಿಜಾರಿ ಪಕ್ಷಕ್ಕೆ ಸೇರಿದ ೧೩ ಜನ ಸದಸ್ಯರು ಸರಕಾರದ ವಿರುದ್ಧ ಮತದಾನ ಮಾಡಿದರ ನೋಡಿ, ಇವಕ್ಕೇ ಅನ್ನೋದು ಯಾರನ್ನು ನಂಬ ಬೇಕೂಂತ? ಅಂದು ನೋಡಿ,

(ಹದಿಮೂರನೇ ಪುಟ ನೋಡಿರಿ)

ನೆಯ್ಯೂರು ಎಂಬಲ್ಲಿ
(ಕನ್ಯಾಕುಮಾರಿ ಜಿಲ್ಲೆ)
ಸಿಂಡಿಕೇಟ್ ಬ್ಯಾಂಕ್ ಲಿ., ಇದರ
200ನೇ ಶಾಖೆ
ಪ್ರಾರಂಭದ ಘೋಷಣೆ.

ದಿ ಸೌತ್ ಟ್ರಾವಂಕೂರ್ ಬ್ಯಾಂಕ್ ಲಿ.,
ಸಿಂಡಿಕೇಟ್ ಬ್ಯಾಂಕ್ ಲಿ.,
ಇದರೊಡನೆ ಸೇರ್ಪಡೆಗೊಂಡಿದೆ.

ಇದೇ ದಶಂಬರ 9ನೇ ತಾರೀಕಿಗೆ ದಿ ಸೌತ್ ಟ್ರಾವಂಕೂರು ಬ್ಯಾಂಕ್ ಲಿ., ನೆಯ್ಯೂರು (ಕನ್ಯಾಕುಮಾರಿ ಜಿಲ್ಲೆ) ಇದರ ಸಾಲ ಮೂಲಗಳನ್ನು ಸಿಂಡಿಕೇಟ್ ಬ್ಯಾಂಕ್ ಲಿ, ಇವರು ವಹಿಸಿಕೊಂಡಿರುವರು ಎಂಬುದನ್ನು ಪ್ರಕಟಿಸಲು ಸಿಂಡಿಕೇಟ್ ಬ್ಯಾಂಕಿನ ಡೈರೆಕ್ಟರರು ಸಂತೋಷ ಪಡುತ್ತಾರೆ.

ದಿ ಸೌತ್ ಟ್ರಾವಂಕೂರ್ ಬ್ಯಾಂಕ್ ಲಿ., ಇದು ಸಿಂಡಿಕೇಟಿನವರು ವಹಿಸಿಕೊಂಡಿರುವ 20ನೇ ಬ್ಯಾಂಕು ಆಗಿದೆ. ಈ ಬ್ಯಾಂಕಿನ ಸೇರ್ಪಡೆಯಿಂದ ಸಿಂಡಿಕೇಟ್ ಬ್ಯಾಂಕಿಗೆ ಮದರಾಸು ರಾಜ್ಯದಲ್ಲಿ ಒಂದು ಶಾಖೆ ಹೆಚ್ಚಾದಂತಾಗಿ ರಾಜ್ಯದಲ್ಲಿ ಒಟ್ಟು 22 ಶಾಖೆಗಳಾದಂತಾಗುವುದು. ಸೌತ್ ಟ್ರಾವಂಕೂರ್ ಬ್ಯಾಂಕ್ ಲಿ, ನ ಗ್ರಾಹಕರಿಗೂ ನೆಯ್ಯೂರಿನ ಜನತೆಗೂ ದಕ್ಷ ಬ್ಯಾಂಕಿಂಗ್ ಸೇವೆಯನ್ನು ಸಲ್ಲಿಸಲು ಸಿಂಡಿಕೇಟ್ ಬ್ಯಾಂಕು ಹಾತೊರೆಯುತ್ತದೆ.

FAITHFUL FRIENDLY SB
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ
ಶಾಖೆಗಳು: 200
ಚಲಾವಣಾ ಸಂಪತ್ತು:
ರೂ. 60 ಕೋಟಿಗಳು

ವಿವೇಚನೆ

ಮಾನವನ ಮನಸ್ಸು ಸಂಘರ್ಷಗಳ ಸಿಲುಕು

ಬರೆದವರು: ಶ್ರೀ. ಬಿ. ಪಿ. ಅಡಿಗ.

‘ಪಾಪ’ ಎಂದು ನಾವು ಸಾಮಾನ್ಯವಾಗಿಯಾವುದನ್ನು ಕರೆಯುತ್ತೇವೆಯೋ ಅದು ನಿಜವಾಗಿ ಅಜ್ಞಾನ. ಯಾವುದನ್ನು ನಾವು ‘ದೋಷ’ ಎನ್ನುತ್ತೇವೆಯೋ ಅದು ದೌರ್ಬಲ್ಯ. ಸಾಮಾನ್ಯವಾಗಿ ಪ್ರತಿಯೊಬ್ಬ ಮನುಷ್ಯನ ಸ್ವಭಾವ ಸಂಪತ್ತಿನಲ್ಲಿಯೂ ಯಾವುದಾದರೊಂದು ಹೆಚ್ಚು, ಅಥವಾ ಒಂದು ಕಡಿಮೆ ಇದ್ದೇ ಇರುತ್ತದೆ. ನಮ್ಮ ದೇಹದ ಆಂತರಿಕ ಮತ್ತು ಬಾಹ್ಯ ರಚನೆಯಲ್ಲಿಯೇ ಸೃಷ್ಟಿಕರ್ತನು ಕೆಲವು ನ್ಯೂನತೆಗಳನ್ನು, ಕೆಲವು ಅತಿರೇಕಗಳನ್ನು ಅಡಗಿಸಿಟ್ಟಿರುತ್ತಾನೆ. ಹೀಗೆ ಹುಟ್ಟಿದೊಡನೆ ಬರುವ ನಮ್ಮ ಬಡತನಗಳೂ, ಕೊಬ್ಬುಬ್ಬರಗಳೂ ಈ ಪ್ರಪಂಚದ ವಾತಾವರಣದಲ್ಲಿ ಪ್ರಕಟವಾಗುತ್ತವೆ. ಜಿಹ್ವಾರಸಿಕತೆಯೂ, ಜೀರ್ಣ ಶಕ್ತಿಯೂ ಹೆಚ್ಚಾಗಿರುವ ಮನುಷ್ಯನಿಗೆ ಭಕ್ಷ್ಯ ದರ್ಶನವಾದ ಕೂಡಲೇ ಮನಸ್ಸಿನ ಮೇಲಿನ ಹತೋಟಿ ಕಡಿಮೆಯಾಗುತ್ತದೆ ನಮ್ಮೊಳಗಿರುವ ಒಂದು ಸುಪ್ತ ಚೇತನವನ್ನು, ಇಂದ್ರಿಯ ಶಕ್ತಿಯನ್ನು ಕೆಣಕಿ ಎಬ್ಬಿಸುತ್ತದೆ. ಅದೇ ಆಸೆ. ಈ ಆಸೆಯನ್ನು ಅದುಮಿಡುವ ಶಕ್ತಿ ಮನಸ್ಸಿಗೆ ಇಲ್ಲದೆ ಹೋಗುತ್ತದೆ. ಅದೇ ದೋಷ.

ಸಾಮಾನ್ಯವಾಗಿ ಎಚ್ಚರಿಕೆಯಿಂದಲೂ, ಜ್ಞಾನಶಕ್ತಿಯಿಂದಲೂ ಜಾಣತನದಿಂದಲೂ ನಡೆದುಕೊಳ್ಳುತ್ತಿರುವ ಮನುಷ್ಯನನ್ನು ಒಂದು ಆಸೆಯು ಹಿಡಿದು ಕೊಂಡಾಗ ಅವನು ಭ್ರಾಂತನಾಗಿ ಪ್ರಮಾದ ಮಾಡುತ್ತಾನೆ. ಅವನೊಳಗೆ ಸುಪ್ತವಾಗಿ ನಿದ್ರಿಸುತ್ತಿರುವ ಒಂದು ಆಕಾಂಕ್ಷೆಯನ್ನು, ಒಂದು ವ್ಯಾಮೋಹವನ್ನು ಅವನಿಗೊದಗಿದ ಒಂದು ಸನ್ನಿವೇಶವು ಎಬ್ಬಿಸಿ, ಉದ್ರೇಕಗೊಳಿಸುತ್ತದೆ. ಕೊಂಬೀಳದ ಮಾತೂ, ನಡವಳಿಕೆಯೂ ಆಶಾವಶನಾದಾಗ ಅವನಿಂದ ಹೊರಟು ಬಿಡುತ್ತವೆ. ಅಂದರೆ ಆಸೆಯು ಅವನ ಜ್ಞಾನಕ್ಕೆ ಕಣ್ಣು ಕಟ್ಟುತ್ತದೆ; ಅವನ ಸದ್ಗುಣದ ಗಂಟಲನ್ನು ಒತ್ತುತ್ತದೆ, ಅದುಮುತ್ತದೆ. ಇದೇ ದೌರ್ಬಲ್ಯದ ಸ್ಥಿತಿ ಮನುಷ್ಯನ ಸ್ವಭಾವದ ಲೋಪವಕ್ರಗಳು ಹೀಗೆ ಕೆಲಸ ಮಾಡುವುದರಿಂದ ‘ದೋಷಿ’ ಎನಿಸಿದವನ ವಿಷಯದಲ್ಲಿ ಇತರರಿಂದ ಸಲ್ಲಬೇಕಾದುದು ಕ್ರೋಧವಲ್ಲ-ಕನಿಕರ. ಕನಿಕರವೆಂದರೆ ಮೆಚ್ಚಿಕೆಯಲ್ಲ. ದೋಷವು ವರ್ಜ್ಯವೇ. ಆದರೆ ದೋಷದ ಮೂಲವಿರುವುದೆಲ್ಲಿ ಎಂಬುದನ್ನು ವಿಚಾರ ಮಾಡಲು ನ್ಯಾಯ ಶೀಲನು ಮರೆಯಲಾರನು. ‘ದೋಷಿ’ ಎಂಬವನಿಗಿರುವ ಸುಖ, ಯೋಗ್ಯತೆ, ಅವನಿಗಿರುವ ಅನುಭವ ಶಕ್ತಿ, ಅವನ ಮನಸ್ಸಿನ ಅಭಿರುಚಿ, ಆಸಕ್ತಿ ನನಗಿದ್ದರೆ ಅವನಿಗೊದಗಿದ ಸನ್ನಿವೇಶದಲ್ಲಿ ನಾನೂ ಅವನಂತೆ ನಡೆಯುತ್ತಿರಲಿಲ್ಲವೇ—ಇಲ್ಲವೆಂಬುದ ಖಂಡಿತವೇ?” ಎಂದು ನ್ಯಾಯ ಶೀಲನು, ವಿಚಾರವಂತನು ತನ್ನನ್ನು ತಾನೇ ಕೇಳಿಕೊಳ್ಳದೇ ಇರನು. ಇಂತಹ ಆತ್ಮಾನುಸಂಧಾನದಿಂದ ಹುಟ್ಟುವುದು ‘ಕನಿಕರ’.

‘ಆಸೆ’ ಎಂಬುದು ಮನುಷ್ಯನಲ್ಲಿ ಅಂತರ್ಗತವಾಗಿ ಇರತಕ್ಕದ್ದು. ಎಷ್ಟೋ ಮಾನವ ಸಂದರ್ಭಗಳಲ್ಲಿ ಅದರ ಪ್ರಭಾವವು ಅನಿವಾರ್ಯವಾಗುತ್ತದೆ. ಮನುಷ್ಯನ ಪೂರ್ವಾರ್ಜಿತ, ಅವನ ವಂಶಗುಣ, ಅವನ ವಿದ್ಯೆ ಸಂಸ್ಕಾರಗಳು, ಅವನಿಗೆ ಅದೃಷ್ಟವು ತಂದೊದಗಿಸುವ ಪ್ರೇರಣೆ, ಸಹಾಯಗಳು ಅವನಿಗೆ ಸಮಾಜವು ಒದಗಿಸಿಕೊಡುವ ನೆವ, ಒತ್ತಾಸೆಗಳು—ಇವೆಲ್ಲವೂ ಅವನ ಆಶಾ ವಿಶಿಷ್ಟತೆಗೆ, ಅವನ ದೋಷಯುಕ್ತ ನಡವಳಿಕೆಗೆ ಪ್ರಥಮ ಕಾರಣವಾಗುತ್ತವೆ. ಹೀಗೆ ಸೂಕ್ಷ್ಮವನ್ನು ನೋಡಿದರೆ ಮನುಷ್ಯನು ತನ್ನ ಜೀವಮಾನದ ಬಹುತೇಕ ಸನ್ನಿವೇಶಗಳಲ್ಲಿ ಎಷ್ಟುಮಾತ್ರವೂ ಸ್ವತಂತ್ರನಲ್ಲದೆ ತನ್ನ ಸ್ವಭಾವಕ್ಕೂ, ಸಮಾಜಕ್ಕೂ, ಅದೃಷ್ಟಕ್ಕೂ ದಾಸನಾಗಿ, ಬಂದಿವಾನನಾಗಿ ನಡೆದುಕೊಳ್ಳುತ್ತಾನೆ ಎಂದು ತೋರಿ ಬರುತ್ತದೆ. ಈ ಜಗತ್ತಿನಲ್ಲಿರುವ ನಮ್ಮ ಮಾನವ ಪ್ರಕೃತಿಯ ಈ ಕೊಂಕು, ಕುಂದು ಕೊರತೆಗಳನ್ನು, ಈ ಆಸೆಯ ಅನಿವಾರ್ಯತೆಯನ್ನು, ಈ ದೋಷದ ಅಪರಿಹಾರ್ಯತೆಯನ್ನು ವಿಮರ್ಶಿಸಿ ತಿಳಿದುಕೊಳ್ಳಬೇಕು. ಆಗ “ನಮ್ಮ ಬಾಳ್ವೆ ಇಷ್ಟೇಯೇ?” ಎಂದೆನಿಸುತ್ತದೆ. ಹೀಗೆಂದುಕೊಂಡವನು ನಮ್ರನೂ, ಕ್ಷಮಾವಂತನೂ ಆಗುತ್ತಾನೆ. ಇದೇ “ಹೃದಯ ಮಂಥನ.”

ಪ್ರಪಂಚದ ಪರಿಚಯ ಹೆಚ್ಚಿದಷ್ಟೂ, ನಮ್ಮ ಜೀವನದಲ್ಲಿರಬಹುದಾದ ಸ್ವಾರಸ್ಯವಿಷ್ಟು, ಮುಖ್ಯವಿಷ್ಟು, ಇದಕ್ಕಿರುವ ಅಪಾಯ ವಿಪತ್ತುಗಳೆಂತಹವು ಎಂಬ ತಿಳಿವಳಿಕೆ ನಮ್ಮಲ್ಲಿ ಹೆಚ್ಚುತ್ತದೆ ‘ಅನುಭವದಲ್ಲಿ ಅಮೃತತ್ವವಿದೆ’ಯೆಂಬುದು ಖಚಿತವಾಗುತ್ತದೆ. ಜೀವನದಲ್ಲಿ ಹೀಗೆ ನಮಗೊಂದು ಎಚ್ಚರಿಕೆ ದೊರೆಯುತ್ತದೆ.

ಮನುಷ್ಯನಲ್ಲಿರಬೇಕಾದ ಸದ್ಗುಣಗಳಲ್ಲಿ ಶಿರೋಮಣಿಪ್ರಾಯವಾದುದು ಸಹನೆ, ತಾಳ್ಮೆ. ದುರ್ಬಲರೂ ಅವಿವೇಕಿಗಳೂ ಆದವರ ವಿಷಯದಲ್ಲಿ ತೋರುವ ಸಹನೆಯು ಕ್ಷಮೆ. ಒದಗಿದ ಕಷ್ಟಗಳನ್ನು ಸೈರಿಸುವುದರಲ್ಲಿಯೂ, ಆ ಕಷ್ಟಗಳನ್ನು ನಿವಾರಣೆ ಮಾಡುವ ಪ್ರಯತ್ನದಲ್ಲಿ ತೋರುವ ಸಹನೆ—ಧೈರ್ಯ. ಈ ಕ್ಷಮೆ ಧೈರ್ಯಗಳೆರಡೂ ನಿಜವಾದ ಧೀರತನದ ಲಕ್ಷಣ. ಅಜ್ಞರಲ್ಲಿಯೂ, ಅಶಕ್ತರಲ್ಲಿಯೂ ಕನಿಕರ, ಪಶ್ಚಾತ್ತಾಪಗಳು, ಜೀವನದಲ್ಲಿ ಬರುವ ಪೀಡೆ, ಸಂಕಟ, ಸಾವು, ನೋವುಗಳನ್ನು ಸಹಿಸುವುದರಲ್ಲಿ ದೃಢಸಂಕಲ್ಪ ಸಾಹಸಗಳು; ಯಾವ ಸದುಪಾಯಗಳಿಂದಲೂ ತಪ್ಪಿಸಿಕೊಳ್ಳಲಾಗದ ಕಷ್ಟಗಳನ್ನು ಅನುಭವಿಸುವುದರಲ್ಲಿ ನಗುಮೊಗದ ತಾಳ್ಮೆ; ಲೋಕದೊಡನೆ ಬೆರೆಯುವುದರಲ್ಲಿ ಸ್ನೇಹ ಉಲ್ಲಾಸಗಳು—ಈ ಗುಣಗಳು ನಮ್ಮ ಇಹಜೀವನವನ್ನು ಸಹ್ಯವನ್ನಾಗಿ ಮಾಡುತ್ತವೆ. ಹೀಗೆ ಜೀವನ ಹೋರಾಟಕ್ಕೆ, ಅದರ ಪರೀಕ್ಷೆ ಸಾಹಸಗಳಿಗೆ ಸಿದ್ಧರಾಗುವುದೇ ನಮ್ಮ ಕರ್ತವ್ಯ. ಇದನ್ನು ಪ್ರತಿಯೊಬ್ಬನೂ ಸ್ಮೃತಿಪಟಲದಲ್ಲಿಟ್ಟುಕೊಳ್ಳಬೇಕು.

ಮನಸ್ಸೇ ಆಗಲಿ, ಬುದ್ಧಿಯೇ ಆಗಲಿ ಅದನ್ನು ಕೆಲವು ಸಂದರ್ಭಗಳು ಥಟ್ಟನೆ ಬಂದು ಆಕ್ರಮಿಸಿಕೊಳ್ಳುತ್ತವೆ. ಇನ್ನು ಕೆಲವು ಸಂದರ್ಭಗಳು ಸ್ವಲ್ಪ ಕಾಲ ವ್ಯವಸಾಯ ಮಾಡಿ, ಆ ಮೇಲೆ, ಕ್ರಮೇಣ ಆಕ್ರಮಿಸುತ್ತವೆ. ಒಬ್ಬ ಮನುಷ್ಯನನ್ನು ಇದ್ದಕ್ಕಿದ್ದ ಹಾಗೆ ಪರ್ವತದ ಶಿಖರದ ಮೇಲೆ ನಿಲ್ಲಿಸಿದರೆ ಅಥವಾ ಒಂದು ಮಹಾನದೀ ಪ್ರವಾಹದ ಎದುರಿಗೆ ನಿಲ್ಲಿಸಿದರೆ ಕೂಡಲೇ ಅವನು ಬೆರಗಾಗಿ ನಿಂತುಬಿಡುತ್ತಾನೆ. ಆದರೆ ಅವನ ಕೈಗೆ ಒಂದು ಸಣ್ಣ ಹೂವನ್ನು ಕೊಟ್ಟರೆ ಅವನು ಮೊದಲು ಅದನ್ನು ಲಕ್ಷ್ಯ ಮಾಡದೆ ಆ ಮೇಲೆ ಚೆನ್ನಾಗಿ ಕಣ್ತೆರೆದು ನೋಡಿ ಆಶ್ಚರ್ಯಪಡುತ್ತಾನೆ. ಬೇಲೂರಿನ ಶಿಲಾಪ್ರತಿಮೆಗಳ ಹತ್ತಿರ ನಿಂತು ಕೆಲನಿಮಿಷ ಪರೀಕ್ಷಿಸಿದ ಬಳಿಕ ವಿಸ್ಮಿತರಾಗುತ್ತೇವೆ. ಆದರೆ ಜೋಗ ಜಲಪಾತದ ಪ್ರಪಾತವನ್ನು ನೋಡಿದೊಡನೆ, ಎಣಿಸಿದೊಡನೆ ಮೈ ರೋಮಾಂಚಗೊಳ್ಳುತ್ತದೆ ಕೆಲವು ದೃಶ್ಯಗಳ ಸೌಂದರ್ಯ ಒಟ್ಟನದು, ಅಖಂಡವಾದದ್ದು; ತತ್‍ಕ್ಷಣ ವ್ಯಾಪಿಸತಕ್ಕದ್ದು. ಇನ್ನು ಕೆಲವು ಪರೀಕ್ಷಿಸಿದ ಮೇಲೆ ವ್ಯಾಪಿಸತಕ್ಕದ್ದು.

ನಮಗೆ ಬುದ್ಧಿ ಜಾಗೃತವಾಗುವುದು ಹೀಗೆಯೇ ಕೆಲವು ಸಂದರ್ಭಗಳಲ್ಲಿ ಕರ್ತವ್ಯವೇನೆಂಬುದು ಥಟ್ಟನೆ ವಿವೇಚನೆಗಾಗಿ ಕಾಯಿರದೆ ಬುದ್ಧಿಗೆ ಹೊಳೆದಿರುತ್ತದೆ. ಎಡವಿ ಬೀಳುವಾಗ ಮುಖ ನೆಲಕ್ಕೆ ತಾಗುವ ಮೊದಲೇ ನಾವು ಕೈಯೂರುತ್ತೇವೆ. ಇನ್ನೆಷ್ಟೋ ಸಂದರ್ಭಗಳಲ್ಲಿ ಸಾವಧಾನವಾಗಿ ಆಲೋಚನೆ ಮಾಡಿದ ಬಳಿಕ ಕರ್ತವ್ಯ ಎಂತಹದೆಂದು ನಿಶ್ಚಯಿಸುತ್ತೇವೆ. ಮನಸ್ಸು ಬುದ್ಧಿಗಳೆರಡರ ಪ್ರತ್ಯೇಕ ಕಾರ್ಯಾಚರಣೆಗಳು ಹೀಗೆ ಸಂದರ್ಭ ಗುಣವನ್ನನುಸರಿಸಿ ಕ್ಷಿಪ್ರವಾಗಿ ಅಥವಾ ಸಾವಕಾಶವಾಗಿ ನಡೆಯುತ್ತಿವೆ. ಅವೆರಡರ ಪರಸ್ಪರ ಪರಿಣಾಮವು ಕೂಡಾ ಹಾಗೇ ಸನ್ನಿವೇಶಕ್ಕನುಸಾರವಾಗಿ ಇರುತ್ತವೆ. ಕೆಲವೆಡೆಗಳಲ್ಲಿ ಮನಸ್ಸು ಕೆರಳಿ, ಬಳಿಕ ಬುದ್ಧಿಯಿಂದ ವಿವೇಚನೆ ಮಾಡುತ್ತದೆ ಕೋಪದಲ್ಲಿ ಮೂಗು ಕೊಯ್ದು ಶಾಂತದಲ್ಲಿ ಪಶ್ಚಾತ್ತಾಪ ಪಡುವ ಜನರನ್ನು ನಾವು ನೋಡುತ್ತಿಲ್ಲವೇ? ಇನ್ನು ಕೆಲವೆಡೆಗಳಲ್ಲಿ ಮೊದಲು ಬುದ್ಧಿ ಚಿಂತೆ ನಡೆಸಿ ಆ ಮೇಲೆ ಮನಸ್ಸನ್ನು ಕೆರಳಿಸುತ್ತದೆ. ಗಾಳಿಯಿಂದ ಬೆಂಕಿ ಉರಿಯುವುದೂ ಉಂಟು, ಆರುವುದೂ ಉಂಟು. ಬುದ್ಧಿಯಿಂದ ಮನಸ್ಸು ಹಾಗೆ! ಮನಸ್ಸಿನಿಂದ ಬುದ್ಧಿಯೂ ಹಾಗೇ.

ಬಹು ತೆರದ ಸೌಂದರ್ಯಾನುಭವಗಳಲ್ಲಿ ಒಂದು ಬಗೆಯ ಸ್ಪರ್ಧೆ ಅಥವಾ ಎರಡು ವಿಷಮ ಗುಣಗಳ ಸಂಘರ್ಷಣೆ ನಡೆಯುತ್ತಿರುತ್ತದೆ ನಮಗೆ ಪರಿಚಯವಾ

(ಹನ್ನೆರಡನೇ ಪುಟ ನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p. a.	7ರಿಂದ 11 ತಿಂಗಳು. % p. a.	12ರಿಂದ 23 ತಿಂಗಳು. % p. a.	24ರಿಂದ 35 ತಿಂಗಳು. % p. a.	36ರಿಂದ 47 ತಿಂಗಳು. % p. a.	48ರಿಂದ 59 ತಿಂಗಳು. % p. a	60ರಿಂದ 83 ತಿಂಗಳು. % p. a	84ರಿಂದ 120 ತಿಂಗಳು % p. a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ:-	5-25	5-50	5-75	6 00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ವಿಶಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.
[ಶೆಡ್ಯೂಲ್ಡ್ ಬ್ಯಾಂಕ್] ಶ್ರೀ
ರಿಜಿಸ್ಟರ್ಡ್ ಆಫೀಸು:— ಕೋರ್ಟು ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

ಇತಿಹಾಸದ ಮೇಲೆ ಬೆಳಕು

ಸೋವಿಯತ್ ಕಂಡಂತೆ ಛತ್ರಪತಿ ಶಿವಾಜಿ

ಶಿವಾಜಿಯ ನೇತೃತ್ವದಲ್ಲಿ ಮರಾಠಾ ಜನರು ನಡೆಸಿದ ರಾಷ್ಟ್ರೀಯ ವಿಮೋಚನಾ ಚಳವಳಿವು ಅನೇಕ ಸೋವಿಯೆತ್ ಇತಿಹಾಸಕಾರರ ಆಸಕ್ತಿಯನ್ನು ಕೆರಳಿಸಿದೆ. ಭಾರತೀಯ ಇತಿಹಾಸದಲ್ಲಿ ಅದು ಅಗಾಧ ಅವತಾರವಿದ್ದಂಥ ಜನತಾ ಚಳವಳಿವೆಂದು ಅವರು ಭಾವಿಸುತ್ತಾರೆ. ಸೋವಿಯೆತ್ ಒಕ್ಕೂಟದ ಪ್ರಖ್ಯಾತ ಪೌರ್ವಾತ್ಯ ಶಾಸ್ತ್ರಜ್ಞರಾದ ಪ್ರೊ| ಇಗೋರ್ ರೆಯಿಸ್ನರ್ ಅವರು ಈ ಕುರಿತು ವಿಶೇಷ ರೀತಿಯಲ್ಲಿ ಅಭ್ಯಸಿಸಿದ್ದಾರೆ.

ರೆಯಿಸ್ನರರು ಭಾರತದ ಜನತಾ ಹೋರಾಟಗಳನ್ನು ಪದೇ ಪದೇ ಗಮನಿಸಿದ್ದಾರೆ. ಸಾವಿರದ ಒಂಭೈನೂರ ಇಪ್ಪತ್ತರ ಕಾಲಾವಧಿಯಷ್ಟು ಹಿಂದೆಯೇ ಅವರ ಕೃತಿಗಳಾದ 'ಮೊಘಲರ ಕಾಲದಲ್ಲಿ ಭಾರತೀಯ ರೈತಾಪಿವರ್ಗ', ಸಿಖ್ ರೈತರ ಚಳವಳಿ (೧೭೦೦ ೧೮೪೦) ಮೊದಲಾದವು ಪ್ರಕಟವಾಗಿವೆ. ಈ ಪ್ರಖ್ಯಾತ ಸೋವಿಯೆತ್ ಭಾರತಶಾಸ್ತ್ರಜ್ಞರ ಅಂತ್ಯಕಾಲದ ಪರಿಶ್ರಮ ತುಂಬಾ ತುಂಬ ಫಲದಾಯಕವಾಗಿತ್ತು. ಅವರ "೧೭ನೇ ಶತಮಾನದ ಅಂತ್ಯದಲ್ಲಿ ಮತ್ತು ೧೮ನೇ ಶತಮಾನದ ಆರಂಭದಲ್ಲಿ ಸಿಖ್ ರೈತರ ಚಳವಳಿ" ಮತ್ತು "೧೮ನೇ ಶತಮಾನದ ಆರಂಭದಲ್ಲಿ ಆಗ್ರಾ ಮತ್ತು ದಿಲ್ಲಿ ಪ್ರದೇಶಗಳಲ್ಲಿ ನಡೆದ ಜಾಟ್ ಜನರ ಬಂಡಾಯ"ಎಂಬ ಎರಡು ಕೃತಿಗಳೂ ಈ ಸಂಬಂಧದಲ್ಲಿ ತುಂಬ ಗಮನಾರ್ಹವಾಗಿದ್ದು ಇವೆರಡೂ ಕ್ರಮೇಣ ೧೯೫೯ ಮತ್ತು ೧೯೬೨ರಂದು ಪ್ರಕಟವಾದುವು.

ಅವರ ಇನ್ನೊಂದು ಕೃತಿ "೧೭ ಮತ್ತು ೧೮ನೇ ಶತಮಾನದಲ್ಲಿ ನಡೆದ ಭಾರತೀಯ ಜನತಾ ಹೋರಾಟಗಳು" ಎಂಬುದು ಪೂರ್ಣಗೊಂಡಂತೆಯೇ ಇದ್ದು ಅವರ ಅಕಾಲ ನಿಧನದಿಂದಾಗಿ ಅರ್ಧಕ್ಕೆ ನಿಂತಂತಾಗಿದೆ. ಮೂರು ದಶಕಗಳ ಕಾಲ ಅವರು ತುಂಬ ಪ್ರಯಾಸದಿಂದ ರಚಿಸಿದ ಈ ಕೃತಿಯು ಅವರ ಪರಿಶ್ರಮದ ಉಪಸಂಹಾರದಂತಿದೆ. ಆದರೂ ಮುಂದೆ ಅವರ ಪುತ್ರರು ಈ ಕಾರ್ಯವನ್ನು ಪೂರ್ಣಗೊಳಿಸಿದರು. ರೆಯಿಸ್ನರ ನಿಧನಾನಂತರ ಮೂರು ವರ್ಷಗಳ ಬಳಿಕ ೧೯೬೧ರಲ್ಲಿ ಈ ಕೃತಿಯು ಪ್ರಕಟವಾಯಿತು.

೧೯೫೮ರಲ್ಲಿ ಪ್ರಕಟವಾದ ಇವರದೇ ಆದ "೧೮ನೇ ಶತಮಾನದ ಆರಂಭದಲ್ಲಿ ಆದ ಮರಾಠಾ ಗ್ರಾಮೀಣ ಸಮಾಜದ ಛಿದ್ರವಿಚ್ಛಿದ್ರತೆಯ ಕುರಿತು ಕೆಲವು ಸಂಗತಿಗಳು"ಎಂಬ ಪುಸ್ತಕದಲ್ಲಿ ವಿವರವಾಗಿ ಚರ್ಚಿಸಿದಂತೆಯೇ ಈ ಪುಸ್ತಕದಲ್ಲೂ ಅವರು ವಿಸ್ತಾರವಾಗಿ ಚರ್ಚಿಸಿದ್ದಾರೆ. ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು, ಮರಾಠಾ ಚಳವಳಿದ ಸ್ವಭಾವ, ರಾಷ್ಟ್ರೀಯ ನಾಯಕನಾಗಿ ಈ ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ಶಿವಾಜಿಯು ವಹಿಸಿದ್ದ ಪಾತ್ರ ಮೊದಲಾದವುಗಳನ್ನೆಲ್ಲ ಅವರು ಇದರಲ್ಲಿ ವಿವರಿಸಿದ್ದಾರೆ.

ರೆಯಿಸ್ನರರ ಅಭಿಪ್ರಾಯದ ಪ್ರಕಾರ ಮರಾಠಾ ರಾಷ್ಟ್ರೀಯ ವಿಮೋಚನಾ ಚಳವಳಿದ ಕಾರಣಗಳು ಇವು: ಮರಾಠಾ ಪ್ರದೇಶದಲ್ಲಿ ಪಾಳೆಯಗಾರ ಪದ್ಧತಿಯು ಬೆಳವಣಿಗೆ, ಮೊಘಲರ ಬಗ್ಗೆ ಮರಾಠಾರ ರೈತರಲ್ಲಿ ತುಂಬಿದ್ದ ಅಸಮಾಧಾನ ಮತ್ತು ಮರಾಠಾ ರೈತರಲ್ಲಿ ತುಂಬಿದ್ದ ಅಸಮಾಧಾನ ಮತ್ತು ಮರಾಠಾ ಪಾಳೇಗಾರರು ತಮ್ಮದೇ ಆದ ರಾಜ್ಯವನ್ನು ಕಟ್ಟಿ ವಿಸ್ತರಿಸಲು ಹೊಂದಿದ್ದ ಅರ್ಥಿಕ ಹಾಗೂ ಲಷ್ಕರೀ ಶಕ್ತಿಯ ವಿಕಾಸನ. "ತಮ್ಮ ಸ್ವಂತ" ಪಾಳೆಯಗಾರರ ಮತ್ತು ಮುಸ್ಲಿಂ ಪಾಳೆಯಗಾರರ ಮರ್ದನಕ್ಕೊಳಗಾಗಿದ್ದ ಮರಾಠ ರೈತರು ಮೊಘಲರನ್ನು ಮುಖ್ಯ ಹಗೆಗಳೆಂದು ಭಾವಿಸಿ ತೀವ್ರವಾಗಿ ದ್ವೇಷಿಸುತ್ತಿದ್ದರು. ಮರಾಠದ ಧರ್ಮ ಹಾಗೂ ಜೀವನ ಮತ್ತು ಸಂಸ್ಕೃತಿಗಳನ್ನು ಅತಿ ಕ್ರಮಿಸಿದ ಔರಂಗಜೇಬನ ವಿರುದ್ಧ ನಡೆದ ಕದನವು ದೇಶಾಭಿಮಾನದ ಯುದ್ಧವಾಗಿತ್ತು.

ಮೊಘಲ್ ಆಡಳಿತಗಾರರ ವಿರುದ್ಧ ಮರಾಠರು ನಡೆಸಿದ ಹೋರಾಟದಲ್ಲಿ ಶಿವಾಜಿಯು ತನ್ನ ಸ್ವಂತ ಶಕ್ತಿ ಸಾಮರ್ಥ್ಯದಿಂದ ಮತ್ತು ಐತಿಹಾಸಿಕ ಸ್ಥಿತಿಗಳಿಂದ ಅವರ ನಾಯಕರಾದರೆಂದು ಐ| ರೆಯಿಸ್ನರ್ ತೋರಿಸಿಕೊಡುತ್ತಾರೆ. ಶಿವಾಜಿಯ ಮುತ್ಸದ್ದಿತನ, ಉಕ್ಕಿನಂಥ ದೃಢ ಮನಸ್ಸು ಮತ್ತು ಆತನ ಚತುರತೆಗಳನ್ನು ಈ ಸೋವಿಯುತ್ ಚರಿತ್ರಕಾರರು ತುಂಬ ಪ್ರಶಂಸಿಸುತ್ತಾರೆ ಔರಂಗಜೇಬನ ಸೋಮೋ ಸೇನೆಯೆದುರು ಶಿವಾಜಿಯು ತನ್ನ ಚಟುವಟಿಕೆಯ ದಂಡನ್ನು ಯಶಸ್ವಿಯಾಗಿ ಎದುರು ನಿಲ್ಲಿಸಿದರು ಎಂಬುದನ್ನು ರೆಯಿಸ್ನರ್ ವಿಶೇಷವಾಗಿ ಎತ್ತಿ ತೋರಿಸುತ್ತಾರೆ. ರಣರಂಗದಲ್ಲಿ ಶಿವಾಜಿಯ ವಿಜಯಗಳಿಗೆ ಇನ್ನೂ ಒಂದು ಕಾರಣವಿತ್ತು. ಅದೆಂದರೆ ಹಿಂದೆಲ್ಲ ದಂಡಿಗೆ ಬಾಡಿಗೆ ಬಂಟರನ್ನು ಸೇರಿಸಿಕೊಳ್ಳುತ್ತಿದ್ದರೆ ಈಗ ಶಿವಾಜಿಯು ತಮ್ಮ ದೇಶದ ಸ್ವಾತಂತ್ರ್ಯವನ್ನು ಕಾಣಬೇಕೆಂಬ ಅಪೇಕ್ಷೆಯ ಮರಾಠಾ ರೈತರನ್ನೇ ಸೈನಿಕರನ್ನಾಗಿ ಸೇರಿಸಿಕೊಂಡಿದ್ದರು ಎಂದು ಈ ಕಾರಣವನ್ನು ಅವರು ವಿವರಿಸುತ್ತಾರೆ. ಶಿವಾಜಿಯು ಶತ್ರು ಶಿಬಿರದಲ್ಲಿ "ಏನು ನಡೆಯುತ್ತಿದೆ, ಅದನ್ನು ಚತುರತೆಯಿಂದ ಹೇಗೆ ಎದುರಿಸುವುದು' ಎಂಬುದನ್ನೆಲ್ಲ ತಿಳಿದುಕೊಳ್ಳಲು ಬೇಹುಗಾರಿಕೆಯನ್ನು ದೊಡ್ಡ ಪ್ರಮಾಣದಲ್ಲಿ ವ್ಯವಸ್ಥೆಗೊಳಿಸಿದ್ದರು. ಶಿವಾಜಿಯು ಸೇನೆಯಲ್ಲೂ ಆಡಳಿತದಲ್ಲೂ ವಂಶಪಾರಂಪರ್ಯದ ಸನದುಗಳನ್ನು ರದ್ದುಪಡಿಸಿದುದು ಹಳೇ ಪದ್ಧತಿಯ ತೆರಿಗೆ ವಸೂಲಿಯನ್ನೂ ಕಿತ್ತು ಹಾಕಿದುದು ಈ ಇತಿಹಾಸ ಸಂಶೋಧಕರ ಮೆಚ್ಚುಗೆಗೆ ಪಾತ್ರವಾಗಿವೆ.

(ಹನ್ನೊಂದನೇ ಪುಟ ನೋಡಿರಿ)

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ.ಯವರ

ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:–

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ದಕ್ಷ ಬ್ಯಾಂಕಿಂಗ್ ವ್ಯವಸ್ಥೆ

ಆರ್ಥಿಕ ಸ್ವಾತಂತ್ರ್ಯಕ್ಕೆ

ಹೆದ್ದಾರಿ

1947ರ ಆಗಸ್ಟ್‌ನಲ್ಲಿ ಭಾರತವು ಸ್ವತಂತ್ರವಾದಾಗಿನಿಂದೀಚೆಗೆ ದೇಶದಲ್ಲಿ ಬ್ಯಾಂಕಿಂಗ್ ಉದ್ಯಮವು ಬೆಳೆದು ಪ್ರಗತಿ ಹೊಂದಿರುವುದು ಆರ್ಥಿಕ ಸ್ವಾತಂತ್ರ್ಯಕ್ಕೆ ದಕ್ಷ ಬ್ಯಾಂಕಿಂಗ್ ವ್ಯವಸ್ಥೆಯು ಒಂದು ಪ್ರಮುಖ ಅವಶ್ಯಕತೆಯೆಂಬ ವಾಸ್ತವಾಂಶವನ್ನು ಸೂಚಿಸುವುದಾಗಿದೆ.

"ಒಂದು ಉತ್ತಮ ಬ್ಯಾಂಕಿಂಗ್ ಸಂಸ್ಥೆ ಜನಾಂಗದ ಆರ್ಥಿಕ ಜೀವನಾಡಿಯಷ್ಟೇ ಅಲ್ಲ, ಅದು ದೇಶದ ಜನ ಯಶಸ್ವಿಯಾಗಿ ಸಂಪತ್ಸಮೃದ್ಧಿ ಹೊಂದುವುದಕ್ಕೆ ಸರ್ವಸಾಧ್ಯ ರೀತಿಗಳಲ್ಲೂ ಸಹಾಯಮಾಡಬೇಕಾದ ಹೊಣೆಯನ್ನು ಹೊಂದಿದೆ" ಎಂಬ ಧ್ಯೇಯದಿಂದ ಐವತ್ತೆಂಟು ವರ್ಷಗಳ ಹಿಂದೆ ಕೆನರಾ ಬ್ಯಾಂಕ್ ಸ್ಥಾಪಿತವಾಯಿತು.

ಪಟ್ಟಣ ಮತ್ತು ಗ್ರಾಮಪ್ರದೇಶಗಳ ಜನರಲ್ಲಿ ಬ್ಯಾಂಕಿಂಗ್ ಅಭ್ಯಾಸವು ಬೆಳೆಯುವುದಕ್ಕೆ, ವಾಣಿಜ್ಯ-ವ್ಯಾಪಾರ-ಕೈಗಾರಿಕೆಗಳ ಅಭಿವೃದ್ಧಿ ಅಗತ್ಯವನ್ನು ಪೂರೈಸುವುದಕ್ಕೆ ಹಾಗೂ ಉತ್ತಮ ಹಣಕಾಸಿನ ನಿರ್ವಹಣೆಯ ಮೂಲಕ ಜನ ಆರ್ಥಿಕ ಭದ್ರತೆಯನ್ನು ಸಾಧಿಸುವುದಕ್ಕೆ ಕೆನರಾ ಬ್ಯಾಂಕ್ ಸ್ಥಾಪನೆಯಾದಾಗಿನಿಂದ ನಿರಂತರವಾಗಿ ಶ್ರಮಿಸುತ್ತಿದೆ.
ಆರ್ಥಿಕ ಸ್ವಾತಂತ್ರ್ಯವನ್ನು ಒಂದು ಸಾರ್ಥಕ ಸಾಧನೆಯಾಗಿಸಲು ಕೆನರಾ ಬ್ಯಾಂಕ್ ಎಷ್ಟು ನಿಷ್ಠೆಯಿಂದ ಶ್ರಮಿಸುತ್ತಿದೆಯೆಂಬುದು "ಉತ್ತಮ ಬ್ಯಾಂಕಿಂಗ್ ಮೂಲಕ ಉತ್ತಮ ಬಾಳುವೆ"ಗಾಗಿ, ಜನತೆಯ ಮತ್ತು ದೇಶದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವುದಕ್ಕಾಗಿ ಕೆನರಾ ಬ್ಯಾಂಕ್ ಒದಗಿಸುತ್ತಿರುವ ವಿವಿಧ ರೀತಿಯ ಸೇವೆಗಳಿಂದ ಸ್ಪಷ್ಟಪಡುವುದು.

ಮುನ್ನಡೆಯಿರಿ — ಕೆನರಾ ಬ್ಯಾಂಕಿನೊಡನೆ ಮುಂದುವರಿಯಿರಿ



ಬ್ಯಾಂಕಿನ ಆಡಳಿತ ಕಛೇರಿ ಕಟ್ಟಡ

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಮಂಗಳೂರು   ಆಡಳಿತ ಕಛೇರಿ: ಬೆಂಗಳೂರು

ಬ್ಯಾಂಕ್ ಅಷ್ಟೇ ಅಲ್ಲ ವಿಶೇಷ ವೈಶಿಷ್ಟ್ಯತೆಯ ಬ್ಯಾಂಕಿಂಗ್ ಸಂಸ್ಥೆಯೂ ಹೌದು

ವಿಶ್ವದಾದ್ಯಂತ ಪ್ರತಿನಿಧಿಗಳು   ಭಾರತದಲ್ಲಿ 235ಕ್ಕೂ ಹೆಚ್ಚಿನ ಶಾಖೆಗಳು

CB-10 Kan. A

ಮಕ್ಕಳಿಗಾಗಿ ಹೆಣೆದ

ಮಹಾಪುರುಷರ ಕಥೆಗಳು

೩. ಕೃಷ್ಣದೇವರಾಯ

ಬರೆದವರು.
ವಿದ್ವಾನ್ ಸುರತ್ಕಲ್ಲು ಸುಬ್ರರಾವ್ ಮತ್ತು
ವಿದ್ವಾನ್ ಕೆ. ವೆಂಕಟರಾಯಾಚಾರ್ಯ ಸುರತ್ಕಲ್ಲು.

ನಮ್ಮ ಕನ್ನಡವು ಧಾರ್ಮಿಕ ರಾಜಕೀಯಗಳೆರಡರಲ್ಲೂ ಪ್ರಸಿದ್ಧವಾದ ಪ್ರದೇಶ. ಇಲ್ಲಿ ಸದ್ಧರ್ಮ ನಿಷ್ಠರೂ ಸಮುಚಿತ ಸಾಹಸಿಗಳೂ ಆದ ರಾಜರು ಬಹಳ ಹಿಂದಿನಿಂದಲೂ ಹೆಸರುಗೊಂಡಿದ್ದಾರೆ ಕೀರ್ತಿಶಾಲಿಗಳಾದ ಇಂತಹ ರಾಜರ್ಷಿಗಳ ಪವಿತ್ರ ಚರಿತ್ರೆಗಳು ಇತಿಹಾಸ ಗ್ರಂಥಗಳಲ್ಲಿ ಕಂಗೊಳಿಸುತ್ತಿವೆ.

ವಿಜಯನಗರವು ಅಂತಹ ಸರ್ವೋತ್ಕೃಷ್ಟ ರಾಜರ ರಾಜ್ಯಗಳಲ್ಲೊಂದು. ಇದು ಕನ್ನಡಿಗರು ಮಾತ್ರವಲ್ಲ, ಎಲ್ಲೆಡೆಯವರೂ "ಎಂದೆಂದೂ ಮರೆಯಲಾಗದ ರಾಜ್ಯ'ವೆಂದು ವಿಖ್ಯಾತವಾಗಿದೆ. ಇಲ್ಲಿ ಅಂಸೊತ್ತಿಗೆಯು ಮೂರು ಮನೆತನಗಳ ಆಡಳಿತದಲ್ಲಿ ಸಾಗಿದುದು ಅದೊಂದು ವಿಚಿತ್ರವೇ. ಸಂಗಮ, ಸಾಳ್ವ, ತುಳುವ ಎಂಬ ಮೂರು ವಂಶಗಳ ರಾಜರು ಸುಮಾರು ೨೩೦ ವರ್ಷಗಳಲ್ಲಿ ವಿಜಯನಗರವನ್ನು ಆಳಿದರು ಎಂದು ತಿಳಿದು ಬಂದಿದೆ. ಹೀಗೆ ಇದು ಮೂರು ಬೇರೆ ಬೇರೆ ಮನೆತನಗಳ ಆಳಿಕೆಗೆ ಒಳಗಾದುದಕ್ಕೆ ಎರಡು ಮುಖ್ಯ ಕಾರಣಗಳಿವೆ. ರಾಜ ಸಂಬಂಧಿಕರಲ್ಲಿನ ಅಂತಃಕಲಹವು ಒಂದು ಕಾರಣವಾದರೆ, ಅನ್ಯ ರಾಜರ ದಾಳಿಯೇ ಇನ್ನೊಂದು ಕಾರಣವಾಗಿದೆ ಮೊದಲನೆಯ ಕಾರಣದಿಂದ ಪ್ರತಿಯೊಂದು ವಂಶದ ಮೂರು ನಾಲ್ಕು ಮಂದಿ ರಾಜರೊಳಗೆ ರಾಜ್ಯ ನಿರ್ವಹಣವಾಗಿ, ಹಸ್ತಾಂತರವಾಯಿತು. ಎರಡನೆಯ ಕಾರಣದಿಂದ ರಾಜ್ಯದ ಮೇಲೆ ಅನ್ಯಮತೀಯರಾದ ಬಾದಶಾಹಿ ರಾಜರ ಮುತ್ತಿಗೆಯಾಗಿ, ರಾಜ್ಯವು ಛಿನ್ನತೆಗೆ ತೊಡಗಿ ನಾಮಾವಶೇಷವಾಯಿತು!

ವಿಜಯನಗರವು ಇಷ್ಟೊಂದು ಅಲ್ಪಾವಧಿಯಲ್ಲಿ ಮಾಡಿ ಮುಳುಗಿದ್ದರೂ, ಅಂದಿನ ಕೆಲವು ರಾಜವರೇಣ್ಯರ ಹೆಸರು ಪ್ರಪಂಚದಲ್ಲೇ ಪ್ರಖ್ಯಾತವಾದುದು. ಅವರಲ್ಲಿ ಕೃಷ್ಣದೇವರಾಯನು 'ನಾಯಕಮಣಿ', ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಉಲ್ಲೇಖನೀಯನಾದ ಮಹನೀಯನು. ಇವನ ಸಚ್ಚರಿತ್ರೆಯನ್ನು ಅವಲೋಕಿಸುವುದಕ್ಕೆ ಮೊದಲು ತತ್ಪೂರ್ವಕರ ವಿಷಯದ ಹಿನ್ನೆಲೆಯನ್ನು ಅರಿತುಕೊಳ್ಳುವುದು ಅವಶ್ಯವೆಂದು ಭಾವಿಸುತ್ತೇವೆ.

ವಿಜಯನಗರವು ಧರ್ಮದ ಅಸ್ತಿವಾರದಿಂದ ನೆಲೆಗೊಂಡುದನ್ನ ಬೇಕು. ಏಕೆಂದರೆ—ಮಹಾತ್ಮರಾದ ವಿದ್ಯಾರಣ್ಯ ಮಹರ್ಷಿಗಳೇ ವಿಜಯನಗರದ ಸಂಸ್ಥಾಪನೆಗೆ ಮೂಲಕಾರಣರಾದವರು. ಅದೇ ಅವರಿಗೆ "ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ" ಎಂಬ ಬಿರುದು ಇದೆ.

ಅವರಿಂದ ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ (೧೩೩೬) ಈ ರಾಜ್ಯವು ಸ್ಥಾಪಿತವಾಯಿತು ಇದು ಈಗಿನ ಬಳ್ಳಾರಿ ಜಿಲ್ಲೆಯಲ್ಲಿದೆ. ಹುಕ್ಕಬುಕ್ಕರೆಂಬ ವೀರ ಸಹೋದರರು ಆ ಸ್ವಾಮಿಗಳ ಪರಮಾನುಗ್ರಹದಿಂದ ಈ ರಾಜ್ಯದ ಮೊತ್ತಮೊದಲನೆಯ ಅರಸರಾಗಿ ಮೆರೆದರು (೧೩೭೭). ಇವರ ಆಳಿಕೆಯಲ್ಲಿ ಕ್ರಮವಾಗಿ ರಾಜ್ಯವು ಘನತೆಯನ್ನು ಪಡೆಯತೊಡಗಿತು.

ಅನಂತರ ಇಮ್ಮಡಿ ಹರಿಹರ, ಇಮ್ಮಡಿ ಬುಕ್ಕ, ದೇವರಾಯ, ಇಮ್ಮಡಿ ದೇವರಾಯರ ಕಾಲದಲ್ಲಿ ಆ ವೈಭವ ಘನತೆಗಳಿಗೇನೂ ಕೊರತೆಯಾಗಲಿಲ್ಲ (೧೪೪೬)

ಆ ಮೇಲಿನ ಮಲ್ಲಿಕಾರ್ಜುನ, ಒಂದನೆಯ ವಿರೂಪಾಕ್ಷರ ಆಳಿಕೆಯಲ್ಲಿ ಸುತ್ತಲಿನ ಸಾಮಂತರೂ ಮಹಮ್ಮದೀಯ ರಾಜರೂ ಕೊಂಚ ಪ್ರಬಲರಾಗ ಹತ್ತಿದರು (೧೪೮೬). ಇದು ವರೆಗೆ ಸಂಗಮ ಮನೆತನದ ರಾಜರು ಆಳಿದರು ಬಳಿಕ ಸಾಳುವ ವಂಶದವರ ಆಳಿಕೆ.

ಆ ವಂಶದ ನರಸಿಂಹನೆಂಬವನು ತನ್ನ ಅಪ್ರಿಯದಾತನಾದ ಇಮ್ಮಡಿ ವಿರೂಪಾಕ್ಷನನ್ನು ಉರುಳಿಸಿ, ತಾನೇ ರಾಜನಾದನು. ಮಹಮ್ಮದೀಯ ರಾಜರೊಳಗೆ ಪರಸ್ಪರ ಭೇದವುಂಟಾಗಿ, ಬಹಮನೀ ರಾಜ್ಯವು ಐದು ರಾಜ್ಯಗಳಾಗಿ ಒಡೆಯಲ್ಪಟ್ಟದು ಇದೇ ಕಾಲದಲ್ಲಿ. ಇಮ್ಮಡಿ ನರಸಿಂಹನೇ ಈ ವಂಶದ ಕೊನೆಯ ಅರಸು (೧೪೯೬)

ಮತ್ತೆ ತೌಳವ ವಂಶದವರ ಆಳಿಕೆಯ ಆರಂಭ. ಇಮ್ಮಡಿ ನರಸಿಂಹನ ಆಶ್ರಿತನಾದ ನರಸನೆಂಬವನು ಅವನನ್ನು ಮೂಲೆಗೊತ್ತಿ, ತಾನೇ ಆಳತೊಡಗಿದನು. ಈ ನರಸನು ತೆಂಕನಾಡಿನ ರಾಜರನ್ನು ಗೆದ್ದು, ವಿಜಯಶ್ರೀಯನ್ನೇ ವರಿಸಿದ್ದನು. ಆ ಬಳಿಕ ಇವನ ಮೂವರು ಮಕ್ಕಳಲ್ಲಿ ಹಿರಿಯನಾದ ವೀರನರಸಿಂಹನು ಪಟ್ಟವೇರಿದನು. ಇವನು ರಾಜ್ಯಲೋಭದಿಂದ ತನ್ನ ತಮ್ಮನಾದ ಕೃಷ್ಣದೇವರಾಯನನ್ನು ಕೊಲ್ಲಲು ಹವಣಿಸಿದನು (೧೫೦೪—೯) ಆದರೆ, ಆಗಣ ಚಾಣಾಕ್ಷ ಮಂತ್ರಿಯಾದ ಅಪ್ಪಾಜಿ ಅಥವಾ ತಿಮ್ಮರಸನು ಕೃಷ್ಣದೇವರಾಯನನ್ನು ಉಪಾಯದಿಂದ ಅಡಗಿಸಿಟ್ಟು ಕಾಪಾಡಿದನು. ಸ್ವಲ್ಪ ಸಮಯದಲ್ಲಿ ಅಪ್ಪಾಜಿಯು ತನ್ನ ಬುದ್ಧಿ ಕೌಶಲ್ಯದಿಂದಲೂ, ಸಮಯೋಚಿತ ಸಾಹಸದಿಂದಲೂ ಕೃಷ್ಣನನ್ನು ಪಟ್ಟಕ್ಕೇರಿಸಿದನು ಕೃಷ್ಣರಾಯನೂ ಪಟ್ಟವನ್ನೇರಿ, ರಾಜ್ಯ ಸೂತ್ರವನ್ನು ಕೈಕೊಂಡ ಕೂಡಲೆ, ಪ್ರತೀಕಾರ ಬುದ್ಧಿಯಿಂದ ತನ್ನ ಸೋದರರನ್ನೂ ಅವರ ಮಕ್ಕಳನ್ನೂ ಸೆರೆಯಲ್ಲಿರಿಸಿದನು. "ಅಶಾಪಾ ಪರಮಂ ದುಃಖಂ" ಎಂಬುದಕ್ಕೆ ಇದು ನಿದರ್ಶನವಲ್ಲವೇ?

'ಕನ್ನಡ ರಾಜ್ಯರಮಾರಮಣ' ನಾದ ಕೃಷ್ಣ ದೇವರಾಯನ ರಾಜ್ಯ ಭಾರವು ಇಪ್ಪತ್ತು ವರ್ಷಗಳ ವರೆಗೆ ತಡೆಯಿಲ್ಲದೆ ಸಂಭ್ರಮದಿಂದ ಸಾಗಿತು. ಈ ರಾಜನು ಪ್ರಾರಂಭದಲ್ಲಿ ವಿಲಾಸಮಯ ಜೀವನದಲ್ಲಿ ಮಗ್ನನಾಗಿದ್ದನೆಂದೂ, ಈ ದೆಸೆಯಿಂದ ಅತ್ತ ವಿರೋಧಿ ವರ್ಗವು ಪ್ರಬಲವಾಗುತ್ತಿದ್ದಿತೆಂದೂ: ಒಮ್ಮೆ ವೃದ್ಧ ತಿಮ್ಮರಸನು, ರಾಜನು ಸಿಂಹಾಸನವಿಳಿದು ನಿದ್ರೆಗೆಂದು ಹೋಗುವಾಗ ಕೆನ್ನೆಗೆ ಬಡಿದನೆಂದೂ, ಆಗ ಅನೇಕ ರಾಜನೀತಿಗಳನ್ನು ಬೋಧಿಸಿದನೆಂದೂ, ಹೇಳಿಕೆ ಇದೆ. ಅಂತೂ, ತಿಮ್ಮರಸನು ರಾಜದಂಡಕ್ಕೆ ಬಂದ ಅಡ್ಡಿ ಆತಂಕಗಳನ್ನು ಹೋಗಲಾಡಿಸಿದ ನೀತಿ ನಿಪುಣನಾದ ಸಮರ್ಥ ಮಂತ್ರಿವರ್ಯನೆಂದು ತಿಳಿದುಕೊಳ್ಳಬಹುದು.

ಪಟ್ಟವೇರಿದ ಕೃಷ್ಣದೇವರಾಯನು ಸಕಲ ಸನ್ನಾಹಗಳಿಂದ ಕೂಡಿ, ರಾಜಧಾನಿಯಿಂದ ಹೊರಟು ದಕ್ಷಿಣ ಸಮುದ್ರದ ವರೆಗೆ ದಂಡಯಾತ್ರೆಯನ್ನು ಕೈಗೊಂಡನು, ಚೋಳ, ಪಾಂಡ್ಯ, ಕೇರಳ ರಾಜರನ್ನು ಸೋಲಿಸಿ, ಅಂಕಿತರನ್ನಾಗಿಸಿದನು. ಸಿಂಹಳದ ರಾಜವಂಶದ ಅಂತಃಕಲಹದಲ್ಲಿ ಕೃಷ್ಣದೇವರಾಯನು 'ಮಧ್ಯಸ್ಥ'ನಾಗಿದ್ದನೆಂದು ತಿಳಿದು ಬರುವುದು.

ಇದು ವರೆಗಿನ ದಿಗ್ವಿಜಯದಿಂದ ಉತ್ಸಾಹಿತನಾದ ರಾಜನು ಅಲ್ಲಿಂದ ಮರಳಿ ಉತ್ತರ—ಪೂರ್ವ—ದಿಕ್ಕುಗಳಿಗೆ ಸಾಗಿದನು ವಿಜಾಪುರದ ಇಸ್ಮಾಯಿಲ್ ಆದಿಲ್ ಶಹನೂ ಕೃಷ್ಣದೇವರಾಯನೂ ರಾಯಚೂರಿನ ಬಳಿ ಹೋರಾಡಿದರು. ಈ ಕದನ ಕಾಳಗದಲ್ಲಿ ಕೃಷ್ಣದೇವರಾಯನಿಗೇ ವಿಜಯವಾಯಿತು ಆದರೂ ಬುದ್ಧಿ ಚತುರನಾದ ಇವನು ದೂರಾಲೋಚನೆಯಿಂದ ಶಾಹನೊಂದಿಗೆ ಸಂಧಿಮಾಡಿಕೊಂಡನು.

ಕೃಷ್ಣದೇವರಾಯನು ಕಳಿಂಗದ ವರೆಗೆ ಚೈತ್ರಯಾತ್ರೆಯನ್ನೆಸಗಿದನು, ಎಲ್ಲೆಡೆಗಳಲ್ಲಿಯೂ ಇವನಿಗೆ ವಿಜಯವೇ ಕೈಸೇರಿತು. ಈ ವಿಧವಾಗಿ ಗೆದ್ದ ರಾಜ್ಯಗಳನ್ನು ತಾನೇ ಆಕ್ರಮಿಸದೆ, ಆಯಾ ರಾಜರಿಗೇ ಮರಳಿಕೊಟ್ಟು, ಅವರನ್ನು ತನ್ನ ಸಾಮಂತರನ್ನಾಗಿ ಮಾಡಿಕೊಂಡುದು ಇವನದೊಂದು ವೈಶಿಷ್ಟ್ಯವು. ಇಂತು ವಿಜಯನಗರದ ಸಾಮ್ರಾಜ್ಯವು ಸರ್ವಸಮರ್ಥನಾದೀ ರಾಜನಿಂದ ಅತಿ ಪ್ರಖ್ಯಾತವಾಗಿ ನೆಲೆಯಿತು

ಕೃಷ್ಣದೇವರಾಯನು ಬಹು ಪತ್ನೀಯುತನು. ಇವನು ಗೆದ್ದ ಅನೇಕ ದೇಶಗಳ ರಾಜಕುಮಾರಿಯರನ್ನು ಮದುವೆಯಾಗಿದ್ದನು ಚಿನ್ನಾದೇವಿ, ಅನ್ನಪೂರ್ಣೆ (ಕಮಲೆ) ಜಗನ್ಮೋಹಿನಿ (ತುಕ್ಕಾ), ತಿರುಮಲಾಂಬೆ ಮೊದಲಾದ ಮಹಿಳೆಯರು ಇವನ ಮಡದಿಯರು, ಇವರಲ್ಲಿ ತಿರುಮಲಾಂಬೆಯೇ ಪಟ್ಟದ ರಾಣಿಯಾಗಿದ್ದಳು ಇವಳಲ್ಲಿ ತಿರುಮಲರಾಯ ಮಗನೂ, ತಿರುಮಲೆಯೆಂಬ ಮಗಳೂ ಹುಟ್ಟಿದರು. ರಾಜ್ಯವು ತನ್ನ ಸಂತತಿಯಲ್ಲೇ ಮುಂದೆ ಸ್ಥಿರವಾಗಿರ ಬೇಕೆಂದು ಮಹಾರಾಜನು ಬಯಸಿದನು ಅದೇ ಆತನು ತಿರುಮಲನಿಗೆ ಆರೇಳು ವರುಷ ವಯಸ್ಸಾದಾಗಲೇ (ಯುವರಾಜ) ಯುವರಾಜ ಪಟ್ಟವನ್ನು ಕಟ್ಟಿ ಆಳಿಸಿದನು ಈ ಯೋಚನೆಗೆ ಅಪ್ಪಾಜಿಯು ಒಪ್ಪಲಿಲ್ಲವಾದರೂ, ಅದನ್ನು ಅರಸನು ಆಲಕ್ಷಿಸಿ, ಸಂಕಲ್ಪವನ್ನು ಸಾಧಿಸಿಯೇ ಬಿಟ್ಟನು. ಆದರೆ ದೈವ ಚಿಂತನೆ ಬೇರಾಗಿತ್ತು ಪಟ್ಟವಾಗಿ ಒಂದು ವರುಷದೊಳಗೆ ಬಾಲಕನು ಆಕಸ್ಮಿಕ ಮರಣಕ್ಕೆ ತುತ್ತಾದನು ರಾಜನ ಅಳಲನ್ನು ಹೇಳಲಳವಲ್ಲ. ಇದರಿಂದ ರಾಜನ ಬುದ್ಧಿಯು ತೀರಾ ಮಂಕಾಯಿತು ಯುವರಾಜನ ಕೊಲೆಗೆ ಸಜ್ಜನರಾದ ಅಪ್ಪಾಜಿಯೂ ಅವನ ಮಕ್ಕಳೂ ಕಾರಣರೆಂದು ಬಗೆದನು. ಚಿಕ್ಕಂದಿನಲ್ಲಿ ತನ್ನನ್ನು ಅಕ್ಕರೆಯಿಂದ ಪಾಲಿಸಿದ ಮಂತ್ರಿವರ್ಯನು ಈ ಭಾಗದಲ್ಲಿ ನಿರಪರಾಧಿಯಾಗಿರ ಬೇಕೆಂದು ಬುದ್ಧಿ ಕಲುಷಿತನಾದ ರಾಜನಿಗೆ ಹೊಳೆಯಲಿಲ್ಲ. ದುಃಖದಿಂದ ಕೇವಲ ಕುರುಡನಾಗಿ, ಮಂತ್ರಿಯ ಕಣ್ಣುಗಳನ್ನು ಕೀ

(ಕತ್ತನೇ ಪುಟ ನೋಡಿರಿ)

ಕೇಂದ್ರ ಆರೋಗ್ಯ ಸಚಿವೆ ಡಾ| ಸುಶೀಲಾ ನಾಯರ್‌ರವರು ಡಿಲ್ಲಿಯಲ್ಲಿರುವ ಆಲ್ ಇಂಡಿಯಾ ಮೆಡಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಹೊರ ರೋಗಿಗಳ ಹೊಸ ವಿಭಾಗವನ್ನು ಉದ್ಘಾಟಿಸುತ್ತಿರುವುದು.

ಧರ್ಮಸ್ಥಳಕ್ಷೇತ್ರದ ಸರ್ವಧರ್ಮ

ಧರ್ಮಸ್ಥಳದ ಸರ್ವಧರ್ಮ ಮತ್ತು ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಉದ್ಘಾಟಿಸುತ್ತ ಮೈಸೂರಿನ ಅರ್ಥ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಭಾಷಣ ಮಾಡುತ್ತಿರುವುದು. ಶ್ರೀ ಜತ್ತಿಯವರ ಬಲದಲ್ಲಿ ಸಮ್ಮೇಳನದ ಸ್ವಾಗತಾಧ್ಯಕ್ಷ ಮತ್ತು ಧರ್ಮಸ್ಥಳ ಕ್ಷೇತ್ರದ ಧರ್ಮದರ್ಶಿ ಶ್ರೀ ಡಿ. ರತ್ನವರ್ಮ ಹೆಗ್ಗಡೆ, ಎಡದಲ್ಲಿ ಸಮ್ಮೇಳನದ ಅಧ್ಯಕ್ಷ ಜಗದ್ಗುರು ಶ್ರೀ ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ, ಸಾಹಿತ್ಯಸಮ್ಮೇಳನದ ಅಧ್ಯಕ್ಷ ಶ್ರೀ ತಿ. ನಂ. ಶ್ರೀಕಂಠಯ್ಯ ಇವರು ಇದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳದ ಹೆಸರು — ಕೀರ್ತಿಯನ್ನು ಕೇಳದವರು ಇಲ್ಲವೆಂದರೂ ಅದು ಒಪ್ಪುವ ಮಾತು. "ಮಾತು ಬಿಡದ ಮಂಜುನಾಥ"ನ ಆವಾಸಸ್ಥಾನವಾದ ಧರ್ಮಸ್ಥಳದ ಹೆಸರೂ ಅನ್ವರ್ಥಕವಾಗಿದೆ ಇಲ್ಲಿ ಬಂದ ಪ್ರತ್ಯೇಕ ಯಾತ್ರಾರ್ಥಿಯೂ ಇಲ್ಲಿನ ಸೊಬಗನ್ನು, ಆತಿಥ್ಯವನ್ನು, ಭಗವಂತನ ಕೃಪಾಕಟಾಕ್ಷವನ್ನು ಮೆಚ್ಚದಿರುವುದಿಲ್ಲ. ಇವೆಲ್ಲ ಹಿರಿಮೆಗೆ ಕಾರಣವಾದ ಧರ್ಮಸ್ಥಳದಲ್ಲಿ ಕಾರ್ತಿಕ ಅಮಾವಾಸ್ಯೆಯ ಸಮಯ ನಡೆಯುವ ಲಕ್ಷ ದೀಪೋತ್ಸವ ಮತ್ತು ಇದೇ ಸಮಯ ಕಳೆದ ೩೨ ವರ್ಷಗಳಿಂದಲೂ ಜರಗಿ ಬರುತ್ತಿರುವ ಸರ್ವಧರ್ಮ ಸಮ್ಮೇಳನ ಹಾಗೂ ಸಾಹಿತ್ಯ ಸಮ್ಮೇಳನಗಳು ಕ್ಷೇತ್ರ ಪ್ರಸಿದ್ಧಿಗೆ ಕಲಶವಿಟ್ಟವೆ.

ಈ ವರುಷವೂ ಈ ಯೆರಡು ಸಮ್ಮೇಳನಗಳು ಇದೇ ತಾ. ೨ ಮತ್ತು ೩ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ವೈಭವೋಪೇತವಾಗಿ ಜರಗಿದುವು. ಇವುಗಳ ಉದ್ಘಾಟನೆಯನ್ನು ಕರ್ನಾಟಕದ ಅರ್ಥ ಮಂತ್ರಿ ಮಾನ್ಯ ಶ್ರೀ ಬಸಪ್ಪದಾನಪ್ಪ ಜತ್ತಿಯವರು ಮಾಡಿದರು ಶ್ರೀ ಜಗದ್ಗುರು ನಿಡಿಮಾಮಿಡಿ ಶ್ರೀ ಶೈಲ ಸೂರ್ಯ ಸಿಂಹಾಸನಾಧೀಶ್ವರ ಶ್ರೀ ಶ್ರೀ ಚನ್ನಬಸವರಾಜ ದೇಶೀಕೇಂದ್ರ ಶಿವಾಚಾರ್ಯ ಮಹಾ ಸ್ವಾಮಿಗಳು ಸರ್ವಧರ್ಮ ಸಮ್ಮೇಳನದ ಅಗ್ರಪೀಠವನ್ನು ಅಲಂಕರಿಸಿದ್ದರು. ಪ್ರೊ|| ತೀ. ನ. ಶ್ರೀಕಂಠಯ್ಯನವರು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಎರಡೂ ಸಮ್ಮೇಳನಗಳಲ್ಲಿ ವಿದ್ವಾಂಸರನೇಕರು ತಾವು ಆಯ್ದುಕೊಂಡ ವಿಷಯಗಳ ಮೇಲೆ ಬೋಧಪ್ರದವಾದ ಭಾಷಣಗಳನ್ನಿತ್ತು ಜನರಿಗೆ ಧರ್ಮ ಮತ್ತು ಸಾಹಿತ್ಯಗಳಲ್ಲಿ ಆಸಕ್ತಿಯು ಹೆಚ್ಚುವಂತೆ ಮಾಡಿದರು.

ಸಮ್ಮೇಳನಗಳ ಉದ್ಘಾಟನೆಯನ್ನು ಮಾಡುತ್ತ, ಮಾನ್ಯ ಜತ್ತಿಯವರು ಹೀಗೆಂದರು: "ಧರ್ಮದ ಮೂಲಕ ದೇವರನ್ನು ಕಾಣುವ ಪ್ರಯತ್ನವು ಜಗತ್ತು ಹುಟ್ಟಿದಾಗಿನಿಂದಲೂ ನಡೆಯುತ್ತಾ ಬಂದಿದೆ. ಯೋಗಿಗಳೂ ಸಾಧಕರೂ ಅರಸುತ್ತ ಬಂದ ಸತ್ಯವು ಬೇರೆ ಬೇರೆ ದಾರಿಗಳನ್ನು ಕಂಡಿರುವುದಾದರೂ ಅವೆಲ್ಲವೂ ಒಂದೇ ಮೂಲ ತತ್ವದತ್ತ ಸಾಗಿವೆ. ವಿವಿಧ ಧರ್ಮಗಳಲ್ಲಿ ವಿವಿಧ ರೀತಿಯಲ್ಲಿ ತೋರಿಸಲಾದ ಈ ಸತ್ಯ ತತ್ವವನ್ನು ಎಲ್ಲರಿಗೂ ತಿಳಿದುಕೊಳ್ಳಲು ಅನುಕೂಲವಾಗುವಂತೆ ಆತ್ಮಜ್ಞಾನಿಗಳೂ ಸಾಹಿತಿಗಳೂ ಸುಲಭ ಭಾಷೆಯಲ್ಲಿ ಪ್ರಯತ್ನಿಸಬೇಕು. ಜನಸಾಮಾನ್ಯರು ಎಲ್ಲ ಧರ್ಮಗಳ ಮುಖ್ಯಾಂಶಗಳನ್ನು ಅರಿತು ಅವನ್ನು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಬಾಳನ್ನು ಬೆಳಗಿಸಬೇಕು, ಇದಕ್ಕೆ ಪಂಡಿತರು ಮತ್ತು ಧರ್ಮ ರಂಗದ ಹಿರಿಯರು ನೆರವಾಗಬೇಕು."

ಶ್ರೀ ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಗಡೆಯವರು ಮುಖ್ಯ ಅತಿಥಿಗಳನ್ನೂ ಧರ್ಮಾಭಿಮಾನಿಗಳನ್ನೂ ಸ್ವಾಗತಿಸುತ್ತ, ೩೨ ವರ್ಷಗಳಿಂದಲೂ ನಿರಂತರವಾಗಿ ನಡೆದು ಬರುತ್ತಿರುವ ಸಮ್ಮೇಳನದ ಭವ್ಯ ಪರಂಪರೆಯನ್ನ ನೆನೆದು, ತಮ್ಮ ಹಿರಿಯರು ತೋರಿದ ದಾರಿಯಲ್ಲಿಯೇ ತಾನೂ ಮುಂದುವರಿಯುತ್ತಿರುವುದಾಗಿ ಹೇಳಿ ಸಮ್ಮೇಳನದ ವಿಚಾರದೀಪ್ತಿಯಿಂದ ಪ್ರಯೋಜನ ಪಡೆಯಬೇಕೆಂದು ಕೇಳಿಕೊಂಡರು

ಅನಂತರ, 'ಧರ್ಮ ಮತ್ತು ರಾಷ್ಟ್ರ ಭದ್ರತೆ' ಹಾಗೂ 'ಧರ್ಮ ಮತ್ತು ಭ್ರಷ್ಟಾಚಾರ ನಿರ್ಮೂಲನ' ಎಂಬ ವಿಷಯಗಳ ಮೇಲೆ ಈ ಕೆಳಗಿನವರು ಮಾತನಾಡಿ, ಧರ್ಮಪಾಲನೆಯಿಂದ ರಾಷ್ಟ್ರ ಭದ್ರತೆ ಹಾಗೂ ಭ್ರಷ್ಟಾಚಾರದ ಕೊನೆ ಹೇಗಾಗಬಲ್ಲುದೆಂಬುದನ್ನು ವಿವರಿಸಿದರು: ಶ್ರೀಗಳಾದ ಬಿ. ಶಿವಮೂರ್ತಿ ಶಾಸ್ತ್ರಿ, ಸಿ. ಎಸ್. ಕರ್ಬಿ, ಸೈಯದ್ ಅಬುತ್ ರಾಬ್ ಕತಾಯ್, ಎಚ್. ಜಿ ರಂಗಸ್ವಾಮಿ ಐಯ್ಯಂಗಾರ, ಎಸ್. ವಿ. ಚೆನ್ನಬಸವೇಶ್ವರ, ಸಾಮಕ ಗಣೇಶ ಶಾಸ್ತ್ರಿ, ಎಂ ಜಿ. ನಂಜುಂಡಾರಾಧ್ಯ, ಡಿ. ಪದ್ಮನಾಭ ಶರ್ಮ, ಕೆ ಪಿ. ಶಾಂತಿರಾಜ್ ಮತ್ತು ಕಾ. ಶಿ. ಧರಣೇಂದ್ರಯ್ಯ.

ಅಧ್ಯಕ್ಷ ಸ್ಥಾನದಿಂದ ಮಹಾ ಸ್ವಾಮಿಗಳು ಮಾತಾಡುತ್ತ "ಶ್ರೀ ಧರ್ಮಸ್ಥಳದಲ್ಲಿ ಸರ್ವಧರ್ಮ ಸಮನ್ವಯದ ಸರ್ವಮಾನ್ಯ ಮಹಾಲ್ಯ ಮತ್ತು ಸರ್ವರ ಶ್ರೇಯೋಭ್ಯುದಯಗಳಿಗೆ ದಾರಿಯಾಗಿರುವ ಸರ್ವಧರ್ಮ ಸಮನ್ವಯದ ವಾತಾವರಣವು ನೆಲಸಿದೆ. ಪರಧರ್ಮ ಸಹಿಷ್ಣುತೆ ಭಾರತೀಯರಲ್ಲಿ ಪುರಾತನ ಕಾಲದಿಂದಲೂ ಬಂದ ಒಂದು ಹಿರಿಯ ಗುಣ. ದೇಶೀಂದ್ರಿಯಗಳ ದುರ್ಗುಣ ರೂಪ ಧರ್ಮವು ಆತ್ಮದೃಷ್ಟಿಯಲ್ಲಿ ಪರಧರ್ಮವೆಂದು ಹೇಳಿದ ಮೇಲೆ ಬೇರೆ ಜನಾಂಗಗಳ ಗುಣ ಧರ್ಮಗಳನ್ನು ಕುರಿತು ಮತ್ಸರವಿರಬಾರದು; ಪ್ರತಿಯಾಗಿ ಆದರವಿರಬೇಕು. ಧರ್ಮ ವಿವಿಧವಾದರೂ ಧರ್ಮಿ ಒಬ್ಬ; ಇದನರಿದು ಸರ್ವಧರ್ಮ ಸಮನ್ವಯ ನಿರೀಕ್ಷಣೀಯ. ಇಂದಿನ ವಿಜ್ಞಾನ ಯುಗದ ಉದ್ದೇಶ ವಿಶ್ವೈಕ್ಯ. ಈ ವಿಶ್ವೈಕ್ಯ ಸಾಧನೆಗಾಗಿ ವಿಶ್ವಧರ್ಮ ಅವಶ್ಯ. ವಿಶ್ವಧರ್ಮವು ರೂಪಿಸಲ್ಪಡುವುದು ಸರ್ವಧರ್ಮಗಳ ಮೂಲಕ, ಪ್ರತಿ ಸಮಾಜವು ಮತೀಯಧರ್ಮದಿಂದ ಮಾನವಧರ್ಮಕ್ಕೆ ಪ್ರತಿ ಮಾನವನು ವ್ಯಕ್ತಿ ಧರ್ಮದಿಂದ ವಿಶ್ವಧರ್ಮಕ್ಕೆ ಏರಿ ನಿಲ್ಲಬೇಕು ಆಗ ಎಲ್ಲಾ ಜಾತಿ— ಪಂಥಗಳು ಸಮನ್ವಯಗೊಂಡು ವಿಶ್ವ ಧರ್ಮವು ರೂಪಿಸಲ್ಪಡುವುದು" ಎಂದು ನಿರೂಪಿಸಿದರು.

ಎರಡನೆಯದಿನದ ಸಮ್ಮೇಳನದಂದು ಶ್ರೀ ಡಿ ರತ್ನವರ್ಮ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರು 'ಸಾಹಿತ್ಯವು ಸಾಹಿತ್ಯಕ್ಕಾಗಿರುವುದಲ್ಲ, ಜೀವನಕ್ಕಾಗಿ' ಎಂದು ಹೇಳಿದರು. ಅವರು ಮುಂದುವರಿಸುತ್ತಾ "ಸಾಹಿತ್ಯವು ಹಲವಾರು ಪರಿಣಾಮಗಳನ್ನು ಜೀವನದಲ್ಲಿ ಉಂಟು ಮಾಡುತ್ತದೆ ಅದು ಕ್ರಾಂತಿಕಾರಕವಿರಬಹುದು, ನೀತಿಬೋಧಕವಿರಬಹುದು; ವಿಚಾರ ಪ್ರಚೋದಕವಿರಬಹುದು. ಆದರೆ, ಇವುಗಳಲ್ಲಿ ಒಂದೊಂದೂ ಸಾಹಿತ್ಯ ನೀಡುವ ಪೂರ್ಣ ಫಲಿತಾಂಶವೆಂದು ತಿಳಿಯುವುದು ತಪ್ಪು; ಸಾಹಿತ್ಯದ ಮುಖ್ಯ ಉದ್ದೇಶ ಜನ ಮನರಂಜನೆ. ಇದು ಸಾಧ್ಯವೆನಿಸಿದರೆ ಮಾತ್ರ ಸಾಹಿತ್ಯಪೂರ್ಣವೆಂದು ತಿಳಿಯಬೇಕು ಒಂದು ಸಾಹಿತ್ಯ ಜನರ ಮೇಲೆ ನಿರ್ದಿಷ್ಟ ಪರಿಣಾಮ ಬೀರುತ್ತದೆ ಎಂದು ಭಾವಿಸುವುದು ಸರಿಯಲ್ಲ. ಏಕೆಂದರೆ, ಒಬ್ಬೊಬ್ಬನ ಮೇಲೆ ಒಂದೊಂದು ಸಾಹಿತ್ಯ ಒಂದೊಂದು ಪರಿಣಾಮ ಬೀರಬಹುದು. ಅದು ಬೇರೆ ಬೇರೆ ರೀತಿಗಳಿಂದ ಮನೋವಿಕಾಸಕ್ಕೆ, ಅದರ ರಂಜನೆಗೆ ಪ್ರಯತ್ನಿಸುತ್ತಿದೆ. ಹೀಗಾದಾಗ ಸಾಹಿತ್ಯಕಾರ ಜನ ಜೀವನದ ಅವ್ಯಕ್ತ ಶಾಸಕನಾಗುತ್ತಾನೆ" ಎಂದರು.

ಆ ದಿನ "ರಾಷ್ಟ್ರೀಯ ಚಾರಿತ್ರ್ಯವನ್ನು ರೂಪಿಸುವಲ್ಲಿ ಸಾಹಿತ್ಯದ ಪಾತ್ರ", "ಬುದ್ಧಿ ಭಾವಗಳ ಸಾಮರಸ್ಯ ಸಾಧ್ಯವೆ?" ಎಂಬಿವೇ ವಿಷಯಗಳನ್ನು ಆಧರಿಸಿ ವಿದ್ವಾಂಸರ ಭಾಷಣಗಳು ನಡೆದುವು. ಇವುಗಳಲ್ಲಿ ಈ ಕೆಳಗಿನವರು ಭಾಗ ವಹಿಸಿದ್ದರು. ಡಾ|| ಡಿ. ಎಸ್. ಕರ್ಕಿ, ಶ್ರೀಮತಿ ಹಂ. ಪ ನಾ. ಕಮಲಮ್ಮ, ಕುಮಾರಿ ಎಚ್. ವಿಮಲ, ಶ್ರೀಗಳಾದ ಜಿ. ಬ್ರಹ್ಮಪ್ಪ, ಹಂ ಪ ನಾಗರಾಜಯ್ಯ, ದಾಮೋದರ ಬಾಳಿಗಾ, ಎ ಬಾಲಕೃಷ್ಣ ಶೆಟ್ಟಿ, ಬ ನ. ಸುಂದರ ರಾಯ, ಮಿರ್ಜಿ ಅಣ್ಣಾರಾಯ ಮತ್ತು ಶ್ರೀಮತಿ ಎಸ್. ರತ್ನಮ್ಮ.

ಭಾಷಣದ ನಡುವೆ ಶ್ರೀಮತಿ ಪಾಪ ಶ್ರೀಮತಿ ಪಾಪ ಚಂದ್ರಾವತಿ ಮತ್ತು ಸಂಗಡದರಿಂದ ಸಂಗೀತ ಕಛೇರಿಯು ನಡೆದಿತ್ತು. ಕೊನೆಯಲ್ಲಿ ಮಂಗಳೂರಿನ ಶ್ರೀಯು ಎಸ್. ಕೃಷ್ಣರಾವ್ ಮತ್ತು ಶಿಷ್ಯೆಯರಿಂದ ನೃತ್ಯಪ್ರದರ್ಶನವು ಜರಗಿತು.

ತ್ತು ಕನ್ನಡ ಸಾಹಿತ್ಯ ಸಮ್ಮೇಳನಗಳು

ಶ್ರೀ ಡಿ ರತ್ನವರ್ಮ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡುತ್ತಿರುವುದು.

ಶ್ರೀ ಡಿ ರತ್ನವರ್ಮ ಹೆಗ್ಗಡೆಯವರು ಮಂತ್ರಿ ಶ್ರೀ ಬಿ ಡಿ ಜತ್ತಿಯವರಿಗೆ ಮಾನಪತ್ರವನ್ನೊಪ್ಪಿಸುತ್ತಿರುವುದು

ಸಂಪ್ರದಾಯದಂತೆ ನವಂಬರ ತಾ. ೨೯ರಂದು ಪ್ರಾರಂಭವಾಗಿ ಧರ್ಮಸ್ಥಳದ ವಿಶೇಷ ಕಾರ್ಯಕ್ರಮಗಳು ಡಿಸೆಂಬರ ೪ರಂದು ಮುಕ್ತಾಯಗೊಂಡುವು. ಧರ್ಮಸ್ಥಳದ ಲಲಿತಕಲಾ ಸಂಘದವರು 'ಸತ್ಯ ಹರಿಶ್ಚಂದ್ರ'ವೆಂಬ ನಾಟಕವನ್ನು ಅಭಿನಯಿಸಿದರು. ವಿವಿಧ ಪಂಗಡದವರ ನಾಗಸ್ವರ ವೇಣುವಾದನ ಮೊದಲಾದುವಿದ್ದುವು. ದಕ್ಷಿಣ ಕನ್ನಡದ ಪ್ರಸಿದ್ಧ ಯಕ್ಷಗಾನ ಕಲಾವಿದರ ಸಮ್ಮೇಳದಿಂದ ಯಕ್ಷಗಾನ ಕೂಟ, ಶ್ರೀ ಬಿ ದೇವೇಂದ್ರಪ್ಪ ಮತ್ತು ಸಂಗಡದವರ ಸಂಗೀತ, ಶ್ರೀ ಮಂಜುನಾಥಸ್ವಾಮಿ ಯಕ್ಷಗಾನ ಮೇಳದವರ ಯಕ್ಷಗಾನ ಬಯಲಾಟಗಳು ಮನೋರಂಜಕವಾಗಿದ್ದುವು.

ಶ್ರೀ ಬಿ. ಡಿ. ಜತ್ತಿ

ಐವತ್ತೆರಡು ವಯಸ್ಸಿನ ಮೈಸೂರಿನ ಅರ್ಥ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಚಿಕ್ಕ ವಯಸ್ಸಿನಲ್ಲೇ ಪ್ರಸಿದ್ಧಿಗೆ ಬಂದ ದೇಶದ ಕೆಲವೇ ನಾಯಕರಲ್ಲಿ ಒಬ್ಬರು. ಹಿಂದಿನ ಜಮಖಂಡಿ ಸಂಸ್ಥಾನದ ಅನಭಿಷಿಕ್ತ ದೊರೆ ಎನಿಸಿಕೊಂಡಿದ್ದ ಅವರು ಇಂದೀಗ ಕರ್ನಾಟಕದ ಜನತೆಯ ಮನೆಮಾತಾಗಿದ್ದಾರೆ. ರಾಜ್ಯಪುನರ್ವಿಂಗಡಣೆಯ ಮೊದಲು ಮುಂಬಯಿ ಸರಕಾರದಲ್ಲಿ ಉಪಮಂತ್ರಿಗಳಾಗಿ, ಪಾರ್ಲಿಮೆಂಟರಿ ಕಾರ್ಯದರ್ಶಿಗಳಾಗಿ ಅವರು ಅನುಭವವನ್ನು ಪಡೆದವರು. ೧೯೫೭ರಲ್ಲಿ ವಿಶಾಲ ಮೈಸೂರಿನ ರಚನೆಯಾದಾಗ, ಜತ್ತಿಯವರ ಕುರಿತು ಜನ ಹೆಚ್ಚೇನೂ ತಿಳಿದಿರಲಿಲ್ಲ.

ಆದರೆ ೧೯೫೮ರಲ್ಲಿ ಅವರ ಭಾಗ್ಯದ ಚಕ್ರ ತಿರುಗಿತು. ಮೈಸೂರಿನ ಗುಂಪು ರಾಜಕೀಯದ ಫಲವಾಗಿ ಆದರ ಮುಖ್ಯಮಂತ್ರಿ ಪದವಿ ಶ್ರೀ ಬಿ ಡಿ ಜತ್ತಿಯವರ ಪಾಲಿಗೆ ದೊರೆಯಿತು. ೧೯೫೮ರಿಂದ ಕಳೆದ ಮಹಾ ಚುನಾವಣೆಯ ತನಕ ಅವರು ರಾಜ್ಯಕ್ಕೊಂದು ಸುಭದ್ರವಾದ ಸರಕಾರವನ್ನು ಒದಗಿಸಿ ಕೊಟ್ಟರು. ೧೯೬೨ರ ಚುನಾವಣೆಯ ಬಳಿಕ ಅವರು, ಗುಂಪು ರಾಜಕೀಯದಲ್ಲಿ ಲೀನರಾಗದೆ, ಶ್ರೀ ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿ ಸೇರಿಕೊಂಡು, ದುಡಿಯುತ್ತಿರುವುದು ಅವರ ಹೃದಯವಂತಿಕೆಗೆ ನಿದರ್ಶನ.

ಶ್ರೀ ಜತ್ತಿಯವರು ಚತುರ ವಕೀಲರು, ಚತುರ ಆಡಳಿತದಾರರು. ಅವರು ಜನತೆಯ ಒಲವರಿತು ನಡೆಯುವ ಜನನಾಯಕರು. ಕಳೆದ ತಾ ೩ರಂದು ಅವರು ಧರ್ಮಸ್ಥಳದ ಸರ್ವಧರ್ಮ ಸಮ್ಮೇಳನವನ್ನು ಉದ್ಘಾಟಿಸುತ್ತಾ, ಜನಸಾಮಾನ್ಯರು ಸರ್ವಧರ್ಮಗಳ ತಿರುಳನ್ನು ಅರಿತು, ಅವುಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು, ಬಾಳುವೆಯನ್ನು ಬೆಳಗಿಸುವ ದಿಸೆಯಲ್ಲಿ, ಪಂಡಿತರು ಮತ್ತು ಧಾರ್ಮಿಕ ರಂಗದ ವ್ಯಕ್ತಿಗಳು ನೆರವಾಗಬೇಕೆಂದು ಹೇಳಿದರು. ಅವರ ಈ ಮಾತುಗಳು ಸರ್ವಧರ್ಮಗಳ ನೇತಾರರೂ ಮನನ ಮಾಡಿಕೊಳ್ಳುವಂತವುಗಳು. ಸರ್ವಧರ್ಮಗಳ ನೆಲೆವೀಡಾದ ಭಾರತದ ಜನ ಪರಮತ ಸಹಿಷ್ಣುಗಳೆನ್ನುವುದಕ್ಕೆ ಜತ್ತಿಯವರು ಉದ್ಘಾಟಿಸಿದ ಸರ್ವಧರ್ಮ ಸಮ್ಮೇಳನವೇ ಸಾಕ್ಷಿ.

ಸಚಿವ ಶ್ರೀ ಬಿ ಡಿ ಜತ್ತಿಯವರು ಶ್ರೀ ದಾಮೋದರ ಬಾಳಿಗರವರ "ಗೋವಿಂದ ಹರಿ ಗೋವಿಂದ" ಎಂಬ ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಗ್ರಂಥವನ್ನು ಉದ್ಘಾಟಿಸುತ್ತಿರುವುದು

ಶ್ರೀ ಡಿ. ರತ್ನವರ್ಮ ಹೆಗ್ಗಡೆ

ಧರ್ಮಕ್ಷೇತ್ರಗಳೆಂದರೆ "ಭಕ್ತರಿಂದ ಹಣ ಸುಲಿಯುವ ಸ್ಥಳಗಳು, ಅರ್ಚಕರೆಂದರೆ ಭಕ್ತರಿಂದ ಸಿಕ್ಕಿದ್ದನ್ನು ದಕ್ಕಿಸಿಕೊಳ್ಳುವವರು" ಎಂಬ ಭಾವನೆ ಹಲವು ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಿದವರಲ್ಲಿ ಕೆಲವರಿಗೆ ಮೂಡದಿರದು. ಆದರೆ ಈ ಮಾತಿಗೆ ಅಪವಾದವಾಗಿರುವ ಹಲವಾರು ಧರ್ಮ ಕ್ಷೇತ್ರಗಳೂ ಇಲ್ಲದಿಲ್ಲ. ಅವುಗಳಲ್ಲಿ ಹೊಸರೀತಿ ಹೇಳುವಂತಹ ಕ್ಷೇತ್ರವೆಂದರೆ ಶ್ರೀ ಧರ್ಮಸ್ಥಳ ಕ್ಷೇತ್ರ. ಹೆಸರೇ ಸೂಚಿಸುವಂತೆ ಇದು ಧರ್ಮವು ನೆಲೆನಿಂತ ಪುಣ್ಯ ಪಾವನ ಭೂಮಿ.

ಧರ್ಮಸ್ಥಳದ ಮಂಜುನಾಥನ ಕೀರ್ತಿ ಇಂದು ಭಾರತದಲ್ಲಿ ತುಂಬಾ ಹಬ್ಬಿದೆ. ಮಲೆನಾಡಿನ ಮಡಿಲಿನಲ್ಲಿರುವ ಈ ಪುಣ್ಯಕ್ಷೇತ್ರಕ್ಕೆ ದಿನಂಪ್ರತಿ ಎಂಬಂತೆ ಸಾವಿರಾರು ಯಾತ್ರಿಕರು ಬರುತ್ತಿರುತ್ತಾರೆ. ಹಲವು ಭಾಷೆಗಳ, ಹಲವು ಪ್ರದೇಶಗಳ, ಹಲವು ಮನೋಭಾವನೆಗಳ ಈ ಯಾತ್ರಿಕರಿಗೆ ಸಕಲ ಸೌಲಭ್ಯಗಳನ್ನು ಒದಗಿಸಿ, ಅವರ ಯಾತ್ರೆ ಸುಖಕರವಾಗುವಂತೆ ಮಾಡುವ ಎಲ್ಲಾ ಯತ್ನಗಳನ್ನು ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಮಾಡಲಾಗಿದೆ. ಧರ್ಮಸ್ಥಳವೊಂದು ಸ್ವಯಂ ಸಂಪೂರ್ಣ ಸ್ಥಳವಾಗಿದೆ.

ಧರ್ಮಸ್ಥಳದಲ್ಲಿ ಹಲವು ತೆರದ ಬದಲಾವಣೆ ಆಗಿ, ಅಲ್ಲಿ ಯಾತ್ರಿಕರು ನಿಶ್ಚಿಂತರಾಗಿ ಮಂಜುನಾಥನ ದರ್ಶನ ಪಡೆಯುವಂತೆ ಶ್ರಮಿಸಿದವರು ಶ್ರೀ ರತ್ನವರ್ಮ ಹೆಗ್ಗಡೆಯವರು. ಇವರು ಧರ್ಮಾಧಿಕಾರಿಯ ಪಟ್ಟ ವಹಿಸಿಕೊಂಡಂದಿನಿಂದ ಧರ್ಮಸ್ಥಳದಲ್ಲಿ ಮಹತ್ತರ ಪ್ರಗತಿ ಆಗತೊಡಗಿದೆ. ಶ್ರೀ ಹೆಗ್ಗಡೆಯವರ ನೇತೃತ್ವದಲ್ಲಿ ನಡೆಯುತ್ತಿರುವ ಸರ್ವಧರ್ಮ ಸಮ್ಮೇಳನ ಇದಕ್ಕೊಂದು ನಿದರ್ಶನ. ಜಗತ್ತಿನ ಎಲ್ಲಾ ಧರ್ಮಗಳ ಜನತೆಯೂ, ತಮ್ಮ ಧರ್ಮದ ತಿರುಳನ್ನರಿತು ಪರಸ್ಪರ ಭ್ರಾತೃಭಾವದಿಂದ ಬದುಕುವಂತೆ ಮಾಡುವಲ್ಲಿ ಇಂತಹ ಸರ್ವಧರ್ಮ ಸಮ್ಮೇಳನಗಳು ತುಂಬಾ ನೆರವಾಗುತ್ತವೆ.

ಶ್ರೀ ಹೆಗ್ಗಡೆಯವರು ಪ್ರಗತಿಶೀಲ ಮನೋಭಾವದವರು, ಆಡಳಿತದಲ್ಲಿ ನುರಿತವರು, ಶಾಸನ ಸಭಾ ಸದಸ್ಯರಾಗಿ ರಾಜಕೀಯದಲ್ಲಿಯೂ ಅನುಭವ ಗಳಿಸಿದವರು. ಅವರ ಕ್ರಿಯಾಶೀಲ ವ್ಯಕ್ತಿತ್ವದಿಂದ ಧರ್ಮಸ್ಥಳದ ಚಿತ್ರ ಇನ್ನೂ ಪ್ರಗತಿಯತ್ತ ಮುಂದರಿಯುವುದೆಂಬುದರಲ್ಲಿ ಅನುಮಾನ ಬೇಡ.

ಮಹಾಪುರುಷರ ಕಥೆಗಳು

(ಏಳನೇ ಪುಟದಿಂದ)

ಳಿಸಿ, ಜೀವಾವಧಿ ಸೆರೆಯಲ್ಲಿರಿಸಿದನು. 'ದುರಾಶೆಯ ಮುಂದೆ ಯಾರ ವಿಚಾರವೂ ಸಾಗದು' ಎಂಬುದಕ್ಕೆ ನಿದರ್ಶನವಿದು!

'ವಿಧಿ ವಿಲಾಸವನ್ನು ವರ್ಣಿಸುವುದೆಂತು? ಈ ಸಂದರ್ಭದಲ್ಲಿಯೇ ಮಹಮ್ಮದೀಯರ ಪಾಳೆಯೊದಗಿತು. ಶೂರನಾದ ರಾಜನು ಅದನ್ನು ಎಚ್ಚರದಿಂದ ಪ್ರತಿಭಟಿಸಿ ಗೆದ್ದನು, ಆದರೇನು? ಪುತ್ರಶೋಕದ ಉರಿಯು ಕೃಷ್ಣದೇವರಾಯನ ಹೃದಯವನ್ನು ಕುದಿಯಿಸಿತು, ಇವನಿಗೆ ಇಹಲೋಕದ ಸುಖದಲ್ಲಿ ವಿರಕ್ತಿಯನ್ನುಂಟು ಮಾಡಿತು. ಹೀಗೆ ಕಂಗೆಟ್ಟ ಕಾತರನಾದ ಅರಸನು ಇಬ್ಬರು ರಾಣಿಯರೊಂದಿಗೆ ತಿರುಪತಿಯಲ್ಲಿ ನೆಲೆನಿಂತು, ಭಗವದ್ಧ್ಯಾನದಲ್ಲಿಯೇ ತನ್ನ ಜೀವನ ಕಾಲವನ್ನು ಕಳೆದನೆಂದು ಹೇಳುವರು. ಅರಸನ ಅಂತ್ಯವು ದುರಂತವಾಯಿತು! ತಿರುಪತಿ ಕ್ಷೇತ್ರದಲ್ಲಿ ಕೃಷ್ಣದೇವರಾಯನ ಮತ್ತು ಇವನ ಪತ್ನಿಯರಿಬ್ಬರ ವಿಗ್ರಹಗಳಿವೆ!

ರಾಜಶಿರೋಮಣಿ ಕೃಷ್ಣದೇವರಾಯನ ಕೊನೆಯೊಂದಿಗೆ ಈ ಭವ್ಯ ನಗರದ ಕೊನೆಗಾಲವೂ ಸಮೀಪಿಸುತ್ತಿತ್ತು ಎನ್ನಬಹುದು. ಇವನ ಬಳಿಕ ಇವನ ತಮ್ಮ ಅಚ್ಯುತರಾಯನು ರಾಜ್ಯಭಾರವನ್ನು ವಹಿಸಿದನು (೧೫೩೦-೪೨). ಆಗಲೇ ರಾಜಕುಟುಂಬದಲ್ಲಿ ಮತ್ತು ರಾಜ್ಯವಲಯದಲ್ಲಿ ದ್ವೇಷದ ಕಿಡಿ ಹೊಗೆಯಾಡುತ್ತಿತ್ತು. ಅದು ಆ ಮೇಲಿನ ಸದಾಶಿವರಾಯನ ಆಳಿಕೆಯಲ್ಲಿ (೧೫೪೨--೬೭) ಹೆದಮಾರಿ ಉರಿಯಿತು. ಇತಿಹಾಸ ಪ್ರಸಿದ್ಧವಾದ ರಕ್ಕಸತಂಗಡಿಯ (ತಾಳಿಕೋಟೆಯ) ಕಾಳೆಗವು ೧೫೬೫ ಜನವರಿ ೨೩ರಂದು ಆರಂಭವಾಯಿತು. ವಿಜಾಪುರ, ಗೋವಳಕೊಂಡ, ಅಹಮ್ಮದನಗರ, ಬೀದರಗಳೆಂಬ ನಾಲ್ಕು ರಾಜ್ಯಗಳ ಬಾದಶಹರು ಒಂದಾಗಿ ಸೇರಿ ಈ ಯುದ್ಧದಲ್ಲಿ ಈ ಕನ್ನಡ ರಾಜನನ್ನು ಇದಿರಿಸಿದರು. ಈ ಪ್ರಚಂಡ ಕದನದಲ್ಲಿ, ಕೃಷ್ಣದೇವರಾಯನ ಅಳಿಯ ರಾಮರಾಯನು ತೊಂಭತ್ತಾರು ವರ್ಷ ವಯಸ್ಸಿನ ಮುದುಕನಾಗಿದ್ದರೂ, ಹಿಂಜರಿಯದೆ, ಮೂವತ್ತು ವರುಷದ ತರುಣನಂತೆ ಅನುಪಮವಾದ ಪರಾಕ್ರಮದಿಂದ ಪ್ರತಿಭಟಿಸಿದ್ದನು. ದೈವಗತಿಯನ್ನು ಮೀರುವವರಾರು ಶತ್ರು ಸೈನ್ಯದಿಂದ ವಿಜಯನಗರದ ಸೈನ್ಯವೂ, ರಾಮರಾಯನೂ ಹತರಾದರು! ವಿಜಯೋನ್ಮತ್ತರಾದ ಶತ್ರುಗಳು ಹಲದಿನಗಳ ವರೆಗೆ ಯಥೇಚ್ಛವಾಗಿ ಕೂರಿ ಸುಲಿಗೆಗಳನ್ನು ನಡೆಯಿಸಿ, ನಂದನವನದಂತಿದ್ದ ವಿಜಯನಗರವನ್ನು ಸ್ಮಶಾನ ಸದೃಶ ಭೂಮಿಯನ್ನಾಗಿ ಮಾಡಿದರು. ಒಂದು ರಾಜ್ಯವನ್ನು ಕಟ್ಟಲಿಕ್ಕೆ ಹತ್ತಾರು ವರ್ಷಗಳು ಬೇಕಾದಾವು, ಅದನ್ನು ಉರುಳಿಸಲು ಹತ್ತಾರು ದಿನಗಳೇ ಸಾಕು. "ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ"ವೆನ್ನುವರಲ್ಲವೇ? ಅಂದು ಅಳಿದುಳಿದ ಹಾಳು ಹಂಪೆಯಲ್ಲಿ—ವಿಜಯನಗರದ ವೈಭವದ ಕುರುಹುಗಳು ಕೆಲವೇನೋ ಈಗಲೂ ಇವೆ. ಆ ಬೀಳು ಕೊಂಪೆಯನ್ನು ನೋಡುವ ಕನ್ನಡಿಗರ ಕಣ್ಮನಗಳು ಖೇದವನ್ನು ಪಡೆಯುತ್ತವೆ, ಕರುಳು ಕತ್ತರಿಸಿದಂತಾಗುತ್ತದೆ! (ಆ 'ವಿದ್ಯಾನಗರಿ'ಯ ಮಾದರಿಯಲ್ಲಿಯೇ ಮೈಸೂರು ರಾಜವಂಶವು ನಡೆಯಿಸಿಕೊಂಡು ಬರುವ ವೈಭವದ 'ದಸರಾ ಮಹೋತ್ಸವ ಸಮಾರಂಭ'ವು ತುಸ ಸಂತಸವನ್ನುಂಟು ಮಾಡುತ್ತದೆಯೆನ್ನಬಹುದು.)

ಕೃಷ್ಣದೇವರಾಯನ ರಾಜ್ಯಭಾರದ ಕಾಲದ ವಿಶೇಷಗಳನ್ನು ಹೇಳದಿದ್ದರೆ ಈ ಪರಿಚಯ ಪೂರ್ಣವಾಗದು. ಆ ಕಾಲವೆಂದರೆ, ವಿದ್ವಜ್ಜನರ ಸಂತೋಷದ ಸಮಯವು. ಇವನು ಅನೇಕ ವಿದ್ವಾಂಸರಿಗೆ ಆಶ್ರಯದಾತನಾಗಿದ್ದನು. ಆ ಕಾಲದಲ್ಲಿ ಸಂಸ್ಕೃತ, ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಹಲಮಂದಿ ಗ್ರಂಥಗಳನ್ನು ಬರೆದಿದ್ದರು; ಜೈನ, ಬ್ರಾಹ್ಮಣ, ವೀರಶೈವ ಕವಿಗಳಿದ್ದರು. ಅದು ಮಾತ್ರವಲ್ಲ, ಸ್ವಯಂ ರಾಜನೇ ವಿದ್ವಾಂಸನಾಗಿದ್ದನು, ಇವನು ಸ್ವತಃ ಅಯ್ದು ಕೃತಿಗಳನ್ನು ರಚಿಸಿದ್ದನು. ಅವುಗಳಲ್ಲೊಂದಾದ ತೆಲುಗು ಭಾಷೆಯ "ಆಮುಕ್ತ ಮಾಲ್ಯದ' ಎಂಬ ಕಾವ್ಯವು ಉಲ್ಲೇಖನೀಯವಾಗಿದೆ (ಇದರಿಂದಾಗಿ 'ಇವನ ಮಾತೃಭಾಷೆ ತೆಲುಗು' ಎಂದು ಕೆಲವರ ಹೇಳಿಕೆ, ಪರಂತು, ಅದೇ ಕಾವ್ಯದಲ್ಲಿ 'ಕನ್ನಡರಾಯ'ನೆಂದು ಹೇಳಿದೆಯಲ್ಲದೆ, ಶಿಲಾಶಾಸನಗಳಲ್ಲಿ ಈತನನ್ನು 'ಕನ್ನಡ ರಾಜ್ಯ ರಮಾರಮಣ'ನೆಂದೂ ಹೊಗಳಿದೆ, ಸಂಸ್ಕೃತ ಕನ್ನಡ ಭಾಷೆಗಳಲ್ಲೂ ಇವನು ಬರೆದ ಗ್ರಂಥಗಳಿವೆ, ಇವನು 'ತುಳುವ ವಂಶ'ದವನೆಂದು ಪ್ರಸಿದ್ಧಿ ಇದೆ. ಇವುಗಳಿಂದ ಇವನ 'ತಾಯ್ನುಡಿ ಕನ್ನಡ'ವೆಂದು ತಿಳಿಯುವುದೇ ಸೂಕ್ತವಾಗಿದೆ).

ಕೃಷ್ಣದೇವರಾಯನು ಎಲ್ಲಾ ಮತದವರನ್ನೂ ಏಕಪ್ರಕಾರವಾಗಿ ಗೌರವಿಸುತ್ತಿದ್ದನೆಂಬುದು ಶ್ಲಾಘ್ಯವಾದ ವಿಷಯವಾಗಿದೆ. "ಹಿಂದೂರಾಯ ಸುರತ್ರಾಣ" ನಾದ ಇವನು ತನ್ನ ಸಿಂಹಾಸನದ ಮುಂಭಾಗದಲ್ಲಿ "ಕುರಾನ್" ಗ್ರಂಥವನ್ನು ಇರಿಸಿದ್ದನು, ಮಹಮ್ಮದೀಯರು ಅದಕ್ಕೆ ತಲೆ ಬಾಗಿದರೆ ಸಾಕೆಂದು ಸಾರಿದನು. ಶೃಂಗೇರಿಯ ಜಗದ್ಗುರುಗಳನ್ನು ಆಗಾಗ ಸಂದರ್ಶಿಸಿ ಸಂಭಾವಿಸುತ್ತಿದ್ದನು, ವಿಶಿಷ್ಟಾದ್ವೈತದ ಸ್ವಾಮಿಯವರನ್ನು ಆದರಿಸುತ್ತಿದ್ದನು, ಮಾಧ್ವಗುರುಗಳಾದ ಶ್ರೀ ವ್ಯಾಸರಾಯರು ಮಹಾರಾಜನ ಪ್ರಾಣಪ್ರಿಯರಾಗಿದ್ದರು. ಒಮ್ಮೆ ಈ ರಾಜನ ಪರವಾಗಿ ರಾಜ್ಯವನ್ನು ನಿರ್ವಹಿಸಿದ್ದರು. ಇವನು ಜೈನ ಗುರುಗಳಿಗೂ ದತ್ತಿ ಬಿಟ್ಟಿದ್ದಾನೆಂದು ತಿಳಿಯಬರುವುದು. ರಾಜ್ಯಕ್ಕೆ ಆಗಾಗ ವಿದೇಶೀಯರೂ ಬಂದು ಹೋಗುತ್ತಿದ್ದರು. ಹೀಗೆ ಮಹಾರಾಜನು ಸಕಲಜನ ಪಕ್ಷಪಾತಿಯೂದ ಮಹಾನುಭಾವನಾಗಿದ್ದನು.

ಕೃಷ್ಣದೇವರಾಯನ ಧರ್ಮಶ್ರದ್ಧೆಯು ಅತಿಶಯವಾದುದು. ಇವನ ಆಳಿಕೆಯಲ್ಲಿ ಹಲವು ದೇವಳಗಳಿಗೆ ದತ್ತಿಗಳು ಕೊಡಲ್ಪಟ್ಟವೆ. ಅನೇಕ ದೇವಳಗಳನ್ನೂ, ಕೆರೆ ಗೋಪುರ ದಿಬ್ಬಗಳನ್ನು ಇವನು ಕಟ್ಟಿಸಿದ್ದನು. ಇದರಿಂದಾಗಿ ವಾಸ್ತು ಶಿಲ್ಪ, ಚಿತ್ರ ಕಲೆ, ಧಾರ್ಮಿಕ ವಿಚಾರಗಳನ್ನು ಜನತೆಯಲ್ಲಿ ಬಿತ್ತರಿಸಿದನು. ಪುರಂದರಾದಿ ಸಾಧುಸಂತರ ದಿವ್ಯವಾಣಿಯು ಈತನ ಕಾಲದಲ್ಲಿಯೇ ಅಖಂಡವಾಗಿ ಹರಿಯತೊಡಗಿದುದು. ಹೀಗೆ ವಿಧವಿಧವಾಗಿ ಜನಾಂಗದ ಸಂಸ್ಕೃತಿಯ ಪ್ರಸಾರಣೆಯನೆಸಗಿದ ಈ ರಾಜಶಿರೋಮಣಿಯ ಆಳಿಕೆಯು ಸರ್ವತೋಮಾನ್ಯವಾಗಿ ಅತ್ಯಂತ ಘನತೆಯಿಂದ ಮೆರೆದಿದ್ದಿತು.

ಪೇಯಸನೆಂಬ ವಿದೇಶೀಯ ಪ್ರವಾಸಿಯೊಬ್ಬನು ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಬಂದಿದ್ದನು(೧೫೨೦) ಆವನು ಈ ರಾಜಧಾನಿಯನ್ನು ಪ್ರತ್ಯಕ್ಷವಾಗಿ ಪರಿಕಿಸಿ ಬರೆದಿಟ್ಟ ವಿವರಣೆಯಿಂದ ಸಾಮ್ರಾಜ್ಯದ ವೈಭವವು ಸುವ್ಯಕ್ತವಾಗುತ್ತಿದೆ. ಆವನ ಮಾತುಗಳಲ್ಲಿ ಕೆಲವನ್ನು ಇಲ್ಲಿ ಉದ್ಧರಿಸುತ್ತೇವೆ:

"ಈ ಪಟ್ಟಣವನ್ನು ನಾನು ಏನೆಂದು ಬಣ್ಣಿಸಲಿ? ಒಮ್ಮೆಯೇ ಇಡೀ ಪಟ್ಟಣವನ್ನು ಕಂಡರಷ್ಟೇ ಇದನ್ನು ನಾನು ಚೆನ್ನಾಗಿ ಬಣ್ಣಿಸಬಹುದು. ಆದರೂ ನಾನು ಒಂದು ಗುಡ್ಡವನ್ನೇರಿ ನೋಡಿದೆನು. ಆಗ ನನ್ನ ಕಣ್ಣಿಗೆ ಬಿದ್ದ ಭಾಗವಷ್ಟೇ ರೋಮ್ ಪಟ್ಟಣದಷ್ಟು ವಿಶಾಲವೂ ಅತ್ಯಂತ ಮನೋಹರವೂ ಆಗಿದೆ. ಅಲ್ಲಿ ನಿಬಿಡವಾದ ಗಿಡಮರಗಳ ಸಾಲುಗಳು ಅಂದವಾಗಿ ಕಂಡವು. ಅಲ್ಲಲ್ಲಿ ಜಲಭರಿತಗಳಾದ ಅನೇಕ ಸರೋವರಗಳು ಕಂಗೊಳಿಸುತ್ತವೆ. ಅರಮನೆಯ ಸಮೀಪದಲ್ಲಿಯೇ ತೆಂಗಿನ ತೋಟಗಳೂ, ಫಲಪುಷ್ಪಭರಿತಗಳಾದ ವನಗಳೂ ತುಂಬಿಕೊಂಡಿವೆ. ನಡುನಡುವೆ ಸ್ವಚ್ಛವಾಗಿ ಹರಿಯುವ ಝರಿಗಳಿಂದಲೂ, ಹಚ್ಚಗೆ ಹಸುರಾಗಿರುವ ಬಗೆ ಬಗೆಯ ಬಳ್ಳಿಗಳಿಂದಲೂ, ಲಿಂಬೆ, ದ್ರಾಕ್ಷೆ, ಕಿತ್ತಳೆ ಅಂಜೂರ ಮೊದಲಾದ ಫಲವೃಕ್ಷಗಳಿಂದಲೂ ನಗರವಿದು ಶೋಭಾಯಮಾನವಾಗಿದೆ.

ಇನ್ನೀ ಪಟ್ಟಣದ ಜನಸಂಖ್ಯೆಯು ಅಪರಿಮಿತವಾಗಿದೆ. ಮಾರ್ಗಗಳ ಇಕ್ಕಡೆಗಳಲ್ಲೂ ವರ್ತಕರು ಮತ್ತು ರತ್ನ ಹವಳ ಮತ್ತು ವಜ್ರಗಳ ವ್ಯಾಪಾರವನ್ನು ಮಿತಿ ಮೀರಿ ಮಾಡುತ್ತಾರೆ. ಪ್ರತಿ ಶುಕ್ರವಾರಕ್ಕೊಮ್ಮೆ ದೊಡ್ಡ ಸಂತೆ ನೆರೆಯುತ್ತದೆ. ಆದರೆ ಪ್ರತಿ ದಿನವೂ ಬೇರೆಬೇರೆ ಬೀದಿಗಳಲ್ಲಿ ಸಂತೆಗಳು ಕೂಡಿಯೇ ಕೂಡುತ್ತವೆ. ಈ ಪಟ್ಟಣದಲ್ಲಿ ಇಂತಹ ಪದಾರ್ಥವು ಸಿಕ್ಕದುದು ಎಂಬುದಿಲ್ಲವೇ ಇಲ್ಲ. ಹಣ್ಣು ಹಂಪಲು ಕಾಯಿಪಲ್ಲೆಗಳ ರಾಶಿಯನ್ನು ನೋಡಿದರೆ ಕಣ್ಣು ತಿರುಗುತ್ತದೆ. ಅಂಗಡಿ, ಮಳಿಗೆ ಮೊದಲಾದ ಕಟ್ಟಡಗಳಲ್ಲದೆ, ಕೇವಲ ಜನರು ವಾಸಿಸುವ ಮನೆಗಳೇ ಈ ಪಟ್ಟಣದಲ್ಲಿ ಒಂದು ಲಕ್ಷ ಇವೆ. ಈ ರಾಯನು ಇಪ್ಪತ್ತು ಲಕ್ಷ ಸೈನ್ಯವನ್ನು ಕೂಡಿಸಬಲ್ಲನು. ಇವನ ಸೈನಿಕರನ್ನು ನಾನು ನೋಡಿದೆನು. ಆ ಸೈನಿಕರಲ್ಲಿ ಹೇಡಿಯೊಬ್ಬನೂ ನನಗೆ ಕಾಣಿಸಲಿಲ್ಲ" (ಶ್ರೀ ವಿದ್ಯಾರಣ್ಯ ಸ್ವಾಮಿಗಳು – ವಾಗ್ಭೂಷಣ ಗ್ರಂಥಮಾಲೆ).

ಮಾನವ ಪ್ರಪಂಚದ ಇತಿಹಾಸದಲ್ಲಿ ವಿಜಯನಗರದ ಕೃಷ್ಣದೇವರಾಯನ ಚರಿತ್ರೆ ಮರೆಯಲಾಗದೆಂದು ಇನ್ನೊಮ್ಮೆ ಹೇಳಬಹುದು. ಇವನ ಹೊಗಳಿಕೆಯ ಪದ್ಯವೊಂದು ಬರೆದು ಈ ಬರಹ ನಿಲ್ಲಿಸುವೆವು: "ಆಲೋಕನಾ ಮಹಾರಾಜ ಜಯಜೀವೇತಿ ವಾದಿಭಿಃ | ಅಂಗ ವಂಗ ಕಲಿಂಗಾದ್ಯೈ ರಾಜಭಿಃ ಸೇವ್ಯತೇ ಚ ಯಃ||." ಇತ್ಯಲಮ್!

ಉಡುಪಿ ಲಯನ್ಸ್ ಕ್ಲಬ್ಬಿನ ಉದಾರ ದಾನ

ಉಡುಪಿ ಲಯನ್ಸ್ ಕ್ಲಬ್ಬಿನವರು ಉಡುಪಿ ಆಯುರ್ವೇದ ಕಾಲೇಜಿನ ಧರ್ಮಾಸ್ಪತ್ರೆಗೆ ನೀಡಿರುವ ಆರು ಮಂಚ ಮತ್ತು ಒಂದು ಕಪಾಟಿನ ದಾನದ ಸಮಾರಂಭವು ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ವಿ. ಎಂ. ಇನಾಂದಾರರ ಅಧ್ಯಕ್ಷತೆಯಲ್ಲಿ ತಾ. 26-11-64ರಂದು ಜರಗಿತು.

ಕ್ಲಬ್ಬಿನ ಅಧ್ಯಕ್ಷ ಶ್ರೀ ಕೆ. ಎಸ್. ಕಾಮತರು ಸ್ವಾಗತಿಸಿ ಕ್ಲಬ್ಬು ಈ ವರೆಗೆ ಬೇರೆ ಬೇರೆ ವಿಷಯಗಳಿಗಾಗಿ ನೀಡಿರುವ ಸಹಕಾರವನ್ನು ವಿವರಿಸಿದರು.

ಶ್ರೀ ವಿ. ಎಂ. ಇನಾಂದಾರರು ಕ್ಲಬ್ಬು ಸಾರ್ವಜನಿಕ ಸಂಕಷ್ಟದಲ್ಲಿ ಈ ರೀತಿಯ ಉದಾರತೆಯ ಮೂಲಕ ನೆರವಾಗುತ್ತಿರುವುದಕ್ಕೆ ಅಭಿನಂದನೆ ಸಲ್ಲಿಸಿದರು.

ಆಯುರ್ವೇದ ಕಾಲೇಜಿನ ಪರವಾಗಿ ಶ್ರೀ ಬೈಲೂರು ವಾಸುದೇವ ರಾಯರು ಕ್ಲಬ್ಬಿನ ಈ ದಾನವನ್ನು ಸ್ವೀಕರಿಸಿ ಕೃತಜ್ಞತೆ ಸಮರ್ಪಿಸಿದರು. ಆಯುರ್ವೇದ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ವಿಜಯೇಂದ್ರ ಮೂರ್ತಿಯವರು ಸಭಿಕರ ಪರವಾಗಿ ಮಾತನಾಡಿದರು. ಶ್ರೀ ಯು. ಕೆ. ಶಿಣೈಯವರು ಕ್ಲಬ್ಬಿನ ವಿವಿಧ ಕಾರ್ಯಕ್ರಮಗಳನ್ನು ವಿವರಿಸಿದರು, ಶ್ರೀ ಎಸ್. ವಿ. ಕಾಮತರು ಧನ್ಯವಾದ ಸಮರ್ಪಿಸಿದರು. ರಾತ್ರಿ ಪಿ. ಸುಂದರ ನಾಯಕರು ಭೋಜನ ಕೂಟವನ್ನೇರ್ಪಡಿಸಿದ್ದರು.

ಉದಯ ಕ್ಲಿನಿಕ್

ಪಣಂಬೂರು, ಡಾ|| ಎನ್. ಎಸ್. ಶೆಟ್ಟರ ಉದಯ ಕ್ಲಿನಿಕಿನ ಪ್ರಾರಂಭೋತ್ಸವವನ್ನು ಡಾ||ಎಂ. ವಿ ಚಾರಿಯವರು 17-11-64ರಂದು ಎಡ್ವೋಕೇಟ್ ಶ್ರೀ. ಸಿ. ವಿ. ಐತಾಳರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಡಾ|| ಚಾರಿಯವರು ವೈದ್ಯವೃತ್ತಿಯ ಮಹತ್ವವನ್ನು ವಿವರಿಸಿ ಡಾ|| ಎನ್. ಎಸ್. ಶೆಟ್ಟರಿಗೆ ತಮ್ಮ ಉದ್ಯಮದಲ್ಲಿ ಜಯವಾಗಲೆಂದರು.

ಉಡ್ಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ.

O. S. No. 36/63. R. E. P.23/64.

ಮಾರ್ಕ ಶೀನಪ್ಪ ಸೆಟ್ಟಿ-ಅರ್ಜಿದಾರ.
ಮತ್ತು
ಮಹಾಬಲ ಸೆಟ್ಟಿ ಕೊಡಾ- ಎದ್ರಿರು.
ಇವರೊಳಗೆ.

2. ಸೀತಸೆಡ್ತಿ—ಕಾವೇರಿಸೆಡ್ತಿರ ಮಗಳು. 3. ಪದ್ಮಾವತಿ ಸೆಡ್ತಿ—ಪುಟ್ಟಮ್ಮ ಸೆಡ್ತಿ ಮಗಳು. 4. ರಾಮಕೃಷ್ಣ ಸೆಟ್ಟಿ— ಸೀತಸೆಡ್ತಿರ ಮಗ ಉಡ್ಪಿ ತಾಲ್ಲೂಕು ಬೆಳ್ಳೆಗ್ರಾಮದ ಶಂಕರಬೆಟ್ಟಿನಲ್ಲಿರುವವರು. 2, 3 ಮತ್ತು 4 ನೇ ಎದ್ರಿರಿಗೆ ತಿಳಿಯಪಡಿಸುವದೇನೆಂದರೆ:

ಮೇಲಿನ ಅಮಲ್ ಜಾರಿಯಲ್ಲಿ ದಾಕಲದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ ಸದ್ರಿ ಅಮಲ್ ಜಾರಿಯನ್ನು ತಾ. 6. 1. 65ಕ್ಕೆಯಿಟ್ಟಿರುತ್ತದೆ ಎಂತ ಈ ಮೂಲಕ ತಿಳಿಸಿರುತ್ತದೆ.

By order of the Court

Y. C. S. Hegde
Advocate for Petitioner.

ತಾ. 4-12-64 ಉಡ್ಪಿ

ಹೆಣ್ಣು ಹೆತ್ತವರಿಗೊಂದು ಕಿವಿಮಾತು

ಹೆಮ್ಮಕ್ಕಳಿಗೆ ಉಚ್ಚ ಶಿಕ್ಷಣ ಬೇಕು

ಬರೆದವರು:— ಶ್ರೀ ಯೇತಡ್ಕ ನಾರಾಯಣರಾವ್.

ಸ್ತ್ರೀಯರಿಗೆ ಉಚ್ಚ ಮಟ್ಟದ ಶಿಕ್ಷಣವು ಅನಗತ್ಯವೆಂದು ಕೆಲವರ ಅಭಿಪ್ರಾಯವಿದೆ. ಆದರೆ ಮಹಿಳೆಯರಿಗೂ ಪುರುಷರಂತೆಯೇ ಉಚ್ಚ ಮಟ್ಟದ ವಿದ್ಯಾಭ್ಯಾಸವು ಆಗತ್ಯವಿದೆ. ಹುಡುಗಿಯರು, ಹೈಸ್ಕೂಲು, ಕಾಲೇಜುಗಳಿಗೆ ಹೋಗಿ ಕಲಿತರೆ ಹುಡುಗರ ಜೊತೆಯಲ್ಲಿ ಕೆಟ್ಟ ದಾರಿಗೆ ಇಳಿಯುತ್ತಾರೆ ಎಂಬ ಭಾವನೆಯಿಂದ ಕೆಲವರು ವಿದ್ಯಾಭ್ಯಾಸವನ್ನು ಅರ್ಧದಿಂದಲೇ ಬಿಡಿಸುತ್ತಾರೆ. ವಿದ್ಯಾವತಿಯರಾಗಿ ಹುಡುಗಿಯರು ಕೆಡುತ್ತಾರೆ ಎಂಬ ಭಾವನೆಯು ಅರ್ಥವಿಲ್ಲದ್ದಾಗಿದೆ. ಹುಡುಗರೂ, ಕೆಟ್ಟ ದಾರಿಗೆ ಒಲಿಯಲಾಗುವುದಿಲ್ಲವೇ? ಗಂಡು ಹುಡುಗನಾಗಿ ಹುಟ್ಟಿದವನು ಯಾವ ಕೆಲಸವನ್ನು ಮಾಡಬಹುದು, ಎಂತಹ ಕೆಟ್ಟ ಕೆಲಸಗಳನ್ನೂ, ಪಾಪ ಕಾರ್ಯಗಳನ್ನೂ ಮಾಡಿದರೂ ಅದಕ್ಕೆ ಕ್ಷಮೆ ಇದ್ದೇ ಇದೆ. ಸ್ತ್ರೀಯಾಗಿ ಹುಟ್ಟಿದವಳು ಪರ ಪುರುಷರೊಡನೆ ಮಾತನಾಡಿದ ಮಾತ್ರಕ್ಕೆ ಅಪಾರ್ಥ ಕಲ್ಪಿಸುತ್ತಾರೆ. ಸ್ತ್ರೀಯಾಗಿ ಹುಟ್ಟಿದ್ದು ಆಕೆಯ ತಪ್ಪೆ? ಅಲ್ಲ ಹುಟ್ಟಿಸಿದ ಬ್ರಹ್ಮನ ತಪ್ಪೇ? ಇದು ಅಂಧಕಾರ ತುಂಬಿದ ಸಮಾಜದ ತಪ್ಪು. ಉದಾಹರಣೆಗೆ ಅವಿದ್ಯಾವತಿಯಾದ ಒಬ್ಬ ಬಾಲಿಕೆಯನ್ನು ಹದಿನೈದು ವರ್ಷ ತುಂಬಿದ ಕೂಡಲೇ ವಿಧಿವತ್ತಾಗಿ ಮದುವೆ ಮಾಡಿ ಗಂಡನ ಮನೆಗೆ ಕಳುಹಿಸುತ್ತಾರೆ. ಯಮನ ಪಾಶವನ್ನು ತಪ್ಪಿಸಲು ಯಾರಿಂದಲೂ ಅಸಾಧ್ಯ, ಆದುದರಿಂದ ಮದುವೆಯಾಗಿ ಆರು ತಿಂಗಳು ಕಳೆಯುವುದರೊಳಗೆ ಗಂಡನು ಪರಲೋಕ ವಾಸಿಯಾದರೆ ಆ ಬಾಲಿಕೆಯ ಅವಸ್ಥೆಯೇನು? ಮರು ಮದುವೆ ಮಾಡಿ ಕೊಡೋಣವೆಂದರೆ ಸಮಾಜ ಅಡ್ಡಿ ಬರುತ್ತದೆ. ಇದನ್ನು ಎದುರಿಸುವ ಎದೆಗಾರಿಕೆಯು ಇಂದು ಸಮಾಜಕ್ಕಿಲ್ಲ. ಆ ಬಾಲಿಕೆಯು ಕಣ್ಣೀರಿನ ಕಡಲನ್ನು ಹರಿಸಿ ಕಾಲ ಕಳೆಯಬೇಕಾಗುತ್ತದೆ. ಅಂತಹ ಬಾಲಿಕೆಯರನ್ನು ಸಮಾಜವು ಕಂಡು ಕೈ ಕಟ್ಟಿ ನೆಗಾಡುವುದಲ್ಲದೆ ಸಮಾಜದ ಕಟ್ಟುಕಟ್ಟಳೆಗಳನ್ನು ಎದುರಿಸಿ ಆಕೆಗೆ ಬಾಳಿಗೊಂದು ದಾರಿ ತೋರಿಸಬೇಕೆಂದು ಮುನ್ನಡುವ ಧೈರ್ಯವಂತರು ಯಾರೂ ಇಲ್ಲ. ಎಲ್ಲಿಯಾದರೂ ಒಬ್ಬಿಬ್ಬರು ಧೈರ್ಯವಾಗಿ ಸಮಾಜವನ್ನು ಎದುರಿಸಿದರೆಂದರೆ ತೀರಿತು, ಅಂತವರಿಗೆ ಬಹಿಷ್ಕಾರ. ಇದು ನ್ಯಾಯವೇ?

ಕೆಟ್ಟ ದಾರಿಗೆ ಇಳಿಯುವವನು ಗಂಡನಾಗಿರಲೀ, ಹೆಣ್ಣಾಗಿರಲೀ ವಿದ್ಯಾವಂತನಾದುದರಿಂದ ಎಂದು ಭಾವಿಸುವುದು ತಪ್ಪು. ವಿದ್ಯೆ ಕಲಿತು ಸ್ತ್ರೀಯರಾಗಲೀ—ಪುರುಷರಾಗಲೀ ಖಂಡಿತಕ್ಕೂ ಕೆಡಲಾರರು.

ಸ್ತ್ರೀಯರಿಗೆ ವಿದ್ಯೆ ಇದ್ದರೆ ಮನೆಯಲ್ಲಿ ದಿನನಿತ್ಯ ಬರುವ ಸಣ್ಣ—ಸಣ್ಣ ಮಾತುಗಳಿಗೂ ಅಪಾರ್ಥ ಕಲ್ಪಿಸಿ ಜಗಳವಾಡುವುದು ಕಡಿಮೆ. ಸಾಧ್ಯವಿದ್ದಷ್ಟು ತಾಳ್ಮೆಯಿಂದ ಒಂದೇ ಮನೆಯಲ್ಲಿ ಜೀವನಸಾಗಿಸುತ್ತಾ ಮನೆಯಲ್ಲಿ ಪ್ರೀತಿಯುಂಟಾಗುವಂತೆ ಇಲ್ಲರ ಮನಸ್ಸಿಗೂ ನೋವಾಗದಂತೆ ನೆರೆಯವರಿಗೆ ಪ್ರೀತಿಪಾತ್ರಳಾಗಿ ಸಂತೋಷದಿಂದ ದಿನಕಳೆಯಲು ಅವಿದ್ಯಾವತಿ ಸ್ತ್ರೀಗೆ ವಿದ್ಯಾವತಿಯರಷ್ಟು ಸಾಧ್ಯವಿಲ್ಲವೆಂಬುದು ಖಂಡಿತ. ಸ್ತ್ರೀಯರಿಗೆ ವಿದ್ಯಾಭ್ಯಾಸವಿರುವುದರಿಂದ ಮನೆಯಲ್ಲಿನ ಮಕ್ಕಳ ವಿದ್ಯಾಭ್ಯಾಸದ ಮಟ್ಟ—ಮತ್ತು ಮಕ್ಕಳನ್ನು ಸನ್ಮಾರ್ಗದಲ್ಲಿ ನಡೆಸಲು ಉತ್ತಮ ಗುಣನಡತೆಯವರನ್ನಾಗಿ ತಿದ್ದಲು ತುಂಬಾ ಸಹಾಯವಾಗುತ್ತದೆ. ಬಡ ಕುಟುಂಬದವರಾಗಿದ್ದು ಮನೆಯಲ್ಲಿ ತುಂಬಾ ಜನರಿದ್ದರೆ. ಜೀವನ ಸಾಗಿಸಲು ತುಂಬಾ ಕಷ್ಟದ ಪರಿಸ್ಥಿತಿಯಾಗುತ್ತದೆ. ಇಂತಹ ಸಂದರ್ಭದಲ್ಲಿ ಸ್ತ್ರೀಯರಿಗೆ ವಿದ್ಯೆಯಿದ್ದರೆ ಯಾವುದೇ ಸಂಸ್ಥೆಯಲ್ಲಾಗಲೀ— ಕಂಪೆನಿಯಲ್ಲಾಗಲೀ ದುಡಿದು ವರಮಾನದಿಂದ ಜೀವನ ಸಾಗಿಸಲು ಸಹಾಯವಾಗುತ್ತದೆ. ಈ ಬಗ್ಗೆ ಹೆಚ್ಚಿನ ಗಂಡುಹುಡುಗರು ವಿದ್ಯಾವಂತರಾಗಿ ಪಟ್ಟಣದಲ್ಲಿ ಜೀವನ ನಡೆಸಲು ಹೋದರು ಅವರ ಹೆಚ್ಚು ಪಟ್ಟಣದಲ್ಲಿ ವಾಸಿಸಲು ಸ್ತ್ರೀಯರಿಗೆ ವಿದ್ಯಾಭ್ಯಾಸವಿರುವುದು ಉತ್ತಮ, ಆ ಕಾರಣ ವಿದ್ಯಾವಂತರಾದ ಹುಡುಗರು, ವಿದ್ಯಾವತಿಯಾದ ಹುಡುಗಿಯನ್ನೇ ಬಯಸುತ್ತಿರುವುದು ಸಹಜ. ಯಾವ ತರದ ಕಷ್ಟನಷ್ಟಗಳ ಪರಿಸ್ಥಿತಿ ಒಂದರೂ ತಾನು ಕಲಿತ ವಿದ್ಯೆಯ ಬಲದಿಂದ ವರಮಾನದಿಂದ ಸ್ತ್ರೀಯಾಗಿ ಜೀವಿಸಲು ವಿದ್ಯಾವತಿಗೆ ಸಾಧ್ಯವಿದೆ.

ಆದುದರಿಂದ ಯಾವುದೇ ದೃಷ್ಟಿಯಿಂದ ನೋಡಿದರೂ ಸ್ತ್ರೀಯರಿಗೂ ಪುರುಷರಂತೆ ಉಚ್ಚ ಮಟ್ಟದ ವಿದ್ಯಾಭ್ಯಾಸವಿರುವುದು ಅತಿ ಆಗತ್ಯ. ಸ್ತ್ರೀಯರಿಗೆ ವಿದ್ಯೆ ಅನಗತ್ಯವೆನ್ನುವ ಮಹನೀಯರು ಈ ಎಲ್ಲಾ ವಿಷಯಗಳನ್ನು ಆಳವಾಗಿ ವಿಮರ್ಶಿಸಿ ಮಹಿಳೆಯರಿಗೆ ಉಚ್ಚ ಮಟ್ಟದ ವಿದ್ಯಾಭ್ಯಾಸ ಅನಗತ್ಯವೋ? ಆಗತ್ಯವೋ? ಎಂದು ತಿಳಿದು ಕೊಳ್ಳುವುದು ಉತ್ತಮ. ಪ್ರತಿಯೊಬ್ಬ ಹೆಣ್ಣು ಹೆತ್ತವರೂ ಎಲ್ಲ ವಿಷಯಗಳನ್ನು ವಿಮರ್ಶೆ ಮಾಡಿ ಪ್ರತಿಯೊಬ್ಬ ಸ್ತ್ರೀಯರೂ ಹುಡುಗರಂತೆ ವಿದ್ಯಾಭ್ಯಾಸಕ್ಕೆ ಎಡೆಕೊಡುವುದು ಅತೀ ಅಗತ್ಯ.

ಸೋವಿಯತ್ ಕಂಡಂತೆ ಛತ್ರಪತಿ ಶಿವಾಜಿ

(ಆರನೇ ಪುಟದಿಂದ)

ಮರಾಠಾ ಜನರ ನಾಯಕ ಶಿವಾಜಿಯಾಗಿದ್ದರೆಂದು ಹೀಗೆ ಚಿತ್ರಿಸುವ ಐ. ರೆಯಿಸ್ನರ್ ಶಿವಾಜಿ ನಾಯಕತ್ವ ವಹಿಸಿದ್ದ ಈ ಜನತಾ ಚಳವಳಿಯ ಮೂಲ ಶಕ್ತಿಯು ಮರಾಠಾ ರೈತಾಪಿ ವರ್ಗವಾಗಿತ್ತೆಂದು ತೋರಿಸುತ್ತಾರೆ ಇವರೇ ಈ ಸಿಕರ ಸಂಗ್ರಾಮದ ಹೊಡೆತಗಳನ್ನು ಸಹಿಸಿಕೊಂಡವರು ಶಿವಾಜಿಯು ಸ್ವತಂತ್ರ ರಾಜ್ಯದ ಪರಿಸ್ಥಿತಿಗೆ ಈ ವರ್ಗ ಸಂಗತಿಗಳನ್ನು ಗಮನಿಸಿದರು. ಅವರ ಆಡಳಿತದಲ್ಲಿ ರೈತರ ಪರಿಸ್ಥಿತಿಯು ತಕ್ಕಷ್ಟು ಸುಧಾರಿಸಿತು. ಮೊಘಲರು ಹುಟ್ಟುವಳಿಯ ಮೇಲೆ ಶೇಕಡ ೫೦ ರಷ್ಟು ತೆರಿಗೆಗಳನ್ನು ವಿಧಿಸುತ್ತಿದ್ದರೆ ಶಿವಾಜಿ ಅದನ್ನು ಕಡಿತ ಮಾಡಿ ಶೇಕಡ ೩೦-೪೦ಕ್ಕೆ ಇಳಿಸಿದರು. ಜಮೀನಿನ ಸರ್ವೆಯನ್ನೂ ಅದೇ ಕಾಲದಲ್ಲಿ ನಡೆಸಿದುದರಿಂದ ತೆರಿಗೆ ವಸೂಲಿಯಲ್ಲಾಗುತ್ತಿದ್ದ ದುರುಪಯೋಗಗಳು ನಿವಾರಣೆಗೊಳ್ಳಲು ಸಹಾಯವಾಯಿತು. ಇದರಲ್ಲಿ ಮತ್ತೆ ಶಿವಾಜಿಯ ಜಾಣ್ಮೆ ವ್ಯಕ್ತಪಡುತ್ತದೆ. ರಾಜ್ಯದ ವರಮಾನವು ಕಡಿಮೆಯಾಗುವ ಬದಲು ಹೆಚ್ಚಾಯಿತು. ಮಧ್ಯವರ್ತಿಯ ಸ್ಥಾನಕ್ಕೆ ಸರ್ಕಾರಿ ಸಂಬಳದ ಅಧಿಕಾರಿಗಳು ಬಂದರು.

ಶಿವಾಜಿ ನಾಯಕತ್ವದಲ್ಲಿ ನಡೆದ ಮರಾಠರ ರಾಷ್ಟ್ರೀಯ ವಿಮೋಚನಾ ಚಳವಳಿಯ ಬಗ್ಗೆ ಐ. ರೆಯಿಸ್ನರ್ ನಡೆಸಿದ ಸಂಶೋಧನೆ ಸೋವಿಯತ್ ಭಾರತೀಯ ಶಾಸ್ತ್ರಕ್ಕೆ ಅನುಪಮ ಕಾಣಿಕೆಯಾಗಿದೆ.

ಹನಿಗತೆ

ಲೆಕ್ಕಣಿಕೆ ಮತ್ತು ಇರುವೆ

ಕಾಗದದ ಮೇಲೆ ಓಡಾಡುತ್ತಿದ್ದ ಇರುವೆಯೊಂದು ಲೆಕ್ಕಣಿಕೆಯು ಕಾಗದದ ಮೇಲೆ ಬರೆಯುತ್ತಿರುವ ಸುಂದರ ಚಿತ್ರವನ್ನು ಕಂಡು ಆಶ್ಚರ್ಯದಿಂದ ತನ್ನ ಸಖಿಯ ಇರುವೆಗೆ ಹೇಳಿತು:

"ಲೆಕ್ಕಣಿಕೆಯು ಅದ್ಭುತ ಮತ್ತು ಸುಂದರ ಚಿತ್ರಗಳನ್ನು ಚಿತ್ರಿಸುತ್ತಿದೆ. ಆದರ ಕುಶಲತೆಯನ್ನು ನೋಡಿರ ಹೂತೋಟ, ವನಸಿರಿ ನಿರ್ಮಿತವಾಗುತ್ತಿದೆ"

"ಹಾಗಲ್ಲ. ಲೆಕ್ಕಣಿಕೆ ನಿರ್ಜೀವವಾದದು. ಲೆಕ್ಕಣಿಕೆಯನ್ನು ಹಿಡಿದ ಕೈಬೆರಳುಗಳೇ ನಿಜವಾದ ಕಲಾಕಾರರು. ಅವುಗಳಿಂದಾಗಿ ಚಿತ್ರ ಬರೆಯಲ್ಪಡುತ್ತಿದೆ" ಎಂದನು ಇರುವೆ ಎರಡನೆ.

'ನಿಜವಲ್ಲ; ಬೆರಳುಗಳು ತೋಳಿನ ಬಲದಿಂದ ಬರೆಯುತ್ತಿವೆ ಆದ್ದರಿಂದ ತೋಳೇ ನಿಜವಾದ ಕಲಾಕಾರ' ಮೂರನೆ ಇರುವೆ ಎಂದಿತು.

ಹೀಗೆ ವಾದ ವಿವಾದ ಬೆಳೆಯುತ್ತಾ ತೋಳಿನಿಂದ ಎದೆ, ತಲೆ, ಕಣ್ಣು ಇತ್ಯಾದಿಯಾಗಿ ವರ್ಣನೆ ಬೆಳೆಯಿತು. ಈ ವಾದವನ್ನು ಕೇಳಿ ಬುದ್ಧಿವಂತನಾದ ಇರುವೆಗಳ ರಾಜನು ಹೀಗೆ ಹೇಳಿದ

'ಈ ಚಮತ್ಕೃತಿ ಯಾಗೂ ಕಲೆ ಶಾರೀರಿಕ ಯಾ ಭೌತಿಕ ಚತುರತೆಯಿಂದ ಒಡಮೂಡಿದ್ದಲ್ಲ. ಏಕೆಂದರೆ ನಿಪ್ರಾಣವಾದಾಗ ಯಾ ಮರಣ ಬಂದಾಗ ಈ ಅವಯವಗಳೆಲ್ಲ ನಿಷ್ಕ್ರಿಯವಾಗಿರುತ್ತವೆ. ಆದ್ದರಿಂದ ಈ ಎಲ್ಲಾ ಕ್ರಿಯೆಗೆ ಕಾರಣವಾದ ಸ್ಫೂರ್ತಿ ಚೇತನ ಬೇರೆ ಮುನ್ನೆಲೆ ದೊರೆತು ಬಂದಿದೆ. ಅದರಿಂದಾಗಿ ಬೆರಳುಗಳು ಚಿತ್ರಿಸಲು ಶಕ್ತವಾಗಿವೆ.

ಇರುವೆಗಳ ರಾಜನು ಬುದ್ಧಿವಂತನಾದರೂ ಆತನ ಬುದ್ಧಿಗೂ ಮಿತಿ ಇದೆಯೆಂಬುದನ್ನು ಬುದ್ಧಿವಂತ ಮನುಷ್ಯನು ತಿಳಿಯುತ್ತಾನೆ. ಶರೀರದೊಳಗಿನ ಸ್ಫೂರ್ತಿ ಚೇತನಗಳನ್ನೂ ಮನವನ್ನೂ ಹಿಡಿತದಲ್ಲಿಡುವ ದಿವ್ಯ ಶಕ್ತಿಯೊಂದಿದೆ. ಅದನ್ನೇ ಭಕ್ತರು ದೇವರೆನ್ನುತ್ತಾರೆ. ಆ ದೇವರ ಕೃಪೆ ಇಲ್ಲದಿದ್ದರೆ ಸ್ಫೂರ್ತಿಯೂ ಸ್ಪಂದಿಸದ; ಚೈತನ್ಯವೂ ಚಲಿಸದು.'

ಗಮನಾರ್ಹ ಬದಲಾವಣೆ! ಠೇವಣಾತಿದಾರರಿಗೆ ಸುಸಂದರ್ಭ !!

ನಿರಖು ಠೇವಣಿಗಳ ಮೇಲೆ

ಪರಿಷ್ಕರಿಸಿದ ಆಕರ್ಷಣೀಯ ಬಡ್ಡಿ ದರ !!!

91 ದಿನಗಳಿಗೆ ಮೇಲ್ಪಟ್ಟ 6 ತಿಂಗಳ ಒಳಗಿನ ಅವಧಿಯ ಠೇವಣಾತಿಗಳಿಗೆ— 4¾%

6 ತಿಂಗಳಿಂದ ಮೇಲ್ಪಟ್ಟ	1 ವರ್ಷ ಒಳಗಿನ ಅವಧಿಯ				,	5¼%
1 ವರ್ಷದಿಂದ	,,	2 ವರ್ಷಗಳ ಒಳಗಿನ	,,		,,	5½%
2 ,,	,	3	,,	,,	,	5¾%
3 ,,	,,	5	,,	,,	,,	6%
5 ,,	,,	7	,,	,,	,,	6¼%
7 ,,	,,	9	,,	,,	,,	6½%
9 ವರ್ಷಗಳಿಗೆ ಮೇಲ್ಪಟ್ಟು			....		....	6¾%

5 ವರ್ಷ ಮ ಅವುಗಳಿಗೆ ಮೇಲ್ಪಟ್ಟ ಅವಧಿಯ ಧಾರ್ಮಿಕ ಸಂಸ್ಥೆಗಳ ಠೇವಣಾತಿಗಳಿಗೆ 6¾%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ನೀಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ

ನಮ್ಮ ಯಾವುದೇ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು:-

"ವಿಜಯ ಬ್ಯಾಂಕ್ ಬಿಲ್ಡಿಂಗ್", ಲೈಟ್‌ಹೌಸ್ ಹಿಲ್ ರೋಡ್,

ಮಂಗಳೂರು – ೨.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc No. 466 N/50 dated 2-12-1950 of the Director of Public Instruction, Madras.

ಮಾನವನ ಮನಸ್ಸು ಸಂಘರ್ಷಗಳ ಸಿಲುಕು

(ಐದನೇ ಪುಟದಿಂದ)

ಗಿರುವುದಕ್ಕೂ ನವೀನವಾಗಿರುವುದಕ್ಕೂ ಸ್ಪರ್ಧೆ, ಸಾಮಾನ್ಯವಾಗಿರುವುದಕ್ಕೂ ಅಪೂರ್ವವಾದುದಕ್ಕೂ ಸ್ಪರ್ಧೆ. ಈ ಹೋರಾಟವಿರುವುದರಿಂದಲೇ ಅದನ್ನು ನೋಡುವುದರಲ್ಲಿ ನಮಗೆ ಕುತೂಹಲ. ಹಳ್ಳಿಯವನಿಗೆ ಪಟ್ಟಣ ಸುಂದರ. ಪಟ್ಟಣಿಗನಿಗೆ ತೋಟ ಸುಂದರ. ಬಯಲು ಸೀಮೆಯವರಿಗೆ ಮಲೆನಾಡು ಸುಂದರ. ನಾಡೊಳಗಣ ಊರವನಿಗೆ ಸಮುದ್ರ ಸುಂದರ. ಹೆಣ್ಣಿಗೆ ಗಂಡು ಸುಂದರ. ಗಂಡಿಗೆ ಹೆಣ್ಣು ಸುಂದರ. ಇದು ಪ್ರಕೃತಿ ಸೌಂದರ್ಯದ ಮಾತಾಯಿತು.

ಮಾನವ ಸ್ವಭಾವ ಚಿತ್ರದಲ್ಲಿ ಮತ್ತೊಂದು ಬಗೆಯ ದ್ವಂದ್ವ, ಸಂಘರ್ಷಣೆ ಇರುತ್ತದೆ. ರಾಮ ರಾವಣರ, ಭೀಮ ದುರ್ಯೋಧನರ ವಿರೋಧವಂತೂ ಸ್ವಾಭಾವಿಕ ಇರಲಿ. ರಾಮನ ಸೀತಾ ಪ್ರೇಮಕ್ಕೂ, ಆಕೆಯ ಅಶೋಕವನ ಗುಪ್ತತೆಗೂ ಇರುವ ವಿರೋಧ; ರಾವಣನ ವ್ಯಾಮೋಹಕ್ಕೂ ಸೀತೆಯ ಅಸಮ್ಮತಿಗೂ ಇದ್ದ ವಿರೋಧ; ಭೀಮನ ಆವೇಶಕ್ಕೂ, ಅವನ ಯುಧಿಷ್ಠಿರ ವಿಧೇಯತೆಗೂ ಇದ್ದ ವಿರೋಧ— ಈ ಬಗೆಯ ವಿರೋಧ, ದ್ವಂದ್ವ ಸ್ವಭಾವಗಳ ರಂಗವೇ ಮಾನವ ಹೃದಯ.

ಇನ್ನು ಬೇರೊಂದು ತರದ ವೈಷಮ್ಯವುಂಟು. ಒಬ್ಬ ಮನುಷ್ಯನಲ್ಲಿರುವ ಸತ್ವಕ್ಕೂ, ಅವನಲ್ಲೇ ಇರುವ ತಾಮಸಕ್ಕೂ ಜಗಳ. ರಾವಣನು ಮಹಾ ಬಲಿಷ್ಠ, ಮಹಾ ತಪಸ್ವಿ. ಆದರೆ ಸೀತೆಯ ಮೇಲಿನ ಆಸೆಯನ್ನು ಮಾತ್ರ ಜಯಿಸಲಾರದೆ ಹೋದ. ಆ ಒಂದು ವಿಷಯದಲ್ಲಿ ಅವನಿಗೆ ತನ್ನ ಮನಸ್ಸಿನ ಮೇಲೆ ಅಧಿಕಾರವಿಲ್ಲದಾಯಿತು. ವಿಶ್ವಾಮಿತ್ರನು ಮಹರ್ಷಿ, ಮಹಾಸಮರ್ಥ. ಆದರೆ ವಸಿಷ್ಠನ ಮೇಲಣ ಛಲಕ್ಕೂ, ಮೇನಕೆಯ ಮೇಲಣ ವ್ಯಾಮೋಹಕ್ಕೂ ಸೋಲಬೇಕಾಯಿತು.

ಮತ್ತೊಂದು ತರದ ಯುದ್ಧವೇ ನಮ್ಮ ಜೀವನದಲ್ಲಿ ನಡೆಯುತ್ತಿರುತ್ತದೆ. ಒಬ್ಬ ಮನುಷ್ಯನ ಸತ್ಪ್ರವೃತ್ತಿಯೇ ಎರಡಾಗಿ ಒಡೆಯುವ ಸಂಭವವುಂಟು. ಅದೇ ಧರ್ಮಸಂಕಟ; ದ್ವೈವಿಭಾವ. ದಶರಥನಿಗೆ ಒಂದು ಕಡೆಯಲ್ಲಿ ಕೊಟ್ಟ ಮಾತನ್ನು ಕಾಪಾಡಬೇಕೆಂಬ ಪ್ರತಿಜ್ಞೆ, ಇನ್ನೊಂದು ಕಡೆ ಮುದ್ದು ಮಗನನ್ನು ಕಾಡಿಗಟ್ಟಲೊಪ್ಪದ ಮಮತೆ. ದುಷ್ಯಂತನಿಗೆ ಒಂದು ಕಡೆ ಶಕುಂತಲೆಯ ಮೇಲಿನ ಮೋಹ, ಇನ್ನೊಂದು ಕಡೆ ತಾನು ಕಣ್ಣು ಹಾಕಬಹುದೋ ಕೂಡದೋ ಎಂಬ ಧಾರ್ಮಿಕ ಸಂದೇಹ. ಮಗುದೊಂದು ತರದ ಘೋರ ಕದನವೂ ನಮಗೆ ತಪ್ಪಿದ್ದಲ್ಲ. ಅದು ಮನುಷ್ಯನ ಗುಣ ಸಾಮರ್ಥ್ಯಗಳಿಗೂ ಅವನ ಅದೃಷ್ಟಕ್ಕೂ ನಡೆಯುತ್ತಿರುವುದು. ರಾಮನು ಸದ್ಗುಣ ಸಂಪನ್ನನು, ಲೋಕಪ್ರಿಯನು. ಆದರೆ ಪ್ರಜೆಗಳನ್ನು ಆನಂದಪಡಿಸಿ ಅರಮನೆಯಲ್ಲಿ ಸೀತೆಯೊಡನೆ ಸುಖದಿಂದ ಇರಬೇಕಾದ ವಯಸ್ಸಿನಲ್ಲಿ ವನವಾಸವು ಅವನ ಹಣೆಬರಹವಾಯಿತು....

ಹೀಗೆ ನಮ್ಮ ಜೀವನರಂಗದಲ್ಲಿಯ ವೈಷಮ್ಯ ಪರಂಪರೆ ನಾನಾ ವಿಧಗಳನ್ನು ವಿದಿತ ಅವಿದಿತ ಸನ್ನಿವೇಶಗಳ ಅಥವಾ ಸಾಧಾರಣ, ಅಸಾಧಾರಣ ಸನ್ನಿವೇಶಗಳ ನಡುವಣದ್ದು. ಅಖಿಲ ಮತ್ತು ತತ್ಪ್ರವೃತ್ತಿಗಳ ನಡುವಿನದ್ದು. ಒಬ್ಬ ವ್ಯಕ್ತಿಯ ಸ್ವಭಾವದ ಎರಡು ಭಾಗಗಳು ಅವನ ದೌರ್ಬಲ್ಯಗಳ ನಡುವಣದ್ದು. ಅವನ ಕರ್ತವ್ಯಾಕರ್ತವ್ಯಗಳ ಅಥವಾ ಎರಡು ಸಮಾನ ಕರ್ತವ್ಯಗಳ ನಡುವಣದ್ದು. ಅವನ ಅರ್ಹತೆ, ದೃಷ್ಟಗಳ ನಡುವಣದ್ದು. ಈ ಪ್ರಕಾರವಾಗಿ ಎಷ್ಟೋ ಜಾತಿಯ ಸಂಘರ್ಷಣೆಗಳನ್ನು ದೈನಂದಿನವೂ ಕಾಣಬಹುದು. ಅವುಗಳಲ್ಲಿ ಮೊದಲನೇದರ ಸ್ವರ ಕೌತುಕ ಆಶ್ಚರ್ಯಗಳನ್ನು, ಉಳಿದವುಗಳ ಜೀವಿತ ಸಾಫಲ್ಯದ ವಿಚಾರದ್ದು. ಈ ಬಗೆಯ ಸಂಘರ್ಷಣೆಗಳ ಕೋಲಾಹಲವೇ ಸೌಂದರ್ಯ.

ನಗು ನೀನು .... ಜಗವೆ ನಿನ್ನೊಡನೆ ನಗುತಲಿಹುದು

೧

"ರಾಯರೇ, ಡಾಕ್ಟರರು ಬಂದಿದ್ದಾರೆ. ಒಳಗೆ ಬಿಡಲೇ?"— ನೌಕರ ಪ್ರಶ್ನಿಸಿದ.

"ನಿನಗೇನು ತಲೆ ಕೆಟ್ಟಿದೆಯೇ? ನಾನು ಕಾಯಿಲೆಯಿಂದ ಮಲಗಿದ್ದೇನೆ; ಕಾಣಿಸುವುದಿಲ್ಲವೇ? ಹಣಿಂಗಿ ಹೋಗಿದೆಯೋ. ನಾನೀಗ ಯಾರನ್ನೂ ಭೇಟಿಯಾಗಲು ಸಾಧ್ಯವಿಲ್ಲ."— ಪ್ರೊಫೆಸರರು ಗದರಿಸಿದರು.

೨

"ಆದದ್ದಾಯಿತು. ಇನ್ನು ಮುಂದೆ ಮಾತ್ರ ನಾನು ಯಾವ ಹುಡುಗಿಯ ಎದುರಿನಲ್ಲಿಯೂ ಮದುವೆಯ ಪ್ರಸ್ತಾಪವನ್ನೆತ್ತುವುದಿಲ್ಲವೆಂದು ನಿರ್ಧರಿಸಿ ಬಿಟ್ಟಿದ್ದೇನೆ."

"ಏಕೆ? ಏನಾಯಿತು ಆ ಹುಡುಗಿ 'ಸಾಧ್ಯವಿಲ್ಲ' ಎಂದಳೇ?"

"ಅಲ್ಲ ಮಾರಾಯ! ಆಕೆ ಒಪ್ಪಿಬಿಟ್ಟಳು"

೩

"ನಾನು ನಿನ್ನೆ ಪಕ್ಷಿ ಸಂಗ್ರಹಾಲಯವನ್ನು ನೋಡಲು ಹೋಗಿದ್ದೆ."

"ಹೌದೇ? ನಾನೂ ಅಲ್ಲಿಯೇ ಇದ್ದಿದ್ದೆ."

"ಓಹೋ! ಯಾವ ಪಂಜರದಲ್ಲಿ?"

೪

ಕಿಸೆ ಕತ್ತರಿಸಿದ ಒಂದು ಘಟನೆಯ ಬಗ್ಗೆ ಕೋರ್ಟಿನಲ್ಲಿ ಸಾಕಷ್ಟು ದೀರ್ಘವಾದ ವಾದವಿವಾದಗಳು ನಡೆದ ಬಳಿಕ ಯಾರ ಕಿಸೆ ಕತ್ತರಿಸಲ್ಪಟ್ಟಿತ್ತೋ ಅವನೊಡನೆ ನ್ಯಾಯಾಧೀಶರು ಈ ರೀತಿ ಪ್ರಶ್ನಿಸಿದರು— "ಈತನೇ ನಿನ್ನ ಕಿಸೆಯನ್ನು ಕತ್ತರಿಸಿದವನೆಂದು ನಿನಗೆ ನಂಬಿಗೆಯಿದೆಯೇ?"

"ಈಗ ಆ ನಂಬಿಗೆಯಿಲ್ಲ. ಮೊದಲು ಇದ್ದಿತ್ತು. ಈಗಂತೂ ಇಲ್ಲಿನ ವಾದ ವಿವಾದಗಳನ್ನು ಕೇಳಿದ ಬಳಿಕ ನಾನು ಅಂದು ಕೋಟು ಹಾಕಿಕೊಂಡಿದ್ದೆನೋ ಇಲ್ಲವೇ ಎಂಬ ಶಂಕೆಯೇ ನನಗೆ ಉಂಟಾಗಿದೆ."

೫

"ನಾನು ಇಂದು ಮೇಯರರೊಡನೆ ಜಗಳಾಡಿದೆ. ನನ್ನನ್ನು ತಡೆಯುತ್ತಿದ್ದರೆ ನಾನು ಖಂಡಿತ ಅವರ ಸೊಂಟ ಮುರಿಯುತ್ತಿದೆ...."

"ಹೌದೇ! ಯಾರು ನಿನ್ನನ್ನು ತಡೆದರು?"

"ಮೇಯರು.

೬

"ನಿನಗೆ ನಾನು ಕಳುಹಿದ ಚೆಕ್ಕು ಸಿಕ್ಕಿತೇ?"

"ಹೌದು, ನನಗೆ ಆ ಚೆಕ್ಕು ಎರಡು ಬಾರಿ ಸಿಕ್ಕಿತು. ಒಮ್ಮೆ ನಿನ್ನಿಂದ, ಇನ್ನೊಮ್ಮೆ ಬ್ಯಾಂಕಿನಿಂದ!"

—ಸಂಗ್ರಾಹಕ: ವೈ. ಹಾರ್ಯಾಡಿ ಮಂಜುನಾಥ.

'ನಚಿಕೇತ'ರ

ಹೃದಯಸ್ಪರ್ಶಿ

ನವೀನ ಕಾದಂಬರಿಗಳು

ಹಸುರು ಹಂಸ

ಬೆಲೆ. ರೂ. ಎರಡು.

ಋಣ ಯಾತ್ರೆ

ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ

ಬೆಲೆ ರೂ. 2—00

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ,

ನವಭಾರತ ಬುಕ್ ಡಿಪ್ಪೊ, ಉಡುಪಿ.

ಹೊಸಕೆರೆ ಚಿದಂಬರಯ್ಯನವರ

ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.

ಬೆಲೆ: ಸಾದಾ ಪ್ರತಿ ರೂ. ೧.

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."

—ಲೋಕಮಾನ್ಯ ತಿಲಕ.

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು

ಡಾ| ಕೆ. ಎಲ್. ಐತಾಳ, ಎಂ. ಬಿ ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಶಾಂತಿ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್ ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.



ಶ್ರೀರಾಮಕೃಷ್ಣ ಪರಮಹಂಸ

ವಚನ ವಲ್ಲರಿ

ಕಂಬವನ್ನು ಹಿಡಿದುಕೊಂಡು ಸುತ್ತಲೂ ಹುಡುಗನು ವೇಗವಾಗಿ ಸುತ್ತುತ್ತಾನೆ. ಸುತ್ತುವಾಗ ಅವನ ಗುರಿಯೆಲ್ಲ ಕಂಬದ ಮೇಲೆ ಇದೆ. ಕಂಬವನ್ನು ಅವನು ಎಲ್ಲಿಯ ವರೆಗೆ ಭದ್ರವಾಗಿ ಹಿಡಿದುಕೊಂಡಿರುವನೋ ಅಲ್ಲಿಯ ವರೆಗೂ ಅವನು ಬೀಳುವುದಿಲ್ಲವೆಂದೂ, ಕಂಬವನ್ನು ಬಿಟ್ಟ ತಕ್ಷಣವೇ ತಾನು ಬಿದ್ದು ಬಿಡುವೆನೆಂದೂ ಅವನಿಗೆ ಚೆನ್ನಾಗಿ ಗೊತ್ತಿದೆ. ಆದರಂತೆಯೇ ಮನಸ್ಸನ್ನು ದೇವರ ಮೇಲೆ ಯಾವಾಗಲೂ ನಿಲ್ಲಿಸಿ ನಿಮ್ಮ ಪ್ರಪಂಚದ ಕೆಲಸಗಳನ್ನು ಮಾಡಿದರೆ ಎಲ್ಲಾ ಅಪಾಯಗಳಿಂದಲೂ ಪಾರಾಗುವಿರಿ

o o o

ಅನೇಕರು ಪ್ರಪಂಚದಲ್ಲಿ ತಮ್ಮ ಸುಖ ಹೆಚ್ಚುವುದೆಂದು ತಿಳಿದು ವ್ರತಾದಿಗಳನ್ನು ಮಾಡುತ್ತಾರೆ ಆದರೆ ದುರದೃಷ್ಟವಶದಿಂದ ಅವರು ಏನಾದರೂ ಕಷ್ಟಕ್ಕೆ ಒಳಗಾದಾಗ, ಅಥವಾ ಸಾಯುವ ಕಾಲದಲ್ಲಿ, ದೇವರನ್ನು ಮರೆಯುವರು. ಸಾಧಾರಣ ದಿನಗಳಲ್ಲಿ ಗಿಣಿ ರಾಧಾರಮಣನ ಹೆಸರನ್ನು ದಿನವೆಲ್ಲ ಹಾಡುವುದು. ಆದರೆ ಅದು ಬೆಕ್ಕಿನ ಕೈಗೆ ಸಿಕ್ಕಿಕೊಂಡಾಗ ರಾಧಾರಮಣನ ಹೆಸರನ್ನು ಮರೆತು ತನ್ನ ಸ್ವಜ ಧ್ವನಿಯಿಂದ ಕೇರ್ ಎಂದು ಕಿರಿಚಿಕೊಳ್ಳುವುದು.

o o o

ದೋಣಿ ನೀರಿನಲ್ಲಿದ್ದರೆ ಅಪಾಯವಿಲ್ಲ. ಆದರೆ ನೀರು ದೋಣಿಯೊಳಗೆ ಬರದಂತೆ ಮಾಡಬೇಕು. ನೀರು ಬಂದರೆ ದೋಣಿ ಮುಳುಗುವುದು ಇದರಂತೆಯೇ ಭಕ್ತನು ಗೃಹಸ್ಥನಂತೆ ಪ್ರಪಂಚದಲ್ಲಿ ಇದ್ದರೆ ತೊಂದರೆ ಇಲ್ಲ. ಆದರೆ ಪ್ರಾಪಂಚಿಕತೆ ಅವನ ಮನಸ್ಸನ್ನು ಪ್ರವೇಶಿಸ ಕೂಡದು

o o o

ಪ್ರಪಂಚ ಹೇಗಿದೆ ಬಲ್ಲಿರಾ? ಇದು ಬರೀ ಬೀಜ ಮತ್ತು ಸಿಪ್ಪೆಯಿಂದ ಕೂಡಿದ ಒಂದು ಬಗೆಯ ಹಣ್ಣಿನಂತೆ ಇದೆ. ತಿರುಳು ಇರುವದು ಎಲ್ಲೋ ಸ್ವಲ್ಪ ದನ್ನು ತಿಂದರೆ ಹೊಟ್ಟೆನೋವು ಬರುವುದು.

o o o

ಕೈಗೆ ಎಣ್ಣೆ ಸವರಿಕೊಂಡು ಹಲಸಿನ ಹಣ್ಣನ್ನು ಸುಲಿದರೆ ಕೈಗೆ ಅಂಟುವದಿಲ್ಲ ಇದರಂತೆಯೇ ನೀವು ಮೊದಲು ಭಕ್ತಿ ಎಂಬ ಎಣ್ಣೆಯನ್ನು ಸವರಿಸಿಕೊಂಡರೆ ಪ್ರಪಂಚದಲ್ಲಿ ಕಾಮ ಕಾಂಚನಗಳ ಪಾಶಕ್ಕೆ ಬೀಳದೆ ಇರಬಹುದು

o o o

ಹಾವು ತನ್ನನ್ನು ಹಿಡಿಯಲು ಬರುವವರನ್ನು ಕಚ್ಚುತ್ತದೆ. ಆದರೆ ಯಾರಿಗೆ ಗಾರುಡಿಗ ವಿದ್ಯೆ ಗೊತ್ತಿದೆಯೋ ಅವರು ಸರ್ಭಯವಾಗಿ ಏಳೆಂಟು ಹಾವನ್ನು ತಮ್ಮ ಕೊರಳಿನ ಸುತ್ತಲೂ ನೇತುಹಾಕಿಕೊಂಡು ಅವುಗಳಿಂದ ಬೇಕಾದನ್ನು ಆಟವಾಡಿಸುವರು ಆದರಂತೆಯೇ ಯಾರು ವಿವೇಕ ಮತ್ತು ವೈರಾಗ್ಯವನ್ನು ಹೊಂದಿದ ಮೇಲೆ ಪ್ರಪಂಚದಲ್ಲಿ ಜೀವಿಸುತ್ತಾರೆಯೋ ಅವರು ಪ್ರಪಂಚದ ವಿಷಯಗಳಿಂದ ಕೆಡುವುದಿಲ್ಲ ವಿವೇಕ ಮತ್ತು ವೈರಾಗ್ಯ ಎಂಬಿವು ಹಾವಾಡಿಸುವವನನ್ನು ಕಾಪಾಡುವ ಮಣ್ಣಿನಂತೆ

o o o

ನೇರಳೆಯನ್ನು ತಿಂದರೆ ಅದು ತೇಗಿನಿಂದ ಗೊತ್ತಾಗುವಂತೆ ಒಬ್ಬನ ಆಲೋಚನೆ ಅವನ ಮಾತಿನಿಂದ ಗೊತ್ತಾಗುವುದು. ಪ್ರಪಂಚದಲ್ಲಿ ಮುಳುಗಿರುವವರು ಮಹಾ ಪುರುಷರನ್ನು ನೋಡುವುದಕ್ಕೆ ಬಂದರೂ ಅಲ್ಲಿಯೂ ಪ್ರಾಪಂಚಿಕ ವಿಷಯವನ್ನೇ ಮಾತನಾಡುವರು.

o o o

ಮನಸ್ಸೇ ಎಲ್ಲದಕ್ಕೂ ಮೂಲ ಎಂಬುದನ್ನು ತಿಳಿದುಕೊಳ್ಳಿ ಒಬ್ಬನನ್ನು ಬುದ್ಧಿವಂತನನ್ನಾಗಿ ಅಥವಾ ದಡ್ಡನನ್ನಾಗಿ ಮಾಡುವುದು, ಬಂಧನದಲ್ಲಿ ನರಳುವಂತೆ ಮಾಡುವುದು ಅಥವಾ ದುರಾತ್ಮರನ್ನಾಗಿ ಮಾಡುವುದು ಎಲ್ಲಾ ಮನಸ್ಸು. ಯಾರ ಮನಸ್ಸು ಸದಾ ಭಗವಂತನ ಮೇಲೆ ನೆಲೆಸಿರುವುದೋ ಅವರಿಗೆ ಇನ್ನು ಯಾವ ಸಾಧನೆಯೂ ಬೇಕಿಲ್ಲ.

o o o

ಬ್ರಹ್ಮಜ್ಞಾನವನ್ನು ಪಡೆದವನ ಸ್ವಭಾವ ನಿನಗೆ ಗೊತ್ತೆ? ಅವನು ಸರ್ವಾಂತರ್ಯಾಮಿಯನ್ನು ಒಳಗೆ ಮತ್ತು ಹೊರಗೆ ನೋಡುತ್ತಾನೆ. ಗಾಜಿನ ಬಾಗಿಲಿರುವ ಒಂದು ಕೋಣೆಯೊಳಗೆ ಇದ್ದಂತೆ ಆತನು ಇರುವನು

ಬೇಲಿಯೋ ಹೊಲ ಮೆದ್ದಿತು

(ನಾಲ್ಕನೇ ಪುಟದಿಂದ)

ನಿಮ್ಮ ಕೇರಳದಲ್ಲಿಯೂ ಆದದ್ದೂ ಇದೇ. ಈಗ ಅದೇ ಗಾಳಿ ತಾಗಿದ್ದು ಸರಿಹೋಗೆ. ವಾಹ, ಒಂದು ಪಾತದಿಂದಾಗಿ ಬಿದ್ದುಬಿಟ್ರು....ಅಯ್ಯೊ ಬಿಡ್ರೀ ಇನ್ನು ಮಾಡೋದೇನು ಏನು?"

'ಬೇಲಿಯೇ ಹೊಲ ಮೇಯುತ್ತಂತೆ."

"ಹೌದು, ಅದ್ಕೇ ಅನ್ನೋದು ಕಲಿಕಾಲಂತ ತಕ್ಕೈಯನ್ನ ಈ ಕೈ ನಂಬೋದಿಲ್ಲಂತೆ ಈ ಕಲಿಕಾಲದಲ್ಲಿ ."

"ಯಾರು ಯಾರನ್ನ ನಂಬೋದಾ ಸರ್‍ವಿಲ್ಲ, ಈ ಸಮಾಚಾರ ಪತ್ರವನ್ನ ನಂಬಲೇ ಬೇಕಲ್ಲ .."

"ನಾನು ನಿಮ್ಮನ್ನ ನಂಬಿಕೆ ಬಿಡ್ಲೆ ಹಾಗಾ..?

'ಸಿದ್ಧ ಅಷ್ಟು ವಿಶ್ವಾಸವಿದೆಯಲ್ಲಾ.."

"ನನ್ಗೆ ನಿಮ್ಮ ಮೇಲೆ ಇದಿಲ್ಲವಾ? ಮತ್ತ್ಯಾರ ಮೇಲೆ ."

"ನನಗೂ ಹಾಗೇನೇ ಅನ್ನು ಗೊತ್ತು ಇನ್ನು ಬನ್ರಿ..."

'ಹ್ಲೋ ಗೊತ್ತಾಗ್ ಬಿಡಿ. ಒನ್ನಿ ಹೀಗ....'

'ಕರೆದಾಗ ಓಗೊಡದುಂಟೆ?'

—ಗೋರಾ

ಅಮೃತ ಬಿಂದು

ಕ್ರೂರ ಮನುಷ್ಯನನ್ನು ಸಹಿಸಬಹುದು. ಆತನು ನಾಳೆ ಸುಧಾರಿಸುವ ಸಾಧ್ಯತೆ ಇದೆ; ಆದರೆ ನಾಚಿಕೆ ಇಲ್ಲದ ಮನುಷ್ಯನನ್ನು ಸಹಿಸಲಾಗದು ಏಕೆಂದರೆ ಆತನು ಸುಧಾರಿಸಲಾರ.

o o o

ಪ್ರತಿಲಿಂಗಿಯನ್ನು ಹೀಯಾಳಿಸುವ, ಯಾ ಕಡಿಮೆಯೆಂದು ಭಾವಿಸುವ ಯಾ ತಿರಸ್ಕರಿಸುವ ವ್ಯಕ್ತಿಗೆ ಮಾನವತೆಯ ಸಂಸ್ಕಾರದ ಅಭಾವವಿದೆ ಏಕೆಂದರೆ ಅದು ಪ್ರಕೃತಿ ತತ್ವಗಳಿಗೆ ವಿರೋಧ

o o o

ಹೂವುಗಳನ್ನು ಕಂಡು ಹಾತೊರೆದು ಸುಖಾನ್ನುಗ್ರಹ ಹೃದಯವೇ ಪ್ರಪ್ರಥಮವಾಗಿ ಮುಳ್ಳುಗಳನ್ನು ಚುಚ್ಚಿಸಿಕೊಳ್ಳಬೇಕಾಗುತ್ತದೆ.

o o o

ಮಿತಿಮೀರಿದ ಪರಹಿತಚಿಂತನೆ ಮತ್ತು ತಾಳ್ಮೆ ದುಃಖವನ್ನು ತರುತ್ತದೆ ಮಿತಿಮೀರಿದ ಸ್ವಾರ್ಥತೆ ಪಕ್ವ ಅತಿರೇಕ ಕಾರ್ಯದಲ್ಲಿ ಪರಿಣಮಿಸುತ್ತದೆ.

o o o

ತನ್ನ ಹಿತವನ್ನು ಸರ್ವದಾ ಚಿಂತಿಸಿ ತಾನೇ ಯತ್ನ ಮಾಡುವವನನ್ನು ಸ್ವಾರ್ಥಿ ಎನ್ನುವದಿಲ್ಲ ನೆರೆಯವರ ಹಿತವನ್ನು ಕಡೆಗಣಿಸುವವನನ್ನು ಸ್ವಾರ್ಥಿ ಎನ್ನುತ್ತಾರೆ.

o o o

ತನ್ನ ಲಾಭಕ್ಕಾಗಿಯೇ ಜೀವಿಸುವವನು ಸತ್ತಾಗ ಸರ್ವವನ್ನು ಜಗತ್ತಿನ ಲಾಭಕ್ಕಾಗಿ ಬಿಟ್ಟು ಹೋಗುತ್ತಾನೆ

o o o

ಸ್ವಾರ್ಥತೆ ತಮ್ಮಲ್ಲಿಲ್ಲದ ಮನುಷ್ಯರಿಲ್ಲ ಇನ್ನೊಬ್ಬರ ಸ್ವಾರ್ಥತೆಯನ್ನು ಕ್ಷಮಿಸಿದವರಿಲ್ಲ!

o o o

ಚಂದ್ರನು ತನ್ನ ಬೆಳಕನ್ನು ಇಡೀ ಜಗತ್ತಿಗೆ ಕೊಡುತ್ತಾನೆ. ತನ್ನ ಕಪ್ಪು ಕಲೆಯನ್ನು ತನಗಾಗಿಯೇ ಇಟ್ಟುಕೊಳ್ಳುತ್ತಾನೆ.

ಕನ್ನಡ ಸಣ್ಣ ಕಥೆಗಳ ಸ್ಪರ್ಧೆ

ಕುಂದಾಪುರ, ಇದೇ ಬರುವ ಜನವರಿ ತಾ. 26ರಂದು ಇಲ್ಲಿನ ಕನ್ನಡ ಸಂಘವು ಪ್ರಜಾಪ್ರಭುತ್ವ ದಿನೋತ್ಸವದ ಸುಸಂದರ್ಭದಲ್ಲಿ ನಡೆಸಲಿರುವ ಸಾಹಿತ್ಯ, ಕಲೆ, ಸಂಸ್ಕೃತಿಗಳಿಗೆ ಸಂಬಂಧಪಟ್ಟ ಚಟುವಟಿಕೆಗಳ ಅಂಗವಾಗಿ ಕನ್ನಡ ಕಥಾ ಸ್ಪರ್ಧೆಯೊಂದನ್ನು ಏರ್ಪಡಿಸಲು ನಿರ್ಧರಿಸಿದೆ ರೂ. ೫೦/ ರೂ. ೪೦/- ಮತ್ತು ರೂ 20/-ರ ಬಹುಮಾನಗಳನ್ನು ಕೊಡಲಾಗುವುದು ಕಥೆಗಳು ಸ್ವತಂತ್ರವಾಗಿದ್ದು ಅಪ್ರಕಟಿತವಾಗಿರಬೇಕಲ್ಲದೆ ಸುಮಾರು ಎರಡು ಸಾವಿರ ಪದಗಳಿಗೆ ಮೀರಕೂಡದು ಕಥೆಗಳನ್ನು ರೂ. 0-50 ಪ್ರವೇಶ ಧನ ಸಮೇತ ಇದೇ ಡಿಸೆಂಬರ 31ರ ಒಳಗಾಗಿ "ಕಾರ್ಯದರ್ಶಿ", ಕನ್ನಡ ಸಂಘ, ಕುಂದಾಪುರ ಈ ವಿಳಾಸಕ್ಕೆ ಕಳುಹಿಸಬೇಕು. ಹೆಚ್ಚಿನ ವಿವರ ತಿಳಿಯಲಪೇಕ್ಷಿಸುವವರು ಸಂಘದ ಕಾರ್ಯದರ್ಶಿಯವರಿಗೆ ಬರೆಯಬಹುದು.

ಸರಕಾರದ ಮಾನ್ಯತೆ

ಉಡುಪಿ, ಮೈಸೂರು ಸರಕಾರದ ಸಂಗೀತ ನಾಟಕ ಅಕಾಡೆಮಿ ಬೆಂಗಳೂರು ಇವರು ಯಕ್ಷಗಾನ ಕಲಾಕ್ಷೇತ್ರ ಸಂಸ್ಥೆಯನ್ನು ಪಾಲ್ಗಾ ಸಾಲಿನಲ್ಲಿ ಸರಕಾರದ ಮಾನ್ಯತೆ ಪಡೆದ ಸಂಸ್ಥೆ ಎಂಬುದಾಗಿ ಅಂಗೀಕರಿಸಿದ್ದಾರೆ ಎಂದು ತಿಳಿದು ಬರುತ್ತದೆ

ಜಬಲ್‌ಪುರದಲ್ಲಿ ನೆಹರು ಎಗ್ರಿಕಲ್ಚರಲ್ ಯೂನಿವರ್ಸಿಟಿಯ ಉದ್ಘಾಟನೆ ಮಾಡುವುದಕ್ಕಾಗಿ ಶ್ರೀಮತಿ ಇಂದಿರಾ ಗಾಂಧಿಯವರು ಪಂಡಿತ ಜವಾಹರಲಾಲರ ವಿಗ್ರಹದ ಎದುರಲ್ಲಿ ಉತ್ಸವದ ವಿಧಿಸೂಚಕ ದೀಪವನ್ನು ಉರಿಸುತ್ತಿರುವುದು.

ಎಲ್ಲೆಲ್ಲಿ ಏನೇನು?

ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘ, ಉಡುಪಿ

ಕುರುಕಾಲು, ಈ ಸಂಸ್ಥೆಯ ಆಡಳಿತ ಮಂಡಳಿಯ ಸಭೆಯು ಸಂಘದ ಅಧ್ಯಕ್ಷ ಶ್ರೀ ಟಿ. ಎ. ಪೈಯವರ ನೇತೃತ್ವದಲ್ಲಿ ತಾರೀಕು 1-12-64ರಲ್ಲು ಮಣಿಪಾಲದಲ್ಲಿ ಜರಗಿತು. ಜಿಲ್ಲಾ ಸಂಘವು ಸ್ಥಾಪನೆಯಾದಂದಿನಿಂದಲೂ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಟಿ. ಎ. ಪೈಯವರು ಬರುವ ಜನವರಿ ಆರಂಭದಿಂದ, ಅಖಿಲ ಭಾರತ ಫುಡ್ ಟ್ರೇಡಿಂಗ್ ಕೋರ್ಪರೇಶನ್ನಿನ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದು, ಆ ಸಂಬಂಧ ಅವರು ಕೆಲವು ಸಮಯ ಅಗಲಿಹೋಗಲಿಕ್ಕಿರುವ ಕಾರಣ, ಜಿಲ್ಲಾ ಸಂಘದ ಅವರ ಅಧ್ಯಕ್ಷ ಸ್ಥಾನಕ್ಕೆ ಸಭೆಯಲ್ಲಿ ಹಾಜರಿದ್ದ ಶ್ರೀ ಬಿ ಮಧ್ವರಾಜ್ ಎಂ. ಎಲ್. ಎ ಅವರನ್ನು ಆರಿಸಲಾಯಿತು.

ಮಾತ್ರವಲ್ಲದೆ, ಅಧ್ಯಕ್ಷರ ವಿದಾಯ ಸತ್ಕಾರಕ್ಕೂ, ಹೊಸ ಅಧ್ಯಕ್ಷರ ಸ್ವಾಗತ ಸತ್ಕಾರಕ್ಕೂ ಮತ್ತು ನ್ಯಾಯವಾದ ಮೈಂಟೆನೆನ್ಸ್ ಗ್ರಾಂಟು ದೊರೆಯದೆ, ಖಾಸಗಿ ಶಾಲೆಗಳಿಗೆ ಉಂಟಾದ ಗಂಭೀರ ಪರಿಸ್ಥಿತಿಯ ಕುರಿತು ಮುಂದಿನ ಧೋರಣೆಯನ್ನು ನಿರ್ಧರಿಸಲಿಕ್ಕೂ ಇದೇ ದಶಂಬರ ತಾ. 26ನೇ ಶನಿವಾರ ಪೂರ್ವಾಹ್ನ ಗಂಟೆ 10-30ಕ್ಕೆ ಮಣಿಪಾಲ ಹೈಸ್ಕೂಲ್ ಕಟ್ಟಡದಲ್ಲಿ ಜಿಲ್ಲಾ ಸಂಘದ ವಿಶೇಷ ಮಹಾಸಭೆಯನ್ನು ಜರಗಿಸುವರೇ ನಿಶ್ಚೈಸಿ ಆ ಬಗ್ಗೆ ಆಗತ್ಯವುಳ್ಳ ಸಿದ್ಧತೆಗಳಿಗಾಗಿ ಕಾರ್ಯದರ್ಶಿ ಶ್ರೀ. ಕುಕುಕಾಲ. ಗಣಪಯ್ಯ ಸಟ್ರಿಗೆ ಅಧಿಕಾರವನ್ನು ಕೊಡಲಾಯಿತು.

(ಮೂರನೇ ಪುಟದಿಂದ)

ರಾಷ್ಟ್ರೀಕರಣದ ಕುದುರೆ

ಪ್ರೆಸ್‌ಗಳ ರಾಷ್ಟ್ರೀಕರಣದ ಮಹತ್ವದ ಪ್ರಶ್ನೆಯಿಂದಾಗಿ ಸಿಂಹಳದ ಪ್ರಧಾನಿ ಸಿರಿಮಾವೋ ಸರಕಾರ ಸೋತು ಹೋದುದು ಅನಿರೀಕ್ಷಿತ ವಾರ್ತೆಯಲ್ಲ, ಸೋಜಿಗವೂ ಹೌದು. ಇತ್ತೀಚಿಗಿನ ಕೆಲವು ತಿಂಗಳುಗಳಿಂದ ಅಲ್ಲಿನ ರಾಜಕೀಯ ವಲಯದಲ್ಲಿ ಕೆಲವೊಂದು ಮಹತ್ವದ ಸ್ಥಿತ್ಯಂತರವು ನಡೆಯುತ್ತ ಬಂದಿದ್ದು, ಅದು ಭಂಡಾರನಾಯಿಕೆಯವರ ಪರಾಜಯದಲ್ಲಿ ಒಂದು ಗಟ್ಟಕ್ಕೆ ಬಂದು ಮುಟ್ಟಿತು. ಆದರೂ ಅವರು ರಾಜಿನಾಮೆ ನೀಡದೆ, ಶಾಸನ ಸಭೆಯನ್ನೇ ಬರ್ಖಾಸ್ತುಗೊಳಿಸುವ ಸಲಹೆಯನ್ನು ಗವರ್ನರ ಜನರಲ್ಲರಿಗೆ ನೀಡಿದ್ದಾರೆ. ಅದೇನೇ ಇದ್ದರೂ ಭಂಡಾರನಾಯಿಕೆ ಸರಕಾರವು ರಾಷ್ಟ್ರೀಕರಣದ ಕುದುರೆಯ ಬೆನ್ನೇರಿದುದು ಸ್ವಯಂ ಸಿಂಹಳೀಯರಿಗೂ ಮೆಚ್ಚುಗೆಯಾಗಲಿಲ್ಲವೆಂದು ನಾವೀ ಘಟನೆಯಿಂದ ತಿಳಿಯಬಹುದೆ?

ಬೆಳ್ತಂಗಡಿ ಮುನ್ಸಿಫ಼್ ಕೋರ್ಟಿನಲ್ಲಿ

R. E. P. No 119/1964
in O. S. 342/63 of D. M. C.
Karkal.

ಶ್ರೀ ಮೂಡುಬಿದ್ರಿ ದಿಗಂಬರ್ ಜೈನ್ ವಿದ್ಯಾವರ್ಧಕ ಸಂಘ } ಅರ್ಜಿದಾರ.

(ವಾದಿ)

ಅಂಣಪ್ಪ ಹೆಗ್ಡೆ ಕೂಡಾ — ಎದ್ರಿರು

(ಪ್ರತಿವಾದಿರು)

ಎದ್ರಿರು: 2. ಸೀತಮ್ಮ ಹೆಗಡ್ತಿ 3. ಚೆರಿಯಮ್ಮ ಹೆಗಡ್ತಿ—ಅಣ್ಣಪ್ಪ ಹೆಗ್ಡೆ ಸೊಸೆಯಂದಿರು-ಬೆಳ್ತಂಗಡಿ ತಾಲ್ಲೂಕು ಹೊಸಂಗಡಿ ಗ್ರಾಮಸ್ಥರು

ಇವರೀಗೆ ಅಸ್ತಿ ಜಪ್ತಿ ಕುರಿತು ಕೊಡುವ ಪ್ರೊಹಿಬಿಟರಿ ಓರ್ಡರ್ ಏನಂದ್ರೆ—

ಮೇಲಿನ ಅನುಸೂಚಿಯಲ್ಲಿ 1ರಿಂದ 3ನೇ ವರೆಗಿನ ಎದ್ರಿರವ ಅವರ ಕುಟುಂಬದ ಮೂಲ ಪಕ್ಕಿನ ಹೊಸಂಗಡಿ ಗ್ರಾಮದ ಸ. ನಂ. 86/1, 2,9; 88/1, 6,7,8; 89/2, 89/3, 4; 92/4; 209/1; 251/1ನೇ ಅಸ್ತಿಯನ್ನು ಎದ್ರಿರು ಜವಾಬದಾರಿ ಯಾ ಪರಾಧೀನ ಮಾಡಕೂಡದೆಂತ ಟಿಮ್ಕಸ್ಸಿ ವ್ಯಾಸ್ ಮಾಡಿ ಜಪ್ತಿ ಪಡ್ಸಿ ನಿಬಂಧಿಸೋಣಾಗಿಯದೆಂ ತಿಳಿಸಿ, ಆ ಕುರಿತು ಆಕ್ಷೇಪ ಇದ್ದರೆ, ತಾ. 16-12-64 ರಂದು ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹೇಳಿಕೊಳ್ಳತಕ್ಕದ್ದೆಂತಲೂ ಈ ಮೂಲ್ಕ ತಿಳಿಸಿಯದೆ.

B. K. Suryanarayana Rao.
Advocate for Petitioners

ಬೆಳ್ತಂಗಡಿ, ತಾ. 1-12-64

ಅರವಿಂದ್ ಮೋಟರ್ಸಿನಲ್ಲಿ ಹೊಸ ಟಾಟಾ ಮರ್ಸಿಡಿಸ್ ಬೆಂಜ್ ಪ್ರದರ್ಶನ

ಟಾಟಾ ಮರ್ಸಿಡಿಸ್ ಬೆಂಜ್‌ನ 1210ನೆ ಮಾಡೆಲಿನ ಪ್ರಾಯೋಗಿಕ ಪ್ರದರ್ಶನವು ಮಂಗಳೂರಿನ ಅರವಿಂದ ಮೋಟಾರ್ಸ್ ಇವರಿಂದ ನವಂಬರ ತಾ 21ರಂದು ನಡೆಯಿತು. ಆ ದಿನ ಪ್ರದರ್ಶನಾಲಯವನ್ನು ಚಿತ್ರ-ವಿಚಿತ್ರವಾಗಿ ಅಲಂಕರಿಸಲಾಗಿತ್ತು. ಸುಮಾರು ಒಂದು ಸಾವಿರಕ್ಕೂ ಮಿಕ್ಕಿದ ಟ್ರಕ್ ಮತ್ತು ಬಸ್ ಓಪರೇಟರರೂ ಜಿಲ್ಲೆಯ ಪ್ರಮುಖರೂ ಈ ಪ್ರದರ್ಶನವನ್ನು ನೋಡಿ ಮೆಚ್ಚಿದರು. ಈ ಪ್ರದೇಶದಲ್ಲಿ ಟಾಟಾ ಮರ್ಸಿಡಿಸ್ ಬೆಂಜ್‌ಗಳು ಈಗಾಗಲೇ ಅತೀವ ಜನಪ್ರಿಯವಾಗಿವೆ. ಈ ಹೊಸ ಮಾಡೆಲಿನಲ್ಲಿ ಅಳವಡಿಸಿಕೊಳ್ಳಲಾದ ವೈಶಿಷ್ಟ್ಯಗಳಿಂದ, ಇದು ಮತ್ತಷ್ಟು ಜನ ವಿಶ್ವಾಸ ಗಳಿಸುವುದು ಸಾಧ್ಯವಾಗಿದೆ. ಏಕೆಂದರೆ ಯಂತ್ರವು ಹೊರುವ ಸಾಮರ್ಥ್ಯದಲ್ಲಿ ಹೆಚ್ಚಳ ಪಡೆದಿದ್ದು ವಿಶೇಷ ಗಟ್ಟಿ ಮುಟ್ಟಾಗಿದೆ. ಪ್ರದರ್ಶನದಂದು ಆಗಮಿಸಿದ ಅತಿಥಿಗಳಿಗೆ ಲಘೂಪಹಾರಗಳನ್ನು ಒದಗಿಸಲಾಗಿತ್ತು.

ರಾಷ್ಟ್ರೀಯ ಹಿಂದೀ ಕನ್ನಡ ಸಾಹಿತ್ಯ ಮಾಲೆ

ಉಡುಪಿ, ಸಂಭಾವನೆ ಕೊಟ್ಟು ಹಿಂದಿ ಮತ್ತು ಕನ್ನಡ ಕೃತಿಗಳನ್ನು ಪ್ರಕಟಿಸಿ ಲೇಖಕರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ರೂಪುಗೊಂಡ ಈ ಸಾಹಿತ್ಯಮಾಲೆಯ ಸಲಹಾ ಸಮಿತಿಯ ಸಭೆಯು ತಾ. 29-11-64 ರಂದು ಕಲ್ಪನಾ ಟೂರಿಸ್ಟ್ ಹಾಲಿನಲ್ಲಿ ಎಡ್ವೊಕೇಟ್ ಶ್ರೀ ಎಂ. ಡಿ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಸಂಯೋಜಕ ಶ್ರೀ ಉ. ಲ. ಕಿಣಿಯವರು ಸಾಹಿತ್ಯ ಮಾಲೆಯ ಉದ್ದೇಶ ಮತ್ತು ಕ್ರಮ ನಿಬಂಧನೆಗಳನ್ನು ವಿವರಿಸಿದರು. ಅನಂತರ ಶ್ರೀ ಕೆ. ಕೆ. ಪೈಯವರು ಅಧ್ಯಕ್ಷರಾಗಿರುವ ಕಾರ್ಯಕಾರಿ ಸಮಿತಿಯು ಆಯ್ಕೆಯಾಗಿ ಪುಸ್ತಕ ಚುನಾವಣಾ ಸಮಿತಿ ರಚಿಸಲ್ಪಟ್ಟಿತು. ಶ್ರೀ ಕೆ. ಕೆ. ಪೈಯವರು ಸಾ| ಮಾಲೆಗೆ ಯಶಸ್ಸನ್ನು ಕೋರಿಯೂ ಸಭಾಧ್ಯಕ್ಷರು ಹರಸಿಯೂ ಮಾತಾಡಿದರು.

ಮಕ್ಕಳ ಪುಸ್ತಕಗಳ ಪ್ರದರ್ಶನ

ಉಡುಪಿ,— ಹಿಗ್ಗಿನ್ ಬಾತಮ್ಸ್ (ಪ್ರೈವೇಟ್) ಲಿಮಿಟೆಡ್‌ನವರು ಉಡುಪಿ ರೋಟರಿ ಕ್ಲಬ್ ಆಶ್ರಯದಲ್ಲಿ (ಸೆಂಬರ್ 30ರಿಂದ 3ರವರೆಗೆ ಉಡುಪಿಯಲ್ಲಿ ಮಕ್ಕಳ ಪುಸ್ತಕಗಳ ಪ್ರದರ್ಶನವನ್ನು ಏರ್ಪಡಿಸಲಿದ್ದಾರೆ. ಈ ಅಪೂರ್ವ ಪ್ರದರ್ಶನ ಉಪೇಂದ್ರ ಬಾಗ್ ಆವರಣದಲ್ಲಿರುವ ರೋಟರಿ ಸಭಾಭವನದಲ್ಲಿ ಪ್ರತಿದಿನ ಬೆಳಗ್ಗೆ ೯ರಿಂದ ಸಂಜೆ ೫ ಗಂಟೆಯ ವರೆಗೆ ಸಾರ್ವಜನಿಕರಿಗೆ ತೆರೆದಿರುತ್ತದೆ.

ಯಕ್ಷಗಾನ "ಭಕ್ತ ಸುಧನ್ವ"

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂದಿರದಲ್ಲಿ ಕಳೆದ ತಾ. 28ರಂದು "ಭಕ್ತ ಸುಧನ್ವ" ಎಂಬ ಯಕ್ಷಗಾನ ಕೂಟವು ನಡೆಸಲ್ಪಟ್ಟಿತು. ಶ್ರೀ ಕೀರಿಕ್ಕಾಡು ಮಾಸ್ಟರ್ ವಿಷ್ಣು ಭಟ್ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಶ್ರೀಗಳಾದ ಕೀ ವ ಕೇಶವ, ಬಾಬು ರೈ, ಬಿ. ವಿ. ವಿನೋದ, ಕೆ. ಅಣ್ಣಯ್ಯ ಭಂಡಾರಿ, ಬಿ ಪರಮೇಶ್ವರ ಭಟ್, ಕೆ ಬಿ ರೈ, ಚಂದಪ್ಪ ಶೆಟ್ಟಿ ಮತ್ತು ಮಾಸ್ಟರ್ ಸಾಂತಪ್ಪ ಗೌಡರೇ ಮುಂತಾದವರು ಪಾಲುಗೊಂಡಿದ್ದರು. ಕಾರ್ಯಕ್ರಮದ ವ್ಯವಸ್ಥಾಪಕರಾದ ಶ್ರೀ ಕೆ. ಎಂ. ಭಂಡಾರಿಯವರು ಆರಂಭದಲ್ಲಿ ಸ್ವಾಗತಿಸಿದ್ದು—ಕೊನೆಗೆ ಧನ್ಯವಾದವಿತ್ತರು.

ಪೋಪರ ಸಂದರ್ಶನಕ್ಕೆ ಸ್ವಾಗತ

ಉಡುಪಿ ನಗರ ಸಭಾ ಸದಸ್ಯರ ಅವಸರದ ಸಭೆಯೊಂದು ಕಳೆದ. ತಾ 28 ರಂದು ನಗರ ಸಭಾಪತಿ ಶ್ರೀ ಟಿ. ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿ 'ಭಾರತ ದೇಶದಲ್ಲಿ ಜರಗಲಿರುವ 38 ನೇ ಅಂತರಾಷ್ಟ್ರೀಯ ಯುಕಾರಿಸ್ಟ್ ಕಾಂಗ್ರೆಸ್‌ನಲ್ಲಿ ಭಾಗವಹಿಸಲು ಒಪ್ಪಿ ಭಾರತವನ್ನು ಸಂದರ್ಶಿಸುವ ಕ್ರಿಸ್ತ ಜಗದ್ಗುರು ಪೋಪರನ್ನು ಸ್ವಾಗತಿಸುವ ಹಾಗೂ ಅವರ ಸಂದರ್ಶನವು ಜಯ ಪ್ರದವಾಗಲೆನ್ನುವ ಗೊತ್ತುವಳಿ ಮಾಡಿದೆ.

ಮಂಗಳೂರು ಕೆನರಾ ಬ್ಯಾಂಕಿಂಗ್ ಕೋರ್ಪರೇಶನಿನ ಜನರಲ್ ಮೆನೇಜರರಾಗಿದ್ದು ಕಳೆದ ತಾ 19 ರಂದು ನಿವೃತ್ತರಾದ ಶ್ರೀ. ಕೆ. ಶಂಕರನಾರಾಯಣ ಶೆಣೈಯವರಿಗೆ ತಾ. 23ರಂದು ಬ್ಯಾಂಕಿನ ಸಿಬ್ಬಂದಿಯವರು ಆಡಳಿತಕಛೇರಿಯಲ್ಲಿ ವಿದಾಯ ಸತ್ಕಾರವಿತ್ತರು.

ಪೆಪ್ಪರ್ ಮಿಠಾಯಿ, ಶರಬತ್ತು ಮೊದಲಾದ 'ಬಿಕ್ಕೊ'ರವರ ಹಣ್ಣು ಹಂಪಲುಗಳ ತಯಾರಿಕೆಗಳು ಎಲ್ಲೆಲ್ಲಿಯೂ ಪ್ರಸಿದ್ಧಿ ಪಟ್ಟಿವೆ.

ದಿ. ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ

ರಿಜಿಸ್ಟರ್ಡ್ ಆಫೀಸು: ವಿಜಯಾ ಬ್ಯಾಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್‌ರೋಡ್, ಮಂಗಳೂರು—1 ದ. ಕ.

—ಏಲಂ ನೋಟೀಸು—

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಬಡ್ಡಿಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ ಇನ್ನು ಕೆಲವರು ಯಾವುದೇ ರೀತಿಯ ಕ್ರಮತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ—ನ-ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯ ಪಡಿಸುವದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾರೀಕು 19-12-1964ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 19—12—1964ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾದೀತು—ಯಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ—ಯಾ—ಖಾಸಗಿಯಾಗಿ ಹರಾಜು ಮಾಡಲಾದೀತು ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಖರ್ಚು—ವ—ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ.

ಸಾಲದ ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ	ತಾ. 30-9-1964ಕ್ಕೆ ಬರತಕ್ಕ ಮೊಬಲಗು ರೂ. ಪೈಸೆ.
6/62	ವಿ. ನಾರಾಯಣ ಶೆಣೈ, ವಿ. ಮುಕುಂದ ಶೆಣೈಯವರ ಮಗ, ಮರ್ಚಂಟ್, ಪೋಸ್ಟು ವಂಡ್ಸೆ ದ ಕ.	87=62
481/62	ನಾರಾಯಣ ಶೆಟ್ಟಿ, ಸಂದಿಯಪ್ಪ ಶೆಟ್ಟಿಯವರ ಅಳಿಯ, ಬೆಳ್ವೆ ಗ್ರಾಮದ ಮಂತ್ರಿಕಿ ಮನೆ, ಪೋಸ್ಟು ಬೆಳ್ವೆ.	657=76
663/62	ಮಹಾಬಲ ಶೆಟ್ಟಿ, ನಾಗಪ್ಪ ಶೆಟ್ಟಿಯವರ ಮೊಮ್ಮಗ, ವಂಡ್ಸೆ ಗ್ರಾಮದ ಆಜ್ರಿಕೋಡ್ಲು, ಪೋಸ್ಟು ವಂಡ್ಸೆ ದ. ಕ.	1380=56
722/62	ಎಸ್. ಗಣಪತಿ ಭಟ್, ಯು. ಡಿ. ಸಿ. ತಾಲೂಕ್ ಕಛೇರಿ, ಕುಂದಾಪುರ ದ. ಕ.	353=50
812/62	ನಾರಾಯಣ ಶೆಟ್ಟಿ, ಕಾವೇರಿ ಶೆಡ್ತಿಯವರ ಮಗ, ಪಡುವರಿ ಗ್ರಾಮದ ದೊಡ್ಡಮನೆ, ಪೋಸ್ಟ್ ಪಡುವರಿ ದ. ಕ.	195=85
836/62	ನಾರಾಯಣ ಪೂಜಾರಿ, ಮಂಜ ಪೂಜಾರಿಯವರ ಮಗ, ಚಂಗನ ಕೋಡಿ ಮನೆ, ಮೊಳಹಳ್ಳಿ ಗ್ರಾಮ, ಪೋಸ್ಟು ಮೊಳಹಳ್ಳಿ ದ. ಕ.	59=10
19/63	ಎಮ್. ಅಣ್ಣಪ್ಪ ಶೆಟ್ಟಿ, ಅಂತಯ್ಯ ಶೆಟ್ಟಿಯವರ ಮಗ, ಹೇರೂರು ಗ್ರಾಮ, ಪೋಸ್ಟ್ ರಾಗಿ ಹಕ್ಲು ದ ಕ.	91=35

ಸ್ಥಳ: ಕುಂದಾಪುರ.
ತಾ. 4—12—1964.

ಕೆ. ಭಾಸ್ಕರ ಹೆಗ್ಡೆ.
ಮೆನೇಜರ್.

ಗೆಲವು ಯಾರದು ?

(ಎರಡನೇ ಪುಟದಿಂದ)

ಮುಖ್ಯಾಧಿಕಾರಿಯಾಗಿ ಬಂದವನ ದೃಷ್ಟಿ ಅವಳ ಕಡೆಗೆ ಹರಿಯಿತು. ಪ್ರತಿನಿತ್ಯವೂ ಒಂದಲ್ಲ ಒಂದು ಬಗೆಯಲ್ಲಿ ಉಷೆಯ ಕೆಲಸದ ಬಗೆಗೆ ಪ್ರಶಂಸೆ ಅವನ ಬಾಯಿಂದ ಬರುತ್ತಲಿತ್ತು.

ಮೊದ ಮೊದಲು ಕೆಲಸವನ್ನು ಮಾತ್ರ ಪ್ರಶಂಸಿಸುತ್ತಿದ್ದ ಅಧಿಕಾರಿ ಕ್ರಮೇಣ ಅವಳ ರೂಪ, ಲಾವಣ್ಯ, ನಡತೆಗಳನ್ನೂ ಹೊಗಳಲಾರಂಭಿಸಿದ. ಅವಳು ಕೆಲಸ ಮಾಡುತ್ತಿದ್ದ ಸ್ಥಾನದಿಂದ ಬದಲಾಗಿ ಅಧಿಕಾರಿಯ ಕೋಣೆಯಲ್ಲಿ ಅವನ ಎದುರಿನಲ್ಲಿಯೇ ಕೆಲಸವನ್ನು ಮಾಡಬೇಕಾಯಿತು ಅವಳನ್ನು ಮೆಚ್ಚಿಸಲು ದಿನಕ್ಕೊಂದು ಬಗೆಯಲ್ಲಿ ಹೊಗಳುತ್ತಿದ್ದ.

ಅಧಿಕಾರಿಯ ವರ್ತನೆ ಉಷಾಳ ಗಮನಕ್ಕೆ ಬಾರದೆ ಹೋಗಲಿಲ್ಲ. ಅವನ ದೃಷ್ಟಿ ತನ್ನ ಮೇಲಿದೆ; ಅದರಿಂದಲೇ ಈ ಬಗೆಯ ಅಸಭ್ಯ ವರ್ತನೆ ಎನ್ನುವುದನ್ನು ಮನಗಂಡಳು. ಹುಲಿಯ ಕೈಗೆ ಸಿಕ್ಕಿಕೊಂಡ ಹುಲ್ಲೆಯಂತಾಯಿತು ಉಷಾಳ ಪಾಡು. ಅನ್ನಲಾರಳು, ಅನುಭವಿಸಲಾರಳು. ಅಧಿಕಾರಿಯ ವರ್ತನೆಯನ್ನು ತಿರಸ್ಕರಿಸಿದ್ದರೂ ಪುರಸ್ಕರಿಸದೆ ಮೌನದಿಂದಿದ್ದಳು. ಅಧಿಕಾರಿ ಅವಳಿಗೆ ತನ್ನ ಪ್ರಾರ್ಥನೆಗೆ ಸಮ್ಮತಿ ಇರುವುದೆಂದೇ ಭಾವಿಸಿದ್ದ.

ಅಧಿಕಾರಿಯ ಹುಟ್ಟು ನಡತೆಯಿಂದ ಬೇಸರಗೊಂಡ ಉಷಾಳಿಗೆ 'ಸಾಕಪ್ಪಾ ಹೆಂಗಸರಿಗೆ ಈ ನೌಕರಿಯ ಸಹವಾಸ' ಎನ್ನುವಷ್ಟು ಬೇಸರ ಬಂದಿತ್ತು. ತಾನಾಗಿಯೇ ಕೈಬಿಟ್ಟು ಹೋದರೆ ಎಲ್ಲರೆದುರಿಗೆ ಸೋಲನ್ನು ಒಪ್ಪಿಕೊಂಡಂತೆ ಆಗುವುದು ಎಂದುಕೊಂಡು ಕೆಲಸ ಮಾಡುತ್ತಿದ್ದಳು.

ಒಂದು ದಿನ ಉಷಾ ಒಬ್ಬಳೇ ತನ್ನ ಮೇಜಿನ ಬಳಿ ಕುಳಿತು ಕೆಲಸದಲ್ಲಿ ಮಗ್ನಳಾಗಿರುವಾಗ ಮೇಲಧಿಕಾರಿ ಅವಳ ಮೇಜಿನ ಬಳಿ ನಿಂತು ತನ್ನ ಮೊದಲ ಆಟವನ್ನು ಆರಂಭ ಮಾಡಿದ. ಅಲ್ಲಿಯವರೆಗೆ ಅವನ ಆಟವನ್ನು ನೋಡಿ ಬೇಸತ್ತಿದ್ದ ಉಷಾ "ನೀವು ದೊಡ್ಡ ಅಧಿಕಾರಿಗಳು ಸಾರ್, ಹೆಂಗಸರ ಮುಂದೆ ಹೀಗೆಲ್ಲ ಆಡುವುದು ಚೆಂದವಲ್ಲ" ಎಂದಳು.

"ಇದರಲ್ಲಿ ತಪ್ಪೇನಿದೆ?"

"ತಪ್ಪು ನಿಮ್ಮದಲ್ಲ, ಕೆಲಸ ಅಂತ ಬಂದಿದ್ದೇವಲ್ಲ ನಮ್ಮದು."

"ಹಾಗೆಲ್ಲ ಅನ್ನಬಾರದು. ಗಂಡಸು ಹೆಂಗಸನ್ನು ಪ್ರೀತಿಸುವುದು ತಪ್ಪೇ?"

"Shut up ನಿಮಗೆ ತಾಯಿ, ಅಕ್ಕ-ತಂಗಿ ಯಾರೂ ಇಲ್ವೆ?"

"ಹಾಗೆಲ್ಲ ಶ್ರೀಮತಿಯವರೇ ನಿಮ್ಮನ್ನು ಕಂಡು ಹುಚ್ಚನಾಗಿದ್ದೇನೆ, ಬೇಕಾದರೆ ನಾಳೆಯೆ ಇಲ್ಲಿಂದ ಹೊರಟು ಬೇರೆ ಯಾವುದಾದರೂ ಊರಿನಲ್ಲಿ ರಿಜಿಸ್ಟರ್ ಮದುವೆ ಮಾಡಿಕೊಂಡು ಸುಖವಾಗಿ ರೋಣ"

"ನೋಡಿ ಸಾರ್, ನೀವು ದೊಡ್ಡವರೆಂದು ಇಲ್ಲಿಯವರೆಗೆ ಮರ್ಯಾದೆಕೊಟ್ಟು ಮಾತನಾಡಿದ್ದಾಯಿತು. ನನಗೂ ಮನೆ-ಮಠ, ತಂದೆ-ತಾಯಿ, ಅತ್ತೆ-ಮಾವ ಯಜಮಾನರು ಎಲ್ಲರೂ ಇದ್ದಾರೆ. ನಿಮ್ಮ ಮಾತಿನಂತೆ ನಿಮ್ಮನ್ನು ಹಿಂಬಾಲಿಸಿ ಬರಲು ನಾನೇನು ಮಾನಗೆಟ್ಟವಳಲ್ಲ. ಹೇಳಿದವರ ಮಾತನ್ನು ಕೇಳದೆ ಕೆಲಸ ಮಾಡಬೇಕು ಎನ್ನುವ ಹುಚ್ಚು ಹಿಡಿದು ಬಂದೆ. ಒಳ್ಳೆಯ ಅನುಭವವಾಯಿತು. ನಿಮಗೂ ನಿಮ್ಮ ಕಚೇರಿ ಕೆಲಸಕ್ಕೂ ನೂರು ನಮಸ್ಕಾರ" ಎಂದು ಕೈ ಮುಗಿದು ಒಂದು ಕ್ಷಣವೂ ನಿಲ್ಲದೆ ಉಷಾ ಮನೆಗೆ ಬಂದಳು. ಅವಳ ಕಣ್ಣಿಂದ ನೀರು ಹರಿದಿತ್ತು.

ಮರುದಿನ ಕಛೇರಿ ಆರಂಭವಾಗುವ ವೇಳೆಗೆ ಉಷಾಳ ರಾಜೀನಾಮೆಯು ಪತ್ರ ಮುಖ್ಯಾಧಿಕಾರಿಗಳ ಮೇಜನ್ನು ಅಲಂಕರಿಸಿತ್ತು.

ಅನಿರೀಕ್ಷಿತವಾಗಿ ಬೇಗ ಕಂಗಾಲಾಗಿ ಮನೆಗೆ ಬಂದ ಸೊಸೆಯನ್ನು ಕಂಡ ಶಂಕರನ ತಾಯಿ ಅಚ್ಚರಿಗೊಂಡರು. ಉಷಾಳ ದುಃಖವನ್ನು ನೋಡಿದಾಗ ಅವರ ಹೆಂಗರುಳು ಮರುಗಿತು. ಸೊಸೆಯನ್ನು ಕರೆದು ಉಪಚರಿಸಿ ಊಟವಾದನಂತರ "ಏನಮ್ಮ ಉಷಾ ಹೇಳದೆ ಕೇಳದೆ ಹೀಗೆ ಬಂದು ಬಿಟ್ಟಿರುವೆ ಕೆಲಸಕ್ಕೆ ಹೋಗುವುದಿಲ್ಲವೆ?" ಎಂದು ಪ್ರಶ್ನಿಸಿದರು. "ಇನ್ನೊಂದು ಬಾರಿ ಆ ಕೆಲಸದ ಸುದ್ದಿ ಎತ್ತಬೇಡಿ ಅತ್ತೆ, ನಿಮ್ಮ ಮನಸ್ಸಿಗೆಲ್ಲ ಬೇಸರ ಪಡಿಸಿ ಕೆಲಸವೆಂದು ಹುಡುಕಿಕೊಂಡು ಹೋದೆ. ಅಲ್ಲಿಯ ಜನರ ನಡತೆಯನ್ನು ತಿಳಿಸಲು ನಾಚಿಕೆಯಾಗುತ್ತದೆ' ಎಂದು ಅಳಲಾರಂಭಿಸಿದಳು. ಕೊನೆಗೆ ತನ್ನ ಗಂಗತಿಯನ್ನೆಲ್ಲಾ ಮರೆಮಾಚದೆ ಅತ್ತೆಗೆ ವರದಿ ಮಾಡಿದಳು "ಸದ್ಯ ಶನಿ ತೊಲಗಿತು ಹೋಗಲಿ ಬಿಡು' ಎಂದು ಸಂತೋಷ ಪಟ್ಟರು ಅವಳ ಅತ್ತೆ.

"ಅವರ ಮಾತನ್ನು ಮೀರಿ ನಡೆದು ಅವರಿಗೆ ತೊಂದರೆ ಕೊಟ್ಟು ವಿರೋಧಿಯಾಗಿರುವೆನಲ್ಲಾ, ಈಗ ನನ್ನನ್ನು ಮೊದಲಿನಂತೆ ಕಾಣುತ್ತಾರೆಯೆ ಅತ್ತೆ" ಎಂದು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. "ಅಳಬೇಡ ಉಷಾ, ಶಂಕರನಿಗೆ ನಾನು ಹೇಳುತ್ತೇನೆ, ಎಲ್ಲಿಯಾದರೂ ನಿನ್ನಂತಹ ಸೊಸೆಯನ್ನು ದೂರ ಮಾಡುವುದು ಸಾಧ್ಯವೇ ನಮ್ಮ?" ಎಂದು ಅವಳ ಕಣ್ಣೀರು ಒರೆಸಿದರು ಶಂಕರನ ತಾಯಿ. ಉಷಾ ಕೆಲಸ ಬಿಟ್ಟು ಬಂದುದನ್ನು ತಿ[illegible] ನರೆ[illegible]ಧು ವಿ ತ್ರರು ಆನಂದ ಪಟ್ಟರು.

ಶಂಕರ ತಿಂಗಳ ಕೊನೆಯ ವೇಳೆಗೆ ಪ್ರವಾಸದಿಂದ ಹಳ್ಳಿಗೆ ಹಿಂತಿರುಗಿದ. ಮನೆಗೆಲಸದಲ್ಲಿ ನಿರತಳಾಗಿದ್ದ ಉಷಾಳನ್ನು ಕಂಡಾಗ ಅವನಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಉಷಾಳ ಕಣ್ಣುಗಳೇ ಕ್ಷಮಾಪಣೆ ಬೇಡುತ್ತಿದ್ದವು

ಕೋಣೆಯಲ್ಲಿ ಶಂಕರ ಕೋಟನ್ನು ಬಿಚ್ಚುತ್ತಿರುವಾಗಲೇ ಉಷಾ ಕಾಫಿಯೊಂದಿಗೆ ಹಾಜರಾದಳು. ಮೇಜಿನ ಮೇಲೆ ಕಾಫಿಯ ಲೋಟವನ್ನಿಟ್ಟು ಶಂಕರನ ಕಾಲು ಹಿಡಿದು "ನನ್ನನ್ನು ಕ್ಷಮಿಸುತ್ತೀರಾ" ಎಂದು ದೈನ್ಯದಿಂದು ಕೇಳಿದಳು.

"ಇದೇನು ಉಷಾ ಎಂದೂ ಇಲ್ಲದ ಪತಿ ಭಕ್ತಿ?"

"ದಯವಿಟ್ಟು ಹಾಗೆಲ್ಲ ಮಾತಾಡಬೇಡಿ'.

"ಹೋಗಲಿ, ಹೇಗಿದೆ ನಿನ್ನ ನೌಕರಿ?"

"ಎಂದಿಗೋ ಮುಗಿದು ಹೋಯಿತು ನೌಕರಿ ನಾನು ಈಗ ಆಫೀಸ್ ನೌಕರಳಲ್ಲ. ನಿಮ್ಮ ನೌಕರಳು."

"ಅದೇಕೆ ನೌಕರಿ ಬಿಟ್ಟೆ ಉಷಾ, ಅಷ್ಟೊಂದು ಆಸೆ ಪಡುತ್ತಿದ್ದೆಯಲ್ಲ?"

"ಅದನ್ನೆಲ್ಲಾ ಕೇಳುವಷ್ಟು ಸಮಯ ಇಲ್ಲ. ನೀವು ನನ್ನನ್ನು ಕ್ಷಮಿಸಿದ್ದೇನೆ ಎಂದು ತಿಳಿಸಿದರೆ ಅನಂತರ ಎಲ್ಲ ವಿಷಯವನ್ನೂ ತಿಳಿಸುತ್ತೇನೆ.

"ಒಂದು ಬಾರಿಯಲ್ಲ ನೂರು ಬಾರಿ ಕ್ಷಮಿಸಿದ್ದೇನೆ, ಈಗಲೇ ಹೇಳುತ್ತೀಯಾ"

"ನಿಮ್ಮ ಬಾಯಿಂದ ಇಷ್ಟು ಮಾತು ಬಂತಲ್ಲ, ಅಷ್ಟು ಸಾಕು ಮೊದಲು ಕಾಫಿ ಕುಡಿದು ಅನಂತರ ಊಟ ಮಾಡಿ ಆ ಮೇಲೆ ಉಳಿದ ಮಾತು" ಎಂದು ಹೇಳಿ ಜಿಂಕೆಯಂತೆ ಮರೆಯಾದಳು ಉಷಾ.

"ಭಲೆ ಹುಡುಗಿ" ಎಂದು ಮನಸ್ಸಿನಲ್ಲೇ ನಕ್ಕ ಶಂಕರ.

"ಅಂತೂ ಈ ಘಾಟಿ ಹೆಣ್ಣು ತನ್ನ ಹಟವನ್ನು ಬಿಡಲೇ ಇಲ್ಲ. ಇವಳಿಗೆ ಸಕ್ಕ ಬುದ್ಧಿ ಯಾರ್ನೇನೋ ಕಲಿಸಿದಂತಾಯಿತು ಎಂದುಕೊಂಡು ತನ್ನ ಮಿತ್ರ ಚಂದ್ರನ ಉಪಕಾರಕ್ಕೆ ಮನದಲ್ಲಿಯೇ ಕೃತಜ್ಞತೆಗಳನ್ನು ಅರ್ಪಿಸಿದ ಶಂಕರ

ಚಳಿಗಾಲ ಕಾಲಿರಿಸಿದೆ

ಆಲಿ ನರಿಯ ತೊಗಲಿಗೂ ಬೆಲೆಯಿದೆ

ಉಣ್ಣೆ ಉಡುಪುಗಳ ತಯಾರಿಕೆಯಲ್ಲಿ ಪಶ್ಚಿಮ ಜರ್ಮನಿ ಬಹು ಮುಂದುವರಿದಿದೆ. ಚಳಿಗಾಲ ಹತ್ತಿರ ಬಂದಾತೆ ಜರ್ಮನಿಯಲ್ಲಿ ಉಣ್ಣೆ ವಸ್ತ್ರಗಳ ತಯಾರಿಕೆಯು ಏರುತ್ತಲೇ ನಡೆಯುವುದು ಜರ್ಮನ್ನರು ಉಣ್ಣೆ ಉಡಿಗೆಗಳನ್ನು ಹೇರಳವಾಗಿ ಕೊಂಡರೂ, ರಫ್ತು ಮಾಡುವಷ್ಟನ್ನು ಜರ್ಮನಿಯ ಬಟ್ಟೆ ಉದ್ಯಮಿಗಳು ತಯಾರಿಸುತ್ತಿದ್ದಾರೆ. ಪ್ರಾಣಿಗಳ ತೊದಲಿನಲ್ಲಿ ತಯಾರಿಸಿದ ನಯವಾದ, ಆಕರ್ಷಕವಾದ ತೊಡಿಗೆಗಳಿಗಂತೂ ಈಗ ವಿಶೇಷ ಗಿರಾಕಿಯಿದೆ.

ಪಶ್ಚಿಮ ಜರ್ಮನಿಯಲ್ಲಿ ಮಾಗಿಕಾಲವು ಮೆಲ್ಲಡಿಯಿಡುತ್ತಿದೆ ಅಂತೆಯೇ ಉಣ್ಣೆ ಉಡಿಗೆಗಳನ್ನು ತಯಾರಿಸುವ ಗಿರಣಿಗಳು ರಾತ್ರಿಹಗಲೆನ್ನದೆ ಕಾರ್ಯೋನ್ಮುಖವಾಗಿವೆ. ನೂತನ ಮಾದರಿಗಳಲ್ಲಿ, ಆಕರ್ಷಕ ವರ್ಣಗಳಲ್ಲಿ ಉಡಿಗೆಗಳನ್ನು ತಯಾರಿಸಲಾಗುತ್ತಿದೆ. ಬಟ್ಟೆ ಅಂಗಡಿಗಳ ಒಂದೊಂದು, ಕಪಾಟಿನಲ್ಲಿಯೂ ಉಣ್ಣೆ ಉಡಿಗೆಗಳೇ ತೂಂಟಿಹೋಗಿವೆ. ಶಿಬಿರದಿಂದ ಉಂಗುಷ್ಟದ ವರೆಗೆ ಧರಿಸುವ ಉಣ್ಣೆ ಉಡಿಗೆಗಳು, ಕೋಟುಗಳು, ಸ್ವೆಟರ್‌ಗಳು ಮುಂತಾದವುಗಳಲ್ಲದೆ, ಪ್ರಾಣಿಗಳ ರೋಮದಲ್ಲಿ ತಯಾರಾದ ಮೇಲು ಹೊದಿಕೆಗಳು ಕಾಲರ್, ಟೈ, ಕೈಚೀಲ, ಕಾಲುಚೀಲ ಮುಂತಾದವುಗಳನ್ನು ಈಗ ಜರ್ಮನಿಯಲ್ಲಿ ಎಲ್ಲಿಂದರಲ್ಲಿ ನೋಡಬಹುದು ಎರಡನೆಯ ಮಹಾ ಯುದ್ಧದ ಮುನ್ನ, ಈಗ ಸೋವಿಯತ್ ವಶದಲ್ಲಿರುವ ಪೂರ್ವ ಜರ್ಮನ್ ವಿಭಾಗದಲ್ಲಿರುವ ಲೀಪ್‌ಜಿಗ್ ನಗರವು ಉಣ್ಣೆ ತೊಡಿಗೆಗಳ ತಯಾರಿಕೆಯಲ್ಲಿ ವಿಶ್ವದಲ್ಲೇ ಅಗ್ರಸ್ಥಾನವನ್ನು ವಹಿಸಿತ್ತು, ಹೊರ ದೇಶಗಳಿಗೆ ಇಲ್ಲಿಂದ ಹೇರಳವಾದ ವಸ್ತ್ರಗಳನ್ನು ರಫ್ತು ಮಾಡಲಾಗುತಿತ್ತು. ಎರಡನೆಯ ಮಹಾ ಯುದ್ಧದ ನಂತರ, ಲೀಪ್‌ಜಿಗ್‌ಗೆ ಪೋಟಿಯಾಗಿ ಉಣ್ಣೆ ಉದ್ಯಮವನ್ನು ಆರಂಭಿಸಿದ ದೇಶಗಳಾದ ಅಮೇರಿಕಾ, ಬ್ರಿಟನ್, ಫ್ರಾನ್ಸ್ ಇಟಲಿ, ಸ್ವೀಡನ್, ಡೆನ್ಮಾರ್ಕ್ ಮುಂತಾದ ದೇಶಗಳು ಅತಿ ಶೀಘ್ರವಾಗಿ ಪ್ರಗತಿಯನ್ನು ಸಾಧಿಸಿದವು.

ಲೀಪ್‌ಜಿಗ್ ಸೋವಿಯತ್ ಆಕ್ರಮಣಕ್ಕೆ ಸೇರಿಕೊಂಡರೂ ಪಶ್ಚಿಮ ಜರ್ಮನಿಯು ಕೈ ಕಟ್ಟಿ ಕೂಡಲಿಲ್ಲ. ತದನಂತರ ಎಣ್ಣೆ ತಯಾರಿಕಾ ಕೇಂದ್ರಗಳನ್ನು ಮ್ಯೂನಿಚ್, ಬರ್ಲಿನ್, ಹ್ಯಾಂಬರ್ಗ್, ಡಸ್ಸೆಲ್ ಡಾರ್ಫ್ ಮುಂತಾದ ನಗರಗಳಲ್ಲಿ ತೆರೆಯಲಾಯಿತು. ರೋಮದ ಉಡಿಗೆಗಳನ್ನು ತಯಾರಿಸುವುದರಲ್ಲಿ ಫ್ರಾಂಕ್ ಫರ್ಟ್ ವಿಶೇಷ ಕೀರ್ತಿಯನ್ನು ಸಾಧಿಸಿದೆ. ಪಶ್ಚಿಮ ಜರ್ಮನಿಯಲ್ಲಿ ಈಗ ಒಟ್ಟು ೨೦೦೦ ಕೇಂದ್ರಗಳಲ್ಲಿ ಉಣ್ಣೆ ಉಡಿಗೆಗಳನ್ನು ತಯಾರಿಸಲಾಗುತ್ತಿದೆ. ಈಗ ಜರ್ಮನಿಯಲ್ಲಿ ಉಣ್ಣೆ ವಸ್ತ್ರಗಳನ್ನು ಅತಿ ಹೆಚ್ಚಿನ ಸಂಖ್ಯೆಯಲ್ಲಿ ತಯಾರಿಸುತ್ತಿರುವುದರಿಂದ ಜರ್ಮನ್ ಬೇಡಿಕೆಗಳನ್ನೆಲ್ಲಾ ಪೂರೈಸಿ ವಿದೇಶಗಳಿಗೂ ಹೇರಳವಾಗಿ ರಫ್ತು ಮಾಡಲಾಗುತ್ತಿದೆ.

ಪ್ರಾಣಿಗಳ ರೋಮದ ಉಡಿಗೆಗಳಿಗಂತೂ ಜರ್ಮನಿಯಲ್ಲಿ ವಿಶೇಷಬೇಡಿಕೆಯಿದೆ ಒಂದೊಂದು ವರ್ಷ ಒಂದೊಂದು ಪ್ರಾಣಿಯ ತೊದಲಿಗೆ ಬೇಡಿಕೆ ವಿಶೇಷವಾಗಿರುತ್ತದೆ. ಅದೇ ರೀತಿಯಲ್ಲಿ ಈ ವರ್ಷ ಮುಂಗುಸಿಯ ತೊದಲಿಗೆ ಮಹತ್ವಬಂದಿದೆ. ಪರ್ಸಿಯಾದ ಕುರಿ, ಮಸ್ಕ್ ಎಂಬ ಜಾತಿಯ ಇಲಿ, ಬೀವರ್, ಓಸಿಲಾಟ್, ಓಕೆ, ನರಿ ಮುಂತಾದುವುಗಳ ರೋಮ ಹಾಗೂ ತೊಗಲುಗಳಿಂದ ತಯಾರಾದ ವಸ್ತುಗಳಿಗೂ ಮೆಚ್ಚುಗೆಯಿದೆ. ನೋಡಿದವರ ಮನಸ್ಸನ್ನು ಒಡನೆಯೇ ಆಕರ್ಷಿಸುವಂತಹ ರೀತಿಯಲ್ಲಿ ಉಡಿಗೆಗಳನ್ನು ತಯಾರಿಸುವುದರಲ್ಲಿ ಜರ್ಮನ್ ಸಂಸ್ಥೆಗಳು ಒಂದಕ್ಕೊಂದು ಪೋಟಿಯಾಗಿವೆ. ಇವುಗಳಲ್ಲಿರುವ ಪರಿಣತರು ಹೊಸ ಹೊಸ ಫ್ಯಾಷನ್‌ಗಳನ್ನು ಕಂಡ ಹಿಡಿಯುತ್ತಲೇ ಇರುತ್ತಾರೆ. ಜರ್ಮನ್ ತರುಣಿಯರು ವಿಶೇಷ ಅಲಂಕಾರ ಪ್ರಿಯೆಯರು. ಅವರಿಗಾಗಿ ಹೊಸ ಫ್ಯಾಷನ್‌ಗಳನ್ನು ಸೃಷ್ಟಿಸಲಾಗುತ್ತಿದೆ.

NAVAYUGA 10-12-1964
Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೦-೧೨-೬೪ರಿಂದ ೧೬-೧೨-೬೪ರ ವರೆಗೆ

೧. ಮೇಷ.

ಗೋಚಾರಾಂಧಕಾರದಲ್ಲಿ ಸಿಲುಕಿದ್ದ ನಿಮಗಿಂದು ದೂರದಿಂದ ಆಶಾಕಿರಣವೊಂದು ಕಾಣಿಸಲಿದೆ. ಬಾಲ್ಯ ಸ್ನೇಹಿತರ ನೆರವಿನಿಂದಾಗಿ ನಿಮ್ಮ ಕೆಲವೊಂದು ತಾಪತ್ರಯಗಳು ದೂರವಾಗುವವು. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟವಾಗಲಾರದು. ಅಂತೂ ದಿನ ನಿತ್ಯದ ಆಗುಹೋಗುಗಳಿಗಾಗಿ ಹೆರವರನ್ನಾಶ್ರಯಿಸಲಾರಿರಿ. ಆದರೆ ಶತ್ರುಜನರ ದಾಯಾದಿ ವರ್ಗದವರ ಕಾಟದಿಂದ ಮುಕ್ತರಾಗಲಾರಿರಿ. ತಾ. 10, 11, 15, 16 ಈ ದಿನಗಳು ಉಳಿದ ದಿನಗಳಿಗಿಂತ ಉತ್ತಮವಾಗಿವೆ.

೨ ವೃಷಭ

ನಿಮ್ಮ ಪರಿಸ್ಥಿತಿಯಲ್ಲಿಂದು ಏನೊಂದೂ ಸುಧಾರಣೆಯು ಕಂಡುಬರಲಾರದು. ನಿಮ್ಮ ಮನಸ್ಸೂ ಕೂಡ ಗಾಳಿಗೆದುರಾಗಿಟ್ಟ ದೀಪದಂತೆ ಅತೀವ ಚಪಲವಾಗಿ ನಿಮ್ಮ ಅಂಕಿತದಲ್ಲಿರಲೊಲ್ಲದು. ಸಾಲ ಮಾಡಿಯಾದರೂ ಖರ್ಚು ಮಾಡುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ಸೋಲುನಷ್ಟಗಳುಂಟಾಗಲಿದೆ. ವಿಶೇಷತಃ ಸಾಂಸಾರಿಕ ತಾಪತ್ರಯಗಳಿಂದ ಬಹಳವಾಗಿ ಪೀಡಿತರಾಗುವಿರಿ. ದ್ಯೂತ ವ್ಯಸನಿಗಳಿಗೆ ಮಾತ್ರ ಈ ವಾರವು ಸ್ವಲ್ಪ ಅನುಕೂಲವಾಗಿ ಪರಿಣಮಿಸೀತು. ವಾರಾದಿಯ 5 ದಿನಗಳಲ್ಲಿ ಮಿತ್ರಮುಖದಿಂದ ಇಷ್ಟಾರ್ಥವಂ ಪಡೆವಿರಿ.

೩. ಮಿಥುನ

ಈ ವಾರದಲ್ಲಿ ನಿಮ್ಮ ಗ್ರಹಗತಿಯು ತೀರ ಬದಲಾಯಿಸಿಹುದು. ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ಲಭಿಸಿದರೂ ಕೂಡ ಆಕಸ್ಮಿಕ ಶೋಕಸಂದರ್ಭಗಳಿಗೆ ನೀವು ಗುರಿಯಾಗಲಿರುವಿರಿ. ಅನಿರೀಕ್ಷಿತ ಪ್ರವಾಸದ ಯೋಗವಿದೆ. ವಿನಾಕಾರಣ ಇತರರೊಡನೆ ಕಲಹವಾಗುವದು. ಆದರೂ ಗುರ್ವಂಗಾರಕರ ಪೂರ್ಣ ಬೆಂಬಲವು ನಿಮಗಿರುವುದರಿಂದ ಶತ್ರುಜನರ ಬೆದರಿಕೆಗೆ ಸೊಪ್ಪುಹಾಕುವಿರಿ. ಹಣದ ತೊಂದರೆಯೂ ಕಾಣಿಸಲಾರದು. ವಾರಾಂತ್ಯದ 4 ದಿನಗಳು ಸುಖ ಇಷ್ಟಪ್ರದಗಳಿವೆ.

೪. ಕರ್ಕಟ

ಧನಪತಿಯಾದ ರವಿಯು ಉಚ್ಚಸ್ಥಾನದಲ್ಲಿ ಬುಧನಿಂದ ಕೂಡಿರುವ ಕಾರಣ ಇಂದು ನಿಮ್ಮ ಹೆಚ್ಚಿನ ಬಯಕೆಗಳು ನಿರ್ವಿಘ್ನದಿಂದ ನೆರವೇರುವವು. ಆರ್ಥಿಕ ತಗಾದೆಯಿಂದ ಮುಕ್ತರಾಗುವಿರಿ. ಕಫ ಪಿತ್ಥ ದೋಷದಿಂದ ಆರೋಗ್ಯಕ್ಕೆ ಧಕ್ಕೆಯುಂಟಾಗುವ ಸಂಭವವಿದೆ. ಮಾತ್ರವಲ್ಲ, ಜನತೆಯೊಡನೆ ನಿಷ್ಠುರವಾಗಿ ವರ್ತಿಸುವಿರಿ. ಶ್ರಮಜೀವಿಗಳಿಗೀ ಕಾಲವು ಸ್ವಲ್ಪ ಕಷ್ಟದಾಯಿಯಾಗಿ ಪರಿಣಮಿಸೀತು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅಭ್ಯಾಸಕ್ಕೆ ತುಂಬ ಅನುಕೂಲ ಒದಗಲಿದೆ. ವಾರಾಂತ್ಯದ 2 ದಿನಗಳಲ್ಲಿ ಇಷ್ಟಸಿದ್ಧಿ ಲಾಭ ಸುಖಗಳಂ ಪಡೆವಿರಿ.

೫. ಸಿಂಹ

ಮನೆಗೆ ಮಾರಿ ಊರಿಗೆ ಉಪಕಾರಿ ಎಂಬ ಮಾತಿಗೆ ನೀವಿಂದು ಸಿಲುಕಲಿರುವಿರಿ. ಆದರೂ ಸಮಾಜದಲ್ಲಿ ನಿಮಗಿಂದು ಒಳ್ಳೆಯ ಸ್ಥಾನ ಲಭಿಸುವದು. ವ್ಯವಹಾರ ಚತುರರಾದ ನಿಮಗೆ ನಿರೀಕ್ಷೆಗಿಂತಲೂ ಹೆಚ್ಚಿನ ಧನಾಗಮವಾಗಲಿದೆ. ಆದರೆ ಅನಿರೀಕ್ಷಿತ ಪ್ರವಾಸದಿಂದಾಗಿ ದೇಹಾಲಸ್ಯ ಧನಹಾನಿ ಆಕಸ್ಮಿಕ ಅಪಘಡಗಳು ಪ್ರಾಪ್ತವಾಗುವಂತಿವೆ. ರಾಜಕೀಯ ವ್ಯವಹಾರಕ್ಕಿದು ಯೋಗ್ಯ ಸಮಯವಲ್ಲವು. ವಾರಾದಿಯ ಮೂರು ದಿನಗಳಲ್ಲಿ ಧನಲಾಭ ಗೃಹಸುಖಾದಿಗಳನ್ನು ಪಡೆಯುವಿರಿ.

೬. ಕನ್ಯಾ

ನಿಮ್ಮ ಆಯವ್ಯಯಗಳಿಂದು ಸಮತೂಕದಲ್ಲಿ ನಿಲ್ಲಲಿವೆ. ಮಹಾಜನರ ವಿರೋಧವಿದ್ದರೂ ಶ್ರಮಸಹಿಷ್ಣುಗಳಾದ ನಿಮಗೆ ಯಾವ ಕಾರ್ಯದಲ್ಲೂ ಪರಾಭವವುಂಟಾಗದು. ಖರ್ಚಿಗೆ ಸಾಕಷ್ಟು ದುಡಿಮೆಯಿದ್ದರೂ ಮನಸ್ಸಿಗೆ ನೆಮ್ಮದಿಯಿರಲೊಲ್ಲದು. ಅರ್ಧಾಂಗಿಯ ಆರೋಗ್ಯಕ್ಕೆ ತುಂಬಾ ಹಾನಿ ಇದೆ. ಸ್ವಜನರ ವಿರೋಧ ವಿಯೋಗಗಳಿಗೆರವಾದ ನಿಮಗೆ ವಾರಾದಿಯ 5 ದಿವಸಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೭. ತುಲಾ

ದೈವಬಲವುಳ್ಳ ಪಾತ್ರರಾದ ನಿಮಗೆ ಇಂದಿನ ದಿನಗಳು ಸುಗಮವಾಗಿ ಸಾಗಲಿವೆ. ಬಂಧುಮಿತ್ರರ ನೆರವು ಜನತೆಯ ಸಹಕಾರವುಳ್ಳ ನೀವು ಯಾವ ಕಾರ್ಯದಲ್ಲೂ ಪರಾಜಿತರಾಗಲಾರಿರಿ. ವಿಶೇಷತಃ ನಿಮ್ಮ ಆರ್ಥಿಕ ಭಾಗವು ತುಂಬ ಸುಧಾರಿಸಲಿದೆ. ಪಶು ಭೃತ್ಯಾದಿ ಗೃಹಪರಿವಾರದಲ್ಲಿ ಯಾವೊಂದು ತರದ ಕುಂದುಕೊರತೆಯೂ ಇರಲಾರದು. ಕೋರ್ಟು ಕಚೇರಿಗಳ ವ್ಯವಹಾರಗಳಲ್ಲಿ ವಿಜಯ ಕೀರ್ತಿ ಲಾಭಗಳಂ ಪಡೆವಿರಿ. ವಾರಾಂತ್ಯದ 4 ದಿನಗಳು ತುಂಬ ಅನುಕೂಲವಾಗಿವೆ.

೮ ವೃಶ್ಚಿಕ

ದೇಹಾಲಸ್ಯ ವಿರೋಧಿಗಳ ಉಪಟಳಗಳಿಂದಾಗಿ ನಿಮ್ಮ ಮನಸ್ಸಿಗೆ ಸ್ವಲ್ಪವೂ ನೆಮ್ಮದಿಯಿರಲಾರದು. ನೌಕರಿ ವ್ಯಾಪಾರಾದಿ ವಿಭಾಗಗಳಲ್ಲಿ ನಿಮ್ಮ ಶ್ರಮವು ಸಾರ್ಥಕವಾಗಲಿದೆ. ಕೆಲವೊಮ್ಮೆ ವಿಷಯಾದಿಗಳಿಗೆ ಮನಸೋತು ವ್ಯರ್ಥ ಧನ ವ್ಯಯಿಸುವಿರಿ. ಸ್ವಂತ ಭೋಗಕ್ಕೆ ಬೇಕಾದ ಸಲಕರಣೆಗಳು ಅನಾಯಾಸದಿಂದ ಲಭಿಸಲಿವೆ. ಮಹಾತ್ಮರೊಡನೆ ಕಲಹವಾದೀತು ಮಾತ್ರವಲ್ಲ, ಆಪ್ತಮಿತ್ರರೊಡನೆಯೂ ಮನಸ್ತಾಪವುಂಟಾಗಲಿದೆ. ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಬಯಕೆಗಳು ಪೂರ್ಣವಾಗಲಿವೆ.

೯. ಧನು

ಯಾರೇ ಹೊಗಳಲಿ ವ ಯಾರೇ ತೆಗಳಲಿ ನೀವು ನಿಮ್ಮ ಕರ್ತವ್ಯದಿಂದ ವಿಮುಖರಾಗಲಾರಿರಿ. ನಿಮ್ಮ ನಿರೀಕ್ಷೆಯೂ ಕೂಡ ಸಫಲವಾಗಲಿದೆ. ದೇಹಸುಖಪತಿಯಾದ ಬೃಹಸ್ಪತಿಯ ಪೂರ್ಣಾನುಗ್ರಹಕ್ಕೆ ಪಾತ್ರರಾದ ನಿಮ್ಮ ದೇಹಕ್ಕೆ ಸುಖವೂ ಮನಸ್ಸಿಗೆ ಶಾಂತಿಯೂ ಕೂಡ ಲಭಿಸುವದು. ಪರಿವಾರ ವರ್ಗದವರಿಂದ ಕೂಡಿದ ನಿಮಗೆ ರಾಜಕೀಯದಲ್ಲಿ ಮಾತ್ರ ಹೆಚ್ಚಿನ ಪ್ರಯೋಜನ ಸಿಗಲೊಲ್ಲದು. ವಾರಾದಿಯ 3 ದಿನಗಳಲ್ಲಿ ಗೃಹಸುಖ ವಿಜಯ ಲಾಭಗಳನ್ನು ಪಡೆವಿರಿ.

೧೦. ಮಕರ

ನಿಮ್ಮ ಸಂಕಲ್ಪಗಳಿಂದು ತಿರುಕನ ಕನಸಿನಂತಾಗಲಿವೆ. ನಿಮ್ಮ ಭಾಗ್ಯಪತಿಯಾದ ಬುಧನು ವ್ಯಯಕ್ಕೆ ಬಂದಿಹನು. ಲಾಭ ಸುಖಪತಿಯಾದ ಕುಜನೂ ಅಷ್ಟಮಕ್ಕೆ ಪ್ರವೇಶಿಸಿಹನು. ಅಂದಮೇಲೆ ಇಂದು ನಿಮ್ಮ ತಾಪತ್ರಯಗಳು ಹೇಳತೀರವು. ದೇಹಾಲಸ್ಯ ಆರ್ಥಿಕ ದುರವಸ್ಥೆ ಶತ್ರುಜನರ ಕಾಟಗಳಿಗೊಗಾದ ನಿಮಗೆ ಸ್ವಪ್ನದಲ್ಲೂ ಕೂಡ ಸುಖವಿರದೆಂದರೆ ತಪ್ಪಾಗದು. ಬಹಳ ಜಾಗರೂಕತೆಯಿಂದ ನೀವೀ ದಿನಗಳನ್ನು ಕಳೆಯಬೇಕಾಗಿವೆ. ತಾ. 13, 14 ಮಾತ್ರ ಹೆಚ್ಚಿನ ದೋಷಕಾರಿಯಲ್ಲ.

೧೧. ಕುಂಭ

ವ್ಯಾಪಾರ ವ್ಯವಹಾರಗಳಲ್ಲಿ ಆಕಸ್ಮಿಕವಾಗಿ ನಷ್ಟ ಸಂಭವಿಸಲಿದೆ. ಎಷ್ಟೇ ಮಿತಭಾಷಿಯಾಗಿದ್ದರೂ ಕೂಡ ಇಂದು ಕಲಹವಾದೀತು. ಖರ್ಚಿಗೆ ಸಾಕಷ್ಟು ಆದಾಯವಿಲ್ಲದ್ದರಿಂದಾಗಿ ಹಣದ ಬಿಕ್ಕಟ್ಟು ಕಾಣಿಸೀತು. ಶ್ರಮಜೀವಿಗಳಿಗೂ ಕಲಾವಿಲಾಸಿಗಳಿಗೂ ಈ ಕಾಲವು ತುಂಬ ಪ್ರತಿಕೂಲವಾಗಿದೆ. ವಾತದೋಷದಿಂದಾಗಿ ಅಂಗಾಂಗಗಳಲ್ಲಿ ನೋವು ಕಾಣಿಸುವ ಸಂಭವವಿದೆ. ತಾ. 10, 11, 12, 15, 16 ಇವು ಹೆಚ್ಚಿನ ಅನಿಷ್ಟಕಾರಿಗಳಾಗವು.

೧೨ ಮೀನ

ಸಾಡೇಸಾತ್ ಶನಿಯೋರ್ವನನ್ನುಳಿದು ಇತರ ಎಲ್ಲಾ ಗ್ರಹರ ಕೃಪಾಕಟಾಕ್ಷವು ನಿಮ್ಮ ಮೇಲೆ ಪರಿಪೂರ್ಣವಿರುವುದರಿಂದ ನಿಮ್ಮ ಯಾವತ್ತೂ ಬಯಕೆಗಳು ನಿರ್ವಿಘ್ನದಿಂದ ಕೊನೆ ಹೊಂದಲಿವೆ. ಮಧು ತುಂಬಿದ ಸುಮಗಳನ್ನು ಮಧುಕರಗಳು ಬಂದು ಮುತ್ತುವಂತೆ ಸಧ್ಯ ನಿಮ್ಮ ಪರಿವಾರ ವರ್ಗವು ಬಹು ದೀರ್ಘವಾಗಲಿದೆ. ಸರ್ವತ್ರ ಸ್ಥಾನಗಳು ತಾವಾಗಿ ಲಭಿಸುವವು. ನಿಮ್ಮ ಕಾರ್ಯದಕ್ಷತೆಯಂ ಕಂಡ ಶತ್ರುವೃಂದವು ಕೂಡ ಮೂಗಿನ ಮೇಲೆ ಬೆರಳಿಟ್ಟೀತು. ತಾ. 13, 11ರಲ್ಲಿ ಸುಖಭೋಗ ಲಾಭಗಳು ಪ್ರಾಪ್ತವಾಗಲಿವೆ.

ವಿದಾಯ ಸತ್ಕಾರ

ಮೂಳೂರು:-- ಕಾಪು ಅಭಿವೃದ್ಧಿ ಕ್ಷೇತ್ರದ ಡಿಸ್ಕ್ಟಿ.ಬಿ.ಡಿ.ಒ. ಶ್ರೀ ಯಚ್. ಯಂ. ಮುರುಗೇಶಯ್ಯನವರಿಗೆ ಇಲ್ಲಿಂದ ವರ್ಗವಾದ ಪ್ರಯುಕ್ತ ಅವರನ್ನು ಬೀಳ್ಕೊಡುವ ಸತ್ಕಾರ ಕೂಟವು ತಾ. 21-11-64ರಲ್ಲು ಉಚ್ಚಿಲ ಯು. ಬಿ. ಯಂ. ಸಿ. ಹಯರ್ ಎಲಿಮೆಂಟರಿ ಶಾಲೆಯಲ್ಲಿ ಕಾಪು ಮಂಡಲ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ. ಟಿ ವೆಂಕಟ್ರಮಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಶ್ರೇಯೋಭಿವೃದ್ಧಿ ಸಮಿತಿಯ ಮತ್ತು ಮೂಳೂರು ಪಂಚಾಯತದ ಅಧ್ಯಕ್ಷ ಶ್ರೀ ಯಂ. ಭೋಜ ಹೆಗ್ಡೆಯವರೂ ಸ್ವಾಗತ ಭಾಷಣ ಮಾಡುತ್ತಾ ಶ್ರೀ ಯಚ್. ಯಂ. ಮುರುಗೇಶಯ್ಯನವರು ಕಾಪು ಕ್ಷೇತ್ರದಲ್ಲಿಯಾಗೂ ಮೂಳೂರು ಗ್ರಾಮದಲ್ಲಿ ಮಾತ್ರವಲ್ಲದೆ, ಸದ್ರಿ ಯು ಬಿ ಯಂ. ಸಿ. ಶಾಲೆಯ ಅಭಿವೃದ್ಧಿಗೆ ದುಡಿದಿರುವ ವಿಚಾರವನ್ನು ವಿವರಿಸುತ್ತಾ ಸದ್ರಿಯವರಿಗೆ ಉತ್ತರೋತ್ತರ ವೃದ್ಧಿಯನ್ನು ಹಾರೈಸಿದರು. ಸಭಿಕರ ಪೈಕಿ ಶ್ರೀ ಯಂ ಜಯರಾಮ ಹೆಗ್ಡೆ ಮತ್ತು ಬಿ. ಕರುಣಾಕರ ಶೆಟ್ಟಿಯವರು ಮುಖ್ಯ ಅಥಿತಿಗಳ ಗುಣಗಾನ ಮಾಡಿದರು. ಶ್ರೀ ಮುರುಗೇಶಯ್ಯನವರು ತನ್ನನ್ನು ಸತ್ಕರಿಸಿದ ಬಗ್ಗೆ ಕೃತಜ್ಞತೆಯನ್ನು ಸೂಚಿಸಿದ ಬಳಿಕ ಅಧ್ಯಕ್ಷರು ಮುಖ್ಯ ಅಥಿತಿಗಳ ಕಾರ್ಯದಕ್ಷತೆಯನ್ನು ಪ್ರಶಂಸಿಸಿದರು. ಶಾಲಾ ಶ್ರೇಯೋಭಿವೃದ್ಧಿ ಸಮಿತಿಯ ಕಾರ್ಯದರ್ಶಿ ಶ್ರೀಮತಿ, ಡಿ. ಆರ್. ಸಾಲಿನ್ಸ್‌ರವರಿಂದ ಧನ್ಯವಾದ ಸಮರ್ಪಣೆಯಾದ ನಂತರ ಉಪಾಹಾರದೊಂದಿಗೆ ಸಭೆ ಮುಕ್ತಾಯವಾಯಿತು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ —
ಡಾ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನೆಯಿಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾಪ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ. ಪ್ರತ್ಯೇಕ)

READ &
ADVERTISE IN
NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ಸಂಪುಟ ೪೪]   ದಶಂಬರ, ೧೭, ೬೪   [ಸಂಚಿಕೆ ೧೬

Phone No.
ಫೋನ್ ನಂಬ್ರ: 226

leading nationalist weekly

೨೦
ಪೈಸೆ

ಕಥಾ ಪ್ರಪಂಚ

ಹೃದಯ ಮಂಥನ

ಬರೆದವರು
ಶ್ರೀ ಹಾರ್ಯೋಡಿ ಮಹಾಬಲೇಶ್ವರ ಐತಾಳ.

ವನಜಾಕ್ಷಿ ಥರಥರನೆ ಕಂಪಿಸಿದಳು. ಮೈಯಲ್ಲೆಲ್ಲ ವಿದ್ಯುತ್ಸಂಚಾರವಾದಂತಾಗಿ ರೋಮ ರೋಮಗಳೂ ನಿಮಿರಿ ನಿಂತುವು.

ತನಗೆ ಇದೇನಾಗುತ್ತಿದೆ? ಹೃದಯಾಂತರಾಳದಲ್ಲಿ ತರಂಗ ತರಂಗವಾಗಿ ಎದ್ದೇಳುತ್ತಿರುವ, ಅಪೂರ್ವವಾದ ಈ ವಿಚಿತ್ರ ಭಾವನೆಗಳ ಅರ್ಥವೇನು?--ಎಂದು ಚಿಂತಿಸ ತೊಡಗಿದಳು ವನಜಾಕ್ಷಿ.

"ಒಂದೆರಡು ತಾಸುಗಳ ಕಾಲ ಮಾತ್ರ ನನ್ನ ಜೊತೆಯಲ್ಲಿ ಪ್ರಯಾಣ ಮಾಡಿದ ಆ ಅಪರಿಚಿತ ಯುವಕನ ನೆನಪು ನನಗೇಕೆ ಆಗುತ್ತಿದೆ?— ಇಲ್ಲ, ನಾನವನನ್ನು ಮರೆತು ಬಿಡುತ್ತೇನೆ, ಸಂಪೂರ್ಣ ಮರೆತು ಬಿಡುತ್ತೇನೆ ನಾನೇಕೆ ಅವನನ್ನು ಸ್ಮರಿಸಬೇಕು?"

"ಮರೆತು ಬಿಡುತ್ತೇನೆ" ಮರೆತುಬಿಡುತ್ತೇನೆ—ಎಂದು ಹತ್ತಾರು ಬಾರಿ ಆಕೆ ತನ್ನೊಳಗೇ ಅಂದುಕೊಂಡಳು.

ಆದರೆ ಆ ಅಪರಿಚಿತ ಯುವಕನನ್ನು ಆಕೆ ಮರೆಯದಾದಳು. ಮತ್ತೆ ಮತ್ತೆ ಅವನದೇ ನೆನಪು! ಪುನಃ ಪುನಃ ಅವನ ಸುಂದರ ವದನಾರವಿಂದ ಅವಳ ಕಣ್ಣಾಗ ಳೆದುರು ನಿಲ್ಲುತ್ತಿದೆ! ಸಂಯಮವು ಕ್ಷಣ ಕ್ಷಣಕ್ಕೂ ಶಿಥಿಲವಾಗುತ್ತಿದೆ. ಯಾಕೆ ಹೀಗಾಗುತ್ತಿದೆ? ಯಾಕೆ ಹೀಗಾಗುತ್ತಿದೆ?...?

ಇದ್ದಕ್ಕಿದ್ದಂತೆಯೇ ಅವಳಿಗೆ ತನ್ನ ತಾಯಿಯ ಕೊನೆಗಾಲದ ನೆನಪಾಯಿತು. ತಾಯಿ ತನ್ನ ಕೊನೆಯುಸಿರನ್ನೆಳೆಯುತ್ತಿದ್ದಾಗ ಪ್ರೀತಿಯಿಂದ ಮೈ ಸವರಿ ಅಂದಿದ್ದ ಆ ಮಾತುಗಳನ್ನು ಮರೆಯುವುದೆಂತು? ತಾಯಿಯ ಅಂತರಂಗವನ್ನು ಸೀಳಿಕೊಂಡು ಬಂದಿದ್ದ ಆ ನುಡಿಗಳು! ಕಣ್ಣೀರು ಸುರಿಸುತ್ತ ವಾತ್ಸಲ್ಯದಿಂದ ಹೇಳಿದ ಆ ಮಾತುಗಳು!

ವನಜಾ ಅಂದು ತನ್ನ ತಾಯಿಗೆ ವಚನವಿತ್ತಿದ್ದಳು. ತಾಯಿಯ ಅಪೇಕ್ಷೆಯಂತೆಯೇ ಆಚರಿಸುವವಳಾಕೆ....ಆದರೆ....?

ಆದರೆ?

ಇಂದು ಅವಳು ಮಾಡುತ್ತಿರುವುದೇನನ್ನು?

ತಾಯಿಯ ಮಾತನ್ನು ತಾನಿಂದು ಉಲ್ಲಂಘಿಸ ಹೊರಟಿರುವೆನಲ್ಲ—ಎಂದು ಅನ್ನಿಸಿ ವನಜಾಕ್ಷಿ ಭೀತಳಾದಳು. ತಾಯಿ ತೋರಿದ ದಾರಿಯಲ್ಲಿ ತಾನಿಂದು ಹೆಜ್ಜೆಯನ್ನಿಡುತ್ತಿಲ್ಲವಲ್ಲ ಎಂದು ಆಕೆಗೆ ಪಶ್ಚಾತ್ತಾಪವಾಯಿತು.

ಅಂದಿನ ರಾತ್ರಿ!

ಗಾಢಾಂಧಕಾರ ಕವಿದಿದ್ದ ಅಮಾವಾಸ್ಯೆಯ ರಾತ್ರಿ!

ತಾಯಿಯ ಶವವನ್ನು ಸ್ಮಶಾನಕ್ಕೆ ಸಾಗಿಸಿದ ಬಳಿಕ—

ಶವವನ್ನು ಮಲಗಿಸಿದ ಜಾಗದಲ್ಲಿಟ್ಟಿದ್ದ ದೀಪದ ಮುಂದೆ ಕುಳಿತು ವನಜಾಕ್ಷಿ ಬಿಕ್ಕಿಬಿಕ್ಕಿ ಅಳುತ್ತಿದ್ದಳು.

ಆ ಘಟನೆಯನ್ನು—ತಾಯಿಯ ವಿಯೋಗವನ್ನು—ಆಕೆ ಅಷ್ಟೊಂದು ಸುಲಭವಾಗಿ ಮರೆಯಲಾರಳು!

"ಮಗಳೇ! ಅಪರಿಚಿತನಾದ ಯಾವ ಯುವಕನನ್ನೂ ಮದುವೆಯಾಗಬೇಡ. ಸುಖಿಯಾಗಿ ಬಾಳು"—ಇದು ಆಕೆಯ ತಾಯಿಯ ಕೊನೆಯ ಮಾತಾಗಿತ್ತು. ಅಂದಿನ ವರೆಗೂ ಆಕೆಗಿದ್ದಿದ್ದ ಏಕಮಾತ್ರ ಆಶ್ರಯವೆಂದರೆ ತಾಯಿಯೊಬ್ಬಳೇ. ಆತ್ಮೀಯಳೆಂದರೆ ಅವಳೊಬ್ಬಳೇ. ಅವಳೂ ತೀರಿಕೊಂಡಳು.

ಈಗ ವನಜಾಕ್ಷಿಯು ತನ್ನ ಸೋದರ ಮಾವನ ಛತ್ರಛಾಯೆಯಲ್ಲಿದ್ದಾಳೆ.

ತಾಯಿಯ ಕೊನೆಗಾಲದ ಮಾತುಗಳನ್ನು ವನಜಾಕ್ಷಿ ಅನೇಕ ಬಾರಿ ತನ್ನಲ್ಲಿಯೇ ಮನನ ಮಾಡಿದ್ದಾಳೆ. ಅಪರಿಚಿತರ ವೈವಾಹಿಕ ಸಂಬಂಧದಲ್ಲಿ ಇರಬಹುದಾದ ಆಕರ್ಷಣೆ-ನಾವೀನ್ಯಗಳು ಪರಿಚಯವಾದ ಮೇಲೆ ಆಗುವ ಮದುವೆಯಲ್ಲಿ ಇರಲಾರವು ಎಂದು ವನಜಾಕ್ಷಿ ತೀರ್ಮಾನಿಸಿದ್ದಾಳೆ. ಈ ಆಕರ್ಷಣೆಯೇ—ಈ ನವೀನತೆಯೇ ಎರಡು ಜೀವಗಳನ್ನು, ಎರಡು ಶರೀರಗಳನ್ನು ಒಂದೇ ಒಂದಾಗ ದೃಢ ಸೂತ್ರದಲ್ಲಿ ಬಿಗಿದು ಅವರೆಂದೂ ಮತ್ತೆ ಬೇರೆಯಾಗದಂತೆ ಮಾಡುವ ಪ್ರಮುಖ ಸಾಧನಗಳಾಗಿವೆ. ಆದರೆ ಪರಿಚಿತರೊಳಗಾದ ಮದುವೆಯಲ್ಲಿ ಯಾವುದೇ ಆಕರ್ಷಣೆ ಇರುವುದಿಲ್ಲ ಕೇವಲ ಕ್ಷಣಿಕ ಉಲ್ಲಾಸವಷ್ಟೇ ಇರುತ್ತದೆ. ಅಲ್ಪಾವಧಿಯ ಈ ಉಲ್ಲಾಸವೂ ಮುಗಿಯಿತೆಂದರೆ ವೈವಾಹಿಕ ಬಂಧನವು ಸೆರೆಮನೆಯ ವಾಸಕ್ಕೆ ಸಮಾನವಾಗಿ ಪರಿಣಮಿಸುತ್ತದೆ.

ಇದೆಲ್ಲ ವನಜಾಕ್ಷಿಗೆ ಗೊತ್ತಿದೆ. ಅಷ್ಟು ತಿಳುವಳಿಕೆ ಅವಳಲ್ಲಿದೆ. ಆದರೂ ಅದೇಕೋ ಅವಳ ಮನಸ್ಸು ಇಂದು ಅವಳ ಅಧೀನದಲ್ಲಿಲ್ಲ. ಇಂದು ತನಗೇನಾಗಿದೆಯೆಂದು ತಿಳಿದುಕೊಳ್ಳಲೂ ಆಕೆ ಸರ್ವಥಾ ಅಸಮರ್ಥಳಾಗಿದ್ದಾಳೆ.

ಈ ಮಧುರ ಯಾತನೆ?

ಇದಕ್ಕೆ ಕಾರಣವೇನು?

ಮದುವೆಯಾದ ಬಳಿಕ ಮೊತ್ತಮೊದಲು ಪತಿಗೃಹದಲ್ಲಿ ಕಾಲಿಟ್ಟಾಗ ನವವಧುವು ಲಜ್ಜಾನ್ವಿತಳಾಗುವಂತೆ— ವನಜಾಕ್ಷಿ ಲಜ್ಜಿತಳಾದಳು ಅವಳನ್ನು ನಾಚಿಕೆ ಆವರಿಸಿಕೊಂಡು ಬಿಟ್ಟಿತು.

ವನಜಾಕ್ಷಿಗೆ ಪ್ರಾಯ ಬಂದ ತತ್ಕ್ಷಣವೇ ಅವಳ ತಾಯಿ ತೀರಿಕೊಂಡಳು. ಬುದ್ಧಿ ಬರುವುದಕ್ಕೆ ಮೊದಲೇ ತಂದೆಯೂ ಸ್ವರ್ಗಸ್ಥರಾಗಿದ್ದರು.

ತಾಯಿ ತೀರಿಕೊಂಡ ದಿನ—

ಅಂದು ವನಜಾಕ್ಷಿ ದಿನವಿಡೀ ಅತ್ತಿದ್ದಳು. ಪಕ್ಕದ ಮನೆಯ ಮಡಿ ಮಂಜಮ್ಮ, ಅದರಾಚೆ ಮನೆಯ ಐತಾಳರು, ಎದುರು ಮನೆಯ ಶಾನುಭೋಗರು—ಎಲ್ಲರೂ ಸಮಾಧಾನ ಹೇಳುವವರೇ, ಬದುಕು ಶಾಶ್ವತವಲ್ಲ ಎಂದು ಬಣ್ಣಿಸುವವರೇ. ಮಾವ ಬಂದು ಏನೇನೋ ವೇದಾಂತದ ಮಾತುಗಳನ್ನಾಡಿದರು. ಧೈರ್ಯ ನೀಡಿದರು. ಅದೊಂದೂ ವನಜಾಕ್ಷಿಗೆ ಅರ್ಥವಾಗಿರಲಿಲ್ಲ ಅವಳ ವ್ಯಥೆಯೂ ಕಡಿಮೆಯಾಗಿರಲಿಲ್ಲ.

ಅತ್ತು ಅತ್ತು ಬಳಲಿದಾಗ, ಕಣ್ಣುಗಳು ಕೆಂಪಾಗಿ ಊದಿಕೊಂಡಾಗ —"ಅಳುವುದು ವ್ಯರ್ಥ"—ಎಂದು ಅವಳಿಗನ್ನಿಸಿತು" ಈ ಪ್ರಪಂಚದಲ್ಲಿ ಜನ್ಮವೆತ್ತಿದ ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ದಿನ ಸಾಯಲೇಬೇಕು ಎಂದು ಅವಳಿಗನ್ನಿಸಿತು.

ತಾಯಿಯ ಉತ್ತರಕ್ರಿಯೆ ಮುಗಿದ ಬಳಿಕ, ಆಕೆ ಮಾವನ ಮನೆ ಸೇರಿದ್ದಳು

ಈಗ ಅವಳು ಒಬ್ಬಂಟಿಗಳು, ಅವಳ ಸುಖ-ದುಃಖಗಳಲ್ಲಿ ಪಾಲುಗೊಳ್ಳುವ ಆತ್ಮೀಯರಿಲ್ಲ. ಅವಳ ಹೃದಯದ ವೇದನೆಯನ್ನು, ಸಂತಾಪವನ್ನು ಅರ್ಥ ಮಾಡಿಕೊಂಡು ಸಹಾನುಭೂತಿಯ ಮಾತುಗಳನ್ನಾಡುವವರಿಲ್ಲ . ಅಲ್ಲದೆ ಇನ್ನು ಹೆಚ್ಚು ದಿನ ಈ ಪರಿವಾರದ ಸಹವಾಸವೂ ತನಗೆ ದೊರೆಯುವಂತಿಲ್ಲವೆಂಬುದನ್ನೂ ಆಕೆ ಬಲ್ಲಳು. ಎಂತಿದ್ದರೂ ಹೆಣ್ಣು ಪರರ ಒಡವೆ ತಾನೇ? ಯಾವನೋ ಒಬ್ಬನ ಕೊರಳಿಗೆ ತನ್ನನ್ನು ಬಿಗಿದು, ತನ್ನ ಶರೀರವನ್ನೂ ಬದುಕನ್ನೂ ಅವನಿಗೆ ಸಂಪೂರ್ಣ ಒಪ್ಪಿಬಿಡುವ ದಿನ ತೀರಾ ದೂರದಲ್ಲಿಲ್ಲವೆಂಬುದೂ ಅವಳಿಗೆ ಗೊತ್ತಿದೆ. ಹಿರಿಯರ ಅಪೇಕ್ಷೆಯಂತೆ; ತನ್ನ ಕೊರಳಿಗೆ ಮಾಂಗಲ್ಯ ಬಿಗಿದ ಆ ಅಪರಿಚಿತನ ಹಿಂದೆ ತಾನು ಹೋಗಬೇಕಾದುದೂ, ಅವನಿಗೆ ತನ್ನ ಸರ್ವಸ್ವವನ್ನೂ ಸಮರ್ಪಿಸಬೇಕಾದುದೂ ಅನಿವಾರ್ಯವೆಂಬುದನ್ನು ಅರಿಯದ ಹುಡುಗಿಯೇನಲ್ಲ-- ವನಜಾಕ್ಷಿ.

ಆದರೆ ಯಾರು ತನ್ನ ಜೊತೆಗಾರ?

ಯಾರು ತನ್ನ ಬಾಳ ಸಂಗಾತಿ?

ರಾತ್ರಿಯ ನೀರವತೆಯಲ್ಲಿ, ಕಗ್ಗತ್ತಲೆಯಲ್ಲಿ, ಮನೆಯವರೆಲ್ಲರೂ ಮಲಗಿ ಗೊರಕೆ ಹೊಡೆಯ ತೊಡಗಿದಾಗ, ತನಗೆ ನಿದ್ರೆ ಬರದೆ ಹಾಸಿಗೆಯಲ್ಲಿ ಮಗ್ಗುಲಿಂದ ಮಗ್ಗುಲಿಗೆ ಹೊರಳಾಡುತ್ತಿದ್ದಾಗ, ವನಜಾಕ್ಷಿಯ ಹೃದಯದಲ್ಲಿ ಇದೇ ಪ್ರಶ್ನೆ ಏಳುತ್ತದೆ. ಯಾರು ತನ್ನ ಬಾಳ ಸಂಗಾತಿ?

ಮತ್ತೆ ಮತ್ತೆ ಅದೇ ಯೋಚನೆ ಅವಳನ್ನು ಕಾಡುತ್ತದೆ. ಯಾರು ತನ್ನ ಬಾಳ ಸಂಗಾತಿ? ಅವರು ಹೇಗಿರಬಹುದು?

ಆದರೆ ಇಂದಿನ ವರೆಗೂ ಈ ಪ್ರಶ್ನೆಗೆ ಸಮರ್ಪಕವಾದ ಉತ್ತರ ಅವಳಿಗೆ ದೊರೆತಿರಲಿಲ್ಲ.

ಈ ಪ್ರಶ್ನೆಯ ವಿಚಾರ ಹೃದಯದಲ್ಲಿ ಕೇಂದ್ರೀಕೃತವಾಗುತ್ತಲೇ ಅವಳೆದೆ ತೀವ್ರವಾಗಿ ಬಡಿದು ಕೊಳ್ಳತೊಡಗಿತು. ಮಾದಕತೆಯ ಲಹರಿಯೊಂದು ಅವಳ ದೇಹದಾದ್ಯಂತ ಸಂಚರಿಸಿತು. ವಿದ್ಯುತ್ ಸ್ಪರ್ಶವಾದಂತಾಯಿತು ಆಕೆಗೆ.

ಅವಳು ಹೆಣ್ಣು. ಹೆಣ್ಣಿನ ಬಾಳಿನಲ್ಲಿ ಒಂದಲ್ಲ ಒಂದು ದಿನ ತನ್ನ ಶರೀರವನ್ನು, ಬದುಕನ್ನು ಪುರುಷನಿಗೆ ಅರ್ಪಿಸಬೇಕಾಗುತ್ತದೆ. ಅವಳ ಶರೀರದೊಂದಿಗೆ, ಅವಳ ಬದುಕಿನೊಂದಿಗೆ ಮನಸ್ವಿಯಾಗಿ ಆಟವಾಡುತ್ತಾನೆ ಪುರುಷ.

ಘೃಣೆ ತುಂಬಿಕೊಂಡಿತು ವನಜಾಕ್ಷಿಯ ಹೃದಯದಲ್ಲಿ.

ತಾನರಿಯದ ಅಪರಿಚಿತನೊಬ್ಬನಿಗೆ ತನ್ನ ಶರೀರವನ್ನೊಪ್ಪಿಸಿದರೆ ಆತ ಯಾವ ರೀತಿ ವರ್ತಿಸಬಹುದು? ಪರಿಚಿತನಾಗಿದ್ದರೆ, ತನ್ನ ಬಂಧು ಬಳಗದವನಾಗಿದ್ದರೆ, ಆಸುಪಾಸಿನಲ್ಲಿ ವಾಸಿಸುವವನಾಗಿದ್ದರೆ ಅವನ ಸ್ವಭಾವ ಗೊತ್ತಿರುತ್ತದೆ. ಅದಕ್ಕೆ ತಕ್ಕಂತೆ ಆಚರಿಸುವುದು ಸುಲಭವಾಗುತ್ತದೆ. ಹೇಗಾದರೂ ಹೊಂದಿಕೊಂಡು ಹೋಗಬಹುದು. ಆದರೆ ...

ಆದರೆ ತನ್ನ ತಾಯಿಯ ಕೊನೆಯ ದಿನದ ಆದೇಶದ ಅರ್ಥವೇನು?

ಇಷ್ಟು ದಿನಗಳ ನಂತರ ತಾಯಿಯ ಆ ಮಾತುಗಳ ಮೇಲಿದ್ದ ಅವಳ ನಂಬಿಕೆ ಸಡಿಲವಾಯಿತು.

ಆಕೆ ಕೋಣೆಯಿಂದೆದ್ದು ಹೊರಗೆ ಅಂಗಳಕ್ಕೆ ಬಂದಳು, ಕೋಣೆಯೊಳಗೆ ಒಬ್ಬಳೇ ಕುಳಿತಿದ್ದರೆ ಈ ಮಾನಸಿಕ ಆಂದೋಲನಕ್ಕೆ ಕೊನೆಯಿಲ್ಲ. ಈ ದ್ವಂದ್ವದಿಂದ ಬಿಡುಗಡೆ ದೊರೆಯುವಂತಿಲ್ಲ ಎಂದು ಅವಳಿಗನ್ನಿಸಿತು.

ಹೊರಗೆ ಚೆನ್ನಾಗಿ ಬಿಸಿಲು ಬಿದ್ದಿತ್ತು. ನಿರಭ್ರವಾದ ನೀಲಾಕಾಶವನ್ನು ನೋಡುತ್ತ ನಿಂತಳಾಕೆ.

ಅಂಗಳದ ಮೂಲೆಯಲ್ಲಿ ಮೌನಿಯಾಗಿ ನಿಂತಿದ್ದಾಗ, ಅಂಗಳಕ್ಕೆ ತಾಗಿಕೊಂಡೇ ಇದ್ದ ಪಕ್ಕದ ಮನೆಯ ಕೋಣೆಯಿಂದ ಹೆಂಗಸಿನ ದನಿ ಕೇಳಿಸಿತು.

ಕಿವಿಗೊಟ್ಟು ಆಲಿಸಿದಳು ವನಜಾಕ್ಷಿ

"ಥೂ! ಏನಿದು ಹುಡುಗಾಟಿಕೆ! ಸ್ವಲ್ಪ ತಾಳಿ"—ಮಂದಾಕಿನಿಯ ಸ್ವರ ಅದಾಗಿತ್ತು.

"ಓ! ಇಷ್ಟೊಂದು ನಾಚಿಕೆಯೇ ನನ್ನ ಅರಗಿಣಿ!"—ಗಂಡಸಿನ ಮಾತೂ ಕೇಳಿಸಿತು.

"ನೀವೊಬ್ಬರು! ಸಾಕು ಬಿಡಿ."

"ಚಿಂತಿಸಬೇಡ ಎನ್ನರಗಿಣಿ! ಬೇಗನೇ ನಾವಿಬ್ಬರೂ ಮದುವೆ ಮಾಡಿಕೊಂಡು ಬಿಡೋಣ. ನನ್ನ ಹಿರಿಯರು ನನ್ನ ಇಚ್ಛೆಯನ್ನು ಖಂಡಿತ ವಿರೋಧಿಸುವುದಿಲ್ಲ. ನಿನ್ನ ತಂದೆಯವರೂ ಸಮ್ಮತಿಸುವರೆಂಬ ಭರವಸೆ ನನಗಿದೆ. ಮತ್ತೇಕೆ ಹೆದರಬೇಕು?—ಬಾ....ಸ್ವಲ್ಪ ಹತ್ತಿರ ಬಾ..."

ವನಜಾಕ್ಷಿಯ ಉಸಿರಾಟ ನಿಂತೇ ಹೋಯಿತು. ತತ್ಕ್ಷಣವೇ ಆಕೆ ಅಲ್ಲಿಂದ ಮನೆಯೊಳಗೋಡಿದಳು.

(ಹದಿನೈದನೇ ಪುಟ ನೋಡಿರಿ)

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ ಜೈ ಹಿಂದ್ ಹಂಚುಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧.

Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಫೋಟೋ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ಸಂಖ್ಯೆಯನ್ನು ಸೂಚಿಸುವುದು ಅನುಕೂಲ

ಮುಖಪತ್ರದಲ್ಲಿ:

ದಿ| ರಾಷ್ಟ್ರಕವಿ

ಎಂ. ಗೋವಿಂದ ಪೈಯವರು

ನವಯುಗ

ಸಂಪುಟ ೪೪	ಉಡುಪಿ	Vol 44
ಸಂಚಿಕೆ ೧೬	೧೭—೧೨—೧೯೬೪	No. 16

ಸಮಸ್ಯೆಗಳ ಸೃಷ್ಟಿ

ಸರಕಾರಕ್ಕೆ ಕೊಡಬೇಕಾದ ಕಂದಾಯವನ್ನು ಧಾನ್ಯ ರೂಪದಲ್ಲಿ ವಸೂಲು ಮಾಡುವ ಸೂಚನೆಯೊಂದನ್ನು ಕೇಂದ್ರ ಆಹಾರ ಶಾಖೆಯ ಮಂತ್ರಿ ಸುಬ್ರಹ್ಮಣ್ಯಮ್ ಮಾಡಿದರು. ಇದರಲ್ಲಿ ಬರಬಹುದಾದ ವ್ಯಾವಹಾರಿಕ ತೊಂದರೆಗಳನ್ನು ಅನುಲಕ್ಷಿಸಿ ಎಲ್ಲ ರಾಜ್ಯಗಳೂ ಇದನ್ನು ಒಪ್ಪಲಿಲ್ಲ. ಆದರೆ, ಕರ್ನಾಟಕ ರಾಜ್ಯ ಮಾತ್ರ ಜೊರತಾಗಿ ಇದನ್ನು ಸ್ವೀಕರಿಸುವ ಮನಸ್ಸು ಮಾಡಿತು; ಕಾರಣಾಂತರದಿಂದ ಮುಂದಿದನ್ನು ಸಂಪೂರ್ಣ ಕೈಬಿಡಲು ನಿರ್ಧರಿಸಿತು. ನಮ್ಮ ರಾಜ್ಯ ಸರಕಾರದ ನೀತಿ ಯಾವಾಗಲೂ ಇದೇ ಬಗೆಯ ಅನಿಶ್ಚಿತತೆ ಮತ್ತು ಅಪ್ರಬುದ್ಧತೆಯಿಂದಲೇ ಕೂಡಿದೆ. ಈ ಕಾರಣದಿಂದಾಗಿಯೇ ಇಲ್ಲಿನ ಆಡಳಿತೆಯಲ್ಲಿ ಬಿಗಿಯಿಲ್ಲ. ಎಲ್ಲವೂ ಸಡಿಲೋ ಸಡಿಲು. ಹೀಗಾದಲ್ಲಿ ಆಡಳಿತೆಯು ಸುಸೂತ್ರವಾಗಿ ಸಾಗುವುದೆಂತು? ಯಾವುದೇ ನೀತಿಯನ್ನು ಅಳವಡಿಸಿಕೊಳ್ಳುವಾಗ ಕೂಲಂಕುಷ ವಿವೇಚನೆಯನ್ನು ನಾವು ಮಾಡುವುದಿಲ್ಲ; ಇದೇ ನಮ್ಮಲ್ಲಿರುವ ಬಹು ದೊಡ್ಡ ಕೊರತೆ.

ಸರಕಾರವೀಗ ಆಹಾರಧಾನ್ಯಗಳ ಸಂಗ್ರಹಕ್ಕೆ ಮತ್ತೊಂದು ಯೋಜನೆಯನ್ನು ಮಾಡಿದೆ. ಅಕ್ಕಿಯ ಗಿರಣಿಗಳಿಗೆ ಬರುವ ಭತ್ತದಲ್ಲಿ ಅರ್ಧಾಂಶವನ್ನು ಗಿರಣಿ ಮಾಲಕರು ಸರಕಾರಕ್ಕೆ ಮಾರಬೇಕಂತೆ. ಇದರಿಂದ ಸಂಗ್ರಹವಾಗುವ ಭತ್ತ-ಧಾನ್ಯಗಳನ್ನು ಸರಕಾರ ಅವಶ್ಯ ಕಂಡಂತೆ ವಿನಿಯೋಗಿಸುವುದು. ಸರಕಾರವು ನಿಗದಿ ಮಾಡಿದ ಬೆಲೆಯು ತೀರ ತೃಪ್ತಿಕರವಿರುವುದರಿಂದ ಹೀಗೆ ಮಾಡಲು ಯಾರೂ ಹಿಂಜರಿಯಲಾರರು; ಕೆಲವರು ಇನ್ನೂ ಬೆಲೆಯೇರುವ ನಿರೀಕ್ಷೆಯಿಂದ ದಾಸ್ತಾನು ಮಾಡಿಕೊಳ್ಳ ಬಯಸಬಹುದು; ಆದರೆ, ಬೆಲೆಯು ಇನ್ನೇನೂ ಹೆಚ್ಚುವುದಿಲ್ಲ; ಆದುದರಿಂದ ಎಲ್ಲರೂ ಸರಕಾರದ ನೀತಿಯನ್ನು ಪುರಸ್ಕರಿಸಿ ಸಹಕರಿಸಬೇಕು ಎನ್ನುತ್ತಾರೆ ಮುಖ್ಯಮಂತ್ರಿ ನಿಜಲಿಂಗಪ್ಪನವರು. ಇತ್ತೀಚಿನ ವರ್ಷಗಳಿಗಿಂತ ಈ ವರ್ಷ ಭತ್ತದ ಬೆಲೆ ಹೆಚ್ಚಿದೆ; ಎಲ್ಲರೂ ಒಪ್ಪಬಹುದಾದಂತೆ ಅದು ಪರಮಾವಧಿಯೂ ಹೌದು. ಆದರೆ, ಸಾಹು..... ಸರಕಾರವು ನಿಗದಿ ಮಾಡಿದುದಕ್ಕಿಂತ ಹೆಚ್ಚು ಬೆಲೆ ತೆತ್ತು ರೈತರಿಂದ ಧಾನ್ಯ ಸಂಗ್ರಹ ಮಾಡುತ್ತಿದ್ದಾರೆ. ಸಂಗ್ರಹಕಾರರ ಮೇಲೆ ತೀವ್ರ ಕ್ರಮ ಕೈಗೊಳ್ಳುವ ಅಧಿಕಾರ ಸರಕಾರಿ ಅಧಿಕಾರಿಗಳಿಗಿರುವುದಾದರೂ, ಅವರದನ್ನು ಎಷ್ಟರ ಮಟ್ಟಿಗೆ ಉಪಯೋಗಿಸುತ್ತಿದ್ದಾರೆ? ವಿವಿಧ ರೀತಿಯ ಕರ್ತವ್ಯಬಾಹಿರತೆಯೇ ತುಂಬಿ ತುಳುಕಾಡುತ್ತಿರುವ ಹಳಸಿದ ಆಡಳಿತ ಯಂತ್ರದಿಂದ, ಸಾರ್ವಜನಿಕರ ಬದುಕು—ಉಳಿವಿನ ಪ್ರಶ್ನೆಯೊಡನೆ ಚೆನ್ನಾಟವಾಡುತ್ತ ಕುಳಿತರೆ, ಪ್ರಯೋಜನವೇನು? ಸದಾಚಾರ ಸಮಿತಿ ಅಥವಾ ಭ್ರಷ್ಟಾಚಾರ ನಿರ್ಮೂಲನ ವಿಭಾಗವು ಇಂತಹ ಅಸಹಾಯಕ ಪರಿಸ್ಥಿತಿಯನ್ನು ಎದುರಿಸುವುದು ಸಾಧ್ಯವಾದೀತೆ? ಸರಕಾರವು ಕೈ ಹಾಕಿದ ಪ್ರತಿಯೊಂದು ರಂಗದಲ್ಲಿಯೂ ಅನಾಚಾರವೇ ತಾಂಡವವಾಡುತ್ತಿರುವಾಗ ಸದಾಚಾರವನ್ನು ಉಪದೇಶಿಸುವುದಾದರೂ ಹೇಗೆ ತಾನೇ ಸಾಧ್ಯ?

ಸದ್ಯ ಹೇಳಿಕೆಯಿತ್ತ ಮುಖ್ಯಮಂತ್ರಿಗಳು ಗಿರಣಿ ಮಾಲಕರಿಗೆ ಸೂಕ್ತ ಮುನ್ಸೂಚನೆಯಿತ್ತರು. ಹಿಂದೆ ಆಹಾರ ಧಾನ್ಯಗಳ ಮೂಟೆ ಮೂಟೆಯನ್ನೇ ಅಡಗಿಸಿಡಲು ಅನುಕೂಲವಾಗುವಂತೆ ಅಭಾವ ಪರಿಸ್ಥಿತಿ-ಬೆಲೆ ನಿರ್ಧರಿಸುವ ಯೋಜನೆ—ಮೊದಲಾದುವುಗಳ ಬಗೆಗೆ ಪ್ರಕಟಣೆ ನೀಡಿದಂತೆಯೇ ಇದೂ ಒಂದು ಎಚ್ಚರಿಕೆಯಾಗದಿದ್ದೀತೆ? ವ್ಯಾಪಾರಿಗಳ ದುರ್ವರ್ತನೆಯನ್ನು ಪದೇ ಪದೇ ವಿರೋಧಿಸುತ್ತಿರುವ ನಮ್ಮ ನಾಯಕರು ಅವರ ದುರ್ವರ್ತನೆಗೆ ಸಹಕಾರಿಯಾಗುವಂತಹ ಮಾತುಗಳನ್ನೇ ಮತ್ತೂ ಮತ್ತೂ ಮೆಲುಕು ಹಾಕುತ್ತಿರುವುದು ಸಾರ್ವಜನಿಕ ಹಿತದೃಷ್ಟಿಯಿಂದ ಒಳಿತಲ್ಲವೆಂದೇ ಹೇಳಬೇಕು. ಪ್ರಜಾರಾಜ್ಯದಲ್ಲಿ ಸರಕಾರದ ನೀತಿಗಳಲ್ಲಿ ಮುಚ್ಚಿಡುವಂತಹ ಪ್ರಮೇಯ ಬರುವುದಿಲ್ಲವಾದರೂ ನಾಗರಿಕರ ಹಿತಸಾಧನೆಗಾಗಿ ಬಹಿರಂಗ ಪಡಿಸಲಾಗದ ವಿಷಯಗಳೂ ಕೆಲವಿವೆಯೆಂಬುದನ್ನು ಮರೆಯಬಾರದು. ಆಹಾರದ ಪ್ರಶ್ನೆ ಉಳಿದೆಲ್ಲಾ ಪ್ರಶ್ನೆಗಳಿಗಿಂತಲೂ ಮಿಗಿಲಾದುದು. ಇದರಲ್ಲಿ ಸರಸಾಟವಾಡುತ್ತ ಕುಳಿತರೆ, ಸರಕಾರವು ಜನ ವಿಶ್ವಾಸಕ್ಕೆ ಎರವಾಗಬೇಕಾದೀತು. ಸರಕಾರದ ಗಡಸುತನವಿರುವುದು ಉದ್ದುದ್ದ ಹೇಳಿಕೆಗಳಲ್ಲಿಯಲ್ಲ; ಉಪದೇಶಗಳಲ್ಲಿಯಲ್ಲ. ಸಂವಿಧಾನವೂ ಶಾಸನಗಳೂ ತನಗಿತ್ತಿರುವ ಅಧಿಕಾರಗಳನ್ನು ಕ್ರಮಬದ್ಧವಾಗಿ ಚಲಾಯಿಸಿ ಅನ್ಯಾಯವನ್ನು ತಡೆದು ಪ್ರಜಾಜನರಿಗೆ ನ್ಯಾಯವೊದಗಿಸುವುದರಲ್ಲಿ. ಆದರೆ, ನಮ್ಮ ವ್ಯವಹಾರ ಹೀಗಿಲ್ಲದಿರುವುದರಿಂದಲೇ ನಮ್ಮ ಸಮಸ್ಯೆಗಳು ಇನ್ನೂ ಪರಿಹಾರವಾಗಿಲ್ಲ; ಬದಲು ಸೃಷ್ಟಿಯಾಗುತ್ತಲೇ ಇವೆ. ನಿಕಟ ಭವಿಷ್ಯದಲ್ಲಿ ಪರಿಹಾರವಾಗುವ ಸೂಚನೆಗಳೂ ಕಂಡು ಬರುತ್ತಿಲ್ಲ. ಮಾತು ಕಡಿಮೆ ಮಾಡಿ ಕೃತಿಯನ್ನು ಹೆಚ್ಚಿಸುವ ಕಾರ್ಯವಿಂದು ನಮಗೆ ಬೇಕು; ಸರಕಾರವು ಈ ನೀತಿಯನ್ನು ಅವಲಂಬಿಸಿದರೆ ಮಾತ್ರ ಪರ್ವತಾಕಾರದ ಸಮಸ್ಯೆಗಳು ಹುಲ್ಲು ಕಡ್ಡಿಯಾದಾವು.

ವಚನಸುಧೆ

ಮಿತ್ರಸ್ಯ ಚಕ್ಷುಷಾ
ಸಮೀಕ್ಷಾಮಹೇ॥

(ಯಜುರ್ವೇದ, ೩೬—೧೮)

○ ನಾವೆಲ್ಲರೂ ಮಿತ್ರನ ದೃಷ್ಟಿಯಿಂದಲೇ ಎಲ್ಲರನ್ನೂ ನೋಡುವ.

○○ ಎಲ್ಲರೂ ಇತರರನ್ನು ಸ್ನೇಹದೃಷ್ಟಿಯಿಂದ ನೋಡಬೇಕು. ಮಾನವ ಪಶು ಪಕ್ಷಿ ಮೊದಲಾದ ಎಲ್ಲ ಜೀವಗಳಲ್ಲಿಯೂ ದಯೆ ತೋರಬೇಕು. ಮಿತ್ರನನ್ನು ಕಾಣುವಂತೆ ಚರಾಚರ ವಸ್ತುಗಳನ್ನು ನೋಡಬೇಕು. ಮಿತ್ರದೃಷ್ಟಿಯಿಂದಲೇ ಪ್ರೇಮವೃದ್ಧಿಯಾಗುತ್ತದೆ; ಇದರಿಂದಲೇ ಲೋಕದ ಕಲ್ಯಾಣವಾಗುತ್ತದೆ.

ಮಹಾರಾಷ್ಟ್ರದ ಬೆದರಿಕೆ

ಕರ್ನಾಟಕ ರಾಜ್ಯದ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯು ಕೊನೆಗಾಲದಲ್ಲಾದರೂ ಗೋವೆಯ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಅದು ಸ್ವೀಕರಿಸಿದ ಗೊತ್ತುವಳಿಯು ಕೇಂದ್ರದ ನಿಲುಮೆಯನ್ನೇ ಸಾಮಾನ್ಯವಾಗಿ ಒಪ್ಪಿಕೊಂಡಂತಿದೆ. ಆದರೆ, ದಿವಂಗತ ಪ್ರಧಾನಿ ಜವಾಹರಲಾಲರು ಗೋವೆಯು ಹತ್ತು ವರ್ಷ ಕೇಂದ್ರಾಧೀನ ಪ್ರದೇಶವಾಗಿ ಉಳಿಯುವುದೆಂದು ಅಂದಿದ್ದರೂ ಎಐಸಿಸಿಯು ಇದನ್ನೇ ಬೆಂಬಲಿಸಿದ್ದರೂ ಕೇಂದ್ರ ಮಂತ್ರಿ ಮಂಡಳದಲ್ಲಿ ಈ ಬಗ್ಗೆ ಒಮ್ಮತವಿಲ್ಲದಿರುವುದು ಇಂದು ಸರಿಯಾಗಿ ಬೆಳಕಿಗೆ ಬಂದಿದೆ. ಪ್ರಧಾನಿ ಶಾಸ್ತ್ರಿ—ರಕ್ಷಣಾ ಸಚಿವ ಚವಾನರ ಹೇಳಿಕೆಗಳು ಇದನ್ನೇ ಸ್ಪಷ್ಟೀಕರಿಸುತ್ತವೆ. ಇದರ ಮೇಲೆ ಮಹಾರಾಷ್ಟ್ರದ ಕಾಂಗ್ರೆಸ್ ಸಮಿತಿಯು ಎಐಸಿಸಿಗೊಂದು ಆಹ್ವಾನವನ್ನೇ ಕೊಟ್ಟು, ಗೋವೆಯ ಮೇಲೆ ಮಹಾರಾಷ್ಟ್ರದ ಹಕ್ಕುದಾರಿಕೆಯನ್ನು ಸಮರ್ಥಿಸಿಕೊಂಡಿದೆ. ಗೋವೆಯು ಮಹಾರಾಷ್ಟ್ರದಲ್ಲಿಯೇ ಕೂಡಲೇ ಲೀನವಾಗಬೇಕೆಂಬ ಅದರ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಿದೆಯೆಂಬುದಕ್ಕಿಂತ ಎಐಸಿಸಿಗೊಂದು ಬಲವಾದ ಬೆದರಿಕೆಯನ್ನೇ ಅದು ಹಾಕಿದೆಯೆಂದರೆ, ತಪ್ಪಾಗಲಾರದು. ಈ ಸಂದರ್ಭದಲ್ಲಿ ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ತೆಪ್ಪಗೆ ಕುಳಿತಿದ್ದಾರೆ. ಕೇರಳದಲ್ಲಿ ಮಧ್ಯಾವಧಿ ಚು

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



"ಎತ್ತು ಏರಿಗೆಳೆದ್ರೆ ಹೋರಿ ನೀರಿಗೆಳೀತೂಂತ ಅಂದಹಾಗೆ ಆಯ್ತಲ್ಲ ರಾಯ್ರೆ, ಗೋವೇ ಸ್ಥಿತಿ...."

ಗೇಹ ರಾಜ್ಯದಲ್ಲಿ

ಎಲ್ಲ ಸಮಸ್ಯೆಗೂ ಒಂದೇ ಪರಿಹಾರ

"ಬುದ್ಧಿಯಿಲ್ಲ... ಬುದ್ಧಿಯಿಲ್ಲ.... ಖಂಡಿತಕ್ಕೂ ಬುದ್ಧಿಯಿಲ್ಲ.... ಇಲ್ವಾದ್ರೆ..."

"ಓಹೋಹೋ ಏನಿದು? ಬುದ್ಧಿಯಿಲ್ಲಾಂತ ಎದರಾಟ? ಯಾರಿಗೆ ಬುದ್ಧಿಯಿಲ್ಲ ಯಾಕೆ ಬುದ್ಧಿಯಿಲ್ಲ....?"

"ಅದೇ ಅಂಟೆನಲ್ಲಾ ಬುದ್ಧಿಯಿಲ್ಲಾಂತ?"

"ಹೌದು ಹೌದು ಯಾರಿಗೇಂತ?"

"ಯಾರಿಗೇಂತಂದ್ರೆ?... ಮತ್ಯಾಗೆ? ನಿನ್ಗೆ..."

"ಅಲ್ಲಾ, ಮನೆಗೆ ಬರೋವಾಗ ತಡವಾದ್ರೆ ಆಗ್ಲೂ ಬುದ್ಧಿಯಿಲ್ಲಾಂತ ಕೂಗ್ತೀಯ ಹಾಗೇಂತ ಬೇಗ್ನೇ ಬಂದು ಬಿಟ್ರೂ ಅದೇ ನಿನ್ನ ಒದರಾಟ.... ಅಂದ್ರೆ, ನಿನ್ನ ನಾಲಗೆಯ ತುದಿಯಲ್ಲಿ ಕುಣಿದಾಡೋ ಪದಾಂತಂದ್ರೆ ಅದು ಮಾತ್ರಾಂತ ತೋರುತ್ತೆ...."

"ಓ ...ಹಾಗಲ್ರಿ, ನಾನಂದದ್ದು........ ನಿಮ್ಮ ಶಾಸ್ತ್ರಿಯವರಿಗೆ ಬುದ್ಧಿಯಿಲ್ಲಾಂತ....'

"ಇದ್ಯಾ ನನ್ನು ನಿನ್ನು ಸರಿಯಾಗೇ ಇದೆ ತಾನೆ?"

"ಸಾಕು ಬಿಡೀಂದ್ರೆ....ನಾನು ಸರಿಯಾಗಿಷ್ಟೇ ಆಡೋದು...."

ಅದು ಗೊತ್ತು ಕಣೇ....ಅಲ್ಲಾ, ನಿನ್ನಿಂದ ಬುದ್ಧಿಗೇಡಿ ಅನ್ನಿಸ್ಕೊಳ್ಳೋಕಾದ್ರೆ ಆ ಶಾಸ್ತ್ರಿ ಏಕ ಮೂರ್ಖನೇ ಇರ್ಬೇಕು; ಅವನಿಗೆ ಶಾಸ್ತಿ ಖಂಡಿತಕ್ಕೂ ಮಾಡಬೇಕು."

"ಅಂದ್ರೆ ನೀವೂ ನನ್ನ ದಾರಿಗೆ ಬಂದು ಬಿಟ್ರಿ?"

'ಅಯ್ಯೋ, ದಾರೀಂತಂದ್ರೇನು? ನ್ಯಾಯವಾಗಿರೋದನ್ನ ಪ್ರತಿಪಾದಿಸಲು ನಾನು ಯಾವಾಗ್ಲೂ ತಯಾರು...'

"ಹಾಗಾದ್ರೆ... ಇಂದಾದ್ರೂ ನೀವು ನನ್ನ ಬುದ್ಧಿಯನ್ನ ಮೆಚ್ಚಿ ಕೊಂಡ್ರೀಂತಾಯ್ತು."

"ಇಂದೇ ಎಂದೇನು? ನಿಜವಾಗಿರುವುದನ್ನ ಅಂದಾಗ, ನ್ಯಾಯವಾಗ ಇಲ್ಲಾಂತಂತಿದ್ದೆ? ಅಲ್ಲಾ ನೋಡು, ಯಾವ ಶಾಸ್ತ್ರಿಯವ ನಿನ್ನ ಕಣ್ಣಾ ಕುಕ್ಕಿದ್ದು? ಅವನು ಮಾಡಿದ ಅಪರಾಧವಾದ್ರೂ ಏನ ?

'ಓ, ಅವನೇ? ಅವ್ರು ನಿಮ್ಮ ಟೋಪಿ ಸರ್ಕಾರದ... "

"ಏನೆಂದೆ? ಲಾಲಬಹದೂರ ಶಾಸ್ತ್ರಿಯವರನ್ನೋ ನೀನಂದದ್ದು?"

'ಮತ್ಯಾರನ್ನೂಂತ ತಿಳ್ಕೊಂಡ್ರಿ ನೀವು?'

"ನಾನು ಅದ್ಯಾವ ಪಾಣಿಸಂಚೆ ಶಾಸ್ತ್ರಿಯೋಂತ ಅಂತಿದ್ದೆ....ಹ್ಞಾ, ಗಂಡ್ಸಾಗಿಲ್ಲ ಕಣೇ ನೀನು. ಅಲ್ಲ, ಆ ದೇವತಾ ಮನುಷ್ಯ ನಿನ್ನ ಬಾಯಿಂದ ಇಂತಹ ಅಪಶಬ್ದ ಕೇಳ್ಸಿಕೊಳ್ಳೋಕೆ ಮಾಡಿದ ತಪ್ಪಾದ್ರೂ ಏನೂಂತ?"

"ಭಾರಿ ಸಂಭಾವಿತ್ರ ಹಾಗೆ ಮಾತಾಡ್ತಿದ್ದೀರಲ್ಲಾ ಪಾಪ ದೇವತಾ ಮನುಷ್ಯ ಅವ್ರು....ಹ್ಞಾ ಒಂದು ರೀತಿಯಿಂದ ಅದೂ ಹೌದೂನ್ನಿ"

"ಪದ ಹಾಡ್ಬೇಡ. ಅರ್ಥ ಹೇಳ್ಬೇಕು ಎಲ್ಲಾ ನೀನೇ ಅಗ್ಬಿಟ್ರ ಹೇಗೇಂತ..."

'ಶುರು ಮಾಡಿದ್ರಿ ಮತ್ತೆ ನಿಮ್ಮ ಹಳೇ ರಾಗಾನ್ನ..."

"ನೋಡು, ನೀನನ್ನೋದೆಲ್ಲಾ ಹೊಸ್ತು ರಾಗ.... ನಾನು ಅನ್ನೋದೆಲ್ಲಾ ಹಳೇ ಹಳ್ತು..."

'ಮತ್ತೆ ಅಲ್ಲದೇನಂತೆ? ನೋಡಿ, ನಾನು ಸಾಫಾಗಿ ಹೇಳ್ಬಿಡ್ತೀನಿ. ನಮ್ಮ ಶತ್ರುಗಳು ಚೀನೀಯರು ಹೌದೋ ಅಲ್ವೋ?"

"ಹೌದೂನ್ನು...."

"ನಿಮ್ಮ ಅನ್ನು ಗುನ್ನು ಎಲ್ಲಾ ಬೇಡ. ಕಡ್ಡಿ ಮುರಿದ್ಹಾಗೆ ಒಂದು ಮಾತನ್ನ ಅನ್ಬೇಕು, ಬೆಕ್ಕಿನ ತಲೇ ಮೇಲೆ ದೀಪ .."

"ಆಯ್ತು ಮಹಾರಾಯ್ತಿ.... ಹೌದು, ಖಂಡಿತಕ್ಕೂ ಹೌದು."

"ಸರಿ, ಅವರ ಆಕ್ರಮಣದಿಂದ ನಮ್ಮ ರಕ್ಷಣೆ ಮಾಡಿಕೊಳ್ಳೋ ಪ್ರಯತ್ನ ನಾವು ಮಾಡ್ಬೇಕೋ ಬೇಡವೋ...'

"ಅನುಭವಿ ವಕೀಲ್ರು ಕ್ರಾಸ್ ಸವಾಲು ಹಾಕಿದಾಂಗೆ ಪ್ರಶ್ನೆ ಕೇಳ್ತೀಯಲ್ಲಾ ನೀನು?"

"ನೋಡಿ, ಅದೆಲ್ಲಾ ಬೇಡಿ. ನಾನು ಕೇಳಿದ್ದಕ್ಕೆ ನಿಮ್ಮ ಅಂತಃಕರಣ ಪೂರ್ವಕವಾದ ಉತ್ರ ಹೇಳಿ."

"ಹ್ಞಾಂ ಆಯ್ತಪ್ಪ ಅಂತೂ ಇಂದಿನ ವರೆಗೆ ನೀನು ಹೇಳಿದಾಗೆ ಇರೋದೇ ಮೇಲು...."

"ನೋಡಿ ನೀವು ಶರಣಾಗತಿ ಸೂತ್ರ ಪಠಿಸುವುದು ಬೇಡ. ಅಗತ್ಯಾಂತನಿಸಿದ್ರೆ ಮಾತ್ರ ಒಪ್ಪಿಕೊಳ್ಳಿ."

"ಹ್ಞಾ ನಮ್ಮ ನಮ್ಮ ರಕ್ಷಣೆ ನಾವೇ ಮಾಡ್ಕೊಳ್ಳದಿದ್ರೆ ಮತ್ಯಾರು ಬರ್ತಾರೇಂತ..."

"ಅದಕ್ಕಾಗಿ ನಮ್ಮ ಶಕ್ತಿಯನ್ನ ಹೆಚ್ಚಿಸ್ಕೋ ಬೇಕು..."

"ಹೌದು..."

"ಸೇನೆ, ಯುದ್ಧೋಪಕರಣಗಳು, ಅವುಗಳ ಗುಣ, ಕ್ರಿಯಾಪಟುತ್ವ ಎಲ್ಲಾ ಹೆಚ್ಚಬೇಕು...."

"ಹೌದು...."

"ನೋಡಿ ಹಾಗಾದ್ರೆ ಚೀನಾ ಈಗ ಅಟಂ ಬಾಂಬು ತಯಾರು ಮಾಡಿದೆ...."

"ಹೌದು...'

'ಅದು ಅದನ್ನ ತಯಾರ್ಸಿ ಯಾವ ಕಾಲಕ್ಕೂ ಯಾರ ಮೇಲೂ ಎಸೀ ಬಹುದು....'

'...ಅದು ಹೇಗೆ? ಎಸೆಯೂದೆಂದ್ರೆ ಅಷ್ಟು ಸುಲಭದಲ್ಲಾಗುತ್ತೆ?"

"ಯಾಕೆ ಆಗಲಾರದೂಂತ?" ಮಂಗನ ಕೈಯಲ್ಲಿ ಉರಿಯುವ ಕೊಳ್ಳಿ ಕೊಟ್ಟೆ ಅದು ಯಾವ ಸಮಯದಲ್ಲೂ ಯಾರ ಮನೆಯನ್ನೂ ಸುಟ್ಟುಹಾಕಬಹುದು...."

"ಹ್ಞಾಂ.... ನಿನ್ನ ಸವಾಲೆಲ್ಲಾ ಸರಿಯಾಗಿದೆ. ಆದ್ರೆ ನೋಡು, ಚೀನೀಯರು ಮಂಗಗಳಲ್ಲವಲ್ಲಾ...."

"ಮಂಗ ಹೌದೋ ಅಲ್ವೋ ಅದು ಈಗ್ಲೇ ಹೇಗೆ ಗೊತ್ತಾಗುತ್ತೆ? ಅಲ್ಲಾಂತಿದ್ರೆ ಅವ್ರಂದು ಯಾಕೆ ನಮ್ಮ ಉತ್ತರಗಡಿಯಲ್ಲಿ ಆಕ್ರಮಣ ಮಾಡಿದ್ರೂಂತ."

"ನಿನ್ನ ಮಾತಿನ ಅರ್ಥ ಈಗ ಸರಿಯಾಗೇ ತಿಳೀತು ಬಿಡು. ನಮ್ಮ ಶಾಸ್ತ್ರಿಗಳು ಭಾರತವು ಅಣ್ವಸ್ತ್ರ ತಯಾರಿಸ ಬಯಸುವುದಿಲ್ಲಾಂತ ಹೇಳುತ್ತ ಬಂದದ್ದಕ್ಕೆ ನಿನ್ನ ಸವಾಲು ಅಲ್ವೆ?"

"ಹ್ಞಾಂ ಹೌದು. ನೋಡಿ, ಚೀನಾದ ಅಣು ಗುಂಡನ್ನ ಭಾರತ ಕೈಕಟ್ಟಿ ಎದುರಿಸುವುದೆಂದ್ರೆ ಇದ್ಯಾವ ಮಾತೂಂತ.

'ಒಂದೇ ಕೈ ಬೀಸಲೀಂತ, ಇರಬಹುದು .."

"ಇದು ಹಾಗಲ್ಲ ನೋಡಿ ಒಂದು ದೇಶದ ಉಳಿವು ಅಳಿವಿನ ಪ್ರಶ್ನೆಯಿದು, ನಮ್ಮೀದ ಅಗಡಿ ಇದ್ರೆ, ಆ ಕತೆ ಬೇರಿಯಿತ್ತು...."

'ನಾಯಿ ನಮ್ಮನ್ನ ಕಚ್ಚೋಕೆ ಬರುತ್ತೇಂತ ಹೆದರಿ, ನಾವೂ ಅದನ್ನ ಕಚ್ಚೋಕೆ..."

'ನೋಡಿ, ಆಗ್ಲೇ ಅಂದೆನಲ್ಲಾ...ಇದು ಅದು ಯಾವುದ್ರ ಹಾಗೂ ಅಲ್ಲ...'

'ಮತ್ತೆ ಏನು ಮಾಡ್ಬೇಕೂಂತೀಯ?'

"ಚೀನಾದ ಸೇನೆಗೆ ನಮ್ಮ ಸೇನೆ, ಅವರ ವಿಮಾನಕ್ಕೆ ನಮ್ಮ ವಿಮಾನ — ಹೀಗೆ ಪ್ರತಿಯೊಂದ್ರಲ್ಲೂ ಅವರನ್ನ ಎದುರಿಸೋಕೆ ಸಿದ್ಧರಾದವರು ಅಣುಗುಂಡಿನಲ್ಲಿ ಮಾತ್ರ ಹಿಂಜರಿಯೋದಂದ್ರೆ?"

"ಅಣ್ವಸ್ತ್ರ ಹೊಂದದ ರಾಷ್ಟ್ರದ ಮೇಲೆ ಅಣುಗುಂಡು ಹಾಕುವಷ್ಟು ನೈತಿಕನಾಗಿ ಚೀನೀಯರು ಪತಿತರಾಗಲಾರರು."

"ನೀತಿಯಿದ್ದರೆ ತಾನೇ ಅವ್ರು ಪತಿತರಾಗುವುದು? ಮತ್ತೆ ನೋಡಿ, ನಿಮ್ಮ ಅಮೆರಿಕೆಯವ್ರು ಜಪಾನಿನ ಮೇಲೆ ಬಾಂಬು ಹಾಕಿದ್ರಲ್ಲಾ....? ಆಗ ಅವ್ರ ನೈತಿಕ ಮಟ್ಟ ಎಲ್ಲಿ ಬಳ್ಕೊಂಡು ಹೋಗಿತ್ತೂಂತ...."

"ಆ ಕಾಲ ಬೇರೆ, ಈ ಕಾಲ ಬೇರೆ. ಇಂದಿನ ದಿನಗಳಲ್ಲಿ ಅಂತಹುದು ನಡೆಯಲಾರದು."

"ಅದು ನೀವನ್ನೋದು; ನಿಮ್ಮ ಶಾಸ್ತ್ರಿ ನಂಬಿರೋದು. ಅಂತಃ ನೋಡಿ, ನನಗನ್ನಿಸುತ್ತೆ, ನಾವು ಅಣುಗುಂಡನ್ನ ತಯಾರಿಸದಿದ್ರೆ ಖಂಡಿತಕ್ಕೂ ಉಳಿಯೋದಿಲ್ಲಾಂತ."

"ಒಳ್ಳೇ ಭವಿಷ್ಯವಾದಿಯಂತೆ ಅಂತಾ ಇದ್ದೀಯ? ಅಲ್ಲಾ, ಇಷ್ಟೆಲ್ಲ ವಿಚಾರ ನಿನ್ಗೆ ತಿಳೀತಾವ್ರಾ ಹೇಗೇಂತ?"

"ಅಲ್ಲಾ, ನನಗೆಲ್ಲಾ ತಿಳೀಬಾರ್ದೂಂತ ಇದೆಯೇನು?"

'ಹಾಗಲ್ವೆ ನಾನಂದದ್ದು ನಿನ್ನಂತವರಿಗೆ ತಾನಾಗಿಯೇ ಸ್ಫುರಿಸೋ ವಿಚಾರ ಇದಲ್ಲ. ಹಾಗಿರುವಾಗ ಯಾರು ಬುತ್ತಿ ಕಟ್ಟಿಕೊಟ್ಟರೂಂತ?'

"ಸಾಕು ಬಿಡೀಂದ್ರೆ....ನಾನನ್ನೋದೆಲ್ಲಾ, ಕಟ್ಟಿ ತಂದ ಬುತ್ತಿ. ನೀವನ್ನೋದ...."

'ನೀವು ಬೇಯ್ಸಿದ ಬುತ್ತಿ....'

"ಹ್ಹ ಹ್ಹ ಹ್ಹ....ಸರಿಹೋಯ್ತು. ಇದಿರ್ಲಿ,"

ಇರ್ಲಿ, ಯಾರುಬೇಡಾಂತಾರೆ? ಯಾರು ಇವತ್ತು ಬಂದಿದ್ರು ಮನೆಗೆ?"

'ಯಾರೂ ಇಲ್ವಲ್ಲಾ .."

'ಸುಳ್ಳು ಯಾಕೆ ಹೇಳ್ತೀಯ?"

ಹಾಗಾದ್ರೆ, ನೀವೇ ಹೇಳಿ ನೋಡೋಣ .."

"ನೋಡು, ಒಂದು ಸಂಖ್ಯೆ ಹೇಳು ..

"ಶುರುವಾಯ್ತು ಇವ್ರದ್ದೊಂದು.."

"ಹ್ಞಾ ಒಂದ....ಒಂದು ಅಲ್ವೆ? ನೋಡು, ಒಬ್ಬಳೆ. ನಿನ್ನ ಮಿತ್ರೆ ಬಂದಿದ್ದಾಳೆ .."

"ಅಬ್ಬಾ ಇವ್ರೇ ..ಹೇಗೆ... ಗೊತ್ತಾಯ್ತು?"

'ಇನ್ನೊಂದು ಸಂಖ್ಯೆ ಹೇಳು...."

"ಮೂರು....'

'ಮೂರು... ಹೋ ತಿಳಿಯಿತು ಬಿಡು. ಮೂರಕ್ಷರ ಆಕೆಯ ಹೆಸರಲ್ಲಿದೆ.... ಸುಮನಾ...'

"ಸಾಕಾಗಿಲ್ರಿ... ಮತ್ತೂ ಸಂಖ್ಯೆ ಹೇಳ್ತೀನಿ. ಅವ್ರು ಏನೆಂದರೂಂತನ್ನಿ...."

"ಅದ್ಕೆ ಸಂಖ್ಯೆ ಗಿಂಖ್ಯೆ ಬೇಡ ಹೀಗೇ ಹೇಳ್ತೀನಿ. ನೀನು ನನ್ನ ಮುಂದೆ ಬಾರ್ಸಿದ ಬಾಡು ಬಾಡಿಕೆ ಅಕೆಯ ಬಾಯಿದ್ದು. ಹೌದಾದ್ರೆ ಹೌದನ್ನು, ಅಲ್ವಾದ್ರೆ ಅಲ್ಲನ್ನು..."

"ಹ್ಞಾಂ...ನನ್ಗಿಂತ ನೀವೇ ಭವಿಷ್ಯ ಚನ್ನಾಗಿ ಹೇಳ್ತೀರಿ..."

"ಹಾಗೆ ಬಾ ... ನೋಡು, ಇವತ್ತು ನಿಂಗೊಂದು ವಿಚಾರ ತಿಳಿಸೋಣಾಂತ ಬೇಗ ಬಂದೆ..."

"ಅದು ಗೊತ್ತಿತ್ತು ನನ್ಗೆ. ಕಾರಣವಿಲ್ದೆ ಬರೋಕಿಲ್ಲಾಂತ ಏನದು?"

"ನೀನಂದೆಯಲ್ಲಾ.... ನಮ್ಮ ರಕ್ಷಣೆಯ ವಿಚಾರ..."

"ಛೀ ನಾನೇನಂದಿದ್ದೆ ಅವ್ರು ಕಿವಿ ಚುಚ್ಚಿದ್ರು, ನಾನು ಅಂದೆ...."

"ಹಾಗೇ ಅನ್ನು. ಅದ್ಕೇ ಸಂಬಂಧಿಸಿದ್ದು."

"ಏನಂತೆ? ಶಾಸ್ತ್ರಿ ಅಣುಗುಂಡು ತಯಾರಿ ಮಾಡ್ತಾರಂತೇನು?"

"ಅದು ಆನವಿನಲ್ಲೂ ಸಧ್ಯವಿಲ್ಲ."

"ಮತ್ತೆ ಏನಪ್ಪಾ ಅದು?"

"ನಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಒಂದೇ ಪರಿಹಾರ..."

ಹೇಗಂತೆ ಹೇಳಿ ಬಿಡಿ ಮತ್ತೆ...."

"ನೋಡು, ನಾಗ ಜನರು ದೊಡ್ಡ ಬಂಡುಗಾರರು. ಅವರಿಗೆ ಪ್ರತ್ಯೇಕ ಸ್ವತಂತ್ರ ರಾಜ್ಯಕೊಟ್ಟು ಬಿಡುವುದು."

"ಹ್ಞಾಂ...."

"ಕಾಶ್ಮೀರದ ನಮಗೆ ತಲೆ ಸಿಡಿತ ಅದನ್ನು ಶೇಖ ಅಬ್ದುಲ್ಲಾರಿಗೆ ದಾನಮಾಡುವುದು. ಪಾಕಿಸ್ತಾನವೂ ಶೇಖರೂ ಹೋರಾಡುವ ಚಂದ ನೋಡುವುದು...."

"ಹ್ಞಾಂ...."

ಚೀನಾವು ನಮ್ಮ ಮಿತ್ರನಾಗಬೇಕು. ಅದಕ್ಕಾಗಿ ಅಕ್ಷಯ ಚಿನ್ನೆಯನ್ನು ಧಾರೆಯೆರೆದು ಕೊಡುವುದು...."

ಹ್ಞಾಂ...ಮುಗಿಯಿತೆ?"

"ಇಲ್ಲ, ಇನ್ನೂ ಕೊಂಚವಿದೆ.... ಗೋವೆಗಾಗಿ ಮಹಾರಾಷ್ಟ್ರ— ಮೈಸೂರುಗಳು ಹೋರಾಡುತ್ತಿವೆ. ಇದನ್ನು ತಪ್ಪಿಸಿ ಭಾವೈಕ್ಯ ಸಾಧಿಸಲು ಪೋರ್ತುಗೀಸರಿಗೆ ಗೋವೆ ಎನ್ನು ಹಸ್ತಾಂತರಿಸುವುದು."

"ಇದು ಎಲ್ಲಿಗೆ ಬಂದು ಬಿಟ್ತೂಂತ....'

"ನಮ್ಮ ಮೇಲೆ ಮಾಜಿ ರಾಜ ಮಹಾರಾಜರಿಗೆ ಸಿಟ್ಟು... ಕೋಪ; ವಿರೋಧ. ವಿರೋಧವನ್ನು ರಾಜಿ ಮಾಡಲು ಅವರವರ ರಾಜ್ಯವನ್ನು ಅವರವರಿಗೆ ಬಿಟ್ಟು ಕೊಡುವುದು.

(ಹದಿಮೂರನೇ ಪುಟ ನೋಡಿರಿ)

ಅವಲೋಕನ

ಭಾರತದ ಲೋಕಸಭೆಯಲ್ಲಿ ಚೈನಿ ಅಣುಗುಂಡು

ಬರೆದವರು: ಶ್ರೀ ಶಿವಶಂಕರ.

ಕಮ್ಯೂನಿಸ್ಟ್ ಚೈನೀಯರು ಅಣುಗುಂಡಿನ ಪರೀಕ್ಷೆ ನಡೆಸಿದಾಗ ಭಾರತದ ಅಧ್ಯಕ್ಷ, ಪ್ರಧಾನಿ, ಮಂತ್ರಿಮಂಡಲ, ರಾಜಕೀಯ ಪಕ್ಷಗಳು, ಹಾಗೂ ಶಾಂತಿವಾದಿಗಳೆಬ್ಬಿಸಿದ ಪ್ರತಿಕ್ರಿಯೆಗಳನ್ನು ಕ್ರಮಶಃ ಹಿಂದಿನ ಸಂಚಿಕೆ ವಾಚಕರ ಮುಂದಿಟ್ಟಿರುತ್ತದೆ. ಅದೇ ಪ್ರತಿಕ್ರಿಯೆಯು ಲೋಕಸಭೆಯಲ್ಲೂ ಕಂಡು ಬಂದಿರುತ್ತದೆ. ಗುಂಟೂರಿನಲ್ಲಿ ಸಿಡಿಮದ್ದುಗಳ ಭಾರೀ ಶಬ್ದ ಇದ್ದಷ್ಟು ಮಾತ್ರ ಲೋಕಸಭೆಯಲ್ಲಿ ಕೇಳಿ ಬಂದಿಲ್ಲ, ಅಷ್ಟೆ. ಸಾಧಾರಣವಾಗಿ ಅದೇ ವ್ಯಕ್ತಿಗಳು ಲೋಕಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಲೋಕಸಭೆಯಲ್ಲಿ ಘನತೆಗೆ ಕುಂದು ಬಾರದಂತೆ ಸದಸ್ಯರು ವರ್ತಿಸಿಕೊಂಡಿದ್ದು ಶಿಸ್ತಿನ ಗಡಿ ಒಡೆಯದೆ ಲೋಕಸಭೆಯ ಗೌರವವನ್ನೂ ಪಕ್ಷ-ಪ್ರತಿಪಕ್ಷಗಳವರು ಕಾಯ್ದುಕೊಂಡಿದ್ದಾರೆ.

ಆಳುವ ಪಕ್ಷದ ಪಡಿಯಿಂದ ಮಂತ್ರಿಗಳೂ, ಪ್ರಧಾನಿಯವರೂ, ತಮ್ಮ ನಿಲುವನ್ನು ಸದಸ್ಯರ ಮುಂದಿಡುವುದು ಸಹಜ ಸಂಗತಿ ಇದೆ. ಅಂತಯೇ ಆ ಪಕ್ಷದವರೂ ಅದಕ್ಕೆ ತಮ್ಮ ಬೆಂಬಲವನ್ನು ಸೂಚಿಸಬೇಕಾಗುತ್ತದೆ. ಅನೇಕ ಸದಸ್ಯರನ್ನು ಪ್ರತ್ಯೇಕವಾಗಿ ಕಂಡು ಅವರ ಅಭಿಪ್ರಾಯವನ್ನು ಕೇಳಿದಲ್ಲಿ ಅವರು ಬೇರೆ ಉತ್ತರವನ್ನು ಕೊಡಬಹುದು. ಆದರೆ ಲೋಕಸಭೆಯೊಳಗೆ ಸ್ವೇಚ್ಛೆಯಿಂದ ವರ್ತಿಸಲು ಸಾಧ್ಯ ಇರುವದಿಲ್ಲ. ಹಾಗಿದ್ದರೂ ಕೆಲ ಸದಸ್ಯರು ತಮ್ಮ ಅಭಿಪ್ರಾಯವನ್ನು ಬಹಿರಂಗಗೊಳಿಸಿಯೇ ಬಿಟ್ಟಿದ್ದಾರೆ. ಆದ್ದರಿಂದಲೇ ಪ್ರಧಾನಿ ಲಾಲಬಹದ್ದೂರ ಶಾಸ್ತ್ರೀಯವರು ಎರಡನೆಯ ದಿನ ಮಧ್ಯ ಪ್ರವೇಶಿಸಬೇಕಾಯಿತು. ಅವರಿಗೆ ತಮ್ಮ ಪಕ್ಷದವರನ್ನು ಸಂತೈಸುವದೇ ಒಂದು ಕೆಲಸವಾಯಿತು. ಈಗ ಬೇಕಾಗಿರುವದು ಶಾಂತಿ, ಅಣುಗುಂಡು ತಯಾರಿ ಚೈನಿ ಅಣುಗುಂಡಿಗೆ ಸರಿಯಾದ ಉತ್ತರವಲ್ಲವೆಂದು ಶ್ರೀ ಲಾಲಬಹದ್ದೂರ ಶಾಸ್ತ್ರೀಯವರು ಹೇಳಿದರು. ಭಾರತಕ್ಕೆ ಇಂದು ಅಣುಗುಂಡನ್ನು ತಯಾರಿಸಲು ಸಾಧ್ಯವಿರುವದಿಲ್ಲವೆಂದಲ್ಲ, ಜವಾಹರಲಾಲ ನೆಹ್ರೂಜೀಯವರ ಸಿದ್ಧಾಂತಗಳಂತಿರುವ ಶಾಂತಿ, ಸಹ-ಅಸ್ತಿತ್ವ ಹಾಗೂ ಅನ್ಯರಾಷ್ಟ್ರಗಳ ವಿಷಯದಲ್ಲಿ ಕೈಹಾಕದಿರುವಿಕೆಯನ್ನು ಎತ್ತಿ ಹಿಡಿಯಬೇಕೆಂದು ಅವರು ಹೇಳಿದರು. ಭಾರತವು ಅಣುಗುಂಡು ತಯಾರಿಸಲು ಕಣಕ್ಕಿಳಿದಲ್ಲಿ ಇದು ತನ್ನ ಆರ್ಥಿಕ ಅಭಿವೃದ್ಧಿಗೆ ತಾನೇ ತಡೆಯನ್ನು ತಂದುಕೊಳ್ಳುತ್ತದೆ ಹಾಗೂ ಶಾಂತಿಯ ಮೂಲಕ್ಕೆ ಮತ್ತು ನಿಶ್ಶಸ್ತ್ರೀಕರಣಕ್ಕೆ ಪ್ರಪಂಚದಲ್ಲಿ ಅಡ್ಡಿತಂದ ಹಾಗಾಗುತ್ತದೆಂದು ಅವರು ಎಚ್ಚರಿಕೆ ಇತ್ತರು. ಇದೀಗ ಇಂಡೋನೇಶ್ಯಾ ಕೂಡಾ ಅಣುಗುಂಡು ತಯಾರಿಯ ಕಣಕ್ಕಿಳಿಯುತ್ತದೆಂದು ಸಾರಿರುವದೇ ಅಪಾಯದ ಮುನ್ಸೂಚನೆಯಾಗಿದೆಂದು ಅವರು ಭವಿಷ್ಯ ನುಡಿದರು. ಅಣುಗುಂಡನ್ನು ತಯಾರಿಸುವದಕ್ಕಿಂತಲೂ ಯಾರೂ ಅಣುಗುಂಡನ್ನು ತಯಾರಿಸದಂತೆ ಮಾಡುವದೇ ನಿಜವಾಗಿರುವ ಏಕಮೇವ ಪರಿಹಾರೋಪಾಯವೆಂದು ಶ್ರೀ ಲಾಲಬಹದೂರರು ತಮ್ಮ ಸರಕಾರದ ನಿಲುವನ್ನು ಸ್ಪಷ್ಟಪಡಿಸಿದರು. ತಮ್ಮ ಪ್ರಧಾನಿಗಳ ಪರಿಹಾರೋಪಾಯ ಒಳ್ಳೆ ಸರಳ ಹಾಗೂ ಸಂಭವನೀಯ. ಆದರೆ ಬೆಕ್ಕಿಗೆ ಗಂಟೆ ಕಟ್ಟುವವರ್ಯಾರು? ಅಣ್ವಸ್ತ್ರ ನಿಶ್ಶಸ್ತ್ರೀಕರ

(ಹನ್ನೆರಡನೇ ಪುಟ ನೋಡಿರಿ)

6½%

ನಿಮ್ಮ ನಿರಖು ಠೇವಣಾತಿಗಳಿಗೆ ಬಡ್ಡಿ

ನಿಮ್ಮ ನಿರಖು ಠೇವಣಾತಿಗಳ ಮೇಲೆ ವರ್ಷಕ್ಕೆ 6½% ತನಕ ಬಡ್ಡಿ ಕೊಡಲು ನಾವು ಸಂತೋಷಪಡುತ್ತೇವೆ.

ಹೆಚ್ಚಿನ ಮಾಹಿತಿಗಳಿಗೆ ದಯಮಾಡಿ ನಿಮಗೆ ಸಮೀಪವಿರುವ ನಮ್ಮ ಶಾಖಾ ಮೆನೇಜರರ ಸಂಪರ್ಕ ಬೆಳೆಸಿರಿ

ಬ್ಯಾಂಕಿನ ಆಡಳಿತ ಕಚೇರಿಯ ಕಟ್ಟಡ

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಬ್ಯಾಂಕ್ ಅಷ್ಟೇ ಅಲ್ಲ—ವಿಶೇಷ ವೈಶಿಷ್ಟ್ಯತೆಯ ಬ್ಯಾಂಕಿಂಗ್ ಸಂಸ್ಥೆಯೂ ಹೌದು

ರಿಜಿಸ್ಟರ್ಡ್ ಆಫೀಸು: ಮಂಗಳೂರು ● ಆಡಳಿತ ಕಚೇರಿ: ಬೆಂಗಳೂರು

ವಿಶ್ವದಾದ್ಯಂತ ಪ್ರತಿನಿಧಿಗಳು

ಭಾರತದಲ್ಲಿ 235ಕ್ಕೂ ಹೆಚ್ಚಿನ ಶಾಖೆಗಳು

ಲಘು ಬರೆಹ

ಉತ್ತರನ ಪೌರುಷ

ಬರೆದವರು: ಶ್ರೀ ಕು. ಗೋ.

ಹೀಗೆಲ್ಲಾ ರೇಗಾಡಬಾರದು ಕಣೋ ಶಂಕರ. ಯಾವುದಕ್ಕೂ ಹಿರಿಯರ ಮಾತು ಸ್ವಲ್ಪ ಕೇಳಬೇಕು. ದೊಡ್ಡವರೆಂತ ಇರುವುದಾದರೂ ಏತಕ್ಕೆ? ಕಿರಿಯರಿಗೆ ಬೈದು ಬಾಳ ಹೇಳಲು ತಾನೆ? ಕಿರಿಯರಾದ ನಮಗೂ ಒಂದು ಶ್ರೇಯಸ್ಸಲ್ಲವೇನೋ, ದೊಡ್ಡವರ ಮಾತು ಕೇಳಿ ಅದರಂತೆ ನಡೆದರೆ.

ಸಾಕಯ್ಯ ನಿಲ್ಲಿಸು ನಿನ್ನ ಪುರಾಣ. ಈ ದೊಡ್ಡವರ ಮಾತು ಕೇಳಿ ಕೇಳಿಯೇ ನಾವೆಲ್ಲ ಈ ದರಿದ್ರ ಗತಿಗೆ ಬಂದಿರೋದು. ಹಿರಿಯರು ಎಂದು ನಾವು ಅವರಿಗೆ ಮರ್ಯಾದೆ ಕೊಡೋದು, ಅವರು ಹೇಳಿದಂತೆ ಕುಣಿಯುವುದು ಹೆಚ್ಚಾದ್ದರಿಂದಲೇ ಅವರು ನಮ್ಮನ್ನ ಈ ಸ್ಥಿತಿಗೆ ತಂದಿರೋದು. ಅವರು ನಮಗೆ ಮಾಡಿರುವ ಅನ್ಯಾಯ ನಿನಗೆಲ್ಲಿ ಗೊತ್ತಾಗುತ್ತೆ ಹೇಳು.

ಅನ್ಯಾಯ? ಯಾರು ಯಾರಿಗಯ್ಯ ಅನ್ಯಾಯ ಮಾಡುತ್ತಾರೆ? ಕಿರಿಯರಿಗೆ ಅನ್ಯಾಯ, ದ್ರೋಹ ಮಾಡಲು ಹಿರಿಯರಿಗೆ ಮನಸ್ಸಾದರೂ ಹೇಗಯ್ಯ ಆಗುತ್ತೆ? ತಮ್ಮ ಮಕ್ಕಳುಮರಿಗಳು ಯೋಗ್ಯ ವ್ಯಕ್ತಿಗಳಾಗಿ ಸಮಾಜದಲ್ಲಿ ಉನ್ನತ ಸ್ಥಾನವನ್ನು ಗಳಿಸಿ ಮೆರೆಯಬೇಕೆಂಬ ಹಂಬಲ ಅವರಿಗಿಲ್ಲವೇ? ಕಿರಿಯರ ಶ್ರೇಯಸ್ಸಿಗಾಗಿ ಹಗಲಿರುಳು ದುಡಿಯುತ್ತಾರೆಯೋ ಹೊರತು ಕಿರಿಯರಿಗೆ ದ್ರೋಹವೆಸಗುತ್ತಾರೆಯೇ ಅವರು? ನೀನೇಕೆ ಇಂದು ಇಷ್ಟು ರೋಸಿ ಹೋಗಿದ್ದೀಯ ಹಿರಿಯರ ಬಗ್ಗೆ?

ಇಂದಲ್ಲ, ಎಂದೆಂದಿಗೂ ನಾನು ಹಿರಿಯರ ದ್ವೇಷಿಯೇ ಸರಿ. ಎಲ್ಲ ಕಿರಿಯರನ್ನೂ ಒಟ್ಟುಗೂಡಿಸಿ ಹಿರಿಯ ಮನುಷ್ಯರ ವಿರುದ್ಧ ದಂಗೆ ಏಳಬೇಕೆಂಬ ಮನಸ್ಸಾಗುತ್ತದೆ ನನಗೆ. ಆದರೇನು ಮಾಡಲಿ, ಅವಕಾಶವೇ ಸಿಗುತ್ತಿಲ್ಲ.

ಈ ದಂಗೆಯೇಳುವ ಮನೋಭಾವ ನಿನ್ನಲ್ಲುಂಟಾಗಲು ಕಾರಣವಾದರೂ ಏನು?

ಅದನ್ನು ನಿನಗೂ ಹೇಳಬೇಕೇನಯ್ಯ? ನೀನು ಅನುಭವಿಸಲಿಲ್ಲವೇ ಅವರ ಉಪಟಳಗಳನ್ನು? ನಮ್ಮನ್ನು ಕಂಡರೆ ಅವರಿಗೇನೋ ಒಂದು ವಿಧದ ಅಲಕ್ಷ್ಯ, ಅಸಹ್ಯ.

ನೀನು ಹೇಳುತ್ತಿರುವುದೊಂದೂ ನನಗೆ ಅರ್ಥವಾಗುತ್ತಿಲ್ಲ

ನಿನಗೆ ಅರ್ಥವಾದರೂ ಹೇಗಾದೀತು? ಸ್ವಲ್ಪ ಯೋಚಿಸುವ ಶಕ್ತಿ ಇದ್ದರೆ ಅರ್ಥವಾದೀತು. ಆ ಯೋಚನಾ ಶಕ್ತಿಯೂ ಈ ಹಿರಿಯರ ಕಾಟದಿಂದ ಮಾಯವಾಗಿರಬಹುದು.

ಅದೆಲ್ಲಾ ಇರಲಿ, ನೀನು ಹಿರಿಯರ ಮೇಲೆ ಹೊರಿಸಿರುವ ಅಪಾದನೆಗಳಾದರೂ ಯಾವುವು?

ನನ್ನ ಮೊದಲನೆ ಅಪಾದನೆ — ಅವರು ನಮ್ಮನ್ನು ಹುಟ್ಟಿಸಿದ್ದೇ ತಪ್ಪು. ಪ್ರಪಂಚದಲ್ಲಿ ಇಷ್ಟೊಂದು ಹಾಹಾಕಾರಗಳಿರುವಾಗ, ಅನ್ನ ಬಟ್ಟೆಗಳಿಗೆ ಅಭಾವವಿರುವಾಗ, ರೋಗರುಜಿನಗಳ ಉಪಟಳವಿರುವಾಗ, ಕ್ಷಾಮಡಾಮರಗಳಿರುವಾಗ ನಮ್ಮನ್ನು ಏಕೆ ಹುಟ್ಟಿಸಬೇಕಿತ್ತು? ಅವರೊಂದಿಗೆ ನಾವೂ ಹೆಣಗಾಡಬೇಕೆಂದೇ?

ಹಾಗಲ್ಲ ಪುಣ್ಯಾತ್ಮಾ, ವಂಶಾಭಿವೃದ್ಧಿಯಾಗಲೆಂದು ಅವರು ಹುಟ್ಟಿಸುತ್ತಾರೆ.

ಎಂಥ ಮಸಣದ ವಂಶಾಭಿವೃದ್ಧಿಯಯ್ಯಾ? ವಂಶ ಅಭಿವೃದ್ಧಿಯಾಗಿ ಅವರಿಗೇನಯ್ಯ ಲಾಭ?

ಲಾಭವಿದೆ ಶಂಕರಾ, ಲಾಭವಿದೆ. ಮಕ್ಕಳನ್ನು ಪಡೆಯಲೆಂದೇ ಮನುಷ್ಯ ಮದುವೆಯಾಗುತ್ತಾನೆ. ಅಥವಾ ಕಾಮತೃಪ್ತಿಗಾಗಿ ಮನುಷ್ಯ ಮದುವೆಯಾಗುತ್ತಾನೆ. ಗಂಡು ಹೆಣ್ಣುಗಳ ಕೂಡುವಿಕೆಯಿಂದ ನೈಸರ್ಗಿಕ ಸಂಬಂಧವುಂಟಾಗಿ ವಂಶ ವೃದ್ಧಿಯಾಗುತ್ತದೆ.

ಕಾಮ ತೃಪ್ತಿ ಪಟ್ಟುಕೊಳ್ಳಲಯ್ಯಾ ಅವರು ಆದರೆ ಮಿತ ಸಂತಾನ ಯೋಜನೆಯನ್ನೂ ದೃಷ್ಟಿಯಲ್ಲಿಟ್ಟುಕೊಳ್ಳಬಾರದೇ?

ಆಗ ಹಾಗಿರಲಿಲ್ಲ. ಹೆಚ್ಚು ಮಕ್ಕಳನ್ನು ಪಡೆದಷ್ಟೂ ಹೆಚ್ಚು ಸಂಪತ್ತು ಬಂದಂತೆ. ಮಕ್ಕಳೆಲ್ಲ ದೊಡ್ಡವರಾಗಿ ದುಡಿಮೆಗೆ ಕೈ ಹಾಕಿದರೆ ಅವರ ಸಂಪಾದನೆಯೂ ಸೇರಿ ಸಂಸಾರದ ಆದಾಯ ಹೆಚ್ಚಿ ಸುಖ ಸಂತೋಷದ ಸಾಧನೆಯಾಗುವುದಿಲ್ಲವೇ?

ಅದು ಈಗ ಹೆಚ್ಚಾಗಿದೆಯೆಂದು ನಿನ್ನ ಅಭಿಮತವೇ? ನಿನ್ನ ಗೊಡ್ಡು ವೇದಾಂತಕ್ಕೆ ತಲೆ ಕೊಡುವುದರಲ್ಲಿ ಅರ್ಥವಿಲ್ಲ. ಹೋಗಲಿ, ಬಿಡು. ಎಂತೂ ನಮ್ಮನ್ನು ಹುಟ್ಟಿಸಿ ಹಾಕಿದರು. ಆ ಮೇಲಾದರೂ ನಮ್ಮನ್ನು ಸರಿಯಾಗಿ ಬೆಳೆಸಿದರೇ ಅವರು? ತಾಯಿ ಹೊಟ್ಟೆಯಿಂದ ಬೀಳುವಾಗಲೇ ಅವರ ಕೀಟಲೆ ಆರಂಭವಾಗುತ್ತದೆ ನಾವು ಬೆಳೆದಂತೆಲ್ಲಾ ನಾವು ಕೇಳಿದ ವಸ್ತುಗಳನ್ನು ತೆಗೆದು ಕೊಡುತ್ತಾರೆಯೇ? ಮಕ್ಕಳು ಅತ್ತು ಕರೆದೂ ಕಣ್ಣು ಕೆಂಪಗೆ ಮಾಡಿಕೊಂಡು, ಗಂಟಲು ನೋವು ಮಾಡಿಕೊಂಡರೂ ಬೇಕಾದ ವಸ್ತುಗಳನ್ನು ತಂದುಕೊಡುತ್ತಾರೆಯೇ? ಏನಾದರೂ ಕೇಳಿದರೆ ಕಿವಿ ಹಿಡಿದು, ಬೆನ್ನಿಗೆ ಗುದ್ದಿ ನಾಲ್ಕು ಮಾತು ಬೈದು ಓಡಿಸುತ್ತಾರೆ. ಅವರು ಹೇಳಿದಂತೆ ಮಕ್ಕಳು ಕೇಳಬೇಕಂತೆ! ಇದಾವ ನ್ಯಾಯ! ಮಕ್ಕಳು ಹೇಳಿದ ಹಾಗೆ ಅವರೇಕೆ ಕೇಳಬಾರದು? ಕೆಲವು ಮಕ್ಕಳಿಗೆ ಕೆಲವು ವೇಳೆ ಊಟ ಸೇರುವುದಿಲ್ಲ. ಆಗ ಕೇಳುತ್ತಾರಾ? ಜೋರು ಮಾಡಿ, ಹೊಡೆದು ಬಡಿದು ಅನ್ನವನ್ನು ಗಂಟಲಿಗೆ ಇಳಿಸುತ್ತಾರೆ. ಕಿರಿಯರಿಗೆ ಎಲ್ಲಿದೆ ಸ್ವಾತಂತ್ರ್ಯ? ಅವರೆಲ್ಲಾ ತಮ್ಮ ತಮ್ಮ ಕೆಲಸ ಮಾಡಿಸಿಕೊಳ್ಳಲು ಸತ್ಯಾಗ್ರಹ ಹೂಡಬಹುದಂತೆ. ಆದರೆ ಈ ಕಿರಿಯರು ತಾವು ಊಟ ಮಾಡುವುದಿಲ್ಲವೆಂದೋ, ಶಾಲೆಗೆ ಹೋಗುವುದಿಲ್ಲವೆಂದೋ ಸತ್ಯಾಗ್ರಹ ಹೂಡಿದರೆ ಅದು ಅವರಿಗಾಗುವುದಿಲ್ಲ. ಈ ವಿದ್ಯಾಭ್ಯಾಸವೋ ಯಾರಿಗೆ ಬೇಕು? ಆ ಶಾಲೆ ಅಥವಾ ಕಾಲೇಜುಗಳಲ್ಲಿ ಬೆಳಗಿನಿಂದ ಬೈಗಿನ ವರೆಗೂ ಕುಳಿತುಕೊಳ್ಳಬೇಕು. ಆ ಶಾಲೆಗಳಲ್ಲಿ ಸರಿಯಾಗಿ ಕುಳಿತುಕೊಳ್ಳಲು ಸ್ಥಳವಿದೆಯೇ? ಅಲ್ಲಿಯೂ ಬೈದು, ಹೊಡೆದು ಇಲ್ಲಸಲ್ಲದ ವಿಚಾರಗಳನ್ನೆಲ್ಲ ನಮ್ಮ ತಲೆಗೆ ತುರುಕಿಸಲು ಪ್ರಯತ್ನಿಸುತ್ತಾರೆ. ನಾವು ನೋಡದ ಕೇಳದ ವಿಚಾರಗಳನ್ನು ಹೇಳಿ ಅವನ್ನು ನಾವು ನಂಬುವಂತೆ ಮಾಡುತ್ತಾರೆ. ನಮ್ಮ ಮನಸ್ಸು ಚಿನ್ನಿಕೋಲು, ಗೋಲಿಯಾಟ, ಪಗಡೆಯಾಟಗಳತ್ತ ಓಡುತ್ತಿದ್ದರೂ ನಾವು ಈ ವಿಚಾರಗಳನ್ನು ಕೇಳಬೇಕು. ಅವನ್ನು ಉರು ಹೊಡೆಯಬೇಕು. ಯಾವುದೋ ರಾಜರಾಣಿಯರ ಕಥೆ. ಅದು ನಿಜವೋ ಸುಳ್ಳೋ ಯಾರಿಗೆ ಗೊತ್ತು? ಅವನ್ನೆಲ್ಲ ನಾವು ನಂಬಬೇಕು. ಆ ಲೆಕ್ಕ, ಆ ಭೂಗೋಳ, ಆ ಚರಿತ್ರೆ, ಆ ಪದ್ಯ, ಆ ಗದ್ಯ ಇವುಗಳಿಂದ ನಮಗೇನಾಗಬೇಕಾಗಿದೆ ಹೇಳು? ನಮ್ಮ ಹಿಂದಿನವರೆಲ್ಲ ಹೀಗೆ ಶಾಲೆಗೆ ಹೋದವರೇ! ಇಷ್ಟು ಕಷ್ಟಪಟ್ಟಿದ್ದಾರೆಯೇ? ಈಗ ಒಂದು ಶಾಲೆಯ ವಿದ್ಯೆ ಮುಗಿದರೆ ಇನ್ನೊಂದು. ಅದೂ ಮುಗಿದರೆ ಕಾಲೇಜು. ಒಂದೇ ಸಮನೆ ಹತ್ತು ಹದಿನಾರು ವರ್ಷ ಓದುವುದೆಂದರೆ ಏನು ಸಾಮಾನ್ಯವಾಯಿತೇ? ನಮ್ಮ ಕಷ್ಟ ಅವರಿಗೆಲ್ಲಿ ತಿಳಿಯುತ್ತೆ?.... ಇನ್ನು ಕೆಲವು ಕೆಲಸಗಳನ್ನು ಅವರು ಮಾತ್ರ ಮಾಡಬಹುದಂತೆ ನಾವು ಮಾಡಬಾರದಂತೆ! ನಮಗೆ ಬೇಕಾದ ಪುಸ್ತಕವನ್ನು ಓದಿದರೆ ಅವರಿಗಾಗದು. ಅವನ್ನು ಅವರು ಓದುವುದಿಲ್ಲವೆ? ನಾವು ಓದಬಾರದೆಂದರೆ ಅವನ್ನು ಪ್ರಕಟಿಸುವುದಾದರೂ ಏತಕ್ಕೆ? ಇಸ್ಪೀಟಾಟ ಆಡಬಾರದಂತೆ; ಬೀಡಿ ಸಿಗರೇಟುಗಳನ್ನು ಸೇದಬಾರದಂತೆ; ಹೆಂಡ ಸರಾಯಿಗಳನ್ನು ಕುಡಿಯಬಾರದಂತೆ; ಸಿನೇಮ ನಾಟಕಗಳನ್ನು ನೋಡಬಾರದಂತೆ; ಹೆಣ್ಣುಗಳನ್ನು ನೋಡಬಾರದಂತೆ, ನರ್ತನ ಮಾಡಿಸಬಾರದಂತೆ, ಇವುಗಳನ್ನೆಲ್ಲ ನಿಷೇಧಿಸುವುದಾದರೆ ತಯಾರಿಸುವುದಾದರೂ ಏತಕ್ಕೆ? ನಾವೇನಾದರೂ ಅವನ್ನು ತಯಾರಿಸಿ ಮಾರ್ಕೆಟಿನಲ್ಲಿ ಇಡಿ ಎಂದು ಹೇಳಿದೆವೇ ಅವರಿಗೆ? ಅವರೇ ತಯಾರಿಸಿ ಇಟ್ಟರು. ನಾವು ಅವನ್ನು ಉಪಯೋಗಿಸಬಾರದು ಎಂದರೇನರ್ಥ! ಇನ್ನು ಕೆಲವು ಹಿರಿಯರು ಹೇಳುವುದುಂಟು — ಸರಳ ಜೀವನ ನಡೆಸಬೇಕು — ಎಂದು. ಸರಳ ಜೀವನವೆಂದರೇನು? ಊಟವನ್ನೂ ಮಾಡದೆ, ಬಟ್ಟೆ ಬರೆಗಳನ್ನೂ ತೊಡದೆ, ಸ್ನಾನಾದಿಗಳನ್ನೂ ಮಾಡದೇ ಇದ್ದಂತೆಯೇ ಇರುವುದು ಸರಳ ಜೀವನವೇ? — ಇನ್ನು ಪರೀಕ್ಷೆಗಳ ಕಾಟ ಕೇಳಬೇಕೇ; ಹುಟ್ಟಿ ಸಾಯುವವರೆಗೂ ಇದ್ದದ್ದೇ. ಯಾವನೋ ಬರೆದ ಪುಸ್ತಕದಲ್ಲಿಯ ವಿಚಾರಗಳನ್ನು ನಾವು ಓದಿ ಉರು ಹೊಡೆದು ಗಿಳಿಪಾಠ ಒಪ್ಪಿಸಬೇಕು. ಆ ನೂರೆಂಟು ಶಾಸ್ತ್ರಗಳನ್ನು ಸಿದ್ಧಾಂತಗಳನ್ನು ಅವರು ಹೇಳಿದಂತೆ ನಂಬಬೇಕು. ನಮ್ಮ ಸ್ವಂತ ಅಭಿಪ್ರಾಯಗಳನ್ನು ತಿಳಿಸ

(ಹನ್ನೊಂದನೇ ಪುಟ ನೋಡಿರಿ)

7%

ತಾರೀಕು **20-10-64**ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p.a.	7ರಿಂದ 11 ತಿಂಗಳು % p.a.	12ರಿಂದ 23 ತಿಂಗಳು. % p.a.	24ರಿಂದ 35 ತಿಂಗಳು. % p.a.	36ರಿಂದ 47 ತಿಂಗಳು. % p.a.	48ರಿಂದ 59 ತಿಂಗಳು. % p.a.	60ರಿಂದ 83 ತಿಂಗಳು. % p.a.	84ರಿಂದ 120 ತಿಂಗಳು. % p.a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ:-	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

[ಶೆಡ್ಯೂಲ್ಡ್ ಬ್ಯಾಂಕ್]

ರಿಜಿಸ್ಟರ್ಡ್ ಆಫೀಸು:— ಕೋರ್ಟು ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ)

ಸ್ಥಾಪನೆ:— 1920

ನೀವೂ ತಿಳಿಯಿರಿ

ಆಹಾರ ಮತ್ತು ಕೃಷಿ ಮಂಡಳಿ - ಕಾರ್ಯವ್ಯಾಪ್ತಿ

ವಿಶ್ವ ಆಹಾರ ಮತ್ತು ಕೃಷಿ ಮಂಡಳಿ ಎಂದರೇನು? ಅದಾವ ಕೆಲಸ ಮಾಡುತ್ತಿದೆ?

ಜೀವನಕ್ಕೆ ಅತ್ಯಗತ್ಯವಾದ ಆಹಾರಕ್ಕೆ ಆಹಾರ ಮತ್ತು ಕೃಷಿ ಮಂಡಳಿವು ಸಂಬಂಧಿಸಿರುವುದರಿಂದ, ಅದು ಪ್ರಗತಿಯಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಹೂ, ಯುನೆಸ್ಕೊ, ಯುನಿಸೆಫ್ ಮುಂತಾದ ವಿಶ್ವಸಂಸ್ಥೆಯ ಬೇರೆ ಬೇರೆ ಅಂಗ ಸಂಸ್ಥೆಗಳಲ್ಲಿ ಈ ಸಂಸ್ಥೆಯು ಬಹು ಹಿರಿಯದಾಗಿದೆ. ಈ ಮಂಡಳಿಯು ಮೊತ್ತಮೊದಲು ೧೯೪೫ರಲ್ಲಿ ಕಾರ್ಯಾರಂಭ ಮಾಡಿತು. ಆಗ ಇದರ ಸದಸ್ಯ ಸಂಖ್ಯೆ ೪೨. ಈ ಸಂಖ್ಯೆಯಿಂದು ೧೧೦ ಆಗಿದೆ. ಪ್ರಾರಂಭದಲ್ಲಿ ಮಂಡಳಿಯು ೨೦ ಲಕ್ಷ ಡಾಲರ್‌ಗಳ ಮುಂಗಡ ಪತ್ರವನ್ನು ರಚಿಸಿಕೊಂಡಿದ್ದರೆ, ಇಂದು ೧೯೦ ಲಕ್ಷ ಡಾಲರ್‌ಗಳ ಅಂಕೆ ಸಂಖ್ಯೆಗಳಿವೆ.

ಆಹಾರ ಮತ್ತು ಕೃಷಿ ಮಂಡಳಿಯು ತಾಂತ್ರಿಕ ಸಹಾಯದ ವಿಸ್ತರಣಾ ಕಾರ್ಯಕ್ರಮ, ಅಂದರೆ, ದೇಶಗಳಿಗೆ ಸಹಾಯ ನೀಡುವ ಕಾರ್ಯಕ್ರಮದ ಸಲುವಾಗಿ ವರ್ಷಕ್ಕೆ ೯೦ ಲಕ್ಷ ಡಾಲರ್‌ಗಳನ್ನು ಬೇರೆ ಪಡೆಯುತ್ತದೆ. ಬೇಸಾಯಗಾರರು, ಅರಣ್ಯ ತಜ್ಞರು, ಮೀನು ಪಂಡಿತರು ಮೊದಲಾದ ತಂತ್ರಜ್ಞರನ್ನು ಮಂಡಳಿವು ವಿವಿಧ ದೇಶಗಳಿಗೆ ಕಳಿಸುತ್ತದೆ. ಇದು ವರೆಗೆ ೧೦೦ಕ್ಕೂ ಮಿಕ್ಕಿದ ದೇಶಗಳಲ್ಲಿ ೨೦೦೦ಕ್ಕೂ ಹೆಚ್ಚು ಯೋಜನೆಗಳನ್ನು ಕಾರ್ಯಗತ ಮಾಡಿದೆ. ಪ್ರತಿ ವರ್ಷವೂ ಹತ್ತಾರು ದೇಶಗಳಲ್ಲಿ ನೂರಾರು ಪರಿಣತರು ಕೆಲಸ ಮಾಡುತ್ತಿರುತ್ತಾರೆ. ಭಾರತದಲ್ಲಿ ಈಗ ೩೦ ಮಂದಿ ಇಂತಹ ತಂತ್ರಜ್ಞರು ಕೆಲಸ ಮಾಡುತ್ತಿದ್ದಾರೆ.

ವಿಶ್ವಸಂಸ್ಥೆಯ ಅನೇಕ ವಿಶೇಷ ನಿಧಿಯ ಯೋಜನೆಗಳನ್ನು ಈ ಮಂಡಳಿಯೇ ನಿರ್ವಹಿಸುತ್ತದೆ. ಈಗ ಒಟ್ಟು ೨೦ ಕೋಟಿ ಡಾಲರ್ ಮೊತ್ತದ ಇಂತಹ ೧೦೦ ಯೋಜನೆಗಳನ್ನು ಇದು ಸಂಯೋಜಿಸುತ್ತದೆ. ಕೆಲವೊಮ್ಮೆ ಈ ಮಂಡಳಿಯು ತನ್ನ ಸಹೋದರ ಸಂಸ್ಥೆಗಳೊಡನೆ ಕೂಡಿ ಕೆಲಸ ಮಾಡುವುದೂ ಇದೆ, ಭಾರತದಲ್ಲಿ ೩೫೦ ಲಕ್ಷ ಡಾಲರ್ ವೆಚ್ಚದಿಂದ ತೊಡಗಿದ ಪೌಷ್ಟಿಕಾಂಶ ಕಾರ್ಯಕ್ರಮದಲ್ಲಿ ಯೂನಿಸೆಫ್‌ನೊಡನೆ ಸಹಕರಿಸುತ್ತಿದೆ; 'ಹಸಿವೆಯಿಂದ ವಿಮೋಚನೆ' ಚಳುವಳಿಗೆ ಇದರ ಹೆಚ್ಚಿನ ಕಾರ್ಯ ಸಾಧನೆಗಳು ನಡೆಯುತ್ತಿವೆ.

ಮಂಡಳಿಯ ಡೈರೆಕ್ಟರ್ ಜನರಲ್ ಆದ ಪ್ರತಿಭಾಸ್ವಿತ ಭಾರತೀಯ ಡಾ|| ಬಿ. ಆರ್. ಸೇನ್ ೧೯೬೦ರ ಜುಲೈಯಲ್ಲಿ ವಿಶ್ವದಾದ್ಯಂತ 'ಹಸಿವೆಯಿಂದ ವಿಮೋಚನೆ' ಚಳುವಳಿಯನ್ನು ಪ್ರಾರಂಭಿಸಿದರು. ಹಸಿವೆಯ ಅಪಾಯದತ್ತ ವಿಶ್ವವನ್ನು ಎಚ್ಚರಗೊಳಿಸುವುದೇ ಈ ಚಳುವಳಿಯ ಗುರಿ. ಈ ಸಂಬಂಧ ಮಂಡಳಿವು ಕೆಲವೊಂದು ಅಂಕೆ ಸಂಖ್ಯೆಗಳನ್ನು ಕಲೆ ಹಾಕಿದೆ. ಪ್ರಪಂಚದಲ್ಲಿ ಸುಮಾರು ೩೦೦ರಿಂದ ೫೦ ಕೋಟಿ ಜನರಿಗೆ ಸಾಕಷ್ಟು ತಿನ್ನುವುದಕ್ಕಿಲ್ಲ; ಒಂದು ನೂರು ಕೋಟಿ ಜನರು ಪೌಷ್ಟಿಕಾಂಶವಿಲ್ಲದ ಶುಷ್ಕ ಆಹಾರವನ್ನೇ ಸೇವಿಸುತ್ತಾರೆ. ಇದರ ಪರಿಣಾಮವಾಗಿ ವಿಶ್ವ ಜನಸಂಖ್ಯೆಯ ಅರ್ಧಾಂಶದಷ್ಟು ನಾಗರಿಕರು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಅಗತ್ಯವಾದ ಉತ್ತಮ ಆಹಾರ ಪಡೆಯುತ್ತಿಲ್ಲ.

'ಜನ ಸಂಖ್ಯಾ ಹೆಚ್ಚಳ'ದಿಂದ ಈ ಭೀಷಣತೆ ಮತ್ತೂ ಉಗ್ರವಾಗಬಹುದು. ಕ್ರಿ. ಶ. ೨೦೦೦ರ ಸುಮಾರಿಗೆ ಜನಸಂಖ್ಯೆಯು ಇಂದಿಗಿಂತ ದ್ವಿಗುಣಿತವಾಗಬಹುದು (ಸು. ೬೦೦ ಕೋಟಿ) ಆಹಾರೋತ್ಪಾದನೆಯನ್ನೂ ದ್ವಿಗುಣಿತಗೊಳಿಸದಿದ್ದರೆ, ಹಸಿವೆಯ ಕಾಟ ಮತ್ತಷ್ಟು ಹೆಚ್ಚಬಹುದು.

'ಹಸಿವೆಯಿಂದ ವಿಮೋಚನೆ' ಚಳವಳಿಗೆ ಸಾರ್ವಜನಿಕರಿಂದ ೫೫೦ ಲಕ್ಷ ಡಾಲರ್ ವಂತಿಗೆ ಬಂದಿದೆ. ವಿಶ್ವ ಆಹಾರ ಕಾರ್ಯಕ್ರಮದ ಸ್ಥಾಪನೆಯು ಈ ಚಳುವಳಿಯ ಒಂದು ಫಲ. ಹತ್ತು ಕೋಟಿ ಡಾಲರ್‌ಗಳ ಈ ಯೋಜನೆಯು ಆಹಾರವನ್ನು ಸಹಾಯವಾಗಿ ಬಳಸಿ ಆರ್ಥಿಕ ಬೆಳವಣಿಗೆಯನ್ನು ಸಾಧಿಸಲು ನೆರವಾಗುತ್ತದೆ; ಬರಗಾಲ—ಕೊರಗಾಲದ ಭೀಕರ ಪರಿಸ್ಥಿತಿಯನ್ನೆದುರಿಸಲು ಮುಂದಾಗುತ್ತಿದೆ.

ಭಾರತದಲ್ಲಿ ಆಹಾರ ಮತ್ತು ಕೃಷಿ ಮಂಡಳಿಯು ಈ ಕೆಳಗಿನ ಕ್ರಮಗಳನ್ನು ಸದ್ಯ ಕೈಕೊಂಡಿದೆ.

೧. ಮಂಡಳಿಯು ೩೦ ಮಂದಿ ತಂತ್ರಜ್ಞರು ತಾಂತ್ರಿಕ ಕಾರ್ಯಕ್ರಮಗಳಲ್ಲಿ ಕೆಲಸ ಮಾಡುತಿದ್ದಾರೆ. ೬೪೦ ಸಾವಿರ ಡಾಲರ್ ವೆಚ್ಚ ಇದಕ್ಕಾಗುತ್ತದೆ.

೨. ೧೨೭ ಲಕ್ಷ ಡಾಲರ್ ಮೊತ್ತದ ನಿಧಿಗಳ ಜವಾಬ್ದಾರಿಯನ್ನು ಹೊತ್ತುಕೊಂಡಿದೆ.

೩. 'ಹಸಿವೆಯಿಂದ ವಿಮೋಚನೆ' ಕಾರ್ಯಕ್ರಮವು ೫೭೦ ಸಾವಿರ ಡಾಲರ್ ವಂತಿಗೆಯನ್ನು ಕಳುಹಿಸಿದೆ

೪. ೪೦ ಲಕ್ಷ ಡಾಲರ್‌ಗಳ ಎರಡು ವಿಶ್ವ ಆಹಾರ ಕಾರ್ಯಕ್ರಮಗಳ ಯೋಜನೆಯನ್ನು ಕೈಗೊಂಡಿದೆ.

೫. ಭಾರತ ಸರಕಾರದ ೩½ ಕೋಟಿ ಡಾಲರ್‌ಗಳ ಪೌಷ್ಟಿಕಾಂಶ ಕಾರ್ಯಕ್ರಮದಲ್ಲಿ ಭಾಗವಹಿಸಿದೆ.

೬. ಭಾರತ ಸರಕಾರದ ೮೨೦ ಲಕ್ಷ ಡಾಲರ್‌ಗಳ ಕ್ಷೀರ ಪಾಲನಾ ಕಾರ್ಯಕ್ರಮದಲ್ಲಿ ಇದರ ಪಾತ್ರವಿದೆ.

ಹೀಗೆ ಒಟ್ಟು ೧೪ ಕೋಟಿ ಡಾಲರ್‌ಗಳಿಗೂ ಮೀರಿದ ವಿವಿಧ ಯೋಜನೆಗಳಲ್ಲಿ ಮಂಡಳಿಯು ಸಕ್ರಿಯವಾಗಿ ಭಾಗ ವಹಿಸುತ್ತಿದೆ. ಇದೇ ರೀತಿಯಲ್ಲಿ ವಿಶ್ವದ ಇತರ ದೇಶಗಳಲ್ಲೂ ಮಂಡಳಿಯ ಕಾರ್ಯಕ್ರಮಗಳು ನಡೆಯುತ್ತಿವೆ. ಆಹಾರ ಮತ್ತು ಕೃಷಿ ಮಂಡಳಿಯು ವಿಶ್ವದಲ್ಲಿ ಸಹಕಾರ ಭಾವನೆಯನ್ನು ವ್ಯಕ್ತಪಡಿಸುತ್ತದೆಯೆಂದರೆ, ತಪ್ಪಲ್ಲ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

R.I.A. 713/64 O.S. 304/63.

ರಗುನಾಥ ಶೆಟ್ಟಿ —ವಾದಿ, ಅರ್ಜಿದಾರ.

ಮತ್ತು

1. ಚಂದ್ರ ಯಾನೆ ಸಂಕಿ ಶೆಡ್ತಿ
2. ನಾಗಯ್ಯ ಶೆಟ್ಟಿ
3. ಮಹಾಬಲ ಶೆಟ್ಟಿ
4. ಲಚ್ಚು ಶೆಡ್ತಿ
5. ವಾರಿಜ

6. ಸುಂದರಿ 7. ರಗು— ವ್ಯವಸ್ಥರು ಕೋರ್ಟು ಗಾರ್ಡಿಯನ್ ಶ್ರೀ U.R.K Achar, Advocate, Udipi

—ಪ್ರತಿವಾದಿರು, ಎದ್ರಿರು.

1ರಿಂದ 4ನೇ ಎದ್ರಿರು ಉಡುಪಿ ತಾಲೂಕು ಪಡುತೋನ್ಸೆ ಗ್ರಾಮದ ಸಂಣ ಮನೆಯಲ್ಲಿರುವ ದುಗ್ಗಶೆಡ್ತಿ ಮಗಳು. ಚಂದ್ರೆ ಯಾನೆ ಸಂಕಿ ಶೆಡ್ತಿ 1ನೇಯವಳ ಮಕ್ಕಳು, ನಾಗಯ್ಯ ಶೆಟ್ಟಿ, ಮಹಾಬಲ ಶೆಟ್ಟಿ ಲಚ್ಚು ಶೆಡ್ತಿಯವರಿಗೆ ಸಹಾ ಯಾಮೂಲ್ಕ ತಿಳಿಯಪಡಿಸುವದೇನೆಂದ್ರೆ:—

ಮೇಲಿನ ವಾವೆಯಲ್ಲಿ 21-12-63ರಲ್ಲಿ ಕೊಡೋಣಾದ ಪ್ರಿಲಿಮಿನರಿ ಡಿಕ್ರಿಯನ್ನು ಫೈನಲ್ ಡಿಕ್ರಿಯನ್ನಾಗಿ ಮಾಡಬೇಕಾಗಿ ವಾದಿ ಅರ್ಜಿದಾರನು ಕೊಟ್ಟ ಮೇಲಿನ ಅರ್ಜಿಯು 1ರಿಂದ 4ನೇ ಎದ್ರಿರೀಗೆ ನೋಟೀಸ್ ಬಗ್ಗೆ ತಾ. 8-1-65ಕ್ಕೆ ಮೇಲಿನ ಕೋರ್ಟಿನಲ್ಲಿ ಯಿಡೋಣಾಗಿರುತ್ತದೆ ಎಂಬ ಸಂಗ್ತಿಯಿಾ ಮೂಲ್ಯ ನಿಮಗೆ ತಿಳಿಸೋಣಾಗುತ್ತದೆ

(Sd.) B. Ananda Shetty,
Advocate for Petitioner.

Udipi, dated 10-12-64.

ನಿಮ್ಮ ಉಳಿತಾಯವನ್ನು ಸಿಂಡಿಕೇಟ್‌ನಲ್ಲಿ ತೊಡಗಿಸಿರಿ ಮತ್ತು
ನಿಮ್ಮ ಹಣದ ಮೇಲೆ ಹೆಚ್ಚು ಆದಾಯವನ್ನು ಗಳಿಸಿರಿ!

ಠಾಯಿದೆ ಠೇವಣಾತಿಗಳ ಮೇಲಣ ಬಡ್ಡಿ ದರವನ್ನು ಹೆಚ್ಚಿಸಲಾಗಿದೆ.

ಈಗ ಚಾಲ್ತಿಯಲ್ಲಿರುವ ಬಡ್ಡಿ ದರಗಳು.

ಕೆಳಗೆ ಕಾಣಿಸಿದ ಅವಧಿಗೆ ಅಥವಾ ಹೆಚ್ಚಿಗೆ	ಆದರೆ ಈ ಕೆಳಗೆ ಕಾಣಿಸಿದ ಅವಧಿಗಿಂತ ಕಡಿಮೆ	ಬಡ್ಡಿ ದರ
15 ದಿವಸಗಳು.	45 ದಿವಸಗಳ ವರೆಗೆ	1.25%
46 ದಿವಸಗಳು.	90 ದಿವಸಗಳ ವರೆಗೆ	2.50%
91 ದಿವಸಗಳು.	6 ತಿಂಗಳು	4⅛%
6 ತಿಂಗಳು.	1 ವರ್ಷ.	4⅝%
1 ವರ್ಷ.	2 ವರ್ಷ.	5⅛%
2 ವರ್ಷ.	3 ವರ್ಷ	5⅜%
3 ವರ್ಷ.	5 ವರ್ಷ.	5⅝%
5 ವರ್ಷ.	7 ವರ್ಷ.	6⅛%
7 ವರ್ಷ.	9 ವರ್ಷ.	6⅜%
9 ವರ್ಷ.	ಮತ್ತು ಹೆಚ್ಚಿನ ಅವಧಿಗೆ	6½%

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 200

ಚಲಾವಣಾಸಂಪತ್ತು 60 ಕೋಟಿಗೂ ಮಿಕ್ಕಿದೆ. .... ವಿಶ್ವವ್ಯಾಪೀ ಬ್ಯಾಂಕಿಂಗ್ ಬಗ್ಗೆ

WANTED

Fitters, Operators, Electricians, Welders, for our Mechanical Ore Handling Plant at Mormugao Harbour.

Write to:

CHOWGULE & CO. LTD., GOA.

giving details of experience and salary expected, within 8 days

READ & ADVERTISE IN **NAVAYUGA WEEKLY**

ನೃತ್ಯಕಲೆಯಲ್ಲಿ

ಪ್ರಪಂಚವು ಸೃಷ್ಟಿಯಾದಂದೇ ಕಲೆಯೂ ಹುಟ್ಟಿ ಬಂದಿದೆ. ಮಾನವನು ಬದಲಾಗುತ್ತ ಬಂದಂದಂತೆಯೇ ಈ ಕಲೆಯ ಸ್ವರೂಪದಲ್ಲಿಯೂ ಪರಿವರ್ತನೆ ನಡೆಯುತ್ತ ಬಂದಿದೆ. ಕಲೆಯು ಮಾನವ ಪ್ರವೃತ್ತಿಯಿಂದ ದೂರ ಸರಿದಿಲ್ಲವಾದುದರಿಂದಲೇ ಅದು ಇಂದಿಗೂ ಉಳಿದು ಬಂದಿದೆ. ಕಲೆಯು ಕಲೆಗಾಗಿಯೇ ಉಳಿದಿದ್ದ ಕಾಲವೊಂದಿತ್ತು. ಸಾಹಿತ್ಯವು ಸಾಹಿತ್ಯಕ್ಕಾಗಿ ಉಳಿಯದೆ ಜನಮನರಂಜನೆಗಾಗಿಯೆಂಬ ತಿಳುವಳಿಕೆ ಮನುಷ್ಯನಲ್ಲಿ ಮೂಡಿ ಬಂದಂತೆಯೇ ಕಲೆಯೂ ಮಾನವನ ಮನರಂಜನೆಗಾಗಿರುವುದೆಂಬ ಭಾವನೆಯು ಹುಟ್ಟಿ ಬಂದಿದೆ. ಆದುದರಿಂದಲೇ ದೇಶ—ಮತ—ಪಂಗಡವೆಂಬ ಭೇದಭಾವವಿಲ್ಲದ ಕಲೆಗೆ ಎಲ್ಲೆಲ್ಲಿಯೂ ಮನ್ನಣೆಯು ದೊರೆಯುತ್ತಲಿದೆ. ಆಯಾ ವಿಭಾಗಗಳ ಜನರ ಪ್ರವೃತ್ತಿ ನಡವಳಿಕೆಗಳಿಗನುಸಾರ ಅಲ್ಲಲ್ಲಿಯ ಕಲಾ ಪ್ರದರ್ಶನದ ವೈಖರಿಯಲ್ಲಿಯೂ ಅಂತರ ಕಂಡುಬರುವುದು ಸ್ಪಷ್ಟ.

ಕಲೆಯ ಕಡೆಗೆ ಜನರ ಪ್ರವೃತ್ತಿ ಯಿಂದು ವಿಶೇಷವಾಗಿ ಹರಿಯುತ್ತಿದೆ, ಅಭಿಮಾನ ದಿನದಿಂದ ದಿನಕ್ಕೆ ಬೆಳೆಯುತ್ತ ಬರುತ್ತಿದೆ. ಒಂದಾನೊಂದು ಕಾಲದಲ್ಲಿ ವಿಶಿಷ್ಟ ವರ್ಗದ ಜನರ ಸೊತ್ತಾಗಿದ್ದ ಕಲಾಭ್ಯಾಸವಿಂದು ಸಾರ್ವತ್ರಿಕವಾದ ಗೌರವ ಪಡೆಯುತ್ತಲಿದೆ. ದೇಶ ದೇಶಗಳಲ್ಲಿ ಪ್ರತಿವರ್ಷವೂ ಕಲಾ ಮೇಳಗಳು ಆಗಾಗ ಸಂಘಟಿಸಲ್ಪಡುತ್ತಿವೆ. ಕೆಲವೊಮ್ಮೆ ಅಂತಾರಾಷ್ಟ್ರೀಯ ಕಲಾಮೇಳಗಳು ಸೇರುವುದೂ ಉಂಟು. ಇತ್ತೀಚಿಗಿನ ವರ್ಷಗಳಲ್ಲಿ ಅಂತಾರಾಷ್ಟ್ರೀಯ ಸಂಬಂಧ— ಸಂಪರ್ಕಗಳು ಅತಿನಿಕಟವಾಗುತ್ತಿರುವುದರಿಂದ ಇಂತಹ ಮೇಳಗಳೂ ಪ್ರಾಶಸ್ತ್ಯ ಪಡೆಯುತ್ತ ಬರುತ್ತಿವೆ. 'ಒಲಿಂಪಿಕ್ ಕ್ರೀಡೆ'ಗಳಂತೆಯೇ ಅಂತಾರಾಷ್ಟ್ರೀಯ ಕಲಾಮೇಳಗಳೂ ವಿಶ್ವದ ಎಲ್ಲ ರಾಷ್ಟ್ರಗಳಿಂದ ಮಾನ್ಯವಾಗುವ ದಿನವು ಬಂದರೂ ಬರಬಹುದು.

ಬಲ್ಗೇರಿಯಾ ಒಂದು ಚಿಕ್ಕ ದೇಶ. ಇದು ಕಪ್ಪು ಸಮುದ್ರದ ತೀರದಿಂದ ಕೂಡಿದೆ. ಕಪ್ಪು ಸಮುದ್ರದ ಕರಾವಳಿಯ ರಮಣೀಯ ನೋಟದಿಂದ ಮುಗ್ಧಗೊಳ್ಳದವನಿಲ್ಲ. ಇಂತಹ ಪ್ರಕೃತಿ ಸುಂದರ ನಾಡೆಡೆಯಲ್ಲಿ 'ವಾರ್ನಾ' ಎಂಬುದೊಂದು ಸಾಮಾನ್ಯ ನಗರ. ಕಳೆದ ಬೇಸಗೆಯಲ್ಲಿ ಈ ನಗರವು ಎಲ್ಲ ಕಲಾಭಿಮಾನಿಗಳನ್ನೂ ತನ್ನತ್ತ ಆಕರ್ಷಿಸಿತ್ತು. ಇದಕ್ಕೆ ಇಲ್ಲಿ ಅಂತರರಾಷ್ಟ್ರೀಯ 'ಬ್ಯಾಲೆಟ್ ಪರ್ವ'ವು ನಡೆದುದೇ ಕಾರಣ.

'ವಾರ್ನಾ'ದಲ್ಲಿ ಕಳೆದ ಬೇಸಗೆಯಲ್ಲಿ ಜುಲೈ ೪ರಿಂದ ೧೧ರ ವರೆಗೆ ಅಂತಾರಾಷ್ಟ್ರೀಯ ಬ್ಯಾಲೆಟ್ ಪರ್ವವು ವೈಭವೋಪೇತವಾಗಿ ಜರಗಿತು. ಇಲ್ಲಿ ಪ್ರತಿ ವರ್ಷವೂ ಬೇಸಗೆಯ ಕಾರ್ಯಕ್ರಮಗಳು ನಡೆಯುತ್ತಲೇ ಇವೆ. ಈ ವರ್ಷದ ಬ್ಯಾಲೆಟ್ ಪರ್ವವನ್ನು ಸಂಘಟಿಸಲು ಬಲ್ಗೇರಿಯಾದ ಸಂಗೀತ ಡೈರೆಕ್ಟರೇಟ್ ಒಳ್ಳೆ ಮುತುವರ್ಜಿ ವಹಿಸಿತು. ಈ ಉತ್ಸವದಲ್ಲಿ ೬೦ ಮಂದಿ ಪುರುಷ ಮತ್ತು ಸ್ತ್ರೀ ಬ್ಯಾಲೆಟ್ ಡಾನ್ಸರ್‌ಗಳು ಭಾಗವಹಿಸಿದ್ದರು. ಇವರು ೧೨ ಬೇರೆ ಬೇರೆ ರಾಷ್ಟ್ರಗಳಿಗೆ ಸೇರಿದವರಾಗಿದ್ದರು.

ಉತ್ಸವದ ಮೂರು ಸುತ್ತುಗಳನ್ನು ಬಲ್ಗೇರಿಯಾದ ಬ್ಯಾಲೆಟ್ ಫ್ಯಾನ್‌ಗಳು ಮಾತ್ರವಲ್ಲ ನಿಸರ್ಗ ಶೋಭಿತ ಕಪ್ಪು ಸಮುದ್ರ ತೀರದಲ್ಲಿ ರಜಾದಿನಗಳಲ್ಲಿ ತಿರುಗಾಟಕ್ಕೆಂದು ಬಂದಿದ್ದ ಸಾವಿರಾರು ಅತಿಥಿಗಳೂ ಕುತೂಹಲಾಸಕ್ತಗಳಿಂದ ನಿರೀಕ್ಷಿಸಿದರು. ಇಲ್ಲಿ ನಡೆದಿದ್ದ ಕಲಾ ಸ್ಪರ್ಧೆಗಳು ಉನ್ನತ ಮಟ್ಟದವಾಗಿದ್ದುವು. ಸೋವಿಯತ್ ರಶ್ಯದ ಸುವಿಖ್ಯಾತ ಡಾನ್ಸರರೂ ಜನತಾ ಕಲಾವಿದರೂ ಆದ ಗಲೀನಾ ಉಲನೋವಾರು ನ್ಯಾಯ ಮಂಡಳಿಯ ಅಧ್ಯಕ್ಷರಾಗಿದ್ದರು. ಲಂಡನ್ನಿನ ರಾಯಲ್ ಬ್ಯಾಲೆಟ ಸ್ಕೂಲಿನ ಡೈರೆಕ್ಟರ್ ಆರ್ನೋಲ್ಡ್ ಹಾಸ್ಕೆಲ್, ಸುಪ್ರಸಿದ್ಧ ಫ್ರೆಂಚ ಬ್ಯಾಲೆಟ್ ಡಾನ್ಸರ್ ಸೆರ್ಜ್ ಲಿಫಾರ್ ಮತ್ತು ಸೋಫಿಯಾ ನೇಶನಲ್ ಒಪೇರಾ ಹೌಸ್‌ನ ಬ್ಯಾಲೆಟ್‌ನ ಕಲಾನಿರ್ದೇಶಕ ನೀನಾ ಕಿರಾಡಜೀವಾರು ನ್ಯಾಯಾಧೀಶ ಮಂಡಳಿಯ ಉಪಾಧ್ಯಕ್ಷ ಪದವನ್ನು ನಿರ್ವಹಿಸಿದ್ದರು.

ಸೋವಿಯತ್ ರಶ್ಯ, ಬಲ್ಗೇರಿಯಾ, ರುಮೇನಿಯಾ, ಚೆಕೊಸ್ಲೊವಾಕಿಯಾ, ಪೋಲೆಂಡ್, ಫ್ರಾನ್ಸ್, ಹಂಗೆರಿ, ಕ್ಯೂಬಾ ಮೊದಲಾದ ಹನ್ನೆರಡು ದೇಶಗಳ ಪ್ರಖ್ಯಾತ ಬ್ಯಾಲೆಟ್ ನೃತ್ಯ ಕಲಾವಿದರು ಭಾಗವಹಿಸಿದ್ದ ಈ ಪ್ರದರ್ಶನವು ಹೃದ್ಯವಾಗಿತ್ತು. ನ್ಯಾಯಮಂಡಳಿಯ ಅಭಿಪ್ರಾಯದಂತೆ ಅತ್ಯುತ್ತಮ ಪ್ರದರ್ಶನ ನೀಡಿದ ಕಲಾವಿದರಿಗೆ ಪ್ರಶಸ್ತಿಯನ್ನೂ ಪದಕಗಳನ್ನೂ ನೀಡಲಾಗಿತ್ತು.

ಅತ್ಯುತ್ತಮ ಪ್ರದರ್ಶನ ನೀಡಿದ ರಶ್ಯದ ವ್ಲಾದಿಮೀರ್ ವಸ್ಸಿಲೇವ್‌ರವರು ವಾರ್ನಾ ಬೇಸಗೆ ಸ್ಪರ್ಧೆಯ 'ಗ್ರಾಂಡ್ ಪ್ರಿಕ್ಸ್' (ವಿಶೇಷ ಪ್ರಶಸ್ತಿ) ಯನ್ನೂ ಬಂಗಾರದ ಪದಕವನ್ನೂ ಪಡೆದರು. ರಶಿಯಾದ ಅಲ್ಲಾ ಸಿಜೋವ, ಎಕತೆರೀನಾ ಮಾಕ್ಸಿಮೋವಾ, ಸೆರ್ಜ ವಿಕುಲೋವ್ ಮತ್ತು ನಿಕೀತಾ ಡಲ್ಗುಶಿನ್ ಹಾಗೂ ಬಲ್ಗೇರಿಯಾದ ವೇರಾ ಕಿರೋವಾರವರು ಪ್ರಥಮ ಬಹುಮಾನವೆಂದು ಬಂಗಾರದ ಪದಕವನ್ನು ಗಳಿಸುವಲ್ಲಿ ಯಶಸ್ವಿಯಾದರು.

ಕ್ರಸ್ಸಿಮೀರಾ ಕೋಲ್ಡಮೋವಾ (ಬಲ್ಗೇರಿಯಾ) ಮಲ್ಲಿಕಾ ಸಬಿರೋವಾ (ರಶ್ಯ), ಮೆಗ್ದಲೀನಾ ಪೋಪ (ರುಮೇನಿಯಾ), ಕಲೀನಾ ಬಗೋವಾ (ಬಲ್ಗೇರಿಯಾ), ಮಾರ್ತಾ ಡ್ರೊತ್ನೆರೋವಾ (ಚೆಕೊಸ್ಲೊವಾಕಿಯಾ) ಮೌಜಾಹಾರ್ ಬೋರ್ಹಾಜಾವ್ (ರಶ್ಯ), ವ್ಯಾರ್ಜಿಜ ವಿಸ್ಸಿಲೋಕ್ಸಿ (ಪೋಲೆಂಡ್), ಜಾಸಪ್‌ವಾರ್ಗಸ್ (ಹಂಗೆರಿ), ಪ್ರೊಪೋ ಲೋರ್ಡ್ ಸ್ಕೆಪಾನ್ಸ್ಕಿ (ರುಮೇನಿಯಾ) ಮತ್ತು ಮಿತ್ರಾಪ್ಲಾ (ಕ್ಯೂಬಾ) ಇವರು ಬೆಳ್ಳಿಯ ಪದಕಗಳನ್ನು ದ್ವಿತೀಯ ಬಹುಮಾನವಾಗಿ ಗಳಿಸಿದರು.

ಇಟ್‌ಸ್ಕೊ ಲಾಜರೋವ್ (ಬಲ್ಗೇರಿಯಾ) ಮಾರ್ಗರೇಟಾ ಟ್ರೋಯನೋವಾ ಬಲ್ಗೇರಿಯಾ), ಮೇಕಿಕೇಸಿ (ಹಂಗೇರಿ), ಜಾರ್ಜ್‌ಗೆಸ್ಲರ್ (ಹಂಗೇರಿ), ಜಾಸೆಫಿನಾ ಮೆಂಡೆಜ್ (ಕ್ಯೂಬಾ) ರುಡುಲ್ಫೋರೊಡ್ರಿಗಸ್ (ಕ್ಯೂಬಾ) ಮತ್ತು ಕೋನ್ಸ್ಟಾಂಟಿನ್ ಡಮ್ಯನೋವ್ (ಬಲ್ಗೇರಿಯಾ) ಇವರು ಕಂಚಿನ ಪದಕಗಳನ್ನು ಮೂರನೆಯ ಪಾರಿತೋಷಕವೆಂದು ಪಡೆದರು.

ಫ್ರಾನ್ಸಿನ ಎಮಿಲಿಯಾ ಗೋಬಿನ್‌ರವರಿಗೆ ಅತಿ ಕಿರಿಯ ಸ್ಪರ್ಧಾಳುವೆಂದು ಮೂರನೆಯ ಸುತ್ತನ್ನು ಪ್ರವೇಶಿಸಿದುದಕ್ಕೆ ವಿಶೇಷ ಡಿಪ್ಲೊಮಾವನ್ನು ಕೊಡಲಾಯಿತು.

ಲಂಡನ್ನಿನ ರಾಯಲ್ ಬ್ಯಾಲೆಟ್ ಸ್ಕೂಲಿನ ನಿರ್ದೇಶಕರಾದ ಆರ್ನಾಲ್ಡ್ ಹಾಸ್ಕೆಲ್ಲರನ್ನು ಕಲೋತ್ಸವದ ಕುರಿತಾಗಿ ಹಲವಾರು

ಅತ್ಯಂತಾಸಕ್ತಿ

ವರದಿಗಾರರು ಪ್ರತ್ನಿಸಿದರು ನ್ಯಾಯ ಮಂಡಳದ ಉಪಾಧ್ಯಕ್ಷರಲ್ಲಿ ಒಬ್ಬರಾದ ಇವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ 'ಈ ಸ್ಪರ್ಧೆಯು ಉನ್ನತ ಮಟ್ಟವನ್ನು ಕಾಯ್ದುಕೊಂಡಿತ್ತು ಮತ್ತು ಪ್ರತ್ಯೇಕ ಪ್ರದರ್ಶನವೂ ವೈಶಿಷ್ಟ್ಯ ಪೂರ್ಣವಾಗಿತ್ತು' ಎಂದು ನಾನು ಭಾವಿಸುತ್ತೇನೆ. ರಶ್ಯದ ವ್ಲಾದಿಮಿರ್ ವಸ್ಸಿಲೇವ್‌ರವರು ಇಂದಿನ ಅತ್ಯುತ್ತಮ ನರ್ತಕರೆಂದು ನನ್ನ ಅಭಿಪ್ರಾಯ ಇವರನ್ನು ಸರಿಗಟ್ಟುವ ನರ್ತಕರು ಇತರ ದೇಶಗಳ ರಂಗಭೂಮಿಯಲ್ಲಿಯೂ ಇರಲಾರರು' ಎಂದು ಸಂತೋಷದಿಂದ ಉದ್ಗರಿಸಿದರು

"ಈ ಪ್ರದರ್ಶನವು ಬಹು ದೊಡ್ಡ ಅಂತರಾಷ್ಟ್ರೀಯ ಮಹತ್ವವನ್ನು ಹೊಂದಿದೆ. ಈ ಉತ್ಸವವನ್ನೇ ವಿಸ್ತರಿಸಿ ಅಂತರಾಷ್ಟ್ರೀಯ ಸಂಪ್ರದಾಯವನ್ನಾಗಿ ಪರಿವರ್ತಿಸುವುದು ಸರಿಯೂದುದು" ಎಂದು ಅವರು ಮುಂದುವರಿಸುತ್ತ ನುಡಿದರು.

ಬಲ್ಗೇರಿಯಾದ ವಾರ್ನಾದಲ್ಲಿ ನಡೆದ ಈ ಬ್ಯಾಲೆಟ್ ನೃತ್ಯೋತ್ಸವವು ಆಮಂತ್ರಿತ ರಾಷ್ಟ್ರಗಳ ನರ್ತಕರಿಂದ ಮಾತ್ರ ಕೂಡಿತ್ತು ಅರ್ನಾಲ್ಡ್ ಹಾಸ್ಕೆಲ್‌ರು ಹೇಳುವಂತೆ ಈ ಬಗೆಯ ಉತ್ಸವವನ್ನು ವಿಸ್ತರಿಸಿ ವಿಶ್ವದ ಎಲ್ಲಾ ದೇಶಗಳ ಬ್ಯಾಲೆಟ್ ನರ್ತಕರನ್ನೂ ಆಮಂತ್ರಿಸಿ ಇದಕ್ಕೆ ಅಂತರಾಷ್ಟ್ರೀಯ ಸ್ಥಾನವನ್ನು ಕಲ್ಪಿಸಿ ಕೊಡುವ ದಿನವೂ ಬಹುದೂರವಿಲ್ಲವೆಂದು ಊಹಿಸಬಹುದು

ಭಾರತದಲ್ಲಿಯೂ ಒಂದಲ್ಲ, ಹಲವು ಬಗೆಯ ನೃತ್ಯ ಕಲೆಗಳಿವೆ ಪ್ರತಿ ಸಂಪ್ರದಾಯದಲ್ಲಿಯೂ ಪರಿಣತರಾದ ಅನೇಕ ಕಲಾವಿದರಿದ್ದಾರೆ ಅಖಿಲ ಭಾರತೀಯ ಮಟ್ಟದ ನೃತ್ಯ ಕಲೋತ್ಸವವನ್ನು ಸಂಘಟಿಸಿ, ಗೌರವಿಸುವುದರಿಂದ ಆ ಸಂಪ್ರದಾಯವು ಮತ್ತಷ್ಟು ಬೆಳೆದು ಬರುವುದು. ಸಾಧ್ಯವಿದೆ ಭರತನಾಟ್ಯ-ಕಥಕ್ಕಳಿ ಮೊದಲಾದ ಪರಿಷ್ಕೃತ ಸಂಪ್ರದಾಯಗಳಲ್ಲದೆ ಜಾನಪದ ನೃತ್ಯ ಪರಂಪರೆಗಳು ಹಲವಾರಿವೆ ಅವುಗಳು ಅಪರೂಪಕ್ಕೊಮ್ಮೆ ಅಲ್ಲಲ್ಲಿ ಪ್ರದರ್ಶಿಸಲ್ಪಡುತ್ತವೆ ಪ್ರಜಾರಾಜ್ಯ ದಿನೋತ್ಸವದಂದು ಮಣಿಪುರಿ ನೃತ್ಯವನ್ನು ನವದೆಹಲಿಯಲ್ಲಿ ಪ್ರದರ್ಶಿಸಿದ್ದುದನ್ನು ಇಲ್ಲಿ ನನೆಯಬಹುದು. ಪಂಜಾಬದ ಢೋಲಾ ನೃತ್ಯ ಮಹಾರಾಷ್ಟ್ರದ ಹೋಳಿ ನೃತ್ಯ ಮೊದಲಾದ ಹಲವಾರು ನೃತ್ಯ ಪರಂಪರೆಗಳಿವು ಮರೆಯಾಗುತ್ತ ಬರುತ್ತಿವೆ ಕನ್ನಡ ನಾಡಿನ ಯಕ್ಷಗಾನದಲ್ಲಿನ ನೃತ್ಯ-ಕುಣಿತಗಳ ಸಂಪ್ರದಾಯ ಶಿಥಿಲವಾಗುತ್ತ ಬರುತ್ತಿರುವುದನ್ನು ನಾವು ಕಾಣುತ್ತೇವೆ ತುಳುನಾಡಿನಲ್ಲಿ ಪ್ರಚಾರವಿರುವ 'ಕೋಲ'ದಲ್ಲಿನ ಪಂಬದರ ಕುಣಿತವೂ ಒಂದು ಕಲೆಯೇ ಇವೆಲ್ಲವೂ ನಮ್ಮ ಕಲಾ ಸೊತ್ತುಗಳು ಇವನ್ನು ನಾವು ಪ್ರೋತ್ಸಾಹಿಸದೆ ಈಗಿನಂತೆಯೇ ಉಪೇಕ್ಷೆಯಿಂದ ಕಾಣುತ್ತ ಬಂದರೆ, ಅವು ನಿರ್ನಾಮವಾಗುವುದು ಖಂಡಿತ ಆನೆ ಕಣ್ಣ ಮುಂದಿರುವಾಗ ಅದನ್ನು ಆನೆಯೆಂದು ನಂಬದೆ ಅದು ದೂರವಾದ ಮೇಲೆ ಅದರ ಹೆಜ್ಜೆಯನ್ನು ಗುರುತಿಸಿ ವ್ಯಥೆ ಪಡುವಂತಾಗಬಾರದು 'ಇದಕ್ಕಾಗಿ ಕಲಾಭಿಮಾನಿಗಳೂ ಜನತಾ ಸರಕಾರವೂ ಮುಂದಾಗಬೇಕು. ಬಲ್ಗೇರಿಯಾದ ಬ್ಯಾಲೆಟ್ ನೃತ್ಯೋತ್ಸವವು ನಮ್ಮ ನೃತ್ಯ ಕಲೆಯ ಮೇಲೆ ನಮ್ಮ ಅಭಿಮಾನವನ್ನು ಕೆರಳಿಸುವುದೆ?

ಚಿತ್ರಗಳು

೧. ಫ್ರಾನ್ಸಿನ ಸಿಲ್ವಿ ಕಲ್ಲಾಪೀ ತನ್ನ ಅಭಿನಯ ಚಾತುರ್ಯವನ್ನು ತೋರಿಸುತಿದ್ದಾಳೆ (ವರ್ನಾ ನೃತ್ಯೋತ್ಸವದಲ್ಲಿ)

೨. ವಾರ್ನಾ ನೃತ್ಯೋತ್ಸವದಲ್ಲಿ ಪ್ರಥಮ ಬಹುಮಾನ ಪಡೆದ ಎಕ್ತೇರಿನಾ ಮಾಕ್ಸಿಮೋವಾ ಮತ್ತು ಸಿಕೀಟಾ ದೋಲ್ಗುಶಿನ್ ವಿಶಿಷ್ಟ ಭಂಗಿಯಲ್ಲಿ

೩. ರೋಡೋಪ್ ಪ್ರಾಂತ್ಯದ (ಬಲ್ಗೇರಿಯಾ) ರಾಷ್ಟ್ರೀಯ ಕಟ್ಟಲೆಗಳು

೨

೩



ನ್ಯೂಯಾರ್ಕಿನ ವಿಶ್ವ ಪ್ರದರ್ಶನದಲ್ಲಿ ಉದ್ದಿಮೆ ಮತ್ತು ನುಜೂರು ಪರಿವರ್ತನ ಹಾಗೂ ಕ್ಯಾಟನ ಧಸನದ ಶಿಖರದಲ್ಲಿ ರಯಾ ಗಿಠಾದ ಗುಮ್ಮಟಾಕಾರ ಚಂದ್ರ ಕಕ್ಷೆಗೆ ಅಂತಿಮ ರೂಪ ನೀಡುತಿದ್ದಾರೆ. ದರ್ಶಕರು ಈ ಕಕ್ಷೆಗೆ ಚಂದ್ರನ ನಂತರ ಮತ್ತು ಆದರ್ಶ್ಯ ನಂಸೆ ಎಂಬ ಒಂದು ಫಿಲ್ಮನ್ನು ನೋಡಿ ಸಂತೋಷ ಪಟ್ಟಿದ್ದರು ಪ್ರದರ್ಶನವು ಕಳೆದ ಏಪ್ರಿಲ್‌ನಿಂದ ಅಕ್ಟೋಬರದ ವರೆಗೆ ನಡೆದಿತ್ತು

ವಿಶ್ವಪೌರನಿಗೆ ಕಿವಿ ಮಾತು

ನಾವು ಬೆಳಕನ್ನೇ ಅರಸೋಣ

ಬರೆದವರು: ಶ್ರೀ ರಾಬರ್ಟ್ ಎಫ್ ಕೆನೆಡಿ

ಪ್ರಾಚೀನ ಕಾಲದ ವಿಶ್ವವಿದ್ಯಾನಿಲಯಗಳಿಗೂ ಇಂದಿನ ವಿಶ್ವ ವಿದ್ಯಾನಿಲಯಗಳಿಗೂ ಮೃವಗಳ ಅಂತರವಿದೆ ಅಂದು ಯಾವುದೇ ಸಂಸ್ಥಾಪನೆಯೊಂದರ ಅನ್ವಯದ ವಿಧಾನಗಳನ್ನು ಕುರಿತು ದಶವರ್ಷಗಳ ವರೆಗೂ ಜಿಜ್ಞಾಸೆ ನಡೆಯುತ್ತಿತ್ತು. ಅನಂತರ ಕೋಪರ್ನಿಕಸ್ ಕಂಡ ಹಿಡಿದ ಖಗೋಳ ಶಾಸ್ತ್ರದ ವಿವರಗಳನ್ನು [illegible] ಮಾನವ ಜನಾಂಗಕ್ಕೆ ಒಂದು ಶತಮಾನ ಬೇಕಾಯಿತು ಆದರೆ ಇಂದು ಅಷ್ಟು ಕಾಲ ವ್ಯವಧಾನವಿಲ್ಲ ಇಂದಿನ ಮಾನವ ಎದುರಿಸಬೇಕಾಗಿರುವ ಸಮಸ್ಯೆಗಳು, ಜಟಿಲವಾದವು, ಅನಂತವಾದವು, ಶೀಘ್ರಗತಿಯವು ಕೆಲವಂತೂ ಅಗಾಧವಾದ ಸಮಸ್ಯೆಗಳು, ಅವುಗಳಿಗೆ ಪರಿಹಾರ ತ್ವರಿತಗತಿಯಿಂದ ಲಭಿಸಬೇಕಾಗಿದೆ ಸಮಸ್ಯೆಗಳ ಸಂಖ್ಯೆ ಕೂಡ ದಿನದಿನಕ್ಕೆ ಹೆಚ್ಚುತ್ತಿದೆ.

ಕಲ ಕಾಲದ ಹಿಂದೆ ಎಲ್ಲ ಗ್ರಹಗಳನ್ನು ತೋರಿಸಬಲ್ಲ ದೂರದರ್ಶಕಗಳಿಗಾಗಿ ಪ್ರಯಾಸ ಪಡುತ್ತಿದ್ದರೆ, ಇಂದು ಆ ಗ್ರಹಗಳಿಗೆ ಹೋಗಿಬರಬಲ್ಲ ಗ್ರಹಗಳಿಗಾಗಿ ತಡಕುತ್ತಿದ್ದೇವೆ

ಈ ಹಿಂದೆ ನಗರಗಳನ್ನೇ ಧ್ವಂಸಮಾಡಿದ ಯುದ್ಧಗಳಲ್ಲಿ ಭಾಗವಹಿಸಿದರೆ ಇಂದು ಪ್ರಪಂಚವನ್ನೇ ನಾಶಮಾಡಬಲ್ಲ ಯುದ್ಧವನ್ನು ತಪ್ಪಿಸುವ ಕಾರ್ಯದಲ್ಲಿ ನಿರತರಾಗಿದ್ದೇವೆ ಪರಮಾಣು ಶಕ್ತಿಯನ್ನು ವಿದ್ಯುತ್ತಿನ ಉತ್ಪಾದನೆಗೂ, ಹಡಗುಗಳ ಚಾಲನೆಗೂ ಉಪಯೋಗಿಸಬಹುದು ಆದರೆ ಕೋಪದಲ್ಲಿ ಅದರ ಬಳಕೆಯಾಗದಂತೆ ಹತೋಟಿಯನ್ನು ವಿಧಿಸ ಬಲ್ಲೆವೆ? ಸ್ವಯಂಚಾಲಕ ಯಂತ್ರಗಳಿಂದ ಉತ್ಪನ್ನವನ್ನು ವಿಸ್ಮಯಕಾರಕ ಪ್ರಮಾಣದಲ್ಲಿ ಹೆಚ್ಚಿಸಬಹುದು ಆದರೆ ಆ ಯಂತ್ರಗಳು ಕೆಲಸದಿಂದ ತೆಗೆದು ಹಾಕಿದ ಮಾನವರನ್ನು ಏನು ಮಾಡಬೇಕು ಎಂಬ ವಿಷಯದಲ್ಲಿ ಏನಾದರೂ ಹೇಳಬಲ್ಲೆವೆ? ಆಧುನಿಕ ಕೈಗಾರಿಕೆಯೇನೋ ನಮಗೆ ಅಸಮಾನವಾದ ಸಂಪತ್ತಿನ ಸಾಮರ್ಥ್ಯವನ್ನು ಒದಗಿಸಬಲ್ಲದು, ಆದರೆ ಆ ಸಂಪತ್ತು ಎಲ್ಲ ದೇಶಗಳ ಬಡವರಿಗೂ ಸಾರ್ಥಕವಾಗುವಂತೆ ವ್ಯವಸ್ಥೆ ಮಾಡುವ ವಿಷಯದಲ್ಲಿ ನಮಗಿರುವ ಸಾಮರ್ಥ್ಯ ಎಲ್ಲಿಯದು?

ಈ ಸಮಸ್ಯೆಗಳ ಪರಿಹಾರಕ್ಕೆ ನಮಗಿರುವ ಕಾಲಾವಕಾಶವಾದರೂ ಎಷ್ಟು? ಶತಮಾನದ ಕಾಲ ಸಾವಧಾನವಾಗಿ ಕಂಗ್ಗಂಟುಗಳನ್ನು ಬಿಡಿಸುತ್ತ ಕೂಡುವಂತಿಲ್ಲ. ಒಂದೇ ತಲೆಮಾರಿನಲ್ಲಿ ಅದೂ ಈ ತಲೆಮಾರಿನಲ್ಲಿ ಅಥವಾ ಇನ್ನೂ ಬೇಗನೇ ಇವನ್ನೆಲ್ಲ ಪರಿಹರಿಸಬೇಕಾಗಿದೆ ಅಷ್ಟೇ ಅಲ್ಲ ಈ ಸಮಸ್ಯೆಗಳನ್ನು ನಾವು ಎದುರಿಸುತ್ತ ಹೋದ ಹಾಗೆ ಇನ್ನೂ ಕ್ಲಿಷ್ಟವಾದ ಸಮಸ್ಯೆಗಳು ಎದುರಾಗುವವು. ಅಂತೆ ನಮ್ಮ ವಿಧಾನಪ್ರಯತ್ನ, ಕ್ರಮ ಇವು ನಾಳಿನ ಪ್ರಪಂಚವನ್ನು ರೂಪಿಸುವ ಕುಂಚಗಳು

ಈ ಸಮಸ್ಯೆಗಳನ್ನು ಯಾವೊಬ್ಬ ವ್ಯಕ್ತಿಯೂ ಬಿಡಿಸಲಾರ ಯಾವುದೇ ರಾಷ್ಟ್ರ ಕೂಡಾ, ಅನ್ಯಸಹಾಯವಿಲ್ಲದೆ ಬಿಡಿಸಲಾರದು ನಮ್ಮ ಸಮಸ್ಯೆಗಳು ಹೆಚ್ಚು ಹೆಚ್ಚು ಜಟಿಲವಾದಂತೆ, ನಮ್ಮ ಪ್ರಪಂಚ ಕುಗ್ಗತೊಡಗಿನೆ ಪರಿಹಾರ ಸಿಕ್ಕದ ಪ್ರಶ್ನೆಯಾಗುತ್ತಿದೆ.

ಉಪಗ್ರಹಗಳ ಮೂಲಕವಾದ ಸಂಪರ್ಕ ವ್ಯವಸ್ಥೆಯ ಫಲವಾಗಿ ಇಂಗ್ಲೆಂಡಿನ ಟೆಲಿವಿಷನ್ ಛಾಯಾಗ್ರಾಹಕಗಳ ಫಲ ಜಪಾನಿನ ಟೆಲಿವಿಷನ್ ಪರದೆಗಳ ಮೇಲೆ ಬೆಳಗುತ್ತಿದೆ ಪ್ರಪಂಚದ ಅರ್ಧದೂರವನ್ನು ಸಾಗಿದ ಹಾಗೆ ಎಂಬ ಮಾತು ಅರ್ಥವನ್ನು ಕಳೆದು ಕೊಳ್ಳುತ್ತಿದೆ ಶಬ್ದವೇಧಿ ವಿಮಾನಗಳು ಬೆಳಗಿನ ಫಲಹಾರ ಮಧ್ಯಾಹ್ನದ ಊಟಗಳ ನಡುವಿನ ಅವಧಿಯಲ್ಲಿ ನ್ಯೂಯಾರ್ಕಿನಿಂದ ಯಾವುದೇ ದೇಶವನ್ನು ತಲುಪಲಿವೆ ಆದರೆ ತತ್ಫಲವಾಗಿ ಸಂಭವಿಸುವ ಅಂತಾರಾಷ್ಟ್ರೀಯ ವ್ಯವಹಾರ ಕೇವಲ ಅಮೆರಿಕದ ಸಮಸ್ಯೆ ಮಾತ್ರವಲ್ಲ ಅದೇ ವಿಮಾನಗಳು, ಅದೇ ವೇಗದಲ್ಲಿ ಇತರ ದೇಶಗಳವರನ್ನೂ ಅಮೆರಿಕಕ್ಕೆ ಕರೆತರುವುದರಿಂದ ಅವರೂ ಅಮೆರಿಕವನ್ನು ಅರಿತ ಕೊಳ್ಳಬೇಕಾದ ಸಮಸ್ಯೆಯೂ ಉದ್ಭವಿಸುತ್ತದೆ

ದೂರವನ್ನು ಘಂಟೆಗಳಿಂದ—ನಿಮಿಷಗಳಿಂದ ಅಳೆವ ಹಾಗೆ ವಿಚಾರಗಳನ್ನು ಅವು ಯಾವ ರಾಷ್ಟ್ರದಿಂದ ಬಂದವು ಎಂಬುದರ ಆಧಾರದ ಮೇಲೆ ಪರಿಗಣಿಸದೆ, ಅವುಗಳ ಅರ್ಹತೆಯೇನು ಎಂಬುದರ ಆಧಾರದ ಮೇಲೆ ಪರಿಗಣಿಸ ಬೇಕು. ನಮಗೆ ಬೇಕಿರಲಿ ಬೇಡದಿರಲಿ ನಾವೆಲ್ಲ ಪ್ರಪಂಚದ ಪೌರರಾಗುತ್ತಿದ್ದೇವೆ ಅದಕ್ಕೆ ತಕ್ಕಂತೆ ಸಹಿಷ್ಣುತೆಯಿಂದ ವಿವೇಕದಿಂದ ನಮ್ಮ ಜನ ಅಥವಾ ನಮ್ಮ ರಾಷ್ಟ್ರ ಮಾತ್ರವಲ್ಲ ಪ್ರಪಂಚದ ಎಲ್ಲ ಕಡೆಯ ಎಲ್ಲ ಜನರ ಸಮಸ್ಯೆಗಳ ಪರಿಹಾರದಲ್ಲಿ ನಾವು ನಿರತರಾಗಬೇಕಾಗಿದೆ

ಇತರ ದೇಶದ ಯುವಜನರಂತೆ ನಮ್ಮ ದೇಶದ ಯುವಜನರು ತಮ್ಮ ತಮ್ಮ ದೇಶದ ಹಾಗೂ ಹೊರಗಿನ ದೇಶಗಳ ಸಮಸ್ಯೆಗಳ ಪರಿಹಾರದಲ್ಲಿ ಆಸಕ್ತಿಯನ್ನು ಹೊಂದಿದ್ದಾರೆ ಸಹಸ್ರಾರು ಮಂದಿ ಪೌರಹಕ್ಕುಗಳ ಅಥವಾ ದಲಿತರ ಸೇವೆಯಲ್ಲಿ ನಿರತರಾಗಿದ್ದಾರೆ

ಈ ಬಗೆಯ ಮನೋಧರ್ಮಕ್ಕೆ ಕಾರ್ಯತತ್ಪರತೆಗೆ ವಿದ್ಯೆಯೇ ಕಾರಣ. ಬೌದ್ಧಿಕ ವ್ಯಾಪಾರ ಮಾತ್ರವೇ ವಿದ್ಯೆಯ ಉದ್ದೇಶವಲ್ಲ, ಮಾನವೀಯರೂ ವಿಚಾರಶೀಲರೂ ಆದ ವ್ಯಕ್ತಿಗಳಾಗಿ ಬಾಳಲು ಅವಕಾಶ ಮಾಡಿಕೊಡುವುದೂ ವಿದ್ಯೆಯ ಉದ್ದೇಶ ಎಂಬ ಅರಿವೇ ಅವರ ಈ ಬಗೆಯ ಉತ್ಸಾಹಕ್ಕೆ ಕಾರಣ

ಆದುದರಿಂದ ವಿದ್ಯಾವಂತರಿಗೆ ಸೇವೆಯ ವಿಷಯದಲ್ಲಿ ಹೆಚ್ಚಿನ ಬೋಧನೆಯೇನೂ ಅವಶ್ಯಕವಿಲ್ಲ ಆದರೂ ವಿದ್ಯಾವ್ಯವಸ್ಥೆಯಲ್ಲಿ ಸುತ್ತಲ ಸಮಸ್ಯೆಗಳ ಅರಿವು ದೊರೆತೂ, ಅದೇ ವಿದ್ಯೆಯ ಫಲವಾಗಿ ಈ ಎಲ್ಲ ಸಮಸ್ಯೆಗಳಿಂದ ದೂರವಾಗಿ ಉಳಿಯುವ ಸಿದ್ಧತೆಯೂ ಲಭಿಸುತ್ತದೆ

ರತ್ನಗಂಬಳಿ ಹಾಸಿದ ತನ್ನ ಕಚೇರಿಯಲ್ಲಿರುವ ಅಮೆರಿಕದ ವೈದ್ಯ ವಿಶೇಷಜ್ಞನಿಗೂ ಲ್ಯಾಟಿನ್ ಅಮೆರಿಕೆಯಲ್ಲಿ ಬಳಲುತ್ತಿರುವ ರೋಗಗ್ರಸ್ತ ಮಗುವಿಗೂ ಯಾವ ಸಂಬಂಧವೂ ಇಲ್ಲ. ಯುರೋಪಿನ ತತ್ವಶಾಸ್ತ್ರಜ್ಞಾನಿಯು ಅನ್ಯಯುಗದ ಕೊರಡಿಗೂ ಏಷ್ಯದ ಬಡವರ ಗುಡಿಸಲುಗಳಿಗೂ ಶತಮಾನಗಳ ಅಂತರವಿದೆ ಪ್ರಯೋಗಶಾಲೆ ಯಾವದೋ ದೂರದ ದೇಶದಲ್ಲಿ ನಡೆಯುತ್ತಿರಬಹುದಾದ ಘಟನೆಯ ವಿಷಯದಲ್ಲಿ ಕಳವಳವನ್ನು ವ್ಯಕ್ತಪಡಿಸಲಾರದು

ಹಿಂದುಳಿದ ದೇಶಗಳ ಪ್ರಥಮ ಸಮಸ್ಯೆ ಹಸಿವು ನಾಳೆಗೇನೆಂಬ ಕೊರಗು ಆದರೆ ಆ ದೇಶಗಳ ಕುಶಲರೂ, ವೃತ್ತಿಜೀವಿಗಳು ಅಂಥ ಬಹುಪಾಲು ಜನರ ಸಂಪರ್ಕದಿಂದ ದೂರವಾಗಿ ಉಳಿಯುವ ಪರಿಸ್ಥಿತಿಯುಂಟು. ಮುಂದುವರಿದ ದೇಶಗಳಲ್ಲಿ ಅಧ್ಯಯನಮಾಡಿದವರಿಗೆ ೨೦ನೇ ಶತಮಾನದ ಅತ್ಯಾಧುನಿಕ ವಿಧಾನದಲ್ಲಿ ಬಾಳುವ, ಓದುವ, ಪ್ರವಾಸಮಾಡುವ ಅವಕಾಶವಿರುತ್ತದೆ. ಅವರಿಗೆ ದಾರಿದ್ರ್ಯ ದಬ್ಬಾಳಿಕೆಗಳ ಮಾತೂ ಕೇಳುತ್ತದೆ ಆ ವಿಷಯದಲ್ಲಿ ಕಳವಳವೂ ಸಹಾನುಭೂತಿಯೂ ಅವರಿಗಿರುತ್ತದೆ ಆದರೆ ಅವರು ತಮ್ಮ ಸಮಾಜದ ಕುಗ್ಗುತ್ತಿರುವ ಭಾಗ್ಯಹದ ಎಲ್ಲ ಸಮಾಜಗಳ ಸೇವೆಗೆ ತಮ್ಮ ಪ್ರತಿಭೆಯನ್ನು ವಿನಿಯೋಗಿಸಲು ಮುಂದಾಗಬೇಕು

"ನಮ್ಮ ದೇಶ ಅಲಸಿಕೆಗೆ ಆಹ್ವಾನ ನೀಡುವುದಿಲ್ಲ, ನೈಮುಂದು ದುಡಿದ ಸಾಹಸದ ಜೀವನವನ್ನು ಬಯಸುತ್ತದೆ." ಎಂಬುದಾಗಿ ಅಮೆರಿಕದ ಚರಿತ್ರಾರ್ಹ ಪುರುಷರಲ್ಲೊಬ್ಬರಾದ ಥಿಯೋಡರ್ ರೂಸ್‌ವೆಲ್ಟ್ ಅವರು ಗರ್ಜನದಲ್ಲಿ ಸಾರಿದರು.

"ನಿಮ್ಮ ನಿರ್ಧಾರವೇನು, ಗರುಟಿ ಅಂದಂತೆ ನೀವೇನಾಗುವಿರಿ, ಬಡಿಗಲ್ಲೋ ಅಥವಾ ಸತ್ತಿಗೆಯೋ" ಎಂಬುದಾಗಿ ಅಮೆರಿಕಾಧ್ಯಕ್ಷ ಕೆನೆಡಿ ಅವರು ವಿಶ್ವವಿದ್ಯಾನಿಲಯದ ಸಭೆಯೊಂದರಲ್ಲಿ ಕೇಳಿದರು

ಈ ಮೇಲಿನ ವಾಕ್ಯಗಳಲ್ಲಿ ಹೇಳಬೇಕಾದುದೆಲ್ಲವೂ ಅಡಕವಾಗಿವೆ

ಖಾಸಗಿ ವ್ಯಕ್ತಿಯನ್ನು ಅವಲಂಬಿಸಿದರೂ ಸಮಾಜದ ವ್ಯವಹಾರಗಳಲ್ಲಿ ಭಾಗವಹಿಸುವ ಅವಕಾಶವಿರುತ್ತದೆ ಇಂಗ್ಲಿಷ್ ಭಾಷೆಯ "ಈಡಿಯಟ್" ಎಂಬ ಶಬ್ದ ಗ್ರೀಕಿನಿಂದ ಬಂದದ್ದು. ಅದರ ಅರ್ಥ ಗ್ರೀಕಿನಲ್ಲಿ ಸಾರ್ವಜನಿಕ ವ್ಯವಹಾರದಲ್ಲಿ ಭಾಗವಹಿಸದವ ಎಂದು. ಹಾಗೇ ಲ್ಯಾಟಿನ್ನಿನ "ಯೂನಿವರ್ಸಿಟಿ" ಎಂಬ ಶಬ್ದದ ಅರ್ಥ "ಎಲ್ಲ ಒಟ್ಟಾಗಿ" ಎಂದು

ಪ್ರತಿಯೊಬ್ಬ ವ್ಯಕ್ತಿಯೂ ಭಾಗವಹಿಸಬೇಕು. ಎಂಬುದೇ ಸೂಚ್ಯಾಂಶ ನಾವೆಲ್ಲರೂ ಭಾಗವಹಿಸಬೇಕು ನಮ್ಮೆಲ್ಲರ ಅಗತ್ಯವೂ ಇದೆ. ಆದರೆ ನಾವು ವಿಮರ್ಶಕರಾಗಿ ಉಳಿಯಬೇಕೇ ಅಥವಾ ವಾಸ್ತವಿಕವಾಗಿ ಭಾಗವಹಿಸಬೇಕೇ ಎಂಬುದೇ ಬಿಡಿಸ ಬೇಕಾದ ಪ್ರಶ್ನೆ ಕತ್ತಲೆಯನ್ನು ಶಪಿಸಬೇಕೆ ಅಥವಾ ಬೆಳಕು ಬೀರಬೇಕೆ ಎಂಬುದೇ ಪ್ರಶ್ನೆ

ಸಾಮಾಜಿಕ ಹೊಣೆಗಾರಿಕೆಯನು ಹೊತ್ತ ಜನ ಬೆಳಕನ್ನು ಅರಸಿಕೊಳ್ಳಬೇಕೆಂದು ನನ್ನ ಭಾವನೆ

ಅಮೆರಿಕಾಧ್ಯಕ್ಷ ಕೆನೆಡಿ ಒಮ್ಮೆ ಹೇಳಿದಂತೆ "ಈ ಭೂಮಿಯಲ್ಲಿ ದೇವರ ಕಾರ್ಯವನ್ನು ನಮ್ಮದೇ ಎಂಬ ಅರಿವಿನೊಡನೆ ದೇವರ ಆಶೀರ್ವಾದವನ್ನೂ, ಸಹಾಯವನ್ನು ಕೋರುತ್ತ' ಅಂಥ ಆಯ್ಕೆಗಾಗಿ ಮುಂದ ವರಿಯೋಣ

ಪೆಪ್ಪರ್ ಮಿಠಾಯಿ, ಶರಬತ್ತು ಮೊದಲಾದ 'ಬಿಕ್ಕೊ'ರವರ ಹಣ್ಣು ಹಂಪಲುಗಳ ತಯಾರಿಕೆಗಳು ಎಲ್ಲೆಲ್ಲಿಯೂ ಪ್ರಸಿದ್ಧಿಪಟ್ಟಿವೆ.



ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

O S 529/47 R E P, 283/64

ನಾಗವೇಣಿ ಅಮ್ಮ . ಅರ್ಜಿದಾರಳು

ಮತ್ತು

ಹರಿದಾಸ ಶಿವತ್ತಾಯ_ ಸೀತಾರಾಮ ಶಿವತ್ತಾಯರ ಮಗ, ಶಿವಳ್ಳಿ ಗ್ರಾಮ, ಉಡುಪಿ ತಾಲೂಕು ಇವರಿಗೆ } ಎದ್ರಿ

ಅರ್ಜಿದಾರಳು ಮೇಲ್ಕಾಣಿಸಿದ ಡಿಕ್ರಿ ಮೇಲೆ ನಡೆಸಿದ ಅಮ್ಮಲ್ಜಾರಿಯಲ್ಲಿ ದಾಖಲ್ಲು ಮಾಡಿದ ಇಷ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ ಸದ್ರಿ ನಂಬ್ರವನ್ನು ತಾರೀಕು 27—1—65ಕ್ಕೆ ಇಟ್ಟಿದ್ದಾರೆ ಎಂದು ತಿಳಿಸೋಣಾಗಿಯದೆ

ಪಿ ರಾಮಚಂದ್ರ ರಾವ್.
ಎಡ್ವಕೇಟ್

ಉಡುಪಿ, 3 12.64

ಅಭಿಪ್ರಾಯ

ಶಿಕ್ಷಣ ಕೇಂದ್ರಾಧೀನವಾಗಬೇಕು

ಇತ್ತೀಚೆಗಿನ ಕೆಲವು ತಿಂಗಳುಗಳಿಂದ ಕೇವಲ ಮೂಲುಗಾರಿಕೆ, ಪ್ರಶಂಸೆ ಮತ್ತು ಸಹಾನುಭೂತಿಗಳಿಂದಲೇ ತೃಪ್ತರಾಗಬೇಕಾಗಿದ್ದ ಶಿಕ್ಷಕರ ಬಗೆಗೆ ವ್ಯಕ್ತವಾಗುತ್ತಿರುವ ಅಭಿಪ್ರಾಯಗಳು ಅವರ ಸ್ಥಿತಿಗತಿಗಳ ಸುಧಾರಣೆಯಾದೀತೆಂಬ ಆಶಾವಾದಕ್ಕೆ ಪ್ರೇರಕವಾಗುತ್ತಿವೆ. ರಾಷ್ಟ್ರಪತಿ ಡಾ| ರಾಧಾಕೃಷ್ಣನ್ ಮತ್ತು ಕೇಂದ್ರ ಶಿಕ್ಷಣ ಸಚಿವ ಶ್ರೀ ಎಂ. ಸಿ. ಛಾಗ್ಲಾ ಅವರು ಈ ಸಂಬಂಧ ವಿಶೇಷ ಕಳಕಳಿಯನ್ನು ಪ್ರದರ್ಶಿಸಿದ್ದಾರೆ. ಶಿಕ್ಷಕರ ಬಗೆ ತಾವು ನೀಡಿದ ಮಾತನ್ನು ಶೀಘ್ರದಲ್ಲಿಯೇ ಪರಿಪಾಲಿಸುವುದು ಅತ್ಯಗತ್ಯವೆಂಬ ಅಂಬೋಣವು ಸ್ವಾಗತಾರ್ಹವಾದುದು. ಆದರೆ, ಶ್ರೀ ಛಾಗ್ಲಾ ಹೇಳುವಂತೆ, ಈ ಸಂಬಂಧ ಕೇಂದ್ರ ಸರಕಾರವು ಅದೆಷ್ಟು ಕಾಳಜಿ ತೋರಿಸಿದರೂ ಶಿಕ್ಷಣವು ರಾಜ್ಯ ಸರಕಾರಗಳ ಕಕ್ಷೆಗೆ ಬರುವ ವಿಷಯವಾದುದರಿಂದ ಎಲ್ಲ ರಾಜ್ಯಗಳೂ ಇದರಲ್ಲಿ ಆಸಕ್ತಿ ವಹಿಸದ ಹೊರತು ಸುಧಾರಣೆಯಾಗುವಂತಿಲ್ಲ.

ಇದರಿಂದ ಒಂದೊದಗಿದ ಹಲವು ಪ್ರಶ್ನೆಗಳಲ್ಲಿ ಒಂದನ್ನು ಇಲ್ಲಿ ಎತ್ತಿ ಹೇಳಬಹುದು. ಕೆಲವು ವರ್ಷಗಳಿಗೆ ಮೊದಲು ಭಾಷಾ ಪ್ರಶ್ನೆಯನ್ನು ಬಗೆಹರಿಸಲು ಸೇರಿದ ರಾಜ್ಯಗಳ ಮುಖ್ಯಮಂತ್ರಿಗಳು ತ್ರಿಭಾಷಾ ಸೂತ್ರವನ್ನು ಸ್ವೀಕರಿಸಿದ್ದನ್ನು ನಾವು ನೆನಪಿಸಬೇಕು. ಇದರಂತೆ ಹಿಂದ್ಯೇತರ ರಾಜ್ಯಗಳ ಶಿಕ್ಷಣಾಲಯಗಳಲ್ಲಿ ಹಿಂದಿಯನ್ನು ಕಲಿಸುವ ವ್ಯವಸ್ಥೆ ಮಾಡಬೇಕೆಂದೂ ಹಿಂದೀ ಪ್ರದೇಶಗಳಲ್ಲಿಯೂ ಇತರ ಒಂದು ಭಾಷೆಯನ್ನು, ಅದು ದಕ್ಷಿಣ ಭಾರತದ್ದಾಗಿದ್ದರೆ ಚೆನ್ನ, ಕಲಿಸುವ ಏರ್ಪಾಡು ಮಾಡಬೇಕೆಂದೂ ಗೊತ್ತಾಗಿತ್ತು. ಈ ಸೂತ್ರವು ಭಾರತದ ಎಲ್ಲಾ ರಾಜ್ಯಗಳಲ್ಲಿಯೂ ಅನುಷ್ಠಾನಕ್ಕೆ ಬಂದಿಲ್ಲವೆನ್ನುವುದನ್ನು ಶ್ರೀ ಛಾಗ್ಲಾರೇ ಒಪ್ಪುತ್ತಾರೆ. ಇದಕ್ಕೆ ತಗಲುವ ಸಕಲವೆಚ್ಚವನ್ನು ಕೇಂದ್ರ ಸರಕಾರವೇ ವಹಿಸಿಕೊಳ್ಳುವುದಾದರೂ ರಾಜ್ಯ ಸರಕಾರಗಳ ಮೇಲೆ ಬಲತ್ಕಾರ ಹೇರುವುದು ಮಾತ್ರ ಸಾಧ್ಯವಿಲ್ಲವಂತೆ. ಇದಕ್ಕೆಂದೇ ಶಿಕ್ಷಣದಂತಹ ಮಹತ್ವದ ಮಂತ್ರಿ ಖಾತೆಯು ಕೇಂದ್ರ ಸರಕಾರದ ಕೈಕೆಳಗೆ ಬರುವುದು ಅವಶ್ಯವೆಂಬ ಅಭಿಪ್ರಾಯ ಅನಿಸಿದ್ದು. ಆದರೆ, ರಾಜ್ಯ ಸರಕಾರಗಳು ಮಾತ್ರ ಇದಕ್ಕೆ ಸಿದ್ಧವಿಲ್ಲ.



ಇದಕ್ಕೆ ಕಾರಣವರಸಲು ಹೆಚ್ಚು ತ್ರಾಸವಿಲ್ಲ. ಶಿಕ್ಷಣಾಲಯ— ಶಿಕ್ಷಕರ ಮೇಲೆ ರಾಜ್ಯ ಸರಕಾರವು ತನ್ನ ಹಿಡಿತವನ್ನು ಬಿಟ್ಟು ಕೊಟ್ಟರೆ, ಅದರಿಂದ ಅದಕ್ಕೆ ಸಮಾಜದ ಮೇಲಿನ ಹಿಡಿತವೂ ತಪ್ಪಬಹುದು. ಸರಕಾರವು ನೇರವಾಗಿ ಸಮಾಜದೊಡನೆ ಸಂಪರ್ಕವಿರಿಸಿ ಕೊಳ್ಳುವುದಕ್ಕೆ ಬದಲಾಗಿ ಇದನ್ನು ಶಿಕ್ಷಣಾಲಯದ ಅಧ್ಯಾಪಕರು— ವಿದ್ಯಾರ್ಥಿಗಳಿಂದ ಸಾಧಿಸಿಕೊಳ್ಳುತ್ತಿದೆ. ಇವೆಲ್ಲವೂ ಕೇಂದ್ರಾಧೀನವಾದರೆ, ರಾಜ್ಯ ಸರಕಾರಗಳ ಬಲಗೈ ಉಡುಗಿ ಹೋದಂತಾಗಬಹುದೆಂಬ ಅವ್ಯಕ್ತ ಭಯವೇ ಹುದುಗಿಕೊಂಡಿದೆಯೆನ್ನಬೇಕೆ?

ಇಲ್ಲವಾದರೆ, ಶಿಕ್ಷಣಾಲಯ—ಶಿಕ್ಷಕರ ವೇತನ, ಛಾತ್ರವೃತ್ತಿ ಮೊದಲಾದ ಒಂದಲ್ಲ ನೂರು ಶೈಕ್ಷಣಿಕ ರಂಗದ ಅಭಿವೃದ್ಧಿಗಳಿಗೆ ಕೇಂದ್ರ ಸರಕಾರದ ಸಹಾಯವನ್ನೇ ಎದುರು ನೋಡುತ್ತಿರುವ, ಶಿಕ್ಷಣ ಖಾತೆಯು ಸರಕಾರಕ್ಕೆ ನಷ್ಟದ ಖಾತೆಯೆಂದು ತಿಳಿಯುವ ರಾಜ್ಯ ಸರಕಾರಗಳು ಅದನ್ನು ಕೇಂದ್ರಕ್ಕೆ ಹಸ್ತಾಂತರ ಮಾಡಲು ಒಪ್ಪಬಾರದು? ಹೀಗೆ ಮಾಡಿದರೆ, ರಾಜ್ಯದ ಆರ್ಥಿಕ ವ್ಯವಸ್ಥೆಯೂ ಉತ್ತಮವಾಗಿ ಉಳಿದು, ಸಾಂಪತ್ತಿಕ ಅಭಿವೃದ್ಧಿಯನ್ನು ಸಾಧಿಸುವುದು ಸಾಧ್ಯವಾಗಲಾರದೆ?

ಭಾರತವೊಂದು ವಿಶಾಲ ದೇಶ. ಇದರಲ್ಲಿ ನಾನಾ ಬಗೆಯ ಭಾಷೆಗಳನ್ನಾಡುವ ಜನರಿದ್ದಾರೆ. ನಾನಾ ಸಂಸ್ಕೃತಿಯ ಜನರಿದ್ದಾರೆ. ಇವರೆಲ್ಲರನ್ನೂ ಏಕ ಸೂತ್ರದಲ್ಲಿ ಪೋಣಿಸಲು ಶಿಕ್ಷಣವೊಂದೇ ಸಮರ್ಪಕ ಸಾಧನ. ಭಾವೈಕ್ಯ—ರಾಷ್ಟ್ರೈಕ್ಯಗಳಿಗೆ ಇದೇ ನಾಂದಿ. ಇದಕ್ಕಾಗಿ ಏಕರೂಪದ ಪಠ್ಯಪುಸ್ತಕಗಳಿರಬೇಕೆಂಬ ಮತ್ತು ಅವುಗಳ ಅನುವಾದವನ್ನು ಎಲ್ಲ ಭಾರತೀಯ ಭಾಷೆಗಳಲ್ಲಿ ಮಾಡಬೇಕೆಂಬ ವಾದವೂ ಇದೆ. ಇದನ್ನು ನಾವು ಒಪ್ಪುವುದಾದರೆ, ಇಡಿಯ ಭಾರತದಲ್ಲಿ ಒಂದೇ ವಿಧವಾದ ಶಿಕ್ಷಣ ಪ್ರಣಾಳಿಯಿರುವುದು ಅಗತ್ಯವೆನಿಸುತ್ತದೆ. ಆಗ ಕೇಂದ್ರವೇ ಈ ಬಗ್ಗೆ ಅನುಕೂಲ ಮತ್ತು ಸಮುಚಿತ ನಿರ್ಣಯ ಮಾಡುವುದು ಸೂಕ್ತವೆನಿಸುತ್ತದೆ. ಏಕರೂಪವನ್ನು ಸಾಧಿಸುವ ಬದಲು ಭಿನ್ನತೆಗೇನೇ ಪುರಸ್ಕಾರ ನೀಡುವ ಈಗಿನ ಪರಿಸ್ಥಿತಿ ಸರಿಯಾದರೆ, ಎಲ್ಲವೂ ಸಮಾಧಾನಕರವಾಗುವುದು. ಇದರಿಂದ ಶಿಕ್ಷಣದ ಮಟ್ಟದಲ್ಲಿಯೂ ಏಕರೂಪತೆಯನ್ನು ಸಾಧಿಸುವುದು ಸಾಧ್ಯವೆನಿಸುವುದು.

ಈ ಸಮಗ್ರ ಪ್ರಶ್ನೆಯನ್ನು ವೈಜ್ಞಾನಿಕ ಹಾಗೂ ಪ್ರಾಯೋಗಿಕ ಮತ್ತು ವ್ಯಾವಹಾರಿಕ ದೃಷ್ಟಿಕೋನಗಳಿಂದ ಪರಿಶೀಲಿಸಬೇಕು. ಆಗ, ಶಿಕ್ಷಣದ ಉನ್ನತಿ ಮತ್ತು ಶಿಕ್ಷಕರ ಶ್ರೇಯಸ್ಸಿಗಾಗಿ ಕೇಂದ್ರ ಸರಕಾರದ ಅಧೀನದಲ್ಲೇ ಈ ಖಾತೆಯಿರುವುದು ಅಪೇಕ್ಷಣೀಯವೆನಿಸುತ್ತದೆ. ಅವಶ್ಯ ಕಂಡರೆ, ಪ್ರತಿ ರಾಜ್ಯದಲ್ಲಿಯೂ ಶಿಕ್ಷಣ ತಜ್ಞರಿಂದ ಕೂಡಿದ ಒಂದು ಉಪ ಮಂಡಳಿಯು ಕೇಂದ್ರದ ಅಧೀನವೇ ಇದ್ದು, ಅದರ ಮೂಲಕ ಆಯಾ ರಾಜ್ಯದ ಶಿಕ್ಷಣಾಲಯಗಳನ್ನು ನೋಡಿಕೊಳ್ಳಬಹುದು. ಭಾಷಾವಾರು ರಾಜ್ಯಗಳು ಸ್ಥಾಪನೆಗೊಂಡಿದ್ದರೂ ಒಂದು ರಾಜ್ಯದಲ್ಲಿ ಇತರ ಭಾಷಾಮಾಧ್ಯಮವಿರುವುದೂ ಅನಿವಾರ್ಯವಾದುದರಿಂದ, ಒಂದೊಂದು ಭಾಷಾಮಾಧ್ಯಮಕ್ಕೆ ಒಂದೊಂದು ಉಪಮಂಡಳಿಯನ್ನೂ ರಚಿಸಬಹುದು.

ಹೀಗೆ ಮಾಡುವುದರಿಂದ ಶಿಕ್ಷಣಾಲಯಗಳ ಆಡಳಿತ ಪ್ರಶ್ನೆಯ ಮೇಲೆ ಯಾವ ದುಷ್ಪರಿಣಾಮವೂ ಬೀಳುವುದಿಲ್ಲ. ಶಿಕ್ಷಣದಲ್ಲಿ ಏಕರೂಪತೆಯನ್ನು ಸಾಧಿಸುವುದು ಸಾಧ್ಯವೆನಿಸುತ್ತದೆ. ಮಕ್ಕಳಲ್ಲಿ ರಾಜ್ಯ—ಭಾಷೆ ಮೊದಲಾದ ಪ್ರತ್ಯೇಕತಾ ಭಾವನೆಗಳು ಮೂಡದೆ ರಾಷ್ಟ್ರೀಯ ಮನೋಭಾವನೆ ಮೂಡುವುದು ಸಾಧ್ಯವೆನಿಸುತ್ತದೆ. ಭಾಷಾ ಮಾಧ್ಯಮವು ಪ್ರಾದೇಶಿಕವಾಗಿರುವುದು ಅಗತ್ಯವಾದರೂ ಇದನ್ನೂ ಉಳಿಸಿಕೊಳ್ಳಲು ತ್ರಾಸವಾಗುವುದಿಲ್ಲ.

ರಾಜ್ಯ ಸರಕಾರಗಳ ಆರ್ಥಿಕ ಸ್ಥಿತಿಯು ಉತ್ತಮವಾಗಿಲ್ಲದಿರುವುದರಿಂದ ಅವು ಶಿಕ್ಷಕರ ಸ್ಥಿತಿಗತಿಗಳನ್ನು ಸುಧಾರಿಸುವತ್ತ ಗಮನ ಕೊಡುವುದು ಕಡಿಮೆಯಾಗಿದೆ. ರಾಜ್ಯಾದಾಯದಲ್ಲಿ ಬಹು ದೊಡ್ಡ ಪಾಲು ಶಿಕ್ಷಣ ಮಂತ್ರಿ ಖಾತೆಯು ತಿಂದು ಹಾಕುವುದೂ ನಿಜ. ಇದರ ಪ್ರತಿಫಲ ಕೂಡಲೇ ಸಿಗುವುದಿಲ್ಲವೆಂಬುದೂ ಸತ್ಯ. ಆದರೆ, ಪ್ರಜಾಸತ್ತೆಯಲ್ಲಿ ಸಮಾಜದ ಶಿಕ್ಷಣ ಕಾರ್ಯವು ಆರ್ಥಿಕಾಭಿವೃದ್ಧಿ ಯೋಜನೆಗಳಂತೆಯೇ ಅತಿ ಮುಖ್ಯವಾದುದು. ತಿಳುವಳಿಕೆಯಿಲ್ಲದ ಜನರಿಂದ ದೇಶ ಉನ್ನತವಾಗುವುದೆಂತು? ಉತ್ತಮ ಶಿಕ್ಷಣ ನಮ್ಮ ಮಕ್ಕಳಿಗೆ ದೊರೆಯಬೇಕಾದರೆ, ಪಾಠ ಪಟ್ಟಿ ಉತ್ತಮವಿದ್ದರೆ ಸಾಲದು; ಉತ್ತಮ ಪಠ್ಯ ಪುಸ್ತಕಗಳೂ ಬೋಧನೋಪಕರಣಗಳೂ ಬೇಕು. ಅಧ್ಯಾಪಕರೂ ಸಮರ್ಥರಾಗಿರಬೇಕು. ನಮ್ಮ ರಾಜ್ಯದ ಸರಕಾರಿ ಶಾಲೆಗಳನ್ನು ಕಾಣುವಾಗ ಇವೆಲ್ಲವುಗಳ ಅಭಾವವೇ ತೋರಿ ಬರುತ್ತದೆ. ಖಾಸಗಿ ಶಾಲೆಗಳ ಫಲಿತಾಂಶ ಉತ್ತಮವಿದೆಯೆನ್ನುವವರು ಇದನ್ನು ಮನಗಾಣಬೇಕು.

ಯೋಗ್ಯತೆಯುಳ್ಳವರನ್ನು ಶಿಕ್ಷಕ ವೃತ್ತಿಗೆ ಆಕರ್ಷಿಸಿದರೆ ಮಾತ್ರ ಯೋಗ್ಯ ಶಿಕ್ಷಣ ದೊರೆಯಬಲ್ಲುದು. ಇದಕ್ಕಾಗಿ ಶಿಕ್ಷಕರ ವೇತನ— ಸೌಲಭ್ಯಗಳು ಉದಾರವಾಗಿರಬೇಕು. ತಾನು ಪೂರ್ವ ಜನ್ಮದಲ್ಲಿ ಮಾಡಿದ ಪಾಪದ ಕಾರಣವಾಗಿಯೇ ಈ ಉದ್ಯೋಗಕ್ಕೆ ಬಂದೆನೆನ್ನುವ ದೃಷ್ಟಿಯನ್ನು ತೊಲಗಿಸಬೇಕು. ತನ್ನಷ್ಟೇ ವಿದ್ಯಾರ್ಹತೆಯುಳ್ಳವರು ತನ್ನಾ[illegible]ಯೇ ತನಗಿಂತ ಇಮ್ಮಡಿ—ಮುಮ್ಮಡಿ ವೇತನ ಪಡೆಯುವುದನ್ನು ಕಾಣುವಾಗ ಶಿಕ್ಷಕ ತನ್ನ ಕರ್ಮಗತಿಗಾಗಿ ತಾನೇ ಕಣ್ಣೀರು ಸುರಿಸಬೇಕು! ಹೀಗಿರುವುದರ ಪರಿಣಾಮ ಸಾಮಾನ್ಯವಾಗಿ ಶಿಕ್ಷಣದ ಮೇಲೆ ಬೀಳುವುದು. ಇಂತಹ ದಾರುಣ ಸ್ಥಿತಿಯನ್ನು ತಪ್ಪಿಸಬೇಕಾದರೆ, ಸಮಾಜವನ್ನು ಸುಶಿಕ್ಷಿತವಾಗಿಸಿ ಉನ್ನತ ನೈತಿಕ ಮತ್ತು ಐಕ್ಯ ಸೂತ್ರದಲ್ಲಿ ಪೋಣಿಸಬೇಕಾದರೆ, ಇಡಿಯ ಭಾರತಕ್ಕೆ ಒಂದೇ "ಶಿಕ್ಷಣ ಕೇಂದ್ರ"ವಿರುವುದು ಅಪೇಕ್ಷಣೀಯವಾಗಿದೆ. ಶಿಕ್ಷಕ ಸಮಾಜದವರು ಛಾಗ್ಲಾರ ಈ ಯೋಜನೆಯನ್ನು ಎರಡೂ ಕೈಗಳಿಂದ ಸ್ವಾಗತಿಸುತ್ತಾರೆ. ಛಾಗ್ಲಾ ಇದನ್ನು ಸಾಧಿಸಿದರೆಂದರೆ, ಶಿಕ್ಷಕರ ಉದ್ಧಾರ ಮಾತ್ರವಲ್ಲ, ಭಾವಿಭಾರತದ ಶ್ರೇಯೋಭಿವೃದ್ಧಿಯ ಪಂಚಾಂಗವನ್ನು ಹಾಕಿದಂತಾಗುವುದು.

—ರಾಶಿ

ಉತ್ತರನ ಪೌರುಷ

(ಆರನೇ ಪುಟದಿಂದ)

ಲು ಅವಕಾಶವೇ ಇಲ್ಲ. ಹೀಗಾದರೆ ಹೇಗೆ ಹೇಳು." ಆಗಲೇ ಹೇಳಿದ್ದೆ, ಸಿನೇಮಾಗಳನ್ನು ನೋಡಬಾರದಂತೆ, ಹುಡುಗಿಯರನ್ನು ನೋಡಬಾರದಂತೆ ಕಾಮಶೃಂಗಾರ ವರ್ಣನೆಗೊಳಿಸಿರುವ ಪುಸ್ತಕಗಳನ್ನು ಓದಬಾರದಂತೆ! ನಮಗೆ ಬೇಗನೆ ಮದುವೆ ಮಾಡಿಬಿಟ್ಟಿದ್ದರೆ ಇಷ್ಟೆಲ್ಲಾ ಅವಸ್ಥೆ ಇರುತ್ತಿತ್ತೇ? ಬಾಲ್ಯ ವಿವಾಹ ಇರಕೂಡದು ಎಂದು ಬೊಬ್ಬೆ ಹಾಕುತ್ತಾರೆ. ಈ ಹಿರಿಯರು. ಇವರೆಲ್ಲಾ ತಮ್ಮ ಹದಿನಾಲ್ಕು ಹದಿನೈದನೇ ವಯಸ್ಸಿಗೆ ಮದುವೆ ಮಾಡಿಕೊಂಡು ಮಜಾ ಮಾಡಿ ಈಗ ನಮಗೆ ನೀವು ಮಜಾ ಮಾಡಬೇಡಿ ಎಂದು ಹೇಳುತ್ತಿದ್ದಾರೆ. ದೇವರು ಒಪ್ಪಿಯಾನೇ ಇದಕ್ಕೆ? ನೀನೇ ಹೇಳು. ಈಗ ಅಲ್ಲ ನಾವು ಇಪ್ಪತ್ತೆಂಟು ಮೂವತ್ತು ವರ್ಷವಾದರೂ ಇನ್ನೂ ಮದುವೆಯಾಗದೇ ಇರುವುದಾದರೂ ಹೇಗೆ? ನಮಗೆ ಒಂದು ಮದುವೆ ಮಾಡಿಬಿಡಬೇಕೆನ್ನುವಷ್ಟೂ ಗೊತ್ತಾಗುವುದಿಲ್ಲವೇ ಅವರಿಗೆ?

ಓಹೋ ಇಷ್ಟಕ್ಕೆಯೋ ನಿನ್ನ ಹಾರಾಟ. ನಿನಗೆ ಮದುವೆಗೆ ನಿಶ್ಚಯ ಮಾಡಿಲ್ಲವೆಂದು ಹಿರಿಯರ ಮೇಲೆ ಇಷ್ಟು ರೋಸಿ ಹೋಗಿರುವೆಯೋ? ಅದಕ್ಕೇನಂತೆ—ನಿನ್ನ ತಂದೆಯ ಹತ್ತಿರ ಹೇಳಿದರೆ ಈಗಲೇ ಮುಗಿಸಿ ಬಿಡುತ್ತಾರೆ.

....ಸ್ವಲ್ಪ ಮೆತ್ತಗೆ ಮಾತನಾಡಯ್ಯ. ಅಪ್ಪ ಈ ಕಡೆಯೇ ಬರುತ್ತಿದ್ದಾರೆ. ನನ್ನ ಮಾತು ಕೇಳಿ ರೇಗಿಯಾರು ಸುಮ್ಮನಿರು.

ಅರೆ, ಇಷ್ಟು ಹೊತ್ತು ಹಿರಿಯರ ಬಗ್ಗೆ ಇಲ್ಲ ಸಲ್ಲದ ಅಪವಾದನೆಗಳನ್ನು ಹೊರಿಸಿದೆಯಲ್ಲಯ್ಯ. ಒಳ್ಳೆ, ಉತ್ತರನ ಪೌರುಷವಾಯಿತಲ್ಲಯ್ಯ ನಿನ್ನದು.

ನಿನಗೆ ನಮಸ್ಕಾರ ಮಹಾತ್ಮಾ, ದಯವಿಟ್ಟು ಜೋರಾಗಿ ಮಾತನಾಡ ಬೇಡ.

ಭಾರತದ ಲೋಕಸಭೆಯಲ್ಲಿ ಚೈನಿ ಅಣುಗುಂಡು

೧ ೮

(ಐದನೇ ಪುಟದಿಂದ)

ಣಕ್ಕೆ ಅಮೇರಿಕ ಹಾಗೂ ರಷ್ಯಾ ಒಪ್ಪಿವೆಯಾದರೂ ಇಂದು ಕೂಡಾ ಅಣು ಪ್ರಯೋಗ ನಡೆಸುತ್ತಿವೆ! ಇಂಥ ಸತ್ಯ ಸಂಗತಿ, ವಾತಾವರಣ, ಪರಿಸ್ಥಿತಿ ಈ ದೇಶಗಳಲ್ಲಿ ಇಂದು ನಮ್ಮ ಭಾರತವನ್ನು ಕೇಳುವವರಾದರೂ ಯಾರಿದ್ದಾರೆ? ದಿನದಿಂದ ದಿನಕ್ಕೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತೀಯರ 'ಮೌಲ್ಯ' ಕಮ್ಮಿಯಾಗುತ್ತಾ ಬರುತ್ತಿದೆ. ನಮ್ಮದೇ ಅಂಗಗಳಾಗಿದ್ದ ಬ್ರಹ್ಮದೇಶ, ಶ್ರೀಲಂಕೆ ಹಾಗೂ ಪಾಕಿಸ್ಥಾನಗಳೇ ನಮಗೆ ಕಿರುಕುಳ ಕೊಡಲಾರಂಭಿಸಿವೆ; ಇನ್ನೀಗ ಸ್ವಾತಂತ್ರ್ಯ ಸೂರ್ಯನನ್ನು ಕಾಣುತ್ತಿರುವ ಆಫ್ರಿಕಾದ ದೇಶಗಳೂ ನಮ್ಮ ಮೇಲೆ ಒತ್ತಡ ಹಾಕಲು ಪ್ರಯತ್ನಿಸುತ್ತಿವೆ. ಹೀಗಿರುವಾಗ ಬಾಂಬಿನ ಮೇಲೆ ಸೀಲು ಒತ್ತುವ ಫಲ? ಈ ಪರಿಸ್ಥಿತಿಯಲ್ಲಿ ಬಾಯಿಗೆ ಬೀಗ ಹಾಕಿಕೊಂಡಿರುವದೊಳ್ಳೆಯದಲ್ಲವೇ?

ಪ್ರತಿ-ಪಕ್ಷಗಳ ವಿಷಯ ಹಾಗಿರಲಿ, ತಮ್ಮ ಪಕ್ಷದವರನ್ನೇ ಸಂತೈಸಬೇಕಾಗಿ ಪ್ರಧಾನಿಯವರು ವಾದ-ಪ್ರತಿವಾದದ ನಡುವೆ ಪ್ರವೇಶಿಸಿದರು. ಕೆಲ ಕಾಂಗ್ರೆಸ್ ಸದಸ್ಯರು ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿಯೇ ಬಿಟ್ಟಿದ್ದಾರೆ. ಗುಂಟೂರಿನಿಂದ ದಿಲ್ಲಿಗೆ ಹೋದರೂ ಶ್ರೀ ವಿಭೂತಿ ಮಿಶ್ರರ ಅಭಿಪ್ರಾಯ ಬದಲಾಗಿರುವದಿಲ್ಲ. ತಮಗೆ ದೊರಕಿದ ಅನಿರೀಕ್ಷಿತ ಸಂದರ್ಭದಲ್ಲಿ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಭೂಕಂದಾಯವನ್ನು ಮೂರು ಪಾಲು ಹೆಚ್ಚಿಗೆ ಮಾಡಿಯಾದರೂ ಅಣುಗುಂಡನ್ನು ತಯಾರಿಸಲೇ ಬೇಕೆಂದು ಅವರ ಹಟ ಹಿಡಿದರು.

ಶ್ರೀ ವಿಭೂತಿ ಮಿಶ್ರರಿಗೆ ಎದುರಾಗಿ ಎಂಬಂತೆ ಮಾತಾಡಿರುವವರಲ್ಲಿ ಶ್ರೀ ಕೃಷ್ಣ ಮೆನನರು ಅಗ್ರೇಸರರು. ವಿಭೂತಿ ಮಿಶ್ರರಿಗಿಂತ ಮೊದಲೇ ಕೃಷ್ಣ ಮೆನನ್ ತನ್ನ ಅಭಿಪ್ರಾಯವನ್ನು ಯುದ್ಧ ಪ್ರಕಾರ ಹೊರಗೆಡಹಿದ್ದರು. ಗುಂಟೂರಿನ ಗುಟ್ಟನ್ನೇ ಲೋಕಸಭೆಯಲ್ಲಿ ಹಾಕಿದ್ದಾರೆ. ಇದು ಅಣುಗುಂಡು ತಯಾರಿಸ ಕೂಡದೆಂದು ಹಟ ಹಿಡಿದವರ ಕಾರಣಗಳನ್ನು ಓದಿದ ನಂತರ ವಾಚಕರ ಮುಂದಿಟ್ಟ [illegible] ಸಾಮರ್ಥ್ಯವಾಗಿರುವದರಿಂದ ಅದನ್ನು ತಯಾರಿಸುವ ಗೋಜಿಗೆ ಯಾರೂ ಹೋಗಬಾರದೆಂದು ಗುಪ್ತ್ಮನ ಕಥೆಯನ್ನು ಹೇಳುವಂತೆ ಮಾಜಿ ರಕ್ಷಣಾ ಮಂತ್ರಿಗಳು ಹೇಳಿದ್ದಾರೆ. ಪಕ್ಷದೊಳಗನೇ ಒಗ್ಗಟ್ಟನ್ನು ಸಾಧಿಸಲಾರದ ಕಾಂಗ್ರೆಸ್, ಜಗತ್ತಿನಲ್ಲೇ ಹಾರುವ ಕಾಂಗ್ರೆಸ್ ಸೂರ್ಯನತ್ತ ಕುಪ್ಪಳಿಸುವಂತೆ ಪರರಾಷ್ಟ್ರಗಳಲ್ಲಿ ಒಗ್ಗಟ್ಟನ್ನುಂಟು ಮಾಡಲು ಪ್ರಯತ್ನಿಸುತ್ತಿದೆ! ಭಾರತ ಅಣುಗುಂಡು ತಯಾರಿಸಿದರೆ ಭಾರತಕ್ಕೇನೇ ಅಪಾಯವೆಂದು ಶ್ರೀ ಕೃಷ್ಣಮೆನನರು ಬೆದರಿಕೆ ಹಾಕಿದ್ದಾರೆ. ಅದು ಹೇಗೆಂಬುದನ್ನು ಮಾತ್ರ ಅವರು ಬಹಿರಂಗಪಡಿಸಿರುವದಿಲ್ಲ. ಅಷ್ಟರಿಂದಲೇ ಅವರಿಗೆ ತೃಪ್ತಿಯಾಗಿರುವದಿಲ್ಲ. ಕೇವಲ ಹದಿನೆಂಟು ತಿಂಗಳೊಳಗೆ ಭಾರತವು ಅಣುಗುಂಡನ್ನು ತಯಾರಿಸಲು ಸಾಧ್ಯವೆಂದು ಜಗತ್ತಿಗೇನೇ ತಿಳಿಯಪಡಿಸಿದ ಅಣುಶಕ್ತಿ ಇಲಾಖೆಯ ಅಧಿಕಾರಿ ಶ್ರೀ ಭಾಭಾರವರ ಮೇಲೂ ತಮ್ಮ ಕೋಪವನ್ನು ವ್ಯಕ್ತಪಡಿಸಿದ್ದು, ಅವರನ್ನು ದಂಡಿಸಬೇಕೆಂದು ಹೇಳಿದ್ದಾರೆ! ಕಾಂಗ್ರೆಸ್ ಸದಸ್ಯ ಮಾಥುರ ಅದಕ್ಕೆ ಒಡನೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿರುವರು.

ಕೃಷ್ಣಮೆನನರಿಗಿಂತಲೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವವರು ಸಮ್ಯ ಕಾಂಗ್ರೆಸ್ಸಿನ ಮುಖ್ಯರು. ಚೈನಾ-ಭಾರತಗಳ ನಡುವೆ ಗಡಿ ವಿವಾದ ತಿದ್ದಿರುವದರಿಂದ ಅದನ್ನು ಚೈನಾದೊಂದಿಗೆ ನೇರ ಮಾತುಕತೆಯಿಂದ ಭಾರತ ಬಗೆಹರಿಸಿಕೊಳ್ಳಬೇಕೆಂದು ಅವರು ಸೂಚಿಸಿರುವರು. ಚೈನಾ ಆಕ್ರಮಣ ನಡೆಸಿಲ್ಲ ಎನ್ನುವ ಕಾಂಗ್ರೆಸ್ಸಿಗರು ಇನ್ನೂ ಇದ್ದಾರೆ!

ಇವರಿಗಿಂತ ಉತ್ತಮ ವಾದಿಗಳು ಕಮ್ಯೂನಿಸ್ಟರಿಗೆ ಬೇರೆ ಬೇಕೇನು? ಆದುದರಿಂದಲೇ ಅವರನ್ನು ಪಕ್ಷವರ್ಜಿತರಾಗಿಸುವದಿಲ್ಲ.

ಭಾರತೀಯ ಜನಸಂಘದ ಪರವಾಗಿ ಅದರ ನಾಯಕ ಶ್ರೀ ತ್ರಿವೇದಿಯವರು ಅಣ್ವಸ್ತ್ರ ಅಭಿವೃದ್ಧಿ ಅತ್ಯಗತ್ಯವೆಂದು ವಾದಿಸಿ ತಮ್ಮ ಪ್ರೋತ್ಸಾಹವನ್ನು ವ್ಯಕ್ತಪಡಿಸಿದ್ದಾರೆ. ಆ ದಳದ ಇನ್ನೊಬ್ಬ ಸದಸ್ಯ ಶ್ರೀ ರಾಮಚಂದ್ರ ವಿಟ್ಟಲ ಬಡೆಯವರು ಸರಕಾರಕ್ಕೆ ಕತ್ತರಿ ಪ್ರಯೋಗ ನಡೆಸಲು ಪ್ರಯತ್ನಿಸಿದರು.

ಸ್ವತಂತ್ರ ಪಕ್ಷದ ಪರವಾಗಿ ಮಸಾನಿಯವರು ಮಾತನಾಡುತ್ತ ಚೈನಿ ಅಣುಗುಂಡು ಭಾರತದ ಸಾರ್ವಜನಿಕರ ನೈತಿಕ ಅಧಃಪತನಕ್ಕೆ ಕಾರಣವಾಗಿದೆಯಲ್ಲದೆ ಪಡೆಯ ನೈತಿಕ ಪರಿಸ್ಥಿತಿಯ ಮೇಲೂ ಪ್ರಭಾವ ಬೀರಿದೆಂದು ಸೈನ್ಯದ ಗುಟ್ಟನ್ನು ತಿಳಿದಿರುವವರಂತೆ ತಿಳಿಸಿರುವರು. ಇದಕ್ಕೆ ಅವರು ಕಂಡುಹಿಡಿದಿರುವ ಏಕಮೇವ ಪರಿಹಾರೋಪಾಯವೆಂದರೆ ಭಾರತದ ರಕ್ಷಣೆಯ ಭಾರವನ್ನು ಅಮೇರಿಕಕ್ಕೆ ಒಪ್ಪಿಸಿ ಬಿಡುವದು! ಬ್ರಿಟಿಷರು ಇಲ್ಲಿಯ ಚಿಕ್ಕ ಪುಟ್ಟ ರಾಜ್ಯಗಳನ್ನು ಬಗಲಲ್ಲಿ ಹಾಕಿಕೊಂಡದ್ದಾದರೂ ಹೇಗೆ? ಅವುಗಳ ರಕ್ಷಣೆಯ ಭಾರವನ್ನು ಹೊತ್ತುಕೊಂಡದ್ದಲ್ಲವೆ

ಅತ್ಯಾಧುನಿಕ ಅಣ್ವಸ್ತ್ರಗಳನ್ನು ಚೈನಾ ತಯಾರಿಸುತ್ತಿರುವಾಗ ಭಾರತವು ಅರ್ಜುನ ಕಾಲದ ಶಸ್ತ್ರಗಳಿಗೆ ಮೆರುಗು ಕೊಡುತ್ತಿದೆಯೆಂದು ಸ್ವತಂತ್ರ ಸದಸ್ಯ ಫ್ರೇಂಕ್ ಅಂಥೋನಿ ಟೀಕಿಸಿದರು.

ಸ್ವತಂತ್ರ ಪಕ್ಷದವರನ್ನು ಉದಾರತನವನ್ನು ಸ್ವತಂತ್ರ ಸದಸ್ಯ ಶ್ರೀ ಕೃಪಲಾನಿಯವರು ಪ್ರಕಟಿಸದಿದ್ದರೂ ಭಾರತವು ಸೈನಿಕ ಒಪ್ಪಂದವನ್ನು ಅಮೇರಿಕದೊಂದಿಗೆ ಮಾಡಿಕೊಳ್ಳಬೇಕೆಂದೂ, ಅಗತ್ಯ ಬಿದ್ದಲ್ಲಿ ಅವರಿಗೆ ತಂಗುದಾಣವನ್ನು ಕೊಡಬೇಕೆಂದೂ ಹೇಳಿದರು.

ಭಾಭಾರವರ ಬಾಯಿ ಮುಚ್ಚಿಸಿಬಿಡಬೇಕೆಂದು ಕೃಷ್ಣಮೆನನ ಕಠೋರವಾಗಿ ಹೇಳಿದ್ದಕ್ಕೆ ಸ್ವತಂತ್ರ ಸದಸ್ಯರಾಗಿರುವ ರಾಮಮನೋಹರ ಲೋಹಿಯಾರವರು ಅವರಿಗೆ ಹಾಸ್ಯ ಮಾಡಿದ್ದಾರೆ. ಈಗಿನ ನಮ್ಮ ಔದ್ಯೋಗಿಕ ಪರಿಸ್ಥಿತಿಯಲ್ಲಿ ಇನ್ನು ಹದಿನೆಂಟು ತಿಂಗಳಲ್ಲಿ ಅಲ್ಲ ಹದಿನೆಂಟು ವರ್ಷಗಳಲ್ಲೂ ಅಣುಗುಂಡನ್ನು ನಮ್ಮಿಂದ ತಯಾರಿಸಲು ಸಾಧ್ಯವಿಲ್ಲನೆಂದು ಅವರು ಹೇಳಿದರು.

ಸಾರ್ವಜನಿಕ ಸಭೆಯಲ್ಲಿ ಮಾತನಾಡುವದಕ್ಕೂ ವ್ಯತ್ಯಾಸವಿದ್ದೇ ಇದೆ. ಎನಿಷ್ಟರೂ ಲೋಕ ಸಭೆಯಲ್ಲಿ ಪಕ್ಷಗಳೆಲ್ಲವೂ ತಮ್ಮ ವಾದವನ್ನು ಸಮರ್ಥಿಸಲು ಪ್ರಯತ್ನಿಸಿದಲ್ಲಿ, ಮಂತ್ರಿಗಳು ತಮ್ಮ ಧೋರಣೆಯನ್ನು, ನಿಲುವನ್ನು ಸಮರ್ಥಿಸಲು ಪ್ರಯತ್ನಿಸಿದ್ದಾರೆ. ಪ್ರಧಾನಿಯವರು ಅಣುಗುಂಡು ತಯಾರಿಯ ದಾರಿಯಲ್ಲಿ ಆರ್ಥಿಕ ಪರಿಸ್ಥಿತಿ ಹಾಗೂ ಅಹಿಂಸೆ ಮತ್ತು ನೆಹರೂ ತತ್ವಗಳು ಅಡ್ಡಿ ಬರುತ್ತಿರುವದರಿಂದ ಅದನ್ನು ಭಾರತ ತಯಾರಿಸಲು ಸಿದ್ಧವಿಲ್ಲವೆಂದು ಹೇಳಿರುವದರಿಂದ ಸರಕಾರದ ಧೋರಣೆಯಲ್ಲಿ ಅದೇ ಪಕ್ಷದ ಸದಸ್ಯ ಶ್ರೀ ಶುಕ್ಲರವರಿಗೆ ಸಂದೇಹ ಬಾರದು, ಅವರು ನಿಜವಾಗಿ ಸರಕಾರವು ತೆರೆದ ಹೃದಯದಿಂದ ತನ್ನ ನಿಲುವನ್ನು ಸಮರ್ಥಿಸಿ ಕೊಳ್ಳುತ್ತಿದೆಯೋ ಎಂದು ಪ್ರಶ್ನಿಸಿಯೇ ಬಿಟ್ಟರು.

ಭಾರತ ಅಣುಗುಂಡು ತಯಾರಿಸಬೇಕೇ, ಬೇಡವೇ ಎಂಬುದರ ಮೇಲೆ ಲೋಕ ಸಭೆ ಏಕಾಭಿಪ್ರಾಯವನ್ನು ವ್ಯಕ್ತಪಡಿಸಿಲ್ಲವಾದರೂ ರಷ್ಯಾದಿಂದ ಸಹಾಯ ಪಡೆಯಲು ಸಾಧ್ಯವಿಲ್ಲವೆಂಬುದನ್ನು ಕಮ್ಯೂನಿಸ್ಟರು ಒಪ್ಪಿ ಕೊಂಡಿರುವರು.

ಅಣುಗುಂಡು ತಯಾರಿಯ ಕುರಿತು ಕಾಂಗ್ರೆಸ್ಸಿನಲ್ಲೇ ಒಮ್ಮತ ಸಿಗುವದಿಲ್ಲ. ಭಾರತದ ರಕ್ಷಣಾ ಭಾರವನ್ನು ಅಮೇರಿಕಕ್ಕೆ ಬಿಟ್ಟು ಕೊಡಬೇಕೆಂದು ಸ್ವತಂತ್ರ ಪಕ್ಷ ಒಂದೇ ಸಮನೆ ಸಾರುತ್ತ ಬರುತ್ತಿದೆ. ನೆರವು ಸಿಕ್ಕುವದಿದ್ದಲ್ಲಿ ಅದನ್ನು ಪಡೆದುಕೊಳ್ಳುತ್ತ, ತಮ್ಮ ಕಾಲಮೇಲೆ ತಾವು ನಿಂತು ರಕ್ಷಿಸಿಕೊಳ್ಳಲು ಸಮರ್ಥರಾಗಬೇಕೆಂದು ಭಾರತೀಯ ಜನಸಂಘ ಬೋಧಿಸುತ್ತದೆ. ಇವರೆಲ್ಲರಿಗೂ ವಿರುದ್ಧವಾಗಿರುವದು ಕಮ್ಯೂನಿಸ್ಟ್ ಪಕ್ಷ. ಎಲ್ಲಾ ಭಾರವನ್ನೂ ಚೈನಾಕ್ಕೆ ಹಾಗೂ ರಷ್ಯಕ್ಕೆ ಬಿಟ್ಟುಕೊಡುವದೊಳ್ಳೆಯದೆಂದು ಅವರು ಹೇಳುತ್ತಿದ್ದಾರೆ. ಕಾಂಗ್ರೆಸ್ಸಿನಂತೆ ಡೋಲಾಯಮಾನನಾಗಿರುವ ಇನ್ನೊಂದು ಪಕ್ಷ ಸಂಯುಕ್ತ ಸಮಾಜವಾದಿ ಪಕ್ಷವಿದೆ. ಇದಲ್ಲದೆ ಏನು ಹೇಳಬೇಕೆಂದು ತೋಚದೆ ಮಿಕಿ ಮಿಕಿ ಮುಖ ನೋಡುತ್ತಿರುವ ಪಕ್ಷಗಳೆಂದರೆ ದ್ರಾವಿಡ ಮುನ್ನೇತ್ರ ಕಳಗಂ, ಮುಸ್ಲಿಂ ಲೀಗು ಹಾಗೂ ರಿಪಬ್ಲಿಕನ್ ಪಾರ್ಟಿ.

ಇವು ರಾಜಕೀಯ ಪಕ್ಷಗಳು ಭಾರತದ ಲೋಕಸಭೆಯಲ್ಲಿ ಚೈನಿ ಅಣುಗುಂಡು ಪ್ರಯೋಗಕ್ಕೆ ವ್ಯಕ್ತಪಡಿಸಿದ ಪ್ರತಿಕ್ರಿಯೆ ಇದು. ಹೀಗಿರುವಾಗ ಭಾರತದ ಲೋಕಸಭೆಯಲ್ಲಿ ಚೈನಾದ ಅಣುಗುಂಡೆನ್ನುವದು ಸರಿಯೋ ಎಂಬ ಪ್ರಶ್ನೆ ಏರಬಹುದು. ಗೋಮಾಂತಕ ಹಾಗೂ ಕಾಶ್ಮೀರಗಳಲ್ಲಿ ನಡೆಯುತ್ತಿರುವದು ದರೂ ಏನು? ವಯೋವೃದ್ಧ ಪಂಡಿತ ಪ್ರೇಮನಾಥ ಡೋಗ್ರಾರ ಮನೆಯೊಳಗೇನೆ ಗುಂಡು ಒಡೆದಿರುತ್ತದೆ. ಇದುವರೆಗೆ ಯಾರು ಅದಕ್ಕೆ ಕಾರಣ ಎಂಬುದನ್ನು ಕಂಡು ಹಿಡಿಯಲಿಕ್ಕೆ ಸಾಧ್ಯವಾಗಿರುವದಿಲ್ಲ. ವಾಸ್ತವ್ಯ ಪರಿಸ್ಥಿತಿ ಹೀಗಿರುವಾಗ ಭಾರತದ ಲೋಕಸಭೆಯೊಳಗೆ ಚೈನಿ ಅಣುಗುಂಡು ಬಂದರೂ ಆಶ್ಚರ್ಯವಿಲ್ಲ. ಅದರಲ್ಲೂ ಕಮ್ಯೂನಿಸ್ಟ್ ಸದಸ್ಯರು ಅಲ್ಲೇ ಇರುವಾಗ ಆಶ್ಚರ್ಯಕ್ಕೆ ಅವಕಾಶವಾದರೂ ಎಲ್ಲಿದೆ? ಅವರೇ ಇಲ್ಲಿ ಚೈನಿ ಅಣುಗುಂಡುಗಳಂತಿದ್ದಾರೆ. ಅದರಲ್ಲಿನಿತೂ ಸಂದೇಹವೇ ಇಲ್ಲ.

ಗಮನಾರ್ಹ ಬದಲಾವಣೆ! ಠೇವಣಾತಿದಾರರಿಗೆ ಸುಸಂದರ್ಭ !!

ನಿರಖು ಠೇವಣಿಗಳ ಮೇಲೆ

ಪರಿಷ್ಕರಿಸಿದ ಆಕರ್ಷಣೀಯ ಬಡ್ಡಿ ದರ !!!

91 ದಿನಗಳಿಗೆ ಮೇಲ್ಪಟ್ಟ 6 ತಿಂಗಳ ಒಳಗಿನ ಅವಧಿಯ ಠೇವಣಾತಿಗಳಿಗೆ—					4¼%
6 ತಿಂಗಳಿಂದ ಮೇಲ್ಪಟ್ಟ	1 ವರ್ಷ ಒಳಗಿನ ಅವಧಿಯ	,,			5¼%
1 ವರ್ಷದಿಂದ ,,	2 ವರ್ಷಗಳ ಒಳಗಿನ	,,	,,		5½%
2 ,, ,,	3	,,	,,	,,	5¾%
3 ,, ,,	5	,,	,,	,,	6%
5 ,, ,,	7	,,	,,	,,	6¼%
7 ,, ,,	9	,,	,,	,,	6½%
9 ವರ್ಷಗಳಿಗೆ ಮೇಲ್ಪಟ್ಟ		....		....	6¾%

5 ವರ್ಷ ಮತ್ತು ಅವುಗಳಿಗೆ ಮೇಲ್ಪಟ್ಟ ಅವಧಿಯ ಧಾರ್ಮಿಕ ಸಂಸ್ಥೆಗಳ ಠೇವಣಾತಿಗಳಿಗೆ 6¾%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ನೀಡಲಾಗುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ

ನಮ್ಮ ಯಾವುದೇ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು:-

"ವಿಜಯ ಬ್ಯಾಂಕ್ ಬಿಲ್ಡಿಂಗ್", ಲೈಟ್‌ಹೌಸ್ ಹಿಲ್ ರೋಡ್,

ಮಂಗಳೂರು – 5.

ನವಯುಗಕ್ಕೆ,
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ನಗು ನೀನು ....

ಜಗವೆ ನಿನ್ನೊಡನೆ ನಗುತಲಿಹುದು ....

— ೧ —

ಪತಿಯೊಡನೆ ನಾಕನ್ನು ಜಗಳಾಡಿ ವಿವಾಹ ವಿಚ್ಛೇದನೆಗೆ ಅರ್ಜಿ ಸಲ್ಲಿಸಿದ ಮಹಿಳಾ ಮಣಿಗೆ ನ್ಯಾಯಾಧೀಶರು ಹೇಳಿದರು—"ನಾನೊಂದು ಹೊಸ ಉಪಾಯವನ್ನು ಹುಡುಕಿದ್ದೇನೆ. ಅದರಂತೆ ನೀವಿಬ್ಬರೂ ನಡೆದರೆ ನಿಮಗಿಬ್ಬರಿಗೂ ತುಂಬಾ ಲಾಭವಿದೆ."

"ಇಬ್ಬರಿಗೂ ಲಾಭವೇ?"—ಸಿಟ್ಟಿನಿಂದ ಆ ಹೆಂಗಸು ನುಡಿದಳು—"ಅದನ್ನು ನಾನೂ ಮಾಡಲು ಸಾಧ್ಯವಿದ್ದಿತ್ತು. ಅದಕ್ಕಾಗಿ ನಾನು ನೀವಿದ್ದಲ್ಲಿಗೆ ಬರಬೇಕಾಗಿದ್ದಿರಲಿಲ್ಲ."

— ೨ —

ತಾಯಿ ತನ್ನೆರಡು ಮಕ್ಕಳಿಗೂ ಒಂದೊಂದು ಲಾಡನ್ನು ಕೊಟ್ಟು ಅಡಿಗೆ ಮನೆಯೊಳಗೆ ಹೋದ ಕೆಲವೇ ನಿಮಿಷಗಳಲ್ಲಿ ಚಿಕ್ಕ ಹುಡುಗ ಅಳ ತೊಡಗಿದ. ಅದನ್ನು ಕೇಳಿ ತಾಯಿ ಹೊರಬಂದು ದೊಡ್ಡ ಹುಡುಗನನ್ನು ಪ್ರಶ್ನಿಸಿದಳು— "ಅದೇನು? ನಿನ್ನ ತಮ್ಮನೇಕೆ ಅಳುತ್ತಿದ್ದಾನೆ?"

"ನಾನು ನನ್ನ ಲಾಡನ್ನು ತಿನ್ನುತ್ತಿದ್ದೇನೆ ಅದಕ್ಕೆ..."

"ಆದರೆ ನಾನು ಅವನಿಗೂ ಒಂದು ಲಾಡನ್ನು ಕೊಟ್ಟಿದ್ದೆನಲ್ಲ!"

"ಹೌದಮ್ಮ, ಅವನ ಲಾಡನ್ನು ನಾನು ತಿನ್ನುತ್ತಿರುವಾಗಲೂ ಅವನು ಅಳುತ್ತಲೇ ಇದ್ದಿದ್ದ."

— ೩ —

ಶರಾಬು ಕುಡಿಯುವವನಂತೆ ಕಾಣಿಸುತ್ತಿದ್ದ ಒಬ್ಬನನ್ನು ಶರಾಬು ಮಾರುತ್ತಿದ್ದನೆಂಬ ಅಪರಾಧಕ್ಕಾಗಿ ಬಂಧಿಸಿದರು. ಕೋರ್ಟಿನಲ್ಲಿ ವಿಚಾರಣೆ ಪ್ರಾರಂಭವಾದಾಗ ಅಪರಾಧೀ ಪಕ್ಷದ ವಕೀಲರೆಂದರು— "ಮನುಷ್ಯನನ್ನು ಚೆನ್ನಾಗಿ ನೋಡಿರಿ. ಒಂದು ವೇಳೆ ಈತನ ಬಳಿಯಲ್ಲಿ ಶರಾಬು ಇದ್ದಿದ್ದರೆ ಅದನ್ನು ಈತ ಮಾರಬಲ್ಲನೇ??"

ಕೆಲವೇ ಕ್ಷಣಗಳಲ್ಲಿ 'ಅಪರಾಧಿ ನಿರ್ದೋಷಿ'ಯೆಂದು ಜ್ಯೂರಿಗಳು ತೀರ್ಪಿತ್ತರು.

— ೪ —

ಮಧ್ಯಮ ವರ್ಗದ ತಂದೆತಾಯಿಗಳ ಮಗಳೊಬ್ಬಳು ಲಕ್ಷಾಧೀಶನೊಬ್ಬನನ್ನು ತನ್ನ ಗಂಡನನ್ನಾಗಿ ಆರಿಸಿಕೊಂಡಳು. ಆಗ ಆಕೆಯ ತಾಯಿ—"ಮಗೂ, ನೀನು ನಿನ್ನಂತೆಯೇ ಸಾಮಾನ್ಯ ಸ್ಥಿತಿಯಲ್ಲಿರುವ ಗಂಡನನ್ನು ಆರಿಸಿಕೊಂಡಿದ್ದರೆ ನಿನ್ನ ದಾಂಪತ್ಯ ಜೀವನವು ಹೆಚ್ಚು ಸುಖಕರವಾಗುತ್ತಿತ್ತು."—ಎಂದಳು.

ಮಗಳು ತಾಯಿಯ ಶಂಕೆಯನ್ನು ನಿವಾರಿಸಲು ಈ ರೀತಿ ನುಡಿದಳು—"ಅದಕ್ಕಾಗಿ ನೀನು ಚಿಂತಿಸಬೇಡ ಅಮ್ಮ. ಮದುವೆಯಾದ ಕೆಲವೇ ತಿಂಗಳಲ್ಲಿ ಅವರನ್ನು ನಮ್ಮ ಸ್ಥಿತಿಗೇತರುತ್ತೇನೆ."

— ೫ —

ಡಾಕ್ಟರ್:- (ರೋಗಿಯೊಡನೆ) "ನಿಮಗೇನು ಕಾಯಿ[illegible]

ರೋಗಿ:- [illegible] ಮಾಡಬೇಕಾಗಿದೆ."

ಡಾಕ್ಟರ್:- ಓ! ಹಾಗಾದರೆ ನೀವು ಪಕ್ಕದಲ್ಲಿರುವ ಜೋತಿಷಿಗಳಲ್ಲಿಗೆ ಹೋಗಿರಿ. ಅವರು ನಿಮ್ಮೊಡನೆ ಏನನ್ನೂ ಪ್ರಶ್ನಿಸದೆಯೇ ನಿಮ್ಮ ರೋಗಕ್ಕೆ ಚಿಕಿತ್ಸೆ ಮಾಡಬಲ್ಲರು"

— ೬ —

ಒಮ್ಮೆ ಲೋಕಪ್ರಿಯರಾದ ಮಹಿಮರೊಬ್ಬರಿಗೆ 'ಮೈಲಿಗೆ'ಯಾಯಿತು. ಅದು ಅಂಟುರೋಗವಾದುದರಿಂದ ಯಾರೂ ಅವರ ಬಳಿ ಕೆಲ ಸಮಯ ಸುಳಿಯಲಿಲ್ಲ. ಆ ಮೇಲೆ ಒಂದು ದಿನ ಅವರು ತಮ್ಮ ಘನಿಷ್ಠ ಮಿತ್ರನೊಂದಿಗೆ ಹೀಗೆಂದರು—"ನೋಡು, ಪ್ರಪಂಚ ಎಷ್ಟು ವಿಚಿತ್ರವಾಗಿದೆ! ನಾನು ಇನ್ನೊಬ್ಬರಿಗೆ ಕೊಡುವ ಸ್ಥಿತಿಯಲ್ಲಿರುವಾಗ ಯಾರೂ ನನ್ನ ಬಳಿ ಬರಲೊಲ್ಲರು."

— ೭ —

ವಿಮಾನ ಹಾರಲು ನಿರ್ಧಾರಿತ ಸಮಯಕ್ಕಿಂತ ತುಸು ವಿಲಂಬವಾಯಿತು. ಆಗ ಒಬ್ಬ ಪ್ರವಾಸಿಯು ಬಾರಿ ಬಾರಿಗೂ ವಿಮಾನ ಪರಿಚಾರಿಕೆಯೊಂದಿಗೆ-"ನಾವು ನಿರ್ದಿಷ್ಟ ಸಮಯಕ್ಕೆ ಸರಿಯಾಗಿ ಗಂತವ್ಯ ಸ್ಥಾನವನ್ನು ತಲುಪಬಲ್ಲೆವೇ?" —ಎಂದು ಪ್ರಶ್ನಿಸತೊಡಗಿದ. ಈ ರೀತಿ ಆತ ಪುನಃ ಪುನಃ ಪ್ರಶ್ನಿಸಿದಾಗ ಬೇಸರಗೊಂಡ ವಿಮಾನ ಪರಿಚಾರಿಕೆಯು ಉತ್ತರಿಸಿದಳು "ಅಹುದು, ವಿಮಾನವು ಸಮಯಕ್ಕೆ ಸರಿಯಾಗಿ ಖಂಡಿತ ತಲುಪುವಂತಿಲ್ಲ. ಆದರೆ ನಿಮ್ಮನ್ನು ಮಾತ್ರ ಸಮಯಕ್ಕೆ ಸರಿಯಾಗಿ ವಿಮಾನದಿಂದ ಕೆಳಗಿಳಿಸುವ ಏರ್ಪಾಡು ಮಾಡಬಲ್ಲೆವು.'

— ೮ —

ಒಂದು ಕೊಳಕು ಹೋಟೆಲಿನ ಮಾಲಿಕನು ಅಲ್ಲಿ ತಂಗುವ ಗಿರಾಕಿಗಳಿಗೆ ಯಾವಾಗಲೂ ಕಾನೂನುಗಳನ್ನು ಉಪದೇಶಿಸುವ ಸ್ವಭಾವದವನಾಗಿದ್ದ. ಯಾರಾದರೂ ನಲ್ಲಿಯ ನೀರನ್ನು ನಿಲ್ಲಿಸಲು ಅಥವಾ ದೀಪ ಆರಿಸಲು ಮರೆತರೆ ತಂಟಾ ಹಚ್ಚುತ್ತಿದ್ದ. ಒಮ್ಮೆ ಒಬ್ಬ ಗಿರಾಕಿ ತನ್ನ ರಾತ್ರಿಯ ಕೆಲಸ ಮುಗಿಸಿ ಆಗಷ್ಟೇ ಹಾಸಿಗೆಯನ್ನು ಹೊಕ್ಕಾಗ ಮಾಲಿಕ ಅವನನ್ನುದ್ದೇಶಿಸಿ ನುಡಿದ— 'ನೀವು ನಿನ್ನೆ ಬಾತ್ ರೂಮಿನ ದೀಪ ಆರಿಸಲು ಮರೆತು ಬಿಟ್ಟಿದ್ದೀರಿ. ಇನ್ನು ಮುಂದೆ ಹೀಗೇನಾದರೂ ಮಾಡಿದಿರೆಂದರೆ ನಿಮ್ಮನ್ನು ನರಕಕ್ಕೆ ಕಳಿಸುತ್ತೇನೆ...'

"ಓ! ಹಾಗಾದರೆ ನಾನು ಇಷ್ಟು ದಿನ ಇದ್ದದ್ದು ಮತ್ತೆಲ್ಲಿ?" ಗಿರಾಕಿ ಶಾಂತನಾಗಿ ಪ್ರಶ್ನಿಸಿದ.

— ೯ —

"ನೀನು ಆ ಹುಡುಗನನ್ನೇಕೆ ಕಚ್ಚಿದೆ ಎಂಬ ಬಗ್ಗೆ ಈ ಕೋರ್ಟಿನ ಎದುರು ಸ್ಪಷ್ಟೀಕರಣ ನೀಡಬೇಕು"

"ಸ್ವಾಮಿ ಅವರು ಸ್ನಾನದ ಕತ್ತಿಯಿಂದಿದ್ದಿತ್ತು. ಅದು ಒಡೆಯ ಕತ್ತು ಹಾಕಿದ ಬೇಕೆಂದು ನಾನು ಭಾವಿಸಿದೆ."

—ಶ್ರೀ ಹಾರ್ವ್ಯಾಡಿ ಮ. ಐತಾಳ.

ಎಲ್ಲ ಸಮಸ್ಯೆಗೂ ಒಂದೇ ಪರಿಹಾರ

(ನಾಲ್ಕನೇ ಪುಟದಿಂದ)

"ಏನಂದ್ರೆ ಇದು....?"

"ಇಷ್ಟೆಲ್ಲಾ ಪ್ರಶ್ನೆಗಳು ಉದ್ಭವಿಸಲು ಮೂಲಕಾರಣ ಸ್ವಾತಂತ್ರ್ಯ. ಬ್ರಿಟನ್ನನ್ನು ಆಮಂತ್ರಿಸಿ, ಅವರ ಕೈಗಳಿಗೇ ನಮ್ಮ ರಕ್ಷಣೆಯ ಪೂರ್ಣ ಭಾರ ಮತ್ತೆ ಒಪ್ಪಿಸಿ ಬಿಡುವುದು...."

"ಛೆ...ಛೆ ..ಎಲ್ಲಾದ್ರೂ ಉಂಟೆ?"

"ಆದಿರ್ಲಿ ಇಲ್ಲದಿರ್ಲಿ, ಹಸಿವೆಯಂತೂ ಇದ್ದೇ ಇದೆ ತಾನೆ?"

"ಹ್ಞೂಂ ..ಬನ್ನಿ ಮತ್ತೆ..."

"ಮತ್ತೆ ಗಿತ್ತೇನಿಲ್ಲ, ಈಗ್ಲೆ ಬಂದು ಬಿಟ್ಟೆ"

— ಗೋರಾ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 161/1961 R E P 280/1962

ದಿ. ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್ ಉಡುಪಿ .... ಅರ್ಜಿದಾರ

ಮತ್ತು

I. D. ಕರ್ಕೇರ ಕೂಡಾ .... ಎದ್ರಿದು ಯವರೊಳಗೆ

1ನೇ ಎದ್ರಿ—I. D ಕರ್ಕೇರ—ಆಲ್ಬರ್ಟ್ ಕರ್ಕೇರರ ಮಗ ಉಡುಪಿ ಕಸಬಾ ಅಜ್ಜರಕಾಡು— ಯವರಿಗೆ —

ಮೇಲೆ ಹೇಳಲಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು ಪದರಿ ಅಮಲ್‌ಜಾರಿಯಲ್ಲಿ ಜಪ್ತು ಮಾಡಲಾದ ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದುದರಿಂದಾ ವಿಕ್ರಯದ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ 1965 ಜನವರಿ ತಿಂಗಳು 16ನೇ ತಾರೀಕು ನಿಶ್ಚಯಿಸಲಾಗಿಯದೆಯಂತ ನಿಮಗೆ ಈ ಮೂಲಕ ತಿಳಿಸಲಾಗಿಯದೆ.

H. Ramanath Pai.
Advocate for Petitioner

ಉಡುಪಿ, ತಾ. 10—12—1964

ದಿ ವಿಜಯಾ ಬೇಂಕ್, ಲಿಮಿಟೆಡ್ ಕಾರ್ಕಳ

ರಿಜಿಸ್ಟರ್ಡ್ ಆಫೀಸು:-

ಲೈಟ್ ಹೌಸ್ ಹಿಲ್ ರೋಡು, ಮಂಗಳೂರು — 3

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವಾಯಿದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರ್ ನೋಟೀಸು ಮೂಲಕ ಕೇಳಿಕೊಂಡಿದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರ್ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ—ವ—ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾರೀಕು 28ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 5—1—1965 ಅಪರಾಹ್ನ ಗಂಟೆ 3 ಕ್ಕೆ ಸರಿಯಾಗಿ ಬೇಂಕಿನ ವರಾಂಡದಲ್ಲಿ ಬಹಿರಂಗ ಹರಾಜು ಮಾಡಲಾಗುವುದು. ಯಾ. ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ ಯಾ. ಖಾಸಗಿಯಾಗಿ ಹರಾಜು ಮಾಡಲಾಗುವುದು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು—ವ—ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ.

ಸಾಲದ ಜಂಜಡಾ ನಂಬರು.	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು. ರೂ. ಪೈಸೆ.
119/62	ಶ್ರೀ ಚಂದಯ್ಯ ದೇವಾಡಿಗ, ತಂದೆ ದೇವಾಡಿಗರ ಮಗ, ಮಜಾಲು ಮನೆ, ಪೋಸ್ಟು ಕಾರ್ಕಳ	34 = 69.
810/62	ಶ್ರೀ ಎ. ಯಸ್. ಸನ್ಮತ, ರೆವರೆಂಡ್. ಯಸ್. ಸದಾನಂದರ ಮಗ, C/O P. W. D. ಕಾರ್ಕಳ	80 = 78.
1072/62	ಶ್ರೀ ಮಹಾದೇವ, ಗಣಪಯ್ಯರ ಮಗ C/O B. D. O. ಕಾರ್ಕಳ	41 = 40
1073/62	ಶ್ರೀ ಯಮ್. ಅಣ್ಣ ಪಡಿವಾಳ, ಶಾಂತು ಅತಿಕಾರಿಗಳ ಮಗ ಇನವಾಡಿ ಮನೆ, ಪೋಸ್ಟು ಮಿಯ್ಯಾರು	100 = 65
1140/62	ಶ್ರೀ ಕೆ. ಎಸ್. ಎ. ಸಮೀದ್, ಮೊಹಿದಿನ್ ಸಾಹೇಬರ ಮ.ಗ, ತಾಲೂಕು ಆಫೀಸಿನ ಬಳಿ, ಕುಕ್ಕುಂದೂರು	64 = 60
1303/62	ಶ್ರೀ ಮುದ್ದು ಶೆಟ್ಟಿ, ಅಣ್ಣು ಶೆಟ್ಟರ ಮಗ, ಅದಂಜಾರು ಮನೆ, ಪೋಸ್ಟು ಅಜೆಕಾರು	41 = 09.
38/63	ಶ್ರೀ ಕೆ. ಯಸ್. ಇಬ್ರಾಹಿಮ್, ಕೆ. ಯಸ್. ಅಬ್ದುಲ್ ಕರಿಮರ ಮಗ, ಪೋಸ್ಟು ಮೇನ್, ತಾಲೂಕು ಆಫೀಸಿನ ಬಳಿ ಕಾರ್ಕಳ	32 = 93.
55/63	ಶ್ರೀ ರಕ್ಷಕ್ಸ ಪೂಜಾರಿ, ಅಪ್ಪು ಪೂಜಾರಿ ಮಗ, ಹೊಸಮನೆ, ಪೋಸ್ಟು ಕಂಡಾವಿ	62 = 74.
315/63	ಶ್ರೀ ಲೂಯಿಸ್ ಮಸ್ಕರೇಂಜ, ಲೋರೆನ್ಸ್ ಮಸ್ಕರೇಂಜರ ಮಗ, ಚರ್ಚಿನ ಬಳಿ, ಪೋಸ್ಟ್ ಶಿರ್ತಾಡಿ	130 = 45.
926/63	ಶ್ರೀ ಪಿ. ಧರ್ಮರಾಜಯ್ಯನವ, ಶಾಂತಿರಾಜ ಅಧಿಕಾರಿಯವರ ಮಗ, ಹೃದಯ ಫೋನ್ ಹಾಸಿನ ವಠಾರ, ಹಿರಿಯಂಗಡಿ, ಕಾರ್ಕಳ	94 = 70.

ಕಾರ್ಕಳ

ತಾ. 11-12-1964.

M. M. Bhandary
Manager

ನಮ್ಮ-ನಮ್ಮವರು

ಶ್ರೀ ಎಂ. ಸಿ. ಛಾಗ್ಲಾ

ನ್ಯಾಯಾಧೀಶರಾಗಿ, ರಾಯಭಾರಿಗಳಾಗಿ ದೇಶದ ಘನತೆಯನ್ನು ಹೆಚ್ಚಿಸಿದ ಶ್ರೀ ಎಂ. ಸಿ. ಛಾಗ್ಲಾರವರು ಕೇಂದ್ರ ಮಂತ್ರಿ ಮಂಡಲವನ್ನು ಸೇರಿದಂದಿನಿಂದ ಭಾರಿ ಸುದ್ದಿಯ ವ್ಯಕ್ತಿಗಳಾಗಿದ್ದಾರೆ. ಸತ್ವಶೂನ್ಯವಾಗಿದ್ದ ಕೇಂದ್ರ ಶಿಕ್ಷಣ ಮಂತ್ರಿ ಶಾಖೆಗೆ ಅವರ ಆಗಮನವಾದಂದಿನಿಂದ ಹೊಸ ಜೀವಕಳೆ ಬಂದಿದೆ. ನಿರ್ವಹಿಸಿ ಕೊಟ್ಟ ಕಾರ್ಯಗಳನ್ನು ದಕ್ಷವಾಗಿ, ಸುಸೂತ್ರವಾಗಿ ನೆರವೇರಿಸುವುದರಲ್ಲಿ ಛಾಗ್ಲಾರದು ಎತ್ತಿದ ಕೈ. ಯುಕ್ತರಾಷ್ಟ್ರಸಂಘದಲ್ಲಿ ಕಾಶ್ಮೀರ ವಿವಾದದ ಕುರಿತಾದ ಚರ್ಚೆಯಲ್ಲಿ ಭಾಗವಹಿಸಲು ಭಾರತ ಸರಕಾರವನ್ನು ಅವರು ಪ್ರತಿನಿಧೀಕರಿಸಿ, ಭಾರತದ ವಾದವನ್ನು ಪರಿಣಾಮಕಾರಿಯಾಗಿ ಮನಬರುವಂತೆ ಮುಂದಿರಿಸಿ ಹೊಸ ದಾಖಲೆಯನ್ನು ನಿರ್ಮಿಸಿದರು- ಅವರದು ಎಲ್ಲದರಲ್ಲೂ ಸಮತೂಕದ ಧೋರಣೆ, ಮಾತಿನಲ್ಲಿ ತೂಕ, ಆದರ್ಶ ವಿಶೇಷವಾದ ಬಗುತನ.

ಇತ್ತೀಚೆಗೆ ಅವರು ಲೋಕಸಭೆಯಲ್ಲಿ ಮಾತನಾಡುತ್ತಾ ಪ್ರಾದೇಶಿಕ ಭಾಷೆಗಳೇ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಮಾಧ್ಯಮವನ್ನಾಗಿರುವ ಯೋಜನೆಯು ನಿಧಾನವಾಗಿ ಜಾಗರೂಕವಾಗಿ ಹಾಗೂ ಸಂಕಷ್ಟ ಸಿದ್ಧತೆಯೊಂದಿಗೆ ನಡೆಯಬೇಕಾದ ಕಾರ್ಯ ಎಂಬುದಾಗಿ ಹೇಳಿ, ಯಾರ ಮೇಲೂ ಒತ್ತಾಯವಾಗಿ ಹಿಂದಿಯನ್ನು ಹೇರಲಾಗುವುದಿಲ್ಲ ಎಂಬ ಮಾತನ್ನು ಸ್ಪಷ್ಟವಾಗಿ ನುಡಿದರು. ರಾಷ್ಟ್ರಭಾಷೆಯು ವಿಶ್ವವಿದ್ಯಾಲಯಗಳ ನಡುವಿನ ಸಂಪರ್ಕ ಭಾಷೆಯಾಗುವ ಗುರಿಯು ಸಾಧನೆಗೆ ಶ್ರಮಿಸುವುದಗತ್ಯವೆಂದೂ, ಆದರೆ ಅಲ್ಲಿಯವರೆಗೆ ಇಂಗ್ಲಿಷ್ ಭಾಷೆ ಮುಂದುವರಿಯಲೇ ಬೇಕು ಎಂದೂ ಅವರು ಹೇಳಿದರು.

ಹಿಂದಿಯೇತರ ಜನರ ಮೇಲೆ, ಮುಖ್ಯವಾಗಿ ದಕ್ಷಿಣ ಭಾರತದ ಜನರ ಮೇಲೆ ಹಿಂದಿಯನ್ನು ಕಡ್ಡಾಯವಾಗಿ ಹೇರುವುದು ಅವಿವೇಕತನದ ವಿಚಾರ. ಈ ಕುರಿತು ಹಲವು ಕಡೆ ವಿರೋಧ ಹಾಗೂ ಚಳವಳಗಳೂ ನಡೆಯುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಹಿಂದಿಯೇತರ ಜನರ ಮನಸ್ಸನ್ನು ಹಿಂದಿಗೆಲ್ಲ ಬೀಕಲ್ಲಡಿ ಒತ್ತಾಯದ ಹೇರುವಿಕೆ ಜಾಣಾತನವಾಗಲಿಕ್ಕಿಲ್ಲ. ಛಾಗ್ಲಾರವರು ಹಿಂದಿಯೇತರ ಜನರ ನಾಡಿಯ ಬಡಿತವನ್ನು ಚೆನ್ನಾಗಿ ಅನುಭವಿಸಿ, ಅರ್ಥವತ್ತಾದ ಹೇಳಿಕೆ ನೀಡಿರುವುದೂ ನಿಜಕ್ಕೂ ಸಮಾಧಾನಕರವಾದ ಸಂಗತಿ.

ಟಿ ಮಾಧವ ಪೈ

ಗಡಿಯಾರದ ಪೆಂಡ್ಯುಲಂ ಚಲಿಸಬೇಕಾದರೆ ಅದಕ್ಕೆ ಚೆನ್ನಾಗಿ ಕೀ ಕೊಡಬೇಕು. ಇಲ್ಲವಾದರೆ ಗಡಿಯಾರ ಚಲಿಸುವಂತಿಲ್ಲ. ಹಾಗೆಯೇ ಯಾವುದೇ ಒಂದು ಊರು, ಅಥವಾ ಸಂಸ್ಥೆ ಪ್ರಸಿದ್ಧಿಗೆ ಬರಬೇಕಾದರೆ, ಅಲ್ಲಿಯು ಸೂತ್ರಧಾರಿ ಗಡಿಯಾರದ ಕೀಯಂತಿರಬೇಕು. ಮಣಿಪಾಲವು ಇಂದು ಒಂದು ಚಟುವಟಿಕೆ ತುಂಬಿದ, ಸುದ್ದಿ ಹಾಗೂ ಸಮಾಚಾರಗಳಿಗೆ ಹೆಸರಾದ ತಾಣವಾಗಿ ಪರಿಣಮಿಸಿದೆ. ಪತ್ರಿಕೆಗಳವರಿಗೆ ಮಣಿಪಾಲದ ಕುರಿತು ಪ್ರತಿದಿನವೆಂಬಂತೆ ಸುದ್ದಿ ಸಿಗುತ್ತದೆ. ಈ ಮಣಿಪಾಲದ ಮಣ್ಣನ್ನು ಹೊನ್ನಾಗಿಸಿ, ಅದರಲ್ಲಿ ಸಜೀವ ಕಳೆಯನ್ನು ಮೂಡಿಸಿದ ಕರ್ಮಯೋಗಿ ಡಾ| ಪೈಗಳು. ಅವರು ಮಣಿಪಾಲಕ್ಕೆ ಹೊಸ ಜನ್ಮವನ್ನು ಕೊಟ್ಟು, ಅದನ್ನು ಭಾರತದ ಮಾತ್ರವಲ್ಲ ಜಗತ್ತಿನ ನಕಾಶೆಯಲ್ಲಿ ಕಾಣುವಂತೆ ಮಾಡಿದರು.

ಮಾನವೀಯತೆಯನ್ನೇ ತನ್ನ ಪರಮ ಗುರಿಯನ್ನಾಗಿಟ್ಟುಕೊಂಡಿರುವ ರೋಟರಿ ಸಂಸ್ಥೆಯ 317ನೇ ಜಿಲ್ಲೆಯ ಗವರ್ನರಾಗಿರುವ ಡಾ| ಪೈಗಳು ಮಾನವೀಯತೆಯ ವಿಕಾಸಕ್ಕೆ ದುಡಿದವರು. ಬೇರೆ ಬೇರೆ ಭಾಷೆಗಳನ್ನಾಡುವ ಬೇರೆ ಬೇರೆ ಪ್ರದೇಶಗಳ ಜನತೆ ಒಂದಾಗಿ ಬಾಳುವಂತ ಅವಕಾಶ ಕಲ್ಪಿಸಿ ಕೊಟ್ಟವರು. ಅವರು ಗವರ್ನರಾಗಿರುವ ರೋಟರಿ ಜಿಲ್ಲೆಯ ಸಮ್ಮೇಳನವು ಈ ತಿಂಗಳ ೨೬, ೨೭ ಹಾಗೂ ೨೮ರಂದು ಮಣಿಪಾಲದಲ್ಲಿ ಜರಗಲಿದೆ. ಈ ಸಮ್ಮೇಳನದಲ್ಲಿ ಸಾವಿರಕ್ಕೂ ಮಿಕ್ಕಿ ಪ್ರತಿನಿಧಿಗಳು ಭಾಗವಹಿಸಲಿದ್ದು ಈ ಸಮ್ಮೇಳನಕ್ಕೆ ಬೇಕಾದ ಸಿದ್ಧತೆಗಳೆಲ್ಲಾ ಬಹು ಉತ್ತಮವಾಗಿ ನಡೆಯುತ್ತಿವೆ.

ಡಾ| ಪೈಗಳು ಅಸಾಧ್ಯವೆನಿಸುದುದನ್ನು ಸಾಧ್ಯವಾಗಿಸಿದವರು. ಅವರು ಮುಟ್ಟಿದುದು ಬಂಗಾರವಾಗುತ್ತದೆ. ಅವರು ಕಂಡ ಕನಸು ನನಸಾಗುತ್ತದೆ. ಕಾರಣ, ಅವರ ಅಸ್ಖಲಿತ ಪ್ರತಿಭೆ, ಕಾರ್ಯಕ್ಷಮತೆ ಹಾಗೂ ಅಸಮಾನ ಧೈರ್ಯ. ಅವರ ಅಧ್ಯಕ್ಷತೆಯಲ್ಲಿ, ಗವರ್ನರ್ ಜನರಲ್ ಎಸ್. ಎಂ. ಶ್ರೀ ನಾಗೇಶ್‌ರವರಿಂದ ಉದ್ಘಾಟಿಸಲ್ಪಡುವ ಈ ಸಮ್ಮೇಳನ ಒಂದು ಹೊಸ ದಾಖಲೆಯನ್ನೇ ನಿರ್ಮಿಸಿ, ರೋಟರಿಯ ತತ್ವಗಳ ಕುರಿತು ಇನ್ನಷ್ಟು ಚಿಂತನೆ ಮಾಡುವುದಕ್ಕೆ ಅವಕಾಶ ಕಲ್ಪಿಸುವುದೆಂಬುದಕ್ಕೆ ಸಂದೇಹ ಬೇಡ.

(ಮೂರನೇ ಪುಟದಿಂದ)

ನಾವಣೆಯನ್ನು ಮುಂದೂಡುವತ್ತ ಕೆಲವರ ಮೊದಲು ಹರಡಿರುವಾಗ ಕಾಮರಾಜರದು ಏಕ ನೀತಿಯಾಗಿದೆಯಂತೆ, ಮಧ್ಯಾವಧಿ ಚುನಾವಣೆಯಲ್ಲಿ ಕಾಂಗ್ರೆಸ್ಸು ಪರಾಜಿತವಾದರೂ ಚಿಂತೆಯಿಲ್ಲ ನಿಯೋಜಿತ ಧೋರಣೆಯಿಂದ ಕದಲಲು ಅವರು ಸಿದ್ಧರಿಲ್ಲವಂತೆ. ಹಾಗೆಯೇ ಒಮ್ಮೆ ನಿರ್ಧಾರವಾದ 'ಗೋವೆಯ ಭವಿಷ್ಯ" ಮರಾಠಿಗಳ ಒತ್ತಡ, ಬಲಾತ್ಕಾರಗಳಿಂದ ಬದಲಾಗ ಬಾರದು. ಗೋವೆ ಗೋಮಾಂತಕರದ್ದು; ಅದರ ಭವಿಷ್ಯವನ್ನು ಎ ಐ ಸಿ ಸಿ ಅಥವಾ ಅದರ ಅಂಗ ಸಂಸ್ಥೆಗಳು ಬದಲಾಯಿಸುವಂತಹ ಕಠಿನ ಪರಿಸ್ಥಿತಿ ಬರಬಾರದು. ಬಂದರೆ, ಇದಕ್ಕಿಂತ ಶೋಚನೀಯವಾದ ಘಟನ ಮತ್ತೊಂದಿಲ್ಲ. ಮರಾಠಿಗರ ಹಠಮಾರಿತನಕ್ಕೆ ಎ ಐ ಸಿ ಸಿ ತಲೆ ತಗ್ಗಿಸಬಾರದು.

ರೋಟರಿ ಸಮ್ಮೇಳನದ ಸಿದ್ಧತೆ

ಮಣಿಪಾಲ, ಡಿ ೯—ಇದೇ ದಿನಾಂಕ ೨೬ರಿಂದ ೨೮ರ ವರೆಗೆ ಇಲ್ಲಿ ನಡೆಯಲಿರುವ ಅಂತರಾಷ್ಟ್ರೀಯ ರೋಟರಿ ಸಂಸ್ಥೆಯ ೩೧೭ನೇ ಜಿಲ್ಲೆಯ ಆರನೆಯ ವಾರ್ಷಿಕ ಸಮ್ಮೇಳನದಲ್ಲಿ ಸಾವಿರಕ್ಕೂ ಹೆಚ್ಚು ರೋಟೆರಿಯನ್ನರು ಹಾಗೂ ಅವರ ಕುಟುಂಬದವರು ಭಾಗವಹಿಸುವ ನಿರೀಕ್ಷೆ ಇದೆ.

ಮೈಸೂರಿನ ರಾಜ್ಯಪಾಲ ಜನರಲ್ ಎಸ್. ಎಂ. ಶ್ರೀನಾಗೇಶ್‌ರವರು ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆಂದು ಸಮ್ಮೇಳನದ ಅಧ್ಯಕ್ಷ ಶ್ರೀ ರಮೇಶ ಪೈಯವರು ಪತ್ರಕರ್ತರಿಗೆ ತಿಳಿಸಿದರು. ಪಾಕಿಸ್ತಾನದಲ್ಲಿ ಪ್ರಮುಖ ಕೈಗಾರಿಕೋದ್ಯಮಿಗಳಲ್ಲೊಬ್ಬರಾಗಿರುವ ಶ್ರೀ ಯೂಸುಫ್ ಎನ್ ಚಿನಾಯ್‌ರವರು ವಿಶ್ವ ರೋಟರಿ ಅಧ್ಯಕ್ಷರ ಪ್ರತಿನಿಧಿಯಾಗಿ ಹಾಜರಿರುತ್ತಾರೆ. ಜಿಲ್ಲಾ ಗವರ್ನರ್ ಡಾ| ಟಿ. ಎಂ. ಎ ಪೈಯವರು ಅಧ್ಯಕ್ಷತೆ ವಹಿಸುತ್ತಾರೆ.

ಈ ರೋಟರಿ ಜಿಲ್ಲೆಯಲ್ಲಿ ೬೪ ಕ್ಲಬ್ಬುಗಳಿದ್ದು ಇದು ಮೈಸೂರು ರಾಜ್ಯ, ಗೋವಾ ಮತ್ತು ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶದ ಕೆಲವು ಭಾಗಗಳನ್ನು ಒಳಗೊಂಡಿದೆ.

ಸಮ್ಮೇಳನದ ಕಾರ್ಯಕ್ರಮದಲ್ಲಿ ರೋಟರಿ ವಿಷಯಗಳನ್ನು ಕುರಿತು ಚರ್ಚೆ, ಪ್ರಮುಖರಿಂದ ಭಾಷಣಗಳು, ಹಾಗೂ ಮನೋರಂಜನೆ ಸೇರಿವೆ. ನಾನಾ ಚಟುವಟಿಕೆಗಳ ಬಗ್ಗೆ ಸೌಹಾರ್ದಯುತ ಚರ್ಚೆ ನಡೆಸಿ ರೋಟರಿಯ ಧ್ಯೇಯೋದ್ದೇಶಗಳನ್ನು ಮುಂದುವರೆಸುವುದು ಇದರ ಉದ್ದೇಶವಾಗಿದೆ. "ಸಮಾಜದಲ್ಲಿ ನಾಯಕರಾಗಿ ರೋಟರಿ ಜೀವನವನ್ನು ಬಾಳಿ" ಎಂಬುದು ಸಮ್ಮೇಳನದ ಮುಖ್ಯ ವಿಷಯವಾಗಿದೆ.

ಉಡುಪಿ ರೋಟರಿ ಕ್ಲಬ್ ಆರಂಭಿಸಲಿರುವ ನಿತೀಶ ಲಹರಿ ಮಕ್ಕಳ ಮ್ಯೂಜಿಯಂನ್ನು ಸಮ್ಮೇಳನದ ಕಾಲದಲ್ಲಿ, ಶ್ರೀ ಯೂಸುಫ್ ಚಿನಾಯ್ ಉದ್ಘಾಟಿಸುವರು. ಈ ಮ್ಯೂಜಿಯಂನಲ್ಲಿ ಇಡುವುದಕ್ಕಾಗಿ ಪ್ರಪಂಚದ ನಾನಾ ಕಡೆಗಳಲ್ಲಿರುವ ರೋಟರಿ ಕ್ಲಬ್ಬುಗಳಿಂದ ಸುಂದರ ಗೊಂಬೆಗಳನ್ನು ಸಂಗ್ರಹಿಸಲಾಗಿದೆ. ಪ್ರತಿನಿಧಿಗಳಿಗೆ ವಾಸ್ತವ್ಯದ ಅನುಕೂಲ ಮುಂತಾಗಿ ಸಮ್ಮೇಳನಕ್ಕಾಗಿ, ಸಕಲ ವ್ಯವಸ್ಥೆಗಳನ್ನೂ ಮಾಡುತ್ತಿರುವುದಾಗಿ ಶ್ರೀ ಪೈ ಹೇಳಿದರು. ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಮೈದಾನದಲ್ಲಿ ಸಮ್ಮೇಳನಕ್ಕಾಗಿ ಏರ್ಪಡಿಸಲಾಗುವ ವಿಶೇಷ ಮಂಟಪವನ್ನು ಅಂತರಾಷ್ಟ್ರೀಯ ರೋಟರಿಯ ಪ್ರಥಮ ಏಷ್ಯದ ಅಧ್ಯಕ್ಷರಾಗಿದ್ದ ದಿವಂಗತ ನಿತೀಶ್ ಲಹರಿಯವರ ಜ್ಞಾಪಕಾರ್ಥವಾಗಿ, "ಲಹರಿ ಮಂಟಪ" ಎಂದು ಕರೆಯಲಾಗುವುದು.

ನಾಟಕ ಪ್ರದರ್ಶನ

ಉಡುಪಿ, ಕಡಿಯಾಳಿಯ ಮಹಿಷಮರ್ದಿನಿ ಕಲಾಮಂಡಳಿಯ ಕಲಾವಿದರು ಭ್ರಷ್ಟಾಚಾರದ ಮೇಲೆ ಬೆಳಕು ಬೀಳುವ ಭ್ರಷ್ಟಾಚಾರ ಎಂಬ ಸಾಮಾಜಿಕ ನಾಟಕವನ್ನು ತಾ 12-12-64ನೇ ರಾತ್ರಿ ವಿಕ್ಟೋರಿಯಾ ಜ್ಯುಬಿಲಿ ಯೂನಿಯನ್ ಕ್ಲಬ್ಬಿನ ಡಾ| ಯು ಸುಂದರ ರಾವ್ ಸ್ಮಾರಕ ರಂಗಮಂಟಪದಲ್ಲಿ ಉಚಿತವಾಗಿ ಅಭಿನಯಿಸಿದರು. ಅಧ್ಯಕ್ಷತೆ ವಹಿಸಿದ್ದ ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರು ನಾಟಕದ ಜಯಶೀಲತೆಗಾಗಿ ಮೆಚ್ಚಿಗೆ ಸೂಚಿಸಿ ಮಾತಾಡಿದರು. ಕಾರ್ಯದರ್ಶಿ ಶ್ರೀ ಸದಾಶಿವರಾಯರು ಧನ್ಯವಾದಗಳನ್ನರ್ಪಿಸಿದರು.

ಧ್ವಜ ದಿನಾಚರಣೆ

ಈ ವರ್ಷ, ವಾಡಿಕೆಯಂತೆ ಧ್ವಜ ದಿನವನ್ನು ದೇಶದ ಎಲ್ಲ ಕಡೆಗಳಲ್ಲಿ ಡಿಸೆಂಬರ್ 7ರಂದ ಆಚರಿಸಲಾಗುವದು. ನಾವು ಧ್ವಜ ದಿನವನ್ನು ಕಳೆದ ಕೆಲವು ವರ್ಷಗಳಿಂದ ನಿವೃತ್ತ ಸೈನಿಕರ ಮತ್ತು ಅವರ ಕುಟುಂಬದವರ ಹಿತಕ್ಕಾಗಿ ಮತ್ತು ನಮ್ಮ ಸೈನಿಕ ಸಿಬ್ಬಂದಿಯವರಿಗೆ ಸೌಲಭ್ಯಗಳನ್ನು ಒದಗಿಸುವದಕ್ಕಾಗಿ ಬೇಕಾಗುವ ನಿಧಿಯನ್ನು ಸಂಗ್ರಹಿಸುವ ಉದ್ದೇಶದಿಂದ ಆಚರಿಸುತ್ತಿದ್ದೇವೆ.

ಧ್ವಜ ದಿನದಂದು ಸಾಂಕೇತಿಕ ಕಾಗದ ಧ್ವಜಗಳನ್ನು ಮತ್ತು ಮೋಟಾರುಗಳಿಗೆ ಹಚ್ಚಲು ಬರುವ ಧ್ವಜಗಳನು ಮಾರಲಾಗುವುದು. ಸ್ವಯಂಸೇವಕರು ಸಾಂಕೇತಿಕ ಧ್ವಜಗಳನ್ನು ಅಥವಾ ಯಾವುದೇ ಸಹಾಯಾರ್ಥ ಪ್ರದರ್ಶನದ ಟಿಕೇಟುಗಳನ್ನು ಮಾರಲು ತಮ್ಮ ಹತ್ತಿರ ಬಂದಾಗ ಉದಾರವಾಗಿ ಧನ ಸಹಾಯ ಮಾಡಿ ಈ ವರ್ಷದ ಧ್ವಜ ದಿನವನ್ನು ಹೆಚ್ಚು ಯಶಸ್ವಿಗೊಳಿಸಬೇಕೆಂದು ನನ್ನ ನಾಡಿನವರಲ್ಲಿ ರಾಜ್ಯದ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಬಿನ್ನವಿಸಿಕೊಂಡಿರುವರು.

ಕುಮಾರಿ ಸತ್ಯವತಿಯವರ ನಿಧನ

ಮಂಗಳೂರು, ಆದರ್ಶ ಉಪಾಧ್ಯಾಯರಾಗಿ ಮದ್ಯಪಾನ ನಿಷೇಧ ಪ್ರಚಾರಕರಾಗಿ ಸಾರ್ವಜನಿಕ ಕೆಲಸಗಾರರಾಗಿ ಪ್ರಸಿದ್ಧರಾದ ಶ್ರೀ ಎನ್. ನಾರಪ್ಪ ಶೆಟ್ಟರ ಪ್ರಥಮ ಪುತ್ರಿ ಕುಮಾರಿ ಎನ್ ಸತ್ಯವತಿಯವರು ತಾರೀಕು 6-12-64ರಂದು ತನ್ನ ಕೊನೆಯ ಉಸಿರನ್ನೆಳೆದು ದೇವರ ಪಾದ ಸೇರಿದರೆಂದು ತಿಳಿಸಲು ವಿಷಾದವಾಗುತ್ತದೆ. ಕು. ಸತ್ಯವತಿಯವರು ಮದರಾಸು ವಿಶ್ವವಿದ್ಯಾನಿಲಯದ ಬಿ ಎ. ಪದವಿಯಲ್ಲಿ ಶ್ರೀ ಎಸ್. ಎನ್. ಕೃಷ್ಣಮೂರ್ತಿ ಸ್ಮಾರಕ ಸ್ವರ್ಣಪದಕಗಳಿಸಿದ ಉತ್ತಮ ವಿದ್ಯಾರ್ಥಿನಿಯಾಗಿದ್ದರು. ದಿವಂಗತೆಯವರು ಹಲವು ವರ್ಷಗಳಿಂದ ಕಠಿಣ ಕಾಯಿಲೆಯ ಯಾತನೆಗೊಳಗಾಗಿ ಶಯ್ಯಾರುಗ್ಣೆ ಇದ್ದರು. ಆತ್ಮೀಯರ ಗುರುಹಿರಿಯರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು.

ಹೆಮ್ಮಕ್ಕಳ ಪಂದ್ಯಾಟಗಳು

ಉಡುಪಿ, ಮೈಸೂರು ವಿಶ್ವ ವಿದ್ಯಾನಿಲಯದ ನೇತೃತ್ವದಲ್ಲಿ ಪ್ರೊ| ಎಂ. ಜಿ. ಶ್ರೀನಿವಾಸರಾವ್ ಸ್ಮಾರಕ ಅಂತರ್ ಕಾಲೇಜುಗಳ ಅಂತರ್ ಪ್ರಾದೇಶಿಕ ಹೆಮ್ಮಕ್ಕಳ ಪಂದ್ಯಾಟಗಳು ಯಮ್. ಜಿ. ಯಮ್. ಕಾಲೇಜಿನಲ್ಲಿ ಇದೇ ತಾ. 11ರಿಂದ 13ರ ವರೆಗೆ ನಡೆದುವು. ಪ್ರೊ| ಕೆ ಎಸ್. ಹರಿದಾಸ್ ಭಟ್ಟರಿಂದ ಉದ್ಘಾಟಿಸಲ್ಪಟ್ಟ ಈ ಪಂದ್ಯಾಟಗಳ ಪಾರಿತೋಷಕ ವಿತರಣಾ ಸಮಾರಂಭವು ಡಾ| ಟಿ. ಎಂ. ಎ ಪೈಯವರ ಹಿರಿತನದಲ್ಲಿ ತಾ. 13ರಂದು ಜರಗಿತು. ಪ್ರೊ| ಕೆ. ಎಸ್. ಹರಿದಾಸ್ ಭಟ್ಟರು ಸ್ವಾಗತಿಸಿದ ಬಳಿಕ ವಿಶ್ವವಿದ್ಯಾನಿಲಯದ ಪರವಾಗಿ ಶ್ರೀ ನಾರಾಯಣಸ್ವಾಮಿ ಪಂದ್ಯಾಟಗಳ ವಿವರವನ್ನಿತ್ತರು. ಶ್ರೀ ಸೋಮ ನಾ... ಧನ್ಯವಾದಗಳನ್ನರ್ಪಿಸಿದರು.

ಹೃದಯ ಮಂಥನ

(ಎರಡನೇ ಪುಟದಿಂದ)

ಸ್ತ್ರೀ ಪುರುಷರು ಮದುವೆಗೆ ಮೊದಲೇ ಒಟ್ಟು ಸೇರಿದ್ದಾರೆ! ಪ್ರೇಮಾಲಾಪದಲ್ಲಿ ಮಗ್ನರಾಗಿದ್ದಾರೆ!

ಕಾಲ ಕೆಟ್ಟು ಹೋಯಿತು. ಎಲ್ಲೆಲ್ಲೂ ಇಂದು ಇಂತಹ ದುರ್ವರ್ತನೆಗಳೇ ತುಂಬಿ ಕೊಂಡಿವೆ.

ಥೂ!

ನಾಚಿಕೆಯಾಯಿತು ವನಜಾಕ್ಷಿಗೆ. ಅವಳ ರಕ್ತ ವೇಗವಾಗಿ ಪ್ರವಹಿಸ ತೊಡಗಿತು.

ಪುನಃ ಆ ಅಪರಿಚಿತ ಯುವಕ—ಎರಡು ಕಾಪಿನ ಸಹಯಾತ್ರಿಕ-ಅವಳ ಕಣ್ಣುಗಳ ಮುಂದೆ ಬಂದು ನಿಂತಂತಾಯಿತು.

ಪ್ರೀತಿಸುವುದು ಪಾಪವಲ್ಲ. ಅದು ಶಾಶ್ವತ ಸತ್ಯ. ಪ್ರೇಮದಲ್ಲಿ ಭಗವಂತ ನೆಲಸಿದ್ದಾನೆಂದು ಅದಾವುದೋ ಪುಸ್ತಕದಲ್ಲಿ ಓದಿದ ನೆನಪಿದೆ ವನಜಾಕ್ಷಿಗೆ.

ಪ್ರೇಮವೇ ದೇವರು, ದೇವರೇ ಪ್ರೇಮ

ಈಶ್ವರನ ಪ್ರಾಪ್ತಿಗಾಗಿ ಪಾರ್ವತಿ ತಪಸ್ಸು ಮಾಡಿದ್ದಳಂತೆ. ಅಂತೆಯೇ ತಾನೂ ಆ ಅಪರಿಚಿತ ಯುವಕನನ್ನು ಪಡೆಯುವುದಕ್ಕಾಗಿ ತಪಸ್ಸನ್ನಾಚರಿಸಿದರೆ ಅದೇನೂ ಅಪರಾಧವಾಗಲಾರದು.

ಆದರೆ ನನ್ನ ತಾಯಿ ತನ್ನ ಕೊನೆಕಾಲದಲ್ಲಿ ಹಾಗೇಕೆ ನುಡಿದಿರಬಹುದು? ಯಾರಿಗೆ ಗೊತ್ತು, ಬಹುಶಃ ವೃದ್ಧಾಪ್ಯದಲ್ಲಿ ಮನುಷ್ಯನ ಮಸ್ತಿಷ್ಕ ವಿಕೃತವಾಗುತ್ತದೆಯೋ ಏನೋ. ಅಥವಾ ನಾನು ಯಾರಾದರೊಬ್ಬ ಉಚ್ಛೃಂಖಲ ಪ್ರವೃತ್ತಿಯ ಪೋಲಿಯ ಬಲೆಗೆ ಬಿದ್ದು ಹಾಳಾಗಿ ಹೋಗಬಾರದೆಂದು ಹಾಗೆಂದಿರಲೂ ಬಹುದು.

ಆದರೆ ಆ ಅಪರಿಚಿತ ಯುವಕ ಪೋಲಿಯಲ್ಲ—ಎಂದು ವನಜಾಕ್ಷಿಯ ಅಂತರಂಗ ನುಡಿಯುತ್ತಿದೆ. ಅವನು ಘಟಿಂಗನೆಂದು ಅವಳ ಹೃದಯ ಒಪ್ಪಲೊಲ್ಲದು. ಅವನ ದೃಷ್ಟಿಯಲ್ಲಿ ಅಸೀಮ ಪ್ರೀತಿಯಿದೆ. ಅಪಾರ ಶ್ರದ್ಧೆಯಿದೆ. ಅನುಪಮ ಆಕರ್ಷಣೆಯಿದೆ. ಎಂದೆಂದಿಗೂ ಬತ್ತದ ಪ್ರೀತಿಯ ಸಾಗರ ಅವನು. ತಿರುಗಿ ಆಕೆಯ ಕಂಗಳೆದುರು ಅತನ ಸಾಕ್ಷಾತ್ಕಾರವಾಯಿತು.

ಆತ ಈಗ—ಈ ಕ್ಷಣದಲ್ಲಿ—ಕಾಣಲು ಸಿಕ್ಕಿದ್ದರೆ....?

ಖಂಡಿತವಾಗಿಯೂ ತನ್ನ ಸರ್ವಸ್ವವನ್ನೂ ಆತನಿಗೆ ಅರ್ಪಿಸಿಬಿಡುತ್ತಿದ್ದಳು ವನಜಾಕ್ಷಿ.

ಅವಳಿಗೆ ಆತನ ಹೆಸರು ಗೊತ್ತಿಲ್ಲ. ಮೊದಲಿಂದಲೂ ಅವನನ್ನು ಕಂಡೂ ಇರಲಿಲ್ಲ. ಅವನು ಎಲ್ಲಿಯವನೆಂಬುದನ್ನೂ ಅವಳರಿಯಳು. ಅವನ ಕುಲಗೋತ್ರಗಳ ಪರಿಚಯವಿಲ್ಲ. ಆದರೂ ಆಕೆ ಅವನಿಗೆ ಮನಸೋತಿದ್ದಾಳೆ. ಅವನಿಗಾಗಿ ಹಂಬಲಿಸುತ್ತಿದ್ದಾಳೆ. ಒಂದು ವೇಳೆ ಪ್ರೇಮದಲ್ಲಿ ಭಗವಂತನಿರುವುದು ಸತ್ಯವಾದರೆ-ಪ್ರೇಮದಲ್ಲಿ ಶಕ್ತಿ- ಆಕರ್ಷಣೆಗಳಿರುವುದು ನಿಜವೆಂದಾದರೆ— ಒಂದಲ್ಲ ಒಂದು ದಿನ ಅವನು ನನಗೆ ಸಿಕ್ಕೇ ಸಿಗುವನು ಎಂದು ಕೊಂಡಳು ವನಜಾಕ್ಷಿ.

ಹೀಗೆ ಯೋಚಿಸಿ ಆಕೆ ನಿಶ್ಚಿಂತಳಾದಳು. ಆಕೆಯ ತುಟಿಗಳಲ್ಲಿ ಮೋಹಕವಾದ ಮುಗುಳು ನಗು ಮೂಡಿತು.

"ಓ ವನಜಾಕ್ಷಿ, ನೀನಲ್ಲಿ ಕುಳಿತಿರುವಿಯಾ? ನಾನು ಆಗನಿಂದಲೂ ನಿನ್ನನ್ನು ಹುಡುಕುತಿದ್ದೇನೆ"

ವನಜಾಕ್ಷಿ ಹಿಂತಿರುಗಿನೋಡಿದಳು. ಅವಳ ಅತ್ತೆ. ಎದ್ದು ನಿಂತಳು ವನಜಾಕ್ಷಿ

"ಬಾ ತುಸು ಕೆಲಸವಿದೆ"- ಅತ್ತೆಯೆಂದರು.

ವನಜಾಕ್ಷಿ ಅತ್ತೆಯ ಹಿಂದೆ ನಡೆದಳು.

ನಡುಮನೆಯಲ್ಲಿ ಮಾವನ ಬಳಿಯಲ್ಲಿ ಯಾರೋ ಒಬ್ಬ ಅಪರಿಚಿತ ಕುಳಿತು ಮಾತನಾಡುತ್ತಿದ್ದುದು ಕೇಳಿಸುತ್ತಿತ್ತು.

"ಎರಡು ಕಪ್ ಕಾಫಿ ಮಾಡು" ಅತ್ತೆ ಆದೇಶವಿತ್ತರು.

ವನಜಾಕ್ಷಿ ಅಡಿಗೆ ಮನೆಗೆ ಹೋಗಿ ಒಲೆಯ ಮೇಲೆ ಕಾಫಿಗೆ ನೀರನ್ನಿಟ್ಟಳು. ನೀರು ಕುದಿಯತೊಡಗಿತು.

"ಚೆನ್ನಾಗಿ ಮಾಡಮ್ಮ ಕಾಫಿಯನ್ನು. ಅಪರೂಪದ ಅತಿಥಿಗಳು ಬಂದಿದ್ದಾರೆ"— ಅತ್ತೆ ಹೇಳಿದರು. ಅವರು ಅದೇಕೋ ನಗುತ್ತಿದ್ದರು. ಅವರ ಮುಖದಲ್ಲಿ ಪ್ರಸನ್ನತೆ ತಾಂಡವಾಡುತ್ತಿತ್ತು.

ಕಾರಣವೇನಿರ ಬಹುದು?

ವನಜಾಕ್ಷಿ ಕಾಫಿಯನ್ನು ಸಿದ್ಧಗೊಳಿಸಿದಳು.

"ನಿನ್ನ ಮಾವನ ಬಳಿ ಕುಳಿತಿರುವವರಲ್ಲ, ಅವರನ್ನು ಚೆನ್ನಾಗಿನೋಡಿಕೊಂಡು ಬಾ" — ಅತ್ತೆ ಹೇಳಿದರು.

"ಏನತ್ತೆ?" ಗಾಬರಿಯಿಂದ ಪ್ರಶ್ನಿಸಿದಳು ವನಜಾಕ್ಷಿ.

"ಏ ಹುಚ್ಚು ಹುಡುಗಿ! ಇನ್ನೂ ಗೊತ್ತಾಗಲಿಲ್ಲವೇ? ನಿನ್ನ ಮದುವೆಗಾಗಿ ಮಾವ ಪ್ರಯತ್ನಿಸುತ್ತಿದ್ದಾರೆ"

ವನಜಾಕ್ಷಿಯ ಕೊರಳು ಅದೇಕೋ ಬಿಗಿದು ಬಂದಂತಾಯಿತು. ಮತ್ತೆ ಮಾತನಾಡಲಾಗಲಿಲ್ಲ ಆಕೆಗೆ. ಭಯದಿಂದ, ಲಜ್ಜೆಯಿಂದ ಅವಳು ಅವನತಮುಖಿಯಾದಳು

"ಈಗಲೇ ಇಷ್ಟೊಂದು ನಾಚಿಕೆಯೇ?" —ಎಂದುಕೊಂಡು ಅವಳ ಅತ್ತೆಯೇ ಕಾಫಿಯನ್ನು ಕೊಟ್ಟು ಬಂದರು.

ವನಜಾ ನಿಶ್ಚಲಳಾಗಿ ಅಲ್ಲಿಯೇ ಕುಳಿತಿದ್ದಳು.

ಸ್ತ್ರೀಯ ಆಸೆ ಆಕಾಂಕ್ಷೆಗಳನ್ನು ಅವಳ ಕೋಮಲ ಭಾವನೆಗಳನ್ನು ಈ ರೀತಿ ತುಳಿದು ಬಿಡುವುದು ಯಾವ ನ್ಯಾಯ? ಸ್ತ್ರೀಯು ಅನವರತವೂ ಪರಾಧೀನಳಾಗಿಯೇ ಇರಬೇಕೇ?

ಬಾಲ್ಯದಲ್ಲಿ ತಂದೆತಾಯಿಗಳ ಅಧೀನದಲ್ಲಿ. ಆ ಬಳಿಕ ಯೌವನಾವಸ್ಥೆಯಿಂದ ತೊಡಗಿ ಮರಣಪರ್ಯಂತವೂ ಗಂಡನ ದಾಸ್ಯದಲ್ಲಿ. ನಾರೀ ಜೀವನವೆಂದರೆ ಇದೇ ಏನು? ಹೆಂಗಸಿಗೆ ತನ್ನ ಹೃದಯದ ಭಾವನೆಗಳನ್ನು ಪ್ರಕಟಗೊಳಿಸುವ ಸ್ವಾತಂತ್ರ್ಯವೇ ಇಲ್ಲವೇ?

ಅತ್ತೆ ತಿರುಗಿ ಬಂದವರೇ ಪುನಃ ನುಡಿದರು—"ಅವರನ್ನೊಮ್ಮೆ ನೋಡಿಕೊಂಡು ಬಾ."

ವನಜಾಕ್ಷಿ ಮೌನ.

"ಹುಡುಗ ತುಂಬಾ ಒಳ್ಳೆಯವನು. ಸುಶೀಲ, ಸುಂದರ, ಸಾಕಷ್ಟು ಹಣವನ್ನು ಸಂಪಾದಿಸುತ್ತಿದ್ದಾನೆ. ಇಂತಹ ಯೋಗ್ಯನಾದ ವರನು ಸಿಗುವುದೇ ಕಷ್ಟ."

ವನಜಾಕ್ಷಿ ಮತ್ತೂ ಮೌನಿಯಾಗಿಯೇ ಇದ್ದಳು.

"ನಿನ್ನ ಮಾವ ಆಗಲೇ ಒಪ್ಪಿ ಬಿಟ್ಟಿದ್ದಾರೆ. ನನಗೂ ಸಹ ಒಪ್ಪಿಗೆಯೇ. ನೀನು ಯಾವಾಗಲೂ ಸುಖಿಯಾಗಿಯೇ ಇರಬೇಕೆಂಬ ಉದ್ದೇಶದಿಂದಲೇ ಒಳ್ಳೆಯ ನೆಂಟಸ್ತಿಕೆಯನ್ನು ಗೊತ್ತು ಮಾಡಿದ್ದೇವೆ."

"ಅತ್ತೆ..."

ಮುಂದೆ ಮಾತನಾಡಲಾಗಲಿಲ್ಲ. ಅವಳ ಕಂಗಳೆದುರು ಅಂಧಕಾರ ಕವಿದಿತ್ತು. ಅತ್ತೆ ಅದಕ್ಕೆ ಬೇರೊಂದೇ ಅರ್ಥವನ್ನು ಕಲ್ಪಿಸಿಕೊಂಡು ಸಾಂತ್ವನ ನೀಡ ತೊಡಗಿದರು.

"ಹುಚ್ಚಿ! ತಂದೆ ತಾಯಿಗಳು ನಾವಿರುವವರೆಗೂ ಬದುಕಿರ ಬೇಕೆಂದರೆ ಅದು ಸಾಧ್ಯವೇ? ಇಷ್ಟು ದಿನಗಳಾದರೂ ನೀ ನಿನ್ನೂ ತಂದೆತಾಯಿಗಳನ್ನು ಸ್ಮರಿಸಿಕೊಂಡು ಅಳುತ್ತಿರುವೆಯಲ್ಲ" ಸುಮ್ಮನಿರು."

'ಏನು ಏನಾಯಿತು?" ಎನ್ನುತ್ತ ಮಾವ ಒಳಗೆಬಂದರು.

'ಏನೂ ಇಲ್ಲ. ತಾಯಿಯನ್ನು ಸ್ಮರಿಸಿಕೊಂಡು ವನಜಾಕ್ಷಿ ಅಳುತ್ತಿದ್ದಾಳೆ.'

ಮಾವ ಅವಳನ್ನೊಮ್ಮೆ ಕರುಣಾದೃಷ್ಟಿಯಿಂದ ನೋಡಿದರು.

ನಿಜವಾಗಿಯೂ ವನಜಾಕ್ಷಿಯ ಕಣ್ಣುಗಳು ಅಶ್ರುಪೂರಿತವಾಗಿದ್ದುವು. ಬಿಕ್ಕಿ ಬಿಕ್ಕಿ ಅಳತೊಡಗಿದ್ದಳಾಕೆ.

"ಆಗಿ ಹೋದುದನ್ನು ಸ್ಮರಿಸಿಕೊಂಡು ದುಃಖಿಸುವುದರಿಂದ ಏನೂ ಲಾಭವಿಲ್ಲ. ನಿನಗೆ ತಿಳಿಯದೇ. ನೀನಿನ್ನೂ ಹಸುಳೆಯೇ ದೇವರ ದಯೆಯಿಂದ ನಿನಗೆ ಒಳ್ಳೆಯ ವರನೇ ಸಿಕ್ಕಿದ್ದಾನೆ."

'ಮಾವ....'

ತನ್ನ ಅಂತರಂಗದ ವ್ಯಥೆಯನ್ನು, ಎದೆಗುದಿಯನ್ನು ವನಜಾಕ್ಷಿ ವ್ಯಕ್ತಗೊಳಿಸಲಾರದಾದಳು.

'ಅಳಬೇಡ'— ಮಾವ ಸಮಾಧಾನಗೊಳಿಸತೊಡಗಿದರು ಆದರಿಂದ ವನಜಾಕ್ಷಿಯು ಕಂಬನಿ ಸುರಿಸುವುದೇನೋ ನಿಂತಿತು. ಆದರೆ ಅವಳ ವ್ಯಥೆಮಾತ್ರ ಎಳ್ಳಷ್ಟೂ ಕಡಿಮೆಯಾಗಿರಲಿಲ್ಲ. ಒಳಗಿಂದೊಳಗೇ ಅವಳ ಹೃದಯ ಗೋಳಿಡುತ್ತಿತ್ತು. ಅಳುತ್ತಿತ್ತು. ಒಂದೇ ಒಂದು ಬಾರಿಯೂ ನಡುಮನೆಯಲ್ಲಿ ಕುಳಿತಿದ್ದ ಯುವಕನನ್ನು ಆಕೆ ಕಂಡಿಲ್ಲ. ಸುರೂಪಿಯಂತೆ; ಸರಳ ಪ್ರವೃತ್ತಿಯವನಂತೆ, ಧನಿಕನೂ ಹೌದು'—ಎಂದು ಅತ್ತೆ ಹೇಳಿದ್ದಾರೆ. ಇದಕ್ಕಿಂತ ಹೆಚ್ಚಿಗೆ ಇನ್ನೇನು ಬೇಕು?

ಆದರೆ ವಿವಾಹವೆಂದರೆ ಶರೀರದ ವಿಕ್ರಯವಲ್ಲ. ಇದೇನು ಎಮ್ಮೆಯ ವ್ಯಾಪಾರವೇ? ಮದುವೆಯೆಂದರೆ ಎರಡು ಹೃದಯಗಳ ಮಿಲನ.

ಈ ಮದುವೆಗೆ ತಾನು ಒಪ್ಪಿಗೆ ನೀಡುವುದಿಲ್ಲವೆಂದು ವನಜಾಕ್ಷಿ ನಿರ್ಧರಿಸಿದಳು.

"ಮಾವನೊಡನೆ ಸ್ಪಷ್ಟವಾಗಿತಿಳಿಸಿ ಬಿಡುತ್ತೇನೆ.'

ಆದರೆ ಅವಳಿದನ್ನು ವಿರೋಧಿಸಬಲ್ಲಳೇ?

ಅಷ್ಟು ಧೈರ್ಯ ಅವಳಲ್ಲಿದೆಯೇ?

ವಿರೋಧಿಸಿದರೂ ಮಾವ ಅದನ್ನು ಸಹಿಸಿಯಾರೇ?

'ಏಕೆ?'—ಎಂದು ಪ್ರಶ್ನಿಸಿದರೆ ಏನೆಂದು ಉತ್ತರಿಸಲಿ?

ಆಕೆಯ ತಲೆ ಕಾವೇರಿತು.

ದೇವರ ಹೊರತು ತನಗೆ ಬೇರಾವ ಆಶ್ರಯದಾತರೂ ಇಲ್ಲ ತನ್ನ ಮೇಲೆ ಕರುಣೆ ತೋರಿಸಬಲ್ಲವನು ಸದ್ಯಕ್ಕೆ ದೇವರೊಬ್ಬನೇ.

ಓ ದೇವರೇ!

ಹತ್ತಿರದಲ್ಲಿಯೇ ಶ್ರೀ ಕೃಷ್ಣನ ಗುಡಿಯಿದೆ. ಅವನ ಚರಣಗಳಿಗೆ ವಂದಿಸಿ, ತನ್ನ ಅಳವನ್ನು ತೋಡಿಕೊಂಡು, ಪರಿಹಾರ ನೀಡೆಂದು ಪ್ರಾರ್ಥಿಸುವ ಹಂಬಲದಿಂದ ಆಕೆ ದೇವಸ್ಥಾನದತ್ತ ಹೊರಡಲಣಿಯಾದಳು

"ಅತ್ತೇ, ದೇವಸ್ಥಾನಕ್ಕೆ ಹೋಗಿ ಬರುತ್ತೇನೆ."

ಅತ್ತೆ ಬೇಡವೆನ್ನಲಿಲ್ಲ. ತನ್ನ ತಲೆಯನ್ನಲ್ಲಾಡಿಸಿ ಸ್ವೀಕೃತಿ ಸೂಚಿಸಿದಳು.

ವನಜಾಕ್ಷಿ ಸಜಲನಯನಳಾಗಿ ದೇವಸ್ಥಾನದತ್ತ ಹೆಜ್ಜೆ ಹಾಕಿದಳು.



NAVAYUGA 17-12-1964
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೭-೧೨-೬೪ರಿಂದ ೨೩-೧೨-೬೪ರ ವರೆಗೆ

೧. ಮೇಷ.

ನಿಮ್ಮ ಕರ್ಮಲಾಭಪತಿಯೂ ಶನೈಶ್ಚರನು ಬಲಿಯನಾಗಿ ಲಾಭದಲ್ಲಿದ್ದ ಕಾರಣ ನಿಮ್ಮ ಯೋಜನೆಗಳು ಉದ್ಯಮಗಳು ಸಫಲಗಳಾಗುವುವು. ಧನಾಗಮವು ಕೂಡ ಚೆನ್ನಾಗಿರುವುದು. ಆದರೆ ಗೃಹತಾಪತ್ರಯಗಳು ವಿಶೇಷವಾಗಿರುವುದರಿಂದ ದುಡಿಮೆಯು ಸಾಲದೆ ಸಾಲ ಮಾಡುವ ಪ್ರಸಂಗವೂ ಬಂದೀತು. ರಾಜಕೀಯ ವ್ಯವಹಾರಗಳಿಂದ ದೂರವಾಗಿರಿ. ಕಫ ದೋಷದಿಂದಾಗಿ ಆರೋಗ್ಯಕ್ಕೆ ಧಕ್ಕೆಯಿದೆ. ತಾ, 19, 20ರಲ್ಲಿ ವಿಜಯ ಧನಲಾಭಗಳಿವೆ.

೨. ವೃಷಭ

ದೈವದಿಂದು ತೀರ ವಿಮುಖವಾಗಿರುವದು, ಧನ ಸುಖಪತಿಗಳಾದ ಬುಧ ರವಿಗಳು ಅಷ್ಟಮದಲ್ಲಿದ್ದು ಲಾಭಪತಿಯೂದ ಬೃಹಸ್ಪತಿಯೂ ವ್ಯಯಗತನಾದ ಕಾರಣ ಮಾನಸಿಕ ಚಿಂತೆ ಆರ್ಥಿಕ ದುರವಸ್ಥೆಗಳು ನಿಮ್ಮನ್ನಿಂದು ಸದಾ ಪೀಡಿಸಲಿವೆ. ಶತ್ರು ಜನರ ಪೀಡೆಯು ಅಸಹನೀಯವೆನಿಸುವದು. ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚಿನ ನಷ್ಟವುಂಟಾದೀತು. ಗೃಹತಾಪತ್ರಯವು ಹೆಚ್ಚಿಲ್ಲವಾದರೂ ಸ್ವಜನರ ವಿರೋಧವಧಿಕವಾದೀತು. ಕಫ ವಾತ ದೋಷಕ್ಕೆ ಗುರಿಯಾದ ನಿಮಗೆ ತಾ. 17, 18, 21, 22 ಈ ದಿನಗಳು ಹೆಚ್ಚಿನ ದೋಷಕಾರಿಗಳೆನಿಸವು.

೩. ಮಿಥುನ

ಕೈ ಕೆಸರಾದರೆ ಬಾಯಿ ಮೊಸರಾದೀತೆಂಬ ಗಾದೆಯಂತೆ ನಿಮ್ಮ ಪರಿಶ್ರಮವು ಪೂರ್ಣ ಫಲಪ್ರದವಾಗುವದು. ವೈದ್ಯ, ವಕೀಲ ಮತ್ತು ನಿತ್ಯೋಪಜೀವಿ ವರ್ಗಕ್ಕೆ ಈ ಕಾಲವು ಅನುಕೂಲವಾಗಿ ಪರಿಣಮಿಸಲಿದೆ. ಆಕಸ್ಮಿಕ ಪ್ರವಾಸದಿಂದ ಧನವ್ಯಯ ದೇಹಾಲಸ್ಯಗಳು ಕಂಡುಬರಲಿವೆ ಮಕ್ಕಳ ಆರೋಗ್ಯದತ್ತ ಹೆಚ್ಚಿನ ಗಮನವಿರಿಸಿರಿ. ತಾ 19, 20, 23 ಈ ದಿನಗಳಲ್ಲಿ ಭೋಗ ವಿಜಯ ಧನಲಾಭಗಳಾಗಲಿವೆ.

೪. ಕರ್ಕಟ

ಖರ್ಚಿಗೆ ಸಾಕಷ್ಟು ದುಡಿಮೆಯಿರೋಣದರಿಂದ ನಿಮಗಿಂದಿನ ದಿನಗಳು ಸುಗಮವಾಗಿ ಸಾಗಲಿವೆ, ಕರ್ತವ್ಯದಕ್ಷರಾದ ನಿಮಗೆ ಕೋರ್ಟು ವ್ಯವಹಾರಗಳಲ್ಲಿ ವಿಜಯವು ಲಭಿಸಲಿದೆ. ಆರೋಗ್ಯದಲ್ಲಿ ಪ್ರಗತಿ ವ್ಯಾಪಾರದಲ್ಲಿ ಲಾಭಗಳು ಚೆನ್ನಾಗಿ ಲಭಿಸುವವು. ಮಿತಭಾಷಿಯಾಗಿದ್ದರೂ ವಿನಾ ಕಾರಣ ಕಲಹವಾದೀತು. ಸೇವಕ ಜನತೆಗೂ ಶ್ರಮಜೀವಿಗಳಿಗೂ ಇಂದಿನ ಸಮಯವು ಚೆನ್ನಾಗಿಲ್ಲ. ತಾ. 17, 18, 21, 22 ಈ ದಿನಗಳಲ್ಲಿ ಮಿತ್ರ ಸಮಾಗಮ ಮೃಷ್ಟಾನ್ನ ಭೋಜನವೂ ಲಭಿಸುವದು.

೫. ಸಿಂಹ

ಬಂಧು ಮಿತ್ರರ ನೆರವಿಂದು ನಿಮಗೆ ಚೆನ್ನಾಗಿ ಲಭಿಸುವುದರಿಂದ ರಾಜಕೀಯೋದ್ದೇಶದ ಚಟುವಟಿಕೆಗಳಲ್ಲಿ ನಿಮ್ಮ ಪ್ರಯತ್ನವು ಸಫಲವಾಗುವದು. ಖರ್ಚಿನಸಲುವಾಗಿ ನೀವಿಂದು ಚಿಂತಿಸಬೇಕಾಗಿಲ್ಲ. ಆದರೆ, ಗೃಹತಾಪತ್ರಯಗಳ ದೆಸೆಯಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ಪಿತ್ತ ದೋಷದಿಂದಾಗಿ ಆರೋಗ್ಯಕ್ಕೆ ಧಕ್ಕೆಯಿದೆ. ತಾ 21.22. ರಲ್ಲಿ ಅಧಿಕ ವ್ಯಯ-ಪ್ರವಾಸಗಳುಂಟಾಗುವವು.

೬. ಕನ್ಯಾ

ನಿಮ್ಮ ದ್ವಾದಶಾಷ್ಟಮಗಳಲ್ಲಿ ಅಂಗಾರಕ ಬೃಹಸ್ಪತಿಗಳು ನಿಂತ ಕಾರಣ ಹಲವಾರು ತರದ ಸಮಸ್ಯೆಗಳನ್ನು ನೀವಿಂದು ಎದುರಿಸಬೇಕಾಗಿ ಬರುವದು, ಇಲ್ಲಸಲ್ಲದ ಅಪವಾದಕ್ಕೆ ಗುರಿಯಾಗುವಿರಿ. ಪಿತ್ತದೋಷದಿಂದಾಗಿ ಆರೋಗ್ಯ ಕೆಡಲಿದೆ. ಪ್ರವಾಸದಲ್ಲಿ ಕಷ್ಟನಷ್ಟಗಳಾಗುವವು ಆರ್ಥಿಕ ಬಿಕ್ಕಟ್ಟಿನಿಂದಾಗಿ ಮಾರ್ಯಾದೆಯುಳಿಸಿಕೊಳ್ಳಲು ಕಷ್ಟವಾದೀತು ಆದರೂ ಏನೇ ಬಂದರೂ ಎದುರಿಸಿಯೇ ಸಿದ್ಧ ನೆಂಬ ಧೀರರಾದ ನಿಮಗೆ ತಾ,19ರಿಂದ 22ರ ವರೆಗಿನ ದಿನಗಳು ಅನುಕೂಲವಾಗಿ ಪರಿಣಮಿಸಲಿವೆ,

೭. ತುಲಾ

ಬಹ್ವಂಶ ನಿಮ್ಮ ಬಯಕೆಗಳಿಂದು ನಿರ್ವಿಘ್ನದಿಂದ ನೆರವೇರಲಿವೆ, ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳನ್ನು ಪಡೆವಿರಿ. ಮಾತ್ರವಲ್ಲದೆ ಕೋರ್ಟು ಕಚೇರಿಗಳ ವ್ಯವಹಾರಗಳಲ್ಲೂ ವಿಜಯಿಗಳಾಗುವಿರಿ. ನಿರೀಕ್ಷೆಗಿಂತಲೂ ಅಧಿಕವಾದ ಧನಾಗಮ ವಾಗುವದರಿಂದ ದಿನಗಳನ್ನು ಸುಖಸಂತಸದಿಂದ ಕಳೆವಿರಿ. ತಂದೆ ಮಕ್ಕಳೊಳು ಸೇವಕಸ್ವಾಮಿಯರೊಳು ಮನಸ್ತಾಪವುದಿಸಲಿದೆ.— ವಾರಾಂತ್ಯದ 3 ದಿನಗಳಲ್ಲಿ ಸುಖ ವಿಜಯ ಲಾಭಗಳಿವೆ.

೮. ವೃಶ್ಚಿಕ

ಚಿತ್ತ ಚಾಂಚಲ್ಯವು ವಿಶೇಷವಾಗಿದ್ದರೂ ಹಿಡಿದ ಕಾರ್ಯವನ್ನು ಮಧ್ಯದಲ್ಲಿ ಬಿಡಲಾರಿರಿ. ನಿರಾಮಯವಾದ ಸಂಸಾರದಲ್ಲಿ ಸುಖ ಸಂತಸದಿಂದ ಕಾಲ ಕಳೆವ ನಿಮಗೆ ಬಂಧು ಮಿತ್ರರೊಳು ಪರಸ್ಪರ ಮನಸ್ತಾಪಗಳುದಿಸುವ ಸಂಭವವಿದೆ. ಶತ್ರು ಜನರು ಕೂಡಾ ಶಕ್ತರಿದ್ದರೂ ಕಿರುಕುಳವನ್ನುಂಟುಮಾಡುವರು. ವಿಲಾಸ ಪ್ರಿಯರಾದ ನಿಮಗೆ ತಾ 17-18 23 ಈ ದಿನಗಳು ಅನುಕೂಲವಾಗಿವೆ.

೯. ಧನು

ಪ್ರಬಲವಾದ ಇದಿರಾಳಿಯೂ ಕೂಡ ನಿಮಗಿಂದು ಶರಣು ಬರಲಿರುವನು ಬಂಧುಮಿತ್ರಾದಿ ಪರಿವಾರ ವರ್ಗದವರಿಂದ ಕೂಡಿದ ನಿಮಗಿಂದು ಸರ್ವತ್ರ ವಿಜಯಶ್ರೀ ಒಲಿವಳಾದರೂ ರಾಜಕೀಯ ರಂಗದಲ್ಲಿ ಪರಾಭವವುಂಟಾದೀತು. ಆರ್ಥಿಕ ವಿಚಾರದಲ್ಲಿಂದು ನೀವು ನಿಶ್ಚಿಂತರಾಗುವಿರಿ, ವ್ಯಾಪಾರ ಉದ್ಯೋಗಾದಿ ವ್ಯವಹಾರಗಳಲ್ಲಿ ನಿರೀಕ್ಷೆಗಿಂತಲೂ ಹೆಚ್ಚಿನ ಫಲ ಲಾಭವಿದೆ, ವಾರಾದಿಯ 4 ದಿನಗಳಲ್ಲಿ ಗೃಹಸುಖ, ಧನಲಾಭ ಮಾನಸನ್ಮಾನಗಳು ದೊರೆಯಲಿವೆ.

೧೦. ಮಕರ

ಲಾಭಗತ ಶುಕ್ರನೋರ್ವನನ್ನುಳಿದು ಇತರ ಗ್ರಹಮಂಡಲವೇ ನಿಮ್ಮ ಮೇಲೆ ಮುನಿದಿರುವ ಕಾರಣ ನಿಮ್ಮ ಸಂಕಲ್ಪಗಳಿಂದು ತಿರುಕನ ಕನಸಿನಂತಾಗಲಿವೆ. ವಿರೋಧಿ ವರ್ಗದವರು ನಿಮ್ಮ ಧನಮಾನಗಳಿಗೆರವಾಗಲಿರುವರು. ಕಾಸು ಇಲ್ಲದವರು ಕಲ್ಲಿಗೆ ಸಮ ನೆಂಬ ಗಾದೆಯಂತೆ ಜನತೆಯ ತೆಗಳಿಕೆಗೆ ಗುರಿಯಾಗುವಿರಿ ಮಾತನಾಡಿದವರೊಡನೆ ಕಲಹವಾಗುವದು, ತಾ. 19ರಿಂದ 22ರ ವರೆಗಿನ ದಿನಗಳು ಇತರ ದಿನಗಳಿಗಿಂತ ಲೇಸು.

೧೧. ಕುಂಭ

ಶಕ್ತಿ ಮೀರಿ ದುಡಿಯುವಿರಾದರೂ ನೀವಿಂದು ನಿಮ್ಮ ಖರ್ಚನ್ನು ನಿರ್ವಹಿಸಲಾರದೆ ಪರರ ಕೂಡೆ ಸಾಲ ತೆಗೆವಿರಿ, ಸಂಸಾರವು ನಿರಾಮಯವಾಗಿದ್ದರೂ ಸತಿಪತಿಗಳಲ್ಲಿ ಕಲಹ ಮನಸ್ತಾಪಗಳುಂಟಾದಾವು ವ್ಯಾಪಾರಿಗಳಿಗೆ ಆಕಸ್ಮಿಕ ನಷ್ಟದ ಯೋಗವಿದೆ. ಪ್ರವಾಸವು ಸುಖಮಯವೂ ಪುಣ್ಯದಾಯಿಯೂಗಿಯೂ ಪರಿಣಮಿಸುವದು. ಶತ್ರು ಕಾಟದಿಂದ ಮುಕ್ತರಾದ ನಿಮಗೆ ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಇಷ್ಟಾರ್ಥಗಳು ಫಲಿಸಲಿವೆ.

೧೨. ಮೀನ

ಗಾಳಿ ಬಂದಾಗ ತೂರಿಕೊಂಡರ್ದ್ವೇ ಬಂತೆಂಬ ಲೋಕೋಕ್ತಿಯಂತೆ ದೈವ ಬೆಂಬಲವಂ ಪಡೆದ ನೀವಿಂದು ಒಂದು ಹಿಡಿ ಮಣ್ಣು ಹಿಡಿದರೂ ಅದು ಹೊನ್ನಾಗಿ ಪರಿಣಮಿಸುವದು, ಸಮಾಜದಲ್ಲಾಗಲಿ ರಾಜಸ್ಥಾನದಲ್ಲಾಗಲಿ ನಿಮ್ಮನ್ನಿಂದು ಇದಿರಿಸುವರಾರೂ ಇರಲಾರರು, ಜನತೆಯ ನಡುವೆ ತಾನೇ ತಾನಾಗಿ ಮೆರೆಯುತಕ್ಕ ನಿಮಗೆ ತಾ. 17, 18, 23 ಈ ಮೂರು ದಿನಗಳು ಸರ್ವಾಭೀಷ್ಟಪ್ರದಗಳೆಂದರೂ ತಪ್ಪಾಗಲಾರವು.

ಉಡುಪಿ ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 47/1964.

1. ಕೆ. ಲಕ್ಷ್ಮಿ ಅಮ್ಮ, 2. ಕೆ ಜಿ. ರಾಘವ ರಾಮ ರಾವ್, 3. ಶಾಕುಂತಲ ಎಸ್. ರಾವ್, 4. ಅಹಲ್ಯ ಜಿ ಭಟ್, 5 ಅನುಸೂಯ ಜಿ. ಭಟ್,—Minors represented by 1st respondent

—ಅರ್ಜಿದಾರರು.

ಮತ್ತು

1. ತುಳಸಿ ಎಸ್. ರಾವ್, 2, ಪಿ. ಜಯಲಕ್ಷ್ಮಿ, 3, ಅರ ಎ, ಆಚಾರ್ಯ 4, ಸಾವಿತ್ರಿ ಬಿ ರಾವ್ —ಎದ್ರಿಯರು

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ.—

ಮೇಲ್ಕಂಡ ಅರ್ಜಿಯು ಒಂದನೆ ಅರ್ಜಿದಾರಳ ಗಂಡ, ವ, ಮಿಕ್ಕ ಅರ್ಜಿದಾರರ ವ ಎದ್ರಿರ ತಂದೆ ತಾ 2-12-1963ರಲ್ಲಿ ಸ್ವರ್ಗಸ್ಥರಾದ ಕೆ. ಜಿ. ಗೋಪಾಲಕೃಷ್ಣ ಭಟ್ಟರಿಗೆ ಅರ್ಜಿಯಲ್ಲಿ ವಿವರಿಸಿದ ಪ್ರಕಾರ ಬರತಕ್ಕ ಡಿಪೊಜಿಟು ಅಮೇಜುಗಳ ವಸೂಲಿ ಕುರಿತು ಅತನ ವಾರೀಸುದಾರರಾದ ಅರ್ಜಿದಾರರು ಮತ್ತು ಎದ್ರಿಯರ ಬಗ್ಗೆ 1ನೆ ಅರ್ಜಿದಾರಳ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅರ್ಜಿ ತಾ. 16-1-1965ಕ್ಕೆ ತನಿಖೆಗೆ ಇಡೋಣಾಗಿಯದೆ. ಆ ಕುರಿತು ಆಕ್ಷೇಪ ಹೇಳತಕ್ಕವರು ಇದ್ರೆ ಸದ್ರಿ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಇವಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು—ಎಂಬ ಸಂಗ್ತಿ ಯೀಮೂಲಕ ಸಮಸ್ತ ಜನರಿಗೆ ತಿಳಿಸೋಣಾಗಿಯದೆ,

By order of the Court.

(Sd) ಶಿರ್ತಾಡಿ ವಿಲಿಯಂ ಪಿಂಟೊ,
B.A., LL.B.
ಅರ್ಜಿದಾರರ ಎಡ್ವಕೇಟರು.

ಉಡುಪಿ, 8-12-64.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆಂಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ ಪ್ರತ್ಯೇಕ)

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction, Madras.

Edited, Printed & Published by K. H. Shetty at the Navayuga Press, Udipi, S. India.

ಸಂಪುಟ ೪೪]   ದಶಂಬರ, ೨೪, ೬೪   [ಸಂಚಿಕೆ ೧೭

Phone No.
ಫೋನ್ ಸಂಖ್ಯೆ: 226

leading nationalist weekly

೨೦
ಪೈಸೆ

ಕಥಾ ಪ್ರಪಂಚ

ಭ್ರಾಂತಿಯೋ? ಹುಚ್ಚೋ?

ಬರೆದವರು
ಎಂ. ಶಾಂತಕುಮಾರಿ, ಮಂಗಳೂರು.

"ಅಲ್ವೇ, ಮತ್ತೇ?...."

"ನೀನೇನನ್ನುತ್ತಿರುವುದೇಂದಾದರೂ ಸರಿಯಾಗಿ ತಿಳಿಸಬಾರದೆ?"

"ಸರಿಯಾಗೀಂದ್ರೇ....? ಇನ್ನೇನು ಡಂಗುರ ಸಾರಿಸಬೇಕೇ? ಒಂದು ಮಾತು ಹೇಳಿದ್ರೆ ತಿಳಿಯುವಷ್ಟಾದರೂ ಬುದ್ಧಿ ಬೇಡವೇ?—ಅಲ್ಲ...., ನಮ್ಮ ರಾಮರಾಯರಿಗೆ, ದಪ್ಪದ ಮನೆ ತಿಪ್ಪಾ ಭಟ್ಟರ ಮಗಳನ್ನು ಕೊಡುವುದೆಂತ ನಿಶ್ಚಯವಾಗಿ ಬಿಟ್ಟಿದೆ! ನೀವಾದರೂ ರಾಮರಾಯರಿಗೆ ತಿಳಿಸಬಾರದಿತ್ತೇ? ಹಗಲು ರಾತ್ರೆ ಅನ್ನದೆ ಅವರ ಮನೆಯಲ್ಲಿ ಎಲೆಯಡಿಕೆ ಜಗಿದು, ಎಲೆ ಆಡುತ್ತಿದ್ದಾರಲ್ಲಾ, ಸ್ವಲ್ಪಾಗಾದ್ರೂ ಹೇಳಿದ್ರೆ ಅವರು ಒಪ್ಪುತ್ತಿರಲಿಲ್ಲ—!"

"ಅಂದ್ರೇ....ನೀನೇನು ಅನ್ನಬೇಕೆಂದಿದ್ದೀಯಂತ? ಸೀತಾಬಾಯಿ ಯೋಗ್ಯ ಹುಡುಗಿ ಅಲ್ಲಂತ ಹೇಳುವುದಕ್ಕಾಗಿ ಹೀಗೆಲ್ಲ ಸುತ್ತಿ ಸುತ್ತಿ ಹೇಳ್ತಿರೋದೇನು ಸುಮ್ಮಾರು! ಅಂತಹ ಹುಡುಗಿ ಸಿಗಬೇಕಾಗಿದ್ರೆ ಸಾವಿರ ವರ್ಷ ತಪಸ್ಸು ಮಾಡಬೇಕು!"

"ಹುಡುಗಿ ಚೆನ್ನಾಗಿಲ್ಲ ಅಂತ ನಾನು ಹೇಳ್ತಿರೋದಲ್ಲ—ಅವಳಲ್ಲಿ ಕೊರತೆ ಕಾಣುವುದೂ ಮೊಸರಲ್ಲಿ ಕಲ್ಲು ಹುಡುಕುವುದೂ ಒಂದೇ! ಆದ್ರೆ!..."

"ಆದ್ರೇ" ಎಂತ ರಾಗ ಎಳೆತಿದ್ದೀಯಲ್ಲ ಮತ್ತೇ....?'

"ನನಗೊಂದು ಹೆದರಿಕೆ—ಅಂದ್ರೆ!.... ಅವಳಮ್ಮ ಗೋಪಮ್ಮನಿಗೆ ಹುಚ್ಚು ಹಿಡಿದು ಅವಳು ಅಪರಲ್ಲೇ ತೀರಿಕೊಂಡಳು. ಅವಳಜ್ಜಿಗೂ ಅದೇ ಗತಿ ಒದಗಿತ್ತಂತೆ! ಆ ಸೀತಾನೂ ಮುಂದೆ....!"

"ಅಯ್ಯೋ ಹಾಳು ಹಂಟೆ! ಅಂತಹ ಅಪಶಕುನನ ಕನಸಿನಲ್ಲಿಯೂ ನೆನೆಸಬಾರದು!"

"ತಪ್ಪಾಯಿತು! ನನಗೇನೋ ಮನಸ್ಸಿನಲ್ಲಿ ಕಂಡಿತು! ರಾಮ ರಾಮ! ನಮ್ಮ ಶತ್ರುಗಳಿಗೂ ಅಂತಹದಾಗಬಾರದಪ್ಪಾ!"

o o o

ಸೀತಾದೇವಿಗೂ ರಾಮರಾಯರಿಗೂ ಮದುವೆಯಾಗಿ ಅವರು ಸೀತಾರಾಮಚಂದ್ರರಂತೆ ಸುಖವಾಗಿದ್ದಾರೆ. ಯಾವುದರಲ್ಲಿಯೂ ಕೊರತೆಯಿಲ್ಲದ ಈ ದಂಪತಿಗಳಿಗೆ ಹೇಳಿಗೆಯಿಲ್ಲದೊಂದೇ ಚಿಂತೆ. ಮದುವೆಯಾಗಿ ಇಂದಿಗೆ ಇಪ್ಪತ್ತು ವರ್ಷಗಳಾಗಿವೆ. ಈ ದೀರ್ಘ ಅವಧಿಯಲ್ಲಿ ಅವರು ಜೀವನದ ಎಲ್ಲ ಸಿಹಿ ಕಹಿಗಳನ್ನು ಅನುಭವಿಸಿ, ಅವುಗಳಲ್ಲಿ ಸಹಭಾಗಿಗಳಾಗಿ, ಯೋಗ್ಯ ದಂಪತಿಗಳಾಗಿದ್ದು ಊರಿಗೇ ಆದರ್ಶವಾಗಿದ್ದರು. ರಾಮರಾಯರದು ಚಿಕ್ಕ ಕುಟುಂಬ. ಅವರು ಮತ್ತು ಅವರ ಹೆಂಡತಿ; ಹೆಂಡತಿಯೊಂದಿಗೆ ತವರು ಮನೆಯಿಂದ ಬಂದ ಗೌರಜ್ಜಿ, ಮನೆಯ ಮಕ್ಕಳ ಬದಲಿಗೆ ಎರಡು ನಾಯಿಮರಿಗಳು, ಅಡಿಗೆಯ ಮನೆಯಲ್ಲಿ ಎರಡು ಬೆಕ್ಕಿನ ಮರಿಗಳು, ಹೊರಗೆ ಅಂಗಳದಲ್ಲಿ ಎರಡು ಪಾರಿವಾಳಗಳು, ಹಟ್ಟಿಯಲ್ಲಿ ಎರಡು ಆಕಳು – ಎಲ್ಲವೂ ಜೋಡಿ, ಜೋಡಿಯಾಗಿದ್ದುವಲ್ಲದೆ ಅವುಗಳ ಕುಟುಂಬ ವೃದ್ಧಿಯಾಗುವ ಯಾವ ಚಿಹ್ನೆಯೂ ಕಂಡು ಬರುತ್ತಿರಲಿಲ್ಲ. ಇಪ್ಪತ್ತು ವರುಷಗಳು....! ಈ ಅವಧಿಯಲ್ಲಿ ಮುತ್ತು ಹಳ್ಳಿಯು ಊರಾಗಿ, ಪೇಟೆಯಾಗಿ ಈಗ ನಗರವಾಗಿದೆ. ಆದರೆ ರಾಮರಾಯರ ಮನೆಯಲ್ಲಿ ಯಾವ ಬದಲಾವಣೆಗಳೂ ಆಗಲಿಲ್ಲ. ಮದುವೆ ಯಾವ ವರ್ಷ ಮದ್ರಾಸಿನಿಂದ ತರಿಸಿದ ಕನ್ನಡಿ ಬಾಗಿಲುಗಳನ್ನು ಬಿಟ್ಟರೆ ಗೋಡೆಗಳು ಸುಣ್ಣವನ್ನು ಕೂಡ ಕಾಣಲಿಲ್ಲ. ಇದಕ್ಕೆ ಮುಖ್ಯ ಕಾರಣವೊಂದೇ! ಅವರಿಬ್ಬರ ಅಭಿಪ್ರಾಯವೂ ಒಂದೇ! ಯಾರಿಗಾಗಿ ನಾವು ಮಾಡಬೇಕು ಎಂಬುದಾಗಿ. ಯಾವ ಕೆಲಸವನ್ನು ಆಲೋಚಿಸುವುವಾಗಲೂ "ಯಾರಿಗಾಗಿ" ಎಂಬ ದೊಡ್ಡ ಪ್ರಶ್ನೆಯೊಂದು ಭೂತಾಕಾರವಾಗಿ ಎದ್ದು ನಿಂತು ಅವರ ಎಲ್ಲ ಹುರುಪನ್ನೂ ಭಸ್ಮೀಭೂತಗೊಳಿಸುತ್ತಿತ್ತು!

ರಾಯರಿಗೆ ಐವತ್ತು ದಾಟಿತು. ಸೀತಾದೇವಿಗೆ ನಾಲ್ವತ್ತೆರಡು ಅಂದ ಹಾಗೇ. ಆ ವರುಷ ನವರಾತ್ರಿ ಸಮಯ ಗೌರಜ್ಜಿಯ ಉತ್ಸಾಹದಿಂದ ಎಂಬಂತೆ ಪಾರಾಯಣ ಮಾಡಿಸುವುದೆಂತ ರಾಯರು ನಿಶ್ಚಯಿಸಿದ್ದರು. ಬೇಕಾದ ಸಾಮಾಗ್ರಿಗಳನ್ನು ತರಲಿಕ್ಕಾಗಿ ರಾಯರು ಪೇಟೆಗೆ ಹೋಗಿದ್ದಾರೆ. ಗೌರಜ್ಜಿಯು ಬಟ್ಟೆಯ ಮೂಟೆ ಹೊತ್ತುಕೊಂಡು ಹೊಳೆ ಕಡೆಗೆ ಹೋಗಿದ್ದಾಳೆ. ಸೀತಮ್ಮ ಏನೋ ಅಡಿಗೆ ಕೋಣೆಯಲ್ಲಿ ಕೆಲಸದಲ್ಲಿದ್ದವಳು— ಏನೋ ಬೊಬ್ಬೆ ಕೇಳಿ ಹೊರಗೆ ಓಡಿ ಬಂದಳು. "ಯಾರೋ ನಿಮ್ಮ ಯಜಮಾನರನ್ನು ಖೂನಿ ಮಾಡಿದ್ದಾರೆ!" ಎಂಬಂತೆ ಅವರ ಕಿವಿಗೆ ಕೇಳಿಸಿತಂತೆ. ಅದು ಬರಿಯ ಭ್ರಮೆಯಾಗಿತ್ತು. ರಾಜ ಬೀದಿಯಲ್ಲಿ ಓಡಾಡುವ ವಾಹನಗಳ ಕರ್ಕಶ ಶಬ್ದವಾಗಿರಲೂ ಬಹುದು.! ಅವಳು ಕೆಲಸವೆಲ್ಲವನ್ನೂ ಬಿಟ್ಟು ಜೀವದ ಭಯವಿಲ್ಲದೆ ಜಗಲಿಯಿಂದ ಅಂಗಳಕ್ಕೆ ಹಾರಿ ಬೀದಿ ಬದಿಗೆ ಓಡಿ ಹೋದಳು. "ಅಯ್ಯೋ— ಕೊಂದರು! ಕೊಂದರ!" ಎಂದು ಚೀರಿಕೊಂಡು ಗೇಟು ಮುರಿದು ಬೀದಿಗೆ ಓಡಿದಳು. ಪಕ್ಕದ ಮನೆಯ ಚಿಕ್ಕಯ್ಯ ಅವರನ್ನು ಹಿಡಿದು ನಿಲ್ಲಿಸಲು ಧೈರ್ಯ ಸಾಲದೆ ಇನ್ನೂ ಎರಡು ಜನರನ್ನು ಕೂಗಿ ಕರೆದನು.

ದೂರದಲ್ಲಿ ಎತ್ತಿನ ಗಾಡಿಯೊಂದು ನಿಧಾನವಾಗಿ ಹೋಗುತ್ತಿತ್ತು. ಅಗಸನು ಊರ ಹೊಲಸು ಬಟ್ಟೆಗಳ ಮೂಟೆಯನ್ನು ಅದರಲ್ಲಿ ಹೇರಿಸಿ ಹಳ್ಳಿಯ ಕಡೆಗೆ ಹೋಗುವುದನ್ನು ಸೀತಮ್ಮನು ಒಮ್ಮೆ ಕಂಡು, ಚೀರಿಕೊಳ್ಳುತ್ತ ಆ ಗಾಡಿಯನ್ನು ಹಿಂಬಾಲಿಸಿದಳು ತಡೆವರಿಯುತ್ತ ಬೊಬ್ಬಿಡುತ್ತ. "ಅಯ್ಯೋ ನನ್ನ ಯಜಮಾನರನ್ನು ಕೊಂದುಬಿಟ್ಟಿದ್ದಾರೆ. ಬಟ್ಟೆಯಲ್ಲಿ ಕಟ್ಟಿಕೊಂಡು ಹೋಗುತ್ತಾರೆ. ಅವರನ್ನು ಕಾಪಾಡಿರಿ!" ಎಂಬ ಆರ್ತನಾದ ಬೀದಿ ಇಡೀ ತುಂಬಿತು. ಚಿಕ್ಕಯ್ಯನೂ ಅವನ ಜತೆಗಾರರೂ ಓಡುತ್ತ ಸೀತಮ್ಮನನ್ನು ಹಿಂಬಾಲಿಸಿದರು. ಕೊನೆಗೆ ಅವಳನ್ನು ತಡೆಹಿಡಿದರು. ಸೊರಗಿ ಶುಂಠಿಯಾದ ಹೆಂಗಸಿಗೆ ಆಗ ನೂರು ಆನೆಗಳ ಬಲ ಬಂದಂತಿತ್ತು. ಆದರೂ ಮೂವರು ಗಂಡಸರು ಬಹು ಪ್ರಯಾಸಪಟ್ಟು ಹಿಡಿದುಕೊಂಡರು!

"ನನ್ನನ್ನೂ ಅದೇ ಗಾಡಿಯಲ್ಲಿ ಕೊಂಡೊಯ್ಯಿರಿ! ನಾನು ಇನ್ನು ಬದುಕಿ ಫಲವಿಲ್ಲ!"

"ಅಯ್ಯೋ ತಾಯೀ ಅದು ಅಗಸನ ಮೂಟೆ! ರಾಯರು ಪೇಟೆಗೆ ಹೋದವರು ಈಗ ಮನೆಗೆ ಬರುವ ಹೊತ್ತಾಯಿತು! ಸುಮ್ಮನೆ ಏನೇನನ್ನು ತಲೆಯೊಳಗೆ ತುಂಬಿಸಿಕೊಂಡು..."

"ಬಾಯಿ ಮುಚ್ಚಿ! ನನ್ನ ಯಜಮಾನರನ್ನು ನೀವೇ ಕೊಂದಿದ್ದೀರಿ! ಈಗ ಸು

(ಹದಿನೈದನೇ ಪುಟ ನೋಡಿರಿ)

ಕ್ಷಯರೋಗದ ವಿರುದ್ಧ ಧರ್ಮಯುದ್ಧ

ಕೊಡುವಿಕೆಯ ಇತಿಹಾಸದಲ್ಲಿ ಟಿ ಬಿ ಮೊಹರಿನ ಶಕ್ತಿಗೆ ಸರಿಸಾಟಿಯಿಲ್ಲ. ಟಿ ಬಿ ಸಂಸ್ಥೆಗಳ ಕಾರ್ಯಕ್ರಮಗಳಿಗೆ ಆರ್ಥಿಕ ನೆರವು ನೀಡಲಿಕ್ಕೆ ನಿಧಿ ಸಂಗ್ರಹಿಸಲು ಮೊಹರಿಗೆ ಸಾಧ್ಯವಾದ ಶಕ್ತಿ ಮಾತ್ರವಲ್ಲದೆ, ಟಿ ಬಿ ಮೊಹರುಗಳನ್ನು ನೂರಾರು, ಸಾವಿರಾರು ಜನರು ಖರೀದಿಸುವುದರ ಮೂಲಕ ಎಲ್ಲರ ಶತ್ರುವಿನೊಡನೆ ಒಂದಾಗಿ ಕಾದಾಡಿದಂತಾಗುವುದೆಂಬ ಸತ್ಯವಡಗಿದೆ. ಕ್ಷಯರೋಗದ ವಿರುದ್ಧವಾಗಿ ಮುನ್ನಡೆಯುವುದು ಈ ಧರ್ಮಯುದ್ಧದಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ಸೇರಿದ್ದಾಗಿದೆ.

ಇದೀಗ ಕ್ರಿಸ್‌ಮಸ್ ಸಮಯ. ಈ ಸಮಯಾವಕಾಶದಲ್ಲಿ, ಕ್ಷಯರೋಗದಿಂದ ನರಳುವವನ ಗೌರವ ಸಂಕೇತವಾಗಿ ಟಿ ಬಿ ಮೊಹರುಗಳನ್ನು ಕ್ರಿಸ್‌ಮಸ್ ಟಪ್ಪಾಲು, ಗ್ರೀಟಿಂಗ್ ಕಾರ್ಡು ಮತ್ತು ಉಡುಗೊರೆ ಪಾಕೇಟುಗಳಿಗೆ ಅಂಟಿಸುವ ರೂಢಿ ಇದೆ.



ದಯಮಾಡಿ ಅಧಿಕ ಸಂಖ್ಯೆಯಲ್ಲಿ ಟಿ ಬಿ ಮೊಹರುಗಳನ್ನು ಕೊಂಡುಕೊಳ್ಳಿರಿ.

ಒಂದು ಟಿ ಬಿ ಸೀಲಿನ ಬೆಲೆ ಹತ್ತು ಪೈಸೆ ಮಾತ್ರ.

ಮೊಹರುಗಳು ದೊರೆಯುವ ಸ್ಥಳ— ದಕ್ಷಿಣ ಕನ್ನಡ ಜಿಲ್ಲಾ ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್, ಮಂಗಳೂರು ಮತ್ತು ಅದರ ಬೇರೆ ಬೇರೆ ಏಜನ್ಸಿಗಳು.

15ನೆ ಟಿ ಬಿ ಮೊಹರು ಮಾರಾಟ ಚಳವಳ

(ಟ್ಯುಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, ನ್ಯೂಡಿಲ್ಲಿ ಇವರ ಹೊಣೆಗಾರಿಕೆಗೊಳಪಟ್ಟದ್ದು)

ಸ್ಥಳದಾನ ಮಾಡಿದವರು

The Scientific Fertiliser Co. (Private) Ltd.,
Coimbatore.



Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ನಾಟೀಸ್, ರಿಪೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ' ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ

ಈ ವಾರ ಮುಖಪತ್ರದಲ್ಲಿ:

317ನೇ ರೋಟರಿ ಗವರ್ನರ್

ಡಾ। ಟಿ. ಎಂ. ಎ. ಪೈ

ನವಯುಗ

ಸಂಪುಟ ೪೪	ಉಡುಪಿ	Vol 44
ಸಂಚಿಕೆ ೧೭	೨೪—೧೨—೧೯೬೪	No. 17

ಶಾಸ್ತ್ರಿಯವರ ಪ್ರುಗ್ಗೆ

ಪ್ರಧಾನಿ ಶಾಸ್ತ್ರಿಯವರು ಇತ್ತೀಚೆಗೆ, ಅಂದರೆ, ಈ ತಿಂಗಳ ಮೊದಲ ವಾರದಲ್ಲಿ ಲಂಡನ್ನಿಗೆ ಭೆಟ್ಟಿ ಇತ್ತರು. ಇಂಗ್ಲಿಷ್ ಪ್ರಧಾನಿ ವಿಲ್ಸನರ ಕೂಡೆ ಉಭಯ ದೇಶಗಳ ನಡುವಣ ಪ್ರಶ್ನೆಗಳನ್ನು ಉತ್ತರಿಸಲು ಪ್ರಯತ್ನಿಸಿದರು. ಅಲ್ಲಿಂದ ಅವರು ಮರಳಿ ಬರುತ್ತಲೇ ಶಾಸ್ತ್ರಿಯವರ ಭೆಟ್ಟಿಯ ಶಸ್ವಿಯಾಗಿದೆಯೆಂದು ರಾಜತಾಂತ್ರಿಕ ವಲಯಗಳು ಅಭಿಪ್ರಾಯಪಟ್ಟವು. ತನ್ನ ಸಂದರ್ಶನದ ವೇಳೆ ಅವರು ಒಂದು ಸಲಹೆಯನ್ನು ಮುಂದಿಟ್ಟಿದ್ದರು. ಚೀನವು ಅಣುಬಾಂಬನ್ನು ಸ್ಫೋಟಗೊಳಿಸಿ ಅಣುಶಕ್ತಿ ಹೊಂದಿದ ರಾಷ್ಟ್ರ ಪಂಕ್ತಿಯಲ್ಲಿ ಬಂದು ನಿಂತಿದೆ ಅವರ ಶತ್ರು ವರ್ಗದಲ್ಲಿ ಸೇರಿದ ಭಾರತವು ಅಣುಶಕ್ತಿಯನ್ನು ಕಲ್ಯಾಣಕಾರಕಗಳಿಗೆ ಮಾತ್ರ ಬಳಸುವುದಲ್ಲದೆ ಬಾಂಬು ತಯಾರಿಗಲ್ಲವೆಂಬುದನ್ನು ಜಗಜ್ಜಾಹೀರು ಮಾಡಿದೆ; ಇಂದಿಗೂ ಮಾಡುತ್ತಲೂ ಇದೆ. ಒಂದು ವೇಳೆ ಚೀನಾವು ಭಾರತದ ಮೇಲೆ ಅಣುಯುದ್ಧ ಹೂಡಿದರೆ? ಎಂಬ ಪ್ರಶ್ನೆ ಎಲ್ಲೆಲ್ಲೂ ತಲೆಯೆತ್ತಿತ್ತು ಇಂದಿಗೂ ಇದೆ. ಈ ವಿಷಯದಲ್ಲಿ ಶಾಸ್ತ್ರಿಯವರು ಲಂಡನ್ನದಲ್ಲಿ ನೀಡಿದ ಸಲಹೆಯು ಇಂದು ಬಹು ಪ್ರಾಮುಖ್ಯವನ್ನು ಪಡೆದಿದೆ.

ಅಣ್ವಸ್ತ್ರ ಹೊಂದಿದ ರಾಷ್ಟ್ರವೊಂದು ಅಣ್ವಸ್ತ್ರ ಹೊಂದದ ಬೇರೊಂದು ರಾಷ್ಟ್ರದ ಮೇಲೆ ಆಕ್ರಮಣ ಮಾಡಿದಾಗ, ಅಮೇರಿಕೆ ಮತ್ತು ಸೋವಿಯತ್ತುಗಳು ಒಂದಾಗಿ ರಕ್ಷಣೆ ನೀಡುವ ವ್ಯವಸ್ಥೆ ಮಾಡಿಕೊಳ್ಳುವುದರ ಸಾಧ್ಯತೆಯ ಬಗ್ಗೆ ಶಾಸ್ತ್ರಿಯವರು ವಿಲ್ಸನರಲ್ಲಿ ಪ್ರಸ್ತಾಪಿಸಿದ್ದರು. ವಿಲ್ಸನರಿಗೂ ಈ ಸೂಚನೆಯು ಸರಿಯೆಂದು ಕಂಡಿರಬೇಕು ಪ್ರಪಂಚದ ಅಣುಶಕ್ತಿವಂತ ರಾಷ್ಟ್ರಗಳಲ್ಲಿ ಅತೀವ ಹಿರಿಯವಾದ ಈ ಎರಡು ಒಂದಾದರೆ, ಅಣುಯುದ್ಧ ನಡೆಯುವ ಸಂಭವವೂ ಇಲ್ಲ; ಯುದ್ಧದ ಭೀತಿಯೂ ದೂರವಾಗುವುದು ಭಾರತದ ಮೇಲೆ ಚೀನಾವು ಅಣ್ವಸ್ತ್ರ ಉಪಯೋಗಿಸುವ ಸಾಧ್ಯತೆಯೂ ಕಡಿಮೆಯಾಗುವುದು. ತನ್ಮೂಲಕ ಅಣ್ವಸ್ತ್ರವಿಲ್ಲದೇನೇ ಭಾರತವು ಸ್ವರಕ್ಷಣೆ ಮಾಡಿಕೊಳ್ಳಲು ಸಮರ್ಥವಾಗುವುದು. ಆಮೇಲೆಯೇ ವಿಲ್ಸನರು ಈ ಪ್ರಸ್ತಾಪವನ್ನು ಅಮೇರಿಕನ್ ಅಧ್ಯಕ್ಷ ಜಾನ್ಸನರನ್ನು ಕಂಡಾಗ ಮಾಡಿದರು. ಜಾನ್ಸನರು ಸಾಧ್ಯವಾಗವುದಾದರೆ, ಇಂತಹ ಯೋಜನೆಯನ್ನು ತಿರಸ್ಕರಿಸಲಾರರು. ಇಲ್ಲಿ ನಾವು ಮುಖ್ಯವಾಗಿ ನೋಡಬೇಕಾದುದು ರಷ್ಯದ ನಿಲುಮೆಯನ್ನು ಶಾಸ್ತ್ರಿಯವರು ಭಾರತ ಮತ್ತು ಚೀನಾಗಳನ್ನು ಗುರಿಯಾಗಿಟ್ಟುಕೊಂಡೇ ತನ್ನ ಸೂಚನೆಯನ್ನು ಮುಂದಿಟ್ಟಿದ್ದಾರೆ; ವಿಲ್ಸನ್ ಮತ್ತಿತರ ಪರಿಸ್ಥಿತರೆಲ್ಲರೂ ಇದನ್ನು ಅರಿತಿದ್ದಾರೆ. ರಶ್ಯನ್ ನಾಯಕರನ್ನು ನೋಡಲಿರುವ ವಿಲ್ಸನ್ ಅಲ್ಲಿಯೂ ತನ್ನ ಪಾತ್ರವನ್ನು ಸರಿಯಾಗಿ ಆಡಿಯಾರು. ಈ ದಿಸೆಯಲ್ಲಿ ಸೋವಿಯತ್ತಿನ ಮನೀಷೆಯನ್ನು ಅವರು ತಿಳಿದುಕೊಂಡು, ಸೂಕ್ತ ಕ್ರಮ ಕೈಗೊಂಡಾರು. ಒಂದು ವೇಳೆ ಶಾಸ್ತ್ರಿ ಸಲಹೆಯು ಕೈಗೂಡಿತೆಂದರೆ, ಅದು ದೊಡ್ಡ ವಿಜಯವೆನ್ನಲೇ ಬೇಕು; ಹಾಗಾಗಲಿ

ಕಲಕತ್ತೆಯಲ್ಲಿ ಬ್ರಿಟಿಷ್ ರಾಯಭಾರಿಯು ಮಾತನಾಡುತ್ತ ಬ್ರಿಟನ್ನಿನ ಅಣ್ವಸ್ತ್ರ ಪಡೆಯ ಒಂದು ಭಾಗವನ್ನು ನ್ಯಾಟೋದಿಂದ ಹೊರಗಿಡುವ ವಿಚಾರವನ್ನು ಬಹಿರಂಗಗೊಳಿಸಿದರು. ಭಾರತ ಸರಕಾರವು ಬಯಸಿದರೆ, ಬ್ರಿಟನ್ನು ಅಣುಬಾಂಬರುಗಳನ್ನು ನೀಡಬಹುದೆಂಬುದನ್ನೂ ತಿಳಿಸಿದರು. ಭಾರತಕ್ಕೆ ಹಲವಾರು ವಿಧಗಳಿಂದ ಸಹಾಯ ಮಾಡುತ್ತ ಬರುತ್ತಿರುವ ಬ್ರಿಟನ್ ತನ್ನ ಆರ್ಥಿಕ ಇತಿಮಿತಿಗಳಿಗೊಳಪಟ್ಟು, ಮುಂದೆಯೂ ಸಹಾಯ ಮಾಡುವುದೆಂದವರು ಹೇಳಿದರು. ಬ್ರಿಟನ್ನು ನ್ಯಾಟೋದಿಂದ ಪಡೆವ ವಿಮಾನ ಬಾಂಬರಗಳನ್ನು ಹೊರಗಿಡಲು ಮಾಡಿದ ನಿರ್ಧಾರವು ಶಾಸ್ತ್ರಿಯವರೊಡನೆ ಆದ ಭೆಟ್ಟಿಯ ಫಲವಿದ್ದರೂ ಇರಬಹುದು. ಮೂವತ್ತೈದು ವರ್ಷಗಳಿಗೆ ಮೊದಲು ಹಿಟ್ಲರನು ಯುರೋಪನ್ನು ಭಯಗ್ರಸ್ತಗೊಳಿಸುತ್ತಿದ್ದಾಗ ಬ್ರಿಟನ್ನಿನ ಅಂದಿನ ಪ್ರಧಾನಿ ಸ್ಟಾನ್ಲಿಬಾಲ್ಡ್ವಿನ್ನರು ತಮ್ಮ ದೇಶದ ಸರಹದ್ದು ರೈನ್ ನದಿಯೆಂದು ಅಂದಿದ್ದರು. ಹಾಗೆಯೇ ಇಂದು ವಿಲ್ಸನರು ಚೀನೀಯ ಅಣುಬಾಂಬಿನ ಭೀತಿಯು ವಿಷ್ವ್ಯಾದ್ಯಂತ ಹಂಚಿರುವಾಗ ತಮ್ಮ ಸೀಮೆಯು ಹಿಂದೂ ಸಾಗರವೆನ್ನಲೂ ಹಿಂಜರಿಯುಲಾರರು. ಲೇಬರ್ ಸರಕಾರವು ಟೋರಿಗಿಂತ ಕಾಮನ್‌ವೆಲ್ತ್ ದೇಶಗಳಿಗೆ ಹೆಚ್ಚು ಉದಾರವಾಗಿರುವುದಕ್ಕೆ ಇತಿಹಾಸವೇ ಸಾಕ್ಷಿ. ಹಾಗಿರುವಾಗ ವಿಲ್ಸನ್ ಸರಕಾರವು ಉದಾರ ನೀತಿಯನ್ನು ಅವಲಂಬಿಸುವುದು, ಅದೂ ಭಾರತದ ಬಗ್ಗೆ, ತೀರ ಸ್ವಾಭಾವಿಕವಾದುದು. ಪ್ರಧಾನಿ ಶಾಸ್ತ್ರಿಯವರ ಮುಗ್ಗೆ ಊರಿ ಬಂದಿದ್ದಾರೆ, ಅದೀಗ ತ್ರಿಶಂಕುವಿನಲ್ಲಿ ತೂಂಗಾಡ ತೊಡಗುತ್ತಿದೆ; ಮತ್ತು ಮೇಲೆ ಹಾರಿ ಗುರಿ ಸಾಧಿಸುವುದೋ ಅರ್ಧದಿಂದಲೇ ಪಾತಾಳಕ್ಕೆ ಉರುಳಿ ಬೀಳುವುದೋ ಇನ್ನು ಒಂದೆರಡು ತಿಂಗಳುಗಳಲ್ಲಿ ತಿಳಿಯಬಹುದು.

ವಚನಸುಧೆ

ಕಿಂ ಪುಣ್ಯಮಿತಿ?

ಬ್ರಹ್ಮ ಚರ್ಯಮಿತಿ॥

ಕಿಂ ಲೌಕ್ಯಮಿತಿ?

ಬ್ರಹ್ಮಚರ್ಯಮೇವೇತಿ॥

(ಗೋಪ. ಬ್ರಾಹ್ಮಣ ೨—೧೫)

೦ ಬ್ರಹ್ಮಚರ್ಯವೇ ಪುಣ್ಯ, ಲೋಕಹಿತಕಾರಕ.

೦೦ ತನ ವೀರ್ಯರಕ್ಷಣೆ ಮತ್ತು ಜ್ಞಾನ ಸಂಪಾದನೆಯು ಬ್ರಹ್ಮಚರ್ಯವ್ರತದಲ್ಲಿ ಅಂತರ್ಗತವಾಗಿವೆ. ಈ ಬ್ರಹ್ಮ ಚರ್ಯದಿಂದಲೇ ಪುಣ್ಯಪ್ರಾಪ್ತಿ, ಲೋಕಹಿತ. ವೀರ್ಯನಾಶದಿಂದ ಬಲ, ಬುದ್ಧಿ, ಆರೋಗ್ಯ, ದೀರ್ಘಾಯು, ತೇಜ ಮೊದಲಾದುವು ನಷ್ಟವಾಗುವವು ಸರ್ವಸುಖ ಮೂಲವೂ ಸರ್ವಾನಂದಮಯ ದ್ವಾರವೂ ಆದ ಬ್ರಹ್ಮಚರ್ಯವನ್ನು ಎಲ್ಲರೂ ಪಾಲಿಸಬೇಕು.

ಬೆಂಕಿ ಹಚ್ಚಬಾರದು

ಜೀವನ ಮಟ್ಟವೇರುವುದು ಬರೇ ಕೆಲವೊಂದು ವರ್ಗದವರಿಗಲ್ಲ. ವಸ್ತುಗಳ ಬೆಲೆಯು ದಿನದಿಂದ ದಿನಕ್ಕೆ ಏರುತ್ತಿರುವುದು ಮಾತ್ರವಲ್ಲ, ಆವಶ್ಯಕ ಪದಾರ್ಥಗಳು ಮಾರುಕಟ್ಟೆಯಿಂದಲೇ ಮಾಯವಾಗುತ್ತಿವೆ. ಸರಕಾರವು ಗಿರಣಿಗಳಿಗೆ ಬರುವ ಭತ್ತದಲ್ಲಿ ಅರ್ಧಾಂಶವನ್ನು ತನಗೆ ಮಾರಬೇಕೆಂದು ಆಜ್ಞೆ ಹೊರಡಿಸಿದ್ದೇ ತಡ ಇದ್ದ ಬಿದ್ದ ಅಕ್ಕಿಯೂ ಮಂಗ ಮಾಯ. ಇದು ಯಾಕೆ ಹೀಗಾಗಬೇಕು? ವ್ಯಾಪಾರಿಗಳಿಗೆ ಲಾಭಬಡಕತನವನ್ನು ಬಿಟ್ಟುಕೊಡಬೇಕೆಂಬ ಉಪದೇಶವನ್ನು ಉಪದೇಶಿಸುತ್ತಲೇ ಇದ್ದಾರೆ ಮಂತ್ರಿಗಳು. ತಾವು ನೀಡಿದ ಉಪದೇಶ ಯಾವ ಪರಿಣಾಮವನ್ನು ಬೀರಿತು ಎಂದು ಅವರು ಅರಿಯರು. ಕಳೆದ ಆರು ತಿಂಗಳುಗಳಿಂದಲೂ ವ್ಯಾಪಾರಿ ವರ್ಗವು ಶಾಸ್ತ್ರವನ್ನು ಓದುತ್ತ ನಾಳ ಹಾಕುತ್ತಿದ್ದುದನ್ನು ಎಲ್ಲರೂ ಅರಿತಿದ್ದಾರೆ. ಸರಕಾರವು ಇನ್ನೂ ಇನ್ನೂ ಉಪದೇಶ ನೀಡುತ್ತ ಕೂತುಕೊಂಡರೆ, ಜನ ರೊಚ್ಚಿಗೆದ್ದಾರು. ಆಹಾರ ಧಾನ್ಯಗಳ ಪೂರೈಕೆಯಿಲ್ಲದೆ ಕಾರವಾರದ ಹೋಟೇಲುಗಳು ಬಂದಾದಂತೆಯೇ ರಾಜ್ಯದ ಎಲ್ಲೆಡೆಯೂ ಆದೀತು. ಮನೆಮನೆಯಲ್ಲೂ ಒಲೆಯುರಿಸದಿರುವ ಪರಿಸ್ಥಿತಿ ಬಂದೀತು. ಹೊಟ್ಟೆ ಹಸಿವಿರುವಾಗ, ಅನ್ನ ಕೊಡಬೇಕಲ್ಲದೆ ಭಾವಿ ಆಶೆಯನ್ನಲ್ಲ; ಭರವಸೆಯ ಮಾತುಗಳನ್ನಲ್ಲ. ಇಂದು ಬದುಕಿದ ಬಳಿಕ ತಾನೇ ನಾಳೆಯ ಚಿಂತೆ? ಈ ಬಗ್ಗೆ ವಿಳಂಬ ಮಾಡದೆ ಸರಕಾರ ಸೂಕ್ತ ಕ್ರಮ ಕೈಗೊಳ್ಳಬೇಕು; ಪರಿಸ್ಥಿತಿ ಕೈಮೀರುವುದಕ್ಕೆ ಮೊದಲೇ ಎಚ್ಚರಾಗಬೇಕು. ಬೆಂಕಿ ಹಚ್ಚಿ ಆ ಮೇಲೆ ನೀರಿಗಾಗಿ ಓಡಾಡತೊಡಗಿದರೆ ಹೇಗೆ?

ನರಸಣ್ಣನ ಸರಸ



"ಮುಸ್ಸ ಪ್ರದೇಶದಲ್ಲಿ ಇದ್ದಲು ಶೋಧವಾಗಿದೆಯಂತೆ ನೋಡು..'

"ಹಾಗಾದ್ರೆ ನಮ್ಮ ಲಾರೀನೆಲ್ಲಾ ಅಲ್ಲಿಗೇ ಸಾಗ್ಸಿ ಹಾಕೋಣ ಸಾಮಿ ..."

"ಯಾಕೋ, ಅದ್ರಿಂದೇನು ಲಾಭ?'

"ಅಲ್ಲ ಸಮುದ್ರ ಭಾರೀ ದೂರಾ ಅದೇಂತಲ್ರಿ... ಮೈಲೇಜು ಭಾರೀ ಸಿಗುತ್ತೆ....'

ಭವಿಷ್ಯತ್ತಿನ ಚಿಂತೆ



ಗಂಡಹೆಂಡಿರ ತಲೆಹರಟೆ

"ಕೇಳಿದೆಯೇನೇ, ಮದ್ರಾಸು ಅತ್ತ ಕಡೆ ಎರಡು ಕಡೆ ಮದುವೆ ನಿಂತೋಯ್ತಂತೆ!"

"ಅದೇನು ಆಶ್ಚರ್ಯದ ಸುದ್ದೀಂತ ಹೇಳ್ತೀರೊ? ವರದಕ್ಷಿಣೇದ್ದೋ ಚಿನ್ನಾ ಬಣ್ಣದ್ದೋ, ಬೀಗರ ಉಪಚಾರದ ವಿಷಯದ್ದೋ ಹೀಗೆ ಯಾವುದಾದರೋ ಕಾರಣದಿಂದ ಮದುವೇ ನಿಂತ್ಹೋಗಿರಬೋದು. ಮುಖ್ಯ ಬ್ರಹ್ಮ ಬರಹ ಕೂಡಿ ಬಂದ್ರೆ...."

"ಬ್ರಹ್ಮ ಬರಹ ಅಲ್ವೇ; ನೀನು ಹೇಳಿದ ಯಾವ ಕಾರಣವೂ ಅಲ್ಲ. ಮದುವೆಗೆ ಬೇಕಾದ ಅಕ್ಕೀ ಸಕ್ರೆ ಸ್ಯಾಂಕ್ಷನ್ ಮಾಡ್ಲಿಕ್ಕೇ ಸಾಧ್ಯವಿಲ್ಲಾಂತ ಹೇಳಿದರಂತೆ ಅಧಿಕಾರಿಗಳು. ಅದಕ್ಕೇ ನಿಂತು ಹೋಯ್ತಂತೆ ಮದುವೆ"

"ಅಯ್ಯಯ್ಯೋ! ಇದೇನೂಂದ್ರೆ, ಆಶ್ಚರ್ಯವಾಗಿದೆಯಲ್ಲಾ?"

"ಮದುವೆ ಹ್ಯಾಗೋ ಏನೋ ಮಾಡ್ತಾರೇ ಬಿಡ್ನಿ. ಬ್ರಹ್ಮ ಬರೆದ ದಕ್ಕಿಂತಲೂ, ರೇಷನ್ನಿನ ಬರಹ ಕೂಡಿ ಬಂದ್ರೇನೇ ಇನ್ನು ಮದುವೇ ಮುಂಜೀ ಎಲ್ಲಾನೂ"

"ಅಂದ ಹಾಗೆ ಬೆಂಗಳೂರು, ಮದರಾಸುಗಳಲ್ಲೆಲ್ಲಾ ರೇಷನ್ ಬಂತಂತಲ್ಲಾ. ಇನ್ನು ಮೇಲೆ ನಾವು ಅಲ್ಲಿಗೆ ಹೋಗೋದೇ ಫಜೀತಿಗೆ ಒಳಗಾಗುತ್ತಲ್ರೀ? ನಾವು ಹೋಗಿ ಅಲ್ಲಿರುವ ನಮ್ಮವರಿಗೇ ಕಷ್ಟ ಕೊಟ್ಟ ಹಾಗಾಗುತ್ತಲ್ಲಾರ್ರಿ? ನಮ್ಮ ಚಿಕ್ಕಮ್ಮ ...."

"ಹಾಗಾಗೋದೇನು ಬಂತು. ಕಷ್ಟವೇ ಸರಿ. ಅದೇ ಕತೆ ನಮಗೂ ಬಂದೀತು ಬಿಡ್ನಿ. ದೇಶದಲ್ಲಿ ಪೂರಾ ಕುಟುಂಬ ಕಾರ್ಡು ಎಂಬ ರೇಶನ್ ಪದ್ಧತಿ ತರಬೇಕೂ ಅಂತ ಮಾತುಕತೆ ನಡೀತಾ ಇದೆ. 'ತೆಂಕಣ ಗಾಳಿಯಾಟ'ದ ಹಾಗೆ ಬರಲಿದೆ ಅಹಹಾ ದೂರದಿ ಬರಲಿದೆ— ಅನ್ನಬೇಡಾ. ಬಂತೈ ಬಂತೈ ಬೀಸುತ ಬಂತೈ—ಅಂತಲೇ ಅನ್ನಬಹುದು. ಅದರ ಆಗಮನದ ರಭಸ ಕೇರಳದಲ್ಲಿ ನಡೆದದ್ದೆಲ್ಲಾ ಗೊತ್ತಿದೆಯಷ್ಟೇ?"

"ಹೌದೂಂದ್ರೆ, ಅದೇ ಮೊದಲು ಯುದ್ಧಕಾಲದಲ್ಲಿ ಬಂದಿತ್ತಲ್ಲಾ, ಒಬ್ಬೊಬ್ಬರಿಗೆ ಆರು ಔನ್ಸು ಅಕ್ಕೀ ಅಂತ. ಈಗಲೂ ಅಷ್ಟೇನಾ?"

"ಯುದ್ಧ ಕಾಲದಲ್ಲಿ ಹದ್ನಾರು ಔನ್ಸಿನಿಂದ ಪ್ರಾರಂಭ ಮಾಡ್ಸಿ ಇಳಿಸುತ್ತಾ ಆರು ಔನ್ಸಿನಲ್ಲಿ ಮುಕ್ತಾಯ ಮಾಡಿದರು. ಆದರ ಮುಂದಿನ ಹಂತವಾದ ನಾಲ್ಕು ಔನ್ಸಿನಿಂದಲೇ ಮತ್ತೆ ಪ್ರಾರಂಭಿಸುವುದೇ ರೇಶನ್ ನ್ಯಾಯ. ಅಸಲು ಹೆಚ್ಚಿಗೆ ಧಾನ್ಯ ಇಲ್ದಿದ್ರಿಂದ ತಾನೇ ರೇಷನ್ನಿನ ವ್ಯವಹಾರ? ಹಿಂದೆ ರೇಷನ್ ತೆಗೆದು ಹಾಕುವಾಗ ಇದ್ದವರಿಗೆ ಹೇಗೂ ಇದರ ಅಭ್ಯಾಸವಿದ್ದೇ ಇರುತ್ತೆ. ಆ ಮೇಲೆ ಹುಟ್ಟಿದವರಿಗೆ ರಕ್ತಗತವಾಗಿಯೇ ಬಂದಿರುತ್ತದಲ್ಲಾ? ಒಂದು ವೇಳೆ ಈ ನಾಲ್ಕು ಔನ್ಸು ನಮಗೆ ಸಾಲದು; ಒಮ್ಮೆಲೇ ಬೆಕ್ಕಿನಷ್ಟೇ ಹೇಗೆ ತಿಂದಿರುವುದು ಅಂತ ಜನರೆಲ್ಲಾ ಹಸಿದ ಬೆಕ್ಕಿನ ಹಾಗೇ ಕೂಗಾಡಿದಾಗ ಅರ್ಧ, ಕಾಲೂ ಅಂಶ ಹೆಚ್ಚಿಗೂ ಕೊಟ್ಟಾರು ಬಿಡ್ನಿ. ಹೆದರಬೇಡ. ಜನರನ್ನು ಹಸಿವೆಯಿಂದಂತೂ ಖಂಡಿತಾ ಕೊಲ್ಲೋದಿಲ್ಲ"

"ಯಾಕೆ ಹೀಗೆ ಬಂತ್ರೀ? ಸುಜಲಾಂ ಸುಫಲಾಂ ದೇಶದಲ್ಲಿ ಹೀಗಾಗುವುದೂ ಅಂದ್ರೆ ಆಶ್ಚರ್ಯವಲ್ಲವೇನ್ರೀ?"

"ನಿನ್ನ ಸುಜಲಾಂ ಸುಫಲಾಂ ಎಲ್ಲಾ ನಲ್ವತ್ತು ವರ್ಷಗಳ ಹಿಂದಿನ ಕತೆಯಾಯ್ತೇ. ಈಗ ಜನಸಂಖ್ಯೆ ವಿಪುಲಾಂ ಆಗಿ ಹೋಗಿದೆಯಲ್ಲಾ! ಇನ್ನೂ ವಿಪುಲಾಂ ಆದ್ರೆ ಹ್ಯಾಂಗೋ ಅಂತ ಭಯ ಹುಟ್ಟಿದ್ರಿಂದ ತಾನೇ ಕುಟುಂಬ ನಿಯಂತ್ರಣ ಪದ್ಧತಿ ಜನರಿಗೆ ಬಂದು? ಈ ರೇಷನಿಂಗೂ ಕುಟುಂಬ ನಿಯಂತ್ರಣವೂ ಜತೆ ಜತೆಯಾಗಿ ಸೇರಿಕೊಂಡ್ರೇನೇ, ಹ್ಯಾಗೋ ಮುಂದೆ ಸಮಸ್ಥಿತಿಗೆ ಬಂದೀತು ದೇಶ. ಬರಬೇಕು"

"ಏನು ಬಂದೀತು ಮಣ್ಣು! ನಿಮ್ಮ ಕುಟುಂಬ ನಿಯಂತ್ರಣಾನ್ನ ಬೆಂಕಿಗೆ ಹಾಕಿ. ಒಂದೇ ಹೆರಿಗೇಲಿ ಎರಡು ಮೂರು ಮಕ್ಕಳನ್ನು ಹಡಿಯುವ ಸುದ್ದಿ ಆಗಾಗ ಬರುತ್ತಾ ಇದೆಯಲ್ಲ ಪೇಪರಿನಲ್ಲಿ? ಓದುವಾಗ ನಾಚಿಕೆಯಾಗುತ್ತೆ. ಪೇಪರಿನವರಿಗೆ ಗೊತ್ತಾಗದ ಮೂಲೇ ಮುದುಕಿನಲ್ಲಿ ಏನೇನು ಹುಟ್ಟುತ್ತೋ!"

'ಹೆದರಬೇಡವೆ! ಹಾಗೆಲ್ಲಾ ಅಪರೂಪದ ಸುದ್ದಿ ಯಾವಾಗಲೂ ಇದ್ದದ್ದೇ."

"ಏನು ಇದ್ದದ್ದೋ! ಈಗೀಗ ಸ್ವಲ್ಪ ಹೆಚ್ಚಾಗಿದೆಯಾಗ ಇದೇಂದ್ರೆ ನೀವು ಹೇಳಿದ ಹಾಗೆ ಮದುವೇನೆ ನಿಂತ್ಹೋದರೆ ಮಾತ್ರ ಕುಟುಂಬ ನಿಯಂತ್ರಣ ಸಾರ್ಥಕವಾದೀತು.."

"ಮದುವೆ ನಿಂತ್ಹೋಗೋದೂ ಅಂತ ಸತ್ಯ ಬರಲಿಕ್ಕಿಲ್ಲ. ಆಡಂಬರ ಮಾಡಿ ಮದುವೆ ನಡೆಸಲಿಕ್ಕೆ ಆಗೋದಿಲ್ಲಾಂತೆ. ಒಳ್ಳೇದು ತಾನೆ? ಊರಿಗೆಲ್ಲಾ ಇದೇ ಪರಿಸ್ಥಿತಿ ಬಂದು ಬಿಟ್ರೆ, ಯಾರಾದರೂ ದೂರುತ್ತಾರೆಂಬ ಭಯವೂ ಇರೋದಿಲ್ಲ. ನೋಡು ಎರಡು ಕಡೇಯಿಂದಲೂ ನಾಲ್ ನಾಲ್ಕು ಜನ ಯಾವುದೋ ಒಂದು ಗುಡಿಯಲ್ಲಿ, ಅಥವಾ ಒಂದು ಮಂಟಪದಲ್ಲಿ ಅಂತ ಇಟ್ಕೊಳೋ, ಮಾಂಗಲ್ಯ ಸೂತ್ರಧಾರಣೆ ಮಾಡಿಸಿಬಿಡು, ಮಂತ್ರ ಹೇಳಿದ ಪುರೋಹಿತನಿಗಿಷ್ಟು ದಕ್ಷಿಣೆ ಕೊಟ್ರೆ ಮದುವೆಯಾಗುವುದಿಲ್ಲವೆ?

ಬರೆದವರು: "ನವಗಿರಿನಂದ"

ಮುಖ್ಯ ಮುಖ್ಯದ ಕೆಲವರ ಸಾಕ್ಷಿ ಹಾಕಿಸಿ ಒಂದೆರಡು ಫೋಟೋನೂ ಹಿಡಿಸಿಬಿಟ್ರೆ, ಕಾನೂನು ಬದ್ಧವೂ ಆಯ್ತಲ್ಲ. ಅದು ಸಾಲದಿದ್ರೆ ಮದುವೇ ರಿಜಿಸ್ಟ್ರಿ ಆಫೀಸೂ ಉಂಟು. ಇನ್ನೇನಾಗಬೇಕಂತೆ ಮದುವೆಗೆ?"

"ಉಂ! ನಿಮ್ಗೆ ಹೀಗೂ ಆಗುತ್ತೋ ಏನೋ?"

"ನೀನೊಬ್ಬಳು! ಈಗಲೇ ಹೀಗಾಗಲಿಕ್ಕೆ ಶುರುವಾಗಿದ್ದು ಗೊತ್ತೆ? ಎಷ್ಟು ಮಂದಿಗೆ ರಿಜಿಸ್ಟ್ರೀ ಮದುವೆಯಾಗಿಲ್ಲ? ಇದರ ಮೇಲೆ ಸಾಮೂಹಿಕ ಮದುವೆಗಳೂ, ಉಪನಯನಗಳೂ ನಡೆದಿವೆಯಲ್ಲಾ? ಬಡವರಿಗೆಲ್ಲ ಇಷ್ಟು ಒಳ್ಳೆಯದು! ಕಷ್ಟಪಟ್ಟು, ಹೊಟ್ಟೆ ಬಾಯಿ ಕಟ್ಟಿ ಸಂಪಾದಿಸಿದ್ದನ್ನೆಲ್ಲ ಒಂದೇ ದಿನದ ಮದುವೇಲಿ ಧಾಂಧೂಂ ಮಾಡಿ ಹಾರಿಸುವುದು ಯಾಕೇಂತ? ದುಡ್ಡಿದ್ದವರಿಗೆ ಖರ್ಚುಮಾಡಲು ನೂರಾರು ದಾರಿಯಿದೆ. ಬೇಕಾದರೆ ಆಮಂತ್ರಿತರಿಗೆಲ್ಲಾ ಊಟದ ಬದಲಿಗೆ ದುಡ್ಡು ಕೊಟ್ಟು ಕಳಿಸಲಿ. ಮುಖ್ಯ ಅಕ್ಕಿಯಿಲ್ಲ! ಊಟವಿಲ್ಲ. ಹುಂ— ಬೇರೆ ಬೇಕಾದ್ದು ನೋಡು. ನಾಲ್ಕು ದಿನ ಏನೋ ಎಂತೋ ಎನಿಸಬಹುದು ಮತ್ತೆ ಅಭ್ಯಾಸವಾಗುತ್ತೆ. ಅದೇ ಒಂದು ಪದ್ಧತಿ ಆಗುತ್ತೆ."

"ಹಾಗಾದ್ರೆ ಒಂದು ವೈದಿಕ ಬಾಕಿ, ಶ್ರಾದ್ಧ ಅಂತ; ಅಗ ಹ್ಯಾಂಗೆ?"

"ಹ್ಯಾಗಾಂದ್ರೆ ಎಲ್ಲಕ್ಕೂ ಲೆಕ್ಕ ಪತ್ರ ಆಗಬೇಕು. ಅರ್ಜಿ ಬರೆದು ಪರ್ಮಿಶನ್ ತಕೊಂಡು ನಡೆಸಬೇಕು!"

"ಪರವಾಯಿಲ್ಲ. ಅಷ್ಟಾದರೂ ದಾರಿ ಉಂಟಲ್ಲ"

"ಆದರೆ ಅದು ಕಷ್ಟದ ದಾರಿ ಕಣೇ. ಇಂಥಾ ಅರ್ಜಿ ಹಿಡಿದುಕೊಂಡು ಎಷ್ಟೋ ಮಂದಿ ಬಂದಿರ್ತಾರೆ ಅಂದುಕೋ. ಒಬ್ಬನಿಗೆ ನೆಂಟರು ಬರುವ ಅರ್ಜಿ, ಒಬ್ಬನಿಗೆ ಮದುವೇ ಅರ್ಜಿ, ರೇಶನ್ ವರ್ಗಾವಣೆ ಅರ್ಜಿ, ವೈನ್ ಹೇಜರ್ ಆದ ಅರ್ಜಿ, ಸತ್ತ ಕರ್ಮದ ಅರ್ಜಿ, ಹಬ್ಬ ವೈಭೋಗದ ಅರ್ಜಿ ಹೀಗೆ ಎಷ್ಟೋ ಜನರು. ನಾವೂ ಅವರ ಕ್ಯೂನಲ್ಲಿ ನಿಂತು ಅರ್ಜಿ ಸಲ್ಲಿಸಿ, ಸ್ಯಾಂಕ್ಷನ್ ಪಡೆಯುವುದರೊಳಗೆ ಸಾಕೋ ಸಾಕಾಗಿ ಹೋಗುತ್ತೆ. ಅದರಲ್ಲಾ ಅಕ್ಕೀ ಕ್ಯೂ, ಸಕ್ರೇ ಕ್ಯೂ, ಸಜ್ಜಿಗೆ ಕ್ಯೂ, ಗೋದಿ ಕ್ಯೂ, ಅಂತ ಬೇರೆ ಬೇರೆ ಪೇಟೆಯುಂಟು. ಇಷ್ಟೆಲ್ಲಾ ಆಗಿ ಒಂ

(ಹದಿನಾರನೇ ಪುಟನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. % p.a.	7ರಿಂದ 11 ತಿಂಗಳು. % p.a.	12ರಿಂದ 23 ತಿಂಗಳು. % p.a.	24ರಿಂದ 35 ತಿಂಗಳು. % p.a.	36ರಿಂದ 47 ತಿಂಗಳು. % p.a.	48ರಿಂದ 59 ತಿಂಗಳು. % p.a.	60ರಿಂದ 83 ತಿಂಗಳು % p.a.	84ರಿಂದ 120 ತಿಂಗಳು % p.a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ. 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ:-	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.

[ಶೆಡ್ಯೂಲ್ಡ್ ಬ್ಯಾಂಕ್]

ರಿಜಿಸ್ಟರ್ಡ್ ಆಫೀಸು:— ಕೋರ್ಟು ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

ಮರಳಿ ಚೈನಿ ಅಣುಗುಂಡು

ಭಾರತದ ಲೋಕಸಭೆಯಲ್ಲಿ

ಬರೆದವರು ಶ್ರೀ ಶಿವಶಂಕರ

ಕಮ್ಯೂನಿಸ್ಟ್ ಚೈನೀಯರು ಪರೀಕ್ಷೆ ನಡೆಸಿದ ಅಣುಗುಂಡು ಭಾರತದ ಲೋಕಸಭೆಯಲ್ಲುಂಟು ಮಾಡಿದ ಪ್ರತಿಕ್ರಿಯೆಯ ಸ್ಥೂಲ ಪರಿಚಯ ಕಳೆದ ವಾರ ಆಗಿರುತ್ತದೆ. ಪ್ರಧಾನಿಯವರು ತಮ್ಮ ದೃಢ ನಿರ್ಧಾರವನ್ನು ಜನತೆಗೆ ತಿಳಿಸಿದ ಮೇಲೆ ವಿಷಯ ಅಲ್ಲಿಗೇನೇ ಮುಗಿದಿತ್ತು. ಅಂತಹ ದುಃಸ್ಥಿತಿ ಬಂದೊದಗಿದರೂ ಭಾರತವು ಅಣುಗುಂಡನ್ನು ತಯಾರಿಸುವುದೇ ಇಲ್ಲವೆಂಬುದನ್ನು ಪ್ರಧಾನಿಯವರ ಸ್ಪಷ್ಟಪಡಿಸಿರುವರು. ಹಾಗಿದ್ದರೂ ಅಣುಗುಂಡು ಬೇಕೆನ್ನುವವರ ಸೊಲ್ಲಡಗಿರುವುದಿಲ್ಲ. ಚಿಕ್ಕ ಸಂದರ್ಭ ಸಿಕ್ಕಿದರೂ ಸಾಕು, ಜನರಿಗೆ ಮನ ಒಪ್ಪಿಸಲು ಅವಕಾಶ ಸಿಕ್ಕಿದಂತೆ, ಬೇಕೆನ್ನುವವರು ಒಡನೆ ತಮ್ಮ ಸ್ವರವನ್ನೆತ್ತುತ್ತಾರ. ಆದರೆ ತಮ್ಮ ಅಭಿಪ್ರಾಯಕ್ಕೆ ಅವರನ್ನು ಒಪ್ಪಿಸಲು ಪ್ರಧಾನಿಯವರಿಗೆ ಸಾಧ್ಯವಾಗಿಲ್ಲ. ಸಂಬಂಧ ಸ್ಪಷ್ಟವಾಗುತ್ತದೆ. ಎಲ್ಲರನ್ನೂ ಎಲ್ಲರಿಂದಲೂ, ಎಲ್ಲಾ ಬಗೆಯಲ್ಲಿ ಒಪ್ಪಿಸಲು ಸಾಧ್ಯವಾಗದ ವಿಷಯವೇನೋ ಸತ್ಯ. ಆದರೆ ಪ್ರಶ್ನೆ, ಪದೇ ಪದೇ ಅಣುಗುಂಡುತ್ಪಾದನೆಯ ಆಶೆಯು ಒಳ್ಳೆಯಲ್ಲಿ ಪ್ರಧಾನಿಯವರ ಮೇಲೆ ಚಿಗುರನ್ನು ಹುಟ್ಟಿಸುತ್ತಿದೆ.

ಅಣುಗುಂಡುತ್ಪಾದನೆಯ ಸಮರ್ಥಕರಿಗೆ ಲೋಕಸಭೆಯಲ್ಲಿ ಇನ್ನೊಂದು ಸಂದರ್ಭ ಸಿಕ್ಕಿತು. ಸರಕಾರೇತರರು ವಿಷಯ ಮಂಡನೆಯ ಸಂದರ್ಭದಲ್ಲಿ ಭಾರತೀಯ ಜನಸಂಘದ ಸದಸ್ಯ ಶ್ರೀ ಹುಕುಂ ಚಂದ ಕಛವಾಯಿಯವರ ನಿರ್ಣಯಕ್ಕೊಂದು ಅವಕಾಶ ಸಿಕ್ಕಿತು. ಅದಕ್ಕೆ ಭಾರತೀಯ ಜನಸಂಘದವರಲ್ಲದೆ ಸ್ವತಂತ್ರ ಪಕ್ಷದವರೂ ಸ್ವತಂತ್ರ ಸದಸ್ಯರೂ ಸಮ್ಮತಿ ಸೂಚಿಸಿರುವರು, ಕಾಂಗ್ರೆಸ್ಸಿಗರೂ ಬೆಂಬಲವಿತ್ತಿದ್ದಾರೆ. ಭಾರತೀಯ ಜನಸಂಘದ ಪಕ್ಷದಿಂದ ಶ್ರೀ ರಾಮಚಂದ್ರ ವಿಟ್ಟಲ ಬಡೆಯವರೂ, ಸ್ವತಂತ್ರ ಪಕ್ಷದ ಪರವಾಗಿ ಸರ್ವಶ್ರೀ ಯಶಪಾಲ ಸಿಂಘ ಹಾಗೂ ಕರಣಿ ಸಿಂಘ, ಸ್ವತಂತ್ರ ಸದಸ್ಯರ ಸಾಲಿನಿಂದ ಶ್ರೀ ಪ್ರಕಾಶವೀರ ಶಾಸ್ತ್ರಿಯವರೂ ವಾದಿಸಿದವರು. ಕಾಂಗ್ರೆಸ್ ಸದಸ್ಯ ಶ್ರೀ ಕಮಲನಾಥ ತಿವಾರಿಯವರೂ ಅವರೊಂದಿಗೆ ಸೇರಿಕೊಂಡಿದ್ದರು.

"ಭಾರತೀಯ ಸರಕಾರವು ಅಣ್ವಸ್ತ್ರಗಳನ್ನು ತಯಾರಿಸಬೇಕೆನ್ನುವುದು ಈ ಸಭೆಯ ಅಭಿಪ್ರಾಯವಿದೆ"ಎನ್ನುವುದು ಶ್ರೀ ಹುಕುಂ ಚಂದ ಕಛವಾಯಿಯವರು ತಂದಿದ್ದ ನಿರ್ಣಯವಾಗಿತ್ತು. ಅದಕ್ಕೆ ಜನತೆಯ ಪೂರ್ಣ ಬೆಂಬಲವಿದೆಯೆಂದೂ ಅವರು ಹೇಳಿದರು.

ಕಳೆದ ಸಲ ವಾದದ ನಡುವೆ ಪ್ರವೇಶಿಸಿದ ಪ್ರಧಾನಿಯವರು ಈ ಸಲ ಪ್ರಾರಂಭದಲ್ಲೇ ಭಾರತೀಯ ಜನಸಂಘದ ಶ್ರೀ

(ಹನ್ನೆರಡನೇ ಪುಟ ನೋಡಿರಿ)



ನೀವೂ ತಿಳಿಯಿರಿ

ಅಂಚೆಯ ಕರ್ಮಕತೆ

ಬರೆದವರು

ಶ್ರೀ ನೀ. ರೋಹಿದಾಸ ಕಾಮತ್.

ಆಧುನಿಕ ಯುಗದಲ್ಲಿ ಅಂಚೆಕಟ್ಟೆಯು ಮಹತ್ವದ ಪಾತ್ರ ವಹಿಸಿದೆಯೆನ್ನಬಹುದು. ಅದೆಷ್ಟೋ ದೂರದ ತನ್ನ ಬಂಧುವಿನ ಪತ್ರವನ್ನು ಕಂಡಾಗ ಯಾರ ಮನಸ್ಸಿಗೆ ಆಹ್ಲಾದವಾಗಲಾರದು? ಮಾನವನ ಹಲವಾರು ಅನ್ವೇಷಣೆಗಳಲ್ಲಿ ಸುವ್ಯವಸ್ಥಿತ ರೀತಿಯ ಅಂಚೆ ವ್ಯವಸ್ಥೆಯು ಕೂಡಾ ಒಂದು. ಕೇವಲ ಪತ್ರ ಮುಖೇನ ಒಬ್ಬನೊಂದಿಗೆ ಸಂಬಂಧವನ್ನಿಟ್ಟುಕೊಳ್ಳುವುದೆಂದರೆ ನಿಜಕ್ಕೂ ಅಂಚೆಯ ವ್ಯವಸ್ಥೆಯ ಸುಧಾರಣೆಯೇ ಕಾರಣ. ಇಂದು ಅಂಚೆಕಟ್ಟೆಯೆಂಬುದು ಸರ್ವ ಸಾಮಾನ್ಯವಾಗಿದೆ. ಆದರೆ ಅದೊಂದು ಕಾಲದಲ್ಲಿ ಅಂಚೆ ಕಟ್ಟೆಯ ಕುರಿತು ಜನರು ಕುತೂಹಲ ತೋರಿಸುತ್ತಿದ್ದರು. ಆಗಿನ್ನೂ ಭಾರತದಲ್ಲಿ ಯೋಗ್ಯ ಅಂಚೆ ವ್ಯವಸ್ಥೆ ಆಗಿರಲಿಲ್ಲ. ಟಪ್ಪಾಲನ್ನು ಒಂದು ಕಡೆಯಿಂದ ಇನ್ನೊಂದೆಡೆಗೆ ಒಯ್ಯುವುದೆಂದರೆ ಅದೊಂದು ದುಸ್ಸಾಧ್ಯವಾದ ಕೆಲಸವಾಗಿತ್ತು. ಟಪಾಲು ವಾಹಕನು ಒಂದು ಕಡೆಯಿಂದ ಇನ್ನೊಂದೆಡೆಗೆ ಕಾಲ್ನಡೆಯಲ್ಲೇ ಮೈಲುಗಟ್ಟಲೆ ಚೀಲವನ್ನು ಹಿಡಿದು ಓಡಬೇಕಾಗಿತ್ತು. ಅದೇ ಕೆಲಸವನ್ನು ಇಂದು ರೈಲು ಹಾಗೂ ವಿಮಾನಗಳು ಮಾಡುತ್ತಿವೆ.

ಮೊತ್ತ ಮೊದಲು ಟಪ್ಪಾಲು ವ್ಯವಸ್ಥೆಯನ್ನು ಭಾರತಕ್ಕೆ ತಂದವರು ವಾರನ್ ಹೇಸ್ಟಿಂಗ್. ೧೭೭೪ನೇ ಇಸವಿಯಲ್ಲಿ ಈಸ್ಟ್ ಇಂಡಿಯಾ ಕಂಪೆನಿಯವರು ತಮ್ಮ ಸ್ವಯಂ ಲಾಭಕ್ಕಾಗಿ ಟಪ್ಪಾಲು ಕಟ್ಟೆಯನ್ನು ತೆರೆದಿದ್ದರು. ಜನರು ಯೋಗ್ಯವಾದ ಶುಲ್ಕವನ್ನು ತೆತ್ತು ಟಪ್ಪಾಲಿನ ಉಪಯೋಗ ಪಡೆಯುತ್ತಿದ್ದರು. ಆದರೆ ಬಡವನಿಗೆ ನಿಲುಕದ ಶುಲ್ಕವನ್ನು ಈಸ್ಟ್ ಇಂಡಿಯಾ ಕಂಪೆನಿಯವರು ಹೇರಿದ್ದರು. ಹಲವಾರು ರಾಜಮಹಾರಾಜರುಗಳು ತಮ್ಮ ಉಪಯೋಗಕ್ಕಾಗಿ ಟಪ್ಪಾಲು ವ್ಯವಸ್ಥೆಯ ಕ್ರಮವನ್ನು ಸ್ವೀಕರಿಸಿಕೊಂಡಿದ್ದರು. ಕುದುರೆಗಳ ಮೂಲಕ ಪತ್ರವನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಕೊಂಡು ಹೋಗುವ ಕ್ರಮವು ರಾಜರ ಕಾಲದಲ್ಲಿ ಇತ್ತು. ಮಹಮ್ಮದ್ ಬಿನ್ ತಗ್ಲಕನ ಕಾಲದಲ್ಲಿ ಯೋಗ್ಯವಾದ ಟಪ್ಪಾಲು ವ್ಯವಸ್ಥೆಯಿತ್ತೆಂಬುದು ವಿದೇಶೀ ಲೇಖಕನಾದ ಇಬ್ಬನ್ ಬಟೂಟನ ಲೇಖನಗಳಿಂದ ತಿಳಿಯುತ್ತದೆ. ೧೯ನೇ ಶತಮಾನದಲ್ಲಿ ಭಾರತಕ್ಕೆ ಆಗಮಿಸಿದ ಈಸ್ರಮಾಸಿಗನು ಭಾರತದ ಅಂಚೆ ವ್ಯವಸ್ಥೆಯನ್ನು ಕಂಡು ಆ ಕಾಲದಲ್ಲಿ ಮೈಲಿಗೊಬ್ಬರಂತೆ ಅಂಚೆ ವಾಹಕರು ಇದ್ದರು. ಅಲ್ಲದೆ ಪ್ರತಿ ಮೂರು ಮೈಲಿಗೊಂದರಂತೆ ಹಳ್ಳಿ, ಆ ಹಳ್ಳಿಯ ಹೊರಪ್ರದೇಶದಲ್ಲಿ ಪಹರೆಯವ ನಿರುತ್ತಾನೆ. ಈ ಪಹರೆಯವನು ಅಂಚೆ ವಾಹಕನ ಬರವಿಗಾಗಿ ಕಾಯುತ್ತಿರುತ್ತಾನೆ. ಅಂಚೆ ವಾಹಕನು ಚೀಲದೊಂದಿಗೆ ಬಂದೊಡನೆ ಆತನಿಂದ ಚೀಲವನ್ನು ಪಡೆದು ಇನ್ನೊಂದೆಡೆಗೆ ಅದನ್ನು ಒಯ್ಯುತ್ತಿದ್ದನು. ಆತನ ಕೈಯಲ್ಲಿ ಒಂದು ಬೆತ್ತ, ಅದರ ತುದಿಗೆ ಗಂಟೆ. ಈ ಗಂಟೆಯು ಸದ್ದು ಮಾಡುತ್ತಾ ಆತನು ಮುಂದೆ ಸಾಗುವಾಗ ಜನರು ನಿಂತು ನೋಡುವ ದೃಶ್ಯ ಅದ್ಭುತವಾದುದು" ಎಂದು ಹೇಳಿದ್ದಾನೆ. ಈ ವ್ಯವಸ್ಥೆಯಿದ್ದ ಕಾರಣಕ್ಕಾಗಿಯೇ ರಾಜರು ಬಹು ಕ್ಷಿಪ್ರವಾಗಿ ಪತ್ರ ಪಡೆಯುತ್ತಿದ್ದರು ಎಂದು ಹೇಳಿದ್ದಾನೆ.

ಕಾಲ ಕ್ರಮೇಣ ಚರ್ಮದ ಚೀಲದೊಳಗೆ ಪತ್ರವನ್ನು ಹಾಕಿ ಆ ಚೀಲವನ್ನು ಬೆನ್ನ ಮೇಲೆ ಹಾಕಿಕೊಂಡು ಹೊತ್ತು ಹೋಗುವ ಕ್ರಮ ಬಂತು. ಡಗ್‌ಡಗಿವಾಲ ಎಂದು ಕರೆಯುವ ಇವರು ೮ ಮೈಲಿಗೊಬ್ಬರಂತೆ ಬದಲಾವಣೆಯಾಗುತ್ತಿದ್ದರು. ಕೈಯಲ್ಲಿ ದೀಪ ಹಾಗೂ ಡೋಲನ್ನು ಹಿಡಿದು ಅದನ್ನು ಬಾರಿಸುತ್ತಾ ಮುಂದೆ ಸಾಗಬೇಕಾಗಿತ್ತು. ಕ್ರೂರ ಮೃಗಗಳ ಹಾವಳಿಯಿಂದ ತಪ್ಪಿಸಲು ಡೋಲನ್ನು ಬಾರಿಸುವ ಕ್ರಮವಿತ್ತು. ಕೆಲವೊಮ್ಮೆ ಇವರು ಬಿಲ್ಲು ಬಾಣಗಳನ್ನು ಹಿಡಿದೇ ಹೋಗಬೇಕಾಗಿತ್ತು. ಹುಲಿ ಕರಡಿಗಳ ಬಲಿಗೆ ಬಿದ್ದ ಈ ಡಗ್‌ಡಗಿವಾಲರ ನಿದರ್ಶನಗಳೆಷ್ಟೋ ಇವೆ. ಹಜರಿ ಬಾಗ್ ಜಿಲ್ಲೆಯಲ್ಲಿ ಒಮ್ಮೆ ಡಗ್‌ಡಗಿ ವಾಲರು ಹೋಗುತ್ತಿರುವಾಗ (ಕಲ್ಕತ್ತಾದಿಂದ ಅಲ್ಲಹಾಬಾದಿಗೆ ಹೋಗುವ ದಾರಿಯಲ್ಲಿ) ಇವರು ಹುಲಿಗಳ ಬಾಯಿಗೆ ಸಿಕ್ಕಬೇಕಾಗಿತ್ತು. ವರ್ಷಂ ಪ್ರತಿ ಅದೆಷ್ಟೋ ಮಂದಿ ಈ ರೀತಿ ಕ್ರೂರಮೃಗಗಳ ಬಾಯಿಗೆ ತುತ್ತಾಗಿದ್ದರು. ಆದರೆ ಟಪ್ಪಾಲು ಮುಟ್ಟಿಸದೆ ಗತ್ಯಂತರವಿರಲಿಲ್ಲವಾದ ಕಾರಣ ಆ ದಾರಿಯಿಂದಾಗಿ ಹೋಗಬೇಕಾಗಿತ್ತು.

ಅಂಚೆ ವಾಹಕರಲ್ಲಿ ಹೆಚ್ಚಿನವರು ಗುಡ್ಡ ಕಾಡಿನ ನಿವಾಸಿಗಳು. ಕ್ರೂರ ಮೃಗಗಳಿಗೆ ಹೆದರದೆ ಅದರೊಡನೆ ಕೆಲವೊಮ್ಮೆ ಸೆಣಸಾಡಬೇಕಾಗುವ ಸಂದರ್ಭ ಬಂದಾಗ ಸೆಣಸಾಡಿ ಮುಂದೆ ಹೋಗುತ್ತಿದ್ದರು. ಇಷ್ಟು ಸಾಹಸ ಕಾರ್ಯ ಮಾಡಿ ತಮ್ಮ ಕೆಲಸವನ್ನು ಮಾಡುತ್ತಿದ್ದ ಈ ಡಗ್‌ಡಗಿವಾಲಾ 'ಅಂಚೆವಾಹಕ'ರ ಸಂಬಳ ಎಷ್ಟು ಗೊತ್ತೇ? ಕೇವಲ 12 ರೂ. ತಿಂಗಳೊಂದಕ್ಕೆ ರೂ. ೧೨. ಆ ಕಾಲದಲ್ಲಿ ನಿಜಕ್ಕೂ ಅತ್ಯಲ್ಪವಾಗಿತ್ತು. ಇವರ ಕೆಲಸವು ತುಂಬಾ ಅಪಾಯದ್ದಾಗಿತ್ತು. ಜೀವನದ ಹಂಗು ತೊರೆದೇ ಕೆಲಸ ಸಾಗಿಸಬೇಕಾದ ಪ್ರಮೇಯವಿತ್ತು. ಮೇಲಾಗಿ ಹಲವಾರು ದರೋಡೆಗಾರರ ಬಲಿಗೆ ಬೀಳಬೇಕಾಗಿ ಬಂದ ಅದೆಷ್ಟೋ ಸಂದರ್ಭಗಳು ಅಂಚೆಯ ಇತಿಹಾಸದಲ್ಲಿ ನಾವು ಕಾಣುತ್ತೇವೆ. ಉದಾಹರಣೆಗಾಗಿ ೧೮೦೮ರಲ್ಲಿ ಕಾನ್ಪುರ ಮತ್ತು ಫತ್ತೇಘರ್ ನಡುವೆ ಟಪ್ಪಾಲು ದರೋಡೆ ಮಾಡುವವರು ತಂಡ ಈ ಅಂಚೆವಾಹಕರನ್ನು ಮುತ್ತಿತ್ತು.

ಕಾಲ ಗತಿಸಿದಂತೆ ಅಂಚೆ ವ್ಯವಸ್ಥೆಯಲ್ಲಿ ಸುಧಾರಣೆಯಾಗ ತೊಡಗಿತು. ೧೮೩೨ರಲ್ಲಿ ಕುದುರೆಯ ಮೇಲೆ ಸವಾರಿ ಮಾಡಿ ಅಂಚೆ ಒಯ್ಯುವ ವ್ಯವಸ್ಥೆ ಇತ್ತು. ಆದರೆ ಇದು ಲಾಭದಾಯಕವಾದ ವ್ಯವಸ್ಥೆಯಾಗಿರಲಿಲ್ಲ. ಕಾರಣ ಕುದುರೆ ಹಾಗೂ ಮನುಷ್ಯನಿಗೆ ಆಹಾರವನ್ನು ಒದಗಿಸಬೇಕಾಗಿತ್ತು. ಅಲ್ಲದೆ ಈ ಕುದುರೆಗಳು ಕಲ್ಕತ್ತೆಯಿಂದ ವಾರಣಾಸಿಗೆ ತಲಪಲು ೧೨ ದಿನಗಳು ತಗಲುತ್ತಿದ್ದುವು. ಅಂಚೆ ವಾಹಕನು ಕೇವಲ ೧೦ ದಿನಗಳಲ್ಲಿ ಈ ಕೆಲಸವನ್ನು ಪೂರೈಸುತ್ತಿದ್ದ.

ಮಾನವನ ಮಸ್ತಿಷ್ಕ ಹೊಸ ಹೊಸ ಶೋಧನೆ ಮಾಡುವುದರಲ್ಲೇ ಮಗ್ನನಾಗಿರುತ್ತದೆ. ಅಂತೆಯೇ ಸ್ವಲ್ಪ ಕಾಲದ ವರೆಗೆ ಬ್ರಿಟಿಷ್ ಪದ್ಧತಿಯ ಕುದುರೆ ಬಂಡಿಗಳು ಬಳಕೆಗೆ ಬಂದುವು. ಆದರೆ ಈ ಬಂಡಿಗಳು ರಾಜರಸ್ತೆ ವಿನಹ ಗುಡ್ಡಕಾಡನ್ನು ದಾಟಲು ಅಸಮರ್ಥವಾದುವು. ಇದಕ್ಕಾಗಿ ಅಂಚೆವಾಹಕನ ಸಹಾಯ ಆಗಲೂ ಬೇಕಾಗಿತ್ತು.

೧೮೫೪ನೇ ಇಸವಿಯಲ್ಲಿ ಯೋಗ್ಯವಾದ ಟಪಾಲು ವ್ಯವಸ್ಥೆ ಬ್ರಿಟಿಷರಿಂದ ಸ್ಥಾಪಿಸಲ್ಪಟ್ಟಿತು. ಸಿಕ್ಕಿಂನ ಮುಖಾಂತರ ಲಾಸಾ ಹಾಗೂ ಭಾರತದ ನಡುವೆ ಯೋಗ್ಯ ಅಂಚೆ ವ್ಯವಸ್ಥೆ ಇತ್ತು. ಅಂಚೆ ವಾಹಕರಾಗಿ ಕೆಲವು ಇಂಡಿಯಾ ಹಾಗೂ ಟಿಬೇಟಿಯನ್ನರು ದುಡಿಯುತ್ತಿದ್ದರು.

ಮೊತ್ತಮೊದಲು ರೈಲ್ವೆ ಮೂಲಕ ಟಪಾಲು ಕಳುಹಿಸುವ ಕ್ರಮ ೧೮೬೩ರಲ್ಲಿ ಪ್ರಾರಂಭವಾಯಿತು. ಕಲ್ಕತ್ತಾ ಹಾಗೂ ರಾಣಿಗಂಜ್‌ನ ನಡುವೆ ೧೨ ಮೈಲುಗಳಷ್ಟು ದೂರದ ವರೆಗೆ ಟಪ್ಪಾಲನ್ನು ರೈಲಿನ ಮೂಲಕ ಸಾಗಿಸಲಾಗಿತ್ತು. ಇಂದು ವಿಮಾನಯಾನವು ಟಪ್ಪಾಲು ವ್ಯವಸ್ಥೆಯಲ್ಲಿ ಮಹತ್ವದ ಪಾತ್ರ ವಹಿಸಿದೆಯೆನ್ನಬಹುದು.

ಅಂಚೆ ವ್ಯವಸ್ಥೆ ಇನ್ನೂ ಪ್ರಗತಿ ಪಥದಲ್ಲಿ ಸಾಗಿಲ್ಲವೆನ್ನುವುದಕ್ಕೆ ಇಂದಿನ ಹಳ್ಳಿಯ ಅಂಚೆ ವ್ಯವಸ್ಥೆಯೇ ನಿದರ್ಶನ. ಇನ್ನು ಕೆಲವು ಕಡೆ ಅಂಚೆ ವಾಹಕರು (ಪೋಸ್ಟ್‌ಮೇನ') ಮೈಲುಗಟ್ಟಲೆ ನಡೆದೇ ಟಪ್ಪಾಲನ್ನು ಬಟವಾಡೆ ಮಾಡಬೇಕಾದ ಸಂದರ್ಭ ಕಾಣುತ್ತೇವೆ. ಯೋಗ್ಯವಾದ ಸಾರಿಗೆ ಸಂಪರ್ಕವಿಲ್ಲದುದೇ ಇದಕ್ಕೆ ಕಾರಣವೆನ್ನಬಹುದು. ಅದರೆ ಸುಧಾರಿತ ಅಂಚೆ ವ್ಯವಸ್ಥೆ ಇಂದಿನ ಅದೆಷ್ಟೋ ಮಾನವನ ಸಮಸ್ಯೆಗಳನ್ನು ಬಗೆಹರಿಸಿದೆಯೆನ್ನಬಹುದು. ಈ ಆಧುನಿಕ ಯುಗದಲ್ಲಿ ಸುವ್ಯವಸ್ಥಿತವಾದ ಅಂಚೆಯ ವ್ಯವಸ್ಥೆ ಇಲ್ಲದೆ ಹೋಗಿದ್ದರೆ ಪ್ರಾಯಶಃ ನಾವು ಬಾಹ್ಯ ಪ್ರಪಂಚವನ್ನು ಅರಿಯದ ಕೂಪ ಮಂಡೂಕದಂತಿರಬೇಕಿತ್ತೋ ಏನೋ. ಕಾಳಿದಾಸನ ಕಾಲದಲ್ಲಾದರೆ ಮೋಡಗಳು ವಾರ್ತೆಯನ್ನು ಕಳುಹಿಸುತ್ತಿದ್ದಿರಬೇಕು. ಅದಕ್ಕಾಗಿಯೇ ಮೇಘದೂತದಲ್ಲಿ ಮೋಡಗಳನ್ನು ದೂತನಿಗೆ ಹೋಲಿಸಿದ್ದಾನೆ. ಇಂದಿನ ಅಂಚೆ ವಾಹಕನು ಆ ಮೋಡಗಳ ಕೆಲಸವನ್ನು ಮಾಡಬೇಕಾಗಿದೆ

NAVAYUGA ANNOUNCING

REPUBLIC DAY SPECIAL 1965

Eighteen years ago we earned our Independence and three years after that India declared herself a federal republic and a secular state devoted to ideals of social justice. In this happy culmination 'NAVAYUGA' established in 1921 by our beloved nationalist leader, the late Sri A. B. Shetty, played a small but not insignificant part. It was the vehicle through which ideas and ideals of freedom enunciated by our leaders was popularised in the country-side. It acted as a valuable medium of mass communication

Many businessmen and industrialists and the government too have come to realise that 'NAVAYUGA' is a potent weapon of publicity and a useful medium for advertising their goods and services They have considered the **Republic Day Special** of the 'NAVAYUGA' as a fitting occasion to publicize their wares; for they know by experience that their goods would share the prestige and esteem that are associated with a long standing weekly like 'NAVAYUGA'.

Republic Day Special 1965

is planned by us as a bountiful and sumptuous volume catering to the literary and cultural taste of the readers as also the demands of modern advertisement

Please reach us your advertisement on or before 10-1-65.

ADVT. MANAGER.

ಜನ ಕೇಳುತ್ತಿದೆ

ಪಣಂಬೂರು ಬಂದರದ ಗಾತ್ರವೆಷ್ಟು?

ಪರ್ವತ ಪ್ರಸವ ಮಾಡಿದಂತೆ ಬೃಹತ್ ಬಂದರ ಮಂಗಳೂರಲ್ಲಿ ನಿರ್ಮಿಸಲು ಕೇಂದ್ರ ಸರಕಾರ ನಿರ್ಧರಿಸಿದಾಗ ಜಿಲ್ಲೆಯ ಜನರು ಪ್ರಸನ್ನರಾಗಿದ್ದರು, ಹಲವು ವರ್ಷಗಳಿಂದಲೂ ನನೆಗುದಿಗೆ ಬಿದ್ದ ಪ್ರಶ್ನೆಯೊಂದು ಬಗೆಹರಿಯಿತೆಂದು! ಮುಂದೆ ಬಂದರವು ಮಂಗಳೂರಿನಿಂದ ಪಣಂಬೂರಿಗೆ ವರ್ಗಾಯಿಸಲ್ಪಟ್ಟಿತು. ಬಂದರ ನಿರ್ಮಾಣಕ್ಕಾಗಿ ೧,೩೦೦ ಎಕ್ರೆ ಜಮೀನನ್ನು ವಶಪಡಿಸಿಕೊಳ್ಳುವ ಆಜ್ಞೆಯೂ ಹೊರಟಿತು ಅಲ್ಲಿ ನೆಲಸಿಂತ ಜನರಿಗೆ ಸೂಕ್ತ ಪರಿಹಾರ ನೀಡುವ ಭರವಸೆಯನ್ನು ರಾಜ್ಯದ ಮುಖ್ಯಮಂತ್ರಿಯವರು ಮುದ್ದಾಂ ನೀಡಿದುದರಿಂದ, ರಾಷ್ಟ್ರಾಭಿವೃದ್ಧಿಯ ಘನೋದ್ದೇಶಕ್ಕಾಗಿ ಪಣಂಬೂರು ಮತ್ತದರ ಆಸುಪಾಸಿನ ಜನತೆಯವರು ತಮ್ಮ ವಶವಿದ್ದ ಭೂಮಿಯನ್ನು ಬಿಟ್ಟುಕೊಟ್ಟರು. ಈ ಜನರನ್ನು ಕಾಟಿಪಳ್ಳಕ್ಕೆ ಸಾಗಿಸಿ ಅಲ್ಲಿ ಪುನರ್ವಸತಿಯ ಸೌಕರ್ಯಗಳನ್ನು ಒದಗಿಸುವ ಪ್ರಯತ್ನ ಮಾತ್ರ ನಡೆಯುತಲ್ಲದೆ, ನ್ಯಾಯವಾದ ಪರಿಹಾರ ದೊರೆಯಲಿಲ್ಲ. ಹೀನಾಯವಾಗಿ ಕೂಲಿ - ಮಜೂರ ವರ್ಗಕ್ಕೆ ಸೇರಿದ ಈ ಜನತೆಗೆ ಸರಿಯಾದ ಕೂಲಿ-ನಾಲಿ ದೊರೆಯದಿರುವುದರಿಂದ, ಅವರ ಕಥೆ ಕೈಲಾಸವೇ ಆಗಿದೆ.

ಜೋಕ್ಯೆಯ ಮೇಲೆ ಬರೆಯೆಂಬಂತೆ ಆ ಕ್ಷಣ ಜನರ ಸಂಕಷ್ಟ ಇಲ್ಲಿಗೇ ಮುಗಿಯಲಿಲ್ಲ. ಮತ್ತೆ ೧,೫೦೦ ಎಕ್ರೆ ಜಮೀನನ್ನು ವಶಪಡಿಸಿಕೊಳ್ಳುವ ಬಗ್ಗೆ ಸರಕಾರಿ ಪ್ರಕಟಣೆ ಹೊರಟಿದೆ! ಮೊದಲು ಬರೇ ೧,೩೦೦ ಎಕ್ರೆಗಳಷ್ಟಿದ್ದ ವಿಸ್ತಾರ ಒಮ್ಮಿಂದೊಮ್ಮೆಗೆ ೨,೮೦೦ ಎಕ್ರೆಗಳಿಗೆ ಏರಲು ಕಾರಣವೇನು? ಭಾರತದಲ್ಲಿನ ಯಾವ ಪ್ರಮುಖ ಬಂದರವೂ ಇಷ್ಟು ವಿಸ್ತಾರವಿಲ್ಲದಿರುವಾಗ, ಪಣಂಬೂರಿನ ಬಂದರಕ್ಕೆ ಇಷ್ಟು ಸ್ಥಳಾವಕಾಶವೇಕೆ? ಈ ಬಗ್ಗೆ ಯಾವ ನಿಶ್ಚಿತ ಕಾರಣವನ್ನೂ ನೀಡಲು ಜನಪ್ರತಿನಿಧಿಗಳಾಗಲೀ, ರಾಜ್ಯ ಅಥವಾ ಕೇಂದ್ರ ಸರಕಾರವಾಗಲೀ ಸಶಕ್ತವಾಗಿಲ್ಲ. ಎಲ್ಲ ದೋಷಗಳನ್ನು ತಜ್ಞರ ತಲೆಯ ಮೇಲೆ ಹೊರಿಸಲಾಗುತ್ತಿದೆ! ಈ ತಜ್ಞರ ಅಭಿಪ್ರಾಯವಾದರೂ ಏನು? ಅವರು ನೀಡಿದ ವರದಿ ಮತ್ತು ಕಾರ್ಯಾಚರಣೆಯ ಹಂತಗಳನ್ನು ಏಕೆ ಇನ್ನೂ ಪ್ರಕಟಿಸಿಲ್ಲ? ಈಯೆಲ್ಲ ಕಾರಣಗಳಿಂದ ಜನ ರೊಚ್ಚಿಗೆದ್ದರೆ ಅದರಲ್ಲಿ ಆಶ್ಚರ್ಯವಿಲ್ಲ. ಈಗ ಸರಕಾರವು ಯೋಜಿಸಿದಂತೆ ಭೂಮಿಯನ್ನು ವಶಪಡಿಸಿಕೊಂಡರೆ ಸುಮಾರು ೧೫—೨೦ ಸಾವಿರ ನಾಗರಿಕರು ನಿರ್ಗತಿಕರಾಗುವರು. ಪಣಂಬೂರು, ಬೈಕಂಪಾಡಿ, ತಣ್ಣೀರುಬಾವಿ ಹಳ್ಳಿಗಳ ಎರೆ ಭೂಮಿಯು ಸಂಪೂರ್ಣ ನಷ್ಟವಾಗುವುದು. ಆಹಾರ ಧಾನ್ಯ-ಕಬ್ಬುಗಳು ಇಡಿ ವರ್ಷವೂ ಸಾಗುವಳಿಯಾಗುತ್ತಿರುವ ಈ ಗ್ರಾಮಗಳನ್ನು ಬಂಜರು ಮಾಡುವುದರ ಹಿಂದೆ ಸದುದ್ದೇಶವಿಲ್ಲ, ಬರೇ ಕೆಲವರ ಹಿತಾಸಕ್ತಿಗಳಡಗಿವೆ ಎಂದು ಈ ಭಾಗದ ಜನತೆಯ ಖಚಿತಾಭಿಪ್ರಾಯವಿದೆ. ಬಂದರದ ಕಾರ್ಯವು ಪ್ರಾರಂಭವಾಗಿದೆಯೆಂದು ಪ್ರಚಾರವಾಗಿದ್ದರೂ ಸತ್ಯವಾಗಿ ಕೆಲಸವನ್ನು ಪ್ರಾರಂಭಿಸಲು ಯಾವೊಂದು ನಕ್ಷೆಯೂ ತಯಾರಾಗಿಲ್ಲವೆಂದು ತಿಳಿಯುತ್ತದೆ. ಹಾಗಿರುವಾಗ, ಈಗಾಗಲೇ ವ್ಯರ್ಥವಾಗಿ ಭೂಮಿಯನ್ನು ವಶಪಡಿಸಿ ಅದನ್ನು ಪಡಿಲು ಬಿಡುವದಕ್ಕಿಂತ ಆಗತ್ಯಬಿದ್ದಾಗ ವಶಪಡಿಸಿಕೊಂಡರೆ ಸಾಲದೆ? ಎಂಬ ಪ್ರಶ್ನೆಯೂ ಕೇಳಿ ಬರುತ್ತಿದೆ.

ಸರಕಾರದ ಈ ವಶಪಡಿಸಿ ಕೊಳ್ಳುವ ನೀತಿ ಇಂದಿನ ಪಣಂಬೂರು ಬಂದರದ ಕಾರ್ಯಕ್ರಮಗಳಿಗೆ ಅನಗತ್ಯ; ಮುಂದೆಯೂ ಬಹು ಕಾಲದ ತನಕ ಅನವಶ್ಯ. ಹಾಗಿರುವಾಗ ಸುಮ್ಮ ಸುಮ್ಮನೆ ತಮ್ಮ ಭೂಮಿಯಿಂದ ಹೊರಬೀಳಬೇಕಾದ ಪಣಂಬೂರು – ಬೈಕಂಪಾಡಿ ಗ್ರಾಮೀಣರು ತಮ್ಮ ರಕ್ಷಣೆಗಾಗಿ ಒಂದು ಸಮಿತಿ ಮಾಡಿಕೊಂಡಿದ್ದಾರೆ; ಬಂದರಕ್ಕೆ ಅಗತ್ಯವಿಲ್ಲದ ಹೆಚ್ಚಿನ ೧೫೦೦ ಎಕ್ರೆಗಳ ಭೂಸ್ವಾಧೀನತೆಯನ್ನು ಅದರು ವಿರೋಧಿಸುತ್ತಾರೆ. ಸರಕಾರವು ಈಗ, ಇತ್ತೀಚಿನ ಭೂಸ್ವಾಧೀನತೆಯ ಪ್ರಕಟಣೆಯನ್ನು ಹಿಂದೆಗೆದುಕೊಳ್ಳದಿದ್ದರೆ, ಉಪವಾಸ ಸತ್ಯಾಗ್ರಹ ಹೂಡುವ ಅಚಲ ನಿರ್ಧಾರವನ್ನೂ ಅವರು ಮಾಡಿದ್ದಾರೆ.

ಈ ವಿಷಯದಲ್ಲಿ ನಿಷ್ಪಕ್ಷಪಾತಿಯು ಹೀಗೆ ಹೇಳಬಹುದು: ಅನವಶ್ಯವಾದ ಭೂಮಿಯನ್ನು ಸ್ವಾಧೀನಪಡಿಸುವುದು ಅನಗತ್ಯ ಮತ್ತು ಅಸೇಕ್ಷಣೀಯ. ಒಂದು ವೇಳೆ ಬಂದರವು ತೀವ್ರ ಅಭಿವೃದ್ಧಿಯನ್ನು ಹೊಂದುತ್ತ ಬಂದರೆ, ಈಗಾಗಲೇ ಗ್ರಾಮೀಣರು ಮೊದಲ ೧,೩೦೦ ಎಕ್ರೆಗಳನ್ನು ಬಿಟ್ಟು ಕೊಟ್ಟಂತೆ ಹೆಚ್ಚಿನ ಭೂಮಿಯನ್ನೂ ಬಿಟ್ಟುಕೊಡಲು ಮುಂದೆ ಬಂದೇ ಬರುತ್ತಾರೆ. ಸರಕಾರಕ್ಕೆ ಈಗಾಗಲೇ ಒಟ್ಟು ೨,೮೦೦ ಎಕ್ರೆ ಜಮೀನು ಬೇಕೆಂದಾದರೆ, ಅಂತಹ ಸಲಹೆಯಿತ್ತ ತಜ್ಞರ ವರದಿಯನ್ನು ಪ್ರಕಟಿಸಿ, ಜನತೆಯ ಸದ್ಭಾವನೆಯನ್ನು ಗಳಿಸಬೇಕು. ಇದು ಪ್ರಜಾಪ್ರಭುತ್ವದ ಧರ್ಮ, ಗೊಂದಲಗಳಿಗೆ ಅವಕಾಶ ನೀಡದೆ ಸರಕಾರವು ನ್ಯಾಯದಾನ ಮಾಡಬೇಕು; ಜನತೆಯ ಮೇಲೆ ಅನ್ಯಾಯ ಹೇರಬಾರದು. ಪ್ರಜಾಪ್ರಭುತ್ವದಲ್ಲಿ ಪ್ರಜಾಭಿಪ್ರಾಯಕ್ಕೆ ಬೆಲೆ ಬರಬೇಕು. ಇಲ್ಲವಾದರೆ, 'ಪ್ರಜಾಪ್ರಭುತ್ವ'ವೆಂಬ ಪವಿತ್ರ ಪದಕ್ಕೆ ಅಪಚಾರವಾಗುವುದು.

ದೆಹಲಿಯಲ್ಲಿ

ಸಿಂಡಿಕೇಟ್ ಬ್ಯಾಂಕಿನ

5 ನೇ ಮಹಿಳಾ ಶಾಖೆ..........

ವಿಶಾಲವಾಗಿ ಹಬ್ಬಿರುವ ಸಿಂಡಿಕೇಟ್ ಬ್ಯಾಂಕಿನ
ಶಾಖಾಸಮುದಾಯಕ್ಕೆ ಇನ್ನೊಂದು ಹೊಸ ಶಾಖೆ

ಬ್ಲಾಕ್ ನಂ. 5,
ಪ್ಲಾಟ್ ನಂ. 65,
W. E. A. ಅಜ್ಮಲ್‌ಖಾನ್ ರೋಡ್,
ಕರೋಲ್ ಭಾಗ್,
ದೆಹಲಿ—5

● ಎಂಬಲ್ಲಿ ●

ಮಹಿಳೆಯರಿಂದಲೇ ನಡೆಸಲ್ಪಡುವ ಇನ್ನೊಂದು ಹೊಸ ಶಾಖೆಯು
ತಾ. 26—12—1964ರಂದು ತೆರೆಯಲ್ಪಡುವುದೆಂದು ತಿಳಿಸಲು
ನಾವು ಸಂತೋಷ ಪಡುತ್ತೇವೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 201. ಚಲಾವಣಾಸಂಪತ್ತು ರೂ. 60 ಕೋಟಿಗೂ ಮಿಕ್ಕಿದೆ.

..........ವಿಶ್ವವ್ಯಾಪೀ ಬ್ಯಾಂಕಿಂಗ್ ವ್ಯವಹಾರ.

—ನಮ್ಮ ಇತರ ಮಹಿಳಾ ಶಾಖೆಗಳು—

ಬೆಂಗಳೂರು: ಶೇಷಾದ್ರಿಪುರಂ.	ಹೈದರಾಬಾದ್: ಚಿಕ್ಕಡಪಳ್ಳಿ.
ಮದ್ರಾಸು: ತ್ಯಾಗರಾಯ ನಗರ.	ಟ್ರಿವೆಂಡ್ರಮ್: ಪುತೆನ್ ಚಂತ್ಯೆ.



SYNDICATE BANK LIMITED
REGD. OFFICE, MANIPAL 1910-1925

ಸುಬ್ರಹ್ಮಣ್ಯ ಕಿರುಷಷ್ಠಿ ಉತ್ಸವ

ದಕ್ಷಿಣ ಕನ್ನಡ ಜಿಲ್ಲಾ ಮಹತೋಭಾರ ಕುಕ್ಕೇ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದಲ್ಲಿ ಕಿರುಷಷ್ಠಿ ಉತ್ಸವವು ತಾ. 9--1--1965 ರಂದು ಜರಗಲಿದೆ.

ತ್ಯಾಗ ಸೇವೆಗಳ ಪ್ರತೀಕ ಮಣಿಪಾಲದಲ್ಲಿ

317ನೆ ರೋಟರಿ ಜಿಲ್ಲೆಯ ಕ್ಲಬ್ಬುಗಳ ಸಮ್ಮೇಳನವು ಮಣಿಪಾಲದಲ್ಲಿ ನಡೆಯಲಿದೆ ದಶಂಬರ ತಾ. ೨೬ರಿಂದ ತಾ. ೨೮ರ ವರೆಗೆ ನಡೆಯಲಿರುವುದು.

ಹದಿನೈದು ವರ್ಷಗಳಿಗೆ ಮೊದಲು ಕೆಲವು ನೂರು ಜನರ ಹಳ್ಳಿಯಾಗಿದ್ದ ಮಣಿಪಾಲವು ಬಹುದೊಡ್ಡ ಶೈಕ್ಷಣಿಕ ರಂಗವಾಗಿ ಮಾನ್ಯತೆ ಪಡೆಯಲು ಬಾಕಿಯುಳಿದಿರುವ ವಿಶ್ವವಿದ್ಯಾಲಯವಾಗಿದೆ. ಇಂತಹ ಅಪೂರ್ವ ಸಾಧನೆಯ ಹಿಂದೆ ಡಾ। ಟಿ ಎಂ ಎ. ಪೈಯವರ ತ್ಯಾಗ ಮತ್ತು ಸೇವೆಗಳ ಚರಿತ್ರೆ ಅಡಕವಾಗಿದೆ. ಸಮುದ್ರದ ತಂಗಾಳಿ ಬೀಸುತ್ತಿರುವ ಬೆಟ್ಟದ ತಲೆಯಲ್ಲಿ ಮಣಿಪಾಲವಿದೆ. ಇಲ್ಲಿಂದ ನಾವು ಅರಬಿ ಸಮುದ್ರವನ್ನು ಕಾಣಬಹುದು. ಇಂದು ಇಲ್ಲಿನ ಜನಸಂಖ್ಯೆ ೧೦,೦೦೦ವನ್ನೂ ಮೀರಿದೆ. ಮಣಿಪಾಲ ನಿರ್ಮಾಣವು ಖಾಸಗಿ ರಂಗದಲ್ಲಿಯೇ ಆಗಿದೆಯೆಂಬುದನ್ನು ಮರೆಯಬಾರದು.

"ಶಿಕ್ಷಣವು ದೇಶದ ಅಮೂಲ್ಯ ಸಂಪತ್ತು. ನಮ್ಮ ಬಳಿ ಒಂದು ಲಕ್ಷ ರೂಪಾಯಿಗಳಿದ್ದರೆ, ಅವುಗಳಲ್ಲಿ ಅರ್ಧಾಂಶ ಹೊರಗೆ ಕೊಟ್ಟರೆ ಮತ್ತೆ ಉಳಿಯುವುದು ರೂ. ೫೦ ಸಾವಿರ ಮಾತ್ರ. ಆದರೆ, ನಾವು ವಿದ್ಯೆ ಕಲಿತು ಅದನ್ನು ಇತರರಿಗೆ ಕೊಟ್ಟರೆ, ನಮ್ಮಲ್ಲೂ ಅದು ಉಳಿಯುವುದು," ಎನ್ನುವ ಡಾ। ಪೈಯವರು ಶಿಕ್ಷಣರಂಗದಲ್ಲೇ ಒಂದು ಕ್ರಾಂತಿ ಪುರುಷರು. ವಿದೇಶೀಯ ನೆರವಿಗಿಂತ ಡಾ। ಪೈಯವರಂತಹ ಮನುಷ್ಯರ ಅಗತ್ಯ ನವಭಾರತಕ್ಕೆ ಇದೆ, ಎಂದು ಡಾ। ಪೈಯವರ ಬಗ್ಗೆ ವಿದೇಶೀಯ ತಜ್ಞರೊಬ್ಬರು ಎತ್ತಿದ ಉದ್ಗಾರ ನೂರಕ್ಕೆ ನೂರರಷ್ಟು ಸತ್ಯ.

ಹೀಗೆ ತ್ಯಾಗ— ಸೇವೆಗಳಿಗೆ ಹೆಸರಾದ ಡಾ। ಪೈಯವರು ಈ ವರ್ಷ 317ನೆ ರೋಟರಿ ಜಿಲ್ಲೆಯ ಗವರ್ನರರಾಗಿ ಚುನಾಯಿತರಾದರು. ಇವರು ಅವರಿಕೆಗೆ ತೆರಳಿ ಅಂತಾರಾಷ್ಟ್ರೀಯ ರೋಟರಿ ಕ್ಲಬ್ಬಿನ ಅಧ್ಯಕ್ಷ ಚಾರ್ಲ್ಸ್ ಡಬ್ಲ್ಯು ಪೆಟೆನ್‌ಗಿಲ್‌ರವರಿಂದ ಅಧಿಕಾರ ಸನದು ಸ್ವೀಕರಿಸಿ ಬಂದಿದ್ದಾರೆ. ತನ್ನ ಜಿಲ್ಲೆಯ ಕ್ಲಬ್ಬುಗಳನ್ನು ಸಂದರ್ಶಿಸಿ ಸೌಹಾರ್ದತೆಯನ್ನು ಬೆಳೆಸಿಕೊಂಡಿದ್ದಾರೆ. ಈ ಕ್ಲಬ್ಬುಗಳ ಸದಸ್ಯರ ಸಮ್ಮೇಳನವನ್ನು ತ್ಯಾಗ—ಸೇವೆಗಳ ಪ್ರತೀಕವಾದ ಮಣಿಪಾಲದಲ್ಲಿ ಕರೆದಿದ್ದಾರೆ — ಇದು ತ್ಯಾಗ—ಸೇವೆಗಳಿಗೆ ಹೆಸರಾದ ರೋಟರಿಯ ತತ್ವಗಳ ಘನತೆಗೆ ತಕ್ಕುದಾದುದು. ಇಂತಹ ಪವಿತ್ರ ನೆಲೆಯಲ್ಲಿ ನಡೆಯುವ ರೋಟರಿ ಜಿಲ್ಲಾ ಸಮ್ಮೇಳನವು ರೋಟರಿ ಸಂದೇಶವನ್ನು ಮನೆ ಮನೆಗೂ ಮುಟ್ಟಿಸಬೇಕೆಂಬ ಸಿತೀಶ ಲಹರಿಯವರ ಅಭಿಲಾಷೆಯನ್ನು ಕಾರ್ಯರೂಪಕ್ಕಿಳಿಸುವುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.



ಉಡುಪಿಯ ರೋಟರಿ ಕ್ಲಬ್

1967ರಲ್ಲಿ ರೋಟರಿಯು ಉಡುಪಿಗೆ ಪಾದಾರ್ಪಣ ಮಾಡಿತು. ಅಂದು ಈ ಕ್ಲಬ್ಬು 320ನೆಯ ಜಿಲ್ಲೆಯೊಂದಿಗೆ ಸೇರ್ಪಡೆ ಹೊಂದಿತ್ತು. ಈ ಜಿಲ್ಲೆಯ ಆಗಿನ ಗವರ್ನರ್ ರೊಟೇರಿಯನ್ ಟಿ ಎಸ್. ರಾಜನ್‌ರವರು ಉಡುಪಿ ಕ್ಲಬ್ಬಿಗೆ ಸನದು ಪ್ರದಾನ ಮಾಡಿದರು. ಇಂದು 317ನೆ ರೋಟರಿ ಜಿಲ್ಲೆಯ ಗವರ್ನರರಾಗಿರುವ ಡಾ। ಟಿ. ಎಂ ಎ ಪೈಯವರು ಉಡುಪಿ ಕ್ಲಬ್ಬಿನ ಮೊತ್ತಮೊದಲಿನ ಅಧ್ಯಕ್ಷರಾಗಿದ್ದರು. 28 ಸದಸ್ಯರಿಂದ ಪ್ರಾರಂಭವಾದ ಈ ಕ್ಲಬ್ಬು ಇಂದು 43 ಸದಸ್ಯರನ್ನು ಹೊಂದಿದೆ.

ಸಾಮಾಜಿಕ ಸೇವೆಯಲ್ಲಿ ಉಡುಪಿ ಕ್ಲಬ್ಬು ಇಟ್ಟುಕೊಂಡ ಯೋಜನೆಗಳಲ್ಲಿ ಇವು ಪ್ರಮುಖವಾಗಿವೆ. ೧. ಕಸ್ತೂರ್ಬಾ ಜನರಲ್ ಆಸ್ಪತ್ರೆಯ ರಕ್ತ ಬ್ಯಾಂಕಿಗೆ ಸಕ್ರಿಯ ಬೆಂಬಲ. ಸ್ವೇಚ್ಛೆಯಿಂದ ರಕ್ತದಾನ ಮಾಡುವ ಸಂಬಂಧ ೧೦೦ಕ್ಕೂ ಹೆಚ್ಚು ಜನರಿಂದ ರಕ್ತದಾನ ಮಾಡಿಸಿ ಆಸ್ಪತ್ರೆಯಲ್ಲಿ ಹಲವಾರು ಪ್ರಾಣಗಳನ್ನು ಉಳಿಸಲು ಸಹಾಯ ಮಾಡಿದೆ. ೨. ಎರಡು ಸ್ಥಳೀಯ ಕಾಲೇಜುಗಳಲ್ಲಿ ಬುಕ್‌ಬ್ಯಾಂಕನ್ನು ನಡೆಸುತ್ತಿದೆ. ೩. ಸ್ಥಳೀಯ ಆಸ್ಪತ್ರೆ ಮತ್ತು ವೈದ್ಯರಿಂದ ಉಡುಪಿಯ ಜನತೆಗೆ ತ್ರಿಪಲ್ ಆ್ಯಂಟಿಜನ್ ಮತ್ತು ಟಿಎಬಿ ಚಾಕುಗಳ ಸೌಲಭ್ಯವನ್ನು ಉಚಿತವಾಗಿ ಒದಗಿಸಿದೆ. ಕ್ಲಬ್ಬು ಸದ್ಯಕ್ಕೆ ಕಸ್ತೂರ್ಬಾ ಜನರಲ್ ಆಸ್ಪತ್ರೆಯಲ್ಲಿ 'ರೋಟರಿ ಬ್ಲಾಕ್' ಎಂಬ ಹೆಸರಿನಿಂದ ಹೊರರೋಗಿಗಳ ಬ್ಲಾಕೊಂದನ್ನು ಕಟ್ಟಲು ಧನ ಸಂಚಯ ಮಾಡುವಲ್ಲಿ ವ್ಯಸ್ತವಾಗಿದೆ.

ಔದ್ಯಮಿಕ ಸೇವೆಯಲ್ಲಿ ಎರಡು ಪ್ರಧಾನ ಕಾರ್ಯಕ್ರಮಗಳನ್ನು ಕ್ಲಬ್ಬು ಇಟ್ಟುಕೊಂಡಿದೆ. ಮಣಿಪಾಲದಲ್ಲಿ ಕೋ-ಒಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟನ್ನು ನಡೆಸುವುದು ಮೊದಲನೆಯದಾದರೆ, ನಗರದ ಸಂಘದ ಸಹಕಾರದಿಂದ ಉಡುಪಿಗೆ ಚೇಂಬರ್ ಆಫ್ ಕಾಮರ್ಸನ್ನು ಸ್ಥಾಪಿಸುವುದು ಎರಡನೆಯದು.

ಅಂತಾರಾಷ್ಟ್ರೀಯ ಸೇವೆಯಲ್ಲಿ ಇವು ಮುಖ್ಯವಾಗಿವೆ. ೧. ಅಧಿಕ ಸಂಖ್ಯೆಯ ವಿದೇಶೀ ಕ್ಲಬ್ಬುಗಳೊಡನೆ ಪತ್ರವ್ಯವಹಾರ ಮತ್ತು ಪರಸ್ಪರ ಶುಭಾಕಾಂಕ್ಷೆಗಳಿಂದ ಸಂಬಂಧವನ್ನು ಬೆಳೆಸುವುದು. ೨. ಪ್ರತಿಯೊಬ್ಬ ವಿದೇಶೀ ಸಂದರ್ಶಕನಿಗೆ ಉಚಿತ ಆತಿಥ್ಯವು ದೊರೆಯುವಂತೆ ವಿಶೇಷ ಅತಿಥಿ ಸತ್ಕಾರ ಯೋಜನೆ ಮಾಡುವುದು ಮತ್ತು ೩. ಪ್ರಪಂಚದ ವಿವಿಧ ದೇಶಗಳ ಆಕರ್ಷಕ ಗೊಂಬೆಗಳನ್ನು ಪ್ರದರ್ಶಿಸುವ ಸಿತೀಶ ಲಹರಿ ಮಕ್ಕಳ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸುವುದು.



ಬೇರೆ ಬೇರೆ ಜಿಲ್ಲಾ ಸಮ್ಮೇಳನಗಳಲ್ಲಿ ಉಡುಪಿಯ ಕ್ಲಬ್ಬು ಕೆಳಗಿನವುಗಳ ಬಗ್ಗೆ ಶೀಲ್ಡುಗಳನ್ನು ಪಡೆದಿದೆ. ೧. ಉತ್ತಮ ಕ್ಲಬ್ ಬುಲ್ಲೆಟಿನ್. ೨. ಅಂತಾರಾಷ್ಟ್ರೀಯ ಸೇವೆಯಲ್ಲಿ ಉತ್ತಮ ಚಟುವಟಿಕೆಗಳು ೩. ಉತ್ತಮ ಯುವಜನ ಸೇವೆ.



317ನೆ ರೋಟರಿ ಜಿಲ್ಲಾ ಸಮ್ಮೇಳನ

ರೋಟರಿಯ ಹುಟ್ಟು ಮತ್ತು ಬೆಳವಣಿಗೆ

1905 ಫೆಬ್ರವರಿ 23ರಂದು ಪೌಲ್ ಪಿ. ಹ್ಯಾರಿಸ್‌ರವರ ಆಮಂತ್ರಣದ ಮೇರೆಗೆ ಸಿಲ್ವೆಸ್ಟರ್ ಸ್ಕೀಲೀ, ಗಸ್ಟವಸ್ ಇ. ಲೋಹರ್ ಮತ್ತು ಹಿರಂ ಇ. ಶೋರಿಯವರು ಚಿಕಾಗೋದಲ್ಲಿನ ಹಿರಿಸರ ಭವನದಲ್ಲಿ ಒಂದಾದರು. ಇವರು ನಾಲ್ವರೂ ವಾಣಿಜ್ಯ—ವ್ಯವಹಾರದಲ್ಲಿ ತೊಡಗಿದ್ದವರು. ವ್ಯವಹಾರ- ವ್ಯಾಪಾರದಲ್ಲಿರುವವರು ವೈಯಕ್ತಿಕ ವಿ ತ್ರಂಗ ಬೇಕೆಂಬ ಶಕ್ಯದ ತಳಹದಿಯಲ್ಲಿ ಒಂದು ಕ್ಲಬ್ಬನ್ನು ಪ್ರಾರಂಭಿಸಲು ಇವರು ನಿರ್ಧರಿಸಿದರು.



ಕೆಲವೇ ದಿನಗಳಲ್ಲಿ ಇನ್ನೂ ಕೆಲವರು ಸೇರಿಕೊಂಡು, ರೋಟರಿ ಕ್ಲಬ್ಬನ್ನು ಪ್ರಾರಂಭಿಸಿದರು. ಸ್ಕೀಲೀ ಇದರ ಅಧ್ಯಕ್ಷರಾದರು, ಪೌಲ್‌ರು ಮುಂದಿನ ಎರಡು ವರ್ಷಗಳ ವರೆಗೆ ಯಾವ ಅಧಿಕಾರವನ್ನು ವಹಿಸುವುದಕ್ಕೂ ನಿರಾಕರಿಸಿ, ತ್ಯಾಗ ಮತ್ತು ಸೇವೆಯ ಪಾಠವನ್ನು ಮೊದಲಿಗೇನೇ ಕಲಿಸಿದರು.

ಈ ಕ್ಲಬ್ಬಿನ ಸದಸ್ಯರಾಗಿದ್ದ ಆರು ಜನರೂ ಸಾಮಾನ್ಯವಾಗಿ ಅಪರಿಚಿತರಾಗಿದ್ದರೆಂದೇ ಹೇಳಬೇಕು. ಆದರೂ ಗೆಳೆತನ, ಒಡನಾಟ ಮತ್ತು ನೆರವನ್ನು ಪ್ರೋತ್ಸಾಹಿಸುವಂತೆ ಗುರಿಯನ್ನಿಟ್ಟುಕೊಂಡು ಅವರೆಲ್ಲರೂ ಮುಂದ ವರಿದರು. ಮೊದಲ ಸಭೆಗಳಲ್ಲಿ ಕ್ಲಬ್ಬಿನ ಹೆಸರಿನ ಬಗ್ಗೆ ಹಲವಾರು ಹೆಸರುಗಳು ಮುಂದೆ ಬಂದುವು. ಕ್ಲಬ್ಬಿನ ಸದಸ್ಯರ ಬೇರೆ ಬೇರೆ ವ್ಯವಹಾರ ಸ್ಥಾನಗಳಲ್ಲಿ ಸರತಿಪ್ರಕಾರ ಒಟ್ಟು ಸೇರುವ ಯೋಜನೆಗೆ ಅನುಗುಣವಾದ "ರೋಟರಿ" ಎಂಬ ಹೆಸರೇ ಅಲ್ಲಿ ಸ್ವೀಕೃತವಾಯ್ತು.

ವ್ಯಾವಹಾರಿಕ, ಸಾಮಾಜಿಕ ಸಂಬಂಧಗಳಲ್ಲಿ ಕ್ಲಬ್ಬಿನ ಸಂಪರ್ಕವು ಲಾಭಪ್ರದವೆನಿಸಿದ್ದರಿಂದ ಇದರ ಸದಸ್ಯ ಸಂಖ್ಯೆಯು ಬೆಳೆಯುತ್ತ ಬಂತು. ಇದರಿಂದಾಗಿ ಸದಸ್ಯರ ಮನೆಯಲ್ಲಿ ಒಂದಾಗುವುದು ಕಷ್ಟಸಾಧ್ಯವಾಗಿ ಪರಿಣಮಿಸಿ, ಡಿನ್ನರ್ ಮೀಟಿಂಗ್‌ಗಳು ನಡೆಯತೊಡಗಿದುವು.

೧೯೦೬ರ ಅಂತಿಮ ಭಾಗದಲ್ಲಿ ರೋಟರಿಯ ಗಾಳಿಯು ಚಿಕಾಗೋದಿಂದ ಹೊರಗಿನ ನಗರಗಳಿಗೂ ಬೀಸತೊಡಗಿತು. ೧೯೦೭ರಲ್ಲಿ ಪಾಲ್ ಹರಿಸ್ ರೋಟರಿ ಅಧ್ಯಕ್ಷನಾದಾಗ ಅಮೆರಿಕೆಯ ಮುಖ್ಯ ನಗರಗಳಲ್ಲೆಲ್ಲಾ ರೋಟರಿ ಕ್ಲಬ್‌ಗಳನ್ನು ಸ್ಥಾಪಿಸುವ ಆಶಯವನ್ನಿಟ್ಟುಕೊಂಡಿದ್ದರು. ಇದೇ ವರ್ಷದಲ್ಲಿ ಕ್ಲಬ್ಬು ಸಾಮಾಜಿಕ ಅಭ್ಯುತ್ಥಾನದ ಯೋಜನೆಗಳನ್ನು ಹಾಕಿಕೊಂಡಿತು. 1908ರಲ್ಲಿ ಸಾನ್ ಫ್ರಾನ್ಸಿಸ್ಕೋವಿನಲ್ಲಿ ಎರಡನೆಯ ರೋಟರಿ ಕ್ಲಬ್ಬು ಪ್ರಾರಂಭವಾಯಿತು. 1910ರ ಹೊತ್ತಿಗೆ ಅಮೆರಿಕೆಯಲ್ಲಿ 24 ಕ್ಲಬ್ಬುಗಳು ಇದ್ದುವು ಇವುಗಳ ಒಟ್ಟು ಸದಸ್ಯ ಸಂಖ್ಯೆ ಸುಮಾರು 1500. ಈ ಕ್ಲಬ್ಬುಗಳೆಲ್ಲಾ ಒಂದು ಕೇಂದ್ರ ಸಂಸ್ಥೆಯ ಮೂಲಕ ಕ್ರೋಢೀಕೃತವಾಗಿದ್ದುವು.

1911ರಲ್ಲಿ ರೋಟರಿಯು ಅಂತರಾಷ್ಟ್ರೀಯ ಆಂದೋಲನದ ರೂಪವನ್ನು ಪಡೆಯಿತು. ಕೆನಡಾ, ಇಂಗ್ಲೆಂಡ್, ಐರ್ಲೆಂಡುಗಳಲ್ಲಿ ಇದು ಕಾಲಿರಿಸಿತು. ಇದೇ ವರ್ಷ 'ದಿ ನೇಶನಲ್ ರೋಟೇರಿಯನ್' ಎಂಬ ಪತ್ರಿಕೆಯನ್ನೂ ಹೊರಡಿಸಲಾಯಿತು. ಆಗ ಅದರ ಐದು ಸಾವಿರ ಪ್ರತಿಗಳನ್ನು ತೆಗೆಯಲಾಗುತ್ತಿತ್ತು. 'ತನಗೆ ಮೇಲು ಸೇವೆ ಮತ್ತು ಅಧಿಕ ಸೇವೆ ಮಾಡುವವನು ಅಧಿಕ ಲಾಭ ಗಳಿಸುವನು' ಎಂಬ ರೋಟರಿ ಗುರಿಯ ಬೀಜವು ಅಂಕುರಿಸಿದ್ದು ಆ ವರ್ಷ. ಅಂದು ಇ 28 ಕ್ಲಬ್ಬುಗಳಲ್ಲಿ 2,500 ಸದಸ್ಯರಿದ್ದರು.

ಹೀಗೆ ಬೇರೆ ಬೇರೆ ದೇಶಗಳಲ್ಲಿ ಕಾಲಿರಿಸಿ ಬೆಳೆಯುತ್ತ ಬಂದ ರೋಟರಿಯು 50 ಕ್ಲಬ್ಬುಗಳಲ್ಲಿ 5000 ಸದಸ್ಯರು 1912ರಲ್ಲಿದ್ದರೆ, 1913ರಲ್ಲಿ 83 ಕ್ಲಬ್ಬುಗಳೂ 10,000 ಸದಸ್ಯರೂ ಇದ್ದರು

1914—1918ರ ಯುದ್ಧದ ಕಾಲದಲ್ಲಿಯೂ ರೋಟರಿಯ ಪ್ರಗತಿ ಕುಂಠಿತವಾಗಲಿಲ್ಲ. 1914ರಲ್ಲಿ 123 ಕ್ಲಬ್ಬುಗಳೂ 15,000 ಇದ್ದರೆ, 1918ರಲ್ಲಿ 407 ಕ್ಲಬ್ಬುಗಳಲ್ಲಿ 38,300 ಸದಸ್ಯ ಸಂಖ್ಯೆಯಿತ್ತು.

ಭಾರತದಲ್ಲಿ ಮೊತ್ತಮೊದಲಿಗೆ 1919ರಲ್ಲಿ ಕಲ್ಕತ್ತ ಕ್ಲಬ್ಬಿನ ಮೂಲಕ ರೋಟರಿಯು ಪಾದಾರ್ಪಣ ಮಾಡಿತು. ಅಂದಿನಿಂದ ಒಂದೇ ಸಮನೆ ಇಲ್ಲಿ ಕ್ಲಬ್ಬುಗಳ ಸಂಖ್ಯೆಯು ಹೆಚ್ಚುತ್ತ ಬರುತ್ತಿದೆ. 17ನೆಯ ರೋಟರಿ ಜಿಲ್ಲೆಯೊಂದರಲ್ಲೇ ಅಂದರೆ, ಮೈಸೂರು ರಾಜ್ಯ ಗೋವೆ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳ ದಾಕ್ಷಿಣಾತ್ಯ ಜಿಲ್ಲೆಗಳಲ್ಲಿಯೇ 64 ಕ್ಲಬ್ಬುಗಳೂ 3000 ರೋಟೇರಿಯನ್ನರೂ ಇದ್ದಾರೆ.

1930ರ ಜುಲೈಯಲ್ಲಿ 3349 ಕ್ಲಬ್ಬುಗಳು ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿದ್ದು 153 ಸಾವಿರ ಸದಸ್ಯರನ್ನು ಹೊಂದಿದ್ದುವು. ಕಳೆದ ವರ್ಷದಲ್ಲಿ ಇವೇ ಸಂಖ್ಯೆಗಳು 11,500 ಮತ್ತು 540 ಸಾವಿರವನ್ನು ಮುಟ್ಟಿವೆ. ಒಟ್ಟು 129 ದೇಶಗಳಲ್ಲಿ ರೋಟರಿ ತನ್ನ ಸಂದೇಶವನ್ನು ಬೀರುತ್ತಿದೆ.

ಇಂದು ರೋಟರಿಯೊಂದು 60 ವರ್ಷ ಪ್ರಾಯದ ದೊಡ್ಡ ಆಲದ ಮರದಂತಿದೆ. ಇದರ ಶಾಖೋಪಶಾಖೆಗಳು ಸಾವಿರಾರು. ಇದರ ವಿಶಾಲ ಛಾಯೆಯಲ್ಲಿ ಲಕ್ಷಾಂತರ ವಿವಿಧ ವೃತ್ತಿಗಳಲ್ಲಿ, ರಂಗಗಳಲ್ಲಿ ದುಡಿಯುತ್ತಿರುವವರು ಒಂದಾಗಿ ಗೆಳೆತನ, ಒಡನಾಟ ಮತ್ತು ನೆರವುಗಳ ಮೂಲ ಗುರಿಯನ್ನಿಟ್ಟುಕೊಂಡು ತ್ಯಾಗ ಮತ್ತು ಸೇವೆಗಳ ಪವಿತ್ರ ತತ್ವ ಪಾಲನೆಯಿಂದ ಸಮಾಜ ಹಿತ ಕಾರ್ಯಗಳಲ್ಲಿ ತಲ್ಲೀನರಾಗಿದ್ದಾರೆ. ರಾಜಕೀಯ ಭಿನ್ನಾಭಿಪ್ರಾಯಗಳೇನೇ ಇದ್ದರೂ ರೋಟರಿ ಎಂತಹ ಅಂತಾರಾಷ್ಟ್ರೀಯ ಸ್ನೇಹಸಂಸ್ಥೆಯು ಜಗತ್ತಿನ ಎಲ್ಲಾ ದೇಶಗಳ ಜನತೆಯ ನಡುವೆ ಸ್ನೇಹ ಸಂಪರ್ಕವನ್ನುಂಟುಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂಬುದು ಖಂಡಿತ ಈ ಕಾರಣದಿಂದಲೇ ರೋಟರಿಯು ಜನಪ್ರಿಯತೆ ದಿನದಿಂದ ದಿನಕ್ಕೆ ಬೆಳೆಯುತ್ತ ಬಂದಿದೆ, ಬರುತ್ತಿದೆ

ಒಂದು ನಗರದ ಸಂಸ್ಥೆಯಾಗಿ ಹುಟ್ಟಿದ ರೋಟರಿ ರಾಷ್ಟ್ರೀಯ ಸಂಸ್ಥೆಯಾಯಿತು; ಇದೀಗ ಅಂತರಾಷ್ಟ್ರೀಯ ಮಹತ್ವತೆಯನ್ನು ಹೊಂದಿ ಬೆಳಗುತ್ತಿದೆ, ಬೆಳೆದು ಬಾಳುತ್ತಿದೆ.

317ನೆ ರೋಟರಿ ಜಿಲ್ಲಾ ಸಮ್ಮೇಳನಕ್ಕೆ ಗವರ್ನರ್ ಡಾ। ಪೈಯವರ ಸಂದೇಶ

ರೋಟರಿ ಜಿಲ್ಲಾ ಸಮ್ಮೇಳನವು, ಪರಸ್ಪರ ಸೌಹಾರ್ದವನ್ನು ಬೆಳೆಸಿ ರೋಟರಿ ಸಂದೇಶದಲ್ಲಿ ಪಾಲುಗೊಳ್ಳಲು ಜಿಲ್ಲೆಯ ಎಲ್ಲಾ ರೋಟೇರಿಯನ್ನರಿಗೂ ಒಂದು ಅಪೂರ್ವ ಅವಕಾಶ. ಗವರ್ನರರೇ ಮೊದಲಾದ ರೋಟರಿ ಇಂಟರ್‌ನೇಶನಲ್‌ನ ಅಧಿಕಾರಿಗಳಾಗಿದ್ದ ಹಿರಿಯ ರೋಟೇರಿಯನ್ನರು ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದು ರೋಟೇರಿಯನ್ನರಿಗೂ ಸಮ್ಮೇಳನದಲ್ಲಿ ಪಾಲುಗೊಳ್ಳುವ ಮತ್ತಿತರರಿಗೂ ಅವರ ಅನುಭವಗಳು ಬೋಧಪ್ರದವೂ, ಸ್ಫೂರ್ತಿದಾಯಕವೂ ಆಗುವುವು.

317ನೆಯ ಗವರ್ನರನಾಗಿ ನಾನು ಅರವತ್ತನಾಲ್ಕು ಕ್ಲಬ್ಬುಗಳನ್ನೂ ಸಂದರ್ಶಿಸಿದ್ದೇನೆ. ಇಡಿಯ ಮೈಸೂರು ರಾಜ್ಯ, ಗೋವೆ ಮತ್ತು ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶಗಳ ದಾಕ್ಷಿಣಾತ್ಯ ರೆವಿನ್ಯೂ ಜಿಲ್ಲೆಗಳಿಂದ ಕೂಡಿದ ಈ 317ನೇ ರೋಟರಿ ಜಿಲ್ಲೆಯ ಅಭಿವೃದ್ಧಿಯ ಕುರಿತು ಯೋಚಿಸಲು ಇದು ನನಗೆ ಸಹಾಯಕವಾಯಿತು. ಈ ಪ್ರದೇಶದ ಜನಸಂಖ್ಯೆ ಮೂರು ಕೋಟಿಗೂ ಮಿಕ್ಕಿದೆ. ಉದ್ದಿಮೆ, ವ್ಯಾಪಾರ, ಕೃಷಿ, ನೀರಾವರಿಗಳಲ್ಲಿ ಈ ಜಿಲ್ಲೆ ಸಮೃದ್ಧವಿದೆ; ಕೊಯನಾ, ಶರಾವತಿ, ಮತ್ತು ತುಂಗಭದ್ರಾ ಬೃಹದ್ಯೋಜನೆಗಳೂ ಈ ಪ್ರದೇಶದಲ್ಲಿವೆ. ಮಾಧ್ವ, ಶಾಂಕರ, ಜೈನ, ವೀರಶೈವ, ಕ್ರಿಶ್ಚಿಯನ್ ಮತ್ತು ಮುಸ್ಲಿಮ್ ಮೊದಲಾದ ತತ್ವಾನುಯಾಯಿಗಳು ಇಲ್ಲಿದ್ದಾರೆ. ರೋಟೇರಿಯನ್ನರು ಸಂಪರ್ಕವಿರಿಸಿಕೊಂಡ ಹಲವಾರು ವಿದ್ಯಾಕೇಂದ್ರಗಳೂ ಇಲ್ಲಿವೆ. ಅವರೆಲ್ಲರೂ ಒಂದುಸ್ಥಳದಲ್ಲಿ ಒಂದುಗೂಡುವ ಈ ಸಮ್ಮೇಳನದ ಅವಕಾಶವನ್ನು ಯಾವರೋಟೇರಿಯನ್ನನೂ ಕಳೆದುಕೊಳ್ಳಬಾರದು.

ಭಾರತದ ಪ್ರಾಚೀನ ಸಂಸ್ಕೃತಿಯ ಮೂಲ ತತ್ವವಾದ ನಿಸ್ವಾರ್ಥ ಸೇವೆಯ ಮೇಲೆಯೇ ರೋಟರಿ ಸ್ಥಾಪನೆಗೊಂಡಿದೆ. ಈ ಧ್ಯೇಯವನ್ನು ನಮ್ಮ ದೈನಿಕ ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯ ಇಂದು ಅತ್ಯಧಿಕವಿದೆ ರೋಟರಿಯ ಕಾರ್ಯಕ್ರಮಗಳು ನಾನಾ ವಿಧವಾಗಿದ್ದರೂ ಸಾಮಾಜಿಕ ಸೇವೆಯು ಭಾರತದ ಅವಶ್ಯವಾಗಿದೆ. 317ನೆ ಜಿಲ್ಲೆಯ 3000 ರೋಟೇರಿಯನ್ನರು ರೋಟರಿ ಧ್ಯೇಯವನ್ನು ಕಾರ್ಯರೂಪದಲ್ಲಿ ಕೃತಿಗಿಳಿಸಲು ಒಂದಾದರೆ, ನಮ್ಮ ದೇಶವೂ ರೋಟರಿ ಆಂದೋಲನವೂ ಯಶಸ್ವಿಯಾಗುವುವು.

ಈ ದಿಸೆಯಲ್ಲಿ ಮಣಿಪಾಲದ ಸಮ್ಮೇಳನವು ಉತ್ತೇಜನವನ್ನೂ ಸ್ಫೂರ್ತಿಯನ್ನೂ ನೀಡಲಿ

ಡಾ। ಟಿ ಎಂ. ಎ. ಪೈ,
ಗವರ್ನರ್, 317ನೆ ಜಿಲ್ಲೆ.



ಚಿತ್ರಗಳು: 317ನೇ ಜಿಲ್ಲೆ ರೋಟರಿ ಗವರ್ನರ್ ಡಾ। ಟಿ ಎಂ. ಎ. ಪೈಗಳವರು ಉಡುಪಿ, ಹಾವೇರಿ, ಬೆಂಗಳೂರು, ಬಂಗಾರಪೇಟೆ, ದಾವಣಗೆರೆ ತುಮಕೂರು, ಮೈಸೂರು, ರೋಟರಿ ಸಭೆಗಳಲ್ಲಿ ಭಾಷಣ ಮಾಡುತ್ತಿರುವುದು.

ಅಣುಶಕ್ತಿಯಿಂದ
ಮಾನವನ ಕಲ್ಯಾಣ ಪರಂಪರೆ

ಅಣುಗುಂಡಿನ ಪ್ರಯೋಗದಿಂದ ಪ್ರಪಂಚವನ್ನೇ ನಾಶಮಾಡಬಹುದು. ಅದೇ ಅಣುಶಕ್ತಿಯ ಸಾರ್ಥಕ ಬಳಕೆಯಿಂದ ಜಗತ್ತಿಗೆ ಬೇಕಾದ ಸಮಸ್ತ ಕಾರ್ಯಗಳನ್ನೂ ಮಾಡಿಕೊಳ್ಳಬಹುದು ಎಂಬುದನ್ನು ತೋರಿಸಲು, ಮಹಿಳೆಯರಿಗೆ ಅಣುಬಾಂಬಿನ ಬಗ್ಗೆ ಇರುವ ಹೆದರಿಕೆಯನ್ನು ಹೋಗಲಾಡಿಸಲು ಈಚೆಗೆ ಹಾನೋವರಿನಲ್ಲಿ ಒಂದು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಅದು ಅಸಂಖ್ಯ ಮಹಿಳಾ ಪ್ರೇಕ್ಷಕರನ್ನು ಆಕರ್ಷಿಸಿತು.

ಪ್ರತಿ ವರ್ಷವೂ ಈ ನಗರದಲ್ಲಿ ನಡೆಯುವ ವಸ್ತುಪ್ರದರ್ಶನದ ಅಂಗವಾಗಿ ಈ ವರ್ಷ ಗೃಹಿಣಿಯರಿಗಾಗಿ ಪ್ರದರ್ಶನವೆಂಬುದೊಂದನ್ನು ಏರ್ಪಡಿಸಲಾಗಿತ್ತು. ಗೃಹಕೃತ್ಯಕ್ಕೆ ಸಂಬಂಧಿಸಿದ ಹಲವಾರು ಉಪಯುಕ್ತ ವಿಷಯಗಳನ್ನು ಇಲ್ಲಿ ಪ್ರದರ್ಶಿಸಲಾಗಿತ್ತು. ದೇಶದ ಪ್ರಗತಿಯಲ್ಲಿ ಗೃಹಕೃತ್ಯಕ್ಕಿರುವ ಮಹತ್ತರ ಸ್ಥಾನ ಎತ್ತಿ ತೋರಿಸುವ ಸಲುವಾಗಿಯೇ ಈ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಈ ಪ್ರದರ್ಶನವನ್ನು ಸುಮಾರು ೩೦ ಲಕ್ಷ ಪುರುಷರೂ, ಸ್ತ್ರೀಯರೂ ವೀಕ್ಷಿಸಿದರು. ಈ ವೀಕ್ಷಕರು ಕೇವಲ ಜರ್ಮನ್ನರು ಮಾತ್ರವಾಗಿರದೆ ನೆದರ್‌ಲೇಂಡ್ಸ್, ಬೆಲ್ಜಿಯಂ, ಫ್ರಾನ್ಸ್, ಸ್ವಿಟ್ಜರ್‌ಲೇಂಡ್, ಡೆನ್ಮಾರ್ಕ್, ಸ್ವೀಡನ್ ಮತ್ತು ಅಮೇರಿಕಾ ಮುಂತಾದ ದೇಶಗಳಿಗೆ ಸೇರಿದವರೂ ಆಗಿದ್ದರು.

ಸಾಮಾನ್ಯವಾಗಿ ಅಣುಶಕ್ತಿ ಎಂದರೆ ವಿಧ್ವಂಸಕ ಕಾರ್ಯಗಳಿಗೆ ಮಾತ್ರ ಬಳಸಿಕೊಳ್ಳುವಂತಹುದೆಂದು ಬಹು ಜನರು, ಹೆಚ್ಚಾಗಿ ಹೆಂಗಸರು ತಿಳಿದಿದ್ದಾರೆ. ಅಣುಶಕ್ತಿಯನ್ನು ಮಾರಕ ಕಾರ್ಯಗಳಿಗೆ ಮಾತ್ರವಲ್ಲದೆ ಸಾಧಕ ಕಾರ್ಯಗಳಿಗೂ ಬಳಸಿಕೊಳ್ಳಬಹುದೆಂಬುದನ್ನೂ ರುಜುಪಡಿಸಲೋಸುಗವೇ ಈ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಅಡಿಗೆ ಮಾಡುವಿಕೆ, ಬಟ್ಟೆಗಳನ್ನು ಶುಭ್ರಗೊಳಿಸುವಿಕೆ, ಮನೆಯನ್ನು ಶುದ್ಧ ಪಡಿಸುವಿಕೆ ಮುಂತಾದ ಕಾರ್ಯಗಳಿಗಾಗಿ ಗಣಿಯ ಹೆಚ್ಚು ಶ್ರಮವಹಿಸದೆ ಅಣು ಶಕ್ತಿಯಿಂದ ಅವನ್ನು ಮಾಡಿ ಮುಗಿಸಬಹುದೆಂದು ಈ ಪ್ರದರ್ಶನವನು ವೀಕ್ಷಿಸಿದವರಿಗೆ ಮನವರಿಕೆಯಾಯಿತು.

ಗೃಹಕೃತ್ಯ ಆದ್ಯತೆಗಳ ಈ ಪ್ರದರ್ಶನದಲ್ಲಿ ಬಟ್ಟೆಗಳನ್ನು ತೊಳೆಯುವ ಯಂತ್ರ ವಿದೆಯೆಂದೂ, ಶೇಕಡಾ ೬೦ ಮನೆಗಳಲ್ಲಿ ರೆಫ್ರಿಜಿರೇಟರುಗಳಿವೆಯೆಂದೂ ತಿಳಿದು ಬಂದಿದೆ. ಅಮೇರಿಕಾದಲ್ಲಿ ೪೫ ಲಕ್ಷ ಮನೆಗಳಲ್ಲಿ ಸ್ವಯಂಚಾಲಿತ ಬಟ್ಟೆ ತೊಳೆಯುವ ಯಂತ್ರವಿವೆ. ಇಂತಹವು ೪೦೦೦೦ ಜರ್ಮನ್ ಮನೆಗಳಲ್ಲಿದ್ದು ಇನ್ನು ಮುಂದೆ ಪ್ರತೀ ವರ್ಷವೂ ೫೦೦೦೦ ಮನೆಗಳು ಕೊಳ್ಳುವ ನಿರೀಕ್ಷೆ ಇದೆ. ಇದಲ್ಲದೆ ಅಣುಶಕ್ತಿಯಿಂದ ಅಡಿಗೆ ತಯಾರಿಸಲು ಬೇಕಾದ ಒಲೆ ಮುಂತಾದವುಗಳನ್ನೂ ಇಲ್ಲಿ ಪ್ರದರ್ಶನಕ್ಕಿಡಲಾಗಿತ್ತು, ಇನ್ನು ಮುಂದೆ ಸ್ತ್ರೀ ಶಕ್ತಿಯೊಂದಿಗೆ ಅಣು ಶಕ್ತಿಯೂ ಸೇರಿದೆಂದರೆ ಕೇಳಲೇ ಬೇಕಾಗಿಲ್ಲ!

ಭಾರತವು ಅಣುಗುಂಡು ತಯಾರಿಸಬೇಕೇ ಅಥವಾ ಇಂತಹ ಕಲ್ಯಾಣಕಾರಕಗಳಿಗೆ ಪ್ರೋತ್ಸಾಹ ಕೊಡಬೇಕೆ?



ಹೇಗೆಂದರೆ

1 — ತಲಿಪರಂಬಾದಲ್ಲಿರುವ ತಲಿಪರಂಬಾ ಬ್ಯಾಂಕ್ ಲಿಮಿಟೆಡ್ ತಾ. 26-12-1964 ರಂದು ವಿಜಯ ಬ್ಯಾಂಕ್ ಲಿಮಿಟೆಡ್‌ನಲ್ಲಿ ವಿಲೀನವಾಗಲಿದೆ.

3 — (1) ತಲಚೇರಿ, (2) ಕೂತುಪರಂಬಾ ಮತ್ತು (3) ಕಲ್ಪೆಟ್ಟ (ಹೊಸ ಮಾಹೆ) ಈ ಸ್ಥಳಗಳಲ್ಲಿ ಶಾಖೆಗಳನ್ನು ಹೊಂದಿರುವ ದಿ ತಲಚೇರಿ ಬ್ಯಾಂಕ್ ಲಿಮಿಟೆಡ್ ತಾ. 28-12-1964 ರಂದು ವಿಜಯ ಬ್ಯಾಂಕ್ ಲಿಮಿಟೆಡ್‌ನಲ್ಲಿ ವಿಲೀನವಾಗಲಿದೆ.

3 — (1) ರಾಮನಗರಂ, (2) ಕನಕಪುರ ಮತ್ತು (3) ಚನ್ನಪಟ್ಟಣ - ಈ ಸ್ಥಳಗಳಲ್ಲಿರುವ ದಿ ವೈಶ್ಯ ಮರ್ಕಂಟೈಲ್ ಬ್ಯಾಂಕ್ ಲಿಮಿಟೆಡ್ ತಾ. 29-12-1964 ರಂದು ವಿಜಯ ಬ್ಯಾಂಕ್ ಲಿಮಿಟೆಡ್‌ನಲ್ಲಿ ವಿಲೀನವಾಗಲಿದೆ.

52 — ಈ ಮೂರು ಬ್ಯಾಂಕುಗಳ ವಿಲೀನದಿಂದ ವಿಜಯ ಬ್ಯಾಂಕ್‌ಗೆ ಇನ್ನೂ ಏಳು ಶಾಖೆಗಳು ಸೇರಿ ವಿಜಯ ಬ್ಯಾಂಕ್ ಶಾಖೆಗಳ ಸಂಖ್ಯೆ 52 ಆಗುವುದು.

ಕೇರಳದಲ್ಲಿನ ನಾಲ್ಕು ಹೊಸ ಶಾಖೆಗಳು ಮತ್ತು ಮೈಸೂರಿನಲ್ಲಿನ ಮೂರು ಹೊಸ ಶಾಖೆಗಳ ಠೇವಣಿದಾರರನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇವೆ. ಅವರೆಲ್ಲರಿಗೂ ವಿಜಯ ಬ್ಯಾಂಕಿನ ಆದರ್ಶ ಸೇವೆಯ ಭರವಸೆಕೊಡುತ್ತೇವೆ.

ವಿಜಯ ಬ್ಯಾಂಕ್ ನಿಮಗಾಗಿ ಇರುವ ಬ್ಯಾಂಕು.

ವಿಜಯ ಬ್ಯಾಂಕನ್ನು ನಿಮ್ಮ ಬ್ಯಾಂಕಾಗಿ ಮಾಡಿಕೊಳ್ಳಿ. ಈ ಬ್ಯಾಂಕಿನ ಉಪಯೋಗಪಡೆಯಿರಿ.

ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: "ವಿಜಯ ಬ್ಯಾಂಕ್ ಬಿಲ್ಡಿಂಗ್ಸ್,"
ಲೈಟ್ ಹೌಸ್ ಹಿಲ್ ರೋಡು, ಮಂಗಳೂರು-1.

ಚೇರ್ಮನ್: ಸುಂದರ ರಾಮ ಶೆಟ್ಟಿ

ಸೆಕ್ರೆಟರಿ: ಜಿ. ಜಯರಾಮ ಶೆಟ್ಟಿ

VB-18 KAN

ಅನಾವರಣ ಸಮಾರಂಭ

ಹಳೆಯಂಗಡಿ, ತಾ. 16—12—64 ರಂದು ಶ್ರೀ ಮಾನ್ ಶೇಖ್ ಇಸ್ಮಾಯಿಲ್ ಸಾಬ್ರು ಮತ್ತು ಸಹೋದರರು ಸ್ಥಳೀಯ ಬೋರ್ಡ್ ಹೈಸ್ಕೂಲಿಗೆ ದಾನವಾಗಿತ್ತ ಪ್ರಧಾನಿ ನೆಹರುಜೀಯವರ ಭಾವಚಿತ್ರದ ಅನಾವರಣ ಸಮಾರಂಭವು ಬೆಳ್ಳೂರು ಪಂಚಾಯತಿನ ಚೆಯರ್‌ಮೇನ್ ಶ್ರೀ ಪಿ. ಸಂಜೀವ ಹೆಗ್ಡೆಯವರಿಂದ ಶ್ರೀ ಮುಕ್ಕ ಮಹಾಬಲ ಶೆಟ್ರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಪಿ. ತಿಮ್ಮಪ್ಪಯ್ಯ ಮತ್ತು ಹಳೆಯಂಗಡಿ ಪಟೇಲರಾದ ಶ್ರೀ ಪಿ. ಬಿ. ಶಕೀರಪ್ಪನವರು ಸಮಯೋಚಿತ ಭಾಷಣಮಾಡಿದರು. ಶ್ರೀ ಪಿ. ಸಂಜೀವ ಹೆಗ್ಡೆಯವರು ನೆಹರು ಜೀಯವರ ಜೀವನದ ವೈಶಿಷ್ಟ್ಯವನ್ನು ವಿವರಿಸಿ ಮಕ್ಕಳನ್ನು ಆ ದಾರಿಯಲ್ಲಿ ಪ್ರಗತಿ ಹೊಂದುವಂತೆ ಹರಸಿದರು. ಶ್ರೀ ಶೇಖ್ ಇಸ್ಮಾಯಿಲ್ ಸಾಬ್ರು ಅವರು ತಾನು ಭಾವಚಿತ್ರವನ್ನು ದಾನಮಾಡಿದ ಉದ್ದೇಶವನ್ನು ವಿವರಿಸಿ ಆನಂದವನ್ನು ವ್ಯಕ್ತಪಡಿಸಿದರು. ಅಧ್ಯಕ್ಷರು ಶಾಲೆಗೂ ಮಕ್ಕಳಿಗೂ ಶುಭವನ್ನು ಕೋರಿದ್ದಲ್ಲದೆ, ಶಾಲೆಯಲ್ಲಿ ಈ ವರ್ಷ ವಾರ್ಷಿಕ ಪರೀಕ್ಷೆಯಲ್ಲಿ ಲೆಕ್ಕ ಶಾಸ್ತ್ರದಲ್ಲಿ ಪ್ರಥಮ ಸ್ಥಾನಗಳಿಸುವ ವಿದ್ಯಾರ್ಥಿಗಳಿಗೆ ರೂಪಾಯಿ 25/- ನ್ನು ಬಹುಮಾನವಾಗಿ ಕೊಡುವ ವಾಗ್ದಾನಮಾಡಿದರು. ಹಳೆಯಂಗಡಿ ಶ್ರೀ ಗಣೇಶ ಶಣೈಯವರು ಸಿಹಿತಿಂಡಿ ಹಾಗೂ ಪಾನೀಯವನ್ನು ವಿತರಣೆ ಮಾಡುವ ಉದಾರತೆ ತೋರಿಸಿದರು. ಕೊನೆಗೆ ಶಾಲಾ ಹಿಂದೀ ಹಾಗೂ ಕನ್ನಡ ಪಂಡಿತರಾದ ಶ್ರೀ ಎ. ಶಂಕರ ಸೆಟ್ರು ಧನ್ಯವಾದ ಸಮರ್ಪಿಸಿದರು.

ಉದ್ಘಾಟನೆ

ಉಡುಪಿ, 'ಡೋನ್ ಬೊಸ್ಕೊ ಕ್ಲಬ್‌ಹೋಲ್'ನ ಉದ್ಘಾಟನಾ ಸಮಾರಂಭವು ತಾ. 27-12-64 ನೇ ಸಂಜೆ 5-30 ಕ್ಕೆ, ಉಡುಪಿ ನಗರ ಸಭಾಪತಿ ಶ್ರೀ ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ಶ್ರೀ ಜೋಕಿಂ ಆಲ್ವ, ಎಂ. ಪಿ. ಯವರಿಂದ ನೆರವೇರಲಿರುವುದು.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ವಿಚಿತ್ರ ಸತ್ಯ

ದಕ್ಷಿಣ ಆಫ್ರಿಕೆಯ ಪ್ರತಿಗಾಮಿ ಶಕ್ತಿ

ದಕ್ಷಿಣ ಆಫ್ರಿಕೆಯಲ್ಲಿ ಆಳುತ್ತಿರುವ ರಾಜಕೀಯ ಪಕ್ಷ ಕಾಲವಾದಿ ರಾಷ್ಟ್ರೀಯ ಪಕ್ಷ. ಇದು ದೇಶೀಯರನ್ನು ಗುಲಾಮರಿಗೂ ಕಡೆಯಾಗಿ ನೋಡುತ್ತಿದೆ. ಇದರ ಅಧಿಕಾರಿಗಳೇ ಆಡಳಿತ ಯಂತ್ರವನ್ನೂ ಸೇನೆಯನ್ನೂ ನಿಯಂತ್ರಿಸುತ್ತಾರೆ. ಈ ರಾಷ್ಟ್ರೀಯ ಪಕ್ಷ, ಅರೆ ಫಾಸಿಸ್ಟ್ ಸಂಘಟನೆ ಮತ್ತಿತರ ಕೆಲವು ಗುಂಪುಗಳನ್ನು ತನ್ನ ಅಂಕೆಯಲ್ಲಿಟ್ಟುಕೊಂಡು ದಕ್ಷಿಣ ಆಫ್ರಿಕೆಯ ಹಣೆಬರಹವನ್ನೇ ಮುಗಿಸುತ್ತಿರುವ ರಹಸ್ಯ ಸಂಗಡವೊಂದಿದೆ ಎಂಬುದನ್ನು ಪಶ್ಚಿಮದವರು ಅರಿತಿಲ್ಲ. ಈ ರಹಸ್ಯ ಸಂಸ್ಥೆಯ ಹೆಸರು 'ಬ್ರೆಡರ್ ಬಾಂಡ್' 'ಅಂದರೆ ಸಹೋದರರ ಸಂಘ' ೧೯೧೮ರಲ್ಲಿ ಇದು ಸ್ಥಾಪಿತವಾದಾಗಲೇ ಇದರ ನಾಯಕರು 'ದಕ್ಷಿಣ ಆಫ್ರಿಕೆಯಲ್ಲಿ ಶ್ವೇತೇತರರನ್ನೆಲ್ಲ ದೂಡಿದುವುದೇ' ತಮ್ಮ ಕಾರ್ಯಕ್ರಮಗಳ ಮುಖ್ಯೋದ್ದೇಶವೆಂದು ಸಾರಿದ್ದರು.

"ಸಹೋದರರ ಸಂಘ"ವು ತನ್ನೆಲ್ಲ ಚಟುವಟಿಕೆಗಳನ್ನು ರಹಸ್ಯವಾಗಿಯೇ ನಡೆಸುತ್ತಿದೆ. ಇದರ ಸದಸ್ಯರು ಹಲವಾರು ಕರಾರುಗಳನ್ನು ಪಾಲಿಸಬೇಕಾಗುವುದು ದೇಶೀಯರನ್ನು ದ್ವೇಷಿಸುವವನೂ ಪರ್ಚಿಸ್ಟೀ ಉದ್ಯೋಗಾಧಿಪತಿ ಅಥವಾ ಸಾರ್ವಜನಿಕ ವರ್ತುಲಗಳಿಗೆ ಸೇರಿದವನೂ ಅಥವಾ ಅಂತಹವರೊಡನೆ ನಿಕಟ ಸಂಪರ್ಕವಿಟ್ಟುಕೊಂಡವನೂ ಇದರ ಸದಸ್ಯನಾಗಬಹುದು.

೧೯೪೮ರಲ್ಲಿ ಸೋದರರ ಸಂಘವು ಅಧಿಕಾರಕ್ಕೆ ಬಂದಾಗ ಅದರ ಸದಸ್ಯ ಸಂಪತ್ತು ಸುಮಾರು ಮೂರ ಸಾವಿರವಿತ್ತು. ಇಂದೀ ಸಂಖ್ಯೆ ೬,೦೦೦ವನ್ನೂ ಮೀರಿದೆ. ಇದರಲ್ಲಿ ೧೦ ಸದಸ್ಯರ ನೂರಾರು ತಂಡಗಳು ಇದರಲ್ಲಿವೆ. ಅನೇಕ ಗುಂಪುಗಳು ಕೂಡಿ ಒಂದೊಂದು ವಿಭಾಗವಾಗುತ್ತದೆ. ೧೨ ಜನ ಕಾರ್ಯ ನಿರ್ವಾಹಕ ಸಮಿತಿಯ ಕೈಕೆಳಗೆ ಇವರು ಕೆಲಸಮಾಡುತ್ತಾರೆ. ಈ ಸಮಿತಿಯ ಸದಸ್ಯರನ್ನು ದೂತರೆನ್ನುತ್ತಾರೆ. ವರಿಷ್ಠಾಧಿಕಾರವು ಬರೇ ಮೂವರು ದೂತರ ಕೈಗಳಲ್ಲಿದೆ ಈ ಮೂವರಲ್ಲಿ ದ. ಆಫ್ರಿಕೆಯ ಪ್ರಧಾನಿ ವೆರ್ವರ್ಡರೂ ಒಬ್ಬರೆಂದು ಅಮೇರಿಕೆಯ 'ಕ್ರಿಶ್ಚಿಯನ್ ಸೈನ್ಸ್ ಮಾನಿಟರ್' ಹೇಳುತ್ತದೆ. ವಾಣಿಜ್ಯಾಧಿಪತಿ ಡಾ| ಮೇಯೆರ್ ತ್ರಿಮೂರ್ತಿಗಳಲ್ಲಿ ಒಬ್ಬರು. ದ. ಆಫ್ರಿಕೆಯ ರೇಡಿಯೋ ಪ್ರಸಾರ ಕಾರ್ಪೊರೇಶನ್ನಿನ ಅಧಿನಾಯಕರೂ ಇವರೇ.

ಹಲವಾರು ಫೆಸಿಸ್ಟ್ ಸಂಸ್ಥೆಗಳಿಂದ ಎರವಲು ತಂದ ವಿಧಿ ವಿಧಾನಗಳು ಸಹೋದರ ಸಂಸ್ಥೆಯಲ್ಲಿವೆ. ಒಂದು ಕೋಣೆಯ ಮಧ್ಯದಲ್ಲಿ ಸ್ಟೆಚರ್ ಇದೆ ಅದರ ಮೇಲೆ ಬೊಂಬೆಯೊಂದಕ್ಕೆ ಕಪ್ಪು ವಸ್ತ್ರವನ್ನು ಸುತ್ತಿ ಇಟ್ಟಿದ್ದಾರೆ. ಈ ಶವದ ಎದೆಯನ್ನು ಕಠಾರಿಯೊಂದರಿಂದ ತಿವಿಯಲಾಗಿದೆ ಬ್ಯಾಟಂಗಳಿಂದ ಬೆಳಕು ಚೆಲ್ಲಿ ನೋಡಿದರೆ, ಅಪ್ತ ಸದಸ್ಯನು ಸ್ವೀಕರಿಸಬೇಕಾದ ಪ್ರತಿಜ್ಞೆಯ ಅಕ್ಷರಗಳು ಸರಿಯಾಗಿ ಕಾಣುತ್ತವೆ. "ಸೋದರತ್ವಕ್ಕೆ ದ್ರೋಹ ಬಗೆದವರನ್ನು ನಾಶಮಾಡಲಾಗುವುದು ಸೋದರತ್ವವು ಏನನ್ನೂ ಮರೆಯುವುದಿಲ್ಲ, ಏನನ್ನೂ ಕ್ಷಮಿಸುವುದಿಲ್ಲ ವಿಶ್ವಾಸ ದ್ರೋಹಿ ದಂಡನೆಯಿಂದ ಎಂದೆಂದೂ ಪಾರಾಗಲಾರ..."

ಮೊದಮೊದಲು ತೆರೆಯ ಮರೆಯೊಳಗೆ ಕೆಲಸ ಮಾಡುತ್ತಿದ್ದ "ಸೋದರರ ಸಂಸ್ಥೆ" ಕಾಲ ಕ್ರಮದಲ್ಲಿ ಶಕ್ತಿಗಳಿಸಿತು. ರಾಷ್ಟ್ರೀಯ ಪಕ್ಷದ ಯಂತ್ರವನ್ನೂ ಯಶಸ್ವಿಯಾಗಿ ಹತೋಟಿಗೆ ತೆಗೆದುಕೊಂಡಿತು. ಈ ಪಕ್ಷದ ಸದಸ್ಯರಲ್ಲೂ ಭೂಮಾಲೀಕರು ಹಾಗೂ ಬಂಡವಾಳಗಾರರ ಕಡೆಯಿಂದ ಅತ್ಯಂತ ಪ್ರತಿಗಾಮಿ ಮತ್ತು ಅತಿರೇಕ ರಾಷ್ಟ್ರೀಯ ವಾದಿ ಶಕ್ತಿಗಳ ಕೈ ಮಾಡವೇ ಅಧಿಕ. ೧೯೩೮ರಲ್ಲಿ ಇದರ ರಕ್ಷಣೆಯಲ್ಲಿ ಹೊಸತೊಂದು ರಾಜಕೀಯ ಪಕ್ಷವನ್ನು ರಕ್ತನದಿಯ ದಡದ ಮೇಲೆ ನಡೆದ ಯುದ್ಧದ ಶತಮಾನೋತ್ಸವದಂದು ರಚಿಸಲಾಯಿತು ಈ ಯುದ್ಧದಲ್ಲೇ ದ. ಆಫ್ರಿಕೆಯ ದೇಶೀಯರಾದ ಝುಲೂ ಜನರನ್ನು ಬಿಳಿಯರು ಸೋಲಿಸಿದ್ದರು. ಅಂದು ಈ ಸಂಘವು ಒಂದು ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸಂಸ್ಥೆಯಂತೆ ತೋರುತಿದ್ದರೂ ಇದು ನಾಜೀ ಸಂಘಟನೆಯನ್ನೇ ಬಹುವಾಗಿ ಹೋಲುತಿತ್ತು.

ಎರಡನೆಯ ಲೋಕ ಸಮರದ ವೇಳೆ ಈ ಸಂಸ್ಥೆಯು ೬೦ ಸಾವಿರ ಸದಸ್ಯರಿಂದ ಕೂಡಿ ಹಿಟ್ಲರನ ಪಂಚಮ ಸ್ತಂಭವಾಗಿ ಕಾರ್ಯವೆಸಗಿತು ಇದರ ಪ್ರಮುಖ ಕಾರ್ಯಕರ್ತ ರಾಬಿಲಿಯಿ ಜರ್ಮನಿಗೆ ಓಡಿದ್ದನು. ಆತನೇ ಜರ್ಮನ್ ಸಬ್‌ಮೇರಿನ್ ಒಂದರಲ್ಲಿ ದಕ್ಷಿಣ ಆಫ್ರಿಕೆಗೆ ಬಂದು ಇಲ್ಲಿ ಬಂಡಾಯಗಳನ್ನ ಸಂಘಟಿಸಿದನು. ಯುದ್ಧ ಮುಗಿವ ವೇಳೆಗೆ ಮರಣದಂಡನೆಗೊಳಗಾಗಿದ್ದ ಆತ ಮುಕ್ತನಾದನು. ಈ ವೇಳೆಯಲ್ಲಿ ಈ ಸಂಘದ ದಂಡನಾಯಕನಾಗಿದ್ದ ಬಾಲ್ಡ್ ಜಾರ್ ವೋರ್ಸ್ಟರನ್ನು ನಾಜೀ ಪರ ಚಟುವಟಿಕೆಗಳಲ್ಲಿ ಕೊಡಗಿದ್ದಕ್ಕೆ ಶಿಕ್ಷಿಸಲ್ಪಟ್ಟಿದ್ದನ. ಇಂತಹ ಮಹಾನುಭಾವನೇ ಇಂದು ವೆರ್ವರ್ಡ್ ಸರಕಾರದಲ್ಲಿ ನ್ಯಾಯಾಂಗ ಶಾಖೆಯ ಮಂತ್ರಿಯಾಗಿದ್ದಾನೆ.

ಸಹೋದರ ಸಂಸ್ಥೆ ಮತ್ತದಕ್ಕೆ ಸೇರಿರುವ ಸಂಘಗಳು, ಭೂಗತ ನಾಜೀ ತಂಡಗಳ ನಡುವೆ ನಿಕಟ ಸಂಪರ್ಕ ಬೆಳೆದುದನ್ನು ಕಂಡ ದ್ವಿತೀಯ ಲೋಕ ಯುದ್ಧದ ವೇಳೆ ದ. ಆಫ್ರಿಕೆಯ ಪ್ರಧಾನಿಯಾಗಿದ್ದ ಸ್ಮಟ್ಸ್ ವಿಚಾರಣೆ ನಡೆಸಲು ಆಜ್ಞೆಯನ್ನೂ ಹೊರಡಿಸಿದ್ದರು. ವಿಚಾರಣೆಯ ಫಲಿತಾಂಶ ಹುಚ್ಚು ಹಿಡಿಸುವಂತಹದಿದ್ದುದರಿಂದ ಇದನ್ನು ರಹಸ್ಯವಾಗಿಯೇ ಇಡುವ ಅಗತ್ಯ ಬಂತು. ಆದುದರಿಂದಾಗಿ 'ಸಹೋದರ ಸಂಸ್ಥೆ'ಯ ರೋಮ ಕೊಂಕಿಸಲಾಗದ ಸರಕಾರವೇ ಮುಂದೆ ಅದರ ಕೈಗಳಿಗೆ ಸಿಕ್ಕಿ ಗೊಂಬೆಯಾಟವಾಡಬೇಕಾಯಿತು. ಇದರ ಪರಿಣಾಮವಾಗಿಯೇ ಖಟ್ಟಾ 'ಸೋದರ'ರಾದ ಮಲಾನ್, ಸ್ಟ್ರಿಜ್ಡೋಯಿ ಮತ್ತು ವೆರ್ವರ್ಡರು ಕ್ರಮವಾಗಿ ದ. ಆಫ್ರಿಕೆಯಲ್ಲಿ ಅಧಿಕಾರ ಸೂತ್ರ ಹಿಡಿಯುವಂತಾಯಿತು.

"ಸೋದರರ ಸಂಸ್ಥೆ' ಮತ್ತು ರಾಷ್ಟ್ರೀಯ ಪಕ್ಷಗಳು ದ. ಆಫ್ರಿಕೆಯಲ್ಲಿ ತಮ್ಮ ಮುಷ್ಟಿಯನ್ನು ಬಿಗಿಯಾಗಿ ಹಿಡಿದಿವೆ ತೋರಿಕೆಗೆ ಅದ ಗಣರಾಜ್ಯವಾದರೂ ದ. ಆಫ್ರಿಕೆಯು ಕುಲವಾದೀ ಆಡಳಿತಗಾರರ ಆಗರವಾಗಿದೆ. ಇವರ ಚಟುವಟಿಕೆಗಳಿಂದ ಇದು ಅಪಾಯಕರವಾಗಿದೆ. ಅದರೂ ವೆರ್ವರ್ಡರು ಈ ಸಂಸ್ಥೆಯ ಚಟುವಟಿಕೆಗಳನ್ನು ಪರಿಶೀಲಿಸಲು ಸಮಿತಿ ನೇಮಿಸುವುದನ್ನು ಪಾರ್ಲಿಮೆಂಟಿನಲ್ಲಿ ತಡೆಯಲಾಗಲಿಲ್ಲ ವೆಂಬ ದಿಷ್ಟೇ ಸಂತೋಷ.

ಸಹೋದರ ಸಂಸ್ಥೆ ಹುಟ್ಟಿ ಬೇರು ಬಿಟ್ಟಿದ್ದು ದ. ಆಫ್ರಿಕೆಯಲ್ಲಿ. ಆದರೆ, ಈ ಬೇರು ಅದರ ಹೊರಗೆಯೂ ಹರಡಿದೆ. ಜಾಗತಿಕ ಪ್ರತಿಗಾಮಿ ಮತ್ತು ಸಾಮ್ರಾಜ್ಯವಾದಿಗಳ ಕೈಗೂಸಾಗಿದೆ ಈ ಸಂಸ್ಥೆ. ದ ಆಫ್ರಿಕೆಯ ಗಣರಾಜ್ಯದಲ್ಲಿ ದೇಶೀಯರನ್ನು ದ್ವೇಷಿಸುವ ವರ್ಣಭೇದ ನೀತಿಯನ್ನು ಪುರಸ್ಕರಿಸಿ, ಮಾನವತೆಯ ತಳಪಾಯವನ್ನೇ ಕೆಡಿಸುತ್ತಿರುವ ಈ 'ಸಹೋದರ ಸಂಸ್ಥೆ'ಯ ಗಪ್ತಕಾರಸ್ಥಾನಗಳೇ ಅಲ್ಲಿನ ಹಿಂಸೆಗೆ, ದೇಶೀಯರ ಬಂಧನಾದಿಗಳಿಗೆ ಕಾರಣವಾಗಿವೆ ಪ್ರಧಾನಿ ವೆರ್ವರ್ಡರೂ ಅವರ ಸಹಚಾರಿಗಳೂ ಈ ಸಂಸ್ಥೆಗೇ ತಮ್ಮನ್ನು ಮಾರಿಕೊಂಡವರಂತೆ ವರ್ತಿಸಿ ನಡೆಯುತ್ತಿದ್ದಾರೆ. ಆದುದರಿಂದಲೇ ಅಲ್ಲಿ ದಾನವತೆ ತಾಂಡವವಾಡುತ್ತಿದೆ.

ಎಂ. ಜಿ ಎಂ ಕಾಲೇಜಿನ ನೂತನ ಪುಸ್ತಕ ಭಂಡಾರದ ಕಟ್ಟಡವನ್ನು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಡಾ| ಕೆ. ಎಲ್. ಶ್ರೀಮಾಲಿಯವರು ಇತ್ತೀಚೆಗೆ ಉದ್ಘಾಟಿಸಿದಾಗ ತೆಗೆದ ಈ ಚಿತ್ರದಲ್ಲಿ ಅವರ ಜತೆಗೆ (ಎಡದಿಂದ) ಶ್ರೀಗಳಾದ ಟಿ. ರಮೇಶ ಪೈ, ಆರೂರು ಲಕ್ಷ್ಮೀನಾರಾಯಣ ರಾವ್ (ಕಾಲೇಜ್ ಟ್ರಸ್ಟಿನ ಅಧ್ಯಕ್ಷ) ಕೆ. ಎಸ್. ಹರಿದಾಸ ಭಟ್, (ಪ್ರಿನ್ಸಿಪಾಲ್) ಪ್ರಭಾಕರ ಶೆಟ್ಟಿ (ಯೂನಿಯನ್ ಅಧ್ಯಕ್ಷ) ಟಿ ಎ ಪೈ (ಕರೆಸ್ಪಾಂಡೆಂಟ್) ಎಂ. ಮಧ್ವರಾಜ, ಎಂ. ಎಲ್.ಎ. ಮೊದಲಾದವರಿದ್ದಾರೆ

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಮು. ರಾಘವೇಂದ್ರ ಆಚಾರ್ಯ, ಎಂ ಎ.

ಸಾಮಾನ್ಯ ರೋಗಗಳು

ಡಾ| ಕೆ. ಎಲ್ ನಾತ್ತಾಳ, ಎಂ ಬಿ ಬಿ. ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್ ಬಿ

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮರಳಿ ಚೈನಿ ಅಣುಗುಂಡು

(ಐದನೇ ಪುಟದಿಂದ)

ರ್ಮಾನವನ್ನೆದುರಿಸಿದರು. ಕಳೆದ ಸಲ ಹೇಳಿದ್ದ ವಿಷಯಗಳನ್ನೇ ಅಲ್ಪ ಸ್ವಲ್ಪ ಬದಲಾಯಿಸಿ ಹೇಳಿದರು ಪ್ರಧಾನಿಯವರು. ವಿಷಯಗಳನ್ನು ಪರ್ಯಾಲೋಚಿಸಿ ಸರಕಾರ ಆ ತೀರ್ಮಾನಕ್ಕೆ ಬಂದಿದ್ದು, ಅದು ಸಂದರ್ಭವನ್ನು ತೀವ್ರವಾಗಿ ಅವಲೋಕಿಸುತ್ತಿದೆ ಹಾಗೂ ದೇಶದ ರಕ್ಷಣೆಗೆ ಬೇಕಾಗಿರುವದನ್ನೆಲ್ಲಾ ಅದು ಮಾಡುತ್ತದೆಂಬ ಆಶ್ವಾಸನೆಯನ್ನು ಅವರು ಸದಸ್ಯರಿಗಿತ್ತಿರುವರು. ರೂಕ್ಷ ಕಮ್ಯೂನಿಸ್ಟರು ಅಣುಗುಂಡನ್ನು ಹಾಕುವಾಗ ಶ್ರೀ ಲಾಲಬಹದೂರ ಶಾಸ್ತ್ರಿಯವರು ದೇಶವನ್ನು ಹೇಗೆ ರಕ್ಷಿಸುವರೆಂಬುದೇ ಮುಖ್ಯ ವಿಷಯವಿದೆ. ಅಣ್ವಸ್ತ್ರ ಪರಿಣಾಮ ತಾಗದಂತೆ ಮಾಡಲು ಅವರ ಬಳಿ ಏನಾದರೂ ತಾಯಿತವಿದೆಯೇ? ಚೈನೀಯರು ಅಣುಗುಂಡು ಪ್ರಯೋಗಿಸದಂತೆ ಪ್ರಧಾನಿಯವರು ಸತ್ಯಾಗ್ರಹ ಹೂಡುವರೇ? ಅದರೆ ಅವರ ಬಳಿ ಹೇಳಿ, ನಂತರ ಚೈನೀಯರು ಪ್ರಯೋಗ ನಡೆಸುವದಿಲ್ಲವಲ್ಲಾ? ದಿವಂಗತ ಜವಾಹರಲಾಲರ ಮಾತಿನಲ್ಲಿ ಹೇಳುವದಾದರೆ ನಮಗೆ ಅವರು ಬೆನ್ನಲ್ಲಿ ಇರಿಯುತ್ತಾರೆ—ಪ್ರಚಲಿತ ಪ್ರಧಾನಿಯವರು ಈ ಸಲ ಅಂತಹದ್ದೇ ಇನ್ನೊಂದು ಉದ್ಗಾರವನ್ನೆತ್ತಿದ್ದಾರೆ.

ಭಾರತ ಅಣುಶಕ್ತಿ ತಯಾರಿಸಲಾರಂಭಿಸಿದಾಗ ಅಣುರಂಗದಲ್ಲಿ ಚೈನಾ ಬಹಳ ಹಿಂದಿತ್ತೆಂದು ಆಗ ಬಂದಿದ್ದ ಚಾ ಎನ್-ಲೈ ಹೇಳಿದ್ದರಂತೆ. ಅದು ಬಹುಶಃ ತಮ್ಮನ್ನು ಮೋಸ ಮಾಡಲಿಕ್ಕಾಗಿಯೇ ಹೇಳಿದ್ದೆಂಬುದು ಪ್ರಧಾನಿಯವರ ವಾದ. ಮೋಸ ಹೋಗುತ್ತಿರುವದೇ ಈ ಸರಕಾರದ ವೈಶಿಷ್ಟ್ಯವೇನು? ನಾಲ್ಕು ಜನರ ನಲ್ನುಡಿಗಳಿಗೆ ತಕ್ಕಂತೆ ನಡೆದುಕೊಳ್ಳಲೂ ಗೊತ್ತಿಲ್ಲ. ಅನಂತರ ಮೋಸ ಹೋದೆವೆಂದು ಅಂಗೈ ಮೇಲೆ ಹಿಡಿದು ಬಿಡುವದು! ಸಾಲದುದಕ್ಕೆ ನಾವೂ ಮನುಷ್ಯರೇ ತಾನೇ, ತಪ್ಪು ಮಾಡುವದು ಮನುಷ್ಯನ ಸ್ವಭಾವವೆಂದು ನೂತನ ವರ್ಗದ ಮುಖಕ್ಕೇ ಕಪ್ಪು ಬಳಿಯಲು ಮುಂದಾಗಿ ಬಿಡುತ್ತಾರೆ!

ಅಡಿಗೆ ಬಿದ್ದರೂ ಮೂಗು ಮೇಲೆನ್ನುವವರ ಜಾತಿಗೆ ಸೇರಿದವರಂತೆ ಪ್ರಧಾನಿಯವರು ತಮ್ಮಿಂದಲೂ ಅಣುಗುಂಡು ತಯಾರಿಸಲು ಸಾಧ್ಯವೆಂದು ಎದೆತಟ್ಟಿ ಹೇಳುವಂತೆ ಸಾರಿದ್ದಾರೆ. ಅಣುಶಕ್ತಿ ಇಲಾಖೆಯ ಅಧಿಕಾರಿ ಡಾ. ಭಾಭಾರವರಿಗೆ ಅಣುಗುಂಡು ತಯಾರಿಸಲು ಒಂದೂವರೆ ವರ್ಷ ಸಾಕಾಗುತ್ತದಾದಲ್ಲಿ ಪ್ರಧಾನಿಯವರಿಗೆ ಮೂರು ವರ್ಷ ಬೇಕು! ಈ ರಂಗದಲ್ಲಿ ಯಾರಿಗೆ ಅನುಭವ ಜಾಸ್ತಿ? ಇನ್ನು ರಕ್ಷಣಾ ಮಂತ್ರಿಯವರಿಗೆ ಅದೆಷ್ಟು ವರ್ಷಗಳು ಬೇಕೋ? ಹೀಗೆ ದಿನಗಳೆದಂತೆ ನಮ್ಮ ಪ್ರಗತಿ ನಡೆಯುತ್ತಿದೆ! 'ಪುಣ್ಯವಶಾತ್', ತಪ್ಪಿ ಕೂಡಾ ಭಾರತ ಅಣುಗುಂಡನ್ನು ತಯಾರಿಸುವದಿಲ್ಲವೆನ್ನುವ ಆಶ್ವಾಸನೆಯನ್ನು ಪ್ರಧಾನಿಯವರು ಪದೇ ಪದೇ ಕೊಡುತ್ತಿದ್ದಾರೆ. ಗಿಳಿಯಂತೆ ಅವರು ಪಲ್ಲವಿಯನ್ನು ಹಾಡುತ್ತಿದ್ದರೂ ಪಾಕಿಸ್ಥಾನ ತನ್ನ ಸಂಶಯವನ್ನು ಪ್ರಕಟಪಡಿಸಿದ್ದು, ಅದರ ಸತ್ಯಾಸತ್ಯತೆಯ ಪರೀಕ್ಷೆಗಾಗಿ ಸಂಯುಕ್ತ ರಾಷ್ಟ್ರ ಸಂಘಕ್ಕೆ ಮೊರೆ ಇಡಲು ಅದು ಮುಂದಾಗಿದೆ. ಪ್ರಧಾನಿಯವರ ಆಶ್ವಾಸನೆಯ ಪ್ರಯೋಜನವಾದರೂ ಏನು?

ಕಳೆದ ಸಲದಂತೆ ಈ ಬಾರಿಯೂ ಆರ್ಥಿಕ ಪರಿಸ್ಥಿತಿಯ ಪರಿಚಯವನ್ನು ಸದಸ್ಯರಿಗೆ ಪ್ರಧಾನಿಯವರು ಜ್ಞಾಪಕಪಡಿಸಿದ್ದಾರೆ. ಅದಕ್ಕೆ ಹಾಸ್ಯ ಮಾಡಲಿಕ್ಕಾಗಿಯೋ ಎಂಬಂತೆ ಲೋಕ ಸಭೆಯಲ್ಲಿ ಇನ್ನೊಂದು ಘಟನೆ ನಡೆಯಿತು. ಸರಕಾರಿ ನೌಕರರಿಗೆ ಅಧಿಕ ತುಟ್ಟಿಭತ್ತೆ ಕೊಡಬೇಕೆನ್ನುವವರ ಕುರಿತು ಚರ್ಚೆ ನಡೆಯುತ್ತಿದ್ದಾಗ ಕಾಂಗ್ರೆಸ್ಸ್ ಸದಸ್ಯ ಶ್ರೀ ಯಸ್. ಯನ್. ಚತುರ್ವೇದಿಯವರು ಅಣುಶಕ್ತಿ ಸಂಶೋಧನೆಗಾಗಿ ಹಣ ಬೇಕಾಗಿರುತ್ತದೆಂದು ಅವರು ಹೇಳಿದರು. ಸಂಸತ್ತ್ ಸದಸ್ಯರ ಸಂಭಾವನೆ ಅಧಿಕಗೊಳಿಸಿದಾಗ ಇಂತಹ ಮುತ್ತಿನ ಮಾತು ಆಗ ಅವರ ಬಾಯಿಯಿಂದ ಬಂದಿತ್ತೇ?

ಏಳಲಿಕ್ಕೇನೇ ಸಾಧ್ಯವಾಗದಿರುವವನು ಜಗಲಿ ಹಾರುವದನ್ನು ಕಂಡು, ಮಹಾ ಗಗನಕ್ಕೆ ಹಾರುವವನೆಂದು ಮೂಗು ಮುರಿಯುವಂತೆ ಶ್ರೀ ಲಾಲಬಹದೂರಜೀಯವರು ಅಣುಗುಂಡು ಪರೀಕ್ಷೆ ನಡೆಸಿಯಾದರೂ ಚೈನಾವು ಹೊಸ ಅಣ್ವಸ್ತ್ರ ಶಕ್ತಿಯಲ್ಲವೆಂದಿದ್ದಾರೆ.

ಅಣುಗುಂಡು ತಯಾರಿಸುವ ಕುರಿತು ಬಾಯಿಗೆ ಬೀಗ ಹಾಕಿಕೊಂಡಿದ್ದ ಕಮ್ಯೂನಿಸ್ಟರಿಗೆ ಕಾಂಗ್ರೆಸ್ಸಿಗರ ವರ್ತನೆಯಿಂದ ಹಾಗೂ ಪ್ರಧಾನಿಯವರ ಆಶ್ವಾಸನೆಯಿಂದ ಸ್ವಲ್ಪ ಧೈರ್ಯ ಬಂದಿರುತ್ತದೆ. ಅವರು ಸರಕಾರದ ಧೋರಣೆಯನ್ನು ಪ್ರೋತ್ಸಾಹಿಸುವವರಂತೆ ಮಾತಾಡಿದ್ದಾರೆ. ಅವರಲ್ಲಿರುವ ರಷ್ಯಾ ಗುಂಪಿನವರಾತೂ ಅಣುಗುಂಡನ್ನು ತಯಾರಿಸ ಕೂಡದೆಂದು ಪಟ ಹಿಡಿದಿದ್ದಾರೆ. ಚೈನಿ ಗುಂಪು ಭಾರತದ ಬಲದ ಕುರಿತು ಪ್ರಶ್ನೆಯನ್ನೆತ್ತಿರುತ್ತದೆ. ಔದ್ಯೋಗಿಕ ಹಾಗೂ ಆರ್ಥಿಕ ಬಲವಿದ್ದಲ್ಲಿ ಅಣುಗುಂಡನ್ನು ಭಾರತ ತಯಾರಿಸುವದಕ್ಕೆ ತಮ್ಮಿಂದೇನೂ ವಿರೋಧವಿಲ್ಲವೆಂದು ಅನಂದನ್ ನಂಬಿಯಾರ್ ಹೇಳಿದ್ದಾರೆ. ಅಂದರೆ ಇಂದು ಭಾರತ ಕೈಗಾರಿಕೆ ಹಾಗೂ ಆರ್ಥಿಕ ರಂಗದಲ್ಲಿ ಬಹಳ ಹಿಂದುಳಿದಿದ್ದು, ಚೈನಾದ ಎದುರಿಗೆ ಮಂಡಿಯೂರ ಬೇಕೆಂಬುದೇ ಅವರ ಮಾತಿನ ಅಂತರಾಳವಿದೆ. ಪ್ರಧಾನಿಯವರು ಪದೇ ಪದೇ ನಮ್ಮ ಆರ್ಥಿಕ ರಂಗದ ಕುರಿತು ಆಡಿರುವ ಮಾತುಗಳೇ ಅವರಿಗೆ ಆ ರೀತಿ ಆಡಲು ಧೈರ್ಯವನ್ನುಂಟು ಮಾಡಿರುತ್ತದೆ.

ಧರ್ಮ ಮತ್ತು ದೇವರ ಹೆಸರು ಹೇಳಿ ಕೆಲವರು ಮುಗ್ಧ ಜನತೆಯನ್ನು ಹಿಂದೆ ಮೋಸಗೊಳಿಸುತ್ತಿದ್ದರು. ಇಂದು ಗಾಂಧೀ-ನೆಹರು ಹೆಸರು ಹೇಳಿ ರಾಜಕೀಯದಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವವರಿದ್ದಾರೆಂಬುದನ್ನು ಸ್ವತಂತ್ರ ಸದಸ್ಯ ಶ್ರೀ ಪ್ರಕಾಶವೀರ ಶಾಸ್ತ್ರೀಯವರು ಹೇಳಿರುವರು. ಪ್ರಧಾನಿಯವರು ತಮ್ಮ ಭಾಷಣದಲ್ಲಿ, ಆರ್ಥಿಕ ಪರಿಸ್ಥಿತಿ ಒತ್ತಟ್ಟಿಗಿರಲಿ, ಗಾಂಧೀಜಿ ಮತ್ತು ನೆಹ್ರೂಜೀಯವರ ನೇತೃತ್ವದಲ್ಲಿ ಶಾಂತಿ ಹಾಗೂ ಅಹಿಂಸೆಗಳಿಗಾಗಿ ಎದ್ದು ನಿಂತಿರುವ ಭಾರತ ಅಣ್ವಸ್ತ್ರ ರಂಗದಲ್ಲಿ ಪಂದ್ಯಾಟಕ್ಕೆ ನಿಲ್ಲುವ ಕಲ್ಪನೆಯನ್ನೂ ಮಾಡುವದಿಲ್ಲವೆಂದು ಹೇಳಿದ್ದರು. ಅದಕ್ಕೆ ಉತ್ತರ ಕೊಡುತ್ತ ಶ್ರೀ ಪ್ರಕಾಶವೀರ ಶಾಸ್ತ್ರೀಯವರು, ಪಾಕಿಸ್ಥಾನ ಆಕ್ರಮಣಕ್ಕಾರಂಭಿಸಿದ್ದಾಗ ಕಾಶ್ಮೀರಕ್ಕೆ ಸೈನ್ಯ ಕಳುಹಿಸುವುದನ್ನು ಗಾಂಧೀಜೀ ತಡೆದಿರಲಿಲ್ಲ, ಅದರ ಬದಲು ಪ್ರೋತ್ಸಾಹಿಸಿದ್ದರು. ಅಂತೆಯೇ ಅವರಿಂದು ಇರುತ್ತಿದ್ದಲ್ಲಿ ಚೈನೀ ಆಕ್ರಮಣಗಾರರನ್ನೆದುರಿಸಲು ಅಣುಗುಂಡು ತಯಾರಿಸುವುದಕ್ಕೆ ವಿರೋಧಿಸುತ್ತಿರದೆ ಪ್ರೋತ್ಸಾಹಿಸುತ್ತಿದ್ದರೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ನೆಹ್ರೂಜಿಯವರು ಅಣ್ವಸ್ತ್ರ ತಯಾರಿಸುವದಿಲ್ಲವೆಂದು ಹೇಳುತ್ತಿದ್ದಾಗ ಅಣುಶಕ್ತಿ ರಂಗದಲ್ಲಿ ಚೈನಾ ಭಾರತಕ್ಕಿಂತ ಹತ್ತು ವರ್ಷ ಹಿಂದಕ್ಕಿತ್ತು. ಈಗ ಕಾಲ ಬದಲಾಗುತ್ತದೆ. ನೆಹ್ರೂಜೀ ಇರುತ್ತಿದ್ದಲ್ಲಿ ಅದರ ನಿಲುವೂ ಬದಲಾಗುತ್ತಿತ್ತೆಂದೂ ಪ್ರಕಾಶವೀರ ಶಾಸ್ತ್ರೀಯವರು ತಮ್ಮ ವಾದವನ್ನು ಪ್ರಬಲವಾಗಿ ತಿಳಿಯಪಡಿಸಿದರು. ಆದರೂ ಆರ್ಥಿಕ ಬಲ ಕಾಂಗ್ರೆಸ್ ಪಕ್ಷಕ್ಕಿರುವದರಿಂದ ಲೋಕಸಭೆಯಲ್ಲಿ ಎದುರು ಪಕ್ಷಗಳು ಉಸಿರೆತ್ತುವಂತಿಲ್ಲ. ಅಂತೆಯೇ ಈ ಸಲದ ಅವರ ಪ್ರಯತ್ನವೂ ವಿಫಲವಾಯಿತು. ಕಮ್ಯೂನಿಸ್ಟರು ಹಿಗ್ಗಿ ಹೀರೆಕಾಯಿಗಳಾದರು.

ಅಣ್ವಸ್ತ್ರ ತಯಾರಿಕೆಯನ್ನು ವಿರೋಧಿಸುತ್ತ ಕಾಂಗ್ರೆಸ್ಸ್ ಸದಸ್ಯ ಖಾಡಿಲ್ಕರರು ಅಣುಗುಂಡು ಆಟದ ಗೊಂಬೆ ಅಥವಾ ಗೌರವದ ಚಿಹ್ನೆ ಇರುವದಿಲ್ಲವೆಂದು ಹೇಳಿದರು. ಇಂತಹ ಮಾತನ್ನು ಹಲವಾರು ಸದಸ್ಯರು ಆಡಿರುವರು. ಅದು ಸ್ವರಕ್ಷಣೆಗಾಗಿ ಇರದೆ, ಮಾರಕಶಾಸ್ತ್ರವಾಗಿದೆಂಬುದೇ ಅವರೆಲ್ಲರ ವಾದದ ಸಾರವಾಗಿತ್ತು.

ಠೇವಣಾತಿದಾರರಿಗೆ ಸುಸಂದರ್ಭ!
ಹೆಚ್ಚಿಸಿದ ಬಡ್ಡಿ ದರ!!

ಠೇವಣಾತಿಗಳ ಮೇಲೆ 4¼%ರಿಂದ 6¼%ರ ವರೆಗಿನ ಬಡ್ಡಿ ನೀಡಲಾಗುವುದು.

5 ವರ್ಷದ ಅವುಗಳಿಗೆ ಮೇಲ್ಪಟ್ಟ ಧಾರ್ಮಿಕ ಠೇವಣಾತಿಗಳಿಗೆ 6¼%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ಕೊಡಲಾಗುವುದು.

[illegible] ವಿವರಗಳಿಗೆ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ದೇಶ ರಕ್ಷಣೆಯ ಸರ್ವಭಾರ ಇಂದು ಅಧಿಕಾರ ರೂಢ ಕಾಂಗ್ರೆಸಿನ ಕೈಯಲ್ಲಿದೆ. ದೇಶರಕ್ಷಣೆ ಎಂಬ ಪಂದ್ಯಾಟ ಕಣದಲ್ಲಿ ಅದು ಇಳಿದಿದೆ. ಹಿಮಾಲಯದ ತಪ್ಪಲಲ್ಲಿ ತಪಸ್ಸು ಮಾಡುತ್ತಿರುವ ಅಥವಾ ಶ್ರೀ ಗುಲ್ಜಾರೀಲಾಲ ನಂದರವರ ಕೃಪಾಛತ್ರದಡಿಯಲ್ಲಿರುವ ಸಾಧು. ಸಂಗದ ಸದಸ್ಯರೂ ಕಾಂಗ್ರೆಸ್ಸಿಗರಿರುವದಿಲ್ಲ. ಚೈನಾ-ಪಾಕಿಸ್ತಾನ ಕಾಲು ಕೆದರಿ ನಮ್ಮನ್ನು ಕಾಳಗಕ್ಕೆ ಕರೆಯುತ್ತಿವೆ. ಅವರು ಗಡಿದಾಟಿ ಬಂದು ರಾಕ್ಷಸೀಯ ಕುಕೃತ್ಯಗಳನ್ನು ನಡೆಸುತ್ತಿದ್ದಾರೆ. ಅದೆಷ್ಟು ಸಮಯ ಸಾವಧಾನ ಹಾಗೂ ಸಮಾಧಾನದಿಂದ ಅದನ್ನು ನೋಡಿಕೊಂಡಿರಲು ಸಾಧ್ಯ? ಭಾರತಕ್ಕೆ ಇಷ್ಟವಿರಲಿ ಇಲ್ಲದಿರಲಿ ರಕ್ಷಣೆಯ ಮಾರ್ಗಕ್ಕೆ ಮೊರೆಹೋಗಲೇ ಬೇಕು.

ಗೀತಾ ಜಯಂತಿ ಆಚರಿಸಿ ವಾರವೊಂದು ಸಂದಿತು: ಈ ಸಮಯದಲ್ಲಿ ಅರ್ಜುನನು ಮಾಯೆಗೊಳಗಾದಾಗ ಭಗವಾನ್ ಶ್ರೀ ಕೃಷ್ಣನು ಹೇಳಿದ್ದ ಮಾತುಗಳು ಜ್ಞಾಪಕಕ್ಕೆ ಬರವುದು ಸ್ವಾಭಾವಿಕವಿದೆ. ಅರ್ಜುನ ಕೇವಲ ಸ್ವರಕ್ಷಣೆಗಾಗಿ ಮಾತ್ರ ಬಾಣ ಬಿಡಲಿಲ್ಲ. ಶತ್ರುಗಳ ನಾಶಕ್ಕಾಗಿ ಬಾಣ ಬಿಟ್ಟ. ಸ್ವರಕ್ಷಣೆಗಾಗಿ ಮಾತ್ರ ಬಾಣ ಬಿಡುತ್ತಿದ್ದಲ್ಲಿ ಮಹಾಭಾರತದ ಕಥೆ ಬೇರೆಯೇ ರೂಪವನ್ನು ತಾಳುತ್ತಿತ್ತು. ಅಂತೆಯೇ ನಾವಿಂದು ಅಣುಗುಂಡನ್ನೆದುರಿಸುವ ವಿಧಾನವನ್ನು ಕಂಡುಹಿಡಿಯದಿದ್ದಲ್ಲಿ ಭಾರತದ ಭವಿಷ್ಯತ್ತು ಬೇರೆ ರೀತಿಗೆ ಹೋಗಬಹುದು. ಅಣುಗುಂಡು ತಯಾರಿಸಲು ನಾವೆದುರಿಸಬೇಕಾಗಿರುವ ಕಷ್ಟಗಳ್ಯಾವುವು, ಉಳಿದ ದಾರಿ ಯಾವದು ಎಂಬುದನ್ನು ಅಲ್ಲದೆ ಕೆಲವರ ಅಭಿಪ್ರಾಯಗಳನ್ನು ಮುಂದಿನ ವಾರಗಳಲ್ಲಿ ಕಾಣುವ

"ಕೃಷ್ಣ, ಕೌರವರನ್ನು ಕೊಂದರೆ (ಅಣುಗುಂಡಿನ ಮದದಲ್ಲಿರುವ ಆಕ್ರಮಣಗಾರ ಚೈನಿ ಕಮ್ಯೂನಿಸ್ಟರನ್ನು ಸದೆಬಡಿದರೆ) ನಮಗೇನು ಸುಖವಾದೀತು? ಈ ಕೇಡಿಗರನ್ನು ಕೊಲ್ಲುವದರಿಂದ ನಮಗೆ ಪಾಪವೇ ಗಂಟು ಬಿದ್ದೀತು... ರಾಜ್ಯದಿಂದಾಗುವ ಸುಖದ ಮೇಲಿನ ಆಸೆಯಿಂದ ನೆಂಟರನ್ನು ಕೊಲ್ಲುವದಕ್ಕೆ ಹೊರಟಿರುವ ನಾವು, ಆಹಾ! ಎಂಥ ದೊಡ್ಡ ಪಾಪವನ್ನು ಮಾಡುವದಕ್ಕೆ ಹೊರಟಿರುವೆವು!"... ಈ ರೀತಿ ದಯನೀಯ ಅವಸ್ಥೆಯಲ್ಲಿ ಕಣ್ಣೀರು ತಂಬಿ ಮುಂದುಗಾಣದೆ ವ್ಯಥೆಪಡುತ್ತಿರುವ ಅರ್ಜುನನನ್ನು ಕಂಡು ಮಧುಸೂದನನು ಹೇಳಿದ್ದಾದರೂ ಏನು? "ಅರ್ಜುನ, ದೊಡ್ಡವರ ನಡವಳಿಕೆಯಿಲ್ಲದೆಯೂ, ಸ್ವರ್ಗದ ಸಾಧನವಲ್ಲದೆಯೂ, ಅಕೀರ್ತಿ ತರುವದಾಗಿಯೂ ಇರುವ ಈ ಕಶ್ಮಲ ನಿನಗೆ ಬರಬಾರದ ಕಡೆ ಹೇಗೆ ಬಂತು? ಪಾರ್ಥ, ಎದೆಗೇಡಿತನವನ್ನು ಹೊಂದಬೇಡ ನಿನಗೆ ಇದು ತಕ್ಕುದಲ್ಲ. ವೈರಿಗಳನ್ನು (ಆಕ್ರಮಣಗಾರರನ್ನು) ನಡುಗಿಸುವ ನೀನು ಈ ಕ್ಷುದ್ರಕರ ಹೃದಯ ದೌರ್ಬಲ್ಯವನ್ನು ತೊರೆದು ಎದ್ದೇಳು... ಗುರಿ ಮುಟ್ಟುವ ತನಕವೂ ನಿಲ್ಲದಿರು." ಇದಲ್ಲವೇ ಇಂದಿನ ಗೀತಾ ಸಂದೇಶ?

ಗಂಡಹೆಂಡಿರ ತಲೆಹರಟೆ

(ನಾಲ್ಕನೇ ಪುಟದಿಂದ)

ದು ವೈದೀಕ ಮಾಡೋ ಬದಲಿಗೆ ಭಟ್ರಿಗೆ ಊಟದ ದುಡ್ಡು ಅಂತ ಎಲ್ಲಾ ದಕ್ಷಿಣೇಲೇ ಮುಗಿಸಿ ಬಿಡುವುದು ಒಳ್ಳೆಯದಲ್ಲವೆ? ಅವರವರ ಊಟ ಅವರವರ ಮನೇಲೇ ಎಂಬುದೇ ನ್ಯಾಯ"

"ಯಾರೋ ನೆಂಟರು ಬರುತ್ತಾರೆ. ಎರಡು ದಿನ ಇದ್ದು ಹೋಗುತ್ತಾರೆ, ಆಗ?"

"ಬುದ್ಧಿವಂತ ನೆಂಟರಾದರೆ ಹಾಗೆಲ್ಲಾ ಬರೋದೇ ಇಲ್ಲ; ಬಂದ್ರೂ ತಮ್ಮ ಪಾಲಿನ ರೇಷನ್ ಅಕ್ಕೀನೂ ತಂದಾರು. ಇಲ್ಲದಿದ್ರೆ ಅರ್ಜಿ ಬರೆದು ರೇಷನ್ ಸ್ಯಾಂಕ್ಷನ್ ಮಾಡಿಸಿ ಕೊಳ್ಳಬೇಕು"

"ಆದಕ್ಕಲ್ಲ ಒಂದೆರಡು ದಿನವೇ ಆದೀತು. ಅಷ್ಟರ ವರೆಗೂ ಅವರು ಉಪವಾಸವೇನು?"

"ಅದಕ್ಕೇನು ಹೇಳೋದೇನೊಂದ್ರೆ, ಮನೇ ಮುಂದೆ, ಇಲ್ಲಿ ಊಟಕ್ಕೆ ಬರುವವರು ಅಕ್ಕಿಯೊಂದಿಗೇ ಬನ್ನಿ, ಅಂತ ಬೋರ್ಡು ಬರೆದು ತಗಲು ಹಾಕಿ ಬಿಟ್ರೆ ಯಾವ ತಂಟೇನೂ ಇಲ್ಲ".

"ಛೇ ಛೆ! ನಾಚಿಗ್ಗೇಡ!"

'ನಾಗರಿಕರ ದುಡ್ಡಿನ ನೋಟ್ಸ್ ಇದ್ದವರು ಕಾಳ ಸಂತೆಗೆ ಹೋಗಿ ಬೇಕಾದ ಹಾಗೆ ತಂದು ಕೊಳ್ತಾರೆ!'

'ಅಪ್ಪಾ! ಬಚಾವ್! ಅದಾದ್ರೂ ಉಂಟಲ್ಲ!'

(ಕೋಪದಿಂದ) 'ಏನೇ! ಸೊಕ್ಕಿನವಳೆ! ನೀನೂ ಛಾಂಗಂತೀಯಾ? ಸಂಪಾದಿಸುವವ ನಾನು. ನಿನಗೇನು? ನಿನ್ನಂಥವರಿಂದಲೇ ಕಳ್ಳ ಪೇಟೆ ಬೆಳೆದು ಹೋಯ್ತು ಗೊತ್ತೆ? ಹುಂ! ಸರಕಾರ ಎಷ್ಟೋ ಹಣ ಖರ್ಚು ಮಾಡಿಕೊಂಡು ಜನರ ಹೊಟ್ಟೆಯನ್ನು ಸಣ್ಣದು ಮಾಡಲಿಕ್ಕೆ ಪ್ರಯತ್ನ ಪಡುತ್ತಾ ಇರುವಾಗ, ನಿನ್ನ ಹಾಗಿನ ಮನೋಭಾವವುಳ್ಳವರು ಮೂರು ಹೊತ್ತು ಮೂಗಿನವರೆಗೆ ತಿನ್ನುತ್ತ, ಬ್ಲ್ಯಾಕ್ ಮಾರ್ಕೆಟ್ ಬೆಳೆಯಗೊಟ್ಟು ಸರಕಾರಕ್ಕೆ ಹೊಸ ತಲೇ ನೋವು ಒದಗಿಸುತ್ತಾ ಇದ್ದೀರಿ!"

(ಅಳುತ್ತ) "ಏನೂಂದ್ರೆ! ನನ್ನ ಮೇಲೆ ಯಾಕೆ ಸಿಟ್ಟು ಮಾಡ್ತೀರಿ? ನಾನು ಉಣ್ಣೋ ಅನ್ನ ನೋಡಿ ಇಷ್ಟೇ. ಬೇಕಾದರೆ ಬಟ್ಟೆಬಿಟ್ಟುಕೊಂಡು ಪರೀಕ್ಷೆ ಮಾಡಿ ನನ್ನ'

(ಅವಳ ಕಣ್ಣೀರೊರೆಸುತ್ತ) ಅಯ್ಯೋ! ಇದೇನೇ? ನಿನ್ನ ವಿಷಯ ನನಗೆ ಗೊತ್ತಿಲ್ಲವೇ? ನಾನು ಹೇಳಿದ್ದು ನಿನಗ ಅಲ್ಲವೇ ಅಲ್ಲ. ನಿನ್ನ ನೆಪದಲ್ಲಿ ಸಾರ್ವಜನಿಕವಾಗಿ ಹೇಳಿದ್ದು—ಹೀಗೆಲ್ಲಾ ನಡೀತೇ ಅಂತ. ನೀನು ಅಂಥಾ ಅಸ್ಪತ್ರೆ ಬಂದರೆ ಏನಾದರೂ ಉಂಟಲ್ಲಾ ಅಂತ ಗೊತ್ತಾಯ್ತು ಬಿಡು. ಸತ್ಯಾರ್ಥಕ್ಕಾಗಿ ಏನೇ ಅಂದಿಲ್ಲ ಕಣೇ. ಸಾರ್ವಜನಿಕ್ಕಾಗಿ ಧೀರತೆಯಿಂದ ಹೇಳಿದೆ ಕಣೇ. ಎಲ್ಲಿ, ನಗು! ನಗು!...... . ಹುಂ. ಹಾ—ಗೆ'

'ಹೋಗೀ ಅಂದ್ರೆ. ಯಾರು ಯಾರ ಮೇಲಿನ ಸಿಟ್ಟನ್ನು ನನ್ನ ಮೇಲೇನಾ ನೀವು ಕಾಣಿಸ್ತೀರಿ? ಹಾಳಾದ ರೇಷನ್ನೂ ಸಾಕು. ನಿಮ್ಮ ಸಿಟ್ಟೂ ಸಾಕಪ್ಪ!'

'ಇಕೋ ನೋಡು, ನನ್ನ ಸಿಟ್ಟು ಸಾಕೂಂತ ಹೇಗೆ ಸಮಾಧಾನ ಮಾಡಿಕೊಂಡಿಯೋ ಹಾಗೇ ರೇಷನ್ನೂ. ಈಗ ನಾನು ಸಿಟ್ಟನವ ಅಂತ ನೀನು ನನ್ನನ್ನು ಗಂಡ ಅಲ್ಲ ಅನ್ನೋಕಾಗುತ್ತೆಯೆ? ಹಾಗೆಯೇ ರೇಷನ್ನಿನಿಂದ ರೋಸಿಗೆ ಬಂದರೂ ಅದು ಬೇಡಾ ಅನ್ನೋಕಾಗೋದಿಲ್ಲ ನೋಡು. ಪಾಲಿಗೆ ಬಂದದ್ದು ಪಂಚಾಮೃತ ಅಂತ ಹೇಳೋದು ಇದಕ್ಕೇ. ಎಲ್ಲಾ ಅಭ್ಯಾಸವಾದರೆ ಸರಿ ಹೋಗಿ ಬಿಡುತ್ತೆ."

"ಏನು ಸರಿ ಹೋಗುತ್ತೆ? ಮಧ್ಯಾಹ್ನಾದೇ ಹಸಿವೆಯಿಂದ ಕಂಗಾಲಾಗಿ ಕೂತ್ಕೊಂಡು ಬಿಡ್ತೀರಲ್ಲ"

"ನಿಜಾನ್ನು. ಹಸಿವೆಯ ಯಾರು ತಾನೇ ತಡೆದುಕೊಂಡಾನು?"

"ಮತ್ತೆ ನಿಮ್ಮ ಮಾಗು ಮಾತ್ರ ಏನಂತೆ? ಅನ್ನ ಸ್ವಲ್ಪ ಅದ್ದ ವಾಸನೆ ಬಂದ್ರೂ ಸೊಟ್ಟ ಮಾಡಿ ಕೊಳ್ತೀರಲ್ಲ ಮೂಗನ್ನು!"

"ಅದನ್ನೆಲ್ಲಾ ಇನ್ನು ಅಭ್ಯಾಸ ಮಾಡಿಕೊಳ್ತೀನೆ ಬಿಡು. ನಮ್ಮಿಷ್ಟ ಪ್ರಕಾರ ಅಕ್ಕಿ ತಕ್ಕೊಳ್ಳಲು ಸಾಧ್ಯ ಇಲ್ಲಾಂತ ಆಗಿಬಿಟ್ರೆ ತನ್ನಂತ ಅಭ್ಯಾಸವಾಗಿ ಬಿಡುತ್ತೆ. ಹಾಗೆ ಬೇಕಾದರೆ ನಸ್ಯದ ಅಭ್ಯಾಸ ಮಾಡಿಕೊಂಡೇ ಆಯ್ತಲ್ಲ!"

"ಅಯ್ಯೋ! ಕರ್ಮ ಕರ್ಮ! ನಿಮ್ಮ ಸಿಗರೇಟಿನ ಕಸ್ಸಂಟು ವಾಸನೆ ಸಾಲದ್ದಕ್ಕೆ ಅದು ಬೇರೆಯೆ? ಅಲ್ಲ, ಈ ರೇಷನ್ನೂ ಅಂತ ಬಂದುಬಿಟ್ರೇ ಊಟ ಅಕ್ಕಿಗಳೆಲ್ಲಾ ಎಲ್ಲಿಗೆ ಹೋಗುತ್ತೇ ಅಂತ?"

"ಅದೆಲ್ಲಾ ಯಾಕೆ ಯೋಚನೆ ಮಾಡಿಕೊಂಡ ಸಾಯಬೇಕು ಬಿಡು. ಏನು ಸಿಕ್ಕಿದರೂ ಸ್ವಲ್ಪಸ್ವಲ್ಪ ತಾನೆ? ಕಣ್ಣು ಮುಚ್ಚಿ ನುಂಗಿದರಾಯಿತು. ಹಳೇ ಕಾಲದವರ ಹಾಗೆ ಈಗ ಯಾರು ಉಣ್ಣುತ್ತಾರೆ ಹೇಳು? ಒಂದೆ ನಮ್ಮಪ್ಪ ಊಟ ಮಾಡುತ್ತಿದ್ದ ನೆನಪು ಬರುತ್ತಿದೆ. ಅವರ ಎಲೇ ಮೇಲೆ ಗುಡ್ಡೇ ಹಾಗೆ ಎರಡು ಸಾರಿ ಅನ್ನ ಬಂತಿ ಅಂತ್ಲೇ. ಊಟಾ ಅಂದರೆ ಅದು. ಈಗ ನಮಗೆಲ್ಲಿದೆ ಅಂಥಾ ಹೊಟ್ಟೆ? ಸಣ್ಣದಾಗಿ ಹೋಯ್ತು. ಗದ್ದೆಯಲ್ಲಿ ಕಷ್ಟ ಕೆಲಸ ಮಾಡುವವರು ಕೂಡಾ ಈಗ ಹಿಂದಿನ ಪರಿಷ್ಟು ಉಣ್ಣುವುದಿಲ್ಲ. ನನಗಿದಗ ಚಾಯಕುಡಿದು ಹೊಟ್ಟೆ ಚಿರುಟಿಸಿ ಕೊಂಡವರೇ ಎಲ್ಲಾರೂ. ನಾವು ಅಷ್ಟೇ. ಹೀಗೆ ಎಲ್ಲಾ ಮುಟ್ಟಿದವರ ಹೊಟ್ಟೇನೂ ಚಿರುಟತ್ತಾ ಬಂದಿದೆ"

'ಯಾಕೆ ಹೀಗಾಗಬೇಕು? ಮೊದಲಿದ್ದ ಹಾಗೇ ಇರುತ್ತಿದ್ರೆ ಏನಾಗ್ತಿತ್ತು?"

"ಅದು ಹ್ಯಾಗಿದ್ದೀತೂಂತ? ನಗರದಿಂದ ನಗರಕ್ಕೆ ದೇಶದಿಂದ ದೇಶಕ್ಕೆ ಸಂಪರ್ಕ ಹೆಚ್ಚುತ್ತಾ ಬಂದಹಾಗೆ ನಾಗರೀಕತೆ ಹರಡೋದು ಸಹಜತಾನೆ? ವಿಜ್ಞಾನದ ಸಾಧನೆಗಳು ಹೆಚ್ಚಿದುವು. ವೇಗ ಹೆಚ್ಚಿತು. ವ್ಯವಸಾಯಿಕ್ಕ ಪಂಪುಬಂತು; ಟ್ರ್ಯಾಕ್ಟರು ಬಂತು. ನಗರ ಬೆಳೀತು. ಕೃಷಿಗೆ ಜನಸಿಕ್ಕದೆ. ಬೇಸಾಯಗಾರರು ನೇಗಿಲಾಡುವ ಹಾಗಾಯ್ತು ಯಂತ್ರ ಸಾಧನೆಗಳಿಂದಾಗಿ ಶ್ರಮಬಲ ತಗ್ಗಿತು; ಖರ್ಚು ಹೆಚ್ಚಿತು. ಸಂಪಾದನೆ ಹೆಚ್ಚಿತು. ಜೇಬು ತುಂಬಿತು ನಾಲಗೆಗೆ ಚೋರುಜೋರಾಯ್ತು. ಆಗಾಗ ಹೊಟ್ಟೆಗೆ ನಾಲಗೆಗಿಂದು ಅದೂ ಇದೂ ಸೇರುತ್ತ ಹೊಟ್ಟೆ ಚಿರುಟಿ ಕೊಂಡಿತು. ಜನಸಂಖ್ಯೆಯೇರಿತು. ಅದಕ್ಕೇ ಹೀಗೆಲ್ಲಾ ಆಯಿತು."

ಹೋದ್ದೊಂದ್ರೆ. ಕೃಷಿಗೆ ಜನ ಇಲ್ಲದೆ ಗ್ರಾಮಗಳಲ್ಲಿ ಬಹಳ ಕಷ್ಟವಾಗಿದೆ. ...."

"ಅದಕ್ಕೇ ಸರಕಾರವು ಜನರ ಮನಸ್ಸನ್ನು ಕೃಷಿಯ ಕಡೆ ಆಕರ್ಷಿಸಲು ಎಷ್ಟೋ ಕೆಲಸ ಮಾಡುತ್ತ ಇದೆಯಲ್ಲಾ! ಕೃಷಿಸುಧಾರಣೆ, ಭೂಸುಧಾರಣೆ, ಸಾಲದ ಸೌಲಭ್ಯ, ಅಣೆಕಟ್ಟು, ಕಾಲುವೆ, ಅದು ಇದು ಅಂತ ಪಂಚವಾರ್ಷಿಕ ಯೋಜನೆ ಹಾಕಿಕೊಂಡು ಕೆಲಸ ಮಾಡ್ತಾನೇ ಇದೆ ಸರಕಾರ. ಅಧಿಕ ಬೆಳೆ ಬೆಳೆದವರಿಗೆ ಬಹುಮಾನ ಕೊಡ್ತಿದೆ...';

"ಅಯ್ಯೋ, ಸಾಕು ನಿಲ್ಸೀಂದ್ರೆ. ನೀವು ಹೇಳಿದ ಎಲ್ಲಾ ಸೌಕರ್ಯಗಳೂ ಎಕ್ರೆಗಟ್ಲೆ ಭೂಮಿಯಿರುವ ಜಮೀನ್ದಾರ್ರಿಗೂ, ದುಡ್ಡಿನ ದೊಡ್ಡಪ್ಪನವರಿಗೂ ಆಯಿತು. ಬಡ ವ್ಯವಸಾಯಗಾರನ ಪಾಡೇನು ಹೇಳಿ? ಅವರಿಗೆಲ್ಲಾ ನಿರುತ್ಸಾಹ ತಾನೆ?"

"ಅಂಥವರ ಉತ್ಸಾಹಕ್ಕಾಗಿಯೇ ಬಹುಮಾನಾ ಅಂತ—"

"ಅದೇ ಹೇಳ್ಲಿಕ್ಕೆ ಬಂದೆ ಬಹುಮಾನ ಪಡೆವಷ್ಟು ಬೆಳೆ ಬೆಳೆಸಲು ನಮ್ಮಿಂದೆಲ್ಲಿ ಸಾಧ್ಯಾ, ಯಾರೋ ತೆಗೆದುಕೊಳ್ಳಲಿ, ನಮಗೇನು ಅಂತ ಸಾಮಾನ್ಯರೆಲ್ಲ ಕಣ್ಣು ಮುಚ್ಚಿಕೊಂಡೇ ಉದಾಸೀನದಿಂದ ತಮ್ಮ ಪಾಡು ತಾವು ಪಡುತ್ತಿರುತ್ತಾರೆ ಅಂತೆ."

"ಅಂಥವರು ಹಾಳಾಗಿ ಹೋದಾರ. ಏಳಿಗೆಯಾಗಬೇಕಾದರೆ ಸ್ಪರ್ಧೆ ಬಹುಮಾನ ಬೇಡವೆ? ಇಡಿ ತಡಿ. ಈಗಲೇ ಅವಸರ ಪಡಬೇಡ ಪುನಃ ರೇಷನಿಂಗ್ ಬರಲಿಕ್ಕೆ ಶುರುವಾಗಿದೆ. ಇದು ಕುಟುಂಬ ಕಾರ್ಡು ಎಂಬ ಹೆಸರಿನಲ್ಲಿ ಬರುತ್ತ ಇರೋದರಿಂದ ಬ್ಲ್ಯಾಕ್ ಮಾರ್ಕೆಟ್ ಮಣ್ಣು ತಿಂದು ಹೋದೀತು. ಜನರು ಕಮ್ಮಿ ಊಟ ಮಾಡಲಿಕ್ಕೆ ಕಲಿಯುತ್ತ, ಗೋದಿ, ಗೆಣಸು ಎಲ್ಲಾ ತಿನ್ನಲು ಕಲಿತ ಹಾಗೆ ಆಹಾರದ ಚಿಂತೆ ಕಡಮೆಯಾಗುತ್ತಾ ಹೋಗಿ...."

"ಹೋಗಿ ಹೋಗಿ ಮನುಷ್ಯರೆಲ್ಲಾ ಬೆಕ್ಕುಗಳಾಗುತ್ತಾರೆ, ಅಷ್ಟೇ ತಾನೆ?"

'ಅದರಿಂದ ತಪ್ಪೇನೂಂತ? ಕಮ್ಮಿ ತಿಂದರೆ ರೋಗಗಳು ಕಡಮೆಯಾದಾವು ಗೊತ್ತೇ? ಈಗ ವಿಜ್ಞಾನದ ಮೂಲಕವಾಗಿ ಆಹಾರದಲ್ಲಿ ಸತ್ವಗಳು ದೊರೆಯುವ ಹಾಗೆ ಪರೀಕ್ಷೆಗಳು ನಡೀತಾ ಇವೆ ಅದೆಲ್ಲಾ ಸಫಲವಾದರೆ—"

"ಸಫಲವಾದರೆ, ಆಹಾರದ ಮಾತ್ರೇ ಗೀತ್ರೆ ಅಂತ ಬಂದೀತು ಅನ್ನಿ. ಅದೂ ಬ್ಲ್ಯಾಕ್‌ಮಾರ್ಕೆಟಾದ್ರೆ ಏನು ಮಾಡ್ತೀರೂ?"

"ನೀನೊಬ್ಬಳು! ಬ್ಲ್ಯಾಕ್ ಮಾರ್ಕೇಟಿಗೆಲ್ಲಾ ಅಷ್ಟರೊಳಗೆ ಜಗ ಜಗ ದೀಪ ಹಾಕಿ ಬಿಡ್ತಾರೆ ನೋಡು. ಈಗಲೇ ಅಲ್ಲಿ ಇಲ್ಲೀ ಬ್ಲ್ಯಾಕ್ ಮಾರ್ಕೆಟ್ ಶಿರೋಮಣಿಗಳನ್ನು ಹಿಡಿತಾ ಇದ್ದಾರಲ್ಲಾ!"

"ಹೌದಪ್ಪ; ಅಂತೂ ನಮ್ಮ ಮರಿಮೊಮ್ಮಕ್ಕಳು ಶಾಲೇಲಿ ಕಲೀವಾಗ ಅಕ್ಕೀ ಅಂದರೇನು? ಹೇಗೆ ಉಪಯೋಗಿಸುತ್ತಿದ್ದರು? ಅಂತೆಲ್ಲಾ ಪ್ರಶ್ನೆಗಳು ಬಂದಾವು. ಹುಡುಗರ ಉತ್ತರ ಮಾತ್ರ ತಮಾಷೆಯಾಗಿದ್ದೀತು ಬಿಡು."

"ಏನು ತಮಾಷೆಯಾಗಿದ್ದೀತು?"

"ಅಕ್ಕಿ ಸ್ಟೀಮರಿನಲ್ಲಿ ಬೆಳೆಯುತ್ತೇ ಅಂದಾರು. ಸ್ಟೀಮರಿನಲ್ಲಿ ಬರುತ್ತೆ ಅಂತ ಮಾಸ್ತರು ತಿದ್ದಿಯಾರು. ಹಿಂದಿನ ಕಾಲದಲ್ಲಿ ಹಿಂದೂ ದೇಶದಲ್ಲಿ ಎತ್ತುಗಳು ಅದನ್ನು ಬೆಳೆಸಿದುವು. ಅವು ತಮ್ಮ ದೇಹದೊಳಗಿನ ಸೆಗಣಿ ಮತ್ತು ಗಂಜಳ ಎಂಬ ದ್ರವ ವಸ್ತುಗಳಿಂದ ಗೊಬ್ಬರ ಎಂಬ ಹೊಸ ವಸ್ತುವನ್ನು ಮಾಡಿಸಿ, ತಮ್ಮ ಕುತ್ತಿಗೆಯಲ್ಲಿ ಕಟ್ಟಿದ ನೊಗಚಾದ ನೇಗಿಲು ಎಂಬ ಆಯುಧದಿಂದ ನೆಲವನ್ನು ಗೀರಿ ಬೆಳೆಸಿದುವು. ಹಾಗೆ ಬೆಳೆದ ಹಸುರು ಗಿಡಗಳನ್ನೇ ಅವು ತಿಂದುವು. ಅವುಗಳ ತಿರುಳಾದ ಪುಟ್ಟಪುಟ್ಟ ಕಾಳುಗಳೇ ಅಕ್ಕಿ. ಇವನ್ನು ಮನುಷ್ಯರು ಬಹಳ ಕಷ್ಟಪಟ್ಟು ತಿಂದು ಬದುಕಿದರು. ಅದನ್ನ ದೊರಕಿಸಿಕೊಳ್ಳಲು ಮೊದ್ದು ದೊಡ್ಡ 'ಕ್ಯೂ' ಎಂಬ ಸಾಲಿನಲ್ಲಿ ಗಾಳಿ ಮಳೆ ಬಿಸಿಲುಗಳನ್ನು ಸಹಿಸಿ ತಪಸ್ಸು ಮಾಡಿದರು ಹೀಗೆಲ್ಲಾ ಹೇಳಿಯಾರ'

'ಆಹಾ ಹಾ! ಆಗ ಎತ್ತು ದನಗಳು ಕೂಡಾ ಇರಲಾರವೆಂದು ನಿನ್ನ ಊಹೆಯೋ"

"ಎತ್ತು ದನಗಳ ಉಪಯೋಗವಿಲ್ಲದ ಕಾಲದಲ್ಲಿ ಅವುಗಳು ಏಕಿದ್ದಾವು ಹೇಳಿ? ಮನುಷ್ಯರು ಮಂಡೆ ಬೆಳೆಸಿಕೊಂಡು, ಹೊಟ್ಟೆ ಚಿರುಟಿಸಿಕೊಂಡು, ಆಹಾರಗಳ ಸತ್ವ ಮಾತ್ರ ವಿಜ್ಞಾನದ ಮೂಲಕ ಸೇವಿಸಲು ಪ್ರಾರಂಭಿಸಿ ಬಿಟ್ಟರೆ, ಮತ್ತೇನಾದೀತೂ ಅಂತ?'

"ಆ ಸತ್ವ ತೆಗೆಯಲಿಕ್ಕಾದರೂ ವಸ್ತು ಬೆಳೆಸಬೇಡವೆ? ನಿನ್ನ ಹುಚ್ಚು ಹುಚ್ಚು ಕಲ್ಪನೆಯು ಹಾಗೇನೂ ತಲೆ ಕೆಳಗಾಗೋದಿಲ್ಲ ಬಿಡು. ಕೆಲಸದ ರೀತಿಗಳಲ್ಲಿ ಬದಲಾವಣೆ ಆಗುತ್ತೆ ಅಷ್ಟೆ ಹೊರತು."

"ಹೆದರಲಿಕ್ಕೆ ನ ಹಿಡ್ದರ ತಾನೆ? ಏನು ಬರೆಯುತ್ತಿದ್ದೀರೋ ಇಷ್ಟು ನಮ್ಮ ಮರಿ ಮಕ್ಕಳ ತಲೆಲಿ?"

"ಮತ್ತೇನು? ಕಾಲಕ್ಕೆ ತಕ್ಕ ಹಾಗೆ ಬದುಕು ಅಂತ ಬರೀತಾನೆ"

ಹಾಗಾದರೆ ನೆಮ್ಮದಿ ಬರಲೀಪ್ಪ ಸದ್ಯ"

'ನಚಿಕೇತ'ರ
ಹೃದಯಸ್ಪರ್ಶಿ
ನವೀನ ಕಾದಂಬರಿಗಳು

ಹಸುರು ಹಂಸ
ಬೆಲೆ: ರೂ. ಎರಡು

ಋಣ ಯಾತ್ರೆ
ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ
ಬೆಲೆ ರೂ 2-00

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ,
ನವಭಾರತ ಬುಕ್ ಡಿಪ್ಪೋ, ಉಡುಪಿ.

ದಕ್ಷಿಣ ಕನ್ನಡದಲ್ಲಿ ಮುಖ್ಯಮಂತ್ರಿ ನಿಜಲಿಂಗಪ್ಪನವರು

ಕೊಕ್ಕರ್ಣೆ ಸೇತುವೆ ಉದ್ಘಾಟನೆ, ಬಾರ್ಕೂರಿಗೆ ಸಂಕದ ಆಶ್ವಾಸನೆ!

ಇದೇ ತಾ. 19ರಂದು ಮೈಸೂರು ಸರಕಾರದ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ವಿಮಾನ ಮೂಲಕ ಬಜ್ಪೆಗೆ ಬಂದು ಅಲ್ಲಿಂದ ಮಂಗಳೂರಿಗೆ ತೆರಳಿ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಭೇಟಿಯಾದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ. ಯವರು ಸ್ವಾಗತಿಸಿ ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ವಿವರಿಸಿದರು. ಮುಖ್ಯಮಂತ್ರಿಗಳು ರಾಜ್ಯದೊಳಗೆ ಆಹಾರ ಸಾಗಾಟದ ಕುರಿತು ಶೀಘ್ರ ಕಾರ್ಯಕ್ರಮ ಕೈಗೊಳ್ಳುವುದಾಗಿ ಹೇಳಿದರು. ಅನಂತರ ಮುಖ್ಯಮಂತ್ರಿಗಳು ಕಾರ್ಪೊರೇಷನಲ್ಲಿ ನಡೆಯುತ್ತಿರುವ ಮಂಗಳೂರು ಬಂದರಿನ ಕಾರ್ಯವನ್ನು ವೀಕ್ಷಿಸಿ ರಾತ್ರಿ ಉಡುಪಿಗೆ ಬಂದರು. ಉಡುಪಿಯ ಪೆಟ್ಲಿಂಡ್ ಹೋಟೆಲ್ ಬಂಗ್ಲೆಯ ವರಾಂಡದಲ್ಲಿ ಜರಗಿದ ಕಾಂಗ್ರೆಸ್ ಕಾರ್ಯಕರ್ತರ, ನಗರ ಸಭಾ ಸದಸ್ಯರ, ಹಾಗೂ ಚೇಂಬರ್ ಆಫ್ ಕಾಮರ್ಸ್ ಸದಸ್ಯರ ಸಭೆಯಲ್ಲಿ ಮಾತನಾಡುತ್ತಾ ಸದ್ಯದ ಆಹಾರ ಕೊರತೆಯ ಪರಿಸ್ಥಿತಿಯು ಕೃತ್ರಿಮವಾದುದೆಂದೂ ಕೆಲವು ವ್ಯಾಪಾರಿಗಳು ಕಠಿಣ ಪರಿಸ್ಥಿತಿಯಲ್ಲಿಯೂ ತಮ್ಮ ಸ್ವಾರ್ಥವನ್ನೇ ನೋಡಿದರೆಂದೂ ಇದು ಅವರಿಗೂ ನಮಗೂ ಕಳಂಕವೆಂದೂ ಹೀಗಾಗಿ ಆಹಾರ ವಿತರಣೆಯ ಕಾರ್ಯವನ್ನು ಸಹಕಾರಿ ಸಂಸ್ಥೆಗಳಿಗೆ ಒಪ್ಪಿಸುವುದು ಯೋಗ್ಯವೆನಿಸುತ್ತದೆಂದೂ ದ. ಕನ್ನಡವು ಅಷ್ಟೊಂದು ಆಹಾರ ಕೊರತೆಯ ಜಿಲ್ಲೆಯಲ್ಲವಾದರೂ ಕೇರಳಕ್ಕೆ ಆಹಾರ ಹೋಗುದುದೇ ಕೊರತೆಗೆ ಕಾರಣವೆಂದೂ ಮುಂದೆ ತಕ್ಕ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದೂ ಹೇಳಿದರು. ದ. ಕನ್ನಡಿಗರು, ಉತ್ಸಾಹಿಗಳೂ, ಕಾರ್ಯಪಟುಗಳೂ, ಶೈಕ್ಷಣಿಕವಾಗಿ ಮುಂದುವರಿದವರೂ ಆಗಿದ್ದಾರೆ. ಇಲ್ಲಿ ಯಾವುದೇ ಕೈಗಾರಿಕೆಯನ್ನು ಸ್ಥಾಪಿಸಲು ಜನ ಮುಂದೆ ಬಂದರೆ ಸರಕಾರವು ಸಹಕಾರ ಬೆಂಬಲ ನೀಡಲು ಸಿದ್ಧವಿರುವರೆಂದೂ ಈ ಜಿಲ್ಲೆಗೆ ಬಂದಾಗ ಇಲ್ಲಿಯ ಅನೇಕಾಲು ರೋಗದ ದೃಶ್ಯವನ್ನು ಕಂಡು ನನಗೆ ತುಂಬಾ ಬೇಸರವಾಗುತ್ತದೆ ಆದ್ದರಿಂದ ಇಲ್ಲಿಯ ಜನರು ನೀರು ಸರಬರಾಯಿ, ಒಳ ಚರಂಡಿ ಯೋಜನೆಗಳಿಗಾಗಿ ಮುಂದಿಡುವ ಯೋಜನೆಯನ್ನು ಕಾರ್ಯಗತ ಮಾಡಲು ಸರಕಾರವು ಪರಿಶೀಲಿಸುತ್ತದೆಂದೂ ಹೇಳಿದರು. ಆರಂಭದಲ್ಲಿ ಡಾ| ಟಿ. ಎಂ. ಎ. ಪೈಯವರು ಮಾತನಾಡಿ ರೋಟರಿ ಕ್ಲಬ್ಬಿನ ನೇತೃತ್ವದಲ್ಲಿ ಚೇಂಬರ್ ಆಫ್ ಕಾಮರ್ಸಿನವರು ಆಹಾರ ವಿತರಣೆಯ ಹೊಣೆ ಹೊರುವ ಭರವಸೆಯಿತ್ತರು. ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರು ಎಲೆಕ್ಟ್ರಿಸಿಟಿ ಬೋರ್ಡಿನ ಕಾರ್ಯವಿಳಂಬ ಧೋರಣೆ, ನಳ್ಳಿ ನೀರಿನ ಯೋಜನೆ, ಪ್ರವಾಸಿ ಕೇಂದ್ರದ ಸೂಚನೆ, ಕಲ್ಯಾಣಪುರ ಸೇತುವೆಯ ರಚನೆಯೇ ಮೊದಲಾದ ಬೇಡಿಕೆಗಳ ಮನವಿಯನ್ನರ್ಪಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟರು ಮಾತನಾಡುತ್ತಾ ಉಡುಪಿಯಲ್ಲಿ ಯಾವುದೇ ಕೆಲಸಕ್ಕೆ ಮುಂದಾಗುವ ಉತ್ಸಾಹಿಗಳು ಇದ್ದಾರೆಂದೂ ಅಲ್ಪಾವಕಾಶದಲ್ಲಿ ಶ್ರೀ ಮಧ್ವರಾಜರು ಭೋಜನವೇ ಮೊದಲಾದ ಇಂದಿನ ವ್ಯವಸ್ಥೆ ಮಾಡಿದುದು ವಂದನೀಯವೆಂದೂ ಅವರು ಉದಾರಿಗಳಾದ ಕಾರ್ಯಕರ್ತರೆಂದೂ ಹೇಳಿದರು.

ಶ್ರೀ ಎಂ. ಮಧ್ವರಾಜ್ ಎಂ. ಎಲ್. ಎ. ಯವರು ವಂದನಾರ್ಪಣೆಮಾಡುತ್ತಾ ಅಗುಂಬೆ ಘಾಟಿಯನ್ನು ವಿಸ್ತರಿಸಿ ಸರ್ವ ವಾಹನಗಳ ಸಂಚಾರಕ್ಕೆ ಯೋಗ್ಯವಾಗುವಂತೆ ಮಾಡಬೇಕೆಂದು ಕೇಳಿಕೊಂಡರು.

ಕೊಕ್ಕರ್ಣೆ ಸೇತುವೆಯ ಉದ್ಘಾಟನೆ

ತಾ. 20ನೇ ಬೆಳಿಗ್ಗೆ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು 5 ಲಕ್ಷ ರೂಪಾಯಿ ವೆಚ್ಚದಲ್ಲಿ ಕಟ್ಟಿಸಲಾದ ಕೊಕ್ಕರ್ಣೆ ಸಂಕವನ್ನು ಉದ್ಘಾಟಿಸುತ್ತಾ ದಕ್ಷಿಣ ಕನ್ನಡ ಜಿಲ್ಲೆಯು ಇಲ್ಲಿನ ನೈಸರ್ಗಿಕ ಸಂಪತ್ತಿನ ಸಂಪೂರ್ಣ ಸದುಪಯೋಗ ಪಡೆದು ಪ್ರಗತಿ ಹೊಂದಬೇಕೆಂದಿರುವಾಗ ಸರಕಾರವು ಪಣಂಬೂರು ಬಂದರದ ಯೋಜನೆಯನ್ನು ಕೈಗೊಂಡಿರುವಾಗ ಅಲ್ಲಿಯ ಜನರು ಭೂಮಿ ಕೊಡಲು ತಕರಾರು ಮಾಡುವುದಕ್ಕೆ ಕಳವಳ ವ್ಯಕ್ತಪಡಿಸಿ ಆಹಾರ ಪರಿಸ್ಥಿತಿಯ ಕುರಿತು ಮಾತಾಡುತ್ತಾ ರಾಜ್ಯದ ಒಳಗೆ ಆಹಾರ ಸಾಗಾಟಕ್ಕೆ ನಿರ್ಬಂಧವಿಲ್ಲವೆಂದರು. ಆರಂಭದಲ್ಲಿ ಸುಪರಿಂಟೆಂಡ್ ಇಂಜಿನಿಯರ್ ಡಬ್ಲ್ಯು. ಕೆ. ಎಸ್. ಸಿದ್ದಣ್ಣನವರು ಸ್ವಾಗತಿಸಿ ಕೊಕ್ಕರ್ಣೆ ಸಂಕದ ವಿವರಗಳನ್ನಿತ್ತರು. ಸಭಾಧ್ಯಕ್ಷತೆ ವಹಿಸಿದ್ದ ಶ್ರೀ ಕೆ. ಕೆ. ಶೆಟ್ಟರು ಜನತಾ ಸರಕಾರ ಏರ್ಪಟ್ಟ ನಂತರ ನಡೆದ ಅಭಿವೃದ್ಧಿ ಕಾರ್ಯಗಳನ್ನು ವಿವರಿಸಿದರು. ಇಂಜಿನಿಯರ್ ಜಿ. ಕರಿಸಿದ್ದಪ್ಪನವರು ವಂದನೆಗಳನ್ನರ್ಪಿಸಿದರು. ಈ ಸೇತುವೆಯನ್ನು ಮಂಗಳೂರಿನ ಮಲ್ಲಿ ಕಂಸ್ಟ್ರಕ್ಷನ್ ಕಂಪೆನಿಯವರು ಕಟ್ಟಿದ್ದಾಗಿದೆ.

ಪ್ರಕಟಣೆ

ಸ್ವಾಮಿ ಶ್ರೀ ಕೃಷ್ಣ ಚೈತನ್ಯ ನಿವಾಸ, ಜವಾಹರ ನಗರ ಖಾರ (ಪೂರ್ವ) ಮುಂಬಯಿ ನಂ. ೫೧, ಇವರು ಈ ಮೂಲಕ ಜಾಹೀರು ಮಾಡುವುದೇನೆಂದ್ರೆ:—

ನಾನು ಕುಂದಾಪುರ ತಾಲ್ಲೂಕು ಪೊಳ್ಳಿ ಶೀರೂರು ಗ್ರಾಮದಲ್ಲಿರುವ ಚಲಿಬಿ ಆಸ್ತಿಯ ಮೂಲಕ ಇರುತ್ತೇನೆ ನಾನು ಸದ್ರಿ ಆಸ್ತಿಯನ್ನು ನೋಡಲಿಕ್ಕೆ ಶ್ರೀಯುತ ಸಂಜೀವ ರಾವ್ ಇವರಿಗೆ ಮುಕ್ತ್ಯಾರ್ ನಾಮೆ ಕೊಟ್ಟಿದ್ದೆ ಆದರೆ ನನಗೆ ಹೀಗೆ ತಿಳಿದು ಬರುತ್ತದೆ ಏನಂದ್ರೆ:— ಸದ್ರಿಯವರು ನನ್ನ ಕರೆಸ್ವಾನಗಿ ಶಿವ್ಯಾ ಮತ್ತು ನನಗೆ ತಿಳಿಸದೇ ಪರಮೇಶ್ವರ ಹೆಗಡೆ ಇವರಿಗೆ ಟ್ರಸ್ಟ್ ಮಾಡಿ ಕೊಟ್ಟದ್ದಾಗಿ ತಿಳಿದು ಬರುತ್ತದೆ, ಆದ್ದರಿಂದ ಆ ಟ್ರಸ್ಟನ್ನು ಇದರ ಮೂಲಕ ನಾನು ರದ್ದು ಪಡಿಸಿದ್ದೇನೆ ನಾನು ಸದ್ರಿಯವರಿಗೆ ಟ್ರಸ್ಟ್ ಮಾಡಿ ಆಸ್ತಿಯನ್ನು ಕೊಡಲಿಕ್ಕೆ ಮುಕ್ತ್ಯಾರನಾಮೆಯನ್ನು ಕೊಡಲಿಲ್ಲವಾದ್ದರಿಂದ ಸದ್ರಿಯವರು ಮಾಡಿದ ಸದ್ರೀ ಟ್ರಸ್ಟನ್ನು ನಾನು ರದ್ದು ಮಾಡಿದ್ದೇನೆ ನಾನು ಜೀವಂತ ಇರುವಾಗ ನನ್ನ ಕಬೂಲಿ ಶಿವಾಯ ಟ್ರಸ್ಟ್ ಮಾಡಲಿಕ್ಕೆ ಬರುವ ಹಾಗಿಲ್ಲ. ಮಾಡುವವಾದರೆ ಅದಕ್ಕೆ ನನ್ನ ಕಬೂಲಿ ಬೇಕಿತ್ತು

ಆದ್ದರಿಂದ ನಾನು ಈ ಮೂಲಕ ಸದ್ರಿ ಟ್ರಸ್ಟನ್ನು ರದ್ದು ಪಡಿಸಿದ್ದೇನೆ . ತ್ತು ಸದ್ರಿ ಆಸ್ತಿಯನ್ನು ಮಾರಾಟಕ್ಕೆ ಇಡುತ್ತೇನೆ ಯಾರಾದರೂ ಕೊಂಡುಕೊಳ್ಳುವವರಿದ್ದರೆ ಅವರು ನನಗೆ ಪತ್ರ ವ್ಯವಹಾರ ಮಾಡಬೇಕು

ಬಾರ್ಕೂರಲ್ಲಿ ಹೈಸ್ಕೂಲ್ ಕಲಾ ಮಂದಿರದ ಉದ್ಘಾಟನೆ

ಶ್ರೀ ಎಸ್. ಎಸ್. ಕೊಳ್ಕೆಬೈಲ್, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿದ ನೇಷನಲ್ ಹೈಸ್ಕೂಲ್ ಕಲಾಮಂದಿರದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಮಾತನಾಡುತ್ತಾ ಇಲ್ಲಿಯ ಸಂದರ್ಶನವು ಅಪೂರ್ವದೆಂದೂ ಬಾರ್ಕೂರು ಹೊಳೆಗೆ ಸೇತುವೆ ಅತ್ಯಾವಶ್ಯವಿದ್ದು ಅದನ್ನು ಮೂರು ವರ್ಷಗಳೊಳಗೆ ಮಾಡಿಸುವ ಆಶ್ವಾಸನೆಯನ್ನಿತ್ತರು ಕಲಾಸಾಹಿತ್ಯ ರಕ್ಷಣೆಗೆ ಇಂತಹ ಕಲಾ ಮಂದಿರಗಳು ಆವಶ್ಯಕವೆಂದರು. ಆರಂಭದಲ್ಲಿ ಶ್ರೀ ಎಸ್. ಧರ್ಮಸಾಮ್ರಾಜ್ಯ, ಎಂ. ಎಲ್. ಎ. ಯವರು ಸ್ವಾಗತಿಸಿದರು.

ಎಸ್. ಎಸ್. ಕೊಳ್ಕೆಬೈಲರು ಅಧ್ಯಕ್ಷಭಾಷಣ ಮಾಡುತ್ತಾ ಈ ಒಳನಾಡಿನ ಅಭಿವೃದ್ಧಿಗೆ ಬಾರ್ಕೂರು ಮತ್ತು ಬನ್ನಾಡಿ ಸೇತುವೆಗಳು ಬೇಗನೆ ಆಗಬೇಕೆಂದರು. ಇಲ್ಲಿರುವ ಸಣ್ಣ ಪುಟ್ಟ ಮೋರಿಗಳು ಕೆಟ್ಟದ್ದು ಅವುಗಳ ದುರಸ್ತಿಯಾಗದಿದ್ದರೆ ಸಂಪರ್ಕವೇ ಕಡಿದುಹೋದೀತೆಂದರು. ಮಂತ್ರಿಗಳು ಬಾರ್ಕೂರಲ್ಲಿ ಮಧ್ಯಾಹ್ನದ ಭೋಜನ ತೀರಿಸಿ ರಾಷ್ಟ್ರಕವಿ ಗೋವಿಂದ ಪೈಗಳ ಸ್ಮಾರಕೋತ್ಸವದ ಅಧ್ಯಕ್ಷತೆ ವಹಿಸಲು ಕುಂದಾಪುರಕ್ಕೆ ತೆರಳಿದರು.

ಬಾರ್ ಎಸೋಸಿಯೇಶನ್ ಕಟ್ಟಡದ ಉದ್ಘಾಟನೆ

ಉಡುಪಿ ಬಾರ್ ಎಸೋಸಿಯೇಶನ್‌ನ ಉಪಯೋಗಾರ್ಥವಾಗಿ ಸುಮಾರು ರೂ ೪೦ ಸಾವಿರ ವೆಚ್ಚದಲ್ಲಿ ಸರಕಾರವು ಕೋರ್ಟ್ ಕಾಂಪೌಂಡಿನಲ್ಲಿ ಕಟ್ಟಿಸಿದ ಭವ್ಯವಾದ ಹೊಸ ಕಟ್ಟಡದ ಉದ್ಘಾಟನೆಯು ತಾ. ೧೮ರಂದು ಶ್ರೀ ಆರೂರು ಲಕ್ಷ್ಮೀನಾರಾಯಣರಾಯರಿಂದ ನೆರವೇರಿಸಲ್ಪಟ್ಟಿತು ಈ ಸಮಾರಂಭಕ್ಕೆ ಸಬ್ ಜಡ್ಜ್, ಡಿ ಮುನ್ಸಿಫ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ಮತ್ತು ಎಲ್ಲಾ ವಕೀಲರು ಹಾಗೂ ಕೋರ್ಟ್ ಸಿಬಂದಿಯವರೂ ಹಾಜರಿದ್ದರು ಉಪಹಾರವಾದ ಬಳಿಕ ಬಾರ್ ಎಸೋಸಿಯೇಶನ್‌ನ ಅಧ್ಯಕ್ಷ ವಕೀಲ್ ಶ್ರೀ ಜಿ. ಸಿ. ರಿಗೋರವರು ಸ್ವಾಗತಿಸುತ್ತಾ ಇಂತಹ ಉತ್ಕೃಷ್ಟ ಹೋಲ್‌ನ್ನು ಜಿಲ್ಲೆಯ ಯಾವುದೇ ಬಾರ್ ಎಸೋಸಿಯೇಶನ ಪಡೆದಿಲ್ಲವೆಂದೂ ಇಲ್ಲಿಯ ಬಾರ್ ಎಸೋಸಿಯೇಶನ್ನಿಗೆ ಉತ್ತಮ ಲೈಬ್ರೇರಿ ಇರುವುದೆಂದೂ ಇದಕ್ಕೆ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರು ೫೦೦ ರೂಪಾಯಿಗಳನ್ನು ದಾನವಾಗಿತ್ತುದಕ್ಕೆ ಕೃತಜ್ಞರಾಗಿರುವೆವೆಂದೂ ಹೇಳಿ ಎಸೋಸಿಯೇಶನ್‌ನ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಕಾರ್ಯದರ್ಶಿ ಶ್ರೀ ವೈ. ಸಿ. ಯಸ್. ಹೆಗ್ಡೆಯವರನ್ನು ಪರಿಚಯಿಸಿದರು. ಶ್ರೀ ರಾಯರು ಉದ್ಘಾಟನಾ ಭಾಷಣದಲ್ಲಿ ಕಟ್ಟಡವನ್ನು ಕಟ್ಟಿಸಿಕೊಟ್ಟಿರುವುದಕ್ಕೆ ಸರಕಾರವನ್ನು ಅಭಿನಂದಿಸಿದಲ್ಲದೆ ಬಾರ್ ಗೌರವ ಘನತೆಗಳನ್ನು ಕಾಯು ಕೊಂಡು ಮುಂದುವರಿಯಬೇಕೆಂದು ಹಾರೈಸಿದರು. ಇದೇ ಸಂದರ್ಭದಲ್ಲಿ ದಿ| ವಕೀಲ ಪದ್ಮನಾಭರಾಯರ ತೈಲಚಿತ್ರವನ್ನು ಅನಾವರಣಮಾಡುತ್ತಾ ಶ್ರೀ ಆರೂರರವರು ದಿವಂಗತರ ಅನುಭವ, ದಕ್ಷತೆಗಳನ್ನು ಕೊಂಡಾಡಿದರು. ಅನಂತರ ಶ್ರೀ ಜಿ. ಸಿ. ರಿಗೋರವರು ದಿ| ಎಡ್ವಕೇಟ್ ಪೆರ್ಡೂರು ಲಕ್ಷ್ಮೀನಾರಾಯಣರಾಯರ ತೈಲಚಿತ್ರವನ್ನು ಅನಾವರಣ ಮಾಡಿ ದಿವಂಗತರ ಗುಣಗಾನ ಮಾಡಿದರು.

ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ವೈ. ಸಿ. ಯಸ್. ಹೆಗ್ಡೆಯವರು ಧನ್ಯವಾದ ಸಮರ್ಪಿಸಿದ ಬಳಿಕ ಗ್ರೂಪ್ ಫೋಟೋ ತೆಗೆಯಲ್ಪಟ್ಟಿತು.

ಕೆನರಾ ಬ್ಯಾಂಕಿನ ನವ ಯೋಜನೆ.

ಹೈಸ್ಕೂಲುಗಳಿಗೆ ಬಹುಮಾನ ಮೈಸೂರು ರಾಜ್ಯದಲ್ಲಿ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲಿಕ್ಕೂ ಸೆಕೆಂಡರಿ ಶಿಕ್ಷಣದ ಮಟ್ಟವನ್ನು ಉತ್ತಮಗೊಳಿಸಲಿಕ್ಕೂ ಕೆನರಾಬ್ಯಾಂಕ್ ಸಂಸ್ಥೆಯವರು "ಕೆನರಾ ಬ್ಯಾಂಕ್ ಪರಿಹಾರ ಮತ್ತು ಕಲ್ಯಾಣ ಯೋಜನೆ" ಎಂಬ ಹೊಸತೊಂದು ಯೋಜನೆಯನ್ನು ಆರಂಭಿಸಲಿದ್ದಾರೆ ಈ ಯೋಜನೆಯಂತೆ ರಾಜ್ಯದ ಎಲ್ಲಾ ೨೦ ಜಿಲ್ಲೆಗಳ ಶಾಲೆಗಳಿಗೆ ಪಂಚಾಯ ಪಾರಿತೋಷಕಗಳನ್ನಲ್ಲದೆ ಇವರ ಜೊತೆಗೆ ಉಪಾಧ್ಯಾಯರಿಗೆ ನಗದು ಬಹುಮಾನವನ್ನೂ ಮತ್ತು ಆಯ್ಕೆಯಾದ ಮೂರು ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಪಾರಿತೋಷಕಗಳನ್ನೂ ಕೊಡಲಾಗುವುದು

೧೯೬೫ರ ಮಾರ್ಚಿನಿಂದ ಪ್ರತಿ ವರ್ಷ ಈ ೨೦ ಜಿಲ್ಲೆಗಳಲ್ಲಿ ಎಸ್. ಎಸ್. ಎಲ್. ಸಿ. ಪಬ್ಲಿಕ್ ಪರೀಕ್ಷೆಗಳಲ್ಲಿ ಶೇಕಡಾವಾರು ಉತ್ತೀರ್ಣತೆಯಲ್ಲಿ ಸ್ಥಾನಪಡೆಯುವ ಆಯಾಯ ಜಿಲ್ಲೆಯ ಶಾಲೆಗಳಿಗೆ ಈ ಪರ್ಯಾಯ ಪಾರಿತೋಷಕಗಳನ್ನು ನೀಡಲಾಗುವುದು.

ಮಧ್ವನವಮಿ ರಜತೋತ್ಸವ

ಮುದರಂಗ ಮಾಧ್ವ ಸಂಘದ ಅಧ್ಯಕ್ಷರಾದ ಶ್ರೀ ಕೆ. ಸೀತಾರಾಮ ರಾಯರು ವರ್ಷಂಪ್ರತಿ ನಡೆಸುತ್ತಿರುವ ಮಧ್ವನವಮೀ ಮಹೋತ್ಸವದ 25ನೇ ವರ್ಷದ ಸಲುವಾಗಿ ರಜತ ಮಹೋತ್ಸವವನ್ನು ಇದೇ ಕ್ರೋಧಿ ಸಂವತ್ಸರದ ಮಾಘ ಶುದ್ಧ ಅಷ್ಟಮಿ ನವಮಿ, ದಶಮಿ (ತಾ 9, 10, 11ನೇ ಫೆಬ್ರವರಿ 1965) ಈ ದಿನ ತ್ರಯಗಳಲ್ಲಿ ಮಾಡಬೇಕೆಂದು ನಿಶ್ಚಯಿಸಿದ್ದಾರೆ. ಈ ಸುಸಂಧರ್ಭದಲ್ಲಿ ಶ್ರೀ ಭಂಡಾರಕೇರಿ ಶ್ರೀ ಶ್ರೀ ಪಾದಂಗಳವರು ವರ್ಷಂಪ್ರತಿ ನಡೆಸುತ್ತಿರುವ ಶ್ರೀ ಮಾಧ್ವಸಿದ್ಧಾಂತ ಸಂವರ್ಧಿನೀ ಸಭೆಯ ಈ ವರ್ಷದ ಮಹಾಧಿವೇಶನವನ್ನೂ ಇಲ್ಲೇ ಮಾಡಲು ಒಪ್ಪಿಕೊಂಡಿರುವರು.

ಆದ್ದರಿಂದ ಮಧ್ವನವಮಿ ರಜತ ಮಹೋತ್ಸವದಿಂದ ಸಂಯುಕ್ತವಾಗಿ ಶ್ರೀ ಮಾಧ್ವಸಿದ್ಧಾಂತ ಸಂವರ್ಧಿನೀ ಸಭೆಯ ಮಹಾಧಿವೇಶನವು ಉಡುಪಿ ಶ್ರೀ ಶ್ರೀ ಪೇಜಾವರ ಮಠಾಧೀಶ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ಮಹಾಸಭೆಯಲ್ಲಿ ಜರಗುವುದು.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

R I A 188/1964 O S 70/51

ಅನಂತಮತಿ ಕೂಡಾ — ಅರ್ಜಿದಾರರು

K. ಕಮಲ ಶೆಡ್ತಿ ಸಹ. — ಎದ್ರಿರು.

4ನೇ ಎದ್ರಿ K. ಸುಲೋಚನ ಆಳ್ವ, ಕೋಚಪ್ಪ ಶೆಟ್ಟಿ ಮಗಳು, ಮಹಾತ್ಮಾ ಗಾಂಧಿ ರೋಡ್, ಕೊಡಿಯಾಲಬೈಲು, ಮಂಗಳೂರು. ಇವರಿಗೆ ಕೋರ್ಟ್ ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಮೇಲಿನ ಡಿಕ್ರಿಗೆ ಕಾರಣವಾದ ದಾವಾ ಆಸ್ತಿಯ ಬಾಬ್ತು ಮುಂಗ್ತಿ ವಗೈರೆ ನಿರ್ಣಯಿಸಿ ಕೊಡಬೇಕಾಗಿ ಅರ್ಜಿದಾರರು ನೀವು ವಗೈರೆರ ಮೇಲೆ ದಾಖಲು ಮಾಡಿದ ಮೇಲಿನ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾ. 8—1—65 ಕ್ಕೆ ಇಟ್ಟಿರುವುದರಿಂದ ನೀವು ಸದ್ರಿ ದಿವಸ ಮುಜೂರು ಕೋರ್ಟ್ ಮುಂದೆ ಹಾಜರಾಗಿ ಉಡಪಡಿಸಿಕೊಳ್ಳ ತಪ್ಪಿದ್ರೆ ನಿಮ್ಮ ಗೈರು ಹಾಜರಿಯಾದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿಯದೆ

(*Sd*) B. Ishwara Bhat,
Advocate for Petitioners

ಪುತ್ತೂರು, ತಾ 19-12-64.

ಭ್ರಾಂತಿಯೋ? ಹುಚ್ಚೊ?

(ಎರಡನೇ ಪುಟದಿಂದ)

ಳ್ಳು ಹೇಳುತ್ತೀರಿ! ನನ್ನ ಜೀವವನ್ನೂ ತೆಗೆಯಿರಿ!'

ಹಾಗನ್ನಬಾರದಮ್ಮಾ—! ಬನ್ನಿ, ಮನೆಗೆ ಹೋದಾಗ ಎಲ್ಲವೂ ತಿಳಿಯುತ್ತದೆ!"

"ಇನ್ನು ಯಾವ ಮನೆ! ಆ ಮನೆ ಮಸಣವಾಗಿದೆ! ಮನೆಯ ದೀಪ ಆರಿತು! ಅಯ್ಯೋ—ದಮ್ಮಯ್ಯ! ಒಮ್ಮೆ ಆ ಗಂಟನ್ನು ಬಿಚ್ಚಿರಿ! ಅವರ ಕೊನೆಯ ದರ್ಶನವನ್ನಾದರೂ ಮಾಡುತ್ತೇನೆ!"

ಯಾರ ಮಾತುಗಳೂ ಸೀತಾದೇವಿಯನ್ನು ಸಮಾಧಾನಪಡಿಸದೆ ಹೋದುವು! ಅಯ್ಯೋ ಪಾಪ! ಕೊನೆಗೂ ಅವಳ ತಾಯಿಯ ಗತಿಯೇ ಅವಳಿಗೂ ಆಯಿತು!

ಅಷ್ಟರಲ್ಲಿ ರಾಮರಾಯರು ಪೇಟೆಯಿಂದ ಬಂದವರು ಈ ಗಲಾಟೆಯನ್ನು ಕೇಳಿ ದಿಙ್ಮೂಢರಾಗಿ ಹೋದರು.

ತಂದ ಸಾಹಿತ್ಯಗಳೆಲ್ಲವನ್ನೂ ಅಲ್ಲೇ ಬಿಸುಟು ಹೆಂಡತಿಯು ಹೋದ ದಾರಿಯಲ್ಲಿಯೇ ಅವರು ಓಡುತ್ತಾ ಹೋದರು. ದೂರದಿಂದ ಬರುವ ರಾಯರನ್ನು ನೋಡಿದ ಸೀತಮ್ಮ!

'ಹೋ—ಹೋ! ಈಗ ಕಾಣುತ್ತದೆ.... ಕಾಣುತ್ತವೆ ಅವರ ಪ್ರೇತ ಓಡಿ ಬರುತ್ತಿದೆ! ಬರಲಿ—! ಬರಲಿ!...

ಹೀಃ ಹೀಃ, ಹೀಃ...ಹೌದು ಅವರ ಹಾಗೆಯೇ ಇದೆ....ನಾನೂ ಅವರಂತೆ ಪ್ರೇತವಾಗುತ್ತೇನೆ...."

ಪ್ರೇತ—!"

ರಾಯರು ಬಂದು ಮುಟ್ಟಿದರು!—

"ಸೀತಾ!"....

"ಸೀತಾ'....ಸೀತಾ'! ಹಾ! ಹಾ!ಹಾ!

"ದೂರ! ದೂರ ಸರಿಯಿರಿ! ನಾನು ಮೋಸ ಹೋಗಲಾರೆ! ಈ ಹಗಲಿನಲ್ಲಿಯೂ ಪ್ರೇತಗಳು ಕಾಣಿಸಿಕೊಂಡು ಜನರನ್ನು ಮೋಸಗೊಳಿಸುತ್ತವೆ. ಎಂದು ನನಗೆ ಈಗ ತಿಳಿಯಿತು! ಆದರೆ ನಾನು ಮೋಸ ಹೋಗಲಾರೆ! ..."

ರಾಯರು ಗರಬಡಿದವರಂತೆ ನಿಂತು ಬಿಟ್ಟರು! ಏನಾಗಿದೆ ಅವಳಿಗೆ? ಯಾರು ಬಲ್ಲರು? ಅವಳು ಅಲ್ಲಿಯವರೆಗೆ ಹೇಗೆ ಬಂದಳು? ಯಾಕೆ ಬಂದಳು? ಅವಳು ಹೇಳುತ್ತಿರುವುದಾದರೂ ಏನು! ಯಾವುದೂ ರಾಯರಿಗೆ ತಿಳಿಯಲಿಲ್ಲ ಅವರಿಗೆ ಅದನ್ನು ತಿಳಿಸುವ ಪರಿಸ್ಥಿತಿಯಲ್ಲಿ ಯಾರೂ ಇರಲೂ ಇಲ್ಲ.

ಎಲ್ಲರೂ ಕೂಡಿ ಸೀತಮ್ಮನನ್ನು ಮನೆಗೆ ಕರೆದುತಂದರು. ನೀರು ಕುಡಿಸಲು

೭೭

ಹೋದಾಗ ತಂಬಿಗೆಯನ್ನು ಎಳೆದುಕೊಂಡು ತಲೆಗೆ ಸುರಿಸಿಕೊಂಡಳು. ರಾಯರು ಎದುರಿಗೆ ನಿಂತಿದ್ದಾರೆ....!

"ನಗಾಡಿರಿ! ನಗಾಡಿರಿ! ಎಲ್ಲ ಹಲ್ಲು ತೋರಿಸಿರಿ! ಇನ್ನು ಯಾರೊಟನೆ ನಗಾಡುವಿರಿ? ನಾನು ಬದುಕಿದ್ದೇನೆ. ಸತ್ತವರೂ ಇದ್ದವರೂ ಎದುರು ಎದುರು ನಿಂತು ಕೊಳ್ಳುವುದು ಇದೇ ಮೊದಲು...... ಎಲ್ಲಿ?"

ಗೌರಜ್ಜಿಯು ಓಡುತ್ತ ಬಂದು ತಲೆ ಬಡಿದುಕೊಂಡು ಸಮಾಧಾನ ಮಾಡಲು ಹೊರಟಳ. ಸೀತಮ್ಮನಿಗೆ ಬಾಯಿ ಮಾತ್ರವಿದೆ! ಆದರೆ ಕಿವಿಗಳು ಕೇಳುವುದಿಲ್ಲ. ಕಣ್ಣುಗಳು ತೆರೆದಿದ್ದರೂ ಹತ್ತಿರ ನಿಂತವರ ಗೋಚರವಿಲ್ಲ! ಸ್ಪರ್ಶಶಕ್ತಿಯೂ ಉಡುಗಿ ಹೋಗಿದೆ! ಕ್ರಮೇಣ ಮಾತು ಕಡಿಮೆಯಾಯಿತು. ಜ್ವರವು ವಿಪರೀತವಾಗಿದೆ! ಎಲ್ಲವೂ ಪ್ರೇತ ಛಾಯೆಯಂತಿದೆ! ಮನೆಯು ಸ್ಮಶಾನವಾಗಿದೆ! ಕೆಲವು ಗಳಿಗೆಗಳ ಹಿಂದೆ ನಂದನ ವನದಂತಿದ್ದ ರಾಯರ ಮನೆಯಲ್ಲಿ ಈಗ ಪ್ರೇತಗಳು ಕುಣಿದಾಡುತ್ತಿವೆ. ಸೀತಮ್ಮನ ಕೈಕಾಲುಗಳಿಗೆ ಕೋಳ ಬಿದ್ದಿದೆ.!

o o o

"ಸೀತಮ್ಮನಿಗೆ ಹುಚ್ಚು! ಹೌದಂತೆ, ಪಾಪ, ಹಿಸ್ಟೀರಿಯಾ ಎಂದು ವೈದ್ಯರು ಹೇಳಿದ್ದಾರಂತೆ! ರಾಮರಾಯರೇ ಈಗ ಅಡಿಗೆ ಮನೆ ಕೆಲಸ ಮಾಡುತ್ತಾರೆ. ಗೌರಜ್ಜಿಯು ಸೀತಮ್ಮನ ಕೋಣೆಯ ಹೊರಗೆ ದಿನವಿಡಿ ಅಳುತ್ತ ಕುಳಿತಿರುತ್ತಾಳಂತೆ! ಅಮ್ಮನವರ ಹಾಂಗಾಗಿ ಬುಟ್ಟಿತಲ್ಲಾಂತ ಗೋಳಿಡುವುದೇ ಅವಳ ಪಾರವಾಗಿದೆ!"

"ಮನೆಯ ಅಂಗಳ ಇಳಿಯದ ಹೆಂಗಸು ಸೀರೆ, ಕುಪ್ಪಸಗಳ ಗೊಡವೆಯೇ ಇಲ್ಲದೆ ಬೀದಿಯಲ್ಲಿ ಓಡಿಹೋದಳು. ಎರಡು ದಿನ ಮನೆಗೆ ಬಂದಾಗ ಹೊಸಲಿನಿಂದ ಹೊರಗೆ ಇಣಿಕಿ ನೋಡದ, ಮೊದ್ದು

ಹನಿಗಳು

ಇಂದಿನ ಸ್ವರ್ಗ!

ಅಮೇರಿಕಾದ ಚರ್ಚ್ ಒಂದರಲ್ಲಿ ಪಾದ್ರಿಯು ಉಪದೇಶ ಮಾಡುತ್ತಿದ್ದನು. ತನ್ನ ಮಾತಿನ ಮಧ್ಯೆ ಅವನು ನೆರೆದಿದ್ದವರನ್ನು ಕುರಿತು "ನಿಮ್ಮಲ್ಲಿ ಸ್ವರ್ಗಕ್ಕೆ ಹೋಗಲು ಸಿದ್ಧರಿರುವವರು ಕೈಯೆತ್ತಿ" ಎಂದು ಕೇಳಿದನು. ಎಲ್ಲರೂ ಕೈ ಎತ್ತಿದರು. ಆದರೆ ಸಭೆಯಲ್ಲಿದ್ದ ಅಬ್ರಹಾಂ ಲಿಂಕನರು ಕೈ ಎತ್ತಲಿಲ್ಲ. "ಏಕೆ? ನಿಮಗೆ ಸ್ವರ್ಗ ಬೇಡವೇ?" ಪಾದ್ರಿ ಪ್ರಶ್ನಿಸಿದನು.

"ಇಲ್ಲ, ನಾನು ಕಾಂಗ್ರೆಸ್ಸಿಗೆ (ಅಮೇರಿಕಾದ ಜನಪ್ರತಿನಿಧಿ ಸಭೆ) ಹೋಗುತ್ತೇನೆ" ಎಂದು ಅಬ್ರಹಾಂರವರು ಮಾರ್ಮಿಕ ಉತ್ತರವಿತ್ತರು. ಅಬ್ರಹಾಮರಿಗೆ ಜನಸೇವೆಯ ಕೈಮಾರಿಯಾದ ಕಾಂಗ್ರೆಸ್ ಸ್ವರ್ಗಕ್ಕಿಂಥಲೂ ಹಿರಿದೆಂದು ತೋರಿರಬಹುದು. ಆದರೆ ಭಾರತದಲ್ಲಿಯ ಜನ ಪ್ರತಿನಿಧಿ ಸಭೆಗಳಾದ ಲೋಕ ಸಭೆ, ವಿಧಾನ ಸಭೆಗಳು ಪ್ರತ್ಯಕ್ಷ ಸ್ವರ್ಗದ ಸೋಪಾನಗಳೇ ಆಗಿವೆ!

ಈ ಸಭೆಗಳ ಸದಸ್ಯರ ವೇತನ, ಬತ್ಯ, ಜೀವನ ಧಾಟಿ, ಅನುಕೂಲತೆಗಳ ವಿಚಾರ ವಿವರಣೆ ಬೇಡ.

ಸ್ವರ್ಗವೆಂಬುದಿದೆಯೋ ಇಲ್ಲವೋ ನಾಕಾಣೆ. ಆದರೆ ಸ್ವರ್ಗ ಬೇಕೇ ಎಂದು ಕೇಳಿದರೆ ಪಸಿಷ್ಟ ಭಾರತದ ಮಂತ್ರಿಗಳಾದರೂ ತಮಗೆ ಸ್ವರ್ಗಕ್ಕಿಂಥಾ (ಕಾಂಗ್ರೇಸ್ಸೇ) ಮಂತ್ರಿ ಪದವೇ ಸಾಕೆಂದು ಅಬ್ರಹಾಂಲಿಂಕನರಂತೆ ಹೇಳಬಹುದು!

ಜೀವಿ ರಾಜಬೀದಿಯಲ್ಲಿ ಬೊಬ್ಬಿಡುತ್ತ ರಂಬಾರೂಟೆ ಮಾಡಿದ ದೃಶ್ಯವನ್ನು ಕಂಡರು! ಹೌದು—ಹುಚ್ಚೀ....ಇದು ಹುಚ್ಚಿನ ಪವಾಡವೇ?"

"ಯಾರಿಗಾದರೂ ಹಣೆಬರಹ ತಪ್ಪಿಸಲು ಬರುತ್ತೇ? ಆ ದಿನ ನೀವು ರಾಮರಾಯರಿಗೆ ಉಪದೇಶ ಮಾಡಿದ್ರು, ಈ ನೆಂಟಕ್ಕೆ ತಪ್ಪುತ್ತಿರಲಿಲ್ಲ— ಹೀಗೆಲ್ಲ ಆಗಲೇಬೇಕಂತ ಬ್ರಹ್ಮ ಬರೆದಿದ್ದ ಮೇಲೆ ಯಾರು ಏನು ಮಾಡಲುಂಟೊಂತ?"

"ಒಳ್ಳೆ, ಮತ್ತೆ—?

ಸ್ತ್ರೀ

ಹೆಂಗಸರಿಗೆ ಬೇರೆಯಾವ ಯಜ್ಞದಾನ ತಪಸ್ಸು ವ್ರತೋಪವಾಸಗಳೂ ಇರುವದಿಲ್ಲ. ಪತಿಶುಶ್ರೂಷೆಯೊಂದೇ ಸ್ತ್ರೀಗೆ ಸದ್ಗತಿಯನ್ನು ಕೊಡುವುದು.

ಮನುಸ್ಮೃತಿ.

ಯಾವಾಕೆಯು ತನ್ನ ಪತಿಯ ಹಿತದಲ್ಲಿಯೇ ಆಸಕ್ತಳಾಗಿ ಸ್ವಧರ್ಮಶೀಲಳಾಗಿ, ಜಿತೇಂದ್ರಿಯಳಾಗಿ ಇರುತ್ತಾಳೋ ಅವಳು ಈ ಲೋಕದಲ್ಲಿ ಕೀರ್ತಿಯನ್ನೂ ಅನಂತರ ಪರಮೋತ್ತಮವಾದ ಶಾಶ್ವತ ಪದವಿಯನ್ನೂ ಪಡೆಯುತ್ತಾಳೆ.

—ಯಾಜ್ಞವಲ್ಕ್ಯಸ್ಮೃತಿ.

ಯಾವ ಮನೆಯಲ್ಲಿ ಹೆಂಡತಿಯಿಂದ ಗಂಡನು ಸಂತುಷ್ಟನಾಗಿರುತ್ತಾನೋ, ಹಾಗೆಯೇ ಗಂಡನಿಂದ ಹೆಂಡತಿಯು ಸಂತುಷ್ಟಳಾಗಿರುತ್ತಾಳೋ, ಅಂಥ ಮನೆಯಲ್ಲಿ ಶಾಶ್ವತವಾಗಿ ಕಲ್ಯಾಣವಿರುವುದರಲ್ಲಿ ಸಂಶಯವಿಲ್ಲ. — ಮನುಸ್ಮೃತಿ.

ಲೋಕಸೇವಾ ವೃಂದದ ಸ್ಥಾಪನಾ ದಿನ

"ಲೋಕಸೇವೆಯೆಂಬ ಹೆಸರಲ್ಲೇ ಒಂದು ಆಕರ್ಷಣೆಯಿದೆ ಸೇವಾ ದೃಷ್ಟಿಯಿದ್ದರೆ ಮನುಷ್ಯನಲ್ಲಿ ಮನುಷ್ಯತ್ವ ತಾನಾಗಿ ಬರುತ್ತದೆ... ಸಮುದ್ದೇಶವಿದ್ದಾಗ ಪರಮಾತ್ಮನ ಅನುಗ್ರಹವೂ ಜನರ ಬೆಂಬಲವೂ ಬಂದೇ ಬರುತ್ತದೆ ಹಿಂದಿನ ಗುರುಗಳು ತಮ್ಮ ಸ್ವಂತಕ್ಕಾಗಿ ಏನೂ ಮಾಡುತ್ತಿದ್ದಿಲ್ಲ. ಅವರು ಕೇವಲ ಜ್ಞಾನ ದಾನವನ್ನು ಮಾಡುತ್ತಿದ್ದರು. ಇಂದು ಕೇವಲ ಜೀವನೋಪಾಯಕ್ಕಾಗಿ ಗುರುಗಳಾಗುತ್ತಾರೆ. ಇದರಿಂದ ಸಮಾಜಕ್ಕೆ ಅಪಾಯವಾಗಬಹುದು"

"ತಮ್ಮ ಸಂಪತ್ತೆಲ್ಲವನ್ನೂ ಒಂದು ಸಂಸ್ಥೆಗಾಗಿ, ಜನತಾ ಸೇವೆಗಾಗಿ ಧಾರೆಯೆರೆಯುವುದೆಂದರೆ ಅದರಲ್ಲೊಂದು ಮಹತ್ವವಿರಲೇಬೇಕು. ಅಂತಹ ಕಾರ್ಯ ಇಲ್ಲಿ ನಡೆಯುತ್ತಿದೆಯೆನ್ನುವುದು ಬಹಳ ಸಂತೋಷದ ವಿಷಯ" ಎಂಬುದಾಗಿ ಇದೇ ತಾ. 7ರಂದು ಚತುರ್ಥ ಸ್ಥಾಪನಾ ದಿನಾಚರಣೆಯ ಅಧ್ಯಕ್ಷಪೀಠದಿಂದ ಶ್ರೀ ಮುಡೆನೀರು ಮಠಾಧೀಶರಾದ ಶ್ರೀ ಕೇಶವಾನಂದ ಭಾರತೀ ಸ್ವಾಮೀಜಿಯವರು ನುಡಿದರು ಆರಂಭದಲ್ಲಿ ಶ್ರೀ ಎ. ಮೋಹನರಾಯರು ಸ್ವಾಗತ ಭಾಷಣ ಮಾಡಿದರು. ಶ್ರೀ ಬಿ. ನಾರಾಯಣರಾಯರಿಂದ ಸಂದೇಶ ವಾಚನವಾದ ಮೇಲೆ ಶ್ರೀಗಳಾದ ನಗ್ರಿಮೂಲೆ ವೆಂಕಟ್ರಮಣ ಭಟ್ಟ, ಎಡನೀರು ವೆಂಕಟ್ರಮಣ ಪುಣಿಂಚತ್ತಾಯ, ಕೆ. ಸೋಮಶೇಖರ ಪ್ರಭು, ಮತ್ತು ಯಂ. ತ್ಯಾಗರಾಜರವರು ಶುಭ ಕೋರಿ ಮಾತನಾಡಿದರು. ಅಂತ್ಯದಲ್ಲಿ ಮನರಂಜನಾ ಕಾರ್ಯಕ್ರಮಗಳಾದವು

ಬೆಂಗಳೂರು ಮಾಧ್ವ ಸಂಘದಲ್ಲಿ ಅಮೋಘ ಭಜನೆ

27.11.64ರಲ್ಲಿ ಮಾಧ್ವ ಸಂಘದ ಆಶ್ರಯದಲ್ಲಿ ಏರ್ಪಡಿಸಿದ ಈ ಭಜನೆಯನ್ನು ಸಾವಿರಾರು ಮಂದಿ ಪ್ರೇಕ್ಷಕರು ನೋಡಿ ಮತ್ತು ಕೇಳಿ ಸಂತೋಷಪಟ್ಟರು. ಶ್ರೀ ರಾಯರ ಹಿತ್ಯ ವರ್ಯರಾದ ಭಕ್ತ ಶ್ರೀ ಗೋವಿಂದ ದಾಸರವರು ತಮ್ಮ ಜೀವಿತ ಕಾಲದಲ್ಲಿ ಎಪ್ಪತ್ತು ವರ್ಷ ಅವಿಚ್ಛಿನ್ನವಾಗಿ ಈ ಭಜನೆಯನ್ನು ಮಾಡುತ್ತಿದ್ದರು. ಈ ಭಕ್ತಿ ಪಂಥದ ಪದ್ಧತಿಯನ್ನು ಅವರ ಮಕ್ಕಳಾದ ಶ್ರೀ ಸೀತಾರಾಮ ರಾಯರು, ಅವರ ಸಹೋದರರು, ಮಕ್ಕಳು ಮತ್ತು ಮೊಮ್ಮಕ್ಕಳು ಅನುಸರಿಸುತ್ತಾ ಬರುವುದು ಬಹಳ ಶ್ಲಾಘನೀಯವಾಗಿದೆ. ಶ್ರೀ ರಾವ್ ಬಹದ್ದೂರ್ ವೆಂಕಟೇಶಾಚಾರ್ಯರು ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು

ಶ್ರೀ ಸೀತಾರಾಮರಾಯರು ತಮ್ಮ ಪರಿವಾರದೊಡನೆ ಭಜನಾ ಸೇವೆಯನ್ನು ಮಾಡಲಿಕ್ಕೆ ಈ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ಸಂಘದವರಿಗೆ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು.

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

● ಶಾಸ್ತ್ರೀಯ ನೇತ್ರಪರೀಕ್ಷೆ—ಲಂಡನ್ನಿನಲ್ಲಿ ನೇತ್ರಪರೀಕ್ಷೆಯ ಪದವಿ ಪಡೆದವರಿಂದ

● ಮೆಳ್ಳುದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು ● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು.

NAVAYUGA 24-12-1964
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ನಾಲಿಗ್ರಾಮ.

೨೪-೧೨-೬೪ರಿಂದ ೩೦-೧೨-೬೪ರ ವರೆಗೆ

೧. ಮೇಷ.

ಸದ್ಯ ನಿಮ್ಮ ಅದೃಷ್ಟದ ಕದವು ತೆರೆಯು ತೆಂದರೂ ತಪ್ಪಾಗದು. ಉದ್ಯೋಗದಲ್ಲಿ ಪ್ರಗತಿ ವ್ಯವಹಾರದಲ್ಲಿ ಯಶಸ್ಸು ವ್ಯಾಪಾರಾದಿಗಳಲ್ಲಿ ತುಂಬ ಲಾಭವನ್ನು ಪಡೆವಿರಿ. ಪರರ ಹಂಗಿಲ್ಲದೆ ಅದೆಂತಹ ಮಹತ್ಕಾರ್ಯವನ್ನೂ ಸಾಧಿಸುವಿರಿ. ನಿಮ್ಮ ಉತ್ಕರ್ಷದ ಅಸಹನೆಯಿಂದಲೋ ಎಂಬಂತೆ ಬಂಧು ಜನರು ನಿಮ್ಮನ್ನು ವಕ್ರ ದೃಷ್ಟಿಯಿಂದ ನೋಡುವರು. ತಾ. 25 ರಿಂದ 30ರವರೆಗಿನ ದಿನಗಳೂ ವಿವಿಧ ಲಾಭ ಇಷ್ಟಾರ್ಥ ಪ್ರದಗಳಾಗಿವೆ.

೨. ವೃಷಭ

ನರನ ಎರಡು ಬಾಹುಗಳಂತಿರತಕ್ಕ ದೈವ ಮತ್ತು ಪೌರುಷಗಳಲ್ಲಿ ಇಂದು ನೀವು ದೈವದಿಂದ ಸಂಪೂರ್ಣ ವಂಚಿತರಾಗಿರುವಿರಿ ಆದಕಾರಣ ನಿಮ್ಮ ಎಲ್ಲ ಯತ್ನಗಳು ನೀರಿನಲ್ಲಿ ಮಾಡಿದ ಹೋಮದಂತೆ ವಿಫಲವಾದಾವು. ಮನೋದೌರ್ಬಲ್ಯವುಳ್ಳ ನೀವಿಂದು ಹೆಚ್ಚಿನ ಕಾರ್ಯಗಳನ್ನು ಅರ್ಧದಲ್ಲೇ ಕೈಬಿಡುವಿರಿ. ಗೃಹತಾಪತ್ರಯ ಆರ್ಥಿಕ ದುರವಸ್ಥೆ ದೇಹಾಲಸ್ಯ ಸ್ವಜನ ವಿರಹ ವಿರೋಧಾದಿಗಳಿಗೀಡಾದ ನಿಮಗೆ ವಾರಾಂತ್ಯದ 3 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

೩. ಮಿಥುನ

ಹಿಂದಿಗಿಂತ ನಿಮಗಿಂದು ಹೆಚ್ಚಿನ ಸುಖ ಸೌಕರ್ಯಗಳು ಕಾಣಿಸದಿದ್ದರೂ ಇದ್ದುದಕ್ಕೆ ಕೊರತೆಯಾಗಲಾರದು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ವಿದ್ಯೋಪಜೀವೀ ನೌಕರಿ ವರ್ಗಕ್ಕೂ ಇಂದಿನ ದಿನಗಳು ತುಂಬ ಅನುಕೂಲವಾಗಿವೆ. ಅಧಿಕಾರಿಗಳ ಕೃಪೆಗೆ ಪಾತ್ರರಾದ ನೀವಿಂದು ಉದ್ಯೋಗದಲ್ಲಿ ಮೇಲ್ಮೆಯನ್ನು ಪಡೆಯಲಿರುವಿರಿ. ಶ್ರಮವು ಸರ್ವತ್ರ ಸಾರ್ಥಕವಾದರೂ ರಾಜಕೀಯದಲ್ಲಿ ವಿಫಲವಾದೀತು. ವ್ಯಾಪಾರೀ ಜನತೆಗೆ ಮೇಲಿಂದ ಮೇಲೆ ತೊಡಕು ತೊಂದರೆಗಳುಂಟಾದಾವು. ತಾ. 21.30 ಇದ್ದುದರಲ್ಲಿ ಉತ್ತಮವಿವೆ.

೪. ಕರ್ಕಟ

ಸ್ವಜನರ ವಿರಹ ಶತ್ರುಜನರ ಕಾಟ ಗೃಹ ತಾಪತ್ರಯಾದಿಗಳಿಂದ ನಿಮ್ಮ ಮನಸ್ಸಿಗಿಂದು ನೆಮ್ಮದಿಯಿಲ್ಲವಾದರೂ ಕಾರ್ಯರಂಗದಲ್ಲಿ ನೀವು ಸರ್ವತ್ರ ವಿಜಯಿಗಳಾಗುವಿರಿ. ವಿಶೇಷತಃ ಕೋರ್ಟು ಕಚೇರಿಗಳ ವ್ಯವಹಾರಗಳು ನಿಮ್ಮಂತೆ ಆಗಲಿವೆ. ಖರ್ಚಿಗೆ ತಕ್ಕಷ್ಟು ಫಲ ಲಾಭವಿರೋಣದರಿಂದ ಹಣದ ತೊಂದರೆಯೆನಿಸದು. ಅರ್ಧಾಂಗಿಯ ಆರೋಗ್ಯ ಕೆಡುವಂತಿದೆ. ನೌಕರಿ ಜನರಿಗೆ ಅಧಿಕಾರಿಗಳ ಪೀಡೆ ಹೆಚ್ಚಲಿದೆ. ತಾ. 22.26.27 ಇಷ್ಟಪ್ರದಗಳಾಗಿವೆ.

೫. ಸಿಂಹ

ನಿಸರ್ಗತಃ ಸೌಮ್ಯರಾದ ಬುಧ ಗುರು ಶುಕ್ರರಿಂದು ನಿಮ್ಮ ಮೇಲೆ ಅನುಗ್ರಹ ದೃಷ್ಟಿಯಂ ಬೀರಿಹ ಕಾರಣ ನೀವಿಂದು ಸಮಾಜದಲ್ಲಿ ಒಳ್ಳೆಯ ಕೀರ್ತಿ ಗೌರವಗಳನ್ನು ಪಡೆವಿರಿ. ಮಾತ್ರವಲ್ಲ ನಿಮ್ಮ ಸಾಂಪತ್ತಿಕ ಪರಿಸ್ಥಿತಿಯು ದಿನದಿಂದ ದಿನಕ್ಕೆ ಸುಧಾರಿಸಲಿದೆ. ಕೆಲವೊಂದು ಕುಜನರು ನಿಮ್ಮ ಮೇಲೆ ಸೇಡು ತೀರಿಸಲೆತ್ನಿಸಿದರೂ ದೈವವು ನಿಮ್ಮನ್ನು ಆಶ್ರಯದಿಂದ ಪಾರುಗಾಣಿಸಲಿದೆ. ವಾಕ್ಕಲಹ ಪಿತ್ತೋಷ್ಣ ಸಂಬಂಧವಾದ ದೇಹಾಲಸ್ಯ ಸ್ವಲ್ಪ ಹೆಚ್ಚಲಿದೆ. ತಾ. 24, 28, 29, ಈ ದಿನಗಳಲ್ಲಿ ಗೃಹಸುಖ ಭೋಗ ಭಾಗ್ಯಗಳನ್ನು ಪಡೆವಿರಿ.

೬. ಕನ್ಯಾ

ಶ್ರಮ ಸಹಿಷ್ಣುಗಳಾದ ನೀವಿಂದು ಹಲವಾರು ತೊಡಕು ತೊಂದರೆಗಳಿಗೀಡಾಗಲಿರುವಿರಿ. ಮನೆಯಲ್ಲಿನ ಅವ್ಯವಸ್ಥೆಯಿಂದಾಗಿ ಮನಸ್ಸಿಗೆ ಸ್ವಲ್ಪವೂ ನೆಮ್ಮದಿಯಿರದು. ಪ್ರಿಯಜನರ ವಿರಹ ದುಃಖಕ್ಕೆ ನೀವಿಂದು ಗುರಿಯಾಗಲಿರುವಿರಿ. ಬೇಕು ಬೇಕಾದ ವಸ್ತು ಒಡವೆಗಳು ಸಾಕಷ್ಟಿದ್ದರೂ ನಿಮ್ಮ ಸಮಯಕ್ಕೆ ಅವು ಲಭಿಸಲಾರವು. ಕಫ ಪಿತ್ತ ಸಂಬಂಧವಾದ ಕಾಹಿಲೆಯು ಕಂಡುಬರಲಿದೆ. ಎಷ್ಟೇ ದುಡಿದರೂ ದಿನಾಂತ್ಯದಲ್ಲಿ ಕೈ ಬರಿದಾಗುವುದು. ತಾ. 25, 26, 27, 30 ಈ ದಿನಗಳು ಇದ್ದುದರಲ್ಲಿ ಅನುಕೂಲವಾಗಿರುವುವು

೭. ತುಲಾ

ನಿಮ್ಮ ಧನಪತಿಯಾದ ಅಂಗಾರಕನಿಂದು ವ್ಯಯ ಸ್ಥಾನಕ್ಕೆ ಬಂದರೂ ಭಾಗ್ಯಪತಿಯ ಅನುಗ್ರಹ ಮತ್ತು ಬೃಹಸ್ಪತಿಯ ದೃಷ್ಟಿ ನಿಮ್ಮ ಮೇಲೆ ಪೂರ್ಣವಾಗಿರುವುದರಿಂದ ಈ ವಾರವು ಸುಖದಿಂದ ಸಾಗಲಿದೆ. ನಿಮ್ಮ ಬಯಕೆಯಂತೆ ಕಾರ್ಯಗಳು ಪೂರ್ಣವಾಗಲಿವೆ. ಬಂಧು ಮಿತ್ರರ ನೆರವು ಸಾಕಷ್ಟಿದ್ದರೂ ಕೋರ್ಟು ವ್ಯವಹಾರಗಳಲ್ಲಿ ಪರಾಭವದ ಚಿಹ್ನೆಗಳಿವೆ. ಶ್ರಮ ಜೀವಿಗಳಿಗೀ ಕಾಲವು ತುಂಬ ದುಃಖದಾಯಿಯಾಗಿ ಪರಿಣಮಿಸಲಿದೆ. ತಾ. 24, 28, 29, ಈ ದಿನಗಳಲ್ಲಿ ನಾನಾ ವಿಧದಿಂದ ಧನಾಗಮ ಮಿತ್ರರ ಭೆಟ್ಟಿ ಸುಖ ಭೋಗಗಳಂ ಪಡೆವಿರಿ.

೮ ವೃಶ್ಚಿಕ

ಕಳೆದ ದಿನಗಳಿಗಿಂತ ಈ ವಾರವು ಸ್ವಲ್ಪ ಬಿಕ್ಕಟ್ಟಿನದಾಗಿ ಕಾಣಿಸಲಿದೆ. ಆದಾಯವು ಕಡಿಮೆಯಾದಂತೆ ಖರ್ಚುಗಳೂ ಹೆಚ್ಚಲಿವೆ. ಆದರೂ ಹಣದ ಅಡಚಣೆಯಾಗದು. ಬಂಧು ಜನರ ವಿರೋಧ ಸಾಂಸಾರಿಕ ತಾಪತ್ರಯಗಳಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲಿ ಎಂದು ನೀವು ಕಾರ್ಯರಂಗದಲ್ಲಿ ಮುಂದರಿಯಿರಿ. ಇದಿಲ್ಲ ಮುಂದಾದರೂ ನೀವು ಸುದಿನಗಳನ್ನು ಕಾಣಲಿರುವಿರಿ. ತಾ. 24, 25, 26, 27, 30 ಈ ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿವೆ.

೯. ಧನು

ನಿಮ್ಮ ಸಂಕಲ್ಪಗಳಿಂದು ನಿರ್ವಿಘ್ನದಿಂದ ಕಾರ್ಯರೂಪಕ್ಕೆ ಬರಲಿವೆ. ಎಂತಹ ಮಹತ್ಕಾರ್ಯವನ್ನೂ ನೀವಿಂದು ತೃಣಪ್ರಾಯವಾಗಿ ಕಾಣುವಿರಿ. ಸ್ವಯಂ ಸಮರ್ಥರಾದ ನಿಮಗೆ ಜನತೆಯ ಬೆಂಬಲವೂ ಸಾಕಷ್ಟು ದೊರೆವುದು. ಮಧು ತುಂಬಿದ ಸುಮವನ್ನು ಮಧುಕರಗಳು ಬಂದು ಸೇರುವಂತೆ ಪ್ರಿಯ ಪರಿವಾರ ವರ್ಗದವರು ನಿಮ್ಮನ್ನು ಬಂದು ಸೇರಲಿರುವರು ನಿಶ್ಚಿಂತೆಯಿಂದಲೂ ನಿರಾಮಯದಿಂದಲೂ ಕಾಲ ಕಳೆವ ನಿಮಗೆ ತಾ. 25ರಿಂದ 29ರ ವರೆಗಿನ ದಿನಗಳು ಅನುಕೂಲಗಳಾಗಿ ಪರಿಣಮಿಸಲಿವೆ.

೧೦. ಮಕರ

ಭಾಗ್ಯ ಮತ್ತು ಕರ್ಮಪತಿಗಳಾದ ಬುಧ ಶುಕ್ರರು ಇಂದು ನಿಮ್ಮ ಲಾಭಸ್ಥಾನದಲ್ಲಿ ಕೂಡಿರುವುದರಿಂದ ನಿಮ್ಮ ಉದ್ಯೋಗ ವ್ಯವಹಾರಗಳಲ್ಲಿ ಫಲಲಾಭವು ಉತ್ತಮವಾಗಿ ಲಭಿಸಲಿದೆ. ಗೃಹತಾಪತ್ರಯಗಳಿಂದ ಮುಕ್ತರಾದ ನೀವು ಸುಗಮವಾಗಿ ಜೀವನ ಸಾಗಿಸುವಿರಾದರೂ ಮನೋರೋಗವು ನಿಮ್ಮನ್ನು ಸತತವಾಗಿ ಕಾಡಲಿದೆ. ರಾಜಕೀಯ ರಂಗಕ್ಕಿಂದು ಪ್ರವೇಶಿಸದಿರಿ. ಸೋಲನ್ನೊಪ್ಪಬೇಕಾಗಿ ಬಂದೀತು ವಾರಾಂತ್ಯದ 3 ದಿನಗಳು ಸುಖಲಾಭದಾಯಿಗಳಾಗಿವೆ

೧೧. ಕುಂಭ

ಅಧಿಕಾರಿಗಳ ವಕ್ರದೃಷ್ಟಿಗೆ ಗುರಿಯಾದ ನಿಮಗೆ ಸ್ಥಾನದಲ್ಲಿ ಸ್ಥಿರತೆಯಿರಲಾರದು. ಮಾತ್ರವಲ್ಲ ಅಷ್ಟಮಕ್ಕೆ ಅಂಗಾರಕನೂ ಬಂದಿಹ ಕಾರಣ ಶತ್ರುಜನರ ಪೀಡೆ ಉಪಟಳಗಳು ಅತಿಯಾಗುವವು ಪ್ರವಾಸದಲ್ಲಿ ಅಪಘಾತಾದಿಗಳ ಭಯವಿದೆ. ಜನ್ಮರಾಶಿಗತಶನೈಶ್ಚರನಿಂದಾಗಿ ಆಗಾಗ ವಾತದೋಷಗಳು ದೇಹದಲ್ಲಿ ಕಾಣಿಸಿಕೊಳ್ಳಲಿವೆ. ಪರಿಶ್ರಮಕ್ಕೆ ತಕ್ಕ ಫಲಪ್ರಾಪ್ತಿಯಾಗುವುದರಿಂದ ನಿಮಗಿಂದು ಹಣದ ಕೊರತೆ ಕಾಣದು ವಾರದ ಆದ್ಯಂತ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಲ್ಲ

೧೨ ಮೀನ

ನಿಮ್ಮ ಪರಿಸ್ಥಿತಿಯಲ್ಲಿ ಒಮ್ಮೆಲೇ ಕೆಲವು ಪರಿವರ್ತನೆಗಳಾಗಲಿವೆ. ನಿಮ್ಮ ಕಾರ್ಯ ಕಲಾಪಗಳಿಂದು ನಿರ್ವಿಘ್ನದಿಂದ ಸಾಗಲಾರವು. ಅರ್ಧಾಂಗಿಯ ಕೂಡೆ ವಿರಸ ವಿವಾದಗಳುಂಟಾಗಲಿವೆ. ಕೋರ್ಟು ವ್ಯವಹಾರಗಳ ನಿಮಿತ್ತ ಹೆಚ್ಚಿನ ಧನವ್ಯಯವಾಗುವುದು. ಮನೋಧೈರ್ಯವು ಮಾತ್ರ ಕುಂಠಿತವಾಗಲಾರದು. ಆದರೂ ಸುರಗುರುಗಳ ಅನುಗ್ರಹದಿಂದಾಗಿ ನಿಮಗೆ ಹಣದ ತೊಂದರೆಯುಂಟಾಗಲಾರದು. ವಾರಾದಿಯ ನಾಲ್ಕು ದಿನಗಳಲ್ಲಿ ಸುಖಭೋಗ ಧನಮಾನಗಳನ್ನು ಪಡೆವಿರಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ 1-25 (ಟ.ಖ.ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಕರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ. ಪ್ರತ್ಯೇಕ)

ಬಾಲವಿಷ್ಣು ತೈಲ

(ಸನ್ಯಾಸಿ ಕೈಯಿಂದ ಪ್ರಯೋಗ)
ಅಂಗವಿಹೀನರಿಗೆ (ಅಂಗ ವಿಕಲರಿಗೆ)
ಪ್ರಮುಖ್ಯ ಔಷಧಿ

BEST-REMEDY-FOR-FITS-HYSTIRIA-RECKETS &-CONVALSIONS

ಮದ್ದು, ಮಂತ್ರ, ತಂತ್ರ, ಬಲಿ, ಇಂಜಕ್ಷನ್, ವಗೈರೆಗಳಲ್ಲಿಯೂ ಗುಣವಾಗದ ಕಾಯಿಲೆಯು ಇದರಲ್ಲಿ ಖಂಡಿತ ಗುಣ. ಅಂಗ ಹೀನರೆಂಬುದು ನಾಡಿ ದೋಷ ಕಾಯಿಲೆ ಹುಟ್ಟು ಕಾಯಿಲೆ ಅಲ್ಲ ಆಹಾರ ಬೇಕಾದಷ್ಟು ತಿನ್ನುತ್ತಾರೆ ಹೊಟ್ಟೆಗೆ ಮದ್ದು ಬೇಡ, ಸಾವಿರಾರು ಹಣ ಖರ್ಚು ಮಾಡಿ ಗುಣವಾಗದ ಈ ಕೆಳಗಿನ ಕಾಯಿಲೆಯವರು ಅನೇಕರು ಗುಣ ಹೊಂದಿದ್ದಾರೆ. ಬರೇ ತೈಲದಿಂದಲೇ ಗುಣ-

ಮೂರ್ಛೆ, ಮಕ್ಕಳು ನಡೆಯದಿರುವಿಕೆ, ಕೈ ಕಾಲು ಮುದ್ದೆ, (ಪಕ್ಷಿಕಡವು) ಕೈ ಕಾಲು ಆರಿ ಹೋಗುವಿಕೆ, ಸೊಂಟದ ಮೇಲೆ ಮುಷ್ಟಿ ಕೆಳಗೆ ಸಪೂರ, ಬಾಲವಾತ, ಬಾಲಕ್ಷಯ, ಹದಗೆಟ್ಟ ನಿತ್ರಾಣ, ಒಳಭಾಗ ನೋವು ಮತ್ತು ಇತರ ಮಕ್ಕಳ ಬಿಷ್ಮೆ ಕಾಯಿಲೆಗೂ ಉತ್ತಮ. ಮತ್ತು ವಿಪ್ರಯಸ್ಕರ ಗುಣವಾಗದ ವಾತ, ವಾತಕ್ಷಯ ಹದಗೆಟ್ಟ ನಿತ್ರಾಣಕ್ಕೂ ಉತ್ತಮ. ಒಂದೆರಡು ಕುಪ್ಪೆಯಲ್ಲಿ ಗುಣ ಅವಗುಣ ಗೊತ್ತಾಗುತ್ತದೆ. ಮತ್ತು ಬಾಟ್ಲಿಯೊಂದಿಗಿರುವ ವಿಷಯ ಪತ್ರಿಕೆಯಂತೆ ನಡೆಕೊಂಡರೆ ಖಂಡಿತ ಗುಣ. 3 ಕುಡ್ತೆಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ—ಇದರಿಂದ ಗುಣವಾಗದ ಪಕ್ಷಕ್ಕೆ ಆ ವ್ಯಕ್ತಿಗೆ ಮದ್ದು ಮಾಡುವ ಅಗತ್ಯವಿಲ್ಲ—ತಿಳಿದಿರಲಿ.

ತಯಾರಕರು:—A S. ಪಕ್ಕಳ, ಬಾಲವಿಷ್ಣು ತೈಲ ಔಷಧಾಲಯ ಪುತ್ತೂರು ತಾಲ್ಲೂಕು, ಪುತ್ತೂರು ಕಸಬಾ, ಪೋಸ್ಟು: ದರ್ಬೆ, S. K.

Edited, Printed & Published by K. H. Shetty at the Navayuga Press, Udupi, S. India.

ನವಯುಗ

ಸಂಪುಟ ೪೪] ದಶಂಬರ, ೩೧, ೬೪ [ಸಂಚಿಕೆ ೧೮

Phone No.
ಫೋನ್ ಸಂಖ್ಯೆ: 226

NAVAYUGA

leading nationalist weekly

೨೦ ಪೈಸೆ

ಮರೆಯಲಾಗದ ಭಾವಚಿತ್ರ

ಬರೆದವರು
ಶ್ರೀ ಕುತ್ಯಾರುಗುತ್ತು ರವೀಂದ್ರ ಶೆಟ್ಟಿ.

"ಭಾರತ ಮಾತಾಕೀ—ಜೈ"

ಜಯಕಾರವನ್ನು ಒಕ್ಕೊರಲಿನಿಂದ ಘೋಷಿಸಿದರು—ಭಾರತೀಯ ಸೈನಿಕರು.

ಆ ಪವಿತ್ರನಾದ 'ಜೈ' ಎಂಬ ನಾದವು ಪಾವನವಾದ ಹಿಮಾಚಲದಿಂದ ಹೊರಟಿತ್ತು. ನಮ್ಮೀ ಭಾರತಕ್ಕೆ ಮಾತ್ರವಲ್ಲ—ಈ ಪ್ರಪಂಚಕ್ಕೆ ಕೇಳಿತ್ತು ಆ ಪಾವನ ಮಂತ್ರ.

ವೈರಿಯ ಶತ್ರುಗಳ ಕಿವಿಗೆ ಬಡಿಯಿತು—ಆ ವಿಜಯ ಧ್ವನಿ. ಅವರ ಕಿವಿ ಕಿವುಡಾಯಿತು. ಮನವು 'ಶರಣು' ಎಂದಿತು. ಆದರೂ ತಮ್ಮ ಅನ್ಯಾಯದ ಅರಿವು ಅವರಿಗಿಲ್ಲವಾಗಿತ್ತು.

"ಭಾರತ ಮಾತಾಕೀ—ಜೈ".

ದ್ವಿತೀಯ ಬಾರಿಗೆ ಹೊರಟಿತ್ತು—ಆ ವಿಜಯ ಘೋಷ. ಗಗನವನ್ನೂ ಭೇದಿಸಿತ್ತು ಆ ಜಯ ಕಹಳೆ.

ಚೀನೀಯ ಠಾಣ್ಯವೊಂದು ಭಾರತೀಯ ಸೈನಿಕರಿಂದ ನಾಶಗೊಂಡಿತು. ಹಲವು ಶತ್ರುಗಳನ್ನು ನೆಲಕ್ಕುರುಳಿಸಿತು—ಭಾರತೀಯ ಸೈನಿಕ ವೃಂದ. ನಮ್ಮ ಅಣ್ಣಂದಿರೂ ಹಲವರು ವೀರ ಸ್ವರ್ಗವನ್ನು ಪಡೆದರು. ಭಾರತ ಮಾತೆಯ ಚರಣ ಕಮಲಗಳಲ್ಲಿ ಐಕ್ಯಗೊಂಡರು.

ಕೂಡಲೇ ಶತ್ರುಗಳ ಪಡೆ ಹಿಮ್ಮೆಟ್ಟಿತು. ಭಾರತದ ಜನತೆಗೆ ಸಂತೋಷದ ಸಾಗರವನ್ನು ದಾನವಾಗಿ ಇತ್ತಿತು—ಈ ವಿಷಯ. ಭಾರತೀಯರೆಲ್ಲರೂ ತಮ್ಮ ಅಣ್ಣಂದಿರಿಗೆ ಕೃತಜ್ಞತೆಯ ಹೂಮಾಲೆಯನ್ನರ್ಪಿಸಿದರು.

ಮೈ ಕೊರೆಯುವ ಚಳಿಯಿಂದ ಕೂಡಿತ್ತು ಯುದ್ಧರಂಗ. ಆ ಸಮರ ರಂಗದ ಇನ್ನೊಂದೆಡೆಯಲ್ಲಿ ಭೀಕರವಾದ ಘರ್ಷಣೆಯು ನಡೆಯುತಿತ್ತು. ಫಿರಂಗಿಗಳ ಧೂಮದಿಂದ ಆವೃತವಾಗಿತ್ತು ಆ ಸ್ಥಳ. ಭಾರತದ ಸೈನಿಕರು ಎದೆಯೊಡ್ಡಿ ಹೋರಾಡಿದರು. ಹಲವರು ಸಾವು ತೆತ್ತರು. ಕೆಲವರು ಗಾಯಗೊಂಡರು. ಇನ್ನು ಕೆಲವರು ಶತ್ರುಪಡೆಯನ್ನು ಯಮಲೋಕಕ್ಕೆ ಅಟ್ಟಿದರು. ಆದರೂ ಅಲ್ಪ ಸೈನಿಕರನ್ನೊಳಗೊಂಡ ಭಾರತೀಯ ಸೈನ್ಯ ಅಪಾರವಾದ ಶತ್ರುಪಡೆಯೆದುರು ಹೋರಾಡಲಾರದೆ ಹೋಯಿತು. ಭಾರತದ ಠಾಣ್ಯವೊಂದು ಕೈತಪ್ಪಿತು.

ಈ ನಲವತ್ತೈದು ಕೋಟಿ ಜನತೆಗಾಗಿ ಹಲವು ಪ್ರಾಣಗಳು ಹೋದುವು. ಹಲವು ಧೀರರು ಅಂಗವಿಕಲರಾದರು. ಚಳಿಯಿಂದ ಮೈ ಕೊರೆಯುವ ಆ ಸ್ಥಳದಲ್ಲಿ ನೆಲೆನಿಂತರು. ಯುದ್ಧದ ಫಿರಂಗಿಗಳ ಧೂಮದ ನಡುವಿನಲ್ಲಿ ಧೈರ್ಯಗೊಂಡು ನಿಂತಿದ್ದರು—ಅಣ್ಣಂದಿರು. ಪ್ರಾಣವನ್ನು ಪಣವಾಗಿಟ್ಟುಕೊಂಡು ಹೋರಾಡಿದರು. ಒಂದು ಮಗ್ಗುಲಿಂದ ಚಳಿಯ ಹೊಡೆತ, ಇನ್ನೊಂದು ಮಗ್ಗುಲಿಂದ ವೈರಿಸೈನಿಕರ ಉಪದ್ರವ, ಮಗದೊಂದು ಮಗ್ಗುಲಿಂದ ಹಸಿವೆಯ ಕಾಟ—ಇವುಗಳಿಂದ ತತ್ತರಿಸಿದರು—ಭಾರತ ಮಾತೆಯ ವೀರ ಯೋಧರು.

ಭಾರತೀಯ ಸೈನಿಕರನ್ನು ಸಾಗಿಸುವ ವಾಹನವೊಂದು ಬಂತು ಆ ಕಡೆ. ಗಾಯಗೊಂಡ ಸೈನಿಕರನ್ನು ತ್ವರಿಯಾಗಿ ವಾಹನದಲ್ಲಿ ಇರಿಸಿದರು—ಇತರ ರಕ್ಷಣೆಗಾರರು. ವಾಹನವು ಅವರನ್ನು ಒಂದು ಆಸ್ಪತ್ರೆಗೆ ಒಯ್ಯಿತು. ಕೂಡಲೇ ತಜ್ಞ ವೈದ್ಯರು ಗಾಯಗೊಂಡ ಸೈನಿಕರಿಗೆ ಯೋಗ್ಯ ಔಷಧೋಪಚಾರಗಳನ್ನಿತ್ತರು.

ಗಾಯಗೊಂಡ ಸೈನಿಕನೊಬ್ಬನನ್ನು ವೈದ್ಯರು ಪರೀಕ್ಷೆ ಮಾಡುತ್ತಿದ್ದರು. ಪತ್ರಿಕಾಕಾರರು ಆ ದೃಶ್ಯದ ಚಿತ್ರವನ್ನು ತೆಗೆದರು. ಆ ಭಾವಚಿತ್ರವು ಮಾರನೇ ದಿವಸ ಪತ್ರಿಕೆಯಲ್ಲಿ ಪ್ರಕಟವಾಗಿತ್ತು.

ಜನರೆಲ್ಲರೂ ಬೆಲ್ಲವನ್ನು ನೊಣಗಳು ಮುತ್ತುವಂತೆ ಆ ಪತ್ರಿಕೆಯನ್ನು ಮುತ್ತಿದರು. ಜನರ ಸಮೂಹದಲ್ಲಿದ್ದ ಹತ್ತರ ಹರೆಯದ ಬಾಲಕನೊಬ್ಬ ಚಿತ್ರವನ್ನು ಸರಿಯಾಗಿ ಈಕ್ಷಿಸಿದ. ಮಾತು ಹೊರಡದಾಯಿತು. ಕಣ್ಣು ಮಬ್ಬದಾಯಿತು. ಕಣ್ಣಿಂದ ಕಂಬನಿಯೊಂದು ಕೆಳಗುದುರಿತು. 'ಅಣ್ಣಾ' ಎನ್ನುತ್ತಾ ಆ ಬಾಲಕ ನೆಲಕ್ಕುರುಳಿದ. ಕೂಡಲೇ ಜನರೆಲ್ಲರೂ ಆತನನ್ನು ಆಸ್ಪತ್ರೆಗೆ ಕೊಂಡೊಯ್ದರು. ವೈದ್ಯರ ಔಷಧದ ಫಲವಾಗಿ ಬಾಲಕನು ಪ್ರಜ್ಞೆ ಮರಳಿತು. ವೈದ್ಯರು ಬಾಲಕನನ್ನು ಪ್ರಶ್ನಿಸಿದರು:

"ಏನಾಗುತ್ತಿದೆಯಪ್ಪ ನಿನಗೆ?"

ಬಾಲಕನ ಗಮನ ಅತ್ತಯಿಲ್ಲ. ಆತ "ಅಣ್ಣಾ, ನಾಗರಾಜಾ" ಎನ್ನುತ್ತಾ ಕಣ್ಣೀರಿಟ್ಟ. ಜನ ವೃಂದಕ್ಕೆ ಮನವರಿಕೆಯಾಯಿತು. ಆ ಸೈನಿಕ ಗೋವಿಂದದಾಸರ ಮಗ ನಾಗರಾಜನೆಂದು.

ಪತ್ರಿಕೆಯೊಂದನ್ನು ಹಿಡಿದುಕೊಂಡು ಆತ ನೇರ್ವ ಗೋವಿಂದ ದಾಸರ ಮನೆಗೋಡಿದ. ದಾಸರು ಪಾಪದ ಲೇಪದ ಮನುಷ್ಯರು. ಮಗಳ ಕಾಯಿಲೆಯ ಬಗ್ಗೆ ಚಿಂತಿಸುತ್ತಾ ಕುಳಿತಿದ್ದರು.

ಚಿಂತೆಯಿಂದಲೇ ಅವರ ಹಣೆ ನೆರಿಗೆ ಕಟ್ಟಿತ್ತು. ಚಿಂತೆಯಿಂದಲೇ ಅವರ ಮುಖ ಬಾಡಿಹೋಗಿತ್ತು. ನಲ್ವತ್ತೈದರ ಅವರು ಎಂಬತ್ತೈದರ ಮುದುಕನಂತೆ ಗೋಚರಿಸುತ್ತಿದ್ದರು. ಮಗಳು ತಿಂಗಳೆಂಟರ ಬಸಿರಿ ಮನೆಯೊಳಗಿಂದ ನರಳುತ್ತಿದ್ದಳು. ಆಕೆ ಕಾಯಿಲೆಯ ಪೆಟ್ಟಿಗೆಯಾಗಿದ್ದಳು. ಗೋವಿಂದದಾಸರ ಪತ್ನಿ ಮೊದಲೇ ಅವರನ್ನು ಅಗಲಿದ್ದರು. ಪ್ರಥಮ ಪುತ್ರ ನಾಗರಾಜನು ಸೈನಿಕ ವೃತ್ತಿಗೆ ಸೇರಿದ್ದ. ಇನ್ನು ಉಳಿದದ್ದು ಕೊನೆಯ ಮಗ ವೆಂಕಟೇಶ. ಗೋವಿಂದದಾಸರ ಮನೆ ದಾರಿದ್ರ್ಯದ ತವರಾಗಿತ್ತು.

ಪತ್ರಿಕೆಯನ್ನು ಹಿಡಿದು ಕೊಂಡಾತ ಮನೆಗೆ ಬಂದ. ಏನೂ ಮಾತಾಡದೆ ಪತ್ರಿಕೆಯನ್ನು ದಾಸರ ಕೈಗಿತ್ತ. ಆ ಚಿತ್ರವನ್ನೊಮ್ಮೆ ತೋರಿಸಿದ. ದಾಸರು ಎವೆಯಿಕ್ಕದೆ ಚಿತ್ರವನ್ನೇ ನೋಡುತ್ತಿದ್ದರು. ಮುಚ್ಚಿದ ತುಟಿ ಎರಡಾಗಲಿಲ್ಲ. ಹೃದಯ ಹಿಂಡಿದಂತಾಯಿತು ಗೋವಿಂದ ದಾಸರಿಗೆ.

"ಹಾ! ನಾಗರಾಜಾ!" ಎಂದು ಮೂರ್ಛೆಹೋದರು. ಗೋವಿಂದ ದಾಸರು ಕೂಡಲೇ ಮಗಳು ನರಳುತ್ತಾ ಒಳಗಿಂದ ಹೊರಬಂದಳು. ಗೋವಿಂದ

(ಹನ್ನೆರಡನೇ ಪುಟ ನೋಡಿರಿ)

'ಬ್ಯಾಂಕ್' ಅಷ್ಟೇ ಅಲ್ಲ
ವಿಶೇಷ ವೈಶಿಷ್ಟ್ಯತೆಯ ಬ್ಯಾಂಕಿಂಗ್
ಸಂಸ್ಥೆಯೂ ಹೌದು

ಡಾ. ರಾಜೇಂದ್ರಪ್ರಸಾದರು ನಮ್ಮ ಬ್ಯಾಂಕಿನ ಆಡಳಿತ ಕಛೇರಿಯ ಕಟ್ಟಡದ ಅಸ್ತಿಭಾರ ಶಿಲಾಸ್ಥಾಪನೆ ಮಾಡಿದ ಸಂದರ್ಭದಲ್ಲಿ, ಜನಹಿತಕ್ಕಾಗಿ ಕೆನರಾ ಬ್ಯಾಂಕ್ ಕೈಗೊಂಡಿರುವ ವಿವಿಧ ಕಾರ್ಯಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು

"ನಿಮ್ಮ ಬುಕ್ ಬ್ಯಾಂಕ್ ಯೋಜನೆ, ಜ್ಯುಬಿಲೀ ಎಜುಕೇಶನ್ ಫಂಡ್, ಹೌಸಿಂಗ್ ಸಾಲದ ಯೋಜನೆ, ಜ್ಯುಬಿಲೀ ಸ್ಟಾಫ್ ವೆಲ್‌ಫೇರ್ ಫಂಡ್ ಇವೇ ಹಲವು ಯೋಜನೆಗಳು ಸಾಮಾಜಿಕ ಸ್ಥಿತಿಗತಿಗಳ ಅಭಿವೃದ್ಧಿಗಾಗಿ ಶ್ರಮಿಸುವ ಯೋಜನೆಗಳ ಪ್ರತಿಬಿಂಬವಾಗಿವೆ. ನಿಮ್ಮ ಯೋಜನೆಗಳು ನನ್ನ ಮನಸ್ಸನ್ನು ಬಹಳವಾಗಿ ಆಕರ್ಷಿಸಿವೆ" ಎಂಬುದಾಗಿ ತಿಳಿಯಪಡಿಸಿದರು

ದಿವಂಗತ ಡಾ. ರಾಜೇಂದ್ರಪ್ರಸಾದರ ಈ ಶ್ಲಾಘನೆಯ ಮಾತುಗಳು ಸಾಮಾಜಿಕ ಪ್ರಗತಿಯ ಬಗ್ಗೆ ಬ್ಯಾಂಕಿನ ಉತ್ಸುಕತೆ ಹಾಗೂ ಕರ್ತವ್ಯಪರತೆಯನ್ನು ಸೂಚಿಸುತ್ತವೆ

ಸಮಾಜ ಸೇವೆಯ ಬಗ್ಗೆ ಕೆನರಾ ಬ್ಯಾಂಕ್ ಹಾಕಿರುವ ಈ ಧೋರಣೆಯ ಮೂಲಕವಾಗಿ ಅನೇಕ ನಾಗರಿಕ ಸಂಸ್ಥೆಗಳು ಕಾರ್ಯತತ್ಪರವಾಗಿವೆ. ಈ ಕಾರ್ಯಗಳ ಪ್ರಗತಿ ಸಾಧನೆಗೆ ಬ್ಯಾಂಕ್ ಸತತವಾಗಿ ಶ್ರಮಿಸುತ್ತಿದೆ

ಈ ಕಾರಣಕ್ಕಾಗಿಯೇ ಇಂದು ಕೆನರಾ ಬ್ಯಾಂಕು "ಬ್ಯಾಂಕ್ ಅಷ್ಟೇ ಅಲ್ಲ ವಿಶೇಷ ವೈಶಿಷ್ಟ್ಯತೆಯುಳ್ಳ ಬ್ಯಾಂಕಿಂಗ್ ಸಂಸ್ಥೆಯೂ ಹೌದು."



ಬ್ಯಾಂಕಿನ ಆಡಳಿತ ಕಛೇರಿ ಕಟ್ಟಡ

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪಿತ: 1906)
ರಿಜಿಸ್ಟರ್ಡ್ ಆಫೀಸು: ಮಂಗಳೂರು
ಆಡಳಿತ ಕಛೇರಿ: ಬೆಂಗಳೂರು
ವಿಶ್ವದಾದ್ಯಂತ ಪ್ರತಿನಿಧಿಗಳು
ಭಾರತದಲ್ಲಿ 235ಕ್ಕೂ ಹೆಚ್ಚಿನ ಶಾಖೆಗಳು

ಜ್ಯುಬಿಲೀ ಎಜುಕೇಶನ್ ಫಂಡ್
ಬುಕ್ ಬ್ಯಾಂಕುಗಳು
ರಿಲೀಫ್ ಅಂಡ್ ವೆಲ್‌ಫೇರ್ ಸೊಸೈಟಿ
ಬ್ಯಾಂಕ್ ಹಿತೈಷಿಗಳಿಗೆ ಶಿಕ್ಷಣ ಸೌಲಭ್ಯ
ಪ್ರದರ್ಶನಗಳ ಮೂಲಕ ಬ್ಯಾಂಕಿಂಗ್ ತಿಳುವಳಿಕೆ
ಗೋಲ್ಡನ್ ಜ್ಯುಬಿಲೀ ಸ್ಟಾಫ್ ವೆಲ್‌ಫೇರ್ ಫಂಡ್
ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ

CB-106/೮

Phone No. 226

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಫೋಟೋ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

೧೬೦ನೇ ರೋಟರಿ ಜಿಲ್ಲಾ ಗವರ್ನರರು ಹಾಗೂ ಇತರ ಸದಸ್ಯರು ೩೧೭ನೇ ಜಿಲ್ಲಾ ಗವರ್ನರ್ ಡಾ| ಟಿ. ಎಂ. ಎ. ಪೈ, ಶ್ರೀಮತಿ| ಶಾರದಾ ಪೈ ಹಾಗೂ ರೋಟೇರಿಯನ್ ಟಿ. ರಮೇಶ ಪೈ ಇವರನ್ನು ಬಾಲ್‌ಕನ್ ವಿಮಾನ ನಿಲ್ದಾಣದಲ್ಲಿ ಎದುರುಗೊಂಡಾಗ ತೆಗೆದ ಚಿತ್ರ.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೧೮	೩೧—೧೨—೧೯೬೪	No. 18

ಯಶಸ್ವಿ ರೋಟರಿ ಸಮ್ಮೇಳನ

ದೇಶದ ಪುನರ್ರಚನೆಯ ಇಂದಿನ ಪರ್ವ ದಿನಗಳಲ್ಲಿ, ದೇಶದ ನಾಗರಿಕರ ಪಾತ್ರವು ಅಪಾರವಾದುದು. ಜನತೆಯಿಂದಲೇ ಆರಿಸಲ್ಪಟ್ಟ ಜನತಾ ಸರಕಾರವು ದೇಶದ ಪ್ರಗತಿಯ ಸಲುವಾಗಿ ಹಲವಾರು ವಿಧದ ಯೋಜನೆಗಳನ್ನು ಅಳವಡಿಸಿಕೊಂಡು ಕಾರ್ಯವೆಸಗುತ್ತಿರುವ ಕಾಲವಿದು. ಈ ಸಂದರ್ಭ ರಾಷ್ಟ್ರದ ನಾಗರಿಕರೂ ಸರಕಾರದ ಈ ಘನವಾದ ಉದ್ದೇಶಸಾಧನೆಗಾಗಿ ಶಕ್ತಿಮೀರಿ ಶ್ರಮಿಸಬೇಕಾಗಿದೆ. ದೇಶದ ಪ್ರಗತಿಯು ಬರೇ ಸರಕಾರದ ಹೊಣೆಗಾರಿಕೆ ಎಂಬ ಭಾವವು ತೊಲಗಿ, ಪ್ರತಿಯೊಬ್ಬ ಪ್ರಜೆಯೂ ತನ್ನ ಕರ್ತವ್ಯವರಿತು ದೇಶದ ಅಭಿವೃದ್ಧಿಗೆ ನೆರವಾಗುವುದು ಪ್ರಗತಿಯ ಸಂಕೇತ.

ಸಮಾಜದ ಹಿತಸಾಧನೆಗಾಗಿ ನಮ್ಮಲ್ಲಿ ಸಂಘ ಸಂಸ್ಥೆಗಳು ಸ್ಥಾಪನೆಗೊಂಡಿವೆ. ಸಾಮಾಜಿಕ ಹಿತಕಾರ್ಯ ಹಲವಾರು ಸಂಘ ಸಂಸ್ಥೆಗಳ ಮೂಲಕ ಇಂದು ಸಾಗುತ್ತಿದೆ. ಎಂತಲೇ, ನಾವಿಂದು ಇಷ್ಟಾದರೂ ಪ್ರಗತಿಯತ್ತ ಸಾಗಿದ್ದೇವೆ. ಈ ರೀತಿ ತ್ಯಾಗ ಹಾಗೂ ಸೇವೆಯ ಉದ್ದೇಶವಿಟ್ಟುಕೊಂಡು ಜನ್ಮ ತಳೆದ ಸಂಸ್ಥೆಗಳಲ್ಲಿ ರೋಟರಿ ಕ್ಲಬ್ಬು ಕೂಡಾ ಒಂದು.

ಅಮೆರಿಕದ ಚಿಕಾಗೋ ನಗರದಲ್ಲಿ ಹುಟ್ಟಿದ ರೋಟರಿಯ ಸಂದೇಶ ಇಂದು ಜಗದ್ವ್ಯಾಪಿಯಾಗಿದೆ. ಇತರ ಶಾಖೆಗಳು ಅಲ್ಪ ಅವಧಿಯಲ್ಲಿ ವಿಶಾಲವಾಗಿ ಬೆಳೆದು, ಇದರ ಆಸರೆಯಲ್ಲಿ ರೋಟೇರಿಯನ್ನರು ಸಾಮಾಜಿಕ ಹಿತಸಾಧನೆಗಾಗಿ ದುಡಿಯುತ್ತಿದ್ದಾರೆ. ರೋಟರಿಯ ಉದ್ದೇಶಗಳು ಘನವಾಗಿದ್ದಂತೆ ಅದರ ಸಾಧನೆಗಳೂ ಉಲ್ಲೇಖನೀಯವೆನಿಸಿವೆ. ಅಂತರಾಷ್ಟ್ರೀಯ ಸೌಹಾರ್ದವು ಒಂದು ಪ್ರಧಾನ ಆವಶ್ಯಕತೆ ಎನಿಸಿರುವ ಇಂದಿನ ಯುಗದಲ್ಲಿ ರೋಟರಿಯಂತಹ ಸಂಸ್ಥೆಗಳು ದೇಶ ದೇಶಗಳ ನಾಗರಿಕರನ್ನು ಒಂದುಗೂಡಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ.

ಮೊನ್ನೆ ಮಣಿಪಾಲದಲ್ಲಿ ಜರಗಿದ ರೋಟರಿ ೩೧೭ನೇ ಜಿಲ್ಲೆಯ ಸಮ್ಮೇಳನವು ರೋಟರಿಯ ತತ್ವಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಇನ್ನೊಂದು ಹೊಸ ಮೈಲುಗಲ್ಲನ್ನು ಸ್ಥಾಪಿಸಿದೆ. ಈ ಜಿಲ್ಲೆಯ ವಿವಿಧ ಭಾಗಗಳ ರೋಟೇರಿಯನ್ನರು ಒಂದೆಡೆ ಸೇರಿ, ದೇಶದ ಆವಶ್ಯಕತೆಗಳೆನಿಸಿರುವ ಶಿಕ್ಷಣ, ಉದ್ದಿಮೆ, ಕೈಗಾರಿಕೆ, ವಾಣಿಜ್ಯ, ವೈದ್ಯಕೀಯ ಸವಲತ್ತುಗಳ ಕುರಿತು ಚಿಂತನೆ ಮಾಡಿದರು. ರೋಟರಿಯ ತತ್ವಗಳಾದರೂ ದೇಶ ಕಟ್ಟುವುದಕ್ಕೆ ನೆರವಾಗುವಂತವುಗಳೇ. ಈ ತತ್ವಗಳ ಸಾಧನೆಗೆ ರೋಟೇರಿಯನ್ನರು ಶಕ್ತಿ ಮೀರಿ ದುಡಿಯುವ ಆವಶ್ಯಕತೆಯನ್ನು ಮಣಿಪಾಲದ ಸಮ್ಮೇಳನ ಮನಗಾಣಿಸಿತೆಂದರೆ ಅತಿಶಯೋಕ್ತಿಯೇನಿಲ್ಲ.

ಈ ಸಂದರ್ಭ ರೋಟರಿ ಗವರ್ನರ್ ಡಾ| ಟಿ. ಎಂ. ಎ. ಪೈಗಳು ಆಡಿದ ಮಾತುಗಳು ಮನನೀಯವೆನಿಸಿವೆ. ಅವರು ರೋಟರಿ ೩೧೭ನೇ ಜಿಲ್ಲೆಯ ಸದಸ್ಯರಿಗೆ ಕರೆ ಕೊಡುತ್ತಾ ಮಣಿಪಾಲದಿಂದ ಮುಂಬರುವಾಗ ಈ ಜಿಲ್ಲೆಯು ದೇಶದಲ್ಲಿ ಆದರ್ಶ ರೋಟರಿ ಜಿಲ್ಲೆಯೆನಿಸಿ, ಸರಕಾರಕ್ಕೊಂದು ಮಹಾ ಶಕ್ತಿಯಾಗಿ, ದೇಶದ ಮೂಲೆ ಮೂಲೆಗಳಲ್ಲಿ ಜನಜಾಗೃತಿಯನ್ನುಂಟು ಮಾಡುವ ಜ್ಯೋತಿಯಾಗುವಂತೆ ಯತ್ನಿಸಬೇಕೆಂದರು. ಪ್ರತಿಯೊಂದು ರೋಟರಿ ಕ್ಲಬ್ಬು ಈ ಸಂದೇಶದ ಸಾರವನ್ನರಿತು, ಸರಕಾರಕ್ಕೆ ಬೆಂಬಲವಾಗಿ ನಿಂತು, ತ್ಯಾಗ ಹಾಗೂ ಸೇವೆಗಳನ್ನು ಅನುಷ್ಠಾನಕ್ಕೆ ತಂದು ತಾನು ಇರುವ ಊರಿನ ಅಭಿವೃದ್ಧಿ ಸಾಧಿಸಿತೆಂದರೆ, ಆಗ ರಾಷ್ಟ್ರ ನಾಯಕರು ಕಂಡ ಕನಸು ನನಸಾಗಲು ಹೆಚ್ಚು ದಿನಗಳು ಬೇಕಾಗಿಲ್ಲ. ೩೧೭ನೇ ರೋಟರಿ ಜಿಲ್ಲೆಯ ರೋಟೇರಿಯನ್ನರು ಈ ದಿಸೆಯಲ್ಲಿ ಶಕ್ತಿಮೀರಿ ಶ್ರಮಿಸುವವರೆಂಬುದನ್ನು ಅವರ ಈ ವರ್ಷದ ಸಾಧನೆಗಳೇ ತೋರಿಸಿವೆ.

ಇನ್ನೊಂದು ಮಾತು ಈ ಸಮ್ಮೇಳನದ ಸಂಘಟಕರ ಕುರಿತು. ಎಲ್ಲರೂ ಮೆಚ್ಚುವಂತಹ, ಕುಂದುಕೊರತೆಗಳಿಲ್ಲದ ವ್ಯವಸ್ಥೆಯನ್ನು ಮಾಡಿದುದಕ್ಕಾಗಿ ಕಾರ್ಯಕರ್ತರು ಪ್ರಶಂಸಾರ್ಹರು. ಅವರ ಕಾರ್ಯಕ್ಷಮತೆ ಕೊಂಡಾಡುವಂತಹುದು. ಅಂತೂ ಮಣಿಪಾಲದ ರೋಟರಿ ಸಮ್ಮೇಳನವು ಚರಿತ್ರಾರ್ಹವೆನಿಸಿತೆಂದು ಸಂತೋಷಪಡಬೇಕಾಗಿದೆ.

ಸ್ತುತ್ಯ ಉಪಕ್ರಮ

ಭಾರತದ ಸಂವಿಧಾನದ ೩೫೬ ಹಾಗೂ ೩೫೭ನೇ ನಿಬಂಧನೆಗಳನ್ನು ಜಮ್ಮು ಹಾಗೂ ಕಾಶ್ಮೀರಕ್ಕೆ ಅನ್ವಯಿಸುವಂತೆ ಮಾಡುವ ಆಜ್ಞೆಯೊಂದನ್ನು ಕಳೆದ ವಾರ ರಾಷ್ಟ್ರಪತಿಗಳು ಹೊರಡಿಸಿದರು. ಇದು ಸ್ತುತ್ಯ ಹಾಗೂ ಶ್ಲಾಘನೀಯ ಕಾರ್ಯ. ಇದರ ದೆಸೆಯಿಂದ ರಾಜ್ಯದ ಆಡಳಿತಯಂತ್ರವು ಕುಸಿದಂತಾದ ಸಂದರ್ಭದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತೆಯನ್ನು ಜಾರಿಗೆ ತರುವ ಅನುಕೂಲತೆಗಳನ್ನು ಒದಗಿಸುವುದಷ್ಟೇ ಈ ಆಜ್ಞೆಯ ಉದ್ದೇಶ.

ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ. ಆ ಪರೂ ಆ ವಕ್ಕೆ ಸಂವಿಧಾನದಲ್ಲಿ ವಿಶಿಷ್ಟವಾದ ಸ್ಥಾನ ಹೊಂದನ್ನು ಅಂದಿನ ಪರಿಸ್ಥಿತಿಗನುಗುಣವಾಗಿ ಕೊಡಲಾಗಿತ್ತು. ಈಗ ಅದನ್ನು ಭಾರತದ ಉಳಿದ ರಾಜ್ಯಗಳ ಸಾಲಿಗೆ ಸೇರಿಸಲು ಕೈಕೊಳ್ಳುತ್ತಿರುವ ಕಾರ್ಯಗಳಲ್ಲಿ ಇದು ಕೂಡಾ ಒಂದು. ಕಾಶ್ಮೀರಕ್ಕೆ ಭಾರತದ ಉಳಿದ ರಾಜ್ಯಗಳಂತೆ ನಮ್ಮ ಸಂವಿಧಾನದ ಎಲ್ಲಾ ನಿಬಂಧನೆಗಳನ್ನು ಅನ್ವಯವಾಗಿಸಿ, ಅದನ್ನು ಭಾರತದೊಡನೆ ಶಾಸನಬದ್ಧವಾಗಿ ವಿಲೀನಗೊಳಿಸುವುದರಲ್ಲಿ ವಿಳಂಬ ಇನ್ನು ಸಲ್ಲದು. ಈಗ ಮಾಡಿದಂತೆ ಸಂವಿಧಾನದ ಒಂದೊಂದೇ ನಿಬಂಧನೆಗಳನ್ನು ಕಾಶ್ಮೀರಕ್ಕೂ ವಿಸ್ತರಿಸುತ್ತಾ ಬಂದರೆ ಈ ಕಾರ್ಯ ಕಠಿಣವೆನಿಸಲಾರದು. ಆ ದಿನಗಳೂ ದೂರವಿಲ್ಲ ಎಂದು ಹಾರೈಸಬಹುದು.

ವಚನ ಸುಧೆ

ಆಪ್ಯಾಯಂತು ಮಮಾಂಗಾನಿ
ವಾಕ್ ಪ್ರಾಣ ಶ್ಚಕ್ಷುಃ ಶ್ರೋತ್ರ ಮಥೋ|
ಬಲಮಿಂದ್ರಿಯಾಣಿ ಚ ಸರ್ವಾಣಿ||

(ಉಪ. ಶಾಂತಿ)

೦ ನನ್ನ ಕಣ್ಣು, ಕಿವಿ ಮೊದಲಾದ ಎಲ್ಲಾ ಅವಯವಗಳು, ಇಂದ್ರಿಯಗಳು ಪ್ರಾಣ, ಮಾತು ಮತ್ತು ಬಲ ಮೊದಲಾದುವು ಶಕ್ತಿಯುಕ್ತವಾಗುವುವು.

೦೦ ಪ್ರತಿಯೊಬ್ಬ ಮನುಷ್ಯನು ತನ್ನ ಅವಯವಗಳನ್ನು ಪುಷ್ಟ ಮತ್ತು ಬಲಶಾಲಿಯಾಗುವಂತೆ ಮಾಡಬೇಕು. ಎಲ್ಲ ಇಂದ್ರಿಯಗಳನ್ನೂ ತನ್ನ ತನ್ನ ಕಾರ್ಯ ನಿರ್ವಹಿಸಲು ಸಮರ್ಥವಾಗುವಂತೆ ಇಟ್ಟುಕೊಳ್ಳಬೇಕು. ತನ್ನ ಶಕ್ತಿಗೆ ನಿಲುಕದ ಕಾರ್ಯವನ್ನು ಎಂದಿಗೂ ಮಾಡಬಾರದು. ಬಲವಂತರಾಗಬೇಕು; ಎಲ್ಲ ದುರ್ಬಲತೆಗಳನ್ನೂ ದೂರಮಾಡಬೇಕು

ಜನವರಿ 26

ಪ್ರಜಾರಾಜ್ಯ ವಿಶೇಷಾಂಕ

ಪ್ರಖ್ಯಾತ ಬರಹಗಾರರ ವಿಚಾರಪರ ಲೇಖನ, ಕವನ, ಕಥೆ ಮೊದಲಾದುವನ್ನೊಳಗೊಂಡು ಎಂದಿಗಿಂತಲೂ ಮಿಗಿಲಾದ ರೀತಿಯಲ್ಲಿ ನವಯುಗದ ಪ್ರಜಾರಾಜ್ಯ ಸಂಚಿಕೆ ಪ್ರಕಟವಾಗುವುದು.

ಕರ್ನಾಟಕದಲ್ಲೂ ಇತರ ಕಡೆಗಳಲ್ಲೂ ವಿಶೇಷ ಪ್ರಚಾರವುಳ್ಳ ನವಯುಗವು ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ನರಸಣ್ಣನ ಸರಸ



"ಏನೋ, ಪಣಂಬೂರು ಬಂದರನ್ನು ಮುಚ್ಚಿಗೋ, ಕಾರವಾರಕ್ಕೋ ಟ್ರಾನ್ಸ್‌ಫರ್ ಮಾಡ್ತಾರಂತಲ್ಲ ನಿಜವಿಂಗಪ್ಪನವರ ?"

"ಅಪ್ರಿಯಕ್ಕೆ ಬಂದರೆಂದರೆ ಸರಕಾರೀ ಗುಮಾಸ್ತರೆಂತ ಭಾವಿಸಿಬೇಕು ನಮ್ಮ ಮುಖ್ಯಮಂತ್ರಿಗಳು!"

ಲಹರಿ ಮಂಟಪದಲ್ಲಿ

ಚರಿತ್ರಾರ್ಹ ರೋಟರಿ ಸಮ್ಮೇಳನ

ಮಣಿಪಾಲದಲ್ಲಿ ಮೊನ್ನೆ ತಾ. ೨೬ ರಿಂದ ೨೮ರ ತನಕ ಜರಗಿದ ರೋಟರಿ ೩೧೬ನೇ ಜಿಲ್ಲೆಯ ಸಮ್ಮೇಳನವು ಅತ್ಯಂತ ಉಚ್ಚ ಮಟ್ಟದಲ್ಲಿ ನಡೆಯಿತೆಂದು ಬರೆಯಲು ಅತೀವ ಆನಂದವೆನಿಸುತ್ತದೆ. ಮೂರು ದಿನಗಳ ತನಕ ನಡೆದ ಈ ಸಮ್ಮೇಳನವು ಈ ಜಿಲ್ಲೆಗಳ ವಿವಿಧ ಭಾಗಗಳ ರೋಟೇರಿಯನ್ನರನ್ನು ಒಂದುಗೂಡಿಸುವ ಸದವಕಾಶವನ್ನು ಒದಗಿಸಿತಲ್ಲದೆ, ರೋಟರಿಯ ಘನವಾದ ತತ್ವಗಳನ್ನು ಇನ್ನಷ್ಟು ಜನಪ್ರಿಯಗೊಳಿಸುವದಕ್ಕೆ ಸಹಕಾರಿಯೂ ಯಿತು. ನಮ್ಮ ಮೈಸೂರು ರಾಜ್ಯ, ಗೋವೆ, ಆಂಧ್ರ ಹಾಗೂ ಮಹಾರಾಷ್ಟ್ರಗಳ ದಕ್ಷಿಣ ಭಾಗಗಳನ್ನೊಳಗೊಂಡ ಈ ರೋಟರಿ ಜಿಲ್ಲೆಯು ಈಗಾಗಲೇ ಹಲವಾರು ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಂಡು ಬೆಳಕಿಗೆ ಬಂದಿದೆ. ವಿವಿಧ ಭಾಷೆಗಳನ್ನಾಡುವ, ಮತವನ್ನನುಸರಿಸುವ, ನಾನಾ ಬಗೆಯ ಕಟ್ಟುಕಟ್ಟಳೆಗಳ ಜನ ರೋಟರಿಯ ಆಶ್ರಯದಲ್ಲಿ ಒಂದುಗೂಡಿ ತ್ಯಾಗ ಹಾಗೂ ಸೇವೆಗಳ ಸಂದೇಶವನ್ನು ಪ್ರಚುರಪಡಿಸಿ, ಅನುಷ್ಠಾನಕ್ಕೆ ತಂದು ದುಡಿಯುವ ಸದವಕಾಶವನ್ನು ಈ ಸಮ್ಮೇಳನ ಒದಗಿಸಿತು ಎಂದರೆ ಅತಿಶಯೋಕ್ತಿಯೇನಿಲ್ಲ.

ಸಮ್ಮೇಳನವನ್ನು ಉದ್ಘಾಟಿಸಿದ ಮೈಸೂರು ರಾಜ್ಯದ ರಾಜ್ಯಪಾಲ ಜನರಲ್ ಶ್ರೀ ನಾಗೇಶರವರು ಮಾತಾಡುತ್ತಾ ರೋಟರಿಯ ಮೂಲ ತತ್ವಗಳನ್ನು ಈ ಜಿಲ್ಲೆ ಈಗಾಗಲೇ ಆಚರಣೆಗೆ ತಂದು ಹಲವಾರು ಜನೋಪಯೋಗಿ ಕಾರ್ಯಕ್ರಮ ಕೈಕೊಂಡು ಹೊಸತಿನಲ್ಲೇ ಹೊಸ ದಾರಿ ಹಾಕಿ ಕೊಟ್ಟಿದೆ ಎಂದು ಹೇಳಿದರು. ಸಮ್ಮೇಳನದ ಸಂಘಟಕರ ಕುರಿತು ಅವರು ಪ್ರಶಂಸಿಸುತ್ತಾ ಡಾ|| ಟಿ. ಮಾಧವ ಪೈಗಳು ಶೈಕ್ಷಣಿಕ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಳು ರೋಟರಿಯ ತತ್ವಕ್ಕನುಗುಣವಾಗಿಯೇ ಇವೆ. ಅವರು ಜನರ ಹೃದಯ ಗೆದ್ದುಕೊಂಡಿರುವರೆಂಬುದಕ್ಕೆ ಇಂದು ಈ ಸಮ್ಮೇಳನಕ್ಕೆ ಬೇರೆ ಬೇರೆ ಕಡೆಗಳಿಂದ ಇಷ್ಟು ಸಂಖ್ಯೆಯಲ್ಲಿ ಪ್ರತಿನಿಧಿಗಳು ಸೇರಿರುವುದೇ ನಿದರ್ಶನ ಎಂದು ಹೇಳಿದರು. ಸಮ್ಮೇಳನವನ್ನು ಇಷ್ಟೊಂದು ಸುಸಜ್ಜಿತ ಹಾಗೂ ಸಮರ್ಪಕವಾದ ಅತ್ಯಂತ ಉಚ್ಚ ಮಟ್ಟದಲ್ಲಿ ಏರ್ಪಡಿಸಿದುದಕ್ಕಾಗಿ ಅವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಸಮ್ಮೇಳನ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ. ರಮೇಶ ಪೈಯವರು ಸ್ವಾಗತವನ್ನು ಬಯಸುತ್ತಾ ಮಣಿಪಾಲದಂತಹ ಗ್ರಾಮೀಣ ಪ್ರದೇಶದಲ್ಲಿ ಇಂತಹ ಚರಿತ್ರಾರ್ಹ ಸಮ್ಮೇಳನ ಜರಗುವುದು ಇದೇ ಮೊದಲ ಬಾರಿಯೆಂದೂ, ಉಡುಪಿಯು ಶ್ರೀ ಕೃಷ್ಣನ ಹಾಗೂ ಮಧ್ವಾಚಾರ್ಯರ ದೆಸೆಯಿಂದ ಪ್ರಸಿದ್ಧಿಗೆ ಬಂದ ಯಾತ್ರಾಸ್ಥಳವಾಗಿದ್ದರೂ, ಸಾಮಾಜಿಕ ಚಟುವಟಿಕೆಗಳಲ್ಲೂ ಹಿಂದುಳಿದಿಲ್ಲವೆಂದು ಹೇಳಿ ಆಗಮಿಸಿದ ಅತಿಥಿ ಅಭ್ಯಾಗತರು ಇಲ್ಲಿಯ ಯಾವುದಕ್ಕೂ ಕೊರತೆ ಮಾಡಿಕೊಳ್ಳದೆ, ತಮ್ಮ ವಾಸ್ತವ್ಯದಲ್ಲಿ ಆನಂದವನ್ನು ಪಡೆಯಬೇಕೆಂದು ವಿನಂತಿಸಿದರು.

ರೋಟರಿ ೩೧೬ನೇ ಜಿಲ್ಲೆಯ ಗವರ್ನರರಾದ ಡಾ|| ಟಿ. ಮಾಧವ ಪೈಗಳು ಸ್ವಾಗತ ಭಾಷಣ ಮಾಡುತ್ತಾ ಮೂರು ಕೋಟಿಗೂ ಮಿಕ್ಕಿ ಜನ ಸಂಖ್ಯೆಯುಳ್ಳ ಈ ರೋಟರಿ ಜಿಲ್ಲೆಯು ವೈವಿಧ್ಯತೆಗಳಿಗೆ ಹೆಸರಾದ ಜಿಲ್ಲೆ. ಸಕಲ ಮತ ಪಂಥಗಳನ್ನನುಸರಿಸುವ ಸಕ್ರಿಯ ಶಾಲೀ ಜನತೆಯಿಂದ ಕೂಡಿದ ಈ ಜಿಲ್ಲೆ ಪ್ರಗತಿ ಹೊಂದಲು ಬೇಕಾದ ಸರ್ವ ಅನುಕೂಲತೆಗಳನ್ನು ಹೊಂದಿ, ಪ್ರಗತಿಯ ದಾರಿಯತ್ತ ಮುಂದರಿಯುತ್ತಿದೆ ಎಂದರು.

ಅಂತರಾಷ್ಟ್ರೀಯ ರೋಟರಿ ಅಧ್ಯಕ್ಷರ ಪ್ರತಿನಿಧಿಗಳಾಗಿ ಆಗಮಿಸಿದ ಶ್ರೀ ಮತ್ತು ಶ್ರೀಮತಿ ಯುಸುಫ್. ಎನ್. ಚಿನಾಯಿಯವರನ್ನು ಅವರು ಸ್ವಾಗತಿಸಿ, ಅವರ ಆಗಮನವು ರೋಟೇರಿಯನ್ನರಲ್ಲಿ ಆನಂದ ಹಾಗೂ ಉತ್ಸಾಹಗಳನ್ನುಂಟುಮಾಡಿದೆ ಎಂದು ಹೇಳಿದರು. ತನ್ನ ಸ್ಥಾನವನ್ನು ಈ ಹಿಂದೆ ಅಲಂಕರಿಸಿದ್ದ ಮಾಜೀ ಗವರ್ನರರ ಸಹಕಾರ ಹಾಗೂ ಉಡುಪಿ ರೋಟರಿ ಕ್ಲಬ್ಬಿನ ಸದಸ್ಯರ ಬೆಂಬಲಕ್ಕಾಗಿ ಅವರು ಕೃತಜ್ಞತೆ ಸಲ್ಲಿಸಿ ಈ ರೋಟರಿ ಜಿಲ್ಲೆ ದೇಶದಲ್ಲಿ ಮಾದರಿಯೆನಿಸಿ, ಸರಕಾರದ ಕೈಯನ್ನು ಬಲಪಡಿಸುವುದಕ್ಕೂ, ಜನಜಾಗೃತಿ ಉಂಟುಮಾಡುವುದಕ್ಕೂ ಹೆಣಗಬೇಕು ಎಂದು ಹಾರೈಸಿದರು.

ರೋಟರಿ ಇಂಟರ್ ನೇಶನಲ್ ಅಧ್ಯಕ್ಷರ ಪ್ರತಿನಿಧಿ ಹಾಗೂ ಮಾಜೀ ರೋಟರಿ ಗವರ್ನರರಾದ ಶ್ರೀ ಯುಸೂಫ್ ಎನ್. ಚಿನಾಯಿಯವರು ಮಾತನಾಡುತ್ತಾ ಭಾರತದ ಜನತೆಗೆ ಪಾಕಿಸ್ತಾನದ ಜನತೆಯ ಶುಭಾಶಯಗಳನ್ನರ್ಪಿಸಿ, ಈ ದೇಶವನ್ನು ಸಂದರ್ಶಿಸುವ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸುವ ಅವಕಾಶ ಲಭಿಸಿದುದಕ್ಕಾಗಿ ತಮಗೆ ಆನಂದವಾಗಿದೆ ಎಂದು ಹೇಳಿದರು. ರೋಟರಿ ಇಂಟರ್ ನೇಶನಲಿನ ಅಧ್ಯಕ್ಷರ ಸಂದೇಶವನ್ನು ಅವರ ಪರವಾಗಿ ವಿವರಿಸುತ್ತಾ ತರುಣರನ್ನು ಹೆಚ್ಚಾಗಿ ರೋಟರಿಗೆ ಆಕರ್ಷಿಸಬೇಕೆಂದೂ, ರೋಟರಿ ಕ್ಲಬ್ಬುಗಳನ್ನು ವಿಸ್ತರಿಸಬೇಕೆಂದೂ, ರೋಟರಿ ಚಳವಳಿ ಇನ್ನಷ್ಟು ವ್ಯಾಪಕವಾಗಿ ಹಬ್ಬಬೇಕೆಂದೂ ಹೇಳಿದರು.



Paul P. Harris

ರೋಟರಿಯ ಸ್ಥಾಪಕ ಶ್ರೀ ಪೌಲ್ ಪಿ. ಹೇರಿಸ್

ಸಮ್ಮೇಳನಕ್ಕೆ ಶುಭ ಕೋರಿ ಬಂದ ಸಂದೇಶಗಳನ್ನು ಶ್ರೀ ಎ. ಜೆ. ಅಲ್ಸೆಯವರು ವಾಚನ ಮಾಡಿದರು. ಕಾರ್ಯಕ್ರಮದ ಕೊನೆಯಲ್ಲಿ ಉಡುಪಿ ರೋಟರಿ ಕ್ಲಬ್ಬಿನ ಅಧ್ಯಕ್ಷ ಡಾ| ಎ. ಕೃಷ್ಣ ರಾಯರು ಧನ್ಯವಾದ ಅರ್ಪಿಸಿದರು.

(ಹದಿಮೂರನೇ ಪುಟ ನೋಡಿರಿ)

ಅಮೇರಿಕದ ರುಟ್‌ಲೇಂಡ್‌ನ ರೋಟರಿ ವಿಶೇಷ ಸಭೆಯಲ್ಲಿ ಡಾ| ಟಿ. ಎಂ. ಎ. ಪೈ ಹಾಗೂ ಶ್ರೀಮತಿ ಶಾರದಾ ಪೈ ಭಾಗವಹಿಸಿದ ಸಂದರ್ಭ ತೆಗೆದ ಚಿತ್ರ.

ವಿಚಾರವರ್ಷ

ಇಂದಿನ ಜೀವನದಲ್ಲಿ ಇಂಗ್ಲಿಷ್ ಭಾಷೆಯ ಸ್ಥಾನ

ಬರೆದವರು— ಕುಮಾರಿ ನೇತ್ರಾವತಿ. ವಿದ್ಯಾರ್ಥಿನಿ, ಮಹಾರಾಣಿ ಕಾಲೇಜು, ಬೆಂಗಳೂರು.

ಇನ್ನೂರು ವರ್ಷಗಳ ಕಾಲ ಇಡೀ ಭಾರತವನ್ನು ತಮ್ಮ ಮುಷ್ಟಿಯಲ್ಲಿ ಹಿಡಿದು, ಅದರ ಮೇಲೆ ದಬ್ಬಾಳಿಕೆ ನಡೆಸಿದ ಬ್ರಿಟಿಷರು ನಮ್ಮ ದೇಶವನ್ನು ಬಿಟ್ಟು ಹೊರಡುವಾಗ ತಮ್ಮ ನೆನಪಿಗಾಗಿ ಕಾಣಿಕೆಯೊಂದನ್ನು ನಮಗಿತ್ತು ಹೋದರು. ಅದೇ ಇಂಗ್ಲಿಷ್ ಭಾಷೆ. ಬ್ರಿಟಿಷರು ತಮ್ಮ ಜೊತೆಗೇ ಅದನ್ನು ತಂದಿದ್ದರು, ಆದರೆ ಹೋಗುವಾಗ ಅದನ್ನಿಲ್ಲಿಯೇ ಬಿಟ್ಟು ಹೋದರು.

ಬ್ರಿಟಿಷರ ಆಳ್ವಿಕೆಯಲ್ಲಿ ಭರತಖಂಡದೊಳಗೆ ಹೈಸ್ಕೂಲು ಕಾಲೇಜುಗಳಲ್ಲಿ ಇಂಗ್ಲಿಷ್ ಭಾಷೆಯೇ ಬೋಧಭಾಷೆಯಾಗಿದ್ದಿತು. ಆಡಳಿತದ ಎಲ್ಲ ವ್ಯವಹಾರಗಳೂ ಇಂಗ್ಲಿಷ್‌ನಲ್ಲಿಯೇ ನಡೆಯುತ್ತಿದ್ದುದರಿಂದ ಜನತೆಗೆ ಈ ಭಾಷೆಯನ್ನು ಕಲಿಯುವುದು ಅನಿವಾರ್ಯವಾಯಿತು. ಅದರಂತೆ ಇಂಗ್ಲಿಷ್ ಭಾಷೆಗೆ ಪ್ರಾಶಸ್ತ್ಯವೂ ದೊರೆಯತೊಡಗಿತು. ಪರದೇಶ ಪ್ರಯಾಣ ಮಾಡುವವನಿಗೆ ಪರದೇಶದೊಡನೆ ವ್ಯಾಪಾರ ನಡೆಸುವವರಿಗೆ, ಪರದೇಶದಲ್ಲಿ ಓದು ಕಲಿಯುವವರಿಗೆ, ವಿಜ್ಞಾನ ಸಂಶೋಧಕರಿಗೆ, ಸಾಹಿತ್ಯೋಪಾಸಕರಿಗೆ, ಇಂಗ್ಲಿಷ್ ಭಾಷೆಯಿಂದ ಹೆಚ್ಚು ಪ್ರಯೋಜನವುಂಟು. ಇಷ್ಟಲ್ಲದೆ ಟೈಪ್‌ರೈಟಿಂಗ್ ಟೆಲಿಗ್ರಾಮ್, ಟೆಲಿಪ್ರಿಂಟರ್, ವಿಜ್ಞಾನ ಮತ್ತು ಇತರ ವಿಷಯಗಳ ಉಚ್ಚ ಶಿಕ್ಷಣ—ಈ ನಾಲ್ಕು ಅಂಶಗಳಿಗೆ ಸುಲಭವಾಗಿ ಹೊಂದಿಕೊಳ್ಳುವ ಭಾಷೆಯೆಂದರೆ ಇಂಗ್ಲಿಷ್ ಒಂದೇ. ಭಾರತಕ್ಕೆ ಸ್ವಾತಂತ್ರ್ಯವನ್ನು ತಂದ ಇಂಗ್ಲಿಷ್ ಭಾಷೆಯೇ ಭಾರತದ ದಾಸ್ಯವಿಮೋಚನೆಯ ಸಾಧನವಾಗಬಾರದೇತಕ್ಕೆ— ಎಂಬ ದೃಷ್ಟಿಕೋನದಿಂದ ವಿಚಾರ ಮಾಡಿ ಶ್ರೀ ರಾಮಮೋಹನರಾಯ್‌ರವರು ಇಂಗ್ಲಿಷ್ ಭಾಷಾ ಪ್ರಸಾರಕ್ಕೆ ಇಂಬುಕೊಟ್ಟಿದ್ದರು. ವಿಶ್ವವನ್ನು ಸಾಮ್ರಾಜ್ಯಶಾಹಿಯ ಹಿಡಿತದಿಂದ, ಪರದಾಸ್ಯ ಶೃಂಖಲೆಯಿಂದ ಬಿಡುಗಡೆ ಮಾಡಬಲ್ಲ ಜಾನ್ ಸ್ಟುಅರ್ಟ್ ಮಿಲ್, ಎಡ್ಮಂಡ್ ಬರ್ಕ್, ಪೇನ್ ಮೊದಲಾದವರ ಕೃತಿ ರತ್ನಗಳ ಮಾಲೆ ಇದ್ದದ್ದು ಇಂಗ್ಲಿಷ್ ಸಾಹಿತ್ಯದ ಕೊರಳಿನಲ್ಲಿಯೇ. ಇಂಗ್ಲಿಷ್ ಭಾಷೆಯೊಂದರ ಪರಿಚಯದಿಂದ ವಿಶ್ವದ ಸಮಸ್ತ ವಿಚಾರಧಾರೆಯನ್ನರಿಯಲು ಅವಕಾಶವಿತ್ತೆಂದೇ ಶ್ರೀ ರಾಮಮೋಹನರಾಯರು ಈ ಭಾಷೆಯ ಪ್ರಸಾರಕ್ಕೆ ತ್ರಿಕರಣಪೂರ್ವಕವಾಗಿ ದುಡಿದರು. ಶ್ರೀ ಸ್ವಾಮಿ ವಿವೇಕಾನಂದ, ಶ್ರೀ ರವೀಂದ್ರನಾಥ ಠಾಕೂರ, ಮಹಾತ್ಮಾ ಗಾಂಧೀಜಿ— ಮೊದಲಾದವರು ಪರದೇಶಗಳಲ್ಲಿ ಭಾರತದ ಕೀರ್ತಿಯನ್ನು ಬೀರಲು ಇಂಗ್ಲಿಷ್ ಭಾಷೆಯ ಮೇಲೆ ಅವರಿಗಿದ್ದ ಪ್ರಭುತ್ವವೇ ಕಾರಣವಾಯಿತು.

ಭರತಖಂಡದಲ್ಲಿ ಈಗ ಉಂಟಾಗಿರುವ ಜಾಗೃತಿಗೆ ಇಂಗ್ಲಿಷ್ ಭಾಷೆಯು ಬಹುಮಟ್ಟಿಗೆ ಕಾರಣವಾಗಿದೆಯೆಂದರೆ ತಪ್ಪಾಗಲಾರದು. ಏಕೆಂದರೆ ರಾಮಮೋಹನ ರಾಯ್ ಮುಂತಾದವರ ಸತತ ಪ್ರಯತ್ನದಿಂದ ಇಂಗ್ಲಿಷ್ ಭಾಷೆ ಭಾರತೀಯರ ಮೇಲೆ ತನ್ನ ಪ್ರಭಾವ ಬೀರಿ ಜನಜಾಗೃತಿಗೆ ಕಾರಣವಾದುದೊಂದೇ ಅಲ್ಲ ಸ್ವಾತಂತ್ರ್ಯ ದೊರಕಿಸಿಕೊಳ್ಳಲೂ ಸಾಧನವಾಯಿತು.

ಕನ್ನಡದ ಮೇಲಿನ ಪ್ರಭಾವ

ಇಪ್ಪತ್ತನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಹೊಸ ಕಟ್ಟಡವನ್ನು ಪ್ರಾರಂಭಿಸಿತು. ಇಂಗ್ಲಿಷ್ ಭಾಷೆ ೧೮೫೪ರಲ್ಲಿ Education Charter ಎಂಬ ಪದ್ಧತಿ ಜಾರಿಗೆ ಬಂದು ತನ್ಮೂಲಕ ಇಂಗ್ಲಿಷ್ ಶಿಕ್ಷಣ ಆರಂಭವಾಯಿತು. ಈ ಪದ್ಧತಿಗೆ ಮೂಲ ಕಾರಣ ಪುರುಷ— ಎಂದರೆ ಲಾರ್ಡ್ ಮೆಕಾಲೆ ಎಂದರೆ ತಪ್ಪಲ್ಲ. ಈಗಲೂ ಈ ಶಿಕ್ಷಣ ಪದ್ಧತಿಗೆ 'ಮೆಕಾಲೆ ಸಿಸ್ಟಂ' ಎನ್ನುತ್ತಾರೆ. ಹೀಗೆ ೧೮೫೪ರಿಂದ ಪ್ರಾರಂಭವಾದ ಇಂಗ್ಲಿಷ್ ಶಿಕ್ಷಣ ದೇಶದಲ್ಲೆಲ್ಲಾ ಬಹುಬೇಗ ಹರಡತೊಡಗಿತು. ಶಾಂತವಾಗಿ ಹರಿಯುತ್ತಿದ್ದ ಕನ್ನಡ ಸಾಹಿತ್ಯ ವಾಹಿನಿಯಲ್ಲಿ ಇಂಗ್ಲಿಷಿನ ರಸ ಹನಿಹನಿಯಾಗಿ ಸ್ಪಂದಿಸತೊಡಗಿತು. ಇಂಗ್ಲಿಷ್ ಸಾಹಿತ್ಯಾಭ್ಯಾಸದ ಪ್ರಭಾವದಿಂದ ತಲೆದೋರಿದ ನವೀನ ದೃಷ್ಟಿಯು ನಮ್ಮ ಆಧುನಿಕ ಸಾಹಿತ್ಯಕ್ಕೆ ಸಂಜೀವಿನೀ ಶಕ್ತಿಯಾಗಿ ಪರಿಣಮಿಸಿತು. ಪಾಶ್ಚಾತ್ಯರ ಸಂಪರ್ಕದಿಂದ ದೇಶೀಯ ಭಾಷೆಗಳಲ್ಲಿ ಸಾಹಿತ್ಯದ ಕೆಲ ಹೊಸರೂಪಗಳು ಕಾಲಿಡಲು ಕಾರಣವಾಯಿತು. ಕನ್ನಡ ಸಾಹಿತ್ಯದ ಸ್ವರೂಪವೂ ಸಹ ಬಹಳವಾಗಿ ಬದಲಾಗತೊಡಗಿತು. ಇಂಗ್ಲಿಷ್ ಭಾಷೆಯಲ್ಲಿ ವಿದ್ಯಾಪ್ರಸಾರವಾಗತೊಡಗಿದಂದಿನಿಂದ ಜನರ ಆಚಾರ ವಿಚಾರಗಳು ಬದಲಾಗತೊಡಗಿದವು. ಇಂಗ್ಲಿಷ್ ವಿದ್ಯಾ ಸಂಪನ್ನರಾದ ಉತ್ಸಾಹೀ ಬಂಗಾಲೀ ತರುಣರು ತಮ್ಮ ಮಾತೃಭಾಷೆಯಲ್ಲಿ ಹೊಸಬಗೆಯ ಸಾಹಿತ್ಯವನ್ನು ನಿರ್ಮಿಸತೊಡಗಿದರು. ಅವರ ಅನುಕರಣವನ್ನು ಉಳಿದ ಪ್ರಾಂತದವರೂ ಮಾಡಲಾರಂಭಿಸಿದರು. ಇತರ ಪ್ರಾಂತಗಳಲ್ಲಿ ಈ ಹೊಸ ಬೆಳಕು ಮೊದಲೇ ಹರಡಿಬಂದಿತು. ಕರ್ನಾಟಕದಲ್ಲಿ ಎಲ್ಲವೂ ತಡವಾಗಿಯೇ ಆರಂಭವಾದಂತೆ ಈ ಅರುಣೋದಯವಾದರೂ ತಡವಾಗಿಯೇ ಬಂದಿತು. ಮೊದಮೊದಲು ಬಂಗಾಲಿ, ಮರಾಠಿ ಭಾಷೆಗಳಲ್ಲಿ ಪ್ರಖ್ಯಾತರಾದ ಸಾಹಿತಿಗಳ ಕೃತಿಗಳನ್ನು ಕನ್ನಡಕ್ಕೆ ಪರಿವರ್ತಿಸುವ ಕಾರ್ಯ ನಡೆಯಿತು. ಆ ವೇಳೆ ಸಾಹಿತ್ಯದ ವಿವಿಧ ರೂಪಗಳಲ್ಲಿ ಸ್ವತಂತ್ರ ಗ್ರಂಥಗಳೂ ಹೊರಬೀಳತೊಡಗಿದವು.

ಶ್ರೀಯವರ ಸಾಹಸ

ಕನ್ನಡ ಛಂದಸ್ಸಿನ ಕಷ್ಟ ನಿರ್ಬಂಧಗಳಿಗೆ ಕಟ್ಟುಬಿದ್ದ ಕವಿಗಳು ನೂತನವೂ ಸಹಜವೂ ಆದ ವಿಧಾನಗಳನ್ನು ಹುಡುಕುತ್ತಿದ್ದರು. ಈ ದಿಸೆಯಲ್ಲಿ ಶ್ರೀ ಬಿ. ಶ್ರೀಕಂಠಯ್ಯನವರು ೭.ನೂರು ೧೯೨೧ರಲ್ಲಿ ಯಶಸ್ವಿಯಾಗಿ ಮುಂದುವರಿದರು. ಪಡುವಕಡಲ ಹೊನ್ನ ಹೆಣ್ಣಿನ ತೊಡಿಗೆಯನ್ನು ಕನ್ನಡ ನುಡಿ ಹೆಣ್ಣಿಗೆ ತೊಡಿಸಿ ಹೃದಯಂಗಮವಾಗಿ ಹಾಡಿದರು.

ಇಂಗ್ಲಿಷ್ ಭಾಷೆಯೊಂದರ ಪರಿಚಯದಿಂದ ವಿಶ್ವದ ಸಮಸ್ತ ವಿಚಾರಧಾರೆಯನ್ನರಿಯಲು ಅವಕಾಶವಿರುವುದೆಂಬ ಮನೋಭಾವವೇ ಇಂಗ್ಲಿಷ್ ಭಾಷೆಯ ಉದ್ದಾಮ ಪಂಡಿತರಾದ ಶ್ರೀ ಬಿ. ಎಂ. ಶ್ರೀಕಂಠಯ್ಯನವರನ್ನು ಪ್ರೇರೇಪಿಸಿ, ಅವರಿಂದ ಕೆಲವು ದಿವ್ಯ ಇಂಗ್ಲಿಷ್ ಗೀತೆಗಳನ್ನು ಅನುವಾದ ಮಾಡಿಸಿತು. ಮೂಲ ಇಂಗ್ಲಿಷ್ ಕವಿಕೃತಿಗಳ ಛಂದಸ್ಸುಗಳಿಗೆ ಸರಿಹೋಲುವ ಕನ್ನಡ ಛಂದಸ್ಸುಗಳನ್ನಾಯ್ದುಕೊಂಡು "ಶ್ರೀ"ಯವರು ತಮ್ಮ ಇಂಗ್ಲಿಷ್ ಗೀತೆಗಳನ್ನು ರಚನೆ, ಆಂಗ್ಲ ಕಾವ್ಯದ ಸಾಹಿತ್ಯದ ಅನರ್ಘ್ಯ ರತ್ನಗಳು ಇಂಗ್ಲಿಷ್ ಬಾರದ ಕನ್ನಡಿಗನಿಗೂ ದೊರಕುವಂತೆ ಮಾಡಿದರು. 'ಗೋಲ್ಡನ್ ಟ್ರೆಜರಿ' ಎಂಬ ಆಂಗ್ಲ ಗೀತೆಗಳ ಸಂಕಲನದಿಂದ ಅನೇಕ ಆಣಿಮುತ್ತುಗಳನ್ನು ಆಯ್ದುಕೊಂಡು 'ಇಂಗ್ಲಿಷ್ ಗೀತೆಗಳು' ಎಂಬ ಹೊತ್ತಿಗೆಯಲ್ಲಿ ಅವುಗಳ ಸುಂದರ ಭಾಷಾಂತರಗಳನ್ನು ಗೀತರೂಪದಲ್ಲಿ ಕನ್ನಡ ಜಾಯಮಾನಕ್ಕೆ ಹೊಂದಿಕೆಯಾಗುವಂತೆ ನೀಡಿದರು. ಅವುಗಳಲ್ಲಿ ಹೆಚ್ಚಿನದಕ್ಕೆ ಸ್ವತಂತ್ರ ರಚನೆಯಷ್ಟೇ ಘನತೆಯುಂಟು.

ಇವರೊಂದಿಗೇ ಶ್ರೀ ಪಂಜೆ ಮಂಗೇಶರಾಯರೂ, ಶ್ರೀ ಗೋವಿಂದ ಪೈಗಳೂ ಶ್ರೀ ಆಲೂರು ವೆಂಕಟರಾಯರೂ ಹೊಸ ಹುರುಪಿನ ತರುಣರಿಗೆ ನವ ಸ್ಫೂರ್ತಿಯನ್ನಿತ್ತು ಅಭಿನವ ಸಾಹಿತ್ಯ ಸೇವೆಯ ದೀಕ್ಷೆಯನ್ನು ಕೊಟ್ಟರು. ಇದರಿಂದಾಗಿ ಹೊಸ ದೃಷ್ಟಿಯು ಹೊಸ ಜೀವನದ ಕನ್ನಡ ಸಾಹಿತ್ಯ ವಿಪುಲವಾಗಿ ಬಹುಮುಖವಾಗಿ ಬೆಳೆಯಲು ಅನುಕೂಲವಾಯಿತು.

"ನಮ್ಮ ಜನಾಂಗ ಎರಡು ಶಕ್ತಿಗಳ ಹೋರಾಟಕ್ಕೊಳಗಾಗಿದೆ ಒಂದು ಪಶ್ಚಿ

(ಹನ್ನೊಂದನೇ ಪುಟ ನೋಡಿರಿ)

7%

ತಾರೀಕು 20-10-64ರಿಂದ ಫಿಕ್ಸೆಡ್ ಡಿಪಾಜಿಟುಗಳ ಮೇಲೆ
ಈ ಕೆಳಗಿನ ಬಡ್ಡಿ ದರಗಳನ್ನು ಕೊಡಲಾಗುವುದು.

	4ರಿಂದ 6 ತಿಂಗಳು. %p.a.	7ರಿಂದ 11 ತಿಂಗಳು %p.a.	12ರಿಂದ 23 ತಿಂಗಳು. %p.a.	24ರಿಂದ 35 ತಿಂಗಳು %p.a.	36ರಿಂದ 47 ತಿಂಗಳು %p.a.	48ರಿಂದ 59 ತಿಂಗಳು %p.a.	60ರಿಂದ 83 ತಿಂಗಳು %p.a.	84ರಿಂದ 120 ತಿಂಗಳು %p.a.
ರೂ 5,000ಕ್ಕಿಂತ ಕೆಳಗಿನ ಡಿಪಾಜಿಟುಗಳ ಮೇಲೆ:-	5-00	5-25	5-50	5-75	6-00	6-25	6-50	6-75
ರೂ 5,000 ಮತ್ತು ಮೇಲಿನ ಡಿಪಾಜಿಟುಗಳ ಮೇಲೆ -	5-25	5-50	5-75	6-00	6-25	6-50	6-75	7-00

ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಯಾವತ್ತೂ ಶಾಖೆಯಲ್ಲಿ ವಿಚಾರಿಸಿರಿ.
ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ ಪಾಂಗಾಳ ನಾಯಕ್ ಬ್ಯಾಂಕ್, ಲಿಮಿಟೆಡ್.
[ಶೆಡ್ಯೂಲ್ಡ್ ಬ್ಯಾಂಕ್]
ರಿಜಿಸ್ಟರ್ಡ್ ಆಫೀಸು.— ಕೋರ್ಟ್ ರಸ್ತೆ, ಉಡುಪಿ, ದ. ಕ. (ಮೈಸೂರು ರಾಜ್ಯ) ಸ್ಥಾಪನೆ:— 1920

ಅಪೂರ್ವ ಕಲಾಗಾರ

ದೇವಾಲಯಗಳ ನಾಡು - ದಕ್ಷಿಣ ಭಾರತ

ಲೇಖಕರು: ಶ್ರೀ ಕೆ. ಆರ್. ಶ್ರೀನಿವಾಸನ್.

"ದೇವಾಲಯವಿಲ್ಲದ ನಾಡಿನಲ್ಲಿ ವಾಸಿಸಬೇಡ" ಎಂಬರ್ಥದ ಪ್ರಾಚೀನ ಪದಪ್ರಯೋಗವೊಂದು ತಮಿಳು ಭಾಷೆಯಲ್ಲಿ ಅಧಿಕವಾಗಿ ಬಳಕೆಯಲ್ಲಿದೆ. ವಾಸ್ತವವಾಗಿ ದಕ್ಷಿಣ ಭಾರತವು ದೇವಾಲಯಗಳ ನಾಡು. ಇಲ್ಲಿನ ಸಣ್ಣ ದೊಡ್ಡ ದೇವಾಲಯಗಳನ್ನು ಮೊದಲುಗೊಂಡು ಎಲ್ಲವೂ ಇತಿಹಾಸದ ವಿವಿಧ ಕಾಲಗಳಲ್ಲಿನ ಶಿಲ್ಪ ಕಲೆಯ ಶೈಲಿಗಳ ಕಲಾವೈಭವದ ಸಾಕ್ಷಿಯಾಗಿ ನಿಂತಿವೆ.

ತಮಿಳು ಸಾಹಿತ್ಯದಲ್ಲಿನ ಸಂಗಮ ವಂಶದ ಕೃತಿಗಳಲ್ಲಿ ಆಗಾಗ್ಗೆ ಉಲ್ಲೇಖಿಸಲಾಗಿರುವ ಕೊಟ್ಟಂ, ನಗರಂ, ಕೊಯಿಲ್ ಮತ್ತು ಪಳ್ಳಿ ಇವೇ ಮುಂತಾದ ದೇವಾಲಯಗಳನ್ನು ಇಟ್ಟಿಗೆ ಮತ್ತು ಮರಗಳಿಂದ ನಿರ್ಮಿಸಲಾಗಿತ್ತು. ಈ ಕಟ್ಟಡಗಳು ಬಿರುಗಾಳಿ, ಪ್ರವಾಹ – ಇವೇ ಮೊದಲಾದ ನೈಸರ್ಗಿಕ ಪ್ರಕೋಪಗಳನ್ನು ತಡೆಯದೇ ಕಾಲಕ್ರಮದಲ್ಲಿ ನಶಿಸಿ ಹೋದುವು. ಕ್ರಿಸ್ತಶಕ ಆರನೆಯ ಶತಮಾನಕ್ಕೆ ಸೇರಿದ ಈ ದೇವಾಲಯಗಳ ಅವಶೇಷಗಳು ನಾಗಾರ್ಜುನಕೊಂಡ, ದನವಲವಾಡು, ಕಾವೇರಿ ಪಟ್ಟಣಂಗಳಲ್ಲಿ ಅಗೆತದ ಕಾರ್ಯ ನಡೆದಾಗ ದೊರೆತಿವೆ. ಗುಂಟೂರಿನ ಚಿಜರ್ಲಾ ಮತ್ತು ಉಸ್ಮಾನಾಬಾದ್ ಜಿಲ್ಲೆಯ ತೇರ್ ಎಂಬಲ್ಲಿ ದೊರೆತ ಬೃಹದಾಕಾರದ ವ್ಯಾಸವುಳ್ಳ ಎರಡು ದೇವಾಲಯಗಳು ಕಟ್ಟಡ ನಿರ್ಮಾಣದ ದೃಷ್ಟಿಯಿಂದ ಪರಿಪೂರ್ಣವಾದವುಗಳೆಂದು ಹೇಳಬಹುದು. ಕಟ್ಟಡ ನಿರ್ಮಾಣದ ವೈಖರಿ ಮತ್ತು ವಿನ್ಯಾಸದ ದೃಷ್ಟಿಯಿಂದ ಈ ದೇವಾಲಯಗಳು ಆಗ ಅಸ್ತಿತ್ವದಲ್ಲಿದ್ದ, ಹಿಂದು ಜೈನ ಹಾಗೂ ಬೌದ್ಧ ದೇವಾಲಯಗಳನ್ನೇ ಹೋಲುತ್ತವೆ. ಆಗಿನ ಕಾಲದಲ್ಲಿ ಶಿಲ್ಪಕಲೆಯು ಯಾವುದೇ ಒಂದು ಮತದ ಅಥವಾ ಧರ್ಮದ ಸೊತ್ತಾಗಿರಲಿಲ್ಲ.

ದಕ್ಷಿಣ ಭಾರತದಲ್ಲಿ ಬಹುಕಾಲದವರೆಗೂ ಮಂದಿರಗಳನ್ನು ನಿರ್ಮಿಸುವಾಗ ಪ್ರಕೃತಿಯ ಪ್ರಕೋಪಗಳನ್ನು ಎದುರಿಸಿ ಸ್ಥಿರವಾಗಿ ನಿಲ್ಲುವಂತಹ ಶಿಲೆಯನ್ನು ಬಳಸುವ ಕಲ್ಪನೆ ಬಂದಿರಲಿಲ್ಲ.

ಕ್ರಿಸ್ತಶಕ ಆರನೆಯ ಶತಮಾನದ ಉತ್ತರಾರ್ಧದಲ್ಲಿ ವಿಂಧ್ಯ ಪರ್ವತಾವಳಿಯ ದಕ್ಷಿಣದಲ್ಲಿ ಚಾಲುಕ್ಯ, ಪಲ್ಲವ, ಪಾಂಡ್ಯ ಈ ಮೂರು ರಾಜವಂಶಗಳು ಏಕಕಾಲದಲ್ಲಿ ತಲೆಯೆತ್ತಿದುದು ಶಿಲ್ಪಕಲಾ ಪರಂಪರೆಯಲ್ಲಿ ಅನೇಕ ಬದಲಾವಣೆಗಳಿಗೆ ಕಾರಣವಾಯಿತು. ಚಾಲುಕ್ಯರು ಬಾದಾಮಿಯನ್ನೂ, ಪಲ್ಲವರು ಕಂಚಿಯನ್ನೂ, ಪಾಂಡ್ಯರು ಮಧುರೆಯನ್ನೂ ತಮ್ಮ ರಾಜ್ಯಗಳ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಈ ಮೂರು ರಾಜವಂಶದವರು ರಾಜಕೀಯ ದೃಷ್ಟಿಯಿಂದ ಪರಸ್ಪರ ಶತ್ರುಗಳಾಗಿದ್ದರಲ್ಲದೆ ಕಲೆಯ ಉತ್ಕರ್ಷಕ್ಕಾಗಿ ಕಲಾವಿದರಿಗೆ ಆಶ್ರಯ ನೀಡುವಲ್ಲಿಯೂ ಪರಸ್ಪರ ಪ್ರತಿಸ್ಪರ್ಧಿಗಳಾಗಿದ್ದರು. ಬೌದ್ಧಧರ್ಮವು ಆಗ ಅವನತಿಯ ಹಾದಿಯಲ್ಲಿತ್ತು. ತಮಿಳುನಾಡಿನ ನಾಯನಮಾರರ, ಆಳ್ವಾರರ ಮುಂದಾಳುತ್ವದಲ್ಲಿ ಶೈವ ವೈಷ್ಣವ ಪಂಥಗಳ ಪುನರುಜ್ಜೀವನ ಆಂದೋಲನಗಳು ಆರಂಭವಾಗಿದ್ದುವು. ಕನ್ನಡನಾಡಿನಲ್ಲಿ ಜೈನ ಧರ್ಮಕ್ಕೆ ನವಚೇತನ ದೊರೆಯಿತು. ತಮಿಳುನಾಡಿನ ಮೇಲೆ ಅದರ ಪ್ರಭಾವ ಇನ್ನೂ ಶಿಥಿಲವಾಗಿರಲಿಲ್ಲ.

ಕ್ರಿಸ್ತಶಕ ಆರನೆಯ ಶತಮಾನದ ಕೊನೆಯ ಭಾಗದಲ್ಲಿ ಚಾಲುಕ್ಯರ ದೊರೆ ಮಂಗಳೇಶ ಮತ್ತು ಪಲ್ಲವರ ದೊರೆ ಮೊದಲನೆಯ ಮಹೇಂದ್ರವರ್ಮ ಇವರು ದೇವಾಲಯಗಳ ನಿರ್ಮಾಣ ಸಂಬಂಧವಾದ ಪ್ರಾಚೀನ ಪರಂಪರೆಯನ್ನು ತ್ಯಜಿಸಿ ಅಖಂಡಶಿಲೆಯಲ್ಲಿ ಹಿಂದೂ ದೇವಾಲಯಗಳನ್ನು ಕೊರೆಯುವ ಹೊಸ ಪರಂಪರೆಯನ್ನು ಆರಂಭಿಸಿದರು. ಆ ನಂತರ ಜೈನರೂ ಈ ಪರಂಪರೆಯನ್ನು ಅನುಸರಿಸಿದರು. ಮಂಗಳೇಶನು ಬಾದಾಮಿಯ ಬೆಟ್ಟಗಳಲ್ಲಿ ವಿಷ್ಣು ದೇವನಿಗಾಗಿ ಮೆದುವಾದ ಶಿಲೆಯನ್ನು ಕೊರೆಯಿಸಿ ಮೊದಲನೆಯ ಗುಹಾಂತರ ದೇವಾಲಯವನ್ನು ನಿರ್ಮಿಸಿದನು. ಇದು ನಿಜಕ್ಕೂ ಒಂದು ಸ್ತುತ್ಯ ಪ್ರಯತ್ನವಾಗಿದೆ.

ಚಾಲುಕ್ಯರ ಕಲ್ಪನೆಯ ಗುಹಾಂತ ದೇವಾಲಯ ಭವ್ಯವೂ ವಿಶಾಲವೂ ಆಗಿದೆ. ದೇವಾಲಯದಲ್ಲಿ ಒಂದರ ಹಿಂದೊಂದರಂತೆ ಎರಡು ಮಂಟಪಗಳಿವೆ. ಅಪೂರ್ವ ಶಿಲ್ಪಕಲಾ ಪ್ರತಿಭೆಯಿಂದ ಈ ಮಂಟಪಗಳ ಸೌಂದರ್ಯ ದ್ವಿಗುಣಗೊಂಡಿವೆ. ಮೆದುವಾದ ಬಂಡೆಗಳಲ್ಲಿ ದೇವಾಲಯವನ್ನು ಕೊರೆಯಿಸುವುದು ಮತ್ತು ಈ ದೇವಾಲಯಗಳಲ್ಲಿ ಶಿಲ್ಪಕಲೆಯನ್ನು ಬಿಡಿಸುವುದು ಅವನಿಗಿಂತಲೂ ಹಿಂದೆ ರೂಢಿಯಲ್ಲಿತ್ತು. ಮಂಗಳೇಶನ ಈ ಗುರಿ ಸಾಧನೆಗೆ ಈ ಪರಂಪರೆಯ ಪರಿಚಯವೂ ಕಾರಣವಾಯಿತು. ಗುಹಾಂತರ್ದೇವಾಲಯವು ನಿರ್ಮಾಣಗೊಂಡ ನಂತರ ಬಾದಾಮಿಯಲ್ಲಿ ಶಿವ, ವಿಷ್ಣು, ಮತ್ತು ಜಿನ ಇವರುಗಳಿಗಾಗಿ ಮೂರು ಪ್ರತ್ಯೇಕ ಗುಹಾಂತ ದೇವಾಲಯಗಳನ್ನು ನಿರ್ಮಿಸಲಾಯಿತು.

ಪಲ್ಲವರ ಮಹೇಂದ್ರವರ್ಮನು ಮಂದಗಪಟ್ಟು ಎಂಬಲ್ಲಿ ಹಿಂದುಗಳ ಬ್ರಹ್ಮ, ಶಿವ, ವಿಷ್ಣು ಈ ಮೂರು ದೇವತೆಗಳಿಗಾಗಿ ಕಗ್ಗಲ್ಲಿನಲ್ಲಿ ಮೊದಲನೆಯ ಗುಹಾಂತ ದೇವಾಲಯವನ್ನು ಕೊರೆಯಿಸಿದರು.

ಮಹೇಂದ್ರವರ್ಮನಿಗಿಂತಲೂ ಪೂರ್ವದಲ್ಲಿ ಅಶೋಕ ಮತ್ತು ಅವನ ಮೊಮ್ಮಗ ದಶರಥ ಇವರು ಗಯೆಯಲ್ಲಿ ಆಜೀವಿಕಾ ಗುಹಾಂತರ್ದೇವಾಲಯಗಳನ್ನು ನಿರ್ಮಿಸಿದ್ದರು. ಕಗ್ಗಲ್ಲಿನಲ್ಲಿ ಕೊರೆಯಿಸಿ ದೇವಾಲಯವನ್ನು ನಿರ್ಮಿಸುವ ಅಪೂರ್ವ ಕಾರ್ಯವನ್ನು ಸಾಧಿಸಿದ್ದಕ್ಕಾಗಿ ಮಹೇಂದ್ರವರ್ಮನು ತನ್ನನ್ನು ವಿಚಿತ್ರ ಚಿತ್ರ ಎಂದು ಕರೆದುಕೊಂಡಿದ್ದಾನೆ.

ಹಿಂದೂ ದೇವಾಲಯಗಳನ್ನು ನಿರ್ಮಿಸಲು ಆಗತ್ಯವಾಗಿದ್ದ ಇಟ್ಟಿಗೆ, ಮರ, ಲೋಹ, ಗಚ್ಚು, ಗಾರೆ ಇವೊಂದನ್ನೂ ಉಪಯೋಗಿಸದೇ ಕಗ್ಗಲ್ಲಿನಲ್ಲಿ ದೇವಾಲಯವನ್ನು ಕೊರೆಯುವುದನ್ನು ಗಮನಿಸಿದರೆ ಅವನು ಹಾಗೆ ಕರೆದುಕೊಂಡಿರುವುದು ಸಮಂಜಸವೆಂದು ತೋರುತ್ತದೆ. ಕಟ್ಟಡಕ್ಕೆ ಉಪಯೋಗಿಸುವ ಶಿಲೆಯ ಸ್ವರೂಪ ಅದನ್ನು ಕೊರೆಯಲು ಅನುಸರಿಸುತ್ತಿದ್ದ ತಂತ್ರ ಇವೇ ಮೊದಲಾದುವುಗಳಲ್ಲಿನ ಭಿನ್ನತೆ ಮತ್ತು ಈ ದಿಶೆಯಲ್ಲಿ 'ಆಗತ್ಯವಾದ ಅನುಭವದ ಕೊರತೆ ಇವೇ ಮೊದಲಾದ ಕಾರಣಗಳಿಂದಾಗಿ ಪಲ್ಲವ ಮತ್ತು ಅವರ ಸಮಕಾಲೀನರಾದ ಪಾಂಡ್ಯರು ಅನಂತರ ನಿರ್ಮಿಸಿದ ದೇವಾಲಯಗಳು ಆಕಾರದಲ್ಲಿ ಚಿಕ್ಕವಾಗುತ್ತಾ ಬಂದವು. ಶಿಲ್ಪಕಲೆಯೂ ಅಷ್ಟೊಂದು ವೈವಿಧ್ಯಪೂರ್ಣವಾಗಿರಲಿಲ್ಲ.

ಪಲ್ಲವರ ಮಹೇಂದ್ರವರ್ಮನ ಪ್ರಭಾವಿ ಉತ್ತರಾಧಿಕಾರಿಯಾದ ನರಸಿಂಹವರ್ಮ ಮಮ್ಮಲನು ಹೊಸಬಗೆಯ ಅಲಂಕೃತವಾದ ಗುಹಾಂತರ್ದೇವಾಲಯಗಳನ್ನು ಕೊರೆಯಿಸಿದನು. ಈ ದೇವಾಲಯಗಳೆಲ್ಲವೂ ಮಂಟಪದ ಮಾದರಿಯವಾಗಿವೆ.

ಚೋಳರ ಆಳಿಕೆಯ ಮಧ್ಯಕಾಲದಲ್ಲಿ ದೇವಾಲಯಗಳ ವಿಮಾನಗಳನ್ನು ಇಟ್ಟಿಗೆ ಮತ್ತು ಗಚ್ಚುಗಾರೆಗಳಿಂದ ನಿರ್ಮಿಸಲು ಆರಂಭವಾಯಿತು. ದಾರಾಸುರಂನಲ್ಲಿಯ ಐರಾವತೇಶ್ವರ, ತ್ರಿಭುವನಂನಲ್ಲಿಯ ಕಂಪಹರೇಶ್ವರ ದೇವಾಲಯಗಳಲ್ಲಿ ನೂತನ ಮಾದರಿಯ ಕಟ್ಟಡ ನಿರ್ಮಾಣ ಕಲೆಯನ್ನು ಕಾಣಬಹುದು. ಚೋಳ ಸಾಮ್ರಾಟರು ತಮ್ಮ ರಾಜ್ಯದ ಉದ್ದಗಲಕ್ಕೂ ಅನೇಕ ದೇವಾಲಯಗಳನ್ನು ಕಟ್ಟಿಸಿದರು. ಅನಂತರ ದಕ್ಷಿಣದಲ್ಲಿ ಅಧಿಕಾರಕ್ಕೆ ಬಂದ ವಿಜಯನಗರ ಸಾಮ್ರಾಟರನ್ನು ಬಿಟ್ಟರೆ ಇತರರು ಅವರಂತೆ ಅಧಿಕ ಸಂಖ್ಯೆಯ ದೇವಾಲಯಗಳನ್ನು ನಿರ್ಮಿಸಲಿಲ್ಲ.

ಎರಡನೆಯ: ಚೋಳ ಮತ್ತು ಪಾಂಡ್ಯ ಸಮ್ರಾಟರುಗಳು ಮತ್ತೆ ದೇವಾಲಯಗಳನ್ನು ಕಟ್ಟಿಸಿ ಇಲ್ಲವೇ ಆಗಿದ್ದ ದೇವಾಲಯಗಳಿಗೆ ಗೋಪುರಗಳನ್ನು ಕಟ್ಟಿಸಿ ದೇವಾಲಯಗಳ ಅಭಿವೃದ್ಧಿಗೆ ಕಾರಣರಾದರು. ವಿಜಯನಗರ ಸಾಮ್ರಾಟರು ತಮ್ಮ ರಾಜ್ಯದುದ್ದಕ್ಕೂ ಅನೇಕ ದೇವಾಲಯಗಳನ್ನು ಕಟ್ಟಿಸಿದರು. ಹೀಗೆ ಕಟ್ಟಡಗಳನ್ನು ನಿರ್ಮಿಸುವಾಗ ಅವರು ಮೊದಲಿನ ಚಾಲುಕ್ಯರ ಶಿಲ್ಪಕಲಾ ವೈಶಿಷ್ಟ್ಯಕ್ಕೆ ಪ್ರಾಧಾನ್ಯವನ್ನು ಕೊಟ್ಟರು. ತೀರ ದಕ್ಷಿಣದಲ್ಲಿ ನಿರ್ಮಿಸಿದ ದೇವಾಲಯಗಳು ಪಲ್ಲವರ ಶಿಲ್ಪಕಲೆಯನ್ನು ಹೋಲುತ್ತವೆ. ಸಾಮ್ರಾಜ್ಯದ ಉತ್ತರದ ಮತ್ತು ಕರ್ನಾಟಕದ ಪ್ರದೇಶಗಳಲ್ಲಿ ಬಿಳುಪಾದ ಶಿಲೆಯನ್ನು ಬಳಸಿ ದೇವಾಲಯಗಳನ್ನು ನಿರ್ಮಿಸಿದರು. ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳಲ್ಲಿ ಇಂತಹ ಕಟ್ಟಡಗಳನ್ನು ಕಾಣಬಹುದಾಗಿದೆ. ಚಾಲುಕ್ಯರು ನಿರ್ಮಿಸಿದ ವಿಮಾನಗಳುಳ್ಳ ದೇವಾಲಯಗಳ ಪೈಕಿ ಪಟ್ಟದಕಲ್ಲಿನ ಸಂಗಮೇಶ್ವರ, ವಿರೂಪಾಕ್ಷ, ಮಲ್ಲಿಕಾರ್ಜುನ ದೇವಾಲಯಗಳು ಸುಂದರವಾದ ವಿನ್ಯಾಸ, ವ್ಯವಸ್ಥಿತವಾದ ಕಟ್ಟಡ ನಿರ್ಮಾಣ ಯೋಜನೆಗೆ ಹೆಸರಾಗಿವೆ.

ವಾರಂಗಲ್ಲಿನ ಕಾಕತೀಯರು ಚಾಲುಕ್ಯರು ಉಪಯೋಗಿಸಿದ ಶಿಲೆಯನ್ನೇ ದೇವಾಲಯಗಳಿಗಾಗಿ ಬಳಸಿದರು. ಹೊಯ್ಸಳರು ಮೆದುವಾದ ಶಿಲೆಗಳಿಂದ ದೇವಾಲಯಗಳನ್ನು ನಿರ್ಮಿಸಿದರು. ಕಲ್ಲು ಮೃದುವಾಗಿದ್ದರಿಂದ ಶಿಲ್ಪಕಲಾ ಪ್ರತಿಭೆ ವ್ಯಕ್ತವಾಗಲು ಅಧಿಕ ಉತ್ತೇಜನ ದೊರೆಯಿತು.

ಪಲ್ಲವರು ಅಖಂಡ ಶಿಲೆಯಲ್ಲಿ ದೇವಾಲಯಗಳ ವಿಮಾನಗಳನ್ನು ನಿರ್ಮಿಸುವುದರ ಜೊತೆಗೆ ವಿವಿಧ ಶಿಲೆಗಳಿಂದ ದೇವಾಲಯಗಳನ್ನು ನಿರ್ಮಿಸಲು ಆರಂಭಿಸಿದರು. ಮಹಾಬಲಿಪುರಂನಲ್ಲಿಯ ಬಕ್ಕನೇಶ್ವರ ಮತ್ತು ದಕ್ಷಿಣ ಅರ್ಕಾಟಿನಲ್ಲಿಯ ತಾಳಗಿರೀಶ್ವರ ದೇವಾಲಯಗಳು ಪಲ್ಲವರ ಕಟ್ಟಡ ನಿರ್ಮಾಣ ಕಲಾ ವೈಶಿಷ್ಟ್ಯದ ಪ್ರತೀಕವಾಗಿವೆ. ಕಂಚಿಯಲ್ಲಿ ರಾಜಸಿಂಹ ಪಲ್ಲವನ ಕಾಲದ (ಕ್ರಿ. ಶ. ೭೦೦—೭೨೮) ಕೈಲಾಸನಾಥ ಮತ್ತು ಇತರ ದೇವಾಲಯಗಳು ಮತ್ತು ರಾಜಸಿಂಹನ ಉತ್ತರಾಧಿಕಾರಿ ಪಲ್ಲವರ ಮಲ್ಲ ಎರಡನೆಯ ನಂದಿವರ್ಮನು ಕಟ್ಟಿಸಿದ ವೈಕುಂಠ ಪೆರುಮಾಳ ದೇವಾಲಯವು ಪಲ್ಲವರ ಶಿಲ್ಪಕಲಾಭಿಜ್ಞತೆಗೆ ಸಾಕ್ಷಿಯಾಗಿವೆ.

ಪಲ್ಲವರು ಕಟ್ಟಡ ನಿರ್ಮಾಣದಲ್ಲಿ ತಮ್ಮ ಎದುರಾಳಿಗಳಾದ ಚಾಲುಕ್ಯರೊಂದಿಗೆ ಸ್ಪರ್ಧಿಸಿ ಸ್ಥಳೀಯ ಬಿಳುಪಾದ ಬಂಡೆಗಳಿಂದ ಅನೇಕ ದೇವಾಲಯಗಳನ್ನು

(ಹನ್ನೊಂದನೇ ಪುಟ ನೋಡಿರಿ)

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

O. S. No. 361/1964

ಯು. ವಾಸುದೇವ ಪೈ — ವಾದಿ.
ಮತ್ತು
ಶ್ರೀ ಸೀತು ಮರಕಾಲ್ತಿ ಕೂಡಾ —
ಪ್ರತಿವಾದಿರು.

ಇವರೊಳಗೆ

3. ರಾಮೂಜಿ ಪಪ್ಪುಮರಕಾಲನ ಮಗ.
5. ಶೀಲು ಮರಕಾಲ್ತಿ }
6. ನಾರಾಯಣ ಮರಕಾಲ } ಸಿದ್ದು ಮರಕಾಲ್ತಿ ಮಕ್ಕಳು
7. ಜಾನಕಿ ಮರಕಾಲ್ತಿ — }

ಉಡುಪಿ ತಾಲ್ಲೂಕು ಉದಿಯಾವರ ಗ್ರಾಮದ ಕನಕೋಡು.

ಸದ್ರಿ ಪ್ರತಿವಾದಿರಿಗೆ ಯಿಮೂಲ್ಯ ತಿಳಿಸುವದೇನಂದ್ರೆ:

ಮೇಲ್ಕಂಡ ವಾದಿಗೆ ಬರತಕ್ಕ ಮೂಲಗೇಣಿ ಅಸಲು ಬಡ್ಡಿಗೆ ದಾವೆ ಮಾಡಿದ ಮೇಲ್ಕಂಡ ದಾವೆಯು ತಾ. 16—1—1965ಕ್ಕೆ ಯಿಟ್ಟಿದೆ. ಆ ಕಾರಣ, 3, 5, 6, 7ನೆ ಪ್ರತಿವಾದಿರಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ ದಿನ್ನ ಮೇಲ್ಕಂಡ ಕೋರ್ಟಿನ ಮುಂದೆ ಪೂರ್ವಾರ್ಹ್ನ 11 ಗಂಟೆಗೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ಯಿವ ಮೂಲ್ಕ ತಿಳಿಸಲಾಗಿಯದೆ.

N. V. Kamath
Advocate for Pltf.

ಉಡುಪಿ. 22.12 64

ಕೃಷಿಕ ರಂಗ

ಭಾರತದ ಹಳ್ಳಿಗಳ ದುಸ್ಥಿತಿ

ಲೇಖಕರು: ಶ್ರೀ ಸ. ನಾರಾಯಣ.

ಆಸೇತು ಹಿಮಾಚಲ ಪರ್ಯಂತ ಪಸರಿಸಿರುವ ಭಾರತ ಕೃಷಿ ಪ್ರಧಾನವಾದ ನಾಡು; ಹಳ್ಳಿಗಳ ದೇಶ. ವ್ಯಾಪಾರ, ಕೈಗಾರಿಕೆ ಸಾಕಷ್ಟು ಬೆಳೆದರೂ ಭಾರತೀಯರ ಪ್ರಮುಖ ಜೀವನೋದ್ಯೋಗ ವ್ಯವಸಾಯ. ಕೃಷಿಯನ್ನೇ ಅವಲಂಬಿಸಿ ಬದುಕುವ ಜನತೆ ಹಳ್ಳಿಗಳಲ್ಲಿ ವಾಸಿಸದೆ ಗತ್ಯಂತರವೇ ಇಲ್ಲ.

ಭಾರತದಲ್ಲಿ ಹತ್ತು ಮನೆಗಳ ಹಳ್ಳಿಯೂ ಉಂಟು, ಸಾವಿರ ಮನೆಗಳ ಹಳ್ಳಿಯೂ ಉಂಟು. ಕುಗ್ರಾಮವಾಗಲಿ, ಮಹಾಗ್ರಾಮವಾಗಲಿ ರೈತರ ಜೀವನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆಯಷ್ಟೆ.

ಕಲ್ಕತ್ತಾ, ಬೊಂಬಾಯಿ, ಬೆಂಗಳೂರಿನಂತಹ ಬೃಹತ್ ನಗರಗಳ ನಿರ್ಮಾಣವೂ ನಡೆದಿರಬಹುದು. ಚರಿತ್ರೆಯ ಕಾಲದಲ್ಲಿ ದೆಹಲಿ, ಗ್ವಾಲಿಯರ್, ಬರೋಡ, ಮೈಸೂರು ಮೊದಲಾದ ಸಂಸ್ಥಾನಗಳ ರಾಜಧಾನಿಗಳೂ ಬೆಳೆದು ಅಳಿದು ಹೋಗಿರಬಹುದು. ಹಳ್ಳಿಗಳ ಸಂಖ್ಯೆಗಾಗಲಿ ಬೆಳವಣಿಗೆಗಾಗಲಿ ಯಾವ ಲೋಪವೂ ಬಂದಿಲ್ಲ.

'ಹಳ್ಳಿಯಿಂದಲೇ ದಿಲ್ಲಿ' ಎಂಬ ನಾಣ್ಣುಡಿ ಎಲ್ಲರಿಗೂ ಚಿರಪರಿಚಿತ. ಅಂದರೆ ಹಳ್ಳಿಗಳೇ ಭಾರತದ ಬೆನ್ನೆಲುಬು. ರಾಷ್ಟ್ರದ ಪ್ರಗತಿ, ಐಕ್ಯ, ಶಕ್ತಿ ಸಂವರ್ಧನೆಗಳಲ್ಲಿ ಹಳ್ಳಿಗಳ ಪಾತ್ರ ವಿಶೇಷ ಎಂಬುದು ನಿರ್ವಿವಾದ. ರೈತರ [illegible] ಸಂಘಟನೆಯಿಂದ ಕೇವಲ ಹಳ್ಳಿಯೊಂದೇ ಉದ್ಧಾರವಾಗುವುದಿಲ್ಲ. ರಾಷ್ಟ್ರವೇ ಬಲಗೊಳ್ಳುತ್ತದೆ.

ಜನ—ಜಾನುವಾರುಗಳಿಗೆ ಆಹಾರ ಸೌಕರ್ಯ, ಜಲವಸತಿ ಇರುವೆಡೆಯಲ್ಲಿ ಹಳ್ಳಿಗಳು ಬೆಳೆದವು. ತಮ್ಮ ಜಮೀನುಗಳ ಸಮೀಪದಲ್ಲಿಯೇ ಪೂರ್ಣಾನುಕೂಲತೆ ದೊರೆಯುವ ಸ್ಥಳಗಳಲ್ಲಿ ಪೂರ್ವಿಕರು ಮನೆಗಳನ್ನು ಕಟ್ಟಿಕೊಂಡು ವಾಸಿಸಲಾರಂಭಿಸಿದರು. ಮನೆಗಳ ಸಂಖ್ಯೆ, ಹಳ್ಳಿಗಳ ಸಂಖ್ಯೆ ವಿಶೇಷವಾಗಿಯೇ ಬೆಳೆಯಿತು.

ಬಿಳಿಯರ ಆಳ್ವಿಕೆ ಭಾರತದಲ್ಲಿ ಪ್ರಾರಂಭವಾಗುವುದಕ್ಕೆ ಮುಂಚೆ ಭಾರತದಲ್ಲಿ ಹಳ್ಳಿಗಳ ಸಂಖ್ಯೆಯೇ ಹೇರಳವಾಗಿತ್ತು. ನವನಾಗರಿಕತೆ ಬೆಳೆದ ಇಪ್ಪತ್ತನೆಯ ಶತಮಾನದಲ್ಲಿಯೂ ಭಾರತದಲ್ಲಿ ಪಟ್ಟಣಗಳ ಸಂಖ್ಯೆ ವಿರಳ. ಭಾರತೀಯರಲ್ಲಿ ಶೇಕಡಾ ಎಂಬತ್ತು ಜನ ಗ್ರಾಮವಾಸಿಗಳು ಎಂಬ ಅಂಶ ತಿಳಿಯಬರುತ್ತದೆ.

ಬ್ರಿಟಿಷರ ಆಳ್ವಿಕೆಗೆ ಪೂರ್ವದಲ್ಲಿ ಅವರ ಆಳ್ವಿಕೆಯ ಕಾಲದಲ್ಲಿ ಅನಂತರ ಸ್ವಾತಂತ್ರ್ಯಾನಂತರ ಭಾರತದ ಹಳ್ಳಿಗಳ ಜೀವನ, ಸನ್ನಿವೇಶ, ವಾತಾವರಣಗಳನ್ನು ಗಮನಿಸುವಲ್ಲಿ ವಿಶೇಷ ಅಂತರವಿರುವುದು ಕಾಣಬರುತ್ತದೆ.

ಭಾರತ ಧರ್ಮ ಪ್ರಧಾನವಾದ ರಾಷ್ಟ್ರ. ನಮಗೆ ಐಹಿಕ ಸುಖಕ್ಕಿಂತಲೂ ಪಾರಮಾರ್ಥಿಕದ ಕಡೆಗೆ ಗಮನ ಹೆಚ್ಚು. ಧರ್ಮ, ನೀತಿ, ನ್ಯಾಯ ಭಾರತೀಯರ ಜೀವನದ ಪ್ರತಿ ಕ್ಷೇತ್ರದಲ್ಲಿಯೂ ಹಾಸುಹೊಕ್ಕಾಗಿ ಬೆಳೆದು, ಉಳಿದು ಬಂದಿದೆ. ಗ್ರಾಮವಾಸಿಗಳಾದ ಅಂದಿನ ಪೂರ್ವಿಕರು ಧರ್ಮಾನುಯಾಯಿಗಳಾಗಿದ್ದುದು ಮಾತ್ರವಲ್ಲದೆ, ರಾಷ್ಟ್ರದ ಜನತೆಗೆ ಅನ್ನವನ್ನೂ ಒದಗಿಸಿ ನಿಸ್ಸೀಮ ರಾಷ್ಟ್ರೀಯರಾಗಿ, ರಾಷ್ಟ್ರದ ಶಕ್ತಿಗಳಾಗಿದ್ದರು.

ಬ್ರಿಟಿಷರ ಆಳ್ವಿಕೆಯಲ್ಲಿ ಹಾಗೂ ಅದಕ್ಕೆ ಪೂರ್ವದಲ್ಲಿ ಭಾರತೀಯ ಗ್ರಾಮವಾಸಿಗಳು ಧಾರ್ಮಿಕ ಜೀವನಾವಲಂಬಿಗಳಾಗಿದ್ದರೂ ಅವರು ಲೌಕಿಕವನ್ನು ಮರೆತಿರಲಿಲ್ಲ. ಅವರಲ್ಲಿ ರಾಷ್ಟ್ರಾಭಿಮಾನ, ಸ್ವಾಭಿಮಾನ ಸದಾ ಜಾಗೃತವಾಗಿಯೇ ಇರುತ್ತಿದ್ದವು.

ಪ್ರತಿಯೊಂದು ಹಳ್ಳಿಯಲ್ಲಿಯೂ ಹಲವಾರು ವ್ಯಕ್ತಿ ಬಾಂಧವರು ಸೇರಿ ಸಹಕಾರ ತತ್ವಗಳನ್ನು ಅನುಸರಿಸಿ ಬಾಳುತ್ತಿದ್ದರು. ಅಂದು ಯಾವ ಸಹಕಾರ ಸಂಘಗಳಾಗಲಿ ರಿಜಿಸ್ಟ್ರಾರುಗಳಾಗಲಿ ಕಾನೂನುಗಳಾಗಲಿ ಇರಲಿಲ್ಲ. ಗ್ರಾಮವಾಸಿಗಳಿಗೆ ಸಹಕಾರಿತತ್ವಗಳ ಕಾನೂನಿನ ಪರಿಚಯವಿಲ್ಲದಿದ್ದರೂ ಸಹಕಾರದಿಂದ ಬಾಳುವ ಮನೋಭಾವವಿತ್ತು.

ಒಂದು ಗ್ರಾಮದಲ್ಲಿ ಇದ್ದ ಹತ್ತು ಕುಟುಂಬಗಳಾಗಲಿ ಐವತ್ತು ಕುಟುಂಬಗಳಾಗಲಿ ಅಲಿಪ್ತರಾಗಿರಲಿಲ್ಲ. ಒಂದೆ ಬೃಹತ್ ಕುಟುಂಬದಂತೆ ಅನ್ಯೋನ್ಯವಾಗಿ ಕೂಡಿ ಬಾಳುತ್ತಿದ್ದರು. ಅಂದಿನ ರೈತನಿಗೆ ಅತೃಪ್ತಿಯ ಗಾಳಿ ಬೀಸುವ ಅವಕಾಶವಿರಲಿಲ್ಲ. ಮೇಲಾಗಿ ನವನಾಗರಿಕತೆಯ ಮಾದಕ ರೂಪವಾಗಲಿ, ಹಳ್ಳಿಗಳನ್ನು ತಮ್ಮ ಕಣಿಕಕ್ಕೆ ಸರಿಪಡಿಸಿಕೊಂಡು ಸ್ವಾರ್ಥನ್ನೆ ನಡೆಸುವ ಪುಢಾರಿಗಳ ಹಾವಳಿಯಾಗಲಿ ಇರಲಿಲ್ಲ.

ನ್ಯಾಯ ದೊರೆಯಲು ಎಂದೂ ಹಳ್ಳಿಗರು ನ್ಯಾಯಾಲಯದ ಕಟ್ಟೆ ಏರುತ್ತಿರಲಿಲ್ಲ. ನ್ಯಾಯ ಧರ್ಮಗಳಿಗೆ ಅಂಜಿ ಬಾಳುತ್ತಿದ್ದ ನಿರಕ್ಷರಕುಕ್ಷಿ ರೈತ ಹಳ್ಳಿಯ ಹಿರಿಯರ ಅಂದರೆ ಪಂಚಾಯಿತರ ಮಾತಿಗೆ ತಲೆಬಾಗುತ್ತಿದ್ದ. ಭಾರತೀಯರಿಗೆ ಹಿಂದೆ ಅಂತರಾತ್ಮನೇ ಸಾಕ್ಷಿಯಾಗಿದ್ದ. ಅವರ ನಾಲಿಗೆಯಲ್ಲಿ ಎಂದೂ ಸುಳ್ಳು ವಂಚನೆ ಬರುತ್ತಿರಲಿಲ್ಲ.

ಶಾಲೆ ಕಾಲೇಜುಗಳಿಲ್ಲದಿದ್ದರೂ ವಿದ್ಯಾವಂತರಾಗುತ್ತಿದ್ದರು. ಆಸ್ಪತ್ರೆಗಳು ವೈದ್ಯರಿಲ್ಲದಿದ್ದರೂ ರೋಗಗಳನ್ನು ಗುಣಪಡಿಸಿಕೊಳ್ಳುವಷ್ಟು ಶಕ್ತಿ ಸಂಪಾದಿಸಿಕೊಂಡಿದ್ದರು. ಹೀಗೆ ಹಲಬಗೆಯಲ್ಲಿ ಪೂರ್ಣ ಅನುಕೂಲತೆಗಳನ್ನು ಕಲ್ಪಿಸಿಕೊಂಡು ಸ್ವಾವಲಂಬಿಗಳಾಗಿದ್ದರು ಪೂರ್ವದ ಗ್ರಾಮ ನಿವಾಸಿಗಳು.

ಪಾಪ-ಪುಣ್ಯ, ನ್ಯಾಯ-ಅನ್ಯಾಯ, ಧರ್ಮ-ಅಧರ್ಮ, ನೀತಿ-ಅನೀತಿಗಳ ತಾರತಮ್ಯ ಜ್ಞಾನ, ವಿವೇಚನಾ ಶಕ್ತಿ ಪ್ರತಿ ಹಳ್ಳಿಗಳಲ್ಲಿಯೂ ರಕ್ತಗತವಾಗಿ ಬಂದಿತ್ತು. ಕಷ್ಟಪಟ್ಟು ದುಡಿಯಬೇಕು—ದುಡಿದು ತಿನ್ನಬೇಕು. ಪರರ ಸ್ವತ್ತಿಗೆ ಆಸೆಪಡಬಾರದು ಎನ್ನುವ ದೃಢ ಸಂಕಲ್ಪವೂ ಅವರಲ್ಲಿ ಮನೆಮಾಡಿಕೊಂಡಿದ್ದವು.

ಕಪಟ-ವಂಚನೆಗಳಿಂದಲೇ ಕತ್ತಿ ಹಿಡಿದು ರಾಜ್ಯಾಡಳಿತವನ್ನು ವಹಿಸಿಕೊಂಡ ಬ್ರಿಟಿಷರು ತಮ್ಮ ದರ್ಪದ ಆಡಳಿತದಲ್ಲಿ ಹಲಬಗೆಯ ಮಾರ್ಪಾಡುಗಳನ್ನು ಮಾಡಿದರು. ಕಾಲಗತಿ ಬದಲಿಸಿದಂತೆ ಹಳ್ಳಿಗಳಲ್ಲಿ ಹಲವು ಬದಲಾವಣೆಗಳೂ ಆದುವು. "ದುಡಿದು ತಿನ್ನಬೇಕು" ಎಂಬ ನಿರ್ಧಾರ ಮಾಯವಾಗಿ "ದುಡಿಯದೆ ತಿನ್ನಬೇಕು" ಎಂಬ ಭಾವನೆ ಬೆಳೆಯಿತು. ನವನಾಗರಿಕತೆಯ ಗಾಳಿ ಬೀಸಲಾರಂಭಿಸಿದ ಮೇಲೆ ಹಳ್ಳಿಗರ ಮನಸ್ಸು ತಾತ್ಕಾಲಿಕ ಸುಖ, ನಗರದ ಕೃತಕ ಜೀವನದ ಕಡೆಗೆ ಹರಿಯಿತು.

ಹಳ್ಳಿಗಳಲ್ಲಿ ಅತೃಪ್ತಿ, ಅಹಂಕಾರ, ಸ್ವಾರ್ಥ, ಅಧಿಕಾರ ದಾಹ, ದುರಾಶೆಗಳೂ ಬೆಳೆಯಲಾರಂಭಿಸಿದವು. ಹಳ್ಳಿಗರ ತೃಪ್ತ ಉದಾತ್ತ ಮನೋಭಾವವನ್ನು ಕೆರಳಿಸಿ ಸ್ವಾರ್ಥ ಸಾಧಿಸಿಕೊಳ್ಳುವ ಸಮಯ ಸಾಧಕರೂ ಬೆಳೆದು ಮುಂದೆ ಬಂದರು. ಮೊಟ್ಟಮೊದಲಿಗೆ ಬೆಳೆದ ಗ್ರಾಮ ಪಂಚಾಯಿತಿಗಳು ಹಳ್ಳಿಯ ಹಿರಿಯರ ದುರಾಶೆ ದ್ವೇಷಸಾಧನೆ ಅಧಿಕಾರ ದಾಹಕ್ಕೆ ಮೊದಲ ಮೆಟ್ಟಿಲುಗಳಾದವು.

ಜೀವ ಅನ್ನವಿಲ್ಲದೆ ಬದುಕಲಾರದು. ಮನುಷ್ಯ ಊಟವಿಲ್ಲದೆ ಎಂದೂ ಇರಲಾರ. ಭೂತಾಯಿಯನ್ನು ಭಕ್ತಿಯಿಂದ ಸೇವಿಸಿ ಆಹಾರ ಧಾನ್ಯ ಬೆಳೆದು ಲೋಕಕ್ಕೆ ಹಂಚಿ ಹಸಿದ ಒಡಲನ್ನು ತೃಪ್ತಿಪಡಿಸುವ ದ್ವಿತೀಯ ಬ್ರಹ್ಮ ನೇಗಿಲ ಯೋಗಿಯಾದ ರೈತ, ಬಿಳಿಯರ ಆಳ್ವಿಕೆಯ ಅವಧಿಯಲ್ಲಿ ರೈತ ಅತೃಪ್ತನಾದ. ಅವನ ಆವಾಸಸ್ಥಾನವಾದ ಹಳ್ಳಿ ಕಲುಷಿತವಾಯಿತು.

ನಿಸ್ವಾರ್ಥತೆಯಿಂದ ಭೂತಾಯಿಯನ್ನೇ ನಂಬಿ ಬದುಕುತ್ತಿದ್ದ ರೈತ ನವನಾಗರಿಕತೆಯ ಕೃತಕ ವೈಭವ ಅಟ್ಟಹಾಸಗಳಿಗೆ ಮನಸೋತು ಅಧಿಕಾರ ನಡೆಸಬೇಕು, ಸುಖಪಡಬೇಕು ಎನ್ನುವ ಆಸೆಯಿಂದ ತನ್ನ ಸೇವಾಕ್ಷೇತ್ರದಿಂದಲೇ ಹೊರ ಬಂದ. ರೈತನ ಕ್ಷೇತ್ರವಾದ ಹಳ್ಳಿ ವಿನಾಶದ ಹಾದಿಯಲ್ಲಿ ಸಾಗಿದರೆ ರಾಷ್ಟ್ರದ ಗತಿ!

ಇಂದಿನ ಹಳ್ಳಿಗಳ ಜೀವನದ ಸನ್ನಿವೇಶ, ಕಲುಷಿತ ವಾತಾವರಣ ಎಲ್ಲರಿಗೂ ಚಿರಪರಿಚಿತವೇ. ಆದರೂ ಕೆಲವು ಮಾತುಗಳನ್ನು ಇಲ್ಲಿ ಹೇಳುವುದು ಅಪ್ರಸ್ತುತವಾಗಲಾರದು.

ಹಿಂದಿನ ಹಳ್ಳಿಗಳಲ್ಲಿ— ಹಳ್ಳಿಗರಲ್ಲಿ ಶಿಸ್ತು, ಸಂಘಟನೆ, ಸಹಕಾರ ಮನೋಭಾವ, ದುಡಿಮೆಯ ಉತ್ಸಾಹ, ನಿರ್ಮಲಾಂ

(ಹತ್ತನೇ ಪುಟ ನೋಡಿರಿ)

3 ಹೊಸ ಶಾಖೆಗಳು........

ಸಿಂಡಿಕೇಟ್ ಬ್ಯಾಂಕು ಈ ಕೆಳಗಿನ ಸ್ಥಳಗಳಲ್ಲಿ ಇದೇ ತಾರೀಖು 26ನೇ ಡಿಸೆಂಬರ್ 1964ರಲ್ಲು ತನ್ನ ಹೊಸ ಶಾಖೆಗಳನ್ನು ತೆರೆದಿದೆ ಎಂದು ತಿಳಿಸಲು ಸಂತೋಷಪಡುತ್ತೇವೆ.

ವೆಲ್ಲಿಂಗ್‌ಟನ್ (ನೀಲಗಿರಿ ಜಿಲ್ಲೆ)

ಕುನಿಯಮುತ್ತೂರು (ಕೊಯಮುತ್ತೂರು ಜಿಲ್ಲೆ)

ದಿಲ್ಲಿ—5 (ಸಂಪೂರ್ಣ ಮಹಿಳಾ ಬ್ಯಾಂಕು)

ಸಿಂಡಿಕೇಟ್ ಬ್ಯಾಂಕು ತನ್ನ ಧ್ಯೇಯವಾದ ವಿಶ್ವಾಸ ಮತ್ತು ಸ್ನೇಹಪರತೆಗಳಿಂದ ಈ ಕ್ಷೇತ್ರಗಳ ಜನತೆಗೆ "ಅತ್ಯುತ್ತಮ ಬ್ಯಾಂಕಿಂಗ್ ಸೇವೆ"ಯನ್ನು ಒದಗಿಸುವ ಅವಕಾಶವನ್ನು ಎದುರು ನೋಡುತ್ತಿದೆ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ

200ಕ್ಕೂ ಮಿಕ್ಕಿದ ಶಾಖೆಗಳು

ರೂ. 60 ಕೋಟಿಗೂ ಮಿಕ್ಕಿದ ಚಲಾವಣಾ ನಿಧಿ

ಪಣಂಬೂರಿನ ಜನತೆಯು

ಬೈಕಂಪಾಡಿಯಿಂದ ಮಂಗಳೂರಿಗೆ

ಬಂದರದ ಹೆಸರಲ್ಲಿ

ದೇಶದ ಪಶ್ಚಿಮ ಕರಾವಳಿಯಲ್ಲಿ ಒಂದು ಬೃಹತ್ ಬಂದರದ ನಿರ್ಮಾಣದ ಯೋಜನೆ ನಮ್ಮ ಸರಕಾರಕ್ಕಿದ್ದಾಗ ಮಂಗಳೂರು-ಮಲ್ಪೆ ಎಂಬ ವಾದ ತಲೆದೋರಿತು. ಬಂದರದ ನಿರ್ಮಾಣಕ್ಕಾಗಿ ನೇಮಿಸಲ್ಪಟ್ಟಿದ್ದ ತಜ್ಞರ ಸಮಿತಿಯು ಮಲ್ಪೆಯೇ ನೈಸರ್ಗಿಕ ಲಕ್ಷಣಗಳನ್ನೊಳಗೊಂಡ ಸೂಕ್ತ ಸ್ಥಳವೆಂದು ಶಿಫಾರಸನ್ನು ಮಾಡಿದರೂ, ರಾಜಕೀಯವು ಆಗ ತನ್ನ ಕೈವಾಡ ತೋರಿಸಿ, ಮಂಗಳೂರಿನಲ್ಲೇ ಬೃಹತ್ ಬಂದರ ನಿರ್ಮಾಣವಾಗುವುದೆಂದು ಆಜ್ಞೆ ಹೊರಡಿಸಿತು; ತಜ್ಞರ ಅಭಿಪ್ರಾಯ ಮೂಲೆ ಪಾಲಾಯಿತು!

ಮಂಗಳೂರಿನ ಬೃಹತ್ ಬಂದರದ ಯೋಜನೆ ಕೆಲವು ಆಸಕ್ತ ವರ್ಗದವರಿಗೆ ಹಾನಿಕಾರಕವಾಗಬಹುದೆಂದೇನೋ, ಅದನ್ನು ಮಂಗಳೂರಿನ ಹೆಸರಲ್ಲಿ ಪಣಂಬೂರಿಗೆ ವರ್ಗಾಯಿಸಲಾಯಿತು. ಬಂದರಕ್ಕಾಗಿ ೧೫೦೦ ಎಕರೆ ಫಲವತ್ತಾದ ಬಂಗಾರದಂತಹ ಭೂಮಿಯನ್ನು ವಶಪಡಿಸಿಕೊಳ್ಳಲಾಯಿತು. ಈ ಮಣ್ಣಿನಲ್ಲಿ ಹೊನ್ನನ್ನು ಕಂಡು, ತಮ್ಮ ಬಾಳ್ವೆಯಲ್ಲಿ ಬೆಳಕನ್ನು ಕಂಡಿದ್ದ ಬೈಕಂಪಾಡಿ ಪಣಂಬೂರುಗಳ ಬಡ ಜನತೆಗೆ ಏನೇನೋ ಆಶ್ವಾಸನೆಗಳನ್ನು ಕೊಟ್ಟು, ಅವರು ಪುನರ್ವಸತಿಯ ಹೆಸರಿನಲ್ಲಿ 'ವನವಾಸ' ಮಾಡುವಂತಹ 'ಕಾಟು ಪಳ್ಳ'ಕ್ಕೆ ಅವರನ್ನು ದಾಟಿಸಿ, ಬಂದರದ ಪ್ರಾರಂಭೋತ್ಸವ ನಡೆಯಿತು. ಮಂತ್ರಿ ಮಾಗಧರ ಪಡೆಯೇ ಬಂದು ಪಣಂಬೂರು ಬಂದರದ ಕಾರ್ಯದ ಆರಂಭೋತ್ಸವ ನೆರವೇರಿತು.

ಮೊದಲಿಗೆ ವಶಪಡಿಸಿಕೊಂಡ ೧೫೦೦ ಎಕರೆ ಭೂಮಿಯಲ್ಲಿ ವಾಸಿಸುತ್ತಿದ್ದ ಬಡ ಜನತೆಗೆ ಕೊಟ್ಟ ಆಶ್ವಾಸನೆಗಳನ್ನು ಪಾಲಿಸುವ ಪ್ರಾಮಾಣಿಕತನವನ್ನು ನಮ್ಮ ಸರಕಾರ ತೋರಲಿಲ್ಲ. ಅವನ್ನು ಪಶುಗಳಿಗಿಂತ ಕೀಳಾಗಿ ಕಾಣಲಾಗುತ್ತಿದೆ ಎಂಬ ದೂರೂ ಇದೆ. ಕಳನಾದ ಬಯಲ ಭೂಮಿಯಲ್ಲಿ ತಮ್ಮ ರಕ್ತ ಹರಿಸಿ, ಬೆವರು ಸುರಿಸಿ, ಕಾಯಕಷ್ಟ ಮಾಡಿ, ಬದುಕುತ್ತಿದ್ದ ಈ ಜನತೆಯನ್ನು ಏರುಪೇರುಗಳಿಂದ ಕೂಡಿದ, ಕುಡಿಯುವ ನೀರಿಗೆ ಪಾತಾಳಕ್ಕಿಳಿಯಬೇಕಾಗಿರುವ, ಜನವಸತಿಗೆ ಕಷ್ಟಸಾಧ್ಯವಾದ 'ಕಾಟುಪಳ್ಳ'ಕ್ಕೆ ಕಟುಕ ಭಾವನೆಯಿಂದ ನೂಕಲಾಯಿತು! ಆದರೂ ಪಣಂಬೂರು, ಬೈಕಂಪಾಡಿಗಳ ಈ ನಾಗರಿಕರು ದೇಶದ ಅಭಿವೃದ್ಧಿಯಲ್ಲಿ ನಾವು ಅಡ್ಡಿಮಾಡಬಾರದೆಂಬ ಸದುದ್ದೇಶದಿಂದ ಈ ಕಷ್ಟವನ್ನು ಸಹಿಸಿಕೊಂಡರು. ಸರಕಾರ 'ನಿಮಗೆ ಅಮೃತ ನೀಡುವೆ'ನೆಂದು ಹೇಳಿ ವಿಷ ಕುಡಿಸಿದರು, ದೇಶದ ಕಲ್ಯಾಣಕ್ಕಾಗಿ ನೀಲಕಂಠನಂತೆ ವಿಷವನ್ನೇ ಕುಡಿದು ಕರಗಿಸಿಕೊಂಡರು!

ಬೈಕಂಪಾಡಿ, ಪಣಂಬೂರು, ತಣ್ಣೀರು ಬಾವಿ, ಪಡುಕೋಡಿಗಳ ೧೫-೨೦ ಸಾವಿರಕ್ಕಿಂತಲೂ ಮಿಕ್ಕಿದ ಜನತೆಯ ಈ ಸದ್ಭಾವನೆಯನ್ನು ಸಂಬಂಧಪಟ್ಟವರು ದುರುಪಯೋಗ ಪಡಿಸಿಕೊಂಡರೆಂದು ಹೇಳದೆ ಗತ್ಯಂತರವಿಲ್ಲ. ದೇಶಕ್ಕಾಗಿ ಸ್ವಾರ್ಥತ್ಯಾಗ ಮಾಡಿದ ಈ ಬಡ ಮಣ್ಣಿನ ಮಕ್ಕಳ ಮೇಲೆ ಇದೀಗ ಸರಕಾರ ವಜ್ರಾಯುಧ ಪ್ರಯೋಗ ಮಾಡಿದೆ. ಮೊನ್ನೆ ಮೊನ್ನೆ ಮಾಡಿದ ಗದಾ ಪ್ರಹಾರದಿಂದ ಇಲ್ಲಿಯ ಜನತೆ ಇನ್ನೂ ಚೇತರಿಸಿಕೊಂಡಿಲ್ಲ! ಈಗ ಅದರ ಮೇಲೆ ವಜ್ರಾಯುಧ ಪ್ರಯೋಗ! ಗಾಯದ ಮೇಲೆ ಬರೆ! ಬಂದರದ ನೆಪದಲ್ಲಿ ಈಗ ಪುನಃ ಮತ್ತೆ ೧೫೦೦ ಎಕರೆಯಷ್ಟು ಚಿನ್ನದಂತಹ ಭೂಮಿಯನ್ನು ವಶಪಡಿಸಿಕೊಳ್ಳುವುದರ ಕುರಿತು ಮೈಸೂರು ಸರಕಾರ ಗಜೇಟು ಪ್ರಕಟಣೆ ಹೊರಡಿಸಿದೆ!

ಪಣಂಬೂರು ಬಂದರದ ಗಾತ್ರವೆಷ್ಟು? ಅದಕ್ಕಾಗಿ ಎಷ್ಟು ಭೂಮಿ ಬೇಕು? ಈಗ ಪುನಃ ಭೂಸ್ವಾಧೀನಗೊಳಿಸುವುದರ ಆವಶ್ಯಕತೆಯೇನು? ಎಂಬುದಕ್ಕೆ ಯಾರೂ ಮೊದಲು ಸಮರ್ಪಕ ಉತ್ತರ ಕೊಡಲಿಲ್ಲ. ಸರಕಾರದ ಈ ತರದ ದಬ್ಬಾಳಿಕೆಯ ವಿರುದ್ಧ ಇಲ್ಲಿಯ ಜನತೆ ಎದ್ದು ನಿಂತಿತು. ಪ್ರಜಾಪ್ರಭುತ್ವವೆಂದು ಕರೆಯಲ್ಪಡುತ್ತಿರುವ ಈ ಯುಗದಲ್ಲೂ 'ತಗ್ಲಕ್ ದರ್ಬಾರು' ನಡೆಯುವುದನ್ನು ಕಂಡ ಜನ ಎಚ್ಚೆತ್ತರು. ಸಮಿತಿಯೊಂದನ್ನು ರಚಿಸಿಕೊಂಡು, ಗ್ರಾಮ ರಕ್ಷಣೆಗೆ ಟೊಂಕ ಕಟ್ಟಿದರು. ಶಾಂತ ರೀತಿಯ, ಪ್ರಜಾಪ್ರಭುತ್ವಕ್ಕೆ ಯೋಗ್ಯವೆನಿಸುವ ದಾರಿಯಲ್ಲಿ ಅವರು ಪ್ರಾಮಾಣಿಕವಾಗಿ ಹೋರಾಟ ನಡೆಸುತ್ತಾ ಬಂದರು. ಆದರೆ, ಜನತೆಯ ಪ್ರಾತಿನಿಧಿಕ ಸಂಸ್ಥೆಯಾದ ಈ ಸಮಿತಿಯ ಮಾತುಗಳಿಗೆ ಜನನಾಯಕರು, ಅಧಿಕಾರ ಸ್ಥಾನದಲ್ಲಿರುವವರು ಬೆಲೆ ಕೊಡಲಿಲ್ಲ. ಪೊಳ್ಳು ಆಶ್ವಾಸನೆಗಳನ್ನಿತ್ತು, ಸಮಿತಿಯ ಅಸ್ತಿತ್ವವನ್ನೂ ಮರೆತು ಅವರು ವರ್ತಿಸುತ್ತಿದ್ದಾರೆ.

ಇಂತಹ ಸಂದರ್ಭದಲ್ಲಿ ನಮ್ಮ ಮೈಸೂರು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರ ಸವಾರಿ ನಮ್ಮ ಜಿಲ್ಲೆಗೆ ಆಗಮಿಸಿತು. ನಿಜಲಿಂಗಪ್ಪನವರು ಮತ್ತೆ ಮಂಗಳೂರು ಹಾಗೂ ಉಡುಪಿಗಳಲ್ಲಿ ಬೇಕಾದಷ್ಟು ಮಾತಾಡಿದರು. 'ಭೂಸ್ವಾಧೀನ

ಮಂಗಳೂರಿನ ಚಿಲಿಂಬಿಯಲ್ಲಿ ಮತ ಪ್ರದರ್ಶಕರ ದಾರುಣ ಸ್ಥಿತಿ ಕಂಡು ಮನನೊಂದ ಗುಜರಾಥಿ ಮಹಿಳೆ ಸ್ವಯಂಪ್ರೇರಿತಳಾಗಿ ಅವರಿಗೆ ಬೆಲ್ಲ ನೀರು ಹಂಚಿದ ದೃಶ್ಯ.

ಜಿಲ್ಲಾ ಡೆಪ್ಯುಟಿ ಕಮಿಶನರ ಆಫೀಸಿನ ಮುಂಗಡೆ ಶಾಂತ ಸತ್ಯಾಗ್ರಹಿಗಳು.



ಜಿಲ್ಲಾ ಡೆಪ್ಯುಟಿ ಕಮಿಶನರ ಕಚೇರಿಯ ಮುಂಗಡೆ ನೆರೆದ ಸತ್ಯಾಗ್ರಹಿಗಳ ತಂಡದ ಇನ್ನೊಂದು ದೃಶ್ಯ.

ಕರುಳು ಕರಗಿಸುವ ಕಥೆ

ಶಾಂತ ಪಾದ ಯಾತ್ರೆ

ಬಡ ಜನತೆ ನಿರ್ಗತಿಕವಾಗಬಾರದು!

ಮೆರವಣಿಗೆಯಲ್ಲಿ ಮಹಿಳೆಯರೂ ಬಹುಸಂಖ್ಯೆಯಲ್ಲಿ ಪಾಲುಗೊಂಡಿದ್ದರು. ಕೂಳೂರಿನ ಮಾರ್ಗವಾಗಿ ಅವರು ಶಾಂತ ರೀತಿಯಿಂದ ಸಾಗುತ್ತಿರುವುದು.

ತೆಗೆ ಆಡ್ಡಿ ಮಾಡಿದರೆ, ನಿಮಗೆ ಬೇಡವಾದ ಈ ಬಂದರವನ್ನು ಮಲ್ಪೆಗೋ, ಕಾರವಾರಕ್ಕೋ, ವರ್ಗಾಯಿಸಲಾದೀತು ಎಂದು ಶಾಲೆಯ ಮಕ್ಕಳನ್ನು ಹೆದರಿಸುವಂತೆ ಗದರಿಸಿದರು ನಿಜಲಿಂಗಪ್ಪನವರ ಹೇಳಿಕೆಯ ಅರ್ಥವೇನು? ಬಂದರ ಯೋಜನೆಯನ್ನು ವರ್ಗಾಯಿಸುವುದು ನಿಜಲಿಂಗಪ್ಪನವರ ಅಧಿಕಾರ ಕಕ್ಷೆಯೊಳಗೆ ಬರುವುದ ಅಥವಾ ಕೇಂದ್ರ ಸರಕಾರದ ಅಧಿಕಾರಕಕ್ಷೆಯೊಳಗೆ ಬರುವುದ? ಹೊಣೆಗಾರ ಸ್ಥಾನದಲ್ಲಿರುವಂತಹವರು ಆಡುವ ಮಾತುಗಳೆ ಇವು? ಈಗಾಗಲೇ ಪಣಂಬೂರಿನಲ್ಲಿ ೨೫೧ ಕೋಟಿಗಳಷ್ಟು ಹಣವನ್ನು ವ್ಯಯಿಸಲಾಗಿದೆಯಂತೆ. ಈ ಹಣಕ್ಕೆ ಏನುಗತಿ? ನಿಜಲಿಂಗಪ್ಪನವರು ಈ ವಿಚಾರ ಆಲೋಚಿಸಿರುವರೆ? ಎಂದ ಎಲ್ಲರೂ ಪ್ರಶ್ನಿಸುತ್ತಿದ್ದಾರೆ.

ನಿಜಲಿಂಗಪ್ಪನವರು ಇನ್ನೊಂದು ಅತ್ಯಂತ ಸ್ವಾರಸ್ಯಕರವಾದ ವಿಚಾರವನ್ನು ಉಡುಪಿಯಲ್ಲಿ ಹೊರಗೆಡಹಿದರು. "ಮಂಗಳೂರು—ಮಲ್ಪೆ ಎಂಬ ನಿಮ್ಮವರ ವಾದದಿಂದಲೇ ಬಂದರ ಮಂಗಳೂರಿಗೆ ಹೋಯಿತು ತಜ್ಞರ ಅಭಿಪ್ರಾಯ ಮಲ್ಪೆಯೇ ಪ್ರಶಸ್ತ ಸ್ಥಳ ಎಂದಿದ್ದರೂ ನಿಮ್ಮ ನಿಮ್ಮ ಮೇಲಾಟದಿಂದ ಮಂಗಳೂರೇ ಬಂದರವಾಗುವಂತಾಯಿತು' ಎಂದ ಈ ರಟ್ಟಾದ ಗುಟ್ಟನ್ನು ಮಹಾ ಗುಟ್ಟೆಂದು ನಿಜಲಿಂಗಪ್ಪನವರು ಹೇಳುತ್ತಿದ್ದಾರೆ! ಈ ವಿಚಾರ ಯಾರಿಗೆ ಗೊತ್ತಿಲ್ಲ! ಅದನ್ನೀಗ ನಿಜಲಿಂಗಪ್ಪನವರು ಹೇಳುವ ಆಗತ್ಯವೇನು? ಮಲ್ಪೆಯ ವಿಚಾರದಲ್ಲಿ ಅಷ್ಟು ಸಹಾನುಭೂತಿ ಅವರಿಗೆ ಇರುವುದಾದರೆ, ಅಂದೇ ಆ ಕಾಲದಲ್ಲೇ ಈ ಗುಟ್ಟನ್ನು ಹೊರಗೆ ಬಿಡಬಹುದಿತ್ತಲ್ಲ? ಆ ಕಾಲ ತುಟಿ ಮುಚ್ಚಿ ಮೌನವ್ರತ ತಳೆದದ್ದೇಕೆ?

"ಮಾತು ತುಟಿ ಮೀರಿತೆಂದರೆ ಮತ್ತೆ ಪ್ರಸಾದ' ಈ ಮಾತು ಹೊಣೆಗಾರಸ್ಥಾನದಲ್ಲಿರುವವರಿಗೆ ಹೆಚ್ಚು ಅನ್ವಯಿಸುವುದಲ್ಲವೆ?

ಪಣಂಬೂರಿನ ಜನತೆ ನ್ಯಾಯಪಾಲನೆಗಾಗಿ ಹೋರಾಡುತ್ತಿದೆ ಈಗ ವಶಪಡಿಸಿಕೊಳ್ಳಬೇಕೆಂದಿರುವ ೧೫೦೦ ಎಕರೆ ಭೂಮಿಯು ಕೈಗಾರಿಕೆಯ ಉದ್ದೇಶಗಳಿಗಾಗಿ ಎಂದು ಮಾನ್ಯ ನಿಜಲಿಂಗಪ್ಪನವರು ಬಾಯಿ ಬಿಟ್ಟರು ಆದರೆ ಈಗ ಕೈಗಾರಿಕೆಗೆ ಭೂಮಿ ವಶಪಡಿಸಿಕೊಳ್ಳುವುದು ಆಗತ್ಯವೆ? ಕುಗ್ಗುರಿ ತಗುವ ಮೊದಲೇ ಹುರುಳಿ ತಂದಿಟ್ಟ" ಎಂಬ ಗಾದೆ ಮಾತೊಂದಿದೆ ಬಂದರ ರಚನೆಗೆ ಇನ್ನು ಹಲವು ವರ್ಷಗಳೂ ಬೇಕಾಗಿರುವಾಗ ಈಗ ಕೈಗಾರಿಕಗೆ ಭೂಸ್ವಾಧೀನತೆ ಮಾಡುವುದು ಯಾಕೆ? ಮೂರು ಬೆಳೆ ಬೆಳೆಯುವ, ತೆಂಗು ಕಂಗಿನ ಸಸಿಗಳಿಂದ ಕಂಗೊಳಿಸುವ ಈ ಬಂಗಾರದಂತಹ ಭೂಮಿಯನ್ನು ಈಗಲೇ ಹಾಳುಗೆಡಹಬೇಕೆ?

ಕೈಗಾರಿಕೆಗೆ ಬಂದರ ಸಿವೇಶನದ ಸಮೀಪದಲ್ಲೇ ಭೂಮಿ ಬೇಕೆಂಬ ನಿಯಮವೇನಾದರೂ ಇದೆಯೆ? ಪಣಂಬೂರಿಗೆ ಸಮೀಪವೇ ಸರಕಾರದ ಪಡಿಲುದಭೂಮಿ ಸ್ವಲ್ಪ ದೂರದಲ್ಲಿ ಇಲ್ಲವೆ? ಆ ಬರಡು ಮೈದಾನದಲ್ಲಿ ಬಂಜರು ಸ್ಥಳದಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರಬಹುದಲ್ಲ?

"ಬಂದರಕ್ಕಾಗಿ ಸ್ಥಳ ಕೊಟ್ಟೆವು ಇನ್ನು ಕೈಗಾರಿಕೆಗೆ ಸ್ಥಳ ಕೊಡಲಾರೆವು" ಎನ್ನುತ್ತಿದೆ ಅಲ್ಲಿಯ ಜನತೆ. ಇದರಲ್ಲಿ ಗ್ರಾಮದ ಎಲ್ಲ ವರ್ಗದ ಜನತೆ ಪಾಲುಗೊಂಡಿದೆ ಇದಕ್ಕೆ ನಿದರ್ಶನ ಕಳೆದ ತಾರೀಖು ಬೈಕಂಪಾಡಿಯಿಂದ ೭ ಮೈಲು ದೂರದ ಮಂಗ-

ಳೂರಿನವರಗೆ ಸಾಗಿದ ೭ ಸಾವಿರ ಜನ ಹೆಂಗಸರು ಮಕ್ಕಳ ಮುದುಕರು ಮುದುಕಿಯರಿಂದ ಕೂಡಿದ ಬೃಹತ್ ಮೆರವಣಿಗೆ! ಈ ಮೆರವಣಿಗೆ ಕಂಡವರು ಮರುಗಬೇಕು! ಅವರ ಹೃದಯ ಮಿಡಿಯಬೇಕು! ಕಲ್ಲು ಕರಗಿ ನೀರಾಗಬೇಕು!! ಜನತೆಯ ಒಗ್ಗಟ್ಟಿನ ಪ್ರತೀಕವಾದ ಈ ಮೆರವಣಿಗೆ ಹಾಗೂ ಆ ದಿನ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ನಡೆದ ಶಾಂತ ರೀತಿಯ ಅನ್ನ ಸತ್ಯಾಗ್ರಹ, ಪಣಂಬೂರಿನ ಜನತೆಗೆ ಕೀರ್ತಿ ತರುವಂತಹುದ! ಅಧಿಕಾರದ ಗದ್ದುಗೆಯಲ್ಲಿರುವವರ ಕಣ್ಣು ತೆರೆಯಿಸುವಂತಹುದು.

ಸರಕಾರ ಇನ್ನು ಈ ವಿಚಾರದಲ್ಲಿ ಮೀನಮೇಷ ಮಾಡುವುದಿಲ್ಲ. ಸಹನೆಯಿಂದ ವರ್ತಿಸಿರುವ ಜನತೆಯ ತಾಳ್ಮೆಗೂ ಒಂದು ಮಿತಿ ಇದೆ. ಈ ರೀತಿಯ ಅನ್ಯಾಯ ಪ್ರಜಾಪ್ರಭುತ್ವದಲ್ಲಿ ನಡೆಯಬಾರದು.

ಪಣಂಬೂರು ಬಂದರ ನಿರ್ಮಾಣವಾಗಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಸಂಬಂಧಪಟ್ಟವರು ಸರಕಾರದ ಇತರ ಭೂಮಿಯನ್ನು ಪಡೆಯಲಿ ಪಣಂಬೂರಿನ ಬಯಲು ಭೂಮಿಯಲ್ಲೇ ನಾವು ಕೈಗಾರಿಕೆ ಸ್ಥಾಪಿಸುತ್ತೇವೆ; ಅಲ್ಲಿಯ ಜನರನ್ನು ನಿರ್ಗತಿಕರನ್ನಾಗಿ ಮಾಡಿಯೇ ನಾವು ರಾಷ್ಟ್ರದ ಪುನರ್ನಿರ್ಮಾಣ ಮಾಡುತ್ತೇವೆ ಎಂಬ ಹಟ ಬಿಟ್ಟು ಬಿಡಲಿ ಜನತೆಯ ಸಹಕಾರವಿಲ್ಲದೆ ಯಾವ ಯೋಜನೆಯೂ ಯಶಸ್ವಿಯಾಗಲಾರದೆಂದು ಸರಕಾರ ಇನ್ನಾದರೂ ಮನಗಾಣಬೇಕು ಪಣಂಬೂರಿನ ಜನತೆಗೆ ನ್ಯಾಯ ದೊರಕಬೇಕು. ಅವರ ಹೋರಾಟ ಯಶಸ್ವಿಯಾಗಲಿ ಎಂದು ಹಾರೈಸುವುದರ ಜತೆಗೆ, ಜನತೆ ಅವರಿಗೆ ಪೂರ್ಣ ಬೆಂಬಲ ಈಯಲೆಂದು ವಿನಂತಿಸುತ್ತೇವೆ.



ಭೂಮಿ ಹಾಳಾಗಬಾರದೆಂದು ಆ ಭೂಮಿಯ ಮೇಲೆಯೇ ಸಾಗುತ್ತಿರುವ ಸತ್ಯಾಗ್ರಹಿಗಳು

ಜಿಲ್ಲಾಧಿಕಾರಿಗಳ ಕಚೇರಿಯ ಮುಂಗಡೆ ಕುಳಿತ ಮಹಿಳಾ ಸತ್ಯಾಗ್ರಹಿಗಳು.

ನಮ್ಮ-ನಮ್ಮವರು

ಶ್ರೀ ಕೆಂಗಲ್ ಹನುಮಂತಯ್ಯ

ಕರ್ನಾಟಕದ ಸಮಸ್ಯೆಗಳನ್ನು ಚೆನ್ನಾಗಿ ತಿಳಿದ ಹಾಗೂ ಕನ್ನಡ ಜನತೆಯ ಮನಸ್ಸನ್ನು ಚೆನ್ನಾಗಿ ಅರಿತುಕೊಂಡಿರುವ ಕರ್ನಾಟಕದ ಕೆಲವೇ ನಾಯಕರಲ್ಲಿ ಶ್ರೀ ಹನುಮಂತಯ್ಯನವರೂ ಒಬ್ಬರು. ಮೈಸೂರು ಸಂಸ್ಥಾನಕ್ಕೆ ಒಂದು ದಕ್ಷ ಸರಕಾರಿ ಯಂತ್ರವನ್ನು ಒದಗಿಸಿ ಕೊಟ್ಟ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರ ಆಡಳಿತ ಕಾಲದಲ್ಲಿ "ವಿಧಾನ ಸೌಧ"ದಂತಹ ಅನಪೇಕ್ಷಿತ ಪ್ರಕರಣಗಳು ಜರಗಿದರೂ, ಅವರು ದಕ್ಷ ಆಡಳಿತಗಾರರೆಂಬುದು ಮಾತ್ರ ಎಲ್ಲರೂ ಒಪ್ಪಬೇಕಾದ ಮಾತು.

ಶ್ರೀ|| ಹನುಮಂತಯ್ಯನವರು ನಿರ್ದಾಕ್ಷಿಣ್ಯ ಪ್ರವೃತ್ತಿಯ ಬಿಚ್ಚು ಮಾತುಗಾರರು. ಅವರು ತಮ್ಮ ಅಭಿಪ್ರಾಯವನ್ನು ಇದ್ದಕ್ಕಿದ್ದಂತೆ ಮಂಡಿಸುತ್ತಾರೆ. ಯಾರಿಗೂ ಹೆದರುವ ಪ್ರವೃತ್ತಿ ಅವರದಲ್ಲ. ಕಾಂಗ್ರೆಸ್ ಸಭೆಯಲ್ಲಿ ದಿವಂಗತ ಪ್ರಧಾನಿ ನೆಹರೂರವರಿಗೆ ಎದುರಾಗಿ, ಖಂಡತುಂಡ ಅಭಿಪ್ರಾಯ ಮಂಡಿಸಿದ ದಿಟ್ಟತನದ ನಾಯಕರು ಹನುಮಂತಯ್ಯನವರು. ಅವರ ಮಾತು ಕೆಲವರಿಗೆ ಅಪ್ರಿಯವಾಗಿ ಕಂಡೀತು ಕಾರಣ, ಅವರು ಯಾರನ್ನೂ ಸಮಾಧಾನ ಪಡಿಸಬೇಕೆಂದು ಮಾತಾಡುವುದಿಲ್ಲ. ಇದ್ದುದನ್ನು ಇದ್ದಂತೆ ಆಡುತ್ತಾರೆ. ಅವರ ಈ ಖಂಡತುಂಡ ಧೋರಣೆಯೇ, ಕೇಂದ್ರದಲ್ಲಿ ಅವರು ಮಂತ್ರಿಯಾಗುವುದಕ್ಕೆ ಅಡ್ಡಿಯಾಗಿದೆ ಎನ್ನುವವರೂ ಇದ್ದಾರೆ. ಈ ಸಂಗತಿ ಇದ್ದರೂ ಇರಬಹುದು. ಆದರೂ ಅವರು ದೂರದೃಷ್ಟಿಯ, ಚತುರ ಆಡಳಿತಗಾರರೆನ್ನುವುದಕ್ಕೆ ಪಂಜಾಬ್ ಸರಕಾರ ಅವರ ಸೇವೆಯನ್ನು ಪಡೆದುದೇ ಸಾಕ್ಷಿ.

ಇದೀಗ ಕೇಂದ್ರ ಸಂಪುಟದಲ್ಲಿ ಶ್ರೀ|| ಎಚ್. ಸಿ. ದಾಸಪ್ಪನವರ ನಿಧನದಿಂದ ತೆರವಾದ ಮಂತ್ರಿ ಸ್ಥಾನಕ್ಕೆ ಕರ್ನಾಟಕದವರೊಬ್ಬರನ್ನೇ ನೇಮಿಸಬೇಕೆಂಬ ಕೇಳಿಕೆ ಇದೆ. ಕರ್ನಾಟಕದ ನಾಯಕರಲ್ಲಿ ಈಗಾಗಲೇ ಶ್ರೀ|| ಹನುಮಂತಯ್ಯ ಹಾಗೂ ಪೂಣಚ್ಚರ ಹೆಸರುಗಳು ಕೇಳಿ ಬರುತ್ತಿವೆ. ಮೈಸೂರು ಕಾಂಗ್ರೆಸಿನ ಗುಂಪು ರಾಜಕೀಯ ಈ ವಿಚಾರದಲ್ಲೂ ತಲೆ ಹಾಕಿದೆ ಎಂಬ ಸುದ್ದಿಯೂ ಇದೆ. ಹಾಗಿದ್ದರೆ ನಮ್ಮ ನಮ್ಮೊಳಗಿನ ಭಿನ್ನಾಭಿಪ್ರಾಯಗಳ ದೆಸೆಯಿಂದ, ಮಂತ್ರಿ ಪಟ್ಟ ಕರ್ನಾಟಕದವರಲ್ಲದ ಮತ್ತಾರನ್ನಾದರೂ ಒಬ್ಬರಿಗೆ ಹೋದರೂ ಹೋದೀತು. ಇಬ್ಬರ ಜಗಳ ಮೂರನೆಯವನಿಗೆ ಲಾಭ ಎನ್ನುವ ಹಾಗೆ. ಆದುದರಿಂದ ಕನ್ನಡದ ಜನ ಹಾಗೂ ನಾಯಕರೂ ಒಂದಾಗಿ, ಏಕಕಂಠದ ಅಭಿಪ್ರಾಯ ವ್ಯಕ್ತ ಪಡಿಸುವುದೊಳಿತು. ಶ್ರೀ ಹನುಮಂತಯ್ಯನವರಲ್ಲಿ ಕೇಂದ್ರ ಸಂಪುಟವನ್ನಲಂಕರಿಸುವ ಯೋಗ್ಯತೆ ಅನುಭವ, ಹಾಗೂ ದೂರದೃಷ್ಟಿಗಳು ಇವೆ. ಅವರು ಕೇಂದ್ರ ಸಂಪುಟ ಸೇರುವುದರಿಂದ ಕರ್ನಾಟಕಕ್ಕೆ ಹಿತವೂ ಇದೆ. ಈಗ ಎಲ್ಲರೂ ಅವರನ್ನು ಬೆಂಬಲಿಸಬೇಕಾದುದು ಅಗತ್ಯವೆನಿಸಿದೆ.



ಶ್ರೀ ಕೆ. ಗೋವಿಂದ ಶೆಟ್ಟಿ

ದೇಶದಲ್ಲಿ ಆಹಾರ ಸಮಸ್ಯೆ ಭೀಕರ ತಾಂಡವಾಡುತ್ತಿರುವ ಈ ದಿನಗಳಲ್ಲಿ ಸರಕಾರ ಕೃಷಿ ಹಾಗೂ ಅದರ ಉತ್ಪಾದನೆಗಳತ್ತ ವಿಶೇಷ ಗಮನ ಈಯುತ್ತಿದೆ. ಆಹಾರ ಧಾನ್ಯಗಳ ಬೆಳೆಯ ಜತೆ, ತೋಟಗಾರಿಕೆಯೂ ಅಭಿವೃದ್ಧಿ ಹೊಂದಬೇಕಾದುದು ಅತಿ ಅಗತ್ಯದ್ದೆನಿಸಿದೆ. ನಮ್ಮ ಕರಾವಳಿಯ ಸೀಮೆಯಾದ ಕಾಪುವಿನಲ್ಲಿ ಸುಂದರವಾದೊಂದು ನಂದನವನ ಕಂಗೊಳಿಸುತ್ತಿದೆ. ಇಲ್ಲಿ ಹಣ್ಣು ಹಂಪಲುಗಳ ನಂದನವನದ ಸ್ಥಾಪನೆಗೆ ಕಾರಣರು ಶ್ರೀ|| ಕೆ. ಗೋವಿಂದ ಶೆಟ್ಟಿ ಮತ್ತು ಅವರ ಬಳಗದವರು. ೧೯೪೯ರಲ್ಲಿ ಕಾಪು ಮುದ್ದಣ ಶೆಟ್ಟರ ನೇತೃತ್ವದಲ್ಲಿ ಕಾಪುವಿನಲ್ಲಿ "ಬಿಕ್ಕೋ" ದ ಸ್ಥಾಪನೆಯಾಯಿತು. ಹಣ್ಣಿನ ರಸ ಹಾಗೂ ಇತರ ಉತ್ಪಾದನೆಗಳನ್ನು ಉತ್ಪಾದಿಸುವ ಈ ಕಾರ್ಖಾನೆ ಇಂದು ಭಾರತದಲ್ಲೇ ಮನೆ ಮಾತಾಗಿದೆ. ಬಿಕ್ಕೋರವರ ಹಣ್ಣಿನ ರಸ, ಪೆಪ್ಪರ್‌ಮಿಂಟು, ಜೇಂಗಳೆಂದರೆ ಜನಪ್ರಿಯವೆನಿಸಿವೆ.

ನಾಲ್ಕುನೂರು ಎಕರೆ ವಿಶಾಲವಾದ ಭೂಮಿಯಲ್ಲಿ ಬೆಳೆದ ಹಣ್ಣುಗಳನ್ನು ಕೇನಿಂಗ್ ಮಾಡುವ ಕಾರ್ಯ ಬಿಕ್ಕೋರವರಿಂದ ಜರಗುತ್ತಿದೆ. ದಕ್ಷಿಣ ಕನ್ನಡದಲ್ಲಿ ಇಂತಹದೊಂದು ಉದ್ದಿಮೆಯನ್ನು ಮೊದಲು ಸ್ಥಾಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಬಿಕ್ಕೋರವರ ಉದ್ದಿಮೆಯಲ್ಲಿ ತೊಡಗಿದ ಭಂಡವಾಳ ಸುಮಾರು ಎರಡು ಲಕ್ಷ ರೂಪಾಯಿಗಳಾಗಬಹುದು. ಇವರ ತೋಟದಲ್ಲಿ ಬೆಳೆಯುವ "ಅಲ್ಫಾನ್ಸೋ" ಮಾವಿನ ಹಣ್ಣುಗಳಿಗೆ ವಿದೇಶಗಳಿಂದಲೂ ಬೇಡಿಕೆ ಇದೆ. ಆದರೆ ಈ ಜಾತಿಯ ಮಾವಿನ ಹಣ್ಣುಗಳ ಉತ್ಪಾದನೆ ಹೆಚ್ಚದೆ, ಕಡಿಮೆ ದರದಲ್ಲಿ ಇದರ ಸರಬರಾಜು ಆಗುವುದು ತುಸು ಕಷ್ಟ. ಅನಾನಾಸು, ನಿಂಬೆ, ಕಿತ್ತಳೆ, ಚಿಕ್ಕು ಇವುಗಳನ್ನು ಬೆಳೆಸುವ ಕುರಿತು ಧರ್ಮಾರ್ಥವಾದ ಅನುಭವವನ್ನು ಇಲ್ಲಿ ಕೊಡುತ್ತಾರೆ.

ಕಾಪುವಿನಂತಹ ಗ್ರಾಮಾಂತರ ಪ್ರದೇಶದಲ್ಲಿ ಇಂತಹದೊಂದು ಉದ್ದಿಮೆ ಬೆಳೆದು ಬರಬೇಕಾದರೆ ಇದರ ಕಾರ್ಯಕರ್ತರ ಕರ್ತವ್ಯದಕ್ಷತೆ ಮಹತ್ವದ್ದಿರಲೇಬೇಕು. ಶ್ರೀ|| ಗೋವಿಂದ ಶೆಟ್ಟರ ಅಣ್ಣ ಶ್ರೀ|| ಸಂಜೀವ ಶೆಟ್ಟಿ ಕಾಳಾವರರು ಈ ದಿಸೆಯಲ್ಲಿ ಹಗಲಿರುಳು ಹೆಗಲು ಕೊಟ್ಟು ದುಡಿದವರು. ಇದೀಗ ಸಕ್ಕರೆಯ ಅಭಾವದಿಂದ ಈ ಉದ್ದಿಮೆ ಶೀರಾ ಕಠಿಣ ಪರಿಸ್ಥಿತಿಯನ್ನೆದುರಿಸುತ್ತಿದೆ. ಸರಕಾರ, ಇಲ್ಲಿನ ಅವಶ್ಯಕತೆಯನ್ನು ಪೂರೈಸದೆ, ಉದ್ದಿಮೆ ಕುಂಠಿತವಾಗುವ ಪರಿಸ್ಥಿತಿಯೊದಗಿದೆ. ಇದು ಹೀಗಾಗಕೂಡದು. ಗ್ರಾಮಾಂತರ ಪ್ರದೇಶದಲ್ಲಿ ಉದ್ದಿಮೆಗಳು, ಕೈಗಾರಿಕೆಗಳು ಸ್ಥಾಪಿಸಲ್ಪಡಬೇಕೆಂದು ಹಾರೈಸುವ ಸರಕಾರ ಇವುಗಳಿಗೆ ತಕ್ಕ ಪ್ರೋತ್ಸಾಹ ನೀಡುವುದೂ ಅಗತ್ಯವಲ್ಲವೆ? ಶ್ರೀ ಗೋವಿಂದ ಶೆಟ್ಟರ ಉತ್ಸಾಹದ ಜತೆ ಬತ್ತದಂತೆ ಸರಕಾರ್ಯ ಅವರಿಗೆ ಸರ್ವ ಸಹಾಯ ಹಾಗೂ ಸಹಕಾರ ನೀಡುವುದು ಅಗತ್ಯವೆನಿಸಿದೆ.

ಭಾರತದ ಹಳ್ಳಿಗಳ ದುಸ್ಥಿತಿ

(ಏಳನೇ ಪುಟದಿಂದ)

ಕಾರಣ, ಸೌಜನ್ಯ ಎಲ್ಲವೂ ಇದ್ದವು. ಅವರು ನಿತ್ಯ ತೃಪ್ತರಾಗಿದ್ದರು. ಸುಖ—ಶಾಂತಿ—ಸಂತೋಷಗಳಿಗಾಗಿ ಬೇರೆಡೆಗೆ ಹೋಗಬೇಕಿರಲಿಲ್ಲ. ಅವುಗಳೇ ಅವರನ್ನು ಬಿಡದೆ ಅನುಸರಿಸಿದ್ದವು.

ಇನ್ನೊಂದು ಇಂದಿನ ಹಳ್ಳಿಗಳ ಚಿತ್ರ. ಪ್ರತಿಯೊಂದೂ ಹಿಂದಿನದಕ್ಕೆ ವಿರುದ್ಧ. ಶಿಸ್ತು ಸಂಘಟನೆಗಳಿಂದ, ಸುಖ—ಸಂತೋಷ—ಶಾಂತಿಗಳಿಂದ ತೃಪ್ತಿ ಪಡೆದು ಬಾಳುವುದಿರಲಿ, ಸದ್ಯ ಹಳ್ಳಿಗಳಲ್ಲಿ ಕಾಳ್ಗಿಚ್ಚಿನಂತೆ ಆವೇಶಿಸಿರುವ ರಾಜಕೀಯ ವಾತಾವರಣದಿಂದ ದೂರವಾದರೆ ಸಾಕು ಎನಿಸುತ್ತದೆ.

ಗುಂಪುಗಾರಿಕೆ ಇಲ್ಲದ ಅದಾವ ಹಳ್ಳಿ ಭಾರತದಲ್ಲಿದೆಯೋ ಭಗವಂತನೇ ಬಲ್ಲ. ಇಂದು ಎಟಕದ ಸುಖಗಳಿಗೆ, ಆಸೆಗಳಿಗೆ ಕೈ ಚಾಚಿ ರೈತ ನಿರಾಶನಾಗಿದ್ದಾನೆ. ಅತೃಪ್ತಿ, ಅಸಹನೆಯ ಅಗ್ನಿಕುಂಡದಲ್ಲಿ ತೊಳಲಾಡುತ್ತಿದ್ದಾನೆ. ಇಂದಿನ ಗ್ರಾಮಗಳ ಸ್ಥಿತಿ ಶೋಚನೀಯ.

ಹಳ್ಳಿಗಳು ಮುಖ್ಯವಾಗಿ ಇಂದು ರಾಜಕೀಯ ಮುಖಂಡರ ಹೋರಾಟದ ರಣರಂಗಗಳಾಗಿವೆ. ಹಲ ಬಗೆಯ ಕಷ್ಟ ನಷ್ಟ ನೋವುಗಳಿಂದ ರೈತ ಸಾಲವಂದಿಗನಾಗಿದ್ದಾನೆ. ಪ್ರಕೃತಿಯ ಪ್ರಕೋಪಗಳೂ ಅವನನ್ನು ಸಾಕಷ್ಟು ನಿಸ್ತೇಜನನ್ನಾಗಿ ಮಾಡಿವೆ. ಅಜ್ಞಾನ, ದಾರಿದ್ರ್ಯ, ದುಃಖ, ರೋಗ-ರುಜಿನ, ನೆರೆ ಹಾವಳಿಗಳೂ ಸಾಕಷ್ಟು ಅಧಿಕ ಪ್ರಮಾಣದಲ್ಲಿಯೇ ರೈತರನ್ನು ಶೋಷಿಸುತ್ತಿವೆ. ಹೆಚ್ಚು ತಿಳುವಳಿಕೆ, ಲೋಕಾನುಭವವಿಲ್ಲದ ಬಡ ರೈತರನ್ನು ತಮ್ಮ ತಾಳಕ್ಕೆ ಕುಣಿಯುವಂತೆ ಪರಿವರ್ತಿಸಿರುವ ಜಿಗ್ನಿ ಭಕ್ಷಕರ ಸಂಖ್ಯೆಯೂ ಸಾಕಷ್ಟು ದೊಡ್ಡದೇ ಆಗಿದೆ.

ಇಂದು ಹಳ್ಳಿಯಲ್ಲಿ ಜೀವಿಸಿರುವ ಯಾರೊಬ್ಬನಿಗೂ ತೃಪ್ತಿ, ಶಾಂತಿ ಇಲ್ಲವಾಗಿದೆ. ಇಂದು ಹಳ್ಳಿಗಳಲ್ಲಿ ವಾಸಿಸಿ ಬಯಸುವ ರೈತ ಅಥವಾ ಇನ್ನೊಬ್ಬ ಪ್ರಜೆ ಎದುರಿಸಬೇಕಾದ ಸಮಸ್ಯೆಗಳು ಅನೇಕ.

ಒಂದೇ ಮಾತಿನಲ್ಲಿ ಹೇಳುವುದಾದರೆ ಹಲ ಬಗೆಯ ಹೋರಾಟದ ಕರಾಳ ರಂಗ ಹಳ್ಳಿಯ ಜೀವನ ಹಳ್ಳಿಗಳಲ್ಲಿಯೇ ಬೆಳೆದಿರುವ ಪಕ್ಷ ಪ್ರತಿ ಪಕ್ಷಗಳ ಹೋರಾಟರಂಗ, ದ್ವೇಷ— ಅತೃಪ್ತಿ, ಅಸಮಾಧಾನಗಳನ್ನು ಪ್ರದರ್ಶಿಸುವ ಉತ್ತಮ ಕ್ಷೇತ್ರ, ಜಾತೀಯ ಮತಾಂಧತೆಯ ಅಗ್ನಿಕುಂಡ, ಬೆಳೆದ ಹಲಬಗೆಯ ರಾಜಕೀಯಗಳ ಕಾರಣದಿಂದ ಕೈ ಕೈ ಕೂಡಿಸಿ ಸೆಣಸಾಡುವ ರಣರಂಗ. ಹೀಗೆ ಇಲ್ಲಿಯ ಚರಿತ್ರೆ ಸಾಗುತ್ತದೆ.

ಗ್ರಾಮ ಸೇವಕನಿಂದ ಹಿಡಿದು ಮಂತ್ರಿವರ್ಯರ ವರೆಗೆ ಪ್ರತಿಯೊಬ್ಬರಿಂದಲೂ ಒಂದೇ ನೊಲ್ಲು. ಭಾರತದ ಬೆನ್ನೆಲುಬು ಹಳ್ಳಿಗಳು. ಗ್ರಾಮೋದ್ಧಾರವಾಗ ಬೇಕು, ರೈತರ ಏಳಿಗೆ ಆಗಬೇಕು. ಆಗಬೇಕಾಯ್ತಲ್ಲ. ಪತ್ರಿಕೆಗಳಲ್ಲಿಯೂ ಅದೇ ಹಾಡು ವೇದಿಕೆಗಳ ಮೇಲೂ ಅದೇ ಪಲ್ಲವಿ. ಹಳ್ಳಿಗಳ ಉದ್ಧಾರ ಎಣಿಸಿದಷ್ಟು ಸುಲಭವೂ ಅಲ್ಲ.

ಭವಿಷ್ಯತ್ ಭಾರತದ ನಿರ್ಮಾಪಕರಾದ ಇಂದಿನ ವಿದ್ಯಾವಂತ ತರುಣರು ಗ್ರಾಮಾಂತರ ಪ್ರದೇಶಗಳಲ್ಲಿ ದುಡಿಯಲು ಮುಂದೆ ಬರಬೇಕು. ಕಛೇರಿಯ ಗುಮಾಸ್ತನಿಂದ ಮಂತ್ರಿಗಳ ವರೆಗೆ ಎಲ್ಲರೂ ನಗರವಾಸಿಗಳಾಗಬೇಕೆಂದು ಬಯಸಿದರೆ ನಗರಗಳು ಏಕೆ ಮೇರೆ ತಪ್ಪಿ ಬೆಳೆಯುವುದಿಲ್ಲ? ಸೇವೆ ಸಲ್ಲಿಸುವ ಅವಕಾಶ ದೊರೆತಿರುವಾಗ ಹಳ್ಳಿಗಳಲ್ಲಿ ದುಡಿಯಬೇಕು ಅಲ್ಲದೆ ಸಂಕುಚಿತ ಮತ, ಭಾಷೆ, ಜನಾಂಗಗಳ ಭಾವನೆ ತೊಲಗಿ 'ಭಾರತೀಯ' ಎಂಬ ಏಕೈಕ ಭಾವನೆ ಮೂಡಬೇಕು.

ಗ್ರಾಮ ರಾಜ್ಯದಿಂದಲೇ ರಾಮ ರಾಜ್ಯ ಎಂಬುದರಲ್ಲಿ ಸಂದೇಹವಿಲ್ಲ ವಿದ್ಯಾವಂತ ತರುಣರು ಮುಂದೆ ಬಂದು ಗ್ರಾಮಾಂತರ ಪ್ರದೇಶಗಳ ಸೇವೆಯ ಮೂಲಕ ಭಾರತದ ಶಕ್ತಿಯನ್ನು ಹೆಚ್ಚಿಸುವ, ಹಳ್ಳಿಗಳನ್ನು ಪುನರುದ್ಧಾರ ಮಾಡುವ ದೀಕ್ಷೆಯನ್ನು ವಹಿಸಿಕೊಂಡರೆ ಅವರ ಗುರುತರವಾದ ಜವಾಬ್ದಾರಿ ಯಶಸ್ವಿಯಾಗುವುದರಲ್ಲಿ ಅಡ್ಡಿಯಿಲ್ಲ.

ಹಳ್ಳಿಗಳ, ರೈತರ ಅಭಿವೃದ್ಧಿಯ ಕಡೆಗೆ ವಿದ್ಯಾವಂತರೂ ಸಮಾಜ ಸುಧಾರಕರೂ ಮಂತ್ರಿವರ್ಯರು, ಘನ ಸರ್ಕಾರ ತೀವ್ರ ಗಮನ ಹರಿಸಬೇಕಾದುದು ಸೂಕ್ತ. ಹಳ್ಳಿಗಳು, ಹಳ್ಳಿಗರು ವಿನಾಶದ ಹಾದಿಯಲ್ಲಿ ಮತ್ತಷ್ಟು ದೂರ ಸಾಗುವ ಮುಂಚೆ ಉಚಿತ ಕ್ರಮ ಕೈಗೊಳ್ಳಬೇಕಾದುದು ಕರ್ತವ್ಯ ಮತ್ತು ಅಗತ್ಯ.

ಇಂದಿನ ಜೀವನದಲ್ಲಿ ಇಂಗ್ಲಿಷ್ ಭಾಷೆಯ ಸ್ಥಾನ

(ಐದನೇ ಪುಟದಿಂದ)

ಮದಿಂದ ಬಂದ ಇಂಗ್ಲಿಷ್ ವಿದ್ಯೆಯ ಸೆಳೆತ, ಇನ್ನೊಂದು— ಮತ್ತೊಮ್ಮೆ ಚೇತರಿಸಿಕೊಂಡು ಏಳುತ್ತಿರುವ ನಮ್ಮ ಹಿರಿಯರ ಪುಣ್ಯಾರ್ಜನೆಯಾದ ಭಾರತ ವಿದ್ಯೆಯ ಹೆಮ್ಮೆ. ಈ ಹೋರಾಟದಲ್ಲಿ ಹೊರಗಿನದನ್ನು ಹೊರಕ್ಕೆ ತಳ್ಳಿ ನಮ್ಮವನ್ನೇ ನಾವು ಮುಂದಕ್ಕೆ ಬೆಳೆಸಿಕೊಳ್ಳಬೇಕೆಂಬುವವರು ಇದ್ದಾರೆ, ಹೆಚ್ಚುತ್ತಿದ್ದಾರೆ. ಚಿಕ್ಕಂದಿನಿಂದಲೂ ನನಗೆ ದೊರೆತೊಂದು ನೋಟ, ಧ್ಯೇಯ, ದರ್ಶನ ಅದೇನೆಂದರೆ ಎರಡನ್ನೂ ರೂಢಿಸಿಕೊಳ್ಳುವುದು. ಎರಡೂ ವಿದ್ಯೆಗಳೂ, ಸಂಸ್ಕಾರಗಳೂ ತತ್ವಗಳೂ ಒಂದಾಗಿ ಸಾಮರಸ್ಯಕ್ಕೆ ಬರಬೇಕೆನ್ನುವುದು. ಇಂಗ್ಲಿಷ್ ವಿದ್ಯೆ, ಸಾಹಿತ್ಯ ನನ್ನ ಜೀವಕ್ಕೆ ರಸವನ್ನು ತುಂಬಿವೆ. ಕಡೆಗೆ ಭಾರತದಲ್ಲಿ, ಕರ್ನಾಟಕದಲ್ಲಿ ಪೂಜ್ಯ ಬುದ್ಧಿಗೆ ಅದೇ ಕಣ್ಣು ತೆರೆದು ಕೊಟ್ಟಿದ್ದಾಗಿದೆ. ('ಶ್ರೀ' ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ— ಪುಟ ೧೪೧)

ವಿಶ್ವವಿಜ್ಞಾನ ಭಂಡಾರದ ಬೀಗದಕ್ಕೆ

ಹತ್ತೊಂಬತ್ತನೆಯ ಶತಮಾನದಲ್ಲಿ ನಮ್ಮ ದೇಶದ ಜ್ಞಾನ ಭಂಡಾರಕ್ಕೆ ಹೆಚ್ಚು ಕಿಟಕಿಗಳು ತೆರೆಯಲ್ಪಟ್ಟು ಅಧಿಕವಾಗಿ ಗಾಳಿ ಬೆಳಕು ಬರಲು ಅನುವಾಯಿತು. ಆ ಕಿಟಕಿಗಳಲ್ಲಿ ಬಹಳ ಉಪಯುಕ್ತವಾದ ಕಿಟಕಿ ಎಂದರೆ ಇಂಗ್ಲಿಷ್ ಭಾಷೆ. ಅದು ವಿಶ್ವದ ವಿವಿಧ ಪಟಲಗಳನ್ನೇ ಸಮೀಕ್ಷಿಸುವಂತೆ ಮಾಡಿತು. ಇಂಗ್ಲಿಷ್ ವಿದ್ಯಾಭ್ಯಾಸದ ಫಲವಾಗಿ ಈ ಲಾಭ ಬಂದಿತು. ಅದು ಮೊದಲು ನಮ್ಮ ದೇಶದಲ್ಲಿ ಲಭಿಸಿದುದು ಬಂಗಾಳದಲ್ಲಿ, ಮುಂಬಯಿಯಲ್ಲಿ ಎನ್ನಬಹುದು. ಸರ್ ವಾಲ್ಟರ್ ಸ್ಕಾಟನ ರೋಮಾಂಚಕಾರಿ ಕಾದಂಬರಿಗಳು, ಬಂಗಾಳದಲ್ಲಿ ಬಂಕಿಮರ, ಮುಂಬಯಿಯಲ್ಲಿ ಆಪ್ಟೆಯವರ ಪ್ರತಿಭೆಗೆ ನವಸ್ಫೂರ್ತಿಯನ್ನಿತ್ತು, ತನ್ಮೂಲಕ ಭಾರತದಲ್ಲಿ ನಿಜವಾದ ಕಾದಂಬರಿ ಯುಗಕ್ಕೆ ನಾಂದಿಯಾಯಿತು. ಈ ಹೊಸ ಹುಚ್ಚು ನೆರೆ ಪ್ರಾಂತಗಳಿಗೂ ಹರಿಯಿತು. ಅಂತಹ ಒಂದು ಪ್ರಾಂತ ಕರ್ನಾಟಕ. ಕನ್ನಡ ಸಾಹಿತ್ಯದ ಮೇಲಂತೂ ಇದರ ಪ್ರಭಾವ ಅತ್ಯಂತ ಪರಿಣಾಮಕಾರಿಯಾಯಿತು.

ಶ್ರೀಯವರ ಸಂದೇಶ

ಇಂಗ್ಲಿಷಿನವರ ಆಡಳಿತ, ಸಾಮ್ರಾಜ್ಯದಾಹದ ಬಗ್ಗೆ ನಮಗೆ ಅಸಮಾಧಾನವಿರಬಹುದು. ಆದರೆ ಅವರ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಆ ಅಸಮಾಧಾನ ತೋರುವ ಕಾರಣವಿಲ್ಲ. ಅವರಿಂದ ನಾವು ಕಲಿಯಬಹುದಾದುದನ್ನೂ, ಕಲಿಯಬೇಕಾದುದನ್ನೂ, ಕಲಿತು, ನಮ್ಮ ರಾಷ್ಟ್ರದ ಸರ್ವತೋಮುಖವಾದ ಬೆಳವಣಿಗೆಗೆ ಉಪಯೋಗಿಸಿಕೊಳ್ಳಬಹುದು. ಕನ್ನಡಿಗರು ಸಂಕುಚಿತ ಮನಸ್ಕರಾಗದೆ ಎಲ್ಲ ರಾಷ್ಟ್ರಗಳ, ಎಲ್ಲ ಭಾಷೆಗಳ ಸಂಸ್ಕೃತಿ ಭಂಡಾರವನ್ನು ತಂದು ನಮ್ಮ ಭಂಡಾರ ದೊಡ್ಡದು ಮಾಡಿಕೊಳ್ಳಬೇಕು. ಆ ಭಂಡಾರಕ್ಕೆ ಸಂಡೂರಿಯಾದ ಮಿಗಿಲಾದ ಭಂಡಾರ ನಿರ್ಮಿಸಿ ತಾವೂ ಹಲವು ನಾಡಿಗೆ ಹಂಚಬೇಕು— ಇದು 'ಶ್ರೀ'ಯವರ ಸಂದೇಶ.

ಕನ್ನಡ ಸಾಹಿತ್ಯ ಮುಂದುವರಿಯಬೇಕಾದರೆ ಇತರ ಸಾಹಿತ್ಯಗಳ ಪರಿಚಯವು ನಮ್ಮ ಜನತೆಗೆ ಆಗಬೇಕು. ಈ ದೃಷ್ಟಿಯಲ್ಲಿ ಇಂಗ್ಲಿಷ್ ಸಾಹಿತ್ಯದ ಪರಿಚಯ ಅತ್ಯಗತ್ಯವೆಂದರೆ ಅತಿಶಯೋಕ್ತಿಯಲ್ಲ. ಇಂಗ್ಲಿಷ್ ಹಿರಿಯ ಭಾಷೆ. ಜಗತ್ತಿನ ಎಲ್ಲ ಭಾಷೆಗಳಿಗಿಂತಲೂ ಹೆಚ್ಚು ಪ್ರಚಾರವುಳ್ಳ ಭಾಷೆಯೆಂದರೆ ಇಂಗ್ಲಿಷ್ ಒಂದೇ. ವಿಜ್ಞಾನಕ್ಕೆ ಅವಶ್ಯಕವಾದ ಭಾಷೆ, ಮಿಕ್ಕೆಲ್ಲ ಭಾಷೆಗಳಿಗಿಂತ ಮಿಗಿಲಾದ ಸಾಹಿತ್ಯ ಸಂಪತ್ತನ್ನು ಪಡೆದಿರುವ ಭಾಷೆ—ಇಂಗ್ಲಿಷ್. ಈ ರೀತಿ ಉತ್ತಮ ಸ್ಥಾನದಲ್ಲಿರುವ ಇಂಗ್ಲಿಷ್ ಭಾಷೆಯು ಈಗಾಗಲೇ ಪ್ರಪಂಚದ ಭಾಷೆಯಾಗಿ ಪರಿಗಣಿಸಲ್ಪಡುವ ಮಟ್ಟದಲ್ಲಿಯೇ ಇದೆಯೆಂದು ಧಾರಾಳವಾಗಿ ಹೇಳಬಹುದು. ಆದಕಾರಣ ನಾವು ಇಂಗ್ಲಿಷ್ ಭಾಷೆಯನ್ನು ಕಲಿಯುವುದು ಅಗತ್ಯವೆಂಬುದನ್ನು ಹೊಸದಾಗಿ ಹೇಳಬೇಕಾದ ಅವಶ್ಯಕತೆಯೇ ಇಲ್ಲ. ಇಂತಹ ಇಂಗ್ಲಿಷ್ ಭಾಷೆ ಭಾರತದ ಜನಜೀವನದಲ್ಲಿ ಬಹ ಮಟ್ಟಿಗೆ ಸೇರಿಹೋಗಿದೆ. ಇಂಗ್ಲಿಷ್ ಬಲ್ಲ ಕೆಲವರಂತೂ ಆ ಭಾಷೆಯಲ್ಲಿಯೇ ಪಾಂಡಿತ್ಯ ಪಡೆದು, ಪ್ರತಿಭೆಯನ್ನ ತೋರಿ, ಇಂಗ್ಲಿಷರನ್ನೇ ಬೆರಗುಗೊಳಿಸಿದ್ದಾರೆ.

ಅನ್ಯಭಾಷಾ ಸಾಹಿತ್ಯ ಸಂಪರ್ಕ ಸಂಬಂಧಗಳಿಂದ ಸೃಷ್ಟಿಯೇ ವಿನಾ ನಷ್ಟವಲ್ಲ. ಏಕೆಂದರೆ ಸಂಸ್ಕೃತಿಯ ಒಂದು ಹೆಗ್ಗುರುತು ವೈಶಾಲ್ಯ. ಆ ವೈಶಾಲ್ಯವೆಂದರೆ ಮನೋವೈಶಾಲ್ಯ, ಹೃದಯ ವೈಶಾಲ್ಯ ಮತ್ತು ಬುದ್ಧಿವೈಶಾಲ್ಯ. ಬಾಹ್ಯ ಸಂಪರ್ಕವನ್ನು ಬಿಟ್ಟು ತನ್ನ ಮನೆಯನ್ನೇ ತಾನು ಕೊರೆಯುತ್ತಾ ಹೋದರೆ ಅದು ಕತ್ತಲೆಯ ಬಿಲವಾಗುತ್ತದೆ. ಹೀಗೆಂದರೆ ಆಳವಾದ ಪಾಂಡಿತ್ಯ ಬೇಡವೆಂದಲ್ಲ. ಆಳವಿಲ್ಲದ ಕೆರೆ ಬೇಗ ಬತ್ತಿಹೋಗುವಂತೆ ಆಳವಾಗಿ ವ್ಯಾಸಂಗ ಮಾಡದ ಪಾಂಡಿತ್ಯವೂ ವ್ಯರ್ಥವೆನಿಸಿ ನಿಷ್ಪ್ರಯೋಜಕವಾಗುತ್ತದೆ. ಕರ್ನಾಟಕದ ಸುತ್ತಮುತ್ತ ಮರಾಠಿ, ತೆಲುಗು, ತಮಿಳು, ತುಳು, ಮಲೆಯಾಳಿ ಮುಂತಾದ ಭಾಷೆಗಳಿವೆ. ಅವೂ ಸಹ ಕನ್ನಡದಂತೆ ಎಚ್ಚೆತ್ತು ಮುಂದುವರೆಯುತ್ತಿವೆ. ಇವಕ್ಕೆಲ್ಲಾ ಹಿನ್ನೆಲೆಯಾಗಿ ಸಂಸ್ಕೃತ, ಇಂಗ್ಲಿಷ್ ಭಾಷೆಗಳಿವೆ. ಇವುಗಳನ್ನೂ, ಭಾರತದ ಇತರ ಭಾಷೆಗಳನ್ನೂ ನಾನಾ ಯುರೋಪೀಯ ಭಾಷೆಗಳನ್ನೂ ಬಲ್ಲ ಕನ್ನಡಿಗ ವಿದ್ವಾಂಸರು ಕರ್ನಾಟಕದಲ್ಲಿದ್ದಾರೆ. ಅವರೆಲ್ಲರೂ ಒಟ್ಟುಗೂಡಿದರೆ ನಮ್ಮ ಸಂಸ್ಕೃತಿ ಸಾಹಿತ್ಯಗಳು ವಿಶಾಲವಾಗುವುದರಲ್ಲಿ ಸಂದೇಹವಿಲ್ಲ. (ಜಯಚಾಮರಾಜ ಒಡೆಯರ್)

ಇಂಗ್ಲೀಷಿನ ಸ್ಥಾನಮಾನ

ಹೀಗೆ ಇಂಗ್ಲಿಷ್ ಭಾಷೆ ತನ್ನದೇ ಆದ ಅಪಾರ ಸಾಹಿತ್ಯ ಸಾಗರದ ಮೂಲಕ ಭಾರತದಲ್ಲಿ ತನ್ನ ಗೌರವಯುತವಾದ ಸ್ಥಾನಮಾನಗಳನ್ನು ದೊರಕಿಸಿಕೊಂಡಿದೆ. ಆ ಸಾಹಿತ್ಯ ಬೀರಿದ ಬೆಳಕಿನಲ್ಲೇ ನಮ್ಮ ಪ್ರಾಚೀನ ಇತಿಹಾಸ, ಅದರ ವಾಙ್ಮಯ ವೈಖರಿ, ಇವುಗಳು ನಮಗೆ ಗೋಚರವಾದುವು. ಕನ್ನಡ ಸಾಹಿತ್ಯದ ಪುನರುಜ್ಜೀವನದಲ್ಲಿ ಇಂಗ್ಲಿಷಿನ ಪಾತ್ರ ಅತಿ ಮಹತ್ವದ್ದು.

ಶಿಕ್ಷಣದಲ್ಲಿ ಇಂಗ್ಲಿಷ್ ಭಾಷೆಯ ಸ್ಥಾನವೇನು—ಎಂದು ಚರ್ಚೆಮಾಡುವಾಗ ಸಂಸ್ಕೃತ ಭಾಷೆಯನ್ನೂ ಗಣನೆಗೆ ತಂದುಕೊಳ್ಳಬಹುದು ಆದರೆ ಸಂಸ್ಕೃತದ ಮುಂದೆ ಅದು ನಿಲ್ಲಲಾರದು. ಏಕೆಂದರೆ ಸಂಸ್ಕೃತವು ಸಂಸ್ಕೃತಿ ಧರ್ಮಗಳ ದಿಸೆಯಲ್ಲಿ ಬಹು ದೂರ ದೂರ ಹೋಗಿದೆ. ಇಂಗ್ಲಿಷ್ ಭಾಷೆ ಸಂಸ್ಕೃತದ ಮಟ್ಟಕ್ಕಿನ್ನೂ ಬಂದಿಲ್ಲ. ಆದರೆ ಸೌಂದರ್ಯದ ದೃಷ್ಟಿಯಿಂದ ಇಂಗ್ಲಿಷ್ ಭಾಷೆ ಸಂಸ್ಕೃತಕ್ಕಿಂತ ಸುಲಭವೆನ್ನಬಹುದು.

"ಈಗ ಭಾರತದ ಭೂಮಿಯಲ್ಲಿ ಜ್ವಲಿಸುತ್ತಿರುವ ಹೊಸ ಜೀವನ ಧ್ಯೇಯಗಳೂ, ಆದೇಶಗಳೂ ಈ ಇಂಗ್ಲಿಷ್ ಭಾಷೆಯ, ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದಲೇ—ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಸಂಪರ್ಕ ಮತ್ತು ಈ ಸಂಪರ್ಕದಿಂದುಂಟಾದ ನಮ್ಮ ಪುರಾತನ ಚರಿತ್ರೆಯ ಸಂಸ್ಕೃತಿ, ಜ್ಞಾನ ಹೆಮ್ಮೆ— ಇವುಗಳೇ ತಾನೇ ನಮ್ಮ ಪುನರುಜ್ಜೀವನ? ('ಶ್ರೀ' ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ).

ಒಟ್ಟಿನಲ್ಲಿ ಹೇಳುವುದಾದರೆ ಇಂಗ್ಲಿಷ್ ಭಾಷೆ ಭಾರತವ ಮತ್ತು ಪ್ರಪಂಚದ ಎಲ್ಲ ಭಾಷೆಗಳ ಪರಿಚಯಕ್ಕೊಂದು ಸೇತುವೆಯಂತಿದೆ. ಇಂಗ್ಲಿಷ್ ಭಾಷೆಯ ಮೂಲಕವೇ ಇತರ ಭಾಷೆಗಳ ತಿಳುವು, ಜ್ಞಾನ ನಮ್ಮಲ್ಲಿ ಮೂಡುತ್ತದೆ. ಇಂತಹ ಇಂಗ್ಲಿಷ್ ಭಾಷೆಗೆ ಭಾರತದಲ್ಲಿ ಈಗಾಗಲೇ ಹೆಚ್ಚಿನ ಪ್ರಾಧಾನ್ಯ ದೊರೆತಿದೆ ಇನ್ನು ಮುಂದೆಯೂ ದೊರೆಯುವುದೆಂಬ ನಂಬಿಕೆ ನಮಗಿದೆ.

(ಮುಂಬಯಿ ಕನ್ನಡ ಸಂಘದವರು ನಾಡಹಬ್ಬದ ಅಂಗವಾಗಿ ಏರ್ಪಡಿಸಿದ್ದ ಅಖಿಲ ಭಾರತ ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಪ್ರಬಂಧದಿಂದ ಸಂಗ್ರಹಿತ)

ದೇವಾಲಯಗಳ ನಾಡು—ದಕ್ಷಿಣ ಭಾರತ

(ಆರನೇ ಪುಟದಿಂದ)

ಕಟ್ಟಿಸಿದರು. ದಕ್ಷಿಣದಲ್ಲಿ ಅನಂತರ ಅಧಿಕಾರಕ್ಕೆ ಬಂದ ಪಾಂಡ್ಯರು, ವಿಜಯನಗರದ ಸಾಮ್ರಾಟರು, ನಾಯಕ ಮನೆತನದವರು ಈ ಶಿಲ್ಪಕಲೆಯ ಪರಂಪರೆಯನ್ನು ಮುಂದುವರಿಸಿಕೊಂಡು ಬಂದರು.

ಮಾಮಲನು ಅದೇ ಕಗ್ಗಲ್ಲಿನ ಅಖಂಡ ಶಿಲೆಯಲ್ಲಿ ದೇವಾಲಯಗಳ ವಿಮಾನಗಳನ್ನು ಕೆತ್ತಿಸಿದನು. ಆಗಿನ ಕಾಲದಲ್ಲಿ ಇಟ್ಟಿಗೆ ಮತ್ತು ಮರಗಳಿಂದ ನಿರ್ಮಿಸಲಾಗಿದ್ದ ಹಿಂದೂ ದೇವಾಲಯಗಳ ವಿನ್ಯಾಸಗಳ ಸೌಂದರ್ಯವನ್ನೂ ಮಾಮಲನು ಶಿಲೆಯಲ್ಲಿಯೇ ಸೆರೆಹಿಡಿದನು. ಈ ದೇವಾಲಯಗಳು ಮಹಾಬಲಿಪುರದ ರಥಗಳೆಂದು ಪರಿಚಿತವಾಗಿವೆ.

ಪಾಂಡ್ಯರು ಈ ದೇವಾಲಯಗಳಿಗಿಂತಲೂ ದೊಡ್ಡದಾದ ಮತ್ತು ಅತ್ಯಂತ ಸುಂದರವಾದ ಶಿಲ್ಪಕಲೆಯುಳ್ಳ ದೇವಾಲಯವನ್ನು ತಿರುನೆಲವೆಲಿ ಜಿಲ್ಲೆಯ ವೆಟ್ಟುವನಕೋವಿಲ್ ಎಂಬಲ್ಲಿ ನಿರ್ಮಿಸಿದರು.

ರಾಷ್ಟ್ರಕೂಟರ ಶಿಲ್ಪಕಲೆ

ದಕ್ಷಿಣದಲ್ಲಿ ಚಾಲುಕ್ಯರನಂತರ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರು ತಮ್ಮ ಶಿಲ್ಪಕಲಾ ಪರಂಪರೆಯನ್ನು ಮುಂದುವರಿಸಿ ಅಖಂಡಶಿಲೆಯಿಂದ ಎಲ್ಲೋರಾದಲ್ಲಿ ಕೈಲಾಸ ದೇವಾಲಯವನ್ನು ನಿರ್ಮಿಸಿದರು. ಈ ದೇವಾಲಯದ ಗೋಪುರ, ಗರ್ಭಗುಡಿಗಳಲ್ಲಿನ ಶಿಲ್ಪಕಲೆಯು ಪ್ರೇಕ್ಷಕರ ಕಣ್ಮನಗಳನ್ನು ಸೆರೆಹಿಡಿಯುತ್ತವೆ.

ದೊಡ್ಡವಾದ ಬಂಡೆಗಳನ್ನು ಕೊರೆದು ದೇವಾಲಯಗಳನ್ನು ನಿರ್ಮಿಸುವಲ್ಲಿ ದೊರೆತ ಅನುಭವದಿಂದ ಉತ್ತೇಜನ ಪಡೆದು ಬಾದಾಮಿಯ ಚಾಲುಕ್ಯರು ಬೃಹತ್ ಕಲ್ಲುಬಂಡೆಗಳಿಂದ ವಿಜಯನಗರ ಸಾಮ್ರಾಟರ ಬಳಿಕ ಅಧಿಕಾರಕ್ಕೆ ಬಂದ ನಾಯಕವಂಶದ ಆಡಳಿತಗಾರರು ವಿಜಯನಗರ ಸಾಮ್ರಾಜ್ಯದ ಶಿಲ್ಪಪರಂಪರೆಯನ್ನು ಅಳವಡಿಸಿಕೊಂಡು ಮಂಟಪಗಳನ್ನು ಹೋಲುವ ಅನೇಕ ಬೃಹತ್ ದೇವಾಲಯಗಳನ್ನು ಕಟ್ಟಿಸಿದ ಅವರು ಕಟ್ಟಿಸಿದ ಕೆಲವು ದೇವಾಲಯಗಳು ಸಾವಿರ ಕಂಬಗಳ ದೇವಾಲಯಗಳೆಂದು ಪರಿಚಿತವಾಗಿವೆ. ಮಧುರೆಯಲ್ಲಿನ ಮೀನಾಕ್ಷಿ–ಸುಂದರೇಶ್ವರ ದೇವಾಲಯವು ಬಹು ಮಟ್ಟಿಗೆ ನಾಯಕವಂಶದ ಶಿಲ್ಪಕಲೆಯನ್ನೇ ಹೋಲುತ್ತದೆ.

ಕೇರಳದ ಪಶ್ಚಿಮ ಕರಾವಳಿಯಲ್ಲಿ ಮಾತ್ರ ಇಟ್ಟಿಗೆ ಹಾಗೂ ಮರಗಳಿಂದ ಕಟ್ಟಡ ನಿರ್ಮಾಣದ ಕಲೆಯು ಯಾವುದೇ ಬದಲಾವಣೆಗೆ ಒಳಗಾಗದೆ ಯಥಾಸ್ಥಿತಿ ಉಳಿಯಿತು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S No. 363/61 R E P 57/1964

ಮೋನು ಶೆಟ್ಟಿ — ಅರ್ಜಿದಾರ.

ಮತ್ತು

ರಾಮಚಂದ್ರ ಭಟ್ಟ ಕೂಡಾ—ಎದುರರು.

ಇವರೊಳಗೆ

1 ರಾಮಚಂದ್ರ ಭಟ್ಟ
2 ಗುರುರಾಜ
4 ನರಸಿಂಹ ಭಟ್ಟ
} ಮರಿಯಪ್ಪ ಭಟ್ರ ಮಕ್ಕಳು

6 ಬಸ್ತ್ಯಾವ್ ಡಿ ಸೋಜ ಬ್ಯಾ— ಬಾಪ್ತಿಸೋಜನ ಹೆಂಡಿ

7 ಸಾಂತು ಡಿ ಸೋಜ
8 ಗಿಲ್ಬರ್ಟ ಡಿ ಸೋಜ
9 ಚಾರ್ಲಿ ಡಿ ಸೋಜ
10 ಜಸಿಂತಾ ಡಿ ಸೋಜ ಬ್ಯಾ
} ಡಿ_ ಮಕ್ಕಳು

ಉಡುಪಿ ತಾಲ್ಲೂಕು ಉದ್ಯಾವರ ಗ್ರಾಮ— ಇವರಿಗೆ ಈ ಮೂಲಕ ತಿಳಿಸುವದೇನೆಂದರೆ— ಮೇಲ್ಕಂಡ ಅಮಲ್ಜಾರಿಯಲ್ಲಿ ಅರ್ಜಿದಾರನು ಹಾಜರು ಪಡಿಸಿದ ಸ್ಥಿರಾಸ್ತಿ ಯೇಲಂ ಯಿಸ್ತಾರನ ಯೇಲಂ ಶರ್ತ ನಿರ್ಣಯಿಸುವರೆ ತಾರೀಕು 16-1-1965ಕ್ಕೆ ಇಟ್ಟಿದೆ. ಆ ಕುರಿತು ಸದ್ರಿ ಎದುರಿಗೆ ಆಕ್ಷೇಪ ಹೇಳತಕ್ಕದ್ದು ಇದ್ರೆ ಸದ್ರಿ ದಿವಸ ಪೂರ್ವಾಹ್ನ 11 ಗಂಟೆಗೆ ಮೇಲ್ಕಂಡ ಕೋರ್ಟ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದೆಂತ ಈ ಮೂಲಕ ತಿಳಿಸಲಾಗಿಯದೆ.

M. V. Kamath.
Advocate for Petitioner

ಉಡುಪಿ, 22-12-64.

ಮರೆಯಲಾಗದ ಭಾವಚಿತ್ರ

(ಎರಡನೇ ಪುಟದಿಂದ)

ದದಾಸರು ಕುರ್ಚಿಯಿಂದ ಕೆಳಬಿದ್ದರು. ಪತ್ರಿಕೆಯನ್ನು ಹಿಡಿದುಕೊಂಡು ಬಂದಾತ ಅವರನ್ನು ಎಬ್ಬಿಸುತ್ತಿದ್ದ. ಆ ಪತ್ರಿಕೆಯನ್ನವರು ಎದೆಗಪ್ಪಿ ಹಿಡಿದಿದ್ದರು.

ಗೋವಿಂದ ದಾಸರು ಕಳಕೊಂಡ ಪ್ರಜ್ಞೆಯನ್ನು ಮರಳಿ ಪಡೆದರು. ಮಗಳ ಕೂಡೆ ಹೇಳಿದರು.

"ಕಮಲು, ನಿನ್ನಣ್ಣ ನಾಗರಾಜನ ಸ್ಥಿತಿ ನೋಡು. ನಾನು ಪಾಪಿ ಕಮಲ... ನಾನು ಪಾಪಿ. ತಂದೆ ಪಾಪ, ಮಕ್ಕಳು ಅದೃಷ್ಟಹೀನರು. ಇಲ್ಲವಾದರೆ ಹೀಗೆಲ್ಲ ಆಗ ಬೇಕಿತ್ತೆ? ಕಮಲ.... ನಿನ್ನ ಗಂಡ ರೈಲು ಅವಘಡದಲ್ಲಿ ತೀರಿಕೊಂಡ. ನಿನ್ನ ತಾಯಿ ಎಳೆ ವಯಸ್ಸಿನಲ್ಲೇ ಈ ಜಗತ್ತು ಬೇಡವೆಂದು ತಿರುಗಿ ಬಾರದ ಲೋಕಕ್ಕೆ ಹೊಂಟಳು. ನಮ್ಮ ಈ ಪಾಪದ ಕುಟುಂಬ ನಾಗರಾಜನಿಂದಾದರೂ ಮಾನವತೆಗೆ ಒಯ್ಯ ಬಹುದೆಂದು ಕಂಡಿದ್ದೆ. ಆದರೆ ಅದೂ ಗಾಳಿಗೋಪುರವಾಯಿತು ಕಮಲ. ಇನ್ನು ನಮ್ಮ ಗತಿ? ಒಟ್ಟಿನಲ್ಲಿ ನಾನು ಪಾಪಿ ಕಮಲ. ನೀವೆಲ್ಲರೂ ದುರ್ಭಾಗ್ಯರು. ಇಕೋ! ನೋಡು ಕಮಲಾ! ನೋಡು-"

ಅವರ ಕರಗಳು ಆ ಪತ್ರಿಕೆಯನ್ನು ಕಮಲಳು ನಿಂತಿದ್ದ ಕಡೆಗೆ ಬಿಸಾಡಿದವು. ಬಗ್ಗಿ ಹೆಕ್ಕಿದಳು ಕಮಲ. ತೆರೆದ ಕಣ್ಣು ಮುಚ್ಚಲಿಲ್ಲ. ಮಾತು ಹೊರಡಲಿಲ್ಲ. ಮುತ್ತಿನಂತಿದ್ದ ಕಣ್ಣೀರ ಹನಿಗಳು ಆಕೆಯ ಕಣ್ಣಿಳಿಂದ ಕೆಳಗುದುರಿದವು.

ವೆಂಕಟೇಶ ಓಡಿ ಬಂದ. "ಅಪ್ಪಾಜಿ! ಎಂದೇ ಬಿದ್ದು ಬಿಟ್ಟ ಅಪ್ಪಾಜಿಯ ಕಾಲ್ಗಳಿಗೆ. ವೆಂಕಟೇಶನ ಕಣ್ಣುಗಳು ಕಣ್ಣೀರ ಕಡಲಾಯಿತು. "ನೋಡಿ ಅಪ್ಪಾಜಿ....ಅಣ್ಣ ನಾಗರಾಜನನ್ನು" ಆತನ ಬಾಯಿಂದ ಹೊರಬಿತ್ತು-ಮುತ್ತಿನಂತಹ ಮಾತು.

ಗೋವಿಂದ ದಾಸರು ಕೆಳಗಿತ್ತ ಮುಖವನ್ನು ಮೇಲಕ್ಕೆತ್ತಲಿಲ್ಲ. ಮಗಳು ಕಮಲೆ ಚಿತ್ರವನ್ನು ನೋಡುತ್ತಿದ್ದ ಕಣ್ಗಳನ್ನು ಬೇರೆಡೆಗೆ ಒಯ್ಯಲಿಲ್ಲ. "ಅಪ್ಪಾಜಿ"ಯ ಕಾಲ್ಗಳಿಗೆ ಬಿದ್ದ ವೆಂಕಟೇಶ ಮೇಲಕ್ಕೇಳಲಿಲ್ಲ.

ಪತ್ರಿಕೆಯನ್ನು ತಂದಾತನಿಗೆ ಬೇಸರವಾಯಿತೋ ಏನೋ? ಆತ ಅಲ್ಲಿಂದ ಮುಂಚೆಯೇ ಹೊರಟು ಹೋಗಿದ್ದ.

ದಾಸರು ಮೌನವನ್ನು ಮುರಿದು ಪ್ರಾರ್ಥನೆ ಮಾಡಿಕೊಂಡರು:

"ಸ್ವಾಮಿ, ಶ್ರೀಕೃಷ್ಣ ಕಾಪಾಡಬೇಕು ದೇವಾ." ಮಗಳೂ ಮಗನೂ ಅದನ್ನೇ ಅನುಸರಿಸಿದರು – "ಕಾ ಪಾ ಡ ಬೇ ಕು ದೇವಾ."

ಮಗಳು ಕಮಲೆ ಒಳಗೆ ಹೋದಳು. ಆ ಪತ್ರಿಕೆಯನ್ನು ಒಂದೆಡೆಯಲ್ಲಿ ತೆಗೆದಿಟ್ಟಳು. ಆ ದಿನ ಎಲ್ಲರೂ ಉಪವಾಸ ಮಾಡಿದ್ದರು. 'ಕಣ್ಣೀರ ಹೊಳೆ ಹರಿಯದ ದಿನವೇ ಇಲ್ಲವಾಗಿತ್ತು—ಆ ಮನೆಯಲ್ಲಿ.

ರಾತ್ರಿ ಸುಮಾರು ಎಂಟು ಗಂಟೆಯ ಹೊತ್ತಾಗಿರಬಹುದು. ವೆಂಕಟೇಶನ ಭಜನೆಯು ಮುಂದುವರಿಯುತ್ತಾ ಇತ್ತು. ಅವನ ಭಜನೆಗೆ ತಾಳಮೇಳಗಳಿಲ್ಲ. ಅವನ ದೇವರ ಚಿತ್ರಕ್ಕೆ ಹೂವಿನ ಮಾಲೆ ಇಲ್ಲ. ಚಿಕ್ಕ ದೀಪವೊಂದು ಉರಿಯುತ್ತಾ ಇತ್ತು.

ವೆಂಕಟೇಶ ರಾಗಯುಕ್ತವಾಗಿ ಹಾಡುತ್ತಿದ್ದ:

'ಹರಿಯ ಸ್ಮರಣೆ ಮಾತ್ರದಿಂದ
ಘೋರ ದುರಿತವೆಲ್ಲ ನಾಶ'

ಇದಕ್ಕೆ ಶ್ರೀ ಹರಿಯು ಕಿವಿ ಇತ್ತನೋ ಇಲ್ಲವೋ ತಿಳಿಯದು. ಒಮ್ಮೊಮ್ಮೆ ದೇವರ ಮನಸ್ಸು 'ಕಲ್ಲು ಮನಸ್ಸು' ದೇವರು ಐಶ್ವರ್ಯ, ಸುಖವನ್ನು ನೀಡಿದವರಿಗೆ ಮತ್ತೂ ನೀಡುವನು. ಬಡವರನ್ನು ಮತ್ತೂ ಬಡತನದ ಸಾಗರದಲ್ಲಿ ಅದ್ದುವನು.

ವೆಂಕಟೇಶನ ಭಜನೆ ಮುಗಿಯಿತು. ಅಂದಿನ ರಾತ್ರಿ ಯಾರಿಗೂ ಊಟವಿಲ್ಲ. ಎಲ್ಲರಿಗೂ ನಿದ್ರೆ ಹತ್ತಿರಬೇಕು. ಗೋವಿಂದ ದಾಸರು ಮಾತ್ರ ತನ್ನ ಮನವನ್ನು ತನ್ನ ಹಿಂದಿನ ಜೀವನದ ಕಡೆಗೆ ಕೊಂಡೊಯ್ದರು.

ಇಪ್ಪತ್ತಾರರ ಎಳೆಂಜವ್ವನದಲ್ಲಿಯೇ ಅವರು ಗೃಹಸ್ಥಾಶ್ರಮದ ಮೆಟ್ಟಲನ್ನೇರಿದರು. ಬಡತನವು ಅವರನ್ನು ಆಗಲೂ ಮುತ್ತಿಗೆ ಹಾಕಿತ್ತು. ಇದ್ದ ಅಲ್ಪ ಸ್ವಲ್ಪ ಜಮೀನಿನಲ್ಲಿ ಅವರು ತನ್ನ ಜೀವನವನ್ನು ಸಾಗಿಸ ಬೇಕಾಗಿತ್ತು. ಗೋವಿಂದದಾಸರು ಒಳ್ಳೆಯ ಕಷ್ಟಗಾರರೂ ಅಹುದು. ಮಡದಿಯ ಕೈ ಹಿಡಿದ ದಿನದಿಂದ ಅವರು ಮತ್ತೂ ದಾರಿದ್ರ್ಯವನ್ನೇ ಅನುಭವಿಸ ಬೇಕಾಯಿತು. ಮೂರು ಮಕ್ಕಳಿಗೆ ಜನುಮವಿತ್ತವರ ಮಡದಿ. ಆದರೆ ಆಕೆಗೆ ಇಹಲೋಕದ ನೀರಿನ ಸಂಪರ್ಕ ಅಲ್ಲಿಗೆ ತುಂಡಾಯಿತು. ತಾಯಿ ಸಾಯುವಾಗ ಕಡೆಯ ಮಗ ವೆಂಕಟೇಶ ಮೂರು ತಿಂಗಳ ತೊಟ್ಟಿಲ ಕೂಸು. ಆಗಲೇ ದಾಸರು ಮಗಳು ಕಮಲೆಯನ್ನು ಮದುವೆ ಮಾಡಿ ಕೊಟ್ಟರು. ಆಕೆಗಾದ ವರನೂ ಅಷ್ಟೇ ದಾರಿದ್ರ್ಯ ದೇವಿಯ ದಾಸನವನು. ಆತ ರೈಲು ಅಪಘಾತದಲ್ಲಿ ಮೃತಪಟ್ಟನು.

ಈಗ ಗೋವಿಂದ ದಾಸರ ನೆನಪುಗಳು ಕುದುರೆ ಮುಂದಕ್ಕೋಡಿ ಬಂತು.

ಆತ ಮೃತಪಡುವಾಗ ಕಮಲ ಆರು ತಿಂಗಳ ಬಸಿರಿ ಹೆಣ್ಣು. ಈಗ ಆಕೆಗೆ ಎಂಟು ತಿಂಗಳು. ಇಪ್ಪತ್ತನಾಲ್ಕರ ಯೌವನದ ನಾಗರಾಜನದು ದೃಢಕಾಯ. ಓದು ಬರಹದಲ್ಲಿ ಆತ S. S. L. C ಪಾಸಾಗಿದ್ದ. ಬರೀ S. S. L. C. ಮುಗಿಯಲು ಗೋವಿಂದ ದಾಸರು ಜನರಲ್ಲಿ ಸಾಲ ಮಾಡಿದ್ದರು. ಅಂತೂ ಅವರು ತಮ್ಮ ಬಾಳಿನ ದೀಪ ಇನ್ನಾದರೂ ಬೆಳಗಬಹುದೆಂದು ಎಣಿಸಿದ್ದರು. ಆದರೆ ಅವರೆಣಿಕೆಯೇ ತಪ್ಪಾಗಿತ್ತು. ಮಾತೃ ಭೂಮಿಯ ಪ್ರೇಮ ಪಾಶಕ್ಕೆ ನಾಗರಾಜ ಬಲಿಯಾದ. ಸೈನಿಕ ವೃತ್ತಿಗೆ ಸೇರಿದ.

ಕುದುರೆ ಮುಂದಕ್ಕೆ ನೆಗೆಯಿತು— ದಾಸರ ನೆನಪಿನ ಕುದುರೆ. ಆ ದಿನ ತಾನು ನೋಡಿದ ಆ ಚಿತ್ರ ಅವರನ್ನು ಕಣ್ಣೀರ ಸಮುದ್ರಕ್ಕೆ ಕರೆದೊಯ್ಯಿತು. ದಾಸರಿಗೆ ನಿದ್ರೆಯ ಜೊಂಪು ಹತ್ತಿತು.

ರಾತ್ರಿ ಕಳೆಯಿತು—ಬೆಳಕು ಹರಿಯಿತು. ಕಮಲೆ ಎದ್ದಳು ಒಲೆಯಲ್ಲಿ ಬೆಂಕಿ ಮಾಡಿದಳು. ಆದರೇನು? ಊಟಕ್ಕೆ ಅಕ್ಕಿಯಿರಲಿಲ್ಲ. ಬೆಂಕಿ ಮಾಡಿ ಏನು ಪ್ರಯೋಜನ?

ಅಲ್ಲಿಯೇ ಕುಳಿತಳು. ಹಿಂದಿನ ದಿನ ತಾನು ನೋಡಿದ ಚಿತ್ರವನ್ನೊಮ್ಮೆ ಜ್ಞಾಪಿಸಿಕೊಂಡಳು. ಆ ಚಿತ್ರ....ಅದೆಷ್ಟು ಪವಿತ್ರ?....ಅದೆಷ್ಟು ಪಾವನ! ...ಅದು ಮರೆಯಲಾರದ ಭಾವಚಿತ್ರವಾಗಿತ್ತು.

ಆಕೆಗೆ ಅರಿವಿಲ್ಲದಂತೆಯೇ ಬಾಯಿಂದ ಮಾತುಗಳು ಹೊರಡಲಾರಂಭಿಸಿದವು.

"ನಾಗರಾಜಾ ನಿನಗೆ ಎಷ್ಟು ನೋವಾಗುತ್ತಿರಬಹುದು ಈಗ? ನಿನ್ನ ಶುಶ್ರೂಷೆ ಮಾಡಲು ಯಾರಿದ್ದಾರೆ? ತಾಗಿದ ಪೆಟ್ಟಾದರೂ ಎಲ್ಲಿಗೆ?

ಮೌನ— ಒಂದು ಕ್ಷಣ. ಉರಿಯುವ ಬೆಂಕಿಯ ಕೊಳ್ಳಿಯೊಂದು 'ರಪ್' ಎಂದಿತು, ಎರಡೂ ಕಣ್ಗಳಲ್ಲಿ ಧಾರಾಕಾರವಾಗಿ ನೀರು ಹರಿಯಿತು.

ಆಗ ಕಮಲೆ ಒಂದು ಜೀವಂತ ಹೆಣ್ಣೆ? ಅಲ್ಲ....ಅವಳೊಂದು ..

ವಾರ ಒಂದಾದರೂ ಆಕೆಯು ಕೇಶರಾಶಿ ಎಣ್ಣೆಗಾಣಲಿಲ್ಲ. ಮುಖ ಹಳದಿ ಬಣ್ಣಕ್ಕೆ ತಿರುಗಿತ್ತು. ಆಕೆಯ ದೇಹ ನಡೆಯುತ್ತಿರುವ ಅಸ್ಥಿಪಂಜರವಾಗಿತ್ತು. ಸೀರೆ ರವಕೆಗಳು ತಮ್ಮ ನೈಜ ಬಣ್ಣದಿಂದ ಬೇರ್ಪಡೆ ಹೊಂದಿದ್ದವು. ಸಾಲದ್ದಕ್ಕೆ ತಿಂಗಳೆಂಟರ ಬಸಿರಿಯಂತೆ

ಬೆಳ್ಳಂಬೆಳಗಾಯಿತು. ವೆಂಕಟೇಶನೂ ಎದ್ದನು ಗೋವಿಂದದಾಸರು ನಿದ್ರಾದೇವಿಯ ಬಂಧನದಿಂದ ಬಿಡುಗಡೆಯಾದರು.

ನಿತ್ಯ ಕರ್ಮಗಳು ತೀರಿದುವು. ಊಟಕ್ಕೆ ಅಕ್ಕಿಯಿರಲಿಲ್ಲ. ಪರಿಣಾಮವಾಗಿ ಬರಿಯ ಹೊಟ್ಟೆಯಲ್ಲಿಯೇ ವೆಂಕಟೇಶ ಶಾಲೆಯ ದಾರಿ ಹಿಡಿದ.

ಗೋವಿಂದದಾಸರಿಗೆ ಒಂದೇ ಯೋಚನೆ—ನಾಗರಾಜನ ವಿಷಯ ಭಾರತದ ನಲ್ವತ್ತೈದು ಕೋಟಿ ಜನತೆಗಾಗಿ ಎದೆಯೊಡ್ಡಲು ಹೋದವರಲ್ಲಿ ಆತನೂ ಒಬ್ಬ.

ಉಟ್ಟ ಉಡುಗೆಯಲ್ಲಿಯೇ ಮನೆಯ ಮೆಟ್ಟಲನ್ನಿಳಿದು ಹೊರ ಹೊರಟರು ಗೋವಿಂದದಾಸರು. ಎಲ್ಲಿಗೆ? ಅವರಿಗೇ ಅರಿಯದು ಎಲ್ಲಿಗೆ ಎಂದು. ಅವರ ಕಾಲ್ಗಳು ದಾರಿಯನ್ನು ತುಳಿಯುತ್ತಾ ಇದ್ದವು. ಪಕ್ಕದ ಮನೆ ಸಾಹುಕಾರರ ಮನೆ ದಾಟಿ ಹೋದರು ಅವರ ಉದರ ಹಸಿವೆಯಿಂದ ಚುರುಗುಟ್ಟಿತು. ಕೂಡಲೇ ಹಿಂದೆ ತಿರುಗಿದರು. ನೇರವಾಗಿ ಸಾಹುಕಾರರ ಮನೆಯಂಗಳಕ್ಕೆ ಧಾವಿಸಿದರು ಅಲ್ಲಿಯೇ ನಿಂತುಕೊಂಡು ಒಂದರೆಕ್ಷಣ ಏನನ್ನೋ ಯೋಚಿಸಿದರು. ಪುನಃ ಮನಸ್ಸಿಲ್ಲದ ಮನದಿಂದ ಸಾಹುಕಾರರ ಮನೆಯೊಳಗೆ ಪ್ರವೇಶಿಸಿದರು.

ಸಾಹುಕಾರರು ಪುಣ್ಯಾತ್ಮರು. ಆರಾಮ ಕುರ್ಚಿಯ ಮೇಲೆ ಕುಳಿತಿದ್ದರು. ಅಂದಿನ ದಿನಪತ್ರಿಕೆಯನ್ನು ಓದುತ್ತಿದ್ದರು. ಬಾಯಿಯಲ್ಲಿದ್ದ ಸಿಗರೇಟು ಹೊಗೆ ಕಾರುತ್ತಿತ್ತು. ಪಕ್ಕದ ಮೇಜಿನ ಮೇಲೆ ಇದ್ದ ಕಾಫಿ ಇನ್ನೂ ಬಿಸಿ ಆರಿಲಿಲ್ಲ.

(ಹದಿನೈದನೇ ಪುಟ ನೋಡಿರಿ)

ಪ್ರಕಟಣೆ

ಸ್ವಾಮಿ ಶ್ರೀಕೃಷ್ಣ ಚೈತನ್ಯ ಚೈತನ್ಯ ನಿವಾಸ, ಜವಾಹರ ನಗರ, ಖಾರ (ಪೂರ್ವ) ಮುಂಬಯಿ ನಂ. ೫೧, ಇವರು ಈ ಮೂಲಕ ಜಾಹೀರು ಮಾಡುವುದೇನೆಂದ್ರೆ:—

ನಾನು ಕುಂದಾಪುರ ತಾಲ್ಲೂಕು ಶಿರೂರು ಗ್ರಾಮದಲ್ಲಿರುವ ಚರಿಂವಿ ಆಸ್ತಿಯ ಮಾಲಕ ಇರುತ್ತೇನೆ. ನಾನು ಸದ್ರಿ ಆಸ್ತಿಯನ್ನು ಮಾರಲಿಕ್ಕೆ ಶ್ರೀಯುತ ಸಂಜೀವ ರಾವ್ ಇವರಿಗೆ ಮುಕ್ತ್ಯಾರ್ ನಾಮೆ ಕೊಟ್ಟಿದ್ದೆ. ಆದರೆ ನನಗೆ ಹೀಗೆ ತಿಳಿದು ಬರುತ್ತದೆ ಏನೆಂದ್ರೆ:— ಸದ್ರಿಯವರು ನನ್ನ ಪರವಾನಗಿ ಇಲ್ಲ ಮತ್ತು ನನಗೆ ತಿಳಿಸದೇ ಪರಮೇಶ್ವರ ಹೆಗಡೆ ಇವರಿಗೆ ಟ್ರಸ್ಟ್ ಮಾಡಿ ಕೊಟ್ಟಿದ್ದಾರಾಗಿ ತಿಳಿದು ಬರುತ್ತದೆ, ಅದ್ದರಿಂದ ಆ ಟ್ರಸ್ಟನ್ನು ಇದರ ಮೂಲಕ ನಾನು ರದ್ದು ಪಡಿಸಿದ್ದೇನೆ. ನಾನು ಸದ್ರಿಯವರಿಗೆ ಟ್ರಸ್ಟ್ ಮಾಡಿ ಆಸ್ತಿಯನ್ನು ಕೊಡಲಿಕ್ಕೆ ಮುಕ್ತ್ಯಾರ್ ನಾಮೆಯನ್ನು ಕೊಡಲಿಲ್ಲವಾದ್ದರಿಂದ ಸದ್ರಿಯವರು ಮಾಡಿದ ಸದ್ರೀ ಟ್ರಸ್ಟನ್ನು ನಾನು ರದ್ದು ಮಾಡಿದ್ದೇನೆ. ನಾನು ಜೀವಂತ ಇರುವಾಗ ನನ್ನ ಕಬೂಲಿ ಶಿವಾಯಿ ಟ್ರಸ್ಟ್ ಮಾಡಲಿಕ್ಕೆ ಬರುವ ಹಾಗಿಲ್ಲ. ಮಾಡುವಹಾಗಿದ್ದರೆ ಅದಕ್ಕೆ ನನ್ನ ಕಬೂಲಿ ಬೇಕಿತ್ತು.

ಆದ್ದರಿಂದ ನಾನು ಈ ಮೂಲಕ ಸದ್ರಿ ಟ್ರಸ್ಟನ್ನು ರದ್ದು ಪಡಿಸಿದ್ದೇನೆ. ಮತ್ತು ಸದ್ರಿ ಆಸ್ತಿಯನ್ನು ಮಾರಾಟಕ್ಕೆ ಇಡುತ್ತೇನೆ. ಯಾರಾದರೂ ಕೊಂಡುಕೊಳ್ಳುವವರಿದ್ದರೆ ಅವರು ನನಗೆ ಪತ್ರ ವ್ಯವಹಾರ ಮಾಡಬೇಕು.

ಠೇವಣಾತಿದಾರರಿಗೆ ಸುಸಂದರ್ಭ!
ಹೆಚ್ಚಿಸಿದ ಬಡ್ಡಿ ದರ!!

ಠೇವಣಾತಿಗಳ ಮೇಲೆ 4¼%ರಿಂದ 6¼%ರ ವರೆಗಿನ ಬಡ್ಡಿ ನೀಡಲಾಗುವುದು.

5 ವರ್ಷದ ಅವಧಿಗಳಿಗೆ ಮೇಲ್ಪಟ್ಟ ಧಾರ್ಮಿಕ ಠೇವಣಾತಿಗಳಿಗೆ 6¼%ಗೆ ಮೀರದಂತೆ ¼% ಹೆಚ್ಚಿನ ದರದ ಬಡ್ಡಿಯನ್ನು ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ನಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3



ಚರಿತ್ರಾರ್ಹ ರೋಟರಿ

ಸಮ್ಮೇಳನ

(ನಾಲ್ಕನೇ ಪುಟದಿಂದ)

ಸಮ್ಮೇಳನದ ಮೂರು ದಿನಗಳ ಕಾರ್ಯಕ್ರಮಗಳೂ ಇದಕ್ಕಾಗಿ ರಚಿಸಲ್ಪಟ್ಟ ಭವ್ಯವಾದ "ಲಹರಿ ಮಂಟಪ"ದಲ್ಲಿ ಜರಗಿದುವು. ಉದ್ಘಾಟನಾ ದಿನದಂದು ಉದ್ಘಾಟಕರನ್ನು ಹಾಗೂ ಅತಿಥಿಗಳನ್ನೆಲ್ಲಾ ವಾದ್ಯ ಘೋಷ ಹಾಗೂ ಬಿರುದು ಬಾವಲಿಗಳಿಂದ ಮೆರವಣಿಗೆಯಲ್ಲಿ ಸಭಾ ಮಂಟಪಕ್ಕೆ ಕರೆತರಲಾಗಿತ್ತು. ಸುಸಜ್ಜಿತವಾಗಿದ್ದ ಲಹರಿ ಮಂಟಪದ ರಚನೆ ಹಾಗೂ ವ್ಯವಸ್ಥೆ ಕಲಾಪೂರ್ಣವಾಗಿದ್ದು ಜನಮೆಚ್ಚುಗೆ ಗಳಿಸಿತ್ತು.

Kiyoshi Togasaki

ಅಂತರಾಷ್ಟ್ರೀಯ ರೋಟರಿಯ ಎರಡನೇ ಉಪಾಧ್ಯಕ್ಷರಾದ ಶ್ರೀ ಕಿಯೋಶಿ ತೊಗಸಾಕಿ.

ಸಮ್ಮೇಳನಕ್ಕಾಗಮಿಸಿರುವ ವಿವಿಧ ಭಾಗಗಳ ಅತಿಥಿಗಳಿಗೆ ಉಡುಪಿ ಹಾಗೂ ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳ ಸಂದರ್ಶನಕ್ಕಾಗಿ ಸಮ್ಮೇಳನದ ಸಂಘಟಕರೇ ವ್ಯವಸ್ಥೆ ಮಾಡಿದ್ದರು. ಎರಡು ದಿನ ರಾತ್ರಿ ಮನರಂಜನಾ ಕಾರ್ಯಕ್ರಮಗಳು ಜರಗಿದ್ದು ದಕ್ಷಿಣ ಕನ್ನಡದ ಹೆಮ್ಮೆಯ ಜನಪದ ಕಲೆಯಾದ ಯಕ್ಷಗಾನ ಬಯಲಾಟವು ಗ್ರೀಕ್ ವೇಷಧಾರಿಗಳ ಕೂಡುವಿಕೆಯಿಂದ ಪ್ರದರ್ಶಿಸಲ್ಪಟ್ಟು ಅತಿಥಿ ಅಭ್ಯಾಗತರ ಮೆಚ್ಚುಗೆ ಪಡೆಯಿತು. ಇದೊಂದು ಕಾರ್ಯಕ್ರಮದ ಆಕರ್ಷಣೆಯಾಗಿತ್ತು.

Charles Pettengill

ಅಂತರಾಷ್ಟ್ರೀಯ ರೋಟರಿಯ ಅಧ್ಯಕ್ಷ ಶ್ರೀ ಚಾರ್ಲ್ಸ್ ಪೆಟ್ಟಂಗಿಲ್



ಪ್ರಾನ್ಸಿನ ಸ್ಟೆಂಟ್ ಗಿರ್ಮೋಸ್ ರೋಟರಿ ಕ್ಲಬ್ಬಿನ ಅಧ್ಯಕ್ಷ ಶ್ರೀ ಪೌಲ್ ಬೋರ್ಡಿಯೋ ಹಾಗೂ ಅವರ ಪತ್ನಿಯವರೊಂದಿಗೆ ಉಡುಪಿ ರೋಟರಿ ಕ್ಲಬ್ಬಿನ ಅಧ್ಯಕ್ಷ ಶ್ರೀ ಟಿ ರಮೇಶ ಪೈಗಳು.

ಸಮ್ಮೇಳನದಲ್ಲಿ ರೋಟೇರಿಯನ್ನರು "ಶಿಕ್ಷಣ", 'ವೈದ್ಯಕೀಯ ವೃತ್ತಿ'', "ಕಾನೂನು ವೃತ್ತಿ'', ''ಕೈಗಾರಿಕೆ", ಹಾಗೂ ''ವಾಣಿಜ್ಯ ಈ ವಿಷಯಗಳ ಕುರಿತು ಸಂಗಡ ಸಂಗಡಗಳಾಗಿ ಚರ್ಚೆ ನಡೆಸಿದರು. ವಿವಿಧ ರಂಗಗಳಲ್ಲಿ ನಿಷ್ಣಾತರಾದ ತಜ್ಞರು ಒಂದು ಗೂಡಿ ದೇಶದ ಪುನರ್ರಚನೆಗೆ ಅಗತ್ಯವೆನಿಸಿರುವ ಮೇಲಣ ವಿಷಯಗಳ ಕುರಿತು ಸುದೀರ್ಘ ಚರ್ಚೆನಡೆಸಿ, ವಿಚಾರ ವಿನಿಮಯ ಮಾಡಿಕೊಂಡಿರುವುದು ನಿಜಕ್ಕೂ ಉತ್ತಮ ಕಾರ್ಯ. ಸಮ್ಮೇಳನದ ಕಾರ್ಯಕರ್ತರೂ ಇದಕ್ಕಾಗಿ ಅಭಿನಂದನೀಯರು.

ಈ ಸಮ್ಮೇಳನಕ್ಕೆ ಉದ್ದಿಮೆ, ಶಿಕ್ಷಣ, ಕಾನೂನು, ಕೈಗಾರಿಕೆ, ವಾಣಿಜ್ಯ, ಕೃಷಿ ಮೊದಲಾದ ಹಲವಾರು ರಂಗಗಳಲ್ಲಿ ಅನುಭವಿಗಳೆನಿಸಿ ಕೊಂಡವರು ಆಗಮಿಸಿದ್ದು ಸಮ್ಮೇಳನದ ಫಲಶ್ರುತಿ ಉತ್ತಮವಾಗ ಬಂತೆ ಮಾಡಿರುವುದು. ಸಮ್ಮೇಳನಕ್ಕಾಗಮಿಸಿದ್ದ ಪ್ರತಿನಿಧಿಗಳನೇಕರು ಇಲ್ಲಿನ ಏರ್ಪಾಟು ಹಾಗೂ ಸುವ್ಯವಸ್ಥೆಗಳನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿರುವರು. ಇಂತಹ ಸರ್ವ ಸುಸಜ್ಜಿತ ಸಮ್ಮೇಳನ ಬೇರೆಲ್ಲೂ ಜರಗಿರಲಿಲ್ಲ ಅಂದವರೂ ಇದ್ದಾರೆ.

ಸಮ್ಮೇಳನದ ಅವಸರದಲ್ಲಿ ಒಂದು ಸ್ಮಾರಕ ಸಂಚಿಕೆಯನ್ನು ಪ್ರಕಟಿಸಲಾಗಿದ್ದು ಇದು ಸರ್ವಾಂಗ ಸುಂದರವಾಗಿ ಪ್ರಕಟವಾಗಿದೆ. ಶ್ರೀ ಕೆ ಪಿ ಹರಿದಾಸ ಭಟ್ಟರ ನೇತೃತ್ವದಲ್ಲಿ ಉತ್ತಮವಾದ ಸ್ಮಾರಕ ಸಂಚಿಕೆ ಹೊರಗೆ ತಂದ ಸ್ಮಾರಕ ಸಂಚಿಕೆ ಸಮಿತಿಯ ಸದಸ್ಯರು ಅಭಿನಂದನೆಗೆ ಅರ್ಹರು. ಮಣಿಪಾಲವು ಈ ಮೂರು ದಿನಗಳಲ್ಲಿ ಒಂದು ವಿದೇಶೀ ಪಟ್ಟಣದಂತೆ ಕಂಡು ಬರುತ್ತಿತ್ತು. ಸಾಲಾಗಿ ನಿಂತಿದ್ದ ಕಾರುಗಳು ನಾನಾ ಕಡೆಯಿಂದ ಬಂದು ಸೇರಿದ ರೋಟರಿ ಪ್ರತಿನಿಧಿಗಳ ನಡೆವಳಿಕೆಗಳು, ಭವ್ಯವಾಗಿ ಅಲಂಕರಿಸಲ್ಪಟ್ಟ ಲಹರಿ ಮಂಟಪಗಳ ದೃಶ್ಯ ಪ್ರೇಕ್ಷಕರಿಗೆ ಹಬ್ಬವುಂಟು ಮಾಡಿತ್ತು.

ಎಲ್ಲಾ ದೃಷ್ಟಿಯಿಂದಲೂ ಹೊಸಕೊಂದು ಮೈಲಿಗಲ್ಲನ್ನು ನಿರ್ಮಿಸಿದ ೩೧೭ನೇ ಜಿಲ್ಲಾ ರೋಟರಿ ಸಮ್ಮೇಳನದ ಸಂಘಟಕರ ಕಾರ್ಯದಕ್ಷತೆಯನ್ನು ಕೊಂಡಾಡದ ವರಿಲ್ಲದೆ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತೇವೆ.

ಮುಂಬಾಯಿಯಲ್ಲಿ ಲಕ್ಷಾಂತರ ಮಹನೀಯರು
ಗಳಿಂದ ಪ್ರಶಂಸೆಗಳಿಸಿ ಮನ್ನಣೆ ಪಡೆದ

Shetty Ice Cream,
Panambur

ಶೆಟ್ಟಿ ಐಸ್ ಕ್ರೀಮ್, ಪಣಂಬೂರು

(Phone 13)

ನಿಮಗೆ ನೂತನ ವರ್ಷದ ಬಗ್ಗೆ ನಮ್ಮ ಹಾಗೂ ಈ ಕೆಳಗಿನ ನಮ್ಮ ಏಜಂಟರುಗಳ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸಲು ಸಂತೋಷ ಪಡುತ್ತೇವೆ.

1 ಜಂಪ್ರಾ ಕೋಲ್ಡ್ ಡ್ರಿಂಕ್ ಹೌಸ್, ಪಾಣೆಮಂಗಳೂರು
2 ದೇವರಾಜ್ ಕೋಲ್ಡ್ ಡ್ರಿಂಕ್ ಹೌಸ್, ಶಿರ್ವ.
3 ಗಣಪತಿ ಕೋಲ್ಡ್ ಡ್ರಿಂಕ್ ಹೌಸ್, ಬಂಟ್ವಾಳ
4 ಶ್ರೀ ಗೋಪಾಲ ಮಲ್ಯ, ಮೂಡಬಿದ್ರಿ
5 ಹೋಟೆಲ್ ವಿವೇಕಿರ್ತಿ, ಪುತ್ತೂರು
6 ಕೆ ಆರ್ ಇ. ಸಿ ಹಾಸ್ಟೆಲ್, ಸುರತ್ಕಲ್
7 ಮೆರ್ರಿ ಸ್ಟೋರ್ಸ್, ಬಜ್ಪೆ
8 ರೋಯಲ್ ಎರೇಟೆಡ್ಸ್, ಜೆಪ್ಪು, ಮಂಗಳೂರು
9 ಶೆಣೈ ಕೋಲ್ಡ್ ಡ್ರಿಂಕ್ ಹೌಸ್, ವಿಟ್ಲ.
10 ಹೆಗ್ಡೆ ಏಜನ್ಸೀಸ್, ಉಡುಪಿ

ಶ್ರೀ ಕೆ ಕೆ ಶೆಟ್ಟಿ, ಎಂ ಎಲ್ ಸಿ, ಯವರ
ನವಕಾಲ ಕೊಸ್ಪ್ರವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮನೆಯ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ!	0=25
ಪುರುಷಮೃಗ	0=25
ಸನ್ಯಾಸಿಯ ಸೂಳೆಗಳು!	0=75
ಸಂಪ್ರಯ ಪಿಶಾಚಿ	0=75
ಕುರುಬನ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು –
ನವಯುಗ ಪ್ರೆಸ್, ಉಡುಪಿ
ನವಭಾರತ ಬುಕ್ ಡಿಪೊ, ಉಡುಪಿ

ಎಲ್ಲೆಲ್ಲಿ ಏನೇನು?

ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಯವರ ಸ್ಮಾರಕೋತ್ಸವ

ಕುಂದಾಪುರ, ಕಳೆದ ತಾ. ೩ರಂದು ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳ ಸ್ಮಾರಕೋತ್ಸವವು, ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ, ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ, ಡಾ| ಟಿ. ಎಂ. ಎ. ಪೈಯವರಿಂದ ಉದ್ಘಾಟಿಸಲ್ಪಟ್ಟಿತು. ಡಾ| ಶಿವರಾಮ ಕಾರಂತರು ಸ್ಮಾರಕ ಗ್ರಂಥದ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ ವಿ. ಎಸ್. ಕುಡ್ವರು ಸ್ಮಾರಕೋತ್ಸವ ಸಂಚಿಕೆಯ ಉದ್ಘಾಟನೆಗೈದರು. ರಾಷ್ಟ್ರಕವಿಗಳ ಭಾವಚಿತ್ರವನ್ನು ಅನಾವರಣಗೈಯುತ್ತಾ ಶ್ರೀ ಬಾಳಿಗಾರವರು, ಇದು ಮುಂದಿನ ಜನಾಂಗಕ್ಕೊಂದು ಆದರ್ಶ ಹಾಗೂ ಸ್ಫೂರ್ತಿದಾಯಕವಾಗಲೆಂದು ನುಡಿದರು. ಮುಖ್ಯ ಮಂತ್ರಿಗಳು ಡಾ|| ಭಂಡಾರ್‌ಕಾರರ ಭಾವಚಿತ್ರ ಅನಾವರಣ ಗೈದು, ಅವರ ಉದಾರತೆಯನ್ನು ಶ್ಲಾಘಿಸಿದರು. ಅಧ್ಯಕ್ಷಸ್ಥಾನದಿಂದ ಅವರು ಮಾತಾಡುತ್ತಾ ದಿವಂಗತ ಪೈಗಳು ಮುಂದಿನ ಕವಿಗಳಿಗೊಂದು ಸ್ಫೂರ್ತಿಯಾಗಿದ್ದಾರೆಂದು ಹೇಳಿದರು. ಮತ್ತು ರಾಷ್ಟ್ರಕವಿ ಸ್ಮಾರಕ ಪಂದ್ಯಾಟದಲ್ಲಿ ಜಯಗಳಿಸಿದವರಿಗೆ ಬಹುಮಾನ ವಿತರಣೆಗೈದರು.

ಡಾ| ಟಿ. ಎಂ. ಎ. ಪೈಗಳು ಉದ್ಘಾಟಿಸುತ್ತಾ ರಾಷ್ಟ್ರಕವಿಗಳ ಪುಣ್ಯ ಸ್ಮರಣೆಯನ್ನು ಆಚರಿಸುವುದು ಸ್ತುತ್ಯಾರ್ಹವೆಂದರು.

ಆರಂಭದಲ್ಲಿ ಶ್ರೀ ಸಿ. ನಾರಾಯಣ ಶೆಟ್ಟರು ಮುಖ್ಯ ಅತಿಥಿಗಳಿಗೆ ಹೂಮಾಲೆಯರ್ಪಿಸಿದರು. ಶ್ರೀ ಪೈ. ಮಂಜಯ್ಯಶೆಟ್ಟಿ, ಎಂ. ಎಲ್. ಎ. ಅವರು ಸ್ವಾಗತಿಸಿದರು. ಪ್ರೊ| ಕೆ. ಜಿ. ಶೆಣೈಯವರು ವರದಿಯ ನ್ನೂ ಸಂದೇಶಗಳನ್ನೂ ಓದಿದರು. ಡಾ| ಟಿ. ಎಂ. ಎ. ಪೈ, ಶ್ರೀಗಳಾದ ಜೆ. ಎ. ರಾಜರತ್ನಂ, ಟಿ. ಟಿ. ಶರ್ಮ, ಕೆ ಕಿಞ್ಞಣ್ಣ ರೈ ಮತ್ತು ಯು. ರಾಜಾರಾಮ ಮಲ್ಯರು ರಾಷ್ಟ್ರಕವಿಗಳ ಕುರಿತು ಮಾತಾಡಿದರು.

ಅಂತ್ಯದಲ್ಲಿ ಕಲಾ ಪ್ರದರ್ಶನದ ಬಳಿಕ ಶ್ರೀ ಆರ್. ರಾಮದೇವ ಶೆಣೈಯವರು ಧನ್ಯವಾದ ಸಮರ್ಪಿಸಿದರು.

ಮುದ್ದಣ್ಣ ಸ್ಮಾರಕ ಸಾಹಿತ್ಯೋತ್ಸವ

ಉಡುಪಿ, ಹನ್ನೆರಡನೆಯ ಮುದ್ದಣ್ಣ ಸ್ಮಾರಕ ಸಾಹಿತ್ಯೋತ್ಸವವು ಕಳೆದ ತಾ 18 19ರಂದು ಎಂ. ಜಿ. ಎಂ. ಕಾಲೇಜಿನಲ್ಲಿ ನೆರವೇರಿತು. ತಾ. 18 ರಂದು ಸಮಾರಂಭವು ಪೂರ್ಣ ಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ವಿ. ಎಂ. ಆನಂದಾರ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರೊ| ಹರಿದಾಸ್ ಭಟ್ಟರು ಅಧ್ಯಕ್ಷರನ್ನೂ, ಶ್ರೀಗಳಾದ ಚೆನ್ನವೀರ ಕಣವಿ ಹಾಗೂ ಎಂ. ರಾಮಚಂದ್ರರವರನ್ನು, ಸ್ವಾಗತಿಸಿದರು. ಅಧ್ಯಕ್ಷರು ಶ್ರೀ ಎಂ. ರಾಮಚಂದ್ರರವರ "ಸೇಡಿಯಾಪು ಕೃಷ್ಣಭಟ್ಟ" ಎಂಬ ಪುಸ್ತಕವನ್ನೂ ಉದ್ಘಾಟಿಸಿದರು ಶ್ರೀ ಎಂ. ರಾಮಚಂದ್ರರವರು ಶ್ರೀ ಸೇಡಿಯಾಪುರವರ ಪ್ರತಿಭೆಯ ಕುರಿತು ಮಾತಾಡಿದರು. ಶ್ರೀ ರೂಪರ್ಟ್ ರೊಸಾರಿಯೋರವರು ಧನ್ಯವಾದ ಸಮರ್ಪಿಸಿದರು.

ಮರುದಿನ ಡಾ| ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಸಮಾರಂಭ ನೆರವೇರಿತು. ಈ ಸಂದರ್ಭದಲ್ಲಿ ಯಕ್ಷಗಾನ ಕಲಾವಿದ ಹಾರಾಡಿ ರಾಮ ಗಾಣಿಗರನ್ನು ಸನ್ಮಾನಿಸಲಾಯಿತು.

ಆರಂಭದಲ್ಲಿ ಶ್ರೀ ಶ್ರೀಪತಿ ಆಚಾರ್ಯರು ಸ್ವಾಗತಿಸಿದರು ಶ್ರೀ ಪ್ರಭಾಕರ ಶೆಟ್ಟರು ಸಂದೇಶವಾಚನ ಗೈದರು. ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯರು ಶ್ರೀ ಗಾಣಿಗರ ಕಲಾಜೀವನದ ಪರಿಚಯ ಮಾಡಿದರು. ಶ್ರೀ ಚೆನ್ನವೀರ ಕಣವಿ ಶರೀಫ ಸಾಹೇಬರ ಕುರಿತು ಮಾತನಾಡಿದರು. ಶ್ರೀ ರೊಸಾರಿಯೋಯವರು ಧನ್ಯವಾದ ಸಮರ್ಪಿಸಿದರು. ಎರಡು ದಿನವೂ ವಿವಿಧ ಮನೋರಂಜನೆಗಳಿದ್ದವು.

ಕುಟುಂಬ ಯೋಜನಾ ಶಿಬಿರ

ಶಿರ್ವ, ತಾ. 20–12–64 ಅಖಿಲ ಭಾರತ ಕುಟುಂಬ ಯೋಜನಾ ಸಂಸ್ಥೆಯ ಮಣಿಪಾಲ ಶಾಖೆಯು ಶಿರ್ವ ಮೆಡಿಕಲ್ ರಿಲೀಫ್ ಎಸೋಸಿಯೇಷನಿನ ಆಶ್ರಯದಲ್ಲಿ ಶಿರ್ವ ಲೋಕಲ್ ಫಂಡ್ ಆಸ್ಪತ್ರೆಯ ಪಂಗಡದಲ್ಲಿ ತಾ. 18, 19, 20 ಈ ಮೂರು ದಿನಗಳಲ್ಲಿ ಕುಟುಂಬ ಯೋಜನಾ ಶಿಬಿರವನ್ನು ಏರ್ಪಡಿಸಿತ್ತು. 50 ಜನ ಶಿಬಿರಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದ್ದರು. ಶ್ರೀ ವಿ. ಚಂದ್ರಶೇಖರ್ ಇವರ ಅಧ್ಯಕ್ಷತೆಯಲ್ಲಿ ಶ್ರೀ ಸಿ. ರಂಗನಾಥ ಶೆಣೈ ಇವರು ಶಿಬಿರವನ್ನು ಉದ್ಘಾಟಿಸಿದರು. ಡಾ. ಕೆ. ಆರ್. ವಿ. ಕೃಷ್ಣ ಧನವಾದರಿತ್ತರು. ಶ್ರೀ ಗುರುದತ್ ಶ್ರೀ ಕೆ. ಆರ್ ಶೆಣೈ, ಶ್ರೀಮತಿ ಲೀಲಾಭಂಡಾರಿ ಮತ್ತು ಶ್ರೀ ಕೆ. ಯಂ. ಹೊಳ್ಳ ಇವರು ಶಿಬಿರದ ಯಶಸ್ಸಿಗೆ ಕಾರಣರಾಗಿದ್ದರು. ಡಾ. ಮೋಹನದಾಸ್ ಪೈ, ಡಾ. ಯಂ. ಯಸ್. ಶೆಟ್ಟಿ, ಡಾ. ಯಚ್. ಯಸ್. ನಾಯಕ್, ಡಾ. ಶ್ರೀಮತಿ ಹದ್ದಾರ್‌ರವ್, ಶ್ರೀ ಎ. ಜೆ. ಆಳ್ವ ಮೊದಲಾದವರು ಭಾಷಣಮಾಡಿದರು

ತಾ. 19–12–64 ರಂದು ವೀರ್ಯನಾಳ ಛೇದ ಶಸ್ತ್ರಕ್ರಿಯೆಯು ನಡೆಯಿತು. ಡಾ. ಯು. ಕೆ. ಆಚಾರ್ ಇವರು ಶಿಬಿರದ ಅಭ್ಯರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಣೆಮಾಡಿ ಸಮಾರೋಪ ಭಾಷಣ ಮಾಡಿದರು. ಮೆಡಿಕಲ್ ರಿಲೀಫ್ ಎಸೋಸಿಯೇಶನ್ ಪತಿಯಿಂದ ಶ್ರೀ ಕೆ. ಯಂ. ಹೊಳ್ಳರೂ ಅಖಿಲ ಭಾರತ ಕುಟುಂಬ ಯೋಜನಾ ಸಂಸ್ಥೆಯ ಪರವಾಗಿ ಶ್ರೀ ಗುರುದತ್ತ ಅವರೂ ಧನ್ಯವಾದಗಳನ್ನಿತ್ತರು.

ಡಾನ್ ಬೋಸ್ಕೋ ಕ್ಲಬ್ ಹಾಲಿನ ಉದ್ಘಾಟನೆ.

ಉಡುಪಿ ಚರ್ಚ್ ಕಂಪೌಂಡ್‌ನಲ್ಲಿ ಸುಮಾರು 50 ಸಾವಿರ ರೂ. ವೆಚ್ಚದಲ್ಲಿ ಕಟ್ಟಲಾದ ಡಾನ್ ಬೋಸ್ಕೋ ಕ್ಲಬ್ ಹಾಲಿನ ನೂತನ ಕಟ್ಟಡದ ಉದ್ಘಾಟನೆಯನ್ನು ಪಾರ್ಲಿಮೆಂಟ್ ಸದಸ್ಯ ಶ್ರೀ ಜೋಕಿಂ ಆಳ್ವರು ತಾ. 27—12—64ರಂದು ನೆರವೇರಿಸಿದರು. ಆರಂಭದಲ್ಲಿ ಕ್ಲಬ್‌ನ ಅಧ್ಯಕ್ಷ ರೆ. ಫಾ. ಸಿಲ್ವೆಸ್ಟರ್ ಡಿಸೋಜರವರು ಸ್ವಾಗತ ಭಾಷಣಮಾಡುತ್ತಾ ಆರು ವರ್ಷಗಳ ಕೆಳಗೆ ಒಂದು ಸಣ್ಣ ಶೆಡ್ಡಿನಲ್ಲಿ ಸ್ಥಾಪಿತವಾಗಿ ಸಾರ್ವಜನಿಕರ ಬೆಂಬಲದಿಂದ ಬೆಳೆದು ಇಂದು ಇಂತಹ ಸಭಾಸದನವನ್ನು ಉದ್ಘಾಟಿಸುವ ಸುಸಂದರ್ಭಬಂತೆಂದೂ ಕ್ಲಬ್ಬಿನ ಮುಂದಿನ ಗುರಿ ಏನೆಂಬುದನ್ನೂ ವಿವರಿಸಿದರು.

ಶ್ರೀ ಆಳ್ವರು ಉದ್ಘಾಟನಾ ಭಾಷಣಮಾಡುತ್ತಾ ಸಾಂಸ್ಕೃತಿಕ ಕೇಂದ್ರವಾದ ಉಡುಪಿಯಲ್ಲೇ ತಾನು ರೂಪುಗೊಂಡವನೆಂದೂ, ಸ್ವಾವಲಂಬನೆ ಮತ್ತು ಸೇವಾಭಾವನೆ ಮಾನವನಲ್ಲಿರಬೇಕೆಂದೂ ಹೇಳಿದರು.

ರಾಜ್ಯಸಭೆಯ ಉಪಾಧ್ಯಕ್ಷೆ ಶ್ರೀಮತಿ ವಾಯ್‌ಲೆಟ್ ಆಳ್ವರು ಸ್ಮಾರಕ ಸಂಚಿಕೆಯನ್ನು ಉದ್ಘಾಟಿಸುತ್ತಾ ಬಾಲ್ಯದಲ್ಲಿಯೇ ಯೋಗ್ಯ ಸಂಸ್ಕೃತಿ ರೂಪುಗೊಳ್ಳುವಂತಾಗಬೇಕೆಂದೂ ಜನತಾ ಹಿತವೇ ನಮ್ಮ ಗುರಿಯಾಗಿರಬೇಕೆಂದೂ ಹೇಳಿದರು. ವಿಕಾರ್ ಜನರಲ್ ಮೋನ್ಸಿನೋರ್ ರವರು ಆಶೀರ್ವದಿಸುತ್ತಾ ದಣಿದ ಮನಸ್ಸಿಗೆ ಮನರಂಜನೆ ಅತ್ಯಾವಶ್ಯಕವೆಂದೂ ಈ ಕ್ಲಬ್ಬು ಮನಸ್ಸಿನ ವಿಕಾಸಕ್ಕೂ ಜನಹಿತಕ್ಕೂ ಸಾಧ್ಯವಾಗಲೆಂದರು. ಅಧ್ಯಕ್ಷತೆವಹಿಸಿದ್ದ ನಗರಸಭಾಧ್ಯಕ್ಷ ಶ್ರೀ ಸಿ ರಂಗನಾಥಶೆಣೈರವರು ಉಡುಪಿಯಲ್ಲಿ ಕೆಥೋಲಿಕರೂ ಬಾಶೆಲ್ ಮಿಶನಿನವರೂ ಮಾಡಿರುವ ಜನಹಿತ ಕಾರ್ಯಗಳನ್ನು ಕೊಂಡಾಡಿದರು, ಶ್ರೀ ಎ. ಫೆರ್ನಾಂಡಿಸರು ಸಂದೇಶವಾಚನ ಮಾಡಿದರು. ವಿವಿಧ ಮನರಂಜನಾ ಕಾರ್ಯಕ್ರಮಗಳಾದ ಮೇಲೆ ಕಾರ್ಯದರ್ಶಿ ಶ್ರೀ ವಿಲಿಯಂ ಪಿಂಟೋರವರು ವಂದನೆ ಸಲ್ಲಿಸಿದರು.

ಹೆಗ್ಡೆ ರೇಡಿಯೋ ಹೌಸ್‌ನ ಪ್ರಾರಂಭೋತ್ಸವ.

ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಎದುರು ತಾ. 28—12—64ರಂದು ಶ್ರೀ ಎಂ. ತಾರನಾಥ ಹೆಗ್ಡೆಯವರ 'ಹೆಗ್ಡೆ ರೇಡಿಯೋ ಹೌಸ್' ಎಂಬ ರೇಡಿಯೋ ವಿಕ್ರಯ, ರಿಪೇರಿ ಹಾಗೂ ವಿದ್ಯುತ್ ಸಂಬಂಧೀ ಕಾರ್ಯಗಳನ್ನು ಮಾಡಲಾಗುವ ನೂತನ ನಿಲಯವು ಉದ್ಘಾಟಿಸಲ್ಪಟ್ಟಿತು.

ದೆಹಲಿಯಲ್ಲಿ ಸಿಂಡಿಕೇಟಿನ ಮಹಿಳಾ ಶಾಖೆ

ತಾ. 26–12–64ರಂದು ಅಜ್ಮಲ್ ಖಾನ್ ರಸ್ತೆ, ದೆಹಲಿ–5 ಎಂಬಲ್ಲಿ ಸಿಂಡಿಕೇಟಿನ 6ನೇ ಸಂಪೂರ್ಣ ಮಹಿಳಾ ಶಾಖೆಯನ್ನು ತೆರೆಯಲಾಗಿದೆ ಎಂದು ತಿಳಿಸಲು ಸಿಂಡಿಕೇಟ್ ಬ್ಯಾಂಕಿನ ಡೈರೆಕ್ಟರರು ಸಂತೋಷಪಡುತ್ತಾರೆ ಇದು ದೆಹಲಿಯಲ್ಲಿ ಬ್ಯಾಂಕಿನ ಎರಡನೇ ಶಾಖೆಯಾಗುವುದಲ್ಲದೆ ಸಿಂಡಿಕೇಟಿನ 6ನೇ ಮಹಿಳಾ ಶಾಖೆಯಾಗುವುದು. ಇತರ ಮಹಿಳಾ ಶಾಖೆಗಳು ಬೆಂಗಳೂರು—ಶೇಷಾದ್ರಿಪುರಂ, ಟ್ರಿವೆಂಡ್ರಮ್—ಪುತೇನ್ ಚಂತೈ, ಹೈದರಾಬಾದ್—ಚಿಕ್ಕದಪಳ್ಳಿ ಮತ್ತು ಮದ್ರಾಸು–ತ್ಯಾಗರಾಜನಗರದಲ್ಲಿರುವವು. ಶ್ರೀಮತಿ ಪದ್ಮಜಾ ಕುಲಕರ್ಣಿ ಇವರು ದೆಹಲಿ ಮಹಿಳಾ ಶಾಖೆಯ ಮೆನೇಜರರಾಗಿರುವರು. ಇದು ದೆಹಲಿಯಲ್ಲಿ ಪ್ರಥಮ ಮಹಿಳಾ ಶಾಖೆಯಾಗಿದ್ದು ಆಫಿಸರರೇ ಆದಿಯಾಗಿ ಎಲ್ಲಾ ಸಿಬಂದಿಯವರು ಸ್ತ್ರೀಯರೇ ಆಗಿದ್ದಾರೆ. ಇತರ ಮಹಿಳಾ ಶಾಖೆಗಳಲ್ಲಿ ಹೆಚ್ಚು ಹೆಚ್ಚಾಗಿ ಮುಖ್ಯತಃ ಸ್ತ್ರೀಯರಿಂದ ದೊರೆತ ಪ್ರೋತ್ಸಾಹವೇ ದೆಹಲಿ ಮಹಿಳಾ ಶಾಖೆ ತೆರೆಯಲು ಕಾರಣವಾಯಿತು.

ಸಿಂಡಿಕೇಟ್ ಬ್ಯಾಂಕಿನ ಇನ್ನೆರಡು ಶಾಖೆಗಳು ದಶಂಬರ 26ರಂದು ವೆಲ್ಲಿಂಗ್‌ಟನ್ (ನೀಲಗಿರಿ ಜಿಲ್ಲೆ) ಮತ್ತು ಕುನಿಯಮುತ್ತೂರು (ಕೊಯಮುತ್ತೂರು ಜಿಲ್ಲೆ) ಇಲ್ಲಿ ತೆರೆಯಲ್ಪಟ್ಟವೆ. ಈ ಎರಡೂ ಕ್ಷೇತ್ರಗಳು ಬ್ಯಾಂಕ್ ರಹಿತ ಕ್ಷೇತ್ರಗಳಾಗಿವೆ. ಈ ಹೊಸ ಶಾಖೆಗಳ ತೆರೆಯುವಿಕೆಯಿಂದ ಸಿಂಡಿಕೇಟಿಗೆ ಇದೀಗ 203 ಶಾಖೆಗಳಾದಂತಾಯಿತು.

ಕೋಮಲ್ಸ್ ಕ್ರೀಮ್ ಪಾರ್ಲರ್

ಈಗಾಗಲೇ ಪ್ರಸಿದ್ಧಿ ಪಡೆದ ಮಂಗಳೂರಿನ ಕೋಮಲ ಸ್ವೀಟ್ಸ್‌ನವರ ಅತ್ಯಾಧುನಿಕ ಮಾದರಿಯ ಕೋಮಲ್ಸ್ ಕ್ರೀಮ್ ಪಾರ್ಲರನ್ನು ತಾ. 27–12–64ರಂದು ಆರೋಗ್ಯ ಮಂತ್ರಿ ಡಾ| ಕೆ. ನಾಗಪ್ಪ ಆಳ್ವರು ಉದ್ಘಾಟಿಸಿದರು. ಸೆಂಟ್ರಲ್ ಟಾಕೀಸಿನಲ್ಲಿ ಜರಗಿದ ಸಮಾರಂಭದ ಅಧ್ಯಕ್ಷತೆಯನ್ನು ನಗರ ಸಭಾಪತಿ ಶ್ರೀ ಜಿ. ಸೋಮಶೇಖರ ರಾಯರು ವಹಿಸಿದ್ದರು. ಶ್ರೀ ಬಿ. ವಿ. ಎಸ್. ವಾಗ್ಲೆಯವರು ಸ್ವಾಗತಿಸಿದರು. ಶ್ರೀ ಮಹೇಲ ಶ್ರೀನಿವಾಸ ನಾಯ್ಕ ಎಂ. ಎಲ್. ಎ., ಶ್ರೀ ಕೆ. ಸೂರ್ಯನಾರಾಯಣ ಅಡಿಗ ಇವರು ಶುಭಕೋರಿ ಮಾತನಾಡಿದರು.

ಆಯುರ್ವೇದ ಕಾಲೇಜಿನ ವರ್ಧಂತಿ

ಉಡುಪಿ ಆಯುರ್ವೇದ ಕಾಲೇಜಿನ ವರ್ಧಂತಿ ಸಮಾರಂಭವು ತಾ. 23–12–64 ರಂದು ಡಾ| ವಿ. ಎಸ್. ಶೆಟ್ಟಿರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಲ್ಲಿ ಜರಗಿತು.

NAVAYUGA

REPUBLIC DAY SPECIAL 1965

is planned by us as a bountiful and sumptuous volume catering to the literary and cultural taste of the readers as also the demands of modern advertisement

Please reach us your advertisement on or before 10-1-65.

ADVERTISEMENT RATES:

Full Page	Rs. 150/-	Back Cover Page	Rs. 650/-
Half Page	Rs. 75/-	Inside 1st Cover Page	Rs. 450/-
Quarter Page	Rs. 40/-	Inside 2nd Cover Page	Rs. 350/-

Ordinary Full Page in Double colours Rs. 250/-

Inside Pages facing the Cover Pages Rs. 200/-

MECHANICAL DATA:

Paper Size... 15" × 10" (37.5 Cm. × 25 Cm.) Size of type page... 13" × 8" (32.5 Cm. × 20 Cm.)

Date of Publication: 26—1—1965.

ADVT. MANAGER.

ಪೆಪ್ಪರ್ ಮಿಠಾಯಿ, ಶರಬತ್ತು ಮೊದಲಾದ 'ಬಿಕ್ಕೊ'ರವರ ಹಣ್ಣು ಹಂಪಲುಗಳ ತಯಾರಿಕೆಗಳು ಎಲ್ಲೆಲ್ಲಿಯೂ ಪ್ರಸಿದ್ಧಿಪಟ್ಟಿವೆ.

ಮರೆಯಲಾಗದ ಭಾವಚಿತ್ರ

(ಹನ್ನೆರಡನೇ ಪುಟದಿಂದ)

"ನಮಸ್ಕಾರ ಸ್ವಾಮಿ" ...

ಗೋವಿಂದ ದಾಸರ ಒರಟು ಧ್ವನಿ ಸಾಹುಕಾರರ ಭವ್ಯವಾದ ಮನೆಯಲ್ಲಿ ಪ್ರತಿಧ್ವನಿಸಿತು. ಮುಖಕ್ಕೆ ಅಡ್ಡವಾಗಿ ಹಿಡಿದು ಕೊಂಡ ಪತ್ರಿಕೆಯನ್ನು ತಿರುಗಿಸಿ ನಮಸ್ಕಾರದ ಚಿಹ್ನೆಯನ್ನು ಇತ್ತರು-ಗೋವಿಂದದಾಸರಿಗೆ.

ಬಲ್ಲವರ ಮಾತೊಂದು:— ಮನೆವನ ಕಣ್ಣೀರು ಹೊರ ಹೋದರೆ ಹೃದಯದ ಭಾರ ಕಡಿಮೆಯಾಗುವುದಂತೆ. ನಾಗರಾಜನ ಸ್ಥಿತಿಗತಿಗಳನ್ನೆಲ್ಲ ಸಾಹುಕಾರರೆದುರು ತೋಡಿಕೊಂಡರು—ದಾಸರು.

ಕೊನೆಗೆ ನುಡಿದರು. 'ಸ್ವಾಮಿ, ಊಟಕ್ಕೂ ಗತಿಯಿಲ್ಲ. ತಮ್ಮಿಂದ ಕೈಲಾದ ಮಟ್ಟಿಗೆ ಸಹಕರಿಸಿ ನನ್ನ ಸ್ವೈರು ಕೊಯ್ದು ತಕ್ಷಣ ಬಡ್ಡಿದ ರೂಪದಲ್ಲಿ ಹಿಂತಿರುಗಿಸುವೆ."

ಕಣ್ಣಿಗೆಯಿಟ್ಟಿದ್ದ ಕನ್ನಡಕವನ್ನೊಮ್ಮೆ ತೆಗೆದು ವಸ್ತ್ರದಲ್ಲಿ ಉಜ್ಜಿದರು-ಸಾಹುಕಾರರು. ಆಲೋಚನೆ ಮಾಡಿದರು. ಪಾಪದ ಅರಿವು ಅವರಿಗೂ ಆಗಿರಬೇಕೋ ಏನೋ? ನೇರವಾಗಿ ಒಳಗೆ ನಡೆದರು.

ಸಾಹುಕಾರರ ಮೇಜಿನ ಮೇಲ್ಗಡೆ ಕಳೆದ ದಿನದ ಪತ್ರಿಕೆಯೂ ಇರುತ್ತಿತ್ತು. ಗೋವಿಂದ ದಾಸರು ಅದನ್ನೊಮ್ಮೆ ಈಕ್ಷಿಸಿದರು.

ಆಗಲೇ ಪೋಸ್ಟ್ ಮ್ಯಾನ್ ಅವರನ್ನು ಹುಡುಕಿ ಕೊಂಡು ಸಾಹುಕಾರರ ಮನೆಗೆ ಬಂದ. ಬಂದವನೇ "ತಂತಿ" ಕವರನ್ನು ದಾಸರ ಕೈಗಿತ್ತ.

ಭಯ ಮುಸುಕಿದ ಕೈಗಳಿಂದ ತೆಗೆದು ಕೊಂಡರು ದಾಸರು, ಹೃದಯ ತಳಮಳಿಸುತ್ತಿತ್ತು. ಮೈಯೆಲ್ಲ ಕಂಪಿಸುತ್ತಿತ್ತು. ಉಸಿರ ವೇಗ ಇಮ್ಮಡಿಯಾಗಿತ್ತು. ಅವರು ಅದರಲ್ಲಿ ಓದಿದ್ದೇನು? ನಾಗರಾಜನ ಮೃತ್ಯುವನ್ನು. ಕೂಡಲೇ ಕರ್ಕಶವಾಗಿ ಚೀರಿತು ಅವರ ಆ ಕಂಠ. ಪ್ರಜ್ಞೆ ತಪ್ಪಿತು.

ಸಾಹುಕಾರರು ಇಪ್ಪತ್ತೈದು ರೂಪಾಯಿಗಳೊಂದಿಗೆ ಹೊರ ಬಂದರು. ಗೋವಿಂದ ದಾಸರಿಗೆ ಉಪಚಾರಗಳನ್ನು ನೀಡಿದರು. ಪರಿಣಾಮವಾಗಿ ಕಳೆದ ಪ್ರಜ್ಞೆ ಮರಳಿತು ಸಾಹುಕಾರರಿಗೂ ತಿಳಿಯಿತು ಆ ವಿಷಯ.

ಗೋವಿಂದ ದಾಸರಿಗೆ ನಡೆಯಲು ಶಕ್ತಿಯಿಲ್ಲ. ಆಮಂಡುವ ಮಾತುಗಳಿಗೆ ಅವರಿಗವರ ಬಾಯಿಯೇ ಸಾಲದಾಯಿತು. ಉಕ್ಕಿ ಬರುವ ಕಣ್ಣೀರಿಗೆ ಎರಡು ಕಣ್ಣುಗಳು ಸಾಲದಾದವು.

ಸಾಹುಕಾರರ ಮನೆಯಾಳು ಅವರನ್ನು ಮನೆಗೆ ತಲುಪಿಸಿದ. ಒಂದು ಮಗ್ಗುಲಿನಿಂದ ಮಗಳ ರೋದನ ಇನ್ನೊಂದು ಮಗ್ಗುಲಿನಿಂದ ದಾಸರ ಅಳಲು. ಪಕ್ಕದ ಮನೆಯವರೆಲ್ಲ ಸಂತೈಸುತ್ತಿದ್ದರು—ಅವರನ್ನು.

ಹಲವರೆಂದರು: "ಏನು ಗೋವಿಂದ ದಾಸರೇ, ನೀವು ತಾಳಿಕೊಳ್ಳಬೇಕು. ನೀವೇ ಹೀಗೆ ಮಾಡಿದರೆ....?"

ಮಗಳು ಕಮಲೆ 'ಅಯ್ಯೋ ನಾಗರಾಜ' ಎಂದು ಅಳುತ್ತಿದ್ದಳು. ಆ ದೃಶ್ಯ ನೋಡುವವರಿಗೆ ಬೇಡವಾಗಿತ್ತು.

ಆ ದಿನ ಗೋವಿಂದ ದಾಸರ ಮನೆ ಕಣ್ಣೀರ ಕಡಲಾಯಿತು.

ಗೋವಿಂದ ದಾಸರಿಗೆ ಜೀವನವೇ ಬೇಡವಾಗಿತ್ತು. ಅವರು ಪ್ರಾಣ ಹತ್ಯೆಗೂ ಸಿದ್ಧರು. ಆದರೆ ಕಮಲೆ ಮತ್ತು ವೆಂಕಟೇಶನವರ ಗತಿ?

ಅಲ್ಲದೆ ಕಮಲೆಯ ಉದರದಲ್ಲಿ ಪಿಂಡವೊಂದು ಬೇರಿ ಬೆಳೆದಿತ್ತು. ಕಣ್ಣಲ್ಲಿದ್ದ ಕಣ್ಣೀರು ಒಂದಾದ ವೇಳೆ ಗೋವಿಂದ ದಾಸರ ದುಃಖ ಕಡಿಮೆಯಾಯಿತು.

ಅವರ ಹೃದಯ ಗುಲಾಬಿಯ ಹೂವಲ್ಲ—ಗುಲಾಬಿಯ ಗಿಡದಂತೆ. ಅವರು ಜೀವನದಲ್ಲಿ ಕಷ್ಟಕಾರ್ಪಣ್ಯಗಳನ್ನು ಸಾಕಷ್ಟು ಅನುಭವಿಸಿದ್ದವರು. ಅವರಿಗೆ ಇದೊಂದು ಹೊಸತಲ್ಲ. ಆದರೇನ? ಅವರ ಬಳಿನ ಕುಡಿಯೊಂದು ತುಂಡಾಯಿತು ಅಷ್ಟೆ.

ಕಷ್ಟಕಾಲದಲ್ಲಿ ಮಾನವನಿಗಿರಬೇಕು ತಾಳ್ಮೆ—ಸಹನೆ.

ಹಿರಿಯರ ಒಂದು ಮಾತು. ತಾಳಿದವ ಬಾಳಿಯಾನಂತೆ. ಗೋವಿಂದ ದಾಸರೂ ತಾಳಿಕೊಂಡರು, ಕುಡಿಯೊಂದು ತುಂಡಾದರೆ ಏನಾಯಿತು? ಇನ್ನೊಂದು ಕುಡಿಯಿಲ್ಲವೆ?

ವೆಂಕಟೇಶ ಶಾಲೆಯನ್ನು ಸೇರಿದ, ಆ ದಿನ ಎಂದಿನಂತೆ ಅವನಲ್ಲ ಆತನ ಅಂದಿನ ರೀತಿಯೇ ಬೇರೆಯಾಗಿತ್ತು. ಮೂರನೆಯ ತರಗತಿಯಲ್ಲಿ ಓದುತ್ತಿದ್ದ ವೆಂಕಟೇಶ ಗುರುಗಳ ಪ್ರೀತಿಗೆ ಪಾತ್ರನೂ ಅಹುದು.

ಅಧ್ಯಾಪಕ ವೃಂದಕ್ಕೂ ತಿಳಿದಿತ್ತು— ಹಿಂದಿನ ದಿನ ನೋಡಿದ ಭಾವ ಚಿತ್ರದ ವಿಚಾರ. ಅವರಿಗೆಲ್ಲ ಈ ದಿವಸವೂ ತಿಳಿಯಿತು – ನಾಗರಾಜನ ಮೃತ್ಯುವಿನ ವಿಷಯ.

ದುಃಖವೇ ಇರಲಿ; ಸುಖವೇ ಇರಲಿ — ಸಮಯವು ನಿಲ್ಲುವುದೇ? ಶಾಲೆಯ ತೃತೀಯ ಗಂಟೆ ಬಾರಿಸಿತು.

ರಾಷ್ಟ್ರ ಗೀತೆಯು ಮಕ್ಕಳ ಒಕ್ಕೊರಲಿನಿಂದ ಹೊರ ಬಂತು. ಕನ್ಯಾ ಕುಮಾರಿಯಿಂದ ಹಿಡಿದು ಹಿಮಾಚಲದ ತನಕವೂ ಕೇಳಿರಬೇಕು—ಆ ಗೀತೆ.

ಹಿಮಾಲಯದಲ್ಲಿನ ನಮ್ಮ ಅಣ್ಣಂದಿರು ಮನಕ್ಕೆ ಸಮಾಧಾನವಿತ್ತಿರಬಹುದು— ಈ ಗೀತೆಯಿಂದ.

ಪ್ರಾಧ್ಯಾಪಕರು ಕ್ಲಾಸಿಗೆ ಬಂದರು. "ಶಾಲೆಯ ಮುಖ್ಯ ಸಭಾಭವನದಲ್ಲಿ ಸಭೆ ಜರಗುವುದು" ಎಂದರು.

ವಿದ್ಯಾರ್ಥಿ ಮುಖಂಡರೆಲ್ಲ ಸೇರಿ ಬೆಂಚು ಕುರ್ಚಿಗಳನ್ನು ಕ್ರಮಬದ್ಧವಾಗಿ ಇಟ್ಟರು, ಪ್ರಾಧ್ಯಾಪಕರು ಹಿಂದಿನ ದಿನ ಕಂಡ ಚಿತ್ರವನ್ನು ಪತ್ರಿಕೆಯಿಂದ ಪ್ರತ್ಯೇಕಿಸಿದರು. ಅದನ್ನು ತಂದು ಮೇಜಿನ ಮೇಲೆ ಎಲ್ಲರಿಗೂ ಕಾಣುವ ರೀತಿಯಲ್ಲಿ ಇಟ್ಟರು. ಪಕ್ಕದಲ್ಲಿಯೇ ದೀಪವೊಂದನ್ನು ಬೆಳಗಿಸಿದರು.

ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲ ಸಭೆ ಸೇರಿದರು ಆ ಚಿತ್ರವನ್ನು ನೋಡಿದ ವೆಂಕಟೇಶ ಗಳಗಳನೆ ಅತ್ತುಬಿಟ್ಟ.

ಗುರುಗಳು ಬಾಲಕ ಬಾಲಕಿಯರಿಗೆ ಹೇಳುತ್ತಿದ್ದರು:

"ನಮ್ಮ ಪಾವನವಾದ ತಾಯ್ನೆಲವನ್ನು ವೈರಿಗಳು ಆಕ್ರಮಿಸಿದ್ದಾರೆ, ಹಿಮಾಲಯದ ಗಡಿಯಲ್ಲಿ ಆ ಹಿಮಾಲಯವು ಬಹು ಪವಿತ್ರವಾದುದು. ಅದು ಪರಮೇಶ್ವರನ ಕೈಲಾಸ. ಈಗ ಅಲ್ಲಿ ಪರಮೇಶ್ವರನಿಲ್ಲ. ಶತ್ರು ಸೈನಿಕರ ರಾಣ್ಯಗಳಿವೆ. ನಮ್ಮ ಭಾರತದ ಜನತೆಗಾಗಿ ಹೋರಾಡಲು ನಮ್ಮ ಅಣ್ಣಂದಿರು ಅಲ್ಲಿ ಇದ್ದಾರೆ. ಅಲ್ಲಿನ ಆ ಸ್ಥಳವು ವಿಪರೀತ ಚಳಿಯಿಂದ ಕೂಡಿದುದು. ಅಲ್ಲಿಗೆ ಸರಿಯಾದ ಸಂಪರ್ಕಗಳಿಲ್ಲ. ನಮ್ಮ ವೀರ ಸೈನಿಕರ ಆ ಸ್ಥಳದಲ್ಲಿ "ಭಾರತ ಮಾತಾಕೀ ಜೈ" ಎಂಬ ವಿಜಯ ಘೋಷವನ್ನು ಘರ್ಜಿಸಿ ವಿಜಯ ಧ್ವಜವನ್ನು ನೆಡಲು ಪ್ರಯತ್ನಿಸುತ್ತಿದ್ದಾರೆ. ಹಾಗೆ ಪ್ರಯತ್ನಪಡುವಾಗ ಹಲವು ಸೈನಿಕರು ವೈರಿಗಳ ಗುಂಡಿನೇಟಿಗೆ ತುತ್ತಾಗುತ್ತಾರೆ. ಭಾರತ ಮಾತೆಯ ಚರಣಕಮಲಗಳಲ್ಲಿ ಐಕ್ಯಗೊಳ್ಳುತ್ತಾರೆ. ಹಾಗೆ ವೀರಸ್ವರ್ಗವನ್ನು ಪಡೆದ ಸೈನಿಕರಲ್ಲಿ ನಮ್ಮ ಶಾಲೆಯ ವೆಂಕಟೇಶನ ಅಣ್ಣ ನಾಗರಾಜನೂ ಒಬ್ಬ."

ವೆಂಕಟೇಶನಿಗೆ ಇದನ್ನು ಕೇಳಿದಾಕ್ಷಣ ಆಕಾಶವೇ ಕಳಚಿಬಿದ್ದಂತಾಯಿತು. ಕಣ್ಗಳಿಂದ ನೀರು ಹರಿಯುತ್ತಾ ಇತ್ತು.

ಗುರುಗಳು ಮತ್ತೂ ಮುಂದುವರಿಸಿದರು:

"ಮಕ್ಕಳೇ, ಈ ಚಿತ್ರವನ್ನು ನೋಡಿ. ನಾಗರಾಜನು ಮಲಗಿದ್ದಾನೆ. ಆತನ ಆ ಉಡುಪು ಅದೆಷ್ಟು ಪವಿತ್ರ? ಮೃತ್ಯುವಿನೊಡನೆ ಹೋರಾಡುತ್ತಾ ಇದ್ದಾರೆ— ವೈದ್ಯರು. ಆದರೆ ಅವರ ಹೋರಾಟ ನಿಷ್ಫಲವಾಯಿತು._ನಾಗರಾಜನು ಭಾರತ ಮಾತೆಯ ಚರಣ ಕಮಲಗಳಲ್ಲಿ ಐಕ್ಯಗೊಂಡ. ಆತನ ಆತ್ಮಕ್ಕೆ ಶಾಂತಿ ಲಭಿಸಲೆಂದು ನೀವೆಲ್ಲರೂ ಶ್ರೀ ಕೃಷ್ಣ ಪರಮಾತ್ಮನಲ್ಲಿ ಪ್ರಾರ್ಥಿಸಿ."

ಮೌನ ಪ್ರಾರ್ಥನೆಯ ನಡುವೆ ಕಣ್ಣೀರ ಹೊನಲು ಹರಿಯಿತು ವೆಂಕಟೇಶನಿಗೆ-

ಗುರುಗಳೆಂದರ :

"ಮಕ್ಕಳೇ, ನೀವು ಮಾಡುವ ಜಯ ಘೋಷವು ಹಿಮಾಚಲದಲ್ಲಿನ ನಮ್ಮ ಸೈನಿಕರನ್ನು ಹುರಿದುಂಬಿಸಬೇಕು" ಎಂದರು

ಮತ್ತು ಗುರುಗಳೆಂದರು!

"ಭಾರತ ಮಾತಾಕಿ ...."

ಶಾಲೆಯ ಮಕ್ಕಳೆಲ್ಲ ಒಕ್ಕೊರಲಿನಿಂದ ಘೋಷಿಸಿದರು—

"ಜೈ"

ಆ "ಜೈ" ಎಂಬ ನಾದವು ಅಲೆ ಅಲೆಯಾಗಿ ಹಿಮಾಚಲಕ್ಕೂ ಮುಟ್ಟಿರಬಹುದು.

ಬಾಲವಿಷ್ಣು ತೈಲ
(ಸನ್ಯಾಸಿ ಕೈಖಂಡ ಪ್ರಯೋಗ)
ಅಂಗಹೀನರಿಗೆ (ಅಂಗ ನಿಕಲರಿಗೆ)
ಪ್ರಮುಖ್ಯ ಔಷಧಿ

ಅಂಗ ಹೀನರಾಗುವುದು ಮಕ್ಕಳ ಚಿಕ್ಕಂದಿನಿಂದಲೇ ಇದು ಎಲ್ಲವರೂ ತಿಳಿಯತಕ್ಕದ್ದು.

BEST-REMEDY-FOR-FITS-HYSTIRIA-RECKETS &-CONVALSIONS

ಮದ್ದು, ಮಂತ್ರ, ತಂತ್ರ, ಬಲಿ, ಇಂಜಕ್ಷನ್, ವಗೈರೆಗಳಲ್ಲಿಯೂ ಗುಣವಾಗದ ಖಾಯಿಲೆಯು ಇದರಲ್ಲಿ ಖಂಡಿತ ಗುಣ. ಅಂಗ ಹೀನರೆಂಬುದು ನಾಡಿ ದೋಷ ಖಾಯಿಲೆ ಹೊಟ್ಟೆ ಖಾಯಿಲೆ ಅಲ್ಲ ಆಹಾರ ಬೇಕಾದಷ್ಟು ತಿನ್ನುತ್ತಾರೆ ಹೊಟ್ಟೆಗೆ ಮದ್ದು ಬೇಡ. ಸಾವಿರಾರು ಹಣ ಖರ್ಚು ಮಾಡಿ ಗುಣವಾಗದ ಈ ಕೆಳಗಿನ ಖಾಯಿಲೆಯವರು ಅನೇಕರು ಗುಣ ಹೊಂದಿದ್ದಾರೆ ಬರೇ ತೈಲದಿಂದಲೇ ಗುಣ.

ಮೂರ್ಛೆ, ಮಕ್ಕಳು ನಡಿಯದಿರುವಿಕೆ, ಕೈ ಕಾಲು ಮುದ್ದೆ, (ಪಕ್ಷವಾತ) ಕೈ ಕಾಲು ಅರಿ ದೋಗುವಿಕೆ ಸೊಂಟದ ಮೇಲೆ ಮಣ್ಣಿಕೆಗೆ ಸಪೂಪ, ಬಾಲವಾತ, ಬಾಲಕ್ಷಯ, ಹದಗೆಟ್ಟ ನಿತ್ರಾಣ, ಒಳಾಂಗ ನೋವು ಮತ್ತು ಇತರ ಮಕ್ಕಳ ಚಿಕ್ಕ ಖಾಯಿಲೆಗೂ ಉತ್ತಮ. ಮತ್ತು ಪ್ರಾಯಸ್ಥರ ಗುಣವಾಗದ ವಾತ, ವಾತಕ್ಷಯ ಹದಗೆಟ್ಟ ನಿತ್ರಾಣಕ್ಕೂ ಉತ್ತಮ. ಒಂದೆರಡು ಕಡ್ಡಿಯಲ್ಲಿ ಗುಣ ಅವಗುಣ ಗೊತ್ತಾಗುತ್ತದೆ. ಮತ್ತು ಬಾಟ್ಲಿಯೊಂದಿಗಿರುವ ವಿಷಯ ಪತ್ರಿಕೆಯಂತೆ ನಡಕೊಂಡರೆ ಖಂಡಿತ ಗುಣ. 3 ಕಡ್ಡಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ—ಇನ್ನೆರಿನ ಗುಣವಾಗದ ಪಕ್ಷಕ್ಕೆ ಆ ವ್ಯಕ್ತಿಗೆ ಮದ್ದು ಮಾಡುವ ಆಗತ್ಯವಿಲ್ಲ—ತಿಳಿದಿರಲಿ.

ತಯಾರಕರು:—A S. ಪಕ್ಕಳ, ಬಾಲವಿಷ್ಣು ತೈಲ ಔಷಧಾಲಯ ಪುತ್ತೂರು ತಾಲ್ಲೂಕು, ಪುತ್ತೂರು ಕಸಬಾ. ಪೋಸ್ಟ್. ದರ್ಬೆ .S.K

ಅಗಾಗ್ಗೆ ಪ್ರಕಟವಾಗುವುದಿಲ್ಲ. ಇದನ್ನು ಜಾಗ್ರತೆಯಲ್ಲಿಟ್ಟುಕೊಂಡು ಬೇಕಾದಾಗ ಬರೆಯಿರಿ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪಸಿದ್ಧವಾದ ಜೈ ಹಿಂದ್ ಹಂಚು ಗಳನ್ನೇ ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

NAVAYUGA 31 –12 –1964
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೩೧-೧೨-೬೪ರಿಂದ ೬-೧-೬೫ರ ವರೆಗೆ

೧ ಮೇಷ

ನಿರಾಮಯವಾದ ಸಂಸಾರದಲ್ಲಿ ಸುಖದಿಂದ ಕಾಲ ಕಳೆವಿರಿ. ನಿಮ್ಮ ಯೋಜನೆಯೂ ಉದ್ಯಮ ವ್ಯವಹಾರಗಳು ಯಾವೊಂದೂ ತೊಡಕು ತೊಂದರೆಗಳಿಲ್ಲದೆ ನಿರಾತಂಕವಾಗಿ ಸಾಗಲಿವೆ. ಆದರೆ ಹಣದ ಲೇವಾದೇವಿ ನಿಮಿತ್ತ ವಾಕ್ಕಲಹ ಬೆಳೆದು ಕೆಲವೊಮ್ಮೆ ಕೋರ್ಟಿಗೆ ಹೋಗುವ ಪರಿಸ್ಥಿತಿಯೂ ಒದಗೀತು. ದ್ಯೂತಪ್ರೇಮಿಗಳಿಗೀವಾರವು ಲಾಭದಾಯಯಾಗಿ ಪರಿಣಮಿಸಲಿದೆ. ಆಪ್ತೇಷ್ಟರ ವಿರಹ ವಿಯೋಗಗಳುಂಟಾಗಲಿವೆ. ವಾರಾಂತ್ಯದ 3 ದಿನಗಳಲ್ಲಿ ನಾನಾ ತೆರದಿಂದ ಧನಾಗಮ, ಸುಖ, ಸಂತಸವಂ ಪಡೆವಿರಿ.

೨ ವೃಷಭ

ನಿಮ್ಮ ಪರಿಸ್ಥಿತಿಯಿಂದು ಮತ್ತಷ್ಟು ಭೀಕರ ಸ್ವರೂಪ ತಳೆಯಲಿದೆ. ಜನತೆಯೊಡನೆ ವೃಥಾ ನಿಷ್ಠುರ ಕಲಹಗಳನ್ನು ಕಟ್ಟಿಕೊಳ್ಳುವಿರಿ. ಕೈಯಲ್ಲಿ ಕಾಸಿಲ್ಲ, ಮೈಯಲ್ಲಿ ಮಾಂಸವಿಲ್ಲ ಎಂಬ ಗಾದೆಯು ಮಾತಿನಂತಾದೀತು ನಿಮ್ಮ ಸ್ಥಿತಿಗತಿ. ಕೈ ಹಿಡಿದ ಹೆಂಡತಿಯೇ ನಿಮ್ಮನ್ನು ದ್ವೇಷಿಸುವಳೆಂದ ಮೇಲೆ ಸ್ತ್ರೀ ವರ್ಗದವರನ್ನೇ ನೀವಿಂದು ಶತ್ರುಗಳಂತೆ ಕಾಣುವಿರಿ. ಆಪ್ತ ಸ್ನೇಹಿತರು ಕೂಡ ನಿಮ್ಮ ನೆರವಿಗಿಂದು ಬರಲಾರರು. ವಾರದ ಆದ್ಯಂತ ದಿನಗಳು ಸ್ವಲ್ಪ ಸಹ್ಯವೆನಿಸಲಿವೆ.

೩. ಮಿಥುನ

ಮನೋದೌರ್ಬಲ್ಯವು ನಿಮ್ಮನ್ನಿಂದು ವಿಶೇಷವಾಗಿ ಕಾಡುವದಾದರೂ ನೀವು ನಿಮ್ಮ ಕರ್ತವ್ಯ ಭ್ರಷ್ಟರಾಗಲಾರಿರಿ. ಪರಿಶ್ರಮವು ಸಫಲವಾಗುವುದರಿಂದ ಹಣದ ಚಿಂತೆಯಿಂದು ನಿಮಗಿರದು. ಜನತೆಯ ಸಹಕಾರವು ಸಾಕಷ್ಟು ಲಭಿಸಲಿದೆ. ವ್ಯವಹಾರ ಚತುರರಾದ ನಿಮಗೆ ರಾಜಕೀಯರಂಗದಲ್ಲಿ ವಿಪಕ್ಷೀಯರಿಂದ ಪರಾಭವವುಂಟಾದೀತು. ವಿದ್ಯೋಪಜೀವೀ ನೌಕರ ವರ್ಗದವರಿಗೀ ಕಾಲವು ಅನುಕೂಲ. ವಾರಾದಿಯ 4 ದಿನಗಳಲ್ಲಿ ಕೆಲವೊಂದು ಬಯಕೆಗಳು ಈಡೇರಲಿವೆ.

೪. ಕರ್ಕಟ

ದಾನಾಕ್ಷರೂ ಕಾರ್ಯದಕ್ಷರೂ ಆದ ನಿಮಗೆ ಯಾವ ಉದ್ಯಮದಲ್ಲೂ ಸೋಲುಂಟಾಗದು. ವಿಶೇಷತಃ ಕೃಷಿ ಭೂಸಂಬಂಧ ವ್ಯವಹಾರಗಳಲ್ಲಿ ಹೆಚ್ಚಿನ ಲಾಭವಾಗುವುದು. ಕೆಲವೊಮ್ಮೆ ವಾತ ದೋಷದಿಂದ ಅನಾರೋಗ್ಯ ಅಪ್ತಬಂಧುಗಳ ವಿಯೋಗವೂ ಕಾಣಿಸಬಹುದು. ತಂದೆಮಕ್ಕಳೊಳು ಮತಭೇದದಿಂದಾಗಿ ಮನಸ್ತಾಪವುದಿಸಲಿದೆ. ಆದರೂ ಸಹನಾಶೀಲರಾದ ನಿಮಗೆ ತಾ. 2ರಿಂದ 6ರ ವರೆಗಿನ ದಿನಗಳು ಅನುಕೂಲ.

೫. ಸಿಂಹ

ದೈವ ಬಲವೂ ಚೆನ್ನಾಗಿರಕಕ್ಕ ನಿಮಗೆ ರಾಜಕೀಯೇತರ ಸಕಲ ಕಾರ್ಯಗಳಲ್ಲೂ ವಿಜಯವು ಕಟ್ಟಿಟ್ಟ ಗಂಟಿನಂತಿಹುದು. ಪಶು ಭೃತ್ಯ ಧನ ಧಾನ್ಯಾದಿಗಳಿಂದ ಪರಿಪೂರ್ಣವಾದ ಸಂಸಾರ ರಥವು ಸುಗಮವಾಗಿ ಸಾಗಲಿದೆ. ಅಧಿಕಾರಿ ವರ್ಗದವರ ವಕ್ರ ದೃಷ್ಟಿಯು ನಿಮ್ಮ ಮೇಲೆ ಬಿದ್ದಿರುವ ಕಾರಣ ಬಹಳ ಜಾಗರೂಕತೆಯಿಂದಿರಬೇಕಾಗುವದು. ಮಧ್ಯೆ ವಿರೋಧಿಗಳೂ ಅಲ್ಪಸ್ವಲ್ಪ ಪೀಡೆಯನ್ನುಂಟುಮಾಡಲಿರುವರು. ತಾ. 4, 5, 6 ಈ ದಿನಗಳಲ್ಲಿ ನಿಮ್ಮ ಬಯಕೆಯು ಸಫಲವಾಗಲಿದೆ.

೬. ಕನ್ಯಾ

ನೀವೆಷ್ಟೇ ಸಮರ್ಥರಿದ್ದರೂ ದೈವವಿಂದು ನಿಮ್ಮ ಮೇಲೆ ಮುನಿದಿರುವುದರಿಂದ ಬಯಕೆಯಂತೆ ಕಾರ್ಯಗಳು ಕೊನೆಗೊಂಡಲಾರವು. ಆದರೂ ಉತ್ತೇದು ಬಿತ್ತೇದು ನಮ್ಮಿಚ್ಚೆ ಆಗೋದು ಹೋಗೋದು ದೈವೇಚ್ಚೆಯೆಂದ ಕಾರಣ ನಿಮ್ಮ ಕರ್ತವ್ಯವನ್ನು ನೀವು ನಿರ್ವಹಿಸಿರಿ. ಇಂದಲ್ಲ ಮುಂದಾದರೂ ನೀವದರ ಫಲವನ್ನು ಪಡೆದೇ ತೀರುವಿರಿ. ಆರ್ಥಿಕ ಪರಿಸ್ಥಿತಿಯು ಸ್ವಲ್ಪಮಟ್ಟಿಗೆ ಕೆಟ್ಟದ್ದರೂ ತಾ. 31, 1, 6 ಈ ದಿನಗಳು ಅನುಕೂಲ.

೭. ತುಲಾ

ಎಷ್ಟೇ ವಿಘ್ನ ವಿಡಂಬನೆಗಳು ಬಂದರೂ ನೀವಿಂದು ನಿಮ್ಮ ಕರ್ತವ್ಯದಲ್ಲಿ ಕೃತಕೃತ್ಯರಾಗುವಿರಿ. ಜನಾನುರಾಗವಂಗಳಿಸಿದ ನಿಮಗೆ ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವುವು. ನಿರೀಕ್ಷೆಗಿಂತಲೂ ಅಧಿಕ ಫಲ ಪ್ರಾಪ್ತಿ. ಕೆಲವೊಂದಂಶ ಧನವು ವ್ಯರ್ಥವಾಗಿ ಖರ್ಚಾಗಲಿದೆ. ಇದಕ್ಕೆ ನಿಮ್ಮ ಅರ್ಧಾಂಗಿಯೇ ಕಾರಣಳಾಗುವಳು. ತಾ. 1, 2, 3 ಈ ದಿನಗಳಲ್ಲಿ ಸುಖ ಭೋಗ ವಿಜಯ

೮ ವೃಶ್ಚಿಕ

ಹಿಂದಿಗಿಂತ ನಿಮ್ಮ ಆರೋಗ್ಯವು ತುಂಬಾ ಸುಧಾರಿಸಲಿದೆ. ಆರ್ಥಿಕ ವಿಚಾರಗಳಲ್ಲೂ ನೀವಿಂದು ಸ್ವಾವಲಂಬಿಗಳಾಗುವಿರಿ. ಸ್ವಂತ ಉಪಭೋಗಕ್ಕೆ ಬೇಕಾದ ವಸ್ತು ಒಡವೆಗಳು ಅನಾಯಾಸದಿಂದ ಲಭಿಸಲಿವೆ ಆದರೆ ಹಿಂದಿನ ಸ್ಥಾನಮಾನಗಳು ನಿಮಗಿಂದು ಲಭಿಸಲಾರವು. ಇದಕ್ಕೆ ನಿಮ್ಮ ಸ್ವೇಚ್ಛಾಚಾರವೇ ಕಾರಣ ಸಣ್ಣಪುಟ್ಟ ಗೃಹಚ್ಛಿದ್ರಗಳು ನಿಮಗಿಂದು ಗೋಚರಿಸಲಿವೆ. ತಾ. 31, 1, 6 ಈ ದಿನಗಳು ಇತರ ದಿನಗಳಿಗಿಂತ ಉತ್ತಮ—

೯. ಧನು

ದೈವಬಲ ಸಂಪನ್ನರಾದ ನಿಮ್ಮಲ್ಲಿಂದು ಪೌರುಷವೂ ಸಾಕಷ್ಟಿರುವುದರಿಂದ ನಿಮ್ಮ ಕಾರ್ಯಕ್ಷೇತ್ರವು ವಿಶಾಲವಾಗುವದಲ್ಲದೆ ಸಾಂಪತ್ತಿಕ ಪರಿಸ್ಥಿತಿಯೂ ಸುಧಾರಿಸಲಿದೆ. ನಿಮ್ಮ ಧೈರ್ಯ ಸ್ಥೈರ್ಯಗಳಂ ಕಂಡ ಪ್ರತಿಪಕ್ಷಿಗಳು ದೂರದಿಂದಲೇ ಮಾಯವಾದಾರು. ಬಂಧುಮಿತ್ರಾದಿ ಪರಿವಾರ ವರ್ಗದಿಂದ ಕೂಡಿದ ನಿಮಗೆ ಸಮಾಜದಲ್ಲೂ ರಾಜಕೀಯದಲ್ಲೂ ಒಳ್ಳೆಯ ಸ್ಥಾನಮಾನ ಲಭಿಸಲಿದೆ. ಆಕಸ್ಮಿಕ ಪ್ರವಾಸಮಾಡಬೇಕಾದೀತು. ತಾ. 1, 2, 3, 6 ಈ ದಿನಗಳಲ್ಲಿ ಸುಖಭೋಗ ವಿಜಯ

೧೦. ಮಕರ

ಕಾರ್ಯಾರಂಭಕ್ಕಿಂತಲೂ ಮುಂಚಿತವಾಗಿ ವಿಘ್ನಗಳುಪಸ್ಥಿತವಾಗುವುದರಿಂದ ನೀವಿಂದು ಉದಾಸೀನರಾಗಿರುವುದೇ ಹೆಚ್ಚು. ಅತ್ತೀಯರೆಂಬವರು ನಿಮ್ಮ ಮೇಲೆ ಎರಡೆಣಿಸಲಿರುವರು. ದೇಹದಲ್ಲಿ ಕಫ ಪಿತ್ಥ ದೋಷದಿಂದಾಗಿ ನಿಶ್ಶಕ್ತಿ ಆರ್ಥಿಕ ದುಸ್ಥಿತಿಯಿಂದಾಗಿ ಚಿಂತೆಗಳು ಹೆಚ್ಚಲಿವೆ. ಆದರೂ ನೀವಿಂದು ಪುತ್ರರ ನೆರವಿನಿಂದಾಗಿ ಗೃಹ ತಾಪತ್ರಯಗಳಿಂದ ಮುಕ್ತರಾಗುವಿರಿ. ತಾ. 31, 1, 4, 5, ಈ ದಿನಗಳು ಉಳಿದ ದಿನಗಳಿಗಿಂತ ಉತ್ತಮ.

೧೧. ಕುಂಭ

ಇಂದು ನೀವೆಷ್ಟೇ ಮಿತಭಾಷಿಗಳಾಗಿದ್ದರೂ ಜನತೆಯೊಡನೆ ಕಲಹವಾಗದಿರದು. ಶತ್ರು ಜನರಂತೂ ಪ್ರತೀಕಾರವನ್ನೆಸಗಲು ಹೊಂಚು ಹಾಕುತ್ತಿರುವರು. ಇದಕ್ಕೆ ಸರಿಯಾಗಿ ಅಧಿಕಾರಿಗಳ ಅಸಕೃಪೆಗೂ ನೀವಿಂದು ಪಾತ್ರರಾಗಲಿರುವಿರಿ. ಅದೇ ಕಾರಣ ನೀವಿಂದು ಎಷ್ಟೊಂದು ಜಾಗರೂಕರಾಗಿದ್ದರೂ ಸಾಲದು. ಆರ್ಥಿಕ ಪರಿಸ್ಥಿತಿಯು ಅಷ್ಟೊಂದು ಹದಗೆಟ್ಟಿಲ್ಲವಾದರೂ ಆರೋಗ್ಯವು ಚೆನ್ನಾಗಿರದು. ವಾರಾದಿಯ 4 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೧೨ ಮೀನ

ನಿಮ್ಮ ಧೈರ್ಯ ಸಾಹಸಗಳಿಂದು ಮಾಯವಾಗುವುವು. ಪರರ ನೆರವಿಲ್ಲದೆ ಯಾವ ಕಾರ್ಯವನ್ನೂ ಸಾಧಿಸಲಾರಿರಿ. ಆದರೂ ಜನತೆಯ ಸಹಕಾರವು ಚೆನ್ನಾಗಿರುವುದರಿಂದ ಹಿಡಿದ ಕಾರ್ಯವನ್ನು ಕೊನೆಗಾಣಿಸುವಿರಿ. ಸಾಡೇಸಾತ್ ಶನಿಯಿಂದಾಗಿ ಆಕಸ್ಮಿಕ ಅನರ್ಥಗಳೂ ಗೃಹಕೃತ್ಯದಲ್ಲಿ ಒಡಕೂ ಮೂಡಲಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ನೌಕರಿ ವರ್ಗಕ್ಕೂ ಇಂದಿನ ದಿನಗಳು ಅನುಕೂಲ. ತಾ. 2ರಿಂದ 6ರ ವರೆಗೆ ವಿಜಯ ಲಾಭ.

ಉಡ್ಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

A. S. No 54/1964

ಮ್ಯಾನರ್_ಬಾಲಕೃಷ್ಣ ಕೂಡಾ — ಅಪ್ಪಿಲಾಂಟರು

ಮತ್ತು

H. ಶ್ರೀನಿವಾಸ ರಾವ್ ಕೂಡಾ — ಎದ್ರಿರು.

ಇವರೊಳಗೆ

2. ಜನಾರ್ಧನ ಕಿಣಿ— ಗಣಪತಿ ಕಿಣಿಯರ ಮಗ

4. ಗಣಪತಿ ಕಿಣಿ_ಜನಾರ್ಧನ ಕಿಣಿಯರ ಮಗ ಕುಂದಾಪುರ ಕಸಬಾ ಕೋಡಿ—

ಇವರಿಗೆ ಈ ಮೂಲಕ ತಿಳಿಸುವದೇನಂದರೆ—

ಮೇಲ್ಕಂಡ ಅಪ್ಪಿಲಾಂಟರು— ಕುಂದಾಪುರ ಮುನ್ಸಿಫ ಕೋರ್ಟ O.S. 198/62ನೆ ದಾವೆಯ ತೀರ್ಪಿನ ಮೇಲೆ ದಾಖಲು ಮಾಡಿದ ಅಪ್ಪಿಲು ತಾ. 9-2_1965ಕ್ಕೆ ಇಡೋಣಾಗಿಯದೆ— ಆ ಕುರಿತು 2,4ನೆ ಎದ್ರಿರಿಗೆ ಆಕ್ಷೇಪ ಹೇಳತಕ್ಕದ್ದು ಇದ್ರೆ ಸದ್ರಿ ದಿವಸ ಪೂರ್ವಾಹ್ನ 11 ಗಂಟೆಗೆ ಮೇಲ್ಕಂಡ ಕೋರ್ಟಿನಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು— ಎಂಬ ಸಂಗ್ತಿ ತಿಳಿಸೋಣಾಗಿಯದೆ.

M. V. Kamath,
Advocate for Appellants.
Udipi, 22-12-64.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ, ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ ಖ.ಪ್ರತ್ಯೇಕ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ. ಪ್ರತ್ಯೇಕ)

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ,ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

Printed & Published by K. K. Shetty, at the Navayuga Press, Udipi, S. India